
ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೩೨

ಜೀವನ ಚರಿತ್ರೆ ಸಾಹಿತ್ಯ : ಭಾಗ-೪



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೩೨ : ಜೀವನ ಚರಿತ್ರೆ ಸಾಹಿತ್ಯ : ಭಾಗ-೫

• [illegible] •

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಬಿ. ಎಸ್. ಮಾಳಿ

ಜಮಖಂಡಿ

ಶ್ರೀಮನ್ಮಹಾರಾಜ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೮

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೩೨ : ಜೀವನ ಚರಿತ್ರೆ ಸಾಹಿತ್ಯ : ಭಾಗ-೪

❖

• ಅರಟಾಳ ರುದ್ರಗೌಡರ ಚರಿತ್ರೆ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ವಿ. ಎಸ್. ಮಾಳಿ

ಹಾರೂಗೇರೆ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI

VOLUME - 32 : JEEVAN CHARITRE SAHITY : BHAGA-4

Edited by : **Dr. V. S. Mali,** Harogere

Published by : **Dr. P.G. Halakatti Research Centre**
B.L.D.E. Association, Vijayapura, Karnatak

First Edition : 2019
Pages : xxxvi+8+580=624

Copies : 1000
Price : Rs. 310/-

❖❖

Cover page design : K.K. Makali, Hampi
Tyapset : **Dr. Hanumanth Melinamani, Dr. Sarswatidevi Bhagawati,** Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town, Bengaluru-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩೨
ಜೀವನ ಚರಿತ್ರೆ ಸಾಹಿತ್ಯ: ಭಾಗ-೪

ಸಂಪಾದಕರು : **ಡಾ. ವ್ಹಿ. ಎಸ್. ಮಾಳಿ, ಹಾರೂಗೆರೆ**

ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ : ೨೦೧೯
ಪುಟಗಳು : xxxvi+೮+೫೮೦=೬೨೪

ಪ್ರತಿಗಳು : ೧೦೦೦
ಬೆಲೆ : ರೂ. ೩೧೦/-

❖❖

ಮುಖಪುಟ ವಿನ್ಯಾಸ: ಕೆ.ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: **ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ,** ಧಾರವಾಡ
ಮುದ್ರಣ : **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ

ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ

ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ'

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ,

೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):
ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪಾ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಡಾ. ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ –ಸಂ. ಡಾ. ಪಂಡಿತ ರಾಠೋಡ
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ –ಸಂ. ಡಾ. ಪಂಡಿತ ರಾಠೋಡ
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ –ಸಂ. ಡಾ. ವೀರಣ್ಣ ರಾಜೂರ
೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಲಿಂಗ ಕಾಪಸೆ
೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ –ಸಂ. ಡಾ. ವೀರಣ್ಣ ರಾಜೂರ
೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ –ಸಂ. ಡಾ. ವೀರಣ್ಣ ರಾಜೂರ
೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ –ಸಂ. ಡಾ. ವೀರಣ್ಣ ರಾಜೂರ
೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ –ಸಂ. ಡಾ. ವೀರಣ್ಣ ರಾಜೂರ
೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ.ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ.ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ-೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ-೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ-೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ-೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ-೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ-೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ-೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ-೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ-೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು-ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ-೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ-೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ-೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು (ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ-೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ-೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ-೩ –ಸಂ. ಡಾ. ಕೆ. ರವೀಂದ್ರನಾಥ

ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ-೪ –ಸಂ. ಡಾ. ಕೆ. ರವೀಂದ್ರನಾಥ

ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ-೫ –ಸಂ. ಡಾ. ಕೆ. ರವೀಂದ್ರನಾಥ

ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ

ಅರಿಕೆ-ಭಾಷಣ-ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೧ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ

ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೨ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ

ಪತ್ರ-ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೩ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ

ಆಡಿಯೋ-ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು,

ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು

ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಡಾ. ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ-ವಿಶ್ವಾಸ-ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಡಾ. ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಮತ್ತು ಈ ಯೋಜನೆಯ ಕಾರ್ಯದರ್ಶಿಗಳೂ ಆದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲೀಕರಾದ ಬಿ.ಸಿ. ಪಾಟೀಲ (ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ತಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.

❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.

❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ,

ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ವಿ.ಎಸ್ ಮಾಳಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ವಿ. ಎಸ್. ಮಾಳಿ

ಗದಗಿನ ತೋಂಟದಾರ್ಯ ಮಠದ ಮೂಲಕ 'ವೀರಶೈವ ಪುಣ್ಯಪುರುಷರ ಮಾಲೆ'ಯನ್ನು ಆರಂಭಿಸಿ, ಬಸವಮಾರ್ಗದಲ್ಲಿ ನಡೆದು ಸಮಾಜಾಭಿವೃದ್ಧಿಗಾಗಿ ತಮ್ಮ ಬದುಕನ್ನು ಸವೆಸಿದ ಪುಣ್ಯ ಪುರುಷರನ್ನು ಶೋಧಿಸಿ, ಅವರನ್ನು ಚಿರಂಜೀವಿಗೊಳಿಸಿದ ಮಹಾಮಾರ್ಗದ ಡಾ. ಎಂ. ಎಂ. ಕಲಬುರ್ಗಿಯವರು ಪುಣ್ಯಪುರುಷರ 'ಶೋಧ ಪುರುಷ'. ಸಮಾಜಸೇವೆ ಮಾಡಿಯೂ ಮಾಡದಂತೆ ಗುಪ್ತವಾಗಿದ್ದ ದಾಸೋಹಭಾವದ ಮಹಾನುಭಾವರನ್ನು ಹುಡುಕುವುದೆಂದರೆ ಸಾಮಾಜಿಕ ಚರಿತ್ರೆ ಕಟ್ಟುವ ಪ್ರಾಮಾಣಿಕ ಕೆಲಸ. 'ಪುಣ್ಯಪುರುಷರ ಮಾಲೆ' ವ್ಯಕ್ತಿಚರಿತ್ರೆಗಳ ತೋರಣವಲ್ಲ; ಸಾಮಾಜಿಕ ಅಭಿವೃದ್ಧಿಯ ದಾಖಲೀಕರಣ. ಕಲಬುರ್ಗಿಯವರ ಸಾಮಾಜಿಕ ಕಳಕಳಿ ಅಪೂರ್ವವಾದುದು. ಡೆ. ಚೆನ್ನಬಸಪ್ಪ, ಸಿರಸಂಗಿ ಲಿಂಗರಾಜ, ಶಿ. ಶಿ. ಬಸವನಾಳ, ಹರ್ಡೇಕರ ಮಂಜಪ್ಪ, ಫ.ಗು.ಹಳಕಟ್ಟಿ, ವಾರದ ಮಲ್ಲಪ್ಪ, ಹಾನಗಲ್ಲ ಕುಮಾರಸ್ವಾಮಿಗಳು ಮೊದಲಾದ ಸಮಾಜಸೇವಾ ಪುರುಷರ ಸಾಲಿಗೆ ಸೇರಿದವರು ಅರಟಾಳ ರುದ್ರಗೌಡರು. "೧೯-೨೦ನೆಯ ಶತಮಾನಗಳ ಮಧ್ಯಕಾಲೀನ ಲಿಂಗಾಯತ ಸಮಾಜದಲ್ಲಿ ಬಸವಯುಗದ ಉತ್ಸಾಹವನ್ನು ತಮ್ಮ ವ್ಯಾಪ್ತಿಯಲ್ಲಿ ಮೆರೆದವರು, ಅರಟಾಳ ರುದ್ರಗೌಡರು." ಆದ್ದರಿಂದ ಕಲಬುರ್ಗಿಯವರು ಅವರನ್ನು 'ಯುಗದ ಉತ್ಸಾಹ'ವೆಂದು ಕರೆದಿರುವರು. 'ಅವರ ಚರಿತ್ರೆಯ ಪರಿಷ್ಕರಣ ತಮ್ಮ ಬದುಕಿನ ಸಾರ್ಥಕ ಸಂದರ್ಭ'ವೆಂದು ಭಾವಿಸುವ ಕಲಬುರ್ಗಿಯವರ ಮನೋಭಾವವೇ ಅವರ ವ್ಯಕ್ತಿತ್ವದ ಮಹೋನ್ನತಿಗೆ ಸಾಕ್ಷಿಯಾಗುತ್ತಿದೆ.

ಡಾ. ಕಲಬುರ್ಗಿಯವರು ಹೇಳುವಂತೆ ಅರಟಾಳರು 'ಸಾಮಾಜಿಕ ಸ್ವಾತಂತ್ರ್ಯ ಹೋರಾಟಗಾರರು'. ಅವರು ಆರಂಭಿಸಿದ 'ಸಾಮಾಜಿಕ ಸ್ವಾತಂತ್ರ್ಯ ಹೋರಾಟ'ಕ್ಕೆ ಒಂದಿಷ್ಟು ಕೈಗಳು ಕೂಡಿಕೊಂಡಿದ್ದರೆ, ಅದು ಚಳುವಳಿಯ ಸ್ವರೂಪ ಪಡೆಯುತ್ತಿತ್ತು. ಅರಟಾಳರು ರಾಷ್ಟ್ರಮಟ್ಟದ, ಕೊನೆಗೆ ರಾಜ್ಯಮಟ್ಟದ ನೇತಾರರಾಗುತ್ತಿದ್ದರು. 'ಬ್ರಾಹ್ಮಣೇತರ ಚಳುವಳಿ'ಗೆ ಒಂದು ವೇದಿಕೆ ರೂಪಿಸಿದವರು ಅರಟಾಳರು. ಪ್ರಾಮಾಣಿಕ ಅಧಿಕಾರಿಯಾಗಿದ್ದ ಅವರು ಭ್ರಷ್ಟ ವ್ಯವಸ್ಥೆಗೆ ಸವಾಲಾದರು. ಭ್ರಷ್ಟಾಚಾರಿಗಳನ್ನು ಶಿಕ್ಷಿಸುವ ಮೂಲಕ ಜನಸಾಮಾನ್ಯರಿಗೆ ಹತ್ತಿರವಾದರು. ಆಂಗ್ಲರ ಆಡಳಿತದಲ್ಲಿ ಆಯಕಟ್ಟಿನ ಜಾಗಗಳನ್ನು ಹಿಡಿದುಕೊಂಡು ಸಾಮಾನ್ಯ ಜನರನ್ನು ಶೋಷಿಸುತ್ತಿದ್ದ ಬ್ರಾಹ್ಮಣ ಅಧಿಕಾರಿಗಳ ಸರ್ವಾಧಿಕಾರಿ ಧೋರಣೆಗೆ ಕಡಿವಾಣ ಹಾಕಿ ಬ್ರಾಹ್ಮಣೇತರ ಸಮುದಾಯಕ್ಕೆ ಸಾಮಾಜಿಕನ್ಯಾಯ ಕೊಡಿಸಿದರು. ಲಂಚನಿರ್ಮೂಲನೆಯಿಂದ ಜನರ ಪ್ರೀತಿ ಗಳಿಸಿ, ಖ್ಯಾತಿ ಪಡೆದರು. ಲಿಂಗಾಯತರ ಉನ್ನತಿಗಾಗಿ ಶಕ್ತಿಮೀರಿ ಯತ್ನಿಸಿದ ಅರಟಾಳರ ಚರಿತ್ರೆ ಡಾ. ಕಲಬುರ್ಗಿಯವರ ಕಣ್ಣಿಗೆ ಬಿದ್ದುದು ಒಂದು ಸುಯೋಗ.

ಕಂಬಿ ಬಸವಾರ್ಯರು ಕಟ್ಟಿದ ಅರಟಾಳರ ಚರಿತ್ರೆ ರುದ್ರಗೌಡರ ಬದುಕಿನ ಪ್ರಮುಖ ಘಟನಾವಳಿಗಳ ಅಧಿಕೃತ ದಾಖಲೀಕರಣ. ಏಕೆಂದರೆ ಅದನ್ನು ಅರಟಾಳರು ಸಮಗ್ರವಾಗಿ ಪರಿಶೀಲಿಸಿ, ಕೆಲವೆಡೆ ತಿದ್ದುಪಡಿ ಮಾಡಿರುವರು. ಇದು ಕನ್ನಡದ ಮೊದಲ ಜೀವನ ಚರಿತ್ರೆ (೧೯೦೭). ಹಳೆಯ ಕಾಲದಲ್ಲಿ ಅಂಗಡಿ ಲೆಕ್ಕ ಬರೆಯಲು ಬಳಸುತ್ತಿದ್ದ ಎರಡು(ಕೀರ್ದಿ ದಪ್ತರ)ವಹಿಯಲ್ಲಿ ಬರೆಯಲಾದ ಈ ಕೃತಿಯನ್ನು ಪ್ರಕಟಿಸಲು ತೀವ್ರ ಆಸಕ್ತಿ ವಹಿಸಿದವರು ಡಾ. ಕಲಬುರ್ಗಿಯವರು. ಅದನ್ನು ಪರಿಷ್ಕರಿಸಿ, ಶಾಸ್ತ್ರೀಯವಾಗಿ ಸಂಪಾದಿಸಿರುವರು. ಒಂದರ್ಥದಲ್ಲಿ ಇದು ಕಲಬುರ್ಗಿಯವರ ಹೊಸಗನ್ನಡದ ಸಂಪಾದನೆಗೊಂದು ಅಪರೂಪದ ಮಾದರಿ. ಯಾವುದು ಮೂಲ, ಯಾವುದು ಪ್ರಕ್ಷಿಪ್ತ, ಯಾವುದು ಅನಂತರ ಸೇರಿಲ್ಪಟ್ಟದ್ದು ಇತ್ಯಾದಿ ಸಂಗತಿಗಳನ್ನು ಕರಾರುವಕ್ಕಾಗಿ ಗುರುತಿಸಿ, ಯಾವುದನ್ನು ಎಲ್ಲಿಡಬೇಕೋ ಅಲ್ಲಿಟ್ಟು ಪುನರಾವೃತ್ತಿ ಕೈಬಿಟ್ಟಿರುವುದನ್ನು ಸ್ಪಷ್ಟವಾಗಿ ಹೇಳಿರುವರು. ಹಸ್ತಪ್ರತಿಯ ಸ್ವರೂಪ, ಕಾಲ, ಪರಿಷ್ಕರಣದ ಕಷ್ಟಗಳನ್ನು ಸ್ಪಷ್ಟವಾಗಿ ತಿಳಿಸಿರುವರು. 'ಹಸ್ತ ಪ್ರತಿಯಲ್ಲಿ ಮೂರು ಜನರ ಅಕ್ಷರಗಳಿದ್ದು, ೨೩ ಭಾಗಗಳ ಕೃತಿಯಲ್ಲಿ ೨೨ನೆ ಭಾಗದವರೆಗೆ ಜೀವನಚರಿತ್ರೆ ಸ್ವರೂಪದಲ್ಲಿದೆ. ೨೩ನೇ ಭಾಗ ಗೊಂದಲಗಳಿಂದ ಕೂಡಿದೆ. ರುದ್ರಗೌಡರು ಟಿಪ್ಪಣಿಗಳನ್ನು ಸೇರಿಸಿದ್ದರಿಂದ ನಡುನಡುವೆ ಆತ್ಮಚರಿತ್ರೆಯ ಸ್ವರೂಪ ಪಡೆದುಕೊಂಡು ಸಂಯೋಜನೆಗೆ ತೊಡಕಾಗಿದೆ. ಈ ಟಿಪ್ಪಣಿಗಳನ್ನು ಪಠ್ಯದಿಂದ ಬೇರ್ಪಡಿಸಿ, ಅಡಿಟಿಪ್ಪಣಿಯಾಗಿ ಜೋಡಿಸಿಕೊಂಡಿದ್ದು ಈ ಕೃತಿಯ ಸಂಪಾದನೆಯ ವಿಶೇಷ. ಹೀಗಿದ್ದರೂ ಅರಟಾಳರ ಎಲ್ಲ ಟಿಪ್ಪಣಿಗಳನ್ನು ಅಡಿಟಿಪ್ಪಣಿಯಾಗಿಸಿಲ್ಲ. ಅಗತ್ಯವಿರುವ ವಿಷಯಗಳನ್ನು ತೆಗೆದುಕೊಂಡು ಪುನರುಕ್ತ, ಅಸ್ಪಷ್ಟ, ತ್ರುಟಿತ, ಅನಾವಶ್ಯಕ ಟಿಪ್ಪಣಿಗಳನ್ನು ಕೈಬಿಟ್ಟಿದ್ದಾರೆ. ೨೩ನೇ ಭಾಗದಲ್ಲಿಯ ಮೊದಲೆರಡು ಉಪಶೀರ್ಷಿಕೆಗಳವರೆಗಿನ ಬರವಣಿಗೆ ಬಸವಾರ್ಯರದಾಗಿದ್ದು, ಮಧ್ಯದಲ್ಲಿಯ ಪಠ್ಯ ಬೇರೊಬ್ಬರ ಅಕ್ಷರಗಳಲ್ಲಿದೆ. ಅದರ ಶೈಲಿ ಕೂಡ ಭಿನ್ನವಾಗಿದೆ. ಹಂದಿಗನೂರು ದೇಸಗತಿಯ ದತ್ತಕ ಕಂಟಕ, ಪೆನ್‌ಶನ್ ಹೊಂದಿದ ರುದ್ರಗೌಡರ ಪಾನಸುಪಾರಿ ತಪಶೀಲ, ಹುಬ್ಬಳ್ಳಿ ಮೂರು ಸಾವಿರಮಠದ ಅಡ್ಡಪಲ್ಲಕ್ಕಿ ವ್ಯಾಜ್ಯ, ರಾವಬಹಾದ್ದೂರವರು ಹತ್ತು ವಿಷಯಗಳನ್ನು ಕುರಿತು Anthropological Journal, Bombay ಇದರಲ್ಲಿ ಬರೆದದ್ದು, ವ ಮೆಂಬರಾದದ್ದು. [ಯಡೂರ ವೀರಭದ್ರ ದೇವರ ಪೂಜೆಯ ಬಗ್ಗೆ ಕೋರ್ಟ ಆದೇಶ]. [ಮೂಕಿ ಅರ್ಜಿಯನ್ನು ಕಛೇರಿಯಲ್ಲಿ ಓದಿ ಹರಿದು ಹಾಕಿದ್ದು], ಸ್ವಾಮೀರಾಯಾಚಾರ್ಯ ಭೀಮಾಚಾರ್ಯ ಮಾಸೂರ ತಾ. ಹಿರೇಕೆರೂರ ಇವನು, ವರಿಷ್ಠ ಅಮಲದಾರರ ವಿರುದ್ಧವಾಗಿ ವಿಶ್ವಪ್ರಯತ್ನದಿಂದ ನವಕರೀ ಪಡೆಯಬೇಕೆಂಬ ಅಭಿಲಾಷೆಯೂ ರಾವಬಹಾದ್ದೂರ ರುದ್ರಗೌಡರು ಮಾಡಿದ ಮುಂಜಾಗ್ರತೆಯ ಪ್ರತೀಕಾರವೂ, ಧಾರವಾಡದಲ್ಲಿ ಕರ್ನಾಟಕ ಕಾಲೇಜ ಸ್ಥಾಪಿಸುವ ಬಗ್ಗೆ ನಡೆದ ಗೊಂದಲವೂ ರಾ.ಬ. ರುದ್ರಗೌಡರ ವರ್ಗಣೀ ವಸೂಲ ಮಾಡಿ ಸರಕಾರಕ್ಕೆ ಒಂದು ಲಕ್ಷ ರೂಪಾಯಿ ಕಳುಹಿಸಿದ ಸಂಗತಿಯೂ, ರಾವಬಹಾದ್ದೂರ ಅರಟಾಳ ಪತ್ರವು, [ರುದ್ರಗೌಡರಿಗೆ ಮೇಲಧಿಕಾರಿಗಳಿಂದ ಶಿಫಾರಸ್ಸು ಪತ್ರಗಳು], [ಶ್ರೀಮಂತ ಶಿರಸಂಗೀ ಸುಂದರಾಬಾಯಿ ಸಾಹೇಬರವರ ದತ್ತಕ ಪ್ರಕರಣ], ಸಿರಸಂಗಿ ಸಂಸ್ಥಾನದ ಮೆ॥ ಸುಂದರಾಬಾಯಿ ಸಾಹೇಬರು ೨ನೇ ಸಾರಿ ದತ್ತಕ ರದ್ದು ಮಾಡಿಕೊಂಡ ಸಂಗತಿಯು ಹಾಗೂ (ರುದ್ರಗೌಡರಿಗೆ ಮನೆದೇವರು ವೀರಭದ್ರನ ಬಗ್ಗೆ ಭಕ್ತಿ) ಉಪಶೀರ್ಷಿಕೆಯ ವಿಷಯಗಳು ಇದರಲ್ಲಿವೆ. ಈ ಬರವಣಿಗೆ ಬೇರೊಂದು ಪೂರಕ ಗ್ರಂಥದ ಸ್ವರೂಪ ಕೊಟ್ಟು ಅದನ್ನು ಮೂಲ ಕೃತಿಯಿಂದ ಬೇರ್ಪಡಿಸಿ ಅದರೊಂದಿಗೆ ಪ್ರಕಟಿಸಿದ್ದು ಕಲಬುರ್ಗಿಯವರ ಸಂಪಾದನಾ ಶಿಸ್ತಿನ ನಿದರ್ಶನ, ಕರ್ನಾಟಕ ಕಾಲೇಜು ಉಪಶೀರ್ಷಿಕೆಯಿಂದ ಮತ್ತೆ ಬಸವಾರ್ಯರ ಪಠ್ಯ ಪ್ರಾರಂಭವಾಗುತ್ತದೆ. ಪ್ರಾಯಶಃ ಮಧ್ಯದ ಆತ್ಮಕಥನ ಅರಟಾಳರದೇ ಇರಬೇಕು. ಆದರೆ ನಿರೂಪಕರ ಹೆಸರು ತಿಳಿಯದು.

ಡಾ. ಕಲಬುರ್ಗಿಯವರು ಪ್ರಾಚೀನ ಕೃತಿಯೊಂದರ ಸಂಪಾದನೆಯ ಶ್ರದ್ಧೆಯನ್ನು ಇಲ್ಲಿಯೂ ಮೆರೆದಿದ್ದಾರೆ. ಸಂಪಾದನೆ ಕಾರ್ಯ ಕೇವಲ ಪ್ರಾಚೀನ ಕೃತಿಗಳಿಗೆ ಸೀಮಿತಗೊಳ್ಳದೆ ಆಧುನಿಕ ಕೃತಿಗಳಿಗೂ ವಿಸ್ತರಿಸಬಹುದೆಂದು ತೋರಿದ್ದಾರೆ. ಅವರ ಶಿಸ್ತು, ಕಾಳಜಿ, ವಿಧಾನ, ವರ್ಗೀಕರಣ ಮೊದಲಾದವು ಸಂಪಾದಕರಿಗೆ ಮಾದರಿಯಾಗಿವೆ. ಹಸ್ತಪ್ರತಿಗಳ ಸ್ವರೂಪ, ಬರವಣಿಗೆ ಶೈಲಿ, ಕಾಲ, ಅಕ್ಷರ ವಿನ್ಯಾಸ ಮುಂತಾದ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಅವರ ಸಂಪಾದನಾ ಕ್ರಮ ತೀವ್ರ ಗಮನ ಸೆಳೆಯುತ್ತದೆ. ಆಧುನಿಕ ಕೃತಿಯೊಂದರ ಸಂಪಾದನೆಯ ಮಾದರಿಗೆ ಇದೊಂದು ಅತ್ಯುತ್ತಮ ಉದಾಹರಣೆ. ಹೀಗಿದ್ದರೂ ಇದನ್ನು ಕಲಬುರ್ಗಿಯವರು ಸಂಪಾದನೆಯೆಂದು ಒಪ್ಪಿಕೊಳ್ಳದೆ ಪರಿಷ್ಕರಣವೆಂದು ಹೇಳುವುದು ಅವರ ಸೌಜನ್ಯ. ಕರ್ತೃವಿನ ಉದ್ದೇಶಕ್ಕೆ ಕಿಂಚಿತ್ತು ಚ್ಯುತಿಬರದಂತೆ ಕಾಳಜಿವಹಿಸಿದ್ದಾರೆ. ಕೃತಿಯ ಮೊದಲ ಪುಟವನ್ನು ನೋಡಿದರೆ ಕಲಬುರ್ಗಿಯವರ ಪ್ರಾಮಾಣಿಕತೆ ದರ್ಶಿಸುತ್ತದೆ. ಕೃತಿಯ ಶೀರ್ಷಿಕೆ, ಲೇಖಕರ ಹೆಸರು ಯಥಾವತ್ತಾಗಿ (As it is) ಇಟ್ಟು, ಹಸ್ತಪ್ರತಿಯ ಭಾವಚಿತ್ರವನ್ನು ಕೊಟ್ಟಿದ್ದಾರೆ. ಹಸ್ತಪ್ರತಿ ಸಂಪುಟ, ಬಸವಾರ್‍ಯರ ಮಾದರಿ ಹಸ್ತಾಕ್ಷರ, ರುದ್ರಗೌಡರು ಹಸ್ತಪ್ರತಿಯನ್ನು ತಿದ್ದಿ ರುಜು ಹಾಕಿದ ಪುಟ-ಹೀಗೆ ಹಸ್ತಪ್ರತಿಯ ಪ್ರಮುಖ ಚಿತ್ರಗಳನ್ನು ಒದಗಿಸಿ ಗ್ರಂಥದ ಅಧಿಕೃತತೆಯನ್ನು ಅಧಿಕಾರಯುಕ್ತವಾಗಿ ಪ್ರಮಾಣೀಕರಿಸಿದ್ದಾರೆ.

'ಅರಟಾಳ ರುದ್ರಗೌಡರ ಚರಿತ್ರೆ'ಯನ್ನು ನಿರೂಪಿಸಿದ ಬಸವಯ್ಯ ಚನ್ನಬಸವಯ್ಯ ಹಿರೇಮಠ ಊರ್ಫ ಕಂಬಿಯವರ ಕುರಿತು ಡಾ. ಕಲಬುರ್ಗಿಯವರು ಒಂದು ಟಿಪ್ಪಣಿ ನೀಡಿದ್ದಾರೆ. ಅದರಲ್ಲಿ ಕಂಬಿಯವರ ವಿದ್ವತ್ತು ಮತ್ತು ಸೃಜನಶೀಲತೆಯ ಸಂಕ್ಷಿಪ್ತ ಪರಿಚಯವಿದೆ. ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ಪಾರಿಶವಾಡ ಗ್ರಾಮದವರಾದ ಬಸವಯ್ಯನವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದರು. ಕಿತ್ತೂರು ಹಾಗೂ ನೇಗಿನಹಾಳ ಗ್ರಾಮಗಳಲ್ಲಿ ಸೇವೆ ಸಲ್ಲಿಸಿದ್ದರು. ಕಿತ್ತೂರು ಶಾಲಾ ನಂ-೦೧ರಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಈ ಕೃತಿ ರಚಿಸಿದರು. ನೇಗಿನಹಾಳ ಗ್ರಾಮದ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ (೨೩-೦೩-೧೯೨೧ ರಂದು) ಪ್ಲೇಗಿಗೆ ಬಲಿಯಾದರು.

ಡಾ. ಕಲಬುರ್ಗಿಯವರು ಕೃತಿ ಮತ್ತು ಹಸ್ತಪ್ರತಿಗಳಿಗೆ ಸಂಬಂಧಿಸಿದ ಅಂಶಗಳ ಹಿನ್ನೆಲೆಯಲ್ಲಿ ಮಾತ್ರ ಕೃತಿಕಾರನ ವಿವರಗಳನ್ನು ಪ್ರಸ್ತಾಪಿಸುವರು. ಕರ್ತೃವಿಗೆ ಸಂಬಂಧಿಸಿದ ಇತರ ವಿವರಗಳನ್ನು ಒದಗಿಸುವುದಿಲ್ಲ.

ಪಾರಿಶವಾಡದ ಬಸವಾರ್ಯರೆಂದೇ ಗುರುತಿಸಿಕೊಳ್ಳುತ್ತಿದ್ದ ಬಸವಯ್ಯ ಚನ್ನಬಸವಯ್ಯ ಹಿರೇಮಠರ ಜನ್ಮಗ್ರಾಮ ಪಾರಿಶ್ವಾಡ. ಇವರ ಪೂರ್ವಜರು ಮೂಲತಃ ಲಕ್ಕೀಬೈಲ ಗ್ರಾಮದ ಹಿರೇಮಠದವರು. ಯಾವುದೋ ಕಾರಣದಿಂದ ಪಾರಿಶ್ವಾಡಕ್ಕೆ ಬಂದು ನೆಲೆಸಿದರು. ಅಲ್ಲಿಯ ಕಂಬಿ ಮನೆತನದವರ ಜಾಗದಲ್ಲಿ ನೆಲೆ ಪಡೆದ ಕಾರಣ ಈ ಮನೆತನಕ್ಕೆ 'ಕಂಬಿ' ಹೆಸರು ಸೇರಿಕೊಂಡಿತು. ಚನ್ನಬಸವಯ್ಯ ಮತ್ತು ಶಿವಗಂಗವ್ವ ದಂಪತಿಗಳು ಕ್ರಿ.ಶ. ೧೮೭೬ರಲ್ಲಿ ಬಸವಯ್ಯನವರಿಗೆ ಜನ್ಮ ನೀಡಿದರು.

ಬಸವಯ್ಯನವರನ್ನು ಬಡತನ ಜೀವನದುದ್ದಕ್ಕೂ ಕಾಡಿತ್ತು. ಕಷ್ಟದಲ್ಲಿಯೇ ವಿದ್ಯೆ ಕಲಿತು, ೧೮೯೨ರಲ್ಲಿ ಮುಲ್ಕೀ ಪರೀಕ್ಷೆ ಪಾಸುಮಾಡಿದರು. ಹೆಚ್ಚಿನ ಅಂಕ ಪಡೆದು ಜಾಣತನವನ್ನು ಸಾಕ್ಷೀಕರಿಸಿದರು. ೧೮೯೩ರಲ್ಲಿ ಧಾರವಾಡದ ಟ್ರೇನಿಂಗ್ ಕಾಲೇಜಿಗೆ ಪ್ರವೇಶ ಪಡೆದು, ಎರಡನೇ ವರ್ಷ ಮುಗಿಸಿದರು. ತಂದೆ ತೀರಿದ ನಂತರ ಆರ್ಥಿಕ ಮುಗ್ಗಟ್ಟಿನಿಂದ ಶಿಕ್ಷಣಕ್ಕೆ ವಿದಾಯ ಹೇಳಿ,

ಕಿತ್ತೂರು ಶಾಲೆಗೆ ಶಿಕ್ಷಕರಾಗಿ ಬಂದರು. ಸುಖದ ಕ್ಷಣಗಳ ಭರವಸೆಯಲ್ಲಿ ಕಷ್ಟದ ದಿನಗಳನ್ನು ಕಳೆಯುತ್ತ ಶಿಕ್ಷಣಕ್ಕಾಗಿ ಮಾಡಿದ ಸಾಲ ತೀರಿಸಲು ತುಂಬ ಹೆಣಗಾಡಿದರು.

ಅರಟಾಳ ರುದ್ರಗೌಡರ ಸಾಮಾಜಿಕ ಸೇವೆಯನ್ನು ಮೆಚ್ಚಿಕೊಂಡ ಬಸವಾರ್ಯರು ಅವರನ್ನು ಭೆಟ್ಟಿಯಾಗಿ ತಮ್ಮ ಕಷ್ಟವನ್ನು ಕಳೆದುಕೊಳ್ಳಲು ಇಚ್ಛಿಸಿದರು. ಸಂಪಗಾಂವಿಯಲ್ಲಿ ಅವರನ್ನು ಕಂಡು ತಮ್ಮ ಪ್ರತಿಭೆಯನ್ನು ಪರಿಚಯಿಸಿದರು. ಅನಂತರ ರುದ್ರಗೌಡರು ಅವರನ್ನು ಬೆಳಗಾವಿಗೆ ಬರಮಾಡಿಕೊಂಡು ಸತ್ಕರಿಸಿದರು. ಅದು ರುದ್ರಗೌಡರ ಹಾಗೂ ಬಸವಾರ್ಯರ ನಿಕಟ ಸಂಪರ್ಕಕ್ಕೆ ನಾಂದಿಯಾಯಿತು. ಇದು ಬಸವಾರ್ಯರ ಕಷ್ಟಗಳ ತೀವ್ರತೆಯನ್ನೊಂದಿಷ್ಟು ಕಡಿಮೆ ಮಾಡಲು ಸಹಕಾರಿಯಾಯಿತು. ಕೊನೆಕೊನೆಗಂತೂ ಬಸವಾರ್ಯರು ಅರಟಾಳರ ನೆರಳಿನಂತೆ ಅವರೊಂದಿಗೆ ಸುತ್ತಾಡಿದರು. ಅರಟಾಳರ ಬಹುಪಾಲು 'ಪಾನಸುಪಾರಿ' ಸಮಾರಂಭಗಳಲ್ಲಿ ಬಸವಾರ್ಯರು ಪಾಲ್ಗೊಂಡಿದ್ದರು. ಅವರ ಕುಟುಂಬದ ಪ್ರತಿಯೊಂದು ಮಹತ್ವದ ಕಾರ್ಯಕ್ರಮಗಳನ್ನು ಖುದ್ದಾಗಿ ವೀಕ್ಷಿಸಿದ್ದಾರೆ. ಆದ್ದರಿಂದಲೇ ಸಾರ್ವಜನಿಕ ಸಮಾರಂಭ ಹಾಗೂ ಖಾಸಗಿ ಕಾರ್ಯಕ್ರಮಗಳನ್ನು ಸವಿವರವಾಗಿ ದಾಖಲಿಸುವುದು ಸಾಧ್ಯವಾಗಿದೆ.

ಬಸವಾರ್ಯರು ಆಶುಕವಿಗಳು. ಲಿಂಗರಾಜ ನಾಮಾವಳಿ, ತಾರಾವಳಿ, ರುದ್ರಪ್ರಭುನೀತಿ, ಪದ್ಯ ನವರತ್ನ, ಪದ್ಯ ಪಂಚಕ, ಜೋಗುಳ ಪದ, ಲಾವಣಿ, ಕವಿತೆ, ಶಿಶುಗೀತೆಗಳನ್ನು ರಚಿಸಿರುವರು. ತಾರಾವಳಿ, ರುದ್ರಪ್ರಭು ನೀತಿ, ಪದ್ಯನವರತ್ನ, ಪದ್ಯ ಪಂಚಕ, ಶ್ರೀ ಮುರುಘೇಂದ್ರಾಷ್ಟಕ, ಕೆಲವು ಜೋಗುಳ ಪದಗಳು ರುದ್ರಗೌಡರ ಚರಿತ್ರೆಯಲ್ಲಿಯೇ ಅಡಕಗೊಂಡಿವೆ. ಕಂದ, ವೃತ್ತ ಹಾಗೂ ದೇಶಿ ಛಂದೋಬಂಧಗಳೆಂದರೆ ಬಸವಾರ್ಯರಿಗೆ ಅತಿ ಪ್ರೀತಿ. ಪ್ರಾಸ, ಛಂದ, ಅಲಂಕಾರಗಳಿಂದ ಕೂಡಿದ ಅವರ ಪದ್ಯಗಳ ಭಾಷೆ ಸಂಸ್ಕೃತ ಪ್ರೌಢಿಮೆಯಿಂದ ಹದವಾದದ್ದು.

ಕ್ಷುದ್ರಜನ ಛಿದ್ರ ನಿದ್ರೋ
ನ್ನಿದ್ರಾ ಬ್ರಹ್ಮಾಂಡ ಬೇಧ ಮೇಘೋದ್ರಾವರ್।
ರುದ್ರಾವತಾರ ರೂಪರ್
ಭದ್ರಪ್ರದ ರುದ್ರಗೌಡ ನಾಮ ವಿಶೇಷರ್॥

ಆದರೆ ಅವರಲ್ಲಿ ಪಾಂಡಿತ್ಯ ಪ್ರದರ್ಶನದ ಅಹಂಕಾರವಿಲ್ಲ. ಕೆಲವೊಮ್ಮೆ ರಗಳೆಯಷ್ಟು ಸರಳವಾದ ಕಂದಗಳನ್ನು ರಚಿಸುತ್ತಾರೆ.

ಬಡವರಿಗೆ ತಾನೆ ಭಾಗ್ಯಂ
ನಡೆದೈತಂದಂತೆ ರುದ್ರಗೌಡರ ಬರವು।
ನಡೆನಾಡ ಜನರಿಗಾದುದು
ಬಡಮಂದಿಯ ಹರಕೆ ಕಯ್ಯಗೂಡ್ವುದು ನಿಜದಿಂ॥

ಸಂಸ್ಕೃತ, ಮರಾಠಿ, ಹಿಂದಿ ಭಾಷೆಗಳನ್ನೂ ಬಲ್ಲ ಬಸವಾರ್ಯರಿಗೆ ಇಂಗ್ಲೀಷನಲ್ಲಿ ಪ್ರೌಢಿಮೆ ಇರಲಿಲ್ಲ. "ಬಸವಾರ್ಯರ ಕಾರ್ಯವನ್ನು ಗಮನಿಸಿದ ರುದ್ರಗೌಡರು 'ಇವರು ಇಂಗ್ಲೀಷ್ ಕಲಿತಿದ್ದರೆ ಬಹಳ ಮುಂದೆ ಬರುತ್ತಿದ್ದರು' ಎಂದು ಉದ್ಗರಿಸಿದ ಪ್ರಸಂಗವನ್ನು ಬಸವಾರ್ಯರು ತಮ್ಮ ಪತ್ರದಲ್ಲಿ ದಾಖಲಿಸಿದ್ದಾರೆ." (ಶಿರೀಷ್ ಜೋಶಿ. ಕಂಬಿ ಬಸವಾರ್ಯರು, ಪುಟ, ೭)

ಕವಿತೆಗಳೊಂದಿಗೆ ಲೇಖನ, ಭಾಷಣ, ನಾಟಕಗಳನ್ನೂ ಅವರು ರಚಿಸಿದ್ದಾರೆ. ಕೆಲವರು 'ವಿಷಮ ವಿವಾಹ' ನಾಟಕವೆಂದು ಭಾವಿಸಿದ್ದಾರೆ. ಆದರೆ ಅದು ನಾಟಕವಲ್ಲ, ಕಾವ್ಯ. ೧೯೧೮ರಲ್ಲಿ ಪ್ರಭಾತ ಪತ್ರಿಕೆಯಲ್ಲಿ ಪ್ರಕಟವಾಗಿದೆ. 'ಚಂದ್ರಿಕಾ ವಿಜಯ' ಐದು ಅಂಕಗಳ ಸಾಮಾಜಿಕ ನಾಟಕ. ಮದ್ಯಪಾನದ ದುರಂತವನ್ನು ಚಿತ್ರಿಸುವ ಈ ನಾಟಕ ಅವರ ಜೀವಿತ ಕಾಲದಲ್ಲಿಯೇ ಪ್ರದರ್ಶನಗೊಂಡು, ಅವರಿಗೆ ಖ್ಯಾತಿ ತಂದಿತು. ಅವರ ಶ್ರೇಷ್ಠ ಕೃತಿ (Master Piece) ಎಂದರೆ 'ಅರಟಾಳ ರುದ್ರಗೌಡರ ಚರಿತ್ರೆ'.

ರಾ. ಯ. ಧಾರವಾಡಕರ ಹೇಳುವಂತೆ ಬಸವಾರ್ಯರ ಕುರಿತು ಸಂಶೋಧನೆಯ ಅಗತ್ಯವಿದ್ದು, ಅವರ ಸಮಗ್ರ ಸಾಹಿತ್ಯ ಪ್ರಕಟಗೊಳ್ಳಬೇಕಿದೆ. "ಪದ – ಪದ್ಯಗಳು ಹೆಸರಿನಲ್ಲಿ ಕಿತ್ತೂರಿನ ವೀರಪ್ಪ ನಾಗಶೆಟ್ಟಿ ಮಾಸ್ತರರು (ಬಸವಾರ್ಯರ ಶಿಷ್ಯ) ಬಸವಾರ್ಯರ ಹಲವು ಪದ್ಯಗಳನ್ನು ಸಂಪಾದಿಸಿದ್ದಾರೆ. ಚಂದ್ರಿಕಾ ವಿಜಯ ನಾಟಕ ಹಾಗೂ ಲಿಂಗರಾಜ ಸ್ತವನ ಕೃತಿಗಳನ್ನು ಅವರ ದತ್ತಕ ಮೊಮ್ಮಗನಾದ ಬಸವಂತಯ್ಯನವರು ೧೯೫೦ರ ದಶಕದಲ್ಲಿ ಮುದ್ರಿಸಿ ಪ್ರಕಟಿಸಿದ್ದಾರೆ. 'ಚಂದ್ರಿಕಾ ವಿಜಯ'ಕ್ಕೆ ಕವಿ ಎಸ್. ಡಿ. ಇಂಚಲರು, 'ಲಿಂಗರಾಜ ಸ್ತವನ'ಕ್ಕೆ ಕವಿ ಡಿ. ಎಸ್. ಕರ್ಕಿಯವರು ಮುನ್ನುಡಿ ಬರೆದಿದ್ದಾರೆ. (ಆರ್. ಎಸ್. ಚಾಪಗಾವಿ–ಕಂಬಿ ಬಸವಾರ್ಯರು (ಲೇ) ಹಿಂದಣ ಹೆಜ್ಜೆ ಪುಟ, ೩೮೧) ಅಂದರೆ ಬಸವಾರ್ಯರ ಪ್ರಕಟಿತ ಕೃತಿಗಳ ಒಟ್ಟು ಸಂಖ್ಯೆ ೪ (ವಾಗ್ಭೂಷಣ, ಪ್ರಭಾತ, ಮೈಸೂರು ಸ್ಟಾರ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನ, ಕವಿತೆಗಳನ್ನು ಹೊರತುಪಡಿಸಿ).

ಆದರೆ ಅವರ ಜೀವಿತಾವಧಿಯಲ್ಲಿ ಒಂದೂ ಕೃತಿ ಬೆಳಕು ಕಾಣದಿರುವ ವಿಷಾದ ಅವರಲ್ಲಿತ್ತು. ಅವರ ಪತ್ನಿ ಬಸಮ್ಮನವರಿಗೆ ಅವು ಪ್ರಕಟಗೊಳ್ಳುವುದನ್ನು ತಾವಾದರೂ ನೋಡಬೇಕೆಂಬ ಆಶೆಯಿತ್ತು. ಬಸಮ್ಮನವರ ಕಣ್ಣೆದುರು ಎರಡು ಕೃತಿಗಳು ಪ್ರಕಟಗೊಂಡವು.

'ಬಸವಾರ್ಯರ ದಿವ್ಯ ಜೀವನಾದರ್ಶಗಳಿಗೆ ಮಾರುಹೋದ ಅಭಿಮಾನಿಗಳಲ್ಲಿ ತಾವು ಒಬ್ಬರು' ಎಂದು ಕವಿ ಎಸ್.ಡಿ. ಇಂಚಲ ಹೇಳಿದರೆ, ಡಾ. ಡಿ. ಎಸ್. ಕರ್ಕಿಯವರು ಹಳತು ಮತ್ತು ಹೊಸತರ ಸಂಧಿಕಾಲವನ್ನು ಬಸವಾರ್ಯರ ಕವಿತೆಗಳಲ್ಲಿ ಗುರುತಿಸಿದ್ದಾರೆ. ಬಸವಾರ್ಯರು ನವೋದಯ ಯುಗದ ಅರುಣೋದಯ ಕಾಲದ ಕವಿಗಳು. ಕನ್ನಡ ಕಾವ್ಯ ಪ್ರಾಸ, ಛಂದ–ಬಂಧಗಳ ಬಂಧನಗಳಿಂದ ಹೊರಬರಲು ಹವಣಿಸುತ್ತಿದ್ದ ಸಂದರ್ಭದಲ್ಲಿ ಕಾವ್ಯಯೋಗದಲ್ಲಿ ಸಕ್ರಿಯರಾದವರು. ಅವರ ಕಾವ್ಯ ಪ್ರಯೋಗಗಳು, ಸಮಾಜಮುಖಿಯಾದ ಪ್ರಗತಿಪರ ಚಿಂತನೆಗಳು ಗಮನಾರ್ಹವಾದವು. ಶ್ರೀಮಂತರ ಕೃಪಣತೆ, ವಿರಕ್ತರ ಡಾಂಭಿಕತೆ, ಸಮಾಜದಲ್ಲಿ ಮಡುಗಟ್ಟಿದ ಅಜ್ಞಾನ, ಕಂದಾಚಾರ, ವ್ಯಾಪಕವಾದ ಭೋಗ ವ್ಯಸನಗಳನ್ನು ಖಂಡಿಸಿ ಬರೆದಿರುವರು. ಬಾಲ್ಯವಿವಾಹ, ವೃದ್ಧ ವಿವಾಹದಂಥ ಅನಾಚಾರಗಳನ್ನು ಖಂಡಿಸಿದ್ದಾರೆ. ಕೂಳಿನ ಆಶೆಗೆ ಜೋಳಿಗೆ ಹಿಡಿದು ಭಿಕ್ಷೆ ಬೇಡುತ್ತ ಊರೂರು ಅಲೆಯುವ ಜಂಗಮರನ್ನು ಕಟುವಾಗಿ ಟೀಕಿಸುತ್ತಾರೆ. 'ವಿವೇಕವಿಲ್ಲದ ಗುರು ಅವಿವೇಕಿ ಶಿಷ್ಯರನ್ನು ಸೃಷ್ಟಿಸುತ್ತಾನೆ'. ಜಂಗು ಕಟ್ಟಿಕೊಂಡು ತಿರುಗುವುದೆ ಜಂಗಮರ ಕಾಯಕವಲ್ಲ.

ಅಲ್ಲಲ್ಲಿ ತಿರಿದು ಧನಮಂ
ಮೆಲ್ಲನೆ ಕೂಡಿಟ್ಟು ಪೆಣ್ಗಳಿದಿರೊಳ್ ಮೆರೆಯಲ್।
ಪಲ್ಲಕ್ಕಿಯ ದಂಡಿಗೆಯಂ
ನಿಲ್ಲದೆ ಮಾಡಿಸುವರವರದೇಂ ಗಾವಿಲರೋ॥

"ಇವರು ಗೋಮುಖ ವ್ಯಾಘ್ರರು. ಲಲನಾ ಪ್ರೇಮವೇ ಇವರ ಲಿಂಗಭಕ್ತಿ, ವ್ಯಾಮೋಹವೇ ಧ್ಯಾನ, ಅಹಂಕಾರವೇ ಶಿವಪೂಜೆ, ಶೃಂಗಾರಗಾನವೇ ಶಿವಮಂತ್ರ, ಸ್ತ್ರೀಸಂಗವೇ ಮೋಕ್ಷಮಂಗಲ–" ಎಂದು ನಿಂದಿಸುವರು. ಪ್ಲೇಗದ ಹಾವಳಿಯಲ್ಲಿ ಪತಿಯನ್ನು ಕಳೆದುಕೊಂಡು ರೋಧಿಸುವ ತರುಣಿಯರ ಕಾವ್ಯಚಿತ್ರಗಳು ಮನೋವೇದಕವಾಗಿವೆ.

ಬೆದರಿದೆ ಚಿಗರಿಯ ಮರಿಪರಿ

ಇದರಿಗೆ ಇರದೆನ್ನ ಬಿಟ್ಟು ನಡೆದಿರಿ ಬಿಡದೆ।

ಸದರಿಗೆ ಮೆರೆಯುವ ಪತಿಯೆ

ಪದರೊಡ್ಡುವೆ ಪೇಳ್ವಿರೇನು ನನಗಿದು ಗತಿಯೇ॥

ಸತಿ ವಿಲಾಪದ ಇಂಥ ಹಲವು ಪದ್ಯಗಳು ಬಸವಾರ್ಯರ ಸಾಮಾಜಿಕ ಪ್ರಜ್ಞೆಗೆ ನಿದರ್ಶನವಾಗಿವೆ.

ಬಸವಾರ್ಯರು ಕಷ್ಟದಲ್ಲಿಯೇ ಬದುಕು ಕಳೆದರು. ಅವರಿಗೆ "ಚೆನ್ನಬಸವಯ್ಯ ಮತ್ತು ವಿಶ್ವನಾಥ ಎಂಬಿಬ್ಬರು ಗಂಡು ಮಕ್ಕಳಿದ್ದರು. ಚೆನ್ನಬಸವಯ್ಯ ಬೆಳಗಾವಿ ಡಿ.ಸಿ.ಸಿ. ಬ್ಯಾಂಕಿನಲ್ಲಿ ಸೇವೆಸಲ್ಲಿಸುತ್ತಿದ್ದರು. ೧೯೪೨ರಲ್ಲಿ ನಿಧನರಾದರು. ವಿಶ್ವನಾಥ ಕಿತ್ತೂರಿನಲ್ಲಿಯೇ ಇರುತ್ತಿದ್ದು ೧೯೪೮ರಲ್ಲಿ ತೀರಿಕೊಂಡರು. ಇಬ್ಬರಿಗೂ ಮಕ್ಕಳಿರಲಿಲ್ಲ. ಬಸಮ್ಮನವರ ಇಚ್ಛೆಯಂತೆ ಗಣಿಕೊಪ್ಪದ ಚಿಕ್ಕಮಠ ಮನೆತನದ ಬಸವಯ್ಯ ಎಂಬುವರು ದತ್ತು ಮಗನಾಗಿ ಬರುತ್ತಾರೆ. ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಅವರ ವಯಸ್ಸು ಈಗ ತೊಂಬತ್ತು ದಾಟಿದೆ." ಅವರ ಪ್ರಯತ್ನದ ಫಲವಾಗಿ ಬಸವಾರ್ಯರ ಕೆಲವು ಕೃತಿಗಳು ಪ್ರಕಟಗೊಳ್ಳುವುದು ಸಾಧ್ಯವಾಗಿದೆ.

ಕಂಬಿ ಬಸವಾರ್ಯರ ಕುರಿತು ಶಿರೀಷ ಜೋಶಿ ಪರಿಚಯಾತ್ಮಕ ಕೃತಿಯೊಂದನ್ನು ರಚಿಸಿದ್ದು, ಅದನ್ನು ಕಿತ್ತೂರು ರಾಜಗುರು ಸಂಸ್ಥಾನ, ಕಲ್ಮಠದ ಶರಣ ಸಾಹಿತ್ಯ ಅಕಾಡೆಮಿ ೨೦೧೬ರಲ್ಲಿ ಪ್ರಕಟಿಸಿದೆ. ಬಸವಾರ್ಯರು 'ಬಡವನ ಬಯಕೆ ಅರ್ಥಾತ್ ನನ್ನ ಚರಿತ್ರೆ' ಶೀರ್ಷಿಕೆಯಡಿಯಲ್ಲಿ ಅರಟಾಳ ರುದ್ರಗೌಡರಿಗೆ ಬರೆದ ಪತ್ರವನ್ನು ಮೂಲ ಆಕರವಾಗಿಟ್ಟುಕೊಂಡು ಕೃತಿ ರಚಿಸಿರುವುದಾಗಿ ಜೋಶಿ ಹೇಳಿಕೊಂಡಿದ್ದಾರೆ. ಈ ಮೊದಲು ರಾ. ಯ. ಧಾರವಾಡಕರ, ಹಾಗೂ ಆರ್. ಎಸ್. ಜಾಪಗಾವಿ ಕಂಬಿಯವರ ಕುರಿತು ಲೇಖನಗಳನ್ನು ಬರೆದಿದ್ದರು. ಡಾ. ಎಂ. ಎಂ. ಕಲಬುರ್ಗಿಯವರು ಸಣ್ಣ ಟಿಪ್ಪಣಿ ನೀಡಿದ್ದರು. ಆರ್. ನರಸಿಂಹಾಚಾರ್ಯರು 'ಕವಿಚರಿತೆ'ಯ ಮೂರನೇ ಸಂಪುಟದಲ್ಲಿ ಇವರನ್ನು ಉಲ್ಲೇಖಿಸಿದ್ದಾರೆ. ಆದರೆ ಕೃತಿಗಳನ್ನು ಹೆಸರಿಸಿಲ್ಲ. "ಕಿತ್ತೂರು ಬಸವಾರ್ಯ ವೀರಶೈವನು; ಧಾರವಾಡ ಪ್ರಾಂತದವನು. ಅನೇಕ ಲೇಖನಗಳನ್ನು ಕವಿತೆಗಳನ್ನು ಪ್ರಬೋಧ ಮುಂತಾದ ಮಾಸಪತ್ರಿಕೆಗಳಲ್ಲಿ ಬರೆದಿರುವನು" (ಆರ್. ನರಸಿಂಹಾಚಾರ್, ಕವಿಚರಿತೆ ಸಂ. ೨, ಪುಟ. ೨೫೨) ಎಂದಿರುವರು.

ಕಂಬಿ ಬಸವಾರ್ಯರ 'ರುದ್ರಗೌಡರ ಚರಿತ್ರೆ' ಸ್ವಾತಂತ್ರ್ಯ ಪೂರ್ವ ಕಾಲದ ಲಿಂಗಾಯತ ಸಮುದಾಯದ ಸ್ಥಿತಿಗತಿಗಳೆಲ್ಲವನ್ನು ಕಣ್ಣುಮುಂದೆ ತಂದು ನಿಲ್ಲಿಸುತ್ತದೆ. ಪರಂಪರಾಗತವಾದ ಕೃಷಿಯಲ್ಲಿ ತೊಡಗಿಕೊಂಡು ಆಧುನಿಕ ವಿದ್ಯಾಭ್ಯಾಸದಿಂದ ದೂರ ಉಳಿದ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದ ಹಲವು ಮಹನೀಯರ ವಿವರಗಳು ಇದರಲ್ಲಿ ಅಡಕಗೊಂಡಿವೆ. ರುದ್ರಗೌಡರು ಅನೇಕ ಶ್ರೀಮಂತ–ದೇಸಾಯಿಯರ ಮನವೊಲಿಸಿ ಸಮಾಜದ ಅಭಿವೃದ್ಧಿಗಾಗಿ ಅವರಿಂದ ಹಣ ಸಂಗ್ರಹಿಸುತ್ತಾರೆ. ಉತ್ತರ ಕರ್ನಾಟಕದ ವಿಕಾಸಕ್ಕೆ ಅರಟಾಳರು ನೀಡಿದ ಕೊಡುಗೆ ಅಮೋಘವಾದುದು. ಈ

ಕಾರಣಕ್ಕಾಗಿಯೇ ಕಲಬುರ್ಗಿರವರಿಗೆ ಅರಟಾಳರ ಮೇಲೆ ಪ್ರೀತಿ. ಅವರದು ಪರಂಪರೆಯನ್ನು ಕಟ್ಟುವ ಮಣಿಹಕ್ಕೆ ಮೀಸಲಾದ ಸಾರ್ಥಕ ಬದುಕು. 'ವಹಿಸಿಕೊಂಡ ಕೆಲಸವನ್ನು ವಹಿಸಿಕೊಟ್ಟವರಿಗಿಂತ ಹೆಚ್ಚು ವೇಗ–ಕಾಳಜಿಯಿಂದ ಮಾಡಿ ಮುಗಿಸುವ ಸ್ವಭಾವ.' ಅರಟಾಳರು ಮತ್ತು ಕಲಬುರ್ಗಿಯವರು ಸಮಜೋಡಿಯ ಮಹಾನುಭಾವರು. ಒಬ್ಬರದು ಸಮಾಜ ನಿರ್ಮಾಣದ ಕನಸು; ಮತ್ತೊಬ್ಬರದು ಪರಂಪರೆ ನಿರ್ಮಾಣದ ಕನಸು.

ಡಾ. ಕಲಬುರ್ಗಿಯವರು ನನ್ನ ವಿದ್ಯಾಗುರುಗಳು. ನನ್ನಲ್ಲಿ ಸಂಶೋಧನೆಯ ಆಸಕ್ತಿ ಮೂಡಿಸಿ, ನನ್ನನ್ನು ಸಂಶೋಧನದಲ್ಲಿ ತೊಡಗಿಸಿದ ಪುಣ್ಯಾತ್ಮರು. ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆಯಲ್ಲಿ ಸೇರಿಸಿಕೊಂಡು ಪಳಗಿಸಿದವರು. ಇದೀಗ ಅವರ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಯಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತುದು ಒಂದು ಸುದೈವ. ಈ ಅವಕಾಶವನ್ನು ಒದಗಿಸಿದ ಆತ್ಮೀಯರಾದ ಡಾ. ಎಂ.ಎಸ್. ಮದಭಾವಿಯವರಿಗೆ ಕೃತಜ್ಞತೆಗಳು.

❖❖



ರಾವಬಹದ್ದೂರ ಅರಟಾಳ ರುದ್ರಗೌಡರು



ರಾಬಬಹದ್ದೂರ ಅರಟಾಳ ರುದ್ರಗೌಡರು



ಧರ್ಮ ಪತ್ನಿ ಗುರುಪಾದಮ್ಮನವರು




ದತ್ತಕ ಪುತ್ರ ಶ್ರೀಮಂತ ಬಾಬಾಸಾಹೇಬ್
(ಚೆನ್ನವೀರಗೌಡರು)



ಅರಟಾಳ ರುದ್ರಗೌಡರ ಬಂಗ್ಲೆ-ಬೆಳಗಾವಿ



ಶ್ರೀ ರುದ್ರಗೌಡರು ಮೊಮ್ಮಗ ಶ್ರೀ ಚೆನ್ನವೀರಗೌಡ
ಅವರನ್ನು ದತ್ತಕ ತೆಗೆದುಕೊಂಡ ಸಂದರ್ಭ



Home Office
Whitehall
13th April 1912


Dear Sir,

I have the pleasure of forwarding to you herewith a Royal Warrant appointing you to be a Companion of the Imperial Service Order, together with the Insignia of the Order, and I shall be obliged if you will favour me with an acknowledgment of the receipt of these enclosures.

I am,
Dear Sir,
Yours faithfully,

Secretary and Registrar of the Imperial Service Order

ಶ್ರೀ ರುದ್ರಗೌಡರಿಗೆ ಬ್ರಿಟಿಷ್ ಸರಕಾರ ನೀಡಿದ
ಐಯ್. ಎಸ್. ಓ.(ಇಂಪೀರಿಯಲ್ ಸರ್ವ್ಹಿಸ್ ಆರ್ಡರ್)



SANAD


To

Rudragauda Chanvirgauda Artal,
District Deputy Collector,
Belgaum.


I hereby confer upon you the title of Rao Bahadur as a personal distinction.

Viceroy and Governor General of India.


ಶ್ರೀ ರುದ್ರಗೌಡರಿಗೆ ಬ್ರಿಟಿಷ್ ಸರಕಾರ ನೀಡಿದ
‘ರಾವಬಹದ್ದೂರ’ ಸನದು




ಅರಟಾಳ ರುದ್ರಗೌಡರ ಚರಿತ್ರ ಗ್ರಂಥದ ಹಸ್ತಪ್ರತಿ ಭಾಗ-೧




ಹಸ್ತಪ್ರತಿ ಭಾಗ-೨




ಹಸ್ತಪ್ರತಿಯ ಮೊದಲ ಪುಟ




ಹಸ್ತಪ್ರತಿಯ ಹರಿದು ತುಂಟಾದ ಒಂದು ಮಾದರಿ ಪುಟ




ಲಿಂಗಾಯತ ಫಂಡಿನ(ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ) ಮೂಲಾರಂಭ ವಿಷಯವನ್ನೊಳಗೊಂಡ ಮೊದಲ ಪುಟ




ಶ್ರೀ ರುದ್ರಗೌಡರು ಹಸ್ತಪ್ರತಿಯನ್ನು ತಿದ್ದಿ ರುಜು ಹಾಕಿದ ಘಟನೆಗಳ: ಅಧಿಕೃತತೆಗಾಗಿ ನಂಬರ್ ದಿನಾಂಕ ಸಹಿತ ಸರಕಾರಿ ಪತ್ರ ನಮೂದಿಸಿದ ಒಂದು ಮಾದರಿ ಪುಟ



ಧಾರವಾಡದಲ್ಲಿ ಜರುಗಿದ ೧ನೇ ಶ್ರೀಮದ್ ವೀರಶೈವ
ಮಹಾಸಭೆಯ ವಿವರಗಳನ್ನು ಒಳಗೊಂಡ ಆರಂಭದ ಪುಟ



ಶ್ರೀ ರುದ್ರಗೌಡರು ಆರಂಭಿಸಿದ್ದ
"ವೀರಶೈವಗ್ರಂಥಮಾಲಾ" ಪತ್ರಿಕೆಯ ಮೊದಲ ಸಂಚಿಕೆ



ಶ್ರೀ ರುದ್ರಗೌಡರು ನಿವೃತ್ತಿಯಾದ ಸಂದರ್ಭದಲ್ಲಿ
ಚಚಡಿಯಲ್ಲಿ ನೀಡಿದ ಪಾನಸುಪಾರಿ ಸಮಾರಂಭ



ಅರಟಾಳ ರುದ್ರಗೌಡರ ಅಂತಿಮ ಯಾತ್ರೆ

ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ: ಸಾಹಿತ್ಯ ಮಾಲೆ - ಮೂರು

ರಾವಬಹದ್ದೂರ ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರರಾದ

ಅರಟಾಳ ರುದ್ರಗೌಡರ ಚರಿತ್ರೆ

ಇದನ್ನು

ಬಸವಯ್ಯ ಚನ್ನಬಸವಯ್ಯ ಹಿರೇಮಠ ಊರ್ಫ ಕಂಬಿ

ಸಾಕೀನ ಪಾರಿಶವಾಡ ತಾಲೂಕ ಖಾನಾಪುರ

ಸ್ಕೂಲ ಮಾಸ್ತರ ಕಿತ್ತೂರ ಶಾಳಾ ನಂಬರ-೧

ಇವರು ಟಿಪ್ಪಣಿಗಳ ಆಧಾರದಿಂದ ಬರೆದದ್ದು

ಸನ್ ೧೯೦೭ನೇ ಇಸವಿ

❄

ಪರಿಷ್ಕರಣ

ಡಾ. ಎಂ.ಎಂ. ಕಲಬುರ್ಗಿ

ಪ್ರಸಾರಾಂಗ

ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ

*

ಯುಗದ ಉತ್ಸಾಹ

ಎಂ.ಎಂ. ಕಲಬುರ್ಗಿ

ಬಸವಣ್ಣನವರನ್ನು "ಯುಗದ ಉತ್ಸಾಹ"ವೆಂದು ಪ್ರಭುದೇವರು ಬಣ್ಣಿಸಿದ್ದಾರೆ. ೧೯-೨೦ನೆಯ ಶತಮಾನಗಳ ಮಧ್ಯಕಾಲೀನ ಲಿಂಗಾಯತ ಸಮಾಜದಲ್ಲಿ ಅಂಥ ಉತ್ಸಾಹವನ್ನು ತಮ್ಮ ವ್ಯಾಪ್ತಿಯಲ್ಲಿ ಮೆರೆದವರು, ಅರಟಾಳ ರುದ್ರಗೌಡರು. ಹೀಗಾಗಿ ಇವರ ಜೀವನ ಚರಿತ್ರೆಯ ಪರಿಷ್ಕರಣ ನನ್ನ ಬದುಕಿನ ಸಾರ್ಥಕ ಸಂದರ್ಭವೆಂದು ಭಾವಿಸುತ್ತ, ಈ ನಾಲ್ಕು ಮಾತುಗಳನ್ನು ಬರೆಯುತ್ತೇನೆ.

ಪ್ರಕಟನೆಯ ಇತಿಹಾಸ:

೧೯೮೦. ಹಳೆಯ ಕಾಲದಲ್ಲಿ ಅಂಗಡಿಯ ಲೆಕ್ಕ ಬರೆಯಲು ಬಳಸುತ್ತಲಿದ್ದ, ಕೆಂಪು ಅರಿವೆ ಹೊದಿಕೆಯ ಎರಡು ದೊಡ್ಡ ವಹಿಗಳು. ಅವುಗಳನ್ನು ಧಾರವಾಡದ "ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ"ಯಲ್ಲಿ ನೋಡುವ ಭಾಗ್ಯ ನನ್ನದಾಯಿತು. ಅವು ಶ್ರೀ ಅರಟಾಳ ರುದ್ರಗೌಡರ ಜೀವನ ಚರಿತ್ರೆಯ ಸಂಪುಟಗಳು. ಅದೇ ಆಗ ರುದ್ರಗೌಡರ ವಂಶಜರಿಂದ ತಂದು, ಮುಂದೇನು? ಎಂದು ಆ ಸಂಸ್ಥೆಯ ಸದಸ್ಯರು ವಿಚಾರಮಗ್ನರಾಗಿದ್ದ ಕಾಲವದು. ೧೯೦೭-೧೯೨೧ರ ಅವಧಿಯಲ್ಲಿ ಬರೆಯಲ್ಪಟ್ಟ ಈ ಹಳೆಯ ಹಸ್ತಪ್ರತಿ ಸಂಪುಟಗಳನ್ನು ಹಾಳಾಗಲು ಬಿಡಬಾರದು, ಕನಿಷ್ಠಪಕ್ಷ ಮರುಪ್ರತಿಯನ್ನಾದರೂ ಮಾಡಿಸಬೇಕೆಂದು ಭಾವಿಸಿ, ಬೆರಳಚ್ಚು ಮಾಡಿಕೊಂಡು, ಹಸ್ತಪ್ರತಿಯ ಎರಡೂ ಸಂಪುಟಗಳನ್ನು ರುದ್ರಗೌಡರ ವಂಶಜರಿಗೆ ಅವರು ಮರಳಿಸಿದರು.

ಸಾಹಿತ್ಯಮಾಧ್ಯಮದಿಂದ ಸಮಾಜಸೇವೆ ಮಾಡಿದವರು ಶ್ರೀ ಫ.ಗು.ಹಳಕಟ್ಟಿ, ಶ್ರೀ ಶಿ.ಶಿ. ಬಸವನಾಳ. ಇವರ ಆದರ್ಶದಲ್ಲಿ ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಮಠದ ಮೂಲಕ "ವೀರಶೈವ ಪುಣ್ಯಪುರುಷ"ರ ಚರಿತ್ರೆಗಳನ್ನು ಪ್ರಕಟಿಸುವ ಯೋಜನೆಯಲ್ಲಿ ಮುಳುಗಿದ್ದ ನನಗೆ, ಈ ವಹಿಗಳನ್ನು ಪ್ರಕಟಿಸುವ ಹಂಬಲ ಅಂದೇ ಮೂಡಿದ್ದಿತು.

ಈ ಮಧ್ಯೆ ಡೆಪ್ಯುಟಿ ಚೆನ್ನಬಸಪ್ಪ, ಸಿರಸಂಗಿ ಲಿಂಗರಾಜ, ಶಿ.ಶಿ. ಬಸವನಾಳ, ಹರ್ಡೇಕರ ಮಂಜಪ್ಪ, ಹಳಕಟ್ಟಿ ಫಕೀರಪ್ಪ ಮೊದಲಾದವರನ್ನು ಕುರಿತು ಪಿಎಚ್.ಡಿ. ಅಧ್ಯಯನಮಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ, ಪರೋಕ್ಷವಾಗಿ ಮಾರ್ಗದರ್ಶನ ಮಾಡುವ, ಈ ಪ್ರಬಂಧಗಳ ಪ್ರಕಟನ ಕೆಲಸದಲ್ಲಿ ಭಾಗಿಯಾಗುವ ಸದವಕಾಶ ನನ್ನದಾಯಿತು. ಹೀಗಿದ್ದೂ ಹಾನಗಲ್ಲ ಕುಮಾರಸ್ವಾಮಿಗಳು, ವಾರದ ಮಲ್ಲಪ್ಪನವರು, ಅರಟಾಳ ರುದ್ರಗೌಡರು ಮೊದಲಾದವರನ್ನು ಕುರಿತು ಪಿಎಚ್.ಡಿ. ಅಧ್ಯಯನ ಮಾಡಿಸಬೇಕೆಂಬುದು ಕೈಗೂಡದ

ಕನಸಾಗಿ ಉಳಿಯಿತು. ಇಂಥ ಕೆಲಸ-ಕನಸುಗಳಿಂದ ಹದಗೊಂಡ ನನ್ನ ಮನಸ್ಸಿನ ಮೂಲೆಯಲ್ಲಿ, ಈ ವಹಿಗಳ ಪ್ರಕಟನೆ ದೊಡ್ಡ ನೆನಪಾಗಿ ಕಾಡುತ್ತಲಿದ್ದಿತು.

೨೦೦೧. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭ. ಬೆಂಗಳೂರಿಗೆ ಹೋಗಿದ್ದ ನಾನು, ಬಳ್ಳಾರಿ ಜಿಲ್ಲೆಯ ಶಾಸಕರೂ, ತೋಟಗಾರಿಕೆ ಇಲಾಖೆಯ ಸಚಿವರೂ ಆಗಿದ್ದ ಶ್ರೀ ಅಲ್ಲಂ ವೀರಭದ್ರಪ್ಪ ಅವರನ್ನು ಕಾರ್ಯನಿಮಿತ್ತ ದೂರವಾಣಿಯ ಮೂಲಕ ಸಂಪರ್ಕಿಸುತ್ತಲೇ "ಬನ್ನಿ, ನಾನೇ ಫೋನ್ ಮಾಡುವವನಿದ್ದೆ. ಬೇಗ ಬನ್ನಿ, ತಪ್ಪಿಸಬೇಡಿ" ಎನ್ನುವಷ್ಟರಲ್ಲಿ ನಾನು, ನನ್ನ ಶ್ರೀಮತಿ ಉಮಾ ಅವರ ಮನೆಯಲ್ಲಿದ್ದೆವು. ಶ್ರೀ ವೀರಭದ್ರಪ್ಪನವರ ಶ್ರೀಮತಿ ಸುನಂದಾ ಅವರು ಎರಡು ದೊಡ್ಡ ಝೆರಾಕ್ಸ ಸಂಪುಟಗಳನ್ನು ತಂದು ನನ್ನ ಮುಂದೆ ಇಟ್ಟರು. "ಈಕೆ ಅರಟಾಳ ರುದ್ರಗೌಡರ ಮಗಳ ಮೊಮ್ಮಗಳು. ಕೈಬರಹದಲ್ಲಿರುವ ಇವು, ಅವರ ಜೀವನ ಚರಿತ್ರೆಯ ಬೆರಳಚ್ಚು ಪ್ರತಿಯ ಝೆರಾಕ್ಸ ಸಂಪುಟಗಳು. ನೀವು ಚರಿತ್ರೆಯ, ವೀರಶೈವ ಪುಣ್ಯಪುರುಷರ ಚರಿತ್ರೆಯ ಪ್ರಕಟನೆಯ ಆಸಕ್ತರು. ಇದರ ಪರಿಷ್ಕರಣ ಕಾರ್ಯ ನಿಮ್ಮಿಂದ ಮಾತ್ರ ಸಾಧ್ಯವೆಂದು, ಇಂದೇ ನಾವಿಬ್ಬರೂ ಮಾತನಾಡಿದ್ದೆವು. ನೀವು ಬಂದು ಬಿಟ್ಟಿರಿ. ರುದ್ರಗೌಡರು ಕಳೆದ ಶತಮಾನದ ವೀರಶೈವ ಪುಣ್ಯ....." ಎಂದು ವೀರಭದ್ರಪ್ಪನವರು ಹೇಳುತ್ತಲೇ ಅವರ ಮಾತಿಗೆ ತಡೆಹಾಕಿದೆ. "ನಿಮ್ಮಿಬ್ಬರಿಗಿಂತ ರುದ್ರಗೌಡರ ಬಗ್ಗೆ, ಈ ಸಂಪುಟಗಳ ಬಗ್ಗೆ ನನಗೆ ಹೆಚ್ಚು ಗೊತ್ತಿದೆ. ಇವುಗಳನ್ನು ಮೂಲ ಹಸ್ತಪ್ರತಿಯಲ್ಲಿಯೇ ಓದಿದ್ದೇನೆ" ಎಂದು ವಿವರಗಳನ್ನು ಹೇಳಿದೆ. ಕೇಳಿ ವಿಸ್ಮಿತರಾದರು. "ಇದರ ಪರಿಷ್ಕರಣ ಹೊಣೆ ನಿಮ್ಮದು" ಎನ್ನುತ್ತ ಝೆರಾಕ್ಸ ಪ್ರತಿ ನನ್ನ ಕೈಗಿಟ್ಟರು. ಹೊತ್ತುಕೊಂಡು ಹಂಪಿಗೆ ಮರಳಿದೆ.

ಕುಲಪತಿ ಹುದ್ದೆಯಿಂದ ನಿವೃತ್ತನಾದೆ. ವಿಶ್ರಾಂತಿ ಬಯಸಿ ನೇರವಾಗಿ ಪುಣೆಗೆ ಹೋಗಿ ಮಗನ ಜೊತೆ ಇದ್ದು, ಅಲ್ಲಿ ಮೂರು ತಿಂಗಳು ಈ ಝೆರಾಕ್ಸ ಪ್ರತಿಯ ಪರಿಷ್ಕರಣಕಾರ್ಯ ಪೂರೈಸಿದೆ. ನನ್ನಲ್ಲಿದ್ದುದು ಮೂಲಪ್ರತಿಯ ಬೆರಳಚ್ಚು ಪ್ರತಿಯ ಝೆರಾಕ್ಸ ಪ್ರತಿ. ಬೆರಳಚ್ಚಿನ ದೋಷ, ಝೆರಾಕ್ಸ ಸಂದರ್ಭದ ಅಸ್ಪಷ್ಟತೆಗಳು ಇದರಲ್ಲಿ ತುಂಬಿಕೊಂಡಿದ್ದವು. ಮೂಲಪ್ರತಿಯೊಂದಿಗೆ ಹೋಲಿಸಿ ನೋಡುವುದು ಅಗತ್ಯವೆನಿಸಿತು. ಅದನ್ನು ಕಳಿಸಿಕೊಡಲು ಶ್ರೀ ವೀರಭದ್ರಪ್ಪನವರಿಗೆ ಪತ್ರ ಬರೆದೆ, ದೂರವಾಣಿ ಮೂಲಕ ಮಾತನಾಡಿದೆ. ರಾಜಕೀಯ ಗದ್ದಲದಲ್ಲಿ ನನ್ನ ಮಾತು ಅವರಿಗೆ ಕೇಳಿಸಲಿಲ್ಲ.

೨೦೦೨. ವಹಿಸಿಕೊಂಡ ಕೆಲಸವನ್ನು ವಹಿಸಿಕೊಟ್ಟವರಿಗಿಂತ ಹೆಚ್ಚು ವೇಗ-ಕಾಳಜಿಗಳಿಂದ ಮಾಡಿ ಮುಗಿಸುವದು ನನ್ನ ಸ್ವಭಾವ. ಶ್ರೀ ಅರಟಾಳ ಅವರ ಪುಸ್ತಕ ಅರ್ಧಕ್ಕೆ ನಿಂತ ಚಿಂತೆ ಬಾಧಿಸತೊಡಗಿತು. ಕೆಲವು ದಿನಗಳ ಬಳಿಕ ಶಸ್ತ್ರಚಿಕಿತ್ಸೆಗಾಗಿ ಬೆಳಗಾವಿಯ ಕೆ.ಎಲ್.ಇ. ಆಸ್ಪತ್ರೆಯಲ್ಲಿದ್ದ ಸಂದರ್ಭ. ಸಾಂಸ್ಕೃತಿಕ ಶ್ರದ್ಧೆಯ ಮಿತ್ರರಾದ ಶ್ರೀ. ಬಿ.ಎಸ್. ಗವಿಮಠ ಅವರಿಗೆ ಇದೆಲ್ಲವನ್ನು ವಿವರಿಸಿದೆ. ಅವರ ಪ್ರಯತ್ನದಿಂದಾಗಿ ಶ್ರೀ ರುದ್ರಗೌಡರ ದತ್ತುಪುತ್ರರ ಮೊಮ್ಮಕ್ಕಳಾದ ಶ್ರೀ ಚೆನ್ನವೀರಗೌಡರು ಆಸ್ಪತ್ರೆ ವರೆಗೆ ಬಂದು, ಮೂಲ ಹಸ್ತಪ್ರತಿ ಕೊಟ್ಟರು.

ನನ್ನ ಆರೋಗ್ಯವನ್ನು ವಿಚಾರಿಸಲು ಕೋಣೆಗೆ ಬಂದ, ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆ ಅವರಿಗೆ ಈ ಕಥೆ ಹೇಳಿ, ಪ್ರಕಟನೆಯ ವ್ಯಥೆ ವಿವರಿಸಿದೆ. "ಇದನ್ನು ನಮ್ಮ ಕೆ.ಎಲ್.ಇ. ಸೊಸೈಟಿಯಿಂದ ಪ್ರಕಟಿಸೋಣ. ಇದು ನಮ್ಮ ಸಂಸ್ಥೆಯ ಕರ್ತವ್ಯ, ನನಗೆ ಗೌರವ" ಎಂದು ಭರವಸೆ ನೀಡಿದರು.

ಆಸ್ಪತ್ರೆಯಿಂದ ಮನೆಗೆ ಬಂದವನೇ ಝೆರಾಕ್ಸಪ್ರತಿಯನ್ನು ಮೂಲಪ್ರತಿಯೊಂದಿಗೆ ಹೋಲಿಸಿ ನೋಡುವ, ಪರಿಷ್ಕರಣಮಾಡುವ ಕೆಲಸದಲ್ಲಿ ಮೂರು ತಿಂಗಳು ಮಗ್ನನಾದೆ. ಇದು ಭಾವಿಸಿದಷ್ಟು

ಸುಲಭವಾಗಿರಲಿಲ್ಲ. ಮೊದಲನೆಯದು ಗ್ರಂಥಬಾಹುಳ್ಯ, ಎರಡನೆಯದು ಈಗಾಗಲೇ ಅಲ್ಲಲ್ಲಿ ಮುರಿದು ಹೋಗಿರುವ- ಈಗ ಮುಟ್ಟಿದರೆ ಮುರಿಯುವ ಹಸ್ತಪ್ರತಿ, ಮೂರನೆಯದು ಮೂಲಪಠ್ಯದಲ್ಲಿ ಆಮೇಲೆ ಅಲ್ಲಲ್ಲಿ ಸೇರಿಸಿದ ಅವಶ್ಯ- ಅನವಶ್ಯ ಟಿಪ್ಪಣಿಗಳು ಮತ್ತು ಈ ಟಿಪ್ಪಣಿಗಳ ಅಸ್ಪಷ್ಟ ಅಕ್ಷರಗಳು. ಈ ಎಲ್ಲ ತೊಡಕು ತೊಂದರೆಗಳ ನಡುವೆಯೂ ಶುದ್ಧ ಝುರಾಕ್ಸಪ್ರತಿ ಸಿದ್ಧವಾಗಿ, ಮುದ್ರಣಾಲಯ ಸೇರಿ ಮತ್ತೆ ೬ ತಿಂಗಳು ದುಡಿಯುವಲ್ಲಿ ಮುದ್ರಿತ ಪ್ರತಿ ಬೆಳಕು ಕಂಡಿತು. ಒಟ್ಟಾರೆ, ಹಸ್ತಪ್ರತಿಯಿಂದ ಸಿದ್ಧವಾದ ಬೆರಳಚ್ಚು ಪ್ರತಿಯ ಝುರಾಕ್ಸ ಪ್ರತಿಯು ನನ್ನ ಕೈಯಲ್ಲಿ ಪರಿಷ್ಕೃತ ಝುರಾಕ್ಸ ಪ್ರತಿಯಾಗಿ ಪರಿವರ್ತನೆಗೊಂಡು, ಈಗ "ಮುದ್ರಿತ ಪ್ರತಿ"ಯಾಗಿ ಹೊರಬರುತ್ತಲಿದೆ. ಹೀಗೆ ಕಳೆದ ಎಪ್ಪತ್ತೈದು ವರ್ಷಗಳಿಂದ ಅಜ್ಞಾತ ವಾಸದಲ್ಲಿದ್ದು, ಬಳಿಕ ಇಪ್ಪತ್ತೈದು ವರ್ಷ ಧಾರವಾಡ-ಬೆಳಗಾವಿ-ಬಳ್ಳಾರಿ-ಬೆಂಗಳೂರು ಸುತ್ತಾಡಿ, ಈ ಹಸ್ತಪ್ರತಿ ನನ್ನನ್ನು ಹುಡುಕಿಕೊಂಡು ಬಂದುದು, ನನ್ನ ಭಾಗ್ಯವೆಂದೇ ಭಾವಿಸುತ್ತೇನೆ.

ಅರಟಾಳ ರುದ್ರಗೌಡರು:

೧೯-೨೦ನೆಯ ಶತಮಾನಗಳ ಮಧ್ಯದ ಅವಧಿಯು ವಿದೇಶೀಯರ "ಆಡಳಿತ"ದ ವಿರುದ್ಧ, ಸ್ವದೇಶೀಯರ "ಶೋಷಣೆ"ಯ ವಿರುದ್ಧ ನಡೆದ ಎರಡು ಸ್ವಾತಂತ್ರ್ಯ ಚಳುವಳಿಗಳ ಸಂದರ್ಭವೆನಿಸಿದೆ. ಲೋಕಮಾನ್ಯ ಟಿಳಕ (ಜನನ ೧೮೫೬), ಮಹಾತ್ಮಾಗಾಂಧಿ (ಜನನ ೧೮೬೯) ಮೊದಲಾದವರು ವಿದೇಶೀಯರ ಆಡಳಿತದ ವಿರುದ್ಧ, ಛತ್ರಪತಿ ಶಾಹೂಮಹಾರಾಜ (ಜನನ ೧೮೭೪), ಅಂಬೇಡ್ಕರ (ಜನನ ೧೮೯೧) ಮೊದಲಾದವರು ಸ್ವದೇಶೀಯರ ಶೋಷಣೆಯ ವಿರುದ್ಧ ದನಿಯೆತ್ತಿದವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ವಯಸ್ಸಿನಲ್ಲಿ ಇವರೆಲ್ಲರಿಗಿಂತ ಹಿರಿಯರಾದ ಅರಟಾಳ ರುದ್ರಗೌಡರು (ಜನನ ೧೮೫೧) ಸ್ವದೇಶಿಯರ ಶೋಷಣೆಯ ವಿರುದ್ಧ ಸಿಡಿದು ನಿಂತವರಾಗಿದ್ದಾರೆ. ಅಂಬೇಡ್ಕರ ಅವರು ತನ್ನ ಜನರ ಶೋಷಣೆಯನ್ನು ತಪ್ಪಿಸುವುದಕ್ಕಾಗಿ ಹೆಣಗಿದಂತೆ, ಉತ್ತರ ಕರ್ನಾಟಕ ವ್ಯಾಪ್ತಿಯಲ್ಲಿ ರುದ್ರಗೌಡರು ತನ್ನ ಜನರ ಶೋಷಣೆಯನ್ನು ತಪ್ಪಿಸುವುದಕ್ಕಾಗಿ ಹೋರಾಡಿದರು. ನೇರವಾಗಿ ಹೇಳುವುದಾದರೆ ಮೊದಲಿನಿಂದಲೂ ಧಾರ್ಮಿಕ ಶೋಷಣೆ ಮಾಡುತ್ತ ಬಂದು, ಪೇಶವೆಯರ ಕಾಲದಲ್ಲಿ ನೇರವಾಗಿ ಆಡಳಿತ ಶೋಷಣೆಯನ್ನೂ ರೂಢಿಸಿಕೊಂಡಿದ್ದ ಬ್ರಾಹ್ಮಣರ ವಿರುದ್ಧ ಹೋರಾಟಕ್ಕಿಳಿದರು. ಒಂದರ್ಥದಲ್ಲಿ ವಿದೇಶೀಯರ ವಿರುದ್ಧ ನಡೆದುದು ಕೊನೆಯೆಂಬುದನ್ನುಳ್ಳ "ಆಡಳಿತ ಸ್ವಾತಂತ್ರ್ಯ ಹೋರಾಟ"ವಾದರೆ, ಸ್ವದೇಶೀಯರ ವಿರುದ್ಧ ನಡೆದುದು ಕೊನೆಯೆಂಬುದೇ ಇಲ್ಲದ "ಸಾಮಾಜಿಕ ಸ್ವಾತಂತ್ರ್ಯ ಹೋರಾಟ"ವಾಗಿದೆ. ಉತ್ತರ ಕರ್ನಾಟಕದಲ್ಲಿ ಈ ಸಾಮಾಜಿಕ ಸ್ವಾತಂತ್ರ್ಯ ಹೋರಾಟಗಾರರಾಗಿ ಮೂಡಿ ಬಂದವರು, ಮೂಡಿ ಬಂದ ಮೊದಲಿಗರು, ರುದ್ರಗೌಡರು. ಮೇಲು ನೋಟಕ್ಕೆ ಘರ್ಷಣೆಗಳೆನಿಸಿದರೂ, ಜಗಳ ಬೇರೆ, ಹೋರಾಟ ಬೇರೆ, ಚಳುವಳಿ ಬೇರೆ. ಅನ್ಯಾಯ-ಅನ್ಯಾಯಗಳ ನಡುವಿನದು ಜಗಳ, ಅನ್ಯಾಯ-ನ್ಯಾಯಗಳ ನಡುವಿನದು ಹೋರಾಟ. ಈ ಹೋರಾಟ ಸಾಮೂಹಿಕ ಸ್ವರೂಪ ಪಡೆದರೆ ಚಳುವಳಿಯೆನಿಸಿಕೊಳ್ಳುತ್ತದೆ. ರುದ್ರಗೌಡರದು ಹೋರಾಟ. ಈ ಹೋರಾಟಕ್ಕೆ ಒಂದಿಷ್ಟು ಸಾಮೂಹಿಕ ಸ್ವರೂಪ ಪ್ರಾಪ್ತವಾಗಿದ್ದರೆ, ಇವರು ರಾಷ್ಟ್ರಮಟ್ಟದ, ಕೊನೆಯ ಪಕ್ಷ ರಾಜ್ಯಮಟ್ಟದ ನೇತಾರರಾಗುತ್ತಿದ್ದರು. ಹೀಗಿದ್ದೂ ಮುಂದಿನ ಕಾಲದ "ಬ್ರಾಹ್ಮಣೇತರ ಚಳುವಳಿ"ಗೆ ಧೈರ್ಯ ತಂದುಕೊಟ್ಟ ಇವರ ಹೋರಾಟಕ್ಕೆ, ರಾಜ್ಯಮಟ್ಟದಲ್ಲಾದರೂ ಸರಿಯಾದ ಪ್ರಸಿದ್ಧಿ ಸಿಗುವುದು ಅಗತ್ಯವಿದೆ. ಸರಕಾರಿ ಅಧಿಕಾರಿಯಾಗಿ, ಕಚೇರಿಯಲ್ಲಿ ವಿಪರೀತ ಬೆಳೆದು ನಿಂತಿದ್ದ ಲಂಚವನ್ನು

ನಿರ್ಮೂಲನ ಮಾಡಿದುದು ರುದ್ರಗೌಡ ಜೀವನದ ಪರಮ ಸಾಧನೆ. "The entire credit of eradicating corruption from the Revenue Department, goes to Rao Bahadur R.C. Aratal" ಎಂದು ಸರಕಾರದ ರೆವಿನ್ಯೂ ಎಡ್ಮಿನಿಸ್ಟ್ರೇಟಿವ್ ರಿಪೋರ್ಟಿನಲ್ಲಿ ದಾಖಲಾದುದನ್ನು ಇಲ್ಲಿ ಗಮನಿಸಬೇಕು.

೧೮೫೯ರಲ್ಲಿ ಅರಟಾಳದಂಥ ಸಣ್ಣಗ್ರಾಮದಲ್ಲಿ ಹುಟ್ಟಿದ, ಹಳ್ಳಿಯ ಗೌಡರ ಮಗನಾದ ರುದ್ರಗೌಡರು ನಿರ್ವಹಿಸಿದ ಸರಕಾರಿ ಹುದ್ದೆಗಳು ಹೀಗಿವೆ. :

೧೮೭೩-೭೪	ಅರಟಾಳ ಗ್ರಾಮದ ಗೌಡಕಿ
೧೮೭೫	ಹದಿನೈದು ರೂಪಾಯಿ ವೇತನದ ಕಾರಕೂನ, ಧಾರವಾಡ
೧೮೭೮	ಕಲೆಕ್ಟರ ಡೆಪ್ಯುಟಿ ಚಿಟ್ನೀಸ್, ಧಾರವಾಡ
೧೮೮೦	ಕಲೆಕ್ಟರ ಅವರ ಚಿಟ್ನೀಸ್, ಧಾರವಾಡ
೧೮೮೮	ಕಲೆಕ್ಟರ ಅವರ ದಫ್ತರ್‌ದಾರ, ಉತ್ತರ ಕನ್ನಡ ಜಿಲ್ಲೆ
೧೮೯೦	ದಕ್ಷಿಣ ವಿಭಾಗದ ಕಮೀಶನ್ ಅವರ ನೇಟಿವ್ಹ ಅಸಿಸ್ಟಂಟ್
೧೮೯೨	ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ, ವಿಜಾಪುರ
೧೮೯೭	ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ, ನಾಸಿಕ
೧೮೯೮-೧೯೧೩	ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ, ಬೆಳಗಾವಿ

ಕೇವಲ ಮೆಟ್ರಿಕ್ (ಈಗಿನ ಎಸ್.ಎಸ್.ಎಲ್.ಸಿ.) ವರೆಗೆ ಓದಿ, ಹಳ್ಳಿಯ ಗೌಡಕಿಯಿಂದ ಆರಂಭಿಸಿ, ಡೆಪ್ಯುಟಿ ಕಲೆಕ್ಟರ್ ಹುದ್ದೆ ವರೆಗೆ ಏರಿದ ರುದ್ರಗೌಡರ ಮನೋಧರ್ಮ ವ್ಯಕ್ತಿಕೇಂದ್ರಿತವಲ್ಲ, ಸಮಾಜ ಕೇಂದ್ರಿತ. ಹೀಗಾಗಿ ವ್ಯಕ್ತಿಕಲ್ಯಾಣಕ್ಕೆ ಸೀಮಿತರಾಗದೆ, ಸಮಾಜಕಲ್ಯಾಣಕ್ಕೆ, ಲಿಂಗಾಯತ ಸಮಾಜದ ಬಹುಮುಖಿ ಕಲ್ಯಾಣಕ್ಕೆ ವಿಸ್ತಾರಗೊಂಡರು.

ಬೌದ್ಧಿಕವಾಗಿ ಬೆಳೆಯಲು ಕಾರಣವಾಗಿರುವ ಶಿಕ್ಷಣ, ಭೌತಿಕವಾಗಿ ಬದುಕಲೂ ಸಾಧನವೆಂಬುದನ್ನು ಅರಿತ ಲಿಂಗಾಯತರು, ೧೯ನೆಯ ಶತಮಾನದ ಮಧ್ಯದಲ್ಲಿ ತಮ್ಮ ದೃಷ್ಟಿಯನ್ನು ಶಿಕ್ಷಣದ ಕಡೆಗೆ ಕೇಂದ್ರೀಕರಿಸಿದರು. ಇದರ ಫಲವೆಂಬಂತೆ ವಿದ್ಯಾರ್ಥಿಗಳ ಊಟಕ್ಕಾಗಿ ಬೆಳಗಾವಿಯಲ್ಲಿ (೧೮೬೭) 'ಲಿಂಗಾಯತ ಬೋರ್ಡಿಂಗ್' ಸ್ಥಾಪಿಸುವ ಮೂಲಕ ಡೆಪ್ಯುಟಿ ಚೆನ್ನಬಸಪ್ಪನವರು 'ಅನ್ನದಾಸೋಹ'ವನ್ನು ತೆರೆದರೆ, ಹಣದ ಸಹಾಯಕ್ಕಾಗಿ ಧಾರವಾಡದಲ್ಲಿ (೧೮೮೩) "ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ"ಯನ್ನು ಸ್ಥಾಪಿಸುವ ಮೂಲಕ ರುದ್ರಗೌಡರು 'ಅರ್ಥದಾಸೋಹ'ವನ್ನು ಆರಂಭಿಸಿದರು. ಆ ಕಾಲದಲ್ಲಿ ಇದು ಲಿಂಗಾಯತರ ಶಿಕ್ಷಣಾಭಿವೃದ್ಧಿಯ ಅನಧಿಕೃತ ಇಲಾಖೆಯಂತೆ ಕೆಲಸಮಾಡಿತು. ಸುಶಿಕ್ಷಿತ ಲಿಂಗಾಯತ ವಿದ್ಯಾರ್ಥಿಗಳ ಹೆಸರನ್ನು ನೌಕರಿಗಾಗಿ ಶಿಫಾರಸ್ ಮಾಡುವ ಅಧಿಕಾರವನ್ನು ಅಂದಿನ ಸರಕಾರ ಈ ಸಂಸ್ಥೆಗೆ ನೀಡುವ ಮೂಲಕ, ಇದು ಅರೆ ಸರಕಾರಿ ಸಂಸ್ಥೆಯೆಂಬಂತೆ ಮಾನ್ಯತೆ ಗಳಿಸಿತು. ಬಳಿಕ ಜಗದ್ಗುರು ತೋಂಟದಾರ್ಯ ಸಂಸ್ಕೃತಪಾಠಶಾಲೆ, ಗದಗ (೧೮೯೯), ವೀರಶೈವ ವಿಲಾಸ ಪ್ರೆಸ್, ಹುಬ್ಬಳ್ಳಿ (೧೯೦೩), ವೀರಶೈವ ಮಹಾಸಭೆ,ಧಾರವಾಡ (೧೯೦೪), ಸಿರಸಂಗಿ ಲಿಂಗರಾಜ ಫಂಡ್, ಬೆಳಗಾವಿ (೧೯೦೬), ಲಿಂಗಾಯತ ಬೋರ್ಡಿಂಗ್, ಕೊಲ್ಲಾಪುರ (೧೯೦೭), ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್ ಸೊಲ್ಲಾಪುರ (೧೯೦೭), ಸೂಲಗಿತ್ತಿಯರ ತರಬೇತಿಕೇಂದ್ರ, ಬೆಳಗಾವಿ (೧೯೦೮), ಕೆ.ಎಲ್.ಈ. ಸೊಸೈಟಿ, ಬೆಳಗಾವಿ (೧೯೧೬), ಕರ್ನಾಟಕ ಸೆಂಟ್ರಲ್ ಕೋ ಆಪರೇಟಿವ್ಹ ಬ್ಯಾಂಕ, ಧಾರವಾಡ (೧೯೧೬), ಕರ್ನಾಟಕ ಕಾಲೇಜು, ಧಾರವಾಡ (೧೯೧೭) ಮೊದಲಾದ ಸಂಸ್ಥೆಗಳನ್ನು ಪ್ರತ್ಯಕ್ಷವಾಗಿ ಸ್ಥಾಪಿಸಿದರು, ಪರೋಕ್ಷವಾಗಿ ಸ್ಥಾಪನೆಗೆ ಪ್ರೇರಣೆ ನೀಡಿದರು.ಇವುಗಳಿಗಾಗಿ, ತಮ್ಮ ಜೀವಮಾನದ ೧೮೮೩-೧೯೧೭ರ ವರೆಗಿನ

ಅವಧಿಯಲ್ಲಿ ಸಾರ್ವಜನಿಕರಿಂದ, ಇಂದಿನ ಕಾಲದಲ್ಲಿ ನೂರಾರು ಕೋಟಿಗೆ ಸಮವೆನಿಸುವ ಸುಮಾರು ೨೫ ಲಕ್ಷ ರೂಪಾಯಿ ಸಂಗ್ರಹಿಸಿದರು. ಇಂಥ ಪ್ರಯತ್ನಗಳ ಮೂಲಕ, ಲಿಂಗಾಯತರು ಆಧುನಿಕ ಇಂಗ್ಲಿಷ ಶಿಕ್ಷಣ, ಆರ್ಷೇಯ ಸಂಸ್ಕೃತ ಶಿಕ್ಷಣ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುವಂತೆ ಮಾಡಿದರು. ಸಾಲದುದಕ್ಕೆ ವೀರಶೈವ ವಿಲಾಸ ಪ್ರೆಸ್ ಆರಂಭಿಸಿ, ಲಿಂಗವಂತ ಪತ್ರಿಕೆ-ಪುಸ್ತಕಗಳ ಪ್ರಕಟನೆಗೆ ಚಾಲನೆ ನೀಡಿದರು. ರಾಯಲ್ ಏಸಿಯಾಟಿಕ್ ಸೊಸೈಟಿ (ಮುಂಬಯಿ) ಮೆಂಬರರಾಗಿ, ಎಂಥ್ರಾಪೊಲಾಜಿಕಲ್ ಸೊಸೈಟಿ ಜರ್ನಲ್‌ದಲ್ಲಿ ಅನೇಕ ಲೇಖನ ಬರೆದು, ತಮ್ಮ ಬರವಣಿಗೆಯ ಒಲವನ್ನು ಮೆರೆದರು. ಇನ್ನೂ ಮುಂದುವರಿದು ಅಂದಿನ ಸಾಮಾಜಿಕ ಪ್ರತಿಷ್ಠೆಯೆನಿಸಿದ್ದ ಅಡ್ಡಪಲ್ಲಕ್ಕಿ ಉತ್ಸವ, ವ್ಯಾಸನತೋಳು ಮೆರವಣಿಗೆ, ದೇವರ ಪೂಜೆಯ ಹಕ್ಕು ಮೊದಲಾದ ಹೋರಾಟಗಳಲ್ಲಿ ಲಿಂಗಾಯತರಿಗೆ ಜಯವನ್ನು ದೊರಕಿಸಿಕೊಟ್ಟರು. ಇವೆಲ್ಲವುಗಳಿಂದಾಗಿ ಲಿಂಗಾಯತರ ಭೌತಿಕ, ಸಾಂಸ್ಕೃತಿಕ ಮಟ್ಟ ವರ್ಧಿಸಿತು. ಅವರಲ್ಲಿ ಆತ್ಮವಿಶ್ವಾಸ, ಆತ್ಮಗೌರವ ಬೆಳೆಯಿತು.ಡೆಪ್ಯುಟಿ ಕಲೆಕ್ಟರ್ ಹುದ್ದೆಯ ವರೆಗೂ ಏರಿ ನಿವೃತ್ತರಾದ (೧೯೧೩) ರುದ್ರಗೌಡರ ನಿಸ್ಪೃಹ ಸರಕಾರಿ ಸೇವೆ, ಸಮಾಜಸೇವೆಗಳನ್ನು ಗಮನಿಸಿ, ಸರಕಾರ ಇವರಿಗೆ ರಾವ್‌ಬಹಾದ್ದೂರ ಮತ್ತು ಆಯ್.ಎಸ್.ಓ. ಪದವಿ ಪ್ರಶಸ್ತಿಗಳನ್ನು ನೀಡಿತು. ಲಿಂಗಾಯತ ಸಮಾಜವೂ ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನ ನೀಡಿ ಗೌರವಿಸಿತು.

ಅರಟಾಳ ರುದ್ರಗೌಡರ ಚರಿತ್ರೆ:

ಡೆಪ್ಯುಟಿ ಚೆನ್ನಬಸಪ್ಪನವರು ಲಿಂಗೈಕ್ಯ(೧೮೮೧)ರಾಗುವಲ್ಲಿ ಲಿಂಗಾಯತರ ಶಿಕ್ಷಣ ಅಭಿವೃದ್ಧಿ ಅನಾಥವಾಯಿತು. ಈ ಹೊಣೆಯನ್ನು ಗಿಲಗಂಚಿ ಗುರುಸಿದ್ಧಪ್ಪ ಮತ್ತು ಅರಟಾಳ ರುದ್ರಗೌಡರು ಹೊತ್ತರು. ಆದರೆ ಗಿಲಗಂಚಿಯವರು ೧೮೯೧ರಲ್ಲಿ ನಿಧನರಾಗುವಲ್ಲಿ ಆ ಭಾರವನ್ನು ಅರಟಾಳರೊಬ್ಬರೇ ಹೊರಬೇಕಾಯಿತು. ಕ್ರಿಯಾಶೀಲ ವ್ಯಕ್ತಿಯಾಗಿದ್ದ ಇವರು, ಲಿಂಗಾಯತರಿಗೆ ಅವಶ್ಯವಾಗಿರುವ ಎಲ್ಲ ಅವಕಾಶಗಳನ್ನು ತೆರೆಯುವ ಮೂಲಕ, ಸಾಮಾಜಿಕ ಸಾರ್ವಭೌಮನಂತೆ ಬೆಳೆದರು. ಹೀಗೆ ಸಾಮಾಜಿಕ ವ್ಯಕ್ತಿಯಾಗಿ ಬೆಳೆಯುತ್ತಿದ್ದಂತೆಯೇ ಸಾಮಾನ್ಯರಲ್ಲಿ ದಂತಕಥೆಯಾಗಿ, ವಿದ್ವಾಂಸರ ರಚನೆಗಳಿಗೆ ವಸ್ತುವಾಗಿ ಪ್ರಚಾರ ಪಡೆದರು. ಸ್ವತಃ ರುದ್ರಗೌಡರೂ ದಿನಚರಿ ಬರೆಯುವ ರೂಢಿಯಿಟ್ಟುಕೊಂಡಿದ್ದರು. ಈ ಎಲ್ಲ ಲಿಖಿತ ಮತ್ತು ಮೌಖಿಕ ಸಾಮಗ್ರಿಯನ್ನು, ರುದ್ರಗೌಡರ ಸಹವಾಸದಲ್ಲಿದ್ದು ಕಣ್ಣಾರೆ ಕಂಡ ಘಟನೆಗಳನ್ನು, ರುದ್ರಗೌಡರ ಸಂದರ್ಶನವನ್ನು ಬಳಸಿಕೊಂಡು, ಶ್ರೀ ಬಸವಾರ್ಯರು ಈ ಜೀವನ ಚರಿತ್ರೆಯನ್ನು ಬರೆದರು. ಸ್ವತಃ ರುದ್ರಗೌಡರೇ ಬರೆಯಿಸಿದರು. ತಾನು ಸಮಾಜಕ್ಕೆ ಮಾಡಿದ ಸೇವೆ ದಾಖಲುಯೋಗ್ಯವೆಂಬ ವಿಶ್ವಾಸ ರುದ್ರಗೌಡರದಾಗಿದ್ದಿತು. ಅದು ನಿಜವೂ ಹೌದು. ಹೀಗಾಗಿ ತಮ್ಮ ದಿನಚರಿ, ಟಿಪ್ಪಣಿಗಳನ್ನು ಒದಗಿಸಿ, ಇದರ ರಚನೆಗೆ ಕಾರಣರಾದರು.

ಇದರ ಮುಖ್ಯ ಲಕ್ಷಣವೆಂದರೆ ವ್ಯಕ್ತಿನಿಷ್ಠ ಜೀವನಚರಿತ್ರೆಗೆ ಸೀಮಿತವಾಗದೆ, ಸಮಾಜನಿಷ್ಠ, ಅದರಲ್ಲಿಯೂ ಲಿಂಗಾಯತ ಸಮಾಜನಿಷ್ಠ ಜೀವನಚರಿತ್ರೆಯಾಗಿ ಇದು ವಿಸ್ತಾರ ಪಡೆದಿದೆ. ಹೀಗಾಗಿ ಇದು ಅರ್ಧಶತಮಾನದ ಉತ್ತರ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯೆಂಬಂತೆ ಆಕಾರ ಪಡೆದಿದೆ. ಸಮಕಾಲೀನ ಆಚಾರ-ವಿಚಾರಗಳು, ಸಾಮಾಜಿಕ ಸ್ನೇಹ-ಸಂಘರ್ಷಗಳು, ಪರಿಸರವನ್ನು ನಿರ್ಮಾಣಮಾಡಿದ ಡೆಪ್ಯುಟಿ ಚೆನ್ನಬಸಪ್ಪ, ಶಾಂತವೀರ ರಾಚಿದೇವ ಕಿತ್ತೂರ, ಗಂಗಾಧರ ಮಡಿವಾಳೇಶ್ವರ ತುರಮರಿ, ಸಕ್ಕರಿ ಕರಡೆಪ್ಪ ಮೊದಲಾದ ಹಿರಿಯ ಸಮಕಾಲೀನರ, ಗಿಲಗಂಚಿ ಗುರುಸಿದ್ಧಪ್ಪ, ಸಿರಸಂಗಿ ಲಿಂಗರಾಜ, ವಂಟಮುರಿ ರಾಜಾ ಲಖಮನಗೌಡ, ವಾರದ ಮಲ್ಲಪ್ಪ, ಹಾನಗಲ್ಲ ಕುಮಾರಸ್ವಾಮೀಜಿ, ಬೆಂಗಳೂರಿನ ಪುಟ್ಟಣ್ಣ ಶೆಟ್ಟರು, ಚಿತ್ರದುರ್ಗ-ಗದಗ-ಹುಬ್ಬಳ್ಳಿ ಜಗದ್ಗುರುಗಳು, ಶಿವಮೂರ್ತಯ್ಯ ಕಣಬರಗಿಮಠ, ಚೆನ್ನಮಲ್ಲಪ್ಪ ಟೆಂಗಿನಕಾಯಿ, ಶಾಂತವೀರಪ್ಪ ಮೆಣಸಿನಕಾಯಿ,

ಮುತ್ತೂರ ಬಸಪ್ಪ ಶೆಟ್ಟರು, ಕುರಲಿ ಸಿಂತ್ರೆ ಮಲ್ಲಪ್ಪಣ್ಣ, ಕುರುಬಗೊಂಡ ಬಸಪ್ಪಶೆಟ್ಟರು ಮೊದಲಾದ ನೂರಾರು ಜನ ಸಮಕಾಲೀನ ಗಣ್ಯರ ವಿವರಗಳು, ತಲೆಯೆತ್ತಿದ ಸಂಘ-ಸಂಸ್ಥೆಗಳು, ಜಾತಿ-ವಿಜಾತಿಗಳ ಸ್ವರೂಪ-ಸ್ವಭಾವಗಳು, ಸಾಮಾಜಿಕ-ಧಾರ್ಮಿಕ-ಶೈಕ್ಷಣಿಕ-ರಾಜಕೀಯ ಚಲನವಲನಗಳು, ಇತ್ಯಾದಿ ಇಲ್ಲಿ ಏಕೀಭವಿಸಿದ ಕಾರಣ ಒಬ್ಬ ವ್ಯಕ್ತಿಯ ಚರಿತ್ರೆಯನ್ನಲ್ಲ, ಒಂದು ಕಾಲಘಟ್ಟದ ಸಾಮಾಜಿಕ ಚರಿತ್ರೆಯನ್ನೋದಿದ ಅನುಭವವಾಗುತ್ತದೆ. ಮುಂದೆ ಯಾರಾದರೂ ಈ ಕೃತಿಯನ್ನೇ ಕೇಂದ್ರವಾಗಿಟ್ಟುಕೊಂಡು ಸಾಂಸ್ಕೃತಿಕ ಅಧ್ಯಯನ ನಡೆಸುವಷ್ಟು, ವಿಪುಲ ಸಾಮಗ್ರಿಯನ್ನೊಳಗೊಂಡಿದೆ, ಈ ಕೃತಿ.

ಈ ಕೃತಿಯಲ್ಲಿ ೨೩ ಭಾಗಗಳಿವೆ. ಒಂದೊಂದು ಭಾಗದಲ್ಲಿ ಅನೇಕ ವಿಭಾಗಗಳಿವೆ. ನವೋದಯ ಪೂರ್ವದ ಬರೆವಣಿಗೆಯಾಗಿರುವುದರಿಂದ ಒಂದಿಷ್ಟು ವರ್ಣನಪರವೆನಿಸಿದರೂ ದಾಖಲೆಗಳಿಂದ ಘಟನೆಗಳನ್ನು ರೂಪಿಸಲಾಗಿದೆ. ಪ್ರತಿಯೊಂದು ದಾಖಲೆಗೂ ಅಧಿಕೃತ ನಂಬರು, ತಾರೀಖು ಇತ್ಯಾದಿ ಕೊಡುತ್ತ ಹೋಗಿರುವುದರಿಂದ, ಇಡಿ ಚರಿತ್ರೆಗೆ ಸತ್ಯದ ಮುದ್ರೆ ಪ್ರಾಪ್ತವಾಗಿದೆ. ಬರಹಗಾರನಿಂದಾಗಿ ಅಲ್ಲಲ್ಲಿ ನುಸುಳಿದ್ದ ತಪ್ಪು ಮಾಹಿತಿಗಳು ಉಳಿದುಕೊಳ್ಳಬಾರದೆಂಬ ಉದ್ದೇಶದಿಂದ, ತಮ್ಮ ಈ ಜೀವನ ಚರಿತ್ರೆಯನ್ನು ರುದ್ರಗೌಡರು ಇಡಿಯಾಗಿ ಓದಿ, ದೋಷಗಳನ್ನು ತೊಡೆದು ಹಾಕಿ, ಅವಶ್ಯವಿದ್ದಲ್ಲಿ ಹೊಸ ವಿಷಯವನ್ನು ಸೇರಿಸಿ, ಹೀಗೆ ತಿದ್ದುಪಡಿಮಾಡಿದ ಸ್ಥಳಗಳಲ್ಲಿ ತಪ್ಪದೇ ಸಹಿಹಾಕಿದ್ದಾರೆ. ಹೀಗಾಗಿ ಇದು ನಿಜನಿಷ್ಠ ಜೀವನ ಚರಿತ್ರೆಯಾಗಿದೆ. ಚರಿತ್ರೆಗೆ ಚರಿತ್ರೆಯಾಗುತ್ತಲೇ ಸಾಹಿತ್ಯಕ್ಕೆ ಸಾಹಿತ್ಯವಾಗಿ ಬೆಳೆದಿದೆ.

ಇದನ್ನು ಓದುವವರು ಒಂದು ಮಾತನ್ನು ನೆನಪಿಡಬೇಕು. ಈ ಕೃತಿ, ಸಂಕ್ರಮಣ ಕಾಲದ ಸೃಷ್ಟಿ. ಅಂದು ಸಾಮಾಜಿಕ ಜಾಗೃತಿ ಕಾರಣವಾಗಿ ಶ್ರೇಣೀಕೃತ ಜಾತಿವ್ಯವಸ್ಥೆಯನ್ನು ಮುರಿಯುವ ಸಂಘರ್ಷ ಭಾರತ ವ್ಯಾಪ್ತಿಯಲ್ಲಿ ಆರಂಭವಾಗಿದ್ದಿತು. ಈ ಸಂಘರ್ಷದ ಮುಖ್ಯ ಉದ್ದೇಶ ಪರಸ್ಪರರು ಇನ್ನಷ್ಟು ದೂರ ಸರಿಯುವುದಲ್ಲ, ಆದಷ್ಟು ಸಮೀಪ ಬರುವುದು. ಇಂದು ಸಮೀಪ ಬಂದು ಸಮನ್ವಯ ಸಾಧ್ಯವಾಗಿದ್ದರೆ, ಈ ಕೀರ್ತಿ ಆ ಸಂಘರ್ಷಕ್ಕೆ ಸಲ್ಲುತ್ತದೆ. ಕೆಲವೊಮ್ಮೆ ಹುಸಿ ಪ್ರತಿಷ್ಠೆಯ ಸಂಘರ್ಷಗಳು ಜರುಗಿದ್ದರೂ ಅವೆಲ್ಲ ದೊಡ್ಡ ಉದ್ದೇಶಕ್ಕೆ ಪರ್ಯಾಯವಾಗಿ ಪೂರಕವಾಗಿದ್ದವು. ಹೀಗಾಗಿ ಈ ಕೃತಿಯನ್ನು ಶುದ್ಧ ಶೈಕ್ಷಣಿಕ ದೃಷ್ಟಿಯಿಂದ ನೋಡುವುದು ಅವಶ್ಯವಿದೆ.

ನಮ್ಮಲ್ಲಿ ಪುರಾಣ (ಆದಿಪುರಾಣ), ಪುರಾಣದ ಚರಿತ್ರೀಕರಣ (ಪಂಪಭಾರತ), ಚರಿತ್ರೆಯ ಪುರಾಣೀಕರಣ (ಸಿದ್ಧರಾಮ ಚರಿತೆ) ಪದ್ಧತಿಗಳ ಪರಂಪರೆಯಿದೆ. ಕ್ವಚಿತ್ತಾಗಿ ಕುಮಾರ ರಾಮನ ಸಾಂಗತ್ಯ, ಅಪ್ರತಿಯವೀರ ಚರಿತೆಗಳಂಥ ಚರಿತ್ರೆಗಳಿದ್ದರೂ, ಇಂಗ್ಲಿಷ್ ಸಾಹಿತ್ಯದ ಕೊಡುಗೆಯೆನಿಸಿದ ಜೀವನ ಚರಿತ್ರೆಯೆಂಬ ಪ್ರಕಾರ, ನಮ್ಮಲ್ಲಿ ಇತ್ತೀಚೆ ಬೆಳೆದುಬಂದಿದೆ. ಈ ಪ್ರಕಾರವನ್ನು ಕುರಿತು ಅಭ್ಯಾಸ ಮಾಡಬೇಕಾದವರು ಅವಶ್ಯ ಗಮನಿಸಬೇಕಾದ ಆದ್ಯಕೃತಿಯೆಂಬ ಖ್ಯಾತಿ, ಈ ಗ್ರಂಥಕ್ಕೆ (೧೯೦೭) ಸಲ್ಲುತ್ತದೆ.

ಬಸವಯ್ಯ ಹಿರೇಮಠ (ಕಂಬಿ):

ಕನ್ನಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜು, ಉತ್ತರ ಕರ್ನಾಟಕದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಪ್ರಥಮ ಘಟ್ಟವನ್ನು ರೂಪಿಸಿದ ಶಿಕ್ಷಣಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ ಆಕಾರಗೊಂಡ ನೂರಾರು ಜನರಲ್ಲಿ ಬಸವಯ್ಯ ಹಿರೇಮಠ ಅವರೂ ಒಬ್ಬರು. ಖಾನಾಪುರ ತಾಲೂಕಿನ ಪಾರಿಶವಾಡ ಗ್ರಾಮದವರಾದ ಇವರು, ಚನ್ನಬಸವಯ್ಯನವರ ಮಕ್ಕಳು. ಕಿತ್ತೂರು, ನೇಗಿನಹಾಳ ಗ್ರಾಮಗಳಲ್ಲಿ ಕನ್ನಡ ಶಾಲಾ ಮಾಸ್ತರರಾಗಿದ್ದ ಇವರು, ೨೭-೩-೧೯೨೧ನೆಯ ರವಿವಾರ ನೇಗಿನಹಾಳದಲ್ಲಿ ತೀರಿಕೊಂಡರು. ಮರಣಕಾಲಕ್ಕೆ ಇವರ ವಯಸ್ಸು ಸುಮಾರು

೪೫ ಎಂದು ತಿಳಿದುಬರುತ್ತದೆ. "ಇವರು ಸ್ವಭಾವದಿಂದ ಬಲು ಸಜ್ಜನರು, ಶಾಂತತಾ ಪ್ರಿಯರು, ಕನ್ನಡಭಾಷಾ ಪಂಡಿತರು. ಮಾತಿನಲ್ಲಿ ಬಹು ಜಾಣ್ಮೆಯುಳ್ಳವರು, ರಸಿಕತನದಲ್ಲಂತೂ ಇವರನ್ನು ಯಾರೂ ಸರಿಗಟ್ಟುವಂತಿದ್ದಿಲ್ಲ. ವಾಗ್ಭೂಷಣ, ಪ್ರಭಾತ ಪತ್ರಿಕೆಗಳಿಗೆ ಕವಿತೆ, ಲೇಖನ ಬರೆಯುತ್ತಿದ್ದರು. ಲಿಂಗರಾಜ ನಾಮಾವಳಿ, ವೀರಶೈವ ಸಮಾಜಗುಣದರ್ಪಣ, ವಿಷಮವಿವಾಹ-ಚಂದ್ರಿಕಾವಿಜಯ ನಾಟಕ, ಮುರುಗೇಂದ್ರಾಷ್ಟಕ, ಸಮಾಜಾದರ್ಶ ಅಥವಾ ರುದ್ರಪ್ರಭುನೀತಿ ಇವರ ಗ್ರಂಥಗಳು." ಇವರ ಪ್ರಿಯ ಶಿಷ್ಯರಾಗಿದ್ದ ಕಿತ್ತೂರಿನ ನಾಗಶೆಟ್ಟಿ ಮಾಸ್ತರರು "ಕೆ. ಬಸವಾರ್ಯರ ಪದ-ಪದ್ಯಗಳು" ಹೆಸರಿನಲ್ಲಿ ಇವರ ಪದ-ಪದ್ಯಗಳನ್ನು ಸಂಗ್ರಹಿಸಿದ ಹಸ್ತಪ್ರತಿ ದೊರೆಯುತ್ತದೆ.

ಕವಿಚರಿತೆಕಾರರು, ಧಾರವಾಡಕರ ಮೊದಲಾದವರು ಬಸವಯ್ಯ ಮಾಸ್ತರರ ಸಾಹಿತ್ಯದ ಬಗ್ಗೆ ಹೇಳಿರುವರಾದರೂ, ಇವರ ಕೃತಿಗಳಲ್ಲಿಯೇ ದೊಡ್ಡದಾಗಿರುವ "ಅರಟಾಳ ರುದ್ರಗೌಡರ ಚರಿತ್ರ"ದ ಬಗ್ಗೆ ಪ್ರಸ್ತಾಪಮಾಡುವುದಿಲ್ಲ. ಇವರು ತೀರಿಕೊಂಡುದು ೨೭-೩-೧೯೨೧. ಈ ಕೃತಿ ಮುಕ್ತಾಯವಾದುದು ೧೯-೧೦-೧೯೨೧. ಈ ವಿವರವನ್ನು ನೋಡಿದರೆ, ಇದು ಬಸವಯ್ಯನವರಿಂದ ಅಪೂರ್ಣವಾಗಿದ್ದಿತೆಂದು ತೋರುತ್ತದೆ. ಬಹುಶಃ ಕೊನೆಯ ೨೩ನೆಯ ಭಾಗದ " ಧಾರವಾಡ ವೀರಶೈವ ಮಂದಿರ" ಪ್ರಕರಣ ಬರೆದು ಇವರು ನಿಧನರಾಗಿರಬೇಕು. ಇಲ್ಲಿಂದ ಮುಂದೆ ಬೇರೆಯವರ ಹಸ್ತಾಕ್ಷರಗಳಿವೆ. ಶೈಲಿಯೂ ಒಂದಿಷ್ಟು ಆತ್ಮಚರಿತ್ರೆ, ಒಂದಿಷ್ಟು ಜೀವನಚರಿತ್ರೆ ರೀತಿಯಲ್ಲಿ ಮುಂದುವರಿದು ೧೯-೧೦-೧೯೨೧ ದಿನಾಂಕದೊಂದಿಗೆ ಕೃತಿ ಸಮಾಪ್ತಗೊಂಡಿದೆ. ಈಗಿನ ಸ್ಥಿತಿಯಲ್ಲಿ ಈ ಕೃತಿ, ಭಾಗ ೨೩ಕ್ಕೆ ಮುಗಿದಿದೆ. ಈ ಅಂಕಿಗೆ ಮುಗಿದುದು ಸಮಂಜಸವೆನಿಸುವುದಿಲ್ಲ. ಬಸವಯ್ಯನವರು ಇನ್ನೂ ಕೆಲವು ಭಾಗಗಳನ್ನು ಬರೆಯುವ ಯೋಜನೆ ಹಾಕಿಕೊಂಡಿದ್ದಿರಬಹುದು. ಅವರ ಅಕಾಲಿಕ ಮರಣ ಕಾರಣವಾಗಿ (ಇವರು ಬದುಕಿದ್ದು ೪೫ ವರ್ಷ), ರುದ್ರಗೌಡರು ಮುಂದೆ ಯಾರಿಂದಲೋ ಬರೆಯಿಸಿ,ಅವಸರದಿಂದ ಈ ಕೃತಿಯನ್ನು ಪೂರ್ಣಗೊಳಿಸಿರಬೇಕು.

ಬಸವಯ್ಯನವರ ಮರಣ ಸಂದರ್ಭದಲ್ಲಿ ಅವರ ಶಿಷ್ಯರಾದ ಶ್ರೀ ವೀರಪ್ಪ ನಾಗಶೆಟ್ಟಿ ಮಾಸ್ತರರು ಬರೆದಿರುವ

ನಿನ್ನಂದದ ಸತ್ಕವಿಗಳ್। ನಿನ್ನಂದದ ಸುಂದರಾಕ್ಷರಂಗಳಂ ಲಿಖಿಪರ್।
ನಿನ್ನಂದದ ಗುಣಶಾಲಿಗ।ಳಿನ್ನೇಂ ಕರ್ನಾಟಕಾಂಬೆಯುದರದೊಳುದಿಪರ್॥

ಈ ಶೋಕಗೀತೆಯಲ್ಲಿ ಹೇಳಿರುವಂತೆ, ಈ ಹಸ್ತಪ್ರತಿಯಲ್ಲಿಯ ಸುಂದರ ಅಕ್ಷರ, ಸುಂದರ ವಿನ್ಯಾಸಗಳನ್ನು ನೋಡುವುದೇ ಒಂದು ಸಂತೋಷ. ಮೇಲಿನ ಪದ್ಯ ತಿಳಿಸುವಂತೆ ಶ್ರೀಯುತರು ಸತ್ಕವಿಗಳಾಗಿದ್ದಾರೆ. ಗಳಗನಾಥರಂತೆ ಉತ್ಸಾಹಭರಿತ ಶೈಲಿ ಇವರದಾಗಿದೆ.

ಹಸ್ತಪ್ರತಿ ಪರಿಚಯ:

ಈ ಜೀವನಚರಿತ್ರೆಯನ್ನು ಎರಡು ಪ್ರತ್ಯೇಕ ಸಂಪುಟಗಳಲ್ಲಿ ಬರೆಯಲಾಗಿದೆ. ಹಳೆಯ ಕಾಲದಲ್ಲಿ ಲೆಕ್ಕ ಬರೆಯಲು ಬಳಸುತ್ತಲಿದ್ದ ಕೆಂಪು ಅರಿವೆ ಹೊದಿಸಿದ ದೊಡ್ಡ ಆಕಾರದ ವಹಿಗಳಿವು. ಒಂದನೆಯ ವಹಿಗಿಂತ ಎರಡನೆಯ ವಹಿ ಸ್ವಲ್ಪ ದೊಡ್ಡದಿದೆ. ಇವುಗಳನ್ನು ೧ನೇ ಭಾಗ, ೨ನೇ ಭಾಗ ಎಂದು ಹೆಸರಿಸಲಾಗಿದೆ. ೧ನೆಯ ಸಂಪುಟದಲ್ಲಿ ೧ರಿಂದ ೧೫ ಭಾಗಗಳು, ೨ನೆಯ ಸಂಪುಟದಲ್ಲಿ ೧೬ ರಿಂದ ೨೩ ಭಾಗಗಳಿವೆ. ಈ ಎಲ್ಲ ಭಾಗಗಳು ಸೇರಿ ಒಟ್ಟು ಪುಟಸಂಖ್ಯೆ ೧೭೪೦ ಇದ್ದರೂ ಬೆನ್ನು ಮೇಲೆ ಬರೆದಿಲ್ಲವಾಗಿ, ಈ ಪತ್ರದ ಒಟ್ಟು ಪುಟಸಂಖ್ಯೆ ೮೭೦ ಎಂದೇ ತಿಳಿಯಬೇಕು.

ಎರಡೂ ವಹಿಗಳಲ್ಲಿ ಕೆಲವು ಪುಟಗಳು ಹರಿದು ಕಳೆದು ಹೋಗಿವೆ. ಕೆಲವು ಓದಲು ಬಾರದಷ್ಟು, ಕೆಲವು ಓದಲು ಬರುವಷ್ಟು ತುಂಡಾಗಿವೆ. ಒಂದನೆಯ ವಹಿಗಿಂತ ಎರಡನೆಯ ವಹಿ ಹೆಚ್ಚು ಜೀರ್ಣವಾಗಿದೆ. **೧ನೇ ವಹಿ:** ಆಕಾರ ೧೦"x೬, ೧/೨". ಪುಟ ೧ರಿಂದ ೧೦೫೦. ಪಠ್ಯ ಆರಂಭವಾಗುವುದಕ್ಕಿಂತ ಮುಂಚಿನ ರಕ್ಷಾಪುಟಗಳ ಮೇಲೆ ಲೇಖಕರು ರಾವ್‌ಬಹಾದ್ದೂರ ಅವರನ್ನು ಕುರಿತು ಎರಡು ಪದಗಳನ್ನು ಬರೆದಿದ್ದಾರೆ. ರಾವ್‌ಬಹಾದ್ದೂರ ಅವರೂ, ಕೆಲವು ಟಿಪ್ಪಣಿ ಬರೆದಿದ್ದಾರೆ ಮತ್ತು ತಮಗೆ ಸಂಬಂಧಿಸಿದ ಮುದ್ರಿತ ಪ್ರಕಟನೆಗಳನ್ನೂ ಅಂಟಿಸಿದ್ದಾರೆ, ತಮಗೆ ಸಂದ ಗೌರವ ಪದವಿ, ಕಾಣಿಕೆಗಳ ಯಾದಿಯನ್ನು ಬರೆದಿದ್ದಾರೆ. ಇಲ್ಲಿಂದ ಮುಂದೆ ಪುಸ್ತಕ ಪ್ರಾರಂಭವಾಗುತ್ತದೆ.

೧ನೆಯ ಪುಟದ ಮೇಲೆ "ರಾವಬಹಾದ್ದೂರ ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರರಾದ ಅರಟಾಳ ರುದ್ರಗೌಡರ ಚರಿತ್ರ, ಇದನ್ನು ಬಸವಯ್ಯ ಚನ್ನಬಸವಯ್ಯ ಹಿರೇಮಠ ಊರ್ಫ ಕಂಬಿ, ಸಾಕೀನ ಪಾರಿಶವಾಡ ತಾಲೂಕ ಖಾನಾಪೂರ-ಸ್ಕೂಲ ಮಾಸ್ತರ ಕಿತ್ತೂರ ಶಾಲಾ ನಂಬರ ೧, ಇವರು ಟಿಪ್ಪಣಿಗಳ ಆಧಾರದಿಂದ ಬರೆದದ್ದು. ಸನ್ ೧೯೦೭ನೇ ಇಸವಿ" ಎಂದು ಇದೆ. ೨ನೆಯ ಪುಟದ ಮೇಲೆ ಬರೆದಿಲ್ಲ. ೩ನೆಯ ಪುಟದ ಮೇಲೆ "ಈ ಗ್ರಂಥವುxxಟಿಪ್ಪಣಿಗಳ ಆಧಾರದಿಂದಲೂ ರಾವಬಹಾದ್ದೂರರವರxxಹೇಳಿಕೆಯ ಮೇಲಿಂದಲೂ ಬರೆಯಲ್ಪಟ್ಟಿದೆ" ಎಂದು ಇದೆ. ೪,೫,೬,೭,೮ ನೆಯ ಪುಟಗಳ ಮೇಲೆ ಏನೂ ಬರೆದಿಲ್ಲ. ೯ರಿಂದ ೧೭ನೆಯ ಪುಟಗಳ ವರೆಗೆ ಅನುಕ್ರಮಣಿಕೆ ಇದೆ. ೧೮ನೆಯ ಪುಟದ ಮೇಲೆ ಬರೆದಿಲ್ಲ. ೧೯ನೆಯ ಪುಟದ ಮೇಲೆ, "ಗ್ರಂಥಕರ್ತರಾದ ಬಸವಾರ್ಯರು ರಚಿಸಿದ ಶಾರದಾಸ್ತವನ" ಶೀರ್ಷಿಕೆಯ ಕೆಳಗೆ ೩ ಪದ್ಯಗಳ ಪದವಿದೆ. ೨೦ನೆಯ ಪುಟದ ಮೇಲೆ ಬರೆದಿಲ್ಲ. ೨೧ನೆಯ ಪುಟದ ಮೇಲೆ "ಶ್ರೀ ಗುರು ಪ್ರಸನ್ನ ರುದ್ರಭೂಪಾಲರ ಚರಿತ್ರ, ೧ನೇ ಭಾಗ-ಜನನ" ಎಂಬ ಶೀರ್ಷಿಕೆಯ ಕೆಳಗೆ ಪಠ್ಯ ಆರಂಭವಾಗಿದೆ.

ಅಂತ್ಯದಲ್ಲಿ "ಈ ಪುಸ್ತಕದಲ್ಲಿ ೧ರಿಂದ ೧೦೫೦ರ ವರೆಗಿನ ಅಂಕಿಗಳನ್ನು ಹಾಕಿ ಸಹಿ ಮಾಡಿರುತ್ತದೆ. ಮುಕ್ಕಾಮ ಬೆಳಗಾವ, ತಾರೀಖ ೩೦ನೇ ಮೇ ಸನ್ ೧೯೦೬ನೇ ಇಸವಿ, ಶ್ರೀಮನೃಪಶಾಲಿವಾಹನ ಶಕೆ ೧೮೨೮ ಪರಾಭವನಾಮ ಸಂವತ್ಸರ ಜೇಷ್ಠ ಶುದ್ಧ ೭ ಬುಧವಾರ" ಎಂದು ಬರೆಯಲಾಗಿದೆ. ಕೊನೆಗೆ R.C.Aratal ಎಂದು ಸಹಿ ಇದೆ.

೨ನೇ ವಹಿ: ಆಕಾರ ೧೧"x೧೬". ಆರಂಭದ ೧೬ನೆಯ ಭಾಗದ ಮೊದಲಿನ ಕೆಲವು ಪುಟಗಳು ಹಾಳಾಗಿ, ಕೊನೆಯ ೨೩ನೆಯ ಭಾಗಕ್ಕೆ (೧೭೪೦ನೆಯ ಪುಟಕ್ಕೆ) ಕೃತಿ ಮುಗಿದಿದೆ. ಈ ೨೩ನೆಯ ಭಾಗದಲ್ಲಿ "ಹಂದಿಗನೂರ ದತ್ತಕ ತಂಟೆ" ಉಪಶೀರ್ಷಿಕೆ ಮೊದಲುಗೊಂಡು ಅಂತ್ಯದ ವರೆಗೆ ಬೇರೊಬ್ಬರ ಹಸ್ತಾಕ್ಷರಗಳಿವೆ. ಅಂತ್ಯದಲ್ಲಿ "ಸಮಾಪ್ತಿ ತಾ. ೧೯-೧೦-೧೯೨೧ ಬೆಳಗಾವಿ" ಎಂದು ಬರೆಯಲಾಗಿದೆ. ಕೆಳಗೆ "R.C.Aratal, Belgaum 19th October 1921" ಎಂಬ ಸಹಿಯಿದೆ.

ಇದರ ಬಳಿಕ "ಪುರವಣಿ" ಶೀರ್ಷಿಕೆ (ಪುಟ ೧೭೪೨)ಯ ಕೆಳಗೆ ಮತ್ತೆ ಕೆಲವು ವಿವರಗಳನ್ನು ಬರೆಯಲಾಗಿದೆ. ಇನ್ನೂ ಬಳಿಕ ರುದ್ರಗೌಡರ ಹಸ್ತಾಕ್ಷರದ ಅನೇಕ ಟಿಪ್ಪಣಿಳಿದ್ದು, ೧೯೫೩ನೆಯ ಪುಟದಲ್ಲಿ ವಹಿಯ ಬರೆವಣಿಗೆ ಕೊನೆಗೊಂಡಿದೆ (ದಾಸಿ ಸಂವಾದ). ನಾವು ಪುಟ ೧೭೪೦ರ ವರೆಗಿನ (ಭಾಗ ೧ರಿಂದ ೨೩) ಪಠ್ಯ ಇಟ್ಟುಕೊಂಡು, ಮುಂದಿನ ಪುರವಣಿ, ಟಿಪ್ಪಣಿಗೆಗಳನ್ನು ಕೈಬಿಟ್ಟಿದ್ದೇವೆ.

ಕೃತಿ ರಚನೆಯ ಕಾಲ :

ಒಂದನೆಯ ವಹಿಯ ಅಂತ್ಯದಲ್ಲಿ ಇಸ್ವಿ ೧೯೦೬, ಎಂದು ಮಿತಿ ನಿರ್ದೇಶನವಿದೆ. ೧೯೦೬ಕ್ಕಿಂತ ಎಷ್ಟು ವರ್ಷ ಮುಂಚೆಯಿಂದ ಈ ವಹಿಯಲ್ಲಿ ಬರೆವಣಿಗೆ ಆರಂಭವಾಯಿತೆಂಬುದಕ್ಕೆ ಸೂಚನೆಯಿಲ್ಲ. ಹೀಗಿದ್ದೂ

ಆರಂಭದ ಮುಖಪುಟದ ಮೇಲೆ ೧೯೦೭ ಎಂದು ದಾಖಲಿಸಿದುದು ವಿಚಿತ್ರವೆನಿಸುತ್ತದೆ. ಬಹುಶಃ ಮೊದಲನೆಯ ವಹಿಯನ್ನು ಬರೆದು ಮುಗಿಸಿ (೧೯೦೬), ಎಷ್ಟೋ ದಿನಗಳಾದ ಮೇಲೆ ಅಂದರೆ ೧೯೦೭ನೆಯ ಇಸ್ವಿಯಲ್ಲಿ ಇದರ ಮುಖಪುಟ ಸಿದ್ಧಪಡಿಸಿರಬಹುದು. ಅದೇನೇ ಇದ್ದರೂ ಈ ಕೃತಿ ರಚನೆ ೧೯೦೬ಕ್ಕಿಂತ ಮೊದಲು ಆರಂಭವಾಗಿ ೧೯೨೧ರಲ್ಲಿ ಮುಗಿದುದನ್ನು ನೋಡಿದರೆ, ಇದರ ಸೃಷ್ಟಿ ಮತ್ತು ನಕಲು ಕಾರ್ಯಗಳಿಗೆ ೧೫ ವರ್ಷಗಳ ದೀರ್ಘಕಾಲ ಹಿಡಿಯಿತೆನಿಸುತ್ತದೆ.

ಪರಿಷ್ಕರಣ:

ಈ ಹಸ್ತಪ್ರತಿಗಳಲ್ಲಿ ಲೇಖಕರಾದ ಶ್ರೀ ಬಸವಯ್ಯ ಹಿರೇಮಠ ಅವರ, ಮತ್ತೊಬ್ಬರ ಮತ್ತು ರುದ್ರಗೌಡರ-ಹೀಗೆ ಮುಖ್ಯವಾಗಿ ೩ ಜನರ ಹಸ್ತಾಕ್ಷರಗಳಿವೆ. ಇಲ್ಲಿಯ ಬರೆವಣಿಗೆ ೨೨ನೆಯ ಭಾಗದ ವರೆಗೆ ಜೀವನಚರಿತ್ರೆಯ ಶೈಲಿಯಲ್ಲಿದೆ. ೨೩ನೆಯ ಭಾಗ ಒಂದಿಷ್ಟು ಗೊಂದಲ ಸ್ವರೂಪದ್ದಾಗಿದ್ದು, ಇದರ ವಿವರ ಹೀಗಿದೆ: ಇದರ ಆರಂಭದ ಭಾಗ ಜೀವನಚರಿತ್ರೆಯ, ಮಧ್ಯದ ಭಾಗ ಆತ್ಮಚರಿತ್ರೆಯ, ಅಂತ್ಯದ ಭಾಗ ಜೀವನಚರಿತ್ರೆಯ ಶೈಲಿಯಲ್ಲಿವೆ. ಪಠ್ಯದ ಏಕಮುಖತೆಗೆ ಧಕ್ಕೆ ತರುತ್ತಲಿದ್ದ ಮಧ್ಯದ ಆತ್ಮಚರಿತ್ರೆ ಶೈಲಿಯ ಬರವಣಿಗೆಯನ್ನು ಸಣ್ಣ ಅಕ್ಷರದಿಂದ ಅಡಿಯಲ್ಲಿ ಮಡಗಿದ್ದೇವೆ. ಈ ತೊಡಕನ್ನು ಬಿಡಿಸಿಕೊಳ್ಳುವಲ್ಲಿ ನಾವು ತುಂಬ ತೊಂದರೆ ಅನುಭವಿಸಬೇಕಾಯಿತು.

ಉದ್ದಕ್ಕೂ ಕಾಡಿದ ಇನ್ನೊಂದು ತೊಂದರೆಯೆಂದರೆ, ಕ್ವಚಿತ್ತಾಗಿ ಲೇಖಕರಾದ ಬಸವಯ್ಯನವರು ಮತ್ತು ವಿಪುಲವಾಗಿ ರುದ್ರಗೌಡರು ಅಲ್ಲಲ್ಲಿ ಬೆನ್ನುಪುಟಗಳ ಮೇಲೆ, ಪಠ್ಯದ ನಡುವೆ ದಾಖಲಿಸಿದ ಹೆಚ್ಚಿನ ಬರವಣಿಗೆ. ಇವುಗಳನ್ನು ಪಠ್ಯದ ಯಾವ ಸ್ಥಳದಲ್ಲಿ ಜೋಡಿಸಿಕೊಳ್ಳಬೇಕೆನ್ನುವುದು ಒಂದು ಸಮಸ್ಯೆ. ಹೀಗಾಗಿ ಅವೆಲ್ಲವುಗಳನ್ನು ಅಡಿಯಲ್ಲಿ ಅಚ್ಚಿಸಲಾಗಿದೆ. ಹೀಗಿದ್ದೂ ರುದ್ರಗೌಡರ ಇಂಥ ಬೇರೆ ಕೆಲವು ಟಿಪ್ಪಣಿಗಳನ್ನು ಅಡಿಯಲ್ಲಿಯೂ ಅಚ್ಚಿಸುವುದು ಸರಿಕಾಣಲಿಲ್ಲ. ಇದಕ್ಕೆ ಕಾರಣ, ಅವು ಇಲ್ಲಿ ಅನವಶ್ಯ- ಪುನರುಕ್ತವೆನಿಸುತ್ತವೆ. ಇನ್ನು ಕೆಲವು ಟಿಪ್ಪಣಿಗಳು ಅಸ್ಪಷ್ಟ, ಮತ್ತು ತ್ರುಟಿತ. ಆದುದರಿಂದ ಇಂಥವುಗಳನ್ನು ಕೈಬಿಟ್ಟು, ಮುಖ್ಯ ಸೂಕ್ತ-ಟಿಪ್ಪಣಿಗಳನ್ನು ಮಾತ್ರ ಆಯ್ದುಕೊಂಡು ಅಡಿಯಲ್ಲಿ ಕೊಟ್ಟಿದ್ದೇವೆ. ಹೀಗೆ ಕೊಡುವಾಗ ಸೂಚನಾರೂಪದ ವಿವರಣೆ ನೀಡಿ, ಅದರ ಮುಂದೆ ಸಂ (=ಸಂಪಾದಕ) ಎಂಬ ಸಂಕೇತ ಬಳಸಿದ್ದೇವೆ. ಒಟ್ಟಾರೆ ಈ ಎಲ್ಲ ಗೊಂದಲುಗಳಿಂದ ಬಸವಯ್ಯನವರ ಕೃತಿಯನ್ನು ಸುರಕ್ಷಿತ ಬಿಡಿಸಿಕೊಂಡು, ಸರಿಯಾಗಿ ವಿನ್ಯಾಸಗೊಳಿಸಿದ್ದೇವೆ.

ಈ ಸಂದರ್ಭದಲ್ಲಿ ಹೇಳಬೇಕಾದ ಇನ್ನೊಂದು ಮಾತೆಂದರೆ, ಆರಂಭದಲ್ಲಿ ಅಂಟಿಸಿದ-ಬರೆದ ಟಿಪ್ಪಣಿ, ಬೆನ್ನುಪುಟಗಳ ಮೇಲೆ-ಪಠ್ಯದ ನಡುವೆ ಅಲ್ಲಲ್ಲಿ ಉಳಿದುಕೊಂಡಿರುವ ಟಿಪ್ಪಣಿ, "ಪುರವಣಿ" ಮತ್ತು ಆಮೇಲಿನ ಟಿಪ್ಪಣಿಗಳನ್ನು ಬಳಸಿಕೊಂಡು, ಬೇರೊಂದು ಕೃತಿ ರೂಪಿಸುವುದು ಅವಶ್ಯವಿದೆ. ಯಾರಾದರೂ ಈ ಕೆಲಸವನ್ನು ಪೂರೈಸುವರೆಂದು ಆಶಿಸುತ್ತೇನೆ. ರುದ್ರಗೌಡರು ಎಂಥ್ರಾಪೊಲಾಜಿಕಲ್ ಸೊಸೈಟಿದಲ್ಲಿ ಪ್ರಕಟಿಸಿರುವ ಹತ್ತು ಲೇಖನಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುವರೆಂದು ನಂಬಿದ್ದೇನೆ.

ಕೃತಜ್ಞತೆ:

ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯಲ್ಲಿ ಇತ್ತೀಚೆ ಹೊಸ ಹೊಸ ಅಧ್ಯಾಯಗಳು ತೆಗೆದುಕೊಳ್ಳುತ್ತಲಿವೆ. ಇಂಥ ಒಂದು ಹೊಸ ಅಧ್ಯಾಯವಾಗಿದೆ, ಪುಸ್ತಕ ಪ್ರಕಾಶನ. ಈ ಎಲ್ಲ ಹೊಸತುಗಳಿಗೆ ಕಾರಣರೆನಿಸಿ, ಪ್ರಸ್ತುತ

ಕೃತಿ ಬೆಳಕು ಕಾಣುವಂತೆ ಮಡಿದವರು, ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆ ಅವರು. "ಅರಟಾಳ ರುದ್ರಗೌಡರ ಜೀವನಚರಿತ್ರೆ"ಯ ಝುರಾಕ್ಸ ಪ್ರತಿಯನ್ನು ನೀಡಿ, ಪರಿಷ್ಕರಿಸಲು ಅವಕಾಶ ಮಾಡಿಕೊಟ್ಟವರು ರಾಜ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಅಲ್ಲಂ ವೀರಭದ್ರಪ್ಪನವರು. "ಅರಟಾಳ ರುದ್ರಗೌಡರ ಜೀವನ ಚರಿತ್ರೆ"ಯ ಮೂಲಪ್ರತಿ ನನ್ನ ಕೈಸೇರುವುದರ ಸಲುವಾಗಿ ಶ್ರಮಿಸಿದುದಲ್ಲದೆ, ಇದರ ಪ್ರಕಟನೆಯ ರಾಯಭಾರತ್ವ ವಹಿಸಿದವರು, ರಚನಾತ್ಮಕ ಮನಸ್ಸಿನ ಶ್ರೀ ಬಿ.ಎಸ್. ಗವಿಮಠ ಅವರು. ಈ ಕೃತಿ ಪ್ರಕಟನೆಯಲ್ಲಿ ತೀವ್ರ ಆಸಕ್ತಿ ವಹಿಸಿದವರು ಸಂಸ್ಥೆಯ ಪರಿವಾರದವರಾದ ಶ್ರೀ ಎಫ್.ವ್ಹಿ. ಮಾನ್ವಿ, ಶ್ರೀ ಆಯ್.ಆರ್. ನೀಲಿ, ಶ್ರೀ ಎ.ಆರ್. ಪಾಟೀಲ ಅವರು.

ಪ್ರೀತಿಪೂರ್ವಕ ಹಸ್ತಪ್ರತಿ ನೀಡಿದುದಲ್ಲದೆ, ಈ ಕೃತಿಪ್ರಕಟನೆಯಲ್ಲಿ ಸಹಕರಿಸಿದವರು, ರುದ್ರಗೌಡರ ಮರಿಮೊಮ್ಮಕ್ಕಳಾದ ಶ್ರೀ ಚೆನ್ನವೀರಗೌಡರು, ಶ್ರೀ ವೀರೇಶಗೌಡರು ಮತ್ತು ಶ್ರೀ ಸುರೇಶಗೌಡರು. ಮುದ್ರಣಕಾರ್ಯದಲ್ಲಿ ನಿರಂತರ ನೆರವಾದವರು ಇನ್ನೊಬ್ಬರಿಗೆ ಸಹಾಯವಾಗುವಲ್ಲಿಯೇ ಸಂತೋಷಪಡುವ ಶ್ರೀ ಸದಾನಂದ ಕನವಳ್ಳಿ ಮತ್ತು ಪರಂಪರೆಯ ಶೋಧದಲ್ಲಿ ಖುಷಿಪಡುವ ಶ್ರೀ ಸಿದ್ಧಲಿಂಗ ದೇಸಾಯಿಯವರು. "ವೀರಶೈವ ಗ್ರಂಥಮಾಲಾ" ಹೆಸರಿನ ಪತ್ರಿಕೆಯ ಮುಖಪುಟ ಪೂರೈಸಿದವರು, ಅಪೂರ್ವ ದಾಖಲೆಗಳನ್ನು ರಕ್ಷಿಸಿಕೊಂಡು ಬಂದಿರುವ, ಪ್ರೊ. ಸಿ.ಪಿ. ಹೇಮಗಿರಿಮಠ ಅವರು.

ಅಕ್ಷರ ಜೋಡಣೆ, ಮುದ್ರಣಕಾರ್ಯಗಳನ್ನು ಶ್ರದ್ಧೆಯಿಂದ ಪೂರೈಸಿದವರು ಧಾರವಾಡದ ಶ್ರೀ ದೇವರಾಜ ನಾಡಿಗ ಮತ್ತು ಬೆಂಗಳೂರಿನ ಲಕ್ಷ್ಮೀ ಮುದ್ರಣಾಲಯದ ಒಡೆಯರಾದ ಶ್ರೀ ಅಶೋಕ ಅವರು. ಇವರೆಲ್ಲರಿಗೆ ವಿಶ್ವಾಸಪೂರ್ವಕ ಕೃತಜ್ಞತೆಗಳು.

❖❖

*

ಪರಿವಿಡಿ

೫ನೇ ಭಾಗ : ಪುಟ ೫೫-೭೨

ಲಿಂಗಾಯತ ಫಂಡಿನ ಮೂಲಾರಂಭ/ಸುಶಿಕ್ಷಿತರಾದ ತಂದೆ-ಮಕ್ಕಳು/ಚೆನ್ನವೀರಗೌಡರ ಮರಣ/ರಾ.ಸಾ॥ರುದ್ರಗೌಡರಿಂದಾದ ಅಘಟಿತ ಘಟನೆಯು/ರಾ.ಸಾ॥ರುದ್ರಗೌಡರ ಸತ್ಯಸ್ವಭಾವವು/ರಾ.ಸಾ॥ರುದ್ರಗೌಡರ ಅಲೌಕಿಕ ಸಾಮರ್ಥ್ಯ/ಬಸನಗೌಡರ ಮುಗ್ಧಭಕ್ತಿ/ರಾ.ಸಾ॥ರಾಮರಾವ ಸ್ವಾಮಿರಾವ ಮಾಳಾಪುರ ಎಂಬವರಿಗೆ ಕುಲಕರಣಿಕೆಯ ವತನವನ್ನು ಕೊಡಿಸಿದ್ದು/ರಾ.ಸಾ॥ರುದ್ರಗೌಡರು ಕೊಣ್ಣೂರ ಮಲ್ಲನಗೌಡರ ಗೌಡಕೀ ವತನವನ್ನು ಕಾಹೀಮ ಮಾಡಿಸಿದ್ದು/ರಾ.ಸಾ॥ರುದ್ರಗೌಡರ ಅಸಾಧಾರಣ ಯುಕ್ತಿ.

೬ನೇ ಭಾಗ : ಪುಟ ೭೩-೯೦

ಮೆ॥ಮಿಡಲ್ಟನ್ ಸಾಹೇಬ ಬಹದ್ದೂರವರು ರಾ.ಸಾ॥ ರುದ್ರಗೌಡರವರಿಗೆ ಕೊಟ್ಟ ಸರಟೀಫಿಕೇಟು/ನ್ಯಾಯನಿಷ್ಠರಾದ ರಾಜಪ್ರಧಾನರು/ಅರಸು ಮಂತ್ರಿಗಳ ಸಮ್ಮೇಳನವೂ, ಬ್ರಾಹ್ಮಣರ ಕುಚೇಷ್ಟೆಯೂ/ಹಾನಗಲ್ಲಿನಲ್ಲಾದ ವೀರಶೈವರ ಸಭೆ/ಶಿವಲಿಂಗಪ್ಪ ಹೊಸಹಳ್ಳಿ ಊರ್ಫ ಬಾಲಸರಸ್ವತಿ/ಮೆಚ್ಚಿದೆಮ್ಮೆ ಕೋಣವನ್ನೀದಂತಾಯಿತು/ರಾ.ಸಾ॥ರುದ್ರಗೌಡರ ಮೇಲೆ ಮೊಖಾಸಿ ಗುರುರಾಯರು ಮಾಡಿದ ಗಿಲ್ಲೆಯೂ, ಅದರ ಕಡೆಯ ಪರಿಣಾಮವೂ/ರಾ.ಸಾ॥ರುದ್ರಗೌಡರ ವಿಷಯವಾಗಿ ವರಿಷ್ಠರು ನಿಜವಾದ ಪ್ರೇಮವನ್ನು ತೋರಿಸಿದ್ದು/ರಾ.ಸಾ॥ ರುದ್ರಗೌಡರ ಕರ್ತವ್ಯಜಾಗ್ರತೆ/ಸಮಶೀಲ ದಾಂಪತ್ಯದ ಸವಿಕಟ್ಟು/ರಾ.ಸಾ॥ರುದ್ರಗೌಡರು ಅರಟಾಳದಲ್ಲಿ ಮಾಡಿದ ಮನ್ಮಥೋತ್ಸವವು /ಮಂಟಪದ ಶೃಂಗಾರ/ಅಪೂರ್ವವಾದ ಉತ್ಸವಗಳು/ಅಗ್ನಿಕ್ರೀಡೆ/ಅನ್ನಸಂತೃಪ್ತಿ.

೭ನೇ ಭಾಗ : ಪುಟ ೯೧-೧೦೫

ರಾ.ಸಾ॥ರುದ್ರಗೌಡರು ಕಾರವಾರ ಜಿಲ್ಲೆಯ ದಪ್ತರದಾರರಾದದ್ದು/ಹೆಬ್ಬುಲಿಯ ಬೊಬ್ಬೆ/ರಾ.ಬ॥ರುದ್ರಗೌಡರು ಕಾರವಾರಕ್ಕೆ ಹೋದದ್ದು/ರಾ.ಬ॥ರುದ್ರಗೌಡರು ಧಾರವಾಡ ಜಿಲ್ಲೆ ಆಕ್ಟಿಂಗ ಡಿ.ಡಿ॥ಕಲೇಕ್ಟರರಾದದ್ದು/ಪಾಷಾಣತ್ರಯ (ಮೂರು ಕಲ್ಲುಗಳು) ೧ಲರ್ಲ ಇಸ್ವಿ/ಶ್ರೀಮಜ್ಜಗದ್ಗುರು ಗದುಗಿನ ತೋಂಟದಾರ್ಯರ ಸಂಸ್ಕೃತ ಪಾಠಶಾಲೆಯ ಸ್ಥಾಪನೆ/ರಾ.ಬ॥ರುದ್ರಗೌಡರು ಹಂದಿಗನೂರ ದೇಸಾಯರಿಗೆ ದೇಸಗತಿಯ ಅಧಿಕಾರ ಕೊಡಿಸಿದ್ದು/ರಾ.ಬ॥ ರುದ್ರಗೌಡರು ಪುನಃ ಕಾರವಾರ ಜಿಲ್ಲೆಯ ದಪ್ತರದಾರರಾದದ್ದು/ಸೌ॥ತಾಯವ್ವನವರ ಜಡ್ಡು/ಪಂಜರದೊಳಗಿನ ಪಕ್ಷಿಯು ಹಾರಿಹೋಯಿತು.

೮ನೇ ಭಾಗ : ಪುಟ ೧೦೬-೧೨೩

ರಾ.ಬ॥ರುದ್ರಗೌಡರು ದಕ್ಷಿಣಭಾಗದ ಕಮೀಶನರ ಕಚೇರಿಯ ದಪ್ತರದಾರರಾದದ್ದು/ತಾಯವ್ವನವರ ಪತಿಭಕ್ತಿಯು/ರಾ.ಬ॥ಗುರುಸಿದ್ಧಪ್ಪ ವೀರಬಸಪ್ಪ ಗಿಲಗಿಂಚಿ/ಪ್ರತಿಸೂರ್ಯ ಪ್ರಕಾಶ/ರುದ್ರಾಣಿಯವರ ಜನನ/ಕುರುಕುಲದ ಕೋಲಾಹಲ.

೯ನೇ ಭಾಗ : ಪುಟ ೧೨೪-೧೪೬

ಸೂಳಿಯ ಪಿಡುಗು ಸನ್ಯಾಸಿಗೆ/ರಾ.ಬ॥ರುದ್ರಗೌಡರಿಗೆ ಸೇಕಂಡಗ್ರೇಡ ಮಾಜಿಸ್ಟ್ರೇಟ ಅಧಿಕಾರವೂ ಕಮೀಟ ಪಾವರವೂ ದೊರೆದದ್ದು/ರಾ.ಬ॥ರುದ್ರಗೌಡರು ವಿಜಾಪುರದಲ್ಲಿ ವಿಜಯಿಗಳಾದದ್ದು/ವಿಜಾಪುರದ ಸಂಚಾರ/ಶ್ರೀ ವೀರಭದ್ರದೇವರ ಗುಗ್ಗುಳ ಸಮಾರಂಭ/ರಾ.ಬ॥ರುದ್ರಗೌಡರು ದುಷ್ಕಾಳದಲ್ಲಿ ಬಡಜನರನ್ನು ಸಂರಕ್ಷಿಸಿದ್ದು/ಕಾಠೇವಾಡಿಯ ಕಿರಿಗುದುರೆಗಳು/ರುದ್ರಾಣಿಯವರನ್ನು ಶಾಲೆಗೆ ಹಾಕಿದ್ದು/ರಾ.ಬ॥ರುದ್ರಗೌಡರು

೧೫ನೇ ಭಾಗ ಪುಟ ೨೬೪-೩೦೪

ಗೋಕಾವಿ ಮಹಾಜನರ ಪ್ರಕರಣ/ಮಹಾಜನರ ಅಟ್ಟಹಾಸ/ಮಹಾಜನರ ಪ್ರಕರಣಕ್ಕೆ ಸರಕಾರದ ಉತ್ತರ/ನ್ಯಾಯಯುದ್ಧ ಅಥವಾ ಜಂಗೀಕುಸ್ತಿ/ಟಿಳಕರವರ ಸತ್ವಹರಣ/ಮಹಾಜನರ ಮೂರ್ಖತನ/ಬಂಡೋಪಂತರ ಭಂಡಾಟ/ಶ್ರೀಮಂತ ಛತ್ರಪತಿ ಶಾಹೂಮಹಾರಾಜ ಕೊಲ್ಲಾಪುರ ಇವರ ಭೆಟ್ಟಿ/ಕೊಲ್ಲಾಪುರದಲ್ಲಿ ಲಿಂಗಾಯತ ಬೋರ್ಡಿಂಗ ಹೌಸ ಸ್ಥಾಪನೆ/ರಾ.ಸಾ॥ವಾರದ ಮಲ್ಲಪ್ಪಣ್ಣನವರು ಊರ್ಫ ಅಪ್ಪಾಸಾಹೇಬ/ಸೊಲ್ಲಾಪುರ ಸಭಾಮಂಟಪದ ಸೌಂದರ್ಯ/ದೇವೀಹೊಸೂರಲ್ಲಾದ ಸಿರಸಂಗಿಯ ಶ್ರೀಮಂತರ ಸ್ಮಾರಕ ಮಂದಿರ/ಶ್ರೀಮದ್ವೀರಶೈವ ೩ನೇ ಮಹಾಸಭೆ-೧೯೦೭ನೇ ಡಿಸೆಂಬರ/ರಬಕವಿಯ ಪಾನಸುಪಾರಿಯ ಸಮಾರಂಭ/ಮುತ್ತೂರ ಬಸ್ಸೆಟ್ಟೆಪ್ಪನವರು.

೧೬ನೇ ಭಾಗ : ಪುಟ ೩೦೫-೩೩೮

ಫ್ಯಾನ್ಸಿ ಫೆಲರ್ ಅಥವಾ ಫ್ಯಾನ್ಸಿ ಬರುಖಾರ/ಹೈದ್ರಾಬಾದದ ಹಾಹಾಕಾರ/ಬಾಗಲಕೋಟೆಯಲ್ಲಿ ೪ನೇ ಶ್ರೀಮದ್ವೀರಶೈವ ಮಹಾಸಭೆ/ಶಿವಯೋಗಮಂದಿರ ಸ್ಥಾಪನೆಯ ಆವಶ್ಯಕತೆಯೂ ಅದರ ಬಗ್ಗೆ ಆದರ ಠರಾವವೂ/ರುದ್ರಗೌಡ ದೊರೆಗಳಿಗೆ ಹಿಂದುಸ್ಥಾನ ಸರಕಾರದಿಂದ "ರಾವಬಹಾದ್ದೂರ" ಎಂಬ ಪದವಿಯು ದೊರೆದದ್ದು/ಗೋಕಾವಿಯಲ್ಲಾದ ತಾಂಬೂಲ ಸಮಾರಂಭ/ವಂಟಮುರಿಯಲ್ಲಾದ ತಾಂಬೂಲ ಸಮಾರಂಭ/ಶ್ರೀಮಂತ ಚಚಡಿಯ ಚಂದ್ರಭೂಷಣ ದೊರೆಗಳ ಜನನ/ಶಿಶುವಿನ ಸೌಂದರ್ಯವೂ, ನಾಮಕರಣವೂ.

೧೭ನೇ ಭಾಗ: ಪುಟ ೩೩೯-೩೫೩

ಹಾರುವರ ಹೃದಯದೊಳಗಿನ ಹಾಲಾಹಲ/ವಾಲೀಕಾರರ ತ್ರಾಸವನ್ನು ಕಡಿಮೆ ಮಾಡಿದ್ದು/ಗ್ರಾಮಸ್ಥರ ಪೋಟಗೀ ಹಣವು ಮನಿಯಾರ್ಡರ ರೂಪದಿಂದ ದೊರೆಯುವ ಏರ್ಪಾಡಾದದ್ದು/ಸರಕಾರಿ ವನಗಾವಲದ ಫೀ ಕಡಿಮೆ ಮಾಡಲ್ಪಟ್ಟಿದ್ದು/ಗೋಪಾಳ ಸಿದ್ಧೇಶ್ವರನ ಗುಪ್ತತಂತ್ರವು ಬೈಲಿಗೆ ಬಂದದ್ದು/ಮೆ॥ಬೆಳಗಾವ ಜಿಲ್ಲಾ ಕಲೆಕ್ಟರ ಸಾಹೇಬ ಬಹದ್ದೂರವರಿಗೆ ಶಿರಸಂಗೀ ದೇಸಗತಿಯ ಪ್ರೊಬೇಟ ದೊರೆದದ್ದು/ಶ್ರೀಮಂತರ ಅಭೂತಪೂರ್ವವಾದ ಧರ್ಮಮಾರ್ಗ.

೧೮ನೇ ಭಾಗ : ಪುಟ ೩೫೪-೩೬೫

ಅರಟಾಳ ಗ್ರಾಮದ ಶ್ರೀ ವೀರಭದ್ರದೇವರ ಜಾತ್ರೆ/ಯಾತ್ರೆಯ ಪ್ರಯಾಣ/ಅರಟಾಳದ ಶೃಂಗಾರ/ರಥೋತ್ಸವ/ಕರಡಿಯ ಮಜಲೂ. ಪಾರಿಜಾತದ ಆಟವೂ/ಕೀರ್ತನ, ಕುಸ್ತಿ, ಬೈರಕು, ವನಭೋಜನ ಮುಂತಾದ್ದು/ಅನ್ನಸಂತರ್ಪಣೆ.

೧೯ನೇ ಭಾಗ: ಪುಟ ೩೬೬-೪೧೧

ಚಿತ್ರಗಲ್‌ದುರ್ಗದ ಮಹಾಸ್ವಾಮಿಗಳೂ ಅವರಿಗಿರುವ ರಾಜಮರ್ಯಾದೆಯೂ/ಜಗದ್ಗುರುಗಳು ಅಥಣಿಗೆ ದಯಮಾಡಿಸಿದ್ದು/ಅಥಣಿಯಲ್ಲಿ ಶ್ರೀ ಜಗದ್ಗುರುಗಳ ಮೆರವಣಿಗೆಯ ಉತ್ಸವವೂ ಅವರ ಬಿರುದಾವಳಿಗಳೂ/ರಾ.ಬ॥ ಅಥಣಿಗೆ ಬಂದದ್ದು/ಶ್ರೀಗಳ ದರ್ಶನವೂ ಸಮಾರಂಭದ ಸಭೆಯೂ/ಅಥಣಿಯಲ್ಲಿ ವ್ಯಾಸನ ತೋಳಿನ ಪ್ರಸ್ತಾಪ/ಕೊಲ್ಲಾಪುರದಲ್ಲಿ ಆದ ವ್ಯಾಸನ ತೋಳಿನ ಮೆರವಣಿಗೆಯು/ವ್ಯಾಸನ ತೋಳಿನ ಬಗ್ಗೆ ವೀರಶೈವರಿಗೆ ಇರುವ ಹಕ್ಕೂ ಆ ಬಗ್ಗೆ ಹಿಂದೆ ಆಗಿಹೋದ ಸರಕಾರ ಠರಾವುಗಳೂ/ ವ್ಯಾಸನ ತೋಳು ಕಟ್ಟಿ ಮೆರಿಸುವ ಬಗ್ಗೆ ವೀರಶೈವರಿಗೆ ಜನ್ಮತಃ ಇರುವ ಹಕ್ಕೂ ಪೌರಾಣಿಕ ಆಧಾರಗಳೂ/ವ್ಯಾಸನ ತೋಳಿನ ಬಗ್ಗೆ ವ್ಯಾಪಾರ

ರೂಢವಾದ ಆಧಾರಗಳು/ಮಹಾರಾಣಿ ವಿಕ್ಟೋರಿಯಾ ಚಕ್ರವರ್ತಿನಿಯರವರ ಜಾಹೀರನಾಮೆಯೂ, ಅದಕ್ಕೆ ವಿರೋಧವಾದ ಮುಂಬಯಿ ಸರಕಾರದವರ ವ್ಯಾಸನ ತೋಳಿನ ಠರಾವವೂ/ವ್ಯಾಸನ ತೋಳಿನ ಬಗ್ಗೆ ವಿಶೇಷ ವಿಚಾರ/ವ್ಯಾಸನ ತೋಳಿನ ಬಗ್ಗೆ ಜಜ್ಜಕೋರ್ಟಿನಲ್ಲಿ ಅಸಲ ದಾವೆಯನ್ನು ತಂದದ್ದು.

೨೦ನೇ ಭಾಗ : ಪುಟ ೪೧೭-೪೨೦

ದಿಲ್ಲಿ ದರ್ಬಾರವೂ, ಆಯ್.ಎಸ್.ಓ. ಎಂಬ ಪದವಿಯೂ/ಆಯ್.ಎಸ್.ಓ. ಎಂಬ ಪದವಿಯು ಸಿಕ್ಕಿದ್ದು/ ರತ್ನಖಚಿತವಾದ ಸುವರ್ಣ ಪದಕವು ಶ್ರೀ ಜಾರ್ಜ ಬಾದ ಶಹರವರಿಂದ ದೊರೆತದ್ದು/ಮೆ||ಕಮೀಶನರ ಸಾಹೇಬರವರ ಭಾಷಣ/ರಾವಬಹಾದ್ದೂರರವರು ಕೊಟ್ಟ ಉತ್ತರ/ಆಯ್.ಎಸ್.ಓ. ಎಂಬ ಪದವಿಯ ಸನದು ಸಿಕ್ಕದ್ದು.

೨೧ನೇ ಭಾಗ : ಪುಟ ೪೨೧-೪೫೬

ದತ್ತಪುತ್ರನನ್ನು ತೆಗೆದುಕೊಳ್ಳುವ ಬಗ್ಗೆ ವಿಚಾರ/ಶ್ರೀಮಂತ ಬಾಬಾಸಾಹೇಬರ ಜನನ/ಶ್ರೀಮಂತ ಬಾಬಾಸಾಹೇಬರನ್ನು ದತ್ತಪುತ್ರರನ್ನಾಗಿ ತೆಗೆದುಕೊಂಡದ್ದು ತಾ. ೨೦-೧೦-೧೯೧೨/ಶ್ರೀಮತಿ ಗುರುಪಾದಮ್ಮನವರ ಅಂತ್ಯಕಾಲದ ನುಡಿಗಳು/ಗುರುಪಾದವ್ವನವರ ಲಿಂಗೈಕ್ಯವೂ ಅಂತ್ಯಯಾತ್ರೆಯೂ/ ಗುರುಪಾದವ್ವನವರ ಸ್ವರೂಪ-ಗುಣವರ್ಣನ/ಛಿದ್ರಾನ್ವೇಷ/ತಾರೀಖು ೨೭-೨೮-೨೯-೩೦ನೇ ಡಿಶಂಬರ ಸನ್ ೧೯೧೧ ಇ. ದಿವಸ ಬೆಳಗಾವಿಯಲ್ಲಿ ಕೂಡಿದ ೬ನೇ ಶ್ರೀಮದ್ವೀರಶೈವ ಮಹಾಸಭೆ/೨ನೇ ವೀರಶೈವ ಮಹಿಳಾ ಪರಿಷತ್ತು. ಬೆಳಗಾವ/ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ ಗೋಕಾಕ ಫಾಲ್ಸ/ತಾ||೨೬-೨೭-೨೮-೨೯ನೇ ಡಿಸಂಬರ ಸನ್ ೧೯೧೨ರ ಇಸವಿಯಲ್ಲಿ ನಿಪ್ಪಾಣಿಯಲ್ಲಾದ ೭ನೇ ಶ್ರೀಮದ್ವೀರಶೈವ ಮಹಾಸಭೆ/ ಸಭಾಮಂಟಪ/ಅಧ್ಯಕ್ಷರ ಅದ್ವಿತೀಯ ಮೆರವಣಿಗೆ/ಮಹಾಸಭೆಗೆ ಮೆ|| ನಾಮದಾರ ಶೆಫರ್ಡ ಸಾಹೇಬ ಬಹಾದ್ದೂರ ಕಮೀಶನರ ದಕ್ಷಿಣಭಾಗ ಇವರ ಆಗಮನ/೩ನೇ ಮಹಿಳಾ ಪರಿಷತ್ತು ನಿಪ್ಪಾಣಿ ತಾ. ೨೯-೧೨-೧೯೧೨ ರವಿವಾರ/ರಾವಸಾಹೇಬ ಶ್ರೀಮಂತ ಮಲ್ಲಪ್ಪಣ್ಣಾ ಸಿಂತ್ರೆ, ಕುರಲಿ.

೨೨ನೇ ಭಾಗ : ಪುಟ ೪೫೭-೫೦೬

ರಾ.ಬ||ಅರಟಾಳ ಸಾಹೇಬರು ಪೆನಶನ್ ತೆಗೆದುಕೊಂಡದ್ದೂ ಮತ್ತು ಅವರಿಗಾದ ತಾಂಬೂಲ ಸಮಾರಂಭಗಳೂ ತಾ. ೧೬ನೇ ಜೂನ ೧೯೧೩ ಸೋಮವಾರ ಬೆಳಗಾವಿಯ ಪಾನಸುಪಾರಿ/ಗೋಕಾಕದ ಪಾನಸುಪಾರಿ ಸಮಾರಂಭ ತಾ. ೨೭ನೇ ಜುಲೈ ಸನ್ ೧೯೧೩ ಇ. ಶನಿವಾರ/ಚಚಡೀ ದೇಸಗತಿಯ ಮತ್ತು ನೇಸರಗಿ ಗ್ರಾಮದ ತಾಂಬೂಲ ಸಮಾರಂಭ ತಾ. ೨೪ನೇ ಅಗಸ್ಟ ಸನ್ ೧೯೧೩ ರವಿವಾರ/ಚಚಡೀ ಕಾರಭಾರಿಗಳ ಸ್ವಾಗತಪರ ಭಾಷಣ/ಶ್ರೀಮಂತ ಗುಣಪ್ಪದೇಸಾಯರು ಊರ್ಫ ಆಬಾಸಾಹೇಬ ಜನನ ೨೭-೮-೧೯೧೩/ಧಾರವಾಡದಲ್ಲಿ ಆದ ಕೈ.ವಾ. ಶ್ರೀಮಂತ ಶಿರಸಂಗಿ ಸರದೇಸಾಯಿಯವರ ಭಾವಪಟದ ಮೆರವಣಿಗೆಯೂ ರಾ.ಬ||ಅರಟಾಳ ರುದ್ರಗೌಡ ಸಾಹೇಬರವರ ತಾಂಬೂಲ ಸಮಾರಂಭವೂ/ಸಿರಸಂಗಿಯ ಸರದೇಸಾಯಿಯವರ ಭಾವಚಿತ್ರದ ಮೆರವಣಿಗೆ/ಧಾರವಾಡದ ತಾಂಬೂಲ ಸಮಾರಂಭ ತಾ. ೨೧-೯-೧೯೧೩ ರವಿವಾರ/ಕಣಬರಿಗಿಯಲ್ಲಾದ ತಾಂಬೂಲ ಸಮಾರಂಭ/ ಬೈಲಹೊಂಗಲದ ತಾಂಬೂಲದ ಸಮಾರಂಭ ತಾ||೨೬ನೇ ಅಕ್ಟೋಬರ ೧೯೧೩/ಬಸವಾರ್ಯರ ಭಾಷಣವು/ ಬಾಗಲಕೋಟೆಯಲ್ಲಾದ ತಾಂಬೂಲ ಸಮಾರಂಭ/ವಿಜಾಪೂರದಲ್ಲಾದ ತಾಂಬೂಲ ಸಮಾರಂಭ/ಅರಟಾಳದ

ತಾಂಬೂಲ ಸಮಾರಂಭ ತಾ. ೨೬ನೇ ಎಪ್ರೀಲ್ ಸನ್ ೧೯೧೪ ಇ./ರಾವ ಬ॥ರವರ ಅರಟಾಳದ ಸರಕಾರೀ ಜಮೀನುಗಳೆಲ್ಲ ವತನೀ ಸದರಿನಲ್ಲಿ ಸೇರಿಸಲ್ಪಟ್ಟು ಇವರ ವಂಶಪರಂಪರ ಫಕ್ತ ೧/೪ ಜೂಡಿ ಕೊಡುವ ಬಗ್ಗೆ ಸರಕಾರ ಠರಾವವಾದದು/ಚಿಕ್ಕೋಡಿಯ ತಾಂಬೂಲ ಸಮಾರಂಭ.

೨೩ನೇ ಭಾಗ : **ಪುಟ ೫೦೭-೫೭೭**

ಜಗದ್ಗುರುಗಳಾದ ಶ್ರೀ ಜಯದೇವ ಮುರುಘೇಂದ್ರ ಮಹಾಸ್ವಾಮಿಗಳು ಬಂಗಲೆಗೆ ದಯಮಾಡಿಸಿದ್ದು/ ಧಾರವಾಡ ವೀರಶೈವ ಮಂದಿರ/* ಕರ್ನಾಟಕ ಕಾಲೇಜ/ಬೆಳಗಾಂವಿಯಲ್ಲಿ ಗಿಲಗಂಚೀ ಅರಟಾಳ ಹೈಸ್ಕೂಲ ಸ್ಥಾಪನೆಯಾದದ್ದು/ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಚಿತ್ರಕಲ್‌ದುರ್ಗ ಬೃಹನ್ಮಠ ಇವರ ಸನ್ನಿಧಾನದಲ್ಲಿ ಜರುಗಿದ ಬಿರೂರ ತಾಂಬೂಲ ಸಮಾರಂಭ/ ಅಥಣೀ ತಾಲೂಕ ತೆಲಸಂಗದ ತಾಂಬೂಲ ಸಮಾರಂಭ/ ಶ್ರೀಮತಿ ವೀರವ್ವಗೌಡಶಾನಿ, ತಬಕದ ಹೊನ್ನೀಹಳ್ಳಿ/ಮಿ. ಎಂಥೊವ್ಹನ್ ದೊರೆಗಳಿಂದ ಕೃತಜ್ಞತೆ ಸ್ಮರಣೆ ಮತ್ತು ಪತ್ರ/ರುದ್ರಗೌಡರು ನೀಡಿದ ಧರ್ಮಾರ್ಥ ವರ್ಗಣಿ/ರುದ್ರಗೌಡರ ವರ್ಣ, ಸ್ವಭಾವ, ಆಚರಣೆ/ವೇದಾಂತಜ್ಞಾನ.

❖❖

೧ನೇ ಭಾಗ

ಮನೆತನದ ಪೂರ್ವವೃತ್ತಾಂತ

ಶ್ರೀಮಜ್ಜಗಚ್ಚಾಲಕನ ಪ್ರೇರಣೆಯಿಂದ ಈ ಪೃಥ್ವೀವಲಯದಲ್ಲಿ ಸೃಷ್ಟ್ಯಾದಿಯಿಂದ ಜನನ ಮರಣಗಳು ಅವಿಚ್ಛಿನ್ನವಾಗಿ ನಡೆದೇ ಇರುತ್ತವೆ. ಪ್ರತಿ ದಿವಸ ಎಷ್ಟೋ ಪ್ರಾಣಿಗಳು ಉದಯವಾಗುತ್ತವೆ, ಎಷ್ಟೋ ಜೀವಿಗಳು ಲಯವಾಗುತ್ತವೆ. ಈ ಮೇರೆಗೆ ಸೃಷ್ಟಿನಿಯಮಾನುಸಾರವಾಗಿ ಉತ್ಪತ್ತಿ, ಸ್ಥಿತಿ, ಲಯಾದಿಗಳು ಅಬಾಧಿತವಾಗಿ ನಡೆದಿರಲು, ಪುಣ್ಯವಿಶೇಷದಿಂದ ಮನುಷ್ಯಜನ್ಮವನ್ನು ತಾಳಿ, ವಿದ್ಯಾವಿನಯ ಗುಣಗಣಸಂಪನ್ನರಾಗಿ, ಪರೋಪಕೃತಿಯಲ್ಲಿಯೇ ತನುಮನಧನಗಳನ್ನು ಸೂರೆಮಾಡುತ್ತ, ಮಹೋನ್ನತಿಯನ್ನು ಹೊಂದಿ, ಅಖಂಡಕೀರ್ತಿಯನ್ನು ಸಂಪಾದಿಸಿ, ಆಬಾಲವೃದ್ಧ ಮಂಡಳಿಗೆಲ್ಲ ಬೇಕಾಗಿ, ಇಹಪರವೆರಡರಲ್ಲಿಯೂ ಸುಖಸಾಮ್ರಾಜ್ಯವನ್ನನುಭವಿಸಿ, ಜನ್ಮಸಾರ್ಥಕತೆಯನ್ನು ಹೊಂದುವ ಮಹನೀಯರು ತೀರ ವಿರಳ. ಇಂತಹ ಮಹಾತ್ಮರ ಮಾಲೆಯಲ್ಲಿ ನಮ್ಮ ಚರಿತ್ರನಾಯಕರಾದ ರಾವಬಹದ್ದೂರ ಶ್ರೀಮದರಟಾಳ ರುದ್ರಗೌಡ ಸಾಹೇಬರವರನ್ನು ನಿಃಸಂದೇಹವಾಗಿ ಗಣಿಸತಕ್ಕದ್ದು.

ಚರಿತ್ರೆಯನ್ನಾರಂಭಿಸುವ ಮೊದಲು, ಗೊತ್ತಾದಷ್ಟು ಇವರ ಪೂರ್ವಜರ ಐತಿಹ್ಯವನ್ನು ಹುಡುಕಿ ತೆಗೆಯುವದು ಪ್ರಸ್ತುತಕ್ಕೆ ವಿಹಿತ ತೋರುತ್ತದೆ. ಸಾಹೇಬರವರ ಮೂಲ ಮನೆತನವು ಜಿಲ್ಲಾ ವಿಜಾಪುರ, ಬಾಗೇವಾಡಿ ತಾಲೂಕಿನಲ್ಲಿರುವ ಕೊಡತಿ-ಕೊಲ್ಲಾರ ಗ್ರಾಮಗಳ ದೇಸಗತಿಯದು. ಕೆಲವೊಂದು ಕಾಲದಲ್ಲಿ ಇವರ ಪೂರ್ವಜರು ಆ ನಾಡಿನ ದೇಸಾಯರಾಗಿ, ತಮ್ಮ ಆಳಿಕೆಗೊಳಪಟ್ಟಷ್ಟು ಪ್ರಜರನ್ನು ಸುಖಶಾಂತಿಯಿಂದ ಸಲಹುತ್ತಿದ್ದರು. ಕೆಲಕಾಲನಂತರ ಆಂಗ್ಲೇಯರು ನಮ್ಮ ಪುಣ್ಯಭೂಮಿಯಾದ ಭರತಖಂಡವನ್ನೊಳನುಗ್ಗಲಾಗಿ, ಆ ಕಾಲಕ್ಕೆ ಹಿಂದುಸ್ಥಾನದ ಅಯ್ವತ್ತಾರು ದೇಶಗಳ ಅರಸರಲ್ಲಿಯ ಒಕ್ಕಟ್ಟು ಒಡೆದು, ಪರಸ್ಪರ ವೈಷಮ್ಯ ಮನಸ್ತಾಪವೂ ಹೆಚ್ಚಲು, ದೇಶದಲ್ಲಿ ಅಲ್ಲಲ್ಲಿಗೆ ಬಂಡಾಯಗಳೂ, ಡಕಾಯತಿಗಳೂ ಎದ್ದು, ಅಸಂಖ್ಯ ಕೊಲೆ ಸುಲಿಗೆಗಳಾಗಿ, ಒಬ್ಬರ ವಿತ್ತಜೀವಿತಗಳೆಲ್ಲ ಬೇರೊಬ್ಬರ ಕೈವವಶವಾಗಹತ್ತಿದವು. ಇದೇ ಸಂಧಿಯಲ್ಲಿ ದೇಶದಲ್ಲಿ ಭಯಂಕರ ದುಷ್ಕಾಳ ಬಿದ್ದು, ಅತಿ ಕಷ್ಟತಮವಾದ ಪ್ರಸಂಗ ಬಂದಿತು. ಇಂಥ ಅರಾಜಕದ ಮತ್ತು ದುಷ್ಕಾಳದ ಅನರ್ಥವನ್ನು ತಪ್ಪಿಸಲೋಸುಗ ಎಷ್ಟೋ ನಾಡೊಡೆಯರೂ, ಸಂಸ್ಥಾನಿಕರೂ ದಿಕ್ಕೆಟ್ಟು ಸ್ಥಾನತ್ಯಾಗಮಾಡಹತ್ತಿದರು. ಹಿಂದಕ್ಕೆ ಜನರು ಗುಳೇಕಟ್ಟಿ ಓಡಿ ಹೋಗುತ್ತಿದ್ದದ್ದು ಎಲ್ಲರಿಗೂ ಗೊತ್ತುಂಟು.


ಇಂಥ ವಿಷಮಕಾಲದಲ್ಲಿ ವಿಜಾಪುರದ ಮಹಮ್ಮದಿಯರ ರಾಜ್ಯವನ್ನು ದಿಲ್ಲಿಯ ಚಕ್ರವರ್ತಿಗಳು ಕ್ರೂರತನದಿಂದ ಹಾಳುಮಾಡಲು, ಇನ್ನು ಇಲ್ಲಿ ಪರಿಣಾಮಗಾಣೆವೆಂದು ಈ ಕೊಡತಿ-ಕೊಲ್ಲಾರಗಳ ದೇಸಾಯರು

ತಮ್ಮ ದೇಸಗತಿಯನ್ನೆಲ್ಲ ಬಿಟ್ಟು, ದಕ್ಷಿಣಕ್ಕೆ ಸಾಗಿ ಧಾರವಾಡ ಜಿಲ್ಲಾ ಬಂಕಾಪುರ ತಾಲೂಕದೊಳಗಿರುವ ಹಿರೇ ಹರಕುಣಿಗೆ[1] ಬಂದರು. ಅಲ್ಲಿಗೆ ಸಮೀಪದಲ್ಲಿರುವ ಅತ್ತೀಗೇರಿಯ[2] ಬೇಡರು ಹರಕುಣಿಯ ಜನರನ್ನು ಬಹಳೇ ಪೀಡಿಸುತ್ತಿದ್ದರು. ಯಾಕೆಂದರೆ ಹರಕುಣಿಯವರಿಗೂ ಅತ್ತೀಗೇರಿಯವರಿಗೂ ಸೀಮಾಂತರದ ಸಲುವಾಗಿ ಜಗಳ ನಡೆದಿತ್ತು. ಈ ಬೇಡರ ಯಮಬಾಧೆಯನ್ನು ತಾಳದೆ ಹರಕುಣಿಯ ಜನರು, ಈ ದುಷ್ಟವ್ಯಾಧರ ಉಪದ್ರವದಿಂದ ನಮ್ಮನ್ನು ಮುಕ್ತಮಾಡುವ ಕೃಪೆಯಾಗಬೇಕೆಂದು, ಈ ಶೂರ ಮನೆತನದ ದೇಸಾಯರಿಗೆ ಮೊರೆಯಿಟ್ಟರು. ಕರುಣಾಳುಗಳಾದ ಹಿರೇಲಕ್ಕನಗೌಡ ದೇಸಾಯಿ, ಮರಿಲಕ್ಕನಗೌಡ ದೇಸಾಯಿ ಎಂಬ ಬಂಧುಗಳೀರ್ವರು ಅವರ ದೀನಾರ್ತವವನ್ನು ಲಾಲಿಸಿ, ಬೇಡರ ಉಪಟಳವನ್ನು ತಗ್ಗಿಸಿ, ಹರಕುಣಿಯ ಜನರನ್ನು ಸಂರಕ್ಷಿಸಿದರು.

ಈ ಉಪಕೃತಿಯನ್ನು ಸ್ಮರಿಸಿ, ಅಲ್ಲಿಯ ಜನರೆಲ್ಲರೂ ಕೂಡಿ, ದೇಸಾಯಿಯವರಿಗೆ ಹರಕುಣಿಯಲ್ಲಿಯೇ ದೊಡ್ಡದೊಂದು ಗೌಡಿಕಿಯ ವತನವನ್ನು ಹಾಕಿಸಿಕೊಟ್ಟರು. ಮುಂದೆ ಇರ-ಇರುತ್ತ ಇವರ ವಂಶಜರೊಬ್ಬರು ತಮ್ಮ ಸ್ವಂತ ಸಹಾಸದಿಂದಲೂ, ಜಾಣತನದಿಂದಲೂ, ಧಾರವಾಡ ಜಿಲ್ಲೆ ಬಂಕಾಪುರ ತಾಲೂಕಿನಲ್ಲಿ ಕಸಬಾ ಅರಟಾಳ, ಮಜರೆ ಮಸಳೀಕೊಪ್ಪ, ಹಿರೇಕೊಪ್ಪ (ಹಂದರಕೊಪ್ಪ) ಮತ್ತು ಕಲ್ಲಘಟಗೀ ತಾಲೂಕದೊಳಗಿರುವ ಬೀರವಳ್ಳಿ ಈ ಗ್ರಾಮಗಳ ಯಜಮಾನತೆಯನ್ನು ಸಂಪಾದಿಸಿದ್ದರಿಂದ, ಈ ದೇಶಗತಿಯ ಮನೆತನದವರು ಹರಕುಣಿ ಸಹಿತ ಪಂಚಗ್ರಾಮಗಳ ಅಧಿಕಾರಿಗಳಾದರು. ದೈವದುರ್ವಿಪಾಕದಿಂದ ದೇಸಗತಿಯನ್ನು ಕಳಕೊಂಡಾಗ್ಯೂ ಕೂಡಲೆ ಪಂಚಗ್ರಾಮಗಳ ಅಧಿಪತ್ಯವನ್ನು ಸಂಪಾದಿಸಿದರು. ಒಳ್ಳೇ ಮನಸಿನವರಿಗೆ ದೇವರು ಒಳ್ಳೇ ಪದವಿಯನ್ನೇ ಕೊಡುತ್ತಿರುವನೆಂಬ ಮಾತು ಸುಳ್ಳಲ್ಲ.

ಅರಟಾಳ ಗೌಡರ ವಂಶಾವಳಿ

ಮೂಲಪುರುಷ




---

೧. ಈ ಊರು ಜಮಖಂಡಿ ಇಲಾಖೆಗೊಳಪಟ್ಟು ಕುಂದಗೋಳದ ಹತ್ತರ ಅದೆ.

೨. ಈ ಅತ್ತೀಗೇರಿಯ ಗೌಡ ಶಾನಭೋಗರು ಈಗ್ಯೂ ಬೇಡ ಜಾತಿಯವರೇ ಇರುತ್ತಾರೆ.

ಇವರ ಮನೆತನದ ಒಬ್ಬ ಗೌಡರು ಹಿರೇ ಹರಕುಣಿಯ ಗೌಡಕಿ ವತನದಲ್ಲಿ ಅರ್ಧವತನವನ್ನು ತಮ್ಮ ಹೆಣ್ಣು ಮಗಳಿಗೆ ಕೊಟ್ಟಿದ್ದರಿಂದ, ಸದ್ಯಕ್ಕೆ ಅರ್ಧವತನವು ಬೀಗಮನೆತನದವರಿಗೆ, ಉಳಿದ ಅರ್ಧವತನವು ಸಾಹೇಬರವರ ವಂಶಜರಿಗೆ ನಡೆಯುತ್ತದೆ. ಇದನ್ನು ಕಂಡು ಮತ್ತೊಬ್ಬ ಹೆಣ್ಣುಮಗಳು ನನಗೂ ಏನಾದರೂ ವೃತ್ತಿಯನ್ನು ಕೊಡಿರೆಂದು ಬಂಧುಗಳನ್ನು ಬೇಡಿಕೊಳ್ಳಲು, ಸಮದೃಷ್ಟಿಗಳಾದ ಗೌಡರು ಸವಣೂರ ಇಲಾಖೆಗೆ ಸೇರಿದ ಮುಳ್ಳಕೇರಿಗ್ರಾಮದ ಗೌಡಕಿಯನ್ನೂ ಕುಲಕರಣಿಕೆಯನ್ನೂ ಸಂಪಾದಿಸಿ, ಈ ಹೆಣ್ಣುಮಗಳಿಗೆ ಕೊಟ್ಟರು. ಈ ಕೊಟ್ಟ ವತನವನ್ನು ಹೆಣ್ಣುಮಗಳ ಮನೆತನದವರು ಕೆಲಕಾಲನಂತರ ಕಳಕೊಂಡರು. ಮುಂದೆ ಪಂಚಗ್ರಾಮಾಧಿಪತಿಗಳ ವಂಶವೃಕ್ಷವು ಮೂರು ಶಾಖೆಗಳಾಗಿ ಒಂದು ಶಾಖೆಯವರು ಬೀರವಳ್ಳಿಯಲ್ಲಿ, ಇನ್ನೊಂದು ಶಾಖೆಯವರು ಹಿರೇ ಹರಕುಣಿಯಲ್ಲಿ, ಮತ್ತೊಂದು ಶಾಖೆಯವರು ಕಸಬಾ ಅರಟಾಳ, ಮಜರೆ ಮಸಳೀಕೊಪ್ಪ, ಹಿರೇಕೊಪ್ಪಗಳಲ್ಲಿ ಗ್ರಾಮಾಧಿಪತ್ಯವನ್ನು ನಡಿಸುವರು. ಈ ಅರಟಾಳದ ಶಾಖೆಯವರೇ ನಮ್ಮ ರುದ್ರಭೂಪಾಲರ ಮನೆತನದ ಮೂಲಪುರುಷರು.

ಅರಟಾಳ ಗೌಡರ ೨ನೇ ಅಣ್ಣ-ತಮ್ಮಂದಿರ ಇನ್ನೊಂದು ಮನೆತನವು
ಮನೆತನದ ವಂಶಾವಳಿಯು



ಅರಟಾಳ ವೀರನಗೌಡರ ಜೇಷ್ಠ ಪುತ್ರರಾದ ಮುದಿಗೌಡರ ಸತಿಯರಾದ ನೀಲವ್ವಗೌಡಸಾನಿಯವರು ಈ ಅರಟಾಳಗೌಡರ ಮನೆತನದಲ್ಲಿ ಬಹು ಪ್ರಸಿದ್ಧರಾದವರಿರುತ್ತಾರೆ. ಯಾಕೆಂದರೆ ಇವರು ಸನ್ ೧೮೪೩ನೇ ಇಸವಿಯ ೧೧ನೇ ಆಕ್ಟು ಅಮಲಿನಲ್ಲಿ ಬಾರದ ಪೂರ್ವದಲ್ಲಿ ಮತ್ತು ಅಮಲಿನಲ್ಲಿ ಬಂದ ಕೆಲವು ದಿವಸಗಳ ವರೆಗೆ ಬಹಳೇ ಉತ್ತಮರೀತಿಯಿಂದ ಸ್ವತಃ ಗೌಡಿಕೆಯ ಕೆಲಸವನ್ನು ಮಾಡಿದರು. ಇವರು ಮಹಾಪತಿವ್ರತೆಯರೂ, ಪರೋಪಕಾರಿಗಳೂ, ಬಹಳೇ ಸುಸ್ವಭಾವದವರೂ ಇದ್ದರು. ಇವರು ಸ್ತ್ರೀಯರಾದರೂ ಗಂಡಸರಕಿಂತಲೂ ಬಹಳೇ ದರ್ಪಿನಿಂದಲೂ, ದಕ್ಷತೆಯಿಂದಲೂ ಕೆಲಸಮಾಡುತ್ತಿದ್ದುದರಿಂದ, ಇವರಿಗೆ ರೈತ ಜನರು ನಡುಗುತ್ತಿದ್ದರು. ಇವರು ಸ್ತ್ರೀಯರಾಗಿ, ಅತ್ಯುತ್ತಮರೀತಿಯಿಂದ ಕೆಲಸಮಾಡಿ ಕೀರ್ತಿಯನ್ನು ಹೊಂದಿದ್ದರಿಂದ, ಸರ್ವಜನರ ಶ್ಲಾಘನೆಗೆ ಕಾರಣರಾಗಿರುತ್ತಾರೆ. ಇವರು ತಾರೀಖು ೨೫ನೇ ಫೆಬ್ರುವರಿ ಸನ್ ೧೮೫೬ನೇ ಇಸವಿಯಲ್ಲಿ ಮೃತವಾದರು. ಮರಣ ಕಾಲಕ್ಕೆ ಇವರ ವಯಸ್ಸು ಎಪ್ಪತ್ತೈದು (೭೫) ವರ್ಷವಾಗಿತ್ತು. ಇವರು ಅರಟಾಳ ಗೌಡಿಕೆಯ ಎರಡನೇ ಬಣದವರು. ಮೂಲಗೌಡಿಕೆಯಲ್ಲಿ ಎರಡು ಬಣಗಳಾಗಿ, ಮೊದಲು ಒಂದೊಂದು ಬಣವು ಎಂಟಾಣೆಯ ಪಾಲುಳ್ಳದ್ದಾಗಿತ್ತು. ಈ ಪ್ರತಿಯೊಂದು ಬಣದಲ್ಲಿ ಎರಡೆರಡು ಮನೆತನಗಳಾದುದರಿಂದ ಒಂದೊಂದು ಮನೆತನಕ್ಕೆ ನಾಲ್ಕಾಣೆಯ ಪಾಲು ಬಂದಿರುತ್ತದೆ.ಅದರಿಂದ ಮೊದಲನೇ ವಂಶಾವಳಿಯಲ್ಲಿಯ ಎರಡು ಮನೆತನಗಳಲ್ಲಿ ಪ್ರತಿಯೊಂದು ಮನೆತನಕ್ಕೆ ನಾಲ್ನಾಲ್ಕು ಆಣೆಯ ಗೌಡಿಕೆಯ ಭಾಗವೂ, ೨ನೆಯ ವಂಶಾವಳಿಯಲ್ಲಿಯ ಎರಡು ಮನೆತನಗಳಲ್ಲಿ ಪ್ರತಿಯೊಂದು ಮನೆತನಕ್ಕೆ ನಾಲ್ನಾಲ್ಕು ಆಣೆಯ ಭಾಗವೂ ಬಂದಿರುತ್ತವೆ. ನೀಲವ್ವಗೌಡಸಾನಿಯವರ ಮೈದುನರಾದ ರುದ್ರಗೌಡರ ಮಗ ಲಿಂಗನಗೌಡರೆಂಬವರು ಬಹಳೆ ಸಾತ್ವಿಕ ಸ್ವಭಾವದವರಿದ್ದು, ಸಾಯುವ ವರೆಗೆ ಚೆನ್ನವೀರಗೌಡರ ಕೈಯಲ್ಲಿದ್ದರು. ಇವರು ಸನ್ ೧೮೮೩ನೇ ಜುಲೈ ತಿಂಗಳಲ್ಲಿ ಅರಟಾಳದಲ್ಲಿ ಮೃತವಾದರು. ಇವರ ಹೊಟ್ಟೆಯಿಂದ ವಂಶಾವಳಿಯಲ್ಲಿ ತೋರಿಸಿದಂತೆ ಮೂರು ಮಂದಿ ಮಕ್ಕಳು. ಜೇಷ್ಠಪುತ್ರ ಭರ್ಮನಗೌಡರು ಸನ್ ೧೮೮೬ನೇ ಮೇ ತಿಂಗಳಲ್ಲಿ ಮರಣ ಹೊಂದಿದರು. ೨ನೇ ಮಗ ರುದ್ರಗೌಡರು ಸನ್ ೧೮೮೮ನೇ ಮಾರ್ಚ ತಿಂಗಳಲ್ಲಿ ಕುನ್ನೂರಲ್ಲಿ ಸಂಕನಗೌಡರ ಮನೆಯಲ್ಲಿ ಮೃತವಾದರು. ೩ನೇ ಮಗ ಮುದಿಗೌಡರು ಧಾರವಾಡದಲ್ಲಿ, ಕುನ್ನೂರ ಸಂಕನಗೌಡರು ಇಲಾಖಾ ಸಾಹೇಬರ ಕಛೇರಿಯ ಶಿರಸ್ತಾರರಾಗಿದ್ದಾಗ, ಅವರ ಮನೆಯಲ್ಲಿ ಮೃತವಾದರು.

ಚೆನ್ನವೀರಗೌಡರ ಪ್ರತಾಪ

ಅರಟಾಳ ಮೊದಲಾದ ಗ್ರಾಮಗಳ ಗೌಡಿಕೆಯನ್ನು ನೋಡುತ್ತಿದ್ದ (ವಂಶಾವಳಿಯಲ್ಲಿ ತೋರಿಸಿದ) ವೀರನಗೌಡರಿಂದಿತ್ತ ರುದ್ರಭೂಪಾಲರ ವಂಶಾವಳಿಯು ಗೊತ್ತಾಗುತ್ತದೆ. ಅದರಾಚೆಯ ಪೀಳಿಕೆಯು ಸಾಗ್ರವಾಗಿ ಸಿಗುವದಿಲ್ಲ. ವೀರನಗೌಡರ ಮೊಮ್ಮಕ್ಕಳಾದ ಸುಪ್ರಸಿದ್ಧರೂ, ಸುಶೀಲರೂ, ಸದ್ಗುಣ ಸಂಪನ್ನರೂ ಆದ ಚೆನ್ನವೀರಗೌಡರು ರುದ್ರಭೂಪಾಲರ ತಂದೆಯವರು. ಚೆನ್ನವೀರಗೌಡರು ದೇವಜಂಗಮ ಪೂಜಕರೂ, ಸದಾಚಾರಿಗಳೂ, ಸತ್ಯಾಶ್ರಯರೂ, ಭಾವಿಕರೂ, ಭಕ್ತಿವಂತರೂ ಆಗಿ ಒಳ್ಳೇ ದೊಡ್ಡಸ್ತಿಕೆಯುಳ್ಳವರಿದ್ದರು. ಇವರು ತಮ್ಮ ಗ್ರಾಮಾಧಿಪತ್ಯವನ್ನು ನ್ಯಾಯದಿಂದಲೂ, ನಿಷ್ಪಕ್ಷಪಾತದಿಂದಲೂ, ವಿವೇಕದಿಂದಲೂ ನಡೆಸುತ್ತಿದ್ದರಿಂದ ಪ್ರಸಿದ್ಧಗೌಡರಲ್ಲೊಬ್ಬರೆಂಬದಾಗಿ ಪ್ರಖ್ಯಾತಿಯನ್ನು ಹೊಂದಿದ್ದರು. ಜನರಲ್ಲಿ ಇವರ ಸೌಜನ್ಯವಿದ್ದಂತೆ ಕಾರಭಾರದಲ್ಲಿ ದರ್ಪವೂ ಇತ್ತು. ಚೆನ್ನವೀರಗೌಡರು ಕೆಲಸ ಮಾಡುತ್ತಿದ್ದಾಗ, ಊರಜನರು ಬಾಗಿಲತೆರೆದು ನಿದ್ರಿಸುತ್ತಿದ್ದರೆಂಬದಾಗಿ ಜನವಾರ್ತೆಯುಂಟು. ಇದರಿಂದ ಅವರ ಆಳಿಕೆಯ ಸಾಮರ್ಥ್ಯವೂ,

ಕಾರ್ಯಧೋರಣವೂ ಯಾವ ಪ್ರಕಾರದ್ದಿತ್ತೆಂಬದು ತಾನಾಗಿ ತೋರುತ್ತದೆ. ಊರಮನೆತನದ ವ್ಯಾಜ್ಯಗಳನ್ನು ಚೆನ್ನವೀರಗೌಡರು ತಮ್ಮ ಮನೆಯ ಕಟ್ಟೆಯ ಮೇಲೆ ಉಭಯ ಪಕ್ಷಕ್ಕೂ ಹಿತವಾಗುವಂತೆ ಜಾಣ್ಮೆಯಿಂದಲೂ, ನಿರ್ವಂಚನೆಯಿಂದಲೂ ತೀರಿಸುತ್ತಿದ್ದದರಿಂದ, ಇವರು ಇರುವ ವರೆಗೆ ಬಹುಶಃ ಯಾವ ವ್ಯಾಜ್ಯಗಳೂ ಸರಕಾರದ ತನಕ ಹೋಗುತ್ತಿದ್ದಿಲ್ಲವೆಂದು ಹೇಳಬಹುದು. ಎಲ್ಲ ಜಗಳಗಳು ತಿರಾಯತ ಪಕ್ಷದಲ್ಲಿಯೇ ತೀರುತ್ತಿದ್ದದರಿಂದ ಚೆನ್ನವೀರಗೌಡರ ಕಟ್ಟೆಯು ಕಚೇರಿಯಂತೆ ಕಾಣುತ್ತಿತ್ತು. ಚೆನ್ನವೀರಗೌಡರನ್ನು ಜನರೆಲ್ಲರು ಹೆಸರಿನಿಂದ ಕರೆಯದೆ, ಅವರ ದೊಡ್ಡಸ್ತಿಕೆಗೆ ಸರಿಯಾಗಿ ದೊಡ್ಡಗೌಡರೆಂದೇ ಕರೆಯುತ್ತಿದ್ದರು. ದೊಡ್ಡ ಮನಸಿನವರಾದ ಚೆನ್ನವೀರಗೌಡರಿಗೆ ದೊಡ್ಡಗೌಡರೆಂಬ ಅನ್ವರ್ಥನಾಮವು ಬಹು ಶೋಭಿಸುತ್ತಿತ್ತು.

ಚೆನ್ನವೀರಗೌಡರ ಅರ್ಧಾಂಗಿನಿಯವರ ಸುಶೀಲತೆ

ಚೆನ್ನವೀರಗೌಡರಿಗೆ ಅವರ ಶೀಲಸ್ವಭಾವಕ್ಕೆ ಅನುರೂಪವಾಗಿ, ಸುಶೀಲೆಯರೂ, ಮಹಾಪತಿವ್ರತೆಯರೂ, ಗುರುಲಿಂಗಜಂಗಮಭಕ್ತರೂ ಆದ ಲಿಂಗವ್ವನವರು, ರುದ್ರವ್ವನವರು ಎಂಬ ಇಬ್ಬರು ಹೆಂಡರಿದ್ದರು. ಸಮಶೀಲ ಸ್ವಭಾವದವರಾದ ಈ ದಂಪತಿಗಳು ಸುಖದಿಂದಿರುತ್ತಿರಲು, ಗಂಡುಮಕ್ಕಳಿಲ್ಲೆಂಬದೊಂದೇ ಚಿಂತೆಯಲ್ಲದೆ ಇವರಿಗೆ ಬೇರೊಂದು ಚಿಂತೆಯಿದ್ದಿಲ್ಲ. ಸತಿಯರೀರ್ವರೂ ಶುಚಿರ್ಭೂತರೂ, ಪತಿಭಕ್ತಿಪಾರಾಯಣರೂ ಆಗಿ, ಪುತ್ರಲಾಭವನ್ನಿತ್ತು ವಂಶೋದ್ಧಾರ ಮಾಡಬೇಕೆಂಬ ತಮ್ಮ ಮನೆದೇವರಾದ ಶ್ರೀ ವೀರಭದ್ರನನ್ನು ಅಹರ್ನಿಶೆಯಲ್ಲಿಯೂ ಸ್ಮರಿಸುವರು. ಮನೆಯಲ್ಲಿ ಆಗಾಗ್ಗೆ ಪಾದೋದಕ ಪ್ರಸಾದವನ್ನೂ, ಜಂಗಮಾರ್ಚನೆಯನ್ನೂ ಮಾಡಿಸುವರು. ಪುತ್ರೋತ್ಪತ್ತಿಗಾಗಿ ಮಹನೀಯರು ಹೇಳಿದ ಕಠಿಣ ವ್ರತಗಳನ್ನೂ, ದಾನ ಧರ್ಮಗಳನ್ನೂ ಭಯಭಕ್ತಿಯಿಂದ ಮಾಡುವರು. ಚೆನ್ನವೀರಗೌಡರು ಆಗಾಗ್ಗೆ ರುದ್ರಾಭಿಷೇಕಗಳನ್ನು ಮಾಡಿಸುತ್ತ, ಅಷ್ಟಾವರಣದ ಮಹಾತ್ಮೆಯನ್ನು ಹೇಳಿಸುತ್ತ ಪುಣ್ಯಕರವಾದ ಕಾರ್ಯಗಳಲ್ಲಿಯೇ ನಿರತರಾಗುತ್ತಿದ್ದರು.

ಎಲ್ಲಕ್ಕೂ ಮೊದಲು ಜೇಷ್ಠಭಾರ್ಯೆಯವರಾದ ಲಿಂಗವ್ವನವರ[೩] ಹೊಟ್ಟೆಯಿಂದ ಸನ್ ೧೮೪೫ನೇ ಇಸವಿಯಲ್ಲಿ ಲಿಂಗನಗೌಡರು ಹುಟ್ಟಿದರು. ಲಿಂಗನಗೌಡರ ಜನನದಿಂದ ಎಲ್ಲರೂ ಸಂತುಷ್ಟರಾದರು. ರುದ್ರವ್ವನವರ ಹೊಟ್ಟೆಯಿಂದಲೂ ತನ್ನಂತೆ ಬಹುಬೇಗ, ಫಲವಾಗಲೆಂದು ಲಿಂಗವ್ವನವರು ದೇವರನ್ನು ಸ್ಮರಿಸಿದರು. ಚಿಕ್ಕ ಪತ್ನಿಯವರಾದ ರುದ್ರವ್ವನವರು ಬಹಳೇ ವತ್ರಸ್ಥರು. ಮುಗ್ಧಭಕ್ತಿಯುಳ್ಳವರು. ಯಾರೊಬ್ಬರು ಹೇಳಿದ ಸೇವಾನಿಷ್ಠೆಗಳನ್ನು ಬಿಡದೇ ಆಸಕ್ತಿಯಿಂದ ಮಾಡುವವರು. ದೇವಜಂಗಮರಲ್ಲಂತೂ ಅವಿರಳವಾದ ಭಕ್ತಿಯುಳ್ಳವರು. ಆದರೆ ಇವರಿಗೆ ಇನ್ನೂ ಮಕ್ಕಳಾಗಲಿಲ್ಲ. ಪುತ್ರಾರ್ಥವಾಗಿ ರುದ್ರವ್ವನವರು ಹಿರೇಮಠದ ಸೇವೆಯನ್ನೂ, ಶ್ರೀ ವೀರಭದ್ರದೇವರ ನೋಂಪಿಯನ್ನೂ ನಿಷ್ಠೆಯಿಂದ ಮಾಡುತ್ತಿದ್ದರು. ಧುಂಡಸಿಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳೂ, ಕುಟ್ನಾಸಹಳ್ಳಿ (ಕುಂಟನ ಹೊಸಹಳ್ಳಿ)ಯ ಸ್ವಾಮಿಗಳೂ ರುದ್ರವ್ವನವರಿಗೆ - ಅರವತ್ತು ಬಾವಿಗಳ ಜಲವನ್ನು ತಂದು, ಅರವತ್ತು ವಿರಕ್ತಮೂರ್ತಿಗಳ ಪಾದೋದಕ ಮಾಡಿ, ಪಾದೋದಕ ಬೆರಿಸಿದ ೬೦ ಕೊಡ ನೀರಿನಿಂದ ಪ್ರತಿದಿವಸ ಸ್ನಾನಮಾಡಿ, ಹನ್ನೊಂದು ತಿಂಗಳುಗಳ ವರೆಗೆ ಬಿಲ್ವವೃಕ್ಷದ

---

೩. ಜಮಖಂಡಿ ಇಲಾಖಾ, ಕುಂದಗೋಳ ತಾಲೂಕ, ಕುಬೀಹಾಳದ ಪ್ರಸಿದ್ಧಗೌಡರ ಮನೆತನವೇ ಲಿಂಗವ್ವನವರ ತವರ ಮನೆಯು. ಈ ಕುಬೀಹಾಳದ ಗೌಡರು ಬಹಳೇ ದೊಡ್ಡ ವತನದಾರರಿದ್ದಾರೆ. ಲಿಂಗವ್ವನವರು ಅರಟಾಳದ ಹಳೇ ಮನೆಯಲ್ಲಿ ತಾ. ೧೧ನೇ ಡಿಶೆಂಬರ ಸನ್ ೧೮೬೧ನೇ ಇಸವಿಯಲ್ಲಿ ಮರಣಹೊಂದಿದರು.

ಪೂಜೆ ಮಾಡಿದರೆ ನಿಮಗೆ ಪುತ್ರೋತ್ಪತ್ತಿಯಾಗುವದೆಂದು ಹೇಳಿದ್ದಕ್ಕೆ ರುದ್ರವ್ವನವರು ಶಿರಸಾವಹಿಸಿ, ಈ ಅಸಾಧ್ಯವಾದ ವ್ರತವನ್ನು ಬಹುಭಕ್ತಿಯಿಂದ ಪೂರ್ಣಮಾಡಿದರು. ಇದಲ್ಲದೆ ಉಪವಾಸ ಮುಂತಾದ ಕಠಿಣವ್ರತಗಳನ್ನು ಕೂಡ ಏಕೋಭಾವದಿಂದ ನೆರವೇರಿಸಿ, ಪುತ್ರಕಾಮೇಷ್ಠಿಯಲ್ಲಿಯೇ ಮಗ್ನರಾಗಿರುತ್ತಿದ್ದರು. ಪ್ರತಿದಿನದಲ್ಲಿಯೂ ಶ್ರೀ ವೀರಭದ್ರನನ್ನು ಗಂಧಮಾಲ್ಯಾದಿಗಳಿಂದಲೂ, ಧೂಪದೀಪ ನೈವಿದ್ಯಾದಿಗಳಿಂದಲೂ ಸಂತೃಪ್ತಪಡಿಸಿ, ಮಹಾತ್ಮರಲ್ಲಿ ನಿಜವಾದ ಭಕ್ತಿಯುಳ್ಳವರಾಗಿ, ಗುರುದೇವರಿಂದುಪದೇಶಿಸಲ್ಪಟ್ಟ ಪಂಚಾಕ್ಷರೀ ಮಂತ್ರವನ್ನು ಬಿಡದೆ ಭಜಿಸುತ್ತಿದ್ದರು. ಮತ್ತು "ದೇವಾಧಿದೇವಾ; ಪಾರ್ವತಿಯ ಕಾಮಿತವನ್ನು ಪೂರ್ಣಮಾಡಿದ ಶ್ರೀ ವೀರಭದ್ರನೇ! ನನಗೆ ವಂಶಾಂಬುಧಿ ಚಂದ್ರಸದೃಶನಾದ ಸತ್ಪುತ್ರನನ್ನು ಕೊಟ್ಟು, ಬಹು ದಿವಸದಿಂದಿದ್ದ ನನ್ನ ಇಚ್ಛಿತವನ್ನು ಪೂರ್ಣಮಾಡಿ, ನಿನ್ನ ದೀನಭಕ್ತಳನ್ನು ಉದ್ಧರಿಸಬೇಕೆಂ"ದು ಏಕನಿಷ್ಠೆಯಿಂದ, ದೇವರನ್ನು ಬೇಡಿಕೊಳ್ಳುತ್ತಿದ್ದರು. ಇಂತಹ ಮೂಢಭಕ್ತಿಗಳನ್ನಾಚರಿಸುವದೂ, ಕಠಿಣವ್ರತಗಳನ್ನು ಪಾಲಿಸುವದೂ ಅಯೋಗ್ಯವೆಂದೂ, ಅದರಲ್ಲೇನಿದೆಯೆಂದೂ ನಾಸ್ತಿಕ ಮತಾವಲಂಬಿಗಳಾದ ಈಗಿನ ಸುಧಾರಕರು ಅವಹೇಳನೆ ಮಾಡಬಹುದು. ಆದರೆ 'ಭಾವದಂತೆ ಭಕ್ತಿ, ಮನದಂತೆ ಘನ' ಎಂಬ ಮಹಾತ್ಮರ ವಾಕ್ಯಾನುಸಾರವಾಗಿ ಅವರವರ ನಂಬಿಗೆಯಂತೆ ಶಂಭುವು ಬೆಂಬಲವಾಗಿರುವನೆಂಬದೇನು ಸಟೆಯಲ್ಲ. ಈ ಮಾತಿನ ನಿಜಾಂಶವು ಮುಂದೆ ತಾನಾಗಿ ಗೋಚರಿಸುವದು.

ಚೆನ್ನವೀರಗೌಡರು ಸತ್ಯಶಾಲಿಯಾದಂತೆ ಸಂಗೀತ, ಆಟ, ನೋಟ, ಉತ್ಸವಗಳಲ್ಲಿ ಉತ್ಸುಕತೆಯುಳ್ಳ ರಸಿಕರಾಗಿದ್ದರು. ಇವರು ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಮನ್ಮಥನ ಉತ್ಸವವನ್ನು ಮಾಡುತ್ತಿದ್ದರು. ಒಂದುವರ್ಷ ಬಹುಸುಂದರವಾದದ್ದೊಂದು ಕಾಮನ ಪ್ರತಿಮೆಯನ್ನು ಮಾಡಿಸಿ, ಮಹೋತ್ಸವವನ್ನೆಸಗಿರಲು, ಜನರು ನಮ್ಮ ರುದ್ರವ್ವಗೌಡತಿಯವರಿಗೆ ಮನ್ಮಥನಂತಹ ಮಗನೊಬ್ಬನು ಹುಟ್ಟಲೆಂದು ಹರ್ಷನಿರ್ಭರದಲ್ಲಿ ಕೊಂಡಾಡುತ್ತಿದ್ದರು. ಜೋತಿಷ್ಯರೂ, ಸಾಮುದ್ರಿಕೆಯವರೂ ಗೌಡರಿಗೆ ರುದ್ರವ್ವನವರ[೪] ಹೊಟ್ಟೆಯಿಂದ ಸತ್ಪುತ್ರಯೋಗ ಚೆನ್ನಾಗಿದೆಯೆಂದೇ ಹೇಳುತ್ತಿದ್ದರು. "ಜನವಾಕ್ಯೋ ಜನಾರ್ಧನಃ" ಎಂಬಂತೆ ಜನರಾಶಯವು ತೀವ್ರವೇ ನಿದರ್ಶನಕ್ಕೆ ಬಂತು.

ರುದ್ರಗೌಡರ ಜನನ

ಒಂದು ದಿನ ರುದ್ರವ್ವನವರ ನಿದ್ರಾವಸಾನದಲ್ಲಿ ಬೇಸಿಗೆಯ ಮೋಡಗಳನ್ನೋಡಿಸುವ ಸೂರ್ಯೋದಯವಾದಂತೆಯೂ, ಮುಸುಕಿದ ಮಬ್ಬುಗತ್ತಲೆಯನ್ನು ದೂಡುವ ಪೂರ್ಣಚಂದ್ರೋದಯ ವಾದಂತೆಯೂ ಶುಭಕರವಾದ ಸ್ವಪ್ನವಾಗಲು, ಸಮಾಧಾನ ಚಿತ್ತವೃತ್ತಿಯೊಳಿರುತ್ತಿರಲು, ಪಂಚಾಕ್ಷರೀಮಂತ್ರ ಪ್ರಭಾವದಿಂದಲೋ, ಗುರುಲಿಂಗ ಜಂಗಮರಲ್ಲಿರುವ ನಿಶ್ಚಲವಾದ ಭಕ್ತಿಯ ಮಹಿಮೆಯಿಂದಲೋ, ಶ್ರೀ ವೀರಭದ್ರನ ಕರಣಾಕಟಾಕ್ಷದಿಂದಲೋ ಶೀಲಸ್ವಭಾವ, ಶಿವಧ್ಯಾನ, ಸದ್ಭಕ್ತಿಗಳಿಂದ ಅಮೃತವತಿ ಮಹಾದೇವಿಯವರನ್ನು ಹೋಲುವಂತಹ ರುದ್ರವ್ವನವರು, ಶುಭಮುಹೂರ್ತದಲ್ಲಿ ಗರ್ಭವನ್ನು ತಾಳಿದರು. ಸರ್ವಸಂಭ್ರಮದಿಂದ ಸೀಮಂತಾದಿ ಶುಭಕಾರ್ಯಗಳು ಸಾಂಗವಾಗಿ ಸಂತೋಷದಿಂದಿರುತ್ತಿರಲು, ನವಮಾಸಗಳು

---

೪. ಬಂಕಾಪುರ ತಾಲೂಕು ಕುನ್ನೂರ ಸಾಲಮನೆ ಗೌಡರ ಮನೆತನವು, ರುದ್ರವ್ವನವರ ತವರ ಮನೆಯು. ಇವರ ಮನೆತನದವರಿಗೆ ಗೌಡಿಕೆಯೂ, ಕುಲಕರಣಿಕೆಯೂ ಇರುತ್ತದೆ. ರುದ್ರವ್ವನವರ ತಂದೆಯ ಹೆಸರು ಮಹಾಲಿಂಗನಗೌಡರು.

ತುಂಬಿ, ಶ್ರೀಮನ್ನೃಪಶಾಲಿವಾಹನ ಶಕೆಯ ೧೭೭೨ನೇ ಸಾಧಾರಣನಾಮ ಸಂವತ್ಸರ, ಉತ್ತರಾಯಣ ಫಾಲ್ಗುಣಮಾಸ ಕೃಷ್ಣಪಕ್ಷ ಪಂಚಮಿ ತಿಥಿ ಶನಿವಾರ ಅನುರಾಧಾ ನಕ್ಷತ್ರದ ಶುಭಲಗ್ನದಲ್ಲಿ (೨ನೇ ಚರಣದಲ್ಲಿ) ಅಂದರೆ ಸನ್ ೧೮೫೧ನೇ ಇಸವಿ ಪೂರ್ವತಿಂಗಳ ೨೨ನೇ ತಾರೀಖಿನ ದಿವಸ ಸಾಧ್ವಿಶಿರೋಮಣಿಯಾದ ರುದ್ರವ್ವನವರ ಪುಣ್ಯೋದರದಿಂದ, ಮುಂದೆ ಇಡೀಭರತಭೂಮಿಯಲ್ಲೆಲ್ಲ ಪ್ರಖ್ಯಾತಿಯನ್ನು ಹೊಂದಿದವರೂ, ಅದ್ವಿತೀಯ ಮಹೋನ್ನತಿಪಡೆದ ಮಹಾನುಭಾವರೂ, ರಾಜಪೂಜ್ಯರೂ, ರಾಜ್ಯಕಾರ್ಯಧುರಂಧರರೂ, ನಮ್ಮ ಚರಿತ್ರದ ಮುಖ್ಯನಾಯಕರೂ ಆದ, ಚಿಕ್ಕಗೌಡರು ಅರಟಾಳ ಗ್ರಾಮದ ಹಳೇಮನೆ[೫]ಯಲ್ಲಿ ಜನಿಸಿದರು.

ಚೆನ್ನವೀರಗೌಡರ ಪುತ್ರೋತ್ಸವ

ಪುತ್ರೋದಯವೆಂದರೆ ಹೆಚ್ಚಿನದಲ್ಲವೇ? ಸರ್ವಲಾಭಗಳಲ್ಲಿ ಪುತ್ರ ಲಾಭವೇ ಅಧಿಕ. ಎಲ್ಲ ಆನಂದಗಳಲ್ಲಿ ಪುತ್ರಾನಂದವೇ ವೆಗ್ಗಳ. ಎಲ್ಲ ಪ್ರಾಪ್ತಿಗಳಲ್ಲಿ ಪುತ್ರಪ್ರಾಪ್ತಿಯೇ ಶ್ರೇಷ್ಠ. ಸಕಲಮಹೋತ್ಸವಗಳಲ್ಲಿ ಪುತ್ರೋತ್ಸವವೇ ಮಿಗಿಲು. ಅಂತೆಯೇ ಮಹಾರಾಜಾಧಿರಾಜರು ಪುತ್ರಾರ್ಥವಾಗಿ ಘೋರತರ ಜಪತಪಾದಿ ಕಠಿಣವ್ರತಗಳನ್ನು ಕೈಕೊಳ್ಳಲಿಲ್ಲವೇ? ಮನೆತನವನ್ನು ಮುಂದಕ್ಕೆ ತರುವ ಕುಲದೀಪಕನಾದ ಸತ್ಪುತ್ರನು ಯಾರಿಗೆ ಬೇಕಾಗಲಿಕ್ಕಿಲ್ಲ?.

ಚಿಕ್ಕಗೌಡರು ಜನಿಸಿದ ವಾರ್ತೆಯು ತಡವಿಲ್ಲದೆ ಸುತ್ತಲೂ ಹಬ್ಬಿ ಜನರೆಲ್ಲರು ಆನಂದಹೃದಯರಾದರು. ಪುತ್ರಾಕಾಂಕ್ಷಿತರಾದ ತಾಯಿ ತಂದೆಗಳಿಗಾದ ಆನಂದವನ್ನು ಬಣ್ಣಿಸಲಿಕ್ಕೆ ಯಾರಿಂದಲೂ ಆಗದು. ಅವರು ಸಂತೋಷ ಸಮುದ್ರದಲ್ಲಿ ಮುಳುಗಿ ಪರವಶರಾದರು. ಪುತ್ರೋತ್ಸವವನ್ನು ಯಥೋಚಿತವಾಗಿ ಮಾಡಿ, ಬೇಡಿಕೊಂಡ ದೇವರ ಹರಕೆಗಳನ್ನು ಸಂತೋಷದಿಂದ ಸಾಂಗಗೊಳಿಸಿದರು. ಇದೇ ಸಂಧಿಯಲ್ಲಿ ಲಿಂಗನಗೌಡರ ಹಾಗೂ ಅವರ ಅಕ್ಕಂದಿರಾದ ಬಸವ್ವನವರ[೬] ಲಗ್ನ ಸಮಾರಂಭವೂ, ಗುಗ್ಗುಳ ಮದುವೆಯೂ ನಡೆದಿತ್ತು. ಮನೆಯಲ್ಲಿ ಮಂಗಳೋತ್ಸವಗಳು ನಡೆದಿರಲು, ಈ ಅಪೂರ್ವ ಕೂಸು ಹುಟ್ಟಲು, ಕಬ್ಬಿನ ಮೇಲೆ ಜೇನಿಟ್ಟಂತೆ ಆನಂದವು ಇಮ್ಮಡಿಸಿತು. ಲಗ್ನಕ್ಕಾಗಿ ತಮ್ಮ ಮನೆತನದ ಗುರುದೇವರಾದ ನರೇಗಲ್ಲ ಹಿರೇಮಠದ ಪಟ್ಟದಸ್ವಾಮಿಗಳನ್ನು ಕರೆಯಿಸಿದ್ದರು. ಅನಾಯಾಸವಾಗಿ ಗುರುಪಾದ ಸನ್ನಿಧಿಯ ಯೋಗವು ಕೂಸಿಗೆ ಲಭಿಸಿತು. ಸುದೈವಿಗಳ ಯೋಗವೇ ಹೀಗೆ. ಹುಟ್ಟಿದ ದಿವಸ ಶ್ರೀ ಗುರುಸ್ವಾಮಿಗಳು ಜಾತಕರಣ-ಲಿಂಗಧಾರಣಾದಿಗಳನ್ನು ವಿದ್ಯುಕ್ತವಾಗಿ ಮಾಡಿ, ಪೂಜ್ಯವಾದ ಭಸಿತವನ್ನು ಸ್ವಹಸ್ತದಿಂದ ಕೂಸಿನ ಮೈಗೆ ತೊಡೆದು, 'ಶಿಷ್ಯೋತ್ತಮನೇ ಆಯುರಾರೋಗ್ಯ ಸಂತತಿ ಸಂಪನ್ನನಾಗೆ'ಂದು ಆಶೀರ್ವದಿಸಿದರು. ಮತ್ತು ಕೂಸಿನ ಮುಖಮುದ್ರೆ ಸಲ್ಲಕ್ಷಣಾದಿಗಳನ್ನು ಕಂಡು 'ಈ ಚಿಕ್ಕಗೌಡರು ಮುಂದೆ ಮಹಾಪ್ರಬಲರೂ, ವಿದ್ವಾನರೂ, ರಾಜಪೂಜ್ಯರೂ ಆಗುವರೆ'ಂಬುದಾಗಿ ಹೇಳಿದರು. ಗುರುವಾಕ್ಯದಂತೆ ಮುಂದೆ ಅಕ್ಷರಶಃ ನಿಜವಾಯಿತು.

---

೫. ಈ ಹಳೇಮನೆಯ ಪೂರ್ವಕ್ಕೆ ಇವರ ಅಣ್ಣತಮ್ಮಂದಿರಾದ ಲಿಂಗನಗೌಡ ತಂದೆ ರುದ್ರನಗೌಡರ ಮನೆ ಹಾಗೂ ವೀರನಗೌಡ ತಂದೆ ಹುಚ್ಚಬಸವನಗೌಡರ ಮನೆ ಮತ್ತು ಕೋಣನಬಾವಿ. ಪಶ್ಚಿಮಕ್ಕೆ ಕುಂತೀಶ್ವರನ ಗುಡಿ ಮತ್ತು ಆ ಗುಡಿಯ ಮುಂದಿನ ಹೊಂಡ. ದಕ್ಷಿಣಕ್ಕೆ ವೀರನಗೌಡ ತಂದೆ ಬಸವನಗೌಡರ ಮನೆ. ಉತ್ತರಕ್ಕೆ ವೀರನಗೌಡ ತಂದೆ ಸೊಲಬನಗೌಡರ ಮನೆ ಮತ್ತು ಚೆನ್ನವೀರಗೌಡರ ಹೊಸಮನೆ. (ಈ ಹೊಸಮನೆಯನ್ನು ಚೆನ್ನವೀರಗೌಡರು ಹಿಂದಿನಿಂದ ಕಟ್ಟಿಸಿದರು)

೬. ಬಸವ್ವನವರನ್ನು ಅರಟಾಳದ ಹತ್ತಿರಿರುವ ಹೊಸೂರ ಚೆನ್ನಬಸವಗೌಡರ ಪುತ್ರರಾದ ಮಹಾಬಲಗೌಡರಿಗೆ ಕೊಟ್ಟಿತ್ತು. ಈ ಬಸವ್ವನವರು ತಾ. ೭-೯-೧೮೮೪ನೇ ಇಸವಿಯಲ್ಲಿ ಮೃತವಾದರು. ಮಹಾಬಲಗೌಡ ಪಾಟೀಲ ಸಾಕೀನ ಹೊಸೂರ ತಾ. ೩೦-೧-೯೫ ನೇ ಇಸವಿಯ ದಿವಸ ಮೃತರಾದರು.

ಶಿಶುವಿನ ಸೌಂದರ್ಯ

ಚೆನ್ನವೀರಗೌಡರ ಮಾತೋಶ್ರೀಗಳವರಾದ ಭರ್ಮಗೌಡಸಾನಿಯವರು[೭] ಮೊಮ್ಮಗನಾದ ಮುದ್ದುಮಗುವನ್ನು ಕಣ್ತುಂಬ ನೋಡಿ, ಹಿರ್ರನೆ ಹಿಗ್ಗಿ ಎಳೆ ಕಳಲನ್ನೆತ್ತಿಕೊಂಡು ಮುದ್ದಾಡಿ, ಆ ಪುಟ್ಟಕೂಸಿಗೆ ದೇವಕೃಪೆಯಾಗಲೆಂಬುದ್ದೇಶದಿಂದ ಗುಗ್ಗುಲ ಕುಂಭಗಳಿಗೆ ಶಿಶುವಿನ ಶಿರಸ್ಸನ್ನು ಸ್ಪರ್ಶಿಸಿದರು. ಹೆಣ್ಣುಮಕ್ಕಳ ವೃದ್ಧಾಚಾರವೂ, ಅಕ್ಕರತೆಯೂ ವಿಚಿತ್ರವಾದದ್ದೇ ಸರಿ. ಚಿಕ್ಕ ಶಿಶುವು ಶುಕ್ಲಚಂದ್ರನಂತೆ ಅಥವಾ ಬಾಲಸೂರ್ಯನಂತೆ ಉತ್ತರೋತ್ತರವಾಗಿ ಬೆಳೆಯಹತ್ತಿತು. ಕೂಸಾದರೋ ನೋಟಕ್ಕೆ ಬಲು ರಮಣೀಯವಾಗಿತ್ತು. ಅಂಗಕಾಂತಿಯು ಶರಚ್ಚಂದ್ರನಂತೆಯೂ, ಪಾಲ್ಗಡಲದ ಬೆಳ್ನೊರೆಯಂತೆಯೂ, ರಜತಾದ್ರಿಯ ಹೊಳಪಿನಂತೆ ಶುಭ್ರವೂ, ಆನಂದಕಾಯಕವೂ ಆಗಿತ್ತು. ವಿಶಾಲವಾದ ಕಣ್ಣೂ, ನೆಟ್ಟನ್ನ ಮೂಗೂ, ಬಟ್ಟನ್ನ ಮುಖಮಂಡಲವೂ, ದೀರ್ಘವಾದ ಹಣೆಯೂ, ತುಂಬಿಕೊಂಡ ಗಲ್ಲಗಳೂ, ಗಂಭೀರವಾದ ಮುದ್ರೆಯೂ ಉಳ್ಳ, ಸುಂದರ ಸುಕುಮಾರ ದೇಹದ ಪ್ರಿಯ ಬಾಲಕನನ್ನು ಕಂಡು, ಯಾರು ಪ್ರೀತಿಸಲಿಕ್ಕಿಲ್ಲ? ಸುಂದರಾಂಗಿಯರಾದ ಹೆಂಗಳೆಯರಂತೂ ಈ ಮೋಹಕರೂಪದ ಮುದ್ದು ಮಗುವನ್ನು ಬಹು ಪ್ರೀತಿಸುತ್ತಿದ್ದರು.

ತಂದೆ ತಾಯಿಗಳು ಕೂಸಿನ ಅಂಗೋಪಾಂಗಗಳ ಸೌಂದರ್ಯವನ್ನೂ ಮನೋಹರವಾದ ಬಾಲಲೀಲೆಗಳನ್ನೂ ಕಂಡು, ಪರಮಾನಂದ ಹೃದಯರಾಗಿ “ಗುರುಸೇವೆ, ದೇವಭಕ್ತಿ, ಮಹಾವ್ರತಗಳ ಫಲವು ನಿಜವಾಗಿ ಕೈಸಾರ್ದುದೆ”ಂದು ಮನಗಂಡರು. "ತಂದೆಯಂತೆ ಮಗ" ಎಂದು ವ್ಯವಹರಿಸುತ್ತಿದ್ದ ನಾಣ್ಣುಡಿಯು ನಿಜವಾಗಿದೆ. ಚೆನ್ನವೀರಗೌಡರ ಮುಖಲಕ್ಷಣಗಳೂ, ಶೀಲಸ್ವಭಾವಗಳೂ, ಸೌಂದರ್ಯವೂ, ರೂಪರೇಖಾ ವಿಲಾಸಗಳೂ ಈ ಬಾಲಕನಲ್ಲಿ ಇಳಿದಿದ್ದವು. ಇಂಥ ಸತ್ಪುತ್ರರುಳ್ಳ ಮಾತಾಪಿತರೇ ಧನ್ಯರು. ಪೂರ್ವಸುಕೃತವಲ್ಲದೆ ಇಂತಹ ಸೌಭಾಗ್ಯವನ್ನು ಪಡೆಯುವದು ಅಸಂಭವವೇ ಸರಿ.

ಶಿಶುವಿನ ನಾಮಕರಣ

ಹುಟ್ಟಿದ ಹನ್ನೆರಡನೇ ದಿವಸ ಕೂಸನ್ನು ಸರ್ವಸಂಭ್ರಮದಿಂದ ತೊಟ್ಟಿಲೊಳಿಟ್ಟರು. ಸುಂದರಾಂಗಿಯರೂ, ಸುವಾಸಿನಿಯರೂ ಆದ ಎಳೆವೆಣ್ಗಳು ಮಂಜುಳ ಧ್ವನಿಯಿಂದ ಜೋಗುಳವನ್ನು ಪಾಡಿದರು. ಚಿಕ್ಕಗೌಡರ ಸೋದರತ್ತೆಯವರಾದ ರಾಚವ್ವನವರು[೮] ಅಳಿಯಂದಿರ ಹೆಸರೇನಿಡಬೇಕೆಂದು ಹಿರಿಯರನ್ನು ಕೇಳಿದರು. ಅದಕ್ಕೆ ಭರ್ಮಗೌಡಸಾನಿಯವರು ಶ್ರೀ ವೀರಭದ್ರದೇವರ ಮಹದನುಗ್ರಹದಿಂದಲೂ, ಸದ್ವ್ರತ ಮಹಿಮೆಯಿಂದಲೂ ಜನಿಸಿದ ಕಾರಣ, ದೇವರ ಹೆಸರನ್ನಿಡುವದೇ ಯೋಗ್ಯವೆಂದು ಹೇಳಿದೊಡನೆ, ರಾಚವ್ವನವರು ರುದ್ರಗೌಡರೆಂದು ಹೆಸರಿಟ್ಟು “ಬಾಳಾ, ಚಿಕ್ಕಗೌಡರೇ, ಸೋದರಳಿಯರೇ, ರುದ್ರಗೌಡರೇ ನೀವು ಜಗಜ್ಜನವಂದ್ಯರಾಗಿ ತಂದೆತಾಯಿಗಳಿಗೂ, ಬಂಧುಬಳಗದವರಿಗೂ, ಗುರುಹಿರಿಯರಿಗೂ ಅಮಂದಾನಂದವನ್ನೀವುದೆ”ಂದಾಶೀರ್ವದಿಸಿ,

---

೭. ಭರ್ಮಗೌಡಸಾನಿ ಭೃತಾರ ಸೊಲಬನಗೌಡ ಇವರು ತಾರೀಖ ೧೯ನೇ ನವಂಬರ ಸನ್ ೧೮೬೪ನೇ ಇಸವಿಯಲ್ಲಿ (ಅರಟಾಳದ ಹಳೇಮನೆಯಲ್ಲಿ) ಮೃತರಾದರು. ಮರಣಕಾಲಕ್ಕೆ ಇವರ ವಯಸ್ಸು ಅಜಮಾಸು ೬೫ ವರ್ಷವಾಗಿತ್ತು. ಭರ್ಮಗೌಡಸಾನಿಯವರ ತಮ್ಮಂದಿರೂ, ಚೆನ್ನವೀರಗೌಡರ ಸೋದರಮಾವಂದಿರೂ ಆದ ಲಿಂಗನಗೌಡ ತಂದೆ ಚನ್ನಬಸವಗೌಡ ಪಾಟೀಲ ಹೊಸೂರ ಇವರು ಹೊಸೂರ ಗೌಡರಲ್ಲಿ ಬಹುಪ್ರಖ್ಯಾತರಾಗಿದ್ದರು. ಇವರು ತಾರೀಖ ೪-೭-೧೮೬೪ನೇ ಇಸವಿಯಲ್ಲಿ ಸೋಮವಾರ ಮೃತರಾದರು.

೮. ರಾಚವ್ವನವರನ್ನು ಹಾನಗಲ್ಲ ತಾಲೂಕ, ಜಿಲ್ಲಾ ಧಾರವಾಡ, ಕೂಡ್ಲಗ್ರಾಮದ ಗೌಡರಾದ ಕಲ್ಲನಗೌಡರಿಗೆ ಕೊಟ್ಟಿತ್ತು. ಇವರ ಮನೆಯು ಕೂಡ್ಲಗ್ರಾಮದಲ್ಲಿ ಹೊಸದಾಗಿ ಕಟ್ಟಿದ ಹೊಸೂರ ಕಡೆಯ ಅಗಸಿಯಲ್ಲಿ ಇರುತ್ತದೆ.

ಜೋ ಜೋಯೆನ್ನ ರುದ್ರಭೂಪಾಲಾ ಜೋ ಜೋ ॥ಪಲ್ಲವಿ॥
ಜೋ ಜೋಯೆನ್ನ ಮುತ್ತಿನ ಚಂಡೇ ।
ಜೋ ಜೋಯೆನ್ನ ಬಂಗಾರ ಗುಂಡೇ ।
ಜೋ ಜೋಯೆನ್ನ ರೇಶಿಮೆ ಗೊಂಡೇ ॥ ನಿತ್ಯ॥
ಜೋ ಜೋಯೆನ್ನ ಸುಕುಮಾರ ಪಿಂಡೇ ಜೋಜೋ ॥೧॥

ಮುದ್ದುಮುಖದ ದಿವ್ಯಸುಂದರ ರೂಪಾ ।
ತಿದ್ದಿ ತೀಡಿದ ಹುಬ್ಬು ಮನ್ಮಥ ಚಾಪಾ ।
ಎದ್ದು ಮೂಡುವಂಥ ಚಂದ್ರಕಲಾಪಾ ॥ನೀನು॥
ಬುದ್ಧಿವಂತನಾಗು ವರಕುಲದೀಪಾ ಜೋ ಜೋ ॥ ೨॥

ಚಿಕ್ಕಗೌಡರ ಚೆಲುವ ರೂಪವ ನೋಡಿ ।
ಅಕ್ಕರದಿಂದಲಿ ನಲಿನಲಿದಾಡಿ ।
ಸೊಕ್ಕ ಜವ್ವನೆಯರು ಜೋಗುಳ ಪಾಡಿ ॥ಶ್ರೀ॥
ಮುಕ್ಕಣ್ಣ ಹರನನ್ನು ಬಿಡದೆ ಕೊಂಡಾಡಿ ಜೋ ಜೋ ॥ ೩ ॥

ಈ ಪ್ರಕಾರ ಜೋಗುಳ ಪಾಡಿದ ರಾಚವ್ವನವರಿಗೆ ಬಹುಮಾನಮಾಡಿ, ಮಾತೋಶ್ರೀ ರುದ್ರವ್ವನವರನ್ನು ಮಣಿಕನಕಾಭರಣ ವಸ್ತ್ರಾಲಂಕಾರಗಳಿಂದಲಂಕರಿಸಿ, ಉತ್ಸವಕ್ಕೆ ನೆರೆದಿದ್ದ ಮಂಗಳಾಂಗಿಯರನ್ನು ಉಡುಗೊರೆ ಭೋಜನಾದಿಗಳಿಂದ ತೃಪ್ತಿಪಡಿಸಿದರು.

❖❖

೨ನೇ ಭಾಗ

ರುದ್ರಗೌಡರ ಬಾಲಲೀಲೆ

ನೀರು ಆಡುವ ಸಸಿಗಳು ಪ್ರಫುಲ್ಲಿತವಾಗಿ ಬೆಳೆಯುವಂತೆ ರುದ್ರಗೌಡರು ದಿನೇ ದಿನೇ ರಸವತ್ತಾಗಿ ಬೆಳೆದು ಐದಾರು ವರ್ಷದವರಾದರು. ಲಾವಣ್ಯದ ರಾಶಿಯಂತಿರುವ ರುದ್ರಗೌಡರು ಮನೆಯೊಳಗೆ ಓಡಾಡುವಾಗ, ಕಮಲಾಕರದಲ್ಲಿ ಬಾಲಹಂಸನು ಕ್ರೀಡಿಸುವಂತೆ ಬಹು ಚಂದವಾಗಿ ತೋರುತ್ತಿದ್ದರು. ಮೃದು ಮಧುರವಾದ ತೊದಲ್ನುಡಿಗಳು, ತಾಯಿ ತಂದೆಗಳಿಗೆ ಜೇನುತುಪ್ಪದ ಜಡಿಮಳೆಯಾದಂತೆ ಸವಿಯನ್ನುಂಟು ಮಾಡುತ್ತಿದ್ದವು. ಬಂಧು ಬಳಗದವರು ಈ ಸುಂದರ ಶಿಶುವನ್ನು ಕುರಿತು, "ಎಲೈ ತಂದೆಯೇ, ಬಾ. ನನ್ನ ಕ್ಷೀರಸಮುದ್ರವೇ ಮುದ್ದನ್ನು ಕೊಡು. ನನ್ನ ರಾಜಹಂಸನೇ ತಿರುಗಾಡು. ನನ್ನ ಪುಣ್ಯರಾಶಿಯೇ, ತಿರುಗಿ ನೋಡು. ನನ್ನ ಅರಗಿಳಿಯೇ ಮಾತಾಡು. ನನ್ನ ರತ್ನವೇ, ಕುಳಿತುಕೋ" ಎಂಬುದಾಗಿ ಸಂತೋಷದಿಂದ ಮಾತಾಡುತ್ತ. ಪ್ರೀತಿಯಿಂದ ಅಪ್ಪಿ ಮುದ್ದಾಡುವರು. ಈ ಹಸುಮಗುವು ಮುಗುಳ್ನಗೆ ನಗುತ್ತ ಕುಣಿಯುತ್ತಿರಲು, ಹಣೆಯಲ್ಲಿ ಅರಳೆಲೆಯು ಕುಣಿಯುವದು. ಕರ್ಣಾಭರಣಗಳು ಅಲೆದಾಡುವವು. ಕಾಲುಗಳಲ್ಲಿ ಕಿರುಗೆಜ್ಜೆಗಳು ಮಂಜುಳ ಧ್ವನಿಮಾಡುತ್ತಿರುವವು. ಈ ರೀತಿಯ ಬಾಲಲೀಲೆಗಳಿಂದ ಸರ್ವರನ್ನು ಸಂತೋಷಪಡಿಸುತ್ತ, ದಿನೇ ದಿನೇ ವರ್ಧಿಸುತ್ತಿರುವ ರುದ್ರಗೌಡರಿಗೆ ವಿದ್ಯಾರಂಭದ ವಯಸ್ಸಾಗಲು, ಪ್ರಿಯ ಬಾಲಕನನ್ನು ಪನ್ನೀರ ಸ್ನಾನಮಾಡಿಸಿ, ನವವಸ್ತ್ರಾಭರಣ ಗಳಿಂದಲಂಕರಿಸಿ, ಅರಟಾಳದಲ್ಲಿರುವ ಗಾವಠೀ ಸಾಲೆಗೆ ಕಳಿಸಿದರು.

ರುದ್ರಗೌಡರನ್ನು ಎಲ್ಲಕ್ಕೂ ಮೊದಲು ಶಾಲೆಗೆ ಹಾಕಿದ್ದು

ಆಗ ಹಳ್ಳಿಗಳಲ್ಲೆಲ್ಲ ವಾಡಿಕೆಯಾಗಿ ಗಾವಠೀ ಸಾಲೆಗಳೇ ಇದ್ದವು. ಚೆನ್ನಾಗಿ ಓದುಬರಲು ಬಲ್ಲವನು, ಯಾವದಾದರೊಂದು ಮಠದಲ್ಲಿ ಇಲ್ಲವೆ ಗುಡಿಯಲ್ಲಿ ಅಥವಾ ಕಟ್ಟೆಯ ಮೇಲೆ ಊರ ಹುಡುಗರನ್ನು ಕೂಡಿಸಿಕೊಂಡು, ಓದುಬರಹವನ್ನು ಕಲಿಸುವನು. ಸರಕಾರಿ ಸಾಲೆಗಳು ಶಹರಗಳಲ್ಲಿ ಮಾತ್ರ ಇದ್ದವು. ಸಾಲೆಯ ಅಧ್ಯಾಪಕರಿಗೆ ಅಯ್ಯನವರು, ದಾದಾನವರು, ಪಂತೋಜಿಯವರು[೧] ಎಂದು ಕರೆಯುತ್ತಿದ್ದರು. ಆಗಿನ ಕಾಲದಲ್ಲಿ ಅಯ್ಯನವರೇ ವಿಶೇಷವಾಗಿ ಓದುಬರಹವನು ಕಲಿಸುತ್ತಿದ್ದರೆಂದು ತೋರುತ್ತದೆ. ಆದರಿಂದ ಈಗಾದರೂ

---

೧. ಪಂಡಿತ ಎಂಬ ಶಬ್ದದಿಂದ ಪಂತ, ಪಂತೋಜಿ ಎಂಬ ಶಬ್ದಗಳಾಗಿರಬಹುದು.

ಮಾಸ್ತರರಿಗೆ ಸಾಲೆಯ ಅಯ್ಯನವರೆನ್ನುವ ಪರಿಪಾಠವುಂಟು. ಈಗಿನಂತೆ ಸ್ಲೇಟು ಪೇನಶಿಲಗಳು ಆಗ ಇದ್ದಿದ್ದಿಲ್ಲ. ಕಟ್ಟಿಗೆಯ ಹಲಿಗೆಯ ಮೇಲೆ ಬಿಳೇ ಮಟ್ಟಿಯಿಂದ ಸಾರಿಸಿ, ಕೆಮ್ಮಣ್ಣು ಸೂಸಿ ಅದರ ಮೇಲೆ ಬಿದರ ಲೆಕ್ಕಣಿಕೆಯಿಂದ ಬರೆಯುತ್ತಿದ್ದರು. ಅರಟಾಳದ ಸಾಲೆಯಲ್ಲಿ ಗೌಡರು ಧೂಳಾಕ್ಷರ, ಬಳ್ಳಿ, ಅಂಕೆ, ಮೊಗ್ಗೆ ಮೊದಲಾದ ಹಲಗೆಯ ಮೇಲಿನ ಬರಹವನ್ನೆಲ್ಲ ಕಲಿತರು. ಒಂದು ಬಳ್ಳಿಯನ್ನು ಕಲಿತೊಡನೆ ಅದರ ಮರ್ಮವನ್ನು ತಿಳಿದು ಕುಶಾಗ್ರಬುದ್ಧಿಯುಳ್ಳ ಗೌಡರು, ಎಲ್ಲ ವರ್ಣಮಾಲೆಯನ್ನು ತಾವಾಗಿ ತೀವ್ರವೇ ಕಲಿತರು. ಇವರು ಕಲಿಯುವ ಜಾಣ್ಮೆಯನ್ನು ಕಂಡು ಶಾಲಾಧ್ಯಾಪಕರಾದ ಸವನೂರ ನಂದಯ್ಯನವರು "ಆನಂದಿಸಿ ನಿಮ್ಮ ನಂದನರಾದ ರುದ್ರಗೌಡರು ನಿಮ್ಮ ಹೆಸರನ್ನು ತರುವರೆಂ"ದು ಚೆನ್ನವೀರಗೌಡರಿಗೆ ಆಗಾಗ್ಗೆ ಹೇಳುತ್ತಿದ್ದರು. ರುದ್ರಗೌಡರ ತೀವ್ರಮತಿಯನ್ನು ಕಂಡು, ಅಯ್ಯನವರು ಬಹುಪ್ರೀತಿಯಿಂದ ಕಲಿಸುತ್ತಿದ್ದರು. ಹೀಗೆ ಗುರುಗಳ ಮನಸ್ಸನ್ನು ಪ್ರಸನ್ನೀಕರಿಸಿಕೊಂಡು, ಅವರ ಪ್ರೀತಿಗೆ ಪಾತ್ರರಾಗುವ ವಿದ್ಯಾರ್ಥಿಗಳುಳ್ಳ ಶಿಕ್ಷಕರೇ ಧನ್ಯರು.

ಮತಿ ಹಿಡಿಸುವ ಪದ್ಧತಿಯೂ, ಆಗಿನ ಸಾಲೆಗಳ ಸ್ಥಿತಿಗತಿಯೂ

ಹಲಿಗೆಯ ಮೇಲಿನ ಬರಹವನ್ನೆಲ್ಲ ಕಲಿತನಂತರ, ಒಂದು ಶುಭದಿವಸದಲ್ಲಿ[೧] ಚೆನ್ನವೀರಗೌಡರು ಸಾಲೆಯ ಅಯ್ಯನವರನ್ನು ಕರಿಸಿ, ಪನ್ನೀರು, ಪುಷ್ಪ, ಗಂಧ, ಕುಂಕುಮ, ವೀಳೆ, ಬಾಳೆ, ತೆಂಗು, ಅಡಿಕೆ ಮೊದಲಾದ ಮಂಗಲದ್ರವ್ಯಗಳನ್ನು ತರಿಸಿ, ತಮ್ಮ ಮನೆಯ ಕಟ್ಟೆಯ ಮೇಲೆ, ವಸ್ತ್ರಾಲಂಕಾರಗಳಿಂದ ಪರಿಶೋಭಿಸುವ ಪ್ರಿಯ ಬಾಲಕನಿಂದ ಶ್ರೀ ವಿಘ್ನೇಶ್ವರ, ಸರಸ್ವತಿದೇವಿಯರ ಪೂಜೆಯನ್ನೂ, ಪ್ರಾರ್ಥನೆಯನ್ನೂ ಮಾಡಿಸಿ, ಗುರುಗಳನ್ನೂ, ಜಂಗಮರನ್ನೂ ದಕ್ಷಿಣೆ ತಾಂಬೂಲಗಳಿಂದ ಸಂತೃಪ್ತಿಪಡಿಸಿ, ಬಾಲಕನಿಗೆ ಮತಿಹಿಡಿಸಿದರು. ವಿದ್ಯಾರ್ಥಿಯು ಮಾಡುವ ವಿದ್ಯಾದೇವರುಗಳ ಪ್ರಾರ್ಥನಾ ಪರವಾದ ಲೇಖವನ್ನು ಸಾಲೆಯ ಅಯ್ಯನವರು ಬರೆದು, ರುದ್ರಗೌಡರಿಂದ ಓದಿಸಿದರು. ಈ ಲೇಖವನ್ನು ಬರೆದ ಕಾಗದಕ್ಕೆ ಮತಿಚೀಟವೆಂದೂ, ಈ ಪೂಜಾ ಮುಂತಾದ ಕ್ರಿಯೆಗೆ ಮತಿಹಿಡಿಸೋಣವೆಂದೂ ಅನ್ನುವರು. ಈ ಮತಿಹಿಡಿಸುವ ಸಾದ್ಯಂತ ಕ್ರಮವು ಹೇಗೆಂದರೆ:

ಶ್ರಾವಣ ಶುದ್ಧ ಪಂಚಮಿ ದಿವಸ ಶುಭಮುಹೂರ್ತವೆಂದು ತಿಳಿದು, ಅದೇ ದಿವಸ ವಿದ್ಯಾರ್ಥಿಗಳಿಗೆ ಮತಿಹಿಡಿಸುತ್ತಿದ್ದರು. ಮತಿ ಹಿಡಿಸತಕ್ಕ ವಿದ್ಯಾರ್ಥಿಯು ವಸ್ತ್ರಾಲಂಕಾರಗಳಿಂದ ಶ್ರೀಂಗರವಾಗುತ್ತಿದ್ದನು. ವಿದ್ಯಾರ್ಥಿಯನ್ನು ಪೂರ್ವಾಭಿಮುಖವಾಗಿ ಚೌಕಾಸನದಿಂದ ಕೂಡ್ರಿಸಿ, ಮೊದಲು ಆತನ ಕಡೆಯಿಂದ ವಿದ್ಯಾಧಿಕಾರಿಯಾದ ಗಣಪತಿಯನ್ನೂ ಸರಸ್ವತಿಯನ್ನೂ ಪೂಜಾಸಾಮಗ್ರಿಗಳಿಂದ ಪೂಜೆಮಾಡಿಸುತ್ತಿದ್ದರು. ಪೂಜೆ ನಡೆದಾಗ ಎಲ್ಲ ವಿದ್ಯಾರ್ಥಿಗಳಿಗೂ, ನೋಡಬಂದ ಜನರಿಗೂ ಅಕ್ಷತೆಗಳನ್ನು ಕೊಡುತ್ತಿದ್ದರು. ಪೂಜೆ ಮುಗಿಯುವಾಗ ಆ ಅಕ್ಷತೆಗಳನ್ನು ಎಲ್ಲರೂ ದೇವರ ಮೇಲೂ ವಿದ್ಯಾರ್ಥಿಗಳ ಮೇಲೂ ಒಗೆಯತಕ್ಕದ್ದು. ವಿದ್ಯಾರ್ಥಿಯ ಮುಂದಿರುವ ಅಕ್ಷತೆಯ ಗುಂಪಿನಲ್ಲೊಂದು ವರಹವನ್ನು[೨] ಇಟ್ಟು, ಆತನ ಹಣೆಗೆ ಶ್ರೀಗಂಧವನ್ನು ದಟ್ಟಾಗಿ ಹಚ್ಚಲು, ಅವನು ಬೊಗ್ಗಿ ಆ ಅಕ್ಷತೆಯ ಗುಂಪಿಗೆ ಹಣೆಯನ್ನು ಮೂರು ಅಥವಾ ಐದು ಸಾರೆ ಹತ್ತೊತ್ತುವನು. ಆತನ ಹಣೆಗೆ ಆ ವರಹವೂ, ಅಕ್ಷತೆಗಳೂ ಹತ್ತಿಕೊಂಡರೆ ಅವನಿಗೆ ವಿದ್ಯೆ ಹತ್ತುವದೆಂಬದಾಗಿ

೧. ಶಕೆ ೧೭೭೯ ಪಿಂಗಲನಾಮ ಸಂವತ್ಸರ ಶ್ರಾವಣಶುದ್ಧ ೫ ದಿವಸ ಅಂದರೆ ತಾರೀಖು ೨೬ನೇ ಜುಲೈ ತಿಂಗಳ ಸನ್ ೧೮೫೭ನೇ ಇಸವಿಯ ರವಿವಾರ ದಿವಸ ಮತಿಹಿಡಿಸಿದ್ದು.

೨. ವರಹವೆಂದರೆ ಇದೊಂದು ಬಗೆಯ ಬಂಗಾರದ ನಾಣ್ಯವು. ಒಂದು ವರಹದ ಬೆಲೆ ನಾಲ್ಕು ರೂಪಾಯಿ. ಮೊದಲು ನಮ್ಮಲ್ಲಿ ವರಹನಾಣ್ಯಗಳೇ ನಡೆಯುತ್ತಿದ್ದವು.

ಭಾವಿಸುತ್ತಿದ್ದರು. ವಿದ್ಯಾರ್ಥಿಯ ತಂದೆ ತಾಯಿಗಳು ಆತನ ಹಣಿಗೆ ಆ ವರಹವು ಹತ್ತುತ್ತದೋ ಇಲ್ಲವೋ ಎಂಬುದನ್ನು ಮನಃಪೂರ್ವಕವಾಗಿ ನೋಡುತ್ತಿದ್ದರು. ವರಹವು ಹಣೆಗೆ ಬೇಗ ಹತ್ತಿದರೆ ಮತಿಯು ಬಹುಬೇಗ ಹತ್ತುತ್ತದೆಂದು ತಿಳಿಯುವರು. ಪೂಜೆಗಾಗಿ ಇಟ್ಟಿದ್ದ ಆ ವರಹವು ಸಾಲೆಯ ಗುರುಗಳಿಗೆ ಮುಟ್ಟತಕ್ಕದ್ದು. ಆದರೆ ಬಡವರಿದ್ದವರು ಪೂಜೆಯ ಪೂರ್ತೆ ವರಹವನ್ನಿಟ್ಟು, ತಮ್ಮ ಯೋಗ್ಯತಾನುಸಾರವಾಗಿ ಗುರುದಕ್ಷಿಣೆಯನ್ನು ಮುಟ್ಟಿಸಿ, ಆ ವರಹವನ್ನು ತೆಗೆದುಕೊಳ್ಳುತ್ತಿದ್ದರು. ಪೂಜಾರ್ಥವಾಗಿ ಕೊಟ್ಟಿದ್ದ ಅಕ್ಷತೆಗಳನ್ನು ಸಾಲೆಯ ಹುಡುಗರು ಕದ್ದು, ನಮಗೊಂದೊಂದು ದುಡ್ಡು ಕೊಟ್ಟರೆ ನೆಟ್ಟಗಾಗುವದೆಂದೂ, ಕೊಡದಿದ್ದರೆ ಈ ಅಕ್ಷತೆಗಳನ್ನೊಯ್ದು ಕತ್ತೆಯ ಕಿವಿಯಲ್ಲಿ ಹಾಕುವೆವೆಂದೂ ಅನ್ನುತ್ತಿದ್ದರು. ಅಕ್ಷತೆಗಳನ್ನು ಕತ್ತೆಯ ಕಿವಿಯಲ್ಲಿ ಹಾಕಿದರೆ, ವಿದ್ಯಾರ್ಥಿಗೆ ಮತಿ ಹತ್ತುವದಿಲ್ಲೆಂದು ಸರ್ವರೂ ತಿಳಿಯುತ್ತಿದ್ದರು. ಕಾರಣ ಅಕ್ಷತೆಗಳನ್ನು ಕತ್ತೆಯ ಕಿವಿಯಲ್ಲಿ ಹಾಕುವರೆಂಬ ಭಯದಿಂದ ಮತಿಹಿಡಿಸಿದ ವಿದ್ಯಾರ್ಥಿಯ ತಾಯಿತಂದೆಗಳು, ಆ ಹುಡುಗರಿಗೆ ತಲೆಗೊಂದು ದುಡ್ಡಿನಂತೆ ಕೊಡಲು, ಅವರು ಕದ್ದಿದ್ದ ಅಕ್ಷತೆಗಳನ್ನೆಲ್ಲ ಕೊಡುತ್ತಿದ್ದರು. ತಮಗೆ ಬಂದ ದುಡ್ಡುಗಳನ್ನೆಲ್ಲ ಹುಡುಗರು ಶಾಲೆಯ ಪಂತೋಜಿಯವರಿಗೆ ಕೊಡುತ್ತಿದ್ದರು. ಅದರಿಂದ ಪಂತೋಜಿಯವರು ಹುಡುಗರಿಗೆಲ್ಲ ಸೂಟಿಯನ್ನು ಕೊಡುತ್ತಿದ್ದರು. ಕೆಲವರು ಸಾಲೆಯ ಗುರುಗಳಿಗೆ ರುಮಾಲ ದೋತರಗಳನ್ನು ಕೊಡುವರು. ಪೂಜಾ ಸಮಾರಂಭವೂ ತೀರಿದ ನಂತರ ವಿದ್ಯಾರ್ಥಿಯ ಪ್ರಾರ್ಥನಾಪರವಾದ ಲೇಖವನ್ನು ಪಂತೋಜಿಯವರು ಬರೆದು, ಅದನ್ನು ಆತನ ಕಡೆಯಿಂದ ಓದಿಸುವರು. ಇದೇ ಅವನು ಎಲ್ಲಕ್ಕೂ ಮೊದಲು ಕಾಗದವನ್ನು ಓದಲಿಕ್ಕೆ ಪ್ರಾರಂಭಿಸಿದ್ದು, ಧೂಳಾಕ್ಷರ ಮೊದಲಾದ ಹಲಗೆಯ ಮೇಲಿನ ಬರಹವೆಲ್ಲ ಮುಗಿದ ಬಳಿಕ ಮತಿಯನ್ನು ಹಿಡಿಸುತ್ತಿದ್ದರು. ಮತಿಹಿಡಿಸೋಣವೆಂದರೆ ಕಾಗದಗಳನ್ನೋದಲಿಕ್ಕೆ ತಕ್ಕವನಲ್ಲೆಂಬದಾಗಿ ಜನರ ಭಾವನೆಯಿತ್ತು. ಅದರಿಂದವರು ಭಕ್ತಿಯಿಂದಲೂ, ವಿಶ್ವಾಸದಿಂದಲೂ ತಂತಮ್ಮ ಮಕ್ಕಳಿಗೆ ತಪ್ಪದೆ ಮತಿ ಹಿಡಿಸುತ್ತಿದ್ದರು. ಮತಿಹಿಡಿಸುವಾಗ ಮಗನ ಹಣೆಗೆ ಹತ್ತಿದ, ಗಂಧಕುಂಕುಮಾದಿಗಳಿಂದ ಮಿಶ್ರಿತವಾದ, ಅಕ್ಷತೆಗಳನ್ನು ತಕ್ಕೊಂಡು ಹೋಗಿ, ತಾಯಿತಂದೆಗಳು ಬೇರೆ ಅಕ್ಕಿಯಲ್ಲಿ ಅವುಗಳನ್ನು ಕೂಡಿಸಿ, ಸಕ್ಕರೆ, ಯಾಲಕ್ಕಿ ಮುಂತಾದ ಸವಿ ಮತ್ತು ಸುಗಂಧದಿಂದೊಡಗೂಡಿದ ಪಾಯಸಮಾಡಿ, ಸರಸ್ವತಿಯ ಪ್ರಸಾದವೆಂದು ಮಗನನ್ನುಣಿಸುತ್ತಿದ್ದರು. ಮತಿಹಿಡಿಸಿದ ದಿವಸ ಮಗನು ಬೆಕ್ಕು, ನಾಯಿ, ಕತ್ತೆ ಮುಂತಾದ ಅಶುಭ ಮತ್ತು ಅಪವಿತ್ರ ಪ್ರಾಣಿಗಳನ್ನು ನೋಡಿದರೆ ಅವನಿಗೆ ಮತಿಹತ್ತುವದಿಲ್ಲೆಂದು ತಿಳಿದು, ನೋಡಬಾರದೆಂದೂ ಅವನನ್ನು ಹೊರಗೆ ಹೋಗಗೊಡದೆ ದೇವರ ಕೋಣೆಯಲ್ಲಿ ಹಾಕಿ ಕೀಲಿ ಹಾಕುತ್ತಿದ್ದರು. ಮತಿಹಿಡಿಸುವಾಗ ಮತಿಯ ಚೀಟನ್ನೂ ಪೂಜಿಸುತ್ತಿದ್ದರು. ಸಾರಾಂಶ: ಮೊದಲಿನ ಜನರಲ್ಲಿ ದೇವಭಕ್ತಿಯು ವಿಶೇಷವಾಗಿತ್ತೆಂದು ನಂಬಬಹುದು. ಇದರ ಕೆಳಗೆ ಅವತರಿಸಿದ ರುದ್ರಗೌಡರ ಮತಿಚೀಟನ್ನು ಓದಲಾಗಿ, ಮತಿಚೀಟನ್ನು ಬರೆಯುವ ಪದ್ಧತಿಯೂ, ಆಗಿನ ಜನರ ತಿಳುವಳಿಕೆಯೂ ಚೆನ್ನಾಗಿ ತಿಳಿಯುವದು.

॥ ಶ್ರೀ ಗಜಾನನ ಪ್ರಸನ್ನಂ ॥

ಶ್ರೀಮಂತ ಸಕಲಗುಣಸಂಪನ್ನ ರಾಜಮಾನ್ಯ ರಾಜಶ್ರೀ

ಸಿದ್ಧಿವಿನಾಯಕ ಸ್ವಾಮಿಗಳ ಸನ್ನಿಧಾನಕ್ಕೆ

ಸೇವಾನುಸೇವಕ ದಾಸಾನುದಾಸ ಕೇವಲ ತಮ್ಮ ಕಿಂಕರನಾದ ಚೆನ್ನವೀರಗೌಡರ ಗರ್ಭಸಂಜಾತ, ರುದ್ರಗೌಡ ಪಾಟೀಲ ಕಸಬಾ ಅರಟಾಳ, ಮಹಾಲ ದೇಸಗತ ಹಾವನೂರ[೪] ತಾಲೂಕ ಬಂಕಾಪುರ, ನಾನು ಚರಣಕಮಲದಲ್ಲಿ ಮಸ್ತಕವನ್ನಿಟ್ಟು, ತ್ರಿಕಾಲದಲ್ಲಿ ಮಾಡುವ ಶಿರಸಾಷ್ಟಾಂಗ ನಮಸ್ಕಾರ ವಿನಂತಿ ವಿಶೇಷ-

೪. ಅರಟಾಳ ಗ್ರಾಮವು ಮೊದಲು ಕರ್ಜಗಿ ತಾಲೂಕ, ಹಾವನೂರ ಹಣಮಂತಗೌಡ ಬಹದ್ದೂರ ದೇಸಾಯಿ ಇವರ ಇನಾಮಗ್ರಾಮವಾಗಿತ್ತು.

ಸ್ವಾಮಿಪಾದವನ್ನು ಕುರಿತು ಪ್ರಾರ್ಥಿಸುವದೇನೆಂದರೆ: ಈಗ ನಾನು ಹಲಿಗೆಯ ಮೇಲಿನ ಅಲ್ಪಸ್ವಲ್ಪ ಧೂಳಾಕ್ಷರಮೊದಲಾದ ಅಭ್ಯಾಸವನ್ನು ಮುಗಿಸಿ, ಈ ಹೊತ್ತು ಶಕೆ ೧೭೭೯ ಪಿಂಗಲನಾಮ ಸಂವತ್ಸರ ಶ್ರಾವಣ ಶುದ್ಧಪಂಚಮಿ ಭಾನುವಾರ ಸುಮೂಹೂರ್ತದಲ್ಲಿ ಚೀಟು ಓದಲಿಕ್ಕೆ ಪ್ರಾರಂಭಿಸಿದ್ದೇನೆ. ಕಾರಣ ಸ್ವಾಮಿಗಳು ಸೇವಕನ ಮೇಲೆ ಪೂರ್ಣಕೃಪೆಯನ್ನಿಟ್ಟು, ಸಂಪೂರ್ಣ ವಿದ್ಯೆಯನ್ನು ಕೊಡಬೇಕು. ಈಗ ಸ್ವಾಮಿಗಳ ನೈವಿದ್ಯಾರ್ಥವಾಗಿ ಶೆಕ್ತ್ಯಾನುಸಾರ ಹಣ್ಣು ಹಂಪಲಗಳನ್ನು ತಂದಿರುತ್ತೇನೆ. ಅವುಗಳ ವಿವರ:[೫]

ಬಾಳೆಯ ಹಣ್ಣು	- ೧೦೦೦	ತೆಂಗಿನಕಾಯಿ	- ೧೦೦೦	ಕಲ್ಲುಸಕ್ಕರೆ	-	ಅಜಮಾಸು
ಪೇರಲ ಹಣ್ಣು	- ೧೦೦೦	ಲಿಂಬೀಹಣ್ಣು	- ೧೦೦೦	ಬದಾಮು	-	ಅಜಮಾಸು
ದಾಳಿಂಬರ ಹಣ್ಣು	- ೧೦೦೦	ಅಂಟೀರ	- ೧೦೦೦	ಅಡಿಕೆ	-	ಅಜಮಾಸು
ಕಿತ್ತಳೆ ಹಣ್ಣು	- ೧೦೦೦	ವೀಳೇದೆಲೆಗಳು	- ೧೦೦೦	ಕರ್ಪೂರ	-	ಅಜಮಾಸು
ಸೀತಾಫಲ	- ೧೦೦೦	ದೀಪದ್ರಾಕ್ಷೆ	- ೧೦೦೦	ಅಗರಬತ್ತಿ	-	ಅಜಮಾಸು
ರಾಮಫಲ	- ೧೦೦೦	ಉತ್ತತ್ತಿ	- ೧೦೦೦	ಕೇಶರ-ಕಸ್ತೂರಿ	-	ಅಜಮಾಸು
ಹಲಸಿನ ಹಣ್ಣು	- ೧೦೦೦	ಕೊಬ್ಬರೆ	- ೧೦೦೦	ಸಿಂಧೂರ	-	ಅಜಮಾಸು

ಈ ಪ್ರಕಾರ ಫಲ-ಜೀನಸುಗಳನ್ನು ಸ್ವಾಮಿಗಳ ಚರಣಕಮಲಗಳಿಗೆ ಸಮರ್ಪಿಸಿರುತ್ತೇನೆ. ನನ್ನ ಅಲ್ಪಭಕ್ತಿಯನ್ನು ಸ್ವೀಕರಿಸಿ, ಪೂರ್ಣಾಶೀರ್ವಾದದಿಂದ ಸಂಪೂರ್ಣ ವಿದ್ಯೆಯನ್ನು ಕೊಡಬೇಕು. ಈ ವಿಷಯವಾಗಿ ಸ್ವಾಮಿಗಳಿಗೆ ವಿಶೇಷ ಬರೆಯಲಿಕ್ಕೆ ಬಾಲಕನು ಶಕ್ತನಲ್ಲ. ಇತಿ ವಿಜ್ಞಾಪನಾ ನಮಸ್ಕಾರಗಳು- ೧೦೦೦೦೦೦.

ಈ ಮತಿಹಿಡಿಸುವ ಪುರಾತನ ಪದ್ಧತಿಯು ಉತ್ತಮವಾದದ್ದು. ಇತ್ತಿತ್ತಲಾಗಿ ಸರಕಾರಿಯ ಸಾಲೆಗಳಾದನಂತರ ಜನರು ಈ ಪದ್ಧತಿಯನ್ನೇ ಮುರಿದು ಬಿಟ್ಟಿದ್ದಾರೆ. ವಿದ್ಯಾರಂಭದಲ್ಲಿ ವಿದ್ಯಾಧಿದೇವತೆಯ ಪೂಜೆಮಾಡುವ ಸಂಪ್ರದಾಯವನ್ನು ಧಿಕ್ಕರಿಸುವದು ಅಯೋಗ್ಯವಾದದ್ದು. ಮೊದಲಿನ ಜನರಷ್ಟು ಈಗಿನವರು ಭಕ್ತಿವಂತರಲ್ಲ. ಪಾಖಂಡ ಮತಾವಲಂಬಿಗಳಾದ ಪಾಮರರೇ ಹೆಚ್ಚು. ಆಗ ಸಾಲೆಯಲ್ಲಿ ಈಗಿನಂತೆ ಮೊದಲಿಗೆ ಮೂಲಾಕ್ಷರಗಳನ್ನು ಕಲಿಸುತ್ತಿದ್ದಿಲ್ಲ. 'ಓಂ ನಮಸ್ಸಿದ್ಧಂ' ಎಂಬ ಮೂಲಪ್ರಣವಗಳನ್ನು ಕಲಿಸಿದನಂತರ ಧೂಳಾಕ್ಷರಗಳನ್ನು ಕಲಿಸುತ್ತಿದ್ದರು. ಹಳೆತರದ ಮನುಷ್ಯರು "ಓನಾಮಾ ಕಲಿತೆಯಿಲ್ಲೊ" ಎಂಬದಾಗಿ ಈಗ್ಯೂ ಕೇಳುತ್ತಿರುತ್ತಾರೆ. ಈಗಿನಂತೆ ಆರೇಳು ವರ್ಗಗಳೂ, ಅನೇಕ ತರದ ಗಹನ ವಿಷಯಗಳೂ ಮೊದಲು ಇದ್ದಿದ್ದಿಲ್ಲ. ಚೆನ್ನಾಗಿ ಓದು ಬರೆಯಲಿಕ್ಕೂ, ವ್ಯವಹಾರದ ಪೂರ್ತೆ ಲೆಖ್ಖಪತ್ರಮಾಡಲಿಕ್ಕೂ ಬಂದರೆ ತೀರಿತು. ಬೇರೀಜು, ವಜಾಬಾಕಿ, ಗುಣಕಾರ, ಭಾಗಾಕಾರಗಳೂ/ವ್ಯವಹಾರದ ಕೋಷ್ಟಕಗಳೂ ಗಣಿತವಿಷಯದಲ್ಲಿ ಕಲಿಸಲ್ಪಡುತ್ತಿದ್ದವು. ತ್ರೈರಾಶಿ, ಪಂಚರಾಶಿಗಳನ್ನು ಕಲಿತವನಿಗೆ ತೀರಗಲಿತನೆನ್ನುತ್ತಿದ್ದರು. ಕಲಿತ ವಿಷಯಗಳು ದೃಢವಾಗಬೇಕೆಂದು ದಿನಾಲು ಪುರೋಟಿಯನ್ನು[೬] ಹೇಳಿಸುತ್ತಿದ್ದರು. ವಾರಕ್ಕೊಮ್ಮೆ ಕಲಿತದ್ದರ ಉಜಳಣಿಯಾಗುತ್ತಿತ್ತು.[೭] ಸಂವತ್ಸರ, ಮಾಸ, ಹುಣ್ಣಿವೆ, ಅಮಾವಾಸ್ಯೆ, ತಿಥಿ, ವಾರ, ನಕ್ಷತ್ರ, ಯೋಗ, ಕರ್ಣ ಮೊದಲಾದ ವ್ಯವಹಾರೋಪಯುಕ್ತ ವಿಷಯಗಳನ್ನು ಪಾಠಮಾಡಿಸುತ್ತಿದ್ದರು. ಈಗಿನಂತೆ ಸಾಲೆಗೆ ರವಿವಾರ ದಿವಸ ಸೂಟಿಯನ್ನು ಕೊಡದೆ, ಪ್ರತಿ

---

೫. ಇಷ್ಟು ಫಲಗಳನ್ನೂ ಜೀನಸುಗಳನ್ನೂ ತಂದಿರುವದಿಲ್ಲ. ಮುಗ್ಧಭಕ್ತಿಯಿಂದ ಬಹಳವಾಗಿ ಬರೆಯುವ ಸಂಪ್ರದಾಯವಿತ್ತು.

೬. ಪುರೋಟಿಯೆಂದರೆ ಒಮ್ಮೆ ಅಂದದನ್ನು ತಿರುಗಿ ಅನ್ನೋಣ. ಪುನರ್+ವಾದ ಈ ಶಬ್ದದಿಂದ ವಿಕೃತಿಯನ್ನು ಹೊಂದಿ ಪುರೋಟಿ ಎಂದಾಗಿರಬಹುದು.

೭. ಉಜ್ವಲ ಈ ಶಬ್ದದಿಂದ ಉಜಳಣಿಯಾಗಿದೆ. ಉಜ್ವಲವೆಂದರೆ ಪ್ರಕಾಶೀಸೋಣ. ಉಜಳಣಿ ಎಂದರೆ ಕಲಿತದ್ದನ್ನು ಜಳಜಳಮಾಡೋಣ.

ಹುಣಿವೆ ಅಮವಾಸ್ಯೆಗಳಿಗೆ ಒಂದೊಂದು ದಿವಸ, ಶುದ್ಧವದ್ಯಾಷ್ಟಮಿಗಳಿಗೆ ಅರ್ಧರ್ಧದಿವಸ ಸೂಟಿಯನ್ನು ಕೊಡುತ್ತಿದ್ದರು. ಆ ದಿವಸ ಎಲ್ಲ ವಿದ್ಯಾರ್ಥಿಗಳು ಸಾಲೆಯ ಗುರುಗಳಿಗೆ ಅಕ್ಕಿಯನ್ನು, ಇದ್ದುಳ್ಳವರ ಮಕ್ಕಳು ಅಕ್ಕಿಯಲ್ಲದೆ ಮೇಲೊಂದೊಂದು ದುಡ್ಡನ್ನು ಕೊಟ್ಟು ಹಲಗೆಪೂಜೆ ಮಾಡಿ, ಸೂಟಿಯನ್ನು ತೆಗೆದುಕೊಳ್ಳುತ್ತಿದ್ದರು. ಸಾಲೆಯ ಪಂತೋಜಿಯವರಿಗೆ ಅಖವಾನಜಿಯೆಂದೂ ಕರೆಯುತ್ತಿದ್ದರು. ಹಲಗೆಯ ಮೇಲೆ ಹಗಲೆಲ್ಲ ಕೆಮ್ಮಣ್ಣು ಹಾಕಿ ಬರೆಯಬೇಕಾಗುವದರಿಂದ ಹುಡುಗರ ಮೈಮೇಲಿನ ಅರಿವೆಗಳೆಲ್ಲ ಬಹುಶಃ ಕೆಂಪಗಾಗಿರುತ್ತಿದ್ದವು. ಅದರಿಂದ ನೋಡಿದ ಕೂಡಲೆ ಸಾಲೆಯ ಹುಡುಗರೆಂದು ತಿಳಿಯುತ್ತಿತ್ತು. ಮೂತ್ರಕ್ಕೂ, ಮಲವಿಸರ್ಜನಕ್ಕೂ ಹೋಗಬೇಕಾದರೆ ಈಗಿನಂತೆ ಒಂದಕ್ಕೆ, ಎರಡಕ್ಕೆ ಎಂದೆನ್ನುವ ಪರಿಪಾಠವಿತ್ತು. ಈಗಿರುವ ಗಾವಠಿಸಾಲೆಗಳಲ್ಲಿ ಹಳೆತರದ ಪದ್ಧತಿಗಳು ನಡೆಯುತ್ತಿದ್ದದ್ದು ವಿರಳವಾಗಿ ಕಂಡುಬರುತ್ತವೆ. ಆದರೂ ಪ್ರಾಥಮಿಕ ಶಿಕ್ಷಣವು ಹಳೆತರಕ್ಕೂ ಹೊಸತರಕ್ಕೂ ಮಹದಂತರವಾಗಿ ಹೋಗಿದೆ.

ರುದ್ರಗೌಡರ ಪ್ರಾಥಮಿಕ ಶಿಕ್ಷಣ

ರುದ್ರಗೌಡರು ಹುಟ್ಟಿದ ಮೂರುನಾಲ್ಕು ವರ್ಷಗಳಲ್ಲಿಯೇ ಚೆನ್ನವೀರಗೌಡರಿಗೆ (ಲಿಂಗವ್ವನವರ ಹೊಟ್ಟೆಯಿಂದ) ಮಹಾದೇವಗೌಡರು ಹುಟ್ಟಿದರು. ಹುಟ್ಟಿದ ಐದಾರು ವರ್ಷಗಳಲ್ಲಿಯೇ ಮಹಾದೇವಗೌಡರನ್ನೂ ಸಾಲೆಗೆ ಹಾಕಿದರು. ರುದ್ರಗೌಡರೂ, ಮಹಾದೇವಗೌಡರೂ ಸಾಲೆಯಲ್ಲಿ ಕಲಿಯುವಾಗ ಇವರ ಅಣ್ಣಂದಿರಾದ ಲಿಂಗನಗೌಡರು ಹಿರೇಮಣಿಗಳಾಗಿದ್ದರು. ಸಾಲೆಯಲ್ಲಿ ಹೆಚ್ಚಿಗೆ ಕಲಿತ ವಿದ್ಯಾರ್ಥಿಯನ್ನು ಸಣ್ಣ ಹುಡುಗರ ವರ್ಗಕ್ಕೆಲ್ಲ ಕಲಿಸಲಿಕ್ಕೆ ಹಚ್ಚಿ, ಅವರಿಗೆ ಹಿರೇಮಣಿಯೆಂದೆನ್ನುತ್ತಿದ್ದರು. ಲಿಂಗನಗೌಡರ ಬುದ್ಧಿಯಾದರೂ ಬಹಳೇ ಜಾಗ್ರತವಾದದ್ದಿತ್ತು. ಚೆನ್ನವೀರಗೌಡರು ಚಿಕ್ಕ ಮಕ್ಕಳಿಗೆ "ತುಂಟ ಹುಡುಗರ ಸಂಗತಿ ಹಿಡಿಯದೆ, ಗುರು ನಿರಾಕರಣೆ ಮಾಡದೆ, ನಿರುತಾಭ್ಯಾಸವನ್ನು ನಿತ್ಯದಲ್ಲಿ ತಪ್ಪದೆ ಮಾಡಿ ಗುರುಚಿತ್ತಕ್ಕೆ ಆನಂದವನ್ನುಂಟು ಮಾಡಿರೆಂ"ದು ಬಾರಿಬಾರಿಗೆ ಬುದ್ಧಿವಾದವನ್ನು ಹೇಳುತ್ತಿದ್ದರು. ತೀರ್ಥರೂಪರ ಸದುಪದೇಶವನ್ನು ಅರ್ಥಿಯಿಂದ ಕೇಳಿಕೊಂಡು ಅದರಂತೆ ನಡೆದುಕೊಳ್ಳುತ್ತಿದ್ದರು. ಸಾಲೆಯಲ್ಲಿಯಾದರೂ ಗುರೂಪದೇಶವನ್ನು ಶಿರಸಾಮಾನ್ಯ ಮಾಡಿ ಹೇಳಿಕೊಟ್ಟ ಅಭ್ಯಾಸವನ್ನು ಮನಮುಟ್ಟಿ ಕಲಿತು, ಎಲ್ಲ ಹುಡುಗರಲ್ಲಿ ಮುಂದಾದರು. ಸುಶಿಕ್ಷಿತ ಮನೆತನದಲ್ಲುದಿಸಿದ ರುದ್ರಗೌಡರಿಗೆ ಚಿಕ್ಕಂದಿನಲ್ಲಿ ಗೃಹಶಿಕ್ಷಣವೂ, ಶಾಲಾಶಿಕ್ಷಣವೂ ಚೆನ್ನಾಗಿ ದೊರೆಯಿತು. ಮೊದಲೇ ತೈಲಬುದ್ಧಿಯು, ಮೇಲಾಗಿ ಸಚ್ಛಿಕ್ಷಣವು, ಅಲ್ಲಿಂದ ಕೇಳುವುದೇನು? ಚಿನ್ನಕ್ಕೆ ರನ್ನವನ್ನಿತ್ತಂತಾಯಿತು. ರುದ್ರಗೌಡರು ಹತ್ತು ಹನ್ನೊಂದು ವರ್ಷದವರಾಗುತ್ತಲೆ (ಸನ್ ೧೮೬೨ ನೇ ಇಸವಿಯಲ್ಲಿ) ಅರಟಾಳ ಸಮೀಪದಲ್ಲಿರುವ ಧುಂಡಸೀ ಸರಕಾರಿ ಸಾಲೆಗೆ ಹೋದರು. ಸರಕಾರಿ ಸಾಲೆಗಳಿಗೆ ಆಗ ಜನರು ಧರ್ಮಸಾಲೆ (ಧರ್ಮಾರ್ಥವಾಗಿ ಕಲಿಸುವ ಸಾಲೆ) ಎಂದೆನ್ನುತ್ತಿದ್ದರು. ಅಲ್ಲಿಯೂ ಶಾಲಾ ಗುರುಗಳಾದ ವಿರೂಪಾಕ್ಷ ಸಿದ್ಧಲಿಂಗಪ್ಪ ಮಮದಾಪುರ ಸಾಕೀನ ಸವದತ್ತಿ ಇವರ ಅನುಗ್ರಹಕ್ಕೆ ಪಾತ್ರರಾಗಿ, ದೇಶಭಾಷೆಯ ಪುಸ್ತಕಗಳನ್ನೋದಹತ್ತಿದರು. ಕೂಡಲೇ ವಿರೂಪಾಕ್ಷಪ್ಪ ಮಾಸ್ತರರಿಗೆ ವರ್ಗವಾಗಿ, ಅವರ ಸ್ಥಳಕ್ಕೆ ಯಜ್ಞೇಶ್ವರ ವೆಂಕಾಜಿ ಜೋಸಿ ಸಾಕೀನ ಕಸಬಾ ನವಲಗುಂದ ಇವರು ಬಂದರು. ಯಾವ ಮಾಸ್ತರರು ಬಂದರೂ ರುದ್ರಗೌಡರನ್ನು ಪ್ರೀತಿಸದೆ ಇರಲಿಲ್ಲ. ಜಾಣ ವಿದ್ಯಾರ್ಥಿಗಳನ್ನು ಎಲ್ಲರೂ ಪ್ರೀತಿಸುವದು ಸಹಜವಾಗಿದೆ. ಇವರು ಎಂದಿನಂತೆ ಗುರುಸೇವೆಯಲ್ಲಿ ಆಸಕ್ತರಾಗಿ, ಗುರ್ವಾಜ್ಞೆಯನ್ನು ದೇವಾಜ್ಞೆಯೆಂದೇ ಭಾವಿಸಿ ತಮ್ಮ ಅಭ್ಯಾಸವನ್ನು ಚೆನ್ನಾಗಿ ಮಾಡಹತ್ತಿದರು.

ಗುರುಸೇವೆ

ಸತ್ಯಾಂಕುರವು ಇವರ ಹೃದಯದಲ್ಲಿ ಚಿಕ್ಕಂದಿನಲ್ಲಿಯೇ ಮೊಳೆಯಿತು. ಸಟೆಯು ಇವರಿಗೆ ಹುಟ್ಟಾ ಸೇರಲಿಲ್ಲ. ಸಾಲೆಯ ಹುಡುಗರ ನ್ಯಾಯವಿಚಾರವನ್ನು ಮಾಡಿ, ಅವರಿಗೆ ಸರಿಯಾಗಿ ಬುದ್ಧಿಯನ್ನು ಹೇಳುವ ಜಾಣ್ಮೆಯನ್ನು ಇವರು ಬಾಲ್ಯದಲ್ಲಿಯೇ ಕಲಿತುಬಿಟ್ಟರು. ಸಾರಾಂಶ, ಸತ್ಯಾಂಶದಲ್ಲಿ ಇವರು ಜಾರ್ಜ ವಾಸಿಂಗ್ಟನ್‌ರಾಗಿದ್ದರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅಂತೆಯೇ ಇವರು ಪ್ರಾಮಾಣಿಕತನದ ಬಗ್ಗೆ ಮುಂದೆ ಬಹುಪ್ರಖ್ಯಾತಿಗೆ ಬಂದರು. ಚಿಕ್ಕಂದಿನಲ್ಲಿ ಇವರು ಚಕ್ಕಂದದಿಂದ ವೇಳೆಗಳೆಯಲಿಲ್ಲ. ವೇಳೆಯ ಬೆಲೆಯು ಇವರಿಗೆ ಆಗಲೇ ತಿಳಿದುಹೋಗಿತ್ತು. ಮುಂದರಿಯತಕ್ಕ ಮಹಾಪುರುಷರ ವಿಶಿಷ್ಟಗುಣ ಶಕ್ತಿಲಕ್ಷಣಗಳು ಬಾಲ್ಯದಲ್ಲಿಯೇ ದೃಗ್ಗೋಚರವಾಗುತ್ತವೆ. ಆ ಸಲ್ಲಕ್ಷಣಾದಿಗಳನ್ನು ಕಂಡುಹಿಡಿಯತಕ್ಕವರು ವಿಚಾರಶೀಲರಾದ ವಿವೇಕರೇ ಸರಿ.

ಗೌಡರು ಇನ್ನೂ ವಯಸ್ಕರಲ್ಲದಿದ್ದರೂ ಜ್ಞಾನದೇವತೆಯು ಇವರನ್ನು ವರಿಸಿದ್ದಳು. ಇವರು ಯಜ್ಞೇಶ್ವರ ಪಂತರಲ್ಲಿ ಮೂರುವರ್ಷ ವಿದ್ಯಾಮೃತಪಾನ ಮಾಡಿದರು. ಎಷ್ಟು ದಿವಸಾದರೂ ಇವರು ಗುರುಸೇವೆಯನ್ನು ಬಿಡಲಿಲ್ಲ.

ಗುರುಬ್ರಹ್ಮಾ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರಃ ।
ಗುರುಸಾಕ್ಷಾತ್ಪರಬ್ರಹ್ಮೋ ತಸ್ಮೈ ಶ್ರೀ ಗುರವೇ ನಮಃ ॥೧॥

ಎಂಬ ಗುರುಮಂತ್ರವನ್ನರಿತು ಗುರುಕೃಪೆಯಿಂದ ಬೇಕಾದದ್ದನ್ನು ಪಡೆಯಬಹುದೆಂದು ನಂಬಿ ಗುರ್ವನುಮತಿಯಂತೆಯೇ ವರ್ತಿಸುತ್ತಿದ್ದರು. ಎಂಟು ದಿವಸಕ್ಕೊಮ್ಮೆ ಪಂತೋಜಿಯವರ ದೋತರಗಳನ್ನು ಸಹ ನಿರ್ಮಲವಾಗಿ ಒಗೆದು ತಂದುಕೊಡುತ್ತಿದ್ದರು. ಇದಲ್ಲದೆ ರಾತ್ರಿ ಯಜ್ಞೇಶ್ವರರು ಅಭ್ಯಾಸ ಹೇಳಿದ ಮೇಲೆ ಮಲಗಿ ನಿದ್ರೆ ಹತ್ತುವ ವರೆಗೆ ರುದ್ರಗೌಡರು, ತಮ್ಮ ತಂದೆಯ ಆಜ್ಞೆ ಪ್ರಕಾರ ಯಜ್ಞೇಶ್ವರರ ಪಾದಗಳನ್ನು ಹಿಚಕುತ್ತಿದ್ದರು. ಅವರಿಗೆ ನಿದ್ರೆಹತ್ತಿದ ಮೇಲೆ ತಾವು ಹೋಗಿ ಮಲಗುತ್ತಿದ್ದರು. (ರುದ್ರಗೌಡರು ಸ್ವತಃ ಹೇಳಿ ಬರೆಸಿದ್ದು. ತಾ. ೫-೯-೧೯೨೮). ಈಗಿನ ವಿದ್ಯಾರ್ಥಿಗಳಂತೆ ನಾವು ದೊಡ್ಡವರ ಮಕ್ಕಳೆಂಬ ಶಠಂಭಾವವೃತ್ತಿಯನ್ನು ಇವರು ಮನಸಿನಲ್ಲಿ ಕೂಡ ತರಲಿಲ್ಲ. ಪೂರ್ವದಲ್ಲಿ ದೊಡ್ಡ ದೊಡ್ಡ ಸಾರ್ವಭೌಮ ರಾಜರ ಮಕ್ಕಳು ತಮ್ಮ ರಾಜಗರ್ವವನ್ನು ಯತ್ಕಿಂಚಿತವಾಗಿ ಹಿಡಿಯದೆ ಯಃಕಶ್ಚಿತರಂತೆ ವರ್ತಿಸಿ, ವಿದ್ಯಾರ್ಜನೆಯನ್ನು ಮಾಡುತ್ತಿರುವಂತೆ ನಮ್ಮ ಗೌಡರಾದರೂ ಗುರುಸೇವೆಯನ್ನು ತ್ರಿಕರಣಪೂರ್ವಕವಾಗಿ ಮಾಡಿ, ವಿದ್ಯೆಯನ್ನು ಸಂಪಾದಿಸುತ್ತಿದ್ದರು. ಐಶ್ವರ್ಯ ಮದೋನ್ಮತ್ತರಾದ ನರಾಧಮರನ್ನು ವಿದ್ಯಾದೇವಿಯು ಎಂದಿಗೆ ಅಂಗೀಕರಿಸುವಳು? ಚೆನ್ನವೀರಗಡರಾದರೋ ಬಂದ ಪಂತೋಜಿಯವರಿಗೆ ಇರಲಿಕ್ಕೆ ಬಾಡಿಗೆಯಿಲ್ಲದೆ ಮನೆಕೊಡಿಸಿ, ಪ್ರಪಂಚದ ಅನೇಕ ಸಾಮಾನುಗಳನ್ನು ಕೈಲಾದಮಟ್ಟಿಗೆ ಒದಗಿಸಿಕೊಟ್ಟು, ಮೇಲಿಂದ ಮೇಲೆ ಅವರ ಪರಾಮರಿಕೆಯನ್ನು ತೆಗೆದುಕೊಳ್ಳುತ್ತಿದ್ದು, ಅವರ ಸಾಲೆಯ ಎಷ್ಟೋ ಕೆಲಸಕ್ಕೆ ಸಹಾಯಕರಾಗುತ್ತಿದ್ದರು. ಬಹಳ ಹೇಳುವದೇನು? ಕಾಯಿಪಲ್ಲೆ ಜೀನಸು, ಕಟ್ಟಿಗೆ, ಧಾನ್ಯಾದಿಗಳನ್ನು ಕೂಡ ಕೊಡುತ್ತಿದ್ದರು. ಮನೆಯೊಳಗೆ ಸವಿಯಡಿಗೆಯಾದರೆ ಪಂತೋಜಿಯವರ ಮನೆಯಲ್ಲಿಯೂ ಆಗಲಿಕ್ಕೆ ಬೇಕು. ಇದಲ್ಲದೆ ಅವರಲ್ಲಿ ಯಾವನೊಬ್ಬ ವಿದ್ಯಾರ್ಥಿಯ ಮತಿಹಿಡಿಸಿದರೆ ದಾದಾನವರಿಗೆ ಯೋಗ್ಯತಾನುಸಾರವಾಗಿ ದಕ್ಷಿಣೆಸಹಿತ ದೋತರ ರುಮಾಲಗಳನ್ನು ಸಮರ್ಪಿಸಬೇಕು. ಈ ಪ್ರಕಾರ ವಿತರಣಾಶಾಲಿಗಳಾದ ಚೆನ್ನವೀರಗೌಡರು ಬಡಮಾಸ್ತರ ಜನರ ಯೋಗಕ್ಷೇಮ ತೆಗೆದುಕೊಳ್ಳುತ್ತಿದ್ದದರಿಂದ ಅಲ್ಲಿಂದ ಮಾಸ್ತರ ಜನರು ವರ್ಗಾಗಿ ಹೋಗುವಾಗ ಕಣ್ಣೀರು ತರುತ್ತಿದ್ದರು. ಈ

ಕಾಲದಲ್ಲಿ ಮಾಸ್ತರ ಜನರಿಗೆ ಈ ಪರಿ ನೆರವಾಗುವ ಮಹಾನುಭಾವರು ಒಬ್ಬರಾದರೂ ಇರುವರೋ? ಯಜ್ಞೇಶ್ವರ ಪಂತರಿಗೆ ೩೬ ವರ್ಷದ ವಯಸ್ಸಾಗಿದ್ದರೂ ಇನ್ನೂ ಅವರ ಲಗ್ನವಾಗಿದ್ದಿಲ್ಲ. ಚೆನ್ನವೀರಗೌಡರ ಉದಾರತ್ವದಿಂದ ಪಂತರ ಲಗ್ನವೂ ಕೂಡ ಆಗಿ, ಅವರ ದಾರಿದ್ರ್ಯವಿಚ್ಛಿನ್ನವಾಗಿ ಹೋಯಿತು.

ರುದ್ರಗೌಡರು ಹಿರೇಮಣಿಗಳಾದದ್ದು

ಮುಂದೆ ಯಜ್ಞೇಶ್ವರ ಪಂತರಿಗೆ ಹಳೆಹುಬ್ಬಳ್ಳಿಯ ಕನ್ನಡ ೧ನೇ ನಂಬರ ಸಾಲೆಗೆ ವರ್ಗವಾಯಿತು. (೧೮೬೬ ಜೂನ). ಹೋಗುವಾಗ್ಗೆ ಯಜ್ಞೇಶ್ವರ ಪಂತರು ಚನ್ನವೀರಗೌಡರಿಗೆ ತಮ್ಮ ಚಿರಂಜೀವರು ಪ್ರವೀಣರಾಗುವರೆಂದೂ, ಇವರನ್ನು ನಮ್ಮೊಡನೆ ಹುಬ್ಬಳ್ಳಿಗೆ ಕಳಿಸಿಕೊಡಿರೆಂದೂ, ಇವರ ವಿದ್ಯಾರ್ಜನೆಯನ್ನು ಇಷ್ಟಕ್ಕೆ ಮುಗಿಸಿಸಬೇಡಿರೆಂದೂ ಹೇಳಿದ್ದಕ್ಕೆ ಅವರು ಒಪ್ಪಿಕೊಂಡರು. ಯಜ್ಞೇಶ್ವರ ಪಂತರು ಹುಬ್ಬಳ್ಳಿಗೆ ಹೋಗಲು ಅವರ ಸ್ಥಳಕ್ಕೆ ಲಿಂಗಪ್ಪ ಅಡಿವೆಪ್ಪ ಅಗಸರ ಸಾಕೀನ ಕಸಬಾ ಬಂಕಾಪುರ ಎಂಬವರು ಮಾಸ್ತರರಾಗಿ ಬಂದರು. ಇವರ ಬಳಿಯಲ್ಲಿ ತುಸು ದಿವಸ ವಿದ್ಯೆಯನ್ನಾರ್ಜಿಸಿ ಉನ್ನತಿಯನ್ನು ಪಡೆದದರಿಂದ, ಇದೇ ಸಾಲೆಯಲ್ಲಿ ರುದ್ರಗೌಡರು ಮೂರು ರೂಪಾಯಿ ಸಂಬಳದ ಮೇಲೆ ಕೆಲವು ದಿವಸ ಮಾನಿಟರ ಅಂದರೆ ಹಿರೇಮಣಿಗಳಾಗಿ ಶಾಳಾ ಕೆಲಸವನ್ನು ಮಾಡಿದರು (೧೮೬೬ ಇಸವಿ). ಮುಂದೆ ಈ ಮಾನಿಟರ ಕೆಲಸವನ್ನು ಬಿಟ್ಟು ಸನ್ ೧೮೬೬ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಹಳೇಹುಬ್ಬಳ್ಳಿಯ ಕನ್ನಡ ೧ ನೇ ನಂಬರ ಸಾಲೆಗೆ ಹೋಗಿ, ಪುನಃ ಯಜ್ಞೇಶ್ವರ ಪಂತರವರ ವಿದ್ಯಾರ್ಥಿಗಳಾದರು. ಇವರು ಅಲ್ಲಿ ಮುಂದಣಭ್ಯಾಸವನ್ನು ಚೆನ್ನಾಗಿ ಮಾಡುತ್ತಿರಲು, ಅದೇ ವರ್ಷ ಇವರ ಮಾತೋಶ್ರೀ ರುದ್ರವ್ವನವರು ಅರಟಾಳದಲ್ಲಿ ಮಂಗಳವಾರ ಮಕರಸಂಕ್ರಮಣದ ದಿವಸ ಮೃತವಾದರು. (೧೮೬೬ನೇ ಜನೇವರಿ ತಾರೀಖು, ೧೫)

ರುದ್ರವ್ವನವರ ಭಕ್ತಿಮಾರ್ಗವೂ, ಅಗ್ಗಣಿಯ ಕ್ರಮವೂ

ಮಾತೋಶ್ರೀಯವರ ಮರಣದಿಂದ ರುದ್ರಗೌಡರಿಗೆ ಬಹಳೇ ದುಃಖವಾಯಿತು. ತಾಯಿಯವರ ಶುದ್ಧಾಂತಃಕರಣವನ್ನೂ, ಪ್ರೇಮವನ್ನೂ ನೆನೆನೆನೆದು ಶೋಕಿಸಿದರು. ಹುಟ್ಟಿದಾರಭ್ಯ ಇವರಿಗೆ ದುಃಖವೇ ಗೊತ್ತಿದ್ದಿದ್ದಿಲ್ಲ. ತಾಯಂದಿರ ವಿಯೋಗದಿಂದ ದುಃಖವು ಅಪಾರವಾಯಿತು. ಭಗವತ್ಸಂಕಲ್ಪಕ್ಕೆ ನಿರುಪಾಯವದೆ. ರುದ್ರವ್ವನವರ ಭಕ್ತಿಮಾರ್ಗವು ವಿಶೇಷವಾದದ್ದು. ಪಾದೋದಕ ಪ್ರಸಾದದಲ್ಲಿ ಪರಮ ನಿಷ್ಠೆಯುಳ್ಳವರು. ಒಮ್ಮೆ ಮನೆಯಲ್ಲಿ ಹೆಗ್ಗಣಗಳ ಉಪದ್ರವವು ಬಹಳವಾಗಲು, ಬಲಿ-ಔಷಧ ಮುಂತಾದ ಎಷ್ಟು ಉಪಾಯ ನಡಿಸಿದರೂ ಅವು ನಾಶವಾಗದಿರಲು, ರುದ್ರವ್ವನವರು ದಿನಾಲು ಮನೆಯಲ್ಲಿ ಪಾದೋದಕ ಸೇಚನೆಗೆಯ್ಯಹತ್ತಿದರು. ಅದರಿಂದ ಹೆಗ್ಗಣಗಳು ಲೆಗ್ಗಿಯು ತಗ್ಗಿ ಹೋಯಿತು. ಪಾದೋದಕ ಮಹಿಮೆಯನ್ನೂ, ಫಲವನ್ನೂ ಅವರು ಮನಗಂಡಿದ್ದರು. ಯೋಗ್ಯವಿರಕ್ತಸ್ವಾಮಿಗಳ ಮೇಲೆ ಅವರ ನಿಷ್ಠೆ ಬಹಳ. ಧುಂಡಸಿಯ ಮಹಾಸ್ವಾಮಿಗಳಾದ ಶ್ರೀ ಪರದೇಶಪ್ಪನವರ ಪಾದೋದಕ ಪ್ರಸಾದವು ಮನೆಯಲ್ಲಿ ಯಾವಾಗಲೂ ಇರುತ್ತಿತ್ತು. ಪಾದೋದಕ ಬೆರೆಯದೆ ಯಾರ ಸ್ನಾನವೂ ಆಗುತ್ತಿದ್ದಿಲ್ಲ. ಮನೆತನದಲ್ಲಿ ಯಾರಿಗಾದರೂ ಜ್ವರ ಮುಂತಾದ ಬೇನೆ ಬಂದರೆ ಅವರಿಗೆ ಬಹುಶಃ ಔಷಧವನ್ನು ಕೊಡದೆ, ಅಗ್ಗಣಿಯನ್ನು ಹಾಕುತ್ತಿದ್ದರು. ಅಗ್ಗಣಿಯೆಂದರೆ ಒಂದು ಮಣ್ಣಿನ ಹೊಸಕೊಡವನ್ನು ತಂದು, ಸಂಜೆಯಾದ ಮೇಲೆ ಜಲಾಶಯದಿಂದ ನೀರು ತುಂಬಿಕೊಂಡು ಬಂದು, ಆ ಕೊಡದ ಬಾಯಿಯನ್ನು ಮಡಿವಸ್ತ್ರದಿಂದ ಮುಚ್ಚಿ, ಹಿತ್ತಲಲ್ಲಿರುವ ಲಿಂಬೇಗಿಡದ ಮೇಲೆ ಅಂತರಿಲೆ ಇಡುತ್ತಿದ್ದರಂತೆ. ಬೆಳಗಾದ ಕೂಡಲೆ ಬೇನೆಯವರನ್ನು ಒಂದು

ಮಣಿಯ ಮೇಲೆ ಕುಳ್ಳಿರಿಸಿ, ತುಸು ಪಾದೋದಕ ಬೆರಿಸಿ, ಆ ಕೊಡನೀರನ್ನು ಅವರ ಮೇಲೆ ಸುರಿವಿ ಮೆಯ್ಯೊರಿಸಿ, ಕೂಡಲೆ ಕಂಬಳಿಯ ಮುಸುಕು ಹಾಕಿಸಿ, ಕವಡಿ ಲೋಬಾನದ ಹೊಗೆಯನ್ನು ಕೊಡುವರಂತೆ. ಈ ಪ್ರಕಾರ ಅಯ್ದು ವಾರ ಅಗ್ಗಣಿಯನ್ನುಗ್ಗಿಕೊಂಡರೆ ಬೇನೆಗಳೆಲ್ಲ ಬಿಟ್ಟೋಡುತ್ತಿದ್ದವಂತೆ. ಇದು ಅವರ ಅನುಭವಕ್ಕೆ ಬಹಳೇ ಬಂದದರಿಂದ, ಈ ಕ್ರಮವನ್ನು ಬಿಡದೇ ಮಾಡುತ್ತಿದ್ದರು. ಸಾರಾಂಶ, ಔಷಧಕ್ಕಿಂತ ಅಗ್ಗಣಿಯೇ ಅವರಿಗೆ ಗುಣಕರವಾಗಿತ್ತು. ಇಂತಹ ಅಪೂರ್ವ ಭಕ್ತಿಯುಳ್ಳ ತಾಯಂದಿರು ಗತಿಸಿದ್ದರಿಂದ ಗೌಡರಿಗೆ ಬಹಳೇ ದುಃಖವಾಯಿತು. ಕಡೆಗೆ ದುಃಖನಿವೃತ್ತಿ ಮಾಡಿಕೊಂಡು, ತಮ್ಮ ವಿದ್ಯಾಭ್ಯಾಸಕ್ಕೆ ಹೋದರು.

ರುದ್ರಗೌಡರು ಇಂಗ್ಲೀಷ ಕಲಿಯಲಿಕ್ಕೆ ಪ್ರಾರಂಭಿಸಿದ್ದು

ರುದ್ರಗೌಡರ ಜಾಣತನದ ವಿಷಯಕ್ಕೆ ಎಲ್ಲರು ಬಹಳೇ ಶ್ಲಾಘಿಸಹತ್ತಿದ್ದರಿಂದಲೂ, ಅಂತರಂಗದಲ್ಲಿ ಇವರ ವಿದ್ಯಾಜಾಗ್ರತೆಯೂ- ವ್ಯವಹಾರಜ್ಞಾನವೂ ಗೊತ್ತಾದದ್ದರಿಂದಲೂ ಚೆನ್ನವೀರಗೌಡರು ಇವರಿಗೆ ಇಂಗ್ಲೀಷವನ್ನು ಕಲಿಸಬೇಕೆಂದಾಲೋಚಿಸಿದರು. ಅಷ್ಟೊತ್ತಿಗೆ ರುದ್ರಗೌಡರ ಕನ್ನಡ ಅಭ್ಯಾಸವು ಮುಗಿದದ್ದರಿಂದ, ಇವರನ್ನು ಇಂಗ್ಲೀಷ ಕಲಿಯಲಿಕ್ಕೆ ಧಾರವಾಡ ಆಂಗ್ಲೋ ವರ್ನ್ಯಾಕ್ಯೂಲರ ಸ್ಕೂಲಿಗೆ ಸನ್ ೧೮೬೭ ನೇ ಇಸವಿಯ ಮಾರ್ಚ ತಿಂಗಳಲ್ಲಿ ಕಳಿಸಿದರು. ಇದೇ ಅವರ ಆಂಗ್ಲ ವಿದ್ಯಾರ್ಜನೆಯ ಆರಂಭವು. ಇಲ್ಲಿ ಇವರಿಗೆ ಹಗಲೆಲ್ಲ ವಾಂತಿರೋಗೋಪದ್ರವವಾಗಿ ಅಭ್ಯಾಸವು ಸರಿಯಾಗಿ ಸಾಗಲಿಲ್ಲ. ಬೇನೆಯಿಂದ ಹಗಲೆಲ್ಲ ಸಾಲೆಯನ್ನು ಬಿಟ್ಟು ಊರಿಗೆ ಹೋಗುವ ಪ್ರಸಂಗಬರುತ್ತಿತ್ತು. ಹಾಗೂ ಹೀಗೂ ಧಾರವಾಡದಲ್ಲಿ ಮೊದಲನೇ ಇಯತ್ತೆಯೊಂದನ್ನು ಕಲಿತನಂತರ ಮುಂಬಯಿಗೆ ಹೋಗಿ ಕಲಿಯಬೇಕೆಂಬದಾಗಿ ಗೌಡರ ಮನಸಿನಲ್ಲಿ ಹುಟ್ಟಿತು. ಮುಂದೆ ಉದಯಕಾಲವಿತ್ತೆಂದರೆ ಆರಂಭದಲ್ಲಿಯೇ ಮನಸ್ಸಾಗರದೊಳಗೆ ತರತರದ ಸದ್ವಿಚಾರ ತರಂಗಗಳು ಉದ್ಭವಿಸುತ್ತವೆ. ಆ ಸುವಿಚಾರಿಗಳ ಮನಸು ಸ್ಥೈರ್ಯವೂ, ದಾರ್ಢ್ಯವೂ ಉಳ್ಳದ್ದಾದರೆ, ಅವರ ವಿಚಾರ ತರಂಗಗಳು ಎಂದೂ ಭಂಗವಾಗಲಾರವು. ಸರ್ವಾಭಿಗಾಮಿಯಾದ ಮಾರುತನು ಅಲೆಗಳನ್ನೊಯ್ದು ದಂಡೆಗೆ ಅಪ್ಪಳಿಸುವಂತೆ, ಸರ್ವಾಂತರ್ಯಾಮಿಯಾದ ಸರ್ವೇಶ್ವರನು ಅವರ ವಿಚಾರಾಂತರ್ಗತ ಕಾರ್ಯಗಳನ್ನು ತಪ್ಪದೆ ಸಿದ್ಧಿಗೊಯ್ಯುವನು.

ಮುಂಬಯಿಗೆ ಹೋಗುವ ವಿಷಯವಾಗಿ ತಂದೆಯನ್ನು ಕೇಳಿದರೆ ಹೋಗಗೊಡಲಿಕ್ಕಿಲ್ಲೆಂದು ಭಾವಿಸಿ, ಹೇಳದೆ ಹೋಗಬೇಕೆಂಬ ಎಣಿಕೆಯನ್ನು ಹಾಕಹತ್ತಿದರು. ಮಕ್ಕಳ ಮೇಲೆ ಚೆನ್ನವೀರಗೌಡರ ಮಮತೆ ಬಹಳ, ಕೇಳಿದರೆ ಎಂದೂ ಕಳಿಸಲಿಕ್ಕಿಲ್ಲ. ಅಂದಮೇಲೆ ಇವರು ಹೋಗುವ ಬಗೆ ಹೇಗೆ? ಮುಂಬಯಿಗೆ ಹೋಗಬೇಕೆಂಬ ಇವರ ಮನಸಾದರೋ ಪ್ರಬಲವಾಯಿತು. ನಾನು ಹೋಗದಿದ್ದರೆ ನನ್ನ ವಿದ್ಯಾರ್ಜನೆಯು ಇಲ್ಲಿಗೇ ಕಟ್ಟಾಗಿ, ಕೂಪಮಂಡೂಕ ನ್ಯಾಯದಂತೆ ನನ್ನ ಸ್ಥಿತಿಯಾಗುತ್ತದೆಂದೂ ತರ್ಕಿಸಿದರು. ಆದರೆ ಮನಸಿನಲ್ಲಿ ಮಂಡಿಗೆ ಮಾಡಿದರೆ ಗೋದಿಯ ಲೆಖ್ಖವನ್ನು ಕೊಡುವವರಾರು? ಎಂಬಂತೆ ಚಿಕ್ಕವಯಸ್ಸಿನ ಗೌಡರವರ ವಿಚಾರವಾಯಿತು. ಧಾರವಾಡದ ಮಠದ ವೆಚ್ಚಕ್ಕಾಗಿ ತಂದೆಯವರು ಕೊಟ್ಟಿದ್ದ ೪೦ ರೂಪಾಯಿಗಳು ಗೌಡರ ಬಳಿಯಲ್ಲಿದ್ದವು. ಅದರಿಂದವರು ಮುಂಬಯಿಗೆ ಹೋಗುವದನ್ನು ನಿಶ್ಚಯಿಸಿದರು. ಚೆನ್ನವೀರಗೌಡರು ವಿದ್ಯೆ ಕಲಿಸುವ ವೆಚ್ಚಕ್ಕಾಗಿ ಹಿಂದೆ ಮುಂದೆ ನೋಡುತ್ತಿದ್ದಿಲ್ಲ. ರುದ್ರಗೌಡರು ಮುಂಬಯಿಗೆ ಹೋಗುವ ತಮ್ಮ ಇಚ್ಛಿತವನ್ನು ತಿಳಿಸಿದ್ದರೆ, ಅವರು ನಿಶ್ಚಯವಾಗಿ ಕಳಿಸುತ್ತಿದ್ದರು. ಮತ್ತು ಬೇಡಿದಷ್ಟು ಹಣವನ್ನೂ ಕೊಡುತ್ತಿದ್ದರು. ಅವರು ಹಳೆತರದ ಮನುಷ್ಯರಂತೆ ಅಲ್ಪವಿಚಾರಿಗಳಾಗಿದ್ದಿಲ್ಲ. ವಿದ್ಯಾಭಿರುಚಿಯು ಅವರಲ್ಲಿತ್ತು. ಚೆನ್ನವೀರಗೌಡರು ಕರ್ತವ್ಯದಕ್ಷರೂ ಸುಧಾರಣಾವಾದಿಗಳೂ ಆಗಿದ್ದರು.

ರುದ್ರಗೌಡರು ವಿದ್ಯಾಭ್ಯಾಸಕ್ಕೆ ಮುಂಬಯಿಗೆ ಹೋದದ್ದು

ಕಡೆಗೆ ರುದ್ರಗೌಡರು ಯಜಮಾನರನ್ನು ಕೇಳಲಿಕ್ಕೆ ಸಂದೇಹಗ್ರಸ್ತರಾಗಿ, ಒಬ್ಬ ಸಂಗಡಿಗನೊಡನೆ ಆಪ್ತಾಲೋಚನೆಯನ್ನು ಮಾಡಿ, ಇಬ್ಬರೂ ಕೂಡಿ ಧಾರವಾಡಕ್ಕೆ ಬಂದು, ಪೆಂಡಾರಿಗಳ ಕುದುರೆಯನ್ನು ಬಾಡಿಗೆಮಾಡಿಕೊಂಡು, ಸೊಲ್ಲಾಪುರಕ್ಕೆ ಬಂದರು. ಬಿಸಲಲ್ಲಿ ಬಳಲಿಬಂದ ಇವರಿಗೆ ಅಲ್ಲಿಯ ಒಬ್ಬ ಮುದಿಕೆಯು ಒಳ್ಳೇ ಉಪಚಾರಮಾಡಿದಳು. ಮರುದಿವಸ ಈ ಉಭಯರು ಉಗೆಬಂಡಿಯನ್ನೇರಿ ಮುಂಬಯಿಗೆ ಹೊರಟುಹೋದರು (೧೮೮೯ ಜಾನೇವಾರಿ). ಆಗ ಮುಂಬಯಿಯಲ್ಲಿ (ಲೋಹಾರ ಚಾಳಿಯಲ್ಲಿ) ಹುಬ್ಬಳ್ಳಿಯ ಪ್ರಸಿದ್ಧ ಸಾವಕಾರರಾದ ನೀಲೀ ಚೆನ್ನಬಸಪ್ಪಣ್ಣನವರ ಅಂಗಡಿಯಿತ್ತು. ಅವರು ಪ್ರೀತಿಯಿಂದ ಗೌಡರವರನ್ನು ಆದರಿಸಿದ್ದರಿಂದ ಅಲ್ಲಿ ನಿಂತು, ಮುಂಬಯಿಗೆ ತಾವು ಸುರಕ್ಷಿತವಾಗಿ ಬಂದದ್ದನ್ನೂ, ಕ್ಷೇಮದೊಡನೆ ಇದ್ದದ್ದನ್ನೂ ಪತ್ರಬರೆದು ಅರಟಾಳದಲ್ಲಿದ್ದ ತಂದೆಯವರಿಗೆ ತಿಳಿಸಿದರು. ರುದ್ರಗೌಡರು ಎಲ್ಲಿ ಹೋದರೆಂದು ಹಳಹಳಿಸುತ್ತಿದ್ದ ಮನೆಯವರು ಪತ್ರವನ್ನು ನೋಡಿ ಸಂತುಷ್ಟರಾದರು. ಮುಂಬಯಿಯಲ್ಲಿ ಮೊದಲು ರುದ್ರಗೌಡರು ರಾಬರ್ಟಮನಿ ಸ್ಕೂಲಿನಲ್ಲಿ ಎರಡನೇ ಇಯತ್ತೆಯನ್ನು ಕಲಿತ. ಬಳಿಕ, ಎಲ್ಫಿನಿಷ್ಟನ್ ಹಾಯಸ್ಕೂಲಿಗೆ ಹೋಗಿ ೧೮೭೧ ನೇ ಇಸವಿ ಮಾರ್ಚ ವರೆಗೆ ೫ನೇ ಇಯತ್ತೆಯನ್ನು ಕಲಿತರು. ಮುಂಬಯಿಯಲ್ಲಿರುವಾಗ ಹಿಂದಿನಿಂದಿವರಿಗೆ ಎಷ್ಟೋ ಸದ್ಗೃಹಸ್ಥರ ಗೊತ್ತು ಆಯಿತು. ಇತ್ತಕಡೆಯ ಯಾದವಾಡದ ಮುತ್ತೂರವರು, ಬಾಗಲಕೋಟೆ ಮಹಾಲಿಂಗಪುರದ ಸಾವಕಾರ ಜನರು ಎಷ್ಟೋ ಮಂದಿ ಮುಂಬಯಿಯಲ್ಲಿ ತಂತಮ್ಮ ಅಂಗಡಿಗಳನ್ನಿಟ್ಟಿದ್ದರು. ಅವರೆಲ್ಲರು ರುದ್ರಗೌಡರನ್ನು ಸಾದರಿಸಹತ್ತಿದರು. ಸದ್ವಿದ್ಯಾರ್ಥಿಗಳನ್ನು ಎಲ್ಲರೂ ಸತ್ಕರಿಸುತ್ತಾರೆ. ಸರ್ವಜನರ ಸಾದರಕ್ಕೆ ಪ್ರೀತರಾಗುವದು ರುದ್ರಗೌಡರ ಸುಕೃತವೆಂದು ತಿಳಿಯಬೇಕು.

ರುದ್ರಗೌಡರು ಮುಂಬಯಿಯಿಂದ ತಿರುಗಿಬಂದದ್ದು

ಮುಂಬಯಿಯ ಹವೆಯು ರುದ್ರಗೌಡರಿಗೆ ಮಾನಿಸಲಿಲ್ಲ. ಅಲ್ಲಿಯೂ ಇವರಿಗೆ ವಾಂತಿರೋಗವು ಗಂಟುಬಿತ್ತು. ಅದರಿಂದ ಅಶಕ್ತರಾಗಿ ಮುಂಬಯಿಯನ್ನು ಬಿಟ್ಟು ಅರಟಾಳಾಭಿಮುಖರಾಗಿ ಹೊರಟು, ಮಾರ್ಗದಲ್ಲಿ ಸೊಲ್ಲಾಪುರಕ್ಕಿಳಿದು, ಹಿಂದೆ ತಮಗೆ ಮುಂಬಯಿಗೆ ಹೋಗುವಾಗ ಉಪಚರಿಸಿದ ಮುದಿಕೆಗೆ ಒಂದು ಸೀರೆಯನ್ನು ಕೊಟ್ಟರು. ಅದರಿಂದಲೂ ಮುದಿಕೆಯು ಅತ್ಯಾನಂದದಿಂದ "ನಿಮಗೆ ದೇವರು ದಯಮಾಡಲಿ, ನಿಮಗೆ ದೊಡ್ಡದೊಂದು ಪದವಿಬರಲಿ, ಹೋದ ಹೋದಲ್ಲಿ ನಿಮ್ಮ ಕಾರ್ಯಗಳು ಕೈಗೂಡಲಿ" ಎಂದು ಹರಿಸಿದಳು. ಇದರ ಮೇಲಿಂದ ರುದ್ರಗೌಡರ ಕೃತಜ್ಞತೆಯು ಎಷ್ಟರ ಮಟ್ಟಿಗೆ ಇತ್ತೆಂಬುದು ಗೊತ್ತಾಗುವದು. ಇಂಥ ಮಹನೀಯರೇ ಮುಂದಾಗುವವರಲ್ಲವೇ? ಸೊಲ್ಲಾಪುರದಿಂದ ರುದ್ರಗೌಡರು ಸನ್ ೧೮೭೧ನೇ ಎಪ್ರಿಲ ತಿಂಗಳಲ್ಲಿ ಅರಟಾಳಕ್ಕೆ ಬಂದರು. ಪುತ್ರಾಗಮನದಿಂದ ಚೆನ್ನವೀರಗೌಡರು ಸಂತೋಷಪಟ್ಟರು. ರುದ್ರಗೌಡರು ಮುಂದೆ ಮೂರು ತಿಂಗಳು ಅರಟಾಳದಲ್ಲಿ ನಿಂತು ಪ್ರಕೃತಿಯನ್ನು ಸ್ವಲ್ಪಮಟ್ಟಿಗೆ ಸುಧಾರಿಸಿಕೊಂಡರು.

ರುದ್ರಗೌಡರು ಬೆಳಗಾವ ಸರದಾರ್ಸ ಹಾಯಸ್ಕೂಲಿನಲ್ಲಿ ವಿದ್ಯಾಭ್ಯಾಸಮಾಡಿದ್ದು

ಅಪೂರ್ಣ ಅಭ್ಯಾಸಮಾಡಿಕೊಂಡು, ಅರಟಾಳದಲ್ಲಿ ಸುಮ್ಮನೆ ಕೂಡ್ರುವದು ಪ್ರಶಸ್ತವಾಗಲಿಲ್ಲ. ಉದ್ಯೋಗಿಗಳಿಗೆ ಅಮೌಲ್ಯವಾದ ವೇಳೆಯನ್ನು ನಿರರ್ಥಕವಾಗಿ ಕಳೆಯುವದಾಗುವದಿಲ್ಲ. ಬಲಿತ ಗಿಡವು

ಬಾಗುವದಿಲ್ಲ; ಚಿಕ್ಕಂದಿನಲ್ಲಿ ಕಲಿತ ವಿದ್ಯೆಯು ಹಸಿಗೋಡೆಗೆ ಹರಳು ನಡುವಂತೆ ದೃಢವಾಗಿ ನಿಲ್ಲುವದೆಂಬ ತತ್ವವನ್ನು ತಿಳಿದು, ಸನ್ ೧೮೭೧ನೇ ಸಪ್ಟಂಬರ್ ತಿಂಗಳಲ್ಲಿ ಕಿತ್ತೂರ ಮಾರ್ಗವಾಗಿ ಬೆನಕನ ಹಬ್ಬದ ದಿವಸ ಬೆಳಗಾವಿಗೆ ಬಂದು ಸರದಾರ್ಸ ಹಾಯಸ್ಕೂಲಿನಲ್ಲಿ ಘನಪಂಡಿತರಾದ ಹ್ಯೂಗ್ವರ್ಫ ಸಾಹೇಬರವರ ವಿದ್ಯಾರ್ಥಿಗಳಾದರು. ಅಭ್ಯಾಸವು ಮಲಿನವಾದದರಿಂದ ಆರಂಭಕ್ಕೆ ೫ನೇ ಇಯತ್ತೆಯನ್ನೇ ಸ್ವಲ್ಪದಿವಸ ಕಲಿತು, ಕೂಡಲೆ ೬ನೇ ಇಯತ್ತೆಗೆ ಬಂದರು. ಆಗ ೬ನೇ ಇಯತ್ತೆಯೇ ಮ್ಯಾಟ್ರಿಕ್ ಪರೀಕ್ಷೆಯ ಕ್ಲಾಸವಾಗಿತ್ತು. ರುದ್ರಗೌಡರ ತೀವ್ರಬುದ್ಧಿಯನ್ನೂ ಶೀಲಸ್ವಭಾವಗಳನ್ನೂ ಕಂಡು, ಹ್ಯೂಗ್ವರ್ಫಸಾಹೇಬರು ಇವರನ್ನು ಬಹು ಪ್ರೀತಿಸುತ್ತಿದ್ದರು. ಇಪ್ಪತ್ತು ವರ್ಷದವರಲ್ಲದಿದ್ದರೂ ಎಪ್ಪತ್ತು ವರ್ಷದವರಷ್ಟು ವಿಚಾರ ಶಕ್ತಿಯುಳ್ಳ ಈ ಗೌಡರು, ಮುಂದೆ ಯಾವದೊಂದು ಉನ್ನತಪದವಿಯನ್ನು ಹೊಂದಬಹುದೆಂದು ಹೂಗ್ವರ್ಫಸಾಹೇಬರು ಭಾವಿಸಿದ್ದರು. ಇಂಗ್ಲೀಷ ೬ನೇ ಇಯತ್ತೆಯಲ್ಲಿದ್ದಾಗ ಗೌಡರು ಒಂದು ಕನ್ನಡಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ, ೧ನೇ ನಂಬರವನ್ನು ಪಡೆದದರಿಂದ ಸ್ಕಾಲರ್ಶಿಫ್‌ವನ್ನೂ, ಇನಾಮ ಪುಸ್ತಕವನ್ನೂ ಪಡೆದರು. ರುದ್ರಗೌಡರು ಹ್ಯೂಗ್ವರ್ಫಸಾಹೇಬರ ಪ್ರೀತಿಯೆಂಬ ಸಾಲವನ್ನು ತಕ್ಕೊಂಡು ವಿಧೇಯತ್ವವೆಂಬ ಬಡ್ಡಿಸಹಿತ ಅವರ ಸಾಲವನ್ನು ಮುಟ್ಟಿಸಿದರು. ಸುಖಿಗಳು ಬರಹತ್ತಿದವೆಂದರೆ ಒಂದರ ಹಿಂದೊಂದು ಬರುತ್ತವೆಂದು ಹಿರಿಯರಾಡುವ ಮಾತು ಸುಳ್ಳಲ್ಲ. ಸದ್ಗುರುಗಳ ಸದ್ಬೋಧದಿಂದ ಕೂಡಲೆ ಇವರು ಮ್ಯಾಟ್ರಿಕ್ ಪರೀಕ್ಷೆಯ ಅಭ್ಯಾಸವನ್ನು ಮುಗಿಸಿಕೊಂಡು, ಮುಂಬಯಿಗೆ ಹೋಗಿ ಪರೀಕ್ಷೆಗೆ ಕೂತರು. ಗುರ್ವನುಗ್ರಹದಿಂದ ಅದೇ ವರ್ಷವೇ ಇವರ ಮ್ಯಾಟ್ರಿಕ್ ಪರೀಕ್ಷೆಯು ಪಾಸಾಯಿತು. (ಸನ್ ೧೮೭೨ನೇ ನವಂಬರ).

❖❖

೩ನೇ ಭಾಗ

ರುದ್ರಗೌಡರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದದ್ದು

ಮೋಹದ ಕುವರರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದರೆಂಬ ವಾರ್ತೆಯನ್ನು ಕೇಳಿ, ಸತಿವಿಯೋಗದಿಂದ ಕಲುಷಿತವಾದ ಚೆನ್ನವೀರಗೌಡರ ಮನಸು ಮಹದಾನಂದವನ್ನು ಹೊಂದಿತು. ಆಗಿನ ನಮ್ಮ ಜನರಲ್ಲಿ ಈಗಿನಷ್ಟು ಇಂಗ್ಲೀಷ ಕಲಿತವರಿದ್ದಿಲ್ಲ. ಈಗಿನ ಬಿ.ಎ., ಎಮ್.ಎ. ಪದವಿಗಳಿಗಿಂತ ಆಗಿನ ಮ್ಯಾಟ್ರಿಕದ ಬೆಲೆಯು ಹೆಚ್ಚಿತ್ತು. ಗ್ರಾಜುಯೇಟರು ವಿರಳವಾಗಿದ್ದರು. ರುಜುಮಾಡಲಿಕ್ಕೆ ಕಲಿತವರೆಷ್ಟೋ ಜನರು ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿಬಿಟ್ಟರು. ಸದ್ಯಸ್ಥಿತಿಯು ವಿಪರೀತವಾಗಿ ಹೋಗಿದೆ. ಈಗ ಪ್ರತಿವರ್ಷ ಹೊಸ ಹೊಸದಾಗಿ ಎಷ್ಟೋ ಜನರು ಗ್ರ್ಯಾಜುಯೆಟರಾಗಿ ಕೆಲಸ ಸಿಗದ್ದರಿಂದ ಮನೆಯಲ್ಲಿ ಕೂಡ್ರಹತ್ತಿದ್ದಾರೆ. ಮ್ಯಾಟ್ರಿಕದವರನ್ನಂತೂ ಈಗ ಯಾರೂ ಮೂಸುವದಿಲ್ಲ. ಕಾಲಗತಿಗನುಸರಿಸಿ ಈಗ ವಿದ್ಯೆಯು ಬಲು ಅಗ್ಗವಾಗಿ ಹೋಯಿತು. ಮ್ಯಾಟ್ರಿಕ್ ಪರೀಕ್ಷೆ ಪಾಸಾದೊಡನೆ ಚೆನ್ನವೀರಗೌಡರು ರುದ್ರಗೌಡರಿಗೆ ವೆಚ್ಚಕ್ಕಾಗಿ ೮೦ ರೂಪಾಯಿ ಕಳಿಸಿದರು. ಪರೀಕ್ಷೆ ಪಾಸಾದ ಆನಂದ ಪ್ರದರ್ಶನಾರ್ಥವಾಗಿ ಅದರಲ್ಲಿಯ ೫೦ ರೂಪಾಯಿ ವೆಚ್ಚಮಾಡಿ, ತಮ್ಮ ಮಿತ್ರಮಂಡಳಿಗೆ ಮೇಲಾದ ಮೇಜವಾನಿಯನ್ನು ಮಾಡಿಸಿದರು. ಅದರಿಂದ ರುದ್ರಗೌಡರ ವಿಶಾಲವಾದ ಮನಸು ಪ್ರಕಟವಾಯಿತು. ಸ್ನೇಹಿತರ ಸಮೂಹವೆಲ್ಲ ಸಂತೋಷವನ್ನು ಹೊಂದಿತು.

ರುದ್ರಗೌಡರು ಗೌಡಿಕಿ ಕೆಲಸವನ್ನು ಮಾಡಿದ್ದು

ಪುನಃ ಗೌಡರು ಪ್ರಾಂತಿಭೇದದಿಂದ ಸ್ವಲ್ಪ ದಣಕೊಂಡು ಬೆಳಗಾವಿಯಿಂದ ಅರಟಾಳಕ್ಕೆ ಬಂದರು. ಊರಜನರೆಲ್ಲರು ನಮ್ಮ ಚಿಕ್ಕಗೌಡರು ದೊಡ್ಡಪರೀಕ್ಷೆ ಪಾಸಾದರೆಂದು ಆನಂದಿತರಾಗಿ ಬಂದು, ಇವರ ಭೆಟ್ಟಿಯನ್ನು ತಕ್ಕೊಂಡರು. ಮೇಲಿಂದ ಮೇಲೆ ಬೇನೆ ಬೀಳುತ್ತಿದ್ದರೂ ತೀವ್ರಗತಿಯುಳ್ಳ ಇವರು ವಿದ್ಯೆದಲ್ಲಿ ಮುಂದೆಯೇ ಹೋಗುತ್ತಿದ್ದರು. ಪಾಸಾಗಿ ಬಂದು ಇವರು ಸುಮ್ಮನೆ ಕೂಡ್ರಲಿಲ್ಲ. ೧೯೭೩ರಿಂದ ೧೮೭೪ ಜೂನದ ವರೆಗೆ ಎರಡುವರ್ಷ ಗೌಡಿಕಿಯ ಕೆಲಸಮಾಡಿದರು. ಗೌಡಿಕಿಯನ್ನು ಮಾಡುತ್ತ ಕುಲಕರಣಿಯ ಕೆಲಸದ ಮಾಹಿತಿಯನ್ನು ತಕ್ಕೊಂಡರು. ಆರಂಭದ ಕೆಲಸವಾಗಿದ್ದರೂ ಅನುಭವಿಕರಂತೆ ಚೆನ್ನಾಗಿ ಮಾಡಿದರು. ಬಂಗಾರವು ಮಣಿಸಿದತ್ತ ಮಣಿಯುತ್ತದೆ. ತಮ್ಮ ಪದ್ಧತಿಯನ್ನೇ ಅನುಸರಿಸಿ ಮಾಡುತ್ತಿದ್ದ ಇವರ ಕೆಲಸದ ಕಾರ್ಯಕ್ರಮವನ್ನೂ, ಮುಂಜಾಗ್ರತೆಯನ್ನೂ ನೋಡಿ ಚೆನ್ನವೀರಗೌಡರು ಆನಂದಪಟ್ಟು ನಿಶ್ಚಿಂತರಾದರು. ಆದರೂ ಹುಡುಗನ

ಸಡಗರವನ್ನು ಹಡೆದವಳು ನೋಡಲಿಲ್ಲೆಂದು ಒಳಗೊಳಗೆ ಕಳಕಳಿಸಿದರು. ಜನರಾದರೋ ಇವರ ನ್ಯಾಯನಿಷ್ಠೆಯನ್ನೂ, ಸಮದೃಷ್ಟಿಯನ್ನೂ ನೋಡಿ ಹೊಗಳಿದರು. ಈ ಪ್ರಕಾರ ಜನಾನುರಾಗಕ್ಕೆ ಪಾತ್ರರಾಗಿ ಕೆಲಸಮಾಡುತ್ತಿರುವಾಗ ಮೆ।। ಫರ್ಸ್ಟ ಅಸಿಸ್ಟಂಟ ಕಲೇಕ್ಟರ ಸಾಹೇಬ ಬಹಾದ್ದೂರ ಜೇ.ಆರ್. ಮಿಡಲ್ಟನ್ ಎಂ.ಎ. ಧಾರವಾಡ ಇವರ ಸ್ವಾರಿ ಮುಕ್ಕಾಮವು ಅರಟಾಳಕ್ಕಾಯಿತು. ಸಾಹೇಬರವರು ರುದ್ರಗೌಡರ ಕೆಲಸದ ಚಲಾಖಿಯನ್ನೂ ಕಾಗದಪತ್ರಗಳ ಶಿಸ್ತನ್ನೂ ನೋಡಿ ಆನಂದಪಟ್ಟು, ಚೆನ್ನವೀರಗೌಡರಿಗೆ "ನಿಮ್ಮ ಚಿರಂಜೀವರು ಜಾಗ್ರತವಾದ ಮತಿಯುಳ್ಳವರಿದ್ದು, ಮೇಲಾಗಿ ಮ್ಯಾಟ್ರಿಕ್ ಆಗಿರುವರು. ಇವರನ್ನು ಈ ಹಳ್ಳಿಯಲ್ಲಿ ಇಟ್ಟುಕೊಂಡು ಕೂಡ್ರಬೇಡಿರಿ. ಹರಳಿನ ಬೆಲೆಯು ಹಳ್ಳಿಯಲ್ಲಿ ಆಗುವದಿಲ್ಲ. ಭರಣಿಯ ಬಾಯನ್ನು ತೆರೆಯದಿದ್ದರೆ ಕಸ್ತೂರಿಯ ವಾಸನೆಯು ಹೊರಬೀಳದು. ಇವರು ಶ್ರಮದಿಂದ ಗಳಿಸಿದ ವಿದ್ಯೆಯನ್ನೂ, ಇವರಿಗೆ ದೇವರು ಕೊಟ್ಟ ಜ್ಞಾನವನ್ನೂ ಸಾರ್ಥಕಗೊಳಿಸಿರಿ. ಇವರನ್ನು ಧಾರವಾಡಕ್ಕೆ ನನ್ನೆಡೆಗೆ ಕಳಿಸಿರಿ. ನಾನು ಮೆ।। ಕಲೆಕ್ಟರ ಸಾಹೇಬರವರಿಗೆ ಹೇಳಿ ಯಾವದಾದರೊಂದು ಕೆಲಸ ದೊರೆಯುವಂತೆ ಮಾಡುವೆನೆ"ಂದು ಹೇಳಲು ಚೆನ್ನವೀರಗೌಡರು ಆನಂದದಿಂದ ಒಪ್ಪಿಕೊಂಡರು. ರುದ್ರಗೌಡರು ಹೋಗಲಿಕ್ಕೆ ಮೊದಲೇ ಸಿದ್ಧರಿದ್ದರು. ರಾಜಹಂಸವು ಕಮಲನಾಳವನ್ನೇ ಬಯಸುತ್ತದಲ್ಲವೇ? ಒಟ್ಟಿಗೆ ವೈದ್ಯ ಹೇಳಿದ್ದೂ ರೋಗಿ ಬಯಸಿದ್ದೂ ಒಂದೇ ಆಯಿತು.

ರುದ್ರಗೌಡರು ಧಾರವಾಡ ಕಲೇಕ್ಟರ ಕಛೇರಿಯಲ್ಲಿ ಉಮೇದುವಾರರಾದದ್ದು, ಬದಲೀ ಕೆಲಸ ನೋಡಿದ್ದು

ಕೂಡಲೆ ಮೇ ೧೧ ಮಿಡಲ್ಟನ್ ಸಾಹೇಬರವರು ಕಾರವಾರಕ್ಕೆ ವರ್ಗವಾಗಿ ಹೋಗಲು ಗೌಡರವರ ಗಮನ ತಡೆಯಿತು. ಮುಂದೆ ತುಸು ದಿವಸದೊಳಗೆ ಅಂದರೆ ೧೮೭೪ನೇ ಇಸವಿಯ ಮೇ ತಿಂಗಳಲ್ಲಿ ಮೆ।। ಆರ್.ಬಿ. ಆಲಿಫಂಟ್ ಡಿವ್ಹಿಜನ್ ಫಾರೆಷ್ಟ ಆಫೀಸರ ಧಾರವಾಡ ಇವರು ಕಾರವಾರ ಜಿಲ್ಲೆಯ ಮುಂಡಗೋಡ ಗುಡ್ಡಕ್ಕೆ ಹುಲಿಯ ಬೇಟೆಯ ಸಲುವಾಗಿ ಬಂದು, ಮುಂಗಾರಿಯ ಮಳೆಯ ಹೊಡತಕ್ಕೆ ಸಿಕ್ಕು ಘೋರಕಾನನದಲ್ಲಿ ದಾರಿತಪ್ಪಿ, ಮೈಮೇಲಿನ ಅರಿವೆಗಳನ್ನೆಲ್ಲ ತೊಯ್ಸಿಕೊಂಡು, ಕತ್ತಲಲ್ಲಿ ಅರಟಾಳಕ್ಕೆ ಬಂದರು. ಸಾಹೇಬರವರು ಹತ್ತಿದ್ದ ಅರಬೀಜಾತಿಯ ಮಹತ್ತರವಾದ ಕುದುರೆಯು, ಪ್ರಪಂಡವಾದ ಮಳೆ, ಗಾಳಿ, ಗುಡುಗು, ಸಿಡಿಲುಗಳಿಗೆ ಬೆದರಿ ಆಣೆಯ ಕಲ್ಲುಗಳ ಹೊಡೆತಕ್ಕೆ ನೊಂದು, ಗದಗದ ನಡುಗುತ್ತಿತ್ತು. ಮೈಯೆಲ್ಲ ತೊಯ್ದದ್ದರಿಂದ ಹನಿಗಳು ಜೋರಿಕ್ಕಿದ್ದವು. ಈ ಮೇರೆಗೆ ಗೋಳಾಗಿ ಬಂದ ಸಾಹೇಬರವರನ್ನು ಆದರಪೂರ್ವಕ ಬರಮಾಡಿಕೊಂಡು, ಸಾಹೇಬರ ತೊಯ್ದ ವಸ್ತ್ರಗಳನ್ನೆಲ್ಲ ಅಗ್ಗಿಷ್ಟಿಗಿಯಿಂದ ಕಾಸಿ ಆರಿಸಿ ಉಪಚರಿಸಿದರು. ಕುದುರೆಯ ಸುತ್ತಲೂ ಉರಿಹಚ್ಚಿ ಕಾಸಿ, ಅದರ ಥಂಡಿಯನ್ನು ತೆಗೆಸಲು, ಕಾವು ಏರಿ ಕುದುರೆಯು ದಾಣಿಯನ್ನು ತಿನ್ನಹತ್ತಿತು. ಸಾಹೇಬರವರನ್ನು ಹಾಲುಸಕ್ಕರೆಗಳಿಂದ ತೃಪ್ತಿಪಡಿಸಿದರು. ಗೌಡರ ಆದರಾತಿಥ್ಯಕ್ಕೆ ಆನಂದಪಟ್ಟು ಸಾಹೇಬರವರು ಮರಳಿ ಹೋಗುವಾಗ ಗೌಡರನ್ನು ಧಾರವಾಡಕ್ಕೆ ಕರಕೊಂಡು ಹೋಗಿ, ಅವರ ಕೃತಜ್ಞತೆಯನ್ನು ಸ್ಮರಿಸಿ ಮೆ. ಈ.ಪಿ. ರಾಬರ್ಟಸನ್ ಕಲೆಕ್ಟರ್ ಸಾಹೇಬರ ಬಹಾದ್ದೂರ ಧಾರವಾಡ ಇವರ ಮುಂದೆ ಈ ಅರಟಾಳದ ರುದ್ರಗೌಡರು ಪ್ರೌಢರೂ, ಪರೋಪಕಾರಿಗಳೂ, ಪರೀಕ್ಷೆ ಪಾಸಾದವರೂ ಇದ್ದದರಿಂದ ಇವರಿಗೆ ಯಾವದೊಂದು ಕೆಲಸವನ್ನು ಹಚ್ಚಿಕೊಡಿರೆಂದು ಕೇಳಿದರು. ಮೆ. ಕಲೆಕ್ಟರ ಸಾಹೇಬ ಬಹದ್ದೂರವರು ಆಲಿಫಂಟ ಸಾಹೇಬರವರ ಮಾತನ್ನು ಆಲಿಸಿ, ರುದ್ರಗೌಡರನ್ನು ಹನ್ನೆರಡು (೧೨) ರೂಪಾಯಿ ಪಗಾರದ ಮೇಲೆ ಕರ್ಜಗೀ ತಾಲೂಕ

ಕಚೇರಿಯ ಕಾರಕೂನರನ್ನಾಗಿ ನೇಮಿಸಿದರು. ಗೌಡರು ದೂರಾಗುತ್ತದೆಂದು ಅದಕ್ಕೆ ಸಮ್ಮತಿಸಲಿಲ್ಲ. ಕೊಟ್ಟ ಜಾಗೆಯನ್ನು ಸ್ವೀಕರಿಸಲಿಲ್ಲೆಂದು ಸಾಹೇಬರು ಸಿಟ್ಟಾದರು. ಕಡೆಗೆ ಗೌಡರು ಧಾರವಾಡ ಕಲೇಕ್ಟರ ಆಫೀಸ ಉಮೇದವಾರರಾದರು. ಆಗ ಅದೇ ಆಫೀಸಿನಲ್ಲಿ ರಾವಬಹದ್ದೂರ ಗಿಲಗಂಚಿ ಗುರುಸಿದ್ಧಪ್ಪನವರು ೫೦ ರೂಪಾಯಿ ಸಂಬಳದ ಮೇಲೆ ಕಾರಕೂನರಿದ್ದರು. ಸಮಶೀಲ ಸ್ವಭಾವವುಳ್ಳ ಇವರಿಬ್ಬರ ಸಖ್ಯವು ಬಹು ಬೇಗನೆ ಕೂಡಿತು. ಇವರಿಬ್ಬರ ಸಮ್ಮೇಳನವು ಹೋಳಿಗೆಗೆ ತುಪ್ಪ ಬೆರೆದಂತಾಗಿ, ಒಳ್ಳೇ ಸವಿಯಾಗಿ ಸಾಗಿತು. ಮುಂದೆ ಅಕೌಂಟ ಕಛೇರಿಯ ४೦ ರೂಪಾಯಿ ಪಗಾರದ ಕ್ಲಾರ್ಕರಾದ ಶಿವನಗೌಡ ಚೆನ್ನವೀರಗೌಡ ಹೆಬ್ಬಾಳ ಇವರು ಆರು ತಿಂಗಳ ರಜೆಯ ಮೇಲೆ ಹೋಗಲು ಅವರ ಜಾಗೆಯ ಮೇಲೆ ರುದ್ರಗೌಡರನ್ನು ಅರ್ಧಪಗಾರದ ಮೇಲೆ ಬದಲಿಯಾಗಿ ನೇಮಿಸಿದರು. ಆರು ತಿಂಗಳ ವರೆಗೆ ಬಹಳೇ ಉತ್ತಮ ರೀತಿಯಿಂದ ಕೆಲಸ ಮಾಡಿದ್ದರಿಂದ ಮೆ॥ ಆಯ್. ಡ್ರೇಕಪ್ ಸಾಹೇಬರು ಸಂತುಷ್ಟರಾಗಿ, ಕೆಲಸವನ್ನು ಚೆನ್ನಾಗಿ ಮಾಡಿದ್ದರ ಬಗ್ಗೆ ಇವರಿಗೆ ಸರಟೀಫಿಕೇಟು ಕೊಟ್ಟರು. ರುದ್ರಗೌಡರು ಎಲ್ಲಕ್ಕೂ ಮೊದಲು ದೊರಕಿಸಿದ ಸರ್ಟಿಫಿಕೇಟು ಇದೇ.

ರುದ್ರಗೌಡರು ಕಾಹೀಮ ಕಾರಕೂನರಾದದ್ದು (೧೭-೭-೧೮೭೫)

ಈ ಸಂಧಿಯಲ್ಲಿ ರಾವಬಹಾದ್ದೂರ ಯಶವಂತ ಮೋರೇಶ್ವರ ಕೇಳಕರ ಇವರಿಗೆ ಧಾರವಾಡ ಚಿಟ್ನೀಸಿಯಿಂದ ಅಥಣಿಯ ಮಮಲತಿಗೆ ವರ್ಗವಾಯಿತು. ಈ ವರ್ಗಾವರ್ಗಿಯಲ್ಲಿ ಮೆ॥ಜಾರ್ಜ ವಾಷಿಂಗ್ಟನ್ ಸಾಹೇಬರವರು ರುದ್ರಗೌಡರಿಗೆ ಚೀಟ್ನಿಸ ಕಚೇರಿಯಲ್ಲಿ ೮೦ ರೂಪಾಯಿ ಪಗಾರದ ಕಾಹೀಮ ಜಾಗೆಯನ್ನು ಕೊಟ್ಟರು. ಆದರೆ ಪರೋತ್ಕರ್ಷಾ ಅಸಹಿಷ್ಣುಗಳೂ, ಲಂಚಗುಳಿಗಳೂ ಆದ ಕೆಲ ಬ್ರಾಹ್ಮಣ ಕಾರಕೂನರು ಸಾಹೇಬರವರ ಮುಂದೆ "ಇವರು ಹಳ್ಳಿಯವರು, ಜ್ಞಾನರಹಿತರು, ಅನುಭವವಿಲ್ಲದವರು. ಕೆಲಸದ ಕ್ರಮವು ಗೊತ್ತಿಲ್ಲದವರು. ಹಕ್ಕುದಾರರನ್ನು ಬಿಟ್ಟು ಇವರಿಗೆ ಒಮ್ಮಿಂದೊಮ್ಮೆ ಕಾಹೀಮ ಜಾಗೆಯನ್ನು ಕೊಟ್ಟಿದ್ದು ತೀರ ಅಯೋಗ್ಯವು. ಇವರು ಕೆಲಸಕ್ಕೆ ಅಪಾತ್ರರಿದ್ದಾರೆಂ"ದು ತಕರಾರ ತೆಗೆದದ್ದರಿಂದ, ಸಿಕ್ಕ ಜಾಗೆಯು ಮರುದಿವಸವೇ ರದ್ದಾಯಿತು. ದೇವರು ವರವನ್ನು ಕೊಟ್ಟರೂ ಪೂಜಾರಿ ಕೊಡಲಿಲ್ಲವೆಂಬ ಗಾದೆಯಂತಾಯಿತು. ಪಾಪಭೀರುಗಳಾದ ಇವರನ್ನು ವಂಚಕರಾದ ಬ್ರಾಹ್ಮಣರು ಆರಂಭದಿಂದಲೇ ವಿರೋಧಿಸತೊಡಗಿದರು. ಆದರೆ ಕಪಟಿಗಳ ಕಾಟ ಕಡೆಗಾಣದೆಂಬಂತೆ ಕೂಡಲೆ ಮೆ॥ಹುಜೂರ ಡಿಪೂಟಿ ಕಲೇಕ್ಟರ ೧ನೇ ವರ್ಗ ಮಾಜಿಸ್ಟ್ರೇಟ್ ಆಯ್. ಡ್ರೇಕಪ್ ಸಾಹೇಬರವರ ಕಚೇರಿಯಲ್ಲಿ ಆರಂಭಕ್ಕೆ ರುದ್ರಗೌಡರಿಗೆ ೧೫ ರೂಪಾಯಿ ಪಗಾರದ ಕಾಹೀಮ ಕಾರಕೂನಿಕೆಯ ಜಾಗೆಯು ಸಿಕ್ಕಿತು (ತಾರೀಖು ೧೭-೭-೧೮೭೫ ಇಸವಿ). ಕಾರಕೂನರಾಗಿ ಶಿವಸ್ಮರಣೆಯಿಂದ ಬಾರನಿಸಿಯ ಕೆಲಸವನ್ನಾರಂಭಿಸಿದರು. ಆಗಿನ ಕೆಲಸವನ್ನು ಆಗಲೇ ಮಾಡಿ ಬಿಡುವದು ಇವರ ಹುಟ್ಟು ಸ್ವಭಾವವಾಗಿತ್ತು. ತಮ್ಮ ಕೆಲಸದಲ್ಲಿ ಜಾಣ್ಮೆಯನ್ನು ತೋರಿಸಿ ವರಿಷ್ಠರ ಪ್ರೀತಿಯನ್ನು ಸಂಪಾದಿಸಿದರು. ಆಗ್ಗೆ ಮಿ. ಗುರುರಾವ ಶ್ರೀನಿವಾಸ ಸಂಗೀತ ಎಂಬವರು ೩೫ ರೂಪಾಯಿ ಪಗಾರದ ಶಿರಸ್ತಾ ರರಿದ್ದರೂ ಅವರ ಕೆಲಸವು ಸಾಹೇಬರ ಮನಸಿಗೆ ಬಾರದೆ, ಎಲ್ಲ ಮಾಹಿತಿಯನ್ನು ರುದ್ರಗೌಡರಿಂದಲೇ ತೆಗೆದುಕೊಳ್ಳುತ್ತಿದ್ದರು. ಸಾಹೇಬರು ಇವರ ಕೆಲಸಕ್ಕೆ ಪ್ರೀತಿಪಟ್ಟು ಮುಖ್ಯ ಕೆಲಸವನ್ನೆಲ್ಲ ಇವರಿಗೆ ಒಪ್ಪಿಸುತ್ತಿದ್ದರು. ಸಾರಾಂಶ, ಇವರು ಕಾರಕೂನರಾಗಿದ್ದರೂ ಸಾಹೇಬರಿಗೆ ಇವರೇ ಶಿರಸ್ತಾರರಂತೆ ಕೆಲಸದಲ್ಲಿ ಅನುಕೂಲರಾಗಿದ್ದರು.

ರುದ್ರಗೌಡರು ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದುತ್ತ ಕಾರಕೂನರಾದದ್ದು

ಮುಂದಿನ ವರ್ಷವೇ ಇವರು ಬಡತಿಯಿಂದ ಅಕೌಂಟ ಆಫೀಸಿನಲ್ಲಿ ೨೫ ರೂಪಾಯಿ ಪಗಾರದ ಕ್ಲಾರ್ಕರಾದರು (ತಾ.:೧೯-೫-೧೮೭೬). ಮುಂದೆ ಎರಡೇ ತಿಂಗಳಲ್ಲಿ ಕರೆಸ್ಪಾಂಡೆನ್ಸ ಡಿಪಾರ್ಟಮೆಂಟಿನಲ್ಲಿ ೩೦ ರೂಪಾಯಿ ಸಂಬಳವು ಸಿಗಹತ್ತಿತು (ತಾ. ೧೭-೭-೧೮೭೬). ಅಲ್ಲಿಂದ ಪುನಃ ಅಕೌಂಟ ಆಫೀಸ ಕ್ಲಾರ್ಕರಾಗಿ ೩೫ ರೂಪಾಯಿ ಪಗಾರ ಪಡೆದರು (ತಾ. ೧೯-೭-೧೮೭೬). ಮುಂದೆ ದೇಶದಲ್ಲಿ ಭಯಂಕರವಾದ ಬರ ಬೀಳಲು ಮೆ|| ಸರ್ ಜೇಮ್ಸ್ ರಿಚೆ ಸಾಹೇಬ ಬಹಾದ್ದೂರವರು ರುದ್ರಗೌಡರನ್ನು ೪೦ ರೂಪಾಯಿ ಪಗಾರದ ಮೇಲೆ ದುಷ್ಕಾಳ ಕ್ಲಾರ್ಕರನ್ನಾಗಿ ನೇಮಿಸಿದರು (ತಾರೀಖ ೨೨-೧೩-೧೮೭೬ ಇಸವಿ). ಇವರು ಕೆಲಸವನ್ನು ಒಳ್ಳೇ ಆಸ್ಥೆಯಿಂದಲೂ, ಉತ್ಸುಕತೆಯಿಂದಲೂ, ಜಾಗ್ರತೆಯಿಂದಲೂ ಬಡಜನರಿಗೆ ಕಲ್ಯಾಣಕರವಾಗಿ ಮಾಡುತ್ತಿದ್ದರು. ಇವರ ಸ್ಮರಣಶಕ್ತಿಯು ವಿಚಿತ್ರವಾದದ್ದು. ಒಬ್ಬ ವರಿಷ್ಠರ ಕಡೆಯಿಂದ ಒಮ್ಮೆಯಾದರೂ ಹೇಳಿಸಿಕೊಳ್ಳಲಿಲ್ಲ. ಅನುಚಿತವಾದ ಆಚರಣೆಯನ್ನು ಎಂದೂ ಅನುಸರಿಸಲಿಲ್ಲ. ಎಲ್ಲ ಕಾರಕೂನರು "ಸುಳ್ಳಾಡದವನು ವ್ಯವಹಾರಚತುರನಲ್ಲ; ಲಂಚತೆಗೆದುಕೊಳ್ಳದವನು ಕಾರಕೂನನಲ್ಲ" ಎಂದು ಮಹಾಸೂಕ್ತವನ್ನು ಪಠಿಸುತ್ತ, ಮನಸೋಕ್ತ ರೊಕ್ಕವನ್ನು ಗಳಿಸುತ್ತ ಮೆರೆದಾಡುವಾಗ, ಇವರೂ ರಾ||ಬ|| ಗಿಲಗಿಂಚಿ ಗುರುಸಿದ್ಧಪ್ಪನವರೂ, ಲಂಚವನ್ನು ಪ್ರತ್ಯಕ್ಷ ಹೇಸಿಗೆಯೆಂದೇ ಭಾವಿಸಿ, ಸತ್ಯನಿಷ್ಠೆಯಿಂದಲೂ ನಿಷ್ಪಕ್ಷಪಾತದಿಂದಲೂ ವರ್ತಿಸುತ್ತಿದ್ದರು. ಇವರ ಸತ್ಯವರ್ತನದಿಂದ ಕುಹಕ ಕಾರಕೂನರ ಅಟ್ಟಹಾಸಕ್ಕೆ ಅಡ್ಡಿಯಾಗಹತ್ತಿದರಿಂದವರು ಗೋಮುಖವ್ಯಾಘ್ರರಾಗಿ, ಅಂತರಂಗದಲ್ಲಿ ವಿರೋಧಿಸಹತ್ತಿದರು. ಆದರೆ "ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ"ವೆಂಬಂತೆ ಇವರ ಕೆಲಸವು ಸುಸೂತ್ರವಾಗಿ ಸಾಗಿತು. ಮುಂದೆ ಇವರಿಗೆ ಇದ್ದ ಜಾಗೆಯ ಮೇಲೆಯೇ ಬಡತಿಯು ಸಿಕ್ಕು, ಇವರ ಪಗಾರವು ೪೫ ರೂಪಾಯಿಯಾಯಿತು (ತಾರೀಖ ೨೮-೧-೭೮). ಈ ಸಮಯದಲ್ಲಿ (ಸನ್ ೧೮೭೮ ನೇ ಫೆಬ್ರುವರಿಯಲ್ಲಿ) ಇವರಿಗೆ ವಿಷಮಜ್ವರ ಹುಟ್ಟಿ ಬಹಳೇ ಜಡ್ಡಾಯಿತು. ಜ್ವರ ಹೆಚ್ಚಾಗಿ ಬಾಯಿ ಹೋಯಿತು. ಐದಾರು ತಿಂಗಳು ಗಳವರೆಗೆ ಜ್ವರ ತೆಗೆಯಲಿಲ್ಲ. ಮನೆಯವರೆಲ್ಲರು ಬಹಳೇ ಹೆದರಿದರು. ಉಳಿದರೆ ಪುನರ್ಜನ್ಮವೆನ್ನುವಂತೆ ಅವಸ್ಥೆಯಾಗಿತ್ತು. ಅನೇಕ ತರದ ಔಷಧಗಳನ್ನು ಕೊಡಿಸಿದರು. ಮಂತ್ರ ತಂತ್ರಾದಿಗಳನ್ನು ಮಾಡಿಸಿದರು. ಹುಟ್ಟಾ ಇವರಿಗೆ ಇಂತಹ ಬೇನೆ ಬಂದಿಲ್ಲ. ಏನಾಗುತ್ತದೋ ಎಂದು ಎಲ್ಲರು ಗಾಬರಿಗೊಂಡರು. ಕಡೆಗೆ ಧುಂಡಸಿಯ ಚೂರಮರಿಕಾರ ಕೇದಾರಿ ಎಂಬ ದೇಶೀ ವೈದ್ಯರು ರೋಗವನ್ನು ಕಂಡುಹಿಡಿದು, ಇಂಗಳಿಕ ಭಸ್ಮವನ್ನು ಹೊಟ್ಟೆಯಲ್ಲಿ ಕೊಟ್ಟಿದ್ದರಿಂದ ಮತ್ತು ಹಿರಿಯರ ಪುಣ್ಯವಿಶೇಷದಿಂದ ಸಪ್ಟಂಬರ ತಿಂಗಳಲ್ಲಿ ಇವರಿಗೆ ನೆಟ್ಟಗಾಯಿತು. ಮುಂದೆ ಈ ಮಹಾನುಭಾವರು ಒಳ್ಳೆ ಘನತೆಯನ್ನು ಹೊಂದುವ ಯೋಗವಿರುವದರಿಂದಲೂ ಇವರಿಂದ ಎಷ್ಟೋ ಜನಹಿತದ ಘನಕಾರ್ಯಗಳು ನೆರವೇರುವ ಸಂಭವವಿದ್ದದರಿಂದಲೂ ದೇವಕೃಪೆಯಿಂದ ಗುಣಹೊಂದಿ ಕೆಲಸಮಾಡುತ್ತಿರಲು, ತುಸು ದಿವಸಗಳಲ್ಲಿಯೇ ಹೆಚ್ಚಳವನ್ನು ಹೊಂದಿ ಇವರು ೫೦ ರೂಪಾಯಿ ಸಂಬಳದ ಮೇಲೆ ಅಕೌಂಟ ಆಫೀಸಿನಲ್ಲಿ ಪ್ರೊವ್ಹಿನ್‌ಶಲ್ ಕ್ಲಾರ್ಕರಾಗಿ ನಿಯಮಿಸಲ್ಪಟ್ಟರು (ತಾ ೨೩-೧೦-೭೮ ಇ). ಸತ್ಯಾಶ್ರಯಿಗಳಿಗೆ ಸದಾಶಿವನು ಸಹಾಯಕನಾಗಿರುತ್ತಾನೆಂಬಂತೆ ಮುಂದಿನ ವರ್ಷವೇ ರುದ್ರಗೌಡರು ಮೆಹರ್ಬಾನ ಕಲೆಕ್ಟರ ಸಾಹೇಬ ಬಹದ್ದೂರ ಧಾರವಾಡ ಇವರ ಆಫೀಸಿನಲ್ಲಿ ಅರವತ್ತು (೬೦) ರೂಪಾಯಿ ಪಗಾರದ ಹೆಡ್ ಕಾರಕೂನರೆಂದರೆ ಡಿಪೂಟಿ ಚೀಟ್ನಿಸರಾದರು. (ತಾರೀಖ ೧೧ನೇ ಮಾಹೆ ನವಂಬರ ಸನ್ ೧೮೭೯ನೇ ಇಸವಿ).

ರುದ್ರಗೌಡರು ಚಿಟ್ಣೀಸರಾದದ್ದು

ಕಾರಕೂನರೆಂದು ಇಂಥವರಿಗೆ ಅನ್ನಬೇಕು. ಇವರು ಲಂಚವೆಂಬ ಹೆಸರನ್ನು ಕೂಡ ಮನಸಿನಲ್ಲಿ ತಾರದೆ, ಮಹದಾಸೆಯನ್ನು ಮಾಡದೆ, ಅವರವರ ಕೆಲಸಗಳನ್ನು ಆಗಾಗಲೇ ತೀರಿಸಿಕೊಡುತ್ತಿದ್ದರು. ಬಹುಶಃ ಬಕ್ಕಣವು ಭರತಿಯಾಗುವ ತನಕ ಯಾವ ಕಾರಕೂನನೂ ಪಕ್ಷಕಾರರ ಕೆಲಸಗಲನ್ನು ಬೇಗನೆ ತೀರಿಸಿಕೊಡುವದಿಲ್ಲ. ಎಲ್ಲರೂ ಲಂಚಗುಳಿಗಳೇ ಇರುತ್ತಾರೆಂಬದಾಗಿ ನಮ್ಮ ಮತವಲ್ಲ. ನಿಷ್ಪೃಹಿಗಳಾದ ನಮ್ಮ ರುದ್ರಗೌಡರಂಥ ಕಾರಕೂನರು ಎಲ್ಲಿಯೋ ಒಬ್ಬಿಬ್ಬರಿರುವರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಕಾವ್ಯಾಲಂಕಾರ ತತ್ವಜ್ಞೋ।ರಸಿಕೋದಾರ ನೀತಿಮಾನ್॥
ಕುಶಲಃ ಸರ್ವಕಾರ್ಯೇಷು । ನಮ್ರಃ ಕಾರಕೂನ ಉಚ್ಯತೇ ॥[೧]

ಎಂಬಂತೆ ಸದ್ಗುಣಪರಿಪೂರ್ಣರಾದ ಈ ಹೆಡ್‌ಕಾರಕೂನರು ಬಹಳೇ ಉತ್ತಮರೀತಿಯಿಂದ ಕೆಲಸಮಾಡುತ್ತಿರಲು, ಚಿಟ್ಣೀಸರಾಗಿದ್ದ ಮಿ॥ ರಂಗೋ ರಾಮಚಂದ್ರ ಭರಡಿ ಇವರು ರಜೆಯ ಮೇಲೆ ಹೋದದರಿಂದ ರುದ್ರಗೌಡರು ಮೂರು ತಿಂಗಳ ವರೆಗೆ ಆಕ್ಟಿಂಗ ಚಿಟ್ಣೀಸರಾದರು. ಮುಂದೆ ಭರಡಿಯವರಿಗೆ ಪುಣೆ ಜಿಲ್ಲಾ ಭೀಮಥರಿಯ ಮಮಲತಿ ಜಾಗೆಗೆ ವರ್ಗವಾದದರಿಂದ ಮೆ॥ ಜಾನ್ ಎಲ್ಫಿನಿಷ್ಟನ್ ಸಾಹೇಬ ಬಹದ್ದೂರ ಕಲೇಕ್ಟರವರು ರುದ್ರಗೌಡರ ಜಾಗ್ರತಿಯನ್ನು ಕಂಡು, ಇವರಿಗೆ ೧೨೫ ರೂಪಾಯಿ ಪಗಾರದ ಚಿಟ್ಣೀಸಿಯ ಜಾಗೆಯನ್ನೇ ಕಾಹೀಮಮಾಡಿದರು. ಆದ್ದರಿಂದ ರುದ್ರಗೌಡರು ಕಾಹೀಮ ಚಿಟ್ಣೀಸರಾದರು (ತಾರೀಖ ೧೬-೫-೧೮೮೦ ಇ).

ಕ್ರಾಫರ್ಡಶಾಹಿ

ರುದ್ರಗೌಡರು ಈ ಪ್ರಕಾರ ಆರಂಭದಿಂದ ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದುತ್ತ ಮಹೋನ್ನತಿಗೆ ಬಂದದರಿಂದ, ಎಷ್ಟೋ ಜನರಿಗೆ ಸಹನವಾಗಲಿಲ್ಲ. ಈ ವೇಳೆಯಲ್ಲಿ ನಮ್ಮ ದಕ್ಷಿಣಭಾಗಕ್ಕೆ ಮೆಹರ್ಬಾನ ಎ.ಟಿ. ಕ್ರಾಫರ್ಡಸಾಹೇಬರು ಕಮೀಶನರಾಗಿದ್ದರು. ಈ ಕ್ರಾಫರ್ಡಸಾಹೇಬರು ಜನರ ಚಾಡಿಗಳನ್ನೂ, ದುರ್ಜನರ ದುರ್ಬೋಧನೆಗಳನ್ನೂ ಬಹಳವಾಗಿ ಕೇಳುತ್ತಿದ್ದರು. ಧನತೃಷ್ಣೆಯು ಇವರಿಗೆ ಅಪಾರವಾಗಿತ್ತು. ಅದರಿಂದವರು ಲಂಚದಾಸೆಗೆ ಬಿದ್ದು ನಿರ್ಭಯದಿಂದ ಮನಬಂದಂತೆ ಆಚರಿಸಹತ್ತಿದರು. ಲಂಚ ತಕ್ಕೊಂಡು ಬೇಕಾದ ಹೆಚ್ಚು ಕಡಿಮೆಗಳನ್ನು ಮಾಡುವರು. ದುಡ್ಡು ಕೊಟ್ಟರೆ ತೀರಿತು. ಕೆಲಸವಿಲ್ಲದವರಿಗೆ ಕೆಲಸಕೊಡುವರು. ಸಣ್ಣದರ್ಜೆಯಲ್ಲಿದ್ದವರನ್ನು ದೊಡ್ಡಪದವಿಗೆ ಏರಿಸುವರು. ಬೇಕಾದ ಅಘಟಿತ ಘಟನೆಗಳಾಗಹತ್ತಿದವು. ಈ ಕ್ರಾಫರ್ಡಶಾಹಿಯ ಏರ್ಪಾಡುಗಳಲ್ಲಿ ನಿರಪರಾಧಿಗಳಾದ ಎಷ್ಟೋ ಜನರ ನಂಬರುಗಳು ಕೆಳಗಿಳಿದವು. ಕಾರ್ಯಕ್ರಮವನ್ನರಿಯದ ಎಷ್ಟೋ ಕೀಳುಜನರು ಉಚ್ಚಸ್ಥಾನಗಳನ್ನೇರಿ ಮೆರೆದಾಡಹತ್ತಿದರು. ಸಾರಾಂಶ: ಕ್ರಾಫರ್ಡ ಸಾಹೇಬರ ಆಳಿಕೆಯ ಕಾಲವು ಲಂಚಗುಳಿಗಳ ಸುಗ್ಗಿಯಾದಂತಾಗಿತ್ತು. ಈ ಲಂಚದ ಸುಗ್ಗಿಯಲ್ಲಿ ವಂಚಕರಾದ

೧.ಈ ಶ್ಲೋಕದ ಪ್ರತಿಯೊಂದು ಚರಣದ ಮೊದಲಿನ ಒಂದೊಂದು ಅಕ್ಷರವನ್ನು ತಕ್ಕೊಂಡು ನಾಲ್ಕೂ ಅಕ್ಷರಗಳನ್ನು ಕ್ರಮದಿಂದ ಓದಿದರೆ ಕಾರಕೂನ ಎಂಬ ಶಬ್ದವಾಗುತ್ತದೆ. ಕಾವ್ಯ, ಅಲಂಕಾರ, ತತ್ವಗಳನ್ನು ಬಲ್ಲವನೂ, ರಸಿಕನೂ ಉದಾರನೂ, ನೀತಿವಾನನೂ, ಸರ್ವಕಾರ್ಯಗಳ ಸಾರಾಸಾರ ವಿಚಾರದಲ್ಲಿ ಕುಶಲನೂ ನಿಷ್ಪೃಹಿಯೂ, ನಮ್ರನೂ ಆದವನೇ ಕಾರಕೂನನೆಂಬ ಅಭಿದಾನಕ್ಕೆ ಯೋಗ್ಯನಾಗುತ್ತಾನೆ.

ಕೆಲ ಬ್ರಾಹ್ಮಣ ಕಾಮದಾರರ ಲೆಗ್ಗಿ ಚೆಂಡು ಪುಟಿದಾಡಹತ್ತಿತು. ಬೇಲಿಯೇ ಎದ್ದು ತೋಟವನ್ನು ಮೇಯಹತ್ತಿದರೆ, ಯಾರೇನು ಮಾಡುವದು?

ರುದ್ರಗೌಡರೋ ಲಂಚವನ್ನು ನೋಡುವವರೂ ಅಲ್ಲ, ಕೊಡುವವರೂ ಅಲ್ಲ, ಕುಕಲ್ಪನೆಯನ್ನು ಕೂಡ ಮನಸಿನಲ್ಲಿ ತರುವವರಲ್ಲ. ಅಂದಮೇಲೆ ಕೃತಕ ಲೇಖಗಳು ಇವರಿಂದ ಹೇಗೆ ಬರೆಯಲ್ಪಡಬೇಕು. ಕ್ಷುದ್ರ ಕಾಮದಾರರ ಕೀಳು ಆಚರಣೆಯಲ್ಲಿ ಕುದುರೆಯನ್ನು ಕತ್ತೆಯೆಂದು ಸಿದ್ಧಮಾಡುವ, ಕತ್ತೆಯನ್ನು ಕುದುರೆಯೆಂದು ನಿರ್ಣಯಿಸುವ ಕಪಟ ಲೇಖಗಳು ಲೇಖಣಿಯಿಂದ ಜಾರಿಬೀಳಲಿಕ್ಕೆ ಎಷ್ಟು ಮಾತ್ರವೂ ತಡವಾಗುವದಿಲ್ಲ. ಚೊಕ್ಕ ಬಂಗಾರದಂತೆ ಪ್ರಜ್ವಲಿಸುವ ಪರಿಶುದ್ಧವಾದ ಇವರ ಲೇಖಗಳೆಲ್ಲ ಮೆ॥ಕ್ರಾಫರ್ಡಸಾಹೇಬರಿಗೆ ವಿರುದ್ಧವಾಗಿಯೇ ತೋರಹತ್ತಿದವು. ಕಪಟಿಗಳಿಗೆ ಜಗತ್ಯವೆಲ್ಲ ಕಪಟಮಯವಾಗಿಯೇ ತೋರುತ್ತದೆ. ಇವರು ಕ್ರಾಫರ್ಡ ಸಾಹೇಬರ ಬಾಯಿಗೆ ತುಸು ಬೆಣ್ಣೆಯನ್ನು ಸವರಿದ್ದರೆ ವಿರುದ್ಧವಾಗಿ ತೋರುವ ಇವರ ಲೇಖಗಳೇ ಸಾಹೇಬ ಬಹದ್ದೂರವರಿಗೆ ಬಲು ಸವಿಸವಿಯಾಗಿ ತೋರುತ್ತಿದ್ದವು. ಆದರೆ ಹಾಗೆ ಆಗುವ ಸಂಭವವೇ ಇಲ್ಲದ್ದರಿಂದ ರುದ್ರಗೌಡ ಚೀಟ್ಣಿಸರವರ ಮೇಲೆ ಕ್ರಾಫರ್ಡಸಾಹೇಬರವರ ವಕ್ರದೃಷ್ಟಿಯಾಗಿ, ಇವರ ಚೀಟ್ಣಿಸಿಯನ್ನು ಮಂಜೂರ ಮಾಡಲಿಲ್ಲ. ಆದರೂ ಇವರು ಭರಪೂರ ಪಗಾರ ತೆಗೆದುಕೊಂಡು ಚೀಟ್ಣಿಸಿಯ ಕೆಲಸವನ್ನು ಸನ್ ೧೮೮೦ನೇ ಸಪ್ಟಂಬರದ ವರೆಗೆ ಮಾಡಿದರು.

ಎಷ್ಟೋ ಜನ ಕೃಷ್ಣಕಾರಸ್ಥಾನಿಗಳಾದ ಕಾಮದಾರರು ಕ್ರಾಫರ್ಡಸಾಹೇಬರವರ ಕಿವಿಯಲ್ಲಿ ರುದ್ರಗೌಡರ ವಿಷಯವಾಗಿ ಏನೇನೋ ದುರ್ಬೋಧನೆಯ ಗಾಳಿಯನ್ನು ಊದಿದರು. "ಮರ್ಕಟಸ್ಯ ಸುರಾಪಾನಂ" ಎಂಬ ವಿಚಾರದಂತಾಗಿ ಕಿವಿಯಲ್ಲಿ ಗಾಳಿತುಂಬಿದ ಕುದುರೆಯಂತೆ ಅಸ್ತವ್ಯಸ್ತವಾಗಿ ಆಚರಿಸಿ " ಈ ಚೀಟ್ಣಿಸರು ತೀರ ಚಿಕ್ಕವರೂ, ಹಾಗೂ ತರುಣರೂ ಇದ್ದು, ಇನ್ನೂ ಇವರಿಗೆ ಮೀಸೆ ಸಹಿತ ಬಹಳ ಬಂದಿಲ್ಲ. ಅಂತಹ ಪ್ರೌಢರೂ ಅನುಭವಿಕರೂ ಅಲ್ಲ. ಈ ಕೆಲಸಕ್ಕೆ ಅನುಭವಶೀಲರಾದ ಪ್ರಬುದ್ಧ ಜನರಿರತಕ್ಕದ್ದು. ಅಪ್ರಬುದ್ಧರಾದ ಈ ರುದ್ರಗೌಡರು ನಿರುಪಯೋಗಿಗಳಿದ್ದಾರೆಂಬ ಶುಷ್ಕನೆವನದಿಂದ ನಿರಪರಾಧಿಗಳಾದ ಇವರನ್ನು ಚೀಟ್ಣಿಸಿಯಿಂದ ತೆಗೆದು ತಿರುಗಿ ಇವರ ಮೊದಲಿನ ೬೦ ರೂಪಾಯಿಯ ಡಿಪೂಟಿ ಚೀಟ್ಣಿಸಿಯ ಜಾಗೆಯನ್ನೇ ಕೊಟ್ಟು, ಮಿಸ್ಟರ ರಂಗೋ ರಾಮಚಂದ್ರ ಶಿರಹಟ್ಟಿ ಎಂಬವರನ್ನು ಚೀಟ್ಣಿಸರನ್ನಾಗಿ ನೇಮಿಸಿದರು. ಈ ಕಪಟ ವ್ಯಾಪಾರವು ಯಾರದು? ಎಷ್ಟು ಅನ್ಯಾಯದ್ದು. ಈ ಶಿರಹಟ್ಟಿಯವರು ಆಕಸ್ಮಿಕವಾಗಿ ಹೇಗೆ ಬಂದರೆಂಬ ವಿಚಾರವನ್ನು ವಾಚಕರೇ ಮಾಡಲೆಂದು ಬಿಟ್ಟಿರುವೆವು.

ದೀರ್ಘದೇಹಿಗಳೂ, ದೊಡ್ಡ ದೊಡ್ಡ ಮನೆಗಳಲ್ಲಿ ವಾಸಿಸುವವರೂ, ದೊಡ್ಡ ಹುದ್ದೆಗಳಿಂದ ಮೆರೆದಾಡುವವರೂ ಆದ ಮಾತ್ರಕ್ಕೆ ಅವರು ದೊಡ್ಡವರಲ್ಲ. ದೊಡ್ಡ ಗುಣಗಳುಳ್ಳವರೇ ದೊಡ್ಡವರೆಂದು ಹೇಳಬಹುದು. ದೊಡ್ಡಸ್ತನವು ದೊಡ್ಡ ರುಮಾಲದಲ್ಲಿಯೂ, ದಿವ್ಯಪೋಷಾಕಿನಲ್ಲಿಯೂ, ಡಂಭಾಚಾರದಲ್ಲಿಯೂ ಇರುವದಿಲ್ಲ. ಸದ್ಗುಣಿಗಳ ಸೌಜನ್ಯದಲ್ಲಿಯೇ ದೊಡ್ಡಿಸ್ತನವಿರುತ್ತದೆ. ಕಯ್ಯೊಳಗೆ ಕೆಲಸವಿರುತ್ತದೆಂದು ಮನಬಂದಂತೆ ಮಾಡಬಾರದು. ದೇವದತ್ತ ಅಧಿಕಾರವಿರುತ್ತದೆಂದು ಅಕಾಂಡತಾಂಡವ ಮಾಡುವದೆಷ್ಟು ಮಾತ್ರವೂ ಸರಿಯಲ್ಲ. ದೇವರು ಮನುಷ್ಯನಿಗೆ ಕರ್ಮೇಂದ್ರಿಯಗಳನ್ನು ಕೀಳಕೃತ್ಯಗಳನ್ನು ಮಾಡಲಿಕ್ಕೂ, ಪಂಚಜ್ಞಾನೇಂದ್ರಿಯಗಳನ್ನು ಪ್ರಜಾಪೀಡನೆಯನ್ನುಂಟು ಮಾಡಲಿಕ್ಕೂ, ಆತ್ಮವನ್ನು ಅನ್ಯಾಯದ ಆಲೋಚನೆಗೂ ಕೊಟ್ಟಿರುವುದಿಲ್ಲ. ಜಗದ್ಧಿತಕಾರ್ಯಗಳು ಸರಿಯಾಗಿ ನೆರವೇರಬೇಕೆಂಬುದೇ ಆತನ ಉದ್ದೇಶವು. ದುರ್ಜನರ ವಶವಾಗಿರ್ದ ಅಧಿಕಾರಗಳು ಮೂಸಲಿಕ್ಕೆಂದು ಮಂಗನ ಕಯ್ಯಲ್ಲಿ ಕೊಟ್ಟ ಮಲ್ಲಿಗೆ ಹೂವಿನಂತೆ

ನಿಷ್ಪ್ರಯೋಜನವಾಗುತ್ತವೆ. ಕಡವಂಡಿಯು ಕಡಕೊಂಡು ಕೆಳಗೆ ಬೀಳುವಂತೆ ಇಂತಹ ಕಿಡಿಗೇಡಿಗಳು ಕಡೆಗೆ ದುರ್ದಶೆಯನ್ನೇ ಹೊಂದುವರು. ಉದ್ವಾದದ್ದು ಮುರಿಯುವದೆಂಬ ವೃದ್ಧವಾಕ್ಯದಂತೆ ಕ್ರಾಫರ್ಡಶಾಹಿಯು ಬಹುದಿವಸ ಬಾಳಲಿಲ್ಲ. ಕೂಡಲೇ ಇವರ ಕಪಟವ್ಯಾಪಾರಗಳು ಬೈಲಿಗೆ ಬಂದು, ಸರಕಾರಕ್ಕೆ ಗೊತ್ತಾಗಿ, ಇವರ ಕೃತ್ರಿಮವನ್ನು ವಿಚಾರಿಸಹತ್ತಿದರು. ಈ ಕ್ರಾಫರ್ಡ ಪ್ರಕರಣವು ಸನ್ ೧೮೮೮ರಲ್ಲಿ ಆರಂಭವಾಗಿ, ಒಂದು ವರ್ಷದ ವರೆಗೂ ವಿಚಾರ ನಡೆದು, ಇವರು ಕೆಲಸದಿಂದ ಮುಕ್ತರಾದದ್ದು ಮುಂದಿನ ಭಾಗದಲ್ಲಿ ವಿವರಿಸಲ್ಪಡುವದು.

ಲಿಂಗನಗೌಡರ ಹಾಗೂ ಮಹಾದೇವಗೌಡರ ಮರಣ

ಸನ್ ೧೮೮೦ ರಲ್ಲಿ ರುದ್ರಗೌಡರು ಹಾಯರ ಸ್ಟ್ಯಾಂಡರ್ಡ ಪರೀಕ್ಷೆಯಲ್ಲಿ ಪಾಸಾಗಿ, ಮೇಲ್ನಂಬರ ಪಡೆದು ಸಂತೋಷದಿಂದಿರುತ್ತಿರಲು, ಇದೇ ವರ್ಷ ಅಂದರೆ ಸನ್ ೧೮೮೦ನೇ ಅಗಷ್ಟ ೧ನೇ ತಾರೀಖ ರವಿವಾರ ಮಧ್ಯಾಹ್ನದ ೧೨ ಘಂಟೆಗೆ ಇವರ ಅಣ್ಣಂದಿರಾದ ಲಿಂಗನಗೌಡರು ಜ್ವರದಿಂದ ಮೃತವಾದರು. ಪುತ್ರವಿಯೋಗದಿಂದ ಚೆನ್ನವೀರಗೌಡರೂ ಭ್ರಾತೃವಿಯೋಗದಿಂದ ರುದ್ರಗೌಡರೂ ಬಹಳೇ ದುಃಖಪಟ್ಟರು. ಇವರ ಮರಣದಿಂದ ಬಂಧು ಬಳಗಕ್ಕೆಲ್ಲ ಬಹಳೇ ದುಃಖವಾಯಿತು. ಲಿಂಗನಗೌಡರು ಬಹಳ ಶಾಂತ ಸ್ವಭಾವದವರೂ, ಸದ್ಗುಣಸಂಪನ್ನರೂ ಆಗಿದ್ದರು. ಮರಣ ಕಾಲಕ್ಕೆ ಇವರ ವಯಸ್ಸು ೩೪ ವರ್ಷವಾಗಿತ್ತು. ಇವರಿಗೆ ಗಂಡುಮಕ್ಕಳಿದ್ದಿಲ್ಲ. ಇಬ್ಬರು[೨] ಹೆಣ್ಣುಮಕ್ಕಳಿರುವರು.

ಮುಂದೆ ರುದ್ರಗೌಡರಿಗೆ ವಾಂತಿರೋಗವು ಪ್ರಬಲವಾಗಿ ಕೊಲ್ಲಾಪುರದ ಡಾಕ್ಟರರಾದ ದಾದಾನಾಥಾಜಿ ಸೇಳಕೆಯವರ ಔಷಧದಿಂದ ಸನ್ ೧೮೮೧ನೇ ಫೆಬ್ರುವರಿ ತಿಂಗಳಲ್ಲಿ ಗುಣವನ್ನು ಹೊಂದಿದರು. ಇಷ್ಟರಲ್ಲಿ ಹಿಂದೆ ಕಾರವಾರಕ್ಕೆ ವರ್ಗವಾಗಿ ಹೋಗಿದ್ದ ಮೆ|| ಮಿಡಲ್ಟನ್ ಸಾಹೇಬ ಬಹದ್ದೂರವರು ಧಾರವಾಡ ಜಿಲ್ಲೆಯ ಹೆಡ್‌ಕಲೆಕ್ಟರರಾಗಿ ಬಂದರು (ಸನ್ ೧೮೮೦ ನೇ ಇಸವಿ). ನಿರ್ವಂಚನೆಯಿಂದ ಸರಳವಾಗಿ ಕೆಲಸಮಾಡುತ್ತಿದ್ದ ರುದ್ರಗೌಡರನ್ನು ಮೆ|| ಮಿಡಲ್ಟನ್ ಸಾಹೇಬರವರು ಬಹಳೇ ಪ್ರೀತಿಸುತ್ತಿದ್ದರು. ಇವರಿಬ್ಬರ ಪ್ರೇಮವು ಮೊದಲಿನಿಂದಲೇ ಇತ್ತೆಂಬದನ್ನು ವಾಚಕರು ಮರೆತಿರಲಿಕ್ಕಿಲ್ಲ. ರುದ್ರಗೌಡರು ಗೌಡಿಕೆಯನ್ನು ಮಾಡುತ್ತಿದ್ದಾಗಲೇ ಇವರ ಸದ್ಗುಣಗಳನ್ನೂ ಪ್ರಾಮಾಣಿಕತನವನ್ನೂ ಮೆ|| ಮಿಡಲ್ಟನ್ ಸಾಹೇಬರು ಕಂಡುಕೊಂಡಿದ್ದರು. ಮುಂದೆ ೧೮೮೩ನೇ ಇಸವಿಯ ಎಪ್ರೀಲದ ವರೆಗೆ ರುದ್ರಗೌಡರು ೮೦ ರೂಪಾಯಿ ಪಗಾರದ ಡಿಪೂಟಿ ಚೀಟ್ನಿಸ ಜಾಗೆಯ ಮೇಲೆಯೇ ಇದ್ದರು. ಇವರ ಕೆಲಸದ ಕುಶಲತನವನ್ನು ಕಂಡು ಮೆ|| ಮಿಡಲ್ಟನ್ ಸಾಹೇಬರವರು ಇವರ ಶಿಫಾರಸಮಾಡಲಾಗಿ, ಪುನಃ ರುದ್ರಗೌಡರು ಚೀಟ್ನಿಸರಾದರು. ಆಗ ಇವರಿಗೆ ಆಕ್ಟಿಂಗ ಅಲೌನ್ಸ ಸಹಿತ ೮೫ ರೂಪಾಯಿ ಪಗಾರ ಸಿಗಹತ್ತಿತು. ಕೆಲವು ದಿವಸಗಳಲ್ಲಿಯೇ ಭರಪೂರ ಪಗಾರ ಅಂದರೆ ೧೨೫ ರೂಪಾಯಿ ದೊರೆಯಹತ್ತಿತು.

ಸಂಸಾರದಲ್ಲಿ ಸುಖದುಃಖಗಳು ಸರಿಯಾಗಿ ಬರುತ್ತಿರುವವೆಂಬಂತೆ ಇವರು ಅಭಿವೃದ್ಧಿಯನ್ನು ಹೊಂದಿ ಆನಂದದಿಂದ ಇರುತ್ತಿರಲು, ಲಿಂಗನಗೌಡರು ತೀರಿದ ಮೂರು ವರ್ಷಗಳಲ್ಲಿಯೇ ಅಂದರೆ ಸನ್ ೧೮೮೩ನೇ

೨.ಹಿರೇಮಗಳಾದ ಧರ್ಮವ್ವನವರನ್ನು ಬಂಕಾಪುರ ತಾಲೂಕ, ಇಂಗಳಗಿ ಗುರುನಗೌಡರ ಚಿರಂಜೀವರಾದ ಶಿವನಗೌಡರಿಗೆ ಕೊಟ್ಟಿತ್ತು. ಮತ್ತು ಚಿಕ್ಕವರಾದ ರುಕ್ಮವ್ವನವರನ್ನು ಇದೇ ತಾಲೂಕ ಹೊಸೂರ ನೀಲಕಂಠಗೌಡರ ಚಿರಂಜೀವರಾದ, ಫಕೀರಗೌಡರವರಿಗೆ ಕೊಟ್ಟಿರುತ್ತದೆ. (ಇಂಗಳಗಿ ಗೌಡರು ಜಂಗಮಗೌಡರು).

ಇಸವಿ ಮೇ ತಿಂಗಳ ೧೩ನೇ ತಾರೀಖ ಶನಿವಾರ ಮುಂಜಾನೆ ೧೧ ಘಂಟಗೆ ಇವರ ತಮ್ಮಂದಿರಾದ ಮಹಾದೇವಗೌಡರು ಮೃತವಾದರು. ಈ ಚಿಕ್ಕಮಗನ ಮೇಲೆ ಚೆನ್ನವೀರಗೌಡರ ಮಮತೆ ಬಹಳಿತ್ತು. ಪುತ್ರವಿಯೋಗವಹ್ನಿಯಿಂದ ದಹ್ಯಮಾನರಾಗಿದ್ದ ಚೆನ್ನವೀರಗೌಡರಿಗೆ ಮಹಾದೇವಗೌಡರ ಮರಣದಿಂದ ಗಾಯದೊಳಗೆ ಕೋಲು ಚುಚ್ಚಿದಂತಾಯಿತು. ರುದ್ರಗೌಡರೇ ಮೊದಲಾದ ಬಂಧು ಬಳಗದವರಿಗೆಲ್ಲ ಅಪಾರವಾದ ದುಃಖವಾಯಿತು.-ಮರಣಕಾಲಕ್ಕೆ ಮಹಾದೇವಗೌಡರು ೨೬ ವರ್ಷದ ಒಳ್ಳೇ ಪ್ರಾಯದವರಾಗಿದ್ದರು. ಇವರು ಒಳ್ಳೇ ಜಾಣರೂ, ಕೃಷಿಕರ್ಮದಲ್ಲಿ ನಿಪುಣರೂ ಇದ್ದರು. ಇವರಿಗೆ ಒಂದು ಗಂಡೂ, ಒಂದು ಹೆಣ್ಣು ಹೀಗೆ ಇಬ್ಬರು ಮಕ್ಕಳಿದ್ದು ಚಿಕ್ಕಂದಿನಲ್ಲಿಯೇ ಮೃತವಾಗಿದ್ದರು. ಪ್ರೌಢಪುತ್ರರ ಮರಣದಿಂದ ಚೆನ್ನವೀರಗೌಡರ ವೃದ್ಧಾಪ್ಯವು ದುಃಖಕಾರಕವಾದರೂ ಅವರ ದುಃಖಶಮನಕ್ಕೆ ರಾವಸಾಹೇಬ ರುದ್ರಗೌಡರ ಅಭಿವೃದ್ಧಿಯೇ ಕಾರಣವಾಯಿತೆಂದು ಹೇಳಬಹುದು.

❖❖

೪ನೇ ಭಾಗ

ರುದ್ರಗೌಡ ಚಿಟ್ಣೀಸರ ಸ್ವಭಾವ

ರುದ್ರಗೌಡರು ಡಿಪೂಟಿ ಚಿಟ್ಣೀಸರಿದ್ದಾಗಲೇ ಜನರಲ್ಲಿ ಇವರ ವರ್ಚಸ್ಸು ಬಹಳವಾಗಿ ಕೂತಿತು. ಇವರ ಸದ್ವರ್ತನದಲ್ಲಿ ಕುಹಕಿಗಳಾದ ಕಾರಕೂನರ ಆಟವು ನಾಟದಂತಾಗಿ ಅಂತರಂಗದಲ್ಲಿ ಇವರಿಗೆ ಹೆದರುತ್ತಿದರು. ಬ್ರಾಹ್ಮಣರು ಇವರನ್ನು ಎಷ್ಟು ವಿರೋಧಿಸಿದರೂ ಗಟ್ಟಿಬಂಗಾರಕ್ಕೆ ಪುಟಕೊಟ್ಟಂತೆ ಇವರ ತೇಜಸ್ಸು ಮತ್ತಷ್ಟು ಪ್ರಜ್ವಲಿಸಹತ್ತಿತು. ಸತ್ಯಾವಲಂಬಿಗಳೂ, ಪ್ರಮಾಣಿಕರೂ ಆದ ಇವರ ಖ್ಯಾತಿಯು ಬಹಳೇ ಬೆಳೆಯಹತ್ತಿತ್ತು. ಇವರ ಯಶಃಪ್ರಭಾವದಿಂದ ದೊಡ್ಡ ದೊಡ್ಡ ಜನರ ದರ್ಶನವಾಗಹತ್ತಿತು. ಸರಕಾರಕ್ಕೆ ಸಹ ಇವರ ಸತ್ಯವಂತಿಕೆಯು ಪೂರಾ ಗೊತ್ತಾಯಿತು. ಕಸ್ತೂರಿಯ ವಾಸನೆಯು ಅಡಗುವದಿಲ್ಲ. ಸತ್ಯವು ರಾಜಮಾರ್ಗದಂತೆ ನೀಟಾಗಿರುತ್ತದೆಂಬ ತತ್ವವು, ಇವರ ವರ್ತನವನ್ನು ಬಲ್ಲ ಎಲ್ಲ ಜನರಿಗೆ ತಿಳಿಯ ಹತ್ತಿತು. ಮೇಲಿಂದ ಮೇಲೆ ಬರುವ ಪ್ರತಿಯೊಬ್ಬ ಸಾಹೇಬರವರ ಶಿಫಾರಸವಾಗಹತ್ತಿತು. ಈ ಚಿಟ್ಣೀಸರಲ್ಲಿ ಚಪಲತನೂ, ಚಟುವಟಿಕೆಯೂ ಚೆನ್ನಾಗಿ ಇದ್ದವು. ಸ್ವಲ್ಪ ದಿವಸದಲ್ಲಿಯೇ ಇವರು ಕೆಲಸದ ಕ್ರಮವನ್ನೆಲ್ಲ ಗೊತ್ತುಮಾಡಿಕೊಂಡರು. ಎಷ್ಟು ಕೆಲಸವಿದ್ದರೂ ಇವರು ಬೇಸರಿಯದೆ ಮಾಡುತ್ತಿದ್ದರು. ಇವರ ಕೆಲಸದಲ್ಲಿ ಸುಧಾರಣೆಯೂ, ಶಿಸ್ತೂ ಬಹಳ. ಸಾರಾಂಶ ಇರಲವಶ್ಯವಾದ ಸದ್ಗುಣಗಳೆಲ್ಲವೂ ಇವರಲ್ಲಿ ನೆಲೆಗೊಂಡಿದ್ದವು. ಇಂಥ ಸದ್ಗುಣಗಳ ಏಳ್ಗೆಯಾಗುವದೇನಾಶ್ಚರ್ಯ.

ಬ್ರಿಟಿಶ ಸರಕಾರವು ಬಂದಂದಿನಿಂದ ಬಹುತರವಾಗಿ ಸರಕಾರಿಯ ಕೆಲಸದ ಉಚ್ಚಾಸನಗಳನ್ನೆಲ್ಲ ಬ್ರಾಹ್ಮಣರೇ ಅಲಂಕರಿಸಿದ್ದರು. ಎಲ್ಲ ರಾಜ್ಯಸೂತ್ರವು ಅವರ ಕಯ್ಯಲ್ಲಿದ್ದಂತೇ ಆಗಿ, ಅವರು ಮಾಡಿದ್ದೇ ಮಟ್ಟ, ಕಟ್ಟಿದ್ದೇ ಪಟ್ಟವಾಗಿತ್ತು. ಅವರ ಚಲ್ಲಾಟವನ್ನು ಅಲ್ಲಗಳೆಯುವವರು ಯಾರೂ ಇರಲಿಲ್ಲ. ಅವರ ಕ್ಷುದ್ರತನವೂ, ಏರಾಟವೂ ಮಿತಿಮೀರಿತ್ತು. ಇವರ ಕಪಟ ಕಾರಸ್ಥಾನಗಳೂ, ದುರಾಚರಣೆಗಳೂ ಶುದ್ಧಮನಸಿನ ಯುರೋಪಿಯನ್ ಜನರಿಗೆ ಎಳ್ಳಷ್ಟೂ ಗೊತ್ತಾಗುತ್ತಿದ್ದಿಲ್ಲ. ಆದ್ದರಿಂದವರು ಅಟ್ಟಕ್ಕೇರಿದ್ದರು. ಕಾಡುಮೃಗಗಳ ಉಪಟಳವನ್ನು ತಲ್ಲಣಿಸುವ ರುದ್ರಗೌಡರಂಥ ಮೃಗೇಂದ್ರರು ಸಮೀಪದಲ್ಲಿಯೇ ಉದಯಿಸುವರೆಂಬದು ಯಾರ ಕನಸು ಮನಸಿನಲ್ಲಿಯೂ ಬಂದಿದ್ದಿಲ್ಲ. ರುದ್ರಗೌಡರು ಚೀಟ್ಣಿಸರಾಗುತ್ತಲೇ ಮೆರೆದಾಡುತ್ತಿದ್ದ ಬ್ರಾಹ್ಮಣರು ಅಧೋಮುಖರಾದರು. ಭರಭರಾಟಿಯಿಂದ ಬೆಳೆದಿದ್ದ ಅವರ ತೇಜೋವೃಕ್ಷಕ್ಕೆ ಗೆದ್ದಲೆ ಹತ್ತಿದಂತಾಯಿತು. 'ಕಳ್ಳನ ಜೀವವು ಹುಳ್ಳುಳ್ಳಗೆಂಬಂತೆ' ಅವರ ಅಟ್ಟಹಾಸವು ಕುಕ್ಕುರಬಡೆಯಿತು. ಆದರೂ ಅವರ ವಿರುದ್ಧ ಭಾವವು

ಅಡಗಲಿಲ್ಲ. "ಹುಟ್ಟುಗುಣವು ಹುಗಿದರೂ ಹೋಗದೆಂ"ಬ ಮಾತು ಎಂದಿಗಾದರೂ ಸುಳ್ಳಾದೀತೇ? ಈ ಚಿಟ್ನೀಸರ ಚಾತುರ್ಯವು ಚತುಃಸೀಮೆಯಲ್ಲಿಯೂ ಬಹುಬೇಗ ಪ್ರಕಟವಾಯಿತು. ಬ್ರಿಟಿಶ ಸರಕಾರದ ಕಾರಭಾರವಾದಂದಿನಿಂದ ಬ್ರಾಹ್ಮಣೇತರ ಜನರಲ್ಲಿ ಚೀಟ್ಣಿಸರಾದವರು ರಾವಸಾಹೇಬ ರುದ್ರಗೌಡರೇ ಮೊದಲಿನವರು. ಇವರಾಚೆಯಲ್ಲಿ ಚೀಟ್ನಿಸೀ ಜಾಗೆಗೆ ಎಲ್ಲರೂ ಬ್ರಾಹ್ಮಣರೇ ಇದ್ದರು. ಇದೊಂದು ಸಂಗತಿಯು ಇವರ ಚರಿತ್ರದಲ್ಲಿ ನೆನಪಿಡತಕ್ಕ ಮಾತಾಗಿದೆ. ರುದ್ರಗೌಡರಂಥ ಚತುರರಾದ ಚೀಟ್ನಿಸರು ಯಾರೂ ಆಗಲಿಲ್ಲವೆಂದು ಜನರು ಈ ಹೊತ್ತಿಗೂ ಅನ್ನುತ್ತಾರೆ. ಅಂದಮೇಲೆ ಇವರು ಎಷ್ಟು ಪ್ರಮಾಣಿಕರೂ, ಜನಪ್ರಿಯರೂ ಆಗಿದ್ದರೆಂಬುದು ತಾನಾಗಿ ತಿಳಿಯುತ್ತದೆ.

ಬ್ರಾಹ್ಮಣರ ಮತ್ಸರಬುದ್ಧಿ

ಸನ್ ೧೮೮೩ನೇ ಇಸವಿಯಲ್ಲಿಯೇ ಇವರ ಮಾಮಲತಿಯ ನಂಬರು ಬಂತು. ಮೊದಲನೆಯ ನಂಬರು ಬಂದದರಿಂದ ಇವರಿಗೆ ಮಾಮಲತಿಯ ಜಾಗೆಯನ್ನು ಅವಶ್ಯವಾಗಿ ಕೊಡಲೇಬೇಕಾಗಿತ್ತು. ಇವರು ಮಾಮಲೇದಾರರಾಗುವರೆಂಬ ಅಸೂಯಾಗ್ನಿಯು ಬ್ರಾಹ್ಮಣ ಕಾಮದಾರರ ಹೃದಯದಲ್ಲಿ ಹೊತ್ತಹತ್ತಿತು. ಅವರ ಒಡಲಲ್ಲಿ ಚಡಪಡಿಕೆಯು ಹುಟ್ಟಿತು. ಕ್ರಾಫರ್ಡಶಾಹಿಯು ಇನ್ನೂ ನಡೆದೇ ಇತ್ತು. ಅಷ್ಟರಲ್ಲಿ ಹಾಯರ ಪರೀಕ್ಷೆಯ ವಿಷಯಗಳು ಬದಲಾಯಿಸಲ್ಪಟ್ಟಿದ್ದವು. ರುದ್ರಗೌಡರು ಹಳೆತರದ ನಿಯಮಗಳಿಗನುಸರಿಸಿ ಹಾಯರ ಆಗಿರುವರೆಂದೂ ಹೊಸ ರೂಲಿನ ಪ್ರಕಾರ ಸ್ಪೇಶಲ್ ಲೋಯರ ಆಗಿ, ಆರ್ಡಿನರಿ ಹಾಯರ್ ಆಗದ ವಿನಹಾ ಇವರಿಗೆ ಮಾಮಲತಿ ಜಾಗೆಯನ್ನು ಕೊಡುವದು ಅಯೋಗ್ಯವೆಂದೂ, ಕಮೀಶನರ ಕಚೇರಿಯ ಬ್ರಹ್ಮವೃಂದವು ತಕರಾರ ತೆಗೆಯಿತು. ಈ ಬಗ್ಗೆ ಮುಂದೆ ಕೆಲಸ ನಡೆದಿರಲು, ರುದ್ರಗೌಡರು ಬಹಳೇ ಜಾಗ್ರತಬುದ್ಧಿಯುಳ್ಳವರಿರುವದರಿಂದ, ಇವರ ಪರೀಕ್ಷೆಯನ್ನು ರದ್ದುಮಾಡಬಾರದೆಂಬದಾಗಿ ಮೆ॥ಮಿಡಲ್ಟನ್ ಸಾಹೇಬರು ಬರೆದರು. ನಂಬರ ೧೫೪೪/೧೯-೪-೮೪ ಆದರೆ ಇವರ ಮೊದಲಿನ ಹಾಯರ ಪರೀಕ್ಷೆಯು ರದ್ದುಮಾಡಲ್ಪಟ್ಟು, ಇವರು ಪುನಃ ಲೋಯರ ಪರೀಕ್ಷೆಯನ್ನು ಕೂಡಬೇಕೆಂತಲೂ, ಆರ್ಡಿನರಿ ಹಾಯರ ಆಗಬೇಕೆಂತಲೂ ಸರಕಾರ ಠರಾವವಾಯಿತು. ನಂಬರ ೪೪೧೧/೨-೬-೮೪ ಮುಲಿಕೀಖಾತೆ ಸರಕಾರ ಠರಾವ ಪ್ರಕಾರ ರುದ್ರಗೌಡರು ಸನ್ ೧೮೮೪ನೇ ಇಸವಿಯ ಅಕ್ಟೋಬರದಲ್ಲಿ ಪುಣೆಯಲ್ಲಿ ಸ್ಪೇಶಲ್ ಲೋಯರ ಪರೀಕ್ಷೆಯಲ್ಲಿ ಪಾಸಾಗಿ ಮೇಲ್ನಂಬರ ಪಡೆದರು. ಇನ್ನುಮೇಲೆ ಇವರು ಪುನಃ ಹಾಯರಾಗುವ ಕಾರಣವಿಲ್ಲೆಂಬದಾಗಿ ಸನ್ ೧೮೮೫ನೇ ಫೆಬ್ರುವರಿಯಲ್ಲಿ ಸರಕಾರಿಯ ಠರಾವವು ಆಯಿತು. ಅಷ್ಟರಲ್ಲಿ ಎಷ್ಟೋ ಮಂದಿ ಲೋಯರ ಹಾಯರ ಆಗಿ ಮೇಲೆ ಹೋದದರಿಂದ ಇವರ ಮಾಮಲತಿಯ ನಂಬರು ತೀರ ಕೆಳಗೆ ಬಂತು. ಈ ನಂಬರದ ಮೇಲಿಂದ ನೋಡಿದರೆ ಮುಂದೆ ೮-೧೦ ವರ್ಷಗಳ ವರೆಗೂ ಇವರಿಗೆ ಮಾಮಲತಿಯು ಸಿಗದಂತಾಯಿತು. ಇದೆಲ್ಲ ಬ್ರಾಹ್ಮಣರ ಕುಚೋದ್ಯತನದ ಪರಿಣಾಮವು. ರಾ.ಸಾ॥ ರುದ್ರಗೌಡರು ಮೇಲೇರಿದರೆ ನಮ್ಮ ಪರಿಣಾಮವು ನೆಟ್ಟಗಾಗದೆಂದೂ, ಎಲ್ಲಿಯೂ ನಮ್ಮ ಕೈ ಚಾಚಲಿಕ್ಕಿಲ್ಲೆಂದೂ ಬಗೆದು, ಛಿದ್ರವನ್ನು ಹುಡುಕುವ ಕೀಟಕನಂತೆ ಈ ಮೇಲಿನ ಕ್ಷುದ್ರಕಾರಣವನ್ನು ಹುಡುಕಿ ತೆಗೆದು, ಇವರ ಮಾಮಲತಿಯ ನಂಬರವನ್ನು ಕೆಳಗೆ ತಂದರು. ಇದು ಒಂದು ದೊಡ್ಡ ಅನ್ಯಾಯವಾಯಿತೆಂದು ಹೇಳಬಹುದು. ಈ ಪ್ರಕಾರ ಮುಂದಾಗುವ ಮಾರ್ಗದಲ್ಲಿ ಇವರಿಗೆ ಎರಡು ಸಾರೆ ವಿಘ್ನಬಂದಿತು. ಹೀಗಾಗದಿದ್ದರೆ ಇವರು ಇನ್ನೂ ಹೆಚ್ಚಿನ ಪದವಿಗೆ ಬರುತ್ತಿದ್ದರು.

ಸನ್ ೧೮೮೩ರಲ್ಲಿ ರಾ.ಸಾ||ರುದ್ರಗೌಡರು ಡಿಪೂಟಿ ಚೀಟ್ನಿಸರಾಗಿದ್ದಾಗ ರಾ.ಬ|| ಗುರುಸಿದ್ದಪ್ಪ ವೀರಬಸವಪ್ಪ ಗಿಲಿಗಿಂಚಿಯವರು ಧಾರವಾಡದಲ್ಲಿಯೇ ಅಕ್ಬಿಂಗ ಹುಜೂರ ಡಿಪೂಟಿ ಕಲೇಕ್ಟರರಾಗಿದ್ದರು. ಆ ಕಾಲಕ್ಕೆ ಇವರಿಬ್ಬರ ಹೊರತು ಯಾವ ಲಿಂಗಾಯತನೂ ಉಚ್ಚ ಪದವಿಯನ್ನೇರಿದ್ದಿಲ್ಲ. ರಾವಸಾಹೇಬ ರಾಚಪ್ಪ ವೀರಪ್ಪ ಕಲಬುರ್ಗಿ ಸಾಕೀನ ಕಸಬಾ ಧಾರವಾಡ ಎಂಬವರೊಬ್ಬರು ಮಾತ್ರ ಕಾರವಾರ ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿ ಮಾಮಲೇದಾರರಿದ್ದರು. ಇವರು ರಾ.ಸಾ||ರುದ್ರಗೌಡರಂತೆ ಮತ್ತು ರಾ.ಬ||ಗುರುಸಿದ್ದಪ್ಪನವರಂತೆ ಸಾರ್ವಜನಿಕ ಕಾರ್ಯಗಳಲ್ಲಿ ಮುಂದೊರೆಯದ ಕಾರಣ ಇವರು ಜನರಲ್ಲಿ ಹೆಸರುವಾಸಿಯಾಗಲಿಲ್ಲ. ಎಲ್ಲ ಜಿಲ್ಲೆಗಳಲ್ಲಿ ಬ್ರಾಹ್ಮಣರೇ ಹೆಚ್ಚಳವನ್ನು ಹೊಂದಿದ್ದರು. ವಿದ್ಯೆಯಲ್ಲಿ ಅವರೇ ಮುಂದೆ ಹೋಗಿದ್ದರು. ಯಾವನೊಬ್ಬ ವೀರಶೈವನಾಗಲಿ, ಇತರ ಜಾತಿಯವನಾಗಲಿ ಅಲ್ಪಸ್ವಲ್ಪ ಎಲ್ಲಿಯಾದರೂ ಸರಕಾರಿಯ ಕೆಲಸದಲ್ಲಿ ಸೇರಿಕೊಂಡರೆ ಅವನನ್ನು ಬ್ರಾಹ್ಮಣರು ಸಹಸಾ ಏರುಗೊಡುತ್ತಿದ್ದಿಲ್ಲ. ರಾ.ಬ||ಗುರುಸಿದ್ದಪ್ಪನವರೂ ರುದ್ರಗೌಡರೂ ಚತುರೋಪಾಯ ಬಲ್ಲವರೂ, ರಾಜಕಾರ್ಯ ಧುರೀಣರೂ, ಸತ್ಯಪ್ರತಿಪಾದಕರೂ, ಧೈರ್ಯಸ್ಥರಂತಲೇ ಇಷ್ಟು ಮೇಲೇರಿದರು. ಇವರಿಗಾದರೂ ಕೆಲವು ಏರಿಳಿತಗಳಾದವು. ಸ್ವಾಭಾವಿಕವಾಗಿ ಸದ್ಧರ್ಮವೇ ಕಡೆಗೆ ಗೆಲುವುದೆಂಬಂತೆ, ಇವರಿಗೆ ವಿಜಯಲಕ್ಷ್ಮಿಯು ಕ್ರಮೇಣ ಕೃಪೆಯನ್ನು ಕೊಡಹತ್ತಿದಳು.

ವೀರಶೈವರ ವಿದ್ಯೋತ್ಪತ್ತಿಯ ವಿಚಾರವು

ಬ್ರಾಹ್ಮಣರು ವಿದ್ಯಾವೃಕ್ಷದ ಮಧುರತರ ಫಲಗಳನ್ನು ಯಥೇಚ್ಛ ಭಕ್ಷಿಸುತ್ತಿರುವಾಗ, ನಮ್ಮ ವೀರಶೈವರಲ್ಲಿ ಇನ್ನೂ ವಿದ್ಯಾವೃಕ್ಷದ ಅಂಕುರೋತ್ಪತ್ತಿಯು ಸಹ ಆಗದೆ, ನಮ್ಮ ಜನರು ಬಹಳೇ ಅಜ್ಞಾನ ಸ್ಥಿತಿಯಲ್ಲಿದ್ದದ್ದನ್ನು ನೋಡಿ, ಈ ಉಭಯ ಮಹನೀಯರಿಗೂ ಸರಿಬರಲಿಲ್ಲ. ನಮ್ಮ ಜನರಲ್ಲಿ ನೂರರಲ್ಲೊಬ್ಬನು ವಿದ್ಯಾವಂತನಿಲ್ಲೆಂಬದನ್ನು ಕೇಳಲಿಕ್ಕೆ ಕೂಡ ಕಠಿಣವಾಯಿತು. ಬ್ರಾಹ್ಮಣರ ವಿದ್ಯಾಮಂದಿರದ ಶಿಖರಾಗ್ರವು ಸುವರ್ಣತೇಜರಿಂದ ಹೊಳೆಯುತ್ತಿರಲು, ನಮ್ಮಲ್ಲಿ ಆ ವಿದ್ಯಾಮಂದಿರದ ಅಸ್ತಿವಾರವೂ ಕೂಡ ಇನ್ನೂ ಹಾಕಲ್ಪಡಲಿಲ್ಲವೆಂದು ಹಳಹಳಿಸಿದರು. ಅನ್ನಿಗರಾಚರಿಸುವ ಅನೃತವನ್ನೂ, ಅಸೂಯೆಯನ್ನೂ, ನಮ್ಮ ಜನರ ಮೌಢ್ಯತೆಯನ್ನೂ ಕಂಡು ಇವರ ಮಿದುಳು ಸ್ತಬ್ಧವಾಗಲಿಲ್ಲ. ಈ ಗಹನವಾದ ವಿಚಾರವು ಇವರೀರ್ವರ ಹೃತ್ಸಾಗರದಲ್ಲಿ ಹೊಕ್ಕು ಗಡಬಡಿಸಹತ್ತಿತು.

ಒಂದು ದಿವಸ ರಾ.ಬ||ಗುರುಸಿದ್ಧಪ್ಪನವರೂ, ರುದ್ರಗೌಡರೂ ಕಚೇರಿಯ ಕೆಲಸವನ್ನು ತೀರಿಸಿ, ಸಂಜೆಯ ಮುಂದೆ ಹುಬ್ಬಳ್ಳಿಯ ಹಾದಿಯ ಕಡೆಗೆ ಹವೆಯನ್ನು ತೆಗೆದುಕೊಳ್ಳಲಿಕ್ಕೆ ಹೋದಾಗ, ಮೈಲಾರಲಿಂಗನ ಗುಡ್ಡದ ಮೇಲೆ ಈ ಮಾತು ಹೊರಟಿತು. ಅದೇನೆಂದರೆ- ಪ್ರತಿಯೊಂದು ರಾಷ್ಟ್ರವಾಗಲಿ, ಸಮಾಜವಾಗಲಿ, ಉನ್ನತಾವಸ್ಥೆಯನ್ನು ಹೊಂದಬೇಕಾದರೆ ವಿದ್ಯೆಯೇ ಮೂಲವು. ವಿದ್ಯಾವಿರಹಿತವಾದ ಸಮಾಜವು ದನಗಳಂತೆ ಕಾಡು ಸ್ಥಿತಿಯಲ್ಲಿರುತ್ತದೆ. 'ವ್ಯಯೇ ಕೃತೇ ವರ್ಧತಿ ಏವ ನಿತ್ಯಂ ವಿದ್ಯಾಧನಂ ಸರ್ವಧನಪ್ರಧಾನಂ' ಎಂಬ ಶ್ಲೋಕಾರ್ಥದಂತೆ ವ್ಯಯ ಮಾಡಹತ್ತಲು ಎಲ್ಲ ವಸ್ತುಗಳು ಕಡಿಮೆಯಾಗುತ್ತವೆ. ಆದರೆ ಈ ವಿದ್ಯೆಯೆಂಬ ಅನರ್ಘ್ಯವಾದ ರತ್ನರಾಶಿಯನ್ನು ವೆಚ್ಚಮಾಡಹತ್ತಲು ಅದು ವರ್ಧಿಸುತ್ತದೆ. ಕಾರಣ ಎಲ್ಲ ಸಂಪತ್ತಿಗಳಲ್ಲಿ ವಿದ್ಯಾಸಂಪತ್ತಿಯೇ ಘನವಾದದ್ದು.

ವಿದ್ಯಾನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಂ ।
ವಿದ್ಯಾಭೋಗಕರೀ ಯಶಃ ಸುಖಕರೀ ವಿದ್ಯಾ ಗೂರೂಣಾಂ ಗುರುಃ ॥

ವಿದ್ಯಾ ಬಂಧುಜನೋ ವಿದೇಶಗಮನೇ ವಿದ್ಯಾಪರಂದೈವತಂ ।
ವಿದ್ಯಾರಾಜಸು ಪೂಜಿತಾ ನ ತು ಧನಂ ವಿದ್ಯಾವಿಹೀನಃ ಪಶುಃ ॥

ಎಂಬ ಗೀರ್ವಾಣೋಕ್ತಿಯಂತೆ ಸಮಾಜೋನ್ನತಿಗೆ ವಿದ್ಯೆಯೇ ಮೂಲಕಾರಣವಾಗಿರುವದು. ವಿದ್ಯಾಗಂಧವು ತಿಲಮಾತ್ರವಿಲ್ಲದ ಜನಾಂಗದಲ್ಲಿ ವಿದ್ಯೆಯು ಬೇರೂರಬೇಕಾದರೆ ಧನದ ಸಹಾಯ ಬೇಕಾಗುವದು. "ನಿರೊಳಗೆ ಹೋಗದೆ ಈಸಲಕ್ಕೆ ಬಾರದು. ಈಸಲಿಕ್ಕೆ ಬಾರದೆ ನೀರೊಳಗೆ ಹೋಗುವದಾಗದು" ಎಂಬ ಮಾತಿನಂತೆ ಧನವಿಲ್ಲದೆ ವಿದ್ಯೆಬಾರದು. ವಿದ್ಯೆಯಿಲ್ಲದೆ ಧನ ಕೂಡದು. ಧನವನ್ನು ಕೂಡಿಸುವದು ದೊಡ್ಡ ಕೆಲಸವು. ಇದು ಒಬ್ಬಿಬ್ಬರಿಂದಾಗತಕ್ಕ ಕೆಲಸವಲ್ಲ. ಗೊತ್ತಿಲ್ಲದ ಹಾದಿಯನ್ನು ಕತ್ತಲಲ್ಲಿ ಹುಡುಕಿ ತೆಗೆಯುವದು ಕಠಿಣವಾದಂತೆ, ಸಾರ್ವಜನಿಕ ಹಿತದ ಸಲುವಾಗಿ ಧನವನ್ನು ಕೂಡಿಸುವದು ಬಲು ಬಿಗಿಯಾದ ಕೆಲಸವು. ಧೈರ್ಯಶಾಲಿಯಾದವನೊಬ್ಬನು ದಾರಿಯಂನು ಕಂಡುಹಿಡಿದು ಮುಂದೆ ನಡೆದರೆ ಎಲ್ಲರೂ ಅವನನ್ನು ಅನುಸರಿಸಿ ಸುಲಭವಾಗಿ ಹೋಗುವಂತೆ, ಎಲ್ಲರೂ ಮುಖ್ಯಮನುಷ್ಯನಿಗೆ ಸಹಾಯವಾದರೆ ಸುಲಭವಾಗಿ ಕಾರ್ಯಸಿದ್ಧಿಯಾಗುವದು. "ಸರ್ವಾರಂಭಾಸ್ತಂಡುಲಾಃ" ಎಂಬಂತೆ ಎಲ್ಲಕ್ಕೂ ಮೊದಲು ವಿದ್ಯಾಭಿವೃದ್ಧಿಗೆ ಧನವೇಬೇಕು. ಹಣವಿದ್ದರೆ ಬೇಕಾದದ್ದನ್ನು ಮಾಡಿಕೊಳ್ಳಬಹುದು. ಹಣವಿಲ್ಲದೆ ಏನೂ ಸಾಗದು. ಅಸಾಧ್ಯವಾದ ಕೆಲಸವು ಧನ ವಿಶೇಷತೆಯಿಂದ ಸಾಧ್ಯವಾಗುತ್ತದೆ. ದುಡ್ಡಿಲ್ಲದವನೇ ದಡ್ಡನು. ಸಂಜೀವಿನಿಯಂತೆ ಹಣವು ಸರ್ವಕಾರ್ಯಕ್ಕೂ ಮೇಲಾದ ಔಷಧಿಯಾಗಿರುವದು.

ವಿದ್ಯೆಯೇ ಮಾನಕ್ಕೆ ಮುಖ್ಯಕಾರಣವು. ವಿದ್ಯೆಯಿಲ್ಲದ ಮನುಷ್ಯನು ಮುತ್ತಲಹೂವಿನಂತೆ ನಿರ್ಗಂಧವಾಗಿರುತ್ತಾನೆ. ನಿರ್ಗಂಧಕುಸುಮವನ್ನು ಯಾರಾದರು ಮೂಸುವರೋ? ಕೋಗಿಲೆಯು ಕಪ್ಪಾಗಿದ್ದರೂ ಅದರ ಕಲಕಂಠದಿಂದ ಅದನ್ನು ಎಲ್ಲರೂ ಪ್ರೀತಿಸುತ್ತಾರೆ. ಅದರಂತೆ ಜನರು ಮಾನವಂತನನ್ನೇ (ವಿದ್ಯಾವಂತನನ್ನೇ) ಮುಂದೆ ಕರೆಯುವರು. ವಿದ್ಯಾವಿರಹಿತವಾದ ರಾಷ್ಟ್ರವು ನಿರ್ಜೀವವಾಗಿರುವದು. ನಾಲ್ವತ್ತು ಐವತ್ತು ವರ್ಷಗಳಲ್ಲಿಯೇ ಜಪಾನವು ಬೆಳಕಿಗೆ ಬಂದು, ಮಹೋನ್ನತಿಯನ್ನು ಹೊಂದಿ ಜಗದ್ವಂದ್ಯವಾದದ್ದು ವಿದ್ಯೆಯ ಮಹಿಮೆಯಿಂದಲೇ ಅಲ್ಲವೇ? ಹೀಗೇ ಬಿಟ್ಟರೆ ನಮ್ಮ ಜನರು ಎಂದೂ ಮೇಲೆ ಬರುವದಿಲ್ಲ. ವಿದ್ಯಾವಿಹೀನರಾದ ಇವರಿಗೆ ಎಂದೂ ನೀರೇರುವದಿಲ್ಲ, ಇದಕ್ಕೇನಾದರೊಂದು ಯೋಗ್ಯಮಾರ್ಗವನ್ನು ಹುಡುಕಿ ತೆಗೆಯಬೇಕೆಂದಾಲೋಚಿಸಿದರು. ಅಜ್ಞಾನಾಂಧಕಾರದಲ್ಲಿದ್ದ ವೀರಶೈವ ಜನಾಂಗವನ್ನೂ, ಅದರ ಅಸಹ್ಯ ಬವಣೆಯನ್ನೂ ಕಣ್ಣಾರೆ ಕಂಡು, ಅದನ್ನು ಜ್ಞಾನಪ್ರಭೆಯಲ್ಲಿ ತಾರದಿದ್ದರೆ ನಾವು ಹುಟ್ಟಿದ್ದಕ್ಕೆ ಸಾರ್ಥಕವೇನು? ಸರಿಯವಳು ಸರಿಗೆಯಿಟ್ಟರೆ ನೆರೆಮನೆಯವಳು ಉರುಲುಹಾಕಿಕೊಳ್ಳದೆ, ಅಂತಹ ಸರಿಗೆಯನ್ನೇ ಸಂಪಾದಿಸಲಿಕ್ಕೆ ಪ್ರಯತ್ನಿಸುವದೇ ಪ್ರಶಸ್ತವು. ಈ ವಿದ್ಯಾಭಿವೃದ್ಧಿಯ ಕೆಲಸಕ್ಕೆ ಎಲ್ಲಕ್ಕೂ ಮೊದಲು ಧನರಾಶಿಯನ್ನು ಕೂಡಿಸಲಿಕ್ಕೆಬೇಕು. ಸುಶಿಕ್ಷಿತರೂ ಪ್ರೌಢರೂ ಆದ ಕೆಲ ಜನರಿದಕ್ಕೆ ನಡಗಟ್ಟಿನಿಂತಾಗ ಕಾರ್ಯವು ಕೈಗೂಡುವದೆಂದು ಪರ್ಯಾಲೋಚಿಸಿ, ಸ್ವಮತವಿದ್ಯಾಭಿವೃದ್ಧಿಯ ಕೆಲಸಕ್ಕೆ ಕಂಕಣಬದ್ಧರಾದರು.

ಚಿತ್ರಕಲ್ ದುರ್ಗದ ಮಹಾಲಿಂಗಸ್ವಾಮಿಗಳವರ ವೈಭವವೂ ಅವರ ಬೋರ್ಡಿಂಗ ಸ್ಕೂಲವೂ

ವೀರಶೈವ ವಿದ್ಯಾಭಿವೃದ್ಧಿಯ ಇದೇ ವಿಚಾರವು ಹಿಂದಕ್ಕೆ ಧಾರವಾಡದಲ್ಲಿ ಡಿಪೂಟಿ ಇನಸ್ಪೆಕ್ಟರರಾಗಿದ್ದ ರಾ||ಸಾ|| ಚೆನ್ನಬಸವಪ್ಪ ಬಸವಲಿಂಗಪ್ಪ ಧಾರವಾಡ ಇವರ ಮನಸಿನಲ್ಲಿ ಬಂದು, ಇವರ ಹಾಗೂ ಮುಂಬಯಿ ಹೈಕೋರ್ಟಿನ ಟ್ರಾನ್ಸಲೇಟರರಾಗಿದ್ದ ವೀರಭದ್ರಯ್ಯ ಮಡಿವಾಳಯ್ಯ ಪಂಡಿತ ಇವರ ಸಾಹಸದಿಂದ ಶ್ರೀ ಚಿತ್ರಕಲ್‌ದುರ್ಗದ ಬೃಹನ್ಮಠದ ಮಹಾಲಿಂಗಸ್ವಾಮಿಗಳವರು ಬೆಳಗಾವಿಯಲ್ಲಿ ಕೇಳಕರ ಬಾಗದಲ್ಲಿ ಬೋರ್ಡಿಂಗ ಸ್ಕೂಲವನ್ನಿಟ್ಟಿದ್ದರು. ವಿದ್ಯಾರ್ಥಿಗಳಿಗೆ ಅಶನ ವಸನಾದಿಗಳನ್ನು ಸ್ವಾಮಿಗಳೇ ಕೊಡುತ್ತಿದ್ದರು. ಆ ಸ್ಕೂಲಿಗೆ 'ದುರ್ಗದ ಸ್ವಾಮಿಗಳ ಶಾಲೆ'ಯೆಂದೆನ್ನುತ್ತಿದ್ದರು. ಈ ಸ್ವಾಮಿಗಳ ವೈಭವವೂ, ಉದಾರತ್ವವೂ ಅನುಪಮೇಯವಾಗಿತ್ತು. ಈ ಸ್ವಾಮಿಗಳ ದರ್ಶನವು ರಾ||ಸಾ|| ರುದ್ರಗೌಡರಿಗೆ ಚಿಕ್ಕಂದಿನಲ್ಲಿಯೇ ಆಗಿತ್ತು. ಹಿಂದೆ ಹೇಳಿದಂತೆ ರುದ್ರಗೌಡರು ಧಾರವಾಡದಲ್ಲಿ ಸಾಲೆ ಕಲಿಯುತ್ತಿದ್ದಾಗ ಒಮ್ಮೆ ಅರಟಾಳಕ್ಕೆ ಬಂದಿರಲು, ಶ್ರೀ ಮಹಾಲಿಂಗಸ್ವಾಮಿಗಳು ರಾಜವೈಭವದಿಂದ ಶ್ರೀ ಉಳವಿಯ ಕ್ಷೇತ್ರಕ್ಕೆ ಹೊರಟಿರಲು, ಧುಂಡಸಿಯಲ್ಲಿ ಸ್ವಾಮಿಗಳವರ ದಿವ್ಯದರ್ಶನಲಾಭವನ್ನು ಹೊಂದಿ ಸಂತುಷ್ಟರಾಗಿ ಮಾಘಮಾಸದಲ್ಲಿ ಮಹಾಸ್ವಾಮಿಗಳವರೊಡನೆ ತಾವೂ ಉಳಿವಿಗೆ ಹೋಗಿದ್ದರು (ಸನ್ ೧೮೬೮ ನೇ ಫೆಬ್ರುವರಿ). ಈ ಸ್ವಾಮಿಗಳ ಅದ್ವಿತೀಯವಾದ ವೈಭವವನ್ನು ಯಥಾಸ್ಥಿತವಾಗಿ ಇಲ್ಲಿ ವಿವರಿಸಿದರೆ ವಾಚಕವೃಂದಕ್ಕೆ ಅಪ್ರಾಸಂಗಿಕವೂ, ಅಪ್ರಶಸ್ತವೂ ಆಗಲಿಕ್ಕಿಲ್ಲೆಂದು ತಿಳಿದು ಅದನ್ನು ಸ್ವಲ್ಪಮಟ್ಟಿಗೆ ಕೊಡುತ್ತೇವೆ.

ಸ್ವಾಮಿಗಳವರ ಸಂಗಡ ಪರಿವಾರವು ಪ್ರಚಂಡವಾಗಿತ್ತು. ಮಹಾಮಹಾಯೋಗಿಗಳೂ, ಸಂಸ್ಥಾನಿಕರೂ, ದೇಸಾಯರೂ, ಸಾವಕಾರರೂ, ಸೇವಕರೂ ನಿಬಿಡವಾಗಿ ಹಿಂಬಾಲಿಸಿದ್ದರು. ಸ್ವಾಮಿಗಳವರ ಪ್ರಯಾಣವು ಒಳ್ಳೇ ಶೋಭೆಯುಳ್ಳದ್ದಾಗಿತ್ತು. ಅವರು ಚೀನಾಂಬರದಿಂದ ಆಚ್ಛಾದಿತವಾದ ಬಹು ಸುಂದರವಾದ ಬೆಳ್ಳಿಯ ಮೇಣೆಯಲ್ಲಿ ಗಮಿಸುತ್ತಿದ್ದರು. ಪರಿವಾರ ಜನರ ಅಲಂಕಾರಕ್ಕೆ ಅಳತೆ ಇದ್ದಿಲ್ಲ. ಮಹತ್ತರವಾದ ಗಜಾಶ್ವಗಳು ವಸ್ತ್ರಾಭರಣಗಳಿಂದಲಂಕೃತವಾಗಿದ್ದವು. ಸಿಂಗರವಾದ ಆನೆಗಳ ಮೇಲೆ ಥಳಥಳಿಸುವ ಬೆಳ್ಳಿಯ ಅಂಬಾರಿಗಳಲ್ಲಿ ವಿಶ್ರಮಿಸಿದ ಪುರುಷರು ಮಣಿಕನಕಾದ್ಯಲಂಕಾರಗಳಿಂದ ಮುಚ್ಚಿಹೋಗಿದ್ದರು. ಸ್ವಾಮಿಗಳವರ ಮೇಣೆಯ ಮೇಲೆ ಛತ್ರಚಾಮರಾಪ್ತಾಗಿರಿಗಳೂ, ಬಿರುದಾವಳಿಗಳೂ ಸಾಂದ್ರವಾಗಿದ್ದವು. ಇಬ್ಬದಿಯಲ್ಲಿ ಸಮವಯಸ್ಕರೂ, ಸುಂದರ ಸುಕುಮಾರರೂ ಆದ ಸುವರ್ಣವೇತ್ರಧಾರಿಗಳು ಸರ್ವತೋಪರಿಯಿಂದ ಚಂದಗಾಣುತ್ತಿದ್ದರು. ಮುಂದೆ ಮುಂದೆ ಮಂಗಳವಾದ್ಯಗಳು ಕಿವಿಗಳನ್ನು ಗಡಚಿಕ್ಕಿಸುತ್ತಿದ್ದವು. ಭಟ್ಟಂಗಿಗಳ ಸ್ತುತಿಘೋಷವು ಉಚ್ಚಸ್ವರಗಳಿಂದ ಉಚ್ಚರಿಸಲ್ಪಡುತ್ತಿತ್ತು. ಹೇಳಿದೊಡನೆ ಕೆಲಸಕ್ಕೆ ತತ್ಪರರಾಗುವ ಸ್ವಾಮಿನಿಷ್ಠೆಯುಳ್ಳ ಸದ್ಭಕ್ತರು ಸುತ್ತಲೇ ಇರುತ್ತಿದ್ದರು. ಸಂಗಡ ಭಕ್ತಜನ ಜಂಗುಳಿಯು ಕಿಷ್ಕಿಂಧವಾಗಿತ್ತು. ಇಂಥ ಅಷ್ಟೈಶ್ವರ್ಯದಿಂದಲೂ, ರಾಜವೈಭವದಿಂದಲೂ ಶ್ರೀ ಮಹಾಲಿಂಗಸ್ವಾಮಿಗಳು ಉಳಿವಿಗೆ ಬಿಜಯಂಗೈದರು. ಉಳವಿಗೆ ಹೋಗಿ ಅಲ್ಲಿ ೨೦೦೦ ರೂಪಾಯಿ ವೆಚ್ಚಮಾಡಿ ಒಂದು ಭವ್ಯವೂ, ಮನೋಹರವೂ ಆದ ಸಭಾಮಂಟಪವನ್ನು ರಚಿಸಿದರು. ಕಲಾಕುಶಲರಾದ ಶಿಲ್ಪಿಗರಿಂದ ಭವ್ಯವೂ ರಮ್ಯವೂ ಆಗಿ ರಚಿಸಲ್ಪಟ್ಟ ಈ ದುರ್ಗದ ಸ್ವಾಮಿಗಳವರ ಸಭಾಮಂಟಪವು, ದೇವೇಂದ್ರನ ಸಭೆಯಂತೆ ದಂಗುಪಡಿಸುತ್ತಿತ್ತು. ಸ್ವಾಮಿಗಳವರ ಎಡಬಲದಲ್ಲಿ ವಿರಾಜಮಾನವಾಗಿರುವ ಎರಡೂ ಹುಡುಗರು ಒಂದೇ ವಯಸ್ಸಿನವರು, ಒಂದೇ ರೂಪದವರು, ಒಂದೇ ಆಕಾರದವರು, ಒಂದೇ ತರದ ಪೋಷಾಕಿನವರು

ಇದ್ದು, ಚಿತ್ರದಲ್ಲಿ ಬರೆದ ಪ್ರತಿಮೆಗಳಂತೆ ಬಹು ಸುಂದರರೂ ಸಲ್ಲಕ್ಷಣರೂ ಆಗಿದ್ದರು. ಇವೆರಡೂ ಹುಡುಗರು ವಸ್ತ್ರಾಭರಣಗಳಿಂದಲಂಕೃತರಾಗಿ ಸ್ವಾಮಿಗಳ ಇಕ್ಕೆಲದಲ್ಲಿ ದ್ವಾರಪಾಲಕರಂತೆ ನಿಂತರೆ ಬಹುಜನರು ಈ ಹುಡುಗರನ್ನೇ ನೋಡುತ್ತಿದ್ದರಂತೆ. ಸಾರಾಂಶ, ಇವರ ವೈಭವವೂ, ಠೀವಿಯೂ ಅದ್ವಿತೀಯವಾಗಿದ್ದವು.

ಸ್ವಾಮಿಗಳವರು ಉಳವಿಯಲ್ಲಿ ಮಹಾಸಮಾರಾಧನೆಯನ್ನು ಮಾಡಿ, ಲಕ್ಷಾವಧಿ ಗಣಂಗಳನ್ನು ಭೋಜನ, ವಸ್ತ್ರಾಭರಣ, ದಕ್ಷಿಣೆ, ತಾಂಬೂಲಗಳಿಂದ ಸಂತೃಪ್ತಿಪಡಿಸಿ, ಅಜಮಾಸು ಒಂದು ಲಕ್ಷ ರೂಪಾಯಿ ವೆಚ್ಚಮಾಡಿದರು. ಸ್ವಾಮಿಗಳು ಕೂಡಿಸಿಕೊಂಡು ಬಂದ ಸಾಮಾನುಗಳ ವರ್ಣನೆಮಾಡುವದು ಅಸಾಧ್ಯವಾಗಿತ್ತು. ೧೨೦೦ ಉಪ್ಪಿನಕಾಯಿಯ ಕೊಡಗಳೂ, ಸುಮಾರು ೧೦,೦೦೦ (ಹತ್ತುಸಾವಿರ) ಘೃತಕುಂಭಗಳೂ ಮಹಾಪ್ರಸ್ಥಕ್ಕೆ ಕೂಡಿಸಲ್ಪಟ್ಟಿದ್ದವು. ಇದರ ಮೇಲಿಂದ ಉಳಿದ ಸಾಮಾನು ಎಷ್ಟೆಷ್ಟಿರಬಹುದೆಂಬದರ ಕಲ್ಪನೆಯನ್ನು ವಾಚಕರೇ ಮಾಡತಕ್ಕದ್ದು. ದಾನಾರ್ಥವಾಗಿ ತಂದಿದ್ದ ಅಗಣಿತ ದೋತರ ಸೀರೆಗಳನ್ನೂ, ಬೆಳ್ಳಿಯ ಚೌಕಗಳನ್ನೂ, ಗುಂಡಗಡಿಗೆಗಳನ್ನೂ, ಇವಲ್ಲದೆ ಬೇರೆ ಎಷ್ಟೋ ಒಡವೆ ವಸ್ತುಗಳನ್ನೂ ಬೇಡಿದ ಜಂಗಮರಿಗೆ ಭಿನ್ನಭಾವವಿಲ್ಲದೆ ಹಂಚಿಬಿಟ್ಟರು.

ಈ ಅಪೂರ್ವ ಸಮಾರಂಭವನ್ನು ನೋಡಿ, ನೇತ್ರಾನಂದವನ್ನಾಂತು ರುದ್ರಗೌಡರು ಧನ್ಯರಾದರು. ಮಹಾಸ್ವಾಮಿಗಳು ರುದ್ರಗೌಡರ ಚುರುಕುತನವನ್ನು, ಸುಶೀಲತೆಯನ್ನೂ ಕಂಡು, ನೀವು ನಮ್ಮ ಅಪ್ಪಣೆಯಾಗದ ಹೊರತು ಗಮಿಸಕೂಡದೆಂದು ಹೇಳಿದದರಿಂದ, ಅವರನುಮತಿಯಂತೆ ಎರಡು ಮೂರು ತಿಂಗಳು ಸ್ವಾಮಿಗಳ ಚರಣಸನ್ನಿಧಾನದೊಳಿದ್ದು ಚೈತ್ರಮಾಸದಲ್ಲಿ ಅರಟಾಳಕ್ಕೆ ಬಂದರು. ಕಣ್ಣಾರೆ ಕಂಡ ಈ ಮಹಾವೈಭವವನ್ನು ರುದ್ರಗೌಡರು ಆಗಾಗ್ಗೆ ಪ್ರೇಮದಿಂದ ಹೇಳುತ್ತಿದ್ದರು. ಮತ್ತು ಸ್ವಾಮಿಗಳ ಸಾಮಾನುಗಳ ಸನ್ನಾಹವನ್ನೂ, ಸಂಚಾರದ ಸೊಬಗನ್ನೂ, ಸಭಾಮಂಟಪದ ಸೌಂದರ್ಯವನ್ನೂ, ನೋಡಿದ ಜನರು ಅವರ ಮಹಿಮೆಯನ್ನು ಬಹಳೇ ಬಣ್ಣಿಸುತ್ತಾರೆ. ಈ ಮಹಾಲಿಂಗಸ್ವಾಮಿಗಳು ಸಂಚಾರದಲ್ಲಿಯೇ ಲಿಂಗೈಕ್ಯರಾಗಲು, ಅವರ ದೇಹವನ್ನು ಸಂಸ್ಥಾನ ಶಿರಸಂಗಿಯಲ್ಲಿ ಮಹೋತ್ಸವದಿಂದ ಸಮಾಧಿಗೊಳಿಸಿ, ಸಮಾಧಿಯ ಮೇಲೆ ತೋರಗದ್ದಿಗೆಯನ್ನು ಕಟ್ಟಿದ್ದಾರೆ.

ರಾ.ಸಾ||ಡಿಪೂಟಿ ಚೆನ್ನಬಸಪ್ಪನವರೂ ಪಂಡಿತ ವೀರಭದ್ರಯ್ಯನವರೂ

ಈ ಮಹಾಲಿಂಗಸ್ವಾಮಿಗಳು ಲಿಂಗೈಕ್ಯರಾಗಲು ಕೆಲವು ದಿವಸಗಳ ನಂತರ ಆ ಬೋರ್ಡಿಂಗಸ್ಕೂಲು ಬಂದಾಯಿತು. ರಾ.ಸಾ||ಡಿಪೂಟಿ ಚೆನ್ನಬಸಪ್ಪನವರು ನಮ್ಮ ವೀರಶೈವರು ವಿದ್ಯಾವಂತರಾಗಲೆಂದು ತಾವು ಸಾಲೆಯ ಪರೀಕ್ಷಾರ್ಥವಾಗಿ ಹೋದಹೋದಲ್ಲಿ ಜನರಿಗೆ ಉಪದೇಶ ಮಾಡುತ್ತಿದ್ದರು. ಇವರ ಸದುಪದೇಶವೇ ಮುಂದೆ ರಾ.ಬ||ಗುರುಸಿದ್ದಪ್ಪನವರೂ, ರುದ್ರಗೌಡರೂ ನಿರ್ಮಿಸುವ ವೀರಶೈವ ವಿದ್ಯಾಮಂದಿರದ ತಳಗಲ್ಲಾಯಿತೆಂದು ಹೇಳಬಹುದು. ರಾ.ಸಾ||ಡಿಪೂಟಿ ಚೆನ್ನಬಸವಪ್ಪನವರು ಮತಾಭಿಮಾನಿಗಳೂ, ವಿದ್ಯಾಭಿರುಚಿಯುಳ್ಳವರೂ, ಜಾಣರೂ, ರಸಿಕರೂ, ಕುಶಲರೂ ಇದ್ದರು. ಇವರು ಕುಶಲಪ್ರಶ್ನೆಗಳಿಂದ ಸಾಲೆಗಳ ಪರೀಕ್ಷೆಯನ್ನು ಬಹುಸೊಗಸಾಗಿ ತೆಗೆದುಕೊಳ್ಳುತ್ತಿದ್ದರೆಂತಲೂ, ಎಲ್ಲ ವಿಷಯಗಳ ಜ್ಞಾನವು ಇವರಲ್ಲಿ ಪರಿಪೂರ್ಣವಾಗಿತ್ತೆಂತಲೂ, ಜನಹಿತಕಾರಕರಾಗಿದ್ದರೆಂತಲೂ, ವಿಚಾರದೃಷ್ಟಿಯುಳ್ಳವರೆಂತಲೂ, ಇಂತಹ ಡೆಪೂಟಿ ಇನಸ್ಪೆಕ್ಟರರು ಅಪರೂಪವಾಗಿರುವರೆಂತಲೂ ಇವರ ಕಾಲಕ್ಕಿದ್ದ ಮಾಸ್ತರ ಜನರೆಲ್ಲರು ಇವರನ್ನು ಬಹಳೇ ಕೊಂಡಾಡುತ್ತಾರೆ. ಇವರ ಮತಿಯು ಗಣಿತವಿದ್ಯೆಯಲ್ಲಿ ಒಳ್ಳೇ ತೀವ್ರವಾದ ಗತಿಯುಳ್ಳದ್ದಾಗಿತ್ತು. ಇದರಾಚೆಗೆ ಕನ್ನಡದಲ್ಲಿ

ಗಣಿತಪುಸ್ತಕಗಳನ್ನು ಯಾರೂ ಮಾಡಿದ್ದಿಲ್ಲ. ಆದರಿಂದ ಮುಂಬಯಿ ಕರ್ನಾಟಕದ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಬಹಳೇ ತೊಂದರೆಯಾಗುತ್ತಿತ್ತು. ಈ ತೊಂದರೆಯನ್ನು ಪರಿಹರಿಸುವದಕ್ಕೋಸ್ಕರ ಕನ್ನಡದಲ್ಲಿ ಎರಡು ಅಂಕಗಣಿತ ಪುಸ್ತಕಗಳನ್ನು ಬರೆದರು. ಇವೆರಡು ಪುಸ್ತಕಗಳು ಸರಕಾರದಿಂದ ಮಾನ್ಯಮಾಡಲ್ಪಟ್ಟು, ಗವ್ಹರ್ನಮೆಂಟಾಗಿ ಎಲ್ಲ ಸಾಲೆಗಳಲ್ಲಿ ಈಗ್ಯೂ ಕಲಿಸಲ್ಪಡುತ್ತವೆ. ಚನ್ನಬಸಪ್ಪನವರ ಗಣಿತ ಪುಸ್ತಕಗಳೆಂದು ಎಲ್ಲ ಕಡೆಗೂ ಪ್ರಸಿದ್ಧಿಯುಂಟು. ಈ ಅಂಕಗಣಿತ ಪುಸ್ತಕಗಳನ್ನಲ್ಲದೆ ಇವರು ಬೀಜಗಣಿತ, ನಗದವರನ್ನು ನಗಿಸುವ ಕಥೆ, ಮುಂತಾದ ಬೇರೆ ಎರಡು ಮೂರು ಪುಸ್ತಕಗಳನ್ನು ಬರೆದಿರುವರು. ಇವರು ಧಾರವಾಡದಲ್ಲಿ ತಮ್ಮ ಮನೆಯಲ್ಲಿಯೇ ಕ್ರಿಸ್ತಿಶಕದ ೧೮೮೧ನೇ ಇಸವಿಯ ಜಾನೇವಾರಿ ತಿಂಗಳಲ್ಲಿ ಮೃತವಾದರು. ಇವರ ಮರಣದಿಂದ ವೀರಶೈವ ಜನಾಂಗಕ್ಕೆಲ್ಲ ಮಹಾದುಃಖವಾಯಿತು.[೧]

ಪಂಡಿತ ವೀರಭದ್ರಯ್ಯನವರ ಮನೆತನದವರೆಲ್ಲ ನಿಶ್ಚಯವಾಗಿ ಪಂಡಿತರೇ ಇದ್ದರು. ಇವರ ಕನ್ನಡ ವಿಷಯವು ನೆಟ್ಟಗಿತ್ತು. ಈ ವೀರಭದ್ರಯ್ಯನವರು ಮುಂಬಯಿ ಹೈಕೋರ್ಟಿನಲ್ಲಿ ಟ್ರಾನ್ಸಲೇಟರರಿದ್ದಾಗ ಶಾಲಾ ಖಾತೆಯ ಗವ್ಹರ್ನಮೆಂಟಾದ ೧ನೇ ಮತ್ತು ೨ನೇ ಪುಸ್ತಕಗಳನ್ನು ರಚಿಸಿದ್ದರು. ಇವರು ಅಲ್ಲಿಂದ ವರ್ಗವಾಗಿ ಸನ್ ೧೮೬೭ನೆಯ ಜುಲೈ ತಿಂಗಳಲ್ಲಿ ಎರಡುನೂರು ರೂಪಾಯಿ ಪಗಾರದ ಮೇಲೆ ಚಿಕ್ಕೋಡಿಗೆ ಮುನಿಸೀಫರಾಗಿ ಬಂದರು. ಮುಂದೆ ಚಿಕ್ಕೋಡಿಯಿಂದ ವರ್ಗವಾಗಿ, ಕಾರವಾರ ಜಿಲ್ಲೆಯ ಸಿರಸೀ ತಾಲೂಕಿಗೆ ಅಯ್ನೂರು (೫೦೦) ರೂಪಾಯಿ ಪಗಾರದ ಮೇಲೆ ಪ್ರಿನ್ಸಿಪಾಲ ಸದರ ಅಮೀನರ (ಪರ್ಷ್ಟಕ್ಲಾಸ ಸಬ್‌ಜಜ್ಜ)ರಾದರು (ಸನ್ ೧೮೭೯ ಜಾನೇವಾರಿ). ಇವರು ಸನ್ ೧೮೭೧ನೇ ಜಾನೇವರಿ ತಿಂಗಳಲ್ಲಿ ಉತ್ತರ ಕಾನಡಾ ಜಿಲ್ಲೆಯ ಸಿರಸಿಯಲ್ಲಿಯೇ ತೀರಿದರು. ಇವರಾದರೂ ಒಳ್ಳೇ ಮತಾಭಿಮಾನಿಗಳಿದ್ದು, ಇವರೂ ಚೆನ್ನಬಸಪ್ಪನವರೂ ಲಿಂಗಾಯತ ಮತದ ವಿದ್ಯಾಭಿವೃದ್ಧಿಗಾಗಿ ಬಹಳೇ ಸಹಾಯಮಾಡಿದರು. ಈ ವೀರಭದ್ರಯ್ಯನವರ ತಮ್ಮಂದಿರಾದ ಶಿವರುದ್ರಯ್ಯನವರು ಸನ್ ೧೮೯೧-೯೨ ಇಸವಿಯಲ್ಲಿ ಧಾರವಾಡ ತಾಲೂಕಿನ ಅವ್ವಲ ಕಾರಕೂನರಾಗಿದ್ದರು.

ಗಂಗಾಧರ ಮಡಿವಾಳೇಶ್ವರ ತುರಮರಿ ಮತ್ತು ಶಾಂತವೀರ ರಾಚಿದೇವ ಕಿತ್ತೂರ

ಇದೇ ಸಮಯದಲ್ಲಿ ಇನ್ನಿಬ್ಬರು ವೀರಶೈವ ಕನ್ನಡ ಪಂಡಿತರು ತಮ್ಮ ವಿದ್ಯಾಪ್ರೌಢಿಮೆಯಿಂದಲೂ, ಪಾಂಡಿತ್ಯಪ್ರಭಾವದಿಂದಲೂ ಬೆಳಕಿಗೆ ಬಂದಿದ್ದರು. ಅವರಿಬ್ಬರ ಹೆಸರನ್ನರಿಯದ ಯಾವ ಕರ್ನಾಟಕ ಭಾಷಾಭಿಜ್ಞನೂ ಇಲ್ಲವೆಂದು ಹೇಳಬಹುದು. ಇವರಾರೆಂದರೆ-ಗಂಗಾಧರ ಮಡಿವಾಳೇಶ್ವರ ತುರಮರಿ ಮತ್ತು ಶಾಂತವೀರ ರಾಚಿದೇವ ಕಿತ್ತೂರ. ಈ ಉಭಯ ಮತಾಭಿಮಾನಿಗಳಿಂದ ವೀರಶೈವ ಜನಾಂಗಕ್ಕೂ, ಇವರ ಕನ್ನಡ ಭಾಷಾಪಾಂಡಿತ್ಯದಿಂದ ಇಡೀ ಕರ್ನಾಟಕಸ್ಥರಿಗೂ ಅಲಭ್ಯಲಾಭವಾಗಿರುತ್ತದೆ. ಗಂಗಾಧರ ಶಾಸ್ತ್ರಿಗಳ

---

೧. ಬೆಳಗಾವಿಯಲ್ಲಿ ಇದ್ದ ದುರ್ಗದ ಸ್ವಾಮಿ ಬೋರ್ಡಿಂಗಿಗೆ ಮಹಾಲಿಂಗಸ್ವಾಮಿಗಳು ಹಣವನ್ನು ಕೊಡದಿದ್ದುದರಿಂದ ರಾ.ಸಾ.ಡೆ|ಚೆನ್ನಬಸಪ್ಪನವರು ಸ್ವತಃ ತಾವೇ ಅಂಗಡಿಯಲ್ಲಿ ಉದ್ದರಿಮಾಡಿ ಬೋರ್ಡಿಂಗ ನಡೆಸಿದರು. ಸ್ವಾಮಿಗಳು ಕೈಲಾಸವಾಸಿಯಾದರು. ಮುಂದೆ ಅಂಗಡಿಕಾರರು ರಾ|| ಚೆನ್ನಬಸಪ್ಪನವರ ಮೇಲೆ ದಾವೆಮಾಡಿದರು. ಅವರ ಮೇಲೆ ತುರಂಗ ವಾರಂಟ ಮಾಡಿದರು. ಅವರ ಹಿರೇಹೆಂಡತಿಯು ತನ್ನ ಮೈಮೇಲಿನ ದಾಗೀನಗಳನ್ನು ಕೊಟ್ಟಿದ್ದಳು. ಆದರೆ ಚಿಕ್ಕ ಹೆಂಡತಿಯು ದಾಗೀನಗಳನ್ನು ಕೊಟ್ಟದ್ದಿಲ್ಲ. ಆಮೇಲೆ ನನ್ನನ್ನು ಕರೆಯಲಿಕ್ಕೆ ಬಂದರು. ನಾನು ಮತ್ತು ಮೆ|| ಫಕ್ಕೀರಪ್ಪ ಹೇಳಿ ಕೊಡಿಸಿದೆವು. ನಂತರ ಅವುಗಳನ್ನೆಲ್ಲ ಮಾರಿ ಸಾಲ ತೀರಿಸಿದರು.

ಜನನಸ್ಥಾನವು ಸಂಪಗಾವ ತಾಲೂಕ ಬೈಲಹೊಂಗಲವೂ, ಶಾಂತವೀರಶಾಸ್ತ್ರಿಗಳ ಜನ್ಮಸ್ಥಾನವು ಕಿತ್ತೂರ[೨] ಸಂಸ್ಥಾನವೂ ಆಗಿದ್ದವು. ಗಂಗಾಧರಶಾಸ್ತ್ರಿಗಳು ಮೊದಲು ಒಬ್ಬ ಲಿಂಗಾಯತ ಪಂಚಮಸಾಲಿ ಸನದಿಯ ಮಕ್ಕಳು. ಇವರನ್ನು ಚಿಕ್ಕಂದಿನಲ್ಲಿಯೇ ಮಠಕ್ಕೆ ಕೊಟ್ಟಿತ್ತು. ಇವರಿಬ್ಬರು ಕನ್ನಡ ಮತ್ತು ಸಂಸ್ಕೃತ ಉಭಯ ವಿದ್ಯಾವಿಶಾರದರಾಗಿದ್ದರು. ಗಂಗಾಧರಶಾಸ್ತ್ರಿಗಳು ಆರಂಭಕ್ಕೆ ಬೆಳಗಾವ ಹಾಯಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ, ಅನಂತರ ಬೆಳಗಾವಿಯಲ್ಲಿಯೇ ಅಸಿಸ್ಟಂಟ ಟ್ರಾನ್ಸಲೇಟರಾಗಿದ್ದರು. ಮುಂದೆ ಬೆಳಗಾವಿಯಿಂದ ಟ್ರಾನ್ಸಲೇಟರ ಆಫೀಸು ಧಾರವಾಡಕ್ಕೆ ಹೋದದರಿಂದ ಧಾರವಾಡದಲ್ಲಿಯೂ ಇವರು ಕೆಲವು ದಿವಸ ಟ್ರಾನ್ಸಲೇಟರರಾಗಿದ್ದರು. ಶಾಂತವೀರಶಾಸ್ತ್ರಿಗಳು ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕನ್ನಡ ಅಧ್ಯಾಪಕರ ಸ್ಥಳದಲ್ಲಿ ಅಲಂಕೃತರಾಗಿದ್ದರು. ಉಭಯ ಭಾಷಾಭಿಜ್ಞರಾದ ಇವರಿಬ್ಬರೂ ವಿದ್ವಾಂಸರಿದ್ದದ್ದಲ್ಲದೆ ಕವಿಗಳೂ ಆಗಿದ್ದರು. ಆಗಿನ ಕಾಲಕ್ಕೆ ಇವರು ಮಾಡಿದ ಎಷ್ಟೋ ಕವಿತೆಗಳು ವ್ಯವಹಾರದಲ್ಲಿರುತ್ತವೆ. ಇವರ ಕವಿತ್ವಗಳು ಒಳ್ಳೇ ರಸವತ್ತಾಗಿ ಇದ್ದು, ಇವರು ಸಮಸ್ಯೆಗಳನ್ನು ಪೂರ್ಣಮಾಡುವದರಲ್ಲಿ ಒಳ್ಳೇ ಕುಶಲರಾಗಿದ್ದರೆಂದು ತಿಳಿಯುತ್ತದೆ.

ಗಂಗಾಧರಶಾಸ್ತ್ರಿಗಳು ಸಂಸ್ಕೃತಭಾಷೆಯಲ್ಲಿದ್ದ ಬಾಣಕಾದಂಬರಿಯನ್ನು ಕನ್ನಡದಲ್ಲಿ ಬಹುರುಚಿಕರವಾಗಿಯೂ, ಸರಳಶೈಲಿಯುಳ್ಳದ್ದಾಗಿಯೂ ಭಾಷಾಂತರಿಸಿರುವರು. ಈ ಮನೋಹರವಾದ ಗದ್ಯಪ್ರಬಂಧವು ಕನ್ನಡ ಕಾದಂಬರಿಯೆಂಬ ಹೆಸರಿನಿಂದ ಇಡೀ ಕರ್ನಾಟಕಭೂಮಿಯಲ್ಲಿ ಪ್ರಸಿದ್ಧವಾಗಿರುತ್ತದೆ. ಮಧುರವಾದ ಅದರ ಭಾಷಾಸರಣಿಯೂ, ಹೃದಯಂಗಮವಾದ ವರ್ಣನೆಯೂ ಅದನ್ನೋದದೆ ತಿಳಿಯುವದಿಲ್ಲ. ಇಂಥ ಸವಿಕಟ್ಟಾದ ಭಾಷಾಸರಣಿಯುಳ್ಳ ಕಾದಂಬರಿಗಳು ಈವರೆಗೆ ಒಂದೂ ರಚಿಸಲ್ಪಡಲಿಲ್ಲವೆಂದು ಕನ್ನಡಿಗರು ನಿರ್ಭೇದವಾಗಿ ಹೇಳುತ್ತಾರೆ. ಇದಲ್ಲದೆ ಇವರು ಪ್ರಾಥಮಿಕ ಸಾಲೆಗಳ ವಾಚನಕ್ಕಾಗಿ ಬರೆದ ಕನ್ನಡ ೨ನೇ ೩ನೇ ಕ್ರಮಿಕ ಪುಸ್ತಕಗಳು ಗರ್ವರ್ನಮೆಂಟಾಗಿ ಮುಂಬಯಿ ಕರ್ನಾಟಕದ ಎಲ್ಲ ಭಾಗದಲ್ಲಿ ಕಲಿಸಲ್ಪಡುತ್ತವೆ. ಈ ಕಾಲಕ್ಕೆ ದಕ್ಷಿಣ ಭಾಗದ ವಿದ್ಯಾಖಾತೆಯ ಎ॥ಇನ್‌ಸ್ಪೇಕ್ಟರರಾಗಿದ್ದ ಮೆಹರಬಾನ ರಸಲ್ ಸಾಹೇಬರು ಕನ್ನಡದಲ್ಲಿ ಕಡು ಅಭಿಮಾನಿಗಳಾಗಿದ್ದರು. ಇವರು ಬಹು ಘನವಂತರೂ, ಮಹೋದಾರರೂ ಇದ್ದು ವಿದ್ವಾಂಸರಿಗೂ, ಕವಿಗಳಿಗೂ ಚೆನ್ನಾಗಿ ಆಶ್ರಯ ಕೊಡುತ್ತಿದ್ದರು. ಉಭಯ ವಿದ್ಯಾವಿಶಾರದನೂ, ಕರ್ನಾಟಕ ಕವಿಕುಲ ಲಲಾಮನೂ, ವೀರಶೈವ ವಿರಕ್ತೋತ್ತಮನೂ ಆದ ಷಡಕ್ಷರದೇವನು ಸಂಸ್ಕೃತದಲ್ಲಿ ಕವಿಕರ್ಣರಸಾಯನ, ಶಿವಾಧಿಕ್ಯ, ಭಕ್ತ್ಯಾಧಿಕ್ಯವೆಂಬ ಉದ್ಗ್ರಂಥ'ಗಳನ್ನೂ, ಕನ್ನಡದಲ್ಲಿ ಶಬರಶಂಕರವಿಳಾಸ,[೩] ರಾಜಶೇಖರ, ವೃಷಭೇಂದ್ರವಿಜಯಗಳೆಂಬ ರಸವತ್ಕಾವ್ಯಗಳನ್ನೂ ರಚಿಸಿ ಇನ್ನೂರು ವರ್ಷಗಳು ಮೀರಿ ಹೋಗಿದ್ದರೂ, ನವರಸ ಪರಿಪ್ಲುತವಾದ ರಾಜಶೇಖರವೆಂಬ ಕಾವ್ಯಕ್ಕೆ ಭಾಷ್ಯವನ್ನು ಇನ್ನೂ ವರೆಗೆ ಯಾರೂ ಬರೆಯದೆ ಇದದ್ದರಿಂದ ಮೆ॥ ರಸಲ್ ದೊರೆಗಳು ಈ ನ್ಯೂನತೆಯನ್ನು ಪೂರ್ಣಮಾಡಬೇಕೆಂದು ರಾಜಶೇಖರ ಕಾವ್ಯವನ್ನು ಯಥೋಚಿತವಾಗಿ ಟೀಕಿಸಿದವರಿಗೆ ಅದರೊಳಗಿನ ಪ್ರತಿಯೊಂದು ಆಶ್ವಾಸಕ್ಕೆ ಇನ್ನೂರು (೨೦೦) ರೂಪಾಯಿಯಂತೆ, ಹದಿನಾಲ್ಕು ಆಶ್ವಾಸಗಳಿಗೂ ಸರಕಾರದಿಂದ ಬಹುಮಾನ ಕೊಡಲ್ಪಡುತ್ತದೆಂದು ಜಾಹೀರಮಾಡಿದ ಮೇರೆಗೆ, ಆರಂಭಕ್ಕೆ ಗಂಗಾಧರ ಶಾಸ್ತ್ರಿಗಳು ೧ನೇ ೪ನೇ ಆಶ್ವಾಸಗಳಿಗೂ, ಕಿತ್ತೂರ ಶಾಂತವೀರಯ್ಯನವರು ೨ನೆಯ ಆಶ್ವಾಸಕ್ಕೂ

---

೨. ಈ ಶಾಂತವೀರಯ್ಯನವರು, ಕಿತ್ತೂರ ಸೋಮವಾರ ಪೇಟೆಯಲ್ಲಿರುವ ಹುಚ್ಚ ರಾಚಯ್ಯನವರ ಮಠದವರು.

೩. ಶಬರಶಂಕರ ವಿಳಾಸದ ಕಾವ್ಯವನ್ನು ಮದ್ರಾಸದ ಸುಬ್ರಹ್ಮಣ್ಯಶಾಸ್ತ್ರಿಗಳ ಸುತರಾದ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು ಟೀಕಿಸಿರುವರು. ರಾಜಶೇಖರ ಪ್ರಬಂಧವನ್ನು ಗಂಗಾಧರಶಾಸ್ತ್ರಿ, ಶಾಂತವೀರಶಾಸ್ತ್ರಿ ಮೊದಲಾದ ಹಲವು ಮಂದಿ ಪಂಡಿತರು ಟೀಕಿಸಿರುವರು. ವೃಷಭೇಂದ್ರ ವಿಜಯವನ್ನು ಮೈಸೂರ ಗವರ್ನಮೆಂಟ ಕಾಲೇಜಿನಲ್ಲಿ ಕನ್ನಡ ಭಾಷಾಧ್ಯಾಪಕರಾದ ವೀರಶೈವ ಮತದ ಯನ್.ಆರ್. ಕರಿಬಸವಶಾಸ್ತ್ರೀಗಳು ಟೀಕಿಸಿರುವರು.

ಟೀಕೆಯನ್ನು ಬರೆದು, ಬಹುಮಾನವನ್ನು ಪಡೆದರು. ಮುಂದೆ ಮುಂಡರಗಿಯ ಅರಳೆಲೆಯ ಮಠದ ಅನ್ನದಾನಿಶಾಸ್ತ್ರಿಗಳು ೩ನೆಯ ಆಶ್ವಾಸಕ್ಕೂ, ಶಾಂತವೀರಯ್ಯನವರ ತರುವಾಯ ಧಾರವಾಡ ಟ್ರೇನಿಂಗ ಕಾಲೇಜದ ಕನ್ನಡ ಪಂಡಿತರಾದ ಧೋಂಡೋ ನರಸಿಂಹ ಮುಳಬಾಗಲ ಎಂಬವರು (ತೇಜೋ ನೃಸಿಂಹಕವಿಗಳು)[೪] ೧ನೆಯ ಆಶ್ವಾಸಕ್ಕೂ ಟೀಕೆಯನ್ನು ಬರೆದು ಉಚಿತವನ್ನು ಹೊಂದಿದರು. ಮತ್ತೆ ಗಂಗಾಧರಶಾಸ್ತ್ರಿಗಳು, ಕರ್ನಾಟಕ ಭಾಷೆಯಲ್ಲಿ ಒಂದೂ ಮಹತ್ತಾದ ಕೋಶವಿಲ್ಲದ್ದರಿಂದ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ ಅನೇಕ ಬಗೆಯಿಂದ ತೊಂದರೆಯಾಗುತ್ತಿದ್ದದ್ದನ್ನು ಕಂಡು, ಅನೇಕ ಗ್ರಂಥ ಪ್ರಬಂಧಗಳನ್ನೂ, ಕಾವ್ಯಕಥೆಗಳನ್ನೂ ಪರಿಶೋಧಿಸಿ 'ಶಬ್ದಮಂಜರಿ' ಎಂಬ ಕೋಶವನ್ನು ಬಹುಶ್ರಮದಿಂದ ರಚಿಸಿ, ಕನ್ನಡಿಗರ ಕೊರತೆಯನ್ನು ಪೂರ್ಣಮಾಡಿದರು. ಈ ಕನ್ನಡ ಕೋಶವು ಸರಕಾರದಿಂದ ಮಾನ್ಯತೆಯನ್ನು ಹೊಂದಿ ಕರ್ನಾಟಕದ ಎಲ್ಲ ಕಡೆಗೂ ಪ್ರಸಿದ್ಧಿಸಲ್ಪಟ್ಟಿತು. ಸದ್ಯಕ್ಕೆ ಕರ್ನಾಟಕದಲ್ಲಿ ಈ ಕೋಶವಿಲ್ಲದ ಶಾಲೆಗಳೂ, ವಾಚನಾಲಯಗಳೂ ಇಲ್ಲವೆಂದು ಹೇಳಬಹುದು. ಕನ್ನಡಿಗರಿಗೆ ಅತ್ಯುಪಯುಕ್ತವಾದ ಈ ಶಬ್ದಮಂಜರಿಯೂ, ಕಾದಂಬರಿಯೂ, ಕನ್ನಡ ಭಾಷೆಯಲ್ಲಿ ಎಲ್ಲಕ್ಕೂ ಮೊದಲು ಇವರಿಂದಲೇ ರಚಿತವಾದದರಿಂದ, ಇವರ ಉಪಕಾರವನ್ನು ಕನ್ನಡಿಗರೆಲ್ಲರೂ ಈಗಲೂ ಸ್ಮರಿಸುತ್ತಾರೆ. ಗಂಗಾಧರಶಾಸ್ತ್ರಿಗಳು ಮತ್ತೂ ಬೇರೆ ಒಂದೆರಡು ಗ್ರಂಥಗಳನ್ನು ರಚಿಸಿದಂತೆ ತೋರುತ್ತದೆ. ಸಾರಾಂಶ ಈ ಉಭಯ ಶಾಸ್ತ್ರಿಗಳು ವೀರಶೈವ ಸಮಾಜಕ್ಕೆ ಅದೇಕೆ? ಎಲ್ಲ ಜಾತಿಯ ಜನಾಂಗಕ್ಕೆ ವಿದ್ಯಾಭೂಷಣರಾಗಿದ್ದರೆನ್ನಲಿಕ್ಕೆ ಅಡ್ಡಿಯಿಲ್ಲ.

ಶಾಂತವೀರಯ್ಯನವರು ಕವಿತೆಯನ್ನು ಮಾಡುವ ಜನರಿಗೆ ಉಪಯುಕ್ತವಾಗುವ ಒಂದು ಪ್ರಾಸಬದ್ಧ ಘನಕೋಶವನ್ನು ರಚಿಸುತ್ತಿರಲು ಅವರ ಆಯುರ್ದಾಯ ತುಂಬಿ ಕಿತ್ತೂರಲ್ಲಿ ಮೃತವಾದದರಿಂದ, ಅಪೂರ್ಣವಾದ ಈ ಕೋಶವು ಪ್ರಕಟವಾಗಲಿಲ್ಲ. ಗಂಗಾಧರಶಾಸ್ತ್ರಿಗಳು ಸನ್ ೧೮೭೬ನೇ ಇಸವಿಯ ಅಕ್ಟೋಬರದಲ್ಲಿ ಧಾರವಾಡದಲ್ಲಿ ತೀರಿಕೊಂಡರು. ಇವರೀರ್ವ ಶಾಸ್ತ್ರಿಗಳ ವಿಯೋಗದಿಂದ ಕರ್ನಾಟಕ ಭಾಷಾಮಾತೆಯ ಸೀಮಂತರತ್ನವೂ, ಶೋಭೆಯೂ, ಕಳಚಿ ಬಿದ್ದಂತಾಗಿ, ವೀರಶೈವ ಸಮಾಜಕ್ಕೂ ಕನ್ನಡ ಭಾಷಾಭಿಮಾನಿಗಳಾದ ಸರ್ವಜನಾಂಗಕ್ಕೂ ಬಹು ವಿಷಾದವಾಯಿತು. ಈ ಶಾಸ್ತ್ರಿದ್ವಯರೂ, ಡಿಪೂಟಿ ಚೆನ್ನಬಸಪ್ಪನವರೂ, ಪಂಡಿತ ವೀರಭದ್ರಯ್ಯನವರೂ ರಾವಸಾಹೇಬ ರುದ್ರಗೌಡರ ಸ್ನೇಹಿತರಾಗಿದ್ದರು. ದೊಡ್ಡ ದೊಡ್ಡ ಪ್ರಭೃತಿಗಳ ಸಮ್ಮೇಳನದಿಂದ ಆ ಸಮಯದ ವೀರಶೈವ ಜನಾಂಗದಲ್ಲಿ ಬಹು ಶೋಭೆಯುಂಟಾಗಿತ್ತು.

❖❖

೪. ಈ ಕವಿಗಳು ಕನ್ನಡ ಭಾಷೆಯ ಕಟ್ಟಭಿಮಾನಿಗಳಾಗಿದ್ದರು. ಇವರು ವೇಣೀಸಂಹಾರ, ಉತ್ತರರಾಮಚರಿತ್ರ, ಮಾಲವಿಕಾಗ್ನಿಮಿತ್ರ ಮೊದಲಾದ ನಾಟಕಗಳನ್ನು ಸಂಸ್ಕೃತದಿಂದ ಕನ್ನಡದಲ್ಲಿ ಭಾಷಾಂತರಿಸಿದರು. ಮತ್ತು ಶಾಲೋಪಯುಕ್ತವಾದ ಕೈಪಿಡಿ, ನುಡಿಗಟ್ಟುಗಳೆಂಬ ವ್ಯಾಕರಣಗ್ರಂಥಗಳನ್ನೂ, ಛಂದಶ್ಶಾಸ್ತ್ರವನ್ನೂ, ಪದಾರ್ಥಬೋಧಿನಿಯನ್ನೂ ರಚಿಸಿ, ಕನ್ನಡಿಗರಿಗೆ ಬಹಳೇ ಉಪಕಾರ ಮಾಡಿದರು. ಇವರು ವೈಷ್ಣವರಿದ್ದರೂ ಬಹಳೇ ಸಭ್ಯಸ್ವಭಾವದವರಿದ್ದರು.

೫ನೇ ಭಾಗ

ಲಿಂಗಾಯತ ಫಂಡಿನ ಮೂಲಾರಂಭ

ರಾ.ಬ||ಗಿಲಗಿಂಚಿ ಗುರುಸಿದ್ಧಪ್ಪನವರೂ, ರುದ್ರಗೌಡರೂ ಹಿಂದೆ ತಾವು ವಿಚಾರಿಸಿದಂತೆ, ಲಿಂಗಾಯತ ಮತದ ವಿದ್ಯಾಭಿವೃದ್ಧಿಯ ಸಲುವಾಗಿ ಒಂದು ಸಭೆಯನ್ನು ನೆರವೇರಿಸಬೇಕೆಂದು ಗೊತ್ತುಮಾಡಿದರು. ಆದರೆ ಜಗಜ್ಜಾಹೀರ ಮಾಡಿ, ಸಭೆಯನ್ನು ಕೂಡಿಸುವ ಭರಿಗೆ ಇವರು ಬೀಳಲಿಲ್ಲ. ಏಕೆಂದರೆ "ಈಗ ನಾವು ಆಲೋಚಿಸಿದ ಮಹಾಕಾರ್ಯವು ಕಠಿಣ ಹಾಗೂ ಮಹತ್ವವಾದದ್ದೂ, ಬಹುಶ್ರಮಸಾಧ್ಯವಾದದ್ದೂ ಇದ್ದು, ಬಹುಜನರ ಸಹಾಯ ವಿಶೇಷದಿಂದ ಕೈಗೂಡತಕ್ಕದ್ದದೆ. ಅಟ್ಟಕ್ಕೇರದ ಪಕ್ಷಿಯು ಆಕಾಶಕ್ಕೆ ಹಾರಿತೆಂಬಂತೆ ಒಮ್ಮೆಲೇ ಆಕಾಶಕ್ಕೆ ನಿಚ್ಚಣಿಕೆಯನ್ನು ಹಚ್ಚುವ ಹವ್ಯಾಸಕ್ಕೆ ಬೀಳುವದು ಸರಿಯಲ್ಲ. ಒಂದಂದು ಎರಡೆನ್ನುವದು ಲೇಸು. ಈಗ ಒಳ್ಳೇ ವೈಭವದಿಂದ ಸಭೆಯನ್ನು ರಚಿಸಿ ಮುಂದೆ ಕಾರ್ಯಸಿದ್ಧಿಯು ಫಲಿಸದಿದ್ದರೆ ಜನರೊಳಗೆ ಅಪಹಾಸ್ಯಕ್ಕೆ ಕಾರಣವಾದೀತು. ಸಾವಕಾಶದಿಂದಾದರೂ ಚಿಂತೆಯಿಲ್ಲ. ಕಾರ್ಯವು ಮಾತ್ರ ಕೊನೆಗಾಣಲಿಕ್ಕೆ ಬೇಕು" ಎಂದು ಪೂರ್ವಾಪರ ವಿಚಾರಮಾಡಿ, ಸುಶಿಕ್ಷಿತರೂ, ವಿಶ್ವಾಸಿಕರೂ, ಮತಾಭಿಮಾನಿಗಳೂ ಆದ ತಮ್ಮ ಮಿತ್ರಮಂಡಳಿಯನ್ನಷ್ಟೇ ಕೂಡಿಸಿ, ಧಾರವಾಡದಲ್ಲಿ ರಾ||ಟೆಂಗಿನಕಾಯಿ ಚೆನ್ನಮಲ್ಲಪ್ಪನವರ ಮನೆಯಲ್ಲಿ ಬಾಗಿಲಹಾಕಿ, ಗುಪ್ತರೀತಿಯಿಂದ ಸಭೆಯನ್ನು ಮಾಡಿದರು. ವಿದ್ಯಾಗಂಧವು ತಿಲಮಾತ್ರವಿಲ್ಲದ ವೀರಶೈವರಲ್ಲಿ ವಿದ್ಯಾಭಿರುಚಿಯನ್ನು ಹುಟ್ಟಿಸಬೇಕೆಂತಲೂ, ಮತೋನ್ನತಿಯ ಪಥದಲ್ಲಿ ನಾವು ಮುಂದರಿಯಬೇಕಾದರೆ ರಾಜಭಾಷೆಯಾದ ಆಂಗ್ಲವಿದ್ಯಾಪ್ರಸಾರವು ನಮ್ಮ ಜನರಲ್ಲಿ ಅತ್ಯವಶ್ಯವಾಗಿ ಆಗಬೇಕೆಂತಲೂ, ಈ ಕೆಲಸಕ್ಕೆ ಧನರಾಶಿಯನ್ನು ಕೂಡಿಸುವದವಶ್ಯವೆಂತಲೂ, ಇದಕ್ಕಾಗಿ ನಾವೆಲ್ಲರು ತನು ಮನ ಧನದಿಂದ ಸಹಾಯಕರಾಗುತ್ತೇವೆಂತಲೂ ಸಭೆಯಲ್ಲಿ ಪ್ರತಿಯೊಬ್ಬರು ಹೇಳಿದರು. ಮತ್ತು ಆಗಲೇ ತಮ್ಮ ತಮ್ಮ ಯೋಗ್ಯತೆಗೆ ಸರಿಯಾಗಿ ಹಣವನ್ನೂ ಹಾಕಿದರು. ಇದೇ ಲಿಂಗಾಯತ ಫಂಡಿನ ಮೂಲಾರಂಭವು (ಸನ್ ೧೮೮೩ನೇ ಅಕ್ಟೋಬರ).

ಸಮಾರಂಭದ ಪೂರ್ವಾಪರ ವಿಚಾರವನ್ನೂ, ಸಭೆಯನ್ನು ಗುಪ್ತರೀತಿಯಿಂದ ಕೂಡಿಸಿದ ಕಾರ್ಯ ಕಾರಣಭಾವವನ್ನೂ ವಿಚಾರಿಸಿದರೆ, ಗುರುಸಿದ್ಧಪ್ಪನವರ ಮತ್ತು ರುದ್ರಗೌಡರ ಸೂಕ್ಷ್ಮದೃಷ್ಟಿಯು ಎಷ್ಟಿರುತ್ತದೆಂಬುದು ಗೊತ್ತಾಗುತ್ತದೆ. ಭರಭರನೆ ಉರಿದು ಸ್ವಲ್ಪ ಹೊತ್ತು ಬೆಳಗಿ, ಕೂಡಲೆ ಕತ್ತಲೆಯನ್ನುಂಟು ಮಾಡುವ ದೊಡ್ಡ ಬೊಂಬಾಳಕ್ಕಿಂತ ಸಾಧಾರಣ ಪ್ರಕಾಶದಿಂದ ನುಣ್ಣಾಗಿ ಉರಿಯುವ ಸಣ್ಣ ದೀವಿಗೆಯೇ ಪ್ರಯೋಜನಕಾರಿಯೆಂದೂ, ತುಸು ದಿವಸ ತುಂಬಿಕೊಂಡು ಬೇಸಿಗೆಯಲ್ಲಿ ಬತ್ತಿಹೋಗುವ ದೊಡ್ಡ ಕೆರೆಗಿಂತ ಸದಾವಕಾಲದಲ್ಲಿ ಪಥಿಕರ

ತೃಷೆಯನ್ನು ಹೋಗಲಾಡಿಸಿ, ತೃಪ್ತಿಯನ್ನುಂಟು ಮಾಡುವ ನಿರ್ಝರಿಯುಳ್ಳ ಕಿರುವರತೆಯೇ ಉಪಯೋಗವಾದುದೆಂದೂ ಇವರು ಆರಂಭದಲ್ಲಿಯೇ ವಿಚಾರಿಸಿದರು. ಹಣ್ಣು ಸಣ್ಣದಾದರೇನಾಯಿತು? ತಿನ್ನಲಿಕ್ಕೆ ಸವಿಯಿದ್ದರೆ ತೀರಿತು. ಇಂತಹ ಸೂಕ್ಷ್ಮ ವಿಚಾರಗಳುಳ್ಳ ಸತ್ಪುರುಷರೇ ರಾಜ್ಯಕಾರ್ಯಧುರೀಣರೆಂದು ಪ್ರಖ್ಯಾತಿಯನ್ನು ಹೊಂದುವರು. ಮಹಾನುಭಾವರಾದ ಇವರೀರ್ವರು ಸಭೆಯ ಯಾವದ್ವೃತ್ತಾಂತವನ್ನು ಮೆ|| ಜಿಲ್ಲಾ ಕಲೇಕ್ಟರ ಮಿಡಲ್ಟನ್ ಸಾಹೇಬ ಬಹದದೂರವರಿಗೆ ತಿಳಿಸಲು, ಕೇಳಿ ಸಂತೋಷಪಟ್ಟು, ಇವರೀರ್ವರನ್ನು ಕುರಿತು "ನಿಮ್ಮ ವಿದ್ಯಾಭಿರುಚಿಯನ್ನೂ, ಸಾರ್ವಜನಿಕ ಹಿತಬುದ್ಧಿಯನ್ನೂ, ಸಾಹಸವನ್ನೂ ನೋಡಿ ನನಗೆ ಆನಂದವಾಗುತ್ತದೆ. ಇದಕ್ಕೆ ಸರಕಾರದಿಂದಾಗಬೇಕಾದ ಸಹಾಯವನ್ನು ನಾನು ಅವಶ್ಯವಾಗಿ ಮಾಡಿಕೊಡುತ್ತೇನೆ. ನಿಮ್ಮ ಉದ್ದೇಶವು ಸ್ತುತ್ಯವಾಗಿದೆ. ದೃಢ ನಂಬಿಗೆಯಿಂದಲೂ, ದೀರ್ಘಸಹಾಸ ದಿಂದಲೂ, ನಿಮ್ಮ ಇಷ್ಟಹೇತುಭೂತಮಾಡಿಕೊಳ್ಳಿರಿ" ಎಂಬದಾಗಿ ಹೇಳಿದರು.

ಮುಂದೆ ಈ ಉಭಯ ಮಹನೀಯರ ವಿಶ್ವಪ್ರಯತ್ನದಿಂದಲೂ, ಸದುಪದೇಶದಿಂದಲೂ, ಫಂಡು ಬಹು ಬೇಗ ಕೂಡಹತ್ತಿತು. ಸತ್ಕಾರ್ಯಗಳಿಗೆ ಸಹಾಯವಾಗುವ ಸಂಪತ್ತಿಯು ನಿರರ್ಥಕವಾದೀತೆಂದು ಯಾರೂ ತಿಳಿಯಲಿಲ್ಲ. ಇವರ ಉಪದೇಶ ವಚನಗಳೆಂಬ ಸದ್ಬೀಜಗಳು ಮತಾಭಿಮಾನಿಗಳಾದ ವೀರಶೈವ ಧನಾಢ್ಯರ ಹೃದ್ಭೂಮಿಯಲ್ಲಿ ಚೆನ್ನಾಗಿ ಮೊಳೆಯಹತ್ತಿದವು. 'ಹನಿ ಹನಿ ಕೂಡಿ ಹಳ್ಳ, ತೆನಿ ತೆನಿ ಕೂಡಿ ರಾಶಿ' ಎಂಬಂತೆ ಫಂಡು ಬೆಳೆಯಹತ್ತಿತು. ಇವರು ಫಂಡಿನ ಹಣವನ್ನೆಲ್ಲ ಕಲೇಕ್ಟರ ಆಫೀಸಿನಲ್ಲಿ ಹಾಜರಮಾಡಿದರು. ಮೆ|| ಮಿಡಲ್ಟನ್ ಸಾಹೇಬರು ಈ ಉಭಯ ಮಹನೀಯರ ಹಿತಬುದ್ಧಿಯನ್ನೂ, ಸಾಹಸವನ್ನೂ ಶಿಫಾರಸಮಾಡಿ, ತಮ್ಮ ವೀರಶೈವ ಸಮಾಜದ ವತಿಯಿಂದ ಈ ಹಣವನ್ನು ಮುಂಬಯಿ ಸರಕಾರದ ಬ್ಯಾಂಕಿನಲ್ಲಿಟ್ಟು, ಬಂದ ಬಡ್ಡಿಯ ಹಣದಿಂದ ವಿದ್ಯೆಯಲ್ಲಿ ಹಿಂದುಳಿದ ತಮ್ಮ ವೀರಶೈವ ಜನಾಂಗವನ್ನು ಆಂಗ್ಲವಿದ್ಯಾಭೂಷಿತರನ್ನಾಗಿ ಮಾಡಬೇಕೆಂದು ಇಚ್ಛಿಸುತ್ತಾರೆಂತಲೂ, ಇದಕ್ಕೆ ಸರಕಾರದ ಒಪ್ಪಿಗೆ ಬೇಕೆಂತಲೂ ಮುಂಬಯಿ ಸರಕಾರಕ್ಕೆ ಬರೆಯಲು, ಈ ವೀರಶೈವರ ಅಭ್ಯುದಯಕ್ಕಾಗಿ ಆನಂದಿಸಿ, ಸರಕಾರದವರು ಒಡಂಬಟ್ಟು, ಅದರಂತೆ ಹುಕುಮು ಮಾಡಿದರು. ಸರಕಾರ ಠರಾವ ನಂಬರ ೩೬೯/೨೫-೨-೮೪. ಈ ಧನರಾಶಿಯು 'ಲಿಂಗಾಯತ ಎಜ್ಯುಕೇಶನಲ್ ಫಂಡ'ವೆಂಬ ಹೆಸರಿನಿಂದ ಪ್ರಸಿದ್ಧವಾಗಿ, ಇದರ ಯೋಗ್ಯ ವ್ಯವಸ್ಥೆಗಾಗಿ ಮುಖ್ಯ ಮುಖ್ಯ ಜನರನ್ನು ಮೆಂಬರರನ್ನಾಗಿ ನೇಮಿಸಿರುತ್ತಾರೆ. ಈ ಪ್ರಕಾರ ಈ ಉಭಯ ದೀರ್ಘಸಾಹಸಿಗಳು ಕೂಡಿಸಿದ ಹಣದ ಬಡ್ಡಿಯಲ್ಲಿ, ಬೇಕಾದಷ್ಟು ವೀರಶೈವ ವಿದ್ಯಾರ್ಥಿಗಳು ನಿರಾಯಾಸವಾಗಿ ಇಂಗ್ಲೀಷವನ್ನೂ, ಸಂಸ್ಕೃತವನ್ನೂ ಕಲಿಯುವ ಏರ್ಪಾಡು ಆಗಿರುವದು. ಈ ಧನಸಹಾಯ್ಯದಿಂದ ಎಷ್ಟೋ ಜನರು ಇಂಗ್ಲೀಷ ಕಲಿತು ಗ್ರ್ಯಾಜುಯೇಟರಾಗಹತ್ತಿದರಿಂದ ಈಗೀಗ ವೀರಶೈವ ಜನರ ವಿದ್ಯಾಂಕುರಕ್ಕೆ ಚಿಗುರೊಡೆಯ ಹತ್ತಿದೆ. ಈ ಮಹತ್ಕಾರ್ಯವನ್ನೆಸಗಿದ ಈ ಉಭಯ ಮಹಾನುಭಾವರ ಹೆಸರುಗಳು ಆಧುನಿಕ ವೀರಶೈವ ಸಮಾಜದ ಚರಿತ್ರಮಾಲೆಯಲ್ಲಿ ಚಿರಸ್ಥಾಯಿಯಾದವು. ಅಜ್ಞಾನಾಂಧಕಾರದಲ್ಲಿ ಮುಳುಗಿದ ವೀರಶೈವ ಜನರನ್ನೆತ್ತಿ ಜ್ಞಾನಪ್ರಭೆಯಲ್ಲಿ ತಂದ ಕೀರ್ತಿಗೆ, ರಾ||ಬ||ಗುರುಸಿದ್ಧಪ್ಪ ವೀರಬಸಪ್ಪ ಗಿಲಗಿಂಚಿಯವರೂ, ಅರಟಾಳ ರುದ್ರಗೌಡರವರೂ ಸರಿಯಾಗಿ ಬಾಧ್ಯರಿರುತ್ತಾರೆ. ಈ ಫಂಡಿನ ಹಣದಿಂದ ವಿದ್ಯೆ ಕಲಿತು ವಿದ್ಯಾವಿಶಾರದರಾಗಿ, ಉಚ್ಚಪದವಿಯನ್ನು ಹೊಂದಿದ ಪ್ರತಿಯೊಬ್ಬ ಸುಶಿಕ್ಷಿತನು ಇವರ ಉಪಕೃತಿಯನ್ನು ಸ್ಮರಿಸದೆ ಎಂದೂ ಇರನು. ಈ 'ಲಿಂಗಾಯತ ಫಂಡು' ಇವರ ಚಿರಸ್ಮಾರಕವಾಗಿ ಇವರ ಅಖಂಡವಾದ ಕೀರ್ತಿಧ್ವಜವು ಆಚಂದ್ರಾರ್ಕ ಮೆರೆಯುವದರಲ್ಲಿ ಸಂಶಯವಿಲ್ಲ.

ಸುಶಿಕ್ಷಿತರಾದ ತಂದೆ-ಮಕ್ಕಳು

ರಾ.ಸಾ॥ರುದ್ರಗೌಡರು ಪ್ರಖ್ಯಾತರಾಗಿಯೂ, ಜನಪ್ರಿಯರಾಗಿಯೂ, ಅಭಿವೃದ್ಧಿಯನ್ನು ಹೊಂದುತ್ತಿರುವದನ್ನು ಕಂಡು ವೃದ್ಧ ಜನಕರಾದ ಚೆನ್ನವೀರಗೌಡರು ಸಂತೋಷಭರಿತರಾದರು. ಎಲ್ಲ ಜನರು ಚೆನ್ನವೀರಗೌಡರನ್ನು ಕುರಿತು, ತಮ್ಮ ಸುತರಾದ ರಾ.ಸಾ॥ ರುದ್ರಗೌಡರು ಮಹದಭ್ಯುದಯವನ್ನು ಹೊಂದಿ ಜನ್ಮಕೊಟ್ಟ ತಂದೆತಾಯಿಗಳನ್ನೂ, ತಮ್ಮ ಮಹತ್ತಾದ ವಂಶವನ್ನೂ ಉದ್ಧಾರಮಾಡಿದರೆಂತಲೂ, ಇಂತಹ ಸತ್ಪುತ್ರರನ್ನು ಹೆತ್ತ ತಮ್ಮ ಜನ್ಮವು ಸಾರ್ಥಕವಾಯಿತೆಂತಲೂ, ಇಂಥ ಸುಶಿಕ್ಷಿತ ಸತ್ಪುತ್ರರುಳ್ಳ ಮಾತಾಪಿತರೇ ಧನ್ಯರೆಂತಲೂ, ಇವರ ಅಭ್ಯುದಯವನ್ನು ಕಣ್ಣಾರೆ ಕಂಡ ತಾವು ಪುಣ್ಯಪುರುಷರೆಂತಲೂ, ಅವರನ್ನು ಪರಿಪರಿಯಿಂದ ಶ್ಲಾಘಿಸುತ್ತಿದ್ದರು. ಹುಟ್ಟಿದರೆ ಇಂಥ ಸತ್ಪುತ್ರರು ಹುಟ್ಟಬೇಕು. ಇಲ್ಲದಿದ್ದರೆ-

ವರಂ ಗರ್ಭಸ್ರಾವೋ ವರಮಪಿ ಚ ನೈವಾಭಿಗಮನಂ ।
ವರಂ ಜಾತಪ್ರೇತೋ ವರಮಪಿ ಚ ಕನ್ಯೈವ ಜನಿತಾ ॥

ವರಂ ವಂಧ್ಯಾ ಭಾರ್ಯಾ ವರಮಪಿ ಚ ಗರ್ಭೇಷು ವಸತಿ ।
ರ್ನ ಚಾವಿದ್ವಾನ್ ರೂಪದ್ರವಿಣಗುಣಯುಕ್ತೋಪಿ ತನಯಃ ॥

ಎಂಬಂತೆ ವಿದ್ಯಾಗುಣಗಣ ವಿಹೀನರಾದ ಮಕ್ಕಳ ಉತ್ಪತ್ತಿಯ ಕಾರಣವೇ ಇಲ್ಲವೆಂದು ಓರ್ವಕವಿ ಪುಂಗವನು ಹೇಳುತ್ತಾನೆ. ಅನಧ್ಯಾಯಿಗಳೂ, ಅವಿವೇಕಿಗಳೂ, ಅನಾಚಾರಿಗಳೂ, ಅಡನಾಡಿಗಳೂ ಆದ ಅನೇಕ ಮಕ್ಕಳಿರುವದಕ್ಕಿಂತ, ಕುಲದೀಪಕನಾದ ಒಬ್ಬನೇ ಮಗನು ಇರುವದು ಲೇಸು. ಲಕ್ಷಾವಧಿ ನಕ್ಷತ್ರಗಳು ಆಕಾಶದಲ್ಲಿ ತೋರುತ್ತಿದ್ದಾಗ್ಯೂ ಕತ್ತಲೆಯನ್ನೋಡಿಸಿ ಪ್ರಕಾಶಿಸುವಂಥವನು ಚಂದ್ರನೊಬ್ಬನೇ ಅಲ್ಲವೇ!

ಏಕೋಪಿ ಗುಣವಾನ್ ಪುತ್ರೋ ನಿರ್ಗುಣ್ಯೈಃ ಕಿಂ ಶತೈರಪಿ।
ಏಕಶ್ಚಂದ್ರೋ ಜಗಚ್ಚಕುರ್ನಕ್ಷತ್ರೈಃ ಕಿಂ ಪ್ರಯೋಜನಂ ॥

ಎಂಬ ಶ್ಲೋಕವಾದರೂ ಇದೇ ಅರ್ಥವನ್ನೇ ಹೇಳುತ್ತದೆ. ಸತ್ಕೃತಿಗಳಿಂದ ಜನಪ್ರಿಯರಾಗಿ ಲೋಕೋತ್ತರಕೀರ್ತಿಯನ್ನು ಸಂಪಾದಿಸಿ, ಜನ್ಮಕೊಟ್ಟ ಜನನಿ ಜನಕರ ಇಚ್ಛೆಯನ್ನು ತೃಪ್ತಿಪಡಿಸಿ ಅವರಿಗೆ ಯಾವಾಗಲೂ ಆನಂದವನ್ನೀಯುವ ಸತ್ಪುತ್ರರನ್ನು ಪಡೆಯುವದು ಪೂರ್ವಸುಕೃತವೆಂದು ತಿಳಿಯಬೇಕು.

ಕಂದ॥ ಜನಿಯಿಸಿ ಜನಕನ ವಂಶಕೆಘನತರ ಸತ್ಕೀರ್ತಿಯೆಸಗಿ ಮಾತಾಪಿತರಂ ॥
ವಿನಯದೆ ಗುರುದೈವಮೆನುತ್ತನೀಶಂ ಸೇವಿಸುತಮಿರ್ಪನೇ ಸತ್ಪುತ್ರಂ ॥

ಎಂಬಂತೆ ಅನಂತ ಪಿತೃಭಕ್ತರಾದ ಸತ್ಪುತ್ರರುಳ್ಳ ತಂದೆ ತಾಯಿಗಳ ಪುಣ್ಯರಾಶಿಯು ಇಂತಿಷ್ಟೇ ಎಂದು ಹೇಳಲಿಕ್ಕಾಗುವದಿಲ್ಲ. ಮತ್ತು ಇಂಥ ಸತ್ಪುತ್ರರಿಗೆ ಸದ್ವಿದ್ಯಾಮೃತಪಾನ ಮಾಡಿಸುವದು ತಂದೆ ತಾಯಿಗಳ ಮುಖ್ಯಕರ್ತವ್ಯವಾಗಿರುತ್ತದೆ.

ಬಾಲತ್ವದೊಳ್ ಬಾಲಕನಂ ಸುವಿದ್ಯಾ ।
ಲೋಲುಪ್ತನಂ ಮಾಡದ ತಂದೆತಾಯ್ಗಳ್ ॥
ಬಾಲಂಗಮಿತ್ರರ್ ಬಕಪಕ್ಷಿಯೆಂತಾ ।
ಬಾಲಂ ಸಭಾಹಂಸ ಸಮಾಜಕೊಪ್ಪಂ ॥

ಎಂಬ ಕವಿತೆಯಂತೆ, ಚಿಕ್ಕಂದಿನಲ್ಲಿ ವಿದ್ಯೆಯನ್ನು ಕಲಿಸದ ತಂದೆ ತಾಯಿಗಳು ಮಕ್ಕಳಿಗೆ ಶತ್ರುವೆಂದು ಸುಶಿಕ್ಷಿತರಾದ ಚೆನ್ನವೀರಗೌಡರು ಭಾವಿಸಿ, ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದ್ದರು. ಸುಶಿಕ್ಷಿತರಾದ ತಂದೆ ತಾಯಿಗಳಿಂದ ಅವರ ಸಂತತಿಯು ವಿದ್ಯಾವಿನಯ ಸದ್ಗುಣ ಸಂಪನ್ನತೆಯನ್ನು ಪಡೆಯುವದು. ಇದರಂತೆ ರಾ.ಸಾ||ರುದ್ರಗೌಡರು ವಿದ್ಯೆ ಕಲಿತು ಮುಂದಾಗಬೇಕಾದರೆ ಚೆನ್ನವೀರಗೌಡರಲ್ಲಿ ವಿದ್ಯಾಭಿರುಚಿಯೂ ಸುಸಿಕ್ಷಿತಮತಿಯೂ, ಸುಧಾರಣಾಗ್ರತೆಯೂ ಎಷ್ಟು ಪ್ರಚುರವಾಗಿತ್ತೆಂಬದು ಸಿದ್ಧವಾಗುತ್ತದೆ.

ಪ್ರತಿವರ್ಷ ರಾ.ಸಾ|| ರುದ್ರಗೌಡರು ದಸರೆಯ ಹಬ್ಬಕ್ಕೆ ಅರಟಾಳಕ್ಕೆ ಹೋಗುತ್ತಿದ್ದರು. ಇವರು ಲಿಂಗಾಯತ ಫಂಡಿನ ವಿಷಯವಾಗಿ ಸಭೆಯನ್ನು ನೆರವೇರಿಸಿ, ಪ್ರತಿವರ್ಷದಂತೆ ಯಥಾಪ್ರಕಾರ ವಿಜಯ ದಶಮಿಗೆ ಅರಟಾಳಕ್ಕೆ ಹೋಗಿರಲು ಈ ಲಿಂಗಾಯತ ಸಭೆಯ ವಾರ್ತೆಯನ್ನು ಕೇಳಿ ಚೆನ್ನವೀರಗೌಡರು ರುದ್ರಗೌಡರನ್ನು ಕುರಿತು "ತಮ್ಮಾ ರಾ.ಬ||ಗುರುಸಿದ್ದಪ್ಪ ಮೊದಲಾದ ನೀವೆಲ್ಲರೂ ಈ ಲಿಂಗಾಯತ ಫಂಡಿನ ಮಹಾಕಾರ್ಯಕ್ಕೆ ಕೈಹಾಕಿದಿರಿ. ಇಂಥ ಘನಕಾರ್ಯವನ್ನು ನಿಮ್ಮಿಂದ ಸಿದ್ಧಿಗೆ ಒಯ್ಯೋಣಾದೀತೇ! ಹಿಡಿದ ಕೆಲಸವನ್ನು ಅರ್ಧಕ್ಕೇ ಬಿಟ್ಟು ಅಪಹಾಸ್ಯಕ್ಕೆ ಕಾರಣವಾಗುವದು ಸರಿಯಲ್ಲ. "ಆರಂಭಶೂರಾಃ ಖಲು ದಾಕ್ಷಿಣಾತ್ಯಾಃ" ಎಂಬ ವಾಕ್ಯವು ಜನರಲ್ಲಿ ಮೊದಲೇ ರೂಢವಾಗಿರುತ್ತದೆ. ಆರಂಭದಲ್ಲಿಯ ಔತ್ಸುಕ್ಯವು ಅಂತ್ಯದ ವರೆಗೂ ಇರುತ್ತಿರುವದಿಲ್ಲ. ಆದರೆ ನೀವು ಆರಂಭಿಸಿದ ಕಾರ್ಯವು ಬಹಳೇ ಯೋಗ್ಯವಾದದ್ದದೆ. ದೈವಯೋಗದಿಂದ ಈ ಕಾರ್ಯವು ಕೊನೆಗಾಣಿಸಿದರೆ ವೀರಶೈವರ ಅಭ್ಯುದಯವು ನಿಶ್ಚಯವಾಗಿ ಆಗುತ್ತದೆ. ಆದರೆ ಒಂದು ಲಗ್ನಕ್ಕೆ ಹನ್ನೆರಡು ವಿಘ್ನಗಳೆಂಬಂತೆ ನಿಮಗೆ ಈ ಕಾರ್ಯದಲ್ಲಿ ಅನೇಕ ತೊಂದರೆಗಳು ಬಂದು ತೊಡಗಿದರೂ ಸಮಾಜಹಿತದ ಸತ್ಕಾರ್ಯದಲ್ಲಿ ಬಂದ ವಿಘ್ನಗಳೆಲ್ಲ ಭಗ್ನವಾಗಬಹುದು. ಏನೇ ಆಗಲಿ; ದೃಢನಿಶ್ಚಯದಿಂದಲೂ, ದೀರ್ಘಸಾಹಸದಿಂದಲೂ ಈ ಕಾರ್ಯವನ್ನು ಸಿದ್ಧಿಗೊಯ್ಯಿರಿ" ಎಂದು ಹೇಳಲಾಗಿ, ರುದ್ರಗೌಡರು ತಂದೆಯವರನ್ನು ಕುರಿತು "ಯಜಮಾನರೇ! ನೀವು ಹೇಳಿದ ಉಪಯುಕ್ತ ವಚನಗಳನ್ನೆಲ್ಲ ಸ್ಮರಣದಲ್ಲಿಟ್ಟುಕೊಂಡೆನು. ನಾವು ನಮ್ಮ ಜನಾಂಗದ ವಿದ್ಯಾಭಿವೃದ್ಧಿಗಾಗಿ ನಿಮ್ಮೆಲ್ಲ ಗುರುಹಿರಿಯರ ಅನುಗ್ರಹದಿಂದ ಈ ಮಹತ್ಕಾರ್ಯವನ್ನು ಆರಂಭಿಸಿರುತ್ತೇವೆ. ಮತ್ತು ನಮ್ಮ ಆಮರಣಾಂತ ಈ ಕೆಲಸಕ್ಕೆ ತ್ರಿಕರಣಪೂರ್ವಕವಾಗಿ ಸಾಹಸ ಮಾಡುತ್ತೇವೆ. ಕಸಕಸಿಯ ಕಾಳಿಗಿಂತ ಸಣ್ಣದಾದ ಯತ್ಕಿಂಚಿತ್ ಬೀಜದಿಂದ ಮಹತ್ತಾದ ವಟವೃಕ್ಷವು ಆಗಿ, ಬೇಸಿಗೆಯ ಬಿಸಲಿನಿಂದ ಬಳಲುವ ಪಥಿಕರನ್ನು ತಣ್ಣೆಳಲಿನಿಂದ ಸಂತೋಷಪಡಿಸುವಂತೆ ಈ ಸಣ್ಣದಾದ ಫಂಡು ಈಶಾನುಗ್ರಹದಿಂದ ಬಲಿದು, ಆಶೇಷ ವೀರಶೈವ ಜನಾಂಗಕ್ಕೆ ವಿದ್ಯಾಮೃತವನ್ನೀಯುವದೆಂದು ಭಾವಿಸುತ್ತೇವೆ." ಈ ಪ್ರಕಾರ ನುಡಿದ ರುದ್ರಗೌಡರ ಉದಾತ್ತ ವಿಚಾರವನ್ನೂ, ಸ್ಥೈರ್ಯಬುದ್ಧಿಯನ್ನೂ ಕಂಡು ಚೆನ್ನವೀರಗೌಡರು ಸಂತೋಷಪಟ್ಟರು. ಇವರ ವಿಚಾರದಂತೆಯೇ ಲಿಂಗಾಯತ ಫಂಡು ಬಹುಬೇಗ ಬೆಳೆದು ಚಿರಸ್ಥವಾಯಿತು.

ಚೆನ್ನವೀರಗೌಡರ ಮರಣ

ರಾ.ಸಾ||ರುದ್ರಗೌಡರು ಪ್ರಖ್ಯಾತರಾಗಿಯೂ, ಜನಪ್ರಿಯರಾಗಿಯೂ, ಸಾರ್ವಜನಿಕ ಹಿತಕಾರ್ಯಗಳಲ್ಲಿ ಮಗ್ನರಾಗಿಯೂ ಅಭಿವೃದ್ಧಿಯನ್ನು ಹೊಂದುತ್ತ ಕೆಲಸಮಾಡುತ್ತಿದ್ದದ್ದನ್ನು ನೋಡಿ, ಸಂತೋಷದಿಂದಿರುವಾಗ ಚೆನ್ನವೀರಗೌಡರ ಆಯುರ್ಮರ್ಯಾದೆಯು ತುಂಬಿ, ತಾರೀಖು ೨೬ನೇ ಮಾರ್ಚ ತಿಂಗಳ ಸನ್ ೧೮೮೪ನೇ ಇಸವಿ ಬುಧವಾರ ಮಧ್ಯಾಹ್ನದ ೧೨ ಘಂಟೆಗೆ ಕಸಬಾ ಅರಟಾಳದ ಹಳೆಮನೆಯಲ್ಲಿ ಮೃತಪಟ್ಟರು. ಇವರ ಸ್ಮಶಾನಯಾತ್ರೆಯು ಬಹಳ ಸಡಗರದಿಂದಾಯಿತು. ಇವರು ಯಾವತ್ತು ಜನರಿಗೆ ಬೇಕಾಗಿ ದೊಡ್ಡ

ಮನುಷ್ಯರೆನ್ನಿಸಿಕೊಳ್ಳುತ್ತಿದ್ದರು. ಇವರ ದಫನಕಾರ್ಯವು ಚೆನ್ನಾಗಿ ಆಯಿತು. ಸುಮಾರು ಎರಡುಸಾವಿರ ಜನರು ಕೂಡಿದ್ದರು. ಸುತ್ತುಹಳ್ಳಿಗಳಿಂದ ಬಹುಜನ ಬಂದಿತ್ತು. ಮರಣ ಕಾಲಕ್ಕೆ ಇವರಿಗೆ ಎಪ್ಪತ್ತೈದು (೭೫) ವರ್ಷವಾಗಿದ್ದರೂ ಶರೀರದಿಂದ ಸದೃಢವಾಗಿದ್ದರು. ಮೊದಲಿನ ಜನರು ದೀರ್ಘಾಯುಗಳೂ, ಸದೃಢಶರೀರಿಗಳೂ ಇರುತ್ತಿದ್ದರು. ಈಗ್ಗಿನವರು ಅಲ್ಪಶರೀರಿಗಳೂ, ಅಲ್ಪ ವಯಸ್ಕರೂ ಆಗಿರುತ್ತಾರೆ. ಚೆನ್ನವೀರಗೌಡರು ದೀರ್ಘದೇಹಿಗಳೂ, ಪುಷ್ಟರೂ, ಮಹದ್ದಾರಮನುಷ್ಯರೂ ಆಗಿದ್ದರು. ಇವರ ಪೋಷಾಕು ಸಾಧಾರಣತರದ್ದಾದರೂ ಸ್ವಚ್ಛತೆಯಿಂದ ಶೋಭೆಯುಳ್ಳದ್ದಾಗಿತ್ತು. ಪಿತೃಭಕ್ತಿಯುಳ್ಳವರಾದ ರುದ್ರಗೌಡರು ಹಿರಿಯರ ಪೋಷಾಕುಗಳನ್ನು ಸ್ವಚ್ಛಮಾಡಿಸಿ, ಇನ್ನೂ ವರೆಗೆ ಕಾಯ್ದು ಇಟ್ಟಿರುತ್ತಾರೆ. ಚೆನ್ನವೀರಗೌಡರು ಜಾಣರೂ, ಪ್ರಬಲರೂ, ವ್ಯವಹಾರಜ್ಞಾನವುಳ್ಳವರೂ ಇದ್ದು, ಬಹು ಸುಂದರ ಪುರುಷರಾಗಿದ್ದರು. ಗತವಯಸ್ಕರಾಗಿದ್ದರೂ ಇವರ ಒಂದೂ ಹಲ್ಲು ಬಿದ್ದಿದ್ದಿಲ್ಲ. ಅಂದಮೇಲೆ ಇವರು ಎಷ್ಟು ಗಟ್ಟಿಗರಿದ್ದರೆಂಬುದು ಗೊತ್ತಾಗುತ್ತದೆ. ಇವರು ಮನೆತನದ ಪದ್ಧತಿಯನ್ನು ಬಹು ಮರ್ಯಾದೆಯಿಂದಲೂ, ವ್ಯವಸ್ಥೆಯಿಂದಲೂ ಇಟ್ಟಿದ್ದರು. ಇವರಿಗೆ ಒಟ್ಟು ನಾಲ್ಕುಮಂದಿ ಗಂಡುಮಕ್ಕಳು, ನಾಲ್ಕು ಮಂದಿ ಹೆಣ್ಣು ಮಕ್ಕಳು. ಮರಣ ಕಾಲಕ್ಕೆ ಬಸವ್ವನವರು, ರುದ್ರಗೌಡರು, ವೀರವ್ವನವರು[೧] ಈ ಮೂರೇ ಮಂದಿ ಮಕ್ಕಳಿದ್ದರು. ಉಳಿದವರೆಲ್ಲ ಮೊದಲೇ ಮೃತರಾಗಿದ್ದರು.

ತಂದೆಯವರ ಮರಣದಿಂದ ರುದ್ರಗೌಡರಿಗೆ ಮುಗಿಲೇ ಹರಿದು ಬಿದ್ದಂತಾಗಿ, ಅನಿವಾರ ದುಃಖ ವಾಯಿತು. ಮತ್ತು ಇದೇ ವರ್ಷ ಮುಂದೆ ತುಸು ದಿವಸಗಳಲ್ಲಿಯೇ ಇವರ ಅಕ್ಕಂದಿರಾದ ಬಸವ್ವನವರು[೨] ಪರಲೋಕವಾಸಿಯಾಗಲು, ಹುಣ್ಣಿನ ಮೇಲೆ ಬರೆಕೊಟ್ಟಂತೆ ದುಃಖವು ಇಮ್ಮಡಿಸಿತು. ಈಶೇಚ್ಛೆಗೆ ಉಪಾಯವಿಲ್ಲ. ಜನನ ಮರಣಾದಿಗಳನ್ನು ತಪ್ಪಿಸಲು ಹರಿಹರಾದ್ಯರಿಗೂ ಅಸಾಧ್ಯವು. ಈ ನಶ್ವರವಾದ ಪ್ರಪಂಚದಲ್ಲಿ ಜನ್ಮತಾಳಿದ ಪ್ರತಿಯೊಂದು ಪ್ರಾಣಿಯು ಒಂದಿಲ್ಲೊಂದು ದಿನ ಮೃತಿಯನ್ನು ಹೊಂದತಕ್ಕದ್ದೆ. ಸಕಲಪ್ರಾಣಿಗಳು ಒಂದು ದಿನ ಹುಟ್ಟಿ, ಒಂದು ದಿವಸ ಬೆಳೆದು, ಮತ್ತೊಂದು ದಿನಕ್ಕೆ ಶಿವಪಾದ ಸನ್ನಿಧಿಗೆ ತೆರಳತಕ್ಕದ್ದು. ಈ ಹಾಳು ಪ್ರಪಂಚವು ಮೂರುದಿನದ ಸಂತೆಯೋಪಾದಿ ಇರುತ್ತದೆಂಬದೇನು ಸುಳ್ಳವಲ್ಲ. ಸಾರಾಂಶ, ಈ ಜಗತ್ತು ಕ್ಷಣಭಂಗುರುವಾಗಿರುತ್ತದೆಂಬ ತತ್ವವನ್ನು ತಿಳಿದು, ರುದ್ರಗೌಡರು ತಮ್ಮ ದುಃಖವನ್ನು ತಾವೇ ಶಮನಮಾಡಿಕೊಂಡು, ಮನೆತನಕ್ಕೆ ತಾವೇ ಹಿರಿಯರಾದರು. ಇವರ ಗದ್ದುದಗಳನ್ನು ಸೈಪಿಡಲಿಕ್ಕೆ ಇವರ ಮನೆತನದಲ್ಲಿ ಯಾರೂ ಹಿರಿಯರು ಉಳಿದಿರಲಿಲ್ಲ.

ರಾ.ಸಾ॥ರುದ್ರಗೌಡರಿಂದಾದ ಅಘಟಿತ ಘಟನೆಯು

ರಾವಸಾಹೇಬ ರುದ್ರಗೌಡರು ಪಿತೃವಿಯೋಗಜನ್ಯ ದುಃಖವನ್ನು ಸೈರಿಸಿಕೊಂಡು, ಯಥಾಪ್ರಕಾರ ತಮ್ಮ ಕೆಲಸವನ್ನು ಮಾಡಹತ್ತಿದರು. ಯೋಗ್ಯರೀತಿಯಿಂದ ಇವರು ಕೆಲಸಮಾಡುತ್ತಿರಲು, ಧಾರವಾಡ

---

೧. ವೀರವ್ವನವರನ್ನು ಕಲಘಟಗೀ ತಾಲೂಕ ತಬಕದ ಹೊನ್ನೀಹಳ್ಳಿಯ ಪ್ರಸಿದ್ಧ ಪಾಟೀಲರಾದ ಹಾಳಪ್ಪಗೌಡರ ಪುತ್ರರಾದ ಬಸನಗೌಡರಿಗೆ ಕೊಟ್ಟಿತ್ತು. ವೀರವ್ವನವರ ಜನನ ತಾರೀಖು ೨-೨-೧೮೬೦ ನೇ ಇಸವಿ. ವೀರವ್ವನವರು ಹೊಸಮನೆಯಲ್ಲಿ ಕಾಲು ಮುಂದಾಗಿ ಹುಟ್ಟಿದರು. ಇವನ ಜನನವಾಗುವ ಪೂರ್ವದಲ್ಲೆ ೨ ತಿಂಗಳ ಹಿಂದೆ, ಹೊಸೂರು ಹುಲೆಪ್ಪಗೌಡರ ಮಗಳಾದ ತಾಯವ್ವನವರೊಡನೆ ೯ ವರ್ಷ ವಯಸ್ಸಿನಲ್ಲಿ ರುದ್ರಗೌಡರ ಲಗ್ನವಾಯಿತು.

೨. ಬಸವ್ವನವರು ತಾರೀಖ ೭ನೇ ಸೆಪ್ಟಂಬರ್ ಸನ್ ೧೮೮೯ನೇ ಇಸವಿಯಲ್ಲಿ ಹೊಸೂರಲ್ಲಿಯೇ ಮೃತವಾದರು. ಇವರ ಪತಿಯಾದ ಮಹಾಬಲ (ಮಹಾಬನ)ಗೌಡ ತಂದೆ ಚೆನ್ನಬಸನಗೌಡ ಇವರು ತಾ. ೩ನೇ ಜಾನೇವಾರಿ ಸನ್ ೧೮೯೫ ಇಸವಿಯಲ್ಲಿ ಮೃತವಾದರು.

ತಾಲೂಕದೊಳಗಿರುವ ಕಣವೀ ಹೊನ್ನಾಪುರಗ್ರಾಮದ ಗೌಡಿಕೀ ವತನದ ಸಂಬಂಧವಾಗಿ, ಸರಕಾರದಲ್ಲಿ ಒಂದು ವಿಚಿತ್ರವಾದ ವ್ಯಾಜ್ಯವು ಬಹುದಿವಸದಿಂದ ನಡೆದಿತ್ತು. ಅದರ ಪೂರ್ವಾಪರ ಸಂಗತಿಯೇನಂದರೆ: ಕಣವೀಹೊನ್ನಾಪುರವೆಂಬ ಇನಾಮಗ್ರಾಮದ ಗೌಡಕೀವತನವು ಎಲ್ಲಪ್ಪಗೌಡ ಉರ್ಫ ಬಸನಗೌಡ ತಂದೆ ಬಸನಗೌಡ ಎಂಬವರಿಗೆ ಪೂರ್ವದಿಂದಲೂ ಇದ್ದದ್ದನ್ನು, ವ್ಯಾಸರಾವ ರಾಮರಾವ ದೇಸಾಯಿ ಕಣವೀ ಹೊನ್ನಾಪುರ ಪರಗಣಿ ಧಾರವಾಡ ಎಂಬ ಬಲಾಢ್ಯ ಇನಾಮದಾರರು ಕಪಟತನದಿಂದ ಹರಣಮಾಡಿ, ಸನ್ ೧೮೫೭ನೇ ಇಸವಿಯಲ್ಲಿ ತಮ್ಮ ವಶಕ್ಕೆ (ಕಬಜಾಕ್ಕೆ) ತಕ್ಕೊಂಡು, ತಮ್ಮ ಮುಖಾಂತರವಾಗಿಯೇ ಆ ಊರ ಬಸಯ್ಯ ಪೂಜಾರಿ ಎಂಬವನಿಗೆ ಗೌಡಿಕಿಯನ್ನು ನೇಮಿಸಿ, ಯಾರ ಭಯವಿಲ್ಲದೆ ವರ್ತಿಸುತ್ತಿದ್ದರು. ಇನಾಮದಾರ ವ್ಯಾಸರಾಯರು ಕಪಟತನದಿಂದ ಅಪಹರಿಸಿದ ತಮ್ಮ ಗೌಡಕೀ ವತನವನ್ನು ತಮಗೆ ಕೊಡಿಸಬೇಕೆಂದು, ದುರ್ಬಲರಾದ ಬಸನಗೌಡರು ವಹಿವಾಟಿಯಲ್ಲಿ ದಾವೆಯನ್ನು ತಂದರು. ಆಗ (ಸನ್ ೧೮೫೭ ಇಸವಿಯಲ್ಲಿ) ವಹಿವಾಟಿ ದಾವೆಗಳು ಮೆ॥ ಕಲೇಕ್ಟರ ಸಾಹೇಬರ ಕಡೆಗೇ ನಡೆಯುತ್ತಿದ್ದವು. ಸದರೀ ಗೌಡಕೀ ವತನವನ್ನು ಪೂರ್ವದ ಗೌಡರಾದ ಈ ಬಸನಗೌಡರಿಗೇ ಕೊಡಬೇಕೆಂಬದಾಗಿ ಮೆ॥ಕಲೇಕ್ಟರ ಸಾಹೇಬರಿಂದ ಈ ವಹಿವಾಟಿ ದಾವೆಯ ನಿಕಾಲೆಯಾಗಿತ್ತು. ಆದರೆ ಮದಾಂಧರಾದ ವ್ಯಾಸರಾಯರ ಬಲಾಢ್ಯತನದಲ್ಲಿ, ಈ ತೀರ್ಪಿನ ಹುಕುಮನ್ನು ಅಮಲಿನಲ್ಲಿ ತರಲಿಲ್ಲ. ಅಮೀನಭಾವಿ ಕಲ್ಲಾಪುರ ಮುಂತಾದ ಪ್ರಮುಖ ದೇಸಾಯರು ಈ ಗಂಟುಗಳ್ಳರಾದ ವ್ಯಾಸರಾಯರ ಆಪ್ತರೇ ಇದ್ದರು. ಮತ್ತು ಎಷ್ಟೋ ದೊಡ್ಡದೊಡ್ಡ ಜನರ ಹಾಗೂ ಎಲ್ಲ ಕಾಮದಾರ ಜನರ ಮುರವತ್ತು ಈ ದೇಸಾಯರಿಗೆ ಬಹಳೇ ಇತ್ತು. ದಪ್ತರದಾರರಾದ ಹಣಮಂತರಾವ ಪೀತಾಂಬರ ಎಂಬವರು ವ್ಯಾಸರಾಯರ ಪ್ರತ್ಯಕ್ಷ ಆಪ್ತರಾಗಿದ್ದರು. ಅಂದರೆ ಹಣಮಂತರಾಯರ ಮಗಳನ್ನು ವ್ಯಾಸರಾಯರ ಮಗನಾದ ರಾಮರಾಯರಿಗೆ ಕೊಟ್ಟಿತ್ತು. ಸಾರಾಂಶ, ಎಲ್ಲರೂ ಇವರಿಗೆ ಅನುಕೂಲರಿದ್ದರು. ಮೇಲಾಗಿ ಇನಾಮದಾರರೂ, ಧನಾಢ್ಯರೂ, ಬಲಾಢ್ಯರೂ ಆಗಿದ್ದರು. ಇಂತಹ ದೊಡ್ಡ ನದರಿನ ಮುಂದೆ ಸರಕಾರಿಯ ಹುಕುಮಗಳು ಅವರಿಗೆ ನೊರಜಿನಂತೆ ಕಾಣುತ್ತಿದ್ದವು. ದೀನರಾದ ಬಸನಗೌಡರು ದಿವಾಣಿಯ ಕೋರ್ಟಿನಲ್ಲಿ ಸನ್ ೧೮೬೨ನೇ ಇಸವಿಯಲ್ಲಿ ದಾವೆಯನ್ನು ತಂದರು. ದಿವಾಣಿಯಲ್ಲಿ ಇದರ ವಿಚಾರವು ಏಳೆಂಟು ವರ್ಷ ನಡೆದು, ಕಡೆಗೆ ಹಾಯಕೋರ್ಟಿನಿಂದ ಈ ದಾವೆಯು ಮುದ್ದತಿಯ ಹೊರಗೆ ಅದೆಯೆಂಬದಾಗಿ ಸನ್ ೧೮೭೭ನೇ ಇಸವಿಯಲ್ಲಿ ನಿರ್ಣಯವಾಯಿತು. ಮುಂದೆ ವತನೀ ಆಕ್ಟಿನ ಪ್ರಕಾರ (ವತನದಾರ ಕಾಯದೆ ೧೮೭೪ನೇ ಇಸವಿ ೩ನೇ ಆಕ್ಟಿನ ಪ್ರಕಾರ) ಆ ಊರ ವಾರಸಾ ವತನದಾರ ಗೌಡರು ಯಾರೆಂಬುದರ ಚೌಕಸಿಯು ಮೆ॥ ಜೇ. ಫಯರಲಿ ಮ್ಯೂರ ೧ನೇ ಅಸಿಸ್ಟಂಟ ಕಲೇಕ್ಟರ ಇವರ ಮುಂದೆ ಸನ್ ೧೮೮೦ರಲ್ಲಿ ನಡೆದು, ಇನಾಮದಾರರೇ ವತನದಾರಗೌಡರೆಂದು ನಿರ್ಣಯವಾಯಿತು.

ಗೆದ್ದ ಎತ್ತಿನ ಬಾಲವನ್ನು ಹಿಡುಯುವವರೇ ಬಹಳ ಮಂದಿ. ಪರಿವಿತ್ತಾಪಹಾರ ಮಾಡಿ ಧನ್ಯನಾದೆನೆಂದು ಪರಿಪರಿಯಿಂದ ಮೆರೆದಾಡುವ ಬಲಾಢ್ಯರಾದ ವ್ಯಾಸರಾಯರ ಬಾಲವನ್ನೇ ಎಲ್ಲರೂ ಬಡಿಯಹತ್ತಿದರು. "ಬಲಾಚ ಪೃಥ್ವೀ" ಎಂಬಂತೆ ಮುಖ್ಯ ಮುಖ್ಯ ಜನಸಮೂಹವೆಲ್ಲ ಇನಾಮದಾರರ ಅನುಮತಿಯಂತೆಯೇ ಇತ್ತು. ರಾ. ಸಾ॥ ರುದ್ರಗೌಡರ ಚಿಟ್ಣಿಸಿಯ ಆಚೆಗೆ ಎಲ್ಲ ಕಾಮದಾರರು ಬ್ರಾಹ್ಮಣರೇ ಇದ್ದರೆಂದು ಹಿಂದೆ ಬರೆಯಲ್ಪಟ್ಟಿದೆ. ಎಲ್ಲ ಕಾಮದಾರರ ಬೆಂಬಲದಿಂದ ಬಹು ದಿವಸ ಪರ್ಯಂತರ ಸದರೀ ಗೌಡಿಕೀ ವತನವನ್ನು ವ್ಯಾಸರಾಯರು ತಾವೇ ಅನುಭೋಗಿಸುತ್ತ ಬಂದಿದ್ದರು. ಎಲ್ಲ ಕಾಮದಾರರು ಮೆ॥ಮ್ಯೂರಸಾಹೇಬರ ಹೃದಯವನ್ನು ಅನೃತ ವಚನಗಳಿಂದಲೂ, ದುರ್ಬೋಧನೆಯಿಂದಲೂ ಕಲುಷಿತಮಾಡಿ, ಗೌಡಿಕೀ ವತನವೆಲ್ಲ ಇನಾಮದಾರರದೇ ಎಂಬದಾಗಿ ಶತಃಸಿದ್ಧಮಾಡಿ, ಅವರಿಗೆ ನಿಜವಾರ್ತೆಯು ತಿಲಮಾತ್ರ ತಿಳಿಯದಂತೆ ಅನುವರ್ತಿಸಿ, ಚೌಕಸಿಯ ಮುದ್ದತವನ್ನು ಸಹ ತಪ್ಪಿಸಿ, ಆದಷ್ಟು ತೀವ್ರವಾಗಿ ನಿರ್ಣಯವನ್ನು

ವ್ಯಾಸರಾಯರಂತೆಯೇ ಮಾಡಿಸಿ ಬಿಟ್ಟಿದ್ದರು. ವ್ಯಾಸರಾಯರ ಪ್ರಬಲವಾದ ಪ್ರಾರಬ್ಧ ತುರಗವು ವಾಯುವೇಗದಿಂದ ಭರದಿಂದ ಓಡುತ್ತಿರಲು, ಅದರ ಮುಂದೆ ಬಸನಗೌಡರ ದುರ್ದೈವದ ಬಡ ತಟ್ಟುವಿನ ಕಿರುನಡಿಗೆಯು ಯಾತಕ್ಕೆ ಹತ್ತೀತು! ಅನ್ಯಾಯದ ನಿರ್ಣಯದಲ್ಲಿ ಸಬಲವಾದ ಆಧಾರಗಳೆಲ್ಲ ಮೂಲೆಗೆ ಬಿದ್ದುಹೋದವು. ಬಡ ಬಸನಗೌಡರನ್ನು ಕೇಳುವವರು ಯಾರೂ ಇರಲಿಲ್ಲ. ದುರ್ದೈವಿಗಳ ದೀನಾರ್ತವನ್ನು ಕೇಳುವ ದಯಾಳುಗಳಾದ ಸಜ್ಜನರು ಬಹು ಕಡಿಮೆ. ಗೌಡಿಕಿಯ ವತನವನ್ನು ಕಳಕೊಂಡು ಬರಿಗಯ್ಯಾದ ಬಸನಗೌಡರ ಸ್ಥಿತಿಯು ಹಗಲು ಮೂಡಿದ ಚಂದ್ರನಂತೆ ನಿಸ್ತೇಜವೂ, ನಿರುಪಯೋಗವೂ ಆಗಿತ್ತು. ಸ್ವಪ್ರಕಾಶಕನಾದ ಸೂರ್ಯತೇಜದಲ್ಲಿ ಪರಪ್ರಕಾಶಕನಾದ ಚಂದ್ರಚ್ಛಾಯೆಯು ಎಲ್ಲಿ ಕಾಣಬೇಕು? ಉಗ್ರರಾದ ವ್ಯಾಸರಾಯರ ಕಪಟವ್ಯಾಪಾರದಲ್ಲಿ, ಶಾಂತರಾದ ಬಸನಗೌಡರ ಆಟವೊಂದೂ ನಡಿಯದಂತಾಗಿ, ಯಾರೂ ದಿಕ್ಕಿಲ್ಲದವರಂತೆ ಮನಸಿನೊಳಗೇ ಅವರು ಮರಮರ ಮರಗುತ್ತಿದ್ದರು.

ಕಣವೀ ಹೊನ್ನಾಪುರದ ಸಮೀಪಕ್ಕಿರುವ ಬಸನಕೊಪ್ಪದ ಪಾಟೀಲರಾದ ವೀರನಗೌಡರು ಒಂದು ಮಂಗಳವಾರ ದಿವಸ ಧಾರವಾಡ ಸಂತೆಗೆ ಬರುವಾಗ, ಮಾರ್ಗದಲ್ಲಿ ಈ ಬಸನಗೌಡರ ದೀನಸ್ಥಿತಿಯನ್ನು ಕೇಳಿ ಮರುಗಿ, ಇವರನ್ನು ಕರಕೊಂಡು ಬಂದು, ತಮ್ಮ ಆಪ್ತರಾಗಿದ್ದ[೧] ರಾ.ಸಾ॥ರುದ್ರಗೌಡ ಚೀಟ್ನೀಸರಿಗೆ ಭೆಟ್ಟಿಮಾಡಿಸಿ, ಅವರಿಗೆ ಯಾವದ್ವೃತ್ತಾಂತವನ್ನು ತಿಳಿಸಿದರು. ಈ ಅನ್ಯಾಯದ ತೀರ್ಪನ್ನೂ ಬ್ರಾಹ್ಮಣ ಕಾಮದಾರರ ಕಪಟವ್ಯೂಹವನ್ನೂ ಕಂಡು, ರಾವಸಾಹೇಬರವರು ಬಹು ವ್ಯಸನಪಟ್ಟರು. ಅನ್ಯಾಯವೂ, ಅಸತ್ಯವೂ, ಎಳ್ಳಷ್ಟೂ ಸೇರದ ರಾ.ಸಾ॥ರವರ ಮುಂದೆ ಖೊಟ್ಟಿತನದ ಗುಡ್ಡವನ್ನೇ ಕಿತ್ತು ತಂದಿಟ್ಟಂತಾಯಿತು. ಇವರ ಚಿತ್ತವೃತ್ತಿಯು ಸ್ವಸ್ಥವಾಗಲಿಲ್ಲ. ವೀರವೈಷ್ಣವರೂ, ದೊಡ್ಡ ಇನಾಮದಾರರೂ, ಜನರಲ್ಲಿ ದೊಡ್ಡ ವರ್ಚಸ್ವಿಗಳೂ ಆದ ವ್ಯಾಸರಾಯರು ಕಪಟತನದಿಂದ ಬಸನಗೌಡರ ವತನವನ್ನು ಅಪಹರಿಸಿ, ಅವರನ್ನು ಅನ್ನಾನುಗತಿ ಮಾಡಿದ್ದನ್ನು ನೋಡಿ, ಇವರ ಪಿತ್ತವು ನೆತ್ತಿಗೇರಿತು. ಈ ದುರ್ಬಲರಾದ ಬಸನಗೌಡರ ಕಡೆಯಿಂದ ಇನ್ನುಮೇಲೆ ಹೆಚ್ಚಿನ ಕಾರ್ಯವೇನು ಆಗುವ ಸಂಭವವಿಲ್ಲೆಂದೂ, ಈ ಮಹತ್ತಾದ ವತನವು ವ್ಯರ್ಥವಾಗಿ ಅನ್ನಿಗರ ಪಾಲಾಗಿ ಹೋಗುವದೆಂದೂ, ಈ ಅನ್ಯಾಯದ ವೊಟ್ಟಿಯನ್ನು ಕಿವಿಮುಟ್ಟಿ ಕೇಳಿ, ಸುಮ್ಮನೆ ಕೂಡ್ರುವದು ಅಯೋಗ್ಯವೆಂದೂ, ಏನೇ ಆಗಲಿ, ಈ ಕೆಲಸದಲ್ಲಿ ಕೈಲಾದ ಮಟ್ಟಿಗೆ ಸಹಾಯಮಾಡಿ, ಈ ಬಡಗೌಡರ ಬವಣೆಯನ್ನು ದೂರಮಾಡಬೇಕೆಂದೂ ಯೋಚಿಸಿ, ಬಸನಗೌಡರಿಗೆ ಮೆ॥ಕಲೆಕ್ಟರ ಸಾಹೇಬರ ಕಡೆಗೆ ಯಾವ ದ್ವೃತ್ತಾಂತವನ್ನು ಬರೆದು, ಒಂದು ಅರ್ಜಿಯನ್ನು ಕೊಡಿರೆಂದು ಹೇಳಿದರು. ರಾವಸಾಹೇಬರು ಹೇಳಿದಂತೆ ಕೂಡಲೆ ಅರ್ಜಿಯು ದಾಖಲ ಮಾಡಲ್ಪಟ್ಟಿತು. ಕಪಟತನದಿಂದ ಇನಾಮದಾರ ವ್ಯಾಸರಾಯರು ನನ್ನ ಗೌಡಿಕಿ ವತನವೃತ್ತಿಯನ್ನೆಲ್ಲ ಅಪಹಾರಮಾಡಿರುವರೆಂತಲೂ, ಯೋಗ್ಯವಿಚಾರಮಾಡಿ ಪೂರ್ವದಿಂದಲೂ ಇದ್ದ ನನ್ನ ಗೌಡಕೀ ವತನವನ್ನು ನನಗೆ ಕೊಡಿಸಬೇಕೆಂತಲೂ ಈ ಅರ್ಜಿಯ ಅಭಿಪ್ರಾಯವಿತ್ತು. ಈ ಕಾಲಕ್ಕೆ ಮೆಹರ್ಬಾನ ಜೇ.ಆರ್. ಮಿಡಲ್ಟನ್ ಸಾಹೇಬರೇ ಕಲೇಕ್ಟರರಿದ್ದರು. ಮೆ॥ಮ್ಯೂರ ಸಾಹೇಬರು ವರ್ಗವಾಗಿ ಹೋಗಿದ್ದರು. ಮತ್ತು ಇದೇ ಸಂಧಿಯಲ್ಲಿ ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪನವರು ಧಾರವಾಡಕ್ಕೆ ಆಕ್ಟಿಂಗ ಹುಜೂರ ಡಿಪೂಟಿ ಕಲೇಕ್ಟರರಾಗಿ ಬಂದರು. ಮ್ಯೂರ್‌ಸಾಹೇಬರು ಈ ವತನೀಗೌಡಕಿಯ ಪ್ರಕರಣದ ತೀರ್ಪನ್ನು ವಾಸ್ತವಿಕವಾಗಿ ಮಾಡದೆ, ಕಾಯದೆಯ ವಿರುದ್ಧವಾಗಿ ತಪ್ಪುಮಾಡಿರುವದರಿಂದ ಪುನಃ ಚೌಕಸಿಯಾಗಬೇಕೆಂದು ಮೆ॥ ಕಲೇಕ್ಟರ

---

೧. ಬೀಗರು.

ಸಾಹೇಬರು ಹುಕುಮು ಮಾಡಿದ್ದರು. ಮ್ಯೂರ ಸಾಹೇಬರ ವರ್ಗವಾದದರಿಂದ ನಾಲ್ಕೈದು ತಾಲೂಕುಗಳ ವ್ಯವಸ್ಥೆಮಾಡಬೇಕಿತ್ತು. ಆಗ ರಾ.ಬ॥ರುದ್ರಗೌಡ ಚೀಟ್ಣಿಸರು ವ್ಯವಸ್ಥೆಯನ್ನು ಮಾಡಿದರು. ಅದರಿಂದ ಈ ಗೌಡಕೀ ವತನದ ಪ್ರಕರಣವು ಚೌಕಸಿಗಾಗಿ ರಾ.ಬ॥ಗುರುಸಿದ್ಧಪ್ಪನವರ ಕಡೆಗೆ ಬಂತು. ಈ ಕೃತಿಯು ರಾ.ಸಾ॥ರುದ್ರಗೌಡರು ರಾಜ್ಯತಂತ್ರಗಳನ್ನು ಬಲ್ಲವರೆಂತಲೂ, ರಾಜ್ಯಕಾರ್ಯ ಧುರೀಣರೆಂತಲೂ, ಸತ್ಯದ ಕಡೆಗೇ ಇವರ ಮನಃಪ್ರವಾಹವು ಪ್ರವಹಿಸುವದೆಂತಲೂ ದಿಗ್ದರ್ಶನಮಾಡುತ್ತದೆ.

ರಾ.ಬ॥ಗುರುಸಿದ್ಧಪ್ಪನವರ ಕಡೆಗೆ ಈ ಪ್ರಕರಣವು ವಿಚಾರಿಸಲ್ಪಡುತ್ತದೆಂದು ವ್ಯಾಸರಾಯರು ಆನಂದಪಟ್ಟರು. ಯಾಕಂದರೆ ವ್ಯಾಸರಾಯರೂ, ಗುರುಸಿದ್ಧಪ್ಪನವರೂ ಕೂಡಿಯೇ ಸಾಲೆಯನ್ನು ಕಲಿತದ್ದರಿಂದ ಮಿತ್ರಪಕ್ಷದಿಂದ ತಮ್ಮಂತೆ ಮಾಡುವರೆಂದು ನೆರೆನಂಬಿದ್ದರು. ಪ್ರಮಾಣಿಕರಾದ ರಾ.ಬ॥ಗುರುಸಿದ್ಧಪ್ಪನವರ ಕಡೆಗೆ ಸತ್ಯಾಸತ್ಯ ನಿರ್ಣಯವಾಗಿ ಯೋಗ್ಯ ಠರಾವು ಹೇಳಲ್ಪಡುತ್ತದೆಂದು ಬಸನಗೌಡರು ಆನಂದಿಸಿದ್ದರು. ಮುಂದೆ ರಾ.ಬ॥ಗುರುಸಿದ್ಧಪ್ಪನವರು ಯಾವ ಪಕ್ಷವನ್ನೂ ಹಿಡಿಯದೆ, ಸತ್ಯಪಕ್ಷವನ್ನೇ ಆಶ್ರಯಿಸಿ, ತಮಗೆ ತಿಳಿದಂತೆ ಈ ಕಣವೀಹೊನ್ನಾಪುರದ ಗೌಡಿಕಿಯ ವತನವು ಬಸನಗೌಡರದೇ ನಿಜವೆಂದೂ, ಈ ವತನದ ಅರ್ಧಭಾಗಕ್ಕೆ ಮಾತ್ರ ಇವರು ಬಾಧ್ಯರೆಂದೂ, ಉಳಿದರ್ಧ ಭಾಗಕ್ಕೆ ಇವರ ಅಣ್ಣತಮ್ಮಂದಿರಾದ ದೇವಲಿಂಗೀ ಕೊಪ್ಪದ ಲಿಂಗನಗೌಡರು ಬಾಧ್ಯರೆಂದೂ ನಿರ್ಣಯಿಸಿದರು. ಕೂಡಲೆ ಬಸನಗೌಡರು ಸರ್ವ ಗೌಡಿಕಿಯ ವತನಕ್ಕೆ ನಾನೇ ಬಾಧ್ಯಸ್ಥನೆಂತಲೂ, ಇದರ ಯೋಗ್ಯ ವಿಚಾರವಾಗಬೇಕೆಂತಲೂ ಮೆ॥ಕಲೆಕ್ಟರ ಸಾಹೇಬರಕಡೆಗೆ ಅಪೀಲು ಮಾಡಿದರು. ಸದರೀ ವತನಕ್ಕೆ ಇವರು ಯಾರೂ ಹಕ್ಕುದಾರರಲ್ಲವೆಂತೂ, ಸರ್ವಸ್ವಾಮಿತ್ವಕ್ಕೆ ತಾನೇ ಬಾಧ್ಯಸ್ಥನೆಂತಲೂ ವ್ಯಾಸರಾಯರು ವಾದಹೂಡಿದರು.

ಮೆ॥ಕಲೇಕ್ಟರ ಮಿಡಲ್ಟನ್ ಸಾಹೇಬರ ಕಡೆಗೆ ಈ ಅಪೀಲಿನ ವಿಚಾರವು ನಡೆಯುವದೆಂಬದನ್ನು ತಿಳಿದು, ವ್ಯಾಸರಾಯರು ಸಮಾಧಾನವನ್ನು ಹೊಂದಲಿಲ್ಲ. ಯಾಕಂದರೆ ಸಾತ್ವಿಕ ರಾಜನಿಗೆ ಸತ್ಯಪ್ರಧಾನಿಯಿದ್ದಂತೆ ನ್ಯಾಯನಿಷ್ಠುರಾದ ಮೆ॥ ಮಿಡಲ್ಟನ್ ಕಲೇಕ್ಟರರಿಗೆ ಪ್ರಮಾಣಿಕರಾದ ರಾ.ಸಾ॥ರುದ್ರಗೌಡರು ಚೀಟ್ಣಿಸರಿದ್ದದರಿಂದ ಇವರ ವಿಚಾರದ ಮುಂದೆ ತನ್ನ ಬೇಳೆ ಬೆಯ್ಯುವದಿಲ್ಲೆಂದೂ, ತನ್ನ ಹುಳುಕೆಲ್ಲ ಹೊರಬೀಳುವದೆಂದೂ ವ್ಯಾಸರಾಯರು ಭಯಗ್ರಸ್ತರಾದರು. ಆದರೂ ಇದಕ್ಕೇನಾದರೊಂದು ಕಪಟತಂತ್ರವನ್ನು ಮಾಡಬೇಕೆಂದೂ, ರಾ.ಸಾ॥ ರುದ್ರಗೌಡ ಚೀಟ್ಣಿಸರಿಗೆ ಹೇಳಿಕೊಳ್ಳಬೇಕೆಂದು ಕಲ್ಪಿಸಿದರು. ಆದರೆ ವ್ಯಾಸರಾಯರ ಇಂಥ ಕ್ಷುದ್ರಕಲ್ಪನೆಗಳಿಗೆ ರಾ.ಸಾ॥ರುದ್ರಗೌಡರು ಎಂದಿಗಾದರೂ ಕಿವಿಗೊಡುವರೇ! ಆದರೆ ಚೀಟ್ಣಿಸರಿಗೆ ಭೆಟ್ಟಿಯಾಗಲಿಕ್ಕೆ ಅವರೊಬ್ಬರಿಗೆ ಧೈರ್ಯವಾಗಲಿಲ್ಲ. ಇದೇ ಸಮಯದಲ್ಲಿ ರಾವಬಹದ್ದೂರ ಗಿಲಗಿಂಚಿ ಗುರುಸಿದ್ಧಪ್ಪನವರು ರಜೆ ತೆಗೆದುಕೊಂಡು ಬೆಳಗಾವಿಯಿಂದ ಧಾರವಾಡಕ್ಕೆ ಬಂದಿದ್ದರು.[೪] ಇವರು ಬಂದ ಸುದ್ದಿಯನ್ನು ತಿಳಿದವರೇ ವ್ಯಾಸರಾಯರು ರಾ.ಬ॥ ಗುರುಸಿದ್ಧಪ್ಪನವರಿಗೆ ಭೆಟ್ಟಿಯಾಗಿ, ತಾವು ಕಲ್ಪಿಸಿಕೊಂಡ ಕೃತ್ರಿಮ ಬೋಧನೆಯನ್ನೆಲ್ಲ ಅವರ ಕಿವಿಯಲ್ಲಿ ತುಂಬಿದರು. ಅಂದರೆ ರಾ.ಬ॥ಗುರುಸಿದ್ಧಪ್ಪನವರ ಮಧ್ಯಸ್ಥಿಕೆಯಿಂದ ರಾ.ಸಾ॥ರುದ್ರಗೌಡರಿಗೆ ಹೇಳಿಸಿ, ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂಬದೇ ವ್ಯಾಸರಾಯ ಹಂಚಿಕೆ.

---

೪. ರಾ.ಬ॥ ಗುರುಸಿದ್ಧಪ್ಪನವರು ಈ ಪ್ರಕರಣದ ವಿಚಾರಣೆಯನ್ನು ತಾವು ಮಾಡಿದ ಕಾಲಕ್ಕೆ ಧಾರವಾಡಕ್ಕೆ ಅ.ಹು.ದಿ॥ ಕಲೇಕ್ಟರರಾಗಿ ಬಂದಿದ್ದು, ಪುನಃ ತಮ್ಮ ಕಾಹೀಮ ಜಾಗೆಯ ಮೇಲೆ ಬೆಳಗಾವಿಗೆ ಹೋಗಿದ್ದರು. ಈ ಅಪೀಲ ವಿಚಾರಣೆಯ ಕಾಲಕ್ಕೆ ತಮ್ಮ ಮನೆತನದ ಕೆಲಸದ ಸಲುವಾಗಿ ರಜೆಯ ಮೇಲೆ ಧಾರವಾಡಕ್ಕೆ ಬಂದಿದ್ದರು.

ರಾ.ಬ॥ಗುರುಸಿದ್ಧಪ್ಪನವರು ಬಂದದ್ದನ್ನು ತಿಳಿದು ರಾ.ಸಾ॥ರುದ್ರಗೌಡರು ಅವರಿಗೆ ಮೇಜವಾನಿಯನ್ನು ಮಾಡಿದರು. ಇವರ ಮೇಜವಾನಿಯು ವ್ಯಾಸರಾಯರ ಕೆಲಸಕ್ಕೆ ಬಲು ಸಾಧಿಸಿದಂತಾಯಿತು. ರಾ.ಸಾ॥ಚೀಟ್ನೀಸರ ಮನೆಯಲ್ಲಿ ಒಳಗೆ ಭೋಜನ ಸಮಾರಂಭವು ನಡೆದಾಗ ವ್ಯಾಸರಾಯರು ಕಡಲೆಯಗಿಡ ಮುಂತಾದವುಗಳನ್ನು ಹೊರಿಸಿಕೊಂಡು ಬಂದು ಹೊರಗೆ ಕೂತುಕೊಂಡಿದ್ದರು. ಊಟಾದನಂತರ ಇಬ್ಬರೂ ಪಡಸಾಲೆಯೊಳಗಿರುವ ಕೋಣೆಗೆ ಬಂದು ತಾಂಬೂಲ ತೆಗೆದುಕೊಳ್ಳುತ್ತಿರುವಾಗ್ಗೆ, ಹೊರಗೆ ವ್ಯಾಸರಾಯರು ಬಂದದ್ದನ್ನು ತಿಳಿದು ರಾ.ಬ॥ ಗುರುಸಿದ್ಧಪ್ಪನವರು ಅವರನ್ನು ಒಳಗೆ ತಮ್ಮ ಬಳಿಗೆ ಕರೆದರು. ಒಳಗೆ ಬಂದಕೂಡಲೆ ಒಮ್ಮಿಂದೊಮ್ಮೆ ಈ ಬಲಾಢ್ಯ ಇನಾಮದಾರರಾದ ವ್ಯಾಸರಾಯರು ತಮ್ಮ ರುಮಾಲ ತೆಗೆದು ರಾ.ಸಾ॥ ರುದ್ರಗೌಡರ ಎರಡೂ ಪಾದಗಳನ್ನು ತೆಗೆದುಕೊಂಡು, ತಮ್ಮ ತಲೆಯ ಮೇಲೆ ಇಟ್ಟುಕೊಂಡರು. ಇದನ್ನು ನೋಡಿ ರಾವಸಾಹೇಬರು ಗಾಬರಿಯಾಗಿ "ವ್ಯಾಸರಾಯರೇ ಇದೇನಿದು! ತಾವು ದೊಡ್ಡವರೂ, ದೇಸಾಯರೂ, ಇನಾಮದಾರರೂ ಇದ್ದು, ಈ ಪ್ರಕಾರ ಅನುಚಿತವಾದ ಕೆಲಸವನ್ನು ಮಾಡುವದು ಅಯೋಗ್ಯ"ವೆಂದು ಎಷ್ಟು ಹೇಳಿದರೂ ಕಾಲುಗಳನ್ನು ಬಿಡದೆ ಗಟ್ಟಿಯಾಗಿ ಹಿಡುಕೊಂಡು, "ತಾವು ತಮ್ಮ ಅಭಯಹಸ್ತವನ್ನು ನನ್ನ ಮಸ್ತಕದ ಮೇಲೆ ಇಡದ ವಿನಹಾ ನಾನು ಸರ್ವಥಃ ಏಳುವದಿಲ್ಲೆ"ಂದು ವ್ಯಾಸರಾಯರು ನಿಷ್ಠುರವಾಗಿ ಹೇಳಿದರು. ಮತ್ತು ಹೇಗಾದರೂ ಮಾಡಿ ಹಸ್ತವನ್ನಿಡಿಸಬೇಕೆಂದು ಗುರುಸಿದ್ಧಪ್ಪನವರನ್ನು ಪರಿಪರಿಯಿಂದ ಬೇಡಿಕೊಂಡರು. ಅದಕ್ಕೆ ಗುರುಸಿದ್ಧಪ್ಪನವರು ಮುಗ್ಧಭಾವದಿಂದ ರಾ.ಸಾ॥ರುದ್ರಗೌಡರಿಗೆ ಹಸ್ತವನ್ನಿಟ್ಟು ಬಿಡಿರೆಂದು ಹೇಳಿದರು. ಅದಕ್ಕೆ ರಾ.ಸಾ॥ರುದ್ರಗೌಡರು "ಏನಿರಿ, ಗುರುಸಿದ್ಧಪ್ಪನವರೇ! ನಿಮಗೆ ಇನ್ನೂ ಮರುಳತನ ಬಿಟ್ಟಿಲ್ಲವೇನು? ನ್ಯಾಯಮಾರ್ಗದಲ್ಲಿ ಸಾರಾಸಾರ ವಿಚಾರಮಾಡದೆ ಹಸ್ತವನ್ನಿಡುವದು ಯೋಗ್ಯವಲ್ಲ. ದುರ್ಮಾರ್ಗಿಗಳ ಕಪಟಜಾಲಕ್ಕೆ ಒಳಗಾಗಿ, ಬಡಜನರನ್ನು ಬವಣೆಗೇಡಾಗಿ ಮಾಡುವದು ನ್ಯಾಯಧರ್ಮವಲ್ಲ. ನ್ಯಾಯಕ್ಕೂ, ಸೌಖ್ಯಕ್ಕೂ ಆಧಾರಭೂತವಾದ ಸತ್ಯಸ್ತಂಭದ ಆಶ್ರಯವನ್ನು ನನ್ನಿಂದ ಬಿಡೋಣವಾಗದು. ಸತ್ಯವನ್ನೇ ಆಶ್ರಯಿಸಿ ಪ್ರಸಂಗ ವಿಶೇಷದಲ್ಲಿ ನೋಡೋಣ"ವೆಂದು ದುಂಡು ಮಾತುಗಳನ್ನಾಡಲು, ವ್ಯಾಸರಾಯರು ತಮ್ಮ ತಲೆಯನ್ನು ಮೇಲಕ್ಕೆ ತೆಗೆದರು. ಹತ್ತುಸಾವಿರ ರೂಪಾಯಿ ವತನದಾರನ ಮಸ್ತಕದ ಪ್ರಣಿಪಾತವನ್ನು ತಮ್ಮ ಪಾದಗಳು ಹೊಂದುತ್ತಿರಲು ರಾ.ಸಾ॥ರುದ್ರಗೌಡರು ಅಸತ್ಯದ ಕಡೆಗೆ ತಮ್ಮ ಮನವನ್ನು ಎಳ್ಳಷ್ಟೂ ಎಳೆಸಲಿಲ್ಲ. ಆದರೆ ರಕ್ಕಸರ ಮಾಯಾತಂತ್ರದಿಂದ ತ್ರಿಕಾಲಜ್ಞಾನಿಯಾದ ಶ್ರೀರಾಮನು ಹೇಮಮೃಗಕ್ಕೆ ಮರುಳಾದಂತೆ ಕಪಟಮಾಯ ಹೃದಯರಾದ ಬ್ರಾಹ್ಮಣರ ಮೋಹದ ಮಾತುಗಳಿಗೆ ನಿಷ್ಕಲಂಕರೂ, ನಿರ್ಮಲ ಮನಸ್ಕರೂ ಆದ ಗುರುಸಿದ್ಧಪ್ಪನವರು ಒಂದು ವೇಳೆ ಮರುಳಾಗಿ ವಿಚಾರಮಾಡದೆ ಹಸ್ತವನ್ನಿಡಿರೆಂದು ರಾ.ಸಾ॥ ಚೀಟ್ನಿಸರಿಗೆ ಹೇಳಿದರೆಂದು ಹೇಳಬಹುದು. ರಾ.ಸಾ॥ರುದ್ರಗೌಡರ ಗಂಭೀರ ಹಾಗೂ ಸಯುಕ್ತಿಕ ಮಾತುಗಳನ್ನು ಕೇಳುತ್ತಲೆ ರಾ.ಬ॥ ಗುರುಸಿದ್ಧಪ್ಪನವರು ವಿಚಾರಕ್ಕೆ ತಂದುಕೊಂಡು ಸ್ತಬ್ಧರಾದರು. ವ್ಯಾಸರಾಯರು ತಮ್ಮ ಕೀಳತನಕ್ಕೆ ತಾವೇ ನಾಚಿಕೊಂಡು ಹೊರಟೆದ್ದು ಹೋದರು.

ಮುಂದೆ ಈ ಗೌಡಕೀ ವತನದ ಅಪೀಲ ವಿಚಾರಣೆಯು ನಡೆದ ಕಾಲಕ್ಕೆ ರಾ.ಸಾ॥ರುದ್ರಗೌಡರು ಈ ಪ್ರಕರಣದ ಸತ್ಯಾಂಶವನ್ನು ಮೆ॥ಕಲೇಕ್ಟರ ಸಾಹೇಬರಿಗೆ ತಿಳಿಸಿಕೊಟ್ಟಿದ್ದು ಒಳ್ಳೆ ಚಮತ್ಕಾರವಿರುತ್ತದೆ. ವ್ಯಾಸರಾಯರು ಆರಂಭದಿಂದ ಕಡೆತನದ ಎಷ್ಟು ಜಾಣತನದಿಂದ ಈ ಪ್ರಕರಣವನ್ನು ಎಷ್ಟು ಬನಾವಟರೀತಿಯಿಂದ ಸೃಜಿಸಿದ್ದರೋ, ಅದಕ್ಕೂ ಹೆಚ್ಚಿನ ಚಾಣಾಕ್ಷತನವನ್ನು ಈ ಚೀಟ್ನಿಸರು ಹೊರಪಡಿಸಿದರು. ವ್ಯಾಸರಾಯರು, ಸದರೀ ಗೌಡಿಕಿ ವತನವು ಪೂರ್ವದಿಂದಲೂ, ನಮ್ಮ ಕಡೆಗೇ ಇರುವದೆಂತಲೂ, ಅದರ ಸರ್ವಸ್ವಾಮಿತ್ವವು ನಮ್ಮದೇ ಎಂತಲೂ, ನಾವು ನಮ್ಮ ತರ್ಫೆಯಿಂದಲೇ (ಮುಖಾಂತರವಾಗಿಯೇ) ಬಸಯ್ಯ ಪೂಜಾರಿ ಎಂಬವನಿಗೆ ಗೌಡಿಕಿಯನ್ನು ನೇಮಿಸಿರುವೆವೆಂತಲೂ, ಈ ಬಸಯ್ಯನಿಗೇ ಜನರೆಲ್ಲರು ಬಸನಗೌಡನೆಂದೆನ್ನುತ್ತಾರೆಂತಲೂ, ಈಗ ಅಪೀಲ

ಮಾಡಿದ ಈ ಬಸನಗೌಡರು ಸುಮ್ಮನೆ ವಾದಹೂಡಿರುವನೆಂತಲೂ, ಇನ್ನೂ ಅನೇಕ ತರದಿಂದ ಕೃತ್ರಿಮವನ್ನು ಕಲ್ಪಿಸಿ ಅನ್ಯಾಯವಾಗಿ ಸ್ವಾರ್ಥವನ್ನೇ ಸಾಧಿಸಹತ್ತಿದರು. ಅದಕ್ಕೆ ರಾ.ಸಾ॥ರುದ್ರಗೌಡ ಚೀಟ್ನೀಸರು ಈಗ ಅಪೀಲ ಮಾಡಿದ ಎಲ್ಲಪ್ಪಗೌಡ ಉರ್ಫ ಬಸನಗೌಡರೇ ಮೂಲಗೌಡರೆಂತಲೂ, ಇವರು ಕೆಲಸಮಾಡಿದ ಬಗ್ಗೆ ಎಷ್ಟೋ ಕಾಗದಪತ್ರಗಳು ಇರುವವೆಂತಲೂ, ಹಿಂದೆ ಆ ಗ್ರಾಮದ ಮೋಜಣಿಯಾಗುವ ಕಾಲಕ್ಕೆ ಈ ಬಸನಗೌಡರೇ ಕೆಲಸಮಾಡುತ್ತಿದ್ದರೆಂತಲೂ, ಆಗ್ಗೆ ಮೋಜಣೀದಾರರ ಕೂಡ ಮೋಜಣಿಗೆ ಹೋಗಿದ್ದ ಅನೇಕ ಜನರಲ್ಲಿ ಬಸನಗೌಡರ ಕೂಡ ಬಸಯ್ಯ ಪೂಜಾರಿ ಎಂಬವನೂ ಇದ್ದದ್ದು ಪತ್ರಿಕೆಗಳಲ್ಲಿ ನಮೂದವಾಗಿರುವದೆಂತಲೂ, ಈ ಪೂಜಾರಿಯೇ ಆಗ್ಗೆ ಗೌಡನಾಗಿದ್ದರೆ ಬಸವಯ್ಯ ಪೂಜಾರಿ ಎಂಬ ಬೇರೊಬ್ಬ ಮನುಷ್ಯನು ಎಲ್ಲಿ ಬರುತ್ತಿದ್ದನೆಂತಲೂ ತೀರ ಸಬಲವಾದ ಆಧಾರಗಳನ್ನೂ, ಪ್ರತ್ಯಕ್ಷಪುರಾವೆಗಳನ್ನೂ ತೋರಿಸಿ ಸಿದ್ಧಮಾಡಿಕೊಡಲು, ಮೆ॥ ಮಿಡಲ್ಟನ್ ಸಾಹೇಬರವರು ಇವರ ಅಸಾಧಾರಣ ಶೋಧಕ್ಕೂ, ಅಪ್ರತಿಮ ಚಾತುರ್ಯಕ್ಕೂ ತಲೆದೂಗಿದರು. ವ್ಯಾಸರಾಯರ ಅಸತ್ಯಮಯವಾದ ಹುಳುಕೆಲ್ಲ ಹೊರಬಿತ್ತು. ಗಂಟಲು ಹಿಡಿದಷ್ಟೇ ತುತ್ತು ಹಾಕುವದು ಯೋಗ್ಯವು. ತುತ್ತು ದೊಡ್ಡದಾದರೆ ಕುತ್ತಿಗೆ ಸಿಕ್ಕು ಹೊರಬೀಳುವದೆಂಬ ತತ್ವವು ಆಶಾತುರರಾದ ವ್ಯಾಸರಾಯರಿಗೆ ಗೊತ್ತಾಗಲಿಲ್ಲೆಂಬಂತೆ ತೋರುತ್ತದೆ. ಮೆ॥ಕಲೇಕ್ಟರಸಾಹೇಬರವರು ಇದರ ನಿಜಾಂಶವನ್ನು ತಿಳಿದು ಈ ಗೌಡಿಕೀ ವತನದ ಸರ್ವಸ್ವಾಮಿತ್ವಕ್ಕೆ ಬಸನಗೌಡರೇ ಬಾಧ್ಯರೆಂದೂ, ಇವರೇ ಮೂಲಗೌಡರೆಂದೂ ನಿರ್ಣಯಿಸಿದರು. ಮುಂದೆ ಈ ವತನವನ್ನೆಲ್ಲ ಬಸನಗೌಡರ ವಶಕ್ಕೆ ಕೊಡಿಸುವ ಬಗ್ಗೆ ಕಮಿಶನರ ಸಾಹೇಬರ ಕಡೆಯಿಂದ ಸರಕಾರದ ತನಕ ಬರೆದುಹೋಗಿ, ಗೌಡಿಕಿಯ ಸರ್ವವತನವನ್ನೆಲ್ಲ ಬಸನಗೌಡರ ವಶಕ್ಕೆ ಕೊಡಬೇಕೆಂದು ಸರಕಾರ ಠರಾವವಾಯಿತು. ಆಗ ಈ ವತನಿಯ ಭೂಮಿಯೆಲ್ಲ ಬೆಳೆಯಿಂದ ಭರಿತವಾಗಿತ್ತು. ಬೆಳೆಯೆಲ್ಲ ಹಂಪಾಗಿ ಕೊಯ್ಯಲಿಕ್ಕೆ ಬಂದು ಜೋಳದ ನಿಲವು ಹೊಲದಲ್ಲಿ ಹಾಗೇ ನಿಂತುಕೊಂಡಿತ್ತು. ಸರಕಾರಿಯ ಹುಕುಮಿನಂತೆ ಬೆಳೆಸಹಿತ ವತನಿಯ ಭೂಮಿಯನ್ನು ಕೂಡಲೆ ಬಸನಗೌಡರ ಸ್ವಾಧೀನಕ್ಕೆ ಕೊಡಲ್ಪಟ್ಟಿತು. (ಸನ್ ೧೮೮೭ ನೆಯ ಇಸವಿ). ಪಲದ್ರೂಪವಾದ ವತನವೆಲ್ಲ ಕೈಬಿಟ್ಟು ಹೋದದರಿಂದ ವ್ಯಾಸರಾಯರು ಹೊಟ್ಟೆಬೇನೆ ಹಚ್ಚಿಕೊಂಡು ಸತ್ತುಹೋದರು.

ಆದರೆ ವ್ಯಾಸರಾಯರ ಪುತ್ರರಾದ ರಾಮರಾಯರು ಇಷ್ಟಕ್ಕೆ ಸುಮ್ಮನೆ ಕೂಡ್ರಲಿಲ್ಲ. ಈ ಗೌಡಿಕಿಯ ವತನದ ತೀರ್ಪು ಅನ್ಯಾಯವಾಗಿ ಮಾಡಲ್ಪಟ್ಟಿತೆಂದು ಬಸನಗೌಡರ ಮೇಲೂ, ಸರಕಾರದ ಮೇಲೂ ದಾವೆಯನ್ನು ತಂದರು. ಜಜ್ಜಕೋರ್ಟಿನಲ್ಲಿ ಈ ಪ್ರಕರಣದ ವಿಚಾರಣೆಯು ನಡೆದು, ರಾಮರಾಯರೇ ಈ ವತನದ ಗೌಡರೆಂತಲೂ, ಬಹುದಿವಸದಿಂದ ಇವರ ವಹಿವಾಟಿಯಲ್ಲಿರುವದು ನಿಜವೆಂತಲೂ, ಬಸನಗೌಡರು ವತನದಾರರಲ್ಲೆಂತಲೂ ಸರಕಾರ ಠರಾವಿನ ವಿರುದ್ಧವಾಗಿ ತೀರ್ಪು ಆಯಿತು. ತಮ್ಮ ವಿರುದ್ಧ ನಿರ್ಣಯವಾದದ್ದರಿಂದ ಬಸನಗೌಡರು ಮುಂಬಯಿ ಹಾಯಕೋರ್ಟಿಗೆ ಅಪೀಲು ಮಾಡಲು, ಅಲ್ಲಿಯೂ ಜಜ್ಜಕೋರ್ಟಿನವರು ಮಾಡಿದ ಠರಾವವನ್ನೇ ಕಾಹೀಮು ಮಾಡಿದರು. ಅದರಿಂದ ರಾಮರಾಯರ ಚವರಿಯು ಬೀಸಹತ್ತಿತು. ಜಜ್ಜಕೋರ್ಟಿನಲ್ಲಿಯೂ, ಹಾಯಕೋರ್ಟಿನಲ್ಲಿಯೂ ತಮ್ಮಂತೆ ಠರಾವವಾದದರಿಂದ ಮುಂದೆ ರಾಮರಾಯರು ತಾವೇ ವತನದಾರರಾದದರಿಂದ ತಮ್ಮ ಹೆಸರನ್ನೇ ದಾಖಲಮಾಡಬೇಕೆಂದು ಅರ್ಜಿಯನ್ನು ಮಾಡಿದರು. ಈ ಸಮಯದಲ್ಲಿ ಅಂದರೆ ಸನ್ ೧೮೮೯ನೇ ಇಸವಿಯ ಮಾರ್ಚ ತಿಂಗಳಲ್ಲಿ ಮೆ॥ಜೇ.ಆರ್. ಮಿಡಲ್ಟನ್ ಸಾಹೇಬರು ದಕ್ಷಿಣಭಾಗಕ್ಕೆ ಆಕ್ಟಿಂಗ್ ಕಮೀಶನರರಾಗಿದ್ದರು. ರಾ.ಸಾ॥ರುದ್ರಗೌಡರು ಕಾರವಾರದ[೫] ದಪ್ತರರಾಗಿದ್ದರು. ಮೆ॥

---

೫. ಇವರು ಕಾರವಾರದ ದಪ್ತರದಾರರಾಗಿ ಹೋದ ಸಂಗತಿಯು ಮುಂದೆ ಕ್ರಮೇಣ ಬರುವದು.

ಕಮೀಶನರ ಮಿಡಲ್ಟನ್ ಸಾಹೇಬರಿಗೆ ಈವತನೀ ಗೌಡಿಕಿ ಪ್ರಕರಣದ ಸಾದ್ಯಂತ ವೃತ್ತಾಂತವು ಮೊದಲೇ ಗೊತ್ತಿತ್ತು. ಕಾರಣ ಇವರಿಂದ ಯಾವತ್ತು ನಿಜಸಂಗತಿಯು ಬರೆಯಲ್ಪಟ್ಟು, ಸನ್ ೧೮೮೯ನೆಯ ಇಸವಿಯ ಎಪ್ರೀಲ ಅಥವಾ ಮೇ ತಿಂಗಳಲ್ಲಿ ಸರಕಾರಕ್ಕೆ ರಿಪೋರ್ಟು ಹೋಯಿತು. ಸರಕಾರದಲ್ಲಿ ಈ ಪ್ರಕರಣದ ವಿಚಾರವು ಪುನಃ ನಡೆದು, ಈ ವತನದ ಮೇಲೆ ಇನಾಮದಾರರ ಹಕ್ಕು ಎಷ್ಟು ಮಾತ್ರವೂ ಇಲ್ಲೆಂದೂ, ಎಲ್ಲ ವತನಗಳ ಮೇಲೆ ಸರಕಾರದ ಸ್ವಾಮಿತ್ವವೇ ಇರುವದೆಂದೂ, ಸರಕಾರದ ಇಚ್ಛೆಯಂತೆ ವತನಗಳು ಬೇಕಾದವರಿಗೆ ಕೊಡಲ್ಪಡುವವೆಂದೂ, ಈಗಿರುವ ವತನದಾರರಿಗೆಲ್ಲ ಮೊದಲು ಇದೇ ಪ್ರಕಾರವೇ ವತನಗಳು ಸರಕಾರದಿಂದಲೇ ಕೊಡಲ್ಪಟ್ಟಿರುವವೆಂದೂ ನಿರ್ಣಯಸಲ್ಪಟ್ಟು, ಈ ಕಣವೀಹೊನ್ನಾಪುರದ ವತನವನ್ನು ಸರಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು, ಪುನಃ ಬಸನಗೌಡರಿಗೆ ಈ ವತನವನ್ನು ಹೊಸದಾಗಿ ಇನಾಮು ಕೊಟ್ಟರು. ಸರಕಾರ ಠರಾವ ನಂಬರ ೬೮೯೦/ ೧೫-೯-೮೯ ಮುಲಕೀಖಾತೆ. ಈ ಅತ್ಯುಪಯುಕ್ತವಾದ ಠರಾವಿನ ಮುದ್ರಣವಾದ ಪ್ರತಿಗಳು ಮುಂಬಯಿ ಇಲಾಖೆಯ ಎಲ್ಲ ಜಿಲ್ಲಾ ಕಲೇಕ್ಟರರ ಕಡೆಗೆ ಸರಕಾರದಿಂದ ಕಳಿಸಲ್ಪಟ್ಟವು. ಸದ್ಯಕ್ಕೆ ಮುಂಬಯಿ ಇಲಾಖೆಯ ಎಲ್ಲ ಕಡೆಯಲ್ಲಿ ಅನ್ಯಾಯದಿಂದ ಎರಡನೆಯವರ ಕಡೆಗೆ ಹೋಗಿದ್ದ ವತನದಾರರ ಇನಾಮು ಭೂಮಿಗಳನ್ನು ಈ ಠರಾವಿನ ಆಧಾರದಿಂದಲೇ ಬಿಡಿಸಿಕೊಡುತ್ತಿರುವದುಂಟು. ಸಾರ್ವಜನಿಕ ಹಿತಕರವಾದ ಈ ಮಹತ್ವಾದ ಠರಾವವು ಒಳ್ಳೇ ಮಹತ್ವವಾದದ್ದೆಂದು ಹೇಳಬಹುದು. ಅನ್ಯಾಯವಾಗಿ ವತನಗಳನ್ನು ಕಳಕೊಂಡ ವತನದಾರರಿಗೆ ಅವರ ವತನಗಳನ್ನು ಪುನಃ ಅವರಿಗೆ ಕೊಡಿಸುವದಕ್ಕೆ ಈ ದೊಡ್ಡ ಠರಾವವು[೬] ಆಧಾರಭರಿತವಾಗಿದೆ.

ಈ ಪ್ರಕರಣದಲ್ಲಿ ರಾ.ಸಾ॥ರುದ್ರಗೌಡ ಚೀಟ್ನಿಸರು ತಮ್ಮ ಚಾತುರ್ಯವನ್ನೂ, ಚಾಣಾಕ್ಷತನವನ್ನೂ ಪ್ರಕಟಮಾಡದಿದ್ದರೆ ಈ ಬಡ ಬಸನಗೌಡರ ವತನವೃತ್ತಿಯೆಲ್ಲ ಇನಾಮದಾರರ ಪಾಲಾಗಿ ಹೋಗುತ್ತಿತ್ತು. ಹಾಯಕೋರ್ಟಿನಿಂದ ರದ್ದಾದ ವತನವನ್ನೆಲ್ಲ ಸರಕಾರದಿಂದ ಪುನಃ ದೊರಕಿಸಿಕೊಟ್ಟ ಇವರ ಯುಕ್ತಿ ಸಾಮರ್ಥ್ಯವನ್ನು ಎಷ್ಟು ವರ್ಣಿಸಿದರೂ ತೀರದು. ಈ ಪ್ರಕರಣವು ತಮ್ಮ ಮನೆಯದಲ್ಲ, ತಮ್ಮ ಆಪ್ತರದಲ್ಲ,ತಮಗೆ ಹತ್ತಿ ಹೊಂದಿದವರದಲ್ಲ, ಮತ್ತು ತಮ್ಮ ಪ್ರಾಪ್ತಿಯ ವಿಷಯದ್ದಲ್ಲ, ಹೀಗಿದ್ದೂ ಇವರು ಈ ಪ್ರಕರಣದಲ್ಲಿ ತಮ್ಮ ಮನೆಯ ಕೆಲಸಕ್ಕಿಂತಲೂ ಹೆಚ್ಚಾಗಿ ತ್ರಿಕರಣಪೂರ್ವಕವಾಗಿ ಸಹಾಯಮಾಡಿದ್ದನ್ನು ವಿಚಾರದೃಷ್ಟಿಯಿಂದ ನೋಡಿದರೆ ಪರೋಪಕಾರ ಗುಣವು ಇವರಲ್ಲಿ ವಾಚಾಮಗೋಚರವಾಗಿತ್ತೆಂದು ನಿಕ್ಷುಣ್ಣವಾಗಿ ಹೇಳಬಹುದು. ದುಷ್ಟಜನರ ದುರ್ವರ್ತನಜಾಲದಲ್ಲಿ ಸಿಕ್ಕು ಬಳಲುತ್ತಿರುವ ಸಜ್ಜನರನ್ನು ದುಃಖದಿಂದ ಮುಕ್ತಮಾಡುವದು, ಇವರ ಸ್ವಾಭಾವಿಕ ಗುಣವಾಗಿತ್ತು. ಇನಾಮದಾರ ವ್ಯಾಸರಾಯರೆಂದರೆ ಸಾಮಾನ್ಯ ಮನುಷ್ಯರಲ್ಲ. ಧನವಿಶೇಷತೆಯಿಂದಲೂ, ಇನಾಮುಭೂಮಿಯಿಂದಲೂ, ಜನವಶದಿಂದಲೂ, ಬಲಿಷ್ಠರಾದ ಅಪ್ತೇಷ್ಟರುಗಳಿಂದಲೂ, ಎಲ್ಲ ಕಾಮದಾರ ಜನರ ಭಿಡೆಯಿಂದಲೂ, ಯಮನಿಗೂ ಕೂಡ ಹೆದರದ ಮಹಾಪ್ರಬಲ ಮನುಷ್ಯರು. ಇಂಥ ಪ್ರಚಂಡ ಇನಾಮದಾರರ ಕೂಡ ಬಸನಗೌಡರು ಹೋರಾಡುವದೆಂದರೆ ಆನೆಗೂ ಆಡಿಗೂ ಕಾದು ಹತ್ತಿದಂತಾಗಿತ್ತು. ಹಾಯಕೋರ್ಟಿನಲ್ಲಿ ಸಹ ವಿರುದ್ಧವಾಗಿದ್ದ ಇಂಥ ಅಸಂಭವನೀಯವಾದ ಪ್ರಸಂಗವನ್ನು ಗೆದ್ದದ್ದು ರಾ.ಸಾ॥ರುದ್ರಗೌಡರ ಅದ್ವಿತೀಯವಾದ ಯುಕ್ತಿ ಸಾಹಸಗಳಲ್ಲದೆ ಬೇರೊಂದಿಲ್ಲ. ಇಂಥ ಅಘಟಿತ ಘಟನೆಗಳನ್ನು ಮಾಡುವದು ಸಾಧಾರಣ ಜನರಿಂದ ಆಗದ ಮಾತು.

೬.ಈ ಠರಾವಿನ ಸಾದ್ಯಂತ ವಿವರಣೆಯು ಹಣಮಂತ ಶೇಷಗಿರಿ ಫಡಣೀಸ ಇವರ ವತನೀ ಆಕ್ಟಿನ ಮೇಲೆ, ಟೀಕಾ ಬರೆದ ಬುಕ್ಕಿನ ಪಾನ ೩೩-೩೪ನೇದರಲ್ಲಿ ಛಾಪಿಸಿರುತ್ತದೆ. ಬೇಕಾದವರು ನೋಡಿಕೊಳ್ಳತಕ್ಕದ್ದು.

ರಾ.ಸಾ॥ರುದ್ರಗೌಡರ ಸತ್ಯಸ್ವಭಾವವು

ಗುಣಸ್ವಭಾವಾದಿಗಳಿಂದ ಮನುಷ್ಯರಲ್ಲಿ ಮೂರು ವರ್ಗಗಳನ್ನು ಮಾಡಬಹುದು. ಹೇಗೆಂದರೆ: ತಮ್ಮ ಸ್ವಾರ್ಥವು ಸಾಧಿಸಲಿ, ಸಾಧಿಸದಿರಲಿ, ತಾವು ಮುಳುಗಲಿ ತೇಲಲಿ, ಅದನ್ನು ಎಣಿಸದೆ ಎರಡನೆಯವರಿಗೆ ಒಳಿತಾಗುವ ಕೆಲಸವನ್ನೇ ಮನಸುಗೊಟ್ಟು ಮಾಡುವವರು ಮೇಲ್ತರದ ಮನುಷ್ಯರು. ಇಂಥವರನ್ನು ದೇವರಿಗೆ ಹೋಲಿಸತಕ್ಕದ್ದು. ಕೆಲವರು ಸ್ವಲ್ಪಾದರೂ ತಮಗೆ ಕೇಡಾಗದೆ ಎರಡನೆಯವರಿಗೆ ತಮ್ಮ ಕಯ್ಯಿಂದ ಒಳಿತಾಗುವ ಹಾಗಿದ್ದರೆ ಆ ಕೆಲಸಕ್ಕೆ ತೊಡಗುತ್ತಾರೆ. ಇಲ್ಲವೆ ತಮಗೆ ಏನಾದರೂ ಲಾಭವಾಗುವ ಹಾಗಿದ್ದರೆ ಪರಹಿತದ ಕೆಲಸಕ್ಕೆ ತೊಡಗುತ್ತಾರೆ. ಇಂಥ ಸ್ವಭಾವವುಳ್ಳವರು ಮಧ್ಯಮ ಪ್ರತಿಯವರು. ಇವರನ್ನು ಮನುಷ್ಯ ಗಣದಲ್ಲಿ ಎಣಿಸತಕ್ಕದ್ದು. ಕೆಲವರು ಎರಡನೆಯವರ ಸ್ವಾರ್ಥ ಮುಳಿಗಿದಾಗ್ಯೂ ತಮ್ಮ ಸ್ವಾರ್ಥಸಾಧಿಸಿಕೊಳ್ಳುತ್ತಾರೆ. ಇಲ್ಲವೆ ಎರಡನೆಯವರಿಗೆ ಬೇಕಂತ ಕೇಡು ಉಂಟುಮಾಡಿ ತಮ್ಮ ಒಳಿತನ್ನು ಮಾಡಿಕೊಳ್ಳುತ್ತಾರೆ. ಇವರು ಕೀಳುತರದ ಮನುಷ್ಯರು. ಇಂಥವರನ್ನು ರಾಕ್ಷಸರೊಳಗೆ ಎಣಿಸತಕ್ಕದ್ದು. ಈ ಮೂರು ತರದ ಸ್ವಭಾವಗಳುಳ್ಳ ಮನುಷ್ಯರಲ್ಲಿ ರಾ॥ಸಾ॥ರುದ್ರಗೌಡರನ್ನು ೧ನೇ ವರ್ಗದಲ್ಲಿ ಅಂದರೆ ದೇವಾಂಶದಲ್ಲಿ ಮತ್ತು ಬಸನಗೌಡರ ಪ್ರತಿಸ್ಪರ್ಧಿಗಳಾದ ವ್ಯಾಸರಾಯರನ್ನು ೩ನೇ ವರ್ಗದಲ್ಲಿ ಅಂದರೆ ರಾಕ್ಷಸಾಂಶದಲ್ಲಿ ನಿಃಸಂದೇಹವಾಗಿ ಗಣಿಸತಕ್ಕದ್ದು.

ರಾ.ಸಾ॥ರುದ್ರಗೌಡರ ಅಕಾಲಿಕ ಸಾಮರ್ಥ್ಯ

ಈ ಗೌಡಕೀ ವತನದ ಪ್ರಕರಣವು ಸಮಗ್ರ ೩೨ ವರ್ಷ ನಡೆದು, ಕೆಲವು ಸಾರೆ ವಾದಿಯಂತೆಯೂ, ಕೆಲವು ಸಾರೆ ಪ್ರತಿವಾದಿಯಂತೆಯೂ ಆಗಿ, ಕಡೆಗೆ ನ್ಯಾಯಮಾರ್ಗದಿಂದ ಬಸನಗೌಡರಂತೆ ನಿರ್ಣಯವಾದದರಿಂದ ಇಡೀ ಧಾರವಾಡ ಜಿಲ್ಲೆಯಲ್ಲೆಲ್ಲ ರಾ.ಸಾ॥ ರುದ್ರಗೌಡರ ಕೀರ್ತಿಯು ಪ್ರಕಟವಾಗಿ, ಹೋಯಿತು. ಇಂಥ ಮಹತ್ತರವಾದ ವ್ಯಾಜ್ಯದಲ್ಲಿ ಇವರು ತೋರಿಸಿದ ಜಾಣ್ಮೆಯು ಚತುಃ ಸೀಮೆಯ ಜನರಿಗೂ, ಸರಕಾರಕ್ಕೂ ಸಂಪೂರ್ಣವಾಗಿ ತಿಳಿದು ಹೋಯಿತು. ಇವರ ಆಳಿಕೆಯಲ್ಲಿ ಬಸನಗೌಡರಿಗೆ ಈ ಗೌಡಕೀ ವತನವನ್ನು ಕೊಡಿಸಿದ್ದು ಮತ್ತು ಪ್ರಚಂಡವಾದ ಲಿಂಗಾಯತ ಫಂಡು ಕೊಡಿಸಿದ್ದು ಇವೆರಡು ಅತಿ ಮಹತ್ವದ ಸಂಗತಿಗಳಾಗಿರುವವು. ಇವೆರಡು ಮಹತ್ಕಾರ್ಯಗಳ ಅಲೌಕಿಕ ಸಾಮರ್ಥ್ಯವನ್ನೂ, ಮುಂದೆ ಇದರಿಂದಾದ ಇನ್ನೂ ಅನೇಕ ಸಾರ್ವಜನಿಕ ಹಿತದ ಕಾರ್ಯಗಳ ಶಕ್ತಿಸಾಹಸಗಳನ್ನೂ ತೂಗಿ ನೋಡಿದರೆ ಸಮತೋಲವಾಗುವದೆಂದು ಹೇಳಬಹುದು.

ಬಸನಗೌಡರ ಮುಗ್ಧ ಭಕ್ತಿ

ಬಸನಗೌಡರು ಶ್ರೀ ಬಸವಪುರಾಣದಲ್ಲಿ ಪ್ರಸಿದ್ಧವಾಗಿರುವ ನವಮುಗ್ಧ ಭಕ್ತರಲ್ಲೊಬ್ಬರಂತೆ ಶರಣ ಪುರುಷರಾಗಿದ್ದರೆನ್ನಲಿಕ್ಕೆ ಅಡ್ಡಿಯಿಲ್ಲ. ಅಂದರೆ ಇವರಲ್ಲಿ ನಯ ಭಯ ಭಕ್ತಿ ಮೊದಲಾದ ಸದ್ಗುಣಗಳು ಪರಿಪೂರ್ಣವಾಗಿದ್ದು, ಸ್ವಭಾವವು ಒಳ್ಳೇ ಸಾತ್ವಿಕ ವೃತ್ತಿಯಲ್ಲಿತ್ತು. ಇವರ ಮುಗ್ಧಭಕ್ತಿಯ ವಿಷಯಕ್ಕೆ ಸಾಧಾರಣವಾದದ್ದೊಂದು ಉದಾಹರಣೆಯೇನೆಂದರೆ-ಬಸನಗೌಡರ ತಂದೆ ಬಸನಗೌಡರೆಂಬವರು ಹಿಂದೆ ಮೃತವಾಗಿರಲು, ಅವರ ಶವವನ್ನು ತಮ್ಮ ವತನೀ ಭೂಮಿಯಲ್ಲಿಯೇ ದಫನಮಾಡಿ, ಆ ದಫನಸ್ಥಾನದ ಮೇಲೆ ಒಂದು ಮಾವಿನ ಬೀಜವನ್ನು ಹಚ್ಚಿದ್ದರು. ಅದು ಒಳ್ಳೇ ದೊಡ್ಡಮರವಾಗಿ ಉತ್ತಮವಾದ ಫಲಗಳನ್ನು ಕೊಡುತ್ತಿತ್ತು. ಹಣ್ಣುಗಳು ಉತ್ತಮವಾಗಿದ್ದರಿಂದ ಅವಕ್ಕೆ ಪಾಯರೀ ಜಾತಿಯ ಹಣ್ಣುಗಳೆನ್ನುತ್ತಿದ್ದರು.

ರಾ.ಸಾ||ರುದ್ರಗೌಡರವರಿಂದಲೇ ತಮಗೆ ವತನವು ಬಂದಿರುವದಾದ ಕಾರಣ, ಎಲ್ಲಕ್ಕೂ ಮೊದಲು ರಾ.ಸಾ||ರವರಿಗೆ ಈ ಪಾಯರೀ ಹಣ್ಣುಗಳನ್ನು ಸೇವನ ಮಾಡಿಸಿ, ಅನಂತರ ತಾವು ಸೇವಿಸಬೇಕೆಂದು, ಆ ಮಾವಿನ ಹಣ್ಣುಗಳನ್ನು ಕಾಯ್ದು, ತಮ್ಮ ವತನೀ ಹೊಲದ ಸಮೀಪಕ್ಕಿರುವ ಕಲಘಟಗೀ ದಾರಿಯ ಮೇಲಿನ ದುರ್ಗಾದೇವಿಯ ಗುಡಿಯೊಳಗೆ ಇಟ್ಟುಕೊಂಡು ಕೂತಿದ್ದರು. ಯಾಕೆಂದರೆ ರಾ||ಸಾಹೇಬರವರು ಕಾರವಾರದಿಂದ ಧಾರವಾಡ ಚೀಟ್ನಿಸಿ ಜಾಗೆಗೆ ವರ್ಗವಾಗಿ ಬರುವದಿದ್ದದರಿಂದ ಆ ಸಮಯವನ್ನು ಕಾಯ್ದುಕೊಂಡು, ದಾರೀನೋಡುತ್ತ ಹೊಲದೊಳಗೆ ಕೂತಿದ್ದರು. ಈ ವತನೀ ಹೊಲವು ಕಾರವಾರದಿಂದ ಧಾರವಾಡಕ್ಕೆ ಬರುವ ಮಾರ್ಗದಲ್ಲಿಯೇ ಇತ್ತು. ರಾವಸಾಹೇಬರು ಸನ್ ೧೮೮೭ನೇ ಇಸವಿಯ ಜೂನ ತಿಂಗಳ ಸುಮಾರಕ್ಕೆ ಅದೇ ಮಾರ್ಗವಾಗಿ ಬರಲು, ಬಸನಗೌಡರು ನೋಡಿ ಪರಮಾನಂದವನ್ನು ಹೊಂದಿ, ಹಾಲು ಸಕ್ಕರೆಗಳನ್ನೂ, ಮಾವಿನ ಹಣ್ಣುಗಳನ್ನು ತಂದು ನನ್ನ ಬಡಭಕ್ತಿಯನ್ನು ಸ್ವೀಕರಿಸೋಣವಾಗಬೇಕೆಂದು ವಿನಯದಿಂದ ಬೇಡಿಕೊಳ್ಳಲು, ಅವರ ಶುದ್ಧಭಾವಭಕ್ತಿಯನ್ನು ಕಂಡು, ಅವುಗಳನ್ನು ಸ್ವೀಕರಿಸಿ ತೃಪ್ತರಾಗಿ ಬಸನಗೌಡರನ್ನು ಆನಂದಪಡಿಸಿದರು. ಈ ಬಸನಗೌಡರು ರಾವಸಾಹೇಬರವರಿಗೆ ಮಕ್ಕಳಿಲ್ಲದ್ದನ್ನು ಕಂಡು, ಇಂತಹ ಅನಂತ ಪರೋಪಕಾರಗುಣವುಳ್ಳ ರಾ.ಸಾ|| ರುದ್ರಗೌಡರವರಿಗೆ ಪುತ್ರಲಾಭವನ್ನು ದಯಪಾಲಿಸಬೇಕೆಂದು ಮುಗ್ಧಭಾವದಿಂದ ತಾವು ಗಡ್ಡಜಡೆಗಳನ್ನು ಬಿಟ್ಟು, ಅಹರ್ನಿಶೆಯಲ್ಲಿಯೂ ಶ್ರೀ ಬಸವೇಶ್ವರನ ಉಪಾಸನೆಯನ್ನು ಮಾಡುತ್ತಿದ್ದರು. ಮುಂದೆ ಇವರು ಮುಪ್ಪಿನವರಾಗಿ, ಕಡೆತನಕ ಆ ಗಡ್ಡ ಜಡೆಗಳನ್ನು ತೆಗೆಸದೆ ಶಿವಾಧೀನರಾದರು. ಇವರ ಗೌಡಕೀ ವತನವು ಇವರ ಮಕ್ಕಳಿಗೆ ಈಗ್ಯೂ ನಡೆಯುತ್ತದೆ.

ರಾ.ಸಾ||ರಾಮರಾವ ಸ್ವಾಮಿರಾವ ಮಾಳಾಪುರ ಎಂಬವರಿಗೆ ಕುಲಕರಣಿಕೆಯ ವತನವನ್ನು ಕೊಡಿಸಿದ್ದು

ಈ ಗೌಡಿಕೆಯ ವತನವನ್ನು ಅಪಹರಿಸಿದಂತೆ, ಆ ಕಣವೀಹೊನ್ನಾಪುರದ ಕುಲಕರಣಿಕೆಯ ವತನವನ್ನಾದರೂ ಕಪಟತನದಿಂದ [ವ್ಯಾಸರಾಯರು] ಹರಣಮಾಡಿದ್ದರು. ಗೌಡಿಕಿಯ ವತನವನ್ನು ಸರಕಾರದವರು ಬಸನಗೌಡರಿಗೆ ಕೊಡಿಸಿದ್ದರಿಂದ, ಕುಲಕರಣಿಯಾದ ರಾ.ಸಾ|| ರಾಮರಾವ ಸ್ವಾಮಿರಾವ ಮಾಳಾಪುರ ಎಂಬವರು ತಮ್ಮ ಕುಲಕರಣಿಕೆಯ ವತನವನ್ನು ವ್ಯಾಸರಾಯರಿಂದ ಬಿಡಿಸಿಕೊಡಬೇಕೆಂದು ಅರ್ಜಿಯನ್ನು ಮಾಡಿದ್ದರಿಂದ ಮೆ|| ಕಲೆಕ್ಟರಸಾಹೇಬರು ಆ ಕುಲಕರಣಿಕೆಯ ವತನವನ್ನು ರಾಮರಾಯರಿಗೆ ಕೊಡಿಸಿದ್ದರು. ಆದರೆ ಮುಂದೆ ಅದು ಸರಕಾರಕ್ಕೆ ಅಪೀಲಾಗಿ ಸರಕಾರದಿಂದ ರಾಮರಾಯರ ವಿರುದ್ಧ ಠರಾವವಾಗಿ ಹೋಯಿತು. ಕಾರಣ ರಾಮರಾಯರು ನಿರುಪಾಯರಾಗಿ ಸುಮ್ಮನೆ ಕೂಡ್ರಬೇಕಾಯಿತು. ಆದರೆ ರಾ.ಸಾ||ರುದ್ರಗೌಡರು ಸನ್ ೧೮೯೦ನೇ ಇಸವಿಯ ಅಗಸ್ಟ ತಿಂಗಳಲ್ಲಿ ದಕ್ಷಿಣಭಾಗದ ಕಮಿಶನರ ದಪ್ತರದಾರರಾದದ್ದನ್ನು ತಿಳಿದು, ರಾಮರಾಯರು ರಾ.ಸಾ||ರವರಿಗೆ ಭೆಟ್ಟಿಯಾಗಿ "ಬಸನಗೌಡರಿಗೆ ಗೌಡಿಕಿಯ ವತನವನ್ನು ಕೊಡಿಸಿ ಅಖಂಡ ಕೀರ್ತಿಯನ್ನು ಹೊಂದಿದಂತೆ ನಮ್ಮ ಕುಲಕರಣಿಕೆಯ ವತನವನ್ನು ದಯಮಾಡಿ ಕೊಡಿಸಿ ತಮ್ಮ ಪಾಲಿಗೆ ಕೀರ್ತಿ ತೆಗೆದುಕೊಳ್ಳಬೇಕೆ"ಂದು ಬೇಡಿಕೊಂಡು ಮೆ||ಕಮಿಶನರ ಸಾಹೇಬರವರ ಕಡೆಗೆ ತಮ್ಮ ಕುಲಕರಣಿಕೆಯ ವತನವನ್ನು ವ್ಯಾಸರಾಯರಿಂದ ಬಿಡಿಸಿಕೊಡಬೇಕೆಂದು ಅರ್ಜಿಯನ್ನು ಮಾಡಿದರು. ಈ ಕಾಲಕ್ಕೆ ಕಮಿಶನರರಾಗಿದ್ದ ಮೆ||ನ್ಯೂಜೆಂಟ ಸಾಹೇಬರವರಿಗೆ ರಾ.ಸಾ|| ರುದ್ರಗೌಡರು ಸತ್ಯವಾರ್ತೆಯನ್ನೆಲ್ಲ ಸಾದ್ಯಂತವಾಗಿ ಹೇಳಿಕೊಟ್ಟಿದ್ದರಿಂದ

ಅದರಂತೆ ಸನ್ ೧೮೮೧ರಲ್ಲಿ ಈ ಪ್ರಕರಣವು ಸರಕಾರಕ್ಕೆ ಬರೆದುಹೋಯಿತು. ಮುಂದೆ ಸರಕಾರದಲ್ಲಿ ಈ ವಿಷಯವಾಗಿ ವಿಚಾರ ನಡೆದು, ಸರಕಾರದವರು ತಮ್ಮ ಮೊದಲಿನ ಠರಾವವನ್ನು ರದ್ದಪಡಿಸಿ ಮೆ॥ಜೇ.ಆರ್. ಲೀಗಲ್ ರಿಮೆಂಬರ್ಸನ್ ಇವರ ಅಭಿಪ್ರಾಯದಿಂದ ಸದರೀ ಕುಲಕರಣಿಕೆಯ ವತನವನ್ನು ರಾಮರಾಯರಿಗೆ ಕೊಡಿಸುವ ಬಗ್ಗೆ ಸನ್ ೧೮೮೩ನೇ ಇಸವಿಯಲ್ಲಿ ಹೊಸ ಠರಾವವನ್ನು ಮಾಡಿದರು. ಅದರಿಂದ ಗೌಡ ಕುಲಕರಣಿಯರಿಗೆ ಕಳಕೊಂಡ ವತನಗಳನ್ನು ಸರಕಾರದಿಂದ ಪುನಃ ಕೊಡಿಸಿದ ಸಂಪೂರ್ಣಯಶಸ್ಸು ರಾ.ಸಾ॥ರುದ್ರಗೌಡರಿಗೇ ಸಲ್ಲತಕ್ಕದ್ದು.

ಈ ಕಣವೀಹೊನ್ನಾಪುರದ ಗೌಡ ಕುಲಕರಣಿಯರ ವತನಗಳನ್ನು ಕೊಡಿಸಿದ್ದಲ್ಲದೆ ರಾ.ಸಾ॥ರವರು ರೋಣ ತಾಲೂಕ ಕೊಣ್ಣೂರ ಮಲ್ಲನಗೌಡರಿಗೂ, ಕಸಬಾ ಧಾರವಾಡದ ಸುಪ್ರಸಿದ್ಧ ಕಲ್ಲನಗೌಡರಿಗೂ ಅಧಿಕಾರ ಕೊಡಿಸಿದರು. ಮತ್ತು ನವಲಗುಂದ ತಾಲೂಕ, ಅಣ್ಣಿಗೇರಿಯ ಶ್ರೀಮಂತ ಫಕೀರಪ್ಪ ಬಿನ್ (ಭದ್ರಪ್ಪ)ದೇಸಾಯಿಯವರ ಸಂಬಂಧವಾದ ಗೌಡಿಕಿ ಕುಲಕರಣಿಕೆಯ[೨] ವ್ಯಾಜ್ಯಗಳನ್ನೂ, ಕಾರಡಿಗಿ ಮಹಾಲ-ಕುತುಕೂರ ದೇಶಪಾಂಡೆಯವರ ಪ್ರಕರಣವನ್ನೂ ನ್ಯಾಯಮಾರ್ಗದಿಂದ ತೀರಿಸಿಕೊಟ್ಟು, ಇನ್ನೂ ಎಷ್ಟೋ ಪರಹಿತಕೃತ್ಯಗಳನ್ನೆಸಗಿ, ಸಜ್ಜನರ ಸಂಕಟಗಳನ್ನು ದೂರಮಾಡಿ ಅವರನ್ನು ಸಂತೋಷಪಡಿಸಿ, ತಾವು ಸರ್ವಜನರ ಶ್ಲ್ಯಾಘನೆಗೆ ಪಾತ್ರರಾದರು.

ರಾ.ಸಾ॥ರುದ್ರಗೌಡರು ಕೊಣ್ಣೂರ ಮಲ್ಲನಗೌಡರ ಗೌಡಕೀ ವತನವನ್ನು ಕಾಹೀಮ ಮಾಡಿಸಿದ್ದು

ಈ ಮೇಲೆ ಬರೆದ ಕೊಣ್ಣೂರ ಪ್ರಕರಣದಲ್ಲಿ ರಾವಸಾಹೇಬರವರು ಒಂದು ವಿಚಿತ್ರವಾದ ಯುಕ್ತಿಯನ್ನು ಸಾಧಿಸಿದ್ದರಿಂದ, ಅದರ ಚಮತ್ಕೃತಿಯು ವಾಚಕರಿಗೆ ತಿಳಿದು ಆನಂದಿಸಬೇಕೆಂದು ಆ ಪ್ರಕರಣದ ಸಾದ್ಯಂತ ವಿವರವನ್ನು ಬರೆಯುವೆವು. ಜಿಲ್ಲಾ ಧಾರವಾಡ ತಾಲೂಕ ನವಲಗುಂದ, ನರಗುಂದ ಪೇಠೆಯಲ್ಲಿ ಮಲಪ್ರಭಾ ನದಿಯ ದಂಡೆಯ ಮೇಲಿರುವ ಕೊಣ್ಣೂರಗ್ರಾಮದ ಗೌಡಕೀ ವತನದ ಬಗ್ಗೆ ವತನೀ ಆಕ್ಟಿನ (ಸನ್ ೧೮೭೪ ನೇ ಇಸವಿ ಆಕ್ಟ ೩ ನೇ)ಪ್ರಕಾರ ಮಲ್ಲನಗೌಡ ಮತ್ತು ಪರ್ವತಗೌಡ ಇವರಿಬ್ಬರೇ ಮೂಲ ಹಕ್ಕುದಾರರೆಂದು ಮೆ॥ ಇಲಾಖಾ ಸಾಹೇಬರಿಂದ ಸಿದ್ಧವಾಗಿ, ಅದರಂತೆ ಹಕ್ಕುದಾರ ರಜಿಷ್ಟರದಲ್ಲಿ ದಾಖಲಾಗಿತ್ತು. ಆದರೆ ಈ ಗೌಡಿಕಿ ವತನಕ್ಕೆ ಬಿನ್ ಹಕ್ಕುದಾರರಾದ ಭಾಗಾದಿಗಳಿಬ್ಬರು ತಾವು ಈ ಗೌಡಿಕೀ ವತನಕ್ಕೆ ಹಕ್ಕುದಾರರಾಗುವ ದುರಾಲೋಚನೆಯನ್ನು ಮಾಡಿ, ನರಗುಂದದಲ್ಲಿರುವ ಒಬ್ಬ ದುಷ್ಟಬ್ರಾಹ್ಮಣನಿಗೆ ಕೆಲವು ರೂಪಾಯಿ ಕೊಟ್ಟು, ತಾವು ಆ ಊರ ಗೌಡಿಕೀ ಕೆಲಸ ನೋಡಿದಂತೆ ಖೊಟ್ಟಿ ಲೇಖೀ ತಾಕೀದಿಗಳನ್ನು ತಯಾರಮಾಡಿಸಿಕೊಂಡು, ಇಲಾಖಾ ಸಾಹೇಬರ ಕಡೆಗೆ ಅವುಗಳನ್ನು ಹಾಜರಮಾಡಿ, ನಾವೂ ಈ ಗೌಡಿಕಿ ವತನಕ್ಕೆ ಹಕ್ಕುದಾರರಾದದರಿಂದ ರಜಿಸ್ಟರಕ್ಕೆ, ನಮ್ಮ ಹೆಸರುಗಳನ್ನಾದರೂ ದಾಖಲಮಾಡಬೇಕೆಂದು ಅರ್ಜಿ ಮೂಲಕ ಹೇಳಿಕೊಂಡದ್ದಕ್ಕೆ "ನೀವು ಹಕ್ಕುದಾರಾಗಿದ್ದರೆ ಹಕ್ಕುದಾರರ ನಿರ್ಣಯ ಕಾಲಕ್ಕೆ ನಿಮ್ಮ ತಾಕೀದಿಗಳನ್ನು ಹಾಜರಮಾಡತಕ್ಕದ್ದಿತ್ತು. ನಿಮ್ಮ ಈ ತಾಕೀದಿಗಳು ನೀವು ಹಕ್ಕುದಾರರೆಂಬುವದಕ್ಕೆ ನಂಬಿಗೆಯಾಗಿ ಕಂಡುಬಾರದ ಕಾರಣ, ನಿಮ್ಮ ಹೆಸರುಗಳನ್ನು ದಾಖಲಮಾಡಲಿಕ್ಕೆ ಬರುವದಿಲ್ಲೆ"ಂದು ಠರಾವ ಮೊದಲು ಅವರಿಬ್ಬರು

---

೨. ಕುಲಕರಣಿಕೆಯು ಜೈನಜಾತಿಯ ಚಂದಪ್ಪಯ್ಯ ದೇಶಪಾಂಡೆಯರದು.

ಮೆ॥ಜೇ.ಆರ್. ಮಿಡಲ್ಟನ್ ಕಲೇಕ್ಟರ ಸಾಹೇಬ ಬಹಾದ್ದೂರವರ ಕಡೆಗೆ ಅಪೀಲ ಮಾಡಿದರು. ಈ ಖೊಟ್ಟಿ ತಾಕೀದಿಗಳ ಮೇಲೆ ಕಲೇಕ್ಟರ ಸಾಹೇಬರು ವಿಶ್ವಾಸವನ್ನಿಡದೆ ಇಲಾಖಾ ಸಾಹೇಬರು ಮಾಡಿದ್ದನ್ನೇ ಅಪೀಲಿನಲ್ಲಿ ಕಾಹೀಮ ಮಾಡಿದರು. ಆದರೆ ಇವರ ದುರಾಲೋಚನೆಯು ಸಿದ್ಧಿಗೆ ಹೋಗದ್ದರಿಂದ ಇವರು ಪುನಃ ಮೆ॥ ಕಮಿಶನರ ಸಾಹೇಬರ ಕಡೆಗೆ ಅರ್ಜಿಯನ್ನು ಮಾಡಿದರು. ಆಗ ಮೆ॥ ಕ್ರಾಫರ್ಡಸಾಹೇಬರೇ ಕಮಿಶನರರಾಗಿದ್ದರು. ಅಂದಬಳಿಕ ಕೇಳುವದೇನು? ಇವರ ಗೆಲವು ಆಗಲಿಕ್ಕೆ ಅವಕಾಶವೇ ಹತ್ತಲಿಲ್ಲ. ಇವರು ಕ್ರಾಫರ್ಡಸಾಹೇಬರಿಗೆ ಲಂಚ ಕೊಟ್ಟಿದ್ದರಿಂದ ಮೂಲ ಹಕ್ಕುದಾರಂತೆ ಇವರಾದರೂ ಕೊಣ್ಣೂರ ಗೌಡಿಕಿಗೆ ಹಕ್ಕುದಾರರೆಂದು ಕಮಿಶನರ ಕಚೇರಿಯಿಂದ ಬರೆದು ಸರಕಾರಕ್ಕೆ ಹೋಗಲು, ಸದರೀ ಗೌಡಿಕಿ ವತನಕ್ಕೆ ಈ ನಾಲ್ಕು ಮಂದಿಯೂ ಹಕ್ಕುದಾರರೆಂಬದಾಗಿ ಸರಕಾರ ಠರಾವವಾಯಿತು. ಈ ಅನರ್ಥವನ್ನು ನೋಡಿ, ಇದು ಅನ್ಯಾಯವಾಯಿತೆಂದೂ, ನಮ್ಮ ಗೌಡಿಕಿಯ ವತನಕ್ಕೆ ನಾವಿಬ್ಬರೇ ಬಾಧ್ಯರೆಂದೂ ಮಲ್ಲನಗೌಡರು ಸರಕಾರಕ್ಕೆ ಅರ್ಜಿಯನ್ನು ಮಾಡಲಾಗಿ, ಅದಕ್ಕೆ ಒಮ್ಮೆ ನಿಕಾಲೆಯಾದ ಈ ಪ್ರಕರಣದ ಸಂಬಂಧವಾಗಿ ಪುನಃ ವಿಚಾರ ಮಾಡುವ ಕಾರಣವಿಲ್ಲೆಂಬದಾಗಿ ಸರಕಾರದಿಂದ ಉತ್ತರ ಸಿಕ್ಕಿತು. ಆದರೂ ಮಲ್ಲನಗೌಡರು ಸುಮ್ಮನೆ ಕೂಡ್ರದೆ ಒಮ್ಮಿಲ್ಲ ಒಮ್ಮೆಯಾದರೂ ದಾದ ಹತ್ತೀತೆಂದು ಪುಣೆಗೆ ಹೋಗಿ ಪುನಃ ಪುನಃ ಅರ್ಜಿಯನ್ನು ಮಾಡಲು ಕಡೆಗೆ ಸರಕಾರದವರು "ಇನ್ನು ಮೇಲೆ ಈ ಪ್ರಕರಣದ ವಿಷಯವಾಗಿ ಬಂದ ನಿಮ್ಮ ಅರ್ಜಿಗಳಿಗೆ ಉತ್ತರವನ್ನು ಸಹ ಕೊಡದೆ ಆ ಅರ್ಜಿಗಳನ್ನು ವಿಲ್ಲೆಗೆ ಇಡುವೆವೆಂ"ದು ಲೇಖೀ ಠರಾವದಿಂದ ಮಲ್ಲನಗೌಡರಿಗೆ ತಿಳಿಸಿದರು. ಅದರಿಂದ ಮುಂದೆ ಏನು ಮಾಡಬೇಕೆಂಬ ವಿಚಾರವೇ ತಿಳಿಯದೆ, ಮಲ್ಲನಗೌಡರು ಮನೆಯಲ್ಲಿ ಸುಮ್ಮನೆ ಕೂತರು.

ರಾ.ಸಾ॥ರುದ್ರಗೌಡರ ಅಸಾಧಾರಣ ಯುಕ್ತಿ

ರಾ.ಸಾ॥ರುದ್ರಗೌಡರು ಸನ್ ೧೮೮೪ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಪುಣೆಗೆ ಸ್ಪೆಶಲ್ ಲೋಯರ ಪರೀಕ್ಷೆಗೆ ಹೋದಾಗ, ಮಲ್ಲನಗೌಡರು ಪುಣೆಯಲ್ಲಿಯೇ ಇದ್ದರು. ಪುಣೆಯಲ್ಲಿ ರಾವಸಾಹೇಬರವರ ಭೆಟ್ಟಿಯಾಗಿ, ಮಲ್ಲನಗೌಡರು ತಮ್ಮ ಪ್ರಕರಣದ ಯಾವತ್ತು ಸವಿಸ್ತರ ಸಂಗತಿಯನ್ನು ಅವರಿಗೆ ತಿಳಿಸಿ ಮತ್ತು ಹೇಳಿದ್ದೇನೆಂದರೆ : "ನರಗುಂದದಲ್ಲಿ ಒಬ್ಬ ದುಷ್ಟಮನುಷ್ಯನಿರುವನು. ಅವನಿಗೆ ೮-೧೦ ರೂಪಾಯಿ ಕೊಟ್ಟರೆ ಕೆಲಸಮಾಡಿದಂತೆ ಖೊಟ್ಟಿ ತಾಕೀದಿಗಳನ್ನು ಹುಬೇಹೂಬ ತಯಾರ ಮಾಡಿಕೊಡುತ್ತಿರುತ್ತಾನೆ. ರೂಪಾಯಿ ಕೊಟ್ಟು ಕೊಟ್ಟು ಆತನ ಕಡೆಯಿಂದ ಬನಾವಟ ತಾಕೀದಿಗಳನ್ನು ತಯಾರಿಸಿಕೊಂಡು ಬಂದು, ಮೆ॥ ಕ್ರಾಫರ್ಡಸಾಹೇಬರಿಗೆ ಲಂಚಕೊಟ್ಟು ಬಿನ್‌ಹಕ್ಕುದಾರರೆಲ್ಲ ನಮ್ಮ ವತನಕ್ಕೆ ಹಕ್ಕುದಾರರಾಗಿ ಕೂತಿದ್ದಾರೆ. ಅನ್ಯಾಯವಾದ ಬಗ್ಗೆ ಸತ್ಯಸಂಗತಿಯನ್ನು ಎಷ್ಟು ರೀತಿಯಿಂದ ತಿಳಿಸಿದರೂ ಸ್ವಲ್ಪವಾದರೂ ಸರಕಾರದಲ್ಲಿ ದಾದು ಹತ್ತಲೊಲ್ಲದು. ಸರಕಾರವು ಕಣ್ಣುಮುಚ್ಚಿ ಕೆಲಸ ಮಾಡುವಂತೆ ತೋರುತ್ತದೆ. ಮಾಡಲೇನು?ಊರಿಗೆ ಹೋಗಿ ಮೋರೆ ತೋರಿಸಲಿಕ್ಕಾಗದೆ, ನನ್ನ ದುರ್ದೈವವೆಂದು ತಿಳಿದು ನಿರುಪಾಯನಾಗಿ ಸುಮ್ಮನೆ ಇಲ್ಲಿ ಕೂತುಬಿಟ್ಟಿರುವೆನು. ನನ್ನ ದುರವಸ್ಥೆಯು ಈ ಪ್ರಕಾರವಾಗಿದೆ. ಸತ್ಯಾಶ್ರಯಿಗಳೂ ಕರುಣಾಳುಗಳೂ ಆದ ತಮ್ಮೊಬ್ಬರ ಮುಂದೆ ಈ ನನ್ನ ದುರ್ಗತಿಯನ್ನು ಹೇಳಿಕೊಳ್ಳಬೇಕೆಂಬ ಲವಲವಿಕೆ ಬಹಳೇ ಇತ್ತು. ಆಕಸ್ಮಾತ್ ತಮ್ಮ ಭೆಟ್ಟಿಯನ್ನು ಇಲ್ಲಿ ದೇವರೆ ಮಾಡಿಸಿದನೆಂದೂ, ತಮ್ಮ ದರ್ಶನವೇ ನನ್ನ ಸುಯೋಗವೆಂದೂ ನಾನು ತಿಳಿಯುತ್ತೇನೆ. ನನ್ನ ಅರ್ಜಿಗಳಿಗೆ ಉತ್ತರವನ್ನೇ ಕೊಡುವದಿಲ್ಲೆಂದು ಸರಕಾರದ ಲೇಖೀ ಠರಾವವಾಗಿರುತ್ತದೆ. ಆದ್ದರಿಂದ ನನ್ನಿಂದ ಇನ್ನು ಮೇಲೆ ಸರಕಾರಕ್ಕೆ ದಾದ ಹಚ್ಚುವ ಮಾರ್ಗವು ಸ್ವಲ್ಪವಾದರೂ ಉಳಿದಿಲ್ಲ. ಕಾರಣ ತಾವು ಇದನ್ನಷ್ಟು ಮನಸಿನ ಮೇಲೆ

ತೆಗೆದುಕೊಂಡು, ಏನಾದರೊಂದು ಉಪಾಯವನ್ನು ಕಲ್ಪಿಸಿ, ನನ್ನ ಗೋಳನ್ನಷ್ಟು ಪರಿಹರಿಸಿ ನನ್ನನ್ನು ಉದ್ಧಾರಮಾಡಬೇಕು. ತಾವು ಅನಾದರ ಮಾಡಿದರೆ ನನ್ನ ವತನವೇ ಕೈಗೆ ಹತ್ತುವದಿಲ್ಲ. ಎಲ್ಲವೂ ತಮ್ಮನ್ನೇ ಕೂಡಿದೆ" ಎಂದು ಪರಿಪರಿಯಿಂದ ಬೇಡಿಕೊಳ್ಳಲು, ದೀನ ಬಂಧುಗಳಾದ ರಾ.ಸಾ||ರುದ್ರಗೌಡರು ಕನಿಕರಪಟ್ಟು ಮಲ್ಲನಗೌಡರ ಮಾತುಗಳನ್ನೆಲ್ಲ ಆದರದಿಂದ ಕೇಳುಕೇಳುತ್ತಲೇ ಈ ಪ್ರಕರಣದ ವಿಷಯವಾಗಿ ಒಂದು ಒಳ್ಳೇ ಹಂಚಿಕೆಯು ಅವರ ಮನಸಿನಲ್ಲಿ ಹೊಳೆಯಿತು. ಕೂಡಲೆ ರಾ.ಸಾ||ರವರು ಮಲ್ಲನಗೌಡರನ್ನು ಕುರಿತು "ನಿಮಗೊಂದು ಯುಕ್ತಿಯನ್ನು ಹೇಳುತ್ತೇನೆ. ನೀವು ಅದರಂತೆ ಮಾಡಿರಿ. ಅಂದರೆ ಚಮತ್ಕಾರ ರೀತಿಯಿಂದ ನಿಮ್ಮ ಪ್ರಕರಣವು ಸರಕಾರದಲ್ಲಿ ತಾನಾಗಿ ಪುನಃ ವಿಚಾರಕ್ಕೆ ಬರುವದೆ"ಂದು ಹೇಳಲು, ಮಲ್ಲನಗೌಡರು "ಅದೇನು ಹೇಳೋಣವಾಗಬೇಕು;ತಾವು ಹೇಳಿದಂತೆ ಅವಶ್ಯವಾಗಿ ಮಾಡುತ್ತೇನೆ"ಂದರು. ಅದಕ್ಕೆ ರಾವಸಾಹೇಬರು "ನೀವು ಈಗ ಇಲ್ಲಿಂದ ನಿಮ್ಮ ಊರಿಗೆ ಹೋಗಿ, ನಿಮ್ಮ ಭಾಗಾದಿಗಳಲ್ಲಿ ಬೇರೆ ಅಯ್ಯಾರು ಮಂದಿಯನ್ನು, ನಿಮ್ಮ ವತನಕ್ಕೆ ಅವರೂ ಹಕ್ಕುದಾರರೆಂಬದಾಗಿ ಅವರಿಂದ ವ್ಯಾಜ್ಯನಡಿಸುವಂತೆ ಗೊತ್ತುಮಾಡಿ, ಆ ಬನಾವಟ ತಾಕೀದಿಗಳನ್ನು ತಯಾರ ಮಾಡಿಕೊಡುವವನ ಕಡೆಯಿಂದ, ಹಿಂದಿನವರು ತಯಾರ ಮಾಡಿಸಿಕೊಂಡಂತೆ, ಇವರಿಗೂ ಗೌಡಿಕಿಯನ್ನು ಮಾಡಿದಂತೆ ತಾಕೀದಿಗಳನ್ನು ತಯಾರಮಾಡಿಸಿರಿ. ಇದರೊಳಗೆ ಇನ್ನೊಂದು ಚಮತ್ಕಾರಮಾಡಲಿಕ್ಕೇ ಬೇಕು. ಅದೇನೆಂದರೆ-ನೀವು ಗೌಡಿಕಿಯನ್ನು ಮಾಡಿದ ಸಾಲವಾರದಂತೆ ಒಂದೇ ವರ್ಷದಲ್ಲಿ ಒಂದೇ ಕಾಲಕ್ಕೆ ಅಯ್ಯಾರು ಮಂದಿ ಕೆಲಸಮಾಡಿದಂತೆ ತಾಕೀದಿಗಳನ್ನು ತೆಗೆದುಕೊಂಡು ಬರುವಂತೆ ಮಾಡಿರಿ. ಈ ಬನಾವಟಿ ಕೆಲಸದಲ್ಲಿ ನೂರಾರು ರೂಪಾಯಿ ವೆಚ್ಚವಾದರೂ ಚಿಂತೆಯಿಲ್ಲ ಕಳ್ಳನನ್ನು ಹಿಡಿಯಬೇಕಾದರೆ ಕಳ್ಳನಿಗಿಂತಲೂ ಕಳ್ಳನಾಗಬೇಕಾಗುತ್ತದೆ. ಮತ್ತು ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಾಗುತ್ತದೆ. "ಉಷ್ಣಂ ಉಷ್ಣೇನ ಶಾಮ್ಯತೇ. ಶೀತಂ ಶೀತೇನ ಶಾಮ್ಯತೇ" ಎಂಬಂತೆ ಈ ಪ್ರಸಂಗದಲ್ಲಿ ಸುಳ್ಳಿಗೆ ಸುಳ್ಳನ್ನೇ ಕಲ್ಪಿಸಿ ಸತ್ಯವನ್ನು ಹೊರಡಿಸಬೇಕಾಗಿದೆ. ಇದಕ್ಕೆ ಎಷ್ಟು ಮಾತ್ರವೂ ಸಂದೇಹ ತೆಗೆದುಕೊಳ್ಳದೆ ನಾನು ಹೇಳಿದಷ್ಟು ಕೆಲಸವನ್ನು ಮಾಡಿ, ಅವರ ಕಡಿಯಿಂದ ಮೆ||ಕಲೇಕ್ಟರ ಸಾಹೇಬರವರ ಕಡೆಗೆ ಅರ್ಜಿಗಳನ್ನು ದಾಖಲಮಾಡಿಸಿರಿ. ನಾವು ಅವುಗಳನ್ನು ದಾಖಲ ಮಾಡಿಕೊಳ್ಳದೆ ಸರಕಾರಕ್ಕೆ ಮಾಡಿಕೊಳ್ಳಿರೆಂದು ಹೇಳಿ ಕಳಿಸುವೆವು. ಮುಂದೆ ಸರಕಾರಕ್ಕೆ ಹೋಗಿ, ಸರಕಾರದಿಂದ ನಮ್ಮ ಕಡೆಗೆ ಚೌಕಸಿಗೆ ಬಂದಾಗ್ಗೆ ಯಾವತ್ತು ವಿಚಾರವಾಗುವದು" ಎಂದು ಹೇಳಲು ಮಲ್ಲನಗೌಡರು ಧೈರ್ಯವನ್ನು ತಂದುಕೊಂಡು, ಊರಿಗೆ ಬಂದು ರಾ.ಸಾ||ರವರು ಹೇಳಿದಂತೆ ಕೃತ್ರಿಮ ಹಕ್ಕುದಾರರನ್ನು ತಯಾರಮಾಡಿ, ಅವರಿಗೆ ಹೇಳತಕ್ಕದ್ದನ್ನೆಲ್ಲ ಹೇಳಿ, ಖೊಟ್ಟಿ ತಾಕೀದಿಗಳನ್ನು ತಯಾರಮಾಡಿಸಿಕೊಂಡು ಬರಲಿಕ್ಕೆ ರೂಪಾಯಿ ಕೊಟ್ಟು ಕಳಿಸಿದರು. ಈ ಬನಾವಟಿ ತಾಕೀದಿಗಳನ್ನು ಮಾಡಿಸಿಕೊಂಡು ಬರಲಿಕ್ಕೆ ಇವರಿಗೆ ಏನೂ ತಡವಾಗಲಿಲ್ಲ. ಯಾಕಂದರೆ ನಿಯಮಿತ ರೂಪಾಯಿಗಳನ್ನು ಕೊಡಲು ಆ ನರಗುಂದದಲ್ಲಿರುವ ದುಷ್ಟಬ್ರಾಹ್ಮಣನು, ಯಾವ ವರ್ಷದ ಯಾವ ತಾರೀಖಿನ ತಾಕೀದಿಗಳನ್ನು ಬೇಡುತ್ತಾರೋ ಅವುಗಳನ್ನು ಆಗಿಂದಾಗ್ಗೆ ತಯಾರಮಾಡಿಕೊಡುತ್ತಿದ್ದನು. ನರಗುಂದ ಗ್ರಾಮವು ಸಂಸ್ಥಾನಕ್ಕೆ ಒಳಪಟ್ಟಿದ್ದರಿಂದ ಸಹಿನಿಸಿ ಮೋಹರ ಮುಂತಾದ್ದನ್ನೆಲ್ಲ ತದ್ರೂಪವಾಗಿ ತಯಾರಿಸುತ್ತಿದ್ದನು. ದುಷ್ಟರಿಗೆ ಬನಾವಟಿ ಲೇಖಗಳನ್ನು ಮಾಡಿಕೊಡುವದೇ ಆತನ ಮುಖ್ಯ ಉದ್ಯೋಗವಾಗಿತ್ತು. ಆ ಸಂಸ್ಥಾನದಲ್ಲಿ ಬಾರನಿಸಿಯನ್ನು ಇಡುತ್ತಿದ್ದಿಲ್ಲವಾದದರಿಂದ ಹಿಂದು ಮುಂದಿನ ವಿಚಾರವನ್ನೇನೂ ಮಾಡದೆ, ನಿರ್ಭಯದಿಂದ ಇಂಥ ದುರ್ಲೇಖಗಳನ್ನು ಸಿದ್ಧಮಾಡಿಕೊಡಲಿಕ್ಕೆ ಈತನಿಗೆ ಬಲು ಸುಲಭವಾಗಿತ್ತು. ಕಾರಣ ಆತನು ಇವರು ಬೇಡಿದಷ್ಟು ತಾಕೀದಿಗಳನ್ನು ಬೇಡಿದ ತಾರೀಖಿಗೆ ಬನಾವಟಿ ತಯಾರ ಮಾಡಿಕೊಟ್ಟನು.

ಈ ಖೊಟ್ಟಿ ತಾಕೀದಿಗಳನ್ನು ತಯಾರ ಮಾಡಿಸಿಕೊಂಡು ಬಂದು, ಈ ಅಯ್ಯಾರು ಮಂದಿ ಕೃತ್ರಿಮ ಹಕ್ಕುದಾರರು ನಾವೂ ಕೊಣ್ಣೂರ ಗೌಡಿಕಿಯ ವತನದಾರರೆಂದೂ, ನಮ್ಮ ಹೆಸರುಗಳನ್ನೂ ಹಕ್ಕುದಾರರ ರಜಿಸ್ಟರಕ್ಕೆ

ದಾಖಲಮಾಡಬೇಕೆಂದೂ ಮೆ॥ಮಿಡಲ್ಟನ್ ಕಲೇಕ್ಟರ ಸಾಹೇಬ ಬಹದ್ದೂರವರ ಕಡೆಗೆ ಅರ್ಜಿಗಳನ್ನು ಮಾಡಲು ಮೆ॥ರವರು ಈ ಅರ್ಜಿಗಳನ್ನು ಹಿಡಿಯದೆ, ಸರಕಾರಕ್ಕೆ ಹೋಗಿರೆಂದು ಹೇಳಲು, ಕೂಡಲೆ ಸರಕಾರಕ್ಕೆ ಅರ್ಜಿಗಳು ದಾಖಲಾದವು. ಮುಂದೆ ಈ ಪ್ರಕರಣವು ಸರಕಾರದಿಂದ ಮೆ॥ಕಮಿಶನರ ಸಾಹೇಬರವರ ಮಾರ್ಫತ ಮೆ॥ಕಲೇಕ್ಟರ ಸಾ.ಬ॥ರವರ ಕಡೆಗೆ ಪುನಃ ಚೌಕಸಿಗೆ ಬಂತು. ಈ ಕೃತ್ರಿಮವನ್ನು ಕಲ್ಪಿಸಿಕೊಟ್ಟಿದ್ದನ್ನು ರಾ.ಸಾ॥ ರುದ್ರಗೌಡರವರು ಮೆ॥ಮಿಡಲ್ಟನ್ ಸಾ.ಬ॥ರವರಿಗೆ ಸಾದ್ಯಂತವಾಗಿ ಮೊದಲೇ ತಿಳಿಸಿದ್ದರು. ಇವರ ಈ ಸಮಂಜಸವಾದ ಯುಕ್ತಿಗೆ ಮೆ॥ರವರು ಬಹಳೇ ಆಶ್ಚರ್ಯಪಟ್ಟರು. ಹಕ್ಕುದಾರರಲ್ಲದ ಹತ್ತೆಂಟು ಜನರು ಸುಳ್ಳುಸುಳ್ಳೇ ತಮ್ಮ ಬಾಧ್ಯತೆಯನ್ನು ಸಾಧಿಸಹತ್ತಿದರು. ಒಂದೇ ಕಾಲಕ್ಕೆ ನಾಲ್ಕೈದು ಮಂದಿ ಒಮ್ಮೇಲೆ ಗೌಡಿಕಿಯನ್ನು ಮಾಡುವದು ತೀರ ಅಸಂಭವವೆಂಬ ವಿಚಾರವು ಅರಿಯದವರಿಗೂ ಕೂಡ ತಿಳಿಯುವಂತಿದ್ದರೂ, ಯೋಗ್ಯವಾದ ನಿರ್ಣಯವು ಎಲ್ಲಿಯೂ ಆಗಿದ್ದಿಲ್ಲ. ನಿಜವಾದ ವೃತ್ತಾಂತವು ತಿಳಿಯದೆ ಸರಕಾರದಲ್ಲಿ ಎಷ್ಟೋ ವಿಪರೀತ ಕೆಲಸಗಳಾಗುತ್ತವೆ. ಅಥವಾ ಕಣ್ಣುಮುಚ್ಚಿಕೊಂಡು ಸರಕಾರಿಯ ಕೆಲಸ ಮಾಡುವ ಮದಾಂಧರೂ, ಲಂಚಬಕ್ಕರೂ ಆದ ಅಧಿಕಾರಿಗಳ ನಿರಂಕುಶ ಪ್ರಭುತ್ವದಲ್ಲಿ ಒಬ್ಬರ ವಿತ್ತಜೀವಿತವೆಲ್ಲ ಇನ್ನೊಬ್ಬರ ಪಾಲಾಗುತ್ತಿರುವದು ಸರ್ವಸಾಧಾರಣವಾಗಿ ಹೋಗಿದೆ. ಲಂಚದ ಹಣವು ಏನು ಮಾಡೀತು, ಏನು ಮಾಡಲಿಕ್ಕಿಲ್ಲ. ದುರಾಶೆಯಿಂದ ಸತ್ಯವು ಮಿಥ್ಯವಾಗುವದರಲ್ಲಿ ಮಿಥ್ಯವು ಸತ್ಯವಾಗುವದರಲ್ಲಿ ತಡವೇ ಇಲ್ಲ.

ಕಡೆಗೆ ಮೆ॥ ಮಿಡಲ್ಟನ್ ಸಾಹೇಬ ಬಹದ್ದೂರವರ ಕಡೆಯಿಂದ ಯೋಗ್ಯ ವಿಚಾರ ಮಾಡಲ್ಪಟ್ಟು, ಒಂದೇ ವರ್ಷದಲ್ಲಿ ಒಂದೇ ಕಾಲಕ್ಕೆ ಅಯ್ದಾರು ಜನರು ಗೌಡಿಕಿಯನ್ನು ಮಾಡುವದು ತೀರ ಅಸಂಭವವೆಂತಲೂ ಈ ಬಿನ್ನ ಹಕ್ಕುದಾರರಾದ ಏಳೆಂಟು ಜನರು ತಾವು ಹಕ್ಕುದಾರರೆಂದು ವಾದಹೂಡಿದ್ದು, ಬೊಡ್ಡಿಯಿಂದ ತುದಿತನಕ ಎಲ್ಲ ಸುಳ್ಳು ಇರುತ್ತದೆಂತಲೂ ಸ್ಪಷ್ಟೀಕರಣಮಾಡಿ ಈ ಗೌಡಿಕಿಯು ಹಕ್ಕಿಗೆ, ಎಲ್ಲಕ್ಕೂ ಮೊದಲು ಇಲಾಖಾ ಸಾಹೇಬರು ಠರಾಯಿಸಿದಂತೆ ಮಲ್ಲನಗೌಡ ಮತ್ತು ಪರ್ವತಗೌಡ ಈ ಇಬ್ಬರೇ ಮೂಲಹಕ್ಕುದಾರರೆಂಬದಾಗಿ ಸನ್ ೧೮೮೬ನೇ ಇಸವಿಯ ಅಕ್ಟೋಬರ ತಿಂಗಳಲ್ಲಿ ಬರೆದು ಸರಕಾರಕ್ಕೆ ಹೋಗಲು, ಸರಕಾರದಲ್ಲಿ ಈ ಬಗ್ಗೆ ವಿಶೇಷ ವಿಚಾರವಾಗದೆ, ಕ್ರಾಫರ್ಡಸಾಹೇಬರಿಂದ ವಿಚಾರವಾದದ್ದರಲ್ಲಿ ನಾವು ಕೈಹಾಕುವದಿಲ್ಲೆಂಬದಾಗಿ ಠರಾವವಾಯಿತು. ಕಾರಣ ಈ ಪ್ರಕರಣವು ಅಷ್ಟರಮಟ್ಟಿಗೆ ಮೂಲೆಗೆ ಬಿದ್ದಂತಾಯಿತು.

ಮುಂದೆ ಸ್ವಲ್ಪದಿವಸಗಳಲ್ಲಿಯೇ ಕ್ರಾಫರ್ಡಪ್ರಕರಣವು ಏಳಲು, ಕ್ರಾಫರ್ಡ ಸಾಹೇಬರು ಯಾರಾರ ಕಡೆಯಿಂದ ಎಷ್ಟೆಷ್ಟು ಲಂಚವನ್ನು ತೆಗೆದುಕೊಂಡಿರುವರೆಂಬ ಬಗ್ಗೆ ಸರಕಾರದಿಂದ ಶೋಧನ ನಡೆಯಿತು. ಮೆ॥ಕ್ರಾಫರ್ಡಸಾಹೇಬರು ದೇಸಾಯಿ, ದೇಶಪಾಂಡೆ ಮುಂತಾದ ಸಂಸ್ಥಾನಿಕರ ಕಡೆಯಿಂದಲೂ, ಎಷ್ಟೋ ದೊಡ್ಡ ದೊಡ್ಡ ವತನದಾರರ ಕಡೆಯಿಂದಲೂ, ಎಷ್ಟೋ ಶಿರಸ್ತಾರ, ಮಾಮಲೇದಾರ, ಡಿಪೂಟಿ ಕಲೇಕ್ಟರ ಮೊದಲಾದ ದೊಡ್ಡ ದೊಡ್ಡ ಸರಕಾರೀ ಕಾಮದಾರರ ಕಡೆಯಿಂದಲೂ ಅತಿಶಯವಾಗಿ ಲಂಚ ತೆಗೆದುಕೊಂಡಿರುವರೆಂಬದಾಗಿ ಬೊಬ್ಬಾಟವಾದದರಿಂದ, ಇದರ ಶೋಧವನ್ನು ನಡಿಸುವ ಬಗ್ಗೆ ಸರಕಾರದವರು ದಕ್ಷಿಣಭಾಗಕ್ಕೆ ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪನವರನ್ನೂ ರಾ.ಸಾ॥ರುದ್ರಗೌಡರವರನ್ನೂ ಸ್ಪೆಶಲ್ ಡ್ಯೂಟಿಯ ಮೇಲೆ ನೇಮಿಸಿದರು. ರಾ.ಸಾ॥ರವರು ಈ ಯೋಗ್ಯ ಸಮಯವನ್ನು ಕಂಡು, ಕ್ರಾಫರ್ಡಸಾಹೇಬರ ಲಂಚದ ಎಷ್ಟೋ ದೊಡ್ಡ ದೊಡ್ಡ ಪ್ರಕರಣಗಳನ್ನು ಶೋಧಮಾಡಿಕೊಟ್ಟು ಅವುಗಳಲ್ಲಿ ಈ ಕೊಣ್ಣೂರ ಗೌಡಿಕೀ ಪ್ರಕರಣದಲ್ಲಿ ಬಿನ್ ಹಕ್ಕುದಾರರೆಲ್ಲ ಖೊಟ್ಟಿತಾಕೀದಿಗಳನ್ನು ತೆಗೆದುಕೊಂಡು ಬಂದು, ಕ್ರಾಫರ್ಡಸಾಹೇಬರಿಗೆ ಲಂಚಕೊಟ್ಟು, ನಿರಾಧಾರದಿಂದ ಹಕ್ಕುದಾರರಾಗಿ ಕೂತದ್ದನ್ನು ಸರಕಾರಕ್ಕೆ ತಿಳಿಸಲಾಗಿ, ಪ್ರಕರಣವು ಪುನಃ ವಿಚಾರಣೆಗೆ ಬಂದು, ಕಪಟವ್ಯಾಪಾರವೆಲ್ಲ ಹೊರಬಿದ್ದು, ಯೋಗ್ಯ ನಿರ್ಣಯವಾಗಿ ಮೊದಲು ಮೆ॥ ಮಿಡಲ್ಟನ್ ಸಾಹೇಬ ಬಹಾದ್ದೂರವರು ಠರಾವ

ಮಾಡಿದಂತೆ ಈ ಕೊಣ್ಣೂರ ಗೌಡಿಕಿ ವತನಕ್ಕೆ ಇಬ್ಬರೇ ಮೂಲಹಕ್ಕುದಾರರೆಂದು ಸನ್ ೧೮೮೯ನೇ ಇಸವಿಯ ಆರಂಭಕ್ಕೆ ಸರಕಾರ ಠರಾವವಾಯಿತು. ಅದರಿಂದ ಹಿಂದಿನಿಂದ ಹಕ್ಕುದಾರ ರಜಿಸ್ಟರಕ್ಕೆ ದಾಖಲ ಆದವರನ್ನೆಲ್ಲ ಕಿತ್ತು ಹಾಕಲ್ಪಟ್ಟು, ಮಲ್ಲನಗೌಡರು ಮತ್ತು ಪರ್ವತಗೌಡರು ಇವರಿಬ್ಬರೇ ಮೂಲಹಕ್ಕುದಾರರಾದರು.

ರಾ.ಸಾ||ರುದ್ರಗೌಡರು ಈ ಪ್ರಸಂಗದಲ್ಲಿ ಈ ಪ್ರಕರಣವನ್ನು ಎಬ್ಬಿಸದಿದ್ದರೆ ಈ ಗೌಡಿಕಿಯ ವತನವು ನಿರರ್ಥಕವಾಗಿ ಹನ್ನೆರಡು ಮಂದಿ ಹವಾಲದಾರರ ಪಾಲಾಗಿ, ಚಲ್ಲಾಪಿಲ್ಲಿಯಾಗಿ ಹೋಗುತ್ತಿತ್ತು. ಕಣವೀ ಹೊನ್ನಾಪುರದ ಗೌಡಿಕಿ ವತನದ ಪ್ರಕರಣದಂತೆ ಈ ಕೊಣ್ಣೂರ ಮಲ್ಲನಗೌಡರ ಪ್ರಕರಣವಾದರೂ ಅಘಟಿತ ಘಟನೆಯೆಂದೇ ಹೇಳಬಹುದು. ಕಣವೀಹೊನ್ನಾಪುರದ ಪ್ರಕರಣದಲ್ಲಿ ರಾ.ಸಾ||ರವರು ತೋರಿಸಿದ ಯುಕ್ತಿ ಸಾಹಸಗಳಿಗಿಂತ ಈ ಕೊಣ್ಣೂರ ಪ್ರಕರಣದಲ್ಲಿ ಪ್ರಕಟಿಸಿದ ಯುಕ್ತಿಚಾತುರ್ಯಾದಿಗಳು ಚಮತ್ಕಾರಿಕವಾದವುಗಳೆಂದು ಸ್ಪಷ್ಟವಾಗುತ್ತದೆ. ಕಬ್ಬಿಣವನ್ನು ಕಬ್ಬಿಣದಿಂದಲೇ ಕಡಿಯುವಂತೆ, ಸುಳ್ಳಿಗೆ ಸುಳ್ಳು ಕಲ್ಪನೆಯನ್ನು ಕಲ್ಪಿಸಿ, ಈ ಸತ್ಯನಿರ್ಣಯವನ್ನು ಹೊರಬೀಳಿಸಿದ ಇವರ ಯುಕ್ತಿಗೆ ಮೆ||ಮಿಡಲ್ಟನ್ ಸಾಹೇಬ ಬಹಾದ್ದೂರವರು ಚಕಿತರಾಗಿ ಹೋದರು. ಇಂಥ ಅಸಾಧಾರಣ ಬುದ್ಧಿಪ್ರಭೆಯನ್ನು ಕಂಡು, ಜನಸಮೂಹವೆಲ್ಲ ಇವರನ್ನು ಕೊಂಡಾಡಿತು. ಕೆಲಸವೆಲ್ಲ ತೀರಿಹೋಗಿದ್ದ ಪ್ರಕರಣವನ್ನು ಪುನಃ ಎಬ್ಬಿಸಿ, ಯುಕ್ತಿಯಿಂದ ಮೂಲ ವತನದಾರರ ಹಕ್ಕು ಕಾಹೀಮ ಮಾಡಿಸಿದ್ದು, ಮೃತವಾದ ಮನುಷ್ಯನ ಕಳೇವರಕ್ಕೆ ಸಂಜೀವನೀ ಪ್ರಯೋಗಮಾಡಿ, ಜೀವಕಳೆಯನ್ನು ತುಂಬಿಸಿ, ಪುನರ್ಜನ್ಮ ಮಾಡಿದಂತಾಯಿತೆಂದು ಹೇಳಬಹುದು.

ಮಲ್ಲನಗೌಡರು ಲಿಂಗಾಯತ ರಡ್ಡೀಜಾತಿಯ ಪಾಕನಾಕ ಕುಲದವರು. ಏನೇನೂ ಸಂಬಂಧವಿಲ್ಲದ ಇವರ ಕಷ್ಟವನ್ನು ಕಂಡು, ನಿರಪೇಕ್ಷಬುದ್ಧಿಯಿಂದ ಇವರ ಇಷ್ಟವನ್ನು ಪರಿಪೂರಿಸಿಕೊಟ್ಟಿದ್ದರ ಮೇಲಿಂದ ರಾ.ಸಾ||ರುದ್ರಗೌಡರವರ ಭೂತದಯೆಯು ಎಷ್ಟರಮಟ್ಟಿಗೆ ಪ್ರಬಲವಾಗಿತ್ತೆಂಬುದು ಪ್ರತಿಯೊಬ್ಬ ಮನುಷ್ಯನಿಗೆ ಸಹಜವಾಗಿ ತಿಳಿಯುವಂತಿದೆ. ಇದರಂತೆ ಎಷ್ಟೋ ಸಜ್ಜನರು ದುರದೃಷ್ಟದಿಂದ ದುರ್ಜನರ ಕಪಟಜಾಲದಲ್ಲಿ ಸಿಕ್ಕು, ನ್ಯಾಯಪಥವನ್ನು ಕಾಣದೆ ತೊಳಲಾಡುತ್ತಿದ್ದದ್ದನ್ನು ಕಂಡು ಕನಿಕರಪಟ್ಟು, ಅವರನ್ನು ಆ ದುಷ್ಟರ ಜಾಲದಿಂದ ಮುಕ್ತಮಾಡಿ, ಅವರಿಗೆ ಸಂತೋಷವನ್ನುಂಟು ಮಾಡಿದ ಸಂಗತಿಗಳು ಇವರ ಚರಿತ್ರಮಾಲೆಯಲ್ಲಿ ಸಾವಿರಾರು ಇರುವವು. ಗ್ರಂಥವಿಸ್ತಾರವಾಗುವದೆಂಬ ಭಯದಿಂದ ಅವನ್ನೆಲ್ಲ ಬರೆಯದೆ, ಮಾದರಿಗಾಗಿ ಈ ಮೇಲಿನ ಒಂದೆರಡು ಸಂಗತಿಗಳು ಮಾತ್ರ ಬರೆಯಲ್ಪಟ್ಟಿರುವವು.

❖❖

೬ನೇ ಭಾಗ

ಮೆ||ಮಿಡಲ್ಟನ್ ಸಾಹೇಬ ಬಹದ್ದೂರವರು ರಾ.ಸಾ||ರುದ್ರಗೌಡರವರಿಗೆ ಕೊಟ್ಟ ಸರಟೀಫಿಕೇಟು

ಸನ್ ೧೮೮೬ನೇ ಇಸವಿಯ ನವಂಬರ ತಿಂಗಳಲ್ಲಿ ಮೆ||ಮಿಡಲ್ಟನ್ ಸಾಹೇಬ ಬಹದ್ದೂರವರು ಒಂದು ವರ್ಷ ಫರ್ಲೋ ರಜೆಯನ್ನು ತೆಗೆದುಕೊಂಡು ವಿಲಾಯತಿಗೆ ಹೋದರು. ಹೋಗುವಾಗ್ಗೆ ತಮ್ಮ ವಿಶ್ವಾಸಿಕ ಚೀಟ್ನಿಸರಾದ ರಾ.ಸಾ||ರುದ್ರಗೌಡರವರಿಗೆ ಸ್ವಸಂತೋಷದಿಂದ ಒಂದು ಸರಟೀಫಿಕೇಟು ಕೊಟ್ಟರು. ವಾಚಕರ ಅವಲೋಕನಾರ್ಥವಾಗಿ ಆ ಸರಟೀಫಿಕೇಟಿನ ಭಾಷಾಂತರವನ್ನು ಇಲ್ಲಿ ಕೊಡುತ್ತೇವೆ.

"ಮಿಸ್ಟರ, ರುದ್ರಗೌಡ ಚೆನ್ನವೀರಗೌಡ ಅರಟಾಳ ಇವರು ಚೀಟ್ನಿಸಿಯ ಕೆಲಸ ಮಾಡಹತ್ತಿ ಮೂರು ವರ್ಷಗಳಿಗಿಂತ ಹೆಚ್ಚಾಯಿತು. ಈಗ ನಾನು ಈ ಜಿಲ್ಲೆಯನ್ನು ಬಿಡುವವನಿದ್ದದರಿಂದ ಇವರ ವಿಷಯಕ್ಕೆ ನನ್ನ ಅಭಿಪ್ರಾಯವನ್ನು ದಾಖಲೆಗಾಗಿ ಬರೆದಿಡುತ್ತೇನೆ. ಇವರು ಹಾಯರ ಸ್ಟ್ಯಾಂಡರ್ಡ ಪರೀಕ್ಷೆ ಪಾಸಾದವರಿದ್ದು, ಒಳ್ಳೇ ಸುಶಿಕ್ಷಿತರೂ, ಕೆಲಸದಲ್ಲಿ ಜಾಗ್ರತೆಯುಳ್ಳ ತರುಣರೂ ಆಗಿದ್ದಾರೆ. ಇವರು ತಮ್ಮ ಕೈಕೆಳಗಿನ ಕಚೇರಿಯ ಕೆಲಸವನ್ನು ವ್ಯವಸ್ಥೆಯಿಂದ ನಡಿಸುವದರಲ್ಲಿ ಮತ್ತು ನಿರ್ಣಯ ಮಾಡುವದರಲ್ಲಿ ಒಳ್ಳೇ ಚಾತುರ್ಯವನ್ನು ತೋರಿಸಿದ್ದಾರೆ. ಇವರ ಪ್ರಾಮಾಣಿಕತನದ ವಿಷಯಕ್ಕೆ ನನಗೆ ಪೂರ್ಣ ನಂಬಿಗೆಯದೆ. ಇವರು ಜಾತಿಯಿಂದ ಲಿಂಗಾಯತರಿದ್ದಾರೆ. ಇವರು ಅತಿಶಯವಾದ ಪ್ರಾಮಾಣಿಕತನದಿಂದ ಮತ್ತು ನಿಷ್ಪಕ್ಷತನದಿಂದ ಕೆಲಸ ಮಾಡಿದ ಕಾರಣ, ಕೆಲವು ಪ್ರಸಂಗಗಳಲ್ಲಿ ಇವರಿಗೆ ಕೆಲವರು ಬಲಾಢ್ಯ ಶತ್ರುಗಳಾಗಿದ್ದಾರೆ. ಅವರು ನಾನು ಹೊರಟು ಹೋದ ಮೇಲೆ,ಇವರ ಲುಕಸಾನೆಯ ದಶಿಯಿಂದ ಪ್ರಯತ್ನಮಾಡುವ ಸಂಭವವಿದೆ. ಮತ್ತು ಅಡವಿಗಳಿಗೆ ಇನಾಮದಾರರ ಹಕ್ಕಿನ ವಿಷಯವಾಗಿ ನಡೆದ ಪ್ರಕರಣವು ಬಹಳೇ ಕಠಿಣವೂ, ಮತ್ತು ಸರಕಾರದ ಗುಪ್ತಪತ್ರ ವ್ಯವಹಾರವುಳ್ಳದ್ದೂ ಆಗಿತ್ತು. ಇದರ ವಿಷಯವಾಗಿ ರಿಕಾರ್ಡರೂಮಿನಲ್ಲಿಯ ಹಳೇ ದಾಖಲೆಗಳನ್ನು ಹುಡುಕುವದರಲ್ಲಿ ಇವರು ನನಗೆ ಬಹಳೇ ಉಪಯೋಗಬಿದ್ದರು. ಮತ್ತು ಬೆಳಗಾವಿಯ ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರರಾದ ಗಿಲಗಿಂಚಿ ಗುರುಸಿದ್ಧಪ್ಪನವರು ಮತ್ತು ರುದ್ರಗೌಡರು ಈ ಉಭಯತರ ಶ್ರಮದಿಂದ ಲಿಂಗಾಯತ ಎಜ್ಯುಕೇಶನ್ ಫಂಡು ಸ್ಥಾಪಿಸಲ್ಪಟ್ಟಿತು. ಇವರು ಈ ಕೆಲಸದಲ್ಲಿ ಬಹಳ ಜಾಣತನವನ್ನು ತೋರಿಸಿದ್ದಾರೆ. ಮತ್ತು ಜಾಹೀರ ರೀತಿಯಿಂದ ಹಣವನ್ನು ವಸೂಲ ಮಾಡುವದರಲ್ಲಿ ಮತ್ತು ತಮ್ಮ ಮೇಲೆ ತಿಲಮಾತ್ರ ದೋಷಬರಲಿಕ್ಕೆ ಏನೂ ಮಾರ್ಗವುಳಿಯದಂತೆ ಎಲ್ಲ ವಸೂಲಿಗಳಿಗೆ ಪಾವತಿಗಳನ್ನು ಕೊಡುವದರಲ್ಲಿ, ಇವರು ಬಹಳೇ

ಜಾಗ್ರತೆಯುಳ್ಳವರಾಗಿದ್ದರು. ಈ ಚತುರರಾದ ಚೀಟ್ಣಿಸರು ಮಾಮಲತಿಯ ಕೆಲಸಕ್ಕೂ ಅಥವಾ ಇದಕ್ಕೂ ಹೆಚ್ಚಿನ ಕೆಲಸಕ್ಕೂ ಪೂರ್ಣಯೋಗ್ಯರಿದ್ದಾರೆ. ಕಾರಣ ಇವರಿಗೆ ತೀವ್ರವೇ ಬಡತಿಯು ಸಿಗುವದೆಂದು ನಾನು ನಂಬುತ್ತೇನೆ. ಮತ್ತು ಇವರು ಬಹಳ ಉಪಯೋಗವುಳ್ಳ ಮತ್ತು ನಂಬಿಗೆ ಇಡಲಿಕ್ಕೆ ಯೋಗ್ಯರಾದ ಮಾಮಲೇದಾರರಾಗುವರೆಂದು ನನಗೆ ಸಂಪೂರ್ಣ ವಿಶ್ವಾಸವಿದೆ. ಇಂಥ ಚತುರ ಹಾಗೂ ಪ್ರಮಾಣಿಕತನವುಳ್ಳ ಯೋಗ್ಯ ಚೀಟ್ಣಿಸರು ನನಗೆ ಎಂದೂ ದೊರೆಯಲಿಲ್ಲ.

ಧಾರವಾಡ

ತಾರೀಖು ೨೪ ನೇ ನವಂಬರ

ಸನ್ ೧೮೮೬ ಇಸ್ವಿ.

ನ್ಯಾಯನಿಷ್ಠರಾದ ರಾಜಪ್ರಧಾನರು

ಈ ಪ್ರಕಾರ ವರಿಷ್ಠರ ಕಡೆಯಿಂದ ಸರಟೀಫಿಕೇಟನ್ನು ಪಡೆದ ರಾ.ಸಾ|| ರುದ್ರಗೌಡರವರ ಜಾಣ್ಮೆಯನ್ನೂ, ಕುಶಲತನವನ್ನೂ ಎಷ್ಟು ಹೊಗಳಿದರೂ ತೀರದು. ಈ ಒಂದೇ ಸರಟೀಫಿಕೇಟಿನಿಂದ ಇವರ ಕೆಲಸದ ಪ್ರಾಮಾಣಿಕತನ, ಕಾರ್ಯಬಾಹುಲ್ಯ, ಸಹನಶೀಲತೆ, ಸಾಹಸಾದಿಗಳು ಎಷ್ಟಿದ್ದವೆಂಬುದು ಸ್ಪಷ್ಟವಾಗುತ್ತದೆ. ಇಂತಹ ಮಹತ್ವವಾದ ಗುಣಗಳುಳ್ಳವರೇ ಮಹನೀಯರೆಂಬ ಅಭಿಧಾನಕ್ಕೆ ಪಾತ್ರರಾಗುತ್ತಾರೆ. ರಾ.ಬ||ಗಿಲಿಗಿಂಚಿ ಗುರುಸಿದ್ಧಪ್ಪನವರೂ, ರಾ.ಸಾ||ರುದ್ರಗೌಡರವರೂ ದೀರ್ಘ ಸಾಹಸದಿಂದ ಕೈಕೊಂಡ ಲಿಂಗಾಯತ ಎಜ್ಯುಕೇಶನ್ ಫಂಡಿಗೆ ಮೆ||ಮಿಡಲ್ಟನ್ ಸಾಹೇಬರವರು ಬಹಳೇ ಅನುಕೂಲರಾದರು. ಆದದರಿಂದ ಈ ಫಂಡು ಮೆ||ಮಿಡಲ್ಟನ್ ಸಾಹೇಬ ಬಹದ್ದೂರವರಿಂದಲೇ ಸ್ಥಾಪಿತವಾಯಿತೆಂದನ್ನಲಿಕ್ಕೆ ಏನೇನೂ ಅಡ್ಡಿಯಿಲ್ಲ. ಈ ಲಿಂಗಾಯತ ಫಂಡಿಗೆ ವಿದ್ಯಾಭಿಮಾನಿಗಳೂ, ಧರ್ಮಾಭಿಮಾನಿಗಳೂ ಆದ ಎಷ್ಟೋ ವೀರಶೈವ ಧನಾಢ್ಯರು ಸಹಾಯ ಮಾಡಿದರು. ಇವರೆಲ್ಲರ ಉಪಕೃತಿಯನ್ನು ವೀರಶೈವರಾದ ನಾವೆಲ್ಲರು ಮನಸಾ ಸ್ಮರಿಸತಕ್ಕದ್ದು. ಈ ಲಿಂಗಾಯತ ಫಂಡಿಗೆ ಸಹಾಯಮಾಡಿದ ಮಹಾಪುರುಷರ ಹೆಸರುಗಳನ್ನು ಈ ಚರಿತ್ರೆಯ ಕಡೆಯಲ್ಲಿ ಕೊಡುವೆವು. ಶ್ರೀ ಮದ್ವೀರಶೈವ ಮತಸ್ಥಾಪನಾಕರ್ತರಾದ ಪಂಚಾಚಾರ್ಯರಲ್ಲಿ ಅಗ್ರೇಸರರಾದ ರೇಣುಕಾರಾಧ್ಯರ ಮೂಲಪೀಠ ಸ್ಥಾನವೂ, ವೀರಶೈವ ಮತದ ಪಂಚಸಿಂಹಾಸನಗಳಲ್ಲಿ ಒಂದು ಸಿಂಹಾಸನವೂ ಆದ ಮೈಸೂರು ಸಂಸ್ಥಾನಕ್ಕೊಳಪಟ್ಟ ರಂಭಾಪುರೀ (ಬಾಳೀಹಳ್ಳಿಯ) ಶ್ರೀ ಚಂದ್ರಶೇಖರ ಮಹಾಸ್ವಾಮಿಗಳವರು, ಸದ್ಭಕ್ತ ಶಿರೋಮಣಿಗಳಾದ ರಾ.ಬ|| ಗುರುಸಿದ್ಧಪ್ಪನವರೂ ರಾ.ಸಾ||ರುದ್ರಗೌಡರವರೂ ಲಿಂಗಾಯತ ಫಂಡನ್ನು ಸ್ಥಾಪನೆಯನ್ನು ಮಾಡಿದ್ದು ನೋಡಿ ಸಂತೋಷಪಟ್ಟು, ಅದನ್ನು ಅಭಿವೃದ್ಧಿಸಲಿಕ್ಕೂ ಚಿರಸ್ಥಾಯಿ, ಮಾಡಲಿಕ್ಕೂ ಪ್ರೋತ್ಸಾಹಗೊಂಡು, ತಾವು ಈ ಫಂಡಿಗೆ ಪ್ರತಿವರ್ಷ ಎರಡು ಸಾವಿರ ರೂಪಾಯಿಯಂತೆ ೨೫ ವರ್ಷಗಳಲ್ಲಿ ಅಯ್ವತ್ತು (೫೦) ಸಾವಿರ ರೂಪಾಯಿಗಳನ್ನು ಮುಟ್ಟಿಸುತ್ತ ಹೋಗುವೆವೆಂದು ಖಂಡಿತವಾದ ವಾಗ್ದಾನಮಾಡಿದರು. ಇಂಥ ದೊಡ್ಡ ರಕಮನ್ನು ದಯಪಾಲಿಸುವ ವಾಗ್ದಾನಮಾಡಿದ್ದರಿಂದ ಈ ಮಹಾಸ್ವಾಮಿಗಳು ಬಹು ವಿದ್ಯಾಭಿಮಾನಿಗಳೂ, ವಿತರಣಾಶಾಲಿಗಳೂ ಇದ್ದರೆಂದು ವ್ಯಕ್ತವಾಗುತ್ತದೆ. ಎಲ್ಲ ವೀರಶೈವಮಠದ ಎಲ್ಲ ಸಿಂಹಾಸನಾಧೀಶ್ವರರೂ, ಮಹಾಮಹಾ ವಿರಕ್ತೋತ್ತಮರೂ, ಧನಾಢ್ಯ ಸದ್ಭಕ್ತರೂ ಮೊದಲಾದ ಅಶೇಷ ವೀರಶೈವ ಪ್ರಮುಖರು ಈ ಮಹಾಸ್ವಾಮಿಗಳವರ ಅನುಕರಣವನ್ನೇ ಅನುಸರಿಸಿದರೆ, ವೀರಶೈವರು ವಿದ್ಯಾವಂತರಾಗಲಿಕ್ಕೆ ಅವಕಾಶವೇ ಬೇಕಾಗಿಲ್ಲ.

ಮೆ||ಮಿಡಲ್ಟನ್ ಸಾಹೇಬ ಬಹಾದ್ದೂರವರು ವೀರಶೈವ ಜನಾಂಗದ ಉತ್ಸುಕತೆಯನ್ನೂ, ವಿದ್ಯಾಭಿರುಚಿಯನ್ನೂ ಕಂಡು "ರಾ.ಬ||ಗಿಲಗಿಂಚಿ ಗುರುಸಿದ್ಧಪ್ಪನವರೂ, ರಾ.ಸಾ||ಅರಟಾಳ ರುದ್ರಗೌಡರವರೂ ತಮ್ಮ ಮತವು ವಿದ್ಯೆದಲ್ಲಿ ಹಿಂದುಳಿದಿರುವದೆಂದು ತಿಳಿದು, ಈ ದೊಡ್ಡ ಕೊರತೆಯನ್ನು ಕೈಲಾದ ಮಟ್ಟಿಗೆ ದೂರಮಾಡಬೇಕೆಂದು ಲಕ್ಷಾವಧಿ ಹಣಕೂಡಿಸುತ್ತಿರುವರೆಂದೂ, ಇದಕ್ಕೆ ಶ್ರೀಬಾಳೀಹಳ್ಳಿಯ ಸಿಂಹಾಸನಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಹಾಸ್ವಾಮಿಗಳವರು ಅಯ್ವತ್ತು ಸಾವಿರ ರೂಪಾಯಿಗಳನ್ನು ಕೊಡುವ ವಾಗ್ದಾನಮಾಡಿರುವರೆಂದೂ, ಮತ್ತು ಜಿಲ್ಲೆಯ ಎಲ್ಲ ಕಡೆಗೆ ಅಲ್ಲಲ್ಲಿಯ ವೀರಶೈವ ಧನಾಢ್ಯರು ಮತಾಭಿವೃದ್ಧಿಗೋಸ್ಕರ ಸ್ವಸಂತೋಷದಿಂದ ಧನವನ್ನು ಕೊಡುತ್ತಿರುವರೆಂದೂ, ರಾ.ಬ||ಗುರುಸಿದ್ಧಪ್ಪನವರೂ, ರಾ.ಸಾ||ರುದ್ರಗೌಡರು ಈ ಕೆಲಸವನ್ನು ಅತಿಪ್ರಮಾಣಿಕತನದಿಂದ ಮಾಡುತ್ತಿರುವರೆಂದೂ, ಬಂದ ವಸೂಲಿಗಳಿಗೆಲ್ಲ ಆಗಿಂದಾಗ್ಗೆ ಪಾವತಿಗಳನ್ನು ಕೊಡುವದರಲ್ಲಿ ಬಹಳೇ ಜಾಗ್ರತೆಯುಳ್ಳವರಾಗಿದ್ದಾರೆಂದೂ, ಇವರು ತಮ್ಮ ಕರ್ತವ್ಯಕ್ಕೆ ಸರಿಯಾಗಿ ಸರಕಾರದವರು ಸಾನುಕೂಲರಾಗಬೇಕೆಂದು ಸರಕಾರವನ್ನು ಕುರಿತು ಬೇಡಿಕೊಳ್ಳುವರೆಂದೂ, ವಿದ್ಯೆಯಲ್ಲಿ ಹಿಂದುಳಿದ ವೀರಶೈವ ಜನಾಂಗವನ್ನು ಮುಂದೆ ತರುವದು ಸರಕಾರದ ಕರ್ತವ್ಯವೆಂದೂ ಸರಕಾರಕ್ಕೆ ನಂಬರ ೩೫೦೭/೧-೧೧-೧೮೮೬ನೆಯ ರಿಪೋರ್ಟ ಮೂಲಕ ತಿಳಿಸಲು, ಸರಕಾರದವರು ಈ ವೀರಶೈವರ ವಿದ್ಯಾಭಿವೃದ್ಧಿಯ ಉತ್ಸುಕತೆಯನ್ನೂ, ದೀರ್ಘ ಸಾಹಸವನ್ನೂ ಕಂಡು ಸಂತುಷ್ಟರಾಗಿ "ವೀರಶೈವರ ವಿದ್ಯಾಭ್ಯುದಯಕ್ಕಾಗಿ ರಾ.ಬ||ಗುರುಸಿದ್ಧಪ್ಪನವರೂ, ರಾ.ಸಾ||ರುದ್ರಗೌಡರವರೂ ನಡಿಸಿರುವ ಅವರ ಪ್ರಯತ್ನವು ಸ್ತುತ್ಯವದೆ. ಅವರ ವಿದ್ಯಾವಿಷಯಕವಾದ ಪ್ರತಿಯೊಂದು ಕೆಲಸಕ್ಕೂ, ವೀರಶೈವರ ಉನ್ನತಿಗೂ ಅನುಕೂಲವನ್ನುಂಟು ಮಾಡಕೊಡಲಿಕ್ಕೆ ಸರಕಾರವು ತತ್ಪರವಿರುತ್ತದೆ" ಎಂಬುದಾಗಿ ಠರಾವವಾಯಿತು ಠ.ನಂ.೪೦/೧೩-೧-೮೭

ಮೆ||ಮಿಡಲ್ಟನ್ ಸಾಹೇಬ ಬಹದ್ದೂರವರು ರಾ.ಸಾ||ಅರಟಾಳ ರುದ್ರಗೌಡರಂಥ ಕುಶಾಗ್ರಬುದ್ಧಿಯುಳ್ಳ ಹಾಗೂ ನಂಬಿಗೆಯ ಚೀಟ್ಣಿಸರನ್ನು ನಾನು ಎಲ್ಲಿಯೂ ಕಾಣಲಿಲ್ಲವೆಂದು ಸರಕಾರಕ್ಕೆ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಇವರಿಗೆ ರಾ||ಸಾಹೇಬರವರ ನಿಷ್ಕಲಂಕವಾದ ಹೃದಯಾಂತರ್ಗತವೆಲ್ಲ ತಿಳಿದು ಹೋಗಿತ್ತು. ಜಾಣರ ಹೃದಯಭಾವವನ್ನು ತಿಳಿದುಕೊಳ್ಳಲಿಕ್ಕೆ ಜಾಣರೇಬೇಕು. ಮೆ||ರವರು ವಿಲಾಯತಿಗೆ ಹೋದಕೂಡಲೆ ಮೆ||ಎಚ್.ಟಿ. ಓಮಾನಿ ಎಂಬ ಸಾಹೇಬ ಬಹದ್ದೂರವರು ಧಾರವಾಡ ಜಿಲ್ಲೆಯ ಆಕ್ಟಿಂಗ ಕಲೇಕ್ಟರರಾಗಿ ಬಂದರು. ಇವರಾದರೂ, ಪೂರ್ಣ ವಿಶ್ವಾಸದಿಂದ ಕೆಲಸಮಾಡುತ್ತಿದ್ದ ಈ ಚೀಟ್ಣಿಸರ ಮೇಲೆ ಮೆ||ಮಿಡಲ್ಟನ್ ಸಾಹೇಬ ಬಹದ್ದೂರವರಂತೆಯೇ ತಮ್ಮ ಪ್ರೇಮವನ್ನಿಟ್ಟರು. ಚಿಕ್ಕಂದಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ ಇವರು ಎಲ್ಲ ಮಾಸ್ತರ ಜನರ ಪ್ರೀತಿಗೆ ಹೇಗೆ ಪಾತ್ರರಾಗಿದ್ದರೋ ಅದರಂತೆ ಪ್ರೌಢಾವಸ್ಥೆಯಲ್ಲಿ ಕೂಡ ಬಂದ ವರಿಷ್ಠರಿಗೆ ಅತಿಶಯ ಪ್ರೇಮಾನ್ವಿತರಾಗುತ್ತಿದ್ದರು. "ಮೂರು ವರ್ಷದ ಬುದ್ಧಿ ನೂರು ವರ್ಷತನಕ" ಎಂಬ ಗಾದೆಯ ಮಾತು ನಿಜವಾಗಿರುತ್ತದೆ. ರಾ.ಸಾ||ರುದ್ರಗೌಡರು ಅಸತ್ಯಕ್ಕೂ, ಆಲಸ್ಯಕ್ಕೂ ತಿಲಮಾತ್ರ ಆಶ್ರಯ ಕೊಡುತ್ತಿದ್ದಿಲ್ಲ. ಇವರು ಮಿತಿಮೀರಿ ಕೆಲಸಮಾಡುವವರು. ಮೆ||ಕಲೇಕ್ಟರ ಸಾಹೇಬ ಬಹದ್ದೂರವರ ಮುಂದೆ ದಿನಾಲು ಕಾಗದಪತ್ರಗಳ ಸುಲಾವಣಿ ನಡೆದಾಗ ಮಧ್ಯಾಹ್ನದ ಹನ್ನೆರಡು ಘಂಟೆಯಿಂದ ಸಂಜೆಯ ಒಂಭತ್ತು ಘಂಟೆಯ ವರೆಗೆ ಎದ್ದು ನಿಂತೇ ಕೆಲಸಮಾಡಬೇಕಾಗುತ್ತಿತ್ತು. ಇವರಲ್ಲಿ ಶಾಂತ ಮತ್ತು ಸಮಾಧಾನ ವೃತ್ತಿಯು ದೃಢವಾಗಿತ್ತು. ಇವರಿಗೆ ಸ್ಮರಣಶಕ್ತಿಯೂ, ಕೆಲಸದ ಮಾಹಿತಿಯೂ ಬಹಳವಾಗಿದ್ದರಿಂದ ಹಿಂದು ಮುಂದಿನ ಕಾಗದಪತ್ರಗಳ ಗೊತ್ತು ಇವರಿಗಿದ್ದಷ್ಟು ಬೇರೆ ಯಾರಿಗೂ ಗೊತ್ತಿದ್ದಿಲ್ಲ. ಅದರಿಂದ ಕಚೇರಿಯ ಮುಖ್ಯ ಯಾವತ್ತು ಕೆಲಸಗಳಿಗೆ ಇವರೇ ಬೇಕಾಗುತ್ತಿದ್ದರು. ಆದ್ದರಿಂದ ಸರ್ವತೋಮುಖವಾಗಿ ರಾಜ್ಯಸೂತ್ರಗಳಿಗೆ ಸಹಾಯಕರಾಗುವ ಶ್ರೇಷ್ಠ ಪ್ರಧಾನರಂತೆ ರಾ.ಸಾ||ರುದ್ರಗೌಡರು ಚಿಟ್ಣೀಸಿಯ ಸ್ಥಳದಲ್ಲಿ ಬಹು ಶೋಭಿಸುತ್ತಿದ್ದರು.

ಕೆಲಸದಲ್ಲಿ ಇವರು ತೋರಿಸುವ ಜಾಣ್ಮೆಯು ಇಂತಿಷ್ಟೇ ಎಂದು ಹೇಳಲಿಕ್ಕಾಗುವದಿಲ್ಲ. ಚದುರಂಗದಾಟದಲ್ಲಿ ಪ್ರವೀಣನಾದವನು ಮುಂದಿನ ನಾಲ್ಕೈದು ಆಟಗಳ ಲಾಭವನ್ನು ಮುಂದಾಗಳೇ ತರ್ಕಿಸುತ್ತಿರುವಂತೆ, ಇವರು ಈ ಪ್ರಕರಣವು ಅಥವಾ ಇಂಥದೊಂದು ಪ್ರಸಂಗವು ಇದೇ ತರದಿಂದ ಪರಿಣಮಿಸಿ, ಕಡೆಗೆ ಇದೇ ಸ್ಥಿತಿಗೆ ಬರುತ್ತದೆಂಬದಾಗಿ ಮುಂಗಂಡು, ಮೆ॥ ಮಿಡಲ್ಟನ್ ಸಾಹೇಬ ಬಹದ್ದೂರವರಿಗೆ ಮುಂದಾಗಿಯೇ ತಿಳಿಸುತ್ತಿದ್ದರು. ಮುಂದೆ ಅದು ನಿಶ್ಚಯವಾಗಿ ಇವರು ಹೇಳಿದಂತೆಯೇ ಆಗುತ್ತಿತ್ತು. ಕಾಲಸ್ಥಿತಿಮಾನಗಳಿಗನುಸರಿಸಿ ಧೂರ್ತಲಕ್ಷಣದಿಂದ ಮುಂದಾಗುವ ಕಾರ್ಯಕ್ರಮಗಳನ್ನು ಊಹಿಸಿ, ಅದಕ್ಕೆ ತಕ್ಕ ಯೋಜನೆಯನ್ನೂ ವ್ಯವಸ್ಥೆಯನ್ನೂ ಮೊದಲಾಗಿಯೇ ಮಾಡಿಡುತ್ತಿದ್ದರು. ಬ್ರಾಹ್ಮಣರು ಇವರನ್ನು ಏನಾದರೂ ಮಾಡಿ ಮೇಲಕ್ಕೇರಗೊಡಬಾರದೆಂದು ಎಷ್ಟೋ ದುಷ್ಟೋಪಾಯಗಳನ್ನು ರಚಿಸುತ್ತಿದ್ದರು. ಕುಯುಕ್ತಿಗಳನ್ನು ಕಲ್ಪಿಸುತ್ತಿದ್ದರು. ಮೂಕ ಅರ್ಜಿಗಳನ್ನು ಮಾಡುತ್ತಿದ್ದರು. ಅವರು ಎಷ್ಟೋ ಗುಪ್ತ ರೀತಿಯಿಂದ ಕಪಟವ್ಯೂಹವನ್ನು ರಚಿಸಿದ್ದರೂ, ಅವು ತಡವಿಲ್ಲದೆ ಚಾಣಾಕ್ಷರಾದ ಇವರಿಗೆ ತಿಳಿದೇ ಇರುತ್ತಿದ್ದವು. ತಮಗೆ ತಿಳಿದೊಡನೆ ಅವನ್ನು ತಳುವದೆ ವರಿಷ್ಠರಿಗೆ ತಿಳಿಸುತ್ತಿದ್ದರು. ಇವರು ತಿಳಿಸಿದಂತೆಯೇ ಪ್ರಸಂಗವು ಮುಂದೆ ಪರಿಣಮಿಸಲು, ವರಿಷ್ಠರು ಮನಗಂಡು, ಇವರಲ್ಲಿ ನಿಶ್ಚಲವಾದ ನಂಬಿಗೆಯುಳ್ಳವರಾಗಿದ್ದರು.

ಮೆ॥ಮಿಡಲ್ಟನ್ ಸಾಹೇಬ ಬಹದ್ದೂರವರಂತೂ ಇವರ ಮಾತನ್ನು ದೇವವಾಕ್ಯವೆಂದು ಭಾವಿಸಿದ್ದರು. ಇವರು ಸುಳ್ಳು ಹೇಳಿದರೂ ಕೂಡ ನಿಜವೆಂದು ತಿಳಿಯುವಷ್ಟು ಇವರಲ್ಲಿ ನಂಬಿಗೆಯಿತ್ತು. ಸಾಹೇಬ ಬಹದ್ದೂರವರು ಪ್ರತಿಯೊಂದು ಕೆಲಸಕ್ಕೆ ಇವರ ಮತವನ್ನೇ ಕೇಳುತ್ತಿದ್ದರು. ಇವರಿಂದ ಗೊತ್ತಾದಷ್ಟು ಮಾಹಿತಿಯು ಬೇರೆ ಯಾವ ಬಗೆಯಿಂದಲೂ ಅವರಿಗೆ ಗೊತ್ತಾಗುತ್ತಿದ್ದಿಲ್ಲ. ಈ ಪ್ರಕಾರ ಇವರಿಂದ ನಿಜವೃತ್ತಾಂತವನ್ನರಿದು ಮೆ॥ಮಿಡಲ್ಟನ್ ಸಾಹೇಬ ಬಹದ್ದೂರವರು ಠರಾವುಗಳನ್ನು ಬರೆದರೆ, ಅವು ರಾಮಬಾಣದಂತೆ ಹುಸಿಯೇ ಆಗುತ್ತಿದ್ದಿಲ್ಲ. ಈ ದೊರೆಗಳು ಬರೆದ ಠರಾವುಗಳು ಮುಲಿಕಿ, ಫೌಜದಾರಿ, ದಿವಾಣಿಯಲ್ಲಿ ಕೂಡ ಒಂದಾದರೂ ಎಂದೂ ತಿರುಗಲಿಲ್ಲವಂತೆ. ಈ ಪ್ರಕಾರ ರಾ.ಸಾ॥ರುದ್ರಗೌಡರು ದೊರೆಗಳವರ ಅತ್ಯಂತ ಪ್ರೇಮಕ್ಕೆ ಪಾತ್ರರಾದದರಿಂದಲೂ, ನ್ಯಾಯದೃಷ್ಟಿಯಿಂದ ರಾಜ್ಯಭಾರವನ್ನು ನಡಿಸುವದಲ್ಲಿ ಇವರಿಬ್ಬರ ಹೃದಯಗಳು ಸಾಮರಸ್ಯವಾದದರಿಂದಲೂ, ಕಚೇರಿಯ ಪ್ರಮುಖ ಮತ್ತು ಸುಶಿಕ್ಷಿತರಾದ ಎಷ್ಟೋ ದುಷ್ಟಕಾರಕೂನರು ಈ ರುದ್ರಗೌಡರ ಹತ್ತರ ವಶೀಕರಣ- ಮಂತ್ರ ತಂತ್ರೌಷಧಿಗಳಿರುವವೆಂದೂ, ಆದರಿಂದ ಇವರು ಮೆ॥ಮಿಡಲ್ಟನ್ ಸಾಹೇಬ ಬಹದ್ದೂರವರನ್ನು ಮರುಳಮಾಡಿರುವರೆಂದೂ, ಇವರು ತಮ್ಮ ಬೆರಳಿಗೆ ಗುಪ್ತವಾಗಿ ಔಷಧಿ ಹಚ್ಚಿಕೊಂಡು ಬಂದು ಕಾಗದಪತ್ರಗಳ ಸಹಿಮಾಡಿಸುವಾಗ್ಗೆ ಮೆಹರ್ಬಾನರವರ ಕೈಗೆ ಅವರಿಗೆ ತಿಳಿಯದಂತೆ ಸವರಿಬಿಡುತ್ತಾರೆಂದೂ, ಅಂತಲೇ ಇವರಿಗೆ ರಾಜವಶ-ಜನವಶವಾಗಿರುವದೆಂದೂ ಸುದ್ದಿಯನ್ನು ಹುಟ್ಟಿಸಿದರು. ಇದು ಹುಚ್ಚರು ಸಹ ನಗುವಂಥ ಮಾತು. ಅಥವಾ ತಿಳಿಗೇಡಿಗಳಾದ ಹೆಂಗಸರು ಹುಟ್ಟಿಸುವ ಮಾತು. ಮಹಾಪುರುಷರ ಮಹೋನ್ನತಿಯನ್ನು ಕಂಡು ಸಹನವಾಗದೆ, ಗೂಗೆಯು ತೇಜಃಪುಂಜವಾದ ಸೂರ್ಯಪ್ರಭೆಯನ್ನು ತಿರಸ್ಕರಿಸುವಂತೆ ಅವರನ್ನು ಧಿಕ್ಕರಿಸುವದು ದುರ್ಜನರ ಸ್ವಾಭಾವಿಕವಾದ ಗುಣವಾಗಿದೆ.

ಅರಸು ಮಂತ್ರಿಗಳ ಸಮ್ಮೇಳನವೂ, ಬ್ರಾಹ್ಮಣರ ಕುಚೇಷ್ಟೆಯೂ

ದುರ್ಜನರ ದುರಾಲೋಚನೆಗಳಿಗೆ ಮರ್ಯಾದೆಯೇ ಇಲ್ಲ. ಸಮಶೀಲರಾದ ಮೆ॥ ಮಿಡಲ್ಟನ್ ದೊರೆಗಳ ಮತ್ತು ರಾ.ಸಾ॥ರುದ್ರಗೌಡರ ಐಕ್ಯಭಾವಕ್ಕೆ ಆಗ ಬ್ರಾಹ್ಮಣಸಮಾಜದಲ್ಲಿ ಇನ್ನೊಂದು ಕಟ್ಟುಕಲ್ಪನೆಯು ಪ್ರಕಟವಾಗಿತ್ತು. ಅದೇನೆಂದರೆ: ಮೆ॥ಮಿಡಲ್ಟನ್ ಸಾಹೇಬರೆಂಬ ಮಹತ್ತರವಾದ ಕುದುರೆಯನ್ನು

ರಾ.ಸಾ||ರುದ್ರಗೌಡರೆಂಬ ಪ್ರಚಂಡ ಸ್ವಾರರು ಆರೋಹಣಮಾಡಿ, ತಮ್ಮ ಚತುರೋಪಾಯವೆಂಬ ಕಡಿವಾಣದಿಂದ ಆ ತುರಗವನ್ನು ರಾಜ್ಯದರ್ಬಾರವೆಂಬ ರಾವುಂಡಿನಲ್ಲಿ ಸ್ವೇಚ್ಛೆಯಿಂದ ಬೇಕಾದತ್ತ ತಿರುಗಿಸುತ್ತ, ಸ್ವಚ್ಛಂದ ವೃತ್ತಿಯಿಂದ ವರ್ತಿಸುವರೆಂದು ಕೆಲ ಅರಣ್ಯಪಂಡಿತರಾದ ದುಷ್ಟಬ್ರಾಹ್ಮಣರು ಶೃಗಾಲ ಸಮೂಹದಂತೆ ಕೂಗಾಟವನ್ನೆಬ್ಬಿಸಿದರು. ಅಹಹ! ಈ ಪಂಡಿತ ಪಾಮರರಾದ ಬ್ರಾಹ್ಮಣರ ಕೌಶಲ್ಯಕ್ಕೂ, ಕೌಟಿಲ್ಯಕ್ಕೂ ಯಾರೂ ಸರಿಬಾರರು. ಇಪ್ಪರಿಗೆ ಇವರೇ ಸರಿಯಾದವರು. ನಾವು ಬ್ರಾಹ್ಮಣರು!ಬ್ರಹ್ಮಜ್ಞಾನಿಗಳು, ನಾವು ದೊಡ್ಡವರು! ನಾವು ಅಂಥವರು, ಇಂಥವರು- ಎಂದು ಗಳುಹುತ್ತ ಎದೆಯುಬ್ಬಿಸಿ ಮೆರೆದಾಡುವ ಪವಿತ್ರರೆಂದು ಹೇಳಿಕೊಳ್ಳುವ ಬ್ರಾಹ್ಮಣರ ಆಚರಣೆಯನ್ನೂ, ಕುಕಲ್ಪನೆಯನ್ನೂ ವಾಚಕರೇ ಪರೀಕ್ಷಿಸಲಿ, "ಸಜ್ಜನಕು ಸಜ್ಜನ ಮಿಲೇತೋ ಚಂದನಮೇ ಕರ್ಪೂರ" ಎಂಬ ಸಾಧು ಶಿರೋಮಣಿಯಾದ ಕಬೀರದಾಸರ ಮಹೋಕ್ತಿಯಂತೆ ನ್ಯಾಯನಿಷ್ಠರಾದ ಮೆ|| ಮಿಡಲ್ಟನ್ ದೊರೆಗಳಿಗೆ ಕೇವಲ ಸತ್ಯಸಂಧರಾದ ರಾ.ಸಾ||ರುದ್ರಗೌಡರೆಂಬ ಚೀಟ್ನಿಸರು ದೊರೆತು ಇವರಿಬ್ಬರ ಸದೃದಯ ಸಮ್ಮೇಳನದಿಂದ ರಾಜ್ಯಸೂತ್ರವು ಸರಳವಾಗಿಯೂ ನ್ಯಾಯವಾಗಿಯೂ ನಡೆದು, ದುಷ್ಟದಲನ ಶಿಷ್ಟಪಾಲನವಾಗಿ ಪ್ರಜಾಜನರು ಸಂತೋಷದಿಂದಿರುತ್ತಿರಲು, ಈ ನರಾಧಮರು ಈ ಪರಿ ದುಷ್ಟಾಲೋಚನೆಯನ್ನು ಮಾಡುವದು ಎಷ್ಟು ಕಷ್ಟತಮವಾಗಿರುವದು! ಅತ್ಯಂತ ನಂಬಿಗಸ್ಥರೂ, ಪ್ರಮಾಣಿಕರೂ ಆದ ರಾ.ಸಾ||ರುದ್ರಗೌಡರ ಅನುಮತಿಯನ್ನು ಮೆಹರ್ಬಾನರವರು ಪ್ರತಿಯೊಂದು ಕೆಲಸದಲ್ಲಿ ತೆಗೆದುಕೊಳ್ಳುತ್ತಿದ್ದರು. ಸಣ್ಣವರ ಜಾಣ್ಣುಡಿಗಳು ಮಾನ್ಯವಲ್ಲವೇನು? ರಾ.ಸಾ||ಚೀಟ್ನಿಸರ ಚತುರೋಕ್ತಿಗಳೂ, ಚಮತ್ಕಾರಿಕವಾದ ಯುಕ್ತಿಗಳೂ ಮೆಹರ್ಬಾನರವರನ್ನು ಚಕಿತರನ್ನಾಗಿ ಮಾಡುತ್ತಿದ್ದವು. ಇದನ್ನು ಕಂಡು ಹೊಟ್ಟೆಯುರಕ ಕಾಮದಾರರಿಗೆ ಸಹನವಾಗಲಿಲ್ಲ. ಹಂಸವು ಹಾಲನ್ನೇ ಕುಡಿದು ಸಂತೋಷಿಸುತ್ತದೆ. ಹಂದಿಯು ಹೇಸಿಗೆಯನ್ನೇ ತಿಂದು ಆನಂದಿಸುತ್ತದೆ. ಇದರಂತೆ ಸಜ್ಜನರು ಮಹನೀಯರ ಮಹಿಮೆಯನ್ನೂ, ಜಾಣತನವನ್ನೂ, ಸದ್ಗುಣಗಳನ್ನೂ ಕಂಡು ತಲೆದೂಗುತ್ತಾರೆ. ದುಷ್ಟರು ಮಹಾನುಭಾವರ ಸರಳಹೃದಯವನ್ನೂ, ಏಳ್ಗೆಯನ್ನೂ ಕಂಡು ಸಹಿಸದೆ ಅಸೂಯೆಯಿಂದ ಅವರನ್ನು ದೂಷಿಸುತ್ತಾರೆ. ಬುಭುಕ್ಷಿತವಾದ ಬಡನರಿಯು ತನಗೆ ನಿಲುಕದೆ ಇದ್ದ ಮಧುರವಾದ ದ್ರಾಕ್ಷೆಗಳಿಗೆ ಹುಳಿಯೆಂದು ಅವುಗಳನ್ನು ತಿರಸ್ಕರಿಸಿದಂತೆ, ಆಶಾತುರರಾದ ಕುಜನರು ಸುಮ್ಮನೆ ಕೂಡ್ರದೆ ಸಜ್ಜನರ ವಿಷಯವಾಗಿ ಏನಾದರೊಂದು ಕುಯುಕ್ತಿಯನ್ನು ಕಲ್ಪಿಸುತ್ತಾರೆ. ಇದು ಸರ್ವಕಾಲದಲ್ಲಿ, ಸರ್ವಸ್ಥಳದಲ್ಲಿ ಸರ್ವಸಾಧಾರಣವಾಗಿದೆ. ಕತ್ತಲೆಯಿಲ್ಲದೆ ಪ್ರಕಾಶದ ಪ್ರಭೆಯೂ, ದುಃಖ ಹೊರತು ಸುಖದ ಜ್ಞಾನವೂ, ಮಿಥ್ಯದ ಹೊರತು ಸತ್ಯದ ಮಹಿಮೆಯೂ, ರೋಗದ ಹೊರತು ಆರೋಗ್ಯದ ಬೆಲೆಯೂ ಗೊತ್ತಾಗಲಾರದೆಂಬಂತೆ ದುರ್ಜನರ ದೂಷಣೆಯಲ್ಲವೆ?

ಹಾನಗಲ್ಲಿನಲ್ಲಾದ ವೀರಶೈವರ ಸಭೆ

ರಾ.ಸಾ||ರುದ್ರಗೌಡರವರ ಪ್ರಖ್ಯಾತಿಯು ಈ ಬಗೆಯಾಗಿ ಎಲ್ಲ ಕಡೆಯಲ್ಲಿ ಹಬ್ಬುತ್ತಿರಲು, ಹಾನಗಲ್ಲಿನಲ್ಲಿ ಮತಸಂಬಂಧವಾಗಿ ಒಂದು ವಿವಾದ ನಡೆದಿತು. ಅದೇನೆಂದರೆ: ವೀರಶೈವರಲ್ಲಿ ಸಾದರೂ, ನೊಣಬರೂ ಎಂಬೆರಡು ಒಳಭೇದಗಳಿರುತ್ತವೆ. ಇವರಾದರೂ ಲಿಂಗಧಾರಣಮಾಡುತ್ತಿದ್ದು ಜಂಗಮರೇ ಇವರ ಮೂಲಗುರುಗಳಾಗಿರುತ್ತಾರೆ. ಹೀಗೆ ಬಹುಕಾಲದಿಂದ ಅನುವರ್ತಿಸುತ್ತಿದ್ದು, ಈ ಸಮಯದಲ್ಲಿ ಇವರು ತಾವೇ ಪ್ರತಿಷ್ಠಿತರೆಂದು ಭಾವಿಸಿ, ಶಾಸ್ತ್ರವಿರುದ್ಧವಾಗಿ ತಮ್ಮ ತಮ್ಮೊಳಗೇ ಗುರುಗಳನ್ನು ಕಲ್ಪಿಸಿಕೊಂಡು, ಅವರಿಗೇ ನಡೆದುಕೊಳ್ಳಹತ್ತಿ ಮೊದಲಿನ ಗುರು ಜಂಗಮರನ್ನು ಧಿಕ್ಕರಿಸಿದರು. ಅದರಿಂದ ವೀರಶೈವರಲ್ಲಿ ವಿವಾದ ಹುಟ್ಟಿ, ಇದರ ವಿಚಾರ ಮಾಡಲೋಸುಗ ಹಾನಗಲ್ಲಿನ ವೀರಶೈವರು ಸನ್ ೧೮೮೬ನೇ ಇಸವಿಯ ಎಪ್ರೀಲದಲ್ಲಿ ಒಂದು

ಭವ್ಯವಾದ ಸಭೆಯನ್ನು ನೆರವೇರಿಸಿ, ಸಭೆಗೆ ರಾ.ಸಾ||ರುದ್ರಗೌಡರನ್ನು ಕರಕೊಂಡು ಹೋದರು. ಊರೆಲ್ಲ ಸಿಂಗರಿಸಲ್ಪಟ್ಟಿತ್ತು. ರಾವಸಾಹೇಬರವರ ಸ್ವಾಗತ ಸಮಾರಂಭವು ಚೆನ್ನಾಗಿ ಆಯಿತು. ಬಾಳೀಹಳ್ಳಿಯ (ರಂಭಾಪುರೀ)ಸಿಂಹಾಸನಾಧೀಶ ಈ ಚಂದ್ರಶೇಖರ ಮಹಾಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಅಲಂಕೃತವಾಗಿತ್ತು. ಹಾನಗಲ್ಲಿನ ಶ್ರೀ ಕುಮಾರಸ್ವಾಮಿಗಳೂ, ವಿರೂಪಾಕ್ಷಪ್ಪ ಬಸೆಟ್ಟೆಪ್ಪ ಕುರಬಗೊಂಡ ಸಾಕೀನ ದೇವೀಹೊಸೂರ ತಾಲೂಕ ಕರ್ಜಗಿ ಮತ್ತು ಸಂಕನಗೌಡ ಕಲ್ಲನಗೌಡ ಪಾಟೀಲ ಕುಲಕರಣಿ ಕುನ್ನೂರ ತಾಲೂಕ ಬಂಕಾಪುರ ಮತ್ತು ಹಾನಗಲ್ಲ ತಾಲೂಕ ಮಾಮಲೇದಾರರಾದ ರಾ.ಸಾ||ಗಣೇಶ ರಘುನಾಥ ಸಾಂಭಾರೆ ಸಾಕೀನ ಶಹಾಪುರ ಇವರೆಲ್ಲರೂ ಸಭೆಯ ಕೆಲಸಕ್ಕೆ ಒಳ್ಳೇ ಸಹಾಯ ಮಾಡಿದರು. ಸಭೆಯಲ್ಲಿ ಮುಖ್ಯ ವಿಷಯವು ಚರ್ಚಿಸಲ್ಪಟ್ಟು, ವಿಶೇಷ ವೀರಶೈವರಿಗೇ ಗುರ್ವಧಿಕಾರವಿರುತ್ತದಲ್ಲದೆ ಸಾಮಾನ್ಯ ವೀರಶೈವರಿಗೆ ಇರುವದಿಲ್ಲೆಂದೂ, ಈ ಸಾಮಾನ್ಯ ವೀರಶೈವರಾದ ಸಾದರೂ, ನೊಣಬರೂ ತಮ್ಮ ತಮ್ಮೊಳಗೆ ಹೊಸದಾಗಿ ಗುರುಸ್ಥಲಗಳನ್ನು ಕಲ್ಪಿಸಿಕೊಂಡು ಮೂಲ ಗುರುಗಳನ್ನು ತಿರಸ್ಕರಿಸಿದ್ದು ಶಾಸ್ತ್ರಸಮ್ಮತವಲ್ಲೆಂತಲೂ, ಇವರೆಲ್ಲರು ಇನ್ನು ಮೇಲೆ ತಮ್ಮ ಮೂಲ ಗುರುಗಳಿಗೇ ನಡೆದುಕೊಳ್ಳಬೇಕೆಂದೂ ಸರ್ವಜನ ಸಮ್ಮತದಿಂದ ನಿರ್ಣಯವಾಯಿತು. ಸಭಾಮಂಟಪವು ಊರ ಹೊರಗೆ ಶ್ರೀ ಕುಮಾರಸ್ವಾಮಿಗಳವರ ಮಠದ ಮುಂಭಾಗದಲ್ಲಿರುವ ವಿಶಾಲವಾದ ಬೈಲಿನಲ್ಲಿ ಬಹು ಸೊಗಸಾಗಿ ಹಾಕಲ್ಪಟ್ಟಿತ್ತು. ಸಭೆಯಲ್ಲಾದ ಯೋಗ್ಯ ನಿರ್ಣಯವನ್ನು ಕೇಳಿ ಎಲ್ಲ ವೀರಶೈವ ಮಂಡಳಿಗೆ ಮಹದಾನಂದವಾಯಿತು. ಕಡೆಯಲ್ಲಿ ಸುಗಂಧ ತಾಂಬೂಲಾದಿಗಳಿಂದ ಸಭಾವಿಸರ್ಜನೆಯಾದನಂತರ ಶ್ರೀ ಹಾನಗಲ್ ಸ್ವಾಮಿಗಳವರ ಮೆರವಣಿಗೆಯು ಮಹೋತ್ಸವದಿಂದ ನೆರವೇರಿತು. ಸಭೆಗೆ ದೂರದೂರಿನಿಂದ ಬಹುಜನರು ಬಂದದ್ದರಿಂದ ಸಭೆಯು ಒಳ್ಳೇ ಕಿಷ್ಕಿಂಧವಾಗಿತ್ತು. ಮೈಸೂರ ಸ್ವಾರಪತ್ರಿಕೆಯ ಎಡಿಟರರಾದ ಸುಪ್ರಸಿದ್ಧ ವೀರಸಂಗಪ್ಪನವರೂ ಬಂದಿದ್ದರು. ಸಭೆಯ ವರ್ಣನೆಯೂ, ನಿರ್ಣಯವೂ ಪುಸ್ತಕರೂಪವಾಗಿ ಪ್ರಸಿದ್ಧಿಸಲ್ಪಟ್ಟಿತು. ಈ ಮಹತ್ಕಾರ್ಯವನ್ನೆಸಗಿ ರಾ.ಸಾ||ರುದ್ರಗೌಡರು ಇಬ್ಬರೂ ಮಹಾಸ್ವಾಮಿಗಳವರ ಆಶೀರ್ವಾದವನ್ನು ಪಡೆದು ಧಾರವಾಡಕ್ಕೆ ಬಂದರು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಒಂದು ದೊಡ್ಡ ಸಭೆಯನ್ನು ಕೂಡಿಸಿ, ವೀರಶೈವಮತವು ಸನಾತನವಾದುದೆಂದೂ, ವೇದಪ್ರತಿಪಾದಿತವಾದುದೆಂದೂ, ಶ್ರೇಷ್ಠವಾದದ್ದೆಂದೂ ಸಿದ್ಧಮಾಡಿದರು.

ಶಿವಲಿಂಗಪ್ಪ ಹೊಸಹಳ್ಳಿ ಊರ್ಫ ಬಾಲಸರಸ್ವತಿ

ರಾ.ಬ||ಗಿಲಿಗಿಂಚಿ. ಗುರುಸಿದ್ಧಪ್ಪನವರೂ ರಾ.ಸಾ||ರುದ್ರಗೌಡರವರು ಕೂಡಿಸಿಟ್ಟ ಫಂಡಿನ ಉಪಯೋಗವು ಕೂಡಲೆ ಆಗಹತ್ತಿತು. ಸಕ್ಕರೆಯನ್ನು ತೆರೆದಿಡುವದಷ್ಟೇ ತಡ, ಇರುವೆಗಳು ಬರುವದೆಷ್ಟೊತ್ತು? ಎಷ್ಟೋ ವಿದ್ಯಾರ್ಥಿಗಳು ಈ ಫಂಡಿನ ಸಹಾಯದಿಂದ ಇಂಗ್ಲಿಷವನ್ನು ಕಲಿಯಲಾರಂಭಿಸಿದರು. ಬೀಜಬಿತ್ತಿದ ಸ್ವಲ್ಪದಿವಸಗಳಲ್ಲಿಯೇ ಸಸಿಗಳು ಹುಟ್ಟುವಂತೆ ವಿದ್ಯಾರ್ಥಿಗಳು ವಿದ್ಯೆ ಕಲಿತು, ಮುಂದೆ ಇವರೊಳಗೆ ಮಿ. ಶಿವಲಿಂಗಪ್ಪ ಹೊಸಹಳ್ಳಿಯೆಂಬವರೊಬ್ಬ ವಿದ್ಯಾರ್ಥಿಗಳವರು ಇಂಗ್ಲೀಷವನ್ನು ಕಲಿತು ಚಿಕ್ಕಂದಿನಲ್ಲಿಯೇ ಒಳ್ಳೇ ಹೆಸರಾದರು. ಬಾಲ್ಯದಲ್ಲಿಯೇ ಇವರ ಬುದ್ಧಿಯು ಒಳ್ಳೇ ತೀವ್ರಗತಿಯುಳ್ಳದ್ದಾದದರಿಂದ ಬುದ್ಧಿವಂತರು ಅವರ ಮತಿಗೆ ಸರಿಯಾಗಿ ಅವರ ಹೆಸರಿಗೆ 'ಬಾಲಸರಸ್ವತಿ'ಯೆಂಬ ಉಪನಾಮವನ್ನು ಜೋಡಿಸಿದರು. ಅದರಿಂದವರಿಗೆ ಬಾಲಸರಸ್ವತಿಯೆಂದೇ ಬಹುರೂಢವಾಯಿತು. ಇವರು ಮುಂದೆ ಬಹು ವಿದ್ವಾಂಸರಾಗಬಹುದೆಂದೂ ಇವರಿಗೆ ಕಡೆತನಕ ವಿದ್ಯೆಯನ್ನು ಕಲಿಸಿದರೆ ಇವರಿಂದ ನಮ್ಮ ಸಮಾಜಕ್ಕೆಲ್ಲ ಮಹೋಪಕಾರವಾಗಬಹುದೆಂದೂ, ಮತ್ತು

ಇವರಿಂದ ಸಮಾಜ ಸುಧಾರಣಾಪರವಾದ ಮಹತ್ಕೃತ್ಯಗಳು ನೆರವೇರಬಹುದೆಂದೂ ಊಹಿಸಿ ರಾ.ಬ॥ ಗುರುಸಿದ್ಧಪ್ಪನವರೂ ರಾ.ಸಾ॥ರುದ್ರಗೌಡರೂ ಬಾಲಸರಸ್ವತಿಯವರನ್ನು ವಿದ್ಯಾಭ್ಯಾಸಕ್ಕೆ ವಿಲಾಯತಿಗೆ ಕಳಿಸುವ ಯೋಚನೆಯನ್ನು ಮಾಡಿ, ಅವರ ಬಗ್ಗೆ ಬೇರೆ ಒಂದು ಫಂಡು ಕೂಡಿಸತೊಡಗಿದರು. ಹದಿನೈದು ದಿವಸಗಳಲ್ಲಿಯೇ ಹದಿನೆಂಟು ಸಾವಿರ (೧೮೦೦೦) ರೂಪಾಯಿಗಳು ಕೂಡಿದವು (ಸನ್ ೧೮೮೭ನೇ ಇಸವಿ).ಮುಂದೆ ಬಾಲಸರಸ್ವತಿಯವರನ್ನು ವಿಲಾಯತಿಗೆ ಕಳಿಸಿಕೊಡುವ ಸಮಯದಲ್ಲಿ ರಾ.ಬ॥ಗುರುಸಿದ್ಧಪ್ಪನವರು ಇದ್ದಿದ್ದಿಲ್ಲ. ಅಷ್ಟೊತ್ತಿಗೆ ಶಿವಾಧೀನರಾಗಿದ್ದರು. ಇವರು ಶಿವಾಧೀನರಾದ ಸಂಗತಿಯು ಮುಂದೆ ಬರುವದು. ಮೃತವಾಗುವ ಮೊದಲು ಈ ಬಾಲಸರಸ್ವತಿಯವರನ್ನು ವಿಲಾಯತಿಗೆ ತಪ್ಪದೆ ಕಳಿಸಿಕೊಡಬೇಕೆಂದು ಇವರು ತಮ್ಮ ಪರಮಸ್ನೇಹಿತರಾದ ರಾ.ಸಾ॥ರುದ್ರಗೌಡರವರಿಗೆ ಹೇಳಿದ್ದರು. ಮುಂದೆ ರಾ.ಬ॥ ಗುರುಸಿದ್ಧಪ್ಪನವರು ತೀರಿದ ನಂತರ ಈ ಬಾಲಸರಸ್ವತಿಯವರು ಅಂಥ ವಿಶಿಷ್ಟ ಗುಣಶಕ್ತಿಯುಳ್ಳವರಾಗುವದಿಲ್ಲೆಂದು ರಾ.ಸಾ॥ ರುದ್ರಗೌಡರು ದೂರ್ತಲಕ್ಷಣದಿಂದ ಊಹಿಸಿ, ಅವರನ್ನು ವಿಲಾಯತಿಗೆ ಕಳಿಸಲಿಕ್ಕೆ ಅನುಮಾನಿಸಿದರು. ಆದರೂ ಪರಮಮಿತ್ರರಾದ ಗುರುಸಿದ್ಧಪ್ಪಣ್ಣನವರ ವಾಕ್ಯವನ್ನು ನಡಿಸಬೇಕೆಂಬ ವಿಚಾರದಿಂದ ಆ ಫಂಡು ಸಹಿತವಾಗಿ, ಮಿಸ್ಟರ ಹೊಸಹಳ್ಳಿಯವರನ್ನು ವಿಲಾಯತಿಗೆ ಕಳಿಸಿಕೊಟ್ಟರು. ಸನ್ (ಸನ್ ೧೮೯೩ನೇ ಇಸವಿ). ಈ ಫಂಡಿಗೆ 'ಬಾಲಸರಸ್ವತಿ' ಫಂಡು ಎಂಬ ಹೆಸರು ಇತ್ತು. ಈ ಹೊಸಹಳ್ಳಿಯವರಿಗೆ ಆಂಗ್ಲವಿದ್ಯೆಯನ್ನು ಕಲಿಸುವದಕ್ಕಾಗಿ ಬೇರೊಂದು ಫಂಡನ್ನು ಕೂಡಿಸಿರುವೆವೆಂದೂ ಬಾಲಸರಸ್ವತಿಫಂಡು ಎಂಬ ಹೆಸರಿನಿಂದ ಈ ಫಂಡನ್ನು ಸರಕಾರದಲ್ಲಿಟ್ಟು ಬಾಲಸರಸ್ವತಿಯವರನ್ನು ವಿದ್ಯಾಭ್ಯಾಸಕ್ಕೆ ವಿಲಾಯತಿಗೆ ಕಳಿಸಿಕೊಡುತ್ತೇವೆಂದೂ ರಾ.ಬ॥ಗುರುಸಿದ್ಧಪ್ಪನವರೂ ರಾ.ಸಾ॥ರುದ್ರಗೌಡರೂ ಮೆ॥ಕಲೆಕ್ಟರ ಸಾಹೇಬರವರ ವಿದ್ಯಮಾನ ಸರಕಾರಕ್ಕೆ ತಿಳಿಸಲು "ನಿಮ್ಮ ಈ ಯೋಗ್ಯಕೆಲಸಕ್ಕೆ ಸರಕಾರದ ಒಡಂಬಡಿಕೆಯೂ, ಅನುಕೂಲವೂ ಉಂಟು" ಎಂಬುದಾಗಿ ಠರಾವವಾಯಿತು. ಸರಕಾರ ಠರಾವ ನಂಬರ ೧೯೯/೨೧-೬-೮೮ ವಿದ್ಯಾಖಾತೆ. ಆ ಪ್ರಕಾರ ಬಾಲಸರಸ್ವತಿಯವರು ವಿಲಾಯತಿಗೆ ಹೋಗಿ, ಅಲ್ಲಿ ಅವರು ಕೆಲವು ದಿವಸ ನಿಂತು ಕಲಿಯಬೇಕಾಯಿತು.

ಮೆಚ್ಚಿದೆಮ್ಮೆ ಕೋಣವನ್ನೀದಂತಾಯಿತು

ತಮ್ಮ ಸಲುವಾಗಿ ಭಗೀರಥಪ್ರಯತ್ನಮಾಡಿ ಫಂಡು ಕೂಡಿಸಿಕೊಟ್ಟವರೂ, ವೀರಶೈವರು ವಿದ್ಯಾವಂತರಾಗಿ ಮುಂದೆ ಬರಲೆಂದು ಅಹರ್ನಿಶೆಯಲ್ಲಿ ಚಿಂತಿಸುವವರೂ, ಪರೋಪಕೃತಿಯಲ್ಲಿಯೇ ಆಯುಷ್ಯವನ್ನೂ, ಬುದ್ಧಿಯನ್ನೂ, ಧನವನ್ನೂ ವ್ಯಯಮಾಡುತ್ತಿರುವವರೂ ಆದ ರಾ.ಬ॥ಗುರುಸಿದ್ಧಪ್ಪನವರ ಹಾಗೂ ರಾ.ಸಾ॥ರುದ್ರಗೌಡರವರ ಕೃತಜ್ಞತೆಯನ್ನು ಬಾಲಸರಸ್ವತಿಯವರು ಸ್ಮರಿಸಲಿಲ್ಲ. ಇಂಥ ಕೃತಘ್ನರನ್ನು ನೀತಿಶಾಸ್ತ್ರದಿಂದ ಯಾವ ವರ್ಗಕ್ಕೆ ಸೇರಿಸಬೇಕೆಂಬುದನ್ನು ವಾಚಕರೇ ಊಹಿಸಲಿ. ಮುಂದೆ ಬಾಲಸರಸ್ವತಿಯವರು ವಿಲಾಯತಿಯಲ್ಲಿ ನಿಂತು ಅಭ್ಯಾಸಮಾಡಿ, ಸಿವ್ಹಿಲ್ ಸರ್ವೀಸ್ ಪರೀಕ್ಷೆಗೆ ಕೂತು ನಾಪಾಸಾದರು. ಆದರೂ ಮತ್ತೆ ಮುಂದೆ ಅಭ್ಯಾಸ ಮಾಡಿ ಬ್ಯಾರಿಷ್ಟರ ಪರೀಕ್ಷೆಯಲ್ಲಿ ಪಾಸಾದರು. ಆದರೆ ಕೈಗೆ ಬಂದ ತುತ್ತು ಬಾಯ್ಗೆ ಬರಲಿಲ್ಲ. ಯಾಕಂದರೆ ಇವರು ತಮ್ಮ ಆಚರಣೆಯನ್ನು ಶುದ್ಧವಾಗಿ ಇಡಲಿಲ್ಲ. ಪವಿತ್ರವಾದ ಮತವನ್ನೂ, ಕುಲವನ್ನೂ ಸ್ಮರಿಸಲಿಲ್ಲ. ಕಷ್ಟಪಟ್ಟು ಕಲಿತ ವಿದ್ಯೆಯ ಪ್ರಭಾವವನ್ನು ಹೊರಗೆಡುವಲಿಲ್ಲ. ಕಲಿಸಿದ ಮಹಾಪುರುಷರ ಚಿತ್ತವೃತ್ತಿಯನ್ನು ತೃಪ್ತಿಮಾಡಲಿಲ್ಲ. ತಮ್ಮ ವಿದ್ಯಾಪೌಢಿಮೆಯಿಂದ ವೀರಶೈವ ಜನಾಂಗವನ್ನು ಆನಂದ ಪಡಿಸಲಿಲ್ಲ. ಜನ್ಮಭೂಮಿಯನ್ನು ಧ್ಯಾನಕ್ಕೆ ತರಲಿಲ್ಲ. ತಮ್ಮ ಜನಾಂಗವನ್ನೆಲ್ಲ ಹೋದಾಗಲೇ ಮರೆತುಬಿಟ್ಟರು.

ಮನಸಾ ಅಪಭ್ರಷ್ಟರಾಗಿ ಹೋದರು. ಸದ್ಯಕ್ಕೆ ಇವರು ಅಮರಾವತಿಯಲ್ಲಿ (ವರ್‍ಹಾಡ ಪ್ರಾಂತದಲ್ಲಿ) ಬ್ಯಾರಿಷ್ಟರರಾಗಿರುತ್ತಾರೆ.

"ವಿನಾಯಕಂ ಪ್ರಕುರ್ವಾಣೋ ಮರ್ಕಟಂ ರಚಯಾಮಾಸ" ಎಂಬ ಗೀರ್ವಾಣೋಕ್ತಿಯಂತೆ ಮಂಗಳಮೂರ್ತಿಯನ್ನು ಮಾಡಹೋಗಲು ಅದು ಮಂಗನ ಮೂರ್ತಿಯಾಗಿ ಹೋಯಿತು. ಇದನ್ನರಿತು ರಾ.ಸಾ||ರುದ್ರಗೌಡವರು ನಾನೂ ರಾ.ಬ||ಗುರುಸಿದ್ಧಪ್ಪಣ್ಣನವರೂ ಕೂಡಿ ಮಾಡಿದ ಈ ಕೆಲಸವು ಅನುಚಿತವಾಯಿತೆಂತಲೂ, ವ್ಯರ್ಥವಾಗಿ ಹದಿನೆಂಟುಸಾವಿರ (೧೮೦೦೦) ರೂಪಾಯಿಗಳನ್ನು ಕಳೆದಂತಾಯಿತೆಂತಲೂ, ನಮ್ಮ ಶ್ರಮವೆಲ್ಲ ಹೊಳೆಯಲ್ಲಿ ಹುಣಸೀಹಣ್ಣು ತೊಳೆದಂತಾಯಿತೆಂತಲೂ ಬಹಳೇ ಪಶ್ಚಾತ್ತಾಪಗೊಂಡರು. ಮೆಚ್ಚಿದೆಮ್ಮೆ ಕೋಣವನ್ನೀದಂತಾಯಿತೆಂದು ರಾ.ಸಾ||ರುದ್ರಗೌಡರ ಮನಸಿಗೆ ಅತಿ ಕೆಟ್ಟವೆನಿಸಿತು. ಆದರೆ ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು? ನಮ್ಮ ದೇಶೀಯರು ವಿಲಾಯತಿಗೆ ಎಷ್ಟುಮಂದಿ ಹೋಗಿಲ್ಲ? ಎಷ್ಟು ಮಂದಿ ಕಲಿತು ಬಂದಿಲ್ಲ? ವಿಲಾಯತಿಗೆ ಹೋಗಿಬಂದು, ಅಥವಾ ಅಲ್ಲಿಯೇ ನಿಂತುಕೊಂಡು ಮಹೋನ್ನತಿ ಪಡೆದು, ದೇಶಹಿತಕಾರ್ಯಗಳನ್ನೆಸಗಿ ಎಷ್ಟುಮಂದಿ ಇತಿಹಾಸಪ್ರಸಿದ್ಧರಾಗಲಿಲ್ಲ ಸದ್ಯಕ್ಕೆ ನಾಮದಾರ ದಾದಾಭಾಯಿ ನವರೋಜಿಯವರಂಥ ವಿದ್ವನ್ಮುಕುಟ ಮಣಿಗಳು ಆರ್ಯಭೂಮಾತೆಯ ಸೀಮಂತರತ್ನದಂತೆ ಹೇಗೆ ಜಾಜ್ವಲ್ಯಮಾನರಾಗಿದ್ದಾರೆ! ಎಷ್ಟು ರಾಜಪೂಜ್ಯರಾಗಿದ್ದಾರೆ! ಆದರೆ ಅಷ್ಟೊಂದು ರಾಜಪೂಜ್ಯತೆಯು ಹತಭಾಗ್ಯರಾದ ಬಾಲಸರಸ್ವತಿಯವರಿಗೆ ಎಲ್ಲಿಂದ ಬರಬೇಕು? ಇವರಿಗೆ ಇನ್ನು ಬಾಲಸರಸ್ವತಿಯೆಂಬ ಉಪನಾಮವು ಒಪ್ಪದು. ಈ ಅಪಕೃತಿಯಿಂದ ಹೊಸಹಳ್ಳಿಯವರು, ತಮ್ಮ ಜನನಿ ಜನಕರ ಮತ್ತು ತಮ್ಮನ್ನು ವಿಲಾಯತಿಗೆ ಕಳಿಸಿದ ಮಹಾನುಭಾವರ ಹಾಗೂ ಮಹಾನುಯಾಯಿಗಳ ಋಣಿಗಳಾದರೆಂದು ಹಠತ್ತಾಗಿ ಹೇಳಬಹುದು. ಅಥವಾ ಇಡೀ ಭರತಭೂಮಿಗೇ ಕೃತಘ್ನರಾದರೆಂದು ನಿರ್ವಿವಾದವಾಗಿ ಹೇಳಬಹುದು. ಪರೋಪಕೃತಿಯಲ್ಲಿ ಮಗ್ನರಾಗಿದ್ದ ರಾ.ಬ||ಗುರುಸಿದ್ಧಪ್ಪನವರನ್ನೂ ರಾ.ಸಾ||ರುದ್ರಗೌಡರವರನ್ನೂ ಜನಸಮೂಹವು ಎಷ್ಟು ಪೂಜ್ಯಬುದ್ಧಿಯಿಂದ ಭೂಷಿಸುತ್ತದೋ ಅದರಕಿಂತಲೂ ಹೆಚ್ಚಾಗಿ ಹೊಸಹಳ್ಳಿಯವರು ಜನ್ಮಸಾರ್ಥಕತೆಯನ್ನು ಹೊಂದಲಿಲ್ಲೆಂದು ಈಗ್ಯೂ ದೂಷಿಸುತ್ತದೆ. ಇನ್ನು ಈ ಪುಣ್ಯಾತ್ಮರ ಪ್ರಸ್ತಾಪವು ಸಾಕು.

ರಾ.ಸಾ||ರುದ್ರಗೌಡರ ಮೇಲೆ ಮೊಖಾಸಿ ಗುರುರಾಯರು ಮಾಡಿದ ಗಿಲ್ಲೆಯೂ, ಅದರ ಕಡೆಯ ಪರಿಣಾಮವೂ

ಈ ಪ್ರಕಾರ ರಾ.ಸಾ||ರುದ್ರಗೌಡರವರು ಪರಹಿತದ ಕೆಲಸಗಳಲ್ಲಿ ನಿಷ್ಪೃಹತೆಯಿಂದ ಸರಕಾರಿಯ ಕೆಲಸಮಾಡಿ ಶ್ರೇಯೋವಂತರಾದದ್ದು ಎಷ್ಟೋ ಬ್ರಾಹ್ಮಣಜನರಿಗೆ ಸಹನವಾಗದೆ, ಅವರು ಒಳಗಿಂದೊಳಗೆ ಕುದಿಯುತ್ತಿದ್ದು, ಬೂದಿ ಮುಚ್ಚಿದ ಕೆಂಡದಂತಾಗಿದ್ದರು. ಈ ಹೊಟ್ಟೆಯುರಕರಲ್ಲಿ ಆರಂಭಕ್ಕೆ ಪ್ರಕಟರಾದವರು ಮೊಖಾಸಿ ಗುರುರಾಯ ರಾಮಚಂದ್ರರೆಂದು ಹೇಳಬಹುದು. ಇವರ ಜನ್ಮಗ್ರಾಮವು ಧಾರವಾಡವಾಗಿದ್ದು, ಪ್ರಸ್ತುತಕ್ಕೆ ಅಂದರೆ ಸನ್ ೧೮೮೬ ನೇ ಇಸವಿಯಲ್ಲಿ ಇವರು ಗದಗ ತಾಲೂಕಿನಲ್ಲಿ ಮಾಮಲೇದಾರರಾಗಿದ್ದರು. ಇವರು ಬಹಳೇ ಲಂಚಗುಳಿಗಳೂ, ಅಸೂಯಾಪರರೂ, ಜನರ ಛಿದ್ರಗಳನ್ನು ಹುಡುಕುವದರಲ್ಲಿಯೇ ಕಾಲಕಳೆಯುವವರೂ, ಬಹಳೇ ಕೆಟ್ಟಸ್ವಭಾವದವರೂ ಇದ್ದದರಿಂದ ಬಹುಶಃ ಇವರು ಜನಪೀಡಕರೇ ಆಗಿದ್ದರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಇವರ ಕಾಲಕ್ಕೆ ಒಂದು ಮ್ಯುನಸಿಪಾಲ್ಟಿಯ ಪ್ರಕರಣವು ನಡೆದು, ಅದರಲ್ಲಿ ಮೆ||ಕಲೇಕ್ಟರ

ಸಾಹೇಬರವರ ಕಡೆಯಿಂದ ಗುರುರಾಯರ ವಿರುದ್ಧವಾದ ಲೇಖವು ಬರೆಯಲ್ಪಟ್ಟಿತ್ತು. ಅದರಿಂದ ಗುರುರಾಯರಿಗೆ ಕೆಲಸಕ್ಕೆ ಅಯೋಗ್ಯರೆಂಬ ಅಪಕೀರ್ತಿಯು, ಬರುವಂತಿತ್ತು. ಕಾರಣ ಆ ಪ್ರಕರಣದ ಕಾಗದ ಪತ್ರಗಳನ್ನೆಲ್ಲ ಗುರುರಾಯರು ಸುಟ್ಟುಬಿಟ್ಟಿದ್ದರು. ಇಂಥ ಕೆಟ್ಟ ಸ್ವಭಾವದವರ ಕೀಳು ಕೆಲಸಗಳನ್ನೂ, ತಪ್ಪು ತಡೆಗಳನ್ನೂ ಶೋಧಮಾಡಲಿಕ್ಕೆ ರಾ.ಸಾ||ರುದ್ರಗೌಡ ಚೀಟ್ಣಿಸರು ಸಿದ್ಧರೇ ಇದ್ದರು. ಗುರುರಾಯರು ಆ ಪ್ರಕರಣವನ್ನು ಸುಟ್ಟವಾರ್ತೆಯು ಸರಕಾರಕ್ಕೆ ಕೂಡಲೆ ತಿಳಿಯಿತು. ಆದದರಿಂದ ಮೆ||ಮಿಡಲ್ಬನ್ ಸಾಹೇಬ ಬಹದ್ದೂರವರು ತಾವು ಇಲ್ಲಿಂದ ವರ್ಗವಾಗಿ ಹೋಗುವಾಗ ಈ ಮಾಮಲೇದಾರರು ಈ ಪ್ರಕರಣವನ್ನು ಬುದ್ಧ್ಯಾ ಸುಟ್ಟಿರುವರೆಂತಲೂ, ಇವರು ಬಹಳೇ ಕೆಟ್ಟ ಸ್ವಭಾವದವರೆಂತಲೂ, ಕೆಲಸಕ್ಕೆ ಅಯೋಗ್ಯರಿದ್ದಾರೆಂತಲೂ ಬರೆದು ಹೋಗಿದ್ದರು. ಆಗ್ಗೆ ಆ ಮೊಖಾಸಿ ಗುರುರಾಯರಿಗೆ ಖಾನದೇಶ ಜಿಲ್ಲೆಯಲ್ಲಿ ಡಿ.ಡಿ. ಕಲೇಕ್ಟರ ಕೆಲಸಕ್ಕೆ ವರ್ಗವಾಗಿತ್ತು. ಈ ಪ್ರಕರಣದ ವಿಷಯವಾಗಿ ಅಲ್ಲಿ ಅವರ ಜವಾಬವನ್ನು ಕೇಳಲಾಗಿ, ಅವರು ಪುಣೆಯ ಶ್ರೀಧರ ವಿಠ್ಠಲ ದಾತೆ ಎಂಬ ಪ್ರಸಿದ್ಧ ಇಂಗ್ಲೀಷ ಬರೆಯುವವನ ಕಡೆಯಿಂದ ತಮಗೆ ಬೇಕಾದಂತೆ ಜವಾಬವನ್ನು ಬರಿಸಿ, ಅದರಲ್ಲಿ ರಾ.ಬ||ರುದ್ರಗೌಡರವರ ವಿಷಯವಾಗಿ ಎಷ್ಟೋ ಗಿಲ್ಲೆಗಳನ್ನು ತೋರಿಸಿದರು. ಹಾಗು ಮೆ|| ಕ್ರಾಫರ್ಡ ಸಾಹೇಬ ಬಹದ್ದೂರವರಿಗೆ ಮೂರುಸಾವಿರ (೩೦೦೦) ರೂಪಾಯಿ ಲಂಚಕೊಟ್ಟು, ಹೇಗಾದರೂ ಮಾಡಿ ಚೀಟ್ಣಿಸರಾದ ರಾ.ಸಾ||ರುದ್ರಗೌಡರಿಗೆ ಏನಾದರೊಂದು ಧಕ್ಕೆಯನ್ನು ಹಚ್ಚಬೇಕೆಂಬದಾಗಿ ಪ್ರಯತ್ನಿಸಿದರು. ಆ ಗಿಲ್ಲೆಯ ಅರ್ಜಿಗೆ ಮೆ||ಕ್ರಾಫರ್ಡಸಾಹೇಬ ಬಹದ್ದೂರವರ ಕಡೆಯಿಂದ ಶಿಫಾರಸಾಗಿ, ನಿಮ್ಮ ಚೀಟ್ಣಿಸರಾದ ರುದ್ರಗೌಡರು ಬಹಳೇ ಉದ್ಧಟವಾಗಿರುತ್ತಾರೆಂತಲೂ, ಸುಮ್ಮಸುಮ್ಮನೆ ಜನರ ಮೇಲೆ ಏನಾದರೊಂದು ತಪ್ಪು ಹೊರಿಸುತ್ತಾರೆಂತಲೂ, ಈ ಬಗ್ಗೆ ಅವರ ಜವಾಬ ತೆಗೆದುಕೊಂಡು ಕಳಿಸಬೇಕೆಂತಲೂ ಮೆ||ಕಲೇಕ್ಟರ ಸಾಹೇಬ ಬಹದ್ದೂರವರ ಕಡೆಗೆ ಗುಪ್ತರೀತಿಯಿಂದ ಖಡಕ ಹುಕುಮು ಬಂತು. ಈ ಸಮಯದಲ್ಲಿ ಹಿಂದೆ ಹೇಳಿದಂತೆ ಮೆ|| ಮಿಡಲ್ಬನ್ ಸಾಹೇಬರವರ ತರುವಾಯ ಮೆ||ಎಚ್.ಟಿ. ಒವಾನಿ ಸಾಹೇಬ ಬಹದ್ದೂರವರು ಕಲೇಕ್ಟರರಾಗಿ ಬಂದಿದ್ದರು. ಇವರಿಗೆ ಈ ಮೊಖಾಸಿ ಗುರುರಾಯರ ಕಪಟತನವೂ ಗೊತ್ತಾಗಿತ್ತು, ಮತ್ತು ರುದ್ರಗೌಡರ ಪ್ರಾಮಾಣಿಕತನವೂ ಗೊತ್ತಾಗಿತ್ತು. ಅದಕ್ಕೆ ರಾ.ಸಾ||ರುದ್ರಗೌಡರವರ ಸತ್ಯ ಮತ್ತು ಪ್ರಾಮಾಣಿಕತನದ ಜವಾಬ ತೆಗೆದುಕೊಂಡು, ತಾವು ಅದರ ಕೆಳಗೆ "ನಮ್ಮ ಚೀಟ್ಣಿಸರಾದ ರುದ್ರಗೌಡರವರ ವಿಷಯಕ್ಕೆ ವಿರುದ್ಧ ಕಲ್ಪನೆಗೆ ಆಸ್ಪದವೇ ಇಲ್ಲೆಂ"ತಲೂ, "ಇವರಷ್ಟು ಪ್ರಮಾಣಿಕತನದಿಂದ ಕೆಲಸ ಮಾಡುವವರನ್ನು ನಾನು ಎಲ್ಲಿಯೂ ನೋಡಲಿಲ್ಲೆಂ"ತಲೂ, "ಇವರ ವಿಷಯವಾಗಿ ಉಲ್ಲೇಖಿಸಲ್ಪಟ್ಟ ಗಿಲ್ಲೆಯೆಲ್ಲ ಮತ್ಸರಬುದ್ಧಿಯಿಂದ ಬರೆಯಲ್ಪಟ್ಟಿರುವದೆಂ"ತಲೂ, "ಇದೆಲ್ಲ ಮೊಖಾಸಿ ಗುರುರಾಯರ ಕಪಟ ರಚನೆ"ಯಂತಲೂ ಸ್ಪಷ್ಟವಾಗಿ ಬರೆದು ಕಳಿಸಿದರು. ಈ ಕಾಲಕ್ಕೆ ನಾಮದಾರ ಲಾರ್ಡ ರೀ ಸಾಹೇಬರವರು ಮುಂಬಯಿ ಇಲಾಖೆಯ ಗವ್ಹರ್ನರರಿದ್ದರು. ಸರಕಾರದಲ್ಲಿ (ಸನ್ ೧೮೮೭ರಲ್ಲಿ) ಇದರ ವಿಚಾರ ನಡೆದು, ಇಂಥ ಕೀಳು ಕೃತಿಯುಳ್ಳ ಈ ಮೊಖಾಸಿ ಗುರುರಾಯರು ಇಂಥ ದೊಡ್ಡಪದವಿಗೆ ಅಯೋಗ್ಯರೆಂದು ನಿರ್ಣಯವಾಗಿ, ಕಡಿಮೆ ಶರಾಮಾಡಿ, ಇವರನ್ನು ಡಿಸ್ಟ್ರಿಕ್ಟ ಡಿಪೂಟೆ ಕಲೇಕ್ಟರ ಜಾಗೆಯಿಂದ ತೆಗೆದು ಪುನಃ ಮಾಮಲತಿಗೆ ಹಾಕಿದರು.

ಇಷ್ಟಾದರೂ ಗುರುರಾಯರು ತಮ್ಮ ಕೆಟ್ಟ ಸ್ವಭಾವವನ್ನೂ ಕುಕೃತಿಯನ್ನೂ ಬಿಡಲಿಲ್ಲ. ಮೆ||ಉಂಚಸ್ಟರ ಸಾಹೇಬ ಬಹದ್ದೂರವರು ದಕ್ಷಿಣಭಾಗದ ಕಮೀಶನರಿದ್ದಾಗ ಪುನಃ ಸನ್ ೧೮೯೮ನೇ ಇಸವಿಯಲ್ಲಿ ಗುರುರಾಯರ ಕೃತ್ರಿಮತನದ ವಿಷಯಕ್ಕೆ ಸರಕಾರದಲ್ಲಿ ಚೌಕಸಿ ನಡೆದು ಇವರನ್ನು (೨೫೦) ಎರಡುನೂರಾ ಅಯ್ವತ್ತು ರೂಪಾಯಿ ಪಗಾರದಿಂದ ಕಿತ್ತು ಅರವತ್ತು (೬೦) ರೂಪಾಯಿ ಪಗಾರದ ಧಾರವಾಡ ಅವ್ವಲಕಾರಕೂನರನ್ನಾಗಿ ಮಾಡಿದರು (ಸಪ್ಟಂಬರ ೧೮೯೮ ಇಸವಿ). ಇಷ್ಟು ಮಾನಗೇಡಾಗಿ ಇನ್ನು ಕೆಲಸಮಾಡುವದು ವಿಹಿತವಲ್ಲೆಂದು ಗುರುರಾಯರು

ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಸುಮ್ಮನೆ ಮನೆಹಿಡಿದು ಕೂತರು. ತಾವು ಕೆಟ್ಟ ಸ್ವಭಾವದವರಿದ್ದು ಶುದ್ಧ ಮನಸಿನ ಸಜ್ಜನರನ್ನು ಕೆಡಿಸಹೋದರೆ ಕಡೆಗೆ ತಾವೇ ಕೆಡುವರು. ಬಂಗಾರವು ಎಂದೂ ಕಿಲುಬುವದಿಲ್ಲ. ಮಂದಿಯ ಮೋರೆಗೆ ಮಸಿ ಹಚ್ಚ ಹೋದರೆ ಮೊದಲು ತನ್ನ ಕಯ್ಯು ಮಸಿಯಾಗುತ್ತದೆಂಬ ತತ್ವವನ್ನು ವಿಚಾರಮಾಡುವದಿಲ್ಲ. ವಿಚಾರ ಗೇಡಿಗಳು ಕಡೆಗೆ ಕೇಡಿಗೆ ಗುರಿಯಾಗುತ್ತಾರೆ.

ಗುರುರಾಯರಿಗೆ ಈ ಪ್ರಕಾರದ ಅವನತಿಯಾದಾಗ್ಗೆ ರಾ.ಬ॥ರುದ್ರಗೌಡರು ಬೆಳಗಾವಿಯಲ್ಲಿ ಡಿ.ಡಿ.[೧] ಕಲೇಕ್ಟರರಾಗಿದ್ದರು. ಇವರು ಒಂದು ದಿವಸ ಮೆ॥ ಉಂಚಸ್ಟರ ಸಾಹೇಬ ಬಹದ್ದೂರವರ ಭೆಟ್ಟಿಗೆ ಹೋದಾಗ "ಗುರುರಾಯರಿಗೆ ಕಡಿಮೆ ಶರಾ ಮಾಡಿದ್ದಕ್ಕೆ ಜನರೇನೆನ್ನುವರೆ"ಂದು ಸಾಹೇಬರು ರಾ.ಸಾ॥ರುದ್ರಗೌಡರನ್ನು ಸಹಜ ವಿನೋದಕ್ಕಾಗಿ ಕೇಳಲಾಗಿ, "ಅವರ ಅಭಿಪ್ರಾಯಕ್ಕೆ ತಕ್ಕಂತೆ ತಾವು ಯೋಗ್ಯ ನಿರ್ಣಯಮಾಡಲಿಲ್ಲ"ವೆಂದೆನ್ನುವರೆಂದು ಹೇಳಿದರು. ಅದಕ್ಕೆ ಮೆ॥ರವರು ನಗುತ್ತ "ಹೀಗೇಕೆ ಅನ್ನುವರೆ"ಂದು ಕೇಳಲು, "ಇಂಥ ದುಷ್ಟ ಮನುಷ್ಯನನ್ನು ಕೆಲಸದಿಂದ ದೂರ ಮಾಡಿದ್ದರೆ ವಿಹಿತವಾಗುತ್ತಿತ್ತು. ಅವರಿಗೆ ಅರವತ್ತು ರೂಪಾಯಿ ಪಗಾರದ ಅವ್ವಲ ಕಾರಕೂನಿಕೆಯ ಕೆಲಸವನ್ನು ಕೊಟ್ಟಿದ್ದು ಯೋಗ್ಯ ನಿರ್ಣಯವಾದಂತಾಗಲಿಲ್ಲೆ"ಂದು ಜನರು ಮಾತಾಡುತ್ತಾರೆಂದು ಉತ್ತರಕೊಡಲು ಮೆ॥ರವರು ಬಹು ನಕ್ಕರು. ಸಾರಾಂಶ: ದುಷ್ಟರ ಯೋಗ್ಯಶಾಸನವಾಗಿ ಶಿಷ್ಟರ ಪಾಲನೆಯಾಗಬೇಕೆಂಬುದೇ ರಾ.ಸಾ॥ರುದ್ರಗೌಡರವರ ಮುಖ್ಯ ಉದ್ದೇಶವು. ಯಾಕೆಂದರೆ ಮೊಖಾಸಿ ಗುರುರಾಯರು ಹೆಸರಿಗೆ ತಕ್ಕಂತೆ ಹುಚ್ಚ ಮೊಖಾಸಿಯೇ ಆಗಿದ್ದರು.

ರಾ.ಸಾ॥ರುದ್ರಗೌಡರ ವಿಷಯವಾಗಿ ವರಿಷ್ಠರು ನಿಜವಾದ ಪ್ರೇಮವನ್ನು ತೋರಿಸಿದ್ದು

ಇತ್ತ ಕ್ರಾಫರ್ಡಶಾಹಿಯು ದಿನೇ ದಿನೇ ಪ್ರಬಲವಾಗಿ, ಜನಕ್ಕೆಲ್ಲ ಅಸಹಿಷ್ಣುವಾಗಿ ಬೊಬ್ಬಾಟವು ಬಹಳಾಯಿತು. ಆದರೆ ಅವರ ದುರ್ದಶೆಯು ಇನ್ನೂ ದೂರಿತ್ತು. ಅವರ ಮಹತ್ವಾಕಾಂಕ್ಷೆಗೆ ಸರಿಯಾಗಿ ತಿನಸು ಇನ್ನೂ ಯಥೇಚ್ಛವಾಗಿ ಸಿಗುತ್ತಿತ್ತು. ಎಷ್ಟೋ ದೊಡ್ಡ ದೊಡ್ಡ ಕಾಮದಾರರು ಅವರ ಋಣಿಗಳಾಗಿದ್ದರು. ಅವರ ಋಣವು ಇನ್ನೂ ತೀರಿದ್ದಿಲ್ಲ. ಋಣತೀರದೆ ಯಾರೂ ಹೋಗುವದಿಲ್ಲವಲ್ಲ? ಏನೋ ಸ್ವಲ್ಪ ಸಂಧಿಗ್ಧಮನಸ್ಕರಾಗಿ ಸರಕಾರದವರು ಸನ್ ೧೮೮೬ನೇ ಇಸವಿಯ ಎಪ್ರೀಲದಲ್ಲಿ ಮೆ॥ಕ್ರಾಫರ್ಡ ಸಾಹೇಬ ಬಹದ್ದೂರವರನ್ನು ಮಧ್ಯಭಾಗಕ್ಕೆ ವರ್ಗಮಾಡಲಾಗಿ, ಅವರ ಜಾಗೆಯ ಮೇಲೆ ಮೆ॥ಡಬ್ಲು. ಎಚ್. ಪ್ರೋಪರ್ಟ ಸಾಹೇಬ ಬಹದ್ದೂರವರು ಕಮೀಶನರರಾಗಿ ಬಂದರು. ಇವರು ಕ್ರಾಫರ್ಡಸಾಹೇಬರಂತೆ ಆಶಾತುರರೂ, ಅವಿವೇಕರೂ ಇರದೆ ನ್ಯಾಯಿಗಳೂ ಗುಣಿಗಳೂ ಆಗಿದ್ದರು. ಮುಂದೆ ನ್ಯಾಯನಿಷ್ಠ ದೊರೆಗಳವರ ಆಳಿಕೆಯಲ್ಲಿ ರಾಜ್ಯಕಾರ್ಯವು ಸರಿಯಾಗಿ ನೆರವೇರುತ್ತಿರಲು, ಮೆ॥ಎಚ್.ಟಿ.ಒಮಾನಿ ಅಕ್ಟಿಂಗ ಕಲೇಕ್ಟರ ಇವರ ಜಾಗೆಯ ಮೇಲೆ ಮೆ॥ಜೆ.ಕೇ. ಸ್ಪೆನ್ಸ ಎಂಬ ಸಾಹೇಬ ಬಹದ್ದೂರವರು ಕಲೇಕ್ಟರರಾಗಿ ಬಂದರು. ಮೆ॥ ಒಮಾನಿ ಸಾಹೇಬ ಬಹದ್ದೂರವರು ಹೋಗುವಾಗ "ಮಿ॥ರುದ್ರಗೌಡರು ಪ್ರಮಾಣಿಕರೂ, ಕಾರ್ಯತತ್ಪರರೂ, ವ್ಯವಸ್ಥಿತರೂ ಇದ್ದು

---

೧. ಈ ಪ್ರಸಂಗವು ಮುಂದೆ ಸಂಭವಿಸಿದ್ದರೂ ಒತ್ತಟ್ಟಿಗೆ ಬರೆಯಲ್ಪಟ್ಟರೆ ವಾಚಕರಿಗೆ ಒಮ್ಮೇಲೆ ತಿಳಿಯುವದೆಂದು ಹಾಗೆ ಮಾಡಿರುವರು.

ರಾಜ್ಯಕಲಾ ವಿಶಾರದರಿರುತ್ತಾರೆ. ಇವರ ಹೃಚ್ಛಕ್ತಿಯು ಒಳ್ಳೇ ಜಾಣತನವುಳ್ಳದ್ದೂ, ಚಮತ್ಕಾರವುಳ್ಳದ್ದೂ ಇರುತ್ತದೆ. ದುರ್ದೈವದಿಂದ ಇವರ ಮಾಮಲತಿಯ ನಂಬರು ಕೆಳಗೆ ಬಂತು. ಆದರೂ ಇವರನ್ನು ಚೀಟ್ನಿಸಿಯಿಂದ ಒಮ್ಮಿಂದೊಮ್ಮೆ ಡಿಪೂಟಿಕಲೇಕ್ಟರ ಕೆಲಸ ನೋಡಲಿಕ್ಕೆ ತಕ್ಕವರೆಂದು ಶಿಫಾರಸು ಮಾಡುತ್ತೇನೆ." ಈ ಪ್ರಕಾರ ಉತ್ತಮವಾದ ಸರಟಿಫಿಕೇಟು ಬರೆದುಕೊಟ್ಟು ಹೋದರು. ಇದರ ಮೇಲಿಂದ ರಾ.ಸಾ||ರುದ್ರಗೌಡರ ಕಾರ್ಯಶಕ್ತಿಯು ಎಷ್ಟು ವಿಚಿತ್ರವಾಗಿತ್ತೆಂದು ತಿಳಿಯುತ್ತದೆ.

ಮೆ||ಸ್ಪೆನ್ಸ ಸಾಹೇಬ ಬಹದ್ದೂರವರು ಇನ್ನೂ ಬಾರದಕಿಂತ ಮೊದಲೇ ಧಾರವಾಡದಲ್ಲಿಯ ಕೆಲ ಅಸೂಯಾಪರರಾದ ಪ್ರಮುಖ ಬ್ರಾಹ್ಮಣರು ರಾ.ಸಾ||ರುದ್ರಗೌಡರವರ ವಿಷಯವಾಗಿ ದುರ್ಬೋಧದ ಲೇಖಗಳನ್ನು ಬರೆದು, ಅವರಿಗೆ ಇಂಗ್ಲಿಷ ಪತ್ರಗಳನ್ನು ಹಾಕಿ ಮೆ|| ಸ್ಪೆನ್ಸಸಾಹೇಬ ಬಹದ್ದೂರವರ ನಿರ್ದುಷ್ಟವಾದ ಮನಸ್ಸನ್ನು ಕಲುಷಿತ ಮಾಡಿದರು. ಆದರೆ ಕೌರವರ ದುಷ್ಟಾಚರಣೆಗಳೂ, ಕಪಟ ತಂತ್ರಗಳೂ, ಕೃಷ್ಣ ಕೃಪಾಛತ್ರದಲ್ಲಿ ವಿಶ್ರಮಿಸಿರುವ ಪಾಂಡವರಿಗೆ ನಾಟಿದವೇ? ಅದರಿಂದ ಶ್ರೀ ವೀರಭದ್ರನ ಅಂತಃಕರಣದಿಂದ ಬ್ರಾಹ್ಮಣರ ಕುಚೇಷ್ಟೆಗಳೂ, ಕುತಂತ್ರಗಳೂ ಒಂದೂ ರಾ.ಸಾ||ರುದ್ರಗೌಡರವರ ಮುಂದೆ ನಿಲ್ಲಲಿಲ್ಲ. ಈ ಹೊಸ ಕಲೇಕ್ಟರರು ಬಂದೊಡನೆ ಕೆಲವು ದಿವಸ ಕ್ಷುದ್ರಜನರ ಕಿವಿಮಾತುಗಳನ್ನು ಕೇಳಿ ಸುಮ್ಮಸುಮ್ಮನೆ ಅಷ್ಟಿಷ್ಟಕ್ಕೆ ರಾ.ಸಾ||ರವರ ಮೇಲೆ ಕುಪಿತರಾಗುತ್ತಿದ್ದರು. ಮತ್ತು ನಿಮ್ಮ ವಿಷಯವಾಗಿ ಇಷ್ಟು ಪತ್ರಗಳು ಬಂದಿರುವವೆಂದು ಆ ದುರ್ಲೇಖದ ಪತ್ರಗಳನ್ನು ರಾ.ಸಾ||ರವರಿಗೆ ತೋರಿಸಿದರು. ಆದರೆ ಶುದ್ಧಮನಸಿನಿಂದಲೂ, ನಂಬಿಗೆಯಿಂದಲೂ, ಕೆಲಸಮಾಡುತ್ತಿದ್ದ ರಾ.ಸಾ|| ರುದ್ರಗೌಡರ ಸರಳ ಹೃದಯವು ತಿಳಿಯಲಿಕ್ಕೆ ಸುಜ್ಞಾನಿಗಳಾದ ಸಾಹೇಬ ಬಹದ್ದೂರವರಿಗೆ ಬಹಳ ದಿವಸ ಬೇಕಾಗಲಿಲ್ಲ. ಕೂಡಲೆ ರಾ.ಸಾ||ರವರ ಸತ್ಯಬುದ್ಧಿಯನ್ನೂ, ನಿತ್ಯಕಾರ್ಯವನ್ನೂ ಮನಗಂಡರು. ಅದರಿಂದ ಮೆಹರ್ಬಾನರವರ ಅಖಂಡವಾದ ಪ್ರೇಮವೂ ನಂಬಿಗೆಯೂ ಇವರ ಮೇಲೆ ಕೂತಿತು. ರಾ.ಬ||ಗಿಲಿಗಿಂಚಿ ಗುರುಸಿದ್ಧಪ್ಪನವರೂ ರಾ.ಸಾ||ರುದ್ರಗೌಡರೂ ವಿಶ್ವಪ್ರಯತ್ನದಿಂದ ಕೂಡಿಸಿದ ಲಿಂಗಾಯತ ಎಜ್ಯುಕೇಶನಲ್ ಫಂಡಿಗೆ ಮೆ||ಸ್ಪೆನ್ಸ ಸಾಹೇಬ ಬಹದ್ದೂರವರಾದರೂ ಮಾನ್ಯಮಾಡಿದರು.

ರಾ.ಸಾ||ರುದ್ರಗೌಡರ ಕರ್ತವ್ಯಜಾಗ್ರತೆ

ಈ ಉಭಯ ಮಹಾನುಭಾವರು, ಹಿಡಿದ ಕಾರ್ಯವನ್ನು ಕೊನೆಗಾಣಿಸಬೇಕೆಂದು ಲಿಂಗಾಯತ ಫಂಡಿಗಾಗಿ ಅಹೋರಾತ್ರಿ ಅವಿಶ್ರಾಂತ ಶ್ರಮವನ್ನು ಮಾಡಹತ್ತಿದರು. ಧಾರವಾಡ, ಹುಬ್ಬಳ್ಳಿ, ನವಲಗುಂದ, ನರಗುಂದ, ರಾಣೇಬೆನ್ನೂರ, ಗದಗ ಮುಂತಾದ ಎಲ್ಲ ತಾಲೂಕುಗಳಲ್ಲಿಯೂ, ಹಳ್ಳಿಗಳಲ್ಲಿಯೂ ಫಂಡನೆತ್ತಹತ್ತಿದರು. ಎಷ್ಟೋಮಂದಿ ವಿದ್ಯಾಭಿಮಾನಿಗಳೂ, ಮತಾಭಿಮಾನಿಗಳೂ ಆದ ಸಾವಕಾರ ಜನರು ತಂತಮ್ಮ ಯೋಗ್ಯತಾನುಸಾರವಾಗಿ ಹಣವನ್ನು ಫಂಡಿಗೆ ಕೊಟ್ಟು, ತಮ್ಮ ಪಾಲಿಗೆ ಕೀರ್ತಿ ತೆಗೆದುಕೊಂಡರು. ಸನ್ ೧೮೮೩ನೇ ಇಸವಿಯ ಡಿಶಂಬರ್ ತಿಂಗಳಲ್ಲಿ ಒಂದೇ ದಿವಸ ನರಗುಂದ ಗ್ರಾಮದಲ್ಲಿ ಎಂಟುಸಾವಿರ (೮೦೦೦) ರೂಪಾಯಿ ರೋಖ ವಸೂಲಾಗಿದ್ದವು. ಆಕಾಲಕ್ಕೆ ನರಗುಂದ ಮಹಾಲಕರಿಗಳಾದ ರಾ.ಸಾ||ಶಿವನಗೌಡ ಚೆನ್ನವೀರಗೌಡ ಹೆಬ್ಬಾಳ ಇವರು ಫಂಡಿಗಾಗಿ ಬಹಳೇ ಸಹಾಯಮಾಡಿದರು. ಆದರೆ ದೊಡ್ಡ ದೊಡ್ಡ ಜನರೆಂದು ಪ್ರಖ್ಯಾತಗೊಂಡು, ಡಂಭಾಚಾರದಿಂದ ಮೆರೆದಾಡಿ ತಾವು ಮಹಾನುಭಾವರೆಂದು ಹೇಳಿಸಿಕೊಳ್ಳುತ್ತಿರುವ ಅನೇಕರು ಈ ಫಂಡಿಗೆ ತಿಲಮಾತ್ರ ಸಹಾಯಮಾಡದೆ ಹಾಲೊಳಗೆ ಹುಳಿಹಿಂಡುವ ಕಾರ್ಯದಲ್ಲಿ ತತ್ಪರರಾಗಿದ್ದರು. ಈ ಫಂಡು ಕೂಡಿಸುವ ಕೆಲಸಕ್ಕೆ ಎಷ್ಟೋ ಅಪರಿಹಾರ್ಯ ಆತಂಕಗಳು ಬಂದೊದಗಿದವು. ಮೂಕ ಅರ್ಜಿಗಳು

ಅಳತಿಲ್ಲದೆ ಆದವು. ಫಂಡಿನ ಹಣದ ಸಲುವಾಗಿ ಅನೇಕ ಜನರು ಅನೇಕತರದ ಕುಕಲ್ಪನೆಗಳನ್ನು ಮಾಡಿದರು. ಇಂತಹ ಅನಿಷ್ಟಕಾರಕ ವಿಘ್ನಗಳು ಅಡಸುವವೆಂದು ಇವರು ಮೊದಲೇ ಜಾಗ್ರತೆಯಿಂದ ಆ ಪ್ರಕಾರದ ಸುವ್ಯವಸ್ಥೆಯನ್ನು ಇಟ್ಟಿದ್ದರು. ಫಂಡಿನ ಬಗ್ಗೆ ಒಂದು ರೂಪಾಯಿ ಬರಲಿ, ಅದರ ಪಾವತಿಯನ್ನು ಸಹ ಆಗಿಂದಾಗ್ಗೆ ಕೊಟ್ಟು, ಅದನ್ನು ಆಗಿಂದಾಗ್ಗೆ ಸರಕಾರಕ್ಕೆ ಜಮೆಯನ್ನು ಮಾಡುತ್ತಿದ್ದರು. ಇವರ ಶುದ್ಧಾಂತಃಕರಣವೂ ಪ್ರಚಂಡ ಸಾಹಸವೂ ಪ್ರಾಮಾಣಿಕತನವೂ ಸರಕಾರಕ್ಕೆ ತಿಳಿದೇಹೋಗಿತ್ತು. ವೀರಶೈವ ಸಮಾಜವನ್ನೇ ಮುಂದಕ್ಕೆ ತರುವ ಈ ಮಹತ್ಕಾರ್ಯವು ವಿಘ್ನಸಂತೋಷಿಗಳ ವಿರುದ್ಧಾಚರಣೆಯಿಂದ ಅಷ್ಟಕ್ಕೆ ನಿಲ್ಲಲಿಲ್ಲ. ಈ ಉಭಯ ಮಹಾನುಭಾವರ ಸತತೋದ್ಯೋಗದಿಂದಲೂ ದೃಢನಿಶ್ಚಯದಿಂದಲೂ ಉತ್ತರೋತ್ತರವಾಗಿ ಅಭಿವರ್ಧಿಸುತ್ತ ನಡೆಯಿತು.

ಸಮಶೀಲ ದಾಂಪತ್ಯದ ಸವಿಕಟ್ಟು

ರಾ.ಸಾ॥ರುದ್ರಗೌಡರವರಿಗೆ ಅವರ ತಂದೆಯವರಿಗಿದ್ದಂತೆಯೇ ಮಹಾಪತಿವ್ರತೆಯರೂ ಸದ್ಗುಣಮಣಿಯರೂ ಸುಶೀಲೆಯರೂ ಸುರೂಪೆಯರೂ ಆದ ಇಬ್ಬರು ಸತಿಯರು. ಅರಟಾಳಕ್ಕೆ ಹೊಂದಿರುವ ಹೊಸೂರ ಗ್ರಾಮದ ಸುಪ್ರಸಿದ್ಧ ಹುಲೆಪ್ಪಗೌಡರ ಹೆಣ್ಣುಮಕ್ಕಳೂ ಸೌಜನ್ಯವತಿಯರೂ ಆದ ತಾಯವ್ವನವರು ಜೇಷ್ಠಭಾರ್ಯೆಯರು. ಇವರ ಲಗ್ನವು (ಅರಟಾಳ ಹೊಸಮನೆಯಲ್ಲಿ) ಸನ್ ೧೮೫೯ನೇ ಇಸವಿಯ ದಿಶಂಬರ ತಿಂಗಳಲ್ಲಿ (ಮಾರ್ಗಶೀರ್ಷ ಮಾಸದಲ್ಲಿ) ಮಹಾವೈಭವದಿಂದ ಆಗಿತ್ತು. ರಾ.ಸಾ॥ರವರ ಮಾವಂದಿರಾದ ಹುಲೆಪ್ಪಗೌಡರು[೧] ಒಳ್ಳೇ ದೊಡ್ಡಸ್ತಿಕೆಯುಳ್ಳವರೂ ಪ್ರಮುಖರೂ ಆಗಿದ್ದರು. ಇವರ ಮನೆತನದ ಗೌಡರೆಲ್ಲರು ಬಹುಕಾಲದಿಂದ ಬಹುಶೂರತನವುಳ್ಳವರು. ಇವರ ಶೂರತನ ದ್ಯೋತಕವಾದ ಒಂದು ಚಿಲಖತು ಈಗ್ಯೂ ಅವರ ಮನೆಯಲ್ಲಿರುವದು. ಸುಪ್ರಸಿದ್ಧ ತಾಲೂಕ ಬಂಕಾಪುರ ಸಂಗನಬಸಪ್ಪ ಸೆಟ್ಟರ ಹೆಣ್ಣುಮಗಳೂ ಕುಂಕುಮವತಿಯರೂ ಆದ ಗುರುಪಾದವ್ವನವರು ಚಿಕ್ಕಭಾರ್ಯೆಯರು. ಈ ಬಂಕಾಪುರ ಸೆಟ್ಟರಾದರೂ ಪ್ರಸಿದ್ಧವಾದ ದೊಡ್ಡ ಮನೆತನದವರೂ ಆಚಾರ ವಿಚಾರ ಕ್ರಿಯಾನಿಷ್ಠರೂ ದೊಡ್ಡಸ್ತಿಕೆಯುಳ್ಳವರೂ ಆಗಿದ್ದರು. ಈ ಸೆಟ್ಟರು ಶರಣರೆಂದೆನಿಸಿಕೊಳ್ಳುತ್ತಿದ್ದರು. ಈ ಗುರುಪಾದವ್ವನವರ ಲಗ್ನವು ಸನ್ ೧೮೮೨ನೇ ಇಸವಿಯ ಮೇ ತಿಂಗಳಲ್ಲಿ (ಅರಟಾಳದ ಸೊಲಬನಗೌಡ ತಂದೆ ವೀರನಗೌಡರ ಮನೆಯಲ್ಲಿ)ಆಯಿತು.

ಈ ಸೌಭಾಗ್ಯ ಸಂಪನ್ನವತಿಯರಾದ ಸತಿಯರೀರ್ವರು ಪತಿಭಕ್ತಿಪರಾಯಣರಾಗಿ, ಅತಿವಿನಯಾಸ್ಮಿತರಾಗಿ, ಪತಿಯೇ ದೇವರೆಂದು ನೆರೆ ನಂಬಿ, ಮೈ ನೆರಳಿನಂತೆ ಪತಿಗೆ ಸಹಚರಿಗಳಾಗಿದ್ದರು. ಸ್ತ್ರೀಕುಲ ಶಿರೋಮಣಿಗಳಾದ ಭಾರ್ಯೆಯರೀರ್ವರೂ ಒಮ್ಮನಸ್ಸಿನಿಂದ ಪತಿದೇವರನ್ನು ಸುಖಶಾಂತಿಗಳಿಂದ ಸಂತೈಸುತ್ತಿದ್ದರು. ಸೌ॥ತಾಯವ್ವನವರು ಹೆಸರಿಗೆ ತಕ್ಕಂತೆ ಜನರಿಗೆಲ್ಲ ತಾಯವ್ವನವರೇ ಆಗಿದ್ದರು. ಇವರಂತೆ ಸೌ॥ಗುರುಪಾದವ್ವನವರು ಹೆಸರಿಗೆ ಸರಿಯಾಗಿ ಗುರುಗಳ ಪಾದಸೇವೆಯಲ್ಲಿ ಭಕ್ತಿವಂತರಾಗಿದ್ದರು. "ಅತ್ತೆಯಂತೆ ಸೊಸೆ" ಎಂಬ ಗಾದೆಯ ಮಾತಿನಂತೆ ಲಿಂಗವ್ವ ರುದ್ರವ್ವನವರ ಹಾಗೆಯೇ ತಾಯವ್ವನವರೂ ಗುರುಪಾದವ್ವನವರೂ ಗುರುಲಿಂಗಜಂಗಮರಲ್ಲಿ ಅತ್ಯಂತ ಭಯಭಕ್ತಿಯುಳ್ಳವರೂ ಲೋಕಪ್ರಿಯರೂ ಪತಿಸುಖಾನುವರ್ತಿಗಳೂ ಆಗಿ,

---

೧. ಈ ಹುಲೆಪ್ಪಗೌಡರು ಬಿನ್ನ ಸಂಕನಗೌಡರು ಇವರು ಹೊಸೂರಲ್ಲಿ ಸನ್ ೧೮೮೭ನೇ ಇ. ಫೆಬ್ರುವರಿ ತಿಂಗಳ ೨೪ನೇ ತಾರೀಖಿನ ದಿವಸ ಮೃತರಾದರು.

ಗುರು ಹಿರಿಯರಿಗೆ ಶಿರಬಾಗುತ್ತ, ಸರಿಯವರ ಕೂಡ ಸಂತೋಷದಿಂದಿರುತ್ತ, ಕಿರಿಯರನ್ನು ಆದರಿಸಿ ಆಶೀರ್ವದಿಸುತ್ತ, ಹುಟ್ಟಿದಮನೆಗೂ ಕೊಟ್ಟಮನೆಗೂ ಸತ್ಕೀರ್ತಿಯನ್ನು ತಂದು ಸಂತೋಷದಿಂದ ಇರುತ್ತಿದ್ದರು. ಇಂತಹ ಸದ್ಗುಣಸಂಪನ್ನೆಯರಾದ ಸತಿಯರುಳ್ಳ ಪತಿಯರೇ ಧನ್ಯರು.

ರಾ.ಸಾ||ರುದ್ರಗೌಡರಾದರೋ ಕೇವಲ ಮದನಮೂರ್ತಿಯಂತೆ ಸುಂದರರು. ಇವರ ಅಂಗಕಾಂತಿಯು ಬಂಗಾರದಂತೆ ಮನೋಹರವಾಗಿ ಕಾಣುವದು. ವಿಶಾಲವಾದ ನೇತ್ರ, ಸುಕುಮಾರವಾದ ಗಾತ್ರವುಳ್ಳ ಇವರ ಗಂಭೀರವಾದ ಮುಖಮುದ್ರೆಯು ಬಹು ಭವ್ಯವಾಗಿಯೂ, ರಮ್ಯವಾಗಿಯೂ ತೋರುವದು. ದುಂಡನ್ನ ಮುಖದಮೇಲೆ ತೇಜಃಪುಂಜದ ಕಳೆಯು ಚಿಮ್ಮುತ್ತಿರುವದು. ಇವರ ಮೈಕಟ್ಟು ಬಲು ಮಾಟವಾಗಿ(ಸೊಗಸಾಗಿ) ತೋರುವದು. ವಿಶಾಲವಾದ ಎದೆಕಟ್ಟು ಇವರಲ್ಲಿರುವ ಮಹತ್ತಾದ ಧೈರ್ಯವನ್ನು ತೋರಿಸುವದು. ದೊಡ್ಡದಾದ ಹಣೆಯು ಇವರ ದೊಡ್ಡಸ್ತಿಕೆಯನ್ನೂ ಸುದೈವವನ್ನೂ ದೀರ್ಘವಿಚಾರತ್ವವನ್ನೂ ಸೂಚಿಸುತ್ತಿರುವದು. ತೇಜೋರಾಶಿಯಿಂದ ಬೆಳಗುತ್ತಿರುವ ಮುಖಮಂಡಲದಲ್ಲಿ ಸದಾ ಆನಂದದ ಕಳೆಯು ಸುರಿಯುತ್ತಿರುವದು. ದಿವ್ಯವಾದ ತೇಜಸ್ಸು, ಸರಳವಾದ ಮನಸ್ಸು ಇವರು ದೇವಾಂಶ ಸಂಭೂತರೆಂಬುದನ್ನು ಪ್ರಕಟಗೊಳಿಸುತ್ತಿರುವದು. ಸ್ವಚ್ಛ ಮತ್ತು ಶುಭ್ರವಾದ ಇವರ ಪೋಷಾಕು, ಇವರ ನಿರ್ಮಲವಾದ ಚಿತ್ತನ್ನೂ, ಸಭ್ಯ ಸ್ವಭಾವವನ್ನೂ ತೋರುತ್ತಿರುವದು. ರೂಪಕ್ಕೆ ತಕ್ಕಂತೆ ಇವರ ಮನಸ್ಸಾದರೂ ಮಲ್ಲಿಗೆಯಂತೆ ಬಹು ಮೃದುವಾಗಿರುವದು.

ರಾ.ಸಾ||ರುದ್ರಗೌಡರು ಅರಟಾಳದಲ್ಲಿ ಮಾಡಿದ ಮನ್ಮಥೋತ್ಸವವು

ಇಂತಹ ಅನಂತ ಸುಖಸಂಪತ್ತಿಗಳಿಂದೊಡಗೂಡಿದ ದಂಪತಿಗಳು ಸಂಸಾರಯಾತ್ರೆಯಲ್ಲಿ ಸುಖದಿಂದ ಇರುತ್ತಿದ್ದರು. ರಾ.ಸಾ||ರುದ್ರಗೌಡರು ತಂದೆ ತಾಯಿಗಳಂತೆ ದೇವಜಂಗಮ ಪೂಜಕರೂ, ಭಕ್ತಿವಂತರೂ, ಆಗಿದ್ದರು. ತಂದೆಯವರು ನಡಿಸಿದಂತೆ ಆಗಾಗ್ಗೆ ಮನೆಯಲ್ಲಿ ಜಂಗಮಾರ್ಚನೆಯನ್ನೂ, ಗುಗ್ಗುಳ ಪೂಜೆಯನ್ನೂ ಮಾಡಿಸಿ ಗಣಂಗಳನ್ನು ತೃಪ್ತಿಪಡಿಸುತ್ತಿದ್ದರು. ಹಿಂದೆ ತಮ್ಮ ಯಜಮಾನರು ರಚಿಸಿದಂತೆ ತಾವೂ ಮನ್ಮಥೋತ್ಸವವನ್ನು ಬೆಳೆಯಿಸಬೇಕೆಂದು ಸಂಕಲ್ಪವನ್ನು ಮಾಡಿದರು. ಇವರ ಮನಸಿನೊಳಗೆ ವಿಚಾರಗಳು ಬರುವದೊಂದೇ ತಡ, ಕೂಡಲೇ ಆ ವಿಚಾರದಂತೆ ಕೆಲಸವಾಗಲಿಕ್ಕೆ ಬೇಕು. ಅದರಂತೆ ಸನ್ ೧೮೮೮ನೇ ಇಸವಿಯ ಫೆಬ್ರುವರಿ ತಿಂಗಳಲ್ಲಿ (ಫಾಲ್ಗುಣಮಾಸದಲ್ಲಿ) ಮನ್ಮಥೋತ್ಸವವನ್ನು ಬೆಳಿಸಿದರು. ಹಿಂದೆ ಉಳವೀಕ್ಷೇತ್ರದಲ್ಲಿ ಚಿತ್ರಕಲ್‌ದುರ್ಗದ ಶ್ರೀ ಮಹಾಲಿಂಗ ಸ್ವಾಮಿಗಳವರ ಸಭಾಮಂಟಪವನ್ನು ರಚಿಸಿದ ಕಲಾಕುಶಲರಾದ ಮಾರ್ತಾಂಡ ಮತ್ತು ಹೈಬತಿಯೆಂಬ ಹೊಸಹುಬ್ಬಳ್ಳಿಯ ಇಬ್ಬರು ಚಿತ್ರಗಾರರನ್ನು ತಮ್ಮ ಮನ್ಮಥ ಮಂಟಪವನ್ನು ರಚಿಸಲಿಕ್ಕೆ ಕರಿಸಿದ್ದರು. ಮಂಟಪವನ್ನು ತಮ್ಮ ಹಳೆಯ ಮನೆಯ ಮುಂದೆ ಶ್ರೀ ಗ್ರಾಮದೇವತೆಯ ದೇವಾಲಯದ ಕಡೆಗೆ ಮುಖಮಾಡಿ ಕಟ್ಟಲಿಕ್ಕೆ ಹೇಳಿದರು. ಅಗಣಿತವಾದ ಅಡಿಕೆಯ ಕಂಬಗಳೂ, ಎಳೆಗಳೂ, ಗಳಗಳೂ ಬಂದು ಬಿದ್ದವು. ಮಂಟಪವನ್ನು ಕಟ್ಟುವ ಕೆಲಸ ನಡೆಯಿತು. ಅರಟಾಳ ಊರಜನರೂ, ಸುತ್ತು ಹಳ್ಳಿಗಳ ಜನರೂ ರಾತ್ರಿ ಹಗಲು ಬಿಡದೇ ಮಂಟಪವನ್ನು ಕಟ್ಟಹತ್ತಿದರು. ಮಂಟಪವನ್ನು ಕಟ್ಟಲಿಕ್ಕೆ ಅಯ್ನೂರು (೫೦೦) ಗುಡಾರಗಳೂ, ನಾನೂರು (೪೦೦) ಕಾತಿಯ ಹಗ್ಗಗಳೂ ಹತ್ತಿದ್ದವಂತೆ. ಮತ್ತು ಮಂಟಪಕ್ಕೆ ಕಾಗದ, ವಸ್ತ್ರ ಮುಂತಾದವುಗಳನ್ನು ಹಚ್ಚಲಿಕ್ಕೆ (ಅಂಟಿನ ಕೆಲಸಕ್ಕೆ) ಎರಡು ಚೀಲ ಗೋದಿ ಹಿಟ್ಟಿನ ಸರಿಸು ಹತ್ತಿತಂತೆ. ಅಂದಮೇಲೆ ಮಂಟಪವು ಎಷ್ಟು ದೊಡ್ಡದು ಮತ್ತು ಎಷ್ಟು ಮನೋಹರವಾಗಿತ್ತೆಂಬುದರ ಕಲ್ಪನೆಯನ್ನು ವಾಚಕರು ಸಹಜವಾಗಿ ಮಾಡಬಹುದು.

ಮಂಟಪದ ಶೃಂಗಾರ

ಚಿತ್ರವಿಚಿತ್ರವಾದ ಚೀನಾಂಬರಗಳಿಂದಲೂ, ಭವ್ಯವಾದ ಕಮಾನುಗಳಿಂದಲೂ, ತರತರದ ಬಣ್ಣಗಳ ಗೋಪುರಗಳಿಂದಲೂ, ಸುಳುವುಗಳಿಂದಲೂ, ರಮಣೀಯವಾದ ಚಿತ್ರದ ಕನ್ನಡಿಗಳಿಂದಲೂ, ಮನೋಹರವಾದ ಗೊಂಬೆಗಳಿಂದಲೂ ಮಂಟಪವು ಬಹು ಸೊಗಸಾಗಿ ಅಲಂಕೃತವಾಗಿತ್ತು. ಶುಭ್ರವಾದ ಛತ್ತನ್ನು ವಿಶಾಲವಾಗಿ ಹೊಡೆದು ಸುತ್ತಲೂ ಉತ್ತಮವಾದ ಝೂಲರಗಳನ್ನು ಕಟ್ಟಿದ್ದರು. ಮೇಲಕ್ಕೆ ಕಣ್ಣೆತ್ತಿದ್ದರೆ ಸಾಕು. ಸಾವಿರಾರು ಹಂಡೇ ಝುಮರಗಳೂ, ಗುಂಡುಗುಳಾಪಗಳೂ ಪಾಲ್ಗೊಂಡು ತೂಗಾಡುತ್ತಿದ್ದವು. ಮಂಟಪವು ಎರಡು ಅಂತಸ್ತವಾಗಿ ಕಟ್ಟಲ್ಪಟ್ಟಿತ್ತು. ಶೋಭಾಯಮಾನವಾಗಿ ಕಾಣಿಸುವ ಎತ್ತರವಾದ ಮೇಲ್ಮಹಾಲವೂ, ಮುಂದಿನ ನಗಾರಖಾನೆಯೂ ಮುಖ್ಯಮಂಟಪವೂ ಅವರ್ಣನೀಯವಾಗಿ ಸಿಂಗರಿಸಲ್ಪಟ್ಟಿದ್ದವು. ಮಂಟಪದಲ್ಲಿ ಆಸನಗಳು ಅಂದವಾಗಿ ಇಡಲ್ಪಟ್ಟಿದ್ದವು. ಮುಖ್ಯಮಂಟಪದಿಂದ ಅಗಸಿಯ ವರೆಗೂ ಹಂದರವನ್ನು ಹಾಕಿಸಿ, ಕದಳೀ ಸ್ತಂಭಗಳಿಂದಲೂ, ತಳಿದೋರಣಗಳಿಂದಲೂ, ನಿಬಿಡವಾದ ಧ್ವಜ ಪತಾಕೆಗಳಿಂದಲೂ ಶೋಭೆಗೊಳಿಸಿದ್ದರು. ಅಲ್ಲಲ್ಲಿಗೆ ಸಾಲುಸಾಲಾಗಿ ಹೂಮಾಲೆಗಳೂ, ಕೇದಿಗೆಯ ಹೊಡೆಗಳೂ, ತೆಂಗು ಸಾಲುಗಳೂ ತೂಗುತ್ತಿದ್ದವು. ಅಗಸಿಯಿಂದ ಮಂಟಪದ ವರೆಗೂ, ಇಬ್ಬದಿಯಲ್ಲಿ ದೀವಿಗೆಯನ್ನು ಸಾಲ್ಗೊಂಡು ಹಚ್ಚಿಸಿದ್ದರು. ಸಾಲು ಗಿಡಗಳಲ್ಲಿ ಸಹ ದೀವಿಗೆಗಳನ್ನಿರಿಸಿದ್ದರು. ಸಂಜೆಯಾಗುತ್ತಲೆ ಸಾವಿರಾರು ದೀಪಗಳು ಸಾಲುಸಾಲಾಗಿ ಬೆಳಗುವಾಗ ಹೊಳೆಯುವ ನಕ್ಷತ್ರಮಾಲೆಗಳಂತೆ ಚಂದಾಗಿ ಕಾಣುತ್ತಿದ್ದವು. ಅಗಣಿತವಾದ ದೀಪಗಳ ಬೆಳಕಿನಿಂದ ಊರಿಗೇ ಬೆಂಕಿ ಹತ್ತಿದಂತೆ ಕಾಣುತ್ತಿರುವದು. ಮನ್ಮಥನನ್ನು ಕೂಡಿಸುವ ಎತ್ತರವಾದ ಮಣ್ಣಿನ ಕಟ್ಟೆಯನ್ನು ಕಟ್ಟಲಿಕ್ಕೇ ಒಂದುನೂರು (೧೦೦) ರೂಪಾಯಿ ಹತ್ತಿದ್ದವಂತೆ ಅಂದಮೇಲೆ ಮಂಟಪದ ವೆಚ್ಚವೆಷ್ಟಾಗಿರಬಹುದು? ಸಾರಾಂಶ: ಎಲ್ಲ ರೀತಿಯಿಂದಲೂ ಮಂಟಪವು ಬಲು ಅಂದವಾಗಿ ಕಟ್ಟಲ್ಪಟ್ಟಿತ್ತು. ಸೂರ್ಯತೇಜದಂತೆ ಜಾಜ್ವಲ್ಯಮಾನವಾಗಿರುವ ದೀಪಗಳ ಜ್ಯೋತಿಯಿಂದಲೂ, ಸಪ್ತವರ್ಣಗಳಿಂದ ಪ್ರಕಾಶಿಸುತ್ತಿರುವ ಜರತಾರಿಯ ವಸ್ತ್ರಗಳಿಂದಲೂ ಝುಗಝುಗಿಸುತ್ತಿರುವ ಸಿಂಹಾಸನದ ಮೇಲೆ, ಸರ್ವವಸ್ತ್ರಾಭರಣ ಭೂಷಿತರಾಗಿ ಪ್ರತಿಮಾ ರೂಪರಾದ ರತಿ ಮನ್ಮಥರು ವಿರಾಜಮಾನರಾಗಿದ್ದರು. ಮದನ ರತಿಮೂರ್ತಿಗಳು ಮಂಟಪಕ್ಕೆ ತಕ್ಕಂತೆ ಮನೋಹರವಾಗಿದ್ದವು. ಈ ಮಂಟಪದ ಶೋಭೆಯನ್ನೂ, ಮಹೋತ್ಸವವನ್ನೂ ನೋಡಲಿಕ್ಕೆ ದೂರುದೂರಿಂದ ಬಹುಜನರು ಬಂದಿದ್ದರು.

ಅಪೂರ್ವವಾದ ಉತ್ಸವಗಳು

ಉತ್ಸವದಲ್ಲಿ ನಗಾರಿಗಳ ಧೋ ಧೋ ಎಂಬ ಗಂಭೀರನಾದವೂ, ತಾಸೆ ಸನಾದಿ ಮುಂತಾದ ಮಂಗಳವಾದ್ಯಗಳ ಮನೋಹರವಾದ ಸಪ್ಪಳವೂ, ಕರಡೀ ಮಜಲುಗಳ ಕಟಕಟವೂ, ಕಾಳಿ ಕರ್ನಿಗಳ ಉಚ್ಚ ಧ್ವನಿಯೂ, ಮೃದಂಗದ ಮಂಜುಳ ನಿನಾದವೂ, ಹಲಿಗೆ ದಿಮ್ಮು ರಣಹಗೆಗಳ ಹೇರಳವಾದ ಸಪ್ಪಳವೂ, ಸಾರಂಗಿ ಪಿಟೀಲುಗಳ ಸಂಪಾದ ಧ್ವನಿಯೂ, ವೀಣೆ ತಂಬೂರಿಗಳ ವಿಚಿತ್ರವಾದ ನಾದವೂ, ಗವಯಿಗಳ ಗಾನಧ್ವಾನವೂ ಒಟ್ಟಾಗಿ ಸೇರಿ ದಿಗ್ಮಂಡಲವನ್ನು ವ್ಯಾಪಿಸಿತ್ತು. ಈ ಉತ್ಸವಕ್ಕೆ ೪೦ (ನಾಲ್ವತ್ತು) ಮಂದಿ ಪಾತ್ರದವರು ಬಂದಿದ್ದರು. ಈ ಪ್ರಕಾರ ಆಟ, ನೋಟ, ವಾದ್ಯ, ಗೀತ, ಗಾಯನ, ನಾಚು, ರಂಗು ಮುಂತಾದ ಮಹೋತ್ಸವಗಳು ಪ್ರೇಕ್ಷಣೀಯವಾಗಿದ್ದವು. ಉತ್ಸವಗಳು ರಾತ್ರಿ, ಹಗಲು ಬಿಡದೇ ನಡೆಯುತ್ತಿದ್ದವು. ಊರೆಲ್ಲ ದಿಮಿದಿಮಿ ದಿಮಿಗುಡುತ್ತಿತ್ತು. ಪ್ರಸಿದ್ಧಪಾತ್ರಗಳ ನಾಚೂ, ಬೈಠಕಿಯೂ ಬಹಳೇ ಉತ್ತಮವಾಯಿತು. ನಾಲ್ವತ್ತು

ಪಾತ್ರಗಳ ನಾಚು ಒಂದರ ಮೇಲೊಂದು ಬಿಡದೇ ಆಗುತ್ತಿದ್ದವು. ದಿನಾಲು ಇನ್ನೂರು ಕೇದಿಗಿಯ ಹೊಡೆಗಳನ್ನೂ, ಅಸಂಖ್ಯವಾದ ಮಲ್ಲಿಗೆಯ ಹೂವುಗಳನ್ನೂ, ಹಾರಗಳನ್ನೂ ತರಿಸಿ ಪಾತ್ರದವರಿಗೆ ಕೊಡಿಸುತ್ತಿದ್ದರು. ಉತ್ಸವವು ಸುವಾಸಿತದಿಂದ ತುಂಬಿ ಹೋಗುತ್ತಿತ್ತು. ಇದಲ್ಲದೆ ಬುಕ್ಕಿಟ್ಟು, ಅಷ್ಟಗಂಧ, ಅರಗಜ, ಅತ್ತರ ಮುಂತಾದ ಸುಗಂಧ ದ್ರವ್ಯಗಳಿಂದ ಘಮಘಮಿಸುತ್ತಿತ್ತು. ಈ ಉತ್ಸವಕ್ಕೆ ಸುಪ್ರಸಿದ್ಧ ಗವಯಿಗಳಾದ ಮೈಸೂರ ಇಲಾಖಾ, ಕುನಸೂರ ತಾಲೂಕ, ಬೆಟ್ಟದ ಪುರದ ನಾರಾಯಣಸ್ವಾಮಿಗಳು ಬಂದಿದ್ದರು. ಇವರ ಸಮಾನ ಕೃತಿ, ವರ್ಣ, ಪಲ್ಲವಿಗಳನ್ನು ಹಾಡುವದರಲ್ಲಿಯೂ, ಅನೇಕ ತರದ ರಾಗಗಳನ್ನು ಮಾಡುವದರಲ್ಲಿಯೂ ಇನ್ನೂ ವರೆಗೆ ಯಾರನ್ನೂ ಕಾಣಲಿಲ್ಲೆಂದು ರಾ.ಸಾ॥ರುದ್ರಗೌಡರವರು ಹೇಳುತ್ತಿದ್ದರು. ಈ ನಾರಾಯಣಸ್ವಾಮಿಗಳ ಮಧುರವಾದ ಕಂಠಕ್ಕೂ, ರಾಗರಸಕ್ಕೂ ಮೆಚ್ಚಿ ಇವರನ್ನು ಹದಿನಾಲ್ಕು (೧೪) ವರ್ಷ ತಮ್ಮ ಹತ್ತರದಲ್ಲಿಯೇ ಇಟ್ಟುಕೊಂಡಿದ್ದರು. ರಾ.ಸಾ॥ರುದ್ರಗೌಡರವರಿಗೆ ಸಂಗೀತದ ಸವಿಯನ್ನು ತಿಳಿಸಿದವರು ಈ ನಾರಾಯಣಸ್ವಾಮಿಗಳೇ ಸರಿ. ಇವರಿಂದಲೇ ರಾ.ಸಾ॥ರವರಿಗೆ ರಾಗಾದಿಗಳಲ್ಲಿ ಸ್ವಲ್ಪ ಗತಿಯಾಗಿತ್ತು. ಈ ಗವಯಿಗಳು ಬಹಳೇ ಸಭ್ಯಸ್ವಭಾವದವರಾಗಿದ್ದರು. ಇವರ ಗಾಯನದಿಂದ ರಾ.ಸಾ॥ರವರ ಚಿಂತೆ ವ್ಯಸನಾದಿಗಳು ಪರಿಹಾರವಾಗುತ್ತಿದ್ದವಂತೆ. ಇಂತಹ ಅದ್ವಿತೀಯ ಗಾನಕಲಾ ವಿಶಾರದರಾದ ಈ ನಾರಾಯಣಸ್ವಾಮಿಗಳು ಸನ್ ೧೯೮೬ (ಸಪ್ಟಂಬರ) ಜಿಲ್ಲಾ ಧಾರವಾಡ ತಾಲೂಕ ಕರ್ಜಗಿ ಅಗಡೀ ಗ್ರಾಮದಲ್ಲಿ ಮೃತವಾದದರಿಂದ ರಾವಸಾಹೇಬರವರಿಗೆ ಬಹಳೇ ದುಃಖವಾಯಿತು.

ಅಗ್ನಿಕ್ರೀಡೆ

ಈ ಉತ್ಸವದಲ್ಲಿ ಏಳೆಂಟು ದಿವಸ ಹಿರದಿನ ಕುಸ್ತಿಗಳಾದವು. ಜಂಗೀಕುಸ್ತಿಗಳಾಗುವದೆಂದು ಮೊದಲೇ ಜಾಹೀರವಾದುದರಿಂದ ನೋಡಲಿಕ್ಕೆ ಬಹು ದೂರಿದೂರಿಂದ ಬಹಳ ಜನ ಕೂಡಿತ್ತು. ಕುಸ್ತಿಗಳಲ್ಲದೆ ಅವರ್ಣನೀಯವಾದ ಕಸರತ್ತಿನ ಆಟಗಳಾದವು. ರಾತ್ರಿಯಲ್ಲಿ ಪ್ರತಿದಿವಸ ಅಗ್ನಿಕ್ರೀಡೆಯು ವಿಚಿತ್ರವಾಗಿ ಆಗುತ್ತಿತ್ತು. ಉತ್ಸವದ ಶೋಭೆಗಾಗಿ ತರತರದ ಮದ್ದು ಮಾಡಿಸಿದ್ದರು. ಎಂಟು ಎತ್ತಿನ ಹಳೇಬಂಡಿಯ ತುಂಬ ಮತ್ತು ಬೇರೆ ಮೂರು ನಾಲ್ಕು ಚಕ್ಕಡಿ ಮದ್ದು ತಯಾರಾಗಿತ್ತು. ಮತ್ತು ತಾಲೂಕ ಹುಬ್ಬಳ್ಳಿಯಿಂದ ಉಳ್ಳೇಗಡ್ಡಿ ಚನ್ನಯ್ಯನವರು ಒಳ್ಳೇ ಚಮತ್ಕಾರವಾದ ಒಂದು ಚಕ್ಕಡಿ ಭರತಿ ಮದ್ದನ್ನು ತಯಾರಮಾಡಿಸಿಕೊಂಡು ಬಂದಿದ್ದರು. ಬಿಟ್ಟೂಬಿಡದೆ ಬಿಡುವ ಬಾಣಗಳು ಸರ್ ಸರ್ರೆಂದು ಹಾರಿ, ನಭೋಮಂಡಲವನ್ನು ವ್ಯಾಪಿಸಿದ್ದವು. ಕುಡಿಕೆಗಳೂ, ಕೊಂಬುಗಳೂ, ತಾರಲಳಿಗೆಗಳೂ ಭರ್ ಭರ್ರೆಂಬ ದೀರ್ಘಧ್ವನಿಯಿಂದಲೂ, ಏಕಸಮಯವಚ್ಛೇದನೆಯಿಂದಲೂ ಹಾರುತ್ತಿದ್ದವು. ಕೆಂಪು, ಹಸರು, ಬಿಳೇ, ಬಣ್ಣಗಳ ತೇಜಃಪುಂಜವಾದ ಪ್ರಕಾಶದಿಂದುರಿಯುವ ಹಗಲ ಪಂಜುಗಳು, ಹುಣ್ಣಿವೆಯ ಬೆಳ್ದಿಂಗಳ ಕಾಂತಿಯನ್ನು ಕಡಿಮೆ ಮಾಡುತ್ತಿದ್ದವು. ತೆರಪಿಲ್ಲದೆ ಹಾರುವ ಔಟುಗಳು ಎದೆಯನ್ನು ನಡುಗಿಸುತ್ತಿದ್ದವು. ಚಕ್ರಬಾಣಗಳು ಕೂಡಿದ ಜನರನ್ನು ಘೋರ್ಗರ್ಜನೆಯಿಂದ ಬೆದರಿಸುತ್ತಿದ್ದವು. ಹತ್ತು ಲಂಕೆಗಳನ್ನು ಕಟ್ಟಿದ್ದರು. ದಿವ್ಯಪ್ರಕಾಶದಿಂದಲೂ, ಅತಿಶಯವಾದ ಸಪ್ಪಳದಿಂದಲೂ ಅವು ಉರಿಯುವದನ್ನು ಎರಡು ಕಣ್ಣುಗಳಿಂದ ನೋಡುವುದು ಅಸಾಧ್ಯವಾಗಿತ್ತು. ಈ ಲಂಕೆಗಳು ಒಮ್ಮೆಲೇ ಉರಿಯುವಾಗ ಜ್ವಲತ್ಪರ್ವತವು ಸ್ಫೋಟನವಾದಂತೆ ಭಾಸವಾಗುತ್ತಿತ್ತು. ಈ ಪ್ರಕಾರ ಸರ್ವಪ್ರೇಕ್ಷಣೀಯ ಕಾರ್ಯಗಳಿಂದ ಉತ್ಸವವು ಅಹರ್ನಿಶೆಯಲ್ಲಿಯೂ ಉತ್ಸುಕತೆಯಿಂದ ಕುಣಿದಾಡುತ್ತಿತ್ತು.

ರಾ.ಸಾ||ರುದ್ರಗೌಡರು ಬಹಳೇ ರಸಿಕರು. ಇಂಥ ಆಟ, ನೋಟ, ಮಹೋತ್ಸವಗಳಲ್ಲಿಯೂ, ಸಂಗೀತದಲ್ಲಿಯೂ ಇವರ ಪ್ರೇಮ ಬಹಳ. ಕಾರಭಾರದಲ್ಲಿ ದಕ್ಷರೂ, ಧೂರ್ತರೂ ಇದ್ದಂತೆ ಇವರು ಊಟ ಉಪಚಾರಗಳಲ್ಲಿ ಬಹು ಸೊಗಸುಗಾರರೂ, ಸವಿಗಾರರೂ ಇರುವರು. ಇಂಥ ಸದ್ಗುಣ ಪರಿಪೂರಿತರಾದ ರಾ.ಸಾ||ರುದ್ರಗೌಡರು ಅಲಂಕೃತರಾಗಿ ಬಹುಜನ ಸಮೂಹದಿಂದೊಡಗೂಡಿದ ರತಿಮನ್ಮಥರ ಮಹಾಮಂಟಪದಲ್ಲಿ ಆನಂದದಿಂದ ತಿರುಗಾಡುವಾಗ ಪ್ರತಿಕಾಮನಂತೆ ತೋರುತ್ತಿದ್ದರು. ಬಂದೋಬಸ್ತಿಗಾಗಿ ಎಷ್ಟೋಜನರು ಪೋಲೀಸರು ಬಂದಿದ್ದರು. ರಾ.ಸಾ||ರುದ್ರಗೌಡರು ಹಸ್ತಾಲಂಕೃತವಾದ ಒಂದು ಸಣ್ಣ ಬೆತ್ತದ ಛಡಿಯು ಸಂಜ್ಞೆಯಂತೆ ಅಗಣಿತವಾದ ಜನಸಮೂಹವೆಲ್ಲ ವರ್ತಿಸುತ್ತಿತ್ತು. ಛಡಿಯ ಮೇಲೇಳಲು ಸರ್ವಜನರು ಏಳುತ್ತಿದ್ದರು. ಕೆಳಗಿಳಿಯಲು ಎಲ್ಲರೂ ಕೂಡ್ರುತ್ತಿದ್ದರು. ವ್ಯವಸ್ಥೆಯು ಇವರ ಹೃದಯದಲ್ಲಿ ಮನೆಮಾಡಿಕೊಂಡಿತ್ತು. ಯುಕ್ತಿಹೀನನೂ, ಚತುರೋಪಾಯ ರಹಿತನೂ, ವ್ಯವಸ್ಥಾಶೂನ್ಯನೂ ಆದ ಫೌಜದಾರನ ಕಯ್ಯೊಳಗಿರುವ, ಬಾರಮಾಡಲ್ಪಟ್ಟ ಬಂದೂಕಿನಕಿಂತ ರಾಜ್ಯಕಾರ್ಯ ಧುರಂಧರ ಕಯ್ಯೊಳಗಿರುವ ಕಿರಿಬಡಿಗೆಯ ಮಹತ್ವವೂ, ಕಾರ್ಯಶಕ್ತಿಯೂ ಹೆಚ್ಚೆಂದು ಹೇಳಬಹುದು. ರಾವಸಾಹೇಬರವರ ಕಯ್ಯೊಳಗಿನ ಬೆತ್ತವು ಸಾವಿರಾರು ಪೋಲೀಸರ ಕರ್ತವ್ಯವನ್ನು ಶ್ರಮವಿಲ್ಲದೆ ಮಾಡುತ್ತಿತ್ತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಅಂದರೆ ಇವರಲ್ಲಿ ಅಷ್ಟು ಆಳಿಕೆಯ ಸಾಮರ್ಥ್ಯವೂ, ದರ್ಪವೂ ಇತ್ತೆಂಬದೇ ಮುಖ್ಯೋದ್ದೇಶವು. ನಿಜವಾದ ರಾಜಪ್ರಭೆಯು ಈ ಪ್ರಕಾರವಿರುವದು. ಸಾರಾಂಶ: ಸಕಲವೈಭವದಿಂದ ಕೂಡಿದ ಈ ಮನ್ಮಥನ ಮಂಟಪವನ್ನೂ, ಅವಿರಳವಾದ ಉತ್ಸವ ಪರಂಪರೆಯನ್ನೂ ನೋಡಿ, ಮಾಧವನು ಸ್ವರ್ಗದಕಿಂತಲೂ ಇಲ್ಲಿ ಸಡಗರ ಬಹಳಾಯಿತೆಂದು ತನ್ನ ಪುತ್ರನ ಉತ್ಸವವನ್ನು ನೋಡುವದಕ್ಕಾಗಿ ವೈಕುಂಠವನ್ನೇ ತಂದಿಳಿಸಿದಂತೆ, ಸರ್ವೋತ್ಸವಗಳಿಂದ ಕೂಡಿದ ಈ ಮಂಟಪವು ದಿವ್ಯವಾಗಿ ತೋರುತ್ತಿತ್ತು.

ಅನ್ನಸಂತೃಪ್ತಿ

ದೊಡ್ಡ ದೊಡ್ಡ ಜನರನ್ನು ಪರಿಪರಿಯ ಮೃಷ್ಟಾನ್ನದ ಮೇಜವಾನಿಗಳಿಂದ ಯಾರಾದರೂ ತೃಪ್ತಿಗೊಳಿಸುತ್ತಿರುತ್ತಾರೆ. ಬಡಜನರನ್ನು ಯಾರೂ ಲೆಕ್ಕಿಸುವದಿಲ್ಲೆಂದು ತಿಳಿದು ದಯಾಳುಗಳಾದ ರಾ.ಸಾ||ರುದ್ರಗೌಡ ದೊರೆಗಳು, ಉತ್ಸವವನ್ನು ನೋಡಬಂದಿದ್ದ ಎಲ್ಲಜನರ ಊಟಕ್ಕಾಗಿ ಪರಿಪರಿಯ ಪಕ್ವಾನ್ನಗಳನ್ನು ಬಹುವ್ಯವಸ್ಥೆಯಿಂದ ಮಾಡಿಸಿದ್ದರು. ಪ್ರತಿಯೊಂದು ಕೆಲಸದಲ್ಲಿ ಇವರ ವ್ಯವಸ್ಥೆ ಬಹಳ. ಉತ್ಸವಕ್ಕಾಗಿ ತಂತಮ್ಮ ಬಂಧುಬಳಗ ಆಪ್ತೇಷ್ಟ ಜನರನ್ನೆಲ್ಲ ಮೊದಲೇ ಕರಿಸಿಕೊಂಡಿದ್ದರು. ಮತ್ತು ತಮ್ಮ ಹಿರಿಯರ ಕಾಲದಿಂದಲೂ ಋಣಾನುಬಂಧಸ್ಥರಾದ ಸವನೂರ ನವಾಬರ ಮನೆಯವರನ್ನು ಕರಿಸಿದ್ದರು. ಕುಶಲಮತಿಗಳಾದ ಸೌ||ತಾಯವ್ವನವರೂ, ಗುರುಪಾದವ್ವನವರೂ, ರಾವಸಾಹೇಬರವರ ಸಹೋದರಿಯವರಾದ ವೀರವ್ವನವರೂ ಪರಿಪರಿಯ ಪಕ್ವಾನ್ನಗಳನ್ನು ಮಾಡುವದರಲ್ಲಿ ಪ್ರವೀಣೆಯರು ಹಾಗೂ ಬೇಕಾದ ಅಡಿಗೆಗಳನ್ನು ಬೇಡಿದಾಗ ಮಾಡಿಕೊಡುವಂಥ ಜಾಣೆಯರು. ಇಂಥ ಪಕ್ವಾನ್ನವು ನಮಗೆ ಮಾಡಲಿಕ್ಕೆ ಬರುವದಿಲ್ಲೆಂದು ಅನ್ನಿಸಿಕೊಳ್ಳುವವರಲ್ಲ. ಯಜಮಾನರಂತೆ ಇವರದಾದರೂ ಕೆಲಸದಲ್ಲಿ ವ್ಯವಸ್ಥೆ ಬಹಳ. "ಗುರುವಿನಂತೆ ಶಿಷ್ಯ" ಎಂಬಂತೆ ಮನೆಯ ಯಜಮಾನರಂತೆ ಮನೆಮಂದಿಯ ಸ್ಥಿತಿಗತಿಯೆಲ್ಲ ಇರುತ್ತದೆ. ಬಹುಶಃ ಹಿರಿಯರ ಅನುಕರಣವನ್ನೇ ಕಿರಿಯರು ಮಾಡುತ್ತಾರೆ.

ಎಲ್ಲಕ್ಕೂ ಮೊದಲು ಬೇಕಾದ ಸಾಮಾನುಗಳನ್ನು ಬಹಳವಾಗಿ ತರಿತರಿಸಿ, ಒಂದು ಉಗ್ರಾಣವನ್ನು ನಿರ್ಮಿಸಿ, ಅದಕ್ಕೆ ಬೇರೆ ಬೇರೆ ವ್ಯವಸ್ಥಾಪಕರನ್ನು ನಿಯಮಿಸಿದರು. ಆ ಉಗ್ರಾಣವು ಒಂದು ದೊಡ್ಡ ಕಿರಾಣಿ ಅಂಗಡಿಯ ಸ್ವರೂಪವನ್ನೇ ಹೊಂದಿತ್ತು. ಸರ್ವಸಾಮಗ್ರಿಗಳನ್ನು ತರಿಸಿದ್ದಲ್ಲದೆ ಬೇಕಾದ ಕೆಲಸಕ್ಕೆ ಅಡ್ಡಿಯಾಗಬಾರದೆಂದು ಔಷಧಗಳನ್ನೂ, ಸೂಜಿ ದಬ್ಬಣ ಮೊದಲಾದವುಗಳನ್ನು ಸಹ ಆ ಉಗ್ರಾಣದಲ್ಲಿ ತಂದಿಟ್ಟಿದ್ದರು. ಇದರಿಂದ ರಾ.ಸಾ||ರುದ್ರಗೌಡರ ಪೂರ್ವಸಿದ್ಧತೆಯು ಎಷ್ಟು ವಿಚಾರದ್ದು ಮತ್ತು ಎಷ್ಟು ಮಹತ್ವದ್ದು ಇತ್ತೆಂಬದು ತಿಳಿಯುತ್ತದೆ. ಮೊದಲು ಬುಂದೇ, ಬೇಸನ, ದಳಿ, ಮೋತೀಚೂರ, ಗುಳಿಗಿಲಡ್ಡಿಕೆ ಮೊದಲಾದ ಉಂಡಿಗಳನ್ನೂ, ಸುರಳೀಹೋಳಿಗೆ, ಕರಚೀಕಾಯಿ, ಚಿರೋಟಿ ಮೊದಲಾದ ಪರಮಾನ್ನಗಳನ್ನೂ ಮಾಡಿಸಿ, ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿ ತುಂಬಿಸಿದರು. ಅಗಣಿತವಾದ ಮಾಲ್ದಿಯ ರಾಸಿಯನ್ನೇ ಮಾಡಿಸಿ, ಹೊಸ ಚಾಪೆಯ ಕಣಜಗಳಲ್ಲಿ ಹಾಕಿಸಿದರು. ನೋಡಲಿಕ್ಕೆ ಬಂದ ಕಾಡುಜನರ ನ್ಯಾರಿಯ ಊಟಕ್ಕಾಗಿ ಅಸಂಖ್ಯ ರೊಟ್ಟಿಗಳನ್ನು ಮಾಡಿಸಿ ಕಣಜಗಳಲ್ಲಿ ತುಂಬಿಸಿದರು. ಮಾವು, ಮಾಗಣಿ, ಅಂಬೀಹಳದಿ, ಲಿಂಬೆ, ಕವಳಿ, ಕಂಚಿ, ಮೆಣಸು, ಹುಣಸಿ, ಯಾಲಕ್ಕಿ, ಅರಮಾನಿ ಹರಳು ಮೊದಲಾದ ಅನೇಕ ತರದ ಉಪ್ಪಿನಕಾಯಿಗಳನ್ನು ಮುಂದಾಗಿಯೇ ಹಾಕಿಸಿದ್ದರು. ಹಲವು ಬಗೆಯ ಹಪ್ಪಳ ಸಂಡಿಗೆಗಳ ಗಳಿಗೆಗಳನ್ನು ತುಂಬಿದ್ದರು. ಹಾಲು, ಮೊಸರು, ಬೆಣ್ಣೆ, ತುಪ್ಪ, ತಕ್ರ ಮುಂತಾದ ಪಂಚಾಮೃತಗಳು ಆಗಿಂದಾಗ್ಗೆ ಬರುವಂತೆ ಸುವ್ಯವಸ್ಥೆಯನ್ನಿಟ್ಟಿದ್ದರು (ಹತ್ತು ಎಮ್ಮೆಗಳನ್ನು ತರಿಸಿದ್ದರು). ಉತ್ಸವದ ದಿವಸ ಹೋಳಿಗೆ, ಪಾಯಸ, ಕಡಬು, ವಡಿ, ಗಾರಿಗೆ, ಚಕ್ಕುಲಿ ಮೊದಲಾದ ಪಕ್ವಾನ್ನಗಳನ್ನೂ, ಕೇಶರಭಾತ, ವಾಂಗೇಭಾತ ಮೊದಲಾದ ಮೃಷ್ಟಾನ್ನಗಳನ್ನೂ, ಉತ್ತಮವಾದ ನೆಲ್ಲಕ್ಕಿಯ ಅನ್ನವನ್ನೂ, ತರತರ ಕಾಯಿಪಲ್ಲೆಗಳನ್ನೂ ಮಾಡಿಸಿ, ಪ್ರತಿದಿವಸ ನಾಲ್ಕೈದು ಸಾವಿರ ಜನರನ್ನು ಭೋಜನದಿಂದ ಸಂತೃಪ್ತಿಪಡಿಸುತ್ತಿದ್ದರು. ಬೇಡಿದ ಜನರಿಗೆ ಭಿನ್ನಭಾವವಿಲ್ಲದೆ ಬೇಕಾದ ಪಕ್ವಾನ್ನಗಳನ್ನು ನೀಡಿಸುತ್ತಿದ್ದರು. ಅನ್ನಾರ್ಥಿಗಳಿಗೆ ಮುಕ್ತದ್ವಾರವಾಗಿ ನೀಡಲ್ಪಡುತ್ತಿತ್ತು. ಒಂದೊಂದು ಪಂಕ್ತಿಗೆ ಸಾವಿರಜನರ ಊಟವಾಗುತ್ತಿತ್ತು. ಪಂಕ್ತಿ ನಡೆದಾಗ ರಾವಸಾಹೇಬರು ಅಡ್ಡಾಡಿ ಯಾರಿಗೂ ಕೊರತೆ ಮಾಡಬೇಡಿರೆಂದು, ನೀಡುವ ಜನರಿಗೆ ಆಗಾಗ್ಗೆ ಎಚ್ಚರಕೊಡುತ್ತಿದ್ದರು. ಊಟಾದೊಡನೆ ತಾಂಬೂಲವನ್ನು ಕೊಡಲಿಕ್ಕೆ ವ್ಯವಸ್ಥಾಪಕರು ಸಿದ್ಧವಾಗಿಯೇ ನಿಂತಿದ್ದರು.

ಪ್ರತಿದಿವಸ ಮುಂಜಾನೆ, ಒಂದು ತಾಸು ಹೊತ್ತೇರಿದ ಕೂಡಲೆ ಹೆಗ್ಗಾಳಿಯನ್ನು ಹಿಡಿಸಿ, ಬಿಗಿಲ್ ಮಾಡಿಸುವರು. ಬಿಗಿಲಾದ ಕೂಡಲೆ ಹಾಡುವ, ಉದುವ, ಬಾರಿಸುವ, ದುಡಿಯುವ ಜನರೆಲ್ಲರು ಮತ್ತು ನೋಡಲಿಕ್ಕೆ ಬಂದಿದ್ದ ಸುತ್ತ ಹಳ್ಳಿಗಳ ಜನರೆಲ್ಲರು ನ್ಯಾರಿಯ ಊಟಕ್ಕೆ ಹೋಗಲಿಕ್ಕೆ ಬೇಕು. ಈ ಮೇರೆಗೆ ಎಂಟುದಿವಸ ಏಕಪ್ರಕಾರ ಉತ್ಸವದಿಂದಲೂ, ಊಟ ಉಪಚಾರದಿಂದಲೂ ಬಂದ ಯಾವತ್ತೂ ಜನರನ್ನು ಸಂತೃಪ್ತಿಪಡಿಸಿದರು. ಕಡೆಯ ದಿವಸ ಮಹಾಪ್ರಸ್ಥವನ್ನು ಮಾಡಿ, ಊರೊಳಗಿನ ಎಲ್ಲ ಜನರನ್ನೂ, ನೆರೆಹಳ್ಳಿಗಳ ಜನರನ್ನೂ ತೃಪ್ತಿಪಡಿಸಿದರು. ಒಟ್ಟು ಈ ಉತ್ಸವದಲ್ಲಿ ಅಯ್ವತ್ತು (೫೦೦೦೦)ಸಾವಿರ ಭೋಜನವಾಯಿತೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ. ಉತ್ಸವವನ್ನು ನೋಡಬಂದ ದೊಡ್ಡ ದೊಡ್ಡ ಜನರು "ಮಾಡಬಹುದು! ಉತ್ಸವವನ್ನು ಮಾಡಬಹುದು" ಎಂದು ಆಗಾಗ್ಗೆ ಉಚ್ಚರಿಸುತ್ತಿದ್ದರು. ಎಲ್ಲ ಜನರು ಉಂಡುಟ್ಟು ಉತ್ಸವವನ್ನು ನೋಡಿ, ಚೆನ್ನವೀರಗೌಡರ ಹೊಟ್ಟೆಯಿಂದ "ಇವರು ಹುಟ್ಟಬಹುದು" ಎಂದು ಹಾಡಿ ಹರಿಸಿ ಹೋಗುತ್ತಿದ್ದರು. ಇಷ್ಟು ವೈಭವದಿಂದ ನಮ್ಮ ನಾಡಿನಲ್ಲಿ ಕಾಮನನ್ನು ಯಾರೂ ಕೂಡ್ರಿಸಲಿಲ್ಲೆಂದೂ, ಇಂಥ ಉತ್ಸವವನ್ನು ಯಾರೂ ಮಾಡಲಿಲ್ಲವೆಂದೂ, ಊಟ ಉಪಚಾರದ ವ್ಯವಸ್ಥೆಯು ಇಷ್ಟು ಅಚ್ಚುಕಟ್ಟಾಗಿ ಎಲ್ಲಿಯೂ ಆಗಲಿಕ್ಕಿಲ್ಲೆಂದೂ, ಇಷ್ಟು ವ್ಯವಸ್ಥೆ ಮತ್ತು ಸಿದ್ಧತೆಯುಳ್ಳವರನ್ನು ನಾವು ಎಲ್ಲಿಯೂ ನೋಡಲಿಲ್ಲೆಂದ ಬಹುಜನರು ಕೊಂಡಾಡಿದರು.

ಈಉತ್ಸವದ ಅಡಗೆಯ ಕೆಲಸದಲ್ಲಿ ಅರಟಾಳದ ಕುಂಬಾರ ಬಸಪ್ಪ ಮತ್ತು ಚೆನ್ನಬಸಪ್ಪ ಎಂಬವರಿದ್ದರು; ಬಹಳೇ ಸಹಾಯಮಾಡಿದರು. ಇವರಿಬ್ಬರು ಅಡಿಗೆಯಲ್ಲಿ ಹೆಸರಾಗಿದ್ದರು. ಮತ್ತು ಇವರು ತಮ್ಮ ಕುಂಬಾರಿಕಿಯ ಕಸಬಿನಲ್ಲಿಯೂ ಒಳ್ಳೇ ಪ್ರಸಿದ್ಧಿಯನ್ನು ಹೊಂದಿದ್ದರು. ಮಣ್ಣಿನಿಂದ ಗೆಜ್ಜೆಯನ್ನು ಮಾಡಿ ಸುಟ್ಟು ಆ ಗೆಜ್ಜೆಯನ್ನು ನುಡಿಸುತ್ತಿದ್ದರು. ಮಣ್ಣಿನೊಡವೆಗಳನ್ನು ಮಾಡುವದರಲ್ಲಿ ಅರಟಾಳದ ಕುಂಬಾರರು ಹೆಸರಾಗಿರುವರು. ಈ ಇಬ್ಬರೂ ಕುಂಬಾರರಿಗೆ ರಾ.ಸಾ||ರುದ್ರಗೌಡರು ಬೆಳ್ಳಿಯ ಚೌಕಗಳನ್ನು ಮಾಡಿಸಿಕೊಟ್ಟರು. ಮತ್ತು ಉತ್ಸವದ ಸರ್ವಕೆಲಸಗಳಿಗೆ, ಸಹಾಯ ಮಾಡಿದ ಎಷ್ಟೋ ಜನರಿಗೆ ಉಚಿತಗಳನ್ನು ಕೊಟ್ಟು ತೃಪ್ತಿಪಡಿಸಿದರು.

❖❖

೭ನೇ ಭಾಗ

ರಾ.ಸಾ॥ರುದ್ರಗೌಡರು ಕಾರವಾರ ಜಿಲ್ಲೆಯ ದಪ್ತರದಾರರಾದದ್ದು

ಈ ಅಪೂರ್ವ ಸಮಾರಂಭವನ್ನು ಮಾಡಿ ರಾ.ಸಾ॥ ರುದ್ರಗೌಡರು ಧನ್ಯರಾಗಿ, ಧಾರವಾಡಕ್ಕೆ ಬಂದರು. ಮುಂದೆ ಇವರಿಗೆ ಸನ್ ೧೮೮೮ನೇ ಜೂನ ತಿಂಗಳಲ್ಲಿ ಕಾರವಾರ ಜಿಲ್ಲೆಯ ಮೆ॥ಕಲೇಕ್ಟರ ಸಾಹೇಬ ಬಹದ್ದೂರವರ ಕಚೇರಿಯ ದಪ್ತರದಾರ ಜಾಗೆಗೆ ಮುನ್ನೂರು (೩೦೦)ರೂಪಾಯಿ ಪಗಾರದ ಮೇಲೆ ವರ್ಗವಾಯಿತು. ಹುಕುಮು ನಂಬರ ೪೯೭೪/೨೫-೬-೧೮೮೮ ಮುಲಿಕೀ ಖಾತೆ. ಅಂದರೆ ಅದೇ ತಿಂಗಳಲ್ಲಿ ಮೆ॥ಕ್ರಾಫರ್ಡಸಾಹೇಬರವರ ಮೇಲೆ ಲಂಚ ತೆಗೆದುಕೊಂಡ ಆರೋಪ ಬಂದು, ಅದರ ತಪಾಸವು ನಡೆದಿತ್ತು. ದಕ್ಷಿಣ ಮತ್ತು ಮಧ್ಯ ಭಾಗದಲ್ಲಿ ಅಪಾರವಾದ ದ್ರವ್ಯವನ್ನು ತಿಂದಿದ್ದ ಇವರ ಹುಳುಕೆಲ್ಲ ಹೊರಬಿದ್ದು, ಬೊಂಬಾಯಿಯ ಬಾಗಿಲತನಕ ಬೊಬ್ಬಾಟವೆದ್ದಿತು. ಕೂಡಲೆ ಸರಕಾರದವರು ಗಡಿಬಿಡಿಯಿಂದ ಅದರ ಶೋಧ ನಡಿಸಿದ್ದರು. ಕ್ರಾಫರ್ಡ ಪ್ರಕರಣದ ಮಾಹಿತಿಯನ್ನು ಕಳಿಸಿಕೊಡಬೇಕಾಗಿ ಮೇಲಸರಕಾರದಿಂದ ಕೆಳಗಿನ ಕಚೇರಿಯ ಆಫೀಸರರಿಗೆಲ್ಲ ಹುಕುಮು ಆಗಿತ್ತು. ಕಾರಣ ಆದಷ್ಟು ತೀವ್ರವಾಗಿ ಮಾಹಿತಿಯನ್ನು ಕೊಡಬೇಕಾಗಿತ್ತು. ರಾ.ಸಾ॥ರುದ್ರಗೌಡ ಚೀಟ್ನಿಸರು ಬಹಳ ದಿವಸ ಇದೇ ಕಚೇರಿಯಲ್ಲಿ ಕೆಲಸಮಾಡಿದವರೆಂದೂ; ದಕ್ಷಿಣಭಾಗದ ಎಲ್ಲ ಮಾಹಿತಿಯು ಇವರಿಗೆ ಚೆನ್ನಾಗಿ ಇರುವದೆಂದೂ, ಇವರಷ್ಟು ಸಾದ್ಯಂತವಾದ ಸಂಗತಿಯು ಯಾರಿಗೂ ಗೊತ್ತಾಗುವದಿಲ್ಲೆಂದೂ, ಇವರು ಇಂಥ ಶೋಧವನ್ನು ಮಾಡಲಿಕ್ಕೆ ಚಾಣಾಕ್ಷರೂ, ಧೂರ್ತರೆಂತಲೂ ತಿಳಿದು ಸರಕಾರದವರು ಕ್ರಾಫರ್ಡಶಾಹಿಯ ಶೋಧವನ್ನು ಮಾಡಲಿಕ್ಕೆ ಚಾಣಾಕ್ಷರೂ, ಧೂರ್ತರೆಂತಲೂ ತಿಳಿದು ಸರಕಾರದವರು ಕ್ರಾಫರ್ಡಶಾಹಿಯ ಶೋಧವನ್ನು ಮಾಡಲಿಕ್ಕೂ, ಸಾಗ್ರ ಸಂಗತಿಯನ್ನು ತಿಳಿಸುವದಕ್ಕೂ ಕೆಲವು ದಿವಸಗಳ ವರೆಗೆ ಇವರನ್ನು ಧಾರವಾಡದಲ್ಲಿ ಸ್ಪೆಶಲ್ ಡ್ಯುಟಿಯ ಮೇಲೆಯೇ ಇಟ್ಟರು.

ಹೆಬ್ಬುಲಿಯ ಬೊಬ್ಬೆ

ಕಾಡುಮೃಗಗಳ ರಕ್ತವನ್ನು ಯಥೇಚ್ಛವಾಗಿ ಕುಡಿಕುಡಿದು ತೃಪ್ತವಾಗದೆ, ವಿನೋದಕ್ಕಾಗಿ ಕೈಗೆ ಸಿಕ್ಕ ಹರಿಣಗಳನ್ನು ಮುರಿದೊಗೆಯುತ್ತ ಮದೋನ್ಮತ್ತವಾಗಿ, ಕಾನನದಲ್ಲಿ ಚಿಕ್ಕಂದದಿಂದ ಉಡ್ಡಾಣಗೆಯ್ಯುತ್ತಿರುವಾಗ ಆಕಸ್ಮಾತ್ ವ್ಯಾಧಜಾಲದಲ್ಲಿ ಬಿದ್ದು, ಬಳಲಾಡುವ ಕ್ರೂರವಾದ ಹೆಬ್ಬುಲಿಯಂತೆ ಮೆ॥ಕ್ರಾಫರ್ಡ ಸಾಹೇಬ ಬಹದ್ದೂರವರು ಲಂಚದ ಪ್ರಕರಣದಲ್ಲಿ ಸಿಕ್ಕು ಗಡಬಡಿಸಹತ್ತಿದರು. ಇವರ ಆರೋಪದ ಶೋಧವು

ದೂರದೃಷ್ಟಿಗಳೂ, ಚಾಣಾಕ್ಷರೂ ಆದ ರಾ.ಬ॥ಗುರುಸಿದ್ಧಪ್ಪನವರಿಂದಲೂ ರಾ.ಸಾ॥ ರುದ್ರಗೌಡರವರಿಂದಲೂ ಆಗಹತ್ತಿತೆಂದರೆ ಕ್ರಾಫರ್ಡಸಾಹೇಬ ಬಹದ್ದೂರವರ ಆಯುರ್ದಾಯ ತುಂಬಿತೆಂದು ನಿಕ್ಷುಣ್ಣವಾಗಿ ಹೇಳಬಹುದು. ಕ್ರಾಫರ್ಡಸಾಹೇಬ ಬಹದ್ದೂರವರ ಕೃಷ್ಣಕಾರಸ್ಥಾನಗಳೆಲ್ಲ ರಾ.ಸಾ॥ರುದ್ರಗೌಡರವರಿಗೆ ಗೊತ್ತೇ ಇದ್ದವು. ಆದರ ಪ್ರಸಂಗವು ಈಗ ಬಂತು. ಅದರಿಂದ ಸಣ್ಣ ಹುಡುಗರ ಕಯ್ಯಲ್ಲಿ ಹಣ್ಣು ಸಿಕ್ಕಂತಾಯಿತು. ಮೆ॥ಕ್ರಾಫರ್ಡ ಸಾಹೇಬರವರ ಕಪಟವ್ಯಾಪಾರಗಳೆಲ್ಲ ಗೊತ್ತು ಆಗಿ, ಆಗಿ ಸತ್ಯಸಂಗತಿಯು ಸಾದ್ಯಂತವಾಗಿ ಬರೆಬರೆದು ಹೋಗಹತ್ತಿತು. ಇದರಂತೆ ನಾಲ್ಕೂ ಕಡೆಯಿಂದ ಶೋಧವಾಗಹತ್ತಿತು. ಯಾವ ಸಣ್ಣ ಸಣ್ಣ ಅಧಿಕಾರಗಳನ್ನು ಮೆ॥ಕ್ರಾಫರ್ಡ ಸಾಹೇಬರು ಧಿಕ್ಕರಿಸಿ ದೂರನೋಡುತ್ತಿದ್ದರೋ, ಅವರಿಗೆ ತಾವೇ ಹೆದರಬೇಕಾಯಿತು. ಯಾರಿಗೆ ತಾವು ಯಮನಂತೆ ಕಾಣುತ್ತಿದ್ದರೋ, ಅವರೇ ಇವರಿಗೆ ಈಗ ಯಮನಂತೆ ಕಾಣಹತ್ತಿದರು. ನೂರು ವರ್ಷ ತುಂಬಿದ ಮೇಲೆ ಯಾರೇನು ಮಾಡುವದು? ಕ್ರಾಫರ್ಡ ಸಾಹೇಬರವರು ವಿಶ್ವಪ್ರಯತ್ನಮಾಡಿದರೂ ವ್ಯರ್ಥವಾಯಿತು. "ದೈವಂ ತಾಂ ಮುಳಿಯಲ್ಕೆ ಸರ್ವಬಲಮಂ ವೈಯ್ಯರ್ಥಮಂ ಪೊಂದುಗುಂ"[೧] ಎಂಬಂತೆ ಇವರ ವಿಚಾರವಾಗಿ, ಹಿಂದುಸ್ತಾನ ಸರಕಾರದಲ್ಲಿ ಈ ಕ್ರಾಫರ್ಡ ಪ್ರಕರಣವು ಇಡೀ ಒಂದು ವರ್ಷದ ವರೆಗೆ ಚರ್ಚೆ ನಡೆದು, ಪ್ರತ್ಯಕ್ಷ ಪುರಾವೆಗಳು ದೊರೆಯದ್ದರಿಂದ ಅವರ ಮೇಲೆ ಲಂಚದ ಆರೋಪವು ಹೊರಲಿಲ್ಲ. ಕಡೆಗೆ ಈ ಕ್ರಾಫರ್ಡ ಸಾಹೇಬರು ದೇಶೀ ಜನರ ಹತ್ತಿರ ವಿಶೇಷ ಸಾಲ ಮಾಡಿರುತ್ತಾರೆಂಬ ಆರೋಪವನ್ನು ಅವರ ಮೇಲೆ ಹೊರಿಸಿ, ಸ್ಟೇಟ ಸೆಕ್ರೆಟರಿ ಆಫ್ ಇಂಡಿಯಾ ಸರಕಾರದವರು ಸನ್ ೧೮೮೯ನೇ ಇಸವಿಯ ಮಾರ್ಚ ತಿಂಗಳಲ್ಲಿ ಅವರನ್ನು ಬರತರ್ಫ ಮಾಡಿದರು.

ಮೆ॥ಕ್ರಾಫರ್ಡ ಸಾಹೇಬರ ಬರತರ್ಫದಿಂದ ಜನರಲ್ಲಿ ಶಾಂತತೆಯುಂಟಾಯಿತು. ಲಂಚಕೊಟ್ಟು ಕೊಟ್ಟು ರಾಜ್ಯಕಾರ್ಯದಲ್ಲಿ ಮೇಲಕ್ಕೇರಿಹೋಗಿದ್ದ ಮಂದಮತಿಗಳೆಷ್ಟೋ ಜನರು ಕೆಳಗಿಳಿಸಲ್ಪಟ್ಟರು. ಕೆಲವು ಜನರು ಕೆಲಸದಿಂದ ದೂರಾದರು. ಕೆಲವರು ಕಾರಾಗೃಹವಾಸಿಗಳಾದರು. ಅನ್ಯಾಯದಿಂದ ಕೈಬಿಟ್ಟು ಹೋಗಿದ್ದ ವತನ ವೃತ್ತಿಗಳು, ನ್ಯಾಯಮಾರ್ಗದಿಂದ ಪುನಃ ಅವರವರಿಗೆ ದೊರೆತವು. ಸಜ್ಜನರಿಗೆ ನ್ಯಾಯಪಥವು ಹತ್ತಿತು. ದುಷ್ಟರ ಕಪಟೋಪಾಯಗಳು ಎಷ್ಟೋಮಟ್ಟಿಗೆ ಕಟ್ಟಾದವು. ಎಷ್ಟೋ ಮದಾಂಧ ಕಾಮದಾರರ ಗರ್ವಭಂಗವಾಯಿತು. ಅವರ ಕಪಟ ತಂತ್ರದ ಸುಖವೂ, ಮೆರವಣಿಗೆಯೂ ಪ್ರಾತಿಭಾಸಿಕವಾದವು. ಎಲ್ಲ ಅಧಿಕಾರಿಗಳಲ್ಲಿ ಲಂಚದ ಭೀತಿಯು ಉತ್ಪನ್ನವಾಯಿತು. ಸಾರಾಂಶ: ಸಹಿಸಲಸದಳವಾದ ಉಪಟಳವನ್ನು ನಡಿಸಿದ ಹೆಬ್ಬುಲಿಯ ಕೊಲೆಯಾದಂತಾಯಿತು. ಕ್ರಾಫರ್ಡಪ್ರಕರಣದ ಶೋಧದ ಬಗ್ಗೆ ಸರಕಾರದವರು ಒಂದು ಸ್ಪೆಶಲ್ ಡ್ಯೂಟಿಯನ್ನೇ ನೇಮಿಸಿದ್ದರೆಂದು ಹಿಂದೆ ಹೇಳಿರುತ್ತದಷ್ಟೇ ಈ ಡ್ಯೂಟಿಯ ಮೇಲೆ ಹಿಂದೆ ಧಾರವಾಡ ಜಿಲ್ಲೆಯ ಕಲೇಕ್ಟರರಾಗಿದ್ದ ಮೆ॥ ಓಮಾನಿ ಸಾಹೇಬ ಬಹದ್ದೂರವರನ್ನು ಇನಸ್ಪೆಕ್ಟರ ಜನರಲ್ ಆಫ್ ಪೋಲಿಸರನ್ನಾಗಿ ನೇಮಿಸಿದ್ದರು. ಈ ಸಾಹೇಬ ಬಹದ್ದೂರವರು ತಮ್ಮ ರಿಪೋರ್ಟಿನಲ್ಲಿ ಈ ಕ್ರಾಫರ್ಡಪ್ರಕರಣದ ಮಾಹಿತಿಯು ಧಾರವಾಡ ಜಿಲ್ಲೆಯಿಂದ ದೊರೆತಷ್ಟು ಯಾವ ಜಿಲ್ಲೆಯಿಂದಲೂ ದೊರೆಯಲಿಲ್ಲವೆಂತಲೂ, ಈ ಕೆಲಸದಲ್ಲಿ ಧಾರವಾಡದ ಆಫೀಸರರಾದ ಸ್ಪೆನ್ಸ ಸಾಹೇಬರೂ ಮತ್ತು ಅವರ ಚೀಟ್ನಿಸರಾದ ರುದ್ರಗೌಡರೂ ಮಿತಿಮೀರಿ ಮೆಹನತ್ತು ಮಾಡಿದ್ದಾರೆಂತಲೂ ಶಿಫಾರಸಮಾಡಿ ಮುಂಬಯಿ ಸರಕಾರಕ್ಕೆ ತಿಳಿಸಿದರು. ಈ ಮಹತ್ತಾದ ಪ್ರಕರಣದ ಶೋಧದಿಂದ ಸರಕಾರದಲ್ಲಿ ಹಾಗೂ ಜನರಲ್ಲಿ ರಾ.ಸಾ॥ ರುದ್ರಗೌಡರ ಪ್ರಖ್ಯಾತಿಯು ಬಹಳವಾಯಿತು. ಈ ಕ್ರಾಫರ್ಡ ಪ್ರಕರಣದ ಮಾಹಿತಿಯನ್ನು ಕೊಡುವದರಲ್ಲಿ ನಮ್ಮ ಆಫೀಸಿನ ಚೀಟ್ನಿಸರಾದ ರುದ್ರಗೌಡರು ಅತಿಶಯವಾಗಿ ಸಹಾಯ ಮಾಡಿದರೆಂತಲೂ, ಇವರಷ್ಟು ಪ್ರಮಾಣಿಕ ಚೀಟ್ನಿಸರನ್ನು ನಾನಾದರೂ ಇನ್ನೂ ವರೆಗೆ ಎಲ್ಲಿಯೂ

ನೋಡಲಿಲ್ಲೆಂತಲೂ ಮೆ|| ಕಲೇಕ್ಟರ ಸಾಹೇಬ ಬಹದ್ದೂರವರು ಸರಕಾರಕ್ಕೆ ತಿಳಿಸಿದರು. ಕ್ರಾಫರ್ಡಸಾಹೇಬ ಬಹದ್ದೂರವರಿಗೆ ಬರತರ್ಫವಾದ ಮೇಲೇ, ಕೂಡಲೆ, ಹಿಂದೆ ಧಾರವಾಡ ಜಿಲ್ಲೆಯ ಕಲೇಕ್ಟರರೂ, ನ್ಯಾಯನಿಷ್ಠರೂ, ರಾ.ಸಾ|| ರುದ್ರಗೌಡರ ಪ್ರೇಮಾನ್ವಿತರೂ ಆದ ಮೆ|| ಜೆ.ಆರ್. ಮಿಡಲ್ಟನ್ ಸಾಹೇಬ ಬಹದ್ದೂರವರೇ ದಕ್ಷಿಣ ಭಾಗದ ಆಕ್ಟಿಂಗ ಕಮಿಶನರರಾಗಿ ಬಂದರು. ರಾ.ಸಾ||ರುದ್ರಗೌಡರ ವರ್ಚಸ್ಸು ಬೆಳೆಯಿತು. ದುಷ್ಟಜನರಲ್ಲಿ ಇವರ ಹೆದರಿಕೆಯು ನೆಲೆಗೊಂಡಿತು.

ರಾ.ಬ||ರುದ್ರಗೌಡರು ಕಾರವಾರಕ್ಕೆ ಹೋದದ್ದು

ಈ ಕ್ರಾಫರ್ಡ ಪ್ರಕರಣದ ಮಾಹಿತಿಯನ್ನು ಕೊಡುವ ಕೆಲಸ ತೀರಿದ ಕೂಡಲೇ ರಾ.ಸಾ||ರುದ್ರಗೌಡರು ಸನ್ ೧೮೮೮ನೇ ಇಸವಿಯ ಡಿಶಂಬರ ತಿಂಗಳಲ್ಲಿ ಕಾರವಾರ ಜಿಲ್ಲೆಗೆ ದಪ್ತರದಾರರಾಗಿ ಹೋದರು. ಮೊದಲೇ ಇವರ ಪ್ರಮಾಣಿಕತನವನ್ನೂ, ಪ್ರಾಬಲ್ಯವನ್ನೂ, ಕೇಳಿದ್ದ ಕಾರವಾರದ ಜನರೆಲ್ಲರು ರಾ.ಸಾ||ರುದ್ರಗೌಡರೆಂಬವರು ಎಂಥವರಿರುವರೋ ಎಂದು ಇವರ ದರ್ಶನಾತುರರಾಗಿದ್ದರು. ಇವರು ಹೋದ ಕೂಡಲೆ ಇವರ ದಿವ್ಯದರ್ಶನಲಾಭವನ್ನು ಹೊಂದಿ ಸಂತುಷ್ಟರಾದರು. ಧಾರವಾಡದಂತೆ ಕಾರವಾರದಲ್ಲಿಯೂ ಇವರ ಕಾರಭಾರವು ಸುಸೂತ್ರವಾಗಿ ಸಾಗಿತು. ವರಿಷ್ಠರ ಹಾಗೂ ಸಜ್ಜನರ ಪ್ರೇಮವು ಇವರಲ್ಲಿ ಕೂಡಲೆ ಕೂತಿತು. ಆರಂಭದ ಕಾರ್ಯವು ಬಹುಗೌರವದಾದ್ದೆಂಬ ತತ್ವವು ಅಕ್ಷರಶಃ ನಿಜವಾಗಿರುತ್ತದೆ. ಪ್ರಥಮದಲ್ಲಿ ಪ್ರಖ್ಯಾತಿಯನ್ನು ಹೊಂದಿದ್ದು, ಕಡೆತನಕ ಸ್ಥಿರವಾಗಿ ನಿಲ್ಲುವದು.

ಎಲ್ಲಿ ಹೋದರೂ ಇವರು ಲಿಂಗಾಯತ ಫಂಡನ್ನು ಮರೆಯಲಿಲ್ಲ. ಕಾರವಾರ ಜಿಲ್ಲೆಯಲ್ಲಿಯೂ, ಲಿಂಗಾಯತ ಸಮಾಜದಲ್ಲಿ ಫಂಡಿನ ಉದ್ದೇಶವನ್ನು ತಿಳಿಸಿ, ಅಲ್ಲಿಯೂ ಫಂಡನ್ನು ಕೂಡಿಸಿ, ಧಾರವಾಡ ಕಲೇಕ್ಟರ ಆಫೀಸಿಗೆ ಕಳಿಸಿಕೊಟ್ಟರು. ಫಂಡಿಗೆ ಒತ್ತಾಯದಿಂದ ಒಂದು ಪೈ ಸಹ ವಸೂಲ ಮಾಡಲಿಲ್ಲ. ವಿದ್ಯಾಭಿಮಾನಿಗಳಾದ ವೀರಶೈವರು ಇವರನ್ನು ಕರಕೊಂಡು ಹೋಗಿ, ತಾಟು ತುಂಬಿ ಫಂಡಿಗಾಗಿ ರೂಪಾಯಿಗಳನ್ನು ಸಂತೋಷದಿಂದ ಕೊಡುತ್ತಿದ್ದರು. ಕಾರವಾರದಲ್ಲಿ ಸ್ವಲ್ಪ ದಿವಸವೇ ಇದ್ದರೂ ಬಹುಜನರ ಪ್ರೇಮವನ್ನು ಸಂಪಾದಿಸಿದರು. ರಾ.ಸಾ||ರುದ್ರಗೌಡರೆಂಬ ನಾಮಾಂಕಿತವು ಜಿಲ್ಲೆಯ ಎಲ್ಲೆಡೆಯಲ್ಲಿಯೂ ವ್ಯಾಪಿಸಿತು. ಅಲ್ಲಿಯೂ ಎಷ್ಟೋ ಮಂದಿ ಸಾವಕಾರರು, ಇವರಿಗೆ ಮೇಜವಾನಿಗಳನ್ನು ಮಾಡಿದರು. ತಾನು ನೆಟ್ಟಗಿದ್ದರೆ ಜಗತ್ತೆಲ್ಲ ನೆಟ್ಟಗೆಂದು ಜನರಾಡುವ ಮಾತು ಸುಳ್ಳೇನು? ಬಂಗಾರವು ಯಾರಿಗೆ ಬೇಡ? ರತ್ನವನ್ನು ಕತ್ತಲಲ್ಲಿಟ್ಟರೂ ತನ್ನ ಪ್ರಕಾಶವನ್ನು ತೋರಿಸುವದಲ್ಲವೆ? ಈ ಪ್ರಕಾರ ಅಲ್ಲಿ ಎಲ್ಲರಿಗೂ ಬೇಕಾಗಿ ಕೆಲಸವನ್ನು ಸರಿಯಾಗಿ ಮಾಡುತ್ತಿರಲು, ಅಲ್ಲಿಂದ ಸನ್ ೧೮೮೯ನೇ ಇಸವಿಯ ಜೂನ ತಿಂಗಳಲ್ಲಿ ಪುನಃ ಇವರಿಗೆ ಧಾರವಾಡ ಜಿಲ್ಲೆಯ ಚೀಟ್ನಿಸೀ ಕೆಲಸಕ್ಕೆ ವರ್ಗವಾಯಿತು.

ರಾ.ಬ||ರುದ್ರಗೌಡರು ಧಾರವಾಡ ಜಿಲ್ಲೆ ಆಕ್ಟಿಂಗ ಡಿ.ಡಿ||ಕಲೇಕ್ಟರರಾದದ್ದು

ಮೆ||ಮಿಡಲ್ಟನ್ ಸಾಹೇಬ ಬಹದ್ದೂರವರೂ ಮೆ||ಒಮಾನಿ, ಮೆ|| ಸ್ಪೆನ್ಸ ಮೊದಲಾದ ಸಾಹೇಬ ಬಹದ್ದೂರವರೂ ಮಾಡಿದ ಶಿಫಾರಸಿನ ಮೇಲಿಂದ ಸರಕಾರಕ್ಕೆ ಇವರ ರಾಜ್ಯ ಕರ್ತೃತ್ವಶಕ್ತಿಯು ಗೊತ್ತಾಗಿ

ರಾ.ಸಾ॥ರುದ್ರಗೌಡರವರನ್ನು ಧಾರವಾಡ ಜಿಲ್ಲೆಯ ಆಕ್ಟಿಂಗ್ ಡಿಸ್ಟ್ರಿಕ್ಟ್ ಡಿಪೂಟಿ ಕಲೇಕ್ಟರರನ್ನಾಗಿ ನೇಮಿಸಿದರು. ಅಂದಿನಿಂದ ರುದ್ರಗೌಡರಿಗೆ ರಾವಬಹದ್ದೂರ ಎಂಬ ಪದವಿಯು ತಾನಾಗಿ ದೊರೆಯಿತು. ರಾ.ಬ॥ರುದ್ರಗೌಡ ಸಾಹೇಬರಿಗೆ ಹಿಂದೆ ಚೀಟ್ನಿಸಿಯ ಜಾಗೆಯು ಕಾಹೀಮ ಸಿಕ್ಕು ಪುನಃ ರಹಿತವಾದದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಆ ಕಾಲಕ್ಕೆ ಕಲೇಕ್ಟರರಾಗಿದ್ದ ಮೆ॥ಜಾನ್ ಎಲ್ಫಿನಿಷ್ಟನ್ ಸಾಹೇಬ ಬಹದ್ದೂರವರು ಕುಲಾಬಾ ಜಿಲ್ಲೆಗೆ ವರ್ಗಾಗಿ ಹೋಗಿದ್ದರು. ಚೀಟ್ನಿಸಿಯ ರಹಿತದಿಂದ ರಾ.ಬ॥ರುದ್ರಗೌಡರವರಿಗಾದ ಮನಸ್ತಾಪವನ್ನು ಇವರ ಪರಮ ಸ್ನೇಹಿತರಾದ ರಾ.ಬ॥ಗಿಲಗಿಂಚಿ ಗುರುಸಿದ್ದಪ್ಪನವರು ಪತ್ರಬರೆದು ಮೆ॥ಎಲ್ಫಿನಿಷ್ಟನ್ ಸಾಹೇಬ ಬಹದ್ದೂರವರಿಗೆ ತಿಳಿಸಿದ್ದರು. ಆ ಪತ್ರಕ್ಕೆ ಅವರು ಉತ್ತರವನ್ನು ಬರೆದದ್ದೇನಂದರೆ "ಪ್ರಿಯ ಗುರುಸಿದ್ಧಪ್ಪನವರೇ, ಮಿಸ್ಟರ ರುದ್ರಗೌಡರವರ ಚೀಟ್ನಿಸಿಯು ರದ್ದಾದದ್ದು ನೋಡಿ ನಾನೂ ನಿಮ್ಮಂತೆ ದುಃಖಿತನಾಗಿದ್ದೇನೆ. ಕಾಹೀಮವಾದ ಚೀಟ್ನಿಸಿಯು ರದ್ದಾದದ್ದು ಆಶ್ಚರ್ಯವಾಗಿದೆ. ಆದರೆ ಇದು ಏನೋ ಒಂದು ಮುಂದಾಗುವ ಅವರ ಪದೋನ್ನತಿಯನ್ನು ಸೂಚಿಸುತ್ತದೆಂದು ನಾನು ತಿಳಿಯುತ್ತೇನೆ. ಸಕೃದ್ದರ್ಶನಕ್ಕೆ ಈ ಕೃತಿಯು ಅವನತಿಯೆಂದು ಪ್ರತ್ಯಕ್ಷವಾಗಿ ತೋರುತ್ತಿದ್ದಾಗ್ಯೂ, ಪ್ರಾಮಾಣಿಕರಾದ ರುದ್ರಗೌಡರಿಗೆ ಇದಕ್ಕೂ ಹೆಚ್ಚಿನ ಪದವಿಯು ಮುಂದೆ ನಿಶ್ಚಯವಾಗಿ ಸಿಗಬಹುದು. ಆದ ಅವನತಿಯ ಬಗ್ಗೆ ಎಷ್ಟು ಮಾತ್ರವೂ ವ್ಯಸನವನ್ನು ಹಚ್ಚಿಕೊಳ್ಳಬಾರದೆಂದೂ, ಸಿಟ್ಟಿಗೆದ್ದು ರಾಜೀನಾಮೆಯನ್ನು ಕೊಡುವ ಉದ್ಯೋಗ ಮಾಡಬಾರದೆಂದೂ, ಮಿಸ್ಟರ ರುದ್ರಗೌಡರವರಿಗೆ ನೀವು ಚೆನ್ನಾಗಿ ಹೇಳಿರಿ. ಮನೆಗೆ ದರೋಡೆಯವರು ಬಂದಾಗ್ಗೆ ಇದ್ದ ಆಯುಧವನ್ನು ತಕ್ಕೊಂಡು ಧೈರ್ಯತಾಳಿ ಶಕ್ತಿಯಿದ್ದಮಟ್ಟಿಗೆ ಅವರ ಕೂಡ ಹೋರಾಡಿ, ಅವರನ್ನು ಹೊರಗೆ ದೂಡಿ ತಮ್ಮ ಪಾಲಿಗೆ ಕೀರ್ತಿ ತೆಗೆದುಕೊಳ್ಳಬೇಕೋ ಅಥವಾ ಆ ದರೋಡೆಯವರನ್ನು ನೋಡಿದಾಕ್ಷಣವೆ ಅಂಜಿ, ಇದ್ದ ಜಿಂದಿಗಿಯನ್ನೆಲ್ಲ ಅವರ ಪಾಲಿಗಿಟ್ಟು ಮನೆಬಿಟ್ಟು ಓಡಿಹೋಗಿ ಹೇಡಿತನವನ್ನು ತಕ್ಕೊಳ್ಳಬೇಕೋ? ಇವರೆಡು ಪ್ರಶ್ನೆಗಳನ್ನು ನೀವು ಅವರಿಗೆ ಮಾಡಿ, ಯೋಗ್ಯವಾದದ್ದನ್ನು ಅಂಗೀಕಾರ ಮಾಡಲಿಕ್ಕೆ ಅವರಿಗೆ ತಿಳಿಸಬೇಕು. ಮತ್ತು ಸಮುದ್ರದಲ್ಲಿ ಅಗ್ಲಿಟೊಡವೆಂಬ ಹೆಸರಿನದೊಂದು ಕುರೂಪಿಯಾದ ಜಲಚರ ಪ್ರಾಣಿಯುಂಟು. ಅದರ ತಲೆಯಲ್ಲಿರುವ ರತ್ನದ ಆಶೆಗೆ ಅದನ್ನು ಹಿಡಯಲಿಕ್ಕೆ ಜನರು ಪ್ರಯತ್ನಿಸುತ್ತಿರುವಂತೆ, ಈಗಿರುವ ಅವರ ಸ್ಥಾನವು ಚಿಕ್ಕದೆಂದು ತಿರಸ್ಕರಿಸದೆ, ರೈತಜನರಿಗೆ ಹಿತಕರವಾದ ಆ ಸ್ಥಳವು ಉತ್ತಮವಾದದ್ದೆಂಬದಾಗಿ ಭಾವಿಸಿ, ತಮ್ಮ ಉದ್ಯೋಗದಲ್ಲಿ ತೊಡಗಬೇಕೆಂದು ಅವರಿಗೆ ತಿಳಿಸಿರಿ."ಈ ಪ್ರಕಾರ ಮೆ॥ಜಾನ್ ಎಲ್ಫಿನಿಷ್ಟನ್ ಸಾಹೇಬ ಬಹದ್ದೂರವರು ಧೂರ್ತ ವಿಚಾರದಿಂದ ಪತ್ರದಲ್ಲಿ ಬರೆದಂತೆಯೇ ರಾ.ಬ॥ರುದ್ರಗೌಡರವರಿಗೆ ಚೀಟ್ನಿಸಿಯಿಂದ ಒಮ್ಮಿಂದೊಮ್ಮೆ ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರ ಜಾಗೆಯು ದೊರೆಯಿತು. ದೊಡ್ಡವರ ವಿಚಾರಗಳೂ, ಊಹೆಗಳೂ ನಿಜವಾಗಿರುತ್ತವೆ. ಇದರಿಂದ ಸಾತ್ವಿಕರಾದ ಯುರೋಪಿಯನ್ ದೊಡ್ಡ ದೊಡ್ಡ ಅಧಿಕಾರಿಗಳಿಗೆ ರಾ.ಬ॥ ರುದ್ರಗೌಡರು ಎಷ್ಟು ಪ್ರಿಯಕರರಾಗಿದ್ದರೆಂಬದು ವ್ಯಕ್ತವಾಗುತ್ತದೆ.

ಮೆ॥ಕ್ರಾಫರ್ಡ ಸಾಹೇಬರವರು ಕೆಲಸದಿಂದ ದೂರಾಗಲು ಮೆ॥ಕಲೇಕ್ಟರ ಸಾಹೇಬ ಬಹದ್ದೂರ ಮೆ॥ಮಿಡಲ್ಟನ್ ಸಾಹೇಬ ಬಹದ್ದೂರವರೇ ದಕ್ಷಿಣಭಾಗಕ್ಕೆ ಆಕ್ಟಿಂಗ ಕಮೀಶನರರಾದ ಸಂಗತಿಯು ಹಿಂದೆ ಬರೆಯಲ್ಪಟ್ಟಿದೆ. ಇವರು ಹಿಂದೆ ಧಾರವಾಡ ಜಿಲ್ಲೆಯ ಕಲೇಕ್ಟರರಾಗಿದ್ದಾಗ, ಈ ಸಾಹೇಬ ಬಹದ್ದೂರವರಿಗೂ ರಾ.ಬ॥ರುದ್ರಗೌಡರವರಿಗೊ ಎಷ್ಟು ಪ್ರೇಮವು ವಿಶ್ವಾಸವೂ ಇತ್ತೆಂಬದು ವಾಚಕರಿಗೆ ಗೊತ್ತೇ ಇದೆ. ಇವರು ಕಮಿಶನರ ಜಾಗೆಯು ಚಾರ್ಜ ತೆಗೆದುಕೊಂಡ ದಿವಸವೇ ರಾ.ಬ॥ರುದ್ರಗೌಡರವರಿಗೆ ಪ್ರೇಮದರ್ಶಕವಾದ

ಪತ್ರ ಬರೆದರು. ಅರಟಾಳ ಸಾಹೇಬರವರ ಪುಣ್ಯವು ಎಷ್ಟು ಘನವಾದದ್ದು. ಒಡ್ಡಿಬರುವ ಮಹತ್ತರವಾದ ಮೇಘಸಮೂಹವನ್ನು ಪ್ರಚಂಡವಾಯುವು ಹೊಡೆದು ಹಾಕುವಂತೆ, ಇವರಿಗೆ ಕೆಲಸದಲ್ಲಿ ಅವಿಚ್ಛಿನ್ನವಾಗಿ ಅಡರಿಬರುವ ಎಡರುಗಳನ್ನು ಇವರ ಪುಣ್ಯವಾಯು ತಡವಿಲ್ಲದೆ ಜಡಿದೋಡಿಸಹತ್ತಿತು. ಇವರಿಗೆ ಎಷ್ಟು ಅಪರಿಹಾರ್ಯವಾದ ಆತಂಕಗಳು ಬಂದರೂ ಇವರ ಅಭಿವೃದ್ಧಿಯೇ ಆಗಹತ್ತಿತು. ಇವರನ್ನು ವಿರೋಧಿಸುತ್ತಿದ್ದವರೇ ಈಗ ಪ್ರೀತಿಸಹತ್ತಿದರು. ಲಿಂಗಾಯತ ಫಂಡು ಬಿದಿಗೆಯ ಚಂದ್ರನಂತೆ ದಿನದಿನಕ್ಕೆ ಅಭಿವರ್ಧಿಸಹತ್ತಿತು. ಈ ಲಿಂಗಾಯತ ಫಂಡಿನ ಪ್ರಚಂಡ ಹಣವನ್ನೂ, ಅದರ ಬಗ್ಗೆ ಮಾಡಲ್ಪಟ್ಟ ದೀರ್ಘಸಾಹಸವನ್ನೂ ತಿಳಿದು ಮೆ||ಕ್ರಾಫರ್ಡಸಾಹೇಬ ಬಹದ್ದೂರರವರು ತಮ್ಮ ಆಳಿಕೆಯ ಕಡೆಯ ಭಾಗಕ್ಕೆ ರಾ.ಬ||ಗಿಲಿಗಿಂಚಿ ಗುರುಸಿದ್ಧಪ್ಪನವರ ಹಾಗೂ ರಾ.ಬ||ಅರಟಾಳ ಸಾಹೇಬರ ವಿಷಯವಾಗಿ "ಇವರೀರ್ವರು ಒಳ್ಳೆ ಪ್ರಾಮಾಣಿಕತನದಿಂದ ಹಾಗೂ ಅಸ್ಥೆಯಿಂದ ಕೆಲಸಮಾಡುವವರೆಂದೂ, ಇವರು ತಮ್ಮ ಲಿಂಗಾಯತ ಜನಾಂಗವನ್ನು ವಿದ್ಯೆಯಲ್ಲಿ ಮುಂದಕ್ಕೆ ತರುವ ಸದಿಚ್ಛೆಯಿಂದ ಫಂಡು ಕೂಡಿಸಹತ್ತಿದ್ದು ಸ್ತುತ್ಯವಾಗಿದೆಯೆಂದೂ, ಇದಕ್ಕೆ ಯಾರೂ ಎಳ್ಳಷ್ಟು ಸಂಶಯಗ್ರಸ್ತರಾಗುವ ಕಾರಣವಿಲ್ಲೆ"ಂದೂ ಹೃದಯಂಗಮವಾಗಿ ಸರಕಾರಕ್ಕೆ ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ದೈವವು ಅನುಕೂಲವಾಗುತ್ತಿರಲು ಅಸಾಧ್ಯವಾದ ಕಾರ್ಯಗಳಾದರೂ ತಡವಿಲ್ಲದೆ ಕೈಗೂಡುವವು.

ಪಾಷಾಣತ್ರಯ (ಮೂರು ಕಲ್ಲುಗಳು) ೧೮೮೯ ಇಸ್ವಿ

ಈ ಮೇರೆಗೆ ರಾ.ಬ||ರುದ್ರಗೌಡರವರ ಪ್ರಖ್ಯಾತಿಯು ಸುತ್ತಲೂ ಹಬ್ಬುತ್ತಿರಲು, ಇವರ ಖ್ಯಾತಿಯನ್ನು ಕೇಳಿ ಪುಣೆಯ ಕಡೆಯ ಒಬ್ಬ ಪ್ರಸಿದ್ಧ ವೈಯ್ಯಾಕರಣಿಯು ಇವರಿಗೆ ತಮ್ಮ ವಿದ್ಯಾಪ್ರೌಢಿಮೆಯನ್ನು ತೋರಿಸಿ, ಏನಾದರೂ ಸಂಭಾವನೆಯನ್ನು ಹೊಂದಬೇಕೆಂಬುದ್ದೇಶದಿಂದ ಇವರ ಬಳಿಗೆ ಬಂದು "ನಾನೊಬ್ಬ ಪುಣೆಯ ಬಡಬ್ರಾಹ್ಮಣನೆಂತಲೂ, ನನಗೆ ವ್ಯಾಕರಣದಲ್ಲಿ ಗತಿಯಿದೆಯೆಂತಲೂ, ಅದನ್ನಷ್ಟು ಪರೀಕ್ಷಿಸುವ ಕೃಪೆಯಾಗಬೇಕೆಂತಲೂ,"ವಿನಾಶ್ರಯ ನಶೋಭಂತೇ ಪಂಡಿತಾ ವನಿತಾ ಲತಾ" ಎಂಬಂತೆ ಪಂಡಿತರಿಗೆ ಸದಾಶ್ರಯವನ್ನು ಕೊಡುವದು ಮಹಾರಾಯರಾದ ತಮ್ಮಂಥ ಸತ್ಪ್ರಭುಗಳ ಕರ್ತವ್ಯ"ವೆಂತಲೂ ಹೇಳಿಕೊಂಡನು. ಆಗ ಇತ್ತ ಕಡೆಗೆಲ್ಲ ಬಳ್ಳಾರಿಯಲ್ಲಿ ಸಕ್ಕರೀಕರಡೆಪ್ಪನವರ ಸಂಸ್ಕೃತ ಪಾಠಶಾಲಾ ಅಧ್ಯಾಪಕರಾಗಿದ್ದ ವೇದಮೂರ್ತಿ ವಿದ್ವದ್ರಾಜ ಗೋಪಾಲಾಚಾರ್ಯರೇ ಸಂಸ್ಕೃತದಲ್ಲಿ ಹೆಸರಾಗಿದ್ದರು. ಹಿಂದೆ ಇವರು ಧಾರವಾಡ ಬಳ್ಳಾರಿ ಮುಂತಾದೆಡೆಗಳಲ್ಲಾದ ದೊಡ್ಡ ದೊಡ್ಡ ಸಭೆಗಳಲ್ಲಿ ತಮ್ಮ ವಾಕ್‌ಪ್ರೌಢಿಮೆಯನ್ನೂ, ಪಾಂಡಿತ್ಯವನ್ನೂ ಪ್ರಕಟಗೊಳಿಸಿ ಬೆಳಕಿಗೆ ಬಂದಿದ್ದರು. ಇವರ ವಾರ್ತೆಯನ್ನೆಲ್ಲ ವೈಯಾಕರಣಿಕರು ಕೇಳಿಯೇ ಬಂದಿದ್ದರು. ಇದನ್ನು ತಿಳಿದು ರಾ.ಬ||ರುದ್ರಗೌಡರು ಈ ಪುಣೆಯ ವೈಯಾಕರಣಿಕರು ಬಂದಿದ್ದ ವಾರ್ತೆಯನ್ನು ಪ್ರಚುರಗೊಳಿಸಿ, ವಿದ್ವದ್ರಾಜ ಗೋಪಾಲಾಚಾರ್ಯರನ್ನು ಕರಿಸಿ ಧಾರವಾಡದಲ್ಲಿ ದೊಡ್ಡ ಸಭೆಯನ್ನು ಕೂಡಿಸಿದರು. ಸಭೆಯ ಸುದ್ದಿಯನ್ನು ಕೇಳಿ ವಿದ್ವದ್ರಾಜ ಗೋಪಾಲಾಚಾರ್ಯರ ಪರಮಶಿಷ್ಯರಾದ ಗುಂತಕಲ್ಲ ವಿರೂಪಾಕ್ಷಶಾಸ್ತ್ರಿಗಳೂ, ಇನ್ನೂ ಎಷ್ಟೋ ಶಾಸ್ತ್ರಿಗಳೂ, ಪಂಡಿತರೂ ಬಂದರು. ರಾ.ಬ||ರುದ್ರಗೌಡರು ಆರಂಭಕ್ಕೆ ತಮ್ಮ ಮನದಲ್ಲಿ ವಿಚಾರಿಸಿದ್ದೇನೆಂದರೆ "ಸಭೆಯಂತೂ ಪ್ರಸಿದ್ಧಿಗೆ ಬರುವದಾಯಿತು. ಪುಣೆಯ ವೈಯಾಕರಣಿಕರು ಕುಶಲರಿದ್ದಂತೆ ತೋರುತ್ತದೆ. ನಮ್ಮ ಲಿಂಗಾಯತಶಾಸ್ತ್ರಿಗಳು ಹೇಗಿರುವರೋ ಏನೋ. ಸಭೆಗೆ ಮಹಾಮಹಾ ಪಂಡಿತರು ಬರುತ್ತಾರೆ. ಸಭೆಯ ಪರಿಣಾಮವು ಸುತ್ತಲೂ ಪ್ರಕಟವಾಗಬೇಕಾಗಿದೆ. ಸಭೆಯಲ್ಲಿ ಲಿಂಗಾಯತರ

ಭಂಗವಾಗಬಾರದು." ಎಂಬದಾಗಿ ಊಹಿಸಿ, ಈ ನಮ್ಮ ಶಾಸ್ತ್ರಿಗಳ ಆಳವನ್ನು ತಿಳಿಯಬೇಕೆಂದು ಗುಂತಗಲ್ ವಿರೂಪಾಕ್ಷಶಾಸ್ತ್ರಿಗಳನ್ನು ಕರಿಸಿ, ಅವರನ್ನು ಕುರಿತು "ಏನರಿ ಶಾಸ್ತ್ರಿಗಳೇ! ನೀವೆಲ್ಲರು ಬಂದದ್ದು ವಿಹಿತವಾಯಿತು. ವೈಯಾಕರಣಿಗಳಂತೂ ನೆಟ್ಟಗಿದ್ದಂತೆ ತೋರುತ್ತದೆ. ನಿಮ್ಮ ವಿಷಯವು ಜಾಗ್ರತವಾಗಿದೆಯೋ? ಪರ್ವತ ಶಾಸ್ತ್ರಿಗಳ ವಿಷಯವಾವುದು? ಅದು ಹೇಗಿದೆ? ಮತ್ತಾವಾವ ಶಾಸ್ತ್ರಿಗಳು ಬಂದಿರುವರು? ವಿದ್ವದ್ರಾಜ ಗೋಪಾಲಾಚಾರ್ಯರ ಸ್ಥಿತಿಗತಿ ಹೇಗದೆ?" ಎಂದು ಕೇಳಲು ರಾ.ಬ॥ರುದ್ರಗೌಡರವರ ಮಾತಿಗೆ ವಿರೂಪಾಕ್ಷಶಾಸ್ತ್ರಿಗಳು ಮಂದಸ್ಮಿತರಾಗಿ ಇವರನ್ನು ಕುರಿತು "ರಾವಬಹದ್ದೂರವರೇ, ಇಲ್ಲಿ ಬರಿಯ ಮಾತಿನಿಂದ ಹೇಳಿ ಫಲವೇನು? ಕುಸ್ತೀ ಹಿಡಿಯುವದರ ಕಸರತ್ತು ಕಣದಲ್ಲಿಯೇ ತಿಳಿಯುವದು. ವಿಷಯದ ಜಾಗ್ರತೆಯು ಇಲ್ಲದೆ ಇಲ್ಲಿಗೆ ಬರುವದುಂಟೇ? ಪರ್ವತಶಾಸ್ತ್ರಿಗಳು ಪ್ರತ್ಯಕ್ಷ ವಿದ್ಯಾಪರ್ವತವೇ ಆಗಿರುವರು. ವಿದ್ವದ್ರಾಜ ಗೋಪಾಲಾಚಾರ್ಯರ ವಿಷಯಕ್ಕೆ ಹೇಳುವದೇನು? ತರ್ಕ, ನ್ಯಾಯ, ವ್ಯಾಕರಣಾದಿ ಷಟ್‌ಶಾಸ್ತ್ರ ಸಂಪನ್ನರಾಗಿದ್ದಾರೆ. ಸದ್ಯಕ್ಕೆ ಪಾಂಡಿತ್ಯದಲ್ಲಿ ಇವರ ಸರಿ ಯಾರನ್ನೂ ಕಾಣೆ, ವಾಗ್ಧುರದಲ್ಲಿ ಬೃಹಸ್ಪತಿಯಂತೆಯೂ, ಕವಿತ್ವರಚನೆಯಲ್ಲಿ ಕಾಳಿದಾಸನಂತೆಯೂ ಪ್ರಸಿದ್ಧರಾಗಿರುತ್ತಾರೆ. ಪ್ರಸಿದ್ಧವಾಗ್ಮಿಗಳನ್ನು ಪರಾಭವ ಮಾಡಲಿಕ್ಕೆ ಇವರಿಗೆ ಒಂದು ಪಳ ಸಹ ಬೇಕಾಗಿಲ್ಲ. ಇವರ ವಿದ್ವತ್ತಕ್ಕೆ ಮಾ॥ವಿದ್ವಾಂಸರು ತಲೆದೂಗುತ್ತಾರೆ. ಪ್ರಭುಗಳೇ ತಮಗೆ ಬಹಳ ಹೇಳುವದರಿಂದ ಪ್ರಯೋಜನವಿಲ್ಲ; ಅವರು ಪ್ರತ್ಯಕ್ಷ ಕವಿರಾಜ ಕಂಠೀರವರಾಗಿರುವರು ಎಂದು ಹೇಳಿದ ವಿರೂಪಾಕ್ಷಶಾಸ್ತ್ರಿಗಳವರ ವಾಕ್ಯಗಳನ್ನು ಕೇಳಿ ರಾ.ಬ॥ ರವರು ಆನಂದವನ್ನು ಹೊಂದಿದರು.

ಗೊತ್ತಾದ ಪ್ರಕಾರ ಮಧ್ಯಾಹ್ನದಲ್ಲಿ ಸಭೆಯು ಕಿಷ್ಕಿಂಧವಾಗಿ ಕೂಡಿತು. ಸಭೆಗೆ ಮಹಾಶಾಸ್ತ್ರಿಗಳೂ, ಪಂಡಿತರೂ ಬಂದಿದ್ದರು. ರಾ.ಬ॥ ರುದ್ರಗೌಡರು ಮೊದಲಾದ ದೊಡ್ಡ ದೊಡ್ಡ ಅಧಿಕಾರಿಗಳೂ, ಗದಗ ಧಾರವಾಡಗಳ ವಕೀಲ ಜನರೂ, ಬೇರೆ ಎಷ್ಟೋ ಪ್ರಮುಖ ಜನರೂ ಬಂದು ಯೋಗಾಸನಗಳಲ್ಲಿ ವಿಶ್ರಮಿಸಿದರು. ಪುಣೆಯ ವೈಯಾಕರಣಗಳು ಬಂದು ಉಚಿತಾಸಸದಲ್ಲಿ ಕೂತುಕೊಂಡರು. ಬಳಿಕ ದಿವ್ಯಪೋಷಾಕಿನಿಂದಲೂ, ಪಾಂಡಿತ್ಯದ ಠೀವಿಯಿಂದಲೂ ವಿದ್ವದ್ರಾಜ ಗೋಪಾಲಾಚಾರ್ಯರೂ, ಅವರ ಶಿಷ್ಯೋತ್ತಮರಾದ ಗುಂತಗಲ್, ಕಂದಗಲ್, ನರೇಗಲ್ ಶಾಸ್ತ್ರಿಗಳೂ ಬರುತ್ತಲೇ ಸಭೆಯು ತುಂಬಿ ಹೋಯಿತು. ಈ ಗುರುಶಿಷ್ಯರ ಅಟ್ಟಹಾಸವನ್ನೂ, ಆಡಂಬರವನ್ನೂ ನೋಡಿದ ಪ್ರತಿಯೊಬ್ಬರು ಈವತ್ತಿನ ಸಭೆಯಲ್ಲಿ ಇವರು ಪುರುಷಾರ್ಥವನ್ನು ಪಡೆಯುವರೆಂದು ಭಾವಿಸಿದರು. ಸಭೆಯ ಪ್ರಾಸ್ತಾವಿಕ ಭಾಷಣವಾದನಂತರ ವಿದ್ವದ್ರಾಜ ಗೋಪಾಲಾಚಾರ್ಯರು ಸಭಾವರ್ಣನಾಪರವಾಗಿ ಒಂದೆರಡು ಕವಿತ್ವಗಳನ್ನು ಆಗಿಂದಾಗ್ಗೆ ರಚಿಸಿ, ಗಂಭೀರ ವಾಣಿಯಿಂದ ಸಭೆಯಲ್ಲಿ ಅನ್ನಲು, ಸರ್ವಜನರಿಗೂ ಆನಂದವಾಯಿತು. ನಂತರ ವೈಯಾಕರಣಿಗಳು ಎದ್ದರು. ಕವಿರಾಜ ಕಂಠೀರವರಾದ ವಿದ್ವದ್ರಾಜ ಗೋಪಾಲಾಚಾರ್ಯರು ಗಂಭೀರ ಮುದ್ರೆಯನ್ನು ತಾಳಿದರು. ವೈಯಾಕರಣಿಕರ ಒಂದು ಮಾತು ಹೊರಟೊಡನೆ ಕಂಠೀರವರ ಕಳೆಯು ಕಡಿಮೆಯಾಯಿತು. ಕೂಡಲೇ ಸಭಾಜನರ ಕರತಳ ಸಪ್ಪಳಗಳಾದವು. ಅದರಿಂದ ವೈಯಾಕರಣಿಕರ ವ್ಯಾಖ್ಯಾನ ವಾರ್ಧಿಗೆ ಉಕ್ಕು ಬಂದಂತಾಯಿತು. ವೈಯಾಕರಣಿಕರು ಒಂದೇ ಸವನೆ ಕೆಲವು ವೇಳೆ ತಮ್ಮ ವ್ಯಾಕರಣ ವಿಷಯವನ್ನು ಶಾಸ್ತ್ರ ಸಮ್ಮತವಾಗಿಯೂ, ಸಭಾಸಮಂಜಸವಾಗಿಯೂ ದಿಗ್ದರ್ಶನಮಾಡಲಾಗಿ, ಮಹಾ ಮಹಾ ವಿದ್ವಾಂಸರಿಗೆ ದಿಗ್ಭ್ರಮೆಯಾಯಿತು. ವೈಯಾಕರಣಿಕರ ಪ್ರಶ್ನೆಗಳಿಗೆ ಒಬ್ಬ ಶಾಸ್ತ್ರಿಗಳಾದರೂ ಉತ್ತರಕೊಡಲಿಲ್ಲ. ಕವಿಕಂಠೀರವರಾದ ವಿದ್ವದ್ರಾಜ ಗೋಪಾಲಾಚಾರ್ಯರಿಗೆ ಎದ್ದು ನಿಂತು ಮಾತಾಡಲಿಕ್ಕೆ ಸಹ ಬರಲಿಲ್ಲ. ದೊಡ್ಡ ದೊಡ್ಡ ನಾಮಧಾರಿಗಳಾದ ಗುಂತಗಲ್ಲ, ಕಂದಗಲ್ಲ, ನರೇಗಲ್ಲ ಈ ಮೂರೂ ಕಲ್ಲುಗಳ ಶಾಸ್ತ್ರಿಗಳು ನಿಜವಾಗಿ ಅಡಗಲ್ಲುಗಳೇ ಆದರು. ಅಗಸಿಯ ಮುಂದಿನ ಬೋರ್ಗಲ್ಲಿನಂತೆ ಸ್ವಲ್ಪವಾದರೂ ಕದಲದೆ ಸ್ತಬ್ದವಾಗಿ ಕೂತುಬಿಟ್ಟರು. ಪಾಷಾಣತ್ರಯರೆಂದು ಜನರು ಚೇಷ್ಟೆಯನ್ನು ಮಾಡಿ

ಕೇಕೆಯನ್ನು ಹಾಕಲಿಕ್ಕೆ ಕಾರಣರಾದರು. ಏನೇ ಆಗಲಿ, ತಮ್ಮ ಊರುಗಳ ಹೆಸರಿಗೆ ತಕ್ಕಂತೆ ಹೆಸರುವಾಸಿಯಾದರು. ಪಾಷಾಣತ್ರಯರೆಂಬ ನಾಮಾಂಕಿತವನ್ನು ಧಾರಣಮಾಡಿದರು. ವೈಯ್ಯಾಕರಣಿಕರ ವಾಗ್ಧುರದಲ್ಲಿ ಈ ಶಾಸ್ತ್ರಿಗಳ ದಿವ್ಯವಾದ ಪೋಷಾಕುಗಳೆಲ್ಲ ನೆನೆದು ಹೋಗಿದ್ದವು. ಈ ದುರವಸ್ಥೆಯನ್ನು ಕಂಡು ಶಾಸ್ತ್ರಿಗಳು ತಮ್ಮೊಳಗೆ ತಾವೇ ನಾಚಿಕೊಂಡರು. ಸಭಿಕರೆಲ್ಲ ವೈಯಾಕರಣಿಗಳನ್ನು ಹೊಗಳಿದರು. ರಾ.ಬ||ರುದ್ರಗೌಡರವರು ಮೊದಲೇ ಗೊತ್ತುಮಾಡಿಟ್ಟ ಯೋಗ್ಯ ಉಚಿತವನ್ನು (೩೦ ರೂಪಾಯಿಗಳನ್ನು) ಕೊಟ್ಟು ಅವರನ್ನು ಶ್ಲಾಘಿಸಿದರು. ಕಡೆಗೆ ಪರಿಮಳ ತಾಂಬೂಲ ಸಮಾರಂಭವಾಗಿ ಸಭಾವಿಸರ್ಜನೆಯಾಯಿತು. ಮುಖ್ಯ ಶಾಸ್ತ್ರಿಗಳಾದ ಮೂವರೂ ಮೋರೆ ತಗ್ಗಿಸಿಕೊಂಡು ಮೊದಲೇ ಹೊರಟು ಹೋಗಿದ್ದರು.

ಶ್ರೀಮಜ್ಜಗದ್ಗುರು ಗದುಗಿನ ತೋಂಟದಾರ್ಯರ ಸಂಸ್ಕೃತ ಪಾಠಶಾಲೆಯ ಸ್ಥಾಪನೆ

ಈ ದುರವಸ್ಥೆಯನ್ನು ಕಂಡು ರಾ.ಬ|| ಗುರುಸಿದ್ಧಪ್ಪನವರೂ, ರಾ||ಬ||ರುದ್ರಗೌಡರೂ "ನಮ್ಮ ಜನರಲ್ಲಿ ಸಂಸ್ಕೃತವಿದ್ಯೆಯು ಲವಲೇಶವಿಲ್ಲದ್ದರಿಂದ ಇಂಥ ದುರ್ದೆಶೆಯನ್ನು ಹೊಂದಬೇಕಾಗುತ್ತದೆ. ಮೇಲಾಗಿ ನಮ್ಮ ವೀರಶೈವಮತಗ್ರಂಥಗಳಾದ ವೇದಶಾಸ್ತ್ರಾಗಮಗಳೆಲ್ಲ ಸಂಸ್ಕೃತಭಾಷೆಯಲ್ಲಿಯೇ ಬರೆಯಲ್ಪಟ್ಟಿವೆ. ಅವುಗಳ ನಿಜವಾದ ಜ್ಞಾನವು ನಮ್ಮಲ್ಲಿ ಸಿಗಬೇಕಾದರೆ ಸಂಸ್ಕೃತವಿದ್ಯೆಯನ್ನು ನಮ್ಮ ವೀರಶೈವರು ಕಲಿಯುವ ಏರ್ಪಾಡು ಮಾಡುವದು ತೀರ ಅವಶ್ಯವದೆ". ಎಂದು ತಮ್ಮ ತಮ್ಮೊಳಗೆ ಆಲೋಚಿಸಿದರು. ಮುಂದೆ ಒಂದು ದಿವಸ ರಾ.ಬ|| ರುದ್ರಗೌಡರು ಗದುಗಿನ ಶ್ರೀ ಮದ್ಘನಲಿಂಗಚಕ್ರವರ್ತಿಗಳಾದ ಜಗದ್ಗುರು ಶ್ರೀ ತೋಂಟದಸ್ವಾಮಿಗಳ ಪಾದದರ್ಶನವನ್ನು ಹೊಂದಿ, ಸ್ವಾಮಿಗಳ ಮುಂದೆ ಈ ಸಂಸ್ಕೃತ ವಿದ್ಯಾಶಿಕ್ಷಣದ ಪ್ರಸಂಗವನ್ನು ತೆಗೆಯಲು, ಅವರು ಸಂತೋಷದಿಂದ ಇವರನ್ನು ಕುರಿತು: "ಸದ್ಭಕ್ತಶಿರೋಮಣಿಗಳಾದ ರುದ್ರಗೌಡರೇ, ನೀವು ಯಾರೆಂಬದರ ಕಲ್ಪನೆಯನ್ನು ಮಾಡಿರುವಿರೋ? ವೀರಶೈವ ಪ್ರಪಂಚದಲ್ಲಿ ನಿಬಿಡವಾಗಿ ತುಂಬಿಕೊಂಡ ಈ ಅಜ್ಞಾನಿಗಳೂ, ನಿರುದ್ಯೋಗಿಗಳೂ, ಪರಾವಲಂಬಿಗಳೂ ಆದ ಜನರಂತೆ ನೀವು ಮತ್ತು ಗುರುಸಿದ್ಧಪ್ಪನವರು ಸಾಮಾನ್ಯ ಮನುಷ್ಯರಲ್ಲ. ವಿಶಿಷ್ಟಕಾರ್ಯ ಗುಣಶಕ್ತಿಗಳುಳ್ಳ ಮಹನೀಯರು. ಈಶಪ್ರೇರಣೆಯಿಂದ ಈ ಜಗಚ್ಚಕ್ರವು ಅವ್ಯಾಹತವಾಗಿ ಭ್ರಮಿಸುತ್ತಿರಲು ಉನ್ನತಿ, ಅವನತಿಗಳು ಪ್ರಪಂಚವನ್ನೆಲ್ಲ ಸುತ್ತಿಕೊಂಡಿರುವವು. ಕಾಲಕಾಲಕ್ಕೆ ಪೃಥ್ವೀಪಟಲದ ಮೇಲೆ ಈ ಎರಡೂ ಅವಸ್ಥೆಗಳ ಆಳಿಕೆಯು ಆಗತಕ್ಕದ್ದೆ. ಮೇಲೆ ಹೋದ ಗಾಲಿಯ ಹಲ್ಲುಗಳು ಕೆಳಗೆ ಇಳಿಯಲಿಕ್ಕೇ ಬೇಕು. ಕಾಲಗತಿಯಲ್ಲಿ ತಿಪ್ಪಿಯು ಉಪ್ಪರಿಗೆಯಾಗುವದು. ಉಪ್ಪರಿಗೆಯು ತಿಪ್ಪಿಯಾಗುವದು. ಆದರೆ ಅವನತಿ ಕಾಲದಲ್ಲಿ ಜನರು ಅಜ್ಞಾನಾವಸ್ಥೆಯಲ್ಲಿ ಮುಳುಗಿ, ಅನಾಚಾರಗಳನ್ನು ಕಲ್ಪಿಸುತ್ತಿರಲು ಆಗ ಯೋಗನಿದ್ರೆಯೊಳಿದ್ದ ಗುರುವಿಗೆ ಅರುವಾಗಿ, ಆ ಅಜ್ಞಾನವನ್ನು ಅಡಗಿಸಲಿಕ್ಕೆ ತನ್ನ ಪ್ರಿಯ ಶರಣರನ್ನು ಸದ್ಭಕ್ತರ ಪುಣ್ಯೋದರದಿಂದ ಹುಟ್ಟಿಸುವನು. ಪ್ರಥಮದಲ್ಲಿ ಬಸವಾದಿ ಪ್ರಮಥರು ಇದೇ ನಿಮಿತ್ತದಿಂದ ಭೂಲೋಕಕ್ಕೆ ಇಳಿಯಲಿಲ್ಲವೋ?

ಯಾವ ನಮ್ಮ ಪೂರ್ವಜರು ವೇದಾಗಮವೇತ್ತರೂ, ಸಂಸ್ಕೃತ ವಿದ್ಯಾಪಾರಾಂಗತರೂ ಆಗಿ, ಗ್ರಹಣಾಂತ ಜೋತಿಷವನ್ನು ಕಂಡುಹಿಡಿದು, ಮಹದೈಶ್ವರ್ಯ ಸಂಪನ್ನರಾಗಿ, ಮತವಿಷಯವಾಗಿ ಮಹಾಮಹಾ ಗ್ರಂಥಗಳನ್ನು ಬರೆದಿಟ್ಟಿರುವರೋ, ನಾವು ಅವರ ವಂಶಜರೇ ಆಗಿ, ಅಜ್ಞಾನಾಂಧಕಾರದಲ್ಲಿ ಮುಳುಗಿ, ಆ ಮಹದ್ಗ್ರಂಥಗಳ ಅರ್ಥಜ್ಞಾನವನ್ನು ಕಂಡುಕೊಳ್ಳಲಿಕ್ಕೆ ಶಕ್ತಿಯಿಲ್ಲದೆ, ಅವುಗಳನ್ನು ಗೆದ್ದಲೆ ಹುಳಗಳ ಪಾಲುಮಾಡಿ

ದುರ್ದಶಾವಸ್ಥೆಯಲ್ಲಿರುತ್ತಿರಲು, ಈ ವಿದ್ಯಾವಿಹೀನರಾದ ವೀರಶೈವರನ್ನು ಉದ್ಧಾರಮಾಡುವ ಉದ್ದಿಶ್ಯವಾಗಿ ನಿಮ್ಮನ್ನು ಪರಮೇಶ್ವರನು ನಿಮ್ಮ ತಾಯಿ ತಂದೆಗಳ ಪೂರ್ಣೋದರದಿಂದ ಹುಟ್ಟಿಸಿರುವನು. ನೀವು ನಿಜವಾಗಿ ದೇವಾಂಶ ಸಂಭೂತರು. ಅವತಾರಿ ಪುರುಷರು. ಈಶಾಜ್ಞಾಪರವಾಗಿ ಮಾನವಲೋಕಕ್ಕಿಳಿದ ಮಹನೀಯರು. ವಿದ್ಯಾರ್ಜನೆ, ಮತಸುಧಾರಣೆ ಮುಂತಾದ ಮಹತ್ಕೃತ್ಯಗಳು ನಿಮ್ಮಿಂದಲೇ ಜರಗಬೇಕಾಗಿ ಜಗದೀಶನ ಸಂಕೇತವುಂಟು. ಹಿಂದಕ್ಕೆ ಅಂದರೆ ಹನ್ನೆರಡನೇ ಶತಮಾನದ ಸುಮಾರಿನಲ್ಲಿ ನಮ್ಮ ವೀರಶೈವಮತವು ಕಾಲಚಕ್ರವೆಂಬ ತಿರುಗಣಿಯಲ್ಲಿ ಸಿಕ್ಕು ಪವಿತ್ರವಾದ ಆಚಾರ ವಿಚಾರಗಳು ಅಳಿದು ತೀರ ಜೀರ್ಣಾವಸ್ಥೆಗೆ ಬಂದಿರಲು, ಅದನ್ನು ಜೀರ್ಣೋದ್ಧಾರಮಾಡಲಿಕ್ಕೆ ಈಶ ಪ್ರೇರಣೆಯಿಂದ ಆ ಕಾಲಕ್ಕೆ ಬಸವಾಭ್ಯುದಯವಾದಂತೆ, ಸದ್ಯಪ್ರಸಂಗದಲ್ಲಿ ವಿದ್ಯಾವಿಹೀನತೆಯಿಂದ ಅಜ್ಞಾನಾಂಧಕಾರದಲ್ಲಿ ಕೂತಿದ್ದ ವೀರಶೈವ ಜನಾಂಗವನ್ನು ಜ್ಞಾನಪ್ರಭೆಯಲ್ಲಿ ತರುವದಕ್ಕಾಗಿ ಈ ಕಾಲಕ್ಕೆ ನಿಮ್ಮಿಬ್ಬರ ಅಭ್ಯುದಯವಾಗಿದೆ. ನಿಮ್ಮ ಹೆಸರುಗಳಾದರೂ ಆ ಮಹಾಮಹಿಮನ ನಾಮಾವಳಿಯೊಳಗಿನವೇ ಅವೆ. ಈ ಲೋಕೋಪಕಾರವು ನಿಮ್ಮ ಕರ್ತವ್ಯಕರ್ಮವಾಗಿದೆ. ಸದ್ಯಕ್ಕೆ ನೀವು ಈಗ ತೆಗೆದ ಪ್ರಸ್ತಾಪವು ವಾಸ್ತವಿಕವದೆ. ನಿಮ್ಮ ಈ ಸದಿಚ್ಛೆಯು ಗುರ್ವನುಗ್ರಹದಿಂದ ನೆರವೇರುವದು. ಅಘಟಿತ ಘಟನೆಯಾದ ಈ ಲಿಂಗಾಯತ ಫಂಡಿನಿಂದ ನಿಮ್ಮ ಕೀರ್ತಿಯೆಂಬ ಲಕ್ಷ್ಮಿಯು ದೇಶದಲ್ಲೆಲ್ಲ ಜಾಜ್ವಲ್ಯಮಾನವಾಗಿ ಸಂಚರಿಸುತ್ತಿರುವಳು. ಈಗ ನೀವು ನಿರ್ಮಿಸಬೇಕಾಗಿದ್ದ ಸಂಸ್ಕೃತ ಪಾಠಶಾಲೆಯಾದರೂ ನಿಮ್ಮ ಹೆಸರನ್ನು ತರುವದು. ಎಂದು ಹೇಳಲು, ಶ್ರೀತೋಂಟದಾರ್ಯರ ಆಶೀರ್ವಚನಂಗಳನ್ನು ತ್ರಿಕರಣಪೂರ್ವಕ ಲಾಲಿಸಿ" ಸಂಸ್ಕೃತ ಪಾಠಶಾಲಾ ಸ್ಥಾಪನೆಗಾಗಿ ಬೇರೆ ಫಂಡು ಕೂಡಿಸತೊಡಗಿದರು. ಶ್ರೀ ಜಗದ್ಗುರು ತೋಂಟದಾರ್ಯರು ಇದಕ್ಕೆ ಹತ್ತುಸಾವಿರ (೧೦೦೦೦) ರೂಪಾಯಿ ರೋಖ ಕೊಟ್ಟರು.[೧] ಈ ಫಂಡಾದರೂ ಲಿಂಗಾಯತ ಎಜ್ಯುಕೇಶನಲ್ ಫಂಡಿನಂತೆ ಸುಸೂತ್ರವಾಗಿಯೂ, ತೀವ್ರವಾಗಿಯೂ ಕೂಡಹತ್ತಿತು. ಗದುಗಿನ ಪ್ರಸಿದ್ಧ ಸಾವಕಾರರೂ, ವಿದ್ಯಾಭಿಮಾನಿಗಳೂ, ವಿತರಣಶಾಲಿಗಳೂ ಆದ ಮಡಿವಾಳಪ್ಪಾ ಬುಳ್ಳಾನವರ ಎಂಬ ಘನವಂತರು ತಮ್ಮ ದಂಪತಿ ತುಲಾಭಾರ ರೂಪಾಯಿಗಳನ್ನು ಈ ಸಂಸ್ಕೃತ ಪಾಠಶಾಲೆಗಾಗಿ ಕೊಟ್ಟು ಅಖಂಡ ಕೀರ್ತಿಯನ್ನು ಸಂಪಾದಿಸಿದರು. ಈ ಹಣದ ಸಹಾಯದಿಂದ ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯರ ಮಠದಲ್ಲಿಯೇ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ, ವೀರಶೈವ ವಿದ್ಯಾರ್ಥಿಗಳಿಗೆ ಆಶನವಸನಾದಿಗಳನ್ನು ಕೊಟ್ಟು, ಸುಲಭರೀತಿಯಿಂದ ಸಂಸ್ಕೃತ ವಿದ್ಯಾರ್ಜನೆಯ ಮಾರ್ಗವನ್ನು ಮಾಡಿಕೊಟ್ಟರು (ಸನ್ ೧೮೮೯ನೇ ಜುಲೈ). ಮತ್ತು ವೀರಶೈವ ವಿದ್ಯಾರ್ಥಿಗಳಿಗೆ ಸಂಸ್ಕೃತ ವಿದ್ಯಾರ್ಜನೆಗಾಗಿ ಬೇರೊಂದು ಫಂಡು ಕೂಡಿಸಿರುವೆವೆಂತಲೂ, ಈ ಹಣದ ಸಹಾಯದಿಂದ ಗದುಗಿನ ಶ್ರೀ ಮಜ್ಜಗದ್ಗುರು ತೋಂಟದಾರ್ಯರ ಮಠದಲ್ಲಿ ಸಂಸ್ಕೃತ ಪಾಠಶಾಲೆಯು ಸ್ಥಾಪಿತವಾಗಿರುವದೆಂತಲೂ, ಈ ಫಂಡನ್ನು ಮಹಾಸ್ವಾಮಿಗಳ ಸಂಸ್ಕೃತ ಪಾಠಶಾಲೆಯ ಹೆಸರಿನಿಂದ ಲಿಂಗಾಯತ ಫಂಡಿನಂತೆ ಸರಕಾರದಲ್ಲಿಡಲಿಚ್ಛಿಸುವೆವೆಂತಲೂ ಸರಕಾರಕ್ಕೆ ತಿಳಿಸಲು, ಸರಕಾರದವರು ಸಂತೋಷದಿಂದ ಸಮ್ಮತಿಯನ್ನು ಕೊಟ್ಟರು. ಸರಕಾರ ಠರಾವ ನಂಬರ

೧.ಈ ಪಾಠಶಾಲೆಯ ಬಗ್ಗೆ ಸವಿಸ್ತಾರ ಹಾಗೂ ನಿಜವಾದ ಸಂಗತಿ ೨ನೇ ಪುಸ್ತಕ (ಭಾಗ)ದ ೧೭೫೬-೧೬೬೪ ಪುಟಗಳಲ್ಲಿ ಬರೆಯಲ್ಪಟ್ಟಿದೆ.* ಶ್ರೀತೋಂಟದಾರ್ಯರು ಈ ಪಾಠಶಾಲೆಗೆ ಏನೂ ವರ್ಗಣಿ ಕೊಟ್ಟಿಲ್ಲ. ವರ್ಗಣಿ ಕೊಟ್ಟ ಸಾವುಕಾರರ ಅಭಿಪ್ರಾಯದಂತೆ ಸದರೀ ಪಾಠಶಾಲೆಗೆ ಶ್ರೀತೋಂಟದ ಜಗದ್ಗುರು ತೋಂಟದಾರ್ಯರ ಹೆಸರು ಇಟ್ಟಿರುತ್ತದೆ. ಖರೇ ಮಾಹಿತಿಕೊಟ್ಟಿದ್ದು, ಲೇಖಕರು ಗೈರ ಸಮಜೂತಿಯಿಂದ ಈ ಪಾಠಶಾಲೆಯ ಲೇಖದಲ್ಲಿ ತಪ್ಪು ಬರೆದಿರುವದು. (ಆರ್.ಸಿ. ಅರಟಾಳ್ ೨೫-೧೨-೧೯೨೧)

* ಈವಿಷಯ ಹಸ್ತಪ್ರತಿಯ 'ಪುರವಣಿ' ಭಾಗದಲ್ಲಿದೆ. ನಾವು ಪುರವಣಿ ಭಾಗವನ್ನು ಕೈ ಬಿಟ್ಟಿರುವುದರಿಂದ ಆ ವಿಷಯ ಈ ಮುದ್ರಿತ ಪುಸ್ತಕದಲ್ಲಿಲ್ಲ- ಸಂ.

೨೪೩೩/೨೫-೧೧-೯೧ ವಿದ್ಯಾಖಾತೆ. ಈ ಸಮಾಜಹಿತದ ಕಾರ್ಯದಲ್ಲಿ ಸಹಾಯ ಮಾಡಿದ ಮಹಾಸ್ವಾಮಿಗಳನ್ನೂ ಸದ್ಗೃಹಸ್ಥರನ್ನೂ ಇವರು ಸದಾ ಸ್ಮರಿಸುವರು. ಈ ಮಹತ್ಕೃತ್ಯವನ್ನೆಸಗಿ ರಾ.ಬ॥ಅರಟಾಳ ಸಾಹೇಬರು ತಮ್ಮ ಕೀರ್ತಿಯ ಬಳ್ಳಿಯನ್ನು ಹಬ್ಬಿಸಿದರು. ಈ ಸಂಸ್ಕೃತ ಪಾಠಶಾಲೆಯು ಗದುಗಿನ ಶ್ರೀ ತೋಂಟದಾರ್ಯರ ಮಠದಲ್ಲಿ ಈ ಹೊತ್ತಿಗೂ ನಡೆಯುತ್ತದೆ. ಈ ಮಹಾಸ್ವಾಮಿಗಳ ಗೌರವವು ಸರಕಾರಕ್ಕೆ ತಿಳಿದು, ಮುಂದೆ ಇವರಿಗೆ ಸರಕಾರದಿಂದ ಕೋರ್ಟಿನ ಮಾಫಿಯೂ, ಹತ್ಯಾರದ ಮಾಫಿಯೂ ಕೊಡಲ್ಪಟ್ಟಿತು. ಸರಕಾರ ಠರಾವ ನಂಬರ ೩೮೪/೧೫-೬-೧೯೦೪ ಜ್ಯುಡಿಶಿಯಲ್ ಡಿಪಾರ್ಟಮೆಂಟ.

ರಾ.ಬ॥ರುದ್ರಗೌಡರು ಹಂದಿಗನೂರ ದೇಸಾಯರಿಗೆ ದೇಸಗತಿಯ ಅಧಿಕಾರ ಕೊಡಿಸಿದ್ದು

[೨]ಇದೇ ಸಂಧಿಯಲ್ಲಿ ಕರ್ಜಗಿ ತಾಲೂಕ, ಹಂದಿಗನೂರ ದೇಸಾಯಿಯವರ ದತ್ತಪುತ್ರರಾದ ಶ್ರೀಮಂತ ಬಸವಂತರಾಯರಿಗೂ, ಅವರ ದತ್ತಕ ತಾಯಿ ವಿರೂಪಾಕ್ಷವ್ವನವರಿಗೂ ಮನಸ್ತಾಪವುಂಟಾಗಿ ದೇಸಗತಿಯ ಅಧಿಕಾರದ ಸಲುವಾಗಿ ಅವರವರೊಳಗೆ ವ್ಯಾಜ್ಯನಡೆದಿತ್ತು. ಈ ಬಸವಂತರಾಯರು ದತ್ತಪುತ್ರರಲ್ಲೆಂತಲೂ ಇವರ ವಿಷಯವಾಗಿ ದತ್ತಪತ್ರವೇ ಆಗಿಲ್ಲವೆಂತಲೂ ವಾದಿಸಿ, ಬಸವಂತರಾಯರಿಗೆ ದೇಸಗತಿಯ ಅಧಿಕಾರ ಕೊಡಿಸಬಾರದೆಂಬದಾಗಿ ವಿರೂಪಾಕ್ಷವ್ವನವರು ಆಶಿಸುತ್ತಿದ್ದರು. ಅಧಿಕಾರವುಳ್ಳ ಅವ್ವನವರ ಮುಂದೆ ಬಸವಂತರಾಯರ ಆಟವೇನೂ ನಡೆಯದೆ, ನಿರ್ಬಲರಾಗಿ ಅವರು ನಿರಾಶ್ರಯಿಗಳಿಗೆ ಆಧಾರಭೂತರಾದ ರಾ.ಬ॥ರುದ್ರಗೌಡರ ಬಳಿಗೆ ಬಂದು, ತಮ್ಮ ಸಾಗ್ರ ಸಂಗತಿಯನ್ನು ಸ್ಪಷ್ಟವಾಗಿ ನಿವೇದಿಸಿ, ತಾವೇ ನನ್ನನ್ನು ಸಂರಕ್ಷಿಸುವ ಮಹನೀಯರೆಂದು ಇವರನ್ನು ಮೊರೆಹೊಕ್ಕರು. ಬಸವಂತರಾಯರ ಪಕ್ಷವೇ ನಿಜವಿದ್ದದರಿಂದ ಮೆ॥ಕಲೇಕ್ಟರ ಸಾಹೇಬ ಬಹದ್ದೂರವರಿಗೆ ಈ ವಿವರವನ್ನು ತಿಳಿಸಿ, ಶ್ರೀಮಂತ ಬಸವಂತರಾಯರಿಗೆ ಇವರು ಹಂದಿಗನೂರ ದೇಸಗತಿಯ ಅಧಿಕಾರಕೊಡಿಸಿ, ಅವರನ್ನು ಉದ್ಧಾರಮಾಡಿದರು. ಶ್ರೀಮಂತ ಬಸವಂತರಾಯರು ಮುಂದೆ ಸನ್ ೧೯೦೪ನೇ ಇಸವಿಯಲ್ಲಿ ಮೃತವಾದರು. ಬಸವಂತರಾಯರ ಜೇಷ್ಠಪುತ್ರರಾದ ಶ್ರೀಮಂತ ಬುಳ್ಳಪ್ಪ ದೇಸಾಯರೇ ಈಗ ದೇಸಗತಿಯನ್ನು ನಡಿಸುತ್ತಾರೆ.

ರಾ.ಬ॥ರುದ್ರಗೌಡರು ಪುನಃ ಕಾರವಾರ ಜಿಲ್ಲೆಯ ದಪ್ತರದಾರರಾದದ್ದು

ಇಂಥ ಪುಣ್ಯಕಾರ್ಯಗಳಲ್ಲಿ ತೊಡಗುತ್ತ, ಸರಕಾರಿಯ ಕೆಲಸವನ್ನು ಸರಿಯಾಗಿ ಮಾಡುತ್ತ, ಸರ್ವಜನರಿಂದ ಸನ್ಮಾನವನ್ನು ಪಡಿಯುತ್ತಿರಲು, ಇವರಿಗೆ ಸನ್ ೧೮೮೯ನೇ ಇಸವಿಯ ಅಕ್ಟೋಬರ ತಿಂಗಳಲ್ಲಿ ಕಾರವಾರಕ್ಕೆ ಮತ್ತೆ ವರ್ಗವಾಗಲಾಗಿ, ರಾ.ಬ॥ರುದ್ರಗೌಡರು ಪುನಃ ಮೆ॥ಕಲೇಕ್ಟರ ಆಫೀಸಿನ ದಪ್ತರರಾದರು. ಮಹಾಪುಣ್ಯಾತ್ಮರಾದ ರಾ.ಬ॥ರುದ್ರಗೌಡರು ಹಿಂದೆ ನಮ್ಮ ಜಿಲ್ಲೆಗೆ ಬಂದು ಸ್ವಲ್ಪ ದಿವಸಗಳಲ್ಲಿಯೇ ಹೋದರೆಂದು ಮರುಗುತ್ತಿದ್ದ ಕಾರವಾರದ ಜನರು, ಇವರು ಪುನಃ ಬರುತ್ತಲೇ ಮಹದಾನಂದವನ್ನು ಹೊಂದಿದರು. ಇವರು ಕಾರವಾರಕ್ಕೆ ಹೊರಡುವ ಮೊದಲು ಧಾರವಾಡ, ಹುಬ್ಬಳ್ಳೀ ಮೊದಲಾದ ಸ್ಥಳಗಳಲ್ಲಿ ಒಟ್ಟು ಎರಡು ತಿಂಗಳುಗಳ

---

೨. ಎರಡನೇ ಭಾಗದಲ್ಲಿ ಈ ಹಂದಿಗನೂರ ಪ್ರಕರಣವನ್ನು ತಂಟೆ ನಡೆದದನ್ನು ಸವಿಸ್ತಾರವಾಗಿ ಬರೆದಿದೆ. ನೋಡಬೇಕು. ೨ನೇ ಭಾಗದ ಪೇಜವು ೧೫೨೬ ರಿಂದ ೧೫೩೭ರ ವರೆಗೆ. (ಈ ಮುದ್ರಿತ ಪುಸ್ತಕದಲ್ಲಿ ಪುಟ ೫೦೬ರ ಅಡಿಟಿಪ್ಪಣಿ ನೋಡಿರಿ -ಸಂ.

ವರೆಗೆ ಬಿಟ್ಟೂ ಬಿಡದೆ ಒಂದರ ಮೇಲೊಂದು ಮೇಜವಾನಿಗಳು[೧] ಹತ್ತಿದವು. ಪ್ರತಿಯೊಂದು ಮೇಜವಾನಿಗೆ ರಾವಬಹದ್ದೂರವರ ಕೂಡ ಅರವತ್ತು ಎಪ್ಪತ್ತು ಜನರು ಇರುತ್ತಿದ್ದರು. ಸಂಗಡಿಗರೆಲ್ಲರು ಪ್ರತಿದಿವಸ ಪಕ್ವಾನ್ನಗಳನ್ನುಂಡು ಬೇಸರಿಯುತ್ತಿದ್ದರು. ಈ ಪ್ರಕಾರ ಲಗ್ನಸಮಾರಂಭದಲ್ಲಿ ಅತ್ಯಂತ ವೈಭವದಿಂದ ವಧೂವರರು ಕೋರೂಟವನ್ನುಂಡಂತೆ ಇವರಿಗೆ ಮೇಜವಾನಿಗಳಾದವು. ನವಲಗುಂದ ತಾಲೂಕ ಶಿಶುವಿನಾಳದ ಶಿವನಗೌಡರು ಇವರಿಗೆ ಮೇಜವಾನಿಯನ್ನು ಮಾಡಿ, ಮಹಾವೈಭವದಿಂದ ಇವರನ್ನು ತಮ್ಮೂರಿಗೆ ಕರಕೊಂಡು ಹೋಗಿ, ಅನೇಕ ಪ್ರಕಾರದ ಉತ್ಸವಗಳಿಂದ ಸಂತೋಷಪಡಿಸಿದರು. ಶಿವನಗೌಡರು ಈ ಉತ್ಸವಕ್ಕೆ ಏಳುನೂರು ರೂಪಾಯಿದೊಂದು ಮತ್ತು ನಾನೂರು ರೂಪಾಯಿದೊಂದು ಈ ಪ್ರಕಾರ ಆದವಾನಿಯ ಎರಡು ನಾಚುಗಳನ್ನು ತರಿಸಿದ್ದರು. ಇದರ ಮೇಲಿಂದ ರಾವಬಹದ್ದೂರವರ ಆಗಮನದ ಪ್ರೀತ್ಯರ್ಥವಾಗಿ ಶಿವನಗೌಡರು ಎಷ್ಟು ವೆಚ್ಚಮಾಡಿರಬಹುದೆಂಬದನ್ನು ವಾಚಕರೇ ವಿಚಾರಿಸಲಿ. ಇವರಷ್ಟು ಮೇಜವಾನಿಗಳೂ, ಉತ್ಸವಗಳೂ ಯಾರಿಗೂ ಆಗಲಿಕ್ಕಿಲ್ಲ. ಇವರು ಹೋಗುವಾಗ ಧಾರವಾಡದ ಜನರು ಮಹೋತ್ಸವವನ್ನು ಮಾಡಿ, ಇವರಿಗೆ ದಿವ್ಯವಾದ ಪೋಷಾಕು ಕೊಡಬೇಕೆಂಬದಾಗಿ ಆಲೋಚನೆ ಮಾಡಿದರು. ಆದರೆ ಸರಕಾರದ ಅಪ್ಪಣೆಯಿಲ್ಲದೆ ನಮಗೆ ತೆಗೆದುಕೊಳ್ಳಲಿಕ್ಕೆ ಬರುವದಿಲ್ಲೆಂದು ರಾವಬಹದ್ದೂರವರು ಹೇಳಿದ್ದರಿಂದ, ಜನರು ಆಗಿಂದಾಗ ತಾರುಮಾಡಿ ರಾವಬ॥ರುದ್ರಗೌಡರವರಿಗೆ ಬಹುಮಾನಮಾಡಲಿಕ್ಕೆ ಸರಕಾರದ ಅಪ್ಪಣೆಯನ್ನು ಬೇಡಿದರು. ಅದಕ್ಕೆ ಸರಕಾರದವರು "ರಾ.ಬ. ರುದ್ರಗೌಡರ ವಿಷಯಕ್ಕೆ ನಿಮ್ಮಲ್ಲಿರುವ ಪೂಜ್ಯಬುದ್ಧಿಯನ್ನೂ, ಅವರು ಎಷ್ಟು ಜನಪ್ರಿಯರಾಗಿದ್ದಾರೆಂಬುದನ್ನೂ ನೋಡಿ ನಮಗೆ ಬಹಳೇ ಸಂತೋಷವಾಗುತ್ತದೆ. ಆದರೆ ನೀವೆಲ್ಲರು ಅವರ ಮಾನಾರ್ಥವಾಗಿ ಉಚಿತವನ್ನು ಕೊಡುವದು ಸರಕಾರೀ ನಿಯಮಗಳಿಗೆ ವಿರುದ್ಧವಾಗಿದ್ದರಿಂದ ಹಾಗೆ ಮಾಡಲಿಕ್ಕೆ ಬರುವದಿಲ್ಲೆಂಬದನ್ನು ನಿಮಗೆ ತಿಳಿಸಲಿಕ್ಕೆ ವಿಷಾದಪಾಗುತ್ತದೆ." ಸರಕಾರ ಠರಾವ ನಂಬರ ೨೭೮೫/೯-೮-೧೮೮೮ ಜನರಲ್ ಡಿಪಾರ್ಟಮೆಂಟ-ಎಂದು ಉತ್ತರ ಕೊಟ್ಟಿದ್ದರಿಂದ ಜನರು ನಿರುಪಾಯರಾದರು. ಆದರೂ ಅವರ ಜೀವ ತಾಳದೆ ಧಾರವಾಡ-ಹುಬ್ಬಳ್ಳಿಗಳ ವೀರಶೈವ ಸಮಾಜದ ಮುಖಂಡರು ಇವರಿಗೆ ಮೇಜವಾನಿ ಮಾಡಿ, ಪರಿಪರಿಯ ಪಕ್ವಾನ್ನಗಳಿಂದ ಭೋಜನಗೆಯ್ಸಿ, ತಾಂಬೂಲ ಸಮಾರಂಭವನ್ನೆಸಗಿ ಮತ್ತೆ ನಮ್ಮ ಜಿಲ್ಲೆಗೆ ತೀವ್ರವಾಗಿ ತಮ್ಮ ಬರೋಣವಾಗಲಿ ಮತ್ತು ತಮಗೆ ಪ್ರಯಾಣದಲ್ಲಿ ಮಂಗಳವಾಗಲಿಯೆಂದು ಶುಭವಾಕ್ಯಗಳನ್ನಾಡಿ ಅಪ್ಪಣೆಕೊಟ್ಟರು.

ಈ ಪ್ರಕಾರ ಸರ್ವಜನರಿಂದ ಸನ್ಮಾನಿತರಾಗಿ ಮೇಲೆ ಹೇಳಿದಂತೆ ಕಾರವಾರಕ್ಕೆ ಬಂದು, ತಮ್ಮ ಕೆಲಸವನ್ನು ಚೆನ್ನಾಗಿ ಮಾಡುತ್ತ ಸುಖದಿಂದಿರುತ್ತಿರಲು, ಇವರು ಒಮ್ಮೆ ಪರಿವಾರ ಸಹಿತರಾಗಿ ಸರ್ವಸಂಭ್ರಮದಿಂದ ಹೊರಟು ಉಳವೀಕ್ಷೇತ್ರಕ್ಕೆ ಹೋಗಿ, ಶ್ರೀಚೆನ್ನಬಸವೇಶ್ವರನ ದರ್ಶನವನ್ನು ತಕ್ಕೊಂಡು, ಅಭಿಷೇಕ ನೈವೇದ್ಯಾದಿಗಳಿಂದ ದೇವರನ್ನು ಸಂತೃಪ್ತಿಗೊಳಿಸಿ, ಅಲ್ಲಿಂದ ಗೋಕರ್ಣಕ್ಷೇತ್ರಕ್ಕೆ ಪ್ರಯಾಣವನ್ನು ಬೆಳಿಸಿ, ಶ್ರೀ ಮಹಾಬಳೇಶ್ವರದೇವರ ಮಹದ್ದರ್ಶನ ಲಾಭವನ್ನೂ ಹೊಂದಿ, ಮಹಾರುದ್ರಾಭಿಷೇಕದಿಂದಲೂ, ಪಂಚಪಕ್ವಾನ್ನಗಳ ನೈವೇದ್ಯದಿಂದಲೂ ಪೂಜೆಯಂ ಗೆಯ್ಸಿ, ದೇವ ಜಂಗಮರನ್ನು ಸಂತೃಪ್ತಿಪಡಿಸಿ, ಕೋಟಿತೀರ್ಥ, ರಾಮತೀರ್ಥ, ಜಟಾತೀರ್ಥ, ಮಹಾಸಮುದ್ರ ಮೊದಲಾದ ಪುಣ್ಯಸ್ಥಳಗಳನ್ನು ನೋಡಿ ಧನ್ಯರಾಗಿ, ತಿರುಗಿ ಸುರಕ್ಷಿತವಾಗಿ ಕಾರವಾರಕ್ಕೆ ಬಂದರು.

---

೧. ಈ ಮೇಜವಾನಿಗಳು ಮೊದಲನೇ ಸಾರೆ ಕಾರವಾರಕ್ಕೆ ಹೋಗುವಾಗ ಆಗಿರುವವು. ಇಲ್ಲಿ ತಪ್ಪಿ ಬರೆಯಲ್ಪಟ್ಟಿದೆ.

ಸೌ॥ತಾಯವ್ವನವರ ಜಡ್ಡು

ಕಾರವಾರದ ಹವೆಯೂ ನೀರೂ ರಾ॥ಬ॥ರುದ್ರಗೌಡರವರಿಗೆ ಮಾನಿಸಿದಂತೆ ಅವರ ಅರ್ಧಾಂಗಿನಿಯರಾದ ಸೌ॥ತಾಯವ್ವನವರಿಗೆ ಮಾನಿಸಲಿಲ್ಲ. ಅವರ ಸೂಕ್ಷ್ಮವಾದ ಪ್ರಕೃತಿಯು ಕೂಡಲೆ ವಿಕೃತಿಯನ್ನು ಹೊಂದಿತು. ರಾವಬಹದ್ದೂರರವರಿಗೆ ಕಾರವಾರಕ್ಕೆ ವರ್ಗವಾದ ವರ್ತಮಾನವನ್ನು ಕೇಳಿದ ಕೂಡಲೆ, ಅವರು ಎದೆಯೊಡಕೊಂಡಂತೆ ಮಾಡಿದ್ದರು. ಪ್ರಸಿದ್ಧ ವೈದ್ಯರಿಗೆ ತೋರಿಸಿ ಔಷಧವನ್ನು ಕೊಡಿಸಿದರು. ಗುಣವೇನೂ ತೋರದೆ ದಿನದಿನಕ್ಕೆ ಜಡ್ಡು ಹೆಚ್ಚಾಗಹತ್ತಿತು. ಅನ್ನದ ರುಚಿಯು ತಪ್ಪಿಹೋಯಿತು. ಕ್ಷಣಕ್ಷಣಕ್ಕೆ ಕ್ಷೀಣವಾಗಹತ್ತಿದರು. ತಾಯವ್ವನವರು ತಮ್ಮ ಪ್ರಕೃತಿಯ ದುಃಸ್ಥಿತಿಯನ್ನು ನೋಡಿ, ಇನ್ನು ತಾವು ಗುಣವನ್ನು ಹೊಂದುವದಿಲ್ಲೆಂದು ತಮ್ಮೊಳಗೆ ತಾವೇ ತಿಳಿದುಕೊಂಡರು. ಅಸ್ತವ್ಯಸ್ತವಾದರೆ ಜಂಗಮರಿಲ್ಲದ ಪರಸ್ಥಳವಾದ ಇಲ್ಲಿ ತಮ್ಮ ವ್ಯವಸ್ಥೆಯು ನೆಟ್ಟಗಾಗುವದಿಲ್ಲೆಂದೂ, ಏನಾಗುವದೆಲ್ಲ ಸ್ವಸ್ಥಾನದಲ್ಲಿಯೇ ಆಗುವದು ವಿಹಿತವೆಂದೂ ಸುವಿಚಾರಿಗಳಾದ ತಾಯವ್ವನವರು ಊಹಿಸಿ, ಸರ್ವಗುಣಸಂಪನ್ನರಾದ ಪತಿದೇವರಿಗೆ ತಮ್ಮ ಅಭೀಷ್ಟವನ್ನು ತಿಳಿಸಲಾಗಿ, ಸೂಕ್ಷ್ಮವಿಚಾರಿಗಳಾದ ರಾ.ಬ॥ರುದ್ರಗೌಡರು ಸಯುಕ್ತಿಕವಾದ ಅವರ ಇಚ್ಛಿತಕ್ಕೆ ಒಡಂಬಟ್ಟರು.

ಪ್ರೇಮಾನ್ವಿತರಾದ ಪತಿದೇವರನ್ನು ಬಿಟ್ಟು ಊರಿಗೆ ತೆರಳುವದಕ್ಕೆ ತಾಯವ್ವನವರ ಮನಸು ನೊಂದುಕೊಂಡರೂ, ಅನಿಷ್ಟವಾದ ಬೇನೆಯ ಮೂಲಕ ಅನಿವಾರ್ಯ ಪಕ್ಷಕ್ಕೆ ಹೋಗಬೇಕಾಯಿತು. ಬೇನೆಯು ಹೆಚ್ಚಾಗಿದ್ದದರಿಂದ ಮೇಣೆಯನ್ನು ತರಿಸಿದರು. ಪತಿಯವರ ಅನುಜ್ಞೆಯನ್ನು ಪಡಕೊಂಡು, ಅವರನ್ನು ಕಣ್‌ತುಂಬಾ ನೋಡಿ, ತಮ್ಮ ಋಣಾನುಬಂಧವು ಇನ್ನೂ ಇದ್ದರೆ ಕ್ಷಿಪ್ರದಲ್ಲಿ ಗುಣವಾಗಿ ಬಂದು ತಮ್ಮ ಛಾಯಾನುವರ್ತಿಯಾಗುತ್ತೇನೆಂದೂ, ಇಷ್ಟಕ್ಕೆ ತೀರಿದ್ದರೆ ಇದೇ ತಮ್ಮ ಕಡೆಯ ದರ್ಶನವೆಂದೂ ಕಣ್ಣಿಗೆ ನೀರು ತಂದರು. ಏಳಲಿಕ್ಕೆ ಬಾರದಂತಾಗಿದ್ದದರಿಂದ ಪತಿಪಾದಗಳನ್ನು ಮಸ್ತಕಕ್ಕೆ ಮುಟ್ಟಿಸಿಕೊಂಡು, ಅಶ್ರುಪೂರಿತರಾಗಿ ಮೇಣೆಯನ್ನೇರಿದರು. ಅವರ ಸಂಗಡ ಪ್ರೀತಿಯ ನಾದಿನಿಯವರಾದ ವೀರವ್ವನವರೂ, ನೆಗೆಂಣಿಯವರಾದ ಬಸವ್ವನವರೂ,[೪] ಧಾರವಾಡ ಹಿರೇಮಠದ ವೀರಯ್ಯನವರೂ[೫] ರಾವಬಹದ್ದೂರರವರ ಸ್ನೇಹಿತರಾದ ಶಾಬಾಳದ ನೀಲನಗೌಡರೂ, ಋಣಾನುಬಂಧಸ್ಥರಾದ ಬನ್ನೂರ ಶಿವನಗೌಡರೂ, ಬೇರೆ ಮೂರು ನಾಲ್ಕುಮಂದಿ ಆಳುಮಕ್ಕಳೂ ಹೊರಟರು. ಅಡಿಗೆಯವನು ಅಳುತ್ತ ಹೊರಬಿದ್ದನು. ಪರಿವಾರದವರೆಲ್ಲ ಸಾರವಾಟದಲ್ಲಿ ಕೂತರು. ಮೇಣೆಯು ಹೊರಟಿತು. ರಾ.ಬ॥ಅರಟಾಳ ಸಾಹೇಬರವರ ಕಣ್ಣುಗಳಿಂದ ಮುತ್ತುದುರಿದಂತೆ ಅಶ್ರುಬಿಂದುಗಳು ತಟಕಿಕ್ಕಿ ಬೀಳಹತ್ತಿದವು. ಆಳುಮಕ್ಕಳು ಮೇಣೆಯ ಹಿಂದಿನಿಂದ ಓಡಹತ್ತಿದರು. ರಾವಬಹದ್ದೂರರವರಿಗೆ ಮೇಣೆಯು ಮರೆಯಾಗಿ ಕಾಣದಂತಾಯಿತು.

ಮೇಣೆಯೂ, ಸಾರವಾಟವೂ ಕಾರವಾರವನ್ನು ಬಿಟ್ಟು ದೂರ ಹೋದವು. ಬೇನೆಯು ಹೆಚ್ಚಾಗಿದ್ದದರಿಂದ ತೀವ್ರವೇ ಊರಿಗೆ ಹೋಗಬೇಕಾಗಿತ್ತು. ಆದದರಿಂದ ಗಾಡಿಯ ಎತ್ತುಗಳನ್ನು ಜಾಗ್ರತಮಾಡಿದರು. ಸಾರವಾಟವು ತೀವ್ರಗತಿಯಿಂದ ನಡೆಯಿತು. ಎತ್ತುಗಳೆರಡೂ ಅಪರೂಪವಾಗಿದ್ದವು. ಒಂದರ ಹೆಸರು ರಾಜಾ, ಮತ್ತೊಂದರ ಹೆಸರು ಪ್ರಧಾನಿ. ಇವು ಮೈಸೂರಿನಿಂದ ತರಿಸಿದ ಡಾಗಿನೆತ್ತುಗಳು. ಡಾಗಿನೆತ್ತೆಂದರೆ ಮೈಸೂರ ಸರಕಾರದಲ್ಲಿ

---

೪. ರಾವಬಹದ್ದೂರರವರ ಅಣ್ಣಂದಿರಾದ ಲಿಂಗನಗೌಡರ ಅರ್ಧಾಂಗಿನಿಯರು.

೫. ಇವರೆಲ್ಲರು ತಾಯವ್ವನವರು ಜಡ್ಡಿನ ವಾರ್ತೆಯನ್ನು ಕೇಳಿ, ನೋಡಲಿಕ್ಕೆ ಮೊದಲೇ ಬಂದಿದ್ದರು.

ಅತ್ಯುತ್ತಮವಾದ ಎತ್ತುಗಳನ್ನಾರಿಸಿ, ಅವುಗಳ ಜೋಡಿಯನ್ನು ಕೂಡಿಸಿ, ಅವಕ್ಕೆ ಗುರ್ತಿನ ಸಲುವಾಗಿ ಸ್ವಲ್ಪ ಬರೆಯನ್ನು ಕೊಟ್ಟಿರುತ್ತಾರೆ. ಈ ಗುರ್ತಿನ ಡಾಗುಗಳುಳ್ಳ ಎತ್ತುಗಳಿಗೆ ಡಾಗಿನೆತ್ತುಗಳನ್ನುವ ಪರಿಪಾಠವುಂಟು. ಇವುಗಳಿಗೆ ಬೆಲೆ ಬಹಳ. ರಾ.ಬ।।ರುದ್ರಗೌಡರಾದರೋ ಇಂಥ ಅಪರೂಪವಾದ ಪ್ರಾಣಿಗಳನ್ನು ಸಾಕುವದರಲ್ಲಿ ಪ್ರೀತಿ ಬಹಳ. ಪ್ರೀತಿಯಿದ್ದಂತೆಯೇ ಅವುಗಳನ್ನು ಒಳ್ಳೇ ವ್ಯವಸ್ಥೆಯಿಂದ ಜೋಪಾನ ಮಾಡಿಸುವರು. ಪಶುಗಳಾದರೇನಾಯಿತು? ಅವುಗಳನ್ನು ತಮ್ಮ ಜೀವಕ್ಕೆ ಸರಿಯಾಗಿ ಎಣಿಸಿ, ಅವಕ್ಕೆ ಉತ್ತಮವಾದ ತಿನಸನ್ನೇ ಕೊಡಿಸಿ, ತಿಳಿನೀರನ್ನೇ ಕುಡಿಸುವ ವ್ಯವಸ್ಥೆಯನ್ನಿಟ್ಟಿದ್ದರು. ಪ್ರತಿದಿವಸ ಅವುಗಳ ಮೈ ತಿಕ್ಕಿಸಿ, ತಮ್ಮಂತೆಯೇ ಅವುಗಳನ್ನು ಜಳಜಳವಾಗಿ ಇಡಿಸುತ್ತಿದ್ದರು. ಹೀಗೆ ಪ್ರೀತಿಯ ಮಕ್ಕಳಂತೆ ಜೋಪಾನ ಮಾಡಿದ ಆ ಎತ್ತುಗಳು ಒಂದರಕಿಂತಲೊಂದು ಮೇಲಾಗಿದ್ದವು. ಎತ್ತುಗಳನ್ನು ಹೂಡಿ ಗಾಡಿಯನ್ನು ಬಿಟ್ಟರೆ ಬಹುಮಂದಿ ನೋಡುತ್ತಿರಬೇಕು. ಅದರಲ್ಲಿ ರಾಜಾ ಎಂಬ ಎತ್ತಂತೂ ಅವರ್ಣನೀಯವಾದ ಬುದ್ಧಿಯುಳ್ಳದ್ದಾಗಿತ್ತು. ಹಿಂದೆ ಧಾರವಾಡದಲ್ಲಿ ಒಂದು ದಿವಸ ರಾವಬಹದ್ದೂರರವರು ಗಾಡಿಯಲ್ಲಿ ಕೂತು ಕಚೇರಿಗೆ ಹೋಗುತ್ತಿರಲು, ನೋಡು ನೋಡುವಷ್ಟರಲ್ಲಿ ಒಬ್ಬ ಸಣ್ಣಬಾಲಕನು ಗಾಡಿಯ ನಡುವೆ ಸಿಕ್ಕನು. ಹುಡುಗನು ಸಿಕ್ಕನೆಂದು ತಿಳಿದಾಕ್ಷಣವೇ ಕಪ್ಪು ಹಾಕಿ ಹಗ್ಗಗಳನ್ನು ಜಗ್ಗಲು ಎರಡೂ ಎತ್ತುಗಳು ಮುಂದೆ ಒಂದು ಹೆಜ್ಜೆಯನ್ನು ಸಹ ಇಡಲಿಲ್ಲ. ಎತ್ತಿದ್ದ ಕಾಲನ್ನು ಹಿಂದಕ್ಕಿಟ್ಟವು. ಹುಡಗನಿಗೇನೂ ಅಪಾಯ ಸಂಭವಿಸಲಿಲ್ಲ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿದ್ದರೆ ಆ ಹುಡಗನೇ ಉಳಿಯುತ್ತಿದ್ದಿಲ್ಲ. ಇಂಥ ಅಮೌಲ್ಯವಾಗದ ಎತ್ತುಗಳಿದ್ದವೆಂತಲೇ ಅಂದು ಆ ಹುಡುಗನು ಬದುಕಿದನು. ಇವುಗಳ ಇಂಥ ಅಪೂರ್ವವಾದ ಬುದ್ಧಿಯನ್ನು ಮನಗಂಡು ಈ ಎತ್ತುಗಳನ್ನು ಬಹಳೇ ಪ್ರೇಮದಿಂದ ಸಲುಹಿದ್ದರು. ಈ ಎತ್ತುಗಳನ್ನು ೧೮೮೬ನೇ ಇಸವಿಯಲ್ಲಿ ಕೊಂಡಿದ್ದರು. ಮುಂದೆ ಇವು ಹನ್ನೆರಡು (೧೨) ವರ್ಷ ಒಡೆಯರ ಸೇವೆಯನ್ನು ಮನಮುಟ್ಟಿ ಮಾಡಿ, ಸನ್ ೧೮೯೮ನೇ ಇಸವಿಯಲ್ಲಿ ಅರಟಾಳದಲ್ಲಿ ಮೃತವಾದವು. ಆಶ್ಚರ್ಯವೇನೆಂದರೆ, ಇವೆರಡೂ ಎತ್ತುಗಳು ಒಂದೇ ದಿವಸ ಪ್ರಾಣವನ್ನು ಬಿಟ್ಟವು. ಇವೆರಡು ಎತ್ತುಗಳು ಹೆಸರಿಗೆ ತಕ್ಕಂತೆ ನಿಜವಾಗಿ ರಾಜಾಪ್ರಧಾನರಂತೆಯೇ ಇದ್ದವು. ರಾಜಪ್ರಧಾನರಿಬ್ಬರೂ, ಬುದ್ಧಿವಂತರಿದ್ದು ಒಮ್ಮನಸಿನಿಂದ ರಾಜ್ಯಭಾರಮಾಡುತ್ತಿದ್ದರೆ ರಾಜ್ಯಶಕಟವು ಹೇಗೆ ನಿರಾತಂಕವಾಗಿ ನಡೆಯುವದೋ ಅದರಂತೆ ಈ ಎತ್ತುಗಳೆರಡೂ ಸಮಯ ವಿಶೇಷದಲ್ಲಿ ಸಾವರಿಸಿಕೊಳ್ಳುತ್ತಿದ್ದದರಿಂದ, ಅವು ಇರುವ ವರೆಗೆ ಅವುಗಳಿಂದ ಯಾರಿಗೆ ಏನೂ ಅಪಾಯ ಸಂಭವಿಸಲಿಲ್ಲ. ಈ ರಾಜಪ್ರಧಾನಿಗಳೇ ಅಂದು ಆ ಕೋಮಲ ಬಾಲಕನನ್ನು ಬದುಕಿಸಿದವು. ಅರಟಾಳದಲ್ಲಿ ಇವು ಒಂದೇ ದಿವಸ ಮೃತವಾಗಲು ಅವುಗಳನ್ನು ಬಹು ವೆಚ್ಚಮಾಡಿ, ವಿದ್ಯುಕ್ತವಾಗಿ ದಫನಮಾಡಿಸಿದರು. ಇವುಗಳ ಮೃತಿಯಿಂದ ಮನೆ ಮಂದಿಯೆಲ್ಲ ಮರುಗಿದರಂತೆ. ರಾವಬಹದ್ದೂರ ರುದ್ರಗೌಡರಿಗಂತೂ ಬಹಳೇ ವ್ಯಸನವಾಯಿತು.

ಇಂಥ ಅದ್ವಿತೀಯವಾದ ಎತ್ತುಗಳು ವಾಯುವೇಗದಿಂದ ನಡೆದು ಗಾಡಿಯನ್ನು ನೆಟ್ಟಗೆ ಘಟ್ಟದ ವರೆಗೆ ತಂದವು. ಪಯಣವು ಇನ್ನೂ ದೂರಿತ್ತು. ಎತ್ತುಗಳೂ ಸೋತಿದ್ದವು. ಅಷ್ಟರಲ್ಲಿ ಸೂರ್ಯನು ಅಸಮಾಧಾನದಿಂದ ಅಸ್ತಮಿಸುತ್ತಿದ್ದನು. ಹೆಬ್ಬುಲಿಯು ಅಡ್ಡಗಟ್ಟಿ ನಿಂತಂತೆ ಮಹೋನ್ನತವಾದ ಸಹ್ಯಾದ್ರಿಯ ಪರ್ವತವೂ ಸುತ್ತಲೂ ಹಬ್ಬುಗೊಂಡಿತ್ತು. ಗಗನ ಚುಂಬಿತವಾದ ವೃಕ್ಷಗಳಿಂದಲೂ, ಬಹು ನೀಳವಾದ ಕಂದರಗಳಿಂದಲೂ, ಭಯಾನಕವಾದ ವ್ಯಾಘ್ರಾದಿ ಹಿಂಸ್ರ ಪ್ರಾಣಿಗಳ ಸಂಚಾರದಿಂದಲೂ, ಬಹು ಎತ್ತರದಿಂದ ಅತಿವೇಗದೊಡನೆ ಬೀಳುವ ನೀರ್ಝರಿಗಳಿಂದಲೂ, ಪ್ರಚಂಡವಾದ ಝಂಝಾವಾತದಿಂದಲೂ ಆ ಭಯಂಕರವಾದ ಸಹ್ಯಾದ್ರಿಯು ಹಗಲೇ ಭೀತಿಯನ್ನುಂಟು ಮಾಡುತ್ತಿತ್ತು. ಆಗ ಮಳೆಗಾಲ ದಿವಸ. ಶ್ರಾವಣಮಾಸ. ಮರುದಿವಸವೇ

ಅಮವಾಸಿಯಿತ್ತು. ಘೋರಕಾನನದಲ್ಲಿ ಅಪಾರವಾದ ಕತ್ತಲೆಯಾಯಿತು. ಕತ್ತಲೆಯು ಕಾಗೆಗಿಂತಲೂ ಕಪ್ಪಾಗಿತ್ತು. ಮತ್ತು ಉಂಡೇ ಕಟ್ಟಲಿಕ್ಕೆ ಬರುವಷ್ಟು ದಪ್ಪಾಗಿತ್ತು. ಕಣ್ಣಲ್ಲಿ ಬೊಟ್ಟು ಇಟ್ಟರೂ ಕಾಣದಂತಾಗಿತ್ತು. ಆಕಾಶವು ಮೋಡಗಳಿಂದ ಮುಚ್ಚಿಹೋಗಿತ್ತು. ಅಷ್ಟರಲ್ಲಿ ಮೇಘಗರ್ಜನೆಯಿಂದಲೂ, ದಟ್ಟಾಗಿ ಬೆಳೆದು ನಿಂತ ವೃಕ್ಷಗಳ ಸಂಘಟ್ಟಣದಿಂದಲೂ, ಉರಿಯ ಮೇಲೆ ರವದಿಯನ್ನು ಹಾಕಿದಂತೆ ಭಯವು ಇಮ್ಮಡಿಯಾಯಿತು. ಭೋಯಿಗಳ ಪಥಧ್ವಾನದ ಉಚ್ಚಸ್ವರವು ವಾಯುಮಂಡಲದಲ್ಲಿ ವಿಲೀನವಾಗಿ ಹೋಗಿ ಪರ್ವತವೆಲ್ಲ ಪ್ರತಿಧ್ವನಿಕೊಡಹತ್ತಿತು. ಎಂಥ ಧೈರ್ಯಸ್ಥನು ಕೂಡ ಹೆದರುವಂಥ ಪ್ರಸಂಗವು ಪ್ರಾಪ್ತವಾಯಿತು. ಸಾರಾಂಶ, ಸಹ್ಯಪರ್ವತವು ಈ ನಮ್ಮ ಪ್ರಯಾಣಿಕರಿಗೆ ಅಸಹ್ಯವಾಗಿ ಹೋಯಿತು.

ಇಂಥ ಅಸಾಧ್ಯವಾದ ಪ್ರಸಂಗವನ್ನು ಕಂಡು ವೀರವ್ವನವರೇ ಮೊದಲಾದವರು, ಶಿವಶಿವಾ ಇದೆಂಥ ಕಠಿಣ ಪ್ರಸಂಗವನ್ನು ತಂದೆ, ಹುಟ್ಟಾ ಇಂಥ ಕಷ್ಟದ ವೇಳೆಯನ್ನು ಕಂಡಿದ್ದಿಲ್ಲ. ಒಮ್ಮಿಂದೊಮ್ಮೆ ಇದೇನು ಬಂತು? ಇನ್ನೇನು ಮಾಡೋಣವೆಂದು ಚಿಂತಿಸುತ್ತ ತೊಯಿಸಿಕೊಂಡು, ತೊಳಲಿ, ಬಳಲಿ, ಕಂಗೆಟ್ಟು, ಕಸಿವಿಸಿಯಾಗಿ, ಅಂತೂ ಇಂತೂ ಸಾಗಿಬಂದು, ಹಟ್ಟೀಕೇರಿಯೆಂಬದೊಂದು ಹಳ್ಳಿಯಲ್ಲಿ ಇಳುಕೊಂಡರು. ಆರೋಗ್ಯದಿಂದಿರುವವರ ಅವಸ್ಥೆಯೇ ಹೀಗಾದಮೇಲೆ, ರೋಗಿಗಳ ಸ್ಥಿತಿಯು ಎಷ್ಟು ಶೋಚನೀಯವಾಗಿರಬಹುದು? ಚಳಿ, ಗಾಳಿ, ಮಳೆಯಿಂದ ಸೌ|| ತಾಯವ್ವನವರ ಬೇನೆ ಹೆಚ್ಚಾಯಿತು. ಗಂಜಿ ಮುಂತಾದದ್ದನ್ನು ಮಾಡಿಸಿ ಅವರ ಆರೈಕೆಯನ್ನು ಮಾಡಿದರು. ಇವರ ಬೇನೆಯ ಲಕ್ಷಣಗಳನ್ನು ವೀರವ್ವನವರು, ಅಣ್ಣಂದಿರ ಪ್ರೇಮಕ್ಕೆ ಪಾತ್ರರೂ ಮಹಾಪತಿವ್ರತೆಯರೂ ಆದ ನಮ್ಮ ಪ್ರೀತಿಯ ಅತ್ತಿಗೆಯವರಿಗೆ ಗುಣವಾಗುವದಿಲ್ಲೆಂದು ತಿಳಿದು ಮನದೊಳಗೆ ದುಃಖಿಸಿದರು. ತಮ್ಮ ದುಃಖವನ್ನು ತಮ್ಮೊಳಗೇ ಹತ್ತೊತ್ತಿಕೊಂಡು ಆಗಾಗ್ಗೆ ಅತ್ತಿಗೆಯವರಿಗೆ ಧೈರ್ಯಕೊಡುತ್ತ, ಅವರ ಆರೈಕೆ ಮಾಡುತ್ತ ಆ ಹೊತ್ತಿನ ಬೆಳಗುಗಳೆದರು.

ಬೆಳಗಾದ ಕೂಡಲೆ ಪುನಃ ಹಾದಿಯನ್ನು ಹಿಡಿದರು. ಹಿಂದಿನ ದಿವಸದ ಚಳಿಯಿಂದಲೂ, ಮಳೆಯಿಂದಲೂ ದಣಿವಾಗಿ ಎತ್ತುಗಳ ಕಾಲು ಚಳತಿದ್ದವು. ಅದ್ದರವಾದ ಎತ್ತುಗಳಿಂದ, ಆ ಆಳತೆಗೆಟ್ಟು ಏರುಳ್ಳ ಆರಭೈಲಘಟ್ಟವನ್ನು ಎಂದಿಗೂ ಏರೋಣವಾಗದು. ಗಟ್ಟಿಗವಾದ ಬಹದ್ದರ ಎತ್ತುಗಳಂತೆಲೇ ಅಷ್ಟು ಹಾದಿಯನ್ನು ಒಂದೇ ದಿವಸದಲ್ಲಿ ನಡೆದುಬಂದವು. ಮಧ್ಯಾಹ್ನವಾಗುತ್ತಲೇ ಘಟ್ಟದಲ್ಲಿಯೇ ಊಟ ಉಪಚಾರವನ್ನೆಲ್ಲ ತೀರಿಸಿ ಪುನಃ ಮುಂದೆ ನಡೆದರು. ಮುಂದೆ ಎತ್ತುಗಳು ಥಕ್ಕೆಟ್ಟವು. ಬಾಯೊಳಗೆ ಬುರುಗು ಬರಹತ್ತಿತು. ಎತ್ತುಗಳು ಬೇಸತ್ತು ಮುಂದೆ ಒಂದು ಹೆಜ್ಜೆಯನ್ನಿಡದೆ ನಿಂತುಬಿಟ್ಟವು. ಅಷ್ಟರಲ್ಲಿ ಮೇಣೆಯು ಮುಂದೆ ಹೋಗಿತ್ತು. ಮಾಡಬೇಕೇನು? ನಿನ್ನಿನಕಿಂತಲೂ ಹೆಚ್ಚಿನ ಪ್ರಸಂಗಬಂತೆಂದು ಎಲ್ಲರೂ ಚಿಂತಿಸಹತ್ತಿದರು. ಚಿಂತೆಯು ಗೊತ್ತಿಗೆ ಮುಟ್ಟದಂತಾಯಿತು. ವಿಪತ್ತಿನಲ್ಲಿ ಚಿತ್ತವು ಸ್ವಸ್ಥವಾಗಿರುವದಿಲ್ಲ. ಸಂಗಡಿಗರಲ್ಲಿ ಕೆಲವರು ಮೇಣೆಯ ಸಂಗಡ ಮುಂದೆ ಹೋಗಿದ್ದರು. ಅರಬೈಲ ಘಟ್ಟದ ಅರಗಾಡಿನಲ್ಲಿ ಅರ್ಧಮಂದಿ ಮುಂದೆ, ಅರ್ಧಮಂದಿ ಹಿಂದೆ ಆಗಿ, ಅವರ ಸುದ್ದಿ ಇವರಿಗಿಲ್ಲ; ಇವರ ಸುದ್ದಿ ಅವರಿಗಿಲ್ಲದಾಯಿತು. ಏನು ಮಾಡಬೇಕು ವಿಚಾರವೇ ತಿಳಿಯದಂತಾಗಿ ವೀರವ್ವನವರು ಶ್ರೀವೀರಭದ್ರನ ಸ್ಮರಣೆಯನ್ನು ಮಾಡಹತ್ತಿದರು.

"ದೇಶಕ್ಕೊಬ್ಬ ದೇವರೇ ಗತಿ" ಎಂಬಂತೆ ಅಷ್ಟರಲ್ಲಿ ಅರಟಾಳದ ರೈತರಾದ ಸವನೂರ ಬಸಪ್ಪ ಮತ್ತು ಎತ್ತಿನಹಳ್ಳಿಯ ಅಂಗಡಿ ಸಿದ್ದಪ್ಪ ಎಂಬ ಇಬ್ಬರು ವರ್ತಕರು ಅಂಕೋಲೆಯ ವ್ಯಾಪಾರಕ್ಕೆ ಬಂದು, ದಾರಿಯಲ್ಲಿ ಎತ್ತುಗಳನ್ನು ಮೇಯಿಸುತ್ತ ನಿಂತಿದ್ದರು. ಮುಂದಿನ ಮೇಣೆಯವರು ಅವರನ್ನು ನೋಡಿ ಸೌ||ತಾಯವ್ವನವರಿಗೆ ಜಡ್ಡಾದ ಸುದ್ದಿಯನ್ನು ತಿಳಿಸಿದರು. ಅವರು ತಾಯವ್ವನವರ ದುಃಸ್ಥಿತಿಯನ್ನು ಕಂಡು

ದುಃಖಿತರಾಗಿ, ವೀರವ್ವನವರು ಗಾಡಿ ಸಹಿತವಾಗಿ ಹಿಂದುಳಿದರೆಂಬದನ್ನು ತಿಳಿದು ಜೀವವು ತಡೆಯದೆ ಓಡುತ್ತೋಡುತ್ತ ಗಾಡಿ ನಿಂತೆಡೆಗೆ ಬಂದು, ಎತ್ತುಗಳು ಥಕ್ಕೆಟ್ಟಿದ್ದನ್ನು ಕಂಡು, ತಮ್ಮ ಚಕ್ಕಡಿಯ ಎತ್ತುಗಳನ್ನು ಗಾಡಿಗೆ ಹೂಡಿಕೊಟ್ಟರು. ಈ ಅರಗಾಡಿನಲ್ಲಿ ದೇವರೇ ನಿಮ್ಮನ್ನು ಇಲ್ಲಿಗೆ ಕಳಿಸಿಕೊಟ್ಟಂತಾಯಿತೆಂದು ವೀರವ್ವನವರು ಅವರ ಉಪಕಾರವನ್ನು ಬಹಳೇ ಕೊಂಡಾಡಿದರು. ಮುಂದೆ ಇವರೂ, ಅವರೂ ಕೂಡಿಯೇ ನಡೆದು ಮೇಣೆಯನ್ನು ಕೂಡಿ, ಹಾದಿಯಲ್ಲಿ ಮತ್ತೊಂದು ವಸ್ತಿಯನ್ನು ಮಾಡಿ, ಮರುದಿವಸ ಎಲ್ಲಾಪುರಕ್ಕೆ ಬಂದರು. ಅಲ್ಲಿ ದ್ಯಾಮವ್ವನ ಗುಡಿಯಲ್ಲಿಳಿದರು.

ಪಂಜರದೊಳಗಿನ ಪಕ್ಷಿಯು ಹಾರಿಹೋಯಿತು

ಎಲ್ಲಾಪುರದಲ್ಲಿ ಬೇನೆ ಎಲ್ಲಕ್ಕೂ ಹೆಚ್ಚಾಯಿತು. ಸ್ಮೃತಿಯು ಒಮ್ಮೊಮ್ಮೆ ತಪ್ಪಿದಂತಾಗಹತ್ತಿತು. ಮಾತಾಡಲಿಕ್ಕೆ ನೆಟ್ಟಗೆ ಬಾರದಂತಾಯಿತು.ಬೇಗನೆ ಅರಟಾಳಕ್ಕೆ ಮುಟ್ಟಿಸಿರೆಂದೂ, ಹಾದಿಯ ಹೆಣವನ್ನು ಮಾಡಬೇಡಿರೆಂದೂ, ತಾಯವ್ವನವರು ತೊದಲು ತೊದಲಾಗಿ ಹೇಳಹತ್ತಿದರು. ಅದರಿಂದೆಲ್ಲರೂ ಗಡಬಡಿಸಿ, ಎಲ್ಲಾಪುರದಿಂದ ಬೇರೆ ಎರಡು ಎತ್ತುಗಳನ್ನು ತಕ್ಕೊಂಡು ಅವರ ಎತ್ತುಗಳನ್ನವರಿಗೆ ಕೊಟ್ಟು, ಆ ಬಸಪ್ಪ ಸಿದ್ಧಪ್ಪರನ್ನು ಅತ್ತಕಡೆಗೆ ಕಳಿಸಿ, ತಾವು ಇತ್ತ ದಾರಿಯನ್ನು ಹಿಡಿದರು. ಹಾದಿಯಲ್ಲಿ ಅಲ್ಲಲ್ಲಿಗೆ ಮೇಣೆಯನ್ನು ನಿಲ್ಲಿಸಿ, ತಾಯವ್ವನವರ ಕ್ಷೇಮಸಮಾಚಾರವನ್ನು ಮೇಲಿಂದ ಮೇಲೆ ತೆಗೆದುಕೊಳ್ಳುತ್ತ ಮುಂದೆ ಸಾಗಿದರು. ಸಂಗಡಿಗರೆಲ್ಲರೂ ಏಕನಿಷ್ಠೆಯಿಂದ ತಾಯವ್ವನವರ ಆರೈಕೆಯನ್ನು ಮಾಡುತ್ತಿದ್ದರು. ಏನು ಬೇಕಾದನ್ನು ತಂದುಕೊಡುತ್ತಿದ್ದರು. ಪಥಶ್ರಮವು ಅನಿವಾರವಾಗಿದ್ದರೂ, ಯಾರಿಗೂ ಅದು ಗೊತ್ತಾಗಲಿಲ್ಲ. ಏನಾಗುವದೋ ಎಂಬದೊಂದೆ ಚಿಂತೆಯಲ್ಲಿ ಎಲ್ಲರೂ ಮಗ್ನರಾಗಿದ್ದರು. ನೀಲಪ್ಪಗೌಡರಂತೂ ಮೇಣೆಯನ್ನು ಬಿಟ್ಟು ಒಂದರಗಳಿಗೆ ಸಹ ಕದಲುತ್ತಿರಲಿಲ್ಲ. ಕಯ್ಯೊಳಗೆ ತಂಬಿಗೆಯನ್ನು ಹಿಡುಕೊಂಡು ಮೇಲಿಂದ ಮೇಲೆ ನೀರುಕೊಟ್ಟು ತಾಯವ್ವನವರ ಬಾಯಾರಿಕೆಯನ್ನು ಶಾಂತಮಾಡುತ್ತಿದ್ದರು. ಈ ಪ್ರಕಾರ ಬಹು ದೂರವಾದ ದಾರಿಯನ್ನು ಕ್ರಮಿಸಿ ಮುಂಡಗೋಡಕ್ಕೆ ಬಂದು, ಅಲ್ಲಿಯ ಹಿರೇಮಠದಲ್ಲಿ ಇಳಿದರು. ಆ ಮಠಾಧಿಪತಿಗಳಾದ ಚರಂತೆಪ್ಪನವರು ತಮ್ಮ ಮಠದಲ್ಲಿ ಇವರಿಗೆ ಯಾವತ್ತೂ ಅನುಕೂಲ ಮಾಡಿಕೊಟ್ಟರು. ಸಂಜೆಯ ಊಟ ಉಪಚಾರ ಮತ್ತು ತಾಯವ್ವನವರ ಆರೈಕೆಯೆಲ್ಲವಾಯಿತು. ಆದರೆ ರಾತ್ರಿಯಲ್ಲಿ ರುಜೆಯು ಪ್ರಬಲವಾಯಿತು. ಬೆಳಗುಗಳೆಯುವದು ಕಠಿಣವೆಂದು ತೋರಹತ್ತಿತ್ತು. ಎಲ್ಲರೂ ಚಿಂತೆಯಿಂದ ಹಾಗೆಯೇ ಕೂತುಬಿಟ್ಟರು. ಬೆಳಗಾಗುವದರೊಳಗಾಗಿ ಶ್ವಾಸಹುಟ್ಟಿತು. ಸ್ಮೃತಿದಪ್ಪಹತ್ತಿತು. ಮಾತು ಬಂದಾದವು. ಏನನ್ನೋ ಸಂಜ್ಞೆಯಿಂದ ಹೇಳಹತ್ತಿದರು. ಸೂಕ್ಷ್ಮವಿಚಾರಿಗಳಾದ ವೀರವ್ವನವರು, ತಮ್ಮ ಅತ್ತಿಗೆಯವರು ಬಹಳೇ ನಿಯಮದವರಾದದರಿಂದ ವಿಧಾನೋಕ್ತವಾಗಿ ವಿಭೂತಿ ವೀಳೆಯನ್ನು ಮಾಡಿಸಲಿಕ್ಕೂ ತಮ್ಮ ವತನೀಭೂಮಿಯಾದ ಅರಟಾಳದಲ್ಲಿಯೇ ತಮ್ಮ ದಫನಕಾರ್ಯವಾಗಲಿಕ್ಕೂ ಹೇಳುತ್ತಾರೆಂದು ತಿಳಿದು, ಕೂಡಲೆ ಸ್ವಾಮಿಗಳಿಗೆ ತಿಳಿಸಿದರು. ಸಂಗಡ ಇದ್ದ ಧಾರವಾಡದ ಹಿರೇಮಠದ ವೀರಯ್ಯನವರೂ, ಆ ಮಠದ ಸ್ವಾಮಿಗಳೂ ಆಗಿಂದಾಗ್ಗೆ ಸರ್ವಸಾಮಾನುಗಳನ್ನು ತರಿಸಿ, ತಾಯವ್ವನವರ ಮಸ್ತಕಕ್ಕೆ ತಮ್ಮ ಪಾದಗಳನ್ನು ಮುಟ್ಟಿಸಿ, ವಿದ್ಯುಕ್ತವಾಗಿ ವಿಭೂತಿ ವೀಳೆಯನ್ನು ಮಾಡಿ, ಅವರ ಕಯ್ಯಿಂದ ದಾನವನ್ನು ಕೊಡಿಸಿ, ಅವರ ಮನಸ್ಸನ್ನು ತೃಪ್ತಪಡಿಸಿದರು. ಮತ್ತು ಹೆಚ್ಚು ಕಡಿಮೆಯಾದರೆ ನಿಮ್ಮಿಷ್ಟದಂತೆ ಅರಟಾಳಕ್ಕೇ ಒಯ್ಯುವೆವೆಂದು ಹೇಳಿದರು. ತಾಯವ್ವನವರ ಆಶೆಯು ಪೂರ್ಣವಾಯಿತು. ಕೂಡಲೆ ಶ್ವಾಸವು ಹೆಚ್ಚಿತು. ಸ್ಮೃತಿಯು ತೀರ ತಪ್ಪಿಹೋಯಿತು. ಅಷ್ಟೊತ್ತಿಗೆ ಸುಮಾರು ನಾಲ್ಕು ತಾಸು ಹೊತ್ತೇರಿತು. ಮುಂಡಗೋಡಕ್ಕೆ

ಬರುತ್ತಲೆ ಇನ್ನು ನಮ್ಮ ನಾಡಿಗೆ ಬಂದುಬಿದ್ದೆವೆಂದೂ, ಈ ಹೊತ್ತು ಮಧ್ಯಾಹ್ನಕ್ಕೆ ಅರಟಾಳಕ್ಕೆ ಹೋಗುವೆವೆಂದೂ ಎಲ್ಲರೂ ಭಾವಿಸಿದ್ದರು. ಹೆಚ್ಚುಕಡಿಮೆಯಾದದರಿಂದ ಅಲ್ಲಿಯೇ ನಿಲ್ಲಬೇಕಾಯಿತು. ತಾಯವ್ವನವರಿಗೆ ಸಂಕಟಹುಟ್ಟಿತು. ದುರ್ಲಕ್ಷಣಗಳು ತೋರಹತ್ತಿದವು. ಹಗಲೆಲ್ಲ ಪತಿಧ್ಯಾನದಲ್ಲಿಯೇ ಇರುತ್ತಿದ್ದರು. ಮೋರೆಯ ಚಿಹ್ನವು ಬದಲಾಯಿಸಿತು; ಕಣ್ಣುಗಳು ಕಲಕಿದವು. ಸ್ವಾಮಿಗಳ ಶಿವಪೂಜೆಯು ಅದೇ ಮುಗಿಯಿತು. ಕೂಡಲೆ ತಾಯವ್ವನವರ ಹೃತ್ಪಂಜರದೊಳಗಿ ಪ್ರಾಣಪಕ್ಷಿಯು ಹಾರಿಹೋಯಿತು. (ಸನ್ ೧೯೩೦ನೇ ಜುಲೈ).

ಪ್ರಾಣ ಹೋದಾಕ್ಷಣವೇ ಸಂಗಡಿಗರೆಲ್ಲರು ಗೋಳಿಟ್ಟರು. ವೀರವ್ವನವರ ಹಾಗೂ ಬಸವ್ವನವರ ದುಃಖಕ್ಕೆ ಮೇರೆಯೇ ತಪ್ಪಿತ್ತು. ತಡೆದು ತಡೆದು ನಿಂತಿದ್ದ ದುಃಖವು ಒಮ್ಮೆಲೆ ಹೊರಬಿದ್ದದರಿಂದ ಒಡ್ಡಿನಿಂದ ತುಂಬಿಕೊಂಡು ನಿಂತಿದ್ದ ಕೆರೆಯು ಒಡ್ಡು ಒಡೆದು, ಒಮ್ಮಿಂದೊಮ್ಮೆ ಹೊರಬಿದ್ದಂತೆ ಆಕ್ರೋಶವು ಅನಿವಾರವಾಯಿತು. ನಾವು ಮಾಡಿದ ಆರೈಕೆಯೂ, ಶ್ರಮವೂ ವ್ಯರ್ಥವಾಯಿತೆಂತಲೂ, ಅಣ್ಣಂದಿರ ಆನಂದ ಸಾಗರವು ಬತ್ತಿಹೋಯಿತೆಂತಲೂ, ಪ್ರಿಯ ಸತಿಯ ವಿಯೋಗದಿಂದ ಅಣ್ಣಂದಿರ ಅವಸ್ಥೆ ಹೇಗಾಗುತ್ತದೋ ಏನೋ ಎಂತಲೂ, ಹಲವು ಪ್ರಕಾರದಿಂದ ವೀರವ್ವನವರು ಬೋರಾಡಿ ಅಳಹತ್ತಿದರು. ಕಡೆಗೆ ಸ್ವಾಮಿಗಳು ಇವರನ್ನು ಕುರಿತು, "ವೀರವ್ವನವರೇ ಸತ್ತಮೇಲೆ ಅತ್ತು ಫಲವಿಲ್ಲ. ಪ್ರಾರಬ್ಧದಲ್ಲಿ ಇವರು ಇಷ್ಟೇ ಭೋಗವನ್ನು ಬೇಡಿಬಂದಿದ್ದರು. ಹೆಚ್ಚಿಗೆ ಹವಣಿಸಿದರೆ ಹೇಗೆ ದೊರೆದೀತು. ಈಶ ಸಂಕಲ್ಪವನ್ನು ಮೀರುವದು ಹರಿಹರರಿಗೂ ಕೂಡ ಅಸಾಧ್ಯವು. ತಾಯವ್ವನವರು ಬಹಳೇ ಪುಣ್ಯವಂತರು. ಶರಣರ ಮರಣವು ಶ್ರಾವಣದಲ್ಲಿಯೆಂಬಂತೆ ಈ ಶರಣೆಯವರು ಶ್ರಾವಣಮಾಸದಲ್ಲಿ ಸೋಮವಾರ ದಿವಸ ಮುತ್ತೈದಿ ಸಾವಿತ್ರಿಯಾಗಿ ತೀರಿಕೊಂಡರು. ಇವರ ಆತ್ಮಕ್ಕೆ ದೇವರು ನಿಜವಾಗಿ ಸುಖವನ್ನು ಕೊಡುವನು. ನೀವು ಇನ್ನು ಅವರ ಇಷ್ಟದಂತೆ ದಫನಕಾರ್ಯವನ್ನು ತೀರಿಸಿ"ರೆಂದು ಎಲ್ಲರನ್ನು ಸ್ವಲ್ಪ ಮಟ್ಟಿಗೆ ಸಮಾಧಾನಗೊಳಿಸಿ, ದುಃಖದಿಂದ ಕಳಿಸಿಕೊಟ್ಟರು.

ತಾಯವ್ವನವರ ಶವವನ್ನು ಮೇಣೆಯಲ್ಲಿಟ್ಟು ದುಃಖದಿಂದ ಅರಟಾಳಕ್ಕೆ ಬಂದರು. ಎಂಟು ದಿವಸದ ಹಾದಿಯನ್ನು ನಾಲ್ಕೇ ದಿವಸದಲ್ಲಿ ಬಂದರೂ ಫಲವಾಗಲಿಲ್ಲ. ಅರಟಾಳದ ಊರು ಇನ್ನೂ ತುಸು ದೂರಿರುತ್ತಲೇ ನೋಡಿದ ಸುತ್ತಹಳ್ಳಿಯ ಜನರು ಹಾಗೇ ರೇಜುಗಟ್ಟಿದರು. ತಾಯವ್ವನವರು ಬರುತ್ತಾರೆಂದು ಸಂತೋಷದಿಂದ ಅವರ ಆಗಮನವನ್ನು ನಿರೀಕ್ಷಿಸುತ್ತಿದ್ದ ಮನೆಯವರೆಲ್ಲರು ಇವರು ಬರುತ್ತಲೆ ಗೋಳಿಟ್ಟು ಅಳುವದಾಯಿತು. ಕಾಲಗತಿಗೆ ಉಪಾಯವಿಲ್ಲ. ಮರುದಿವಸ ಕ್ರಿಯಾಸಮಾಧಿಯನ್ನು ಮಾಡಿ ಒಳ್ಳೇ ಸಮಾರಂಭದಿಂದ ದಫನಕಾರ್ಯವನ್ನು ತೀರಿಸಿದರು. ದಫನಕಾರ್ಯಕ್ಕೆ ಬಹು ಜನರು ಕೂಡಿದ್ದರು. "ಸಜ್ಜನರು ಸತ್ತರೆ ಊರ್ಜನರು ಮರಗುವರು" ಎಂಬ ಸರ್ವಜ್ಞೋಕ್ತಿಯಂತೆ ಸಾಧ್ವಿ ಶಿರೋಮಣಿಯಾದ ತಾಯವ್ವನವರ ಮರಣದಿಂದ ಊರಜನರೆಲ್ಲರು ಮರುಗಿದರು. ಮರುದಿವಸವೇ ನಾಗರ ಪಂಚಮಿಯು. ಅರಟಾಳ ಊರವರಿಗೆ ತಮ್ಮ ಗೌಡಸಾನಿಯ ಮರಣ ದುಃಖದಲ್ಲಿ ಆ ಹಬ್ಬವೇ ನೆಟ್ಟಗಾಗಲಿಲ್ಲ.

ರಾ.ಬ॥ರುದ್ರಗೌಡರು ಹೃದಯ ಭೇದಕವಾದ ಈ ವಾರ್ತೆಯನ್ನು ಪತ್ರಮುಖದಿಂದ ತಿಳಿದು ದುಃಖಾರ್ಣವದಲ್ಲಿ ಮುಳುಗಿ ಹೋದರು. ಮುಂದಾಗಳೇ ಅವರಿಗೆ ರಜೆಯು ದೊರೆದಿದ್ದಿಲ್ಲ. ವ್ಯಸ್ತವಾದ ವೇಳೆಯು ಅವರನ್ನು ಪಾರತಂತ್ರ್ಯಶೃಂಖಲೆಯಿಂದ ಪ್ರತಿಬಂಧಿಸಿತ್ತು. ದುಃಖವನ್ನು ತಮ್ಮೊಳಗೆ ತಾವೇ ನುಂಗಿಕೊಂಡರು. ಮುಂದೆ ಒಂದು ತಿಂಗಳ ರಜೆಯನ್ನು ತಕ್ಕೊಂಡು ಅಸಮಾಧಾನದಿಂದ ಅರಟಾಳಕ್ಕೆ ಬಂದರು. ಇವರು ಬಂದಕೂಡಲೆ ಮನೆಯವರ ಹಾಗೂ ರಾವಬಹದ್ದೂರರವರ ದುಃಖವು ಅಳತೆಯಿಲ್ಲದಾಯಿತು. ಪ್ರಿಯಜನರ ವಿಯೋಗ ಲಕ್ಷಣವೇ ಹೀಗದೆ.

❖❖

೮ ನೇ ಭಾಗ

ರಾ.ಬ॥ರುದ್ರಗೌಡರು ದಕ್ಷಿಣಭಾಗದ ಕಮೀಶನರ ಕಚೇರಿಯ ದಪ್ತರದಾರರಾದದ್ದು

ಸನ್ ೧೮೯೦ನೇ ಇಸವಿಯ ಅಗಷ್ಟ ತಿಂಗಳ ೧ನೇ ತಾರೀಖಿನಿಂದ ಕಾರವಾರದ ದಪ್ತರದಾರ ಜಾಗೆಯು ಸರಕಾರದಿಂದ ಕಡಿಮೆ ಮಾಡಲ್ಪಟ್ಟಿದ್ದದರಿಂದ (ತೆಗೆಯಲ್ಪಟ್ಟಿದ್ದರಿಂದ) ರಾ.ಬ॥ರುದ್ರಗೌಡರಿಗೆ ಬೆಳಗಾವಿಯಲ್ಲಿ ಮೆ॥ಕಮಿಶನರ ಕಚೇರಿಯ ದಪ್ತರದಾರ (ನೇಟಿವ್ಹ ಅಸಿಸ್ಟಂಟ) ಜಾಗೆಗೆ ನಿಯಮಕವಾಯಿತು. ಪಗಾರ ಮುನ್ನೂರು (೩೦೦) ರೂಪಾಯಿ, ಸರಕಾರ ಹುಕುಮು ನಂಬರ ೫೧೩೦/೨೨-೭-೯೦ ಸತಿವಿಯೋಗದಿಂದ ವಿಹ್ವಲಚಿತ್ತರಾದ ರಾ.ಬ॥ರುದ್ರಗೌಡರು ಒಂದು ತಿಂಗಳನ್ನು ಅರಟಾಳದಲ್ಲಿ ಕಳೆದು ಬೆಳಗಾವಿಗೆ ಕೆಲಸದ ಮೇಲೆ ಹೋಗುತ್ತಿರಲು[೧] ದಾರಿಯಲ್ಲಿ ಹುಬ್ಬಳ್ಳಿ ತಾಲೂಕ ಹಲ್ಯಾಳದ ಬಸನಗೌಡರು ರಾವಬಹದ್ದೂರವರಿಗೆ ಭೆಟ್ಟಿಯಾಗಿ, ತಾವು ನಮ್ಮೂರ ವರೆಗೆ ದಯಮಾಡಿಸಿ ನಮ್ಮ ಪ್ರೀತಿಯನ್ನು ಪೂರ್ಣಮಾಡಬೇಕೆಂದು ವಿಜ್ಞಾಪಿಸಿದ್ದಕ್ಕೆ ಅನುಮತಿಸಿ, ಅವರೊಡನೆ ಮಹಾಸಂಭ್ರಮದಿಂದ ಹಲ್ಯಾಳಕ್ಕೆ ಹೋದರು. ಇವರ ಆಗಮನದ ಪ್ರೀತ್ಯರ್ಥವಾಗಿ ಊರಿಗೆ ಊರೇ ಸಿಂಗರವಾಗಿತ್ತು. ಬಸನಗೌಡರ ಮನೆಯ ಮುಂದೆ ದಿವ್ಯಮಂಟಪವು ಹಾಕಲ್ಪಟ್ಟಿತ್ತು. ಇವರನ್ನು ನೋಡಬೇಕೆಂಬ ಕುತೂಹಲದಿಂದ ಊರ ಜನರೆಲ್ಲರು ಒತ್ತಟ್ಟಿಗೆ ಕೂಡಿದ್ದರಿಂದ ಊರು ಒಮ್ಮಗ್ಗಲಾದಂತೆ ತೋರುತ್ತಿತ್ತು. ಜನ ಜಾತ್ರೆಯಾಗಿತ್ತು. ರಾವಬಹದ್ದೂರವರ ಕೀರ್ತಿಯನ್ನು ಕೇಳಿದ ಹೆಂಗಸರೆಲ್ಲ ಮೇಲುಪ್ಪರಿಗೆಗಳನ್ನೇರಿ ಹುಬ್ಬುಗೈಹಚ್ಚಿ ಕಿಷ್ಕಿಂಧವಾದ ಜನಸಮೂಹದಲ್ಲಿ ತೇಜಃಪುಂಜವಾಗಿ ಕಾಣುವ ಇವರನ್ನು ಆತುರದಿಂದ ನೋಡುತ್ತಿದ್ದರು. ಸಿಂಹಳೇಂದ್ರನು ರಾಜಶೇಖರನ ದರ್ಶನವನ್ನಿಚ್ಛಿಸಿ ತನ್ನ ಪುರವನ್ನು ಸಿಂಗರಿಸಿ, ರಾಜವೈಭವದಿಂದ ಆತನನ್ನು ಪಟ್ಟಣದಲ್ಲಿ ಕರಕೊಂಡು ಬರುವ ಸಮಯದಲ್ಲಿ ರಾಜಮಾರ್ಗದ ಇಬ್ಬದಿಗಳಲ್ಲಿಯೂ ಜನರು ಯಾವ ಪ್ರಕಾರ ನೋಡುತ್ತಿದ್ದರೋ ಅದೇ ಪ್ರಕಾರವೇ ಹಲ್ಯಾಳದಲ್ಲಿ ರಾ.ಬ॥ರುದ್ರಗೌಡರವರ ಸಮಾಗಮ ಸಮಾರಂಭವಾಯಿತೆಂದು ಹೇಳಬಹುದು. ಬಸನಗೌಡರು ನಿರ್ಮಿಸಿದ ಮಂಟಪದ ವಿಸ್ತಾರವು ಅವರ್ಣನೀಯವಾಗಿತ್ತು. ಮಂಟಪವನ್ನು ಶ್ರೀಂಗರಿಸಲಿಕ್ಕೆ ಸುಮಾರು ಇನ್ನೂರು ಪೀತಾಂಬರಗಳು ಹತ್ತಿದ್ದವು. ಕೂಡ್ರಲಿಕ್ಕೆ ರಚಿಸಲ್ಪಟ್ಟ ಉಚ್ಚಾಸನಗಳು

---

೧. ಈಗ ಕೆಲಸದ ಮೇಲೆ ಹಾಜರಾಗಿ, ಮುಂದೆ ಬಂಕಾಪುರದಲ್ಲಿ ಇವರಿಗೆ ಮಗಳು ಹುಟ್ಟಿರಲು, ಕೂಸಿನ ಮೋರೆಯನ್ನು ನೋಡಿ ತಿರುಗಿ ಬರುವಾಗ, ಈ ಹಲ್ಯಾಳದ ಬಸನಗೌಡರ ಮೇಜವಾನಿಯಾಯಿತು. ತಾ॥೨೨ ನೇ ಮೇ ಸನ್ ೧೮೯೨ ಶನಿವಾರ.

ಬಹಳೇ ಮನೋಹರವಾಗಿದ್ದವು. ಆಸನಗಳಿಗೂ, ಕಮಾನುಗಳಿಗೂ, ಮಂಟಪದ ಒಳಭಾಗಕ್ಕೂ ಮಲ್ಲಿಗೆಯ ಹೂವಿನ ಹಾರಗಳು ಸಾಂದ್ರವಾಗಿ ಹೆಣೆಯಲ್ಪಟ್ಟಿದ್ದವು. ಎತ್ತ ನೋಡಿದತ್ತೆಲ್ಲ ಮಲ್ಲಿಗೆಯ ಪುಷ್ಪಗುಚ್ಛಗಳೂ, ಪೂಮಾಲೆಗಳೂ ಕಂಗೊಳಿಸುತ್ತಿದ್ದವು. ಆಗ ವಸಂತ ಋತು. ಮಲ್ಲಿಗೆ ಹೂವಿನ ಕಡುತರವಾದ ಸುಗ್ಗಿ. ಎರಡು ದಿವಸ ಹುಬ್ಬಳ್ಳಿ ಶಹರದೊಳಗೆ ಜನರಿಗೆ ಮಲ್ಲಿಗೆ ಹೂವುಗಳೇ ದೊರೆಯಲಿಲ್ಲ. ಎಲ್ಲ ಹೂವುಗಳು ಈ ಮಂಟಪಕ್ಕೇ ತರಲ್ಪಟ್ಟಿದ್ದವು. ಮಲ್ಲಿಗೆ ಹೂಗಳನ್ನು ತಂದು, ಚಮತ್ಕಾರವಾಗಿ ಹೆಣೆದು, ಮಂಟಪವನ್ನು ಶೃಂಗರಿಸಲಿಕ್ಕೆ ಹೂಗಾರರಿಗೆ ಅಯ್ವಾರು ಹೇರು ಗೋದಿಯನ್ನು ಕೊಟ್ಟಿದ್ದರಂತೆ. ಇದರ ಮೇಲಿಂದ ಮಂಟಪದ ಶೋಭೆಯು ಎಷ್ಟಾಗಿತ್ತೆಂಬದರ ಕಲ್ಪನೆಯನ್ನು ಸಹಜವಾಗಿ ಊಹಿಸಬಹುದು. ರಾ.ಬ॥ರವರ ಕೂಡ ಹುಬ್ಬಳ್ಳಿಯ ಮಾಮಲೇದಾರರಾಗಿದ್ದ ರಾ.ಸಾ॥ವೆಂಕಟೇಶ ಸುಬ್ರಾವ ಕೊಪ್ಪೀಕರ[೨] ಎಂಬವರೂ, ಹುಬ್ಬಳ್ಳಿಯ ಪ್ರಸಿದ್ಧ ಸಾವಕಾರರಾದ ರಾಚಪ್ಪಣ್ಣಾ ನೀಲಿಯವರೂ, ಅಣ್ಣಿಗೇರಿಯ ಖಾಜೀ ಸಾಹೇಬರೂ ಬೇರೆ ಎಷ್ಟೋ ಪ್ರಮುಖ ಜನರೂ ಬಂದಿದ್ದರು. ಈ ಉತ್ಸವವನ್ನು ನೋಡಲಿಕ್ಕೆ ಅರಟಾಳದಿಂದ ಅಜಮಾಸು ಅರವತ್ತು ರೈತರು ವಗೈರೆ ಜನರು ಬಂದಿದ್ದರು. ಸುತ್ತ ಹಳ್ಳಿಗಳಿಂದ ಸುಮಾರು ಹತ್ತುಸಾವಿರ ಜನರು ಕೂಡಿದ್ದರು. ರಾವಬಹದ್ದೂರವರು ಈ ಪ್ರಕಾರ ಅನೇಕಮಂದಿ ಸ್ನೇಹಿತರೊಡಗೊಂಡು ಅತ್ಯಂತ ಸಡಗರದಿಂದ ಅವರ ಮೇಜವಾನಿಯನ್ನು ಸ್ವೀಕರಿಸಿ, ಮೃಷ್ಟಾನ್ನ ಭೋಜನಗೈದು, ತಾಂಬೂಲ ಸಮಾರಂಭವನ್ನು ಹೊಂದಿ, ಆಟ, ನೋಟ, ಮದ್ದು ನಾಚುಗಳನ್ನು ನೋಡಿ ಸರ್ವಜನರ ಪ್ರೀತಿಗೆ ಪಾತ್ರರಾಗಿ ಅವರ ಆಶೆಯನ್ನು ಪೂರ್ಣಮಾಡಿ, ಅವರ ನಿರೂಪ ತಕ್ಕೊಂಡು ಅಲ್ಲಿಂದ ಮರುದಿವಸವೇ ಬೆಳಗಾವಿಗೆ ತಮ್ಮ ಕೆಲಸದ ಮೇಲೆ ಬಂದರು.[೩] ಆಗ ಬೆಳಗಾವಿಯಲ್ಲಿ ಇವರ ಪರಮಸ್ನೇಹಿತರಾದ ರಾ.ಬ॥ಗುರುಸಿದ್ದಪ್ಪ ವೀರಬಸಪ್ಪ ಗಿಲಗಿಂಚಿಯವರು ಹುಜೂರ ಡಿಪೂಟಿ ಕಲೇಕ್ಟರರಾಗಿದ್ದರು. ಧಾರವಾಡದಿಂದ ಇವರಿಬ್ಬರ ಅಗಲುವಿಕೆಯಾಗಿದ್ದರೂ ಅಂತರಂಗದಲ್ಲಿ ಇವರ ಹೃದಯಗಳು ಒಂದೇಯಾಗಿದ್ದವು. ಇಬ್ಬರೂ ದೂರದಲ್ಲಿದ್ದರೂ ನಿಕಟವಾದ ಪ್ರೇಮಬಂಧನದಿಂದ ಸಮೀಪದಲ್ಲಿದ್ದಂತೇ ಆಗಿತ್ತು. ಪುನಃ ಈಗ ಮಿತ್ರಯೋಗವು ಚೆನ್ನಾಗಿ ಆಯಿತು. ಧಾರವಾಡದಲ್ಲಿ ಇಬ್ಬರೂ ಕೂಡಿದ್ದಾಗ ಯಾವ ಅದ್ವಿತೀಯ ಕಾರ್ಯವನ್ನಾರಂಭಿಸಿದ್ದರೋ ಅದನ್ನು ಇನ್ನೂ ಪೂರ್ಣಾವಸ್ಥೆಗೆ ತರಲಿಕ್ಕೆ ಇದು ಒಳ್ಳೇ ಸಮಯವು ಸಾಧಿಸಿತು. ಇವರೀರ್ವರೆಲ್ಲಿರುವರೋ ಅಲ್ಲಿ ಲಿಂಗಾಯತ ಫಂಡಿನ ಪ್ರಸಾರವು ತಾನಾಗಿ ಆಗಹತ್ತಿತು. ತುಸುದಿವಸಗಳಲ್ಲಿಯೇ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಲಿಂಗಾಯತ ಫಂಡು ಕೂಡಹತ್ತಿತು. ಈ ಉಭಯ ಮಹಾನುಭಾವರ ಸಮ್ಮೇಳನದಿಂದ ಬೆಳಗಾವ ಜಿಲ್ಲೆಯವರು ಧನ್ಯರಾದರು. ಅಶೇಷ ವೀರಶೈವ ಸಮಾಜವು ಸಂತೋಷವನ್ನು ಹೊಂದಿತು. ಬೆಳಗಾವಿಯಲ್ಲಿ ಈ ಕಾಲಕ್ಕೆ ಕಮೀಶನರರಾಗಿದ್ದ ಮೆ॥ ಎ. ಕೇಸರ ಸಾಹೇಬ ಬಹದ್ದೂರವರು ರಾ.ಬ॥ರುದ್ರಗೌಡರ ಕೆಲಸದ ಜಾಣತನವನ್ನೂ, ಚತುರೋಪಾಯವನ್ನೂ, ಮೊದಲೇ ಕೇಳಿದ್ದರು. ಈಗ ಇವರು ತಮ್ಮ ಆಫೀಸಿನಲ್ಲಿಯೇ ಬಂದದರಿಂದ ಇವರ ಪ್ರಾಮಾಣಿಕತನವನ್ನೂ, ಚತುರತನವನ್ನೂ ಮನಗಂಡರು. ಇವರನ್ನು ಕಂಡಾಕ್ಷಣವೆ ಸಾಹೇಬರವರ ಪ್ರೇಮವು ಇವರ ಮೇಲೆ ಕೂತಿತು. ರಾವಬಹದ್ದೂರವರ ರಾಜೋದ್ಯೋಗವು ಆರಂಭದಿಂದ ಕಡೆತನಕ ಪ್ರಾಮಾಣಿಕವಾಗಿಯೂ ಜನಪ್ರಿಯಕರವಾಗಿಯೂ ನಡೆಯಿತು. ಧಾರವಾಡ, ಕಾರವಾರಗಳಲ್ಲಿಯಂತೆ ಇಲ್ಲಿಯ ಜನವರ್ಗಕ್ಕೂ ಪ್ರೇಮಾಸ್ಪಿತರಾದರು.

---

೨. ರಾ॥ಸಾ॥ಕೊಪ್ಪೀಕರ ಇವರು ಸದ್ಯಕ್ಕೆ ಬೆಳಗಾವಿಯಲ್ಲಿ ಕಮೀಶನರ ಕಚೇರಿಯ ದಪ್ತರದಾರರಾಗಿರುತ್ತಾರೆ.

೩. ಸನ್ ೧೮೯೮ನೇ ಇ.ಯ ಸಪ್ಟಂಬರ ತಿಂಗಳ ೧ನೇ ತಾರೀಖಿನ ದಿವಸ ಕಮಿಶನರ ದಪ್ತರದಾರ ಜಾಗೆಯ ಚಾರ್ಜತೆಗೆದುಕೊಂಡರು.

ತಾಯವ್ವನವರ ಪತಿಭಕ್ತಿಯು

ರಾ.ಬ॥ರುದ್ರಗೌಡರು ಬಲು ಕರುಳಿನವರು. ಸೂಕ್ಷ್ಮವಿಚಾರಿಗಳು. ಆಪ್ತೇಷ್ಟ ಬಂಧುಗಳಗದವರ ಮೇಲೆ ಇವರ ಪ್ರೇಮ ಬಹಳ. ಅಕ್ಕತಂಗಿಯರ ಮೇಲೆ ಬಹಳೇ ಅಕ್ಕರತೆ. ಯಾರ ಮನಸ್ಸನ್ನೂ ನೋಯಿಸುವವರಲ್ಲ. ಬಹು ಕರುಣಾಳುಗಳು. ಕೆಲಸದಲ್ಲಿ ವ್ಯವಸ್ಥೆಯಿದ್ದಂತೆ ಮನೆತನದಲ್ಲಿಯೂ ಮೀರಿದ ವ್ಯವಸ್ಥೆಯನ್ನಿಡುವವರು. ವ್ಯವಸ್ಥಾದೇವತೆಯು ಇವರ ಹೃದಯದಲ್ಲಿ ಮನೆಮಾಡಿಕೊಂಡಿರುವಳು. ಇವರ ಶೀಲಸ್ವಭಾವಕ್ಕೆ ಅನುರೂಪವಾದ ಜೇಷ್ಠಭಾರ್ಯೆಯವರು ಗತಿಸಿದ್ದರಿಂದ ಇವರಿಗೆ ಪರಮಾವಧಿ ದುಃಖ ವಾಯಿತು. ಮನೆತನದ ಸರ್ವವ್ಯವಸ್ಥೆಯನ್ನೂ, ಕರ್ತವ್ಯವನ್ನೂ ತಾಯವ್ವನವರೇ ಮಾಡುತ್ತಿದ್ದರು. ಮನೆತನದ ಕೆಲಸಗಳನ್ನು ಮಿತಿಮೀರಿ ಮಾಡುವವರು. ಮನೆಗೆ ಬರಹೋಗುವವರ ಪರಾಮರಿಕೆಯನ್ನು ಮಾಡಿಸುವದರಲ್ಲಿ ಬಹಳೇ ಜಾಣತನವಿತ್ತು. ಅದರಿಂದ ರಾವಬಹದ್ದೂರವರಿಗೆ ಮನೆತನದ ಚಿಂತೆಯೇ ಇದ್ದಿದ್ದಿಲ್ಲ. ಪತಿಧ್ಯಾನವೇ ಶಿವಧ್ಯಾನ, ಪತಿಹಿತವೇ ತನ್ನ ಹಿತ, ಪತಿಯ ಚಿಂತೆಯೇ ತನ್ನ ಚಿಂತೆ. ಪತಿಯೇ ದೈವ. ಪತಿಸೇವೆಯ ಹೊರತು ಗತಿಯಿಲ್ಲ. ಪತಿಯೇ ಮೋಕ್ಷವೆಂದು ತಿಳಿದು ನಿರಂತರದಲ್ಲಿ ಪತಿ ಸುಖಾಂಕ್ಷಿತರಾಗಿರುತ್ತಿದ್ದ ತಾಯವ್ವನವರು ಗತಿಸಿದ್ದರಿಂದ ರಾವಬಹದ್ದೂರವರ ಸೌಖ್ಯವೂ, ಉತ್ಸಾಹವೂ ಎಷ್ಟೋ ಕಡಿಮೆಯಾಯಿತೆಂದು ಹೇಳಬಹುದು. ಚಿಕ್ಕ ಭಾರ್ಯೆಯವರಾದ ಗುರುಪಾದವ್ವನವರು ತಾಯವ್ವನವರಂತೆಯೇ ವರ್ತಿಸಿ ಪತಿಪ್ರೇಮಾನ್ವಿತರಾದರು. ಅತ್ತಿಗೆಯವರ ಮರಣದಿಂದ ಅಣ್ಣಂದಿರ ಅಕ್ಕರಗಡಲವು ಬತ್ತಿಹೋಯಿತೆಂದು ವೀರವ್ವನವರು ವ್ಯಸನಾಕ್ರಾಂತರಾಗಿ ಬಾರಿಬಾರಿಗೂ ಅವರ ಆರೈಕೆಗೆ ವ್ಯತ್ಯಾಸ ಬಾರದಂತೆ ಮನೆತನದ ಎಲ್ಲ ವ್ಯವಸ್ಥೆಯನ್ನು ಕಾಯ್ದುಕೊಂಡು, ಅವರ ವ್ಯಸನವನ್ನು ಕಡಿಮೆ ಮಾಡಹತ್ತಿದರು. ಆದರೆ ಅಣ್ಣಂದಿರ ಅಕ್ಕರಗಡಲವನ್ನುಕ್ಕಿಸುವಂತಹ ಒಬ್ಬ ಚಿಕ್ಕಚಂದ್ರಮನನ್ನು ಇವರ ಹೊಟ್ಟೆಯಿಂದ ಕೊಟ್ಟು ವಂಶಾಭಿವೃದ್ಧಿಯನ್ನು ಮಾಡೆಂದು ಅಂತರಂಗದಲ್ಲಿ ಮಹಾಮಹಿಮನಾದ ಪರಮೇಶ್ವರನನ್ನು ಧ್ಯಾನಿಸುವರು.

ರಾ.ಬ॥ಗುರುಸಿದ್ಧಪ್ಪ ವೀರಬಸಪ್ಪ ಗಿಲಗಿಂಚಿ

ದುಃಖಗಳು ಬರಹತ್ತಿದವೆಂದರೆ ಒಂದರ ಮೇಲೊಂದು ಬರುತ್ತವೆ. ರಾವಬಹದ್ದೂರವರ ಸನ್ಮಿತ್ರ ಯೋಗವನ್ನು ಪರಮೇಶ್ವರನು ಮುಂದೆ ಬಹಳದಿವಸ ಇಡಲಿಲ್ಲ. ರಾವಬಹದ್ದೂರ ಗುರುಸಿದ್ದಪ್ಪನವರೂ, ರಾ.ಬ॥ರುದ್ರಗೌಡರೂ ಒತ್ತಟ್ಟಿಗೆ ಕೂಡಿದ್ದರಿಂದ ಇನ್ನೂ ಮುಂದೆ ಎಷ್ಟೋ ಮಹತ್ಕೃತ್ಯಗಳನ್ನು ನೆರವೇರಿಸಬೇಕೆಂದು ಭಾವಿಸಿದ್ದರು. ಇವರೀರ್ವರ ಐಕ್ಯಭಾವದಿಂದ ಪ್ರಜಾಹಿತಕಾರಕವಾದ ಅನೇಕ ಸುಧಾರಣೆಗಳು ಪ್ರಚುರಪಡುವವೆಂದು ಜನಸಮೂಹವು ಸಂತೋಷವನ್ನು ಹೊಂದಿತ್ತು. ಆದರೆ ಈಶ ಸಂಕಲ್ಪವು ಹಾಗಿರಲಿಲ್ಲ. ಇವರು ಬೆಳಗಾವಿಗೆ ಬಂದು ಒಂದು ವರ್ಷವಿನ್ನೂ ಪೂರ್ಣವಾಗುವದರೊಳಗಾಗಿಯೇ ರಾ.ಬ॥ಗುರುಸಿದ್ದಪ್ಪನವರು ಆಮಶೌಚೋಪದ್ರವದಿಂದಲೂ, ಜ್ವರದಿಂದಲೂ ವ್ಯಾಧಿಗ್ರಸ್ತರಾಗಿ ಮಲಗಿಕೊಂಡರು. ಔಷಧೋಪಚಾರ ಎಷ್ಟು ನಡಿಸಿದರೂ ಗುಣ ತೋರಲಿಲ್ಲ. ರಾವಬಹದ್ದೂರವರು, ಪರಮಮಿತ್ರರೂ ವ್ಯವಸಾಯ ಬಂಧುಗಳೂ ಆದ ಗುರುಸಿದ್ದಪ್ಪನವರ ಆರೋಗ್ಯತೆಗಾಗಿ ಬಹಳೇ ಪ್ರಯತ್ನಮಾಡಿದರೂ ಏನೂ ಉಪಯೋಗವಾಗಲಿಲ್ಲ. ಗುರುಸಿದ್ಧಪ್ಪನವರ ಆಯುರ್ಮರ್ಯಾದೆಯು ತುಂಬುತ್ತ ಬಂತು. ಮಿತ್ರರು ಇನ್ನು ನಮ್ಮ ಕೈಬಿಡುವರೆಂದು ರಾ.ಬ॥ರುದ್ರಗೌಡರು ಕುದಿಯುವ ದುಃಖದಿಂದ, ಮರಣಸನ್ನಿಹಿತರಾದ ಅವರನ್ನು ಕುರಿತು,

"ಗುರುಸಿದ್ದಪ್ಪಣ್ಣನವರೇ, ನೀವಂತೂ ನಮ್ಮನ್ನೆಲ್ಲ ಮರೆತು ನಡೆದಿರಿ. ನಮಗೆ ಇನ್ನೇನು ಹೇಳುತ್ತೀರೆಂ"ದು ಕೇಳಿದ್ದಕ್ಕೆ ರಾ.ಬ॥ಗುರುಸಿದ್ಧಪ್ಪನವರು "ಪ್ರಿಯ ರುದ್ರಗೌಡರೇ, ಹೇಳುವದಿಷ್ಟೆ, ನಾವಿಬ್ಬರು ಮಲಿನವಾಗಿದ್ದ (ಪಡ ಬಿದ್ದಿದ್ದ) ವೀರಶೈವರಾಷ್ಟ್ರವೆಂಬ ಭೂಮಿಯನ್ನು ಹಸನುಮಾಡಿ, ಅದರಲ್ಲಿ ವಿದ್ಯಾಬೀಜಾರೋಪಣವನ್ನು ಗೈದು, ವಿಶ್ವಪ್ರಯತ್ನವೆಂಬ ನೀರೆರೆದು, ಎಷ್ಟೋ ದುಷ್ಟಜನರ ಆತಂಕಗಳೆಂಬ ಕೀಡೆಗಳ ಉಪದ್ರವವಾಗದಂತೆ ಜಾಗ್ರತವಾಗಿ ಅದನ್ನು ಸಲುಹಿದ್ದರಿಂದ, ಸದ್ಯಕ್ಕೆ ಅದು ಚಿಕ್ಕ ಸಸಿಯಾಗಿ ಚಿಗುರೊಡೆಯಹತ್ತಿದೆ. ಹಣ್ಣುಗಳನ್ನು ತಾವೇ ತಿನ್ನಬೇಕೆಂದು ಯಾರೂ ಗಿಡಗಳನ್ನು ಹಚ್ಚುವದಿಲ್ಲ. ಬೀಜಬಿತ್ತಿ, ನೀರೆರೆದು, ಗಿಡಬಳ್ಳಿಗಳನ್ನು ಬೆಳಿಸುವವರೂ ಒಬ್ಬಿಬ್ಬರೇ ಆ ಗಿಡದ ಹಣ್ಣುಗಳನ್ನು ತಿಂದು ತೃಪ್ತರಾಗುವವರು ಸಾವಿರಾರು ಮಂದಿ.

ಪರೋಪಕಾರಾಯ ವಹಂತಿ ನದ್ಯಾಃ। ಪರೋಪಕಾರಾಯ ದುಹಂತಿ ಗಾವಃ॥
ಪರೋಪಕಾರಾಯ ಫಲಂತಿ ವೃಕ್ಷಾಃ। ಪರೋಪಕಾರಾಯಮಿದಂ ಶರೀರಂ ॥

ಎಂಬಂತೆ ನಾವು ಭಗೀರಥ ಪ್ರಯತ್ನದಿಂದ ಬಿತ್ತಿ ಬೆಳೆದ ವಿದ್ಯಾವೃಕ್ಷದ ಮಧುರತರ ಫಲಗಳನ್ನು ನಮ್ಮ ವೀರಶೈವ ಸಮಾಜದ ಕೋಟ್ಯಾವಧಿ ಜನರು ತಿಂದು ತೃಪ್ತಪಡಬೇಕಾಗಿದೆ. ಈ ಮಹಾವೃಕ್ಷದ ಮಧುರತರ ಹಣ್ಣುಗಳನ್ನು ಕಣ್ಣುಗಳಿಂದ ಕೂಡ ನೋಡುವದು ನನ್ನ ದೈವದಲ್ಲಿರಲಿಲ್ಲ; ಭಗವತ್ ಸಂಕಲ್ಪವನ್ನು ಯಾರೂ ದಾಟರು. ಹಚ್ಚಿದ ಗಿಡಗಳ ಹಣ್ಣುಗಳನ್ನು ಕಾಣುವವರು ಪುಣ್ಯವಂತರೆಂದು ನಾನು ತಿಳಿಯುತ್ತೇನೆ. ಅಂಥ ಪುಣ್ಯ ವಿಶೇಷತೆಯು ನನಗೆ ಲಭ್ಯವಿರಲಿಲ್ಲೆಂದು ವ್ಯಸನಪಡುತ್ತೇನೆ. ಆದರೆ ನಮ್ಮಿಬ್ಬರ ಅಂತರಂಗಗಳು ಒಂದೇ ಇದ್ದು, ನಾನೇ ನೀವಾಗಿರುವದರಿಂದ ನಿಮ್ಮ ಕಣ್ಣುಗಳು ಕಂಡರೆ ನಾನು ಕಂಡಂತೆಯೇ ಸಂತೋಷಪಡುತ್ತೇನೆ. ನಾವಿಬ್ಬರು ಆಚಾರ ವಿಚಾರದಲ್ಲಿ ಅಣ್ಣ ತಮ್ಮಂದಿರಂತೆ ನಡೆದಿರುತ್ತೇವೆ. ಅಣ್ಣನು ಕಟ್ಟುವ ಮನೆಯನ್ನು ತಮ್ಮನು ಮುಗಿಸುತ್ತಾನೆ. ಅಪೂರ್ಣಮನೆಯನ್ನು ಅಷ್ಟಕ್ಕೆ ಯಾರೂ ಬಿಡುವದಿಲ್ಲ. ಅದನ್ನು ಮುಗಿಸಲಿಕ್ಕೆ ಯಾವ ಬಂಧುವಾದರೂ ಹುಟ್ಟಿರಲಿಕ್ಕೆಬೇಕು. ಪ್ರತಿಯೊಂದು ಕೆಲಸದಲ್ಲಿ ಮಾಡಿದ ಶ್ರಮವು ಎಂದೂ ನಿರರ್ಥಕವಾಗುವದಿಲ್ಲ. ಪ್ರಯತ್ನಕ್ಕೆ ತಕ್ಕ ಫಲವನ್ನು ಪರಮೇಶ್ವರನು ನಿಶ್ಚಯವಾಗಿ ಕೊಡುತ್ತಾನೆ. ವೀರಶೈವ ಜನಾಂಗವನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ನನ್ನಕಿಂತಲೂ ಆಸ್ಥೆಯಿಂದ ಕೆಲಸಮಾಡುವ ನಿಮ್ಮಿಂದ, ಈಗ ಅಪೂರ್ಣವಾಗಿ ಭಣ ಭಣ ಕಾಣುತ್ತಿದ್ದ ಈ ವಿದ್ಯಾಮಂದಿರದ ಕಳಸವು ಇಡಲ್ಪಡುವದೆಂದು ನಾನು ನನ್ನ ಆತ್ಮದೊಳಗೆ ನಿಶ್ಚಯವಾಗಿ ತಿಳಿದಿರುತ್ತೇನೆ. ನಿಮ್ಮಿಂದ ಮುಂದೆ ಮುನ್ನಡೆಸಲ್ಪಡುವ ವೀರಶೈವ ವಿದ್ಯಾಮಂದಿರದ ಭಾವಚಿತ್ರವು ನನ್ನ ಹೃದ್ದರ್ಪಣದಲ್ಲಿ ಮೂಡಿಹೋಗಿದೆ. ಮತ್ತು ಮಿತ್ರಬಂಧುಗಳಾದ ನಿಮ್ಮಿಂದ ಮುಂದೆ ಬೆಳಿಸಲ್ಪಡುವ ವಿದ್ಯಾವೃಕ್ಷವು ರಸವತ್ತಾದ ದಳಗಳಿಂದಲೂ, ಸುಗಂಧವಾದ ಪುಷ್ಪನಿಕರದಿಂದಲೂ, ಮಧುರವಾದ ಫಲಗಳಿಂದಲೂ ತುಂಬಿಕೊಂಡು ಚಂದವಾಗಿ ನನ್ನ ಜ್ಞಾನದೃಷ್ಟಿಯ ಮುಂದೆ ತೂಗಾಡಹತ್ತಿದೆ. ಸದ್ಯಕ್ಕೆ ಪರಮತೀಯರಿಂದ ತಿನ್ನಲ್ಪಡುತ್ತಿರುವ ವಿದ್ಯೆಯೆಂಬ ಹಣ್ಣನ್ನು ನೋಡಿ ಅದನ್ನಿಚ್ಛಿಸಿ ಬಾಯಲ್ಲಿ ನೀರುತರುತ್ತಿರುವ ವೀರಶೈವರು, ನಾವಿಬ್ಬರು ಬಿತ್ತಿ ಬೆಳೆದ ಈ ವಿದ್ಯಾವೃಕ್ಷದಿಂದ ಅಕ್ಷಯವಾದ ಮಧುರಫಲಗಳನ್ನು ಪಡೆದು, ಯಥೇಚ್ಛವಾಗಿ ಭಕ್ಷಿಸಿ ನಲಿದಾಡುತ್ತಿರುವ ವೀರಶೈವ ಭಾವೀರಾಷ್ಟ್ರವು ನನ್ನ ಕಣ್ಣುಮುಂದೆ ಕಟ್ಟಿದಂತಾಗಿರುವದು. ಪ್ರಿಯ ರುದ್ರಗೌಡರೇ, ಸುಜ್ಞರೂ, ಚತುರರೂ, ದೀರ್ಘ ಸಾಹಸಿಗಳೂ, ಮತಾಭಿಮಾನಿಗಳೂ ಆದ ನಿಮಗೆ ವಿಶೇಷ ಹೇಳುವ ಕಾರಣವಿಲ್ಲ. ಸತ್ತವರ ಮಕ್ಕಳು ಇದ್ದವರ ಕಯ್ಯಲ್ಲೆಂಬಂತೆ ಈ ಚಿಕ್ಕಮಕ್ಕಳನ್ನು ನಿಮ್ಮ ಕಯ್ಯಲ್ಲಿ ಕೊಡುತ್ತೇನೆ. ಇವರನ್ನು ಯಾವ ಮಾರ್ಗಕ್ಕೆ ಹಚ್ಚಬೇಕೆಂಬದನ್ನು ಸುಶಿಕ್ಷಿತರೂ, ವಿದ್ಯಾಭಿಮಾನಿಗಳೂ,

ಪರಮಮಿತ್ರರೂ ಆದ ನಿಮಗೆ ಬೇರೆ ಹೇಳುವ ಕಾರಣವಿಲ್ಲ. ನಾವೂ ನೀವೂ ಮಾತಾಡಿದಂತೆ ಮಿ॥ಬಾಲಸರಸ್ವತಿಯರನ್ನು ವಿಲಾಯತಿಗೆ ವಿದ್ಯಾಭ್ಯಾಸಕ್ಕೆ ಕಳಿಸಿರಿ. ಸಾರಾಂಶ: ವೀರಶೈವರು ವಿದ್ಯಾವಂತರಾಗಬೇಕೆಂಬದೇ ನನ್ನ ಮಹದಾಶೆಯು. ಇದೊಂದರ ಹೊರತು ನನಗೆ ಬೇರೆ ಆಶೆ ಎಳ್ಳಷ್ಟಿಲ್ಲ. ಚಿರಂಜೀವ ಬಸವಂತಪ್ಪ ಮೊದಲಾದ ಈ ಚಿಕ್ಕಮಕ್ಕಳೇ ನನ್ನ ಪ್ರೇಮದ ನಿಕ್ಷೇಪವು. ಇನ್ನು ನಾನು ವಿಶೇಷ ಹೇಳಲಾರೆ. ನನ್ನ ಆಶೆಯನ್ನೂ, ವೀರಶೈವರ ಏಳ್ಗೆಯನ್ನೂ ಪೂರ್ಣಮಾಡುವ ಭಾರವು ನಿಮ್ಮಮೇಲೆ ಕೂಡಿರುವದು. ನನ್ನ ಪ್ರಾಣೋತ್ಕ್ರಮಣ ಸ್ಥಿತಿಯನ್ನು ಕಂಡು ನೀವೆಲ್ಲರು ಎಷ್ಟು ದುಃಖಪಡುತ್ತೀರೋ ಅದರ ನೂರಿಮ್ಮಡಿ ದುಃಖವು ನನಗಾಗಿರುವದು. ಹರಿದಾಡುವ ಪಾರಜದಂತೆ ಪ್ರಾಣವು ಒಂದೆಡೆಯಲ್ಲಿ ಸ್ಥಿರವಾಗಿ ನಿಲ್ಲಲೊಲ್ಲದು. ಪ್ರಸ್ಥಾನ ತೆಗೆದಿಟ್ಟ ಪ್ರಯಾಣಿಕನಂತೆ ಪ್ರಾಣವು ಪ್ರಯಾಣೋನ್ಮುಖವಾಗಿದೆ. ನೀವು ನನ್ನ ಕಾಂಕ್ಷೆಯನ್ನು ಪೂರ್ಣಮಾಡುವಿರೆಂದು ನೆರೆನಂಬಿ ಇನ್ನು ನನ್ನ ಪ್ರಾಣವನ್ನು ಬಿಡುತ್ತೇನೆ. ಇದೇ ನಮ್ಮ ನಿಮ್ಮ ಕಡೆಯ ಮಾತು. ಇದೇ ಕಡೆಯ ದರ್ಶನವು. ನಮಸ್ಕಾರ, ನಮಸ್ಕಾರ, ನಮಸ್ಕಾರ" ವೆನ್ನುವದರೊಳಗೆ ಪ್ರಾಣವು ಹೋಯಿತು (ತಾರೀಖ ೨೨ ನೇ ಮೇ ಸನ್ ೧೯೮೧ ನೇ ಇಸವಿ).

ಪರಮ ಮಿತ್ರರಾದ ಗುರುಸಿದ್ಧಪ್ಪಣ್ಣನವರ ಮಾತು ಕೇಳ ಕೇಳುತ್ತಲೆ ರಾ.ಬ॥ರುದ್ರಗೌಡರ ಕಣ್ಣೀರುಗಳು ತಿಳಿಯದೆ ಹೋಗುತ್ತಿದ್ದವು. ಪ್ರಾಣಹೋದಾಕ್ಷಣವೇ,

ಅರರೇ, ಸಜ್ಜನಬಂಧುವರ್ಗವ ತಮಃಶೋಕಾಬ್ಧಿಯೊಳ್ ನೂಂಕಿ ಮೇಣ್ ।
ಧರಣೀ ಗೇಹದ ದೀಪಮಂಬಡೆದು ಸನ್ನೀರೇಜ ಲಿಂಗಾಂಗಿಯಾ ॥
ಅರಳಿರ್ದಾನನ ಕಾಂತಿಯಂ ಕವರ್ದು ತಾನಸ್ತಾದ್ರಿ ಕೈಲಾಸಮಂ ।
ಸರಿದಂತಾದುದು ಭ್ರಾತೃಭಾನು ಗುರುಸಿದ್ಧಪ್ಪಣ್ಣನೀ ಲೋಕದಿಂ ॥೧॥[೪]

ಎಂದು ಪ್ರತ್ಯಕ್ಷವಾಗಿ ಅಳಹತ್ತಿದರು. ನೋಡಬಂದಿದ್ದ ಸ್ನೇಹಿತ ಮಂಡಳಿಗೆಲ್ಲ ಅಪಾರ ದುಃಖವಾಯಿತು. ಮನೆಜನರ ಆಕ್ರೋಶವು ಹಿಡಿಸದಂತಾಯಿತು. ಅವರ ದುಃಖವನ್ನು ದೇವರೇ ಬಲ್ಲ. ಪರಮಮಿತ್ರರ ಮರಣದಿಂದ ರಾ.ಬ॥ರುದ್ರಗೌಡರ ಬಲಗೈಯ್ಯೇ ಹೋದಂತಾಯಿತು. ಸತಿವಿಯೋಗ ದುಃಖಕ್ಕಿಂತ ಮಿತ್ರವಿಯೋಗ ವ್ಯಸನವು ಮಿಗಿಲಾಯಿತು. ಇವರ ಮನೋರಥ ಕಳಸವೇ ಕಳಚಿಬಿದ್ದಂತಾಯಿತು. ವೀರಶೈವ ಸಮಾಜವೆಲ್ಲ ದುಃಖಾಂಬುಧಿಯಲ್ಲಿ ಮುಳುಗಿಹೋಯಿತು. ಪ್ರಫುಲ್ಲಿತವಾಗಿ ಬೆಳೆಯುತ್ತಿದ್ದ ವಿದ್ಯಾವೃಕ್ಷವು ಕಾಡ್ಗಿಚ್ಚಿಗೆ ಸಿಕ್ಕಂತಾಯಿತು. ಚಿಕ್ಕ ಸಸಿಯ ಚಿಗರನ್ನು ಚಿವುಟಿದಂತಾಯಿತು. ಇವರೀರ್ವರೂ ವೀರಶೈವ ಮತವನ್ನು ಜೀರ್ಣೋದ್ಧಾರ ಮಾಡುವ ಕಾರ್ಯದಲ್ಲಿ ತನುಮನಧನಗಳನ್ನು ಸಮರ್ಪಿಸುತ್ತಿರಲು, ಅದನ್ನರಿತು ಜನರು ರಾ.ಬ॥ ಗುರುಸಿದ್ಧಪ್ಪನವರೂ, ರಾ॥ಬ॥ರುದ್ರಗೌಡರೂ ಸೂರ್ಯಚಂದ್ರರಂತೆ, ನಮ್ಮ ವೀರಶೈವ ಜನಾಂಗದ ನಾಡನ್ನು ಬೆಳಗುತ್ತಿರುವರೆಂದು ಆನಂದದಿಂದಲೂ, ಅಭಿಮಾನದಿಂದಲೂ ಕೊಂಡಾಡುತ್ತಿದ್ದರು. ಅಂಥ ದಿವ್ಯಪ್ರಭೆಯುಳ್ಳ ಸೂರ್ಯನು ಅಸ್ತಮಿಸಿದ್ದರಿಂದ ವೀರಶೈವ ಸಮಾಜಕ್ಕೆ ಕತ್ತಲಾದಂತಾಯಿತು. ವೀರಶೈವ ವಿದ್ಯಾಮಂದಿರದ ಕಟ್ಟಡವೇ ಕಳಚಿಕೊಂಡು ಬಿದ್ದಂತಾಯಿತು. ಅವರ ಮರಣವಾರ್ತೆಯನ್ನು ಕೇಳಿದ ಪ್ರತಿಯೊಬ್ಬರಿಗೆ ವಿಷಾದವಾಯಿತು. ಆ ದಿವಸ ಬೆಳಗಾವಿಯ ವೀರಶೈವರ ಒಲೆಯು ಬೆಂಕಿಯನ್ನು ಕಾಣಲಿಲ್ಲ. ಸಮಾಜ ಹಿತದ ಕಾರ್ಯಗಳಲ್ಲಿಯೇ ತ್ರಿಕರಣಪೂರ್ವಕವಾಗಿ ಆಯುಷ್ಯವನ್ನೂ, ಬುದ್ಧಿಯನ್ನೂ, ವೆಚ್ಚಮಾಡುತ್ತಿದ್ದ ಲೋಕೋಪಕಾರಿಯಾದ ಮಹಾನುಭಾವರ ಮರಣದಿಂದ ಯಾರಿಗೆ ದುಃಖವಾಗಲಿಕ್ಕಿಲ್ಲ!

---

೪. ಗ್ರಂಥಕರ್ತ ಬಸವಾರ್ಯಕೃತ.

ರಾ.ಬ||ಗುರುಸಿದ್ದಪ್ಪಣ್ಣನವರ ಮರಣಜನ್ಯ ದುಃಖವು ರಾ.ಬ||ರುದ್ರಗೌಡರಿಗೆ ಆಜನ್ಮ ಮರೆಯದಂತಾಯಿತು. ಅವರ ದಫನಕಾರ್ಯವನ್ನು ಇವರು ಸ್ವತಃ ನಿಂತು ಚೆನ್ನಾಗಿ ಮಾಡಿಸಿದರು. ಅವರ ಸ್ಮಶಾನಯಾತ್ರೆಯು ಬಹುದೊಡ್ಡದಾಗಿತ್ತು. ಬಹುಜನರು ಕೂಡಿದ್ದರು. ಮಿತ್ರವಿಯೋಗ ವಿಹ್ವಲಚಿತ್ತರಾದ ರಾ.ಬ||ರುದ್ರಗೌಡರಿಗೆ ಮುಂದೇನು ಮಾಡಬೇಕೆಂಬದರ ವಿಚಾರವೇ ತಿಳಿಯಲಿಲ್ಲ. ಇವರ ಆಪ್ತಾಲೋಚನೆಗೆ ಸುಶಿಕ್ಷಿತರೂ, ಸಮಾನರೂ ಯಾರೂ ಇಲ್ಲದಂತಾಯಿತು. ಪ್ರಾಣೋತ್ಕ್ರಮಣ ಸಮಯದ ಮಾತುಗಳನ್ನು ಶಿರಸಾ ಮನ್ನಿಸಿ, ಮುಂದೆ ಅಕ್ಷರಶಃ ಅದರಂತೆ ಅಥವಾ ಅದಕ್ಕೂ ಹೆಚ್ಚಾಗಿ ವರ್ತಿಸಿದರು. ಹಿಂದೆ ಹೇಳಿದಂತೆ ಬಾಲಸರಸ್ವತಿಯನ್ನು ವಿಲಾಯತಿಗೆ ಕಳಿಸಿಕೊಟ್ಟರು. ದುಃಖ ಸಮುದ್ರದಲ್ಲಿ ಮುಳುಗಿ ಹೋಗಿದ್ದ ರಾ.ಬ||ಗುರುಸಿದ್ಧಪ್ಪಣ್ಣನವರ ಕುಟುಂಬದವರಿಗೆ "ನೀವು ಇನ್ನು ವೃಥಾ ಪ್ರಲಾಪಿಸಬೇಡಿರಿ, ನಿಮ್ಮಂತೆ ನಮಗೂ, ಅಶೇಷ ವೀರಶೈವ ಜನಾಂಗಕ್ಕೂ ಅತ್ಯಂತ ದುಃಖವಾಗಿರುತ್ತದೆ. ಕ್ಷಣಭಂಗುರವಾದ ಈ ಹಾಳು ಸಂಸಾರದಲ್ಲಿ ಸ್ಥಿರವಾಗಿ ಯಾರೂ ಇರುವದಿಲ್ಲ. ಪ್ರಪಂಚದಲ್ಲಿ ಸುಖದುಃಖಗಳು ಸರಿಯಾಗಿರುತ್ತವೆ. ಬಂದದ್ದನ್ನು ಅನುಭೋಗಿಸುವದು ಮಾನವ ಜನ್ಮದ ಕರ್ತವ್ಯವಾಗಿದೆ. ರಾತ್ರಿಯಲ್ಲಿ ಮರದ ಮೇಲೆ ವಾಸವಾಗಿದ್ದ ಪಕ್ಷಿಗಳು ಬೆಳಗಾಗುತ್ತಲೇ ಒಂದೊಂದೇ ಹಾರಿಹೋಗುತ್ತಿರುವಂತೆ ಸಂಸಾರವು ನಿಜವಾಗಿ ನಿಸ್ಸಾರವಿರುತ್ತದೆ. ಋಣತೀರದ ಮೇಲೆ ಒಂದು ಕ್ಷಣ ಸಹ ಯಾರೂ ನಿಲ್ಲುವದಿಲ್ಲ. ವಿಚಾರಮಾಡಿದರೆ ಈ ಜಗತ್ಯವೆಲ್ಲ ಮಿಥ್ಯವಿರುತ್ತದೆ. ಆಯುಷ್ಯ ತೀರುವವರೆಗೆ ಆದದ್ದನ್ನು ಭೋಗಿಸಲಿಕ್ಕೆಬೇಕು. ನಾವೆಲ್ಲರೂ ಒಂದಿಲ್ಲೊಂದು ದಿನ ಗುರುಸಿದ್ಧಪ್ಪಣ್ಣನವರ ಹಾದಿಯನ್ನೇ ಹಿಂಬಾಲಿಸುವವರು. ನಾವು ಇರುವ ವರೆಗೆ ನೀವು ಯಾವದಕ್ಕೂ, ಎಷ್ಟು ಮಾತ್ರವೂ ಚಿಂತಿಸಬೇಡಿರಿ. ಈ ಚಿಕ್ಕ ಬಾಲಕರ ಚಿಂತೆಯನ್ನೇ ಬಿಡಿರಿ. ಆದಷ್ಟು ರೀತಿಯಿಂದ ಎಲ್ಲ ವ್ಯವಸ್ಥೆಯನ್ನು ಆಸ್ಥೆಯಿಂದ ಮಾಡುತ್ತೇವೆಂ"ದು ಅನೇಕತರದಿಂದ ಹೇಳಿ ಅವರ ಶೋಕಶಮನವನ್ನು ಮಾಡಿದರು.


ರಾ.ಬ||ಗುರುಸಿದ್ಧಪ್ಪಣ್ಣನವರು ದೊಡ್ಡ ಪಗಾರದವರಿದ್ದರೂ ಹಣದ ಸಂಚಯವನ್ನು ಸ್ವಲ್ಪವಾದರೂ ಮಾಡಿಡಲಿಲ್ಲ. ಇವರ ಕಯ್ಯು ಬಹಳೇ ಶಿಥಿಲವಾಗಿತ್ತು. ಇವರಲ್ಲಿ ಪರೋಪಕಾರ ಬುದ್ಧಿಯು ಬಹಳೇ ಪ್ರಬಲವಾಗಿತ್ತು. ದಾನಧರ್ಮದಲ್ಲಿ ಅವಿರಳವಾದ ಭಕ್ತಿಯಿತ್ತು. ಬಂದ ಅತಿಥಿಗಳನ್ನು ಬರಿಗಯ್ಯಿಂದ ಎಂದೂ ಕಳಿಸುತ್ತಿದ್ದಿಲ್ಲ. ಮನೆಯ ವೆಚ್ಚವನ್ನು ಅಳತಿಲ್ಲದೆ ಇಟ್ಟಿದ್ದರು. ಬಡಜನರಿಗೆ ಬಹಳೇ ಆಧಾರಿಗಳಾಗಿದ್ದರು. ದಾನದಲ್ಲಿ ಕರ್ಣನಂತೆ ಇದ್ದರೆಂದರೆ ಅತಿಶಯೋಕ್ತಿಯಾಗದು. ಇಚ್ಛಿತ ಭೋಜನವನ್ನು ಮಾಡುವದು ಇವರ ದೈನಿಕವೃತ್ತಿಯಾಗಿತ್ತು. ಅದರಿಂದ ಇವರ ಕಯ್ಯಲ್ಲಿ ದುಡ್ಡು ನಿಲ್ಲುತ್ತಿದ್ದಿಲ್ಲ. ತಿಂಗಳ ಪಗಾರವು ತಿಂಗಳಿಗೇ ತೀರಿ ಹೋಗುತ್ತಿತ್ತು. ಇವರ ಈ ಬಗೆಯ ಅಂದಾದುಂದಿಯ ವೆಚ್ಚವನ್ನು ನೋಡಿ ಹುಚ್ಚರಾಗಿ ಇವರ ಸ್ನೇಹಿತರು ಯಾರಾದರು ಇವರನ್ನು ಕುರಿತು "ಗುರುಸಿದ್ಧಪ್ಪನವರೇ, ಹೀಗೆ ಅಳತೆಗೆಟ್ಟು ವೆಚ್ಚಮಾಡಿದರೆ ಏತಕ್ಕೆ ಬಂತು? ಮುಂದೆ ನಿಮ್ಮ ಮಕ್ಕಳು ಮರಿಗಳಿಗೆ ಬೇಡವೇ, ನಿಮ್ಮಷ್ಟಕ್ಕೆ ನೀವು ನೋಡಿಕೊಂಡರೆ ತೀರಿತೇ, ಹಾಗೆ ಮಾಡದೆ ಮಕ್ಕಳಿಗೇನಾದರೂ ಸ್ವಲ್ಪ ಗಂಟು ಮಾಡಿಡಿರಿ.ಹಣವಿಲ್ಲದವರನ್ನು ಯಾರೂ ಹಣಿಕಿ ನೋಡರು" ಎಂಬದಾಗಿ ಹೇಳಿದರೆ ಅದಕ್ಕವರು ನಗುತ್ತ "ಹಣವನ್ನು ಗಳಿಸಿಟ್ಟರೆ ಮಕ್ಕಳು ಜಾಣರಾಗುವದಿಲ್ಲ. ಹಿರಿಯರು ಹಣವನ್ನು ಕೂಡಿಟ್ಟಿರುವರೆಂದು ತಿಳಿದು ವಿದ್ಯೆಕಲಿಯದೆ ಸ್ವಚ್ಛಂದವೃತ್ತಿಯಲ್ಲಿ ಕೂತು ಉಣ್ಣುವರು. ಇದ್ದದ್ದನ್ನು ತಿಂದು ತೀರಿಸೋಣವೆಂದೆನ್ನುವರು. ಅದರಿಂದ ಮಕ್ಕಳು ದಡ್ಡರಾಗುವರು. ವಿದ್ಯೆಯಿಲ್ಲದವನು ಹದ್ದಿಗಿಂತ ಕಡೆ" ಎಂಬದಾಗಿ ಅವರ ಮಾತಿಗೆ ವಿನೋದದಿಂದ ಉತ್ತರಕೊಡುವರು. ಎಲ್ಲರೂ ಹೀಗೇ ಮಾಡಬೇಕೆಂದು ಇವರ ಅಭಿಪ್ರಾಯವಲ್ಲ. ಗ್ರಾಹ್ಯಾಂಶವಿಷ್ಟೆ, ವಿದ್ಯೆಯ ಕಡೆಗೆ ಇವರ ಲಕ್ಷ್ಯವು ಎಷ್ಟಿತ್ತೆಂಬದನ್ನಷ್ಟೇ ನೋಡಬೇಕಾಗಿದೆ. ಜ್ಞಾನಿಗಳು

ಧನವನ್ನು ಧಿಕ್ಕರಿಸುತ್ತಾರೆ. "ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬಂತೆ ವೀರಶೈವರು ವಿದ್ಯಾವಂತರಾಗಿ ಎಲ್ಲೆಡೆಯಲ್ಲಿಯೂ ವಂದಿಸಲ್ಪಡಬೇಕಾಗಿ ಇವರ ಮನದಾಶೆಯು. ನಿಜವಾಗಿ ಇವರೇ ವಿದ್ಯಾಭಿಮಾನಿಗಳೆಂದು ಹೇಳಬಹುದು.

"ಮುತ್ತು ಒಡೆದರೆ ಹೋಯಿತು; ಮಾತು ಆಡಿದರೆ ಹೋಯಿತು" ಎಂಬ ಸಾಮತಿಯ ಪ್ರಕಾರ ರಾ.ಬ||ರುದ್ರಗೌಡರು, ಗುರುಸಿದ್ಧಪ್ಪನವರ ತರುವಾಯ ಅವರ ಮನೆತನವನ್ನು ತಮ್ಮ ಮನೆಗಿಂತಲೂ ಮಿಗಿಲಾಗಿ ನೋಡಿದರು. ಅವರು ಹೇಳಿದಕಿಂತಲೂ ಹೆಚ್ಚಾಗಿ ಮಾಡಿದರು. ಅವರ ಮಕ್ಕಳನ್ನು ತಮ್ಮ ಮಕ್ಕಳಿಗೆ ಸರಿಯಾಗಿ ತಿಳಿದು ಸಾಲೆಗೆ ಕಳಿಸಿ, ಅವರನ್ನು ವಿದ್ಯಾವಂತರನ್ನಾಗಿ ಮಾಡಿದರು. ಜೇಷ್ಠಪುತ್ರರಾದ ಬಸವಂತಪ್ಪ ಗಿಲಿಗಿಂಚಿಯವರು ಇಂಗ್ಲೀಷ ಕಲಿತು ಜಾಣರಾಗಿ ಮೊನ್ನೆ ಮೊನ್ನೆ (ಸನ್ ೧೯೦೪ನೇ ಇಸವಿ) ಬಿ.ಎ. ಪರೀಕ್ಷೆಯಲ್ಲಿ ಪಾಸಾಗಿ ತಂದೆಯ ಹೆಸರನ್ನು ಮುಂದೆ ತಂದರು. ಸದ್ಯಕ್ಕೆ ಇವರು ಬೆಳಗಾವಿಯಲ್ಲಿ ಕಮೀಶನರ ಕಚೇರಿಯಲ್ಲಿ ನಾಲ್ವತ್ತು (೪೦) ರೂಪಾಯಿ ಸಂಬಳವುಳ್ಳ ಕಾರಕೂನರಾಗಿರುವರು. ಈ ಬಸವಂತಪ್ಪ ಗಿಲಿಗಿಂಚಿಯವರು ನಮ್ಮ ಮಿತ್ರರ ಹೆಸರನ್ನು ಮುಂದೆ ತಂದರೆಂತಲೂ, ನಾವು ಇವರಿಗೆ ವಿದ್ಯಾ ಕಲಿಸಲಿಕ್ಕೆ ಮಾಡಿದ ಸಹಾಯವನ್ನು ಸಾರ್ಥಕಮಾಡಿದರೆಂತಲೂ ರಾ.ಬ||ರುದ್ರಗೌಡರು ಆನಂದವನ್ನು ಹೊಂದಿದರು. ಚಿಕ್ಕವರಿಬ್ಬರು ಬೆಳಗಾವ ಸರದಾರ್ಸ ಹೈಸ್ಕೂಲಿನಲ್ಲಿ ಇಂಗ್ಲಿಷ ಕಲಿಯುತ್ತಿರುವರು. ವಾಚಕರೇ, ನೋಡಿದಿರಾ ರಾ.ಬ||ರುದ್ರಗೌಡರವರ ಮಿತ್ರಪ್ರೇಮವೂ, ಪ್ರಮಾಣಿಕತನವೂ, ಪರೋಪಕಾರಬುದ್ಧಿಯೂ ಎಷ್ಟು ಮನೋಹರವಾಗಿದೆ? ಎಷ್ಟು ಪುಣ್ಯಕರವಾಗಿದೆ? ನಿಜವಾದ ಮಿತ್ರರೆಂದು ಇಂಥವರಿಗೇ ಅನ್ನಬೇಕು. ಮಿತ್ರ ಎಂಬ ಅನ್ವರ್ಥನಾಮವು ಇಂಥ ಪುಣ್ಯಾತ್ಮರಿಗೇ ಸಲ್ಲುವದು. ಇಂಥ ಮಹಾನುಭಾವರು ಎಲ್ಲಿಯಾದರೂ ದೊರಕುವರೋ? ಇಂಥ ಅಮೌಲ್ಯವಾದ ಗುಣಪ್ರಭಾವದಿಂದಲೇ ಇವರ ಪ್ರಖ್ಯಾತಿಯಾಯಿತು. ದಿಗ್ದೇಶದಲ್ಲೆಲ್ಲ ಇವರ ಕೀರ್ತಿಯ ಬಳ್ಳಿಯು ಹಬ್ಬುಗೊಂಡಿತು. ಹಳ್ಳಿಗಾಡಿನ ಹುಡುಗರಿಗೆ ಕೂಡ ಇವರ ಹೆಸರು ಗೊತ್ತಾಯಿತು. ಹೆಂಗಸು ಕೂಡ ಇವರನ್ನು ಹಾಡಿ ಹರಿಸಹತ್ತಿದರು. ಜನರು ಇವರ ಗುಣಾನುದರ್ಶಕವಾದ ಹಾಡುಗಳನ್ನು ಕಟ್ಟಿ ಹಾಡಹತ್ತಿದರು. ಇವರ ಯಶೋದುಂದುಭಿಯು ಎಲ್ಲ ಕಡೆಗೂ ನುಡಿಯಹತ್ತಿತು. ನುಡಿದಂತೆ ನಡೆಯುವವನು ನಾಡಿಗೆಲ್ಲ ಮಾನ್ಯನು, ಎಂಬ ವ್ಯವಹಾರದೊಳಗಿನ ಮಾತು ನಿದರ್ಶನಕ್ಕೆ ಬಂತು.

ರಾ.ಬ||ಗುರುಸಿದ್ಧಪ್ಪನವರು ವೀರಶೈವರು, ಅಂದರೆ ಲಿಂಗಾಯತ ನೆಯ್ಕಾರರು. ಇವರ ಜನನ ಗ್ರಾಮವು ಧಾರವಾಡ. ಇವರ ಮನೆಯು ಧಾರವಾಡ ಕಾಮನಕಟ್ಟಿಯಲ್ಲಿ ಬಾನಿಯ ಬಸಪ್ಪನವರ ಮನೆಯ ಎದುರಿಗೆ, ಸುಪ್ರಸಿದ್ಧ ಕಲ್ಲನಗೌಡ ತಂದೆ ಕಲ್ಲನಗೌಡ ಕಸಬಾ ಪಾಟೀಲ ಇವರ ಮನೆಗೆ ಸಮೀಪವಾಗಿ, ಅಥವಾ ಚೌರೀ ಬಸವಣ್ಣನ ಗುಡಿಗೆ ತೀರ ಸಮೀಪವಾಗಿ ಇರುತ್ತದೆ. ಇವರ ಕುಲದಲ್ಲಿ ಅಥವಾ ವೀರಶೈವರಲ್ಲಿ ಇಂಗ್ಲೀಷ ಕಲಿತು ಮುಲಕೀಖಾತೆಯಲ್ಲಿ ದೊಡ್ಡ ಅಧಿಕಾರಸ್ಥರಾದವರೂ, ವಿದ್ಯಾಭಿಮಾನಿಗಳೂ, ಮತಾಭಿಮಾನಿಗಳೂ ಇವರೇ ಮೊದಲಿನವರು. ಇವರೂ, ರಾವಬಹದ್ದೂರ ರುದ್ರಗೌಡರೂ ಪರಮ ಸ್ನೇಹಿತರಾದದರಿಂದ ಇವರಿಬ್ಬರು ಒಮ್ಮನಸಿನಿಂದಲೂ, ಪ್ರೇಮದಿಂದಲೂ, ವಿಶ್ವಪ್ರಯತ್ನದಿಂದಲೂ ಮಾಡಿದ ಮಹತ್ಕಾರ್ಯಗಳೂ, ಸುಧಾರಣೆಗಳೂ ಈ ಚರಿತ್ರೆಯಲ್ಲಿ ಅಲ್ಲಲ್ಲಿಗೆ ಕಂಡುಬರುತ್ತದೆ. ಆ ಕಾರ್ಯಗಳಿಂದ ರಾ.ಬ||ಗುರುಸಿದ್ಧಪ್ಪನವರು ಎಂಥವರಿದ್ದರು, ಅವರಲ್ಲಿ ಮತಾಭಿಮಾನವೂ, ವಿದ್ಯಾಭಿಮಾನವೂ ಎಷ್ಟು ಜಾಗ್ರತವಾಗಿತ್ತು, ಕರ್ತವ್ಯ ದಕ್ಷತೆ ಯಾವ ಪ್ರಕಾರದ್ದಿತ್ತು, ಅವರ ಪೌರುಷವೂ, ಮಹರ್ದಶೆಯೂ ಜನರಲ್ಲಿ ಎಷ್ಟು ಹಬ್ಬುಗೊಂಡಿತ್ತು, ಇವರು ಎಷ್ಟು ಘನ ಪುರುಷರೆಂದೆನ್ನಿಸಿಕೊಂಡು ಹೋದರು? ಇದೆಲ್ಲ ಸುಜ್ಞರಾದ ವಾಚಕ ಮಹಾಶಯರಿಗೆ ಸಹಜವಾಗಿ ತಿಳಿಯುವಂತಿದೆ. ಅದರಿಂದ ವಿಶೇಷ ಬರೆಯುವ ಕಾರಣವಿಲ್ಲ. ಸಾರಾಂಶ, ಇವರು ಸದ್ಗುಣಿಗಳೂ, ಸುಶೀಲರೂ,

ಗಿಲಗಿಂಚಿಯವರ ಮನೆತನದ ವಂಶಾವಳಿಯು



ಅರಟಾಳ ರುದ್ರಗೌಡರ ಚರಿತ್ರೆ / ೧೦೮

ಸುಧಾರಣಾಗ್ರಗಣ್ಯರೂ, ಸುಂದರರೂ, ತೇಜಃಪುಂಜರೂ, ರಸಿಕರೂ, ದೀರ್ಘದೇಹಿಗಳೂ, ದೀರ್ಘವಿಚಾರಿಗಳೂ, ಕರಣಾಳುಗಳೂ, ಮಹೋದಾರರೂ, ರಾಜ್ಯಕಾರ್ಯಧುರಂದಧರರೂ ಆಗಿದ್ದರೆಂದು ಹೇಳಬಹುದು. ಇವರ ಮನೆತವದನರೆಲ್ಲರು ಸುಶಿಕ್ಷಿತರಾಗಿದ್ದರೆಂಬುದು ಬದಿಗೆ ಬರೆಯಲ್ಪಟ್ಟ ವಂಶಾವಳಿಯ ಮೇಲಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಇವರು ಬೆಳಗಾವ ಜಿಲ್ಲೆಯ ಡಿಸ್ಟ್ರಿಕ್ಟ ಡೆಪೂಟಿ ಕಲೇಕ್ಟರರಾಗಿ ಬಂದಮೇಲೆ, ಬೆಳಗಾವಿಯಲ್ಲಿ ಸೆಟ್ಟೀಕೇರಿ ಎಂಬ ಓಣಿಯಲ್ಲಿ ಒಂದು ಮನೆಯನ್ನು ಕ್ರಯಕ್ಕೆ ತೆಗೆದುಕೊಂಡು, ಅಲ್ಲಿಯೇ ವಾಸಿಸಹತ್ತಿದರು. ಸದ್ಯಕ್ಕೆ ಈ ಮನೆಯಲ್ಲಿಯೇ ಅವರ ಮಕ್ಕಳೂ, ಪರಿವಾರದವರೂ ಇರುತ್ತಾರೆ. ಗುರುಸಿದ್ಧಪ್ಪನವರ ಕೀರ್ತಿಯು ಚಿರಸ್ಥಾಯವಾಗಿರುತ್ತಿದ್ದು, ಇವರ ವಂಶದ ಪ್ರಭಾವವಾದರೂ ಇವರಷ್ಟಕ್ಕೆ ತಗ್ಗಲಿಲ್ಲ. ಇವರ ಚಿರಂಜೀವರು ವಿದ್ಯಾಪಥದಲ್ಲಿ ಮುಂದೆ ಹೋಗಿ(ಗ್ರ್ಯಾಜುಯೇಟರಾಗಿ)ತಂದೆಯ ಹೆಸರನ್ನು ಮುಂದೆ ತಂದದರಿಂದ ಮತ್ತಿಷ್ಟು ಆನಂದಕ್ಕೆ ಕಾರಣವಾಗಿದೆ.

ಪ್ರತಿಸೂರ್ಯ ಪ್ರಕಾಶ

ರಾ.ಬ॥ಗುರುಸಿದ್ಧಪ್ಪನವರು ಮರಣಹೊಂದುವ ಪೂರ್ವದಲ್ಲಿ ಲಿಂಗಾಯತ ಫಂಡು ಸುಮಾರು ಒಂದು ಲಕ್ಷಕ್ಕೆ ಬಂದಿತ್ತು. ಸಾಧಾರಣವಾಗಿ ವಿದ್ಯಾರ್ಜನೆಯ ಕೆಲಸ ನಡೆಯಹತ್ತಿತು. ಆದರೂ ರಾ.ಬ॥ರುದ್ರಗೌಡರು ಇಷ್ಟರಿಂದ ತೃಪ್ತರಾಗಲಿಲ್ಲ. ಗುರುಸಿದ್ಧಪ್ಪಣ್ಣನವರ ವಾಕ್ಯಗಳನ್ನು ಇವರು ಅಕ್ಷರಶಃ ನೆನಪಿಟ್ಟಿದ್ದರು. ಇವರ ಮನೋದೇವತೆಯು ಇವರನ್ನು ಸುಮ್ಮನೆ ಕೂಡ್ರಗೊಡಲಿಲ್ಲ. ಎಚ್ಚರದಲ್ಲಿಯೂ, ಕನಸಿನಲ್ಲಿಯೂ, ಗಾಢನಿದ್ರೆಯಲ್ಲಿಯೂ ವೀರಶೈವರ ವಿದ್ಯಾರ್ಜನೆಯ ಯೋಚನೆಯನ್ನೇ ಮಾಡಹತ್ತಿದರು. ದೊಡ್ಡ ದೊಡ್ಡ ಸಂಸ್ಥಾನಿಕರಲ್ಲಿಯೂ, ದೇಸಾಯರಲ್ಲಿಯೂ, ಸಾವಕಾರರಲ್ಲಿಯೂ ವಿದ್ಯಾಭಿರುಚಿಯನ್ನು ಹುಟ್ಟಿಸಿ, ಅವರ ಮಕ್ಕಳನ್ನು ರಾಜವಿದ್ಯಾಶಿಕ್ಷಿತರನ್ನಾಗಿ ಮಾಡಲಿಕ್ಕೆ ಚೆನ್ನಾಗಿ ಪ್ರೋತ್ಸಾಹಿಸಿದರು. ಬಡ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಯಲಿಕ್ಕೆ ಉತ್ತೇಜ ಕೊಡಹತ್ತಿದರು. ಜಾಗ್ರತಮತಿಯುಳ್ಳ ವಿದ್ಯಾರ್ಥಿಗಳನ್ನು ಲಿಂಗಾಯತ ಫಂಡಿನ ಹಣದಿಂದ ಸುಶಿಕ್ಷಿತರನ್ನಾಗಿ ಮಾಡಿದರು. ಫಂಡನ್ನು ಇನ್ನೂ ಅಭಿವರ್ಧಿಸಲಿಕ್ಕೆ ಉಪದೇಶಮಾಡಹತ್ತಿದರು. ಇವರ ಸಮಂಜಸವಾದ ಉಪದೇಶ ಬೀಜಗಳು ವೀರಶೈವಧನಾಢ್ಯರ ಹೃದ್ಭೂಮಿಯಲ್ಲಿ ಮೊಳೆಯ ಹತ್ತಿದವು. ಲಿಂಗಾಯತ ಫಂಡು ವರ್ಧಿಸಹತ್ತಿತು. ಇವರ ವಿಶ್ವಪ್ರಯತ್ನವನ್ನೂ, ಸತ್ಕೃತಿಯನ್ನೂ ಕಂಡು ರಾ.ಬ॥ರುದ್ರಗೌಡರು ಗುರುಸಿದ್ಧಪ್ಪನವರನ್ನು ಮರೆಸಿದರೆಂದು ಜನರು ಮಾತಾಡಹತ್ತಿದರು. ರುದ್ರಗೌಡರೆಂಬ ಪ್ರತಿಸೂರ್ಯಛಾಯೆಯು ಪ್ರಕಾಶಿಸಹತ್ತಿತು. ಪ್ರತಿಸೂರ್ಯನ ಹೊಂಬಣ್ಣದ ಕಿರಣಗಳು ಎಲ್ಲ ಸ್ಥಳಗಳಲ್ಲಿಯೂ ಬೆಳಗಿದವು. ಇವರ ಚತುರತನವು ಚತುಃಸೀಮೆಗಳಲ್ಲಿಯೂ ಚದುರಿತು. ಗುರುಸಿದ್ಧಪ್ಪಣ್ಣನವರ ಮರಣದಿಂದ ಬತ್ತಿಹೋಗಿದ್ದ ವೀರಶೈವರ ಆನಂದಸಾಗರವು ರಾ.ಬ॥ರುದ್ರಗೌಡರ ಪ್ರಭಾವದಿಂದ ಉಕ್ಕೇರಹತ್ತಿತು. ಮುಸುಕಿರ್ದ ಕತ್ತಲೆಯು ಹರಿದು ದಿವ್ಯಪ್ರಕಾಶವಾಯಿತು. ಇದರಿಂದ ಸರಕಾರದಲ್ಲಿಯೂ, ಇವರ ಪ್ರತಿಷ್ಠೆಯು ಪ್ರಬಲವಾಗಿ ಹೋಯಿತು.

ರುದ್ರಾಣಿಯವರ ಜನನ

ವೀರಶೈವ ಭೂಮಾತೆಯ ತಿಲಕದಂತೆ ಶೋಭಿಸುವ ರಾ.ಬ॥ರುದ್ರಗೌಡರ ಪ್ರತಿಭೆಯನ್ನು ನೋಡಿ, ವೀರಶೈವ ಜನಾಂಗಕ್ಕೆಲ್ಲ ಅತಿ ಸಂತೋಷವಾಯಿತು. ಬಂಧುಬಳಗದವರಿಗೂ, ಆಪ್ತೇಷ್ಟರಿಗೂ ಆಹ್ಲಾದವಾಯಿತು. ರಾವಬಹದ್ದೂರವರ ಐಶ್ವರ್ಯವೂ, ಸಡಗರವೂ ಈ ಮೇರೆಗೆ ತೂಗಾಡುತ್ತಿರುವಾಗ ಅಷ್ಟೈಶ್ವರ್ಯಗಳಲ್ಲಿ ಒಂದೇ ಐಶ್ವರ್ಯವು ಅವರಿಗೆ ಕಡಿಮೆಯಾಗಿತ್ತು. ಆ ನ್ಯೂನತೆಯಾವದೆಂಬದು ಸುಜ್ಞರಾದ ವಾಚಕರಿಗೆ ಇಷ್ಟರೊಳಗೆ ಗೊತ್ತಾಗಿರಬಹುದು. ಗೊತ್ತಾಗಲಿಕ್ಕೆ ಹೊತ್ತುಬೇಡ. ಮೇಲೆಯೇ ಕಾಣುತ್ತದೆ. "ಗೃಹೇ ರತ್ನಾನಿ ಬಾಲಕಾಃ" ಎಂಬಂತೆ ಸಂಪತ್ತಿಗೂ, ಸಂತೋಷಕ್ಕೂ ಮೂಲಕಾರಣರಾದಂಥ ಮಕ್ಕಳು ಇವರಿಗೆ ಇನ್ನೂ ಆಗಿರಲಿಲ್ಲ. ಇದೊಂದೇ ಕೊರತೆಯಲ್ಲದೆ ಬೇರೊಂದು ಕೊರತೆ ಇವರಿಗಿದ್ದಿದ್ದಿಲ್ಲ. ಎಲ್ಲ ಸಂಪತ್ತುಗಳನ್ನು ಒಮ್ಮೆಲೆ ಕೊಟ್ಟು ಬಿಟ್ಟರೆ ಇವರು ತನ್ನ ಸ್ಮರಣೆಯನ್ನು ಮರೆತಾರೆಂದು ತಿಳಿದು ದೇವರು ಇವರಲ್ಲಿ ಇದೊಂದು ಕೊರತೆಯನ್ನಿಟ್ಟಿರುವನೋ ಏನೋ ಎಂಬಂತೆ ಇವರಿಗೆ ಮಕ್ಕಳಾಗಿದ್ದಿಲ್ಲ. ರಾವಬಹದ್ದೂರವರು ಸಣ್ಣ ಮಕ್ಕಳ ಮೇಲೆ ಬಹಳೇ ಮಮತೆಯನ್ನು ಮಾಡುವವರು. ಅವುಗಳ ಬಾಲಲೀಲೆಗಳನ್ನು ಮನದಣಿ ನೋಡಿ ಅತಿಶಯವಾಗಿ ಆನಂದಿಸುವವರು. ಕಾರಣ, ಮಕ್ಕಳಿಲ್ಲದ್ದರಿಂದ ಮನದೊಳಗೆ ನೊಂದುಕೊಂಡಿದ್ದರು. ಮತ್ತು ಹಸುಮಕ್ಕಳನ್ನೆತ್ತದ ತೋಳು ಬಂಜೆದೋಳೆಂದೂ, ಮಕ್ಕಳಿಲ್ಲದವರ ಜನ್ಮವು ವ್ಯರ್ಥವೆಂದೂ ಚಿಂತಿಸಿ ಗುರುಪಾದವ್ವನವರು ಮಕ್ಕಳ ಸಲುವಾಗಿ ಶ್ರೀವೀರಭದ್ರದೇವರಿಗೆ ಅನೇಕ ತರದಿಂದ ಬೇಡಿಕೊಂಡರು. ಮತ್ತು ಅಣ್ಣಂದಿರ ಹೊಟ್ಟೆಯಿಂದ

ಹುಟ್ಟಿದ ಹಸುಗೂಸನ್ನೆತ್ತಿ ಎಂದು ಆಡಿಸುವೆನೋ ಎಂದು ವೀರವ್ವನವರು ಹಲವು ಹಂಬಲಿಸುತ್ತಿದ್ದರು. ಮತ್ತು ತಾವರೆಗಳಿಲ್ಲದ ಕೊಳವೂ, ತಾರೆಗಳಿಲ್ಲದ ಆಕಾಶವೂ, ಅರಸನಿಲ್ಲದ ರಾಜ್ಯವೂ ಹೇಗೆ ಚಂದಕಾಣುವದಿಲ್ಲವೋ ಅದರಂತೆ ಮಕ್ಕಳಿಲ್ಲದ ಮನೆಯು ಚಂದ ತೋರುವದಿಲ್ಲವೆಂದು ಬಾರಿಬಾರಿಗೆ ನೆನಿಸುತ್ತ, ಬೇಗನೆ ಇವರ ಹೊಟ್ಟೆಯಿಂದ ಫಲಕೊಟ್ಟು, ಬಹು ದಿವಸದಿಂದ ನಡೆದು ಬಂದ ಅಣ್ಣಂದಿರ ವಂಶವನ್ನುದ್ಧರಿಸೆಂದು ತಮ್ಮ ಮನೆದೇವರಾದ ಶ್ರೀವೀರಭದ್ರನನ್ನು ಸ್ಮರಿಸಹತ್ತಿದರು.

ಮುಂದೆ ಗುರುಪಾದವ್ವನವರು ಶ್ರೀ ಚೆನ್ನಬಸವೇಶ್ವರನ ಯಾತ್ರೆಗಾಗಿ ತಮ್ಮ ತವರುಮನೆಯಿಂದ ಉಳವೀಕ್ಷೇತ್ರಕ್ಕೆ ಹೋಗಿ, ದೇವರ ದರ್ಶನವನ್ನು ಹೊಂದಿ, ಆತನನ್ನು ಭಯಭಕ್ತಿಯಿಂದ ಬೇಡಿಕೊಂಡು, ಪ್ರದಕ್ಷಿಣೆಯನ್ನು ಮಾಡುತ್ತಿರುವಾಗ ಉಡಿಯಲ್ಲಿ ಆಕಸ್ಮಾತ್ ಅನ್ನಪ್ರಸಾದವು ಬಂದು ಬಿದ್ದಿತು. ಶುಭಶಕುನವಾದದ್ದನ್ನು ತಿಳಿದು ಸಂತೋಷ ಹೊಂದಿ, ಯಾತ್ರೆಯನ್ನು ಮಾಡಿಕೊಂಡು ಮನೆಗೆ ಬಂದ ತುಸು ದಿವಸಗಳೊಳಗಾಗಿಯೇ ಅವರಿಗೆ ಈಶ ಕರುಣದಿಂದ ಗರ್ಭಲಾಂಛನಗಳು ತೋರಹತ್ತಿದವು. ಅದನ್ನು ತಿಳಿದು ಎಲ್ಲರೂ ಸಂತೋಷಪಟ್ಟರು. ಮುಂದೆ ಪುಂಸಮನ ಸೀಮಂತ ಕಾರ್ಯಾದಿಗಳನ್ನು ಯಥೋಚಿತವಾಗಿಯೂ, ಸಮಾರಂಭದಿಂದಲೂ ಮಾಡಿದರು. ಮುಂದೆ ನವಮಾಸಗಳು ತುಂಬಿ ಶ್ರೀಮನ್ನೃಪಶಾಲಿವಾಹನ ಶಕೆಯ (೧೮೧೩) ಹದಿನೆಂಟು ನೂರಾ ಹದಿಮೂರನೇ ಖರನಾಮ ಸಂವತ್ಸರದ, ಅಶ್ವೀನ ಮಾಸದ, ಸೋಮವಾರದ, ಅರುಣೋದಯದ ಶುಭಮುಹೂರ್ತದಲ್ಲಿ ಗುರುಪಾದವ್ವನವರು ಬಂಕಾಪುರದಲ್ಲಿರುವ ತಮ್ಮ ತವರ್ಮನೆಯಲ್ಲಿ ಹೆಣ್ಣುಕೂಸನ್ನು ಹೆತ್ತರು. ಗುರುಪಾದವ್ವನವರ ತಂದೆಯವರಾದ ಫಕೀರಪ್ಪ ಸೆಟ್ಟರು, ಮೊಮ್ಮಗಳ ಮುದ್ದುಮುಖವನ್ನು ಕಂಡು ಸಂತೋಷಪಟ್ಟರು. ಈ ಸುದ್ದಿಯನ್ನು ಕೇಳಿ ರಾ.ಬ॥ರುದ್ರಗೌಡರೂ, ಬಂಧು ಬಳಗದವರೂ ಆನಂದಪಟ್ಟರು. ಕೆಲವರು ಗಂಡು ಆಗಬೇಕಾಗಿತ್ತೆಂತಲೂ, ಕೆಲವರು ಹೆಣ್ಣು ಹಡೆದವರ ಮನೆಯು ತಣ್ಣಗಿರುವದೆಂತಲೂ ಮಾತಾಡುವವರಾದರು. ಏನೇ ಆಗಲಿ ಮಕ್ಕಳಾದದ್ದೇ ಒಂದು ದೊಡ್ಡದಾಯಿತು. ದೇವರು ಕೊಟ್ಟಿದ್ದನ್ನು ಸ್ವೀಕರಿಸಿ ಸಂತೋಷಪಡುವದೇ ಸದ್ಧರ್ಮವೆಂದು ಹೇಳಬಹುದು.

ಕೂಸಾದರೂ ತಂದೆ ತಾಯಿಗಳಂತೆ ಬಲು ಚಂದವಾಗಿತ್ತು. ವಿಶಾಲವಾದ ಕಣ್ಣುಗಳೂ, ಚಂದವಾದ ಚಂದುಟಿಯೂ, ನೀಟಾದ ನಾಸಿಕವೂ, ಮನೋಹರವಾದ ಮೈಬಣ್ಣವೂ ಇದ್ದು, ಕೂಸು ಚಂಡಿನಂತೆ ದುಂಡಗಿತ್ತು. ಬಹಳ ದಿವಸಕ್ಕೆ ಹುಟ್ಟಿದ ಮಕ್ಕಳು ಬಹಳ ಸಡಗರವನ್ನು ಹೊಂದುತ್ತವೆ. ಎಂಬಂತೆ ಎಲ್ಲ ಜನರು ಈ ಕೂಸನ್ನು ಬಹಳೇ ಪ್ರೀತಿಸಹತ್ತಿದರು. ಲಿಂಗಧಾರಣಾದಿ ಜನನ ವಿಧಿಗಳು ಶಾಸ್ತ್ರೋಕ್ತವಾಗಿ ಸಾಂಗವಾದ ಬಳಿಕ, ಹನ್ನೆರಡನೆಯ ದಿವಸ ಸರ್ವಸಮಾರಂಭದಿಂದ ಕೂಸನ್ನು ತೊಟ್ಟಿಲದೊಳಿಟ್ಟು, ಹೆಸರೇನಿಡಬೇಕೆಂದು ವೀರವ್ವನವರನ್ನು ಕೇಳಲು, ಅಣ್ಣಂದಿರು ಅವ್ವಂದಿರ ಮೇಲೆ ಬಹಳೇ ಪ್ರೇಮವುಳ್ಳವರಾದದರಿಂದಲೂ, ಅವ್ವಂದಿರು ವ್ರತನಿಯಮಾದಿಗಳಲ್ಲಿ ಮತ್ತು ಗುರುಲಿಂಗ ಜಂಗಮರಲ್ಲಿ ಬಹುನಿಷ್ಠೆಯುಳ್ಳವರಾದದರಿಂದಲೂ ಅವರ ಸ್ಮರಣಾರ್ಥವಾಗಿ ಈ ಕೂಸಿಗೆ ಅವ್ವನ ಹೆಸರಿಡುವದೇ ತಕ್ಕದ್ದಾಗಿರುತ್ತದೆಂದು ಹೇಳಲು ರುದ್ರವ್ವನೆಂದು ಹೆಸರಿಟ್ಟು ಮನೋಹರವಾಗಿ ಜೋಗುಳವಾಡಿದರು. ತುಸು ದಿವಸಗಳ ಮೇಲೆ ಸರ್ವ ವೈಭವದಿಂದ ಬಂಕಾಪುರದಿಂದ ಅವರನ್ನು ಕರಕೊಂಡು ಬಂದು, ಎಲ್ಲರೂ ಮುದ್ದುಮಗಳಾದ ರುದ್ರಾಣಿಯವರನ್ನು ನೋಡಿ, ನಮ್ಮ ತಾಯಿಯವರಾದ ರುದ್ರವ್ವನವರೇ ಹುಟ್ಟಿ ಬಂದರೆಂದು ಹಿರಿಹಿರಿ ಹಿಗ್ಗಿದರು. ಗುರುಪಾದವ್ವನವರೂ ವೀರವ್ವನವರೂ ಒಬ್ಬರಕಿಂತಲು ಒಬ್ಬರು ಪ್ರೀತಿಯಿಂದ ಆ ಮುದ್ದುಮಗುವನ್ನು ಸಲುಹ ಹತ್ತಿದರು. ಹೀಗೆ ರುದ್ರಾಣಿಯವರು ಬಾಲಲೀಲೆಗಳಿಂದ ದಿನಾಲು ಎಲ್ಲರನ್ನೂ ಸಂತೋಷಗೊಳಿಸುತ್ತ ಬಾಲಚಂದ್ರನಂತೆ ಬೆಳೆಯ ಹತ್ತಿದರು.

ಕುರುಕುಲದ ಕೋಲಾಹಲ

ರಾವಬಹದ್ದೂರ ರುದ್ರಗೌಡರು ಕಮಿಶನರ ಕಚೇರಿಯಲ್ಲಿ ದಪ್ತರದಾರರಾಗಿ ಸರಕಾರಕ್ಕೂ, ಜನಸಮೂಹಕ್ಕೂ ಪ್ರಿಯಕರರಾಗಿ ಮಹೋನ್ನತಿಯನ್ನು ಹೊಂದಿದ್ದು ನೋಡಿ, ಎಷ್ಟೋ ಮಂದಿ ಬ್ರಾಹ್ಮಣರಿಗೆ ಸಹನವಾಗಲಿಲ್ಲ. ಇವರ ಶುದ್ಧ ವರ್ತನದಿಂದ ಲಂಚಗುಳಿಗಳ ಆಟವು ಎಳ್ಳಷ್ಟು ನಡಿಯದಾಯಿತು. ಅವರ ಕ್ಷುದ್ರಕಲ್ಪನೆಗಳಿಗೆ ಸ್ವಲ್ಪವೂ ಮಾರ್ಗವಿಲ್ಲದಾಯಿತು. ಅದರಿಂದವರು ರಾವಬಹದ್ದೂರವರನ್ನು ಹೇಗಾದರೂ ಮಾಡಿ ಯಾವದೊಂದು ಪ್ರಸಂಗದಲ್ಲಿ ತೊಡಕಿಸಬೇಕೆಂದು ತರತರದ ಹಂಚಿಕೆಗಳನ್ನು ಹಾಕಹತ್ತಿದರು. ಇವರ ಶೋಧದಿಂದ ಮತ್ತು ದರ್ಪದಿಂದ ಹಿಂದೆ ಕ್ರಾಫರ್ಡಪ್ರಕರಣದಲ್ಲಿ ಆದ ಎಷ್ಟೋ ಲಂಚಗುಳಿಗಳ ಕೋಲಾಹಲವನ್ನೂ, ಬವಣೆಯನ್ನೂ ಕಂಡು ಎಲ್ಲರೂ ಹೆದರುತ್ತಿದ್ದರು. ಆದ್ದರಿಂದ ಹೊತ್ತು ಸಾಧಿಸಿ ಇವರನ್ನು ಹಣ್ಣಿಗೆ ತರಬೇಕೆಂದು ಎಷ್ಟೋ ಮಂದಿ ಹವಣಿಸಹತ್ತಿದರು. ಆದರೆ ರಾ.ಬ॥ರುದ್ರಗೌಡರು ಇಂಥ ಕೀಳು ಜನರ ಕಪಟತಂತ್ರಗಳಿಗೆ ಎಂದಾದರೂ ಬೆದರುವರೇ? ಆಡುಗಳ ಆಟಕ್ಕೆ ಆನೆ ಅಂಜಬಹುದೇ!

ಆದರೂ ದುಷ್ಟರಾದ ಕೆಲಜನರು ಕೂಡಿ ಇವರ ಮೇಲೆ ಒಂದು ಆರೋಪವನ್ನು ತಂದರು. ಅದೇನೆಂದರೆ: ರಾ.ಬ॥ರುದ್ರಗೌಡರು ಹಿಂದೆ ಚೀಟ್ನೀಸರಾಗಿದ್ದಾಗ ಸನ್ ೧೮೮೪ನೇ ಇಸವಿಯ ಮಾರ್ಚ ತಿಂಗಳಲ್ಲಿ ಹಕ್ಕಿನ ರಜೆಯ ಮೇಲೆ ಅರಟಾಳಕ್ಕೆ ಹೋದಾಗ, ಇವರ ಎರಡನೇ ಅಣ್ಣತಮ್ಮಂದಿರ ಮನೆತನದಲ್ಲಿ ಪಾಲಿನ ಸಲುವಾಗಿ ವ್ಯಾಜ್ಯವು ನಡೆದಿತ್ತು. ಆ ವ್ಯಾಜ್ಯವನ್ನು ಇವರೂ, ಕುನ್ನೂರ ಸಂಕನಗೌಡರೂ, ಇನ್ನೂ ಬೇರೆ ಅನೇಕ ಜನರೂ ಕೂಡಿ ತೀರಿಸಿ, ಅವರವರ ಪಾಲಿಗೆ ಬಂದ ಸ್ಥಾವರ ಜಂಗಮ ಯಾವತ್ತು ಜಿಂದಿಗಿಯ ಯಾದಿಯನ್ನು ಬರೆದಿಟ್ಟರು. ಆ ಯಾದಿಯನ್ನು ರಾವಬಹದ್ದೂರವರೇ ಬರೆದಿದ್ದರು. ಆಗ ಅವರ ವ್ಯಾಜ್ಯವು ತೀರಿಹೋಗಿತ್ತು. ಮುಂದೆ ಕೆಲವುದಿನಗಳಾದ ಮೇಲೆ ಅಂದರೆ ಸುಮಾರು ಎರಡು ವರ್ಷಗಳಾದ ಮೇಲೆ ಸಂಕನಗೌಡರು ಈ ನಂದಿದ್ದ ಜಗಳವನ್ನು ಪುನಃ ಎಬ್ಬಿಸಿದರು. ಕುನ್ನೂರ ಪಾಟೀಲರಾದ ಸಂಕನಗೌಡ ತಂದೆ ಕಲ್ಲನಗೌಡ ಇವರು ರಾ.ಬ॥ರುದ್ರಗೌಡರ ತಾಯಿಯ ತವರುಮನೆಯ ಅಣ್ಣತಮ್ಮಂದಿರಿದ್ದು ಧಾರವಾಡದಲ್ಲಿ ಇಲಾಖಾ ಸಾಹೇಬರವರ ಕಚೇರಿಯಲ್ಲಿ ಶಿರಸ್ತಾರರಾಗಿದ್ದರು. ಆಪ್ತರಾಗಿದ್ದಾಗ್ಯೂ ರುದ್ರಗೌಡರ ಉನ್ನತಿಯು ಅವರಿಗೆ ಸಹನವಾಗಿದ್ದಿಲ್ಲ. ಇವರನ್ನು ಕುತ್ಸಿತ ಬುದ್ಧಿಯಿಂದ ಕೌರವನಂತೆ ವಿರೋಧಿಸುತ್ತಿದ್ದರೂ, ನಿರ್ಮಲಾಂತಃಕರಣವುಳ್ಳ ಧರ್ಮರಾಜನಂಥ ರುದ್ರಗೌಡರು ಅವರನ್ನು ಪ್ರೀತಿಸುತ್ತಲೇ ಇದ್ದರು. ಇವರ ಚಾಣಾಕ್ಷತನದಿಂದ ಕ್ರಾಫರ್ಡ ಪ್ರಕರಣದಲ್ಲಿ ಕೆಳಗಿಳಿದ ಎಷ್ಟೋ ಮಂದಿ ದುಷ್ಟಬ್ರಾಹ್ಮಣರು ಇವರನ್ನು ಯಾವ ಪ್ರಸಂಗದಲ್ಲಿಯಾದರೂ ಬಿಕ್ಕಟ್ಟಿಗೆ ತರಬೇಕೆಂದು ಇವರ ಮೇಲೆ ಕುನುಸು ಇಟ್ಟಿದ್ದರು. ಇವರೊಳಗೊಬ್ಬರಾದ ಮಲ್ಹಾರ ಮಾರ್ತಾಂಡ ನಾಡಗೇರ ಸಾಕೀನ ಹಿರೇಕೆರೂರ ತಾಲೂಕ ಕೋಡ ಎಂಬವರು ಹುಬ್ಬಳ್ಳಿಯ ಸಬ್ ಜಜ್ಜಕೋರ್ಟಿನಲ್ಲಿ ಮುನಸೂಫರಾಗಿದ್ದರು. ಇವರ ತಂದೆಯಾದ ಮಾರ್ತಾಂಡ ಗುಡ್ಡೋ ನಾಡಗೇರ ಎಂಬವರು ಸನ್ ೧೮೮೬ರಲ್ಲಿ ಧಾರವಾಡದ ಇಲಾಖಾ ಸಾಹೇಬರವರ ಕಚೇರಿಯಲ್ಲಿ ಅವ್ವಲ ಕಾರಕೂನರಿದ್ದ, ಅಲ್ಲಿ ಲಂಚವೇನೂ ಸಿಗದ್ದರಿಂದ ಇವರಿಬ್ಬರು ತಂದೆಮಕ್ಕಳು ಮೆ॥ಕ್ರಾಫರ್ಡಸಾಹೇಬ ಬಹದ್ದೂರವರ ಕಡೆಗೆ ಮುದ್ದಾಂ ಹೋಗಿ, ಅವರಿಗೆ ಮಿತಿಮೀರಿ ಲಂಚಕೊಟ್ಟು, ರೋಣ ತಾಲೂಕಿನ ಅವ್ವಲ ಕಾರಕೂನಿಕೆಯ ಜಾಗೆಗೆ ನೇಮಿಸಿಕೊಂಡು ಬಂದಿದ್ದರು. ಯಾಕೆಂದರೆ ಆ ರೋಣ ತಾಲೂಕಿನಲ್ಲಿ ಅಳತಿಲ್ಲದೆ ಲಂಚದೊರೆಯುತ್ತಿತ್ತು. ಲಂಚಬಕ್ಕ ಅಧಿಕಾರಿಗಳು ಲಂಚಕೊಟ್ಟು ಎಷ್ಟೋ ಪ್ರಯತ್ನಮಾಡಿ, ಲಂಚವು ಬಹಳವಾಗಿ ಸಿಗುವ ಸ್ಥಳಗಳಿಗೆ ವರ್ಗಮಾಡಿಸಿಕೊಳ್ಳುತ್ತಿರುವದು ಎಲ್ಲರಿಗೂ ಗೊತ್ತಿರುತ್ತದೆ. ನಿಸ್ಪೃಹಿ ಕಾಮದಾರರಿಗೆ ಯಾವ ಸ್ಥಳ ದೊರೆತರೇನು? ಎಲ್ಲವೂ ಅವರಿಗೆ ಅಷ್ಟೇ ಸರಿ, ಮಾರ್ತಾಂಡ ಗುಡ್ಡೋ ಇವರು ಲಂಚಕೊಟ್ಟು

ರೋಣದ ಜಾಗೆಯನ್ನು ಸಂಪಾದಿಸಿದ್ದು ರಾ.ಬ॥ರುದ್ರಗೌಡರ ಶೋಧದಿಂದ (ಕ್ರಾಫರ್ಡ ಪ್ರಕರಣದಿಂದ) ಸರಕಾರಕ್ಕೆ ತಿಳಿದದರಿಂದ, ಮಾರ್ತಾಂಡ ಗುಡ್ಡೋ ಇವರನ್ನು ಸನ್ ೧೮೮೯ರಲ್ಲಿ ರೋಣದಿಂದ ಕಿತ್ತು ಕೆಟ್ಟ ಹವೆಯುಳ್ಳ ಕಾರವಾರ ಜಿಲ್ಲೆಯ ಎಲ್ಲಾಪುರ ತಾಲೂಕಿನ ಅವ್ವಲ ಕಾರಕೂನಿಕಿಯ ಜಾಗೆಗೆ ವರ್ಗಮಾಡಿದ್ದರು. ಮತ್ತು ಮಾರ್ತಾಂಡ ಗುಡ್ಡೋ ಇವರು ಸನ್ ೧೮೮೮ರಲ್ಲಿ ರೋಣ ತಾಲೂಕಿನ ಅವ್ವಲಕಾರಕೂನರಿದ್ದಾಗ ಅವರ ಮೇಲೆ ಅಯ್ವತ್ತು (೫೦) ರೂಪಾಯಿ ಲಂಚತೆಗೆದುಕೊಂಡ ಆರೋಪವು ಬಂದಿತ್ತು. ಅವರಿಗೆ ಕೆಲಸದಿಂದ ದೂರಾಗುವ ಪ್ರಸಂಗವೇ ಪ್ರಾಪ್ತವಾಗಿತ್ತು.

ಆಗ ರಾವ ಬ॥ರುದ್ರಗೌಡರು ಧಾರವಾಡದಲ್ಲಿಯೇ ಚೀಟ್ನಿಸರಿದ್ದರು. ರಾವಬಹದ್ದೂರವರು ಒಂದು ದಿವಸ ಹುಬ್ಬಳ್ಳಿಯಲ್ಲಿ ಮರಿಬಸಪ್ಪ ಟೊಪ್ಪಿಗಿ ಇವರ ಮನೆಯಲ್ಲಿ ಕೂತಾಗ್ಗೆ ಮಲ್ಹಾರ ಮಾರ್ತಾಂಡ ಇವರು ವೆಂಕಾಜಿ ಶ್ರೀಪಾದ ಅಳಗವಾಡಿ ಮೊಖ್ತ್ಯಾರ ವಕೀಲ ಕಸಬಾ ಧಾರವಾಡ ಎಂಬ ತಮ್ಮ ಮಿತ್ರರನ್ನು ಸಂಗಡ ಕರಕೊಂಡು ಬಂದು, ನಮ್ಮ ತಂದೆಯನ್ನು ಹ್ಯಾಗಾದರೂ ಮಾಡಿ ಉಳಿಸಿಕೊಳ್ಳಬೇಕೆಂದು ಹೇಳಿಕೊಂಡ ಸಾಷ್ಟಾಂಗ ಬಿದ್ದು, ಬಹದ್ದೂರವರ ಎರಡೂ ಪಾದರಕ್ಷೆಗಳನ್ನು ತನ್ನ ತಲೆಯ ಮೇಲಿಟ್ಟುಕೊಂಡಿದ್ದರು. ಮುಂದೆ ಅವರ ತಂದೆಗೆ ಏನೂ ಆಗಲಿಲ್ಲ. ಮತ್ತು ತಮ್ಮ ತಂದೆಗೆ ಎಲ್ಲಾಪುರಕ್ಕೆ ವರ್ಗವಾದದರಿಂದ ಆ ಕಾಲಕ್ಕೆ ಕಾರವಾರ ದಪ್ತರದಾರರಾಗಿ ಹೋಗಿದ್ದ ರಾವಬಹದ್ದೂರವರನ್ನು ಕುರಿತು "ನಮ್ಮ ತಂದೆಯನ್ನು ಆ ಕೆಟ್ಟ ಹವೆಯಿಂದ ಬಿಡಿಸಿ ದಯಮಾಡಿ ಹಳ್ಳಿಯಾಳ ತಾಲೂಕಕ್ಕಾದರೂ ವರ್ಗಮಾಡಿಸಿರೆಂ"ದು ಮುನಸೂಫ ಮಲ್ಹಾರರಾಯರು ವಿನಯದಿಂದ ಹೇಳಿಕೊಂಡಿದ್ದರು. ಮತ್ತು ಇವರ ಸ್ನೇಹಿತರಾದ ಡಾಕ್ಟರ ಕಾರ್ಡೋ ಇವರ ಕಡೆಯಿಂದಲೂ ಹೇಳಿಸಿದ್ದರು. ಯಾಕಂದರೆ ಹಳ್ಳಿಯಾಳಕ್ಕೆ ಅವರಿಗೆ ವರ್ಗವಾದರೆ ಧಾರವಾಡ ರೇಲಮಾರ್ಗದಿಂದ ಹಗಲೆಲ್ಲ ಹೋಗಿ ಬರಲಿಕ್ಕೆ ಅನುಕೂಲವಾಗುತ್ತಿತ್ತು. ಈ ಪ್ರಕಾರ ಹಲವು ಪ್ರಕಾರದಿಂದ ಹೇಳಿಕೊಂಡ ಮಲ್ಹಾರರಾಯರ ಮಾತುಗಳನ್ನು ಲಾಲಿಸಿ, ಎಲ್ಲರ ಅಡಚಣೆಗಳು ಒಂದೇ ಇರುತ್ತವೆಂದು ಅಂತಃಕರಣದಿಂದ ರಾವಬಹದ್ದೂರವರು ಅವರ ತಂದೆಗೆ ಹಳ್ಳಿಯಾಳಕ್ಕೆ ವರ್ಗಮಾಡಿಸಿದ್ದರು. ಆದರೆ ಈ ಕೆಟ್ಟ ಬ್ರಾಹ್ಮಣನಾದ ಮಲ್ಹಾರರಾಯರು ಆ ಉಪಕಾರವನ್ನು ಸ್ಮರಿಸದೆ, ಆ ಮೊದಲಿನ ಕುನಸನ್ನೇ ಮನಸಿನೊಳಗಿಟ್ಟು ಸಮಯವನ್ನು ಸಾಧಿಸುತ್ತಿದ್ದರು. ರಾ.ಬ॥ ರವರ ಕೂಡ ವಿರೋಧ ಬೆಳಿಸುತ್ತಿದ್ದ ಕುನ್ನೂರ ಸಂಕನಗೌಡರು ಆ ಮಲ್ಹಾರ ಮಾರ್ತಾಂಡವರಿಗೆ ಕೂಡಿಕೊಂಡರು. ಇನ್ನೂ ಕುಯುಕ್ತಿಗಳನ್ನು ರಚಿಸುವದರಲ್ಲಿ ಪ್ರವೀಣರಾದ ಎಷ್ಟೋ ಅರಣ್ಯಪಂಡಿತರೂ ಇವರೂ ಒಂದಾದರು. "ದುರ್ಜನಕು ದುರ್ಜನ ಮಿಲೇ ತೋ ಗಾಂಜ ಮೇ ಧತ್ತೂರ" ಎಂಬ ಕಬೀರೋಕ್ತಿಯಂತೆ ಚಾಂಡಾಳ ಚೌಕಡಿಯು ಕೂಡಿತು. ಒಟ್ಟಿಗೆ ಕುರಕುಲವೆಲ್ಲ ಕೂಡಿಕೊಂಡಂತಾಯಿತು.

ಸಂಕನಗೌಡರು ರಾವಬಹದ್ದೂರವರ ಅಣ್ಣತಮ್ಮಂದಿರ ಪಾಲದ ತಂಟೆಯನ್ನು ಹಿಂದೆ ಹೇಳಿದಂತೆ ಎಬ್ಬಿಸಿ, ಕೋರ್ಟಿನ ಮುಂದೆ ತಂದರು. ಹುಬ್ಬಳ್ಳಿಯ ಮುನಸೀಫರಾದ ಈ ಮಲ್ಹಾರ ಮಾರ್ತಾಂಡ ಎಂಬವರ ಕಡೆಗೇ ಚೌಕಸಿಗಾಗಿ ಈ ಪ್ರಕರಣವು ಬಂತು. ಹುಡುಕುತ್ತಿದ್ದ ಬಳ್ಳಿಯು ಕಾಲ್ತೊಡಕಿದಂತೆ ಮಲ್ಹಾರರಾಯರಿಗೆ ಮಹದಾನಂದವಾಯಿತು. ಮಲ್ಹಾರರಾಯರ ಚೌಕಸಿಯು ಹೇಗಾಗಿರಬಹುದೆಂಬದು ವಾಚಕರಿಗೆ ತಿಳಿದಿರಬಹುದು. ಆ ಪ್ರಕರಣದ ವಿಚಾರವನ್ನು ವಿರುದ್ಧ ಮಾಡಿದರು. ಸಂಕನಗೌಡರ ಪಕ್ಷದವರು ವಿಜಯಿಗಳಾದರು. ರಾವಬಹದ್ದೂರವರ ಪಕ್ಷದವರು ತಮ್ಮ ವಾಟಣೀಪತ್ರವನ್ನು ಹಾಜರಮಾಡಿದರು. ಈ ವಾಟಣೀ ಪತ್ರವು ಸಾದಾ ಕಾಗದದ ಮೇಲೆ ಬರೆಯಲ್ಪಟ್ಟಿರುವದೆಂತಲೂ, ರಜಿಷ್ಟರವಾಗದ ಕಾಗದಪತ್ರಗಳು ಪುರಾವೆಗೆ ಅಗ್ರಾಹ್ಯವೆಂತಲೂ ಮಲ್ಹಾರರಾಯರು ನಿಷ್ಕರ್ಷಿಸಿದರು. ಪುರಾವೆಗಾಗಿ ತಂದಿದ್ದ ಸಾಕ್ಷಿಗಳೇ ಆಗಲಿಲ್ಲ. ಹಿಂದೆ ರಾವಬಹದ್ದೂರವರು ಸ್ವತಃ ಬರೆದಿದ್ದ ಯಾದಿಯೇ ಈ ವಾಟಣೀಪತ್ರವು. ಮುಂದೆ ಸಂಕನಗೌಡರೂ, ಈ

ಮುನಸೂಫರೂ ಬೇರೆ ಎಷ್ಟೋ ಮಂದಿ ದುಷ್ಟಬ್ರಾಹ್ಮಣರೂ ಈ ಪ್ರಕರಣವನ್ನು ದೀರ್ಘವಾಗಿ ಬೆಳಿಸಿ, ಕಡ್ಡಿಯನ್ನು ಗುಡ್ಡಮಾಡುವ ಕೀಳುಯುಕ್ತಿಯನ್ನು ತೆಗೆದರು. ಈ ವಾಟಣೀಪತ್ರವನ್ನು ತೆಗೆದುಕೊಂಡು ಇದನ್ನು ರುದ್ರಗೌಡರು ಬನಾವಟಿಮಾಡಿರುತ್ತಾರೆಂಬದಾಗಿ ತಮಗೆ ಹೇಗೆ ಬೇಕೋ ಹಾಗೆ ಕಪಟಕೃತಿಗಳನ್ನು ರಚಿಸಿ, ರಾ.ಬ॥ರುದ್ರಗೌಡರು ಈ ವಾಟಣೀಪತ್ರವನ್ನು ಬನಾವಟ ಮಾಡಿರುವರೆಂಬ ಆರೋಪವನ್ನು ಹೊರಿಸಿದರು. ಕೋರ್ಟಿನಲ್ಲಿ ವಿಚಾರವಾಗಿ ಈ ವಾಟಣೀಪತ್ರವು ಬನಾವಟವೆಂಬಂತೆ ತೋರುತ್ತದೆಂದು ಮಲ್ಹಾರರಾಯರು ಬುದ್ಧ್ಯಾ ದುಷ್ಟ ಹೇತುವಿನಿಂದ ಬರೆದರು. ಪುರಾವೆಗೆ ಅಗ್ರಾಹ್ಯವೆಂದು ಠರಾವಮಾಡಿದಂಥ ಮತ್ತು ಪುರಾವೆಗಾಗಿ ತೆಗೆದುಕೊಳ್ಳದೆ ಇದ್ದಂಥ ವಾಟಣೀ ಪತ್ರವನ್ನು ಬನಾವಟವೆಂದು ಕಲ್ಪಿಸುವದು ಎಷ್ಟು ಮೂರ್ಖತನವು? ತಾರೀಖ ೨೯ನೇ ನವಂಬರ ಸನ್ ೧೯೨೮ನೇ ಇಸವಿ. ರಾ.ಬ॥ರುದ್ರಗೌಡರವರನ್ನು ಗೊಂದಲದಲ್ಲಿ ಹಾಕಬೇಕೆಂಬದೇ ಮುಖ್ಯವಾಗಿ ಸಂಕನಗೌಡರ ಮತ್ತು ಮಲ್ಹಾರರಾಯರ ಮನಸಿನಲ್ಲಿತ್ತು. ತಾವೇ ಮುನಸೂಫರು, ತಮ್ಮ ಕಯ್ಯೊಳಗಿನ ಕೆಲಸ ತಮಗೆ ಹೇಗೆಬೇಕೋ ಹಾಗೆ ನಿರ್ಣಯ ಮಾಡಿದರು.

ಬ್ರಾಹ್ಮಣರು ಈಗಲೇ ಆನಂದಿಸಹತ್ತಿದರು. ಆದರೂ ರಾವಬಹದ್ದೂರವರು ಹೆದರಲಿಲ್ಲ. ನಾನಂತೂ ಅನ್ಯಾಯದ ಕೆಲಸವನ್ನು ಎಳ್ಳಷ್ಟು ಮಾಡಿಲ್ಲ. ಎಲ್ಲರ ಸಮ್ಮತಿಯಂತೆ ಆದ ವಾಟಣೀಪತ್ರವನ್ನು ಬರೆದದ್ದು ಮಾತ್ರ ನಿಜವು. ಅದರೊಳಗೆ ತಿಲಮಾತ್ರ ಕಪಟತನವಿಲ್ಲ. ಸತ್ಯಕ್ಕೆ ಸಾವಿಲ್ಲ ಎಂದು ತಿಳಿದು ಸಮಾಧಾನದಿಂದಲೇ ಇದ್ದರು. ಈ ಪ್ರಕರಣವು ಮುಂದೆ ಅಪೀಲಾಗಿ ಜಜ್ಜಕೋರ್ಟಿನಲ್ಲಿ ವಿಚಾರ ನಡೆದು ಅಲ್ಲಿಯೂ ಕೆಳಗಿನ ಕೋರ್ಟಿನಲ್ಲಿ ಆದಂತೆ, ಈ ವಾಟಣೀಪತ್ರವು ಬನಾವಟವೆಂಬಂತೆ ತೋರುತ್ತದೆಂಬದಾಗಿ ನಿರ್ಣಯಿಸಲ್ಪಟ್ಟಿತ್ತು

ಹೊಸದಾಗಿ ಬಂದ ಸಾಹೇಬ ಜನರಿಗೆ ಏನೇನೂ ಅನುಭವವಿರುವದಿಲ್ಲ. ಯುರೋಪಿಯನ್ ಜನರಿಗೆ ನಮ್ಮ ದೇಶದ ಸ್ಥಿತಿಗತಿ, ಆಚಾರವಿಚಾರಗಳು ಎಷ್ಟು ಮಾತ್ರವೂ ಗೊತ್ತಿರುವದಿಲ್ಲ. ಯಾವದೊಂದು ಮಾಹಿತಿ ಬೇಕಾದರೆ ಕೈಕೆಳಗಿನವರನ್ನೇ ಕೇಳುವರು. ಬಹುಶಃ ಅವರೆಲ್ಲರು ಕಪಟಿಗಳಾದ ಬ್ರಾಹ್ಮಣರೇ, ಲಂಚಗುಳಿಗಳಾದ ಅವರು ಹೇಳಿದ್ದನ್ನೇ ನಂಬಿ ತಪ್ಪಿನಿಂದ ಅದರಂತೆ ನಿರ್ಣಯಮಾಡುವರು. ತಮ್ಮ ಜಾಣ್ಮೆಯಿಂದ ನ್ಯಾಯಾನ್ಯಾಯವಿಚಾರ ಮಾಡಿ, ಯೋಗ್ಯ ನಿರ್ಣಯವನ್ನು ಹೇಳುವ ನ್ಯಾಯಾಧೀಶರು ಕಡಿಮೆ. ಕೈಕೆಳಗಿನ ಕೀಳ ನೌಕರರ ಮಾತುಗಳನ್ನೇ ಪ್ರಾಧಾನ್ಯವೆಂದು ತಿಳಿದು ಕೆಲಸ ಮಾಡುವವರೇ ಬಹಳ ಮಂದಿ. ಇಂಥ ಅವಿಚಾರದ ನಿರ್ಣಯದಲ್ಲಿ ಸಟಿಯಿದ್ದದ್ದು ದಿಟವೂ, ದಿಟವಿದ್ದದ್ದು ಸಟಿಯೂ ಆಗಿ ನ್ಯಾಯದೇವತೆಯು ಹೊಯ್ಕೊಂಡು ಹೋಗುತ್ತಾಳೆ. ಇದು ಎಲ್ಲರಿಗೂ ಅನುಭವಕ್ಕೆ ಬಂದ ಮಾತು. ಅನನುಭವಿಕ, ಅಪ್ರಬುದ್ಧ, ಅವಿವೇಕಿ ನ್ಯಾಯಾಧೀಶರು ಬಂದರಂತೂ ಕೇಳುವದೇನು? "ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ॥ ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಂ?" ಎಂಬಂತೆ ಅನರ್ಥಕ್ಕೆ ಕಾರಣವಾಗುತ್ತದೆ. ವಿಚಾರ ದೃಷ್ಟಿಯಿಂದ ಮಾಡಿದ ನಿರ್ಣಯವು ದೇವರಲ್ಲಿಯೂ, ಜನರಲ್ಲಿಯೂ ವಂದಿಸಲ್ಪಡುತ್ತದೆ. ನ್ಯಾಯನಿರ್ಣಯವು ಸಾಮಾನ್ಯವಾದ ಕೆಲಸವಲ್ಲ. "ರಾಜಾ ಪ್ರತ್ಯಕ್ಷದೇವತಾ" ಎಂಬಂತೆ ನ್ಯಾಯಾಧೀಶನು ಪ್ರತ್ಯಕ್ಷವಾಗಿ ದೇವರಿರುತ್ತಾನೆ. ಅಸ್ತವ್ಯಸ್ತ ನಿರ್ಣಯಗಳು ನಿರಪರಾಧಿಯನ್ನು ಶಿಕ್ಷಿಸಿದಂತೆಯೂ, ಅಪರಾಧಿಯನ್ನು ರಕ್ಷಿಸಿದಂತೆಯೂ ಆಗಿ ಆ ನ್ಯಾಯಾಧಿಶರು ನಿಜವಾಗಿ ದೇವದ್ರೋಹಿಗಳಾಗುತ್ತಾರೆ. ಇಂಥ ನ್ಯಾಯಾಧೀಶರು ಮುಂದೆ ಯಾವ ಗತಿಗೆ ಹೋಗುತ್ತಾರೋ ದೇವರೇ ಬಲ್ಲ. ತಿಳಿಯದೆ ಆದ ತಪ್ಪಿತಕ್ಕೆ ಮಾತ್ರ ದೋಷವಿಲ್ಲ. ತಿಳಿದೂ ತಿಳಿದೂ ಅನ್ಯತವನ್ನು ಆಚರಿಸುವವನು ಅಧೋಗತಿಗೆ ಹೋಗತಕ್ಕವನೇ ಸರಿ.

ಆಗ ಜಜ್ಜಕೋರ್ಟಿನ ಎಲ್ಲ ನೌಕರರು ಬ್ರಾಹ್ಮಣರೇ ಇದ್ದರು. ಮುನಸೂಫಕೋರ್ಟಿನವರೂ, ಅವರೂ ಬೆಸೆದಾ ತಮ್ಮ ಸ್ವೇಚ್ಛಾವಿಹಾರಕ್ಕೆ ಆತಂಕಮೂರ್ತಿಗಳಾದ ರಾ.ಬ॥ರುದ್ರಗೌಡರವರನ್ನು ಕೆಳಗಿಳಿಸಬೇಕೆಂಬದಾಗಿ ಆತುರಿಸುತ್ತಿದ್ದರು. ತಮ್ಮ ನಿರಂಕುಶಪ್ರಭುತ್ವದಲ್ಲಿ ಸೆಶನ ಜಜ್ಜರಾದ ಮೆ॥ಹ್ಯಾಮಿಲ್ಟನ್ ಸಾಹೇಬ ಬಹದ್ದೂರವರು ಅವರ ಇಷ್ಟದಂತೆಯೇ ನಿರ್ಣಯ ಮಾಡಲಾಗಿ, ಬ್ರಾಹ್ಮವೃಂದವೆಲ್ಲ ಸಂತೋಷ ಸಮುದ್ರದಲ್ಲಿ ಮುಳುಗಿಹೋದರು. ಅವರ ಆನಂದವು ಹೃದಯದಲ್ಲಿ ಹಿಡಿಸಲಾರದಾಯಿತು. ಅವರ ಅಟ್ಟಹಾಸಕ್ಕೆ ಅಳತೆಯಿಲ್ಲದಾಯಿತು. ರಾ.ಬ॥ರುದ್ರಗೌಡರ ಭದ್ರವಾಯಿತೆಂದು ಕುಣಿದಾಡಿದರು. ಅವರ ಚಂಡಿಕೆಗಳೂ ರುಮಾಲುಗಳೂ ಹಾರಾಡಿದವು. ಕೇಕೆಯನ್ನು ಹಾಕಹತ್ತಿದರು. ಈ ಕುರುಕುಲದ ಕೋಲಾಹಲವು ಹೆಚ್ಚಾಯಿತು. ಈ ದುಷ್ಟಹೇತುವಿನ ಆನಂದ ಪ್ರದರ್ಶನಾರ್ಥವಾಗಿ ಗದಗ, ಹುಬ್ಬಳ್ಳಿ, ಧಾರವಾಡಗಳಲ್ಲಿ ಉತ್ಸವಗಳು ನಡೆದವು. ದೇವಾಲಯಗಳಲ್ಲಿ ದೀಪೋತ್ಸವವಾದವು. ಧಾರವಾಡದಲ್ಲಿ ಸೋಮೇಶ್ವರದೇವರ ಅಭಿಷೇಕವಾಯಿತು. ಬ್ರಾಹ್ಮಣ ಸಮೂಹವೆಲ್ಲ ಕೂಡಿ ಮಹಾಪ್ರಸ್ಥವನ್ನು ಮಾಡಿ ಹೂರಣಗಡಬು ಹೆರೆದ ತುಪ್ಪವನ್ನು ಉಂಡರು. ಸಂಕನಗೌಡರು ಬ್ರಾಹ್ಮಣರಿಗೆ ತಲೆಗೆ ನಾಲ್ಕಾಣೆಯಂತೆ ದಕ್ಷಿಣೆಯನ್ನು ಕೊಟ್ಟರು. ವಾದ್ಯಗಳು ಮೊಳಗಿದವು. ಖಾದ್ಯಗಳು ಬೆಳಗಿದವು. ಅವರ ಉತ್ಸವಕ್ಕೂ ಆನಂದಕ್ಕೂ ಅಳತೆಯಿಲ್ಲದಾಯಿತು. ಸಂಕನಗೌಡರು ಲಂಕೆಗೆ ಬೆಂಕಿಹಚ್ಚಿ ಶತಕೃತ್ಯಮಾಡಿದೆನೆಂದು ಧೀಂಕಿಟ್ಟು ಮೆರೆದಾಡಹತ್ತಿದರು. ಈ ಯಾವತ್ತು ಸಂಗತಿಯನ್ನು ಧಾರವಾಡ ಚಂದ್ರೋದಯವೆಂಬ ವರ್ತಮಾನ ಪತ್ರದಲ್ಲಿ ಪ್ರಕಟಮಾಡಿ, ತಮ್ಮ ಆನಂದವನ್ನು ಪೂರ್ಣಮಾಡಿಕೊಂಡರು.

ಈ ಕುರುಕುಲದ ಆನಂದ ಸಾಮ್ರಾಜ್ಯವು ಈ ಮೇರೆಗೆ ನಾನಾಪ್ರಕಾರವಾಗಿ ಮೆರೆದಾಡುತ್ತಿರುವಾಗ, ಧೈರ್ಯಶಾಲಿಗಳಾದ ರಾ.ಬ॥ರುದ್ರಗೌಡರು ಯಥಾಸ್ಥಿತವಾಗಿ ಸಮಾಧಾನವೃತ್ತಿಯಿಂದಲೇ ಇದ್ದರು. ತುಂಬಿದ ಕೊಡವು ತುಳುಕುವದಿಲ್ಲ. ಅರಗೊಡವೇ ಅರ್ಭಾಟವನ್ನು ಮಾಡುತ್ತದೆ. ಸತ್ಯದಲ್ಲಿ ಸೈರಣೆಯು ನೆಲೆಗೊಂಡಿರುತ್ತದೆ. ಸತ್ಯಪಕ್ಷವೇ ಸದಾ ಗೆದೆಯುವದೆಂದು ಗಟ್ಟಿಯಾಗಿ ತಿಳಿದು ಜಪಾನ ನೌಕಾಧಿಪನಾದ ಅಡ್ಮಿರಲ್ ಟೋಗೋ ಇವರು ರಶಿಯಾ ಜಪಾನ ಯುದ್ಧದಲ್ಲಿ ತಮ್ಮ ಕರ್ತವ್ಯ ತತ್ಪರರಾಗಿ ಸಮಾಧಾನವೃತ್ತಿಯನ್ನು ಹ್ಯಾಗೆ ಧಾರಣಮಾಡಿದ್ದರೋ, ಕುರುಕುಲದ ಕಪಟವ್ಯೂಹದಲ್ಲಿ ಧರ್ಮರಾಜನು ಹೇಗೆ ಶಾಂತವೃತ್ತಿಯನ್ನು ಅನುಸರಿಸಿದನೋ ಅದರಂತೆ ರಾ.ಬ॥ರುದ್ರಗೌಡರಾದರು "ಸತ್ಯಮೇವ ಜಯತೇ". ಎಂಬ ಸಿದ್ಧವಾಕ್ಯವನ್ನೇ ಸ್ಮರಿಸಿ ಸತ್ಯ ಮತ್ತು ಶಾಂತವೃತ್ತಿಯನ್ನೇ ಅನುಕರಿಸಿದರು. ಮುಂದೆ ಈ ಪ್ರಕರಣವು ಮುಂಬಯಿ ಹಾಯಕೋರ್ಟಿನ ವರೆಗೆ ಹೋಗಿ, ಅಲ್ಲಿ ಸತ್ಯವಿಚಾರ ನಡೆದು, ಇವರ ಪ್ರಾಮಾಣಿಕತನವನ್ನು ಆರಂಭದಿಂದ ಕಡೆತನಕ ನೋಡಿದ ಸರಕಾರದವರು, ದ್ವೇಷಮೂಲಕ ಈ ಪ್ರಕರಣದ ರಚನೆಯಾಗಿರುತ್ತದೆಂದಲೂ, ಪುರಾವೆಗೆ ಅಗ್ರಾಹ್ಯವಾದ ವಾಟಣೀಪತ್ರವು ಬನಾವಟವೆಂದು ಕಲ್ಪಿಸುವದು ಕಾಯದೆಗೆ ವಿರೋಧವಾಗುತ್ತದೆಂತಲೂ, ರುದ್ರಗೌಡರು ನಿರ್ದೋಷಿಗಳಿರುತ್ತಾರೆಂತಲೂ, ಇವರಿಗೆ ಒಂದು ಶಬ್ದ ದೋಷವನ್ನು ಕೊಡುವ ಆಸ್ಪದವಿಲ್ಲೆಂತಲೂ, ಇವರು ಒಳ್ಳೇ ಪ್ರಾಮಾಣಿಕತನದಿಂದ ಮತ್ತು ಜಾಗ್ರತೆಯಿಂದ ಕೆಲಸ ಮಾಡುವವರೆಂತಲೂ, ಇವರಿಗೆ ಯಾರೂ ಎಳ್ಳಷ್ಟು ಸಂಶಯಗ್ರಸ್ತರಾಗುವ ಕಾರಣವಿಲ್ಲೆಂತಲೂ ಠರಾಯಿಸಿದರು. ಸರಕಾರ ಠರಾವ ನಂಬರ ೮೫೪೬/೩೦-೧೨-೯೧ ರೆವ್ಹಿನ್ಯೂಖಾತೆ.

ಈ ಠರಾವವಾದದ್ದು ಕ್ಷಣಮಾತ್ರದಲ್ಲಿ ಸುತ್ತಲೂ ಹಬ್ಬಿತು. ಬ್ರಾಹ್ಮಣರ ಮೋರೆಯ ಮೇಲೆ ಬಡಿದಂತಾಯಿತು. ಅವರ ಮೋರೆಗಳು ಕಪ್ಪಾದವು. ಅವರ ಉತ್ಸಹವೆಲ್ಲ ತಗ್ಗಿತು. ಆಡಂಬರವೆಲ್ಲ ಅಡಗಿತು. ಮೆರೆದಾಡುವಂಥ ಅವರ ಮೋರೆಗಳೇ ಕಾಣದಂತಾದವು. ಅವರ ಮುಖದ ಮೇಲಿನ ಕಳೆಯೇ ಕಡಿಮೆಯಾಯಿತು.

ಜಂಭದ ಮಾತುಗಳನ್ನು ಗಳಹುತ್ತ, ಆನಂದದ ಸುದ್ದಿಯನ್ನು ಜನರಿಗೆಲ್ಲ ಬೀರುತ್ತ ಓಣಿ ಓಣಿ ಹಿಡಿದು ಚಕ್ಕಂದದಿಂದ ತಿರುಗಾಡುತ್ತಿದ್ದ ಬ್ರಾಹ್ಮಣರು ಕೋಣೆಹಿಡಿದು ಕೂಡ್ರುವಂತಾಯಿತು. ಅವರ ಸವಿಯಲ್ಲಿ ವಿಷಬೆರೆದಂತಾಯಿತು. ಅವರ ಊಟದಲ್ಲಿ ರುಚಿಹುಟ್ಟಲಿಲ್ಲ. ಅವರ ಅಮೃತಕುಪ್ಪಿಯು ಒಡೆದುಹೋಯಿತು. ಅವರ ಧ್ವಜಪತಾಕೆಗಳು ಕೆಳಗಿಳಿದವು. ಸಾರಾಂಶ, ಒಮ್ಮಿಂದೊಮ್ಮೆ ಜ್ವಾಲಾಮುಖಿಯ ಸ್ಫೋಟವಾದಂತೆ ಅವರ ಅವಸ್ಥೆಯಾಯಿತು. ಮಲ್ಹಾರ ಮಾರ್ತಾಂಡ ನಾಡಗೇರ, ಹಿರೇಕೆರೂರ ಇವರಿಗಾದ ಅಸಮಾಧಾನತೆಯನ್ನು ಯಾರಿಂದಲೂ ಬಣ್ಣಿಸುವದಾಗದು. ಮಾರ್ತಾಂಡನ ಪ್ರಕಾಶವು ಮುಳುಗಿದಂತಾಯಿತು. ಅವರ ಕೀಳು ಮನಸ್ಸು ಕಬ್ಬಿಣದ ರಸದಂತೆ ಕುದಿಯಹತ್ತಿತು. ಅವರ ಅಂತರಂಗವು ಲಾವಾರಸದಂತೆ ಕಾದು ತಪ್ತವಾಯಿತು. ಸಂಕನಗೌಡರ ಅವಸ್ಥೆಯನ್ನು ಶಂಕರನೇ ಬಲ್ಲ. ಧೀಂಕಿಡುತ್ತಿದ್ದ ಸಂಕನಗೌಡರು ನಸಗುನ್ನಿಯ ಸುಂಕದ ರಾಸಿಯಲ್ಲಿ ಬಿದ್ದಂತಾಯಿತು. ಅಂದಿನಿಂದ ಇಂದಿನ ವರೆಗೆ ಅವರ ಸುಂಕವು ಬಿಡಲೊಲ್ಲದು. ಮಾಡುವದೇನು? ದೇವರು ಯಾರವನು? ಇವರ ಕೃತಘ್ನತೆಗೆ ದೇವರು ಎಂದಿಗಾದರೂ ಮೆಚ್ಚುವನೋ? ಹಿಂದೆ ರಾವಬಹದ್ದೂರವರ ಪಾದರಕ್ಷೆಗಳನ್ನು ತಲೆಯ ಮೇಲಿಟ್ಟುಕೊಂಡು ತಾಸು ಹೊತ್ತಿನ ವರೆಗೆ ನಿಂತದ್ದನ್ನು ಮಲ್ಹಾರರಾಯರು ಈಗ ಮರೆತರೋ? ಇವರ ಮಾತನ್ನು ಲಾಲಿಸಿ, ಕೆಟ್ಟ ಹವೆಯೊಳಗೆ ಕೊಳೆಯುತ್ತಿದ್ದ ಇವರ ತಂದೆಯಾದ ಮಾರ್ತಾಂಡ ಗುಡ್ಡೋ ಇವರನ್ನು ಎಲ್ಲಾಪುರದಿಂದ ಹಳ್ಳಿಯಾಳಕ್ಕೆ ವರ್ಗಮಾಡಿಸಿದ, ಮತ್ತು ಲಂಚದ ಪ್ರಕರಣದೊಳಗಿಂದ ಪಾರಮಾಡಿಸಿದ ಮಹಾನುಭಾವರ ಮಹೋಪಕಾರವನ್ನು ಮಲ್ಹಾರರಾಯರು ಸ್ವಲ್ಪವಾದರೂ ಸ್ಮರಿಸಿದರೋ? ಹಿಂದು ಮುಂದಿನ ವಿಚಾರವನ್ನು ತುಸುವಾದರೂ ಮಾಡಿದರೋ? ನಿಂದ್ಯವಾದ ಇಂಥ ಕೀಳು ಕೆಲಸಕ್ಕೆ ಕೈಹಾಕುವದು ವಿಹಿತವಲ್ಲೆಂದು ಅಂತರಂಗದಲ್ಲಿಯಾದರೂ ವಿಚಾರಿಸಿದರೋ? ಸರ್ವಜ್ಞಾನಿಯಾದ ದೇವರು ಎಲ್ಲೆಡೆಯಲ್ಲಿಯೂ ಇರುವನೆಂಬದನ್ನು ಸ್ವಲ್ಪಾದರೂ ತಿಳಿದರೋ, ಇವರು ಇಂಗ್ಲೀಷು ಕಲಿತು ಮುನಸೂಫಿಯನ್ನು ಪಡೆದು ಮಾಡಿದ ಮಹತ್ಕೃತ್ಯವಿದೆಯೋ? ಇವರ ಬಿ.ಎ.ಎಲ್.ಎಲ್.ಬಿ. ಪರೀಕ್ಷೆಯ ಪಾಂಡಿತ್ಯದ ಪ್ರಭಾವವು ಇದೇ ಏನು? ಇದಕ್ಕಾಗಿಯೇ ಆಂಗ್ಲವಿದ್ಯಾವಿಶಾರದರಾಗಿ ಬಿ.ಎ., ಎಮ್.ಎ., ಪದವಿಗಳನ್ನು ಪಡೆಯಬೇಕೇನು? ಕಲಿತ ಎಲ್ಲ ಜನರು ಹೀಗೆಯೇ ಆಚರಿಸುವರೋ? ಇಂತಹ ಕೀಳಮನುಷ್ಯರ ದುರಾಚರಣೆಯಿಂದ ಕುಲಕ್ಕೆಲ್ಲ ಕಲಂಕಬರುವದಿಲ್ಲವೋ? ಮುದಿ ತಂದೆಯಾದ ಮಾರ್ತಾಂಡರಾಯರು ಮಗನಾದ ಮಲ್ಹಾರರಾಯರಿಗೆ ಈ ಸಮಯದಲ್ಲಿ ಸ್ವಲ್ಪವಾದರೂ ಮತಿಯನ್ನು ಹೇಳಬಾರದೇನು? ಮಾರ್ತಾಂಡನೆಂದು ಸೂರ್ಯನಿಗೆ ಹೆಸರಿರುವದಲ್ಲವೇ, ನೋಡಿರಿ, ಈ ಮಾರ್ತಾಂಡರ ಪ್ರಕಾಶವು ಹೇಗೆ ಪ್ರಕಟವಾಯಿತು? ತಂದೆಗಿಂತಲೂ ಮಗನ ಪ್ರಕಾಶವು ಹೆಚ್ಚಾಯಿತು?ಇವರಿಗೆ ಹಿರಿಯರು ಹೆಸರಿಟ್ಟು ಕೆಟ್ಟಂತಾಯಿತು. ಇಟ್ಟ ಹೆಸರಿಗೆ ಕುಂದು ತಂದರು. ಅದರಿಂದ ಹೆಸರಿಗೆ ಹಾಲಪ್ಪ ಕುಡಿಯಲಿಕ್ಕೆ ಮಜ್ಜಿಗೆಯಿಲ್ಲಪ್ಪ, ಎಂಬಂತಾಯಿತು.

ತಾಯಿಯ ಪ್ರಾಯವನ್ನು ನಿರರ್ಥಕವಾಗಿ ಹರಣಮಾಡಿ ಜನಿಸಿ, ಯಾವಾಗಲೂ ಕೆಟ್ಟ ಆಲೋಚನೆಗಳಿಂದ ಕಟ್ಟಲ್ಪಟ್ಟ ಹೃದಯವುಳ್ಳವರಾಗಿ, ಭೂಮಿಗೆ ಭಾರವಾಗಿ, ಜನಪೀಡಾಕಾರರಾಗಿ ಇವರು ಯಾವ ಪುರುಷಾರ್ಥವನ್ನು ಪಡೆಯುತ್ತಾರೋ ತಿಳಿಯದು. ಕತ್ತಲೆಯಿಲ್ಲದೆ ಪ್ರಕಾಶದ ಬೆಲೆ ಹೇಗೆ ತಿಳಿಯುವದಿಲ್ಲವೋ, ದುಃಖದ ಹೊರತು ಸುಖದ ಸವಿಯು ಹೇಗೆ ಗೊತ್ತಾಗುವದಿಲ್ಲವೋ ಹಾಗೆ ಇಂತಹ ಕಿಡುಕರ ಹೊರತು ಮಹಾತ್ಮರು ಮುಂದೆ ಬರುವ ಮಾರ್ಗವಿಲ್ಲ. ಕೀಚಕ ವಧೆಯಿಂದ ಭೀಮನ ಪರಾಕ್ರಮವು ಪ್ರಕಟವಾಗಲಿಲ್ಲವೇ? ಕೌರವರ ಕಪಟತನದಿಂದಲೇ ಪಾಂಡವರು ಉಚ್ಛ್ರಯವನ್ನು ಹೊಂದಲಿಲ್ಲವೇ? ರಾವಣನ ಭಂಗದಿಂದಲೇ ರಾಮನು ತ್ರಿಲೋಕ ಪೂಜ್ಯನಾಗಲಿಲ್ಲವೇ ಈ ಪ್ರಕಾರ ರಾವಬಹದ್ದೂರ ರುದ್ರಗೌಡರು ದೇಶದಲ್ಲಿ

ಪ್ರಖ್ಯಾತರಾಗಬೇಕಾಗುವ ಯೋಗವಿದ್ದದರಿಂದ ಇವರಿಗೆ ಮೊಖಾಸಿ ಗುರುರಾಯರಂಥ ಮಹಾನುಭಾವರೂ, ಮಲ್ಹಾರರಾಯರಂಥ ಮಹಾರಾಯರೂ, ಸಂಕನಗೌಡರಂಥ ಕುಲಕಂಟಕರೂ ಗಂಟುಬಿದ್ದರು.

ಆದರೆ ಇವರೆಲ್ಲರು ಮಂದಮಂತಿಗಳೆನ್ನಬೇಕೋ, ಬಹಳೇ ಜಾಣರಿದ್ದರು. ವಿದ್ಯೆಕಲಿತವರೆಲ್ಲರೂ ಸದಾಚಾರಿಗಳಿರುತ್ತಾರೆಂಬದಾಗಿ ನಿಯಮವಿಲ್ಲ. ಒಂದೊಂದು ವೇಳೆ ವಿಚಾರಿಸಿದರೆ, ಕಲಿತವರಿಗಿಂತ ಕಲಿಯದವರೇ ಸ್ವಭಾವದಲ್ಲಿ ನೆಟ್ಟಗಿರುತ್ತಾರೆ. ಆತ್ಮಜ್ಞಾನಕ್ಕೂ, ವ್ಯವಹಾರಜ್ಞಾನಕ್ಕೂ, ಪರೋಪಕೃತಿಗೂ, ದೇಶಹಿತಕ್ಕೂ ವಿದ್ಯೆಕಲಿಯಬೇಕು. ಕಪಟಕೃತಿಗಳನ್ನು ರಚಿಸುವದಕ್ಕೂ, ಕೀಳು ನಡೆಗಳಿಂದಾಚರಿಸಲಿಕ್ಕೂ, ಸಜ್ಜನರನ್ನು ಪೀಡಿಸಲಿಕ್ಕೂ, ವಿದ್ಯೆ ಕಲಿಯಬೇಕೋ? ದೇವರುಕೊಟ್ಟ ಸುಜ್ಞಾನವನ್ನು ಸತ್ಕೃತ್ಯಗಳಲ್ಲಿ ಉಪಯೋಗಿಸಿ ಸತ್ಕೀರ್ತಿಯನ್ನು ಪಡೆಯದೆ, ದುಷ್ಕೃತ್ಯಗಳಿಗೆ ಉಪಯೋಗಿಸಿ, ದುರ್ದಶೆಗೆ ಕಾರಣರಾಗುವ ದುರ್ಜನರೇ ಬಹಳ ಮಂದಿ. ಇವರು ಅಹೋರಾತ್ರಿ ವಿಚಾರವಮಾಡಿ ಕೀಳ್ಗೆಲಸಗಳಲ್ಲುಪಯೋಗಿಸುವ ಜಾಣ್ಮೆಯನ್ನು ಒಳ್ಗೆಲಸಗಳಲ್ಲುಪಯೋಗಿಸಿದ್ದರೆ ಜನಾನುರಾಗಕ್ಕೆ ಪಾತ್ರರಾಗಿ ಮಹತ್ತಾದ ಕೀರ್ತಿಯನ್ನು ಸಂಪಾದಿಸುತ್ತಿದ್ದರು. ಆದರೆ ಅಂಥ ಸದ್ಬುದ್ಧಿಯು ಈ ಮಂದಮತಿಗಳಿಗೆಂದು ಹುಟ್ಟಬೇಕು? "ಏನಕೇನ ಪ್ರಭಾವೇನ ಪ್ರಸಿದ್ಧ ಪುರುಷೋ ಭವ" ಎಂಬಂತೆ ಯಾವದಾದರೂ ರೀತಿಯಿಂದ ಜನರಲ್ಲಿ ತಮ್ಮ ಹೆಸರು ಆದರೆ ತೀರಿತೆಂದು ತಿಳಿದುಕೊಂಡು, ಇಂಥ ನರಪಶುಗಳ ಇಂಥ ಪರನಿಂದೆಯಲ್ಲಿಯೇ ಕಾಲಕಳೆಯುತ್ತಾರೆ. "ದುರ್ಜನೋ ದೋಷಮಾದತ್ತೇ ದುರ್ಗಂಧಮಿವ ಸೂಕರಃ॥ಸಜ್ಜನಃ ಸಾರಮಾದತ್ತೇ ಹಂಸಃ ಕ್ಷೀರಮಿವಾಂಭಸಃ॥" ಎಂಬಂತೆ ದುರ್ಜನರು ಪರದೂಷ್ಯದಲ್ಲಿಯೇ ತತ್ಪರರಾಗಿರುತ್ತಾರೆ. ಸದ್ಬುದ್ಧಿಯನ್ನು ಸತ್ಕೃತಿಗಳಲ್ಲುಪಯೋಗಿಸುವವನೇ ಜಾಣನು. ರನ್ನದ ಹರಳನ್ನು ಚಿನ್ನದಲ್ಲಿಯೇ ಕೂಡ್ರಿಸುತ್ತಾರಲ್ಲದೆ ಕಬ್ಬಿಣದಲ್ಲಿ ಯಾರೂ ಕೂಡಿಸುವದಿಲ್ಲ.

ರಾವಬಹದ್ದೂರ ರುದ್ರಗೌಡರು ನಿರ್ದೋಷಿಗಳೆಂದು ಠರಾವವಾಯಿತೆಂಬ ಸುದ್ದಿಯನ್ನು ಕೇಳಿ ಎಲ್ಲ ಬ್ರಾಹ್ಮಣರಿಗೂ ಅತಿ ವ್ಯಸನವಾಯಿತು. ಇಷ್ಟು ಆನಂದವಾಗಲಿಕ್ಕೆ ರಾವಬಹದ್ದೂರರವರು ಅವರಿಗೆ ಮಾಡಿದ ಅಪಕೃತಿಯೇನು? ಬ್ರಾಹ್ಮಣರು ಬಡಜನರನ್ನು ಗೋಳಾಡಿಸಿ, ಅವರ ಕಡೆಯಿಂದ ಹಣವನ್ನು ಅಳತೆಗೆಟ್ಟು ತಿಂದು, ಅವರ ಮನೆಮಾರು ಹಾಳುಮಾಡಿ, ಅವರನ್ನು ದುಃಖಕ್ಕೆ ಗುರಿಮಾಡಿಟ್ಟು ತಾವು ಈ ಮೇರೆಗೆ ವಂಚನೆಯಿಂದ ಗಳಿಸಿದ ಲಂಚದ ಹಣದಿಂದ ಧನ್ಯರಾಗಿ, ಯಥೇಷ್ಟಸುಗ್ರಾಸವನ್ನು ಭುಂಜಿಸಿ, ಮದಾಂಧರಾಗಿ ಮೇಲ್ಮಂದಿರಗಳಲ್ಲಿ ಸ್ವೇಚ್ಛಾವಿಹಾರಿಗಳಾಗಿರುತ್ತಿದ್ದ ಅವರ ದುಷ್ಟಸಂಭ್ರಮವನ್ನು ಕಣ್ಣಾರೆ ಕಂಡು ಸಂತೃಪ್ತರಾಗಿ, ಇವರ ಇಂಥ ದುರಹಂಕಾರವನ್ನು ನಿಃಶೇಷ ಮಾಡಲು ಪ್ರಯತ್ನಿಸಿ, ಆ ಅನ್ನಾನುಗತಿಯಾದ ಬಡಜನರ ಬಳಲಿಕೆಯನ್ನು ತಪ್ಪಿಸುವ ನ್ಯಾಯಮಾರ್ಗವನ್ನು ಕೈಕೊಂಡದ್ದು, ರಾವಬಹದ್ದೂರ ಎಂಬ ಬಹುಮಾನದ ಪದವಿಯನ್ನು ಧರಿಸುವ ರುದ್ರಗೌಡರಿಗೆ ಭೂಷಣವಲ್ಲವೊ? ಲಕ್ಷಾವಧಿ ಜನರನ್ನು ದುಷ್ಟಪೀಡೆಯಿಂದ ಮುಕ್ತಮಾಡುವ ಮಹತ್ಕಾರ್ಯದಲ್ಲಿ ತೊಡಗಿರುವದು ಇವರಿಗೆಷ್ಟು ಅಲಂಕಾರವು? ತಿನ್ನಲಿಕ್ಕಿಲ್ಲದೆ ತಿರುಕರಂತೆ ತಿರುಗುವ ದುರ್ದೈವಿಗಳಿಗೆ ಅನ್ನ ದೊರೆಯುವಂತೆ ಮಾಡುವದು ಎಷ್ಟು ಪುಣ್ಯಕಾರವು? ಇಂತ ಸತ್ಕೃತ್ಯಗಳಿಗೆ ಸಜ್ಜನರು ಯಾರಾದರೂ ದೋಷಕೊಡುವರೇ!ಇಂಥ ಕೀಳ್ಗೆಲಸಗಳು ಬ್ರಾಹ್ಮಣರಿಂದಾಗುತ್ತಿರಲು ಆ ದುರಾಚಾರಗಳನ್ನು ಮುರಿಬಡಿದರೆ ಇವರಿಗೆ ಬ್ರಹ್ಮದ್ವೇಷಿಗಳೆಂದು ಯಾರಾದರೂ ಅನ್ನಲಿಕ್ಕೆ ಆಸ್ಪದವಿರುವದೋ! ಸಾರಸಾರ ವಿಚಾರಮಾಡದೆ ಕಂಡಂತೆ ಬೊಗಳುವದು ಸುಜ್ಞರ ಕೆಲಸವಲ್ಲ. ರಾವಬಹದ್ದೂರರವರು ಕೆಲಸಕ್ಕೆ ಆರಂಭಿಸುತ್ತಲೇ ಲಂಚಕ್ಕೆ ಮುನಿದರು. ಲಂಚವನ್ನು ತಿಂದು ತೃಪ್ತಿಪಡುವ ಬ್ರಾಹ್ಮಣರ ಹಾಗೂ ಬ್ರಾಹ್ಮಣೇತರರ ಆಚರಣೆಯು ಇವರಿಗೆ ಎಂದೂ ಸರಿಬರಲಿಲ್ಲ. ಅಂದಮೇಲೆ ಅವರಾ ಇವರಾ ಗೋತ್ರಗಳು ಹ್ಯಾಗೆ ಕೂಡಬೇಕು? ಕಾಗೆಗಳಿಗೂ, ಕೋಗಿಲೆಗೂ

ಕೂಡಿಬರುವದೋ? ಎಲ್ಲರೂ ಕಾಮದಾರರೇ ನಿಜ. ಆಚರಣೆಗಳು ಬೇರೆ ಬೇರೆಯಾದರೆ ಸ್ವಭಾವಗಳು ಹೇಗೆ ಸೇರಬೇಕು? ವಿಚಾರವಿಲ್ಲದೆ ಬ್ರಾಹ್ಮಣರ ದ್ವೇಷವನ್ನು ಮಾಡುತ್ತಾರೆಂದರೇನಾಯಿತು?ಸುಮ್ಮ ಸುಮ್ಮನೆ ಬೊಗಳಾಡಿದರೆ ಆನೆಯು ಹೋಗುತ್ತದೆ;ಶ್ವಾನವು ಬೊಗಳುತ್ತದೆ ಎಂಬ ವಿಚಾರದಂತೆ ಆಗುತ್ತದೆ.

ರಾ.ಬ||ರುದ್ರಗೌಡರ ನಿಷ್ಕಲಂಕವಾದ ಸ್ವಭಾವಕ್ಕೂ, ಆಚರಣೆಗೂ, ನ್ಯಾಯದೃಷ್ಟಿಯಿಂದ ಯಾರೂ ದೋಷಕೊಡರು. ಇವರಿಗೆ ಬ್ರಹ್ಮದ್ವೇಷಿಗಳೆಂದು ದೋಷಕೊಡುವವರು ದುರ್ಜನರೆಂದೂ ದೂಷ್ಯರೆಂದೂ ಹೇಳಬಹುದು. ಬ್ರಾಹ್ಮಣನಾಗಲಿ, ಲಿಂಗಾಯತನಾಗಲಿ, ಇತರ ಜಾತಿಯವನಾಗಲಿ, ಲಂಚಬಡಕನೆಂದು ಗೊತ್ತಾದರೆ ಅವರ ಕೀಳಕೃತ್ಯಗಳನ್ನು ತಗ್ಗಿಸುವದರಲ್ಲಿ ಇವರು ಜಾತಿಭೇದವನ್ನೆಂದಿಗೂ ಮಾಡುತ್ತಿದ್ದಿಲ್ಲ. ಯಾರಾದರೇನು? ದುಷ್ಟರಿಗೆ ತಕ್ಕ ಶಿಕ್ಷೆಯಾಗತಕ್ಕದ್ದೇ; ನಿಷ್ಪಕ್ಷಪಾತಿಗಳಾದ ವಾಚಕರೇ ಇದರ ವಿಚಾರವನ್ನು ಹೇಳಲಿ. ದುಷ್ಕರ್ಮಕ್ಕೆ ಶಿಕ್ಷೆ ತಪ್ಪದು. ಸತ್ಕರ್ಮಕ್ಕೆ ಲಾಭ ತಪ್ಪದು. ದುರ್ಜನನು ಹಾವಿನಕಿಂತಲೂ ಕೆಟ್ಟವನಿರುತ್ತಾನೆ. ಹಾವು ತಡವಿದರೆ ಮಾತ್ರ ಕಡಿಯುತ್ತದೆ. ಆದರೆ ದುರ್ಜನನನ್ನು ತಡವದಿದ್ದರೂ ಅವನು ಸಜ್ಜನನ ಐಸಿರಿಯನ್ನೂ, ಸಂಭ್ರಮವನ್ನೂ ನೋಡಿ ಸಹಿಸದೆ ಅವನನ್ನು ಕೆಡಿಸಲಿಕ್ಕೆ ತರತರದ ಹಂಚಿಕೆಗಳನ್ನು ಹಾಕುತ್ತಾನೆ. ಅದರಂತೆ ಈ ಮಲ್ಹಾರರಾಯರೂ, ಸಂಕನಗೌಡರೂ ಮತ್ತು ಎಷ್ಟೋಮಂದಿ ಅಸೂಯಾಪರರೂ ಇವರ ಉನ್ನತಿಯನ್ನು ನೋಡಿ ಸಹಿಸಲಾರದೆ ಇವರನ್ನು ಕೆಡಿಸಲಿಕ್ಕೆ ಹವಣಿಸಿದರು. ಸಂಕನಗೌಡರು ಬಹಳೇ ಜಾಣರು. ಇವರು ತಮ್ಮ ಜಾಣತನವನ್ನೆಲ್ಲ ದಿಲ್ಲಿಯ ಚಕ್ರವರ್ತಿಯಾದ ಔರಂಗಜೇಬನಂತೆ ಕೆಟ್ಟ ಕೆಲಸಗಳಲ್ಲಿಯೇ ಉಪಯೋಗಿಸಿದರಿಂದ ಇವರನ್ನು ದುರ್ಜನರೊಳಗೆ ಎಣಿಸಬೇಕಾಯಿತು.

"ದುರ್ಜನಃ ಪರಿಹರ್ತವ್ಯೋವಿದ್ಯಯಾಲಂಕೃತೋಪಿ ಸನ್।
ಮಣಿನಾ ಭೂಷಿತಃ ಸರ್ಪಃ ಕಿಮಸೌ ನ ಭಯಂಕರಃ ||"

ಎಂಬಂತೆ ಹಾವಿನ ಹೆಡೆಯಲ್ಲಿ ರತ್ನವಿದ್ದ ಪ್ರಕಾರ ಸಂಕನಗೌಡರಲ್ಲಿ ಜಾಣತನವಿದ್ದರೂ ಅವರು ಸಜ್ಜನರಿಂದ ದೂರಿರಬೇಕಾಯಿತು. ಈ ಕುರುಕುಲವೆಲ್ಲ ಕೂಡಿ ಮಾಡಿದ ಘಟಾಟೋಪವು ನಿರರ್ಥಕವಾಯಿತು. ಇವರು ಅನ್ಯಾಯವಾಗಿ ರಚಿಸಿದ ಗುಡ್ಡವು ಕಡ್ಡಿಯಂತೆ ಹಾರಿಹೋಯಿತು. ಝುಂಝಾವಾತಕ್ಕೆ ಮೋಡಗಳು ಓಡಿಹೋಗುವಂತೆ ಬಂದ ಆತಂಕಗಳೆಲ್ಲ ಹರಿದು ಹೋದವು. ಕೌರವರ ಕೃತಕವಾದ ಅರಗಿನ ಮನೆಯೊಳಗಿಂದ ಪಾಂಡವರು ಜಳಸಹಿತ ತಗಲಿಸಿಕೊಳ್ಳದೆ ಹೇಗೆ ಪಾರಾದರೋ ಅದರಂತೆ ಈ ದುಷ್ಟರೆಲ್ಲ ಕೂಡಿ ರಚಿಸಿದ ಸುಳ್ಳ ವ್ಯಾಜ್ಯದಲ್ಲಿ ರಾ.ಬ||ರುದ್ರಗೌಡರ ಮೇಲೆ ಆರೋಪದ ಛಾಯೆಯು ಸಹಿತ ಬೀಳದೆ ಅವರು ಪಾರಾದರು. ಸತ್ಯಕ್ಕೆ ಸಾವಿಲ್ಲವೆಂಬದೇನು. ಸಾಟಿಯೇ?ಸಾರಾಂಶ, ಇವರ ನಿರ್ದೋಷತೆಯಿಂದ, ಮೆರೆದಾಡುತ್ತಿದ್ದ ಬ್ರಾಹ್ಮಣರನ್ನೆಲ್ಲ ಎರೆದು ಹೊಚ್ಚಿ ಮಲಗಿಸಿದಂತಾಯಿತು.

"ಮಾಡಿದವನುಣ್ಣುವನು ಮಣಿಯಂಥ ಕಡಬು" ಎಂಬ ವ್ಯವಹಾರೋಕ್ತಿಯಂತೆ, ಸತ್ಯವಾದಿಗಳೂ, ನಿರಪರಾಧಿಗಳೂ ಆದ ಇವರ ಮೇಲೆ ಯಾರ‍್ಯಾರು ಕೇಡು ಬಗೆದರೋ ಅವರ ಅವಸ್ಥೆ ಏನೇನಾಯಿತೆಂಬದು, ಆಗಾಗ್ಗೆ ವಾಚಕರಿಗೆ ಗೊತ್ತಾಗಿರುತ್ತದೆ. ಈ ಮಹಾನುಭಾವರಾದ ಮಲ್ಹಾರ ರಾಯರು ಕಡೆಗೆ ಅಸಹ್ಯವಾದ ರೋಗಗ್ರಸ್ತರಾಗಿ ಸನ್ ೧೮೯೩ನೇ ಇಸವಿಯಲ್ಲಿ ಮುಂಬಯಿಗೆ ಔಷಧ ತೆಗೆದುಕೊಳ್ಳುವದಕ್ಕಾಗಿ ಹೋಗಿದ್ದರು. ಅಲ್ಲಿ ರೋಗವು ಪ್ರಬಲವಾಗಿ ಬಹಳೇ ಕಷ್ಟಪಟ್ಟು ಬಳಲಹತ್ತಿದರು. ಔಷಧಕ್ಕೆ ರೂಪಾಯಿ ಸಹ ಸಿಗದಂತಾದವು. ಆ ಸಮಯದಲ್ಲಿ ರಾ.ಬ||ರುದ್ರಗೌಡರ ಪರಮಸ್ನೇಹಿತರಾದ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ

ಶಿರಸಂಗಿಯವರು ಮುಂಬಯಿಯೊಳಗಿದ್ದದರಿಂದ ಅವರ ಬಳಿಗೆ ಹೋಗಿ, ಔಷಧವೆಚ್ಚಕ್ಕಾಗಿ ಹಣವನ್ನು ಕೊಟ್ಟು ನನ್ನನ್ನು ಕಾಪಾಡಬೇಕೆಂದು ಅಂಗಲಾಚಿ ಹೇಳಿಕೊಳ್ಳಹತ್ತಿದರು. ಈ ಮಲ್ಹಾರರಾಯರು ತಮ್ಮ ಅತ್ಯಂತ ಸ್ನೇಹಿತರಾದ ರಾ.ಬ॥ರುದ್ರಗೌಡರಿಗೆ ಕೇಡುಬಗೆದಿದ್ದರೂ ಅದನ್ನು ಮನಸಿನೊಳಗೆ ತಾರದೆ ವಿಪತ್ತಿನಲ್ಲಿ ಕಾಯುವದು ಯುಕ್ತವೆಂದು ಶ್ರೀಮಂತರು, ಮಲ್ಹಾರರಾಯರಿಗೆ ರೋಖ ನಾನೂರು (೪೦೦) ರೂಪಾಯಿಗಳನ್ನು ಕೊಟ್ಟರು. ರೂಪಾಯಿಗಳನ್ನು ತೆಗೆದುಕೊಂಡು ತಮ್ಮೊಳಗೆ ತಾವೇ ನಾಚಿಕೊಂಡು ಶ್ರೀಮಂತರನ್ನು ಕುರಿತು : ತಮ್ಮ ಸ್ನೇಹಿತರಾದ ರಾ.ಬ॥ರುದ್ರಗೌಡರಿಗೆ ನಾನು ಅನ್ಯಾಯವಾಗಿ ಕೇಡು ಬಗೆದೆನೆಂದೂ, ನಾನು ಆ ಪ್ರಕಾರ ಮಾಡಬಾರದಿತ್ತೆಂದೂ, ನಾನು ಮಾಡಿದಂಥ ತಪ್ಪಿತಕ್ಕೆ ಯೋಗ್ಯವಾದ ಬವಣೆಯನ್ನು ಸದ್ಯಕ್ಕೆ ಭೋಗಿಸುತ್ತಿರುವೆನೆಂದೂ, ಸರ್ವಥಾ ಅನ್ಯಾಯವನ್ನು ಮಾಡಬಾರದೆಂದೂ ಬಹಳೇ ಪಶ್ಚಾತ್ತಾಪಪಟ್ಟರು. ಮುಂದೆ ಮಲ್ಹಾರರಾಯರ ರೋಗವು ಗುಣವಾಗದೆ ದಿನೇ ದಿನೇ ಹೆಚ್ಚಾಗಿ ಸನ್ ೧೮೯೩ನೇ ಇಸವಿಯ ಮೇ ತಿಂಗಳಲ್ಲಿ ಅಲ್ಲಿಯೇ ಮೃತಪಟ್ಟರು. ಅವರ ಅಂತ್ಯವಿಧಿಗೆ ಸಹ ಯಾರೂ ಗತಿಯಿಲ್ಲದೆ ವ್ಯವಸ್ಥೆಯಾಗದೆ ಬಿದ್ದದ್ದನ್ನು ನೋಡಿ ಸಚ್ಚಿತ್ತರೂ, ಕರುಣಾಳುಗಳೂ ಆದ ಶಿರಸಂಗಿಯ ಯಜಮಾನರು ತಮ್ಮ ಬ್ರಾಹ್ಮಣ ಕಾರಕೂನರನ್ನು ಕಳಿಸಿ, ತಾವೇ ಸ್ವತಃ ವೆಚ್ಚಮಾಡಿ ಅವರ ದಹನಕಾರ್ಯವನ್ನು ತೀರಿಸಿದರು. ಇವರು ಕೊಟ್ಟಿದ್ದ ನಾನೂರು (೪೦೦) ರೂಪಾಯಿಗಳು ಮಲ್ಹಾರರಾಯರ ಹೆಸರಿನಿಂದ ಶಿವಾರ್ಪಣವಾದವು. ತಮ್ಮ ರೂಪಾಯಿಗಳ ಬಗ್ಗೆ ಯಾರನ್ನೂ ಕೇಳಲಿಲ್ಲ. ಇದರಿಂದ ಶ್ರೀಮಂತರ ದಾತೃತ್ವವೂ, ದಯಾಳುತ್ವವೂ, ಎಷ್ಟಿರುವದೆಂಬದು ಸ್ಪಷ್ಟವಾಗಿ ತಿಳಿಯುತ್ತದೆ. ಶ್ರೀಮಂತ ಸರದೇಸಾಯಿಯವರು ರಾ.ಬ॥ರುದ್ರಗೌಡರ ಪರಿವಾರದವರನ್ನು ಮುಂಬಯಿ ಪಟ್ಟಣವನ್ನು ನೋಡಲಿಕ್ಕೆ ಕರಿಸಿದ್ದರಿಂದ ವೀರವ್ವನವರು ಮೊದಲಾದವರು ಮಲ್ಹಾರರಾಯರ ಭವಣೆಯನ್ನು ಕಣ್ಣಾರೆಕಂಡು ಕನಿಕರಪಟ್ಟರು. ಸಂಕನಗೌಡರ ಕೊಂಕು ಕಡಿಮೆಯಾಯಿತು. ಬಿಂಕು ಭಂಗವಾಯಿತು. ಅವರು ಕೆಲಸಬಿಟ್ಟು ಪೆನಶನ್ ತೆಗೆದುಕೊಂಡು ಕುನ್ನೂರಲ್ಲಿ ಮನೆಹಿಡಿದು ಕೂತಿದ್ದಾರೆ. ಸತ್ಪುರುಷರ ಏಳ್ಗೆಯನ್ನು ಕಂಡು ಸೈರಿಸಲಾರದೆ ಮತ್ಸರ ಬುದ್ಧಿಯಿಂದ ಅವರ ಅವಮಾನವನ್ನು ಮಾಡಲಿಕ್ಕೆ ಪ್ರಯತ್ನಿಸಿದ್ದರಿಂದ ಪರಮೇಶ್ವರನು ಸಂಕನಗೌಡರ ಕಣ್ಣುಗಳನ್ನು ಕಳೆದಿದ್ದರಿಂದ ಸದ್ಯಕ್ಕೆ ಅವರು ಕುರುಡರಾಗಿಯೂ, ನಿರ್ಬಲರಾಗಿಯೂ, ಹೃದ್ರೋಗ ಹಚ್ಚಿಕೊಂಡು ಮನೆಹಿಡಿದಿದ್ದಾರೆ. ಮಾಡಿದವರಿಗೆ ಮಾಡಿದಷ್ಟು, ನೀಡಿದವರಿಗೆ ನೀಡಿದಷ್ಟು, ಎಂಬ ಲೋಕರೂಢಿಯ ಗಾದೆಯ ಮಾತಿನಂತೆ ತಮ್ಮ ಪಶ್ಚಾತ್ತಾಪದ ಫಲವನ್ನು ತಾವೇ ಭೋಗಿಸುತ್ತಾರೆ.

❖❖

೯ನೇ ಭಾಗ

ಸೂಳಿಯ ಪಿಡುಗು ಸನ್ಯಾಸಿಗೆ

ರಾವಬಹದ್ದೂರವರು ಬೆಳಗಾವ ಕಮಿಶನರ ದಫ್ತರದಾರರಾಗಿ ಬಂದಾಗ್ಗೆ ಮೆ॥ಎ. ಕೇಸರ ಸಾಹೇಬರ ಬಹದ್ದೂರವರು ಕಮೀಶನರರಾಗಿದ್ದರೆಂದು ಹಿಂದೆ ಹೇಳಿದೆ. ಇವರ ತರುವಾಯ ಮೆ॥ ಡಬ್ಲ್ಯು.ಏ. ಈಷ್ಟ ಸಾಹೇಬ ಬಹದ್ದೂರವರು ಕಮಿಶನರರಾಗಿಬಂದರು. ಈ ಮೆಹರ್ಬಾನರೀರ್ವರು ಈ ದಫ್ತರದಾರರ ಪ್ರಮಾಣಿಕತನದ ಕೆಲಸವನ್ನು ನೋಡಿ ಇವರಲ್ಲಿ ನಂಬಿಗೆಯುಳ್ಳವರಾಗಿದ್ದರು. ಮೆ॥ಈಷ್ಟ ಸಾಹೇಬ ಬಹದ್ದೂರವರ ತರುವಾಯ ಮೆ॥ಜಾನ್ ನ್ಯೂಜೆಂಟ ಸಾಹೇಬ ಬಹದ್ದೂರವರು ಕಮೀಶನರರಾಗಿ ಬಂದರು. ಇವರು ರಾವಬಹದ್ದೂರವರ ವ್ಯಾಜ್ಯದಲ್ಲಿ ಮುಂಬಯಿ ಸರಕಾರಕ್ಕೆ ಮಾಡಿದ ರಿಪೋರ್ಟಿನಲ್ಲಿ ಬರೆದ ಶಿಫಾರಸವನ್ನು ನೋಡಿದರೆ ರಾ.ಬ॥ರುದ್ರಗೌಡರು ಎಷ್ಟು ಘನತೆಯುಳ್ಳವರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಮೆ॥ನ್ಯೂಜೆಂಟ ಸಾಹೇಬ ಬಹದ್ದೂರವರ ತರುವಾಯ ಸುಪ್ರಸಿದ್ಧ ಮೆ॥ಜೇ.ಎಫ್. ಫ್ಲೀಟ ದೊರೆಗಳು ಕಮಿಶನರರಾದರು. ಈ ದೊರೆಗಳು ಘನ ಪಂಡಿತರೂ, ಶೋಧ ದೃಷ್ಟಿಯುಳ್ಳವರೂ ಇದ್ದರು. ಇವರು ಕರ್ನಾಟಕ ಪ್ರಾಂತದಲ್ಲೆಲ್ಲ ಸಂಚರಿಸಿ ಶಿಲಾಲಿಪಿಗಳಿಂದಲೂ, ತಾಮ್ರಪಟಗಳಿಂದಲೂ, ಇಲ್ಲಿಯ ಪೂರ್ವದಲ್ಲಿ ಆಳಿದ ಅರಸರ ಐತಿಹ್ಯವನ್ನು ಗೊತ್ತುಹಚ್ಚಿ ಪ್ರಸಿದ್ಧಮಾಡಿ ಬಹು ಪ್ರಖ್ಯಾತರಾದರು. ಮೆ॥ಫ್ಲೀಟ ದೊರೆಗಳು ರುದ್ರಗೌಡರ ಸೌಜನ್ಯವನ್ನೂ, ಸತ್ಯವಂತಿಕೆಯನ್ನೂ ತಿಳಿದು, ಇವರು ಗುಣಿಗಳೂ, ರಾಜ್ಯಕಾರ್ಯಶಕ್ತಿಯುಳ್ಳವರೂ ಇರುವರೆಂಬದಾಗಿ ಮನಗಂಡಿದ್ದರು. ಮನುಷ್ಯರ ಗುಣಲಕ್ಷಣಾದಿಗಳ ಮೇಲಿಂದ ಅವರ ಕಾರ್ಯಶಕ್ತಿಗಳು ಗೊತ್ತಾಗುತ್ತವೆ. ಈ ಪ್ರಕಾರ ಮೇಲಧಿಕಾರಿಗಳೂ; ಜನಸಾಮುಹ್ಯಕ್ಕೂ ಪ್ರೇಮಾನ್ವಿತರಾಗಿ ಕೆಲಸ ಮಾಡುತ್ತಿರಲು ರಾ.ಬ॥ರುದ್ರಗೌಡರಿಗೆ ಮತ್ತೊಂದು ಅನಿಷ್ಟವು ಬಂದು ಅಡಸಿತು. ಅದೇನೆಂದರೆ, ಹಿಂದೆ ಮುಂಬೈ ಹಾಯಕೋರ್ಟಿನ ಟ್ರಾನ್ಸಲೇಟರರೂ, ಚಿಕ್ಕೋಡಿಯ ಮುನಸೂಫರೂ, ಸಿರಸಿಯ ಪ್ರಿನ್ಸಿಪಾಲ ಸದರ ಅಮೀನರೂ, ಪೂರ್ಣವಿದ್ಯಾಭಿಮಾನಿಗಳೂ ಆಗಿದ್ದ ಪಂಡಿತ ವೀರಭದ್ರಯ್ಯನವರ ತಮ್ಮಂದಿರಾದ ಶಿವರುದ್ರಯ್ಯ ಮಡಿವಾಳಯ್ಯ ಪಂಡಿತರೆಂಬವರು ಈ ಕಾಲಕ್ಕೆ ಧಾರವಾಡ ತಾಲೂಕ ಕಚೇರಿಯಲ್ಲಿ ಅವ್ವಲ ಕಾರಕೂನರಿದ್ದರು. ಇವರು ಕೆಲಸ ಮಾಡುತ್ತಿರುವಾಗ ತಿಜೋರಿಯೊಳಗಿನ ಅಜಮಾಸು ಏಳುನೂರು (೭೦೦) ರೂಪಾಯಿಗಳು ಆಕಸ್ಮಿಕವಾಗಿ ಹೋಗಿದ್ದವು. ಈ ಸಂಗತಿಯನ್ನು ತಿಳಿದು ಕಾರ್ಯಸಾಧಕರಾದ ಕೆಲವರು ಮೆ॥ ಇಲಾಖಾಸಾಹೇಬ ಬಹದ್ದೂರವರಿಗೆ ತಿಳಿಸಿದ ಕೂಡಲೆ ಅವರು ಖಜಾನೆಯ ತಪಾಸಿಗೆ ಆ ಕ್ಷಣವೆ ಬಂದು ನೋಡಲಾಗಿ, ಏಳುನೂರು ರೂಪಾಯಿಗಳು ಕಡಿಮೆ

ಇದ್ದವು. ಅದರಿಂದ ಈ ಹಣವನ್ನು ಪಂಡಿತರೇ ತೆಗೆದುಕೊಂಡಿರುವರೆಂಬದಾಗಿ ಸಂಶಯಗ್ರಸ್ತರಾಗಿ, ಸರಕಾರದವರು ಶಿವರುದ್ರಯ್ಯನವರನ್ನು ಕೆಲಸದಿಂದ ದೂರಮಾಡಿದರು. ಪಂಡಿತರ ಈ ದುರ್ದಶೆಯನ್ನು ನೋಡಿ ಕೆಲ ಬ್ರಾಹ್ಮಣರು ಆನಂದಿತರಾಗಿ ಈ ಪಂಡಿತರೂ, ರಾ.ಬ|| ರುದ್ರಗೌಡರೂ ಅತ್ಯಂತ ಸ್ನೇಹಿತರೆಂತಲೂ, ಅವರ ಬಿಗುವಿನಿಂದಲೇ ಈ ಪಂಡಿತರು ಈ ಕೆಲಸವನ್ನು ಮಾಡಿರುವರೆಂತಲೂ ಬೊಬ್ಬಾಟವನ್ನೆಬ್ಬಿಸಿ, ಮೂಕ ಅರ್ಜಿಗಳನ್ನು ಹಾಕಿದರು. ಈ ನಿರಾಧಾರ ಅರ್ಜಿಗಳನ್ನು ಸರಕಾರದವರು ನಂಬಲಿಲ್ಲ. ಆದರೆ ಸೂಳಿಯ ಪಿಡುಗು ಸನ್ಯಾಸಿಗೆಂಬಂತೆ ರಾ.ಬ||ರುದ್ರಗೌಡರಿಗೆ ತುರ್ತಕ್ಕೆ ವಿಜಾಪುರ ಜಿಲ್ಲೆಗೆ ವರ್ಗವಾಯಿತು.

ರಾ.ಬ||ರುದ್ರಗೌಡರಿಗೆ ಸೇಕಂಡ ಗ್ರೇಡ ಮಾಜಿಸ್ಟ್ರೇಟ ಅಧಿಕಾರವೂ ಕಮೀಟ ಪಾವರವೂ ದೊರೆದದ್ದು

ವರ್ಗವಾದದ್ದು ಒಂದು ಬಗೆಯಿಂದ ವಿಹಿತವೇ ಆಯಿತು. ಸರಕಾರದವರು ಇವರ ಮೇಲೆ ಸಂದೇಹಗ್ರಸ್ತರಾಗಿದ್ದರೆ ಇವರನ್ನು ಕಡಿಮೆ ಪಗಾರದ ಮೇಲೆ ಅಥವಾ ಸಮಪಗಾರದ ಮೇಲೆ ವರ್ಗಮಾಡುತ್ತಿದ್ದರು. ರಾವಬಹದ್ದೂರವರ ಕೆಲಸವು ಮೆ||ಫ್ಲೀಟದೊರೆಗಳಿಗೆ ಬಹಳೇ ಮನಸಿಗೆ ಬಂದಿತ್ತು. ಕಾರಣ ಈ ದೊರೆಗಳು ಇವರ ವಿಷಯಕ್ಕೆ ಸರ್ವೋತ್ಕೃಷ್ಟವಾದ ಶಿಫಾರಸವನ್ನು ಬರೆದದ್ದರಿಂದ ಇವರಿಗೆ ಸರಕಾರದವರು, ಒಮ್ಮಿಂದೊಮ್ಮೆ ೨ನೇ ವರ್ಗಮಾಜಿಸ್ಟ್ರೇಟ ಪದವಿಯನ್ನೂ, ಕಮೀಟಮಾಡುವ ಅಧಿಕಾರವನ್ನೂ ಕೊಟ್ಟು, ಇವರನ್ನು ವಿಜಾಪುರ ಜಿಲ್ಲೆಯ ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರರನ್ನಾಗಿ ನೇಮಿಸಿದರು. ಮೂರನೇ ವರ್ಗ ಮಾಜಿಸ್ಟ್ರೇಟ ಅಧಿಕಾರವನ್ನು ಕೊಡದೆ ಒಮ್ಮಿಂದೊಮ್ಮೆ ೨ನೇ ವರ್ಗ ಮಾಜಿಸ್ಟ್ರೇಟ ಅಧಿಕಾರವನ್ನು ಕೊಡಲಿಕ್ಕೆ ಬರುವದಿಲ್ಲ. ನಿಯಮವನ್ನು ಮುರಿದು ಸರಕಾರದವರು ಹೀಗೆ ಯಾರಿಗೂ ಕೊಟ್ಟಿದ್ದಿಲ್ಲ. ಆದರೆ ಅವರ ವಿಷಯವಾಗಿ ಆ ನಿಯಮವನ್ನು ಮುರಿದು ಇವರಿಗೆ ಒಮ್ಮಿಂದೊಮ್ಮೆ ಸೇಕಂಡಗ್ರೇಡ ಮಾಜಿಸ್ಟ್ರೇಟವನ್ನೂ, ಕಮೀಟ ಪಾವರವನ್ನೂ ಕೊಟ್ಟರು. ಸರಕಾರ ಠರಾವ ನಂಬರ ೬೩೦೭/೧೨-೧೧-೯೨ ಸರಕಾರ ಗ್ಯಾಝೀಟ ಪಾನ ೧೧೫೨ ತಾ. ೨೪-೧೧-೯೨ ೧ನೇ ಭಾಗ ನ್ಯಾಯಖಾತೆ. ಹೀಗೆ ಹೆಚ್ಚಳವನ್ನೂ, ಅಧಿಕಾರವನ್ನೂ, ದೊಡ್ಡಸ್ತಿಕೆಯನ್ನೂ ಸರಕಾರದಿಂದ ನಿಯಮಬಿಟ್ಟು ಪಡೆದ ಮಹನೀಯರು ಇವರೇ ಮೊದಲಿನವರು. ಈ ತರದ ಶ್ರೇಯಸ್ಸು ಸಾಮಾನ್ಯ ಜನರಿಗೆ ಸಿಗುವದಿಲ್ಲ. ಇದು ಪುಣ್ಯವಂತರಿಗೇ ಲಭ್ಯವು. ಇಂಥ ಸತ್ಯಪ್ರದಿಪಾದಿತರಾಗಿ ಆದ ಮಹೋನ್ನತಿಯು ಬಹುಜನ ಸಮಾಜದ ಸೌಖ್ಯಕ್ಕೆ ಕಾರಣವಾಗಿರುವದು. ಪಂಡಿತ ಶಿವರುದ್ರಯ್ಯನವರು ಕೆಲಸದಿಂದ ದೂರಾಗಿ ಮನೆಯಲ್ಲಿ ಕೂಡಲು, ರಾವಬಹದ್ದೂರವರ ಪರಮಪವಿತ್ರರಾದ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಶಿರಸಂಗಿ ಈ ಘನವಂತರು ಪಂಡಿತರನ್ನು ತಮ್ಮ ದೇಸಗತಿಯ ಕಾರಭಾರಿಗಳನ್ನಾಗಿ ನೇಮಿಸಿಕೊಂಡರು. ಇದು ವಿದ್ಯಾಭಿಮಾನತೆಯನ್ನೂ, ದೊಡ್ಡಸ್ತಿಕೆಯನ್ನೂ, ದಯಾರ್ದ್ರದೃಷ್ಟಿಯನ್ನೂ ತೋರಿಸುತ್ತದೆ. ಈ ಪಂಡಿತರು ಕಾರಭಾರಿಗಳಾಗಿ, ಕೆಲವು ದಿವಸ ಕೆಲಸಮಾಡಿ ಮುಂದೆ ಸನ್ ೧೯೦೫ ನೇ ಇಸವಿಯ ಸಪ್ಟಂಬರದಲ್ಲಿ ಸವದತ್ತಿಯಲ್ಲಿ ತೀರಿಕೊಂಡದ್ದರಿಂದ ಯಜಮಾನರಿಗೂ, ರಾವಬಹದ್ದೂರವರಿಗೂ, ಎಲ್ಲ ಜನರಿಗೂ ಬಹಳೇ ವಿಷಾದವಾಯಿತು.

ರಾ.ಬ||ರುದ್ರಗೌಡರು ವಿಜಾಪುರದಲ್ಲಿ ವಿಜಯಿಗಳಾದದ್ದು

ಧಾರವಾಡ, ಕಾರವಾರ, ಬೆಳಗಾವಿ ಜಿಲ್ಲೆಗಳಲ್ಲಿ ಸಂಚರಿಸಿ, ಶೋಭೆಯನ್ನು ಹೊಂದಿ, ರಾವಬಹದ್ದೂರವರ ಕೀರ್ತಿಧ್ವಜವು ಇವರು ಹೋಗುವದಕ್ಕಿಂತ ಮುಂದಾಗಳೇ ವಿಜಾಪುರಕ್ಕೆ ಹೋಗಿ ವಿರಾಜಮಾನವಾಗಿತ್ತು. ಮೊದಲಿನಿಂದಲೂ ಪ್ರಖ್ಯಾತರಾಗಿದ್ದ ಇವರು ಕ್ರಾಫರ್ಡಶಾಹಿಯಂದಿತ್ತ ಬಹಳೇ ಬೆಳಕಿಗೆ

ಬಂದರು. ಇವರ ಆಡಳಿತದಲ್ಲಿ ಬಂದ ಅನೇಕ ಆತಂಕಗಳು ಇವರ ಅಭಿವೃದ್ಧಿಯನ್ನೇ ಗೈದವಲ್ಲದೆ ಹಾನಿಯನ್ನೇನೂ ಮಾಡಲಿಲ್ಲ. ಜನರ ಚಾಡಿಗಳೂ, ಗಿಲ್ಲೆಗಳೂ, ಮೂಕ ಅರ್ಜಿಗಳೂ, ಕಪಟ ವ್ಯಾಜ್ಯಗಳೂ ಇವರ ಅಭ್ಯುದಯಕ್ಕೇ ಕಾರಣವಾದವು. ಕಬ್ಬು ಅನೇಕ ಪ್ರಕಾರದ ಸಂಘರ್ಷದಿಂದ ಸಕ್ಕರೆಯ ಸ್ವರೂಪವನ್ನು ಹೊಂದಿದಂತೆ ಇವರು ಎಷ್ಟೋ ದುಷ್ಟಜನರ ಕಪಟವ್ಯೂಹದಿಂದ ಪಾರಾಗಿ, ಪ್ರಮಾಣಿಕತನವೆಂಬ ತಮ್ಮ ನಿಜ ಪ್ರಕಾಶವನ್ನು ಜಗತ್ತಿಕ್ಕೆ ತೋರ್ಪಡಿಸಿದ್ದರಿಂದ, ಇವರ ಚರಿತ್ರೆಯು ಸಕ್ಕರಿಗಿಂತ ಸವಿಯಾಗಿ ಪುಣ್ಯಚರಿತ್ರೆಯೆಂದೆನ್ನಿಸಿಕೊಂಡಿತು. ದೈವವು ಅನುಕೂಲಿಸುತ್ತಿರಲು ಹಾವವೇ ಹಗ್ಗದಂತಾಗುವದು. ಮುಂಬಯಿ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಲಂಚದ ಪ್ರತಿಬಂಧದ ಕೋಲಾಹಲವನ್ನೆಬ್ಬಿಸಿದ ರಾ.ಬ॥ರುದ್ರಗೌಡರ ಪ್ರಖ್ಯಾತಿಯು ಬಹು ದೂರದೂರಿನ ವರೆಗೆ ಹೋಗಿತ್ತು. ಇವರನ್ನು ನೋಡಿರದಿದ್ದರೂ ಜನರಲ್ಲಿ ಇವರ ಪ್ರಾಮಾಣಿಕತನವೂ, ಚಾಣಾಕ್ಷತನವೂ ಗೊತ್ತಾಗಿ ಹೋಯಿತು. ಇವರ ಪ್ರತಿಯೊಂದು ಪ್ರಕರಣದ ಚಮತ್ಕಾರವನ್ನು ಕೇಳಿದ ಜನರು ಅದನ್ನು ತಮ್ಮೂರುಗಳಲ್ಲಿ ಕಥೆ ಮಾಡಿ ಹೇಳುತ್ತಿದ್ದರು. ಅಕಬರ ಬೀರಬಲ್ಲರ ಚಾತುರ್ಯದ ಕಥೆಗಳನ್ನೂ, ವಿಕ್ರಮಾರ್ಕ ಭೋಜರಾಜರ ಕುಶಲತೆಯನ್ನೂ ನಾನಾ ಫಡಣೀಸನ ಜಾಣತನವನ್ನೂ ಜನರು ಎಷ್ಟು ಉತ್ಸುಕತೆಯಿಂದ ಕೇಳುತ್ತಿದ್ದರೋ ಅದರಕಿಂತಲೂ ಇವರ ಚಮತ್ಕೃತಿಗಳನ್ನು ಕೇಳುತ್ತಿದ್ದರು.

ಮೂರೂ ಜಿಲ್ಲೆಗಳಲ್ಲಿ ರಾವಬಹದ್ದೂರವರ ಪ್ರಭಾವದಿಂದ ಲಂಚದ ಎಳತವು ಎಲ್ಲ ಕಾಮದಾರರಲ್ಲಿ ಎಷ್ಟೋ ಕಡಿಮೆಯಾಗಿತ್ತು. ಬಹುಕಾಲದಿಂದ ಮೆಯ್ಯುಂಡಿದ್ದ ಆ ಲಂಚದ ಯಾಚನೆಯನ್ನು ಒಮ್ಮಿಂದೊಮ್ಮೆ ಮುರಿಯುವದು ಬಹು ಕಠಿಣವಾದದ್ದು. ಬಹುದಿವಸದ ಮರವನ್ನು (ಬಲಿತ ಗಿಡವನ್ನು) ಬೇರುಸಹಿತ ಕೀಳುವದು ಬಿಗಿಯೇ ಸರಿ. ಕ್ರಾಫರ್ಡಶಾಹಿಯ ಆಡಳಿತದಲ್ಲಿ ಎಷ್ಟೋ ಜನರು ಪೆಟ್ಟು ತಿಂದದ್ದನ್ನು ನೋಡಿ ಎಲ್ಲ ಕಾಮದಾರರು ಲಂಚವೆಂದರೆ ವಿಚಾರಿಸಿ ಕೆಲಸ ಮಾಡುತ್ತಿದ್ದರು. ಕೆಲವರಿಗೆ ಲಂಚದ ಚಟವೇ ಬಿದ್ದುಹೋಗಿತ್ತು. ಆ ದುಷ್ಟರ ದುರ್ವ್ಯಸನವು ಇನ್ನೂ ದೂರಾಗಿದ್ದಿಲ್ಲ. ಆದರೂ ಪ್ರತ್ಯಕ್ಷವಾಗಿ ತೆಗೆದುಕೊಳ್ಳುವದು ಅಪ್ರತ್ಯಕ್ಷವಾಗಿ ನಡೆಯುತ್ತಿತ್ತು. ಸಿಗುವಂತಿದ್ದರೆ ಹಿಂದು ಮುಂದಿನ ವಿಚಾರಮಾಡಿ ನೋಡಿ ತೆಗೆದುಕೊಳ್ಳಹತ್ತಿದರು. ಮೆ॥ಕಮಿಶನರರಾಗಿದ್ದ ಕ್ರಾಫರ್ಡಸಾಹೇಬ ಬಹದ್ದೂರವರೇ ಲಂಚದ ಪ್ರಕರಣದಲ್ಲಿ ಕೆಲಸದಿಂದ ದೂರಾಗಲು, ಲಂಚದ ಕಳಸವೇ ಕಡಕೊಂಡು ಕೆಳಗೆ ಬಿದ್ದಂತಾಯಿತು. ಮೂರೂ ಜಿಲ್ಲೆಗಳಲ್ಲಿ ಹೀಗೆ ಎಷ್ಟೋರೀತಿಯಿಂದ ಲಂಚದ ಪ್ರಸಾರವು ಕಡಿಮೆಯಾಗಿರಲು ವಿಜಾಪುರ ಜಿಲ್ಲೆಯೊಂದು ಉಳಿಯಿತೆಂದು ತಿಳಿದು ದೈವವೇ ಇವರನ್ನು ವಿಜಾಪುರಕ್ಕೆ ತಂದಿಳಿಸಿತೆಂದು ಹೇಳಬಹುದು.

ರಾವಬಹದ್ದೂರವರು ಸನ್ ೧೮೯೬ನೇ ಇಸವಿಯ ಅಕ್ಟೋಬರದ ವರೆಗೆ ಬೆಳಗಾವಿಯಲ್ಲಿ ಕಮಿಶನರ ದಪ್ತರದಾರರಾಗಿದ್ದು, ಅದೇ ತಿಂಗಳಲ್ಲಿ ವಿಜಾಪುರಕ್ಕೆ ಹೋದರು. ಇವರು ಹೋಗುವದಕ್ಕಿಂತ ಮುಂದಾಗಳೆ ಇಲ್ಲಿಯ ಕಚೇರಿಯ ಕಾಮದಾರರಲ್ಲಿ ವಿಹರಿಸುತ್ತಿದ್ದ ಲಂಚವೆಂಬ ಪಿಶಾಚಿಯು ಬಿಟ್ಟೋಡಿತ್ತು. ಎಲ್ಲರು ತಮ್ಮ ಮಹದಾಶೆಯನ್ನು ಮರೆತಂತೆ ಮಾಡಿದ್ದರು. ಲಂಚಗ್ರಸ್ತನಾದ ಪ್ರತಿಯೊಬ್ಬ ಅಧಿಕಾರಿಯ ಮನಸಿನೊಳಗೆ ಇವರ ಅಂಜಿಕೆಯು ಮನೆಮಾಡಿಕೊಂಡಿತ್ತು. ಇವರು ಬರುತ್ತಲೆ ಬಹುಶಃ ಎಲ್ಲ ಜನರು ಸದ್ವರ್ತನೆಯುಳ್ಳವರಾದರು. ಇವರ ರಾಜೋದ್ಯೋಗವು ಸುಸೂತ್ರವಾಗಿ ಸಾಗಹತ್ತಿತು. ಜಿಲ್ಲೆಯ ಎಲ್ಲ ಜನರಿಗೂ, ರಾವಬಹದ್ದೂರವರ ಆಗಮನದಿಂದ ಮಹದಾನಂದವಾಯಿತು. ಎಲ್ಲಿ ಹೋದಲ್ಲಿ ಇವರ ಏಳ್ಗೆಯೇ ಆಗಹತ್ತಿತು. ಎಲ್ಲ ಜಿಲ್ಲೆಗಳಂತೆ ಇಲ್ಲಿಯಾದರೂ ಇವರು ವರಿಷ್ಠರ ಪ್ರೇಮಕ್ಕೆ ಪಾತ್ರರಾದರು. ನಾಲ್ಕು ಜಿಲ್ಲೆಗಳಲ್ಲಿಯೂ ಇವರ ದರ್ಪವು ದಟ್ಟಾಗಿ ಕೂತಿತು. ಇನ್ನೂ ಎಷ್ಟೋ ಸರಕಾರಿಯ ಕಾಮದಾರರು ತಮ್ಮ ಮನಸಿಗೆ ಬಂದಂತೆ ಆಚರಿಸಿ ಅಳತೆಗೆಟ್ಟು ದುಡ್ಡು ತಿನ್ನುತ್ತಿದ್ದರು. ಈ ಪ್ರಕಾರ ಅಳತಿಲ್ಲದೆ ಲಂಚತೆಗೆದುಕೊಳ್ಳುವದನ್ನೂ, ಸರಕಾರಿಯ

ಅಧಿಕಾರಿಗಳು ರಾಜ್ಯೋದ್ಯೋಗದ ಸಂಚಾರಕ್ಕೆ ಹೋದಾಗ ಗ್ರಾಮಸ್ಥರ ಕಡೆಯಿಂದ ತೆಗೆದುಕೊಳ್ಳತಕ್ಕ ಯಥೇಷ್ಟವಾದ ಸರಬರಾಯಿಯನ್ನೂ ಆದಷ್ಟು ಮಟ್ಟಿಗೆ ಕಡೆಮೆಮಾಡಿದರು. ಆ ಕಾಲಕ್ಕೆ ಮೆ॥ಜೇಮ್ಸ ಮಾಂಟೀಥ ಸಾಹೇಬ ಬಹದ್ದೂರವರು ವಿಜಾಪುರ ಜಿಲ್ಲೆಯ ಕಲೇಕ್ಟರರಾಗಿದ್ದರು. ಇವರು ಸನ್ ೧೮೯೭ನೆಯ ಇಸವಿಯ ನವಂಬರ ತಿಂಗಳಿನಿಂದ ಸನ್ ೧೮೯೯ನೇ ಎಪ್ರೀಲದ ವರೆಗೆ ವಿಜಾಪುರದಲ್ಲಿಯೇ ಇದ್ದರು. ಇವರಾದರೂ ರಾ.ಬ॥ರುದ್ರಗೌಡರಂತೆ ನಿಷ್ಪೃಹಿಗಳೂ ಪ್ರಮಾಣಿಕರೂ ಇದ್ದದರಿಂದ ಸರಕಾರಿಯ ಅಧಿಕಾರಿಗಳು ಲಂಚ, ಸರಬರಾಯಿಗಳನ್ನು ತೆಗೆದುಕೊಳ್ಳುವದು ಎಷ್ಟೋ ಕಡಿಮೆಯಾಯಿತು. ಇವರು ರಾ.ಬ॥ರುದ್ರಗೌಡರನ್ನು ಅತಿಶಯವಾಗಿ ಪ್ರೀತಿಸುತ್ತಿದ್ದರು. ಇವರ ಕೆಲಸದ ಕ್ರಮವೂ, ಪ್ರಾಮಾಣಿಕತನವೂ ಮೆಹರ್ಬಾನವರ ಮನಸಿಗೆ ಬಹಳೇ ಬಂದಿತ್ತು. ಮೆ॥ರವರು ವಿಜಾಪುರ ಜಿಲ್ಲೆಯನ್ನು ಬಿಟ್ಟುಹೋಗುವಾಗ, ರಾ.ಬ॥ರುದ್ರಗೌಡರು ಕೆಲಸವನ್ನು ಬಹಳೇ ಪ್ರಮಾಣಿಕತನದಿಂದಲೂ, ಚತುರತನದಿಂದಲೂ ಮಾಡುವರೆಂತಲೂ, ಇವರು ಅನ್ಯಾಯಕ್ಕೆ ಎಷ್ಟುಮಾತ್ರವೂ ಆಶ್ರಯಕೊಡದೆ ಬಡಜನರನ್ನೂ ರೈತರನ್ನೂ ರಕ್ಷಿಸುವರೆಂತಲೂ, ದೀರ್ಘಸಾಹಸಿಗಳೆಂತಲೂ, ಇವರು, ಹೋದ ವರ್ಷವಲ್ಲದೆ ಇದೊಂದು ವರ್ಷ ನನಗೆ ಲಭಿಸಿದ್ದು ನನ್ನ ಸುದೈವವೆಂದು ತಿಳಿಯುತ್ತೇನೆಂನಂತಲೂ ರಾವಬಹದ್ದೂರವರ ಶಿಫಾರಸ ಮಾಡಿರುತ್ತಾರೆ. ಇವರು ಹೋಗುವಾಗ ಕಮತಿಗಿಯ ತಾಟವನ್ನು ಮುದ್ದಾಂ ಮಾಡಿಸಿ ತರಿಸಿ ತಮ್ಮ ಪ್ರೀತಿಯ ದಶಿಯಿಂದ ರಾ.ಬ॥ರುದ್ರಗೌಡರಿಗೆ ಕೊಟ್ಟರು. ಇದರ ಮೇಲಿಂದ ಮೆ॥ರವರಿಗೆ ಇವರು ಎಷ್ಟು ಪ್ರಿಯಕರರಾಗಿದ್ದರೆಂಬುದು ವ್ಯಕ್ತವಾಗುತ್ತದೆ. ಮೆ॥ಮಾಂಟೀಥ ಸಾಹೇಬ ಬಹದ್ದೂರವರು ಮುಂದೆ ಸನ್ ೧೯೦೩ನೇ ಇಸವಿಯ ಅಗಷ್ಟ ತಿಂಗಳಿನಿಂದ ನವಂಬರದ ವರೆಗೆ ಮೂರು ತಿಂಗಳು ಮುಂಬಯಿ ಇಲಾಖೆಯ ಆಕ್ಟಿಂಗ ಗವ್ಹರ್ನರರಾದರು. ಆಗ ಇವರಿಗೆ ಸರ್[೧] ಎಂಬ ಬಹುಮಾನದ ಪದವಿಯು ಸಿಕ್ಕಿತು. ಇವರು ನ್ಯಾಯನಿಷ್ಠುರರೂ, ವಿದ್ವಾನರೂ, ದೂರದೃಷ್ಟಿಯಿಂದ ಕೆಲಸಮಾಡುವವರೂ ಆಗಿದ್ದರು. ಮೆ॥ಮಾಂಟೀಥ ಸಾಹೇಬ ಬಹದ್ದೂರವರ ತರುವಾಯ ಬಂದಿದ್ದ ಕಲೇಕ್ಟರರಾದರೂ ರಾ.ಬ॥ ರುದ್ರಗೌಡರನ್ನು ಪ್ರೀತಿಸುತ್ತಿದ್ದರು. ಕಡೆಗೆ ಕಲೇಕ್ಟರರಾಗಿ ಬಂದ ಮೆ॥ಗಣಪತ ದಾಮೋದರ ಪಾನಸೆಯವರಿಗೂ ರಾ.ಬ॥ರುದ್ರಗೌಡರಿಗೂ ಕೂಡಿ ಬರಲಿಲ್ಲ. ಇವರ ಪ್ರಾಮಾಣಿಕತನವೂ, ಸರಳಹೃದಯವೂ, ಮೆ॥ ಪಾನಸೆಯವರಿಗೆ ಸರಿಬರಲಿಲ್ಲ. ಇವರು ಲಂಚಸರಬರಾಯಿಗಳ ವಿಷಯವಾಗಿ ಪ್ರತಿಬಂಧಿಸುವದು ಅಷ್ಟೊಂದು ಪಾನಸೆಯವರ ಮನಸಿಗೆ ಬರಲಿಲ್ಲ. ಮೆ॥ ಮಾಂಟೀಥ ಸಾಹೇಬ ಬಹದ್ದೂರವರಂತೆ ಪಾನಸೆಯವರಾದರೂ ರಾವಬಹದ್ದೂರವರಿಗೆ ಸಹಾಯಕರಾಗಿದ್ದರೆ ಆ ಜಿಲ್ಲೆಯಲ್ಲಿ ಇನ್ನೂ ಎಷ್ಟೋಮಟ್ಟಿಗೆ ಸುಧಾರಣೆಯಾಗುತ್ತಿತ್ತು.

ವಿಜಾಪುರದ ಸಂಚಾರ

ಇವರ ಕಾಲಕ್ಕೆ ಸಿಂದಗಿ ತಾಲೂಕ ಕಚೇರಿಯ ಕಾರಕೂನರಾಗಿದ್ದ ಬಾಪೂಜಿ ಅಣ್ಣಾಜಿ ಡೋಣಗಾವಕರ ಎಂಬವರು ತಗಾಯಿಯಲ್ಲಿ ಬಡಜನರ ಕಡೆಯಿಂದ ಬಹಳ ಲಂಚವನ್ನು ತೆಗೆದುಕೊಳ್ಳುತ್ತಾರೆಂದು ಸುದ್ದಿಯಾಗಿತ್ತು. ಅದನ್ನು ತಿಳಿದು ರಾವಬಹದ್ದೂರವರ ಸ್ವಾರಿಯು ಅಲ್ಲಿಗೆ ಹೋಗಿ ಸೂಕ್ಷ್ಮರೀತಿಯಿಂದ ಶೋಧ ಮಾಡಲಾಗಿ,

---

೧. ಸನ್ ೧೯೦೩ನೇ ಇಸವಿಯ ಜನೇವರಿ ೧ನೇ ತಾರೀಖಿನಲ್ಲಾದ ೭ನೆಯ ಎಡ್ವರ್ಡ ಬಾದಶಹರ ರಾಜ್ಯಾರೋಹಣ ಸಂಬಂಧವಾದ ದಿಲ್ಲಿಯ ದರ್ಬಾರದಲ್ಲಿ ಈ ಸರ್ ಎಂಬ ಪದವಿಯು ಸಿಕ್ಕಿತು. ಈ ದರ್ಬಾರಕ್ಕೆ ವಂಟಮುರಿಯ ಶ್ರೀಮಂತ ಲಖಮಗೌಡ ಬಸವಪ್ರಭುಗೌಡ ಸರದೇಸಾಯಿಯವರೂ, ಸಿರಸಂಗಿಯ ಲಿಂಗಪ್ಪ ಜಾಯಪ್ಪ ಶ್ರೀಮಂತ ಸರದೇಸಾಯಿಯವರೂ ಹೋಗಿದ್ದರು. ದಕ್ಷಿಣಭಾಗದಿಂದ ದಿಲ್ಲೀದರ್ಬಾರಕ್ಕೆ ಹೋದ ಶ್ರೀಮಂತರು ಇವರಿಬ್ಬರೇ ಸರಿ. (ಹುಕ್ಕೇರಿ ಮಹಾಲ ಪೈಕಿ ವಂಟಮುರಿ).

ತಗಾಯಿ ಕೊಡಿಸುವಾಗ್ಗೆ ನೂರಕ್ಕೆ ಸುಮಾರು ಹದಿನೈದು ರೂಪಾಯಿಯಂತೆ ತಪ್ಪದೆ ಲಂಚವನ್ನು ತೆಗೆದುಕೊಳ್ಳುತ್ತಾರೆಂದು ನಿಶ್ಚಿತವಾಗಿ ಗೊತ್ತು ಹಚ್ಚಿ, ಪುರಾವೆಗಾಗಿ ಒಂದೇ ದಿವಸದಲ್ಲಿ ಏಳು ಗ್ರಾಮಗಳನ್ನು ಸಂಚರಿಸಿ ಯೋಗ್ಯ ಪುರಾವೆಗಳನ್ನು ಸಂಪಾದಿಸಿ ಮೆ॥ಪಾನಸೆ ಕಲೇಕ್ಟರ ಸಾ॥ಬ॥ರವರ ಕಡೆಗೆ ಬರೆದು ತಿಳಿಸಲಾಗಿ, ಅವರಿಗೆ ಅದು ಸಮಂಜಸವಾಗಿ ತೋರಿ ಬರೆದು ಹೋಗಲು ೨೫ ರೂಪಾಯಿ ಪಗಾರವುಳ್ಳ ಆ ಬಾಪೂಜಿ ಅಣ್ಣಾಜಿಯವರಿಗೆ ಭರತರ್ಫವಾಗಿ ಹೋಯಿತು. ಮತ್ತು ಒಬ್ಬ ದಪ್ತರಬಂದನಿಗೂ, ಕೆಲವು ಗೌಡಶಾನಭೋಗರಿಗೂ ಭರತರ್ಫವಾಯಿತು. ಅದರಿಂದ ಬಹಳೇ ತ್ರಾಸವಾಗುತ್ತಿದ್ದ ಬಡಜನರಿಗೆ ಆನಂದವಾಯಿತು. ಇಂಥ ಬಡಜನರಿಗೂ, ರೈತ ಜನರಿಗೂ ಹಿತಕರವಾಗುವ ಕಾರ್ಯಗಳಲ್ಲಿ ರಾವಬಹದ್ದೂರರವರು ಬಹಳೇ ದಕ್ಷವುಳ್ಳವರು. ಇದರಂತಹ ಪರಪೀಡೆಯ ಕಾರ್ಯಗಳು ಅಲ್ಲಲ್ಲಿಗೆ ನಡೆಯುತ್ತಿದ್ದವುಗಳನ್ನು ಆದಷ್ಟುಮಟ್ಟಿಗೆ ಕಡಿಮೆಮಾಡುತ್ತ, ಉತ್ತಮರೀತಿಯಿಂದ ಕೆಲಸಮಾಡುತ್ತ, ಆ ಜಿಲ್ಲೆಯಲ್ಲಿರುವ ಶ್ರೀ ಬಸವೇಶ್ವರ ಜನ್ಮಸ್ಥಾನವಾದ ಬಾಗೇವಾಡಿಗೆ ಹೋಗಿ, ಅಲ್ಲಿಂದ ಶ್ರೀ ಬಸವೇಶ್ವರನ ಗುರುಸ್ಥಾನವೂ, ಐಕ್ಯಸ್ಥಾನವೂ ಆದ ಕಪ್ಪಡಿಗೆ ಹೋಗಿ ಶ್ರೀ ಸಂಗಮೇಶ್ವರನನ್ನು ಕಂಡು ಧನ್ಯರಾಗಿ ಮತ್ತು ಬಾದಾಮಿ ಮಹಾಕೂಟ ಮುಂತಾದ ಪ್ರಸಿದ್ಧ ಕ್ಷೇತ್ರಗಳನ್ನು ನೋಡುತ್ತ ಪರಿವಾರವನ್ನೆಲ್ಲ ಸಂತೋಷಪಡಿಸುತ್ತಿದ್ದರು. ಆ ವಿಜಾಪುರ ಜಿಲ್ಲೆಯಲ್ಲಿಯೂ ವೀರಶೈವರಲ್ಲಿ ವಿದ್ಯಾಭಿರುಚಿಯನ್ನು ಹುಟ್ಟಿಸಿ, ಲಿಂಗಾಯತ ಫಂಡನ್ನು ಕೂಡಿಸಿ ಯಶೋವಂತರಾಗಿ ಸುಖದಿಂದ ರಾಜ್ಯಕಾರ್ಯದಲ್ಲಿ ನಿರತರಾಗಿರಲು, ರಾವಬಹದ್ದೂರರವರ ಪ್ರಿಯ ಕುಮಾರಿಯವರಾದ ರುದ್ರಾಣಿಯವರು ಅಂಗಕಾಂತಿಯಿಂದಲೂ, ವಸ್ತ್ರಾಭರಣಾದ್ಯಲಂಕಾರಗಳಿಂದಲೂ, ಬಾಲಲೀಲೆಗಳಿಂದಲೂ ಎಲ್ಲರಿಗೂ ಸಂತೋಷಪಡಿಸುತ್ತ ದಿನದಿನಕ್ಕೆ ಶುಕ್ಲಚಂದ್ರನಂತೆ ಬೆಳೆಯುತ್ತ ಅಂತಃಪುರವೆಂಬ ಸರೋವರಕ್ಕೆ ಬಾಲಹಂಸಿಯಂತೆ ಶೋಭಿಸುತ್ತಿರಲು, ಅವರಿಗೆ ಅಯ್ದು ವರ್ಷ ತುಂಬದವು. ಈ ರುದ್ರಾಣಿಯವರಿಗಾಗಿ ಬೇಡಿಕೊಂಡಿದ್ದ ಶ್ರೀವೀರಭದ್ರದೇವರ ಗುಗ್ಗಳಕಾರ್ಯವನ್ನೊಂದು ಸಮಾರಂಭದಿಂದ ಸಾಂಗಮಾಡಬೇಕೆಂದು ಯೋಚಿಸಿ, ಗುಗ್ಗುಳ ಸಮಾರಂಭದ ಪೂರ್ವಸಿದ್ಧತೆಯನ್ನು ಮಾಡುವದಕ್ಕೆ ತಮ್ಮ ಪರಿವಾರದವರನ್ನೆಲ್ಲ ಮುಂದಾಗಲೇ ಅರಟಾಳಕ್ಕೆ ಕಳಿಸಿದರು.

ಶ್ರೀ ವೀರಭದ್ರದೇವರ ಗುಗ್ಗುಳ ಸಮಾರಂಭ

ವೀರಪ್ಪನವರೂ, ಗುರುಪಾದಪ್ಪನವರೂ ಮತ್ತು ಬೇರೆ ಪರಿವಾರದವರೂ ಅರಟಾಳಕ್ಕೆ ಬಂದು ಗುಗ್ಗುಳಕಾರ್ಯಕ್ಕಾಗಿ ಯಾವತ್ತು ಸಾಮಾನುಗಳ ಸಿದ್ಧತೆಯನ್ನು ಮಾಡಹತ್ತಿದರು. ರಾವಬಹದ್ದೂರರವರ ಸೋದರ ಮಾವಂದಿರ ಮಕ್ಕಳಾದ ಚೆನ್ನಪ್ಪಗೌಡರೂ,[೨] ಸ್ನೇಹಿತರಾದ ಶಾಬಾಳಾದ ನೀಲನಗೌಡರೂ ಮತ್ತು ಇನ್ನೂ ಎಷ್ಟೋ ಮಂದಿ ಸ್ನೇಹಿತರೂ ಕೂಡಿ, ಪುರಶೃಂಗಾರವನ್ನೂ, ಶ್ರೀವೀರಭದ್ರದೇವಾಲಯದ ಅಲಂಕಾರವನ್ನೂ, ಮಹತ್ತಾದ ಮಂಟಪವನ್ನೂ ಹಿಂದೆ ಮನ್ಮಥೋತ್ಸವದಲ್ಲಿ ರಚಿಸಿದಂತೆ ರಚಿಸಿದ್ದರು. ಏನು ಮಾಡತಕ್ಕದ್ದನ್ನೆಲ್ಲ ನೆರವೇರಿಸಿ, ಆಪ್ತೇಷ್ಟ ಜನರನ್ನೆಲ್ಲ ಕರೆಸಿ, ಸಕಲ ಸಾಹಿತ್ಯಗಳನ್ನೆಲ್ಲ ಸಿದ್ಧಮಾಡಿ, ಸಾಹೇಬರವರನ್ನು ಕರೆಸಿದರು. ರಾವಬಹದ್ದೂರರವರು ಬರುತ್ತಲೆ ಚಂದ್ರನನ್ನು ಕಂಡ ಚಕೋರಸಮೂಹದಂತೆ ಪುರದ ಜನರೆಲ್ಲರೂ ಆನಂದಪಟ್ಟರು. ಸರ್ವಸಿದ್ಧತೆಯಾದದ್ದನ್ನು ನೋಡಿ ರಾ.ಬ॥ರುದ್ರಗೌಡರು ಸಂತೋಷಭರಿತರಾದರು. ಮಂಗಳವಾದ್ಯಗಳು

---

೨. ಈ ಚೆನ್ನಪ್ಪಗೌಡರ ತಂದೆ ವೀರಭದ್ರಗೌಡ ಬಿನ್ನ ಮಹಾಲಿಂಗಗೌಡ ಪಾಟೀಲ ಕುಲಕರಣಿ ಎಂಬವರು ರುದ್ರಗೌಡರ ಸೋದರಮಾವಂದಿರು. ಇವರು ಸನ್ ೧೮೭೬ರಲ್ಲಿ ಕುನ್ನೂರಲ್ಲಿಯೇ ತೀರಿಕೊಂಡರು.

ಮೊಳಗುತ್ತಿರಲು ಸರ್ವ ಉತ್ಸವಗಳು ನಡೆದವು. ಯಥೋಚಿತವಾಗಿ ಗುಗ್ಗುಳಪೂಜೆ ವೆಸಗಿ ಪುಟವಾಯಿತು. ಮುದ್ದುಮಗುವಾದ ರುದ್ರಾಣಿಯವರನ್ನು ಪನ್ನೀರ ಸ್ನಾನಮಾಡಿಸಿ, ಸರ್ವವಸ್ತ್ರಾಭರಣಗಳಿಂದಲಂಕರಿಸಿ ಸೌ॥ಗುರುಪಾದವ್ವನವರು ಸರ್ವಾಭರಣಭೂಷಿತೆಯರಾಗಿ ಗುಗ್ಗುಳವನ್ನು ಸ್ಪರ್ಶಿಸಿ ಸರ್ವಸಮಾರಂಭದಿಂದ ಸಕಲಪರಿವಾರ ಸಮೇತರಾಗಿ ಶ್ರೀ ವೀರಭದ್ರೇಶ್ವರನ ದೇವಾಲಯಕ್ಕೆ ತೆರಳಿದರು. ಮುಂದೆ ಮುಂದೆ ಭೇರಿ, ಕರಡಿ, ಕಾಳಿ, ಕರ್ನಿ, ಸಂಬಾಳ, ತಾಳ, ತಾಸೆ, ಸನಾದಿ ಮುಂತಾದ ಮಂಗಳವಾದ್ಯಗಳಿಂದಲೂ, ದಕ್ಷಗರ್ವಾಪಭಂಗವನ್ನು ಮಾಡಿದ ಶ್ರೀ ವೀರಭದ್ರನ ಕಡುಪರಾಕ್ರಮವನ್ನು ಬಿಡದೆ ಖಡೆಖಡೇ ಎಂದು ವರ್ಣಿಸುವ, ಎಡೆಬಿಡದೆ ಕುಣಿಕುಣಿದು ಒಡಪುಗಳನ್ನು ಹೇಳುವ ಪುರವಂತರ ದೀರ್ಘಧ್ವನಿಯಿಂದಲೂ, ಉತ್ಸವವು ಪ್ರೇಕ್ಷಣೀಯವಾಗಿತ್ತು. ಈ ಪ್ರಕಾರ ಸರ್ವಸಮಾರಂಭದಿಂದ ಸಿಂಗರವಾದ ಶ್ರೀವೀರಭದ್ರೇಶ್ವರನ ದೇವಾಲಯಕ್ಕೆ ಹೋಗಿ, ರಜತಕಿರೀಟ ಮುಖಮಂಡಲಗಳಿಂದಲೂ, ಕಣಬಟ್ಟು, ಕರ್ನಕುಂಡಲ, ಮಹಾಮಾಲೆ, ರುಂಡಮಾಲೆ, ಸರಪಳಿ, ರುದ್ರಾಕ್ಷಿಮಾಲೆ, ಕಟಿಸೂತ್ರ, ಕಿಂಕಿಣಿ, ಕತ್ತಿ, ಕಠಾರಿ, ಕೈಚೂರಿ, ಸಿಂಹಮುಖ, ಘುರ್ಘರೆ, ಬಾಣ, ಜಂಗು, ಚವರಿ, ಡಾಲು ಮುಂತಾದ ಬೆಳ್ಳಿ ಬಂಗಾರಗಳ ಆಭರಣಗಳಿಂದಲೂ, ಆಯುಧಗಳಿಂದಲೂ ಕಾಶಿಯನ್ನುಟ್ಟು ಪರಿಶೋಭಿಸುವ ಶ್ರೀ ವೀರಭದ್ರೇಶ್ವರನಿಗೆ ನಮಸ್ಕರಿಸಿ, ರುದ್ರವ್ವನವರ ಹರಕೆಯನ್ನು ಇಳಿಸಿ, ಆಪ್ತೇಷ್ಟರುಗಳಿಂದ ಉಚಿತ ಉಡುಗರೆಯನ್ನು ಕೈಕೊಂಡು, ಸಂತುಷ್ಟರಾಗಿ ಸಾವಿರಾರು ಜನ ಭಕ್ತಮಾಹೇಶ್ವರರನ್ನು, ಪರಿವಾರದವರನ್ನೂ, ಪರಿಚಾರಕರನ್ನೂ ಬುಂದೆ, ಹೂರಣಗಡಬುಗಳ ಮಹಾಪ್ರಸ್ಥದಿಂದ ಅನ್ನಸಂತೃಪ್ತಿಮಾಡಿ, ಹಿಂದೆ ಮನ್ಮಥೋತ್ಸವದಲ್ಲಿ ಕೀರ್ತಿಯನ್ನು ಹೊಂದಿದಂತೆ ಈಗಾದರೂ ಪ್ರಖ್ಯಾತಿಯನ್ನು ಹೊಂದಿದರು. ಬಳಿಕ ಬಂದಿದ್ದ ಆಪ್ತೇಷ್ಟಜನರನ್ನು ಯೋಗ್ಯವಾದ ಉಡುಗರೆಗಳಿಂದ ಮನ್ನಿಸಿ, ಸಂತೋಷದಿಂದ ಪರಿವಾರಸಮೇತರಾಗಿ ತಮ್ಮ ರಾಜ್ಯಕಾರ್ಯಕ್ಕೆ ತೆರಳಿದರು. ಈ ಗುಗ್ಗುಳಕಾರ್ಯವು ಸನ್ ೧೮೯೬ ಮೇ ತಿಂಗಳಲ್ಲಿ ಆಯಿತು.

ಪರಿವಾರ ಸಮೇತರಾಗಿ ಬಿಜಾಪುರಕ್ಕೆ ಹೋಗುವಾಗ ಹಾದಿಯಲ್ಲಿದ್ದ ಸವನೂರ ನವಾಬಗಿರಿಯ ಖಾನಜಾದಿಯರೂ, ಹಂದಿಗನೂರ ದೇಸಾಯರೂ ಇವರನ್ನು ತಮ್ಮ ತಮ್ಮ ಪುರಗಳಿಗೆ ಕರಕೊಂಡು ಹೋಗಿ ಸರ್ವಸಮಾರಂಭದಿಂದ ಇವರಿಗೆ ಮೇಜವಾನಿಗಳನ್ನು ಮಾಡಿಸಿ, ಮೃಷ್ಟಾನ್ನಭೋಜನ, ತಾಂಬೂಲ, ಆಟ,ನೋಟ, ನಾಚು, ಉತ್ಸವಾದಿಗಳಿಂದ ಇವರನ್ನು ಸಂತೋಷಪಡಿಸಿ ಅಪ್ಪಣೆಕೊಟ್ಟರು. ಹೀಗೆ ಹೋದಹೋದಲ್ಲಿ ಮಾನಮರ್ಯಾದೆಗಳನ್ನು ಹೊಂದುವದೂ, ರಾಜಪೂಜ್ಯರಾಗುವದೂ ಪೂರ್ವಸುಕೃತವೇ ಸರಿ.

ರಾ.ಬ॥ರುದ್ರಗೌಡರು ದುಷ್ಕಾಳದಲ್ಲಿ ಬಡಜನರನ್ನು ಸಂರಕ್ಷಿಸಿದ್ದು

ಮುಂದೆ ಸನ್ ೧೮೯೬-೯೭ರಲ್ಲಿ ಬಿದ್ದ ಭಯಂಕರ ದುಷ್ಕಾಳದಲ್ಲಿ ವಿಜಾಪುರ ಜಿಲ್ಲೆಯ ಸ್ಥಿತಿಯು ಬಹಳೇ ಹೀನತರದ್ದಾಗಿತ್ತು. ಆ ವರ್ಷ ಸ್ವಲ್ಪವೂ ಮಳೆಯಾಗದ್ದರಿಂದ ಭೂಮಿಯು ಬೀಜವನ್ನೇ ಕಾಣಲಿಲ್ಲ. ನೋಡಿದತ್ತೆಲ್ಲ ಕರೇ ಭೂಮಿಯೇ ಕಣ್ಣಿಗೆ ಬೀಳುತ್ತಿತ್ತು. ಅದರಿಂದ ಆ ವರ್ಷದ ಬರಕ್ಕೆ ಜನರು ಕರೇಮಣ್ಣಿನ ಬರವೆಂದೆನ್ನುತ್ತಿದ್ದರು. ದುಷ್ಕಾಳವು ಭಯಂಕರವಾಗಿತ್ತು. ಬಡಜನರ ಬವಣೆಯನ್ನೂ ಬಳಲಿಕೆಯನ್ನೂ ನೋಡಲಿಕ್ಕೆ ಅಸಾಧ್ಯವಾಗಿತ್ತು. ಇಂಥ ದುಃಸ್ಥಿತಿಯನ್ನು ಕಂಡು ಇಂಗ್ಲಂಡ, ಕಲಕತ್ತಾ, ಮುಂಬಯಿ ಮೊದಲಾದ ಸ್ಥಳಗಳಲ್ಲಿಯ ಘನವಂತರು, ಬಡಜನರ ದುಷ್ಕಾಳದ ಸಹಾಯಾರ್ಥವಾಗಿ ಲಕ್ಷಗಟ್ಟಲೆ ಫಂಡುಕೂಡಿಸಿ ಸರಕಾರದವರ ಕಡೆಗೆ ಕಳಿಸಿದರು. ಆ ಹಣದಲ್ಲಿ ಸುಮಾರು ಎರಡುಲಕ್ಷ ಹಣವು ವಿಜಾಪುರ ಜಿಲ್ಲೆಗೆ ಬಂದಿರಬಹುದು. ಪ್ರಮಾಣಿಕ

ಮತ್ತು ದಯಾಳುಗಳಾದ ರಾವಬಹದ್ದೂರರವರನ್ನು ಒಂದು ಭಾಗದ ದುಷ್ಕಾಳ ಕಮೀಟಿಯ ಮೇಲೆ ನೇಮಿಸಿದರು. ದಯಾಭರಿತರಾದ ಈ ದೊರೆಗಳು ದುಷ್ಕಾಳದ ಕೆಲಸವನ್ನು ಕಣ್ಣಾರೆ ನೋಡುತ್ತ ವ್ಯಸನಪಟ್ಟು, ದೇಶಕ್ಕೆ ಇಂಥ ಭಯಂಕರವಾದ ದುಷ್ಕಾಳವನ್ನು ತರಬೇಡವೆಂದು ದೇವರನ್ನು ಸ್ಮರಿಸಿ ದುಷ್ಕಾಳ ಫಂಡಿನೊಳಗಿನ ಅಯ್ವತ್ತುಸಾವಿರ (೫೦,೦೦೦) ರೂಪಾಯಿಗಳನ್ನು ಬಡಜನರ ಅನ್ನವಸ್ತ್ರಗಳಿಗೆ ಕೊಟ್ಟು ಅವರನ್ನು ಸಂರಕ್ಷಿಸಿದರು. ಇದಲ್ಲದೆ ಬಡಜನರ ಕಷ್ಟವನ್ನು ಕಣ್ಣಿನಿಂದ ನೋಡಲಿಕ್ಕಾಗದೆ ತಮ್ಮ ಸ್ವಂತ ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ದೀನರನ್ನೂ, ಅನಾಥರನ್ನೂ, ಮಾನವಂತರನ್ನೂ, ಜಂಗಮರನ್ನೂ, ಬ್ರಾಹ್ಮಣರನ್ನೂ, ಕುಂಟಕುರುಡರನ್ನೂ, ರೋಗಿಗಳನ್ನೂ ಕಾಪಾಡಿ ಪುಣ್ಯಪಡೆದರು.

ಹೀಗೆ ಏಕೋಭಾವದಿಂದ ಕೆಲಸಮಾಡಿ ತಮ್ಮನ್ನು ಕಾಪಾಡುವ ದೊರೆಗಳನ್ನು ಕಂಡು, ಆ ಜನಸಮೂಹವೆಲ್ಲ ತಂದೆಯನ್ನು ಕಂಡ ಮಕ್ಕಳಂತೆ ಆನಂದಿಸುತ್ತಿದ್ದರು. ಅನ್ನವನ್ನು ಹಾಕಿ ರಕ್ಷಿಸುವಂಥ ಮಹಾತ್ಮರನ್ನು ಅಹರ್ನಿಶೆಯಲ್ಲಿಯೂ ಕೊಂಡಾಡುವರು. ಹೆಂಗಸರೂ, ಗಂಡಸರೂ, ಇವರು ಕೊಡುವ ಅನ್ನವಸ್ತ್ರಗಳಿಂದ ಸಂತುಷ್ಟರಾಗಿ, ತನುಮನಧನಗಳಿಂದ ಬಡಜನರ ಕಷ್ಟವನ್ನು ಪರಿಹರಿಸುವಂಥ ಈ ದೊರೆಗಳಿಗೆ ಯಾವ ಪುಣ್ಯಾತ್ಮರು ಜನ್ಮವನ್ನು ಕೊಟ್ಟರು? ಎಂದು ಇವರ ತಂದೆತಾಯಿಗಳನ್ನು ಹಾಡಿ ಹರಸುವರು. ರಾವಬಹದ್ದೂರರವರು, ಬಿಸಿಲೊಳಗೆ ಕೂತು ಕಲ್ಲೊಡೆಯುವ ಕೂಲಿಕಾರರಾದ ಹೆಂಗಸರನ್ನೂ ಹುಡುಗರನ್ನೂ ಕಂಡು ಕನಿಕರಪಡುವರು. ಬಡಜನರಿಗೆ ಸೀರೆಗಳನ್ನೂ, ಧೋತರಗಳನ್ನೂ, ಕಂಬಳಿಗಳನ್ನೂ, ಸಣ್ಣ ಹುಡುಗರಿಗೆ ಅಂಗಿ ಟೊಪ್ಪಿಗೆಗಳನ್ನೂ ತೆಗೆದುಕೊಂಡು ಎರಡುಮೂರು ಗಾಡಿಗಳಲ್ಲಿ ಸಂಗಡ ಹೇರಿಸಿಕೊಂಡು ಹೋಗಿ ಕೊಡುತ್ತಿದ್ದರು. ಬಾಣಂತಿಯರಿಗೂ, ಕೈಲಾಗದವರಿಗೂ, ಕುರುಡಕುಂಟ ಮೊದಲಾದವರಿಗೂ, ಬಡರೋಗಿಗಳಿಗೂ ಬಹಳೇ ಸಹಾಯಮಾಡಿದರು. ಸಣ್ಣಕೂಸುಗಳಿಗೆ ಎಣ್ಣೆಬೆಣ್ಣೆಗಳನ್ನೂ, ಅಂಗಿಟೊಪ್ಪಿಗೆಗಳನ್ನೂ, ಬಹಳೇ ಕೊಟ್ಟರು. ಇವರ ಭಾಗದಲ್ಲಿ ಇಪ್ಪತ್ತೈದುಸಾವಿರ (೨೫೦೦೦) ಬಡಜನರು ದುಷ್ಕಾಳಕೆಲಸ ಮಾಡಹತ್ತಿದರು. ಅವರಿಗೆಲ್ಲ ಅನ್ನವಸ್ತ್ರಾದಿಗಳನ್ನು ಕೊಟ್ಟು ಅಖಂಡ ಕೀರ್ತಿಯನ್ನು ಪಡೆದರು.

ಇವರು ಬಹಳೇ ಪ್ರಮಾಣಿಕತನದಿಂದ ಬಡಜನರಿಗೆಲ್ಲ ಆನಂದಕಾರಕವಾಗಿ ಕೆಲಸಮಾಡಿದ್ದನ್ನು ತಿಳಿದು ಮೆ॥ಡಬ್ಲ್ಯು.ಡಿ. ಶೇಫರ್ಡ ಎಂಬ ಕಲೇಕ್ಟರಸಾಹೇಬ ಬಹದ್ದೂರರವರ ಪರ್ಸನಲ್ ಅಸಿಸ್ಟಂಟ ಕಲೇಕ್ಟರರು "ರಾ.ಬ॥ ರುದ್ರಗೌಡರು ಈ ದುಷ್ಕಾಳ ಕೆಲಸದಲ್ಲಿ ಒಳ್ಳೇ ಮೆಹನತಿಯಿಂದ ಮತ್ತು ಅತಿ ಪ್ರಾಮಾಣಿಕತನದಿಂದ ಕೆಲಸಮಾಡಿದರು. ಧರ್ಮಾರ್ಥಫಂಡು ವೆಚ್ಚಮಾಡಿ ಬಡಜನರನ್ನು ಬಹಳೇ ಅಂತಃಕರಣದಿಂದ ಸಂರಕ್ಷಿಸಿದರು. ಈ ಕೆಲಸದಲ್ಲಿ ಇವರು ತನುಮನಧನದಿಂದ ಬಹಳೇ ಸಹಾಯಮಾಡಿ ಕೀರ್ತಿಯನ್ನು ಸಂಪಾದಿಸಿದ್ದಾರೆ. ಜಿಲ್ಲೆಯ ಎಲ್ಲ ಭಾಗಗಳಿಗಿಂತ ಇವರ ಭಾಗದ ದುಷ್ಕಾಳದ ಕೆಲಸವು ಅತ್ಯುತ್ತಮವಾಗಿರುತ್ತದೆ. ಇವರ ಕೆಲಸದ ಕಾರ್ಯಕ್ರಮವನ್ನೂ, ಪ್ರಮಾಣಿಕತನವನ್ನೂ ನೋಡಿ ನನಗೆ ಅತಿಶಯವಾಗಿ ಸಂತೋಷವಾಯಿತು." ಈ ಪ್ರಕಾರ ಉತ್ತಮರೀತಿಯಿಂದ ಇವರ ಶಿಫಾರಸವನ್ನು ಮಾಡಿ ಕಲಕತ್ತಾ ಕಮಿಟಿಯವರಿಗೂ, ಸರಕಾರಕ್ಕೂ ತಿಳಿಸಿದ್ದರಿಂದ, ಸರಕಾರದವರಿಗೆ ಇವರ ವಿಷಯವಾಗಿ ಪೂಜ್ಯಬುದ್ಧಿಯುತ್ಪನ್ನವಾಯಿತು. ದುಷ್ಕಾಳಕೆಲಸದಲ್ಲಿ ಅತ್ಯುತ್ತಮವಾಗಿ ಕೆಲಸಮಾಡಿದ್ದರಿಂದ ಸರಕಾರದವರು ರಾವಬಹದ್ದೂರರವರಿಗೆ ವಿಶ್ರಾಂತಿಗಾಗಿ ಎರಡು ತಿಂಗಳ ಹಕ್ಕಿನ ರಜೆಯನ್ನು ಕೊಟ್ಟು, ಇವರ ಶಿಫಾರಸ ಮಾಡಿದರು. ಸರಕಾರ ಠರಾವ ನಂಬರ ೩೪೭೧/೨-೬-೧೯೦೦. ಆದರೆ ಕೆಲಸ ಬೀಳದ್ದರಿಂದ ರಾವಬಹದ್ದೂರರವರು ಆ ರಜೆಯನ್ನು ಆಗ ಅನುಭೋಗಿಸಲಿಲ್ಲ. ಈ ಪ್ರಕಾರ ಬಡಜನರಿಗೂ, ಸರಕಾರಕ್ಕೂ ಬೇಕಾಗಿ ಉತ್ತಮ ರೀತಿಯಿಂದ ಕೆಲಸಮಾಡಿ ಕೃತಾರ್ಥರಾದರು.

ಕಾತೇವಾಡಿಯ ಕಿರಿಗುದುರೆಗಳು

ರಾವಬಹದ್ದೂರರವರು ಈ ಜಿಲ್ಲೆಯಲ್ಲಿ ಇದ್ದಾಗ್ಗೆ ಒಂದು ಉತ್ತಮವಾದ ಟಾಂಗೆಯನ್ನು ಮಾಡಿಸಿ, ಅದಕ್ಕೆ ಒಂದೇ ವಯಸ್ಸಿನ, ಒಂದೇ ರೂಪದ, ಒಂದೇ ಆಕಾರದ ಒಂದೇ ಬಣ್ಣದ, ಅತಿ ಚುರುಕುಳ್ಳ ಮತ್ತು ಡೌಲುಳ್ಳ ಎರಡು ಕಾತೇವಾಡಿ ಕಿರಿಗುದುರೆಗಳನ್ನು ಕೂಡಿಸಿದ್ದರು. ಇಂಥ ಜೋಡುಳ್ಳ ಪ್ರಾಣಿಗಳನ್ನು ಕೂಡಿಸಲಿಕ್ಕೂ ಅವುಗಳನ್ನು ಅದರಂತೆ ಜೋಪಾನಮಾಡಲಿಕ್ಕೂ, ಇವರನ್ನು ಹೇಳಿದ ಮೇಲೆ ಉಳಿದವರನ್ನು ಹೇಳಬೇಕು. ಈ ವಿಷಯವಾಗಿ ಹಿಂದೆ ರಾಜಾ ಪ್ರಧಾನಿ ಎಂಬ ಹೆಸರುಳ್ಳ ಎತ್ತುಗಳನ್ನು ಜೋಪಾನ ಮಾಡಿದಾಗ್ಗೆ ಬರೆಯಲ್ಪಟ್ಟಿದೆ. ಪುನಃ ಚರ್ವಿತಚರ್ವಣವನ್ನು ಮಾಡುವ ಕಾರಣವಿಲ್ಲ. ಈ ಶುಭ್ರವಾದ ಜೋಡುಗುದುರೆಗಳನ್ನು ಹೂಡಿ, ಗಾಡಿಯು ಹೋಗುವಾಗ ಕೂಡಿದ ಜನರು ಗದ್ದಗೈ ಹಚ್ಚಿ ನೋಡುತ್ತಿದ್ದರು. ಈ ಕುದುರೆಗಳ ಸೊಬಗನ್ನೂ, ಇವರು ರಥಾರೂಢರಾಗಿ ಹೋಗುವಾಗ ಕಾಣುತ್ತಿದ್ದ ಅಂದವನ್ನೂ ನೋಡಿ, ಜನರು ಇವರ ವರ್ಣನಾಪರವಾಗಿ ಹಾಡುಗಳನ್ನು ರಚಿಸಿ ಹಾಡುತ್ತಿದ್ದರು.

ರುದ್ರಾಣಿಯವರನ್ನು ಶಾಲೆಗೆ ಹಾಕಿದ್ದು

ಈ ಪ್ರಕಾರ ರಾ.ಬ॥ರುದ್ರಗೌಡರು ವಿಜಾಪುರದಲ್ಲಿ ವಿಜಯಿಗಳಾಗಿ ರಾಜ್ಯಭಾರ ಮಾಡುತ್ತಿರಲು, ಪ್ರಿಯಪುತ್ರಿಯರಾದ ರುದ್ರಾಣಿಯವರು ವಿದ್ಯಾರಂಭದ ವಯಸ್ಸಿಗೆ ಬಂದಿರುವರೆಂಬದನ್ನರಿದು, ಶುಭಮುಹೂರ್ತದಲ್ಲಿ ಅವರನ್ನು ಜರದ ಅಂಗಿ, ಟೊಪ್ಪಿಗೆ, ಪರಕರ ಮೊದಲಾದ ಬಾಲದೊಡಿಗೆಗಳಿಂದಲೂ, ಆಭರಣಗಳಿಂದಲೂ ಅಲಂಕರಿಸಿ, ಶಾಲೆಗೆ ಕಳುಹಿಸಿದರು. ಶಾಲೆಯಲ್ಲಿ ರುದ್ರಾಣಿಯವರು ಬಾಲಕಿಯರೆಲ್ಲಲ್ಲಿ ಮೇಲಾಗಿ ಕಲಿಯುತ್ತಿರಲಾಗಿ ಅವರು ಬಾಲಶಾರದೆಯಂತೆ ಕಾಣುತ್ತಿದ್ದರು. ರುದ್ರಾಣಿಯವರ ಶುದ್ಧಸ್ವಭಾವವನ್ನೂ, ವಿದ್ಯೆಯಲ್ಲಿರುವ ತೀವ್ರಗತಿಯನ್ನೂ ರಾ.ಬ॥ರುದ್ರಗೌಡರು ನೋಡಿ ಈ ಮುದ್ದುಮಗುವು ಗಂಡು ಆಗಿದ್ದರೆ ನಮ್ಮ ಹೆಸರನ್ನು ತರುತ್ತಿತ್ತೆಂದು ಮನಸಿನೊಳಗೆ ಅಂದುಕೊಳ್ಳುತ್ತಿದ್ದರು. ರುದ್ರಾಣಿಯವರ ಬಾಲಲೀಲೆಗಳನ್ನೂ, ಚುರುಕುಬುದ್ಧಿಯನ್ನೂ, ಶರದ್ರಾಕಾಶಶಾಂಕನಂತೆ ಅಲ್ಹಾದಕರವಾದ ಮುದ್ದುರೂಪವನ್ನು ನೋಡಿ ಗುರುಪಾದವ್ವನವರೂ, ವೀರವ್ವನವರೂ, ಬಂಧು ಬಳಗದವರೂ ನಲಿದಾಡುತ್ತಿರಲು, ಇವರೆಲ್ಲರ ಆನಂದರಸದಲ್ಲಿ ರುದ್ರವ್ವನವರ ತನುಲತಿಕೆಯು ಉತ್ತರೋತ್ತರವಾಗಿ ಬೆಳೆಯಹತ್ತಿತು.

ರಾ.ಬ॥ರುದ್ರಗೌಡರು ನಾಸಿಕಕ್ಕೆ ವರ್ಗವಾಗಿ ಹೋಗಿದ್ದೂ ಪ್ಲೇಗಿನ ಹಾಹಾಕಾರವೂ, ಸಿನ್ನರದ ದಂಗೆಯೂ

ಮುಂದೆ ಸನ್ ೧೮೯೭ನೇ ಇಸವಿಯ ನವಂಬರ ತಿಂಗಳಲ್ಲಿ ರಾವಬಹದ್ದೂರವರಿಗೆ ಉತ್ತರ ಮಹಾರಾಷ್ಟ್ರದಲ್ಲಿರುವ ನಾಸಿಕ ಜಿಲ್ಲೆಗೆ ವರ್ಗವಾಯಿತು. ನಾಸಿಕಕ್ಕೆ ಹೋದಕೂಡಲೆ ಅಲ್ಲಿಯೂ ಎಲ್ಲ ಜಿಲ್ಲೆಗಳಲ್ಲಿದ್ದಂತೆ ಸರಕಾರಕ್ಕೂ ಪ್ರಜೆಗಳಿಗೂ ಪ್ರಿಯಕರರಾಗಿ ಕೆಲಸಮಾಡಹತ್ತಿದರು. ಸಜ್ಜನರ ಬಾಳ್ವೆಯು ಎಲ್ಲಿ ಬೇಕಲ್ಲಿ ಸುಖಕರವಾಗಿಯೇ ಇರುತ್ತದೆ. ಈ ಕಾಲದಲ್ಲಿ ಈ ಭರತಖಂಡದಲ್ಲೆಲ್ಲ ಪ್ಲೇಗವೆಂಬ ಅಸಹ್ಯವಾದ ಸಾಂಸರ್ಗಿಕ ರೋಗವು ಹಬ್ಬಿ, ಹಾಹಾಕಾರವನ್ನುಂಟು ಮಾಡಿತ್ತು. ಈ ದುರ್ಜಾಡ್ಯದಿಂದ ಲಕ್ಷಾವಧಿ ಜನರು

ಮೃತ್ಯುಮುಖದಲ್ಲಿ ಬೀಳುತ್ತಿರಲು, ಈ ರೋಗ ನಿವಾರಣಾರ್ಥವಾಗಿ ಇಂಗ್ಲಿಷ ಸರಕಾರದವರು ಎಷ್ಟೋ ಉಪಾಯಗಳನ್ನು ಅಮಲಿನಲ್ಲಿ ತಂದರು. ಡಿಸಿನ್‌ಫೆಕ್ಸೆನ್, ಕ್ವಾರಂಟಾಯಿಸ್, ಸಿಗ್ರೀಗೇಶನ್, ಇನಾಕ್ಯುಲೇಶನ್ ಮುಂತಾದ ಎಷ್ಟೋ ಕಠಿಣೋಪಾಯಗಳು ಜನರಿಗೆ ಅಸಹ್ಯಕರವಾಗಿದ್ದವು.

ಇವುಗಳಲ್ಲಿ ಜನರನ್ನೆಲ್ಲ ಮನೆಬಿಡಿಸಿ ಊರು ತೆರವು ಮಾಡುವ ಕೃತಿಯು, ಜನರಿಗೆಲ್ಲ ಬಹಳೇ ಪೀಡಾಕಾರವಾಗಿತ್ತು. ಸರಕಾರಿಯ ಹುಕುಮಿನಂತೆ ಪ್ಲೇಗ ಕಮೀಟಿಯ ಅಧಿಕಾರಿಗಳು ಆ ಕಠಿಣ ನಿಯಮಗಳನ್ನು ಹೇಗಾದರೂ ಮಾಡಿ ಅಮಲಿನಲ್ಲಿ ತರಲೇಬೇಕಾಗಿತ್ತು. ಒತ್ತಾಯದಿಂದ ಈ ಪ್ಲೇಗಿನ ನಿಯಮಗಳನ್ನು ಅಮಲಿನಲ್ಲಿ ತರುವಾಗ್ಗೆ ಎಷ್ಟೋ ಕಡೆಯಲ್ಲಿ ಬಂಡಾಯಗಳೂ, ಕೊಲೆಗಳೂ, ದಂಗೆಗಳೂ, ದರೋಡೆಗಳೂ ಅಸಂಖ್ಯಾತವಾಗಿ ಆದವು. ಎಷ್ಟೋ ಕಡೆಯಲ್ಲಿ ಸರಕಾರೀ ಅಧಿಕಾರಿಗಳ ಖೂನುಗಳಾದವು. ಹಿಂದುಸ್ತಾನವನ್ನೂ, ಇಂಗ್ಲಂಡವನ್ನೂ ಗದಗದ ನಡುಗಿಸುವಂಥ, ಪ್ಲೇಗ ಕಮೀಟಿಯ ಮುಖ್ಯಸ್ಥರಾದ ಸುಪ್ರಸಿದ್ಧ ಆರ್.ಸಿ. ರ್‍ಯಾಂಡ ಸಾಹೇಬರ ಕೊಲೆಯು ಮುಖ್ಯ ಪಟ್ಟಣವಾದ ಪುಣೆಯಲ್ಲಿಯೇ ಆಯಿತು. ಅದರಿಂದ ಸರಕಾರದವರು ಎಚ್ಚತ್ತು, ಈ ರ್‍ಯಾಂಡ ಸಾಹೇಬರವರ ಕೊಲೆಯ ಶೋಧವನ್ನು ನಡಿಸಿ, ಆ ಕೊಲೆಗಾರನಾದ ಚಾಫೇಕರ ಎಂಬ ಬ್ರಾಹ್ಮಣನನ್ನು ಹಿಡಿದು, ಈ ಕೊಲೆಯನ್ನು ನೀನು ಯಾಕೆ ಮಾಡಿದಿ ಎಂದು ಕೇಳಲು, ಪ್ಲೇಗ ಪ್ರತಿಬಂಧಕವಾದ ಈ ಸರಕಾರೀ ಉಪಾಯಗಳು ಪ್ಲೇಗಿನಕಿಂತಲೂ ಅಸಹ್ಯವಾಗಿವೆ. ಅವುಗಳಿಂದ ಕೋಟ್ಯಾವಧಿ ಜನರಿಗೆ ಪೀಡಾಕಾರವಾಗಿದೆ. ಆದ ಬವಣೆಯನ್ನು ಜನರು ಅನಂತ ಪ್ರಕಾರವಾಗಿ ರ್‍ಯಾಂಡ ಸಾಹೇಬರಿಗೆ ಹೇಳಿಕೊಂಡು ತಮ್ಮನ್ನು ಈ ಪ್ರಬಲವಾದ ನಿಯಮಗಳಿಂದ ಮುಕ್ತಮಾಡಬೇಕಾಗಿ ಬೇಡಿಕೊಂಡರು. ಅದಕ್ಕೆ ರ್‍ಯಾಂಡಸಾಹೇಬರು ಅನುಮತಿಸದೆ ಪುನಃ ಮೊದಲಿನಕಿಂತ ಅಮಲನ್ನು ಹೆಚ್ಚಾಗಿ ಇಟ್ಟರು. ಅದರಿಂದ ಏತದ್ದೇಶಿಯ ಜನಕ್ಕೆಲ್ಲ ಬಹಳೇ ದುರ್ಘಟಪ್ರಸಂಗ ಬಂದಿರಲು, ಈ ಕೋಟ್ಯಾವಧಿ ಜನರ ಬವಣೆಗೆ ಕಾರಣನಾದ ಈ ರ್‍ಯಾಂಡ ಸಾಹೇಬರ ಕೊಲೆಯನ್ನು ಮಾಡಿ ನನ್ನ ದೇಶಬಂಧುಗಳನ್ನು ಕಾಪಾಡಬೇಕೆಂದೂ, ಈ ಕೋಟ್ಯಾವಧಿ ಜನರು ಕಠಿಣಪ್ರಸಂಗದಿಂದ ಮುಕ್ತರಾಗುತ್ತಿರಲು ನನ್ನ ಪ್ರಾಣವನ್ನು ಸಹ ತೃಣೀಕರಿಸಿದೆನೆಂದೂ, ಸರಕಾರಕ್ಕೆ ಉತ್ತರಕೊಟ್ಟನು. ಮುಂದೆ ಈ ಚಾಫೇಕರನಿಗೆ ಫಾಸಿಯ ಶಿಕ್ಷೆಯಾಯಿತು. ಇದರಿಂದ ಈ ಪ್ಲೇಗ ಪ್ರತಿಬಂಧದ ಸರಕಾರೀ ಉಪಾಯಗಳು ಎಷ್ಟು ಭಯಂಕರ ಸ್ವರೂಪವಾಗಿದ್ದವೆಂಬದು ಸ್ಪಷ್ಟವಾಗುತ್ತದೆ. ಈ ಭಯಂಕರವಾದ ಪ್ಲೇಗಿನ ರೋಗವು ಮುಂಬಯಿ ಇಲಾಖೆಯಲ್ಲೆಲ್ಲ ಹಬ್ಬುತ್ತ ನಾಸಿಕ ಜಿಲ್ಲೆ ಸಿನ್ನರದಲ್ಲಿ ಪ್ಲೇಗಾಗಲು, ಯಥಾಪ್ರಕಾರ ಅಲ್ಲಿ ಪ್ಲೇಗ ಪ್ರತಿಬಂಧೋಪಾಯಗಳು ನಡೆದವು. ಆ ನಿಯಮಗಳು ಅಲ್ಲಿ ಹೊಸದಾಗಿ ಬಂದದರಿಂದ ಅಲ್ಲಿಯ ಜನರಿಗೂ ಬಹಳೇ ತ್ರಾಸದಾಯಕವಾದವು. ಅದರಿಂದ ಸಿನ್ನರದ ಜನರು ಆ ನಿಯಮಗಳನ್ನತಿಕ್ರಮಿಸಿ ನಡೆಯಹತ್ತಿದರು. ಅದರಿಂದ ಅಲ್ಲಿ ಸರಕಾರದವರು ಒಬ್ಬ ಯುರೋಪಿಯನ್ ಡಾಕ್ಟರ ವೀಥರ ಸಾಹೇಬರನ್ನೂ, ಪ್ಲೇಗ ಅಥಾರಿಟಿಯನ್ನೂ ನೇಮಿಸಿ, ಪೋಲೀಸರಿಂದ ಆ ನಿಯಮಗಳನ್ನೆಲ್ಲ ಅಮಲಿನಲ್ಲಿ ತರಹತ್ತಿದರು. ಆ ಡಾಕ್ಟರರು ಊರಲ್ಲೆಲ್ಲ ಹವೆಯಾಡಬೇಕೆಂದು ಮನೆಯ ತಾಟುಗಳನ್ನೆಲ್ಲ ಹಾರಹೊಡಿಯಲಿಕ್ಕೆ ಹಚ್ಚಿದರು. ದೊಡ್ಡ ದೊಡ್ಡ ಇಮಾರತಿಗಳ ಗೋಡೆಗಳಲ್ಲಿ ತೂತುಗಳನ್ನು ತೆಗಿಸಿದರು. ಪ್ಲೇಗಿನ ಸಂಶಯದಿಂದ ಹೆಂಗಸರನ್ನೂ, ಗಂಡಸರನ್ನೂ ದಿನಾಲು ತಪಾಸ ಮಾಡಹತ್ತಿದರು. ಹೆಂಗಸರ ಮಾನಭಂಗವಾಗಹತ್ತಿತು. ಅದರಿಂದ ಹತ್ತು ಹದಿನೈದುಸಾವಿರ ಸಿನ್ನರ ಮತ್ತು ಹತ್ತರಿರುವ ಹಳ್ಳಿಗಳ ಜನರು ಕೂಡಿ, ಒಕ್ಕಟ್ಟಾಗಿ ಒಂದು ಮಾವಿನ ತೋಪಿನಲ್ಲಿ ಸಭೆಕೂಡಿಸಿ ದಂಗೆಯನ್ನೆಬ್ಬಿಸುವ ಒಳಸಂಚು ಮಾಡಿದರು. ಈ ಹತ್ತು ಹದಿನೈದು ಸಾವಿರಜನರು ಈ ಪ್ರಕಾರ ಗದ್ದಲವೆಬ್ಬಿಸಿದ ಸುದ್ದಿಯು ಅಲ್ಲಿಯ ಅದೂರದೃಷ್ಟಿಯ ಮಾಮಲೇದಾರರಾದ ರಾ.ಸಾ॥ಚಿದಂಬರ ಕೇಶವ ಗಾಡಗೀಳ ಸಾಕೀನ ಧಾರವಾಡ ಇವರಿಗೆ ಗೊತ್ತಾಗಿದ್ದಿಲ್ಲ. ಅಂದಮೇಲೆ ಮಾಮಲೇದಾರರು ಎಷ್ಟು ಜಾಗ್ರತೆಯಿಂದ

ಕೆಲಸಮಾಡುತ್ತಿದ್ದರೆಂಬುದು ವ್ಯಕ್ತವಾಗುತ್ತದೆ. ಮತ್ತು ಅಲ್ಲಿ ಎಷ್ಟೋ ಮಂದಿ ಕಾಮದಾರರು ಪ್ಲೇಗ ಡ್ಯೂಟಿಯ ಮೇಲಿದ್ದರು. ಆದರೆ ಇಷ್ಟು ಜನರು ನಡಿಸಿರುವ ಗಡಿಬಿಡಿಯು ಒಬ್ಬರಿಗೂ ತಿಳಿದಿದ್ದಿಲ್ಲ. ಸಿನ್ನರದಲ್ಲಿ ಮಾವಿನ ಗಿಡಗಳು ಬಹಳ. ಗಿಡಗಳಾದರೂ ಬಹುದೊಡ್ಡವು. ದಟ್ಟವಾದ ಗಿಡಗಳುಳ್ಳ, ಕತ್ತಲೆಯಂತೆ ನೆರಳಾಗಿದ್ದ ಆ ಮಹತ್ತಾದ ಮಾವಿನ ತೋಪಿನಲ್ಲಿ ಹತ್ತು ಹದಿನೈದು ಸಾವಿರ ಜನರು ಸೇರಿ ಸಭೆಗೂಡಿಸಿದ್ದು ಯಾರಿಗೂ ತಿಳಿಯಲಿಲ್ಲ. ಆ ಯುರೋಪಿಯನ್ ಡಾಕ್ಟರನ ಅಸಹ್ಯವಾದ ತಪಾಸಣೆಯಿಂದಲೂ, ದೇಶಸ್ಥ ಬ್ರಾಹ್ಮಣನೂ, ಮೊಖತ್ಯಾರ ವಕೀಲನೂ ಆದ ಕಾವಳೆ ಎಂಬಾತನ ಪೀಡೆಯಿಂದಲೂ ಜನರು ಸಂತೃಪ್ತರಾಗಿ, ಇವರಿಬ್ಬರನ್ನು ಠಾರಹೊಡಿಯಬೇಕೆಂದು ಮಸಲತ್ತು ಮಾಡಿದ್ದರು. ಮುಖ್ಯವಾಗಿ ಇವರಿಬ್ಬರು ನಡಿಸಿರುವ ತ್ರಾಸದಿಂದಲೇ ಈ ದಂಗೆ ಎದ್ದದರಿಂದ, ಈ ದಂಗೆಗೆ ಇವರೇ ಕಾರಣರಾದರೆಂದು ಹೇಳಬಹುದು.

ದಂಗೆಯ ಭಯಂಕರವಾದ ಸ್ವರೂಪ

ಒಳಗಿಂದೊಳಗೆ ಹುಲ್ಲು ಬಣಿವೆಯು ಬೆಂದು ಒಮ್ಮಿಂದೊಮ್ಮೆ ಬಗ್ಗನೆ ಉರಿಯೇಳುವಂತೆ ಆಕಸ್ಮಾತವಾಗಿ ಸನ್ ೧೮೯೪ನೇ ಜಾನೇವರಿ ೨೭ನೇ ತಾರೀಖು ಶನಿವಾರ ದಿವಸ ಭಯಂಕರವಾಗಿ ಎದ್ದು, ಸುಮಾರು ಹದಿನೈದು ಸಾವಿರ (೧೫೦೦೦) ಜನ ದಂಗೆಗಾರರು ಕೋಲುಗುದಿಗೆಗಳನ್ನೂ, ಕುಡುಗೋಲು ಕೊಡಲಿಗಳನ್ನು ತಕ್ಕೊಂಡು ಹೊರಬಿದ್ದು ಕೋಲಾಹಲವನ್ನೆಬ್ಬಿಸಿ, ಅಲ್ಲಿಯ ಪೋಷ್ಟ ಆಫೀಸವನ್ನೂ, ಸಾಹೇಬರ ಡೇರೆಗಳನ್ನೂ ಸುಟ್ಟು, ತಾರಿನ ಕಂಬಗಳನ್ನು ಕಿತ್ತೊಗೆದು, ತಂತಿಗಳನ್ನು ಹರಿದು, ಮ್ಯುನಸಿಪಾಲ್ಟಿ ಕಂದೀಲುಗಳ ಕನ್ನಡಿಗಳನ್ನೊಡೆದು ಪಾಚಾಪುರದ ದೇಶಪಾಂಡೆ (ವೆಂಕಟೇಶ) ಎಂಬ ನೇಟಿವ್ಹ ಡಾಕ್ಟರನನ್ನೂ, ಪ್ಲೇಗಕಮಿಟಿಯ ಚೇರಮನ್‌ರಾದ ಮಿ||ರಾಜೇ ವಕೀಲ ಎಂಬವರನ್ನೂ ಠಾರವಾಗಿ ಹೊಡೆದು ರಾ.ಸಾ||ಗೋಕುಲದಾಸ, ಪಾರಖ ಮುನಸೂಫ ಬಿ.ಎ.ಎಲ್‌ಎಲ್‌ಬಿ. ಇವರ ಒಳ್ಳಿತಾಗಿ ಥಳಿಸಿ ಅರೆಘಾಯಮಾಡಿ, ಒಂದು ಹೊಲದೊಳಗಿನ ಮನೆಯಲ್ಲಿ ಒಯ್ದು ಒಗೆದು ಬಿಟ್ಟು, ಊರಲ್ಲಿ ಮನಬಂದಂತೆ ಕೊಲೆ ಸುಲಿಗೆಗಳನ್ನು ನಡಿಸಿದ್ದರು. ಸಿಗ್ರೀಗೇಶನದ ಗುಡಿಸಿಲುಗಳನ್ನೆಲ್ಲ ಸುಟ್ಟು, ಅದರಲ್ಲಿಡಲ್ಪಟ್ಟಿದ್ದ ತಮ್ಮ ತಮ್ಮ ಜನರನ್ನು ಮನೆಗೆ ಕರಕೊಂಡು ಹೋದರು.

ಆಕಸ್ಮಿಕವಾದ ಈ ದಂಗೆಯು ಭಯಂಕರ ಸ್ವರೂಪವನ್ನು ಹೊಂದಿರಲು ರಾ.ಬ|| ಅರಟಾಳ ಸಾಹೇಬರವರ ಸ್ವಾರಿಯು ಸಿನ್ನರಕ್ಕೆ ಸಮೀಪವಾಗಿ ನಾಂದೋದ ಶೇಂಗೋಟಿಯೆಂಬಲ್ಲಿ ಇತ್ತು. ಸಮೀಪದಲ್ಲಿದ್ದರೂ ಇವರಿಗೆ ಆ ದಂಗೆಯ ಸುದ್ದಿಯು ತಿಳಿಯುವ ಮಾರ್ಗವಿದ್ದಿಲ್ಲ. ರಾವಬಹದ್ದೂರವರ ಕಡೆಗೆ ಸಿನ್ನರ, ಎವಿತಿ, ನಿಫಾಢ, ಇಗತಪುರ ಈ ನಾಲ್ಕು ತಾಲೂಕಗಳಿದ್ದವು. ಇವರು ನಾಂದೋದ ಶೇಂಗೂಟಿಯಿಂದ ಹೊರಟು ಸಿನ್ನರಮಾರ್ಗವಾಗಿ ಮುಂದೆ ಇಗತಪುರಕ್ಕೆ ಫಿರತಿಗಾಗಿ ಹೋಗುವವರಿದ್ದರು. ದಂಗೆಯ ದಿವಸ ನಗರ ರಸ್ತೆಯ ಮೇಲೆ ಸಿನ್ನರದಿಂದ ನಾಲ್ಕು ಮೈಲಿನ ಅಂತರದಲ್ಲಿ ತಂಬೂ ಹೊಡಿಸಿದ್ದರು. ಯಾವ ಸುದ್ದಿಯನ್ನೂ ಅರಿಯದೆ ಇವರು ಯಥಾಸ್ಥಿತವಾಗಿ ಭೋಜನವನ್ನು ತೀರಿಸಿಕೊಂಡು, ಮಧ್ಯಾಹ್ನದ ಮೂರು ಘಂಟೆಗೆ ರಥಾರೂಢರಾಗಿ ಸಿನ್ನರ ಗ್ರಾಮ ತಪಾಸಣೆಯನ್ನು ಮಾಡಿಕೊಂಡು ಬರಬೇಕೆಂದು ನಡೆದರು. ಸಂಗಡ ಸಿಪಾಯರನ್ನು ಸಹ ಕರೆದುಕೊಳ್ಳಲಿಲ್ಲ. ಟಾಂಗೆಯನ್ನು ಹೊಡೆಯುವ ಕೋಚಮನ್ ಕಾಶೀಮನೊಬ್ಬನ[೩] ಹೊರತು ಸಂಗಡ

೩. ಈತನ ಪೂರ್ಣ ಹೆಸರು ಹಾಸೀಮ ಬೇಗ ವಲ್ಲದ ಮಹಮ್ಮದ ಬೇಗ ಸಾಕೀನ ವಿಜಾಪುರ ಎಂದಿದ್ದು ಜನರು ಕಾಶೀಮನೆಂದು ಕರೆಯುತ್ತಿರುತ್ತಾರೆ.

ಯಾರೂ ಇದ್ದಿದ್ದಿಲ್ಲ. ಸಿನ್ನರವು ಇನ್ನೂ ಒಂದು ಮೈಲು ದೂರಿರುತ್ತ ಊರ ಹತ್ತರ ದಟ್ಟವಾದ ಹೊಗೆ ಕಾಣ ಹತ್ತಿತು. ಅದನ್ನು ನೋಡಿ ಆ ಹೊಗೆ ಯಾತರದೆಂದು ಕಾಶೀಮನನ್ನು ಕೇಳಿದರು. ಅದಕ್ಕೆ ಕಾಶೀಮನು ಸಿಗ್ರೀಗೇಶನದ ಕ್ಯಾಂಪುಗಳಿಗೆ ಬೆಂಕಿ ಹತ್ತಿರಬಹುದೆಂದು ಹೇಳಿದನು. ಟಾಂಗೆಯು ಹಾಗೇ ನಡೆಯಹತ್ತಿತು. ಊರ ಸಮೀಪಕ್ಕೆ ಹೋದ ಹೋದ ಹಾಗೆ ಜನ ಸಮೂಹದ ಕೋಲಾಹಲವು ಕೇಳಹತ್ತಿತು. ಅಷ್ಟರಲ್ಲಿ ದಂಗೆಗೆ ಮೂಲಕಾರಣನಾದ, ಮೇಲೆ ಹೇಳಿದ ಮೊಖತ್ಯಾರ ವಕೀಲ ಕಾವಳೆ ಎಂಬ ರಾವಬಹದ್ದೂರವರ ಗೊತ್ತಿನವನಾದ ದೇಶಸ್ಥ ಬ್ರಾಹ್ಮಣನು, ಜೀವದ ಮೇಲೆ ಎಚ್ಚರಿಲ್ಲದೆ, ಬಾಯೊಳಗೆ ಉಸಿರಿಲ್ಲದೆ, ಹೌಹಾರಿ, ಗಾಬರಿಯಾಗಿ ಒಡುತ್ತೋಡುತ್ತ ಬಂದನು. ಅವನನ್ನು ನೋಡಿ ಸಾಹೇಬರು ಟಾಂಗೆಯನ್ನು ನಿಲ್ಲಿಸಿದರು. ಅವನು ಬಂದವನೇ ರಾವಬಹದ್ದೂರವರ ಕಾಲುಗಳ ಮೇಲೆ ಬಿದ್ದು ಮಹಾರಾಯರೇ! ನನ್ನನ್ನು ಈ ದಂಗೆಗಾರರ ಕಡೆಯಿಂದ ಉಳಿಸಿಕೊಂಡು ಜೀವದಾನ ಕೊಡಿರೆಂದು ಬೇಡಿಕೊಳ್ಳಹತ್ತಿದನು. ಅದಕ್ಕೆ ರಾವಬಹದ್ದೂರವರು ಭಯಗ್ರಸ್ತರಾಗಿ "ಏನು ಏನು!ಕಾವಳೇ! ದಂಗೆಯೆಲ್ಲಿಯದು, ಏನು ವರ್ತಮಾನ! ಸಾಗ್ರಹಸಂಗತಿಯನ್ನು ಸವಿಸ್ತಾರವಾಗಿ ಹೇಳೆ"ಂದು ಅವನನ್ನು ವಿಚಾರಿಸಿದರು. ಭಯಗ್ರಸ್ತನಾದ ಆ ಬ್ರಾಹ್ಮಣನಿಗೆ ಮಾತಾಡಲಿಕ್ಕೆ ಸಹ ನೆಟ್ಟಗೆ ಬರಲೊಲ್ಲದು. ಆದರೂ ನಡಗುತ್ತ ಸಿಂಹಳರಾಜನ ಸೇನಾಸಮೂಹವು ಸೀಮಾಂತರದಲ್ಲಿ ಆದದ್ದನ್ನು ನೋಡಿ ಅಂಜಿ ಒಬ್ಬ ಚಾರನು ತಮ್ಮೊಡೆಯನಾದ ರಾಜಶೇಖರ ನರೇಂದ್ರನಿಗೆ ಆ ಸುದ್ದಿಯನ್ನು ತಿಳಿಸಿದಂತೆ ಕಾವಳೇನು ಇವರನ್ನು ಕುರಿತು : ರಾವಬಹದ್ದೂರವರೇ! ಸಿನ್ನರದಲ್ಲಿ ಭಯಂಕರವಾದ ದಂಗೆಯಾಗಿದೆಯೆಂತಲೂ, ಇಗೋ ಸಾವಿರಾರು ಜನರು ಬೆನ್ನಟ್ಟಿ ಬರುವರೆಂತಲೂ, ನನ್ನನ್ನು ತಮ್ಮ ಟಾಂಗೆಯಲ್ಲಿ ಕರಕೊಂಡು ಜೀವದಾನ ಕೊಡಬೇಕೆಂತಲೂ ಬಹುಪರಿಯಿಂದ ಬೇಡಿಕೊಂಡದ್ದಕ್ಕೆ ಶರಣಾಗತ ರಕ್ಷಕರಾದ ರಾ.ಬ॥ರುದ್ರಗೌಡರು, ಬಾ, ನಮ್ಮ ಟಾಂಗೆಯಲ್ಲಿ ಹಿಂದೆ ಕೂಡೆ"ಂದು ಹೇಳಿದರು. ಅದಕ್ಕೆ ಕೋಚಮನ್ ಕಾಶೀಮನು, 'ಇವನನ್ನು ಟಾಂಗೆಯಲ್ಲಿ ಕರಕೊಂಡರೆ ಆ ದಂಗೆಗಾರರೆಲ್ಲ ನಮ್ಮನ್ನೇ ಮುತ್ತುವರೆಂದೂ, ಇವನನ್ನು ಸರ್ವಥಾ ಕರಕೊಳ್ಳಬೇಡಿರೆ'ಂದೂ ರಾವಬಹದ್ದೂರವರಿಗೆ ಹೇಳಿದನು. ಆದರೆ ಬ್ರಾಹ್ಮಣನು ಜೀವದಾನ ಕೊಡಿರೆಂದು ಪ್ರತ್ಯಕ್ಷವಾಗಿ ಬೇಡಿಕೊಳ್ಳುತ್ತಿರಲಿಕ್ಕೆ ಅವನ ಮಾತನ್ನು ಅಲ್ಲಗಳೆಯುವದು ಧರ್ಮವಲ್ಲೆಂತಲೂ ಅವನಿಗಾದದ್ದು ನಮಗಾಗುವದೆಂತಲೂ ಕರಣಾಳುಗಳಾದ ಅರಟಾಳ ಸಾಹೇಬರು ಆ ಕಾವಳೇನನ್ನು ಟಾಂಗೆಯಲ್ಲಿ ಕರಕೊಂಡರು. ಹಾದಿಯಿಂದ ಹೋಗುವ ಪಿಶಾಚಿಯನ್ನು ಯಾರಾದರೂ ಮನೆಯಲ್ಲಿ ಹೊಗಸಿಕೊಂಡಾರೇ! ದಂಗೆಗೆ ಮೂಲ ಕಾರಣೀಭೂತನೂ, ದಂಗೆಗಾರರಿಂದ ಬೆನ್ನಟ್ಟಿಸಿಕೊಂಡವನೂ ಆಗಿ ಮೃತ್ಯುಮುಖದಲ್ಲಿ ನಿಂತ ಈ ಕಾವಳೇನಿಗೆ ಯಾರಾದರೂ ಆಶ್ರಯವನ್ನು ಕೊಟ್ಟಾರೇ! ಬೆಂಬತ್ತಿ ಬರುವ ದಂಗೆಗಾರರು ಇವನ ಸಲುವಾಗಿ ತಮ್ಮನ್ನು ಮುತ್ತುವರೆಂಬದನ್ನು ನಿಶ್ಚಯವಾಗಿ ತಿಳಿದುಕೊಂಡಿದ್ದರೂ, ವಿಪತ್ತಿನಲ್ಲಿ ವೈರಿಯನ್ನು ಕೂಡ ರಕ್ಷಿಸುವದು ಧರ್ಮಮಾರ್ಗವೆಂದು ತಿಳಿದು ರಾವಬಹದ್ದೂರವರು ಅವನನ್ನು ಕರಕೊಂಡರು.

ಜನರು ಉದಯಕ್ಕೆ ಬರುವ ಮಾರ್ಗಗಳು ಹಲವು ಬಗೆಯಾಗಿರುತ್ತವೆ. ಕೆಲವರು ಧೈರ್ಯಶೌರ್ಯಾದಿಗಳಲ್ಲಿ, ಕೆಲವರು ಪಾಂಡಿತ್ಯದಲ್ಲಿ, ಬೇರೆ ಕೆಲವರು ರಾಜ್ಯಸೂತ್ರಗಳಲ್ಲಿ, ಕೆಲವರು ಕಲಾಕೌಶಲ್ಯಗಳಲ್ಲಿ, ಕೆಲವರು ವ್ಯವಹಾರಜ್ಞಾನದಲ್ಲಿ ಈ ಪ್ರಕಾರ ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ತಮ್ಮ ಪ್ರಗತಿಯನ್ನು ತೋರಿಸಿ ಉದಯಕ್ಕೆ ಬಂದಿರುತ್ತಾರೆ. ರಾವಬಹದ್ದೂರ ರುದ್ರಗೌಡರಲ್ಲಿ ಈ ಎಲ್ಲ ಗುಣಶಕ್ತಿಗಳು ಗರ್ಭೀಕರಿಸಿಕೊಂಡಿರುತ್ತವೆ. ಆದರೆ ಪ್ರಸಂಗ ಬೀಳದ ಹೊರತು ಆ ಗುಣಶಕ್ತ್ಯಾದಿಗಳು ಹೊರಬೀಳಲಿಕ್ಕೆ ಕಾರಣವಿರುವದಿಲ್ಲ. ದಿಲ್ಲಿಯ ಚಕ್ರವರ್ತಿಯಾದ ಹುಮಾಯುನನಿಗೂ ಶೇರಶಹನಿಗೂ, ಪಾನಿಪತದಲ್ಲಿ ಯುದ್ಧವಾಗದಿದ್ದರೆ ಹದಿಮೂರು ವರ್ಷದ ವಯಸ್ಸಿನಲ್ಲಿ ಅಕಬರನ ಶೌರ್ಯಾದಿ ಸದ್ಗುಣಗಳು ಪ್ರಕಟವಾಗುತ್ತಿದ್ದಿಲ್ಲ. ಪ್ಲಾಸಿಯ ಯುದ್ಧಪ್ರಸಂಗವು ಸಂಭವಿಸದೆ ಇದ್ದಿದ್ದರೆ ಕ್ಲೈವನ ಲೋಕೋತ್ತರವಾದ

ಕೀರ್ತಿಯು ಜಗದ್ವ್ಯಾಪಕವಾಗುತ್ತಿದ್ದಿಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಸಿಪಾಯಿಗಳ ಭಯಂಕರವಾದ ಬಂಡಾಯವೇಳದಿದ್ದರೆ ಸರ್ ಹೆನ್ರಿ ಲಾರೆನ್ಸ್ ಮೊದಲಾದ ಸರದಾರರು ಇತಿಹಾಸ ಪ್ರಸಿದ್ಧರಾಗುತ್ತಿದ್ದಿಲ್ಲ. ಈ ಅಲೌಕಿಕ ಗುಣಗಳುಳ್ಳ ಮಹನೀಯರು ಅಂಥ ಮಹತ್ಪ್ರಸಂಗಗಳಲ್ಲಿ ಜಯಶಾಲಿಗಳಾದರಂತೆಯೇ ಅವರ ಹೆಸರುಗಳು ಚಿರಸ್ಥಾಯಿಗಳಾಗಲಿಕ್ಕೆ ಕಾರಣವಾಯಿತು. ಇವರಂತೆ ರಾವಬಹದ್ದೂರ ರುದ್ರಗೌಡರ ಖ್ಯಾತಿಯು ಸರಕಾರದಲ್ಲಿಯೂ, ಜನರಲ್ಲಿಯೂ ಇನ್ನೂ ಹೆಚ್ಚಿಗೆ ಪ್ರಕಟವಾಗಬೇಕಾಗಿ ಈಶೇಚ್ಛೆಯಿತ್ತೆಂತಲೇ ಇವರಿಗೆ ಈ ಸಿನ್ನರದ ಭಯಂಕರ ಪ್ರಸಂಗವು ಪ್ರಾಪ್ತವಾಯಿತು.

ದಂಗೆಯ ವಾರ್ತೆಯು ಕೇಳಲಿಕ್ಕೂ, ಹೇಳಲಿಕ್ಕೂ ಕಠಿಣವಾಗಿತ್ತು. ದಂಗೆಯು ದಾವಾನಲದಂತೆ ಧಗ ಧಗ ಉರಿಯುತ್ತಿತ್ತು. ಕೇಳಿದರೆ ಮೈಮೇಲೆ ಮುಳ್ಳು ಬರುವಂಥ ಸ್ಥಿತಿಗೆ ಬಂದಿತ್ತು. ಅನೇಕ ದಂಗೆಗಳನ್ನು ಮುರಿಬಡಿದ ಧೀರರಿಗೂ ಕೂಡ ಮುಂದೆ ಹೋಗಲಿಕ್ಕೆ ಅಧೈರ್ಯವುಂಟಾಗುವಂತೆ ಇತ್ತು. ಯುದ್ಧ, ದಂಗೆ, ಬಂಡಾಯ, ಕೊಲೆ, ಸುಲಿಗೆಗಳ ಸ್ಥಿತಿಯು ಹೀಗೆ ಇರುತ್ತದೆಂಬದಾಗಿ ನಿಯಮವಿರುವದಿಲ್ಲ. ಯಾವಾಗ್ಗೆ ಎಂಥ ಪ್ರಸಂಗ ಬರುತ್ತದೆಂಬುದು ನಿಶ್ಚಿತವಾಗಿರುವದಿಲ್ಲ. ಆದರೆ ಹುಟ್ಟಾ ಇಂಥ ಪ್ರಸಂಗವನ್ನು ಕಾಣದ ನಮ್ಮ ರಾವಬಹದ್ದೂರವರಿಗೆ ಈ ಭಯಂಕರ ದಂಗೆಯನ್ನು ನಿರ್ಮೂಲಮಾಡುವ ಪ್ರಸಂಗವು ಮುಂದೆ ಬಂದು ನಿಂತಿತು. ಮಾಡುವದೇನು! ಸರಕಾರಿಯ ಕೆಲಸ. ಒಲ್ಲೆನೆಂದರೆ ಬಿಡಲಿಕ್ಕೆ ಮನೆಯ ಮಾತಲ್ಲ. ಪಾರತಂತ್ರ್ಯವು ಬಹುಕಠಿಣವಾದದ್ದು. ಆದರೆ ಬುದ್ಧಿವಂತರೂ, ಧೈರ್ಯಶಾಲಿಗಳೂ, ದೀರ್ಘವಿಚಾರಿಗಳೂ ಆದ ಮಹನೀಯರೆಂಬವರು ಕಾರ್ಯಪಥದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯುವದಿಲ್ಲ. ಇಂಥ ಮಹಾನುಭಾವರೇ ಮುಂದೆ ಪ್ರಖ್ಯಾತರಾಗುವ ವರಲ್ಲವೇ!ಅಧೈರ್ಯಸ್ಥರೂ, ಅದೂರದೃಷ್ಟಿಯರೂ, ಅಲ್ಪ ವಿಚಾರಿಗಳೂ ಆದ ಅಳುಬುರುಕ ಅಧಿಕಾರಿಗಳಾದರೆ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು, ಹೇಡಿಗಳಂತೆ ಮನೆ ಹಿಡಿದು ಕೂಡುವರು.

ಈ ದಂಗೆಯ ಭಯಂಕರ ವಾರ್ತೆಯನ್ನು ಕೇಳಿ ಕಾಶೀಮನು ರಾವಬಹದ್ದೂರವರಿಗೆ ಈಗ ಮುಂದೆ ಹೋಗುವದು ಪ್ರಶಸ್ತವಲ್ಲೆಂತಲೂ, ಗಾಡಿಯನ್ನು ಹಿಂದಕ್ಕೆ ಹೊರಳಿಸುವೆನೆಂತಲೂ, ಹೋಗುವದು ಅವಶ್ಯವಿದ್ದರೆ, ಪೋಲೀಸರನ್ನು ತೆಗೆದುಕೊಂಡು ಹೋಗುವದು ಉಚಿತವೆಂತಲೂ ಹೇಳಿದ್ದಕ್ಕೆ ಅವರು "ನೀನು ಹೇಳುವದೆಲ್ಲ ವಾಸ್ತವಿಕವು. ಆದರೆ ನಾವು ಹೋಗಿ ಬರುವದರೊಳಗಾಗಿ ದಂಗೆಗಾರರು ಊರೆಲ್ಲ ಧ್ವಂಸ ಮಾಡಿ ಎಷ್ಟೋ ಪ್ರಾಣಿಗಳ ಜೀವವನ್ನು ತೆಗೆದುಕೊಂಡು ಹಾನಿಯನ್ನು ಮಾಡುವರು. ಅದರಿಂದ ಆದಷ್ಟು ಪ್ರಾಣಹತಿಗೆ ನಮ್ಮ ಆಲಸ್ಯವು ಕಾರಣವಾದಂತೆ ಆಗುವದು. ಮತ್ತು ಹಿಂದುರುಗಿದರೆ ಅಂಜಿ ಓಡಿಹೋದರೆಂಬ ಅಪವಾದ ಬಂದು ಸರಕಾರದಲ್ಲಿ ನಾಲಾಯಖಿಯು ಬರುವದು. ಮತ್ತು ಆ ಬಗ್ಗೆ ಹಿಂದಿನಿಂದ ಸರಕಾರದವರು ನಮ್ಮ ಜವಾಬವನ್ನು ಕೇಳ್ಯಾರು. ಕೆಲಸವನ್ನು ಮಾಡಬೇಕಾದರೆ ಮನಃಪೂರ್ವಕ ಮಾಡಬೇಕು. ನಾವು ಯಾರ ಉಪ್ಪನ್ನುಣ್ಣುತ್ತೇವೋ ಅವರನ್ನು ಸ್ಮರಿಸಿ ಕಾರ್ಯಪ್ರವರ್ತಕರಾಗುವದು ಉಚಿತವು. ಇದೇ ರಾಜನಿಷ್ಠೆಯು. ಈಗ ನಾವು ಹಿಂದಕ್ಕೆ ಹೋದರೆ ಆಜನ್ಮ ಅಪಹಾಸ್ಯಕ್ಕೆ ಕಾರಣವಾಗುತ್ತದೆ. ಯಶಾಪಯಶಗಳು ದೇವಾಧೀನವಾಗಿರುವವು. ಮುಂದಿಟ್ಟ ಅಡಿಯನ್ನು ಹಿಂದೆಗೆಯುವದು ಅಧೀರತನವಲ್ಲವೋ? ಪ್ರಸಂಗ ವಿಶೇಷದಲ್ಲಿ ಧೈರ್ಯಗೊಂಡು ಪಾರಾಗುವುದೇ ಪ್ರಸಂಗಾವಧಾನವೆನ್ನಿಸಿಕೊಳ್ಳುತ್ತದೆ. ಏನಾಗುವದೆಲ್ಲ ಅಲ್ಲಿಯೇ ಆಗಿ ಹೋಗಲಿ" ಎಂದು ಆವೇಶದ ಭಾಷಣದಿಂದ ಕಾಶೀಮನನ್ನು ಹುರುಪುಗೊಳಿಸಿದರು.

ಕೋಚಮನ್ ಕಾಶೀಮನು ಸ್ವತಃ ಶೂರನೂ, ಧೈರ್ಯಸ್ಥನೂ ಆಗಿದ್ದನು. ಆದರೆ ಸುಮ್ಮ ಸುಮ್ಮನೆ ಉರಿಯಲ್ಲಿ ಯಾಕೆ ಹೋಗಬೇಕೆಂದು ಮಾನಸಿಕ ಮಾಡಿದ್ದನು. ಆದರೆ ತನ್ನೊಡೆಯರಾದ ರುದ್ರಗೌಡ ದೊರೆಗಳ

ಸಯುಕ್ತಿಕವಾದ ಮಾತುಗಳನ್ನು ಕೇಳಿ ಪ್ರೋತ್ಸಾಹಗೊಂಡು ಕುದುರೆಗಳನ್ನು ಅಬ್ಬರಿಸಿದನು. ಕೂಡಲೆ ವಾಯುವೇಗದಿಂದ ಅಶ್ವಗಳು ಊರನ್ನು ಸೇರಿದವು. ಊರ ಕಡೆಯ ಅಗಸಿಯನ್ನು ದಾಟುತ್ತಲೇ ಕೆಲವು ಜನರು ಕೊಡ್ಲಿಗಳನ್ನೆತ್ತಿಕೊಂಡು ಅಗಸೀ ಬಾಗಿಲಿನಿಂದ ಸಾಲ್ಗೊಂಡು ನಿಂತು ಬಿಟ್ಟಿದ್ದರು. ಊರೆಲ್ಲ ರಾವು ಬಡಿದು ಹೋಗಿತ್ತು. ಎತ್ತನೋಡಿದತ್ತ ದಂಗೆಗಾರರೇ ಕಾಣುತ್ತಿದ್ದರು. ಇವರು ಧೈರ್ಯ ತಕ್ಕೊಂಡು ಆ ದಂಗೆಗಾರರನ್ನು ನೋಡನೋಡುವಷ್ಟರಲ್ಲಿ ಅವರು ಸುತ್ತಲಿಂದಲೂ ಬಂದು ಮುತ್ತಿದರು. ಮೋಡಮುಸುಕಿದ ಸೂರ್ಯನಂತೆ ಸಾಹೇಬರು ಆ ದಟ್ಟಣಿಯಲ್ಲಿ ಕಾಣದಂತಾದರು. ಎಲ್ಲ ಜನರ ಕಯ್ಯಲ್ಲಿ ಒಳ್ಳೇ ತೀಕ್ಷ್ಣವಾದ ಕೊಡ್ಲಿ, ಕುಡುಗೋಲು, ಕತ್ತಿ ಕಠಾರಿ, ಕೈಡೂರಿ ಬರ್ಚಿ ಮುಂತಾದ ತರತರದ ಆಯುಧಗಳಿದ್ದು ಎಲ್ಲವೂ ಮೇಲಕ್ಕೆತ್ತಲ್ಪಟ್ಟು ಮಿಂಚುತ್ತಿದ್ದವು. ಸಾಹೇಬರ ಸುತ್ತಲೂ ಧೈ-ಧೈಯೆಂದು ಹೋಳಿಯನ್ನಾಡಹತ್ತಿದರು. ಅಷ್ಟರಲ್ಲಿ ಯಾವನೋ ಒಬ್ಬನು "ಕಾಯ ಪಾಹತೋಸ್? ತ್ಯಾ ಕಾನಡಿ ಸಾಹೇಬ್ಲಾ ಮಾರರೇ ಮಾರ್" ಎಂದು ಅಂದನು. ಇಷ್ಟು ಅನ್ನುತ್ತಲೇ ಎಲ್ಲರ ಆಯುಧಗಳು ಝಳಪಿಸಿದವು. ಆದರೆ ಅಷ್ಟರಲ್ಲಿ ಆ ದಂಗೆಗಾರೊಡೆಯನಾದ ಗಣೂ ಜಾಧವನೆಂಬವನೊಬ್ಬ ಮರಾಠಿ ಜಾತಿಯವನು "ಮಾರೂನಕಾ, ಮಾರೂ ನಕಾ! ಹೇ ಸಾಹೇಬ ನ್ಯಾಯೀ ವ ಫಾರ ಚಾಂಗಲೇ ಆಹೇತ, ತ್ಯಾನಲಾ ಮಾರೂ ನಕಾ" ಎಂದು ಅವಸರದಿಂದ, ದಟ್ಟಾಗಿ ನಿಂತ ಜನರನ್ನು ಎರಡೂ ಕೈಗಳಿಂದ ಒಮ್ಮೇಲೆ ಎಡಬಲಕ್ಕೆ ಹತ್ತೊತ್ತಿ ಸರಿಸಿ, ಮುಂದೆ ಬಂದು ಒದರಿ ಹೇಳಿದನು. ಕೂಡಲೆ ಎತ್ತಲ್ಪಟ್ಟ ಆಯುಧಗಳು ಕೆಳಗಿಳಿದವು. ಸಾಹೇಬರ ಟಾಂಗೆಯಲ್ಲಿ ಒಂದು ಏಳುಬಾರಿನ ಪಿಸ್ತೂಲೂ, ಒಂದು ಹರತಾದ ಹತ್ಯಾರವೂ ಇದ್ದವು. ಇವರ ಫಿರತಿಯಲ್ಲಿ ಯಾವಾಗಲೂ ಇವೆರಡು ಆಯುಧಗಳು ಸಂಗಡಲೇ ಮೈಗಾವಲಿಗಾಗಿ ಇರುತ್ತಿದ್ದವು. ಕಾಶೀಮನು ಪಿಸ್ತೂಲನ್ನು ಕಡೆಗೆ ತೆಗೆಯಲಾಗಿ ಧೂರ್ತರಾದ ಸಾಹೇಬರು, ಈ ಸಾವಿರಾರು ಮಂದಿ ಕೊಲೆಗಡಕರ ನಡುವೆ ಸಿಕ್ಕ ನಮ್ಮ ಒಬ್ಬಿಬ್ಬರ ಸಾಹಸವೂ, ಸಾಮರ್ಥ್ಯವೂ ಏತಕ್ಕೆ ಮುಟ್ಟೀತು? ಇದು ಸಮಯವಲ್ಲ. ಇಲ್ಲಿ ಯುಕ್ತಿಯಿಂದ ಪಾರಾಗಿ ಹೋಗುವದೇ ಪರಮೋಪಾಯವೆಂದು ಸಂಜ್ಞೆಯಿಂದ ಅವನಿಗೆ ತಿಳಿಸಲಾಗಿ, ಅವನು ಆ ಪಿಸ್ತೂಲನ್ನು ಕೂಡಲೇ ಟಾಂಗೆಯಲ್ಲಿಯೇ ಬಚ್ಚಿಟ್ಟನು.

ಆ ಗಣೂ ಜಾಧವನು ಹೊಡಿಯಬೇಡಿರೆಂದು ಆಗ ಹೇಳದಿದ್ದರೆ ಅಷ್ಟೊತ್ತಿಗೆ ಸಾಹೇಬರ ನೂರುವರ್ಷ ತುಂಬಿ ಹೋಗುತ್ತಿದ್ದವು. ನಾವು ಇಂಥ ಬಂಗಾರದಂಥ ಸುದಿನವನ್ನು ನೋಡುತ್ತಿದ್ದಿಲ್ಲ. ಕುರುಡರಂತೆ ಅಜ್ಞಾನಾಂಧಕಾರದಲ್ಲಿ ಕೊಳೆಯುತ್ತ ಕೂಡ್ರಬೇಕಾಗುತ್ತಿತ್ತು. ಕೂಡಿದ ಮಂದಿಯಲ್ಲಿ ಕೇಳುವದೇನು? ಅವರು ಮುಖ್ಯವಾಗಿ ದಂಗೆಗೇ ಟೊಂಕಕಟ್ಟಿಕೊಂಡು ನಿಂತವರು. ಕೊಲೆಯೇ ಅವರ ಮುಖ್ಯ ಕರ್ತವ್ಯವಾಗಿತ್ತು. ಆದರೆ ಚೆನ್ನವೀರಗೌಡರ ಪುಣ್ಯವಿಶೇಷದಿಂದಲೋ, ಶ್ರೀ ವೀರಭದ್ರನ ಕರಣಾ ವಿಶಿಷ್ಟತೆಯಿಂದಲೋ, ಅಥವಾ ನಮ್ಮ ವೀರಶೈವ ಸಮಾಜದ ಭಾಗ್ಯೋದಯವಿದ್ದದರಿಂದಲೋ, ಆ ಹೊತ್ತು ರಾವಬಹದ್ದೂರ ರುದ್ರಗೌಡರು ಪಾರಾದರೆಂದು ಹೇಳಬಹುದು.

ಆ ಅಪರಿಚಿತನಾದ ಗಣೂ ಜಾಧವನು ಸಾಹೇಬರನ್ನು ಹೊಡೆಯಬೇಡಿರೆಂದು ಯಾಕೆ ಹೇಳಿದನೆಂದು ವಾಚಕರು ಸಂಶಯಗ್ರಸ್ತರಾಗಿರಬಹುದು. ಆದರೆ ಈ ಗಣೂ ಜಾಧವನು ಸಾಹೇಬರಿಗೆ ಅಪರಿಚಿತನಲ್ಲ. ಸ್ವಲ್ಪ ದಿವಸಗಳ ಹಿಂದೆ ಸಿನ್ನರದ ಮುನಸೀಪಾಲ್ಟಿಯವರು ಒಂದು ಸುಳ್ಳು ಸುಳ್ಳೇ ಆರೋಪವನ್ನು ಹೊರಿಸಿ, ಅವನ ಮೇಲೆ ಖಟ್ಲೇಮಾಡಿದ್ದರು. ಅದು ರಾವಬಹದ್ದೂರವರ ಕಡೆಗೆ ವಿಚಾರಕ್ಕೆ ಬಂದು, ಯೋಗ್ಯವಿಚಾರವಾಗಿ ಈ ಗಣೂ ಜಾಧವನು ನಿರಪರಾಧಿಯೆಂದು ನಿರ್ಣಯಿಸಿ, ಆ ಸುಳ್ಳು ಆರೋಪವನ್ನು ಹೊರಿಸಿದವರಿಗೆ ರುಕಾರ ಕೊಡುವ ಕೆಲಸವನ್ನು ನಡಿಸಿದ್ದರು. ಅದರಿಂದ ಈ ಸಾಹೇಬರು ಸತ್ಯನಿರ್ಣಯ ಮಾಡುವವರೆಂದು ಅವನಿಗೆ

ಪೂರ್ಣ ತಿಳಿದಿತ್ತು. ಅದರಿಂದವನು ಆ ಪ್ರಸಂಗದಲ್ಲಿ ಕೃತಜ್ಞತೆಯನ್ನು ಸ್ಮರಿಸಿ, ಕೂಡಲೆ ತನ್ನ ಹಿಂದಿನ ಜನರಿಗೆ ಈ ಸಾಹೇಬರನ್ನು ಹೊಡಿಯಬೇಡಿರೆಂದು ಹೇಳಿದನು. ಸಾಹೇಬರು ತಮ್ಮ ಸತ್ಯನಿರ್ಣಯದಿಂದಲೇ ಅಂದು ಉಳಿದರೆಂದೂ, ಸತ್ಯವೇ ಇವರನ್ನು ಕಾಯಿತೆಂದೂ ಅನ್ನಲಿಕ್ಕೆ ಏನೂ ಅಡ್ಡಿಯಿಲ್ಲ.

ರಾವಬಹದ್ದೂರವರು ಆ ದಂಗೆಗಾರರ ನಡುವೆ ನಿಂತು, ನೀವು ಹೀಗೆ ದಂಗೆಯನ್ನು ಮಾಡಬೇಡಿರೆಂದೂ, ನಿಮ್ಮ ಅಪೇಕ್ಷೆಗಳನ್ನು ಹೇಳಿಕೊಳ್ಳಿರೆಂದೂ, ಆ ಬಗ್ಗೆ ಸರಕಾರಕ್ಕೆ ಬರೆದು ನಿಮ್ಮ ಅಪೇಕ್ಷೆಗಳನ್ನು ಪೂರ್ಣಮಾಡುವೆವೆಂದೂ ಪ್ರೀತಿಯಿಂದಲೂ ಧೈರ್ಯದಿಂದಲೂ ಹೇಳ ಹೇಳುವಷ್ಟರಲ್ಲಿ ಒಂದು ಎತ್ತರವಾದ ದಿನ್ನೆಯ ಮೇಲೆ ಒಂದು ಧೋತರವು ಹಾರಿಸಲ್ಪಟ್ಟಿತು. ಆ ಧೋತರವು ಹಾರಿದ ಸಂಜ್ಞೆಯಿಂದ ಹಿಂಡೇ ಬರಹತ್ತಿತು. ಅದನ್ನು ನೋಡಿದ ಕೂಡಲೆ ಕಾಶೀಮನು ಕುದುರೆಗಳನ್ನು ಹೊಡೆದನು. ಕೂಡಲೆ ಕುದುರೆಗಳು ಕೂಡಿದ ದಂಗೆಗಾರರ ನಡುವೇ ಭರದಿಂದ ಓಡಹತ್ತಿದವು. ದೂರಿನಿಂದ ದಂಗೆಗಾರರೆಲ್ಲ ಬಡಿಗೆಗಳನ್ನೂ, ಕಲ್ಲುಗಳನ್ನೂ ಒಗೆಯಹತ್ತಿದರು. ತೀವ್ರದಿಂದ ರಥವು ಕಚೇರಿಯ ಸಮೀಪಕ್ಕೆ ಬರುತ್ತಲೇ, ಸಿನ್ನರದ ದೇಶಮುಖನೆಂಬ ಮರಾಠೀ ಜಾತಿಯ ಪ್ರಸಿದ್ಧ ಪಾಟೀಲನು ಓಡುತ್ತ ದಂಗೆಗಾರರ ಹಿಂಡಿನೊಳಗಿಂದ ಹಾದು ಆತುರದಿಂದ ಬಂದು, ಸಾಹೇಬರನ್ನು ಹೊತ್ತುಕೊಂಡವನೇ ಕಚೇರಿಯ ಹೊರಗಿನ ಕಟಾಂಜನದೊಳಗೇ ಒಯ್ದನು. ಕೂಡಲೆ ಬಾಗಿಲಗಳನ್ನು ಹಾಕಿಕೊಂಡರು. ಕಾಶೀಮನಿಗೆ ಹೋಗಲಿಕ್ಕೆ ಸವಡವಾಗಲಿಲ್ಲ. ಅಷ್ಟರಲ್ಲಿ ದಂಗೆಗಾರರು ಸರಾಯವನ್ನು ಕುಡಿದು ಮದೋನ್ಮತ್ತರಾಗಿ ಮೈಮೇಲಿನ ಅರುವಿಲ್ಲದೆ ಕಚೇರಿಯನ್ನು ಮುತ್ತಿ ಹೋಳಿಯನ್ನಾಡಹತ್ತಿದರು. ಸಾಹೇಬರ ಕುದುರೆಗಳನ್ನು ಬಡಿಗೆಗಳಿಂದ ಬಡಿದರು. ಕಾಶೀಮನನ್ನು ಬಡೆಯಲಿಕ್ಕೆ ಹೋದರು. ಆಗ ಅವರೊಳಗಿನವನೊಬ್ಬನು, ಪಾಪ! ಅವನನ್ನು ಏತಕ್ಕೆ ಹೊಡಿಯುತ್ತೀರೆಂದು ಬಿಡಿಸಿದನು. ಕಾಶೀಮನು ಟಾಂಗೆಯನ್ನು ಬಿಟ್ಟು ಒಳಗೆ ಹೋಗಿದ್ದರೆ ಕುದುರೆಗಳನ್ನೂ, ಟಾಂಗೆಯನ್ನೂ ಪತ್ತೇ ಹತ್ತದಂತೆ ಮಾಡಿ ಬಿಡುತ್ತಿದ್ದರು.

ಕಚೇರಿಯನ್ನು ಜನಸಮೂಹವು ಮುತ್ತಿಕೊಂಡಿತು. ಕಚೇರಿಯ ಮೇಲೆ ಕಲ್ಲುಗಳ ಮಳೆಯಾದಂತಾಯಿತು. ಬಾಗಿಲ ಕಿಡಿಕೆಗಳೆಲ್ಲ ಒಡೆದುಹೋದವು. ರಾವಸಾಹೇಬ ಚಿದಂಬರ ಕೇಶವ ಗಾಡಗೀಳ ಮಾಮಲೇದಾರರೂ, ಬೇರೆ ಇತರ ಕಚೇರಿಯ ಕಾಮದಾರರೂ ಕಚೇರಿಯಲ್ಲಿ ಸೇರಿಕೊಂಡು ಬಾಗಿಲುಗಳನ್ನು ಬಂದುಮಾಡಿಬಿಟ್ಟಿದ್ದರು. ಮಾಮಲೇದಾರರ ಮೂತ್ರವಿಸರ್ಜನೆಯು ದೋತರದಲ್ಲಿಯೇ ಆಗಿಹೋಗಿತ್ತು. ಈ ದಂಗೆಯ ಪೂರ್ವಲಕ್ಷಣಗಳನ್ನು ತಿಳಿದೊಡನೆ ಆ ಯುರೋಪಿಯನ್ ಡಾಕ್ಟರನು, ಯಾರೂ ಕಾಣದಂತೆ ಒಂದು ಕುದುರೆಯನ್ನೇರಿ ಓಡಿ ಬಂದು, ಕುದುರೆ ಸಹಿತ ಕಚೇರಿಯಲ್ಲಿಯೇ ಹೊಕ್ಕೊಂಡಿದ್ದನು. ಮುಖ್ಯವಾಗಿ ಈ ಡಾಕ್ಟರನನ್ನು ಕೊಲ್ಲುವದೇ ಆ ದಂಗೆಗಾರರ ಮನಸಿನಲ್ಲಿತ್ತು. ಅವನನ್ನು ಬಹಳೇ ಹುಡುಕಿ ಅವನು ಸಿಗದ್ದರಿಂದ ಅವನ ಸಾವಿರಾರು ರೂಪಾಯಿಗಳ ಸಾಮಾನು ಸಹಿತ ತಂಬೂಗಳನ್ನು ಸುಟ್ಟು ಬಿಟ್ಟಿದ್ದರು. ಆ ಡಾಕ್ಟರನ ಬಟ್ಲೋರನನ್ನು ನೆಗಿವಿ, ಒಂದು ಆಳವಾದ ಕೆಸರುಳ್ಳ ಗಟಾರಿಯಲ್ಲಿ ಬಡಿದು ಕೆಡವಿ ಬಿಟ್ಟಿದ್ದರು. ಅವನು ಹಾಗೆಯೇ ಆ ಗಟಾರಿಯ ಕಾವಲಿಯೊಳಗಿಂದಲೇ ಮೈತುಂಬ ರಾಡಿ ಬಡಕೊಂಡವನಾಗಿ ಪಾರಾಗಿ, ಕಚೇರಿಯ ಯಾವದೋ ಒಂದು ಕೋಣೆಯಲ್ಲಿ ನಿಂತು ಬದುಕಿಕೊಂಡನು. ಹಿಂದೆ ಹೇಳಿದ ಆ ರಾಜೇ ವಕೀಲನನ್ನು ಕೊಂದು ದಂಗೆಗಾರರು ಆತನ ಪ್ರೇತವನ್ನು ಹೊತ್ತೊಯ್ದು ಕಾಮಣ್ಣನಂತೆ ಕುಳ್ಳಿರಿಸಿ, ಅವನ ಹೆಗಲ ಮೇಲೆ ಶಲ್ಲೆಯನ್ನು ಹೊಚ್ಚಿ, ಕಣ್ಣಿಗೆ ಚಾಳೀಸ ಹಾಕಿ, ಚಂದಮಾಡಿ ಅವನ ಸುತ್ತಲೂ ಕುಳ್ಳು ಒಟ್ಟಿ ಹುಲ್ಲು ಹಾಕಿ ಉರಿಹಚ್ಚಿ, ಅವನನ್ನು ಸುಟ್ಟು ಹೋಳಿಯನ್ನು ಮಾಡಿಬಿಟ್ಟಿದ್ದರು. ಪೋಷ್ಟ ಆಫೀಸವನ್ನು ಮೊದಲೇ ಸುಟ್ಟು

ಪೋಸ್ಟಮಾಸ್ತರನನ್ನು ಎತ್ತಿ ಒಯ್ದು, ಇಬ್ಬರು ಕಾಲುಗಳನ್ನೂ ಬೇರೆಯಿಬ್ಬರು ಕೈಗಳನ್ನು ಹಿಡಿದು ಜೋಕಾಲಿಯಂತೆ ಅಂಗಾತ ತೂಗಿ, ತಾರು ಮಾಡುತ್ತೀಯಾ, ತಾರು ಎಂದು ಅವನನ್ನು ನದಿಯಲ್ಲಿ ಚಲ್ಲಿ ಬಿಟ್ಟಿದ್ದರು. ಪಾಪ ಆ ಮಾಸ್ತರನು ಕೆಳಗೆ ಬೀಳುತ್ತಲೆ ಹೊಳೆಯೊಳಗಿನ ಕಸಿಕೆಯ ಗಡ್ಡೆಯನ್ನು ಹಿಡುಕೊಂಡು ಪಾರಾಗಿ ದಂಗೆಗಾರರು ಕಾಣದಂತೆ ಎಲ್ಲಿಯೋ ಹೋಗಿ ಬದುಕಿಕೊಂಡನು. ಎಲ್ಲ ಸರಕಾರೀ ಅಧಿಕಾರಿಗಳು ಮನಬಂದ ಕಡೆಗೆ ಎಲ್ಲೆಲ್ಲಿಯೋ ಓಡಿಹೋಗಿದ್ದರು. ಎಷ್ಟೋ ಜನರಿಗೆ ಅಪಘಾತಗಳಾದವು. ಪೊಲೀಸರಿಗೆ ಜಖಮಗಳಾದವು. ಮುನಸಿಪಾಲ್ಟಿಯ ಕಂದೀಲುಗಳನ್ನೆಲ್ಲ ಒಡೆದುಬಿಟ್ಟರು. ಸಾರಾಯಿಯ ಅಂಗಡಿಗೆ ಹೋಗಿ ಅಂಗಡಿಕಾರನನ್ನು ಹೊಡೆದು, ಅವನ ಕೀಲಿ ಕೈ ತಕ್ಕೊಂಡು ಗಲ್ಲೆಯನ್ನು ಲೂಟಿಮಾಡಿ, ಯಥೇಷ್ಟವಾಗಿ ಸುರಾಪಾನಮಾಡಿ ಅಲಾವಿಯನ್ನಾಡಹತ್ತಿದರು. ಈ ಹೃದಯ ವಿದಾರಕವಾದ ಭಯಂಕರ ಕೊಲೆಯು ನಡೆದಿರಲು, ರಾವಬಹದ್ದೂರವರು ಧೈರ್ಯದಿಂದ ಕಚೇರಿಯ ಬಾಗಿಲ ತೆಗಿಸಿ ಮದ್ದಿನ ಖಜಾನೆಯ ಕೀಲಿ ಮುರಿಸಿ ಕಾಡುತೂಸುಗಳನ್ನು ತೆಗಿಸಿ, ಪೊಲೀಸ ಲಾಯನದಿಂದ ಶಿಪಾಯರನ್ನು ಬಂದೂಕ ಸಹಿತ ತರಿಸಿ, ಪೊಲೀಸರಿಗೆ ಗುಂಡುಹಾಕಲಿಕ್ಕೆ ಅಪ್ಪಣೆ ಕೊಟ್ಟರು. ಒಂದೆರಡು ಗುಂಡುಗಳು ಹಾರುತ್ತಲೇ ದಂಗೆಗಾರರು ಕಚೇರಿಯನ್ನು ಬಿಟ್ಟು ಹಿಂದೆ ಸರಿಯಹತ್ತಿದರು. ಆದರೆ ಕೆಲವು ಹೊತ್ತು ಕಟಾಂಜನದ ಸಂದುಗಳೊಳಗಿಂದ ಹಾಯಿಸಿ ಬಂದೂಕುಗಳನ್ನು ಹಾರಿಸಹತ್ತಲು ದಂಗೆಗಾರರೆಲ್ಲ ದೂರ ಓಡಿದರು. ಊರಲ್ಲಿ ಸುತ್ತು ಮುತ್ತು ಇನ್ನೂ ದಂಗೆಯು ನಡೆದೇ ಇತ್ತು. ಕಾರಣ ಸಾಹೇಬರು ಪೊಲೀಸರೊಂದಿಗೆ ಓಣಿ ಓಣಿಗಳಲ್ಲಿ ಧೈರ್ಯದಿಂದ ತಿರುಗುತ್ತ ಗೋಳೀಬಾರ ಮಾಡಿಸಹತ್ತಿದರು. ಈ ಗುಂಡುಗಳ ಸಪ್ಪಳವನ್ನು ಕೇಳಿ, ಎಲ್ಲ ದಂಗೆಗಾರರು ದಿಕ್ಕಾಪಾಲಾಗಿ ಓಡಿಹೋಗಿ, ಅಡವಿಯಲ್ಲಿಯೂ ಗುಡ್ಡದಲ್ಲಿಯೂ ಸೇರಿಕೊಂಡರು. ಸುದೈವದಿಂದ ಗುಂಡು ಯಾರಿಗೂ ಕೂಡ್ರಲಿಲ್ಲ. ಫೌಜದಾರನು ದಂಗೆಯ ಫಜೀತಿಯನ್ನು ನೋಡಿ ಪಲಾಯನ ಮಾಡಿದ್ದನು.

ಈ ಪ್ರಕಾರ ರಾವಬಹದ್ದೂರವರು ಧೈರ್ಯದಿಂದಲೂ, ಯುಕ್ತಿಯಿಂದಲೂ ಆ ಹೊತ್ತಿನ ಪ್ರಬಲವಾದ ದಂಗೆಯನ್ನು ಮೂರೇ ತಾಸುಗಳಲ್ಲಿ ಶಾಂತಗೊಳಿಸಿದ ನಂತರ, ಕಚೇರಿಯ ಕಾಮದಾರರು ಒಬ್ಬೊಬ್ಬರೇ ಕಚೇರಿಯ ಕೋಣೆಗಳೊಳಗಿಂದ ಮೆಲ್ಲಮೆಲ್ಲನೆ ಹೊರಬೀಳಹತ್ತಿದರು. ಮಾಮಲೇದಾರರು ಮೆಲ್ಲನೇ ಹೊರಬಿದ್ದು ಸಾಹೇಬರಿಗೆ ಭೆಟ್ಟಿಯಾಗಿ, ತಾವು ಈ ಸಮಯದಲ್ಲಿ ಬಾರದಿದ್ದರೆ ನಾವು ಈ ಹೊತ್ತು ಜೀವದಿಂದ ಉಳಿಯುತ್ತಿದ್ದಿಲ್ಲವೆಂದೂ, ತಾವು ಎಷ್ಟೋ ಪ್ರಾಣಿಗಳಿಗೆ ಜೀವದಾನಕೊಟ್ಟಂತೆ ಆಯಿತೆಂತಲೂ, ಸಾಹೇಬ ಬಹದ್ದೂರವರನ್ನು ಬಹಳೇ ಕೊಂಡಾಡಿದರು. ಮಾಮಲೇದಾರರು ಮರುದಿವಸದ ತನಕ ಕಚೇರಿಯನ್ನೇ ಬಿಡಲಿಲ್ಲ. ಮಲಮೂತ್ರ ವಿಸರ್ಜನವೆಲ್ಲ ಒಳಗೇ ಆಗಿಹೋಗಿತ್ತು. ಮಿ. ಡಾಕ್ಟರ ವೀಥರರು ಹೊರಬೀಳಲಿಕ್ಕೆ ಇನ್ನೂ ಅನುಮಾನಿಸುತ್ತಿದ್ದರು. ಅವನನ್ನು ನೋಡಿದಾಕ್ಷಣವೆ ದಂಗೆಗಾರರು ಬಿಡುತ್ತಿದ್ದೇ ಇಲ್ಲ. ಅವರಿಗೆ ದಂಗೆಗಾರರ ಟಕ್ಕು ಬಹಳೇ ಇತ್ತು. ಅವರು ಆ ಹೊತ್ತು ಅಲ್ಲಿ ಇರಲಿಕ್ಕೆ ಮಾರ್ಗವೇ ಇದ್ದಿಲ್ಲ. ಡೇರೆಯೇ ಸುಟ್ಟು ಹೋಗಿತ್ತು. ಸರ್ವಸಾಮಾನುಗಳೆಲ್ಲ ಬೂದಿಯಾಗಿ ಹೋಗಿದ್ದವು. ಬಟ್ಲೇರನ ಪತ್ತೆಯೇ ಹತ್ತಲಿಲ್ಲ. ಕುದುರೆಯೊಂದರ ಹೊರತು ಅವನ ಸಾಮಾನು ಒಂದೂ ಉಳಿಯಲಿಲ್ಲ. ಈ ಡಾಕ್ಟರ ಸಾಹೇಬರನ್ನು ಇಲ್ಲಿಯೇ ಬಿಟ್ಟರೆ ಕೆಲಸವು ಪರಿಣಾಮವಾಗುವದಿಲ್ಲ. ದಂಗೆಗಾರರು ಹೊತ್ತು ಸಾಧಿಸಿ ನಿಶ್ಚಯವಾಗಿ ಇವರ ಕೊಲೆಯನ್ನು ಮಾಡುವರು. ಇವರನ್ನು ಹ್ಯಾಗಾದರೂ ಮಾಡಿ ಪಾರಮಾಡಬೇಕೆಂದೂ, ಹಾಗೆ ಮಾಡದಿದ್ದರೆ ಏನಾದರೂ ಅಸ್ತವ್ಯಸ್ತವಾಗಿ ತಮಗೆ ಸರಕಾರದಿಂದ ಮಾತಿನ ಪೆಟ್ಟು ಬಂದೀತೆಂದೂ ಊಹಿಸಿ, ಬಾರಮಾಡಿದ ಬಂದೂಕಗಳೊಡನೆ ಏಳೆಂಟು ಮಂದಿ ಶಿಪಾಯರನ್ನು ಸಂಗಡ ಕರಕೊಂಡು ಡಾಕ್ಟರನನ್ನು ಕುದುರೆ ಸಹಿತ ಊರುದಾಟಿಸಿ ನಾಸಿಕದ ಮಾರ್ಗಕ್ಕೆ ಹಚ್ಚಬೇಕೆಂದು ನಡೆದರು. ಆದರೆ ಈ ದಂಗೆಯ ಸುದ್ದಿಯು ನಾಸಿಕಕ್ಕೆ ಮುಟ್ಟಬಾರದೆಂದೂ ದಂಗೆಗಾರರು

ನಾಸಿಕದ ರಸ್ತೆಯನ್ನು ಕಟ್ಟಿದ್ದರು. ಆ ದಾರಿಯಿಂದ ನಾಸಿಕಕ್ಕೆ ಒಂದು ಪ್ರಾಣಿಯನ್ನು ಸಹ ಅವರು ಬಿಡುತ್ತಿದ್ದಿಲ್ಲ. ರಾವಬಹದ್ದೂರ ರುದ್ರಗೌಡ ಸಾಹೇಬರವರು ಊರೊಳಗಿಂದಲೇ ಗುಂಡುಗಳನ್ನು ಹಾರಿಸಲಿಕ್ಕೆ ಅಪ್ಪಣೆ ಕೊಟ್ಟರು. ತುಬಾಕಿಗಳನ್ನು ಹಾರಿಸುತ್ತ ಬರುವ ಶಿಪಾಯರ ಮಧ್ಯದಲ್ಲಿರುವ ಸಾಹೇಬರನ್ನೂ, ಡಾಕ್ಟರನನ್ನೂ ನೋಡಿ ದಂಗೆಗಾರರು ಹೆದರಿ ಸಳ್ಳುವರಿದರು. ಸಂಜೆಯಾಗುತ್ತ ಬಂದಿತ್ತು. ಡಾಕ್ಟರನನ್ನು ತುಸು ದೂರತನಕ ಕಳಿಸಿ, ರಾವಬಹದ್ದೂರವರು ಪೊಲೀಸರೊಡನೆ ಹಿಂದಕ್ಕೆ ತಿರುಗಿದರು. ಕೂಡಲೆ ಡಾಕ್ಟರರು ಕುದುರೆಯನ್ನು ಬಿಟ್ಟರು. ಕುದುರೆಯು ವಾಯುವೇಗದಿಂದ ಡಾಕ್ಟರನನ್ನು ತೆಗೆದುಕೊಂಡು ನಾಸಿಕದ ಕಡೆಗೆ ಓಡಿಹೋಯಿತು.

ಅಸದೃಶವಾದ ಕೊಲೆ

ಬಳಿಕ ರಾವಬಹದ್ದೂರವರು ಪೋಷ್ಟ ಆಫೀಸವನ್ನು ನೋಡಹೋಗಲು ಆಫೀಸು ಕಾಗದಪತ್ರ ಸಹಿತವಾಗಿ ಸುಟ್ಟುಹೋಗಿತ್ತು. ತಾರಗಳೂ, ಕಂಬಗಳೂ ಕಡಿದು ಬಿದ್ದಿದ್ದವು. ಇದನ್ನು ನೋಡಿ ಹಾಗೆಯೇ ದವಾಖಾನೆಗೆ ಬಂದರು. ಅಲ್ಲಿ ವೆಂಕಾಜಿ ದೇವಜಿ ದೇಶಪಾಂಡೆ ಎಂಬ ನೇಟಿವ್ಹ ಡಾಕ್ಟರರ ಪ್ರೇತವು ತುಂಡು ತುಂಡಾಗಿ ಬಿದ್ದಿತ್ತು. ತಲೆಯನ್ನು ಹಾವಿನ ತಲೆಯನ್ನೊಡೆದಂತೆ ಒಡೆದು ಬಿಟ್ಟಿದ್ದರು. ಎರಡೂ ಕಣ್ಣುಗಳನ್ನು ಕಿತ್ತು ಕಡೆಗೆ ಚೆಲ್ಲಿದ್ದರು. ಅವು ನೋಡುವವರಿಗೆ ಭೀತಿಯನ್ನುಂಟು ಮಾಡುತ್ತ ಅಲ್ಲಿಯೇ ಬಿದ್ದುಕೊಂಡಿದ್ದವು. ಕೈಕಾಲುಗಳ ಬೆರಳುಗಳನ್ನು ಕಲ್ಲುಗಳಿಂದ ಜಜ್ಜಿಬಿಟ್ಟಿದ್ದರು. ಬೆರಳುಗಳು ಕತ್ತರಿಸಿ ಬಿದ್ದಿದ್ದವು. ಆತನು ಅರ್ಧ ಮರ್ಧ ತಿಂದಿದ್ದ ತಾಂಬೂಲವು ಬಾಯೊಳಗೆ ಹಾಗೇ ಇತ್ತು. ಆ ವೆಂಕಾಜಿಯು ಪುಣೆಯಲ್ಲಿದ್ದ ತನ್ನ ಮಗನಿಗೆ ಕ್ಷೇಮವಾರ್ತೆಯನ್ನು ತಿಳಿಸಲೋಸುಗ ಬರೆಯಲಾರಂಭಿಸಿದ ಅಪೂರ್ಣವಾದ ಪತ್ರವು ಅಲ್ಲಿಯೇ ಮೇಜಿನ ಮೇಲೆ ಇತ್ತು. ಅದು ರಕ್ತಮಯವಾಗಿತ್ತು. ಈ ಬಗೆಯ ದಂಗೆಗಾರರ ಕ್ರೂರತರವಾದ ಹಿಂಸೆಯಿಂದ ಆ ಡಾಕ್ಟರನ ಪ್ರೇತವು ಭಯಂಕರ ಸ್ವರೂಪವುಳ್ಳದ್ದಾಗಿತ್ತು. ರಾಜೇ ವಕೀಲರು ಎಲ್ಲಿ ಹೋದರೆಂಬದು ಆ ದಿವಸ ಗೊತ್ತಾಗಲೇ ಇಲ್ಲ. ಅವನನ್ನು ದಂಗೆಗಾರರು ಒಯ್ದು ಹಿಂದೆ ಹೇಳಿದಂತೆ ಒಂದು ಹಳ್ಳದ ಸರುವಿನಲ್ಲಿ ಸುಟ್ಟು ಬಿಟ್ಟಿದ್ದರು. ಮರುದಿವಸ ಶೋಧ ಮಾಡಲಾಗಿ ಆ ಸುಟ್ಟ ಸ್ಥಳವು ಗೊತ್ತಾಯಿತು. ಶವವೆಲ್ಲ ಸುಟ್ಟು ಹೋಗಿತ್ತು. ಸುಡುವ ಮುಂದೆ ಆ ವಕೀಲನ ಕೈಗಳನ್ನು ಜೋಡಿಸಿಟ್ಟು, ಆತನು ದಿನಂಪ್ರತಿ ಹಿಡಿದುಕೊಳ್ಳುವ ಚತ್ತರಿಗೆಯನ್ನು ಎದೆಯ ಮೇಲೆ ಇಟ್ಟಿದ್ದರು. ಆ ಚತ್ತರಿಗೆಯೆಲ್ಲ ಸುಟ್ಟು ಕಬ್ಬಿಣದ ಕಡ್ಡಿಗಳು ಹಾಗೇ ಇದ್ದವು. ಅವುಗಳ ಮೇಲಿಂದ ಇವರೇ ರಾಜೇ ವಕೀಲರೆಂದು ಗೊತ್ತು ಹಿಡಿಯಲ್ಪಟ್ಟಿತು. ರಾ.ಸಾ. ಗೋಕುಲದಾಸ ಮುನಸೂಫರನ್ನು ಅರೆಘಾಯ ಮಾಡಿ ಒಂದು ಮನೆಯಲ್ಲಿ ಒಗೆದಿದ್ದ ಸಂಗತಿಯು ವಾಚಕರಿಗೆ ನೆನಪಿರಬಹುದು. ಮುನಸೂಫರಿಗೆ ಹಿಂದಿನಿಂದ, ನಮ್ಮದು ತೀರ ತಪ್ಪಾಯಿತೆಂತಲೂ, ತಾವು ಎಂದು ತಿಳಿಯದೆ ಪ್ಲೇಗಿನ ಅಧಿಕಾರಿಗಳೆಂದು ಇಷ್ಟು ಹೊಡೆದವೆಂತಲೂ, ದಂಗೆಗಾರರು ಆ ಮುನಸೂಫರ ಕಡೆಯಿಂದ ಕ್ಷಮೆಯನ್ನು ಬೇಡಿಕೊಂಡರು. ಈ ಮುನಸೂಫರೂ ವೆಂಕಾಜಿ ದೇವಜಿ, ರಾಜೇ ವಕೀಲರೂ ದಿನಾಲು ಕೂಡಿಯೇ ತಿರುಗಾಡುತ್ತಿದ್ದದರಿಂದ ಮುನಸೂಫರಿಗೆ ಅವರ ಚತ್ತರಿಗೆಯ ಕಡ್ಡಿಗಳ ಗುರ್ತು ಹತ್ತಿತು. ಆ ಕಡ್ಡಿಗಳ ಗುರ್ತಿನಿಂದಲೇ ರಾಜೇ ವಕೀಲನನ್ನು ಸುಟ್ಟ ಸ್ಥಳವು ಇದೇ ಎಂದು ನಿರ್ಣಯಿಸಲಿಕ್ಕೆ ಕಾರಣವಾಯಿತು.

ರಾವಬಹದ್ದೂರ ರುದ್ರಗೌಡರು ದಂಗೆಯನ್ನು ಶಾಂತಮಾಡಿದ್ದು

ಈ ಪ್ರಕಾರದ ಹೃದಯಭೇದಕ ದಂಗೆಯ ಸ್ವರೂಪವನ್ನು ನೋಡಿಕೊಂಡು, ಊರ ಜನರಿಗೆ ಉಪದೇಶ ಮಾಡಿ, ದಂಗೆಯನ್ನು ಶಾಂತಮಾಡಿ, ಊರಲ್ಲಿ ಬಂದೋಬಸ್ತವನ್ನಿಟ್ಟು, ಪೊಲೀಸರೊಂದಿಗೆ ತಮ್ಮ

ತಂಬೂದ ಕಡೆಗೆ ಟಾಂಗೆಯನ್ನು ಬಿಟ್ಟರು. ಇತ್ತ ತಂಬೂದಲ್ಲಿದ್ದ ಸಾಹೇಬರ ಪರಿವಾರದವರಿಗೆ ಈ ಭಯಂಕರ ದಂಗೆಯ ವಾರ್ತೆಯು ತಿಳಿದು ಎಲ್ಲರೂ ಚಿಂತಿಸುತ್ತ ಕುಳಿತಿರಲು, ಯಾರೋ ಹಾದಿಕಾರರು ಅವರಿಗೆ, ಸಾಹೇಬರನ್ನು ದಂಗೆಯಲ್ಲಿ ಹೊಡೆದರೆಂಬದಾಗಿ ಹೇಳಿದರು. ದಂಗೆಯಲ್ಲಿ ಕೊಲೆಗಳಾದದ್ದನ್ನು ತಿಳಿದು ಯಾರಾದರೂ ಹೇಳಿರಬಹುದು. ಅದನ್ನು ಕೇಳಿ ಚಿಂತಿಸುತ್ತ ಕೂತಿದ್ದರು. ಅಷ್ಟರಲ್ಲಿ ಸಾಹೇಬರು ರಥಾರೂಢರಾಗಿ ಬರುವದು ಕಾಣಿಸುತ್ತಲೇ ಎಲ್ಲರೂ ಸಂತೋಷಭರಿತರಾದರು. ಕುದುರೆಗಳೆರಡೂ ಕುಣಿಯುತ್ತ ಡೇರೆಯನ್ನು ಸೇರಿದವು. ಎಲ್ಲರಿಗೂ ಆನಂದವಾನಂದವಾಗಿ ಹೋಯಿತು. ದಂಗೆಯ ವಾರ್ತೆಯನ್ನು ಕೇಳಿದೊಡನೆ ಅಡಿಗೆಯವನು ಇದ್ದ ಒಡಿವೆ ವಸ್ತಗಳನ್ನೆಲ್ಲ ಒಂದು ಪೆಟ್ಟಿಗೆಯಲ್ಲಿ ತುಂಬಿ ಹತ್ತರಿರುವ ಒಂದು ಹಳ್ಳದಲ್ಲಿ ತಗ್ಗು ತೋಡಿ ಬಚ್ಚಿಟ್ಟು ಬಂದಿದ್ದನು. ಸಾಹೇಬರು ಬರುತ್ತಲೇ ಆ ಪೆಟ್ಟಿಗೆಯನ್ನು ಮಣ್ಣು ಕೆದರಿ ತೆಗೆದುಕೊಂಡು ಬಂದನು. ದಂಗೆಯ ಭಯಂಕರವಾರ್ತೆಯನ್ನು ಕೇಳಿ ರಾವಬಹದ್ದೂರವರ ಕಚೇರಿಯ ಒಬ್ಬ ಶಿರಸ್ತಾರನೂ, ಇಬ್ಬರು ಕಾರಕೂನರೂ ಇವರು ದಂಗೆಯನ್ನು ಶಾಂತಮಾಡಿ ಬರುವದರೊಳಗಾಗಿ, ಓಡಿಹೋಗಿ ಒಂದು ನೆರೆ ಹಳ್ಳಿಯನ್ನು ಸೇರಿಕೊಂಡಿದ್ದರು. ಇವರು ಮೂವರೂ ಬ್ರಾಹ್ಮಣರೇ! ಅಬ್ದುಲ ಎಂಬವನೊಬ್ಬ ಮುಸಲ್ಮಾನ ಕಾರಕೂನನು ಮಾತ್ರ ಒಬ್ಬನೇ ಕಚೇರಿಯಲ್ಲಿ ಕೂತಿದ್ದನು.

ರಾವಬಹದ್ದೂರವರು ಊಟವಾದ ನಂತರ ಯಾವದ್ವೃತ್ತಾಂತವನ್ನು ಯಥಾಸ್ಥಿತವಾಗಿ ರಿಪೋರ್ಟ ಬರೆದು ಸರಕಾರಕ್ಕೆ ತಿಳಿಸಬೇಕೆಂದು ತಯಾರಮಾಡಿ ಇಟ್ಟರು. ಆದರೆ ಅಲ್ಲಿಯ ಪೋಷ್ಟ ಆಫೀಸು ಸುಟ್ಟು ಹೋಗಿತ್ತು. ತಾರುಗಳೆಲ್ಲ ಹರಿದು ಹೋಗಿದ್ದವು. ತೀವ್ರವಾಗಿ ತಿಳಿಸಲಿಕ್ಕೆ ಮಾರ್ಗವೇ ಇದ್ದಿದ್ದಿಲ್ಲ. ಕಾರಣ ರಾತ್ರಿಯಲ್ಲಿಯೇ ಕುದುರೆಯನ್ನು ಕೊಟ್ಟು ಬಂದೂಕ ಸಹಿತ ಕಾಶೀಮನನ್ನು ಸಿನ್ನರಕ್ಕೆ ಕಳಿಸಿ, ಫೌಜದಾರನನ್ನು ಕರಿಸಿ ಅವನನ್ನು ರಾತೋರಾತ್ರ ತಾರಮಾಡಲಿಕ್ಕೆ ನಾಶಿಕಕ್ಕೆ ಕಳಿಸಿದರು. ಫೌಜದಾರರು ಕೂಡಲೆ ನಾಶಿಕ ಸ್ಟೇಶನಕ್ಕೆ ಹೋಗಿ ಸಾಹೇಬರು ಬರೆದು ಕೊಟ್ಟಂತೆ ಮೆ॥ಕಲೇಕ್ಟರ ಸಾಹೇಬ ಬಹದ್ದೂರವರ ಕಡೆಗೂ, ಕಮಿಶನರ್ ಸಾಹೇಬ ಬಹದ್ದೂರವರ ಕಡೆಗೂ, ಮುಂಬಯಿ ಸರಕಾರಕ್ಕೂ ಕಮ್ಯಾಂಡಿಂಗ ಆಫೀಸರರ ಕಡೆಗೂ ತಾರ ಮಾಡಿದರು. ತಾರ ಮಾಡಲಿಕ್ಕೆ ಸುಮಾರು ಒಂದುನೂರಾಐಯ್ವತ್ತು(೧೫೦) ರೂಪಾಯಿಗಳು ಹತ್ತಿದವು. ಭಯಂಕರವಾದ ಈ ದಂಗೆಯಲ್ಲಿ ನಡೆದ ಯಾವತ್ತು ವೃತ್ತಾಂತವನ್ನು ಮುಖ್ಯ ಆಫೀಸರರಿಗೆಲ್ಲ ತಾರಿನಿಂದ ತಿಳಿಸಲ್ಪಟ್ಟಿತು. ಮತ್ತು ದಂಗೆಯು ಇನ್ನೂ ಆಗುವ ಸಂಭವವಿದ್ದದರಿಂದ ಒಳ್ಳೇ ತೀವ್ರವಾಗಿ ಪೊಲೀಸ ಪಾರ್ಟಿಯನ್ನು ಕಳಿಸಿಕೊಡಬೇಕಾಗಿ ಅರ್ಜಂಟ ತಾರವೂ ಮಾಡಲ್ಪಟ್ಟಿತು. ಮರುದಿವಸವೇ ಸುಮಾರು ಅಯ್ವತ್ತು ಅರವತ್ತು ಜನ ಆಯುಧಪಾಣಿಯಾದ ಪೊಲೀಸರೂ, ಪೊಲೀಸ ಇನಸ್ಪೆಕ್ಟರರೂ, ಆರ್.ಬಿ. ಸ್ಟುವರ್ಟ ಇಂಡಿಯನ್ ಸೀ-ಎಸ್ ಮುಂತಾದ ದೊಡ್ಡ ದೊಡ್ಡ ಆಫೀಸರರೂ ಬಂದರು. ರಾವಬಹದ್ದೂರವರು ಅವರೊಂದಿಗೆ ಊರ ಹೊರಗೂ ಸಂಚರಿಸಿ, ಸುತ್ತಲೂ ಬೆದರಿಕೆಯನ್ನುಂಟು ಮಾಡಿದರು. ಅದನ್ನು ಕಂಡು ದಂಗೆಗಾರರು ಎಲ್ಲೆಲ್ಲಿಯೂ ತಲೆಯೆತ್ತಲಿಲ್ಲ. ದಂಗೆಯು ಶಾಂತವಾಗಿ ಹೋಯಿತು.

ಇದೇ ಸಂಧಿಯಲ್ಲಿ ರಾ.ಬ॥ಅರಟಾಳ ಸಾಹೇಬರಿಗೆ ಹೊಟ್ಟೆಶೂಲಿಯೂ, ಜ್ವರವೂ ಉತ್ಪನ್ನವಾದವು. ಅಲ್ಲಿಯೇ ಸಿನ್ನರದ ಪ್ಲೇಗ ಕ್ಯಾಂಪಿನ ಹತ್ತರ ತಂಬೂ ಹೊಡೆದು ಸ್ವಲ್ಪ ದಣುಕೊಂಡರು. ಜ್ವರವು ವಿಶೇಷವಾದದರಿಂದಲೂ, ಊರಲ್ಲಿ ಪ್ಲೇಗವಿದ್ದದರಿಂದಲೂ, ಭಯಗ್ರಸ್ತರಾದರು. ಔಷಧ ತೆಗೆದುಕೊಂಡರೂ ಕಡಿಮೆಯಾಗಲಿಲ್ಲ. ತಂಬೂದ ಹತ್ತರ ನೆರಳೂ ಇದ್ದಿದ್ದಿಲ್ಲ. ಇಲ್ಲಿಯ ಹವೆಯು ದೂಷಿತವಾಗಿರುವದರಿಂದ ಜ್ವರಗ್ರಸ್ತರಾದ ನೀವು ಇಲ್ಲಿಂದ ಇಗತಪುರಕ್ಕೆ ಹೋದರೆ ನೆಟ್ಟಗಾಗುವದೆಂದು ಮೆ॥ಕಲೇಕ್ಟರ ಸಾಹೇಬ ಬಹದ್ದೂರವರು ಪ್ರೀತಿಯಿಂದ ಹೇಳಲಾಗಿ, ಅಲ್ಲಿಂದ ಇಗತಪುರಕ್ಕೆ ಹೋದರು. ಇಗತಪುರದ ಹವೆಯು ಬಹು

ಹಿತಕರವಾದದ್ದು. ಅಲ್ಲಿ ಉತ್ತಮವಾದ ಹಾಲು ಸಿಗುತ್ತವೆ. ನೀರು ನೆಟ್ಟಗೆ, ಅಲ್ಲಿ ಯುರೋಪಿಯನ್ ಕಾಮದಾರರ ವಸತಿಯು ಬಹಳವದೆ. ಆದರಿಂದ ಮನೆಗಳಿಗೆ ಬಾಡಿಗೆ ಬಹಳ. ರಾವಬಹದ್ದೂರವರು ತಿಂಗಳಿಗೆ ಅಯ್ವತ್ತು (೫೦) ರೂಪಾಯಿ ಬಾಡಿಗೆ ಗೊತ್ತುಮಾಡಿ, ನೆಟ್ಟಗೆ ಹವೆಯಾಡುವ ಒಂದು ಬಂಗಲೆಯಲ್ಲಿದ್ದರು. ಅಲ್ಲಿ ರೇಲ್ವೆ ಡಾಕ್ಟರರಾದ ಮಿ. ಪೀಯರ ಇವರ ಔಷಧಿಯಿಂದ ಜ್ವರನಿಂತು ಇವರಿಗೆ ಗುಣವಾಯಿತು.

ಗತಭಾಗ್ಯವಾದ ಭರತಖಂಡ

ರಾವಬಹದ್ದೂರವರ ಶೌರ್ಯ ಧೈರ್ಯ, ಸ್ಥೈರ್ಯ, ಚಾತುರ್ಯ ಗಾಂಭೀರ್ಯ ಸಾಹಸಾದಿಗಳು ಸರಕಾರದವರಿಗೆ ತಿಳಿಯಲಿಕ್ಕೆ ತಡವಾಗಲಿಲ್ಲ. ಜನ ಸಮೂಹಕ್ಕೆಲ್ಲ ಈ ಮೊದಲೇ ತಿಳಿದು ಹೋಗಿತ್ತು. ಇವರು ಸಮಯ ವಿಶೇಷದಲ್ಲಿ ತೋರಿಸಿದ ಧೈರ್ಯವೂ, ಪ್ರಸಂಗಾನುಸಾರವಾಗಿ ಪ್ರಕಟಿಸಿದ ಚತುರೋಪಾಯಗಳೂ ವರ್ಣನೀಯವಾಗಿವೆ. ಅದರಿಂದ ಇವರು ಬಹಳೇ ಇಮಾನಿಯಿಂದ ಕೆಲಸ ಮಾಡುವವರೆಂತಲೂ, ಒಳ್ಳೇ ಧೈರ್ಯಶಾಲಿಗಳೆಂತಲೂ, ರಾಜ್ಯಕಾರ್ಯ ಧುರೀಣರೆಂತಲೂ, ಬಹು ಪ್ರಮಾಣಿಕರೆಂತಲೂ ಎಲ್ಲ ವರಿಷ್ಠರ ಕಡೆಯಿಂದ ಶಿಫಾರಸವಾಗಿ ಮುಂಬಯಿ ಸರಕಾರಕ್ಕೆ ತಿಳಿಸಲ್ಪಟ್ಟಿತು. ಸರಕಾರದಲ್ಲಿ ರಾವಬಹದ್ದೂರವರನ್ನು ಬಹಳೇ ಶ್ಲಾಘಿಸಿದರು. ಸರಕಾರದಿಂದ ಇವರ ವಿಶ್ರಾಂತಿಗಾಗಿ ಮೂರು ತಿಂಗಳ ಹಕ್ಕಿನ ರಜೆಯು ಕೊಡಲ್ಪಟ್ಟಿತು.

ಹಿಂದೆ ಏತದ್ದೇಶಿಯ ಸಾರ್ವಭೌಮರಾಡಳಿತದಲ್ಲಿ ಎಷ್ಟೋ ಜನರು ತಮ್ಮ ಪಾಂಡಿತ್ಯವನ್ನು ಪರಾಕ್ರಮವನ್ನೂ, ಪ್ರಭಾವವನ್ನೂ ಕೆಲ ಕೆಲವು ಪ್ರಸಂಗಗಳಲ್ಲಿ ತೋರಿಸಿ ಸಾರ್ವಭೌಮರಾಜರನ್ನು ಸಂತೋಷಪಡಿಸಿ, ಎಷ್ಟೋ ಪ್ರಾಂತಗಳ ಒಡೆತನವನ್ನು ಸಂಪಾದಿಸಿದ್ದು ಇತಿಹಾಸಪ್ರಸಿದ್ಧವದೆ. ಆ ಕಾಲದಲ್ಲಿ ರಾಜನು ಮೆಚ್ಚಿದರೆ ತನ್ನ ಮನಸಿಗೆ ಬಂದದ್ದನ್ನು ಕೊಡಲಿಕ್ಕೆ ಅಥವಾ ಬೇಡುವವನ ಇಚ್ಛಿತವನ್ನು ಪೂರ್ಣ ಮಾಡಲಿಕ್ಕೆ ಎಂದೂ ಅನುಮಾನಿಸುತ್ತಿದ್ದಿಲ್ಲ. ಯಾವದೊಂದು ವಿಷಯದಲ್ಲಿರುವ ತಮ್ಮ ಪ್ರತಿಭೆಯನ್ನು ತೋರಿಸಿ ರಾಜರನ್ನು ಮೆಚ್ಚಿಸಿ, ವೀರಾಧಿವೀರರು ಅಗಣಿತವಾದ ಧನರಾಶಿಯನ್ನೂ, ಅಖಂಡವಾದ ಪ್ರಾಂತಗಳನ್ನೂ ದೊರಕಿಸಿದ ಉದಾಹರಣೆಗಳು ವಿಕ್ರಮಚರಿತ್ರೆಯಲ್ಲಿಯೂ, ಭೋಜಪ್ರಬಂಧದಲ್ಲಿಯೂ ಅನೇಕಾನೇಕವಾಗಿ ತೋರುತ್ತವೆ. ಅತಿಕಠಿಣ ಪ್ರಸಂಗಗಳಲ್ಲಿ ತಮ್ಮ ಪ್ರಾಣವನ್ನು ಕೂಡ ಲೆಕ್ಕಿಸದೆ ರಾಜನಿಷ್ಠೆಯಿಂದ, ಪ್ರತಿಪಕ್ಷಗಳ ಕೂಡ ಹುರಿದುಂಬಿ ಹೋರಾಡಿ, ತಮ್ಮ ವಿಜಯ ಧ್ವಜವನ್ನು ನಿರಾತಂಕವಾಗಿ ಮೆರೆಯಿಸುವ ಶೂರ ಸರದಾರರಿಗೆ, ಪ್ರತಾಪಶಾಲಿಗಳೂ, ಸದ್ಗುಣ ಸಂಪನ್ನರೂ ಆದ ಆಗಿನ ಕಾಲದ ಅರಸರು ತಮ್ಮ ಅರ್ಧರಾಜ್ಯವನ್ನು ಕೊಟ್ಟ ದೃಷ್ಟಾಂತಗಳು ಹಲವುಂಟು. ಆದರೆ ಕಾಲಚಕ್ರಕ್ಕನುಸಾರವಾಗಿ ಸದ್ಯಸ್ಥಿತಿಯು ಭಿನ್ನವಾಗಿ ಹೋಗಿದೆ. ಆಗಿನ ಸ್ಥಿತಿಗೂ, ಈಗಿನ ಸ್ಥಿತಿಗೂ ಮಹದಂತರವಾಗಿದೆ. ಬಹಳ ದೂರೇಕೆ? ಶ್ರೀಮಂತ ಪೇಶವಾಯಿಗಳ ಕಾಲದಲ್ಲಿ ಯಃಕಶ್ಚಿತರಾದ ಎಷ್ಟೋ ಜನರು ಕೆಲಕೆಲ ಸಮಯಗಳಲ್ಲಿ ತಮ್ಮ ತಮ್ಮ ಶೂರತನವನ್ನು ತೋರಿಸಿ ಬೇಕು ಬೇಕಾದ ಜಾಹಗೀರಗಳನ್ನು ಪಡೆದದ್ದು ಎಲ್ಲರಿಗೂ ಗೊತ್ತುಂಟು. ಈಗ ನಾವು ನೋಡುತ್ತಿರುವ ಸಂಸ್ಥಾನಗಳೂ, ದೇಸಗತಿಗಳೂ, ಜಹಾಗೀರಗಳೂ, ವತನವೃತ್ತಿಗಳೂ ಕೆಲ ಕೆಲವು ಮಹತ್ಪ್ರಸಂಗಗಳಲ್ಲಿ ತಮ್ಮ ತಮ್ಮ ವೀರ್ಯಬಲವನ್ನು ತೋರಿಸಿ, ಪೂರ್ವದ ರಾಜರಿಂದ ಪಡೆದಂಥ ಬಹುಮಾನಗಳೇ ಸರಿ.

ಈ ಆಂಗ್ಲಸಾರ್ವಭೌಮರ ಆಳಿಕೆಯಲ್ಲಿಯ ಉಚಿತ ಬಹುಮಾನಗಳ ಕ್ರಮವು ಬೇರೆ ತರದ್ದಾಗಿದೆ. ಅಸಾಧ್ಯವಾದ ಕಠಿಣಪ್ರಸಂಗಗಳಲ್ಲಿ ಕೂಡ ಜಯಶಾಲಿಗಳಾದರೆ ಸರ್. ನಾಯಿಟ್, ಸಿ.ಎಸ್. ರಾವಬಹದ್ದೂರ, ರಾವಸಾಹೇಬ, ಮುಂತಾದ ಪದವಿಗಳಲ್ಲಾವದೊಂದು ಸಿಕ್ಕರೆ ತೀರಿಹೋಯಿತು. ಅವರು ಮಹಾನುಭಾವರಾದರು.

ಅವರ ಐಶ್ವರ್ಯವು ಆಕಾಶಕ್ಕೆ ಮುಟ್ಟಿದಂತಾಯಿತು. ಇಂಥ ಒಣ ಪದವಿಗಾಗಿಯೇ ದೇಶೀಯ ಸರದಾರ ಮನುಷ್ಯರು ಆಯುಷ್ಯವನ್ನೂ, ಬುದ್ಧಿಯನ್ನೂ ಸವಿಸಬೇಕಾಗಿದೆ. ರಾವಬಹದ್ದೂರ ರುದ್ರಗೌಡ ಸಾಹೇಬರ ಜಾಣ್ಮೆಯನ್ನೂ, ಪ್ರೌಢಿಮೆಯನ್ನೂ, ಧೈರ್ಯಸಾಹಸಾದಿಗಳನ್ನೂ ಅವಲೋಕಿಸಿದರೆ ದೇಶೀಯ ಸಾರ್ವಭೌಮರ ಆಳಿಕೆಯಲ್ಲಿ ಇವರು ಇದ್ದದ್ದಾಗಿದ್ದರೆ ಇವರು ತಮ್ಮ ಶೌರ್ಯಸಾಹಸಾದಿ ಸದ್ಗುಣಗಳಿಂದ ಯಾವದೊಂದು ದೊಡ್ಡ ನಾಡಿನ ಒಡೆತನವನ್ನು ಸಂಪಾದಿಸಿ, ರುದ್ರಭೂಪಾಲರೆಂಬ ನಾಮಾಂಕಿತದಿಂದ ರಾಜ್ಯಭಾರಮಾಡಿ ಬಡಜನರಿಗೆ ಕಲ್ಯಾಣಕರರಾಗಿ, ವಿದ್ವಾಂಸರಿಗೆ ಸದಾಶ್ರಯವನ್ನು ಕೊಟ್ಟು ಭೋಜ ವಿಕ್ರಮಾರ್ಕರಂತೆ ಪ್ರಸಿದ್ಧಿಗೆ ಬರುತ್ತಿದ್ದರೆಂದು ನಿಶ್ಚಯವಾಗಿ ಹೇಳಬಹುದು. ಅಂತಹ ಐಶ್ವರ್ಯವೂ, ವೈಭವವೂ, ಗತಭಾಗ್ಯರಾದ ನಮ್ಮ ಭರತವಾಸಿಗಳಿಗೆಲ್ಲಿಂದ ಬರಬೇಕು? ದೀನಳಾದ ಮುದುಕಿಯು ತಾರುಣ್ಯವನ್ನು ನೆನಿಸಿ ನಿರರ್ಥಕವಾಗಿ ವ್ಯಸನಪಡುವಂತೆ ನಾವು ವೃಥಾ ಚಿಂತಿಸಿ ಫಲವಿಲ್ಲ.

ಸಣ್ಣ ಹುಡುಗರ ಮಾತು ನಿಜವಾಗಿರುತ್ತವೆ

ಸಾಹೇಬರು ನಾಸಿಕಕ್ಕೆ ಹೋಗುವಾಗ ವೀರವ್ವನವರೂ, ಗುರುಪಾದವ್ವನವರೂ, ರುದ್ರಾಣಿಯವರು, ಮೊದಲಾದ ಪರಿವಾರದವರೆಲ್ಲರು ವಿಜಾಪುರದಲ್ಲಿಯೇ ಇದ್ದರು. ಇವರೆಲ್ಲರೂ ಸಿನ್ನರಕ್ಕೆ ಹೋಗಿದ್ದ ಸಾಹೇಬರ ಕ್ಷೇಮ ಚಿಂತನೆಯನ್ನು ಮಾಡುತ್ತಿರಲು, ಆಗ ಅವರಿಗೆ ಸಿನ್ನರದಲ್ಲಿ ಭಯಂಕರವಾದ ದಂಗೆಯಾಗಿ ಡಾಕ್ಟರರನ್ನೂ, ಸಾಹೇಬರನ್ನೂ, ಇನ್ನೂ ಎಷ್ಟೋ ಜನ ಸರಕಾರೀ ದೊಡ್ಡ ದೊಡ್ಡ ಅಧಿಕಾರಿಗಳನ್ನು ಹೊಡೆದರೆಂದು ಕರ್ಣೋಪಕರ್ಣವಾಗಿ ಸುದ್ದಿಹತ್ತಿ ಎಲ್ಲರೂ ಪರಮಾವಧಿ ದುಃಖದೊಳಗಾದರು. ಸಿನ್ನರದ ಭಯಂಕರ ಕೋಲಾಹಲವನ್ನು ಎಲ್ಲ ವರ್ತಮಾನ ಪತ್ರಗಳೂ ಜಗತ್ಯಕ್ಕೆ ಸಾರುತ್ತಿದ್ದವು. ಸರಕಾರಿಯ ಮುಖ್ಯ ಮುಖ್ಯ ಅಧಿಕಾರಿಗಳನ್ನೆಲ್ಲ ಠಾರಹೊಡೆದುಬಿಟ್ಟಿರುವರೆಂಬ ಹಾರಸುದ್ದಿಯು ಹರಿಯುತ್ತ, ಸುತ್ತಲೂ ಹರಡಿಕೊಂಡಿತ್ತು. ಇಂಥಿಂಥವರೇ ಕೊಲೆಗೊಳಗಾದರೆಂಬದು ಪ್ರಕಟವಾಗಿದ್ದಿಲ್ಲ. ಯಾವದೊಂದು ಮಹತ್ ಸಂಗತಿಯು ಒಂದಿದ್ದರೆ ಎರಡಾಗುವದು ಜನಜನಿತವಾಗಿದೆ. ಆದರೂ ಈ ಸಿನ್ನರದ ದಂಗೆಯು ಒಳ್ಳೇ ಭಯಂಕರ ಸ್ಥಿತಿಯುಳ್ಳದ್ದಾಗಿತ್ತು." ದೂರಾತ್ ಯುದ್ಧಂ ರಮ್ಯಂ"ಎಂಬಂತೆ ಯುದ್ಧ, ಕಲಹ, ಕೊಲೆ, ದಂಗೆ, ದರೋಡೆಗಳ ಸುದ್ದಿಯು ಹೇಳಲಿಕ್ಕೂ ಕೇಳಲಿಕ್ಕೂ ಚಂದವಾಗಿರುತ್ತದೆ. "ಗುದ್ದುವವನೇನು ಬಲ್ಲ? ಗುದ್ದಿಸಿಕೊಳ್ಳುವವನೇ ಬಲ್ಲ" ಎಂಬ ಗಾದೆಯ ಮಾತಿನಂತೆ ದಂಗೆಯ ಹೃದ್ಭೇದಕ ಧಗಧಗೆಯು ದಂಗೆಯಲ್ಲಿ ಸಿಕ್ಕವರಿಗೇ ತಿಳಿದಿರುವದಲ್ಲದೆ ಮಿಕ್ಕವರಿಗೆ ತಿಳಿಯುವ ಮಾರ್ಗವಿಲ್ಲ. ದಂಗೆಯಲ್ಲಿದ್ದ ಎಲ್ಲ ಆಫೀಸರರ ಮನೆಯವರಿಗೆ ಹ್ಯಾಗೋ!ಏನೋ!ಎಂಥ ದಂಗೆಯೋ ಏನು ಪರಿಣಾಮವೋ ಎಂಬಂತೆ ಆಗಿತ್ತು.

ಈ ಅನಿಷ್ಟ ಸುದ್ದಿಯನ್ನು ಕೇಳಿ ವೀರವ್ವನವರೂ, ಗುರುಪಾದವ್ವನವರೂ ಹಿಂದು ಮುಂದಿನ ನೆನಪು ತೆಗೆತೆಗೆದು ಅಳಹತ್ತಿದರು. ಯಾರು ಎಷ್ಟುರೀತಿಯಿಂದ ಹೇಳಿದರೂ ದುಃಖ ಶಮನವಾಗಲಿಕ್ಕೆ ಮಾರ್ಗವಿದ್ದಿಲ್ಲ. ಸುಕುಮಾರಿ ರುದ್ರಾಣಿಯವರು ಆಗ ನಿದ್ರೆಯನ್ನು ಮಾಡುತ್ತಿದ್ದರು. ಎಲ್ಲರೂ ಪ್ರಳಾಪಿಸುತ್ತಿರುವ ಗೊಂದಲಕ್ಕೆ ನಿದ್ರೆಯಿಂದೆಚ್ಚತ್ತು ರುದ್ರಾಣಿಯವರು, ತಾಯಿಯವರೂ, ಅತ್ತೆವ್ವನವರೂ ಅಳುವದನ್ನು ಕಂಡು "ಅವ್ವಾ, ಅವ್ವಾ! ಏ ಅತ್ತೆವ್ವಾ! ನೀವು ಯಾಕೆ ಅಳುತ್ತೀರಿ" ಎಂದು ಕೇಳಲಾಗಿ ವೀರವ್ವತ್ತಿಯವರು"ನನ್ನ ಮುದ್ದು ಸೊಸೆಯೇ! ಸಿನ್ನರದಲ್ಲಿ ದಂಗೆಯಾಗಿ, ಆ ದಂಗೆಯಲ್ಲಿ ನಿನ್ನ ತಂದೆಯವರೂ, ನನ್ನ ಅಣ್ಣಂದಿರೂ ಆದ ಸಾಹೇಬರನ್ನು ಹೊಡೆದರೆಂಬ ಹಾರಸುದ್ದಿಯನ್ನು ಕೇಳಿ ದುಃಖಿಸುತ್ತೇವೆಂ"ದು ಕಂಬನಿಗಳನ್ನು ಸುರಿಸುತ್ತ ಹೇಳಲಾಗಿ, ಚಿಕ್ಕ ಕುಮಾರಿಯವರು ಬಾಲ ನುಡಿಗಳಿಂದ "ನೀವು ಸುಮ್ಮನೆ ಯಾಕೆ ಅಳುತ್ತೀರಿ? ಅಪ್ಪನು ಆ ದಂಗೆಗಾರರಿಗೆ ಎಂದಿಗಾದರೂ ಅಂಜುವನೇ! ನೀವು ಹುಚ್ಚರೇನು?ಆ ದಂಗೆಗಾರರನ್ನು ನಮ್ಮ ಕಾಶೀಮನು ಕತ್ತಿಯಿಂದ ಹೊಡೆದು

ಹಾಕಿರಬಹುದು. ಅಪ್ಪನಿಗೆ ಏನು ಆಗಿಲ್ಲ. ಅಳಬೇಡಿರಿ! ಅಳಬೇಡಿರಿ" ಎಂದು ದಿಟ್ಟತನದಿಂದ ಹೇಳುವ ಮುದ್ದುಮಗಳ ಮಂಜುಳ ನುಡಿಗಳನ್ನು ಕೇಳಿ, ಅವರಿಗೆ ದುಃಖದಲ್ಲಿ ತುಸು ಆನಂದವಾಯಿತು. ಸಣ್ಣ ಹುಡುಗರ ಮಾತು ನಿಜವಾಗುತ್ತವೆಂದು ಹಿರಿಯರಾಡುವ ಮಾತು ಸುಳ್ಳಲ್ಲ. ಅಂದಂತೆ ದಂಗೆಯಲ್ಲಿ ಸಾಹೇಬರಿಗೆ ಏನೂ ಆಗಿದ್ದಿಲ್ಲ. ಮರುದಿವಸವೇ ಸಾಹೇಬರವರ ಕ್ಷೇಮಪತ್ರವು ಹೋಗಿ ಅವರ ದುಃಖನಿವೃತ್ತಿಯನ್ನು ಮಾಡಿತು. ಅದರಿಂದ ಎಲ್ಲರೂ ಸಂತೋಷಭರಿತರಾದರು. ಅಣ್ಣಂದಿರು ಸುರಕ್ಷಿತವಾಗಿ ಮನೆಗೆ ಬರಲೆಂದು ಶ್ರೀವೀರಭದ್ರದೇವರನ್ನು ಸ್ಮರಿಸಿ, ಅವರು ಬಂದೊಡನೆ ನಿನ್ನ ಅಭಿಷೇಕವನ್ನು ಮಾಡಿಸುತ್ತೇವೆಂದು ಬೇಡಿಕೊಂಡರು. ಅಲ್ಲಿಂದ ಸರ್ವರೂ ಅರಟಾಳಕ್ಕೆ ಬಂದು ಸಾಹೇಬರ ಮಾರ್ಗಪ್ರತೀಕ್ಷೆಯನ್ನು ಮಾಡಹತ್ತಿದರು.

ರಾ.ಬ॥ರುದ್ರಗೌಡರ ವಿಶ್ರಾಂತಿಯ ರಜೆಯೂ ಶ್ರೀಮಂತರ ಸನ್ಮಾನವೂ

ಮೂರು ತಿಂಗಳ ರಜೆ ದೊರೆತ ಕೂಡಲೆ ಜನ್ಮಸ್ಥಾನವಾದ ಅರಟಾಳಕ್ಕೆ ಸೊಲ್ಲಾಪುರ ಮಾರ್ಗವಾಗಿ ಹೊರಟರು. ಆಗ ಸೊಲ್ಲಾಪುರದಲ್ಲಿ ಪ್ರಸಿದ್ಧ ವ್ಯಾಪಾರಸ್ತರೂ, ಮತಾಭಿಮಾನಿಗಳೂ, ವಿದ್ಯಾಭಿಮಾನಿಗಳೂ ಆದ ಮಲ್ಲಪ್ಪಣ್ಣನವರ ಮಕ್ಕಳ ಲಗ್ನ ಸಮಾರಂಭವು ನಡೆದಿತ್ತು. ಮಲ್ಲಪ್ಪಣ್ಣನವರ ಘನತೆಯನ್ನೂ, ಸೌಜನ್ಯವನ್ನೂ, ದೊಡ್ಡಸ್ತಿಕೆಯನ್ನೂ, ಸಾಮಾಜಿಕ ಹಿತಬುದ್ಧಿಯನ್ನೂ, ತಿಳಿದು ಸರಕಾರದವರು ಅವರಿಗೆ ರಾವಸಾಹೇಬ ಎಂಬ ಬಹುಮಾನದ ಕಿತಾಬು ಕೊಟ್ಟಿರುವರು. ಇವರು ರಾ.ಬ॥ರುದ್ರಗೌಡರ ಆಗಮನವನ್ನು ತಿಳಿದು ಸಂತೋಷಭರಿತರಾಗಿ ರಾವಬಹದ್ದೂರವರ ಸ್ವಾಗತವನ್ನು ಸರ್ವ ಸಮಾರಂಭದಿಂದ ಮಾಡಿ, ತಾವು ಇಲ್ಲಿಗೆ ಆಕಸ್ಮಿಕವಾಗಿ ಬಂದದ್ದು, ಭಾಗ್ಯೋದಯವಾದಂತಾಯಿತೆಂತಲೂ, ತಮ್ಮ ಆಗಮನದಿಂದ ಇಲ್ಲಿಯ ವೀರಶೈವ ಜನಾಂಗಕ್ಕೆಲ್ಲ ಮಹದಾನಂದವಾಗಿರುವದೆಂತಲೂ, ನಮ್ಮ ಮನೆಯಲ್ಲಿ ನಡೆದ ಲಗ್ನ ಸಮಾರಂಭವನ್ನು ಸಾಂಗಮಾಡಿ, ತೆರಳಬಹುದೆಂದೂ ವಿಜ್ಞಾಪಿಸಿಕೊಳ್ಳಲು, ಅವರ ಬಿನ್ನಹವನ್ನು ಮಾನ್ಯಮಾಡಿ ಅಲ್ಲಿ ನಿಂತು, ಅನಂತರ ಮಹೋತ್ಸವದಿಂದ ನೆರವೇರಿದ ಆ ಲಗ್ನಸಮಾರಂಭವನ್ನಲಂಕರಿಸಿ, ರಾ.ಸಾ॥ಮಲ್ಲಪ್ಪಣ್ಣನವರ ಮನ್ನಣೆಯನ್ನು ಹೊಂದಿ, ಸಂತೋಷದಿಂದ ಅವರ ನಿರೂಪ ತಕ್ಕೊಂಡು, ಆ ಸೊನ್ನಲಾಪುರದ (ಸೊಲ್ಲಾಪುರದ) ಶ್ರೀ ಸಿದ್ಧರಾಮೇಶ್ವರ ದೇವರ ದಿವ್ಯದರ್ಶನ ಲಾಭವನ್ನು ಹೊಂದಿ, ಅಲ್ಲಿಂದ ಹೊರಟು ವಿಜಾಪುರ, ಬಾದಾಮಿ, ಕೊಣ್ಣೂರಗಳ ಮೇಲಿಂದ ಶಿರಸಂಗಿಗೆ ಬಂದರು. ಶಿರಸಂಗಿಯ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರು ರಾವಬಹದ್ದೂರವರನ್ನು ಕಂಡುಕೊಂಡು, ಸಿನ್ನರ ದಂಗೆಯ ವೃತ್ತಾಂತವನ್ನೂ, ಅದರಲ್ಲಿ ಸಾಹೇಬರವರು ತೋರಿಸಿದ ಚತುರೋಪಾಯಗಳ ಜಾಣ್ಮೆಯನ್ನೂ, ಅದರಿಂದ ಸರಕಾರದವರಿಂದಾದ ಶ್ಲಾಘನೆಯನ್ನೂ ಕೇಳಿ ಸಂತುಷ್ಟರಾಗಿ, ರಾವಬಹದ್ದೂರವರನ್ನು ಮೃಷ್ಟಾನ್ನಭೋಜನೋತ್ಸವಗಳಿಂದ ಸಂತೃಪ್ತಿ ಪಡಿಸಿ ಅಪ್ಪಣೆಕೊಟ್ಟರು.

ಶಿರಸಂಗಿಯಿಂದ ಹೊರಟು ಮಾರ್ಗದಲ್ಲಿ ನರಗುಂದ, ನವಲಗುಂದ ಸೆಟ್ಟರ್ ಮೇಜವಾನಿಗಳನ್ನು ಸ್ವೀಕರಿಸಿ, ಅವರೆಲ್ಲರು ಆದರಪೂರ್ವಕ ಮಾಡಿದ ಸ್ವಾಗತವನ್ನೂ, ಸಮಾರಂಭವನ್ನೂ ನೋಡಿ ಧನ್ಯರಾಗಿ, ಅಲ್ಲಿಂದ ಹೊರಟು ಬರುತ್ತಿರಲು ನವಲಗುಂದ ತಾಲೂಕ ನಲವಡಿ ಕೃಷ್ಣಗೌಡರು ಬಂದು, "ದೊರೆಗಳೇ, ತಮ್ಮ ದಿವ್ಯಾಗಮನವು ನಮಗೆ ಅತುಲಾನಂದವನ್ನೀಯಿತೆಂತಲೂ, ನಮ್ಮ ವಿಜ್ಞಪ್ತಿಯನ್ನು ಲಾಲಿಸಿ, ನಮ್ಮ ಮೇಜವಾನಿಯನ್ನು ಕೈಕೊಂಡು, ಮನೆಯಲ್ಲಿ ನಡೆದ ಲಗ್ನ ಸಮಾರಂಭವನ್ನಲಂಕರಿಸಿ ನಮ್ಮ ಕಾಂಕ್ಷೆಯನ್ನು ಪೂರ್ಣ ಮಾಡಬೇಕೆಂತ"ಲೂ ಹೇಳಿದ್ದಕ್ಕೆ ರಾವಬಹದ್ದೂರವರು ಸಮ್ಮತಿಸಿ, ಅವರ ಪುರಶೃಂಗಾರವನ್ನೂ, ಬೈಠಕಿ, ನಾಚು, ಮದ್ದು ಮುಂತಾದ ಉತ್ಸವಗಳನ್ನೂ ನೋಡಿ ಷಡ್ರಸಾನ್ನವನ್ನುಂಡು ಸಂತೋಷಭರಿತರಾಗಿ, ಅವರ ಅಪ್ಪಣೆಯೊಂದಿಗೆ ಹೊರಟು ಹುಬ್ಬಳ್ಳಿಗೆ ಬಂದರು. ಹುಬ್ಬಳ್ಳಿಯ ವೀರಶೈವ ಪ್ರಮುಖರಾದ ಸೆಟ್ಟಿ ಸಾವಕಾರ

ಸಮಸ್ತ ದೈವದವರು ಇವರ ಸ್ವಾಗತ ಸಮಾರಂಭವನ್ನು ಮೊದಲಿನಕಿಂತಲು ಮಿಗಿಲಾಗಿ ಮಾಡಿ, ಪರಿಪರಿಯ ಪಕ್ವಾನ್ನಗಳ ಭೋಜನದಿಂದಲೂ, ಆಟ, ನೋಟ, ನಾಚು ಮುಂತಾದ ಮಹೋತ್ಸವಗಳಿಂದಲೂ ರಾವಬಹದ್ದೂರವರನ್ನು ಸಂತೋಷಪಡಿಸಿದರು. ಮತ್ತು ತಾವು ಸಿನ್ನರದ ದಂಗೆಯಲ್ಲಿ ಪಾರಾಗಿ ಬಂದದ್ದು ನಮ್ಮ ವೀರಶೈವ ಸಮಾಜದ ಸುಕೃತವೆಂತಲೂ ಮತ್ತು ತಮಗೆ ಸರಕಾರದಿಂದ ದೊರೆತ ಶ್ಲಾಘನೆಯು ನಮ್ಮೆಲ್ಲರ ಏಳ್ಗೆಗೆ ಕಾರಣವೆಂತಲೂ, ರಾವಬಹದ್ದೂರವರನ್ನು ಬಹಳೇ ಕೊಂಡಾಡಿದರು.

ಈ ಪ್ರಕಾರ ರಾವಬಹದ್ದೂರ ರುದ್ರಗೌಡರು ಸಿನ್ನರದ ಮಹತ್ಪ್ರಸಂಗವನ್ನು ಗೆದ್ದು, ಅಕ್ಷಯವಾದ ಕೀರ್ತಿಯನ್ನು ಸಂಪಾದಿಸಿ, ಮಾರ್ಗದಲ್ಲಿ ಮಹಾಮಹಾ ಮಹಾನುಭಾವರಿಂದಲೂ, ಶ್ರೀಮಂತರುಗಳಿಂದಲೂ ಮರ್ಯಾದೆಯನ್ನು ಹೊಂದಿ, ಸಂತೋಷದಿಂದ ಹುಬ್ಬಳ್ಳಿಯ ವರೆಗೆ ಸಾಹೇಬರವರು ಸುರಕ್ಷಿತವಾಗಿ ಬಂದಿರುವರೆಂಬ ವಾರ್ತೆಯನ್ನು ಕೇಳಿ, ಮನೆಯವರೆಲ್ಲರು ಸಂತೋಷಭರಿತರಾದರು. ಹುಬ್ಬಳ್ಳಿಯಿಂದ ಸಾಹೇಬರು ಅರಟಾಳಕ್ಕೆ ಬರುತ್ತಲೇ ಎಲ್ಲರ ಆನಂದಕ್ಕೆ ಅಳೆಯಿಲ್ಲದಾಯಿತು. ರಾ.ಬ॥ರುದ್ರಗೌಡರು ಮುದ್ದು ಮಗಳಾದ ರುದ್ರಾಣಿಯವರನ್ನೆತ್ತಿಕೊಂಡು "ಮಗುವೆ! ನಿಮ್ಮ ಅಮ್ಮನವರ ಹಾಗೂ ಅಜ್ಜನವರ ಪುಣ್ಯಬಲದಿಂದ ಹಾಗೂ ಶ್ರೀ ವೀರಭದ್ರನ ಕರಣದಿಂದ ಪಾರಾಗಿ, ನಿಮ್ಮೆಲ್ಲರನ್ನು ನೋಡುವ ಈ ಸುದಿನವು ನನಗೆ ಪ್ರಾಪ್ತವಾಯಿತೆಂದು" ಸರ್ವ ವೃತ್ತಾಂತವನ್ನು ಸಂತೋಷದಿಂದ ಹೇಳಿದರು.

ರಾ.ಬ॥ರವರು ರಜೆಯನ್ನು ಅನುಭೋಗಿಸುತ್ತ ಅರಟಾಳದಲ್ಲಿ ವಿಶ್ರಾಂತಿಯನ್ನು ಹೊಂದುತ್ತಿರಲು, ಅಲ್ಲಿ ಸರಕಾರದಲ್ಲಿ ಆ ಸಿನ್ನರ ದಂಗೆಯ ಪ್ರಕರಣವು ನಡೆದು, ದಂಗೆಗಾರರನ್ನು ಹಿಡಿಯುತ್ತಿದ್ದರು. ಆ ದಂಗೆಯ ಪ್ರಕರಣದ ವಿಚಾರವು ನಾಸಿಕ ಜಜ್ಜಕೋರ್ಟಿನಲ್ಲಿ ನಡೆದಿತ್ತು. ಸಂಶಯದಿಂದ ಎಷ್ಟೋ ಜನರನ್ನು ಹಿಡಿದಿದ್ದರು. ಆ ದಂಗೆಯ ಕಾಲಕ್ಕೆ ರಾ.ಬ॥ರುದ್ರಗೌಡರೂ, ಕೋಚಮನ್ ಕಾಶೀಮನೂ ಪ್ರತ್ಯಕ್ಷವಾಗಿ ಇದ್ದದರಿಂದ ಹಿಡಿಯಲ್ಪಟ್ಟ ದಂಗೆಗಾರರ ಗುರ್ತು ಹಿಡಿಯಲಿಕ್ಕೂ ದಂಗೆಯ ಪೂರ್ವಾಪರ ವೃತ್ತಾಂತವನ್ನು ಕೇಳಲಿಕ್ಕೂ ಇವರಿಬ್ಬರಿಗೂ ಸಾಕ್ಷಿಯ ಶಮನಸುಗಳು ಬಂದವು. ಶಮನಸಿನ ಪ್ರಕಾರ ರಾವಬಹದ್ದೂರವರು ಕಾಶೀಮನನ್ನು ಕರಕೊಂಡು, ಅರಟಾಳದಿಂದ ಪುನಃ ನಾಶಿಕಕ್ಕೆ ಹೋಗಿ, ಸೆಶನ ಕೋರ್ಟಿನಲ್ಲಿ ತಮ್ಮ ತಮ್ಮ ಸಾಕ್ಷಿಗಳನ್ನು ಕೊಟ್ಟರು. ಮತ್ತು ದಂಗೆಯ ಕಾಲದಲ್ಲಿ ನೋಡಿದ ಕೆಲಜನ ದಂಗೆಗಾರರ ಗುರ್ತುಗಳೂ ಹೇಳಲ್ಪಟ್ಟವು. ಮುಂದೆ ದಂಗೆಯ ವಿಚಾರವು ಪೂರ್ಣವಾಗಿ ನಡೆದು ಅಪರಾಧಿಗಳಾದ ನೂರಾರು ಜನರಿಗೆ ಕಡುತರವಾದ ಶಿಕ್ಷೆಯಾಯಿತು. ಸಾಕ್ಷಿಗಳಾದ ತರುವಾಯ ಸಾ.ಬ॥ರವರು ನಾಶಿಕದಿಂದ ಹೊರಟು, ಗದುಗಿಗೆ ಬಂದು ಶ್ರೀ ಮಜ್ಜಗದ್ಗುರುಗಳಾದ ತೋಂಟದಾರ್ಯರ ಪಾದದರ್ಶನವನ್ನು ಹೊಂದಿ, ಅಲ್ಲಿ ಮೊದಲು ತಮ್ಮಿಂದ ಸ್ಥಾಪಿತವಾದ ಸಂಸ್ಕೃತ ಪಾಠಶಾಲೆಯನ್ನು ನೋಡಿ, ಆ ಶಾಲೆಯ ಪರೀಕ್ಷೆಯನ್ನು ತಕ್ಕೊಂಡು, ವಿದ್ಯಾರ್ಥಿಗಳ ಜಾಣ್ಮೆಯನ್ನು ಕಂಡು, ನಾವು ಹಚ್ಚಿದ ವಿದ್ಯಾವೃಕ್ಷದ ಫಲಗಳನ್ನು ನಮ್ಮ ಕಣ್ಣುಗಳು ಕಂಡವೆಂದು ಸಂತೋಷಿಸಿ, ಪರಮ ಸ್ನೇಹಿತರಾದ ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪಣ್ಣನವರು ಈ ಸುದಿನಗಳನ್ನು ನೋಡಲಿಲ್ಲೆಂದು ಮನಸಿನಲ್ಲಿ ಅವರನ್ನು ನೆನಿಸಿ, ಮರುಗಿದರು. ಆ ಗದುಗಿನ ಪಾಠಶಾಲೆಯಲ್ಲಿ ಕಲಿತು ಹೆಚ್ಚಿನ ಅಭ್ಯಾಸವನ್ನು ಮಾಡಲಿಕ್ಕೆ ಕೆಲ ಕೆಲ ವಿದ್ಯಾರ್ಥಿಗಳು ಕಾಶಿಗೆ ಹೋಗಹತ್ತಿದರು. ಇದನ್ನು ಕಂಡು ರಾವಬಹದ್ದೂರವರು, ನಮ್ಮ ವೀರಶೈವರ ವಿದ್ಯಾಧ್ಯಯನಕ್ಕಾಗಿ ನಾವು ಮಾಡಿದ ಶ್ರಮವು ಸಾರ್ಥಕವಾಯಿತೆಂದು ಆನಂದಿಸಿದರು. ಮತ್ತು ಇವರು ಲಿಂಗಾಯತರ ಫಂಡಿನ ಸಹಾಯದಿಂದ ಪ್ರತಿವರ್ಷ ಇಬ್ಬರು ವಿದ್ಯಾರ್ಥಿಗಳನ್ನು, ಸಂಸ್ಕೃತವಿದ್ಯಾಧ್ಯಯನಕ್ಕಾಗಿ ಕಾಶಿಗೆ ಕಳುಹಿಸುವ

ಏರ್ಪಾಡು ಮಾಡಿದಂದಿನಿಂದ ವರ್ಷಾನುವರ್ಷ ಎಷ್ಟೋ ವಿದ್ಯಾರ್ಥಿಗಳು ಹೋಗಿ, ವಿದ್ಯಾಧ್ಯಯನ ಮಾಡಿ ವಿದ್ವಾಂಸರಾದರು. ಈ ಫಂಡಿನ ಸಹಾಯದಿಂದಲೇ ಕಾಶಿಯಲ್ಲಿ ಕಲಿತು ಗದುಗಿನ ಮಲ್ಲಿಕಾರ್ಜುನಶಾಸ್ತ್ರಿಗಳು ಬಹು ಪ್ರಖ್ಯಾತರಾದರು. ಕೈಲಾಸವಾಸಿ ನೀಲಕಂಠಶಾಸ್ತ್ರಿಗಳಾದರೂ ಅಲ್ಲಿಯೇ ಕಲಿತು, ವ್ಯಾಕರಣದಲ್ಲಿ ದಿಗಂತಕೀರ್ತಿಯನ್ನು ಪಡೆದರು. ಮೊದಲು ನಮ್ಮ ಜನರಲ್ಲಿ ಸಂಸ್ಕೃತದ ಗಂಧವೇ ಇದ್ದಿದ್ದಿಲ್ಲ. ನಮ್ಮ ಧರ್ಮಶಾಸ್ತ್ರಗಳೆಲ್ಲ ಸಂಸ್ಕೃತದಲ್ಲಿದ್ದು ಅದರ ಮರ್ಮವನ್ನು ತಿಳಿದು ಕೊಳ್ಳಲಿಕ್ಕೆ ನಮಗೆ ತಿಲಮಾತ್ರ ಶಕ್ತಿ ಇದ್ದಿದ್ದಿಲ್ಲ. ರಾವಬಹದ್ದೂರರವರು, ವಿದ್ಯಾರ್ಜನೆಗಾಗಿ ಮಾಡಿದ ಈ ಏರ್ಪಾಡುಗಳಿಂದ ಮಹಾ ವಿದ್ವಾನರಾಗಹತ್ತಿದರು. ನಮ್ಮ ಮತದ ಜ್ಞಾನವು ನಮಗೆ ಮೆಲ್ಲಮೆಲ್ಲನೆ ಆಗಹತ್ತಿತು. ಕತ್ತಲೆಕೋಣೆಗಳಲ್ಲಿ ಧೂಳಿಯಿಂದ ಮುಸುಕಿ ಮೂಲೆ ಹಿಡಿದು ಬಿದ್ದಂಥ ಗ್ರಂಥಗಳು ಬೈಲಿಗೆ ಬರಹತ್ತಿದವು. ಆ ಗ್ರಂಥಗಳ ಜ್ಞಾನವು ನಮಗೆ ಸಾಧಾರಣವಾಗಿ ಆಗಹತ್ತಿತು. ಆ ಗ್ರಂಥಗಳ ಭಾಷೆಗಳು ಪ್ರಕಟವಾಗಹತ್ತಿದವು. ಈ ಗದಗಿನ ಪಾಠಶಾಲೆಯ ಅನುಕರಣವನ್ನು ಮಾಡಿ ಮುಂದೆ ಧಾರವಾಡ, ಹುಬ್ಬಳ್ಳಿ, ಹಾವೇರಿ, ಬ್ಯಾಡಗಿ, ಕಿತ್ತೂರ ಮುಂತಾದ ದೊಡ್ಡ ದೊಡ್ಡ ಸ್ಥಳಗಳಲ್ಲಿ ಅಲ್ಲಲ್ಲಿಗೆ ಸಂಸ್ಕೃತ ಪಾಠಶಾಲೆಗಳೇರ್ಪಟ್ಟು, ಆ ದೇವನಗರೀ ಭಾಷೆಯ ಜ್ಞಾನವು ಕೆಲವಂಶದಿಂದಾದರೂ ನಮಗೆ ಆಗಹತ್ತಿತು. ಸಂಸ್ಕೃತ ಮತ್ತು ಆಂಗ್ಲ ವಿದ್ಯಾವಿಹೀನರಾದ ನಾವು ಪರಮತೀಯರಿಂದ ತಿರಸ್ಕೃತರಾಗಿ ಅಧೋಮುಖರಾಗಿರುತ್ತಿರುವ ಕಾಲವು ರಾ.ಬ॥ರುದ್ರಗೌಡರ ಪ್ರಭಾವದಿಂದಲೂ, ಏರ್ಪಾಡಿನಿಂದಲೂ ಕಳೆದು ದೂರಾಯಿತು. ಸಭೆಯಲ್ಲಿ ಮೌನವ್ರತಧಾರಣ ಮಾಡುತ್ತಿದ್ದ ವೀರಶೈವಶಾಸ್ತ್ರಿಗಳು ಇವರ ಕಾಲದಿಂದಿತ್ತು ತಲೆಯೆತ್ತಿ ತಿರುಗಾಡಹತ್ತಿದರು. ಜನನ, ಲಿಂಗಧಾರಣ, ದೀಕ್ಷೆ, ವಿವಾಹ ಮುಂತಾದ ವಿಧಿಗಳೆಲ್ಲ ಈಗ ಎಲ್ಲೆಡೆಯಲ್ಲಿಯೂ ವಿಧಾನೋಕ್ತವಾಗಿ ನಡೆಯಹತ್ತಿದವು. ಈ ಪ್ರಕಾರ ಅನೇಕ ತರವಾಗಿ ನಮ್ಮ ವೀರಶೈವ ಜನಾಂಗಕ್ಕೆ ಮಾಡಿದ ರಾವಬಹದ್ದೂರರವರ ಉಪಕೃತಿಯನ್ನು ನಾವು ಜನ್ಮಜನ್ಮಾಂತರ ತೀರಿಸಿದರೂ ತೀರದು. ಮತ್ತು ವೀರಶೈವರ ವಿದ್ಯಾಭಿವೃದ್ಧಿಗಾಗಿ ತನುಮನಧನಗಳನ್ನು ಸೂರೆಮಾಡುತ್ತಿದ್ದ ಇವರ ನಿಷ್ಕಲಂಕವಾದ ಆತ್ಮವನ್ನು ಎಷ್ಟು ಹೊಗಳಿದರೂ ತೀರದು.

ರಾವಬಹದ್ದೂರರವರು ಸರ್ವಜನವಂದ್ಯರಾಗಿ ಗದುಗಿನಲ್ಲಿದ್ದಾಗ್ಗೆ ದಕ್ಷಿಣಭಾಗದ ಕಮೀಶನರರಾದ ಮೆ॥ಉಂಚೆಸ್ಟರ ಸಾಹೇಬ ಬಹದ್ದೂರರವರು ಮೆ॥ಪಾನಸೆ ಕಲೇಕ್ಟರ ಸಾಹೇಬರವರೊಂದು ಪ್ರಕರಣವನ್ನು ವಿಚಾರಿಸುವದಕ್ಕಾಗಿ ವಿಜಾಪುರಕ್ಕೆ ಹೊರಟಿರಲು, ಗದಗ ಸ್ಟೇಶನಿನಲ್ಲಿ ಭೆಟ್ಟಿಯಾದ ಗದುಗಿನ ಆಕ್ಟಿಂಗ ಮಾಮಲೇದಾರ ರಾ.ಸಾ॥ವೆಂಕಟೇಶ ಗೋವಿಂದ ಬಾಗಲಕೋಟ ಇವರನ್ನು "ಅರಟಾಳ ಸಾಹೇಬರು ಬೆಳಗಾವಿಗೆ ಹೋದರೇನು?" ಎಂಬದಾಗಿ ಮೆ॥ಉಂಚೆಸ್ಟರ ಸಾಹೇಬರು ಕೇಳಿದ್ದಕ್ಕೆ "ರಾವಬಹದ್ದೂರರವರು ಇನ್ನೂ ಹೋಗಿಲ್ಲ. ಇಲ್ಲಿಯೇ ಇರುವರೆಂದು" ಮಾಮಲೇದಾರರು ಹೇಳಿದರು. ಮುಂದೆ ಹಾಗೆಯೇ ಮೆ॥ ಕಮಿಶನರ ಸಾಹೇಬ ಬಹದ್ದೂರರವರು ವಿಜಾಪುರಕ್ಕೆ ಹೋಗಲು, ಮಾಮಲೇದಾರರು ಸ್ಟೇಶನದಿಂದ ಬಂದು ಅರಟಾಳ ಸಾಹೇಬರಿಗೆ ಭೆಟ್ಟಿಯಾಗಿ ಮೆ॥ ಉಂಚೆಸ್ಟರ ಸಾಹೇಬರವರು ಕೇಳಿದ್ದನ್ನು ತಿಳಿಸಿದರು. ಅಷ್ಟರ ಮೇಲಿಂದಲೇ ಇವರು ತಮಗೆ ಬೆಳಗಾವಿಗೆ ವರ್ಗವಾಗಿರಬಹುದೆಂಬದಾಗಿ ಉಹಿಸಿದರು. ಮುಂದೆ ಇವರ ಊಹೆಯೇ ನಿಜವಾಯಿತು.

ರಾವಬಹದ್ದೂರರವರ ತರ್ಕವು ವಿಚಿತ್ರವಾಗಿತ್ತು. ಯಾವದೊಂದು ಮುಂದೆ ವರ್ತಿಸುವ ಸಂಗತಿಯ ಧೋರಣವನ್ನು ಇವರು ಮುಂದಾಗಳೇ ಕಟ್ಟುವರು. ಮುಂದೆ ಅದು ಇವರ ಧೋರಣದಂತೆ ಆಗುವದರಲ್ಲಿ ಬಹುಶಃ ತಪ್ಪುತ್ತಿದ್ದಿಲ್ಲ. ಯಾರಾದರೂ ಇವರ ಭೆಟ್ಟಿಗಾಗಿ ಬಂದರೆ, ಇವರು ಇಂಥ ಕೆಲಸಕ್ಕೇ ಬಂದಿರುತ್ತಾರೆಂದು

ಮನಸಿನಲ್ಲಿ ತಿಳಿಯುವದು. ಅಥವಾ ನಂಬಿಗಸ್ತರಾದ ಸಜ್ಜನರಾರಾದರು ಹತ್ತರ ಇದ್ದರೆ, ಅವರಿಗೆ ಈ ಮನುಷ್ಯನು ಇದೇ ಪ್ರಸಂಗಕ್ಕಾಗಿ ಬರುವನೆಂಬದಾಗಿ ಮುಂದಾಗಿಯೇ ಹೇಳಿರುವರು. ಅವರು ಬಂದ ಕೂಡಲೆ ಅದೇ ಪ್ರಸ್ತಾಪವನ್ನು ತೆಗೆಯಲಾಗಿ, ಬಹಳೇ ಚಮತ್ಕಾರವಾಗುವದು. ಇವರ ಆಶ್ರಯದಲ್ಲಿ ಯಾವಾಗಲೂ ವಿದ್ವಾಂಸರೂ, ಕವಿಗಳೂ, ಗವಯಿಗಳೂ, ಸಜ್ಜನರಾದ ಜಂಗಮರೂ ಇರುತ್ತಿದ್ದರು. ಇವರು ವಿದ್ಯಾಭಿಮಾನಿಗಳಿಗೆ ಜಾತಿಭೇದವಿಲ್ಲದೆ ಬಹಳೇ ಆಶ್ರಯ ಕೊಡುವರು. ಆಶ್ರಿತ ಜನಾಂಗಕ್ಕೆಲ್ಲ ಇವರ ತರ್ಕಗಳೂ, ವಿಚಿತ್ರ ಕಾರ್ಯಶಕ್ತಿಗಳೂ, ಆಗಾಗ್ಗೆ ಅನುಭವಕ್ಕೆ ಬಂದು ಅವರು, ಬಹಳೇ ವಿಸ್ಮಿತರಾಗುತ್ತಿದ್ದರು. ಇವರ ನ್ಯಾಯಾಸನದ ಮುಂದೆ ಯಾವದೊಂದು ಪ್ರಕರಣವು ನಿರ್ಣಯಕ್ಕೆ ಬಂದಕೂಡಲೆ ಅದರ ನಿಜವೃತ್ತಾಂತವನ್ನು ಆಗಲೇ ಹೊರಡಿಸಿ ಬಿಡುವರು. ಇಂಥ ಸತ್ಯ ನಿರ್ಣಯವನ್ನು ಮಾಡುವ ಪ್ರವೀಣತೆಯು ದೇವರು ಇವರಿಗೆ ಕೊಟ್ಟ ಒಂದು ಅಸಾಧಾರಣವಾದ ಬುದ್ಧಿಶಕ್ತಿಯಲ್ಲದೆ, ಕಲಿತರೆ ಬರುವ ವಿಷಯವಲ್ಲ. ಇವರ ಶೋಧದೃಷ್ಟಿಯ ನಿರ್ಣಯಗಳೂ, ವಿಚಾರಗಳೂ ಇನ್ನೂ ಮುಂದೆ ಬರುವವಿದ್ದ ಮೂಲಕ ಇಲ್ಲಿ ಅವನ್ನು ಬೆಳಿಸುವದಿಲ್ಲ.

ರಾ.ಬ॥ರುದ್ರಗೌಡು ಗದುಗಿನ ವೀರಶೈವ ಮಂಡಳಿಗೆಲ್ಲ ಪ್ರೀತರಾಗಿ, ಜಗದ್ಗುರು ಶ್ರೀ ತೋಂಟದಾರ್ಯರ ಆಶೀರ್ವಾದಗಳನ್ನು ಪಡೆದು, ಅರಟಾಳಕ್ಕೆ ಹೋದಮೇಲೆ, ಇವರಿಗೆ ನಾಸಿಕ ಜಿಲ್ಲೆಯಿಂದ ಬೆಳಗಾವ ಜಿಲ್ಲೆಗೆ ವರ್ಗವಾದದ್ದರ ಖಾಸಿಗೀ ಗ್ಯಾಝೀಟ ಬಂತು. ಸಾಹೇಬರು ಮೊದಲೇ ಮಾಡಿದ ತರ್ಕವು ನಿಜವಾಯಿತು. ಬೆಳಗಾವಿಗೆ ತಮಗೆ ವರ್ಗವಾದದ್ದನ್ನು ತಿಳಿದು ಸಾಹೇಬರು ಸಂತೋಷಪಟ್ಟರು. ಉಳಿದ ರಜೆಯ ದಿವಸಗಳು ಅರಟಾಳದಲ್ಲಿಯೇ ಸಂತೋಷದಿಂದ ಹೋಗಹತ್ತಿದವು. ತಮ್ಮ ಕ್ಷೇಮಚಿಂತನೆಗಾಗಿ ತಂಗಿಯವರಾದ ವೀರವ್ವನವರು ಹಿಂದೆ ಬೇಡಿಕೊಂಡಿದ್ದ ಶ್ರೀ ವೀರಭದ್ರದೇವರ ಅಭಿಷೇಕವನ್ನು ವಿಧಾನೋಕ್ತವಾಗಿ ಮಾಡಿಸಿ, ಅನೇಕ ಗಣಂಗಳನ್ನೂ, ಆಪ್ತೇಷ್ಟರನ್ನೂ ಮೃಷ್ಟಾನ್ನಭೋಜನಾದಿಗಳಿಂದ ಸಂತೃಪ್ತಿ ಪಡಿಸಿ, ವೀರವ್ವನವರ ಹರಕೆಯನ್ನು ಯಥೋಚಿತವಾಗಿ ಪೂರ್ಣಮಾಡಿಸಿ, ಎಲ್ಲರನ್ನೂ ಸಂತೋಷಗೊಳಿಸಿದರು. ಅರಟಾಳದಲ್ಲಿರುವಾಗ್ಗೆ ಇವರ ದರ್ಶನವನ್ನಿಚ್ಛಿಸಿ ಎಷ್ಟೋ ಜನ ಆಪ್ತೇಷ್ಟರರೂ, ಸ್ನೇಹಿತರೂ, ಸಂಸ್ಥಾನಿಕರೂ, ಪಂಡಿತರೂ, ಅಧಿಕಾರಿಗಳೂ ತೆರಪಿಲ್ಲದೆ ಬಂದು, ಇವರ ಭೆಟ್ಟಿಯನ್ನು ತಕ್ಕೊಂಡು, ಮೃಷ್ಟಾನ್ನವನ್ನುಂಡು ಸಂತೋಷಭರಿತರಾಗಿ ಹೋಗುತ್ತಿದ್ದರು. ಸಾರಾಂಶ: ಸನ್ ೧೯೦೮ನೇ ಇಸವಿಯ ಮೇ-ಜೂನ-ಜುಲೈ ಈ ಮೂರು ತಿಂಗಳುಗಳ ವಿಶ್ರಾಂತಿಯ ರಜೆಯು ಸಮಾರಂಭದಿಂದಲೂ, ಸಂತೋಷದಿಂದಲೂ ಕಳೆದು ಹೋಯಿತು.

❖❖

೧೦ನೇ ಭಾಗ

ರಾ.ಬ॥ರುದ್ರಗೌಡರು ಬೆಳಗಾವ ಜಿಲ್ಲೆಯ ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರರಾದದ್ದು

ಮುಂದೆ ರಾವಬಹದ್ದೂರ ರುದ್ರಗೌಡರು ಕೆಲಸದ ಮೇಲೆ ಹಾಜರಾಗುವದಕ್ಕೆ ಅರಟಾಳದಿಂದ ಬೆಳಗಾವಿಗೆ ಹೊರಟರು. ಬರುವಾಗ್ಗೆ ಮಾರ್ಗದಲ್ಲಿ ವೀರವ್ವನವರ ಪತಿಗೃಹವಾದ ತಬಕದ ಹೊನ್ನೀಹಳ್ಳಿಯ ಗೌಡರ ಮೇಜವಾನಿಯು ಬರಲು ನಾಗರಚೌತಿಯ ದಿವಸ ಅಲ್ಲಿಗೆ ಹೋಗಿ, ಅವರ ಮೇಜವಾನಿಯಿಂದ ಸಂತೃಪ್ತರಾಗಿ, ಅವರೆಲ್ಲರನ್ನು ಸಂತೋಷಗೊಳಿಸಿದ ನಂತರ ಕಲಘಟಗೀ ತಾಲೂಕ ಮಡಕೀ ಹೊನ್ನೀಹಳ್ಳಿಯ ಸಂಗಯ್ಯ ಬಿನ್ನ ಕಲ್ಲಯ್ಯನವರು "ನಮ್ಮ ಊರತನಕ ದಯಮಾಡಿಸಿ, ಎಲ್ಲರಂತೆ ನಮ್ಮೆಲ್ಲರನ್ನೂ ಸಂತೋಷಗೊಳಿಸಬೇಕೆಂ"ದು ಹೇಳಿಕೊಳ್ಳಲು, ನಾಗರಪಂಚಮಿಯ ದಿವಸ ಮಡಿಕೀಹೊನ್ನೀಹಳ್ಳಿಗೆ ಹೋಗಿ ಅವರ ಮೇಜವಾನಿಯಿಂದ ಆನಂದ ಹೊಂದಿ, ಅಲ್ಲಿಂದ ಹೊರಟು ಧಾರವಾಡಕ್ಕೆ ಬಂದು, ಅಲ್ಲಿಯೂ ವಿಭೂತಿ ಹುಚ್ಚಯ್ಯನವರ ಮೇಜವಾನಿಯಿಂದ ಸಂತೋಷಭರಿತರಾಗಿ, ಅಲ್ಲೊಂದು ದಿವಸವಿದ್ದು ಸ್ನೇಹಿತಜನರಿಗೆ ಭೆಟ್ಟಿಯನ್ನು ಕೊಟ್ಟು, ಮರುದಿವಸವೇ ಬೆಳಗಾವಿಗೆ ಬಂದು ತಾರೀಖು ೨೭ನೇ ಜುಲೈ ಸನ್ ೧೮೯೮ನೇ ಇಸವಿ ಬುಧವಾರ ದಿವಸ ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರ ಜಾಗೆಯು ಚಾರ್ಜ ತೆಗೆದುಕೊಂಡರು. ಹಿಂದೆ ಇಲ್ಲಿಯೇ ಮೆ॥ಕಮಿಶನರ ಕಚೇರಿಯಲ್ಲಿ ದಪ್ತರದಾರರಾಗಿದ್ದು, ಒಳ್ಳೇ ಕೀರ್ತಿಯನ್ನು ಪಡೆದು, ಸ್ವಲ್ಪ ದಿವಸಗಳಲ್ಲಿಯೇ ವಿಜಾಪುರಕ್ಕೆ ವರ್ಗವಾಗಿ ಹೋಗಿದ್ದದರಿಂದ, ಬೆಳಗಾವ ಜಿಲ್ಲೆಯ ಎಲ್ಲ ಜನರಿಗೆ ಅಸಮಾಧಾನವಾಗಿತ್ತು. ರಾವಬಹದ್ದೂರರವರು ವಿಜಾಪುರದ ದುಷ್ಕಾಳದಲ್ಲಿ ಕೆಲಸಮಾಡಿ ಶಿಫಾರಸನ್ನು ಪಡೆದು, ಅಲ್ಲಿಂದ ಸಿನ್ನರ ದಂಗೆಯಲ್ಲಿ ಚತುರೋಪಾಯದ ಜಾಣ್ಮೆಯನ್ನು ತೋರಿಸಿ, ಅಕ್ಷಯವಾದ ಕೀರ್ತಿಯನ್ನು ಹೊಂದಿ, ಅತಿವೈಭವದಿಂದ ಈಗ ಬೆಳಗಾವಿಗೆ ಬಂದದ್ದರಿಂದ ಜಿಲ್ಲೆಯ ಎಲ್ಲ ಕಡೆಯಲ್ಲಿಯೂ ಸಂತೋಷವು ಹೆಚ್ಚಿತು.

ರಾ.ಬ॥ರುದ್ರಗೌಡರ ಬೆಳಗಾವ, ಚಿಕ್ಕೋಡಿ ತಾಲೂಕುಗಳ ಆಳಿಕೆ

ಬಂದ ಕೂಡಲೆ, ಇವರನ್ನು ಬೆಳಗಾವ ಚಿಕ್ಕೋಡಿ ತಾಲೂಕಗಳ ಮೇಲೆ ನಿಯಮಿಸಲ್ಪಟ್ಟಿತು. ಆಗ ಬಹುತರವಾಗಿ ಜಿಲ್ಲೆಯಲ್ಲೆಲ್ಲ ಹಿಂದೆ ಹೇಳಿದಂತೆ ಪ್ಲೇಗವು ಹಬ್ಬುಗೊಂಡಿತ್ತು. ಪ್ಲೇಗಿನ ಬಾಧೆಯೂ,

ಅದರಕಿಂತಲೂ ಅಸಹ್ಯವಾದ ಪ್ಲೇಗಿನ ನಿಯಮಗಳ ಬಾಧೆಯೂ ಜನರಿಗೆಲ್ಲ ಪೀಡಾಕಾರವಾಗಿದ್ದವು. ಭಯಂಕರವಾದ ಪ್ಲೇಗಿನ ಉಪಟಳದಿಂದ ಜನಸಮೂಹವೆಲ್ಲ ಉರಿಯ ನಡುವೆ ನಿಂತಂತಾಗಿತ್ತು. ಇಂಥ ದುಷ್ಟ ಪ್ರಸಂಗದಲ್ಲಿ ಪ್ಲೇಗಿನ ಅಧಿಕಾರಿಗಳು ತಮ್ಮ ಚೆಲ್ಲಾಟವನ್ನು ಸ್ವಚ್ಛಂದವಾಗಿ ನಡಿಸಿದ್ದರು. "ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ" ವೆಂಬ ವಿಚಾರವಾಗಿತ್ತು. ಅವರ ಸ್ವಚ್ಛಂದ ವೃತ್ತಿಯನ್ನು ಸದೆಬಡೆಯುವ ಮಹಾರಾಯರು ಯಾರೂ ಅವರಿಗೆ ಇನ್ನೂ ಕೂಡಿದ್ದಿಲ್ಲ. ಬಡಜನರನ್ನು ಗೋಳಾಡಿಸಿ ಅವರಿಂದ ಅಳತಿಲ್ಲದೆ ದುಡ್ಡನ್ನು ತೆಗೆದುಕೊಳ್ಳುತ್ತಿದ್ದರು. ಪ್ಲೇಗಿನ ಕಷ್ಟದಿಂದಲೂ, ಸರಕಾರೀ ಅಧಿಕಾರಿಗಳ ತ್ರಾಸದಿಂದಲೂ ಜನರಿಗೆಲ್ಲ ಜನ್ಮವೇ ಬೇಸರಾಗಿ ಹೋಗಿತ್ತು. ರಾ.ಬ॥ರುದ್ರಗೌಡರು ಬಂದಕೂಡಲೆ ಈ ವಾರ್ತೆಯನ್ನು ತಿಳಿದು ಇದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬೇಕೆಂದು ಯೋಚಿಸಿದರು. ಆಗ ಚಂದಗಡ ಮಹಾಲಿನಲ್ಲಿ ಶ್ರೀನಿವಾಸ ರಾಘವೇಂದ್ರ ಮಿರಜೀಕರ ಎಂಬವನೊಬ್ಬ ಪ್ಲೇಗ ಕಾರಕೂನನೂ, ಉಮ್ಮರವಲ್ಲದ ಅಮಿನಮುಲ್ಲಾ ಎಂಬ ಒಬ್ಬ ಶಿಪಾಯಿಯೂ ಪ್ಲೇಗಿನ ಸರಕಾರೀ ನಿಯಮಗಳಿಂದ ಜನರನ್ನು ಹೆದರಿಸಿ, ಅವರ ಕಡೆಯಿಂದ ದುಡ್ಡು ಎಳೆಯ ಹತ್ತಿದ್ದರು. ದುಡ್ಡು ಕೊಟ್ಟವರಿಗೆ ಸಡಿಲುಕೊಟ್ಟು ಕೊಡದವರನ್ನು ಬಹುಪರಿಯಿಂದ ಪೀಡಿಸಿ, ಬಡಜನರನ್ನು ಗಳಗಳ ಅಳಿಸುತ್ತಿದ್ದರು. ಈ ನಿರ್ದಯರಾದ ದುಷ್ಟ ಅಧಿಕಾರಿಗಳು ತಿನ್ನಲಿಕ್ಕೆ ಗತಿಯಿಲ್ಲದ ಬಡವರ ದನಕರಗಳನ್ನು ಮಾರಿಸಿ, ತಮ್ಮ ಲಂಚದ ಹಣವನ್ನು ವಸೂಲಮಾಡುತ್ತಿದ್ದರು. ರಾ.ಬ॥ರವರು ಅದನ್ನರಿತು, ಅವರ ಕೆಟ್ಟ ಆಚರಣೆಯನ್ನು ಮನಗಂಡು, ಅದರ ಶೋಧಮಾಡಿ, ಬಡಜನರ ಗೋಳಿಗೆ ಕಾರಣರಾದ ಅವರ ಮೇಲೆ ಫೌಜದಾರಿಯ ಖಟ್ಲೆಯನ್ನು ಮಾಡಿ, ಅವರಿಬ್ಬರಿಗೂ ೧೬೧ನೇ ಕಲಮಿನನ್ವಯ ಸಕ್ತ ಮಜೂರಿಯ ಕೈದನ್ನೂ, ದಂಡವನ್ನೂ ಮಾಡಿದರು- ತಾರೀಖ ೧೫ನೇ ನವಂಬರ ಸನ್ ೧೯೦೮ನೇ ಇಸವಿ. ಮುಂದೆ ಈ ಪ್ರಕರಣವು ಜಜ್ಜಕೋರ್ಟಿಗೆ ಅಪೀಲಾಗಿ ಅಲ್ಲಿಯೂ ಕಾಹೀಮಾಯಿತು. ಅಲ್ಲಿಂದ ಮುಂಬೈ ಹೈಕೋರ್ಟಿಗೆ ತಪಾಸಣೀ ಅರ್ಜಿಯಾಗಲು ಅಲ್ಲಿಯಾದರೂ ೧೬೧ನೇ ಕಲಮಿನ ಪ್ರಕಾರ ಮೊದಲು ಆಗಿದ್ದ ಶಿಕ್ಷೆಯೇ ಕಾಹೀಮವಾಯಿತು.

ಈ ಕೆಟ್ಟ ಅಧಿಕಾರಿಗಳು ಎಂದು ಹೋದಾರೆಂದು ಚಿಂತಿಸುತ್ತಿರುವ ಬಡಜನರಿಗೆಲ್ಲ ಆನಂದವಾಯಿತು. ಇವರನ್ನು ಕೆಲಸದಿಂದ ದೂರಮಾಡಿದ ಪುಣ್ಯಾತ್ಮರಿಗೆ ಇನ್ನಿಷ್ಟು ಪುಣ್ಯಬರಲೆಂದು ಜನರು ಹರಸಹತ್ತಿದರು. ಬಡಜನರಿಗೂ, ರೈತಜನರಿಗೂ, ಹಿತವಾಗಬೇಕೆಂದೂ, ಲಂಚಬಡಕರ ಆಟವನ್ನು ಮುಂದೆ ತಗ್ಗಿಸಬೇಕೆಂದೂ, ಕೆಟ್ಟ ಆಚರಣೆಯುಳ್ಳ ಅಧಿಕಾರಿಗಳ ಪ್ರಸಾರವಾಗಬಾರದೆಂದೂ, ವಿದ್ಯಾವಂತರನ್ನೂ, ಸದಾಚಾರಿಗಳನ್ನೂ ಮುಂದೆ ತರಬೇಕೆಂದೂ ರಾವಬಹದ್ದೂರರವರ ಮನಸಿನೊಳಗಿನ ಮುಖ್ಯ ಆಶಯಗಳು. ಈ ಸತ್ಕಾಂಕ್ಷೆಗಳನ್ನು ಪೂರ್ಣಮಾಡಬೇಕೆಂದು ಇವರು ಮೊದಲಿನಿಂದಲೂ ಪ್ರಯತ್ನಿಸುವರು. ದುಷ್ಟದಲನ ಶಿಷ್ಟಪಾಲನವಾಗಬೇಕೆಂದು ಇವರ ಹುಟ್ಟ ಸ್ವಭಾವವಾಗಿತ್ತು. ಅಸತ್ಯಕ್ಕೂ, ಅನ್ಯಾಯಕ್ಕೂ, ಆಶ್ರಯವಾಗಬಾರದೆಂದು ಅಹರ್ನಿಶೆಯಲ್ಲಿಯೂ ಆಶಿಸುವರು. ಅಪ್ರಮಾಣಿಕ ವ್ಯವಹಾರಕ್ಕೆ ಇವರ ತಲೆ ತಿರುಗುತ್ತಿತು. ಲಕ್ಷಾವಧಿ ಜನರಿಗೆ ಕಷ್ಟವನ್ನುಂಟು ಮಾಡುತ್ತಿದ್ದ ಕೆಟ್ಟ ಅಧಿಕಾರಿಗಳನ್ನು ಆದಷ್ಟು ಮಟ್ಟಿಗೆ ದೂರಮಾಡದಿದ್ದರೆ ತಾವು ದೇವರೆದುರಿಗೂ, ಮನುಷ್ಯರೆದುರಿಗೂ ಪಾಪಕ್ಕೆ ಗುರಿಯಾಗುತ್ತೇವೆಂಬದನ್ನು ಇವರು ದೃಢವಾಗಿ ನಂಬಿದ್ದರು. ಯಾವನೇ ಆಗಲಿ ಅಪರಾಧಿಗೆ ತಕ್ಕಶಿಕ್ಷೆಯಾಗಲೇಬೇಕೆಂದು ಇವರು ಯಾವಾಗಲೂ ವಾದಿಸುವರು. ಸತ್ಕರ್ಮಕ್ಕೆ ಲಾಭವು ದೊರೆಯಬೇಕೆಂತಲೂ, ದುಷ್ಕರ್ಮಕ್ಕೆ ಶಿಕ್ಷೆ ತಪ್ಪಬಾರದೆಂತಲೂ ಇವರ ಮತವಿತ್ತು. ಈ ಎಲ್ಲ ತತ್ವಗಳಿಗನುಸರಿಸಿಯೇ ಇವರು ಕಡೆತನಕ ತಮ್ಮ ಆಡಳಿತವನ್ನು ಸಾಗಿಸಿದರು.

ಪಶುಗಳ ಪುರಾವೆ

ಈ ಪ್ರಕಾರ ದೇವರನ್ನು ಸ್ಮರಿಸಿ, ಸಜ್ಜನವಂದ್ಯರಾಗಿ ಕೆಲಸಮಾಡುತ್ತಿರಲು, ಚಿಕ್ಕೋಡಿ ತಾಲೂಕ ಹುಕ್ಕೇರಿ ಮಹಾಲ ಅಮ್ಮಣಗಿಯಲ್ಲಿ ಒಂದು ಬಹು ಅನ್ಯಾಯವಾದ ಪ್ರಕರಣವು ಎದ್ದಿತ್ತು. ಅದರ ಮೂಲವೃತ್ತಾಂತವೇನೆಂದರೆ:ಹಿಂದಕ್ಕೆ ಧಾರವಾಡ ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲರಾಗಿದ್ದ ರಾ.ಸಾ||ಭುಜಂಗರಾವ ಕೃಷ್ಣರಾವ ಹುಯಿಲಗೋಳ ಇವರ ಅಳಿಯಂದಿರಾದ ಮಹಾಲ ಹುಕ್ಕೇರಿ ಮಜಲಿ ಇನಾಮದಾರ ಅಪ್ಪಾಸಾಹೇಬರು, ತಮ್ಮದೊಂದು ಅಮ್ಮಣಗಿಯಲ್ಲಿರತಕ್ಕ ದೊಡ್ಡ ತೋಟವನ್ನು ಅದೇ ಊರಲ್ಲಿರುವ ಬಾಳಪ್ಪ ಕಾಡೇಶಪ್ಪ ಬಾನಿ ಎಂಬ ರೈತನಿಗೆ ೫೦೦ ಅಯ್ದುನೂರು ರೂಪಾಯಿಗಳಂತೆ ೧೨ ವರ್ಷ ಲಾವಣೀಕೊಟ್ಟು, ಕಬುಲಾವತಿಯ ಪತ್ರವನ್ನು ಬರಿಸಿ, ರಜಿಸ್ಟರ ಮಾಡಿಸಿಕೊಂಡಿದ್ದನು. ಮುಂದೆ ಈ ಅಪ್ಪಾಸಾಹೇಬರು ಕಪಟತನದಿಂದ ಇದೇ ತೋಟವನ್ನು ಆ ಊರ ಕುಲಕರಣಿಯಾದ ರಾಮಚಂದ್ರ ಸಂಬಾಜಿ ಕುಲಕರಣಿ ಎಂಬವನಿಗೆ ಲಾವಣೀಕೊಟ್ಟು, ಆ ಕುಲಕರಣಿಯ ಕಡೆಯಿಂದಲೂ ಲಾವಣೀಪತ್ರವನ್ನು ಬರಿಸಿಕೊಂಡಿದ್ದರು. ಮುಂದೆ ಈ ಸಾತ್ವಿಕನಾದ ಬಾನೀ ಬಾಳಪ್ಪನನ್ನು ಮುಳುಗಿಸಬೇಕೆಂಬ ಕುಬುದ್ಧಿಯಿಂದ ಕುಲಕರಣಿಯು ಆ ಜಮೀನಿಗೆ ಹರಕತು ಮಾಡಿ ಬಾಳಪ್ಪನ ಮೇಲೆ ವಹಿವಾಟಿ ದಾವೇ ತಂದನು. ಆಗ ಭೀಮಾಜಿ ಕೃಷ್ಣ ಸಾಂಗಲೀಕರ ಎಂಬವರು ಹುಕ್ಕೇರಿಯ ಮಹಾಲಕರಿಯಿದ್ದರು. ಇವರ ಹತ್ತಿರ ಈ ದಾವೆಯು ನಡೆಯಿತು. ಈ ಮಹಾಲಕರಿಯವರು ಬಹಳೇ ದುಡ್ಡು ತಿನ್ನುವವರು. ದುಡ್ಡು ಸಿಕ್ಕರೆ ತೀರಿತು. ಒಬ್ಬನ ವಿತ್ತಜೀವಿತವನ್ನೆಲ್ಲ ಮತ್ತೊಬ್ಬನಿಗೆ ಮಾಡಿ ಬಿಡುವದರಲ್ಲಿ ಅನುಮಾನವನ್ನೇ ಮಾಡುತ್ತಿದ್ದಿಲ್ಲ. ನಾವು ಈ ಪ್ರಕಾರ ಅನ್ಯಾಯ ಮಾಡಿದರೆ ಒಬ್ಬರ ಕೊರಳು ಕೊಯ್ದಂತೆ ಆಗುತ್ತದೆಂಬ ಪಾಪಭಯವನ್ನು ಅವರು ಮನಸಿನಲ್ಲಿ ಕೂಡ ತರುತ್ತಿದ್ದಿಲ್ಲ. ಇವರ ಲಂಚದ ವ್ಯಾಪಾರವು ಕಿರುಕಳವಾಗಿದ್ದಿಲ್ಲ. ಠೋಕ ವ್ಯಾಪಾರವೇ ವ್ಯಾಪಾರ, ಕಿರುಕಳ ವ್ಯಾಪಾರದಲ್ಲಿ ವಿಶೇಷಲಾಭವಿಲ್ಲೆಂದು ಇವರು ಮನಗಂಡಿದ್ದರು. ಇವರ ಈ ಬಗೆಯ ಲಂಚದ ವ್ಯಾಪಾರವಾದರೂ ಚೆನ್ನಾಗಿಯೇ ನಡೆದಿತ್ತು. ಇವರ ಲಂಚದ ಅಂಗಡಿಗೆ ಬರುವ ಗಿರಾಕಿಗಳಿಗೆ ತೆರಪವೇ ಇದ್ದಿಲ್ಲ. ತಾವಾದರೂ ಅದರಂತೆಯೇ ಕೊಡುತ್ತಿದ್ದರು. ಲಂಚವನ್ನು ಕೊಡಲಿಕ್ಕೂ ತೆಗೆದುಕೊಳ್ಳಲಿಕ್ಕೂ ಇವರ ಮನಸು ಬಹಳೇ ಉದಾರವೃತ್ತಿಯನ್ನು ಧಾರಣಮಾಡಿತ್ತು. ಕೆರೆಯ ನೀರನ್ನು ತೆಗೆದು ಭಾವಿಯೊಳಗೆ ಹಾಕುವ ಕೆಲಸವು ಇವರಲ್ಲಿ ಆರಂಭದಿಂದಲೇ ಇತ್ತು. ಇವರು ಹಿಂದೆ ಖಾನಾಪುರ ತಾಲೂಕ ಕಚೇರಿಯಲ್ಲಿ ಅರವತ್ತು (೬೦) ರೂಪಾಯಿ ಪಗಾರದ ಅವ್ವಲ ಕಾರಕೂನರಾಗಿದ್ದಾಗ, ಇವರ ಮೇಲೆ ಲಂಚದ ಆರೋಪವು ಹೊತ್ತು, ಸರಕಾರದಿಂದ ದೂಷಿಸಲ್ಪಟ್ಟು ಅವನತಿಯನ್ನು ಹೊಂದಿ ಬೆಳಗಾವಿಯ ಅಕೌಂಟ ಕಚೇರಿಯ ಅಯ್ವತ್ತು (೫೦) ರೂಪಾಯಿ ಪಗಾರದ ಕಾರಕೂನರಾಗಿ ಬಂದಿದ್ದರು. ಈ ಅವನತಿಯಿಂದ ಅವರಿಗೆ ಸಮಾಧಾನವಾಗದೆ, ಹೇಗಾದರೂ ಮಾಡಿ ಮೇಲೇರಬೇಕೆಂದು ಹವಣಿಸುತ್ತಿದ್ದರು. ಆಗ ತನ್ನದೊಂದು, ಹೊಲವನ್ನು ಒತ್ತೀಹಾಕಿ ಕಲೇಕ್ಟರ ಆಫೀಸಿನ ಚೀಟ್ನೀಸರಾಗಿದ್ದ ರಾಮಚಂದ್ರ ಸುಬ್ರಾವ ಬೈಂದೂರಕರ ಎಂಬವರಿಗೆ ಸುಮಾರು ಒಂಭತ್ತುನೂರು (೯೦೦) ರೂಪಾಯಿ ಲಂಚಕೊಟ್ಟು, ಹುಕ್ಕೇರಿಯ ಮಹಾಲಕರಿಗಾಗಿ ಬಂದಿದ್ದರು.

ಈ ಮಹಾಲಕರಿಯವರಿಗೆ ಅವರಂಥವನೇ ಆದ ಈ ಸಾಂಬಾಜಿ ಕುಲಕರಣಿಯು ಮಹದಾಶೆಯನ್ನು ತೋರಿಸಿ, ಅವರ ಹತ್ತರ ಈ ಅನ್ಯಾಯಕರವಾದ ದಾವೆಯನ್ನು ತಂದಿದ್ದನು. ಮೆಣಸಿನಕಾಯಿಯ ಸುಗ್ಗಿ ತೀರುವತನಕ ಆ ತೋಟವು ಬಾನೀ ಬಾಳಪ್ಪನ ಕಡೆಗೇ ಇತ್ತು. ಗಾಣದ ಸುಗ್ಗಿಯು ನಡೆದಿತ್ತು. ಆ ತೋಟದೊಳಗಿನ ಕಬ್ಬು ಅತಿಶಯವಾಗಿ ಬೆಳೆದದರಿಂದ ಬೆಲ್ಲ ಬಹಳಾಗಿ, ಆಲಿ ಮನೆಯಲ್ಲಿಯೇ ಇಡಲ್ಪಟ್ಟಿತ್ತು. ಅದನ್ನು ತಿಳಿದು ಇದನ್ನೆಲ್ಲ ಎತ್ತಿ ಬಡಿಯಬೇಕೆಂದು, ಕುಲಕರಣಿಯು ಒಬ್ಬ ಲಿಂಗಾಯತ ಮಧ್ಯಸ್ಥಗಾರನ ಕಡೆಯಿಂದ ಅಜಮಾಸು

೧೧೦೦ ಹನ್ನೊಂದುನೂರು ರೂಪಾಯಿಗಳನ್ನು ಮಹಾಲಕರಿಗೆ ಕೊಡುವದನ್ನು ಗೊತ್ತುಮಾಡಿದ್ದರಿಂದ, ಮಹತ್ವಾಕಾಂಕ್ಷಿಗಳಾದ ಮಹಾಲಕರಿಯವರು ಆ ಜಮೀನು ಈ ಸಂಬಾಜಿ ಕುಲಕರಣಿಯ ವಹಿವಾಟದಲ್ಲಿಯೇ ಇರುತ್ತದೆಂದು ನಿರ್ಣಯಿಸಿ, ಆ ಜಮೀನವನ್ನು ತಯಾರಾಗಿದ್ದ ಬೆಲ್ಲಸಹಿತ (ಅಜಮಾಸು ಒಂದುಸಾವಿರ ರೂಪಾಯಿ ಮಹಸೂಲ ಸಹಿತ)ಸಾಂಬಾಜಿಯ ತಾಬೇಕ್ಕೆ ಕೊಟ್ಟರು. ಠರಾವು ಹೇಳಿದ ದಿವಸವೇ (ತಾರೀಖ ೧೭ ನೇ ಮಾರ್ಚ ಸನ್ ೧೮೯೯ ಇಸವಿ ದಿವಸ) ಮಹಾಲಕರಿಗಳಿಗೆ ಸಂಬಾಜಿಯು ಮೊದಲೇ ಗೊತ್ತು ಮಾಡಿದ ಹನ್ನೊಂದು ನೂರು ರೂಪಾಯಿಗಳನ್ನು ಕೊಟ್ಟನು.

ಈ ಸಂಬಾಜಿಯು ತನ್ನ ತಾಬೇಕ್ಕೆ ಆ ಜಮೀನು ಬಂದಾಕ್ಷಣವೇ ತಯಾರಮಾಡಿ ಇಟ್ಟಿದ್ದ ಎಲ್ಲ ಬೆಲ್ಲವನ್ನು ಅಲ್ಲಿಯ ಒಬ್ಬ ವೈದ್ಯ ಮನೆತನದ ಬಣಜಿಗನಿಗೆ ಮಾರಿ, ಆ ಹಣವನ್ನೆಲ್ಲ ಭರತೀಮಾಡಿದ್ದನು. ಈ ಪ್ರಕಾರ ಈ ಕುಲಕರಣಿಯೂ, ಮಹಾಲಕರಿಯೂ ಚಕ್ಕಂದದಿಂದಿರುತ್ತಿರಲು, ಈ ಬಡಪ್ರಾಣಿಯಾದ ಬಾಳಪ್ಪನು ಕಯ್ಯೊಳಗಿನ ಹೊಲವನ್ನು ಕಳಕೊಂಡು ಇನ್ನೇನು ಮಾಡಲೆಂದು ಬಳಲುತ್ತಿದ್ದನು. ಬಡರೈತನನ್ನು ಯಾರು ಕೇಳಬೇಕು? ಕ್ರೂರಕರ್ಮಿಗಳೂ ಕಪಟವ್ಯಾಪಾರಿಗಳೂ ಆದ ಕುತ್ಸಿತ ಬುದ್ಧಿಯ ಧನಮದಾಂಧರಲ್ಲಿ ಚವರಿಯು ಬೀಸುತ್ತಿರಲು, ಈ ಬಲಹೀನನಾದ ಬಾಳಪ್ಪನನ್ನು ಮಾತಾಡಿಸುವವರಾರು?ಬಾಳಪ್ಪನು ಮನಸ್ಸಿನಲ್ಲಿ ಮರಮರಮರುಗಿ ಕೈಲಾಗದೆ ಚಿಂತಿಸುತ್ತಿರಲು, ರಾವಬಹದ್ದೂರ ಅರಟಾಳ ಸಾಹೇಬರವರ ಸ್ವಾರಿಯು ಅದೇ ತಾಲೂಕಿನಲ್ಲಿದ್ದದ್ದು ತಿಳಿದು, ಸಂತೋಷಿತನಾಗಿ, ಈ ಸಾಹೇಬರು ಸತ್ಯನಿರ್ಣಯ ಮಾಡುವವರೆಂದು ಜಗಪ್ರಖ್ಯಾತವಾಗಿರುವದೆಂತಲೂ, ನನ್ನ ಬಡವನ ಮೊರೆಯನ್ನು ಹೇಳಿಕೊಂಡರೆ ಕರಣಾಳುಗಳಾದ ಪ್ರಭುಗಳು ಕೇಳುವರೆಂತಲೂ, ಮನಸಿನಲ್ಲಿ ಅಳತೆಯನ್ನು ಹಾಕಿ, ಅವರ ಸ್ವಾರಿಯು ಅಲ್ಲಿಯೇ ಸಮೀಪದಲ್ಲಿರುವ ಗೋಟೂರ ಮುಕ್ಕಾಮಿನಲ್ಲಿ ಇದ್ದಾಗ್ಗೆ ಅಲ್ಲಿಗೆ ಹೋಗಿ ಬಾಳಪ್ಪನು, ಬಹುದಿವಸದಿಂದ ತನ್ನ ವಹಿವಾಟಿಯಲ್ಲಿದ್ದ ತೋಟವನ್ನು ಮಹಾಲಕರಿಯವರು ಲಂಚತಿಂದು ಅನ್ಯಾಯವಾಗಿ ಕುಲಕರಣಿಗೆ ಕೊಡಿಸಿದರೆಂದೂ, ಇದರ ಯೋಗ್ಯವಿಚಾರವಾಗಿ ತನ್ನ ತೋಟವನ್ನು ತನಗೆ ಕೊಡಿಸಬೇಕೆಂದೂ ಸನ್ ೧೮೯೯ನೇ ಇಸವಿಯ ಎಪ್ರೀಲ ತಿಂಗಳಲ್ಲಿ ಅರ್ಜಿಯನ್ನು ದಾಖಲ ಮಾಡಿದನು.

ರಾ.ಬ॥ರವರು ಆ ಅರ್ಜಿಯನ್ನು ನೋಡುತ್ತಲೆ, ಮತ್ತು ಆ ಬಾಳಪ್ಪನ ಜವಾಬುಗಳನ್ನು ತೆಗೆದುಕೊಳ್ಳುತ್ತಲೆ, ಈ ಪ್ರಕರಣದಲ್ಲಿ ಮಹಾಲಕರಿಯು ಲಂಚತಿಂದು ಅನ್ಯಾಯ ಮಾಡಿದ್ದು ನಿಜವೆಂದು ತಿಳಿದುಬಿಟ್ಟರು. ಈ ಪ್ರಬಲವಾದ ಅನ್ಯಾಯವು ಇವರನ್ನು ಸುಮ್ಮನೆ ಕೂಡ್ರಗೊಡಲಿಲ್ಲ. ಈ ಬಡ ಪ್ರಾಣಿ ಬಾಳಪ್ಪನ ಬವಣೆಯನ್ನು ಇವರಿಂದ ನೋಡೋಣವಾಗಲಿಲ್ಲ. ಮತ್ತು ಈ ಅನ್ಯಾಯದಿಂದ ಗಳಿಸಿದ ತೋಟದ ಐಸಿರಿಯಲ್ಲಿದ್ದ ಕುಲಕರಣಿಯ ಸಂತೋಷವನ್ನೂ, ನಿರಪರಾಧಿಗಳಾದ ಪ್ರಾಣಿಗಳ ಕೊರಳು ಕೊಯ್ಯುವ ಕಟುಕನಂತಿರುವ ಆ ಮಹಾಲಕರಿಯ ಅಕಾಂಡ ತಾಂಡವವನ್ನೂ ಇವರಿಂದ ನೋಡೋಣವಾಗಲಿಲ್ಲ. ಆ ಅರ್ಜಿಯನ್ನು ದಾಖಲಮಾಡಿಕೊಂಡು, ಸೂಕ್ಷ್ಮದೃಷ್ಟಿಯಿಂದ ಅದರ ಶೋಧಮಾಡಹತ್ತಿದರು. ಎಲ್ಲಿ ಹೋದಲ್ಲಿ ಹಳ್ಳಿಯಲ್ಲಿ, ಅಡವಿಯಲ್ಲಿ ಭೆಟ್ಟಿಯಾದವರನ್ನು ಯುಕ್ತಿಯಿಂದ ವಿಚಾರಿಸಹತ್ತಿದರು. ಸುಳ್ಳು ಎಂದೂ ಅಡಗುವದಿಲ್ಲ. ಕಡೆಗೆ ಹಾಲಿದ್ದದ್ದು ಹಾಲೇ ಆಗುತ್ತದೆ. ಯಾರನ್ನು ಕೇಳಿದರೂ ಮಹಾಲಕರಿಯು ಹನ್ನೊಂದು ನೂರು (೧೧೦೦) ರೂಪಾಯಿ ಲಂಚ ತೆಗೆದುಕೊಂಡು, ಪಾಪ ಆ ಬಾಳಪ್ಪನ ತೋಟವನ್ನು ಬೆಲ್ಲ ಸಹಿತವಾಗಿ ಕುಲಕರಣಿಯ ಕಬಜಾಕ್ಕೆ ಕೊಡಿಸಿದರೆಂದೇ ಹೇಳುತ್ತಿದ್ದರು. ರಾವಬಹದ್ದೂರರವರ ಶೋಧದೃಷ್ಟಿಯು ವರ್ಣಿಸತಕ್ಕಂಥಾದ್ದು. ಇವರು ಶೋಧ ಮಾಡುತ್ತ ಮಾಡುತ್ತ ಅಮ್ಮಣಿಗೆಗೆ ಒಮ್ಮಿಂದೊಮ್ಮೆ ಹೋಗಿ, ಅಲ್ಲಿ ಮುಕ್ಕಾಮ ಮಾಡಿ

ಮರುದಿವಸ ಮುಂಜಾನೆ ಯಾರಿಗೂ ಏನೂ ತಿಳಿಸದೆ ಬಾಳಪ್ಪನ ಮನೆಯ ಮುಂದೆ ನಿಂತು, ಬಾಳಪ್ಪನ ಎತ್ತುಗಳನ್ನು ಕಣ್ಣೀಬಿಚ್ಚಿ ಬಿಡಿಸಿದರು. ಕಣ್ಣಿ ಬಿಚ್ಚಿದಾಕ್ಷಣವೇ ಆ ಎತ್ತುಗಳು ನೆಟ್ಟಗೆ ಆ ತೋಟದ ಕಡೆಗೇ ನಡೆದವು. ಈ ಚಮತ್ಕಾರವನ್ನು ನೋಡಲಿಕ್ಕೆ ಊರಜನರೆಲ್ಲರೂ ನೆರೆದಿದ್ದರು. ಹಾದಿಯಲ್ಲಿ ಆ ಎತ್ತುಗಳನ್ನು ತೋಟದ ಹಾದೀ ಬಿಡಿಸಿ ಅಡ್ಡ ಹೊಡಿಯ ಹೇಳಿದರು. ಅಡ್ಡ ಹೊಡಿಯಲಾಗಿ ಅವು ಅತ್ತ ಇತ್ತ ಹೋಗದೆ ನೆಟ್ಟಗೆ ತೋಟಕ್ಕೇ ಹೋಗಿ, ಬೇಲಿಯನ್ನು ಹಾರಿ ತೋಟದ ಒಳಗೇ ಹೋಗಿ, ದಿನಾಲು ತಮ್ಮನ್ನು ಕಟ್ಟುತ್ತಿದ್ದ ಸ್ಥಳದಲ್ಲಿ ತಮ್ಮ ತಮ್ಮ ಕಣ್ಣಿಗಳಿಗೆ ನಿಂತುಬಿಟ್ಟವು. ಆ ತೋಟವು ಬಾಳಪ್ಪನ ವಹಿವಾಟದಲ್ಲಿ ಇಲ್ಲದಿದ್ದರೆ ಆ ಎತ್ತುಗಳು ನೆಟ್ಟಗೆ ಆ ತೋಟಕ್ಕೆ ಎಂದೂ ಹೋಗುತ್ತಿದ್ದಿಲ್ಲ. ಬುದ್ಧಿಯಿಂದಲೂ, ವಿದ್ಯೆಯಿಂದಲೂ ಬಲ್ಲಿದನಾಗಿ, ಎಲ್ಲ ಪ್ರಾಣಿಗಳಲ್ಲಿ ನಾನೇ ಶ್ರೇಷ್ಠನೆಂದು ಮೆರೆಯುತ್ತಿರುವ ಮಾನವನು ಸುಳ್ಳು ಸಾಕ್ಷಿಗಳನ್ನು ಹೇಳುವದರಲ್ಲಿಯೂ, ಕೀಳು ಕೃತ್ಯಗಳನ್ನಾಚರಿಸುವದರಲ್ಲಿಯೂ, ಖೊಟ್ಟಿ ಕತಬಿಗಳನ್ನು ಬರೆಯುವದರಲ್ಲಿಯೂ ಮಗ್ನರಾಗುತ್ತಿರುವದನ್ನು ನೋಡಿದರೆ, ಇಂಥ ನರಧಾಮರು ಪಶುಗಳಿಗಿಂತಲೂ ಪಶುಗಳೆಂದು ಸ್ಪಷ್ಟವಾಗುತ್ತದೆ. ದನಗಳಾದರೇನಾಯಿತು? ಅವು ತಮ್ಮ ಹುಟ್ಟಬುದ್ಧಿಯಿಂದ ತಮ್ಮ ಸ್ಥಳವನ್ನೂ, ಹಾದಿಯನ್ನೂ ನೆನಪಿಟ್ಟಿರುತ್ತವೆ. ಕೆಟ್ಟ ಜನರ ಸುಳ್ಳುಸಾಕ್ಷಿಗಳಿಂದ ಸತ್ತು ಹೋಗಿದ್ದ ಬಾಳಪ್ಪನು ಈ ಮೂಕದನಗಳ ಸ್ವಾಭಾವಿಕ ಬುದ್ಧಿಯಿಂದ ಹುಟ್ಟಿ ಬಂದಂತಾಯಿತು. ಇದನ್ನು ನೋಡಿ ಸತ್ಯಾಂಶವು ಹೊರಬಿತ್ತೆಂದು ರಾ.ಬ॥ರವರಿಗೆ ಬಹು ಆನಂದವಾಯಿತು. ಇವರ ಶೋಧಕ್ಕೆ ಬಹು ಜನರು ಚಕಿತರಾದರು. ಇವರಿಗೆ ಇದೊಂದು ಮುಖ್ಯ ಪುರಾವೆಯು ಸಿಕ್ಕಂತಾಯಿತು.

ಬಾಳಪ್ಪನು ಏಳೆಂಟು ವರ್ಷದಿಂದ ಈ ಜಮೀನವನ್ನು ನಾನೇ ಮಾಡುತ್ತಿರುವೆನೆಂದೂ, ಪ್ರತಿವರ್ಷ ಈ ಹೊಲದ ಮೆಣಸಿನಕಾಯಿಗಳನ್ನು ನಿಪ್ಪಾಣಿಯ ಒಬ್ಬ ವರ್ತಕನಿಗೆ ಕೊಡುತ್ತಿರುವೆನೆಂದೂ, ಈ ವರ್ಷದ ಮೆಣಸಿನಕಾಯಿಗಳನ್ನು ಸಹ ಅವನೇ ಒಯ್ದಿರುವನೆಂದೂ ಜವಾಬಕೊಟ್ಟಿದ್ದನು. ಅದನ್ನು ತಿಳಿದು ಆ ವರ್ತಕನ ಹೆಸರನ್ನು ಬಾಳಪ್ಪನಿಂದ ಕೇಳಿಕೊಂಡು, ಯಾರಿಗೂ ತಿಳಿಯದಂತೆ ನೆಟ್ಟಗೆ ನಿಪ್ಪಾಣಿಗೆ ಹೋಗಿ, ತಮ್ಮ ಶಿಪಾಯಿಗೆ ಇಂಥ ಮನುಷ್ಯನನ್ನು ನಮ್ಮೆಡೆಗೆ ಸುಮ್ಮನೆ ಕರೆದುಕೊಂಡು ಬರಬೇಕೆಂದು ಹೇಳಿ ಕಳಿಸಿದರು. ಬೊಬ್ಬಾಟವಾದರೆ ಸಾಕ್ಷಿಗಳು ಒಡೆದಾವೆಂದು ಇವರು ಗುಪ್ತರೀತಿಯಿಂದಲೇ ಶೋಧನಡಿಸಿದರು. ಶಿಪಾಯಿಯು ಹೋಗಿ ಆ ಮನುಷ್ಯನನ್ನು ಕರೆದುಕೊಂಡು ಬಂದನು. ರಾ.ಬ॥ರವರು ಅವನನ್ನು ಕುರಿತು "ನೀನು ಯಾರು? ನಿನ್ನ ಉದ್ಯೋಗವೇನು? ನೀನು ಮಾಡುವ ವ್ಯಾಪಾರ ಎಲ್ಲೆಲ್ಲಿ? ಖರೀದಿಯೆಲ್ಲಿ? ಮಾರಾಟವೆಲ್ಲಿ? ಅಮ್ಮಣಗೀ ಬಾನಿ ಬಾಳಪ್ಪನ ಗುರ್ತು ನಿನಗಿದೆಯೋ?" ಎಂಬದಾಗಿ ತಮಗೆ ಬೇಕಾದ ಪ್ರಶ್ನೆಗಳನ್ನು ಮಾಡಲಾಗಿ ಅವನು "ನಾನೊಬ್ಬ ಮೆಣಸಿನಕಾಯಿಯ ವ್ಯಾಪಾರಿಯು. ಸುತ್ತು ಹಳ್ಳಿಗಳಲ್ಲೆಲ್ಲ ಮೆಣಸಿನಕಾಯಿಯ ಖರೀದಿ ಮಾಡುತ್ತಿರುವೆನು. ಬಾನೀ ಬಾಳಪ್ಪನು ನಮ್ಮ ಕುಳನು. ಪ್ರತಿವರ್ಷ ಆತನ ತೋಟದ ಮೆಣಸಿನಕಾಯಿಗಳನ್ನು ನಾನೇ ತೆಗೆದುಕೊಳ್ಳುತ್ತಿರುತ್ತೇನೆ. ನನ್ನ ಹೊರತು ಅವನು ಹೊರಗೆ ಕೊಡುವದಿಲ್ಲ. ಬಹಳ ದಿವಸದಿಂದ ಅವರ ನಮ್ಮ ವ್ಯವಹಾರವಿದೆ. ಈ ವರ್ಷದ ಕಾಯಿಗಳನ್ನು ಸಹ ಮೊನ್ನೆ ಮೊನ್ನೆ ತೆಗೆದುಕೊಂಡಿರುವೆನು. ಅವನು ಬಹಳೇ ಉತ್ತಮ ಮನುಷ್ಯನು. ಈಗ ಯಾರ್‍ಯಾರೋ ಕೂಡಿ, ಪಾಪ ಆತನ ತೋಟವನ್ನು ಅವನ ಕಬಜಾದಿಂದ ಕಿತ್ತಿದರೆಂಬದನ್ನು ಕೇಳಿ ನಮಗೆಲ್ಲ ಬಹಳೇ ಕೆಟ್ಟವೆನಿಸಿತು. ಮಹಾಲಕರಿಗಳಾದರೂ ನಮ್ಮ ಭಾಗಕ್ಕೆ ಅಂಥವರೇ ಬಂದಿರುತ್ತಾರೆ. ದುಡ್ಡು ತೆಗೆದುಕೊಂಡು ಒಬ್ಬರ ಹೊಲ ಮನೆಗಳನ್ನು ಇನ್ನೊಬ್ಬರಿಗೆ ಮಾರಿಬಿಡುತ್ತಾರೆ" ಎಂದು ಹೇಳಿದ ಆ ವರ್ತಕನ ಜವಾಬ ತೆಗೆದುಕೊಂಡು, ಅಲ್ಲಿಂದ ಹೊರಟು ಬಂದರು. ರಾವಬಹದ್ದೂರರವರಿಗೆ ಇದೊಂದು ಸಬಲವಾದ ೨ ನೆ ಪುರಾವೆಯಾಯಿತು.

ಇವರ ಶೋಧದಲ್ಲಿ ದಿನದಿನಕ್ಕೊಂದು ಪುರಾವೆಗಳು ಸಿಗಹತ್ತಿದವು. ಮಹಾಲಕರಿಯು ಲಂಚ ತಿಂದದ್ದನ್ನು ಬಹುಜನರು ಹೇಳಿದರು. ಮತ್ತೊಂದು ಪ್ರಕರಣದಲ್ಲಿ ಇದೇ ಮಹಾಲಕರಿಯು ಸುಮಾರು ಆರುನೂರು (೬೦೦) ರೂಪಾಯಿ ಲಂಚ ತೆಗೆದುಕೊಂಡದ್ದು ಗೊತ್ತಾಯಿತು. ಬಂದ ಈ ಲಂಚದ ಹಣದಿಂದ ಇವರು ಹಿಂದೆ ಶಹಾಪುರದಲ್ಲಿ ಹುಕ್ಕೇರಿ ಮಹಾಲಕರಿ ಜಾಗೆ ದೊರಕುವ ಬಗ್ಗೆ ಬೈಂದೂರಕರ ಚೀಟ್ನಿಸರಿಗೆ ಕೊಡುವದಕ್ಕಾಗಿ ಮಾಡಿದ ಸಾಲವನ್ನು ತೀರಿಸಿದ್ದರು.ಈ ಹುಳುಕೂ ಈ ಶೋಧದಲ್ಲಿ ಹೊರಬಿತ್ತು. ಈಗ ಸಂಬಾಜಿ ಕುಲಕರಣಿಯಿಂದ ತೆಗೆದುಕೊಂಡ ಹನ್ನೊಂದು ನೂರು ರೂಪಾಯಿಯ ಶೋಧವನ್ನು ಒಳ್ಳೇ ದೀರ್ಘ ದೃಷ್ಟಿಯಿಂದ ವಿಚಾರಿಸುತ್ತಿರಲು, ಅಲ್ಲಿಯೇ ಸಮೀಪದಲ್ಲಿರುವ ಸಂಕೇಶ್ವರ ಚಿನಿವಾಲರಂಗಡಿಯಲ್ಲಿ ಹಿಂದೆ ತೆಗೆದುಕೊಂಡಿದ್ದ ಬಂಗಾರದ ಬಾಕಿಯನ್ನು ತೀರಿಸಿರುವರೆಂಬದಾಗಿ ತಿಳಿದೊಡನೆ, ತಡಮಾಡದೆ ನೆಟ್ಟಗೆ ಸಂಕೇಶ್ವರದ ಚಿನಿವಾಲರ ಅಂಗಡಿಗೆ ಹೋಗಿ, ಚಿನಿವಾಲರನ್ನು ಕುರಿತು "ನಿಮ್ಮಲ್ಲಿ ಹುಕ್ಕೇರಿ ಮಹಾಲಕರಿ ಸಾಂಗಲೀಕರ ಇವರ ಖಾತೆ ಇರುವದೇನು? ಅವರು ನಿಮ್ಮಲ್ಲಿ ಬಂಗಾರ ಖರೀದಿ ಮಾಡಿದ್ದು ನಿಜವೇನು? ರೂಪಾಯಿಗಳು ಮುಟ್ಟಿರುವವೋ ಹೇಗೆ?" ಎಂಬದಾಗಿ ಯುಕ್ತಿಯಿಂದ ಕೇಳಲು, ಅವರು ಕೀರ್ದಿಯನ್ನು ತೆಗೆದು ಎಲ್ಲವನ್ನು ತೋರಿಸಿದರು. ಅದರಲ್ಲಿ ಮಹಾಲಕರಿಯವರ ಖಾತೆಯಿದ್ದು, ಬಂಗಾರ ಖರೀದಿಯಾಗಿತ್ತು. ಮತ್ತು ಯಾವ ದಿವಸ ರಾಮಚಂದ್ರ ಸಂಬಾಜಿ ಇವರ ವಹಿವಾಟೀಖಟ್ಲೆಯ ಠರಾವು ಹೇಳಲ್ಪಟ್ಟಿತ್ತೋ ಅದೇ ದಿವಸವೇ ಈ ಕೀರ್ದಿಯಲ್ಲಿ ಮಹಾಲಕರಿಯವರ ಹೆಸರಿನಿಂದ ರೋಖ ಜಮೆ ಹಿಡಿಯಲ್ಪಟ್ಟಿತ್ತು. ಅದಕ್ಕೆ ಚಿನಿವಾಲರೂ ಕಬೂಲಮಾಡಿದರು. ಆ ದಿವಸ ಮಹಾಲಕರಿಯಿಂದ ರೋಖ ಏಳುನೂರು (೭೦೦) ರೂಪಾಯಿ ಜಮೆಯಾದ ಬಗ್ಗೆ ಅವರ ಜವಾಬವನ್ನೂ, ಆ ಲೆಖ್ಖದ ಉತಾರವನ್ನೂ ತಕ್ಕೊಂಡು ತಿರುಗಿ ಬಂದರು. ಸಂಬಾಜಿಯು ಲಂಚಕೊಡಬೇಕಾಗಿದ್ದ ೧೦೦೦ ರೂಪಾಯಿಗಳಲ್ಲಿ ನಾನೂರು ರೂಪಾಯಿಗಳನ್ನು ಮೊದಲೇ ಕೊಟ್ಟಿದ್ದನೆಂತಲೂ, ಠರಾವು ಹೇಳಿದ ದಿವಸ ಏಳುನೂರು ರೂಪಾಯಿಗಳನ್ನು ರೋಖಕೊಟ್ಟನೆಂತಲೂ ಹಿಂದಿನಿಂದ ತಿಳಿಯಿತು. ಆ ಮದಾಂಧನೂ, ಮಂದಮತಿಯೂ ಆದ ಮಹಾಲಕರಿಯವರು ಅನಾಯಾಸವಾಗಿ ಝಣ್ ಝಣ್ ಎಂದು ಬಂದ ರೂಪಾಯಿಗಳನ್ನು, ಬಂಗಾರ ತಕ್ಕೊಂಡಿದ್ದರ ಬಾಕಿ ತೀರಿಸಲಿಕ್ಕೆ ಅದೇ ದಿವಸವೇ ಜಮೆಮಾಡಿಸಿ ಬಿಟ್ಟಿದ್ದರು. ಅವರಾದರೂ ಏನು ಮಾಡ್ಯಾರು? ಮುಂದೆ ಅನಿಷ್ಟಕಾಲವು ಇವರ ಹೆಸರಿನಿಂದ ಕಟ್ಟಿಟ್ಟಿತ್ತು. ಮುಂದೆ ಆ ಲಂಚದ ಮಧ್ಯಸ್ಥಗಾರನನ್ನು ಕರಿಸಿ ಕೇಳಲಾಗಿ ಅವನು ಹನ್ನೊಂದುನೂರು ರೂಪಾಯಿ ಕೊಡುವದನ್ನು ಗೊತ್ತುಮಾಡಿದ್ದು ನಿಜವೆಂದು ಒಪ್ಪಿಕೊಂಡನು. ಇದು ೩ನೇ ಪುರಾವೆಯಾಯಿತು. ಅಂತೂ ಈ ಮೂರೂ ಪುರಾವೆಗಳು ಮಹಾಲಕರಿಯನ್ನು ಕೆಲಸದಿಂದ ಮುಕ್ತಮಾಡಲಿಕ್ಕೆ ಬಲವುಳ್ಳವುಗಳಾದವು.

ಮುಂದೆ ಬಾಳಪ್ಪನ ಖಟ್ಲೆಯ ವಿಚಾರ ನಡೆಯಿತು. ಮಹಾಲಕರಿಯವರು ಎಲ್ಲೆಲ್ಲಿಯೂ ಉಲುಕದಂತೆ ಪೂರ್ಣವಾಗಿ ಸಿಕ್ಕುಹೋಗಿದ್ದರು. ಅವರ ಜವಾಬುಗಳಲ್ಲಿ ಅರ್ಥವೇ ಉಳಿಯಲಿಲ್ಲ. ಪಗಾರವಿಲ್ಲದ ನಡುದಿವಸದಲ್ಲಿ ಏಳುನೂರು ರೂಪಾಯಿ ಒಮ್ಮಿಂದೊಮ್ಮೆ ಎಲ್ಲಿಂದ ಬಂದವೆಂಬ ಪ್ರಶ್ನೆಗೆ ಅವರು ನಿರುತ್ತರರಾಗಬೇಕಾಯಿತು. ಮಹಾಲಕರಿಯವರು ಲಂಚತಿಂದದ್ದಕ್ಕೆ ರಾವಬಹದ್ದೂರವರು ಅವರ ಮೇಲೆ ಹೇಳಿದ ಸಬಲವಾದ ಆಧಾರಗಳೊಡನೆ ಯಾವದ್ವೃತ್ತಾಂತವನ್ನು ಇಂಗ್ಲಿಷಿನಲ್ಲಿ ೫೭೬ನೇ ನಂಬರ ರಿಪೋರ್ಟ ಬರೆದು, ತಾರೀಖ ೨೧ನೇ ಮೇ ಸನ್ ೧೮೮೯ನೇ ಇಸವಿಯ ದಿವಸ ಮೆ॥ಜಿ.ಕಾರ್ಮಾಕೆಲ್ ಸಾಹೇಬ ಬಹದ್ದೂರವರ ಕಡೆಗೆ ಕಳುಹಿಸಲು ಮೆ॥ ರವರು ಸಾದ್ಯಂತವಾಗಿ ವಿಚಾರಿಸಿ, ಯಾವತ್ತು ಸಂಗತಿಯು ನಿಜವೆಂದು ನಂಬಿ ರಾ.ಬ॥ರುದ್ರಗೌಡರ ಶೋಧದೃಷ್ಟಿಗೂ, ಸಾಹಸಕ್ಕೂ ಮನದೊಳಗೆ ಸಂತೋಷಿಸಿ, ತಾರೀಖ ೧೨ನೇ ಮಾಹೆ ಜೂನ ಸನ್ ೧೮೮೯ನೇ ಇಸವಿಯ ದಿವಸ ಭೀಮಾಜಿ ಕೃಷ್ಣ ಸಾಂಗಲೀಕರ ಎಂಬ ಹುಕ್ಕೇರಿಯ ಮಹಾಲಕರಿಯನ್ನು

ಬರತರ್ಫಮಾಡಿಬಿಟ್ಟರು. ಈ ಪ್ರಕರಣವು ಮುಂದೆ ಸರಕಾರಕ್ಕೆ ಅಪೀಲಾಗಿ ಅಲ್ಲಿಯೂ ಕಾಹೀಮಾಯಿತು. ಸರಕಾರ ಠರಾವ ನಂಬರ ೭೭೦೯/೨೦-೧೦-೧೯೦೧ ಮತ್ತು[೧] ಸುಳ್ಳು ಸಾಕ್ಷಿಯನ್ನು ಹೇಳಿದ್ದಕ್ಕಾಗಿ ಸಾಹೇಬರವರು ಅಪ್ಪಾಸಾಹೇಬರ ಮೇಲೆ ರುಕಾರಕೊಟ್ಟಿದ್ದರಿಂದ, ಅವರ ಮೇಲೆ ಖಟ್ಲೆಯಾಗಿ, ಇವರ ಚೌಕಸಿಯು ಹುಜೂರ ಡಿಪೂಟಿ ಕಲೇಕ್ಟರರಾದ ರಾ.ಬ॥ಲಲ್ಲುಭಾಯಿ ಸಾಹೇಬರವರ ಕಡೆಗೆ ನಡೆದು ಅಪ್ಪಾಸಾಹೇಬರಿಗೆ ಸನ್ ೧೯೦೨ ನೇ ಇಸವಿಯಲ್ಲಿ ಏಳು ದಿವಸದ ಕೈದೂ, ಐನೂರು (೫೦೦) ರೂಪಾಯಿ ದಂಡವೂ ಆಯಿತು. ಮುಂದೆ ಹಾಯ್‌ಕೋರ್ಟಿಗೆ ಅಪೀಲಾಗಿ ಅಲ್ಲಿಯೂ ಕಾಹೀಮವಾಯಿತು. ಒಳಗಡೆಯಲ್ಲಿ ಈ ಅಪ್ಪಾಸಾಹೇಬರು ತೀರಿಕೊಂಡರು. ಮುಂದೆ ಬಾಳಪ್ಪನು ಮೃತವಾದದರಿಂದ ಅವರ ಮನೆಯವರು ಯಾರೂ ದಾವೆಯನ್ನು ನಡಿಸದ್ದರಿಂದ ಅದು ಅಷ್ಟಕ್ಕೆ ನಿಂತುಹೋಯಿತು.

ರಾ.ಬ॥ರುದ್ರಗೌಡರು ಪರಸಗಡ ಸಬ್ ಡಿವಿಜನಕ್ಕೆ ಒಡೆಯರಾದದ್ದು

ಬರತರ್ಫವಾದ ಭೀಮಾಜಿ ಮಹಾಲಕರಿಯವರು ಕೆಲಸ ಸಿಗಬೇಕೆಂದು, ಮುಂದೆ ಎಷ್ಟು ಪ್ರಯತ್ನಮಾಡಿದರೂ ಅವರ ಪ್ರಯತ್ನವೆಲ್ಲ ಹೊಳೆಯೊಳಗೆ ಹುಣಸೀಹಣ್ಣು ತೊಳೆದಂತೆ ಅಥವಾ ಗುಡ್ಡಕ್ಕೆ ಕಲ್ಲು ಹೊತ್ತಂತಾಯಿತು. ಇವರ ಬರತರ್ಫದಿಂದ ಲಂಚತಿನ್ನುವ ಅಧಿಕಾರಿಗಳೆಲ್ಲ ಭಯಗ್ರಸ್ತರಾದರು. ಬ್ರಾಹ್ಮಣರು ಸಾಹೇಬರನ್ನು ಸುಮ್ಮಸುಮ್ಮನೆ ವಿರೋಧಿಸಹತ್ತಿದರು. ಜ್ಞಾನಿಗಳಾದ ಕೆಲ ಬ್ರಾಹ್ಮಣ ಸದ್ಗೃಹಸ್ಥರು ಇವರನ್ನು ಕೊಂಡಾಡಹತ್ತಿದರು. ಕಳ್ಳ ಜನರಿಗೆಲ್ಲ ಇವರ ಹೆದರಿಕೆಯು ಕೂತಿತು. ಕಪಟಿಗಳಾದ ಬ್ರಾಹ್ಮಣರು ಇವರ ವಿಷಯವಾಗಿ ಪೂಜ್ಯಭಾವವುಳ್ಳವರಾಗಲಿಲ್ಲ. ಯಾಕೆಂದರೆ ಅವರ ಲಂಚದ ವ್ಯವಹಾರವೇ ಕಟ್ಟಾಗಹತ್ತಿತು. ಅವರಿಗೆ ಸವಿಸವಿಯಾದ ತಿನಸು ಸಿಗದಂತಾಯಿತು. ಅವರ ಮೆರವಣಿಗೆಯು ಮೆಲ್ಲಮೆಲ್ಲನೆ ಮುರಿಬಡಿಯ ಹತ್ತಿತು. ಅಂದಮೇಲೆ ಅವರು, ದುಷ್ಟಜನರ ಹೀನಕೃತ್ಯಗಳನ್ನು ನಿರ್ಮೂಲಮಾಡಿ ಬಡಜನರನ್ನೂ, ಸಜ್ಜನರನ್ನೂ ಸಂತೋಷಪಡಿಸುವ ಕಾರ್ಯಭಾಗದಲ್ಲಿ ಪ್ರವರ್ತಕರಾಗಿರುತ್ತಿರುವ ರಾವಬಹದ್ದೂರರವರನ್ನು ವಿರೋಧಿಸದೆ ಬಿಟ್ಟಾರೆ! ಬಡಜನರಿಗೆ ಕಲ್ಯಾಣವಾಗಬೇಕೆಂಬದೇ ಇವರ ಆಳಿಕೆಯ ಮುಖ್ಯಧೋರಣವಿತ್ತು. ಅದರಂತೆಯೇ ತಮ್ಮ ಕಾರ್ಯವನ್ನು ನಡೆಸಿದರು. ದುಷ್ಟದಲನಕಾರ್ಯದಲ್ಲಿ ಇವರಿಗೆ ಎಷ್ಟೋ ಆತಂಕಗಳು ಬಿಟ್ಟೂ ಬಿಡದೆ ಬರುತ್ತಿದ್ದವು. ಇಂಥ ಆತಂಕಗಳನ್ನು ಲಕ್ಷಿಸದೆ ಯಥಾಪ್ರಕಾರವಾಗಿ ತಮ್ಮ ಕೆಲಸವನ್ನು ನಡೆಸಿದರು. ಮುಂದೆ ಇವರಿಗೆ ಸನ್ ೧೯೦೧ನೇ ಇಸವಿಯ ಜಾನೇವಾರಿ ತಿಂಗಳ ೭ನೇ ತಾರೀಖಿಗೆ ಪರಸಗಡ ಸಬ್‌ಡಿವಿಜನಕ್ಕೆ ನೇಮಣೂಕವಾದದರಿಂದ ಮುರಗೋಡ ಮಹಾಲ ಸಹಿತ ಪರಸಗಡ, ಸಂಪಗಾವ, ಖಾನಾಪುರ ಈ ಮೂರು ತಾಲೂಕುಗಳ ಒಡೆತನವು ದೊರೆಯಿತು.

ಸಂಪಗಾವ ಸವದತ್ತಿ ತಾಲೂಕುಗಳಲ್ಲಿ ಲಂಚವು ಬಹಳ ಸಿಗುತ್ತದೆಂದು, ಲಂಚಗುಳಿಗಳಾದ ಅಧಿಕಾರಿಗಳು ಇವೆರಡು ತಾಲೂಕುಗಳನ್ನೇ ಅಪೇಕ್ಷಿಸಿ, ಹೇಗಾದರೂ ಮಾಡಿ ವರ್ಗಮಾಡಿಸಿಕೊಂಡು, ಈ ತಾಲೂಕಗಳಿಗೆ ಬರುತ್ತಿದ್ದರು. ಅದರಂತೆ ಈ ಭಾಗದಲ್ಲಿ ವ್ಯಾಜ್ಯಗಳು ಬಹಳವಾಗಿ ಏಳುತ್ತಿದ್ದು ದುಡ್ಡು ವಿಶೇಷವಾಗಿ ಸಿಗುತ್ತಿತ್ತು. ಕಾರಣ ಎಷ್ಟೋ ಕಾಮದಾರರು ಈ ತಾಲೂಕುಗಳಿಗೆ ಬರಲಿಕ್ಕೆ ಹವಣಿಸುತ್ತಿದ್ದರು. ಸರಕಾರಿ ಅಧಿಕಾರಿಗಳು ಫಿರತಿಯ ಮೇಲೆ (ಸಂಚಾರಕ್ಕೆ) ಹೋದಾಗ್ಗೆ ಗ್ರಾಮಸ್ಥರ ಕಡೆಯಿಂದ, ಬೇಕಾದ ಸರಬರಾಯಿ ಮಾಡಿಸಿಕೊಂಡು, ಆ ವೆಚ್ಚದ ಹಣವನ್ನು ಒಂದು ಪೈ ಸಹಿತ ಕೊಡದೆ, ಅದನ್ನು ಗ್ರಾಮಸ್ಥರ ತಲೆಯ ಮೇಲೆಯೇ

---

೧. ಮೊದಲಿಗೆ ಬರತರ್ಫವಾದದ್ದರಲ್ಲಿ ನಾವು ಕೈಹಾಕುವದಿಲ್ಲೆಂಬದಾಗಿ ಠರಾವವಾಯಿತು.

ಹೊರಿಸುತ್ತಿದ್ದರು. ಬಂದ ಬಂದ ಅಧಿಕಾರಿಗಳಿಗೆ ಸರಬರಾಯಿಮಾಡಿ ಗ್ರಾಮಸ್ಥರು ಬೇಸರಿಯುತ್ತಿದ್ದರು. ಸರಬರಾಯಿಯ ಖರ್ಚು ಅಳತೆಗೆಟ್ಟು ಮೈಮೇಲೆ ಬರಹತ್ತಲು, ಗ್ರಾಮಸ್ಥರು ರೈತರನ್ನು ಪೀಡಿಸಿ ಅವರನ್ನು ಸುಲಿಯ ಹತ್ತಿದರು. ಎಷ್ಟೋ ಅಧಿಕಾರಿಗಳಿಗೆ ದಿನದಿನಾಲು ಸಣ್ಣಕ್ಕಿಯ ಬೋನ, ತಾಜಿಯ ತುಪ್ಪ, ಮೃಷ್ಟಾನ್ನಭೋಜನವೇ ಬೇಕಾಗುತ್ತಿದ್ದದ್ದು ಎಲ್ಲರಿಗೂ ಗೊತ್ತುಂಟು. ಇದೆಲ್ಲ ವೆಚ್ಚವು ಗ್ರಾಮಸ್ಥರ ಮೇಲೆಯೇ ಸರಿ. ಗ್ರಾಮಸ್ಥರಾದರೂ ತಮ್ಮ ಕಯ್ಯಿಂದ ಕೊಡುತ್ತಾರೆನ್ನಬೇಕೋ! ಅವರು ಅನೇಕ ತಂತ್ರಗಳಿಂದ ರೈತರನ್ನು ಸುಲಿಯುತ್ತಾರೆ. ಅದರಿಂದ ಎಲ್ಲ ಕಡೆಯಲ್ಲಿ ಬಡಜನರಿಗೂ, ರೈತಜನರಿಗೂ, ಸರಕಾರೀ ಅಧಿಕಾರಿಗಳಿಂದ ಎಷ್ಟೋ ತ್ರಾಸವಾಗಹತ್ತಿತು. ವ್ಯಾಪಾರಿಗಳೂ, ಸಾವಕಾರರೂ ಕೆಲಕೆಲವು ಕಡೆಯಲ್ಲಿ, ಗ್ರಾಮಸ್ಥರ ತ್ರಾಸಿಗಾಗಿ ಊರೊಳಗೆ ನಿಂತು ಬಾಳ್ವೆ ಮಾಡದಂತಾಯಿತು. ಸ್ಟಾಂಪವೆಂಡರರು ಪ್ರತಿಯೊಂದು ಗ್ರಾಮದಲ್ಲಿ ನಿಕೃಷ್ಟಪಕ್ಷಕ್ಕೆ ೧೦೦ಕ್ಕೆ ಸುಮಾರು ೨೫ರಂತೆ ಅಂದರೆ ಒಂದು ರೂಪಾಯಿಯ ಸ್ಟಾಂಪಿಗೆ ನಾಲ್ಕು ಆಣೆ ಹೆಚ್ಚಿಗೆ ತೆಗೆದುಕೊಳ್ಳುತ್ತಿದ್ದರು. ಸಬ್‌ರಜಿಸ್ಟರರೂ, ಸರ್ಕಲ್ ಇನ್‌ಸ್ಪೆಕ್ಟರರೂ ರೈತರಿಂದ ಅಳತಿಲ್ಲದೆ ದುಡ್ಡು ಎಳೆಯ ಹತ್ತಿದ್ದರು. ಸಾರಾಂಶ, ಎಲ್ಲ ಮೂಲೆನಿಂದಲೂ ಲಂಚಗುಳಿಗಳಿಗೆ ದುಡ್ಡಿನ ಮಳೆಯಾದಂತಾಗುತ್ತಿತ್ತು. ಅಥವಾ ಸಂಪಗಾವ ಸವದತ್ತಿ ತಾಲೂಕುಗಳು ಲಂಚಬಡಕರಿಗೆ ಕುಬೇರನ ವಸತಿಸ್ಥಾನವಾಗಿದ್ದವು.

ಸಾರ್ವಜನಿಕ ಸುಧಾರಣೆಗಳು

ರಾವಬಹದ್ದೂರವರು ಈ ಭಾಗಕ್ಕೆ ಬಂದೊಡನೆ ಎಲ್ಲ ಕಡೆಯಲ್ಲಿ ಸಂಚಾರ ಮಾಡಿ, ಬಡಜನರ ಹಾಗೂ ರೈತರ ಬವಣೆಯನ್ನೂ, ಸರಕಾರೀ ಕಾಮದಾರರ ಕೀಳುಕೃತ್ಯಗಳನ್ನೂ ಕಂಡು, ಈ ದುಷ್ಟ ಸಂಪ್ರದಾಯವನ್ನು ತಗ್ಗಿಸಬೇಕೆಂದು ಯತ್ನಿಸಿದರು. ಸಬ್‌ರಜಿಸ್ಟ್ರರಿಗೆ ಆಗ ಅವರ ರಜಿಸ್ಟರದ ರಕಮಿನ ಮೇಲಿಂದ ಕಮಿಶನ್ ಸಿಗುತ್ತಿತ್ತು. ಅವರು ತಮ್ಮ ಸ್ವಂತವೆಚ್ಚದಿಂದ ಕಾರಕೂನರನ್ನು ನೇಮಿಸಿಕೊಳ್ಳುತ್ತಿದ್ದರು. ಈ ಕ್ರಮವಿರುವದರಿಂದ ಅವರಿಗೆ ಬೇಕಾದಹಾಗೆ ದುಡ್ಡು ತೆಗೆದುಕೊಳ್ಳುವದಕ್ಕೆ ಆಸ್ಪದ ಸಿಗುತ್ತಿತ್ತು. ಇದನ್ನೆಲ್ಲ ನೋಡಿ ರಾವಬಹದ್ದೂರವರು ಆರಂಭಕ್ಕೆ ಸ್ಟಾಂಪವೆಂಡರ, ಸಬ್‌ರಜಿಸ್ಟರ, ಸರಬರಾಯಿ ಈ ಮೂಲಕ ವಿಷಯವಾಗಿ ಕೆಲಸ ನಡಿಸಿ ಮೆ|| ಆರ್.ಸಿ. ಬ್ರಾವುನ ಕಲೇಕ್ಟರ ಸಾಹೇಬ ಬಹದ್ದೂರವರ ಕಡೆಗೆ ರಿಪೋರ್ಟಮಾಡಿದರು. ರಿಪೋರ್ಟ ನಂಬರ ೧೪೯೧/೧೪-೯-೧೯೦೧ ಇವರು ತಮ್ಮ ರಿಪೋರ್ಟಿನಲ್ಲಿ ಬರೆದ ಮುಖ್ಯ ಅಭಿಪ್ರಾಯವೇನೆಂದರೆ ಸ್ಟಾಂಪವೆಂಡರರ ಜಾಗೆಗಳನ್ನು ಆದಷ್ಟು ಸಾಲೆಯ ಮಾಸ್ತರ ಜನರಿಗೆ ಕೊಟ್ಟರೆ ವಿಹಿತವಾಗುತ್ತದೆ. ಯಾಕಂದರೆ ಈಗಿದ್ದ ಸ್ಟಾಂಪವೆಂಡರರು ಕಮಿಶನದಿಂದ ಬರುವ ತುಸು ಹಣದಿಂದ ಸಂತುಷ್ಟರಾಗದೆ, ಒಂದು ರೂಪಾಯಿಗೆ ನಾಲ್ಕಾಣೆಯಂತೆ ಹೆಚ್ಚಿಗೆ ತೆಗೆದುಕೊಳ್ಳುತ್ತಾರೆ. ಅದರಿಂದ ಬಡರೈತರಿಗೆ ತ್ರಾಸವಾಗುತ್ತದೆ. ಇನ್ನಿಷ್ಟು ಕಮಿಶನ್ ಹೆಚ್ಚಿಸಿ ಸ್ಟಾಂಪ ಮಾರುವದನ್ನು ಮಾಸ್ತರ ಜನರಿಗೆ ಕೊಟ್ಟರೆ, ಅವರು ತಮ್ಮ ಕೆಲಸದ ಭಯದಿಂದ ಹೆಚ್ಚಿನ ಹಣವನ್ನು ಎಂದಿಗೂ ತೆಗೆದುಕೊಳ್ಳಲಿಕ್ಕಿಲ್ಲ. ಮತ್ತು ಸರಬರಾಯಿಯ ವೆಚ್ಚವನ್ನು ಸರಕಾರೀ ಅಧಿಕಾರಿಗಳು ಒಂದು ಪೈ ಮೊದಲಾಗಿ ಇಟ್ಟುಕೊಳ್ಳದಂತೆ ಸರಕಾರದಿಂದ ವ್ಯವಸ್ಥೆಯಾಗಬೇಕು. ಮತ್ತು ಸಬ್‌ರಜಿಸ್ಟ್ರರಿಗೆ ಈಗ ಸರಕಾರದಿಂದ ಸಿಗುತ್ತಿರುವ ಕಮಿಶನ್ ಬಂದು ಮಾಡಿ, ಅವರಿಗೆ ಕಾಹೀಮ ಪಗಾರವನ್ನೇ ಗೊತ್ತು ಮಾಡಬೇಕು. ಮತ್ತು ಅವರ ಕೈಕೆಳಗಿನ ಕಾರಕೂನರನ್ನು ಸರಕಾರದಿಂದ ನೇಮಿಸಬೇಕು. ಹೀಗಾಗದಿದ್ದರೆ ಅವರು ಲಂಚದ ಹವ್ಯಾಸಕ್ಕೆ ಬೀಳುವದರಿಂದ ಬಡಜನರ ಗೋಳಿಗೆ ಕಾರಣವಾಗುತ್ತದೆ. ಈ ಪ್ರಕಾರ ಬರೆದ ರಿಪೋರ್ಟ ಮೆ|| ಕಲೇಕ್ಟರರಿಂದಲೂ, ಮೆ||ಕಮಿಶನರ ಕಡೆಯಿಂದಲೂ ಶಿಫಾರಸವಾಗಿ ಇನ್‌ಸ್ಪೆಕ್ಟರ ಜನರಲ್ ಆಫ್

ರಿಜಿಸ್ಟ್ರೇಶನ್ ಮೆ|| ಎಚ್ ಲಾರೆನ್ಸ್ ಸಾಹೇಬ ಬಹದ್ದೂರವರ ಕಡೆಗೆ ಹೋಯಿತು. ಈ ಸಾಹೇಬ ಬಹದ್ದೂರವರು ಈ ರಿಪೋರ್ಟು ನೋಡಿ ರಾ.ಬ||ಅರಟಾಳ ಸಾಹೇಬರು ಹುಡುಕಿ ತೆಗೆದ ಕಾರ್ಯಕಾರಣಗಳೆಲ್ಲ ಯೋಗ್ಯವಾಗಿವೆಯೆಂದೂ, ನಾವು ಆ ಬಗ್ಗೆ ಅಭಾರಿಯಾಗಿದ್ದೇವೆಯೆಂದೂ, ಅವರಿಗೆ ತಿಳಿಸಿರೆಂಬದಾಗಿ ಮೆ||ಕಲೇಕ್ಟರ ಸಾ.ಬ||ರವರ ಕಡೆಗೆ ಬರೆದು ಬಂತು. ಕೂಡಲೆ ಆ ವ್ಯವಸ್ಥೆಗಳೆಲ್ಲ ಅಮಲಿನಲ್ಲಿ ಬಂದು, ಬಡಜನರಿಗೆ ಎಷ್ಟೋ ಸಂತೋಷವಾಯಿತು. ಪೋಷ್ಟಮಾಸ್ತರರಿಗೂ, ಸ್ಕೂಲಮಾಸ್ತರರಿಗೂ, ಸ್ಟಾಂಪ ಮಾರುವ ಲೈಸೆನ್ಸ ಸಿಕ್ಕು ಎಷ್ಟೋ ಜನರಿಗೆ ಕಲ್ಯಾಣವಾಯಿತು. ಮತ್ತು ಗೌಡ ಕುಲಕರಣಿಯರಿಗೆ ಪೋಟಗೀ ಹಣವನ್ನು ಕೊಡುವಾಗ್ಗೆ ತಾಲೂಕ ಕಚೇರಿಯ ಕಾರಕೂನ ಮೊದಲಾದವರು ಅವರಿಂದ ಲಂಚವನ್ನು ತೆಗೆದುಕೊಳ್ಳುತ್ತಿದ್ದರು. ಮತ್ತು ಪೋಟಗೀ ಕೊಡುವ ಮುಂದೆ ಕಾರಕೂನರೂ, ಶಿರಸ್ತಾರರೂ, ಮಾಮಲೇದಾರರೂ ತಮ್ಮ ತಮ್ಮ ಆಸ್ಪದಿಕ ಆಚಾರ್ಯರನ್ನೂ, ಭಟ್ಟರನ್ನೂ ಕರಿಸಿ ಅವರಿಗೆ ಯಾವತ್ತೂ ಗೌಡ ಕುಲಕರಣಿಯರ ಕಡೆಯಿಂದ ದಕ್ಷಿಣೆಗಳನ್ನು ಕೊಡಿಸುತ್ತಿದ್ದರು. ಈ ಕ್ರಮವು ಬಹುದಿವಸದಿಂದ ನಡೆದುಬಂದಿತ್ತು. ವರಿಷ್ಠರ ಮನಸ್ಸನ್ನು ಮುರಿಯಲಾರದೆ ಬ್ರಾಹ್ಮಣರಿಗೆ ದಕ್ಷಿಣೆಯನ್ನೂ, ಕಾರಕೂನರಿಗೆ ಲಂಚವನ್ನೂ ಗೌಡ ಕುಲಕರಣಿಯರು ಕೊಡಬೇಕಾಗುತ್ತಿತ್ತು. ಇದನ್ನು ತಿಳಿದು ರಾವಬಹದ್ದೂರವರು, ಗೌಡಕುಲಕರಣಿಯರ ಪೋಟಗೀ ಹಣವನ್ನು ಅವರವರ ಹೆಸರಿನಿಂದ ಮನಿಯಾರ್ಡರ ಮಾಡಬೇಕೆಂತಲೂ, ಹಾಗೆ ಮಾಡಿದಲ್ಲಿ ಲಂಚವು ಕೆಲಮಟ್ಟಿಗೆ ಕಡಿಮೆಯಾಗಿ ಗೌಡಶಾನಭೋಗರಿಗೆ ಹಿತವಾಗಿ, ಮನಿಯಾರ್ಡರದ ಕಮಿಶನ್ ಬರುವದರಿಂದ ಸರಕಾರಕ್ಕೂ ಲಾಭ ಬರುವದೆಂತಲೂ ಬರೆದು 274/6-2-1902 ನೇ ನಂಬರಿನ ರಿಪೋರ್ಟಿನಿಂದ ಮೆ||ಆರ್.ಸಿ. ಬ್ರಾವುನ ಕಲೇಕ್ಟರ ಸಾಹೇಬ ಬಹದ್ದೂರವರಿಗೆ ತಿಳಿಸಲಾಗಿ, ಅವರು ಅದನ್ನು ಶಿಫಾರಸ ಮಾಡಿ ಮೆ|| ಕಮಿಶನರ ಸಾಹೇಬರವರ ಕಡೆಗೆ ಕಳಿಸಿದರು. ಈ ವ್ಯವಸ್ಥೆಯು ಕಾಲಾಂತರದ ಮೇಲೆ ತೀವ್ರವೇ ಅಮಲಿನಲ್ಲಿ ಬರಬಹುದು.

ದುಷ್ಟದಲನ

ತಗಾಯಿಯ ಹಣವು ರೈತರಿಗೆ ಸರಿಯಾಗಿ ಮುಟ್ಟಬೇಕೆಂದೂ, ಅದು ಸರಕಾರಿಯ ನಿಯಮಗಳಿಗನುಸರಿಸಿ ಸದುಪಯೋಗವಾಗಬೇಕೆಂದೂ ಇವರು ಬಹಳೇ ದಕ್ಷತೆಯನ್ನು ತೆಗೆದುಕೊಳ್ಳುತ್ತಿದ್ದರು. ಆಗ ಪರಸಗಡ ತಾಲೂಕ, ಮಹಾಲ ಮುರಗೋಡ, ಕೋರಕೊಪ್ಪದ ರೈತರಿಗೆ ತಗಾಯಿ ಕೊಡಿಸಿ ಅಲ್ಲಿಯ ರಾಮಚಂದ್ರ ವೆಂಕಟೇಶ ಕುಲಕರಣಿ ಮತ್ತು ಗೌಡಪ್ಪಗೌಡ ಪಾಟೀಲ ಇವರಿಬ್ಬರು ೧೦೦ ಕ್ಕೆ ೫ ರಂತೆ ಅಥವಾ ೧೦ ರಂತೆ ಲಂಚ ತೆಗೆದುಕೊಂಡಿದ್ದರು. ಅದನ್ನು ಶೋಧಮಾಡಿ ಆ ಗೌಡ ಕುಲಕರಣಿಯರ ಮೇಲೆ ಲಂಚದ ಆರೋಪವನ್ನು ಹೊರಿಸಿ ಖಟ್ಲೆ ಮಾಡಿದರು. ಸಾಕಷ್ಟು ಪುರಾವೆಗಳು ದೊರೆತು, ಅದರ ಯೋಗ್ಯ ವಿಚಾರ ಮಾಡಲ್ಪಟ್ಟು, ರಾವಬಹದ್ದೂರ ಹುಜೂರ ಡಿಪೂಟಿ ಕಲೇಕ್ಟರ ಲಲ್ಲುಭಾಯಿ ಸಾಹೇಬರವರ ಕಡೆಯಿಂದ ಸೆಶನ್‌ಕೋರ್ಟಿಗೆ ಕಮೀಟಾಯಿತು. ಮೆ||ಸೆಶನ್ ಜಜ್ಜ ಸಾಹೇಬ ಬಹದ್ದೂರವರು ಸತ್ಯನಿರ್ಣಯಮಾಡಿ ಸನ್ ೧೯೦೨ ನೇ ಅಕ್ಟೋಬರದಲ್ಲಿ ಒಬ್ಬೊಬ್ಬನಿಗೆ ೧೮ ತಿಂಗಳ ಸಕ್ತಮಜೂರಿಯ ಶಿಕ್ಷೆ ಮತ್ತು ಮುನ್ನೂರು (೩೦೦) ರೂಪಾಯಿ ದಂಡಮಾಡಿದರು. ಮುಂದೆ ಈ ಪ್ರಕರಣವು ಹೈಕೋರ್ಟಿಗೆ ಅಪೀಲಾಗಿ ಅಲ್ಲಿಯೂ ಕಾಹೀಮಾಯಿತು. ಇದೇ ತಗಾಯಿ ಹಣದ ಪ್ರಕರಣ ಸಂಬಂಧವಾಗಿ ಸವದತ್ತೀ ತಾಲೂಕ ಕಚೇರಿಯ ಕಾರಕೂನರಾದ ಭೀಮಾಜಿ ರಾಘವೇಂದ್ರ ಸಾತ್ವಿಕ, ಮತ್ತು ರಾಮಚಂದ್ರ ನರಸಿಂಹ ಯಕ್ಕುಂಡಿ ಇವರಿಬ್ಬರು ಆ ಲಂಚದ ಪಾಲುಗಾರರಾಗಿದ್ದರೆಂದು ಗೊತ್ತಾಗಿ, ಅದರಂತೆ ಪುರಾವೆಗಳು ದೊರೆತದರಿಂದ ಮೆ|| ಕಲೇಕ್ಟರ ಸಾಹೇಬ ಬಹದ್ದೂರವರು ಇವರಿಬ್ಬರೂ ಕಾರಕೂನರಿಗೆ ಕಡಿಮೆ

ಶರಾ ಮಾಡಿ, ಒಬ್ಬನನ್ನು ೨೫ ರೂಪಾಯಿ ಪಗಾರದಿಂದ ೧೨ ರೂಪಾಯಿಗೆ, ಇನ್ನೊಬ್ಬನನ್ನು ೨೦ ರೂಪಾಯಿಯಿಂದ ೧೨ ರೂಪಾಯಿಗೆ ಹಾಕಿದರು.

ಈ ದುಷ್ಟರ ಸೊಕ್ಕನ್ನು ಮುರಿಬಡಿಯಲಿಕ್ಕೆ ಮೂಲಕಾರಣರಾದ ರಾ.ಬ॥ರುದ್ರಗೌಡರ ಸದಾಚರಣೆಯು ೧ನೇ ವರ್ಗ ಮಾಜಿಸ್ಟ್ರೇಟ ಅಧಿಕಾರದಿಂದ ಮೆರೆದಾಡುವವರಾದ ರಾ.ಸಾ॥ರಾಮಚಂದ್ರ ಸುಬ್ರಾವ ಬೈಂದೂರಕರ ಎಂಬ ಸವದತ್ತಿಯ ಮಾಮಲೇದಾರರಿಗೆ ಸರಿ ಬರಲಿಲ್ಲ. ಇವರು ರಾವಬಹದ್ದೂರರವರ ವಿರೋಧವಾಗಿ ಆ ಕೋರಕೊಪ್ಪದ ಕುಲಕರಣಿಯ ಕಡೆಯಿಂದ ರಾ.ಬ॥ರುದ್ರಗೌಡ ಸಾಹೇಬರು ನಮ್ಮನ್ನು ಹೊಡೆದು ಬಡೆದು ಅಂಜಿಸಿ ನಮ್ಮ ಕಡೆಯಿಂದ ತಮ್ಮ ಮನಸಿಗೆ ಬಂದಂತೆ ಕಬೂಲಿ ಜವಾಬ ತೆಗೆದುಕೊಂಡರೆಂತಲೂ, ನಮ್ಮ ಮಾನಭಂಗ ಮಾಡಿದರೆಂತಲೂ, ಇನ್ನೂ ಅನೇಕತರವಾಗಿ ಗಿಲ್ಲೆಗಳುಳ್ಳ ಫೌಜದಾರಿ ಅರ್ಜಿಯನ್ನೂ, ಜವಾಬವನ್ನೂ ತೆಗೆದುಕೊಂಡು ಆ ಗೌಡಕುಲಕರಣಿಯರನ್ನು ಉಳಿಸುವ ಸಾಹಸ ಮಾಡಿದರು. ಯಾಕಂದರೆ ಬೆದರಿಕೆಯಿಂದ ತೆಗೆದುಕೊಂಡ ಕಬೂಲೀ ಜವಾಬಗಳು ಪುರಾವೆ ಆಕ್ಟಿನ ಪ್ರಕಾರ ಪುರಾವೆಗೆ ಅಗ್ರಾಹ್ಯವಿರುತ್ತವೆಂಬದು ಮಾಮಲೇದಾರರಿಗೆ ಗೊತ್ತಿತ್ತು. ಇವರ ಮೇಲೆ ಯಾವದೊಂದು ಆರೋಪವನ್ನು ಹೊರಿಸಬೇಕೆಂದು ಪ್ರಯತ್ನಿಸಿದರು. ಇದಕ್ಕೆ ಕೆಲಜನ ವಕೀಲರೂ, ಕಚೇರಿಯ ಜನರೂ, ಕೆಲ ಬ್ರಾಹ್ಮಣರೂ ಕೂಡಿದ್ದರು. ಇವರೆಲ್ಲರು ಕೂಡಿ ನಮ್ಮ ಲಂಚದ ಆಟವನ್ನು ನಿಲ್ಲಿಸಲಿಕ್ಕೆ ಪ್ರಯತ್ನಿಸುವ ರಾ.ಬ॥ರುದ್ರಗೌಡ ಸಾಹೇಬರನ್ನು ಯಾವದೊಂದು ಪ್ರಸಂಗದಲ್ಲಿ ಕೆಡುವಬೇಕೆಂಬ ದುಷ್ಟ ಆಲೋಚನೆಯನ್ನು ಮಾಡಿ, ಮೆ॥ಕಲೆಕ್ಟರ ಸಾಹೇಬ ಬಹದ್ದೂರರವರ ಕಡೆಗೆ ಇವರ ವಿರೋಧಪರವಾದ ಗಿಲ್ಲೆಯ ಅರ್ಜಿಗಳನ್ನು ಮಾಡಿದರು. ಅದರಿಂದ ಕಡೆಗೆ ಮಾಡಿದವರ ದುರ್ವರ್ತನೆಯೇ ಪ್ರಕಟವಾಯಿತಲ್ಲದೆ, ರಾವಬಹದ್ದೂರರವರ ವಿಷಯಕ್ಕೆ ಸರಕಾರಕ್ಕೆ ತಿಲಮಾತ್ರ ಸಂಶಯವು ಬರಲಿಲ್ಲ. ಅವರ ವಿಶ್ವಪ್ರಯತ್ನವೆಲ್ಲ ನಿಷ್ಫಲವಾಯಿತು.

ಬಕಾಸುರನ ಭಂಗ

ಇದೇ ಸಂಧಿಯಲ್ಲಿ ಮುರಗೋಡಿನ ಸರ್ಕಲ್ ಇನಸ್ಪೆಕ್ಟರರಾಗಿದ್ದ, ರಾಮಚಂದ್ರ ಕೃಷ್ಣ ಕುಲವಳ್ಳಿ ಇವರ ಮೇಲೆ ಜಾಲೀಕಟ್ಟಿ ಮಜರೆ ಜೀವಾಪುರದ ಒಬ್ಬ ಹೆಂಗಸು ತನ್ನ ಕಡೆಯಿಂದ ಲಂಚ ತೆಗೆದುಕೊಂಡ ಬಗ್ಗೆ ಫಿರ್ಯಾದಿಯನ್ನು ಮಾಡಲಾಗಿ ರಾ.ಬ॥ರವರು ಅದನ್ನು ಸವದತ್ತಿಯ ಮಾಮಲೇದಾರರಾದ ರಾಮಚಂದ್ರ ಸುಬ್ರಾವ ಬೈಂದೂರಕರ ೧ನೇ ವರ್ಗ ಮಾಜಿಸ್ಟ್ರೇಟ ಇವರ ಕಡೆಗೆ ವಿಚಾರಕ್ಕೆ ಹಾಕಿದರು. ಸರ್ಕಲ್ ಇನ್‌ಸ್ಪೆಕ್ಟರರು ಆ ಬಡಹೆಂಗಸಿನ ಕಡೆಯಿಂದ ಲಂಚತೆಗೆದುಕೊಂಡದ್ದು ಪ್ರತ್ಯಕ್ಷವಾಗಿ ತೋರುತ್ತಿರಲು, ಆ ಸರ್ಕಲರ ಪಕ್ಷಪಾತದಿಂದ ಮಾಮಲೇದಾರರು ಆ ವ್ಯಾಜ್ಯವನ್ನು ಬಿಟ್ಟುಬಿಟ್ಟರು. ಈ ಬೈಂದೂರಕರರ ಗುರ್ತು ವಾಚಕರಿಗೆ ಇರಬಹುದು. ಹಿಂದೆ ಬೆಳಗಾವಿಯ ಚೀಟ್ನಿಸರಾಗಿದ್ದಾಗ ತಮ್ಮ ಕೈ ಬೆಚ್ಚಗೆ ಮಾಡಿಕೊಂಡು ಭೀಮಾಜಿ ಸಾಂಗಲೀಕರರಿಗೆ ಹುಕ್ಕೇರಿ ಮಹಾಲಕರಿಯ ಜಾಗೆಯನ್ನು ಕೊಡಿಸಿದ ಮಹಾರಾಯರು ಇವರೇ! ಲಂಚದ ಸಂಬಂಧವಾಗಿ ಇವರು ಆ ಮಹಾಲಕರಿಯ ಗುರುಗಳಾಗಿದ್ದರೆಂದು ಹೇಳಬಹುದು. ಮಹಾಲಕರಿಗಳಿಗಿಂತಲೂ, ಇವರ ಲಂಚದ ವ್ಯಾಪಾರವು ಬಲುದೊಡ್ಡದು. ಮೇಲಾಗಿ ತಾವು ೧ನೇ ವರ್ಗ ಮಾಜಿಸ್ಟ್ರೇಟರೆಂಬ ಅಹಂಕಾರವು ಅವರಲ್ಲಿ ಪ್ರಬಲವಾಗಿತ್ತು. ನನ್ನ ಸಮಾನ ಯಾರೂ ಇಲ್ಲವೆಂದೂ, ನನಗೆ ನಾನೇ ಸರಿಯಾದವನೆಂದೂ ಇವರು ತಿಳಿಯುತ್ತಿದ್ದರು. ಸಾವಿರಗಟ್ಟಲೆ ಲಂಚ ಸಿಕ್ಕಿತೆಂದರೆ ಹಿಂದುಮುಂದಿನ ವಿಚಾರವನ್ನೇನು ಮಾಡದೆ ಮನಬಂದಂತೆ ನಿರ್ಣಯಗಳನ್ನು ಮಾಡುತ್ತಿದ್ದರು. ಬಂದದ್ದನ್ನೆಲ್ಲ ಬಕಾಸುರನಂತೆ ಬಕ್ಕರಿಸುವ ಕಾಯಕವನ್ನೇ ಹಿಡಿದಿದ್ದರು. ಈ ಬೈಂದೂರರೆಂಬ ಬಕಾಸುರನ

ಬಲವನ್ನು ಪರೀಕ್ಷಿಸಲಿಕ್ಕೆ ಮುಂದೆ ಬಲಭೀಮನು ಬರುವನೆಂಬ ಭವಿತವ್ಯವು ಯಾರಿಗೂ ತಿಳಿದಿದ್ದಿಲ್ಲ. ರಾ.ಬ॥ರುದ್ರಗೌಡ ಸಾಹೇಬರ ಲಂಚದ ಪ್ರತಿಬಂಧವು ಅವರ ಮನಸಿಗೆ ಎಳ್ಳಷ್ಟು ಬಂದಿದ್ದಿಲ್ಲ. ತೋರ್ಮುಖದಲ್ಲಿ ಇವರ ಕೂಡ ಪ್ರೇಮದಿಂದ ವರ್ತಿಸುತ್ತಿದ್ದರೂ "ವಿಷಕುಂಭ ಪಯೋ ಮುಖಂ"ಎಂಬಂತೆ ಅವರ ಆಶಾತುರವಾದ ಅಂತರಂಗದಲ್ಲಿ ಅಂಚುಮಟ ವಿಷತುಂಬಿತ್ತು. ಗುದ್ದಿನೊಳಗಿನ ಹಾವಿನಂತೆ ಆ ವಿಷವು ಒಳಗೇ ಹರಿದಾಡುತ್ತಿತ್ತು.

ಬೈಂದೂರಕರರು ಪಕ್ಷಪಾತದಿಂದ ಸರ್ಕಲರ ಈ ಲಂಚದ ಪ್ರಕರಣವನ್ನು ಬಿಟ್ಟಿದ್ದರಿಂದ ರಾವಬಹದ್ದೂರವರ ನಿರ್ಮಲವಾದ ಮನಸು ಕ್ಷೋಭಿಸಿತು. ಇವರು ಲಂಚಕ್ಕೆ ಅರಿಗಳೆಂದು ಗೊತ್ತಿದ್ದು, ಈ ಪ್ರಕರಣವನ್ನು ಇವರೇ ತಮ್ಮ ಕಡೆಗೆ ವಿಚಾರಕ್ಕೆ ಹಾಕಿದ್ದು, ರಾ.ಸಾ॥ಬೈಂದೂರಕರರು ಅದನ್ನು ಅಲಕ್ಷಮಾಡಿ, ಮೃಗೇಂದ್ರರಂಥ ವರಿಷ್ಠರನ್ನು ಧಿಕ್ಕರಿಸಿ, ಯಾರ ಅಂಜಿಕೆಯಿಲ್ಲದೆ ತಾವು ಅದರಲ್ಲಿ ಪ್ರತ್ಯಕ್ಷವಾಗಿ ಪಕ್ಷಪಾತವನ್ನು ಮಾಡಿ, ಆ ಪ್ರಕರಣವನ್ನು ಬಿಟ್ಟು ಬಿಟ್ಟಿದ್ದು ಎಷ್ಟು ಮದಾಂಧತನವು? ಎಷ್ಟು ಗರ್ವವು? ಮದಾಂಧರ ಕಣ್ಣು ಮಬ್ಬಿಗೆ ಬಂದಿರುತ್ತವೆ. ಅವರಿಗೆ ಕಣ್ಣು ಮುಂದಿನದೇನೇನೂ ಕಾಣಿಸುತ್ತಿರುವದಿಲ್ಲ. ಕಣ್ಣು ಮುಚ್ಚಿ ಕೆಲಸಮಾಡುತ್ತಿರುತ್ತಾರೆ. ಕಣ್ಣುಬೇನೆ ಬಂದ ಹುಲಿಯು ಅಡ್ಡತಿಡ್ಡ ಹೋಗುತ್ತಿರುವಂತೆ ಇವರಾದರೂ ನ್ಯಾಯಮಾರ್ಗವನ್ನು ದೂರೆ ಬಿಟ್ಟಿರುತ್ತಾರೆ. ರಾವಬಹದ್ದೂರವರು ಈ ಬೈಂದೂರಕರರ ದುಷ್ಟವಾಸನೆಯನ್ನೂ, ದುರ್ವರ್ತನೆಯನ್ನೂ ತಿಳಿದು ಈ ಪ್ರಕರಣದ ಸಾದ್ಯಂತ ವಿವರವನ್ನು ಬರೆದು ಮೆ॥ಕಲೇಕ್ಟರ ಸಾ॥ಬಹದ್ದೂರವರ ಕಡೆಗೆ ಕಳಿಸಿದರು. ಬೈಂದೂರಕರರು ರಾವಬಹದ್ದೂರವರ ಮೇಲೆ ಎಷ್ಟೋ ಗಿಲ್ಲೆಗಳ ಅರ್ಜಿಗಳನ್ನು ಮಾಡಿಸಿದರು. ಮೆ॥ಕಲೇಕ್ಟರ ಕಡೆಯಿಂದ ಮೆ॥ಕಮಿಶನರ ಕಡೆಗೆ ಬರೆದು ಹೋಗಿ ಕಡೆಗೆ ಮುಂಬಯಿ ಸರಕಾರದಲ್ಲಿ ಯೋಗ್ಯ ನಿರ್ಣಯವಾಗಿ, ಸರಕಾರದವರು ಈ ಬೈಂದೂರಕರರ ೧ನೇ ವರ್ಗ ಮಾಜಿಸ್ಟ್ರೇಟ ಅಧಿಕಾರವನ್ನು ಕಸಕೊಂಡು, ಅವರನ್ನು ಸವದತ್ತಿಯಿಂದ ಕಿತ್ತು, ಕುಲಾಬಾ ಜಿಲ್ಲೆಯ ಅತಿ ಕೆಟ್ಟ ಹವೆಯುಳ್ಳ ಮಹಾಡ ತಾಲೂಕಿಗೆ ವರ್ಗಮಾಡಿದರು. ಮತ್ತು ಮಾಮಲೇದಾರ ಆಜ್ಞೆನಲ್ಲಿ ಬಡತೀ ಬಗ್ಗೆ ಮುಂದೆ ಏರತಕ್ಕ ಅವರ ಹೆಸರನ್ನು ನಾಲ್ಕು ನಂಬರುಗಳ ಕೆಳಗೆ ಹಾಕಿದರು. ಮತ್ತು ಮುಂದೆ ಅವರಿಗೆ ೩-೪ ವರ್ಷ ಬಡತಿಯಾಗದಂತೆ ಹುಕೂಂ ಮಾಡಿದರು. ಈ ಪ್ರಕಾರ ಇವರ ಅಧಿಕಾರ ಕಸಕೊಂಡದ್ದು, ಗವ್ಹರ್ನಮೆಂಟ ಗ್ಯಾಝೇಟ ೧ನೇ ಭಾಗದ ೩೪೬ನೇ ಪಾನಿನಲ್ಲಿ ಪ್ರಸಿದ್ಧವಾಗಿರುತ್ತದೆ. ಸರಕಾರ ಜಾಹಿರಾತ ನಂಬರ ೧೪೫೪/೨೬-೨-೧೯೦೨.

ಈ ಪ್ರಕಾರ ಬೈಂದೂರಕರರ ದುರ್ಗುಣಗಳು ಬೈಲಿಗೆ ಬಂದು, ಅವರಿಗೆ ಅವನತಿಯಾದದರಿಂದ ಬಕಾಸುರನ ಹಾವಳಿಯು ತಗ್ಗಿದಂತಾಯಿತು. ಬಕಾಸುರನ ಕೊಲೆಯಿಂದ ಕುಂಡಿನೀಪುರದವರಿಗೆ ಸಂತೋಷವಾದಂತೆ ಬೈಂದೂರಕರರ ಪರಾಭವದಿಂದ ಸವದತ್ತಿ ತಾಲೂಕಿನವರಿಗೆಲ್ಲ ಅತ್ಯಾನಂದವಾಗಿ ಹೋಯಿತು. ಅವರ ಆ ೧ನೇ ವರ್ಗ ಮಾಜಿಸ್ಟ್ರೇಟ ಅಧಿಕಾರ ಹೋದದರಿಂದ ಅವರ ಮೋರೆಯ ಮೇಲಿನ ಮೂಗೇ ಹೋದಂತಾಯಿತು. ಅವರ ಗರ್ವವು ಭಂಗವಾಯಿತು. ಅದರ ಪರಿಣಾಮವು ಮಂದಿಯಲ್ಲಿ ಮೋರೆ ತೋರಿಸಿದಂತಾಯಿತು. ಕಬ್ಬು ಸವಿ ಹತ್ತುತ್ತದೆಂದು ಬೇರು ಸಹಿತವಾಗಿ ತಿನ್ನಬಾರದು. ದುಷ್ಟಮನಸಿನವರಿಗೆ ದೇವರು ದುರ್ಗತಿಯನ್ನೇ ಕೊಡುತ್ತಾನೆ. ಮಲಗಿದ ಸಿಂಹನನ್ನು ಕೆಣಕಿ ಬಡ ನರಿಗಳು ಜೀವಿಸುವವೇ? ಷಣ್ಮುಖ ವೀರಭದ್ರಾದಿ ವೀರ ಅಮರರ ಉತ್ಪತ್ತಿಯು ಸುಮ್ಮಸುಮ್ಮನೆ ಆಗಲಿಲ್ಲ. ರಾಮ, ಭೀಮಾದಿಗಳ ಅವತಾರಗಳು ಕಥಾರಮ್ಯತೆಗಾಗಿ ಪ್ರಕಟವಾಗಲಿಲ್ಲ. ದುಷ್ಟ ಠಕ್ಕ ನರರಿಂದುಂಟಾಗುತ್ತಿದ್ದ ಪ್ರಜಾಪೀಡನೆಯನ್ನು ತಪ್ಪಿಸುವದಕ್ಕಾಗಿಯೇ ಆಗಲಿಲ್ಲವೇ? ಕಾಲಕಾಲಕ್ಕೆ ಆಗುವ ಜನಪೀಡನೆಯನ್ನು ಶಾಂತಮಾಡಲಿಕ್ಕೆ ಆಗಾಗ್ಗೆ ಒಬ್ಬ ಅಧಿಕರ್ತ್ಯವು ಉದಯವಾಗುತ್ತಿರುತ್ತಾನೆ. "ಅತಿ ಸರ್ವತ್ರ ವರ್ಜಯೇತ್" ಎಂಬಂತೆ ಈ ಕೆಟ್ಟ ಕಾಮದಾರರ ದುರ್ವರ್ತನೆಯಿಂದ ಪ್ರಜಾತಾಪವು ಹೆಚ್ಚಾಗಲು, ಈ ತಾಪವನ್ನು ಕೆಲವು ಅಂಶದಿಂದಾದರೂ ಕಡಿಮೆ ಮಾಡುವ ಉದ್ದಿಶ್ಯವಾಗಿ

ದೇವರು ತಮ್ಮ ರುದ್ರಾವತಾರದ ಕಿಂಚಿದಂಶದಿಂದ ರಾ.ಬ॥ರುದ್ರಗೌಡರನ್ನು ಸೃಜಿಸಿದನೋ ಎಂಬಂತೆ, ಇವರು ಕೆಟ್ಟ ಜನಸಮೂಹಕ್ಕೆಲ್ಲ ಪ್ರಳಯಕಾಲದ ರುದ್ರನಂತೆಯೇ ರೌದ್ರಸ್ವರೂಪಿಗಳಾಗಿ ತೋರಹತ್ತಿದರು.

ಚಿಕ್ಕಂದಿನಿಂದಿದ್ದ ಯಾವದೊಂದು ವ್ಯಸನವನ್ನು ಬಿಡುವದು ಯಾರಿಗಾದರೂ ಬಿಗಿಯೆನಿಸುತ್ತದೆ. ಅದರಂತೆ ಬಹುದಿವಸದಿಂದ ತಿನ್ನುತ್ತಿದ್ದ ಲಂಚದ ಚಟವನ್ನು ಬಿಡಲಿಕ್ಕೆ ಎಷ್ಟೋ ಜನರಿಗೆ ಕಷ್ಟವಾಗ ಹತ್ತಿತು. ಕೆಟ್ಟನಡತೆಗಳು ಜನರಿಗೆ ತೀವ್ರವಾಗಿ ಸೇರಿಕೊಳ್ಳುತ್ತವೆ. ಕೀಳುಜನರಿಗೆ ಸದಾಚರಣೆಗಳನ್ನು ಅನುಸರಿಸಲಿಕ್ಕೆ ಹೇಳಿದರೆ ಅವರಿಗೆ ಸರಿ ಬರುವದಿಲ್ಲ. ಕಷಾಯವು ವಿಷದಂತೆ ಹತ್ತಿದರೂ ಅದು ಕಡೆಗೆ ಗುಣವನ್ನೇ ಕೊಡುವದೆಂಬದು ಅವರಿಗೆ ತಿಳಿಯುವದಿಲ್ಲ. ಅವರ ದುಷ್ಕೃತ್ಯಗಳನ್ನು ಯಾರಾದರು ಬೈಲಿಗೆ ತಂದರೆ "ಕಂಡದ್ದನಾಡಿದರೆ ಕೆಂಡದಂತಾಗುವರು" ಎಂಬ ಸರ್ವಜ್ಞೋಕ್ತಿಯಿಂದ ರೋಷವಾಗುವದು. ದುಷ್ಕೃತ್ಯಗಳನ್ನೂ, ದುರಾಚಾರಗಳನ್ನೂ ನಿಲ್ಲಿಸಿ ಪ್ರಜಾಶಾಂತಿಯನ್ನು ನೆರೆಗೊಳಿಸುವದು ಸಾಮಾನ್ಯ ಕೆಲಸವಲ್ಲ. ಸಾರ್ವಜನಿಕ ಹಿತದ ಸುಧಾರಣಾಕಾರ್ಯದಲ್ಲಿ ಎಷ್ಟೋ ವಿಘ್ನಗಳು ಬರುತ್ತವೆ. ಎಷ್ಟೋ ಜನರು ಪ್ರಬಲವಾದ ವಿರೋಧಿಗಳಾಗುತ್ತಾರೆ. ಆದರೆ ಕೀಳುಜನರ ದೂಷಣೆಗೆ ಲಕ್ಷ್ಯಗೊಡದೆ ಧೈರ್ಯದಿಂದ ತನ್ನ ಕೆಲಸವನ್ನು ಬಿಡದೇ ಕೊನೆಗಾಣಿಸುವವನೇ ಧೈರ್ಯವಂತನು.

ಬೈಂದೂರಕರವರ ಪ್ರಕರಣದಲ್ಲಿ ಬ್ರಹ್ಮವೃಂದವೆಲ್ಲ ಒಂದಾಯಿತು. ತಾಲೂಕ ಕಚೇರಿಯ ಬ್ರಾಹ್ಮಣರೂ, ಕಲೇಕ್ಟರ ಆಫೀಸಿನ ಹಾರುವರೂ, ಕಮಿಶನರ ಕಚೇರಿಯ ವಿಪ್ರರೂ ಒಟ್ಟುಗೂಡಿದ್ದರಿಂದ ಎಲ್ಲರ ಗುಟ್ಟು ಒಂದೇ ಆಯಿತು. ಇವರೆಲ್ಲರು ಒಂದು ಒಳ್ಳೇ ಹಂಚಿಕೆಯನ್ನು ತೆಗೆದರು. ಅದೇನೆಂದರೆ, ರುದ್ರಗೌಡರು ಆರೋಪಿಗಳನ್ನು ಹೆದರಿಸಿ, ಅವರ ಮನಸಿನ ವಿರುದ್ಧವಾಗಿ ತಮಗೆ ಬೇಕಾದಂತೆ ಧಮಕಿಯಿಂದ ಕಬೂಲಿ ಜವಾಬಗಳನ್ನು ತೆಗೆದುಕೊಂಡು, ನಿರಪರಾಧಿಗಳಾದ ಬ್ರಾಹ್ಮಣರ ಮೇಲೆ ದ್ವೇಷಬುದ್ಧಿಯಿಂದಲೂ, ಅಧಿಕಾರಬಲದಿಂದಲೂ, ಸುಳ್ಳು ಸುಳ್ಳೇ ಖಟ್ಲೇ ಮಾಡಿ, ಶಿಕ್ಷೆಯನ್ನು ಮಾಡಿಸುತ್ತಾರೆಂಬದಾಗಿ ಸರಕಾರಕ್ಕೆ ಸಿದ್ಧ ಮಾಡಿತೋರಿಸಬೇಕೆಂದು ಯೋಚಿಸಿದರು. ಯಾಕೆಂದರೆ ಅನೇಕ ಕಪಟತಂತ್ರಗಳಿಂದ ಹೇಗಾದರೂ ಮಾಡಿ ಇದೊಂದು ಪ್ರಕರಣವನ್ನು ಸರಕಾರಕ್ಕೆ ಖಾತ್ರಿಮಾಡಿ ಕೊಟ್ಟರೆ, ಮುಂದೆ ಇವರಿಗೆ ಇಂಥ ಖಟ್ಲೆಗಳನ್ನು ಮಾಡಲಿಕ್ಕೆ ಆಸ್ಪದವಾಗುವದಿಲ್ಲೆಂದೂ, ಮಾಡಿದರೂ ಅವುಗಳ ಮೇಲೆ ಸರಕಾರದ ನಂಬಿಗೆ ಹುಟ್ಟುವದಿಲ್ಲೆಂದೂ, ಇದು ಬಹುಕಾಲದ ವರೆಗೆ ಸಬಲವಾದ ಆಧಾರವಾಗಿ ನಮ್ಮ ಸಮಾಜಕ್ಕೆ ಹಿತಕರವಾಗುವದೆಂದೂ, ಕಾರಣ ಹೇಗಾದರೂ ಮಾಡಿ ಈ ಕಪಟಕೃತ್ಯವನ್ನು ಸಿದ್ಧಿಗೊಯ್ಯಬೇಕೆಂದೂ ಊಹಿಸಿ ಎಲ್ಲರೂ ಒಕ್ಕಟ್ಟಾಗಿ ರಾ.ಬ॥ರುದ್ರಗೌಡರವರ ವಿಷಯವಾಗಿ ಸರಕಾರದಲ್ಲಿರುವ ಪೂಜ್ಯ ಬುದ್ಧಿಯನ್ನು ಕಲುಷಿತ ಮಾಡುವ ಎಷ್ಟೋ ಗಿಲ್ಲೆಗಳನ್ನು ಮಾಡಿದರು. ಮೆ॥ಬ್ರಾವುನ್ ಕಲೇಕ್ಟರ ಸಾಹೇಬ ಬಹದ್ದೂರವರ ಸ್ವಾರಿಯು ಸವದತ್ತಿಯಲ್ಲಿ ಆದಾಗ್ಗೆ ಎಲ್ಲ ವಕೀಲ ಜನರೂ, ಮಾಮಲೇದಾರರೂ, ಬೇರೆ ಎಷ್ಟೋ ಜನರೂ ಅವರ ಭೆಟ್ಟಿಯಾಗಿ ಅನೇಕ ಹಾರತುರಾಯಿಗಳಿಂದಲೂ, ಸ್ವಾರ್ಥಸಾಧಕ ಸವಿನುಡಿಗಳಿಂದಲೂ ಅವರನ್ನು ಸತ್ಕರಿಸಿದರು. ಆದರೆ ಸೂಕ್ಷ್ಮದೃಷ್ಟಿಗಳೂ, ನ್ಯಾಯನಿಷ್ಠರೂ ಆದ ಮೆಹರ್ಬಾನರು ಅವರ ಅಂತರಂಗವನ್ನೂ, ಆಡಂಬರವನ್ನೂ ಕೂಡಲೆ ತಿಳಿದು, ಇದೆಲ್ಲ ಕೃತ್ರಿಮ ಸತ್ಕಾರವೆಂದೂ, ಕಾರ್ಯಸಾಧನೆಯ ಕಪಟತಂತ್ರವೆಂದೂ ಕೂಡಲೆ ತಮ್ಮ ಮನಸಿನೊಳಗೆ ನಿಶ್ಚಯ ಮಾಡಿಕೊಂಡರು. ಮಾಮಲೇದಾರರು ಹಿಂದಿನಿಂದ ಮೆ॥ಕಲೇಕ್ಟರ ಸಾಹೇಬ ಬಹದ್ದೂರವರ ಭೆಟ್ಟಿಗೆ ಪುನಃ ಹೋಗಲು, ಮೆಹರ್ಬಾನರವರು ಆ ಮಾಮಲೇದಾರರನ್ನು ತಮ್ಮ ರಾಹುಟಿಯ ಒಳಗೆ ಬರಗೊಡದೆ ಹೊರಗೆ ನಿಲ್ಲಿಸಿ, ತಾವೇ ಹೊರಗೆ ಬಂದು "ಈಗ ನಾನು ಕೇಳಿದಷ್ಟು ಜವಾಬವನ್ನು ಕೊಡಿರಿ. ಹೆಚ್ಚಿನ ಸಂಗತಿಗಳ ಕಾರಣವೇನಿಲ್ಲ" ವೆಂದು ನಿಷ್ಠುರವಾಗಿ ನುಡಿದರು.

ಈ ಮಾಮಲೇದಾರರೂ, ವಕೀಲರೂ ಕಲ್ಪಿಸಿದ ಈ ಯುಕ್ತಿಯು ಸಾಮಾನ್ಯವೆಂದು ತಿಳಿಯುವಹಾಗಿಲ್ಲ. ಪಾಂಡವರ ನಾಶಕ್ಕಾಗಿ ಕೌರವರು ರಚಿಸಿದ ಅರಗಿನ ಮನೆಯಂತಿತ್ತು. ತೀರ ಮುದ್ದೇದ ಯುಕ್ತಿಯನ್ನೇ ಹುಡುಕಿ ತೆಗೆದಿದ್ದರು. ಇವರ ಈ ಕುಯುಕ್ತಿಯು ನಾಟಿದ್ದರೆ ಮಾತ್ರ ಇವರ ಹಾರಾಟಿಕೆಯನ್ನು ಯಾರಿಂದಲೂ ಹಿಡಿಯುವದಾಗುತ್ತಿದ್ದಿಲ್ಲ. ಈ ಮಂಗೋಪಂತರ ಹಾರಿಕೆಗಳು ಮುಗಿಲನ್ನೇ ಮುಟ್ಟುತ್ತಿದ್ದವು. ಆದರೆ ಇವರ ಇಂತಹ ಕ್ಷುದ್ರಯುಕ್ತಿಯೆಲ್ಲ ರಾ.ಬ॥ರುದ್ರಗೌಡರ ಜ್ಞಾನದೃಷ್ಟಿಯ ಮುಂದೆ ಆಗಲೇ ಹೊಳೆದು ಹೋಯಿತು. ಇವರ ಇಂಗಿತವನ್ನೆಲ್ಲ ಮುಂಗಂಡು ಮನಸಾ ಸತ್ಯಬುದ್ಧಿಯಿಂದ ಸರಕಾರಿಯ ಕಾಯದೆಯಂತೆ ಇವರು (ರುದ್ರಗೌಡರು) ಈ ಪ್ರಕರಣವನ್ನು ಬಿಡದೆ, ಯಥಾ ಪ್ರಕಾರ ಮುಂದೆ ಕೆಲಸ ನಡೆಸಿದರು. ರಾಮಾಯಣ ಭಾರತಾದಿಯುದ್ಧಗಳಲ್ಲಿ ಸತ್ಯಪಕ್ಷದ ವೀರಾಧಿ ವೀರರು, ಅರಿಬಲದ ನೂರಾರು ಬಾಣಗಳನ್ನು ಒಂದೇ ಬಾಣಪ್ರಯೋಗದಿಂದ ಭೇದಿಸುವಂತೆ, ರುದ್ರಗೌಡರ ರಾಜ್ಯ ಕಾರಭಾರದ ನ್ಯಾಯಯುದ್ಧದಲ್ಲಿ ಸತ್ಯಪಕ್ಷದಿಂದ ಪ್ರಜ್ವಲಿಸುವಂಥ ತಮ್ಮ ಒಂದೇ ಯುಕ್ತಿಯಿಂದ ಬ್ರಾಹ್ಮಣರ ಸಾವಿರಾರು ಕುಯುಕ್ತಿಗಳನ್ನು ಹೊಡೆದು ಹಾಕುತ್ತಿದ್ದರು. ಏನಾದರೂ ಮಾಡಿ ರುದ್ರಗೌಡರನ್ನು ಗೊಂದಲಕ್ಕೆ ಹಾಕಬೇಕೆಂದು ಬ್ರಾಹ್ಮಣ ಸಮಾಜವೆಲ್ಲ ಒಕ್ಕಟ್ಟಾಗಿ ನಡಿಸಿರುವ ಕಪಟವ್ಯಾಪಾರವೆಲ್ಲ "ಮೊಮ್ಮಗಳು ಅಮ್ಮನಿಗೆ ಕೆಮ್ಮು ಕಲಿಸಿದಳೆಂಬ" ಗಾದೆಯ ಮಾತಿನಂತೆ ಜಗದ ನಗೆಗೆ ಕಾರಣವಾಗಿರುತ್ತದೆ.

ಚಂದ್ರಹಾಸನ ಕಥಾಭಾಗದಲ್ಲಿ ದುಷ್ಟಬುದ್ಧಿಯ ಕುತಂತ್ರಗಳು ಆತನ ಸಮೂಲ ವಿನಾಶಕ್ಕೆ ಕಾರಣವಾಗಿ ಪ್ರತಿಪಕ್ಷವೇ ವಿಜಯಿಯಾದಂತೆ, ಬೈಂದೂರಕರರ ದುರ್ಗುಣಗಳು ಬೈಲಿಗೆ ಬಂದು, ಅವೇ ಅವರ ಅವನತಿಗೆ ಕಾರಣವಾಗಿ, ಅವರ ಗರ್ವಭಂಗವಾಗಲು ಸಜ್ಜನ ಸಮೂಹಕ್ಕೆಲ್ಲ ಸಂತೋಷವಾಯಿತು. ಮುಂದೆ ಸವದತ್ತಿಯ ಸಬ್‌ರಿಜಿಸ್ಟ್ರರರಾದ ರಂಗೋ ಗೋವಿಂದ ದೇಶಪಾಂಡೆ ಸಾಕೀನ ಅಥಣಿ ಇವರ ಮೇಲೆ, ತನ್ನ ಕಡೆಗೆ ಇವರು ಲಂಚ ತೆಗೆದುಕೊಂಡರೆಂಬದಾಗಿ ಅಂದಾನೆಪ್ಪ ಬಿನ್ ಗುರುಪಾದಪ್ಪ ಗಾಣಗಿ ಸಾಕೀನ ಸವದತ್ತಿ ಈತನು ಫಿರ್ಯಾದಿಯನ್ನು ಮಾಡಿದನು. ರಂಗೋ ಗೋವಿಂದ ಇವರು ಲಂಚ ತೆಗೆದುಕೊಂಡದ್ದು ನಿಜವೆಂದು ಅಂದಾನೆಪ್ಪನ ಜವಾಬಗಳು ಮೊದಲಿಗೆ ಮಾಮಲೇದಾರರ ಕಡೆಗೂ, ರಾ.ಬ॥ಅರಟಾಳ ಸಾಹೇಬರ ಕಡೆಗೂ ಆದವು. ಮುಂದೆ ಈ ಖಟ್ಲೆಯ ವಿಚಾರವು ಬೆಳಗಾವಿಯ ಹುಜೂರ ಡಿಪೂಟಿ ಕಲೇಕ್ಟರರಾದ ರಾ.ಬ॥ಗೋವರ್ಧನದಾಸ ಲಲ್ಲುಭಾಯಿ ಸಾಹೇಬರವರ ಕಡೆಗೆ ನಡೆಯಿತು. ಅಷ್ಟರಲ್ಲಿ ಧೂರ್ತರಾದ ರಂಗೋ ಗೋವಿಂದ ಇವರು ಅಂದಾನೆಪ್ಪನ ಕೈ ಬೆಚ್ಚನೆ ಮಾಡಿದ್ದರಿಂದ ಅಂದಾನೆಪ್ಪನು ರಾ.ಬ॥ಲಲ್ಲುಭಾಯಿ ಸಾಹೇಬರ ಮುಂದೆ ಸದರೀ ರಂಗೋ ರಾಮಚಂದ್ರ ಇವರು ನನ್ನ ಕಡೆಯಿಂದ ಲಂಚ ತೆಗೆದುಕೊಂಡಿಲ್ಲವೆಂದು ಸುಳ್ಳು ಜವಾಬು ಕೊಟ್ಟನು. ಅದರಿಂದ ರಾ.ಬ॥ಲಲ್ಲುಭಾಯಿ ಸಾಹೇಬರು ರಂಗೋ ಗೋವಿಂದನನ್ನು ಬಿಡುಗಡೆ ಮಾಡಿ, ಸುಳ್ಳು ಜವಾಬ ಕೊಟ್ಟಿದ್ದಕ್ಕಾಗಿ ಅಂದಾನೆಪ್ಪನ ಮೇಲೆ ರುಕಾರಕೊಟ್ಟರು. ಮುಂದೆ ಈ ಅಂದಾನೆಪ್ಪನ ವಿಚಾರವು ಮೆ॥ ಬ್ರಾವುನ ಸಾಹೇಬ ಕಲೇಕ್ಟರ ಬಹದ್ದೂರರವರ ಕಡೆಗೆ ನಡಿದು ಆತನಿಗೆ ಆರು ತಿಂಗಳ ಸಕ್ತ ಮಜೂರಿಯ ಶಿಕ್ಷೆಯೂ, ೫೦೦ ರೂಪಾಯಿ ದಂಡವೂ ಆಯಿತು. ಆದರೆ ರಂಗೋ ಗೋವಿಂದ ಇವರು ಬಹು ಲಂಚಗುಳಿಗಳೆಂದು ರುದ್ರಗೌಡರವರಿಗೆ ನಿಶ್ಚಯವಾಗಿ ಗೊತ್ತಿದ್ದದರಿಂದ ಅವರ ಬಿಡುಗಡೆಯಿಂದ ನ್ಯಾಯವಾಗಲಿಲ್ಲೆಂದು ಬಗೆದು, ಅವರ ಕೃತಕ ಬುದ್ಧಿಯೆಲ್ಲ ಒಡೆದು ತೋರುವಂತೆ ಬೇರೆ ರಿಪೋರ್ಟ ಮಾಡಲು, ಅದು ಸರಕಾರದ ತನಕ ಹೋಗಿ ಅಲ್ಲಿ ವಿಚಾರ ನಡೆದು ರಾ.ಬ॥ಅರಟಾಳ ಸಾಹೇಬರವರ ಸಾಕ್ಷಿಯಾಯಿತು. ರುದ್ರಗೌಡರು ಬಹುಜಾಣ್ಮೆಯಿಂದಲೂ, ಶೋಧದಿಂದಲೂ, ಆ ರಂಗೋ ಗೋವಿಂದರವರು ಅಳತಿಲ್ಲದೆ ತಿಂದಿದ್ದ ಲಂಚವನ್ನೆಲ್ಲ ಪ್ರತ್ಯಕ್ಷಮಾಡಿ ತೋರಿಸಿ ಕೊಡಲು ಯೋಗ್ಯನಿರ್ಣಯವಾಗಿ, ರಂಗೋ ಗೋವಿಂದ ದೇಶಪಾಂಡೆ ಸಬ್‌ರಜಿಸ್ಟ್ರರರಿಗೆ ಬರತರ್ಫಿಯಾಗಿ

ಹೋಯಿತು. ಮತ್ತು ಸುಳ್ಳು ಜವಾಬಕೊಟ್ಟ ಆರೋಪದಿಂದ ಫಿರ್ಯಾದಿ ಅಂದಾನೆಪ್ಪನಿಗೆ ಮೊದಲಿಗೆ ಆದ ಶಿಕ್ಷೆಯು ಕಾಹೀಮಾಯಿತು. ಠರಾವ ನಂಬರ ೮೧೧೪/೧೮-೧೧-೧೯೦೨.

ಮುಳಗುಂದರವರ ಮುಗತಾಯ

ಈ ಪ್ರಕಾರ ದುರಹಂಕಾರದಿಂದ ಮೆರೆಯುತ್ತಿದ್ದ ನರಾಧಮರ ವಧೆಯಾಗಹತ್ತಲು, ಇಡೀ ಜಿಲ್ಲೆಯಲ್ಲಿ ರಾವಬಹದ್ದೂರ ಅವರ ದರ್ಪವೂ, ಭಯವೂ ಕೂತು ಹೋಯಿತು. ಖೂಳಜನರ ಬಾಳ್ವೆಯು ಗೋಳಾಡಹತ್ತಿತು. ದುಷ್ಟರ ದುಷ್ಕೃತ್ಯಗಳು ಎಷ್ಟೋ ಕಡಿಮೆಯಾದವು. ಪ್ರಜಾತಾಪವು ನಂದಹತ್ತಿತು. ಲಂಚವು ನಿರ್ನಾಮವಾಗ ಹತ್ತಿತು. ರಾವಬಹದ್ದೂರವರ ಯಶೋದುಂದುಭಿಯು ಗಂಭೀರವಾಗಿ ನುಡಿಯಹತ್ತಿತು. ಇವರಿಗೆ ಎಲ್ಲಿ ಹೋದಲ್ಲಿ ಮಾನ ಮರ್ಯಾದೆಗಳು ಹೆಚ್ಚಹತ್ತಿದವು. ಈ ಮೇರೆಗೆ ಸುಖಶಾಂತಿಗಳನ್ನು ಸ್ಥಿರಗೊಳಿಸುತ್ತ ತಮ್ಮ ಅಡಳತೆಯಲ್ಲಿ ಸಂತೋಷದಿಂದಿರುತ್ತಿರಲು, ಸಂಪಗಾವ ತಾಲೂಕಿನ ಮಾಮಲೇದಾರರಾಗಿದ್ದ ರಾ.ಸಾ॥ಹಣಮಂತ ವಾಸುದೇವ ಮುಳಗುಂದ ಇವರು ಬಹಳೇ ಲಂಚಗುಳಿಗಳೆಂದೂ, ಅನ್ಯಾಯಗಿಂದ ವರ್ತಿಸಿ ಬಹುಜನರ ಗೋಣು ಮುರಿಯುತ್ತಾರೆಂದೂ, ರಾವಬಹದ್ದೂರವರಿಗೆ ಸುದ್ದಿ ಹತ್ತಿತು. ಆ ತಾಲೂಕಿನಲ್ಲೆಲ್ಲ ಸಂಚರಿಸಿ ಇವರ ನಿಜಸ್ಥಿತಿಯನ್ನೆಲ್ಲ ತಿಳಿದುಕೊಳ್ಳಹತ್ತಿದರು. ಎಲ್ಲಿ ಕೇಳಿದರೂ ಮಾಮಲೇದಾರರ ವಿಷಯಕ್ಕೆ ಅನ್ಯಾಯದ ವರ್ತನೆಯನ್ನೇ ಜನರು ಹೇಳಹತ್ತಿದರು. ಇವರ ವಿಷಯಕ್ಕೆ ಒಬ್ಬರೂ ಪೂಜ್ಯಭಾವವುಳ್ಳವರಾಗಿರಲಿಲ್ಲ. ಆದರೆ ದುಷ್ಟ ಜನರಿಗೂ, ಲಂಚಬಡಕರಿಗೂ ಈ ಮಾಮಲೇದಾರರ ಸ್ವೈರವರ್ತನದ ಆಳಿಕೆಯು ಹಬ್ಬವಾಗಿತ್ತು. ಇವರ ಉದ್ದಾಮತನವನ್ನೂ, ಅನ್ಯಾಯದ ವರ್ತನವನ್ನೂ ಕೇಳುವವರು ಯಾರೂ ಇದ್ದಿಲ್ಲ. ಸಂಪಗಾವ ತಾಲೂಕಕ್ಕೆ ಸಾರ್ವಭೌಮ ರಾಜನಂತೆ ನಿರಂಕುಶ ಪ್ರಭುತ್ವದಿಂದ ಕಣ್ಣು ಮುಚ್ಚಿಕೊಂಡು ಕೆಲಸ ಮಾಡುತ್ತಿದ್ದರು. ತಾಲೂಕಿನಲ್ಲೆಲ್ಲ ಮೊಗಲಾಯಿಯ ಅಮಲವೇ ನಡೆಯುತ್ತಿತ್ತು. ಸಜ್ಜನರು ಮೂಲೆಗುಂಪಾಗಿ ದುರ್ಜನರ ಏಳ್ಗೆಯಾಗುತ್ತಿತ್ತು. ದುಷ್ಟರು ಅನ್ಯಾಯದಿಂದ ಕಲಹಗಳನ್ನೆಬ್ಬಿಸಿ ಪರರ ವಿತ್ತ, ಜೀವಿತಗಳನ್ನಪಹರಿಸಹತ್ತಿದರು. ಸುಳ್ಳು ಸಾಕ್ಷಿಗಳನ್ನು ಹೇಳುವವರೂ, ಅಭುಕ್ತ ಕಲಹಗಳನ್ನು ರಚಿಸುವವರೂ, ಕೀಳು ಕೃತ್ಯಗಳನ್ನಾಚರಿಸುವವರೂ, ಕ್ರೂರ ಕರ್ಮಿಗಳೂ ಮುಂತಾದವರು, ಮಾಂಸಾತುರದಿಂದ ಕಟಕನಂಗಡಿಯ ಮುಂದೆ ಸುಳಿದಾಡುವ ಶುನಕಗಳಂತೆ ಕಚೇರಿಯ ಸುತ್ತಲೂ, ಮಾಮಲೇದಾರರ ಮನೆಯ ಸುತ್ತಲೂ ಸಂಚರಿಸಹತ್ತಿದ್ದರು. ಸಾರಾಂಶ, ಈ ಮಾಮಲೇದಾರರ ಅನ್ಯಾಯದ ಆಳಿಕೆಯು ಪ್ರಜಾತಾಪವನ್ನುಂಟು ಮಾಡಿತ್ತು.

ಸತ್ಯವಾದಿ ದೇವೇಂದ್ರಪುರಿ

ಇಂತಹ ಅವಿವೇಕತನದ ಮಾಮಲತಿಯ ಅಮಲವನ್ನು ನೋಡಿ, ಅದೇ ತಾಲೂಕದೊಳಗಿನ ಕಿತ್ತೂರಲ್ಲಿರುವ ದೇವೆಂದ್ರಪುರಿಯೆಂಬ ಬಾವಾನವರು ಇವರ ಲಂಚದ ಹಾಗೂ ಅನ್ಯಾಯದ ವರ್ತನೆಯನ್ನು ಸಾದ್ಯಂತವಾಗಿ ಮುದ್ರಿಸಿ ಜಗಜ್ಜಾಹೀರ ಮಾಡಿದ್ದರು. ಅದನ್ನು ತಿಳಿದೂ ತಿಳಿದು ಮಾಮಲೇದಾರರು ತಮ್ಮ ವಕ್ರತನವನ್ನು ಬಿಡಲೇ ಇಲ್ಲ. ನಾಯಿಯ ಬಾಲವನ್ನು ಲಳಿಗೆಯಲ್ಲಿ ಹಾಕಿಟ್ಟರೂ ಡೊಂಕತನವು ಬಿಡುವದಿಲ್ಲ. ಕಡೆಗೆ ಬಾವಾನವರು ಮಾಮಲೇದಾರರಿಗೆ "ನೀವು ಈ ಪ್ರಕಾರದ ಲಂಚಕ್ಕೆ ಆಶಾತುರರಾದದ್ದು ನೆಟ್ಟಗಲ್ಲ. ನಿಮ್ಮ ಅನ್ಯಾಯದ ವರ್ತನವು ಜಗಕ್ಕೆಲ್ಲ ಅಸಹ್ಯವಾಗಿದೆ. ಪ್ರಜಾತಾಪಕ್ಕೆ ಕಾರಣವಾದ ನಿಮ್ಮ ನಿರಂಕುಶ

ಪ್ರಭುತ್ವವು ಬಹಳ ದಿವಸ ನಡೆಯಲಿಕ್ಕಿಲ್ಲ. ನೀವು ಅನ್ಯಾಯ ಮಾಡಿದ್ದು ನಿಜವೋ, ಸುಳ್ಳೋ! ನಿಜವಾದರೆ ಇನ್ನು ಮೇಲೆ ಸದ್ವರ್ತ್ತನೆಯನ್ನು ಅನುಸರಿಸಬೇಕು, ಸುಳ್ಳಾದರೆ ನಾನು ಶಬ್ದಶಃ ಅಕ್ಷರಶಃ ನಿಮ್ಮ ಕುಟಿಲತನವನ್ನು ಸಿದ್ಧ ಮಾಡಿಕೊಡುತ್ತೇನೆ. ನಿಮ್ಮ ಅನ್ಯಾಯದ ಆಳಿಕೆಯ ಅಟ್ಟಹಾಸವನ್ನೂ, ಘಟಿಂಗ ಕಾಯಿದೆಯ ಫಜೀತಿ ಕಲಮಿನನ್ವಯ ಕೆಲಸ ಮಾಡುತ್ತಿರುವ ನಿಮ್ಮ ಅಮಲನ್ನೂ ನೋಡಿ, ಅಹಿರಾವಣ, ಮಹಿರಾವಣ, ಝುಟಿಂಗ ಪಾಚ್ಛಾಯಿ, ಮೊಗಲಾಯಿ ಮುಂತಾದ ಬೇಬಂದಶಾಹಿಗಳು ಬೊಬ್ಬೆಗುಟ್ಟಿ, ಬಳಲ್ದು ಪಾತಾಳವನ್ನು ಸೇರಿಕೊಂಡವು. "ಗಗನೋ ಗಗನಾಕಾರಂ" ಎಂಬಂತೆ ನಿಮಗೆ ನೀವೇ ಸರಿಯಾಗಿರುವಿರಿ. ನಿಮ್ಮ ದುಷ್ಕರವಾದ ಆಳಿಕೆಗೆ ಇನ್ನೊಬ್ಬರ ಸಾಮ್ಯವು ಸಿಗದು. ನಾನು ಬರೆದದ್ದನ್ನು ಧಿಕ್ಕರಿಸಿ ನೀವು ಇನ್ನು ಮೇಲೆ ದುರ್ಮಾರ್ಗದಲ್ಲಿಯೇ ಮಾಮಲತಿಯನ್ನು ಮಾಡುವದಕ್ಕಿಂತ ಪ್ರಾಣತ್ಯಾಗ ಮಾಡಿ, ಕೃತಕರ್ಮದ ಪ್ರಾಯಶ್ಚಿತವನ್ನು ತೆಗೆದುಕೊಳ್ಳಬೇಕು. ಪ್ರಾಣದ ಮೇಲೆ ಪ್ರೀತಿಯಿದ್ದರೆ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಪಲಾಯನ ಮಾಡಿ, ಪ್ರಾಣ ರಕ್ಷಣೆಯನ್ನು ಮಾಡಿಕೊಳ್ಳಬೇಕು. ನಾನು ಬರೆದದ್ದು ಒಂದು ಅಕ್ಷರವಾದರೂ ಸುಳ್ಳಿದ್ದರೆ, ಸುಳ್ಳು ನೋಟೀಸು ಕೊಟ್ಟ ಬಗ್ಗೆ ನನ್ನ ಮೇಲೆ ಖಟ್ಲೇ ಮಾಡಬೇಕು. ಅನ್ಯಾಯದ ಲೇಖನಕ್ಕೆ ಆಗುವ ಶಿಕ್ಷೆಯನ್ನನುಭೋಗಿಸಲಿಕ್ಕೆ ನಾನು ಆತ್ಮಸಾಕ್ಷಿಯಿಂದ ಸಿದ್ಧನಿದ್ದೇನೆ. ಈ ನೋಟಿಸಿನೊಳಗಿನ ವಾಕ್ಯಗಳು ದೇವವಾಕ್ಯಗಳೆಂದು ತಿಳಿಯಬೇಕು." ಎಂಬದಾಗಿ ಬರೆದು ರಜಿಷ್ಟರ ಮಾಡಿ ನೋಟೀಸಿನ ದ್ವಾರ ತಿಳಿಸಿದರು. ಅದಕ್ಕೆ ನಿರುತ್ತರವಾಯಿತು. ಯಾವ ವ್ಯವಸ್ಥೆ ಏನೂ ಆಗಲಿಲ್ಲ. ಕಡೆಗೆ ದೇವೇಂದ್ರ ಪುರಿಯವರು ಈ ನೋಟೀಸಿನ ಪ್ರತಿಗಳನ್ನು ರಾವಬಹದ್ದೂರ ರುದ್ರಗೌಡ ಸಾಹೇಬರವರ ಕಡೆಗೂ, ಮೆಹರ್ಬಾನ ಕಲೇಕ್ಟರ ಸಾಹೇಬರವರ ಕಡೆಗೂ, ಮುಂಬಯಿ ಸರಕಾರದ ಕಡೆಗೂ ಕಳಿಸಿದರು. ಈ ಮುಳಗುಂದ ಮಾಮಲೇದಾರರು ಸಂಪಗಾವ ತಾಲೂಕಿಗೆ ಬಂದು ಹನ್ನೊಂದು ತಿಂಗಳಲ್ಲಿ ೧೨೦೦೦ ರೂಪಾಯಿ ಲಂಚ ತೆಗೆದುಕೊಂಡಿದ್ದರಂತೆ. ಅಂದಮೇಲೆ ಇವರ ಲಂಚದ ಎದ್ದಲಗಾಟವು ಎಷ್ಟಿತ್ತೆಂಬದು ಸ್ಪಷ್ಟವಾಗಿ ತಿಳಿಯುವಂತಿದೆ. ದೇವೇಂದ್ರಪುರಿಯವರು ಸತ್ಯವಾದಿಗಳು. ಅನ್ಯಾಯವು ಇವರಿಗೆ ಸ್ವಲ್ಪವಾದರೂ ಸೇರುತ್ತಿದ್ದಿಲ್ಲ. ಕೆಟ್ಟಜನರಿಂದ ದೂರಿರುತ್ತಿದ್ದರು. ಕೆಟ್ಟ ಕಾಮದಾರರ ಆಡಳಿತದಲ್ಲಿ ಎಷ್ಟೋ ಅನಾಹುತಗಳಾಗುತ್ತಿರುತ್ತವೆ. ಆ ಅನ್ಯಾಯಗಳನ್ನು ನೋಡಿ ಬಾವಾನವರ ತಲೆತಿರುಗಿ ಭ್ರಾಂತರಾಗಿ ಆ ಅಧಿಕಾರಿಗಳ ಕೂಡ ಹೆಣಗಾಡಿ ಅವರನ್ನು ಬಾಯಿಗೆ ಬಂದಂತೆ ಬಯ್ಯುತ್ತಿದ್ದರು. ಮತ್ತು ಅಸದೃಶವಾದ ಅನ್ಯಾಯಗಳನ್ನು ನೋಡಿ ಸರಕಾರವೇ ಇಲ್ಲವೆಂದು ವಾದಿಸುತ್ತಿದ್ದರು. ಇದರಿಂದ ಜನರಲ್ಲಿ ಕೆಲವರು ಇವರಿಗೆ ಹುಚ್ಚರೆನ್ನುತ್ತಿದ್ದರು. ನ್ಯಾಯದೃಷ್ಟಿಯಿಂದ ವಿಚಾರಮಾಡಿದರೆ ಇವರು ಹುಚ್ಚರಾಗಿರದೆ ಸುಜ್ಞಾನಿಗಳಾಗಿದ್ದರು. ಇವರ ಹಗುರಾದ ಬಾಯಿಗೂ, ಭ್ರಮಿಷ್ಟತೆಗೂ ಅನ್ಯಾಯವಾಗಿ ಇವರಿಗೆ ಒಂದೆರಡು ಸಾರೆ ಶಿಕ್ಷೆಯಾಗಿತ್ತು. ಶಿಕ್ಷೆಯಾದಾಕ್ಷಣಕ್ಕೆ ಸಜ್ಜನರೆಂಬವರು ದೂಷ್ಯರಾಗುವದಿಲ್ಲ. ಮುಖ್ಯವಾಗಿ ಅವರ ಗುಣಸ್ವಭಾವಾದಿಗಳನ್ನು ನೋಡತಕ್ಕದ್ದು ವಿಹಿತವು. ಸದ್ಗುಣಗಳಿಗೆ ಶಿಕ್ಷೆಯಾದರೆ ಬಂಗಾರಕ್ಕೆ ಅಗ್ನಿಯ ಸಂಸ್ಕಾರವಾದಂತೆ ಅವರು ಮತ್ತಿಷ್ಟು ತೇಜಃಪುಂಜರಾಗುತ್ತಾರೆ. ಕಿತ್ತೂರ ದೇವೇಂದ್ರಪುರಿಯವರು ವಿರಕ್ತಾಶ್ರಮಿಗಳು. ಶಿವೋಪಾಸಕರು, ಜ್ಞಾನಿಗಳು, ಬುದ್ಧಿವಂತರು, ಸದ್ಗುಣಿಗಳು, ಸಂಭಾವಿತರು, ಸತ್ಯವಾದಿಗಳು, ಕರುಣಾಳುಗಳು. ಅಂತಲೇ ರಾ.ಬIIರುದ್ರಗೌಡರು ಇವರನ್ನು ಮನ್ನಿಸುತ್ತಿದ್ದರು. ಈ ದೇವೇಂದ್ರಪುರಿಯವರು ಕಿತ್ತೂರಲ್ಲಿ ಒಂದು ಮಹಾಬಳೇಶ್ವರ ದೇವಾಲಯವನ್ನೂ, ಅದರ ನೆರೆಯಲ್ಲಿ ಒಂದು ಮಹತ್ತಾದ ಮಠವನ್ನೂ ಚೆನ್ನಾಗಿ ಕಟ್ಟಿಸಿದ್ದಾರೆ. ಮತ್ತು ಕಿತ್ತೂರ ನೆರೆಯಲ್ಲಿರುವ ಮಲ್ಲಾಪುರದಲ್ಲಿ ಒಂದು ಮಾರುತಿಯ ಗುಡಿಯನ್ನು ಕಟ್ಟಿಸಿರುವದಲ್ಲದೆ, ಬೇರೆ ಎಷ್ಟೋ ಧರ್ಮಾರ್ಥ ಹಾಗೂ ಸಾರ್ವಜನಿಕ ಕಾರ್ಯಗಳನ್ನು ಮಾಡಿರುತ್ತಾರೆ.

ಲಂಚಾಳಿ ಪಂಚಕ

ರಾವಬಹದ್ದೂರವರು ದೇವೇಂದ್ರಪುರಿಯವರ ಪ್ರಸಿದ್ಧ ಪತ್ರಿಕೆಯ ಮೇಲಿಂದಲೂ, ತಮ್ಮ ಸೂಕ್ಷ್ಮಶೋಧದಿಂದಲೂ, ತಾಲೂಕಿನ ಹಳ್ಳಿಗಳಲ್ಲಿ ಮುಳಗುಂದರವರು ಮಾಡಿದ ಲಂಚದ ಸುಲಿಗೆಯನ್ನು ಕೂಡಲೆ ಗೊತ್ತು ಹಚ್ಚಿದರು. ಮುಳಗುಂದರವರು ಲಂಚದ ವ್ಯಾಪಾರವನ್ನು ಠೋಕ ಮತ್ತು ಕಿರುಕಳ ಎರಡೂ ತರದಿಂದ ಇಟ್ಟಿದ್ದರು. ಕಿರಾಣೀ ಅಂಗಡಿಯವರಂತೆ ಒಂದು ಪೈ ವ್ಯಾಪಾರವನ್ನು ಸಹ ಇವರು ಬಿಡ್ಡುತ್ತಿದ್ದಿಲ್ಲ. ಇವರು ವಯೋವೃದ್ಧರೂ, ಜ್ಞಾನವೃದ್ಧರೂ ಇದ್ದರೂ ಕ್ಷುಲ್ಲಕವಾದ ಆಶೆಯು ಇವರಲ್ಲಿ ಪ್ರಬಲವಾಗಿತ್ತು. ಸಂಸ್ಕೃತದಲ್ಲಿ ನಿಪುಣರಾಗಿದ್ದರು. ಬ್ರಾಹ್ಮಣದ ವ್ರತ ನಿಯಮಾದಿಗಳಲ್ಲಿಯೂ, ಬ್ರಾಹ್ಮಣ ಭೋಜನ ಸಂತೃಪ್ತಿಯಲ್ಲಿಯೂ ನಿಷ್ಠೆ ಬಹಳ. ಪ್ರತಿದಿವಸ ಮನೆಯಲ್ಲಿ ಯಾವದೊಂದು ಮೃಷ್ಟಾನ್ನವಾಗಲಿಕ್ಕೆ ಬೇಕು. ಬಂದಷ್ಟೂ ಬ್ರಾಹ್ಮಣರು ಕೈತೊಳೆಯುತ್ತಿರಬೇಕು. ಈ ಭಕ್ತಿಯ ಮಾರ್ಗದಲ್ಲಿ ಪ್ರವರ್ತಕರಾಗಿದ್ದರೂ ತುಡುಗಿನ ಹಣವನ್ನು ದಾನಮಾಡಿದಂತೆ ಇವರ ಆಚರಣೆಯಾಗಿತ್ತು. ಯಾಕಂದರೆ ಬಡಜನರು ಮನೆಮಾರು ಮಾರಿ ಇಲ್ಲವೆ ಒತ್ತೆಯ ಹಾಕಿ, ಗೋಳಾಡಿ ಕೊಟ್ಟ ಲಂಚದ ಹಣದಿಂದ ನಡಿಸಲ್ಪಡುವ ದಾನಮಾರ್ಗವು ಎಷ್ಟು ಭಕ್ತಿಯುಳ್ಳದ್ದಿರಬೇಕು! ಈ ಕಪಟಭಕ್ತಿಯಿಂದ ಎಷ್ಟು ಪುಣ್ಯ ಬರಬೇಕು! ಕೆರೆಯ ನೀರು ಕೆರೆಗೆ ಹಾಕಿ ವರವನ್ನು ಪಡೆದಂತೆ ಇವರು ಪುಣ್ಯಮಾರ್ಗದಲ್ಲಿ ಪ್ರವರ್ತಕರಾಗಿದ್ದರು.

ಮುಳಗುಂದರವರ ಕಚೇರಿಯ ಕೆಲಸಕ್ಕೆ ಕಾಯಿದೆ ಕಾನೂನಗಳೇನೂ ಬಹುಶಃ ಬೇಕಾಗುತ್ತಿದ್ದಿಲ್ಲವೆಂದು ಹೇಳಬಹುದು. ಯಾಕಂದರೆ ಧನರಾಶಿಯೇ ಇವರಿಗೆ ಕಾಯಿದೆಯಾಗಿತ್ತು. ಗ್ರಾಸ ಸಿಕ್ಕಿತೆಂದರೆ ಪೂರ್ವವು ಪಶ್ಚಿಮವಾಗುತ್ತಿತ್ತು. ಕಾಯಿದೆಯ ಕಲಮುಗಳು ಅಲ್ಲಿಂದಲೇ ಬೊಬ್ಬೆಗುಟ್ಟುತ್ತಿದ್ದವು. ಮೊಗಲಾಯಿಯ ಅಮಲಿನಲ್ಲಿ ಅವುಗಳ ಬೊಬ್ಬೆಯನ್ನು ಕೇಳುವವರಾರು? ಆದರೂ ರುಚಿಹತ್ತುತ್ತದೆಂದು ಅಳತೆಗೆಟ್ಟು ಉಂಡರೆ ಪಚನವಾಗುವದೇ? ಅಜೀರ್ಣವಿಕಾರವಾಗಿ ತಿಂದದ್ದೆಲ್ಲ ಹೊರಬೀಳಲಿಕ್ಕೆಬೇಕು. ಅದರಿಂದಲೇ ಕಬ್ಬು ಸವಿಯೆಂದು ಬೇರುಸಹಿತ ತಿನ್ನಬಾರದೆಂದು ಹಿರಿಯರು ಬಾರಿಬಾರಿಗೆ ಹೇಳುತ್ತಿರುತ್ತಾರೆ. ಕೂಡಲೆ ಗೋವನಕೊಪ್ಪದಲ್ಲಿ ಮಾಮಲೇದಾರರು ದುರ್ವರ್ತನೆಯನ್ನು ನಡಿಸಿದ್ದರ ಬಗ್ಗೆ ದೇವೇಂದ್ರಪುರಿಯವರ ಕಡೆಯಿಂದೊಂದು ಅರ್ಜಿಯು ರಾ.ಬ॥ರುದ್ರಗೌಡ ಸಾಹೇಬರವರ ಕಡೆಗೆ ಬಂತು. ಇದಲ್ಲದೆ ಯರಗೊಪ್ಪ ಮುಂತಾದ ಸುತ್ತ ಹಳ್ಳಿಗಳಲ್ಲಿ ನಡೆದಿರುವ ರಾವಸಾಹೇಬರವರ ಅಕ್ರಮವರ್ತನವು ರಾವಬಹದ್ದೂರವರಿಗೆ ಅನೇಕ ಅರ್ಜಿಗಳ ಮೂಲಕ ತಿಳಿಯಿತು. ಆದರೆ ಪುರಾವೆಗಳು ಹೊರಡಲಿಲ್ಲವಾದದರಿಂದ ಆ ಅರ್ಜಿಗಳು ಮೂಲಿಗೆ ಬಿದ್ದವು. ಮುಂದೆ ನಾಗಪ್ಪ ಗುರುಸಿದ್ಧಪ್ಪ ಬೆಳಗಾವಿ ಸಾಕೀನ ಬೈಲಹೊಂಗಲ ಮತ್ತು ಬೈಲಹೊಂಗಲದ ಒಬ್ಬ ಸನದಿ, ಹಾಗೂ ಸಂಪಗಾವ ತಾಲೂಕ ಮುಗುಟಖಾನ ಹುಬ್ಬಳ್ಳಿಯ ಒಬ್ಬ ಲೋಕಲ್ ಬೋರ್ಡಮೆಂಬರ ಈ ಮೂವರ ಕಡೆಯಿಂದ ಲಂಚ ತೆಗೆದುಕೊಂಡ ಬಗ್ಗೆ ರಾ.ಬ॥ರುದ್ರಗೌಡ ಸಾಹೇಬರು ಅವರಿಂದ ಮುಳಗುಂದ ಮಾಮಲೇದಾರರ ಮೇಲೆ ಫಿರ್ಯಾದಿಯನ್ನು ತೆಗೆದುಕೊಂಡರು. ಆದರೂ ಲಂಚದ ಬೊಬ್ಬಾಟವು ಬಹಳಾಯಿತು. ಆಗ ಮಳೆಗಾಲವಿದ್ದರೂ ರಾವಬಹದ್ದೂರವರು ಇದನ್ನು ಪೂರ್ಣವಾಗಿ ತಪಾಸ ಮಾಡಿಕೊಂಡು ಬರಬೇಕೆಂದು ಸನ್ ೧೯೦೨ನೇ ಇಸವಿಯ ಅಕ್ಟೋಬರ ತಿಂಗಳ ೪ನೇ ತಾರೀಖ ಶನಿವಾರದಿವಸ ಬೆಳಗಾವಿಯಿಂದ ಹೊರಟು, ತಾರೀಖು ೫ನೇ ರವಿವಾರ ಮಧ್ಯಾಹ್ನವರೆಗೆ ಸುತಗಟ್ಟಿ ಮುಕ್ಕಾಮಿನಲ್ಲಿ ಅವರ ಜವಾಬುಗಳನ್ನು ತೆಗೆದುಕೊಂಡು, ತಾರೀಖು ೬ನೇ ದಿವಸ ಬೆಳಗಾವಿಗೆ ಬಂದು ಪೂರ್ಣವಾಗಿ ಚೌಕಸಿ ಮಾಡಿದರು. ಈ ಲಂಚದ ಪ್ರಕರಣದಲ್ಲಿ ಮಾಮಲೇದಾರರ ಹೊರತು ಗುರುರಾವ ಜೀವಾಜಿ ಮುನವಳ್ಳಿ ಮುಲಕೀ ಜವಾಬನಿಸಿ ಕಾರಕೂನ, ಮತ್ತು ಗುಂಡೋ ಲಕ್ಷ್ಮಣ ಹಿಡಕಲ್ಲ ಫೌಜದಾರಿ ಜವಾಬನಿಸಿ ಕಾರಕೂನ ಮತ್ತು ಹಣಮಂತರಾವ ಗೋವಿಂದ ಸಬ್ಬನೀಸ ವಕೀಲ ಸಬ್‌ಜಜ್ಜ ಕೋರ್ಟ

ಸವದತ್ತಿ, ಮತ್ತು ಕಟ್ಟಾಚಾರ್ಯ ರಾಘವೇಂದ್ರಾಚಾರ್ಯ ಮೊಖ್ತ್ಯಾರ ವಕೀಲ ಸಂಪಗಾವ ನಾಲ್ವರ ಮೇಲೆಯೂ ಆರೋಪದಿಂದ ಖಟ್ಲೇಮಾಡಿ,ಈ ಲಂಚಾಳಿ ಪಂಚಕದ ಮೇಲೆಯೂ ಫೌಜದಾರಿಯ ಖಟ್ಲೆಯನ್ನು ಮಾಡಬೇಕೆಂದು ಸಬಲವಾದ ಪುರಾವೆಗಳೊಂದಿಗೆ ಸಾದ್ಯಂತವಾಗಿ (ಶಿಫಾರಸು ಮಾಡಿ) ರಿಪೋರ್ಟ ಬರೆದು, ರಾವಬಹದ್ದೂರರವರು ತಾರೀಖ ೭ನೇ ಅಕ್ಟೋಬರ ಸನ್ ೧೯೦೨ ಇ.ದಿವಸ ಮೆಹರ್ಬಾನ ಕಲೇಕ್ಟರ ಸಾಹೇಬ ಬಹದ್ದೂರರವರ ಕಡೆಗೆ ಕಳಿಸಿದರು. ಆಕ್ಸಫರ್ಡ ಯುನಿವ್ಹರ್ಸಿಟಿಯ ಬಿ.ಎ.ಗಳೂ, ಇಂಡಿಯನ್ ಸಿ.ಎಸ್. ಎಂಬ ಪದವೀಧರರೂ ಆದ ಮೆ॥ಎಡ್ವರ್ಡ ಲಾರೆನ್ಸ ಕಲೇಕ್ಟರ ಸಾಹೇಬರವರು ಗುಂಡೋ ಲಕ್ಷ್ಮಣ ಹಿಡಕಲ್ ಈ ಕಾರಕೂನನೊಬ್ಬನನ್ನು ಬಿಟ್ಟು ಉಳಿದ ನಾಲ್ವರ ಮೇಲೆ ಫೌಜದಾರಿ ಖಟ್ಲೇ ಮಾಡಿ, ತಾರೀಖ -೩-೧೯೦೩ ಇಸವಿಯ ದಿವಸ ಮುಳಗುಂದ ಮಾಮಲೇದಾರರನ್ನು ಸಸ್ಪೆಂಡ ಮಾಡಿದರು.

ಲಲ್ಲುಭಾಯಿ ಸಾಹೇಬರ ಠರಾವು

ರಾ.ಸಾ॥ಮುಳಗುಂದರವರಿಗೆ ಸಸ್ಪೆಂಡಾದ ದಿವಸ ರಾ.ಬ॥ರುದ್ರಗೌಡರು ಪೊಲೀಸ ಕಮೀಶನದ ಸಾಕ್ಷಿಗಾಗಿ ಮುಂಬಯಿಗೆ ಹೋಗಿದ್ದರು. ಅಲ್ಲಿಂದ ಬಂದಕೂಡಲೆ ಸಸ್ಪೆಂಡಾದ ಸುದ್ದಿಯು ತಿಳಿಯಿತು. ಮುಂದೆ ಈ ಖಟ್ಲೆಯ ವಿಚಾರಣೆಯು ಹುಜೂರ ಡಿಪೂಟಿ ಕಲೇಕ್ಟರರಾದ ರಾ.ಬ॥ಲಲ್ಲುಭಾಯಿ ಗೋವರ್ಧನದಾಸ ಸಾಹೇಬರವರ ಕಡೆಗೆ ಸನ್ ೧೯೦೩ನೇ ಇಸವಿಯ ಎಪ್ರೀಲ ೨೮ನೇ ತಾರೀಖಿನ ದಿವಸ ಸುರುವಾಗಿ ಒಂದು ತಿಂಗಳ ವರೆಗೆ ಅದರ ಪೂರ್ವಾಪರ ವಿಚಾರ ನಡೆದು, ಅಪರಾಧವು ಪೂರ್ಣ ಸಾಬೀತಾಗಿ, ಮೇ ತಿಂಗಳ ೨೮ನೇ ತಾರೀಖಿನ ದಿವಸ ಮುಳಗುಂದ ಮಾಮಲೇದಾರರಿಗೆ ೬ತಿಂಗಳ ಸಕ್ತ ಮಜೂರಿಯ ಶಿಕ್ಷೆ ೬೦೦ ರೂಪಾಯಿ ದಂಡ, ಕೊಡದಿದ್ದರೆ ಪುನಃ ೩ ತಿಂಗಳ ಶಿಕ್ಷೆ ಮತ್ತು ಕಾರಕೂನರಾದ ಗುರುರಾವ ಮುನವಳ್ಳಿ ಇವರಿಗೆ ೬ ತಿಂಗಳ ಸಕ್ತ ಮಂಜೂರಿಯ ಕೈದು ಶಿಕ್ಷೆ ಮತ್ತು ೨೦೦ ರೂಪಾಯಿ ದಂಡವಾಯಿತು. ಇವರಿಗೆ ಶಿಕ್ಷೆಯಾದಾಕ್ಷಣವೆ ಬ್ರಹ್ಮವೃಂದವೆಲ್ಲ ಕುಪಿತವಾಯಿತು. ಶಿಕ್ಷೆಯಾಗಲಿಕ್ಕಿಲ್ಲೆಂದು ಬ್ರಾಹ್ಮಣರೆಲ್ಲರು ನಿಶ್ಚಯವಾಗಿ ಭಾವಿಸಿದ್ದರು. ಬ್ರಾಹ್ಮಣರಲ್ಲೆಲ್ಲ ಗಲಭೆಯೆದ್ದಿತು. ಹಣಮಂತರಾವ ಸಬ್ಬನೀಸ ವಕೀಲ ಮೊದಲಾದವರು ದೈವಯೋಗದಿಂದ ಪಾರಾದರು. ಗುರುರಾವ ಮನೋಳಿ ಇವರು ಸಬ್ಬನೀಸರ ಸೋದರಳಿಯರಾಗಬೇಕಾದದರಿಂದ ಸಬ್ಬನೀಸರು ರಾ.ಬ॥ರುದ್ರಗೌಡರ ಮೇಲೆ ರುಷ್ಟರಾದರು. ಒಬ್ಬ ವಕೀಲರ ಪಕ್ಷದಿಂದ ಎಲ್ಲ ವಕೀಲರೂ ಒಂದಾದರು. ಒಬ್ಬ ಮಾಮಲೇದಾರರ ಶಿಕ್ಷೆಯಿಂದ ಎಲ್ಲ ಬ್ರಾಹ್ಮಣ ಕಾಮದಾರರಲ್ಲೆಲ್ಲ ಗೊಂದಲವುತ್ಪನ್ನವಾಯಿತು.

ಲೆಕ್ಕದಿಂದ ಹೊತ್ತರೆ, ಮುಪ್ಪಿನಿಂದ ಸತ್ತರೆ, ನ್ಯಾಯದಿಂದ ಗೆದ್ದರೆ, ಅನ್ಯಾಯದಿಂದ ಬಿದ್ದರೆ ಯಾರೇನು ಮಾಡುವದು? ರಾವಬಹದ್ದೂರ ರುದ್ರಗೌಡರಾದರೋ, ಅನ್ಯಾಯಕ್ಕೆ ಸ್ವಲ್ಪವಾದರೂ ಆಶ್ರಯ ಕೊಡುವವರಲ್ಲ. ರಾಜ್ಯದಲ್ಲಿ ಅನ್ಯಾಯ, ಕೊಲೆ ಸುಲಿಗೆ ದರೋಡೆಗಳಾಗದಂತೆ ವ್ಯವಸ್ಥೆಯನ್ನಿಡಲಿಕ್ಕೂ ದುಷ್ಟ ಜನರನ್ನು ಪ್ರತಿಬಂಧಿಸಲಿಕ್ಕೂ ಪ್ರಜೆಗಳನ್ನು ಸುಖಶಾಂತಿಯಿಂದ ರಕ್ಷಿಸಲಿಕ್ಕೂ ಸರಕಾರದವರು ದೊಡ್ಡ ದೊಡ್ಡ ಸಂಬಳಗಳನ್ನು ಕೊಟ್ಟು, ಒಂದೊಂದು ಭಾಗಕ್ಕೆ ಅಧಿಕರ್ತೃಗಳನ್ನಾಗಿ ನೇಮಿಸಿರಲು, ತ್ರಿಕರಣ ಪೂರ್ವಕವಾಗಿ ಕೆಲಸಮಾಡಿ, ಕಿಂಚಿದಂಶದಿಂದಾದರೂ ಕೀರ್ತಿಪಡೆಯುವ ರಾ.ಬ॥ರುದ್ರಗೌಡರಂಥ ನಿಷ್ಕಲಂಕ ಚರಿತ್ರವುಳ್ಳ ಅಧಿಕಾರಿಗಳು ಎಲ್ಲೆಲ್ಲಿಯೋ ದೊರಕುವರು. ಪೂರ್ವದಲ್ಲಿ ರಾಜರುಗಳು ಅಥವಾ ರಾಜ್ಯಭಾರವನ್ನು ವಹಿಸಿದಂಥ ಅಧಿಕಾರಿಗಳು ಕೂಡ ರಾತ್ರಿಯ ವೇಳೆಯಲ್ಲಿ ವೇಷಾಂತರಧಾರಣಮಾಡಿ, ಸಂದಿ ಗೊಂದಿಗಳನ್ನೆಲ್ಲ ಸುತ್ತಿ, ಬಡವರ ಭಾಗ್ಯವಂತರ ಮನೆಮನೆಗಳ ಮಗ್ಗುಲಲ್ಲಿ ನಿಂತು, ಅಲ್ಲಿ ನಡೆಯುವ ಸಂಭಾಷಣಾದಿಗಳನ್ನೆಲ್ಲ ಕೇಳಿ, ಅದರಿಂದಲೇ ಅವರವರ ಸ್ಥಿತಿಯು ಯಾವ ವಿಧದಲ್ಲಿಯೆಂಬುವದನ್ನರಿತು, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿ, ರಿಕ್ತರನ್ನು

ಉದ್ಧರಿಸುವ ಉಪಾಯವನ್ನು ಕಲ್ಪಿಸುತ್ತಿದ್ದರು. ಈಗಿನ ಕಾಲದಲ್ಲಿ ಇಂತಹ ಏರ್ಪಾಡು ಇಲ್ಲದಿದ್ದರೂ, ತಮ್ಮ ಪ್ರಾಂತದ ಹಳ್ಳಿಪಳ್ಳಿಗಳಲ್ಲಿ ಸಂಚರಿಸಿ ಬಡಜನರ ಸುಖ ದುಃಖಗಳನ್ನೂ ಗ್ರಾಮಸ್ಥರ ಮತ್ತು ಸಣ್ಣ ಅಧಿಕಾರಿಗಳ ಸ್ಥಿತಿಗತಿಗಳನ್ನೂ ತಿಳುಕೊಂಡು, ನ್ಯೂನತೆಯಿದ್ದದ್ದನ್ನೂ ಕೈಲಾದಮಟ್ಟಿಗೆ ಪೂರ್ಣಮಾಡಿ, ಕೀಳಜನರ ತ್ರಾಸದಿಂದ ದೀನರನ್ನು ಮುಕ್ತಮಾಡಿ, ದುಷ್ಟರನ್ನು ಶಾಸನ ಮಾಡುವಂಥ ರಾ.ಬ॥ರುದ್ರಗೌಡರ ಕಾರಭಾರದ ಕ್ರಮವು ಯೋಗ್ಯವಲ್ಲವೋ? ಬಡಪ್ರಜೆಗಳಿಗೆ ಸುಖವನ್ನು ಕೊಟ್ಟು ರಕ್ಷಿಸುವದು ಆಳತಕ್ಕವರ ಕರ್ತವ್ಯವಾಗಿರುವದು. ದಯಾಳುಗಳಾದ ರಾ.ಬ॥ರುದ್ರಗೌಡ ಪ್ರಭುಗಳು ಅಂತಹ ಕರ್ತವ್ಯಾಂಶವನ್ನು ಸಾಧ್ಯವಾದ ಮಟ್ಟಿಗೂ ನೆರವೇರಿಸುವದರಲ್ಲಿ ಕುತೂಹಲಿಗಳಾಗಿಯೇ ಇರುವರು.

ಬೀಜದಂತೆ ಬೆಳೆ

ಎಷ್ಟೋ ಮಂದಿ ದೊಡ್ಡ ದೊಡ್ಡ ಸರಕಾರಿಯ ಉದ್ಯೋಗಸ್ಥರು ತಮ್ಮ ಪ್ರಾಂತಗಳಲ್ಲಿ ಸಂಚಾರಮಾಡಿ ಗ್ರಾಮಗಳ ಮುಖ್ಯ ಮುಖ್ಯ ಬೀದಿಗಳಲ್ಲಿ ತಿರುಗಿ, ದೊಡ್ಡ ಮನುಷ್ಯರಿಗೆ ದರ್ಶನಕೊಟ್ಟು ಸಂಭಾಷಿಸಿ, ಔತಣವನ್ನು ಮಾಡಿಸಿಕೊಂಡು, ಇಷ್ಟು ಮೈಲು ಸಂಚಾರ ಮಾಡಿದೆವೆಂದು ಡಾಯರೀ ಬುಕ್ಕಿಗೆ ಬರೆದುಕೊಂಡು, ಗ್ರಾಸವೆಲ್ಲಿ ಸಿಗುವದೆಂಬ ಬಕಧ್ಯಾನವನ್ನು ಮಾಡುವರೇ ಹೊರತು ಬಡಜನದ ಸ್ಥಿತಿಗತಿಯನ್ನೂ, ಗೋಳನ್ನೂ ದುಷ್ಟಗ್ರಾಮಸ್ಥರಿಂದುಂಟಾಗುತ್ತಿದ್ದ ಅವರ ಕಂಟಕವನ್ನೂ ಕೇಳಿಕೊಳ್ಳಲಿಕ್ಕೆ ಇಂಥವರಿಗೆ ಅವಧಿಯೇ ಸಿಗುವದಿಲ್ಲ. ಪ್ರಜೆಗಳ ಹಣದಿಂದ ಸಾವಿರಾರುಗಟ್ಟಲೆ ಸಂಬಳವನ್ನು ಸರಕಾರದಿಂದ ಪಡೆಯುತ್ತಿದ್ದರೂ ಇಂತಹ ಅಧಿಕಾರಿಗಳಿಗೆ ಸ್ವೋಪಭೋಗದ ಮೇಲೆ ದೃಷ್ಟಿಯಿರುವಂತೆ ಬಡಪ್ರಜೆಗಳ ದೀನಸ್ಥಿತಿಯ ಮೇಲೆ ಇರುವದಿಲ್ಲ. ಅಧಿಕಾರ ಮದಾಂಧರಾಗಿ ತಮ್ಮ ಪ್ರಜೆಗಳಿಗೆ ತಾವೇ ಅರಸರೆಂದೂ, ನ್ಯಾಯವಾಗಲಿ, ಅನ್ಯಾಯವಾಗಲಿ ತಾವು ಮಾಡಿದ್ದೇ ಪ್ರಾಧಾನ್ಯವೆಂದೂ, ರಾಜ್ಯಕರ್ತೃಗಳಾದ ನಮಗೆ ಬೇಕಾದದ್ದನ್ನು ಮಾಡಲಿಕ್ಕೆ ಅನುಕೂಲವಿರುವದೆಂದೂ ತಿಳಿದು, ಅನೇಕ ಪ್ರಕಾರದ ಅನ್ಯಾಯಗಳನ್ನು ಮಾಡಿ ಮೆರೆದಾಡುವಾಗ, ರಾ.ಬ॥ರುದ್ರಗೌಡರು ನಾವು ನಮ್ಮ ಸುಕೃತದಿಂದ ಅಧಿಕಾರವನ್ನು ತಾಳಿ, ಪ್ರಜೆಗಳ ಹಣದಿಂದಲೇ ಬರುವ ದೊಡ್ಡ ಸಂಬಳವನ್ನು ತಕ್ಕೊಂಡು, ಪ್ರಜಾಹಿತಕ್ಕಾಗಿಯೇ ಕೆಲಸ ಮಾಡುವದರಿಂದ ನಾವು ಪ್ರಜೆಗಳ ನೌಕರರೆಂದು ತಿಳಿಯಬೇಕೆಂದೆನ್ನುವರು. ಮತ್ತು ಆಕಳು ತನ್ನ ಕರುವಿಗೆ ಪ್ರೀತಿಯಿಂದ ಹಾಲನ್ನುಣಿಸಿ ಮನೆಮಂದಿಗೂ ಹಾಲು ಕೊಟ್ಟು ಸಂತೋಷಪಡಿಸುವಂತೆ ರಾಜ್ಯಭಾರಿಯು ತನ್ನ ಪ್ರಜೆಗಳನ್ನು ಸುಖಶಾಂತಿಗಳಿಂದ ಸಮಾಧಾನಪಡಿಸಿ, ತಮ್ಮ ವೃತ್ತಿಯಿಂದ ತಾವೂ ತೃಪ್ತಿಯನ್ನು ಹೊಂದುವದು ವಿಹಿತವೆಂದು ಹೇಳುವರು. ನೋಡಿರಿ, ಪ್ರಜೆಗಳ ಹಿತದ ಕಡೆಗೆ ಇವರ ಲಕ್ಷ್ಯವು ಎಷ್ಟಿರುವದು? ಇಂತಹ ಅನುಪಮ ಕರುಣಾಳುಗಳಾದ ರಾವಬಹದ್ದೂರವರಿಗೆ ಪ್ರಜಾಪೀಡಕರಾದ ಮುಳಗುಂದರವರ ಆಳಿಕೆಯು ಎಂದಿಗಾದರೂ ಸರಿಬಂದೀತೇ!! ಒಟ್ಟಿಗೆ ಬಿತ್ತಿದಂಥ ಬೆಳೆಯನ್ನು ಭೋಗಿಸುವದು ಸರ್ವಸಾಧಾರಣವಾಗಿದ್ದಂತೆ, ತಮ್ಮ ಕರ್ಮಫಲಾನುಸಾರವಾಗಿ ಮುಳಗುಂದರವರು ಕಠಿಣತರವಾದ ಶಿಕ್ಷೆಗೊಳಗಾದರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಜಜ್ಜಕೋರ್ಟಿನ ಠರಾವು

ಮುಳಗುಂದರವರ ಶಿಕ್ಷೆಯಿಂದ ಬ್ರಾಹ್ಮಣ ಮಂಡಳಿಗೆ ವಿಷಾದವಾಯಿತು. ಕೂಡಲೆ ಈ ಪ್ರಕರಣವು ಜಜ್ಜಕೋರ್ಟಿಗೆ ಅಪೀಲಾಯಿತು. ಅಪೀಲ ನಂಬರ 28-29/1903 ಬಳಿಕ ಜಜ್ಜಕೋರ್ಟಿನಲ್ಲಿ ವಿಚಾರಣೆ

ನಡೆಯಿತು. ಈ ಖಟ್ಲೆಯ ಚಮತ್ಕಾರವನ್ನು ನೋಡಲಿಕ್ಕೆ ಕೋರ್ಟಿನಲ್ಲಿ ಬಹುಜನ ಕೂಡಿತ್ತು. ಕೋರ್ಟು ಹಿಡಿಸದೆ ಹೊರಗೆ ಬೈಲೊಳಗೆ ಜಾತ್ರೆ ಕೂಡಿದಂತಾಗಿತ್ತು. ಎಲ್ಲ ಜನರು ಬಹುತರವಾಗಿ ಬ್ರಾಹ್ಮಣರೇ ಇದ್ದರು. ದೊಡ್ಡ ದೊಡ್ಡ ಕುಸ್ತಿಗಳನ್ನು ನೋಡಲಿಕ್ಕೆ ದೂರದೂರದಿಂದ ಜನ ಬರುವಂತೆ ಎಷ್ಟೋ ಕಡೆಯಿಂದ ಪ್ರಮುಖ ಬ್ರಾಹ್ಮಣರು ಕೂಡಿದ್ದರು. ಇದಾದರೂ ನ್ಯಾಯವಿಚಾರಣೆಯ ದೊಡ್ಡ ಕುಸ್ತಿಯೇ ಸರಿ. ಖಟ್ಲೆಯ ವಿಚಾರಣೆ ನಡೆದಾಗ ಊರಲ್ಲಿ ಒಬ್ಬ ಬ್ರಾಹ್ಮಣನಾದರೂ ಕಾಣಿಸುತ್ತಿರಲಿಲ್ಲ. ಎಲ್ಲ ಜನರು ಕೋರ್ಟಿನಲ್ಲಿಯೇ ಕಲಿತಿದ್ದರು. ಯಾವಾಗ ಠರಾವವನ್ನು ಹೇಳುವರೋ? ಏನೆಂದು ಹೇಳುವರೋ! ಎಂಬದನ್ನು ತಿಳಿದುಕೊಳ್ಳಲಿಕ್ಕೆ ಎಲ್ಲರೂ ಉತ್ಕಂಠಿತರಾಗಿದ್ದರು. ಆರಂಭಕ್ಕೆ ಎಲ್ಲ ವಕೀಲ ಜನರು ನ್ಯಾಯಾಸ್ಥಾನದ ಮುಂದೆ ರಾ.ಸಾ॥ಮುಳಗುಂದರವರು ನಿರಪರಾಧಿಗಳೆಂತಲೂ ರಾ.ಬ॥ರುದ್ರಗೌಡರು ಬ್ರಹ್ಮದ್ವೇಷಿಗಳೆಂತಲೂ, ದ್ವೇಷ ಮೂಲಕ ಈ ಖಟ್ಲೆಯು ರಚನೆಯಾಗಿರುವದೆಂತಲೂ ತಕರಾರ ತೆಗೆದರು. ಆದರೆ ಶೂರನಾದ ಮಲ್ಲನು ಭುಜಾಸ್ಫಾಲನಗೆಯ್ಯುತ್ತ ಪ್ರತಿಕಕ್ಷಿಯ ಮುಂದೆ ಪ್ರತಿಭಟಿಸಿ ನಿಲ್ಲುವಂತೆ, ಸರಕಾರಿಯ ಪುರಾವೆಗಳು ಪ್ರತ್ಯಕ್ಷವಾಗಿ ಎದ್ದು ನಿಂತಿದ್ದವು. ವಾದೀ ನಾಗಪ್ಪನ ಕೀರ್ದಿಯಲ್ಲಿ, ಸಂಪಗಾವ ಖಾತೆ ಎಂಬದೊಂದು ಖಾತೆಯಿಡಲ್ಪಟ್ಟು ಅದರಲ್ಲಿ ಲಂಚಕೊಟ್ಟ ಹಣದ ಜಮಾಖರ್ಚು ಮಾಡಲ್ಪಟ್ಟಿತ್ತು. ಅದರಲ್ಲಿ ಮಾಮಲೇದಾರರಿಗೆ ಕೊಟ್ಟ ರಕಮಿನ ಮುಂದೆ "ಮಾ" ಎಂದೂ, ಗುರುರಾಯರಿಗೆ ಕೊಟ್ಟ ರಕಮಿನ ಮುಂದೆ "ಗು" ಎಂದೂ ಸಂಜ್ಞಾಕ್ಷರಗಳು ಬರೆಯಲ್ಪಟ್ಟಿದ್ದವು. ಎಂಥ ಮಂದಮತಿ ನ್ಯಾಯಾಧೀಶನಾದರೂ, ಅಪರಾಧವನ್ನು ಕೂಡಲೆ ಕಂಡು ಹಿಡಿಯಲಿಕ್ಕೆ ಬರುವಂತಿತ್ತು. ಮೂರ್ತಿಮಂತವಾಗಿ ಮುಂದೆ ನಿಂತ ಮೇರುಮಂದರಾದ್ರಿಗಳಂಥ ಲೇಖೀ ಮತ್ತು ಪ್ರತ್ಯಕ್ಷ ಪುರಾವೆಗಳು ಮೆ॥ ಜಜ್ಜ ಸಾಹೇಬರವರಿಗೆ ಸಬಲವಾಗಿ ತೋರಲಿಲ್ಲ. ಮುಖ್ಯವಾಗಿ ಅವರು ವಕೀಲರ ತಕರಾರುಗಳ ಕಡೆಗೇ ಲಕ್ಷಕೊಟ್ಟರು. ತಾರೀಖ ೧೮ನೇ ಜೂನ ಸನ್ ೧೯೦೩ನೇ ದಿವಸ ಆರೋಪಿಗಳಿಬ್ಬರೂ ನಿರ್ದೋಷಿಗಳೆಂಬದಾಗಿ ಠರಾವು ಹೇಳಲ್ಪಟ್ಟಿತು. ಸಾರಾಂಶ, ಕುಚೋದ್ಯ ಅರಸನಿಗೆ ಕುಲಗೇಡಿ ಪ್ರಧಾನಿಯೆಂಬಂತೆ ಈ ಜಜ್ಜಕೋರ್ಟಿನ ನಿರ್ಣಯವಾಯಿತು.

ಹಾರುವರ ಹಾರಾಟ

ಠರಾವು ಹೇಳಿದೊಡನೆ ಬ್ರಹ್ಮವೃಂದದ ಜಯಜಯಕಾರವಾಯಿತು. ಅವರ ಆನಂದಕ್ಕೆ ಆಳವೇ ಇಲ್ಲದಾಯಿತು. ಒಬ್ಬರಿಗೊಬ್ಬರು ಕೈ ಬಡಿಬಡಿದು ನಗಾಡಹತ್ತಿದರು. ಹಾಸ್ಯವೂ, ಕುಚೇಷ್ಟೆಯೂ ಮೇರೆದಪ್ಪಿದವು. ಅವರ ಆನಂದೋದ್ಗಾರವನ್ನು ಆಕಾಶವು ಸಹ ಹಿಡಿಯದಂತಾಯಿತು. ಸಂತೋಷವು ಹೆಚ್ಚಿ ಹುಚ್ಚರಂತೆ ಕುಣಿದಾಡಹತ್ತಿದರು. ರುಮಾಲ ದೋತರಗಳು ಅಂತರಿಕ್ಷದಲ್ಲಿ ಹಾರಾಡಹತ್ತಿದವು. ತಂತಮ್ಮ ಆಪ್ತೇಷ್ಟ ಮಿತ್ರರಿಗೆ ಲಗ್ನಪತ್ರದಂತೆ ಪತ್ರಗಳನ್ನು ಬರೆದು, ತಮ್ಮ ಸಂತೋಷದ ವಾರ್ತೆಯನ್ನು ಪ್ರಕಟಮಾಡಿದರು. ಆನಂದ ಪ್ರದರ್ಶಿತ ಎಷ್ಟೋ ತಾರಗಳು ಮಾಡಲ್ಪಟ್ಟವು. ತಡವಿಲ್ಲದೆ ಫೇಡೆಗಳನ್ನೂ, ಗೋಮಾಂತಕದ ಮಾವಿನ ಹಣ್ಣುಗಳನ್ನೂ ತರಿಸಿ ಹಂಚಿದರು. ದೊಡ್ಡ ದೊಡ್ಡ ವಕೀಲ ಜನರೂ, ಎಷ್ಟೋ ಅಧಿಕಾರಿಗಳೂ ಹಾಲು ಸಕ್ಕರಿ ತರಿಸಿ ಕಛೇರಿಯಲ್ಲಿಯೇ ಕುಡಿದರು. ಚಹಾ ತೆಗೆದುಕೊಂಡರು. ತಾಂಬೂಲ ಸಮಾರಂಭವಾಯಿತು. ಎಲ್ಲ ಬ್ರಾಹ್ಮಣರ ಮುಖಮಂಡಲಗಳು ಷೋಡಶಕಲೆಗಳಿಂದ ತುಂಬಿಕೊಂಡವು. ಆನಂದದ ಭರದಲ್ಲಿ ಮನೆಮಾರುಗಳನ್ನು ಸಹ ಮರೆತರು. ತಂತಮ್ಮ ಮನೆತನದ ಉದ್ಯೋಗಗಳಿಗೆ ಆ ದಿವಸ ಸೂಟಿಯನ್ನು ಕೊಟ್ಟರು. ಎಲ್ಲಿ ನೋಡಿದರೂ ಬ್ರಾಹ್ಮಣರ ಜನಜಂಗುಳಿಯೇ ಕಾಣಿಸುತ್ತಿತ್ತು. ಬ್ರಹ್ಮಸಮಾಜಕ್ಕೆಲ್ಲ ಒಂದು ದೊಡ್ಡ ಸಾಮ್ರಾಜ್ಯವನ್ನು ಜಯಿಸಿದಂತೆ ಹರ್ಷವಾಯಿತು. ಜಪಾನರ ವಿಜಯಾನಂದಕ್ಕಿಂತಲೂ ಇವರ ಸಂತೋಷವು ನೂರಿಮ್ಮಡಿಯಾಯಿತು.

ಮರುದಿವಸ ಈ ವ್ಯಾಜ್ಯದ ಠರಾವವನ್ನು ಸಾವಿರಾರು ಪ್ರತಿ ಛಾಪಿಸಿ ಊರಲ್ಲೆಲ್ಲ ಹಂಚಿದರು. ಇಂತಹ ಉತ್ಸಾಹವು ಬೆಳಗಾವಿಯಲ್ಲಿಷ್ಟೇ ಅಲ್ಲ, ಎಲ್ಲ ತಾಲೂಕಗಳಲ್ಲಿಯೂ, ಧಾರವಾಡ ಹುಬ್ಬಳ್ಳಿ, ವಿಜಾಪುರ ಮುಂತಾದ ಪಟ್ಟಣಗಳಲ್ಲಿಯೂ ಈ ಬಗೆಯ ಉತ್ಸವಗಳು ನಡೆದವು. ಸಾರಾಂಶ, ಮುಳಗುಂದರವರ ವಿಮೋಚನೆಯಿಂದ ಬ್ರಹ್ಮಸಮಾಜದಲ್ಲೆಲ್ಲ ಪುತ್ರೋತ್ಸವಕ್ಕಿಂತ ಉತ್ಸವವೂ, ಆನಂದವೂ ಹೆಚ್ಚಾಯಿತೆಂದು ಹೇಳಬಹುದು. ಮುಳಗುಂದರವರಿಗೂ, ಗುರುರಾಯರಿಗೂ ಆದ ಆನಂದದ ವಿಚಾರವನ್ನು ವಾಚಕರೇ ಮಾಡಲಿ.

ಈ ಪ್ರಕಾರದ ಹಾರುವರ ಹಾರಾಟವು ರಾ.ಬ॥ರುದ್ರಗೌಡ ದೊರೆಗಳಿಗೆ ಆಗಳೇ ತಿಳಿದರೂ ಅವರಿಗೆ ಅದೇನು ಅಷ್ಟು ಮಹತ್ವದ್ದಾಗಿ ತೋರಲಿಲ್ಲ. ಆದರೆ ಪ್ರತ್ಯಕ್ಷವಾಗಿ ಅಪರಾಧಿಗಳಾದ ಅವರಿಬ್ಬರ ವಿಮೋಚನೆಯಾದದರಿಂದ ಮನಸಿಗೆ ಬಹು ವಿಷಾದವೆನಿಸಿತು. ಮೆ॥ಜಜ್ಜ ಸಾಹೇಬ ಬಹದ್ದೂರವರ ವಿರುದ್ಧ ತಿಳುವಳಿಕೆಯಿಂದಲೋ, ಬ್ರಾಹ್ಮಣ ವಕೀಲರ ಕೃಷ್ಣಕಾರಸ್ಥಾನದಿಂದಲೋ, ಸಂಪಗಾವ ತಾಲೂಕಿನ ದುರದೃಷ್ಟದಿಂದಲೋ ಅಥವಾ ಮುಳಗುಂದರವರ ಪುಣ್ಯ ಶೇಷದಿಂದಲೋ ಅಸತ್ಯ ನಿರ್ಣಯವಾಗಿ, ಅಪರಾಧಿಗಳು ಬಿಡುಗಡೆ ಹೊಂದಿದರೆಂದು ರಾವಬಹದ್ದೂರವರು ಮನಸಿನಲ್ಲಿ ತಿಳಿದರು. " ತುಂಬಿದ ಕೊಡವು ತುಳುಕುವದಿಲ್ಲ" ಎಂಬಂತೆ ಇವರು ವಿಶೇಷವಾಗಿ ಯಾವದನ್ನೂ ಮನಸಿಗೆ ಹಚ್ಚಿಕೊಳ್ಳಲಿಲ್ಲ. ಆದರೆ ಕುಬುದ್ಧಿಗಳಾದ ಬ್ರಹ್ಮಿಗಳು ತಮಗಾದ ಸಂತೋಷವನ್ನು ತಮ್ಮ ಮನದಲ್ಲಿಟ್ಟುಕೊಂಡು "ಮೌನೇನ ಕಲಹಂ ನಾಸ್ತಿ" ಎಂಬ ಮಹಾಮಂತ್ರವನ್ನು ಪಠಿಸುತ್ತ, ಮನೆಯಲ್ಲಿ ಸುಮ್ಮನೆ ಕೂಡ್ರದೆ ರಾ.ಬ॥ರವರ ದರ್ಶನವನ್ನಿಚ್ಛಿಸಿ ಒಬ್ಬೊಬ್ಬನೇ ಇವರ ಭೆಟ್ಟಿಗೆ ಬರಹತ್ತಿದರು. ಮತ್ತು ದೇಶಾವರಿ ನಗೆಯಿಂದ ಇವರನ್ನು ಕೆಣಕೆಣಕಿ ಮಾತನಾಡಿಸಹತ್ತಿದರು. ಆದರೆ "ಮಂಗೇಶರಾಯರ ಗುರುತು ಮೋರೆಯ ಮೇಲೆಯೇ" ಎಂಬಂತೆ ಅವರ ಮತ್ಸರ ನುಡಿಗಳು ರಾ.ಬ॥ರವರಿಗೆ ಕೂಡಲೇ ತಿಳಿದವು. ಇವರ ನಿಷ್ಕಲಂಕವಾದ ಮನಸ್ಸನ್ನು ಆ ನುಡಿಗಳು ಕಲುಷಿತ ಮಾಡಹತ್ತಿದವು. ಮಲಗಿದ ಗಂಡನನ್ನೆಬ್ಬಿಸಿ ಮಗ್ಗುಲಕ್ಕೆ ಮೂಲ ಮಾಡಿಕೊಂಡಳೆಂಬಂತೆ, ಬ್ರಾಹ್ಮಣರ ಚುಚ್ಚುನುಡಿಗಳು ಸ್ತಬ್ದರಾಗಿದ್ದ ರುದ್ರಗೌಡರನ್ನು ರೊಚ್ಚಿಗೆಬ್ಬಿಸಿದವು.

ಬ್ರಾಹ್ಮಣರ ಮುಂಜಾಗ್ರತೆ

ಬ್ರಾಹ್ಮಣರ ಮುಂಜಾಗ್ರತೆಗೆ ಪಾರಾವಾರವೇ ಇಲ್ಲ. ಠರಾವು ಹೇಳುವ ಮೂರುದಿವಸ ಮುಂದಾಗಿಯೇ ಜಾತ ಮುಚ್ಚಳಿಕೆಯನ್ನು ಬರೆಯಿಸಿಕೊಂಡು, ಉಭಯ ಅಪರಾಧಿಗಳನ್ನು ತುರಂಗದಿಂದ ಮೊದಲೇ ಬಿಟ್ಟಿದ್ದರು. ವಿಮೋಚನೆಯಾಗುವ ಸಂಭವವಿದ್ದರೇನೇ ಮುಚ್ಚಳಿಕೆಯನ್ನು ಬರಿಸಿಕೊಂಡು, ಅಪರಾಧಿಗಳನ್ನು ತುರಂಗದಿಂದ ಮುಂದಾಗಿಯೇ ಬಿಡುತ್ತಿರುತ್ತಾರೆ. ಆಗ ತಕ್ಕ ಕೃಷ್ಣಕಾರಸ್ಥಾನವೆಲ್ಲ ಮೊದಲೇ ಆಗಿ ಹೋಗಿತ್ತು. ಅಂತಲೇ ಅಪರಾಧಿಗಳ ಬಿಡುಗಡೆಯಾಗುತ್ತದೆಂದು ಬ್ರಹ್ಮವೃಂದವೆಲ್ಲ ನಿಶ್ಚಯವಾಗಿ ಭಾವಿಸಿತ್ತು. ಈ ವ್ಯಾಜ್ಯದ ಸಾಗ್ರ ವಿವರವನ್ನು ರಾ.ಬ॥ರುದ್ರಗೌಡ ಸಾಹೇಬರ ವಿಷಯವಾಗಿ ದುರ್ಲೇಖಗಳನ್ನು ಬೆಳಗಾವಿಯ ವಕೀಲ ಮುಂತಾದ ಪ್ರಮುಖ ಜನರು ಮೊದಲೇ ಬರೆದು ಪುಣೆಯ 'ಮರಾಠಾ' ಎಂಬ ವರ್ತಮಾನಪತ್ರಕ್ಕೆ ಪ್ರಸಿದ್ಧಿಗಾಗಿ ಕಳಿಸಿದ್ದರು. ಮತ್ಸರ ಬುದ್ಧಿಯಿಂದ ಬರೆದ ಆ ಲೇಖಗಳು ಠರಾವು ಹೇಳಿದ ಮೂರೇ ದಿವಸಗಳಲ್ಲಿ ಮುದ್ರಿಸಿ ಬಂದವು. ನೋಡಿರಿ! ಬ್ರಾಹ್ಮಣರ ಕುಚೋದ್ಯತನದ ಮುಂಜಾಗ್ರತೆಯೆಷ್ಟು! ಸಾಹಸವೆಷ್ಟು!! ಕೀಳುತನವೆಷ್ಟು!!! ಇದೊಂದೇ ಲೇಖವೆಂಬುವ ಹಾಗಿಲ್ಲ. ಆರೇಳು ಸಂಚಿಕೆಗಳಲ್ಲಿ ಇಂತಹ ದುರ್ಲೇಖಗಳನ್ನು ಇಂಗ್ಲೀಷದಲ್ಲಿ ಪ್ರಸಿದ್ಧಮಾಡಿದರು.

ವಾಚಕವೃಂದದ ಅವಗಾಹನೆಗಾಗಿ ಆ ಪತ್ರಿಕೆಗಳ ಹೆಸರುಗಳನ್ನೂ ಅವುಗಳ ತಾರೀಖುಗಳನ್ನೂ ಕೆಳಗೆ ತೋರಿಸಿರುತ್ತದೆ. ತಿಳಿಯಲಪೇಕ್ಷೆಯುಳ್ಳವರು ಆ ಪತ್ರಿಕೆಗಳಲ್ಲಿ ನೋಡಿಕೊಳ್ಳತಕ್ಕದ್ದು.

ಸಂಖ್ಯೆ	ಪತ್ರಿಕೆಯ ಹೆಸರು	ಸ್ಥಳ	ಮುದ್ರಣದ ತಾರೀಖು
೧	ಮರಾಠಾ ಪತ್ರ	ಪುಣೆ	೨೧-೬-೧೯೦೩
೨	"	"	೧೯-೭-೧೯೦೩
೩	"	"	೨೬-೭-೧೯೦೩
೪	"	"	೨-೮-೧೯೦೩
೫	"	"	೯-೮-೧೯೦೩
೬	ಪ್ರಕಾಶಕ ಪತ್ರ	ವಿಜಾಪುರ	೩-೭-೧೯೦೩

ಈ ಬದಿಗೆ ಬರೆದಿರುವ ಆರುಪತ್ರಿಕೆಗಳಲ್ಲಿಯೂ ರಾವಬಹದ್ದೂರ ರುದ್ರಗೌಡ ಸಾಹೇಬರವರ ವಿಷಯವಾಗಿ ದುರ್ಲೇಖಗಳನ್ನೇ ಪ್ರಸಿದ್ಧ ಮಾಡಿದ್ದರು. ಅವುಗಳಲ್ಲಿ ಇವರ ನಿರ್ಮಲವಾದ ಮನಸಿಗೆ ದೂಷಣೆಯನ್ನೇ ಕೊಟ್ಟಿದ್ದರು. ಸಜ್ಜನರೂ ವಿದ್ವಾನರೂ ಎಂಬುವವರಿಗೆ ದೂಷ್ಯವಾಗಿದ್ದವು. ಗಿಲ್ಲಾದ ನುಡಿಗಳು ಅವುಗಳಲ್ಲಿ ತುಂಬಿಕೊಂಡಿದ್ದವು. ಮುಖ್ಯವಾಗಿ ಲೇಖಗಳನ್ನು ಕಳಿಸಿದವರ ಉದ್ದೇಶವೇ ಮಾತ್ಸರ್ಯವುಳ್ಳದ್ದಾಗಿತ್ತು. ನಿಷ್ಪಕ್ಷತನದಿಂದ ಆ ಲೇಖಗಳನ್ನು ನೋಡಿದರೆ ಅವುಗಳನ್ನು ಬರೆದ ಪಂಡಿತರ ಮೂರ್ಖತನಕ್ಕೆ ಬೆಲೆಯೇ ಆಗುವದಿಲ್ಲ. "ಜಗಳಗಿತ್ತಿಗೂ ಜಡಿಮಳೆಗೂ ಸಮ" ಎಂಬಂತೆ ಲೇಖಕರು ತಮ್ಮ ದುಷ್ಟ ಮನಸಿನಿಂದ ಹೊರಗೆಡವಿದ ಬಿಡಿನುಡಿಗಳೆಂಬ ಜಡಿಮಳೆಯನ್ನು ತಮ್ಮ ಲೇಖದಲ್ಲಿ ಸುರಿಸಿಬಿಟ್ಟಿದ್ದರು. ಆ ಲೇಖಗಳನ್ನು ನೋಡಿದರೆ ಮೈಮೇಲೆ ಮುಳ್ಳು ಬರುವಂತಿದ್ದವು. ಮಲ್ಲಿಗೆಗಿಂತಲೂ ಮೃದುಮನಸುಳ್ಳವರೂ ಕೂಡ ಆ ಲೇಖಗಳನ್ನು ನೋಡಿದರೆ ಕಲ್ಲಿಗಿಂತಲೂ ಕಠಿಣರಾಗಬೇಕಾಗುತ್ತಿತ್ತು. ಈ ಲೇಖಗಳನ್ನು ನೋಡಿದರೆ ಕಲ್ಲಿಗಿಂತಲೂ ಕಠಿಣರಾಗಬೇಕಾಗುತ್ತಿತ್ತು. ಈ ಲೇಖಗಳನ್ನು ಬರೆದವರು ಸಾಮಾನ್ಯರೆಂದು ತಿಳಿಯಬೇಕೋ! ಆಂಗ್ಲ ವಿದ್ಯಾನಿಪುಣರೂ, ಬಿ.ಎ.ಎಲ್‌ಎಲ್.ಬಿ. ಎಂಬ ಪದವೀಧರರೂ, ಸಟೆಯನ್ನು ದಿಟವಾಗಿಯೂ, ದಿಟವನ್ನು ಸಟೆಯಾಗಿಯೂ ಮಾಡುವದರಲ್ಲಿ ಅತಿ ಜಾಣ್ಮೆಯುಳ್ಳವರೂ, ಜಿಲ್ಲೆಯಲ್ಲೆಲ್ಲ ನಾವೇ ಜಾಣರು. ನಾವೇ ಮುಖಂಡರು ಎಂದು ಮೆರೆದಾಡುವ ಮಹಾನುಭಾವರಾದ ಮಹಾ ಮಹಾ ವಕೀಲರು. ಆ ಗಿಲ್ಲೆಯ ಲೇಖಗಳಲ್ಲಿ ಈ ವಕೀಲ ಜನರು ತಮ್ಮ ಆಂಗ್ಲ ವಿದ್ಯಾಪಾಂಡಿತ್ಯವನ್ನೂ, ಪ್ರೌಢಿಮೆಯನ್ನೂ ಸ್ವಚ್ಛಂದವಾಗಿ ತೋರಿಸಿಬಿಟ್ಟಿದ್ದರು. ವಕೀಲರಿಗೆ ತಮ್ಮ ಪ್ರಭಾವವನ್ನು ತೋರಿಸಲಕ್ಕೆ ಒಳ್ಳೇ ಸಮಯಗಳೇ ಸಿಗುವದಿಲ್ಲ. ಪೂರ್ವವನ್ನು ಪಶ್ಚಿಮವೆಂದು ಸಿದ್ಧಮಾಡುವದೂ, ಸಜ್ಜನರ ಗಿಲ್ಲೆಗಳನ್ನೆಬ್ಬಿಸುವರೂ, ಸತ್ಕಾರ್ಯಗಳಿಗೆ ವಿಘ್ನ ತರುವದೂ ಇವರಿಗೆ ಪ್ರೀತಿಯ ವಿಷಯಗಳು. ಅವರ ಜಾತಿಯವರೇ ಆದ ಹರಿದಾಸರು 'ವಕೀಲ'ಶಬ್ದಕ್ಕೆ ಮನೋರಂಜನಾರ್ಥವಾಗಿ ಮಾಡುವ ಅರ್ಥವು ಅಕ್ಷರಶಃ ನಿಜವಿರುತ್ತದೆ. 'ವ' ಎಂದರೆ ವಚನಭ್ರಷ್ಟರೆಂತಲೂ, 'ಕೀ' ಎಂದರೆ ಕ್ರಿಯಾಭ್ರಷ್ಟ (ಕೀಳುಕದನಗಳನ್ನು ಅಥವಾ ಕೀಳಕೃತ್ಯಗಳನ್ನು ಪ್ರೀತಿಸುವವ)ರೆಂತಲೂ, 'ಲ'ಅಂದರೆ ಲಬಾಡಖೋರರೆಂತಲೂ ತಮ್ಮ ಕಥನದಲ್ಲಿ ಮನೋಹರವಾಗಿ ಹೇಳುವರು. ಈ ಅರ್ಥವು ಇಂತಹ ವಕೀಲರಿಗೆ ಬಹಳೇ ಒಪ್ಪುತ್ತದಲ್ಲವೋ! ಈ ವಕೀಲರಿಗೆ ಇವರ ತಾಯಿತಂದೆಗಳು ಜನ್ಮಕೊಟ್ಟಿದ್ದೂ, ವಿದ್ಯೆ ಕಲಿಸಿದ್ದೂ ಸಾರ್ಥಕವಾಯಿತು. ಕಷ್ಟಪಟ್ಟು ಕಲಿತ ವಿದ್ಯೆಯನ್ನೂ, ದೇವರು ಕೊಟ್ಟ ಬುದ್ಧಿಯನ್ನೂ, ಅಹೋರಾತ್ರಿಯಲ್ಲಿಯೂ ಪರಹಿತವನ್ನೆಣಿಸಿ ಕೆಲಸ

ಮಾಡುವ ರಾ.ಬ||ರುದ್ರಗೌಡ ಸಾಹೇಬರ ಮೇಲೆ ಟೀಕಾ ಮಾಡಲಿಕ್ಕೆ ಉಪಯೋಗಿಸಿದ್ದರಿಂದ, ಈ ಮಹಾಪುರುಷರು ಕೃತಾರ್ಥರಾದರು. "ಕತ್ತೆಯ ಮೊಲೆಯಲ್ಲಿ ಖಂಡಗ ಹಾಲಿದ್ದರೇನೆಂಬಂತೆ" ಸತ್ಕೃತ್ಯಗಳಿಗುಪಯೋಗಿಸದ ಇವರ ಪಾಂಡಿತ್ಯವೂ ಪ್ರಭಾವವೂ ನಿರರ್ಥಕವೇ ಸರಿ.

ರಾ.ಬ||ರುದ್ರಗೌಡರು ಅವರಿಗೆ ಮಾಡಿದ್ದಾದರೂ ಏನು? ಅನ್ಯಾಯವನ್ನು ಆಚರಿಸೆಂದು ಯಾರಾದರೂ ಹೇಳುವರೋ? ತಂದೆಯು ತನ್ನ ಮಕ್ಕಳೂ, ಸೇವಕರೂ ಅನೃತಮಾರ್ಗವನ್ನು ಹಿಡಿದರೆ ನೋಡಿ ಸುಮ್ಮನಾಗುವನೋ? ಮನೆಮಂದಿಯೆಲ್ಲ ನೀತಿವಂತರೂ, ಸನ್ಮಾರ್ಗಿಗಳೂ ಆಗಿ ಮನೆಯು ಮುಂದಕ್ಕೆ ಬರಬೇಕೆಂದು ತಂದೆಯು ಅಪೇಕ್ಷಿಸುವದಿಲ್ಲವೋ? ರಾಜ್ಯಭಾರಿಗಳು ಪ್ರಜೆಗಳ ತಂದೆಯಲ್ಲವೋ? ತಮ್ಮ ಪ್ರಾಂತವನ್ನು ಸುಖಶಾಂತಿಗಳಿಂದ ರಕ್ಷಿಸುವದು ಇವರ ಕರ್ತವ್ಯವಲ್ಲವೋ? ಈ ನ್ಯಾಯಮಾರ್ಗಕ್ಕೆ ಯಾರಾದರೂ ದೂಷಣೆಯನ್ನು ಕೊಡಲಿಕ್ಕೆ ಆಸ್ಪದವಿರುವದೋ? ಅಂದಮೇಲೆ ಈ ಬ್ರಾಹ್ಮಣ ವಕೀಲಜನರೂ; ಬೇರೆ ಅಧಿಕಾರಿಗಳೂ, ಪ್ರತ್ಯಕ್ಷವಾಗಿ ಅನ್ಯಾಯ ಪ್ರವರ್ತಕರಾಗಿರೆಂದು ಹೇಳಿದಂತಾಗಲಿಲ್ವೋ? ಇವರು ಇಂತಹ ದುರ್ಲೇಖಗಳನ್ನು ಪ್ರಕಟಮಾಡಿ ತಮ್ಮ ದುರ್ಗುಣಗಳನ್ನು ತಾವೇ ತೋರಿಸಿದಂತಾಗಲಿಲ್ಲವೋ? ಕಳ್ಳಕಾಕರಿಗೂ, ಸುಳ್ಳು ಸಾಕ್ಷಿಯವರಿಗೂ ಪ್ರೋತ್ಸಾಹವುಂಟಾಗಿ ಪ್ರಜಾಪೀಡನೆಯಾಗಲೆಂಬದಾಗಿ ಇವರ ಮನಃ ಪ್ರವೃತ್ತಿಯಿದ್ದಂತಾಗಲಿಲ್ಲವೋ? ಅಂದಮೇಲೆ ಇಂಥವರನ್ನು ಯಾವ ಮೂರ್ಖಕೋಟಿಯಲ್ಲಿ ಸಮಾವೇಶ ಮಾಡಬೇಕೆಂಬ ವಿಚಾರವನ್ನು ವಿವೇಕಿಗಳಾದ ವಾಚಕರೇ ನೀವೇ ಮಾಡಿರಿ. ಇವರ ಜನ್ಮಕ್ಕೂ, ಪಾಂಡಿತ್ಯಕ್ಕೂ ಧಿಕ್ಕಾರವಿರಲಿ!ಬ್ರಾಹ್ಮಣರಲ್ಲಿ ಎಲ್ಲರೂ ಇಂಥವರಿರುತ್ತಾರೆಂದು ನಮ್ಮ ಅಭಿಪ್ರಾಯವಲ್ಲ. ಅವರಲ್ಲಿ ಎಷ್ಟೋ ಜನರು ಸಜ್ಜನರೂ, ಸತ್ಯವಾದಿಗಳೂ, ವಿಶ್ವಾಸಿಕರೂ ಇರುವರು. ಎಷ್ಟೋ ಅಧಿಕಾರಿಗಳು ನಿಸ್ಪೃಹಿಗಳೂ, ನ್ಯಾಯನಿಷ್ಠರೂ, ಸಮದೃಷ್ಟಿಗಳೂ ಇದ್ದು, ಜನೋಪಕಾರಿಗಳಾಗಿ ಕೆಲಸಮಾಡಿ ಕೀರ್ತಿಯನ್ನು ಪಡೆದಿರುವರು, ಪಡೆಯುತ್ತಿರುವರು. ಅವರ ಸುಖಕರವಾದ ಆಡಳಿತದಿಂದ ಪ್ರಜೆಗಳು ಸಂತುಷ್ಟರಾಗಿ ಅವರನ್ನು ಹೊಗಳುತ್ತಿರುವರು. ಆದರೆ ಇಂತಹ ಜನಪ್ರಿಯಕರರಾದ ಬ್ರಾಹ್ಮಣರು ವಿರಳವಾಗಿರುವರೆಂದು ಹೇಳಬಹುದು.

ಹುಟ್ಟುಗುಣ ಹುಗಿದರೂ ಹೋಗದು

ಈ ಬ್ರಾಹ್ಮಣರು ಎಷ್ಟು ದುಷ್ಟರಾಗಿರುತ್ತಾರೆಂಬದು ಮೇಲಿನ ಅವರ ದುಷ್ಕೃತಿಯಿಂದ ಸ್ಪಷ್ಟವಾಗಿ ತಿಳಿಯುವಂತಿದೆ. ಇವರು ಯಾವಾಗಲೂ, ಕಲಹಪ್ರಿಯರೂ, ಕಾಪಟ್ಯರೂ, ಕಿಡುಕರೂ, ಕೀಳಕರೂ, ಕುಲಗೇಡಿಗಳೂ, ಕೂಳಬಕ್ಕರೂ, ಕೆಟ್ಟ ಸ್ವಭಾವದವರೂ, ಕೇವಲ ಸ್ವಾರ್ಥಪರಾಯಣರೂ, ಕೈ ಪೋಣಿಸುವವರೂ, ಕೊಬ್ಬೇರಿದವರೂ, ಕೋಪಿಷ್ಠರೂ, ಕೌಟಿಲ್ಯರೂ, ಕಂಟಕರೂ, ಕಃಪದಾರ್ಥಕಾಮಿಕರೂ ಆಗಿದ್ದಾರೆ. ಹಿಂದಕ್ಕೆ ಮುಂಬಯಿ ಇಲಾಖೆಯ ಗವ್ಹರ್ನರರಾಗಿದ್ದ ನಾಮದಾರ ಲಾರ್ಡ ಎಲ್ಫಿಸ್ಟನ್ ಸಾಹೇಬರವರು ಬ್ರಾಹ್ಮಣರ ದುರಾಚರಣೆಗಳನ್ನೂ, ಕಪಟಸ್ವಭಾವವನ್ನೂ ಮನಗಂಡು ಅವರ ವಿಷಯಕ್ಕೆ ಸ್ವಾನುಭವದಿಂದ ತಮ್ಮ ಅಭಿಪ್ರಾಯವನ್ನು ಬರೆದಿಟ್ಟು ಹೋಗಿರುವರು. ಅದೇನಂದರೆ : ಬ್ರಾಹ್ಮಣರು ಸ್ವಾರ್ಥಪರಾಯಣದಲ್ಲಿ ತಮ್ಮ ಅಣ್ಣ ತಮ್ಮ ಆಪ್ತೇಷ್ಟರನ್ನು ಸಹ ನೋಡುವವರಲ್ಲ. ಇವರ ದುರಹಂಕಾರಕ್ಕೂ, ದುಷ್ಟಸ್ವಭಾವಕ್ಕೂ ಮೇರೆಯೇ ಇಲ್ಲ. ಇವರು ಕೆಲಸ ಬಿದ್ದಾಗ ಕಾಲೊಳಗಿನ ಕೆರವುಗಳನ್ನು ಸಹ ಕೈಯಿಂದ ಹಿಡಿದುಕೊಳ್ಳುವರು. ಪ್ರಸಂಗ ಬಂದಾಗ ತಲೆಯ ಮೇಲೆ ಬಂದು ಕೂಡ್ರುವರು. "ಹೊಳೆದಾಟಿದ ಮೇಲೆ ಅಂಬಿಗನ ಮಿಂಡ" ಎಂಬಂತೆ ಇವರ ಆಚರಣೆಯಿರುವದು. ಇವರು ಅನ್ಯಾಯಕ್ಕೆ ಹಿಂಜರಿಯದವರೂ, ಅವಿಶ್ವಾಸಿಕರೂ ಆಗಿರುತ್ತಾರೆ. ಸ್ವಾರ್ಥ ಸಾಧನೆಗೆ ಇವರು ಬೇಕಾದದ್ದನ್ನು ಮಾಡಲಿಕ್ಕೆ ಹಿಂದೆಗೆಯುವವರಲ್ಲ." ಈ ಪ್ರಕಾರ ಸಾ||ಗವ್ಹರ್ನರ ಸಾಹೇಬ ಬಹದ್ದೂರರವರು

ಬರೆದಿಡಬೇಕಾದರೆ ಅವರು ಬ್ರಾಹ್ಮಣರ ದುರ್ವರ್ತನದ ವಿಷಯಕ್ಕೆ ಎಷ್ಟು ಶೋಧ ಮಾಡಿರಬಹುದು. ಅವರ ಕೀಳು ಕೃತ್ಯಗಳನ್ನೂ, ಕಪಟಾಚರಣೆಗಳನ್ನೂ ಎಷ್ಟು ನೋಡಿರಬಹುದು, ಇಲಾಖಾಧೀಶರಿಗೇ ಈ ಪ್ರಕಾರ ತ್ರಾಸವಾಗಿದ್ದಮೇಲೆ ಈ ಕಿಡುಕರಾಡಳಿತದಲ್ಲಿ ಪ್ರಜೆಗಳಿಗೆಷ್ಟು ದುಃಖವುಂಟಾಗುತ್ತಿದ್ದೀತು?

ರುದ್ರಾವತಾರ

ಈ ಹಾರುವರ ಕ್ಷುದ್ರ ಲೇಖನಗಳಿಂದ ರಾ.ಬ॥ರುದ್ರಗೌಡ ಸಾಹೇಬರಿಗೆ ರುದ್ರಾವತಾರ ತುಂಬಿತು. ಇಷ್ಟಕ್ಕೆ ಬಿಟ್ಟರೆ ಈ ಲೆಂಡ ಹಾರುವರು ವಾನರರಂತೆ ಆಕಾಶಕ್ಕೇ ಹಾರುವರೆಂದೂ, ಇನ್ನುಮೇಲೆ ವಂಚನೆಗೂ, ಲಂಚಕ್ಕೂ ಹಿಂಜರಿಯರೆಂದೂ, ಈ ಲಂಚಾಹಾರಿಗಳಾದ ರಕ್ಕಸರ ಉಪಟಳದಿಂದ ಪ್ರಜಾಪೀಡನೆಯು ಹೆಚ್ಚುವದೆಂದೂ, ಇವರನ್ನು ಮರ್ದನದಿಂದ ಮೃದುಮಾಡಬೇಕೆಂದೂ ಯೋಚಿಸಿದರು. ಈ ಮುಳಗುಂದರವರ ಪ್ರಕರಣದಲ್ಲಿ ಸರಕಾರದ ಫಿರ್ಯಾದಿಯೇ ಇದ್ದು, ಜಡ್ಜಕೋರ್ಟಿನಲ್ಲಿ ಅಪರಾಧಿಗಳಿಗೆ ಬಿಡುಗಡೆಯಾಯಿತೆಂದಮೇಲೆ ಇನ್ನೂ ಮಾಡಬೇಕೇನು? ಎಲ್ಲ ಕಡೆಯಲ್ಲಿ ನ್ಯಾಯಮೂರ್ತಿಗಳು ನ್ಯಾಯನಿಷ್ಠರೇ ಎಲ್ಲಿರುತ್ತಾರೆ? ಒಬ್ಬರಿಗೆ ಸರಿಯಾಗಿ ತೋರುತ್ತಿದ್ದದ್ದು ಇನ್ನೊಬ್ಬರಿಗೆ ತೀರ ವಿರುದ್ಧವಾಗಿ ತೋರುತ್ತದೆ. ಸದ್ಗುಣಶೀಲರೂ, ಸ್ವಾವಲಂಬಿಗಳೂ ಆದ ನ್ಯಾಯಾಧೀಶರಿಗೆ ಎಲ್ಲೆಡೆಯಲ್ಲಿ ಒಂದೇ ವಿಧವಾಗಿರುತ್ತದೆ. ಪರಾವಲಂಬಿಗಳೂ, ಸ್ವಾರ್ಥಸಾಧಕರೂ ಆದ ಮಾಜಿಸ್ಟ್ರೇಟರಿಗೆ ಅವರ ಮನಸಿಗೆ ಬಂದದ್ದೇ ಪ್ರಾಧಾನ್ಯವಾಗಿರುತ್ತದೆ. ಅಂದಮೇಲೆ ಮುಂದೆ ಕೆಲಸ ನಡಿಸಿದರೆ ಹೀಗೇ ಆಗುತ್ತದೆಂದು ಹೇಗೆ ತಿಳಿಯಬೇಕು? ಕೈ ತೋರಿಸಿ ಅವಲಕ್ಷಣವೆನ್ನಿಸಿಕೊಳ್ಳಬಾರದು. ಪ್ರಸಂಗವಾದರೋ ಹೀಗೆ ಬಂತು. ಇಂತಹ ಪ್ರಸಂಗದಲ್ಲಿ ಎಂತಹ ಧೈರ್ಯಸ್ಥನಿಗೂ ವಿಚಾರ ಹರಿಯುವದಿಲ್ಲ. ಎಂಥ ಬುದ್ಧಿವಂತರಿಗೂ ಸಹ ಒಮ್ಮೊಮ್ಮೆ ಮುಂದೇನು ಮಾಡಬೇಕೆಂಬದು ಗೊತ್ತಾಗುವದಿಲ್ಲ. ಒಬ್ಬ ಮುಳುಗುಂದರವರ ಪಕ್ಷಕ್ಕೆ ನಾ ನೀ ಅನ್ನುವಂಥ ಸಾವಿರಾರು ಮಂದಿ ಬ್ರಾಹ್ಮಣರು ಸಹಾಯವಾಗುತ್ತಿದ್ದರು. ಸಕೀಲವನ್ನು ಹೇಳುವ ವಕೀಲರು ಸಂಗಡಲೇ ಇರುತ್ತಿದ್ದರು. ಬೇಕು ಬೇಕಾದಲ್ಲಿ ಇಲ್ಲದ ಗುರುತು ಹಚ್ಚಿ ಕೆಲಸ ಸಾಧಿಸಿಕೊಳ್ಳುವ ಸಾಹಸವಂತೂ ಅವರಲ್ಲಿ ಸ್ವಾಭಾವಿಕವಾಗಿಯೇ ಇದ್ದದ್ದು. ಆದ್ದರಿಂದ ಎಂಥ ದುರ್ಘಟ ಕಾರ್ಯಗಳಿದ್ದರೂ ಅವು ಅವರಿಗೆ ಸುಲಭಸಾಧ್ಯವಾಗಿರುವವು.

ರಾವಬಹದ್ದೂರವರಾದರೋ ವಿಚಾರಮಾಡಲಿಕ್ಕೂ, ಕೆಲಸ ನಡೆಸಲಿಕ್ಕೂ ಸಾಹಸಮಾಡಲಿಕ್ಕೂ ತಾವು ಒಬ್ಬರೇ ಒಬ್ಬರು. ಇವರು ಇನ್ನು ಇದ್ದಷ್ಟು ಬುದ್ಧಿಯನ್ನು ವೆಚ್ಚಮಾಡಬೇಕಾಯಿತು. ಮಿದುಳಶಕ್ತಿಯನ್ನೆಲ್ಲ ಹೊರಬೀಳಿಸಬೇಕಾಯಿತು. "ಸತ್ಯಮೇವ ಜಯತೇ" ಎಂಬ ಗೀರ್ವಾಣವಾಕ್ಯವನ್ನು ಲೋಕಕ್ಕೆ ಪ್ರತ್ಯಕ್ಷಮಾಡಿ ತೋರಿಸಬೇಕಾಯಿತು. ಜಗಜ್ಜನವು ಇವರ ಬುದ್ಧಿಬಲವನ್ನು ಪರೀಕ್ಷೆ ಮಾಡುವದಾಯಿತು. ಮುಳಗುಂದರವರ ಮೂಬದಲಿಯಾಗಿ, ತುರಂಗದಲ್ಲಿದ್ದ ನ್ಯಾಯದೇವತೆಯನ್ನು ನ್ಯಾಯನಿಷ್ಠರೆಂಬ ಬಿರುದಿಗೆ ಪಾತ್ರರಾದ ರುದ್ರಗೌಡರು ಸೆರೆಮನೆಯಿಂದ ಬಿಡಿಸಬೇಕಾಯಿತು. ಕಡೆಗೆ ರಾ.ಬ॥ಅರಟಾಳ ಸಾಹೇಬರು ಈ ಮಹಾಪರಾಧವುಳ್ಳ ವ್ಯಾಜ್ಯವು ಜಜ್ಜಕೋರ್ಟಿನಲ್ಲಿ ನ್ಯಾಯದೃಷ್ಟಿಯಿಂದ ನಿರ್ಣಯಿಸಲ್ಪಡಲಿಲ್ಲವೆಂದೂ, ಪರ್ವತಪ್ರಾಯವಾದ ಅಪರಾಧಗಳು ಆರೋಪಿಗಳ ತಲೆಯ ಮೇಲೆ ಪ್ರತ್ಯಕ್ಷ ಕಾಣುತ್ತಿರಲು, ನಿರಪರಾಧಿಗಳೆಂದು ನಿರ್ಣಯಿಸಲ್ಪಟ್ಟಿದ್ದು ಮಹದನ್ಯಾಯವಾಯಿತೆಂದೂ, ಕಾರಣ ಈ ಪ್ರಕರಣವು ಸರಕಾರದಲ್ಲಿ ಪುನಃ ವಿಚಾರವಾಗುವದವಶ್ಯವೆಂದೂ ಯೋಗ್ಯ ಪುರಾವೆಗಳೊಡನೆ ಸಾದ್ಯಂತ ರಿಪೋರ್ಟವನ್ನು ಬರೆದು ಮೆ॥ಕಲೇಕ್ಟರ ಸಾಹೇಬ ಬಹದ್ದೂರವರ ಕಡೆಗೆ ಕಳಿಸಿದರು. ಮೆ॥ಲಾರೆನ್ಸ ಸಾಹೇಬ ಬಹದ್ದೂರವರಾದರೂ ಪಂಡಿತರೂ ನ್ಯಾಯನಿಷ್ಠರೂ ಆಗಿದ್ದದರಿಂದ ಆ ರಿಪೋರ್ಟಿಗೆ ಒಳ್ಳೇ ಚೆನ್ನಾಗಿ ಶಿಫಾರಸವನ್ನು ಬರೆದು ಸರಕಾರಕ್ಕೆ ಕಳಿಸಿದರು.

ದುಂದುಗಾರನಾದ ಶ್ರೀಮಂತನು ತನ್ನ ಪುತ್ರನ ಲಗ್ನದಲ್ಲಿ ಭಾಂಡಾರವನ್ನೆಲ್ಲ ಸೂರೆ ಮಾಡುವಂತೆ ಈ ರಿಪೋರ್ಟ ಬರೆಯುವ ಕಾಲಕ್ಕೆ ರಾವಬಹದ್ದೂರರವರು ತಮ್ಮ ಬುದ್ಧಿ ಭಾಂಡಾರವನ್ನೆಲ್ಲ ಬಿಚ್ಚಿಬಿಟ್ಟರು. ವಿಚಾರಶಕ್ತಿಯನ್ನು ಮಥಿಸಿದರು. ಈಶದತ್ತ ಜಾಣ್ಮೆಯನ್ನು ಪೂರ್ಣವಾಗಿ ಪ್ರಕಟಮಾಡಿದರು. ಸತ್ಯಸಂಧರು ಅಂತಃಕರಣಪೂರ್ವಕ ಮಾಡಿದ ಪ್ರಯತ್ನವು ಎಂದೂ ವ್ಯರ್ಥವಾಗುವದಿಲ್ಲ. ಕೂಡಲೆ ಇವರ ರಿಪೋರ್ಟಿನ ಪರಿಣಾಮವು ಪಾರ್ಥನ ಪಾಶುಪತಾಸ್ತ್ರದ ಪರಿಣಾಮದಂತೆ ಪರಿಣಮಿಸಿ, ಮುಂಬಯಿ ಗವ್ಹರ್ನಮೆಂಟಿನಲ್ಲಿ ವಿಚಾರಿಸಲ್ಪಟ್ಟು, ಸೆಶನ್‌ಕೋರ್ಟಿನ ನ್ಯಾಯಮೂರ್ತಿಗಳು ಅನ್ಯಾಯವಾಗಿ ಈ ವ್ಯಾಜ್ಯವನ್ನು ಬಿಟ್ಟಿದ್ದರ ಮೇಲೆ, ಹೈಕೋರ್ಟಿಗೆ ಅಪೀಲ ಮಾಡಬೇಕೆಂದು ಸರಕಾರ ಠರಾವವಾಯಿತು. ಸರಕಾರ ಠರಾವ ನಂಬರ ೬೧೦೪/೧೮-೧೧-೧೯೦೩. ನ್ಯಾಯಖಾತೆ ಕೂಡಲೆ ಸರಕಾರೀ ತರ್ಫೆಯಿಂದ ಈ ಪ್ರಕರಣವು ಹೈಕೋರ್ಟಿಗೆ ಅಪೀಲಾಯಿತು. ಗವ್ಹರ್ನಮೆಂಟ ಅಪೀಲ ನಂಬರ ೪೮೪/೧೯೦೩.

ಮುಳಗುಂದರವರ ಶಿಕ್ಷೆ ಕಾಹೀಮಾದದ್ದು, ಹೈಕೋರ್ಟಿನ ಠರಾವು

ಫೆಬ್ರುವರಿ ತಿಂಗಳಲ್ಲಿ ಈ ಮುಳಗುಂದ ಪ್ರಕರಣದ ಅಪೀಲ ಸುಲಾವಣಿಯು ನಡೆಯಿತು. ಆರೋಪಿ ತರ್ಫೆಯಿಂದ ಬ್ರ್ಯಾನ್ಸನ್ ಎಂಬ ಬ್ಯಾರಿಷ್ಟರರಿದ್ದರು. ಇವರಿಗೆ ಮಾಹಿತಿಯನ್ನು ಕೊಡುವದಕ್ಕಾಗಿ ಬೆಳಗಾವಿಯಿಂದ ಬೆಳವಿ ಮುಂತಾದ ವಕೀಲರು ಹೋಗಿದ್ದರು. ಸುಲಾವಣಿಯ ಕಾಲಕ್ಕೆ ರಾವಬಹದ್ದೂರ ಅರಟಾಳ ಸಾಹೇಬರು, ಸರಕಾರೀ ವಕೀಲರಿಗೂ ಅಡ್‌ಹೋಕೇಟ ಜನರಲ್‌ರವರಿಗೂ ಮಾಹಿತಿ ಕೊಡುವದರ ದೆಸೆಯಿಂದ ಹಾಜರ ಇರಬೇಕೆಂಬದಾಗಿ ಸರಕಾರೀ ಠರಾವಿನಲ್ಲಿಯೇ ಪ್ರಸಿದ್ಧವಾಗಿತ್ತು. ಠರಾವ ಪ್ರಕಾರ ರಾವಬಹದ್ದೂರರವರು ಬೆಳಗಾವ ಜಿಲ್ಲೆಯ ಸರಕಾರೀ ವಕೀಲರಾದ ಕೇಶವ ಗಣೇಶ ಅಜರೇಕರರನ್ನು ಕರಕೊಂಡು, ಹಾಯಕೋರ್ಟಿಗೆ ಮುದ್ದತಿಗೆ ಸರಿಯಾಗಿ ಹಾಜರಾದರು. ಸರಕಾರ ತರ್ಫೆಯಿಂದ ಮೆಹರ್ಬಾನ ಕಾಟಸಾಹೇಬ ಅಡ್ವೊಕೇಟ ಜನರಲ್ ಇವರು ವಕೀಲರಿದ್ದರು. ಹಾಯಕೋರ್ಟಿನಲ್ಲಿ ನ್ಯಾಯಮೂರ್ತಿಗಳ ಮುಂದೆ ಏಳೆಂಟುದಿವಸ ವಿಚಾರಣೆಯು ನಡೆಯಿತು.

ಈ ನ್ಯಾಯನಿರ್ಣಯವು ಹೇಗಾಗುವದೆಂಬದನ್ನು ತಿಳುಕೊಳ್ಳಲಿಕ್ಕೆ ಬಹುಮಂದಿಯು ಉತ್ಕಂಠಿತರಾಗಿದ್ದರು. ಸೂರಿನ ನೀರು ಬೆಂಕಟ್ಟಿಗೇರಲಾರದೆಂದು ಎಷ್ಟೋ ಜನರು ಭಾವಿಸಿದರು. ಆದರೆ ವಾತಾಕರ್ಷಕ ಯಂತ್ರದಿಂದ ಕೆಳಗಿನ ನೀರನ್ನು ಬೇಕಾದಷ್ಟು ದೂರದ ವರೆಗೆ ಏರಿಸಬಹುದೆಂಬ ವಿಚಾರ ಮಾತ್ರ ಯಾರ ಮನಸಿನೊಳಗೂ ಬರಲಿಲ್ಲ. ಪ್ರತಿಯೊಬ್ಬ ಬ್ರಾಹ್ಮಣನ ಲಕ್ಷ್ಯವು ಹಾಯಕೋರ್ಟಿನ ಕಡೆಗಿತ್ತು. ಹಾಯಕೋರ್ಟಿನಲ್ಲಿ ಹೆಚ್ಚಿನ ಕಾರ್ಯವೇನೂ ಆಗುವದಿಲ್ಲೆಂದು ಹಾರುವರು ನಂಬಿ, ನಿರ್ಣಯದ ವಾರ್ತೆಯನ್ನು ಕೇಳಿದಾಕ್ಷಣವೆ ಕೇಕೆಯನ್ನು ಹಾಕಬೇಕೆಂದು ಮನದೊಳಗೆ ಮಾಡಿಕೊಂಡಿದ್ದರು. ಮನಸಿನೊಳಗೆ ಮಂಡಗಿಯನ್ನು ಮಾಡಿದರೆ ಗೋದಿಯ ಲೆಕ್ಕವನ್ನು ಕೊಡುವವರಾರೆಂಬ ವಿಚಾರವನ್ನು ಯಾರೂ ಮಾಡಿರಲಿಲ್ಲ. ನಾ॥ನ್ಯಾಯಮೂರ್ತಿ ಆಫ್ಟನ್ ಸಾಹೇಬರವರ ಮತ್ತು ಚಂದಾವರಕರವರ ಮುಂದೆ ಈ ಮುಳಗುಂದರವರ ಪ್ರಕರಣವು ಹೋಗುತ್ತಲೇ ಮುಳಗುಂದರವರು ಪಾಪಕೂಪದಲ್ಲಿ ಮುಳುಗಹತ್ತಿದರು. ಉಭಯ ನ್ಯಾಯಮೂರ್ತಿಗಳು ಸಮದೃಷ್ಟಿಯಿಂದ ವ್ಯಾಜ್ಯದ ಪೂರ್ವಾಪರ ವಿಚಾರ ಮಾಡಿ ರಾ.ಬ॥ರುದ್ರಗೌಡ ಸಾಹೇಬರವರ ಶೋಧಕ್ಕೂ, ದೀರ್ಘದೃಷ್ಟಿಗೂ, ಜಾಗ್ರತೆಗೂ, ಪ್ರಾಮಾಣಿಕತನಕ್ಕೂ ಚಕಿತರಾದರು. ನಾಗಪ್ಪನ ಕೀರ್ದಿಯಲ್ಲಿ ನಮೂದವಾಗಿದ್ದ ಲಂಚದ ರಕಮುಗಳ ಮುಂದಿನ "ಮಾ-ಗು" ಎಂಬ ಸಂಜ್ಞಾಕ್ಷರಗಳನ್ನು ನೋಡಿ ಮೆ॥ ಆಫ್ಟನ್ ಸಾಹೇಬರು ಈ ಲಂಚದ ಆರೋಪವು ನಿಜವೆಂದು ನಂಬಿ, ಆಶ್ಚರ್ಯಮುದ್ರೆಯಿಂದ ಪುನಃ ಪುನಃ

"ಮಾ-ಗು-ಗು" ಎಂಬದಾಗಿ ಉಚ್ಚರಿಸುತ್ತಿದ್ದರು. ಒಂದೇ ಒಂದು ಅಗಳು ಹಿಚಕಿನೋಡಿ ಅನ್ನವಾದದ್ದನ್ನು ತಿಳುಕೊಳ್ಳುವಂತೆ, ನ್ಯಾಯ ವಿಚಕ್ಷಣ ಧುರಂಧರರು ಸನ್ನಿಹಿತಪ್ರಕರಣದ ಸತ್ಯಾಸತ್ಯತೆಯನ್ನು ಒಂದೆರಡು ಮುಖ್ಯ ಮುದ್ದೆಗಳ ಮೇಲಿಂದಲೇ ಕಂಡುಕೊಳ್ಳುವರು. ರಾವಬಹದ್ದೂರರವರ ಚಾತುರ್ಯವನ್ನು ಕಂಡು, "ಈ ಅರಟಾಳ ಸಾಹೇಬರು ಸಾವಿರ ಕಣ್ಣುಗಳ ಮಾಜಿಸ್ಟ್ರೇಟರೆಂದು" ಇವರ ಶಿಫಾರಸ ಮಾಡಿದರು. ನ್ಯಾಯನಿಷ್ಠಪ್ರಭುಗಳಿಗೆ ನ್ಯಾಯಾನ್ಯಾಯ ವಿಚಾರಗಳು ಕೂಡಲೆ ತಿಳಿಯುತ್ತವೆಂದು ಮೇಲೆಯೇ ಹೇಳಿರುತ್ತದೆ. ದೇವರನ್ನು ಸ್ಮರಿಸಿ ರಾಜ್ಯಕಾರ್ಯ ಮಾಡುವ ಮಹನೀಯರ ಚಕ್ಷುಗಳಿಗೆ ಸತ್ಯದ ತತ್ವಗಳು ತಕ್ಷಣದಲ್ಲಿ ಪ್ರಕಾಶಿಸುತ್ತವೆ. ಸತ್ಯವಾದಿಗಳ ನಿರ್ಣಯದಲ್ಲಿ ಅನ್ಯಾಯದ ಜೊಳ್ಳು ಕಾಳುಗಳು ಗಾಳಿಗೆ ಹಾರಿ ದೂರ ಹೋಗುತ್ತವೆ. ನ್ಯಾಯದ ಬೀಜಗಳು ಸ್ಥಿರವಾಗಿ ನಿಲ್ಲುತ್ತವೆ. ಅನ್ಯಾಯದ ಮೊಟ್ಟೆಗಳಾದ ಅಧಿಕಾರಿಗಳ ಮಬ್ಬುಗಣ್ಣಿಗೆ ನ್ಯಾಯದ ತತ್ವಗಳು ಹೊಳೆಯುವದಿಲ್ಲ. ಪಾರಜವು ಬಂಗಾರವನ್ನು ತಡವಿಲ್ಲದೆ ಮುತ್ತಿಕೊಳ್ಳುವಂತೆ ನಿರ್ಮಲಾಂತಃಕರುಣವುಳ್ಳ ನ್ಯಾಯಮೂರ್ತಿಗಳು ಸತ್ಯಾಂಶವನ್ನು ಬಲುಬೇಗ ಕಂಡುಕೊಳ್ಳುವರು.

ಆರಂಭಕ್ಕೆ "ಆರೋಪಿಯು ಪಕ್ಷದವರು ರಾ.ಬ॥ರುದ್ರಗೌಡ ಸಾಹೇಬರು ಬ್ರಹ್ಮದ್ವೇಷಿಗಳೆಂದೆನ್ನುತ್ತಾರೆ"ಂದು ಅಡ್ವೊಕೇಟ ಜನರಲ್‌ರವರು ಮಾತು ತೆಗೆದು ವ್ಯಾಜ್ಯವನ್ನು ಆರಂಭಿಸಲು, ನ್ಯಾಯಮೂರ್ತಿಗಳು "ಯಾವ ಆಧಾರದಿಂದ ಬ್ರಹ್ಮದ್ವೇಷಿಗಳೆನ್ನುತ್ತಾರೆ"ಂದು ಪ್ರಶ್ನೆ ಮಾಡಿದ್ದಕ್ಕೆ, ಅಡ್ವೊಕೇಟ ಜನರಲ್‌ರವರು "ಆಧಾರವೇನೂ ಇಲ್ಲವಲ್ಲ"ವೆಂದರು. ಅದರಿಂದ ಇಂಥ ನಿರಾಧಾರವಾದ ಆರೋಪಗಳು ಉಪಯೋಗವಿಲ್ಲೆಂದು, ಆರಂಭಕ್ಕೆ ಈ 'ಬ್ರಹ್ಮದ್ವೇಷಿ' ಎಂಬ ಮಾತಿನ ನಿರಾಕರಣವಾಯಿತು. ಆದದರಿಂದ ಮುಳಗುಂದರವರ ಭೋಜನ ಪಂಕ್ತಿಯಲ್ಲಿ ಮೊದಲನೆಯ ತುತ್ತಿಗೇ ಹರಳು ಬಂದಂತಾಯಿತು. ಪೂರ್ವವನ್ನು ಪಶ್ಚಿಮವೆಂದು ಶತಃಸಿದ್ಧ ಮಾಡಿಕೊಡಲಿಕ್ಕೆ ತತ್ಪರರಾಗಿದ್ದ ವಕೀಲ ಮುಂತಾದ ಜನರು ತಮ್ಮ ಗೃಧ್ರದೃಷ್ಟಿಗಳಿಗೆ ಓ-ನಾ-ಮಾ ಓದುವಾಗಲೇ ಚಾಳೀಸ ಹಚ್ಚಿಕೊಳ್ಳಬೇಕಾಯಿತು. ಮುಂದೆ ಹಾಯಕೋರ್ಟಿನ ನ್ಯಾಯಮೂರ್ತಿಗಳು ಸತ್ಯಪಕ್ಷವನ್ನೇ ಹಿಂಬಾಲಿಸಿ ಮುಳಗುಂದರವರ ಪ್ರಕರಣವನ್ನು ಪೂರ್ಣವಿಚಾರಮಾಡಿ, ಸೆಶನ ಜಜ್ಜ ಸಾಹೇಬರವರ ಠರಾವವನ್ನು ರದ್ದುಪಡಿಸಿ, ರಾ.ಬ॥ ಹುಜೂರ ಡಿಪೂಟಿ ಕಲೇಕ್ಟರ ಲಲ್ಲುಬಾಯಿ ಸಾಹೇಬರು ಕೊಟ್ಟ ಶಿಕ್ಷೆಯನ್ನೇ ಕಾಹೇಮು ಮಾಡಿದರು. ತಾರೀಖ ೧೫-೩-೧೯೦೪ ಇಸವಿ. ಈ ಹಾಯಕೋರ್ಟಿನ ಠರಾವವು ಸನ್ ೧೯೦೪ನೇ ಇಸವಿಯ (ವ್ಹಾಲ್ಯೂಮ್.೬) ಎಪ್ರಿಲ್ ತಿಂಗಳ ಬಾಂಬೆ-ಲಾ-ರಿಪೋರ್ಟರದ ೪೪೩-೪೫೪ ಪಾನುಗಳಲ್ಲಿ ಪ್ರಸಿದ್ಧಿಸಲ್ಪಟ್ಟಿದೆ. ಬೇಕಾದವರು ನೋಡಿಕೊಳ್ಳತಕ್ಕದ್ದು. (ಬಾಂಬೆ ಲಾ ರಿಪೋರ್ಟ ೧೯೦೪ ವಾಲ್ಯೂಮ್ ೪. ಪು. ೪೪೩-೪೪೫)

ರಾ.ಬ॥ರುದ್ರಗೌಡರವರ ಘನತೆ

ಈ ಪ್ರಕರಣದ ಶೋಧದೃಷ್ಟಿಗೂ ಸತ್ಯವಂತಿಕೆಗೂ ರಾ.ಬ॥ರುದ್ರಗೌಡರನ್ನು ಎಲ್ಲರೂ ಬಹಳೇ ಶ್ಲಾಘಿಸಿದರು. ವಿಚಾರಣೆ ನಡೆದಾಗ ನ್ಯಾಯಮೂರ್ತಿ ಅಷ್ಟನ್ ಸಾಹೇಬರು ಇವರ ಚಾತುರ್ಯಕ್ಕೆ ಮನದೊಳಗೆ ತಲೆದೂಗುತ್ತ ಪ್ರೇಮಾಂತಃಕರುಣದಿಂದ ಇವರನ್ನು ಮೇಲಿಂದ ಮೇಲೆ ನೋಡುತ್ತ, ಸಾನಂದ ಹೃದಯರಾಗುತ್ತಿದ್ದರು. ಸರ್ವಡೆಯಲ್ಲಿ ಸತ್ಯಕ್ಕೆ ಸನ್ಮಾನವಾಗತಕ್ಕದ್ದೇ ಸರಿ. ಮುಂಬಯಿಯಲ್ಲಾದರೂ ರುದ್ರಗೌಡ ಸಾಹೇಬರವರ ಪ್ರಖ್ಯಾತಿಯು ಮೇರೆದಪ್ಪಿ ಆಯಿತು. ಮುಳಗುಂದರವರ ಹಾಗೂ ಗುರುರಾಯರ ಶಿಕ್ಷೆಯು ಹಾಯಕೋರ್ಟಿನಲ್ಲಿ ಕಾಹೇಮವಾದ ವಾರ್ತೆಯು ಸುತ್ತಲೂ ತನ್ನಿಂದ ತಾನೆ ಹರಡಿಕೊಂಡಿತು. ಕಳ್ಳರನ್ನು ಕೋಳಾ ಹಾಕಿ

ಕೆಡವಿದಂತಾಯಿತು. ಬ್ರಾಹ್ಮಣರ ಮನೋರಥ ಕಲಶವೊಡೆದು ಚೂರು ಚೂರಾದಂತಾಯಿತು. "ಕತ್ತೆಯು ಕಾಶಿಗೆ ಹೋದರೆ ಕುದುರೆಯಾಗಬಲ್ಲದೇ?" ಎಂಬಂತೆ ಮುಳಗುಂದರವರ ಪ್ರಕರಣದ ವಿಚಾರವಾಯಿತು. ಕಿಚ್ಚ ಮಾಡಿದವನಿಗೆ ಕಾವು ತಾಕದೆ ಬಿಡಲಾರದೆಂದು ಬಹುಜನರು ಭಾವಿಸಹತ್ತಿದರು. ರಾವಬಹದ್ದೂರವರನ್ನು ದೂಷಿಸುತ್ತಿದ್ದವರ ಬಾಯಿಗೆ ಬೆಣೆಯನ್ನು ಬಡಿದಂತಾಯಿತು. "ಹಲವು ಮಂದಿ ಹೊಲೆಯರು ಕೂಡಿ ತೊಗಲಿನ ಹದವನ್ನು ಕೆಡಸಿದರೆಂ"ಬಂತೆ ಹಲವು ಮಂದಿ ಹಾರುವರು ಹುರಿದುಂಬಿ ಕೂಡಿ ಮುಳಗುಂದರವರನ್ನು ಸೆರೆಮನೆಗೀಡು ಮಾಡಿದರು. ಸತ್ಯದ ಮುಂದೆ ಅಸತ್ಯದ ಆಟವು ನಡೆಯುವದೇ? ಸಾವಿರ ಬೆಕ್ಕು ಕೂಡಿದರೆ ಒಂದು ಹುಲಿಗೆ ಸರಿಯಾಗುವದೇ?ಊರ್ಧ್ವಮುಖವಾಗಿ ಹಾರಾಡುತ್ತಿದ್ದ ಹಾರುವರು ಅಧೋಮುಖಿಗಳಾದರು. ಅವರ ಆನಂದವೂ, ಆಟವೂ, ಪುಂಡಾಟಿಕೆಯೂ, ಕುಚೋದ್ಯತನವೂ ಎಷ್ಟೋಮಟ್ಟಿಗೆ ಕಡಿಮೆಯಾದವು. ಅವರು ಮೊದಲು ಯಥೇಚ್ಛವಾಗಿ ಆಡಿದ ಅಲಾವಿಯ ಜಾರತವಾದಂತಾಯಿತು. ಎಲ್ಲ ಕಡೆಯಲ್ಲಿಯೂ ಅವರ ಸದ್ದು ಅಡಗಿ ಹೋಯಿತು. ಕಾಗೆ ಗೂಗೆಗಳ ಕಲಕಲಾಟವು ಕಡಿಮೆಯಾದಂತಾಯಿತು. ಮೊದಲು ಆನಂದ ಮುದ್ರೆಯಿಂದ ಮಾತಾಡಿಸಲಿಕ್ಕೆ ಬರುವ ಬ್ರಾಹ್ಮಣರು ಎಲ್ಲಿ ಅಡಗಿದರೋ, ಎಂಬಂತೆ ಕೆಲವು ದಿವಸಗಳ ವರೆಗೆ ರುದ್ರಗೌಡ ಸಾಹೇಬರವರ ದರ್ಶನವನ್ನೇ ತೆಗೆದುಕೊಳ್ಳಲಿಲ್ಲ. ದರ್ಶನವಾಗಲಿಕ್ಕೆ ಅವರಿಗೆ ಮೋರೆಯೇ ಇದ್ದಿಲ್ಲ. ಮನುಷ್ಯರು ಬಹಳ ಮೆರೆದಾಡಬಾರದು. ಹೊತ್ತು ಯಾವಾಗಲೂ ಒಂದೇ ಸಮನಾಗಿರುವದಿಲ್ಲ. ಬಹಳ ಬಹಳ ಮಾಡಿದ್ದು ಬಹು ದಿವಸ ನಡೆಯದು. ಸಾರಾಂಶ, ಮುಳಗುಂದರವರ ಶಿಕ್ಷೆಯಿಂದ ವಿಘ್ನಸಂತೋಷಿಗಳೂ, ಪರೋತ್ಕರ್ಷ ಅಸಹಿಷ್ಣುಗಳೂ ಆದ ಬ್ರಹ್ಮವೃಂದದ ಮನೋರಾಜ್ಯವೆಲ್ಲ ಹಾಳಾಗಿ ಹೋಯಿತೆಂದು ಹೇಳಬಹುದು.

ರಾವಬಹದ್ದೂರವರು ಮುಂಬಯಿಯಿಂದ ಬೆಳಗಾವಿಗೆ ಬಂದನಂತರ, ತಮ್ಮ ವಿಷಯಕ್ಕೆ ಟೀಕಾಪರವಾದ ಲೇಖಗಳನ್ನು ಪ್ರಸಿದ್ಧಮಾಡಿದ ವರ್ತಮಾನಪತ್ರ ಕರ್ತರ ಮೇಲೆ ಖಟ್ಲೆಯನ್ನು ಮಾಡುವದಕ್ಕೆ ಸರಕಾರಿಯ ಮಂಜೂರಿಯು ಸಿಗಬೇಕೆಂದು ಮೆ॥ಕಲೇಕ್ಟರ ಸಾಹೇಬ ಬಹದ್ದೂರವರ ಕಡೆಗೆ, ಅಥಣೀ ತಾಲೂಕ ಕುಡಚೀ ಮುಕ್ಕಾಮಿನಿಂದ ನಂಬರ ೯೧/೯-೪-೧೯೦೪ನೆಯ ಇಂಗ್ಲೀಷ ರಿಪೋರ್ಟನ್ನು ಮಾಡಿದರು. ಈ ಮುಳಗುಂದ ಪ್ರಕರಣದಲ್ಲಿದ್ದ ಮೆ॥ಲಾರೆನ್ಸ ಕಲೇಕ್ಟರ ಸಾಹೇಬ ಬಹದ್ದೂರವರು ಸನ್ ೧೯೦೩ನೇ ನವಂಬರಿಯಲ್ಲಿ ಉತ್ತರಭಾಗದ ಕಮಿಶನರರಾಗಿ ಹೋದದರಿಂದ ಅವರ ಜಾಗೆಯ ಮೇಲೆ, ಆಕ್ಸಫರ್ಡ ಯುನಿವ್ಹರ್ಸಿಟಿಯ ಎಮ್.ಎ. ಆದವರೂ, ಇಂಡಿಯನ್ ಸಿ-ಎಸ್ ಎಂಬ ಪದವೀಧರರೂ, ಸಂಸ್ಕೃತವಿದ್ಯಾ ಘನಪಂಡಿತರೂ ಆದ ಮೆಹರ್ಬಾನ್ ಏ.ಎಮ್.ಟಿ. ಜಾಕ್ಸನ್ ದೊರೆಗಳು ಕಲೇಕ್ಟರರಾಗಿ ಬಂದರು. ಮೆ॥ಜಾಕ್ಸನ್ ದೊರೆಗಳಾದರೂ ಮೆ॥ಲಾರೆನ್ಸ ದೊರೆಗಳಂತೆ ಸತ್ಯಶೀಲರೂ, ಘನವಂತರೂ ಆದದ್ದರಿಂದ ಬಂದೊಡನೆ ರಾ.ಬ॥ರುದ್ರಗೌಡ ಸಾಹೇಬರವರ ಮೇಲೆ ಅವರ ಅವಿರಳವಾದ ಪ್ರೇಮವು ಕೂತಿತು. ಲೋಹವನ್ನೂ ಲೋಹಚುಂಬಕವನ್ನೂ ಕೂಡಿಸಲಿಕ್ಕೆ ಯಾರೂ ಬೇಡ. ಸಮಾನಗುಣಧರ್ಮಗಳುಳ್ಳ ಪದಾರ್ಥಗಳ ಆಕರ್ಷಣ ಶಕ್ತಿಯು ಹೆಚ್ಚಾಗಿರುವಂತೆ, ಸಮಶೀಲ ಸ್ವಭಾವವುಳ್ಳ ಸಜ್ಜನದ ಸಖ್ಯವು ಬಹುಬೇಗ ಕೂಡುತ್ತದೆ. ಅದರಂತೆ ಪ್ರಾಮಾಣಿಕರೂ ನ್ಯಾಯ ನಿಷ್ಠರೂ ಆದ ರಾ.ಬ. ರುದ್ರಗೌಡ ಸಾಹೇಬರು ಮೆ. ಜಾಕ್ಸನ್ ದೊರೆಗಳ ಪ್ರೇಮಕ್ಕೆ ಪಾತ್ರರಾದರು. ರಾ.ಬ॥ರುದ್ರಗೌಡ ಸಾಹೇಬರು ಮೆ॥ಜಾಕ್ಸನ್ ದೊರೆಗಳ ಪ್ರೇಮಕ್ಕೆ ಪಾತ್ರರಾದರು.

ಮೆ॥ಜಾಕ್ಸನ್ ದೊರೆಗಳು ರಾವಬಹದ್ದೂರವರ ರಿಪೋರ್ಟನ್ನು ಶಿಫಾರಸಮಾಡಿ ಸರಕಾರಕ್ಕೆ ಕಳಿಸಿದರು. ಸರಕಾರದವರು ಈ ರಿಪೋರ್ಟನ್ನು ನೋಡಿ, ವರ್ತಮಾನ ಪತ್ರಕಾರರ ಮೇಲೆ ಖಟ್ಲೆಯನ್ನು ಮಾಡುವದು ಕ್ಷುಲ್ಲಕವಾದದರಿಂದ ಮುಂದೆ ಅವರ ಮೇಲೆ ಕೆಲಸ ನಡೆಯಿಸುವ ಕಾರಣವಿಲ್ಲೆಂದೂ, ನೀಚರು ದುರ್ಲೇಖವನ್ನು ಪ್ರಕಟಿಸಿದ ಮಾತ್ರಕ್ಕೆ ನಿರ್ಮಲಾಂತಃಕರಣರೂ, ನ್ಯಾಯನಿಷ್ಠರೂ ಆದ ರಾ.ಬ॥ರುದ್ರಗೌಡ ಸಾಹೇಬರು

ದೂಷ್ಯರಾಗುವದಿಲ್ಲೆಂದೂ, ಇವರ ಪ್ರಮಾಣಿಕತನವೂ, ಸೌಜನ್ಯವೂ ಸರಕಾರಕ್ಕೆ ಗೊತ್ತೇ ಇರುವದೆಂದೂ, ಈ ಸಂಗತಿಯನ್ನು ರಾ.ಬ॥ರುದ್ರಗೌಡರಿಗೆ ತಿಳಿಸಬೇಕೆಂದೂ ಮೆ॥ಕಲೇಕ್ಟರ ಸಾಹೇಬ ಬಹದ್ದೂರವರ ಕಡೆಗೆ ಬರೆದರು- ಸರಕಾರೀ ಪತ್ರ ನಂಬರ ೨೨೬೪/೫-೫-೧೯೦೪ ಸರಕಾರ ಹೂಕೂಮ್ ಪ್ರಕಾರ ಮೆಹರ್ಬಾನರವರು ರಾವಬಹದ್ದೂರವರಿಗೆ ತಿಳಿಸಿದರು. ಪತ್ರ ನಂಬರ 3642/18-5-1904. ಮೆ॥ಲಾರೆನ್ಸ ಸಾಹೇಬ ಬಹದ್ದೂರವರ ಕಾಲಕ್ಕೆ ಈ ಮುಳೆಗುಂದರವರ ವ್ಯಾಜ್ಯವು ನಡೆದದರಿಂದ, ರಾವಬಹದ್ದೂರವರು ಈ ಪ್ರಕರಣದ ಕಡೆಯ ಪರಿಣಾಮವನ್ನು ಮೆ॥ರವರಿಗೆ ಪತ್ರ ಬರೆದು ತಿಳಿಸಲಾಗಿ ಮೆ॥ಲಾರೆನ್ಸ ಸಾಹೇಬ ಬ॥ರವರು ಅದಕ್ಕೆ ಪ್ರತ್ಯುತ್ತರವಾಗಿ, ಅಹಮ್ಮದಾಬಾದ ಮುಕ್ಕಾಮಿನಿಂದ ತಾರೀಖ ೨೪-೬-೧೯೦೪ನೇ ದಿವಸ ಬರೆದದ್ದೇನೆಂದರೆ "ರಾ॥ಬ॥ರುದ್ರಗೌಡರೇ! ದುಷ್ಟರಿಗೆ ಶಾಸನವಾಯಿತೆಂಬ ವಾರ್ತೆಯನ್ನು ತಂದ ನಿಮ್ಮ ಪತ್ರವು ನನಗೆ ಸಂತೋಷವನ್ನುಂಟುಮಾಡಿತು. ಈ ಮುಳಗುಂದರವರ ವಿಷಯವಾಗಿ ಪ್ರಾಪ್ತವಾದ ಎಲ್ಲ ಯಶಸ್ಸು ನಿಮ್ಮದೇ ಹೊರತು, ನಾನು ಅದಕ್ಕೆ ಬಾಧ್ಯನಲ್ಲ. ನನ್ನೊಬ್ಬನಿಂದ ಅವರ ಪ್ರಕರಣವನ್ನು ಎಂದಿಗೂ ಸಿದ್ಧಿಗೊಯ್ಯೋಣವಾಗುತ್ತಿದ್ದಿಲ್ಲ. ಇವರ ಬರತರ್ಫದಿಂದ ಮತ್ತು ಶಿಕ್ಷೆಯಿಂದ ದಕ್ಷಿಣಭಾಗದ ಎಲ್ಲ ಮಾಮಲೇದಾರರಿಗೂ, ಬೇರೆ ಅಧಿಕಾರಿಗಳೂ ಭಯವುತ್ಪನ್ನವಾಗಿ, ನಿರ್ವಂಚನೆಯಿಂದ ರಾಜ್ಯಕಾರ್ಯ ನಡೆದು, ಕಿಂಚನ್ಮಾತ್ರದಿಂದಾದರೂ ಪ್ರಜೆಗಳು ಸುಖಿಸುವರೆಂದೆಣಿಸುತ್ತೇನೆ" ಈ ಪತ್ರವನ್ನು ನೋಡಿದರೆ ಮೆ॥ಲಾರೆನ್ಸ್‌ಸಾಹೇಬ ಬಹದ್ದೂರವರು ಎಷ್ಟು ವಿನಯಾನ್ವಿತರೂ, ಎಂಥ ಘನವಂತರೂ ಇದ್ದಾರೆಂಬುದು ವ್ಯಕ್ತವಾಗುತ್ತದೆ.

"ಸಜ್ಜನರ ಸ್ನೇಹವು ಹೆಜ್ಜೇನು ಸವಿದಂತೆ" ಎಂಬ ಸರ್ವಜ್ಞನ ನುಡಿಯಂತೆ ರಾವಬಹದ್ದೂರವರು ಸಜ್ಜನರನ್ನು ಬಹಳೇ ಪ್ರೀತಿಸುವರು. ದುರ್ಜನರನ್ನು ದೂರಿಂದೂರೇ ದೂಡಿಬಿಡುವರು. ಮುಳಗುಂದರವರು ಶಿಕ್ಷೆಯನ್ನನುಭೋಗಿಸಿ ತಿರುಗಿ ಬಂದ ಮೇಲೆ ಮುಂದೆ ಸನ್ ೧೯೦೬ನೇ ಇಸವಿಯಲ್ಲಿ ರಾ॥ಬ॥ರವರಿಗೆಗೊಂದು ಪತ್ರ ಬರೆದರು. ಅದರ ಅಭಿಪ್ರಾಯವೇನಂದರೆ "ನಾನು ನನ್ನ ಕರ್ಮದಂತೆ ಫಲವನ್ನುಂಡೆನು. ನನಗೆ ಆಗ ಸದಸದ್ವಿವೇಕಬುದ್ಧಿಯು ನನ್ನ ದುರ್ದೈವದಿಂದ ಹುಟ್ಟಲಿಲ್ಲ. ನನ್ನಲ್ಲಿ ವಿನಾಶಕಾಲಕ್ಕೆ ವಿಪರೀತ ಬುದ್ಧಿ ಹುಟ್ಟಿದಂತಾಯಿತು. ತಮ್ಮ ಉಪದೇಶ ವಚನಗಳನ್ನು ನಾನು ಕೇಳದೆ ಕೆಟ್ಟೆನು. ನಿಷ್ಕಲಂಕ ಹೃದಯರಾದ ತಮ್ಮನ್ನು ದೂಷಿಸಿ ನನ್ನ ಕಾಲ ಮೇಲೆ ನಾನೇ ಕಲ್ಲು ಚೆಲ್ಲಿಕೊಂಡೆನು. ದುಷ್ಟಜನರ ದುರುಪದೇಶವನ್ನು ಕೇಳಿ, ದುರಾಶೆಯನ್ನು ಮಾಡಿ ನನ್ನ ದೊಡ್ಡಸ್ತಿಕೆಯನ್ನೂ, ಕೆಲಸವನ್ನೂ ಕಳಕೊಂಡು ದುಃಸಹವಾದ ಶಿಕ್ಷೆಯನ್ನನುಭೋಗಿಸಿದೆನು. ತಿಳಿದೂ ತಿಳಿದು ದುರ್ವರ್ತನೆಯನ್ನು ಹಿಡಿದು, ನನ್ನ ದುರದೃಷ್ಟವೆಂದು ಸುಮ್ಮನೆ ದೈವವನ್ನು ದೂಷಿಸಿ, ದುರ್ಗತಿಯನ್ನು ಹೊಂದುವದಾಯಿತು. ಆಗಲಿ! ಆದದ್ದಕ್ಕೆ ಉಪಾಯವಿಲ್ಲ. ಈಗ ತಮ್ಮ ಸನ್ನಿಧಿಗೆ ನನ್ನ ಚಿರಂಜೀವವನ್ನು ಕಳಿಸಿರುತ್ತೇನೆ. ಈತನು ಮ್ಯಾಟ್ರಿಕ ಪರೀಕ್ಷೆ ಪಾಸಾಗಿ ಪೀ... ಪರೀಕ್ಷೆಯ ವರೆಗೆ ಅಭ್ಯಾಸ ಮಾಡಿರುತ್ತಾನೆ. ಎಲ್ಲಿ ಕಳಿಸಿದರೂ ಇವನನ್ನು ಯಾರೂ ಹಚ್ಚಿಕೊಳ್ಳಲೊಲ್ಲರು. "ಬಲವಿಲ್ಲದ ಕಾಲಕ್ಕೆ ನೆಲವೆದ್ದು ಬಡಿದಂತೆ" ನನ್ನ ಅವಸ್ಥೆಯಾಗಿದೆ. ಇವನಿಗೆ ದಯಮಾಡಿ ಯಾವದೊಂದು ಉದ್ಯೋಗವನ್ನು ಕೊಡಿಸಿ, ಉಪಜೀವನದ ಮಾರ್ಗಮಾಡಿಕೊಡುವದು ಮಹನೀಯರಾದ ತಮ್ಮನ್ನೇ ಕೂಡಿಯದೆ. ನನ್ನ ತಪ್ಪಿತಕ್ಕೆ ಕ್ಷಮೆಯನ್ನು ಬೇಡುವೆನು. ಮಮತೆಯಿರಬೇಕು" ಎಂಬ ಪತ್ರವನ್ನು ನೋಡಿ, ನಿಷ್ಕಪಟಿಗಳೂ, ಕರುಣಾಳುಗಳೂ ಆದ ರಾ॥ಬಹದ್ದೂರವರ ಮನಸು ಕರಗಿತು. ತಮ್ಮ ವಿರುದ್ಧ ವ್ಯಕ್ತಿಯ ಪತ್ರಕ್ಕೆ ಯಾರಾದರು ಮಾನಕೊಡುವರೋ! 'ಕಳ್ಳನ ಮಗ ಸುಳ್ಳ'ನೆಂಬ ನಾಣ್ಣುಡಿಯಂತೆ ಆಗಬಾರದವರ ಮಕ್ಕಳಿಗೆ ಯಾರಾದರೂ ಕೆಲಸ ಕೊಡಿಸುವರೋ!

ಆದರೂ ರಾವಬಹದ್ದೂರವರು ಮುಳಗುಂದರವರ ವಿಷಯವಾದ ಹಿಂದಿನ ದುರ್ಭಾವವನ್ನೆಲ್ಲ ಮರೆತು, ಅವರ ಪತ್ರಕ್ಕೆ ಮಾನಕೊಟ್ಟು, ಅವರ ಮಗನಾದ ಬಿಂದೋ ಹಣುಮಂತ ಮುಳಗುಂದ ಎಂಬವನಿಗೆ ಕೆಲಸ ಕೊಡಿಸಿದರು.

ನೋಡಿರಿ! ರಾ||ಬ||ರುದ್ರಗೌಡರ ಘನತೆ ಎಷ್ಟು ದೊಡ್ಡದು, ಇವರ ಮನಸ್ಸು ಎಷ್ಟು ಉದಾರತನದ್ದು, ಮನೋವೃತ್ತಿಯು ಎಷ್ಟು ಸರಳವಾದದ್ದು. ಕೋಪವೂ, ದ್ವೇಷಬುದ್ಧಿಯೂ ಇದ್ದಿದ್ದರೆ ವಿರೋಧಿಯ ಮಗನನ್ನು ನಂಬುತ್ತಿದ್ದರೇ? ತಂದೆಯು ತನ್ನ ದುರ್ವರ್ತನದಿಂದ ಕೆಟ್ಟರೆ ಮಗನೇನು ಮಾಡ್ಯಾನು, ಮುಳಗುಂದರವರ ಪ್ರಕರಣದಲ್ಲಿ ಬ್ರಹ್ಮವೃಂದವೆಲ್ಲ ಅಟ್ಟಹಾಸದಿಂದ ಮಾಡಿದ ಹೋಳಿಯನ್ನು ಸದ್ಯ ಪ್ರಸಂಗಕ್ಕೆ ಸ್ಮರಣದಲ್ಲಿ ತಂದರೆ, ಅವರ ಮಗನ ಕಯ್ಯಲ್ಲಿ ಮತ್ತೊಬ್ಬರಾರಾದರಾಗಿದ್ದರೆ ನೀರು ಸಹ ಹಣಿಸುತ್ತಿದ್ದಿಲ್ಲ. ಅವನನ್ನು ಮಾನಕೊಟ್ಟು ಮುಂದಕ್ಕೆ ಕರೆಯುತ್ತಿದ್ದಿಲ್ಲ. ಶಾಂತಸಾಗರರಾದ ರಾವಬಹದ್ದೂರವರು ಯೋಗ್ಯ ಕೆಲಸ ಕೊಟ್ಟು ಆತನನ್ನು ರಕ್ಷಿಸಿದರು. ಅಂದ ಮೇಲೆ ನಿರ್ಭೇದವಾದ ಶುದ್ಧಮನಸಿನ ರುದ್ರಭೂಪಾಲರಿಗೆ ಕ್ಷುದ್ರಕಲ್ಪನೆಗಳಿಂದ ಬ್ರಹ್ಮದ್ವೇಷಿಗಳೆಂದೆನ್ನುವವರನ್ನು ಅಪದ್ಧರೆಂದೂ, ಶೂದ್ರರೆಂದೂ ಊಹಿಸಲಿಕ್ಕೆ ಏನೇನೂ ಅಡ್ಡಿಯಿಲ್ಲ.

❖❖

೧೧ನೇ ಭಾಗ

ಗ್ರಾಮಾಧಿಕಾರಿಗಳ ಸ್ಥಿತಿಗತಿ

ಚಲೋ ಕೆಲಸಗಳನ್ನು ಮಾಡುವದು ಶ್ರಮಸಾಧ್ಯವಾಗಿರುತ್ತದೆ. ಸಾರ್ವಜನಿಕ ಹಿತದ ಕಾರ್ಯಗಳಲ್ಲಿ ಇಲ್ಲದ ತೊಂದರೆಗಳು ಒಂದರಮೇಲೊಂದು ಬಂದು, ಆ ಕಾರ್ಯಗಳಿಗೆ ಅಡ್ಡಿಯನ್ನು ತರುತ್ತವೆ. ಸತ್ಕಾರ್ಯಗಳನ್ನು ಕೆಡಿಸಲಿಕ್ಕೆ ಎಷ್ಟೋ ದುಷ್ಟ ಜನರು ಭಗೀರಥ ಪ್ರಯತ್ನ ಮಾಡುತ್ತಾರೆ. ಸದ್ಯಸ್ಥಿತಿಯನ್ನು ಪರಿಶೀಲಿಸಿ ನೋಡಿದರೆ ಈ ಪ್ರಕಾರದ ವಿಘ್ನಸಂತೋಷಿಗಳ ಪುಂಡಾಟಿಕೆಯೇ ಬಹಳವಾಗಿದೆ. ಹೇಸಿಗೆಗೆ ಹುಳಗಳು ಮುಗಿಬೀಳುವಂತೆ ಪರಪೀಡೆಯ ಕಾರ್ಯಗಳಲ್ಲಿ ಪ್ರವರ್ತಿಸುವ ದುರಾತ್ಮರೇ ಬಹಳ ಮಂದಿ. ತಮ್ಮ ನೆರಳಿಗಂಜಿ ಬಾಳ್ವೆ ಮಾಡುವ ಸಜ್ಜನರು, ದುರ್ಜನರ ಕಪಟತಂತ್ರದೊಳಗಿಂದ ಪಾರಾಗುವದು ಪರಮ ಪ್ರಯಾಸವು. ಆದದರಿಂದ ಸಜ್ಜನರ ಸಂರಕ್ಷಣೆಯಾಗಬೇಕೆಂತಲೂ, ದುರ್ಜನರ ದುಷ್ಟ ಮನಸು ದೂರಾಗಬೇಕೆಂತಲೂ ಪ್ರತಿಯೊಂದು ರಾಷ್ಟ್ರದ ಪ್ರಜೆಗಳಿಗೆ ಭೂಪತಿಗಳೊಡೆಯರಾಗಿರುತ್ತಾರೆ. ಕೇವಲ ಪ್ರಜಾಹಿತದ ಕಡೆಗೆ ಲಕ್ಷಕೊಟ್ಟು ಧೈರ್ಯ ಸ್ಥೈರ್ಯ ಗಾಂಭಿರ್ಯಾದಿ ಸದ್ಗುಣಗಳಿಂದಲೂ, ಚತುರೋಪಾಯದಿಂದಲೂ ಸರ್ವಜನರನ್ನು ಅಂಕಿತದಲ್ಲಿಟ್ಟುಕೊಂಡು ಸುಖಶಾಂತಿಯಿಂದ ರಾಜ್ಯಭಾರ ಮಾಡುವ ಮಹಾರಾಜನೇ ಇತಿಹಾಸ ಪ್ರಸಿದ್ಧನಾಗುತ್ತಾನೆ. ಇಂತಹ ಅಪ್ರತಿಮ ಭೂಪತಿಯನ್ನೇ ಜನರು ಆಚಂದ್ರಾರ್ಕ ಹಾಡಿ ಹರಸುತ್ತಾರೆ. ಈತನೇ ನರಪತಿಯೆಂಬ ಅಭಿಧಾನಕ್ಕೆ ತಕ್ಕವನಿರುತ್ತಾನೆ. ಇಂತಹ ಗುಣವಿಶಿಷ್ಟಗಳಿಂದ ಪರಿಪೂರ್ಣತರಾದ ರಾ.ಬ॥ರುದ್ರಗೌಡರು ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಲಕ್ಷಾವಧಿ ಪ್ರಜೆಗಳಿಗೆ ಪೀಡೆಯನ್ನುಂಟು ಮಾಡುತ್ತಿರುವಂಥ ದುರಧಿಕಾರಿಗಳನ್ನು ದೂರಮಾಡುತ್ತ, ರಾಜೋದ್ಯೋಗದ ನಿಮಿತ್ಯವಾಗಿ ಸರ್ವೆಡೆಗಳಲ್ಲಿಯೂ ಸಂಚರಿಸುತ್ತಿದ್ದರು.

ಪ್ರತಿಯೊಂದು ಗ್ರಾಮದ ನಿವಾಸಿಗಳ ಸುಖದುಃಖಗಳನ್ನು ತಿಳುಕೊಳ್ಳಲಿಕ್ಕೆ ಸರಕಾರದವರು ಹಳ್ಳಿಹಳ್ಳಿಗೆ ಗೌಡ ಶಾನಭೋಗರನ್ನು ನಿಯಮಿಸಿರುತ್ತಾರೆಂಬ ಸಂಗತಿಯು ಸರ್ವಶ್ರುತವಾದದ್ದು. ಒಂದೊಂದು ಹಳ್ಳಿಯ ಗೌಡ ಕುಲಕರಣಿಯರು ಎಂಥ ಕೆಟ್ಟವರಿರುತ್ತಾರೆಂದು ಎಲ್ಲ ನಾಡಿನ ಎಲ್ಲ ಜನರಿಗೂ ಗೊತ್ತುಂಟು. ಅಂತೆಯೇ ಅವರಿಗೆ ಗ್ರಾಮಸ್ಥರು ಎಂಬುವದರ ಬದಲು ಗ್ರಾಮಕೀಟಕರು ಅಥವಾ ಗ್ರಾಮಕಂಟಕರು ಎಂಬ ಸಾಮಾನ್ಯಾಭಿಧಾನವು ಬಹುರೂಢವಾಗಿರುತ್ತದೆ. ನಿಜವಾಗಿ ಅವರು ಗ್ರಾಮವೆಂಬ ಮಹಾವೃಕ್ಷವನ್ನು ಕೀಟಕೋಪಾದಿಯಲ್ಲಿ ನಾಶ ಮಾಡುವವರಾಗಿಯೂ, ಮುಳ್ಳುಗಳೋಪಾದಿ ಚುಚ್ಚಿ ಚುಚ್ಚಿ ಹಿಂಸಿಸುವವರಾಗಿಯೂ ಇರುತ್ತಾರೆ. ಎಲ್ಲ ಗ್ರಾಮಸ್ಥರು ಇಂಥವರೇ ಇರುತ್ತಾರೆಂಬಂತಲ್ಲ. ಸದ್ಗುಣಿಗಳೂ, ಸತ್ಕಾರ್ಯಪ್ರವರ್ತಕರೂ ಆದ ಗೌಡ ಶಾನಭೋಗರೆಷ್ಟೋ ಜನರು ತಮ್ಮ ಊರ ಜನರಿಂದಲೂ, ಸುತ್ತು ಹಳ್ಳಿಗಳ ಜನರಿಂದಲೂ ಕೊಂಡಾಡಲ್ಪಟ್ಟು ಯಶೋಭಾಜನರೂ, ಸರಕಾರದ ಪ್ರೀತಿಗೆ ಪಾತ್ರರೂ ಆಗಿ ಧನ್ಯತೆಯನ್ನು ಹೊಂದಿರುತ್ತಿರಲು, ಇವರ ವ್ಯವಸಾಯ

ಬಂಧುಗಳೇ ಆದ ಬೇರೆ ಎಷ್ಟೋ ಜನ ಗ್ರಾಮಸ್ಥರು ಬಡಜನರನ್ನು ಬೆದರಿಸಿ, ಊರ ಲಂಚವನ್ನೆಲ್ಲ ತಿಂದು ತೃಪ್ತರಾಗದೆ, ಬೇಡಜಾತಿಯ ಜನರಿಗೂ, ಕಳ್ಳಕಾಕಜನರಿಗೂ ಅಂತರಂಗದಲ್ಲಿ ಆಶ್ರಯಕೊಟ್ಟು, ಅವರಿಂದ ಅಪ್ರತ್ಯಕ್ಷವಾಗಿಯೂ, ಪ್ರಸಂಗಬಿದ್ದರೆ ಪ್ರತ್ಯಕ್ಷವಾಗಿಯೂ ಕಳವು ದರೋಡೆಗಳನ್ನು ಮಾಡಿಸಿ, ಮೀಸೆಗಳನ್ನು ಮುರಿದು ಮರೆದಾಡಿ ಕೀಳುಕೃತ್ಯಗಳಲ್ಲಿ ಮಗ್ನರಾಗಿರುತ್ತಿದ್ದ ಸಂಧಿಯಲ್ಲಿ ಸರಕಾರದ ಕಯ್ಯಲ್ಲಿ ಸಿಕ್ಕು, ಸೆರೆಮನೇಗೀಡಾಗಿ ನಮೋ ನಮೋ ನಾರಾಯಣಾ ಎಂದು ನರಳುತ್ತಿರುವ ನರಧಾಮರಾದರೂ ಸಹಸ್ರಾವಧಿಯಾಗಿರುವರು. ಕೆಲವರು ಕೆಲಸದಿಂದ ದೂರಾಗಿ ಕೈಮುಚ್ಚಿಕೊಂಡು ಮನೆಹಿಡಿದು ಕೂಡ್ರುವವರಾದರು.

ಗ್ರಾಮಸ್ಥರು ನಿಜವಾಗಿ ಗ್ರಾಮಗಳ ಅರಸರೆಂದೇ ಹೇಳಬಹುದು. "ಗೌಡ" ಈ ಶಬ್ದವು "ಗ್ರಾಮ್" ಎಂಬ ಸಂಸ್ಕೃತಧಾತುವಿನಿಂದ ಹುಟ್ಟಿದ ತದ್ಭವ ರೂಪವಾಗಿರುವದು. ಗ್ರಾಮವೆಂಬ ಶಬ್ದವಾದರೂ ಇದೇ ಧಾತುವಿನಿಂದ ಹುಟ್ಟಿದ್ದು ಮೇಲೆಯೇ ಕಾಣುತ್ತದೆ. ಗೌಡನೆಂದರೆ ಗ್ರಾಮಾಧಿಪತಿಯು. ಈ ಗ್ರಾಮಾಧಿಪತಿಯು ವ್ಯವಹಾರರೂಢಿಗೆ ಇದೇ ಕಾಲಕ್ಕೆ ಬಂದವನಲ್ಲ. ಬುನಾದಿಯಿಂದಲೂ ಇದ್ದವನು. ಪ್ರಾಚೀನ ಕಾಲದಲ್ಲಿ ಗ್ರಾಮಗಳ ಸ್ಥಾಪನೆಯನ್ನು ಮಾಡಿದ ಪ್ರಮುಖನೇ ಆ ಗ್ರಾಮದ ಗೌಡನೆನಿಸಿಕೊಂಡನು. ಗ್ರಾಮಸ್ಥಾಪನೆಯಾದ ಮೇಲೆ ಉದರಂಭರಣಕ್ಕೆ ಮೂಲವ್ಯವಸಾಯವಾದ ಭೂಮಿಯ ಸಾಗುವಳಿಗೆ ಎಲ್ಲಕ್ಕೂ ಮೊದಲು ನೇಗಿಲ ಹಾಕಿದವನು ಗೌಡನೇ. ಕೆಲವೆಡೆಯಲ್ಲಿ ಗೌಡರಿಗೆ "ನಾಂಗರಪಾಟೀಲ" ರೆಂದು ಈಗ್ಯೂ ಅನ್ನುವದುಂಟು. ಕೆಲವು ಹಳ್ಳಿಗಳಲ್ಲಿ ಗೌಡರ ನೇಗಿಲವು ಭೂಮಿಯಲ್ಲಿ ಬಿದ್ದ ಮೇಲೆಯೇ ಉಳಿದ ರೈತರ ನೇಗಿಲಗಳು ಸಾಗವಾಗುವ ಪರಿಪಾಠವುಂಟು. ಮತ್ತು ಊರಜನರ ಬಾಬುಗಳಿಗೂ, ಹಕ್ಕುಗಳಿಗೂ ಗೌಡನೇ ಬಾಧ್ಯನಿರುತ್ತಾನೆ. ಅದರಿಂದ ವತನೀ ಗೌಡರೆಂಬವರು ಆಯಾಗ್ರಾಮಗಳ ಸ್ಥಾಪನಾ ಪುರುಷರ ವಂಶದವರೇ ಇರುತ್ತಾರೆಂದು ನಿರ್ವಿವಾದವಾಗಿ ಹೇಳಬಹುದು. ಚೀನದೇಶದ ಬಾದಶಹನು ವರ್ಷಾರಂಭಕ್ಕೆ ಸ್ವತಃ ನೇಗಿಲವನ್ನು ಹೊಡೆಯುವ ಪರಿಪಾಠವು ಇನ್ನೂವರೆಗೆ ನಡೆದಿರುವದು. ಪ್ರಾಚೀನ ಕಾಲದ ವಿಚಾರವು ಹೇಗೆ ಇರಲಿ, ಗೌಡನು ಗ್ರಾಮದ ಅರಸನಾಗಿಯೂ, ಕುಲಕರಣಿಯು ಅವನ ಮಂತ್ರಿ ಅಥವಾ ಕಾರಕೂನನಾಗಿಯೂ ಇರುವನೆಂದರೆ ತಪ್ಪಾಗಲಿಕ್ಕಿಲ್ಲ. ಕಾರಣ ಗೌಡ ಕುಲಕರಣಿಯರು ಸದ್ಗುಣಿಗಳೂ, ಸದಾಚಾರಿಗಳೂ, ಸುಶೀಲರೂ ಇದ್ದರೆ ಜನರು ಸುಖಸಂಪದಗಳಿಂದ ಜೀವಿಸುವರು.ಗೌಡಕುಲಕರಣಿಯರು ತಂತಮ್ಮ ಊರುಗಳನ್ನು ತಮ್ಮಂತೆ ಅನ್ಯಜನರೆಂದು ಬಗೆದು ನಿಷ್ಪ್ರಹತೆಯಿಂದಲೂ ನಿರಪೇಕ್ಷ ಬುದ್ಧಿಯಿಂದಲೂ, ನಿರ್ಮಾತ್ಸರ್ಯದಿಂದಲೂ ಪಾಲಿಸುವದಾದರೆ ದೇಶದಲ್ಲಿ ಜಗಳ ತೋಟಿಗಳೇಳದೆ, ಕಳವು ದರೋಡೆಗಳಾಗದೆ, ಕೀಳುಕೃತ್ಯಗಳು ನಡೆಯದೆ, ನ್ಯಾಯಾಧೀಶರ ತಲೆ ಚಿಟ್ಟಿಡದೆ ದೇಶವು ಶ್ರೀಮಂತಿಕೆಯ ಸೌಖ್ಯವನ್ನು ಸ್ವಚ್ಛಂದವಾಗಿ ಭೋಗಿಸುವದು.

ಆದರೆ ಇಷ್ಟೊಂದು ಭಾಗ್ಯವೂ, ಭೋಗವೂ, ದುರ್ಭಾಗ್ಯರಾದ ನಮ್ಮ ಗ್ರಾಮಸ್ಥರಿಗೆಲ್ಲಿಂದ ಬರಬೇಕು?ದುರಾಲೋಚನೆಗಳನ್ನು ಮಾಡದೆ ಇವರ ಜ್ಞಾನೇಂದ್ರಿಯಗಳು ತೃಪ್ತವಾಗಲಾರವು. ದುಷ್ಕೃತ್ಯಗಳನ್ನೆಸಗದೆ ಕರ್ಮೇಂದ್ರಿಯಗಳು ಸುಮ್ಮನೆ ಕೂಡ್ರಲಾರವು. ಸದ್ಯ ಪ್ರಸಂಗಕ್ಕೆ ಈ ಪೊಡವಿಯೆಲ್ಲ ಕಿಡಿಗೇಡಿಗಳಾದ ಗೌಡ ಕುಲಕರಣಿಯರಿಂದಲೇ ತುಂಬಿಕೊಂಡಂತೆ ಕಾಣುತ್ತಿರುವದು. ಅಂತಲೇ ಹಳ್ಳಿಗಳೆಲ್ಲ ಬಡತನಕ್ಕೀಡಾಗಿ ದೇಶವು ದಾರಿದ್ರ್ಯಾವಸ್ಥೆಯಲ್ಲಿ ಬಳಲುತ್ತಿರುವದು. ಪ್ರಜೆಗಳಿಗೆ ಅತಿನಿಕಟ ಸಂಬಂಧವುಳ್ಳ ಸರಕಾರೀ ಅಧಿಕಾರಿಗಳೆಂದರೆ ಗ್ರಾಮಸ್ಥರೇ ಸರಿ. ಮೇಲಧಿಕಾರಿಗಳು ವರ್ಷದೊಳಗೆ ಒಂದೆರಡು ಸಾರೆ ಬಂದು ಗ್ರಾಮದ ಪರಿಸ್ಥಿತಿಯನ್ನು ನೋಡಿಕೊಂಡು ಹೋಗತಕ್ಕವರು. ಗ್ರಾಮಸ್ಥರು ದುಷ್ಟರಾಗಿದ್ದು ಮೇಲಧಿಕಾರಿಗಳೂ ಅಂಥವರೇ ಆಗಿದ್ದರೆ ತೀರಿಯೇ ಹೋಯಿತು. ಬಡಜನರ ಗೋಳನ್ನು ಕೇಳುವ ಪುಣ್ಯಾತ್ಮರೇ ಇಲ್ಲ. ಗ್ರಾಮ ತಪಾಸಿಗೆ ಬಂದ ಮೇಲಧಿಕಾರಿಗಳ ಬಾಯಿಗೆ ಬೆಣ್ಣೆಯ ಬೆಣೆಯನ್ನು ಬಡಿದರೆ ಸಾಕು. ಗ್ರಾಮಸ್ಥರ ಕೆಲಸವು ನೆಟ್ಟಗಿರಲಿ, ಸೊಟ್ಟವಿರಲಿ ಅವರ ವಿಷಯವಾಗಿ ಷರೆಯನ್ನು ಚೆನ್ನಾಗಿ ಬರೆದು ಹೋಗುವರು. ಹೀಗಾದ ಮೇಲೆ ಆ ಗ್ರಾಮದ ಹೀನಸ್ಥಿತಿಯೂ,

ರೈತಜನರ ಗೋಳೂ ಸರಕಾರಕ್ಕೆ ತಿಳಿಯುವ ಮಾರ್ಗವೇ ಉಳಿಯಲಿಲ್ಲ. ಈ ಪ್ರಕಾರ ನಮ್ಮ ಜನರೇ ಪ್ರಜೆಗಳನ್ನು ಪೀಡಿಸುತ್ತಿರಲು ಸರಕಾರದವರೇನು ಮಾಡಬೇಕು? ಸುಮ್ಮ ಸುಮ್ಮನೆ ಸರಕಾರಕ್ಕೆ ದೋಷ ಕೊಡುವುದರಲ್ಲಿ ಏನೂ ಅರ್ಥವಿಲ್ಲ. ನಮ್ಮ ಕಣ್ಣಲ್ಲಿ, ನಾವೇ ಬೊಟ್ಟು ಚುಚ್ಚಿಕೊಂಡು ಅನ್ಯರ ಮೇಲೆ ಹಾಕಿದರೆ ಫಲವೇನು?ಸದಾ ಊರಲ್ಲಿಯೇ ಇರುವವರಾದ ಗ್ರಾಮಸ್ಥರು ಪ್ರತಿದಿವಸ ಪ್ರತ್ಯೇಕ ತರದಿಂದ ಪೀಡಿಸಹತ್ತಿದರೆ ಪ್ರಜೆಗಳು ಆ ಬವಣೆಯನ್ನು ಹೇಗೆ ತಾಳಬೇಕು? ಅವರ ಬಡತನದ ಬಾಳ್ವೆಯು ಸುಖಕರವಾಗಿ ಹೇಗೆ ಸಾಗಬೇಕು? ಅವರ ಕುಟುಂಬವು ಅಭಿವೃದ್ಧಿಯನ್ನು ಹೊಂದುವ ಮಾರ್ಗ ಯಾವದು? ಈ ಪರಿಸ್ಥಿತಿಯಿಂದ ದೇಶವು ಹೆಚ್ಚಳವನ್ನು ಹೊಂದುವದೆಂತು? ದಿನದಿನಕ್ಕೆ ಸಾಯುವವರಿಗೆ ಅಳುವವರಾರು? ಕಷ್ಟಪಟ್ಟು ಹಗಲಿರುಳು ದುಡಿದು ತಂದ ತಮ್ಮ ಅನ್ನವು ತಮ್ಮ ಬಾಯಿಗೆ ಬೀಳದೆ, ಪರಪೀಡೆಯಿಂದ ಬಡಪ್ರಜೆಗಳು ಮಿಡುಕಬೇಕಲ್ಲವೆ? ಛೇ, ಛೇ, ಇಂಥ ದುರಾತ್ಮರಾದ ಗ್ರಾಮಸ್ಥರ ಗ್ರಾಮದಲ್ಲಿ ವಾಸಿಸಿ ಪ್ರಪಂಚ ಸುಖವನ್ನನುಭೋಗಿಸುವದಕ್ಕಿಂತ, ಆ ಗ್ರಾಮಸ್ಥರ ಹೆಸರಿನಿಂದ ಸನ್ಯಾಸಿಯಾಗಿ ಪಾರಮಾರ್ಥಿಕ ಸುಖವನ್ನನುಭೋಗಿಸುವದು ಲೇಸೆಂಬಂತೆ ತೋರುತ್ತದೆ.

ಈ ಪ್ರಕಾರದ ಅನೀತಿಯನ್ನೂ, ಅನ್ಯಾಯವನ್ನೂ, ಅಕ್ರಮವರ್ತನವನ್ನೂ, ಇವುಗಳಿಂದಾಗುವ ಬಡಜನರ ಗೋಳನ್ನೂ ನೋಡಿ ರಾ.ಬ॥ರುದ್ರಗೌಡರು ತಳಮಳಗೊಂಡು "ನ್ಯಾಯನಿಷ್ಠರೂ, ಕರುಣಾಳುಗಳೂ ಎಂದು ನಾಡಜನರಿಂದ ಕೂಗಿಸಿಕೊಳ್ಳುತ್ತಿರುವ ಪ್ರಭೃತಿಯ ಪ್ರಾಂತದಲ್ಲಿ, ಈ ತೆರವಾಗಿ ಬಡಜನರು ದುಷ್ಟಗ್ರಾಮಸ್ಥರಿಂದುಂಟಾಗುತ್ತಿದ್ದ ಯಮಯಾತನೆಯನ್ನು ಭೋಗಿಸುತ್ತಿರುವದು ಮಹದನ್ಯಾಯವು. ಇದನ್ನು ಕಣ್ಣಾರೆ ಕಂಡು ಬಡರೈತರನ್ನು ಕಷ್ಟದಿಂದ ಮುಕ್ತರನ್ನಾಗಿ ಮಾಡದಿದ್ದರೆ ನಾನು ದೇವರೆದುರಿಗೂ, ಮನುಷ್ಯರೆದುರಿಗೂ ಅಪರಾಧಿಯಾಗುವೆನು. ಪ್ರಜೆಗಳಿಗೆ ಸುಖವನ್ನುಂಟುಮಾಡುವದೇ ನನ್ನ ಕೆಲಸವು. ನಿರ್ದುಷ್ಟವಾದ ಒಡೆತನದ ಲಕ್ಷಣವಾದರೂ ಇದೇ. ಅಧಿಕಾರಿಗಳಾದ ನಾವು ಪ್ರಜೆಗಳ ಹಣದಿಂದಲೇ ಪಾಲನರಾಗುತ್ತಿದ್ದು ಅವರ ಹಿತವನ್ನು ಮನಸಾ ಬಯಸದಿದ್ದರೆ ನಿಜವಾಗಿ ಪ್ರಜಾದ್ರೋಹಿಗಳೇ ಸರಿ" ಎಂಬದಾಗಿ ಪರ್ಯಾಲೋಚಿಸಿ ಗ್ರಾಮಸ್ಥರು ಯಾವ ಯಾವ ಕಾರಣಗಳಿಂದ ರೈತರ ಸುಲಿಗೆಯನ್ನು ಮಾಡಿ, ಯಾವ ಯಾವ ರೀತಿಯಿಂದ ಅವರನ್ನು ಪೀಡಿಸುತ್ತಾರೆಂಬದನ್ನು ಪರೀಕ್ಷಿಸ ತೊಡಗಿದರು.

ತೆರಿಗೆಯ ಹಣವನ್ನು ವಸೂಲಮಾಡುವಾಗ್ಗೆ ಪ್ರತಿಯೊಂದು ಗ್ರಾಮದ ಗೌಡ ಕುಲಕರಣಿಯರು ಪ್ರತಿಯೊಬ್ಬ ರೈತನಿಂದ ಬಾಂದಪಟ್ಟಿಯೆಂದೂ, ಕಳವೀ ಹಣವೆಂದೂ, ಇವಲ್ಲದೆ ಕೆಲವು ಗ್ರಾಮಗಳಲ್ಲಿ ಸರಬರಾಯಿಯ ಪಟ್ಟಿ, ನಂದಾದೀವಿಗೆಯ ಪಟ್ಟಿಯೆಂದೂ, ಆ ಪಟ್ಟಿ ಈ ಪಟ್ಟಿಯೆಂದೂ ಅನೇಕ ತರದಿಂದ ಹೆಚ್ಚಿಗೆ ಹಣವಸೂಲಮಾಡಿ ಆ ಹೆಚ್ಚಾದ ಹಣವನ್ನು ತಾವಿಬ್ಬರೂ ಹಂಚಿಕೊಳ್ಳುತ್ತಿದ್ದರು. ರೈತರು ಈ ಹಣವಾದರೂ ಸರಕಾರಕ್ಕೆ ಸಲ್ಲತಕ್ಕದ್ದೆಂದು ತಿಳಿದು ಪ್ರತಿವರ್ಷ ತಪ್ಪದೆ ಕೊಡುತ್ತಿದ್ದರು. 'ಮಳ್ಳ ಕಂಡು ಮಳ್ಳ ತ್ಯಾ" ಎಂದಿತೆಂಬಂತೆ ತಿಳಿಯದವರ ಕೂಡ ತಿಳಿದವರೂ ಕೂಡ ಕೊಡುತ್ತಿದ್ದರು. ಈ ಅಪಕ್ರಮ ವರ್ತನವು ಎಲ್ಲ ಗ್ರಾಮಗಳಲ್ಲಿ ಸರ್ವಸಾಧಾರಣವಾಗಿ ನಡೆಯುತ್ತಿತ್ತು. ರೈತರು ಭೂಮಿಯ ಕಂದಾಯದ ಹಣವು ಎಷ್ಟೆಷ್ಟೆಂದು ತಮ್ಮ ತಮ್ಮೊಳಗೆ ಮಾತಾಡುವಾಗ ಈ ಪಟ್ಟಿಯ ಹಣವನ್ನು ಕೂಡಿಸಿಕೊಂಡೇ ಒಟ್ಟು ರಕಮನ್ನು ಹೇಳುತ್ತಿದ್ದರು. ಇಷ್ಟರ ಮಟ್ಟಿಗೆ ಈ ಪಟ್ಟಿಯ ಹಣವು ಪರಿಪಾಠದಲ್ಲಿ ಬಂದಿತ್ತು. ಇದನ್ನು ಪ್ರತಿವರ್ಷ ಎತ್ತಲಿಕ್ಕೆ ಗ್ರಾಮಸ್ಥರು ಎಷ್ಟು ಮಾತ್ರವೂ ಸಂದೇಹಗೊಳ್ಳುತ್ತಿದ್ದಿಲ್ಲ. ಈ ವಿಷಯವಾಗಿ ಸರಕಾರದ ಅಂಜಿಕೆಯು ಇವರಿಗೆ ತಿಲಮಾತ್ರವಿದ್ದಿಲ್ಲ. ವರ್ಷಾನುವರ್ಷ ಉದ್ದರೀ ತಂದ ಅಂಗಡಿಕಾರರ ಮತ್ತು ಬೇಡಿದಾಗ ಹಗಲೆಲ್ಲ ಕೈಗಡಕೊಟ್ಟ ಸಾವಕಾರ ಮುಂತಾದವರ ತಗಾದಿಯಾದಾಗ, ಗ್ರಾಮಸ್ಥರು ಪೋಟಗೀ ದಿವಸವನ್ನು ತೋರಿಸುತ್ತಿರುವಂತೆ ಹಪ್ತೆ ವಸೂಲಿಯ ಸಂಧಿಯನ್ನೂ ತೋರಿಸುತ್ತಿದ್ದರು. ಸಾರಾಂಶ, ಆ ಪಟ್ಟಿಯ ಹಣವು ಗ್ರಾಮಸ್ಥರ ಮನೆತನದ ಆದಾಯದ ಒಂದು ಭಾಗವೇ ಆಗಿ ಹೋಗಿತ್ತೆಂದು ಹೇಳಬಹುದು.

ಎಷ್ಟೋ ಗ್ರಾಮಸ್ಥರು ಕೀಟಕಗಳಂತೆ ಊರೊಳಗಿನ ಛಿದ್ರಗಳನ್ನು ಹುಡುಕಿ ತೆಗೆದು, ಇಲ್ಲದ ಕಲಹಗಳನ್ನು ರಚಿಸಿ, ತಾವು ಒಂದು ಪಕ್ಷವನ್ನು ವಹಿಸಿ ಆ ಪಕ್ಷಕಾರರ ದುಡ್ಡಿನ ಸುಲಿಗೆಯನ್ನು ಮಾಡುತ್ತ, ಕಾಲೊಳಗಿನ ಕೆರವುಗಳು ಹರಿಯುವ ಪರಿವೆಯಿಲ್ಲದೆ ಕೋರ್ಟುಕಚೇರಿಗಳಿಗೆ ಎಡೆಬಿಡದೆ ಎಡತಾಕುವರು. ಮುಂದೆ ಆ ಪಕ್ಷಕಾರರ ನ್ಯಾಯವು ಗೆದೆಯಲಿ, ಸೋಲಲಿ. ಇವರು ಮಾತ್ರ ಮೃಷ್ಟಾನ್ನವನ್ನುಂಡು ಮಧುರೋಕ್ತಿಗಳನ್ನಾಡುತ್ತ ಮೃದುತಲ್ಪದಲ್ಲಿ ಮೆರೆದಾಡುವರು. ಬಡವರೂ, ಅಜ್ಞಾನಿಗಳೂ, ವಿಶ್ವಾಸಿಕರೂ ಆದ ರೈತಜನರು ಯಾವದೊಂದನ್ನು ಅರಿಯದೆ ಅವರು ಹೇಳಿದ್ದೇ ಪ್ರಾಧಾನ್ಯವೆಂದು ನಂಬಿ, ಅವರ ಅಂಕಿತದಲ್ಲಿರುವರು. ಪ್ರಸಂಗವಶಾತ್ ಕೆಲ ಗ್ರಾಮಸ್ಥರು ಕಪಟಬುದ್ಧಿಯಿಂದ ಬಡರೈತರನ್ನು ರಮಿಸಿ-ಉಬ್ಬಿಸಿ ಅವರ ಮನೆಮಾರುಗಳನ್ನು ತಮ್ಮ ಹೆಸರಿನಿಂದ ಖರೀದಿ ಬರೆಯಿಸಿಕೊಂಡು, ಕೆಲಸ ಬೀಳುವ ವರೆಗೆ ಅವರನ್ನು ಕಾಯ್ದು, ಕೆಲಸ ತೀರಿದ ಮೇಲೆ ಧುತ್ತೆಂದು ಬೆದರಿಸಿ ಹೊರಗೆ ಹಾಕಿಬಿಡುವರು. ಕಡೆಗೆ ಮನೆ ಮಾರುಗಳನ್ನು ಕಳಕೊಂಡು ಇಂಥ ಅನಾಥ ಪ್ರಜೆಗಳು ಹುಚ್ಚರಾಗಿ, ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಭಿಕ್ಷಾಪಾತ್ರೆಗೆ ಅಧಿಕಾರಿಗಳಾಗುವರು. ಇಂಥ ಅನಾಥರಿಂದ ಅನೇಕ ಪ್ರಕಾರದ ಯುಕ್ತಿಪ್ರಯುಕ್ತಿಗಳಿಂದ ಅಪರಿಮಿತ ಧನವನ್ನೂ, ಭೂಮಿಯನ್ನೂ ಅಪಹರಿಸಿ ಅನೇಕ ಜನಗ್ರಾಮಸ್ಥರು ಧನ್ಯರೆಂದೆನ್ನಿಸಿಕೊಳ್ಳುತ್ತಿದ್ದರು. 'ಛೀ' ಇವರ ಧನ್ಯತೆಗೆ ಬೆಂಕೀ ಹಚ್ಚಲಿ. ಇವರು ನಿಜವಾಗಿ ನರರಲ್ಲ. ನರವೇಷದ ರಕ್ಕಸರು. ಊರಿಗೆ ಊರನ್ನೇ ನುಂಗಿ ನೀರು ಕುಡಿಯುವ ಪಿಶಾಚಿಗಳು. ಇವರ ಅನಿಷ್ಟ ಜನ್ಮಕ್ಕೆ ಧಿಕ್ಕಾರವಿರಲಿ.

ಈ ಬಗೆಯಾಗಿ ಬಡಜನರನ್ನು ಗೋಳಾಡಲಿಕ್ಕಿಟ್ಟು ತಾವು ಹೋಳಿಗೆ ತುಪ್ಪ ಹೊಡೆಯಲೆಳಸುತ್ತಿರುವಂಥ ಗ್ರಾಮಾಧಿಪತಿಗಳ ಉದಾಹರಣೆಗಳು ಒಂದಲ್ಲ, ಎರಡಲ್ಲ, ಸಾವಿರಾರು ಉಂಟು. ಊರೊಳಗಿನ ಎಲ್ಲ ಜನರು ಇವರ ಅಧೀನದಲ್ಲಿರಲಿಕ್ಕೇಬೇಕು. ಇವರು ಹೇಳಿದ್ದನ್ನು ಕೇಳಬೇಕು. ಇವರು ಬೇಡಿದ್ದನ್ನು ಕೊಡಬೇಕು. ಮಾಡಿದ್ದನ್ನು ಮಾಡಿಸಿಕೊಳ್ಳಬೇಕು. ಇವರ ಮಾತನ್ನು ಯಾವನೊಬ್ಬನು ಅಲ್ಲಗಳೆದರೆ "ಒಳ್ಳೇದು ನಿನ್ನನ್ನು ನೋಡೇನು" ಎಂದು ಅದನ್ನು ಮನಸಿನಲ್ಲಿಟ್ಟು, ಪ್ರಸಂಗ ಬಂದಾಗ್ಗೆ ಅವನನ್ನು ಪಾರುಪತ್ಯಗೊಳಿಸುವರು. ಸರ್ವಜನರಲ್ಲಿ ತಾವೇ ಪ್ರಮುಖರೆಂದೆನ್ನಿಸಿಕೊಳ್ಳಬೇಕು, ಯಾವದೊಂದು ಕಾರ್ಯದಲ್ಲಿ ತಮ್ಮ ಮಾತೇ ನಡೆಯಬೇಕು; ಎಂದು ಸ್ವಪ್ರತಿಷ್ಠೆಯನ್ನೇ ಸ್ಥಾಪಿಸಲೆಳಸುವ ಮೂರ್ಖಶಿಖಾಮಣಿಗಳಾದ ಗ್ರಾಮಸ್ಥರು ಎಷ್ಟೋ ಜನರಿರುವರು. ಆ ಅವರ್ಣಗಳ ಜ್ಞಾನವಿಲ್ಲದ ಅಕ್ಷರಶತ್ರುಗಳಾದ ಗೌಡರನೇಕ ಜನರು ತಾವು ದಿಗ್ವಿಜಯ ಪಂಡಿತರೆಂದೆನ್ನಿಸಿಕೊಂಡು, ಆತ್ಮಸ್ತುತಿಯಿಂದಲೂ, ಪರನಿಂದೆಯಿಂದಲೂ ಕೇವಲ ಸ್ವಾರ್ಥೈಕ ಬುದ್ಧಿಯಿಂದಲೂ ತಮ್ಮ ಕರ್ತವ್ಯದ ಅಟ್ಟಹಾಸವನ್ನು ಜನ ಸಮೂಹಕ್ಕೆ ತೋರುವರು. ಇವರು ಪುಣ್ಯವೆಂದ ಶಬ್ದವನ್ನು ಕನಸಿನಲ್ಲಿಯೂ ಕೇಳಿ ಅರಿಯರು. ಅಹರ್ನಿಶೆಯಲ್ಲಿಯೂ ಪಾಪಕೂಪದಲ್ಲಿ ಮಗ್ನರಾಗಿರುವರು. ಇಂಥವರಿಂದ ಪ್ರಜಾಪೀಡೆಯೇ ಹೊರತು ಪ್ರಜಾಹಿತವು ಸ್ವಲ್ಪವಾದರೂ ಆಗಲಾರದು. ಇಂಥವರ ಕಯ್ಯಲ್ಲಿ ಅಲ್ಪಸ್ವಲ್ಪ ಅಧಿಕಾರವಿದ್ದರಂತೂ ಕೇಳುವದೇನು!ಮಂಗನ ಕಯ್ಯಲ್ಲಿ ಮಾಣಿಕ ಕೊಟ್ಟಂತೆ ಅಥವಾ ಶುನಕನನ್ನು ಕನಕದ ಸಿಂಹಾಸನದಲ್ಲಿರಿಸಿದಂತೆ, ನಿರರ್ಥಕವಾಗಿ ಕಾರ್ಯಕ್ರಮವು ತದ್ವಿಪರೀತವಾಗುವದು. ಆಗಬಾರದವರ ಅಷ್ಟಿಷ್ಟು ತಪ್ಪಿತಕ್ಕೆ ತಮ್ಮ ಅಧಿಕಾರಬಲದಿಂದ ಆಗಾಗ್ಗೆ ದಂಡಶಿಕ್ಷಾದಿಗಳನ್ನು ಮಾಡಿ, ಅವರಿಗೆ ಅನೇಕ ಆಪತ್ತುಗಳನ್ನುಂಟುಮಾಡುವರು. ಅಕ್ಕಸಾಲಿಗನು ಅಕ್ಕನ ಬಂಗಾರವನ್ನು ಸಹ ಕದಿಯದೆ ಬಿಡನೆಂಬಂತೆ, ಇಂಥ ಗ್ರಾಮಸ್ಥರು ತಮ್ಮ ಅವ್ವ ಅಪ್ಪಂದಿರ ಹಾಗೂ ಅಣ್ಣ ತಮ್ಮಂದಿರ ಕಡೆಯಿಂದಲೂ ಲಂಚವನ್ನು ತೆಗೆದುಕೊಳ್ಳದೆ ಬಿಡರು. ಕಾವ್ಯಕಥಾಪುರಾಣಗಳೂ, ಆಟನೋಟ ನಾಟಕಗಳೂ ನಡೆದಲ್ಲಿ, ವಿದ್ಯಾವೈಖರಿಯ ಪರೀಕ್ಷಾತುರರಾದ ಪಂಡಿತರು

ಕೂಡ್ರಲಿಕ್ಕೆ ಸ್ಥಳಸಿಗದೆ ಮೂಲೆಯಲ್ಲಿ ಸಿಕ್ಕು ಮಿಡುಕಾಡುತ್ತಿರುವಾಗ, ನಿರಕ್ಷರಕುಕ್ಷಿಗಳೂ, ಪರೋತ್ಕರ್ಷ ಅಸಹಿಷ್ಣುಗಳೂ ಆದ ಗೌಡಕುಲಕರಣಿಯರೂ, ಅವರ ಜತೆಗಾರರೂ ಮಂಟಪದ ಮುಂಭಾಗದಲ್ಲಿಯೇ ಕೂರ್ಚಾಸನಗಳ ಮೇಲೆ ಕಸಿಬೆಯ ಕಾಮಣ್ಣಿನಂತೆ ಕುಕ್ಕರಿಸಿರುತ್ತಾರೆ. ಮತ್ತು ವಿದ್ಯಾಗಂಧವು ಲವಲೇಶವಾದರೂ ಇಲ್ಲದ ಇಂಥವರೇ ಲೋಕಲ್ ಬೋರ್ಡಮೆಂಬರರೂ, ೨ನೇ-೩ನೇ ವರ್ಗದ ಮ್ಯಾಜಿಸ್ಟ್ರೇಟರೂ ಆಗಿ ಮೆರೆದಾಡುತ್ತಿರುತ್ತಾರೆ. "ಲೋಕಲ್ ಬೋರ್ಡ" ಈ ಶಬ್ದದ ಅರ್ಥವೂ ಕೂಡ ಗೊತ್ತಿಲ್ಲದ ಮತ್ತು ತಮ್ಮ ಕರ್ತವ್ಯ ಕರ್ಮವನ್ನರಿಯದ ಇಂತಹ ಮೆಂಬರರಿಂದ ಲೋಕೋಪಕಾರ ಕಾರ್ಯಗಳು ಹೇಗೆ ನೆರವೇರಬೇಕು? ವಸ್ತುಸ್ಥಿತಿಯನ್ನು ನೋಡುತ್ತಿರಲು ಸಜ್ಜನರು ಮೂಲೆಗುಂಪಾಗಿ ಇಂಥ ದುರ್ಜನರಿಗೇ ಛತ್ರಚಾಮರಗಳು ಬೀಸುತ್ತವೆ. ಮಾನಮರ್ಯಾದೆಗಳು ಇವರಿಗೇ ನಡೆಯುತ್ತವೆ. ಆದರೆ ವಿಚಾರದೃಷ್ಟಿಯಿಂದ ಅವಲೋಕನ ಮಾಡಿದರೆ ಈ ದುಷ್ಟವೈಭವಗಳು ಕ್ಷಣಿಕವಾಗಿದ್ದು ಪರ್ಯವಸಾನದಲ್ಲಿ ಅವರು ಅಧೋಗತಿಗೆ ಪಾತ್ರರಾಗುತ್ತಾರೆ. ಯಾಕೆಂದರೆ, ಸತತವಾದ ಈಶ್ವರ ಭಕ್ತಿ, ಭೂತದಯೆ, ಸದಾಚರಣೆಗಳಿಂದ ಇಚ್ಛಿತವು ನೆರವೇರುವದು. ಬಯಕೆ ಕೈಗೂಡದ್ದರಿಂದ ದೇವರನ್ನು ಹಳಿದು ಉದಾಸೀನರಾಗುವ ಉತಾವಳಿ ಸ್ವಭಾವದ ಕಂಗಾಲ ಜನರು ಇದನ್ನು ನೆನಪಿನಲ್ಲಿಡತಕ್ಕದ್ದು. ಮತ್ತು ಜನ್ಮಾಂತರದಲ್ಲಾದರೂ ಕರ್ಮದ ಫಲವು ದೊರೆಯುತ್ತಿರುವದೆಂದು ಅವರು ತಿಳಿಯತಕ್ಕದ್ದು. ಇವರ ವಕ್ರದೃಷ್ಟಿಯನ್ನೂ, ಕಪಟಕರ್ಮಗಳನ್ನೂ ಯಥಾಸ್ಥಿತವಾಗಿ ಯಾವತ್ತೂ ಬರೆಯುತ್ತ ಹೋದರೆ ಬೇರೊಂದು ದೊಡ್ಡ ಗ್ರಂಥವಾಗಬಹುದು. ಸದ್ಯಕ್ಕೆ ದುಷ್ಟ ಗ್ರಾಮಸ್ಥರ ದೌರ್ಜನ್ಯವನ್ನಷ್ಟೇ ಸಂಕ್ಷಿಪ್ತವಾಗಿ ವಾಚಕವೃಂದದ ನಿದರ್ಶನಕ್ಕೆ ಇಟ್ಟಿರುತ್ತೇನೆ.

ಇವರಲ್ಲದೆ ಊರೊಳಗಿನ ನಿರುದ್ಯೋಗಿಗಳಾದ ನೀಚರೂ, ಅಲ್ಪಸ್ವಲ್ಪ ಕಲಿತವರಾದ ಕುವಿಚಾರಿಗಳೂ ಜನರಲ್ಲಿ ಅಭುಕ್ತ ಕಲಹಗಳನ್ನು ರಚಿಸಿ, ಇಲ್ಲವೆ ಖೊಟ್ಟಿ ಕತಬಿಗಳನ್ನು ಹುಟ್ಟಿಸಿ, ಅಥವಾ ಅನೇಕ ಕಪಟತಂತ್ರಗಳ ಯೋಜನೆ ಮಾಡಿ, ಪ್ರಜಾಕಂಟಕರಾಗಿರುತ್ತಿದ್ದರು. ಈಯೆಲ್ಲ ಪ್ರೇತಭಕ್ಷಕರಿಂದುಂಟಾಗುತ್ತಿದ್ದ ಪ್ರಜೆಗಳ ಅಸಹ್ಯಪೀಡೆಯನ್ನು ಪ್ರತ್ಯಕ್ಷ ನೋಡಿ ಮನಗಂಡು ರಾ.ಬ॥ರುದ್ರಗೌಡರು ನ್ಯಾಯಸ್ಥಾನದಲ್ಲಿ ಸಿಕ್ಕ ದುಷ್ಟಜನರಿಗೆ ತಕ್ಕ ಶಿಕ್ಷೆಯನ್ನು ಮಾಡುತ್ತ, ಅವರನ್ನು ಮುರಿಬಡಿಯ ಹತ್ತಿದರು. ಆದುದರಿಂದ ತಪ್ಪಿತಕ್ಕೆ ತಕ್ಕಶಿಕ್ಷೆಯು ತಪ್ಪದೆ ಆಗುವದೆಂದು, ಬಹುತರ ಎಲ್ಲ ಜನರ ನಿದರ್ಶನಕ್ಕೆ ಬರಹತ್ತಿತು. ದುಷ್ಕಾರ್ಯಗಳಿಗೆ ಸ್ವಲ್ಪವಾದರೂ ಆಸ್ಪದವಿಲ್ಲದಂತಾಗಿ ದೌರ್ಜನ್ಯವು ದೂರಾಗಹತ್ತಿತು. ಮುಂಗಾರಿಯ ಸಿಡಿಲನೋಪಾದಿ ಜಾಜ್ವಲ್ಯಮಾನವಾಗಿರುವ ಇವರ ದರ್ಪವು ಸುತ್ತುಮುತ್ತಲೂ ಪ್ರಶಸ್ತವಾಗಿ ಕೂತು ಹೋಯಿತು. ರಾ.ಬ॥ರುದ್ರಗೌಡರೆಂದರೆ ದುಷ್ಟನಿಗ್ರಹಾರ್ಥವಾಗಿ ಪ್ರತ್ಯಕ್ಷವಾಗಿ ಪ್ರಕಟವಾದ ರುದ್ರಾವತಾರವೆಂದೇ ಜನರು ಭಾವಿಸಹತ್ತಿದರು. ಕಪಟೋಪಾಯದ ನರಿಯಂತೆ ಕುವಿಚಾರಗಳಿಂದ ತುಂಬಿದ ಕಿತ್ತೂರ ಕುಲಕರಣಿಯಾದ ನರಸೋ ರಾಮಾಜಿಯಂಥ ಎಷ್ಟೋ ದುಷ್ಟ ಕುಲಕರಣಿಯರೂ, ಹೊಟ್ಟೆಬಾಕ ತೋಳನಂತೆ ಎಷ್ಟು ತಿಂದರೂ ತೃಪ್ತಿಯಿಲ್ಲದ ಹಾಗೂ ಹಡಗಕ್ಕೆ ಹಡಗವನ್ನೇ ನುಂಗುವ ಬೆಳವಡಿಯ ಕುಲಕರಣಿ ಲಕ್ಷ್ಮಣರಾಯನಂಥ[೧] ಎಷ್ಟೋ ಶಾನಭೋಗರೂ,

---

೧. ಈ ಲಕ್ಷ್ಮಣರಾಯನು ಸನ್ ೧೯೦೭ನೇ ಇಸವಿಯ ಮಾರ್ಚ ತಿಂಗಳಲ್ಲಿ ಧಾರವಾಡ ತಾಲೂಕ ನರೇಂದ್ರ ಗ್ರಾಮದಿಂದ ಕುಟುಂಬ ಸಹಿತ ಬೆಳವಡಿಗೆ ಬರುವಾಗ, ದಾರಿಯಲ್ಲಿ ಸಂಧಿಸಾಧಿಸಿ ಇವನ ವಿರೋಧಿಗಳು ಹಗಲುಹಾಡೇ ಹಿಡಿದು ಈತನ ಮೂಗುಕೊಯ್ದರು. ಇದು ಪ್ರಜಾಪೀಡನೆಯ ಪರಿಣಾಮವೇ ಸರಿ.

ಬಡಜನರಿಗೆ ನೀನು ನಿಷ್ಕಾರಣವಾಗಿ ಉಪದ್ರ ಮಾಡಹತ್ತಿದರೆ ಮತ್ತು ಕಪಟದಿಂದ ಪರರ ಧನಾಪಹಾರ ಮಾಡತೊಡಗಿದರೆ ನಿನ್ನ ಪರಿಣಾಮವು ಹೀಗೇ ಆಗಬಹುದೆಂದು ರಾ.ಬ॥ಅರಟಾಳ ಸಾಹೇಬರು ಆಗಾಗ್ಗೆ ಲಕ್ಷ್ಮಣರಾಯನ ಮುಂದೆ ತಮ್ಮ ಧೋರಣಾಶಕ್ತಿಯಿಂದ ಭವಿಷ್ಯ ಕಥನ ಮಾಡುತ್ತಿದ್ದರು. ಈಗ ಅದು ಅಕ್ಷರಶಃ ನಿಜವಾಯಿತು.

ಸ್ವಂತಬುದ್ಧಿಯಿಂದಲೂ ಸಂಗತಿಯ ಫಲದಿಂದಲೂ ದುಷ್ಕಾರ್ಯಗಳಲ್ಲಿ ತೊಡಗಿದ ಎಷ್ಟೋ ಗೌಡರೂ, ಧನಮದಾಂಧತೆಯಿಂದ ಗ್ರಾಮಾಧಿಪತಿಗಳನ್ನು ತಿರಸ್ಕರಿಸಿ ದ್ಯಾಮವ್ವನ ಕೋಣನಂತೆ ಮೆರೆದಾಡುತ್ತಿದ್ದ ಗುರುಸಿದ್ಧಪ್ಪ ಧರ್ಮಪ್ಪ ಬಿಕ್ಕಣ್ಣನವರ (ಗಾಣಗೇರ) ಎಂಬ ಕಿತ್ತೂರ ಹಳಬನಂಥ ಅನೇಕ ಮಂದಿ ಆಹಮೇಕಸ್ವಭಾವದವರೂ, ಕೀಡಿಯಂತೆ ಸೆಟಿಸೆಟಿದು ಬೀಳುವ ಶಠಂಭಾವದ ಸಾವಿರಾರು ಜನರೂ, ಇನ್ನೂ ಎಷ್ಟೋ ತರದಿಂದ ಪ್ರಜಾಪೀಡಕರಾದ ನರಪಶುಗಳೂ, ರುದ್ರದೇವರ ಅಗ್ನಿನೇತ್ರದ ಉಗ್ರಜ್ವಾಲೆಗೆ ಪಾತ್ರಾಪಾತ್ರದ ಹಾಗೂ ಕಾಲಕ್ರಮದ ವಿಚಾರವಿಲ್ಲದ ಮದಾಂಧ ಕಾಮನು ಭಸ್ಮೀಭೂತನಾದಂತೆ, ತಮ್ಮ ಕೆಟ್ಟ ಕೃತ್ಯದ ಫಲದಿಂದ ರಾ.ಬ॥ರುದ್ರಗೌಡರ ಕಯ್ಯಲ್ಲಿ ಸಿಕ್ಕು ಕೆಲಸದಿಂದ ದೂರಾಗಿ, ಕೆಲಸ ಕೊಡಿಸೋ ಕೈಲಾಸಪತೇ ಎಂದು ಕೈಮುಚ್ಚಿಕೊಂಡು, ಕೋಣೆ ಹಿಡಿದು ಕೂಡ್ರುವಂತಾಯಿತು.

ರಾ.ಬ॥ರುದ್ರಗೌಡ ಸಾಹೇಬರ ಶ್ಲಾಘನೆ

ಈ ಪ್ರಕಾರ ಪ್ರಜಾಸೌಖ್ಯಕರವಾದ ಇವರ ನಿರ್ದುಷ್ಟ ಆಳಿಕೆಯನ್ನು ಕಂಡು "ಇದ್ದರೆ ಇರಬೇಕು ರುದ್ರಗೌಡರು" ಎಂಬದಾಗಿ ಸಜ್ಜನ ಸಮೂಹವು ಇವರನ್ನು ಹೊಗಳುವದಾಯಿತು. ಕರ್ನಾಟಕದ ಕವಿ ಮಂಡಲವು ತಮ್ಮ ಕಾವ್ಯ ಕಥೆಗಳಿಂದ ಇವರ ನಿಷ್ಕಲಂಕವಾದ ವರ್ತನವನ್ನೂ, ನಿಷ್ಪಕ್ಷತನದ ರಾಜ್ಯ ಕಾರಭಾರವನ್ನೂ ವರ್ಣಿಸುವದಾಯಿತು. ತಮ್ಮ ಕರ್ತವ್ಯದಿಂದ ಕೀರ್ತಿ ಪಡೆಯಬೇಕೆಂದೆಳಸುವ ಕಾಮದಾರರು ಇವರ ಕಾರಭಾರದ ಕ್ರಮವನ್ನು ಅನುಕರಣೆ ಮಾಡುವದಾಯಿತು. ಎಲ್ಲ ಜನರ ಬಾಯ ಮಾತಿನಲ್ಲಿ, ಉತ್ತಮ ಆಳಿಕೆಯ ಮಾದರಿಯನ್ನು ಹೇಳುವದಾದರೆ ಆರಂಭಕ್ಕೆ ರಾ.ಬ॥ರುದ್ರಗೌಡರ ಹೆಸರನ್ನೇ ತೆಗೆದುಕೊಳ್ಳುವದಾಯಿತು. ಸತ್ಯಸಂಧತೆಯ ಪ್ರಕಾಶದಿಂದ ಥಳಗುಡುತ್ತಿದ್ದ ಇವರ ಆಳಿಕೆಯನ್ನೂ, ಧವಳಕೀರ್ತಿಯನ್ನೂ ಕಂಡು ಸರಕಾರವು, ಇಡೀ ಲಿಂಗಾಯತ ಸಮಾಜವನ್ನು ಪ್ರೀತಿಸುವದಾಯಿತು. ಇವರ ಯಶೋದುಂದುಭಿಯು ಎಲ್ಲೆಡೆಯಲ್ಲಿಯೂ ಗಂಭೀರವಾಗಿ ನುಡಿಯ ಹತ್ತಿತು. ಇವರ ನ್ಯಾಯನಿಷ್ಠತನದ ದೀರ್ಘಧ್ವಜವು ದಿಗ್ದೇಶದಲ್ಲೆಲ್ಲ ಮೆರೆಯಹತ್ತಿತು. ಈ ಪ್ರಕಾರ ಸರ್ವತೋಪರಿಯಿಂದ ಪ್ರಕಾಶಮಾನರಾದ ರಾ.ಬ॥ರುದ್ರಗೌಡರ ಕಾರಭಾರದ ಚಾತುರ್ಯವನ್ನು ಕಂಡು ಈ ಗ್ರಂಥಕರ್ತರೂ, ಕಿತ್ತೂರ ಕನ್ನಡ ಶಾಲಾ ಗುರುಗಳೂ ಆದ ಪಾರ್ಶವಾಡದ ಬಸವಾರ್ಯ ಕವಿಗಳು ಇವರ ಯಥಾಸ್ಥಿತ ವರ್ಣನಾಪರವಾದ ೨೭ ಪದ್ಯಗಳನ್ನು ಕನ್ನಡ ಭಾಷೆಯ ಸುಲಭ ಶೈಲಿಯಿಂದ ರಚಿಸಿ, ಅದಕ್ಕೆ "ಪದ್ಯತಾರಾವಳಿ" ಯೆಂಬ ಹೆಸರನ್ನು ಕೊಟ್ಟಿರುತ್ತಾರೆ. ಆ ಪದ್ಯಗಳನ್ನು ವಾಚಕರ ಅವಲೋಕನಾರ್ಥವಾಗಿ ಇಲ್ಲಿ ಕೊಡಲ್ಪಟ್ಟಿದೆ.

ಗ್ರಂಥಕರ್ತ ಬಸವಾರ್ಯಕೃತ ಪದ್ಯತಾರಾವಳಿಯು

ಶಾರ್ದೂಲವಿಕ್ರೀಡಿತ ವೃತ್ತ.

ಶ್ರೀಶಬ್ರಹ್ಮಸುರೇಂದ್ರ ವಂದ್ಯಚರಣಂ ದೇವೌಘ ವಿಜ್ರಂಭಣಂ।
ಭೇಶಾರ್ಕಾಗ್ನಿ ವಿಶೋಭಿತ ತ್ರಿನಯನಂ ಗೌರೀಮನೋರಂಜನಂ।
ಆಶಾನಂತ ಮಹಾತ್ಮ ಪೂಜ್ಯಚರಿತಂ ಲೋಕತ್ರಯಪ್ರೇರಿತಂ।
ಈಶಂ ಪಾಲಿಸುತಿರ್ಕೆ ನಿಮ್ಮನು ಕರಂ ವಿಶ್ವೇಶ್ವರಂ ಶಂಕರಂ ॥೧॥

ಭಾವಾರ್ಥ ಬ್ರಹ್ಮ ವಿಷ್ಣುದೇವೇಂದ್ರರಿಂದ ನಮಸ್ಕರಿಸಲ್ಪಟ್ಟ ಪಾದಗಳುಳ್ಳಂಥ, ದೇವತೆಗಳ ಸಮೂಹಕ್ಕೆ ಶೋಭಾಸ್ಪದನಾದಂಥ, ಸೂರ್ಯಚಂದ್ರಾಗ್ನಿಯರೇ ತ್ರಿನೇತ್ರಗಳಾಗಿ ಉಳ್ಳಂಥ, ಪಾರ್ವತಿಯ ಮನಸ್ಸನ್ನು ಸಂತೋಷಪಡಿಸುವಂಥ, ಬ್ರಹ್ಮಾಂಡವ್ಯಾಪಕನಾದಂಥ, ಪೂಜ್ಯವಾದ ಚರಿತ್ರವುಳ್ಳಂಥ, ಸ್ವರ್ಗಮರ್ತ್ಯಪಾತಾಳಗಳ ಪ್ರೇರಣೆಗೆ ಕಾರಣನಾದಂಥ, ಜಗದೀಶನಾದಂಥ ಶ್ರೀಮದ್ಯಂಕರನು ತಮ್ಮನ್ನು ಯಾವಾಗಲೂ ಸಂರಕ್ಷಿಸುತ್ತಿರಲಿ.

ಚಂಪಕಮಾಲಾ ವೃತ್ತ

ಶರನಿಧಿಯೆಂತದಾಂತಪುದು ಸಂತಸಮಂ ನೆರೆ ಚಂದ್ರನೈತರಲ್ ।
ಸರಸಿಜಮೆಂತರಳ್ದಪುದು ಸಂತಸದಿಂ ಸಲೆ ಸೂರ್ಯನೈತರಲ್ ॥
ವರ ಪಿಕಪುಂಜಮೆಂತು ಪರಿತೋಷವನಾಂತುದು ಚೈತ್ರಮಾಸದೊಳ್ ।
ದೊರೆಗಳ ರುದ್ರಗೌಡರ ಸುದರ್ಶನದಿಂ ನಲುವೇರ್ಚಿದತ್ತು ದಲ್ ॥೨॥

ಭಾವಾರ್ಥ ಚಂದ್ರೋದಯವಾಗಲು ಸಮುದ್ರವೂ, ಸೂರ್ಯೋದಯವಾಗಲು ಕಮಲಗಳೂ, ವಸಂತೋದಯವಾಗಲು ಕೋಗಿಲೆಗಳೂ, ಹೇಗೆ ಸಂತೋಷ ಹೊಂದುತ್ತವೋ ಹಾಗೆ ರಾ.ಬ॥ರುದ್ರಗೌಡ ದೊರೆಗಳವರ ದರ್ಶನದಿಂದ ನಮ್ಮೆಲ್ಲರಿಗೆ ಪರಮಾನಂದವಾಯಿತು.

ಕಂದ

ರಾಜನಾಗಮನದಿಂದಂ। ರಾಜೀವಾಳಿಗಳು ರಾಜಿಸುವವಿದು ಸಹಜಂ ।
ರಾಜಾಂಶ ರುದ್ರಗೌಡರ। ತೇಜೋದರ್ಶನದಿ ಜನರ ಮುಖಸುಮಮರಳ್ಗುಂ ॥೩॥

ಭಾವಾರ್ಥ ಚಂದ್ರೋದಯದಿಂದ ಕಮಲಗಳು ವಿಕಸನವಾಗುವದು ಹೇಗೆ ಸ್ವಾಭಾವಿಕವೋ ಹಾಗೆ ನಮ್ಮ ಪ್ರಾಂತದ ರಾಜರಾದ ರಾ.ಬ॥ರುದ್ರಗೌಡರ ಆಗಮನದಿಂದ ಜನರ ಮುಖಕಮಲಗಳು ಅರಳುವದು ಸಹಜವಾದದ್ದು (ಸಂತೋಷವಾಯಿತೆಂಬ ಭಾವ).

ವಾರ್ಧಕ ಷಟ್ಪದಿ

ತಿಮಿರಮಿರದೋಡಿದುದು ಕುಮುದನಿಧಿ ಬಾಡಿದುದು ।
ಕಮನತತಿ ಬೆದರಿದುದು ದ್ವಿಜಗಣಂ ಚದುರಿದುದು ।
ಕಮನೀಯ ದಿಗ್ಗಜಗಳೆಚ್ಚತ್ತು ಬೆಳಗಿದುದು ಸುಜನಚಕ್ರಂ ನಲಿದುದು ॥
ಅಮಿತ ತೇಜಃಪುಂಜ ನಿಖಿಲ ಸುಮನೋವಂದ್ಯ ।
ನಮಿತ ಸಾಹಸ್ರಕರ ಸತ್ಯೇಂದ್ರ ಪದವಿಧರ ।
ರಮಣೀಯ ಶ್ರೀ ರುದ್ರಗೌಡನಾಮ ಪ್ರಕಟ ದಿವ್ಯಸೂರ್ಯೋದಯದೊಳು ॥೪॥

ಭಾವಾರ್ಥ: ಈ ಪದ್ಯದಲ್ಲಿ ಸುರ್ಯೋಪಮೆಯಿಂದ ರಾ.ಬ॥ರುದ್ರಗೌಡ ಸಾಹೇಬರವರನ್ನು ವರ್ಣಿಸಿರುವದರಿಂದ ಮೊದಲು ಸೂರ್ಯಪರವಾದ ಅರ್ಥವನ್ನು ಬರೆದು, ಅನಂತರ ರಾವಬಹದ್ದೂರವರ ಸಂಬಂಧಾರ್ಥವನ್ನು ಬರೆದದೆ.

ಸೂರ್ಯಪರಾರ್ಥ-ತೇಜಃಪುಂಜನಾದಂಥ, ಸಮಸ್ತದೇವತೆಗಳ ವಂದನೆಗೆ ಪಾತ್ರನಾದಂಥ, ಪೂರ್ವಾಚಲಕ್ಕೆ ಅಲಂಕೃತನಾದಂಥ, ಝಗಝಗಾಯ ಮಾನವಾದ ಸಹಸ್ರಕಿರಣಗಳುಳ್ಳ ದಿವ್ಯ ಸೂರ್ಯೋದಯವಾಗಲು ತುಂಬಿದ ಕತ್ತಲೆಯು ಹರಿಯಿತು. ಕುಮುದ ಪುಷ್ಪಗಳು ಬಾಡಿದವು. ಜಾರಜಾರೆಯರು ಜಾರಿದರು. ನಕ್ಷತ್ರಗಳು ಅಡಗಿದವು. ಅಷ್ಟದಿಕ್ಕುಗಳು ಬೆಳಗಿದವು. ಚಕ್ರವಾಕಗಳು ಸಾನಂದ ಹೃದಯವುಳ್ಳವುಗಳಾದವು.

ಸಾಹೇಬರ ಪರಾರ್ಥ-ತೇಜೋಮಯರಾದಂಥ, ಸಕಲ ಸಜ್ಜನವಂದ್ಯರಾದಂಥ, ಸಾವಿರಾರು ಜನರಿಂದ ಶರಣು ಮಾಡಿಸಿಕೊಳ್ಳುವಂಥ, ಕಲೆಕ್ಟರ ಸಾಹೇಬರಾದಂಥ, ರಾ.ಬ॥ರುದ್ರಗೌಡರೆಂಬ ಸೂರ್ಯೋದಯವಾಗಲು (ರುದ್ರಗೌಡರು ಪ್ರಕಟವಾಗಲು) ಜನವರ್ಗದ ಗರ್ವವು ಬಯಲಾಯಿತು. ಅಸೂಯಾಪರಿಪುಷ್ಟರಾದ ಜನರ ಮುಖಗಳು ಬಾಡಿದವು. ದುಷ್ಕೃತ್ಯದ ಜನರು ದಿಕ್ಕುಪಾಲಾದರು. ದ್ವಿಜಸಮೂಹವು ಭಯಗ್ರಸ್ತವಾಯಿತು. ಎಂಟು ದಿಕ್ಕುಗಳಲ್ಲಿಯೂ ಜನರು ಜಾಗೃತರಾದರು. ಸಜ್ಜನ ಸಮೂಹಕ್ಕೆ ಸಂತೋಷವಾಯಿತು.

ಮತ್ತೇಭವಿಕ್ರೀಡಿತ ವೃತ್ತ

ಚತುರೋಪಾಯಯುತರ್ ಯಶೋಭರಿತ ಸತ್ಕಾರ್ಯರ್ ಮಹೌದಾರ್ಯರು ।
ಮತಿವಂತರ್ ಜನವೃಂದ ವಂದ್ಯಚರಿತರ್ ಸದ್ಧರ್ಮನಿಷ್ಠಾಪರರ್ ॥
ಚತುರರ್ ಸದ್ಗುಣ ಮಂಡಿತರ್ ವಿವಿಧ ವಿದ್ಯಾಪೂರ್ಣಪ್ರಜ್ಞಾತ್ಮರುಂ ।
ಪ್ರಥಿತರ್ ಸಜ್ಜನ ವಾರನುತ್ಯ ವಿಬುಧರ್ ಶ್ರೀ ರುದ್ರಗೌಡಾಭಿದರ್ ॥೫॥

ಭಾವಾರ್ಥ: ರಾ॥ಬ॥ರುದ್ರಗೌಡರು ಚತುರೋಪಾಯ ಧುರೀಣರೂ, ಕೀರ್ತಿವಿಶಾಲರೂ, ಮಹೋದಾರಿಗಳೂ, ಬುದ್ಧಿವಂತರೂ, ಸಜ್ಜನ ಸಮಂಜಸವಾದ ಚರಿತ್ರವುಳ್ಳವರೂ, ಸ್ವಧರ್ಮಾಭಿಮಾನಿಗಳೂ, ಸದ್ಗುಣಿಗಳೂ, ವಿವಿಧ ವಿದ್ಯಾಪಾರಂಗತರೂ, ಚತುರರೂ, ಪಂಡಿತರೂ, ಪ್ರಸಿದ್ಧರಾದರವರೂ ಇರುತ್ತಾರೆ.

ಕಂದ

ಧಾರುಣಿಯಂ ಸ್ಥಿರತನದಿಂ।ವಾರಿಧಿಯಂ ಪೂರ್ಣ ಕೀರ್ಣಗಂಭೀರತೆಯಿಂ ॥
ಸೂರಜನ ತೇಜೋಬಲದಿಂ। ಮೀರಿರುವರು ರುದ್ರಗೌಡರೆಂಬೀ ದೊರೆಗಳ್ ॥೬॥

ಭಾವಾರ್ಥ: ರಾ:ಬ॥ರುದ್ರಗೌಡ ದೊರೆಗಳು ಸ್ಥಿರತ್ವದಿಂದ ಭೂಮಿಯನ್ನೂ, ಗಾಂಭಿರ್ಯದಿಂದ ಸಮುದ್ರವನ್ನೂ, ತೇಜೋಬಲದಿಂದ ಸೂರ್ಯನನ್ನು ಮೀರಿರುವರು.

ಉತ್ಪಲಮಾಲಾ ವೃತ್ತ

ಸತ್ಯದ ಬೀಡು ಸಂತಸದ ನಾಡು ಲಸದ್ಗುಣ ಜಾಲದೀಡು ಸತ್ ।
ಕೃತ್ಯದ ಗೊತ್ತು ಶಾಂತಿಯ ತವರ್ಮನೆ ನೀತಿಯ ಸೀಮೆ ಪೂರ್ಣಸಂ ॥
ಚ್ಚಿತ್ತಸಮಾಕರಂ ವಿನಯ ಕೋಶಮುದಾರಸದಾಗರಂ ಸದಾ ।
ನುತ್ಯ ಕಲೆಕ್ಟರಾದ ಅರಟಾಳುಪನಾಮದ ರುದ್ರಗೌಡರ್ಯೆ ॥೭॥

ಭಾವಾರ್ಥ: ಮತ್ತೆ ಇವರು ಸತ್ಯಕ್ಕೆ ಮನೆಯಾಗಿಯೂ, ಸಂತೋಷಕ್ಕೆ ಸ್ಥಾನವಾಗಿಯೂ, ಸದ್ಗುಣಕ್ಕೆ ಸ್ಥಳವಾಗಿಯೂ, ಸತ್ಕಾರ್ಯಕ್ಕೆ ನಿಲಯವಾಗಿಯೂ, ಶಾಂತತೆಗೆ ತವರಮನೆಯಾಗಿಯೂ, ಸುನೀತಿಗೆ ಬೊಕ್ಕಸವಾಗಿಯೂ, ಸಚ್ಚಿತ್ತಕ್ಕೆ ಮಹಾಸಾಗರವಾಗಿಯೂ, ವಿನಯಕ್ಕೆ ಕೋಶವಾಗಿಯೂ, ಉದಾರತನಕ್ಕೆ ಭಾಂಡಾರವಾಗಿಯೂ ಇರವರು.

ಮಾಲಿನೀ ವೃತ್ತ

ಕೃತಕ ಕುಜಕುಠಾರಂ ಕ್ರೂರ ಸಂಹಾರ ಶೂರಂ ।
ನತಜನವನ ಚೈತ್ರಂ ನ್ಯಾಯ ನೈಪುಣ್ಯಚಿತ್ರಂ ॥
ವಿತತ ಸುಜನಪಾಲಂ ವೀಧ್ರ ಸದ್ಭಾವ ಶೀಲಂ ।
ಪ್ರಥಿತ ಸುಗುಣ ರೂಢರ್ ಪ್ರಾಜ್ಞರೀ ರುದ್ರಗೌಡರ್ ॥೮॥

ಭಾವಾರ್ಥ: ಸದ್ಗುಣ ಪರಿಪೂರಿತರಾದ ಶ್ರೀಮತ್ ರುದ್ರಗೌಡರು ಕಪಟಿಗಳೆಂಬ ಗಿಡಗಳ ಗುಂಪಿಗೆ ಕೊಡಲಿಯ ಸ್ವರೂಪರಾದವರೂ, ಕ್ರೂರಕೃತ್ಯಗಳ ಸಂಚಾರ ಮಾಡುವದರಲ್ಲಿ ಶೂರರೂ, ಸಜ್ಜನ ಸಮೂಹವೆಂಬ ತೋಟಕ್ಕೆ ವಸಂತಮಾಸದಂಥವರೂ, ನ್ಯಾಯನಿರ್ಣಯದ ನಿಪುಣತೆಯಲ್ಲಿ ವಿಚಿತ್ರಗತಿಯುಳ್ಳವರೂ, ಸಜ್ಜನಪಾಲಕರೂ, ಸಚ್ಛೀಲವುಳ್ಳವರೂ ಆಗಿದ್ದಾರೆ.

ಇಂದ್ರವಜ್ರವೃತ್ತ

ಸತ್ಯಾತ್ಮಕರ್ ಶ್ರೇಯದ ಕಾರ್ಯನಿಷ್ಠರ್।
ಸ್ಥಿತ್ಯಂತರಂದಾಳದ ಚಿತ್ತಯುಕ್ತರ್॥
ಸ್ತುತ್ಯರ್ ಸದಾ ಲೋಕಜನರ್ಕಳಿಂದಂ।
ಮಿಥ್ಯಾಭಿಯೋಗಂಗಳ ಕೇಳರೆಂದುಂ ॥೯॥

ಭಾವಾರ್ಥ: ಮತ್ತೆ ಇವರು ಸತ್ಯಸ್ವಭಾವದವರೂ, ಯಶಃಕಾರ್ಯತತ್ಪರರೂ, ಚಾಂಚಲ್ಯವಿಲ್ಲದ ಚಿತ್ತವುಳ್ಳವರೂ, ಲೋಕಮಾನ್ಯರೂ ಆಗಿದ್ದದರಿಂದ ಅಸತ್ಯದ ಆಟಕ್ಕೆ ಇವರಲ್ಲಿ ಆಶ್ರಯದೊರೆಯುವಂತಿಲ್ಲ.

ಕಂದ

ಕ್ಷುದ್ರಜನಛಿದ್ರನಿದ್ರೋ। ನ್ನಿದ್ರಾ ಬ್ರಹ್ಮಾಂಡ ಭೇದ ಮೇಘೋದ್ರಾವರ್ ॥
ರುದ್ರಾವತಾರ ರೂಪರ್। ಭದ್ರಪ್ರದ ರುದ್ರಗೌಡನಾಮ ವಿಶೇಷರ್ ॥೧೦॥

ಭಾವಾರ್ಥ: ಕೀಳುಜನರ ನೀಚಕೃತ್ಯದ ನಿದ್ರಾಭಂಗಕ್ಕೆ ಇವರು ಬ್ರಹ್ಮಾಂಡವನ್ನು ಭೇದಿಸುವಂತಹ ಮೇಘಗರ್ಜನೆಯ ಹಾಗೆ ಇರುವದರಿಂದ ನೀಚಕೃತ್ಯ ನಿವಾರಣಕ್ಕೆ ರುದ್ರಗೌಡರೆಂಬ ಹೆಸರಿನಿಂದ ಕೇವಲ ರುದ್ರಾವತಾರವೇ ಧಾರುಣಿಗೆ ದಯಮಾಡಿತೋ ಏನೋ ಎಂಬಂತೆ ತೋರುತ್ತದೆಂಬ ಭಾವವು.

ಕಂದ

ನಂಬಿಗೆಯವರಿಗೆ ತಾಂ ಬಹು।ನಂಬಿಗೆಯಿಂದಿಂಬುಗೊಡುವರತಿ ಮುದದಿಂದಂ ॥
ಬೆಂಬಲದಿಂದೇ ಬಯಕೆಗಳಂ।ತುಂಬಿಸುವರ್ ರುದ್ರಗೌಡ ಸಾಹೇಬರವರ್ ॥೧೧॥

ಭಾವಾರ್ಥ: ವಿಶ್ವಾಸಿಕರಿಗೆ ಪರಮವಿಶ್ವಾಸಿಕರಾಗಿಯೂ, ಅವರಿಗೆ ಸದಾಶ್ರಯಕೊಡುವವರಾ ಗಿಯೂ ಇದ್ದು, ನ್ಯಾಯನಿಷ್ಠ ಪ್ರಜೆಗಳ ಕಾಂಕ್ಷೆಯನ್ನು ಪೂರ್ಣಮಾಡುವ ಕಾರ್ಯಭಾಗದಲ್ಲಿ ಬೆಂಬಲವಾಗಿರುವರು.

ಇಂದ್ರವಜ್ರ ವೃತ್ತ

ಶಿಷ್ಟರ್ಕಳಂ ರಕ್ಷಿಸಿ ಪ್ರೇಮಮಾಳ್ಪರ್ ।
ದುಷ್ಟರ್ಕಳಂ ಶಿಕ್ಷಿಸಿ ದೂರನೋಳ್ಪರ್ ॥
ಕಷ್ಟಂಗಳನ್ನೋಡಿಸಿ ಸೌಖ್ಯಗೆಯ್ವರ್ ।
ಶ್ರೇಷ್ಠಾತ್ಮ ಶ್ರೀಮಾನ್ ದೊರೆ ರುದ್ರಗೌಡರ್ ॥೧೨॥

ಭಾವಾರ್ಥ: ಶಿಷ್ಟರನ್ನು ರಕ್ಷಣಮಾಡಿ ಅವರನ್ನು ಪ್ರೇಮದಿಂದ ನೋಡುವವರೂ, ದುಷ್ಟರಿಗೆ ಯೋಗ್ಯ ಶಾಸನಮಾಡಿ ಅವರನ್ನು ದೂರ ನೋಡುವವರೂ, ಸುಜ್ಞಾನಿಗಳ ದುರದೃಷ್ಟದ ಕಷ್ಟಗಳನ್ನು ಕೈಲಾದಮಟ್ಟಿಗೆ ದೂರಮಾಡಿ ಅವರಿಗೆ ಸುಖವನ್ನುಂಟು ಮಾಡುವವರೂ ಆದ ರಾ.ಬ॥ರುದ್ರಗೌಡರು ಮಹಾಪುಣ್ಯಶಾಲಿಗಳೆಂದು ತಿಳಿಯತಕ್ಕದ್ದು.

ಕಂದ

ಬೇಸರವಿಲ್ಲದೆ ಬಡವರ। ಸಾಸಿರ ಬಯಕೆಗಳ ಕೇಳಿಕೊಳ್ವರ್ ನಲವಿಂ॥
ದಾಸರಗೊಡುವರ್ ಹಿತವ।ನ್ನೈಸಲೆಯಿಸಗುವರು ಪೂರ್ಣ ತನುಮನಧನದಿಂ ॥೧೩॥

ಭಾವಾರ್ಥ: ಬಡಜನರ ಅಮಿತ ಅಪೇಕ್ಷೆಗಳನ್ನು ಬೇಸರವಿಲ್ಲದೆ ಕೇಳಿಕೊಂಡು, ಅವರಿಗೆ ತ್ರಿಕರಣಪೂರ್ವಕ ಸಹಾಯಮಾಡಿ, ಸುಶಾಂತಿಯನ್ನುಂಟುಮಾಡುವ ಕಾರ್ಯದಲ್ಲಿಯೇ ಮಗ್ನರಾಗಿರುವರು.

ಉತ್ಪಲಮಾಲಾ ವೃತ್ತ

ಅಕ್ಕರದಿಂದ ಮಕ್ಕಳನು ತಂದೆ ವಿಚಾರಿಸುವಂತೆಯುಕ್ಕುವಾ ।
ಅಕ್ಕರದಿಂದ ದೇಶಜನರೆಲ್ಲರ ಭಾವಮನ್ನೆದೆ ಕೇಳುತಂ ॥
ತಕ್ಕುಪದೇಶವನ್ನು ನಡೆಮಾಡುತ ಕಾಮಿತಪೂರ್ಣಗೆಯ್ಯುತಂ ।
ದಿಕ್ಕಿನೊಳೆಲ್ಲಿಯುಂ ಪಡೆವರಕ್ಷಯ ಕೀರ್ತಿಯ ರುದ್ರಗೌಡರುಂ ॥೧೪॥

ಭಾವಾರ್ಥ: ತಂದೆಯು ಮಕ್ಕಳನ್ನು ಕಕ್ಕುಲತೆಯಿಂದ ವಿಚಾರಿಸುವಂತೆ ನಮ್ಮ ಪ್ರಾಂತದ ತಂದೆಯಾದ ರಾ.ಬ॥ರುದ್ರಗೌಡಸಾಹೇಬರು ತಮ್ಮ ಮಕ್ಕಳ ಸಮಾನರಾದ ಪ್ರಜಾಜನರ ಹೇಳಿಕೆಯನ್ನು ಕೇಳಿಕೊಂಡು, ಕಾಲಮಾನಾನುಸಾರವಾದ ತಕ್ಕ ಉಪದೇಶದಿಂದ ಅವರವರ ಯೋಗ್ಯವಾದ ಇಚ್ಛೆಗಳನ್ನು ಪೂರ್ಣಮಾಡಿ, ದಿಗಂತರದಲ್ಲಿ ಅಖಂಡಕೀರ್ತಿಯನ್ನು ಹೊಂದುತ್ತಿರುವರು.

ಕಂದ

ನಮ್ಮಯ್ಯ ಪ್ರಾಂತದ ಪುಣ್ಯದಿ।ಸಮ್ಮುದದಾ ರುದ್ರಗೌಡ ದೊರೆಗಳ್ ದೊರೆತರ್।
ಸುಮ್ಮನೆ ಸಿಗುತಿಹರೇ? ಎಂ।ದೊಮ್ಮುಗೆಯಿಂ ನಲಿವರಲ್ತೆ ನಾಡ ಜನರ್ಕಳ್ ॥೧೫॥

ಭಾವಾರ್ಥ: ನಮ್ಮ ಪ್ರಾಂತದ ಪುಣ್ಯವಿಶೇಷತೆಯಿಂದಲೇ ನಮ್ಮ ನಾಡಿಗೆ ನ್ಯಾಯನಿರ್ಣಯ ಶಿರೋಮಣಿಗಳಾದ ರುದ್ರಗೌಡ ದೊರೆಗಳು ದೊರೆತರೆಂದು ಪ್ರಜೆರೆಲ್ಲರು ಸಂತೋಷಸಾಗರದಲ್ಲಿರುವರು.

ಭಾಮಿನೀಷಟ್ಪದಿ

ಖೂಳಜನರಿಗೆ ಶೂಲವಾಗುವ।ಕೀಳತನವಂ ಮೂಲೆಗೊತ್ತುವ।
ಜಾಳುನುಡಿಯಂ ಬೀಳಗೆಡುಹುವ ಕಾರ್ಯದಿಂದವರಾ ॥
ಬಾಲಚಂದ್ರಮನಂತೆ ಬೆಳೆಯುವ ಏಳಿಗೆಯ ಸತ್ಕೀರ್ತಿ ಶರಧಿ ವಿ।
ಶಾಲ ಭೂಮಂಡಲವ ಸುತ್ತುತಲಿರ್ಪುದೈ ನಿಜದಿ ॥೧೬॥

ಭಾವಾರ್ಥ: ದುಷ್ಟಜನರನ್ನು ನಿರ್ನಾಮಮಾಡುವಂಥ, ನೀಚಕೃತ್ಯಗಳನ್ನು ಓಡಿಸಿ ಬಿಡುವಂಥ, ಅಸತ್ಯವನ್ನು ಅಡಗಿಸುವಂಥ, ಅಸಹಾಯ ಶೂರರಾದ ರಾ.ಬ॥ರುದ್ರಗೌಡ ಸಾಹೇಬರ ಕಾರ್ಯಪ್ರಭಾವದಿಂದ ಇವರ ಕೀರ್ತಿಸಮುದ್ರವು ಶುಕ್ಲಪಕ್ಷದ ಚಂದ್ರನಂತೆ ಉತ್ತರೋತ್ತರ ವೃದ್ಧಿಯಾಗಿ ವಿಶಾಲವಾದ ಭೂಮಂಡಲವನ್ನು ಸುತ್ತುತ್ತಿರುವದು.

ಕಂದ

ಅದ್ವಿತಿಯ ರುದ್ರಗೌಡರ। ಆದ್ಯಂತದ ಸದ್ವಿವೇಕ ತಾರ್ಕಿಕ ವೇಗಂ ॥
ವಿದ್ಯುದ್ಗತಿಯಂ ಜರಿವುದು।ಹೃದ್ಯಂ ವಿದ್ಯಾವಿನೋದ ಬುಧಜನನಿಧಿಗೆ ॥೧೭॥

ಭಾವಾರ್ಥ: ಅದ್ವಿತೀಯ ನ್ಯಾಯಕಲಾಧುರೀಣರಾದ ರಾ.ಬ॥ರುದ್ರಗೌಡರ ಸದಸದ್ವಿವೇಕವುಳ್ಳ ತರ್ಕವೇಗವು ಪಂಡಿತಾಗ್ರಗಣ್ಯರಿಗೆ ಮನೋಹರವಾಗುವಂತೆ ಅತರ್ಕ್ಯವಾದ ವಿದ್ಯುತ್ತಿನ ವೇಗವನ್ನು ಮೀರಿರುವದು (ಇವರ ತರ್ಕವು ಅತರ್ಕ್ಯವಾಗಿರುವದೆಂಬ ಭಾವವು).

ವಾರ್ಧಕ ಷಟ್ಪದಿ

ರಾಜಹಂಸಂ ಬೆರೆದ ಪಾಲಮುಂ ನೀರುಮುಂ।
ಸಾಜದಿಂ ಪಿಂಗಡಿಪ ತೆರದಿಂದ ದೇಶದೊಳ್ ॥
ರಾಜಿಪ ಕಲೆಕ್ಟರ ಬಹದ್ದೂರರಟಾಳ ಶ್ರೀ ರುದ್ರಗೌಡರೆಂಬಾ ॥
ರಾಜಹಂಸರ್ ನ್ಯಾಯನಿರ್ಣಯದಿ ಸತ್ಯದಾ।
ಬೀಜಮಂ ಬೇಗದಿಂ ತಕ್ಕೊಂಡು ಮಿಥ್ಯದಾ।
ತೇಜವನ್ನಡಗಿಪರ್ ಸಹಜಮಿದು ಸತ್ಯಸಂಕಲ್ಪದಭಿಮಾನಿಗಳ್ಗೆ ॥೧೮॥

ಭಾವಾರ್ಥ: ರಾಜಹಂಸಪಕ್ಷಿಯು ಬೆರಿಸಿಟ್ಟ ಹಾಲುನೀರುಗಳನ್ನು ತನ್ನ ಜಾತಿಯ ಹುಟ್ಟುಗುಣದಿಂದ ವಿಂಗಡಿಸಿ, ನೀರನ್ನು ಬಿಟ್ಟು, ಬರಿಯ ಹಾಲನ್ನೇ ಗ್ರಹಣ ಮಾಡುವದು ಜನಪ್ರಸಿದ್ಧವಿದ್ದಂತೆ, ರಾಜಶ್ರೇಷ್ಠರಾದ ರಾ.ಬ॥ರುದ್ರಗೌಡ ಕಲೆಕ್ಟರ ಸಾಹೇಬರವರು ತಮ್ಮ ನಿಜಸ್ಥಾನದ ನ್ಯಾಯನಿರ್ಣಯದಲ್ಲಿ ಸ್ವಾಭಾವಿಕವಾದ ಜಾಣ್ಮೆಯಿಂದ ಸತ್ಯಾಂಶವನ್ನೇ ಹೊರಗೆಡವಿ ಅಸತ್ಯವನ್ನು ಆಕ್ಷಣವೇ ಆಮೂಲ ನಾಶಮಾಡುವರು. ಇದು ಸತ್ಯಾವಲಂಬಿಗಳಿಗೆ ಸ್ವಾಭಾವಿಕವಾದ ಧರ್ಮವೇ ಸರಿ.

ಭಾಮಿನೀ ಷಟ್ಪದಿ

ವೀರಶೈವ ಸಮಾಜದವರಿಗೆ। ಸೂರ್ಯಚಂದಿರರಂತೆ ತೋರಿದ ।
ಚಾರುಮತಿ ಗಿಲಗಿಂಚಿ ಗುರುಸಿದ್ಧಪ್ಪ ಶ್ರೀ ಚೆನ್ನ ॥
ವೀರಗೌಡವರೇಣ್ಯರಾತ್ಮಜ। ಸಾರ ಗಹನ ವಿಚಾರ ಧೀರೋ-
ದಾರಮತಿ ಶ್ರೀ ರುದ್ರಗೌಡರು ನಾಡ ಬೆಳಗಿದರು ॥೧೯॥

ಭಾವಾರ್ಥ: ಕೈಲಾಸವಾಸಿ ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪನವರೂ, ಸುಪ್ರಸಿದ್ಧ ಮನೆತನದ ಶ್ರೀಮಚ್ಚೆನ್ನವೀರಗೌಡರ ಪುಣ್ಯಾತ್ಮಜರಾದ ರಾ.ಬ॥ರುದ್ರಗೌಡ ದೊರೆಗಳೂ ಸಮಸ್ತ ವೀರಶೈವಸಮಾಜಕ್ಕೆ ಸೂರ್ಯಚಂದ್ರರಂತೆ ಪ್ರಕಾಶಮಾನರಾಗಿ ದೇಶದಲ್ಲಿ ಪ್ರಸಿದ್ಧಿಯನ್ನು ಹೊಂದಿದರು.

ಭಾಮಿನೀ ಷಟ್ಪದಿ

ಲಿಂಗವಂತರ ಫಂಡು ಕೂಡಿಸಿ। ಲಿಂಗವಂತ ಜನಾಂಗದವರಿಗೆ ।
ಆಂಗ್ಲವಿದ್ಯಾಸಂಗ್ರಹಕೆ ಸನ್ಮಾರ್ಗವಂಗೈದು ॥
ಕಂಗೆಡುವ ಕರ್ನಾಟಕಸ್ಥಿತ। ಲಿಂಗವಂತರ ಸಂಘವಂ ಮಿಗೆ ।
ಕಂಗೊಳಿಪ ತೆರದಲ್ಲಿ ತಂದರತೀವ ತೀವ್ರದಲಿ ॥೨೦॥

ಭಾವಾರ್ಥ: ಈ ಉಭಯ ಮಹಾನುಭಾವರು ನಮ್ಮ ಲಿಂಗಾಯತ ಜನಾಂಗದವರಿಗೆ ಇಂಗ್ಲೀಷ ವಿದ್ಯೆಯನ್ನು ಕಲಿಯಲಿಕ್ಕೆ ಸುಲಭಮಾರ್ಗವಾಗಬೇಕೆಂದು ವಿಶ್ವಪ್ರಯತ್ನಮಾಡಿ "ಲಿಂಗಾಯತ ಫಂಡು" ಕೂಡಿಸಿ, ಕಂಗಾಲ ಸ್ಥಿತಿಯಲ್ಲಿದ್ದ ಕರ್ನಾಟಕದ ಲಿಂಗಾಯತರನ್ನು ಅತಿಬೇಗದಿಂದ ಉಚ್ಚಸ್ಥಿತಿಗೆ ತಂದರು.

ಕಂದ

ಜಂಗಮರ ಸಂಘಮಂ ವರ। ಗಂಗಾಧರರೂಪವೆಂದು ನಯಭಯದಿಂದಂ॥
ಲಿಂಗಾಂಗಧರ್ಮಭಾವದಿ।ತುಂಗೋನ್ನತ ಭಕ್ತಿಯಿಂದ ಪೂಜಿಪರಲ್ತೇ ॥೨೧॥

ಭಾವಾರ್ಥ: ಸ್ವಧರ್ಮಾಭಿಮಾನಿಗಳಾದ ರಾ.ಬ॥ರುದ್ರಗೌಡ ಸಾಹೇಬರವರು ಜಂಗಮರನ್ನು ಪ್ರತ್ಯಕ್ಷ ಪರಶಿವಮೂರ್ತಿಯೆಂದೇ ಪರಿಭಾವಿಸಿ, ಅವರನ್ನು ನಯಭಯಭಕ್ತಿಯಿಂದ ಸದಾವಕಾಲದಲ್ಲಿಯೂ ವಿಧ್ಯುಕ್ತವಾಗಿ ಅರ್ಚಿಸುವರು.

ಭಾಮಿನಿಷಟ್ಪದಿ

ದೊರೆ ಕಲೆಕ್ಟರ ರುದ್ರಗೌಡರ।ವರ ವಿಚಾರ ತುರಂಗ ವೇಗದ ।
ಖುರ ಪುಟಸ್ವನಮಖಿಳ ಜನರಾಶ್ಚರ್ಯ ಪಡುವಂತೆ ॥
ಭರತಖಂಡದೊಳೆಲ್ಲಿಯುಂ ಬಧಿ।ರರಿಗೆ ಸಹಿತಂ ಕೇಳ ಬಪ್ಪುದು।
ಭರಿತ ತತ್ಪ್ರತಿರವವು ಪರದೇಶಕ್ಕೆ ಕೇಳುವದು ॥೨೨॥

ಭಾವಾರ್ಥ: ರಾ.ಬ॥ರುದ್ರಗೌಡ ಸಾಹೇಬರವರ ಘನವಿಚಾರವೆಂಬ ಮಹತ್ವವಾದ ಕುದುರೆಯ ಓಟದಲ್ಲಿ ಖುರಪುಟದ ಹೊಡತದಿಂದುಂಟಾದ ಸಪ್ಪಳವು ಸರ್ವಜನರು ಬೆರಗಾಗುವಂತೆ ನಮ್ಮೀ ಭರತಖಂಡದ ಎಲ್ಲೆಡೆಯಲ್ಲಿಯೂ ಕಿವುಡರಿಗೆ ಸಹ ಕೇಳುತ್ತಿರುವದು. ಮತ್ತು ಅದರ ಪ್ರತಿಧ್ವನಿಯು ವಿಲಾಯತಿಯೇ ಮೊದಲಾದ ಪರದೇಶಕ್ಕೆ ಕೇಳಿಸುತ್ತಿರುವದು. ಸಾರಾಂಶ, ಇವರ ಅಸಾಧಾರಣ ವಿಚಾರದ ಕಾರ್ಯಗಳು ಸರ್ವಜನರನ್ನು ಚಕಿತರನ್ನಾಗಿ ಮಾಡುತ್ತವೆ.

ಕಂದ

ಬಡವರಿಗೆ ತಾನೆ ಭಾಗ್ಯಂ।ನಡೆದೈತಂದಂತೆ ರುದ್ರಗೌಡರ ಬರವು ॥
ನಡೆ ನಾಡ ಜನರಿಗಾದುದು। ಬಡಮಂದಿಯ ಹರಕೆ ಕಯ್ಯಗೂಡ್ದುದು ನಿಜದಿಂ ॥೨೩॥

ಭಾವಾರ್ಥ: ಬಡವರಿಗೆ ಭಾಗ್ಯವು ತಾನಾಗಿ ನಡೆದು ಬಂದಂತೆ, ಬಡಜನರಿಗೆ ಆಧಾರವಾಗಿರುವ ರಾ.ಬ॥ರುದ್ರಗೌಡ ಸಾಹೇಬರವರ ಆಳಿಕೆಯಿಂದ ನಾಡಜನರೆಲ್ಲರೂ ಸಂತಸಗಡಲಿನಲ್ಲಿ ಮುಳುಗಿದಂತಾಯಿತು.

ಕಂದ

ಎಲ್ಲರ ಬಾಯೊಳಗಿರುವರ್। ಎಲ್ಲರ್ ಸಂತಸದಿ ಹರಸಿ ಕೊಂಡಾಡುತಿಹರ್॥
ಎಲ್ಲರ ಗೊತ್ತಿನೊಳಿರುವರ್। ಎಲ್ಲರಿಗುಂ ಬೆಲ್ಲದಂತೆಯಿರ್ಪರ್ ದೊರೆಗಳ್ ॥೨೪॥

ಭಾವಾರ್ಥ: ರಾ.ಬ॥ರುದ್ರಗೌಡರು ಎಲ್ಲ ಜನರಿಗೂ ಬೆಲ್ಲದ ಹೇರಿನಂತೆ ಬೇಕಾಗಿರುವದರಿಂದ ಸುಪ್ರಸಿದ್ಧರಾದ ಇವರನ್ನು ಎಲ್ಲರೂ ಹಾಡಿ ಹರಿಸುತ್ತಿರುವರು.

ಚಂಪಕಮಾಲಾ ವೃತ್ತ

ಪರಹಿತ ಚಿಂತನಾತ್ಮ ತವವಂಶ ಲತಾಂಕುರಮೇಳ್ದು ಸತ್ವರಂ।
ಸುರುಚಿರ ಪತ್ರಪುಷ್ಪಫಲ ಭಾರದಿ ತೂಗುತ ಪೃಥ್ವಿಮಂಟಪಾಂ ॥
ತರದೊಳು ಪೂರ್ಣ ಪರ್ಬುಗೆ ಯಶೋರ್ಣವಮುರ್ಕುಗೆ ಸರ್ವಸಂಭ್ರಮಂ।
ನಿರುತದೆ ತೂಗೆಯಾ ಯುವತಿ ವರ್ಧಿಕೆ ಸಂತತ ಸೌಖ್ಯವೆರ್ಚುಗೆ ॥೨೫॥

ಭಾವಾರ್ಥ: ಪರಹಿತ ಚಿಂತಕರಾದ ತಮ್ಮ ವಂಶವೆಂಬ ಬಳ್ಳಿಯ ಮೊಳಿಕೆಯು ಒಳ್ಳೇ ಭರದಿಂದೆದ್ದು ರಸವತ್ತಾದ ಪತ್ರಗಳಿಂದಲೂ, ಪ್ರಫುಲ್ಲಿತವಾದ ಪುಷ್ಪನಿಕರದಿಂದಲೂ, ಸುರುಚಿರವಾದ ಫಲಸಮೂಹದಿಂದಲೂ

ಭಾರವಾಗಿ ತೂಗುತ್ತ, ಪೃಥ್ವಿಯೆಂಬ ಮಂಟಪದ ಮೇಲೆಲ್ಲ ಹಬ್ಬುತ್ತ ಹೋಗಲಿ. ಮತ್ತು ತಮ್ಮ ಯಶಃ ಸಮುದ್ರಕ್ಕೆ ಉಕ್ಕು ಬರಲಿ. ಸಕಲೈಶ್ವರ್ಯ ಸಂಭ್ರಮವು ಯಾವಾಗಲೂ ತಮ್ಮ ಎದುರಿನಲ್ಲಿ ತೂಗುತ್ತಿರಲಿ. ಆರೋಗ್ಯವು ಹೆಚ್ಚಾಗಲಿ. ಆಯುಷ್ಯವು ಅಭಿವರ್ಧಿಸಲಿ. ಸಾರಾಂಶ, ಸದಾಕಾಲದಲ್ಲಿಯೂ ಸದಾಶಿವನು ಸುಖಶಾಂತಿಗಳನ್ನೀಯಲಿ.

ಭಾಮಿನೀ ಷಟ್ಪದಿ

ಮೆರೆಯುವಷ್ಟಾದಶ ಪುರಾಣದ ।ಸುರಸ ಸಾರಂ ನುಡಿಯೆರಡರಿಂ।
ಹೊರಡುವಂದದಿ ರುದ್ರಗೌಡರ ಹೃದಯ ಭಾವಾರ್ಥಂ॥
ಹೊರಡುವದು ನನ್ನಲ್ಪಮತಿಯಿಂ। ಬರೆದ ಕವಿತೆಗಳಿಂದ ಬುಧಜನ।
ರರಿವುದೈ ಸಂತೋಷ ಮಾನಸ ದಿವ್ಯದೃಷ್ಟಿಯಲಿ ॥೨೬॥

ಭಾವಾರ್ಥ: "ಪರೋಪಕಾರಾಯ ಪುಣ್ಯಾಯ ಪಾಪಾಯ ಪರಪೀಡನಂ" ಈ ಎರಡೇ ನುಡಿಗಳಿಂದ ಪೂಜ್ಯವಾದ ಅಷ್ಟಾದಶ ಪುರಾಣಗಳ ಸಾರಾಂಶವೆಲ್ಲ ಹೊರಡುವಂತೆ ನನ್ನ ಅಲ್ಪಮತಿಯಿಂದ ರಚಿಸಲ್ಪಟ್ಟ ಈ ಕವಿತೆಗಳಿಂದ ರಾ.ಬ॥ರುದ್ರಗೌಡರ ಚರಿತ್ರವೆಲ್ಲ ಸಹಜವಾಗಿ ತಿಳಿಯುವದು. ಈ ಪದ್ಯ ತಾರಾವಳಿಯನ್ನು ಪ್ರಾಜ್ಞರು ಸಂತೋಷಮಾನಸದಿಂದಲೂ ದಿವ್ಯದೃಷ್ಟಿಯಿಂದಲೂ ನೋಡಿ ತಿಳಿದುಕೊಳ್ಳಬಹುದು.

ಕಂದ

ನೀರಕ್ಷಿರನ್ಯಾಯದಿ।ತಾರಾವಳಿ ಪದ್ಯಗಳನು ನೋಳ್ಪುದು ವಿಬುಧರ್॥
ಸೂರಿಗಳೆನ್ನಯ ದೋಷವ।ತೋರುವದೈ ಪ್ರೇಮಪೂರ್ಣ ಸನ್ಮನದಿಂದಂ ॥೨೭॥

ಭಾವಾರ್ಥ: ಜಾಣರು ಈ ಪದ್ಯ ತಾರಾವಳಿಯೆಂಬ ಹೆಸರಿನ ೨೭ ಪದ್ಯಗಳನ್ನು ನೀರಕ್ಷೀರ ನ್ಯಾಯದಿಂದ ದೃಷ್ಟಿಸಿ, ಗುಣಾಂಶವನ್ನೇ ಗ್ರಹಣಮಾಡಬೇಕು. ಮತ್ತು ಈ ತಾರಾವಳಿಯೊಳಗಿನ ಕವಿತೆಗಳಲ್ಲಿ ಕಂಡುಬಂದ ದೋಷಗಳನ್ನು ತಿಳಿಸಬೇಕೆಂದು ವಿನಯದಿಂದ ಬೇಡಿಕೊಳ್ಳುತ್ತೇನೆ.

ಈ ಪ್ರಕಾರ ಸಜ್ಜನ ಸಮಂಜಸವಾಗಿ ಬಣ್ಣಿಸಿಕೊಳ್ಳತಕ್ಕ ರಾ.ಬ॥ರುದ್ರಗೌಡರಂಥ ಮಹಾಪುರುಷರು ನಿಜವಾಗಿ ಪುಣ್ಯವಂತರೇ ಸರಿ.

❖❖

೧೨ನೇ ಭಾಗ

ಚಚಡೀ ದೇಸಗತಿಯ ಸ್ಥಿತಿಗತಿ

ಪುಣ್ಯವಂತರ ಕೃತ್ಯಗಳು ನಿಜವಾಗಿ ಪುಣ್ಯಮಯವಾಗಿಯೇ ಇರುತ್ತವೆ. ಭಾಗ್ಯಶಾಲಿಗಳು ಹಿಡಿದ ಮಣ್ಣೇ ಹೊನ್ನಾಗುತ್ತದೆ. ಸರಳ ಭಾವದಿಂದ ಮಾಡಿದ ಅವರ ಸತ್ಕಾರ್ಯಗಳು ಸಫಲವಾಗುತ್ತವೆ. ಅವರಿಗೆ ಪ್ರತಿಕೂಲವಾಗಿದ್ದ ಸಾಧನಗಳು ಸಾನುಕೂಲವಾಗುತ್ತವೆ. ವಿರೋಧಿಗಳು ಸ್ನೇಹಿತರಾಗುತ್ತಾರೆ. ದೌರ್ಜನ್ಯದ ಗಾಳಿಯು ಅವರನ್ನು ಸೋಂಕುವದಿಲ್ಲ. ಅವರ ಮೇಲೆ ಬಂದ ಬಿಸಿಲು ಬೆಳದಿಂಗಳಾಗುತ್ತದೆ. ಒಳ್ಳೆಡೆಯಿಂದ ನಡೆದವನು ಕೆಡಕು ಪರಿಣಾಮ ಹೊಂದಿದ್ದನ್ನು ಇದುವರೆಗೆ ಯಾರೂ ಕೇಳಿಲ್ಲ. ಒಂದೊಂದು ವೇಳೆ ದೈವದುರ್ವಿಪಾಕದಿಂದ ಧಾರ್ಮಿಕನಿಗೆ ತೊಂದರೆಯೂ, ಅಧಾರ್ಮಿಕನಿಗೆ ಸೌಖ್ಯವೂ ಉಂಟಾಗುತ್ತಿರಬಹುದು. ಆದರೆ ಧರ್ಮಾಧರ್ಮಗಳ ಫಲವು ಪರಿಣಾಮಾಂತ್ಯದಲ್ಲಿ ಚೆನ್ನಾಗಿ ತಿಳಿಯುವದು. ಮಹಾತ್ಮರಿಗೆ ಬರುವ ವಿಪತ್ತುಗಳು ಜಗತ್ತಿಗೆ ಅವರ ಮಹತ್ವವನ್ನೇ ತೋರಿಸುತ್ತವಲ್ಲದೆ ಅವರಿಗೆ ದುಃಖವನ್ನುಂಟು ಮಾಡುವದಿಲ್ಲ.

ಈ ಬಗೆಯ ಪುಣ್ಯಾತ್ಮರಾದ ರಾ.ಬ॥ರುದ್ರಗೌಡರು ಹಿಂದೆ ಹೇಳಿದಂತೆ ಉತ್ತರೋತ್ತರವಾಗಿ ಅಭಿವೃದ್ಧಿಯನ್ನೇ ಪಡೆಯುತ್ತ, ಚಿತ್ತಶುದ್ಧರಾಗಿ ಉತ್ತಮವಾದ ಪದ್ಧತಿಯಿಂದ ರಾಜ್ಯಭಾರ ಮಾಡುತ್ತಿರಲು, ತಮ್ಮ ಪ್ರಿಯ ಕುಮಾರಿಯವರಾದ ರುದ್ರವ್ವನವರು ಲಗ್ನವಯಸ್ಕರಾಗಲು ಇವರನ್ನು ಯೋಗ್ಯಸ್ಥಾನದ ಯೋಗ್ಯವರನಿಗೆ ಕೊಟ್ಟು ಲಗ್ನಸಮಾರಂಭವನ್ನು ಬೆಳೆಸಬೇಕೆಂದು ಯೋಚಿಸುತ್ತಿದ್ದರು. ರುದ್ರವ್ವನವರು ಜನ್ಮಭಾಷೆಯ ಅಭ್ಯಾಸವನ್ನು ಮುಗಿಸಿ, ಮರಾಠಿ ೫ ಇಯತ್ತೆಗಳ ವರೆಗೆ ಕಲಿತರು. ವಿದ್ಯಾವತಿಯರೂ, ಸುಶೀಲೆಯರೂ ಸುಕುಮಾರಿಯರೂ ಆದ ಸೌಭಾಗ್ಯಾಕಾಂಕ್ಷಿಣಿ ರುದ್ರವ್ವನವರನ್ನು ಧಾರವಾಡ ಜಿಲ್ಲಾ ಹಂದಿಗಿನೂರ ದೇಸಾಯರೂ, ಬೆಳಗಾವಿ ಜಿಲ್ಲಾ ತಲ್ಲೂರ ದೇಸಾಯರ ತಮ್ಮ ದೇಸಗತಿಗಳ ಅರಮನೆಗೆ ಕೊಡಬೇಕೆಂದು ರುದ್ರಭೂಪಾಲರನ್ನು ಕೇಳಿದರು. ಅದಕ್ಕೆ ಇವರು ವಿಚಾರಮಾಡಿ ಹೇಳುತ್ತೇವೆಂದು ಉತ್ತರಕೊಟ್ಟರು. ಆದರೆ ಇವರು ತಮ್ಮ ರಾಜೋದ್ಯೋಗದ ಸಂಚಾರದಲ್ಲಿ ಸುಪ್ರಸಿದ್ಧ ದೇಸಗತಿಸ್ಥಾನವಾದ ಸವದತ್ತಿ ತಾಲೂಕ ಚಚಡಿ ಗ್ರಾಮದಲ್ಲಿ ಮುಕ್ಕಾಮ ಮಾಡಿರಲು, ಸ್ವಾರ್ಥಸಾಧಕರಾದ ಕಾರಭಾರಿಗಳಿಂದಲೂ, ಅಜ್ಞಾನಿಗಳಾದ ಬಂಧುಗಳ ಮನಸ್ತಾಪದಿಂದಲೂ, ಚಚಡಿಯ ದೇಸಗತಿಯು ಜೀರ್ಣಾವಸ್ಥೆಯಲ್ಲಿ ಇದ್ದದ್ದನ್ನು ನೋಡಿ ವ್ಯಸನಪಟ್ಟರು. ಈ ದೇಸಗತಿಯು ಪೂರ್ವದಿಂದಲೂ ಪ್ರಸಿದ್ಧವಾದದ್ದು. ಹಿಂದೆ ನಮ್ಮ ಕರ್ನಾಟಕ ಭೂಮಿಗೊಡೆಯರಾಗಿದ್ದ

ವಿಜಾಪೂರದ ಆದಿಲ್‌ಶಾಹಿಗಳ ಆಳಿಕೆಯಲ್ಲಿ ಈ ದೇಸಗತಿಯ ಮೂಲಪುರುಷನು ಯಾವದೋ ಒಂದು ಕಾರ್ಯವಿಶೇಷದಲ್ಲಿ ಶೌರ್ಯವನ್ನು ತೋರಿಸಿದ್ದರಿಂದ ಈ ದೇಸಗತಿಯು ಆ ಮಹಮ್ಮದೀಯರಿಂದ ಇನಾಮಾಗಿ ಸಿಕ್ಕಿರುವದಂತೆ. ಮುಂದೆ ಒಂದು ಉಗ್ರವಾದ ವ್ಯಾಘ್ರದ ಉಪಟಳವು ಪ್ರಬಲವಾಗಿರಲು ಈ ದೇಸಾಯರು ಆ ಹುಲಿಯನ್ನು ಕೊಂದದ್ದರಿಂದ ಈ ದೇಸಗತಿಯ ಮನೆತನದವರಿಗೆ "ಕರೇ ಹುಲಿಯ ಭಲೇ ರಾಯರು" ಎಂಬ ಬಿರುದೂ, ಇವರು ಶೌರ್ಯೌದಾರ್ಯ ಗಾಂಭೀರ್ಯ ಧುರಂಧರರಾದ್ದರಿಂದ "ನಾಯಕ ಬಹದ್ದೂರ ದೇಸಾಯಿ" ಎಂಬ ಪದವಿಯೂ ದೊರೆತಿರುವವು. ಈ ದೇಸಗತಿಯು ಸಾಮಾನ್ಯವಾದದ್ದಲ್ಲ. ಬಲಾಢ್ಯವಾದ ದೇಸಗತಿಯ ವೃತ್ತಿಯೂ, ಉತ್ಪನ್ನವೂ ಬಹು ಚೆನ್ನಾಗಿಯುಳ್ಳದು. ಆರಂಭದಲ್ಲಿ ಅಜಮಾಸು ಅಯ್ವತ್ತು ಸಾವಿರದ ಆದಾಯವಿತ್ತಂತೆ. ತಲ್ಲೂರ, ಇಂಗಳಿಗಿ, ರುದ್ರಾಪುರ, ಮುತವಾಡ ಈ ದೇಶಗತಿಗಳು ಚಚಡೀ ದೇಸಗತಿಯ ಅಣ್ಣತಮ್ಮಿಕೆಯ ಸಂಬಂಧವಾದವುಗಳು. ಈ ಚಚಡೀ ದೇಸಗತಿಯ ಶರೀರ ಸಂಬಂಧವು ಮೈಸೂರ ಇಲಾಖಾ ಕೊಡಗದ ಅರಸುಮನೆತನದವರ ಕೂಡಲೂ, ಕಿತ್ತೂರ, ಹಂದಿಗನೂರ, ಬುಗಡೀಕಟ್ಟಿ, ಬಡಗಾವ ಮುಂತಾದ ಪ್ರಸಿದ್ಧ ದೇಸಗತಿಗಳ ಸಂಗಡಲೂ ಆಗಿ ಹೋಗಿದೆ. ಇತಿಹಾಸ ಪ್ರಸಿದ್ಧವಾದ ಕಿತ್ತೂರ ಸಂಸ್ಥಾನದ ಮಲ್ಲಸರ್ಜ ದೇಸಾಯರ ರಾಣಿಗಳ ಸಂಗಡಲೂ ಆಗಿಹೋಗಿದೆ. ಇತಿಹಾಸ ಪ್ರಸಿದ್ಧವಾದ ಕಿತ್ತೂರ ಸಂಸ್ಥಾನದ ಮಲ್ಲಸರ್ಜ ದೇಸಾಯರ ರಾಣಿಯವರಾದ ಅವ್ವ ರುದ್ರವ್ವನವರು[೧] ತಲ್ಲೂರ ದೇಸಗತಿಯ ಹೆಣ್ಣುಮಕ್ಕಳು.

ಚಚಡೀ ದೇಸಗತಿಯ ದೇಸಾಯರು ವೀರಶೈವಮತದ ನಿಜತತ್ವಗಳನ್ನರಿದು ಮತೈಕ್ಯನಿಷ್ಠರೂ, ಶಿವಪೂಜಾಕ್ರಿಯೆಯಲ್ಲಿ ಆಸಕ್ತರೂ, ವ್ರತನಿಯಮಗಳಲ್ಲಿ ತತ್ಪರರೂ, ದೇವಜಂಗಮಪೂಜಕರೂ, ಹರಗುರುಭಕ್ತಪರಾಯಣರೂ ಆದದರಿಂದ ಇದು ಶರಣ ದೇಸಗತಿಯೆಂದೆನ್ನಬಹುದು. ಮೊದಲು ಈ ದೇಸಗತಿಗೆ ಸುಮಾರು ಅರ್ಧಲಕ್ಷದ ಆದಾಯವಿದ್ದು ಇದರ ವೈಭವವೂ, ಐಸಿರಿಯೂ ಬಹಳೇ ಇತ್ತು. ಇತ್ತಿತ್ತಲಾಗಿ ನುಗ್ಗಾನಹಟ್ಟಿಯ ಬಾಬಾ ಎಂಬವನೊಬ್ಬ ಬ್ರಾಹ್ಮಣಕಾರಭಾರಿಯ ದುರ್ವರ್ತನದಿಂದಲೂ, ಅವನ ಸ್ವಾರ್ಥಪರಾಯಣತೆಯಿಂದಲೂ, ದೇಸಗತಿಯ ವತನ ವೃತ್ತಿಯೆಲ್ಲ ಸಾವಕಾರರ ಪಾಲಾಗಿತ್ತು. ಮುಗ್ಧಸ್ವಭಾವದವರೂ, ಸತ್ಯನಿಷ್ಠೆಯುಳ್ಳವರೂ ಆದ ಶ್ರೀಮಂತ ನಾಯಕ ಬಹದ್ದೂರ ದೇಸಾಯರು ತಮ್ಮಂತೆಯೇ ಜಗತ್ಯವೆಂದು ನಂಬಿ, ಬಾಬಾ ಕಾರಭಾರಿಯ ಕಡೆಗೇ ಸರ್ವಕಾರ್ಯಗಳನ್ನು ವಹಿಸಿದ್ದರು. ಕಯ್ಯಲ್ಲಿ ಸಿಕ್ಕ ಕಾರಭಾರದಿಂದ ಪೇಶ್ವೆಯರು ಬಲಾಢ್ಯ ಮಹಾರಾಷ್ಟ್ರರನ್ನು ಮೂಲೆಗೊತ್ತಿ ಅವರನ್ನು ನಾಮಧಾರಿಗಳಾದ ಅರಸರನ್ನಾಗಿ ಮಾಡಿ, ತಾವೇ ರಾಜರಂತೆ ನಟಿಸಿ ಪೇಶವೇ ಸರಕಾರವೆಂದು ಇತಿಹಾಸ ಪ್ರಸಿದ್ಧರಾದಂತೆ, ಈ ಬಾಬಾ ಕಾರಭಾರಿಯು ಶ್ರೀಮಂತರನ್ನು ಹೆಸರಿಗೆ ಮಾತ್ರ ದೇಸಾಯರಿದ್ದಂತೆ ಮಾಡಿ, ತಾನು ಮುತಾಲಿಕ ದೇಸಾಯಿಯೆಂಬ ನಾಮಾಂಕಿತದಿಂದ ಮೆರೆದಾಡಿ ದೇಸಗತಿಯನ್ನೆಲ್ಲ ಹೀನಾವಸ್ಥೆಯಲ್ಲಿ ತಂದು ಬಿಟ್ಟಿದ್ದನು. ದೇಸಾಯಿಯವರನ್ನು ವಂಚಿಸಿ ಕಾರಭಾರಿಯು ತನ್ನ ಉಂಬಳಿಗಾಗಿ ಅಯ್ದುನೂರಾ ಇಪ್ಪತ್ತೈದು (೫೨೫) ಎಕರೆ ಸಾಗುವಳಿಯಿದ್ದ ಉತ್ತಮ ಎರೆಭೂಮಿಯನ್ನು ದೇಸಾಯರಿಂದ ಸಂಪಾದಿಸಿ ರಾಜಮಂದಿರದಂಥ ತಮಗಾಗಿ ಒಂದು ಮನೆಯನ್ನು ಕಟ್ಟಿಸಿದನು. ದೇಸಗತಿಯ ಸೀಮೆಯೊಳಗಿದ್ದ ಶ್ರೀಗಂಧದ ಗಿಡಗಳನ್ನೆಲ್ಲ ಕಡಿಸಿ ತಮ್ಮ ದೇವರ ಮನೆಯನ್ನೆಲ್ಲ ಗಂಧದ ಕಟ್ಟಿಗೆಯಿಂದಲೇ ಕಟ್ಟಿಸಿದನು. ಮತ್ತು ತನ್ನ ಅಂದಾದುಂದಿಯ ಕಾರಭಾರದಲ್ಲಿ ಅರಾಜಕಸ್ಥಿತಿಗೆ ಬಂದಿರುವ ರಾಜವಾಡೆಯ ಮುಂದೆ ಶೋಭಾಯಮಾನವಾಗಿರುವ ಅಶ್ವಶಾಲೆಯನ್ನು ಕೆಡವಿ

---

೧. ಅವ್ವ ರುದ್ರವ್ವನವರ ಸಮಾಧಿಯು ಸಂಪಗಾವ ತಾಲೂಕ ಸಂಗೊಳ್ಳಿ ಗ್ರಾಮದ ಹತ್ತಿರ ಮಲಪ್ರಭಾ ನದಿಯು ತೀರದಲ್ಲಿ ಆಗಿರುತ್ತದೆ. ಅದರ ಮೇಲೆ ಒಂದು ಕಲ್ಲಿನ ಗುಡಿಯನ್ನು ಕಟ್ಟಿದ್ದು ಅದಕ್ಕೆ ಜನರು ನಡೆದುಕೊಳ್ಳುತ್ತಾರೆ.

ತನ್ನ ಮನೆಯನ್ನು ಚಿತ್ರವಿಚಿತ್ರವಾಗಿ ಸಿಂಗರಿಸಿದನು. ಅಲ್ಪನಿಗೆ ಐಸಿರಿ ಬಂದರೆ ಅರ್ಧರಾತ್ರಿಯಲ್ಲಿ ಕೊಡೆಹಿಡಿಸಿಕೊಂಡನೆಂಬಂತೆ ತನ್ನ ಅವಿವೇಕತನದ ಕಾರಭಾರದ ಧುರಂಧರತೆಯಲ್ಲಿ ಏನು ಮಾಡಬೇಕಾದುದನ್ನು ಇವನು ಮಾಡಿಯೇ ಬಿಟ್ಟಿದ್ದನು. ಜನರಲ್ಲಿ ಕಲಹಗಳನ್ನು ಬೆಳಿಸಿ, ಬಡವರನ್ನು ಗೋಳು ಗೋಳು ಮಾಡಿ, ಬಹಳ ಹಣವನ್ನು ಸಂಪಾದಿಸಿದನು. ಈ ಬಾಬಾ ಕಾರಭಾರಿಯ ದುರ್ವರ್ತನೆಯನ್ನೂ, ಅಕ್ರಮವಾದ ದುಂದುಗಾರಿಕೆಯನ್ನೂ ನೋಡಿ ಪ್ರಜಾಕ್ಷೋಭವು ಹೆಚ್ಚಿ, ಈತನ ಮೇಲೆ ಒಮ್ಮೆ ಒಂದು ಗುಂಡು ಹಾರಿತು. ದೈವಯೋಗದಿಂದ ಆ ಗುಂಡು ಅವನಿಗೆ ತಾಕಲಿಲ್ಲ. ಮತ್ತೊಮ್ಮೆ ಜನರು ಇವನನ್ನು ಹೊಡೆದು ಬಡೆದು ಹಣ್ಣುಗಾಯ, ನೀರುಗಾಯ ಮಾಡಿದ್ದರು. ಈ ಪರಿ ಕಾರಭಾರಿಯನ್ನು ಬಡಿದ ಸುದ್ದಿಯು ಶಿವಪೂಜೆಗೆ ಕೂತಿದ್ದ ಶ್ರೀಮಂತ ವೀರಭದ್ರಪ್ಪ ನಾಯಕ ಬಹದ್ದೂರ ದೇಸಾಯಿಯವರಿಗೆ ತಿಳಿದಾಕ್ಷಣವೇ ತೀವ್ರವೇ ಪೂಜೆಯನ್ನು ಮುಗಿಸಿ, ಊಟ ಮಾಡದಲೆ ಕೊತ್ತಳವನ್ನೇರಿ ನೋಡಿ, ಮೇಣೆಯನ್ನು ಕೊಟ್ಟು ಕಳಿಸಿ ಅವರನ್ನು ವಾಡೆಗೆ ತರಿಸಿಕೊಂಡು ತೊಳಿಸಿ, ಗಾಯಗಳನ್ನು ಹೊಲಿಸಿ, ಔಷಧ ಕೊಡಿಸಿ ಪಥ್ಯದ ಸಲುವಾಗಿ ಎರಡು ಚೀಲ ಗೋದಿಯನ್ನೂ, ತುಪ್ಪ ಸಕ್ಕರೆಗಳನ್ನೂ ಕೊಟ್ಟು ಆತನನ್ನು ರಕ್ಷಿಸಿದರು.

ದೇಸಾಯಿ ಸಾಹೇಬರ ಗುಣಾತಿಶಯ ಹೊಗಳತಕ್ಕಂಥಾದ್ದು. ಇಂಥ ಸರಳ ಹೃದಯರಾದ ಯಜಮಾನರನ್ನು ವಂಚಿಸಿ ದೇಸಗತಿಯನ್ನೆಲ್ಲ ಗೊತ್ತಿಗೆ ಹಚ್ಚಿ ಧನಿಕನಾಗಿ, ಕಾರಭಾರಿಯು ಪ್ರತಿದೇಸಾಯಿಯಂತೆ ಮೆರದಾಡಿದನು. ಸ್ವಾಮಿದ್ರೋಹಿಗಳಾದ ಕರ್ಮಿಷ್ಠರಿಗೆ ಎಂದಾದರೂ ಸದ್ಗತಿಯಾಗುವದೇ! ಕಡೆಗೆ ಈ ನೀಚ ಕಾರಭಾರಿಯು ಹುಳಬಿದ್ದು ಹೆಂಡರು ಮಕ್ಕಳಿಗೆ ಬೇಸರಾಗಿ ಒದ್ದಾಡಿ ಸತ್ತುಹೋದನು. ಈ ಬಾಬಾ ಕಾರಭಾರಿಯ ಮರಣದಿಂದ ಸುತ್ತ ಹಳ್ಳಿಗಳಿಗೆಲ್ಲ ಸಂತೋಷವೇ ಆಯಿತೆಂದು ಹೇಳಬಹುದು.

ಶ್ರೀಮಂತ ವೀರಭದ್ರಪ್ಪ ದೇಸಾಯಿಯವರ ತರುವಾಯ ಅವರ ಮಕ್ಕಳಾದ ಅಪ್ಪಾಸಾಹೇಬರು. ಅವರ ತರುವಾಯ ಬಾಬಾಸಾಹೇಬರು ಆಳಿದ ಬಳಿಕ ದೇಸಗತಿಯು ಬಹಳೇ ಕೀಳುಸ್ಥಿತಿಗೆ ಬಂದಿತು. ಬಾಬಾಸಾಹೇಬರ ತಮ್ಮಂದಿರಾದ ಶ್ರೀಮಂತ ಗುಣಪ್ಪ ದೇಸಾಯರು ಊರ್ಫ ಆಬಾಸಾಹೇಬರು ಶಿವಶಿವ ಎಂದು ಕಾಲಯಾಪನೆ ಮಾಡುತ್ತಿದ್ದರು. ಶ್ರೀಮಂತ ಗುಣಪ್ಪ ದೇಸಾಯರ ಮಕ್ಕಳಾದ ಶ್ರೀಮಂತ ವೀರಭದ್ರಪ್ಪ ದೇಸಾಯಿ ಊರ್ಫ ಅಂಣ್ಣಾಸಾಹೇಬರೂ, ಬಸವಂತರಾವ ಊರ್ಫ ನಾನಾಸಾಹೇಬರೂ ಈ ಕಾಲಕ್ಕೆ ಚಿಕ್ಕವರಿದ್ದರು. ಅರಸು ಕುಮಾರರಂತೆ ವೈಭವದಲ್ಲಿರುವ ಬದಲಾಗಿ ಚಿಕ್ಕಮಕ್ಕಳು ದೇಸಗತಿಯ ದೀನಸ್ಥಿತಿಯಿಂದ ಬಡವರ ಮಕ್ಕಳಂತೆ ವರ್ತಿಸುತ್ತಿದ್ದರು. ದೇಸಗತಿಯ ದೊಡ್ಡ ದೊಡ್ಡ ವತನೀ ಜಮೀನುಗಳು ಕವಡಿ ಚುಂಬಕರಾದ ಸಾವಕಾರರ ಕಯ್ಯಲ್ಲಿ ನಿರರ್ಥಕವಾಗಿ ಸೇರಿಹೋಗಿದ್ದವು. ಬೇರೆ ಎಷ್ಟೋ ಜಮೀನುಗಳು ಪುಕ್ಕಟೆಯಾಗಿ ಪರರ ಪಾಲಾಗಿದ್ದವು. ದೇಸಾಯರ ಜೇಷ್ಠಪುತ್ರರು ೧೫ ವರ್ಷದ ವಯಸ್ಸಿನವರೂ, ಚಿಕ್ಕವರೂ ೧೨ವರ್ಷದ ವಯಸ್ಸಿನವರೂ ಆಗಿದ್ದು, ಇಬ್ಬರೂ ಕನ್ನಡ ಸಾಲೆಗೆ ಹೋಗುತ್ತಿದ್ದರು. ಎಂಥ ಮಹತ್ತಾದ ದೇಸಗತಿಯು ಇಂಥ ಕೀಳುಸ್ಥಿತಿಗೆ ಬಂದಿತೆಂದು ರಾ.ಬ॥ರವರು ನೋಡಿ ಅಸಮಾಧಾನಪಟ್ಟು ಆಲೋಚಿಸಿದ್ದೇನಂದರೆ, "ಈ ಚಚಡೀ ದೇಸಗತಿಯು ಸದ್ಯಕ್ಕೆ ತೀರ ಅಧಃಪಥಕ್ಕೆ ಬಂದಿದೆ. ಹೀಗೆಯೇ ಬಿಟ್ಟರೆ ಸ್ವಲ್ಪ ದಿವಸಗಳಲ್ಲಿ ದೇಸಗತಿಯ ಹೆಸರು ಸಹ ಉಳಿಯುವ ಲಕ್ಷಣ ಕಾಣುವದಿಲ್ಲ. ಕ್ರಮೇಣ ಇದಕ್ಕೂ ಕೀಳುಸ್ಥಿತಿಗೆ ಬರುವದು. ಮೊದಲೇ ವೀರಶೈವ ಸಂಸ್ಥಾನಗಳು ಕಡಿಮೆ. ಇದ್ದವುಗಳಾದರೂ ಇಂಥ ಹೀನಾವಸ್ಥೆಯಲ್ಲಿರುತ್ತವೆ. ಲಿಂಗವಂತರ ದೇಸಗತಿಗಳು ಉನ್ನತಾವಸ್ಥೆಯಲ್ಲಿದ್ದರೆ ವೀರಶೈವ ರಾಷ್ಟ್ರಕ್ಕೇ ಬಹುಭೂಷಣವಾಗಿರುತ್ತದೆ. ನಮ್ಮ ಜನರು ಬಹಳ ದಡ್ಡರು. ವಿದ್ಯಾರಹಿತರು. ಯುಕ್ತಿಹೀನರು. ಹೆಚ್ಚಿನದನ್ನು ಗಳಿಸುವದೊತ್ತಟ್ಟಿಗಿರಲಿ. ಹಿರಿಯರು ಗಳಿಸಿದ್ದನ್ನು ಇವರಿಂದ

ಕಾಯ್ದುಕೊಳ್ಳುವುದಾಗುವುದಿಲ್ಲ. ವೀರಶೈವ ರಾಷ್ಟ್ರವೆಂಬ ರಥಕ್ಕೆ ರನ್ನಕಲಶದಂತೆ ಜಾಜ್ವಲ್ಯಮಾನವಾಗಿದ್ದ ಸುಪ್ರಸಿದ್ಧ ಕಿತ್ತೂರಸಂಸ್ಥಾನವನ್ನು ಅದೂರ ದೃಷ್ಟಿಗಳೂ, ಅಜಾಗರೂಕರೂ ಆದ ಅಲ್ಲಿಯ ದೇಸಾಯರು ಕಳಕೊಂಡು ಸದ್ಯಕ್ಕೆ ನಿರ್ನಾಮವಾಗಿ ಹೋದರು. ಇದ್ದ ಸಂಸ್ಥಾನಗಳೂ, ದೇಸಗತಿಗಳೂ ಪರಿಪಕ್ವ ಸ್ಥಿತಿಗೆ ಬರುವದು ಅತ್ಯವಶ್ಯವಾಗಿರುತ್ತದೆ. ಇವು ಸಮಾಜೋನ್ನತಿಗೆ ಬಹು ಬೆಂಬಲವಾಗಿರುತ್ತವೆ. ಬೆಂಬಲವಿದ್ದ ಬಂಟನು ಬೇಕಾದದ್ದನ್ನು ಮಾಡಬಹುದು. ಸಂಸ್ಥಾನಗಳು ಸಮಾಜದ ಸಂಪತ್ತಿಗೆ ಸ್ತಂಭಾಯಮಾನವಾಗಿರುತ್ತವೆ. ಅದರಿಂದ ಸಮಾಜ ಸುಧಾರಣಾ ಕಾರ್ಯಕಾರಣಗಳಲ್ಲಿ ಸಂಸ್ಥಾನಗಳನ್ನು ರಕ್ಷಿಸಿಕೊಳ್ಳುವದೂ, ಅವುಗಳ ಉನ್ನತಿಯ ಏರ್ಪಾಡು ಮಾಡುವದೂ ಮುಖ್ಯವಾಗಿರುವುದು. ಮನೆ-ಮಾರು-ಭೂಮಿ-ಸೀಮೆ ವತನ ವೃತ್ತಿ ಮುಂತಾದ ಯಾವದೊಂದು ಸ್ಥಾವರಾಸ್ತಿಯನ್ನಾಗಲಿ, ಧನಕನಕ ರತ್ನಾಭರಣ ಮುಂತಾದ ಜಂಗಮಾತ್ಮಕ ಒಡಿವೆ ವಸ್ತುಗಳನ್ನಾಗಲೀ ದೊರಕಿಸಲಿಕ್ಕೆ ಆ ಸಂಪಾದಕ ಪುರುಷನು ಎಷ್ಟು ಶ್ರಮಪಡಬೇಕಾಗುತ್ತದೆಂಬದು ಅವನಿಗೇ ಗೊತ್ತು. ಇತರರಿಗೆ ಅದರ ಮಹತ್ವವು ಗೊತ್ತಾಗುವದಿಲ್ಲ. ಇಷ್ಟು ಶ್ರಮಪಟ್ಟು ಸಂಪಾದಿಸಿದ ಜಿಂದಿಗಿಯನ್ನು ಆ ಮಹಾಪುರುಷನ ವಂಶದಲ್ಲಿ ಹುಟ್ಟಿದ ದತ್ತಗೇಡಿಯು ಸ್ವಲ್ಪಾವಧಿಯಲ್ಲಿ ಕಳೆದುಬಿಡುತ್ತಾನೆ. ಬಹು ಹಣವನ್ನು ವೆಚ್ಚಮಾಡಿ ವರ್ಷಾನುವರ್ಷ ಶ್ರಮಪಟ್ಟು ಕಟ್ಟಿದ ಮಂದಿರವನ್ನು ಕೆಡವಿ ನೆಲಸಮ ಮಾಡಲಿಕ್ಕೆ ತಡವಾಗುವದಿಲ್ಲ. ಅನರ್ಘ್ಯವಾದ ರತ್ನವನ್ನು ಒಡೆದು ಅದನ್ನು ಪುಡಿ ಪುಡಿ ಮಾಡಲಿಕ್ಕೆ ಒಂದು ಕ್ಷಣಸಹ ಬೇಕಾಗುವದಿಲ್ಲ. ಆದರೆ ಪುನಃ ಅಂತಹ ಮಂದಿರವನ್ನೂ, ರತ್ನವನ್ನೂ ಉಂಟುಮಾಡುವದು ಮಹತ್ಪ್ರಯಾಸದ ಕೆಲಸವು. ಈ ಚಚಡಿದೇಸಗತಿಯು ಚತುರನೂ, ತಿದ್ದುಪಡಿಯುಳ್ಳವನೂ ಆದ ಯಾವನೊಬ್ಬ ಕರ್ತೃವು ಪ್ರಯತ್ನಿಸಿದರೆ ಇದ್ದದರಲ್ಲಿ ಸ್ವಲ್ಪ ಆಕಾರವನ್ನು ಧರಿಸಬಹುದು. ಆದರೆ ಮಾಡಬೇಕೇನು?" ಎಂದು ಮನದಲ್ಲಿಯೇ ಮರುಗಿದರು.

ಕನ್ಯಾನಿಶ್ಚಯ

ಈ ಕಾಲಕ್ಕೆ ಶ್ರೀಮಂತ ಗುಣಪ್ಪ ದೇಸಾಯರೇ ದೇಸಗತಿಯ ಒಡೆಯರಾಗಿದ್ದರೆಂದು ಹಿಂದೆ ಹೇಳಿರುತ್ತದೆ. ಇವರ ಅತ್ಯಂತ ನಂಬಿಗೆಯವರಾದ ಸಣ್ಣ ತಮ್ಮಪ್ಪಾ ಹುಯಿಲಗೋಳ ಸಾಕೀನ ಗದಗ ಜಿಲ್ಲಾ ಧಾರವಾಡ ಎಂಬ ಸದ್ಗೃಹಸ್ಥರು ರಾ.ಬ॥ರುದ್ರಗೌಡ ಸಾಹೇಬರವರ ಕೃಪಾಕಟಾಕ್ಷದಿಂದ ಬೆಳಗಾವ ಜಿಲ್ಲೆಯ ಸಿಂದಿಯ ಅಂಗಡಿಗಳ ಮಖ್ತೆಮಾಡಿ ಒಳ್ಳೇ ಘನವಂತರಾಗಿದ್ದರು. ಈ ಚಚಡೀ ದೇಸಗತಿಯ ಸೀಮೆಯಲ್ಲಿ ಸಿಂದಿಯ ಗಿಡಗಳು ವಿಶೇಷವಾಗಿದ್ದರಿಂದ ಪ್ರತಿವರ್ಷ ಅವೆಲ್ಲ ಗಿಡಗಳ ಮಖ್ತೆಯನ್ನು ಸಣ್ಣತಮ್ಮಪ್ಪನವರೇ ಮಾಡುತ್ತ ಬಂದಿರುವದರಿಂದ ಇವರಿಗೂ, ದೇಸಾಯರಿಗೂ ಒಳ್ಳೇ ಪರಿಚಯವೂ, ವಿಶ್ವಾಸವೂ ಉಂಟಾಗಿತ್ತು. ಅದರಿಂದ ಇವರೀರ್ವರು ಪರಸ್ಪರ ಹಿತಚಿಂತಕರಾಗಿದ್ದರು. ಈ ಸಣ್ಣತಮ್ಮಪ್ಪನವರು ರಾ.ಬ॥ರುದ್ರಗೌಡ ಸಾಹೇಬರವರ ವಿಶ್ರಾಮದ ವೇಳೆಯಲ್ಲಿ ಆಗಾಗ್ಗೆ ಹೋಗಿ ತಮ್ಮ ವ್ಯಾಪಾರೋದ್ಯೋಗದ ಸಂಭಾಷಣೆಗಳನ್ನು ಮಾಡುತ್ತಿದ್ದರು. ತಮ್ಮ ಘನತೆಗೆ ರಾವಬಹದ್ದೂರವರೇ ಮೂಲಕಾರಣರಾದದರಿಂದ ಅವರ ಕೂಡ ದೈವಿಕಭಾವದಿಂದ ನಡೆದುಕೊಳ್ಳುತ್ತಿದ್ದರು. ಇವರು ಒಳ್ಳೇಯವರಾದದರಿಂದ ರಾವಬಹದ್ದೂರವರಾದರೂ ಇವರ ಮೇಲೆ ವಿಶ್ವಾಸವನ್ನಿಟ್ಟಿದ್ದರು. ಈ ಪ್ರಕಾರ ಇವರೀರ್ವರೂ ಪರಸ್ಪರ ಹಿತಚಿಂತಕರಾಗಿದ್ದರು. ಒಂದು ದಿವಸ ಶ್ರೀಮಂತ ಗುಣಪ್ಪ ದೇಸಾಯರೂ, ಸಣ್ಣತಮ್ಮಪ್ಪನವರೂ ಸಹಜ ಮಾತಾಡುತ್ತ ಕೂತಾಗ್ಗೆ ಚಿಕ್ಕ ದೇಸಾಯರ ಲಗ್ನದ ಪ್ರಸ್ತಾಪವು ಹೊರಟಿತು. ಆಗ ದೇಸಾಯರು ಇವರನ್ನು ಕುರಿತು "ಹುಡುಗರಂತೂ ವಿವಾಹದ ವಯಸ್ಸಿಗೆ ಬಂದಿರುವರು ಖರೆ. ಪರಂತು ಮಾಡುವದೇನು? ಕಯ್ಯಲ್ಲಿ ಕಾಸು ಕೂಡ ಇಲ್ಲದ ಈ ಕಂಗಾಲ ಸ್ಥಿತಿಯಲ್ಲಿ ಲಗ್ನವನ್ನು

ಮಾಡುವ ಬಗೆ ಹೇಗೆ? ಫಲವತ್ತಾದ ದೇಸಗತಿಯ ಭೂಮಿಗಳು ಸಾವಕಾರರ ವಶದಲ್ಲಿರುವವು. ವಾಡೆಯಲ್ಲಿ ದೈನಿಕ ವೆಚ್ಚವು ನಡೆಯುವದು ಬಿಗಿಯಾಗಿ ಹೋಗಿದೆ. ಮರ್ಯಾದೆಯನ್ನು ಕಾಯ್ದುಕೊಂಡು ಪ್ರಪಂಚವನ್ನು ಸಾಗಿಸುವದು ಪರಮ ಪ್ರಯಾಸವಾಗಿದೆ. ಅಂದಮೇಲೆ ಮುಂದಿನ ವಿಚಾರವನ್ನು ನಾನು ಏನು ಹೇಳಲಿ, ಸದ್ಯಕ್ಕೆ ಒಂದು ವೇಳೆ ನಾವು ಲಗ್ನಮಾಡುವದಾದರೆ, ಇಂಥ ವಿಷಮಕಾಲದಲ್ಲಿ ನಮ್ಮ ದೇಸಗತಿಗೆ ಕನ್ಯೆಯನ್ನು ಯಾರು ಕೊಡುವರು? ನಮ್ಮ ಸಂಕಟಗಳು ಒಳಗೆ ಎಷ್ಟೇ ಇರಲಿ, ದೇಸಗತಿಯ ಲಗ್ನವೆಂದಮೇಲೆ ಇದ್ದದರಲ್ಲಿ ಯಾವತ್ತು ರೀತಿಯ ಪ್ರಕಾರ ಮಾಡಲೇಬೇಕಾಗುತ್ತದೆ. ಹೆಚ್ಚಾಗಿ ಸಾಲ ತೆಗೆಯಬೇಕೆಂದರೆ ಬೇರೆ ಆಸ್ತಿಗಳೇನಿಲ್ಲ. ನಾನಾದರೋ ಮುಪ್ಪಿನವನಾದೆನು. ಪುತ್ರರ ಲಗ್ನ ಮಾಡುವದು ಪರಮಧರ್ಮವಾಗಿರುವದು. ಮಾಡುವ ಶಕ್ತಿಯಂತೂ ಎಳ್ಳಷ್ಟಿಲ್ಲ. ದೇವರು ಇಂತಹ ಕಷ್ಟಕಾಲವನ್ನು ತರಬಾರದಿತ್ತು. ಸಕಲ ಸೂತ್ರಗಳಿಗೂ ಅವನೇ ಒಡೆಯನು. ನಮ್ಮ ಆಲೋಚನೆಗಳು ಎಲ್ಲಿಗೆ ಮುಟ್ಟಬೇಕು?ಏನು ಮಾಡುವದನ್ನೆಲ್ಲ ಆ ಪರಮಾತ್ಮನೇ ಮಾಡಲಿ!" ಎಂದು ನಿಟ್ಟುಸುರನ್ನು ಬಿಡಲು, ಸಣ್ಣತಮ್ಮಪ್ಪನವರು ತಮ್ಮ ಮನದಲ್ಲಿ, ಶಿವಶಿವಾ!ದೊಡ್ಡವರಿಗೆ ದೇವರು ವಿಪತ್ತನ್ನು ಎಂದಿಗೂ ತರಬಾರದು. ಯಾಕಂದರೆ ಹೆಂಡರು, ಮಕ್ಕಳು, ಮೊಮ್ಮಕ್ಕಳು, ಅಣ್ಣ ತಮ್ಮ ಅಕ್ಕತಂಗಿಯರು ಅನೇಕಮಂದಿ ಆಪ್ತೇಷ್ಟರು, ಆಶ್ರಿತರು, ಆಳುಮಕ್ಕಳು, ಬೇರೆ ಪರಿವಾರದವರು ಇವರೆಲ್ಲರನ್ನು ಒಡಗೊಂಡು ಸುಖದ ಬಾಳುವೆಗೆ ಯಾವದಕ್ಕೂ ನ್ಯೂನ್ಯತೆಯಿಲ್ಲದೆ, ಮಹಾವೈಭವದಿಂದ ಸಂಸಾರಯಾತ್ರೆಯನ್ನು ಸ್ವಚ್ಛಂದದಿಂದಲೂ ಸಂತೋಷದಿಂದಲೂ, ಸಾಗಿಸುವ ಮಹಾಪುರುಷನಿಗೆ ದುರ್ದೈವದಿಂದ ದರಿದ್ರಾವಸ್ಥೆಯು ಪ್ರಾಪ್ತವಶಯಿತೆಂದರೆ, ಆಗರ್ಭಶ್ರೀಮಂತನ ದಾರಿದ್ರ್ಯ ಬವಣೆಯನ್ನು ಸಹಸ್ರ ಜಿಹ್ವೆಯುಳ್ಳ ಆದಿಶೇಷನೇ ಬಣ್ಣಿಸಬೇಕಲ್ಲದೆ, ಇತರರಿಂದ ಆಗದ ಮಾತು. ಸಕಲ ಸಂಕಟಗಳಲ್ಲಿ ದಾರಿದ್ರ್ಯ ಬವಣೆಯೂ, ದುಷ್ಕಾಲಪೀಡೆಯೂ ಬಹುದುಃಖಕರವಾದವುಗಳು. ದೊಡ್ಡವರ ಕಾರ್ಯಗಳೆಲ್ಲ ದೊಡ್ಡವೇ ಇರುತ್ತವೆ. ಅವುಗಳನ್ನು ಸಂಕೋಚಾವಸ್ಥೆಯಲ್ಲಿ ತರಬೇಕಾದರೆ ಅವರಿಗೆ ಪ್ರಾಣಸಂಕಟವಾದಂತಾಗುತ್ತದೆ. ಜನ್ಮಾರಭ್ಯ ಕಷ್ಟವನ್ನು ಸೋಸದ ಘನವಂತರು ದಾರಿದ್ರ್ಯವೆಂಬ ತಿರುಗಣಿಯ ಮಡುವಿನಲ್ಲಿ ಸಿಕ್ಕು ಕನಸಿನಲ್ಲಿಯೂ ಕೂಡ ಕಾಣದ ಕಷ್ಟವನ್ನು ಪ್ರತ್ಯಕ್ಷವಾಗಿ ಭೋಗಿಸಬೇಕಾಗುತ್ತದೆ. ಅಕಟಕಟಾ! ದೇವರು ದಾರಿದ್ರ್ಯವನ್ನು ವೈರಿಗಳಿಗೂ ಕೂಡ ತರಬಾರದು. ದಾರದ್ರ್ಯಕಷ್ಟವು ಸೈರಿಸಲಸದಳವಾದುದರಿಂದಲೇ ಓರ್ವ ಕವಿ ಪುಂಗವನು,

> ದಾರಿದ್ರ್ಯಾದ್ಧ್ರಿಯಮೇತಿ ಹ್ರೀಪರಿಗತಃ ಸತ್ವಾತ್ ಪರಿಭ್ರಶ್ಯತೇ।
> ನಿಃಸತ್ವಃ ಪರಿಭೂಯತೇ ಪರಿಭಾನ್ನಿರ್ವೇದಮಾಪದ್ಯತೇ॥
> ನಿರ್ವಿಣ್ಣಃಶುಚಮೇತಿ ಶೋಕನಿಹತೋ ಬುದ್ಧ್ಯಾ ಪರಿತ್ಯಜ್ಯತೇ।
> ನಿರ್ಬುದ್ಧಿಃ ಕ್ಷಯಮೇತ್ಯಹೋ ನಿಧನತಾ ಸರ್ವಾಪಾದಾಮಾಸ್ಪದಂ ॥೧॥

ಎಂಬದಾಗಿ ಗೀರ್ವಾಣಭಾಷೆಯಲ್ಲಿ ಮರ್ಮಭೇದಕವಾಗಿ ಕವಿತೆಯನ್ನು ರಚಿಸಿರುವನು". ಈ ಪ್ರಕಾರ ಯೋಚಿಸಿ, ಪ್ರಕಟವಾಗಿ ದೇಸಾಯರನ್ನು ಕುರಿತು, "ಇರಲಿ, ಹೊತ್ತು ಒಂದೇ ಸಮನಾಗಿರುವದಿಲ್ಲ. ಮಧ್ಯಾಹ್ನದಲ್ಲಿ ಪ್ರಖರ ಕಿರಣಗಳಿಂದ ತಾಪವನ್ನುಂಟುಮಾಡುವ ಸೂರ್ಯನೇ ಕೆಲವು ಹೊತ್ತಿನಲ್ಲಿ ಹೂಬಿಸಿಲಿನ ಸೌಮ್ಯಕಿರಣಗಳಿಂದ ಸೌಖ್ಯವನ್ನು ಕೊಡುವನು. ವ್ಯರ್ಥವಾಗಿ ಚಿಂತಿಸಿ ಫಲವಿಲ್ಲ. ನನ್ನವೆರಡು ಮಾತುಗಳನ್ನಷ್ಟು ಚಿತ್ತಿಟ್ಟು ಕೇಳಿರಿ. ನನ್ನ ಮನಸಿನಲ್ಲಿ ಹೊಸದೊಂದು ಯೋಚನೆ ಹುಟ್ಟಿರುತ್ತದೆ. ಅದೇನೆಂದರೆ-ಯಾವದೊಂದು ಕಾರ್ಯವು ನಮ್ಮಿಂದ ಆಗಲಾರದೆಂದು ತಿಳಿದುಬಿಟ್ಟರೆ ಅದು ಬಿಟ್ಟೇಹೋಗುತ್ತದೆ. ಹೇಗಾದರೂ ಮಾಡಿದರೆ ಏನಾದರೂ ಆಗುವದೆಂಬ ತತ್ವದಂತೆ, ಈ ಕಾರ್ಯವು ನಮ್ಮಿಂದಾಗುವದೆಂದು ದೃಢನಿಶ್ಚಯಮಾಡಿ, ಸತತೋದ್ಯೋಗದಿಂದಲೂ,

ಪೂರ್ಣಪ್ರಯತ್ನದಿಂದಲೂ ಮಾಡತೊಡಗಿದರೆ ಕಾರ್ಯವು ನಿಶ್ಚಯವಾಗಿ ನೆರವೇರುವದು. ಏನೇ ಆಗಲಿ, ದೊಡ್ಡವರು ದೊಡ್ಡದರಲ್ಲಿಯೇ ಬಾಯ ಹಾಕಬೇಕು. ನಮ್ಮ ಚಿಕ್ಕದೇಸಾಯರಿಗೆ ಕನ್ಯೆಯನ್ನು ಯೋಗ್ಯಸ್ಥಾನದಲ್ಲಿಯೇ ತೆಗೆಯಬೇಕು. ಕೆಲವರು ದೇಸಾಯರು ನಮ್ಮ ನಾಡಿನೊಡೆಯರಾದ ರಾ.ಬ॥ರುದ್ರಗೌಡ ಸಾಹೇಬರವರ ಪುತ್ರಿಯನ್ನು ಕನ್ಯಾರ್ಥವಾಗಿ ವಿಚಾರಿಸಿರುವರಂತೆ. ನಾವಾದರೂ ಆ ಮಹಾಪ್ರಭುವನ್ನು ಕೇಳಿಕೊಳ್ಳಬೇಕು. ಕೆಲಸವು ಆಗಲಿ, ಹೋಗಲಿ ಮಾಡುವ ಸಾಹಸವನ್ನು ಮಾಡುವದೇ ಜಾಣತನದ ಲಕ್ಷಣವು. ದೈವಯೋಗದಿಂದ ಕೂಡಿಬಂತೆಂದರೆ ದೇಸಗತಿಯ ದೈವವು ತೆರೆಯುತ್ತದೆ. ಅವರಾದರೂ ಪೂರ್ಣಕರುಣಾಳುಗಳಿರುವರು. ಕೇಳಲಿಕ್ಕೆ ಏನೂ ಅಡ್ಡಿಯಿಲ್ಲ. ವಧುವರರ ಯೋಗವು ಎಲ್ಲೆಲ್ಲಿರುವದೋ ಅಲ್ಲಿ ತಾನಾಗಿಯೇ ಸಂಘಟನೆಯಾಗುತ್ತದೆ" ಎಂದು ಹೇಳಲು, ಅದಕ್ಕೆ ದೇಸಾಯರು "ಏನು, ಸಣ್ಣತಮ್ಮಪ್ಪನವರೇ!ನಿಮ್ಮ ಮಾತು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಸಾಂಪ್ರತಕ್ಕೆ ರಾ.ಬ॥ರುದ್ರಗೌಡರ ಸಾಹೇಬರವರ ಪ್ರಖ್ಯಾತಿಯು ದಿಗ್ದೇಶದಲ್ಲೆಲ್ಲ ವ್ಯಾಪಿಸಿರುವಂತೆ ನಮ್ಮ ದೇಸಗತಿಯ ಜೀರ್ಣಾವಸ್ಥೆಯ ವಾರ್ತೆಯೂ ಹಬ್ಬಿರುತ್ತದೆ. ಅಂತಹ ಪ್ರತಾಪಶಾಲಿಗಳು ಈ ನಮ್ಮ ದೇಸಗತಿಗೆ ಕನ್ಯೆಯನ್ನು ಕೊಡಲೊಡಂಬಡುವರೋ, ನಮ್ಮ ಕೃತವು ಕೇಳಿದ ಜನರು ನಗುವಂತೆ ಆದೀತು, ವಿಚಾರಮಾಡಿನೋಡಿ"ರೆಂದರು. ಅದಕ್ಕೆ ಪ್ರತ್ಯುತ್ತರವಾಗಿ ಸಣ್ಣತಮ್ಮಪ್ಪನವರು "ವಿಚಾರವೇನಿದರಲ್ಲಿ? ಕೊಡಲ್ಪಡುವ ಕನ್ಯೆಯನ್ನು ಯಾರಾದರೂ ಕೇಳುವದುಂಟು. ಅವರು ಕೊಟ್ಟರೂ ಸರಿ. ಕೊಡದಿದ್ದರೂ ಸರಿ. ಕೇಳುವದಕ್ಕೆ ತಪ್ಪೇನು?" ಎಂದು ಅಂದದಕ್ಕೆ ದೇಸಾಯರು"ನಿಮ್ಮ ಮನಸಿಗೆ ಬಂದಂತೆ ಮಾಡಿರೆಂದರು. ಬಳಿಕ ಪರೋಪಕಾರಿಗಳೂ, ಪ್ರಾಮಾಣಿಕರೂ, ಆದ ಸಣ್ಣತಮ್ಮಪ್ಪನವರು ತಡಮಾಡದಲೆ ರಾ.ಬ॥ರುದ್ರಗೌಡ ಸಾಹೇಬರವರ ಸನ್ನಿಧಿಗೆ ಹೋಗಿ, ಯಾವದ್ವೃತ್ತಾಂತವನ್ನು ವಿನಯದಿಂದ ತಿಳಿಸಿ"ಮಹಾಪ್ರಭುಗಳೇ!ತಾವು ಈವರೆಗೆ ಮಾಡುತ್ತ ಬಂದಿರುವ ಕಾರ್ಯಗಳು ಅಗಮ್ಯವಾಗಿದ್ದು, ಆ ಪ್ರತಿಯೊಂದು ಕಾರ್ಯಭಾಗದಲ್ಲಿ ವಿಜಯಲಕ್ಷ್ಮಿಯೂ, ಕೀರ್ತಿಲಕ್ಷ್ಮಿಯೂ ತಮ್ಮ ಕೈ ಹಿಡಿದು ಈರ್ವರೂ ಪರಸ್ಪರ ಶ್ರೇಷ್ಠತ್ವದ ಸಲುವಾಗಿ ಸವತಿಮತ್ಸರವನ್ನು ಬೆಳಿಸುತ್ತ ಬಂದಿರುತ್ತಾರೆ. ಶ್ರೀಮಂತರಿಗೆ ಕನ್ಯೆಯನ್ನು ಯಾರಾದರೂ ಕೊಡುತ್ತಾರೆ. ಧನರಾಶಿಯನ್ನು ಕಳಕೊಂಡ ದೀನನಿಗೆ ಯಾರೂ ಕೊಡುವದಿಲ್ಲ. ಪರಿಮಳವಿಲ್ಲದ ಹೂವನ್ನು ಯಾರೂ ಮೂಸುವದಿಲ್ಲ. ಘಮಘಮಿಸುತ್ತಿದ್ದ ಮಲ್ಲಿಗೆಯನ್ನು ಬಿಟ್ಟು ಮದಗುಣಕೆಯ ಹೂವನ್ನು ಯಾರು ಮೂಸುವರು? ಆದರೂ ದೈವಸಂಕಲ್ಪವಿದ್ದರೆ ಆ ಪರಿಮಳವಿಲ್ಲದ ಹೂವು ಪಾರಿಜಾತವೇಕಾಗಬಾರದು? ಏನೇ ಆಗಲಿ, ತಾವು ನನ್ನ ಪ್ರಾರ್ಥನೆಯನ್ನು ದಿವ್ಯಚಿತ್ತದಿಂದ ಲಾಲಿಸಿ, ತಮ್ಮ ಸತ್ಪುತ್ರಿಯನ್ನು ಚಚಡೀ ದೇಸಾಯರ ಜೇಷ್ಠಪುತ್ರರಾದ ವೀರಭದ್ರಪ್ಪ ದೇಸಾಯರಿಗೆ (ಅಣ್ಣಾಸಾಹೇಬರಿಗೆ) ಕನ್ಯಾದಾನ ಮಾಡಿಕೊಟ್ಟು, ದೇಸಗತಿಯ ಜೀರ್ಣೋದ್ಧಾರ ಮಾಡಿದ ಕೀರ್ತಿಯನ್ನು ತೆಗೆದುಕೊಳ್ಳಬೇಕು. ತಮ್ಮ ಅಮೃತಹಸ್ತದಿಂದ ಹಿಡಿಯಲ್ಪಟ್ಟ ಪ್ರತಿಯೊಂದು ಕಾರ್ಯವು ಜಯಪ್ರದವಾಗುವದು. ಈ ಕಾರ್ಯದಿಂದ ತಮ್ಮ ಪುಣ್ಯರಾಶಿಯು ಮತ್ತಿಷ್ಟು ವರ್ಧಿಸುವದು. ಸದ್ಯ ಪ್ರಸಂಗವು ತಮ್ಮ ಅಭ್ಯುದಯವನ್ನೇ ಸೂಚಿಸುತ್ತದೆ. ವಿಶಾಲಹೃದಯರಾದ ತಮ್ಮ ಹೊರತು ಇತರರಿಂದ ಈ ಕಾರ್ಯವು ಸರ್ವಥಾ ಆಗಲಾರದು"ಎಂದು ಹೇಳುತ್ತಿರಲು, ಮತ್ತು ಬೆಳಗಾವಿ ಶ್ರೀ.ರಾ.ರಾ॥ ಹೊಸಮಠದ ಸಿದ್ಧಯ್ಯಸ್ವಾಮಿಗಳೇ ಮೊದಲಾದ ಪರಹಿತಚಿಂತಕರು, "ದೊರೆಗಳೇ ಈ ಪುಣ್ಯಕಾರ್ಯವನ್ನು ದೃಢಮನಸ್ಸಿನಿಂದ ಮಾಡಿ, ತಮ್ಮ ಕೀರ್ತಿಧ್ವಜವನ್ನು ಇನ್ನಿಷ್ಟು ಲಂಬಿಸಬೇಕೆಂದು" ನಿವೇದಿಸುತ್ತಿರಲು, ರಾ.ಬ॥ರುದ್ರಗೌಡ ಸಾಹೇಬರವರು ಸ್ವಲ್ಪವಾದರೂ ಅನುಮಾನಿಸದೆ, "ನಿಮ್ಮ ಇಷ್ಟದಂತೆ ನನ್ನ ಪ್ರಿಯಪುತ್ರಿಕೆ ರುದ್ರವ್ವನನ್ನು ಚಚಡಿಯ ವೀರಭದ್ರಪ್ಪ ದೇಸಾಯರಿಗೆ ಲಗ್ನ ಮಾಡಿಕೊಡುತ್ತೇನೆ" ಎಂಬದಾಗಿ ವಚನವನ್ನಿತ್ತರು.

ಪ್ರಿಯ ವಾಚಕವೃಂದವೇ! ನೋಡಿದಿರಾ, ಸಂತತಿರೂಪದಿಂದ ಸಾವಿರಾರು ವರ್ಷ ನಡೆಯುವ ಶರೀರ ಸಂಬಂಧವನ್ನು ಮಾಡಲಿಕ್ಕೆ ಬಡಬಗ್ಗರೂ ಕೂಡ ಧನವಂತರನ್ನು ಪರಿಶೋಧಿಸುತ್ತಿರುವಾಗ ಇವರು ಆಪ್ತೇಷ್ಟಮಂಡಳಿಯನ್ನು ಏನೂ ವಿಚಾರಿಸದೆ ಒಮ್ಮಿಂದೊಮ್ಮೆ ಒಬ್ಬಳೇ ಒಬ್ಬ ಪುತ್ರಿಕೆಯನ್ನು ಹತಭಾಗ್ಯ ದೇಸಗತಿಗೆ ಕೊಡಲೊಡಂಬಟ್ಟದ್ದು ಎಷ್ಟು ಧೈರ್ಯದ ಕೆಲಸವೋ, ಅಷ್ಟೇ ಅವರ ಪರಿಪಕ್ವ ವಿಚಾರವಾದರೂ ದಾರ್ಢ್ಯವಾಗಿರುತ್ತದೆಂದೆನ್ನಬೇಕಾಗುತ್ತದೆ. ಅನ್ನವಿದ್ದ ಮನೆಯಲ್ಲಿ ಮಕ್ಕಳನ್ನಿರಿಸಬೇಕೆಂದೂ, ಮೇವು ಇದ್ದ ಕೊಟ್ಟಿಗೆಯಲ್ಲಿ ಹಸುಗಳನ್ನು ಕಟ್ಟಬೇಕೆಂದೂ ವ್ಯವಹಾರದಲ್ಲಿ ಮಾತಾಡುತ್ತಿರುತ್ತಾರೆ. ಆದರೆ ಬಡತನ ದೈವವುಳ್ಳತನಗಳು ಸ್ಥಿರವಲ್ಲ. ಶರೀರ ಸಂಬಂಧವು ದೈವಸಂಕಲ್ಪಾನುಸಾರ ಕೂಡಿಕೊಳ್ಳುತ್ತದೆ. ಎಂಬ ಪಾರಮಾರ್ಥಿಕ ತತ್ವವನ್ನೂ, ಮತ್ತು

ಭಾಮಿನೀ ಷಟ್ಪದಿ

ಕುಲವಯೋ ರೂಪಗಳ ನೋಡದೆ । ಕಲೆಯ ನೋಡದೆ ಗುಣವ ನೋಡದೆ ।
ನೆಲದೊಳಗೆ ಸಿರಿವಂತನೇ ಬಹುಯೋಗ್ಯವರನೆಂದು ॥
ಒಲಿದು ಗುಣವತಿ ಸುತೆಯನಿತ್ತಾ । ಬಳಿಕಳಲುವಾ ಸುತೆಯ ಶಾಪಂ ।
ಗಳಿಗೆ ಗುರಿಯಾಗುವ ದುರಾತ್ಮರ ಮಾತಿದೇಕೆಂದಾ ॥೧॥

ಎಂಬ ಸುಜ್ಞಾನಿಯ ಸುಧಾರಕ ತತ್ವವನ್ನು ಅವಲಂಬಿಸಿ ಪರೋಪಕಾರಿ ಬುದ್ಧಿಯಿಂದ ಕನ್ಯಾದಾನದ ವಚನವನ್ನಿತ್ತರು. ಸರ್ವ ಆಪ್ತೇಷ್ಟರೂ ಯಜಮಾನರ ವಚನವನ್ನು ಸಂತೋಷದಿಂದ ಮಾನ್ಯಮಾಡಿದರು. ಈ ವೃತ್ತಾಂತವನ್ನು ವೃದ್ಧರಾದ ಗುಣಪ್ಪ ದೇಸಾಯರು ಕೇಳಿ, ಪರಮಾನಂದ ತುಂದಿಲರಾಗಿ ಸನ್ ೧೯೦೧ ನೇ ಇಸವಿಯ ಫೆಬ್ರುವರಿ ತಿಂಗಳ ೧೩ನೇ ತಾರೀಖಿನ ದಿವಸ ತಮ್ಮ ಜೇಷ್ಠಪುತ್ರರಾದ ವೀರಭದ್ರಪ್ಪ ದೇಸಾಯರಿಗೆ ರಾ.ಬ॥ರುದ್ರಗೌಡ ದೊರೆಗಳವರ ಚಿರಂಜೀವಿಯವರಾದ ಸೌಭಾಗ್ಯಕಾಂಕ್ಷಿಣಿ ರುದ್ರವ್ವನವರನ್ನು ವಧುವೆಂಬದಾಗಿ ಗೊತ್ತುಮಾಡಿರುವೆವೆಂದು ಕನ್ಯಾನಿಶ್ಚಯ ಕಾರ್ಯವನ್ನು ಸಮಾರಂಭದಿಂದ ಸಾಂಗಮಾಡಿದರು.

ರಾ.ಬ.ರುದ್ರಗೌಡರು ಚಿಕ್ಕದೇಸಾಯರನ್ನು ವಿದ್ಯಾಭ್ಯಾಸಕ್ಕಾಗಿ ತಮ್ಮ ಬಳಿಗೆ ಕರಿಸಿಕೊಂಡದ್ದು

ಕನ್ಯಾನಿಶ್ಚಯವಾದ ನಂತರ ಹಳ್ಳಿಯಲ್ಲಿ ಅಳಿಯಂದಿರು ಸುಶಿಕ್ಷಿತರಾಗುವರಿಲ್ಲೆಂದು ತಿಳಿದು, ಸುಧಾರಿಸಿದವರಾದ ರಾ.ಬ॥ರುದ್ರಗೌಡರು ವೀರಭದ್ರಪ್ಪ ದೇಸಾಯರನ್ನೂ, ಇವರ ತಮ್ಮಂದಿರಾದ ಬಸವಂತರಾವ ಊರ್ಫ ನಾನಾಸಾಹೇಬರನ್ನೂ ಬೆಳಗಾವಿಗೆ ಕರಿಸಿಕೊಂಡು, ಇಬ್ಬರನ್ನೂ ಇಂಗ್ಲೀಷ ಸಾಲೆಗೆ ಹಾಕಿದರು. ಹಾಗೂ ವಿದ್ಯಾರ್ಜನೆಯು ನೆಟ್ಟಗೆ ಮತ್ತು ಬೇಗ ಆಗಬೇಕೆಂದು ಶಾಲೆಯ ಹೊರತು ಇತರ ವೇಳೆಯಲ್ಲಿ ಕಲಿಸಲಿಕ್ಕೆ ಇವರಿಗಾಗಿ ಒಬ್ಬ ಸ್ವತಂತ್ರ ಮಾಸ್ತರರನ್ನೂ ಗೊತ್ತು ಮಾಡಿದರು. ಹಾಗೂ ಮನೆತನದ ಸರ್ವಜನರು ಅಳಿಯದ್ವಯರನ್ನು ತಮ್ಮ ಮಕ್ಕಳೋಪಾದಿ ಊಟ ಉಪಚಾರ, ಗೃಹಶಿಕ್ಷಣ, ವಿದ್ಯಾಶಿಕ್ಷಣ ಮೊದಲಾದವುಗಳಿಂದ ಸುಸಂಸ್ಕೃತರನ್ನಾಗಿ ಮಾಡಿದರು. ವಿದ್ಯಾಭಿಮಾನಿಗಳ ಮಂದಿರದೊಳಗಿನ ಮಕ್ಕಳು ಆಟ ನೋಟಗಳಲ್ಲಿ ವ್ಯರ್ಥವಾಗಿ ವೇಳೆ ಕಳೆಯುವದಿಲ್ಲ. ಶಿಕ್ಷಣದ ವಿಷಯಾಂತರವೇ ಅವರಿಗೆ ವಿಶ್ರಾಂತಿಯೆನಿಸುತ್ತದೆ. ಮೇಲಾಗಿ ಸುಶಿಕ್ಷಿತ ಯಜಮಾನರ ಭಯದಿಂದ ಅವರ ಸ್ವಚ್ಛಂದವೃತ್ತಿಯೂ, ನಿರರ್ಥಕ ಕಾಲಹರಣವೂ ಕುಂಠಿತವಾಗುತ್ತವೆ. ಆದಷ್ಟು

ಅಭ್ಯಾಸವನ್ನು ಆಗಾಗ್ಗೆ ಪರೀಕ್ಷಿಸುತ್ತಿರುವದರಿಂದ ಯಾವತರದ ಆಲಸ್ಯಕ್ಕೂ ಅವಕಾಶ ದೊರೆಯುವದಿಲ್ಲ. ಸುಗ್ರಾಸವನ್ನುಂಡು, ಸತ್ ಶಿಕ್ಷಣವನ್ನು ಹೊಂದಿ, ಸದಭ್ಯಾಸ ತತ್ಪರರಾಗಿರುವದೇ ಅವರ ದೈನಿಕ ಕರ್ತವ್ಯವು. ಈ ಬಗೆಯ ಸದ್ವಿದ್ಯಾರ್ಥಿಗಳಾಗಿ ಮಾವಂದಿರ ಮಂದಿರದಲ್ಲಿ ಉಭಯ ದೇಸಾಯರು ಸಂತೋಷದಿಂದಿರುತ್ತಿರಲು ಒಂದಾನೊಂದು ದಿವಸ ವೀರಭದ್ರಪ್ಪ ದೇಸಾಯರು ಠಾಣೆಯ ಮೇಲೆ ಕಟ್ಟಿದ ಸಾಹೇಬರದೊಂದು ಮಹತ್ತಾದ ಕುದುರೆಯನ್ನೇರಿ ವೈಹಾಳಿಯನ್ನು ಮಾಡುತ್ತಿರುವಾಗ ಕುದುರೆಯು ಬೆದರಿ ಅಸಕೊಳ್ಳದೆ ಓಡಹತ್ತಲು ದೇಸಾಯರು ಕುದುರೆಯ ಮೇಲಿಂದ ಬಿದ್ದು, ಬಹಳೇ ಘಾಯ ಹೊಂದಿದರು. ಹಾಗೆಯೇ ಬತ್ತಲೆಗುದುರೆಯು ಭರದಿಂದ ಓಡುತ್ತ ಬಂಗಲೆಗೆ ಬರಲು, ದೇಸಾಯರು ಎಲ್ಲಿ ಹೋದರೆಂದು ಎಲ್ಲರೂ ಗಡಬಡಿಸಿ ಶೋಧಿಸಲು ಕುದುರೆಯ ಮೇಲಿಂದ ಬಿದ್ದದ್ದು ಗೊತ್ತಾಗಿ ಬಿದ್ದಸ್ಥಳದಿಂದ ಅವರನ್ನು ಎತ್ತಿ ತರಿಸಿ ಬೆಳಗಾವಿಯ ಸಿವ್ಹಿಲ್ ಸರ್ಜನ್, ಸಿರಗಾವಕರ ಮುಂತಾದ ಪ್ರಸಿದ್ಧ ಡಾಕ್ಟರರನ್ನು ಕರಿಸಿ, ಘಾಯಗಳನ್ನು ಹೊಲಿಸಿ ಔಷದೋಪಚಾರವನ್ನು ಯೋಗ್ಯವಾಗಿ ನಡಿಸಿದರು. ಘಾಯಗಳು ಬಹಳವಾಗಿದ್ದದರಿಂದ ಬಹು ದಿವಸದ ವರೆಗೆ ಅವರಿಗೆ ಸ್ಮೃತಿಯೇ ಇದ್ದಿಲ್ಲ. ಬದುಕುವದೇ ಕಠಿಣವೆಂದು ಡಾಕ್ಟರರು ಅಭಿಪ್ರಾಯ ಪಡಹತ್ತಿದರು. ಒಂದು ದಿವಸ ಪ್ರಾಣವೇ ಹೋಗಿತ್ತು. ನಾವು ಮಾಡಿದ್ದೆಲ್ಲ ನಿರರ್ಥಕವಾಯಿತೆಂದೂ, ಬಯಸಿದ್ದೆಲ್ಲ ಬಯಲಾಯಿತೆಂದೂ, ಎಲ್ಲರೂ ಕಣ್ಣೀರು ಸುರಿಸುತ್ತ ಕಿವಿಗಳಲ್ಲಿ ಊದುವದೂ, ಅಂಗೈ ಅಂಗಾಲುಗಳನ್ನು ತಿಕ್ಕುವದೂ ಮುಂತಾದ ಉಪಚಾರಗಳನ್ನು ನಡಿಸಿರಲು, ಚಚಡೀ ದೇಸಗತಿಯ ಪುಣ್ಯಶೇಷದಿಂದಲೋ ಅಥವಾ ಸಾಹೇಬರ ಕೀರ್ತಿಯು ಇನ್ನೂ ಹೆಚ್ಚಬೇಕೆಂಬದಾಗಿ ದೈವಸಂಕಲ್ಪವಿರುವದರಿಂದಲೋ ಪುನಃಪ್ರಾಣವು ಬಂದು, ದಿನದಿನಕ್ಕೆ ವಾಸಿಯಾಗುತ್ತ ಬಂದರು. ಈ ಪ್ರಸಂಗದಲ್ಲಿ ವೀರವ್ವನವರೂ, ಗುರುಪಾದವ್ವನವರೂ ಹಗಲಿರುಳು ಹತ್ತರದಲ್ಲಿದ್ದುಕೊಂಡು ಬಹಳೇ ತರದಿಂದ ತಮ್ಮ ಮಕ್ಕಳಕಿಂತಲೂ ಹೆಚ್ಚಾಗಿ ಜೋಪಾನಮಾಡಿದರು. ಈ ದೊಡ್ಡ ಕುತ್ತದೊಳಗಿಂದ ದೇಸಾಯರು ಪಾರಾದದ್ದು ಅವರ ಪುನರ್ಜನ್ಮವಾದಂತೆಯೇ ಸರಿ. ವೀರಭದ್ರಪ್ಪ ದೇಸಾಯರ ತಮ್ಮಂದಿರಾದ ಬಸವಂತರಾಯರು ಮುಂದೆ ತುಸುದಿವಸಗಳಲ್ಲಿ ಪ್ಲೇಗಬೇನೆಯಿಂದ ಚಚಡೀ ಗ್ರಾಮದಲ್ಲಿ ಮೃತವಾದದರಿಂದ ಎಲ್ಲರಿಗೂ ಬಹಳೇ ವ್ಯಸನವಾಯಿತು. ಇವರು ಚಿಕ್ಕವರಿದ್ದರೂ ಒಳ್ಳೇ ಚತುರರೂ, ಹುಷಾರರೂ ಇದ್ದರು. ಇವರು ಗತಿಸಿದ ಸ್ವಲ್ಪಾವಧಿಯಲ್ಲಿಯೇ ಇವರ ಪಿತೃಗಳಾದ ಶ್ರೀಮಂತ ಗುಣಪ್ಪ ದೇಸಾಯರು ಚಚಡಿಯಲ್ಲಿ ಭ್ರಮಿಷ್ಟರಾಗಿ ತಾರೀಖು ೧೭ನೇ ಮಾಹೆ ಅಕ್ಟೋಬರ್ ಸನ್ ೧೯೦೩ನೆಯ ಇಸವಿಯ ದಿವಸ ವಾಡೆಯ ಮೇಲ್ಮಂದಿರದ ಮೇಲಿಂದ ಕೆಳಗೆ ಬಿದ್ದು ಶಿವಾಧೀನರಾದರು. ಅದರಿಂದ ಸರ್ವರಿಗೂ ಬಹಳ ಸಂತಾಪವಾಯಿತು. ಚಿಕ್ಕದೇಸಾಯರ ಲಗ್ನವಾಗುವ ವರೆಗಾದರೂ ಇದ್ದು ವಿವಾಹ ವೈಭವವನ್ನು ಕಣ್ಮುಟ್ಟ ನೋಡಿದ್ದರೆ ನಾವು ಮಾಡಿದ್ದು ಸಾರ್ಥಕವಾಗುತ್ತಿತ್ತೆಂದು ಎಲ್ಲರೂ ಮರಮರ ಮರುಗಿದರು. ಆದರೆ ಭಗವತ್ಸಂಕಲ್ಪಕ್ಕೆ ಯಾರ ಉಪಾಯವೇನದೆ? ಶ್ರೀಮಂತ ಗುಣಪ್ಪ ದೇಸಾಯರ ಮೃತಿಯನಂತರ ರಾ.ಬ॥ರುದ್ರಗೌಡ ಸಾಹೇಬರವರು ದೇಸಗತಿಯ ಸರ್ವವ್ಯವಸ್ಥೆಯು ಸರಿಯಾಗಿ ಸಾಗಬೇಕಾಗಿ ಚತುರರೂ, ಪ್ರಾಜ್ಞರೂ, ಪ್ರಮಾಣಿಕರೂ ಆದ ಕಿತ್ತೂರ ನರಸಿಂಹಾಚಾರ್ಯ ಪುಣೇಕರ ಎಂಬವರನ್ನು ಚಚಡೀ ದೇಸಗತಿಯ ಕಾರಭಾರಿಗಳನ್ನಾಗಿ ನಿಯಮಿಸಿದರು. ಮತ್ತು ಸಾವಕಾರರ ವಶದಲ್ಲಿದ್ದ ದೇಸಗತಿಯ ಭೂಮಿಗಳನ್ನು ಕ್ರಮವಾಗಿ ಬಿಡಿಸಿಕೊಳ್ಳಹತ್ತಿದರು. ರಾ.ಬ॥ರವರ ಪ್ರೇರಣೆಯಿಂದಲೂ, ಕಾರಭಾರಿಗಳ ಸುಧಾರಣೆಯಿಂದಲೂ ಭೂಮಿಸೀಮೆಗಳು ಹೆಚ್ಚಿ, ಆದಾಯವು ಬೆಳೆದು, ದೇಸಗತಿಯು ಉತ್ತರೋತ್ತರ ಅಭಿವೃದ್ಧಿಯಾಗುತ್ತ ಪೂರ್ವದ ಸ್ವರೂಪವನ್ನು ಹೊಂದಹತ್ತಿತು. ಕಳೆಗುಂದಿದ ಚಂದ್ರನು ಪ್ರಕಾಶದಿಂದ ಪರಿಪೂರ್ಣನಾಗಿ ಬೆಳಗಿದಂತೆ ಜೀರ್ಣವಾದ ದೇಸಗತಿಯು ರಾ.ಬ॥ರುದ್ರಗೌಡ ಸಾಹೇಬರವರಿಂದ ಏಳಿಗೆಯನ್ನು ಹೊಂದುತ್ತಿರುವದನ್ನು ನೋಡಿ, ಸರ್ವಜನರು ಸಂತೋಷಭರಿತರಾದರು. ಕೆಲವರು

ತೀರ ಮುರಕಳಿಗೆ ಬಂದ ನಮ್ಮ ದೇಸಗತಿಯು ಪೂರ ಭರತಿಯಾಗುತ್ತ ನಡೆದದರಿಂದ ರಾ.ಬ॥ರುದ್ರಗೌಡರೆಂಬರು ನಮ್ಮ ನಾಡಿಗೆ ದೇವರೇ ಆಗಿ ಬಂದಿರುವರೆಂದು ನಂಬಿ, ಅವರ ಕಾರ್ಯವನ್ನೂ ಕೀರ್ತಿಯನ್ನೂ ಕೊಂಡಾಡಹತ್ತಿದರು.

ರುದ್ರವ್ವನವರ ಲಗ್ನವಾದದ್ದು

ಈ ಪ್ರಕಾರ ರಾ.ಬ॥ರುದ್ರಗೌಡರು ಸರ್ವಜನರ ಸ್ತುತಿಗೆ ಪಾತ್ರರಾಗಿ ಕೂಡಲೆ ಜೋತಿಷಜ್ಞರಾದ ಜಂಗಮರನ್ನು ಕರಿಸಿ, ವಿವಾಹ ಮುಹೂರ್ತವನ್ನು ಗೊತ್ತುಮಾಡಿ, ವಿವಾಹದ ಕಾರ್ಯಕ್ರಮವನ್ನು ಹೊನ್ನಕ್ಕರಗಳಿಂದ ಮುದ್ರಿಸಿ, ತಮ್ಮ ಹಾಗೂ ಆಪ್ತೇಷ್ಟ ಬಂಧುಬಳಗಕ್ಕೆಲ್ಲ ಲಗ್ನಪತ್ರಿಕೆಗಳನ್ನು ಕಳಿಸಿದರು. ಒಡನೆಯೆ ಚಚಡಿಯ ವಾಡೆಯನ್ನು ದಿವ್ಯವಾಗಿ ಸಿಂಗರಿಸಿ ರಾಜಾಂಗಣದ ವಿಶಾಲವಾದ ಚಚ್ಚೌಕ ಪ್ರದೇಶದಲ್ಲಿ ಭವ್ಯವೂ, ಸುಂದರವೂ ಆದ ಲಗ್ನಮಂಟಪವನ್ನು ನೋಡಿದವರು ಬೆರಗಾಗುವಂತೆ ನಿರ್ಮಿಸಿದ್ದರು. ಸಾಲ್ಗೊಂಡು ಶೋಭಿಸುವ ಚಿತ್ರವಿಚಿತ್ರವಾದ ಕನ್ನಡಿಗಳಿಂದಲೂ, ಗುಂಡು, ಗುಳಾಪು, ಹಂಡೇ ಝುಮರುಗಳಿಂದಲೂ, ವಧೂವರರು ವಿರಾಜಮಾನರಾಗುವ ಮುಖ್ಯಮಂಟಪದಿಂದಲೂ, ಛತ್ರಚಾಮರಾಪ್ತಾಗಿರಿಗಳಿಂದಲೂ, ಹೆಬ್ಬಾಗಿಲದ ಹತ್ತಿರ ಶೋಭಿಸುತ್ತಿರುವ ಮುಖಮಂಟಪದಿಂದಲೂ, ಮನೋಹರವಾದ ತಳಿರ್ದೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ ಲಗ್ನಮಂಟಪವು ಬಹುರಮಣೀಯವಾಗಿತ್ತು. ತರತರದ ಬಣ್ಣಗಳ ಸುಳುವುಗಳಿಂದಲೂ, ಗೊಂಬೆಗಳಿಂದಲೂ, ಕನ್ನಡಿಗಳಿಂದಲೂ, ಪ್ರಜ್ವಲಿಸುವ ಸಿಂಹಾಸನದಿಂದಲೂ, ಬೇರೆ ಉಚಿತಾಸನಗಳಿಂದಲೂ ರಾಜವಾಡೆಯಾದರೂ ಮನೋಹರವಾಗಿತ್ತು. ಮಂದಿರವೂ, ಮಂದಿರದ ಮುಂದಿನ ಸುಂದರವಾದ ಲಗ್ನದ ಹಂದರವೂ, ವೈಭವದಲ್ಲಿ ಒಂದನ್ನೊಂದು ಮಿಕ್ಕುವಂತೆ ಪರಸ್ಪರ ಶೋಭೆಗೊಂಡಿದ್ದವು. ಈ ಕೆಳಗಿನ ಪದದಿಂದ ಮಂದಿರದ ಸೊಬಗು ಸಾಧಾರಣವಾಗಿ ವ್ಯಕ್ತವಾಗುವದು.

ಪದ॥ದಾಟಿ॥ "ಶೋಭಾ ಉಪವನಚೀ ಸರವೇಗ" ಎಂಬ ಮರಾಠೀ ಪದದಂತೆ.

ನೋಡೆ ಮಂದಿರವಾ।ಸಖಿಯೆ।ನೋಡೇ ಮಂದಿರವಾ ॥ಪಲ್ಲವಿ॥

ಸುತ್ತಲು ನೋಡಲು। ಚಿತ್ರದ ಗೊಂಬೆಯು। ಮುತ್ತಿನ ಝೂಲರಿಯಾ ॥೧॥

ಬಣ್ಣದ ಮಹಾಲಿನ । ಕನ್ನಡಿ ಪಟಗಳು ।ಕಣ್ಣಿಗೆ ಬಲುಚಂದಾ ॥೨॥

ಗುಂಡು ಗುಳಾಪು।ಹಂಡೇ ಝುಮರು । ಕಂಡರೆ ಆನಂದಾ ॥೩॥

ಸಿಂಗರವಾಗಿ ।ಕಂಗೊಳಿಸುವ ಈ । ಸಿಂಗದಾಸನವಾ ॥೪॥

ಮಂದಿರ ಮುಂದಿನ । ಹಂದರ ಅಹಹಾ । ಸುಂದರವೆಷ್ಟಿದರಾ ॥೫॥

ಉತ್ಸವ ಪರಂಪರೆಗಳು ಎಡೆಬಿಡದೆ ನಡೆದಿರಲು ತಾರೀಖು ೩ನೇ ಮಾಹೆ ಮೇ ಸನ್ ೧೯೦೪ ನೇ ಇಸವಿಯ ಸೋಮವಾರ ದಿವಸ ಹರಿದ್ರ ಲೇಪನವೂ, ಗುಗ್ಗುಳ ಪೂಜೆಯೂ, ತಾ ೪-೫-೧೯೦೪ನೇ ಮಂಗಳವಾರ ದಿವಸ ಗುಗ್ಗುಳ ಸಮಾರಂಭವೂ, ದೇವತಾಕಾರ್ಯವೂ ಬಹುವಿಜ್ರಂಭಣೆಯಿಂದಾಗಿ, ತಾರೀಖು ೫-೫-೧೯೦೪ನೇ ಬುಧವಾರ ಮುಂಜಾವಿನ ಏಳು ಘಂಟೆಗೆ ಉತ್ತಮ ಲಗ್ನದಲ್ಲಿ ಶ್ರೀಮಂತ ವೀರಭದ್ರಪ್ಪ ದೇಸಾಯರ, ರುದ್ರಕುಮಾರಿಯವರ ವಿವಾಹವು ಸರ್ವಸಮಾರಂಭದಿಂದಲೂ, ನಿರ್ವಿಘ್ನತೆಯಿಂದಲೂ ಯಥೋಚಿತವಾಗಿ

ಸಾಂಗವಾಯಿತು. ಲಗ್ನಕ್ಕೆ ದೊಡ್ಡ ದೊಡ ಸ್ವಾಮಿಗಳೂ, ಅನೇಕಮಂದಿ ದೇಸಾಯರೂ, ಎಷ್ಟೋಜನ ಸರಕಾರಿಯ ದೊಡ್ಡ ದೊಡ್ಡ ಅಧಿಕಾರಿಗಳೂ, ಸಾವಕಾರರೂ ಸೆಟ್ಟರೂ ತಮ್ಮ ತಮ್ಮ ವೈಭವದಿಂದ ಬಂದದ್ದರಿಂದ ಲಗ್ನಸಮಾರಂಭವು ಪ್ರೇಕ್ಷಣೀಯವಾಗಿತ್ತು. ಸರ್ವಮಂಗಳ ವಾದ್ಯಗಳ ಮಂಜುಳಧ್ವನಿಯ ತರಂಗಗಳು ಸಮಾರಂಭದ ಸುದ್ದಿಯನ್ನು ವಾಯುಮುಖದಿಂದ ಸುತ್ತಲೂ ಸೂಚಿಸುತ್ತಿದ್ದವು. ಪ್ರಸಿದ್ಧ ಪಾತರದವರ ನಾಚೂ, ಗವಯಿಗಳ ಬೈಠಕೂ ರಸಿಕ ಜನರನ್ನು ತಲೆದೂಗಿಸುತ್ತಿದ್ದವು.

ಮೆರವಣಿಗೆ

ವಧೂವರರ ಮೆರವಣಿಗೆಯ ಶೋಭೆಯಾದರೂ ಅದ್ವಿತೀಯವಾಗಿತ್ತು. ಈ ಅಪೂರ್ವ ಸಮಾರಂಭವನ್ನು ನೋಡಲಿಕ್ಕೆ ಸುತ್ತ ಹಳ್ಳಿಗಳ ಜನಸಮೂಹವು ಒಳಿತಾಗಿ ಕೂಡಿತ್ತು. ಮುಂದೆ ಮುಂದೆ ನಡೆಯುವ ಮಂಗಳವಾದ್ಯಗಳ ಧ್ವನಿಯೂ, ಭಟ್ಟಂಗಿಗಳ ಹೊಗಳುವಿಕೆಯ ಸಪ್ಪಳವೂ, ಸ್ತುತಿಪಾಠಕರ ಪರಾಕುಗಳ ಉಚ್ಚಧ್ವನಿಯೂ, ಸಂಗೀತ ಸಾಹಿತ್ಯಗಳ ಸೊಂಪಾದ ನಾದವೂ, ವನ್ಹಿಲೀಲೆಯ ಅದ್ಭುತ ಗರ್ಜನೆಯೂ, ಕೂಡಿದ ಜನರ ಕಲಕಲಾಟವೂ ಒಟ್ಟಾಗಿ ಸೇರಿ ದಿಗ್ಮಂಡಲವನ್ನೇ ವ್ಯಾಪಿಸಿತ್ತು. ಸರ್ವವಸ್ತ್ರಾಭರಣಗಳಿಂದ ಸಿಂಗರವಾಗಿದ್ದ ಮಹತ್ತರವಾದ ಕುದುರೆಗಳು ಗತ್ತನ್ನನುಸರಿಸಿ ಉತ್ಸವದ ಮುಂದೆ ಇಬ್ಬದಿಯಲ್ಲಿಯೂ ಕುಣಿಯುತ್ತಿದ್ದವು. ಎಷ್ಟೋ ಜನ ಶ್ರೀಮಂತರು ದಿವ್ಯಾಶ್ವಗಳನ್ನು ಹೂಡಿದ ತಮ್ಮ ತಮ್ಮ ರಥಗಳನ್ನೇರಿ ದಂಪತಿಗಳ ಮುಂದೆಯೂ, ಹಿಂದೆಯೂ ಗಮಿಸುತ್ತಿದ್ದರು. ಕೆಲ ಅಶ್ವಾರೋಹಿಗಳು, ಇಕ್ಕೆಲದಲ್ಲಿಯೂ ಪಾಲ್ಗೊಂಡು ನಡೆದಿದ್ದರು. ಅಂತಃಪುರದ ಸ್ತ್ರೀಯರು ಅನಂತ ಶೃಂಗಾರದಿಂದ ಸಾರವಾಟಗಳಲ್ಲಿ ಕೂತುಕೊಂಡಿದ್ದರು. ರಾ.ಬ॥ರುದ್ರಗೌಡರು ಪರೋಪಕಾರಕ್ಕಾಗಿ ಮಾಡಿಸಿಕೊಟ್ಟ ಉತ್ತಮವಾದ ಪಲ್ಲಕ್ಕಿಯಲ್ಲಿ ಸರ್ವತೋಪರಿಯಿಂದ ಸಿಂಗರವಾದ ದಂಪತಿಗಳು ವಿರಾಜಮಾನರಾಗಿದ್ದರು. ಹಸಿರು ರೇಸಿಮೆಯ ಪಿಂಛರದಿಂದಲೂ, ಕುತ್ತನಿಯ ಮೆತ್ತನ್ನ ಆಸನಗಳಿಂದಲೂ, ಆನಿಕೆಗಳಿಂದಲೂ, ದಂಡಿಗೆಯ ಮನೋಹರವಾದ ಗೌಸಣಿಕೆಗಳಿಂದಲೂ ಜರತಾರಿಯ ರಾಜಗೊಂಡೆಗಳಿಂದಲೂ, ಮುತ್ತಿನ ಝೂಲರಿಗಳಿಂದಲೂ, ಪಲ್ಲಕ್ಕಿಯು ಬಹು ಸೊಬಗುಳ್ಳದ್ದಾಗಿತ್ತು. ಛತ್ರಚಾಮರಾಪ್ತಾಗಿರಿಗಳಿಂದಲೂ, ನಿಬಿಡವಾದ ಧ್ವಜಪತಾಕೆಗಳಿಂದಲೂ ಶೋಭೆಗೊಂಡ ಪಲ್ಲಕ್ಕಿಯು ಜನಪ್ರವಾಹದ ಮಧ್ಯದಲ್ಲಿ ಸಕಲ ಸಡಗರದಿಂದ ತೇಲಿಹೋಗುತ್ತಿತ್ತು. ಸಂಸ್ಥಾನದ ಸಿಪಾಯರೂ, ಪೋಲಿಸರೂ ಉಭಯ ಪಾರ್ಶ್ವಗಳಲ್ಲಿಯೂ ಆಯುಧಪಾಣಿಗಳಾಗಿದ್ದರು. ಉತ್ಸವದೊಡನೆ ಗಮಿಸುತ್ತಿದ್ದ ಅನಂತ ಅಶ್ವಗಳ ಹೇಷಾರವವು ಸಂಭ್ರಮದ ಗಂಭೀರತೆಯನ್ನೂ, ಸೌಂದರ್ಯವನ್ನೂ ಸೂಚಿಸುತ್ತಿತ್ತು. ಸಾಲ್ಗೊಂಡು ಶೋಭಿಸುವ ಸಾವಿರಾರು ದೀವಿಗೆಗಳ ದಿವ್ಯಪ್ರಕಾರದಲ್ಲಿ ರಥಾರೋಹಿಗಳಾದ ಶ್ರೀಮಂತರ ಮೈ ಮೇಲಿನ ರತ್ನಾಭರಣಗಳ ಹಾಗೂ ಅವರ ದಿವ್ಯ ಪೋಷಾಕುಗಳ ಪ್ರಕಾಶವು ಎದ್ದು ತೋರುತ್ತಿತ್ತು. ಈ ಸಂಭ್ರಮದ ಸುದ್ದಿಯನ್ನು ಸುತ್ತಲೂ ಕೂಗಿ ಹೇಳಲಿಕ್ಕೆ ಎತ್ತರವಾದ ಸ್ಥಳವನ್ನು ಕುರಿತು ಗಮಿಸುತ್ತವೇನೋ ಎಂಬಂತೆ ಎಡೆಬಿಡದೆ ಬಿಡುವ ಬಿರುಸಾದ ಬಾಣಗಳು ನಭೋಮಂಡಲವನ್ನು ಮಂಡಿಸುತ್ತಿದ್ದವು. ಜನದಟ್ಟಣೆಯು ಬಹಳವಾದದರಿಂದ ಸರ್ವರಿಗೂ ನೋಡಲಿಕ್ಕೆ ಸುಲಭವಾಗಲೆಂದು ಜನಸಮೂಹವನ್ನು ಬೆದರಿಸಿ ಹಿಂದಕ್ಕೆ ಸರಿಸುತ್ತವೋ ಎಂಬಂತೆ ಚಕ್ರಬಾಣಗಳು ಗರ್ಜಿಸಿ ಚಕ್ರಾಕಾರವಾಗಿ ಜನರನ್ನು ಇಂಬಾಗಿ ಸರಿಸುತ್ತಿದ್ದವು. ತಾವು ಅತ್ಯುನ್ನತವಾಗಿರುವೆವೆಂಬ ತೆಂಗು ತಾಳೆಗಳ ಗರ್ವಭಂಗವನ್ನು ಮಾಡುತ್ತವೇನೋ ಎಂಬಂತೆ ಕುಡಿಕೆ ಕೊಂಬುಗಳು ಬಹು ಎತ್ತರವಾಗಿ ಉರಿಯುತ್ತಿದ್ದವು. ಒಂದೇ ಬಿಂಬದ ಪ್ರಕಾಶದಿಂದ ಪರಿಶೋಭಿಸುವ ಚಂದ್ರನನ್ನು ತಿರಸ್ಕರಿಸುತ್ತವೋ ಏನೋ ಎಂಬಂತೆ

ತಾರಬಳಿಗೆಗಳು ಒಮ್ಮಿಂದೊಮ್ಮೆ ಸ್ಫೋಟನವಾಗಿ ಚಂದ್ರ ಸದೃಶವಾದ ಅನೇಕ ಬಿಂಬಗಳನ್ನು ಆಕಾಶಕ್ಕೆ ತೂರಿ ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿದ್ದವು. ದೊಡ್ಡಗರ್ನಾಲುಗಳೂ, ಔಟುಗಳೂ ಮುಂಗಾರಿಯ ಸಿಡಿಲಿನ ರಭಸವನ್ನು ಸ್ಮರಣೆಗೆ ತಂದುಕೊಡುತ್ತಿದ್ದವು. ಸಪ್ತವರ್ಣಗಳಿಂದ ಉರಿಯುತ್ತಿರುವ ಹಗಲುಪಂಜುಗಳು ರಾತ್ರಿಯಲ್ಲಿ ಸೂರ್ಯಪ್ರಕಾಶದ ಭಾಸವನ್ನುಂಟು ಮಾಡುತ್ತಿದ್ದವು. ವಿವಾಹೋತ್ಸವಕ್ಕೆ ತಲೆದೂಗಿ ದೇವತೆಗಳು ಪುಷ್ಪಗುಚ್ಛಗಳನ್ನು ಸುರಿಸುತ್ತಾರೋ ಏನೋ ಎಂಬಂತೆ ಹೂಬತ್ತಿಗಳು ಹಲವು ತರದ ಹೂಗಳನ್ನು ಸುರಿಸುತ್ತಿದ್ದವು. ಸಮಾರಂಭವು ಸುಖಕರವಾಗಿದೆಯೆಂದು ತಿಳಿಸಲಿಕ್ಕೆ ಸುಗಂಧವು ಸುತ್ತಲೂ ಹರಡಿಕೊಂಡಿತ್ತು. ಸಾರಾಂಶ, ಸಾವಿರಾರು ದೀವಿಗೆಗಳಿಂದಲೂ, ತರತರದ ಮದ್ದಿನ ಲೀಲೆಗಳಿಂದಲೂ ಅನೇಕ ವಿಧವಾದ ವಿವಾಹೋತ್ಸವಗಳಿಂದಲೂ ರಾತ್ರಿಯು ಸ್ವೈರಗತಿಯಿಂದ ಕುಣಿದಾಡುತ್ತಿತ್ತು. ಸರ್ವಸಂಭ್ರಮದಿಂದ ಜನಿತವಾದ ಆನಂದರಸವು ಮೇರೆದಪ್ಪಿತು. ಇಂತಹ ಅನಂತ ಸಮಾರಂಭವನ್ನು ನೋಡುತ್ತು ರಾ||ಬ||ರುದ್ರಗೌಡರು ಯಾರಿಗೂ ಅಪಾಯವಾಗದಂತೆ ದಕ್ಷತೆಯನ್ನು ತೆಗದುಕೊಳ್ಳುತ್ತ ಜನಸಮೂಹದ ಮಧ್ಯದಲ್ಲಿ ಸಂತೋಷದಿಂದ ಗಮಿಸುತ್ತಿದ್ದರು.

ಬೀಗರ ಬಿಡಾರ

ರಾವಬಹದ್ದೂರವರು ತಮ್ಮ ರಾಹುಟಿಗಳನ್ನು ಊರ ಪಶ್ಚಿಮಕ್ಕಿರುವ ದೇಸಗತಿಯ ಮಾಮರಗಳ ತಣ್ಣೆರಳಿನಲ್ಲಿ ಹೊಡಿಸಿದ್ದರು. ಇವರ ರಾಹುಟಿಗೆ ಹೊಂದಿ ಶ್ರೀಮಂತ ಸಿರಸಂಗೀ ಸರದೇಸಾಯಿಯವರ ಡೇರೆಗಳು ವಿಶಾಲವಾಗಿ ನಿಂತುಕೊಂಡಿದ್ದವು. ಇವುಗಳ ಬಲಕ್ಕೆ ಅತಿಥಿಗಳ ವಿಶ್ರಾಂತಿಗಾಗಿ ಅನೇಕ ತಂಬೂಗಳು ಸಾಲುಗೊಂಡಿದ್ದವು. ಈ ವಿಸ್ತಾರವಾದ ಪ್ರದೇಶದಲ್ಲಿ ಸ್ವಚ್ಛವಾದ ಸುಳಿಗಾಳಿಯು ಸ್ವೇಚ್ಛೆಯಿಂದ ಸುಳಿದಾಡುತ್ತಿತ್ತು. ಮೊದಲೇ ವಸಂತಮಾಸ, ಕೇಳುವದೇನು? ತರುಲತೆಗಳು ಒಳಿತಾಗಿ ಚಿಗಿತು ಮಹದಾನಂದವನ್ನುಂಟುಮಾಡಿದ್ದವು. ರಾಹುಟಿಗಳ ಮುಂಗಡೆಯಲ್ಲಿ ಕಲ್ಲಿನಿಂದ ಕಟ್ಟಿದ ಶೀತಲೋದಕದ ವಾಪಿಯು ಬಂದ ಜನರ ಬೇಸಿಗೆಯ ಬಳಲಿಕೆಯನ್ನು ಹೋಗಲಾಡಿಸುತ್ತಿತ್ತು. ಸಾಲುಗಿಡಗಳ ನೆರಳಿಗೆ ಪಾಲ್ಗೊಂಡು ಕಟ್ಟಿದ ಎಷ್ಟೋ ಅಶ್ವಗಳು ತಮ್ಮ ರಮ್ಯವಾದ ಪುಚ್ಛಗಳನ್ನೆತ್ತಿ ಜಾಡಿಸುತ್ತ, ಮೇಲಿಂದ ಮೇಲೆ ಕಾಲುಗಳನ್ನು ಬಡಿಯುತ್ತ, ಉಚ್ಚವಾದ ಹೇಷಾರದಿಂದ ಸುತ್ತುಮುತ್ತಿನ ಜನರ ಮುಖಮಂಡಲಗಳನ್ನು ತಿರುಗಿಸುತ್ತ, ತಮ್ಮ ಯೌವನ ಮದದ ಸ್ವಾಭಾವಿಕವಾದ ಒಯ್ಯಾರದಿಂದ ರಾಹುಟಿಗಳ ಬಲಭಾಗಕ್ಕೆ ದೂರವಾಗಿ ನಿಂತುಕೊಂಡಿದ್ದವು. ಮತ್ತು ಥಳಥಳ ಹೊಳೆಯುವ ಬಗಿಗಳೂ, ರಥಗಳೂ, ಸಾರವಾಟಗಳೂ, ಟಾಂಗೆಗಳೂ ಶಿಸ್ತಿನಿಂದ ಇರಿಸಲ್ಪಟ್ಟಿದ್ದವು. ರಾಹುಟಿಗಳ ಸಮೀಪದಲ್ಲಿ ಸ್ನಾನಕ್ಕೂ ಊಟ ಉಪಚಾರಗಳಿಗೂ, ಬೇರೆ ಬಿಡಾರಗಳು ನಿಲ್ಲಿಸಲ್ಪಟ್ಟಿದ್ದವು. ರಾಜರೀತಿಯಿಂದ ಹೊಡೆಯಲ್ಪಟ್ಟ ಇವೆಲ್ಲ ಬಿಡಾರಗಳು ನೋಡುವವರಿಗೆ ಬಹು ಚೆಂದಾಗಿ ತೋರುತ್ತಿದ್ದವು.

ಸುರಗೀ ಊಟದ ಸಾಮಾನು

ಈ ಅಪೂರ್ವವಾದ ಲಗ್ನದಲ್ಲಿಡಲ್ಪಟ್ಟ ಸುರಗೀ ಸಾಮಾನುಗಳ ಒಂದು ಚಿಕ್ಕ ಪ್ರದರ್ಶನವು ಪ್ರೇಕ್ಷಣೀಯವಾಗಿತ್ತು. ಲಿಂಗಾಯತ ಜನರ ಲಗ್ನದಲ್ಲಿ ಅಗತ್ಯದಿಂದಲೂ, ಅಭಿಮಾನದಿಂದಲೂ, ಮಾಡಲ್ಪಡುತ್ತಿರುವ ಇದೊಂದು ಸ್ತ್ರೀಯರ ಹಸ್ತಕೌಶಲ್ಯವು ಅವಶ್ಯವಾಗಿ ನೋಡತಕ್ಕದ್ದಿರುತ್ತದೆ. ವಧುವಿನ ಕಡೆಯವರು ತಮ್ಮ ಹಸ್ತಕೌಶಲ್ಯದಿಂದ ಮಾಡಿದ ಅನೇಕ ಪ್ರಕಾರದ ಊಟದ ಪದಾರ್ಥಗಳನ್ನೂ, ಫಲಾಹಾರದ

ಸಾಮಗ್ರಿಗಳನ್ನೂ, ಆಟಿಕೆಯ ಸಾಮಾನುಗಳನ್ನೂ, ಇತರ ವಿಲಾಸದ ಒಡವೆಗಳನ್ನೂ ಲಗ್ನದಲ್ಲಿ ಬಹು ಸಮಾರಂಭದಿಂದ ತೆಗೆದುಕೊಂಡು ಹೋಗಿ, ವರನಿಗೆ ಕೊಡುವ ಸಾಂಪ್ರದಾಯವು ವಿಶೇಷವಾಗಿ ಲಿಂಗವಂತ ಜನರಲ್ಲಿರುತ್ತದೆ. ಈ ಸಂಪ್ರದಾಯಕ್ಕೆ ಸುರಗೀ ಕೊಡೋಣವೆಂದೂ, ಈ ಊಟಕ್ಕೆ ಸುರಿಗೀ ಊಟವೆಂದೂ, ಮಹಿಷೀ ಊಟವೆಂದೂ ಅನ್ನುತ್ತಾರೆ. ಅದರಿಂದ ಚತುರರಾದ ತರುಣಿಯರು ತಮ್ಮ ಜಾಣತನವನ್ನು ತೋರಿಸಲಿಕ್ಕೆ ಸುರಿಗಿಯ ಸಾಮಾನುಗಳನ್ನು ಬಹು ಅಕ್ಕರತೆಯಿಂದಲೂ, ಅಭಿಮಾನದಿಂದಲೂ ಮಾಡಿರುತ್ತಾರೆ.

ಭಾಮಿನೀ ಷಟ್ಪದಿ

ಪರಡಿ ಸವತಿಯ ಬೀಜ ಗೌಲಿಯು।ಮುರಿಗಿ ಗೌಲಿಯು ಗುಳಿಗೆ ಶಂಕವು।
ತರತರದ ಗೀರ್ಸಿಂಪೆ ಉಂಗರ ಗೌಲಿ ಯಾಲಕ್ಕಿ॥
ಮಿರುಗುವೆಳ್ಳುಗುರೊತ್ತು ಮಲ್ಲಿಗೆ ।ಸರಸ ಹೊನ್ನೊತ್ತವು ಲವಂಗವು।
ಪರಿಪರಿಯ ಸಚ್ಚಂದ್ರಹಾರವು ಸುರಿಗಿ ಕಾಳುಗಳು ॥೧॥

ಇವೇ ಮುಂತಾದ ಸಾಮಾನ್ಯ ಜನರು ಸಹ ಮಾಡುವ ಸುರಿಗೀಕಾಳುಗಳನ್ನಲ್ಲದೆ, ಶ್ರೀಗಂಧದ ಮನೋಹರವಾದ ಮಂಟಪ, ಛತ್ರಚಾಮರ, ಕರಂಡಕ ಮುಂತಾದ ಹಲವು ಬಗೆಯ ಚಿತ್ರವಿಚಿತ್ರವಾಗಿ ಕೆತ್ತಿದ ಕೈಗಾರಿಕೆಯ ಒಡವೆಗಳನ್ನೂ, ಧಾತುಗಳಲ್ಲಿಯೂ, ಸಂಗಮರವರೀ ಕಲ್ಲುಗಳಲ್ಲಿಯೂ ಕೆತ್ತಿಮಾಡಲ್ಪಟ್ಟ ಎಷ್ಟೋ ಪೆಟ್ಟಿಗೆ ಭರಣಿ ಮುಂತಾದ ಸಾಮಾನುಗಳನ್ನೂ, ಪಡಿಯಚ್ಚಿನಿಂದ ತಯಾರಿಸಿದ ಪರಿಪರಿಯ ಸಕ್ಕರೆಯೊಡವೆಗಳನ್ನೂ, ಎರಕುಹೊಯ್ದ ಕೆಲವು ಗೊಂಬೆಗಳನ್ನೂ ಸಂಗ್ರಹಿಸಿ ಶ್ರೀಮಂತರಿಗೆ ಸುರಿಗೀ ಊಟವನ್ನು ಕೊಟ್ಟು, ಬಂದ ಜನರೆಲ್ಲರು ನೋಡಬೇಕೆಂಬ ಇಚ್ಛೆಯಿಂದ ಅವುಗಳನ್ನೆಲ್ಲ ರಾಜವಾಡೆಯ ಸದರುಗಟ್ಟೆಯ ಎದುರಿಗೆ ನೋಡುವವರಿಗೆ ಸುಲಭವಾಗುವಂತೆ ಶಿಸ್ತಿನಿಂದಲೂ, ಚಂದದಿಂದಲೂ ಸಾಲಾಗಿ ರೇವಡಿಗಾರರ ಅಂಗಡಿಯಂತೆ ಇರಿಸಿದ್ದರು. ಬಹು ಜನರು ತಂಡತಂಡಾಗಿ ಬಂದು ನೋಡಿ, ಆ ಪದಾರ್ಥಗಳನ್ನು ಮಾಡಿದ ಜಾಣ್ಮೆಗೆ ನಿಶ್ಚಯವಾಗಿ ಬೆರಗಾಗುವರು. ನಾಲ್ಕೈದು ಮೊಳ ಉದ್ದವಾದದ್ದೊಂದು ಕರಚೀಕಾಯಿಯು ಪ್ರದರ್ಶನ ಮಂಟಪದ ಮುಂಭಾಗದಲ್ಲಿ ಅಡ್ಡಕಟ್ಟಲ್ಪಟ್ಟಿತ್ತು. ಇವೆಲ್ಲ ಸಾಮಾನುಗಳನ್ನು ನೋಡಲಾಗಿ ರಾ.ಬ॥ರವರ ಮನೆತನದ ಸ್ತ್ರೀಯರು ಎಷ್ಟು ಜಾಣ್ಮೆಯುಳ್ಳವರಿರುವರೆಂಬದು ತಿಳಿಯುತ್ತದೆ. ಇಂತಹ ವಿಚಿತ್ರ ಸಾಮಾನುಗಳನ್ನು ಮಾಡುವದರಲ್ಲಿಯೂ, ಅತ್ಯುತ್ತಮವಾದ ಅಡಿಗೆಯನ್ನು ಮಾಡುವದರಲ್ಲಿಯೂ ಲಿಂಗಾಯತ ಸಮಾಜದಲ್ಲಿ ಬಣಜಿಗರೇ ಮೇಲಾದವರೆಂದು ಹೇಳಬಹುದು.

ಶ್ರೀಮಂತರು, ಬಡವರು ಎಂಬ ಭೇದಾಭೇದವಿಲ್ಲದೆ ಲಗ್ನಕ್ಕೆ ಬಂದ ಸರ್ವಜನರಿಗೂ ಊಟದ ವ್ಯವಸ್ಥೆಯನ್ನು ಒಳ್ಳೇ ಶಿಸ್ತಿನಿಂದ ಮಾಡಿದ್ದರು.

ಶಾ-ವಿ-ವೃತ್ತ

ಬುಂದೇ ಬೇಸನು ಖೀರು ಮಂಡಗಿ ದಳೇ ಶ್ರೀಖಂಡ ಅಂಬೋಡಿ ಬಾ।
ಸುಂದೇ ಕೇಶರಭಾತ ಚಕ್ಕಲಿ ಶಿರಾ ಗುಳ್ಳೋರಿಗಿ ಘೀವರೀ॥
ಚಂದಾಗಿರ್ದ ಪುರೇ ಜಿಲೇಬಿ ವರಮೋತಿಚೂರ ಅನ್ನಾರಸಂ।
ಗಂಧಂಬೀರ್ವ ಚಿರೋಟಿ ಹೋಳಿಗೆಗಳೂ ಸುಸ್ವಾದವೆಷ್ಟೆಂಬೆನು ॥೧॥

ರಾ.ಬ॥ರುದ್ರಗೌಡ ಸಾಹೇಬರ ಸುವ್ಯವಸ್ಥೆ

ಈ ಪ್ರಕಾರ ಪರಿಪರಿಯ ಪಕ್ವಾನ್ನಗಳನ್ನುಂಡು ಸಮಾರಂಭವನ್ನು ಮನದಣಿ ನೋಡಿ, ಪರಮಾನಂದವನ್ನು ಹೊಂದಿ ಜನರು ವಿಶ್ರಾಂತಿಗಾಗಿಯೂ, ವಸಂತ ಘರ್ಮವನ್ನು ನೀಗುವದಕ್ಕಾಗಿಯೂ, ಮಧ್ಯಾಹ್ನದಲ್ಲಿ ರಾಹುಟಿಯ ಬದಿಯಲ್ಲಿರುವ ಮಾಮರಗಳ ತಂಪು ನೆರಳಿಗೆ ಮೈಯ್ಯೊಡ್ಡಿ ಮಲಗಿ ಸುಖಸಾಮ್ರಾಜ್ಯವನ್ನನುಭವಿಸುತ್ತಿದ್ದರು. ಊಟದ ಸಂಭ್ರಮವು ವಾಡೆಯಲ್ಲಿಯೂ, ಊರ ಹೊರಬದಿಯ ಬಿಡಾರದಲ್ಲಿಯೂ ಅಭೇದವಾಗಿ ನಡೆಯುತ್ತಿತ್ತು. ಈ ಲಗ್ನಸಮಾರಂಭದಲ್ಲಿ ಮುಖ್ಯವಾಗಿ ಸುಶಿಕ್ಷಿತ ಜನ ಸಾಮೂಹವೆ ಹೆಚ್ಚಿಗಿತ್ತು. ಲಗ್ನಕ್ಕೆ ಬಂದ ಯಾವತ್ತು ಜನರಿಗೆ ಅವರವರ ಯೋಗ್ಯತಾನುಸಾರವಾಗಿ ಆದರಾತಿಥ್ಯ-ಮಾನಮರ್ಯಾದೋಪಚಾರಗಳು ಮಾಡಲ್ಪಟ್ಟವು. ಜಂಗಮರಿಗೂ, ಅನಾಥರಿಗೂ, ಭಿಕ್ಷುಕರಿಗೂ ಅನ್ನಕ್ಕೆ ಮುಕ್ತದ್ವಾರ ಮಾಡಿ, ತಾಂಬೂಲ-ದಕ್ಷಿಣೆಗಳಿಂದ ಅವರನ್ನು ಸಂತೋಷಗೊಳಿಸಿದರು. ರಾವಬಹದ್ದೂರರವರ ಅಡಿಗೆಯವರಾದ ಬಸಪ್ಪ, ಖಜೀನದಾರ, ವೀರಪ್ಪ ಚಿಮ್ಮಲಗಿ, ಬಸಪ್ಪ ನರಸಾಪುರ ಎಂಬವರು ಒಳ್ಳೇ ಕಸರತ್ತು ಮಾಡಿ, ಬಂದಷ್ಟು ಜನರಿಗೆ ಅಡಿಗೆಯನ್ನು ಆಗಿಂದಾಗ್ಗೆ ತಯಾರಿಸುತ್ತಿದ್ದರು. ಅಡಿಗೆಯನ್ನು ಮಾಡುವದೇ ಈ ಅಡಿಗೆಯವರ ಜೀವನೋದ್ಯೋಗವಾಗಿರುವದರಿಂದ ಅಡಿಗೆಯ ತಾರತಮ್ಯವೂ, ಶಿಸ್ತೂ ಬಣ್ಣಿಸುವಂತಿದ್ದವು. ಹೊತ್ತಿಗೆ ಸರಿಯಾಗಿ ಸಾವಿರಾರು ಜನರ ಮೃಷ್ಟಾನ್ನದ ಊಟವಾಗುತ್ತಿತ್ತು. ಎಷ್ಟೋ ಸಂಸ್ಥಾನಿಕರ ದೊಡ್ಡ ದೊಡ್ಡ ಲಗ್ನ ಸಮಾರಂಭಗಳಲ್ಲಿ ಅಳತಿಲ್ಲದೆ ಹಣವೆಚ್ಚವಾಗುತ್ತಿದ್ದು, ಹಲವು ಮಂದಿ ವ್ಯವಸ್ಥಾಪಕರೂ, ಅಡಿಗೆಯವರೂ ಎಡೆಬಿಡದೆ ಎಡತಾಕುತ್ತಿದ್ದರೂ ವ್ಯವಸ್ಥೆಯಿಂದ ಕೆಲಸವಾಗದೆ ಒಂಭತ್ತು ತಾಸಿಗೆ ಊಟವಾಗಬೇಕಾದರೆ ಸಾಕುಬೇಕಾಗುವದು. ಆದರೆ ವ್ಯವಸ್ಥೆಯ ಮೂರ್ತಿಯಂತಿರುವ ರಾ.ಬ॥ರುದ್ರಗೌಡರ ಕೈಯೊಳಗಾಡುವ ಪ್ರತಿಯೊಬ್ಬ ಮನುಷ್ಯನು ಕಾರ್ಯಕ್ರಮದ ಶಿಸ್ತನ್ನು ಬಿಡದೇ ಅನುಸರಿಸುವನು. ಎಂಥ ಆಲಸ್ಯವುಳ್ಳವನಾದರೂ ಇವರ ಕಯ್ಯೊಳಗೆ ಆಡಿದನೆಂದರೆ ಅತಿ ಚಪಲನಾಗುವನು. ಆಳುಮಕ್ಕಳಿಂದ ಅರಸುಮಕ್ಕಳುಗಳ ವರೆಗೆ ಪ್ರತಿಯೊಬ್ಬನೂ ಇವರ ಶಿಸ್ತನ್ನೇ ಅನುಕರಣ ಮಾಡುವನು. ಆದ ಕಾರಣ ಇವರು ಕೈಹಾಕಿದ ಪ್ರತಿಯೊಂದು ಕಾರ್ಯವು ಹೊತ್ತಿಗೆ ಸರಿಯಾಗಿ ಆಗುವದರಲ್ಲಿ ಬಹುಶಃ ತಪ್ಪುತ್ತಿದ್ದಿಲ್ಲ. ಲಗ್ನಾರ್ಥವಾಗಿ ಬಂದಿದ್ದ ಎಷ್ಟೋ ಜನರು ಇವರ ಶಿಸ್ತನ್ನು ಅನುಕರಣ ಮಾಡುವದಾಯಿತು.

ಔದಾರ್ಯದ ಮಾದರಿ

ಈ ಲಗ್ನಸಮಾರಂಭದಲ್ಲಿ ರಾ.ಬ॥ರವರ ಅನುಪಮೇಯವಾದ ಔದಾರ್ಯವು ನೆರೆದ ಜನಸಮೂಹದ ನಿದರ್ಶನಕ್ಕೆ ಬಂತು. ಅದೇನೆಂದರೆ, ಲಂಚಗುಳಿ ಕಾಮದಾರರು ಸ್ವಾರ್ಥವನ್ನು ಸಾಧಿಸಿಕೊಂಡು ಪರರ ಕಾರ್ಯಗಳನ್ನು ಮಾಡಿಕೊಟ್ಟಿರುತ್ತಾರೆ. ರಾವಬಹದ್ದೂರರವರು ಪರೋಪಕಾರ ಕಾರ್ಯಗಳನ್ನು ಸ್ವಾರ್ಥವನ್ನೆಣಿಸದೆ, ಸತ್ಯಪಕ್ಷವನ್ನನುಸರಿಸಿಯೇ ಕೇವಲ ನಿರಪೇಕ್ಷಬುದ್ಧಿಯಿಂದ ಮಾಡುತ್ತಿದ್ದರು. ಇವರ ಸ್ವಾಭಾವಿಕವಾದ ಲೋಕೋಪಕಾರ ಬುದ್ಧಿಯಿಂದ ಇವರು ಲೋಕಪೂಜ್ಯರೇ ಆಗಿದ್ದರು. ಇವರಲ್ಲಿ ಪ್ರಜಾವಾತ್ಸಲ್ಯದ ಯಾವ ಪ್ರಕಾರ ಅನಿವಾರವಾಗಿತ್ತೋ ಅದರಂತೆ ಇಡೀ ಕರ್ನಾಟಕದ ಜನರಲ್ಲಿ ಪ್ರಭುನಿಷ್ಠೆಯು ದೃಢವಾಗಿತ್ತು. ಇದಲ್ಲದೆ ಕಾರ್ಯಕಾರಣ ಸಂಬಂಧವೇನಿಲ್ಲದೆ ಇವರ ನ್ಯಾಯನಿಷ್ಠ ಗುಣಮೆಚ್ಚಿ ಎಷ್ಟೋ ಶ್ರೀಮಂತರೂ, ಸಾವಕಾರರೂ ಇವರ ಪರಮಸ್ನೇಹಿತರಾಗಿದ್ದರು. ಸಾರಾಂಶ, ದುಷ್ಟರ ಹೊರತು ಎಲ್ಲ ಸಾತ್ವಿಕ ಸಮಾಜವು ಇವರ ವಿಷಯಕ್ಕೆ

ನಿಃಸೀಮವಾದ ಪ್ರೇಮವಿತ್ತು. ಲಗ್ನಕ್ಕೆ ಉಭಯ ಪಕ್ಷದ ಬೀಗರು ಬಿಜ್ಜರು ಬಂಧು ಬಳಗದವರಲ್ಲದೆ ಹಿಂದೆ ಹೇಳಿದಂತೆ ಎಷ್ಟೋ ಶ್ರೀಮಂತರೂ, ಸಾವಕಾರರೂ ಬಂದಿದ್ದರು. ಅವರಲ್ಲಿ ಮುಖ್ಯವಾಗಿ ರಾವಬಹದ್ದೂರವರ ಪರಮಸ್ನೇಹಿತರಾದ ಶಿರಸಂಗಿಯ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರೂ, ವಂಟಮುರಿ, ಅಣ್ಣಿಗೇರಿ, ಹಂದಿಗಿನೂರ, ಕಡಕೋಳ, ತಲ್ಲೂರ, ಯರಗಟ್ಟಿ ದೇಸಗತಿಯವರೂ, ಇಂಗಳಿಗಿ, ರುದ್ರಾಪುರ, ಗೊಂತಮಾರ, ಬುಗಡೀಕಟ್ಟಿಗಳ ದೇಸಾಯರೂ, ಬಾಂದೇವಾಡಿ ಅರಸರ ಕಾರಭಾರಿಯವರೂ, ಪ್ರಸಿದ್ಧ ಸಾವಕಾರ ಚಿಕ್ಕೋಡಿ ತಾಲೂಕ ಕುರಲೀಗ್ರಾಮದ ಅಪ್ಪಯ್ಯಪ್ಪ ಸಿಂತ್ರೆಯವರೂ, ಬೆಳಗಾವ ತಾಲೂಕ ಅರಳೀಕಟ್ಟಿಯ ಹೊಳೆಬಸವಪ್ಪ ಸಂಗೊಳ್ಳಿಯವರೂ, ಸಂಕೇಶ್ವರದ ಮಹಾಳಂಕ ಗುರುಪಾದಪ್ಪನವರೂ, ಮತ್ತು ನಿಪ್ಪಾಣಿಯ ಕೋರಿವಾಲೆ ಗಿರಿಮಲ್ಲಪ್ಪನವರೂ ಮುಂತಾದ ದೊಡ್ಡ ದೊಡ್ಡ ಸಾವಕಾರ ಜನರೂ ಬಂದಿದ್ದರು. ಇವರಲ್ಲದೆ ಕೆಲ ಸರಕಾರೀ ಅಧಿಕಾರಿಗಳೂ ಕೂಡಿದ್ದರು.

ಇವರೆಲ್ಲರು ತಮ್ಮ ಪ್ರೀತಿಯನ್ನು ತೀರಿಸುವದು ಇದೇ ತಕ್ಕ ಸಮಯವೆಂದರಿತು ಸಾವಿರಾರು ರೂಪಾಯಿಗಳ ವಸ್ತ್ರಗಳ ಉಡುಗರೆಯನ್ನು ಅಹೇರಾರ್ಥವಾಗಿ ತಂದಿದ್ದರು. ರಾವಬಹದ್ದೂರವರು ಇದನ್ನು ತಿಳಿದು ಲಗ್ನಮಂಟಪದಲ್ಲಿ ಕಿಷ್ಕಿಂಧವಾಗಿ ಕೂಡಿದ ಜನ ಸಮೂಹದೆದುರಿಗೆ ನಿಂತು, "ವಿವಾಹೋತ್ಸವಕ್ಕೆ ಬಂದಿದ್ದ ಸರ್ವಜನರಿಗೆ ನನ್ನ ವಿನಂತಿಯೇನಂದರೆ- ನೀವೆಲ್ಲರು ಈ ಲಗ್ನಸಮಾರಂಭಕ್ಕೆ ಬಂದದ್ದರಿಂದ ನನಗೆ ಪರಮ ಸಂತೋಷವಾಗಿದೆ. ನೀವು ನಿಮ್ಮ ಪ್ರೀತಿಯಿಂದ ತಂದ ಉಡುಗರೆಗಳನ್ನು ನಾವು ಅಹೇರ ಮಾಡಿಸಿಕೊಳ್ಳುವದು ವಾಸ್ತವಿಕವಾದದ್ದು. ಮತ್ತು ಸಾಂಪ್ರದಾಯಾನುಸಾರವಾದದ್ದು. ಆದರೆ ನೀವೆಲ್ಲರು ತಂದಿದ್ದ ಬಹುಮೌಲ್ಯವುಳ್ಳ ವಸ್ತ್ರಗಳನ್ನು ನೋಡಿ ಕುತ್ಸಿತ ಜನರು ಮತ್ಸರಬುದ್ಧಿಯಿಂದ ಯಾವದೊಂದು ಕುಕರ್ಮದ ಕಲ್ಪನೆಯನ್ನು ತೆಗೆಯದೆ ಬಿಡಲಾರರು. ನೀವು ಪ್ರೇಮದಿಂದ ತಂದ ಉಡುಗರೆಯನ್ನು ಅಹೇರ ಮಾಡಿಸಿಕೊಂಡಕ್ಕಿಂತ ಹೆಚ್ಚು ಸಂತೋಷವಾಗಿರುತ್ತದೆ. ಕಾರಣ ನೀವು ಯಾವ ಮಾತಿಗೂ ಅಸಮಾಧಾನ ಪಡದೆ, ತಂದ ಅಹೇರಗಳನ್ನು ತಿರುಗಿ ಒಯ್ಯಬೇಕು. ನಮ್ಮ ಹಾಗೂ ದೇಸಗತಿಯ ಬಂಧುಗಳು ಮತ್ತು ಬೀಗರು ಬಿಜ್ಜರು ಮಾತ್ರ ತಂದ ಅಹೇರಗಳನ್ನಷ್ಟೇ ಶಿಷ್ಟಾಚಾರ ಪ್ರಕಾರ ಸ್ವೀಕರಿಸುವೆವು. ಈ ನನ್ನ ಸವಿನಯ ವಿನಂತಿಗೆ ಯಾರೂ ಅಡ್ಡಾಗಬಾರದು" ಎಂಬದಾಗಿ ನಿಷ್ಠುರ ನುಡಿಗಳಿಂದ ಹೇಳಲು, ಋಣಾನುಬಂಧುಗಳಾದ ಸರ್ವಜನರು ತಂದ ಉಡುಗರೆಗಳನ್ನು ನಿರುಪಾಯರಾಗಿ ತಿರುಗಿ ಒಯ್ಯಬೇಕಾಯಿತು. ನೋಡಿರಿ, ರಾವಬಹದ್ದೂರವರ ಔದಾರ್ಯವೂ, ಮುಂಜಾಗ್ರತೆಯೂ ಎಷ್ಟು ವರ್ಣನಾರ್ಹವಾಗಿವೆ? ಮಹತ್ವಾಕಾಂಕ್ಷಿಯೂ, ಅದೂರದೃಷ್ಟಿಯೂ, ಅಜಾಗರೂಕನೂ ಆದ ಬೇರೊಬ್ಬ ಅಧಿಕಾರಿಯಾಗಿದ್ದರೆ ಬಂದ ಉಡುಗರೆಗಳನ್ನೆಲ್ಲ ಬಡಬಡನೆ ಮಾಡಿಸಿಕೊಂಡು ಬೊಕ್ಕಸಕ್ಕೆ ಒಗಿಸುತ್ತಿದ್ದನು. ಹಿಂದಕ್ಕೆ ಬಿಟ್ಟ ಅಹೇರಗಳ ವಸ್ತ್ರಗಳ ಬೆಲೆಯು ಸುಮಾರು ಅಯ್ವತ್ತು ಸಾವಿರ ರೂಪಾಯಿಯಾಗಬಹುದು. ಆದರೆ "ಪರದ್ರವ್ಯೇಷು ಲೋಷ್ಠವತ್" ಬಗೆಯುವ ಮಹಾತ್ಮರು ಪ್ರಸಂಗ ವಿಶೇಷದಲ್ಲಿ ಧನರಾಶಿಯನ್ನು ತೃಣೀಕರಿಸುವರು. ಹೇಗೂ ಲಗ್ನದ ಕಾರ್ಯವು, ಉಡುಗರೆಗಳನ್ನು ತಂದವರೆಲ್ಲರೂ ಪ್ರೇಮ ಪುರಸ್ಸರವಾಗಿಯೇ ತಂದಿದ್ದರು. ಸಮಾಜದ ಸಾಂಪ್ರದಾಯದಂತೆ ತೆಗೆದುಕೊಂಡಿದ್ದರೆ ಏನೂ ಅಡ್ಡಿಯಿದ್ದಿಲ್ಲ. ಯಾರೂ ಕೇಳುತ್ತಿದ್ದಿಲ್ಲ. ಒಂದು ವೇಳೆ ಕೇಳಿದರೂ ಹೇಳಬಹುದಾಗಿತ್ತು. ಈ ವಿಷಯಕ್ಕೆ ಯಾರಿಂದ ಏನೂ ಆಗುತ್ತಿದ್ದಿಲ್ಲ. ಆದರೂ ಸೂಕ್ಷ್ಮ ವಿಚಾರಿಗಳಾದ ರಾ.ಬ॥ರುದ್ರಗೌಡರು ಇವುಗಳನ್ನು ತೆಗೆದುಕೊಂಡ ಯಶಸ್ಸಿನಕಿಂತಲೂ, ತಿರುಗಿ ಬಿಟ್ಟ ಕೀರ್ತಿಯೇ ಲೇಸೆಂದು ತಿಳಿದು ಬಿಟ್ಟುಬಿಟ್ಟರು. ಇದು ಒಂದು ಬಗೆಯ ರಾವಬಹದ್ದೂರವರ ಮಹೌದಾರ್ಯದ ಮಾದರಿಯೆಂದು ಹೇಳಬಹುದು.

ರುದ್ರವ್ವನವರು ಪುಷ್ಪವತಿಯಾದದ್ದು

ಲಗ್ನಸಮಾರಂಭವು ಸಾಂಗವಾದ ಬಳಿಕ, ಬಂದ ಜನರನ್ನು ಅವರವರ ಯೋಗ್ಯತಾನುಸಾರವಾಗಿ ಮನ್ನಣೆಯಿಂದ ಕಳುಹಿಸಿದರು. ಲಗ್ನವಾದ ೧೦-೧೫ ದಿವಸಗಳಲ್ಲಿಯೇ ರುದ್ರಾಣಿಯವರು ಶುಭಮುಹೂರ್ತದಲ್ಲಿ ಋತುಮತಿಯರಾದದರಿಂದ ಸರ್ವಜನರಿಗೂ ಆನಂದವಾಯಿತು. ಕೂಡಲೆ ಸರ್ವೋತ್ಕೃಷ್ಟವಾದ ಮಂಟಪವನ್ನು ರಚಿಸಿ ಮಂಗಳಾಂಗಿಯರೆಲ್ಲ ಹೆಂಗಳೆಯರೆಲ್ಲ ಸಿಂಗರವಾಗಿ ಬಂದು,

ಉಡಿಯ ತುಂಬುವ ಪದ

ದಾಟಿ॥ "ಏಳಿರೆಲ್ಲರು ಸಾಲುಗೊಳ್ಳಿರಿ" ಎಂಬ ಪದದಂತೆ

ಉಡಿಯ ತುಂಬಿರೆ ಶ್ರೀ ಗೌರಿದೇವಿಗೆ। ಜಡಜಮುಖಿಯರೆಲ್ಲ ರುದ್ರಾಣಿಯವರಿಗೆ ॥ಪಲ್ಲವಿ॥
ಕುಂದಕುಸುಮದಿಂ ಶ್ರೀಗಂಧಲೇಪದಿಂ। ಚಂದವಾದ ಕೇಶರ ಕಸ್ತೂರಿ ತಿಲಕದಿಂ ॥೧॥
ದುಂಡುಮಲ್ಲಿಗೀ ಹೂದಂಡೆಯಿಂದಲಿ।ತೊಂಡಲಗಳು ತೂಗುತಿರಲು ಚಂದದಿಂದಲಿ ॥೨॥
ವೀಳೆಯೆಲಿಗಳು ಗೊನೆ ಬಾಳೆಹಣ್ಣುಗಳು। ಬಾಲೆಗೆ ರುದ್ರವ್ವಗಿಂದು ಅಡಿಕೆ ಫಲಗಳು ॥೩॥
ತೆಂಗು ಕಾಯ್ಗಳು ನಾರಂಗ ಫಲಗಳು। ತಂಗಿಗೈದು ಲಿಂಬಿಹಣ್ಣು ದ್ರಾಕ್ಷಿಗೊನೆಗಳು ॥೪॥
ಮುತ್ತಿನಾರತಿ ನೀವೆತ್ತಿ ಬೆಳಗಿರಿ । ನಿತ್ಯದಲ್ಲಿ ಸತ್ಯ ಬಸವನನ್ನು ಪಾಡಿರಿ ॥೫॥

ಈ ಪ್ರಕಾರ ಮಂಗಳವಾಡಿ ಶ್ರೀಮಂತಿಕೆಯ ಸಡಗರದಿಂದ ರುದ್ರಾಣಿಯವರ ಉಡಿಯನ್ನು ತುಂಬಿ, ಶೋಭನಕಾರ್ಯ (ಗರ್ಭಾದಾನಕಾರ್ಯ)ವನ್ನು ಸಾಂಗಮಾಡಿದರು. ಈ ನೂತನ ದಂಪತಿಗಳು ಪರಸ್ಪರ ಪ್ರೇಮಭಾವದಿಂದ ಪ್ರಪಂಚ ಸುಖಾಸಕ್ತರಾದದ್ದನ್ನು ಕಂಡು, ಸರ್ವಪರಿವಾರದವರು ಪರಮಾನಂದವನ್ನು ಹೊಂದಿದರು.

ಕಾಶೀಬಾಯಿಯವರ ಜನನ

ಸುಖಗಳು ಬರಹತ್ತಿದವೆಂದರೆ ಒಂದರ ಮೇಲೊಂದು ಬರುತ್ತವೆಂಬ ಮಾತು ನಿಜವು. ಲಗ್ನವಾದ ಎರಡು ವರ್ಷಗಳೊಳಗಾಗಿಯೇ ರುದ್ರಾಣಿಯವರು ಗರ್ಭಿಣಿಯಾದದರಿಂದ ಸರ್ವರಿಗೂ ಸಂತೋಷವು ಹೆಚ್ಚಿತು. ಇಚ್ಛಿತ ಭೋಜನಗಳಿಂದಲೂ, ಕಾಮಿತ ವಸ್ತ್ರಾಭರಣಗಳಿಂದಲೂ ಪರಿಪರಿಯ ಪಕ್ವಾನ್ನಗಳಿಂದಲೂ ರುದ್ರಕುಮಾರಿಯವರ ಬಯಕೆಗಳನ್ನು ಪೂರ್ಣಮಾಡಿ, ಸರ್ವಸಮಾರಂಭದಿಂದ ಪುಂಸವನ-ಸೀಮಂತ ಕಾರ್ಯಗಳನ್ನು ನೆರವೇರಿಸಿದರು. ಮುಂದೆ ಪುಣ್ಯಗರ್ಭವು ಬೆಳೆದು ನವಮಾಸಗಳು ತುಂಬಿ, ಶ್ರೀಮನ್ನೃಪಶಾಲಿವಾಹನ ಶಕೆ ಪರಾಭವನಾಮ ಸಂವತ್ಸರ ವೈಶಾಖ ಶುದ್ಧ ೧೨ ಶನಿವಾರ ಒಂದು ಪ್ರಹರ ರಾತ್ರಿಯ ಸುಮಾರಕ್ಕೆ (ತಾರೀಖು ೫-೫-೧೯೦೬ ನೇ ಇಸವಿಯ ಶನಿವಾರ ರಾತ್ರಿ ೯ ಒಂಬತ್ತು ಹೊಡೆದು ೨೬ ಮಿನಿಟಗೆ) ಶುಭಮುಹೂರ್ತದಲ್ಲಿ ರುದ್ರವ್ವನವರು ಹೆಣ್ಣು ಕೂಸನ್ನು ಹೆತ್ತರು.

ಕೂಸು ಹುಟ್ಟಿದ ಕೂಡಲೆ ಸರ್ವರು ಸಂತೋಷ ಸಮುದ್ರದಲ್ಲಿ ಮಗ್ನರಾದರು. ಕೂಸಿಗೆ ವಿಧಾನೋಕ್ತವಾಗಿ ಜಾತಕರ್ಮ-ಲಿಂಗಧಾರಣಾದಿಗಳನ್ನು ಮಾಡಿಸಿದರು. ಕೂಸು ಹೆಣ್ಣಾದದರಿಂದ ಕೆಲವರು ರಾ.ಬ॥ರವರ ಹೊಟ್ಟೆಯಿಂದ ಗಂಡುಮಕ್ಕಳಿಲ್ಲದ ಕಾರಣ ಅವರು ನೋಡಿ ಸಂತೋಷಪಡುವಂತೆ ಗಂಡಾಗಿದ್ದರೆ ಲೇಸಾಗುತ್ತಿತ್ತೆಂದೂ, ಬೇರೆ ಕೆಲವರು ಅದಕ್ಕೆ ಪ್ರತ್ಯುತ್ತರವಾಗಿ ರಾವಬಹದ್ದೂರವರು ಆಯುಷ್ಯವಂತರಾಗಿದ್ದರೆ ಕ್ಷಿಪ್ರದಲ್ಲಿ ಪೌತ್ರನನ್ನಾದರೂ ಕಾಣಬಹುದೆಂತಲೂ ಸಂತೋಷದಿಂದ ಮಾತಾಡಹತ್ತಿದರು. ಅಂತೂ ರುದ್ರವ್ವನವರಿಗೆ

ಅತೀವ ತೀವ್ರದಲ್ಲಿಯೇ ಸಂತತಿಯಾದದರಿಂದ ಸರ್ವರಿಗೂ ಸಂತೋಷವಾಯಿತು. ದುಂಡನ್ನ ಮೈಕಟ್ಟೂ, ವಿಶಾಲವಾದ ನೇತ್ರಗಳೂ, ಬಟ್ಟನ್ನ ಮುಖಮಂಡಲವೂ, ಮುಖಕ್ಕೆ ಶೋಭೆಯಾದ ಮುಗೂ, ಸುಕುಮಾರ ಸಲ್ಲಕ್ಷಣಗಳಿಂದೊಡಗೂಡಿದ ಶರೀರವೂ ಕೂಸಿಗೆ ಬಲು ಒಪ್ಪುತ್ತಿದ್ದವು. ಹುಟ್ಟಿದ ಹನ್ನೆರಡನೆಯ ದಿವಸ ಸಕಲ ಸಡಗರದಿಂದ ಮುತ್ತೈದೆಯರು

॥ಜೋಗುಳ ಪದ॥

ಜೋಜೋ ಎನ್ನ ರಾಜಕುಮಾರಿ ಜೋ ಜೋ ॥ಪಲ್ಲ॥
ಜೋಜೋ ಎನ್ನ ಮುತ್ತಿನ ಖಣಿಯೆ।ಜೋಜೋ ಎನ್ನ ರತ್ನದ ಗಣಿಯೆ॥
ಜೋಜೋ ಎನ್ನ ಮಾತಿನ ಗಿಣಿಯೆ।ಮುದ್ದು। ಜೋಜೋ ಎನ್ನ ಸದ್ಗುಣ
ಮಣಿಯೇ ಜೋಜೋ॥೧॥

ಜೋಜೋ ಎನ್ನ ಅಮೃತ ಮಳೆಯೆ।ಜೋಜೋ ಎನ್ನ ಹವಳದ ಬಳೆಯೆ॥
ಜೋಜೋ ಎನ್ನ ತುಂಬಿದ ಹೊಳೆಯೆ।ನಿತ್ಯ।ಜೋಜೋ ಎನ್ನ ಹಲಸಿನ
ತೊಳೆಯೇ ಜೋಜೋ॥೨॥

ಸುಂದರಿ ಸುಕುಮಾರಿ ಸಕ್ಕರಿ ಕರಣಿ। ಚಂದಿರಮುಖಿ ನೀನು ಬಂಗಾರ ಭರಣಿ॥
ಚಂದಾಗಿ ಹೊಳೆಯುವ ಮಂಡಲ ತರಣಿ। ನೀಲ।ಕಂಧರ ಗುರುಭಕ್ತ ಮಹಾರಾಜ
ತರುಣಿ ಜೋಜೋ॥೩॥

ಅರಳು ಮಲ್ಲಿಗಿ ಮೊಗ್ಗಿ ಸಂಪಿಗೆ ನೆನೆಯೆ।ಸರಳ ತಾಯತ ಗೆಜ್ಜಿ, ಹಾಲಿನ ಕೆನೆಯೆ॥
ಕೊರಳ ಚಂದಿರಹಾರ ಮುತ್ತಿನ ತೆನೆಯೆ।ನಮ್ಮ। ತರಳೆಯ ನೋಡಿರಿ
ದ್ರಾಕ್ಷೆಯ ಗೊನೆಯೇ ಜೋಜೋ ॥೪॥

ರುದ್ರವ್ವ ರಾಣಿಯ ಗರ್ಭದಿ ಜನಿಸಿ। ರುದ್ರಭೂಪಾಲರ ಮೊಮ್ಮಗಳೆನಿಸಿ॥
ರುದ್ರದೇವರ ದಿವ್ಯದಯದೊಳವತರಿಸಿ।ನಿತ್ಯ। ಭದ್ರದಾಯಕ ಕಾಶೀಬಾಯೆಂದು
ಕರಿಸಿ ಜೋಜೋ॥೫॥

ತಂದೆ ತಾಯಿಯ ಚಿಕ್ಕವಯದೊಳು ಹುಟ್ಟಿ। ಬಂಧುಬಳಕ್ಕೆಲ್ಲಾನಂದವ ಕೊಟ್ಟಿ॥
ಮಂದಿರದೊಳಗೊಂದು ತೊಟ್ಟಿಲ ಕಟ್ಟಿ।ನಿನ್ನ।ಅಂದಚಂದಗಳನ್ನು ನೋಡಿ
ಕಣ್ಮುಚ್ಚಿ ಜೋಜೋ॥೬॥

ಮುತ್ತು ಮಾಣಿಕರತ್ನ ಕೆತ್ತಿದರಳೆಲಿ।ಸುತ್ತು ಮುತ್ತಲು ಹೊಳೆವ ಪದಕ ಕೊರಳಲಿ॥
ಪುತ್ಥಳಿ ಉಂಗರ ಗುಂಡು ಬಿಂದಲಿ।ಮೇ।ಲೆತ್ತಿ ತೋರುವ ವಸ್ತ ಉತ್ತಮಾಂಗದಲಿ
ಜೋಜೋ॥೭॥

ಎತ್ತಿ ಆಡಿಸುವಂಥ ಚಿತ್ರದ ಗೊಂಬೆ। ಒತ್ತಿ। ಮುದ್ದಿಡುವಂಥ ಬಣ್ಣ ಗಜನಿಂಬೆ॥
ಸುತ್ತಲು ಬೆಳಗುವ ಮುಖಚಂದ್ರಬಿಂಬೆ।ನಿತ್ಯ। ಸತ್ಯಚಿತ್ತಾನಂದ ಶ್ರೀ ಜಗದಂಬೆ
ಜೋಜೋ॥೮॥

ಚಿಕ್ಕದೇಸಾಯಣೆಯವರಿಗೆ ಮುಂದು।ತಕ್ಕ। ದೇಸಾಯರು ವರ ಬರಲೆಂದು ॥
ಮುಕ್ಕಣ್ಣನವರಿಗೆ ಸುಖ ಕೊಡಲೆಂದು। ಹೀಂಗ। ಅಕ್ಕರದಿ ನುಡಿದನು ಬಸವನು ಬಂದು
ಜೋಜೋ॥೯॥

ಜೋಗುಳ ಪದ

ದಾಟಿ "ಬಾ ಬಾಬಾ ಸುದತಿ। ಬಾ ಮಾರನ ಕಿರಿಬೆರಳ ಗಿಳಿ" ಎಂಬ ಪದದಂತೆ

ತೂಗಿರೆ ತಂಗಿಯ ತೊಟ್ಟಿಲವನು। ತೂಗಿರೆ ಚಂದಿರಮುಖಿ ಸುಂದರಿಯನು॥
ತೂಗಿರೇ ಮುದ್ದು ಕಾಶೀಬಾಯಿಯನ್ನು। ತೂಗಿರೇ ಚಚಡಿಯ ರಾಜಕುವರಿಯನು ॥ಪಲ್ಲ॥

ಬಣ್ಣದ ಮಾಲಿನ ಮಂದಿರದೊಳ್। ರನ್ನದ ತೊಟ್ಟಿಲದೊಳು ಶಿಶು ಮಲಗಿಸಿ॥
ಚಿನ್ನದ ಸರಪಳಿಗಳ ಹಿಡಿಯುತ। ರನ್ನದುಟಿಯ ಸಂಪನ್ನೆಯರೆಲ್ಲರು ॥೧॥

ಮುತ್ತಿನ ಗೊಂಚಲುಗಳ ಅರಳೆಲಿ। ರತ್ನದ ಹರಳಿನ ಪದಕವು ಕೊರಳಲಿ॥
ಉತ್ತಮಾಂಗಿಗೆ ಉಂಗರಬೆರಳಲಿ। ಸುತ್ತುಮುತ್ತಲು ಥಳ ಥಳ ಬೆಳಗಲಿ ॥೨॥

ಸಾರಸ ಮುಖಿಯರು ಸಿಂಗರದೊಳು। ವಾರಿಗೆ ಗೆಳತಿಯರೊಡಗೂಡುತ ಬಲು॥
ಧೀರ ಬಸವನ ಪಾಡುತ ಮುದದೊಳು। ಸಾರ। ವಿಭವದಿಂ ಮಂಗಳ ದಿನದೊಳು ॥೩॥

ಈ ಪ್ರಕಾರ ಜೋಗುಳ ಪಾಡಿ ಕಾಶೀಬಾಯಿ ಎಂದು ಹೆಸರಿಟ್ಟರು. ಮುಂದೆ ಕಾಶೀಬಾಯಿಯು ಶುಕ್ಲಚಂದ್ರನಂತೆ ದಿನೇ ದಿನೇ ವರ್ಧಿಸುತ್ತ ಸರೋವರದಲ್ಲಿ ಸುಳಿದಾಡುವ ಹಂಸಾರ್ಭಕದಂತೆ ಚಂದದೋರುತ್ತ, ಸಕಲ ಪರಿವಾರದವರಿಗೂ ಸಂತೋಷವನ್ನುಂಟು ಮಾಡುತ್ತಿರಲು, ರಾ.ಬ॥ರುದ್ರಗೌಡರೂ, ಅವರ ಸಹೋದರಿಯವರಾದ ವೀರವ್ವನವರೂ, ನಾವು ಪರಹಿತಾಭಿಲಾಷೆಯಿಂದ ಹಿಡಿದ ಕಾರ್ಯವು ಕೈಗೂಡಿತೆಂತಲೂ, ದೇವಾನುಗ್ರಹದಿಂದ ದೇಸಗತಿಯು ಜೀರ್ಣೋದ್ಧಾರವಾಯಿತೆಂತಲೂ, ಸರಳಭಾವದಿಂದ ನಡೆದರೆ ನಿಜವಾಗಿ ಸುಖವಾಗುವದೆಂತಲೂ ಸಾನಂದಹೃದಯರಾದರು.

ದೇಸಗತಿಯ ಸುಧಾರಣೆ

ಮುಂದೆ ವರ್ಷವರ್ಷಕ್ಕೆ ದೇಸಗತಿಯ ಆದಾಯವು ಹೆಚ್ಚಹತ್ತಿತು. ವಾಡೆಯಲ್ಲಿಯೂ, ಊರಲ್ಲಿಯೂ, ಹೊಸ ಹೊಸ ಸುಧಾರಣೆಗಳು ಆಗಹತ್ತಿದವು. ಅಲ್ಲಲ್ಲಿಗೆ ಬಿದ್ದಿದ್ದ ಕೋಟೆಕೊತ್ತಳಗಳು ಭದ್ರವಾಗಹತ್ತಿದವು. ಪಡಬಿದ್ದಿದ್ದ ಭೂಮಿಗಳು ಸಾಗವಾಗಹತ್ತಿದವು. ಹಾಳುಬಿದ್ದಿದ್ದ ವಾಪೀಕೂಪಗಳು ಬಳಸಲ್ಪಟ್ಟು, ನಿರ್ಮಲೋದಕದಿಂದ ತುಂಬಿಕೊಳ್ಳಹತ್ತಿದವು. ಹೊಲಗಳಲ್ಲಿ ಅಲ್ಲಲ್ಲಿಗೆ ಯಾತದ ಭಾವಿಗಳಾಗಿ ಫಲವತ್ತಾದ ತೋಟಪಟ್ಟಿಗಳಿಂದ ಚಚಡೀಗ್ರಾಮದ ಬಹೀ ರ್ಪ್ರದೇಶವು ಅಂದವಾಗಿ ತೋರಹತ್ತಿತು. ಊರವರ ಉಪಯೋಗಕ್ಕಾಗಿ ಹೊಸದಾಗಿ ಸಂತೆ ಕೂಡಹತ್ತಿತು. ಸಾಲೆಯ ಸ್ಥಿತಿಯು ಸುಧಾರಿಸಹತ್ತಿತು. ಗ್ರಾಮದ ರಸ್ತೆಗಳೆಲ್ಲ ದುರಸ್ತಾಗಹತ್ತಿದವು. ಜನರ ವಾಚನಕ್ಕಾಗಿ ಒಂದು ವಾಚನಾಲಯವು ಸ್ಥಾಪಿಸಲ್ಪಟ್ಟಿತು. ವಾಡೆಯ ಹೆಬ್ಬಾಗಿಲ ಮೇಲಿರುವ ನಗಾರಖಾನೆಯಲ್ಲಿ ಪ್ರತಿದಿವಸ ಬೆಳಿಗ್ಗೂ, ಸಂಜೆಗೂ ಮೊದಲಿನಂತೆ ಚೌಘುಡೆ ಮುಂತಾದ ಮಂಗಳ

ವಾದ್ಯಗಳು ಮೊಳಗಹತ್ತಿದವು. ದೇಸಗತಿಯ ಸಿಪಾಯರಿಗೆ ಹೊಲಗಳ ಉತ್ಪನ್ನವಲ್ಲದ ಬೇರೆ ಸಂಬಳವು ಸಿಗಹತ್ತಿತು. ದೇಸಗತಿಯ ಸೇವಾಜನರಿಗೆ ಮೊದಲಿನಂತೆ ಉಂಬಳಿಗಳು ಕೊಡಲ್ಪಟ್ಟವು. ಊರತನದ ವ್ಯಾಜ್ಯಗಳು ಪಂಚಾಯತ ಪಕ್ಷದಲ್ಲಿಯೇ ನಿರ್ಣಯವಾಗಹತ್ತಿದ್ದರಿಂದ ಊರ ದುಡ್ಡು ನಿರರ್ಥಕವಾಗಿ ಹಾಳಾಗುವದು ಎಷ್ಟೋಮಟ್ಟಿಗೆ ಕಡಿಮೆಯಾಗಹತ್ತಿತು. ಇವಲ್ಲದೆ ಇನ್ನೂ ಅನೇಕ ಸಣ್ಣಪುಟ್ಟ ಸುಧಾರಣೆಗಳಾಗಹತ್ತಿದ್ದರಿಂದ ಚಚಡೀ ಗ್ರಾಮನಿವಾಸಿಗಳು ಸುಖವಸತಿಗಳಾದರು.

ಸದ್ಗುಣಿಗಳಾದ ದೇಸಾಯರು

ಶ್ರೀಮಂತ ವೀರಭದ್ರಪ್ಪ ದೇಸಾಯರಾದರೂ ಮಾವಂದಿರಂತೆ ಸತ್ಯಪಕ್ಷಕ್ಕೆ ಸೇರಿದವರು. ಇವರು ಸದ್ಗುಣಿಗಳೂ, ಸುಧಾರಣಾಪ್ರಿಯರೂ ಆಗಿರುವದಲ್ಲದೆ ಬಹಳೇ ಕರುಣಾಳುಗಳಿರುವರು. ಚಚಡೀ ಗ್ರಾಮದ ಸಣ್ಣದೊಡ್ಡ ಯಾವತ್ತು ಜನರು ಇವರ ವಿಷಯಕ್ಕೆ ಒಳ್ಳೇ ಪೂಜ್ಯಭಾವವುಳ್ಳವರಾಗಿರುವರು. ದೇಸಾಯರಾದರೂ, ಬಡಬಗ್ಗರಿಗೆ ತಮ್ಮ ಕೈಲಾದಮಟ್ಟಿಗೆ ಸಹಾಯ ಮಾಡುವರು. ಇವರು ಚಿಕ್ಕಂದಿನಲ್ಲಿ ದೇಸಗತಿಯ ದುರ್ದಶೆಯ ಮೂಲಕ ಕಷ್ಟಪಟ್ಟು, ಪುಣ್ಯವಿಶೇಷದಿಂದ ಒಮ್ಮಿಂದೊಮ್ಮೆ ರಾಜಪದವಿಗೆ ಬಂದಿದ್ದರೂ ಇವರಲ್ಲಿ ಯಾವ ಮದವು ಎಷ್ಟು ಮಾತ್ರವೂ ನೆಲೆಗೊಳ್ಳಲಿಲ್ಲ. ಇವರು ತಮ್ಮನ್ನು ಚಿಕ್ಕಂದಿನಿಂದ ಜೋಪಾನಮಾಡಿ ತಕ್ಕ ಶಿಕ್ಷಣವನ್ನು ಕೊಟ್ಟು, ಅಕ್ಕರೆಯ ಮಗಳನ್ನಿತ್ತು, ಅಹರ್ನಿಶೆಯಲ್ಲಿಯೂ ಹಿತಚಿಂತಕರಾಗಿರುತ್ತಿದ್ದ ರಾ.ಬ॥ರುದ್ರಗೌಡ ದೊರೆಗಳವರನ್ನು ಮನಸಾ ಮನ್ನಿಸಿ, ಅವರ ಕೂಡ ಪಿತೃಭಾವದಿಂದ ನಡೆದುಕೊಳ್ಳುತ್ತಿದ್ದರು. ಮತ್ತು ಇವರ ಸ್ಮರಣಾರ್ಥವಾಗಿ ಚಚಡೀ ಗ್ರಾಮದ ಉತ್ತರಕ್ಕೆ ಸುಮಾರು ಒಂದು ಮೈಲಿನ ಮೇಲೆ ಹೊಸದಾಗಿ ಒಂದು ಚಿಕ್ಕ ಊರನ್ನು (ಮಜರೆ)ಸ್ಥಾಪಿಸಿ, ಅದಕ್ಕೆ ರುದ್ರಕೇರಿ ಎಂದು ಹೆಸರಿಟ್ಟಿರುವರು. ಮನೆಗಳನ್ನು ದೇಸಗತಿಯ ವೆಚ್ಚದಿಂದ ಕಟ್ಟಿಸಿಕೊಟ್ಟದಲ್ಲದೆ ಅಲ್ಲಿರುವ ಜನರಿಗೆ ೨೦-೨೫ ವರ್ಷಗಳ ವರೆಗೆ ಕಂದಾಯವಿಲ್ಲದೆ ಪುಕ್ಕಟೆಯಾಗಿ, ಭೂಮಿಯನ್ನು ಸಾಗುವಳಿಗೂ, ಉಪಜೀವನಕ್ಕೂ ಕೊಟ್ಟಿರುವರು. ರುದ್ರಕೇರಿಯಲ್ಲಿ ಈಶ್ವರನ ಗುಡಿಯೊಂದುಂಟು. ಪ್ಲೇಗವೆಂಬ ಭಯಂಕರ ರೋಗದಿಂದ ದೇಶದಲ್ಲಿಯ ಊರುಗಳೆಲ್ಲ ಬಹುತರ ಹಾಳಾದರಿಂದ ಈ ಊರೂ ಇನ್ನೂ ತುಂಬಿಕೊಂಡಿಲ್ಲ. ಆದರೆ ಇನ್ನು ಮೇಲೆ ಕ್ರಮೇಣ ತುಂಬುತ್ತ ಹೋಗಬಹುದು. ಇವೆಲ್ಲ ಸುಖೋಪಭೋಗದ ಸುಧಾರಣೆಗಳನ್ನೂ, ಅಷ್ಟೈಶ್ವರ್ಯದ ವೈಭವದಿಂದಾದ ಲಗ್ನ ಮುಂತಾದ ಸಮಾರಂಭವನ್ನೂ ನೋಡಿ ಚಚಡಿಯ ನಿವಾಸಿಗಳು ತಮ್ಮ, ಧನಿಯನ್ನೂ, ರಾ.ಬ॥ರುದ್ರಗೌಡ ದೊರೆಗಳನ್ನೂ ಹಾಡಿ ಹರಸಿದರು.

ವೀರಭದ್ರಪ್ಪ ದೇಸಾಯರು ಗಾದಿಗೆ ಕೂತದ್ದು

ಶ್ರೀಮಂತ ಗುಣಪ್ಪ ದೇಸಾಯರು ಮೃತವಾದ ಸಂಗತಿಯು ಹಿಂದೆ ಹೇಳಲ್ಪಟ್ಟಿರುವದಷ್ಟೇ. ಲಗ್ನವಾದ ಮರುವರ್ಷವೇ (ಸನ್ ೧೯೦೫ನೇ ಇಸವಿಯ) ದಸರೆ ದಿವಸ ಚಚಡಿಯಲ್ಲಿ ಒಂದು ಚಿಕ್ಕ ದರ್ಬಾರು ನೆರೆದು, ಶ್ರೀಮಂತ ವೀರಭದ್ರಪ್ಪ ದೇಸಾಯರು ಊರ್ಫ ಅಣ್ಣಾಸಾಹೇಬರು ದೇಸಗತಿಯ ಗಾದಿಗೆ ಕೂತ ಸಮಾರಂಭವಾಯಿತು. ಅಂದಿನಿಂದ ಚಚಡಿಯಲ್ಲಿ ಪ್ರತಿವರ್ಷದ ದಸರೆಗೆ ದರ್ಬಾರಾಗಿ ಅನೇಕೋತ್ಸವಗಳು ನಡೆಯುವವು. ಆಗ ರೈತರು ತಮ್ಮ ಅನುವು ತನುವುಗಳನ್ನು ಹೇಳಿಕೊಳ್ಳುವರು. ಅವನ್ನು ಪ್ರೀತಿಯಿಂದ ಕೇಳಿಕೊಂಡು ಅವರ ತೊಂದರೆಗಳನ್ನು ದೇಸಾಯರು ಆದಷ್ಟು ಮಟ್ಟಿಗೆ ತಪ್ಪಿಸುವರು. ಈ ಪ್ರಕಾರ ಚಚಡೀ ದೇಸಗತಿಯು

ಸುಧಾರಣೆಯಲ್ಲಿ ಮುಂದೆ ಮುಂದೆ ಹೋಗುವದನ್ನೂ, ಅದರ ಘನವಂತಿಕೆಯನ್ನೂ ತಿಳಿದು ಸರಕಾರದವರು ಶ್ರೀಮಂತ ವೀರಭದ್ರಪ್ಪ ದೇಸಾಯರನ್ನು ಬೆಳಗಾವ ಜಿಲ್ಲೆಯ ಲೋಕಲ್‌ಬೋರ್ಡ ಮೆಂಬರರನ್ನಾಗಿಯೂ, ಇತ್ತಿತ್ತಲಾಗಿ ಪ್ರಜೆಗಳ ವ್ಯಾಜ್ಯಗಳನ್ನು ಪಂಚಾಯತ ಪಕ್ಷದಲ್ಲಿ ತೀರಿಸುವ ಗ್ರಾಮ ಮುನಸೂಫರನ್ನಾಗಿಯೂ, ಪರಸಗಡ ತಾಲೂಕಿನ ಕನ್ಸಿಲೇಟರರನ್ನಾಗಿಯೂ ಮಾಡಿದ್ದಾರೆ (ಸನ್ ೧೯೦೬ನೇ ಇಸವಿ). ಈ ಬಗೆಯಾಗಿ ದೇಸಗತಿಯು ರಾ.ಬ॥ರುದ್ರಗೌಡ ಸಾಹೇಬರವರ ಪ್ರಭಾವದಿಂದ ಸರಕಾರದಲ್ಲಿಯೂ, ಪ್ರಜಾಸಾಮೂಹದಲ್ಲಿಯೂ ಖ್ಯಾತಿಯನ್ನು ಹೊಂದುತ್ತ ನಡೆದಿರುವದು. ಇವರ ಉತ್ಕರ್ಷವನ್ನು ಕಣ್ಣಾರೆ ಕಂಡ ಈ ಗ್ರಂಥಕರ್ತನಾದ ಬಸವಾರ್ಯ ಕವಿಯು ಇವರ ಪರವಾಗಿ ಒಂದೆರಡು ಪದಗಳನ್ನು ರಚಿಸಿರುವನು. ಅವನ್ನಿಲ್ಲಿ ಬರೆದರು ಅಪ್ರಾಸಂಗಿಕವಾಗದೆಂದು ಇದರ ಕೆಳಗೆ ಬರೆಯಲ್ಪಟ್ಟಿರುವದು.

ಪದ ಧಾಟಿ

"ಇಂದ್ರನೆ-ಸದ್ಗುಣ ಸಾಂದ್ರನೆ ಭೋ" ಎಂಬ ಪದದಂತೆ

ಭೂಪನೆ ಸುಮಚಾಪರೂಪನೇ ಭೋ। ಸತ್ಕುಲದೀಪನೆ॥ ಭೂಪನೆ.... ॥ಪಲ್ಲ॥

ನೀ ಪಾಲಿಸು ವಿಮಲಗುಣ ಕ। ಲಾಪನೆ ಚಚಡಿಯ ಪುರಾಶ್ರಿತ ॥ಅನುಪಲ್ಲ॥

ರಾಯ ನಿನ್ನ ವಂಶ ವರ್ಧಿಸಲಿ। ಆದಾಯ ಪೆರ್ಚಲಿ॥
ಆಯುರಾರೋಗ್ಯಭಾಗ್ಯ। ವೀಯಲಿ ಚಿರಕಾಲ ದೇವನು ॥೧॥

ವೀರಭದ್ರ ವೀರನಾಯಕನೆ। ಬಹದ್ದೂರ ಧೀರನೆ॥
ಕ್ರೂರಜನ ವಿದೂರ ಸದಯ। ಪೂರಿತ ನರನಾಥ ಪ್ರೀತನೆ ॥೨॥

ಭದ್ರ ಗುಣಸಮುದ್ರ ಮುದ್ರೇಶನೆ। ಸದ್ರಾಜ ತೇಜನೆ॥
ರುದ್ರಗೌಡ ಸುಖದ ವೀರ। ಭದ್ರದೇವ ಪಾದಸೇವಕ ॥೩॥

೨ ನೇ ಪದ

ಧಾಟಿ- "ಸರಸಿಜನೇತ್ರೆ ಈಕೆ ಯಾರು ಪೇಳೆ" ಎಂಬ ನಾಟಕದ ಪದದಂತೆ

ನಳಿನಾಕ್ಷಿ ನೋಡೆ ರಮ್ಯವಾಗಿ ತೋರ್ಪಾ ರಾಜನ ಸಭೆಯಾ ॥ಪಲ್ಲ॥

ತಳಿರುಗಳಿಂ-ಸುಳಿವುಗಳಿಂ-ಕಲಶಗಳಿಂ-ಬಳಿವಿಡಿದುಂ-ತೊಳಗುವದಿದು ॥ಅನುಪಲ್ಲ॥

ಸುತಪಂ-ಡಿತಮಂ-ಡಿತಮಾ-ನಿತ ಗಾ-ಯಕರಿಂ ॥
ಸಿತಛತ್ರದಿಂ- ನೃತಪಾತ್ರದಿಂ-ಧೃತವೇತ್ರ ದಿಂ ॥೧॥

ಸ್ತುತಿಪಾಠರಿಂದ ಧನಪೀಠದಿಂದ ನಟನಾಟ್ಯದಿಂದ ಬಲು ನೀಟವಾಗಿ ಮೆರೆವಾ ॥
ನೋಟಕರಿಗೆ ನಲಿದಾಟವಿದುವೆ ॥೨॥

ದೈವೀ ವಿಚಿತ್ರಾ ಗತಿ

"ಸಂಪತ್ತೇಶ್ಚ ವಿಪತ್ತೇಶ್ಚ ದೈವಮೇವ ಹಿ ಕಾರಣಮ್" ಎಂಬಂತೆ ಸಂಪತ್ತಿಗೂ, ವಿಪತ್ತಿಗೂ ದೈವವೇ ಕಾರಣವಾಗಿರುವದು. ನವಕೋಟಿ ನಾರಾಯಣನೆಂದು ಲೋಕಪ್ರಸಿದ್ಧಿಯಾದ ನರಕುಬೇರನು (ಧನವಂತನು)ದೈವಗತಿಯಿಂದ ಸಾಲಗಾರನಾಗಿ, ಸಾವಕಾರನ ಬಾಗಿಲ ಮುಂದೆ ಕಲ್ಲುಹೊತ್ತುಕೊಂಡು ನಿಲ್ಲುವನು.ಅಶನಕ್ಕೆ ವರ್ಜ್ಯನಾದ ಅಷ್ಟದರಿದ್ರನು ಅಲ್ಪಾವಧಿಯಲ್ಲಿ ಅಷ್ಟೈಶ್ವರ್ಯವುಳ್ಳ ಶ್ರೀಮಂತನಾಗುವನು. ಅರಮನೆಯು ಸೆರೆಮನೆಯಾಗುವದು, ಸೆರೆಮನೆಯು ಅರಮನೆಯಾಗುವದು. ಉಪ್ಪರಿಗೆಯು ತಿಪ್ಪೆಯಾಗುವದು, ತಿಪ್ಪೆಯು ಉಪ್ಪರಿಗೆಯಾಗುವದು. ಇದರಂತೆ ಬೆಟ್ಟವು ಬೈಲಾಗುವದು, ಬೈಲು ಬೆಟ್ಟಾಗುವದು. ಸಾವಕಾರನು ಸಾಲಗಾರನಾಗುವನು, ಸಾಲಗಾರನು ಸಾವಕಾರನಾಗುವನು. ಗಾಳಿಗೆ ಕಟ್ಟಿದ ವಸ್ತ್ರವು ಏಳುತ್ತದೆ, ಬೀಳುತ್ತದೆ. ಈ ಮೇರೆಗೆ ಪ್ರತಿಯೊಂದು ವ್ಯಕ್ತಿಯ ಉತ್ಕರ್ಷಾಪಕರ್ಷಗಳು ದೈವಾಧೀನವಾಗಿರುತ್ತವೆ. "ಶುಭಂ ವಾಪ್ಯಶುಭಂ ಕರ್ಮಫಲಂ ಕಾಲಮಪೇಕ್ಷತೇ" ಎಂಬಂತೆ ಶುಭ ಅಥವಾ ಅಶುಭ ಕೆಲಸಕ್ಕಾದರೂ ವೇಳೆ ಬರಬೇಕು. ಕಾಲಬಾರದೆ ಯಾವ ಕಾರ್ಯವೂ ಕೈಗೂಡದು. ಈ ವಚನಗಳಿಗನುಸಾರವಾಗಿ ಚಚಡಿಯ ದುರ್ದಶಾವಸ್ಥೆಯು ದೈವಗತಿಯಿಂದ ದೂರಾಗಿ, ದೇಸಗತಿಯು ದಿವ್ಯಶೋಭೆಯಿಂದ ಪ್ರಕಾಶಿಸಹತ್ತಿತು. ದೈವಗತಿಯು ವಿಚಿತ್ರವಾದದ್ದೆಂತು ತಿಳಿಯತಕ್ಕದ್ದು.

❖❖

೧೩ನೇ ಭಾಗ

ಉತ್ತಮ ಮೈತ್ರಿ

ರಾವಬಹದ್ದೂರ ಗುರುಸಿದ್ದಪ್ಪ ವೀರಬಸವಪ್ಪ ಗಿಲಗಿಂಚಿಯವರು ಗತಿಸಿದ ತರುವಾಯ ನಮ್ಮ ರಾ.ಬ॥ರುದ್ರಗೌಡ ಸಾಹೇಬರವರಿಗೆ ಪರಮಸ್ನೇಹಿತರೆಂಬವರು ಶ್ರೀಮಂತ ಶಿರಸಂಗಿಯ ಸರದೇಸಾಯಿಯವರಾದ ಲಿಂಗಪ್ಪ ಭೂಪಾಲರೂ, ಶ್ರೀಮಂತ ವಂಟಮುರಿಯ ಸರದೇಸಾಯಿಯವರೂ ಉಳಿದರೆಂದು ಹೇಳಬಹುದು. ಶ್ರೀಮಂತ ಶಿರಸಂಗೀಕರವರ ಸಖ್ಯವು ರಾವಬಹದ್ದೂರವರಿಗೆ ಮೊದಲಿನಿಂದಲೇ ಇತ್ತೆಂಬದು ವಾಚಕವರ್ಗದ ಸ್ಮರಣದಲ್ಲಿರಬಹುದು. ಅದೇ ಸಖ್ಯವು ರಾ.ಬ॥ಗುರುಸಿದ್ಧಪ್ಪ ಗಿಲಿಗಿಂಚಿಯವರ ನಂತರ ವಿಶೇಷವಾಯಿತು.

ಕ್ಷೀರೇಣಾತ್ಮಗತೋದಕಾಯ ಹಿ ಗುಣಾ ದತ್ತಾಃಪರಾಸ್ತೆಖಿಲಾಃ।
ಕ್ಷೀರೇ ತಾಪಮವೇಕ್ಷ್ಯ ತೇನ ಪಯಸಾ ಸ್ವಾತ್ಮಾಕೃಶಾನೋ ಹುತಃ॥
ಗಂತುಂ ತಾವಕಮನ್ಮನ ಸ್ತದಭರದ್ದೃಷ್ಟ್ವಾ ತು ಮಿತ್ರಾಪದಮ್।
ಯುಕ್ತಂ ತೇನ ಜಲೇನ ಶಾಮ್ಯತಿ ಸತಾಂ ಮೈತ್ರೀ ಪುನಸ್ತ್ವೀದೃಶೀ ॥೧॥

ಎಂಬದಾಗಿ ಕವಿಕುಲಸಾರ್ವಭೌಮರು ಹೇಳುತ್ತಿರುವಂತೆ ಈ ಮಹನೀಯರ ಸ್ನೇಹವು ಹಾಲು ನೀರಿನಂತೆ ಏಕರೂಪವಾಯಿತು. ಮೈತ್ರಿಯು ಹೆಚ್ಚಿದಂತೆ ಸರದೇಸಾಯಿಯವರ ಲಿಂಗಾಯತ ಮತಾಭಿಮಾನವೂ ಹೆಚ್ಚಹತ್ತಿತು. ಮಲ್ಲಿಗೆಯ ಪರಿಮಳವು ತನ್ನ ಸುತ್ತಲಿನ ಪದಾರ್ಥಗಳಿಗೂ ಕೂಡ ಪರಿಮಳವನ್ನುಂಟು ಮಾಡುತ್ತಿರುವಂತೆ ರಾ.ಬ॥ ರುದ್ರಗೌಡಸಾಹೇಬರವರಲ್ಲಿ ನಿಸರ್ಗಭೂತವಾಗಿ ಜಾಜ್ವಲ್ಯವಾಗಿದ್ದ ಮತಾಭಿಮಾನವು ಸತ್ಸಂಗದಿಂದ ಉಭಯ ಶ್ರೀಮಂತರಲ್ಲಿಯೂ ಜಾಗೃತವಾಗಹತ್ತಿದರಿಂದ ಇವರೆಲ್ಲರೂ ಒಮ್ಮನಸಿನಿಂದ ವೀರಶೈವ ಜನಾಂಗದ ಏಳಿಗೆಯನ್ನೂ, ಸುಧಾರಣೆಯನ್ನೂ ಚಿಂತಿಸಹತ್ತಿದರು. ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪನವರು ಇರುವ ವರೆಗೆ ಲಿಂಗಾಯತ ಎಜ್ಯುಕೇಶನಲ್ ಅಜಮಾಸು ಒಂದು ಲಕ್ಷರೂಪಾಯಿಯಾಗಿತ್ತು. ಬಳಿಕ ಮತಾಭಿಮಾನದ ಸ್ಫುರಣವಾಗಿ ಶ್ರೀಮಂತ ಶಿರಸಂಗಿಯವರು ಹತ್ತಿಪ್ಪತ್ತು ಸಾವಿರ ರೂಪಾಯಿಯ ಆದಾಯವುಳ್ಳ ತಮ್ಮ ಅಮ್ಮಣ್ಣಗಿಯೆಂಬ ಗ್ರಾಮವನ್ನೇ ಈ ಫಂಡಿಗೆ ಸಮರ್ಪಣೆ ಮಾಡಿದರು. ರಾ.ಬ॥ರುದ್ರಗೌಡ ಸಾಹೇಬರವರ ಸಹವಾಸ ವಿಶಿಷ್ಟತೆಯಿಂದ ಶ್ರೀಮಂತ ವಂಟಮುರಿ ಸರದೇಸಾಯಿಯವರಲ್ಲಿಯೂ ಮತಾಭಿಮಾನವು ಜಾಗೃತವಾಗಿ, ಲಿಂಗಾಯತ ಫಂಡಿಗೆ ಅಯ್ವತ್ತು ಸಾವಿರ ರೂಪಾಯಿ (೫೦೦೦೦)ಗಳ ದೊಡ್ಡ ಮೊಬಲಗನ್ನು ಸಂತೋಷದಿಂದ ಕಯ್ಯೆತ್ತಿ ಕೊಡುವ ಧೈರ್ಯವನ್ನೂ, ಔದಾರ್ಯವನ್ನೂ ಉಂಟುಮಾಡಿತು. ಈ ಶ್ರೀಮಂತದ್ವಯರ ದೊಡ್ಡ

ದೇಣಿಗೆಗಳಲ್ಲದೆ ಬೆಳಗಾವ ಜಿಲ್ಲೆಯಲ್ಲಿ ಪ್ರಸಿದ್ಧ ಸಾವಕಾರರೆಂದು ಹೆಸರುವಾಸಿಯಾಗಿರುವ ಚಿಕ್ಕೋಡಿ ತಾಲೂಕ ಕುರಲಿಯ ಸಾತಪ್ಪ ರೇವಪ್ಪ ಊರ್ಫ ಅಪ್ಪಯ್ಯಪ್ಪಣ್ಣ ಸಿಂತ್ರೆಯವರಿಂದ ಈ ಮೊದಲು ಐದು ಸಾವಿರ (೫೦೦೦) ರೂಪಾಯಿಗಳ ರಕಮು ಫಂಡಿಗೆ ಜಮೆಯಾಗಿ ಹೋಗಿದ್ದರೂ ಕೂಡ ರಾ.ಬ॥ಅರಟಾಳ ಸಾಹೇಬರವರ ಪ್ರಭಾವದಿಂದ ಮತ್ತೆ ಹತ್ತು ಸಾವಿರ (೧೦೦೦೦) ರೂಪಾಯಿಗಳ ದೊಡ್ಡ ದೇಣಿಗೆಯು ಕೊಡಲ್ಪಟ್ಟಿತು. ಒಂದು (೧) ರೂಪಾಯಿ ವರೆಗೆ ಸಹ ಫಂಡಿನ ವರ್ಗಣಿಯು ತೆಗೆದುಕೊಳ್ಳಲ್ಪಟ್ಟಿತು. ಈ ಪ್ರಕಾರ ಬೇರೆ ಕಿರುಕಳ ಹತ್ತುಸಾವಿರ (೧೦೦೦೦)ರೂಪಾಯಿ ಕೂಡಿ ಬೇರೊಂದು ಲಕ್ಷ ರೂಪಾಯಿಯಾಗಿ ಸದ್ಯಕ್ಕೆ ಸುಮಾರು ಒಟ್ಟು ಎರಡು ಲಕ್ಷ (೨,೦೦,೦೦೦) ರೂಪಾಯಿಗಳ ಮಹತ್ತಾದ ರಕಮಿನ ಲಿಂಗಾಯತ ಫಂಡಾಗಿದ್ದು, ಅದು ಇನ್ನೂ ಬೆಳೆಯುವದರಲ್ಲಿರುವದು.

ಶ್ರೀಮನ್ನಿರಂಜನಮೂರ್ತಿ ಹಾನಗಲ್ ಕುಮಾರಸ್ವಾಮಿಗಳು

ಎರಡುಲಕ್ಷ ರೂಪಾಯಿಯೆಂದು ಬಾಯಿಯಿಂದ ಸರಳವಾಗಿ ಅನ್ನಲಿಕ್ಕೆ ಬರುತ್ತಿದ್ದರೂ, ಒಂದು ರೂಪಾಯಿಯ ವರೆಗೆ ಸಹ ಕೊಡಲ್ಪಡುವ ವರ್ಗಣಿಯಿಂದ ಇತಹ ಪ್ರಚಂಡವಾದ ಫಂಡನ್ನು ಕೂಡಿಸಲಿಕ್ಕೆ ಶ್ರಮವೂ ಸಾಹಸವೂ ಎಷ್ಟಾಗಿರಬಹುದೆಂಬದು ಬರಿಯ ಕಲ್ಪನಾ ಮಾತ್ರದಿಂದ ತಿಳಿಯದು. ಫಂಡು ಅಪ್ರಮಾಣವಾಗಿ ಬೆಳೆಯುತ್ತ ಹೋದಂತೆ, ವೀರಶೈವರಲ್ಲಿ ವಿದ್ಯಾವೈಖರಿಯು ಹೆಚ್ಚಹತ್ತಿತು. ಸಮಾಜದ ಉನ್ನತಿಯು ವಿದ್ಯೆಯಿಂದಲೇ ಆಗುವದೆಂಬ ತತ್ವವು ಸರ್ವಜನರಿಗೆ ತಿಳಿಯಹತ್ತಿತು. ಆದರೆ ರಾವಬಹದ್ದೂರ ರುದ್ರಗೌಡ ಸಾಹೇಬರವರು ಇಷ್ಟರಿಂದಲೇ ತೃಪ್ತರಾಗದೆ, ನಮ್ಮ ಜನರಲ್ಲಿ ವಿದ್ಯಾಪ್ರಾಬಲ್ಯವು ಇನ್ನೂ ವಿಶೇಷವಾಗಿ ವರ್ಧಿಸಬೇಕಾಗಿರುವದೆಂತಲೂ ಎಲ್ಲೆಡೆಗಳಲ್ಲಿಯೂ ವೀರಶೈವರ ಪವಿತ್ರವಾದ ಧರ್ಮವು ರಕ್ಷಿಸಲ್ಪಡಬೇಕೆಂತಲೂ, ಇದಕ್ಕಾಗಿ ಅಲ್ಲಲ್ಲಿಗೆ ಧರ್ಮಸಭೆಗಳನ್ನು ಕೂಡಿಸುವದವಶ್ಯವಾಗಿರುವದೆಂತಲೂ, ಧರ್ಮಜಾಗ್ರತೆಯಿಂದ ಸಮಾಜೋನ್ನತಿಯಾಗಬಹುದೆಂತಲೂ ಶ್ರೀಮಂತ ಲಿಂಗಪ್ಪ ಸರದೇಸಾಯರೊಡನೆ ಪರಿಯಾಲೋಚಿಸಿ, ಶ್ರೀಮತ್ಪರಮಪೂಜ್ಯರೂ, ವಿರಕ್ತಶಿರೋಮಣಿಗಳೂ, ತಪೋನಿಷ್ಠರೂ, ಸುಶೀಲ ಸ್ವಭಾವದವರೂ ಪ್ರಾಜ್ಞರೂ ಆದ ಧಾರವಾಡ ಜಿಲ್ಲಾ ವಿರಾಟಪುರ ಹಾನಗಲ್ ಮಠಾಧೀಶ ಶ್ರೀ ಮನ್ಮಹಾ ಕುಮಾರಸ್ವಾಮಿಗಳವರ ಪಾದಾರವಿಂದಗಳನ್ನು ಕಂಡುಕೊಂಡು, ಅವರಿಗೆ ತಮ್ಮ ಇಚ್ಛಿತವನ್ನು ಬಿನ್ನವಿಸಿದರು. ಅದಕ್ಕೆ ಮಹಾಸ್ವಾಮಿಗಳು "ಭಕ್ತಶ್ರೇಷ್ಠರೇ! ಪರಮಪಾವನಕರವೂ, ಮೋಕ್ಷೈಕ ಸಾಧನೀಭೂತವೂ ಆದ ನಮ್ಮ ವೀರಶೈವಮತದ ಉತ್ಕರ್ಷವನ್ನು ಚಿಂತಿಸುವ ನಿಮ್ಮ ಆಲೋಚನೆಗಳು ಸರ್ವಜನ ಸಮಂಜವಾಗಿರುವವು. ಇವೇ ವಿಚಾರಗಳು ನನ್ನ ಮನೋಂಬುಧಿಯಲ್ಲಿಯೂ ತೆರೆಗಳಂತೆ ತೇಲಾಡಹತ್ತಿವೆ. ಮಹನೀಯರ ಮನಸ್ಸಿನಲ್ಲಿ ತೇಲಾಡುತ್ತಿರುವ ವಿಚಾರತರಂಗಗಳನ್ನು ಎತ್ತಿಹಿಡಿಯಲಿಕ್ಕೆ ಮಹೇಶ್ವರನು ತತ್ಪರನಿರುವನು. ನಿಮ್ಮ ಪ್ರಚಂಡ ಸಾಹಸವನ್ನೂ, ಮತಸುಧಾರಣಾ ತತ್ಪರತೆಯನ್ನೂ ಕಂಡು ನನಗೆ ಪರಮಾನಂದವಾಗಿರುತ್ತದೆ. ವೈದ್ಯ ಹೇಳಿದ್ದೂ ಹಾಲೋಗರ ರೋಗಿ ಬಯಸಿದ್ದೂ ಹಾಲೋಗರ ಎಂಬಂತೆ ಉಭಯತಾಪಿ ವಿಚಾರಗಳು ಒಂದೇ ಆಗಿ, ನಮ್ಮ ಮನೋದಯ ಸಿದ್ಧಾರ್ಥಗಳನ್ನೇ ಸೂಚಿಸುತ್ತವೆ. ಪೂರ್ವದಲ್ಲಿ ಅನೇಕ ಮತಗಳು ತೀರ ಮುರಕಳಿಗೆ ಬಂದಿರಲು, ನಿಮ್ಮಂತಹ ಅಸಹಾಯ ಶೂರರಾದ ಕೆಲ ಮತಾಭಿಮಾನಿಗಳುದಿಸಿ, ರಾಜಾಶ್ರಯವನ್ನು ಸಂಪಾದಿಸಿ ಅಲ್ಲಲ್ಲಿಗೆ ಧರ್ಮಸಭೆಗಳನ್ನೆರ್ಪಡಿಸಿ, ತಂತಮ್ಮ ಮತಗಳನ್ನು ಜೀರ್ಣೋದ್ಧಾರಮಾಡಿ ಅವುಗಳನ್ನು ಪೂರ್ವದ ಸ್ಥಿತಿಗೆ ತಂದು, ಅಥವಾ ಇನ್ನಿಷ್ಟು ಪ್ರಕಾಶಿಸುವಂತೆ ಮಾಡಿ, ಅಕ್ಷಯಕೀರ್ತಿಯನ್ನು ಸಂಪಾದಿಸಿದರು. ಆದರೆ ಆಗಿನ

ಕಾಲದಂತೆ ಸದ್ಯಕ್ಕೆ ನಮಗೆ ರಾಜಾಶ್ರಯವು ಸಿಗುವಂತಿಲ್ಲದಿದ್ದರೂ (ರಾ.ಬ॥ರುದ್ರಗೌಡ ಸಾಹೇಬರವರನ್ನುದ್ದೇಶಿಸಿ) ಮತ ಸುಧಾರಣೆಯ ಉತ್ಕಟೇಚ್ಛೆಗಳೂ, ಕೇವಲ ಮತೋನ್ನತ ಕಾರ್ಯದಲ್ಲಿಯೇ ತನುಮನ ಧನದಿಂದ ಸಾಹಸವಂತರಾಗಿ, ಇದಕ್ಕಾಗಿಯೆ ಆಯಷ್ಯವನ್ನೂ, ಬುದ್ಧಿಯನ್ನೂ ವ್ಯಯಮಾಡುತ್ತಿರುವ ನಿಮ್ಮಂತಹ ಕಟ್ಟಭಿಮಾನಿಗಳೂ, (ಶ್ರೀಮಂತರ ಕಡೆಗೆ ಬೊಟ್ಟು ಮಾಡಿ) ಮತೋನ್ನತಿಯ ಕಾರ್ಯಭಾಗದಲ್ಲಿ ಭಾಂಡಾರರನ್ನು ಬಿಚ್ಚಿಬಿಡುವ ನಿಮ್ಮಂತಹ ವಿತರಣಶಾಲಿಗಳಾದ ಸಂಸ್ಥಾನಿಕರೂ ಇದ್ದ ಮೇಲೆ ಬೇಕಾದ ಕೆಲಸವನ್ನು ಮಾಡಬಹುದು. ನಮಗೆ ಆಶ್ರಯದಾತರಾದ ಸದ್ಯಃಕಾಲದ ರಾಜರೆಂದರೆ ನಮ್ಮ ವೀರಶೈವ ಸಂಸ್ಥಾನಿಕರೇ ಸರಿ! ಈ ಸಂಸ್ಥಾನ ದೇಸಗತಿ ಮುಂತಾದ ಎಲ್ಲ ರಾಜಾಶ್ರಯದಿಂದಲೂ, ಜನಾಶ್ರಯದಿಂದಲೂ, ಇಚ್ಛಿತ ಕಾರ್ಯಗಳು ಸುಲಭವಾಗಿ ನೆರವೇರುವುವು. ರಾ.ಬ॥ರುದ್ರಗೌಡರೇ ಈವರೆಗೆ ನಿಮ್ಮಿಂದ ಅನೇಕ ಅಘಟಿತ ಘಟನೆಗಳಾಗಿರುವುವು. ಪ್ರಚಂಡವಾದ 'ಲಿಂಗಾಯತ ಫಂಡು' ನಿಮ್ಮ ಕೀರ್ತಿಧ್ವಜವನ್ನು ಆಚಂದ್ರಾರ್ಕ ಮೆರೆಸುತ್ತಿರುವದು. ಫಂಡಿನ ಹಣದಿಂದ ಪದವೀಧರರಾದ ಎಷ್ಟೋ ಆಂಗ್ಲ ವಿದ್ಯಾವಿಶಾರದರು ನಿಮ್ಮ ಪುಣ್ಯನಾಮದ ಸ್ಮರಣಮಾಡಿಯೇ ಬಾಯಲ್ಲಿ ತುತ್ತು ಹಾಕುತ್ತಿರುವರು. ದೂರೇಕೆ? ಕೇವಲ ಲೋಕಹಿತೈಕ ಬುದ್ಧಿಯಿಂದ ಮಾಡುವ ರಾಜೋದ್ಯೋಗದಿಂದಲೂ, ಮತಸುಧಾರಣಾ ತತ್ಪರತೆಯಿಂದಲೂ ನಿಮ್ಮ ಹೆಸರನ್ನರಿಯದ ಒಬ್ಬ ವೀರಶೈವನೂ ಇಲ್ಲ. ಹತ್ತು ವರ್ಷದ ಹುಡುಗನಿಗೂ ಕೂಡ ನಿಮ್ಮ ಹೆಸರು ಗೊತ್ತುಂಟು. ಇದು ನಿಮ್ಮ ಅವಿಶ್ರಾಂತ ಶ್ರಮದ ಫಲವಲ್ಲದೆ ಬೇರೊಂದಿಲ್ಲ. ವೀರಶೈವ ರಾಷ್ಟ್ರದ ಮೇಲೆ ತಮ್ಮಿಂದಾದ ಮಹೋಪಕಾರವನ್ನು ಆ ಬಾಲವೃದ್ಧ ವೀರಶೈವರು ಆಮರಣ ಸ್ಮರಿಸಿದರೂ ತೀರದಾಗಿದೆ. ಈ ಮತಸುಧಾರಣಾ ವಿಷಯವಾಗಿಯೂ, ಸಾರ್ವಜನಿಕ ಹಿತಕಾರ್ಯಗಳಿಂದಲೂ ತಮ್ಮ ಧನ್ಯವಾದವನ್ನು ಎಷ್ಟು ಸ್ತುತಿಮಾಡಿದರೂ ಸ್ವಲ್ಪವೇ ಆಗಿದೆ. ಇನ್ನು ನೀವು ಈ ಮಹತ್ಕಾರ್ಯಕ್ಕೆ ಕಿಂಚಿತ್ತಾದರೂ ವಿಲಂಬ ಮಾಡಬೇಡಿರಿ. ಈ ಪುಣ್ಯಕಾರ್ಯವು ಸುಲಭವಾಗಿ ನೆರವೇರುವದಾಗಿ ಗುರ್ವಾಶೀರ್ವಾದವುಂಟೆಂ"ದು ದಯಾರ್ದ್ರ ದೃಷ್ಟಿಯಿಂದ ನಿರೂಪಿಸಿದರು.

ಮಹಾಸಭೆಯ ಮೂಲೋತ್ಪತ್ತಿ

ಗುರ್ವಾಶೀರ್ವಾದವನ್ನು ಪಡೆದುಕೊಂಡು ಉಭಯ ಮಹಾಶಯರು ಮುಂಬಯಿ, ಮೈಸೂರ, ಮದ್ರಾಸ, ಹೈದ್ರಾಬಾದ, ವಾಯವ್ಯಪ್ರಾಂತ, ಕರ್ನಾಟಕಗಳಲ್ಲಿರುವ ಎಲ್ಲ ವೀರಶೈವ ಜನಾಂಗದ ಮುಖಂಡರಿಗೂ, ಮತಾಭಿಮಾನಿಗಳಿಗೂ ಪ್ರಸಿದ್ಧಿ ಪತ್ರಿಕೆಗಳಿಂದಲೂ, ಮೈಸೂರಸ್ಟಾರ ಪತ್ರದಿಂದಲೂ ಸ್ವತಂತ್ರ ಲೇಖನಗಳಿಂದಲೂ, ತಾರುಗಳಿಂದಲೂ ತಿಳಿಸಿ, ಪಂಚಸಿಂಹಾಸನಾಧಿಪತಿಗಳ ಹಾಗೂ ವಿರಕ್ತವರ್ಯರ ಅನುಮತಿಯನ್ನು ಪಡೆದುಕೊಂಡು, ಧರ್ಮಸಭೆಯನ್ನು ಭವ್ಯವಾಗಿ ನೆರೆಯಿಸುವದನ್ನು ಗೊತ್ತುಮಾಡಿದರು. ಈ ಸಭೆಯಲ್ಲಿ ಧಾರ್ಮಿಕ, ಸಾಮಾಜಿಕ, ವ್ಯವಹಾರಿಕ, ಔದ್ಯೋಗಿಕ ಮುಂತಾದ ಗಹನ ವಿಷಯಗಳೆಲ್ಲವೂ ಚರ್ಚಿಸಲ್ಪಡಬೇಕಾಗಿ ಮೂಲೋದ್ದೇಶವಿರುವದರಿಂದ ಈ ಸಭೆಗೆ "ಶ್ರೀ ಮದ್ವೀರಶೈವ ಮಹಾಸಭೆ" ಎಂಬ ಹೆಸರನ್ನಿಡುವಂತೆ ಯುಕ್ತಿಯುಕ್ತವಾಗಿ ನಿರ್ಣಯಿಸಿದರು. ಈ ಮಹಾಸಭೆಯ ವಿಚಾರದಲ್ಲಿ ಧಾರವಾಡ ಅಕೌಂಟಂಟ ಕಚೇರಿಯ ಕಾರಕೂನರಾದ ಚೆನ್ನಪ್ಪಗೌಡ ವೀರಪ್ಪಗೌಡ ನವಲಗುಂದ ತಾಲೂಕ ಕೊಂಗವಾಡದವರೂ ಬಹಳೇ ಪ್ರಯತ್ನ ಮಾಡಿದರು. ಆರಂಭಕ್ಕೆ ಧಾರವಾಡದ ವೀರಶೈವ ಮತಾಭಿಮಾನಿಗಳು, ತಮ್ಮಲ್ಲಿ ಸಾವಿರಾರು ರೂಪಾಯಿ ಹಣಕೂಡಿಸಿ ೧ನೇ ಶ್ರೀಮದ್ವೀರಶೈವ ಮಹಾಸಭೆಯು ನಮ್ಮ ಧಾರವಾಡದಲ್ಲಿ ಆಗಬೇಕೆಂತಲೂ, ಅದಕ್ಕೆ ವ್ಯತ್ಯ ಬಾರದೆ ಸರಿಯಾಗಿ ಸಾಗಿಕೊಂಡು ಹೋಗುವಂತೆ ನಾವೆಲ್ಲರು ತನುಮನಧನದಿಂದ ಸಹಾಯಮಾಡುವೆವೆಂತಲೂ, ನಮ್ಮ

ಬಿನ್ನಹವನ್ನು ಮನ್ನಿಸಿ ನಮಗೆ ಅಪ್ಪಣೆಯನ್ನೀಯಬೇಕೆಂತಲೂ ಮಹಾಸಭೆಯ ಮೂಲೋತ್ಪಾದಕರಾದ ಶ್ರೀ ಹಾನಗಲ್ ಕುಮಾರ ಮಹಾಸ್ವಾಮಿಗಳವರನ್ನೂ, ರಾ.ಬ॥ರುದ್ರಗೌಡ ಸಾಹೇಬರವರನ್ನೂ, ಶಿರಸಂಗಿಯ ಶ್ರೀಮಂತ ಸರದೇಸಾಯಿಯವರನ್ನೂ ಕೇಳಿಕೊಳ್ಳಲು ಈ ಮೂವರೂ ಮಹಾನುಭಾವರು "ನಿಮ್ಮ ಅಭಿಮಾನವನ್ನೂ ಆದರವನ್ನೂ ನೋಡಿ ಆನಂದಿಸುತ್ತೇವೆಂ"ಬದಾಗಿ ಧಾರವಾಡದ ಮುಖಂಡರನ್ನು ಅಭಿನಂದಿಸಿ, ಅನುಮೋದನೆಯನ್ನು ಕೊಡಲಾಗಿ, ಧಾರವಾಡದವರು ಕೂಡಲೆ ಸಂತೋಷದಿಂದ ಸಭೆಯ ವಿವರವನ್ನೂ, ದಿವಸಗಳನ್ನೂ, ಉಪನ್ಯಾಸದ ಉಪಯುಕ್ತ ವಿಷಯಗಳನ್ನೂ, ವ್ಯಾಖ್ಯಾತರನ್ನೂ, ಸ್ಥಳವನ್ನೂ ವಿವರವಾಗಿ ಪ್ರಕಟನಾ ಪತ್ರಿಕೆಗಳಿಂದ ಪ್ರಸಿದ್ಧಮಾಡಿದರು. ಧಾರವಾಡ ಜಿಲ್ಲೆಯ ಕಲೇಕ್ಟರರಾದ ಮೆ॥ಗಿಬ್ ಸಾಹೇಬ ಬಹದ್ದೂರವರ ಮುಂದೆ ಮಹಾಸಭೆಯನ್ನು ನೆರವೇರಿಸುವ ಯಾವದ್ವೃತ್ತಾಂತವನ್ನು ತಿಳಿಸಿ, ಸಭೆಯನ್ನು ಕೂಡಿಸಲಿಕ್ಕೆ ಪರವಾನಗಿಯನ್ನೂ, ಅದಕ್ಕೆ ತಕ್ಕ ಸ್ಥಳವನ್ನೂ ಕೊಡೋಣವಾಗಬೇಕೆಂದು ಈ ಮೊದಲೇ ಕೇಳಿಕೊಂಡದ್ದಕ್ಕೆ, ಮೆ॥ರವರು ಸಭೆಯನ್ನು ಕೂಡಿಸಲಿಕ್ಕೆ ಪರವಾನಗಿಯನ್ನೂ, ಶಹರದ ಪಶ್ಚಿಮಕ್ಕಿರುವ ದರ್ಬಾರ ಹಾಲವೆಂಬ ಭವ್ಯವಾದ ಸರಕಾರಿಯ ಇಮಾರತಿಯನ್ನು ಕೊಡಲೊಡಂಬಟ್ಟರು. ಈ ಸ್ಥಳವು ದೊರೆಯದೆ ಹೋಗಿದ್ದರೆ ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ಹೊಸ ಸಭಾಮಂದಿರವನ್ನು ರಚಿಸಿಕೊಳ್ಳುವ ತ್ರಾಸದಾಯಕವಾದ ಹೋರೆಯೊಂದು ಧಾರವಾಡಸ್ಥರಿಗೆ ಹತ್ತುತ್ತಿತ್ತು. ವೀರಶೈವರ ಈ ವೆಚ್ಚವನ್ನುಳಿಸಿ ಸಭಾಕಾರ್ಯಕ್ಕೆ ಸರಕಾರೀ ಇಮಾರತಿಯನ್ನು ಕೊಟ್ಟ ಮೆ॥ಗಿಬ್ಬ ದೊರೆಗಳವರ ಧನ್ಯವಾದವನ್ನು ಎಷ್ಟು ಮಾಡಿದರೂ ತೀರದು. ರಾ.ಬ॥ರುದ್ರಗೌಡ ಸಾಹೇಬರವರ ಆಳಿಕೆಯಿಂದಿತ್ತ ವೀರಶೈವ ಜನಾಂಗದವರು ವಿದ್ಯೆಯಲ್ಲಿ ಮೆಲ್ಲಮೆಲ್ಲನೆ ಮುಂದೊರೆಯ ಹತ್ತಿದ್ದರಿಂದ, ಸ್ವಾಭಾವಿಕವಾಗಿ ಸಾತ್ವಿಕ ಸ್ವಭಾವದವರಾದ ಲಿಂಗಾಯತರನ್ನು ಸರಕಾರದವರು ಆದರಿಸಹತ್ತಿದರು. ಅದರಿಂದ ವೀರಶೈವರ ಸಮಾಜಹಿತದ ಕೆಲಸಗಳು ಸುಲಭವಾಗಿ ನೆರವೇರಹತ್ತಿದವು.

೧ನೇ ಶ್ರೀಮದ್ವೀರಶೈವ ಮಹಾಸಭೆ-ಧಾರವಾಡ

ವಿಶಾಲವಾದ ಸ್ಥಳದಲ್ಲಿರುವ ಮಹತ್ತರವಾದ ದರ್ಬಾರ ಹಾಲನ್ನು ವಿಧವಿಧದ ಬಗೆಯಿಂದ ಸಿಂಗರಿಸಿ, ಮಹಾಸ್ವಾಮಿಗಳವರಿಗೂ, ಸಭಾಧ್ಯಕ್ಷರಿಗೂ, ಪ್ರತಿನಿಧಿಗಳಿಗೂ, ಪ್ರೇಕ್ಷಕರಿಗೂ ಕೂಡ್ರಲಿಕ್ಕೆ ಯೋಗ್ಯಾಸನಗಳನ್ನು ಬಹು ಅಂದವಾಗಿ ಇರಿಸಿ, ಮಹಾದ್ವಾರಕ್ಕೆ ಬಹು ಸೊಬಗುಳ್ಳ ಕಮಾನವನ್ನು ರಚಿಸಿ, ಆ ಕಮಾನಿನ ಮೇಲೆ ಅರ್ಧವರ್ತುಳಾಕಾರವಾಗಿ "ಶ್ರೀಮದ್ವೀರಶೈವ ಮಹಾಸಭೆ" ಎಂಬ ಸುವರ್ಣಾಕ್ಷರಗಳನ್ನು ಕೆತ್ತಿಸಿದ್ದರು. ಧ್ವಜ ಪತಾಕೆಗಳ ಸಂದಣಿಯಿಂದಲೂ, ತಳಿರ್ದೋರಣಗಳಿಂದಲೂ, ಸಭಾಮಂಟಪವು ನೋಡಲಿಕ್ಕೆ ರಮಣೀಯವಾಗಿತ್ತು. ಸನ್ ೧೯೦೪ನೇ ಇಸವಿಯ ಮೇ ತಿಂಗಳ ೧೧ನೇ ತಾರೀಖು ಬುಧವಾರ ದಿವಸವೇ ರಾ.ಬ॥ರುದ್ರಗೌಡ ಸಾಹೇಬರವರೂ, ಶ್ರೀಮಂತ ಶಿರಸಂಗಿಯ ಸರದೇಸಾಯಿಯವರೂ, ಬೆಳಗಾವ ಮುಕ್ಕಾಮದಿಂದ ಹೊರಟು ಧಾರವಾಡ ಶಹರವನ್ನಲಂಕರಿಸಿದರು. ಅನಂತ ಶೋಭೆಯುಳ್ಳ ದರ್ಬಾರ ಮಂಟಪದಲ್ಲಿ ಸನ್ ೧೯೦೪ನೇ ಇಸವಿಯ ಮೇ ತಿಂಗಳ ತಾರೀಖು ೧೩-೧೪-೧೫ಕ್ರಮವಾಗಿ ಶುಕ್ರವಾರ, ಶನಿವಾರ, ರವಿವಾರ ಈ ಮೂರು ದಿವಸಗಳಲ್ಲಿ ಶಿರಸಂಗಿಯ ಶ್ರೀಮಂತ ಲಿಂಗಪ್ಪ ದೇಸಾಯರವರ ಅಧ್ಯಕ್ಷತೆಯ ಕೆಳಗೆ ಮಹಾಸಭೆಯು ಅತಿ ಕಿಕ್ಕಿಂಧವಾಗಿ ಕೂಡಿತು. ಸಭೆಗೆ ಶ್ರೀ ಹಾನಗಲ್ ಕುಮಾರಸ್ವಾಮಿಗಳವರೂ, ರಾ.ಬ॥ರುದ್ರಗೌಡ ಸಾಹೇಬರವರೂ, ರಾ.ಬ॥ಡಿ.ಡಿ. ಕಲೇಕ್ಟರರಾದ ಶಾಂತವೀರಪ್ಪ ಮೆಣಸಿನಕಾಯಿಯವರೂ, ರಾ.ಸಾ॥ರೇವಣಸಿದ್ಧಪ್ಪ ಬಸವಣ್ಣೆಪ್ಪ ಕಿತ್ತೂರ ಮಾಮಲೇದಾರರೂ, ಮೈಸೂರ ಸೀಮೆಯ ಪ್ರಸಿದ್ಧ ವಕೀಲರಾದ ಪಿ. ಮಹಾದೇವಯ್ಯನವರೂ, ಮೈಸೂರಿನ

ಕನ್ನಡ ಪಂಡಿತರಾದ ವೇ. ಪಿ.ಆರ್. ಕರಿಬಸವಶಾಸ್ತ್ರಿಗಳೂ, ಹುಬ್ಬಳ್ಳಿಯ ಸಿದ್ಧರಾಮಪ್ಪ ಪಾವಟೆ ವಕೀಲರವರೂ, ವೀರಭದ್ರಪ್ಪ ಹಾಲಭಾವಿ ಎಲ್‌ಎಲ್.ಬಿ ಯವರೂ, ವಿಭೂತಿ ಗದಿಗಯ್ಯನವರೂ ಮತ್ತು ಇಡೀ ಕರ್ನಾಟಕದ ವೀರಶೈವ ಮತಾಭಿಮಾನಿಗಳಾದ ಮಹಾಸ್ವಾಮಿಗಳೂ, ಸಂಸ್ಥಾನಿಕರೂ, ದೇಸಗತಿಯವರೂ, ಇನಾಮದಾರರೂ, ಸರಕಾರಿಯ ದೊಡ್ಡ ದೊಡ್ಡ ಅಧಿಕಾರಿಗಳೂ, ಪ್ರಸಿದ್ಧ ವಾಗ್ಮಿಗಳಾದ ವಕೀಲರೂ, ಸೆಟ್ಟರೂ, ಸಾವಕಾರರೂ, ಕವಿಗಳೂ, ಪಂಡಿತರೂ, ಸಮಾಜ ಸುಧಾರಣೇಚ್ಛುಗಳಾದ ಸರ್ವಜನರೂ ಸೇರಿದ್ದರಿಂದ ಸಭೆಯ ಕೆಲಸವು ಬಹು ಸಮಾರಂಭದಿಂದ ಸಾಂಗವಾಯಿತು. ಪ್ರತಿನಿಧಿಗಳೂ, ಪ್ರೇಕ್ಷಕರೂ ಕೂಡಿ ಅಜಮಾಸು ಮೂರು ಸಾವಿರದ ವರೆಗೆ ಕೂಡಿದ್ದರು. ಪ್ರಸಿದ್ಧ ವಾಕ್ಪಟುಗಳಾದ ಅನೇಕಮಂದಿ ವ್ಯಾಖ್ಯಾತರು ಮತಸುಧಾರಣಾ ಪರವಾದ ನಿಯಮಿತ ವಿಷಯಗಳ ಮೇಲೆ ಸಭೆಯಲ್ಲಿ ಅಸ್ಖಲಿತವಾಣಿಯಿಂದ ಉಪನ್ಯಾಸ ಮಾಡಿದರು. ಸಭಾಧ್ಯಕ್ಷರಾದ ಶ್ರೀಮಂತ ಶಿರಸಂಗಿಯ ಸರದೇಸಾಯಿಯವರು ಸಭೆಯ ಕಾರ್ಯಕ್ರಮವನ್ನು ಸರಿಯಾಗಿ ಸಾಗಿಸಿಕೊಂಡು ಹೋಗುವಲ್ಲಿ ಜಾಗರೂಕರಾಗಿದ್ದರು. ರಾ.ಬ||ರುದ್ರಗೌಡರು ಆಗಾಗ್ಗೆ ಅಧ್ಯಕ್ಷರಿಗೂ, ವ್ಯಾಖ್ಯಾನಕಾರರಿಗೂ ಉಪಯುಕ್ತ ಸೂಚನೆಗಳನ್ನು ಮಾಡಿ ವಿಷಯ ವಿವೇಚನಕ್ಕೆ ಉತ್ತೇಜನ ಕೊಡುತ್ತಿದ್ದರು. ಸಭೆಯಲ್ಲಿ ಒಟ್ಟು ೧೩ ಹದಿಮೂರು ವಿಷಯಗಳ ಸಂಬಂಧವಾಗಿ ಚರ್ಚೆ ನಡೆದು, ಸರ್ವಾನುಮತಿಯಿಂದ ಹನ್ನೆರಡು (೧೨)ಠರಾವುಗಳು ಪಾಸಾದವು. ಅವುಗಳನ್ನು ಆಗಿಂದಾಗ್ಗೆ ವರ್ತಮಾನ ಪತ್ರಗಳ ದ್ವಾರ ಪ್ರಸಿದ್ಧ ಪಡಿಸಿದ್ದಲ್ಲದೆ, ಮಹಾಸಭೆಯ ಉದ್ದೇಶವನ್ನೂ ಅದರ ಆಮೂಲ ಸಾದ್ಯಂತ ವಿವರನ್ನೂ, ವ್ಯಾಖ್ಯಾತರನ್ನೂ, ಸರ್ವೋತ್ಕೃಷ್ಟವಾದ ಅವರ ಉಪನ್ಯಾಸಗಳನ್ನೂ ಅಧ್ಯಕ್ಷರ ಅಮೌಲ್ಯವಾದ ಭಾಷಣವನ್ನೂ, ಸಭೆಯಲ್ಲಿ ಪಾಸುಮಾಡಲ್ಪಟ್ಟ ಠರಾವುಗಳನ್ನೂ, ಸಭೆಯಿಂದ ವೀರಶೈವ ಜನಾಂಗಕ್ಕೆ ಆಗತಕ್ಕ ಲಾಭವನ್ನೂ ಒಟ್ಟಾಗಿ ಸೇರಿಸಿ ಸರ್ವಜನರೂ ಓದಿ ತೃಪ್ತರಾಗಬೇಕೆಂಬ ಕುತೂಹಲದಿಂದ ಸಭೆಯ ಕಮೀಟಿಯವರು ಅದನ್ನು ಸ್ವತಂತ್ರ ಪುಸ್ತಕರೂಪವಾಗಿ ಮುದ್ರಿಸಿ "ವೀರಶೈವ ಮಹಾಸಭೆಯ ರಿಪೋರ್ಟು" ಎಂಬ ಹೆಸರಿನಿಂದ ಪ್ರಸಿದ್ಧ ಪಡಿಸಿರುತ್ತಾರೆ. ಅದನ್ನು ಓದಿದರೆ ಮಹಾಸಭೆಯ ಸರ್ವಸಂಗತಿಯು ಸ್ಪಷ್ಟವಾಗಿ ವಿದಿತವಾಗುವದು.

ಸಭೆಯ ಕಡೆಯ ದಿವಸ ಮೈಸೂರ ಪ್ರಾಂತದ ಸುಪ್ರಸಿದ್ಧ ವಾಗ್ಮಿಗಳಾದ ವೇದಮೂರ್ತಿ ಪಿ. ಮಹಾದೇವಯ್ಯನವರೆಂಬ ವಕೀಲರು ಸಭಾಮಧ್ಯದಲ್ಲಿ ಎದ್ದು ನಿಂತು, ಈ ಮಹಾಸಭೆಯು ಈ ವರ್ಷದಂತೆ ವರ್ಷ ವರ್ಷ ಅಪ್ರತಿಹತವಾಗಿ ನಡೆಯಬೇಕೆಂತಲೂ, ಈ ಮಹಾಸಭೆಯ ವಿಷಯವಾಗಿ ಬೇರೊಂದು ಫಂಡನ್ನು ಕೂಡಿಸುವದು ಅತ್ಯಗತ್ಯವೆಂತಲೂ, ಈಗ ಸಭೆಯಲ್ಲಿ ಸೇರಿದ ಜನರು ತಮ್ಮ ತಮ್ಮ ಶಕ್ತ್ಯನುಸಾರ ಹಣವನ್ನು ಕೊಡುವ ವಾಗ್ದಾನ ಮಾಡಬೇಕೆಂತಲೂ ಸೂಚನೆ ಮಾಡಲು, ಆರಂಭಕ್ಕೆ ಅಧ್ಯಕ್ಷರಾದ ಶ್ರೀಮಂತ ಶಿರಸಂಗೀಕರ ದೊರೆಗಳು ತಾವು ಆಯ್ದು ಸಾವಿರ (೫೦೦೦) ರೂಪಾಯಿ ಕೊಡುತ್ತೇವೆಂದು ಹೇಳಿದೊಡನೆ ಮತಾಭಿಮಾನಿಗಳಾದವರು ಸಭೆಯಲ್ಲಿ ಎದ್ದೆದ್ದು ನಿಂತು, ತಂತಮ್ಮ ಯೋಗ್ಯತೆಗೆ ಸರಿಯಾಗಿ ಇಷ್ಟಿಷ್ಟು ಹಣ ಕೊಡುತ್ತೇವೆಂದು ಪ್ರೇಮದಿಂದ ವಾಗ್ದಾನಮಾಡಿದರು. ಕೆಲವರು ಸಭೆಯಲ್ಲಿಯೇ ಪ್ರತ್ಯಕ್ಷವಾಗಿ ಹಣವನ್ನಿತ್ತರು. ರಾ.ಬ||ರುದ್ರಗೌಡ ಸಾಹೇಬರವರ ಉತ್ತೇಜನದಿಂದಲೂ, ಪ್ರೇರಣೆಯಿಂದಲೂ, ಸಮಯೋಚಿತವಾದ ಉಪಯುಕ್ತ ಸೂಚನೆಗಳಿಂದಲೂ ಒಂದೇ ಒಂದು ತಾಸಿನಲ್ಲಿ ಒಟ್ಟು ಸುಮಾರು ೩೫೦೦೦ ಮೂವತ್ತೈದು ಸಾವಿರ ರೂಪಾಯಿಗಳ ರಕಮಿನ ವರೆಗೆ ಅಂಕಿಗಳು ಬಿದ್ದವು. ಈ ಸಂಗತಿಯನ್ನು ಕೇಳಿದ ಪ್ರತಿಯೊಬ್ಬ ಮನುಷ್ಯನು ಚಕಿತನಾಗಿ ಲಿಂಗಾಯತ ಜನರ ಅಭಿಮಾನವನ್ನೂ, ಐಶ್ವರ್ಯವನ್ನೂ, ಔದಾರ್ಯವನ್ನೂ ಕೊಂಡಾಡಿದನು. ಎಲ್ಲ ವರ್ತಮಾನಪತ್ರಗಳು ಸಭೆಯ ಉತ್ಪಾದಕರ ಅಭಿನಂದನಪರವಾದ ಲೇಖಗಳಿಂದ ಅಲಂಕೃತವಾದವು, ಸಭೆಯ ಸಾಗ್ರ ಸಂಗತಿಯನ್ನು ಕೇಳಿ, ಮೆ||ಕಲೆಕ್ಟರ ಸಾಹೇಬ ಬಹದ್ದೂರವರು ಸಂತೋಷವನ್ನು ಹೊಂದಿದರು. ವೀರಶೈವರ ಪವಿತ್ರತೆಯೂ,

ಮಹತ್ವವೂ ಸರಕಾರಕ್ಕೆ ಗೊತ್ತಾಗಹತ್ತಿತು. ಕುತ್ಸಿತ ಬ್ರಾಹ್ಮಣ ಅಧಿಕಾರಿಗಳ ಕುತಂತ್ರದಿಂದ ಶೂದ್ರವರ್ಗದಲ್ಲಿ ಗಣಿಸುತ್ತಿದ್ದ ಲಿಂಗಾಯತ ಮತವು ಇದೊಂದು ಬ್ರಾಹ್ಮಣ ಮತಕ್ಕಿಂತಲೂ ಶ್ರೇಷ್ಠವಾದ ಅಥವಾ ಅದಕ್ಕೆ ಸಮಾನವಾದ ಧರ್ಮವೆಂದು ಸರಕಾರದವರು ನಂಬಹತ್ತಿದರು. ಇತರ ಧರ್ಮದ ತತ್ವಗಳು ತಿಳಿತಿಳಿದಂತೆ, ವೀರಶೈವ ಮತಕ್ಕೆ ಸರಕಾರದಲ್ಲಿ ಹೆಚ್ಚಿಗೆ ಮಾನದೊರೆಯಹತ್ತಿತು. ಲಿಂಗಾಯತ ಮತದ ಕೋರಿಕೆಗಳನ್ನು ಸರಕಾರದವರು ಆದರದಿಂದ ಕೇಳಿಕೊಳ್ಳಹತ್ತಿದರು. ಇಷ್ಟು ದಿವಸಗಳ ವರೆಗೆ ಸರಕಾರದಲ್ಲಿ ಕೈದೀಜನರ ವಿಷಯವಾಗಿ ವೀರಶೈವ ಧರ್ಮಬಾಹಿರವಾದ ಕೆಲವು ಕಟ್ಟಳೆಗಳು ನಡಿಸಲ್ಪಡುತ್ತಿದ್ದವು.ಅಂದರೆ ಲಿಂಗವಂತ ಕೈದಿಗಳು ತಮ್ಮ ಕೊರಳೊಳಗಿನ ಇಷ್ಟಲಿಂಗಗಳನ್ನು ಕಡೆಗೆ ತೆಗೆದಿಡಬೇಕಾಗುತ್ತಿತ್ತು. ಮತ್ತು ಇತರ ಜಾತಿಯವರಿಂದ ಕೊಡಲ್ಪಡುವ ಅನ್ನವನ್ನು ಸೇವಿಸಬೇಕಾಗುತ್ತಿತ್ತು. ಈ ಕಟ್ಟಳೆಗಳು ಪವಿತ್ರವಾದ ನಮ್ಮ ಧರ್ಮಕ್ಕೆ ತೀರ ವಿರುದ್ಧವಾದವುಗಳೆಂದು ನಿರ್ಣಯಿಸಿ, ಈ ವಿಷಯವಾಗಿ ಸಭೆಯಲ್ಲಿ ಪಾಸಾದ ಕೆಲ ಮಹತ್ವದ ಠರಾವುಗಳ ವಿಷಯಕ್ಕೆ ಸರಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುವುದು ಅವಶ್ಯವಾಗಿರುವದರಿಂದ ಆ ಪ್ರಕಾರ ಸಭೆಯ ಕಮಿಟಿಯವರು ಸರಕಾರದವರನ್ನು ಕುರಿತು "ಪ್ರಾಣವಾಯುವು ಜೀವನಕ್ಕೆ ಅತ್ಯಾವಶ್ಯಕವಾಗಿರುವಂತೆ ನಮ್ಮ ಲಿಂಗಾಯತ ಮತಕ್ಕೆ ಇಷ್ಟಲಿಂಗವೇ ಪ್ರಾಮುಖ್ಯವಾದುದರಿಂದ, ಲಿಂಗವೇ ಪ್ರಾಣವಾದುದರಿಂದ ಲಿಂಗವಂತ ಕೈದಿಗಳ ಅಂಗದಿಂದ ಇಷ್ಟಲಿಂಗವನ್ನು ವಿಂಗಡಿಸುವದು ನಮ್ಮ ಮತಕ್ಕೆ ತೀರ ವಿರೋಧವೂ ಅಪ್ರಾಶಸ್ತ್ಯವೂ ಆಗುತ್ತದೆಂತಲೂ, ಬ್ರಾಹ್ಮಣರಂತೆ ನಾವಾದರೂ ಅನ್ಯಮತದವರ ಅನ್ನವನ್ನು ಪರಿಗ್ರಹಿಸುವದಿಲ್ಲೆಂ"ತಲೂ ವಿಜ್ಞಾಪಿಸಿಕೊಂಡದ್ದಕ್ಕೆ ಸರಕಾರದವರು ಇವರ ಬಿನ್ನಹವನ್ನು ಮಾನ್ಯಮಾಡಿ, ಇನ್ನುಮೇಲೆ ಲಿಂಗಾಯತ ಕೈದಿಗಳು ತಮ್ಮ ಲಿಂಗಗಳನ್ನು ತೆಗೆದಿಡುವ ಕಾರಣವಿಲ್ಲೆಂತ ಗೊತ್ತುಮಾಡಿದರು-ಸರಕಾರ ಠರಾವ ನಂಬರ ೨೭೫೮/೧೫-೫-೧೯೦೫. ತಮ್ಮ ಧರ್ಮವನ್ನು ಸಂರಕ್ಷಿಸುವ ಕಟ್ಟಳೆಗಳನ್ನು ಮಾಡಿದ್ದರಿಂದ ಮಹಾಸಭೆಯವರು ಸರಕಾರದ ಅಭಾರವನ್ನು ಮನ್ನಿಸಿದರು.

ಧರ್ಮವು ಶುದ್ಧವಾಗಿ ನಡೆಯಬೇಕೆಂತಲೂ, ಧರ್ಮದ ತತ್ವಗಳು ಎಲ್ಲ ಜನರಿಗೂ ಸುಲಭವಾಗಿ ತಿಳಿಯಬೇಕೆಂತಲೂ, ಎಲ್ಲ ಕಡೆಯಲ್ಲಿ ಧರ್ಮೋಪದೇಶಕರು ನಿಯಮಿಸಲ್ಪಡಬೇಕೆಂತಲೂ, ವೀರಶೈವರು ವಿದ್ಯಾವಂತರಾಗಬೇಕೆಂತಲೂ, ಲಗ್ನ ಮುಂತಾದ ಸಮಾರಂಭಗಳಲ್ಲಿ ದುಂದಗಾರಿಕೆಯಲ್ಲಿ ನಿರರ್ಥಕವಾಗಿ ಹಣವನ್ನು ಹಾಳುಮಾಡದೆ ಧರ್ಮೋನ್ನತಿಯ ಕಾರ್ಯಕ್ಕೆ ಹಣದ ಸಹಾಯ ಮಾಡಬೇಕೆಂತಲೂ, ಮಹಾಸಭೆಯಿಂದ ಬಗೆಬಗೆಯ ಸುಧಾರಣೆಗಳು ಎಲ್ಲ ಕಡೆಯಲ್ಲಿ ನಡೆದವು. ಅಲ್ಲಲ್ಲಿಗೆ ಪ್ರಾಂತಿಕ ಸಭೆಗಳಾಗಹತ್ತಿದವು.ರಾಷ್ಟ್ರೀಯ ಸಭೆಯು ಇಡೀ ಭರತಖಂಡಕ್ಕೆ ಹೇಗೆ ಮಹತ್ವದ್ದಾಗಿರುವದೋ ಅದರಂತೆ ಈ ಮಹಾಸಭೆಯು ವೀರಶೈವ ಸಮಾಜಕ್ಕೆ ಮಹತ್ವದ್ದಾಯಿತು. ಈ ಮಹಾಸಭೆಗೆ ವೀರಶೈವ ಕಾಂಗ್ರೆಸ್ ಎಂದೆನ್ನಲಿಕ್ಕೂ ಅಡ್ಡಿಯಿಲ್ಲ. "ಸಂಘೇ ಶಕ್ತಿಃ ಕಲೌ ಯುಗೇ" ಎಂಬಂತೆ ಈ ಮಹಾಸಭೆಯಿಂದ ವೀರಶೈವರ ಕೋರಿಕೆಗಳು ಕ್ರಮಕ್ರಮವಾಗಿ ಕೊನೆಗಾಣಹತ್ತಿದವು. ವೀರಶೈವರ ವಿದ್ಯಾವೃಕ್ಷವು ಫಲಿಸಹತ್ತಿತು. ಕೈ.ವಾ.ರಾ.ಬ||ಗಿಲಗಿಂಚಿ ಗುರುಸಿದ್ದಪ್ಪನವರು ಅಂತ್ಯಕಾಲದಲ್ಲಿ ತಮ್ಮ ಪರಮಸ್ನೇಹಿತರಾದ ರಾ.ಬ||ರುದ್ರಗೌಡರವರಿಗೆ ಹೇಳಿದ ಮಾತುಗಳೆಲ್ಲ ನಿಜವಾಗಹತ್ತಿ, ಪರಲೋಕದಲ್ಲಿದ್ದ ಅವರ ಆತ್ಮಕ್ಕೆ ಆನಂದವನ್ನು ಕೊಡಹತ್ತಿದವು. ರಾ.ಬ||ಗುರುಸಿದ್ಧಪ್ಪಣ್ಣನವರು ಈ ಮಹಾಸಭೆಯ ವರೆಗಾದರೂ ಇರಬೇಕಾಗಿತ್ತೆಂದೂ, ಅವರ ನೇತ್ರಗಳು ಈ ಕಿಕ್ಕಿಂಥವಾದ ಮಹಾಸಭೆಯನ್ನವಲೋಕಿಸಬೇಕಾಗಿತ್ತೆಂದೂ, ಅವರು ಈವರೆಗೆ ಇದ್ದಿದ್ದರೆ ನಮ್ಮ ಸಮಾಜೋನ್ನತಿಯ ಎಷ್ಟೋ ಘನಕಾರ್ಯಗಳು ಒಳಬೀಳುತ್ತಿದ್ದವೆಂದೂ ರಾ.ಬ||ರುದ್ರಗೌಡಸಾಹೇಬರವರು ಅವರನ್ನು ಸ್ಮರಣಕ್ಕೆ ತಂದು ವಿಷಾದಿಸಿಕೊಳ್ಳುವದಾಯಿತು. ಭಗವತ್ಸಂಕಲ್ಪವನ್ನು ತಪ್ಪಿಸುವದು ಯಾರಿಂದಲೂ ಆಗದು. ಒಟ್ಟಿಗೆ ಈ ಮಹಾಸಭೆಯು ವೀರಶೈವ ಸಮಾಜಕ್ಕೆ ಒಂದು ಕಲ್ಪವೃಕ್ಷವೇ ಆಯಿತೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಈ ಪ್ರಕಾರ ಮಹಾಸಭೆಯಿಂದ ಅನೇಕ ಲಾಭಗಳಾಗಹತ್ತಿದವು. ಲಿಂಗಾಯತ ಫಂಡಿನಂತೆ ಈ ಮಹಾಸಭೆಯಾದರೂ ರಾವಬಹದ್ದೂರ ರುದ್ರಗೌಡ ಸಾಹೇಬರ ಸ್ಥಿರವಾದ ಸ್ಮಾರಕವಾಯಿತೆಂದು ಹೇಳಬಹುದು.

ಈ ಮಹಾಸಭೆಯು ಎಷ್ಟು ಭವ್ಯವಾಗಿ ನೆರವೇರಿತ್ತೆಂಬದು ಆ ಮಹಾಸಭೆಗೆ ಪ್ರತಿನಿಧಿಯಾಗಿ ಬಂದಿದ್ದ ಈ ಗ್ರಂಥಕಾರರಾದ ಬಸವಾರ್ಯರು ಸಭೆಯ ಕಡೆಯ ದಿವಸ ಆಗಿಂದಾಗ ರಚಿಸಿ ಸಭೆಯಲ್ಲಿ ಓದಿದ ಪದ್ಯಪಂಚಕದ ಮೇಲಿಂದ ಸ್ಪಷ್ಟವಾಗಿ ತಿಳಿಯುತ್ತದೆ. ವಾಚಕವೃಂದದ ಪ್ರೀತ್ಯರ್ಥವಾಗಿ ಆ ಪದ್ಯಗಳು ಇಲ್ಲಿ ಉದಾಹರಿಸಲ್ಪಟ್ಟಿವೆ.

೧ನೇ ಶ್ರೀಮದ್ವೀರಶೈವ ಮಹಾಸಭಾ ಪರವಾದ ಪದ್ಯಪಂಚಕಂ

ಶಾ॥ವಿ॥ವೃತ್ತಂ

ಶ್ರೀಮದ್ವೇದವಚೋವಿಲಾಸಲಲಿತಂ ರಾಜಾಂಕಭೂಷಂ[೧] ಸುಧೀ-।
ಸ್ತೋಮಾ[೨]ಲ್ಹಾ ದಕವೀರಶೈವಮತವಿಸ್ತೀರ್ಣಾಬ್ಧಿಚಂದ್ರೋಪಮಂ ॥
ಪ್ರೇಮಂಬೆತ್ತೆಮಗೀಗೆ ವಾಂಛಿತಫಲಂ ಕಲ್ಯಾಣತೇಜೋಮಯಂ।
ಸ್ವಾಮಿ ಶ್ರೀ ಶಿವಲಿಂಗರಾಜಮನಿಶಂ ಶ್ರೀಸಂಗ[೩]ರಕ್ಷಾಕರಂ ॥೧॥

ಚಂಪಕಮಾಲಾ ವೃತ್ತಂ

ಪರತರ ವೀರಶೈವಮತ ನೌಕೆಯು ಭೀಕರ ಕಾಲವಾರ್ಧಿಯಾ।
ತಿರುಗಣಿಯಲ್ಲಿ ಸಿಲ್ಕಿ ಮುಳುಗುತ್ತಿರೆ ಸಾಹಸವಾಂತು ಶೀಘ್ರದಿಂ ॥
ಪೊರದೆಗೆಯಲ್ ಪ್ರಯತ್ನಪಡುವೀ ಮಹನೀಯ ಮತಾಭಿಮಾನಿಗಳ್।
ಹರಕರುಣಾತಿರೇಕಪದಮಂ ಪದಪಿಂ ಪಡೆದಿರ್ಕೆ ಸೌಖ್ಯದಿಂ ॥೨॥

ಮಾಲಿನೀ ವೃತ್ತಂ

ನೆರೆದ ಜನಸಮೂಹಂ ದಿವ್ಯದೇವರ್ಕಳಾಗಲ್ ।
ವಿರತಗಣಮದೊಪ್ಪಲ್ ಮಾನ್ಯಮೌನೀಂದ್ರರೆಂಬೊಲ್॥
ಸುರವರ ಸಭೆಯಿಂದೀ ವೃಂದಮೇ ರಮ್ಯದೋರಲ್।
ಸುರಪತಿಯೆನೆ ತೋರ್ದಂ ಲಿಂಗರಾಜಂ ವಿರಾಜಂ ॥೩॥

ಶಾ॥ವಿ॥ವೃತ್ತಂ

ಭೂದಿಗ್ನೇತ್ರ ಗುಣಾಂಕ[೪] ವತ್ಸರದ ವೈಶಾಖಾಖ್ಯ ಮಾಸಾಂತ್ಯದೊಳ್।
ವೇದೋತ್ಪಾದಿತ ವೀರಶೈವ ಸಭೆ ಸದ್ಧರ್ಮೋಪತತ್ವಂಗಳಾ ॥
ಬೋಧಂಗೆಯ್ಯುವ ಸರ್ವಮಾನ್ಯಜನರಿಂ ಸನ್ಮಾನಿತಾಧ್ಯಕ್ಷರಿಂ ॥
ದಾದತ್ತೀ ಘನ ಧಾರವಾಡಪುರದೊಳ್ ಸಂತೋಷ ಸಾಮ್ರಾಜ್ಯದಿಂ ॥೪॥

---

೧. ಚಂದ್ರಧರ, ರಾಜಹ್ನಗಳುಳ್ಳವ

೨. ದೇವಸಮೂಹ, ಪಂಡಿತಸಮೂಹ

೩. ವಿಷ್ಣು, ಶಿರಸಂಗಿ

೪. ಶಕೆ ೧೮೨೦ರಲ್ಲಿ

ಉತ್ಪಲಮಾಲಾವೃತ್ತಂ

ಮಂಗಳಮಕ್ಕೆ ಲಿಂಗಮತಮೆಲ್ಲೆಡೆಯೊಳ್ ನೆಲಸಿರ್ಕೆ ಸರ್ವ ಕಾ-।
ರ್ಯಂಗಳು ಸಾಂಗಮಕ್ಕೆ ಸಿರಿವೆರ್ಚಿ ಮನೋರಥ ಸಿದ್ಧಿಯಕ್ಕೆ ಕ-॥
ಷ್ಟಂಗಳು ಬಾರದಿರ್ಕೆ ಕಲಿವರ್ ಪದವೀಧರರಕ್ಕೆ ಶೀಘ್ರದಿಂ।
ಪಿಂಗದೆ ನೀತಿಯಂ ಬಿಡದೆ ಭಕ್ತಮಹೇಶ್ವರರಿರ್ಕೆ ಸಂತತಂ ॥೫॥

ಈ ಮಹಾಸಭೆಯಲ್ಲಿ ರಾ॥ಬ॥ರುದ್ರಗೌಡ ದೊರೆಗಳು ಸಮಸ್ತ ವೀರಶೈವಜನಾಂಗಕ್ಕೆ ಮಾಡಿದ ಸದುಪದೇಶದ ವಿಷಯವಾಗಿ ಇದೇ ಬಸವಾರ್ಯಕವಿಗಳು ಪದ್ಯಗಳನ್ನು ರಚಿಸಿ, ಆ ಪದ್ಯಸಮೂಹಕ್ಕೆ "ರುದ್ರಪ್ರಭುನೀತಿ" ಎಂಬ ಹೆಸರಿಟ್ಟು ಪ್ರಸಿದ್ಧ ಮಾಡಿರುತ್ತಾರೆ. ಆ ಪದ್ಯಗಳು ಯಥಾರ್ಥವಾಗಿಯೂ, ಮನೋಹರವಾಗಿಯೂ ಇದ್ದುದರಿಂದ ಅವುಗಳನ್ನು ಇಲ್ಲಿ ಕೊಡುತ್ತೇವೆ.

ರುದ್ರಪ್ರಭುನೀತಿ

ಈಶಸ್ತವನಂ

ಕಂದ

ಶ್ರೀ[೫] ಸಂಗಪ್ರಿಯಸಖನು। ಲ್ಲಾಸಾಸ್ಪದ ಯೋಗಿಹೃದಯ ವಾಸಂ ತ್ರಿಪುರಾ।
ವಾಸ ಖಲಶಾಸನಾಂಕಂ । ಲೇಸಂಗುಡುಗೆಮಗೆ ಮಹಿತ ರುದ್ರಂ ಭದ್ರಂ ॥೧॥

ಪೀಠಿಕೆ

ಹಾಂಗಲ್‌ಸ್ವಾಮಿಯ ಕರುಣಾ। ಪಾಂಗದೊಳಾ ರುದ್ರಗೌಡ ಲಿಂಗನೃಪಾಲರ್॥
ಲಿಂಗಾಯತ ಮತ ಸಭೆಯಂ। ತುಂಗೋತ್ಸವದಿಂ ನೆಗಳ್ದರದನರಿಯದರಾರ್ ॥೨॥

ವಚನ

ಏತತ್ ಸಭಾಂತರಾಳದೊಳ್ ಗುಣಗಣಮಂಡಿತ ಮಹಾದೇವಾರ್ಯಾದ್ಯನೇಕ ವಾಕ್ಪಟುಗಳನೇಕ ವಿಷಯ ಪ್ರತಿಪಾದನೆಯಿಂದನೇಕ ತೆರದೊಳುಪನ್ಯಾಸಂಗೈದುದು ಸರ್ವಶ್ರುತಮಿರ್ಕುಂ. ತತ್ಸಮಯದೊಳುಂ ತದಿತರ ಸಮಯದೊಳುಂ ಎಮ್ಮೀ ಬೆಳಗಾವ ಪ್ರಾಂತೋಪಾಧಿಕಾರಿ ಶ್ರೀಮದರಟಾಳ ರುದ್ರಗೌಡ ಮಹಾಶಯಂ ಹೃದಯಂಗಮವಾಗಿ ಪೇಳ್ದ ನುಡಿಗಳಿನಿಸಾದೊಡಮತೀವ ಗಂಭೀರಮಿರ್ದುದರಿಂ, ತನ್ಮಾರ್ಮಿಕೋಪದೇಶಮಂ ಸುಜನ ಸಾಮೂಹ್ಯಂ ಕೇಳ್ದು ನಲಿಗುಮೆಂದರಿಪೆನದೆಂತನೆ,

ವಿರಕ್ತ ವಿಡಂಬನಂ

ಮ-ವಿ-ವೃತ್ತ

ಮೊದಲೊಳ್ ಭೂವರರಿತ್ತರೊಲ್ದು ಧನಭೂವರ್ಷಾಸನಾದ್ಯಂಗಳಂ।
ಬುಧಮಾಹೇಶ್ವರ ವೃಂದಕೈದೆ ನಿಜಶಿಷ್ಯವ್ರಾತಮಂ ಶಾಸ್ತ್ರಕೋ॥

---

೫. ಈ ಪದ್ಯದ ಅರ್ಥವು ಶಿವಪರವಾಗಿಯೂ, ರುದ್ರಗೌಡರ ಪರವಾಗಿಯೂ ಆಗುತ್ತದೆ.

ವಿದರಂಗೆಯ್ಯಲಶೇಷ ಲಿಂಗಮತಮಂ ಸದ್ಧರ್ಮದಿಂ ಪಾಲಿಸಲ್।
ಅದನೇ ದುರ್ವ್ಯಯ ಮಾಳ್ಪರೋ ಶಿವಶಿವಾ ದುಷ್ಟಾತ್ಮರೀ ಕಾಲದೊಳ್ ॥೩॥

ವಚನಂ

ಆಧುನಿಕ ಗೋಮುಖವ್ಯಾಘ್ರನಂತಿರ್ಪ ದುರಾತ್ಮ ವಿರಕ್ತರ್ಕೆಲರ್ ದಾಸೋಹಮಂ ಮಾಳ್ಪೆವೆಂದುಂ ಏಕಾದಶಷೋಡಶಾಷ್ಟಾದಶತ್ರಿಷಷ್ಟ್ಯಾದ್ಯಸಂಖ್ಯಾಕ ಪೂಜಾ ಮಂಟಪಗಳಂ ವಿರಚಿಪೆಮೆಂದಾಡಂಬರದಿಂ ಗಳುಹುತ್ತಂ

ಕಂದ

ಅಲ್ಲಲ್ಲಿ ತಿರಿದು ಧನಮಂ। ಮೆಲ್ಲನೆ ಕೂಡಿಟ್ಟು ಪೆಣ್ಗಳಿದಿರೊಳ್ ಮೆರೆಯಲ್ ॥
ಪಲ್ಲಕ್ಕಿಯ ದಂಡಿಗೆಯಂ । ನಿಲ್ಲದೆ ಮಾಡಿಸುವರವರ್ದೇಂ ಗಾವಿಲರೋ! ॥೪॥

ವಚನಂ

ಇಂತಿಪ್ಪ ಗುರೂತ್ತಮರ ಲಿಂಗಪೂಜಾ ವೈಭವಮೆಂತಿರ್ಪುದೆಂದೊಡೆ-

ಮ-ವಿ-ವೃತ್ತಂ

ಲಲನಾಪ್ರೇಮವೆ ಲಿಂಗಭಕ್ತಿಯಚಲಿದ್ವ್ಯಾಮೋಹಮೇ ಧ್ಯಾನಮಾ।
ಲಲನಾಲಂಕೃತಮೇ ಪೊದಳ್ದ ಶಿವಪೂಜಾಲಂಕೃತಂ ಚಿತ್ತಮಂ॥
ಜುಳೆಯಾಲಾಪಮೆ ಲಿಂಗಮಂತ್ರಪಠಣಂ ತತ್ಸಂಗಮೇ ಮೋಕ್ಷಮಂ।
ಗಲಮೆಂಬರ್ ಕೆಲಬರ್ ವಿರಕ್ತ ಪಿಶುನರ್ ಪರ್ಯಂಕಪೀಠರ್ ಕೆಲರ್ ॥೫॥

ಕಂದಂ

ಇಂತಿರ್ಪ ಲಿಂಗಪೂಜಾ।ನಂತಫಲಂ ಮೂರ್ತಿಮಂತ ಮಾಡಿಪುದೆನೆ ಸೀ॥
ಮಂತಿನಿಯಾ ಕೂಟದೆ ಯುವ । ಸಂತಂ ತಾನಂತುಮಿಂತು ಜನನಂಬಡೆವಂ ॥೬॥

ಉತ್ಪಲಮಾಲಾವೃತ್ತಂ

ಪುಟ್ಟಿದ ಪುತ್ರನಂ ನಲಿದು ನೋಡಿ ವಿಲಾಸಮನಾಂತು ಚಿತ್ತದೊಳ್।
ಪಟ್ಟಕೆ ಯೋಗ್ಯನಪ್ಪನಿವನೆನ್ನವಸಾನದೊಳೆಂದು ಪ್ರೇಮದಿಂ॥
ತೊಟ್ಟಿಲಗಟ್ಟಿ ಬಂಧುರನ ತೂಗುತಮ್ಮೆದೆ ಜನಾಪವಾದಮಂ॥
ಕಟ್ಟಿಡುತಂ ಸದಾ ಪೊರೆವ ವೀರ ವೀರಕ್ತರದೇಂ ಕೃತಾರ್ಥರೋ? ॥೭॥

ಕಂದಂ

ಒಂದು ದಿನಂ ಮಹನೀಯರ।ಸಂದರುಶನದಿಂದೆ ಧನ್ಯನಾದೆಪೆನೆನುತಾ॥
ನಂದದೆ ಮಠದೊಳ ಪೋಗಲ್ ನಿಂದ್ಯಾಸ್ಪದಮೊಂದಸಹ್ಯ ಕೃತಿಯಂ ಕಂಡೆಂ ॥೮॥

ವಚನಂ: ಅದೆಂತನೆ-

ಕಂದ

ಕೆಲಬಲಮಂ ನಿರುಕಿಸುತಂ। ನಿಲುವಂಗಿಯನೇರುಗಟ್ಟಿ ಕಂದನ ಮಲಮಂ॥
ಅಲರ್ದ ಕರಾಂಗುಲಿಯಿಂದಂ। ಬಳಿಯುತ ಶೋಭಿಸಿದನೋರ್ವ ವೃದ್ಧ ವಿರಕ್ತಂ ॥೯॥

ಈತಂ ಮರಿದೇವನೊ? ಗುರು। ನಾಥನೊ ಶಿವಮಂತ್ರದರ್ಪಣವನೊಡೆಯುವ ಹೆ॥
ಗ್ಗೋತಿಯೊ ವಿರತಾರಾತಿಯೊ?। ಪಾತಕಸಂಚಯನೊ? ನರಕ ಕೂಪನೊ ಕಾಣೆಂ ॥೧೦॥

ಕಂದ

ಎಂದವನಂದವನರಿಯದೆ। ಸಂದೇಹಮನಾಂತು ಗುರುಗಳೆಲ್ಲಿರುವರ್ ಪೇ।
ಳೆಂದನಲಾ ನಿಂದ್ಯಂ ಕರೆ। ತಂದಪೆನಿದೊ ಬಂದೆ ಬಂದೆಯೆನುತೋಡಿದವಂ ॥೧೧॥

ಚಂಪಕಮಾಲಾ ವೃತ್ತಂ

ಅನಿತರೊಳೈದಿದಳ್ ಮಧುರವಾಣಿ ವಿಲಾಸಿನಿ ಜಾಣೆ ಜಾರಿಣಿ ।
ಘನ ವಿರತತ್ವಮಂ ಕವರ್ದ ಕಾಮಿನಿ ಭಾಮಿನಿ ಮಂದಹಾಸಿನಿ ॥
ತನುಮನದೊಳ್ಪಿನಿಂ ಧನವಿನಾಶಿನಿ ದುಃಶಿಥಿಲೀಕೃತಾಂಗ ಕೌ।
ಪೆನಿರಯ ಭಾಜನಿ ಪ್ರಳಯ ಕಾರಿಣಿ ತಾಂ ಜಲಭಾಂಡ ಹಸ್ತಿನೀ ॥೧೨॥

ವಚನಂ ಇಂತಿರ್ಪ ಬಂಧುರೆಯಂ ಮಹನೀಯರೆಲ್ಲಿರ್ಪರೆಂದು ಬೆಸಗೊಳಲ್ಕವಳ್ -

ಕಂದ

ಏನೊಂದನಾಡಲರಿಯದೆ। ಜಾನಿಸುತಂ ನಾಣ್ಣುತ ಸ್ಫುಟಸ್ವರದಿಂದಂ ॥
ಆನನವನರೆ ಮುಸುಂಕುತೆ। ನಾನರಿಯೆನೆನುತ್ತೆ ಬೋಡೆಯೋಡಿದಳಾಗಳ್ ॥೧೩॥

ವಚನ ಇದಂ ಕಣ್ಣಾರೆ ಕಂಡು ಸಖೇದಾಶ್ಚರ್ಯಮನಾಂತು ಬೆಚ್ಚಿ ಬಿರ್ದು, ಅಲ್ಲಿಂ ಪೊರಮಟ್ಟು ಜನಗಳಿಂ ನಿಜಮನರಿದು ಮನದೊಳಾಂ ಮರುಂಗಿ-

ಉತ್ಪಲಮಾಲಾ ವೃತ್ತಂ

ಆವೆಡೆಯಲ್ಲಿ ಸ್ವೈರದೆ ವಿನರ್ತಿಪ ರಾಣಿಯ ನೂಪುರಸ್ವನಂ ।
ತೀವಿರಲಾ ವಿರಕ್ತರದ ಕರ್ಣದೊಳಾಂತು ಕೃತಾರ್ಥರಾದರಾ!
ಪಾವನಮಪ್ಪ ತಾಣದೊಳೆ ಪೆಣ್ಗಳ ನೂಪುರಯುಕ್ತ ಪಾದ ಭಾ।
ರಾವಹ ಚಾಲನೋತ್ಥಿತ ರವಂ ಶ್ರುತಿಮಂಜುಳಮಾಮದಕ್ಕಟಾ ॥೧೪॥

ಪಟ್ಟದಾರ್ಯ ಪ್ರವರ್ತನಂ

ಕಂದ

ಶಿಷ್ಟತನಂ ದೂರಾಗಲ್। ದುಷ್ಟತೆ ಮೈಗೊಂಡಿರಲ್ಕೆ ಶಿವಮತವೆನಿಪಾ ॥
ಕಟ್ಟಡಮಂ ಬೀಳ್ಗೆಡಿಪಾ।ಪಟ್ಟದ ಚರಮೂರ್ತಿ ಸುಟ್ಟೊಡೇಂ ಸುಟ್ಟಪನೇ ॥೧೫॥

ವಚನಂ ಶಿವಮಂತ್ರಂಗಳನರಿಯದಿರ್ದೊಡಂ ಕೆಲರ್ ಪ್ರಸ್ಥ ಪ್ರಯೋಜನಾದಿ ಕಾರ್ಯವೈಶೇಷ್ಯದೊಳುಂ ಆಮಂತ್ರಿತ ಧನಿಕರ ಗೃಹಂಗಳೊಳಂ ಶಿವಪೂಜೆಯಂ ಮಾಡಿಕೊಳ್ಳುತಿರ್ಪಾಗಳ್-

ಶಿಖರಿಣೀ ವೃತ್ತಂ

ಮುಸುಂಕುತ್ತಂ ಚೀನಾಂಬರವ ಜಪಮಾಲಾಂಕ ಲಸಿತಂ ।
ಲಸದ್ಭಸ್ಮಾಲಿಪ್ತಂ ಗಣಗಣಿಪ ಘಂಟಾದಿ ನಿನದಂ।
ಅಸಂಬದ್ಧಂ ಮಂತ್ರೋಚ್ಚರಿತ ಬಹಿರಾರ್ಭಾಟ ಭರಿತಂ ।
ಅಸನ್ನಿಷ್ಠೋಪೇತಂ ಗುಣುಗುಣುಗುಡುತ್ತೈದೆ ಮೆರೆವರ್ ॥೧೬॥

ವಚನಂ॥ ನಿರಕ್ಷರ ಕುಕ್ಷಿಗಳಪ್ಪ ಪಲಂಬರ್ ಪಟ್ಟಚರಮೂರ್ತಿಗಳುಂ ಗುರುಸ್ಥಲ ಜಂಗಮರ್ಕಳುಂ, ಗರ್ಭಾದಾನ, ಪುಂಸಮನ ಸೀಮಂತ ಮೊದಲಾದ ವೈದಿಕವಿಧಾಮನರಿಯದೆ ಲಿಂಗಧಾರಣ, ನಾಮಕರಣ, ಅನ್ನಪ್ರಾಶನ, ಚೌಲ, ದೀಕ್ಷಾ, ವಿವಾಹವಿಧಿಯೊಳುಂ ಸಮಾರಾಧನಾ ಸಂಭ್ರಮದೊಳುಂ ಅಂತ್ಯೇಷ್ಠಿಯೊಳುಂ ಅಷ್ಟಕಮೋ ಸ್ತೋತ್ರಮೋ ಪುಷ್ಪಾಂಜಲಿಯೋ ಅರಿಯಲಸದಳಮಪ್ಪಂತೆ ಸೋಮೇಶ್ವರ ಶತಕದೊಳಗಣ ಪದ್ಯಂಗಳಂ ಪಠಿಸಿ, ಪರಮತೀಯರಿಂ ತಿರಸ್ಕರಣೀಯಮಪ್ಪಂತೆವೊಲ್ ಅಬದ್ಧಾಬದ್ಧ ಕರ್ಕಶಪ್ರಯೋಗಗಳಳಿಂ ಪದವಿನ್ಯಾಸಮಂಗೈದು ಕರ್ಣಕಠೋರಮೆನೆ

....[೬]

ಎನುತಂ ಪೇರ್ದನಿಯಿಂದೆ ಕೂಗುತಿಹರೋ ಶ್ರೀ ರುದ್ರಭದ್ರೇಶ್ವರಾ ॥೧॥

ವಚನಂ॥ ಇಂತಿರ್ಪ ಕಿಡುಕರ ಬೆಡಂಗುವಡೆದುಡುಗೆ ತೊಡುಗೆಗಳ ಬಡಿವಾರಮೆಂತನಲ್-

ಉತ್ಪಲಮಾಲಾವೃತ್ತಂ

ಶಾಟಿಯ ವಸ್ತ್ರವೆತ್ತ ಜರಕಾಟಿಯ ಪಾವಡವೆತ್ತ ಸರ್ಜದಾ।
ಕೋಟುಗಳೆತ್ತ ನೀಳ್ದ ನಿಲುವಂಗಿಗಳೆತ್ತಪವಿತ್ರ ಬೂಟಿನಾ॥
ಭಾಟವಿದೆತ್ತ ಪಾದುಕೆಗಳೆತ್ತ ಪ್ರಪಂಚದ ಹಾಳುಬೀಳು ಗೋ।
ಘಾಟವಿದೆತ್ತ ವೀರವಿರತತ್ವಮದೆತ್ತ ಧರಾಂತರಾಳದೊಳ್ ॥೧೭॥

ಶೆಟ್ಟಿಗಳಟ್ಟಹಾಸಂ

ಚಂಪಕಮಾಲಾವೃತ್ತಂ

ಪಿರಿಯರುಪಾರ್ಜಿಸಿಟ್ಟ ಸಿರಿಯಂ ಧರೆಯಂ ವರ ಮಂದಿರಂಗಳಂ ।
ತರತರದಾಟನೋಟ ಕಲಹಂಗಳ ಹೆಂಗಳ ಸಂಗದೊಳ್ ಸದಾ ॥
ಪರಿಪರಿಯಿಂದೆ ಸೂರೆಗೊಳುತಂ ಮಿಳಿತಂ ಜಳಮಿಂಗಿ ಪೋಪವೊಲ್।

---

೬. ಇಲ್ಲಿ ಮೂರು ಚರಣ ಬರೆದಿಲ್ಲ- ಸಂ.

ಮೆರೆಯುವ ವೀರಶೈವ ಧನದಾರ್ಢ್ಯರ ಮೌಢ್ಯರನೇನನೆಂದಪೆಂ ||೧೮||

ವಚನಂ||ಕೃಪಣ ಧನಿಕರ್ಪಲರ್-

ಕಂದ

ತಿನದುಣದುಡದಲೆ ನೀಡದೆ| ಘನಕಾರ್ಯಂಗೈದು ಕೀರ್ತಿವಡೆಯದೆ ವ್ಯರ್ಥಂ||
ದಿನದಿನಕೆ ಕೈಗೆ ಪೈಯ್ಯಂ | ಗುಣಿಸುತೆ ಗಳಿಸುತ್ತೆ ಹಲಗೆ ಹೊಡಿಸುತೆ ನಡೆವರ್ ||೧೯||

ವಚನಂ||ಕೆಲ ಕಿಡುಕ ಸೆಟ್ಟಿಗಳ ಲಕ್ಕಣಮೆಂತೆನಲ್-

ಉತ್ಪಲಮಾಲಾವೃತ್ತಂ

ಪಟ್ಟವಿಭೂತಿ ಕಂಗೆಸೆಯೆ ಪಾವಡಕಟ್ಟುಮಲುಂಗೆ ಪೊಂಗೆ ಪೇ|
ರ್ಬೊಟ್ಟೆ ವಿರಾಜಿಸಲ್ಕೆಯಡಮುಟ್ಟತನಂ ಪಿರಿದಾಗೆ ಜಾತಿಯೊಳ್||
ಪುಟ್ಟಿಸಿ ವ್ಯಾಜ್ಯಮಂ ಪಲವು ಪಂಗಡಮಾಗಿಸಿ ಪ್ರೇರ್ಮೆವೆತ್ತು ತಾಂ|
ಪುಟ್ಟಿದನೇಕೆ ಸೆಟ್ಟಿ ಜಗಜಟ್ಟಿ ಅಶುದ್ಧದ ಮೊಟ್ಟೆ ಭೂಮಿಯೊಳ್ ||೨೦||

ಸದುಪದೇಶಂ

ಕಂದ

ದಾರ್ಢ್ಯತೆಯಿಂ ಪ್ರೌಢತೆಯಿಂ| ಕೂಡದ ಕಾರಣದೊಳಿಂತು ನಿಂದಿಸರಖಿಳರ್||
ಔಡಲಕಟ್ಟಿಗೆ ಪೊಳ್ಳುಂ| ರೂಢಿಯೊಳಯ್ಯನವರಪ್ಪಣೆಯು ತಾಂ ಸುಳ್ಳುಂ ||೨೧||

ಗುರುವೊಳ್ ವಿವೇಕಮಿರ್ದೊಡೆ| ಪರಿಜನರೊಳ್ ಭಕ್ತರೊಳ್ ವಿವೇಕತೆಯಿರ್ಕುಂ||
ಗುರುವೊಳ ವಿವೇಕಮಿರ್ದೊಡೆ| ಪರಿಜನರೊಳ್ ಭಕ್ತರೊಳವಿವೇಕತೆಯಿರ್ಕುಂ ||೨೨||

ಕೋವಿದನಾಗಲದೊರ್ವಂ |ಸಾವಿರ ಪಲ್ಲಕ್ಕಿಯಕ್ಕುಮಗ್ಗಳಮಕ್ಕುಂ||
ಭಾವಿಪೊಡೆ ಜ್ಞಾನಶೂನ್ಯರ್| ತಾವಾಗಲನಂತ ಸಂಪದಂಗಳ್ ಪೋಕುಂ ||೨೩||

ಆದರಿಂದನುಪಮ ಸುಖಸಂ|ಪದ ದೀರ್ಘಯಶೋ ವಿರಾಜಮಾನಂ ಸ್ವಮತಾ||
ಭ್ಯುದಯಕರಮೆನಿಪ ವಿದ್ಯೆಯ| ನೊದವಿಸುವದಶೇಷ ವೀರಶೈವ ಜನರ್ಕಳ್ ||೨೪||

ಪರಹಿತವೆ ಪುಣ್ಯಮರಿವೊಡೆ| ಪರಪೀಡೆಯೆ ಪಾಪಮಪ್ಪ ಕತದಿಂ ಧರ್ಮಾ||
ತ್ಮರು ಸಿರಿಹರಣಂಗಳುಮಂ| ತೊರೆವರ್ ಪಿಂಗದೆ ಪರೋಪಕೃತಿಯೊಳ್ ಕ್ಷಿತಿಯೊಳ್ ||೨೫||

ಕಲಿವುದು ಮೋಕ್ಷಾಪೇಕ್ಷೆಗೆ| ಕಲಿವುದು ಶಾಂತತೆಗೆ ಧರ್ಮಸಂರಕ್ಷಣೆಗೆ||
ಕಲಿವುದು ಸುವೃತ್ತಿಗಲ್ಲದೆ| ಕಲಿವುದು ತನ್ನಾಪ್ತವಂಶ ರಾಷ್ಟ್ರೋನ್ನತಿಗೆ ||೨೬||

ಇರ್ವರ ಕಲಹಗಳೊಳ್ ಬೇ| ರೊರ್ವಗೆ ಬಹುಲಾಭಮಪ್ಪುದೆಂಬಾ ನುಡಿಯೊಳ್||
ಗರ್ವದೊಳೆಸಗಿದ ಕಲಹದಿ| ಮಿರ್ವರ ಸರ್ವಾರ್ಥಮಳಿದು ಪೋಕುಂ ನಿಜದಿಂ ||೨೭||

ವಿದ್ಯಾಭಿವೃದ್ಧಿಯಂ ಸ್ವಮತೋದ್ಧರಣಂ ಗೈವ ಸಂಘಗಳ್ಗೀಯದೆ ತಾಂ॥
ತದ್ಧನಮಂ ಕೆಡಿಸುವ ದುರ್ಬುದ್ಧಿಯ ಮನುಜರ್ಕಳಿರ್ದೊಡೇಂ ಪೋದೊಡದೇಂ ॥೨೮॥
ಸರಿಯುವಳು ಸರಿಗೆಯಿಟ್ಟರೆ।ನೆರೆಮನೆಯವಳುರುಲು ಹಾಕಿಕೊಳ್ವಳೆ ಪರರೊಳ್ ॥
ವರವಿದ್ಯೆ ವರ್ಧಿಸಿರೆ ನೀ।ವರಿದುಂ ಗಾಂಪತೆಯನಾಂತು ಬಾಳ್ವರೆ ಜಗದೊಳ್ ॥೨೯॥

ಮಾಲಿನೀವೃತ್ತಂ

ಗುರುಮಠದಧಿಪಂ ಲಿಂಗೈಕ್ಯರಾಗಲ್ಕೆ ಭಕ್ತರ್ ।
ಮರಿಯನರಸುತಂ ಸುಜ್ಞಾನ ಸಂಪನ್ನನಂ ತಂ ।
ದಿರಿಸಿ ಪರಿಕಿಸುತ್ತಂ ಪಟ್ಟಮಂ ಕಟ್ಟಲಾತಂ ।
ಧರೆಗೆ ಬೆಳಗುತಿರ್ಪಂ ದಿವ್ಯಯೋಗೀಂದ್ರನಂತೆ ॥೩೦॥

ವಚನ॥ಓ, ವೀರಶೈವ ರಾಜ್ಯಾಧಿಕರ್ತೃ ವೃಂದಮೇ

ಕಂದ

ನಿರಪೇಕ್ಷೆಯಿಂದೆ ನಿಸ್ಪೃಹ।ನಿರುಪದ್ರವ ಭಾವದಿಂದೆ ನಿಷ್ಪಕ್ಷತೆಯಿಂ॥
ನಿರಹಂಕಾರದೆ ನಿರ್ಮಲ।ನಿರುಪಮ ಮನದಿಂದೆ ರಾಜ್ಯಕಾರ್ಯವನೆಸಗೈ ॥೩೧॥

ಉತ್ಪಲಮಾಲಾವೃತ್ತಂ

ಲಂಚಕೆ ಪೇಸು ದುಮ್ಮರವನೋಡಿಸು ದುಷ್ಕೃತನಾಗಡಿರ್ ಸದಾ ।
ಮುಂಚು ಮತೋನ್ನಯಾಧ್ವದೆ ಹಿತಂಗುಡು ದುರ್ಬಲರಿಂಗೆ ದುಃಖದೊಳ್ ।
ಕುಂಚಿತ ಬುದ್ಧಿಯಂ ಮೆರೆಯಬೇಡಧಿಕಾರ ಮದಾಂಧನಾಗಿ ನೀಂ ।
ಪಂಚಮುಖಂಗೆ ಪ್ರೇಮಕರನಾಗಿರು ಬಾಗಿರು ರಾಜ್ಯಕಾರ್ಯದೊಳ್ ॥೩೨॥

ಕಂದ

ವಂಚನೆಯಿಂ ಸಂಚನೆಯಿಂ । ವಂಚಿಸಿ ಲಂಚಂಗೊಳುತ್ತೆ ಸಂಚಿತ ಧನಮಂ॥
ಸಂಚಿಯೊಳೆ ತೀವಿ ತಣಿಯುವ । ವಂಚಕನಂ ಮರೆದು ಮಾಡಿ ಮರುಗಿದನಜನುಂ ॥೩೩॥

ಮತ್ತೇಭವಿಕ್ರೀಡಿತ ವೃತ್ತಂ

ಎಲೆಲೇ ಜಂಗಮ ವೃಂದಮೇ ತಳುವದೆನ್ನೀ ನೀತಿವಾಕ್ಯಂಗಳಂ ।
ತಿಳಿಯೊಳ್ತಂದು ಕೆರಳ್ಚಿ ಕಂಗೆಡದೆ ವಿದ್ಯಾವಾರ್ಧಿಯೊಳ್ ಸಾರ್ಚಿ ಮೇಣ್॥
ವಿಳಸದ್ಧರ್ಮದೊಳಾವಗಂ ಚರಿಸಿ ಶ್ರೇಯಂಬೊಂದದೇ ಇರ್ದೊಡಂ।
ಮಳಲೊಳ್ ನೀರರೆದೊಲ್ ನಿರರ್ಥಕಮಹೋ ಧರ್ಮೇಣ ಹೀನಃ ಪಶುಃ ॥೩೪॥

ಅರರೇ ಭಕ್ತ ಧನಾಢ್ಯವೃಂದಮೆ ಭವದ್ಭಾಂಡಾರಮಂ ಧರ್ಮದೊಳ್।
ವರ ಸತ್ಯವ್ಯವಹಾರ ವಿದ್ಯೆಗಳೊಳುಂ ಪಾಳ್ಗೈವುದಂತಲ್ಲದೆ ॥

ಬರಿದೇ ದುರ್ವ್ಯಸನಂಗಳೊಳ್ ದುರಿತದೊಳ್ ದುರ್ವ್ಯಾಜ್ಯದೊಳ್ ದ್ಯೂತದೊಳ್।
ಸುರಿಯುತ್ತಂ ಧನಮೆಲ್ಲಮುಂ ಕಳೆವರೇನೌದಾರ್ಯದಿಂ ಧೈರ್ಯದಿಂ ॥೩೫॥

ಗ್ರಂಥಕರ್ತನ ವಿಜ್ಞಪ್ತಿ

ವಾರ್ಧಕಷಟ್ಪದಿ

ಧಾರವಾಡದ ಚೆನ್ನಬಸವೇಶ್ವರ ಪೃಥಿತ।
ವಾರದಾ ಮಲ್ಲೇಶ್ವರ ಸ್ವಾಭಿಮಾನ ಸಂ-।
ಪ್ರೇರಿತ ಪ್ರಭು ರುದ್ರಗೌಡ ಗಿಲಗಿಂಚಿ ಗುರುಸಿದ್ಧಾರ್ಯ ಸಿರಸಂಗಿಯಾ॥
ಧೀರ ಲಿಂಗೇಂದ್ರ ಗುಣಗಣಸಾಂದ್ರ ವಂಟಮುರಿ।
ಧಾರುಣೀಪತಿ ಲಖಮನಾರ್ಯ ನೂರೊಂದಪ್ಪ।
ಚಾರುತರ ಕಿತ್ತೂರ ರೇವಣಾರ್ಯ ಪ್ರಮುಖರೊಲ್ ಚರಿಪುದಖಿಳಜನರು ॥೩೬॥

ಕಂದ

ಈ ರುದ್ರಪ್ರಭುನೀತಿಯ।ನೋರಣದಿಂದೋದಿ ಕೇಳ್ವುದೊಮ್ಮನದಿಂದಂ॥
ದೂರುವರೆ ದೋಷಮಿರ್ದೊಡೆ। ಸೂರಿಗಳೊಳ್ಪಿಂದೆ ತಿರ್ದಿ ತಿಳುಪದೆ ಪುರುಡಿಂ ॥೩೭॥

ಮಹಾಸಭೆಯ ಮುಖ್ಯೋದ್ದೇಶ

ಈ ಮೇಲಿನ ರುದ್ರಪ್ರಭುನೀತಿಯ ಪದ್ಯಗಳಿಂದ ವೀರಶೈವರಾದ ನಾವು ಎಷ್ಟು ವಿದ್ಯಾವಿಹೀನರಾಗಿ ಧರ್ಮವಿರುದ್ಧವಾದ ಕಾರ್ಯತತ್ಪರರಾಗಿರುತ್ತೇವೆಂಬದು ಸ್ಪಷ್ಟವಾಗಿ ತಿಳಿಯುತ್ತದೆ. ನಮ್ಮ ಅಜ್ಞಾನವನ್ನೂ ಅಧರ್ಮಾಚರಣೆಗಳನ್ನೂ ನೋಡಿ ಅನ್ಯಮತೀಯರು ನಮ್ಮನ್ನು ಅನೇಕ ವಿಧವಾಗಿ ಹಳಿಯುತ್ತಾರೆ. ಪವಿತ್ರವಾದ ವೀರಶೈವರೆಂದು ಎದೆಯುಬ್ಬಿಸಿಕೊಂಡು ಹೇಳಿಕೊಳ್ಳುವ ನಮಗೆ ಇದು ನಿಂದ್ಯವಲ್ಲವೋ? ಈ ಧರ್ಮಗ್ಲಾನಿಯನ್ನೂ ಅಜ್ಞಾನಾಂಧಕಾರವನ್ನೂ ಜಡಿದೋಡಿಸುವದಕ್ಕಾಗಿಯೇ ಈಶ ಸಂಕೇತಾನುಸಾರವಾಗಿ ಈ ಮಹಾಸಭೆಯ ಪ್ರಾದುರ್ಭಾವವಾಯಿತೆಂದು ಹೇಳಬಹುದು. ನಮ್ಮ ಈ ವೀರಶೈವಮತವು ಬುನಾದಿಯಿಂದಲೂ ಹೆಸರಾದದ್ದು; ಸನಾತನವಾದದ್ದು; ವೇದಮಾನ್ಯವಾದದ್ದು; ಸರ್ವೋತ್ತಮವಾದದ್ದು; ಸುಗಮ್ಯವಾದದ್ದು; ಅದ್ವೈತವಾದದ್ದು, ನೀತಿಮಯವಾದದ್ದು; ಅಹಿಂಸಾಯುಕ್ತವಾದದ್ದು; ಮತ್ತು ಎಲ್ಲರಿಗೂ ತಮ್ಮ ತಮ್ಮ ಕರ್ತವ್ಯಕರ್ಮಗಳನ್ನು ನೆರವೇರಿಸಲಿಕ್ಕೂ ಧರ್ಮಕೃತ್ಯಗಳನ್ನಾಚರಿಸಲಿಕ್ಕೂ ಸುಲಭವಾಗಿ ಬರುವಂಥಾದಿದ್ದು; ದೃಢಭಕ್ತಿಯಿಂದ ಸ್ವಲ್ಪಕಾಲ ಮಾತ್ರ ಧರ್ಮವನ್ನನುಸರಿಸಿದವರಿಗೆ ಕೂಡಾ ಪೂರ್ಣಪ್ರತಿಫಲವನ್ನು ಕೊಡತಕ್ಕದ್ದಾಗಿದೆ. ಇಂತಹ ಸುಲಭವಾದ ಧರ್ಮಮಾರ್ಗವನ್ನು ಅನುಸರಿಸುವದು ಸಹ ನಮಗೆ ಈಗ ಕಠಿಣವಾಗಿದೆ. ಕಲಿಕಾಲದ ಪ್ರಾಬಲ್ಯದಿಂದ ಧರ್ಮವು ಊರ್ಜಿತ ಸ್ಥಿತಿಗೆ ಬರುವದೊತ್ತಟ್ಟಿಗಿರಲಿ, ಅದು ದಿನೇ ದಿನೇ ಮಲಿನವಾಗುತ್ತಲೇ ನಡೆದರೆ ಈ ಮಲಿನತ್ವವು ಏನು ಮಾಡಿದರೆ ದೂರಾಗುವದು? ನಮ್ಮ ಧರ್ಮವು ಮೊದಲಿನ ಸ್ಥಿತಿಗೆ ಬಂದು, ನಾವೆಲ್ಲರು ಧರ್ಮೈಕ ಬದ್ಧರಾಗಬೇಕಾದರೆ ಏನು ಮಾಡಬೇಕೆಂಬುವದೇ ಈ ಮಹಾಸಭೆಯ ಮುಖ್ಯೋದ್ದೇಶವು! ಇನ್ನು ಇದರೊಡನೆ ಕಾಲಕ್ಕೆ ಸರಿಯಾಗಿ ನಮ್ಮ ಜನರಲ್ಲಿ ಸಾಮಾಜಿಕ ಸುಧಾರಣೆ, ಕಲಾಕೌಶಲ್ಯಗಳ ಜ್ಞಾನ ಔದ್ಯೋಗಿಕ ಸುಧಾರಣೆ,

ವ್ಯವಹಾರಜ್ಞಾನ, ವಿದ್ಯಾಭಿವೃದ್ಧಿ, ಮೊದಲಾದವುಗಳು ಯಾವ ಉಪಾಯಗಳಿಂದ ಉತ್ಕರ್ಷವನ್ನು ಹೊಂದುವದೆಂಬದಾಗಿ ವಿಚಾರ ಮಾಡುವದೇ ಮಹಾಸಭೆಯ ಎರಡನೇ ಉದ್ದೇಶವು. ಧರ್ಮಸುಧಾರಣೆಯಲ್ಲಿಯೂ, ಇತರ ಸಾಮಾಜಿಕ ಸುಧಾರಣೆಯಲ್ಲಿಯೂ ನಮ್ಮ ಸಂಘವು ಬಹಳೇ ಹಿಂದುಳಿದಿದ್ದು ನಮ್ಮಲ್ಲಿ ಪಂಚಸಿಂಹಾಸನಾಧಿಪತಿಗಳ ಮತ್ತು ಶೂನ್ಯಸಿಂಹಾಸನಾಧಿಪತಿಗಳ ಹಾಗೂ ಉಳಿದ ಧರ್ಮಗುರುಗಳ, ಅವರ ಅನುಯಾಯಿಗಳ ಮನಸಿನಲ್ಲಿ ಈ ಸಂಬಂಧದಿಂದ ಜನಸಿದ ಕಲಂಕವನ್ನು ಹೋಗಲಾಡಿಸಿ ಎಲ್ಲರಲ್ಲಿಯೂ ಒಕ್ಕಟ್ಟು ಬೆಳೆದು ಧರ್ಮಜಾಗ್ರತಿಯಾಗಬೇಕೆಂಬದೇ ಈ ಸಭೆಯ ಮೂರನೇ ಉದ್ದೇಶವು! ಇವೆಲ್ಲ ಉದ್ದೇಶಗಳನ್ನೂ, ಸ್ವಮತೋನ್ನತಿಯ ಕೊರತೆಗಳನ್ನೂ ಪರಿಪೂರ್ಣ ಮಾಡಿಕೊಳ್ಳಲಿಕ್ಕೆ ಕೂಡಿದ ಶ್ರೀಮದ್ವೀರಶೈವ ಮಹಾಸಭೆಯು ಇದೇ ಮೊದಲನೇದ್ದು. ಇಂತಹ ಮಹಾಸಭೆಗಳು ಪೂರ್ವದಲ್ಲಿ ಶ್ರೀ ಬಸವೇಶ್ವರದೇವರ ಕಾಲಕ್ಕೆ ಕೂಡುತ್ತಿದ್ದು, ಅವುಗಳಲ್ಲಿ ಧರ್ಮಸಂಬಂಧಿಯ ಚರ್ಚೆಗಳು ಯಾವಾಗಲೂ ನಡೆಯುತ್ತಿದ್ದವು. ಕಲ್ಯಾಣ ಪಟ್ಟಣದಲ್ಲಿ ಪ್ರತಿವರ್ಷ ಕೂಡುತ್ತಿದ್ದ ಸಭೆಗೆ"ವಿಚಾರ ಮಂಟಪ"ಎಂಬ ಹೆಸರಿತ್ತಂತೆ. ಆ ಕಾಲಕ್ಕೆ ಇಂತಹ ಸಭೆಗಳು ನಡಿಸಲ್ಪಡುತ್ತಿದ್ದದರಿಂದಲೇ ನಮ್ಮ ಈ ಮತವು ಅಭಿವೃದ್ಧಿಯನ್ನು ಹೊಂದಿ, ಈ ಹೊತ್ತಿನ ವರೆಗೂ ವಿಸ್ತೃತವಾಗಿ ಹಬ್ಬಿಕೊಂಡಿರುತ್ತದೆ. ಯಾವ ಪರಮೇಶ್ವರನು ಆ ಕಾಲದಲ್ಲಿ ಬಸವೇಶನೆಂಬ ಭಕ್ತಶ್ರೇಷ್ಠನನ್ನು ಭೂಲೋಕಕ್ಕೆ ಕಳಿಸಿ ವೀರಶೈವಮತದ ಜೀರ್ಣೋದ್ಧಾರ ಮಾಡಿದನೋ ಅದೇ ಪರಮಾತ್ಮನು ಈ ಕಾಲದಲ್ಲಿ ರುದ್ರಗೌಡರೆಂಬ ಭಕ್ತವರೇಣ್ಯರನ್ನು ಭೂಭಾಗಕ್ಕೆ ಇಳಿಸಿ, ನಮ್ಮ ಮತವನ್ನು ಉನ್ನತಾವಸ್ಥೆಗೆ ತರುತ್ತಿರುವನೆಂದು ಸಂತೋಷದಿಂದ ಭಾವಿಸಿಕೊಳ್ಳಬೇಕಾಗಿದೆ.

ಇನ್ನು ಮುಂದೆಯಾದರೂ ಇಂತಹ ಮಹಾಸಭೆಗಳನ್ನು ಮೇಲಿಂದ ಮೇಲೆ ಕೂಡಿಸಿ, ಧರ್ಮವೃದ್ಧಿ, ಸಮಾಜಸುಧಾರಣೆ, ವಿದ್ಯಾರ್ಜನೆ, ಕಲಾಕೌಶಲ್ಯಗಳ ಉನ್ನತಿ ಇವುಗಳ ಬಗ್ಗೆ ವಿಚಾರ ಮಾಡುವದು ಬಹಳ ಅವಶ್ಯವಾಗಿದೆ. ಇದರಿಂದಲೇ ನಮ್ಮ ಜನರಿಗೆ ಇಹಪರಸೌಖ್ಯಗಳು ದೊರೆತಕ್ಕವುಗಳಾಗಿವೆ. ಮತ್ತು ಇಂತಹ ಸಭೆಗಳು ಕೂಡುವದರಿಂದ ಯಾವತ್ತು ಭಾಗಗಳಲ್ಲಿಯ ವೀರಶೈವ ಮತದ ಮುಖ್ಯ ಮುಖ್ಯ ಜನರ ದರ್ಶನವು ಒಬ್ಬೊಬ್ಬರಿಗಾಗಿ ಎಲ್ಲರ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೂ, ತಮ್ಮಲ್ಲಿದ್ದ ಕೀಳು ಆಚರಣೆಗಳನ್ನು ದೂರ ಮಾಡಲಿಕ್ಕೂ, ವ್ಯಾಪಾರೋದ್ಯೋಗಗಳಲ್ಲಿದ್ದ ನ್ಯೂನತೆಗಳ ವಿಚಾರಮಾಡಿ ಅವುಗಳಲ್ಲಿ ಯಾವ ಸುಧಾರಣೆ ಮಾಡಬೇಕೆಂಬದನ್ನು ನಿರ್ಣಯಿಸಲಿಕ್ಕೂ ನಾವೆಲ್ಲರು ಸಮರ್ಥರಾಗುತ್ತೇವೆ. ವೀರಶೈವ ಮತಸ್ಥರು ಏನಾದರು ತೊಂದರೆಗೊಳಗಾದರೆ ಒಬ್ಬರಿಗೊಬ್ಬರು ಸಹಾಯ ಮಾಡಬೇಕೆಂಬ ಸಾನುಭೂತಿಯು ಮಹಾಸಭೆಯ ಸಮ್ಮೇಲದಿಂದ ಪರಸ್ಪರರಲ್ಲಿ ಹುಟ್ಟಿ ಯಾವತ್ತರ ಅಡಚಣೆಗಳು ದೂರಾಗುವವು. ಸಮೂಹದಿಂದಾಗುವ ಕೆಲಸವು ಒಬ್ಬನಿಂದ ಎಂದಿಗೂ ಆಗದು. ವೀರಶೈವರು ಮುಖ್ಯವಾಗಿ ಕರ್ನಾಟಕದಲ್ಲಿ ವಾಸಿಸುವರು. ಈ ಕರ್ನಾಟಕ ದೇಶವು ಮುಂಬಯಿ, ಮದ್ರಾಸ, ಮೈಸೂರ, ಹೈದ್ರಾಬಾದ ಈ ನಾಲ್ಕು ಬೇರೆ ಬೇರೆ ಸರಕಾರದವರ ಆಡಳಿತಗಳಿಗೆ ಒಳಪಟ್ಟಿರುವದರಿಂದ ಇವರು ತಮ್ಮ ಸಮಾಜದ ಏಳ್ಗೆಯನ್ನು ಕುರಿತು ಮಾಡುವ ಪ್ರಯತ್ನಗಳ ದಿಕ್ಕುಗಳು ಸಹ ಬೇರೆಬೇರೆಯಾಗಿರುತ್ತವೆ. ಇದಲ್ಲದೆ ಮುಂಬಯಿ ಮದ್ರಾಸ ಮತ್ತು ಹೈದರಾಬಾದ ಈ ಮೂರು ಪ್ರಾಂತಗಳಲ್ಲಿರುವ ವೀರಶೈವರು ತಮ್ಮ ತಮ್ಮ ರಾಜಧಾನಿಗಳಿಂದಲೂ ಮುಖ್ಯ ಮುಖ್ಯ ವಿದ್ಯಾಪೀಠಗಳಿಂದಲೂ ದೂರವಾದ ಮೂಲೆಗಳಲ್ಲಿ ವಾಸಿಸುವ ಕಾರಣ, ಉಳಿದ ಸಮಾಜದವರಂತೆ ಮುಂದಕ್ಕೆ ಬರಲು ಇವರಿಗೆ ಬಹಳೇ ಅನನುಕೂಲವಾಗಿದೆ. ಆದರೆ ನಮ್ಮ ಸಮಾಜದ ಸ್ಥಿತಿಯು ಎಲ್ಲ ಬಗೆಗಳಿಂದಲೂ, ಸುಧಾರಿಸಬೇಕಾದರೆ ಯಾವತ್ತು ಪ್ರಾಂತಗಳಲ್ಲಿರುವ ವೀರಶೈವರು ಒತ್ತಟ್ಟಿಗೆ ಕೂಡಿ ಒಮ್ಮನಸಿನಿಂದ ಪ್ರಯತ್ನ ಮಾಡಿದ ಹೊರತು ಈ ಉದ್ದೇಶವು ಕೊನೆಗಾಣುವದು ಅಸಾಧ್ಯವಾದ ಸಂಗತಿಯು, ಇವೇ ಮುಂತಾದ ಕಾರಣಗಳನ್ನು ಮನಸ್ಸಿನಲ್ಲಿ ತಂದು, ೧ನೇ

ಶ್ರೀಮದ್ವೀರಶೈವ ಮಹಾಸಭೆಯನ್ನು ಉತ್ಸಾಹದಿಂದಲೂ ಉತ್ಕಂಡೆಯಿಂದಲೂ ಕೂಡಿಸಿ ಸಮಾಜ ಸುಧಾರಣಾ ಮಾರ್ಗವನ್ನುಂಟುಮಾಡಿ, ಅಕ್ಷಯಕೀರ್ತಿಯನ್ನು ಪಡೆದ ಶ್ರೀಮನ್ನಿರಂಜನಮೂರ್ತಿ ಶ್ರೀ ಹಾನಗಲ್ ಕುಮಾರಸ್ವಾಮಿಗಳವರ ಮತ್ತು ರಾ||ಬ||ರುದ್ರಗೌಡ ಸಾಹೇಬರವರ ಹಾಗೂ ಶ್ರೀಮಂತ ಶಿರಸಂಗಿ ಸರದೇಸಾಯಿಯವರ ಅಲ್ಲದೆ ಧಾರವಾಡದ 'ವೀರಶೈವಮತ ಪ್ರಚಾರಕ ಸಂಘ'ದವರ ಉಪಕಾರವನ್ನು ವೀರಶೈವ ಜನಾಂಗದವರು ಎಷ್ಟು ಸ್ಮರಿಸಿದರೂ ತೀರದು.

೨ನೇ ಶ್ರೀಮದ್ವೀರಶೈವ ಮಹಾಸಭೆ, ಬೆಂಗಳೂರ

ಧಾರವಾಡದವರ ಮೇಲ್ಪಂಕ್ತಿಯನ್ನೇ ಅನುಸರಿಸಿ ಉಳಿದ ಪ್ರಾಂತದವರು ಮುಂದಿನ ವರ್ಷದ ಮಹಾಸಭೆಯು ತಮ್ಮ ತಮ್ಮ ಪ್ರಾಂತಗಳ ಮುಖ್ಯ ಪಟ್ಟಣಗಳಲ್ಲಿ ಆಗಬೇಕೆಂದು ಬಯಸಿದರು. ಕಡೆಗೆ ಶ್ರೀ ಹಾನಗಲ್ ಮಹಾಸ್ವಾಮಿಗಳವರ ರಾ.ಬ||ಅರಟಾಳ ಸಾಹೇಬರವರ ಮತ್ತು ಶ್ರೀಮಂತ ಶಿರಸಂಗಿಯ ಸರದೇಸಾಯಿಯವರ ಹಾಗೂ ಧಾರವಾಡದ ಕಾರ್ಯನಿರ್ವಾಹಕ ಸಂಘದವರ ಅನುಮತಿಯಿಂದಲೂ, ಸರ್ವಾನುಮತದಿಂದಲೂ, ಮೈಸೂರ ಪ್ರಾಂತದ ವೀರಶೈವ ಮಹಾಶಯರ ಪ್ರಯತ್ನದಿಂದಲೂ ೨ ಎರಡನೇ ಶ್ರೀಮದ್ವೀರಶೈವ ಮಹಾಸಭೆಯು ಮೈಸೂರ ಸೀಮೆಗೆ ಸೀಮಂತ ರತ್ನದೋಪಾದಿಯಲ್ಲಿ ಶೋಭಿಸುತ್ತಿರುವದಾಗಿಯೂ, ಸಿರಿಬಿಜ್ಜುಜ್ಜುಗಗಳಿಂದ ಪ್ರಸಿದ್ಧಿಯಾಗಿಯೂ ಇರುವ ಬೆಂಗಳೂರ ಪಟ್ಟಣದಲ್ಲಿ ಸನ್ ೧೯೦೫ನೇ ಇಸವಿಯ ಜುಲೈ ತಿಂಗಳ ೧೩-೧೪-೧೫ನೇ ತಾರೀಖುಗಳಲ್ಲಿ ಮೂರು ದಿವಸ ಕೂಡಿತು. ಮಹಾಸಭೆಯ ಆಮಂತ್ರಣ ಪತ್ರಿಕೆಗೆ ಸರಿಯಾಗಿ ರಾ.ಬ||ರುದ್ರಗೌಡ ಸಾಹೇಬರವರೂ ಶಿರಸಂಗಿಯ ಸರದೇಸಾಯಿಯವರೂ ಸನ್ ೧೯೦೫ನೇ ಇಸವಿಯ ಜುಲೈ ತಿಂಗಳ .... ತಾರೀಖಿನ ದಿವಸ ....ಮುಕ್ಕಾಮಿನಿಂದ[೭] ಎಷ್ಟೋ ಮುಖ್ಯ ಮುಖ್ಯ ಜನರ ವೀರಶೈವ ಪರಿವಾರದೊಂದಿಗೆ ಬೆಂಗಳೂರ ಪಟ್ಟಣದ ಸ್ಟೇಶನದಲ್ಲಿಯೇ ಮೈಸೂರ ವೀರಶೈವ ಸಮಾಜದವರಿಂದ ಯೋಗ್ಯ ಸ್ವಾಗತವಾಗಿ ಬಹು ಸಡಗರದಿಂದ ಪಟ್ಟಣಕ್ಕೆ ಕರೆದೊಯ್ದರು. ಈ ಸಮಯದಲ್ಲಿ ಮೈಸೂರ ಮಹಾರಾಜರವರ ಸ್ವಾರಿಯು ಬೆಂಗಳೂರಲ್ಲಿಯೇ ಇದ್ದುದರಿಂದ ಪಟ್ಟಣವು ಅದ್ವಿತೀಯ ಶೋಭೆಗೊಂಡಿತ್ತು. ಧಾರವಾಡದಿಂದ ಮೈಸೂರ ಸೀಮೆಯು ದೂರವಾದುದರಿಂದಲೂ, ರೇಲ ಮಾರ್ಗದ ಪ್ರಯಾಣವು ಶಿಷ್ಟರಾದ ಶಿವಯೋಗಿಗಳಿಗೆ ನಿಷಿದ್ಧವಾದುದರಿಂದಲೂ, ಕಾಲುಮಾರ್ಗದಿಂದ ವೇಳೆಗೆ ಸರಿಯಾಗಿ ಮಹಾಸಭೆಗೆ ತಲುಪುವ ಅನುಕೂಲವಾಗದ್ದರಿಂದಲೂ ಶ್ರೀ ಹಾನಗಲ್ ಕುಮಾರಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಲಿಲ್ಲ. ತಾರೀಖು ೧೩ನೇ ದಿವಸ ವೇಳೆಗೆ ಸರಿಯಾಗಿ ಮಹಾಸಭೆಯು ಕೂಡಿತು. ಮೊದಲನೇ ಮಹಾಸಭೆಯಲ್ಲಿ ಕೂಡಿದ್ದಕ್ಕೆ ಮಿಗಿಲಾಗಿ ಇಲ್ಲಿಯಾದರೂ ಎಲ್ಲ ಪ್ರಾಂತಗಳಿಂದಲೂ ಪ್ರತಿನಿಧಿಗಳೂ, ಪ್ರೇಕ್ಷಕರೂ ಒಳಿತಾಗಿ ಕೂಡಿದರು. ಸಭೆಯಲ್ಲಿ ಮೈಸೂರ ಸರಕಾರದ ದೊಡ್ಡ ದೊಡ್ಡ ಅಧಿಕಾರಿಗಳೂ ವಿರಾಜಮಾನರಾಗಿದ್ದರು. ರಾ.ಬ||ರುದ್ರಗೌಡ ಸಾಹೇಬರೂ ಶಿರಸಂಗಿ ಶ್ರೀಮಂತ ಸರದೇಸಾಯಿಯವರೂ ಸಭಾಪ್ರವೇಶವಾಗುತ್ತಲೆ ಜಯಜಯಕಾರವಾಗಿ ಆನಂದ ಪ್ರದರ್ಶಿತವಾದ ಸಭಿಕರ ಕರತಳಗಳ ಸಪ್ಪಳದಿಂದ ಸಭೆಯು ತುಂಬಿಹೋಯಿತು. ಸಭೆಯ ಅಧ್ಯಕ್ಷಸ್ಥಾನವು ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಶಿರಸಂಗಿಯ ವರಿಗೇನೇ ಕೊಡಲ್ಪಟ್ಟಿತು. ಸಭೆಯಲ್ಲಿ ಧಾರ್ಮಿಕ, ಸಾಮಾಜಿಕ, ನೈತಿಕ, ವ್ಯಾಪಾರೋದ್ಯೋಗ ಕಲಾಕೌಶಲ್ಯವರ್ಧಕ ಮೊದಲಾದ ವಿಷಯಗಳ ಮೇಲೆ ವಾಗ್ಧುರೀಣ ವ್ಯಾಖ್ಯಾತರಿಂದ ಉಪನ್ಯಾಸಗಳಾಗಿ ಕೆಲವು ಮಹತ್ವದ ಠರಾವುಗಳು ಪಾಸಮಾಡಲ್ಪಟ್ಟವು. ಧಾರವಾಡದ ಮಹಾಸಭೆಯಲ್ಲಿಯಂತೆ

---

೭. ಇಲ್ಲಿ ತಾರೀಖು ಬರೆಯದೆ ಬಿಟ್ಟಿದ್ದಾರೆ- ಸಂ.

ಇಲ್ಲಿಯೂ ಒಂದು ಫಂಡು ಕೂಡಿಸಲ್ಪಟ್ಟಿತು. ಸಭೆಯ ಕೆಲಸವು ಮೂರೂ ದಿವಸ ಚೆನ್ನಾಗಿ ನಡೆದು ಸರ್ವಸಂಭ್ರಮದಿಂದ ಸಾಂಗವಾಯಿತು. ಮೈಸೂರ ಸರಕಾರದ ಕೋಲಾರ ಜಿಲ್ಲೆಯ ಡಿ.ಡಿ. ಕಮೀಶನರ್ ಕೆ.ಪಿ. ಪುಟ್ಟಣ್ಣಸೆಟ್ಟರೂ, ಪಿ. ಮಹಾದೇವಯ್ಯನವರೂ, ಡಾಕ್ಟರ ಟಿ. ನಂಜಪ್ಪನವರೂ, ಸ್ವಾರ ಕರ್ತರಾದ ವೈ. ವಿರೂಪಾಕ್ಷಯ್ಯನವರೂ ಮೊದಲಾದ ಮೈಸೂರ ಪ್ರಾಂತದ ವೀರಶೈವ ಪ್ರಭೃತಿಗಳು ರಾ.ಬ॥ರುದ್ರಗೌಡ ಸಾಹೇಬರವರನ್ನೂ, ಶ್ರೀಮಂತ ಶಿರಸಂಗಿಯ ಸರದೇಸಾಯಿಯವರನ್ನೂ ಶಿರಸಾ ಶ್ಲಾಘಿಸಿದರು. ಆಂಗ್ಲ ವಿದ್ಯಾವಿಶಾರದರೂ, ರಾಜೋದ್ಯೋಗ ಪ್ರತಿಷ್ಠಿತರೂ, ಲೋಕೋಪಕಾರ ಕಾರ್ಯಗಳಲ್ಲಿ ತನುಮನಧನಗಳಿಂದ ಸಹಾಯ ಮಾಡುವವರೂ, ಮತಸೇವಾಕಾರ್ಯದಲ್ಲಿ ಇಡೀ ಆಯುಷ್ಯವನ್ನೂ, ಬುದ್ಧಿಯನ್ನೂ ವ್ಯಯ ಮಾಡಲು ಕಂಕಣಬದ್ಧರಾದವರೂ ಆದ ರಾ.ಬ॥ಅರಟಾಳ ಸಾಹೇಬರವರು ಮುಂಬಯಿ ಕರ್ನಾಟಕದ ಜನರ ಅವಿರಳವಾದ ಪ್ರೀತಿಗೆ ಯಾವ ಪ್ರಕಾಶ ಪಾತ್ರರಾಗಿರುವರೋ ಇವರಂತೆ ಕೆ. ಪಿ. ಪುಟ್ಟಣ್ಣಸೆಟ್ಟರಾದರೂ ಮೈಸೂರ ಸೀಮೆಯ ಪ್ರಜೆಗಳ ಪ್ರೇಮಕ್ಕೆ ಪಾತ್ರರಾಗಿರುವರು. ಕೆ. ಪಿ. ಪುಟ್ಟಣ್ಣಸೆಟ್ಟರವರ ಪ್ರಖ್ಯಾತಿಯನ್ನೂ, ಪ್ರಜಾವಾತ್ಸಲ್ಯವನ್ನೂ, ಗುಣಾತಿಶಯವನ್ನೂ ಕಂಡು ಮೈಸೂರ ಸರಕಾರದವರು ಇವರನ್ನು ಸನ್ ೧೯೦೬ನೇಯ ಇಸವಿಯಲ್ಲಿ ತಮ್ಮ ಕೌನ್ಸಿಲದಾರರನ್ನಾಗಿ ಮಾಡಿಕೊಂಡಿರುವರು. ಆದುದರಿಂದ ಮೈಸೂರ ಸರಕಾರದವರು ವೀರಶೈವ ಜನಾಂಗದ ಮೇಲೆ ತಮ್ಮ ಪ್ರೇಮಾಂತಃಕರುಣವನ್ನು ತೋರಿದರೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ.

ಮೈಸೂರ ಮಹಾರಾಜರವರ ದರ್ಶನ ಲಾಭ

ಕೆ.ಪಿ. ಪುಟ್ಟಣ್ಣಸೆಟ್ಟರೇ ಮೊದಲಾಗಿ ಮೈಸೂರ ಸರಕಾರದ ದೊಡ್ಡ ದೊಡ್ಡ ಅಧಿಕಾರಿಗಳು ರಾ.ಬ॥ರವರನ್ನು, ಶಿರಸಂಗಿಯ ಶ್ರೀಮಂತರನ್ನೂ ಕಂಡುಕೊಂಡು ಪರಮಾನಂದ ಹೃದಯರಾಗಿ ತಮ್ಮ ಮಹಾರಾಜ ಸರಕಾರದವರಿಗೆ ಇವರ ದರ್ಶನವನ್ನು ಮಾಡಿಸಬೇಕೆಂದು, ಈ ಉಭಯ ಮಹನೀಯರನ್ನು ಕರೆದುಕೊಂಡು ಹೋದರು, ತಾರೀಖು ೧೬ನೇ ಜುಲೈ ಸನ್ ೧೯೦೫ನೇ ಇಸವಿಯ ರವಿವಾರ ಮಧ್ಯಾಹ್ನದ ೪ ಘಂಟೆಗೆ ಬೆಂಗಳೂರ ಅರಮನೆಯಲ್ಲಿ ಮೈಸೂರ ಶ್ರೀ ಕೃಷ್ಣರಾಜ ಒಡೆಯರವರ ಮತ್ತು ಅವರ ದಿವಾನರಾದ ಸರ್.ಪಿ.ಎಸ್. ಕೃಷ್ಣಮೂರ್ತಿಗಳವರ ಹಾಗೂ ಜಜ್ಜ ಸಾಹೇಬ ಬಹದ್ದೂರವರ ದಿವ್ಯದರ್ಶನ ಲಾಭವಾಯಿತು. ಶ್ರೀ ಮನ್ಮಹಾರಾಜರೂ, ದಿವಾನರವರೂ ರಾ.ಬ॥ಅರಟಾಳ ಸಾಹೇಬ ಬಹದ್ದೂರವರನ್ನೂ, ಶ್ರೀಮಂತ ಶಿರಸಂಗಿಯ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರನ್ನೂ ರಾಜೋಪಚಾರಗಳಿಂದ ಗೌರವಿಸಿ ಉಭಯತರನ್ನು ಕುರಿತು "ನಿಮ್ಮ ಸಮಾಜೋನ್ನತಿಯ ವಿಷಯವಾಗಿ ನಿಮ್ಮಲ್ಲಿ ನೆಲೆಗೊಂಡಿರುವ ಕಟ್ಟಭಿಮಾನವನ್ನೂ, ನಿಮ್ಮ ಪ್ರಚಂಡ ಸಾಹಸವನ್ನೂ, ನಿಮ್ಮಿಂದಾದ ಅಘಟಿತ ಘಟನೆಗಳನ್ನೂ, ನಿಮ್ಮ ಅಸಾಧಾರಣ ಯುಕ್ತಿಪ್ರಯುಕ್ತಿ ಶಕ್ತಿಗಳನ್ನೂ ಕಂಡು ಕೇಳಿ ನಮಗೆ ಪರಮಾನಂದವಾಗಿರುತ್ತದೆ. ಗಾಢನಿದ್ರೆಯಲ್ಲಿದ್ದ ಮೈಸೂರ ಪ್ರಾಂತದ ವೀರಶೈವ ಸಮಾಜವನ್ನು ಬಡಿದೆಬ್ಬಿಸಿ, ಇವರಿಗೆ ವೀರಶೈವ ಮತೋನ್ನತ ಕಾರ್ಯತತ್ಪರತೆಯ ಮಹಾಮಂತ್ರವನ್ನು ನೀವೇ ಉಪದೇಶಿಸಿದಂತಾಯಿತು. ಎಲ್ಲ ಪ್ರಾಂತಗಳ ವೀರಶೈವ ಜನಾಂಗದವರು ನಿಮ್ಮ ಮೇಲ್ಪಂಕಿಯನ್ನೇ ತೀಡುವದಾಯಿತು. ನಮ್ಮ ಪ್ರಾಂತದಲ್ಲಾದ ನಿಮ್ಮ ೨ನೇ ಮಹಾಸಭೆಯು ನಿರ್ವಿಘ್ನದಿಂದಲೂ, ಸಂಭ್ರಮದಿಂದಲೂ ನೇರವೇರಿದ್ದು ಕಂಡು ನಮಗೆ ಬಹಳೇ ಸಂತೋಷವಾಯಿತು. ನಿಮ್ಮ ವೀರಶೈವಮತದ ವಿಷಯಕ್ಕೆ ನಮ್ಮ ಪೂಜ್ಯಭಾವವಿರುವದು. ಸ್ವಂತಕಾರ್ಯಗಳ ಕಡೆಗೆ ಲಕ್ಷಕೊಡದೆ ಕೇವಲ ಲೋಕೋಪಕಾರಕ ಕೃತ್ಯಗಳಲ್ಲಿಯೂ, ಸಮಾಜೋನ್ನತಿಯ ಕಾರ್ಯಗಳಲ್ಲಿಯೂ, ಬುದ್ಧಿಯನ್ನೂ, ಆಯುಷ್ಯನ್ನೂ ವೆಚ್ಚ

ಮಾಡುತ್ತಿರುವ ನಿಮ್ಮ ಪುಣ್ಯಕರವಾದ ಜನ್ಮವು ಶ್ಲಾಘನೀಯವಾದದ್ದು; ನಿಮ್ಮ ಕರ್ತವ್ಯದಕ್ಷತೆಯಿಂದಲೂ, ಸದ್ಗುಣ ಸಮುಚ್ಚಯದಿಂದಲೂ ಸಮಸ್ತ ಲಿಂಗಾಂಗಿಗಳ ಹೊಗಳಿಕೆಗೆ ಕಾರಣರಾದ ನೀವೇ ಧನ್ಯರು" ಎಂಬದಾಗಿ ಅಭಿನಂದಿಸಲು ಇವರೀರ್ವರು" ಮಹಾರಾಜರೇ! ತಮ್ಮ ಮಹದಾಶ್ರಯವೂ, ದಯಾರ್ದ್ರದೃಷ್ಟಿಯೂ, ನಮ್ಮ ವೀರಶೈವ ಸಮಾಜದ ಮೇಲೆ ಇದ್ದುದಾದರೆ ಎಂತಹ ಅಸಾಧ್ಯವಾದ ಕಾರ್ಯಗಳಿದ್ದರೂ ಕೂಡ ಅವು ಅನಾಯಾಸವಾಗಿ ಕೊನೆಗಾಣುತ್ತವೆ. ಈ ಹೊತ್ತು ತಮ್ಮ ಪುಣ್ಯದರ್ಶನಲಾಭವನ್ನು ಹೊಂದಿ ನಾವು ಧನ್ಯರಾದೆವು. ೨ನೇ ಶ್ರೀಮದ್ವೀರಶೈವ ಮಹಾಸಭೆಯು ತಮ್ಮ ಪ್ರಾಂತದಲ್ಲಿ ಜರುಗಿ ಹೋಗುವದಕ್ಕೆ ಆಶ್ರಯ ಕೊಟ್ಟಿದ್ದಕ್ಕಾಗಿ ನಾವೆಲ್ಲರು ತಮ್ಮ ಆಭಾರಿಯಾಗಿರುವೆವು" ಎಂಬದಾಗಿ ಕುಶಲಾಲಾಪಗಳಿಂದ ಸಂತೋಷಪ್ರದರ್ಶನ ಮಾಡಿ, ಮಹಾರಾಜರವರ ಪ್ರೇಮಕ್ಕೆ ಪಾತ್ರರಾಗಿ ತಮ್ಮ ಸ್ವಸ್ಥಾನಗಳಿಗೆ ತೆರಳಿದರು. ಧಾರವಾಡ ಮಹಾಸಭೆಯ ರಿಪೋರ್ಟಿನಂತೆ ಬೆಂಗಳೂರ ಮಹಾಸಭೆಯ ರಿಪೋರ್ಟಾದರೂ ಪ್ರಸಿದ್ಧವಾಗಿರುತ್ತದೆ. ಅದನ್ನು ಓದಿದರೆ ೨ನೇ ಶ್ರೀಮದ್ವೀರ ಮಹಾಸಭೆಯ ಸಾಗ್ರಸಂಗತಿಯು ಸ್ಪಷ್ಟವಾಗಿ ತಿಳಿಯುವದು.

ರಾ.ಬ॥ರುದ್ರಗೌಡರು ಬಂಗಲೆ ಕಟ್ಟಿಸಿದ್ದು

ಸನ್ ೧೯೦೫ನೇ ಇಸವಿಯಲ್ಲಿ ಕರ್ನಾಟಕದಲ್ಲಿ ಭಯಂಕರವಾದ ದುಷ್ಕಾಳ ಬೀಳಲು, ಸನ್ ೧೯೦೬ನೇ ಇಸವಿಯಲ್ಲಿ ಕೂಡುವ ಮೂರನೇ ಮಹಾಸಭೆಯು ಬಂದಾಯಿತು. ಕಾರಣ ಮುಂದಿನ ವರ್ಷವೆಂದರೆ ಸನ್ ೧೯೦೭ನೇ ಇಸವಿಯ ಮೇ ತಿಂಗಳಲ್ಲಿ ೩ನೇ ಮಹಾಸಭೆಯನ್ನು ಬೆಳಗಾವಿಯ ಶಹರದಲ್ಲಿ ಬಹು ವಿಜೃಂಭಣೆಯಿಂದ ಜರುಗಿಸಬೇಕೆಂದು ರಾ.ಬ॥ಅರಟಾಳ ಸಾಹೇಬರವರೂ ಶಿರಸಂಗಿಯ ಶ್ರೀಮಂತ ಸರದೇಸಾಯಿಯವರೂ ಆಲೋಚನೆ ಮಾಡಿದ್ದರು. ಆದರೆ ಈ ಮಹನೀಯರ ಸಂಕೇತವು ಈ ಪ್ರಕಾರವಾಗಿರಲು ಆ ಮಹಾದೇವರ ಸಂಕೇತವು ಬೇರೆಯಾಗಿತ್ತು.

ಶ್ರೀಮಂತರು ಬೇಸಿಗೆಯ ಸುಖವಸತಿಗಾಗಿ ಬೆಳಗಾವಿಯ ಶಹರದ ಪಶ್ಚಿಮದಿಕ್ಕಿಗೆ ಪೆನ್‌ಶನರ ಲಾಯನದಲ್ಲಿ (ಲಷ್ಕರದ ಹದ್ದಿನಲ್ಲಿ) ತಮ್ಮ ದೇಸಗತಿಯ ಶೋಭೆಗೆ ಸರಿಯಾಗಿ ಒಂದು ಮಹತ್ತಾದ ಬಂಗಲೆಯನ್ನು ಕಟ್ಟಿಸಿದ್ದರು. ಶ್ರೀಮಂತರು ವರ್ಷದಲ್ಲಿ ನಾಲ್ಕೈದು ತಿಂಗಳು ಕುಟುಂಬ ಪರಿವಾರ ಸಹಿತ ಶಿರಸಂಗಿಯಿಂದ ಹೊರಟು ಬಂದು ಬೆಳಗಾವಿಯ ಬಂಗಲೆಯಲ್ಲಿ ವಾಸಿಸುವರು. ಅದರಿಂದ ರಾ.ಬ॥ಅರಟಾಳ ಸಾಹೇಬರೂ, ಸರದೇಸಾಯಿಯವರೂ ಒತ್ತಟ್ಟಿಗಾಗಿ ಪ್ರತಿಯೊಂದು ವಿಷಯದ ಆಪ್ತಾಲೋಚನೆ ಮಾಡಲಿಕ್ಕೂ, ತಮ್ಮ ಕರ್ತವ್ಯಗಳನ್ನು ನೆರವೇರಿಸುವದಕ್ಕೂ ಸುಲಭ ಸಾಧ್ಯವಾಗಿತ್ತು. ರಾ.ಬ॥ರುದ್ರಗೌಡ ಸಾಹೇಬರು ಬೆಳಗಾವ ಜಿಲ್ಲೆಗೆ ಡಿ.ಡಿ. ಕಲೆಕ್ಟರರಾಗಿ ಬಂದಕೂಡಲೆ ಆರಂಭಕ್ಕೆ ಶ್ರೀಮಂತ ಶಿರಸಂಗಿಯವರ ಬಂಗಲೆಯಲ್ಲಿಯೇ ವಾಸವಾಗಿದ್ದರು. ಬಳಿಕ ಇವರು ತಮಗಾಗಿ ಬೇರೊಂದು ಬಂಗಲೆಯನ್ನು ಕಟ್ಟಿಸಬೇಕೆಂದಾಲೋಚಿಸಿ, ಅದೇ ಲಷ್ಕರದ ಹದ್ದಿನಲ್ಲಿರುವ ಪೆನ್‌ಶನರ ಲಾಯನದಲ್ಲಿ ಶಿರಸಂಗೀಕರವರ ಬಂಗಲೆಯ ಸಾಲಿನಲ್ಲಿಯೇ ಅದರ ಪೂರ್ವಕ್ಕೆ ಊರಿಗೆ ಸಮೀಪವಾಗಿರುವ ರಾ॥ಬ್ರಿಟೋ ಎಂಬವರ ಹಳೆಯ ಬಂಗಲೆಯನ್ನು, ಅದರ ಸುತ್ತಲಿರುವ ಖುಲ್ಲಾ ಜಾಗೆಯನ್ನೂ ರೋಖ ಎರಡು ಸಾವಿರದಾ ನಾನೂರಾ ಅಯ್ವತ್ತು (೨೪೫೦) ರೂಪಾಯಿಗಳಿಗೆ ಸನ್ ೧೯೦೨ ನೇ ಇಸವಿಯ ಮೇ ತಿಂಗಳಲ್ಲಿ ಖರೀದಿಗೆ ತೆಗೆದುಕೊಂಡು, ತಾರೀಖು ೧೨ನೇ ಮಾಹೆ ಮೇ ಸನ್ ೧೯೦೨ ನೇ ಇಸವಿಯ ದಿವಸ ಖರೀದಿಯ ಪತ್ರವನ್ನು ಬರೆಯಿಸಿದರು. ಸದರೀ ಖರೀದಿಯ ಪತ್ರವು ಬೆಳಗಾವ ರಜಿಸ್ಟ್ರರರ ಕಚೇರಿಯಲ್ಲಿ ತಾರೀಖು ೧೩ನೇ ಮಾಹೆ ಜೂನ ಸನ್ ೧೯೦೨ನೇ ಇಸವಿಯ ದಿವಸ ನೋಂದು

ಮಾಡಲ್ಪಟ್ಟಿತು. ಇದು ೧ನೇ ನಂಬರ ಬುಕ್ಕಿನ ೨೧೭ನೇ ವ್ಹಾಲಿಮ್‌ದ ಪಾನ ೧೫೭ರಿಂದ ೧೬೫ ಪಾನುಗಳಲ್ಲಿ ರಜಿಸ್ಟರ ನಂಬರ ೪೦೩ಕ್ಕೆ ಬಾರಮಾಡಲ್ಪಟ್ಟಿರುತ್ತದೆ. ಹಳೆಯ ಬಂಗಲೆಯನ್ನು ಹಾಗೆಯೇ ದುರಸ್ತ ಮಾಡಿಸಿ, ಅದರ ಎಡಭಾಗಕ್ಕೆ ಖುಲ್ಲಾ ಇದ್ದ ಸ್ಥಳದಲ್ಲಿ ಹೊಸದಾಗಿ ಆಸ್ತಿವಾರು ಹಾಕಿ, ಸುಮಾರು ೧೫೦೦೦ ಹದಿನೈದು ಸಾವಿರ ರೂಪಾಯಿ ವೆಚ್ಚಮಾಡಿ ಎರಡು ಅಂತಸ್ತುವುಳ್ಳದ್ದೊಂದು ಮನೋಹರವಾದ ಮಂದಿರವನ್ನು ಕಟ್ಟಿಸಿದ್ದಾರೆ. ಬಂಗಲೆಯ ಹಾಗೂ ಅದರ ಸುತ್ತುಮುತ್ತಿರುವ ಖುಲ್ಲಾ ಜಾಗೆಯ ಕ್ಷೇತ್ರವು ಒಂದು ಎಕರೆ ಹದಿಮೂರು (೧-೧೩) ಗುಂಠೆ ಇರುವದು. ಇದರ ಚಕಬಂದಿಯು: ಪೂರ್ವಕ್ಕೆ ಫಾರ್ಸೀಜನರು ಅಗ್ನಿಪೂಜೆಯನ್ನು ಮಾಡುವ ಬಂಗಲೆ, ಪಶ್ಚಿಮಕ್ಕೆ ....ನೇ ನಂಬರ ಬಂಗಲೆ,[೮] ಉತ್ತರಕ್ಕೆ ಸರಕಾರಿಯ ರಸ್ತೆ, ಅದರಾಚೆಗೆ ಲಷ್ಕರದ ಮೋದೀಖಾನೆ (ಎತ್ತುಗಳನ್ನು ಕಟ್ಟುವಜಾಗೆ), ದಕ್ಷಿಣಕ್ಕೆ ಒಂದು ಸಣ್ಣ ಹಳ್ಳವದೆ, ಅದರಾಚೆಗೆ ಡ್ಯಾವಲಾಕ ರೋಡವು- ಈ ಪ್ರಕಾರವಿರುತ್ತದೆ. ಬಂಗಲಾ ನಂಬರು ಒಂದುನೂರಾ ಅಯ್ವತ್ತೈದು (೧೫೫). ಬಂಗಲೆಯು ಉತ್ತರಾಭಿಮುಖವಾಗಿ ಬಹುಭದ್ರವಾಗಿ ಕಟ್ಟಲ್ಪಟ್ಟಿದೆ. ಇದರ ಕಟ್ಟುವಿಕೆಯು ಯುರೋಪಿಯನ್ ಮತ್ತು ದೇಶೀಯ ಎರಡೂ ಶಿಸ್ತುಗಳನ್ನು ಅನುಸರಿಸಿರುವದು. ಬಂಗಲೆಯ ಮುಂಭಾಗದಲ್ಲಿಯೂ, ಹಿಂಭಾಗದಲ್ಲಿಯೂ ಒಂದೊಂದು ಸವಿನೀರಿನ ಸೇದುವ ಭಾವಿಗಳಿರುವವು, ಮಂದಿರ ಮುಂದಿರುವ ವಿಶಾಲವಾದ ಸ್ಥಳದಲ್ಲಿ ಪುಷ್ಪವಾಟಿಕೆಯಿರುವದು. ಬಂಗಲೆಗೆ ಹೊಂದಿ ಹಿಂಭಾಗದಲ್ಲಿ ದೂರವಾಗಿ ಕುದುರೆಗಳನ್ನೂ, ಎತ್ತುಗಳನ್ನೂ ಎಮ್ಮೆ ಆಕಳುಗಳನ್ನು ಕಟ್ಟುವದಕ್ಕಾಗಿ ಹಾಗೂ ಟಾಂಗೆಯನ್ನೂ, ಗಾಡಿಯನ್ನೂ ನಿಲ್ಲಿಸುವದಕ್ಕಾಗಿ ಬೇರೆ ಬೇರೆ ಪ್ರಶಸ್ತವಾದ ಪಟಾಂಗಣಗಳನ್ನು ಮಾಡಿಸಿರುವರು.

ಬಂಗಲೆಯ ಶಿಸ್ತು

ಸ್ನಾನದ ಮನೆ, ದೇವರಮನೆ, ಅಡಿಗೆಯಮನೆ, ಊಟದ ಮನೆ, ಕೋಣೆಯ ಮನೆ, ವಿಶ್ರಾಂತಿಯ ಮನೆ, ವಸ್ತ್ರಾಭರಣಗಳನ್ನೂ- ಬೇರೆ ಸಾಮಾನುಗಳನ್ನೂ ಇಡುವಮನೆ, ಬಾಲಬಾಲಿಕೆಯರ ಅಭ್ಯಾಸದ ಮನೆ ಮೊದಲಾದವುಗಳು ಇರತಕ್ಕ ಕ್ರಮಗಳನ್ನು ಅನುಸರಿಸಿ, ನೋಡುವವರಿಗೆ ಚಂದ ಕಾಣುವಂತೆ ವಿಶಾಲವಾಗಿಯೂ, ಸ್ವಚ್ಛವಾಗಿಯೂ ಇರುವವು. ಮೇಲುಪ್ಪರಿಗೆಯ ಬಲಭಾಗದಲ್ಲಿರುವ ಒಂದು ವಿಸ್ತಾರವಾದ ಪಟಾಂಗಣವನ್ನು ಹಲವು ಬಗೆಯಿಂದ ಶೃಂಗರಿಸಿ, ಅಲ್ಲಿ ಎಷ್ಟೋ ವಿಚಿತ್ರವಾದ ಪದಾರ್ಥಗಳನ್ನು, ಪುಸ್ತಕಗಳನ್ನೂ ಓರಣದಿಂದಿರಿಸಿದ್ದಾರೆ. ಅನೇಕ ವಿಧವಾದ ಕೂರ್ಚಾಸನಗಳಿಂದಲೂ, ವ್ಯಾಘ್ರಾಸನ ಹರಿಣಾಸನಗಳಿಂದಲೂ, ಆ ಪಟಾಂಗಣವು ಬಹು ಶೋಭೆಯುಳ್ಳದ್ದಾಗಿದೆ. ಯಾರಾದರು ಮಹನೀಯರು ನೋಡಬಂದರೆ ಅದನ್ನು ಮತ್ತಿಷ್ಟು ಶೃಂಗರಿಸುವರು. ಹೊಸ ಬಂಗಲೆಯು ವಾಸ್ತವ್ಯವಾಗಿದ್ದು ಹಳೆಯ ಬಂಗಲೆಯು ರಾವಬಹದ್ದೂರವರ ವಿಶ್ರಾಂತಿಗಾಗಿಯೂ, ಕಾಗದಪತ್ರಗಳನ್ನು ಬರೆಯುವ ಖಾಸಗಿ ಆಫೀಸಾಗಿಯೂ ಉಪಯೋಗಿಸಲ್ಪಡುತ್ತಿರುವದು. ಬಂಗಲೆಯ ಹಿಂಭಾಗದಲ್ಲಿ ವಿಸ್ತಾರವಾದ ಹಿತ್ತಲಿರುವದು. ರಾ.ಬ||ರವರು ಡಿಸ್ಟ್ರಿಕ್ಟ ಡಿಪೂಟಿ ಕಲೇಕ್ಟರರಾದ ಮೇಲೆ ಊರೊಳಗಿನ ಮನೆಗಳಲ್ಲಿ ವಸತಿಯನ್ನೇ ಮಾಡಿಲ್ಲ. ಎಲ್ಲಿ ಹೋದಲ್ಲಿ ಸ್ವಚ್ಛವಾಗಿ ಹವೆಯಾಡುವ

---

೮. ಇಲ್ಲಿ ಅಂಕಿ ಹಾಕದೆ ಬಿಟ್ಟಿದ್ದಾರೆ- ಸಂ.

ಮನೋಹರವಾದ ಬಂಗಲೆಗಳಲ್ಲಿಯೂ, ಡೇರೆಗಳಲ್ಲಿಯೂ ವಸತಿಯನ್ನು ಮಾಡುತ್ತ ಬಂದಿರುವರು. ಹೆಚ್ಚಿಗೆ ವೆಚ್ಚಾದರೂ ಚಿಂತೆಯಿಲ್ಲ, ಆರೋಗ್ಯತೆಯ ವಿಷಯವಾಗಿ ಜಾಗ್ರತೆಯುಳ್ಳವರಾಗಿದ್ದು ಯುರೋಪಿಯನ್ನರ ಶಿಸ್ತನ್ನೇ ಅವಲಂಬಿಸಿರುವರು. ಆದುದರಿಂದಲೇ ಅವರ ಪ್ರಕೃತಿಯು ಆರೋಗ್ಯದಿಂದ ಸದೃಢವಾಗಿರುವದು.

ಶ್ರೀಮಂತರ ಸ್ನೇಹ

ಈ ಪ್ರಕಾರ ಆರೋಗ್ಯಸಾಮ್ರಾಜ್ಯದಿಂದ ರಾವಬಹದ್ದೂರ ರುದ್ರಗೌಡಸಾಹೇಬರೂ, ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರೂ ಬೆಳಗಾವಿಯಲ್ಲಿ ಸುಖ ವಸತಿಗಳಾಗಿ, ಸೌಖ್ಯದಿಂದ ತಮ್ಮ ಕರ್ತವ್ಯ ತತ್ಪರರಾಗಿದ್ದರು. ಈ ಉಭಯ ಮಹನೀಯರು ಪ್ರತಿದಿವಸ ಸಾಯಂಕಾಲ ಸಮಯದಲ್ಲಿ ದಿವ್ಯಾಶ್ವಗಳನ್ನು ಹೂಡಿದ ರಮ್ಯವಾದ ರಥವನ್ನೇರಿ ವಿಶ್ರಾಂತಿಗೋಸುಗ ಸ್ವಚ್ಛವಾದ ಹವೆಯುಳ್ಳ ಪಟ್ಟಣದ ಬಾಹ್ಯಪ್ರದೇಶದಲ್ಲಿ ಸಂಚರಿಸುವಾಗ್ಗೆ ವೀರಶೈವರ ವೈಭವವೇ ಮೂರ್ತಿಮಂತರಾಗಿ ಇಲ್ಲಿಯೇ ಇರುತ್ತದೋ ಏನೋ ಎಂದು ಜನಸಮೂಹವು ಇವರನ್ನು ಕೊಂಡಾಡುತ್ತಿತ್ತು. ರಾವಬಹದ್ದೂರವರಿಗೆ ಶ್ರೀಮಂತ ಶಿರಸಂಗೀಕರವರು ಸ್ನೇಹಿತರಿದ್ದಂತೆ ವಂಟಮುರಿಯ ಶ್ರೀಮಂತ ಲಖಮಗೌಡ ಬಸವಪ್ರಭು ಸರದೇಸಾಯಿಯವರಾದರೂ ಸ್ನೇಹಿತರಾಗಿದ್ದರೆಂದು ಹಿಂದೆ ಹೇಳಲ್ಪಟ್ಟಿದೆ. ರಾ.ಬ॥ರವರ ಸ್ನೇಹ ವಿಶೇಷತೆಯಿಂದಲೂ ಪೂರ್ಣ ಮತಾಭಿಮಾನದಿಂದಲೂ ಇವರು ಲಿಂಗಾಯತ ಎಜ್ಯುಕೇಶನ್ ಫಂಡಿಗೆ ಒಮ್ಮೆಲೆ ೫೦,೦೦೦ ರೂಪಾಯಿಗಳ ಉದಾರಾಶ್ರಯ ಮಾಡಿದ್ದೂ, ಹಿಂದೆ ಬರೆಯಲ್ಪಟ್ಟಿದೆ. ಇದರ ಮೇಲಿಂದ ಇವರ ಔದಾರ್ಯವನ್ನೂ, ಮಾನವನ್ನೂ, ವಾಚಕರು ಸಹಜವಾಗಿ ಊಹಿಸುವಂತಿದೆ. ಇವರು ಆಂಗ್ಲವಿದ್ಯಾ ಧುರೀಣರೂ, ಸದ್ಗುಣಿಗಳೂ, ಮಾತಿನಲ್ಲಿ ಜಾಣರೂ ಆಗಿರುವರು. ರಾವಬಹದ್ದೂರವರಿಗೆ ಇಂತಹ ಸ್ನೇಹವಿರುವದರಿಂದ, ಹಿಂದಕ್ಕೆ ಬೆಳಗಾವಿಯನ್ನಲಂಕರಿಸಿದ ಬಡೋದೆಯ ಮಹಾರಾಜರವರ ದೊಡ್ಡ ದೊಡ್ಡ ಶ್ರೀಮಂತರ ಸ್ವಾಗತಕ್ಕೂ, ಅವರೊಡನೆ ಪಟ್ಟಣದೊಳಗೆ ವಿಹರಿಸಲಿಕ್ಕೂ ಮೆ॥ಜಿಲ್ಲಾ ಕಲೇಕ್ಟರಸಾಹೇಬ ಬಹದ್ದೂರವರು ರಾಜಕಲಾವಿಶಾರದರಾಗಿದ್ದ ರಾ.ಬ॥ಅರಟಾಳ ಸಾಹೇಬರನ್ನೇ ನಿಯಮಿಸಿದ್ದರು. ಅದರಿಂದ ಇವರಿಗೆ ಮಹಾರಾಜರ ವಿಶೇಷವಾದ ಪರಿಚಯವಾಯಿತು. ಈ ಬಗೆಯಾಗಿ ಎಲ್ಲ ಸಣ್ಣ ದೊಡ್ಡ ಸಂಸ್ಥಾನಿಕರಲ್ಲಿಯೂ, ಮಹಾರಾಜರಲ್ಲಿಯೂ ಇಂಗ್ಲಿಷ ಸಾರ್ವಭೌಮ ಸರಕಾರದಲ್ಲಿಯೂ, ಪ್ರಜೆಗಳಲ್ಲಿಯೂ ಇವರ ಖ್ಯಾತಿಯು ಪ್ರಬಲವಾದುದರಿಂದ ಕೊಲ್ಲಾಪುರ ಶ್ರೀಮಂತ ಛತ್ರಪತಿ ಶಾಹೂ ಮಹಾರಾಜರವರಾದರೂ ಇವರ ದರ್ಶನವನ್ನು ಅಪೇಕ್ಷಿಸುವವರಾದರು. ರಾಜನಿಷ್ಠಾಯುಕ್ತವಾದ ಇವರ ಕಾರಭಾರವನ್ನೂ, ಸುಧಾರಣೆಗಳನ್ನೂ, ರಾಜ್ಯಾದಾಡಳತೆಯ ಅಪ್ರತಿಮ ಚಾತುರ್ಯವನ್ನೂ ಕಂಡು, ದೊಡ್ಡ ದೊಡ್ಡ ಸಂಸ್ಥಾನಿಕರು ಇವರಿಗೆ ತಮ್ಮ ಸಂಸ್ಥಾನಗಳ ಪ್ರಧಾನಪಟ್ಟವನ್ನೂ ಕೊಡಬೇಕೆಂದು ಬಯಸುತ್ತಿದ್ದರು. ಸರಕಾರಕ್ಕಿಂತ ದೊಡ್ಡ ದೊಡ್ಡ ಸಂಸ್ಥಾನಗಳಲ್ಲಿ ಉನ್ನತಿಯು ಬಹುಬೇಗ ಆಗುತ್ತಿರುವದರಿಂದ ಇವರ, ಸಂಸ್ಥಾನಗಳ ಆಡಳಿತಕ್ಕೆ ಸೇರಿದ್ದರೆ ಹಿಂದೆ ಹೇಳಿದಂತಹ ಮಹತ್ಕಾರ್ಯಗಳು ಇನ್ನೂ ಇವರಿಂದ ಎಷ್ಟೋ ಆಗುತ್ತಿದ್ದವೆಂದು ಹೇಳಬಹುದು. ಅರಸನ ಒಲುಮೆ ಒಂದಿದ್ದರೆ ಸಾಕು,ರಾಜ ಪ್ರಜಾ ಸಮ್ಮತವಾದ ಕರ್ತವ್ಯಗಳನ್ನು ಸರಿಯಾಗಿ ನೆರವೇರಿಸುವದಕ್ಕೆ ಸರ್ವಸ್ವಾತಂತ್ರ್ಯವು ಸಿಕ್ಕಂತಾಗುವದು. ಬಿಜ್ಜಳನ ಪ್ರಧಾನಪಟ್ಟವೇ ಶ್ರೀ ಬಸವೇಶ್ವರನ ಪ್ರತಿಷ್ಠೆಗೂ, ಮತೋತ್ಕರ್ಷತೆಗೂ ಕಾರಣವಾಯಿತೆಂಬದು ಪುರಾಣ ಪ್ರಸಿದ್ಧವಾಗಿರುವದು. "ಅರಸು ಮೆಚ್ಚಿದರೆ

ಅರ್ಧರಾಜ್ಯ" ವೆಂಬ ನಾಣ್ಣುಡಿಯಂತೆ ಸಂಸ್ಥಾನಗಳ ಮಾತೇ ಬೇರೆ!ಇರಲಿ, ಸದ್ಗುಣಿಗಳು ಎಲ್ಲಿದ್ದರೂ ಅವರ ಸ್ವೋನ್ನತಿಯೂ, ಸನ್ಮಾನವೂ, ಸೌಖ್ಯವೂ ಹೆಚ್ಚುತ್ತಲೇ ಇರುವದು.

ಸರಕಾರದಲ್ಲಿ ಪ್ರತಿಷ್ಠೆ

ರಾ.ಬ||ಅರಟಾಳ ಸಾಹೇಬರು ಲೋಕೋಪಕಾರಿಗಳೂ, ಲೋಕಪ್ರಿಯರೂ ಆಗಿ ಬಹುದಿವಸ ಕೆಲಸ ಮಾಡಿದ್ದರಿಂದ ಇವರು ಜನರ ಅಂತರಂಗಗಳನ್ನು ಬಲ್ಲವರೆಂತಲೂ, ಪೂರ್ಣ ಅನುಭವವುಳ್ಳವರೆಂತಲೂ, ದೀರ್ಘವಿಚಾರಿಗಳೆಂತಲೂ ತಿಳಿದು ಸರಕಾರದವರು ರಾಜ್ಯಾದಾಡಳಿತೆಯ ಸುಧಾರಣೆಗಳನ್ನು ಕಲ್ಪಿಸುವದರಲ್ಲಿ ಇವರ ಆಲೋಚನೆಗಳನ್ನು ತೆಗೆದುಕೊಳ್ಳುವರು. ಹಿಂದೆ ಸನ್ ೧೮೯೩ನೇ ಇಸವಿಯಲ್ಲಿ ಗಾಂಜಾ ಭಾಗದ ಕಮೀಶನರ ಬಗ್ಗೆ ಇವರ ಸಾಕ್ಷಿಯಾಗಬೇಕಾಗಿ ೮೯೪೪/೫-೧೨-೯೩ ನೇ ನಂಬರಿನ ಸರಕಾರ ಠರಾವಾದ ಪ್ರಕಾರ ತಾರೀಖು ೧೫ನೇ ಡಿಶಂಬರ ಸನ್ ೧೮೯೩ನೇ ಇಸವಿಯ ಶುಕ್ರವಾರ ದಿವಸ ಪುಣೆಯ ಕೌನ್ಸಿಲ್ ಹಾಲಿನಲ್ಲಿ ಇವರ ಸಾಕ್ಷಿಯಾಯಿತು. ಸನ್ ೧೮೯೫ ರಲ್ಲಿ ಇವರು ಲೋಯರ್ ಹಾಯರ ಸ್ಟ್ಯಾಂಡರ್ಡ ಡಿಪಾರ್ಟಮೆಂಟಲ್ ಪರೀಕ್ಷೆಯ ಮೆಂಬರರಾದರು, ಸರಕಾರ ಠರಾವ ನಂಬರ ೨೧೪೧/೧೬-೫-೯೫ ಪುನಃ ಸನ್ ೧೮೯೮ ರಲ್ಲಿ ಸದರೀ ಪರೀಕ್ಷೆಗೆ ೨ನೆಯ ಸಾರೆ ಮೆಂಬರರಾದರು- ಸರಕಾರ ಠರಾವ ನಂಬರ ೧೬೩೩/೫-೩-೯೮ ಮುಲಕೀಖಾತೆ. ಇದೇ ವರ್ಷ ಮುಂಬಯಿಯ ಕೌನ್ಸಿಲ್ ಹಾಲಿನಲ್ಲಿ ದುಷ್ಕಾಳ ಕಮೀಶನದ ಎದುರಿಗೆ ಇವರ ಸಾಕ್ಷಿಯಾಯಿತು. ಸರಕಾರ ಠರಾವ ನಂಬರ ೧೧೧/೪-೨-೯೮ ಫ್ಯಾಮಿನ್ ಡಿಪಾರ್ಟಮೆಂಟ. ಸನ್ ೧೮೯೯ರಲ್ಲಿ ಪ್ಲೇಗ ಕಮಿಶನದ ಬಗ್ಗೆ ನೇಮಕರಾದ ಇವರ ಸಾಕ್ಷಿಯು ಬೆಳಗಾವಿಯಲ್ಲಿ ಆಗತಕ್ಕದ್ದು ಆಗಲಿಲ್ಲ; ತಾರೀಖು ೯-೧-೧೯೦೨ ಗುರುವಾರ ದಿವಸ ಮತ್ತು ತಾರೀಖು ೧೧-೧-೧೯೦೨ನೇ ದಿವಸ ಶನಿವಾರ ಬೆಳಗಾವಿಯಲ್ಲಿ ಇರಿಗೇಶನ್ ಕಮಿಶನದ ಬಗ್ಗೆ ಇವರ ಸಾಕ್ಷಿಗಳಾದವು. ಮತ್ತು ೧೯೦೨ನೇ ಇಸವಿಯ ನವಂಬರ ತಿಂಗಳಲ್ಲಿ ಬಾಂಬೆ ಪೊಲೀಸ ಕಮಿಟಿಯ ಎದುರಿಗೆ ಮೊದಲು ಬೆಳಗಾವಿಯಲ್ಲಿಯೂ, ಇಂಡಿಯಾ ಪೊಲೀಸ ಕಮಿಶನದೆದುರಿಗೆ ತಾರೀಖು ೧೦-೩-೧೯೦೩ನೇ ದಿವಸ ಮುಂಬಯಿ ಸೆಕ್ರೆಟರಿಏಟ ಕೌನ್ಸಿಲ್ ಹಾಲಿನಲ್ಲಿಯೂ ಇವರ ಸಾಕ್ಷಿಗಳಾದವು. ಈ ಪ್ರಕಾರ ಸರಕಾರಿಯ ಪ್ರತಿಯೊಂದು ಕೆಲಸದಲ್ಲಿಯೂ ಇವರ ಆಲೋಚನೆಯನ್ನೂ ಅಭಿಪ್ರಾಯವನ್ನೂ ತೆಗೆದುಕೊಳ್ಳಲ್ಪಡುತ್ತಿತ್ತು.

ವೀರಶೈವ ವಿಲಾಸ ಪ್ರೆಸ್ಸೂ ಯಸ್. ಶಂಕರಾರ್ಯರೂ

ಸರಕಾರದಲ್ಲಿ ರಾವಬಹದ್ದೂರರವರ ಪ್ರಾಮಾಣಿಕತನವೂ, ಪ್ರಶಿಷ್ಠೆಯೂ ಬಹಳವಾಗಿದ್ದರಿಂದ ನಮ್ಮ ಸಾಮಾಜಿಕ ಸುಧಾರಣೆಯ ಕಾರ್ಯಗಳು ನೆರವೇರುವದಕ್ಕೆ ಸುಲಭ ಸಾಧ್ಯವಾದವು. ಆರಂಭದಿಂದಲೂ ಈವರೆಗೆ ನಮ್ಮ ಮತದ ಧಾರ್ಮಿಕ, ಸಾಮಾಜಿಕ, ನೈತಿಕ, ವಿದ್ಯಾವರ್ಧಕವಾದ ಅನೇಕ ಕೆಲಸಗಳನ್ನು ಇವರು ಮಾಡುತ್ತ ಬಂದರು. ಆದರೆ, ಯಾವದೊಂದು ಮತದ ಆಚರಣೆಯು ಸರಿಯಾಗಿ ನಡೆಯಬೇಕಾದರೆ ಆ ಮತದ ತತ್ವಗಳು ಜನರಿಗೆ ತಿಳಿಯಬೇಕಾಗುತ್ತದೆ. ಕಾಯದೆಗೆ ಸರಿಯಾಗಿ ಪ್ರಜೆಗಳು ನಡೆದುಕೊಳ್ಳಬೇಕಾದರೆ ಆ ಕಾಯದೆಯ ನಿಯಮಗಳನ್ನು ಬೈಲಿಗೆ ತರಬೇಕಾಗುತ್ತದೆ. ವೀರಶೈವ ಮತದ ನಿಜವಾದ ನಡವಳಿಕೆಗಳೇ ತಿಳಿಯುವ ಮಾರ್ಗವಿಲ್ಲದಿದ್ದರೆ ಆ ಮತಾನುಯಾಯಿಗಳು ತಮ್ಮ ಆಚರಣೆಗಳನ್ನು ಹೇಗೆ ಸರಿಪಡಿಸಿಕೊಳ್ಳಬೇಕು? ಅದರಿಂದ ಅಜ್ಞಾನಿ ಜನರಿಗೆ ಮತಾಚರಣೆಗಳ ಜ್ಞಾನವನ್ನು ಮಾಡಿಕೊಡುವದೂ, ಆ ಆಚರಣೆಗಳ ಕ್ರಮವನ್ನು ಬರೆದು

ಪ್ರಸಾರಮಾಡುವದೂ ಮತಸುಧಾರಣೆಯ ಮುಖ್ಯಕಾರ್ಯಗಳಾಗಿರುವವು. ಈ ಕಾರ್ಯಗಳು ನೆರವೇರಬೇಕಾದರೆ ಅಲ್ಲಲ್ಲಿಗೆ ಪಾಠಶಾಲೆಗಳೂ, ಮತಾಚರಣೆಗಳನ್ನೂ ಮಠದ ತತ್ವಗಳನ್ನೂ ಸೂಚಿಸುವ ಸಣ್ಣ ಸಣ್ಣ ಗ್ರಂಥಗಳೂ, ಅನೇಕ ಗ್ರಂಥಗಳನ್ನು ಅವಲೋಕನ ಮಾಡಿದ ಶಾಸ್ತ್ರಿಗಳೂ ಅವಶ್ಯವಾಗಿ ಬೇಕು. ಹಿಂದೆ ಹೇಳಿದಂತೆ ಪಾಠಶಾಲೆಗಳು ಅಲ್ಲಲ್ಲಿಗೆ ಸ್ಥಾಪಿತವಾಗಿರುವವು. ವೀರಶೈವ ಪುರಾತನ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿರುವದರಿಂದ, ಅವುಗಳ ಉಪಯೋಗವು ಸಂಸ್ಕೃತರಾದ ಸ್ವಲ್ಪ ಜನರಿಗಷ್ಟೇ ಆಗುವುದಲ್ಲದೆ ಸರ್ವಜನರಿಗೂ ಆಗದು. ಅದರಿಂದ ವೀರಶೈವರ ಜನ್ಮಭಾಷೆಯಾದ ಕನ್ನಡದಲ್ಲಿಯೇ ಮತಗ್ರಂಥ'ಗಳ ಪ್ರಸಾರವಾಗಲಿಕ್ಕೆ ಬೇಕು. ನಾವು ಲಿಂಗಾಯತರೆನ್ನಿಸಿಕೊಳ್ಳುತ್ತಿದ್ದರೂ, ರಾಮಾಯಣ ಭಾರತಾದಿ ಗ್ರಂಥಗಳ ಕಥಾಭಾಗವು ನಮಗೆ ಗೊತ್ತಿದಷ್ಟು ಬಸವಪುರಾಣ, ಶಿವಪುರಾಣಾದಿಗಳ ಕಥಾಭಾಗವು ಗೊತ್ತಿರುವದಿಲ್ಲ. ಯಾವ ಬಸವೇಶನನ್ನು ನಾವು ಕ್ಷಣಕ್ಷಣಕ್ಕೆ ಸ್ಮರಿಸುತ್ತೇವೋ, ಯಾವ ಜಗದಾತ್ಮನು ನಮ್ಮೆಲ್ಲರ ಅಸ್ತಿಕಾರಾಧನೆಗೆ ಕಾರಣನಾಗಿರುವನೋ ಆ ಪರಮಾತ್ಮನ ಚರಿತ್ರೆಯೇ ನಮ್ಮಲ್ಲಿ ಬಹು ಜನರಿಗೆ ಗೊತ್ತಿಲ್ಲವೆಂಬುವದು ಬಹಳ ಲಾಂಛನಾಸ್ಪದವಾದ ಮಾತು! ರಾಮಾಯಣ ಭಾರತಾದಿ ಉದ್ಗ್ರಂಥಗಳು ತಿಳಿಗನ್ನಡದಲ್ಲಿ ತರ್ಜುಮೆಯಾಗಿರುವದರಿಂದ ಅವುಗಳನ್ನು ಬಾಲಬಾಲಿಕೆಯರೂ ಕೂಡ ಓದಿ ತಿಳಿದುಕೊಳ್ಳಲಿಕ್ಕೆ ಅನುಕೂಲವಾಗಿರುವದು. ವೀರಶೈವ ಗ್ರಂಥಗಳು ಸಂಸ್ಕೃತದ ಹೊರತು ಕೆಲವು ಕಾವ್ಯಕಥಾ ಪುರಾಣಾದಿಗಳು ಕನ್ನಡದಲ್ಲಿದ್ದರೂ ಅವು ಪದ್ಯಮಯವಾಗಿರುವವು; ಪದ್ಯಗಳ ಉಪಯೋಗವು ಬಲ್ಲ ಜನರಿಗಷ್ಟೇ ಅಲ್ಲದೆ ಎಲ್ಲ ಜನರಿಗೆ ಆಗುವದಿಲ್ಲ. ಆದರಿಂದ ಮಹತ್ವವಾದ ಎಲ್ಲ ಮತಗ್ರಂಥಗಳು ಅಚ್ಚಗನ್ನಡದಲ್ಲಿ ಸರಳವಾದ ಶೈಲಿಯಿಂದ ಗದ್ಯರೂಪವಾಗಿ ಬರೆಯಲ್ಪಡಬೇಕು. ಸ್ವತಂತ್ರ ಗದ್ಯಗ್ರಂಥಗಳಲ್ಲದೆ ವಾರವಾರಕ್ಕೆ ಅಥವಾ ತಿಂಗತಿಂಗಳಿಗೆ ಮತದ ಮುಖ್ಯ ತತ್ವಗಳೂ ಪುರಾತನರ ಚರಿತ್ರಗಳೂ ವೀರಶೈವ ವರ್ಗದ ಕರ್ಣಕುಹರಗಳಲ್ಲಿ ಸಹಜವಾಗಿ ಪ್ರವೇಶಿಸುವಂತೆ ವೀರಶೈವ ಮತದ ವರ್ತಮಾನ ಪತ್ರಗಳೂ, ಮಾಸತ್ರಿಕೆಗಳೂ, ಪ್ರಕಟವಾಗಬೇಕು. ಅಂದರೆ ಅಲ್ಪಜ್ಞರಾದ ಸಾಮಾನ್ಯ ಜನರೂ ಕೂಡ ಧರ್ಮಜಾಗೃತರಾಗುತ್ತಾರೆ. ಒಂದು ಧಾರ್ಮಿಕ ಪತ್ರವು ಸಾವಿರಾರು ಧರ್ಮೋಪದೇಶಕರ ಕೆಲಸವನ್ನು ಸುಲಭವಾಗಿ ಮಾಡುತ್ತದೆ. ಈ ವಿಷಯವಾಗಿ ಸೊಲ್ಲಾಪುರದ ರಾ.ಸಾ||ಮಲ್ಲಪ್ಪ ಬಸವಪ್ಪ ವಾರದ ಊರ್ಫ ಅಪ್ಪಾಸಾಹೇಬರವರು ಈ ಮೊದಲೇ ಜಾಗೃತರಾಗಿ ಎಷ್ಟೋ ಮತಗ್ರಂಥಗಳನ್ನು ಮಹಾರಾಷ್ಟ್ರ ಭಾಷೆಯಲ್ಲಿ ಭಾಷಾಂತರಿಸಿ, ಮಹಾರಾಷ್ಟ್ರದೇಶದ ವೀರಶೈವರಿಗೆ ಮಹದುಪಕಾರಿಗಳಾಗಿದ್ದಾರೆ. ಈ ಅನುಕೂಲ್ಯವು ನಮ್ಮ ಕರ್ನಾಟಕದಲ್ಲಿ ಅವಶ್ಯವಾಗಿ ಆಗಲಿಕ್ಕೆ ಬೇಕು. ಶ್ರೀಯುತ ಮೈಸೂರ ವೈ. ವೀರಸಂಗಪ್ಪನವರ ಕರಕಂಜ ಸಂಜಾತವಾಗಿ ಅವರ ತರುವಾಯ ಈಗ ಅವರ ತನುಜರಾದ ವೈ. ವಿರೂಪಾಕ್ಷಯ್ಯನವರಿಂದ ನಡಿಸಲ್ಪಡುತ್ತಿರುವ ಸುಪ್ರಸಿದ್ಧ ಒಂದೇ ಒಂದು 'ಮೈಸೂರ ಸ್ಟಾರ'ಪತ್ರಿಕೆಯಿಂದ ಪೂರ್ಣ ಕೆಲಸವಾಗದು. ಇಂತಹ ಪತ್ರಗಳೂ ಮತಗ್ರಂಥಗಲೂ ಬೆಳೆಯಬೇಕು; ಎಂದು ಆಲೋಚಿಸಿ ರಾ.ಬ||ರುದ್ರಗೌಡ ದೊರೆಗಳು ಮೈಸೂರ ಸೀಮೆಯಿಂದ ಯನ್ ಶಂಕರಾರ್ಯರೆಂಬ ಒಬ್ಬ ವಿದ್ವಾಂಸರನ್ನು ಕರೆಯಿಸಿ, ಧಾರವಾಡ ಜಿಲ್ಲಾ ತಾಲೂಕ ಹುಬ್ಬಳ್ಳಿಯಲ್ಲಿ ಹೊಸದಾಗಿ ಒಂದು ಮುದ್ರಾಲಯವನ್ನು ಸ್ಥಾಪಿಸಿಕೊಟ್ಟು, ಸಂಸ್ಕೃತದಲ್ಲಿರುವ ನಮ್ಮ ಮತದ ಉದ್ಗ್ರಂಥಗಳನ್ನು ಕನ್ನಡಿಸಲಿಕ್ಕೆ ಹಚ್ಚಿದರು. ಈ ಶಂಕರಾರ್ಯರು ಶೈವಬ್ರಾಹ್ಮಣರು; ಈ ಮಹತ್ಕೃತ್ಯವನ್ನು ನಿರ್ಬಾಧವಾಗಿ ನೆರವೇರಿಸತಕ್ಕ ವೀರಶೈವ ಘನಪಂಡಿತನೊಬ್ಬನೂ ಇಡೀ ಮುಂಬಯಿ ಕರ್ನಾಟಕದಲ್ಲಿ ದೊರೆಯದ್ದರಿಂದಲೇ, ಪರಪ್ರಾಂತದಿಂದ ಪರಮತೀಯ ಪ್ರಾಜ್ಞನನ್ನು ತರಿಸಬೇಕಾಯಿತು. ಪವಿತ್ರನಾದ ಮತಗ್ರಂಥಗಳನ್ನು ಪರಮತೀಯರಿಂದ ಪ್ರಸಿದ್ಧಿಪಡಿಸುವದು ಪ್ರಶಸ್ತಿವಲ್ಲೆಂದು ಪ್ರತಿಯೊಬ್ಬರು ಶಂಕಿಸಬಹುದು. ಆದರೆ ಬೂದಿಯಿಂದ ಬೈಲಿಗೆ ಬಂದ ಕೆಂಡವು ಕಾಂತಿಯಿಂದ ಹೀನವಾಗುವದಿಲ್ಲವು. ಕೊಳೆಯುಳ್ಳ

ಶುಕ್ತಿಯಲ್ಲಿ ತುಂಬಿಕೊಂಡ ಮುಕ್ತಾಫಲಗಳು ಪರಿಗ್ರಾಹ್ಯಕ್ಕೆ ಯೋಗ್ಯವಲ್ಲವೋ?"ಗುಣಾಃ ಪೂಜಾಸ್ಥಾನಂ ಗುಣಿಷು ನಚಲಿಂಗಂ ನಚವಯಃ" ಎಂಬಂತೆ ಪ್ರತಿಯೊಂದು ವ್ಯಕ್ತಿಯ ಗುಣ ಗ್ರಾಹ್ಯವನ್ನಷ್ಟೇ ಮಾಡತಕ್ಕದ್ದು. ಆದರೂ ಸೂಕ್ಷ್ಮವಿಚಾರಿಗಳಾದ ರಾವಬಹದ್ದೂರವರು ಆ ಮುದ್ರಾಲಯದಲ್ಲಿ ಪ್ರಚುರವಾಗತಕ್ಕ ಯಾವತ್ತೂ ಗ್ರಂಥಗಳ ಪ್ರೂಫಗಳನ್ನು ಪರಿಶೋಧಿಸಲಿಕ್ಕೆ ಆ ಕಾಲಕ್ಕೆ ಧಾರವಾಡ ತಾಲೂಕ ಕಚೇರಿಯ ಸಿರಸ್ತೇದಾರರಾಗಿದ್ದ ರಾ॥ಸಾ॥ರೇವಣಸಿದ್ಧಪ್ಪ, ಬಸವಣ್ಣಪ್ಪ ಕಿತ್ತೂರ ಎಂಬವರನ್ನೂ, ಸಂಸ್ಕೃತವನ್ನೂ ಧಾರ್ಮಿಕ ವಿಷಯವನ್ನೂ ಬಲ್ಲ ಹುಬ್ಬಳ್ಳಿಯ ಪ್ರಸಿದ್ಧ ವಕೀಲರಾದ ಸಿದ್ಧರಾಮಪ್ಪ ಪಾವಟೆ ಬಿ.ಎ., ಎಲ್‌ಎಲ್.ಬಿ. ಎಂಬವರನ್ನೂ ನಿಯಮಿಸಿ, ವೀರಶೈವ ವಿದ್ವಜ್ಜನರ ಸಮ್ಮತಿಯಿಲ್ಲದೆ ಯಾವ ಪುಸ್ತಕವೂ ಪ್ರಚುರ ಪಡದಂತೆ ಸರ್ವವ್ಯವಸ್ಥೆಯನ್ನಿಟ್ಟಿದ್ದರು.

ಈ ಮುದ್ರಾಲಯದ ಹೆಸರು "ವೀರಶೈವ ವಿಲಾಸ ಪ್ರೆಸ್ಸು". ಇದರ ಸ್ಥಾಪನೆಯು ಮೊದಲನೇ ಶ್ರೀಮದ್ವೀರಶೈವ ಮಹಾಸಭೆಯಾದ ಹಿಂದಿನ ವರ್ಷ ಅಂದರೆ ಸನ್ ೧೯೦೩ನೇ ಇಸವಿಯ ಜಾನೇವಾರಿ ತಿಂಗಳಲ್ಲಾಯಿತು. ಆರಂಭಕ್ಕೆ ಈ ಪ್ರೆಸ್ಸಿನಿಂದ "ವೀರಶೈವ ಗ್ರಂಥಮಾಲಾ" ಎಂಬ ಹೆಸರಿನ ಮಾಸಿಕ ಪುಸ್ತಕವು ಹೊರಡಹತ್ತಿತು. ಧಾರ್ಮಿಕ ವಿಷಯಗಳಿಂದಲೂ ಭಾಷಾಮಾಧುರ್ಯದಿಂದಲೂ ಉದ್ಗ್ರಂಥಗಳ ವಿಷಯ ವಿವೇಚನದಿಂದಲೂ ಈ ಮಾಸಪತ್ರಿಕೆಗಳು ಪ್ರಚುರವಾಗಹತ್ತಿದವು. ರಾ.ಬ॥ರುದ್ರಗೌಡ ಸಾಹೇಬರವರು ತಮ್ಮ ರಾಜ್ಯೋದ್ಯೋಗದ ಸಂಚಾರದಲ್ಲಿ ಪುರಾತನದಿಂದಲೂ, ಪ್ರಸಿದ್ಧವಾದ ಮಠಗಳಲ್ಲಿ ಬರಿ ಹುಳಹುಪ್ಪಡಿಗಳ ಪಾಲಾಗಿ ಮೂಲೆಗುಂಪಾಗಿ ಬಿದ್ದ ಪವಿತ್ರವಾದ ಮತಗ್ರಂಥಗಳನ್ನು ಪರಿಶೋಧಿಸಿ, ಈ ಮುದ್ರಾಲಯದ ಮೂಲಕ ಪ್ರಕಟಮಾಡಹತ್ತಿದರು. ಕೆಲ ಕೆಲವು ಕಡೆಯಲ್ಲಿ ನೂರಾರು ವರ್ಷದಿಂದ ಕತ್ತಲೆಯ ಕೋಣೆಗಳಲ್ಲಿ ಕೊಳೆಬಿದ್ದ ಹೆಬ್ಬೊತ್ತಿಗೆಗಳು ಹೊರಬಿದ್ದು ಮುದ್ರಾಲಯಕ್ಕೆ ಹೋಗಹತ್ತಿದವು. ಕಲಿಕಾಲದ ಬಲೆಯಲ್ಲಿ ಸಿಕ್ಕು ನಾಮಶೇಷವಾದ ಮತಗ್ರಂಥಗಳ ಪುನರುಜ್ಜೀವನವಾಗಹತ್ತಿತು. ಈ ಕರ್ನಾಟಕ ಕಾವ್ಯಗಳ ಜೀರ್ಣತೆಯನ್ನು ಕಣ್ಣಾರೆ ಕಂಡ ಓರ್ವ ಕವಿವರನ ಕಟ್ಟಭಿಮಾನದ ಕಳಕಂಠದಿಂದ ಕಳಚಿಬಿದ್ದ ಕನ್ನಡ ಪದವೊಂದನ್ನು ಪಾಠಕ ಮಹಾಶಯರ ಅವಗಾಹನೆಗಾಗಿ ಇಲ್ಲಿ ಕೊಡುತ್ತೇವೆ.

ದಾಟಿ-ಸ್ಮರಣೆಯೊಂದೆ ಸಾಲದೆ-ಎಂಬಂತೆ

ಏನೇನ್ಮಾಡುವಿರಿ। ಮಕ್ಕಳಿರಾ। ಏನೇನು ಮಾಡಿದಿರಿ ॥ಏನಾಡುವಿರೆಲೆ।
ನಾ ನಿಮ್ಮ ತಾಯಲ್ಲೆ ಸೂನುಗಳಿರ ಎನ್ನ। ಧ್ಯಾನವ ತೊರೆದಿರಿ ॥ಪಲ್ಲ॥

ಆರೆ ನುಡಿಗಲಿಯುವಿರಿ।ಎನ್ನೊಳು ನೀವು। ಬಿರುನುಡಿ ನುಡಿಯುವಿರಿ॥
ಮರೆದು ಕನ್ನಡತಾಯಿ।ಗುರುತನ್ನೆ ನಿರುತದಿ।ಪರಭಾಷಾ ಮಲತಾಯಾ।
ಮರೆಹೊಕ್ಕು ಬಾಳ್ವರೆ? ॥೧॥

ಸುಜನೋತ್ತಂಸಕನು। ಹೊನ್ನನು ಹಂಪ।ಗಜಗನು ಗುಣನಂದಿಯು॥
ಸುಜನ ಕೇಶಿರಾಜ। ವಿಜಯಾದಿ ಸುತರೆನ್ನ।ಭಜಿಸಿ ತಮ್ಮಯ ಕೀರ್ತಿ।
ಧ್ವಜನ ನಿಲ್ಲಿಸಲಿಲ್ಲೇ? ॥೨॥

ವೀರ ಷಡಕ್ಷರಿಯು । ಭೀಮನು ದೇವ।ನೂರ ಲಕ್ಷ್ಮೀಪತಿಯು ॥
ಚಾರು ಮತಿಯೊಳೆನ್ನ। ಸಾರಿ ಸೇವಿಸಿ ಕೀರ್ತಿ।ಯೂರಿ ನಿಮ್ಮಯ ಕಯ್ಗೆ।
ಸೇರಿಸಿದರು ಎನ್ನ ॥೩॥

ಇಂತಿಂತವರ ಕುಲದಿ।ಮಕ್ಕಳಿರಾ ।ಎಂಥವರುದಿಸಿದರಿ॥
ಸಂತಾನ ಬೇಕೆಂದು।ಚಿಂತಿಸಲೇಕಿನ್ನು!ಕಾಂತಾರದೊಳು ತಾಯಿ।
ನಿಂತಳುತಿಹಳು ॥೪॥

ಹಿರಿಯರು ಬರೆದೋದಿಟ್ಟ।ನಾಟಕ ಚಂಪೂ।ಸುರಸ ಕಾವ್ಯಾದಿಗಳು॥
ಮರೆಗೆ ಬಿದ್ದವು ನಿಮ್ಮ । ಹುರುಳಿಲ್ಲದಿರುವಿಗೆ ।ಬರಿ ಹುಳ ಹುಪ್ಪಡಿ।
ಹರಿದು ಹಾಳಾದವು ॥೫॥

ಸವೆದು ಹೋಯ್ತಭಿಮಾನವು।ನಿಮ್ಮೊಳು ನೀವೆ।ತವೆ ಜರಿದಾಡುವಿರಿ॥
ಸವತಿ ಮಕ್ಕಳಿಗೆನ್ನ ।ಬವಣೆಗೆ ಕೊಟ್ಟಿರಿ।ಅವರು ಸುಲಿದು ಕಟ್ಟಿ।
ಕವರಿಕೊಂಬರು ನಿಮ್ಮ ॥೬॥

ಕನ್ನಡಿಗರು ನೀವೆಲ್ಲಾ।ಕಣ್ದೆರೆಯಿರಿ।ಇನ್ನಾದರು ಬೇಗನೆ॥
ಕನ್ನಡಮಾತೆಯ ।ಮನ್ನಿಸಿ ಕೀರ್ತಿಯ।ಸನ್ನುತ ಧ್ವಜವನು।
ಮುನ್ನಿನಂತಿರಿಸಿರಿ ॥೭॥

ಕನ್ನಡದೇಶದಲ್ಲಿ ।ಕನ್ನಡ ನುಡಿ।ಚೆನ್ನಾಗಿ ಬೆಳೆಯುವಂತೆ॥
ಕನ್ನಡಿಗರಿಗೆಲ್ಲ ।ಮುನ್ನ ಬುದ್ಧಿಯನಿತ್ತು ।ಪನ್ನಂಗಧರನು ಕಾ।
ರುಣ್ಯದಿ ಪೊರೆಯಲಿ॥೮॥

ಕುಡಿಯಲಿಕ್ಕೆ ಬಾರದಿದ್ದರೂ ಉರುಳಿಸಲಿಕ್ಕೆ ಪ್ರಯತ್ನಿಸುವ ಕಿಡಿಗೇಡಿಯಂತೆ ಈಗಿನ ಕನ್ನಡಿಗರ ಕಥೆಯಾಗಿದೆ; ಮಾಡುವದೇನು? ಕಾಲಕ್ರಮದ ಕುದುರೆಗೆ ಕಡಿವಾಣವೇ ಇಲ್ಲ. ಆದರೂ ಬಿದ್ದವನನ್ನು ಎಬ್ಬಿಸುವದು ಪರಮಧರ್ಮವೆಂದು ಬಗೆದು ರಾ.ಬ॥ರುದ್ರಗೌಡಪ್ರಭುಗಳು ಹಿಡಿದ ಕೆಲಸವನ್ನು ಹಠಾತ್ತಾಗಿ ನಡಿಸುತ್ತ ಬಂದದರಿಂದ, ತಿಳಿಗನ್ನಡದಲ್ಲಿ ತಯಾರಾದ ಎಷ್ಟೋ ಗ್ರಂಥಗಳು ಬೈಲಿಗೆ ಬಂದವು. ಪದ್ಯಪ್ರಬಂಧವಾಗಿದ್ದ ಬಸವಪುರಾಣವು "ವೀರಶೈವ ಗ್ರಂಥಮಾಲೆ"ಯಿಂದ ಬಾಲಬಾಲಿಕೆಯರಿಗೂ ಬೋಧವಾಗುವಂತೆ "ಬಸವಾಭ್ಯುದಯ"ವೆಂಬ ಹೆಸರಿನಿಂದ ಗದ್ಯರೂಪದ ಅಚ್ಚಗನ್ನಡದಲ್ಲಿ ಅಚ್ಚುಮಾಡಲ್ಪಡಹತ್ತಿ ಮತ್ತು ನೀಲಕಂಠಭಾಷ್ಯದ ಕರ್ನಾಟಕ ಭಾಷಾ ವಿವರಣೆ, ಕನ್ನಡ ತಾತ್ಪರ್ಯದೊಡನೆ ಕೂಡಿದ ಸೂಕ್ಷ್ಮಾಗಮ, ಸಟೀಕ ವೀರಶೈವ ಕೌಸ್ತುಭ ಮುಂತಾದ ಉತ್ತಮೋತ್ತಮವಾದ ಮತಗ್ರಂಥಗಳು ಮೇಲೆದ್ದು ಬಂದವು. ಮತ್ತು ಶಂಕರಲಿಂಗ ಶತಕ, ಶಿವಮಹಿಮಾ ಶತಕ, ಮಂತ್ರಗೋಪ್ಯದ ಕಂದ ಮೊದಲಾದ ಚಿಕ್ಕ ಚಿಕ್ಕ ಗ್ರಂಥಗಳು ಚೊಕ್ಕವಾಗಿ ಹೊರಬಿದ್ದವು. ಈ ವರೆಗೆ ಎಷ್ಟೋ ಜನರಿಗೆ ಬಹುಶಃ "ಅರುವತ್ಮೂರು ಮಂದಿ ಪುರಾತನರು"ಎಂಬದಿಷ್ಟೇ ಮಾತ್ರ ಗೊತ್ತಿತ್ತು. ಇವರು ಯಾರು? ಯಾರ ಕಾಲಕ್ಕೆ ಪ್ರಸಿದ್ಧವಾದರು! ಏನು ಮಾಡಿದರು? ಏನು ಕಾರಣ ಪ್ರಸಿದ್ಧಿಗೆ ಬಂದರು? ಯಾವ ಗತಿಯನ್ನು ಹೊಂದಿದರು? ಇವರ ನಾಮಾವಳಿಯನ್ನು ನಾವು ಏಕೆ ಭಜಿಸಬೇಕು? ಇವೇ ಮುಂತಾದ ಇವರ ಪುಣ್ಯಚರಿತ್ರೆಯು ಬಹು ಜನರಿಗೆ ಗೊತ್ತಿದ್ದಿದ್ದಿಲ್ಲ. ಅದರಿಂದ ರಾ.ಬ॥ರುದ್ರಗೌಡರವರು ಚಿಕ್ಕಮಕ್ಕಳು ಸಹ ಗಕ್ಕನೆ ತಕ್ಕೊಂಡು ಅಕ್ಕರದಿಂದ ಓದಬೇಕೆಂಬ ಲಕ್ಕದಿಂದ ತ್ರಿಷಷ್ಟ ಪುರಾತನರ ಚರಿತ್ರೆಯಲ್ಲಿ ಒಬ್ಬೊಬ್ಬ ಪುರಾತನರ ಚರಿತ್ರೆಯನ್ನೇ ಕಥಾರೂಪದಿಂದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿದರು. ಮತ್ತು ವೀರಶೈವ ಧರ್ಮಕ್ಕೆ ಪರಮ ಪೂಜ್ಯವಾದ ಮಹಾರುದ್ರಕ್ಕೆ ಕನ್ನಡದ ಟೀಕೆಯನ್ನು ಬರೆಯಿಸಿದರು. ಮತ್ತು

ಸಮಸ್ತ ಲಿಂಗಾಂಗಿಗಳ ಲಿಂಗಪೂಜೆಗೂ, ಪಠಣಕ್ಕೂ ಸುಲಭ ಸಾಧ್ಯವಾಗುವಂತೆ ವೀರಶೈವ ಶಿವಪೂಜಾನಿಧಿಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ಅದನ್ನು ಕನ್ನಡದ ಟೀಕೆಯೊಂದಿಗೆ ಪ್ರಸಿದ್ಧಿಸಿದರು. ಇವಲ್ಲದೆ ಬೇರೆ ಎಷ್ಟೋ ಗ್ರಂಥಗಳನ್ನು ಜೀರ್ಣೋದ್ಧಾರ ಮಾಡಿದರು. ಈ ವೀರಶೈವ ವಿಲಾಸ ಪ್ರೆಸ್ಸಿನ ಕೆಲಸವು ಒಳ್ಳೇ ಉತ್ಸುಕತೆಯಿಂದಲೂ, ಭರಭರಾಟಿಯಿಂದಲೂ ನಡೆಯಿತು. ಇದು ಅಬಾಧಿತವಾಗಿ ನಡೆಯಬೇಕೆಂದು ಧಾರವಾಡ ಜಿಲ್ಲಾ, ತಾಲೂಕ ಹುಬ್ಬಳ್ಳಿಯ ಪ್ರಸಿದ್ಧ ಸಾವಕಾರರಾದ ನೀಲೀ ರಾಚಪ್ಪಣ್ಣನವರು ಇದಕ್ಕೆ ಬಹಳೇ ಸಹಾಯಮಾಡಿದರು. ಆದರೆ ಯನ್. ಶಂಕರಾರ್ಯರ ಅಕಾಲಿಕ ಮರಣದಿಂದ ಈ ಪ್ರೆಸ್ಸಿನ ಪ್ರಾರಬ್ಧವು ಒಂದೇ ವರ್ಷದೊಳಗಾಗಿ ಪೂರ್ಣವಾಗಿ ಹೋಯಿತು. ಈ ಶಂಕರಾರ್ಯರು ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಇರುವ, ಮಠಮಂದಿರಗಳಲ್ಲಿ ಹಾಳಾಗಿ ಬಿದ್ದ ಹಳೇ ಗ್ರಂಥಗಳ ಶೋಧಾರ್ಥವಾಗಿ ಹುಬ್ಬಳ್ಳಿಯಿಂದ ಹೊರಟು ಪ್ರಯಾಣ ಮಾಡುತ್ತ, ಇತಿಹಾಸ ಪ್ರಸಿದ್ಧವಾದ ಬೆಳಗಾವ ಜಿಲ್ಲಾ, ಸಂಪಗಾವ ತಾಲೂಕದೊಳಗಿನ ಕಿತ್ತೂರ ಕಲ್ಮಠಕ್ಕೆ ಬಂದಿರಲು, ಅವರಿಗೆ ಪ್ಲೇಗರೋಗವು ಅಂಟಿಕೊಂಡು ಪ್ರಬಲವಾದ ವ್ಯಥೆಯಾಯಿತು. ಅವರ ಕುಟುಂಬದವರು ಹುಬ್ಬಳ್ಳಿಯಲ್ಲಿದ್ದುದರಿಂದ, ಆ ಬೇನೆಯವರನ್ನೇ ಅಲ್ಲಿಗೆ ಹೊತ್ತೊಯ್ಯಬೇಕಾಯಿತು. ಹೋಗುವಾಗ ಹಾದಿಯಲ್ಲಿಯೇ ಶಂಕರಾರ್ಯರು ಶಿವಾಧೀನರಾದರು. ಇವರ ಮೃತಿಯಿಂದ ಎಲ್ಲ ವೀರಶೈವರೂ ಮರುಗಿದರು. ಶಂಕರಾರ್ಯರು ಸಾತ್ವಿಕ ಸ್ವಭಾವದ ವಿದ್ವಾಂಸರಾಗಿದ್ದರು. ಇವರು ಅಲ್ಪಾವಧಿಯಲ್ಲಿಯೇ ಬಹಳ ಕೆಲಸಮಾಡಿದರು. ಇವರ ಉದ್ಯೋಗವು ಅನಿವಾರವಿತ್ತು; 'ವೀರಶೈವ ಗ್ರಂಥಮಾಲೆ'ಯ ೮-೯ ಸಂಚಿಕೆಗಳು ಮಾತ್ರ ಹೊರಬಿದ್ದವು. ಒಂದು ಸರ್ವೋತ್ಕೃಷ್ಟವಾದ ವರ್ತಮಾನ ಪತ್ರವನ್ನು ತೆಗೆಯಬೇಕೆಂದೂ ಇನ್ನೂ ಅನೇಕ ಮಹದ್ಗ್ರಂಥಗಳನ್ನು ಪ್ರಚುರಪಡಿಸಬೇಕೆಂದೂ ಇವರ ಸಂಕಲ್ಪವಿತ್ತು. ಆದರೆ ಈಶ ಸಂಕಲ್ಪವು ಹೀಗಿತ್ತು. ಶಂಕರಾರ್ಯರಿಂದ ಬರೆಯಲ್ಪಟ್ಟು ಮುದ್ರಣವಾಗದೆ ಇದ್ದ ಎಷ್ಟೋ ಗ್ರಂಥಗಳು ಅನಾಥವಾಗಿ ಅಲ್ಲಿಂದಲ್ಲಿಯೇ ಅಡಗಿಕೊಂಡವು. ಕೆಲವು ಅಪೂರ್ಣವಾಗಿ ಬಿದ್ದು ಕೊಂಡಿರುವವು.

ಶಂಕರಾರ್ಯರ ತರುವಾಯ ಆ ಪ್ರೆಸ್ಸನ್ನು ಯಥಾಪ್ರಕಾರ ನಡಿಸುವ ಸಮರ್ಥರು ಒಬ್ಬರೂ ಮುಂದೆ ಬರಲಿಲ್ಲವಾದುದರಿಂದ ಅದರ ಕೆಲಸವು ಅಷ್ಟಕ್ಕೆ ನಿಂತುಹೋದುದಕ್ಕಾಗಿ ವೀರಶೈವರೆಲ್ಲರೂ ವಿಷಾದಿಸಬೇಕಾಗಿದೆ. ಹಿಡಿದ ಕಾರ್ಯವು ಸಂಪೂರ್ಣವಾಗಿ ಲಭಿಸದೆ ಶಂಕರಾರ್ಯರು ಗತಿಸಿದ್ದರಿಂದ ರಾ.ಬ॥ರುದ್ರಗೌಡ ಸಾಹೇಬರಿಗೆ ಪರಮವ್ಯಸನವಾಯಿತು. ರಾ.ಬ॥ರವರು ಈ ಪ್ರೆಸ್ಸಿನಲ್ಲಿ ಪ್ರಿಂಟಾದ ಸಾವಿರಾರು ರೂಪಾಯಿ ಬೆಲೆಬಾಳುವ ಪುಸ್ತಕಗಳನ್ನು ತಮ್ಮ ಸ್ನೇಹಿತರಿಗೂ, ಗೊತ್ತಿನವರಿಗೂ, ಯೋಗ್ಯ ಜಂಗಮರಿಗೂ, ಪುಕ್ಕಟೆಯಾಗಿ ಕೊಟ್ಟರು; ಈ ಪ್ರೆಸ್ಸಿನ ಕೆಲಸವು ಕಟ್ಟಾದುದರಿಂದ ರಾವಬಹದ್ದೂರರವರಿಗೆ ನಾಲ್ಕೈದು ಸಾವಿರ ರೂಪಾಯಿಗಳ ಹಾನಿಯಾದಾಗ್ಯೂ ಇವರು ಅಸಮಾಧಾನ ಪಡದೆ, ಆದಷ್ಟು ಕೆಲಸದಲ್ಲಿಯೇ ಲಾಭವು ಅಡಕವಾಗಿರುವದೆಂಬದಾಗಿ ಆನಂದಪ್ರದರ್ಶನವನ್ನೇ ಮಾಡಿದರು. ಬಂಗಾರಕ್ಕಿಂತಲೂ ವಿದ್ಯೆಯು ಹೆಚ್ಚಿನದೆಂಬ ವಾಕ್ಯವನ್ನು ಸಾಲೆಯ ಹುಡುಗರು ಸಹ ಬಲ್ಲರು. ನೀತಿಬದ್ಧವಾದ ಒಂದೇ ಒಂದು ಶ್ಲೋಕವನ್ನು ಒಬ್ಬ ಅರಸುಮಗನು ಲಕ್ಷ ಹೊನ್ನುಗಳಿಗೆ ಮಾರಲಿಕ್ಕೆ ತೆಗೆದುಕೊಂಡ ಕಥೆಯು ಸರ್ವಶ್ರುತವಾಗಿದೆ. ಜ್ಞಾನಿಗಳು ಧನವನ್ನು ಲಕ್ಷಿಸುವದಿಲ್ಲ. ವಿದ್ಯಾವೇಷ್ಟಿತನಾದ ತರುಣನು ಓಡುತ್ತಿದ್ದ ಲಕ್ಷ್ಮಿಯನ್ನು ತುರುಬು ಹಿಡಿದು ಎಳೆದು ತರುವನು.

ವೀರಶೈವರ ಪತ್ರಿಕೆಗಳು

ಈ 'ವೀರಶೈವ ವಿಲಾಸ ಪ್ರೆಸ್ಸ'ವು ಕುಂಠಿತವಾಗಿ ಬೀಳಲು ಬೇರೆ ಬೇರೆ ಪ್ರಾಂತಗಳಲ್ಲಿಯ ಪ್ರಮುಖರಾದ ಮತಾಭಿಮಾನಿಗಳು ರಾ.ಬ॥ರುದ್ರಗೌಡ ಪ್ರಭುಗಳ ಅನುಕರಣವನ್ನೇ ಮಾಡಿ, ತಮ್ಮ ತಮ್ಮ ಪ್ರಾಂತಗಳಲ್ಲಿ ಇತ್ತಿತ್ತಲಾಗಿ ಮತಗ್ರಂಥಗಳ ಜೀರ್ಣೋದ್ಧಾರವನ್ನು ಮಾಡುವ ಕಾರ್ಯದಲ್ಲಿ ತತ್ಪರರಾಗಿದ್ದಾರೆ; ಕೆಲ ಕೆಲ ವೀರಶೈವ ವಿದ್ವದ್ವರ್ಯರು ಸ್ವತಂತ್ರವಾಗಿ ಮತಗ್ರಂಥಗಳನ್ನು ಪ್ರಚುರ ಪಡಿಸಹತ್ತಿದ್ದಾರೆ. ಯನ್.

ಶಂಕರಾರ್ಯರು" ಬಸವಾಭ್ಯುದಯ"ವೆಂಬ ಗ್ರಂಥವನ್ನು ಬರೆದಂತೆ ಮೈಸೂರ ಸೀಮೆಯ ಪ್ರಸಿದ್ಧ ಪಂಡಿತರಾದ ಯನ್. ಆರ್. ಕರಿಬಸವಶಾಸ್ತ್ರಿಗಳವರು, ಬಸವ ಪುರಾಣ, ಚೆನ್ನಬಸವ ಪುರಾಣಗಳನ್ನು ಸುಲಭವಾದ ಗದ್ಯರೂಪದಿಂದ ಬರೆದು"ಬಸವರಾಜ ವಿಜಯ" "ಚೆನ್ನಬಸವೇಶ ವಿಜಯ"ವೆಂಬ ಹೆಸರುಗಳಿಂದ ಎರಡು ಕಥಾಗ್ರಂಥಗಳನ್ನು ಎಲ್ಲ ಕಡೆಗಳಲ್ಲಿಯೂ ಪ್ರಸಾರಮಾಡಿದರು. ಸುರಂಗ ಕವಿಯಿಂದ ಪದ್ಯರೂಪದಲ್ಲಿ ರಚಿಸಲ್ಪಟ್ಟ ತ್ರಿಷಷ್ಠಿ ಪುರಾತನರ ಚರಿತ್ರೆಯನ್ನು ಸರಳವಾದ ಗದ್ಯದಲ್ಲಿ ಕನ್ನಡಿಸಿ, ಮದ್ರಾಸ ಪಟ್ಟಣದ ಸಾಹುಕಾರ ಪೇಟೆಯಲ್ಲಿರುವ "ಗುರುಬಸವ ಆಂಡ ಕೋ" ಎಂಬವರು "ಪುರಾತನ ಭಕ್ತವಿಲಾಸ" ಎಂಬ ಹೆಸರಿನಿಂದ ಪ್ರಕಟಮಾಡಿದರು. ಇದಲ್ಲದೆ ಮೈಸೂರ ಸೀಮೆಯ ಮತಾಭಿಮಾನಿಗಳು ಬೇರೊಂದು ಸಂಘವನ್ನೇರ್ಪಡಿಸಿ, ಅದನ್ನು ಮೈಸೂರ ಸರಕಾರದಲ್ಲಿ ರಜಿಸ್ಟರ ಮಾಡಿಸಿ, ಈ ಸಂಘದಿಂದ ನಮ್ಮ ಪುರಾತನ ಮತಗ್ರಂಥಗಳನ್ನು ಪರಿಪಕ್ವ ಸ್ಥಿತಿಗೆ ತರಹತ್ತಿದ್ದಾರೆ. ವೀರಶೈವ ವಿಲಾಸ ಪ್ರೆಸ್ಸಿನಿಂದ ಹೊರಡುತ್ತಿದ್ದ ವೀರಶೈವ ಗ್ರಂಥಮಾಲೆಯಂತೆ ಈ ಸಂಘದಿಂದ "ವೀರಶೈವ ಗ್ರಂಥಪ್ರಕಾಶಿಕಾ" ಎಂಬ ಮಾಸಿಕ ಪುಸ್ತಕವು ಹೊರಡಹತ್ತಿದೆ. ಇದರಿಂದ "ವೀರಶೈವ ಧರ್ಮಶಿರೋಮಣಿ" "ಪಂಡಿತಚಾರಿತ್ರ" "ಸೌಂದರ ಪುರಾಣ" ಎಂಬ ವೀರಶೈವ ಸಂಸ್ಕೃತ ಕರ್ನಾಟಕ ಉದ್ಗ್ರಂಥಗಳು ಕನ್ನಡ ತಾತ್ಪರ್ಯದೊಡನೆ ಪ್ರಕಾಶಿಸ ಹತ್ತಿವೆ. ಇನ್ನೂ ಅನೇಕ ಮತಗ್ರಂಥಗಳು ಈ ಸಂಘದಿಂದ ಹೊರಹೊರಟು ನಮ್ಮ ವೀರಶೈವಮತಕ್ಕೆ ವಿಶೇಷ ಲಾಭವಾಗುವ ಆಶಯವದೆ. ಪ್ರಸ್ತುತಕ್ಕೆ ವಿದ್ವನ್ಮಕುಟ ಮಣಿಗಳಾದ ಯನ್.ಆರ್. ಕರಿಬಸವಶಾಸ್ತ್ರಿಗಳೂ, ಪಿ.ಆರ್. ಕರಿಬಸವಶಾಸ್ತ್ರಿಗಳೂ ಈ 'ವೀರಶೈವ ಗ್ರಂಥಪ್ರಕಾಶಿಕಾ' ಮಾಸಪತ್ರಿಕೆಯ ಚಾಲಕರೂ, ಮಾಲಕರೂ ಆಗಿದ್ದಾರೆ. ಈ ಬಗೆಯಾಗಿ ಮತಗ್ರಂಥಗಳ ನ್ಯೂನತೆಯು ದಿನೇ ದಿನೇ ಕಡಿಮೆಯಾಗುತ್ತ ನಡೆದಿರುವದು. ಇದರಿಂದ ಇತ್ತಿತ್ತಲಾಗಿ 'ವೀರಶೈವಾನಂದಿನಿ', 'ವೀರಶೈವ ಪ್ರಭಾಕರ' 'ವೀರಶೈವ ಸುಧಾಸಾರ' 'ವಾಗ್ದೇವಿ' ಮೊದಲಾದ ಮಾಸಿಕ ಪತ್ರಿಕೆಗಳೂ, ವೀರಶೈವ ಮತೋನ್ನತಿಯ ಮಾರ್ಗವಲಂಬಿಗಳಾದ ಬೇರೆ ವರ್ತಮಾನ ಪತ್ರಗಳು ಅಲ್ಲಲ್ಲಿ ಹೊರಡ ಹತ್ತಿರುವವು. ಸಾರಾಂಶ, ರಾ.ಬ॥ರುದ್ರಗೌಡ ಪ್ರಭುಗಳು ಸಮಾಜೋನ್ನತಿಗಾಗಿ ಹೊಸ ಹೊಸದಾಗಿ ತೆಗೆದ ಕಲ್ಪನೆಗಳೂ, ಕಾರ್ಯಗಳೂ ಕ್ರಮವಾಗಿ ನಡೆದು ವೀರಶೈವರು ವಿದ್ಯಾವಂತರಾಗಹತ್ತಿದರು.

❖❖

೧೪ನೇ ಭಾಗ

ಶಿರಸಂಗಿಯ ಶ್ರೀಮಂತರ ಅಸ್ವಸ್ಥತೆ

ಈ ಮೇರೆಗೆ ರಾವಬಹದ್ದೂರ ರುದ್ರಗೌಡ ಸಾಹೇಬರು ಕರ್ತವ್ಯದಕ್ಷರಾಗಿ ಮತಸುಧಾರಣಾ ಸುಖಸಾಮ್ರಾಜ್ಯ ಸುಖವನ್ನನುಭೋಗಿಸುತ್ತಿರಲು, ಮುಂದೆ ಸ್ವಲ್ಪ ದಿವಸಗಳಲ್ಲಿ ಇವರು ಅದೇಕೆ? ಸಮಸ್ತ ವೀರಶೈವರು ದುಃಸಹವಾದ ದುಃಖಾರ್ಣವದಲ್ಲಿ ಮುಳುಗಿ ಹೋಗುತ್ತಾರೆಂಬ ಭವಿತವ್ಯವು ಯಾರ ಕನಸು ಮನಸಿನಲ್ಲಿಯೂ ಬಂದಿರಲಿಲ್ಲ ರಾವಬಹದ್ದೂರವರ ಪರಮ ಸ್ನೇಹಿತರೂ, ವೀರಶೈವರ ವೀರಾಭಿಮಾನಿಗಳೂ ಆದ ಶಿರಸಂಗಿಯ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರಿಗೆ ಸನ್ ೧೯೦೬ನೇ ಇಸವಿಯ ಆರಂಭದಲ್ಲಿ ಕ್ಷಯದಂತಹ ಒಂದು ಘನರೋಗವು ಗಂಟುಬಿತ್ತು. ಆಗ ಶ್ರೀಮಂತರು ಬೆಳಗಾವಿಯಲ್ಲಿಯೇ ಇದ್ದರು. ರಾ.ಬ॥ರುದ್ರಗೌಡರು ಪರಮಮಿತ್ರರ ಘನರೋಗದಿಂದ ಬಹು ವ್ಯಸನಾಕ್ರಾಂತರಾಗಿ, ಮಹಾ ಮಹಾ ವೈದ್ಯರಿಂದ ಔಷಧದ ಯೋಜನೆಯನ್ನು ಮಾಡಿಸಿದರು. ನಾಮಾಂಕಿತ ಡಾಕ್ಟರರಿಗೆ ಸಹ ಇವರ ರೋಗ ಪರೀಕ್ಷೆಯಾಗದೆ ರುಜೆಯು ದಿನದಿನಕ್ಕೆ ಪ್ರಬಲವಾಗ ಹತ್ತಿತು. ಅನ್ನವು ಕಡಿಕಡಿಮೆಯಾಗುತ್ತ ಹೋಯಿತು; ಅನ್ನಕ್ಕೆ ರುಚಿಬರಲೆಂಬ ಉದ್ದೇಶದಿಂದ ಪಾಕಶಾಸ್ತ್ರದಲ್ಲಿ ಪ್ರವೀಣರಾದ ಮೈಸೂರ ಅರಮನೆಯ ಅಡಿಗೆಯವರನ್ನು ಕರೆಯಿಸಿದರು. ಆದರೆ ಅಮೃತವೂ ಕೂಡ ವಿಷದಂತೆ ರುಚಿಸುವ, ಪ್ರಖರವಾದ ರೋಗೋಷ್ಮದಿಂದ ವಿಹ್ವಲವಾಗಿರುವ ಜಿಹ್ವೆಗೆ ಯಾವ ಪರಮಾನ್ನವಾದರೂ ಹೇಗೆ ಸವಿದೋರಬೇಕು? ಆರೋಗ್ಯವಂತನಾದ ಅರಸುಮಗನಿಗೆ ಅಂಬಲಿಯೂ ಕೂಡ ಅಮೃತದಂತೆ ಪರಿಣಮಿಸುವದು.

ಶ್ರೀಮಂತರು ಸಂಸ್ಥಾನ ನವಲಗುಂದಕ್ಕೆ ಪ್ರಯಾಣ ಮಾಡಿದ್ದು

ಮುಂದೆ ಶ್ರೀಮಂತರ ಶರೀರವು ಕ್ಷಣಕ್ಷಣಕ್ಕೆ ಕ್ಷೀಣವಾಗಹತ್ತಿತು. ಅದರಿಂದ ಸ್ಥಳವನ್ನು ಬದಲಾಯಿಸಿ ನೋಡಬೇಕೆಂದು ಇಲ್ಲಿಂದ ಆರೋಗ್ಯಕರವಾದ ಹವೆಯುಳ್ಳ ಶಿರಸಂಗಿ, ನವಲಗುಂದಗಳ ಕಡೆಗೆ ಹೋಗಬೇಕೆಂಬದಾಗಿ ಆಲೋಚನೆ ತೆಗೆದರು. ಆದರೆ ಇವರ ಈ ಆಲೋಚನೆಯು ರಾ.ಬ॥ರುದ್ರಗೌಡ ದೊರೆಗಳ ಮನಸಿಗೆ ಬರಲಿಲ್ಲ. ಅದರಿಂದವರು ಶ್ರೀಮಂತರನ್ನು ಕುರಿತು "ನೀವು ಅತ್ತ ಕಡೆಗೆ ಹೋಗುವ ಆಲೋಚನೆಯನ್ನು ಮಾಡಬೇಡಿರಿ. ಇನ್ನೂ ಪ್ರಸಿದ್ಧ ಡಾಕ್ಟರರನ್ನು ಕರೆತರಿಸಿ ಪ್ರಕೃತಿಯನ್ನು ತೋರಿಸೋಣ. ಇಲ್ಲಿಯೇ ಇದ್ದುದಾದರೆ ಔಷಧೋಪಚಾರಕ್ಕೆ ವಿಶೇಷಾನುಕೂಲವಾಗುತ್ತದೆ. ಎಲ್ಲಿ ಹೋದರೂ ಪ್ರಾರಬ್ಧವು ಬೇರೆ ತಪ್ಪುವದಿಲ್ಲ. ಬೇನೆಯಿಂದ

ಬಳಲುವ ನಿಮ್ಮನ್ನು ಬಿಟ್ಟು ದೂರ ಇರುವದು ನನಗೆ ಕಠಿಣವಾಗುವದು. ನಿಮ್ಮ ಪಯಣವು ದೂರಾಗುವದು. ತಾಸೆರಡು ತಾಸಿನ ಹಾದಿಯಲ್ಲ. ನಿಮ್ಮ ಮನಸಿನೊಳಗಿನ ಸಂದೇಹಗಳನ್ನೆಲ್ಲ ಕಳೆದು ಇಲ್ಲಿಯೇ ಇದ್ದು ಬಿಡುವ ದೃಢಮನಸ್ಸು ಮಾಡಿರಿ. ಎಲ್ಲೆಡೆಯಲ್ಲಿಯೂ ದೇವರು ಒಬ್ಬನೇ ಇದ್ದಾನೆ. ಏನಾದದ್ದನ್ನು ನೋಡುತ್ತ ಹೋಗೋಣ! "ಎಂದು ಹೇಳಿದ್ದಕ್ಕೆ ಶ್ರೀಮಂತರು ಒಡಂಬಡದೆ ಸ್ವಸ್ಥಾನಕ್ಕೆ ತೆರಳುವದನ್ನೇ ನಿಶ್ಚಯಿಸಿದರು" ದೀಪ ನಿರ್ವಾಣಗಂಧಂದ ಸುಹೃದ್ವಾಕ್ಯ ಮರುಂಧತಿಮ| ನಜಿಘ್ರಂತಿ ನಶೃಣ್ವಂತಿ ನನಶ್ಯಂತಿ ಗತಾಯುಷಿಃ|| ಎಂಬಂತೆ ಗತಾಯುಷಿಗಳ ಪ್ರಾರಬ್ಧವು ಪರಮ ಮಿತ್ರರ ಮಾತುಗಳನ್ನು ಸಹ ಕೇಳಗೊಡುವದಿಲ್ಲ. ಎಲ್ಲಿದ್ದರೂ ಭವಿತವ್ಯವು ತಪ್ಪಲಾರದು.

ಕೂಡಲೆ ಸಾಮಾನುಗಳಿಂದ ತುಂಬಿದ ಗಾಡಿಗಳು ಬೆಳಗಾವಿಯ ಬಂಗಲೆಯಿಂದ ಶಿರಸಂಗಿಯ ಕಡೆಗೆ ಹೊರಟವು. ದರ್ಶನಾತುರದಿಂದ ಬಂದ ದೊಡ್ಡ ದೊಡ್ಡ ಸದ್ಗೃಹಸ್ಥರಿಗೂ, ಇಷ್ಟ ಮಿತ್ರರಿಗೂ ಶ್ರೀಮಂತರು ಭೆಟ್ಟಿಯನ್ನು ಕೊಟ್ಟು ಬೆಳಗಾವ ಜಿಲ್ಲಾ ಕಲೆಕ್ಟರರೂ, ಡಿಸ್ಟ್ರಿಕ್ಟ ರಿಜಿಸ್ಟ್ರಾರರೂ ಆದ ಮೆ|| ಟಿ.ಎಮ್. ಜಾಕ್ಸನ್ ಸಾಹೇಬ ಬಹದ್ದೂರವರ ದರ್ಶನ ತಕ್ಕೊಂಡು, ತಾವು ಈ ಮೊದಲೇ ಬರೆದು ತಯಾರಿಸಿ ಮೊಹರ ಬಂದುಮಾಡಿ ಲಖೋಟಿಯೊಂದನ್ನು ಪ್ರತಿಜ್ಞಾ ಜವಾಬ ಪೂರ್ವಕ ಮೆ||ರವರ ವಿದ್ಯಮಾನ ಸರಕಾರದಲ್ಲಿಟ್ಟು, ಅವರ ನಿರೂಪ ತಕ್ಕೊಂಡು ಪರಮಸ್ನೇಹಿತರಾದ ರಾ.ಬ||ಅರಟಾಳ ಸಾಹೇಬರವರ ಬಂಗಲೆಗೆ ಬಂದು, ಅಶ್ರುಪೂರಿತ ನಯನರಾಗಿ ಅವರಿಗೆ ಹೋಗಿಬರುತ್ತೇವೆಂದು ಹೇಳಿದರು. ಶ್ರೀಮಂತರನ್ನು ಕಾಣುತ್ತಲೆ ರಾವಬಹದ್ದೂರವರ ಅಶ್ರುಬಿಂದುಗಳು ಅನೈಚ್ಛಿಕವಾಗಿ ಧಾರೆಗೊಂಡವು ದುಃಖೋದ್ಗಾರದಿಂದ ಅವರ ಹಾಗೂ ಅವರ ಪರಿವಾರದವರ ನಿರೂಪ ತೆಗೆದುಕೊಂಡು, ಶ್ರೀಮಂತ ದಂಪತಿಗಳು ಪ್ರಯಾಣೋನ್ಮುಖರಾದರು. ಆದರೆ ಅವರು ತಮ್ಮ ಅಂತರಂಗವನ್ನು ಮಾತ್ರ ಯಾರಿಗೂ ತಿಳಿಸಲಿಲ್ಲ; ಪ್ರಯಾಣದಲ್ಲಿ ಅವರಿಗೆ ಶುಭ ಶಕುನಗಳಾಗಲಿಲ್ಲ. ಸೂಕ್ಷ್ಮ ವಿಚಾರಿಗಳಾದ ರಾ.ಬ||ರುದ್ರಗೌಡರವರು ಆ ಅಶುಭ ಸೂಚನೆಗಳನ್ನೂ, ತಮ್ಮ ಮನಸಿನ ಅಸಾಮಾಧಾನತೆಯನ್ನೂ ತಿಳಿದು ಶ್ರೀಮಂತರ ಆರೋಗ್ಯತೆಯ ವಿಷಯಕ್ಕೆ ಆಗಳೆ ಅನುಮಾನಿಸಿದರು. ಮತ್ತು ತಮ್ಮ ಪರಿವಾರದವರ ಮುಂದೆಯೂ, ತಮ್ಮ ಹತ್ತರ ಯಾವಾಗಲೂ ಇರುತ್ತಿರುವ ಹಿತಚಿಂತಕರ ಮುಂದೆಯೂ ಶ್ರೀಮಂತ ಸರದೇಸಾಯಿಯವರು ತಿರುಗಿ ಈ ಸ್ಥಳಕ್ಕೆ ಬರುವದು ಅಸಂಭವನೀಯವೆಂದು ನನ್ನ ಮನೋದೇವತೆಯು ಹೇಳುತ್ತದೆಂಬದಾಗಿ ಆಗಾಗ್ಗೆ ಹೇಳುತ್ತಿದ್ದರು. ಧೂರ್ತವಿಚಾರಿಗಳಾದ ಮಹನೀಯರ ಚಕ್ಷುಗಳ ಮುಂದೆ ತೂಗಾಡುವ ಅನುಮಾನಗಳು ಅಕ್ಷರಶಃ ನಿಜವಾಗುತ್ತಿರುತ್ತವೆ.

ಶ್ರೀಮಂತರು ಸ್ವಸ್ಥಾನವಾದ ಶಿರಸಂಗಿಗೆ ಸುರಕ್ಷಿತವಾಗಿ ಗಮಿಸಿ, ಅಲ್ಲಿ ಜಮಖಂಡಿಯ ಪ್ರಸಿದ್ಧವಾದ ದೇಶೀ ಘನ ವೈದ್ಯರಿಂದ ಔಷಧೋಪಚಾರ ನಡಿಸಿ, ಪರಿಣಾಮಗಾಣಿಸಿ ಪುನಃ ಅಲ್ಲಿಂದ ಹೊರಟು ಧಾರವಾಡ ಜಿಲ್ಲಾ ಅಣ್ಣಿಗೇರಿಯಲ್ಲಿ ಕೆಲವು ದಿನಗಳನ್ನು ಕಳೆದು, ಕೊನೆಗೆ ಸರ್ವಪರಿವಾರದೊಂದಿಗೆ ತಮ್ಮ ದೇಸಗತಿಯ ಪೂರ್ವಸ್ಥಾನವಾಗಿದ್ದ ನವಲಗುಂದ ಸಂಸ್ಥಾನಕ್ಕೆ ಹೋದರು. ಅಲ್ಲಿಯಾದರೂ ಎಷ್ಟೋ ಜಾಣರಾದ ವೈದ್ಯರಿಂದ ಔಷಧೋಪಚಾರವನ್ನು ನಡಿಸುತ್ತಲೇ ಇದ್ದರು. ತಮ್ಮ ಪ್ರಕೃತಿಯ ಸ್ಥಿತಿಯನ್ನು ತಮ್ಮ ಪರಮ ಸ್ನೇಹಿತರಾದ ರಾ.ಬ||ರುದ್ರಗೌಡ ಸಾಹೇಬರವರಿಗೆ ಮೇಲಿಂದ ಮೇಲೆ ಪತ್ರ ಮುಖಾಂತರವಾಗಿ ತಿಳಿಸುತ್ತಲೇ ಇದ್ದರು. ಶ್ರೀಮಂತರ ಹಸ್ತಾಕ್ಷರದ ಪತ್ರಗಳು ಬರುತ್ತಿರುವ ವರೆಗೆ ರಾವಬಹದ್ದೂರವರಿಗೆ ದುಃಖದಲ್ಲಿ ಸ್ವಲ್ಪ ಸುಖವೆನಿಸಿತ್ತು. ಪರಹಸ್ತಾಕ್ಷರದಿಂದ ಶ್ರೀಮಂತರ ಪತ್ರಗಳು ಬರಹತ್ತಿದಂದಿನಿಂದ ಇವರಿಗೆ ಸ್ವಲ್ಪವೂ ಸಮಾಧಾನವುಂಟಾಗಲಿಲ್ಲ. ಅಹೋರಾತ್ರಿಯಲ್ಲಿಯೂ ಶ್ರೀಮಂತರ ಸುದ್ದಿಯನ್ನೇ ತೆಗೆಯುತ್ತಿದ್ದರು. ಅವರ ಕಡೆಯಿಂದ ಪತ್ರ ಬಂದಾಕ್ಷಣವೆ ಏನು ಸುದ್ದಿಯನ್ನು ತಂದಿರುವದೋ ಎಂದು ಗಡಬಡಿಸಿ ಎಲ್ಲಕ್ಕೂ ಮೊದಲು ಅದನ್ನೇ ನೋಡುತ್ತಿದ್ದರು.

ನಿಜವಾದ ಮೈತ್ರಿಯ ಲಕ್ಷಣವೇ ಹೀಗಿದೆ. "ಸಖಾ ಸಪ್ತಪದೀಭವ" ಎಂಬದಾಗಿ ಪಂಡಿತರು ಹೇಳುತ್ತಿರುವದರಿಂದ, ಆರಂಭದಿಂದಲೂ ಪರಮಸ್ನೇಹಿತರಾಗಿದ್ದ ಶ್ರೀಮಂತರ ಕ್ಷೇಮಭಂಗದಿಂದ ರಾವಬಹದ್ದೂರರವರಿಗೆ ಅಸಹ್ಯವಾದ ಅಸಮಾಧಾನವಾಯಿತೆಂಬುದು ಸಹಜವಾಗಿ ತಿಳಿಯುವಂತಿದೆ.

ಶ್ರೀಮಂತರ ಅಂತ್ಯಕಾಲದ ಉದ್ಗಾರ

ಶ್ರೀಮಂತರು ರುಗ್ಣಶಾಯಿಗಳಾದಂದಿನಿಂದಲೂ, ಹುಬ್ಬಳ್ಳಿ, ಧಾರವಾಡ, ಬೆಳಗಾವ, ವಿಜಾಪುರ, ಗದಗ, ಮುಂತಾದ ಕರ್ನಾಟಕದ ಅನೇಕ ಸ್ಥಳಗಳ ದೊಡ್ಡ ದೊಡ್ಡ ಗೃಹಸ್ಥರು ಪದೇ ಪದೇ ಬಂದು ಅವರನ್ನು ಕಂಡುಕೊಂಡು ಧೈರ್ಯಕೊಡುತ್ತಿದ್ದರು. ಆದರೂ ತಮ್ಮ ರೋಗಕ್ಕೆ ನಿವೃತ್ತಿಮುಖವು ಸ್ವಲ್ಪವಾದರೂ ಕಾಣದೆ ಹೋದುದರಿಂದ, ಸತ್ಪಾತ್ರದಲ್ಲಿ ದಾನಮಾಡುವ ತಮ್ಮ ಜನ್ಮಗುಣವನ್ನು ಇವರು ಮತ್ತಿಷ್ಟು ವಿಶೇಷ ಮಾಡುತ್ತ ಬಂದರು. ತಮಗೆ ಪ್ರಿಯತಮನಾಗಿದ್ದ ಏಳುನೂರು (೭೦೦) ರೂಪಾಯಿ ಬೆಲೆಬಾಳುವ ಕುದುರೆಗಳನ್ನು ಅಣ್ಣಿಗೇರಿಯಲ್ಲಿದ್ದಾಗಲೇ ಶ್ರೀ ಮಜ್ಜಗದ್ಗುರು ಚಿತ್ರದುರ್ಗದ ಬೃಹನ್ಮಠದ ಮಹಾಸ್ವಾಮಿಗಳವರ ಪಾದಸೇವೆಗೆ ಸಮರ್ಪಿಸಿದರು. ಈ ಪ್ರಕಾರದ ದಾನಮಾರ್ಗವು ಅವಿರಳವಾಗಿ ನಡೆಯಹತ್ತಿತು. ಶ್ರೀಮಂತರು ಬೆಳಗಾವಿಯನ್ನು ಬಿಡುವಾಗ ಮೊಹರಬಂದ ಲಖೋಟೆಯೊಂದನ್ನು ಮೆ॥ಕಲೆಕ್ಟರ ಸಾಹೇಬ ಬಹದ್ದೂರರವರೂ, ಡಿಸ್ಟ್ರಿಕ್ಟ ರಜಿಸ್ಟ್ರಾರರೂ ಆದ ಜಿಲ್ಲಾಧಿಪತಿಗಳ (ಸರಕಾರದ) ಸ್ವಾಧೀನ ಮಾಡಿದ್ದರೆಂದು ಹಿಂದೆ ಹೇಳಿರುತ್ತವೆ. ಅದರಲ್ಲಿ ಅವರ ಮೃತ್ಯುಪತ್ರವಿತ್ತಲ್ಲದೆ ಎರಡನೆಯದೇನು ಇದ್ದಿಲ್ಲ. ಪುನಃ ತಾರೀಖು ೧೩ನೇ ಅಗಷ್ಟ ಸನ್ ೧೯೦೬ನೇ ಇಸವಿಯ ದಿವಸ ಮತ್ತೊಂದು ಪತ್ರಿಕೆಯನ್ನು ಮೊದಲಿನ ಮೃತ್ಯುಪತ್ರಕ್ಕೆ ಉಪಪತ್ರಿಕೆಯಾಗಿ ಬರೆಯಿಸಿ, ಸ್ವಹಸ್ತಾಕ್ಷರ ಸಹಿಯನ್ನು ಹಾಕಿ ತಮ್ಮ ಬೊಕ್ಕಸಗಳಿಗೆಲ್ಲ ಬೀಗಮುದ್ರೆಗಳನ್ನು ಜಡಿಸಿ ಅವುಗಳನ್ನೆಲ್ಲ ತಮ್ಮ ವಿಶ್ವಾಸಿಕರಾದ ಸರಕಾರೀ ಅಧಿಕಾರಿಗಳ ವಶಕ್ಕೆ ಒಪ್ಪಿಸಿ "ಇನ್ನು ಮೇಲೆ ನಾನು ನಿಶ್ಚಿಂತನಾದೆನು; ನಾನು ಈ ಜನ್ಮದಲ್ಲಿ ಮಾಡಬೇಕಾಗಿದ್ದ ಕರ್ತವ್ಯವನ್ನು ಮಾಡಿಬಿಟ್ಟೆನು;ಇನ್ನು ನನಗೆ ಪೃಥ್ವಿಯ ಮೇಲಿನ ಯಾವ ಸುಖಲಾಭೇಚ್ಛೆಯೂ ಇಲ್ಲ; ಭಕ್ತವತ್ಸಲನಾದ ಪರಮಾತ್ಮನ ಸಾಮೀಪ್ಯವೊಂದೇ ನನಗೆ ಸಾಕು. "ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ" ಎಂಬಂತೆ ಇನ್ನು ಬೇಕಾದಾಗ ಪ್ರಾಣವು ಗತಿಸಲಿ! ನಾನು ಇನ್ನೂ ಕೆಲಕಾಲ ಲೋಕದಲ್ಲಿರಬೇಕಾದದ್ದು ಶಿವಸಂಕಲ್ಪವಾಗಿದ್ದರೆ ಮಾತ್ರ ನನ್ನ ಯತ್ನವಿಲ್ಲ; ಆಗ್ಗೆ ಪ್ರತಿಯೊಂದು ನಿಮಿಷವನ್ನು ನಮ್ಮ ಪವಿತ್ರವಾದ ಮತದ ಪುರೋವೃದ್ಧಿಗಾಗಿ ವಿನಿಯೋಗಿಸುವೆನೇ ಹೊರತು ಬೇರೊಂದು ಕಾರ್ಯವು ನನಗೆ ಸೇರುವಂತಿಲ್ಲ; ಸಂಸ್ಥಾನದ ಉತ್ಪತ್ತಿಯನ್ನು ಇನ್ನೂ ಹೆಚ್ಚಿಸಿ ಅದೆಲ್ಲವನ್ನು ಲಿಂಗಾಯತ ಫಂಡಿಗೆ ಕೊಡಿಸುತ್ತೇನೆ. ದೈವೇಚ್ಛೆಯಿಂದ ನನಗೆ ಪುತ್ರರಿಲ್ಲದಿದ್ದರೂ ದತ್ತಪುತ್ರನನ್ನು ಮಾತ್ರ ನಾನು ಮಾಡಿಕೊಳ್ಳುವದಿಲ್ಲ, ಒಬ್ಬ ಮಗನನ್ನು ದತ್ತಕ ಮಾಡಿಕೊಳ್ಳುವದಕ್ಕಿಂತ ನಮ್ಮ ಸಂಸ್ಥಾನದ ಹಣದ ಸಹಾಯದಿಂದ ವೀರಶೈವರು ವಿದ್ಯಾವಂತರಾದರೆ ಅವರೆಲ್ಲರು ಕೃತಜ್ಞರಾಗಿ ಈ ಸಂಸ್ಥಾನದ ಹೆಸರನ್ನೇ ಹೇಳುತ್ತಾರಾದ ಕಾರಣ"ಉದಾರ ಚರಿತಾನಾಮ್ ವಸುಧೈವ ಕುಟುಂಬಕಮ್" ಎಂಬ ಕವ್ಯುಕ್ತಿಯಂತೆ ಅವರೆಲ್ಲರನ್ನು ಮಕ್ಕಳೆಂದು ತಿಳಿಯುವದರಲ್ಲಿ ಅಭ್ಯಂತರವಿಲ್ಲ. ಒಂದು ವೇಳೆ ನಾನು ಜೀವಿಸಿ ಮುಂದೆ ನನಗೆ ಪುತ್ರಸಂತಾನವಾದರೆ ಆ ಮಗನು ಪ್ರಾಪ್ತವಯಸ್ಕನಾಗುವ ಅವಧಿಯ ವರೆಗೂ, ಅಂದರೆ ೨೦ ವರ್ಷದ ವಯಸ್ಸಿನವರೆಗೂ ಆದ ಸಂಸ್ಥಾನದ ಉತ್ಪನ್ನವನ್ನು, ಫಂಡಿಗೆ ಕೊಡಿಸುತ್ತ, ಮನೆ ಮಂದಿರ, ದನಕರು, ಭೂಮಿಸೀಮೆಗಳನ್ನು ಮಾತ್ರ ಪುತ್ರನಿಗೆ ಬಿಟ್ಟುಕೊಡತಕ್ಕದ್ದೆಂದು ತಮ್ಮ ನಂಬಿಗಸ್ತರಾದ ಆಪ್ತೇಷ್ಟರ ಮುಂದೆ ಹೇಳುತ್ತಿದ್ದರು.

ಶ್ರೀಮಂತರು ಶಿವಾಧೀನರಾದದ್ದು

ಮುಂದೆ ದಿನದಿನಕ್ಕೆ ಬೇನೆಯು ಬಲಿಯುತ್ತ ನಡೆಯಲು, ಸ್ಮೃತಿಯು ಇನ್ನೂ ಪೂರ್ಣವಾಗಿ ಇರುವಾಗಲೇ ರಾ.ಬ॥ಅರಟಾಳ ಸಾಹೇಬರವರಿಗೆ ತಮ್ಮ ಅಂತರಂಗವನ್ನು ತಿಳಿಸಬೇಕೆಂದು ಅವರ ದರ್ಶನವನ್ನಿಚ್ಛಿಸಿ ಬೆಳಗಾವಿಗೆ ತಾರು ಮಾಡಿಸಿದರು. ತಾರು ನೋಡಿ ತಳಮಳಿಸಿ ತಡಮಾಡದೆ ಹೊರಟು ರಾ.ಬ॥ರವರು ಶ್ರೀಮಂತರನ್ನು ಕಂಡುಕೊಂಡರು. ಮಿತ್ರ ಮುಖಾವಲೋಕನ ಮಾತ್ರದಿಂದ ಶ್ರೀಮಂತರು ತಮ್ಮ ಅಪೇಕ್ಷೆಯು ಪರಿಪೂರ್ಣವಾಯಿತೆಂದು ತಿಳಿಸಿದರು. ಆ ಬಳಿಕ ಅವರೊಡನೆ ಹೆಚ್ಚು ಮಾತನಾಡುವದಕ್ಕಾಗಲಿಲ್ಲ. ಆದರೆ ಸಂಸ್ಥಾನದ ಉತ್ಪತ್ತಿಯೆಲ್ಲ ಲಿಂಗಾಯತ ಎಜ್ಯುಕೇಶನ್ ಫಂಡಿಗೆ ಕೂಡಿಸಲ್ಪಡಬೇಕೆಂತಲೂ, ಅದಕ್ಕಾಗಿ ನಿಮ್ಮನ್ನೇ ಮೊದಲು ಮಾಡಿ ಇಂತಿಂತಹ ಸದ್ಗೃಹಸ್ಥರು ಅದರ ಕಾರ್ಯಕರ್ತರಾಗಿರಬೇಕೆಂತಲೂ, ತಾವು ಬರೆದು ಸರಕಾರದಲ್ಲಿಟ್ಟ ಮೃತ್ಯುಪತ್ರದ ಅಭಿಪ್ರಾಯವನ್ನಷ್ಟು ಮಾತ್ರ ಅವರಿಗೆ ತಿಳಿಸಿದರು. ಹೀಗೆ ಮಾಡುವದು ನ್ಯಾಯ ಸಮ್ಮತವಲ್ಲವೆಂತಲೂ, ಲೌಕಿಕಕ್ಕೆ ವಿರುದ್ಧವಾಗುವದೆಂತಲೂ, ಸಂಸ್ಥಾನದ ಹೆಸರನ್ನು ಉಳಿಸಿ ಫಂಡಿಗೂ ತಕ್ಕಷ್ಟು ಸಹಾಯ ಮಾಡುವಂತೆ ವ್ಯವಸ್ಥೆ ಮಾಡುವದಕ್ಕೆ ಬೇರೊಂದು ಶಾಸನವನ್ನು ಈಗಿಂದೀಗ ಬರೆಯಿಸಬೇಕೆಂತಲೂ ರಾ.ಬ॥ರವರು ಎಷ್ಟು ಬಗೆಯಾಗಿ ಹೇಳಿಕೊಂಡರೂ ಶ್ರೀಮಂತರು ಅದನ್ನು ಕೇಳದೆ "ನನ್ನ ಸಂಕಲ್ಪಕ್ಕೆ ಯಾರೂ ಅಡ್ಡಿಯನ್ನು ಮಾಡಕೂಡದು, ನನ್ನ ನಂತರ ನನ್ನ ಧರ್ಮಸಂಕಲ್ಪವನ್ನು ಕಾಪಾಡುವದು ಸರಕಾರದವರಿಗೆ ಹಾಗೂ ನಿಮಗೆ ಕರ್ತವ್ಯವಾಗಿದೆ; ಮಿತ್ರರಾದ ನೀವು ಯಾವದಕ್ಕೂ ಅಡ್ಡ ಬರಬಾರದು; ಬಹು ದಿವಸದಿಂದಲೂ ಬೇರೂರಿದ್ದ ನನ್ನ ದೃಢಸಂಕಲ್ಪವೇ ಹಾಗಿದೆ." ಎಂದು ನಿಷ್ಠುರವಾಗಿ ಹೇಳಿಬಿಟ್ಟಿದ್ದಲ್ಲದೆ, ತಮ್ಮ ಪರಿವಾರದವರನ್ನು ಕುರಿತು "ನನ್ನ ಬಳಿಯಲ್ಲಿ ಯಾರೊಬ್ಬರೂ ದುಃಖಿಸಕೂಡದು. ನನ್ನ ಹಿತಚಿಂತನೆಯು ನಿಮಗೆ ಬೇಕಿದ್ದರೆ, ನಿಮ್ಮ ಅಳುವ ಕೂಗು, ನನ್ನ ಕಿವಿಗೆ ಬೀಳಗೊಳಿಸದಂತೆ ಎಚ್ಚರದಿಂದಿರಬೇಕು. ನಿಮ್ಮೆಲ್ಲರ ಆರ್ತರವವು ನನಗೆ ಮತ್ತಷ್ಟು ಅಸಮಾಧಾನವನ್ನುಂಟು ಮಾಡುವದು. ಅಳಬೇಡಿರಿ! ಅಳಬೇಡಿರಿ!! ಅಷ್ಟು ಮಾತ್ರ ಮಾಡಿದರೆ ಉಪಕರಿಸಿದಂತಾಗುವದು" ಎಂದು ಹೇಳಿ ತಮ್ಮ ಅವಸಾನದ ವರೆಗೂ ಯಾರಿಗೂ ಅಳಲು ಅವಕಾಶಕೊಡಲಿಲ್ಲ; ರಾವಬಹದ್ದೂರವರು ಬಂದ ಮರುದಿವಸದ ವರೆಗೂ ಅಂದರೆ ಮಂಗಳವಾರ ಮುಂಜಾನೆ ೮ ಘಂಟೆಯ ವರೆಗೂ ಇವೇ ಮಾತುಗಳೇ ಹೊರತಾಗಿ ಬೇರೆ ಮಾತುಗಳೇ ಇದ್ದಿಲ್ಲ. ಯಾವತ್ತು ಆಪ್ತೇಷ್ಟರೆಂಬುವ ನಂಬಿಗಸ್ತರು ಎಷ್ಟು ಪರಿಯಿಂದ ಹೇಳುವ ಯಾವ ಮಾತನ್ನೂ ಕೇಳದೆ ತಮ್ಮ ದೃಢ ಸಂಕಲ್ಪವನ್ನೇ ಸಾಧಿಸಿದರು. ಕಡೆಗೆ ರಾ.ಬ॥ರುದ್ರಗೌಡರ ಕೈಹಿಡಿದು ಕಂಬನಿಗಳಿಂದೊಡಗೂಡಿದ ಸಕರುಣ ದೃಷ್ಟಿಯಿಂದ ಅವರನ್ನು ಕಣ್ತುಂಬ ನೋಡಿ "ಪರಮ ಮಿತ್ರರೇ!ಲಿಂಗಾಯತರ ಕಡೆಗೆ ಲಕ್ಷವಿರಲಿ" ಎಂದು ಮಾತ್ರ ಹೇಳಿ, ಬುಧವಾರ ದಿವಸವೊಂದನ್ನು ಕಳೆದು ತಾರೀಖು ೨೩ನೇ ಮಾಹೆ ಅಗಷ್ಟ ಸನ್ ೧೯೦೬ನೇ ಇಸವಿಯ ಗುರುವಾರ ಗಣೇಶ ಚತುರ್ಥಿಯ ಹಬ್ಬದ ದಿವಸ ಬೆಳಗಿನ ೯ ಘಂಟೆಯ ಸುಮಾರಕ್ಕೆ ಸಂಸ್ಥಾನ ನವಲಗುಂದದ ಹಳೇವಾಡೆಯ ಮೇಲಂತಸ್ತಿನಲ್ಲಿ 'ಶಿವಾ'ಎಂದು ಶಿವೈಕ್ಯರಾದರು.

ಅಳಲ್ಗಡಲು

ಪ್ರಾಣಪಕ್ಷಿಯು ಹೃತ್ಪಂಜರದೊಳಗಿಂದ ಹಾರಿ ಹೋದಾಕ್ಷಣವೇ ಸಕಲಪರಿವಾರದವರೂ ರಾ.ಬ॥ರುದ್ರಗೌಡರೇ ಮೊದಲಾದ ಮುಖ್ಯ ಮುಖ್ಯ ಪ್ರಭೃತಿಗಳೂ ಪುರಜನರೂ ಗೋಳಿಟ್ಟು ಅಳುವದಾಯಿತು. ಮರಣಹೊಂದಿದ ಒಂದೇ ಒಂದು ದಿವಸದೊಳಗೆ ಈ ಅನಿಷ್ಟವಾರ್ತೆಯು ಹಬ್ಬಿ ಇಡೀ ಕರ್ನಾಟಕದಲ್ಲಿ ಹಾಹಾಕಾರವಾಯಿತು. ವೀರಶೈವರ ಆಕ್ರೋಶವನ್ನು ಆಕಾಶವು ಸಹಿತ ಹಿಡಿಯದಾಯಿತು. ವಾರ್ತಾಪತ್ರಿಕೆಗಳು

ವಾಚಕವೃಂದವನ್ನು ಒತ್ತೊತ್ತಿ ಅಳಿಸುವವಾದವು. ವೀರಶೈವ ಜನಾಂಗದ ಮನೋರಥ ಕಲಶವೇ ಕಳಚಿಬಿದ್ದಂತಾಯಿತು. ಪಕ್ವಾವಸ್ಥೆಗೆ ಬಂದಿದ್ದ ವೀರಶೈವ ವಿದ್ಯಾವೃಕ್ಷದ ಶಾಖೆಗಳನ್ನೆಲ್ಲ ನಟ್ಟನಡುವೇ ಕಟ್ಟನೆ ಕಡಿದು ಕೆಡವಿದಂತಾಯಿತು. ಈ ಪುಣ್ಯಾತ್ಮರ ನಿಯೋಗದಿಂದ ವೀರಶೈವ ಮಂಡಳಿಗೆಲ್ಲ ಆದ ನಷ್ಟವನ್ನೂ, ತನ್ಮೂಲಕ ಉಂಟಾದ ಅಸಹ್ಯವಾದ ಪರಿತಾಪವನ್ನೂ ವರ್ಣಿಸಲಿಕ್ಕೆ ಯೋಗ್ಯವಾದ ಶಬ್ದಗಳೇ ಸಿಗದಂತಾದವು.

ಮತ್ತೇಭವಿಕ್ರೀಡಿತ ವೃತ್ತಂ

ಅಹಹಾ! ಬಿಳ್ದುದೆ, ವೀರಶೈವ ಮುಕುಟಂ ವೀರಧ್ವಜಂ ಭೂಭುಜಂ।
ಅಹಹಾ! ಕೀಳ್ದುದೆ, ಕಾಲಚಕ್ರಹತಿಯಿಂ ವಿದ್ಯಾವ್ರಜಂ ಭೂಮಿಜಂ॥
ಅಹಹಾ! ಏಳ್ದುದೆ, ಶೋಕವಹ್ನಿ ಭುಗಿಲೆಂದತ್ಯುಗ್ರದಿಂ ಶೀಘ್ರದಿಂ।
ಅಹಹಾ! ಸನ್ನುತ ಲಿಂಗರಾಜಮೃತಿಯಿಂ ದೈವೀಬಲೀ ದುರ್ಬಲೀ ॥೧॥

ವಸಂತತಿಲಕ ವೃತ್ತಂ

ಶ್ರೀವೀರಶೈವಮತ ವಿಸೃತ ವಾರ್ಧಿಚಂದ್ರಂ।
ಶ್ರೀವೇಷ್ಟಿತಂ ನೃಪವರಂ ಪ್ರಭು ಲಿಂಗರಾಜಂ ॥
ದೇವೇಶನಂಘ್ರಿಯುಗಮಂ ಸಾರಲ್ಕೆ ಹಾಹಾ।
ಏವೇಳ್ವುದಕ್ಕಟ ಮಹತ್ತರಮಾಯ್ತು ಕ್ಲೇಶಂ ॥೨॥

ಉತ್ಪಲಮಾಲಾ ವೃತ್ತಂ

ಸಜ್ಜನ ಚಕ್ರಮಾದತರ್ಪಳಲಿಂ ಬಗೆಗುಂದೆ ವಿಶ್ವ ವಿ-।
ದ್ವಜ್ಜನ ಮಾನಸಾಬ್ಜಮಿರದೈದೆ ತನುತ್ವಮನೇಣಲಕ್ಷ್ಮಬೃದ್।
ಭೃಜ್ಜನದಂತರಾತ್ಮನಭದೊಳ್ ಘನಶೋಕ ತಮಂ ಮುಸುಂಕೆ ಭೂ।
ಭೃಜ್ಜನವರ್ಯ ಲಿಂಗರವಿಯಸ್ತಮನೈದಿದನಾಹ! ಲೋಕದೊಳ್ ॥೩॥

ಚಂಪಕಮಾಲಾ ವೃತ್ತಂ

ಹರಹರ!ವೀರಶೈವ ಜನಹೃನ್ನಳಿನೀ ರವಿಯಸ್ತವಾದನೇ।
ಹರಹರ!ವೀರಶೈವಮತ ವಾರಿಧಿಚಂದ್ರಮನಿಲ್ಲದಾದನೇ॥
ಹರಹರ!ವೀರಶೈವ ಸಮುದಾಯ ರಥೋತ್ಕಲಶಂ ಕಳಲ್ಚಿತೇ।
ಹರಹರ! ಸತ್ವರಂ ಮಡಿದನೇ? ಶಿರಸಂಗಿಯ ಲಿಂಗಭೂವರಂ ॥೪॥

ಮಲ್ಲಿಕಾಮಾಲಾ ವೃತ್ತಂ

ಹಾ!ಮಹೇಶ್ವರಭಕ್ತಜಾಲ ವಿಭೂತಿಯೇ ಬಯಲಾದೆಯಾ।
ಹಾ!ಮಹೇಶ್ವರಭಕ್ತಕಲ್ಪಮಹೀಜವೇ ಮುರಿವೋದೆಯಾ॥
ಹಾ! ಮಹೇಶ್ವರಭಕ್ತ ನಿರ್ಜರರತ್ನವೇ ಒಡೆದ್ಯೆದೆಯಾ।
ಹಾ! ಮಹಾ ಶಿರಸಂಗಿ ಭೂವರ ನಮ್ಮನಿಂದಗದಲ್ಚೆದೆಯಾ॥೫॥

ಮತ್ತೇಭವಿಕ್ರೀಡಿತ ವೃತ್ತಂ

ರವಿ ತಾನಸ್ತಮನೈದೆ ಭೂತತ ತಮಃ ಸಂಹಾರಮಂ ಗೆಯ್ಯುತಂ ।
ಧವಳಾಭಂ ಜನಮಾನಸೋತ್ಸವಕರಂ ಪೂರ್ವಾಶೆಯೊಳ್ ತೋರ್ಪವೊಲ್॥
ಭವಭಕ್ತಾಳಿ ಕಲಾಸುಧಾರಸಮನೀಂಟಲ್ಕೆಂದು ಬಹ್ವರ್ಥಮಂ।
ತವೆನೀಡಿರ್ಪ ತದೀಯ ಸದ್ಗುಣಯಶಶ್ಚಂದ್ರಂ ಕರಂ ರಂಜಿಕುಂ॥೬॥

ಕಂದ

ಗುರು ಚರ ಲಿಂಗಾರ್ಚನೆಯಂ। ಪರತರ ಸದ್ಭಕ್ತಿಯಿಂ ಸದಾ ರಚಿಸುತ್ತಂ॥
ಹರಸಮಯ ಸುಧಾಂಬುಧಿ ಚಂ।ದಿರನೆಂದೆನಿಸಿರ್ದ ಲಿಂಗಭೂಪನೆ ಧನ್ಯಂ॥೭॥

ಅವನುಜ್ವಲ ಗುಣತತಿಯುಂ।ಶಿವಭಕ್ತಿ ಸುಶೀಲ ಶುದ್ಧ ಚೇತೋಮತಿಯುಂ।
ಶಿವಮತಹಿತ ಚಿಂತನೆಯುಂ। ಸವೆಯದ ಸೌಖ್ಯಮನವಂಗೆ ತಾವೇ ಕುಡುಗಂ ॥೮॥

ಮೆರೆವ ಪರಾಭವ ಸಂವ।ತ್ಸರ ಭಾದ್ರದ ಶುಕ್ಲ ಚೌ ಗುರುವಾಸರದೊಳ್ ॥
ಸಿರಸಂಗಿ ಲಿಂಗಭೂಪಂ।ಧರೆಯಂ ಬಿಟ್ಟರರೆ! ಶಿವನ ಪುರಮಂ ಸಾರ್ದಂ॥೯॥

ಒಡಲೊಂದಿದ ಜೀವರ್ಕಳ್।ನುಡಿಪುದು ನಿಜಮೈಸೆ ಕಡೆಗೆ, ತನ್ನಯ ಮೃತಿಯೊಳ್॥
ಮೃಡಭಕ್ತರ ಹಿತಮಂ ಸಲೆ। ನಡೆಪಿದ ಸಿರಸಂಗಿ ಭೂವರಂ ತಾನಮರಂ ॥೧೦॥

ಶಾರ್ದೂಲವಿಕ್ರೀಡಿತ ವೃತ್ತಂ

ಲಿಂಗಾಖ್ಯಃ ಸಿರಸಂಗಿಪಃ ಪರಮಸೌ ಲಿಂಗಾಭಿಮಾನೀ ಸದಾ।
ಗಾಯಂತ್ಯಸ್ಯ ಗುಣಾನುರಾಗಪರತಾಂ ವಿದ್ಯಾವಿಶಿಷ್ಟಾ ಜನಾಃ॥
ಖ್ಯಾತಿಸ್ತಸ್ಯ ಸುವೀರಶೈವಮುಖರೈರ್ವಿಸ್ತಾರಿತಾ ಸ್ಯಾದತೋ।
ಯಸ್ಯ ತ್ಯಾಗವಶಾದ್ಭವೇತ್ಸುಚರಿತಸ್ತೇಷಾಂ ಸಮೂಹೋ ಮಹಾನ್॥೧॥

ನಶ್ಯಂತ್ಯೇ ವ ಹಿ ಯಸ್ಯ ಶತ್ರುನಿಕರಾಃ ಸೌಮ್ಯಾನ ಸಂವಾದಿತಾಃ।
ಮೋದಂತೇ ಚ ಜನಾಸ್ತು ಯದ್ಗುಣಗಣೈಸ್ಸಂ ಯೋಜಿತಾಃ ಸರ್ವದಾ॥
ನ ಧ್ಯಾತಂ ಹಿ ಮಹಾತ್ಮನೋಭ್ಯುಗಮನಂ ದುಃಖೌಘಸಂಪ್ರಾಪ್ತಿಷು ।
ಮೋಹೇನಾಸ್ಮಿ ಕಥಂ ಭವೇತ್ತದತಿವಿಖ್ಯಾತೇರ್ಮಹದ್ದರ್ಶನಂ ॥೨॥[೧]

೧.ಇವೆರಡು ಸಂಸ್ಕೃತ ಶ್ಲೋಕಗಳಲ್ಲಿಯ ಪ್ರತಿಚರಣಗಳ ಆದ್ಯಕ್ಷರಗಳನ್ನು ಕೂಡಿಸಿದರೆ "ಲಿಂಗಾಖ್ಯಾಯ ನಮೋ ನಮೋ" ಎಂಬ ವಚನವು ಸಿದ್ಧಿಸುವದು.

ಈ ಬಗೆಯಾಗಿ ನಾನಾ ತೆರದಿಂದ ಕವಿಕುಲವು ಕೈಲಾಸವಾಸಿಯಾದ ಶ್ರೀಮಂತ ಲಿಂಗಪ್ಪ ಸರದೇಸಾಯಿಯವರನ್ನು ಕೂಗಿ ಕರೆದುಕೊಳ್ಳುವದಾಯಿತು. ಸಾರಾಂಶ, ಸರದೇಸಾಯಿಯವರ ಸಮಾಪ್ತಿಯಿಂದ ಸಮಸ್ತ ವೀರಶೈವ ಮನೋರಾಜ್ಯವೆಲ್ಲ ಹಾಳಾಗಿ ಹೋಯಿತೆಂದು ಹೇಳಬಹುದು.

ಶಿವೈಕ್ಯರಾದ ಈ ಮಹಾನುಭಾವರ ಲಿಂಗಶರೀರವನ್ನು ಅಲಂಕೃತವಾದ ಪಲ್ಲಕ್ಕಿಯಲ್ಲಿಟ್ಟು ಅವರ ಹಿರಿಯರ ಸಮಾಧಿಗಳುಳ್ಳ ರುದ್ರಭೂಮಿಗೆ ಒಯ್ದು ಶ್ರೀ ಕ್ರಿಯಾಸಮಾಧಿಯನ್ನು ಸಾಂಗವಾಗಿ ರಚಿಸಿ, ದಫನಕ್ರಿಯೆಯನ್ನು ಮಾಡಿದರು. ಶ್ರೀಮಂತರು ಮುಂದಾಗಿಯೇ ಹೇಳಿಟ್ಟಂತೆ ಆ ದಿನ, ಜಂಗಮರಿಗೂ, ಬಡವರಿಗೂ, ಅನಾಥರಿಗೂ, ಭಿಕ್ಷುಕರಿಗೂ, ವಸ್ತ್ರ ಪಾತ್ರೆ ಧನಾದಿ ನಾನಾ ವಸ್ತು ದಾನವು ಬಹು ಉದಾರವಾಗಿ ಮಾಡಲ್ಪಟ್ಟಿತು. ಅದೊಂದು ದಿನದ ವೆಚ್ಚವೇ ಎರಡುಸಾವಿರ ರೂಪಾಯಿಗಳಿಗೆ ಕಡಿಮೆಯಾಗಿರಲಾರದು. ಆ ದಿನದ ಉತ್ತರ ಕ್ರಿಯೆಗಳೆಲ್ಲ ರಾತ್ರಿ ೮ ಘಂಟೆಗೆ ಮುಗಿದವು. ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪನವರಂತೆ ಶ್ರೀಮಂತ ಸರದೇಸಾಯಿಯವರ ಸ್ಮಶಾನಯಾತ್ರೆಯಾದರೂ ಬಹು ದೊಡ್ಡದಾಗಿತ್ತು. ಶ್ರೀಮಂತರ ಮುಖಮಂಡಲವು ಮುಳುಗಿ ಹೋಯಿತೆಂತಲೂ, ಇನ್ನು ಮೇಲೆ ಇವರ ಭಾವಚಿತ್ರವೇ ಮಹದ್ದರ್ಶನವಾಯಿತೆಂತಲೂ, ಸರ್ವರು ತಮ್ಮ ಕಣ್ಣೀರುಗಳಿಂದ ದಾರಿಯನ್ನು ತೊಯಿಸುತ್ತ ತಮ್ಮ ತಮ್ಮ ಸ್ಥಳಗಳಿಗೆ ತೆರಳುವವರಾದರು. ಸಮಸ್ತ ವೀರಶೈವರಿಗೂ ಈ ಮೇರೆಗೆ ಪರಮಾವಧಿ ದುಃಖ ವಾಗಿರುವಾಗ ಅವರ ರಾಣಿಯವರಾದ ಚಿಕ್ಕಪ್ರಾಯದ ಸುಂದರಾಬಾಯಿಯವರಿಗೆ ಆದ ದುಃಖರಾಶಿಯನ್ನು ವರ್ಣನೆ ಮಾಡುವದು ಆದಿಶೇಷನಿಗೂ ಕೂಡ ಅಸಾಧ್ಯವಾದದ್ದು. ದುಃಖಮೇರುವು ಅವರನ್ನು ಸುತ್ತುಗಟ್ಟಿದಂತಾಯಿತು. ಅವರ ಮೇಲೆ ಅಳಲೆಂಬ ಆಕಾಶವೇ ಹರಕೊಂಡು ಬಿದ್ದಂತಾಯಿತು. ಅವರು ಅಪಾರವಾದ ದುಃಖಾಂಬುಧಿಯಲ್ಲಿ ಮುಳುಗಿ ಹೋದರು. ಶೋಕಮಯ ವಿಶ್ವದಲ್ಲಿ ಮುಚ್ಚಿಹೋದರು. ದೈವಸಂಕಲ್ಪಕ್ಕೆ ನಿರುಪಾಯವೇ ಸರಿ.

ದುಃಖಾಂಬುಧಿಯ ದಡವನ್ನು ಕಾಣದೆ ಸುಂದರಾಬಾಯಿಯವರು ಪ್ರಲಾಪಿಸುತ್ತಿರುವದನ್ನು ಕಂಡು ರಾ.ಬ॥ರುದ್ರಗೌಡರೇ ಮೊದಲಾದ ಶ್ರೀಮಂತರ ಸ್ನೇಹಿತರು ಅವರನ್ನು ಕುರಿತು "ಬಾಯಿಯವರೇ! ನೀವು ಇನ್ನು ಮೇಲೆ ವೃಥಾಪ್ರಲಾಪಿಸಬೇಡಿರಿ" "ಮರಣಂ ಪ್ರಕೃತಿಃ ಶರೀರಿಣಾಂ" ಎಂಬಂತೆ ಹುಟ್ಟಿದ ಮನುಷ್ಯನಿಗೆ ಸಾವು ಎಂದೂ ತಪ್ಪದು. ಈ ನಮ್ಮ ಕಣ್ಣು ಮುಂದಿರುವ ವಸುಂಧರೆಯು ಅನೇಕಾನೇಕ ಪೃಥ್ವೀಪತಿಗಳನ್ನು ಕಳಕೊಂಡು ನಿಶ್ಚಲವಾಗಿ ನಿಂತಿರುತ್ತದೆ. ನಿರ್ದಯವಾದ ಕಾಲವು ಶಾಶ್ವತವಾದ ಶಿಲೆಗಳನ್ನು ಸಹ ನಾಶಪಡಿಸುತ್ತದೆ. ಅಂದಮೇಲೆ ಕ್ಷಣಕ್ಷಣಕ್ಕೆ ಸವೆದು ಹೋಗುತ್ತಿರುವ ನರದೇಹಿಗಳಾದ ನಮ್ಮ ಪಾಡೇನು! ಕ್ಷಣದಲ್ಲಿ ತೋರಿ ಕ್ಷಣದಲ್ಲಿ ಅಡಗುವ ನೀರ ಮೇಲಣ ಗುಳ್ಳೆಗಳಂತೆ ಈ ಶರೀರವು ಅಸ್ಥಿರವಾಗಿರುತ್ತದೆ. ಈ ಪೃಥ್ವೀಪಟಲದ ಮೇಲೆ ಅವಿನಾಶವಾದ ವಸ್ತುಗಳೇ ಸಿಕ್ಕುವದಿಲ್ಲ. ನಮಗೆ ಶಾಶ್ವತವೆಂದು ಕಂಡುಬರುವ ಪದಾರ್ಥಗಳೆಲ್ಲ ನಿಜವಾಗಿ ಅಶಾಶ್ವತವಾಗಿಯೇ ಇರುತ್ತವೆ. ಈಗ ನಿಶ್ಚಲವಾಗಿ ನಿಂತುಕೊಂಡಿರುವ ಈ ಪೃಥ್ವಿಯಾದರೂ ಪ್ರಳಯಕಾಲದಲ್ಲಿ ಲಯವಾಗಿ ಹೋಗುತ್ತದೆ. ಪ್ರಾಚೀನಕಾಲದಲ್ಲಿ ಸಾರ್ವಭೌಮರಾದ ಹರಿಶ್ಚಂದ್ರ, ರಾಮಚಂದ್ರ, ನಳ, ನಹುಷ, ಭರತ, ಪಾಂಡವಾದಿ ರಾಜ ರಾಜರುಗಳೂ ಮತ್ತು ಅವರವರ ರಾಣಿಯರೂ ಕೂಡ ಪ್ರಾರಬ್ಧಾನುಸಾರವಾಗಿ ಸುಖದುಃಖ ಗಳನ್ನನುಭೋಗಿಸಿ ಕಡೆಗೆ ಲೋಕಾಂತರವನ್ನೈದಿದ ಸಂಗತಿಗಳು ನಿಮಗಾದರೂ ಗೊತ್ತಿರುವವು. ಸಾವು ಅರಸನಿಗೂ ತಪ್ಪಿಲ್ಲ; ತಿರುಕನಿಗೂ ತಪ್ಪಿಲ್ಲ. ಜನನಹೊಂದಿದ ಪ್ರಾಣಿಗಳು ಮರಣ ಹೊಂದಲಿಕ್ಕೇಬೇಕು. ಸೃಷ್ಟಿಯೊಳಗಿನ ಸಚೇತನಾಚೇತನಾತ್ಮಕವಾದ ಸಮಸ್ತ ವಸ್ತುಗಳಿಗೂ ಉತ್ಪತ್ತಿ, ಸ್ಥಿತಿ ಲಯಗಳು ಇದ್ದೇ ಇರುವವು. ಪಿಂಡೋತ್ಪತ್ತಿಯಾದ ಕೂಡಲೆ ಪ್ರಾರಬ್ಧವು ರೇಖಿಸಿಯೇ ಇರುವದು. ಮಹಾಸಾಗರದಲ್ಲಿ ಮಹಾಮೇರುವು ತೇಲಾಡಿದರೂ ಆ ಪ್ರಾರಬ್ಧದಲ್ಲಿ ಅಭ್ಯಂತರವಾಗದು.

ಪ್ರಾರಬ್ಧ ತುರಗವನ್ನು ಯಾರಿಂದಲೂ ಹಿಡಿಯಲಾಗದು. ಬಂದದ್ದನ್ನು ಭೋಗಿಸುವದು ಮಾನವ ಪ್ರಾಣಿಯ ಕರ್ತವ್ಯವಾಗಿರುತ್ತದೆ. ರಾತ್ರಿಯ ಕಾಲದಲ್ಲಿ ಒಂದು ಗಿಡದ ಮೇಲೆ ವಸತಿಯಾಗಿದ್ದ ಪಕ್ಷಿಗಳು ಬೆಳಗಾಗುತ್ತಲೇ ಒಂದೊಂದೇ ಹಾರಿ ಹೋಗುತ್ತಿರುವಂತೆ ಈ ಪ್ರಪಂಚದ ಆಟವಿರುತ್ತದೆ. ಈ ನಿಃಸಾರವಾದ ಸಂಸಾರವು ಮೂರು ದಿನದ ಸಂತೆಯೋಪಾದಿ ಇರುತ್ತದೆಂದು ಸಾಧುಸರ್ವಸ್ವರು ಹೇಳುವ ಮಾತೇನು ಸುಳ್ಳಲ್ಲ. ವಿಚಾರಮಾಡಿ ನೋಡಿದರೆ ಬಗೆ ಬಗೆಯ ಸೊಬಗಿನಿಂದ ಚಂದದೋರುವ ಈ ಜಗತ್ತೆಲ್ಲ ಮಿಥ್ಯವಿರುತ್ತದೆ. ಜಗನ್ನಿಯಮಾನುಸಾರವಾಗಿ ಭೂಪಟಲದ ಮೇಲೆ ಉದಯವಾಗುವ ಪ್ರಾಣಿಗಳು ಒಂದು ದಿನ ಹುಟ್ಟಿ, ಒಂದು ದಿನ ಬೆಳೆದು, ಮರುದಿನ ಜಗತ್ಕರ್ತನ ಪಾದಸನ್ನಿಧಿಯನ್ನು ಹೊಂದತಕ್ಕದ್ದೇ. ಭಗವತ್ಸಂಕಲ್ಪವನ್ನು ಯಾರೂ ದಾಟರು. ಎಣ್ಣೆ ಇರುವ ವರೆಗೆ ದೀಪವು ನುಣ್ಣಾಗಿ ಉರಿಯುವಂತೆ ಪುಣ್ಯವಿರುವವರೆಗೆ ಪ್ರಾಣಿಗಳು ಬದುಕಿದ್ದು ನಲಿದಾಡುತ್ತವೆ. ಋಣ ತೀರಿದ ಮೇಲೆ ಒಂದು ಕ್ಷಣ ಸಹ ಯಾರೂ ನಿಲ್ಲರು. ನಾವು ಯಾವ ಭೋಗವನ್ನು ಎಷ್ಟು ಪಡೆದು ಬಂದಿರುವೆವೋ ಅಷ್ಟೇ ನಮಗೆ ಲಭ್ಯವು. ಹೆಚ್ಚಿನದಕ್ಕೆ ಹೆಣಗಿ ಫಲವಿಲ್ಲ. ಸರ್ವರೂ ಮೃತವಾಗುವಂತೆ ಶ್ರೀಮಂತರೂ ಮೃತರಾಗಿರುವರು. ಆದರೆ ಮನುಷ್ಯನು, ಬಾಲ್ಯ ತಾರುಣ್ಯ ವೃದ್ಧಾಪ್ಯ ಈ ಮೂರೂ ಅವಸ್ಥೆಗಳಲ್ಲಿ ಮಾಡಬೇಕಾಗಿದ್ದ ಕಾರ್ಯಗಳನ್ನು ನೆರವೇರಿಸಿ, ತನ್ನ ಇಚ್ಛಿತವನ್ನೆಲ್ಲ ಈಡೇರಿಸಿಕೊಂಡು ನಿರಾಶನಾಗಿ ಮುಪ್ಪಿನಲ್ಲಿ ಮರಣಹೊಂದಿದರೆ ಬಹುತರ ಯಾರಿಗೂ ದುಃಖವಾಗಲಿಕ್ಕಿಲ್ಲ.

ನನಗಿಂತಲೂ ಮಿಗಿಲಾದ ಅಭಿಮಾನದಿಂದಲೂ, ಆಸ್ಥೆಯಿಂದಲೂ, ತನುಮನಧನಗಳಿಂದಲೂ ವೀರಶೈವ ಮತೋನ್ನತಾ ಕಾರ್ಯಭಾಗದಲ್ಲಿಯೇ ವಿಹರಿಸುತ್ತಿದ್ದ ಶ್ರೀಮಂತ ಸರದೇಸಾಯಿಯವರು ಪ್ರೌಢ ವಯಸ್ಸಿನಲ್ಲಿಯೇ ಅಕಾಲಿಕ ಮರಣಹೊಂದಿದ್ದರಿಂದ ನಿಮ್ಮಂತೆ ನಮ್ಮೆಲ್ಲರಿಗೂ, ವೀರಶೈವ ಸಮಾಜಕ್ಕೂ ವಾಚಾಮಗೋಚರವಾದ ದುಃಖವಾಗಿದೆ. ಶ್ರೀಮಂತರು ಇನ್ನೂ ನಾಲ್ಕೊಪ್ಪತ್ತು ಬದುಕಿರಬೇಕಾಗಿತ್ತು."ಜೀವನ್ನರೋ ಭದ್ರಶತಾನಿ ಪಶ್ಯೇತಿ" ಎಂಬಂತೆ ನಮ್ಮ ಸಮಾಜಹಿತದ ಕಾರ್ಯಗಳು ಅವರಿಂದ ಇನ್ನೂ ಎಷ್ಟೋ ಆಗುತ್ತಿದ್ದವು. ಅವನ್ನೆಲ್ಲ ನೋಡಿ ನಾವೆಲ್ಲರೂ ನಲಿಯುತ್ತಿದ್ದೆವು. ಆದರೆ ಇಂತಹ ಆನಂದದ ಕಾಲವನ್ನು ನೋಡುವದು ನಮ್ಮ ದೈವದಲ್ಲಿರಲಿಲ್ಲ. ಶಿವಸಂಕೇತಕ್ಕೆ ಉಪಾಯವಿಲ್ಲ. ಅಚ್ಚಮುತ್ತಿನಂತೆ ಬೆಳಗುತ್ತಿದ್ದ ನಿಮ್ಮ ಸೌಭಾಗ್ಯತನವು ಈ ಹೊತ್ತಿಗೆ ನಿರ್ನಾಮವಾದುದರಿಂದ, ನೀವೂ ಆಮರಣ ದುಃಖಭಾಜನರಾದಿರಿ ನಿಜ. ಆದರೆ ಕೊಟ್ಟ ದೇವರು ಕಸುಕೊಂಡು ಹೋದರೆ ಕಳವಳಪಟ್ಟು ಫಲವೇನು? ಸತ್ತವರಿಗಾಗಿ ಅತ್ತತ್ತು ಅನುತಾಪ ಪಡುವದರಲ್ಲಿ ಅರ್ಥವೇನಿಲ್ಲ. ತೀರದ ದುಃಖವನ್ನು ಪೂರಾ ನುಂಗಿಕೊಂಡು, ಇನ್ನು ಮೇಲೆ ನೀವು ನಿಮ್ಮ ಶೇಷಾಯುಷ್ಯವನ್ನು ನಿಮ್ಮ ಪತಿಗಳಂತೆಯೇ ಪರೋಪಕೃತಿಯಲ್ಲಿಯೂ, ಸ್ವಮತಾಭ್ಯುದಯದಲ್ಲಿಯೂ, ಸಂಸ್ಥಾನದ ಸುಧಾರಣೆಯಲ್ಲಿಯೂ ಕಳೆದು, ನೀವಾದರೂ ಕೀರ್ತಿವಂತರಾಗಿ, ಕಡೆಗೆ ಒಂದಿಲ್ಲೊಂದು ದಿನ ಈಶಾಜ್ಞೆಯಂತೆ ಇಹವನ್ನು ತ್ಯಜಿಸಿ, ಪರಲೋಕದಲ್ಲಿದ್ದ ಶ್ರೀಮಂತ ಪತಿಯ ಆತ್ಮವನ್ನು ಆನಂದದಿಂದ ಕೂಡಿಕೊಳ್ಳಬೇಕು. ನಾವೆಲ್ಲರೂ ಶ್ರೀಮಂತರ ಹಿಂದಿಂದೆ ಒಂದಿಲ್ಲೊಂದು ದಿನ ಪರಂಧಾಮವನ್ನು ಸೇರತಕ್ಕವರೇ ಸರಿ. ನೀವಾದರೂ ತಿಳಿದವರೇ ಇರುತ್ತೀರಿ. ಸುರಕ್ಷಿತರಾದ ನಿಮಗೆ ಹೆಚ್ಚಿಗೆ ಹೇಳುವ ಕಾರಣವಿಲ್ಲ. ಶ್ರೀಮಂತರು ಮರ್ತ್ಯಕಾಯದಿಂದ ಅಳಿದವರಾಗಿದ್ದರೂ, ಕೀರ್ತಿಕಾಯದಿಂದ ಚಿರಕಾಲ ಉಳಿದವರಾಗಿರುತ್ತಾರೆ. ಅವರು ಸ್ವಹಸ್ತಾಕ್ಷರಗಳಿಂದ ಬರೆದಿಟ್ಟ ಮೃತ್ಯುಪತ್ರವನ್ನು ನೋಡಿ, ಅವರ ಇಚ್ಛಿತವು ಕೊನೆಗಾಣುವಂತೆ ಕರ್ತವ್ಯವನ್ನು ನೆರವೇರಿಸಿ ಕೈಲಾಸವಾಸಿಯಾದ ಶ್ರೀಮಂತರ ಆತ್ಮಕ್ಕೆ ಶಾಂತಿಯನ್ನು ಕೊಡುವದೇ ನಮ್ಮೆಲ್ಲರ ಧರ್ಮಮಾರ್ಗವಾಗಿದೆ." ಈ ಪ್ರಕಾರ ಹಲವು ಪರಿಯಾಗಿ ಶೋಕಶಾಮಕ ವಚನಗಳಿಂದ ಸುಂದರಾಬಾಯಿಯವರನ್ನು ಸಮಾಧಾನಪಡಿಸಿ, ಅವರ ದುಃಖವನ್ನು ಕೆಲಮಟ್ಟಿಗೆ ದೂರಮಾಡಿ, ಅವರಿಂದ ನಿರೂಪವನ್ನು ಹೊಂದಿ, ರಾ.ಸಾ॥ರೇಣಸಿದ್ಧಪ್ಪ ಬಸವಣ್ಣಪ್ಪ, ಕಿತ್ತೂರ ಮಾಮಲೇದಾರ

ತಾಲೂಕ ನವಲಗುಂದ ಇವರ ಕಡೆಗೆ ಶ್ರೀಮಂತರು ಕೊಟ್ಟಿದ್ದ ತಿಜೋರಿಯ ಮತ್ತು ಜವಾಹೀರ ಮುಂತಾದ ಬೆಲೆಯುಳ್ಳ ಒಡವೆ ವಸ್ತುಗಳುಳ್ಳ ಬೊಕ್ಕಸಗಳ ಒಂಭತ್ತು ಕೀಲೀಕೈಗಳನ್ನು ಇಸುಕೊಂಡು, ಬೆಳಗಾವಿಗೆ ಬಂದು, ಸರ್ವವೃತ್ತಾಂತವನ್ನು ಮೆ॥ಕಲೆಕ್ಟರ ಸಾಹೇಬ ಬಹದ್ದೂರ ಜಾಕ್ಸನ್ ದೊರೆಗಳಿಗೆ ತಿಳಿಸಿ ಅರ್ಜಿಕೊಟ್ಟು, ಸರಕಾರದ ಸ್ವಾಧೀನದಲ್ಲಿದ್ದ ಮೊಹರ ಬಂದ ಲಖೋಟಿಯನ್ನೊಡಿಸಿ ಶ್ರೀಮಂತರ ಮೃತ್ಯುಪತ್ರವನ್ನು ತೆಗೆದು, ಅದನ್ನು ರಜಿಸ್ಟರ ಮಾಡಿಸಿ, ಸರ್ವಜನರಿಗೆ ಶ್ರೀಮಂತರ ಅದ್ವಿತೀಯ ದಾತೃತ್ವವೂ, ದಾರ್ಢ್ಯವೂ ತಿಳಿಯಬೇಕೆಂದು ಆ ಮೃತ್ಯುಪತ್ರವನ್ನು ಅಕ್ಷರಶಃ ಜಾಹೀರು ಮಾಡಿಸಿದರು.
(ಶ್ರೀಮಂತರ ಹಸ್ತಾಕ್ಷರದ ಮರಾಠೀ ಮೃತ್ಯುಪತ್ರದ ಕನ್ನಡ ಭಾಷಾಂತರ)-[೨]

ಅನುಪಮ ಔದಾರ್ಯ

ವಾಚಕ ಮಹಾಶಯರೇ! ಶ್ರೀಮಂತರ ಮೃತ್ಯುಪತ್ರವನ್ನು ಚೆನ್ನಾಗಿ ಓದಿದಿರಾ! ಅವರ ಅನುಪಮ ಔದಾರ್ಯಕ್ಕೆ ನೀವು ಏನೆನ್ನುವಿರಿ, ಇದನ್ನೋದಿದ ನಿಮ್ಮ ಚಿತ್ತವೃತ್ತಿಯು ಹೇಗಾಯಿತು? ನಿಜವಾಗಿ ನೀವು ಚಕಿತರಾಗಿರುವಿರಲ್ಲವೋ! ಶ್ರೀಮಂತ ಅಪ್ಪಾಸಾಹೇಬರವರಂತಹ ಅಪ್ರತಿಮ ದಾನವೀರರನ್ನು ಎಲ್ಲಿಯಾದರೂ ನೋಡಿರುವಿರಾ! ಇನ್ನು ಮುಂದೆಯಾದರೂ ನೋಡುವಿರಾ!ಸ್ವಮತಾಭ್ಯುದಯಕ್ಕಾಗಿ ಸಂಸ್ಥಾನದ ಸರ್ವ ಸಂಪತ್ತನ್ನೆಲ್ಲ ಸೆರೆಸೂರಿಮಾಡಿದ ಶ್ರೀಮಂತರ ಸಂಗತಿಯನ್ನು ಕೇಳಿರುವಿರಾ? ಅಷ್ಟು ಸಂಪತ್ತು ಸತ್ಕಾರ್ಯದಲ್ಲಿ ವ್ಯಯಮಾಡಲಿಕ್ಕೆ ನಿಮಗೆ ಅಂತಹ ಧೈರ್ಯೋತ್ಪನ್ನವಾದೀತೋ? ನಿಜವಾಗಿ ಹೇಳಿರಿ? ಸಾರ್ವಜನಿಕ ಹಿತದ ಸಭೆಗಳಿಗೆ ಹೋದರೆ ವರ್ಗಣಿಯನ್ನು ಕೊಡುವ ಪೀಕಲಾಟವು ಬರುವದೆಂದು ಎಷ್ಟೋ ವೀರಶೈವ ಧನದಾರ್ಢ್ಯರು ತಪ್ಪಿಸಿಕೊಳ್ಳುತ್ತಿರುವಾಗ, ಯಾರ ಪ್ರೇರಣೆಯೂ ಎಳ್ಳಷ್ಟಿಲ್ಲದೆ ಸ್ವಂತ ಬುದ್ಧಿಯಿಂದ ಸಂಸ್ಥಾನಕ್ಕೆ ಸಂಸ್ಥಾನವನ್ನೇ ಸ್ವಮತಾಭ್ಯುದಯಕ್ಕಾಗಿ ಸಮರ್ಪಿಸಿದ ಶ್ರೀಮಂತ ಸರದೇಸಾಯಿಯವರ ಸಚ್ಚರಿತ್ರೆಯನ್ನು ಸಾವಿರಾರು ಪಾನುಗಳ ವರೆಗೆ ಬರೆದರೂ ಸಾಕಾಗದು. ಇವರ ಅನುಪಮೌದಾರ್ಯವನ್ನು ಸಾವಿರಾರು ನಾಲಿಗೆಗಳಿಂದ ಬಣ್ಣಿಸಿದರೂ ಸರಿಯಾಗಲಾರದು. ಷಟ್‌ಸ್ಥಲಜ್ಞಾನಸಂಪನ್ನ ವಿರಕ್ತಶಿರೋಮಣಿಗಳಾದ ಮೂಲಪೀಠಾಚಾರ್ಯರು ಸಹ ಇಂತಹ ದಾನ ಶೂರತೆಯನ್ನು ತೋರಿಸಲಿಲ್ಲ. ಧನ, ಧಾನ್ಯ, ಭೂಮಿ, ಸೀಮೆ, ಆದಾಯ, ವಸ್ತ್ರಪಾತ್ರೆ, ಒಡವೆ-ವಸ್ತ್ರಗಳೂ ರೋಖಡ ಹಣವೂ, ಇತರ ಅನೇಕಾನೇಕ ಸಾಮಾನುಗಳೂ ಅಲ್ಲದೆ ಸಂಸ್ಥಾನದ ಭಾಂಡಾರದಲ್ಲಿ ಕೇವಲ ಜವಾಹೀರುಗಳೇ ಸುಮಾರು ೫೦,೦೦೦ (ಅಯ್ವತ್ತುಸಾವಿರ) ಬೆಲೆಬಾಳುವಂತಹದ್ದವು. ಇಂತಹ ಜೋಡಿಲ್ಲದ ಉದಾರತನವನ್ನು ನೋಡಿ ಭೂಲೋಕದ ಕುಬೇರರು ಬೊಟ್ಟು ಕಚ್ಚಿಕೊಂಡರು. ಯುರೋಪದ ಎಲ್ಲ ರಾಷ್ಟ್ರಗಳ ವರ್ತಮಾನಪತ್ರಕಾರರು ಇವರ ಪ್ರಚಂಡ ಭಾತೃತ್ವವನ್ನು ಕೊಂಡಾಡಿದರು.[೩] ಈ ವಿಚಿತ್ರ ಸಂಗತಿಯನ್ನು ಕೇಳಿ, ನೋಡಲಿಕ್ಕೂ ಕೇಳಲಿಕ್ಕೂ ಅಸಂಭವನೀಯವೆಂದು ಕಂಡುಬರುವ ಔದಾರ್ಯದ ಶಿಖರವು ಇದೇ ಎಂದು ಜ್ಞಾನಿಗಳು ತಲೆದೂಗುವವರಾದರು.

೨.ಮೃತ್ಯುಪತ್ರದ ಕನ್ನಡ ಭಾಷಾಂತರ ಕೊಡಬೇಕೆಂದು ವಿಚಾರಮಾಡಿ, ಮೂಲ ಹಸ್ತಪ್ರತಿಯಲ್ಲಿ ೫ ಪುಟಗಳನ್ನು ಬಿಟ್ಟಿರುವರಾದರೂ, ಅದನ್ನು ಕೊಟ್ಟಿಲ್ಲ- ಸಂ.

೩. ಈ ಪದ್ಯವನ್ನು ಬೆನ್ನುಪುಟದ ಮೇಲೆ ಬರೆಯಲಾಗಿದೆ-ಸಂ.

ರಾಗ ಭೈರವಿ-ತಾಳ ರೂಪ
ಧಾಟಿ-"ಮಧುಮಾಸವು।ಒದಗಿರ್ಪುದು" ಎಂಬಂತೆ

ಧೊರೆಯೇ ನಿಮ್ಮ।ಸರಿಗಾಣೆನು ಸಿರಸಂಗಿಯ। ಲಿಂಗಭೂಪನೆ॥
ವರಕರುಣಾಕರ ಶ್ರೀಕರ।ಹರಭಕ್ತನೆ ಶರಣಾಗತ ಪರಿಪಾಲಕ ॥ಪಲ್ಲ। →

ಮೂರ್ತಿ ಸಣ್ಣದಾದರೂ ಕೀರ್ತಿದೊಡ್ಡದೆಂಬಂತೆ ಸಂಸ್ಥಾನವು ಸಣ್ಣದಾದರೂ ಅವರ ಭೂತ, ವರ್ತಮಾನ, ಭವಿಷತ್ಕಾಲಗಳ ಸಂಪತ್ತೆಲ್ಲ ಸ್ವಮತಾಭ್ಯುದಯಕ್ಕೆ ಕೊಡಲ್ಪಟ್ಟಿತೆಂಬ ಸಂಗತಿಯು ಜಗದಾಶ್ಚರ್ಯವನ್ನುಂಟು ಮಾಡಹತ್ತಿದೆ. ಶ್ರೀಮಂತರ ಈ ವಿಲಕ್ಷಣವಾದ ವಿತರಣತ್ವವನ್ನು ಕೇಳಿದ ಸಾರ್ವಭೌಮರು ಸಹ ಚಕಿತರಾಗಿ, ಈ ಸಂಸ್ಥಾನದ ಪ್ರಗತಿಯ ಕಡೆಗೆ ತಮ್ಮ ಲಕ್ಷವನ್ನು ತಿರುಗಿಸುವಂತಾಯಿತು. ಕಾರ್ಯಬಾಹುಳ್ಯವುಳ್ಳ ಮಹನೀಯರು ಒಂದೊಂದು ವೇಳೆ ದೊಡ್ಡ ದೊಡ್ಡ ರಾಷ್ಟ್ರಗಳನ್ನು ಸಹ ಮರೆಯುತ್ತಿರುವಾಗ, ಈ ಸಿರಸಂಗಿ ಎಂಬ ಸಣ್ಣ ಸಂಸ್ಥಾನವು ಅವರ ಹೃದ್ದರ್ಪಣದಲ್ಲಿ ನೆಲೆಗೊಂಡು ನಿಲ್ಲುವದಾಯಿತು. ಈ ಅತ್ಯಪೂರ್ವ ವಿಚಿತ್ರ ವಾರ್ತೆಯನ್ನು ಕೇಳಿದ ಪ್ರತಿಯೊಬ್ಬ ಶ್ರೀಮಂತನು ಭಾಪುರೆ!ಲಿಂಗರಾಜಾ, ಶ್ರೀಮಂತರ ಸಮೂಹದೊಳಗೆ ಶಿರೋಮಣಿಯಾದ ನೀನೇ ಧನ್ಯನು. ನೂರಾರು ವರ್ಷ ಪುಣೆ ಪಟ್ಟಣದಲ್ಲಿ ಇತಿಹಾಸಪ್ರಸಿದ್ಧವಾಗಿ ರಾಜ್ಯಭಾರಮಾಡಿ, ಸಕಲ ಸಂಪತ್ತುಗಳನ್ನು ಸಂಪಾದಿಸಿ ಶ್ರೀಮಂತರೆಂಬ ಬಿರುದಿನ ಹೆಗ್ಗಾಳಿಯನ್ನು ಹಿಡಿಸಿಕೊಂಡ ಯಾವ ಪೇಶವೆಯೂ ಕೂಡ ನಿನ್ನಂತಹ ದಾನಶೂರತೆಯನ್ನು ತೋರಿಸಲಿಲ್ಲ. ನಿನ್ನ ಧೈರ್ಯಕ್ಕೂ, ಔದಾರ್ಯಕ್ಕೂ ಪಾರಾವಾರವೇ ಇಲ್ಲ! ನೀನು ನಿನ್ನ ಸತ್ಕೃತ್ಯದಿಂದ ಸರ್ವಸಂಸ್ಥಾನಿಕರ ಶಿರೋಮಣಿಯೆಂದೆನ್ನಿಸಿಕೊಂಡಿ. ನಿನ್ನ ಮಹೌದಾರ್ಯದ ಸುದ್ದಿಯನ್ನು ಕೇಳಿದ ಜಗಜ್ಜನರು "ನಭೂತೋ ನಭವಿಷ್ಯತಿ" ಎಂದು ಸ್ವೈರವಾಣಿಯಿಂದ ನಿನ್ನ ದಾನಶೂರತೆಯನ್ನು ಕೊಂಡಾಡಹತ್ತಿದರು. ಆದರೆ "ಉದಾರಸ್ಯ ತೃಣಂ ವಿತ್ತಂ" ಎಂಬಂತೆ,

ಅಡಿ ಮೂರೀಯೆನಲೀಯನೇ ಬಲಿನೃಪಂ ಭೂಲೋಕಮಂ, ದೇಹಮಂ।
ಕಡಿದೀಯೆಂದೆನೆ ಪಕ್ಕಿಗೀಯನೆ ನೃಪಂ, ತನ್ನಂಗವಾದ್ಯಂತಮಂ ।
ಮೃಡ ಬೇಕೆಂದೆನೆ ಸೀಳ್ದು ತನ್ನ ಸುತನಂ ನೈವೇದ್ಯಮಂ ಮಾಡನೇ ।
ಕೊಡುವರ್ಗಾವುದು ದೊಡ್ಡಿತ್ತೆ! ಹರಹರಾ ಶ್ರೀ ಚೆನ್ನಸೋಮೇಶ್ವರಾ ।।

ಬಲಿಚಕ್ರವರ್ತಿಯೂ, ಶಿಬಿಚಕ್ರವರ್ತಿಯೂ, ಶ್ರೀಯಾಳ ಭೂಪತಿಯೂ ಮಾಡಿದ ದಾನವನ್ನು ನೋಡಿದರೆ, ಕೊಡಗೈದೊರೆಗೆ ಯಾವದೂ ದೊಡ್ಡದಾಗಿ ಕಾಣುವದಿಲ್ಲೆಂಬ ಸೋಮೇಶ್ವರ ಕವಿ ವಚನವು ಸಹಜವಾಗಿ ನಿದರ್ಶನಕ್ಕೆ ಬರುವಂತಿದೆ. ಕನಸಿನಲ್ಲಿ ಕೊಡಲ್ಪಟ್ಟ ವಾಗ್ದಾನವನ್ನು ಪೂರ್ಣಮಾಡುವದಕ್ಕಾಗಿ ಸತ್ಯಸಂಧಾನದ ಹರಿಶ್ಚಂದ್ರನು ತನ್ನ ದೇಶಕೋಶಗಳನ್ನೆಲ್ಲ ವಿಶ್ವಾಮಿತ್ರ ಮಹರ್ಷಿಗಳಿಗೆ ಸಮರ್ಪಿಸಿದ್ದಲ್ಲದೆ ಪತಿವ್ರತಾ ಶಿರೋಮಣಿಯೂ, ಪ್ರೇಮದ ನಿಧಿಯೂ ಆದ ಪ್ರಿಯಸತಿ ತಾರಾಮತಿಯನ್ನು ಮಾರಿಕೊಂಡು, ತಾನೂ ಅಂತ್ಯಜನ ಮನೆಯ ಸೇವಕನಾಗಿ, ಸುಡುಗಾಡಿನ ಕಾವಲ ಮಾಡಬೇಕಾಯಿತು. ಅಂತೆಯೇ ಆ ಮಹಾರಾಜನ ಕೀರ್ತಿಯು ಆಚಂದ್ರಾರ್ಕ ಮೆರೆಯುತ್ತಿರುವದು. ಲೋಕವಿಚಿತ್ರವಾದ ಯಾವದೊಂದು ಮಹತ್ಕೃತ್ಯವನ್ನು ಮಾಡಿದ ಮಹಾನುಭಾವನೇ ಮಹತ್ತರವಾದ ಕೀರ್ತಿಗೆ ಪಾತ್ರನಾಗುತ್ತಾನೆ.

→ ಸಿರಸಂಗಿಯ।ಸಿರಿಯಿಂದಲಿ।ಹರಮತ ಉದ್ಧಾರಗೈದಿಹ।।
ಪರತರ ಕೀರ್ತಿಯ ಮೂರ್ತಿಯೆ।ನರನೇ ನೀಂ ಸುರನೆಂಬುವರೀ ಜಗದೊಳು।।೧।।

ನಿನ್ನಂಥವರಿನ್ನುದಿಪರೆ।ಪುಣ್ಯಪುರುಷರೀ ಲೋಕದಿ।।
ನಿನ್ನಯ ದೇಶವ ಕೋಶವ । ನಿನ್ನ ಮತೋನ್ನತಿಗಿತ್ತಿಯೊ ಘನಮನದೊಳು।।೨।।

ಸರಿಯೇ ಶಿಬಿ। ನರಪತಿ ಬಲಿ । ಅರಸರೆಲ್ಲರು ನಿನ್ನ ದಾನಕೆ।।
ಶಿರವನು ತೂಗುತ ಬಾಗುತ।ಪರಿಪರಿಯಿಂ ಸ್ಮರಿಸುವರ್ಮೈ ಶ್ರೀ ಬಸವನ ।।೩।।

ಬಸವಾರ್ಯಮಾಸ್ತರ
ಕಿತ್ತೂರ ಶಾಲಾ ನಂಬರ -1

ಸಾವಿರಾರು ವರ್ಷ ಅಪ್ರತಿಬಂಧವಾಗಿ ನಡೆಯುವ ಸಂಸ್ಥಾನದ ಸಂಪತ್ತನ್ನೆಲ್ಲ ಲಿಂಗಾಯತ ಫಂಡಿಗೆ ಕೊಟ್ಟ ಶ್ರೀಮಂತ ಶಿರಸಂಗಿಯ ಸರದೇಸಾಯಿಯವರ ಮತಾಭಿಮಾನವು ಎಷ್ಟು ಜಾಗ್ರತವಿರಬಹುದು? ಸ್ವಮತಾಭ್ಯುದಯದಲ್ಲಿ ಇವರ ಪ್ರೇಮವು ಎಷ್ಟಿರಬಹುದು? ಮತಾಭಿಮಾನಿಗಳೆಂಬ ಮಹಾಶಯರು ಎಲ್ಲ ಸ್ಥಳಗಳಲ್ಲಿ, ಎಲ್ಲ ಕಾಲಗಳಲ್ಲಿ ಎಷ್ಟೋ ಮಂದಿ ಆಗಿಹೋದರು. ಆದರೆ ಅವರೆಲ್ಲರಲ್ಲಿ ಶ್ರೀಮಂತ ಶಿರಸಂಗಿಯ ಸರದೇಸಾಯಿಯವರ ಮತಾಭಿಮಾನದ ಮಾದರಿಯೇ ವಿಸ್ಮಯಕರವಾದುದೆಂದು ಹೇಳಬಹುದು. ಈ ಪುಣ್ಯ ಪುರುಷರ ಜೀವನಚರಿತ್ರವು ಆಧುನಿಕ ವೀರಶೈವರ ಇತಿಹಾಸದೊಳಗೆ ಅತಿ ವಿಸ್ಮಯಕಾರಕವಾದುದೆಂಬುದು ಸ್ವಮತಸ್ಥರಿಗೆ ಅಲ್ಲ! ಪರಮತಸ್ಥರಿಗೂ ಕೂಡ ತೋರುವಂತಿರುವದು. ಅವರು ಬರೆದಿಟ್ಟಿರುವ ಮರಣಶಾಸನವು ಜಗದಾಶ್ಚರ್ಯವನ್ನುಂಟು ಮಾಡುತ್ತಿರುವದು. ಇವರಂತೆ ಸ್ವಾಭಿಮಾನವನ್ನೂ, ಸ್ವಾರ್ಥವನ್ನೂ ಪೂರ್ಣವಾಗಿ ತ್ಯಜಿಸಿ, ಸರ್ವಸ್ವವನ್ನೂ ಸ್ವಮತೋದ್ಧಾರಕ್ಕಾಗಿ ಧಾರೆಯನ್ನೆರೆದವರು ಪ್ರಾಚೀನ ಶಿವಶರಣರಲ್ಲಿ ಸಿಕ್ಕಬಹುದೇ ಹೊರತು ಆಧುನಿಕರಲ್ಲಿ ಯಾರೂ ಇಲ್ಲವೆಂತಲೇ ಹೇಳಬಹುದು.

ಈ ಮೃತ್ಯುಪತ್ರವನ್ನು ಮೆ||ಬೆಳಗಾವ ಜಿಲ್ಲಾ ಕಲೇಕ್ಟರಸಾಹೇಬ ಬಹದ್ದೂರವರು ನೋಡಿ ಆಶ್ಚರ್ಯಪಟ್ಟು, ಇಂತಹ ಕಟ್ಟಭಿಮಾನಿಗಳು ನಿಮ್ಮ ಮತದಲ್ಲಿ ಇನ್ನು ನೂರಾರು ವರ್ಷಗಳು ಕಳೆದು ಹೋದರೂ ಹುಟ್ಟುವದು ಕಷ್ಟವೆಂದು ರಾ.ಬ||ಅರಟಾಳ ಸಾಹೇಬರವರ ಮುಂದೆ ಹೇಳಿದರಂತೆ. ಅಂತ್ಯಕಾಲದಲ್ಲಿ ಶ್ರೀಮಂತರ ಮುಖದಿಂದ ಬಯಲಿಗೆ ಬಂದ ಉದ್ಗಾರಗಳನ್ನೂ, ಅವರು ಬರೆದು ಇಟ್ಟಿರುವ ಮರಣಶಾಸನವನ್ನೂ ನೋಡಿದರೆ ಅವರಲ್ಲಿದ್ದ ಮತಾಭಿಮಾನದ ಇಯತ್ತೆಯು ಪ್ರತಿಯೊಬ್ಬರಿಗೂ ಗೊತ್ತಾಗುವಂತಿರುತ್ತದೆ. ಇಂತಹ ಕಲ್ಪತರುವನ್ನು ಕಳೆದುಕೊಂಡ ವೀರಶೈವ ಮತದ ದೌರ್ಭಾಗ್ಯವನ್ನು ಕುರಿತು ಎಷ್ಟು ಚಿಂತಿಸಿದರೂ ಸ್ವಲ್ಪವೇ ಸರಿ. ಈ ಮತಾಭಿಮಾನದ ಮೂರ್ತಿಯು ವೀರಶೈವಮಂಡಲದ ಮಧ್ಯದಲ್ಲಿ ಇನ್ನೂ ಹತ್ತಿಪ್ಪತ್ತು ವರ್ಷಗಳ ವರೆಗೆ ಇರುತ್ತಿದ್ದರೆ, ಇವರಿಂದ ಮತಸುಧಾರಣೆಯು ನೂರಾರು ಬಗೆಯಾಗಿ ಜರುಗುತ್ತಿತ್ತೆಂದು ಹೇಳಲಿಕ್ಕೆ ಏನೂ ಸಂಶಯವಿಲ್ಲ. ಶ್ರೀಮಂತರ ಮೃತಿಯಿಂದ ವೀರಶೈವರ ಅವಸ್ಥೆಯು ಕೈಕೋಲನ್ನು ಕಳೆದುಕೊಂಡ ಕುರುಡರಂತೆಯೂ, ನಡುಹೊಳೆಯಲ್ಲಿ ನೀರು ಕಡೆಯುವ ಹುಟ್ಟನ್ನು ಕಳಕೊಂಡ ನಾವಾಡಿಗರಂತೆಯೂ ಆಗಿರುವದು. ಸಮಾಜದವರಿಗೆಲ್ಲ ಅಭಿಮಾನದ ವಿಷಯದಲ್ಲಿ ಮಾರ್ಗದರ್ಶಕವಾಗಿರುವ ಶ್ರೀಮಂತರ ಹಳಹಳಿಯು, ಅವರ ಸ್ಥಾನಕ್ಕೆ ಅನುಗುಣವಾಗಿ ನಿಲ್ಲುವ ಶ್ರೀಮಂತರೊಬ್ಬರನ್ನು ಪಡೆದುಕೊಳ್ಳುವ ವರೆಗೂ ಹೋಗಲಾರದು. ಇವರ ವಿಯೋಗದಿಂದುಂಟಾಗಿರುವ ಅಮಿತ ನಷ್ಟವನ್ನು ತುಂಬಿಸಿಕೊಳ್ಳುವದು ಈ ಮತಸ್ಥರಿಗೆ ಪರಮ ಕಷ್ಟವೇ ಸರಿ. ಇಪ್ಪತ್ತನೆಯ ಶತಮಾನದ ಶಿವಶರಣರಾಗಿದ್ದು ಶಿವೈಕ್ಯರಾದ ಈ ನಮ್ಮ ಪುಣ್ಯಾಚರಿತರ ಅಸದೃಶವಾದ ಮತಸೇವಾರೂಪ ತಪಸ್ಸೇ ಶಿವಾನುಗ್ರಹದಿಂದ ತತ್‌ಸದೃಶರಾದ ಶ್ರೀಮಂತರೊಬ್ಬರನ್ನು ವೀರಶೈವ ಸಮಾಜದ ಕಣ್ಣುಮುಂದೆ ಇರಿಸಬೇಕಲ್ಲದೆ ಇನ್ನೊಂದು ಉಪಾಯವಿಲ್ಲ.

ಈ ಸಮಯದಲ್ಲಿ ಇವರ ಮೃತ್ಯುಪತ್ರವು ಜಗದಾಶ್ಚರ್ಯವನ್ನುಂಟು ಮಾಡಿದಂತೆಯೇ, ಪ್ರಸಿದ್ಧವಾದ ಈ ವೀರಶೈವರ ಸಂಸ್ಥಾನವು ನಾಮಾವಶೇಷವಾಗುವಂತೆ ಮಾಡಿರುವದೂ ಅಷ್ಟು ವಿಷಾದಜನಕವಾಗಿದೆ. ಸಂಸ್ಥಾನಕ್ಕೆ ದತ್ತಕರು ಅವಶ್ಯಕತೇ ಇಲ್ಲವೆಂದೂ, ಅದರ ಉತ್ಪತ್ತಿಯನ್ನೆಲ್ಲ ಲಿಂಗಾಯತ ಫಂಡಿಗೆ ಕೊಡಬೇಕೆಂದೂ ಅವರು ಬರೆದಿಟ್ಟ ಶಾಸನವು ಅವರ ಮತಾಭಿಮಾನದ ಅಗಾಧ ಪರಿಣಾಮವನ್ನು ತೋರಿಸತಕ್ಕದ್ದಾಗಿದ್ದರೂ, ಅವರ ಇಷ್ಟವನ್ನು ಸಾಧ್ಯವಾದಮಟ್ಟಿಗೆ ನಡಿಸಿ, ಪ್ರಸಿದ್ಧವಾದ ಈ ದೇಸಗತಿಯನ್ನು ದತ್ತಪುತ್ರ ಸ್ವೀಕಾರರೂಪದಿಂದ ಸ್ಥಿರಗೊಳಿಸುವಂತೆ ಮಾಡುವದು ವೀರಶೈವ ಮತಸ್ಥರಿಗೂ, ನಮ್ಮ ಆಂಗ್ಲೇಯ ಸರಕಾರದವರಿಗೂ ಕೂಡ ಕರ್ತವ್ಯವಾಗಿರುತ್ತದೆಂದು ಉಭಯತೋಪಿಹಿತವನ್ನೇಳಸುವ ಸಜ್ಜನರಾದ ವಿದ್ವಜ್ಜನರು ಮಾತಾಡಹತ್ತಿದರು.

ಮತ್ತು ಸಿರಸಂಗಿಯ ದೇಸಗತಿಯು ವಂಶಭೂಷಕರೂ, ಪ್ರಸಿದ್ಧಪುರುಷರೂ, ಉದಾತ್ತ ವಿಚಾರಿಗಳೂ, ಮತ ವಿಭೂಷಕರೂ ಆಗಿದ್ದ ನಮ್ಮ ಪ್ರಿಯತಮ ಶ್ರೀಮಂತರ ಕಾಲಕ್ಕೆ ಅಂತ್ಯಗೊಳ್ಳುವಂತಾಗಬಾರದೆಂದೂ, ಮುಂದಣ ಕಾರ್ಯವು ನ್ಯಾಯಕ್ಕೂ ಲೋಕೋಪಕಾರಕ್ಕೂ ವಿಹಿತವಾಗುವಂತೆ ಆಚರಿಸಲ್ಪಡಬೇಕೆಂದೂ ಸರ್ವ ಜನರೂ ಚಿಂತಿಸಹತ್ತಿದರು.

ಶ್ರೀಮಂತರು ದತ್ತಪುತ್ರರನ್ನು ಮಾಡಿಕೊಳ್ಳದೆ ವಂಶವನ್ನು ತಮ್ಮಷ್ಟಕ್ಕೇ ಮುಗಿಸಿ, ಸಂಸ್ಥಾನಕ್ಕೆ ಧನಿಯು ಇಲ್ಲದಂತೆ ಮಾಡಿದರೆಂದು ವಿಚಾರಕ್ಕೆ ಬಂದಕೂಡಲೆ ಎಲ್ಲರಿಗೂ ಅಸಮಾಧಾನವಾಗುವದು ಸ್ವಾಭಾವಿಕವು. ಆದರೆ ವಿಚಾರದೃಷ್ಟಿಯಿಂದ ನೋಡಲಾಗಿ ಆ ಸ್ಥಿತಿಯು ಬಹಳಹೊತ್ತು ನಿಲ್ಲುವದಿಲ್ಲ. ಸಂಸ್ಥಾನದ ಉತ್ಪತ್ತಿಯನ್ನೆಲ್ಲ ಲಿಂಗಾಯತ ಫಂಡಿಗೆ ಕೊಟ್ಟಿದ್ದರಿಂದ ಬಿಸಿಲೊಳಗೆ ಬಿದ್ದ ಬರ್ಫದ ಕರಣಿಯಂತೆ ಸಂಸ್ಥಾನವು ಕರಗಿ ಹೋಯಿತೆಂದು ಯಾರೂ ತಿಳಿಯತಕ್ಕದ್ದಲ್ಲ. ಶ್ರೀಮಂತರು ದತ್ತಕ ಮಾಡಿಕೊಂಡಿದ್ದರೇನೇ ಒಂದು ವೇಳೆ ಕರಗುವ ಸಂಭವವಿತ್ತು. ಸಿರಸಂಗೀ ವತನವು ಜಾತ ಇನಾಮವಾದುದರಿಂದ ಇದು ಸ್ವತ್ವ ನಿವೃತ್ತಿಗೆ ಪಾತ್ರವಾಗಿದೆ. ವಂಶದೊಳಗೆ ಎಲ್ಲರೂ ವಿಚಾರಿಗಳೂ, ನಿರ್ವ್ಯಸನಿಗಳೂ ಆಗುವರೆಂದು ಯಾರೂ ನಂಬಿಗೆಯಿಂದ ಹೇಳಲಾರರು. ಶ್ರೀಮಂತರ ಬಾಲ್ಯದಲ್ಲಿ ಸಂಸ್ಥಾನದ ವತನವೆಲ್ಲ ಗಿಳಂಕೃತವಾಗುವ ಹಾದಿಯನ್ನು ಹಿಡಿದಿತ್ತೆಂಬದು ಮುಂದೆ ಬರೆದ ಶ್ರೀಮಂತರ ಸಂಕ್ಷಿಪ್ತ ಚರಿತ್ರೆಯಿಂದ ಗೊತ್ತಾಗುವದು. ಇವೆಲ್ಲ ವಿಚಾರಗಳು ಶ್ರೀಮಂತರ ಕಣ್ಣುಮುಂದೆ ಕಟ್ಟಿದಂತಾಗಿ ಅವರು ಈ ಪ್ರಕಾರದ ವ್ಯವಸ್ಥೆಯನ್ನು ಮಾಡಿಹೋದರೆಂದು ಸೂಕ್ಷ್ಮ ವಿಚಾರಿಗಳು ತರ್ಕಿಸುತ್ತಾರೆ. ಈ ದೇಸಗತಿಯು ಬಹುಕಾಲದಿಂದ ಔರಸಿ ಸಂತತಿಯಿಲ್ಲದೆ ಈವರೆಗೂ ದತ್ತಕ ವಿಧಾನದಿಂದಲೇ ನಡೆಯುತ್ತ ಬಂದಿರುವದು ಬಹುಶಃ ಎಲ್ಲ ಜನರಿಗೂ ಗೊತ್ತಿರಬಹುದು. ಈ ನಮ್ಮ ಲಿಂಗಪ್ಪ ದೇಸಾಯಿಯರಾದರೂ ಈ ಸಂಸ್ಥಾನಕ್ಕೆ ದತ್ತಕವಾಗಿಯೇ ಬಂದವರು.

ದತ್ತಪುತ್ರರಾಗಿ ಬಂದಾಗ್ಯಾದರೂ ಇವರು ತಮ್ಮ ಪುಣ್ಯವಿಶೇಷತೆಯಿಂದ ಉತ್ತಮೋತ್ತಮ ಸಂಸ್ಥಾನಿಕರ ಗಣನೆಯಲ್ಲಿ ಎಣಿಸಲ್ಪಟ್ಟು, ಸರ್ವಜನರ ವಂದನೆಗೆ ಪಾತ್ರರಾದರು. ಕಡೆಗೆ ಅಕ್ಷಯ ಕೀರ್ತಿಗೆ ಕಾರಣೀಭೂತವಾದ, ವೀರಶೈವ ಸಮಾಜಕ್ಕೆ ಅತ್ಯಪೂರ್ವದಾನಮಾಡಿ ಧನ್ಯರಾದರು. ನೂರಾರು ವರ್ಷಗಳೀಚೆ ಕೈಬೆರಳಿನಿಂದೆಣಿಸುವಷ್ಟೇ ದಾನಶೂರ ಜನರು ಕಂಡುಬರುತ್ತಾರೆ. ನಮ್ಮ ಇಲಾಖೆಯಲ್ಲಿ ಮುಂಬಯಿಯ ಟಾಟಾ ಎಂಬ ಫಾರ್ಸಿ ಘನವಂತರು ಸಾರ್ವಜನಿಕ ಸಂಘಗಳಿಗೆ ಲಕ್ಷಾನುಲಕ್ಷ ಧನರಾಶಿಯನ್ನು ಸ್ವಚ್ಛಂದವಾಗಿ ದಾನಮಾಡಿರುವರು. ಇವರಂತೆ ಬಂಗಾಲ ಮುಂತಾದ ಪ್ರಾಂತಗಳಲ್ಲಿ ಕೆಲಕೆಲ ಘನವಂತರು ಸಾರ್ವಜನಿಕ ಹಿತದ ದೆಸೆಯಿಂದ ಲಕ್ಷಾವಧಿ ರೂಪಾಯಿಗಳನ್ನು ದಾನಮಾಡಿದ ಸಂಗತಿಯು ಇತ್ತಿತ್ತ ಗೊತ್ತಾಗಿದೆ. ಇಂತಹ ದಾನಶೌಂಡ ಮಂಡಳಿಯಲ್ಲಿ ಮಿಗಿಲಾದ ನಮ್ಮ ಶ್ರೀಮಂತ ಸರದೇಸಾಯಿಯುವರು ತಮ್ಮ ಸಂಸ್ಥಾನದ ಸರ್ವಸ್ವತ್ತನ್ನು ಸ್ವಮತೋತ್ತೇಜಕ ಸಂಘಕ್ಕೆ ಸಮರ್ಪಿಸಿದ್ದರಿಂದ ಜಗತ್ತೇ ಚಕಿತವಾಗಿ ಹೋಗಿದೆ. ಸಂಸ್ಥಾನದ ಶ್ರೀಮಂತಿಕೆಗೆ ಸಂತಾನವಿಲ್ಲದುದರಿಂದ ಶ್ರೀಮಂತರು ಖಿನ್ನಮನಸ್ಕರಾಗಿ "ಸರ್ವಸಂಸ್ಥಾನಂ ಶಿವಾರ್ಪಣಮಸ್ತು" ಎಂದು ವೀರಶೈವ ಸಮಾಜದ ಹೆಸರಿನಿಂದ ತರ್ಪಣೋದಕವನ್ನು ಬಿಟ್ಟು, ಇಹಪರವೆರಡರಲ್ಲಿಯೂ ಸದ್ಗತಿಯನ್ನು ಹೊಂದಿದ್ದಂತೂ ನಿಜವೇ! ಆದರೆ ದತ್ತಪುತ್ರರನ್ನು ಮಾಡಿಕೊಂಡಿದ್ದರೆ ಇವರಿಗೆ ಬರುವಂತಲಿತ್ತು. ದತ್ತಕ ಮಾಡಿಕೊಂಡರೆ ಯಾವ ಆಗದ ದತ್ತಕನು ಬಂದು, ಯಾವ ವರ್ತನದಿಂದ ವರ್ತಿಸಿ ಸಂಸ್ಥಾನವನ್ನು ಯಾವ ಗತಿಗೆ ತಂದಿಡುವನೋ ಎಂದೂ, ದತ್ತಪುತ್ರನನ್ನು ಮಾಡಿಕೊಂಡು ಸಂಸ್ಥಾನವನ್ನು ನಡೆಯಿಸುವ ಶ್ರೇಯಸ್ಸಿಗಿಂತ, ಸ್ವಮತಾಭ್ಯುದಯಂತೆ ಸರ್ವಸ್ವವನ್ನು ಶಿವಾರ್ಪಣಮಾಡುವ ಕೀರ್ತಿಯೇ ಲೇಸೆಂದು ಪರ್ಯಾಲೋಚಿಸಿ, ಶ್ರೀಮಂತರು ದೃಢಸಂಕಲ್ಪಮಾಡಿ, ಯಾರೊಬ್ಬರಿಗೂ ತಮ್ಮ ಇಂಗಿತವನ್ನು ಮುಂದಾಗಿ ತಿಳಿಸದೆ ಆತ್ಮಬುದ್ಧಿಯಿಂದಲೂ, ನಿಶ್ಚಲಚಿತ್ತದಿಂದಲೂ

ಮೃತ್ಯುಪತ್ರವನ್ನು ಬರೆದಿಟ್ಟಿದ್ದರೆಂದು ಹೇಳಬಹುದು. ಶ್ರೀಮಂತರು ಮೃತ್ಯುಪತ್ರದ್ವಾರ ಮಾಡಿಟ್ಟ ವ್ಯವಸ್ಥೆಯು, ಕೂಪಮಂಡೂಕದ ವಿಚಾರಿಗಳಿಗೆ ಸದ್ಯಕ್ಕೆ ಸಮಂಜಸವಾಗಿ ತೋರದಿದ್ದರೂ, ಮುಂದೆ ಈ ವ್ಯವಸ್ಥೆಯಿಂದ ಇಡೀ ವೀರಶೈವ ಸಾಮ್ರಾಜ್ಯವು ಸುಧಾರಣೆಯ ಶಿಖರದಲ್ಲಿ ಶೋಭಾಯಮಾನವಾಗುವದೆಂದು ನಿಶ್ಚಯವಾಗಿ ಹೇಳಬಹುದು. ಪ್ರಾಂತಕ್ಕೆ, ಸಂಸ್ಥಾನದ ಶೋಭೆಗೆ ಶ್ರೀಮಂತರು ಇಲ್ಲವೆಂಬುದಿಷ್ಟೇ ಹಳಹಳಿಯು. ಆದರೆ ಇದರ ಸವಿಕಟ್ಟು ಬಳೆಬರುತ್ತ ಮುಂದೆ ತಿಳಿಯುವದು. "ದೇಸಗತಿಯು ಪೂರ್ವದಂತೆಯೇ ನಡೆಯತಕ್ಕದ್ದು; ಅದರ ವಾರ್ಷಿಕ ವೆಚ್ಚ ಹೋಗಲಾಗಿ ಉಳಿದ ಉತ್ಪನ್ನವೆಲ್ಲ ಲಿಂಗಾಯತ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮುಟ್ಟಬೇಕು. "ಹೀಗೆ ಬರೆದಿಟ್ಟಿರುವದರಿಂದ ದೇಸಗತಿಯು ಹೋದಂತಾಗಲಿಲ್ಲ. ಇಷ್ಟು ದಿವಸ ಅದರ ಮೇಲೆ ಒಬ್ಬರದೇ ಕಾವಲಿತ್ತು; ಇನ್ನುಮೇಲೆ ಆ ಸಂಸ್ಥಾನಕ್ಕೆ ಸಾವಿರಾರು ಜನ ಸುಶಿಕ್ಷಿತರ ಲಕ್ಷವೂ ರಕ್ಷಣವೂ ಇರುವಂತಾಯಿತು. ವೀರಶೈವ ಮತಾಭಿಮಾನಿಗಳಾದ ಮಹನೀಯರು ತಮ್ಮ ಮನೆಗೆಲಸದಕಿಂತಲೂ ವಿಶೇಷವಾದ ಆಸ್ಥೆಯಿಂದ ಈ ದೇಸಗತಿಯ ಕೆಲಸ ಮಾಡಬೇಕಾಯಿತು. ದೇಸಗತಿಗೆ ಶ್ರೀಮಂತ ಲಿಂಗಪ್ಪ ಸರದೇಸಾಯಿಯವರ ಹೇಸರೇ ಆಚಂದ್ರಾರ್ಕ ನಡೆಯುವದಾಯಿತು. ಸಾವಿರಾರು ವಿದ್ಯಾರ್ಥಿಗಳು, ವಿದ್ಯಾಮೃತದಾನಮಾಡಿ ತಮ್ಮ ಶಿಕ್ಷಣಕ್ಕೆ ಸಹಾಯಕಾರಿಯಾದ ಧನರಾಶಿಯನ್ನಿತ್ತು ಹೋದ ಶ್ರೀಮಂತರನ್ನು ಹಾಡಿ ಹರಸುವದಾಯಿತು. ಇದೇನು ಸಾಮಾನ್ಯಲಾಭವೇ!!

ಶ್ರೀಮಂತ ಸರದೇಸಾಯವರು ವೀರಶೈವ ಸಮಾಜಕ್ಕೆ ಕೊಡಬೇಕೆಂದು ಬರೆದಿಟ್ಟ ಅಸಾಧಾರಣ ದೇಣಗಿಯ ಬಗ್ಗೆ ಆದ ಸರಕಾರೀ ಠರಾವವನ್ನು ಬರೆಯುವದಕ್ಕಿಂತ ಮೊದಲು, ಶ್ರೀಮಂತರ ಸಂಕ್ಷಿಪ್ತ ಚರಿತ್ರೆಯನ್ನು ವಾಚಕ ಮಹಾಶಯರಿಗೆ ತಿಳಿಸುವದು ಸದ್ಯ ಪ್ರಸಂಗಕ್ಕೆ ಸಯುಕ್ತಿಯಾಗಿ ಕಂಡುಬಂದದರಿಂದ ಹಾಗೆ ಮಾಡುತ್ತೇವೆ. ಯಾಕಂದರೆ ಜಗತ್ತವೇ ಆಶ್ಚರ್ಯಗೊಳ್ಳುವಂತೆ ದೃಢಮನಸ್ಸಿನಿಂದ ಬರೆದಿಟ್ಟ ಇವರ ಮೃತ್ಯುಪತ್ರವನ್ನೋದಿದರೆ ಇವರು ಯಾರು! ಇವರ ಚರಿತ್ರವೆಂತು! ಎಂಬ ಲವಲವಿಕೆಯು ಪ್ರತಿಯೊಬ್ಬ ಮನುಷ್ಯನ, ವಿಶೇಷವಾಗಿ ವೀರಶೈವನ ಮನಸಿನಲ್ಲಿ ಹುಟ್ಟದೆ ಎಂದೂ ಇರದು. ಅದರಿಂದ ಆದಷ್ಟು ರೀತಿಯಿಂದ ಶ್ರೀಮಂತ ಸರದೇಸಾಯಿಯವರ ಪರಿಚಯವನ್ನು ಮಾಡಿ ಕೊಡುವದೇ ಗ್ರಂಥಕರ್ತರ ಕರ್ತವ್ಯವಾಗಿರುತ್ತದೆ.

ಶ್ರೀಮಂತರ ಚರಿತ್ರೆ

ಸೊಲ್ಲಾಪುರ ಜಿಲ್ಲೆಯ ಅವರಾದಿಯ ಗೌಡನಾದ ವೀರಗೌಡನೆಂಬವನು, ನವಲಗುಂದ ಸಂಸ್ಥಾನದ (ಸಿರಸಂಗಿ ದೇಸಗತಿಯ) ಮೂಲಪುರುಷನು. ಅವರಾದಿಯ ಗೌಡರಲ್ಲಿ ಶೂರರಾದ ಈರ್ವರು ಅಥಣಿಯ ತಾಲೂಕದೊಳಗಿರುವ, ಸದ್ಯಕ್ಕೆ ವರ್ಷಕ್ಕೆ ಸುಮಾರು ಹದಿನೈದು ಸಾವಿರ (೧೫೦೦೦)ರೂಪಾಯಿ ವಸೂಲಿ ಬರುವ ಕೊಕಟನೂರ ಪರಗಣೆಯ ಹದಿನಾಲ್ಕು ಹಳ್ಳಿಯ ದೇಸಗತಿಯನ್ನು ಸಂಪಾದಿಸಿ, ಕೊಕಟನೂರಲ್ಲಿ ದೊಡ್ಡದೊಂದು ಕಿಲ್ಲೆಯನ್ನು ಕಟ್ಟಿಸಿಕೊಂಡು ಅಲ್ಲಿಯೇ ಇರಹತ್ತಿದರು. ಮುಂದೆ ಈ ದೇಸಾಯರ ಮೂವರು ಅಣ್ಣ ತಮ್ಮಂದಿರೊಳಗೆ ಪಾಲಿನ ಸಲುವಾಗಿ ವ್ಯಾಜ್ಯ ಬೆಳೆಯಲು ವಿಟ್ಟಪ್ಪಗೌಡನೆಂಬವನು ದೇಸಗತಿಯ ತನ್ನ ಪಾಲನ್ನೇ ಒಲ್ಲೆನೆಂದು ಬಿಟ್ಟುಕೊಟ್ಟು, ವಿಜಾಪುರದ ಬಾದಶಹನಲ್ಲಿ ಹೋಗಿ ಸೇವೆಯಲ್ಲಿ ತನಗೊಂದು ಕೆಲಸವನ್ನು ಕೊಡಿರೆಂದು ಕೇಳಿಕೊಂಡನು. ಬಾದಶಹನು ಈತನ ಕುದುರೆಯೇರುವ ಜಾಣ್ಮೆಯನ್ನು ಕಂಡು ಸಂತೋಷಪಟ್ಟು, ಕುದುರೆಯ ಸ್ವಾರನನ್ನಾಗಿ ಈತನನ್ನು ನೇಮಿಸಿದನು. ಸ್ವಲ್ಪ ಕಾಲದೊಳಗೆ ಬಾದಶಹನು ಈತನ ಕಲಿತನಕ್ಕೂ ವಿಶ್ವಾಸಕ್ಕೂ ಮೆಚ್ಚಿ ಈತನನ್ನು ಸಾವಿರ ಕುದುರೆಗಳ ಮೇಲಧಿಕಾರಿಯನ್ನು ಮಾಡಿದನು. ಮುಂದೆ ಸ್ವಲ್ಪ ಕಾಲದಲ್ಲಿಯೇ

(ಸನ್ ೧೫೬೪ನೇ ಇಸವಿಯಲ್ಲಿ) ದಕ್ಷಿಣದ ಮುಸಲ್ಮಾನೀ ಬಾದಶಹರಿಗೂ, ವಿಜಯನಗರದ ರಾಮರಾಜನಿಗೂ ಘನಘೋರವಾದ ತಾಳೀಕೋಟಿಯ ಕಾಳಗವೆಸಗಿತು. ರಾಮರಾಜನು ಬಲಿಷ್ಠನಿದ್ದದರಿಂದವನು ಎಂದೂ ಮಣಿಯುವದಿಲ್ಲೆಂದು ವಿಜಾಪುರದ ಬಾದಶಹನಿಗೆ ಗೊತ್ತಾಗಿ, ಅವನು ಬಹಳ ಚಿಂತಾಕ್ರಾಂತನಾಗಿದ್ದನು. ಆ ಸಮಯವನ್ನರಿದು ಈ ವಿಟ್ಟಪ್ಪಗೌಡನು ಆ ಕಾಳಗದಲ್ಲಿ ಜೀವದ ಮೇಲಿನ ಹಂಗುದೊರೆದು ಒಳ್ಳೇ ಕಲಿತನದಿಂದ ಕಾದಿ, ರಾಮರಾಜನ ಶಿರವನ್ನು ಕೊಯ್ದು ತಂದು, ತನ್ನ ಒಡೆಯನಿಗೊಪ್ಪಿಸಿದನು. ಬಾದಶಹನು ಇವನ ಶೌರ್ಯಕ್ಕೂ ಸ್ವಾಮಿಭಕ್ತಿಗೂ ಸಂತೋಷಪಟ್ಟು ೧೨ಲಕ್ಷ ರೂಪಾಯಿಯ ನವಲಗುಂದ ದೇಸಗತಿಯನ್ನು ವಿಟ್ಟಪ್ಪನಿಗೆ ಉಚಿತವಾಗಿ ಕೊಟ್ಟು "ಮೂರು ಲಕ್ಷ ವರಹದ ಮಂಡೀ ಪಾಚ್ಚಾ" ಎಂಬ ಬಿರುದನ್ನು ಹೊಗಳಿಸಿಕೊಳ್ಳಲಿಕ್ಕೆ ಶಾಸನವನ್ನಿತ್ತನು.

ತಾಳಿಕೋಟಿಯ ಕಾಳಗದಿಂದ ಬಾದಶಹನ ಪ್ರೀತಿಯು ವಿಟ್ಟಪ್ಪನಲ್ಲಿ ದಿನೇ ದಿನೇ ಬೆಳೆಯ ಹತ್ತಿದಂತೆ ಅವನ ಶೌರ್ಯದಲ್ಲಿಯೂ, ಪ್ರಾಮಾಣಿಕತನದಲ್ಲಿಯೂ ಅವನ ವಿಶ್ವಾಸವು ಬೆಳೆಯಹತ್ತಿತು. ಈಗ ಕರವೀರ ಸಂಸ್ಥಾನಕ್ಕೆ ಸೇರಿರುವ ತೊರಗಲ್ಲಿನ ಕಿಲ್ಲೆಯನ್ನು ಬಾದಶಹನು ತಕ್ಕೊಳ್ಳಬೇಕಾಗಿತ್ತು. ಈ ವಿಟ್ಟಪ್ಪನೇ ಇದಕ್ಕೆ ತಕ್ಕ ಬಂಟನೆಂದು ತಿಳಿದು, ಈ ಕಲಿತನದ ಕೆಲಸಕ್ಕೆ ಇವನಿಗೇ ವೀಳೆಯನ್ನು ಕೊಡಲು ಈ ವೀರನು ಆ ಭದ್ರವಾದ ಕೋಟೆಯನ್ನು ತಡವಿಲ್ಲದೆ ಅಯ್ದಾರು ದಿವಸಗಳಲ್ಲಿಯೇ ಕೈವಶಮಾಡಿಕೊಂಡು, ಬಾದಶಹನ ಒಪ್ಪಿಗೆಯಿಂದ ತಾನು ಅಲ್ಲಿಯ ಸುಭೇದಾರನಾಗಿ ಅಲ್ಲಿಯೇ ನಿಂತುಕೊಂಡನು. ಈ ಬಗ್ಗೆ ಕುರುಹುಗಳು ತೊರಗಲ್ಲ ಕಿಲ್ಲೆಯಲ್ಲಿ ಈ ಹೊತ್ತಿಗೂ ಉಂಟು. ಮುಂದೆ ಬಾದಶಹನ ಹೇಳಿಕೆಯಂತೆ ನವಲಗುಂದಕ್ಕೆ ಹೋಗಿ, ವಿಟಪ್ಪಗೌಡನು ಕೆಲವು ದಿವಸಗಳ ಮೇಲೆ ಪರಲೋಕವಾಸಿಯಾದನು. ಆ ಮೇಲೆ ಅವನ ಸಂತತಿಯವರು ನವಲಗುಂದದಲ್ಲಿ ನಿಂತುಕೊಂಡರು. ನವಲಗುಂದದಲ್ಲಿ ನಿಂತಬಳಿಕ ಎಷ್ಟೋ ಜನರು ದೇಸಾಯರಾದರು. ಅವರೆಲ್ಲರಲ್ಲಿ ಜಾಯಪ್ಪನೆಂಬ ಒಬ್ಬ ದೇಸಾಯಿಯು ಮಾತ್ರ ಬಹುಶೂರನೂ, ಚತುರನೂ, ರಸಿಕನೂ ಇದ್ದನಂತೆ. ಅವನ ಸಂಬಂಧವಾದ ಕಥೆಗಳನ್ನು ಈ ಪ್ರಾಂತದವರು ಒಳ್ಳೇ ಅಭಿಮಾನದಿಂದಲೂ ಆಸ್ಥೆಯಿಂದಲೂ ಮನೋಹರವಾಗಿ ಹೇಳುವರಲ್ಲದೆ, ಅವನ ಮುಖದಿಂದ ಹೊರಟ ನುಡಿಗಳು ಒಳ್ಳೇ ಅನುಭವದ ವಚನಗಳೆಂದು ತಿಳಿದು ಅವುಗಳನ್ನು ಒಟ್ಟುಗೂಡಿಸಿ ಬರೆದಿಟ್ಟಿರುವರು. ಪುಣೆಯ ಪೇಶ್ವೆಯರ ಮಂತ್ರಿಯಾದ ಇತಿಹಾಸಪ್ರಸಿದ್ಧ ನಾನಾ ಫಡನೀಸನು ಸಹ ಈ ಜಾಯಪ್ಪ ದೇಸಾಯಿಯ ಜಾಣ್ಮೆಗೆ ಮೆಚ್ಚಿ, ಇವನನ್ನು ಪ್ರೀತಿಸುತ್ತಿದ್ದನು. ಈ ಜಾಯಪ್ಪನ ಚಾತುರ್ಯವನ್ನು ಜನರು ಕಥೆಮಾಡಿ ಹೇಳುತ್ತಿರುತ್ತಾರೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಉದಾಹರಣಾರ್ಥವಾಗಿ ಇಲ್ಲಿ ಕೊಡುತ್ತೇವೆ.

ಜಾಯಪ್ಪ ದೇಸಾಯಿಯ ಜಾಣ್ಮೆ

ಒಂದಾನೊಂದು ದಿವಸ ಪುಣೆಯ ಪೇಶವೆಯು ತನ್ನ ಸಾಮಂತ ಸಂಸ್ಥಾನಿಕನಾದ ಈ ಜಾಯಪ್ಪ ದೇಸಾಯಿಯನ್ನು ರಾಜ್ಯಸೂತ್ರದ ಕೆಲವೊಂದು ಕಾರಣದಿಂದ ಪ್ರತಿಬಂಧಿಸಬೇಕಾದುದರಿಂದ ತನ್ನ ನಂಬುಗೆಯ ಸರದಾರರನ್ನು ಕರೆಯಿಸಿ, ನವಲಗುಂದದ ಜಾಯಪ್ಪ ದೇಸಾಯಿಯನ್ನು ಒಮ್ಮಿಂದೊಮ್ಮೆ ಪ್ರತಿಬಂಧಿಸಿ ಅವನನ್ನು ಇಲ್ಲಿಗೆ ತೆಗೆದುಕೊಂಡು ಬರಬೇಕೆಂತಲೂ, ಈ ವಾರ್ತೆಯು ಅವನಿಗೆ ತಿಳಿದರೆ ಅವನು ನಿಮಗೆ ಸಿಗಲಾರನಾದುದರಿಂದ ನೀವು ಈ ರಹಸ್ಯವನ್ನು ಯಾರ ಮುಂದೆಯೂ ಉಸುರದೆ, ಅಲ್ಲಿಯ ವರೆಗೆ ಹೋಗಿ ಸ್ವಾಭಾವಿಕವಾಗಿ ಆತನ ದರ್ಶನ ತಕ್ಕೊಂಡು, ಕುಶಲಪ್ರಶ್ನೆಗಳಿಂದ ಕ್ಷೇಮವಾರ್ತೆಯನ್ನು ವಿಚಾರಿಸುತ್ತ,

ಒಮ್ಮಿಂದೊಮ್ಮೆ ಆತನನ್ನು ಚತುರ್ಭುಜ ಮಾಡಬೇಕೆಂತಲೂ ಹೇಳಿ ಕಳಿಸಿದನು. ಈ ಕಪಟ ರಾಜತಂತ್ರವನ್ನು ಬಲ್ಲ ನಾನಾ ಫಡನೀಸನು ಜಾಯಪ್ಪ ದೇಸಾಯಿಯ ಹಿತಚಿಂತಕನಾದುದರಿಂದ ಅವನನ್ನು ಉಳಿಸಬೇಕೆಂದೂ, ಸುಮ್ಮನೆ ಬಿಟ್ಟರೆ ಜಾಯಪ್ಪನು ಪರಿಣಾಮಗಾಣನೆಂದೂ, ಇದಕ್ಕೆ ಈಗಲೇ ಯಾವದೊಂದು ಚತುರೋಪಾಯವನ್ನು ಕಲ್ಪಿಸಬೇಕೆಂತಲೂ ಯೋಚಿಸಿ, ಆ ಪ್ರಯಾಣೋನ್ಮುಖರಾದ ಸರದಾರರನ್ನು ಕುರಿತು "ಎಲೈ ಶೌರ್ಯಸಾಗರರಾದ ಸರದಾರರೇ! ನೀವು ಹೇಗೂ ನವಲಗುಂದಕ್ಕೆ ಹೋಗುತ್ತೀರಿ, ಅಲ್ಲಿ ನಮ್ಮದೊಂದಿಷ್ಟು ಕೆಲಸವಿದೆ. ಮಂತ್ರೋಷಧಿಸಿದ್ಧಿಯಾದ ಈ ಜಾಯಫಲವನ್ನು (ಜಾಜೀಕಾಯಿಯನ್ನು) ಜಾಯಪ್ಪ ದೇಸಾಯರಿಗೆ ಮುಟ್ಟಿಸುವದು ಅವಶ್ಯವಿದೆ. ನೀವು ಹೋದೊಡನೆ ತಡಮಾಡದೆ ಇದನ್ನು ಆತನ ಕಯ್ಯೊಳಗೆ ಕೊಟ್ಟರೆ, ಎರಡೊಂದು ಕೆಲಸ ಮಾಡಿದಂತಾಗುತ್ತದೆ. ನಿಮ್ಮ ಕಾರ್ಯಗೌರವಕಿಂತಲೂ ಈ ಜಾಯಫಳವನ್ನು ಜಾಯಪ್ಪನಿಗೆ ತಲ್ಪಿಸುವದು ಮಹತ್ವದ್ದಾಗಿರುವದು. ಕಾರಣ ಮರೆಯದೆ ಎಲ್ಲಕ್ಕೂ ಮೊದಲು ಆತನಿಗೆ ನನ್ನ ಹೆಸರು ಹೇಳಿ ಇದನ್ನು ತಲುಪಿಸಿರಿ. ಎಂದು ಹೇಳಲು ಸರದಾರರು ಆ ಜಾಜೀಕಾಯಿಯನ್ನು ಇಸಕೊಂಡು ನೆಟ್ಟಗೆ ನವಲಗುಂದಕ್ಕೆ ಹೋದರು. ಇವರು ಹೋದಾಗ ದೇಸಾಯರು ವಾಡೆಯೊಳಗೆ ಇದ್ದರು. ಜಾಯಪ್ಪ ದೇಸಾಯರು ವಾಡೆಯಲ್ಲಿದ್ದದ್ದನ್ನು ತಿಳಿದು ಸರದಾರರು ಸಂತೋಷಪಟ್ಟು ಆಲೋಚಿಸಿದ್ದೇನೆಂದರೆ, "ಶ್ರೀಮಂತ ಪೇಶವೆ ಸರಕಾರದಿಂದ ಸರದಾರರು ಬಂದಿರುವರೆಂದು ದೂತರೊಡನೆ ವಾರ್ತೆಯನ್ನು ಕಳಿಸಿದರೆ, ದೇಸಾಯರು ಒಂದು ವೇಳೆ ಹೆದರಬಹುದು, ಹಾಗೆ ಮಾಡುವದಕ್ಕಿಂತ ಸಚಿವ ಶಿರೋಮಣಿಯಾದ ನಾನಾ ಫಡಣವೀಸರು ಕೊಟ್ಟಿದ್ದ ಜಾಯಫಲವನ್ನು ಕೊಟ್ಟು ಅವರ ಕಯ್ಯಲ್ಲಿ ಕೊಡೆಂದು ಹೇಳಿ ದೂತರನ್ನು ಕಳಿಸಿದರೆ, ಅದರ ಕಾರ್ಯಕಾರಣಭಾವವನ್ನು ವಿಚಾರಿಸಲಿಕ್ಕೆ ತಾವಾಗಿ ಆತುರದಿಂದ ಹೊರಗೆ ಬರುತ್ತಾರೆ. ಬಂದಕೂಡಲೆ ಅವರನ್ನು ಪ್ರತಿಬಂಧಿಸಿದರಾಯಿತು. ನಾವು ಬಂದ ಕಾರ್ಯವು ಸಹಜವಾಗಿಯೇ ನೆರವೇರುವದು. ಈ ಜಾಯಫಲವೇ ನಮಗೆ ಫಲಕಾರಿಯಾಗುವದು" ಎಂದು, ಅಲ್ಲಿದ್ದ ಒಬ್ಬ ದೂತನನ್ನು ಕರೆದು "ಇಗೋ ಈ ಜಾಯಫಲವನ್ನು ನಿಮ್ಮ ಒಡೆಯರಿಗೆ ಮುಟ್ಟಿಸಿ, ಇದನ್ನು ಪುಣೆಯ ಮಂತ್ರಿವರ್ಯರಾದ ನಾನಾ ಫಡಣವೀಸರು ಕೊಟ್ಟು ಕಳುಹಿಸಿರುವರೆಂದೂ, ನಿಮ್ಮ ದರ್ಶನಾತುರರಾದ ಸೇವಕರೀರ್ವರು ಮಹಾದ್ವಾರದ ಸನ್ನಿಧಿಯಲ್ಲಿರುವರೆಂದೂ ಹೇಳು" ಎಂದು ಹೇಳಿ ಕಳುಹಿಸಲು, ದೂತನು ವಾಡೆಯೊಳಗೆ ಓಡಿ ಹೋಗಿ ಸರದೇಸಾಯರ ಕಯ್ಯಲ್ಲಿ ಜಾಜಿಕಾಯಿಯನ್ನು ಕೊಟ್ಟು, ಅವರು ಹೇಳಿದಷ್ಟನ್ನು ಒಡನುಡಿದನು. ಜಾಯಪ್ಪ ದೇಸಾಯರು ಜಾಯಫಳವನ್ನು ನೋಡುತ್ತ, ಆನಂದಾಶ್ಚರ್ಯ ಭಯಚಕಿತ ಹೃದಯರಾಗಿ ನಾನಾ ಫಡಣವೀಸರ ಇಂಗಿತವನ್ನು ಆ ಜಾಯಫಲದಿಂದಲೇ ತಿಳಿದು ಅವರ ಜಾಣ್ಮೆಗೆ ತಲೆದೂಗಿ ನಗುತ್ತ "ಸೇವಕಾ, ಬಾಗಿಲಲ್ಲಿ ನಿಂತಿದ್ದ ಸರದಾರರಿಗೆ ದೇಸಾಯರು ವಾಡೆಯಲ್ಲಿಲ್ಲ"ವೆಂದು ಹೇಳೆಂದಾಜ್ಞಾಪಿಸಲು, ಆ ದೂತನು ಬಂದು ಹಾಗೆಯೇ ಹೇಳಿದನು. ಸರದಾರರೀರ್ವರು ಸಂದೇಹಗ್ರಸ್ತರಾಗಿ ಅನೇಕ ಯುಕ್ತಿ ಪ್ರಯುಕ್ತಿಗಳಿಂದ ದೇಸಾಯರನ್ನು ಹಿಡಿಯಬೇಕೆಂದು ಎಷ್ಟು ಪ್ರಯತ್ನಿಸಿದರೂ ಅವರ ಪ್ರಯತ್ನವೆಲ್ಲ ಗುಡ್ಡಕ್ಕೆ ಕಲ್ಲುಹೊತ್ತಂತಾಯಿತು. ಜಾಯಪ್ಪ ದೇಸಾಯರು ಸರದಾರರಿಗೆ ಗೊತ್ತಾಗದಂತೆ ಭದ್ರವಾದ ಸ್ಥಳದಲ್ಲಿ ಕೂತುಕೊಂಡು "ಪೇಶವೆ ಸರಕಾರದ ಫಡಣೀಸಿಯ ಜಾಗೆಯ ಮೇಲೆ ಪ್ರತಿಷ್ಠಿತರಾಗಿ, ನಾ!ನಾ! ಎಂದು ಮಂತ್ರಿತ್ವವನ್ನು ಮಾಡಿದವರಲ್ಲಿ ನಮ್ಮ ನಾನಾ ನವರೇ ಅಗ್ರಗಣ್ಯರಲ್ಲದೆ ಉಳಿದವರೆಲ್ಲ ಚಾತುರ್ಯದಲ್ಲಿ ಇವರ ವ್ಯಾಸಂಗಕ್ಕೆ ಹತ್ತರು" ಎಂಬದಾಗಿ ಅವರನ್ನು ಕೊಂಡಾಡುತ್ತ, ಬಂದ ಅನಿಷ್ಟವನ್ನು ದೂರಮಾಡಿದರು. ದೇಸಾಯರ ದುಷ್ಟಗೃಹಾಚಾರಕ್ಕೆ ಆ ಜಾಯಫಳವೇ ಮಹಾಮಂತ್ರವಾಗಿ ರಕ್ಷಣೆಯನ್ನುಂಟುಮಾಡಿತು. ಸರದಾರರೀರ್ವರು ನಿರುಪಾಯರಾಗಿ ಹಿಂದುರಿಗಿ ಹೋಗಿ, ಶ್ರೀಮಂತರಿಗೆ ಜಾಯಪ್ಪ ದೇಸಾಯಿಯು ವಾಡೆಯಲ್ಲಿರದ್ದರಿಂದ ನಾವು ಹಾಗೆಯೇ ಬರಬೇಕಾಯಿತೆಂದು ಬಿನ್ನವಿಸಿದರು. "ಅರಸನಿಗೆ

ಅರೆಬುದ್ಧಿ" ಎಂಬ ಸಾಮತಿ, ಫಡಣೀಸನು ಸರದಾರರಿಂದ ಸಾಗ್ರ ಸಂಗತಿಯನ್ನು ಕೇಳಿ, ಜಾಯಪ್ಪ ದೇಸಾಯಿಯು ಈ ಸರದಾರರಿಗೆ ಸಿಗದೆ ಇದ್ದುದಕ್ಕೆ ಈ ಜಾಯಫಳವೇ ಕಾರಣವಾಯಿತೆಂದು ಊಹಿಸದೆ ಬಿಡಲಿಲ್ಲ. ನೂರಾರು ಹರದಾರಿಗಳ ಅಂತರದ ಮೇಲಿರುವ ಜಾಯಪ್ಪ ದೇಸಾಯಿಯ ಜಾಣ್ಮೆಯನ್ನು ನಾನಾ ಅವರು ಅಲ್ಲಿಂದಲೇ ತಿಳಿದು ಆನಂದಿಸಿ, "ಜಾಯಾ!ರಸಿಕ ಜನಪದ ರಾಯಾ! ರಾಜಾಸ್ಥಾನಕ್ಕೆ ನಿನ್ನಂತಹ ಕುಶಾಗ್ರಬುದ್ಧಿಯ ರಾಜಹಂಸರೇ ಹುಟ್ಟತಕ್ಕದ್ದು. ನಿನ್ನ ಕುಶಲತ್ವಕ್ಕೆ ಪಾರಾವಾರವೇ ಇಲ್ಲ. ನಿನ್ನಂತಹ ಚತುರೋಪಾಯ ಧುರೀಣನು ನಮ್ಮ ಭರತಖಂಡದ ಸಾರ್ವಭೌಮನಾಗಿರುತ್ತಿದ್ದರೆ ವಿಕ್ರಮಾರ್ಕ ಭೋಜರಾಜರಂತೆ ಲೋಕಪ್ರಖ್ಯಾತಿಯನ್ನು ಹೊಂದುತ್ತಿದ್ದನು. ನಿನ್ನ ಕುಶಾಗ್ರಬುದ್ಧಿಯು ನನಗಿಂತಲೂ ಒಂದು ತೂಕ ಹೆಚ್ಚಿರುವದು. ಜಾಯಫಳವನ್ನು ನೋಡಿದಾಕ್ಷಣವೇ ಮೋರೆ ತಪ್ಪಿಸಿಬಿಟ್ಟದ್ದು ನಿನ್ನ ಅಸಾಧಾರಣ ಧೂರ್ತತ್ವವನ್ನೇ ವ್ಯಕ್ತಪಡಿಸುತ್ತದೆ. ಶಹಬಾಶ!ಶಹಬಾಶ" ಎಂದು ತಲೆದೂಗಿ ಜಾಯಪ್ಪ ದೇಸಾಯಿಯ ಚಾತುರ್ಯವನ್ನು ಕೊಂಡಾಡಹತ್ತಿದನು.

ವಾಚಕ ಮಹಾಶಯರೇ!ಜಾಯಪ್ಪ ದೇಸಾಯಿಯ ಪ್ರತಿಬಂಧವನ್ನು ನಿವಾರಿಸಿದ ಈ ಜಾಯಫಳದ ಮಹಾತ್ಮೆಯು ನಿಮಗೆ ತಿಳಿಯಿತೇ? ಮರಾಠಿ ಭಾಷೆಯಲ್ಲಿ ಜಾಜೀಕಾಯಿಗೆ ಜಾಯಫಳವೆಂದು ಅನ್ನುವದುಂಟು. ನಾನಾ ಫಡಣೀಸನು ಸರದಾರರ ಕಯ್ಯಿಂದ ಜಾಯಫಳವನ್ನು ಕಳಿಸಿಕೊಟ್ಟಿದ್ದರ ಇಂಗಿತವೇನೆಂದರೆ, ಜಾಯಪ್ಪ ದೇಸಾಯಿಯು ನಾನಾ ಅವರ ಪ್ರೀತಿಗೆ ಪಾತ್ರನಾದುದರಿಂದ, ಆತನು ಪ್ರತಿಬಂಧಿಸಲ್ಪಡಬಾರದೆಂತಲೂ, ಅವನನ್ನು ಹೇಗಾದರೂ ಮಾಡಿ ಸರದಾರರಿಗೆ ಸಿಗಗೊಡಬಾರದೆಂತಲೂ ನಾನಾ ಅವರ ಅಂತರಂಗವಿತ್ತು. ಸರದಾರರು ಆಹೊತ್ತೇ ಹೊರಟಿದ್ದರಿಂದ ಬೇರೆ ಮಾರ್ಗದಿಂದ ಜಾಯಪ್ಪ ದೇಸಾಯರಿಗೆ ಈ ಗುಟ್ಟನ್ನು ತಿಳಿಸುವ ಅವಕಾಶವೇ ಇರಲಿಲ್ಲ. ಅದರಿಂದ 'ಜಾಯ' ಅಂದರೆ ಜಾಯಪ್ಪ ದೇಸಾಯಿಯೇ 'ಪಳ' ಅಂದರೆ ಓಡು ಎಂಬದಾಗಿ ಮರಾಠಿ ಭಾಷೆಯಿಂದ ಅನ್ವರ್ಥವಾಗುವ ಜಾಯಫಳವನ್ನು ನಾನಾ ಫಡಣೀಸನು ಕಳಿಸಿಕೊಟ್ಟಿದ್ದು, ಅವನ ಅಗಾಧ ಕಲ್ಪನೆಯನ್ನೇ ದಿಗ್ದರ್ಶನಮಾಡುತ್ತದೆ. ಆದರೆ ಕರಪಲ್ಲವಿಯ ಸಂಜ್ಞೆಗಳನ್ನು ಮಾಡುವವನಿಗಿಂತ ಆ ಸಂಜ್ಞೆಗಳಿಂದ ಅವರ ಇಂಗಿತವನ್ನು ತಿಳಿಯುವವನ ಜಾಣ್ಮೆಯು ಮಿಗಿಲಾಗಿರುವದರಿಂದ ಜಾಯಫಳವನ್ನು ನೋಡಿದಾಕ್ಷಣವೆ, ನಾನಾ ಫಡಣೀಸನ ಅಂತರಂಗಕ್ಕೆ ಅನ್ವರ್ಥವಾಗುವಂತೆ ತರ್ಕಿಸಿದ ಜಾಯಪ್ಪ ದೇಸಾಯಿಯ ಜಾಣ್ಮೆಯು, ಎಷ್ಟೋ ಕಲಾಕುಶಲರಿಂದ ಪರೀಕ್ಷೆಯಾಗದೆ ಇದ್ದ ಅಮೌಲ್ಯವಾಗಿ ಕಾಣುವ ವಜ್ರದ ಹರಳನ್ನು ನೋಡಿದ ಮಾತ್ರವೆ ಇದು ಕಲ್ಲುಸಕ್ಕರೆಯ ಹರಳೆಂದು ಹೇಳಿದ ಅಪ್ರತಿಮ ಶೋಧದೃಷ್ಟಿಯ ನಾನಾ ಫಡಣೀಸನಕಿಂತಲೂ ಒಂದು ಗುಂಜಿ ತೂಕ ಹೆಚ್ಚೆಯೆಂದು ಹೇಳಬಹುದು.

ಜಾಯಪ್ಪ ದೇಸಾಯಿಯು ಕುಶಲನಿದ್ದಂತೆ ರೂಪದಲ್ಲಿ ಬಹುಸುಂದರ ಪುರುಷನಾಗಿದ್ದನಂತೆ. ಈತನ ಚಲುವಿಕೆಗೆ ಮನಸೋತು "ಓರ್ವ ಕಲಾವಂತನಿಯು ಬಹು ದಿವಸದಿಂದ ಈತನ ಭೋಗಸುಖವನ್ನು ಬಯಸುತ್ತಿದ್ದಳು. ಜಾಯಪ್ಪ ದೇಸಾಯಿಯು ಏಕಪತ್ನೀವ್ರತಸ್ಥನಾದುದರಿಂದ ಆಕೆಯ ಬಯಕೆಯು ಪೂರ್ಣವಾಗುವದು ಕಠಿಣವಾಗಿತ್ತು. ಒಂದು ದಿವಸ ಜಾಯಪ್ಪ ದೇಸಾಯಿಯ ದರ್ಬಾರಿನಲ್ಲಿ ಈ ವೇಶ್ಯಾಂಗನೆಯ ನಾಚು ಬಹು ಮನೋಹರವಾಗಿ ಆಯಿತು. ಆಕೆಯ ಗಾನಮಾಧುರ್ಯಕ್ಕೂ ಮೃದುಲಾಸ್ಯಕ್ಕೂ ಸಭಾಸದರೆಲ್ಲರು ತಲೆದೂಗಿದರು. ಅದಕ್ಕೆ ಜಾಯಪ್ಪ ದೇಸಾಯಿಯು ಆನಂದದಿಂದ ಆ ಪಣ್ಯಾಂಗನೆಗ ಏನು ಬೇಡಿದ್ದು ಕೊಡುವೆನು; ನಿನ್ನ ಇಷ್ಟಾರ್ಥವನ್ನು ತಿಳಿಸೆಂದು ಕೇಳಿದ್ದಕ್ಕೆ ಅವಳು "ನಿಮ್ಮ ಅಂಗಸಂಗದ ಹೊರತು ನನಗೆ ಇನ್ನಾವ ಬಯಕೆ ಇಲ್ಲೆಂದು" ಹೇಳಿದಳು. ಅದಕ್ಕೆ ಜಾಯಪ್ಪನು ಕ್ಷಣಮಾತ್ರ ಯೋಚಿಸಿ"ಏಕಾಗವಲ್ಲದು, ನಾಳೆ ಇಂತಿಷ್ಟು ವೇಳೆಗೆ ಸರಿಯಾಗಿ ನನ್ನ ಮೇಲ್ಮಂದಿರಕ್ಕೆ ಬಾ" ಎಂದು ಹೇಳಿ ಆಕೆಯನ್ನು ಕಳುಹಿಸಿ, ತಾನು ಮಾಡತಕ್ಕ ಪೂರ್ವಸಿದ್ಧತೆಯನ್ನು

ಮಾಡಿಸಿ, ಮೇಲ್ಮಂದಿರದಲ್ಲಿ ವಿಶ್ರಮಿಸಿದ್ದನು. ಬಳಿಕಾ ಕಲಾವಂತಿನಿಯು ವಸ್ತ್ರಾಲಂಕಾರ ಭೂಷಿತೆಯಾಗಿ ನಿಯಮಿತ ವೇಳೆಗೆ ಬಂದು ಮೇಲ್ಮಂದಿರದ ಸೋಪಾನ ಮಾರ್ಗವನ್ನೇರಹತ್ತಿದಳು. ಕಡೆಯ ಪಾವಟಿಗೆಯು ಎತ್ತರವಿದ್ದದರಿಂದ ಅದನ್ನು ಎರಲಿಕ್ಕೆ ಬಾರದಂತಾಗಲು, ದೇಸಾಯರ ಹೊರತು ಅಲ್ಲಿ ಬೇರೆಯಾರೂ ಇಲ್ಲದ್ದರಿಂದ ಆತನನ್ನೇ ಕರೆಯಬೇಕಾಯಿತು. ಭೋಗಾತುರಳಾದ ಆ ಭಾಮಿನಿಯು ಕರೆದಕೂಡಲೆ, ದೇಸಾಯಿಯು ಧಿಗ್ಗನೆ ಎದ್ದು ಮೆಟ್ಟಿನ ಮೇಲ್ಬದಿಯಲ್ಲಿ ನಿಂತು ಬೊಗ್ಗಿ "ನಿನ್ನ ಕಯ್ಯನ್ನು ಕೊಡು ಜಗ್ಗಿ ಮೇಲೆ ತೆಗೆದುಕೊಳ್ಳುವೆ"ನೆಂದು ಹೇಳಲಾಗಿ, ಆಕೆಯು ತನ್ನ ಕರಕಮಲವನ್ನಿತ್ತಳು. ಕಾಮಕಲಾಪ್ರವೀಣನಾದ ಜಾಯಪ್ಪನು ಕಳೆಯನ್ನು ನೋಡಿ ಆಕೆಯ ಕಿರಿಬೆರಳನ್ನು ಹಿಚಕಲು, ಆ ಕ್ಷಣವೆ ಆಕೆಯ ಕಾಮಬಾಧೆಯು ಶಾಂತವಾಗಿ ಹೋಯಿತು. ಆಕೆಯು ದೇಸಾಯರನ್ನು ಕುರಿತು "ಇನ್ನು ಇಲ್ಲಿ ನನ್ನ ಕೆಲಸವಿಲ್ಲ; ಮನೆಗೆ ಹೋಗಲು ಆಜ್ಞೆಯನ್ನು ದಯಪಾಲಿಸಬೇಕೆಂದು" ಕರಾಂಜಲಿಯಾಗಿ ಬೇಡಿಕೊಳ್ಳಲು, ಅಪ್ಪಣೆಯೆಂದು ಹೇಳಿ ಆಕೆಯನ್ನು ಕಳುಹಿಸಿಕೊಟ್ಟನು.

ಈ ಜಾಯಪ್ಪ ದೇಸಾಯಿಯ ಸಂಬಂಧವಾದ ಇಂತಹ ಮನೋವೇಧಕ ಕಥೆಗಳನ್ನು ಜನರು ನೂರಾರು ಹೇಳುತ್ತಿರುವರು. ಈತನು ತನ್ನ ಅರಮನೆಯ ಬಾಗಿಲುಗಳನ್ನು ತೆರೆದರೆ ಸಪ್ತಸ್ವರಗಳಾಗುವಂತೆ ರಚನೆಯನ್ನು ಮಾಡಿದ್ದನೆಂದು ಹೇಳುತ್ತಾರೆ. ಸಾರಾಂಶ, ಈತನು ರಾಜಕಲಾವಿಶಾರದನೂ, ರಸಿಕನೂ, ಕುಶಲನೂ ಇದ್ದು ಆಗಿನ ಕಾಲದಲ್ಲಿ ಪ್ರಖ್ಯಾತಿಯನ್ನು ಹೊಂದಿದ್ದನೆಂದು ನಿರ್ವಿವಾದವಾಗಿ ಹೇಳಬಹುದು. ಸವದತ್ತಿಯ ಕಿಲ್ಲೆಯನ್ನು ಈ ಜಾಯಪ್ಪ ದೇಸಾಯಿಯೇ ಕಟ್ಟಿಸಿದನೆಂದು ಹೇಳುತ್ತಾರೆ. ಈ ಕಿಲ್ಲೆಯು ಈ ಹೊತ್ತಿಗೂ ಬಹು ಚಂದದೋರುತ್ತ ನಿಂತುಕೊಂಡಿರುವದು.

ನವಲಗುಂದವು ಕೈಬಿಟ್ಟು, ಸಿರಸಂಗಿಯು ಪ್ರಾಪ್ತವಾದದ್ದು

ಜಾಯಪ್ಪನ ತರುವಾಯ ಮುಂದೆ ಮೈಸೂರಿನ ಹೈದರಲ್ಲಿಯೂ, ಅವನ ಮಗನಾದ ಟೀಪುಸುಲ್ತಾನನೂ ಇತಿಹಾಸ ಪ್ರಸಿದ್ಧವಾದ ನರಗುಂದವನ್ನು ತೆಗೆದುಕೊಳ್ಳಲಿಕ್ಕೆ ಬಂದಾಗ್ಗೆ, ಈ ನವಲಗುಂದವನ್ನೂ ತೆಗೆದುಕೊಂಡರು. ಆಗಿನ ನವಲಗುಂದದ ದೇಸಾಯಿಯು ಎಂದೂ ಯುದ್ಧ ಮಾಡಿದವನಲ್ಲ. ಶಿವಪೂಜೆಯಲ್ಲಿ ಮಾತ್ರ ಒಳ್ಳೇ ನಿಷ್ಠೆಯುಳ್ಳನಾಗಿದ್ದನು. ನವಲಗುಂದವು ಕೈಬಿಟ್ಟು ಹೋದರೂ ಈ ಶರಣನು ಶಿವಪೂಜೆಯನ್ನು ಬಿಡಲಿಲ್ಲ. ಸ್ವಲ್ಪ ಕಾಲದಲ್ಲಿಯೇ ಇಂಗ್ಲೀಷರಿಗೂ, ಟೀಪುನಿಗೂ ಸನ್ ೧೭೯೯ನೇ ಇಸವಿಯಲ್ಲಿ ಶ್ರೀರಂಗಪಟ್ಟಣದ ಹತ್ತರ ಮೈಸೂರ ಕಡೆಯ ಯುದ್ಧವಾಗಿ, ಟೀಪು ಮರಣ ಹೊಂದಿದರಿಂದ ನವಲಗುಂದವು, ಆ ಯುದ್ಧದಲ್ಲಿ ಇಂಗ್ಲಿಷರ ಸಹಾಯಕರಾಗಿದ್ದ ಪೇಶವೆಯರ ಪಾಲಿಗೆ ಹೋಯಿತು. ಆದರೆ ಯುದ್ಧದ ವೆಚ್ಚಕ್ಕಾಗಿ ಪುಣೆಯ ಶ್ರೀಮಂತರು (ಪೇಶವೆಯರು) ಅದನ್ನು ಎರಡನೆಯವರ ಕಡೆಗೆ ಒತ್ತೆ ಹಾಕಿದರು. ಶರಣ ದೇಸಾಯಿಯು ನನ್ನ ನವಲಗುಂದ ದೇಸಗತಿಯನ್ನು ನನಗೆ ಬಿಟ್ಟು ಕೊಡಿರೆಂದು ಪೇಶವೆಯರನ್ನು ಕೇಳಿಕೊಳ್ಳಲು" ಈಗ ಅದು ಬೇರೊಬ್ಬರ ಕಡೆಗೆ ಒತ್ತೆಯದೆ; ಒತ್ತೆಯಿಂದ ಬಿಟ್ಟು ಬಂದ ಬಳಿಕ ಕೊಡುತ್ತೇವೆ; ತುರ್ತ ಪೋಟಗಿಯ ವೆಚ್ಚದ ಸಲುವಾಗಿ ಇದನ್ನು ತಕ್ಕೊಳ್ಳಿರೆಂ"ದು ಸುಮಾರು ಇಪ್ಪತ್ನಾಲ್ಕು ಸಾವಿರ (೨೪೦೦೦) ರೂಪಾಯಿ ಉತ್ಪನ್ನದ ಸಿರಸಂಗಿ ಮೊದಲಾದ ಹತ್ತು ಹಳ್ಳಿಗಳನ್ನು ಕೊಟ್ಟರು. ಅಂದಿನಿಂದ ದೇಸಾಯರು ನವಲಗುಂದ ಬಿಟ್ಟು ಬರುವ ಹಾದಿಯನ್ನೇ ನೋಡುತ್ತ ಸಿರಸಂಗಿಯಲ್ಲಿ ನಿಂತರು. ಮುಂದೆ ಪೇಶವೆಯರ ರಾಜ್ಯವು ಸನ್ ೧೮೧೮ನೇ ಇಸವಿಯಲ್ಲಿ ಆದ ಮಹಾರಾಷ್ಟ್ರದ ಕಡೆಯ ಯುದ್ಧದಿಂದ ಇಂಗ್ಲೀಷ ಸರಕಾರಕ್ಕೆ ಸೇರಿದ್ದರಿಂದ, ದೇಸಾಯರು ನವಲಗುಂದದ ಆಶೆಯನ್ನು ಬಿಟ್ಟು, ಸಿರಸಂಗಿಯಲ್ಲಿಯೇ ನೆಲೆಗೊಂಡು ವಾಸಮಾಡುವದಾಯಿತು.

ರಾಯಪ್ಪನು ಶ್ರೀಮಂತನಾದದ್ದು

ಈ ದೇಸಗತಿಗೆ ವಂಶಪರಂಪರವಾಗಿ ಜಾಯಪ್ಪ ದೇಸಾಯಿ, ಲಿಂಗಪ್ಪ ದೇಸಾಯಿ ಎಂಬ ಎರಡೇ ಹೆಸರುಗಳು ನಡೆಯುತ್ತ ಬಂದಿರುತ್ತವೆಂದು ತಿಳಿಯುತ್ತದೆ. ಸನ್ ೧೮೪೯ನೇ ಇಸವಿಯ ಸುಮಾರಕ್ಕೆ ಸಿರಸಂಗಿಯಲ್ಲಿದ್ದ ಜಾಯಪ್ಪನೆಂಬ ದೇಸಾಯಿಯು ಮೃತನಾದನು. ಆತನು ತೀರುವದಕ್ಕಿಂತ ಮುಂಚೆ ೨-೩ ತಿಂಗಳು ಮೊದಲು ಅವನ ಚಿಕ್ಕ ಹೆಂಡತಿ ಉಮಾಬಾಯಿಯೆಂಬವರು ಗರ್ಭಿಣಿಯಿದ್ದು, ಗಂಡು ಕೂಸನ್ನು ಹೆತ್ತರು; ಎರಡು ವರ್ಷದ್ದಾಗಿ ಆ ಕೂಸು ಮೃತವಾಯಿತು. ಮುಂದೆ ದತ್ತಪುತ್ರರನ್ನು ತೆಗೆದುಕೊಳ್ಳುವ ಬಗ್ಗೆ ವಿಚಾರ ನಡೆದು ಹಿರಿಯ ಹೆಂಡತಿಯಾದ ಗಂಗಾಬಾಯಿಯೆಂಬವರು "ನಾವು ನಮ್ಮ ಸಿರಸಂಗಿಯ ದೇಸಗತಿಗೆ ದತ್ತಪುತ್ರರನ್ನು ಮಾಡಿಕೊಳ್ಳುವವರಿದ್ದೇವೆ. ಬೇಕಾದವರು ನಿಮ್ಮ ನಿಮ್ಮ ಮಕ್ಕಳನ್ನು ತೆಗೆದುಕೊಂಡು ಬನ್ನಿ" ಎಂದು ತಮ್ಮ ಜಾತಿಯ (ಕುಡ ಒಕ್ಕಲಿಗರ) ಜನಾಂಗದವರಿಗೆ ಪ್ರಕಟನಾ ಪತ್ರಿಕೆಯಿಂದ ಪ್ರಸಿದ್ಧ ಮಾಡಿದರು. ಎಷ್ಟೋ ಜನರು ತಮ್ಮ ತಮ್ಮ ಮಕ್ಕಳನ್ನು ಕರಕೊಂಡು ಸಿರಸಂಗಿಗೆ ಬಂದರು. ಮಿರಜ ಸಂಸ್ಥಾನಕ್ಕೆ ಸೇರಿದ ಲಕ್ಷ್ಮೇಶ್ವರ ತಾಲೂಕಿನಲ್ಲಿ ವನಸಿಗ್ಗಲಿ ಎಂಬದೊಂದು ಗ್ರಾಮವದೆ. ಅಲ್ಲಿ ಗೂಳಪ್ಪನೆಂಬೋರ್ವ ರೈತನಿದ್ದನು. ಅವನಿಗೆ ನಾಲ್ವರು ಗಂಡು ಮಕ್ಕಳು. ಕಡೆಹುಟ್ಟ ಮಗನ ಹೆಸರು ರಾಯಪ್ಪ. ರಾಯಪ್ಪನು ರೂಪದಿಂದ ಚೆಲುವನಿದ್ದನು. ಮುಖಲಕ್ಷಣವು ಸಲ್ಲಕ್ಷಣವಾಗಿತ್ತು. ಅವನು ಚಿಕ್ಕವನಾದರೂ ಒಳ್ಳೇ ಬುದ್ಧಿವಂತನಿದ್ದನು. ದಿನದಿನಕ್ಕೆ ಬಿದಿಗಿಯ ಚಂದ್ರನಂತೆ ಅವನು ಬೆಳೆಯುತ್ತಿದ್ದನು. ಎಲ್ಲರಂತೆ ವನಸಿಗ್ಗಲಿಯ ಗೂಳಪ್ಪನಾದರೂ ತನ್ನ ಚಿಕ್ಕಮಗನಾದ ರಾಯಪ್ಪನನ್ನು ಹಿರಿಯ ಮಗನೊಂದಿಗೆ ಸಿರಸಂಗಿಗೆ ಕಳಿಸಿಕೊಟ್ಟನು. ತರುವಾಯ ಅಲ್ಲಿ ಕೂಡಿದ ಹುಡುಗರಲ್ಲಿ ರೂಪರೇಖಾ ಸುಲಕ್ಷಣಗಳಿಂದಲೂ, ಬುದ್ಧಿವಂತಿಕೆಯಿಂದಲೂ ಈ ವನಸಿಗ್ಗಲಿಯ ರಾಯಪ್ಪನೇ ಪಸಂದಿಸಲ್ಪಟ್ಟ ಪ್ರಕಾರಕ್ಕೆ, ಈ ರಾಯಪ್ಪನನ್ನೇ ವಿಧಾನಪೂರ್ವಕ ಸಿರಸಂಗಿಯ ದೇಸಗತಿಗೆ ದತ್ತಕ ಮಾಡಿಕೊಂಡು, ಆತನಿಗೆ "ಲಿಂಗಪ್ಪ ದೇಸಾಯಿ"ಎಂದು ಹೆಸರಿಟ್ಟು, ಪ್ರೀತಿಯಿಂದ ಅಪ್ಪಾಸಾಹೇಬ ಎಂದು ಕರೆಯಹತ್ತಿದರು. ಈ ದತ್ತಕವು ಚಿಕ್ಕ ಹೆಂಡತಿಯಾದ ಉಮಾಬಾಯಿಯವರ ಮನಸಿಗೆ ಬರಲಿಲ್ಲ. ಕೂಡಲೆ ವ್ಯಾಜ್ಯಗಳು ಬೆಳೆದು ಸನ್ ೧೮೮೦ನೆಯ ಇಸವಿಯ ಸುಮಾರಕ್ಕೆ, ಹಿಂದೆ ಹೇಳಿದಂತೆ ದಕ್ಷಿಣ ಭಾಗದ ಕಮಿಶನರರಾಗಿದ್ದ ಮೆ॥ಕ್ರಾಫರ್ಡಸಾಹೇಬ ಬಹದ್ದೂರವರು ಈ ದತ್ತಕವನ್ನು ರದ್ದಮಾಡಿದರು. ಆದರೆ ಈ ವ್ಯಾಜ್ಯವು ಮುಂದೆ ಮುಂಬಯಿ ಸರಕಾರದ ತನಕ ನಡೆದು ಸನ್ ೧೮೮೧ರಲ್ಲಿ ದತ್ತಕವು ಸ್ಥಿರವಾಯಿತು. ಶ್ರೀಮಂತ ಅಪ್ಪಾಸಾಹೇಬರು ಅಂದಿನಿಂದ ಸಂಸ್ಥಾನಕ್ಕೆ ನಿರಾತಂಕವಾಗಿ ಒಡೆಯರಾದರು. ದತ್ತಕ ತೆಗೆದುಕೊಂಡಾಗ್ಗೆ ಇವರಿಗೆ ೧೧ ವರ್ಷಗಳಾಗಿದ್ದವು. ಆಗ ಇವರು ಅಭ್ಯಾಸಕ್ಕಾಗಿ ಸರದಾರರ ಮಕ್ಕಳೊಂದಿಗೆ ಕೊಲ್ಲಾಪುರ ರಾಜಾರಾಮ ಕಾಲೇಜಕ್ಕೆ ಕಳಿಸಲ್ಪಟ್ಟರು. ಮುಂದೆ ಕೆಲವು ಕಾಲದ ಮೇಲೆ, ಮೇಲೆ ಹೇಳಿದ ವ್ಯಾಜ್ಯ ಉದ್ಭವಿಸಲು ಇವರಿಗೆ ಅಭ್ಯಾಸ ಮಾಡಲಿಕ್ಕೆ ಸಾಕಷ್ಟು ಅವಕಾಶವು ದೊರೆಯಲಿಲ್ಲ. ಆದರೂ ದೊರೆತಷ್ಟು ಕಾಲದಲ್ಲಿ ಮರಾಠಿ, ಸಂಸ್ಕೃತ, ಇಂಗ್ಲೀಷ, ಕನ್ನಡ ಭಾಷೆಗಳ ಜ್ಞಾನವನ್ನು ತಕ್ಕಮಟ್ಟಿಗೆ ಮಾಡಿಕೊಂಡರು. ಇವರು ಶಾಲೆಯಲ್ಲಿ ೫ನೆಯ ಇಯತ್ತೆಯ ವರೆಗೆ ಮಾತ್ರ ಇಂಗ್ಲೀಷವನ್ನು ಕಲಿತಿದ್ದರೂ ಮುಂದೆ ವಾಚನ ಗ್ರಂಥಾವಲೋಕಗಳಿಂದ ಆ ವಿದ್ಯೆಯನ್ನು ಬಲಿಸಿದರು. ಯಾವ ಪರೀಕ್ಷೆಯನ್ನು ಕೊಟ್ಟದ್ದಿಲ್ಲವಾದರೂ ಮೇಲ್ತರದ ಶಿಕ್ಷಣವನ್ನು ಹೊಂದಿದವರಷ್ಟು ಇಂಗ್ಲೀಷ ಜ್ಞಾನವು ಇವರಿಗಾಗಿತ್ತು. ವ್ಯವಹಾರಜ್ಞಾನ, ದೂರದೃಷ್ಟಿ, ವಾಕ್ಚಾತುರ್ಯ ಮತ್ತು ಸುಶೀಲತೆ ಇವು ಇವರಲ್ಲಿ ಜನ್ಮದಾರಭ್ಯ ಹುಟ್ಟಿ ಆಯುರ್ಮರ್ಯಾದೆಗಿಂತಲೂ ಪೂರ್ಣತ್ವವನ್ನು ಹೊಂದಿದ್ದವೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಸತ್ಕಾರ್ಯಕ್ಕೆ ಸಹಾಯವನ್ನು ಬೇಡುವವರಿಗೆ ಕೊಡಗೈ ದೊರೆಯು ಈತನೇ ಎಂದರೂ ಸಲ್ಲುವದು. ಇವರು ಶ್ರೀಮಂತರಾದರೂ, ದೈವುಳ್ಳವರ ಕೂಡಲೂ, ಬಡವರ ಕೂಡಲೂ ಸಮದೃಷ್ಟಿಯಿಂದ ನಡೆದುಕೊಳ್ಳುತ್ತಿದ್ದರು. ಅರಮನೆಯಲ್ಲಿ ಪಾಲನಾರ್ಥವಾಗಿ ಅಥವಾ ಆಶ್ರಯಕ್ಕಾಗಿ ಬಂದ ಅನ್ಯರ ಮಕ್ಕಳೆಷ್ಟೋ ಇರುತ್ತಿದ್ದರೂ ಅವುಗಳಲ್ಲಿ ಒಂದಾದರೂ ಹಡೆದವರನ್ನು ನೆನಸುತ್ತಿದ್ದಿಲ್ಲ. ಕೇಡ ಬಗೆದವರಿಗೂ ಕೂಡ ಶ್ರೀಮಂತರು ಹಿತವನ್ನುಂಟುಮಾಡುತ್ತಿದ್ದರು. ಶ್ರೀಮಂತರ ನಿಲುವಿಕೆಯು ಎತ್ತರ, ಮೈಕಟ್ಟು ದುಂಡು, ಮತ್ತು ಮಾಟವಾದದ್ದು, ಆಕೃತಿಯು ವಿಶಾಲವಾದದ್ದು, ರೂಪದಲ್ಲಿ ಸುಂದರ, ಮುಖಲಕ್ಷಣವು ಕಳೆಯುಳ್ಳದ್ದೂ, ಗಂಭೀರವಾದದ್ದೂ ಇತ್ತು; ಹಲ್ಲುಗಳು ಕಾಂತಿಯುಳ್ಳವು; ಕಣ್ಣು ನೋಡಿದರೆ ಇವರು ವಿದ್ವಾಂಸರೆಂದು ತಿಳಿಯುತ್ತಲಿತ್ತು; ಪ್ರಥಮದರ್ಶನ ಮಾತ್ರವೇ ಇವರು ಯಾರೋ ಒಬ್ಬ ಪುಣ್ಯಾತ್ಮರೂ, ಭಾಗ್ಯಶಾಲಿಗಳೂ, ಬುದ್ಧಿವಂತರೂ, ಮತ್ತು ಚತುರರೂ ಇರಬೇಕೆಂದು ಸಹಜವೆ ಭಾಸವಾಗುತ್ತಿತ್ತು. ವಂಶಕ್ರಮದಂತೆ ಇವರ ಹೆಸರು ಸರದಾರರ ಮಾಲಿಕೆಯೊಳಗೆ ಸೇರಿಸಲ್ಪಟ್ಟಿತ್ತು. ಇವರ ಸದ್ಗುಣ, ಪರೋಪಕಾರ, ಬುದ್ಧಿಚಾತುರ್ಯ, ವಿದ್ಯೆವಿನಯ, ಉದ್ಯೋಗಾಸಕ್ತಿ ಮೊದಲಾದವುಗಳಿಗೆ ಸರಕಾರದವರು ಸಂತೋಷಪಟ್ಟು ಇವರನ್ನು ಮುಂಬಯಿಯ ಲೇಜಿಸ್ಲೇಟಿವ್ಹ ಕೌನ್ಸಿಲಿನಲ್ಲಿ ೨-೩ ಸಾರೆ ಮೇಂಬರರನ್ನಾಗಿ ಮಾಡಿದ್ದರು. ಸಂಸ್ಥಾನದ ಯಾವತ್ತೂ ಹಳ್ಳಿಗಳಿಗೆ ಇರುವ ತಕ್ಕ ಫೌಜದಾರಿ, ದಿವಾಣ ಎಲ್ಲ ಅಧಿಕಾರಗಳೂ ಇವರಿಗಿದ್ದವಲ್ಲದೆ, ಪರಸಗಡ ತಾಲೂಕಿನೊಳಗಿನ ೨ನೇ ವರ್ಗ ಮ್ಯಾಜಿಸ್ಟ್ರೇಟರು ನಡಿಸಬಹುದಾದ ಖಟ್ಲೆಗಳನ್ನು ಇವರು ನಡಿಸುತ್ತಲಿದ್ದರು. ಸನ್ ೧೯೦೩ನೇ ಇಸವಿಯ ಜಾನೇವಾರಿ ತಿಂಗಳ ಆರಂಭಕ್ಕೆ ಹಿಂದುಸ್ತಾನದ ಗವ್ಹರ್ನರ್ ಜನರಲ್‌ರಾದ ನಾಮದಾರ ಲಾರ್ಡ ಕರ್ಝನ್ ಸಾಹೇಬ ಬಹದ್ದೂರವರು ನೆರೆಯಿಸಿದ ಬಹು ಭವ್ಯವೂ, ರಮ್ಯವೂ ಆದ ದಿಲ್ಲಿಯ ದರ್ಬಾರಕ್ಕೆ ಸರಕಾರದಿಂದ ಇವರಿಗೆ ಆಮಂತ್ರಣವಾಗಿತ್ತು. ಆಗ್ಗೆ ಶ್ರೀಮಂತರು ತಮ್ಮ ಸಂಸ್ಥಾನಕ್ಕೆ ಸರಿಯಾದ ವೈಭವದಿಂದ ಹೋಗಿ ಅಲ್ಲಿ ಮನ್ನಣೆಯನ್ನು ಹೊಂದಿದರು. ಸನ್ ೧೯೦೫ನೆಯ ಇಸವಿಯಲ್ಲಿ ಬ್ರಿಟಿಶ ಸಾರ್ವಭೌಮ ರಾಜರಾದ ಎಡ್ವರ್ಡಬಾದಶಹರವರ ಜೇಷ್ಠಪುತ್ರ ಪ್ರಿನ್ಸ ಆಫ್ ವೇಲ್ಸರವರು ನಮ್ಮ ದೇಶವನ್ನು ನೋಡಲಿಕ್ಕೆ ಬಂದಾಗ್ಗೆ, ಅವರ ಸತ್ಕಾರಕ್ಕಾಗಿ ಸರಕಾರದವರು ಈ ಸಿರಸಂಗಿಯ ಶ್ರೀಮಂತರನ್ನು ಮುಂಬಯಿಗೆ ಕರೆಯಿಸಿದ್ದರು.

ಶ್ರೀಮಂತ ಅಪ್ಪಾಸಾಹೇಬರಿಗೆ ದೇವರಲ್ಲಿ ದೃಢವಾದ ಭಕ್ತಿಯೂ, ಆಸಕ್ತಿಯೂ ಪೂರ್ಣವಾಗಿದ್ದವು. ವೀರಶೈವ ಧರ್ಮೋನ್ನತಿಯು ಇವರ ಮನಸಿನಲ್ಲಿ ನಟ್ಟುಹೋಗಿತ್ತು. ಒಮ್ಮೆ ಈ ಮತವು ಒಳ್ಳೇ ಭರಭರಾಟಿಯಲ್ಲಿದ್ದು ಈಗ ಹೀನಸ್ಥಿತಿಗೆ ಬಂದಿರುವದೆಂದು ಆಗಾಗ್ಗೆ ಅನ್ನುತ್ತಿದ್ದರು. ಧರ್ಮಕ್ಕೆ ಬಂದ ಗ್ಲಾನಿಯನ್ನು ದೂರ ಮಾಡುವದಕ್ಕಾಗಿ ಜನಸಮೂಹಕ್ಕೆ ಉತ್ತೇಜನಕೊಟ್ಟು ರಾ.ಬ॥ರುದ್ರಗೌಡ ಸಾಹೇಬರವರೊಡನೆ ಶ್ರೀಮದ್ವೀರಶೈವ ಮಹಾಸಭೆಯನ್ನೇರ್ಪಡಿಸಿ ಹಿಂದೆ, ಹೇಳಿದಂತೆ ಧಾರವಾಡಲ್ಲಿಯೂ, ಬೆಂಗಳೂರಲ್ಲಿಯೂ ಆದ ಮಹಾಸಭೆಗಳಿಗೆ ಜನರ ಬಲವಾದ ಆಗ್ರಹ ಮೂಲಕ ಅಧ್ಯಕ್ಷರಾಗಿ ಪ್ರಖ್ಯಾತಿಯನ್ನು ಹೊಂದಿದರು. ಅಧ್ಯಕ್ಷತೆಯ ಕೆಲಸವನ್ನು ಇವರು ಯಾವ ಪ್ರಕಾರ ಮಾಡಿದರೆಂಬದನ್ನು ಯಾರಿಗೂ ಹೇಳಬೇಕಾಗಿಲ್ಲ. ಇವರ ಪರಮಮಿತ್ರರೆಂದರೆ, ಸದಾ ವೀರಶೈವರ ಏಳ್ಗೆಯ ವಿಚಾರದಲ್ಲಿಯೇ ಮಗ್ನರಾಗಿರುವ ರಾ.ಬ॥ಅರಟಾಳ ರುದ್ರಗೌಡ ಸಾಹೇಬರು. ಹೀನಸ್ಥಿತಿಯಲ್ಲಿರುವ ವೀರಶೈವರು ಏನು ಮಾಡಿದರೆ ಮುಂದು ಬಂದಾರೆಂಬುವದೇ ಇವರ ವಿಚಾರ, ವೀರಶೈವರ ಕಲ್ಯಾಣವೇ ಇವರ ಚಿಂತೆ; ಮತ್ತು ಯಾವ ಉಪಾಯದಿಂದ ವೀರಶೈವರು ವಿದ್ಯಾವಂತರಾಗುವರೆಂಬುದೇ ಶ್ರೀಮಂತರ ವ್ಯಸನ; ವೀರಶೈವರು ವಿದ್ಯೆಯಲ್ಲಿ ಮುಂದೆ ಬರಲೆಂದು ತಿಳಿದು ಇವರು ಲಿಂಗಾಯತ ಫಂಡಿಗೆ ಸನ್ ೧೯೦೩ನೇ ಇಸವಿಯಲ್ಲಿ ಸುಮಾರು (೨೦,೦೦೦) ಇಪ್ಪತ್ತು ಸಾವಿರ ರೂಪಾಯಿ ಬೆಲೆ ಬಾಳುವ ಚಿಕ್ಕೋಡಿ ತಾಲೂಕ ಅಮ್ಮಣಿಗೆಯ ಗ್ರಾಮದಲ್ಲಿ ಕೆಲವು ಜಮೀನುಗಳನ್ನು ಕೊಟ್ಟ ಸಂಗತಿಯು ಹಿಂದೆ ಬಂದಿರುವದು. ಇದಲ್ಲದೆ ಧಾರವಾಡದಲ್ಲಿ ಹಾಗೂ ಬೆಂಗಳೂರಲ್ಲಾದ ಎರಡೂ ವೀರಶೈವ ಮಹಾಸಭೆಗಳಲ್ಲಿ ಕೂಡಿಸಿದ ಫಂಡಿಗೆ

ಸಾವಿರಾರು ರೂಪಾಯಿ ಕೊಟ್ಟರು;ಮತ್ತು ಕಾಶೀಪಟ್ಟಣದಲ್ಲಿ ಕಲಿಯುವ ವೀರಶೈವ ವಿದ್ಯಾರ್ಥಿಗಳಿಗೂ, ಪುಣೆ ಮುಂಬಯಿಗಳ ವಿಶ್ವವಿದ್ಯಾಲಯಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೂ ಆಗ್ಗೆ ಅವರ ವಿದ್ಯೆಯನ್ನು ನೋಡಿ ತಕ್ಕ ದ್ರವ್ಯ ಸಹಾಯ ಮಾಡುತ್ತಿದ್ದರು.

ಶ್ರೀಮಂತರ ದಾನಶಾಸನ

ಶ್ರೀಮಂತ ಅಪ್ಪಾಸಾಹೇಬ ಸಿರಸಂಗೀಕರ ಇವರು ಶ್ರೀ ಕಾಶೀ ಜಂಗಮವಾಡಿ ಮಠಕ್ಕೆ ಮಾಡಿರುವ ದಾನಶಾಸನದ ಅವತರಣವನ್ನು ವಾಚಕರ ಅವಲೋಕನಾರ್ಥವಾಗಿ ಇಲ್ಲಿ ಬರೆಯುತ್ತೇವೆ.

"ವಿಶ್ವೇಶ್ವರ"

ನಂಬರು ೧೬

"ಶ್ರೀಮನ್ಮಂಜಲ ಹೃತ್ಕಂಜಕಿಂಜಲ್ಕಪುಂಜ ರಂಜಿತ ರಾಜಚೂಡಾಮಣಿ ರಾಜೇಷ್ಟಲಿಂಗ ಪೂಜಾಲೋಲ ದೇವದೇಶಿಕ ಶಿಖಾಮಣಿಗಳಾದಂಥ, ಶ್ರೀಪುತ್ಕಾಶೀಕೇತ್ರಾಂತರ್ಗಣತ ಮಹಾಮಠ ಪಟ್ಟ ಸಿಂಹಾಸನಾಧಿಪ ಶ್ರೀ ರಾಜೇಶ್ವರಸ್ವಾಮಿ, ಗುರು ವೀರಭದ್ರಸ್ವಾಮಿ ಪಟ್ಟದ್ದೇವರು ಸ್ವಾಮಿಗಳವರ ಚರಣಾರವಿಂದಗಳಿಗೆ-ಭಕ್ತಿಪೂರ್ವಕ ಲಿಂಗಪ್ಪ ಜಾಯಪ್ಪ ದೇಸಾಯಿ ವ ಸರದೇಸಾಯಿ, ನಾಡಗೌಡ, ಮಾಮಲೆ ತೊರಗಲ್, ಪರಗಣೆ ಕೊಕಟನೂರ, ಸಂಸ್ಥಾನ ನವಲಗುಂದ, ಇನಾಮಗ್ರಾಮ ಸಿರಸಂಗಿ ವಗೈರೆ- ಇವರು ತ್ರಿಕಾಲದಲ್ಲಿ ಮಾಡುವ ದೀರ್ಘದಂಡವತ ವಿನಂತಿ ವಿಜ್ಞಾನಪನಮದಾಗಿ ಈ ಶ್ರೀನೃಪಶಾಲಿವಾಹನ ಶಕೆ ೧೮೨೩ನೇ ಪ್ರವರ್ತಮಾನಕ್ಕೆ ಸಲ್ಲುವ ಪ್ಲವನಾಮಸಂವತ್ಸರದ ಮಾರ್ಗಶೀರ್ಷ ಬಹುಳ ೭ ರೋಜ ಬುಧವಾರ ಉತ್ತರಾ ನಕ್ಷತ್ರದಲ್ಲಿ ಭಾಗೀರಥೀ ಅಭಿಷೇಕ ಪೂಜಾ ಮುಂತಾದದ್ದು ಅವ್ಯಾಹತವಾಗಿ ಸಾಗಬೇಕೆಂಬ ಅಭೀಷ್ಟೆಯಿಂದ ಭೂದಾನವನ್ನು ಕೊಡಬೇಕೆಂಬ ಸಂಕಲ್ಪವು ಭಾಗೀರಥೀ ತೀರದಲ್ಲಿ ಮಾಡಲ್ಪಟ್ಟಿತ್ತು. ಆ ಸಂಕಲ್ಪ ಸಿದ್ಧ್ಯರ್ಥವಾಗಿ ನಮ್ಮ ಇನಾಮಗ್ರಾಮ ಗೋವನಕೊಪ್ಪ ಗ್ರಾಮದ ಭೂಮಿಯಲ್ಲಿರುವ ಸರ್ವೇ ನಂಬರ ೧೫೨; ಎಕರೆ ೨೬೧೦; ಆಕಾರ ರೂಪಾಯಿ ೪೦; ಈ ಜಮೀನವನ್ನು ಭಕ್ತಿ ಪೂರ್ವಕ ತ್ರಿಕರಣ ಶುದ್ಧಿಯಿಂದ ಭೂದಾನವನ್ನು ಮಾಡಿರುತ್ತೇವೆ. ಈ ಭೂಮಿಯ ಉತ್ಪನ್ನವನ್ನು ಪ್ರತಿಸಂವತ್ಸರದಲ್ಲಿ ತಾವು ಕೈಕೊಂಡು ಪ್ರತಿನಿತ್ಯದಲ್ಲಿಯೂ ಶ್ರೀ ಸ್ವಾಮಿಗಳವರ ದ್ವಾರ ಶ್ರೀ ದೇವರಿಗೆ ಭಾಗೀರಥೀ ಅಭಿಷೇಕ ಪೂಜಾದಿಗಳು, ಅವರು ಶಿವಸಾನ್ನಿಧ್ಯವೈದುನ ಪರ್ಯಂತರಕ್ಕೂ ನಿರಾತಂಕವಾಗಿ ಸಾಗಿಸಬಹುದಾಗಿ ಅಪೇಕ್ಷಿಸುತ್ತೇವೆ. ಕಾಲಾತಂರದಿಂದಲಾದರೂ ಶ್ರೀ ದೇವರಿಗೆ ಪ್ರತಿನಿತ್ಯ ಭಾಗೀರಥಿಯ ಅಭಿಷೇಕ ಪೂಜಾ ಪೂರೈಸುವದರಲ್ಲಿ ಕೊರತೆಯಾಗಲಿಕ್ಕಿಲ್ಲೆಂದು ಪೂರ್ಣ ನಂಬಿಗೆಯುಂಟು. ಈ ನನ್ನ ಅಭೀಷ್ಟೆಯನ್ನು ಪೂರ್ಣಮಾಡುವಲ್ಲಿ ಸಾಭಿಮಾನಿಗಳೇ ಇರುವಿರೆಂದು ಭಕ್ತಿಪೂರ್ವಕ, ತ್ರಿಕರಣಶುದ್ಧಿಯಿಂದ ಬರಕೊಟ್ಟ ದಾನಪತ್ರ. ಸಹಿ. ತಾರೀಖ ೧ನೇ ಮಾಹೆ ಜಾನೇವಾರಿ ಸನ್ ೧೯೦೨ ನೇ ಇಸವಿ"

ಈ ಸ್ಥಳದಲ್ಲಿ ಮೊಹರು ಅದೆ.	ಈ ಸ್ಥಳದಲ್ಲಿ ಇಂಗ್ರಜಿ ಮತ್ತು ಮರಾಠಿ ಲಿಪಿಯ ಸಹಿ ಇರುತ್ತದೆ

ಈ ಬಗೆಯ ಇವರ ಸತ್ಪಾತ್ರದಾನವನ್ನು ಕಂಡ ಕವಿಶ್ರೇಷ್ಠರು ಶ್ರೀಮಂತ ಲಿಂಗಪ್ಪ ದೇಸಾಯರನ್ನು ಈ ಕೆಳಗಿನ ಶ್ಲೋಕಗಳಿಂದ ಬಣ್ಣಿಸಿರುತ್ತಾರೆ.

ಶ್ಲೋಕಗಳು

ಯಃ ಶ್ರೀಮಾನ್ ದೇವಗಂಗಾತಟಲಸಿತಮಹಾಕ್ಷೇತ್ರಕಾಶೀಶಲಿಂಗಾ ।
ದಾವಿರ್ಭೂಯ ಸ್ವಭಾವೈರುರುತರಚರಿತ್ರೈರ್ಮೋದಯಾಮಾಸ ವಿಶ್ವಂ ।
ವಿಶ್ವಾಚಾರ್ಯಸ್ಯ ತಸ್ಯಾಪ್ರತಿಹತಮಹಿಮಾಲಂಬಿನಃ ಸಿದ್ಧಪೀಠಂ ।
ಚಾರುಹ್ಯಾಯಂ ಕೃಪಾಬ್ಧಿರ್ಜಯತಿ ಹಿ ಯತಿಭಿಃ ಪ್ರಾವೃತೋ ಯತ್ರ ಯೋಗೀ ॥೧॥

ತತ್ಕಾಶೀಕ್ಷೇತ್ರರತ್ನಂ ಶ್ರುತಿತತಿವಿನುತಂ ಯಸ್ಸುಧೀರ್ದಾನಶೂರ-।
ಶ್ಚಾಗತ್ಯಾತ್ಮೀಯ ಲೋಕೈಃ ಪ್ಲವಶರಧಿಮನೋರಮ್ಯಗಂಗಾಪ್ರತೀರೇ।
ಲಿಂಗಪ್ಪಾಖ್ಯೋ ಧರೇಶೋ ಧೃತಜನಕಲಶೋಽಯಚ್ಛದುರ್ವೀಂ ವಿಶಾಲಾಂ।
ಶ್ರೀಮದ್ರಾಜೇಶ್ವರಾಯ ಪ್ರವಿಮಲಹೃದಯಾಯೇತರೇಭ್ಯೋಽನ್ನವಸ್ತ್ರಂ ॥೨॥

ಯೋವಾಕ್ಸಿದ್ಧಿರ್ದೀರ್ಘದೃಷ್ಟಿರ್ಧೃತ ಶಶಿನಗರೇ ಧೂತಲೋಭ ಸ್ಸ್ವರಾಜ್ಯಂ ।
ಪ್ರಾಜ್ಯಂ ಶ್ರೀವೀರಶೈವೋತ್ತಮಜನಸದಸೇ ಚಾರ್ಪಯಿತ್ವೇಶಭಕ್ತಃ ।
ತಸ್ಯೌದಾರ್ಯಾದಿ ಜನ್ಯಂ ಜಗತಿ ಸಿತಯಾಶೋರಾಶಿಮಾಲೋಕ್ಯ ಕೋ ವಾ।
ಕಸ್ಮಿನ್ನಾಗೋಽಮರೋವಾ ನವಹತಿ ಸಮುದಂ ದಾನಮೇಕಂ ಹಿ ಮಾನ್ಯಂ ॥೩॥

ಮೋದಂತೇ ಸುಜನಾಃ ಸರ್ವೇ। ಕೀರ್ತಿಕಾಯಂ ಸಮೀಕ್ಷ್ಯಚ ॥
ಸರ್ವಾವಸ್ಥಾ ಸುಕೃತಿನೋ। ಲೋಕಾನಂದಪ್ರದಾಯಿನಃ ॥೪॥

ಈ ಪ್ರಕಾರವಾಗಿ ಕವಿಶ್ರೇಷ್ಠರಿಂದ ವರ್ಣನಾರ್ಹವಾಗಿದ್ದ ಶ್ರೀಮಂತರ ದಾರ್ಢ್ಯವಾದ ಮನಸ್ಸೂ, ದೀರ್ಘವಿಚಾರವೂ, ಸದ್ವರ್ತನವೂ ಯಾವ ಬಗೆಯಾಗಿದ್ದವೆಂಬದನ್ನು ಬರೆಯುವದಕ್ಕಿಂತ ವಾಚಕರು ಊಹಿಸುವದೇ ಲೇಸು.

ಶ್ರೀಮಂತರ ಸುಧಾರಣೆ

ಶ್ರೀಮಂತರು ಯಾವಾಗಲೂ ಉದ್ಯೋಗದಲ್ಲಿರುವರು. ಒಂದಿಲ್ಲೊಂದು ಕೆಲಸವು ಇವರ ಕಯ್ಯೊಳಗೆ ಬೇಕೇಬೇಕು. ಇವರ ಉದ್ಯೋಗವು ಅನಿವಾರವಾಗಿತ್ತು. ಸಂಸ್ಥಾನದ ಕಾರ್ಯಕ್ಕೆ ತಕ್ಕ ವೇಳೆಯನ್ನು ನೇಮಿಸಿ, ಉಳಿದ ಕಾಲದಲ್ಲಿ ಓದುವದೂ, ಓದಿದ್ದನ್ನು ಕೇಳುವದೂ ಪುನಃ ಆ ವಿಷಯದ ಮೇಲೆ ಚರ್ಚೆ ಮಾಡುವದೂ, ಇವರಿಗೆ ಬಹಳೇ ಸೇರುತ್ತಿದ್ದವು. ನಡುನಡುವೆ ವಿಶ್ರಾಂತಿಯಾದರೂ ಸ್ವಲ್ಪಸ್ವಲ್ಪ ಬೇಕಾಗುತ್ತಿತ್ತು. ವಿಷಯಾಂತರವೇ ಇವರ ವಿಶ್ರಾಂತಿಯು. ಹೂದೋಟದಲ್ಲಿ ಕೆಲಸ ಮಾಡುವದು ಇವರಿಗೆ ಬಹು ಆನಂದಕರವಾಗಿತ್ತು. ಆದರೆ ಇವರ ತೀರ ಪ್ರೀತಿಯ ಹೋರೆಯೆಂದರೆ ಒಕ್ಕಲತನವು. ಒಕ್ಕಲತನದ ಸುಧಾರಣೆಯ ದೆಸೆಯಿಂದ ಇವರು ಯಾವಾಗಲೂ ಚಿಂತಿಸುತ್ತಿದ್ದರು. ಇತ್ತಿತ್ತಲಾಗಿ ಸುಧಾರಿಸಿದ ಕಬ್ಬಿಣದ ತೊಲೆ, ನೇಗಿಲು ಮುಂತಾದ ಕೃಷಿಕರ್ಮದ ಸಾಧನಗಳನ್ನು ತರಿಸುವದೂ, ಅವುಗಳ ಉಪಯೋಗ ಮಾಡಿಸುವದೂ, ಆ ಸಂಬಂಧದ ಜ್ಞಾನವನ್ನು ಬೆಳಿಸುವದೂ, ತೋಟಪಟ್ಟಿ ಮುಂತಾದ ಬಾಗಾಯತ ಭೂಮಿಗಳನ್ನು ಕೀರ್ದಿಮಾಡಿಸುವದೂ ಇವರ ಮನಸ್ಸಿನಲ್ಲಿ ಬಿಂಬಿಸಿ,

ಅದರಂತೆ ಮಾಡಲಿಕ್ಕೆ ಎಲ್ಲ ತರದ ಸಿದ್ಧತೆಯನ್ನು ನಡೆಸಿದ್ದರು. ತಾವು ತಮ್ಮ ಸ್ವಂತ ಜಮೀನುಗಳಲ್ಲಿ ಕೃಷಿಯ ಸುಧಾರಣೆಗಳ ಏರ್ಪಾಡು ಮಾಡಿದುದಲ್ಲದೆ ಇತರ ಎಲ್ಲ ರೈತರಿಗೂ ಉಪದೇಶಿಸಿ ಉತ್ತೇಜ ಕೊಡುತ್ತಿದ್ದರು. ಶ್ರೀಮಂತರು ಸಿರಸಂಗಿಯ ನೆರೆಯಲ್ಲಿ ಒಂದು ಲಕ್ಷದಕಿಂತಲೂ ಹೆಚ್ಚು ರೂಪಾಯಿ ವೆಚ್ಚಮಾಡಿ ಬಾಗಾಯತಕ್ಕಾಗಿ "ಭವಾನೀ ತಲಾವ"ಎಂಬದೊಂದು ದೊಡ್ಡ ಕೆರೆಯನ್ನೂ, ಸವದತ್ತಿಯ ಕಣಿವೆಯ ಕೆಳಗೆ (ಎಲ್ಲಮ್ಮನ ಗುಡ್ಡದ ದಾರಿಯಲ್ಲಿ) ತಾವರೇಕೆರೆಯೊಂದನ್ನು ಕಟ್ಟಿಸಿರುವರು. ಪಾಶ್ಚಾತ್ಯ ಗ್ರಂಥಗಳನ್ನೋದಿ, ಕೃಷಿಕರ್ಮದ ನಿಜತತ್ವಗಳನ್ನರಿತು, ಅದರಂತೆ ತಮ್ಮ ದೇಸಗತಿಯ ಭೂಮಿಗಳ ಸಾಗುವಳಿಯನ್ನು ಮಾಡಿಸಹತ್ತಿದ್ದರಿಂದ, ಅವು ಫಲದ್ರೂಪವಾಗಿ ಮೊದಲಿನಕ್ಕಿಂತ ಉತ್ಪತ್ತಿಯು ಹೆಚ್ಚಾಗಹತ್ತಿತು. ತಾವರೇಕೆರೆಯಿಂದ ಕಣಿವೆಯ ಕೆಳಗಿನ ಭೂಮಿಗಳಲ್ಲಿ ಬತ್ತದ ಬೆಳೆಯು ಮಲ್ಲಾಡಕ್ಕಿಂತಲು ಹೆಚ್ಚಾಗಿ ಬರಹತ್ತಿತು. ಈ ಬಗೆಯ ಅನೇಕ ತಿದ್ದುಪಡಿಯಿಂದ ಇವರು ಸುಧಾರಣಾಗ್ರಗಣ್ಯರಲ್ಲಿ ಶಿರೋಮಣಿಗಳಾಗಿದ್ದರೆಂದು ಹೇಳಬಹುದು.

ಶ್ರೀಮಂತರ ಸಂಕಲ್ಪ

ಇವರಿಗೆ ಆರು ಮಂದಿ ಹೆಂಡಂದಿರಾದರು. ಕಡೆಯುವರ (ಈಗಿರುವವರ) ಹೆಸರು ಸುಂದರಾಬಾಯಿಯವರು. ಇವರೊಡನೆ ಶ್ರೀಮಂತರ ಲಗ್ನವು ಸನ್ ೧೯೦೨ನೇ ಇಸವಿಯ ಜೂನ ತಿಂಗಳಲ್ಲಾಯಿತು. ಇವರೊಬ್ಬರನ್ನುಳಿದು ಶ್ರೀಮಂತರ ಅಯ್ವರೂ ಹೆಂಡಂದಿರು ಇವರ ಕಣ್ಮುಂದೆಯೇ ಗತಿಸಿಹೋದರು. ಶ್ರೀಮಂತರಿಗೆ ಇಬ್ಬರು ಗಂಡು ಮಕ್ಕಳು ಜನಿಸಿದ್ದರೂ ಅವು ಬಹಳ ದಿವಸ ಬಾಳದೆ ಬಾಲ್ಯದಲ್ಲಿಯೇ ಮೃತವಾದವು. ಈ ಕೂಸುಗಳು ತೀರಿದಾಗಲೇ ಸಂಸ್ಥಾನವನ್ನೆಲ್ಲ ಶಿವಾರ್ಪಣೆ ಮಾಡುವ ವೈರಾಗ್ಯಾಂಕುರವು ಶ್ರೀಮಂತರ ಹೃದ್ಭೂಮಿಯಲ್ಲಿ ಮೊಳೆತಿತ್ತೆಂದು ಹೇಳುತ್ತಾರೆ. ಜನಸಮೂಹದ ಈ ಊಹೆಯು ನಿಜವೇ ಇರಬಹುದು. ಯಾಕಂದರೆ ರಾವಬಹದ್ದೂರ ಅರಟಾಳಸಾಹೇಬರು ಶ್ರೀಮಂತರ ಮೃತಿಯ ನಂತರ ವಾಡೆಯನ್ನು ಪರಿಶೋಧಿಸಲು, ಈ ಮೃತ್ಯುಪತ್ರದ ಬರಹವೇ ಉಳ್ಳ ಬೇರೆ ಒಂದೆರಡು ಹಳೇ ಮೃತ್ಯುಪತ್ರಗಳು ದೊರಕಿದವಂತೆ. ಏನೇ ಆಗಲಿ, ಸಂತತಿಯ ಅಭಾವದ ಮೂಲಕವಾಗಿ ಸಂಸ್ಥಾನದ ಸರ್ವಸೊತ್ತನ್ನು ವೀರಶೈವ ಸಮಾಜದ ಉತ್ಕರ್ಷಗಾಗಿ ಸಮರ್ಪಿಸುವ ಸಂಕಲ್ಪವನ್ನು ಶ್ರೀಮಂತರು ಮೊದಲಿನಿಂದಲೇ ಮನದಲ್ಲಿ ಮಾಡಿಟ್ಟಿದ್ದರೆಂದು ನಿಃಸಂದೇಹವಾಗಿ ಹೇಳಬಹುದು. ಇಂತಹ ಅಲೌಕಿಕ ಗುಣಗಳುಳ್ಳ ಮಹನೀಯರು ಜಗದಾಶ್ಚರ್ಯವನ್ನುಂಟು ಮಾಡುವಂತಹ ಮೃತ್ಯುಪತ್ರವನ್ನು ಬರೆದಿಟ್ಟು, ತಮ್ಮ ೪೫ನೆಯ ಪ್ರೌಢವಯಸ್ಸಿನಲ್ಲಿ ಪರಲೋಕವಾಸಿಯಾದುದರಿಂದ ಸಮಸ್ತ ವೀರಶೈವರಿಗೂ ಅನಿರ್ವಾಚ್ಯವಾದ ದುಃಖವಾಯಿತು. ಶ್ರೀಮಂತರ ಜನ್ಮ ತಾರೀಖು ೧೦ನೇ ಮಾಹೆ ಜಾನೇವಾರಿ ಸನ್ ೧೮೭೨ ನೇ ಇಸವಿ ಶನಿವಾರ. ಸುಂದರಾಬಾಯಿಯವರ ಜನನ ತಾರೀಖು ೨೮ನೇ ಮಾಹೆ ಮಾರ್ಚ ಸನ್ ೧೮೯೦ನೇ ಇಸವಿ.

ಈ ಮಹಾಪುರುಷರ ನಾಮಖ್ಯಾತಿಯ ಪರಿಚಯವಿಲ್ಲದವನು ವೀರಶೈವರಲ್ಲಿ ಒಬ್ಬನೂ ಇರಲಾರನು. ಎರಡು ವೇಳೆ ನಡೆದ ವೀರಶೈವ ಮಹಾಸಭೆಗಳಲ್ಲಿ ಇವರು ಮಾಡಿದ ಉಪನ್ಯಾಸಗಳಿಂದಲೇ ಇವರಲ್ಲಿದ್ದ ಸ್ವಮತಾಭಿವೃದ್ಧಿಯ ಕಾಂಕ್ಷೆಯು ಸರ್ವರಿಗೂ ವಿದಿತವಾಗಿರುವದು. ಇವರೊಡನೆ ಒಂದು ಕ್ಷಣವಾದರೂ ಕುಳಿತು ಮಾತನಾಡಿದ್ದವನು ಇವರಲ್ಲಿದ್ದ ಸ್ವಜನಾಭಿಮಾನದ ಮಹತ್ವವನ್ನು ನೆನೆದು ಜನ್ಮಾಂತರದ ವರೆಗೂ ಆಶ್ಚರ್ಯಪಡದೆ ಇರುವದಕ್ಕಾಗುವದಿಲ್ಲ. ಇವರು ಇತರರಂತೆ ಸ್ವನಾಮಖ್ಯಾತಿಯ ಕಾಂಕ್ಷೆಯಿಂದ ಬರಿಯ ಬಾಯ್ಮಾತಿನ ಅಭಿಮಾನವನ್ನು ತೋರಿಸತಕ್ಕವರಾಗಿರದೆ ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪಣ್ಣನವರೆಂತೆಯೂ,

ರಾ.ಬ||ಅರಟಾಳ ರುದ್ರಗೌಡಸಾಹೇಬರವರಂತೆಯೂ, ತ್ರಿಕರಣಪೂರ್ವಕವಾಗಿ ಮತೋನ್ನತಿಯ ಕಾರ್ಯದಲ್ಲಿ ಸಹಾಯಕರಾಗಿಯೂ, ಪ್ರೋತ್ಸಾಹಿಸುವವರಾಗಿಯೂ ಇರುತ್ತಿದ್ದರು. ಔತ್ತರೇಯ ದಾಕ್ಷಿಣಾತ್ಯ ದೇಶಗಳೆರಡರ ವೀರಶೈವರಿಂದಲೂ, ಒಂದೇ ಸಮವಾಗಿ ಇವರು ಗೌರವ್ಯರಾಗಿದ್ದರೆಂಬದಕ್ಕೆ ಎರಡೂ ಮಹಾಸಭೆಗಳ ಅಧ್ಯಕ್ಷತೆಯು ಇವರಿಗೆ ವಹಿಸಲ್ಪಟ್ಟಿದ್ದೇ ದೊಡ್ಡ ನಿದರ್ಶನವಾಗಿದೆ. ತಮ್ಮ ಬದುಕುವಿಕೆಯೆಲ್ಲ ಜನ್ಮಾಕ್ರಮವಾದ ಮತೋನ್ನತಿಗಾಗಿಯೆ ಎಂದು ಇವರಂತೆ ತಿಳಿದಿರುವವರು ನಮ್ಮ ಮತದಲ್ಲಿ ಅತ್ಯಪೂರ್ವತಮರೆಂದು ಹೇಳುವದು ಅತಿಶಯೋಕ್ತಿಯಲ್ಲ. ಕರ್ತವ್ಯ ಮಾರ್ಗದರ್ಶಕರಾಗಿದ್ದ ಈ ಮಹಾನುಭಾವರಲ್ಲಿ ಇಂತಹ ಭಾವವು ಬಲಿಯುವದಕ್ಕಾಗಿ ಶಿವನೇ ಒಂದು ಪರಿಯಾಗಿ ಅನುಗ್ರಹಿಸಿದನೆಂಬಂತೆ ಇವರಲ್ಲಿ ಸಂತಾನಾಭಾವವು ತೋರ್ಪಟ್ಟಿರುವದು. ಇವರು ಸ್ವಮತಸ್ಥರಲ್ಲಿ ಮಾತ್ರವೇ ಗೌರವ್ಯವಾಗಿರದೆ ಇತರ ಸಾರ್ವಜನಿಕ ಕಾರ್ಯಗಳಲ್ಲೂ ಮಿಳಿತರಾಗಿ ಸಲಿಗೆಯಿಂದಲೂ, ಉಲ್ಲಾಸದಿಂದಲೂ ಪ್ರೋತ್ಸಾಹಗೊಳಿಸುತ್ತಿದ್ದರು. ಎರಡು ಮೂರು ವೇಳೆ ಮುಂಬಯಿಯ ನಿಯಮ ನಿರ್ಮಾಣ ಸಭೆಯಲ್ಲಿ ಸಭಾಸದರರಾಗಿದ್ದದರಿಂದ ಸರಕಾರದಲ್ಲಿ ಇವರ ಘನತೆಯೆಷ್ಟಿತ್ತೆಂಬದು ತಾನಾಗಿ ಸ್ಪಷ್ಟವಾಗುತ್ತದೆ. ಇವರು ೧ನೇ ತರಗತಿಯ ಸರದಾರರಾಗಿದ್ದುದಲ್ಲದೆ ೨ನೇ ತರಗತಿಯ ಆನರರಿ ಮ್ಯಾಜಿಸ್ಟ್ರೇಟರಾಗಿದ್ದರೆಂದು ಹಿಂದೆ ಹೇಳಲ್ಪಟ್ಟಿದೆ. ಇವರನ್ನು ದತ್ತಸ್ವೀಕಾರ ಮಾಡಿದಾಗ್ಗೆ ಸಿರಸಂಗಿ ಸಂಸ್ಥಾನದ ಉತ್ಪತ್ತಿಯು ಇಪ್ಪತ್ತು (೨೦) ಸಾವಿರ ಮಾತ್ರವಿದ್ದದ್ದು, ಇವರ ಶ್ರಮ ಸಾಹಸಗಳಿಂದಲೂ, ಸುಧಾರಣೆಯಿಂದಲೂ ಅದು ಐವತ್ತು (೫೦) ಸಾವಿರದ ವರೆಗೆ ವೃದ್ಧಿಗೊಂಡಿತು. ಇದರಿಂದ ವೀರಶೈವ ಜಗತ್ತಿಗೆ ಮುಂದೆ ಎಷ್ಟೋ ವಿಧದ ಫಲಾಶ್ರಯವುಂಟಾಗುವದೆಂದು ಎಲ್ಲರೂ ಭಾವಿಸಿಕೊಂಡು ನಿರೀಕ್ಷಿಸುತ್ತಿರುವಲ್ಲಿ, ದೈವಸಂಕಲ್ಪದಿಂದ ಪೂರ್ವವಯಸ್ಸಿನಲ್ಲಿಯೇ ಇವರು ಶಿವೈಕ್ಯರಾದುದನ್ನು ಕೇಳಿ ಯಾರು ವಿಷಾದಿಸಲಿಕ್ಕಿಲ್ಲ? ಲಕ್ಷಾಂತರ, ಕೋಟ್ಯಂತರ ಧನವನ್ನಾರ್ಜಿಸಿ ಪಿಶಾಚಿಗಳಂತೆ ಅದನ್ನು ಕಾಯ್ದು ಪೂರ್ಣಾಯುಷ್ಯದ ವರೆಗೂ ಬದುಕಿದ್ದು ಸತ್ತು, ಮರುದಿನಕ್ಕೆ ಮರೆತು ಹೋಗುವ ಹೆಸರಿನವರಾಗಿ ಬಾಳುವ ಸಾವಿರಾರು ಮಂದಿಯು ಒಂದು ಮತದಲ್ಲಿ ಅಥವಾ ಒಂದು ದೇಶದಲ್ಲಿರುವದಕ್ಕಿಂತಲೂ ಹುಟ್ಟಿದ ವಂಶ, ಜನಿಸಿದ ಮತ, ಅವತರಿಸಿದ ದೇಶಕ್ಕೆಲ್ಲ ಹಿತವನ್ನಾಚರಿಸುವದರಲ್ಲಿಯೇ ತನ್ನ ಪವಿತ್ರ ಜನ್ಮಕಾಲವನ್ನೂ ಆರ್ಜಿತ ವಿತ್ತವನ್ನೂ, ವಿನಿಯೋಗಿಸುವ ಮಹಾತಪಸನ್ನಾಚರಿಸಿ ಜನ್ಮಧನ್ಯತೆಯನ್ನು ಪಡೆದುಕೊಳ್ಳುವ ಇಂತಹ ಮಹಾಪುರುಷರು ವಿರಳತಮರಾಗಿ ಅಲ್ಪಕಾಲವಿದ್ದರೂ ಅದೇ ಮಹತ್ತರವೆಂದು ಭಾವಿಸಲ್ಪಡುತ್ತದೆ. ಜೀವಂತವಾಗಿ ಇವರು ಮಾಡಿದ ಮತಸೇವೆಯ ಸದ್ಧರ್ಮಕ್ಕಾಗಿ ಪರಶಿವನು ಇವರಿಗೆ ಶಾಶ್ವತ ಸೌಖ್ಯವನ್ನು ದಯಪಾಲಿಸಲು ಸಿದ್ಧನಾಗಿಯೇ ಇರುವನು. ವೀರಶೈವಮತಕ್ಕೆ ಕಿರೀಟಪ್ರಾಯರಾಗಿದ್ದು ಚಿರಸ್ಮರಣೀಯರಾದ ಈ ಮಹಾಪುರುಷರ ಪ್ರಸನ್ನ ಮುಖಮಂಡಲದ ದರ್ಶನವು ಇನ್ನು ಮುಂದೆ ಚಿತ್ರಮಾತ್ರ ಲಭ್ಯವಾಯಿತು. ಜೀವಿತ ಕಾಲದಲ್ಲಿ ಅವರ ದರ್ಶನವನ್ನು ಹೊಂದಿದ ಜನರಿಗೆ ಭಾವದರ್ಶನವನ್ನುಂಟು ಮಾಡಿಕೊಡುವದಕ್ಕಾಗಿಯೂ, ಅವರಲ್ಲಿದ್ದ ಮತಾಭಿಮಾನಾನುಸರಣ ಕ್ರಮವು ಮತಸ್ಥರೆಲ್ಲರಿಂದಲೂ ಅಂಗೀಕರಿಸಲ್ಪಡುವಂತೆ ಎಚ್ಚರಿಸುವದಕ್ಕಾಗಿಯೂ ವೀರಶೈವರ ಮನೆಗಳಲ್ಲಿ ಇವರ ಭಾವಚಿತ್ರಗಳು ಅಲಂಕೃತವಾಗಿ ಇರಿಸಲ್ಪಟ್ಟವು. ಮತ್ತು ಈ ಮಹಾನುಭಾವರ ಕೃತ್ಯವಿಶೇಷವೇ ಚಿರಸ್ಮರಣೀಯವಾಗಿದ್ದರೂ, ಅವರಿಂದ ಮತಕ್ಕುಂಟಾದ ಉಪಕಾರ ವಿಶೇಷವನ್ನು ಸ್ಮರಿಸಿ, ಅವರ ಜ್ಞಾಪಕಾರ್ಥವಾಗಿ ಯಾವದಾದರೊಂದು ಮತೋನ್ನತಿಯ ಕಾರ್ಯವನ್ನು ಆಚರಿಸತಕ್ಕದ್ದು ವೀರಶೈವ ಮಂಡಲದ ಕೃತಜ್ಞತಾ ಪ್ರದರ್ಶನಕ್ಕೆ ಅತ್ಯಾವಶ್ಯಕವಾದುದೆಂದು ಮುಖ್ಯ ಮುಖ್ಯಪಟ್ಟಣಗಳ ಮುಖಂಡರು ವಿಚಾರಿಸಹತ್ತಿದರು. ಧಾರವಾಡ ಜಿಲ್ಲಾ, ಹಾವೇರಿ ತಾಲೂಕ ದೇವೀಹೊಸೂರ ಗ್ರಾಮದ ವೀರಶೈವರು ಅವರಲ್ಲಿ ಮುಖ್ಯವಾಗಿ ಚೆನ್ನಬಸಪ್ಪ ಪಂಚಪ್ಪ ಕುರುಬಗೊಂಡಶೆಟ್ಟರು, ಶ್ರೀಮಂತರ ಉಪಕಾರವನ್ನು ಸ್ಮರಿಸಿ ಎಲ್ಲಕ್ಕೂ ಮೊದಲು ಅವರ ಸ್ಮಾರಕವನ್ನು ಮಾಡಿ, ಕೃತಜ್ಞತೆಯನ್ನು ತೋರಿಸಿದ ಸಂಗತಿಯು ಮುಂದೆ ಬರುವದು.

ದುಃಖಪ್ರದರ್ಶನ ಸಭೆಗಳು

ಅಭೂತಪೂರ್ವ ಔದಾರ್ಯಶಾಲಿಗಳಾದ ಶ್ರೀಮಂತ ಅಪ್ಪಾಸಾಹೇಬರವರ ಅಳಿವಿನಿಂದ ಅಶೇಷ ವೀರಶೈವ ಸಮಾಜಕ್ಕುಂಟಾದ ದುಃಖಪ್ರದರ್ಶನ ಮಾಡುವದಕ್ಕಾಗಿ ಹಾಗೂ ಸಿರಸಂಗಿಯ ಸಂಸ್ಥಾನದ ವಂಶಕ್ಕೇ ತಿಲಕಪ್ರಾಯರಾಗಿ, ದಿಗಂತರ ಕೀರ್ತಿಯನ್ನು ಹೊಂದಿದ ಇಂಥ ಮಹಾಪತಿಯನ್ನು ಚಿಕ್ಕವಯಸ್ಸಿನಲ್ಲಿಯೇ ಕಳೆದುಕೊಂಡಿದ್ದರಿಂದ ಅವರ ಕುಟುಂಬಕ್ಕೆ ಉಂಟಾಗಿರುವ ಅಪಾರವಾದ ದುಃಖ ಶಮನಾರ್ಥವಾಗಿ ಧಾರವಾಡ, ಹುಬ್ಬಳ್ಳಿ, ಗದಗ, ಬೆಳಗಾವ, ವಿಜಾಪುರ, ಗೋಕಾಕ, ಅಥಣಿ, ಮೈಸೂರ, ದೇವೀಹೊಸೂರ ಮುಂತಾದ ಪ್ರಸಿದ್ಧ ಸ್ಥಳಗಳಲ್ಲಿ ಪ್ರಚಂಡವಾದ ಸಭೆಗಳು ನೆರೆದು, ಸುಂದರಾಬಾಯಿಯವರಿಗೆ ಶೋಕೋಪಶಮನಪರವಾದ ತಾರುಗಳೂ, ಪತ್ರಗಳೂ ಕಳುಹಿಸಲ್ಪಟ್ಟವು. ಅವೆಲ್ಲ ಪತ್ರಿಕೆಗಳ ಸಾರವು ಬಹುಶಃ ಒಂದೇ ಇರುವದರಿಂದ ಧಾರವಾಡ ವೀರಶೈವರು ಕಳುಹಿಸಿದ ಪತ್ರದ ಅವತರಣವನ್ನೊಂದೇ ಇದರಡಿಯಲ್ಲಿ ಕೊಡುತ್ತೇವೆ.

ಶ್ರೀಮತಿ ಸುಂದರಾಬಾಯಿಸಾಹೇಬ ಭರ್ತಾರ ಲಿಂಗಪ್ಪ ದೇಸಾಯಿ ಸಂಸ್ಥಾನ ಸಿರಸಂಗಿ, ನವಲಗುಂದ ಇವರ ಸನ್ನಿಧಿಗೆ:

ನಮ್ಮ ವೀರಶೈವ ಸಮಾಜ ಸುಧಾಶರಧಿಗೆ ಪೂರ್ಣಚಂದ್ರೋಪಮಾನರಾಗಿದ್ದ ಮತ್ತು ತಮ್ಮ ಸಕಲಸೌಭಾಗ್ಯಭಾಂಡಾಗಾರವೆನಿಸಿದ್ದ, ತಮ್ಮ ಧರ್ಮಪತಿಗಳಾದ ಶ್ರೀಮಂತ ಲಿಂಗಪ್ಪ ಜಾಯಪ್ಪ ಊರ್ಫ ಅಪ್ಪಾಸಾಹೇಬ ಸರದೇಸಾಯಿ ಸಂಸ್ಥಾನ ಸಿರಸಂಗಿ ಇವರು ಗುರುವಾರ ತಾರೀಖು ೨೩ನೇ ಅಗಸ್ಟ್ ಸನ್ ೧೯೦೬ನೇ ಇಸವಿಯ ದಿವಸ ಅಕಾಲಕ್ಕೆ ಕೈಲಾಸವಾಸಿಗಳಾದರೆಂಬ ಅತ್ಯಂತ ಶೋಚನೀಯ ವಾರ್ತೆಯನ್ನು ಕೇಳಿ, ಧಾರವಾಡ ವೀರಶೈವ ಮಂಡಳಿಯವರಾದ ನಾವೆಲ್ಲರೂ ದುಃಖಸಾಗರದಲ್ಲಿ ಮುಳುಗಿದ್ದೇವೆ. ತಮಗೆ ಸ್ವತಃ ಎಷ್ಟು ದುಃ ಖವಾಗಿದ್ದೀತೆಂಬುದನ್ನು ಹೇಳಲು ನಾವು ಅಸಮರ್ಥರು. ಈಶ ಸಂಕಲ್ಪಕ್ಕೆ ಯತ್ನವಿಲ್ಲ. ಪೂರ್ವದ ಎಷ್ಟೋ ಮಹಾ ಮಹಾ ಸಾರ್ವಭೌಮಾದಿ ಮಹನೀಯರೂ ಕೂಡ ಈಶ ಸಂಕಲ್ಪಕ್ಕೆ ಸರಿಯಾಗಿ ಲೋಕಾಂತರಗತವಾದದ್ದು ತಮಗೆ ವಿದಿತವಾದದ್ದೇ ಅದೆ. ತಮ್ಮ ಪತಿಗಳು ಮರ್ತ್ಯಕಾಯದಿಂದ ಅಳಿದವರಾಗಿದ್ದರೂ, ಕೀರ್ತಿಕಾಯದಿಂದ ಚಿರಕಾಲ ಉಳಿದವರಾಗಿರುತ್ತಾರೆ. ಆದುದರಿಂದ ತಾವು, ತಮ್ಮನ್ನಗಲಿದ ಪತಿಗಳಿಗಾಗಿ ದುಃಖಿಸದೆ ಶಿವಪೂಜಾದಿ ಸತ್ಕರ್ಮನಿರತರಾಗಿ, ತಮ್ಮ ಧರ್ಮಪತಿಗಳಂತೆ ಧೈರ್ಯ, ಔದಾರ್ಯ ಸದ್ಧರ್ಮಗಳಿಂದ ಸಂಸ್ಥಾನದ ಕೀರ್ತಿಯನ್ನು ಕಾಯ್ದುಕೊಂಡು ಇರುವಂತೆ ತಮಗೆ ಪಾರ್ವತೀಪರಮೇಶ್ವರರು ಅನುಗ್ರಹಿಸಲೆಂದೂ ತಮ್ಮ ಪರಮಪೂಜ್ಯಪತಿಗಳವರಿಗೆ ಮೋಕ್ಷ ಸಾಮ್ರಾಜ್ಯವನ್ನೀಯಲೆಂದೂ ಬೇಡಿಕೊಂಡು, ಪರಮದುಃಖದಾಯಕವಾದ ಈ ಲೇಖನವನ್ನು ಮುಗಿಸಲಿಕ್ಕೆ ತಮ್ಮ ಅಪ್ಪಣೆಯನ್ನು ಬೇಡಿಕೊಳ್ಳುತ್ತೇವೆ, ತಾರೀಖ ೮ನೇ ಮಾಹೆ ಸೆಪ್ಟಂಬರ ಸನ್ ೧೯೦೬ನೇ ಇಸವಿ.

ಧಾರವಾಡ ವೀರಶೈವರು

ನ್ಯಾಯನಿಷ್ಠ ಬ್ರಿಟಿಶ ಸರಕಾರ

ಶ್ರೀಮಂತ ಅಪ್ಪಾಸಾಹೇಬರವರ ಲೋಕೋತ್ತರವಾದ ದಾತೃತ್ವದ ಗುಣಾನುವಾದವನ್ನೂ, ಅವರ ಮೃತಿಯಿಂದ ವೀರಶೈವರಾಷ್ಟ್ರಕ್ಕುಂಟಾದ ದುಃಖವನ್ನೂ ಎಷ್ಟು ಬರೆದರೂ ಸ್ವಲ್ಪವೇ ಎಂದು ಇಷ್ಟಕ್ಕೆ ಮುಗಿಸಿ, ಸರಕಾರದ ವಿಚಾರಕ್ಕೊಳಗಾಗಿದ್ದ ಅವರ ಮೃತ್ಯುಪತ್ರದ ಪರ್ಯವಸಾನವು ಏನಾಯಿತೆಂಬದನ್ನು ವಿಚಾರಿಸುವಾ!

ಶ್ರೀಮಂತರ ಮರಣಶಾಸನವನ್ನು ಈಡೇರದಂತೆ ಮಾಡಿಸಬೇಕೆಂದು ಪರೋತ್ಕರ್ಷಾಸಹಿಷ್ಣುಗಳಾದ ಕೆಲ ಅನ್ಯಮತೀಯರು ವಿಶ್ವಪ್ರಯತ್ನವನ್ನು ನಡಿಸಿದರು. ವರ್ಷೇವರ್ಷೇ ೩೦-೪೦ ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಧನರಾಶಿಯು ವೀರಶೈವರ ವಿದ್ಯಾಭಿವೃದ್ಧಿಗೆ ಸಹಾಯವಾಗುತ್ತ ಬಂದರೆ ಇವರಲ್ಲಿ ವಿದ್ಯಾಪ್ರಸಾರವು ಪ್ರಬಲವಾಗಿ ಹೋಗುವದೆಂಬ ಅಸೂಯೆಯಿಂದ, ಕೆಲ ಹೊಟ್ಟೆಯುರಕ ಹಾರುವರು ಒಳಗೊಳಗೆ ಕಪಟತಂತ್ರಗಳನ್ನು ನಡೆಯಿಸಿದರು. ದುಷ್ಟರಿಂದ ಪ್ರೇರಿತರಾದ ಕೆಲ ಅದೂರದರ್ಶಿಗಳು ಮುಂದಾಲೋಚನೆಯಿಲ್ಲದೆ ದೇಸಾಯರ ಸಂಕಲ್ಪಕ್ಕೆ ವಿರುದ್ಧವಾಗಿ ಆಚರಿಸುವದಕ್ಕೂ, ಅನೃತವನ್ನಾಡುವದಕ್ಕೂ ಹಿಂದೆಗೆಯದೆ ಸರಕಾರದಲ್ಲಿಯೂ ಕೂಡ ಬೇರೆ ಬೇರೆ ಬಿನ್ನಪಗಳನ್ನು ಮಾಡಿಕೊಂಡು, ತಮ್ಮ ಕಾಲಮೇಲೆ ತಾವೇ ಕಲ್ಲನ್ನು ಚಲ್ಲಿಕೊಳ್ಳುವಂತಹ ನಡೆಯನ್ನು ಆಚರಿಸಹತ್ತಿದರು. ಆದರೆ ೨೦ನೇ ಶತಮಾನದ ಶಿವಶರಣರಂತೆ ತಮ್ಮ ನಡೆನುಡಿಗಳಲ್ಲೆಲ್ಲ ತೋರ್ಪಟ್ಟ ಮಹಾಪುರುಷರಾದ ಶ್ರೀಮಂತ ಲಿಂಗಪ್ಪ ದೇಸಾಯರ ಪವಿತ್ರ ಸಂಕಲ್ಪವು ಅನ್ಯರ ಪ್ರೇರಣೆಯಿಲ್ಲದೆ ಶುದ್ಧವಾಗಿ ಸ್ವಯಮೇವ ಜನಿಸಿದ್ದುದರಿಂದಲೂ, ಅಭೂತಪೂರ್ವವಾದ ಸದ್ಧರ್ಮಾಭಿಮಾನದ ಸಾರವು ಆ ಸಂಕಲ್ಪದಲ್ಲಿ ಅಡಗಿದ್ದು, ಅವರ ನುತಭಕ್ತಿಯು ಅನನ್ಯಸಾಧಾರಣವೆನಿಸಿ ಶಿವಪ್ರೀತವಾದುದರಿಂದಲೂ, ಯುಕ್ತಾಯುಕ್ತ ವಿಚಾರಪೂರ್ವಕವಾದ ನ್ಯಾಯೌದಾರ್ಯವು ಸರಕಾರದಲ್ಲಿ ಇಲ್ಲವೇ ಇಲ್ಲವೆಂದು ಹೇಳುವದಕ್ಕೆ ಅವಕಾಶವೇ ಇಲ್ಲದುದರಿಂದಲೂ ರಾ.ಬ॥ರುದ್ರಗೌಡ ದೊರೆಗಳವರ ನಿಃಸೀಮವಾದ ಸರಳ ಪ್ರಯತ್ನದಿಂದಲೂ ಆ ಸಂಕಲ್ಪವು ಅಚ್ಯುತವಾಗಿ ನೆರವೇರುವಂತಾಯಿತೆಂಬದನ್ನು ಕೇಳಿ, ವೀರಶೈವ ಸಮಾಜಕ್ಕೆಲ್ಲ ಅತ್ಯಂತ ಸಂತೋಷವಾಯಿತು. ವೀರಶೈವ ಮತವನ್ನೆಲ್ಲ ಪ್ರಕಾಶಗೊಳಿಸುವಷ್ಟು ಸಾಮರ್ಥ್ಯವು ಈ ನಮ್ಮ ಗತಿಸಿದ ಶ್ರೀಮಂತರ ಸಂಕಲ್ಪದಲ್ಲಿ ನೆಲೆಗೊಂಡಿರುವದು. ಇಂತಹ ಸತ್ಸಂಕಲ್ಪಶಿಶುವಿನ ಅಭಿವೃದ್ಧಿಗೆ ಪ್ರತಿಬಂಧಕಗಳಾಗಿ ಹಲವು ಬಾಲಾರಿಷ್ಟಗಳು ಒದಗಿದ್ದವು. ಅವೆಲ್ಲ ಸರಕಾರದವರ ಉದಾರವಾದ ನ್ಯಾಯದೃಷ್ಟಿಯ ಬಲದಿಂದ ಪರಾಭೂತವಾಗಿ ಈ ಶಿಶುವು ಬಾಲಾರಿಷ್ಟವನ್ನು ಕಳೆದುಕೊಂಡಿತು. ಅಂದರೆ ಸರಕಾರದವರು ದೇಸಾಯರ ಮರಣಶಾಸನವನ್ನೆಲ್ಲ ಪರಾಮರಿಸಿ, ಈ ವಿಷಯಕವಾಗಿ ಇತರ ಹೇಳಿಕೆಗಳೇನು ಇದ್ದವೋ ಅವುಗಳನ್ನು ಕೇಳಿಕೊಂಡು, ಪೂರ್ಣವಿಚಾರಮಾಡಿ, ಶ್ರೀಮಂತರ ಸತ್ಯಸಂಕಲ್ಪವನ್ನು ತಮ್ಮ ಶೋಧದೃಷ್ಟಿಗೆ ತಂದು, "ಗತಿಸಿದ ದೇಸಾಯರ ಮೃತ್ಯುಪತ್ರದ ಪ್ರತಿಯೊಂದನ್ನು ಬೆಳಗಾವ ಜಿಲ್ಲಾ ಕಲೆಕ್ಟರ ಸಾಹೇಬರವರು ತೆಗೆದುಕೊಂಡು, ಅದರಲ್ಲಿ ಕಂಡಿರುವ ಮೇರೆಗೆ ಪ್ರತಿಯೊಂದು ವಿಷಯವನ್ನೂ ನೆರವೇರಿಸಿಕೊಡಬೇಕು" ಎಂದು ಅಪ್ಪಣೆ ಮಾಡಿರುತ್ತಾರೆ. ಸರಕಾರ ಠರಾವ ನಂಬರ..........[೪]

ಈ ಠರಾವಿನ ವಾರ್ತೆಯನ್ನು ಕೇಳಿದ ವೀರಶೈವ ಸಮಾಜವೆಲ್ಲವೂ ಆನಂದಪಡುವ ವಿಷಯದಲ್ಲಿ ಸಂದೇಹವಿರುವದಿಲ್ಲ. ಯಾವದೊಂದು ಮರಣಶಾಸನವೂ ಅವ್ಯಾಹತವಾಗಿ ರಕ್ಷಿಸಲ್ಪಡುವದು ರಾಜ್ಯಶಾಸಕರ ಸದ್ಧರ್ಮವಾಗಿರುತ್ತದೆ. ಅದರಲ್ಲಿಯೂ ಒಂದು ಜನಾಂಗಕ್ಕೂ, ತನ್ಮೂಲಕ ದೇಶಕ್ಕೂ, ಶ್ರೇಯಸ್ಸನ್ನು ಕೋರುವದಕ್ಕಾಗಿ ಮಾಡಲ್ಪಟ್ಟಿರುವ ಮಹೌದಾರ್ಯಪೂರ್ವಕವಾದ ಶ್ರೀಮಂತ ಅಪ್ಪಾಸಾಹೇಬರ ಸತ್ಸಂಕಲ್ಪದ ಮೃತ್ಯುಪತ್ರಕ್ಕೆ ಆಂಗ್ಲೇಯ ಸರಕಾರದಲ್ಲಿ ಬಹುಮಾನ ಕೊಡಲ್ಪಡದೆ ಹೋಗುವದು ಎಂದಿಗೂ ಅಸಂಭವವು. ಹಾಗೆ ಮಾಡದೆ ತಪ್ಪುವದು ತಮ್ಮ ಸದ್ಧರ್ಮರಾಜನೀತಿಗೆ ಕಲಂಕಪ್ರದವಾಗುವದೆಂಬದನ್ನು ಆಂಗ್ಲರಾಜ್ಯಾಧಿಕಾರಿಗಳು ಪೂರ್ಣವಾಗಿ ತಿಳುಕೊಂಡಿರುವರೆಂಬದಕ್ಕೆ ಇದೊಂದೇ ದೃಷ್ಟಾಂತವು ಸಾಕು.

ಭರತಖಂಡದಲ್ಲಿ ವಿದ್ಯಾದಿವಿಷಯಗಳಲ್ಲಿ ಹಿಂದುಳಿದಿರುವ ಜನರು ಕೋಟ್ಯಂತರವಿರುವರು. ಅವರನ್ನೆಲ್ಲ ಮುಂದಕ್ಕೆ ತರಬೇಕೆನ್ನುವದು ಬ್ರಿಟಿಷ ಸರಕಾರದವರ ದೃಢ ಸಂಕಲ್ಪವಿದ್ದು, ಅದಕ್ಕಾಗಿ ಅನೇಕ ಬಗೆಯಿಂದ ಪ್ರಯತ್ನ ಪಡುತ್ತಿರುತ್ತಾರೆ. ಪ್ರಕೃತದ ಸರದೇಸಾಯರ ಸಂಕಲ್ಪವಾದರೂ ಅದನ್ನು ಪೋಷಿಸತಕ್ಕದ್ದಾಗಿಯೇ ಇರುವದು. ಪ್ರತಿಯೊಂದು ಮತದವರಲ್ಲಿಯೂ ಈ ನಮ್ಮ ದೇಸಾಯರಂತಹ ಸ್ವಾರ್ಥತ್ಯಾಗಿ ಉದಾರಪುರುಷರು

೪.ಹಸ್ತಪ್ರತಿಯಲ್ಲಿಯೇ ಇಲ್ಲಿ ಜಾಗ ಬಿಡಲಾಗಿದೆ -ಸಂ.

ಮುಂದಾಗಿ ನಿಂತು, ತಮ್ಮ ಜನರ ವಿದ್ಯುವಿವೇಕಾದಿಗಳನ್ನಭಿವೃದ್ಧಿ ಗೊಳಿಸುವದಕ್ಕೆ ನಡಕಟ್ಟಿ ನಿಂತರೆ, ಸರಕಾರದವರ ಕಾರ್ಯಭಾರವು ಬಲು ಹಗುರವಾಗುವದು. ಆ ಕಾರಣ ಅಂತಹ ಮಹಾನುಭಾವರ ಪ್ರಯತ್ನಗಳನ್ನೆಲ್ಲ ಸರಕಾರದವರು ಶ್ಲಾಘಿಸಿ ಬೇಕಾದಷ್ಟು ಪ್ರೋತ್ಸಾಹವನ್ನುಂಟು ಮಾಡಿಯೇ ಕೊಡಬೇಕಾಗಿರುವದು. ಹೀಗಿರುವಲ್ಲಿ ಹಿಂದುಳಿದಿರುವ ವೀರಶೈವ ಜನಾಂಗವನ್ನೆಲ್ಲ ವಿದ್ಯಾ-ಶಿಲ್ಪ-ಕೃಷಿ-ವಾಣಿಜ್ಯಾದಿಗಳಲ್ಲಿ ವೃದ್ಧಿಗೆ ತರಲು ಸಹಾಯಮಾಡುವ ಶ್ರೀಮಂತರವರ ಸಂಕಲ್ಪಕ್ಕೆ ಸಾರ್ವಭೌಮ ಸರಕಾರದವರು ಪೋಷಕರಾಗಿರುವರಲ್ಲದೆ, ಅದನ್ನು ಅಡಗಿಸಿ ಬಿಡುವರೆಂದು ಯೋಚಿಸುವದಕ್ಕೆ ತಿಲಾಂಶವಾದರೂ ಆಸ್ಪದವಿರುವದಿಲ್ಲ. ಎಷ್ಟೋಜನ ವಿಘ್ನಸಂತೋಷಿಗಳು, ಶ್ರೀಮಂತರು ಈ ಪ್ರಕಾರವಾಗಿ ಬರೆದ ಮೃತ್ಯುಪತ್ರವನ್ನು ಸರಕಾರದವರು ಎಂದಿಗಾದರೂ ಮಾನ್ಯಮಾಡುವರೇ? ಬುಭುಕ್ಷಿತವಾದ ಸಿಂಹನ ಗವಿಯನ್ನು ಸೇರಿದ ಮೃಗವು ತಿರುಗಿ ಹೊರಗೆ ಎಂದಿಗೂ ಬಾರದು. ಅನಾಯಾಸವಾಗಿ ಸಿಕ್ಕ ಸಂಸ್ಥಾನವನ್ನು ಸರಕಾರದವರು ಗುಳುಂ ಎಂದು ನುಂಗಿ ಬಿಡುವರು. ಓಹೋ ಸಿರಸಂಗಿಯ ಸಂಸ್ಥಾನವೆಲ್ಲ ಸರಕಾರಕ್ಕೆ ಸೇರಿಹೋಯಿತು ಎಂದೆನ್ನುತ್ತ ನಿರಾಧಾರವಾದ ಸುಳ್ಳು ಸುದ್ದಿಗಳನ್ನು ಪಸರಿಸುತ್ತ, ತಮ್ಮ ಕಪಟಮನಸ್ಸನ್ನು ಶಾಂತಮಾಡಿಕೊಂಡರು. ಕೂಡಲೆ ಸರಕಾರದವರು ಶ್ರೀಮಂತರ ಮೃತ್ಯುಪತ್ರವನ್ನು ಮಾನ್ಯಮಾಡಿ, ಸಂಸ್ಥಾನದ ಸ್ವತ್ತನ್ನೆಲ್ಲ ಲಿಂಗಾಯತ ಫಂಡಿಗೆ ಕೊಟ್ಟರೆಂಬ ವಾರ್ತೆಯನ್ನು ಕೇಳಲಿಕ್ಕೆ ಕೂಡ ಆ ಹೊಟ್ಟೆಯುರಕ ಹಾರುವರಿಗೆ ಕಠಿಣವಾಯಿತು. ಶ್ರೀಮಂತರ ಸಚ್ಚರಿತ್ರೆಯಲ್ಲಿ ಇಂತಹ ದುರ್ಮಾರ್ಗಿಗಳ ಪ್ರಸ್ತಾಪವೇ ಬೇಡ. ಸಾರಾಂಶ ಈ ಮೇಲಿನ ವಿವರದಿಂದ ಸರಕಾರದವರು ನ್ಯಾಯವನ್ನು ತಪ್ಪಿ ನಡೆಯುವದಿಲ್ಲೆಂಬುದು ಸಿದ್ಧವಾಗುತ್ತದೆ.

ಸಿರಸಂಗಿಯ ದೇಸಗತಿಯಿಂದ ವರ್ಷಕ್ಕೆ ಸುಮಾರು ೪೦-೫೦ ಸಾವಿರ ರೂಪಾಯಿಗಳ ಉತ್ಪತ್ತಿಯು ಬರುತ್ತಿರುವದು. ಗತಿಸಿದ ದೇಸಾಯರ ಸಂಕಲ್ಪದಂತೆ ಆ ದೇಸಗತಿಯ ಅಭಿವೃದ್ಧಿಗಾಗಿಯೂ, ನಿಯತವಾದ ಕೆಲಸಗಳಿಗಾಗಿಯೂ, ಮಾಡಬೇಕಾದ ವೆಚ್ಚವನ್ನು ಅದರಲ್ಲಿ ಕಳೆದರೆ ೨೫ ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ಹಣವು ಉಳಿಯಬಹುದು. ಇಷ್ಟು ಹಣವು ಪ್ರತಿವರ್ಷ ವೀರಶೈವರ ಏಳ್ಗೆಗೆ ಉಪಯೋಗಿಸಲ್ಪಡುವದೆಂದರೆ ಅದು ಸಾಮಾನ್ಯವಾಗಲಿಲ್ಲ. ವರ್ಷವೊಂದಕ್ಕೆ ಸರಕಾರೀ ಬಡ್ಡಿಯ ದರದ ಪ್ರಕಾರ, ಮೇಲೆ ಹೇಳಿದಷ್ಟು ಹಣವು ಬಡ್ಡಿಯಾಗಿ ಬರುವ ಒಂದು ಧನರಾಶಿಯನ್ನು ಕಲ್ಪಿಸಬೇಕಾದರೆ ಅದು ಎಂಟು (೮)ಲಕ್ಷರೂಪಾಯಿಗೆ ಕಡಿಮೆಯಲ್ಲದಷ್ಟಾಗಿರಬೇಕು. ಅಂದರೆ ಸಿರಸಂಗೀ ದೇಸಗತಿಯಿಂದ ವಿದ್ಯಾಭಿವೃದ್ಧಿಯ ಫಂಡಿಗೆ ವರ್ಷವೊಂದಕ್ಕೆ ೨೫ ಸಾವಿರ ರೂಪಾಯಿಗಳನ್ನು ಪಡೆಯುವದೂ, ಫಂಡಿನಲ್ಲಿ ೮ ಲಕ್ಷರೂಪಾಯಿಗಳು ಕೂಡಿರುವದೂ ಒಂದೇ ಆಗಿರುವದು. ಆದುದರಿಂದ ಈ ಮುಂದೆ ವೀರಶೈವರ ವಿದ್ಯಾಭಿವೃದ್ಧಿಯ ಫಂಡಿಗೆ ಕೂಡಿರುವ ಸುಮಾರು ೨ ಲಕ್ಷ ರೂಪಾಯಿಗಳಿಗೆ ಇದೂ ಸೇರಿದರೆ ಸುಮಾರು ೧೦ ಲಕ್ಷ ರೂಪಾಯಿಗಳ ನಿಧಿಯು ವೀರಶೈವರ ವಿದ್ಯಾಭಿವೃದ್ಧಿಗಾಗಿ ಸ್ಥಿರವಾಗಿ ನಿಂತಂತಾಗುವದು. ಮತ್ತು ದೇಸಗತಿಯಿಂದ ವೀರಶೈವರ ವಿದ್ಯಾಭಿವೃದ್ಧಿಗಾಗಿ ಬರುವ ಹಣದಲ್ಲಿ ಅವಶ್ಯಕವಾದಷ್ಟು ಹಣವನ್ನು ಉಪಯೋಗಿಸಿಕೊಂಡು ಉಳಿದದ್ದನ್ನೆಲ್ಲ ಮತ್ತೆ ಮೂಲನಿಧಿಗೇ ಸೇರಿಸಿ, ಅದನ್ನು ಇನ್ನೂ ಪ್ರಬಲಸ್ಥಿತಿಗೆ ತರಲೂ ಅವಕಾಶವಿದೆ. ಇಂತಹ ಮಹಾನಿಧಿಯ ಆಶ್ರಯದಿಂದ ವೀರಶೈವರಲ್ಲಿ ವಿದ್ಯೆ, ಧರ್ಮ, ಶಿಲ್ಪ, ಕೃಷಿಕರ್ಮ, ವಾಣಿಜ್ಯಾದಿಗಳ ಪುರೋವೃದ್ಧಿಯನ್ನುಂಟುಮಾಡುವದಕ್ಕೆ ಯಥೇಚ್ಛವಾದ ಅವಕಾಶವು ದೊರಕುವದು. ಸದ್ಯಃ ವೀರಶೈವ ಮತಕ್ಕೆ ಅದ್ವಿತೀಯ ಪರೋಪಕಾರ ಮಾಡಿ ೨೦ನೇ ಶತಮಾನದ ಮತೋದ್ಧಾರಕರಂತೆ ಹೆಸರ್ಗೊಂಡ ಮಹಾಪುರುಷರಾದ ಶ್ರೀಮಂತ ಸರದೇಸಾಯಿಯವರ ಪವಿತ್ರ ಜನ್ಮಕ್ಕೆ ವೀರಶೈವರೆಲ್ಲರು ಕೃತಜ್ಞತಾಪೂರ್ವಕವಾಗಿ ಧನ್ಯವಾದ ಮಾಡಿ, ಅವರನ್ನು ಅಭಿವಂದಿಸುವದಲ್ಲದೆ, ಗತಿಸಿದವರ ಚಿರಸ್ಮರಣಾರ್ಥವಾಗಿ ಒಂದು ಉತ್ಕೃಷ್ಟವಾದ ಕಾರ್ಯವನ್ನು ಜರುಗಿಸಬೇಕಾದದ್ದು ಆದ್ಯಕರ್ತವ್ಯವಾಗಿದೆ.

ಯಶಶ್ಶರೀರಿಗಳಾದ ಇಂತಹ ಪವಿತ್ರ ಪುರುಷರನ್ನು ಪತಿಯಾಗಿ ಪಡೆದುಕೊಂಡ ಭಾಗ್ಯವನ್ನು ಸಂಪಾದಿಸಿದ್ದ ಸುಂದರಾಬಾಯಿಯವರೂ ಶ್ರೀಮಂತ ಸರದೇಸಾಯಿಯವರ ದೇಹಾನುಬಂಧಿಗಳಾದ ಇತರರೂ ಸಹ

"ಸ್ವದತ್ತಾತ್ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ।
ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂಭವೇತ್॥"

ಅಂದರೆ ಪರರು ಮಾಡಿದ ದಾನವನ್ನು ಕಾಪಾಡಿದರೆ (ಅದು ಸಾರೋದ್ಧಾರವಾಗಿ ನಡೆದುಕೊಂಡು ಹೋಗುವಂತೆ ಸಹಾಯಮಾಡಿದರೆ) ತಾವು ದಾನಮಾಡಿದಕಿಂತಲೂ ಇಮ್ಮಡಿಯಷ್ಟು ಅಧಿಕವಾದ ಪುಣ್ಯವು ಲಭಿಸುವದು. ಇತರರು ಮಾಡಿದ ದಾನವನ್ನು ಅಪಹರಿಸಿದರೆ (ಅದನ್ನು ನೆಯಗೊಡದಂತೆ ವಿಘ್ನಮಾಡಿದರೆ) ತಾವು ಮಾಡಿದ ದಾನವೂ ನಿಷ್ಫಲವಾಗಿ ಹೋಗುವದು-ಎಂಬ ಪ್ರಮಾಣ ವಚನವನ್ನು ಪರಿಭಾವಿಸಿ, ಗತಿಸಿದ ಮಹಾನುಭಾವರು ಮಾಡಿರುವ ಸತ್ಸಂಕಲ್ಪವನ್ನು ನಿರುಪಾಧಿಕವಾಗಿಯೂ, ಉಚಿತವಾಗಿಯೂ, ದುರ್ವ್ಯಯವಾಗದೆಯೂ ಇರುವಂತೆ ನಡೆದುಕೊಂಡು ಹೋಗುವ ವಿಷಯದಲ್ಲಿ ತಮ್ಮ ಕೈಲಾದಮಟ್ಟಿಗೆ ಸಹಾಯ ಪ್ರೋತ್ಸಾಹಗಳನ್ನೆಲ್ಲ ಮಾಡಿ, ತನ್ಮೂಲಕ ಗತಿಸಿದವರ ಆತ್ಮಕ್ಕೆ ಶಾಂತಿಯನ್ನೂ ದಾನರಕ್ಷಣದ ಫಲದ ಭಾಗವನ್ನೂ ಪಡೆದುಕೊಳ್ಳಬೇಕಲ್ಲದೆ ಇಹಲೋಕದ ತಮ್ಮ ಸಮಾಜಬಾಂಧವರಲ್ಲಿ ಒಳ್ಳೇ ಯಶಸ್ಸನ್ನು ಪಡೆದುಕೊಳ್ಳವರಾಗತಕ್ಕದ್ದು.

ಶ್ರೀಮಂತ ಅಪ್ಪಾಸಾಹೇಬರು ವೀರಶೈವ ಸಮಾಜಕ್ಕೆ ಮಾಡಿದ ಲೋಕೋತ್ತರವಾದ ದಾತೃತ್ವವು ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪಣ್ಣನವರೂ, ರಾ.ಬ॥ರುದ್ರಗೌಡ ಸಾಹೇಬರೂ ಅವಿಶ್ರಾಂತ ಶ್ರಮದಿಂದ ಬೆಳೆಯಿಸಿದ ವೀರಶೈವ ವಿದ್ಯಾವೃಕ್ಷವು ಬೇರೂರಿ ನಿಂತು ಬಹುಕಾಲ ಬದುಕಲಿಕ್ಕೂ, ಮಧುರತರವಾದ ಫಲಗಳನ್ನು ಫಲಿಸಲಿಕ್ಕೂ ಕಾರಣವಾಯಿತೆಂದು ಹೇಳಬಹುದು. ಯಾವ ಮಹನೀಯರು ಕೇವಲ ಪರೋಪಕಾರ ಬುದ್ಧಿಯಿಂದ ಸಾರ್ವಜನಿಕ ಕಾರ್ಯಗಳನ್ನು ಆರಂಭಿಸಿ ಅಭಿವೃದ್ಧಿಗೊಳಿಸುತ್ತ ಬಂದಿರುವರೋ, ಯಾರು ಪರಹಿತ, ಸಮಾಜ ಹಿತಕ್ಕಾಗಿಯೇ ತಮ್ಮ ತನುಧನಮನಗಳನ್ನು ಆ ಜನ್ಮ ಸೂರೆ ಮಾಡುತ್ತಿರುವರೋ ಅವರ ಕಾರ್ಯಗಳು ದೃಢವಾಗಿ ನೆರವೇರಲ್ಪಟ್ಟು, ಅವರ ಅಖಂಡಕೀರ್ತಿಯು ದಿಗಂತರವಾಗಿ ಪಸರಿಸುವದರಲ್ಲಿ ಸಂದೇಹವಿಲ್ಲ. ಸಮಾಜ ಸುಧಾರಣೆಯ ಸತ್ಕೃತ್ಯಗಳು ಸಹನವಾಗದೆ ತಾವೂ ಸಾರ್ವಜನಿಕ ಕಾರ್ಯಗಳನ್ನು ಮಾಡುವೆವೆಂದು ಬರಿಯ ಸ್ವಾರ್ಥಬುದ್ಧಿಯಿಂದ ಸುಳಿದಾಡುವ ಕೆಲ ಅಸೂಯಾಪರರ ಕೃತ್ಯಗಳು, ಹುಲಿಯಾಗಬೇಕೆಂಬ ಹೆಮ್ಮೆಯಿಂದ ಸುಟ್ಟುಕೊಂಡು ಸತ್ತ ನರಿಯಂತೆ ಜಗದ ನಗೆಗೆ ಕಾರಣವಾಗಿರುತ್ತವಲ್ಲದೆ ಬೇರೊಂದಿಲ್ಲ. ಇಂತಹ ಮೂರ್ಖಕೋಟಿಯಲ್ಲಿ ಎಣಿಸಲ್ಪಡುವ ಕೆಲವರು ದೇಸಗತಿಯ ಸ್ವತ್ತನ್ನೆಲ್ಲ ಲಿಂಗಾಯತ ಫಂಡಿಗೆ ಕೊಡುವ ಬಗ್ಗೆ ಶ್ರೀಮಂತ ಸರದೇಸಾಯಿಯವರಿಗೆ ಲಿಂಗಾಯತ ಫಂಡಿನ ಪುರಸ್ಕರ್ತರಾದ ರಾ.ಬ॥ರುದ್ರಗೌಡ ಸಾಹೇಬರವರೇ ಬೋಧಮಾಡಿರಬಹುದೆಂದೂ, ಇವರ ಉಪದೇಶದಿಂದಲೇ ಶ್ರೀಮಂತರು ಈ ಬಗೆಯ ಹುಚ್ಚುತನದ ಕೃತ್ಯವನ್ನು ಮಾಡಿರುವರೆಂದೂ ಸಂಸ್ಥಾನವನ್ನು ಸಾಹೇಬರೇ ಮುಳುಗಿಸಿದರೆಂದೂ ಕುತರ್ಕವನ್ನು ಕಲ್ಪಿಸಿ, ಇವರಿಗೆ ಬಹಳೇ ದೂಷಣೆಕೊಡುವವರಾದರು. ನವಲಗುಂದ ಕಡೆಯ ಕೆಲಜನರು ರಾ.ಬ॥ರವರು ಕುಡಿಯುವ ನೀರಲ್ಲಿ ಮೂತ್ರ ಬಿಟ್ಟಂತೆ ಮಾಡಿದರೆಂದು ಅನ್ನುವವರಾದರು. ಆದರೆ ದುರ್ಜನರ ದುರೂಹೆಗಳಿಗೆ ಮರ್ಯಾದೆಯೇ ಇರುವದಿಲ್ಲವೆಂಬಂತೆ ಈ ದುಷ್ಟಕಲ್ಪನೆಯಲ್ಲಿ ಏನೂ ಅರ್ಥವಿಲ್ಲ. ಯಾಕಂದರೆ ಶ್ರೀಮಂತ ಲಿಂಗಪ್ಪ ದೇಸಾಯರು ಅಜ್ಞಾನಿಗಳಲ್ಲ. ಅಜ್ಞಾನಿಗಳ ಅಂಧಃಕಾರಕ್ಕೆ ಅಂಜನ ಹಚ್ಚಿ ಅವರನ್ನು ಸಜ್ಞಾನಿಗಳನ್ನಾಗಿ ಮಾಡುವಷ್ಟು ಜಾಣ್ಮೆಯುಳ್ಳ ಧೀಮಂತರಿದ್ದರೆಂಬ ಮಾತು ಸರ್ವರಿಗೂ ಗೊತ್ತಿರುವದು. ಯಾವ ಸುಶಿಕ್ಷಿತನಾದರೂ ತನ್ನ ಮನಸ್ಸಿಗೆ ಬಾರದೆ ಇದ್ದ ಅಥವಾ ತನ್ನ ಮನಸ್ಸಿನಲ್ಲಿ ಹುಟ್ಟದೆ ಇದ್ದ ಕೆಲಸದಲ್ಲಿ ಕೈಹಾಕನು. ಹಾಗೂ ತನ್ನ ಕಯ್ಯೊಳಗಿನ ಹಣವನ್ನು ದುರುಪಯೋಗಮಾಡನು. ಸಂಪತ್ತಿಯ ವಿಷಯದಲ್ಲಿ ಎಲ್ಲರೂ ಜಾಗೃತ ಮನಸ್ಕರಾಗಿಯೇ ಇರುವರು. ಮನಸಿಗೆ ಬಾರದೆ ಯಾರಿಗೆ ಯಾರೂ ಕೊಡರು. ದಾನಶೂರರಾದ ಧನಾಢ್ಯರನೇಕರು ಯುರೋಪ್ ಅಮೇರಿಕಾ ಮುಂತಾದ

ಪ್ರಬಲರಾಷ್ಟ್ರಗಳಲ್ಲಿ ತಮ್ಮ ಧನರಾಶಿಯನ್ನು ಸಾರ್ವಜನಿಕ ಹಿತದ ಕಾರ್ಯಗಳಲ್ಲಿ ವಿನಿಯೋಗಿಸಬೇಕೆಂದು ಬರೆದಿಟ್ಟು ದೇಹಬಿಟ್ಟ ಉದಾಹರಣೆಗಳು ಇತ್ತಿತ್ತ ಅವಿರಳವಾಗಿ ಸಿಗುತ್ತವೆ. ಇವರೆಲ್ಲರು ಪರಪ್ರೇರಣೆಯಿಂದಲೇ ಇಂತಹ ಸತ್ಕೃತ್ಯಗಳನ್ನು ಮಾಡಿದರೆಂದೆನ್ನಬೇಕೋ ಹೇಗೆ? ಮಾಡುವ ಕೃತ್ಯವೇ ಯೋಗ್ಯವೆಂದು ತೋರಿದ ಬಳಿಕ ವಿಚಾರವಂತರೂ ಸುಜ್ಞಾನಿಗಳೂ, ಎಂಬುವವರು "ಅಡದೇ ಮಾಡುವನು ರೂಢಿಯೊಳಗುತ್ತಮನು" ಎಂಬ ಸರ್ವಜ್ಞನ ನುಡಿಯಂತೆ ಆರಂಭಕ್ಕೆ ತಮ್ಮ ಅಂತರಂಗವನ್ನು ಯಾರಿಗೂ ತಿಳಿಸದೆ, ಇಷ್ಟಹೇತು ಭೂತ ಮಾಡಿಕೊಳ್ಳುತ್ತಾರೆ. "ಶರಣನ ಗುಣವನ್ನು ಮರಣದಲ್ಲಿ ಕಾಣು" ಎಂಬ ಗಾದೆಯ ಮಾತಿನಂತೆ ಮಹನೀಯರ ಸತ್ಕೃತ್ಯಗಳು ಅವರ ಅಂತ್ಯಕಾಲದಲ್ಲಿಯೇ ವಿಶೇಷವಾಗಿ ಬೈಲಿಗೆ ಬರುತ್ತಿರುತ್ತವೆ. ದೈವಯೋಗದಿಂದ ಸಂತತಿಯಿಲ್ಲದಿರುವದರ ಲಾಭವನ್ನು ತಮ್ಮ ಸಮಾಜಕ್ಕೆ ಮಾಡಿಕೊಡುವ ಸಂಧಿಯನ್ನು ಸಫಲಗೊಳಿಸುವ ವಿಚಾರವು ಶ್ರೀಮಂತರ ನಿರ್ಮಲಾಂತಃಕರುಣಾ ರಸದಲ್ಲಿಯೇ ಪ್ರಾದುರ್ಭವಿಸಿ, ಅದೇ ರಸದಿಂದಲೇ ಬೆಳೆದು ಜಗದಾಶ್ಚರ್ಯವನ್ನುಂಟು ಮಾಡಲಿಕ್ಕೆ ಹೊರಬಿದ್ದಿತೆಂದೇ ಹೇಳಬೇಕಲ್ಲದೆ, ರಾ.ಬ॥ರುದ್ರಗೌಡ ಸಾಹೇಬರ ಪ್ರೇರಣೆಯಿಂದಲೇ ಹೀಗಾಯಿತೆಂದೆನ್ನಲಿಕ್ಕೆ ತಿಲಮಾತ್ರ ಆಸ್ಪದವಿರುವದಿಲ್ಲ. ಇವರು ಕೂಡಿಸಿದ ಲಿಂಗಾಯತ ಫಂಡಿನ ಮಹತ್ವದಿಂದಲೇ ಶ್ರೀಮಂತರಿಗೆ ಈ ತರದ ದಾನಶೂರತ್ವದ ವಿಚಾರವು ಬಂದಿರಬಹುದೆಂದು ಒಂದುವೇಳೆ ಅಂದರೂ ಅನ್ನಬಹುದು. ಶ್ರೀಮಂತರು ಕೂಪಮಂಡೂಕದ ವಿಚಾರದವರಾಗಿರದೆ, ಪ್ರತಿಯೊಂದು ವ್ಯಕ್ತಿಯು ಸುಶಿಕ್ಷಿತವೂ, ಸಶಕ್ತವೂ ಆದರೆ ಸಮಾಜೋನ್ನತಿಯಾಗುವದೆಂತಲೂ, ಸಮಾಜೋನ್ನತಿಯಿಂದ ರಾಷ್ಟ್ರೋತ್ಕರ್ಷವಾಗುವದೆಂತಲೂ ಪೂರ್ಣವಾಗಿ ತಿಳಿದಿರುವ, ರಾಷ್ಟ್ರೀಯದೃಷ್ಟಿಯುಳ್ಳ, ಸುಧಾರಣಾಗ್ರಗಣ್ಯರಾಗಿದ್ದರೆಂತಲೇ ನಷ್ಟಸಂತತಿಯ ಕಳಕಳಿಯಿಂದ ಗಂಭೀರವಾಗಿ ಅಲ್ಲೋಲ ಕಲ್ಲೋಲವಾಗುತ್ತಿರುವ ಅವರ ಮಸ್ತಿಷ್ಕರಸಮಥನದಿಂದ (ಅವರ ಪರಿಪಕ್ವ ವಿಚಾರದಿಂದ) ಸಮಾಜದ ಅಭ್ಯುದಯಕ್ಕೆ ಸಂಸ್ಥಾನವನ್ನೆಲ್ಲ ಸಮರ್ಪಿಸುವ ನವನೀತವು ಹೊರಟು ಹೊರಬಿತ್ತೆಂದು ಹೇಳುವದೇ ಸಜ್ಜನ ಸಮ್ಮತವಾಗಿದೆ. ಸಂಸ್ಥಾನದ ಭಾವೀಸ್ಥಿತಿಯು ಹೀಗೆ ಆಗುವದೆಂದು ಆರಂಭಕ್ಕೆ ಎಲ್ಲರಿಗೆ ಹೇಗೆ ಗೊತ್ತಾಗಿದ್ದಿಲ್ಲವೋ ಅದರಂತೆ ಶ್ರೀಮಂತರ ಪರಮಮಿತ್ರರಾದ ರಾ.ಬ॥ರುದ್ರಗೌಡ ಸಾಹೇಬರವರು ಕನಸುಮನಸಿನಲ್ಲಿಯೂ ಕೂಡ ಈ ತರದ ವಿಚಾರವು ಬಂದಿದ್ದಿಲ್ಲ. ಶ್ರೀಮಂತರ ಸಂಕಲ್ಪವು ಅವರ ಪರ್ಯವಸಾನ ಸಮಯದಲ್ಲಿಯೇ ಜನರಿಗೆ ಗೊತ್ತಾದಂತೆ ಇವರಿಗೂ ಗೊತ್ತಾಯಿತು. ಸಂಸ್ಥಾನಕ್ಕೆ ಯಾವದೇ ರೀತಿಯಿಂದ ಸಂತತಿ ನಡೆಯಬೇಕೆಂದು ಆ ಕಾಲಕ್ಕೆ ಇವರು ಎಷ್ಟು ಆಗ್ರಹಪಟ್ಟರೂ ಶ್ರೀಮಂತರು ಒಡಂಬಡದೆ ಇದ್ದ ಸಂಗತಿಯು ವಾಚಕರ ಸ್ಮರಣದಲ್ಲಿರಬಹುದು. ಕಾರಣ, ಈ ಬಗ್ಗೆ ಪ್ರೇರಣಾ ಶಬ್ದದ ರಾ॥ಬ॥ರುದ್ರಗೌಡ ಸಾಹೇಬರಿಗೆ ಎಷ್ಟು ಮಾತ್ರವೂ ಹತ್ತದೆ, ಆ ದೋಷದ ಛಾಯಾ ಸಹ ಇವರ ಮೇಲೆ ಬೀಳುವಂತಿಲ್ಲ. ಆದದರಿಂದ ವಿನಹಾ ಕಾರಣ ರಾ.ಬ॥ರುದ್ರಗೌಡ ಸಾಹೇಬವರಿಗೆ ದೂಷಣೆಕೊಡುವವರನ್ನು ದುರ್ಜನಕೋಟಿಯಲ್ಲಿ ಗಣಿಸಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ.

ವೀರಶೈವರ ತ್ರಿಮೂರ್ತಿಗಳು

ರಾ.ಬ॥ರುದ್ರಗೌಡ ಸಾಹೇಬರವರ ಚರಿತ್ರೆಯಲ್ಲಿ ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪಣ್ಣನವರ ಚರಿತ್ರೆಯೂ, ಶ್ರೀಮಂತ ಲಿಂಗಪ್ಪ ದೇಸಾಯಿಯವರ ಮನೋಹರವಾದ ಚರಿತ್ರೆಯೂ ಸಂಕ್ಷಿಪ್ತವಾಗಿ ಸಮಾವೇಶವಾದುದರಿಂದ, ಇಡೀ ಚರಿತ್ರ ಮಾಲೆಯು ಚಿನ್ನದೊಡನೆ ಹೊಳೆಯುವ ರನ್ನದಂತೆ ಬಲು

ರಮಣೀಯವಾಗಿರುವದು. ಈ ತ್ರಿವರ್ಗರ ಸಮಾಜ ಸುಧಾರಣಾ ಕಾರ್ಯಕ್ರಮಗಳೂ, ದೀರ್ಘೋದ್ಯೋಗಗಳೂ, ಅಘಟಿತ ಘಟನಾ ಸಾಮರ್ಥ್ಯವೂ, ಅಸಾಧಾರಣ ಬುದ್ಧಿಶಕ್ತಿಯೂ, ಪರಸ್ಪರ ಮಿಗಿಲಾಗಿರುವದರಿಂದ ಚಿನ್ನದಿಂದ ರನ್ನಕ್ಕೂ, ರನ್ನದಿಂದ ಚಿನ್ನಕ್ಕೂ ಶೋಭೆಯು ಪ್ರಜ್ವಲಿಸುವಂತೆ ಈ ತ್ರಿಮೂರ್ತಿಗಳ ಕಥಾನಕವು ಕೇಳಲಿಕ್ಕೂ ಹೇಳಲಿಕ್ಕೂ ಅತೀವ ಮನೋಹರವಾಗಿರುತ್ತದೆ. ಮತ್ತು ಈ ತ್ರಿವರ್ಗರ ಪುಣ್ಯನಾಮಂಗಳು ಶಿವಾತ್ಮಕವಾದ ಗುರುಸಿದ್ಧಪ್ಪ, ರೌದ್ರಗೌಡ, ಲಿಂಗಪ್ಪ ಎಂಬದಾಗಿ ಶಿವನಾಮಾವಳಿಯೊಳಗಿನವೇ ಇರುವದರಿಂದಲೂ, ಶಿವಮತೋತ್ಕರ್ಷವೇ ಈ ಮೂವರ ಮುಖ್ಯೋದ್ದೇಶವಾದುದರಿಂದಲೂ ೧೯ನೇ ಮತ್ತು ೨೦ನೇ ಶತಮಾನದ ವೀರಶೈವ ಮತಸುಧಾರಣಾ ಶರಣಾಗ್ರಗಣ್ಯರಲ್ಲಿ ಮೊದಲಿಗೆ ಈ ಮೂವರ ಹೆಸರೇ ಮುಂದೆ ಬಂದಿರುವದರಿಂದಲೂ ಈ ಮಹನೀಯತ್ರಯರು ಶಿವಾಜ್ಞಾನುಸಾರವಾಗಿ ಮತೋದ್ಧಾರಕ್ಕಾಗಿ ಭೂಲೋಕಕ್ಕೆ ಅವತರಿಸಿದ ದೇವಾಂಶವುಳ್ಳವರೇ ಎಂದು ದೀರ್ಘದೃಷ್ಟಿಯ ವಿಚಾರದಿಂದ ಹೇಳಬಹುದು. ವಿಷ್ಣುಬ್ರಹ್ಮಾದಿಗಳನ್ನು ಹೃದಯದಲ್ಲಿ ಹುದುಗಿಕೊಂಡ ತ್ರಿಮೂರ್ತ್ಯಾತ್ಮಕನಾದ ಪರಶಿವನು ತೋರಿಕೆಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ಮೂರು ರೂಪಗಳಿಂದ ಪ್ರಕಟವಾಗಿ ಸೃಷ್ಟಿಯ ವ್ಯಾಪಾರವನ್ನು ಸಾಗಿಸುತ್ತಿರುವಂತೆ, ವೀರಶೈವ ಮತಾಭ್ಯುದಯದ ಒಂದೇ ಒಂದು ಉದ್ದೇಶವನ್ನು ಸಾಧಿಸುವದಕ್ಕಾಗಿ ಶಿವಪ್ರೇರಣೆಯಿಂದುದ್ಭೂತವಾದ ಒಂದು ದಿವ್ಯಶಕ್ತಿಯು ಶಕ್ತಿವಿಶಿಷ್ಟಾದ್ವೈತ ಮತವೆಂಬ ವ್ಯಕ್ತಿಮಾತ್ರಕವಾದ ಒಂದು ಶುಕ್ತಿಯಲ್ಲಿ (ಸಿಂಪಿಯಲ್ಲಿ) ಸೇರಿಕೊಂಡು ತೇಜೋಮಯವೂ, ಅಮೌಲ್ಯವೂ, ಆದ ಮೂರು ಮುಕ್ತಾಫಲಗಳನ್ನುಂಟು ಮಾಡಿತು. ಭಕ್ತಶಿರೋಮಣಿಗಳೂ, ಮುಕ್ತಿಮಾರ್ಗಾವಲಂಬಿಗಳೂ ಆದ, ಮೇಲೆ ಹೇಳಿದ ಮೂವರು ಮಹನೀಯರೇ ಮೂರು ಮುಕ್ತಾಫಲ (ಮುತ್ತು)ಗಳೆಂಬ ಉಕ್ತಿಯು ಯುಕ್ತಾಯುಕ್ತವಿಚಾರದಿಂದ ಶತಃ ಸಿದ್ಧವಾದ್ದದು. ಕಾರಣ ವೀರಶೈವರಾದ ನಾವೆಲ್ಲರು ನಿರ್ಮಲ ಚಿತ್ತದಿಂದ ಸರದೇಸಾಯಿಯವರ ಪರಿಶುದ್ಧವಾದ ಆತ್ಮಕ್ಕೆ ಶಾಂತಿಯನ್ನುಂಟುಮಾಡಬೇಕೆಂದೂ, ಸದ್ಯ ಪ್ರಸಂಗಕ್ಕೆ ಶಿವಾಂತಃಕರುಣದಿಂದ ವೀರಶೈವ ಸಮಾಜವೆಂಬ ಆಗಸಕ್ಕೆ ಸೂರ್ಯಮಣಿಯಂತೆ ಪ್ರಕಾಶಿಸುತ್ತಲಿರುವ ರಾ.ಬ॥ರುದ್ರಗೌಡ ದೊರೆಗಳವರ ಹಾಗೂ ಇವರೊಡನೆ ಈಗ ಮತೋನ್ನತಾ ಕಾರ್ಯಗಳಲ್ಲಿ ಮುಂದರಿಯುತ್ತಿರುವ ಶ್ರೀಮಂತ ವಂಟಮುರಿ ಸರದೇಸಾಯಿಯವರ ಅಯುರ್ಮರ್ಯಾದೆಯನ್ನು ಆದಷ್ಟು ಬೆಳೆಯಿಸಬೇಕೆಂದೂ, ಆ ಮಹಾಮಹಿಮನಾದ ಪರಮಾತ್ಮನನ್ನು ಅಹರ್ನಿಶೆಯಲ್ಲಿಯೂ ಪ್ರಾರ್ಥಿಸುವದು ತಕ್ಕದ್ದಾಗಿದೆ.[೫]

❖❖

೫.ಇಲ್ಲಿಂದ ಮುಂದೆ ಹಸ್ತಪ್ರತಿಯಲ್ಲಿ ಮೂರು ಪುಟ ಖಾಲಿ ಬಿಡಲಾಗಿದೆ. ಬಹುಶಃ ಪದ್ಯ ಬರೆಯುವ ಉದ್ದೇಶವಿದ್ದಿರಬಹುದು. -ಸಂ.

೧೫ನೇ ಭಾಗ

ಗೋಕಾವಿ ಮಹಾಜನರ ಪ್ರಕರಣ

ಪರಸಗಡ ಸಬ್ ಡಿವ್ಹಿಜನ್‌ದೊಳಗಿನ ದುಷ್ಟ ಅಧಿಕಾರಿಗಳ ಮತ್ತು ದುರ್ಜನರ ದುರ್ವರ್ತನೆಗಳನ್ನು ಆದಷ್ಟು ಮಟ್ಟಿಗೆ ದೂರಮಾಡಿದನಂತರ ರಾ.ಬ॥ ಅರಟಾಳ ಸಾಹೇಬರವರಿಗೆ ಬೆಳಗಾವ ಸಬ್ ಡಿವ್ಹಿಜನಕ್ಕೆ ಸನ್ ೧೯೦೪ನೇ ಇಸವಿಯ ಮಾರ್ಚ ತಿಂಗಳ ೧೫-೧೬ನೇ ತಾರೀಖಿನ ಸುಮಾರಕ್ಕೆ ವರ್ಗವಾಯಿತೆಂದು ಹಿಂದೆ ಹೇಳಿರುತ್ತದಷ್ಟೇ. ಬೆಳಗಾವ ತಾಲೂಕು, ಚಂದಗಡ ಮಹಾಲು, ಗೋಕಾಕ ತಾಲೂಕಗಳಿಗೆ ಕೂಡಿ ಬೆಳಗಾವ ಸಬ್ ಡಿವ್ಹಿಜನ್ ಎನ್ನುವರು. ಎಲ್ಲಕ್ಕೂ ಮೊದಲು ಇವರ ಕಡೆಗೆ ಚಿಕ್ಕೋಡಿ ಅಥಣೀ ತಾಲೂಕುಗಳಿದ್ದದ್ದು ವಾಚಕರಿಗೆ ಗೊತ್ತಿರಬಹುದು. ಅಂದರೆ ಇಡೀ ಬೆಳಗಾವ ಜಿಲ್ಲೆಯಲ್ಲಿರುವ ದುಷ್ಟರ ನಾಶವೂ, ಶಿಷ್ಟರ ಪಾಲನವೂ ಆಗಿ, ಜಿಲ್ಲೆಯಲ್ಲಿ ಪವಿತ್ರವಾಗಿ ಪ್ರಜೆಗಳು ಸುಖಶಾಂತಿಯಿಂದ ಜೀವಿಸಬೇಕೆಂಬ ಈಶ ಸಂಕೇತವಿರುವದರಿಂದಲೇ ಗೋಕಾಕ, ಬೆಳಗಾವ ಮುಂತಾದ ತಾಲೂಕಗಳ ಚಾರ್ಜವು ಇವರ ಕಯ್ಯಲ್ಲಿ ಬಂತೆಂದು ತಿಳಿಯಬಹುದು. ಎಲ್ಲ ತಾಲೂಕುಗಳಲ್ಲಿ ಇವರ ಸತ್ಯವಾದ ಆಳಿಕೆಯು ನಿರ್ವಿಘ್ನದಿಂದ ಸಾಗುತ್ತ ಬಂದದ್ದು ವಾಚಕರಿಗೆ ವಿದಿತವಾಗಿರಬಹುದು. ಆದರೆ "ಮಹಾಜನ" ಎಂಬ ಅಡ್ಡಹೆಸರಿನ ದುರ್ಧರವಾದ ದುಷ್ಟಜನರಿಂದ ಭರಿತವಾದ ಗೋಕಾಕ ತಾಲೂಕಿನೊಳಗಿನ ಇವರ ನಿರ್ದುಷ್ಟವಾದ ಆಳಿಕೆಯು ವಿಶೇಷ ಮಹತ್ವವುಳ್ಳದ್ದಾಗಿರುವದರಿಂದ ಅದನ್ನು ಈ ಭಾಗದಲ್ಲಿ ವಿವರಿಸುತ್ತೇವೆ.

ಗೋಕಾಕದಲ್ಲಿರತಕ್ಕ 'ಮಹಾಜನ' ಮತ್ತು 'ದೇಶಪಾಂಡೆ' ಎಂಬ ಅಡ್ಡ ಹೆಸರಿನ ಬ್ರಾಹ್ಮಣ ಜನರು ಮಹಾಪ್ರಬಲ ಶಾಲಿಗಳೆಂದು ಎಲ್ಲರಿಗೂ ಗೊತ್ತುಂಟು. ಮೇಲೆ ನೋಡಿದರೆ ಇವರ ಹೆಸರೇ ಮಾತ್ರ ದೊಡ್ಡವು. ದೊಡ್ಡಿಸ್ತನದ ಲಕ್ಷಣವು ಇವರಲ್ಲಿ ಎಳ್ಳಷ್ಟಿದ್ದಿಲ್ಲ. ಉದ್ಧಟತನವೂ ದುರಹಂಕಾರವೂ, ದುರ್ವಾಸನೆಯೂ ದುರ್ವರ್ತನೆಯೂ ಈ ಜನರ ಹೃದ್ಭೂಮಿಯಲ್ಲಿ ಬೇರೂರಿ ಹೋಗಿದ್ದವು. ಸರ್ವತೋಪರಿಯಿಂದ ಇವರು ದುಷ್ಟಸ್ವಭಾವದವರಾಗಿದ್ದರು. ಅನೇಕ ಕಪಟತಂತ್ರಗಳಿಂದ ಅಭುಕ್ತ ಕಲಹಗಳನ್ನೆಬ್ಬಿಸಿ ಬಡಪ್ರಜೆಗಳ ವಿತ್ತಾಪಹಾರ ಮಾಡಿ ಉದರಂಭರಣ ಮಾಡಿಕೊಳ್ಳುವದೇ ಇವರ ಮುಖ್ಯ ಜೀವನೋಪಾಯವಾಗಿತ್ತು. ಕೇವಲ ಪರಪೀಡೆಯಿಂದಲೇ ಯಥೇಷ್ಟ ಧನವರ್ನಾರ್ಜಿಸಿ ಯಾರ ಅಂಜಿಕೆ ಎಳ್ಳಷ್ಟಿಲ್ಲದೆ ಬೇಕಾದಂತಹ ಅನಿಷ್ಟಕೃತ್ಯಗಳನ್ನು ಸ್ವಚ್ಛಂದವಾಗಿ ಮಾಡಿ, ಅವುಗಳನ್ನು ದಕ್ಕಿಸಿಕೊಳ್ಳಲಿಕ್ಕೆ ಸಮರ್ಥರಾಗಿದ್ದರು. ಇವರಲ್ಲಿ ತ್ರಿಯಂಬಕ ಬಾಳಾಜಿ

ಊರ್ಫ ತಾತ್ಯಾ ಮಹಾಜನ ಮತ್ತು ದಾಸೋ ಧೋಂಡದೇವ ಮಹಾಜನ ಊರ್ಫ ಕೆಂಪು ದಾಸಪ್ಪ ಮುಂತಾದವರು ಮುಖಂಡರಾಗಿದ್ದರು. ಇವರು ಮೊದಲು ಎಷ್ಟು ಮುಖಂಡರೆಂದೆನ್ನಿಸಿಕೊಳ್ಳುತ್ತಿದ್ದರೋ ಅಷ್ಟು ಮೂರ್ಖರಾಗಿದ್ದರೆಂಬ ಸಂಗತಿಯು ಮುಂದೆ ತಿಳಿಯುವದು. ಕೌರವರ ಬಳಗದಂತೆ ಈ ಮಹಾಜನ ಮತ್ತು ದೇಶಪಾಂಡೆಯರ ಜನಜಂಗುಳಿಯಾದರೂ ಬಹಳವಾಗಿರುತ್ತದೆ. ಶಾಸ್ತ್ರರೀತಿಯಿಂದ "ಮಹಾಜನ" ಎಂಬ ಶಬ್ದಾರ್ಥವು ಸತ್ಯನಿಷ್ಠರಾದ ದೊಡ್ಡಜನರು, ಮಹಾತ್ಮರು, ಮಹನೀಯರು ಎಂದಾಗುತ್ತಿರುವದರಿಂದ, ಈ ಪುಣ್ಯಕರವಾದ ಅರ್ಥದ ಗಾಳಿಯು ಸಹ ಈ ಮಹಾಜನ ಎಂಬ ಹೆಸರಿನ ಗೋಕಾವಿಯ ಹಾರುವರಿಗೆ ಸ್ವಲ್ಪವೂ ಸೋಂಕುವದಿಲ್ಲ. ಬರಿಯ ದುರ್ವರ್ತನೆಗಳಲ್ಲಿ ಮಾತ್ರ ಇವರು ಮಹಾಜನರಾಗಿರುವರೆಂದು ಹೇಳಬಹುದು. "ಮಹಾಜನೋ ಯೇನ ಗತಃ ಸಪಂಥಃ" ಎಂಬ ಉಕ್ತಿಗೆ ಸರಿಯಾಗಿ ಜನ ಸಮೂಹವು ಈ ಮಹಾನಜರ ನಡೆಯನ್ನು ಅನುಕರಣ ಮಾಡಿದರೆ ಜಗದಾಣ್ಮನ ಸೃಷ್ಟಿಸಂಕೇತವು ತಪ್ಪಿ ಅಕಾಲದಲ್ಲಿಯೇ ಜನಪ್ರಳಯವಾಗಬಹುದು. ಈ ಪ್ರಳಯಕಾರರಾದ ಮಹಾಜನರ ದುರ್ವರ್ತನೆಗಳು ಅವಿಚ್ಛಿನ್ನವಾಗಿ ನಡೆಯುತ್ತಿರುವದರಿಂದ ಬಡಜನರು ಇವರ ಪೀಡೆಯಿಂದ ತ್ರಸ್ತರಾಗಿ, ತತ್ಪೀಡಾ ನಿವಾರಣಮಾಡಲಿಕ್ಕೆ ಯಾವ ಸುಲಭೋಪಾಯವನ್ನು ಕಾಣದೆ, ಕಿಟ್ಟದೊಳಗಿನ ಕ್ರಿಮಿಗಳಂತೆ ಮಿಡುಕುತ್ತಿದ್ದರು.

ಗೋಕಾಕ ತಾಲೂಕಿಗೆ ಫೌಜದಾರ, ಮಾಮಲೇದಾರ ಮುಂತಾದ ಯಾವ ಅಧಿಕಾರಿಗಳೇ ಬರಲಿ; ಅವರನ್ನು ಈ ಮಹಾಜನರು ಹಲವು ಬಗೆಯ ಕಪಟಯುಕ್ತಿಗಳಿಂದ ಒಲಿಸಿಕೊಂಡು, ತಮ್ಮ ಕಾಯಕವನ್ನು ನಿರ್ಬಾಧವಾಗಿ ನಡಿಸುತ್ತಿದ್ದರು. ಲಂಚಗುಳಿಗಳಾದ ಅಧಿಕಾರಿಗಳು ಬಂದರಂತೂ ಕೇಳುವದೇನು? ಧನಾಶೆಯೆಂಬ ವಶೀಕರಣ ಮಂತ್ರದಿಂದ ಅವರ ಲಕ್ಷವನ್ನು ತಿರುಗಿಸಿ, ಅವರನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡು ಮನಬಂದಂತೆ ತಮ್ಮ ದುಷ್ಟಹೇತುಗಳನ್ನು ಸ್ವತಂತ್ರವಾಗಿ ಸಾಧಿಸಿಕೊಳ್ಳುತ್ತಿದ್ದರು. ಈ ದುಷ್ಟರ ಉಪಟಳವನ್ನು ತಡೆಯದೆ ಜನರು ಅರ್ಜಿಗಳ ಮೂಲಕ ಅಧಿಕಾರಿಗಳನ್ನು ಅನನ್ಯಭಾವದಿಂದ ಪ್ರಾರ್ಥಿಸಿಕೊಳ್ಳಲು, ಅಧಿಕಾರಿಗಳು ಇವರ ಆರ್ತವವನ್ನು ಲಕ್ಷೀಕರಿಸದೆ ತಿರುಗಿ ಇವರನ್ನೇ ಬೆದರಿಸಿ ಬಿಡುತ್ತಿದ್ದರು. ಪ್ರಸಂಗವಶಾತ್ ನ್ಯಾಯವನ್ನು ಬೇಡಿಕೊಳ್ಳುವ ಈ ಬಡಜನರೇ ಸೆರೆಮನೆಗೆ ಸೇರಬೇಕಾಗುತ್ತಿತ್ತು. ಯಾಕಂದರೆ ಈ ಅನ್ಯಾಯದ ವ್ಯಾಜ್ಯಗಳಿಂದ ಅಪಹರಿಸಿದ ಧನದ ಕೆಲವು ಭಾಗವು ಮಹಾಜನರಿಂದ ಆ ಅಧಿಕಾರಿಗಳಿಗೆ ಸೇರುತ್ತಿತ್ತು. ಆದ ಕಾರಣ ಈ ಧನತೃಷ್ಣೆಯಿಂದ ದುರಾತ್ಮ ಅಧಿಕಾರಿಗಳು ಪ್ರತ್ಯಕ್ಷವಾಗಿ ಕಾಣಿಸುತ್ತಿದ್ದ ಸತ್ಯಪಕ್ಷವನ್ನು ಕಣ್ಣೆತ್ತಿನೋಡದೆ, ಬಡಜನರನ್ನು ಬವಣೆಗೀಡು ಮಾಡುತ್ತಿದ್ದರು. ಬೇಲಿಯೇ ಎದ್ದು ಹೊಲವನ್ನು ಮೆಯ್ಯಹತ್ತಿದರೆ ಯಾರೇನು ಮಾಡುವದು? ಈ ಪ್ರಕಾರದ ದುಃಸ್ಥಿತಿಯಿಂದ ಆ ತಾಲೂಕಿನೊಳಗಿನ ಬಡಜನರ ದುಃಸಹವಾದ ಗೋಳನ್ನು ಕೇಳುವವರು ಯಾರೂ ಇರಲಿಲ್ಲ. ಸಾಧಾರಣವಾಗಿ ಈ ಮಹಾಜನರ ಪ್ರಬಲತೆಯಿಂದ ಇಡೀ ತಾಲೂಕಿನಲ್ಲಿ ಮೊಗಲಾಯಿಯ ಅಮಲೇ ನಡೆಯುತ್ತಿತ್ತೆಂದು ಹೇಳಬಹುದು. ಅವಿಚಾರಿ ಅರಸು- ಅವಿವೇಕ ಪ್ರಧಾನಿ, ಅಧಿಕಪ್ರಸಂಗಿ ಸಭಾಸದರು ಇದ್ದ ರಾಜಸಭೆಯಲ್ಲಿ ಪಡಿಯನ್ನು ಅಡ್ಡ ಇಟ್ಟು ಕಡಲೆಯನ್ನು ಅಳೆದುಕೊಡಬೇಕೆಂದು ನಿರ್ಣಯವಾದಂತೆ ಒಂದಕ್ಕೊಂದು ಸಂಬಂಧವಿಲ್ಲದ ಠರಾವುಗಳೇ ಗೋಕಾವಿಯ ತಾಲೂಕಿನಲ್ಲಿ ಆಗುತ್ತಿದ್ದು, ಇವುಗಳನ್ನು ನದರೆತ್ತಿ ನೋಡುವ ಮತ್ತು ಕಿವಿಗೊಟ್ಟು ಕೇಳುವ ಧೈರ್ಯವು, ಯಾವ ಮೇಲಧಿಕಾರಿಗೂ ಇರುತ್ತಿದ್ದಿಲ್ಲ. ಫೌಜದಾರ, ಮಾಮಲೇದಾರ, ಮುಂತಾದ ಸರಕಾರೀ ಅಧಿಕಾರಿಗಳೆಲ್ಲ ಈ ಮಹಾಜನರಿಗೂ, ದೇಶಪಾಂಡೆಯವರಿಗೂ ಬಹಳೇ ಅಂಜಿಕೊಂಡು ಕೆಲಸ ಮಾಡಬೇಕಾಗುತ್ತಿತ್ತು. ಇವರ ಪ್ರಬಲವನ್ನು ಕಂಡು ಮೆಹರ್ಬಾನ ಇಲಾಖಾ ಸಾಹೇಬ ಬಹದ್ದೂರವರಾದರೂ ಇವರಿಗೆ ಭಯಪಡುತ್ತಿದ್ದರು. ಮುಖ್ಯವಾಗಿ ಸ್ಥಾನಿಕ

ಅಧಿಕಾರಿಗಳ ಮತ್ತು ಈ ಮಹಾಜನ ಮುಂತಾದವರ ಮಸಲತ್ತು ಒಂದೇ ಆಗಿರುವದರಿಂದ, ಇವರ ಕೃತ್ರಿಮ ವ್ಯಾಪಾರಗಳೂ, ಕಪಟತಂತ್ರಗಳೂ ಮೇಲೆ ಸರಕಾರದವರಿಗೆ ತಿಳಿಯುವ ಮಾರ್ಗವಿದ್ದಿಲ್ಲ. ತಿಳಿದರೂ ಕೂಡ ಆ ಮಹಾಪ್ರಬಲಶಾಲಿಗಳ ಕೂಡ ನ್ಯಾಯಯುದ್ಧವನ್ನು ಮಾಡುವಷ್ಟು ದಿಟ್ಟತನವೂ, ದರ್ಪವೂ, ಯಾವ ಇಲಾಖಾಸಾಹೇಬರಿಗೂ ಆಗುತ್ತಿದ್ದಿಲ್ಲ. ಯುರೋಪಿಯನ್ ಅಧಿಕಾರಿಗಳಿಗಂತೂ ಈ ಮಹಾಜನರ ಮೋಸವು ಗೊತ್ತಾಗುತ್ತಿದ್ದೇ ಇಲ್ಲ; ಅಧೈರ್ಯಸ್ಥರೂ, ಅಶಾತುರರೂ ಆದ ದೇಶಿಯ ಅಧಿಕಾರಿಗಳು ಕಂಡೂ ಕಂಡು ಕಾಣದವರಂತೆ ಇರಬೇಕಾಗುತ್ತಿತ್ತು. ಆದುದರಿಂದ ಯಾವನೊಬ್ಬನೂ ಈ ದುಷ್ಟಜನರ ಮೇಲೆ ಕಯ್ಯೆತ್ತದಂತಾಗಿತ್ತು. ಅದರಿಂದ ಎಲ್ಲ ಜನರು "ಮುಖಪ್ರಕ್ಷಾಲನಾತ್ಪೂರ್ವಂ ಗುದಪ್ರಕ್ಷಾಲನಂ ತಥಾ" ಎಂಬ ತತ್ವವನ್ನವಲಂಬಿಸಿ ಅವರ ಅಂಕಿತದಂತೆಯೇ ಇರಬೇಕಾಗುತ್ತಿತ್ತು. ಆದರೂ ಈ ನರಾಧಮರ ಅನಿವಾರ್ಯವಾದ ನೀಚತನಕ್ಕೆ ಒಳಗೊಳಗೇ ಮಿಡುಕುತ್ತ, ಪ್ರಜಾತಾಪದಾಯಕವಾದ ಕೌರವರ ಬಳಗವೆಲ್ಲ ನಾಶವಾದಂತೆ ಈ ಮಹಾಜನ ದೇಶಪಾಂಡೆಯರು ಎಂದು ನಿರ್ಮೂಲವಾಗಿ ಹೋದಾರೋ ಎಂದು ಪರಿಪರಿಯಿಂದ ಇವರನ್ನು ಶಪಿಸುತ್ತಿದ್ದರು. ಮತ್ತು ಪ್ರಜಾಸುಖಶಾಂತಿದಾಯಕವಾದ ಆ ಭಾರತಯುದ್ಧದಂತಹ ಪುಣ್ಯಕಾಲವು ನಮಗೆ ಎಂದಿಗೆ ಲಭಿಸುವದೋ ಎಂದೂ, ಪಾಂಡವರಂತಹ ಧರ್ಮಾತ್ಮ ಅಧಿಕಾರಿಗಳು ನಮ್ಮ ಪಾಲಿಗೆ ಎಂದು ಉದಿಸಿ ಬರುವರೋ ಎಂದೂ ಚಿಂತಿಸುತ್ತಿದ್ದರು.

ಈ ಮಹಾಜನ ಮತ್ತು ದೇಶಪಾಂಡೆಯವರ ಎದ್ದಲಗಾಟವು ರಾ.ಸಾ|| ವಿಷ್ಣು ರಾಮಚಂದ್ರ ಬಾಕರೆ ಮಾಮಲೇದಾರ ಬಿ.ಎ. ತಾಲೂಕ ಗೋಕಾಕ ಇವರ ಕಾಲಕ್ಕೆ ಮೇರೆದಪ್ಪಿತು. ಈ ಮಾಮಲೇದಾರರು ಬಹಳೇ ಲಂಚಬಡಕರೂ, ಅದೂರದರ್ಶಿಗಳೂ, ಅವ್ಯವಸ್ಥಿತರೂ ಆಗಿದ್ದರು. ಇವರಲ್ಲಿ ಸ್ಮರಣಶಕ್ತಿಯು ಏನೂ ಇದ್ದಿಲ್ಲವಾದುದರಿಂದ ಎಷ್ಟುಸಾರೆ ನೋಡಿದ್ದರೂ ನ್ಯಾಯಾಸ್ಥಾನದಲ್ಲಿ ನಿಂತ ಜನರನ್ನು ತಾಸುತಾಸಿಗೆ ನೀನು ಯಾರು? ನಿನ್ನ ನ್ಯಾಯವೇನು? ಎಂದು ಪುನಃ ಪುನಃ ಕೇಳುತ್ತಿದ್ದರು. ಕೆಲಸದ ಜಾಣ್ಮೆಯು ಇವರಲ್ಲಿ ಎಳ್ಳಷ್ಟು ಇಲ್ಲದ್ದರಿಂದ ಇವರು ತೀರ ದಡ್ಡತನದ ಮಾಮಲೇದಾರರಾಗಿದ್ದರೆಂದು ಹೇಳಬಹುದು. ಶಕುನಿಯಂಥ ಕಪಟಕಲಾ ಚತುರರಾದ ಈ ಮಹಾಜನರಿಗೆ ದುರ್ಯೋಧನನಂಥ ಮಾಮಲೇದಾರರು ದೊರೆತ ಮೇಲೆ ಕೇಳುವದೇನದೆ? ಇವರು ಮಾಡಿದ್ದೇ ಪ್ರಾಧಾನ್ಯವಾಗುವದಕ್ಕೆ ತಡವೇ ಇಲ್ಲ; ಯಾಕಂದರೆ ಅವಿಚಾರದ ಹಾಗೂ ಅನನ್ವಿತ ಕೆಲಸಗಳಿಗೆ ಅವಕಾಶವೇ ಕಾರಣವಿಲ್ಲ. ಅದರಿಂದ ಮಹಾಜನರ ಅಕಾಂಡ ತಾಂಡವಕ್ಕೆ ಅಡ್ಡಿಯಿಲ್ಲದಂತಾಗಿ ಪ್ರಜಾತಾಪವು ಅನಿವಾರವಾಯಿತು. ಇಲ್ಲಿ ಮಹಾಜನರು ಎಂದು ಒಂದೇ ಹೆಸರು ಬರೆದಾಗ್ಯೂ ವಾಚಕರು ಮಹಾಜನರೂ ದೇಶಪಾಂಡೆಯರೂ ಎಂದು ತಿಳಿದುಕೊಳ್ಳತಕ್ಕದ್ದು. ಈ ಮಹಾಜನರೂ, ದೇಶಪಾಂಡೆಯರೂ, ಕುಲಕರಣಿಯರೂ ಮುಂತಾದ ಎಲ್ಲ ಹಾರುವರು ಈ ಲಂಚಬಕ್ಕ ಮಾಮಲೇದಾರರ ಮೊಗಲಾಯಿಯ ಅಮಲಿನಲ್ಲಿ ಒಂದು ತರದ ಪ್ರಜೆಗಳ ಸುಲಿಗೆಯನ್ನೇ ನಡಿಸಿದ್ದರೆಂದು ಹೇಳಲಿಕ್ಕೆ ಪ್ರತ್ಯವಾಯ ತೋರುವದಿಲ್ಲ.

ರಾ.ಬ||ಅರಟಾಳ ಸಾಹೇಬರು ಈ ತಾಲೂಕಿನ ಚಾರ್ಜು ತಮ್ಮ ಕಯ್ಯೊಳಗೆ ಬಂದಾಕ್ಷಣವೇ ಪ್ರಜಾಪೀಡನೆಯ ಈ ಬೇಬಂದಶಾಹಿಯ ಅಮಲನ್ನೂ, ಅದರಿಂದಾಗುತ್ತಿದ್ದ ಪ್ರಜಾತಾಪವನ್ನೂ ನೋಡಿ ಕಳವಳಪಟ್ಟು, ಆದಷ್ಟು ರೀತಿಯಿಂದ ಅವರ ಅಪಕ್ರಮ ವರ್ತನವನ್ನು ಅಡಗಿಸಬೇಕೆಂದು ಯೋಚಿಸಿದರು. ಪಟಗುಂಡಪ್ಪಾ ಎಂಬ ಹೆಸರಿನ ಮಾರುತಿಯ ದೇವಾಲಯವನ್ನು ಜೀರ್ಣೋದ್ಧಾರಮಾಡುತ್ತೇವೆಂದು ಮಹಾಜನರೆಲ್ಲರು ರೈತ ಜನರಿಂದ ಸುಮಾರು ನಾಲ್ಕೈದು ಸಾವಿರ ರೂಪಾಯಿಯ ವರ್ಗಣಿಯನ್ನು ಮಾಡಿ, ಆ ಗುಡಿಗೆ ಒಂದೆರಡು ಸಾವಿರ ರೂಪಾಯಿ ಮಾತ್ರ ವೆಚ್ಚಮಾಡಿ, ಉಳಿದ ೨-೩ ಸಾವಿರ ರೂಪಾಯಿಗಳನ್ನು ಎತ್ತಿ ಬಿಟ್ಟಿದ್ದರು. ಮತ್ತು ಅಷ್ಟರಲ್ಲಿ ಈ ಮಹಾಜನರ ಆಪ್ತನಾದ ಕಲ್ಲೊಳ್ಳಿ ಗ್ರಾಮದ ಕುಲಕರಣಿಯಾದ ಶಂಕರ

ಭೀಮಾಜಿಯೆಂಬವನು ಮಜರೆ ತುಕಾನಹಟ್ಟಿಯ ಸೀಮೆಯೊಳಗಿನ ಒಂದು ಕುರುಬರ ಜಮೀನನ್ನು ಕಪಟರೀತಿಯಿಂದ ಖರೀದಿ ಮಾಡಿಸಿಕೊಂಡು, ಆ ಗ್ರಾಮದ (ಕ) ಪತ್ರಿಕೆಯಲ್ಲಿ ತಗಲುಮಾಡಿದ್ದನು. ಮಾಮಲೇದಾರ ಮುಂತಾದವರು ವಿಚಾರಸ್ಥರಿಲ್ಲದ್ದರಿಂದ ಈ ಜಮೀನಿನ ಸಂಬಂಧದ ಗದ್ದಲವು ಬೈಲಿಗೆ ಬಂದಿದ್ದಿಲ್ಲ. ರಾ.ಬ॥ಅರಟಾಳ ಸಾಹೇಬರು ಇದನ್ನೆಲ್ಲ ತಿಳಿದು ಪೂರ್ಣಶೋಧಮಾಡತೊಡಗಲು ಅವರ ಕಪಟಕೃತ್ಯವೆಲ್ಲ ತಾನಾಗಿ ಹೊರಭೀಳಹತ್ತಿತು. ಅದಕ್ಕೆ ಎಲ್ಲ ಮಹಾಜನರು ಸಹಾಯಕರಾಗಿ ಮೋಸವು ಹೊರಬೀಳಬಾರದೆಂದು ಪ್ರಯತ್ನಿಸಿದರು. ಆದರೂ ಅವರ ಸಾಹಸವು ಎಷ್ಟು ಮಾತ್ರವೂ ಗೊತ್ತಿಗೆ ಮುಟ್ಟದೆ ಹೋಯಿತು. ಅದರಲ್ಲಿ ಪ್ರತ್ಯಕ್ಷವಾಗಿ ಸೇರಿದ ಏಳೆಂಟು ಜನ ಅಪರಾಧಿಗಳನ್ನು ರಾ.ಬ॥ರವರು ಹಿಡಿದು ಚೌಕಸಿಯನ್ನು ನಡಿಸಲು, ಮಹಾಜನರು ದೇಶಪಾಂಡೆಯರೂ ಇನ್ನು ಮೇಲೆ ತಮ್ಮ ಹುಳುಕೆಲ್ಲ ಹೊರಬೀಳುವದೆಂದು ಹೆದರಿದರು. ಮಾಮಲೇದಾರರ ವಿಷಯಕ್ಕೆ ಸರಕಾರದಲ್ಲಿ ವಿಚಾರ ನಡೆದು, ಅವರ ದುರ್ವರ್ತನೆಯ ಮೂಲಕ ಅವರನ್ನು ೧ಗ್ರೇಡು ಕಡಿಮೆ ಶರಾಮಾಡಿ ಕಾರವಾರಕ್ಕೆ ವರ್ಗಮಾಡಿದರು. ಈ ಬವಣೆಯನ್ನು ಕಂಡು ಹೀಗಾಗ ಹತ್ತಿದ ಮೇಲೆ ಇನ್ನು ನಾವು ಪರಿಣಾಮಗಾಣೆವೆಂದೂ, ನಮ್ಮ ಕೃತ್ಯಗಳು ಸರಿಯಾಗಿ ಜರುಗಲಾರವೆಂದೂ ಮಹಾಜನರೂ ದೇಶಪಾಂಡೆಯರೂ ಕೂಡಿ ಆಲೋಚನೆ ಮಾಡಿ, ರಾ.ಬ॥ರುದ್ರಗೌಡ ದೊರೆಗಳವರನ್ನು ವಿರೋಧಿಸಹತ್ತಿದರು.

ಇಂಗ್ಲೀಷ ಸರಕಾರದವರ ಅಮಲು ಸುರುವಾದಂದಿನಿಂದ ಈ ಮಹಾಜನ ಮುಂತಾದವರು ಆ ತಾಲೂಕಿಗೆ ಬಂದ ಬಂದ ಲಂಚಬಡಕ ಅಧಿಕಾರಿಗಳ ಕಯ್ವಾಬಾಯಿಗಳನ್ನು ಬೆಚ್ಚಗೆ ಮಾಡಿ, ತಮ್ಮ ಮನಸೋಕ್ತವಾಗಿ ದುಷ್ಕಾರ್ಯ ಪ್ರವರ್ತಕರಾಗಿರುತ್ತಿದ್ದದರಿಂದ, ಅವರಿಗೆ ಅನ್ಯಾಯದ ಧನವು ಅಪರಿಮಿತವಾಗಿ ಸಿಗುತ್ತಿತ್ತು. ಅದರಿಂದವರು ಧನ್ಯರಾಗಿ ಅಧಾರ್ಮಿಕ ಸಾರ್ವಭೌಮ ಸುಖವನ್ನನುಭೋಗಿಸುತ್ತಿದ್ದರು. ರಾ.ಬ॥ಅರಟಾಳ ಸಾಹೇಬರವರ ರಾಜಕೀಯ ದೃಷ್ಟಿಯು ಇವರ ಮೇಲೆ ಬಿದ್ದಂದಿನಿಂದ ಎಲ್ಲ ಮಹಾಜನರು ದುಷ್ಟರಾಗಿ ರುದ್ರಗೌಡರ ಮೇಲಿರುವ ಸರಕಾರದ ಪ್ರೇಮವನ್ನು ತಪ್ಪಿಸಿ, ಇವರನ್ನು ಗೊಂದಲದಲ್ಲಿ ಹಾಕಬೇಕೆಂದು ಕುಕಲ್ಪನೆಯನ್ನು ತೆಗೆದರು. ಹಾಲಲ್ಲಿ ಉಪ್ಪುಹಾಕುವ ಜಾಣ್ಮೆಯು ಈ ಮಹಾಜನರಲ್ಲಿ ಸ್ವಾಭಾವಿಕವಾಗಿ ಇದ್ದದ್ದೇ ಸರಿ. ಆದರೆ ನಿರ್ದುಷ್ಟವಾದ ಇವರ ಆಳಿಕೆಗೆ ಯಾವ ಪ್ರಕಾರದ ಕುಂದನ್ನು ಕೊಡಬೇಕೆಂದೂ, ಯಾವ ಬಗೆಯಿಂದ ಸರಕಾರಕ್ಕೆ ಅದು ಖಾತ್ರಿಯಾಗುವಂತೆ ತೋರಿಸಬೇಕೆಂದೂ ತರತರದ ಹಂಚಿಕೆಗಳನ್ನು ಹಾಕಹತ್ತಿದರು. ಕಪಟ ಕೃತ್ಯಗಳಿಗೂ, ಸತ್ಯವನ್ನು ಅಸತ್ಯವೆಂದು ಸಿದ್ಧಮಾಡಿಕೊಡುವ ಕುತಂತ್ರಗಳಿಗೂ ಬೇಕಾಗುವ ಜಾಣ್ಮೆಯು ಇಂತಿಷ್ಟೆಂದು ಹೇಳಲಿಕ್ಕಾಗುವದಿಲ್ಲ. ಸಟಿಯನ್ನು ದಿಟವೆಂದು ಅಥವಾ ಸಟಿಯನ್ನು ಸಟಿಯೆಂದು ನಿರ್ಣಯ ಮಾಡಲಿಕ್ಕೆ ಬೇಕಾಗುವ ಜಾಣತನಕ್ಕಿಂತ ದಿಟವನ್ನು ಸಟಿಯೆಂದು ದಿಗ್ದರ್ಶನಮಾಡುವಂತಹ ಜಾಣ್ಮೆಯು ಹೆಚ್ಚಿನದೆಂದು ಹೇಳಬಹುದು. ಇಂಥ ಜಾಣ್ಮೆಯಲ್ಲಿ ಗೋಕಾವಿಯ ಮಹಾಜನರು ಹೆಸರಾದವರು.

ಬೆಳಗಾವ ಜಿಲ್ಲೆಯ ಎಲ್ಲ ತಾಲೂಕಗಳಲ್ಲಿ ಹಾಗೂ ಎಲ್ಲ ಮಹಾಲುಗಳಲ್ಲಿ ಇದರಂತೆ ಹಿಂದೆ ಧಾರವಾಡ, ಕಾರವಾರ, ವಿಜಾಪುರ, ನಾಶಿಕ ಮುಂತಾದ ಎಲ್ಲ ಜಿಲ್ಲೆಗಳಲ್ಲಿ ರಾ.ಬ॥ಅರಟಾಳ ಸಾಹೇಬರವರು ಕೆಲಸ ಮಾಡಿ ಲೋಕಪ್ರಿಯರಾಗಿರುವದರಿಂದ, ಯಾವ ಜಿಲ್ಲೆಯ ಯಾವ ತಾಲೂಕಿನಲ್ಲಿಯಾದರೂ ಇವರ ಬಗ್ಗೆ ಗಿಲ್ಲೆಯ ಅರ್ಜಿಗಳಾಗುವ ಕಾರಣವೇ ಇರಲಿಲ್ಲ. ಇವರ ಶುದ್ಧವಾದ ಆಚರಣೆಯಲ್ಲಿ ಅಥವಾ ಆಳಿಕೆಯಲ್ಲಿ ಯಾರೂ ಎಳ್ಳಷ್ಟು ಕುಂದಿಡಲಿಕ್ಕೆ ಆಸ್ಪದವಿಲ್ಲದೆ ಹೋದುದರಿಂದ ಇವರ ಮೇಲೆ ಗಿಲ್ಲೆಗಳನ್ನೆಬ್ಬಿಸಲಿಕ್ಕೆ ಮಹಾಜನರಿಗೆ ಯಾವ ಉಪಾಯವೂ ಕಾಣದೆ, ತುಸು ದಿವಸಗಳ ವರೆಗೆ ಸಾಧಿಸುತ್ತ ಹೋಗಿ, ಅನಂತರ ಒಮ್ಮೇಲೆ ಕೋಲಾಹಲವನ್ನೆಬ್ಬಿಸಬೇಕೆಂದು ಯೋಚಿಸಿ ಆರಂಭದಿಂದ ಬೇರೆ ಬೇರೆ ಜನರ ಕಡೆಯಿಂದ ಬೇರೆ ಬೇರೆ ಸುಳ್ಳು ಕಾರಣಗಳನ್ನು ಹಚ್ಚಿ ಹಚ್ಚಿ ಗಿಲ್ಲೆಯ ಅರ್ಜಿಗಳನ್ನು ಮಾಡಿಸಹತ್ತಿದರು. ಸುಳ್ಳು ಸುಳ್ಳೇ ಇವರ

ಮೇಲೆ ಫಿರ್ಯಾದಿಗಳನ್ನು ದಾಖಲು ಮಾಡಿಸತೊಡಗಿದರು. ರಾ.ಬ॥ ರುದ್ರಗೌಡರು ಬ್ರಾಹ್ಮಣರ ಮೇಲೆ ಸುಳ್ಳು ಸುಳ್ಳೇ ಆರೋಪ ಹೊರಿಸಿ ಖಟ್ಲೆಯ ರಚನೆಯನ್ನು ಮಾಡುತ್ತಾರಾದ ಕಾರಣ, ಇವರ ಮೇಲೆ ದಾವೆಯನ್ನು ತರುತ್ತೇವೆಂದು ಅರ್ಜಿಗಳ ಮೂಲಕ ತಿಳಿಸುವರು. ಹಾಗೂ ಖೊಟ್ಟಿ ದಾವೆಗಳನ್ನು ಮಾಡುವರು. ಇವರು ಇಂಥಾದ್ದೊಂದು ವ್ಯಾಜ್ಯವನ್ನು ನಿರರ್ಥಕವಾಗಿ ಸೃಜಿಸಿ ನಿರಪರಾಧಿಯನ್ನು ಅಪರಾಧಕ್ಕೊಳಪಡಿಸಿದರಾದ ಕಾರಣ, ಇವರ ಮೇಲೆ ಇಂಥವರು ರುಕಾರ ಬೇಡುತ್ತಾರೆಂದು ಸುಳ್ಳು ಸುದ್ದಿಯನ್ನು ಹರಡುವರು. ಇಂಥ ಕ್ಷುದ್ರ ಕಲ್ಪನೆಗಳನ್ನು ಕಲ್ಪಿಸಿ ಸರಕಾರದಲ್ಲಿ ದಾಖಲೆಯಾಗಿರುವಂತೆ ನಟಿಸಿ, ಮುಂದಿನ ತಮ್ಮ ಇಷ್ಟ ಹೇತುವನ್ನು ಸಾಧಿಸಿಕೊಳ್ಳುವದಕ್ಕೋಸ್ಕರ ಯಾವತ್ತೂ ಪೂರ್ವಸಿದ್ಧತೆಯನ್ನು ಮಾಡಿಕೊಂಡು, ಸರಕಾರಕ್ಕೆ ಪೂರ್ಣವಾಗಿ ಬಿಂಬಿಸುವಂತೆ ಕೆಲವು ದಿವಸಗಳ ಮೇಲೆ ಒಮ್ಮಿಂದೊಮ್ಮೆ ಇವರ ಸುತ್ತು ಹೋಗಬಿದ್ದರು.

ಮಹಾಜನರ ಇಷ್ಟು ಸಾಹಸವೂ, ಸಿದ್ಧತೆಯೂ ಯಾಕೆ ಆಗಿರಬಹುದೆಂಬದನ್ನು ಬೇರೆ ಹೇಳಬೇಕೆಂಬಂತಿಲ್ಲ. ರಾ.ಬ॥ಅರಟಾಳ ಸಾಹೇಬರವರ ಪ್ರಜಾಹಿತಕಾರಕವಾದ ಆಳಿಕೆಯಿಂದ ಇವರ ಸ್ವೈರವರ್ತನವು ಕಟ್ಟಾಗಿ ಮಹಾಜನರ ಕೈಕಟ್ಟಿದಂತಾಗಿತ್ತು. ಆದರಿಂದ ಪರವಿತ್ತಾಪಹಾರದಿಂದ ಸಂತೃಪ್ತಿಯನ್ನು ಹೊಂದುತ್ತಿರುವ ಮಹಾಜನರ ಮೋರೆಗೆ ಬಾಯಿ ಜಾಳಿಗೆಯನ್ನು ಹಾಕಿದಂತಾಗಿತ್ತು. ಸಾರಾಂಶ, ಇವರ ಜೀವನೋಪಾಯವೇ ಕಟ್ಟಾಗಿ ಹೋಗಿತ್ತೆಂದು ಹೇಳಬಹುದು. ಅದರಿಂದ ನಮ್ಮ ಬಾಯಿಗೆ ಬರುತ್ತಿರುವ ಗ್ರಾಸವನ್ನೇ ತಡೆಯುತ್ತಾರೆಂದು ಬಗೆದು ಮಹಾಜನರು, ರಾವಬಹದ್ದೂರವರ ವಿಷಯವಾಗಿರುವ ಸಚ್ಚಿತ್ತವನ್ನು ಕಲುಷಿತ ಮಾಡಲಿಕ್ಕೆ ಕಠಿಣತರವಾದ ಉಪಾಯಗಳನ್ನು ಕೈಕೊಂಡರು. ರಾ.ಬ॥ಅರಟಾಳ ಸಾಹೇಬರು ಇಂಥ ಕೀಳುಜನರ ಕಪಟೋಪಾಯಗಳಿಗೆ ಒಳಗಾಗುವರೇ? ಮಹಾಜನರ ಪೂರ್ವಸಿದ್ಧತೆಯನ್ನು ಗಿಲ್ಲೆಯ ಅರ್ಜಿಗಳ ಮೇಲಿಂದಲೇ ಕಂಡು ಹಿಡಿದು, ಈ ಅರ್ಜಿಗಳು ಮುಂದಿನ ಇಂಥ ಬಗೆಯ ದುಷ್ಟಹೇತು ಸಾಧನಾರ್ಥವಾಗಿ ಮಾಡಲ್ಪಟ್ಟಿರುವವೆಂದೂ, ತಾವು ಈ ಸಂಗತಿಗಳನ್ನು ಜ್ಞಾಪಕದಲ್ಲಿಟ್ಟುಕೊಂಡು, ನಾನು ನನ್ನ ಧೋರಣದಿಂದ ನಿಶ್ಚಿತ ಮಾಡಿರುವ ಭವಿತವ್ಯವನ್ನು ಪರಿಣಾಮಾಂತ್ಯದಲ್ಲಿ ತಾವು ಮನಗಾಣಬಹುದೆಂದೂ ಮೆ॥ಕಲೆಕ್ಟರ ಸಾಹೇಬ ಬಹದ್ದೂರವರ ಮುಂದೆಯೂ, ಮೆ॥ಕಮಿಶನರ ಸಾಹೇಬ ಬಹದ್ದೂರವರ ಮುಂದೆಯೂ ಭೆಟ್ಟಿಯಾದಾಗ್ಗೆ ಇವರು ಸಹಜವಾಗಿ ಮೊದಲೇ ಹೇಳಿಡುತ್ತಿದ್ದರು. ಧೋರಣಾ ಸಾಮರ್ಥ್ಯದಲ್ಲಿಯೂ, ಸ್ಮರಣಶಕ್ತಿಯಲ್ಲಿಯೂ ಇವರು ಕೇವಲ ಸರ್ವಜ್ಞರೇ ಆಗಿರುತ್ತಿದ್ದರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ವಿಷಯದಲ್ಲಿ ಇವರನ್ನು ಎಷ್ಟು ಬಣ್ಣಿಸಿದರೂ ಅದು ಸ್ವಲ್ಪವೇ ಸರಿ. ಮುಂದೆ ಮಹಾಜನರ ಕಡೆಯಿಂದ ರಾವಬಹದ್ದೂರವರ ವಿಷಯವಾಗಿ ಸುಳ್ಳುಸುಳ್ಳು ಕಾರಣಗಳಿಂದ ತುಂಬಿಕೊಂಡಿರುವ ಗಿಲ್ಲೆಯ ಅರ್ಜಿಗಳು ಒಂದೊಂದೇ ಸುರುವಾದವು. ಅರ್ಜಿಗಳು ಬಂದ ಬಂದ ಹಾಗೆ ಹೆದರದೆ ಸಂತೋಷಿತರಾಗಿ ರಾ.ಬ॥ರುದ್ರಗೌಡರು ಮೆಹರ್ಬಾನದ್ವಯರಿಗೆ ನಾನು ಹಿಂದೆ ಹೇಳಿದ ಭವಿಷ್ಯವನ್ನು ಮನಗಾಣಬೇಕೆಂದು ಅವರ ಸ್ಮರಣಕ್ಕೆ ತಂದುಕೊಟ್ಟಾಕ್ಷಣವೇ ಅವರು ಚಕಿತರಾಗಿ ಹೋಗುತ್ತಿದ್ದರು. ಅದರಿಂದ ಮೆ॥ಕಮಿಶನರ ಸಾಹೇಬ ಬಹದ್ದೂರವರು, ಇವರ ವಿರುದ್ಧಪರವಾಗಿ ಬಂದ ಅರ್ಜಿಗಳಿಗೆ ವಿಶೇಷ ಲಕ್ಷ ಕೊಡಲೇ ಇಲ್ಲ. ಎಷ್ಟು ಅರ್ಜಿಗಳನ್ನು ಮಾಡಿದರೂ ಒಂದೂ ಪಟಾಯಿಸಲೊಲ್ಲದೆಂದು ಮಹಾಜನರು ಖಿನ್ನಮನಸ್ಕರಾಗದೆ, ಹತ್ತು ಕಲ್ಲುಗಳಲ್ಲಿ ಒಂದಾದರೂ ತಗಲಿ ಫಲಪ್ರದವಾಗಬಹುದೆಂದೂಹಿಸಿ, ತಾವು ಹಿಂದೆ ಕೃತ್ರಿಮ ತನದಿಂದ ಕೊಡಿಸಿದ ಗಿಲ್ಲೆಯ ಅರ್ಜಿಗಳನ್ನೇ ದಾಖಲೆಯಾಗಿ ತೋರಿಸಿ, ಪುನಃ ಪುನಃ ಒಂದರ ಮೇಲೊಂದು ಅರ್ಜಿಗಳನ್ನು ದಾಖಲಮಾಡಿಸಹತ್ತಿದರು. ಮತ್ತು ರಾವಬಹದ್ದೂರವರ ಬಗ್ಗೆ ಚಳವಳಿಯನ್ನು ಸುತ್ತುಮುತ್ತು ಒಮ್ಮೇಲೆ ಎಬ್ಬಿಸಿದರೆ ಯಾವದೊಂದು ಕಾರ್ಯವಾಗಬಹುದೆಂದು ಯೋಚಿಸಿ, ಈ ಸಂಬಂಧವಾಗಿ

ವರ್ಗಣಿಯಿಂದ ಹಣಕೂಡಿಸಿ, ತಾರೀಖು ೧೬ನೇ ಮಾಹೆ ಡಿಶೆಂಬರ ಸನ್ ೧೯೧೦೬ನೇ ಇಸವಿಯಿಂದ ವರ್ತಮಾನ ಪತ್ರಗಳಲ್ಲಿ ಪ್ರಕಟಮಾಡಲುದ್ಯುಕ್ತರಾದರು. ನಾವು ಸ್ವತಂತ್ರವಾಗಿ ಅರ್ಜಿಯನ್ನು ದಾಖಲ ಮಾಡುವದಕ್ಕಿಂತ ಸರಕಾರದ ವಿಶ್ವಸನೀಯ ಮನುಷ್ಯರ ವಿದ್ಯಮಾನ ತಮ್ಮ ಅರ್ಜಿಯನ್ನು ದಾಖಲಮಾಡಿ ನೋಡಬೇಕೆಂದು ಎಣಿಸಿ, ರಾ.ಬ||ಅರ್ಟಾಳ ಸಾಹೇಬರವರು ನಿಶ್ಚಯವಾಗಿ ಬ್ರಹ್ಮದ್ವೇಷಿಗಳಿರುತ್ತಾರೆಂತಲೂ, ಅದರಿಂದವರು ನಿರಪರಾಧಿಗಳಾದ ಬ್ರಾಹ್ಮಣರ ಮೇಲೆ ನಿರರ್ಥಕವಾಗಿ ಖಟ್ಲೆಗಳ ರಚನೆಯನ್ನು ಮಾಡಿ ತಮ್ಮ ಅಧಿಕಾರದ ದುರುಪಯೋಗ ಮಾಡುತ್ತ ಜನಪೀಡಾಕಾರರಾಗಿದ್ದಾರೆಂತಲೂ, ಈ ಬಗ್ಗೆ ಕಾಯದೇ ಕೌನ್ಸಿಲಿನಲ್ಲಿ ಬೇರೊಂದು ಕಮಿಟಿಯನ್ನೇರ್ಪಡಿಸಿ ಇವರ ವಿಚಾರವಾಗಬೇಕೆಂತಲೂ, ಸುಳ್ಳುಸುಳ್ಳೇ ಕೆಲವು ಬನಾವಟಿ ದಾಖಲೆಗಳನ್ನು ಸೇರಿಸಿ ನಾಮದಾರ ದಾಜಿ ಆಬಾಜಿ ಖರೆ ಮುಂಬಯಿ ಕಾಯದೆ ಕೌನ್ಸಿಲದಾರ ಇವರ ಮುಖಾಂತರ ಮುಂಬಯಿಯ ಕಾಯದೇ ಕೌನ್ಸಿಲಿನಲ್ಲಿ ಪ್ರಶ್ನೋತ್ತರದ ಅರ್ಜಿಯನ್ನು ದಾಖಲಮಾಡಿಸಿದರು. ಮತ್ತು ರಾವಬಹದ್ದೂರವರ ಗಿಲ್ಲೆಯ ಲೇಖಗಳನ್ನೆಲ್ಲ ಜಗಪ್ರಸಿದ್ಧವಾದ ಪುಣೆಯ ಮರಾಠಾ (ಇಂಗ್ಲಿಷ) ಪತ್ರದಲ್ಲಿಯೂ, ಕೇಸರಿ (ಮರಾಠಿ), ಜ್ಞಾನಪ್ರಕಾಶ (ಮರಾಠಿ), ಇಂದುಪ್ರಕಾಶ (ಮರಾಠಿ) ಪತ್ರಿಕೆಗಳಲ್ಲಿಯೂ, ಧಾರವಾಡವೃತ್ತ (ಮರಾಠಿಪತ್ರ) ದಲ್ಲಿಯೂ ತಾ. ೧೬-೧೨-೧೯೧೦೬ನೇ ಇ. ಯ ದಿವಸ ಏಕಕಾಲಕ್ಕೇ ಪ್ರಕಟಮಾಡಿದರು. ಕೂಡಲೆ ಕೆಲವು ಕನ್ನಡ ಪತ್ರಿಕೆಗಳಲ್ಲಿಯೂ ಆ ಗಿಲ್ಲೆಯ ಲೇಖಗಳು ಭಾಷಾಂತರಿಸಿ ಪ್ರಸಿದ್ಧವಾದವು. ಅದರಿಂದ ಕರ್ನಾಟಕದಲ್ಲಿಯ ಮತ್ತು ಪುಣೆ ಮುಂಬಯಿ ಮುಂತಾದ ಪ್ರಮುಖಪಟ್ಟಣಗಳಲ್ಲಿಯ ಅಂದರೆ ಇಡೀ ಮುಂಬಯಿ ಇಲಾಖೆಯ ಜನರಲ್ಲೆಲ್ಲ ಒಮ್ಮೆಲೆ ಬಹು ಗಲಭೆಯೆದ್ದಿತು. ಬ್ರಾಹ್ಮಣರಲ್ಲಿಯೂ, ವೀರಶೈವರಲ್ಲಿಯೂ ಅತಿಶಯವಾದ ಗಡಬಿಡಿಯು ಹರಡಿಕೊಂಡಿತು. ಮಹಾಜನರ ಮುಖಮಂಡಲಗಳಿಗೆ ಕಳೆಯೇರಿತು."ಅರಟಾಳ ಸಾಹೇಬರು ಇಷ್ಟು ದಿವಸಗಳ ವರೆಗೆ ನಿರ್ಭಯವಾಗಿ ಹೇಗೆ ಕೆಲಸಮಾಡುತ್ತಿದ್ದರೋ ಹಾಗೆ ಇನ್ನು ಮೇಲೆ ಮಾಡಲಿ ನೋಡೋಣ! ಮೃಗೇಂದ್ರನು ಮದ್ದಾನೆಗಳ ಹಿಂಡಿನಲ್ಲಿ ಹೊಕ್ಕು, ತನ್ನ ನಖಪಂಜರದಿಂದ ಅವುಗಳ ಕುಂಭಸ್ಥಳಗಳನ್ನು ಸೀಳಿ, ಆ ಆನೆಗಳ ಬಲವನ್ನೆಲ್ಲ ಕಳೆದು, ಅವುಗಳನ್ನು ದುರ್ದಶಾವಸ್ಥೆಗೀಡುಮಾಡುವಂತೆ ಅರಟಾಳ ಸಾಹೇಬರು ತಮ್ಮ ಅಧಿಕಾರಬಲದಿಂದ ದುರ್ಬಲರಾದ ನಮ್ಮ ಹಿಂಡು ಹಾರುವರ ಮೇಲೆ ತಮ್ಮ ಕೋಪಕಟಾಕ್ಷವನ್ನು ಕೆಡಿವಿ, ಸಮಯಾನುಸಾರವಾಗಿ ನಿರರ್ಥಕ ಆರೋಪಗಳನ್ನು ಹೊರಿಸಿ, ನಮ್ಮನ್ನು ಪ್ರತಿಬಂಧಿಸುತ್ತಿದ್ದರು. ನಾವು ಈಗ ಸ್ವಚ್ಛಂದದಿಂದ ಉಡ್ಡಾಣಗೆಯ್ಯುವ ಆ ಸಿಂಹೇಂದ್ರನ ಮಾರ್ಗಕ್ಕೆ ಸುತ್ತಲೂ ಬಲವಾದ ಜಾಲವನ್ನೊಗೆದು ವ್ಯಾಧರಂತೆ ಸಮಯವನ್ನಿರೀಕ್ಷಿಸುತ್ತಿರುವೆವು. ಜಾಲವು ಸಂದಿಗೊಂದಿಗಳಲ್ಲಿ ಸಹ ಸುತ್ತಿಕೊಂಡಿರುವದು. ಈ ಸಾರೆ ಇವರು ಪಾರಾಗಿ ಹೋಗುವದು ತೀರ ಅಸಾಧ್ಯವು. ಅವರ ಮೇಲೆ ಪಾಶಪಪತಾಸ್ತ್ರ ರಾಮಬಾಣಗಳಂಥ ಸಾರ್ಥಕೋಪಾಯಗಳನ್ನೇ ನಡಿಸಿರುವೆವು. ಅವು ಸ್ವಲ್ಪಾವಧಿಯಲ್ಲಿಯೇ ನಮಗೆ ಇಷ್ಟವಾದ ಪರಿಣಾಮವನ್ನುಂಟು ಮಾಡದೆ ಇಂದಿಗೂ ಇರವು. ತಡೆಯಿರಿ ತಡೆಯಿರಿ! ಚಮತ್ಕಾರವನ್ನು ನೋಡಿರಿ!! ಈ ಮಹಾಜನರ ಹಸ್ತಲಾಘವನ್ನು ಕಂಡುಕೊಳ್ಳಿರಿ" ಎಂದು ಜನ ಸಮೂಹದ ಮುಂದೆ ಮಹಾಜನರೂ ದೇಶಪಾಂಡೆಯರೂ ಅವರ ಅನುಯಾಯಿಗಳೂ ಆನಂದದಿಂದ ಹೇಳುತ್ತ ತಿರುಗಾಡಹತ್ತಿದರು. ಆರಂಭಕ್ಕೆ ಮಹಾಜನರು ಈ ಪ್ರಕರಣವನ್ನು ಎಬ್ಬಿಸಿಕೊಟ್ಟುದಿಷ್ಟೇ ಸರಿ, ಹಿಂದಿನಿಂದ ಮುಂಬೈ ಹಾಯಕೋರ್ಟಿನ ವಕೀಲ ಮುಂತಾದ ಮುಖ್ಯ ಮುಖ್ಯ ಜನರೂ, ಕೇಸರಿ-ಮರಾಠಾ ಪತ್ರಗಳ ಎಡಿಟರರಾದ ಬಾಳಗಂಗಾಧರ ಟಿಳಕರೂ, ಅವರಷ್ಟೇ ಯೋಗ್ಯತೆಯುಳ್ಳ ಎಷ್ಟೋ ದೊಡ್ಡ ದೊಡ್ಡ ಜನರೂ ಸಮಾವೇಶವಾಗಿ ಬಹು ಆಸ್ಥೆಯಿಂದಲೂ ಅಭಿಮಾನದಿಂದಲೂ ಈ ಪ್ರಕರಣವನ್ನು ಸಿದ್ಧಿಗೊಯ್ಯದೆ ಬಿಡಬಾರದೆಂದು ಮಹಾಜನರ ಹೆಸರುಮಾಡಿ, ತಾವೇ ನಡಿಸಹತ್ತಿದರು.

ಮಹಾಜನರ ಅಟ್ಟಹಾಸ

ಕೆಲವು ದಿವಸ ಮುಂಬಯಿ ಇಲಾಖೆಯಲ್ಲೆಲ್ಲ ರಾಜಕೀಯ ಸುದ್ದಿಯೆಂದರೆ ಈ ಮಹಾಜನರ ಪ್ರಕರಣವೇ ಆಗಿಹೋಗಿತ್ತು. ಕರ್ನಾಟಕದಲ್ಲಂತೂ ಕೇಳುವದೇನು? ಎಲ್ಲರ ಬಾಯಲ್ಲಿ ಇದೇಮಾತು. ಹಿಂದೆ ಹೇಳಿದಂತೆ ತಾ. ೧೬-೧೨-೧೯೦೬ ರಿಂದ ತಾ. ೧೦-೩-೧೯೦೭ ರ ವರೆಗೆ ಮೂರು ನಾಲ್ಕು ತಿಂಗಳ ತನಕ ಒಂದೇ ಸವನೆ ವಾರವಾರಕ್ಕೆ ಮರಾಠಾ, ಕೇಸರಿ, ಜ್ಞಾನಪ್ರಕಾಶ, ಇಂದುಪ್ರಕಾಶ ಮುಂತಾದ ವರ್ತಮಾನ ಪತ್ರಗಳಲ್ಲಿ ಪ್ರಕಟಮಾಡುತ್ತಲೇ ಬಂದದರಿಂದ ಎಲ್ಲ ಅಧಿಕಾರಿಗಳ ಮತ್ತು ಜನರ ಮನಸು ಅತ್ತಕಡೆಗೇ ಹೋಗಿ ಪರಿಣಾಮವೇನಾಗುವದೋ ಎಂದು ಎಲ್ಲರೂ ಎದುರ ನೋಡಹತ್ತಿದರು. ವೀರಶೈವರಿಗೂ ಉಳಿದ ಬ್ರಾಹ್ಮಣೇತರರಿಗೂ ಮಾತ್ರ ಈ ಕೋಲಾಹಲವನ್ನು ಕಂಡು ಕೇಳಿ ಬಹಳೇ ಕಳಕಳಿಯಾಗಹತ್ತಿತು. ನ್ಯಾಯನಿಷ್ಠರೂ, ಸತ್ಯವಂತರೂ ಆದ ಕೆಲಬ್ರಾಹ್ಮಣರಾದರೂ ನ್ಯಾಯಕ್ಕೆ ಅನ್ಯಾಯದ ಪರಿಣಾಮವಾಗಬಾರದೆಂದು ಚಿಂತಿಸಹತ್ತಿದರು. ಮಹಾಜನರ ಓಡಾಟವನ್ನೂ, ಗಡಿಬಿಡಿಯನ್ನೂ, ಸಾಹಸವನ್ನೂ, ಸಿದ್ಧತೆಯನ್ನೂ ನೋಡಿ ಎಲ್ಲ ವೀರಶೈವರು ಸಾಶಂಕ ಮನಸ್ಕರಾದರು. ರಾವಬಹದ್ದೂರವರ ಪ್ರೇಮಕ್ಕೆ ಪಾತ್ರರಾದ ಎಷ್ಟೋ ವೀರಶೈವರ ಕಡೆಯಿಂದ ಅವರಿಗೆ ದಿನದಿನಕ್ಕೆ ಅನೇಕಾನೇಕ ಪತ್ರಗಳು ಬರುತ್ತಿದ್ದವು. ಅವೆಲ್ಲ ಪತ್ರಗಳಿಗೆ "ನೀವೇನು ಗಡಬಡಿಸಬೇಡಿರಿ, ಸ್ವಲ್ಪ ಸಮಾಧಾನ ತಾಳಿರಿ" ಎಂಬುದಾಗಿ ರಾವಬಹದ್ದೂರವರು ಉತ್ತರ ಕೊಡುತ್ತಿದ್ದರು. ಆದರೂ ಹೊರಗಿನ ಗಡಿಬಿಡಿಯನ್ನು ಕಂಡು ಜನರಲ್ಲಿ ಚಿತ್ತಸ್ಥೈರ್ಯವು ಉಳಿಯಲಿಲ್ಲ. ಯಾಕಂದರೆ ರಾಜಕೀಯ ಹಾಗೂ ಸಾಮಾಜಿಕ ದೃಷ್ಟಿಯಿಂದ ಹಿಂದುಸ್ತಾನದ ಒಂದು ಕಣ್ಣಿನಂತಿರುವ ಕೇಸರೀ ಎಂಬ ವರ್ತಮಾನಪತ್ರದ ಮೇಲೆ ಬಹುಶಃ ಎಲ್ಲ ಜನರ ಪ್ರೇಮ ಬಹಳ. ಅದರ ಚಾಲಕರೂ ಮಾಲಕರೂ ಆದ ಲೋಕಮಾನ್ಯ ಟಿಳಕರವರ ಮೇಲೆ ಜನರ ನಿಃಸೀಮವಾದ ಭಕ್ತಿ. ನಿರಾಧಾರವಾದ ಸುಳ್ಳು ಲೇಖಗಳನ್ನು ಅವರು ಸಾರಾಸಾರ ವಿಚಾರಮಾಡದೇ ತಮ್ಮ ಪತ್ರಿಕೆಗಳಲ್ಲಿ ಎಂದಿಗೂ ಪ್ರಕಟಿಸಲಿಕ್ಕಿಲ್ಲೆಂಬದೊಂದು ಸರ್ವಜನಾಂಗದ ಘಟ್ಟಿಯಾದ ತಿಳುವಳಿಕೆ. ಮಹಾಜನರ ಪಕ್ಷದಿಂದ ಮುಂಬಯಿ ಇಲಾಖೆಯ ಎಲ್ಲ ಬ್ರಾಹ್ಮಣ ಅಧಿಕಾರಿಗಳ ಹಾಗೂ ಮುಖಂಡರ ಮತಾಭಿಮಾನದ ಜಾಗ್ರತೆ, ರಾ.ಬ॥ರುದ್ರಗೌಡರನ್ನು ಶಾಸನಗೊಳಿಸದೆ ಬಿಡಬಾರದೆಂದು ಮುಂಬಯಿ ಇಲಾಖೆಯೊಳಗಿನ ಮುಖ್ಯ ಮುಖ್ಯ ಬ್ರಾಹ್ಮಣರ ಪ್ರಚಂಡವಾದ ಸಾಹಸ, ಭಗೀರಥ ಪ್ರಯತ್ನ, ಹಳ್ಳಿಯ ಹಾರುವರ ಹಿಂಡಿನಲ್ಲಿಯೂ ಕೂಡ ಈ ಪ್ರಕರಣದ ದಟ್ಟವಾದ ಬಲಿಬಲಿ, ಇವೆಲ್ಲ ಕಾರಣಗಳಿಂದ ಎಲ್ಲ ಜನರು ಈ ಮಹಾಜನರ ಕಪಟತಂತ್ರಗಳೊಳಗಿಂದ ರಾ.ಬ॥ಅರಟಾಳ ಸಾಹೇಬರವರು ಪಾರಾಗುವದು ಪರಮಪ್ರಯಾಸಕರವಾದುದೆಂದೇ ಅನುಮಾನಿಸಹತ್ತಿದರು.

ಬಹಿರಂಗದಲ್ಲಿ ಈ ಬಗೆಯ ದಟ್ಟವಾದ ಗಡಿಬಿಡಿಯು ಬಿಡದೇ ನಡೆದಿರಲು, ಸರಕಾರದಲ್ಲಿ ಈ ಪ್ರಕರಣದ ಪ್ರಸ್ತಾಪವು ಇಷ್ಟೊಂದು ಗಡಿಬಿಡಿಗೆ ಕಾರಣವಾಗಿ ಏನೂ ಪರಿಣಮಿಸಿರಲಿಲ್ಲ. ಸಾಧಾರಣವಾಗಿ ಮಂತ್ರವು ಸ್ವಲ್ಪ, ಉಗುಳೇ ಬಹಳಾಗಿತ್ತು. ಈ ಹೊರಗಿನ ಇಷ್ಟು ಗಡಿಬಿಡಿತನಕ್ಕೆ ಮಹಾಜನರ ಅಟ್ಟಹಾಸ, ಆಡಂಬರಗಳೇ ಮೂಲ ಕಾರಣವಾಗಿದ್ದವೆಂದು ಹೇಳಬಹುದು. ಕಡುತರವಾದ ಹೊಗೆಯು ಕೋಣೆಯನ್ನು ತುಂಬಿಕೊಂಡಂತೆ ಈ ಕಠಿಣತರವಾದ ಕೋಲಾಹಲವು ಕರ್ನಾಟಕದಲ್ಲೆಲ್ಲ ಕಿಕ್ಕಿಂಥವಾಗಿ ಮುಸಕಿರಲು ರಾ.ಬ॥ಅರಟಾಳ ಸಾಹೇಬರವರ ಅಧಿಕಾರ ಹೋಯಿತೆಂದೂ, ಅವರನ್ನು ಖಟ್ಲೆಯಲ್ಲಿ ಹಿಡಿಯುವರೆಂದೂ, ಅವರನ್ನು ಈ ಜಿಲ್ಲೆಯಿಂದ ಕಿತ್ತು ಬಹುದೂರ ವರ್ಗಮಾಡಿದರೆಂದರೂ, ಪುನಃ ಈ ಭಾಗಕ್ಕೆ ಅವರನ್ನು ತರುವದೇ ಇಲ್ಲವೆಂದೂ, ಇವರ ಆಳಿಕೆಗೆ ಸರಕಾರದವರು ದೊಷಣೆಯನ್ನು ಕೊಟ್ಟರೆಂದೂ, ಅವರ ಮೇಲಿದ್ದ

ಸರಕಾರದವರ ಅವಿರಳವಾದ ಪ್ರೇಮವು ತಪ್ಪಿ ವಿಶ್ವಾಸವು ಹಾರಿತೆಂದೂ ಇನ್ನು ಇವರು ಎಷ್ಟು ಪ್ರಯತ್ನಿಸಿದರೂ ಪೂರ್ವದ ನಂಬಿಗೆಯನ್ನು ತಂದುಕೊಳ್ಳುವದಾಗದೆಂದೂ ಅನೇಕಾನೇಕ ತರವಾಗಿ ಸುಳ್ಳು ಸುದ್ದಿಗಳನ್ನು ಹುಟ್ಟಿಸಿ ಹಬ್ಬಿಸಿದರು. ಈ ಪ್ರಕಾರದ ಗಡಿಬಿಡಿಯು ನಡೆದಿರಲು ರಾವಬಹದ್ದೂರ ಅರಟಾಳ ಸಾಹೇಬರವರು ಸ್ವಲ್ಪವಾದರೂ ಭಯಗ್ರಸ್ತರಾಗಿರದ್ದೆ, ಆ ಸಂಧಿಯಲ್ಲಿ ಬಹು ವಿಚಾರಾರ್ಹವಾದ "ರಾಧಾಕೃಷ್ಣ" ಮತ್ತು "ಕೆಂಪು ಹಸ್ತ" ಎಂಬ ವಿಷಯಗಳ ಮೇಲೆ ಎರಡು ಪ್ರಬಂಧಗಳನ್ನು ಬರೆದು ಮುಂಬಯಿಯ ಎಂಥ್ರಾಪೊಲಾಜಿಕಲ್ ಸೊಸಾಯಿಟಿಗೆ ಕಳಿಸಿದರು. ಪ್ರಬಂಧಗಳನ್ನು ಬರೆಯಬೇಕಾದರೆ ಚಿತ್ತಸಮಾಧಾನತೆಯು ಎಷ್ಟಿರಬೇಕೆಂಬದು ಸ್ಪಷ್ಟವಾಗಿ ತಿಳಿಯುತ್ತದೆ.

ಮಹಾಜನರ ಪ್ರಕರಣಕ್ಕೆ ಸರಕಾರದ ಉತ್ತರ

ಈ ಮಹಾಜನರ ಪ್ರಕರಣವು ಸರಕಾರದಲ್ಲಿ ನಡೆದೇ ಇದ್ದದರಿಂದ, ಈ ಎಲ್ಲ ಹಾರಕಿ ಸುದ್ದಿಗಳನ್ನು ಜನರು ನಂಬಲಿಕ್ಕೆ ಎಷ್ಟೋ ಆಸ್ಪದವಿತ್ತು. ಆದರೆ ವಸ್ತುಸ್ಥಿತಿಯು ಹಾಗಿರಲಿಲ್ಲ. ರಾ.ಬ॥ಅರಟಾಳ ಸಾಹೇಬರವರ ಮೇಲೆ ಬಂದ ಗಿಲ್ಲೆಯ ಅರ್ಜಿಗಳನ್ನೆಲ್ಲ ಸರಕಾರದವರು ವಿಚಾರದೃಷ್ಟಿಯಿಂದ ನೋಡಿದಾಗ್ಯೂ ಒಂದು ಅರ್ಜಿಯ ಬಗ್ಗೆಯೂ ಇವರ ಜವಾಬು ಕೇಳದೆ, ತಮ್ಮೊಳಗೆ ತಾವೇ ಖಾತ್ರೀ ಮಾಡಿಕೊಂಡು ಲೇಜಿಸ್ಲೇಟಿವ್ಹ ಕೌನ್ಸಿಲಿನಲ್ಲಿ ನಡೆದ ಪ್ರಶ್ನೋತ್ತರಗಳನ್ನು ಪೂರ್ಣವಾಗಿ ವಿಚಾರಿಸಿ, ರಾ.ಬ॥ಅರಟಾಳ ಸಾಹೇಬರು ನಿರ್ದೋಷಿಗಳಿರುತ್ತಾರೆಂತಲೂ, ಇವರ ಆಳಿಕೆಯು ನಿಷ್ಕಲಂಕವಾಗಿರುತ್ತದೆಂತಲೂ, ಇವರು ಆರಂಭದಿಂದಲೂ ನ್ಯಾಯ ನಿಷ್ಠರಾಗಿದ್ದಂತೆ ಈಗಾದರೂ ಸರಕಾರಕ್ಕೂ, ಪ್ರಜೆಗಳಿಗೂ ವಿಶ್ವಸನೀಯರೇ ಇರುವರೆಂತಲೂ, ಇವೆಲ್ಲ ಗಿಲ್ಲೆಯ ಅರ್ಜಿಗಳು ದ್ವೇಷಮೂಲಕ ಆಗಿರುವವೆಂತಲೂ ಸತ್ಯಸಂಧರಾದ ಇವರ ವಿಷಯಕ್ಕೆ ಹೆಚ್ಚಿನ ವಿಚಾರಕ್ಕೆ ಆಸ್ಪದವೇ ಇಲ್ಲೆಂತಲೂ ಮಹಾಜನರು ಮತ್ತು ದೇಶಪಾಂಡೆಯರು ನಡೆಯಿಸಿದ ಬನಾವಟ ಪ್ರಕರಣದ ಪ್ರಶ್ನೆಗೆ ಉತ್ತರಕೊಟ್ಟರು. ಈ ಉತ್ತರವು ಸರಕಾರೀ ಗ್ಯಾಝೀಟ ತಾರೀಖು ೨೩ನೇ ಮಾಹೆ ಎಪ್ರೀಲ ಸನ್ ೧೯೦೭ನೇ ಇಸವಿಯ ೭ನೇ ಭಾಗದ ೩೬ನೇ ಪಾನಿನಲ್ಲಿ ಪ್ರಸಿದ್ಧವಾಗಿರುತ್ತದೆ. ಅದನ್ನು ಬೇಕಾದವರು ನೋಡಿಕೊಂಡು ಖಾತ್ರಿಮಾಡಿಕೊಳ್ಳತಕ್ಕದ್ದು. ಸರಕಾರದವರ ಈ ಉತ್ತರದಿಂದ ಮಹಾಜನರು ಒಡ್ಡಿದ ಕಪಟಜಾಲವು ರುದ್ರದೇವರ ಅಗ್ನಿನೇತ್ರಕ್ಕೆ ಭಸ್ಮೀಭೂತವಾಗಿ ಗಗನಾಂಗಣಕ್ಕೆ ಹಾರಿಹೋಯಿತೆಂದು ಹೇಳಬಹುದು.

ಹೃದಯಕ್ಕೆ ಶೂಲೋಪಮಾನವಾದ ಈ ಉತ್ತರವನ್ನು ನೋಡಿ ಎಲ್ಲ ಹಾರುವರೂ ತಣ್ಣಗಾದರು. ಸಮಸ್ತ ವೀರಶೈವರ ಮುಖಕಮಲಗಳು ಅರಳಿದವು. ಗಡಿಬಿಡಿಯೆಲ್ಲ ಗಡಿದಾಟಿಹೋಯಿತು. ಇಷ್ಟುದಿವಸ ನಡೆದ ಪ್ರಚಂಡವಾದ ಕೋಲಾಹಲವೆಲ್ಲ ಹಿಂಡು ಹಾರುವರ ಬೂಟಾಟಿಕೆಯೆಂದೂ, ಭೀತದಾಯಕವಾದ ಅವರ ಸಾಹಸವೆಂದೂ ಜನಜನಾಂಗಕ್ಕೆ ದಿಗ್ದರ್ಶನವಾಯಿತು. ಮಿತಿಮೀರಿದ ಸೊಕ್ಕುಳ್ಳ ಮಹಾಜನರ ಮೊಸಡಿಗಳೆಲ್ಲ ಮೊಖಾಳವಾದವು. ದೇಶಪಾಂಡೆಯರೆಲ್ಲರು ದೆಸೆಗೇಡಿಗಳಾದಂತಾಯಿತು. ಹಾರುವರ ಹಿಂಡಿನಲ್ಲೆಲ್ಲ ಹೆದರಿಕೆ ಹುಟ್ಟಿತು. ಸಾರಾಂಶ ಕಪಟ ಹವ್ಯಾಹುತಿಯಿಂದ ಪ್ರಜ್ವಲಿಸುತ್ತಿರುವ ಅವರ ಹೋಮಕ್ಕೆ ನೀರೆರಚಿ ಆ ಹೋಮಜ್ವಾಲೆಯನ್ನು ಆರಿಸಿದಂತಾಯಿತು.

ನ್ಯಾಯನಿಷ್ಠರೂ, ಸತ್ಯಸಂಧರೂ ಆದ ರಾ.ಬ॥ರುದ್ರಗೌಡ ಸಾಹೇಬರ ಕೂಡ ನ್ಯಾಯಯುದ್ಧದಲ್ಲಿ ಹೋರಾಡುವದೆಂದರೆ ಸಾಮಾನ್ಯವಲ್ಲ. ಗೋಕಾವಿಯ ಮಹಾಜನರೂ, ದೇಶಪಾಂಡೆಯರು

ಪ್ರಚಂಡರಾದರವರೆಂತಲೇ ಇಷ್ಟುದಿವಸ ಇವರ ಕೂಡ ಹೋರಾಡಿದರು. ಇಂತಹ ಬನಾವಟ ಘಟಾಟೋಪಗಳನ್ನು ನಡಿಸಿ, ಕಡೆಗೆ ತಮ್ಮ ಮೂರ್ಖತನವನ್ನು ತಾವೇ ಹೊರಗೆಡಿವಿದರು. ಆದರೆ ಆರಂಭದಿಂದಲೂ ಕಡೆತನಕ ರಾ.ಬ||ಅರಟಾಳ ಸಾ||ರವರು ವಿಶ್ವಸನೀಯರಾಗಿದ್ದರೆಂತಲೇ ಈ ಮಹಾಜನರು ಒಡ್ಡಿದ ಬಲಾಢ್ಯವಾದ ಜಾಲದೊಳಗಿಂದ ಪಾರಾದರೆಂದು ಧಾರಾಳವಾಗಿ ಹೇಳಬಹುದು. ನಿಷ್ಕಲಂಕವೂ, ನಿರ್ಮಾತ್ಸರ್ಯವೂ, ನಿಷ್ಪ್ರಹವೂ ಆದ ನಿರ್ದುಷ್ಟ ಅಳಿಕೆಯಿಂದಲೇ ಇವರ ಮೇಲೆ ಆರೋಪದ ಛಾಯಾ ಸಹ ಬೀಳಲಿಲ್ಲ. ಇದರಿಂದ ರಾ.ಬ||ಅರಟಾಳ ಸಾಹೇಬರವರ ಘನತೆಯೂ, ವರ್ಚಸ್ಸೂ ಯಾವ ಪ್ರಕಾರದ್ದಿತ್ತೆಂಬುದನ್ನೂ, ಇವರು ರಾಜನಿಷ್ಠೆ ನ್ಯಾಯನಿಷ್ಠೆಗಳಿಂದ ಸರಕಾರದ ಪ್ರೇಮಕ್ಕೆ ಎಷ್ಟರಮಟ್ಟಿಗೆ ಪಾತ್ರರಾಗಿದ್ದರೆಂಬದನ್ನು ವಾಚಕರೇ ವಿಚಾರಮಾಡತಕ್ಕದ್ದು.

ನ್ಯಾಯಯುದ್ಧ ಅಥವಾ ಜಂಗೀಕುಸ್ತಿ

ಇಷ್ಟು ದಿವಸಗಳ ವರೆಗೆ ನ್ಯಾಯಯುದ್ಧಕ್ಕೆ ರಾ.ಬ||ಅರಟಾಳ ಸಾಹೇಬರವರಿಗೆ ಯಾವ ದೊಡ್ಡ ಹುದ್ದರಿಯೂ ಗಂಟು ಬಿದ್ದಿದ್ದಿಲ್ಲ. ಯಾವ ಮಾತಿಗೂ ಎಳ್ಳಷ್ಟು ಹೆದರದಂಥ ಈ ಮಹಾಜನರೆಂಬ ಮಹಾಪ್ರಬಲಶಾಲಿಗಳು ಈಗ ಗಂಟುಬಿದ್ದರು. ರುದ್ರಗೌಡರು ಸತ್ಯಪಕ್ಷದಿಂದ ಹಿಡಿದ ಹಟವನ್ನು ಕಡೆತನಕ ಬಿಡುವವರಲ್ಲೆಂಬ ಮಾತು ಎಲ್ಲ ಜನರಿಗೂ ಗೊತ್ತಿದ್ದಂತೆ, ಈ ಮಹಾಜನ ದೇಶಪಾಂಡೆಯರು ಅಸತ್ಯವನ್ನು ಅಮರಣವೂ ಬಿಡದೆ ಹೋರಾಡುವದಕ್ಕೆ ಬಲು ಬಂಟರೆಂಬ ಸಂಗತಿಯಾದರೂ ಬಹುಶ್ರುತವಾದದ್ದು. ಈಗ ನ್ಯಾಯಯುದ್ಧಕ್ಕೆ ಸಮ ಹುದ್ದರಿಗಳಿದ್ದಂತಾಯಿತೆಂದು ಬಹು ಜನರು ಮಾತಾಡುವವರಾಗಿದ್ದರು. ಈ ಕರ್ನಾಟಕವೆಂಬ ಕುಸ್ತೀಕಣದಲ್ಲಿ ನಡೆದ ನ್ಯಾಯಯುದ್ಧವೆಂಬ ಜಂಗೀಕುಸ್ತಿಯನ್ನು ನೋಡಲಿಕ್ಕೆ ಮುಂಬಯಿ ಇಲಾಖೆಯು ಜನಸಮೂಹವೆಲ್ಲ ಉತ್ಕಂಠಿತವಾಗಿತ್ತು. ಮಹಾಜನಪಕ್ಷದ ಜನಸಮೂಹವು ತಮ್ಮ ಪಕ್ಷಕ್ಕೆ ಜಯದೊರತಾಕ್ಷಣವೇ ಅಂತರಿಕ್ಷದಲ್ಲಿ ರುಮಾಲ ದೋತರಗಳನ್ನು ತೂರಿ ಹಾರಾಡಬೇಕೆಂದು ಆರಂಭದಿಂದಲೇ ಹವಣಿಸುತ್ತಿದ್ದರು. ಮಹಾಜನ ಜಂಗುಳಿಯೆಂಬ ರಾ.ಬ|| ರುದ್ರಗೌಡ ಸಾಹೇಬರ ಎದುರು ಹುದ್ದರಿಯು, ಮಲ್ಲಯುದ್ಧದಲ್ಲಿ ಹೆಸರು ಪಡೆದ ಮೊರಬದ ಜಟ್ಟಿ[೧] ಈಶ್ವರಪ್ಪನಂತೆ ಕರಾಳವಾಗಿ ಕಪ್ಪು ಬಣ್ಣದಿಂದ ಬಹುಭ್ಯವೂ,

---

೧. ಈ ಜಟ್ಟಿಯು ಧಾರವಾಡ ಜಿಲ್ಲಾ ನವಲಗುಂದ ತಾಲೂಕ ಪೈಕಿ ಮೊರಬ ಗ್ರಾಮದವನು; ಈ ಜಿಲ್ಲೆಯು ಕುಸ್ತಿಯನ್ನಾಡುವದರಲ್ಲಿ ಈ ಕಾಲಕ್ಕೆ ಬಹು ಹೆಸರಾಗಿದ್ದನು. ಆಳು ಬಹು ಎತ್ತರ; ಎತ್ತರಕ್ಕೆ ತಕ್ಕ ಪುಷ್ಟನೂ ಗಡುತರವುಳ್ಳವನೂ ಇದ್ದು ಕಪ್ಪು ಬಣ್ಣದಿಂದ ಕಬ್ಬಿಣದ ಗುಂಡಿನಂತೆ ಕಣಕ್ಕೆ ಬಲು ಒಪ್ಪುತ್ತಿದ್ದನು. ಈತನು ಎಷ್ಟೋ ಜಟ್ಟಿಗಳನ್ನು ಒಗೆದು ಎಲ್ಲ ಮಲ್ಲರಲ್ಲಿ ಬಹು ಬಲ್ಲಿದ ಜಟ್ಟಿಯೆಂದೆನ್ನಿಸಿಕೊಂಡು ನನ್ನೊಡನೆ ಬೇಕಾದವರು ಕುಸ್ತಿಗೆ ಬರಲೆಂದು ಕುಸ್ತಿಯ ಕಣಗಳಲ್ಲಿ ಡಂಗುರ ದೊಡಿಸುತ್ತಿದ್ದನು. ಆದರೂ ಕರ್ನಾಟಕದ ಯಾವ ಮಲ್ಲನೂ ಈ ಈಶ್ವರಪ್ಪನ ಕೂಡ ಕುಸ್ತೀ ಹಿಡಿಯಲಿಕ್ಕೆ ಮುಂದೊರದು ಬರಲಿಲ್ಲ. ಆದರಿಂದ ಕರ್ನಾಟಕದಲ್ಲಿ ತಾನು ಅದ್ವಿತೀಯ ಜಟ್ಟಿಯೆಂದು ಹೂಲಿಗಾಳಿಯನ್ನು ಹಿಡಿಸಿ ಬೆಳೆದು ಹೋಗಿದ್ದನು. ಸಾರಾಂಶ, ಕರ್ನಾಟಕವು ಈ ಜಟ್ಟಿಗೆ 'ನಿರ್ವೀರ ಮುರ್ವೀತಲಂ' ಆಗಿತ್ತು. ಅದರಿಂದ ಬೆಳಗಾವ ಜಿಲ್ಲಾ, ಸಂಪಗಾವ ತಾಲೂಕ, ಕಿತ್ತೂರ ಗ್ರಾಮನಿವಾಸಿಗಳು ಈತನೊಡನೆ ಕುಸ್ತೀ ಹಿಡಿಯಲಿಕ್ಕೆ ಶ್ರೀ ಛತ್ರಪತಿ ಕೊಲ್ಲಾಪೂರ ಮಹಾರಾಜವರ ಆಶ್ರಯದಲ್ಲಿ ತಯಾರಾಗಿದ್ದ "ರಮಜಾನ"ಎಂಬ ಜಂಗೀ ಪೈಲವಾನನನ್ನು ಹುದ್ದರಿಯಾಗಿ ನಿಯಮಿಸಿ, ಇವರ ಸಲುವಾಗಿಯೇ ಕಿತ್ತೂರಲ್ಲಿ ಶ್ರೀ ಮಹಾಬಳೇಶ್ವರ ದೇವರ ಜಾತ್ರೆಯನ್ನು ಮಾಡಿ, ಶಕೆ ೧೮೨೯ನೇ ಅಧಿಕ ಚೈತ್ರದಲ್ಲಿ ಅಂದರೆ ಸನ್ ೧೯೦೭ನೇ ಇಸವಿಯ ಮಾರ್ಚ ಎಪ್ರೀಲ ತಿಂಗಳುಗಳಲ್ಲಿ ಕುಸ್ತಿಯನ್ನು ಹಿಡಿಸಿದರು. ಕುಸ್ತಿಯನ್ನು ನೋಡಲಿಕ್ಕೆ ಕರ್ನಾಟಕದ ಯಾವತ್ತು ಭಾಗಗಳಿಂದ ಬಹುಜನ ಕೂಡಿತ್ತು. ರಮಜಾನನು ಕಿರಿ ಆಳಾಗಿದ್ದು ಕೆಂಪು ವರ್ಣದ ದುಂಡನ್ನ→

ಭೀಕರವೂ ಕಾಣುತ್ತಿತ್ತು. ಆದರೆ ಈ ಕುಸ್ತಿಯ ಕಡೆಮಜಲು (ಪರಿಣಾಮವು) ತಿಳಿಯಲಿಕ್ಕೆ ಬಹಳ ಅವಕಾಶಹತ್ತಲಿಲ್ಲ. ರಾವಬಹದ್ದೂರವರ ಸತ್ಯನಿಷ್ಠೆಯೆಂಬ ಸವಾರಿ ಪೇಚವು, ಮುರಿಮುರಿದು ಮೇಲೇರಿ ಬರುವ ಮಹಾಜನ ಸಮೂಹದ ಕಪಟತಂತ್ರವೆಂಬ ಬಲಾಢ್ಯವಾದ ಹುದ್ದರಿಯನ್ನು ತತ್ಕ್ಷಣದಲ್ಲಿಯೇ ಕೆಳಗೆ ಹಾಕಿ, ಜಯಭೇರಿಯನ್ನು ಹೊಡಿಸಹತ್ತಿತು. ಬ್ರಾಹ್ಮಣೇತರ ಜನರಲ್ಲಿ ಆನಂದವಾನಂದವಾಗಿ ಹೋಯಿತು. ಈ ಆನಂದದಾಯಕವಾದ ಪರಿಣಾಮವನ್ನು ಕಂಡು ಎಷ್ಟೋ ಜನರು ರುದ್ರಗೌಡರ ಜಾಣ್ಮೆಗೆ ತಲೆದೂಗಿ "ಇವರನ್ನು ಪುಂಡ ಪ್ರಚಂಡ, ಖಲಕಪಟ ಕೋದಂಡ, ಖೂಳಜನಮದಖಂಡ, ಸಜ್ಜನ ಶ್ರೀಖಂಡ, ಕೃತಕತರು ಕರಿಶುಂಡ, ದುಷ್ಟಹರದೋರ್ದಂಡ, ಸದ್ಗುಣಸಮುದ್ರ, ಶ್ರೀಮದ್ರುದ್ರಗೌಡ ಮಹಾರಾಜ ಬಹುಪರಾಕ್" ಎಂಬುದಾಗಿಯೂ "ಶಿಷ್ಟಜನಪಾಲ, ದುಷ್ಟದುರ್ಜನಶೂಲ, ಸತ್ಯಸತ್ಕವಿಲೋಲ, ಶ್ರೇಷ್ಠಸದ್ಗುಣಜಾಲ, ಕಪಟಕಾರ್ಮುಕ ಕಾಲ, ನಿತ್ಯನಿರ್ಮಲಶೀಲ, ವೀರಶೈವ ಮತವಾರ್ಧಿವರ್ಧನಚಂದ್ರ ಶ್ರೀಮದ್ರುದ್ರಗೌಡ ಭೂಪತೇ ಬಹುಪರಾಕ್" ಎಂಬದಾಗಿಯೂ ಪರಾಕುಗಳ ಉಚ್ಚಧ್ವನಿಯಿಂದ ಕೊಂಡಾಡಹತ್ತಿದರು. ಭಾರತಯುದ್ಧದಿಂದ ಕುರುಕುಲವನ್ನು ನಾಶಮಾಡಲಿಕ್ಕೆ ಧರ್ಮಭೀಮಾರ್ಜುನಾದಿ ಪುಣ್ಯಪುರುಷರು ಕಾರಣರಾದಂತೆ ಈ ಮಹಾಜನರೆಂಬ ಕುರುಕುಲದ ಗರ್ವಭಂಗವಾಗಲಿಕ್ಕೆ ಧರ್ಮರಾಜನ ಧರ್ಮನಿಷ್ಠೆಯೂ, ಶಸ್ತ್ರಾಸ್ತ್ರವಿದ್ಯಾಪರಿಪೂರ್ಣನಾದ ಅರ್ಜುನನ ಚತುರೋಪಾಯವೂ, ಈಶಭಕ್ತಿಯೂ, ಬಲಭೀಮನ ಗದಾಪ್ರಹಾರದ ಯುಕ್ತಿಯೂ ಒತ್ತಟ್ಟಿಗೆ ಸೇರಿ ರಾ.ಬ॥ಅರಟಾಳ ಸಾಹೇಬರು ಪ್ರಕಟವಾಗಿ ಕೇವಲ ನ್ಯಾಯನಿಷ್ಠೆಯಿಂದ, ಅಥವಾ ಧೋರಣಾಶಕ್ತಿಯೆಂಬ ಒಂದೇ ಒಂದು ದಿವ್ಯಬಾಣ ಪ್ರಯೋಗದಿಂದ, ಇಲ್ಲವೆ ಚತುರೋಪಾಯವೆಂಬ ಗದಾಪ್ರಹಾರದಿಂದ ಈ ಹಿಂಡು ಹಿಸುಣರ ಕಪಟತಂತ್ರಗಳೆಂಬ ಸಾಹಸೋಪಾಯಗಳು ಕಿತ್ತುಹೋಗಿ, ಬಿರುಗಾಳಿಗೆ ತರಗಲೆಗಳು ಹಾರಿ ಗಿರಗಿರನೆ ತಿರುಗುತ್ತ ಅಂತರಿಕ್ಷಕ್ಕೆ ಹೋಗುವಂತೆ ಎಲ್ಲಿಯೋ ಅಡಗಿಕೊಂಡವು. ಸಾರಾಂಶ, "ಸತ್ಯಮೇವ ಜಯತೇ" ಎಂಬಂತೆ ರಾ.ಬ॥ರುದ್ರಗೌಡಸಾಹೇಬರವರನ್ನು ಸತ್ಯವೇ ಕಾಯ್ದುಕೊಂಡುಬಂದಿರುವಂತೆ ಸದ್ಯ ಪ್ರಸಂಗಕ್ಕೆ ಇವರು ಸತ್ಯದಿಂದಲೇ ಪಾರಾದರೆಂದು ನಿರ್ವಿವಾದವಾಗಿ ಹೇಳಬಹುದು. ಮತ್ತು ಮಂದಿಯ ಮೋರೆಗೆ ಮಸಿ ಹಚ್ಚ ಹೋದರೆ ಮೊದಲು ತಮ್ಮ ಕೈಗೇ ಮಸಿ ತಗಲುತ್ತದೆಂಬ ತತ್ವವನ್ನು ತಿಳಿಯದೆ, ತಿಳಿಗೇಡಿಗಳಾದ ಮಹಾಜನ ಮತ್ತು ದೇಶಪಾಂಡೆಯರು ಮಾಡಿದ ಶತಕೃತ್ಯವೆಲ್ಲ ನಿರರ್ಥಕವಾಗಿ, ಅವರ ಗರ್ವಭಂಗವಾಗಿ ಕಡೆಗೆ ಅವರು ಅಪಕೀರ್ತಿಯನ್ನು ಹೊಂದಿದರಲ್ಲದೆ ಅವರ ಪ್ರತಿಪಕ್ಷಿಗಳಾದ ರಾ.ಬ॥ಅರಟಾಳ ಸಾಹೇಬರವರ ಧವಲಕೀರ್ತಿಯು ಮತ್ತಿಷ್ಟು ತೇಜಃಪುಂಜವಾಗಿ ಪರಿಶೋಭಿಸಹತ್ತಿತು.

→ಮೈಕಟ್ಟಿನಿಂದ ಬಹಳ ಚಂದಕಾಣುತ್ತಿದ್ದನು. ಆಳಿನ ಮಾನದಿಂದ ಈಶ್ವರನು ರಮಜಾನನ ಇಮ್ಮಡಿ ಕಾಣುತ್ತಿದ್ದನು. ಎರಡೂ ಹುದ್ದರಿಗಳು ಎದ್ದು ಕಣಕ್ಕೆ ಬಂದಾಕ್ಷಣವೆ ರಮಜಾನನು ಕೈಗೆ ಕೈ ಹತ್ತುವದರೊಳಗೆ ಕ್ಷಣಮಾತ್ರದಲ್ಲಿ ಬಿದ್ದು ಹೋಗುವನೆಂಬ ಬಹುಜನರು ಭಾವಿಸಿದರು. ಆದರೆ ನೋಡು ನೋಡುವಷ್ಟರಲ್ಲಿ ರಮಜಾನನು ತನ್ನ ಶಕ್ತಿ ಯುಕ್ತಿಗಳ ಚಮತ್ಕೃತಿಯಿಂದ ಮೊರಬದವನನ್ನು ಅಂಗಾತ ಕೆಡವಿ ಎದೆಯ ಮೇಲೆ ಕೂತುಬಿಟ್ಟಿದ್ದನು. ಕೂಡಿದ ಜನರೆಲ್ಲರು "ಭಲಭಲರೆ ರಮಜಾನ" ಎಂದು ಅವನನ್ನು ವರ್ಣಿಸಹತ್ತಿದರು. ಅವನು ಈಶ್ವರಜಟ್ಟಿಯನ್ನು ಯಾವ ಪೇಚಿನಿಂದ ಹೇಗೆ ಕೆಡವಿದನೆಂದು ಸಹ ನೋಡುವ ಜನರಿಗೆ ತಿಳಿಯದೆ ಹೋಯಿತು. ಈ ಜಂಗೀ ಕುಸ್ತಿಯಂತೆಯೇ ಗೋಕಾವಿಯ ಮಹಾಜನರು ಮೊದಲಾಗಿ ಪುಣೆ-ಮುಂಬಯಿ ಕರ್ನಾಟಕಗಳ ಒಳ್ಳೇ ಹೆಸರಾದ ಬ್ರಾಹ್ಮಣರಿಗೂ ರಾ.ಬ॥ರುದ್ರಗೌಡ ಸಾಹೇಬರವರಿಗೂ ನ್ಯಾಯ ಯುದ್ಧವು ಸರಕಾರದಲ್ಲಿ ನಡೆಯಿತೆಂದೂ, ಪರಿಣಾಮವಾದರು ಅದರಂತೆಯೇ ಆಯಿತೆಂದು ಹೇಳಬಹುದು. ಮೊರಬದವನು ಮರಬಡೆದು ಬಿದ್ದು ಮೋರೆ ಮುಚ್ಚಿಕೊಂಡು ಹೊರಟು ಹೋದಂತೆ ಈ ಮಹಾಜನರು ತಮ್ಮ ಮೂರ್ಖತನಕ್ಕೆ ತಾವೇ ನಾಚಿಕೊಂಡು ಅಧೋಮುಖಿಗಳಾದರು.

ಟಿಳಕರವರ ಸತ್ವಹರಣ

ಈ ಮಹಾಜನರ ಪ್ರಕರಣದಲ್ಲಿ ಸತ್ಯಶಾಲಿಗಳೂ, ದೇಶಭಕ್ತರೂ, ನ್ಯಾಯವಂತರೂ, ಪಂಡಿತರೂ ಎಂದು ಜಗಜ್ಜನರಿಂದ ವಂದ್ಯಮಾನರಾದ ಕೆಲ ಮಹನೀಯರ ಸತ್ವಹರಣವಾಗಿ, ವಿವೇಕಿಗಳು ಅವರನ್ನು ಮತೀಯ ಕೋಟಿಯಲ್ಲಿ ಸಮಾವೇಶ ಮಾಡುವದಾಯಿತು. ಹೇಗೆಂದರೆ, ಸುಪ್ರಸಿದ್ಧ "ಕೇಸರೀ" ಮತ್ತು "ಮರಾಠಾ" ವರ್ತಮಾನ ಪತ್ರಗಳ ಎಡಿಟರರಾದ ಬಾಳ ಗಂಗಾಧರ ಟಿಳಕ ಇವರು ಕೇವಲ ದೇಶಭಕ್ತರೂ, ಭೂತದಯೆಯುಳ್ಳವರೂ, ನಿಷ್ಪಕ್ಷಪಾತಿಗಳೂ ಎಂದೂ ಈವರೆಗೆ ಸಣ್ಣ ಹುಡುಗರಿಗೂ ಕೂಡ ಗೊತ್ತಾಗಿ ಹೋಗಿತ್ತು. ಆದರೆ ಮಹಾಜನ ಮುಂತಾದವರು ವರ್ಗಣಿಯನ್ನು ಕೂಡಿಸಿ, ಆ ಹಣವನ್ನು ಟಿಳಕರವರಿಗೆ ಸಲ್ಲಿಸಿ, ಅವರನ್ನು ಸಂತುಷ್ಟರನ್ನಾಗಿ ಮಾಡಿ, ರಾ.ಬ॥ರುದ್ರಗೌಡಸಾಹೇಬರ ವಿರುದ್ಧಪರವಾದ ಲೇಖಗಳನ್ನು ಅವರ ವರ್ತಮಾನಪತ್ರಗಳ ಮೂಲಕ ಪ್ರಕಟಮಾಡಿದರೆಂದು ಮೊದಲೇ ಹೇಳಿರುತ್ತದೆ. ಸಮದೃಷ್ಟಿಗಳಾದ ವಾಚಕರೇ! ರಾ.ಬ॥ಅರಟಾಳ ಸಾಹೇಬರು ಎಂಥವರಿರುತ್ತಾರೆಂಬದು ನಿಮಗಾದರೂ ಗೊತ್ತಿರುತ್ತದೆ. ಅಂದಮೇಲೆ ಈ ಮಾತನ್ನು ನೀವೇ ಪರೀಕ್ಷಿಸಿರಿ. ಸತ್ಯಾಸತ್ಯದ ಸಾರಾಸಾರ ವಿಚಾರಮಾಡದೆ ಧನದಾಶೆಗೆ ಮರುಳಾಗಿ ಕಂಡ ಸುಳ್ಳು ಲೇಖಗಳನ್ನು ತಮ್ಮ ವಾರ್ತಾಪತ್ರಿಕೆಗಳಲ್ಲಿ ಪ್ರಕಟಮಾಡುವದು ನ್ಯಾಯಸಮ್ಮತವಾದದ್ದೋ ಹೇಗೆ?ನೀವೆ ನೋಡಿರಿ! ಲೋಕಮಾನ್ಯರೆಂದು ಹೊಗಳಿಸಿಕೊಳ್ಳುವವರಿಗೆ ಈ ಕೃತಿಯು ಭೂಷಣವೆನಿಸುವದೋ! ಧನರಾಶಿಯು ಪ್ರಸಂಗವಶಾತ್ ಧರ್ಮಿಷ್ಠನ ಧರ್ಮವನ್ನು ಕಸುಕೊಳ್ಳಲಿಕ್ಕೆ ಹಿಂದೆ ಮುಂದೆ ನೋಡುವದಿಲ್ಲ. ಟಿಳಕರವರು ಈ ಪ್ರಸಂಗದಲ್ಲಿ ತಮ್ಮ ಧನತೃಷ್ಣೆಯನ್ನು ಹೊರಗೆಡವಿ ಸತ್ವಹರಣ ಮಾಡಿಕೊಳ್ಳಬಾರದಾಗಿತ್ತು. ಇದರಿಂದವರನ್ನು ಎಷ್ಟೋ ನ್ಯಾಯನಿಷ್ಠ ಪ್ರಭೃತಿಗಳು ದೂಷಿಸುವವರಾದರು. ವೀರಶೈವರ ವಾರ್ತಾಪತ್ರಿಕೆಗಳು ಕೇಸರಿಯ ಪತ್ರವನ್ನೂ, ಅದರ ಕರ್ತರನ್ನೂ ಪರಿಪರಿಯಿಂದ ನಿಂದಿಸತೊಡಗಿದವು. ಟಿಳಕರವರು ತಮ್ಮ ವಾರ್ತಾಪತ್ರಿಕೆಗಳಲ್ಲಿ ನಿರಾಧಾರವಾದ ಸುಳ್ಳು ಲೇಖಗಳನ್ನು ಪ್ರಕಟ ಮಾಡಿದ್ದಲ್ಲದೆ, ಪ್ರತ್ಯಕ್ಷವಾಗಿ ಮಹಾಜನರ ಹೆಸರಿನಿಂದ ಈ ಪ್ರಕರಣದ ಪರಿಣಾಮವನ್ನು ವಿಪರೀತ ಸ್ಥಿತಿಗೆ ತರಲಿಕ್ಕೆ ಪ್ರಯತ್ನಿಸಿದರು. ಅಂದಮೇಲೆ ಇವರು ನ್ಯಾಯಮಾರ್ಗವನ್ನು ಅತಿಕ್ರಮಿಸಿದಂತಾಯಿತೆಂಬ ಮಾತು ಸಣ್ಣ ಹುಡುಗರಿಗೆ ಸಹ ತಿಳಿಯುವಂತಿದೆ. ತಮಗೆ ಈ ಸಂಗತಿಯ ನಿಜತ್ವವು ತಿಳಿಯದೆ ಇದ್ದಿದ್ದರೆ ನಿಜಸಂಗತಿಯು ಗೊತ್ತಾಗದ ವಿನಹಾ ತಾವು ಈ ಪ್ರಕರಣದಲ್ಲಿ ಕೈಹಾಕಬಾರದಾಗಿತ್ತು. ಇವರ ಈ ಕೃತಿಯು ಸಜ್ಜನದೂಷ್ಯವಾಗಿರುತ್ತದೆಂದು ಎದೆ ತಟ್ಟಿ ಹೇಳಬಹುದು. ಅಂತೆಯೆ ಇವರ ಕೃತ್ರಿಮ ಸ್ವಭಾವವನ್ನು ಕಂಡು ಇವರಿಗೆ ಸರಕಾರದವರು ೨-೩ ಸಾರೆ ಶಿಕ್ಷೆಯನ್ನು ಮಾಡಿದ್ದರೆಂಬುದು ವ್ಯಕ್ತವಾಗುತ್ತದೆ. ಈ ಮಹಾಜನರ ಪ್ರಕರಣದಲ್ಲಿ ಟಿಳಕರು ಮನಸಾ ತೊಡಗಿದ್ದದರಿಂದ ಹಿಂದಕ್ಕೆ ಸರಕಾರದವರು ಇವರಿಗೆ ಕೊಟ್ಟ ಶಿಕ್ಷೆಯು ಯೋಗ್ಯವಾದುದೆಂದು ನ್ಯಾಯನಿಷ್ಠರು ನಂಬಹತ್ತಿದರು. "ನಾಮದಾರ" ಎಂಬ ಇವರ ಉಪಪದವನ್ನು ಸರಕಾರದವರು ಸೆಳೆದುಕೊಂಡದ್ದೂ ವಿಹಿತವೇ ಸರಿ.ಈಗ ವ್ಯವಹರಿಸುವ 'ಲೋಕಮಾನ್ಯ' ಎಂಬ ವಿಶೇಷಣವಾದರೂ ಇವರಿಗೆ ಒಪ್ಪುವದಿಲ್ಲ. ಯಾಕಂದರೆ ಇವರಿಗೆ ನಿಜಸಂಗತಿಯು ಗೊತ್ತಿದ್ದೂ ಈ ದುಷ್ಕೃತಿಯಲ್ಲಿ ತೊಡಗಿದ್ದರೆಂಬುವದು ಈ ಮುಂದಿನ ಸಂಗತಿಯಿಂದ ಸ್ಪಷ್ಟವಾಗಿ ತಿಳಿಯುವದು. ಅದೇನೆಂದರೆ,

ಸವದತ್ತೀ ತಾಲೂಕ, ಮುರಗೋಡ ಮಹಾಲ ಪೈಕಿ ಚಚಡೀ ದೇಸಗತಿಯ ಕಾರಭಾರಿಗಳಾಗಿದ್ದ ನರಸಿಂಹಾಚಾರ್ಯ ಭೀಮಾಚಾರ್ಯ ಪುಣೇಕರ ಎಂಬವರಿಗೂ, ಟಿಳಕರಿಗೂ ಪರಿಚಯವಿತ್ತು. ಟಿಳಕರವರು ಸುಳ್ಳು ಸುದ್ದಿಗಳನ್ನೂ, ಕೃತಕ ಲೇಖಗಳನ್ನೂ ತಮ್ಮ ಪತ್ರಿಕೆಗಳಲ್ಲಿ ಎಂದಿಗೂ ಪ್ರಕಟಿಸುವದಿಲ್ಲೆಂದೂ, ಸದಾ ಸತ್ಯಪಕ್ಷಪಾತಿಗಳಾಗಿ ನ್ಯಾಯನಿಷ್ಠರಿರುವರೆಂದೂ ಇವರಿಗೆ ಸಂಪೂರ್ಣ ನಂಬಿಗೆ ಇತ್ತು. ಹೀಗಿದ್ದು

ರಾ.ಬ॥ರುದ್ರಗೌಡರ ವಿರುದ್ಧವಾಗಿ ನಿರಾಧಾರವಾದ ಸುಳ್ಳು ಲೇಖಗಳನ್ನು ಅವರು ಪ್ರಕಟಿಸಿದ್ದರಿಂದ, ರಾ.ಬ॥ರವರು ನರಸಿಂಹಾಚಾರ್ಯರನ್ನು ಗೋಕಾಕ ತಾಲೂಕ ಚಿಕ್ಕನಂದೀ ಮುಕ್ಕಾಮಿನಲ್ಲಿ ಕರಿಸಿ, ಅವರನ್ನು ಕುರಿತು "ಏನು ಆಚಾರ್ಯರೇ! ನಿಮ್ಮ ದೇಶಭಕ್ತ ಟಿಳಕರವರ ವಿಷಯಕ್ಕೆ ನಿಮ್ಮ ಅಭಿಪ್ರಾಯವೇನಿದೆ? ಇಗೋ ಈ ಲೇಖಗಳನ್ನು ಓದಿರಿ! ಈ ಲೇಖಗಳನ್ನು ಈ ಪ್ರಕಾರ ಪ್ರಕಟಮಾಡಿದ್ದಕ್ಕೆ ಅವರ ವರ್ತನವು ಹೇಗಿರುವದೆಂದು ಊಹಿಸುವಿರಿ?" ಎಂದು ರಾವಬಹಾದ್ದೂರರು ಪ್ರಶ್ನೆ ಮಾಡಲು, ಅದಕ್ಕೆ ಆಚಾರ್ಯರು ಪ್ರತ್ಯುತ್ತರವಾಗಿ "ಟಿಳಕರವರಿಗೆ ಈ ಪ್ರಕರಣದ ನಿಜಸಂಗತಿಯು ತಿಳಿಯದೆ ಇದ್ದು, ಮಹಾಜನ ಮುಂತಾದವರು ಕೊಟ್ಟ ಲೇಖಕ್ಕೇನೇ ಸಮ್ಮತಿಪಟ್ಟು ನಿಜವಿರಬಹುದೆಂದು ತಿಳಿದು ಪ್ರಕಟಮಾಡಿರಬಹುದು. ಇದರಂತೆ ನಾವೇನಾದರೂ ವಾರ್ತೆಯನ್ನು ಸೂಚಿಸಿದರೆ ಅದನ್ನೂ ಛಾಪಿಸುವರೆಂದು" ಹೇಳಿದರು. ಅದಕ್ಕೆ ರಾ.ಬ॥ರವರು "ನಿಮ್ಮ ತಿಳುವಳಿಕೆಯು ನಿಜವಾಗಿ ತಪ್ಪು ಇರುವದು. ಧನದಾಶೆಯಿಂದ ಮತ್ತು ಜಾತ್ಯಭಿಮಾನದಿಂದ ಟಿಳಕರವರು ಬುದ್ಧ್ಯಾ ಆ ಲೇಖಗಲನ್ನು ಪ್ರಸಿದ್ಧಿಸಿರುವರು. ಈ ಪ್ರಕರಣದೊಳಗೆ ಅವರು ಮನಸಾ ಸೇರಿಕೊಂಡಿರುವರು. ಈ ಮಾತನ್ನು ನೀವು ಮನಗಾಣಬೇಕಾದರೆ, ಈಗ ನಾನು ಹೇಳಿದ ಸಂಗತಿಗಳನ್ನು, ನೀವು ಬರೆದು ಕಳಿಸಿರಿ, ಈ ಲೇಖವನ್ನು ಟಿಳಕರು ತಮ್ಮ ಪತ್ರಿಕೆಯಲ್ಲಿ ಛಾಪಿಸಿದರೆ ಮಾತ್ರ ನೀವು ಹೇಳುವಂತೆ ಅವರನ್ನು ನಾನು ಸತ್ಯವಾದಿಗಳೆಂದು ನಂಬುತ್ತೇನೆ" ಎಂದು ಹೇಳಲು, ಆಚಾರ್ಯರು ಹಾಗೆಯೇ ಆಗಲೆಂದರು. ಅದಕ್ಕೆ ರಾವಬಹದ್ದೂರರವರು, ತಮ್ಮ ಆಳಿಕೆಯಲ್ಲಿ ತಾವು ಬ್ರಾಹ್ಮಣ, ಲಿಂಗಾಯತ ಇತ್ಯಾದಿ ಜಾತಿಭೇದವನ್ನೆಣಿಸದೆ, ಕೇವಲ ಸಮದೃಷ್ಟಿಯಿಂದಲೂ, ನ್ಯಾಯವಂತಿಕೆಯಿಂದಲೂ ನಿರ್ಣಯಿಸಿದ ಸರಕಾರೀ ಆಧಾರದ ಕೆಲವು ಸಂಗತಿಗಳನ್ನೂ, ಮತ್ತು ಹಿಂದೆ ಕೆಲ ಮಹಾಜನರಿಗೂ, ದೇಶಪಾಂಡೆಯವರಿಗೂ ಶಿಕ್ಷೆಯಾದ ಸಂಗತಿಯನ್ನೂ, ಅವರವರ ಹೆಸರುಗಳನ್ನೂ ಆಚಾರ್ಯರ ಕಡೆಯಿಂದ ಬರೆಯಿಸಿ ಅವರ ಕಡೆಯಿಂದಲೇ ಪ್ರಕಟನೆಗಾಗಿ ಟಿಳಕರ ಕಡೆಗೆ ಕಳಿಸಲಾಗಿ, "ಈ ಲೇಖವನ್ನು ನಾವು ಗ್ರಹಿಸಲಾರೆವು; ಮತ್ತು ಪ್ರಕಟಪಡಿಸಲಾರೆವು" ಎಂಬ ಉತ್ತರದೊಡನೆ ಆ ಲೇಖವು ಆಗಲೇ ತಿರುಗಿ ಬಂತು. ಅದನ್ನು ನೋಡಿ ಅವರ ನಂಬಿಗಸ್ಥರಾದ ಆಚಾರ್ಯರು ಅಧೋಮುಖಿಗಳಾದರು. ಸಾಹೇಬರವರ ಸತ್ಯವಾಣಿಯು ಆಗಲೇ ಅವರ ನಿದರ್ಶನಕ್ಕೆ ಬಂತು. ಟಿಳಕರು ನ್ಯಾಯವಂತರಾಗಿದ್ದರೆ ಮಹಾಜನ ಮುಂತಾದವರ ಲೇಖಗಳನ್ನು ಪ್ರಕಟಿಸಿದಂತೆ ಈ ಲೇಖವನ್ನೂ ಮುದ್ರಿಸಬೇಕಾಗಿತ್ತು. ಈ ಲೇಖವನ್ನು ತಿರಸ್ಕರಿಸಿದ್ದರಿಂದ ಅವರು ನಿಜವಾಗಿ ಅನ್ಯಾಯದ ಮೊಟ್ಟೆಗಳಾಗಿದ್ದ ಸ್ವಜನರ ಪಕ್ಷವನ್ನು ವಹಿಸಿದ್ದರೆಂತಲೂ, ಧನರಾಸಿಗೆ ಮರುಳಾಗಿ ಅವರ ಲೇಖಗಳನ್ನೆಲ್ಲ ಪ್ರಕಟಪಡಿಸಿ, ಸತ್ಯಸಂಧರೆಂಬ ತಮ್ಮ ಅಮೌಲ್ಯವಾದ ಪದವಿಯನ್ನು ಕಳೆದುಕೊಂಡರೆಂತಲೂ ನಿರ್ಬಾಧವಾಗಿ ನಿರ್ಣಯಿಸಲಿಕ್ಕೆ ಅಡ್ಡಿಯಿಲ್ಲ.

ಮಹಾಜನರ ಮೂರ್ಖತನ

ಈ ಮಹಾಜನರಲ್ಲಿ ಮುಖಂಡನಾದ ಹಿಂದೆ ಹೇಳಿದ ವಾಸೋ ಧೋಂಡದೇವ ಮಹಾಜನ ಊರ್ಫ ಕೆಂಪು ದಾಸಪ್ಪ ಎಂಬವನಿಗೆ ಸನ್ ೧೮೭೭ನೇ ಇಸವಿಯಲ್ಲಿ ಬರತರ್ಫವಾಗಿತ್ತು, ಅದು ಯಾರಿಗೂ ಗೊತ್ತಿಲ್ಲದೆ ಮಾಮಲೇದಾರರೂ, ಇಲಾಖಾಸಾಹೇಬ ಬಹದ್ದೂರ ಮೊದಲಾದವರೂ ಕೆಂಪು ದಾಸಪ್ಪನಿಗೆ ಏಳೆಂಟು ಹಳ್ಳಿಗಳ ಕುಲಕರಿಣಿಕಿ ಮುಂತಾದ ಕೆಲಸಗಳನ್ನು ಕೊಡುತ್ತ ಬಂದದರಿಂದ ಆತನು ಒಳ್ಳೇ ಪ್ರಬಲಾವಸ್ಥೆಯಲ್ಲಿದ್ದನು. ರಾವಬಹದ್ದೂರರವರು ಈತನ ಹಿಂದಿನ ಮುಂದಿನ ಎಲ್ಲ ಸಂಗತಿಗಳನ್ನೂ, ಈತನಂತೆ ಬೇರೆ ಎಷ್ಟೋ ಜನರಿಗಾದ ಶಿಕ್ಷೆಯ ಸಂಗತಿಗಳನ್ನೂ ಬರೆದು ತಮ್ಮ ರಿಪೋರ್ಟಿನ ದ್ವಾರ ಸರಕಾರಕ್ಕೆ ತಿಳುಹಿಸಿದರು. ಈ ಮಹಾಜನರ

ಮೇಲೂ, ದೇಶಪಾಂಡೆಯರ ಮೇಲೂ ಹಿಂದೆ ಫೌಜದಾರಿಯ ಖಟ್ಲೆಗಳಾಗಿದ್ದು, ಅವರಲ್ಲೆಷ್ಟೋ ಜನರಿಗೆ ಕೈದಿನ ಶಿಕ್ಷೆಯೂ, ದಂಡವೂ ಆಗಿದ್ದದರಿಂದ ಅವರ ಹೆಸರುಗಳು ಗ್ರಾಮದ ಗೈರಚಾಲಿ ರಜಿಸ್ಟರಕ್ಕೆ ದಾಖಿಲಾಗಿ ಹೋಗಿದ್ದವು, ಆದರೂ ಇವರು "ಬಿದ್ದರೇನಾಯಿತು ನನ್ನ ಮೀಸೆಗೆ ಮಣ್ಣು ಹತ್ತಿತೇನು" ಎಂದೆನ್ನುವ ಜಟ್ಟಿಯಂತೆ ತಮ್ಮ ಪೌರುಷವನ್ನೇ ಹೇಳಿಕೊಳ್ಳುತ್ತ ಪ್ರಬಲವಾಗಿದ್ದರು. ಮೇಲೆ ಬರೆದ ಕೆಂಪು ದಾಸಪ್ಪನಿಗೆ ಗೌಡಿಕಿಯನ್ನು ನಿಯಮಿಸುವ ಅಧಿಕಾರವಿತ್ತು. ಅದನ್ನು ತಿಳಿದು ರಾ.ಬ॥ಅರಟಾಳ ಸಾಹೇಬರು ಶಿಕ್ಷೆಯಾದ ಮನುಷ್ಯರಲ್ಲಿ ಈ ಅಧಿಕಾರವನ್ನಿಟ್ಟಿದ್ದು ಅಯೋಗ್ಯವೆಂದು ಸರಕಾರಕ್ಕೆ ಬರೆಯಲಾಗಿ, ಅದಕ್ಕೆ ಸರಕಾರದಿಂದ ಕೆಂಪು ದಾಸಪ್ಪನ ಅಧಿಕಾರವನ್ನು ರದ್ದುಪಡಿಸಿರುತ್ತದೆಂಬದಾಗಿ ಹುಕುಮ ಬಂತು. ಆದರೆ ದಾಸಪ್ಪನು ಅಪೀಲು ಮಾಡಿ ತನ್ನ ಅಧಿಕಾರವನ್ನು ಪುನಃ ಪಡೆಯಬೇಕೆಂದು ಪ್ರಯತ್ನಿಸಿದಾಗ್ಯೂ ಅದು ಉಪಯೋಗವಾಗಲಿಲ್ಲ. ಅದರಿಂದ ರಾವಬಹದ್ದೂರವರ ಮೇಲೆ ಹೊಟ್ಟೆಯೊಳಗೆ ಬೆಂಕಿಬಿದ್ದು ಇಲ್ಲದ ಗಿಲ್ಲೆಗಳನ್ನೆಬ್ಬಿಸಿ, ಪ್ರಬಲವಾದ ಪ್ರಕರಣವನ್ನು ಸರಕಾರದ ಮುಂದಿಟ್ಟು ಅನಿಷ್ಟ ಪರಿಣಾಮವನ್ನು ಹೊಂದಿದರು.

ಬಂಡೋಪಂತರ ಭಂಡಾಟ

ಈ ಗೋಕಾವಿಯ ಮಹಾಜನರ ಪ್ರಕರಣದ ಸಮಾಪ್ತಿಯಾದ ನಂತರ ಅಂದರೆ ಸನ್ ೧೯೦೭ನೇ ಇಸವಿಯ ಎಪ್ರೀಲ, ಮೇ, ಜೂನ ತಿಂಗಳುಗಳಲ್ಲಿ ಬೆಳಗಾವ ಶಹರ ಸಂಬಂಧವಾಗಿ ಜನಹಿತಕಾರಕವಾದಂಥ ಒಂದು ಮಹತ್ವದ ಸಂಗತಿಯು ಸಂಭವಿಸಿತು. ಅದೇನೆಂದರೆ: ರಾ.ಸಾ॥ಗೋಪಾಳ ಗೋವಿಂದ ಊರ್ಫ ಬಂಡೋಪಂತ ಉಚಗಾವಕರ ಎಂಬವರು ಬೆಳಗಾವ ಶಹರದ ಮ್ಯುನಸಿಪಾಲ್ಟಿಯ ಮೇಂಬರರಾಗಿದ್ದರು. ಪ್ಲೇಗಿನ ಆರಂಭಕ್ಕೆ ಅಂದರೆ ಸನ್ ೧೮೯೭-೯೮ ಇಸವಿಗಳಲ್ಲಿ ಇವರನ್ನು ಪ್ಲೇಗಿನ ಕೆಲಸದ ಮೇಲೆ ನಿಯಮಿಸಿರಲು, ಆ ಕೆಲಸವನ್ನು ಇವರು ಚೆನ್ನಾಗಿ ಮಾಡಿರುವರೆಂದು ತಿಳಿದು ಸರಕಾರದವರು ಈ ಬಂಡೋಪಂತರಿಗೆ ಮೂರನೇ ವರ್ಗ ಮ್ಯಾಜಿಸ್ಟ್ರೇಟ ಅಧಿಕಾರವನ್ನೂ , ರಾ.ಸಾ॥ ಎಂಬ ಪದವಿಯನ್ನೂ ಕೊಟ್ಟರು. ಇವರ ಕೆಲಸವು ಸರಕಾರದ ಮನಸಿಗೆ ಬಂದದರಿಂದಲೂ, ಇವರ ದೀರ್ಘ ಸಾಹಸದಿಂದಲೂ ಬಂಡೋಪಂತರು ಎರಡನೇ ವರ್ಗಮ್ಯಾಜಿಸ್ಟ್ರೇಟ ಅಧಿಕಾರವನ್ನು ಸಂಪಾದಿಸಿದರು. ಫೌಜದಾರೀ ಅಧಿಕಾರದ ಬಲದಿಂದ ಬಂಡೋಪಂತರು ಗರ್ವಿಷ್ಠರಾಗಿ ಮನಬಂದಂತೆ ಕಾರಭಾರ ಮಾಡಹತ್ತಿದರು. ಲಂಚವನ್ನು ಯಥೇಷ್ಟವಾಗಿ ಬಡಿಯಹತ್ತಿದರು. ದುಷ್ಟರಿಗೆ ಆಶ್ರಯಕೊಡಹತ್ತಿದರು. ನ್ಯಾಯಬಿಟ್ಟು ನಿರ್ಣಯಗಳನ್ನು ಮಾಡಹತ್ತಿದರು. ಆದರೆ ಇವರು ಇಷ್ಟರಿಂದ ತೃಪ್ತರಾಗದೆ ಇನ್ನೊಂದು ಅನನ್ವಿತ ಕೆಲಸವನ್ನು ಮಾಡತೊಡಗಿದದರಿಂದ ಮೇಲಧಿಕಾರಿಗಳಿಗೆ ಇವರ ದುಷ್ಟವಾಸನೆಯು ತಿಳಿಯಲಿಕ್ಕೆ ತಡವಾಗಲಿಲ್ಲ. ಈ ಬಂಡೋಪಂತರು ಬಹಳೇ ಕಾಮುಕರಾಗಿದ್ದರು. ಆದರೆ ಆರಂಭಕ್ಕೆ ಅಷ್ಟೊಂದು ಪರಿಯಿಂದ ಅದು ಹೊರಬಿದ್ದಿದ್ದಿಲ್ಲ. ಅಧಿಕಾರೋಹರಣವಾಗುತ್ತಲೆ ಕಣ್ಣುನೆತ್ತಿಯ ಮೇಲೆ ಬಂದು ಬಂಡೋಪಂತರ ದುಷ್ಟವಾಸನೆಯು ದುರ್ಧರವಾಗಿ ಪರಿಣಮಿಸಿತು. ಅಳತಿಲ್ಲದೆ ಲಂಚವನ್ನು ತಕ್ಕೊಂಡು ಮಾಡುತ್ತಿದ್ದ ಇವರ ಅನ್ಯಾಯದ ನಿರ್ಣಯಗಳೂ, ಬಡಬಗ್ಗರಿಗೆ ತಾಪದಾಯಕವಾಗಹತ್ತಿದವು.

ಕಡೆಗೆ ವಿಷ್ಣುಭಟ್ಟ ಶಹಾಪೂರ ಎಂಬುವರು ರಾ.ಸಾ॥ಬಂಡೋಪಂತರು ನನ್ನ ಮೇಲೆ ಸುಳ್ಳು ಸುಳ್ಳೇ ಫೌಜದಾರಿ ಫಿರ್ಯಾದಿಯನ್ನು ತೆಗೆದುಕೊಂಡು ಜುಲಿಮೆಯನ್ನು ನಡಿಸಿರುವರೆಂದು ಮೆ॥ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಬಿ.ಎ. ಬ್ರ್ಯಾಂಡನ್ ಸಾಹೇಬ ಬಹದ್ದೂರ ಜಿಲ್ಲಾ ಬೆಳಗಾವ ಇವರ ಕಡೆಗೆ ಒಂದು ಅರ್ಜಿಯನ್ನು ಮಾಡಿದರು. ಆ ಅರ್ಜಿಯೊಳಗಿನ ಮಜಕೂರು ಮೆ॥ರವರಿಗೆ ಸತ್ಯವೆಂದು ತೋರಿಬಂದದರಿಂದ ಅದರಂತೆ ಬರೆದು ಸದರೀ

ಪ್ರಕರಣವನ್ನು ವಿಚಾರಕ್ಕೋಸುಗ ಮುಂಬಯಿ ಹೈಕೋರ್ಟಿಗೆ ಕಳಿಸಿದರು. ಸದರೀ ಪ್ರಕರಣವು ಮುಂಬಯಿ ಹಾಯಕೋರ್ಟಿನಲ್ಲಿ ವಿಚಾರ ನಡೆದು, ಬಂಡೋಪಂತರು ಅನನ್ವಿತ ಕಾರ್ಯ ಪ್ರವರ್ತಕರಾಗಿದ್ದಂತೆ ಕೋರ್ಟಿಗೆ ಸಂಶಯ ಬಂದದರಿಂದ "ಇನ್ನು ಮುಂದೆ ರಾ.ಸಾ|| ಬಂಡೋಪಂತರು ಕೆಲಸವನ್ನು ಯಾವ ಪ್ರಕಾರ ಮಾಡುತ್ತಿರುತ್ತಾರೆಂಬದರ ಕಡೆಗೆ ಪೂರ್ಣಲಕ್ಷ್ಯವಿಡಿರಿ" ಎಂಬದಾಗಿ ಮೆ||ಕಲೆಕ್ಟರ ಸಾಹೇಬ ಬಹದ್ದೂರವರಿಗೆ ತಿಳಿಸಿದರು. ಆದರೆ ಬಂಡೋಪಂತರ ಅನನ್ವಿತ ಕಾರ್ಯಗಳು ಮೆ|| ರವರಿಗೆ ಪೂರ್ಣವಾಗಿ ಗೊತ್ತಾಗದರಿಂದ ಹೇಗಾದರೂ ಮಾಡಿ ಇವರ ಅಧಿಕಾರವನ್ನೇ ತೆಗೆದುಕೊಳ್ಳಬೇಕೆಂದು ಯೋಚಿಸಹತ್ತಿದರು. ಮತ್ತು ನಾನು ಜಿಲ್ಲಾಧಿಪತಿಯಾಗಿ, ಮುಖ್ಯ ಶಹರದಲ್ಲಿಯೇ ಇಂತಹ ಅಪಕೃತಿಗಳಾಗುತ್ತಿದ್ದದ್ದನ್ನು ಪ್ರತ್ಯಕ್ಷವಾಗಿ ತಿಳಿದೂ, ಇಂಥ ದುರಾತ್ಮರ ಕಯ್ಯಲ್ಲಿ ದೊಡ್ಡ ಅಧಿಕಾರಗಳನ್ನಿಡುವದು ಅಪ್ರಶಸ್ತವಾದದ್ದೆಂದೂ, ಇದು ದೇವರೆದುರಿಗೂ, ಮನುಷ್ಯರೆದುರಿಗೂ ಅನ್ಯಾಯಕರವಾದದ್ದೆಂದೂ, ಇದನ್ನು ಹಾಗೆಯೇ ಸುಮ್ಮನೆ ಬಿಟ್ಟರೆ ಇದರ ದೋಷವು ನನ್ನ ಪಾಲಿಗೆ ಬರುವದೆಂದೂ ಪರ್ಯಾಲೋಚಿಸಿ ಕರುಣಾಳುಗಳಾದ ಮೆ||ಕಲೇಕ್ಟರ ಸಾಹೇಬರವರು ಯಾವ ಕಾರಣ ಹಚ್ಚಿ ಇವರ ಅಧಿಕಾರವನ್ನು ಕಸಕೊಳ್ಳಬೇಕೆಂಬ ಸುಯುಕ್ತಿಯು ಸೂಚಿಸದೆ, ಒಂದು ದಿವಸ ರಾ.ಬ||ಅರಟಾಳ ಸಾಹೇಬರವರನ್ನು ಕುರಿತು ತಮ್ಮ ಅಂತರಂಗವನ್ನು ತಿಳಿಸಲು ರುದ್ರಗೌಡರು, ಲೋಕೋಪಕಾರಕವಾದ ಈ ಸಂಗತಿಯನ್ನು ಕೇಳಿ ಸಂತುಷ್ಟರಾಗಿ "ತಾವು ಇದಕ್ಕೆ ಏನೆಂದು ಬರೆಯಬೇಕೆಂದಾಲೋಚಿಸಿರುವಿರಿ?"ಎಂದು ಕೇಳಿದ್ದಕ್ಕೆ ಮೆ||ರವರು "ನಿಜವಾದ ಕಾರ್ಯಕಾರಣಗಳನ್ನು ತೋರಿಸಿ ಅವರ ಅಧಿಕಾರವನ್ನೇ ರದ್ದುಪಡಿಸಲಿಕ್ಕೆ ಹುಕುಮು ದೊರೆಯಬೇಕೆಂದು" ಎಣಿಸಿರುವೆ"ನೆಂದು ಹೇಳಿದರು. ಅದನ್ನು ಕೇಳಿ ಕೂಡಲೆ ರಾ.ಬ||ಅರಟಾಳ ಸಾಹೇಬರು "ಮೆಹರ್ಬಾನರವರೇ! ತಾವು ಹೇಳಿದಂತೆ ಬರೆದರೂ ಬರೆಯಬಹುದು. ಅದರಿಂದ ಉದ್ದಿಷ್ಟಹೇತುವು ಕೊನೆಗಾಣುವದು ಅಸಂಭವ ಕಾಣುತ್ತದೆ. ಯಾಕಂದರೆ ಏಳೆಂಟು ವರ್ಷಗಳ ಅವರ ಅಧಿಕಾರದ ಅಮಲು ಸರಕಾರದ ಮನಸಿಗೆ ಬಂದಿದ್ದು, ಒಂದೇ ಒಂದು ಸಣ್ಣ ನೆವದಿಂದ ಸರಕಾರದವರು ಅವರ ಎಲ್ಲ ಅಧಿಕಾರವನ್ನು ಒಮ್ಮಿಂದೊಮ್ಮೆ ಎಂದಿಗೂ ಕಸಕೊಳ್ಳಲಿಕ್ಕಿಲ್ಲ. ಹಾಗೆ ಬರೆದರೆ ಕಾರ್ಯವು ನೆರವೇರದೆ ಅಪಹಾಸ್ಯಕ್ಕೆ ಕಾರಣವಾಗಬಹುದು, ಆದರೆ ಇದಕ್ಕೆ ನನಗೊಂದು ಸಯುಕ್ತಿಕ ಉಪಾಯವು ತೋರುತ್ತದೆ. ಅದೇನೆಂದರೆ, ರಾ.ಸಾ||ಬಂಡೋಪಂತರ ಅಧಿಕಾರದ ಸ್ಥಿತಿಗತಿಯನ್ನೂ, ಅವರ ಅನ್ಯಾಯದ ವರ್ತನೆಯನ್ನೂ, ದುಷ್ಟವಾಸನೆಯನ್ನೂ, ಅವರ ಕಾರ್ಯಕ್ರಮವನ್ನೂ ಯಥಾಸ್ಥಿತವಾಗಿ ಸರಕಾರಕ್ಕೆ ತಿಳಿಸಿ, ಬಂಡೋಪಂತರಿಂದ ಅನ್ಯಾಯಗಳು ಘಟಿಸದಂತೆ ಮಾಡಬೇಕಾದರೆ, ಅವರಿಗಿರುವ ಅಧಿಕಾರವನ್ನು ಅವರೊಬ್ಬರೇ ನಡಿಸದೆ, ಅವರೊಂದಿಗೆ ಸರಕಾರದಿಂದ ಶಿಫಾರಸವಾದ ಬೇರೆ ನಾಲ್ವರನ್ನು ನಿಯಮಿಸಿ, ಈ ಅಯ್ವರಿಂದಲೂ ಅಂದರೆ ಪಂಚಾಯತಪಕ್ಷದಿಂದ ನಡೆಯುವ ಹಾಗೆ ಹುಕುಮು ಆಗಬೇಕೆಂದು ಬರೆದರೆ ಇದರಂತೆ ಹುಕುಮು ಆಗಬಹುದು, ಅಂದರೆ ಅವರ ಅಧಿಕಾರವನ್ನು ಕಸಕೊಂಡಂತೂ ಆಗುವದಿಲ್ಲ, ಇಟ್ಟಂತೆಯೂ ಆಗುವದಿಲ್ಲ, ಅಧಿಕಾರವು ಇಲ್ಲವೆಂದರೆ ಅದೆ, ಅದೆಯೆಂದರೆ ಇಲ್ಲ. ಈ ಮೇರೆಗೆ ಆಗುತ್ತದೆ. ಅಂದರೆ ಬಂಡೋಪಂತರ ಸ್ಥಿತಿಯು ಕೊಂಡಿಯನ್ನು ತೆಗೆದ ಚೇಳಿನಂತೆ ಆಗುತ್ತದೆ. ಪಂಚರ ವಿದ್ಯಮಾನ ನಿರ್ಣಯಗಳಾಗಹತ್ತಿದರೆ ವ್ಯಕ್ತಿ ಮಾತ್ರ ನಿರ್ಣಯವಾಗದೆ ಸರ್ವಜನ ಸಮಂಜಸವಾದ ನಿರ್ಣಯಗಳಾಗಿ ಅಧಿಕಾರದ ಸದುಪಯೋಗವಾಗುತ್ತದೆ" ಎಂದು ಹೇಳಲು ಮೆ||ರವರು ರುದ್ರಗೌಡರ ಚತುರೋಕ್ತಿಗಳಿಗೆ ಚಕಿತರಾಗಿ, "ಮಿಸ್ತರ ಅರಟಾಳ ಸಾಹೇಬರೇ! ನಾನು ಬಹುಮಂದಿ ಆಫೀಸರರನ್ನು ನೋಡಿದೆನು; ಆದರೆ ನಿಮ್ಮಂತಹ ಕುಶಾಗ್ರ ಬುದ್ಧಿಯ ಅಸಾಧಾರಣ ಯುಕ್ತಿವಂತರನ್ನು ಒಬ್ಬರನ್ನೊ ಕಾಣಲಿಲ್ಲ. ಹಿಂದಿನಿಂದ ಎಲ್ಲ ಮನಸಿನಲ್ಲಿ ಅನೇಕ ವಿಚಾರಗಳು ಬರುತ್ತವೆ; ಆದರೆ "ಪಶ್ಚಾತ್ ಬುದ್ಧಿ ನಿರರ್ಥಕಮ್"ಎಂಬಂತೆ ಸಮಯಕ್ಕೊದಗದ ಸುಯುಕ್ತಿಗಳು ನಿರುಪಯೋಗವಾಗುತ್ತವೆ.

ಪ್ರಸಂಗಕ್ಕೆ ಸೂಚಿಸಿದ ತರುಣೋಪಾಯಗಳೇ ಕೆಲಸಕ್ಕೆ ಬೀಳುತ್ತವೆ. ನಿಮ್ಮಲ್ಲಿ ಸ್ವಾಭಾವಿಕವಾಗಿದ್ದ ಪ್ರಸಂಗಾವಧಾನವು ವರ್ಣನೀಯವಾಗಿದೆ" ಎಂಬದಾಗಿ ಇವರ ಧನ್ಯವಾದಮಾಡಿ, ಇವರು ಹೇಳಿದಂತೆ ಬರೆದು ತಿಳಿಸಲಾಗಿ, ಅದರಂತೆಯೇ ಸರಕಾರದಿಂದ ತಡವಿಲ್ಲದೆ ಹುಕುಮು ದೊರೆದದರಿಂದ ಮೆ||ಕಲೆಕ್ಟರ ಸಾಹೇಬರು ಅರಟಾಳ ಸಾಹೇಬರಿಗೆ ಸದರೀ ಹುಕುಮನ್ನು ತೋರಿಸಿ, ಇವರ ಶಿಫಾರಸಮಾಡಿ, " ಈ ಯುಕ್ತಿಯನ್ನು ಹುಡುಕಿ ಕೊಟ್ಟದ್ದರಿಂದ ನಾನು ನಿಮ್ಮ ಆಭಾರಿಯಾಗಿರುತ್ತೇನೆ. ಈ ಪರಪೀಡೆಯನ್ನು ದೂರಮಾಡಿದ ಪುಣ್ಯದ ಫಲವೆಲ್ಲ ನಿಮ್ಮದೇ ಹೊರತು, ಇದರಲ್ಲಿ ನನ್ನದೇನೇನೂ ಇರುವದಿಲ್ಲೆಂದು" ಬಹಳೇ ಅಂತಃಕರುಣಬುದ್ಧಿಯಿಂದ ಹೇಳಿದರು. ಮತ್ತು ಕೂಡಲೆ ಬಂಡೋಪಂತರನ್ನು ಕರಿಸಿ, ಬಂದ ಹುಕುಮನ್ನು ತೋರಿಸಿ, ಸೇಕಂಡಗ್ರೇಡನ ಫೌಜದಾರಿ ಎಲ್ಲ ಮೊಕದಮೆಗಳು ಪಂಚರ ವಿದ್ಯಮಾನ ನೆರವೇರುವಂತೆ ವ್ಯವಸ್ಥೆಯನ್ನು ಮಾಡಿದರು. ಸದರೀ ಹುಕುಮನ್ನು ನೋಡಿದಾಕ್ಷಣವೇ ರಾ.ಸಾ||ಬಂಡೋಪಂತರ ಮೋರೆಯ ಮೇಲಿನ ಮೂಗೇ ಹೋದಂತಾಯಿತು. ವಿಚಾರಮಾಡಿದರೆ ಇವರ ಅಧಿಕಾರವೇ ಇಲ್ಲದಂತಾಯಿತು. ಕೊಂಡಿಯೊಂದು ಇದ್ದದರಿಂದ ಅದರ ಬಿಗುವಿನಿಂದಲೇ ಚೇಳು ನಿರ್ಭಯವಾಗಿ ಹರಿದಾಡುತ್ತಿರುವಂತೆ ಬಂಡೋಪಂತರು ತಮಗಿರುವ ಅಧಿಕಾರದ ಹೆಮ್ಮೆಯಿಂದ ನಿರ್ಭಯವಾಗಿ ವರ್ತಿಸುತ್ತಿದ್ದರು. ಸದ್ಯ ಪ್ರಸಂಗಕ್ಕೆ ಅಧಿಕಾರವೇ ಹೊರಟು ಹೋದುದರಿಂದ ರಾ.ಬ||ಅರಟಾಳ ಸಾಹೇಬರು ಆರಂಭಕ್ಕೆ ಹೇಳಿದಂತೆ ಬಂಡೋಪಂತರ ಸ್ಥಿತಿಯು ಕೊಂಡಿ ಕತ್ತರಿಸಿದ ಚೇಳಿನಂತೆಯೇ ಆಯಿತೆಂದು ನಿಶ್ಚಯವಾಗಿ ಹೇಳಬಹುದು. ಬಂಡೋಪಂತರು ಅಧಿಕಾರದಿಂದ ದೂರಾದ ವಾರ್ತೆಯನ್ನು ಕೇಳಿ ಸಂತುಷ್ಟರಾಗಿ ಬಹುಜನರು ಬೆಳಗಾವ ಶಹರದಲ್ಲಿ ಸಕ್ಕರೆಯನ್ನು ಹಂಚಿದರು. ಪಾತರದವರು ಆನಂದಿಂದ ಫೇಡೆಗಳನ್ನು ಹಂಚಿದರು. ಬೆಳಗಾವ ಶಹರ ನಿವಾಸಿಗಳಿಗೆ ಬಹು ಆನಂದವಾಗಿ ಹೋಯಿತು, ಚೇಷ್ಟೆಖೋರ ಜನರು "ಉಚಗಾವಕರ ಬಂಡೋ-ಅಧಿಕಾರ ಕಳಕೊಂಡೋ" ಎಂದು ಕೂಗಾಡಹತ್ತಿದರು. ಈ ಉತ್ಸವಗಳು ನಡೆದಾಗ ಗ್ರಂಥಕರ್ತನಾದ ನಾನು ಬೆಳಗಾವಿಯಲ್ಲಿಯೇ ಇದ್ದದರಿಂದ ಕಣ್ಮುಟ್ಟ ನೋಡಿದ, ಮತ್ತು ಕಿವಿಗೊಟ್ಟು ಕೇಳಿದ ಸಂಗತಿಯನ್ನು ಯಥಾಸ್ಥಿತವಾಗಿ ಬರೆದಿರುವೆನು. ಈ ಪ್ರಕಾರ ಜನರು ತಮ್ಮ ಆನಂದ ಪ್ರದರ್ಶನಮಾಡಬೇಕಾದರೆ ರಾ.ಸಾ||ಬಂಡೋಪಂತರ ಅಧಿಕಾರದ ಅಮಲು ಎಷ್ಟು ಅನುಚಿತವಾಗಿರಬಹುದೆಂಬದು ತಾನಾಗಿ ವ್ಯಕ್ತವಾಗುತ್ತದೆ. ಆದರೆ ಚೇಳು ಸತ್ತಿರಬಾರದು, ಬದುಕಿದ್ದರೆ ಆ ಚೇಳಿನಿಂದ ಜನರಿಗೆ ಉಪದ್ರವವಾಗಬಾರದು, ಇದರಂತೆ ಬಂಡೋಪಂತರವರ ಅಧಿಕಾರವು ನಷ್ಟವಾಗಿ ಪ್ರಜಾಹಿತಕರವಾದ ಹೊಸ ಏರ್ಪಾಡಾದದ್ದು ಯಾವ ಮಹನೀಯರ ಹಂಚಿಕೆಯಾಗಿರಬಹುದೆಂಬದು ಶಹರ ನಿವಾಸಿಗಳಾದ ಸೂಕ್ಷ್ಮ ವಿಚಾರಿಗಳಿಗೆ ಬಹುಶಃ ಗೊತ್ತಾಗದೆ ಇರಲಿಕ್ಕಿಲ್ಲ! ಈ ಬಗೆಯಾಗಿ ಜನಪೀಡಾಕಾರರಾದ ದುಷ್ಟರ ಏಳ್ಗೆಯೂ ಅಧಿಕಾರವೂ ಕಡಿಮೆಯಾಗಿ, ಬಡಪ್ರಜೆಗಳು ನಿರುಪದ್ರವದಿಂದಲೂ, ಆನಂದದಿಂದಲೂ ಕಾಲಕಳೆಯುವವರಾದರು.

ಶ್ರೀಮಂತ ಛತ್ರಪತಿ ಶಾಹೂಮಹಾರಾಜ ಕೊಲ್ಹಾಪುರ ಇವರ ಭೆಟ್ಟಿ

ರಾ.ಬ||ರುದ್ರಗೌಡ ಸಾಹೇಬರವರ ನ್ಯಾಯನಿಷ್ಠವಾದ ನಿರ್ಣಯಗಳನ್ನೂ, ರಾಜ್ಯಸುಧಾರಣಾ ಸೂತ್ರಗಳನ್ನೂ, ರೈತಜನರ ಹಿತಚಿಂತನೆಯನ್ನೂ, ಇವರ ಮೇಲಿರುವ ಸರಕಾರದ ವಿಶ್ವಾಸವನ್ನೂ ಕೇಳಿ ಬಡವರೂ, ಶ್ರೀಮಂತರೂ, ರಾಜರೂ, ಮಹಾರಾಜರೂ ಮೊದಲಾದ ಸರ್ವಜನರು ರುದ್ರಗೌಡರೆಂದರೆ ಎಂಥವರಿರುವರೋ ಎಂದು ಅವರ ದರ್ಶನಾತುರರಾದರು. ಶ್ರೀಮಂತ ಛತ್ರಪತಿ ಶಾಹೂಮಹಾರಾಜ ಸಾಹೇಬ ಸಂಸ್ಥಾನ ಕರವೀರ ಅಥವಾ ಕೊಲ್ಹಾಪುರ ಇವರು ರಾ.ಬ||ರುದ್ರಗೌಡರವರ ದರ್ಶನವನ್ನಪೇಕ್ಷಿಸಿ ತಮ್ಮ ಹುಜೂರ ಚಿಟಣೀಸರಾದ

ಬಾಳಾಸಾಹೇಬ ಗಾಯಕವಾಡ ಇವರ ಮುಖಾಂತರ ಕಳೆದ ಎರಡು ವರ್ಷಗಳಿಂದಲೂ ನಿರೂಪ ಕಳಿಸುತ್ತಿದ್ದರು. ಸರಕಾರೀ ಕೆಲಸದ ತೊಂದರೆಯಲ್ಲಿ ಇವರಿಗೆ ತೀವ್ರ ಹೋಗುವ ಅನುಕೂಲವಾಗಲಿಲ್ಲ. ಸನ್ ೧೯೦೭ನೇ ಇಸವಿಯ ಜಾನೇವಾರಿ ತಿಂಗಳಲ್ಲಿ ಮಹಾರಾಜ ಸರಕಾರದವರು ಇವರಿಗೆ ಆದಷ್ಟು ತೀವ್ರವಾಗಿ ಕೊಲ್ಲಾಪುರಕ್ಕೆ ಬಂದು ದರ್ಶನಕೊಡುವ ಬಗ್ಗೆ ತಮ್ಮ ಇಲಾಖೆಯ ಡಿಸ್ಟ್ರಿಕ್ಟ ಆಫೀಸರರಾದ ರಾ.ಬ॥ವಿಠಲರಾವ ದೇಸಾಯಿ ಊರ್ಫ ಅಣ್ಣಾಸಾಹೇಬ ಎಂಬವರನ್ನು ಗೋಕಾಕ ತಾಲೂಕ ಲೋಳಸರ ಮುಕ್ಕಾಮಿಗೆ ಮುದ್ದಾಂ ನಿರೂಪಕೊಟ್ಟು ಕಳಿಸಿದರು. ಅದಕ್ಕೆ ರಾವಬಹದ್ದೂರರವರು, ಸರಕಾರೀ ಕೆಲಸದ ಅಡಚಣೆಯ ಬಗ್ಗೆ ಪ್ರಸ್ತುತಕ್ಕೆ ಬರುವ ಅನುಕೂಲವಾಗದ್ದಕ್ಕೆ ವ್ಯಸನಪಡಬೇಕಾಗಿದೆ; ಮುಂದೆ ಮೇ ತಿಂಗಳಲ್ಲಿ ಬಂದು ಭೆಟ್ಟಿಯಾಗುವೆನೆಂಬದಾಗಿ ಹೇಳಿ ಕಳುಹಿಸಿದರು. ಅದಕ್ಕೆ ಸರಿಯಾಗಿ ಮುಂದೆ ಮೇ ತಿಂಗಳಲ್ಲಿ ಪುನಃ ರಾ.ಬ॥ವಿಠ್ಠಲರಾವ ದೇಸಾಯಿಯವರು ಆದಷ್ಟು ಬೇಗನೆ ಬಂದು ಭೆಟ್ಟಿಯಾಗುವ ಬಗ್ಗೆ ಮಹಾರಾಜ ಛತ್ರಪತಿಯವರ ನಿರೂಪ ತೆಗೆದುಕೊಂಡು ಮುದ್ದಾಂ ಬೆಳಗಾವಿಗೆ ಬಂದರು. ಕಡೆಗೆ ಛತ್ರಪತಿಯವರು ತಮ್ಮ ದಿವಾಣಸಾಹೇಬರಾದ ರಾ.ಬ॥ರಘುನಾಥ ವೆಂಕಟೇಶ ಸಬ್ಬನೀಸ ಇವರ ಕಡೆಯಿಂದ ತಾರೀಖು ೨೩ನೇ ಜೂನ ಸನ್ ೧೯೦೭ನೇ ಇಸವಿಯ ದಿವಸ ಕೊಲ್ಲಾಪುರಕ್ಕೆ ಅವಶ್ಯ ಬಂದು ಭೆಟ್ಟಿಯನ್ನು ಕೊಡಬೇಕೆಂಬದಾಗಿ ಲೇಖನಿರೂಪ ಕಳುಹಿಸಿದರು. ಈ ನೇಮಿಸಿದ ದಿವಸಕ್ಕೆ ಹೋಗಲನುಕೂಲವಾಗದ್ದರಿಂದ ತಾರೀಖು ೨೭ನೇ ಜೂನ ಸನ್ ೧೯೦೭ನೇ ಇಸವಿ ಬುಧವಾರ ದಿವಸ ಭೆಟ್ಟಿಯಾಗುವಂತೆ ಗೊತ್ತುಪಡಿಸಿ, ರಾ.ಬ॥ದಿವಾಣಸಾಹೇಬರವರ ಕಡೆಯಿಂದ ಪುನಃ ಲೇಖೀ ನಿರೂಪ ಬಂತು. ಈ ಪ್ರಕಾರ ಒಂದೇ ಸವನೆ ಶ್ರೀಮಂತ ಛತ್ರಪತಿ ಮಹಾರಾಜರವರು ರಾ.ಬ॥ರವರ ದರ್ಶನಕ್ಕೆ ಉತ್ಕಂಠಿತರಾಗಿದ್ದರಿಂದ ಮೇಲಿಂದ ಇವರ ನಾಮಖ್ಯಾತಿಯು ಎಷ್ಟರಮಟ್ಟಿಗೆ ಇರುವದೆಂಬದು ಸಹಜವಾಗಿ ಊಹಿಸುವಂತಿದೆ.

ಆ ನಿಯಮಿತ ದಿವಸಕ್ಕೆ ಹೋಗುವ ಸಿದ್ಧತೆಯನ್ನಿಟ್ಟು, ರಾ.ಬ॥ರವರು ಪಾಕಶಾಸ್ತ್ರದಲ್ಲಿಯೂ, ಮಾತಿನಲ್ಲಿಯೂ, ಕಾರ್ಯದಲ್ಲಿಯೂ, ವ್ಯವಹಾರದಲ್ಲಿಯೂ ಜಾಗರೂಕನಾದ ತಮ್ಮ ಅಡಿಗೆಯ ಬಸಪ್ಪನನ್ನು[೨] ಶಿವರಾಯರೊಡನೆ ತಾರೀಖು ೨೫ನೇ ಜೂನ ದಿವಸ, ಎರಡು ದಿವಸ ಮುಂಚಿತವಾಗಿಯೇ ಸಾಮಾನು ಸರಂಜಾಮ ಸಹಿತವಾಗಿ ಕೊಲ್ಲಾಪುರಕ್ಕೆ ಕಳುಹಿಸಿದರು. ರಾ.ಬ॥ರವರ ಆಗಮನವನ್ನು ತಿಳಿದು ಶ್ರೀಮಂತ ಛತ್ರಪತಿ ಮಹಾರಾಜ ಸಾಹೇಬರು ಇವರ ವಾಸ್ತವ್ಯಕ್ಕೆ ಸರಿಯಾಗಿ ರಾಜೋಪಚಾರದ ಸರ್ವವ್ಯವಸ್ಥೆಯನ್ನು ಒಳ್ಳೇ ದಕ್ಷತೆಯಿಂದ ಇಟ್ಟಿದ್ದರು. ಮತ್ತು ಇವರು ಬರುವ ಮಾರ್ಗದಲ್ಲಿರುವ ತಮ್ಮ ಸಂಸ್ಥಾನದ ಸೀಮೆಯೊಳಗಿನ ಗ್ರಾಮಾಧಿಕಾರಿಗಳಿಗೂ, ತಾಲೂಕಾಧಿಪತಿಗಳಿಗೂ ಮಾರ್ಗದಲ್ಲಿ ರಾ.ಬ॥ರುದ್ರಗೌಡ ಸಾಹೇಬರವರನ್ನು ಮರ್ಯಾದೆಯಿಂದ ಕಂಡುಕೊಂಡು ಆದರಿಸಬೇಕೆಂದು ಮಹಾರಾಜರವರ ಹುಕುಮು ಆಗಿತ್ತು. ಇವರ ಬಿಡಾರಕ್ಕಾಗಿ ಮಹಾರಾಜ ಸಾಹೇಬರು ತಮ್ಮ ಜನಕ ತಂದೆಯಾದ ಶ್ರೀಮಂತ ಆಬಾಸಾಹೇಬ ಕಾಗಟಕರ ಇವರ ಬಂಗಲೆ (ಬಾವಡೆ ಬಂಗಲೆ)ಯಲ್ಲಿ ಸರ್ವಸಿದ್ಧತೆ ಮಾಡಿಸಿದ್ದರು. ಎಲ್ಲ ರೀತಿಯಿಂದಲೂ ಉತ್ತಮವಾದ ವ್ಯವಸ್ಥೆಯನ್ನಿಟ್ಟಿದ್ದರು. ರಾ.ಬ॥ರವರು ಬರುವ ದಿವಸ ಮುಂಜಾನೆ ಮಹಾರಾಜ ಸಾಹೇಬರು ಸ್ವತಃ ಬಾವಡೆ ಬಂಗಲೆಯ ವರೆಗೆ ಬಂದು, ಅಡಿಗೆಯ ಬಸಪ್ಪನನ್ನು ಎಲ್ಲವೂ ಅನುಕೂಲವಾಗಿದೆಯೋ ಎಂದು ಕೇಳಿ, ಸಾಹೇಬರ ಬರುವಿಕೆಯನ್ನು ವಿಚಾರಿಸಿ ರಾಜವಾಡೆಗೆ ಹೋಗಿದ್ದರು. ಸರ್ವವ್ಯವಸ್ಥೆಯು ಸರಿಯಾಗಿ ಆಗಿರುವದೋ ಇಲ್ಲವೋ ಎಂಬುದನ್ನು ತಾವು ಕಣ್ಮುಟ್ಟ ನೋಡಿ

---

೨. ಈ ಅಡಿಗೆಯವನ ಪೂರ್ಣ ಹೆಸರು: ಬಸಪ್ಪ, ಶಿವಬಸಪ್ಪ ಸೊಬರದ, ಸಾಕೀನ ಇನಾಮಗ್ರಾಮ ನರಸಾಪುರ, ತಾಲೂಕ ಬಾದಾಮಿ.

ಹೋಗಲಿಕ್ಕೆ ಮಹಾರಾಜ ಸಾಹೇಬರು ಮುದ್ದಾಂ ಬಂಗಲೆಯ ವರೆಗೆ ಬರಬೇಕಾದರೆ ರಾ.ಬ॥ರುದ್ರಗೌಡಸಾಹೇಬರ ಮೇಲೆ ಅವರ ಪ್ರೀತಿಯು ಎಷ್ಟು ಇದ್ದೀತೆಂಬುದನ್ನು ವಾಚಕರು ವಿಚಾರಿಸತಕ್ಕದ್ದು. ರಾ.ಬ॥ರವರು ತಾರೀಖು ೨೬ನೇ ಮಂಗಳವಾರ ದಿವಸ ಮುಂಜಾವಿನ ೧೦ ಘಂಟೆಯ ಉಗೆಬಂಡಿಯಲ್ಲಿ ಕೂತು ಹೊರಟರು. ಮೊದಲೇ ಸೂಚಿಸಿದ ಪ್ರಕಾರ ಶ್ರೀಮಂತ ಲಖಮಗೌಡ ಬಸವಪ್ರಭು ಸರದೇಸಾಯಿ ವಂಟಮುರಿಯವರೂ ಮತ್ತು ಇವರ ಚಿರಂಜೀವರಾದ ಶ್ರೀಮಂತ ಬಸವಪ್ರಭು ಊರ್ಫ ಬಾಬಾಸಾಹೇಬರವರೂ ಪಾಚ್ಛಾಪುರ ಸ್ಟೇಶನಕ್ಕೆ ಬಂದು ಕೂಡಿದರು. ಎಲ್ಲರೂ ಕೂಡಿ ಪ್ರಯಾಣವನ್ನು ಬೆಳಿಸಿ, ಮಿರ್ಜಿಯ ಸ್ಟೇಶನದಲ್ಲಿಳಿದು ಕೊಲ್ಲಾಪುರ ಸ್ಟೇಟ ರೇಲ್ವೆಯಿಂದ ಪ್ರಯಾಣ ಮಾಡಿದರು. ಶ್ರೀಮಂತ ವಂಟಮುರಿಯವರ ಕಾರಭಾರಿಯಾದ ಕೇಶವರಾವ ಸಂಕೇಶ್ವರ ಎಂಬವರು ಮುಂದಾಗಿಯೇ ಕೊಲ್ಲಾಪುರಕ್ಕೆ ಕಳಿಸಲ್ಪಟ್ಟಿದ್ದರು. ಮಾರ್ಗದಲ್ಲಿ ಹಾತಕಣಗಲೆ ಸ್ಟೇಶನಕ್ಕೆ ಆ ತಾಲೂಕಿನ ಮಾಮಲೇದಾರರೂ, ಫೌಜದಾರರೂ, ಪೋಲಿಸ ಪಾರ್ಟಿಯೂ ಬೇರೆ ಅಧಿಕಾರಿಗಳೂ ಬಂದಿದ್ದು, ಅಲ್ಲಿ ಈ ಮಹನೀಯದ್ವಯರಿಗೆ ಬಹು ಸಮಾರಂಭದ ಪಾನಸುಪಾರಿಯಾಯಿತು. ಸುಮಾರು ಒಂದು ಸಾವಿರದ ವರೆಗೆ ಜನರು ಕೂಡಿದ್ದರು.

ಕೊಲ್ಲಾಪುರ ಸೀಮೆಯ ನಿವಾಸಿಗಳು ರಾ.ಬ॥ರವರ ನಾಮಖ್ಯಾತಿಯನ್ನು ಕೇಳಿ ರುದ್ರಗೌಡರೆಂದರೆ ಎಂಥವರಿರುವರೋ ಎಂದು ನೋಡಬಂದಿದ್ದರು. ಆದರೆ ಜನಸಮೂಹವು ಕಿಷ್ಕಿಂಧವಾಗಿ ಕೂಡಿದ್ದರಿಂದ ದಟ್ಟಣಿ ಬಹಳವಾಗಿ ಉಸುರು ಕಟ್ಟುವಂತಾದದರಿಂದ ರಾ.ಬ॥ರವರು ಗಾಡಿಯನ್ನು ಬಿಟ್ಟು ಹೊರಗೆ ಬರಲಿಲ್ಲ. ಗಾಡಿಯು ಹೊರಟು ಹೋದೊಡನೆ ಎಲ್ಲರೂ ನಿರಾಶೆಯುಳ್ಳವರಾಗುವರೆಂದು ಬಗೆದು, ಕೂಡಿದ ಜನರಲ್ಲೊಬ್ಬನು ಧೈರ್ಯಮಾಡಿ "ಸಾಹೇಬ ಬಹದ್ದೂರವರೇ ಇಷ್ಟು ಜನಸಮೂಹವೆಲ್ಲವೂ ಕೇವಲ ತಮ್ಮನ್ನು ನೋಡಬೇಕೆಂಬ ಆಶೆಯಿಂದಲೇ ಧಾವಿಸಿಬಂದಿರುವದು. ತಾವು ಹೊರಗೆ ಬಾರದ್ದಕ್ಕೆ ಎಲ್ಲರೂ ನಿರಾಶೆಯನ್ನು ಹೊಂದಿರುವರು, ದಯವಿಟ್ಟು ತುಸು ಹೊರಗೆ ಬರುವ ಕೃಪೆಯಾಗಬೇಕೆಂದು" ಒದರಿದನು. ಅದನ್ನು ಕೇಳುತ್ತಲೆ ರಾ.ಬ॥ರವರು ಗಾಡಿಯ ಹೊರಗೆ ಸ್ವಲ್ಪ ಬಂದು ನಿಂತರು, ದರ್ಶನಮಾತ್ರದಿಂದ ಎಲ್ಲರೂ ಸಂತುಷ್ಟರಾದರು. ಈ ಮಹನೀಯರಿಗಾಗಿ ಸ್ತ್ರೀಯರು ಆರತಿಗಳನ್ನು ಸಹ ತೆಗೆದುಕೊಂಡು ಬಂದಿದ್ದರು; ಅಂದಮೇಲೆ ಇವರು ಎಷ್ಟು ಲೋಕಪೂಜ್ಯರಾಗಿರುವರೆಂಬದು ತಾನಾಗಿ ವ್ಯಕ್ತವಾಗುತ್ತದೆ. ಹಾತಕಣಗಲೆ ಸ್ಟೇಶನದ ಪಾನಸುಪಾರಿಯನ್ನು ಸ್ವೀಕರಿಸಿ ಸಂತುಷ್ಟರಾಗಿ ಅವರ ಆಭಾರಮನ್ನಿಸಿ, ಕೂಡಲೆ ಕೊಲ್ಲಾಪುರ ಸ್ಟೇಶನಕ್ಕೆ ಬಂದರು. ಇವರ ಸ್ವಾಗತಕ್ಕಾಗಿ ಕೊಲ್ಲಾಪುರ ಸ್ಟೇಶನವು ಶೃಂಗರಿಸಲ್ಪಟ್ಟಿತ್ತು, ಜನಸಮೂಹವು ಕಿಷ್ಕಿಂಧವಾಗಿ ಕೂಡಿತ್ತು; ಇವರ ಆಗಮನವನ್ನು ಕಂಡೊಡನೆ ಮಂಗಳವಾದ್ಯಗಳು ಮೊಳಗಿದವು; ಸಂಸ್ಥಾನದ ಸರದಾರರೂ, ದೊಡ್ಡ ದೊಡ್ಡ ಅಧಿಕಾರಿಗಳೂ, ಪುರಮುಖಂಡರೂ, ಕೊಲ್ಲಾಪುರ ವೀರಶೈವ ಪ್ರಮುಖರಾದ ವೀರಬಸವ ಶ್ರೇಷ್ಠ ಬಿ.ಎ. ಯವರೂ ಇವರ ದರ್ಶನಾತುರರಾದ ಇತರ ಜನಸಮೂಹವೂ ವಿಶೇಷವಾಗಿ ಕೂಡಿದ್ದರು. ಹಾರತುರಾಯಿಗಳಿಂದ ಸ್ವಾಗತ ಸಮಾರಂಭವಾಗಿ ದಿವ್ಯಾಶ್ವಗಳಿಂದಲಂಕೃತವಾದ ರಥಗಳನ್ನೇರಿ ಸ್ಟೇಶನದಿಂದ ಹೊರಟು ಬಂಗಲೆಗೆ ಹೋದರು. ಸಾರಾಂಶ, ಇಲಾಖಾಧೀಶರಾದ ನಾಮದಾರ ಗವರ್ನರ ಸಾಹೇಬರು ಬಂದಾಗ್ಗೆ ಯಾವ ಪ್ರಕಾರದ ವ್ಯವಸ್ಥೆಯನ್ನೂ, ಸಮಾರಂಭವನ್ನೂ ಮಾಡುವರೋ ಅದೇ ಪ್ರಕಾರವಾಗಿ ಸರ್ವಸಮಾರಂಭವು ಸಾಂಗವಾಯಿತು.

ತಾರೀಖು ೨೭ನೇ ದಿವಸ ಸಾಯಂಕಾಲದ ೩-೪ ಘಂಟೆಗಳ ಮಧ್ಯಕಾಲದಲ್ಲಿ ಹೊಸ ರಾಜವಾಡೆಯಲ್ಲಿ ಮಹಾರಾಜ ಸರಕಾರದವರ ಮತ್ತು ರಾ.ಬ॥ರುದ್ರಗೌಡಸಾಹೇಬರ ಹಾಗೂ ಶ್ರೀಮಂತ ವಂಟಮುರಿ ಸರದೇಸಾಯಿಯವರ ಭೆಟ್ಟಿಯಾಯಿತು. ಮಹಾರಾಜ ಸರಕಾರದವರು ಇವರ ಭೆಟ್ಟಿಯಿಂದ ಬಹಳೇ ಸಂತೋಷವನ್ನು ಹೊಂದಿದರು. ಮಹಾರಾಜ ಸಾಹೇಬರು ರಾ.ಬ॥ರುದ್ರಗೌಡ ಸಾಹೇಬರನ್ನು ಕುರಿತು "ರಾವಬಹದ್ದೂರವರೇ!

ತಮ್ಮ ಕರ್ತವ್ಯ ನಿಷ್ಠತೆಯಿಂದಲೂ, ಕಾರ್ಯದಕ್ಷತೆಯಿಂದಲೂ, ನ್ಯಾಯವಂತಿಕೆಯಿಂದಲೂ, ಅಸಾಧಾರಣ ಬುದ್ಧಿಚಾತುರ್ಯಗಳಿಂದಲೂ, ದುಷ್ಟದಲನ ಶಿಷ್ಟಪಾಲನ ದಿಂದಲೂ, ತಮ್ಮ ಮೇಲಿರುವ ಬ್ರಿಟಿಶ ಸರಕಾರದ ವಿಶ್ವಾಸವನ್ನೂ, ಪ್ರೇಮವನ್ನೂ ಕರ್ಣೋಪಕರ್ಣವಾಗಿ ಕೇಳಿ, ಕಾರ್ಯಗಳಿಂದ ತಿಳಿದು ತಮ್ಮ ದರ್ಶನಕ್ಕೆ ನನ್ನ ಮನಸು ಬಹಳೇ ಆತುರಗೊಂಡಿತ್ತು. ಅದು ಈ ಹೊತ್ತು ಸಫಲವಾದದ್ದಕ್ಕೆ ಸಂತೋಷಗೊಳ್ಳುತ್ತೇನೆ. ನಿಮ್ಮ ದರ್ಶನದೊಂದಿಗೆ ಶ್ರೀಮಂತ ವಂಟಮುರಿ ಸರದೇಸಾಯಿಯವರ ಭೆಟ್ಟಿಯಾದದ್ದಕ್ಕೆ ಇನ್ನಷ್ಟು ಆನಂದ ಪಡುತ್ತೇನೆ. ನಿಮ್ಮ ವೀರಶೈವಮತದ ಮೇಲೂ ವೀರಶೈವಪ್ರಜೆಗಳ ಮೇಲೂ ನಮ್ಮ ಪೂಜ್ಯಭಾವವಿರುವದು. ನಿಮ್ಮ ಜನರು ಬಹು ಸಾತ್ವಿಕರು, ಕೃತಜ್ಞರು, ರಾಜನಿಷ್ಠರು ಎಂದು ನನಗೆ ಅನುಭವಿಸಿದ್ಧವಾಗಿರುವದು. ಬ್ರಾಹ್ಮಣಜಾತಿಯ ಜನರು ಎಷ್ಟು ಕೆಟ್ಟವರೂ, ಸ್ವಾರ್ಥಪರಾಯಣರೂ, ಅವಿಶ್ವಾಸಿಕರೂ ಎಂಬುದು ನನ್ನಕಿಂತಲೂ ಹೆಚ್ಚು ಅನುಭವವು ತಮಗೆ ಆಗಿರಬಹುದು; ಅವರಲ್ಲಿ ನನಗೆ ಎಳ್ಳಷ್ಟು ನಂಬಿಗೆಯಿಲ್ಲ. ಅವರಲ್ಲಿಯೂ ಎಷ್ಟೋ ಜನರು ಸಾತ್ವಿಕರಿರಬಹುದು. ವೀರಶೈವರಲ್ಲಿ ಎಷ್ಟೋ ಕೆಟ್ಟವರೂ ಇರಬಹುದು; ಆದರೆ ಬ್ರಾಹ್ಮಣರಲ್ಲಿ ಬಹುಶಃ ಕೆಟ್ಟವರೇ ಬಹಳ. ಸಾತ್ವಿಕ ಬ್ರಾಹ್ಮಣರೂ ದುಷ್ಟ ವೀರಶೈವನೂ ಸರಿಯಾಗಬಹುದು; ಇಂತಹ ಪ್ರಜಾಘಾತಕವಾದ ಬ್ರಾಹ್ಮಣರ ವರ್ತನವು ನನಗೆ ತಿಲಮಾತ್ರ ಸೇರುವದಿಲ್ಲ. ಸಲಿಗೆಯನ್ನು ಕೊಟ್ಟರೆ ಆ ಜನರು ತಲೆಯ ಮೇಲೆ ಬಂದು ಕೂಡ್ರುತ್ತಾರೆ; ಭಯವನ್ನು ತೋರಿಸಿದರೆ ಕಾಲಮೇಲೆ ಬಂದು ಬೀಳುತ್ತಾರೆ. ನಮ್ಮ 'ವೇದೋಕ್ತ ಪ್ರಕರಣ'ದಲ್ಲಿ ಅವರ ಉದ್ದಾಮತನಕ್ಕೆ ನನಗೆ ತಲೆ ಚಿಟ್ಟಿಡಿದು, ಅವರ ಸಹವಾಸವೇ ಸಲ್ಲದೆಂಬದಾಗಿ ಅನ್ನಿಸಿಹೋಗಿರುವದು. ಇವರ ಪ್ರಸ್ತಾಪವು ಇಷ್ಟಕ್ಕೆ ಸಾಕು.

ವಿದ್ಯೆಯಲ್ಲಿ ಹಿಂದುಳಿದ ನಿಮ್ಮ ಮತವನ್ನು ಮುಂದೆ ತರುವದಕ್ಕಾಗಿ ನೀವು ಆರಂಭದಿಂದಲೂ ಪ್ರಯತ್ನಿಸಿ, ಪ್ರಚಂಡವಾದ ಲಿಂಗಾಯತ ಫಂಡನ್ನೇರ್ಪಡಿಸಿ ಈವರೆಗೂ ಅಹೋರಾತ್ರಿ ಮತಸೇವಯಲ್ಲಿಯೇ ಬುದ್ಧಿಯನ್ನೂ, ಆಯುಷ್ಯವನ್ನೂ ವ್ಯಯಮಾಡುತ್ತಿರುವ ನಿಮ್ಮ ಕಾರ್ಯನಿರ್ವಾಹಕ ಶಕ್ತಿಯು ಅಗಾಧವಾಗಿರುತ್ತದೆ. ತಮ್ಮಂಥ ನ್ಯಾಯನಿಷ್ಠ ನಿಷ್ಪೃಹಿಗಳಾದ ಮಹನೀಯರ ಮೇಲೆ ನನ್ನ ಪ್ರೇಮವು ಅದಿಕವಾಗಿರುವದು. ನಿಮ್ಮ ಮತದ ವಿದ್ಯಾರ್ಜನೆಗಾಗಿ ನಮ್ಮ ಸಂಸ್ಥಾನ ಆಶ್ರಯವು ಕೊಡಲ್ಪಡುವದು, ನಿಮ್ಮ ಮತಾಭಿವೃದ್ಧಿಗೆ ನಮ್ಮಿಂದ ಆಗ ಬೇಕಾಗಿದ್ದ ಸಹಾಯವು ಮಾಡಲ್ಪಡುವದು" ಎಂದು ಪ್ರೀತಿಯಿಂದಲೂ, ಉತ್ಸಾಹದಿಂದಲೂ ಮಹಾರಾಜ ಸರಕಾರದವರು ಮಾತಾಡಿದ್ದಕ್ಕೆ ರಾ.ಬ॥ರವರು ಆನಂದಿತರಾಗಿ "ನಾನು ಹೆಚ್ಚಿನದೇನು ಮಾಡಿಲ್ಲ. ಮಾಡತಕ್ಕ ಕರ್ತವ್ಯವನ್ನು ಕೈಲಾದಮಟ್ಟಿಗೆ ಜರುಗಿಸಿರುವೆನು. ಬ್ರಾಹ್ಮಣರ ಸ್ವಭಾವದ ವಿಷಯಕ್ಕೆ ತಾವು ಏನು ಹೇಳಿದಿರೋ ಅದು ಅಕ್ಷರಶಃ ನಿಜವಾಗಿರುತ್ತದೆ. ಇದರ ಅನುಭವವು ನನಗೆ ೩೩ ವರ್ಷಗಳಿಂದಲೂ ಆಗಹತ್ತಿರುವದು. ತಮಗಾದರೋ ಈಗೀಗ ಆಗಿರಬಹುದು. ನಮ್ಮ ಮತೋದ್ಧಾರಕ್ಕಾಗಿ ತಮ್ಮ ಸಂಸ್ಥಾನದಲ್ಲಿ ಸದಾಶ್ರಯವು ದೊರೆವವೆಂಬದನ್ನು ಕೇಳಿ ನಮಗೆ ಪರಮಾನಂದವಾಗಿರುತ್ತದೆ. ಶ್ರೀಮಂತ ವಂಟಮುರಿ ಸರದೇಸಾಯಿಯವರಾದರೂ ಮತೋನ್ನತಿಗಾಗಿ ಬಹಳೇ ಸಹಾಯ ಮಾಡಿರುತ್ತಾರೆ. ಶ್ರೀಮಂತ ಸಿರಸಂಗಿಯ ಸರದೇಸಾಯರು ಇದ್ದಷ್ಟು ದಿವಸ ಮತಸೇವೆಯನ್ನು ಮಾಡಿ, ಕಟ್ಟಕಡೆಗೆ ತಮ್ಮ ಸಂಸ್ಥಾನವನ್ನೇ ಲಿಂಗಾಯತ ಫಂಡಿಗೆ ಸಮರ್ಪಿಸಿ, ಕೈಲಾಸವಾಸಿಯಾದ ಸಂಗತಿಯು ತಮಗೆ ಗೊತ್ತಾಗಿರಬಹುದು. ಈ ಹೊತ್ತು ನಮ್ಮ ನಿಮ್ಮ ನಡುವೆ ಆದ ಸಮಾಗಮ ಸುಖದಲ್ಲಿ ನಮ್ಮ ಶ್ರೀಮಂತ ಸಿರಸಂಗಿಯ ಲಿಂಗಪ್ಪ ಸರದೇಸಾಯಿಯು ಇರದೆ ಹೋದುದಕ್ಕೆ ವ್ಯಸನವಾಗುತ್ತದೆ. ಒಟ್ಟಿಗೆ ತಮ್ಮ ದರ್ಶನಲಾಭದಿಂದ ಈ ಹೊತ್ತು ನಾವು ಧನ್ಯರಾದೆವು" ಎಂದು ಹೇಳಿ, ವೇಳೆಗೆ ಸರಿಯಾಗಿ ನಿರೂಪ ತೆಗೆದುಕೊಂಡು ಬಿಡಾರಕ್ಕೆ ದಯಮಾಡಿಸಿದರು.

ಈ ಉಭಯ ಮಹನೀಯರ ಸಂಚಾರಕ್ಕಾಗಿ ದಿವ್ಯಾಶ್ವಗಳಿಂದೊಡಗೂಡಿದ ಎರಡು ರಥಗಳನ್ನೂ, ಬಹು ಮೌಲ್ಯವುಳ್ಳ ಎರಡು ಮೋಟಾರಕಾರಗಳನ್ನೂ ಮಹಾರಾಜ ಸರಕಾರದವರು ಇವರ ಬಂಗಲೆಯ ಮುಂದೆ ಬಿಡಿಸಿದ್ದಲ್ಲದೆ, ಹೇಳಿದ ಅಪ್ಪಣೆಯನ್ನು ತಕ್ಷಣವೇ ಪಾಲಿಸುವ ಬಹುಮಂದಿ ಶಿಪಾಯರನ್ನೂ ಇವರ ಸ್ವಾಧೀನ ಮಾಡಿಬಿಟ್ಟಿದ್ದರು. ರಾಜಾಶ್ರಯವಾದರೆ ಯಾವದಕ್ಕೇನು ಕೊರತೆ? ತಾ. ೨೮ನೇ ದಿವಸ ರಾ.ಬ॥ರವರೂ ಶ್ರೀಮಂತ ಸರದೇಸಾಯಿಯವರೂ ರಥಾರೂಢರಾಗಿ ಶ್ರೀ ಅಂಬಾಬಾಯಿಯ ದೇವಾಲಯವನ್ನೂ, ಮಹತ್ತಾದ ರಂಕಾಳಿಯ ಕೆರೆಯನ್ನೂ, ರಾಜಾರಾಮ ಕಾಲೇಜವನ್ನೂ, ಇನ್ನೂ ಕೆಲವು ನೋಡತಕ್ಕ ಸ್ಥಳಗಳನ್ನೂ ನೋಡಿಬಂದರು. ಮತ್ತು ಈ ಮಹನೀಯದ್ವಯರು ಮಧ್ಯಾಹ್ನದ ಮೇಲೆ ಮಹಾರಾಜ ಸರಕಾರದವರ ಮೋಟರ ಗಾಡಿಗಳ ಮೇಲೆ ವಿರಾಜಮಾನರಾಗಿ ಪನ್ನಾಳಗಡವನ್ನು ನೋಡಿ ಬಂದರು. ತಾರೀಖು ೨೯ನೇ ಮುಂಜಾನೆ ಧನದಾರ್ಢ್ಯರಾದ ವೀರಶೈವ ಮುಖಂಡರೊಡನೆ ಮತ್ತು ವೀರಶೈವ ಪದವೀಧರರೊಡನೆ ಕೊಲ್ಹಾಪುರ ಸಂಸ್ಥಾನದಲ್ಲಿ ವೀರಶೈವ ವಿದ್ಯಾರ್ಥಿಗಳ ವಿದ್ಯಾರ್ಜನೆಗಾಗಿ ಒಂದು ಬೋರ್ಡಿಂಗ್ ಹೌಸ ಸ್ಥಾಪನಾ ಮಾಡಬೇಕೆಂದು ಆಪ್ತಾಲೋಚನೆ ನಡಿಸಿ, ಅದಕ್ಕಾಗಿ ಬೇರೊಂದು ಫಂಡನ್ನು ಕೂಡಿಸಿದರು. ಕ್ಷಣಮಾತ್ರದಲ್ಲಿ ಮೂವತ್ತು ಸಾವಿರ (೩೦,೦೦೦) ರೂಪಾಯಿಗಳ ವರ್ಗಣಿಯು ಕೂಡಿತು. ವರ್ಗಣೀ ಕೊಟ್ಟ ಮಹನೀಯರ ಹೆಸರು ಕೆಳಗೆ ಬರೆದಿರುತ್ತದೆ.

ರೂ. ೧೨೦೦೦	ಶ್ರೀಮಂತ ವಂಟಮುರಿ ಸರದೇಸಾಯಿಯವರು.
ರೂ. ೬೦೦೦	ರಾ.ಸಾ॥ವಾರದ ಮಲ್ಲಪ್ಪಣ್ಣನವರು (ಸೊಲ್ಲಾಪುರ)[೧]
ರೂ. ೭೦೦೦	ಕುರಲಿಯ ಸಾತಪ್ಪಾ ಊರ್ಫ ಅಪ್ಪಯ್ಯಪ್ಪ ಸಿಂತ್ರೆಯವರು
ರೂ. ೫೦೦೦	ಕೊಲ್ಹಾಪುರದ ವೀರಶೈವ ಮತಾಭಿಮಾನಿಗಳು.
ರೂ. ೩೦೦೦೦	ಒಟ್ಟು.

ತಾರೀಖು ೨೯ನೇ ಮಧ್ಯಾಹ್ನದ ಮೇಲೆ ಪುನಃ ಮಹಾರಾಜ ಸರಕಾರದವರ ಭೆಟ್ಟಿಯಾಯಿತು. ಮಹಾರಾಜರ ಹತ್ತರ ದಿವಾಣಿ ಸಾಹೇಬರೂ, ಬೇರೆ ಅಧಿಕಾರಿಗಳೂ, ಇತರ ಜನರೂ ಕೂಡಿ ಜನಸಮೂಹವು ಬಹಳಿತ್ತು. ಪ್ರಥಮ ದರ್ಶನದಲ್ಲಿಯೂ ಜನಸಮ್ಮರ್ಧವಿದ್ದದರಿಂದ ವಿಶೇಷ ಮಾತು ಕಥೆಗಳಿಗೆ ಅವಕಾಶವಿರಲಿಲ್ಲ. ಈ ಸಾರೆಯಾದರೂ ಜನಸಮೂಹವು ಇತ್ತೇ ಇತ್ತು. ಜನಸಮೂಹವಿದ್ದರೆ ಅಂತರಂಗದ ಆಲೋಚನಕ್ಕೆ ಅವಕಾಶವಾಗುವದಿಲ್ಲೆಂದು ತಿಳಿದು ಶ್ರೀಮಂತ ವಂಟಮುರಿ ಸರದೇಸಾಯಿಯವರು ಮಹಾರಾಜ ಸರಕಾರದವರ ಏಕಾಂತ ದರ್ಶನಕ್ಕೆ ಯಾವ ಉಪಾಯವನ್ನೂ ಕಾಣದೆ, ಮುಂಜಾನೆಯ ವಿಹಾರದಲ್ಲಿ ರಾ.ಬ॥ರುದ್ರಗೌಡ ಸಾಹೇಬರೊಡನೆ ವಿನೋದದ ಮೇಲೆ ಹಾಕಿ "ರಾವಬಹದ್ದೂರವರೇ! ತಾವು ಅನಂತ ಘನಕಾರ್ಯಗಳನ್ನು ಜರುಗಿಸಿ ಹೆಸರುವಾಸಿಯಾಗಿರುವಿರಿ; ಆದರೆ ಮಧ್ಯಾಹ್ನದ ಮೇಲೆ ಭೆಟ್ಟಿಗೆ ಹೋದಾಗ್ಗೆ ನಮ್ಮ ಏಕಾಂತದ ಮಾತುಗಳಿಗೆ ಅವಕಾಶವುಂಟಾಗುವಂತೆ ಅಲ್ಲಿಯ ಜನಸಮೂಹವನ್ನೆಲ್ಲ ಹೊರಗೆ ಹಾಕುವಂತೆ ಮಾಡಿದರೆ ಮಾತ್ರ ತಮ್ಮ ಚತುರೋಪಾಯವು ನಿಜವೆಂದು ತಿಳಿಯುತ್ತೇನೆ" ಎಂದು ಹೇಳಿದ್ದಕ್ಕೆ ರಾ.ಬ॥ರವರು ಮಂದಸ್ಮಿತರಾಗಿ "ದೇಸಾಯರೇ? ಹಾಗೆ ಮಾಡುವದು ಬಲು ಕಠಿಣವಾದ ಕೆಲಸವು. ಸಮಯವು ಹೇಗೆ ಬರುತ್ತದೋ ನೋಡೋಣ"ವೆಂದರು. ಭೆಟ್ಟಿಯ ಕಾಲಕ್ಕೆ ಶ್ರೀಮಂತರ ತರ್ಕದಂತೆ ಜನರ ದಟ್ಟಣೆಯು ವಿಶೇಷವಾಗಿತ್ತು.

---

೧. ರಾ॥ಸಾ॥ವಾರದ ಮಲ್ಲಪ್ಪನವರು ಕಾರ್ಯಬಾಹುಳ್ಯದಿಂದ ಕೊಲ್ಹಾಪುರಕ್ಕೆ ಬರುವುದಾಗಲಿಲ್ಲ. ಅವರು ಬಾರದಿದ್ದರೂ ಅವರ ಹೆಸರಿನಿಂದ ೬೦೦೦ ರೂ ವರ್ಗಣಿ ಹಾಕಿ, ಅವರಿಗೆ ತಿಳಿಸಲು, ಮಲ್ಲಪ್ಪನವರು ಸಂತೋಷದಿಂದ ಒಡಂಬಟ್ಟರು.

ಭೆಟ್ಟಿಯಾಗಿ ಕೆಲವು ಮಾತು ಕಥೆಗಳು ನಡೆದು ವೇಳೆ ಬಹಳಾಗಿ ಮಹಾರಾಜ ಸರಕಾರದವರು ಏಳತೊಡಗಲು, ಕೂಡಲೆ ರಾವಬಹದ್ದೂರರವರು ಮಹಾರಾಜರನ್ನು ಕುರಿತು"ನಮ್ಮ ಅಂತರಂಗದ ಕೆಲವು ಮಾತುಗಳಿರುತ್ತಾವಾದ ಕಾರಣ ದಯವಿಟ್ಟು ಈ ಜನರನ್ನೆಲ್ಲ ತುಸು ಹೊತ್ತು ದೂರ ಕಳಿಸಿದರೆ ನೆಟ್ಟಗಾಗುವ"ದೆಂಬ ಮಾತನ್ನು ಕೇಳಕೇಳುವದರೊಳಗೆ ಮಹಾರಾಜರು"ಇಲ್ಲಿ ಇವರೀರ್ವರ ಹೊರತು ಯಾರೂ ಇರಲಿಕ್ಕಾಗದು, ಎಲ್ಲರೂ ಹೊರಗೆ ಹೋಗಬೇಕು" ಎಂದು ಅಪ್ಪಣೆಯನ್ನು ಕೊಟ್ಟಾಕ್ಷಣವೇ ಆ ಸ್ಥಾನದಲ್ಲಿ ಈ ಮೂವರು ಮಹನೀಯರೇ ಉಳಿದರು. ದಿವಾಣ ಸಾಹೇಬರನ್ನು ಮೊದಲು ಮಾಡಿ ಎಲ್ಲರೂ ಹೊರಟಿದ್ದು ಹೋಗಬೇಕಾಯಿತು. ಶ್ರೀಮಂತ ಸರದೇಸಾಯರು ರಾ.ಬ॥ರುದ್ರಗೌಡರ ಜಾಣ್ಮೆಗೆ ತಲೆದೂಗಿ, ವಿಚಿತ್ರವಾದ ಕುಶಲತ್ವವೂ, ಅಸಾಧಾರಣ ಬುದ್ಧಿಸಾಮರ್ಥ್ಯವೂ, ಚತುರೋಪಾಯಗಳೂ, ರಾಜ ರಾಜರನ್ನು ಕೂಡ ಅಧೀನರನ್ನಾಗಿ ಮಾಡುತ್ತವೆಂಬ ಮಾತನ್ನು ಮನಗಾಣುವವರಾದರು.

ಕೊಲ್ಲಾಪುರದಲ್ಲಿ ಲಿಂಗಾಯತ ಬೋರ್ಡಿಂಗ ಹೌಸ ಸ್ಥಾಪನೆ

ಬಳಿಕ ಇವರೀರ್ವರು, ಮಹಾರಾಜ ಸಾಹೇಬರನ್ನು ಕುರಿತು "ಮಹಾರಾಜರೇ! ನಾವು ತಮ್ಮ ಸನ್ನಿಧಿಗೆ ಬಂದು ಭೆಟ್ಟಿಯಾಗಿ ಹೋದುದಿಷ್ಟೇ ಮಾತ್ರವಾಗದೆ, ಮಹಾರಾಜ ಸರಕಾರದವರ ದರ್ಶನಲಾಭದ ಸ್ಮಾರಕವಾಗಿಯೂ, ನಮ್ಮ ವೀರಶೈವಮತದ ವಿದ್ಯಾಭಿವೃದ್ಧಿಗಾಗಿಯೂ ಒಂದು ಕಾರ್ಯವನ್ನು ನೆರವೇರಿಸಬೇಕೆಂದೆಣಿಸಿ ನಮ್ಮ ವೀರಶೈವ ಮಹನೀಯರಲ್ಲಿ ಈ ಹೊತ್ತು ೩೦,೦೦೦ ರೂಪಾಯಿಯ ಫಂಡು ಕೂಡಿಸಲ್ಪಟ್ಟಿದೆ. ಮುಂಬಯಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಮತ್ತು ಪುಣೆ ಮುಂಬಯಿಗಳ ವಿಶ್ವವಿದ್ಯಾಲಯಗಳಲ್ಲಿ ಲಿಂಗಾಯತ ಫಂಡಿನ ವೇತನೆಯಿಂದ ವೀರಶೈವ ವಿದ್ಯಾರ್ಥಿಗಳು ಆಂಗ್ಲ ವಿದ್ಯಾವ್ಯಾಸಂಗವನ್ನು ಮಾಡಲಿಕ್ಕೆ ಸುಲಭಸಾಧ್ಯವಾಗಿರುವಂತೆ, ತಮ್ಮ ಕೊಲ್ಲಾಪುರ ಸಂಸ್ಥಾನದಲ್ಲಿಯೂ ಕೂಡ ನಮ್ಮ ವೀರಶೈವ ವಿದ್ಯಾರ್ಥಿಗಳು ವಿದ್ಯಾವ್ಯಾಸಂಗಕ್ಕೆ ನಿಲ್ಲಲನುಕೂಲವಾಗಬೇಕೆಂದು ಇಲ್ಲಿಯೊಂದು ಬೋರ್ಡಿಂಗ ಹೌಸನ್ನು ಸಿದ್ಧಪಡಿಸುವಂತೆ ಆಲೋಚಿಸಿ, ಈ ವರ್ಗಣಿಯು ಕೂಡಿಸಲ್ಪಟ್ಟಿದೆ. ಆ ಬೋರ್ಡಿಂಗಿನಿಂದ ಅಶನವಸನಾದಿಗಳ ವ್ಯವಸ್ಥೆಯಾದರೆ ವಿದ್ಯಾರ್ಥಿಗಳು ಬಹುಬೇಗ ಕೂಡಿ ವಿದ್ಯಾಭಿವೃದ್ಧಿಯಾಗಬಹುದು" ಎಂದು ಹೇಳಲು ಮಹಾರಾಜರು ಸಂತುಷ್ಟರಾಗಿ "ನಮ್ಮ ಸಂಸ್ಥಾನದಲ್ಲಿ ವೀರಶೈವ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ ನೀವು ಇಷ್ಟೊಂದು ಉತ್ಕಟೇಚ್ಛೆಯಿಂದ ಪ್ರವರ್ತಿಸಿರುವದನ್ನು ಕೇಳಲಿಕ್ಕೆ ನನಗೆ ಮಹದಾನಂದವಾಗುತ್ತದೆ. ನಿಮ್ಮ ಅಭಿಲಾಷೆಯೂ, ಕಾರ್ಯಗೌರವವೂ ಸ್ತುತ್ಯವಾಗಿರುತ್ತದೆ. ನೀವು ಲಿಂಗಾಯತ ಬೋರ್ಡಿಂಗ ಹೌಸನ್ನು ಸ್ಥಾಪಿಸುವದಾದರೆ ನಮ್ಮ ಸಂಸ್ಥಾನದ ಒಂದು ಭವ್ಯವಾದ ಬಂಗಲೆಯನ್ನು ಅದಕ್ಕಾಗಿ ಕೊಡುವೆವು. ಮತ್ತು ನಮ್ಮ ಸಂಸ್ಥಾನದ ಬ್ಯಾಂಕಿನಲ್ಲಿ ನಿಮ್ಮ ವರ್ಗಣಿಯ ಧನರಾಶಿಯನ್ನು ಇಡುವದಾದರೆ ಆ ಧನಕ್ಕಾಗಿ, ನಮ್ಮ ಸಂಸ್ಥಾನದ ನೇಮಕವಾದ ಪ್ರಮಾಣಕ್ಕಿಂತಲೂ, ಹೆಚ್ಚಿನ ದರದಿಂದ ಬಡ್ಡಿಯು ದೊರೆಯುವಂತೆ ಏರ್ಪಾಡು ಮಾಡಲ್ಪಡುವದು. ಮತ್ತು ಲಿಂಗಾಯತ ಬೋರ್ಡಿಂಗ ಹೌಸಿನಿಂದಾಗುವ ನಿಮ್ಮ ವೀರಶೈವ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ ನಮ್ಮ ಸಂಸ್ಥಾನದಿಂದ ಪ್ರತಿವರ್ಷ ರೋಖ ಅಯ್ದುಸಾವಿರ (೫೦೦೦) ರೂಪಾಯಿಗಳ ವೇತನೆಯು ಕೊಡಲ್ಪಡುವದು. ಮತ್ತು ಅವಶ್ಯವಾದಲ್ಲಿ ಸಮಯಾನುಸಾರವಾಗಿ ರಾಜಾಶ್ರಯವು ದೊರೆಯಬಹುದು" ಎಂದು ಹೇಳಿದರು. ಮಹಾರಾಜ ಸರಕಾರದವರು ನಮ್ಮ ವೀರಶೈವಮತದ ಮೇಲೆ ಪೂಜ್ಯಭಾವವನ್ನಿಟ್ಟು ಸಂತೋಷದಿಂದ ಹೇಳಿದ ಸತ್ಯವಾಣಿಯನ್ನು ಕೇಳಿ ಉಭಯ ಮಹನೀಯರೂ ಆನಂದಿತರಾಗಿ" ಮಹಾರಾಜ ಛತ್ರಪತಿಯವರೇ! ತಾವು ನಮ್ಮನ್ನು ದಯವಿಟ್ಟು ಕರೆಯಿಸಿ ಮಾಡಿದ ರಾಜೋಪಚಾರಕ್ಕೂ, ನಮ್ಮ ವೀರಶೈವಮತದ

ಮೇಲಿರುವ ತಮ್ಮ ಪೂಜ್ಯಭಾವಕ್ಕೂ, ಅಂತಃಕರಣಕ್ಕೂ ನಾವೆಲ್ಲರು ತಮ್ಮ ಆಭಾರಿಯಾಗಿರುವೆವು" ಎಂದು ಸಂತೋಷದಿಂದ ಹೇಳಿ, ಊರಿಗೆ ಹೋಗಲು ನಿರೋಪವನ್ನು ಕೇಳಿಕೊಳ್ಳಲಾಗಿ, ಮಹಾರಾಜಸಾಹೇಬರು "ಇನ್ನೂ ಒಂದೆರಡು ದಿವಸ ಇದ್ದರೆ ಸಂತೋಷವಾಗುತ್ತದೆಂ"ದು ಅಂದದ್ದಕ್ಕೆ "ಅವಕಾಶವಿಲ್ಲದ್ದರಿಂದ ವ್ಯಸನಪಡಬೇಕಾಗಿದೆಯೆಂ"ದು ಉಭಯ ಮಹನೀಯರೂ ಉತ್ತರಕೊಟ್ಟರು; ಆದರೂ ಮಹಾರಾಜ ಸರಕಾರದವರು ಪ್ರೇಮಾಗ್ರಹದಿಂದ ನಿಲ್ಲಿಸಿಕೊಂಡು, ಅದೇ ದಿವಸ ರಾತ್ರಿ ಮುದ್ದಾಮ ಇವರ ಸಂತೋಷಕ್ಕಾಗಿ ಸುಪ್ರಸಿದ್ಧ ಶಾರದಾ ನಾಟಕದ ಪ್ರಯೋಗವನ್ನು ಮಾಡಿಸಿದರು. ನಾಟಕ ನೋಡಲಿಕ್ಕೆ ಇವರನ್ನೊಡಗೊಂಡು ಮಹಾರಾಜ ಛತ್ರಪತಿಯವರೂ, ರಾ.ಬ॥ದಿವಾಣಸಾಹೇಬರೂ ಮೊದಲಾಗಿ ಸಂಸ್ಥಾನದ ಯಾವತ್ತೂ ಅಧಿಕಾರಿಗಳು ಬಂದಿದ್ದರು. ಎಲ್ಲ ಮಹನೀಯರೆದುರಿಗೆ ನಾಟಕವು ಅಪ್ರತಿಮವಾಗಿ ಮಾಡಲ್ಪಟ್ಟಿತು. ತಾರೀಖ ೩ನೇ ದಿವಸ ಮೋಟರಕಾರಗಳ ಮೇಲೆ ಜೋತಿಬಾನ ಗುಡ್ಡಕ್ಕೆ ಹೋಗಿ, ಅಲ್ಲಿಯ ದೇವರ ದರುಶನ ತೆಗೆದುಕೊಂಡು ಬಂದರು. ಕೊಲ್ಹಾಪುರದಲ್ಲಿಯ ದೊಡ್ಡ ದೊಡ್ಡ ಜನರು ಇವರನ್ನು ಸಂಭ್ರಮದಿಂದ ತಂತಮ್ಮ ಮಂದಿರಗಳಿಗೆ ಕರೆದುಕೊಂಡು ಹೋಗಿ, ಪಾನಸುಪಾರಿಯನ್ನು ಮಾಡಿದರು. ಒಟ್ಟು ೨೦-೨೫ ಸ್ಥಳಗಳಲ್ಲಿ ಪಾನಸುಪಾರಿಯ ಸಮಾರಂಭಗಳಾದವು. ರಾ.ಬ॥ರವರು ಮತ್ತು ವಂಟಮುರಿಯ ಶ್ರೀಮಂತ ಸರದೇಸಾಯರು ರಥಾರೂಢರಾಗಿ ಪಟ್ಟಣದಲ್ಲಿ ಸಂಚಾರ ಮಾಡುತ್ತಿರುವಾಗ, ಕೊಲ್ಹಾಪುರ ನಿವಾಸಿಗಳು ಓಣಿಗಳಲ್ಲಿಯೂ, ಕಟ್ಟೆಗಳ ಮೇಲೆಯೂ, ಮೇಲ್ಮಂದಿರಗಳಲ್ಲಿಯೂ ನಿಂತು ನಿಂತು ಇವರನ್ನು ಆತುರತೆಯಿಂದ ನೋಡಿ ಸಂತೋಷವನ್ನು ಹೊಂದುತ್ತಿದ್ದರು. ಈಮೇರೆಗೆ ಕೊಲ್ಹಾಪುರ ನಿವಾಸಿಗಳನ್ನು ಸಂತೋಷಗೊಳಿಸಿ, ಶ್ರೀಮಂತ ಛತ್ರಪತಿ ಶಾಹೂಮಹಾರಾಜರವರ ಪ್ರೇಮಕ್ಕೆ ಪಾತ್ರರಾಗಿ, ಅವರ ನಿರೂಪ ತೆಗೆದುಕೊಂಡು ತಾರೀಖು ೩ನೇ ರಾತ್ರಿ ಮೇಲಗಾಡಿಯಿಂದ ಹೊರಟು ಮರುದಿವಸ ಅಂದರೆ ತಾರೀಖು ೧ನೇ ಮಾಹೆ ಜುಲೈ ಸನ್ ೧೯೦೭ನೇ ದಿವಸ ೯ ೧/೨ ಘಂಟೆಗೆ ಸುರಕ್ಷಿತವಾಗಿ ಬೆಳಗಾವಿಗೆ ಬಂದು ತಲುಪಿದರು. ಶ್ರೀಮಂತ ವಂಟಮುರಿ ಸರದೇಸಾಯರು ಮಾರ್ಗದಲ್ಲಿ ಪಾಚ್ಛಾಪುರ ಸ್ಟೇಶನಕ್ಕಿಳಿದು ತಮ್ಮ ಸಂಸ್ಥಾನಕ್ಕೆ ತೆರಳಿದರು.

ಮಹಾರಾಜ ಛತ್ರಪತಿಯವರಿಗೂ ರಾ.ಬ॥ರುದ್ರಗೌಡ ಸಾಹೇಬರಿಗೂ ಪರಸ್ಪರ ದರ್ಶನಲಾಭವಾಗಿ ಇರ್ವರಿಗೂ ಆನಂದವಾಗಿರುವಲ್ಲಿ, ಇವರ ಸಮಾಗಮ ಸುಖಸಂಭ್ರಮಾದಿಗಳನ್ನೂ, ಏಕಾಂತವನ್ನೂ ಕಂಡು ಪರೋತ್ಕರ್ಷಾಸಹಿಷ್ಣುಗಳಾದ ಬ್ರಾಹ್ಮಣರು ತಮ್ಮ ತಮ್ಮೊಳಗೆ ತಳಮಳಗೊಳ್ಳುವವರಾದರು. ಕೊಲ್ಹಾಪುರ ಸೀಮೆಯ ಬ್ರಾಹ್ಮಣರಂತೂ ಮಹಾರಾಜ ಸರಕಾರದ ಮೇಲೆ ಮೊದಲೇ ಹಲ್ಲು ತಿನ್ನುತ್ತಿದ್ದರು. ರಾ.ಬ॥ರುದ್ರಗೌಡ ಸಾಹೇಬರ ಮೇಲಂತೂ ಮುಂಬಯಿ ಇಲಾಖೆಯ ಬ್ರಾಹ್ಮಣರ ವಕ್ರದೃಷ್ಟಿ! ಈ ಮಹನೀಯದ್ವಯರು ಒತ್ತಟ್ಟಿಗೆ ಕೂಡಿದ್ದಕ್ಕಾಗಿ ಅವರಿಗೆ ಸಮಾಧಾನವಾಗಲಿಲ್ಲ. ಸನ್ನಿಧಿಯ ಜನರನ್ನೆಲ್ಲ ಹೊರಗೆ ಹಾಕಿ ಇವರು ಏನೋ ಏಕಾಂತ ಮಾತಾಡಿದರೆಂದೂ, ನಮಗೆ ಇನ್ನಾವ ಅರಿಷ್ಟವನ್ನು ತರುವದಕ್ಕಾಗಿಯೇ ಈ ಏಕಾಂತವು ಘಟಿಸಿತೆಂದೂ, ಇವರನ್ನು ಮಹಾರಾಜರು ಸಂಸ್ಥಾನದ ದಿವಾಣರನ್ನಾಗಿ ಎಲ್ಲಿ ಮಾಡಿಕೊಳ್ಳುತ್ತಾರೋ ಎಂದೂ, ಎಲ್ಲ ಬ್ರಾಹ್ಮಣರೂ ಮಾತಾಡುವವರಾದರು. ದುಷ್ಟರು ದುಷ್ಟ ಅಧಿಕಾರಿಯನ್ನೇ ಬಯಸುತ್ತಾರೆ. ಸಜ್ಜನರು ಶಿಷ್ಟ ಅಧಿಕಾರಿಯನ್ನೇ ಅಪೇಕ್ಷಿಸುತ್ತಾರೆ.

ರಾ.ಸಾ॥ವಾರದ ಮಲ್ಲಪ್ಪಣ್ಣನವರು ಊರ್ಫ ಅಪ್ಪಾಸಾಹೇಬ

ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಅಂದರೆ ಸನ್ ೧೯೦೭ನೇ ಇಸವಿಯ ಡಿಶಂಬರ ತಿಂಗಳು ತಾರೀಖು ೨೭-೨೮- ೨೯ ಈ ಮೂರು ದಿವಸಗಳಲ್ಲಿ ಶ್ರೀ ಸಿದ್ಧರಾಮೇಶ್ವರನ ಪುಣ್ಯಸ್ಥಾನವೂ, ಪುರಾಣಪ್ರಸಿದ್ಧವೂ, ಆದ

ಸೊನ್ನಲಾಪುರ ಅಥವಾ ಸೊಲ್ಲಾಪುರದಲ್ಲಿ, ಅಲ್ಲಿಯ ವೀರಶೈವ ನಿವಾಸಿಗಳ, ಮುಖ್ಯವಾಗಿ ಶ್ರೀಮಂತ ರಾ.ಸಾ||ವಾರದ ಮಲ್ಲಪ್ಪಣ್ಣನವರ ಪ್ರಯತ್ನದಿಂದ, ಮೈಸೂರ ಸರಕಾರದ ೨ನೇ ಕೌನ್ಸಿಲದಾರರಾದ ನಾಮದಾರ ಕೆ.ಪಿ. ಪುಟ್ಟಣ್ಣಸೆಟ್ಟರವರ ಅಧ್ಯಕ್ಷತೆಯ ಕೆಳಗೆ ೩ನೇ ಶ್ರೀಮದ್ವೀರಶೈವ ಮಹಾಸಭೆಯು ಒಳ್ಳೇ ವೈಭವವನ್ನು ಪಡೆದಿರುತ್ತದೆ. ಈ ವೈಭವಾತಿಶಯಕ್ಕೆ ಮೂಲ ಕಾರಣರೆಂದರೆ ರಾ.ಸಾ||ವಾರದ ಮಲ್ಲಪ್ಪಣ್ಣನವರೇ ಸರಿ. ಕರ್ನಾಟಕದಲ್ಲಿಯ ವೀರಶೈವರ ಮತೋನ್ನತಿಗಾಗಿಯೂ ವಿದ್ಯಾಭಿವೃದ್ಧಿಗಾಗಿಯೂ ಅಹೋರಾತ್ರಿ ಅವಿಶ್ರಾಂತವಾಗಿ ಶ್ರಮಪಡುವ ರಾ.ಬ||ರುದ್ರಗೌಡ ದೊರೆಗಳಂತೆಯೇ ಮಹಾರಾಷ್ಟ್ರದೇಶದ ವೀರಶೈವರ ಏಳ್ಗೆಯನ್ನುಂಟು ಮಾಡುವದರಲ್ಲಿ ರಾ.ಸಾ||ವಾರದ ಮಲ್ಲಪ್ಪಣ್ಣನವರು ತನುಮನಧನಗಳಿಂದಲೂ ಪ್ರಯತ್ನಿಸುತ್ತಿರುವರು. ಇವರು ಸ್ವಂತ ವೆಚ್ಚದಿಂದ ವೀರಶೈವ ಸಂಸ್ಕೃತ ಪಾಠಶಾಲೆಯೊಂದನ್ನೂ ಸ್ಥಾಪಿಸಿರುವರು. ಈ ಪಾಠಶಾಲೆಯ ನೂರಿನ್ನೂರು ಜನ ವಿದ್ಯಾರ್ಥಿಗಳ ಭೋಜನವು ದಿನಾಲು ಇವರ ಮನೆಯಲ್ಲಿಯೇ ಆಗುತ್ತದೆ. ವೀರಶೈವರಿಗೆ ವ್ಯಾಪಾರವೇ ಮುಖ್ಯೋದ್ಯೋಗವಾಗಿರುವದರಿಂದ ವೀರಶೈವ ವಿದ್ಯಾರ್ಥಿಗಳಿಗಾಗಿ ಇವರು ಒಂದು ವ್ಯಾಪಾರಿ ಶಾಲೆಯನ್ನು ಸ್ಥಾಪಿಸಿರುವರು. ಇವರ ಅಂಗಡಿಗಳು ಮುಂಬಯಿ, ಪೂಣಾ, ಜಾಲನಾ, ಜಾಹಿಂದರ, ವಿಜಾಪುರ, ಸೊಲ್ಲಾಪುರ, ಗುಲಬರ್ಗಾ, ಬಳ್ಳಾರಿ, ರಾಯಚೂರ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇರುವದರಿಂದ ಸೊಲ್ಲಾಪುರದ ವ್ಯಾಪಾರಿ ಶಾಲೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನೇ ತಮ್ಮ ಅಂಗಡಿಗಳಲ್ಲಿ ಗುಮಾಸ್ತರನ್ನಾಗಿ ನೇಮಿಸುವರು. ಈ ವ್ಯಾಪಾರಿಶಾಲೆಯಲ್ಲಿ ವ್ಯವಹಾರೋಪಯುಕ್ತ ವಿಷಯಗಳಷ್ಟೇ ಕಲಿಸಲ್ಪಡುವ ಯೋಜನೆ ಮಾಡಿದ್ದರಿಂದ, ಆ ವಿದ್ಯಾರ್ಥಿಗಳು ಮುಂದೆ ಉತ್ತಮ ಗುಮಾಸ್ತರಾಗುತ್ತಾರೆ. ಈ ಶಾಲೆಗಳನ್ನು ಸ್ಥಾಪಿಸಿದ್ದಲ್ಲದೆ ರಾ.ಸಾ||ಮಲ್ಲಪ್ಪಣ್ಣನವರು ವೀರಶೈವರ ಹಳೆಯ ಗ್ರಂಥಗಳನ್ನೆಲ್ಲ ಸಂಸ್ಕೃತದಿಂದ ಮರಾಠಿಯಲ್ಲಿ ತರ್ಜುಮೆ ಮಾಡಿಸಿ "ವೀರಶೈವ ಗ್ರಂಥಮಾಲಾ" ಎಂಬ ಹೆಸರಿನಿಂದ ಕ್ರಮಗೊಂಡು ಮುದ್ರಿಸುವ ಏರ್ಪಾಡು ಮಾಡಿದ್ದರಿಂದ ಮೂಲೆಗುಂಪಾಗಿದ್ದ ಎಷ್ಟೋ ಉಪಯುಕ್ತ ಗ್ರಂಥಗಳೂ, ಪುರಾಣ ಪುಣ್ಯಕಥೆಗಳೂ ಪ್ರಸಿದ್ಧವಾಗತೊಡಗಿದವು. ಈ ಗ್ರಂಥ ಜೀರ್ಣೋದ್ಧರಣ ಕಾರ್ಯಕ್ಕಾಗಿ ಅವರು ಅಯ್ದಾರು ಜನ ಪ್ರಸಿದ್ಧ ಶಾಸ್ತ್ರಿಗಳನ್ನು ಸ್ವಂತ ವೆಚ್ಚದಿಂದ ಇಟ್ಟಿರುವರು. ಈ ಬಗೆಯಾಗಿ ವೀರಶೈವ ಗ್ರಂಥಗಳ ಜೀರ್ಣೋದ್ಧಾರ ಮಾಡಿ ರಾ.ಸಾ|| ಮಲ್ಲಪ್ಪಣ್ಣನವರು ವೀರಶೈವ ಸಮಾಜದ ಮೇಲೆ ಬಹಳೇ ಉಪಕಾರ ಮಾಡಿದ್ದಾರೆ. ಅವರು ಈವರೆಗೆ ಎಷ್ಟು ಪುಸ್ತಕಗಳನ್ನು ಪ್ರಸಿದ್ಧಪಡಿಸಿದರೆಂಬದೂ, ಅದರಲ್ಲಿ ಶ್ರಮವೂ, ಧನವೂ ಎಷ್ಟು ವೆಚ್ಚವಾಗಿರುವದೆಂಬದೂ ಆ ವೀರಶೈವ ಗ್ರಂಥಮಾಲೆಯ ಪ್ರಸಿದ್ಧ ಪತ್ರಿಕೆಯನ್ನು ನೋಡಿದರೆ ತಿಳಿಯುವಂತಿದೆ. ಪಾಠಶಾಲೆಯು ಇವರ ಹೆಸರಿನಿಂದ ಅಬಾಧಿತವಾಗಿ ನಡೆದುಕೊಂಡು ಹೋಗುವದಕ್ಕಾಗಿ ಇವರು ಸುಮಾರು ೩೨ ಸಾವಿರ ರೂಪಾಯಿ ಬೆಲೆಬಾಳುವ ಫಲದ್ರೂಪವಾದ ಭೂಮಿಯೊಂದನ್ನು ಕೊಟ್ಟಿರುವರಂತೆ. ಇನ್ನೂ ಅನೇಕ ಧರ್ಮಕಾರ್ಯಗಳಲ್ಲಿಯೂ, ಮತೋನ್ನತಿಯಲ್ಲಿಯೂ ಇವರು ತಮ್ಮ ಭಾಂಡಾರವನ್ನು ಬಿಚ್ಚಿಬಿಟ್ಟಿದ್ದಾರೆ. ಇವರು ವ್ಯಾಪಾರದಲ್ಲಿ ಬಹಳೇ ಅನುಭವಶಾಲಿಗಳಾದದರಿಂದ ಇವರಿಗೆ ವೀರಶೈವ ವ್ಯವಹಾರ ಮುಕುಟಮಣಿಗಳೆಂದೆನ್ನಬಹುದು. ಉದ್ಯೋಗಾಭಿವೃದ್ಧಿ, ದೃಢನಿಶ್ಚಯ, ಸತತ ಪ್ರಯತ್ನಾದಿ ಸದ್ಗುಣಗಳಿಂದ ಇವರು ವ್ಯವಹಾರಗಳಲ್ಲಿ ಅತಿ ಘನತೆಯನ್ನು ಪಡೆದುದರಿಂದ ಈಗಿನ ಪ್ರಾಥಮಿಕ ಶಾಲೆಗಳ ೭ನೇ ಇಯತ್ತೆಯ ಕ್ರಮಿಕ (ವಾಚನ) ಪುಸ್ತಕದಲ್ಲಿ ಸರಕಾರೀ ಬುಕ್ಕ ಕಮಿಟಿಯವರು ರಾ.ಸಾ||ಮಲ್ಲಪ್ಪಣ್ಣಾ ವಾರದ ಇವರ ಹೆಸರನ್ನು ಪ್ರಸಿದ್ಧಿಸಿರುತ್ತಾರೆ. ಮತ್ತು ಇವರ ಪ್ರಶಂಸಾ ಪಙ್ತ್ತಿಯಲ್ಲಿ ಮುಂಬಯಿಯ ಮಹಾಘನವಂತರೂ, ವಿತರಣಶಾಲಿಗಳೂ ಆದ ಟಾಟಾ ಎಂಬ ಪಾರ್ಸೀ ಸದ್ಗೃಹಸ್ಥರ ಹೆಸರ್ನು ತಂದಿರುವರು. ವಾರದವರ ಅಡತಿಯ ವ್ಯಾಪಾರವು ಮುಂಬಯಿ, ಮದ್ರಾಸ, ಮಂಗಳೂರ, ಮೈಸೂರ, ಬೆಂಗಳೂರ, ಹೈದರಾಬಾದ, ನಾಗಪುರ, ಅಹಮ್ಮದಾಬಾದ, ಕರಾಚಿ, ಸುರತ, ಕಲಕತ್ತಾ, ಕೊಯಿಮತ್ತೂರ, ದಿಲ್ಲೀ, ಬನಾರಸ, ಗೋವೆ ಮುಂತಾದ ಹಿಂದುಸ್ತಾನದ ಮುಖ್ಯ ಮುಖ್ಯ ಪಟ್ಟಣಗಳ

ವರ್ತಕರೊಡನೆ ನಡೆಯುತ್ತಿರುವದಲ್ಲದೆ, ರಂಗೂನ (ಬ್ರಹ್ಮದೇಶ), ಜಪಾನ, ಇಂಗ್ಲೆಂಡ ಮೊದಲಾದ ಪರರಾಷ್ಟ್ರದವರೊಡನೆಯೂ ನಡೆಯುತ್ತಿರುವದರಿಂದ ಇವರು, ಸ್ವದೇಶದಲ್ಲಿಯೂ ಪರದೇಶಗಳಲ್ಲಿಯೂ ಬೇಕಾದಲ್ಲಿ ಹುಂಡಿಯನ್ನು ಕೊಡುವಷ್ಟು ಧನವರ್ತಕರಾಗಿರುವರು. ಗಿರಣಿ, ಜಮೀನು ಮುಂತಾದ ಇವರ ಕಾರಖಾನೆಗಳಲ್ಲಿ ಸುಮಾರು ಅಯ್ದಾರು ಸಾವಿರ ಜನರು ಕೂಲಿಕಾರರು ಹೊಟ್ಟೆತುಂಬಿಕೊಳ್ಳುತ್ತಾರೆ. ಇವರ ಗಿರಣಿಯಲ್ಲಿ ವಿಲಾಯತಿಯ ಬಟ್ಟೆಗಳಿಗೆ ಸರಿಯಾದ ಬಟ್ಟೆಗಳು ತಯಾರಾಗುತ್ತವೆ. ಸೊಲ್ಲಾಪುರದಲ್ಲಿ ಎಲ್ಲಿ ನೋಡಿದರೂ ವಾರದವರ ಕಂತ್ರಾಟಗಳೇ ದೃಷ್ಟಿಗೆ ಬೀಳುತ್ತಿರುತ್ತವೆ. ಒಂದು ಕಡೆಗೆ ವಾರದವರ ಮಂದಿರ! ಮತ್ತೊಂದು ಕಡೆಗೆ ವಾರದವರ ಬಂಗಲೆ! ಇನ್ನೊಂದು ಕಡೆಗೆ ವಾರದವರ ಅಂಗಡಿ! ಬೇರೊಂದು ಕಡೆಗೆ ವಾರದವರ ಮಹಾಲು! ಅತ್ತ ವಾರದವರ ವಖಾರ! ಇತ್ತ ವಾರದವರ ಕುದುರೆಯ ಪಾಗಾ! ಇದು ವಾರದವರ ಗಾದೀಖಾನೆ! ಇದೂ ಒಂದು ವಾರದವರ ಮನೆ! ಅದು ವಾರದವರ ಪುಣ್ಯಾಶ್ರಮ! ಅಗೋ ಅಲ್ಲಿ ಕಾಣುತ್ತಿರುವದೆಲ್ಲ ವಾರದವರ ಹೊಲ! ಅದರಾಚೆಗೆ ಕಬ್ಬಿನ ಪಡ!! ಅದರ ಮುಂದೆ ಕಾಣುತ್ತಿರುವದೇ ಕಬ್ಬಿನ ರಸ ತೆಗೆಯುವ ಎಂಜಿನ್! ಅದರ ಹತ್ತರವೇ ಎತ್ತರವಾಗಿ ತೋರುತ್ತಿರುವದು ಹೊಲದೊಳಗಿನ ಬಂಗಲೆ! ಇಗೋ ಇತ್ತಕಡೆಗೆ ಕಾಣುವದು ವಾರದವರ ಗಿರಣಿ! ಎಂಬದಾಗಿ ಅಲ್ಲಿಯವರು ತೋರಿಸುತ್ತಿರುವದರಿಂದ, ಅಣುರೇಣು ತೃಣಕಾಷ್ಟಗಳಲ್ಲಿ ಪರಮಾತ್ಮಮಯವಾಗಿದ್ದಂತೆ ಸೊಲ್ಲಾಪುರವು ವಾರದ ಮಯವಾಗಿರುತ್ತದೆ. ರಾ.ಬ॥ರುದ್ರಗೌಡ ಸಾಹೇಬರು ರಾಜ್ಯಕಾರ್ಯಧುರಂಧರತೆಯಲ್ಲಿ ಹೇಗೆ ಹೆಸರುವಾಸಿಯಾಗಿರುವರೋ ಅದರಂತೆ ರಾ.ಸಾ॥ಮಲ್ಲಪ್ಪಣ್ಣ ವಾರದ ಊರ್ಫ ಅಪ್ಪಾಸಾಹೇಬರು ವ್ಯವಹಾರದಲ್ಲಿ ಪ್ರಸಿದ್ಧಪುರುಷರಾಗಿರುತ್ತಾರೆ. ಇವರು ಘನವಂತರಿದ್ದಂತೆ ದಾನಶೂರರೂ ಇರುತ್ತಾರೆ. ಮತಾಭಿಮಾನದಲ್ಲಿಯೂ, ಮತೋದ್ಧಾರಕ ಕಾರ್ಯಭಾಗದಲ್ಲಿಯೂ ಉಭಯ ಮಹನೀಯರೂ ಸರಿಯಾಗಿ ಶ್ರೇಯಸ್ಕರಿರುತ್ತಾರೆ. ಈ ಮಹನೀಯದ್ವಯರ ಸಖ್ಯವು ಮೊದಲಿನಿಂದಲೇ ಇದ್ದ ಸಂಗತಿಯು ಹಿಂದೆ ಹೇಳಲ್ಪಟ್ಟಿದೆ. ರಾ.ಸಾ॥ಮಲ್ಲಪ್ಪಣ್ಣನವರು ಭಕ್ತಿಯ ವಿಷಯದಲ್ಲಿಯೂ, ಸಾತ್ವಿಕವೃತ್ತಿಯಲ್ಲಿಯೂ ಹೆಸರಾದುದರಿಂದ ಇವರನ್ನು ವೀರಶೈವ ಮತೋದ್ಧಾರಕ ದೇವರ್ಷಿಗಳೆಂತಲೂ, ರಾ.ಬ॥ರುದ್ರಗೌಡ ಸಾಹೇಬರು ರಾಜಕಲಾ ವಿಶಾರದರಾದುದರಿಂದ ಇವರನ್ನು ವೀರಶೈವ ಮತೋದ್ಧಾರಕ ರಾಜರ್ಷಿಗಳೆಂತಲೂ, ವೀರಶೈವರು ಸಂಬೋಧಿಸಲಿಕ್ಕೆ ಅಡ್ಡಿಯಿಲ್ಲ. ರಾ.ಸಾ॥ಮಲ್ಲಪ್ಪಣ್ಣನವರು ಬಹಳೇ ಸಾತ್ವಿಕ ವೃತ್ತಿಯುಳ್ಳವರೆಂದೂ, ಘನವಂತರೆಂದೂ, ಪರೋಪಕಾರಿಗಳೆಂದೂ, ಸಾರ್ವಜನಿಕ ಹಿತಕಾರಿಗಳೆಂದೂ ತಿಳಿದು ಸರಕಾರದವರು ಇವರಿಗೆ "ರಾವಸಾಹೇಬ" ಎಂಬ ಪದವಿಯನ್ನು ಕೊಟ್ಟಿರುವರು. ಇವರು ತಮ್ಮ ಘನವಾದ ವ್ಯವಹಾರದ ಆದಾಯದ ಬಹುದೊಡ್ಡ ಭಾಗವನ್ನು ಸಮಾಜೋನ್ನತಿಯ ಕಾರ್ಯದಲ್ಲಿಯೇ ವ್ಯಯಮಾಡುತ್ತಿರುವದರಿಂದ ಇವರು ಸಮಸ್ತ ವೀರಶೈವರಿಗೆ ಮಹದುಪಕಾರಿಗಳಾಗಿದ್ದಾರೆ.

ಸೊಲ್ಲಾಪುರ ಸಭಾಮಂಟಪದ ಸೌಂದರ್ಯ

ಸೊಲ್ಲಾಪುರದಲ್ಲಿ ರಾ.ಸಾ॥ವಾರದ ಮಲ್ಲಪ್ಪನವರಿಂದ ೩ನೇ ಶ್ರೀಮದ್ವೀರಶೈವ ಮಹಾಸಭೆಯು ನೆರವೇರುವದೆಂಬ ವಾರ್ತೆಯನ್ನು ಕೇಳುತ್ತಲೇ, ಈ ಶಿವಶರಣರನ್ನು ಕಂಡುಕೊಳ್ಳಬೇಕೆಂಬ ಹೇತುವಿನಿಂದಲೂ, ಸೊನ್ನಲಾಪುರದ ಸಿದ್ಧರಾಮಶಿವಯೋಗಿಯ ದರ್ಶನಾಪೇಕ್ಷೆಯಿಂದಲೂ, ರಾ.ಬ॥ರುದ್ರಗೌಡ ಸಾಹೇಬರವರು, ಶ್ರೀಮಂತ ವಂಟಮುರಿ ಸರದೇಸಾಯಿಯವರು, ನಾಮದಾರ॥ಕೆ.ಪಿ.ಪುಟ್ಟಣ್ಣಸೆಟ್ಟರವರೂ ಮುಂತಾದ ವೀರಶೈವ ಮಹನೀಯರು ಒತ್ತಟ್ಟಿಗೆ ಕಲೆತ ಮಹಾಸಭಾಶೋಭೆಯನ್ನು ಕಾಣಬೇಕೆಂಬ ಕುತೂಹಲದಿಂದಲೂ, ಸೊಲ್ಲಾಪುರ ಶಹರವನ್ನು ನೋಡುವ ಇಚ್ಛೆಯಿಂದಲೂ ಹಿಂದಿನ ಎರಡು ಮಹಾಸಭೆಗಳಿಗಿಂತಲೂ ಈ ೩ನೇ ಮಹಾಸಭೆಗೆ

ಬಹುಜನ ಕೂಡಿತು. ಇನ್ನೊಂದು ಕಾರಣವೇನೆಂದರೆ, ಮೈಸೂರ, ಹೈದರಾಬಾದ, ಮದ್ರಾಸ, ಮುಂತಾದ ಇಲಾಖೆಗಳಿಗೆ ಸೊಲ್ಲಾಪುರವು ಸಮೀಪವಾಗಿದ್ದುದರಿಂದ ಅತ್ತಕಡೆಯ ಜನರು ವಿಶೇಷವಾಗಿ ಕೂಡಲಿಕ್ಕೆ ಅನುಕೂಲವಾಯಿತು. ಸೊಲ್ಲಾಪುರದಲ್ಲಾದರೂ ವೀರಶೈವ ವಸತಿಯು ಚೆನ್ನಾಗಿ ಇರುತ್ತದೆ. ಮಹಾಸಭೆಯ ಅಲಂಕಾರಕ್ಕಾಗಿ ಶಹರವು ಶೃಂಗರಿಸಲ್ಪಟ್ಟಿತ್ತು. ಸಭಾಮಂಟಪವು ಶ್ರೀ ಸಿದ್ಧರಾಮೇಶ್ವರ ದೇವಾಲಯದ ಮುಂದಿರುವ ವಿಶಾಲವಾದ ಅಂಗಳದಲ್ಲಿ ರಚಿಸಲ್ಪಟ್ಟಿತ್ತು. ಮಂಟಪವು ಬಹು ವಿಸ್ತಾರವೂ, ಭವ್ಯವೂ ಆಗಿತ್ತಲ್ಲದೆ ನೋಡಲಿಕ್ಕೆ ಬಹು ರಮ್ಯವೂ ಆಗಿತ್ತು. ಹಿಂದಿನ ಎರಡು ಮಹಾಸಭಾಮಂಟಪಗಳಿಗಿಂತಲೂ ಈ ಮಂಟಪವು ಮನೋಹರವಾಗಿತ್ತು. ಶ್ರೀ ಸಿದ್ಧರಾಮೇಶ್ವರ ದೇವಾಲಯಕ್ಕೆ ಎದುರಾಗಿ ಆಗಾಗ್ಗೆ ಯಾವದೊಂದು ಧಾರ್ಮಿಕ ಸಮಾರಂಭವನ್ನು ನೆರವೇರಿಸಲಿಕ್ಕೆ ಒಂದು ಸಭಾಮಂಟಪವು ಸ್ಥಿರವಾಗಿದ್ದರೆ ದೇವಾಲಯಕ್ಕೂ, ಪಟ್ಟಣಕ್ಕೂ ಅಲಂಕಾರವಾಗುವದೆಂದು ತಿಳಿದು, ಈ ಮಹಾಸಭೆಗಾಗಿ ನಿರ್ಮಿಸಿದ ಸಭಾಮಂಟಪವನ್ನೇ ಸ್ಥಿರಗೊಳಿಸುವ ಉದ್ದೇಶದಿಂದ ಕಬ್ಬಿಣದ ತೊಲೆ ಕಂಬಗಳಿಂದಲೇ ಮಂಟಪವನ್ನು ನಿಲ್ಲಿಸಿದ್ದರು. ವಿಸ್ತಾರವಾದ ಛತ್ತಿನಿಂದಲೂ, ಬಣ್ಣದ ಪಟ್ಟಿಗಳಿಂದಲೂ, ಸುಳುವುಗಳಿಂದಲೂ, ಹಂಡೆ-ಗ್ಲಾಸ-ಝುಮರುಗಳ ಝುಗಝುಗಾಟದಿಂದಲೂ, ಉಚಿತಾಸನಗಳಿಂದಲೂ, ಭವ್ಯವಾದ ಮಹಾದ್ವಾರದಿಂದಲೂ ಸಭಾಮಂಟಪವು ಬಹು ಶೋಭೆಗೊಂಡಿತ್ತು. ಮಹತ್ತಾದ ಶಿಖರದಿಂದ ಒಪ್ಪುವ ದೇವಾಲಯವೂ, ಅದರ ಸುತ್ತಲಿರುವ ಸರೋವರವೂ, ಹತ್ತಿರಿರುವ ಪುಷ್ಪವಾಟಿಕೆಯೂ ಸಭಾಮಂಟಪಕ್ಕೆ ಇನ್ನಿಷ್ಟು ಶೋಭೆಯನ್ನುಂಟು ಮಾಡುತ್ತಲಿದ್ದವು. ಮಂಟಪವು ಎರಡಂತಸ್ತು ಉಳ್ಳದ್ದಾಗಿತ್ತು. ಮೇಲಂತಸ್ತು, ಸ್ತ್ರೀಯರಿಗಾಗಿ ಮಾಡಲ್ಪಟ್ಟಿತ್ತು. ಸ್ತ್ರೀಯರಿಗಾಗಿ ಸ್ಥಳಾನುಕೂಲವು ಹಿಂದಿನ ಮಹಾಸಭೆಗಳಲ್ಲಿ ಮಾಡಲ್ಪಟ್ಟಿದ್ದಿಲ್ಲ. ಮಹಾಸಭೆಯೆಲ್ಲವೂ ಮೇಲೆ ಕೂತ ಸ್ತ್ರೀಯರಿಗೆ ಕಾಣುವಂತಿದ್ದು, ಅವರು ಮಾತ್ರ ಯಾರಿಗೂ ಕಾಣದಂತೆ ಚಿತ್ರವಿಚಿತ್ರವಾದ ತಿಳುವಾದ ಝಾಲರಿಯ ಶುಭ್ರವರ್ಣದ ಪರದೆಗಳು ಅಲಂಕೃತವಾಗಿದ್ದವು. ಸಭಾಮಂಟಪದಿಂದ ಪಟ್ಟಣದ ವರೆಗೂ, ಸ್ಟೇಶನದ ವರೆಗೂ ಮತ್ತು ಅಧ್ಯಕ್ಷರಿಗಾಗಿಯೂ, ರಾ.ಬ॥ರುದ್ರಗೌಡ ಸಾಹೇಬರಿಗಾಗಿಯೂ, ಶ್ರೀಮಂತ ವಂಟಮುರಿ ಸರದೇಸಾಯಿಯವರಿಗಾಗಿಯೂ ಬಿಡಾರವಾಗಿದ್ದ ಬಂಗಲೆಗಳ ವರೆಗೂ ಶೋಭೆಗೊಂಡಿರುವ ಧ್ವಜ ಪತಾಕೆಗಳೂ, ಮಾರ್ಗಗಳ ಮುಖ್ಯ ಮುಖ್ಯ ಸ್ಥಳಗಳಲ್ಲಿ ಕಟ್ಟಿರುವ ಭವ್ಯವಾದ ಅಗಸಿಗಳೂ, ಕಮಾನುಗಳೂ, ತಳಿರ್ದೋರಣಗಳೂ ಪ್ರೇಕ್ಷಕರಿಗೆ ಬಹು ಸೊಗಸನ್ನುಂಟು ಮಾಡುತ್ತಲಿದ್ದವು. ಇವೆಲ್ಲ ಅಲಂಕಾರಗಳಿಂದ ಪಟ್ಟಣವು ಬಹು ಶೋಭೆಗೊಂಡು ಸಭಾಸದರ ಆಗಮನವನ್ನು ನಿರೀಕ್ಷಿಸುತ್ತಿತ್ತು.

ದೇವೀಹೊಸೂರಲ್ಲಾದ ಸಿರಸಂಗಿಯ ಶ್ರೀಮಂತರ ಸ್ಮಾರಕ ಮಂದಿರ

ಸೊಲ್ಲಾಪುರದಲ್ಲಿ ಈ ಮೇರೆಗೆ ಮಹಾಸಭೆಯ ಗಡಿಬಿಡಿಯು ನಡೆದಿರುವಾಗ, ಧಾರವಾಡ ಜಿಲ್ಲಾ ಹಾವೇರಿ ತಾಲೂಕ, ದೇವೀಹೊಸೂರ ಗ್ರಾಮದಲ್ಲಿ ಇನ್ನೊಂದು ಸಭೆಯ ಗಡಿಬಿಡಿಯು ನಡೆದಿತ್ತು. ಅದೇನೆಂದರೆ, ಶ್ರೀಮಂತ ಶಿರಸಂಗಿಯ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರು ಬದುಕಿದ್ದ ಮಟ್ಟಿಗೂ ಮತಸೇವೆ ಮಾಡಿ, ಅಂತ್ಯಕಾಲದಲ್ಲಿ ಸಂಸ್ಥಾನದ ಸರ್ವಸ್ವವನ್ನೂ ಲಿಂಗಾಯತ ಫಂಡಿಗಾಗಿ ಸಮರ್ಪಿಸಿ, ಅದ್ವಿತೀಯ ದಾನಶೂರರೆಂದು ಜಗಜ್ಜನರಿಂದ ಹೊಗಳಿಸಿಕೊಂಡು ಕೈಲಾಸವಾಸಿಯಾದ ಸಂಗತಿಯು ಹಿಂದೆ ೧೪ನೇ ಭಾಗದಲ್ಲಿ ವಿಸ್ತಾರವಾಗಿ ಬರೆದಿರುವದಷ್ಟೆ, ಕೇವಲ ಮತೋದ್ಧಾರಕ್ಕಾಗಿ ಸಂಸ್ಥಾನವನ್ನು ಸಮರ್ಪಿಸಿ ಶಿವಸಾನಿಧ್ಯವನ್ನು ಸೇರಿದ ಶ್ರೀಮಂತರ ಸ್ಮಾರಕವಾಗಿ, ಅವರ ಹೆಸರಿನಿಂದ ಒಂದು ಭವ್ಯಮಂದಿರವನ್ನು ಕಟ್ಟಿ, ಅದರಲ್ಲಿ ಒಂದು ಸಂಸ್ಕೃತ ಪಾಠಶಾಲೆಯು ಅವರ ಹೆಸರಿನಿಂದಲೇ ಅಬಾಧಿತವಾಗಿ ನಡೆದುಕೊಂಡು ಹೋಗುವಂತೆ ಏರ್ಪಾಡುಮಾಡಿ, ಶ್ರೀಮಂತರು ಮಾಡಿದ

ಘನಕಾರ್ಯಕ್ಕಾಗಿ ಕೃತಜ್ಞತೆಯುಳ್ಳವರಾಗಬೇಕೆಂದು ಧಾರವಾಡ ಜಿಲ್ಲಾ ಹಾವೇರಿ ತಾಲೂಕ ದೇವಿಹೊಸೂರ ಗ್ರಾಮದ ಚೆನ್ನಬಸಪ್ಪ ಪಂಚಪ್ಪ ಕುರುಬಗೊಂಡಸೆಟ್ಟರೇ ಮೊದಲಾದ ವೀರಶೈವ ಮುಖಂಡರು ಭಾವಿಸಿ, ಈ ಸ್ಮಾರಕಮಂದಿರದ ತಳಹದಿಯನ್ನು ಶ್ರೀಮಂತರ ಪರಮಸ್ನೇಹಿತರೂ, ವೀರಶೈವ ವಿದ್ಯಾಪ್ರಸಾರಕರೂ ಆದ ರಾ.ಬ॥ಅರಟಾಳ ಸಾಹೇಬರವರ ಕರಕಮಲದಿಂದ ಪ್ರಾರಂಭಿಸಬೇಕೆಂದೂ, ಈ ಸತ್ಕೃತ್ಯಗಾಗಿ ಒಂದು ಸಭೆಯನ್ನು ಬಹು ಸಮಾರಂಭದಿಂದ ಮಾಡಬೇಕೆಂದೂ, ಗೊತ್ತುಮಾಡಿದ್ದರು. ೩ನೇ ಶ್ರೀಮದ್ವೀರಶೈವ ಮಹಾಸಭೆಯು ಸೊಲ್ಲಾಪುರದಲ್ಲಿ ಜರುಗುವದೆಂದು ಕೇಳಿ ರಾ.ಬ॥ಅರಟಾಳ ಸಾಹೇಬರೂ, ಶ್ರೀಮಂತ ವಂಟಮುರಿಯ ಸರದೇಸಾಯರೂ ಹೇಗೂ ಮಹಾಸಭೆಗೆ ಹುಬ್ಬಳ್ಳಿಯ ರೇಲಮಾರ್ಗದಿಂದ ದಯಮಾಡಿಸುವರೆಂದೂ, ಅವರನ್ನು ಬಿನ್ನವಿಸಿಕೊಂಡು, ಇದೇ ಸಮಯದಲ್ಲಿಯೇ ದೇವೀ ಹೊಸೂರಿಗೆ ಕರೆದುಕೊಂಡು ಬಂದು ತಮ್ಮ ಸಮಾರಂಭವನ್ನು ಸಾಂಗಮಾಡಿಕೊಳ್ಳಬೇಕೆಂದೂ, ನಿಶ್ಚಯಿಸಿ ರಾ.ಬ॥ರವರಿಗೆ ಮುಂದಾಗಿಯೇ ತಮ್ಮ ಇಚ್ಛಿತವನ್ನು ಸಮಕ್ಷ ಅಥಣೀ ತಾಲೂಕ ಕಾಗವಾಡ ಮುಕ್ಕಾಮಿನಲ್ಲಿ ವಿಜ್ಞಾಪಿಸಿಕೊಂಡದ್ದಕ್ಕೆ ರಾ.ಬ॥ರವರೂ, ವಂಟಮುರಿಯ ಶ್ರೀಮಂತರೂ ಒಡಂಬಟ್ಟದ್ದರಿಂದ, ದೇವೀಹೊಸೂರ ವೀರಶೈವರು ಆನಂದಿತರಾಗಿ ತಮ್ಮ ಸಮಾರಂಭದ ಸಿದ್ಧತೆಯನ್ನು ಸಜ್ಜುಗೊಳಿಸತೊಡಗಿದರು.

ದೇವೀಹೊಸೂರಲ್ಲಾಗುವ ಶ್ರೀಮಂತರ ಸ್ಮಾರಕ ಮಂದಿರ ಸಮಾರಂಭಕ್ಕಾಗಿ ಮಹಾಸಭೆಯಕಿಂತ ಮುಂದಾಗಿಯೇ ಹೋಗಬೇಕಾದುದರಿಂದ ತಾರೀಖ ೨೧-೧೨-೧೯೦೭ನೇ ಇಸವಿಯ ದಿವಸ ರಾ.ಬ॥ರುದ್ರಗೌಡ ಸಾಹೇಬರೂ, ಅವರ ಜಾಮಾತೃರಾದ ಚಚಡಿಯ ಶ್ರೀಮಂತ ನಾಯಕ ಬಹದ್ದೂರ ವೀರಭದ್ರಪ್ಪ ದೇಸಾಯರು ಊರ್ಫ ಅಣ್ಣಾಸಾಹೇಬರೂ ಗೋಕಾಕ ತಾಲೂಕ ಧೂಪದಾಳ ಸ್ಟೇಶನದಿಂದ ಮುಂಜಾನೆ ೭ ಘಂಟೆಯ ಮೇಲಗಾಡಿಯಿಂದ ಹೊರಟರು. ಅಡಿಗೆಯವರು ವ್ಯವಸ್ಥೆಗಾಗಿ ಮೊದಲೇ ದೇವಿಹೊಸೂರಿಗೆ ಹೋಗಿದ್ದರು. ಮುಂದಾಗಿಯೇ ಸೂಚನೆ ಕೊಟ್ಟ ಪ್ರಕಾರ, ಶ್ರೀಮಂತ ವಂಟಮುರಿ ಸರದೇಸಾಯಿಯವರೂ, ಅವರ ಚಿರಂಜೀವರಾದ ಬಸವಪ್ರಭು ಊರ್ಫ ಬಾಬಾಸಾಹೇಬರವರೂ ಪಾಚ್ಛಾಪುರ ಸ್ಟೇಶನಕ್ಕೆ ರಾ.ಬ॥ರವರನ್ನು ಕೂಡಿಕೊಂಡರು. ಅಲ್ಲಿಂದ ರಾ.ಬ॥ರವರೂ, ಶ್ರೀಮಂತರೂ ಬೆಳಗಾವಿಯ ಸ್ಟೇಶನಕ್ಕೆ ಬಂದರು. ಈ ಮಹನೀಯರ ಆಗಮನವನ್ನು ನಿರೀಕ್ಷಿಸುತ್ತ ನಿಂತ ಬೆಳಗಾವಿ ಶಹರ ನಿವಾಸಿಗಳು ಇವರ ದರ್ಶನವನ್ನು ಹೊಂದಿ ಸಂತೋಷಭರಿತರಾದರು. ಮತ್ತು ಇಲ್ಲಿಂದ ಇವರೊಡನೆ ಎಷ್ಟೋ ಸಾವಕಾರರೂ, ಸೆಟ್ಟರೂ, ಶರಣರೂ ಹೊರಡುವವರಾದರು. ಗಾಡಿಯು ಧಾರವಾಡ ಸ್ಟೇಶನವನ್ನು ತಲುಪಲು ಅಲ್ಲಿಯ ವೀರಶೈವ ಮಂಡಳಿಯು ಬಂದು, ಈ ಮಹನೀಯರ ಭೆಟ್ಟಿ ತಕ್ಕೊಂಡು ಬಹು ಆದರದಿಂದ ಪಾನಸುಪಾರಿಯ ಸಮಾರಂಭವನ್ನು ಮಾಡಿದರು. ಇವರೆಲ್ಲರ ಫೋಟೋ ತೆಗೆದುಕೊಂಡರು. ಮತ್ತು ಸಮಾರಂಭ ದರ್ಶನಕ್ಕಾಗಿ ಎಷ್ಟೋ ಜನ ವೀರಶೈವರು ಇವರೊಡನೆ ಸಾಗುವವರಾದರು. ಹುಬ್ಬಳ್ಳಿಯ ಸ್ಟೇಶನದಲ್ಲಿ ಅಲ್ಲಿಯ ಪ್ರಸಿದ್ಧ ಸಾವಕಾರರಾದ ರಾಚಪ್ಪಣ್ಣ ನೀಲಿ ಮುಂತಾದ ದೊಡ್ಡ ದೊಡ್ಡ ಜನರು ಪಾನಸುಪಾರಿಯನ್ನು ಮಾಡಿದರು. ಮುಂದೆ ಕುಂದಗೋಳ ಸ್ಟೇಶನದಲ್ಲಿ ಅಲ್ಲಿಯ ದೇಶಪಾಂಡೆಯರು (ಹಂದಿಗನೂರ ದೇಸಾಯರ ಬೀಗರು) ಪಾನಸುಪಾರಿ ಮಾಡಿದರು. ಹಾಗೆಯೇ ಸಾಂವಸಿ, ಗುಡಗೇರಿ, ಎಲವಿಗಿ ಮುಂತಾದ ಪ್ರತಿಯೊಂದು ಸ್ಟೇಶನದಲ್ಲಿಯೂ ಪಾನಸುಪಾರಿಯ ಸಮಾರಂಭಗಳಾದವು. ಅಲ್ಲಿಂದ ಹಾವೇರಿಯ ಸ್ಟೇಶನಕ್ಕೆ ಸಂಜೆಯ ೫ ಘಂಟೆಗೆ ಗಾಡಿಯು ಬಂತು. ಹಾವೇರಿಯಿಂದ ಚೆನ್ನಬಸಪ್ಪ ಸೆಟ್ಟರೇ ಮೊದಲು ಮಾಡಿಕೊಂಡು ವೀರಶೈವ ಜನಸಮೂಹವು ಈ ಮಹನೀಯರ ಸ್ವಾಗತ ಸಮಾರಂಭಕ್ಕಾಗಿ ಬಂದಿದ್ದರು. ಗಾಡಿಯಿಂದ ಇಳಿದೊಡನೆ ಬಹು ಸಮಾರಂಭದ ಪಾನಸುಪಾರಿಯಾಯಿತು. ಶ್ರೀಮಂತರ ಸ್ಮಾರಕ ಸಮಾರಂಭವನ್ನು ನೋಡುವದಕ್ಕಾಗಿ ಎಷ್ಟೋ ಜನರು ರಾವಬಹದ್ದೂರರವರೊಡನೆ

ವಿರಾಜಮಾನರಾಗಿದ್ದರು. ಎಲ್ಲರನ್ನೂ ಕರಕೊಂಡು ಹೋಗಲಿಕ್ಕೆ ದೇವಿಹೊಸೂರಿಂದ ರಥಗಳೂ, ಎಷ್ಟೋ ಗಾಡಿಗಳೂ, ಟಾಂಗೆಗಳೂ, ಬೆಳಕಿಗಾಗಿ ಎಷ್ಟೋ ಕಂದೀಲುಗಳು ಬಂದಿದ್ದವು. ಬಂದವರಲ್ಲಿ ಕೆಲವರು ರಥಗಳಲ್ಲಿ, ಕೆಲವರು ಗಾಡಿಗಳಲ್ಲಿ, ಕೆಲವರು ಟಾಂಗೆಗಳಲ್ಲಿ ಕೂತು ಹೊರಟರು. ಕಂದೀಲುಗಳನ್ನು ಹಿಡಕೊಂಡು ನೂರಾರು ಜನಸೇವಕರು ಮುಂದೆ ಮುಂದೆ ನಡೆದಿದ್ದರು. ಹಾವೇರಿಯಿಂದ ದೇವೀಹೊಸೂರು ಅಯ್ದು ಮೈಲು ದೂರದಲ್ಲಿದ್ದರೂ; ಸ್ಟೇಶನದಿಂದ ದೇವೀಹೊಸೂರ ಸಭಾಮಂಟಪದ ವರೆಗೂ ಮಾರ್ಗದಲ್ಲಿ ಎರಡೂ ಪಾರ್ಶ್ವಗಳಲ್ಲಿಯೂ, ಸಾಂದ್ರವಾಗಿ ನಿಲ್ಲಿಸಿರುವ ಬಾಳೆ, ಅಡಿಕೆ, ತೆಂಗು, ತಾಳೆ ಮರಗಳ ಸಾಲುಗಳಿಂದಲೂ, ತೂಗಾಡುತ್ತಿರುವ ತಳಿರ್ದೋರಣಗಳಿಂದಲೂ, ಅಲ್ಲಲ್ಲಿಗೆ ಕಟ್ಟಿರುವ ಸುಂದರವಾದ ಕಮಾನುಗಳಿಂದಲೂ, ಧ್ವಜ ಪತಾಕೆಗಳ ಸೊಬಗಿನಿಂದಲೂ, ಪ್ರಯಾಣವು ಬಹು ಸೊಗಸನ್ನುಂಟು ಮಾಡುತ್ತಲಿತ್ತು. ದೇವೀಹೊಸೂರಿನ ಜನರು ಶ್ರಮವನ್ನು ನೋಡದೆ, ಪೂಜ್ಯಭಾವದಿಂದ ಮಾಡಿದ ಮಾರ್ಗದ ಸೊಬಗನ್ನು ನೋಡಿ ಎಲ್ಲರೂ ಆನಂದಿಸುತ್ತ ಬರುವಷ್ಟರಲ್ಲಿ ಚೆನ್ನಬಸಪ್ಪ ಸೆಟ್ಟರ ಬಹುಭವ್ಯವೂ, ರಮ್ಯವೂ ಆದ ತೋಟವು ಕಂಗೋಳಿಸಿತು. ಅಡಿಕೆ, ತೆಂಗು, ಮಾವು, ಹಲಸು, ಬಾಳೆ ಮುಂತಾದ ಮರಗಳಿಂದಲೂ, ಕಬ್ಬು ಎಲೆಬಳ್ಳಿಗಳ ತೋಟಗಳಿಂದಲೂ, ಬಗೆಬಗೆಯ ಪುಷ್ಪಲತೆಗಳಿಂದಲೂ, ಆ ವನವು ಬಹು ಮನೋಹರವಾಗಿತ್ತು. ಇಂತಹ ಹೃದಯಂಗಮವಾದ ತೋಟದ ಮಧ್ಯದಲ್ಲೊಂದು ನಿರ್ಮಲೋದಕದಿಂದ ಬೆಳಗುತ್ತಿದ್ದ ಬಾವಿಯೊಂದಿತ್ತು. ಆ ಬಾವಿಯ ಸುತ್ತಲೂ ಬಾಳೆಗಂಬಗಳನ್ನು ನಟ್ಟು ತೆಂಗಿನ ಗರಿಗಳಿಂದಲೂ, ಮಾಂದಳಿರುಗಳಿಂದಲೂ, ಅದನ್ನು ಅಲಂಕರಿಸಿದ್ದರು. ಆ ಬಾವಿಯ ದಂಡೆಯ ಮೇಲೆ ಒಂದು ಸ್ವಚ್ಛವೂ, ವಿಶಾಲವೂ ಆದದ್ದೊಂದು ಬಂಗಲೆಯಿತ್ತು. ಅಡಿಗೆ ಮಾಡಲಿಕ್ಕೂ, ವಿಶ್ರಾಂತಿಗೂ, ಶಯನಕ್ಕೂ, ಬೇರೆ ಬೇರೆ ಸುಂದರವಾದ ಪರ್ಣಕುಟೀರಗಳನ್ನು ರಚಿಸಿದ್ದರು. ವಿರಾಮಕ್ಕಾಗಿ ತೋಟದಲ್ಲಿ ಅಲ್ಲಲ್ಲಿಗೆ ಲತಾಮಂಟಪಗಳನ್ನು ನಿರ್ಮಿಸಿದ್ದರು. ಹಸರು ವರ್ಣದಿಂದ ಶೋಭಿಸುತ್ತಿರುವ ಈ ತೋಟದಲ್ಲಿ ಶುಭ್ರವರ್ಣದಿಂದ ಪ್ರಕಾಶಿಸುತ್ತ ಒಂದು ರಾಹುಟಿಯು ಬಹು ಎತ್ತರವಾಗಿ ನಿಂತುಕೊಂಡಿತ್ತು. ಈ ತಂಬೂವನ್ನು ಧಾರವಾಡ ಜಿಲ್ಲೆಯ ಮೆ॥ಕಲೆಕ್ಟರ ಸಾಹೇಬ ಬಹದ್ದೂರವರ ಕಡೆಯಿಂದ ತೆಗೆದುಕೊಂಡು ಬಂದಿದ್ದರು. ಸರ್ವತೋಪರಿಯಿಂದ ಶೃಂಗಾರವಾಗಿದ್ದ ಈ ತೋಟದ ಮಧ್ಯದಲ್ಲಿರುವ ಬಂಗಲೆಯಲ್ಲಿಯೂ, ತಂಬೂದಲ್ಲಿಯೂ ರಾ.ಬ॥ರುದ್ರಗೌಡ ಸಾಹೇಬರಿಗಾಗಿಯೂ, ಶ್ರೀಮಂತರಿಗಾಗಿಯೂ ಬಿಡಾರಗಳನ್ನು ಗೊತ್ತು ಮಾಡಿದ್ದರು. ಊಟ ಉಪಚಾರವೆಲ್ಲ ಆ ತೋಟದಲ್ಲಿಯ ವಿಶ್ರಾಮಮಂದಿರದಲ್ಲಿಯೇ ಆಗತಕ್ಕದ್ದಿತ್ತು, ಆದರೆ ಆ ದಿವಸ ಮಳೆಯಾದುದರಿಂದ ಊರೊಳಗೆ ಚೆನ್ನಬಸಪ್ಪಸೆಟ್ಟರ ಹೊಸ ಮನೆಯಲ್ಲಿ ಬಿಡಾರವನ್ನು ಮಾಡಬೇಕಾಯಿತು.

ಸಭಾಮಂಟಪವನ್ನು ಬಹುವಿಶಾಲವಾಗಿ ರಚಿಸಿ ಜರತಾರಿಯ ಮತ್ತು ರೇಶಿಮೆಯ ವಸ್ತುಗಳಿಂದಲೂ, ಚಿತ್ರಪಟಗಳಿಂದಲೂ, ಕನ್ನಡಿಗಳಿಂದಲೂ, ಹಂಡೆ-ಗ್ಲಾಸ-ಗುಂಡು-ಗುಳಾಪುಗಳಿಂದಲೂ, ಝುಮರುಗಳ ಝುಗರಝುಗಾಟದಿಂದಲೂ, ಪುಷ್ಪಗುಚ್ಛಗಳಿಂದಲೂ, ಗೋಟುಪಟ್ಟಿಗಳಿಂದಲೂ, ಕಮಾನುಗಳಿಂದಲೂ ತಳಿರ್ದೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ, ಬಹು ಮನೋಹರವಾಗಿ ರಚಿಸಿದ್ದರು. ಉಚಿತಾಸನಗಳು ಬಹು ಅಂದವಾಗಿ ಇರಿಸಲ್ಪಟ್ಟಿದ್ದವು. ಮುಖಮಂಟಪವು ಬಹು ರಮಣೀಯವಾಗಿತ್ತು. ಈ ಸ್ಮಾರಕಮಂದಿರ ಸ್ಥಾಪನಾ ಸಭೆಯ ಸಮಾರಂಭವನ್ನು ನೋಡಲಿಕ್ಕೆಂದು ದೂರದೂರಿಂದ ಜನರು ಮೊದಲೇ ಬಂದಿದ್ದರು. ಊರಜನರು ಈ ಮಹೋತ್ಸವವನ್ನು ನೋಡಲಿಕ್ಕೆ ತಮ್ಮ ಬೀಗಬಿಜ್ಜರನ್ನೂ, ಆಪ್ತೇಷ್ಟರನ್ನೂ ಕರಿಸಿಕೊಂಡಿದ್ದರು. ಬಂದ ಜನರ ಆದರಾತಿಥ್ಯಗಳಿಗಾಗಿ ಆ ಊರವರು ಒಂದೆರಡು ತಿಂಗಳ ಅಡಿಗೆಯ ಸರ್ವಸಂಗ್ರಹ ಮಾಡಿಟ್ಟುಕೊಂಡಿದ್ದರು. ಗ್ರಾಮದೇವತೆಯ ಉತ್ಸವದಲ್ಲಿ ಹೇಗೆ ಪರಸ್ಥಳೀಯ ಜನರು ಬಂದು ಊರನ್ನು

ತುಂಬಿಕೊಳ್ಳುವರೋ ಬಂದವರ ಊಟ ಉಪಚಾರಕ್ಕಾಗಿ ಊರವರು ಪರಮಾನ್ನಗಳ ಸಾಹಿತ್ಯಗಳನ್ನು ಹೇಗೆ ಸಂಗ್ರಹಿಸಿಡುವರೋ ಹಾಗೆ ಸರ್ವವ್ಯವಸ್ಥೆಯಾಗಿತ್ತು. ಈ ಸತ್ಕೃತ್ಯ ಸಮಾರಂಭಕ್ಕಾಗಿ ಶ್ರೀ ಹಾನಗಲ್ ಕುಮಾರಸ್ವಾಮಿಗಳವರನ್ನು ದೇವೀಹೊಸೂರ ಸೆಟ್ಟರು ಮೊದಲೇ ಕರಿಸಿಕೊಂಡಿದ್ದರು.

ತಾರೀಖು ೨೨-೧೨-೦೭ನೇ ದಿವಸ ದಿವ್ಯ ಸಭಾಮಂಟಪದಲ್ಲಿ ಶ್ರೀ ಹಾನಗಲ್ ಕುಮಾರಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಯು ಸಾಂದ್ರವಾಗಿ ಕೂಡಿತು. ಸಭೆಗೆ ಹಾವೇರಿ, ಹುಬ್ಬಳ್ಳಿ, ಧಾರವಾಡ, ಬ್ಯಾಡಗಿ ಮುಂತಾದ ಕಡೆಯಿಂದ ಬಹುಜನರು ಕೂಡಿದ್ದರು. ಸುಮಾರು ೧೦೦೦೦ (ಹತ್ತು ಸಾವಿರ) ಜನರು ಕೂಡಿದ್ದರು. ಬ್ಯಾಡಗಿಯ ಮುರಿಗೆಪ್ಪಾ ಕಾಟನಹಳ್ಳಿ ಎಂಬವರು, ಚೆನ್ನಬಸಪ್ಪಸೆಟ್ಟರೇ ಮೊದಲು ಮಾಡಿಕೊಂಡು ದೇವೀಹೊಸೂರ ವೀರಶೈವ ಜನರ ವತಿಯಿಂದ ಶ್ರೀ ಮಹಾಸ್ವಾಮಿಗಳ, ರಾ.ಬ॥ರವರ, ಶ್ರೀಮಂತರ ಸ್ವಾಗತದ ಭಾಷಣಮಾಡಿ ಅನಂತರ ಸಭೆಯ ಉದ್ದೇಶವನ್ನೂ ಹೇಳಿ, ಶ್ರೀಮಂತರ ಸ್ಮಾರಕಮಂದಿರ ಸ್ಥಾಪನೆಯನ್ನು ಮಾಡುವ ಆವಶ್ಯಕತೆ ಈ ವಿಷಯದ ಮೇಲೆ ಒಳ್ಳೇ ಸರಸಾಗಿ ಭಾಷಣ ಮಾಡಿದರು. ಮತ್ತೆ ಕೆಲ ಕೆಲ ಜನರು ಚೆನ್ನಾಗಿ ಉಪನ್ಯಾಸ ಮಾಡಿದರು. ಶ್ರೀಮಂತರ ಸ್ಮಾರಕಮಂದಿರವನ್ನು ಸ್ಥಾಪಿಸಬೇಕೆಂದೂ, ಆ ಸ್ಮಾರಕ ಮಂದಿರದಲ್ಲಿ ಶ್ರೀಮಂತರ ಹೆಸರಿನಿಂದ ಪಾಠಶಾಲೆ ನಡೆಯಬೇಕೆಂದೂ, ಆ ಮಂದಿರದ ಅಸ್ತಿವಾರವನ್ನು ಶ್ರೀಮಂತರ ಪರಮ ಸ್ನೇಹಿತರಾದ ರಾ.ಬ॥ಅರಟಾಳ ಸಾಹೇಬರೇ ಹಾಕಬೇಕೆಂದೂ ಸಭೆಯಲ್ಲಿ ನಿರ್ಣಯವಾಯಿತು. ತಳಹದಿಯ ಆರಂಭಕ್ಕಾಗಿ ಬೆಳ್ಳಿಯ ತಾಟಿನಲ್ಲಿ ಗಚ್ಚನ್ನಿಟ್ಟು ಬೆಳ್ಳಿಯ ಸಾಧನಗಳನ್ನಿರಿಸಿದ್ದರು. ಅವುಗಳ ಸಹಾಯದಿಂದ ರಾ.ಬ॥ಅರಟಾಳ ಸಾಹೇಬರು ಬಹು ಆನಂದದಿಂದ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರ ಸ್ಮಾರಕಮಂದಿರದ ಅಸ್ತಿವಾರವನ್ನು ತಮ್ಮ ಕರಕಮಲದಿಂದ ಹಾಕಿದರು. ಮಂಗಳವಾದ್ಯಗಳು ಮೊಳಗಿದವು. ಗಾಯನ ಸಮಾರಂಭವಾಯಿತು. ಹಾರ, ತುರಾಯಿ, ಅತ್ತರ ಮೊದಲಾದವುಗಳ ಸಮಾರಂಭದೊಂದಿಗೆ ಸಭಾಕಾರ್ಯವು ಬಹು ಸೊಗಸಾಗಿ ನೆರವೇರಿತು. ಅದೇ ದಿವಸ ಸಂಜೆಯ ಮುಂದೆ ಆ ಸ್ಮಾರಕಮಂದಿರದಲ್ಲಿ ಮುಂದೆ ಏನು ಮಾಡತಕ್ಕದ್ದೆಂಬದರ ಕಾರ್ಯಕ್ರಮವನ್ನು ವಿಚಾರಿಸುವ ಬಗ್ಗೆ ಕಮಿಟಿಯು ಕೂಡಿತು.

ಈ ಸಮಾರಂಭದ ವಿಷಯವಾಗಿಯೂ, ರಾ.ಬ॥ರವರ ಹಾಗೂ ಶ್ರೀಮಂತರ ಆಗಮನದ ಸಲುವಾಗಿಯೂ ಚೆನ್ನಬಸಪ್ಪಸೆಟ್ಟರು ಸರ್ವವ್ಯವಸ್ಥೆಯನ್ನು ಬಹಳ ಚೆನ್ನಾಗಿ ಇಟ್ಟಿದ್ದರು. ಈ ಸಮಾರಂಭದ ಸಲುವಾಗಿ ಅವರು ಸುಮಾರು ಎರಡು ಮೂರು ಸಾವಿರ ರೂಪಾಯಿ ವೆಚ್ಚ ಮಾಡಿರಬಹುದು. ಬಂದಜನರ ಭೋಜನಕ್ಕಾಗಿ ಬುಂದೇ, ಬೇಸನ, ಜಿಲೇಬಿ, ಸುರಳೀಹೋಳಿಗೆ ಮುಂತಾದ ಪಕ್ವಾನ್ನಗಳನ್ನು ಪರಿಮಿತಿಯಿಲ್ಲದೆ ಮಾಡಿಸಿ ಕೋಣೆಗಳಲ್ಲಿ ತುಂಬಿಸಿದ್ದರು. ಬಂದಷ್ಟು ಜನರಿಗೆ ಭೋಜನಕ್ಕೆ ಮುಕ್ತದ್ವಾರವಿತ್ತು. ಎಲ್ಲ ಜನರಿಗೂ ಭೇದಾಭೇದವಿಲ್ಲದೆ ಎಲ್ಲ ಪರಮಾನ್ನಗಳನ್ನು ಬಡಿಸುತ್ತಿದ್ದರು. ಬ್ರಾಹ್ಮಣರಿಗೂ, ಲಿಂಗಾಯತರಿಗೂ, ಇತರ ಜಾತಿಯವರಿಗೂ ಎಲ್ಲರಿಗೂ ಸರಬರಾಯಿ ಮಾಡಲ್ಪಟ್ಟಿತು. ಬೇಡಿದವರಿಗೆ ಬೇಡಿದಷ್ಟು ಸಾಹಿತ್ಯವನ್ನು ಕೊಡುತ್ತಿದ್ದರು. ಒಂದು ದಿವಸ ಖೀರು ಮಾಡಿಸಿ ಸರ್ವಜನರಿಗೂ ಬಡಿಸಿದರು. ಭೋಜನ ನೆಟ್ಟಗಾಯಿತು. ಪ್ರತಿದಿವಸ ಸೂರ್ಯೋದಯಕ್ಕೆ ಸರಿಯಾಗಿ ೧೪ ಕೊಡ ಹಾಲು ಬರುತ್ತಿದ್ದವು. ಇದರ ಮೇಲಿಂದ ಸರ್ವವ್ಯವಸ್ಥೆಯು ಹೇಗೆ ಇಡಲ್ಪಟ್ಟಿತ್ತೆಂಬದೂ, ವೆಚ್ಚವು ಎಷ್ಟಾಗಿರಬಹುದೆಂಬದೂ ತಿಳಿಯುವಂತಿದೆ.

ಚೆನ್ನಬಸಪ್ಪ ಸೆಟ್ಟರು ಮನೆತನದಿಂದ ಮರ್ಯಾದಸ್ಥರೂ, ಘನವಂತರೂ ಇದ್ದು ಇತರ ಸೆಟ್ಟಿಗಳಂತೆ ದುರಭಿಮಾನಿಗಳಿರದೆ ವೀರಶೈವಮತದಲ್ಲಿ ಒಳ್ಳೇ ಅಭಿಮಾನಶೀಲರಾಗಿರುವರು. ಇವರ ವಯಸ್ಸು ಅಷ್ಟೇನು ದೊಡ್ಡದಾಗಿರದಿದ್ದರೂ ಮನಸ್ಸು ಬಲುದೊಡ್ಡದಾಗಿರುವದು. ಇವರ ಈಗಿನ ವಯಸ್ಸು ೨೫ವರ್ಷದ್ದಿರಬಹುದು. ಇಂತಹ ಚಿಕ್ಕವಯಸ್ಸಿನಲ್ಲಿ ಇಂತಹ ಘನಕಾರ್ಯಪ್ರವರ್ತಕರಾಗಿ, ಮಹೌದಾರ್ಯತೋರಿಸಿ, ಮತಾಭಿಮಾನಿಗಳೆಂದೆನ್ನಿಸಿಕೊಂಡು ಮಹನೀಯರ ಪ್ರೇಮಕ್ಕೆ ಪಾತ್ರರಾದದ್ದು ಇವರಿಗೆ ಒಳ್ಳೇ ಅಲಂಕಾರ

ಪ್ರಾಯವಾಗಿರುವದು. ಕರ್ನಾಟಕದಲ್ಲಿ ಊರೂರಿಗೆ ಅಲ್ಲಲ್ಲಿ ಎಷ್ಟೋ ಮಂದಿ ಸೆಟ್ಟರು ಘನವಂತರಾಗಿದ್ದರೂ, ಕೆಲವರು ಮತೋನ್ನತಿಯ ಕಾರ್ಯಕ್ಕೆ ತಿಲಮಾತ್ರ ಸಹಾಯಕರಾಗದೆ ವ್ಯವಹಾರ ವ್ಯಾಜ್ಯದಿಂದ ಕಯ್ಯೊಳಗೆ ಸಿಕ್ಕ ಹೆರವರ ಗಂಟನ್ನು ಎತ್ತಿಹಾಕಿ, ಲಿಗಾಡ ಸೆಟ್ಟಿಗಳೆಂಬ ಅಭಿದಾನಕ್ಕೆ ಪಾತ್ರರಾಗಿರುವರು. ಚೆನ್ನಬಸಪ್ಪಸೆಟ್ಟರು ಮಾತ್ರ ಈ ಲಿಗಾಡ ಸೆಟ್ಟರ ಮಾಲಿಕೆಯಲ್ಲಿ ಸೇರಿದವರಾಗದೆ, ಪೂರ್ವವಯಸ್ಕರಲ್ಲಿಯೇ ತನುಮನಧನಗಳಿಂದ ಈ ಸ್ಮಾರಕಮಂದಿರವನ್ನು ಸ್ಥಾಪಿಸುವ ಸಮಾರಂಭವನ್ನೆಸಗಿ, ಶ್ರೇಯಸ್ಕರರಾದ ಸೆಟ್ಟರ ಮಾತಿನಲ್ಲಿ ಗಣಿಸತಕ್ಕವರಾದರೆಂದು ನಿರ್ವಿವಾದವಾಗಿ ಹೇಳಬಹುದು. ಕೆಲ ಸೆಟ್ಟರು ಚೆನ್ನಬಸಪ್ಪಸೆಟ್ಟರಂತೆ ಮತಾಭಿಮಾನಿಗಳಾಗಿದ್ದು ಲೋಕಪ್ರಿಯರಾಗಿರುವರು. ಕೆಲವರು ಯಾವಾಗಲೂ ಮತೋನ್ನತಿಯ ಕಾರ್ಯಭಾಗದಲ್ಲಿ ಜಾಗ್ರತರಾಗಿರುವರು. ಆದರೆ ಇಂತಹರು ತೀರ ವಿರಳ.

ಶ್ರೀಮಂತ ಲಿಂಗಪ್ಪ ದೇಸಾಯರ ಸ್ಮಾರಕಮಂದಿರದ ಸಮಾರಂಭವನ್ನು ನೋಡಿಕೊಂಡು ಚೆನ್ನಬಸಪ್ಪಸೆಟ್ಟರನ್ನು ಮೊದಲುಮಾಡಿ ದೇವೀಹೊಸೂರ ವೀರಶೈವರ ಅಭಿನಂದಮಾಡಿ ರಾ.ಬ॥ರವರೂ, ವಂಟಮುರಿಯ ಶ್ರೀಮಂತರೂ, ಸಕಲ ಪರಿವಾರದವರೂ, ತಾರೀಖು ೨೩ನೇ ತಾರೀಖು ಮುಂಜಾನೆ ಭೋಜನ ಮಾಡಿಕೊಂಡು ೯ ಗಂಟೆಯ ಸುಮಾರಕ್ಕೆ ಎಲ್ಲರ ನಿರೂಪತಕ್ಕೊಂಡು ಮಹಾವೈಭವದಿಂದ ಹಾವೇರಿಗೆ ಹನ್ನೊಂದು ಘಂಟೆಗೆ ಬಂದರು. ಹಾವೇರಿಯ ಸ್ಟೇಶನದ ಮೇಲೆ ಪುನಃ ಪಾನಸುಪಾರಿಯಾಯಿತು. ಅಲ್ಲಿಂದ ೧೨ ಘಂಟೆಗೆ ತಿರುಗಿ ಹುಬ್ಬಳ್ಳಿಗೆ ಹೋದರು. ಅಲ್ಲಿಯೂ ಸ್ಟೇಶನದಲ್ಲಿ ಪುನಃ ಪಾನಸುಪಾರಿಯ ಸಮಾರಂಭವಾಯಿತು. ಅಲ್ಲಿಂದ ಗದಗಿನ ಕಡೆಗೆ ಗಾಡಿಯನ್ನು ಬಿಡಲಿಕ್ಕೆ ಎರಡು ತಾಸಿನ ಅವಧಿಯು ಇರುವದರಿಂದ ಇಲ್ಲಿಯ ಘನ ವೇದಾಂತಿಗಳಾದ ಶ್ರೀ ಸಿದ್ಧಾರೂಢಸ್ವಾಮಿಗಳ ದರ್ಶನಕ್ಕೆ ದಯಮಾಡಿಸಬೇಕೆಂದು ಹುಬ್ಬಳ್ಳಿಯ ಮಾಮಲೇದಾರರಾದ ರಾ.ಸಾ॥ವಿರೂಪಾಕ್ಷಪ್ಪ ಕಲ್ಲೊಳ್ಳಿಗಿಯವರೂ, ನೀಲೀ ರಾಚಪ್ಪಣ್ಣನವರೂ ಆಗ್ರಹ ಮಾಡಿದರು. ಶ್ರೀಮಂತ ವಂಟಮುರಿಯ ಸರದೇಸಾಯಿಯವರೂ ಅಲ್ಲಿಗೆ ಹೋಗಲಿಕ್ಕೆ ಪ್ರೇರಣೆ ಕೊಟ್ಟರು. ಶ್ರೀಮಂತರು ರಾ.ಬ॥ರವರನ್ನು ಕುರಿತು "ರಾವಬಹದ್ದೂರರವರೇ, ಶ್ರೀ ಸಿದ್ಧಾರೂಢಸ್ವಾಮಿಗಳು ವೇದಾಂತರಹಸ್ಯದಲ್ಲಿ ಸಮ್ಯಕಜ್ಞಾನಿಗಳಿರುತ್ತಾರೆಂದು ಸರ್ವಶ್ರುತವಾಗಿರುವದು. ತಾವೂ ವೇದಾಂತವನ್ನೂ, ಶಾಸ್ತ್ರಸಾರವನ್ನೂ, ಬಲ್ಲವರಿರುವಿರಿ, ಸ್ವಾಮಿಗಳ ದರ್ಶನ ತಕ್ಕೊಂಡು ತುಸುಹೊತ್ತು ವೇದಾಂತ ವಿವೇಚನ ಮಾಡಿಕೊಂಡು ಬರೋಣವೆಂದರು. ಅಭಿಮತಕ್ಕೆ ಒಡಂಬಟ್ಟು ರಾ.ಬ॥ ರವರು ಎಲ್ಲರನ್ನೊಡಗೊಂಡು ಆರೂಢಸ್ವಾಮಿಗಳ ಮಠಕ್ಕೆ ಹೊರಟರು. ಹೋಗುವಾಗ ಹಾದಿಯಲ್ಲಿ ಶ್ರೀಮಂತರು "ರಾ.ಬ॥ರವರೇ, ಶಾಸ್ತ್ರವಿಚಾರದಲ್ಲಿ ಈಹೊತ್ತು ತಮ್ಮ ಪರೀಕ್ಷೆಯಾಗುವದು. ಸಿದ್ಧಾರೂಢಸ್ವಾಮಿಗಳ ಸಮ್ಮುಖದಲ್ಲಿ ತಾವು ಮೂರು ಪ್ರಶ್ನೆಗಳನ್ನು ಮಾಡಬೇಕು. ಎರಡು ಪ್ರಶ್ನೆಗಳಿಗೆ ಸ್ವಾಮಿಗಳು ಉತ್ತರವನ್ನು ಕೊಟ್ಟರೆ ನೀವು ಸೋತಂತಾಯಿತು. ಒಂದೇ ಪ್ರಶ್ನೆಗೆ ಉತ್ತರ ಬಂದರೆ ತಾವು ಗೆದ್ದಂತಾಯಿತು, ಅಂದರೆ ತಮಗೆ ವೇದಾಂತದಲ್ಲಿ ಪರಿಶ್ರಮವಿರುವದೆಂದು ನಾನು ನಂಬುತ್ತೇನೆ" ಎಂದು ಹೇಳಿದ್ದಕ್ಕೆ ರಾ.ಬ॥ರವರು ನಸುನಗುತ್ತ ಪ್ರಸಂಗವು ಹೇಗೆ ಅನುಕೂಲಿಸುತ್ತದೋ ನೋಡೋಣವೆಂದು ಎಲ್ಲರೂ ಗಮಿಸಿದರು. ದರ್ಶನವಾದನಂತರ ತುಸುಹೊತ್ತು ಶ್ರೀ ಸಿದ್ಧಾರೂಢಸ್ವಾಮಿಗಳಿಗೂ, ರಾ.ಬ॥ರುದ್ರಗೌಡಸಾಹೇಬರಿಗೂ ವೇದಾಂತ ವಿಷಯವಾಗಿ ವಿಚಾರ ನಡೆದ ನಂತರ ರಾ.ಬ॥ರವರು, ತಾತ್ವಿಕ ವಿಚಾರವೂ, ವೇದಾಂತರ್ಗತವೂ, ಆದ (೩) ಮೂರು ಪ್ರಶ್ನೆಗಳನ್ನು ಮಾಡಲಾಗಿ, ಸಿದ್ಧಾರೂಢರು ಮೂರೂ ಪ್ರಶ್ನೆಗಳಿಗೂ ನಿರುತ್ತರರಾದರು. ವೇದಾಂತ ವಿಷಯದಲ್ಲಿ ಜಗಜ್ಜಂಕ್ಯರಾದ ಶ್ರೀ ಸಿದ್ಧಾರೂಢಸ್ವಾಮಿಗಳು ಸಾಹೇಬರ ಮೂರು ಪ್ರಶ್ನೆಗಳಿಗೆ ಮೌನವೃತ್ತಿಯನ್ನೇಕೆ ಮಾಡಿದರೋ ತಿಳಿಯದು. ಇವರೀರ್ವರ ವೇದಾಂತದ ಚರ್ಚೆಗೂ, ಸಾಹೇಬರ ಪ್ರಶ್ನೆಗಳಿಗೂ, ಸಿದ್ಧಾರೂಢರ ಮೌನವೃತ್ತಿಗೂ ಚಕಿತರಾಗಿ ಸಾಹೇಬರ ಮಹಾಜ್ಞಾನಕ್ಕೆ ಆನಂದಿಸಿ,

ಮನಸಿನಲ್ಲಿಯೇ ಕೊಂಡಾಡಿದರು. ಅಷ್ಟೊತ್ತಿಗೆ ಗಾಡಿಯ ವೇಳೆಯಾಗಲು ಸ್ವಾಮಿಗಳ ಆಶೀರ್ವಾದವನ್ನು ಪಡೆದುಕೊಂಡು ಸ್ಟೇಶನಕ್ಕೆ ಬಂದು, ಮಧ್ಯಾಹ್ನದ ೨ ಗಂಟೆಗೆ ಗಾಡಿಯಲ್ಲಿ ಕೂತರು. ಸಿದ್ಧಾರೂಢರ ಕೂಡ ನಡೆದ ವೇದಾಂತಸಂವಾದವನ್ನೂ, ಪ್ರಶ್ನೆಗಳನ್ನೂ ವಿಮರ್ಶಿಸುತ್ತ ಮುಂದೆ ಸಾಗಿದರು. ಉಭಯ ಮಹನೀಯರ ಮಾರ್ಗ ಪ್ರತೀಕ್ಷೆ ಮಾಡುತ್ತ ಅಣ್ಣಿಗೇರಿಯ ವೀರಶೈವರು ತಮ್ಮ ಸ್ಟೇಶನದಲ್ಲಿ ವಿರಾಜಮಾನರಾಗಿದ್ದರು. ಅಣ್ಣಿಗೇರಿಯ ಸ್ಟೇಶನದಲ್ಲಿ ಭದ್ರಾಪುರ ಸಾವಕಾರರು ಬಹು ಸಮಾರಂಭದಿಂದ ಪಾನಸುಪಾರಿಯನ್ನು ಮಾಡಿದರು. ಅಲ್ಲಿಂದ ಸಂಜೆಯ ೫-೬ ಘಂಟೆಯ ಸುಮಾರಕ್ಕೆ ಉಗೆಬಂಡಿಯು ಗದಗ ಸ್ಟೇಶನಕ್ಕೆ ನಿಂತಿತು. ಈ ಮಹನೀಯರ ಆಗಮನ ಪ್ರೀತ್ಯರ್ಥವಾಗಿ ಸ್ಟೇಶನವು ಶೃಂಗರಿಸಲ್ಪಟ್ಟಿತು. ಅಲ್ಲಿಯ ಪ್ರಸಿದ್ಧ ವೀರಶೈವ ಧನಾಢ್ಯರಾದ ಮಲ್ಲೇಶಪ್ಪ ಮಾನ್ವಿಯವರೂ, ಶ್ರೀತೋಂಟದ ಸ್ವಾಮಿಗಳವರ ಮರಿದೇವರೂ, ಪಟ್ಟದ್ದೇವರೂ, ಚರಮೂರ್ತಿಗಳೂ, ಇನ್ನೂ ಅನೇಕ ಮಹಾಜನರೂ ಬಂದು ಸ್ಟೇಶನದಿಂದ ಅತಿ ವೈಭವದೊಡನೆ ಶ್ರೀ ಮಜ್ಜಗದ್ಗುರು ತೋಂಟದಸ್ವಾಮಿಗಳವರ ಮಠಕ್ಕೆ ಕರೆದುಕೊಂಡು ಹೋದರು. ಊಟ ಉಪಚಾರವೆಲ್ಲ ಮಠದಲ್ಲಿಯೇ ಆಯಿತು. ಸರ್ವೋತ್ಕೃಷ್ಟವಾದ ಗಾಯನ ಸಮಾರಂಭವಾಯಿತು. ತಾರೀಖು ೨೪ನೇ ದಿವಸ ಊರಲ್ಲಿ ಮಾನ್ವಿ ಮುಂತಾದ ದೊಡ್ಡ ದೊಡ್ಡ ಜನರ ಮನೆಗಳಲ್ಲಿಯೂ, ನೇಟಿಹ್ವ ಜನರ ಕ್ಲಬ್ಬಿನಲ್ಲಿಯೂ ಪಾನಸುಪಾರಿಯ ಮಹೋತ್ಸವಗಳಾದವು. ಈ ಉತ್ಸವಗಳಲ್ಲಿ ವಿದ್ಯುದ್ದೀಪಗಳು ಬೆಳಗುತ್ತಿದ್ದವು. ನಾಚು, ರಂಗು, ಬೈಠಕುಗಳು ರಸಿಕ ಜನಸಮೂಹವನ್ನು ತಲೆದೂಗಿಸುತ್ತಿದ್ದವು. ಈ ಉಭಯ ಮಹನೀಯರ ಆಗಮನಕ್ಕೆ ಶ್ರೀ ತೋಂಟದ ಮಹಾಸ್ವಾಮಿಗಳು ಬಹಳೇ ಸಂತೋಷಪಟ್ಟರು. ಇವರ ಭೆಟ್ಟಿಗಾಗಿ ಎಷ್ಟೋ ಜನ ಪಂಡಿತರೂ, ಶಾಸ್ತ್ರಿಗಳೂ, ಪುರಾಣಿಕರೂ ಬಂದಿದ್ದರು. ಅವರಿಗೆ ಶಾಸ್ತ್ರಾರ್ಥವಿಚಾರದಲ್ಲಿಯೂ, ವೇದಾಂತ ವಿಷಯದಲ್ಲಿಯೂ ಸಾಹೇಬರು ಪ್ರಶ್ನೆಗಳನ್ನು ಮಾಡಿದರು. ಇವರ ಮಹತ್ತಮವಾದ ಪ್ರಶ್ನೆಗಳಿಗೆ ಯಾವ ಶಾಸ್ತ್ರಿಯೂ ಉತ್ತರ ಕೊಡಲಿಲ್ಲ. ಯಾವ ಪಂಡಿತನೂ ಮುಂದರಿಯಲಿಲ್ಲ. ಎಷ್ಟೋ ತಾತ್ವಿಕ ವಿಚಾರಗಳನ್ನೂ, ಶಾಸ್ತ್ರಸಂಗತಿಯನ್ನೂ ತಾವಾಗಿಯೇ ಹೇಳಿದ್ದನ್ನು ಕೇಳಿ ರಾ.ಬ॥ರುದ್ರಗೌಡರು ರಾಜ್ಯಸೂತ್ರದಲ್ಲಿ ಧುರೀಣರಿದ್ದಂತೆ ಮಹಾಜ್ಞಾನಿಗಳೂ ಇರುವರೆಂದು ಜನಸಮೂಹವು ಇವರನ್ನು ಕೊಂಡಾಡಹತ್ತಿತು.

ಈ ಪ್ರಕಾರ ಆನಂದದಿಂದ ಅಲ್ಲಿ ಒಂದೆರಡು ದಿವಸ ನಿಂತು ಎಲ್ಲರ ಪ್ರೀತಿಯನ್ನು ಪೂರ್ಣಗೈದು, ಜಗದ್ಗುರು ಶ್ರೀ ತೋಂಟದ ಮಹಾಸ್ವಾಮಿಗಳವರ ಆಶೀರ್ವಾದವನ್ನು ಹೊಂದಿ, ಮಾನ್ವಿ ಮುಂತಾದ ಗದಗಿನ ವೀರಶೈವರ ಅಭಿನಂದನ ಮಾಡಿ, ತಾರೀಖು ೨೫ನೇ ಮಧ್ಯಾಹ್ನದ ೧ ಗಂಟೆಯ ಉಗೆಬಂಡಿಯಿಂದ ಹೊರಟರು. ದಾರಿಯಲ್ಲಿ ಆಲೂರ, ಬಾದಾಮಿ, ಬಾಗಲಕೋಟಿ, ಚಿಮ್ಮಲಗಿ, ವಿಜಾಪುರ ಮುಂತಾದ ಪ್ರತಿಯೊಂದು ಸ್ಟೇನದಲ್ಲಿಯೂ ಅನೇಕ ಪಾನಸುಪಾರಿಯ ಸಮಾರಂಭಗಳಾದವು. ಕಟಗೇರಿಯ ಸ್ಟೇಶನದಲ್ಲಿ ಒಬ್ಬ ಲಿಂಗಾಯತ ಜಾತಿಯ ಮುದಿಕೆಯು ಕೃತಜ್ಞತೆಯಿಂದ ಒಂದು ಬುಟ್ಟಿ ಸವತಿಕಾಯಗಳನ್ನು ತೆಗೆದುಕೊಂಡು ಬಂದು ಸಾಹೇಬರ ಮುಂದಿಟ್ಟು "ಓ! ಬಡಜನರಿಗೆ ಆಧಾರವಾಗಿರುವ ದೊರೆಯೆ, ಈ ನನ್ನ ಬಡಭಕ್ತಿಯನ್ನು ಕೈಕೊಳ್ಳಬೇಕೆ"ಂದು ನಮಸ್ಕರಿಸಿ ಬೇಡಿಕೊಳ್ಳುವದನ್ನು ಕಂಡು ಸಾಹೇಬರಿಗೆ ನಗೆ ಬಂತು, ಇದನ್ನು ನೋಡಿ ಶ್ರೀಮಂತರೇ ಮೊದಲಾಗಿ ಯಾವತ್ತರೂ, ಸೋಜಿಗಗೊಂಡರು. "ನೀನು ಬಡವಿಯು. ಈ ಸವತಿಯಕಾಯಿಗಳನ್ನು ತಕ್ಕೊಂಡು ಹೋಗಿ ಮಾರಿಕೊಳ್ಳುವಂಥವಳಾಗು, ನಿನ್ನ ಕೃತಜ್ಞತಾಬುದ್ಧಿಯನ್ನೂ, ಭಕ್ತಿಭಾವವನ್ನೂ ಕಂಡು ನಮಗೆ ಆನಂದವಾಯಿತೆಂದು" ಸಾಹೇಬರು ಹೇಳಲು ಆ ಮುದಿಕೆಯು "ಹಾಗೆ ಎಂದಿಗೂ ಆಗದು, ನಿಮ್ಮ ಸಲುವಾಗಿಯೇ ತಂದ ಇವುಗಳನ್ನು ನಾನು ಎಂದಿಗಾದರೂ ಹಿಂದಕ್ಕೊಯ್ದೇನೇ?ನೀವು ಸೇವಿಸದಿದ್ದರೂ ನಿಮ್ಮ ಪರಿವಾರದವರೂ, ಸೇವಕರೂ ತಿನ್ನಲಿ. ದಯಮಾಡಿ ಸ್ವೀಕರಿಸಬೇಕೆಂದು" ಕೈಕಟ್ಟಿ ಬೇಡಿಕೊಳ್ಳುವ ದೀನ ಮುದಿಕೆಯನ್ನು

ಸಂತೈಸುವದಕ್ಕಾಗಿ ಸಾಹೇಬರೂ, ಶ್ರೀಮಂತರೂ ಒಂದೊಂದು ಸವತಿಯ ಕಾಯನ್ನು ಕಯ್ಯೊಳಗೆ ತಕ್ಕೊಂಡರು. ಅದರಿಂದಲೂ ಮುದಿಕೆಯು ಆನಂದವನ್ನು ಹೊಂದಿ "ಓ, ಬಡಬಗ್ಗರ ಮೊರೆಯನ್ನು ಕೇಳಿಕೊಳ್ಳುವ ದೊರೆಯೇ, ನೀನು ಇನ್ನೂ ನೂರು ವರ್ಷ ಬದುಕು" ಎಂದು ಹರಸುತ್ತ ಹಾದಿಯನ್ನು ಹಿಡಿಯುವವಳಾದಳು. ಪ್ರಿಯವಾಚಕರೇ! ಈ ಮುದುಕಿಯು ಸವತಿಯಕಾಯಗಳನ್ನು ಕಟ್ಟಿಕೊಂಡು ಬಂದು ಇವರಿಗೆ ಇಷ್ಟು ಭಕ್ತಿಯಿಂದ ಕೊಡುವ ಕಾರಣವೇನೆಂದು ನೀವು ಅರಿದಾಗಿರಬಹುದು. ಸಾಹೇಬರು ಹಿಂದಕ್ಕೆ ಬೆಳಗಾವಿಯಲ್ಲಿ ಕಮೀಶನರ ಕಚೇರಿಯಲ್ಲಿ ದಪ್ತರದಾರರಿದ್ದಾಗ ಇವರ ಬರಹದ ಪ್ರಕಾರ ಈ ಮುದಿಕೆಯದೊಂದು ವ್ಯಾಜ್ಯವನ್ನು ಸರಕಾರದವರು ಈಕೆಯಂತೆಯೇ ನಿರ್ಣಯಿಸಿದ್ದರು. ಈ ಉಪಕಾರವನ್ನು ಸ್ಮರಿಸಿ ಈ ಬಡಮುದಿಕೆಯು ಸಾಹೇಬರ ಬರುವಿಕೆಯನ್ನು ತಿಳಿದು, ಅಳಲಿಯ ಭಕ್ತಿಯಂತೆ ಈ ಸವತಿಯಕಾಯಗಳನ್ನು ಕಾಣಿಕೆಯಾಗಿ ಅತಿಪ್ರೀತಿಯಿಂದ ತೆಗೆದುಕೊಂಡು ಬಂದಿದ್ದಳು. ಸ್ವಾರ್ಥಸಾಧನಾರ್ಥವಾಗಿಯೂ, ಜನರಲ್ಲಿ ದೊಡ್ಡಸ್ತಿಕೆಯನ್ನು ತೋರ್ಪಡಿಸುವದಕ್ಕಾಗಿಯೂ ಧನವಂತರು ಕಾಣಿಕೆಗಾಗಿ ತರುವ ಬೆಲೆಯುಳ್ಳ ಹಣ್ಣು ಹಂಪಲಗಳಿಗಿಂತಲೂ ಈ ಬಡಮುದಿಕೆಯು ಕೃತಜ್ಞತೆಯಿಂದಲೂ, ಮುಗ್ಧಭಕ್ತಿಯಿಂದಲೂ ತಂದ ಈ ಸವತಿಯ ಕಾಯಿಗಳೇ ಲೇಸೆಂದು ಸಂತೋಷಗೊಂಡರು. ನ್ಯಾಯವಂತಿಕೆಗೂ, ಸಜ್ಜನತ್ವಕ್ಕೂ ಎಲ್ಲಿಯಾದರೂ ಯಾವಾಗಲೂ ಸನ್ಮಾನವಾಗತಕ್ಕದ್ದೇ ಸರಿ.

ವಿಜಾಪುರದ ವೀರಶೈವರು ತಮ್ಮೂರಿಗೆ ಇಳಿಯಬೇಕೆಂದೂ, ಒಂದು ದಿವಸವಾದರೂ ನಮ್ಮಲ್ಲಿದ್ದು ಹೋಗಬೇಕೆಂದೂ, ಕಡೆಗೆ ಭೋಜನ ಮಾಡಿಕೊಂಡಾದರೂ ತೆರಳಬೇಕೆಂದೂ ಸ್ಟೇಶನದಲ್ಲಿ ಸಾಹೇಬರಿಗೂ, ಶ್ರೀಮಂತರಿಗೂ ಬಹಳೇ ಅಗ್ರಹಮಾಡಿದರು. ಅವಕಾಶವಿಲ್ಲದ್ದಕ್ಕಾಗಿ ಅಲ್ಲಿ ಇಳಿಯಲಿಲ್ಲ. ತಿರುಗಿ ಬರುವಾಗಾದರೂ ಬಂದು ಹೋಗಬೇಕೆಂದು ಬೇಡಿಕೊಂಡರು. ಅದಕ್ಕೆ "ನಮಗೆ ಅನುಕೂಲವಾಗಲಿಕ್ಕಿಲ್ಲ, ನಮ್ಮ ಚಚಡಿಯ ಶ್ರೀಮಂತ ನಾಯಕಬಹದ್ದೂರ ದೇಸಾಯಿಯವರು ತಿರುಗಿ ಬರುವಾಗ ನಿಮ್ಮಲ್ಲಿಗೆ ಬರುವರೆಂದು" ಹೇಳಿದರು. ವಿಜಾಪುರ ಸ್ಟೇಶನದಲ್ಲಿ ಪಾನಸುಪಾರಿಯ ಸಮಾರಂಭವಾಯಿತು. ಕೂಡಲೆ ಉಗಿಬಂಡಿಯು ಮುಂದೆ ಸಾಗಿತು. ಹುಟಗೀ ಸ್ಟೇಶನದಲ್ಲಿ ಮೈಸೂರ ೨ನೇ ಕೌನ್ಸಿಲದಾರರಾದ ನಾಮದಾರ ಪುಟ್ಟಣ್ಣಸೆಟ್ಟರವರು ಬಂದು ಕೂಡಿದರು. ಎಲ್ಲ ಮಹಾಶಯರೂ ಮುಂದೆ ಐ.ಆಯ್.ಪಿ. ರೇಲ್ವೆ ಮಾರ್ಗದಿಂದ ತಾರೀಖು ೨೬ನೇ ಡಿಸಂಬರ ದಿವಸ ಮುಂಜಾನೆ ೮ ಘಂಟೆಗೆ ಸೊಲ್ಲಾಪುರ ಸ್ಟೇಶನಕ್ಕೆ ಇಳಿದರು.

ಶ್ರೀಮದ್ವೀರಶೈವ ೩ನೇ ಮಹಾಸಭೆ (೧೯೦೭ನೇ ಡಿಸೆಂಬರ)

ನಿಯಮಿತ ವೇಳೆಗೆ ಸರಿಯಾಗಿ ನಾಮದಾರ ಕೆ.ಪಿ. ಪುಟ್ಟಣ್ಣಸೆಟ್ಟರೇ ಮೊದಲಾಗಿ ಮೈಸೂರ ವೀರಶೈವ ಮುಖಂಡರೂ, ರಾ.ಬ||ರುದ್ರಗೌಡಸಾಹೇಬರೂ, ವಂಟಮುರಿಯ ಶ್ರೀಮಂತರೂ ಸ್ಟೇಶನಕ್ಕೆ ಬಂದೊಡನೆ ರಾ.ಸಾ||ವಾರದ ಮಲ್ಲಪ್ಪಣ್ಣನವರೇ ಮೊದಲಾಗಿ ಸೊಲ್ಲಾಪುರದ ವೀರಶೈವರು ಸ್ಟೇಶನದ ಮೇಲೆ ಇವರ ಸ್ವಾಗತ ಸಮಾರಂಭವನ್ನು ಮಾಡಿ, ಈ ಮಹನೀಯರನ್ನು ದಿವ್ಯರಥಗಳಲ್ಲಿ ಕೂಡಿಸಿ, ಮಂಗಳವಾದ್ಯಗಳ ರಭಸದೊಡನೆ ಬಹು ಸಂಭ್ರಮದಿಂದ ಕರೆದುಕೊಂಡು ಹೋಗಿ, ಅವರವರಿಗಾಗಿ ನೇಮಕಮಾಡಿದ ಬಂಗಲೆಗಳಲ್ಲಿ ಇಳಿಸಿದರು. ತಾರೀಖು ೨೭ನೇ ದಿವಸ ನಿಯಮಿತ ವೇಳೆಗೆ ಸರಿಯಾಗಿ ಮಹಾಸಭೆಯು ಕೂಡಿತು. ಬೆಂಡಬಾಜಾ ಎಂಬ ಪಾಶ್ಚಾತ್ಯ ಮಂಗಳವಾದ್ಯಗಳು ಸಭಾಸದರನ್ನು ಕುರಿತು ಸುಸ್ವರದಿಂದ ಸ್ವಾಗತವನ್ನುಂಟು ಮಾಡುತ್ತಲಿತ್ತು. ನಾಮದಾರ ಕೆ.ಪಿ. ಪುಟ್ಟಣ್ಣಸೆಟ್ಟರೂ, ರಾ.ಬ||ರುದ್ರಗೌಡಸಾಹೇಬರೂ, ವಂಟಮುರಿಯ ಸರದೇಸಾಯಿಯವರೂ ಸಭಾಪ್ರವೇಶಮಾಡಿದೊಡನೆ ಜಯ ಜಯಕಾರವೂ, ಆನಂದವೂ, ಶ್ರೀ ಹಾನಗಲ್ ಕುಮಾರಸ್ವಾಮಿಗಳು ದಯಮಾಡಿಸುತ್ತಲೆ "ಹರಹರ ಮಹಾದೇವ" ಎಂಬ ಉಚ್ಚಧ್ವಾನವೂ, ಕರತಳಗಳ ಸಪ್ಪಳದೊಂದಿಗೆ

ಪ್ರತಿಧ್ವನಿಯನ್ನುಂಟು ಮಾಡುತ್ತ ವಾಯುಮಂಡಲದಲ್ಲಿ ವಿಲೀನವಾಗಿ ಹೋಗುತ್ತಿದ್ದವು. ವಿರಕ್ತವರ್ಯರೂ, ಪಟ್ಟ ಚರಮೂರ್ತಿಗಳೂ, ಸಿಂಹಾಸನಾಧಿಪತಿಗಳೂ, ಶೂನ್ಯಸಿಂಹಾಸನಾಧಿಪತಿಗಳೂ, ಗುರುಸ್ಥಳದವರೂ, ಶಾಸ್ತ್ರಿಗಳೂ, ಪುರಾಣಿಕರೂ, ಆಫೀಸರರೂ, ಅಧಿಕಾರಿಗಳೂ ಅಲ್ಲದೆ ಅನೇಕ ಜನ ಪ್ರತಿನಿಧಿಗಳೂ, ಪ್ರೇಕ್ಷಕರೂ, ಸನ್ಮಾನನೀಯರೂ, ಚೆನ್ನಾಗಿ ಕೂಡಿದ್ದರು. ಸುಮಾರು ಏಳೆಂಟು ಸಾವಿರದ ವರೆಗೆ ಜನಸಮೂಹವು ಕೂಡಿತ್ತೆಂದು ತಿಳಿಯುತ್ತದೆ. ಮೊದಲೇ ಗೊತ್ತುಪಡಿಸಿದಂತೆ ಸಭಾಧ್ಯಕ್ಷಸ್ಥಾನವು ಮೈಸೂರ ಸರಕಾರದ ಕೌನ್ಸಿಲದಾರರಾದ ನಾಮದಾರ ಕೆ.ಪಿ. ಪುಟ್ಟಣ್ಣಸೆಟ್ಟರವರಿಗೆ ಕೊಡಲ್ಪಟ್ಟು, ಸಭಾಕಾರ್ಯವು ಪ್ರಾರಂಭವಾಯಿತು. ಉಪಾಧ್ಯಕ್ಷರು ಶ್ರೀಮಂತ ವಾರದ ಮಲ್ಲಪ್ಪಣ್ಣನವರೇ ಸರಿ.

ಸಭೆಯ ಕಾರ್ಯಾರಂಭಕ್ಕೆ ಮೊದಲು ರಾ.ಬ॥ರುದ್ರಗೌಡ ಸಾಹೇಬರವರು ತಮ್ಮ ಪರಮಸ್ನೇಹಿತರಾದ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಶಿರಸಂಗಿಯವರು ಹಿಂದಿನ ಎರಡೂ ಮಹಾಸಭೆಗಳಲ್ಲಿ ವಿರಾಜಮಾನರಾಗಿದ್ದು, ಈ ೩ನೇ ಮಹಾಸಭೆಯಲ್ಲಿ ಅವರು ಇಲ್ಲದಂತಾಗಿದ್ದಕ್ಕೂ, ಈಗ ಅವರ ಚಿತ್ರಪಟವನ್ನೇ ಕಂಡು ಕಾಲ ಕಳೆಯಬೇಕಾದುದಕ್ಕೂ ಮರುಗಿ, ಅಡರಿ ಬರುವ ದುಃಖವನ್ನು ಸೈರಿಸಿಕೊಳ್ಳುತ್ತ ಗದ್ಗಗಿತ ಕಂಠದಿಂದ ಶ್ರೀಮಂತರ ಮರಣವನ್ನೂ, ಅವರ ಮರಣದಿಂದುಂಟಾದ ನಮ್ಮ ವೀರಶೈವರ ಹಾನಿಯನ್ನೂ, ಹುಟ್ಟಿದ ಮೊದಲುಗೊಂಡು ಮರಣಪರ್ಯಂತರಕ್ಕೂ ನಡೆದ ಶ್ರೀಮಂತರ ಸಂಕ್ಷಿಪ್ತ ಚರಿತ್ರೆಯನ್ನೂ ಮುಖ್ಯವಾಗಿ ಪ್ರಪಂಚವೇ ಆಶ್ಚರ್ಯಪಡುವಂತಹ ಅವರ ಮೃತ್ಯುಪತ್ರದ ಸಾರವನ್ನೂ ಸಭಾಸದರ ಮುಂದೆ ಚೆನ್ನಾಗಿ ವಿವರಿಸಿದರು. ಇವರ ಚರಿತ್ರವನ್ನು ಹೇಳಹೇಳುತ್ತ ಸಾಹೇಬರ ಕಂಬನಿಗಳು ಉದುರಹತ್ತಿದವು. ತುಸುಹೊತ್ತು ಭಾಷಣವು ಕಟ್ಟಾಯಿತು. ಅದನ್ನು ಕಂಡು ಎಲ್ಲ ಸಭಾಸದರ ಕಣ್ಣುಗಳಲ್ಲಿಯೂ ನೀರು ಬಂದವು. ಶ್ರೀಮಂತರ ಅಕಾಲ ಮರಣಕ್ಕಾಗಿ ಮಹಾಸಭೆಯೇ ದುಃಖಿಸಿತೆಂದು ಹೇಳಬಹುದು. ದುಃಖಾತಿಶಯದಿಂದ ಕೆಲವು ಹೊತ್ತು ಸಭೆಯ ನಿಶ್ಯಬ್ದವಾಯಿತು. ಆ ಕಾಲಕ್ಕೆ ಕಣ್ಣಲ್ಲಿ ನೀರುಬಾರದೆ ಇದ್ದ ಮನುಷ್ಯನು ಕಲ್ಲೆದೆಯವನೆಂದು ಹೇಳಬಹುದು. ಕೆಲವರು ಶ್ರೀಮಂತರ ಘನಚರಿತ್ರೆಯನ್ನು ಪದಗಳ ಮೂಲಕ ಸಭೆಯ ಮುಂದಿಟ್ಟರು. ಈ ಪ್ರಕಾರವಾಗಿ ಶ್ರೀಮಂತ ಶಿರಸಂಗಿಯ ಸರದೇಸಾಯಿಯವರ ದುಃಖಪ್ರದರ್ಶನವಾದ ನಂತರ ವೇಳೆಗೆ ಸರಿಯಾಗಿ ಗೊತ್ತಾದ ವಿಷಯಗಳ ಮೇಲೆ ಅನೇಕ ಜನ ಪಂಡಿತರ ವ್ಯಾಖ್ಯಾನಗಳಾದವು. ಸಭಾಕಾರ್ಯವು ವರ್ಷಂಪ್ರತಿಯಂತೆ ಮೂರು ದಿವಸ ಚೆನ್ನಾಗಿ ನಡೆದು ಕೆಲವು ಠರಾವುಗಳು ಪಾಸಾದವು. ಕಡೆಯ ದಿವಸ ಸಾಯಂಕಾಲಕ್ಕೆ ಗಾಯನ ಸಮಾರಂಭವಾಯಿತು. ತಾರೀಖು ೩ನೇ ದಿವಸ ಹೈದರಾಬಾದದ ಪ್ರಸಿದ್ಧ ವೀರಶೈವ ಮುಖಂಡರಾದ ಮಹಾರುದ್ರಪ್ಪ ಕಿಣಿ ಎಂಬ ಘನವಂತರು ಯಾವತ್ತು ಸಭಾಸದರರಿಗೂ ಫಲಾಹಾರ ಮಾಡಿಸಿದರು; ಫಲಾಹಾರಕ್ಕೆ ಅಂಬೀರ, ದ್ರಾಕ್ಷೆ, ಕಿತ್ತಳೆ, ಸಕ್ಕರೆ ಲಿಂಬಿ, ಸಂತ್ರೆ, ಸಫರಚಂದ, ದಾಳಿಂಬರ, ಕಾಶಿಯಬೋರೆ, ಬಾಳೆ, ಖಾರೀಕ, ಬೇದಾಣೆ, ಬದಾಮು ಮುಂತಾದ ಉತ್ತಮೊತ್ತಮ ಫಲಗಳನ್ನೂ, ಕಲ್ಲುಸಕ್ಕರೆ, ಕೇರಬೀಜ, ಫೇಡೆ, ಬುಂದೇ, ಬೇಸನು, ದಳೆ, ಜಿಲೇಬಿ, ಚೂಡಾ ಮುಂತಾದ ಮಿಠಾಯಿಯ ಸಾಮಗ್ರಿಗಳನ್ನೂ ಅಳತೆಯಿಲ್ಲದಷ್ಟು ತರಿಸಿದ್ದರು. ಈ ಪ್ರಚಂಡವಾದ ಫಲಾಹಾರಕ್ಕೆ ಸೊಲ್ಲಾಪುರ ಶಹರದಲ್ಲಿರುವ ಫಲಾಹಾರ ಸಾಮಗ್ರಿಗಳೆಲ್ಲವೂ ತೀರಿಹೋದವೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಫಲಗಳು ಸಾಲದ್ದಕ್ಕೆ ಪುಣೆ, ಮುಂಬಯಿಗಳಿಂದ ತರಿಸಿಕೊಳ್ಳಬೇಕಾಯಿತು. ಈ ಒಂದೇ ಒಂದು ಫಲಾಹಾರಕ್ಕೆ ಆರೇಳು ನೂರು ರೂಪಾಯಿ ವೆಚ್ಚವಾಗಿರಬಹುದೆಂದು ಹೇಳಬಹುದು. ಇದರ ಮೇಲಿಂದ ಕಿಣಿ ಮಹಾರುದ್ರಪ್ಪನವರ ಘನವಂತಿಕೆಯೂ, ಉದಾರಬುದ್ಧಿಯೂ, ಮತಾಭಿಮಾನವೂ ಗೊತ್ತಾಗುವಂತಿದೆ. ಅದೇ ದಿವಸ ಸಭಾಮಂಟಪದಲ್ಲಿ ಶಿವಕೀರ್ತನೆಯಾಯಿತು. ಸಂಜೆಯಾಗಿ ತುಸು ಕತ್ತಲೆಯಾಗುತ್ತಲೆ ಸಭಾಮಂಟಪಕ್ಕೆ ಸಮೀಪವಾಗಿರುವ ವಿಸ್ತಾರವಾದ ಬೈಲಲ್ಲಿ ಮುಂದಾಗಳೇ ವಿರಚಿಸಿದ

ವಿಧವಿಧದ ಮದ್ದಿನ ಚಮತ್ಕೃತಿಯು ಪ್ರೇಕ್ಷಕರ ಮನಸ್ಸನ್ನು ದಂಗುಪಡಿಸಿತು. ಎಷ್ಟೋ ಚಿತ್ರವಿಚಿತ್ರವಾದ ಲಂಕೆಗಳೂ, ಮದ್ದಿನ ಮಂಟಪಗಳೂ, ಕಮಾನುಗಳೂ, ತಾರಲಳಿಗೆಗಳೂ, ಔಟುಗಳೂ, ಗರ್ನಾಲುಗಳೂ, ಬಾಣಬಿರುಸುಗಳೂ, ಕುಡಿಕೆಕೊಂಬುಗಳೂ, ಹೂಬತ್ತಿ ಹಗಲುಪಂಜಗಳೂ, ವಿಧವಿಧದ ಬಣ್ಣಗಳಿಂದ ಒಮ್ಮೇಲೆ ಉರಿಯಹತ್ತಿ ಭೂಮಿಯನ್ನೂ, ಆಕಾಶವನ್ನೂ ಏಕಮಾಡಿಬಿಟ್ಟವು. ಪ್ರೇಕ್ಷಕರೆಲ್ಲರೂ ಕೂತು ಪ್ರಶಸ್ತವಾಗಿ ನೋಡುವಂತೆ ಉಚಿತಾಸನಗಳಿರಿಸಿದ್ದವು. ಒಂದು ಮದ್ದಿನ ಮಂಟಪವು ವಿಧವಿಧದ ಬಣ್ಣದ ಜ್ವಾಲೆಯಿಂದ ಪ್ರಕಾಶಿಸುತ್ತಿರುವಾಗ್ಗೆ ಅದರಲ್ಲಿ ನಡುವೆ ಶ್ರೀ ಸಿದ್ಧರಾಮೇಶ್ವರರ ಮೂರ್ತಿಯೂ, ಬಲಕ್ಕೆ ರಾ.ಸಾ||ವಾರದ ಮಲ್ಲಪ್ಪಣ್ಣನವರ ಪ್ರತಿಮೆಯೂ, ಎಡಕ್ಕೆ ನಾಮದಾರ|| ಕೆ.ಪಿ. ಪುಟ್ಟಣ್ಣಸೆಟ್ಟರವರ ಭಾವಚಿತ್ರವೂ ಅವರವರ ಹೆಸರುಗಳೂ ಮೂಡಿದ್ದನ್ನು ನೋಡಿ ಎಲ್ಲರೂ ಚಕಿತರಾದರು. ಸಾರಾಂಶ, ಈ ವನ್ಹಿಲೀಲಾಮಂಜಯು ಪ್ರೇಕ್ಷಣೀಯವಾಗಿತ್ತು. ಪ್ರೇಕ್ಷಕರು ಇವೆಲ್ಲ ಮಹೋತ್ಸವಗಳನ್ನೂ ಆ ಪಟ್ಟಣದಲ್ಲಿಯ ಇನ್ನೂ ನೋಡತಕ್ಕ ಸ್ಥಳಗಳನ್ನೂ ರಾ.ಸಾ||ವಾರದ ಮಲ್ಲಪ್ಪನವರ ಮಂದಿರವನ್ನೂ, ಬಂಗಲೆಗಳನ್ನೂ, ವಖಾರಗಳನ್ನೂ, ಕಬ್ಬಿನ ರಸ ತೆಗೆಯುವ ಅವರ ಖಾಸಗತ ಎಂಜನವನ್ನೂ, ಬೆಲ್ಲ ಸಕ್ಕರೆ ಮಾಡುವ ಕಾರಖಾನೆಯನ್ನೂ, ಅವರ ಹಿರಿಯರ ಸಮಾಧಿಸ್ಥಾನವಾದ ಪುಣ್ಯಾಶ್ರಮದ ಮನೋಹರತ್ವವನ್ನೂ "ಮೋತಿಭಾಗ" ಎಂಬ ಪುಷ್ಪವಾಟಿಕೆಯನ್ನೂ, ಶ್ರೀ ರೇವಣಸಿದ್ಧರ ಗದ್ದಿಗೆಯನ್ನೂ, ನೋಡಿ ಸಾನಂದಹೃದಯರಾಗುತ್ತಿದ್ದರು. ಶ್ರೀ ಸಿದ್ಧರಾಮೇಶ್ವರನ ಸನ್ನಿಧಾನದಲ್ಲಿಯೇ ಮಹಾಸಭೆಯು ನೆರವೇರಿದುದರಿಂದ ಸಭಾಸದರಿಗೆ ಶ್ರೀ ಸಿದ್ಧರಾಮೇಶ್ವರ ದೇವರ ದರ್ಶನವು ದಿನಾಲೂ ಆಗುತ್ತಿತ್ತು.

ಈ ಸಭೆಗೆ ಲಿಂಗಾಯತ ವಸತಿಯ ಎಲ್ಲ ಪ್ರಾಂತಗಳಿಂದಲೂ, ಜನರು ಬಂದದರಿಂದ ಕನ್ನಡ, ಮರಾಠಿ, ಇಂಗ್ಲಿಷ, ಹಿಂದುಸ್ಥಾನಿ, ತೆಲಗು, ತುಳು, ತಮಿಳ ಇವೆಲ್ಲ ಭಾಷೆಗಳಲ್ಲಿಯೂ ಉಪನ್ಯಾಸಗಳಾದವು. ಮಹಾಸಭೆಯನ್ನು ಎಂದೂ ನೋಡದ ಜನರು ಸಭೆಯ ಭವ್ಯತ್ವವನ್ನೂ, ಪ್ರಚಂಡ ಸ್ವರೂಪವನ್ನೂ, ಕಾರ್ಯಕ್ರಮವನ್ನೂ ನೋಡಿ ಇದು ಪ್ರತ್ಯಕ್ಷ ಕೈಲಾಸವೆಂದೂ, ಇಲ್ಲಿ ಕೂಡಿರುವ ಮಹನೀಯರೆಲ್ಲ ಪ್ರಮಥಗಣಾಧೀಶರೂ, ಶಿವಶರಣರೂ ಎಂದೂ ವರ್ಣಿಸಿದರು. ಈ ಸಭೆಗೆ ಹೊಂದಿ ಒಂದು ಚಿಕ್ಕ ವಸ್ತುಪ್ರದರ್ಶನವು ತೆರೆಯಲ್ಪಟ್ಟಿತ್ತು. ಅದರಲ್ಲಿ ಬಹುತರ ವೀರಶೈವ ಮಹಿಳೆಯರು ತಮ್ಮ ಕಲಾಕುಶಲತ್ವದಿಂದ ರಚಿಸಿದ ಕಸೂತಿಯ ವಸ್ತ್ರಗಳೂ, ಹೆಣಿಕೆಯ ವಸ್ತ್ರಗಳೂ, ಕರಿಮಣಿಯ ಸಾಮಾನುಗಳೂ, ಇತರ ತರತರದ ಪದಾರ್ಥಗಳೂ, ವಿಚಿತ್ರವಾದ ಒಡವೆಗಳೂ, ವೀರಶೈವ ಕಲಾಕುಶಲರು ಗೊತ್ತುಹಚ್ಚಿದ (ಸಿದ್ಧಪಡಿಸಿದ) ವ್ಯವಹಾರದ ಬಗೆಬಗೆಯ ವಸ್ತುಗಳೂ, ಇನ್ನೂ ಅನೇಕಾನೇಕ ಪದಾರ್ಥಗಳೂ ನೋಡುವವರಿಗೆ ಪ್ರಶಸ್ತವಾಗಿ ಕಾಣುವಂತೆ ಅಂದವಾಗಿ ಇರಿಸಲ್ಪಟ್ಟಿದ್ದವು. ಈ ಪ್ರದರ್ಶನದ ಪ್ರಾದುರ್ಭಾವದಿಂದ ಆ ವಿಚಿತ್ರವಸ್ತುಗಳನ್ನು ವಿರಚಿಸಿದ ವೀರಶೈವ ಸ್ತ್ರೀಪುರುಷರಿಗೆ ಉತ್ತೇಜ ಕೊಟ್ಟಂತಾಯಿತು. ಮತ್ತು ಈ ಮಹಾಸಭೆಯಲ್ಲಿ ಸೊಲ್ಲಾಪುರ ಜಿಲ್ಲಾ ಬಾರ್ಶಿ ತಾಲೂಕ ಗರ್ಲಸ್ಕೂಲ ಮಿಸ್ಟ್ರೆಸ್ ಗಂಗಾಬಾಯಿ ಎಂಬೋರ್ವ ಹೆಣ್ಣುಮಗಳು ಸಭಾಮಧ್ಯದಲ್ಲಿ ನಿಂತು "ಸ್ತ್ರೀವಿದ್ಯಾಭ್ಯಾಸದ ಆವಶ್ಯಕತೆ" ಎಂಬ ವಿಷಯದ ಮೇಲೆ ಉಪನ್ಯಾಸ ಮಾಡಿದುದರಿಂದ ಸಭಾಸದರೆಲ್ಲರು ಸಂತುಷ್ಟರಾದರು. ವೀರಶೈವ ಸ್ತ್ರೀಯು ಸಭೆಯಲ್ಲಿ ಉಪನ್ಯಾಸ ಮಾಡಿದುದು ಇದೇ ಮೊದಲಾದದರಿಂದ ಸ್ತ್ರೀವಿದ್ಯಾಭ್ಯಾಸಕ್ಕೆ ಉತ್ತೇಜನ ಬರುವಂತೆ ಆಕೆಯನ್ನು ಗೌರವಿಸಬೇಕೆಂದು ಬಗೆದು ಸಭಾಧ್ಯಕ್ಷರೂ, ಉಪಾಧ್ಯಕ್ಷರೂ, ರಾ.ಬ||ರುದ್ರಗೌಡಸಾಹೇಬರೂ, ಶ್ರೀಮಂತ ವಂಟಮುರಿಯ ಸರದೇಸಾಯರವರೂ ಆಲೋಚಿಸಿ ಆ ತರುಣೀಮಣಿಗೆ ಒಂದು ಸುವರ್ಣ ಪದಕವನ್ನು ಬಹುಮಾನವಾಗಿ ಕೊಟ್ಟರು. ರಾ.ಬ||ರವರಿಗೂ, ಶ್ರೀಮಂತರಿಗೂ, ನಾಮದಾರ|| ಪುಟ್ಟಣ್ಣಸೆಟ್ಟರವರಿಗೂ ಶಹರದಲ್ಲಿ ಶ್ರೀಮಂತ ವಾರದ ಮಲ್ಲಪ್ಪಣ್ಣನವರೇ ಮೊದಲಾದ ಭಾಗ್ಯವಂತರ

ಮಂದಿರಗಳಲ್ಲಿ ಎಷ್ಟೋ ಪಾನಸುಪಾರಿಗಳಾದವು. ಪಾನಸುಪಾರಿಯ ಸಮಾರಂಭಕ್ಕಾಗಿ ಇವರನ್ನು ಕರೆದು ತರಲಿಕ್ಕೂ, ಕಳಿಸಿಬರಲಿಕ್ಕೂ ಮುಖ್ಯ ಮುಖ್ಯಸ್ಥಳಗಳನ್ನು ತೋರಿಸಿಕೊಂಡು ಬರಲಿಕ್ಕೂ, ದಿವ್ಯಾಶ್ವಗಳನ್ನು ಹೂಡಿದ ರಮ್ಯವಾದ ರಥಗಳು ರಾಜಮಾರ್ಗಗಳಲ್ಲಿ ವಿರಾಜಿಸುತ್ತಿದ್ದವು. ಸೊಲ್ಲಾಪುರ ಶಹರವು ನಾಲ್ಕೈದು ದಿವಸ ಒಳ್ಳೇ ಶೋಭೆಯನ್ನು ಹೊಂದಿತ್ತು. ತಾರೀಖು ೩೧ನೇ ಮಂಗಳವಾರ ಮುಂಜಾನೆ ೮ ಘಂಟೆಗೆ ನಾಮದಾರ|| ಪುಟ್ಟಣಸೆಟ್ಟರೂ, ವಂಟಮುರಿಯ ಶ್ರೀಮಂತರೂ ಕಾರ್ಯಾರ್ಥವಾಗಿ ಮೇಲಗಾಡಿಯಿಂದ ಮುಂಬಯಿಗೆ ಹೋದರು. ರಾ.ಬ||ರವರು ಸಂಜೆಯ ಗಾಡಿಗೆ ಗದಗಿನ ಕಡೆಗೆ ಗಮಿಸಿದರು. ಇವರೆಲ್ಲರನ್ನು ಕಳಿಸಲಿಕ್ಕೆ ರಾ.ಸಾ||ಮಲ್ಲಪ್ಪಣ್ಣನವರೇ ಮೊದಲಾಗಿ ಸೊಲ್ಲಾಪುರ ನಿವಾಸಿಗಳು ಸ್ಟೇಶನದ ವರೆಗೂ ಬಂದಿದ್ದರು. ಜನಸಮೂಹದಿಂದ ಸ್ಟೇಶನವು ಕಿಷ್ಕಿಂಧವಾಗಿ ತುಂಬಿಕೊಂಡಿತ್ತು. ಸ್ವಸ್ಥಾನಗಳಿಗೆ ಗಮಿಸುವ ಮಹನೀಯರ ಮೇಲೆ ಮಾಡಿದ ಪುಷ್ಪವೃಷ್ಟಿಗೆ ಅಳತೆ ಇರಲಿಲ್ಲ. ಸ್ಟೇಶನದ ಪ್ಲಾಟ ಫಾರ್ಮವೆಲ್ಲ ಪುಷ್ಪದಳಗಳಿಂದ ಮುಚ್ಚಿ ಹೋಗಿತ್ತೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ಪ್ರಕಾರವಾಗಿ ಮಹಾಸಭೆಯ ಕಾರ್ಯವನ್ನು ನೆರವೇರಿಸಿ ಎಲ್ಲ ಮಹನೀಯರೂ, ಪ್ರತಿನಿಧಿಗಳೂ, ಪ್ರೇಕ್ಷಕರೂ ಶ್ರೀ ಹಾನಗಲ್ ಕುಮಾರಸ್ವಾಮಿಗಳವರ ಆಶೀರ್ವಾದವನ್ನು ಪಡೆದು ತಮ್ಮ ತಮ್ಮ ಸ್ಥಳಗಳಿಗೆ ತೆರಳುವವರಾದರು. ರಾ.ಬ||ರವರು ಅದೊಂದು ದಿವಸ ಗದಗಿನಲ್ಲಿ ನಿಂತು, ಮರುದಿವಸ ಅಂದರೆ ತಾರೀಖು ೧ನೇ ಜಾನೇವಾರಿ ಸನ್ ೧೯೦೮ನೇ ಇಸವಿಯ ಬುಧವಾರ ದಿವಸ ಮೇಲಗಾಡಿಯಿಂದ ಸಂಜೆಯ ೫ ಘಂಟೆಯ ಸುಮಾರಕ್ಕೆ ಬೆಳಗಾವಿಗೆ ಬಂದರು. ಸೊಲ್ಲಾಪುರ ಮಹಾಸಭೆಯ ರಿಪೋರ್ಟ ನೋಡಿದರೆ ಸಭೆಯಲ್ಲಿ ನಡೆದ ಯಾವದ್ವೃತ್ತಾಂತವು ಚೆನ್ನಾಗಿ ತಿಳಿಯುವದು.

ಸೊಲ್ಲಾಪುರದ ಘುನವರ್ತಕರಾದ ರಾವಬಹದ್ದೂರ ಮಲ್ಲಪ್ಪಣ್ಣಾ ಊರ್ಫ ಅಪ್ಪಾಸಾಹೇಬ ವಾರದ ಇವರು ಸನ್ ೧೯೧೧ನೇ ಇಸವಿಯ ಜಾನೇವಾರಿ ತಿಂಗಳ ೧೯ನೇ ತಾರೀಖಿನ ಗುರವಾರ ದಿವಸ ಬೆಳಗಿನ ೫ ಘಂಟೆಯ ಸುಮಾರಕ್ಕೆ ಇಹಲೋಕವನ್ನು ತ್ಯಜಿಸಿದ್ದರಿಂದ ವೀರಶೈವ ಸಮಾಜಕ್ಕೆ ಆದ ನಷ್ಟವನ್ನು ಹೇಳಲು ಅಸಾಧ್ಯವಾಯಿತು. ಇವರು ಅಸ್ವಸ್ಥರಾಗಿ ಮುಂಬಯಿಯಲ್ಲಿ ಹೋಗಿ ಇರುತ್ತಿರಲು ಅಲ್ಲಿ ಜಡ್ಡು ಹೆಚ್ಚಾಯಿತು. ಕೂಡಲೆ ಸ್ಪೆಶಲ್ ಟ್ರೇನಿನಿಂದ ಇವರನ್ನು ಮುಂಬಯಿಯಿಂದ ಸೊಲ್ಲಾಪುರಕ್ಕೆ ತಂದರು. ತಂದ ಮರುದಿವಸವೇ ಇವರು ಕಾಳಜರೋಗದಿಂದ (ಹಾರ್ಟಡಿಸೀಜದಿಂದ) ಮೃತಪಟ್ಟರು. ಆ ದಿವಸ ಸೊಲ್ಲಾಪುರದ ಎಲ್ಲ ಕೋರ್ಟು ಕಚೇರಿಗಳೂ, ಕಾರಖಾನೆಗಳೂ, ಅಂಗಡಿಗಳೂ ಬಂದು ಮಾಡಲ್ಪಟ್ಟವು. ಇವರ ಮರಣದಿಂದ ಎಲ್ಲ ಜನರಿಗೂ ಅಪಾರವಾದ ದುಃಖವಾಯಿತು. ಇವರು ವ್ಯವಹಾರದಲ್ಲಿ ಬಹು ಚತುರರಿದ್ದು, ಅದರಲ್ಲಿ ಬಹಳ ಸುಧಾರಣೆಮಾಡಿ ಶ್ರೀಮಂತರಾದರು. ಕೃಷಿಕರ್ಮವಾದರೂ ಇವರಿಗೆ ಪ್ರೀತಿಯ ವಿಷಯವಾಗಿತ್ತು. ನಮ್ಮ ದೇಶೀ ಒಕ್ಕಲತನದ ಹಳೆಯ ಪದ್ಧತಿಯನ್ನು ತೆಗೆದು ಹಾಕಿ, ಹೊಸತರದ ಪದ್ಧತಿಯಿಂದ ಎಷ್ಟೋ ಲಾಭವನ್ನು ಹೊಂದಿದರು. ಒಕ್ಕಲತನದ ಸಂಬಂಧವಾದ ಎಷ್ಟೋ ಪ್ರಯೋಗಗಳನ್ನು ಪ್ರತ್ಯಕ್ಷ ನೋಡಿದ ಸೊಲ್ಲಾಪುರ ಜಿಲ್ಲೆಯ ಎಲ್ಲ ರೈತಜನರು ಅವರ ಜಮೀನ ಸಾಗುವಳಿಯ ಅನುಕರಣ ಮಾಡುವವರಾದರು. ಇವರ ಒಕ್ಕಲತನದ ಸುಧಾರಣೆಯಿಂದ ಬಡಭೂಮಿಗಳಿಗೂ, ಕೂಡ ಫಲದ್ರೂಪವಾದವು. ಇವರ ಕೃಷಿಕರ್ಮದ ಪದ್ಧತಿಯನ್ನೂ, ಹುಟ್ಟುವಳಿಯನ್ನೂ ನೋಡಿ ಸರಕಾರೀ ಅಗ್ರಿಕಲ್ಚರಲ್ ಖಾತೆಯವರು, ರಾವಬಹದ್ದೂರ ವಾರದ ಇವರ ಒಕ್ಕಲತನವು ಮುಂಬಯಿ ಇಲಾಖೆಯಲ್ಲಿ ಮೇಲ್ತರದ್ದೆಂಬದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಕೃಷಿಕರ್ಮ ವ್ಯವಹಾರಗಳಂತೆಯೇ ಇವರು ಧಾರ್ಮಿಕ ಸುಧಾರಣೆಯನ್ನೂ ಮಾಡಿದರು. ವ್ಯವಹಾರೀ ಪಾಠಶಾಲೆಯನ್ನಿಟ್ಟಂತೆ ಸಂಸ್ಕೃತ ಪಾಠಶಾಲೆಯನ್ನೂ ಸ್ಥಾಪಿಸಿದರು. 'ವೀರಶೈವ ಗ್ರಂಥಮಾಲಾ' ಎಂಬ ಸಂಸ್ಥೆಯಿಂದ ಸಂಸ್ಕೃತ ಭಾಷೆಯಲ್ಲಿದ್ದ ಧರ್ಮಗ್ರಂಥಗಳನ್ನೆಲ್ಲ ಮರಾಠೀ ಭಾಷೆಯಲ್ಲಿ ಭಾಷಾಂತರ ಪಡಿಸಿ ಮಹಾರಾಷ್ಟ್ರದ ವೀರಶೈವರಲ್ಲಿ ಧರ್ಮಜಾಗ್ರತೆಯನ್ನುಂಟುಮಾಡಿದರು.

ಇದಲ್ಲದೆ ಇನ್ನೂ ಅನೇಕ ಧರ್ಮಕಾರ್ಯಗಳನ್ನು ಮಾಡಿ ಹೆಸರುವಾಸಿಯಾದರು. ಇದರಂತೆ ಸೊಲ್ಲಾಪುರದಲ್ಲಿ ನರಸಿಂಗ ಗಿರಜಿ ಮಿಲ್ ಎಂಬ ಕಾರ್ಯಾಲಯವನ್ನು ಸ್ಥಾಪಿಸಿ, ಅಲ್ಲಿ ವಿಲಾಯತಿ ಮಾದರಿಯ ವಸ್ತ್ರಗಳು ತಯಾರಾಗುವ ಏರ್ಪಾಡು ಮಾಡಿದರು. ರಾಜದರ್ಬಾರದಲ್ಲಿಯೂ ಇವರ ವರ್ಚಸ್ಸು ಬಹಳವಾಗಿತ್ತೆಂಬದಕ್ಕೆ ಇವರಿಗೆ ಹಿಂದುಸ್ತಾನ ಸರಕಾರದಿಂದ ದೊರೆತ "ರಾವಬಹದ್ದೂರ" ಎಂಬ ಬಹಮಾನದ ಪದವಿಯೇ ಸಾಕ್ಷವಾಗಿದೆ. ಇವರಿಗೆ ಮೊದಲು: ರಾವಸಾಹೇಬ ಎಂಬ ಕಿತಾಬು ದೊರೆತು, ಕಡೆಗೆ ರಾವಬಹದ್ದೂರ ಎಂಬ ಪದವಿಯು ದೊರೆಯಿತು. ಈ ಮೇರೆಗೆ ಇವರು ವ್ಯಾವಹಾರಿಕ, ಧಾರ್ಮಿಕ, ನೈತಿಕ, ಸಾಮಾಜಿಕ, ಕೃಷಿಕರ್ಮಿಕ, ರಾಜಕೀಯ ಮುಂತಾದ ಎಲ್ಲ ವಿಷಯಗಳಲ್ಲಿಯೂ ಪ್ರಖ್ಯಾತರಾಗಿ, ಶಿರಸಂಗಿಯ ಶ್ರೀಮಂತ ಸರದೇಸಾಯಿಯವರಂತೆ ಶಿವಶರಣರೆಂದೆನ್ನಿಸಿಕೊಂಡು ಪಂಚತ್ವವನ್ನೈದಿದರು. ಮರಣಕಾಲಕ್ಕೆ ಇವರ ವಯಸ್ಸು ಸುಮಾರು ೫೭ ವರ್ಷದ್ದಿತ್ತು. ಈ ಘನವಂತರಿಗೆ ಚನ್ನಬಸವಪ್ಪ ಊರ್ಫ ಬಾಬಾಸಾಹೇಬ ಎಂಬ ಎರಡು ವರ್ಷದ ವಯಸ್ಸಿನ ಒಬ್ಬ ಮಗನಿರುವನು. ಇವರ ಆಸ್ತಿಯೂ, ಆದಾಯವೂ ಚೆನ್ನಾಗಿ ಇದೆ. ಈ ಬಾಲಕನು ತಮ್ಮ ತಂದೆಯವರಂತೆ ಪ್ರಸಿದ್ಧ ಪುರುಷನಾಗುವಂತೆ ದೇವರು ಈತನಿಗೆ ಆಯುರಾರೋಗ್ಯ ಭಾಗ್ಯಸಂತತಿಗಳನ್ನೂ, ಒಳ್ಳೇ ಬುದ್ಧಿಯನ್ನೂ ಕೊಡಲೆಂದು ಆಶಿಸುವೆವು. (ಶ್ರೀಮಂತ ವಾರದ ಮಲ್ಲಪ್ಪನವರ ಚರಿತ್ರವು ಮರಾಠೀ ಭಾಷೆಯಲ್ಲಿ ಮುದ್ರಿತವಾಗಿರುವದು. ಬೇಕಾದವರು ನೋಡಿಕೊಳ್ಳತಕ್ಕದ್ದು).

ರಬಕವಿಯ ಪಾನಸುಪಾರಿಯ ಸಮಾರಂಭ

ಪುಣ್ಯಪುರುಷರನ್ನೂ, ಘನವಂತರನ್ನೂ, ಮಹನೀಯರನ್ನೂ, ಸುಂದರರನ್ನೂ ನೋಡಲಪೇಕ್ಷಿಸುವದು ಮನುಷ್ಯ ಸ್ವಭಾವದ ಧರ್ಮವಾಗಿದೆ. ಇವೆಲ್ಲ ಲಕ್ಷಣಪರಿಪೂರ್ಣರಾದ ರಾ.ಬ॥ರುದ್ರಗೌಡ ದೊರೆಗಳ ದರ್ಶನಕ್ಕಂತೂ ಜನರು ಅತೀವ ಉತ್ಕಂಠಿತರಾಗುತ್ತಿದ್ದದ್ದು ಎಲ್ಲರ ಅನುಭವಕ್ಕೆ ಬಂದ ಮಾತಾಗಿದೆ. ಇವರು ಹೋದಹೋದಲ್ಲಿ ಆಬಾಲವೃದ್ಧರೆಲ್ಲರು ಇವರ ದರ್ಶನಕ್ಕೆ ಹವಣಿಸುತ್ತಿರುತ್ತಾರೆ. ಲೋಕಪ್ರಸಿದ್ಧಿಯಾದ ಇವರ ರಾಜ್ಯಕಾರ್ಯದ ಚಾತುರ್ಯವನ್ನೂ, ಚಮತ್ಕೃತಿಯನ್ನೂ ಕಂಡು, ಇವರು ಎಂಥವರಿರುವರೋ ನೋಡಬೇಕೆಂದು ಎಲ್ಲರೂ ತವಕಿಸುವದು ಸರ್ವಸಾಧಾರಣವಾಗಿದೆ. ಇವರು ಯಾವ ಯಾವ ಪ್ರಾಂತಗಳಲ್ಲಿ ರಾಜ್ಯಕಾರ್ಯಾರ್ಥವಾಗಿ ಸಂಚರಿಸಿರುವರೋ ಆ ನಾಡಿನ ಹೆಣ್ಣು, ಗಂಡು, ಹುಡುಗರು ಮೊದಲು ಮಾಡಿಕೊಂಡು ಇವರನ್ನು ಕಂಡು ಆನಂದಿಸಿರುವರು. ಎಲ್ಲರೂ ಅಪೇಕ್ಷಿಸುವಂತೆ ಕೆಲ ಸಂಸ್ಥಾನಿಕರೂ, ಅವರ ಪ್ರಜೆಗಳೂ, ಇವರ ದರ್ಶನವನ್ನು ಅಪೇಕ್ಷಿಸಿದರು. ಕೊಲ್ಲಾಪುರದ ಛತ್ರಪತಿ ಶಾಹೂಮಹಾರಾಜರೂ ಕೂಡ ಇವರ ಭೆಟ್ಟಿಯನ್ನಿಚ್ಛಿಸಿ ಇವರನ್ನು ರಾಜೋಪಚಾರದಿಂದ ಕರೆಯಿಸಿಕೊಂಡು ತಾವೂ, ತಮ್ಮ ಪ್ರಜೆಗಳೂ ಸಂತುಷ್ಟರಾದ ಸಂಗತಿಯು ಹಿಂದೆ ಬರೆಯಲ್ಪಟ್ಟಿವೆ. ಇವರಂತೆ ಸಾಂಗಲಿಯ ಸಂಸ್ಥಾನದೊಳಗಿನ ರಬಕವಿಗ್ರಾಮದ ನಿವಾಸಿಗಳೂ ಕೂಡ ಇವರ ದರ್ಶನವನ್ನು ಇಚ್ಛಿಸುವವರಾದರು. ರಬಕವಿ ಗ್ರಾಮವು ಅಥಣಿ, ಗೋಕಾಕ ತಾಲೂಕುಗಳ ನಡುವೆ ಇದ್ದು ವ್ಯಾಪಾರಕ್ಕೆ ಹುಬ್ಬಳ್ಳಿಯ ಶಹರದಂತೆ ಬಹುಪ್ರಸಿದ್ಧವಾದ ಸ್ಥಳವಾಗಿರುತ್ತದೆ. ಅದಕ್ಕೆ ಹೊಂದಿ ಒಂದು ಮೈಲು ಅಂತರದ ಮೇಲೆ ಬನಟ್ಟಿ ಎಂಬದೊಂದು ಗ್ರಾಮವದೆ. ಅದು ಜಮಖಂಡಿಯ ಸಂಸ್ಥಾನಿಕರದು. ಎರಡೂ ಗ್ರಾಮಗಳಲ್ಲಿ ವೀರಶೈವರ ವಸತಿಯೇ ವಿಶೇಷ. ಜನರ ಮುಖ್ಯ ಉದ್ಯೋಗವೆಂದರೆ ವ್ಯವಹಾರ ಮತ್ತು ನೇಯ್ಕಾರಿಕೆ. ರಬಕವಿ ಬನಟ್ಟಿಗಳಲ್ಲಿ ಕೂಡಿ ಸುಮಾರು ಎರಡು ಮೂರು ಸಾವಿರ ಮಗ್ಗಗಳಿರಬಹುದು. ಇಲ್ಲಿ ಎಷ್ಟೋ ಜನರು ಧನಾಢ್ಯರಿದ್ದುದರಿಂದ ಶಹಾಪುರದಂತೆ ರಬಕವಿಯಾದರೂ ಸಂಪತ್ತಿನಿಂದ ಶೋಭಾಯಮಾನವಾಗಿರುತ್ತದೆ. ಜನರು ಉದ್ಯೋಗಿಗಳಿರುವದರಿಂದ ಸುಖವಸತಿಗಳಾಗಿದ್ದಾರೆ. ರಬಕವಿಯ ಸೀಮೆಗೆ ಹೊಂದಿದ ಅಥಣಿಯ

ತಾಲೂಕಿನೊಳಗೂ, ಗೋಕಾಕ ತಾಲೂಕಿನೊಳಗೂ ಪ್ರತಿವರ್ಷ ರಾ.ಬ॥ರವರು ಸಂಚರಿಸುತ್ತಿದ್ದರೂ ರಬಕವಿಯಿಂದ ಅಯ್ವಾರು ಮೈಲುಗಳ ಅಂತರದಲ್ಲಿಯೇ ಇವರ ಸ್ವಾರೀ ಮುಕ್ಕಾಂ ಆಗುತ್ತಿದ್ದರೂ ಇಲ್ಲಿಯ ನಿವಾಸಿಗಳಿಗೆ ಅವರ ದರ್ಶನವಾಗುವ ಕಾರಣಬೀಳುತ್ತಿದ್ದಿಲ್ಲ. ರಬಕವಿಯು ಸಾಂಗಲೀ ಸಂಸ್ಥಾನದೊಳಗಿನ ತೇರದಾಳ ತಾಲೂಕಿಗೊಳಪಟ್ಟಿದ್ದರಿಂದ ಇವರ ಸ್ವಾರಿಯು, ರಬಕವಿಗೆ ಆಗುವ ಕಾರಣವೂ ಬೀಳುತ್ತಿದ್ದಿಲ್ಲ. ಆದದರಿಂದ ರಬಕವಿಯ ಪ್ರಮುಖರೆಲ್ಲರು ರಾ.ಬ॥ರವರನ್ನು ತಮ್ಮೂರಿಗೆ ಕರೆದುಕೊಂಡು ಬಂದು, ಅವರ ದರ್ಶನಾತುರರಾದ ಗ್ರಾಮನಿವಾಸಿಗಳ ಕಾಂಕ್ಷೆಯನ್ನು ಪೂರ್ಣಮಾಡಬೇಕೆಂದು ಆಲೋಚಿಸಿದರು. ಆದರೆ ಅವರು ಇಲ್ಲಿಯ ವರೆಗೆ ದಯಮಾಡಿಸುವರೋ ಇಲ್ಲವೋ ಎಂಬದಾಗಿ ಶಂಕಿಸಿದರು. ಕಡೆಗೆ ರಬಕವಿಯ ಪ್ರಸಿದ್ಧ ವ್ಯಾಪಾರಿಯಾದ ಮುತ್ತೂರ ಬಸ್ಸೆಟ್ಟೆಪ್ಪಣ್ಣನವರು, ಸಾಹೇಬರು ಅಥಣಿಯ ಮುಕ್ಕಾಮಿನಲ್ಲಿದ್ದಾಗ್ಗೆ ಅವರ ಭೆಟ್ಟಿಯಾಗಿ "ನಮ್ಮ ರಬಕವಿಯ ನಿವಾಸಿಗಳೆಲ್ಲ ತಮ್ಮ ದರ್ಶನಾತುರರಾಗಿರುವರೆಂತಲೂ, ತಾವು ಅಲ್ಲಿಯ ವರೆಗೆ ದಯಮಾಡಿಸಿ ನಮ್ಮೆಲ್ಲರ ಪ್ರೀತಿಯನ್ನು ಪೂರ್ಣಮಾಡಬೇಕೆಂತಲೂ, ವಿನಯದಿಂದ ಸೂಚಿಸಲು ಅದಕ್ಕೆ ರಾವಬಹದ್ದೂರರವರು "ಎಲ್ಲರಂತೆಯೂ ನಾನೊಬ್ಬ ಮನುಷ್ಯನಿರುವೆನು, ನನ್ನನ್ನೇನು ನೋಡುವದದೆ? ವಿನಹಾ ಕಾರಣ ಎಲ್ಲರಿಗೂ ತ್ರಾಸವೇಕೆ? ಅದೇನೂ ಬೇಡ"ವೆಂದರು. ಈ ಮಾತೆಗೆ ಬಸೆಟ್ಟಪ್ಪನವರು "ದೊರೆಗಳೇ! ಹಾಗೆ ಎಂದಿಗೂ ಆಗದು. ವೀರಶೈವ ಸಮಾಜರಥಕ್ಕೆ ಕಲಶೋಪಮಾನರಾಗಿ ಒಪ್ಪುತ್ತಿರುವ ತಮ್ಮನ್ನು ಕಂಡುಕೊಂಡು ಆನಂದಿಸಬೇಕೆಂದೂ, ತಮ್ಮಿಂದ ನಮ್ಮ ಮತದ ಮೇಲಾಗಿರುವ ಮಹೋಪಕಾರದ ಬಗ್ಗೆ ಸ್ವಲ್ಪಮಟ್ಟಿಗಾದರೂ ಕೃತಜ್ಞತೆಯನ್ನು ತೋರಿಸಬೇಕೆಂದೂ ನಾವೆಲ್ಲರು ಹಾರೈಸಿರುವೆವು. ತಮ್ಮನ್ನು ನಾವು ಅತಿ ಪ್ರೀತಿಪುರಸ್ಸರವಾಗಿ ಕರೆದುಕೊಂಡು ಹೋಗುತ್ತೇವೆ. ತಮ್ಮ ಆಗಮನದ ಬಗ್ಗೆ ನಮಗೆ ಎಷ್ಟು ಮಾತ್ರ ಶ್ರಮವೂ, ತ್ರಾಸವೂ ಆಗುವದಿಲ್ಲ" ಎಂದು ವಿಜ್ಞಾಪಿಸಿಕೊಂಡದ್ದಕ್ಕೆ" ಅನುಕೂಲಾದರೆ ಅಥಣೀ ತಾಲೂಕ ಸತ್ತೀಗ್ರಾಮದ ಮುಕ್ಕಾಮಿನಿಂದ ನಿಮ್ಮಲ್ಲಿಗೆ ಬರುವದಕ್ಕೆ ಪ್ರಯತ್ನಿಸುವೆನು" ಎಂದು ಹೇಳಿದ ರಾವಬಹದ್ದೂರರವರ ಮಾತನ್ನು ಕೇಳಿ, ಮುತ್ತೂರ ಬಸೆಟ್ಟೆಪ್ಪನವರು ಆನಂದಪಟ್ಟರು.

ಮುಂದೆ ಸ್ವಲ್ಪದಿವಸಗಳಲ್ಲಿಯೇ ರಾ.ಬ॥ರವರ ಸ್ವಾರೀ ಅಥಣೀ ತಾಲೂಕ, ಸತ್ತೀಗ್ರಾಮದ ಕೃಷ್ಣಾತೀರದಲ್ಲಿ ಮುಕ್ಕಾಮು ಆಗಿರಲು, ಅಲ್ಲಿಗೆ ರಬಕವಿಯ ಪ್ರಮುಖರಾದ ಬಸೆಟ್ಟಪ್ಪಣ್ಣ ಮುತ್ತೂರ, ಮುರಿಗಪ್ಪಣ್ಣ ಮುತ್ತೂರ, ಮಲ್ಲೇಶಪ್ಪಣ್ಣ ಉಮಡಿ, ಶಿವಪ್ಪ ಶಂಕರಪ್ಪ ಮರೀಗುದ್ದಿ, ಪಾಂಡುರಂಗ ರಾಮಚಂದ್ರ ನಾಯಕ ನಿಸ್ಪತ ದರ್ಬಾರ (ವೈಷ್ಣವ), ತಮ್ಮಣ್ಣಪ್ಪ ಚಿಕ್ಕೋಡಿ (ಬನಟ್ಟಿ), ಮಲ್ಲೇಶಪ್ಪ ಅಲತಿಗಿ ಮೊದಲಾದವರು ತಾರೀಖು ೧೭-೧೨-೧೯೧೯ನೇ ಇಸವಿಯ ಗುರುವಾರ ದಿವಸ ಮಧ್ಯಾಹ್ನದ ೩ ಘಂಟೆಯ ಸುಮಾರಕ್ಕೆ ಬಂದು, ರಬಕವಿ ಬನಟ್ಟಿಗಳ ವರೆಗೂ ದಯಮಾಡಿಸುವದಕ್ಕಾಗಿ ಆಮಂತ್ರಣಕೊಟ್ಟರು. ಆನಂದಿತರಾಗಿ ನಿರೂಪ ತಕ್ಕೊಂಡು ಬಂದು, ತಮ್ಮ ರಬಕವಿ, ಬನಟ್ಟಿ ಗ್ರಾಮಗಳನ್ನು ಶೃಂಗರಿಸುವದರಲ್ಲಿ ತೊಡಗಿದರು. ಗ್ರಾಮಪ್ರವೇಶ ದ್ವಾರಗಳಲ್ಲಿ ದೊಡ್ಡದೊಂದು ಅಗಸಿಯನ್ನು ವಿಧವಿಧದ ವಸ್ತ್ರಗಳಿಂದಲೂ, ಬಣ್ಣದ ಕಾಗದಗಳಿಂದಲೂ, ಭವ್ಯವಾಗಿ ಕಟ್ಟಿದ್ದರು. ಮುಖ್ಯ ಬೀದಿಗಳಲ್ಲೆಲ್ಲ ಅಲ್ಲಲ್ಲಿಗೆ ಮಂಟಪಗಳನ್ನೂ, ಕಮಾನುಗಳನ್ನೂ ನಿರ್ಮಿಸಿದ್ದರು. ಊರಲ್ಲೆಲ್ಲ ತಳಿರ್ದೋರಣಗಳು ತೂಗಾಡುತ್ತಿದ್ದವು. ಧ್ವಜಪತಾಕೆಗಳು ಎದ್ದು ನಿಂತಿದ್ದವು. ಫರಿಫರಿಗಳು ಗಾಳಿಗೆ ಅಲೆದಾಡುತ್ತಿದ್ದವು. ಪೇಟೆಯ ಕೂಟಿನಲ್ಲೊಂದು ಭವ್ಯವೂ, ರಮ್ಯವೂ ಆದ್ದೊಂದು ಮಂಟಪವು ರಚಿಸಲ್ಪಟ್ಟಿತ್ತು. ಈ ಮಂಟಪವು ನೋಡಲಿಕ್ಕೆ ಒಳ್ಳೇ ಸೊಗಸಾಗಿತ್ತು. ಪುರಶೃಂಗಾರವನ್ನು ರಚಿಸುವದಕ್ಕೆ ಎಷ್ಟೋ ಜನರು ತೊಡಗಿರಲು, ಶ್ರೀ ಶಂಕರಲಿಂಗನ ದೇವಾಲಯದಲ್ಲಿ ರಾ.ಬ॥ರವರ ಸ್ವಾಗತ ಸಮಾರಂಭಕ್ಕಾಗಿ ಒಂದು ಬಹು ರಮ್ಯವಾದ ಮಂಟಪವನ್ನು ನಿರ್ಮಿಸಲಿಕ್ಕೆ ರಬಕವಿ ಬನಟ್ಟಿಗಳ ಎಲ್ಲ ಶಿಲ್ಪಿಗರೂ, ಕಲಾಕುಶಲರೂ, ಪುರಪ್ರಮುಖರೂ

ತತ್ಪರರಾಗಿದ್ದರು. ಯಾರಿಗೂ ಎಳ್ಳಷ್ಟು ಪುರಸೊತ್ತು ಇದ್ದಿದ್ದಿಲ್ಲ. ಎರಡೂ ಊರ ತುಂಬ ಎಲ್ಲಿ ನೋಡಿದರೂ, ಸಾಹೇಬರ ಆಗಮನದ ಗಡಿಬಿಡಿಯೇ ನಡೆದಿತ್ತು. ಎಲ್ಲಿ ಕೇಳಿದರೂ ಸಾಹೇಬರ ಬರುವಿಕೆಯ ಸುದ್ದಿಯೇ ಸುದ್ದಿಯು. ಈ ಶೃಂಗಾರ ರಚನೆಗೆ ಗ್ರಾಮ ಮುಖಂಡರೇ ನಡಕಟ್ಟಿ ನಿಂತಿರಲು, ಎಲ್ಲರೂ ಪೂಜ್ಯಭಾವದಿಂದಲೂ, ಒಮ್ಮನದಿಂದಲೂ, ತಮ್ಮ ತಮ್ಮ ಕೃತ್ಯಗಳಲ್ಲಿ ತೊಡಗಿರುತ್ತಿಲು ಬೆಳಗಾಗುವದರೊಳಗಾಗಿ ಸಭಾಮಂಟಪವು ಸಿದ್ಧವಾಗಿ, ಝುಗಝುಗನೆ ಪ್ರಕಾಶಿಸುತ್ತ ಸಾಹೇಬರ ಆಗಮನವನ್ನು ಎದುರು ನೋಡುತ್ತಿತ್ತು. ದೊಡ್ಡ ದೊಡ್ಡ ಸುಂದರವಾದ ಗಾಲೀಚುಗಳಿಂದಲೂ, ರತ್ನಗಂಬಳಿಗಳಿಂದಲೂ, ಸಭಾಮಂಟಪದ ತಳಪ್ರದೇಶವು ಆಹ್ಲಾದಕಾರಕವಾಗಿತ್ತು. ಅಂದವಾದ ಆಸನಗಳು ಚಂದವಾಗಿ ಇಡಲ್ಪಟ್ಟಿದ್ದವು. ಜರತಾರಿಯ ವಸ್ತ್ರಗಳಿಂದಲೂ, ಚೀನಾಂಬರಗಳಿಂದಲೂ, ಕುತ್ತನಿಯ ಮೆತ್ತನ್ನ ಗಾದಿಗಳಿಂದಲೂ, ಕಿನಕಾಪು, ಮಖಮಲಗಳ ಗಿರ್ದೆಗಳಿಂದಲೂ, ಸಪ್ತವರ್ಣಗಳಿಂದ ಪ್ರಕಾಶಿಸುತ್ತ ರಾ.ಬ॥ರವರ ರಾಜಾಸನವು ಸಭಾಮಧ್ಯದಲ್ಲಿ ಎತ್ತರವಾಗಿ ರಂಜಿಸುತ್ತಿತ್ತು. ಮೇಲಕ್ಕೆ ಕಣ್ಣೆತ್ತಿದರೆ ಸಾಕು, ಶುಭ್ರವರ್ಣದಿಂದ ಪ್ರಕಾಶಿಸುತ್ತ ಛತ್ತು, ಬಗೆಬಗೆಯ ಸುಳುವಪಟ್ಟಿಗಳಿಂದಲೂ, ಹಂಡೆ ಗ್ಲಾಸ, ಗುಂಡುಗುಳಾಪುಗಳ ಝುಗಝುಗಾಟದಿಂದಲೂ ರಮಣೀಯವಾಗಿ ತೋರುತ್ತಿತ್ತು. ಶಂಕರಲಿಂಗನ ದೇವಾಲಯವು ಮೊದಲೇ ಬಹು ಸೌಂದರ್ಯವುಳ್ಳದ್ದು. ಅದಕ್ಕೆ ಅಪ್ರತಿಮವಾದ ಶೃಂಗಾರಮಾಡಿದ್ದರಿಂದ ಅದು ಅವರ್ಣನೀಯವಾಗಿತ್ತು. ಸ್ವಾಭಾವಿಕ ಸುಂದರಿಯಾದ ತರುಣಿಯು ದಿವ್ಯವಸ್ತ್ರಾಲಂಕಾರಗಳಿಂದ ಪರಿಶೋಭಿಸುತ್ತಿರುವಂತೆ ಸಭಾಮಂಟಪವು ಅತಿ ಮನೋಹರವಾಗಿತ್ತು. ಗುಡಿಯ ಗರುಡಗಂಬಗಳೆಲ್ಲ ಕಿನಕಾಪಿನ ಗೌಸಣಿಕೆಗಳಿಂದ ಬೆಳಗುತ್ತಿದ್ದವು. ಮೌಲ್ಯವಾದ ಪೀತಾಂಬರಗಳು ಛತ್ತಭಿತ್ತಿಗಳಿಗೆ ಹತ್ತಿಕೊಂಡಿದ್ದವು. ಅಲ್ಲಲ್ಲಿಗೆ ಕುತ್ತನಿಯ ಪಡದೆಗಳು ಇಳಿಬಿದ್ದು ಪ್ರೇಕ್ಷಕರ ಮನಸ್ಸನ್ನು ಎಳೆಯುತ್ತಿದ್ದವು. ನೆಲವೂ, ಕಟ್ಟೆಗೆಯೂ, ಛಾವಣಿಯೂ, ಎಲ್ಲೆಲ್ಲಿಯೂ ಕಾಣದಂತೆ ರೇಸಿಮೆ-ಜರತಾರಿಗಳ ವಸ್ತ್ರಗಳೂ, ಕಿನಕಾಪು ಮಖಮಲಗಳೂ, ಜಮಾಖಾನಿ-ಝೂಜಮಗಳೂ, ಖಿನಾತು ಬನಾತುಗಳೂ, ಗೋಟು ಸುಳುವುಗಳೂ ಅವುಗಳನ್ನು ಅವರಿಸಿ ಅಲಂಕರಿಸಿದ್ದವು. ಚಿತ್ರಪಟಗಳು ಸುತ್ತಲೂ ಸಾಲ್ಗೊಂಡು ಶೋಭಿಸುತ್ತಿದ್ದವು. ಮಂಟಪದ ಮಹಾದ್ವಾರವು ಬಹು ಎತ್ತರವಾಗಿ ನಿಂತುಕೊಂಡಿತ್ತು. ಸಾರಾಂಶ, ಸರ್ವತೋಪರಿಯಿಂದ ಸಭಾಮಂಟಪವು ರಮಣೀಯವಾಗಿತ್ತು. ಮರುದಿವಸ (ತಾರೀಖು ೧೮ನೇ ಡಿಸೆಂಬರ ದಿವಸ) ಬೆಳಗಾಗುತ್ತಲೆ ಬೀದಿಬೀದಿಗೆ ನೀರಿನ ಚಳಿ ಕೊಟ್ಟು, ಅಲ್ಲಲ್ಲಿಗೆ ರಂಗವಲ್ಲಿಗಳನ್ನು ಹಾಕಿದ್ದರು. ಊರೆಲ್ಲ ಜಳಜಳವಾಗಿ ಸರ್ವಾಲಂಕಾರಗಳಿಂದ ರಬಕವಿಯ ಗ್ರಾಮಶ್ರೀಯು ಬಹು ಸೊಬಗನ್ನೂ, ಸೌಭಾಗ್ಯವನ್ನೂ ಪಡೆದಿತ್ತು. ಬೆಳಗಾಗುತ್ತಲೆ ರಾ.ಬ॥ರುದ್ರಗೌಡರು ಬರುವರೆಂದೂ, ಮಹೋತ್ಸವನ್ನು ನೋಡಬೇಕೆಂದೂ ಜನರು ಇಂದಿನ ಉದ್ಯೋಗವನ್ನು ಹಿಂದಿನ ದಿವಸವೇ ತೀರಿಸಿಕೊಂಡು ತಯಾರಾಗಿ ನಿಂತಿದ್ದರು. ಎಲ್ಲ ಜನರ ಮುಖಗಳ ಮೇಲೆ ಆನಂದದ ಕಳೆಯು ಸುರಿಯುತ್ತಿತ್ತು. ಹೊತ್ತೇರಿದ ಹಾಗೆ ಜನರೆಲ್ಲರು ಸಾಹೇಬರ ಆಗಮನಕ್ಕೆ ಆತುರರಾಗಿದ್ದರು. ಪುರಮುಖಂಡರೂ, ಸೆಟ್ಟಿಸಾಹುಕಾರ ಸಮಸ್ತದೈವದವರೂ ಸಾಹೇಬರ ಆಗಮನವನ್ನು ನಿರೀಕ್ಷಿಸುತ್ತ ಗ್ರಾಮದ ಬಹಿರ್ಭಾಗದಲ್ಲಿ ನಿಬಿಡವಾಗಿ ನಿಂತುಕೊಂಡಿದ್ದರು. ಇವರ ಆಗಮನ ಪ್ರೀತ್ಯರ್ಥವಾಗಿ ಎಲ್ಲ ಶಾಲೆಗಳಿಗೂ ಸೂಟಿಯನ್ನು ಕೊಟ್ಟಿದ್ದರಿಂದ ಸಾಲೆಗಳ ವಿದ್ಯಾರ್ಥಿಗಳೆಲ್ಲರೂ ಹಾರಾಡುತ್ತ ಊರಹೊರಗೆ ಬಂದು, ಮಾರ್ಗದಲ್ಲಿ ಸಾಲ್ಗೊಂಡು ನಿಂತಿದ್ದರು. ಸುತ್ತಹಳ್ಳಿಗಳ ಜನರು ಬಂದು ಬಹು ದಟ್ಟಾಗಿ ತುಂಬಿದ್ದರು. ಕುದುರೆಯ ಸವಾರರೂ, ಪೋಲೀಸಪಾಲ್ಟಿಯೂ ಬಂದು ಭದ್ರತೆಗಾಗಿ ಬಹು ಎಚ್ಚರದಿಂದ ನಿಂತಿದ್ದರು. ಪ್ರೇಕ್ಷಕರೂ, ಪ್ರವಾಸಿಕರೂ ಅಲ್ಲಲ್ಲಿಗೆ ಮಾರ್ಗದಲ್ಲಿ ಸಾಂದ್ರವಾಗಿದ್ದರು. ಎಲ್ಲರೂ ಸಾಹೇಬರ ಮಾರ್ಗಪ್ರತೀಕ್ಷೆಯನ್ನೇ ಮಾಡುತ್ತ ನಿಂತನಿಂತಿರುವಷ್ಟರೊಳಗೆ ಒತ್ತರದಿಂದ ಬರುತ್ತಿರುವ ಟಾಂಗೆಯ ಗಡಗಡಾಟದ ಸಪ್ಪಳವು ಕೇಳಬಂತು. ಸಪ್ಪಳಕೇಳಿದೊಡನೆ ಎಲ್ಲರ ದೃಷ್ಟಿಯೂ,

ಲಕ್ಷವೂ ಅತ್ತಕಡೆಗೇ ಹೋಯಿತು. ಕೂಡಲೆ ಶುಭ್ರವರ್ಣದ ಕಿರಿಗುದುರೆಗಳನ್ನು ಕುಣಿಸುತ್ತ ಟಾಂಗೆಯು ಸಮೀಪಕ್ಕೆ ಬಂದ ಹಾಗೆ ಜನಸಮೂಹದ ಮುಖಕಮಲಗಳು ಪ್ರಫುಲ್ಲವಾದವು. ರಾವಬಹದ್ದೂರವರ ಪ್ರಸನ್ನಮುಖಮಂಡಲವನ್ನು ಕಾಣುತ್ತಲೆ ಜನರು ಸಂತೋಷಭರಿತರಾಗಿ, ಜಯಜಯಕಾರ ಮಾಡುತ್ತ ಮಹೋತ್ಸವದೊಡನೆ ಅವರನ್ನು ಕರೆದುಕೊಂಡು ಗ್ರಾಮಪ್ರವೇಶ ಮಾಡಿದರು. ಹೋಗ ಹೋಗುತ್ತ ಹಿಂದೆಯೂ, ಮುಂದೆಯೂ ಜನಸಮೂಹವು ಹೆಚ್ಚಾಗುತ್ತ ಒಂದು ಮೈಲು ಉದ್ದವಾಗಿ ವ್ಯಾಪಿಸಿಕೊಂಡು ಸಾಗಿ ಹೋಗುತ್ತಿತ್ತು. ಅಷ್ಟೊತ್ತಿಗೆ ೯ ಘಂಟೆಯ ಕಾಲವಾಯಿತು. ಶಂಕರಲಿಂಗನ ದೇವಾಲಯದಲ್ಲಿ ಸರ್ವತೋಪರಿಯಿಂದ ಶೃಂಗಾರವಾಗಿದ್ದ ಸಭಾಮಂಟಪಕ್ಕೆ ಎಲ್ಲರೂ ದಯಮಾಡಿಸಿದರು. ಘಮಘಮಿಸುವ ಮಲ್ಲಿಗೆಯ ಪುಷ್ಪಗುಚ್ಛಗಳಿಂದಲೂ, ಸುಗಂಧದ್ರವ್ಯಗಳಿಂದಲೂ, ಹೊರಹೊಂಟ ಸುವಾಸನೆಯು ಸುತ್ತಲೂ ಸೊಗಸನ್ನುಂಟು ಮಾಡುತ್ತಲಿತ್ತು. ರಬಕವಿಯ ನಿವಾಸಿಗಳು ತಮ್ಮ ಆಗಮನ ಪ್ರೀತ್ಯರ್ಥವಾಗಿ ಮಾಡಿದ ಈ ಚಕಚಕಿತವಾದ ಸರ್ವವ್ಯವಸ್ಥೆಯನ್ನೂ, ಶೃಂಗಾರವನ್ನೂ ನೋಡಿ, ರಾವಬಹದ್ದೂರವರು ಬಹು ಆನಂದವನ್ನು ಹೊಂದಿ, ಮುತ್ತೂರ ಸೆಟ್ಟರೇ ಮೊದಲಾದ ಪುರಮುಖಂಡರ ಅಪೇಕ್ಷೆಯ ಮೇರೆಗೆ ಸರ್ವಜನರ ಕರತಳಗಳ ಸಪ್ಪಳಗಳ ಜಯಜಯಕಾರದಲ್ಲಿ ಬಹು ರಮಣೀಯವಾಗಿದ್ದ ರಾಜಾಸನವನ್ನಲಂಕರಿಸದರು. ಸಭಾಮಂಟಪವು ಆಯ್ದಾರು ಸಾವಿರ ಜನರಿಗೆ ಮಾತ್ರ ಸಾಲುವಂತಿತ್ತು. ಆದರೆ ಅಳತೆಯಿಲ್ಲದೆ ಕೂಡಿದ ಜನಕ್ಕೆ ಕೂಡ್ರಲಿಕ್ಕೆ ಸ್ಥಳವೇ ಸಾಲದೆ ಹೋಗಿ, ಒಳಗಿನ ಇಮ್ಮಡಿ ಮುಮ್ಮಡಿ ಜನರು ಹೊರಗೆ ಬಹುದೂರದವರೆಗೆ, ದಟ್ಟಾಗಿ ನಿಲ್ಲಬೇಕಾಯಿತು. ಸಭಾಮಂಟಪವೂ, ದೇವಾಲಯವೂ, ಪಾತಾಳ ಅಂಕಣವೂ, ದೇವಾಲಯದ ಮುಂದಿನ ಬಹುವಿಸ್ತಾರವಾದ ಅಂಗಳವೂ, ವಿಸ್ತೃತವಾದ ಪೌಳಿಗಳೂ, ಗರ್ಭಗುಡಿಯೂ ಜನಸಮೂಹದಿಂದ ತುಂಬಿತುಳುಕುತ್ತಿದ್ದವು. ಹೊರಗೆ ನಿಬಿಡವಾಗಿ ನಿಂತಿದ್ದ ಜನರೂ, ಹೊಸಹೊಸದಾಗಿ ಬಂದು ಸೇರುತ್ತಿದ್ದ ಜನರೂ ಬಂದು ಬಂದು ಮುಗಿಬೀಳುತ್ತಿತ್ತು. ಒಳಗೆ ಒಂದು ಸಣ್ಣಪ್ರಾಣಿಯೂ ಕೂಡ ಸೇರಲಿಕ್ಕೆ ಅವಕಾಶವಿದ್ದಿಲ್ಲ. ಎಲ್ಲ ಸ್ಥಳವೂ ಕಿಷ್ಕಿಂಧವಾಗಿ ತುಂಬಿಹೋಗಿತ್ತು. ಜನರ ದಟ್ಟಣೆಯು ಅತಿಶಯಿಸಲು ಸಾಹೇಬರಿಗೆ ಬಹು ಘರ್ಮವಾಗಿ ಆಯಾಸವಾಗಹತ್ತಿತು. ಬೀಸಣಿಕೆಗಳು ಅವಿಚ್ಛಿನ್ನವಾಗಿ ಬೀಸುತ್ತಿದ್ದರೂ ಘರ್ಮಾಯಾಸವು ತಪ್ಪಲಿಲ್ಲ. ಅದರಿಂದ ಜನರನ್ನು ಚದುರಿಸಲಿಕ್ಕೆ ಎಷ್ಟು ಪ್ರಯತ್ನಿಸಿದರೂ ಉಪಯೋಗ ಬೀಳಲಿಲ್ಲ. ಜನರು ಇವರನ್ನು ನೋಡಲಿಕ್ಕೆ ಹವಣಿಸಿ ಜನಸಮೂಹದ ಮೇಲೆ ಬಂದು ಬೀಳುತ್ತಿದ್ದರು.

ಈ ಪ್ರಕಾರವಾಗಿ ದಟ್ಟಣೆಯು ಒಳಗೂ, ಹೊರಗೂ ಕೂಡಿಯೇ ನಡೆದಿರಲು, ಅದರಂತೆ ವಾದ್ಯದ ಪೆಟ್ಟಿಗೆಯ ಸುಸ್ವರವು ದೇವಾಲಯವನ್ನು ವ್ಯಾಪಿಸಿ ದೊರ ಚೆಲ್ಲುತ್ತಿರಲು, ಗಾಯನ ಸಮಾರಂಭವು ಸಭಿಕರು ತಲೆದೂಗುವಂತೆ ನಡೆಯಿತು. ಬಳಿಕ ಮುತ್ತೂರ ಸೆಟ್ಟರೇ ಮೊದಲಾಗಿ ಕೆಲವರು ರಾವಬಹದ್ದೂರವರ ಸ್ವಾಗತಪರ ಭಾಷಣ ಮಾಡಿ, ಆನಂದ ಪ್ರದರ್ಶನ ಮಾಡಿದರು. ಬನಟ್ಟಿನ ತಮ್ಮಣ್ಣಪ್ಪ ಚಿಕ್ಕೋಡಿಯವರು ರಾವಬಹದ್ದೂರವರ ವಿಷಯವಾಗಿ ಇವರು ಸಾರ್ವಜನಿಕ ಹಿತದ ಸಲುವಾಗಿ ಹಗಲಿರುಳು ಪ್ರಯತ್ನಿಸುತ್ತಿರುವದನ್ನೂ, ಈವರೆಗೆ ಮಾಡಿದ ಲೋಕೋಪಕಾರವನ್ನೂ, ರೈತಜನರ ವಿಷಯವಾಗಿ ತೋರಿಸುವ ಕಳಕಳಿಯನ್ನೂ, ಸರಕಾರದಲ್ಲಿರುವ ಇವರ ವಿಶ್ವಾಸವನ್ನೂ, ಇವರ ಮೇಲಿರುವ ಜನಾನುರಾಗವನ್ನೂ, ಸ್ವಮತದ ವಿಷಯವಾಗಿ ಇವರು ಮಾಡಿದ ಅಸಾಧಾರಣ ಕಾರ್ಯವನ್ನೂ ಉದ್ದೇಶಿಸಿ, ಅಸ್ಖಲಿತವಾಣಿಯಿಂದ ಎಲ್ಲರಿಗೂ ಕೇಳುವಂತೆ ರಸವತ್ತಾಗಿ ಮಾತಾಡಿದರು. ಮತ್ತು ಮುತ್ತೂರ ಬಸೆಟ್ಟೆಪ್ಪನವರು ಸಾಹೇಬರ ಗುಣಾನುವಾದ ಮಾಡಿ ಇವರು ನಮ್ಮ ವೀರಶೈವ ಮತದ ಮೇಲೆ ಮಾಡುತ್ತಿರುವ ಮಹೋಪಕಾರವನ್ನೂ, ಇವರ ಘನತೆಯನ್ನೂ, ಪುಣ್ಯವಂತಿಕೆಯನ್ನೂ ದಿಗ್ದರ್ಶನಮಾಡಿದರು. ಬಳಿಕ ಪಾನಸುಪಾರಿಯ ಸಮಾರಂಭವು ಅದ್ವಿತೀಯವಾಗಿ ಆಯಿತು. ಕಡೆಗೆ ಇವರ

ಧನ್ಯವಾದದ ಜಯಜಯಕಾರದಿಂದುಂಟಾದ ಜನಸಮೂಹದ ಕರತಳಗಳ ಸಪ್ಪಳಗಳ ಸಂಭ್ರಮದಲ್ಲಿ ಮನೋಹರವಾದ ಪುಷ್ಪಮಾಲೆಗಳು ಇವರ ಕಂಠಪ್ರದೇಶದಲ್ಲಿ ಅಲಂಕೃತವಾದವು. ಹಾರತುರಾಯಿಗಳು ಹಂಚಲ್ಪಟ್ಟವು. ಸುಗಂಧದ್ರವ್ಯಗಳ ಸುವಾಸನೆಯಲ್ಲಿ ಸರ್ವರೂ ಮಗ್ನರಾದರು. ಸರ್ವಸಮಾರಂಭದಿಂದ ಸಭಾವಿಸರ್ಜನವಾದರೂ ಜನರ ದಟ್ಟಣೆಯು ತಪ್ಪಲಿಲ್ಲ. ಜನರ ದಟ್ಟಣೆಯಲ್ಲಿ ನೆಟ್ಟಗೆ ಕಾಣಿಸದ್ದರಿಂದ ಇವರನ್ನು ಮನದಣಿ ನೋಡಲಿಕ್ಕೆ ಜನಸಮೂಹವು ಅಲ್ಲಿಯೇ ಸಂಚರಿಸುತ್ತಲಿತ್ತು.

ರಾವಬಹದ್ದೂರವರ ಊಟ ಉಪಚಾರದ ಸಿದ್ಧತೆಯು ಆ ದೇವಾಲಯದಲ್ಲಿಯೇ ಮಾಡಲ್ಪಟ್ಟಿತ್ತು. ಎಷ್ಟೋ ಪರಮಾನ್ನಗಳು ಮುತ್ತೂರಸೆಟ್ಟರ ಮನೆಯಲ್ಲಿ ಸಿದ್ಧವಾಗಿ ಕಳಿಸಲ್ಪಟ್ಟವು. ಬೇಕಾದ ಪಕ್ವಾನ್ನಗಳನ್ನು ಒಳ್ಳೇ ಸೊಗಸಾಗಿ ಮಾಡಲಿಕ್ಕೆ ಮುತ್ತೂರ ಸೆಟ್ಟರ ಮನೆತನದ ಹೆಣ್ಣುಮಕ್ಕಳು ಪ್ರಸಿದ್ಧರಾಗಿರುವದು. ವೀರಶೈವ ಸಮಾಜದಲ್ಲಿ ಅಡಿಗೆಗೂ, ವ್ಯವಸ್ಥೆಗೂ, ಶೀಲಾಚಾರಕ್ಕೂ ಬಣಜಿತನದವರೇ ಮೇಲಾದವರೆಂದು ಹೇಳಬಹುದು. ಭೋಜನವಾದನಂತರ ಮಧ್ಯಾಹ್ನದ ಮೇಲೆ ನೇಟಿವ್ ಜನರಲ್ ಲಾಯಬ್ರರಿಯಲ್ಲಿಯೂ, ಮುತ್ತೂರಸೆಟ್ಟರ ಮನೆಯಲ್ಲಿಯೂ, ವಿರಕ್ತ ಮಠದ ವಾಚನಮಂದಿರದಲ್ಲಿಯೂ, ಮರೀಗುದ್ದಿ ಶಂಕರಪ್ಪಣ್ಣನವರ ಮನೆಯಲ್ಲಿಯೂ, ಪಾನಸುಪಾರಿಯ ಸಮಾರಂಭಗಳು ಬಹು ವಿಜೃಂಭಣೆಯಿಂದ ಜರುಗಿದವು. ತಮ್ಮಣ್ಣಪ್ಪ ಚಿಕ್ಕೋಡಿಯವರೇ ಮೊದಲಾದ ಬನಹಟ್ಟಿಯ ಜನರು ಸಾಹೇಬರನ್ನು ತಮ್ಮ ಊರ ವರೆಗೆ ದಯಮಾಡಿಸಬೇಕೆಂದು ಬೇಡಿಕೊಂಡ ಪ್ರಕಾರಕ್ಕೆ ಒಪ್ಪಿಕೊಂಡು, ೪ ಗಂಟೆಯ ಸುಮಾರಕ್ಕೆ ಬನಹಟ್ಟಿಗೆ ಆಗಮಿಸುವವರಾದರು. ರಬಕವಿಯಿಂದ ಬನಹಟ್ಟಿಯು ಒಂದು ಒಂದೂವರೆ ಮೈಲು ಇದ್ದರೂ ಅಲ್ಲಿಯ ವರೆಗೂ ತಳಿರ್ದೋರಣಗಳು ತೂಗಾಡುತ್ತಿದ್ದವು. ರಬಕವಿಯಿಂದ ಬನಹಟ್ಟಿಯ ವರೆಗೂ ಇವರ ಹಿಂದೆ ಮುಂದೆ ಜನರು ಕಿಷ್ಕಿಂಧವಾಗಿ ತುಂಬಿಕೊಂಡೇ ಇದ್ದರು. ಇವರ ಟಾಂಗೆಯು ಭರದಿಂದ ಮುಂದೆ ಸಾಗಲಿಕ್ಕೆ ಮಾರ್ಗವೇ ಇಲ್ಲದಂತಾಗಿತ್ತು. ಗಂಡಸರು, ಹೆಂಗಸರು, ಹುಡುಗರು ಮೊದಲಾಗಿ ಓಣಿಓಣಿಗಳಲ್ಲಿಯೂ ಕಟ್ಟೆಗಳ ಮೇಲೆಯೂ, ಮಹಡಿಗಳ ಮೇಲೆಯೂ, ಮನೆ ಮಳಿಗೆಗಳ ಮೇಲೆಯೂ ನಿಂತು ಉತ್ಕಟೇಚ್ಛೆಯಿಂದ ನೋಡುತ್ತಿದ್ದರು. ಅದೊಂದು ದಿವಸ ಎಲ್ಲರೂ ತಮ್ಮ ತಮ್ಮ ಉದ್ಯೋಗಗಳಿಗೆ ಸೂಟಿಯನ್ನೇ ಕೊಟ್ಟಿದ್ದರು. ಆ ದಿವಸ ಅವೆರಡು ಗ್ರಾಮಗಳೊಳಗಿನ ಎರಡು ಮೂರು ಸಾವಿರ ಮಗ್ಗಗಳು ಬಂದು ಮಾಡಲ್ಪಟ್ಟಿದ್ದವೆಂದರೆ ಅತಿಶಯೋಕ್ತಿಯಾಗದು. ಈ ಗ್ರಾಮಗಳಲ್ಲಿ, ನೆಯ್ಗೆಕಾರ ಜನರ ವಸತಿಯು ಬಹಳವಿದೆ. ರಾ.ಬ||ರವರ ಟಾಂಗೆಯು ರಾಜಮಾರ್ಗದಿಂದ ಹೋಗುತ್ತಿರಲು, ಅವರೆಲ್ಲರು ತಮ್ಮ ನೇಗಿಗಳನ್ನೂ, ಉಂಕಿಗಳನ್ನೂ ಬಿಟ್ಟುಕೊಟ್ಟು ಓಡುತ್ತೋಡುತ್ತ ಬಂದು ಇವರನ್ನು ಕಂಡು ಆನಂದಿಸುವವರಾದರು. ಮುದುಕರು ಏಳುತ್ತ ಬೀಳುತ್ತ ಬಂದು ಇವರನ್ನು ಕಂಡು ಸಂತೋಷಪಟ್ಟರು. ಹರೆಯದ ಹೆಣ್ಣುಮಕ್ಕಳೂ ಕೂಡ ಮರೆಯಲ್ಲಿ ನಿಂತು ಸಾಹೇಬರನ್ನು ಕಾಣುವವರಾದರು. ಈ ಪ್ರಕಾರ ಮಾರ್ಗದಲ್ಲಿ ದಟ್ಟವಾಗಿ ಮುಂದರಿಯುತ್ತಿರುವ ಜನಪ್ರವಾಹದಲ್ಲಿ ಸಾಹೇಬರ ಟಾಂಗೆಯು ತೇಲಿ ಹೋಗುತ್ತಿರುವಂತೆ ಶೋಭಿಸುತ್ತಿತ್ತು. ರಬಕವಿ ಬನಹಟ್ಟಿಗಳ ನಡುವೆ ರಾಮಪುರವೆಂಬದೊಂದು ಹಳ್ಳಿಯದೆ. ಆ ಹಳ್ಳಿಯವರು ಯಾರಿಗೂ ಹೇಳದೆ ಕೇಳದೆ ತಮ್ಮಷ್ಟಕ್ಕೆ ತಾವೇ ರಬಕವಿ ಬನಹಟ್ಟಿಗಳಂತೆ ತಮ್ಮೂರಲ್ಲಿಯೂ ಮುಖ್ಯಮಾರ್ಗದಲ್ಲಿ ತಳಿರುತೋರಣಗಳನ್ನು ಕಟ್ಟಿಕೊಂಡು, ಇವರು ಬರುವ ಮುಂದೆ ಊರವರೆಲ್ಲ ಒಮ್ಮುಖವಾಗಿ ನಿಂತುಕೊಂಡಿದ್ದರು. ಅವರೆಲ್ಲರು ಸಾಹೇಬರನ್ನು ಕಂಡು ಸಂತೋಷಪಟ್ಟರು.

ಬನಹಟ್ಟಿಯಲ್ಲಿ ಎಲ್ಲಕ್ಕೂ ಮೊದಲು ತಮ್ಮಣ್ಣಪ್ಪ ಚಿಕ್ಕೋಡಿಯವರ ಮನೆಯಲ್ಲಿ ಪಾನಸುಪಾರಿಯಾಯಿತು. ಅನಂತರ ಧರ್ಮಶಾಲೆಯಲ್ಲಿ ಸಭೆಕೂಡಿ, ಅಲ್ಲಿಯೂ ಪಾನಸುಪಾರಿಯಾಯಿತು. ಅಲ್ಲಿ ತಮ್ಮಣ್ಣಪ್ಪನವರು ಸ್ವಲ್ಪದರಲ್ಲಿ ಸರಸಾಗಿ ಭಾಷಣ ಮಾಡಿದರು. ಅಲ್ಲಿಂದ ಕನ್ನಡ ೧ನೇ ನಂಬರ

ಶಾಲೆಯಲ್ಲಿಯೂ, ಹೆಣ್ಣುಮಕ್ಕಳ ಶಾಲೆಯಲ್ಲಿಯೂ, ದವಾಖಾನೆಯಲ್ಲಿಯೂ ಪಾನಸುಪಾರಿಯ ಸಮಾರಂಭಗಳು ಬಹು ಸೊಗಸಾಗಿ ಆದವು. ಸಾಹೇಬರು ಸಾಲೆಗಳ ವಿದ್ಯಾರ್ಥಿಗಳಿಗೆ ಬಕ್ಷೀಸುಗಳನ್ನೂ, ಮುಂಜಾನೆ ಆ ಸಮಾರಂಭಗಳಲ್ಲಿ ಎರಡೂ ವಾಚನಮಂದಿರಗಳಿಗೆ ಸಹಾಯ ದ್ರವ್ಯವನ್ನೂ, ಎಲ್ಲ ಶಿಪಾಯರಿಗೂ, ಸೇವಕರಿಗೂ ಖುಶಾಲಿಯನ್ನೂ ಕೊಟ್ಟು ಅವರನ್ನು ಮರ್ಯಾದಿಸಿ, ತಮ್ಮ ಮಹೌದಾರ್ಯವನ್ನು ವ್ಯಕ್ತಪಡಿಸಿದರು. ಎಲ್ಲ ಪಾನ ಸುಪಾರಿಗಳಲ್ಲಿಯೂ ಹಾರತುರಾಯಿ ಸುಗಂಧದ್ರವ್ಯಗಳ ಸೂರೆಯಾಗಿ ಹೋಯಿತು. ಅಷ್ಟೊತ್ತಿಗೆ ಸಾಯಂಕಾಲವಾಗುತ್ತ ಬಂತು. ಇದೊಂದು ದಿವಸ ಇಲ್ಲಿ ಇದ್ದು ಮರುದಿವಸ ಮುಂಜಾನೆ ತೆರಳಬಹುದೆಂದು ರಬಕವಿ ಬನಟ್ಟಿ ಗ್ರಾಮಗಳ ನಿವಾಸಿಗಳು ಸಾಹೇಬರನ್ನು ಪ್ರಾರ್ಥಿಸಿಕೊಂಡರು. ಕಾರ್ಯ ಬಹುಳತೆಯ ಮೂಲಕ ಅವರು ಇರಲಿಕ್ಕೆ ಒಪ್ಪಲಿಲ್ಲ. ಸಾಹೇಬರನ್ನು ಇರಿಸಿಕೊಂಡು ರಾತ್ರಿಯಲ್ಲಿ ಅವರ ಮೆರವಣಿಗೆಯನ್ನು ಬಹುವಿಜ್ರಂಭಣೆಯಿಂದ ಹೊರಡಿಸಬೇಕೆಂದು ಜನರು ಉತ್ಸುಕತೆಯುಳ್ಳವರಾಗಿದ್ದರು. ಬೆಳಗಿನಿಂದ ಸಂಜೆಯ ವರೆಗೂ ಸಾಹೇಬರ ಆದರೋಪಚಾರದೊಳಗೇ ಮಗ್ನರಾಗಿದ್ದರೂ ಅವರ ಉತ್ಸವ ಪ್ರೀತಿಯು ತೀರಿದ್ದಿಲ್ಲ. ಪುರಜನರು ಹಗಲೆಲ್ಲ ಸಾಹೇಬರ ದರ್ಶನವನ್ನು ಹೊಂದಿದ್ದರೂ ಅವರ ದರ್ಶನಾಪೇಕ್ಷೆಯು ಇನ್ನೂ ಉಳಿದಿತ್ತು. ರಾತ್ರಿಯೊಂದನ್ನು ಮಹೋತ್ಸವದಿಂದ ಕಳೆಯಬೇಕೆಂದು ಅವರ ದೃಢಸಂಕಲ್ಪವಿತ್ತು. ಅದಕ್ಕೆ ಸಾಹೇಬರ ಒಪ್ಪಿಗೆ ಇಲ್ಲದ್ದರಿಂದ ಅವರ ಉತ್ಸುಕತೆಗೆ ಆಸ್ಪದವಿಲ್ಲದಂತಾಯಿ.ಪುರಮುಖಂಡರು ಎಷ್ಟು ಶ್ರಮಪಟ್ಟಿದ್ದರೂ ರಾ.ಬ॥ರವರ ಆಗಮನದ ಆನಂದದಲ್ಲಿ ಅವರಿಗೆ ಶ್ರಮವೆನಿಸಿರಲಿಲ್ಲ. ಸಾಹೇಬರು ಹೊರಡಲು ಸಿದ್ಧರಾದರು. ಸಾವಿರಾರು ಜನರು ಕಳಿಸಲಿಕ್ಕೆ ನಡೆದರು. ಮುಂಜಾನೆಯಿಂದ ಸಾಯಂಕಾಲದ ವರೆಗೂ ಮಾರ್ಗಗಳಲ್ಲಿ ಜನಸಮೂಹವು ತುಂಬಿಯೇ ಇತ್ತು. ಹೊರಡುವಾಗ ರಾ.ಬ॥ರವರು ರಬಕವಿ ಬನಟ್ಟಿ ನಿವಾಸಿಗಳನ್ನು ಕುರಿತು "ಮುತ್ತೂರ ಸೆಟ್ಟರೇ ಮೊದಲಾದ ಪುರನಿವಾಸಿಗಳೇ! ನೀವೆಲ್ಲರು ನನ್ನ ಆಗಮನ ಪ್ರೀತ್ಯರ್ಥವಾಗಿ ತನುಮನಧನಗಳಿಂದ ಬಹಳ ಶ್ರಮವನ್ನು ವಹಿಸಿ ಬಹು ಆನಂದದಿಂದಲೂ, ಅಭಿಮಾನದಿಂದಲೂ ಮಾಡಿದ ಆದರೋಪಚಾರಗಳಿಗೆ ನಾನು ನಿಮ್ಮೆಲ್ಲರ ಆಭಾರಿಯಾಗಿರುವೆನು. ನೀವು ತೋರಿಸಿದ ಪೂಜ್ಯಭಾವವು ನನ್ನ ಸ್ಮರಣದಲ್ಲಿ ಕಡೆತನಕ ನಿಲ್ಲುವದಾಯಿತು. ಇಷ್ಟು ದಿವಸ ಅಲ್ಲಲ್ಲಿ ನನ್ನ ವಿಷಯವಾಗಿ ಎಷ್ಟೋ ಪಾನಸುಪಾರಿಗಳಾದವು. ಅನೇಕ ಸಮಾರಂಭ ಮಹೋತ್ಸವಗಳು ಜರುಗಿದವು. ಎಷ್ಟೋ ಸಭಾಮಂಟಪಗಳು ರಚಿಸಲ್ಪಟ್ಟವು. ಆದರೆ ನೀವು ಒಂದೇ ಒಂದು ರಾತ್ರಿಯೊಳಗಾಗಿ ರಚಿಸಿದ ಸಭಾಮಂಟಪದ ರಮಣೀಯತ್ವವನ್ನು ಈವರೆಗೂ ಯಾವ ಮಂಟಪವೂ ಪಡೆದಿದ್ದಿಲ್ಲ. ಮತ್ತು ತಮ್ಮಷ್ಟು ಪ್ರೇಮೌದಾರ್ಯ ಪೂಜ್ಯಭಕ್ತಿಯನ್ನು ನಾನು ಎಲ್ಲಿಯೂ ಕಾಣಲಿಲ್ಲ. ಸಾಂಗಲಿಯ ಸಂಸ್ಥಾನಕ್ಕೊಳಪಟ್ಟ ತಾವೆಲ್ಲರು ಈ ಬಗೆಯಾಗಿ ಒಕ್ಕಟ್ಟಿನಿಂದ ಅತಿ ನಿಕಟವಾದ ಪ್ರೇಮವನ್ನು ವ್ಯಕ್ತಪಡಿಸಿದ್ದಕ್ಕೆ ನನಗೆ ಪರಮಾನಂದವಾಗಿರುತ್ತದೆ. ಈ ಪ್ರಕಾರ ಅವರೆಲ್ಲರ ಅಭಿನಂದನ ಮಾಡಿ, ಅವರ ನಿರೂಪ ತೆಗೆದುಕೊಂಡರು. ಕೂಡಲೆ ಕುದುರೆಗಳು ಕುಣಿಯುತ್ತ ಟಾಂಗೆಯನ್ನು ಓಡಿಸಿದವು. ರಕ್ಷಣೆಗಾಗಿ ಸ್ವಾರರೂ, ಪೊಲೀಸಪಾಲ್ಟಿಯವರೂ ಬೆನ್ನುಹತ್ತಿದರು. ಅಥಣಿಯ ತಾಲೂಕ ಮಹಿಷವಾಡಿಯ ಹತ್ತರ ಕೃಷ್ಣಾನದಿಯನ್ನು ದಾಟಿ ರಬಕವಿಯಿಂದ ೮-೯ ಮೈಲುಗಳ ಅಂತರದಲ್ಲಿರುವ ಅಥಣಿ ತಾಲೂಕದೊಳಗಿನ ಸವದಿಯ ಗ್ರಾಮಕ್ಕೆ ದಯಮಾಡಿಸಿದರು. ಅಷ್ಟರೊಳಗಾಗಿ ಸತ್ತಿಯ ಮುಕ್ಕಾಮು ಕಿತ್ತು ಸವದಿಗೆ ಬಂದಿತ್ತು.

ಮುತ್ತೂರ ಬಸ್ಸೆಟ್ಟೆಪ್ಪನವರು

ಇತ್ತ ರಬಕವಿಯ ನಿವಾಸಿಗಳು ರಾ.ಬ॥ರವರು ತಮ್ಮನ್ನು ಗೌರವಿಸಿದ್ದಕ್ಕೂ, ಆದರಾತಿಥ್ಯವನ್ನು ಕಂಡು ಆನಂದ ಪ್ರದರ್ಶನಮಾಡಿದ್ದಕ್ಕೂ ಸಂತೋಷಿಸಿ, ಈ ಸಮಾರಂಭಕ್ಕೆ ತಮ್ಮನ್ನು ಪ್ರೋತ್ಸಾಹಿಸಿದ ಮುತ್ತೂರ

ಬಸ್ಸೆಟ್ಟೆಪ್ಪನವರ ಅಭಿನಂದನ ಮಾಡುತ್ತ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಇದೆಲ್ಲ ಘಟಾಟೋಪಕ್ಕೆ ಮುತ್ತೂರ ಬಸ್ಸೆಟ್ಟೆಪ್ಪನವರೇ ಮೂಲ ಕಾರಣರೆಂದು ಹೇಳಬಹುದು. ರಬಕವಿ, ಬನಟ್ಟಿ ಗ್ರಾಮಗಳ ಪ್ರಮುಖರಿಗೆಲ್ಲ ರಾ.ಬ॥ರವರ ಘನತೆಯನ್ನೂ ಅವರಿಂದಾದ ಮತೋತ್ಕರ್ಷವನ್ನೂ ಅರುಹಿ, ಇಲ್ಲಿಗೆ ಸಾಹೇಬರನ್ನು ಬರಮಾಡಿಕೊಂಡು ಅವರನ್ನು ನಾವು ಅಭಿನಂದಿಸದಿದ್ದರೆ ವೀರಶೈವರಾದ ನಮಗೆ ಗೌಣವೆನಿಸುತ್ತದೆಂದೂ, ಅವರು ನಮ್ಮ ಸೆರಕಾರಕ್ಕೊಳಪಟ್ಟ ಅಧಿಕಾರಿಗಳಲ್ಲದಿದ್ದರೂ, ಲೋಕೋಪಕಾರಿಗಳಾದ ಮಹನೀಯರನ್ನು ಬರಮಾಡಿಕೊಳ್ಳುವದು ನಮ್ಮೆಲ್ಲರ ಧರ್ಮವೆಂದೂ ಹೇಳಿ, ಎಲ್ಲರನ್ನೂ ಹುರಿದುಂಬಿಸಿ, ಈ ಸ್ವಾಗತೋತ್ಸವವನ್ನೂ ಪಾನಸುಪಾರಿಯ ಸಮಾರಂಭವನ್ನೂ ನೆರವೇರಿಸಲಿಕ್ಕೆ ಪ್ರೇರಣೆ ಕೊಟ್ಟಿದ್ದರಿಂದಲೇ ಈ ಉತ್ಸವವು ಈ ಮೇರೆಗೆ ಬಹು ವಿಜೃಂಭಣೆಯಿಂದ ನೆರವೇರಿತು. ಮುತ್ತೂರವರ ಮನೆತನದವರು ಎಂದಿನಿಂದಲೂ ಬಹು ದುಂದುಗಾರರು, ವ್ಯವಹಾರ ಚತುರರು, ಘನವ್ಯಾಪಾರಿಗಳು; ಇವರ ವ್ಯಾಪಾರವು ಮೊದಮೊದಲು ಮುಂಬಯಿ ಪಟ್ಟಣದಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿತ್ತು. ಸದ್ಯದ ಕಾಲಕ್ಕೆ ವೀರಶೈವ ವ್ಯಾಪಾರಿಗಳಲ್ಲಿ ಸೊಲ್ಲಾಪುರದ ವಾರದ ಮಲ್ಲಪ್ಪಣ್ಣನವರು ಪ್ರಖ್ಯಾತರಾಗಿರುವಂತೆ ಮೊದಲು, ಈ ಮುತ್ತೂರಸೆಟ್ಟರು ಪ್ರಸಿದ್ಧಿಯನ್ನು ಪಡೆದಿದ್ದರು. ಇವರ ಪೂರ್ವಜರಾದ ಶಿವಬಸಪ್ಪಣ್ಣನವರು, ಮತ್ತು ಬಸಪ್ಪಣ್ಣನವರು ಎಂಬ ಇಬ್ಬರು ಅಣ್ಣತಮ್ಮಂದಿರು ಮುಂಬಯಿಯ ಬಂದರದಲ್ಲಿ ಹಡಗಕ್ಕೆ ಹಡಗವನ್ನೇ ಖರೀದಿ ಮಾಡುತ್ತಿರುವಷ್ಟು ಘನತೆಯನ್ನೂ, ವ್ಯವಹಾರ ಪ್ರೌಢಿಮೆಯನ್ನೂ ಪಡೆದಿದ್ದರೆಂದು ಜನರು ಹೇಳುತ್ತಿರುವರು. ಮುತ್ತೂರಸೆಟ್ಟರ ಮೂಲ ಮನೆತನವು ಗೋಕಾಕ ತಾಲೂಕ, ಯಾದವಾಡ ಗ್ರಾಮದಲ್ಲಿದ್ದು, ಇವರ ವ್ಯವಹಾರವು ಮುಂಬಯಿ ಶಹರ ಮೊದಲು ಮಾಡಿಕೊಂಡು ಕರ್ನಾಟಕದ ಎಲ್ಲೆಡೆಯಲ್ಲಿಯೂ ನಡೆಯುತ್ತಿತ್ತು. ಮುತ್ತೂರವರ ಮನೆತನದ ಶರೀರ ಸಂಬಂಧವು ಕರ್ನಾಟಕದಲ್ಲಿ ಪ್ರಸಿದ್ಧ ಪಟ್ಟಣಗಳಲ್ಲಿಯೂ ಪ್ರಮುಖ ಮನೆತನಗಳೊಡನೆ ಆಗಿರುವದರಿಂದಲೂ, ವ್ಯವಹಾರಪ್ರಸಿದ್ಧಿಯಿಂದಲೂ, ಈ ಮುತ್ತೂರಸೆಟ್ಟರನ್ನು ಅರಿಯದ ವೀರಶೈವರು ಯಾರೂ ಇರಲಿಕ್ಕಿಲ್ಲ. ಇವರು ಒಮ್ಮೆ ಯಾದವಾಡದಲ್ಲಿ ಲಗ್ನ ಸಮಾರಂಭವನ್ನು ಜರುಗಿಸಬೇಕಾಗಿ ಲಗ್ನಮಂಟಪದ ವಿಸ್ತಾರತೆಗಾಗಿ ತಮ್ಮ ಮನೆಯ ಮುಂದಿರುವ ಪರಜನರ ಇಪ್ಪತ್ತು ಮನೆಗಳನ್ನು ಅವರ ಸಮ್ಮತಿಯಿಂದ ಕೆಡವಿ ಕೆಲಸ ಮಾಡಿ, ಬಹುವಿಸ್ತೀರ್ಣವಾದ ಲಗ್ನಮಂಟಪವನ್ನು ರಚಿಸಿ, ಅಪ್ರತಿಮ ವೈಭವದಿಂದ ವಿವಾಹವನ್ನು ಜರುಗಿಸಿ, ಬಳಿಕ ಆ ಇಪ್ಪತ್ತೂ ಮನೆಗಳನ್ನು ಮೊದಲಿನಕಿಂತಲೂ ಬಹು ಭದ್ರವಾಗಿ ಕಟ್ಟಿಸಿಕೊಟ್ಟರಂತೆ. ಈ ಒಂದೇ ಒಂದು ಉದಾಹರಣೆಯ ಮೇಲಿಂದ ಈ ಮುತ್ತೂರಸೆಟ್ಟರ ಘನವಂತಿಕೆಯೂ, ವೈಭವವೂ, ದುಂದುಗಾರಿಕೆಯೂ ಸ್ಪಷ್ಟವಾಗುವಂತಿದೆ. ಈ ಸೆಟ್ಟರು ದೀರ್ಘೋದ್ಯೋಗಿಗಳೂ ಇದ್ದು ಹರಗುರುಜಂಗಮಾರ್ಚನೆಯಲ್ಲಿ ಬಹು ಆಸಕ್ತರಾಗಿರುವರು. ಇತ್ತಿತ್ತಲಾಗಿ ವ್ಯವಹಾರವು ಕಡಿಮೆಯಾಗಿ ಇವರ ಅಂಗಡಿಗಳು ರಬಕವಿ ಅಥವಾ ಯಾದವಾಡ ಮುಂತಾದ ಸ್ಥಳಗಳಲ್ಲಷ್ಟೇ ನೆಲಗೊಂಡಿರುವವು. ಸಜ್ಜನರಲ್ಲಿ ಈ ಸೆಟ್ಟರ ಪ್ರೇಮ ಬಹಳ, ಅಂತೆಯೇ ರಾ.ಬ॥ರುದ್ರಗೌಡ ದೊರೆಗಳನ್ನು ಇಷ್ಟು ವೈಭವದಿಂದ ರಬಕವಿಗೆ ಕರೆದುಕೊಂಡು ಬಂದು, ಪುರನಿವಾಸಿಗಳನ್ನು ಸಂತೋಷಗೊಳಿಸಿದರು.

ಸಾಹೇಬರು ಯಾವಭಾಗಕ್ಕೆ ಅಧಿಕಾರಿಗಳಾಗಿರುವರೋ ಯಾವ ಸರಕಾರಕ್ಕೊಳಪಟ್ಟಿರುವರೋ ಆ ನಾಡಿನ ಜನರು ಇವರನ್ನು ಬೇಕಾದ ವೈಭವದಿಂದ ಕಂಡುಕೊಳ್ಳಬಹುದು. ಆದರೆ ಪರಸಂಸ್ಥಾನದ ಅಧಿಕಾರಕ್ಕೊಳಪಟ್ಟ ಸೀಮೆಯ ಪ್ರಜೆಗಳೂ ಕೂಡ ಇವರನ್ನು ತ್ರಿಕರಣಪೂರ್ವಕವಾಗಿ ಈ ಪ್ರಕಾರ ಆದರಿಸುತ್ತಿದ್ದದ್ದನ್ನು ನೋಡಿದರೆ, ಇವರು ಎಷ್ಟು ಲೋಕಪ್ರಿಯರಾಗಿರುವರೆಂಬದು ಸಹಜವಾಗಿ ತಿಳಿಯುವಂತಿದೆ. ಈ ರಬಕವಿಯ ನಿವಾಸಿಗಳಂತೆ ತಾವೂ ಮಹೋತ್ಸವ ಮಾಡಬೇಕೆಂದು ಸಾಂಗಲಿಯ ಸಂಸ್ಥಾನ ತಾಲೂಕ ತೇರದಾಳದ ಪ್ರಮುಖರೂ, ಅದೇ ಸಂಸ್ಥಾನಕ್ಕೊಳಪಟ್ಟ ಹನಗಂಡಿ ಗ್ರಾಮದ ಜೈನಧರ್ಮದ ಶ್ರೀಮಂತ ಜಕ್ಕಪ್ಪ

ದೇಸಾಯರ ಸ್ವಾರಸಹಿತರಾಗಿಯೂ ಅಥಣಿಯ ತಾಲೂಕ, ಮುಗಳಖೋಡ ಮುಕ್ಕಾಮಿನಲ್ಲಿ ಬಂದು ರಾ.ಬ॥ರವರನ್ನು ಕುರಿತು "ದೊರೆಗಳೇ! ರಬಕವಿಗೆ ದಯಮಾಡಿಸಿದಂತೆ ನಮ್ಮ ಗ್ರಾಮಗಳ ವರೆಗೂ ದಯಮಾಡಿಸಿ, ತಮ್ಮ ದರ್ಶನದಿಂದ ನಮ್ಮೂರ ಜನರನ್ನೂ, ಸಂತೋಷಗೊಳ್ಳಿಸಬೇಕೆಂ"ದು ಪ್ರಾರ್ಥಿಸಿಕೊಳ್ಳಲು ಸಾಹೇಬರು "ನಿಮ್ಮೆಲ್ಲರ ಪ್ರೇಮವನ್ನು ಕಂಡು ನನಗೆ ಬಹಳ ಆನಂದವಾಗುತ್ತದೆ. ಆದರೆ ನಿಮ್ಮ ಇಷ್ಟದಂತೆ ಈಗ ಬರಲಿಕ್ಕೆ ಅನುಕೂಲವಿಲ್ಲದ್ದಕ್ಕೆ ನಾನು ವ್ಯಸನ ಪಡುತ್ತೇನೆ. ದೇವಾನುಕೂಲವಿದ್ದರೆ ಮುಂದಿನ ಸಾರೆ ನಿಮ್ಮ ಗ್ರಾಮಗಳಿಗೆ ಬರುವೆನು". ಎಂದು ಹೇಳಿದ್ದನ್ನು ಕೇಳಿ "ಸನ್ನಿಧಿಯ ಅಭಿಪ್ರಾಯದಂತೆ ಆಗಲಿ" ಎಂದು ಸಂತೋಷದಿಂದ ಅಪ್ಪಣೆ ತಕ್ಕೊಂಡು ಹೋದರು. ಪರಪ್ರಾಂತದವರೂ, ಮುಖ್ಯವಾಗಿ ಇತರ ಧರ್ಮಾನುಯಾಯಿಗಳೂ ಕೂಡ ಇವರ ಆಗಮನವನ್ನು ಅಪೇಕ್ಷಿಸುತ್ತಿರುವದು, ಇವರ ನ್ಯಾಯವಂತಿಕೆಯ ಮತ್ತು ಪ್ರಮಾಣಿಕತನದ ಫಲವೇ ಸರಿ.[೪]

❖❖

---

೫. ಕೆಳಗಿನ ಪತ್ರ ಶ್ರೀ ಅರಟಾಳ ರುದ್ರಗೌಡರ ಹಸ್ತಾಕ್ಷರದಲ್ಲಿ ಬೆನ್ನುಪುಟದ ಮೇಲಿದೆ-ಸಂ.

ಶ್ರೀ ಗುರು ಬಸವಲಿಂಗಾಯ ನಮಃ ಬಾಗಲಕೋಟಿಯಲ್ಲಿ ಅಜಮಾಸು ಎಂಟು ವರುಷದ ಮುಂದೆ ಶ್ರೀಮನ್ಮಹಾರಾಜ ಮುರಘರಾಜೇಂದ್ರಸ್ವಾಮಿಯಾದ ಜಗದ್ಗುರು ಇವರ ಮಹೋತ್ಸವ ವ್ಯಾಸನ ತೋಳ ಕಟ್ಟಿಕೊಂಡು ಉತ್ಸಾಹ ಮಾಡಿದರು. ಬಹಳ ದಂಗೆ ಆಯಿತು. ಆ ಕಾಲಕ್ಕೆ ಧಾರವಾಡದಿಂದ ಮೆ॥ಕಲೆಕ್ಟರ ಸಾಹೇಬರ ಇವರ ಸ್ವಾರಿ ಬಂತು. ಅಲ್ಲಿ ದಂಗೆ ಬಹಳವಾಗಿ ಹಾರುವರು ಲಿಂಗಾಯತರನ್ನು, ಲಿಂಗಾಯತರು ಹಾರುವರನ್ನು ಬಹಳ ಹೊಡೆದರು. ಆ ಕಾಲಕ್ಕೆ ಮತಾಭಿಮಾನಿಯಾದ ಹುಬ್ಬಳ್ಳಿಯಲ್ಲಿ ಶಿದ್ರಾಮಪ್ಪ ಅಣ್ಣಾ ಪಾವಟೆಯವರು ಹೋಗಿ ಮೆ॥ಕಲೇಕ್ಟರ ಸಾಹೇಬರವರಿಗೆ ಹೇಳಿದರಲ್ಲಾ. ಪುಷ್ಕಳ ಜನರು ಕೂಡಿ ಬಡದಾಟು ಆಯಿತು. ಪರಂತು ಪುಷ್ಕಳ ಗದ್ದಲದೊಳಗೆ ಅವರನ್ನು ಇವರು ಹೊಡೆದರು, ಇವರನ್ನು ಅವರು ಹೊಡೆದರು. ಪಂಚನಾಮಿ ಹ್ಯಾಂಗ ಮಾಡಬೇಕು? ಪುರಾವಿ ಹ್ಯಾಂಗ ಹೊಂಡಬೇಕು? ಅಂತಾ ಪಾವಟೆ ಸಿದ್ದರಾಮಪ್ಪನವರು ಮೆ॥ಕಲೇಕ್ಟರ ಸಾಹೇಬರಿಗೆ ಹೇಳಿದರು. ಆಗ್ಗೆ ಕಲೇಕ್ಟರು ಕಟ್ಲೆ ಉಪಯೋಗಯಿಲ್ಲವೆಂತಲು ಬಿಟ್ಟುಕೊಟ್ಟರು. ಹಿಂಗ ಆಯಿತು.

ತಾರೀಖು ೭ ಮಾಹೆ ಅಗಷ್ಟ ೧೯೨೮. ಆರ್.ಸಿ. ಅರಟಾಳ

ಸಹಿ

ಶ್ರೀ ಗುರು ಬಸವಲಿಂಗಾಯ ನಮಃ ಹುಬ್ಬಳ್ಳಿಯಲ್ಲಿ ಅಜಮಾಸು ಹತ್ತುವರುಷದ ಮುಂದೆ ಆರೂಢನು ತನ್ನ ಮಠದಿಂದ ರುದ್ರಾಕ್ಷಿಮಠ ತನಕಾ ಉತ್ಸಾಹ ಬರುತ್ತಿತ್ತು. ಆಗ್ಗೆ ಶಿದ್ರಾಮಪ್ಪ ಅಣ್ಣಾ ಪಾವಟೆಯವರು ಆರೂಢಗೆ "ಲಿಂಗಾಯತ ರುದ್ರಾಕ್ಷಿಮಠ. ಆ ಮಠಕ್ಕೆ ನೀನು ಬರಬಾರದು" ಎಂದು ಹೇಳಿದರು. ಆಗ್ಗೆ ಸಾಳ್ಯಾರು ಮತ್ತು ಹಟಕಾರು ನಾವು ಸರಿ ಅಂತ ತಕರಾರ ಮಾಡಿದರು. ಆ ಕಾಲಕ್ಕೆ ಶಿದ್ರಾಮಪ್ಪನವರು ತಮ್ಮ ಮನಿ ರೊಕ್ಕ ಖರ್ಚುಮಾಡಿ ಆರೂಢನ ಮೇಲೆ ಕೋರ್ಟಿನಲ್ಲಿ ದಾವಾ ಮಾಡಿದರು. ಆಗ್ಗೆ ಕೋರ್ಟಿನಲ್ಲಿ ಹಿಂಗ ಠರಾವ ಆಯಿತಲ್ಲಾ. "ಲಿಂಗವಂತರ ಮಠದಲ್ಲಿ ಲಿಂಗವಿಲ್ಲದವರು ಹೋಗಬಾರದು. ಆರೂಢ ತನ್ನ ಉತ್ಸವಯಿದ್ದರ ತನ್ನ ಮಠದಲ್ಲಿ ಮಾಡಿಕೊಳ್ಳಬೇಕು. ಲಿಂಗಾಯತ ಮಠ ರುದ್ರಾಕ್ಷಿಮಠಕ್ಕೆ ಬರಬಾರದು" ಅಂತಾ ಕೋರ್ಟಿನಲ್ಲಿ ಪಾಸಾಯಿತು. "ಜರಕರತ ಸರಕಾರ ಹುಕುಮಿಗೆ ಭಂಗಮಾಡಿ ಆರೂಢ ನೀನು ಬಂದರೆ ನಿನಗೆ ತುರಂಗ ವಾರಂಟು ಮಾಡಲಾದೀತೆ"ಂದು ಕೋರ್ಟಿನವರು ಹುಕುಂ ಕೊಟ್ಟರು. ಆಗ್ಗೆ ಆರೂಢನು ಬರುವದು ಬಿಟ್ಟನು.

ಆರ್.ಸಿ. ಅರಟಾಳ

೭-೮-೧೯೨೮

೧೬ನೇ ಭಾಗ

ಫ್ಯಾನ್ಸಿ ಫೇಅರ್ ಅಥವಾ ಫ್ಯಾನ್ಸಿ ಬಝಾರ

(ಇಲ್ಲಿ ಒಂದು ಪುಟ ಹರಿದು ನಾಶವಾಗಿದೆ-ಸಂ)

ಈ ವಿಸ್ತಾರವಾದ ಪ್ರದೇಶದಲ್ಲಿ ದಿವ್ಯವಾದ ೩೦-೪೦ ಡೇರೆಗಳು ಹೊಡೆಯಲ್ಪಟ್ಟಿದ್ದವು. ಅವುಗಳಲ್ಲಿ ಚಿತ್ರವಿಚಿತ್ರವಾದ ಹೆಣಿಕೆಯ ಸಾಮಾನುಗಳೂ, ಬಗೆಬಗೆಯ ವಸ್ತ್ರ-ಪಾತ್ರೆಗಳೂ, ತರತರದ ಆಟಿಕೆಯ ಒಡವೆಗಳೂ, ವಿಧವಿಧದ ಕೈಗಾರಿಕೆಯ ಪದಾರ್ಥಗಳೂ, ಹಲವು ಬಗೆಯ ಹಣ್ಣು ಹಂಪಲಗಳೂ, ಚಿತ್ರಪಟಗಳೂ, ನಾನಾತರದ ವಿಲಾಸದ ವಸ್ತುಗಳೂ, ಸುಗಂಧ ದ್ರವ್ಯಗಳೂ, ಬಣ್ಣದೊಡವೆಗಳೂ, ಇನ್ನೂ ಅನೇಕತರದ ಒಡವೆವಸ್ತುಗಳೂ ಓರಣದಿಂದ ಇಡಲ್ಪಟ್ಟು, ಎಲ್ಲ ಅಂಗಡಿಗಳು ವಿಜೃಂಭಿತವಾಗಿದ್ದವು. ಈ ಪದಾರ್ಥಗಳೆಲ್ಲ ಘನವಂತರಾದ ಅನೇಕ ಜನರಿಂದ ಧರ್ಮಾರ್ಥವಾಗಿ ಕಳಿಸಲ್ಪಟ್ಟಿದ್ದವು. ಅವುಗಳ ವಿಕ್ರಯದಿಂದ ಬಂದ ಹಣವೆ ಈ ಘನವಂತರು ನರ್ಸಿಂಗ್ ಫಂಡಿಗಾಗಿ[೧] ಕಳಿಸಿದ ಹಣವೆಂದು ತಿಳಿಯಬಹುದು. ಈ ಮನೋಹರವಾದ ಪದಾರ್ಥಗಳ ಸೊಬಗಿನ ಅಂಗಡಿಗಳೆಲ್ಲ ಝಗಝಗಾಯಮಾನವಾಗಿದ್ದವು. ಮೆ||ಕಮಿಶನರ ಸಾಹೇಬರ ಪತ್ನಿಯವರೇ ಮೊದಲಾಗಿ ಯಾವತ್ತು ಯುರೋಪಿಯನ್ ದೊಡ್ಡ ದೊಡ್ಡ ಅಧಿಕಾರಿಗಳ ಹೆಂಡಂದಿರೇ ಈ ಫ್ಯಾನ್ಸಿಬಝಾರದ ಅಂಗಡಿಕಾರರಾಗಿದ್ದರು. ಮೊದಲೇ ಸುಂದರವಾದ ತಂಬೂಗಳು, ಆ ತಂಬೂಲಗಳಲ್ಲಿದ್ದ ಪ್ರತಿಯೊಂದು ಪದಾರ್ಥವೂ ಮನೋಹರ! ಈ ಮನೋಹರವಾದ ಪದಾರ್ಥಗಳಿಂದ ಝಗಝಗಿಸುವ ಅಂಗಡಿಗಳು! ಈ ಅಂಗಡಿಗಳಲ್ಲಿ ದಿವ್ಯವಸ್ತ್ರಾಲಂಕೃತರಾದ ದೊರೆಸಾನಿಯರೇ ಅಂಗಡಿಕಾರರು! ಮೇಲಾಗಿ ಈ ಅಂಗಡಿಕಾರರಾಗಿದ್ದ ದೊರೆಸಾನಿಯರ ಆದರೋಪಚಾರ! ಎಂತಹ ಗ್ರಾಹಕರಾದರೂ ಬೇಕಾದ ಪದಾರ್ಥವನ್ನು ನಿರ್ದಿಷ್ಟ ಬೆಲೆಗೆ ತೆಗೆದುಕೊಳ್ಳಲೇಬೇಕಾಗಿತ್ತು. ಧರ್ಮಾರ್ಥವಾಗಿ ಕೂಡಿಸುವ ಈ ನರ್ಸಿಂಗ ಫಂಡಿಗಾಗಿ ಪ್ರತಿಯೊಂದು ಪದಾರ್ಥಕ್ಕೆ ಮೂಲಬೆಲೆಗಿಂತಲೂ ಹೆಚ್ಚು ಬೆಲೆ ಇಡಲ್ಪಟ್ಟಿತ್ತು. ಒಂದು ಕಡೆಗೆ ಗಿಬ್ ದೊರೆಸಾನಿಯವರ ಅಂಗಡಿಯೂ, ಅದರ ಹತ್ತರವೇ ಬ್ರ್ಯಾಂಡನ್ ದೊರೆಸಾನಿಯವರ ಅಂಗಡಿಯೂ, ಇನ್ನೊಂದು ಕಡೆಗೆ ಪೋಲಿಸ ಸಾಹೇಬರ ಪತ್ನಿಯವರ ಅಂಗಡಿಯೂ, ಮತ್ತೊಂದು ಕಡೆಗೆ ಕ್ಲೆಮೆಂಟ ಸಾಹೇಬರ ಪತ್ನಿಯ ಅಂಗಡಿಯೂ, ಕಮ್ಯಾಂಡರ ಸಾಹೇಬರ ಸತಿಯ ಅಂಗಡಿಯೂ, ಸುತ್ತುಮುತ್ತು ಇನ್ನೂ ಅನೇಕ ದೊಡ್ಡ ದೊಡ್ಡ ಅಧಿಕಾರಿಗಳ ಹೆಂಡಂದಿರ ಅಂಗಡಿಗಳೂ ಅಲ್ಲಲ್ಲಿಗೆ ರಂಜಿಸುತ್ತಿದ್ದವು. ಈ ಬಝಾರಕ್ಕೆ ದೂರದೂರಿನ ಸ್ಥಳಗಳ ಸರಕಾರಿಯ ಅಧಿಕಾರಿಗಳೂ, ಪೆನಶನ್‌ದಾರರೂ, ದೇಸಾಯಿ ದೇಶಪಾಂಡೆಯರೂ, ಸೆಟ್ಟಿ ಸಾವಕಾರರೂ, ಬೇರೆ ಎಷ್ಟೊ ಘನವಂತರೂ ಬಂದಿದ್ದರು. ಮತ್ತು ಈ ಫ್ಯಾನ್ಸಿ ಬಝಾರದ ತಮಾಷೆಯನ್ನೂ, ಆಟನೋಟಗಳನ್ನೂ, ಮದ್ದಿನ

೧. ಸುಶಿಕ್ಷಿತ ಸೂಲಗಿತ್ತಿಯನ್ನು ತಯಾರಿಸುವದಕ್ಕಾಗಿ ಕೂಡಿಸುವ ಫಂಡಿಗೆ ಇಂಗ್ಲೀಷ ಭಾಷೆಯಿಂದ ನರ್ಸಿಂಗ್ ಫಂಡೆನ್ನುವರು.

ಚಮತ್ಕೃತಿಯನ್ನೂ, ಜಂಗೀಕುಸ್ತಿಗಳನ್ನೂ ನೋಡಬೇಕೆಂದು ಬಹುಜನ ಕೂಡಿತ್ತು. ಈ ತಮಾಷೆಯನ್ನು ನೋಡಲಿಕ್ಕೆ ಧಾರವಾಡ ಫಿಮೇಲ ಟ್ರೇನಿಂಗ ಕಾಲೇಜದ ಎಲ್ಲ ವಿದ್ಯಾರ್ಥಿನಿಯರೂ, ಮಾಸ್ತರಿಣಿಯವರೂ, ಮಾಸ್ತರರೂ ಬಂದಿದ್ದರು. ಈಯೆಲ್ಲ ಜನಸಮೂಹದಿಂದ ಮೆ||ಕಮಿಶನರ ಸಾಹೇಬ ಬಹದ್ದೂರವರ ಬಂಗಲೆಯ ಕಂಪೌಂಡು ತುಂಬಿಕೊಂಡದ್ದಲ್ಲದೆ ಬೆಳಗಾವಿಯ ಶಹರವೂ ತುಂಬಿಹೋಗಿತ್ತು. ಮೆ||ಕಮಿಶನರ ಸಾಹೇಬ ಬಹದ್ದೂರವರೇ ಮೊದಲಾದ ದೊಡ್ಡ ದೊಡ್ಡ ಅಧಿಕಾರಿಗಳು ಈ ಫ್ಯಾನ್ಸಿಫೆಅರದ ವ್ಯವಸ್ಥೆಗಾರರಾಗಿದ್ದರು. ಈ ಫ್ಯಾನ್ಸಿ ಬಝಾರವನ್ನು ನೋಡಲಿಕ್ಕೆ ಮೂರು ತರಗತಿಯ ಪ್ರವೇಶ ಫೀಯನ್ನು ಇಟ್ಟಿದ್ದರು. ೧ನೇ ತರಗತಿಯು ನಾಲ್ಕು ಆಣೆ, ೨ನೇ ತರಗತಿಯು ಎಂಟು ಆಣೆ, ೩ನೇ ತರಗತಿಯು ೧ ರೂಪಾಯಿ. ಈ ಪ್ರವೇಶ ಫೀಯಿಂದಲೂ ಬಹಳ ಹಣವು ಕೂಡಿತು. ಈ ಹಣವಾದರೂ ಆ ನರ್ಸಿಂಗ್ ಫಂಡಿಗೆ ಸೇರತಕ್ಕದ್ದು. ಈ ಫ್ಯಾನ್ಸಿಬಝಾರವು ಒಂದು ಮಾದರಿಯ ಪ್ರದರ್ಶನವೇ ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಆದರೆ ಪ್ರದರ್ಶನದಲ್ಲಿಟ್ಟ ಪದಾರ್ಥಗಳಲ್ಲಿ ಕೆಲವನ್ನು ಮಾತ್ರ ಯೋಗ್ಯ ಬೆಲೆಗೆ ಕ್ವಚಿತ್ತಾಗಿ ವಿಕ್ರಯಿಸುತ್ತಿರುತ್ತಾರೆ. ಆದರೆ ಈ ಫ್ಯಾನ್ಸಿ ಫೇರ್‌ದಲ್ಲಿ ಎಲ್ಲ ಪದಾರ್ಥಗಳನ್ನು ಹೆಚ್ಚಿನ ಬೆಲೆಗೆ ವಿಕ್ರಯಿಸುವ ಯೋಜನೆಯಾಗಿರುತ್ತದೆ. ಪ್ರದರ್ಶನಕ್ಕೂ, ಫ್ಯಾನ್ಸಿ ಬಝಾರಕ್ಕೂ ಪ್ರಾಯಶಃ ಇಷ್ಟೇ ಭೇದವೆಂದು ಹೇಳಬಹುದು.

ತಾರೀಖು ೯-೧೦-೧೯೦೮ನೇ ದಿವಸ ಬಝಾರದ ವೇಳೆಗೆ ಸರಿಯಾಗಿ ಬಹುಜನರು ಕೂಡಿದರು. ಗ್ರಾಹಕರು ತಮ್ಮ ತಮ್ಮ ಇಷ್ಟ ಪದಾರ್ಥಗಳನ್ನು ಬೆಲೆಯನ್ನು ಕೊಟ್ಟು ಕೊಟ್ಟು ತೆಗೆದುಕೊಳ್ಳಹತ್ತಿದರು. ಅಲ್ಲಿಯ ಪದಾರ್ಥಗಳನ್ನು ತೆಗೆದುಕೊಳ್ಳುತ್ತಿರುವದು ದೇಶೀಚಳವಳಿಯ ಭಕ್ತರಾದ ಬ್ರಾಹ್ಮಣ ವಕೀಲ ಮುಂತಾದ ಜನರಿಗೆ ಸರಿಬರದೆ, ಗ್ರಾಹಕರಿಗೆ ವಿದೇಶೀಯ ಪದಾರ್ಥಗಳನ್ನು ತೆಗೆದುಕೊಳ್ಳಬೇಡಿರೆಂದು ಅಂತರಂಗದಲ್ಲಿ ಬೋಧಮಾಡಿ, ಆ ವ್ಯಾಪಾರವನ್ನು ಕಡಿಮೆಮಾಡಲು ಪ್ರಯತ್ನಿಸುತ್ತಿದ್ದರು. ಎಲ್ಲ ಅಧಿಕಾರಿಗಳಂತೆ ಮೆ||ಕಮಿಶನರ ಸಾಹೇಬ ಬಹದ್ದೂರವರ ಆಮಂತ್ರಣದ ಮೇರೆಗೆ ರಾ.ಬ||ರುದ್ರಗೌಡ ಸಾಹೇಬರೂ ಈ ಫ್ಯಾನ್ಸಿ ಬಝಾರಕ್ಕೆ ಹೋಗಿ, ನರ್ಸಿಂಗ್ ಫಂಡಿಗೆ ಸಹಾಯ ಮಾಡುವವರಾಗಿದ್ದರು. ಇವರ ವರ್ಚಸ್ಸಿನಿಂದ ಜಿಲ್ಲಾ ಧಾರವಾಡ ಗದಗ ತಾಲೂಕಿನ ರಾ.ಸಾ||ಮಾನ್ವಿ ಮಲ್ಲೇಶಪ್ಪಣ್ಣನವರೂ, ತಾಲೂಕ ಹುಬ್ಬಳ್ಳಿಯ ನೀಲಿ ರಾಚಪ್ಪಣ್ಣನವರೂ, ಹಾವೇರಿ ತಾಲೂಕ ದೇವೀಹೊಸೂರಿನ ಕುರುಬಗೊಂಡ ಚೆನ್ನಬಸಪ್ಪ ಸೆಟ್ಟರೂ ಮೊದಲಾದ ಎಷ್ಟೋ ಜನ ಲಿಂಗಾಯತ ಸಾವಕಾರ ಜನರು ಈ ಫ್ಯಾನ್ಸಿ ಬಝಾರಕ್ಕೆ ಬಂದಿದ್ದರು. ಹಲವರು ಬ್ರಾಹ್ಮಣ ವಕೀಲ ಜನರು, ಅಧಿಕಾರಿಗಳ ಮುಂದೆ ಈ ಫಂಡಿನ ಕಾರ್ಯಕ್ಕೆ ಒಳ್ಳೇ ಪ್ರಯತ್ನಿಸುತ್ತಿರುವಂತೆ ನಟಿಸಿ, ಆಂತರ್ಯದಲ್ಲಿ ಇದಕ್ಕೆ ವಿಘ್ನಕಾರಕರಾಗಿಯೂ, ಸ್ವಾರ್ಥಸಾಧಿಸುವವರಾಗಿಯೂ ಇರುತ್ತಿದ್ದರು. ರಾವಬಹದ್ದೂರವರು ಈ ವಕೀಲರ ಕಳ್ಳಗತ್ತನ್ನು ಕೂಡಲೆ ಕಂಡುಹಿಡಿದು, ಲಿಂಗಾಯತ ಸೆಟ್ಟರನ್ನೂ, ಸಾವಕಾರರನ್ನೂ, ಇನ್ನೂ ಅನೇಕ ಜನರನ್ನೂ ಕೂಡಿಸಿ ಅವರನ್ನು ಕುರಿತು "ನರ್ಸಿಂಗ್ ಫಂಡು ಕೂಡಿಸುವದಕ್ಕಾಗಿ ಈ ಫ್ಯಾನ್ಸಿ ಬಝಾರವು ಇಲ್ಲಿ ತೆರೆಯಲ್ಪಟ್ಟಿದೆ. ನಮ್ಮಲ್ಲಿ ಅಲ್ಲಲ್ಲಿಗೆ ಎಷ್ಟೋ ಜನ ಸ್ತ್ರೀಯರು ಪ್ರವಸಕಾಲದಲ್ಲಿ ಬಹಳ ವ್ಯಥೆಗೆ ಗುರಿಯಾಗುತ್ತಿರುತ್ತಾರೆ. ಎಷ್ಟೋ ಕೂಸುಗಳು ಗರ್ಭದಿಂದ ಹೊರಗೆ ಬಾರದೆ ಅಶಿಕ್ಷಿತ ಸೂಲಗಿತ್ತಿಯರ ಆಲಸ್ಯತನದಿಂದಲೂ ಒಳಗೇ ಸಿಕ್ಕು ತಾವು ಸಾಯುವದಲ್ಲದೆ, ತಮ್ಮ ತಾಯಿಗಳನ್ನೂ ಕೊಲ್ಲುತ್ತವೆ. ಕೆಲವು ಭೂಪತನ ಮಾತ್ರವೆ ಮೃತಿ ಹೊಂದುತ್ತವೆ. ಕೆಲ ಸ್ತ್ರೀಯರು ಪ್ರವಸವೇದನೆಯಿಂದ ಎಷ್ಟೋ ಕಾಲ ನರಳುತ್ತ ಬೀಳಬೇಕಾಗುತ್ತದೆ; ತೀವ್ರ ಪ್ರಸೂತವಾಗುವದಿಲ್ಲ. ಕೆಲಗರ್ಭಿಣಿಯರು ಅಚಾತುರ್ಯದಿಂದ ನಂಜೇರಿ ಸಾಯುವರು. ಸೂಲಗಿತ್ತಿಯರ ಅಜ್ಞಾನಕ್ಕೆ ಕೆಲ ಬಸುರಿಯರು ಬಹಳೇ ನಾಶವಾಗುತ್ತಾರೆ. ಮತ್ತು ಪ್ರಸವ ವಿಧಾನವು ನೆಟ್ಟಗಾಗದೆ ಎಷ್ಟೋ ಬಾಣಂತಿಯರೂ, ಕೂಸುಗಳೂ ಬಹು ದಿವಸ ಬೇನೆಗೊಳಕರಾಗಿ ಬೀಳುತ್ತಾರೆ. ಕೆಲವರು ಕಡೆಗೆ ಅದೇ

ಬೇನೆಯಲ್ಲಿಯೇ ನಶಿಸಿಹೋಗುತ್ತಾರೆ. ಈ ಪ್ರಕಾರವಾಗಿ ಎಷ್ಟೋ ಶಿಶುಹತ್ಯಗಳೂ, ಮಾತೃಹತ್ಯಗಳೂ ಒದಗಿ, ಬಹು ಅನರ್ಥಗಳಾಗುತ್ತವೆ. ಗರ್ಭಿಣಿ ಶಿಶು ಸಂಗೋಪನವು ಬಹು ಮಹತ್ವವಾದ ಕಾರ್ಯವಾಗಿದ್ದು, ಅದರ ವಿಷಯವಾಗಿ ನಮ್ಮ ಸ್ತ್ರೀಯರು ಬಹಳೇ ಅಲಕ್ಷ್ಯ ಮಾಡುತ್ತಿರುತ್ತಾರೆ. ಅದರ ಮಹತ್ವವು ನಮ್ಮ ಜನರಿಗೆ ಗೊತ್ತೇ ಇಲ್ಲ. ಅಂತಹ ಸುಶಿಕ್ಷಿತ ಸೂಲಗಿತ್ತಿಯರು ನಮ್ಮಲ್ಲಿ ಇಲ್ಲವೇ ಇಲ್ಲ. ಪ್ರಜೋತ್ಪತ್ತಿಯ ಈ ಕಾರ್ಯದ ಕಡೆಗೆ ನಾವು ವಿಶೇಷ ಲಕ್ಷ ಕೊಡಬೇಕಾಗುತ್ತದೆ. ಸೂಲಗಿತ್ತಿಯರಿಗೆ ಮನುಷ್ಯ ಶರೀರ ರಚನೆಯ ಜ್ಞಾನವೂ, ಮುಖ್ಯವಾಗಿ ಜನನೇಂದ್ರಿಯ ಗರ್ಭಾಶಯಗಳ ಜ್ಞಾನವೂ, ಅವು ವಿಕಾರ ಹೊಂದುವ ಕಾರಣವೂ, ಅವುಗಳನ್ನು ಸರಿಪಡಿಸುವ ವೈದ್ಯಚಿಕಿತ್ಸೆಯೂ ಇರುತ್ತಿದ್ದರೆ ಮೇಲೆ ಹೇಳಿದ ಅನರ್ಥಪರಂಪರೆಗಳು ಎಷ್ಟೋ ಕಡಿಮೆಯಾಗಿ, ಸ್ತ್ರೀಜಾತಿಯ ಅರಿಷ್ಟವು ದೂರಾಗುವದು. ಮೇಲಾಗಿ ಸ್ತ್ರೀಯರ ವೈದ್ಯಚಿಕಿತ್ಸೆಯು ಸ್ತ್ರೀಯರಿಂದಲೇ ಆಗುತ್ತಿರುವದು, ಅವರಿಗೆ ಆರೋಗ್ಯಕರವೂ, ಮರ್ಯಾದಾಶೀಲವೂ ಎಂದು ಒಪ್ಪತಕ್ಕ ಮಾತಾಗಿರುವದು. ಸುಶಿಕ್ಷಿತ ಸೂಲಗಿತ್ತಿಯರೂ, ಡಾಕ್ಟರಿಣಿಯರೂ ಇದ್ದುದಾದರೆ ಅವರು ಮೃತ್ಯುಮುಖದಲ್ಲಿರುವ ಎಷ್ಟೋ ಜನ ಗರ್ಭಿಣಿಯರನ್ನೂ,ಬಾಣಂತಿಯರನ್ನೂ,ಶಿಶುಗಳನ್ನೂ, ಬೇನೆಯವರನ್ನೂ ಬದುಕಿಸಿಕೊಳ್ಳಲವಕಾಶವುಂಟಾಗುವದು. ಇಂತಹ ಸೂಲಗಿತ್ತಿಯರಿಲ್ಲದ್ದು ನಮಗೊಂದು ದೊಡ್ಡ ಕೊರತೆಯಾಗಿರುವದು. ಇವೇ ವಿಚಾರಗಳನ್ನು ಮನಸಿನಲ್ಲಿ ತಂದು, ಸುಶಿಕ್ಷಿತ ಸೂಲಗಿತ್ತಿಯರನ್ನು ತಯಾರಿಸುವ ಸಂಸ್ಥೆಯೊಂದನ್ನು ಈ ಬೆಳಗಾವಿಯಲ್ಲಿ ಸ್ಥಾಪಿಸಬೇಕೆಂದಾಲೋಚಿಸಿ, ಆ ಬಗ್ಗೆ ಫಂಡು ಕೂಡಿಸುವದಕ್ಕಾಗಿ ಸ್ತ್ರೀಜಾತಿಯ ಅಭಿಮಾನಶೀಲೆಯರಾದ ಗಿಬ್‌ದೊರೆಸಾನಿಯವರು ದೀರ್ಘಪ್ರಯತ್ನದಿಂದ ಇಲ್ಲಿ ಈಗ ಈ ಫ್ಯಾನ್ಸಿ ಬಝಾರವನ್ನು ಕೂಡಿಸಿರುವರು. ಇಲ್ಲಿ ವಿಕ್ರಯಿಸುವ ಪದಾರ್ಥಗಳ ಬೆಲೆಯು ನಿಜವಾದ ಬೆಲೆಯಲ್ಲ. ಧರ್ಮಾರ್ಥದ ಉದ್ದಿಶ್ಯವಾಗಿ ಬೇಕಂತೇ ಬೆಲೆಯನ್ನು ಹೆಚ್ಚು ಇಟ್ಟಿರುವರು. ಬಂದ ಹಣವೆಲ್ಲ ಸತ್ಪಾತ್ರಕ್ಕೇ ವಿನಿಯೋಗಿಸಲ್ಪಡುವದರಿಂದ ಎಲ್ಲರೂ ಈ ಯಾತ್ರೆಯಲ್ಲಿ ಔದಾರ್ಯವನ್ನು ತೋರಿಸಬೇಕಾದುದು ಅವಶ್ಯಕವಾಗಿರುವದು; ಇದೊಂದು ಧಾರ್ಮಿಕ ಕಾರ್ಯವೇ ಅಲ್ಲದೆ ಬೇರೊಂದಿಲ್ಲ. ಇಲ್ಲಿ ಔದಾರ್ಯವನ್ನು ತೋರುವ ಮಹಾನುಭಾವರು ಎಷ್ಟೋ ಸ್ತ್ರೀಹತ್ಯ ಶಿಶುಹತ್ಯಗಳನ್ನು ನಿಲ್ಲಿಸಿ, ಅವರಿಗೆ ಪ್ರಾಣದಾನಮಾಡಿ ಪುಣ್ಯವಂತಿಕೆಗೆ ಪಾತ್ರರಾಗುತ್ತಾರೆ. ದೇಶೀ ಚಳವಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ಈ ಹಣದಲ್ಲಿ ಒಂದು ಪೈ ಸಹ ಪರದೇಶಕ್ಕೆ ಹೋಗದು. ಎಲ್ಲ ಹಣವೂ ನಮ್ಮ ಸ್ತ್ರೀಕುಲಕ್ಕೆ ಅರಿಷ್ಟಭೂತವಾಗಿರುವ ಅಜ್ಞಾನವನ್ನು ದೂರಮಾಡುವ ಧರ್ಮಕಾರ್ಯಕ್ಕೆ ಉಪಯೋಗಿಸಲ್ಪಡುತ್ತದೆ. ಈ ಸೂಲಗಿತ್ತಿಯ ಶಿಕ್ಷಣವು ಭೇದಾಭೇದವಿಲ್ಲದೆ ಸಾರ್ವಜನಿಕವಾಗಿ ನಡೆಯುವದು. ಈ ಕೆಲಸಕ್ಕಾಗಿ ಕೂಡಿಸುವ ಫಂಡಿಗೆ ನರ್ಸಿಂಗ್ ಫಂಡೆನ್ನುತ್ತಾರೆ. ಇಲ್ಲದ್ದನ್ನು ಬೋಧಿಸುವ ದುರ್ಬೋಧಕರಿಗೆ ಯಾರೂ ಕಿವಿಗೊಡಬಾರದು. ಈ ಧಾರ್ಮಿಕ ಕೃತ್ಯದಲ್ಲಿ ದೇಶೀ ವಿದೇಶೀ ಈ ಕಲ್ಪನೆಯನ್ನು ಯಾರೂ ತರಲಿಕ್ಕಾಗದು. ಕಪಟ ವಕೀಲರನ್ನು ಯಾರೂ ನಂಬಲಾಗದು. ಇನ್ನೊಂದು ವಿಶೇಷ ಸಂಗತಿಯೇನೆಂದರೆ, ನೀವು ಈ ಫ್ಯಾನ್ಸಿಪೇರದಲ್ಲಿ ಏನನ್ನು ತೆಗೆದುಕೊಳ್ಳಬೇಕೆಂದು ಗ್ರಹಿಸಿರುವಿರೋ, ಅಥವಾ ಈ ಫಂಡಿಗಾಗಿ ಎಷ್ಟು ಹಣಕೊಡುವದನ್ನು ನಿಶ್ಚಯಿಸಿರುವಿರೋ ಅದನ್ನು ಒಬ್ಬೊಬ್ಬರೇ ಬೇರೆ ಬೇರೆಯಾಗಿ ವಿನಿಯೋಗಿಸದೆ ಎಲ್ಲ ಹಣವನ್ನು ಒಟ್ಟಾಗಿ ಸೇರಿಸಿ ಒಟ್ಟು ನಮ್ಮ ಲಿಂಗಾಯತ ಸಮಾಜದ್ದು ಇಷ್ಟು ಹಣವೆಂದು ಒಯ್ದು ಇಟ್ಟರೆ, ಅದು ನಮ್ಮ ಸಮಾಜಕ್ಕೆ ಭೂಷಣವಾಗುವುದಲ್ಲದೆ, ಕೂಡಿದ ಜನರಲ್ಲಿ ಬಹು ಮಹತ್ವದ್ದಾಗಿ ತೋರುವದು. ಮತ್ತೆ ಮೆ||ಕಮಿಶನರ ಸಾಹೇಬ ಬಹದ್ದೂರರವರೇ ಮೊದಲಾದ ಅಧಿಕಾರಿಗಳ ವರ್ಗಕ್ಕೂ, ಅವರ ದೊರೆಸಾನಿಯವರ ಸಮೂಹಕ್ಕೂ ನಮ್ಮ ವೀರಶೈವ ಸಮಾಜದ ವಿಷಯಕ್ಕೆ ಪೂಜ್ಯಭಾವವು ಉತ್ಪನ್ನವಾಗುದು. ದುಷ್ಟಜನರ ಮಾತು ಕೇಳಿ ಈ ಧಾರ್ಮಿಕ ಕಾರ್ಯಕ್ಕೆ ನೀವು ಹಿಂಜರಿಯಬಾರದು. ನಿಮ್ಮ ಇಷ್ಟವಿದ್ದಂತೆ ಮಾಡಬೇಕೆಂದು "

ಹೇಳಲು ಎಲ್ಲ ವೀರಶೈವ ಘನವಂತರು ರಾವಬಹದ್ದೂರವರ ವಿಚಾರಕ್ಕೆ ತಲೆದೂಗಿ ಅವರ ಮಾತಿಗೆ ಒಪ್ಪಿ, ಆ ಕ್ಷಣವೆ ತಮ್ಮ ತಮ್ಮೊಳಗೆ ಫಂಡು ಕೂಡಿಸಿದರು. ರಾವಬಹದ್ದೂರವರೂ ಒಂದುನೂರು ರೂಪಾಯಿ ಇದಕ್ಕೆ ಹಾಕಿದರು. ಒಂದುನೂರು ರೂಪಾಯಿಗಳನ್ನು ಈ ಮೊದಲೇ ನರ್ಸಿಂಗ್ ಫಂಡಿಗಾಗಿ ಕೊಟ್ಟಿದ್ದರು. ಇವರೊಳಗೆ ಒಟ್ಟು ಸುಮಾರು ಎರಡು ಸಾವಿರ (೨೦೦೦) ರೂಪಾಯಿ ಕೂಡಿದವು. ಬಳಿಕ ರಾವಬಹದ್ದೂರವರು ಆ ಹಣ ಸಹಿತ ಅವರೆಲ್ಲರನ್ನು ಫ್ಯಾನ್ಸಿ ಬಝಾರಕ್ಕೆ ಕರದೊಯ್ದು ದೊರೆಸಾನಿಯವರೆದುರಿಗೂ, ಅಧಿಕಾರಿಗಳೆದುರಿಗೂ ಆ ಎರಡು ಸಾವಿರ ರೂಪಾಯಿಗಳನ್ನು ಸುರಿವಿ ಅಷ್ಟು ಬೆಲೆಯ ಬೇಕು ಬೇಕಾದ ಪದಾರ್ಥಗಳನ್ನು ಒಟ್ಟಾಗಿ ತೆಗೆದುಕೊಂಡು ಬಂದು,ಬಂಗಲೆಯಲ್ಲಿ ಅವರೆಲ್ಲರಿಗೂ ಹಂಚಿಕೊಟ್ಟರು. ಈ ವೀರಶೈವರ ಧನರಾಸಿಯನ್ನು ಕಂಡು ಮೆ|| ಗಿಬ್ಬಸಾಹೇಬ ಬಹದ್ದೂರವರೂ, ಅವರ ದೊರೆಸಾನಿಯವರೇ ಮೊದಲಾದ ಎಲ್ಲ ಯುರೋಪಿಯನ್ ಸ್ತ್ರೀಪುರುಷರು ಚಕಿತರಾಗಿ ವೀರಶೈವ ಜನಾಂಗದ ಪೂಜ್ಯ ಭಾವಕ್ಕೂ, ರಾ.ಬ||ರುದ್ರಗೌಡ ದೊರೆಗಳ ಪ್ರಯತ್ನಕ್ಕೂ ಸಂತೋಷಪಟ್ಟರು. ಎಲ್ಲ ಅಧಿಕಾರಿಗಳು ಇವರ ಅಭಿನಂದನ ಮಾಡಿದರು. ಇವರ ಪಕ್ಷದಿಂದ ಇನ್ನೂ ಎಷ್ಟೋ ವೀರಶೈವರು ಬೇರೆಬೇರೆ ದೊಡ್ಡ ರಕಮಿನ ಪದಾರ್ಥಗಳನ್ನು ಕೊಂಡುಕೊಂಡರು. ಇನ್ನೂ ಕೆಲವರು ಈ ನರ್ಸಿಂಗ್ ಫಂಡಿಗಾಗಿ ದೊಡ್ಡ ದೊಡ್ಡ ದೇಣಗಿಗಳನ್ನು ವರ್ಗಣಿಯಾಗಿ ಕೊಟ್ಟರು. ಶ್ರೀಮಂತ ವಂಟಮುರಿಯ ಸರದೇಸಾಯಿಯವರು ತಮ್ಮ ಪತ್ನಿಯವರಿಂದ ಗಿಬ್‌ದೊರೆಸಾನಿಯವರ ಪದರಿನಲ್ಲಿ ಈ ಫಂಡಿಗಾಗಿ ಒಂದು ಸಾವಿರ (೧೦೦೦)ರೂಪಾಯಿಗಳನ್ನು ಸುರಿವಿಸಿದರು. ಇದಲ್ಲದೆ ಶ್ರೀಮಂತರು ತಾವು ಸ್ವತಃ ಎರಡೂವರೆ ನೂರು (೨೫೦) ರೂಪಾಯಿ ಬೆಲೆಬಾಳುವ ಬಗೆಬಗೆಯ ಪದಾರ್ಥಗಳನ್ನು ತೆಗೆದುಕೊಂಡರು. ಈ ದಾನಶೂರತೆಯನ್ನು ಕಂಡು ಗಿಬ್‌ದೊರೆಸಾನಿಯರು ಪರಮಾನಂದವನ್ನು ಹೊಂದಿದರು. ಒಟ್ಟು ಈ ಫ್ಯಾನ್ಸಿಬಝಾರದಿಂದ ಎರಡು ದಿವಸಗಳಲ್ಲಿ ಸುಮಾರು ಇಪ್ಪತ್ತುನಾಲ್ಕು ಸಾವಿರ (೨೪೦೦೦) ರೂಪಾಯಿ ಮೊಬಲಗಿನ ಫಂಡು ಕೂಡಿತೆಂದು ತಿಳಿಯುತ್ತಿದೆ. ಆದರೆ ಈ ಫಂಡಿನ ಹಣದಲ್ಲಿ ನಾಲ್ಕರಲ್ಲಿ ಮೂರು ಪಾಲು ಬರಿಯ ವೀರಶೈವರ ಹಣವೇ ಇರುತ್ತದೆಂದು ನಿರ್ವಿವಾದವಾಗಿ ಹೇಳಬಹುದು. ಈ ವೀರಶೈವರ ಔದಾರ್ಯವು ಅಧಿಕಾರಿಗಳಿಗೆ ತಿಳಿದು, ರಾವಬಹದ್ದೂರವರ ಪ್ರತಿಷ್ಠೆಯು ಮತ್ತಿಷ್ಟು ಬೆಳೆಯಲವಕಾಶವಾಯಿತು. ಇವರ ಪ್ರತಿಷ್ಠೆಯನ್ನು ಕಂಡು, ದೇಶೀಚಳವಳಿಯಲ್ಲಿ ಪ್ರವೇಶಿಸಿರುವ ಬ್ರಾಹ್ಮಣರು ಚಕಿತರಾಗಿ ಒಳಗೊಳಗೆ ಮತ್ಸರ ಪಡುವವರಾದರು. ಸಜ್ಜನರ ಏಳ್ಗೆಯು ದುರ್ಜನರ ಎದೆಗುದಿಗೆ ಕಾರಣವಾಗಿರುವದು.

ಈ ಫ್ಯಾನ್ಸಿಬಝಾರದಲ್ಲಿ ವಿಧವಿಧ ಪದಾರ್ಥಗಳ ವಿಕ್ರಯವೂ, ಫಂಡಿನ ಸಂಗ್ರಹವೂ, ಅದಲ್ಲದೆ ಹಿಂದೆ ತಿಳಿಸಿದಂತೆ ಆಟನೋಟಗಳೂ, ತಮಾಷೆಗಳೂ ಆದವು. ಕೆಲ ಕೆಲವು ಕುಸ್ತಿಗಳೂ ಆದವು. ಕುಸ್ತಿಗಳಿಗಾಗಿ ಯೋಗ್ಯ ಉಚಿತವು ಕೊಡಲ್ಪಟ್ಟಿತು; ರಾತ್ರಿಯಲ್ಲಿ ಮದ್ದು ಸುಡಲ್ಪಟ್ಟಿತು. ಮದ್ದಿನ ಚಮತ್ಕೃತಿಯು ಒಳ್ಳೇ ಸೊಗಸನ್ನುಂಟು ಮಾಡಿತು. ಅತಿಥಿಗಳ ಆಹಾರ ವಿಹಾರಾರ್ಥವಾಗಿ ಬೇರೆ ಬೇರೆ ತಂಬೂಗಳು ಹೊಡೆಯಲ್ಪಟ್ಟಿದ್ದವು. ಅಲ್ಲಿ ಚಹಾ, ಕಾಫಿ ಮುಂತಾದ ಅಲ್ಪಾಹಾರದ ಸಿದ್ಧತೆಯು ಎಲ್ಲ ಜಾತಿಯವರಿಗೂ ಅನುಕೂಲವಾಗುವಂತೆ ಇಡಲ್ಪಟ್ಟಿತ್ತು. ಸ್ವಚ್ಛವೂ, ವಿಶಾಲವೂ ಆದ ಸ್ಥಳದಿಂದಲೂ, ಮನೋಹರವಾದ ಅಂಗಡಿಗಳಿಂದಲೂ, ಪ್ರಸನ್ನ ಮುಖವುಳ್ಳ ದೊರೆಸಾನಿಯವರಿಂದಲೂ, ಅಧಿಕಾರಿಗಳ ಸಮೂಹದಿಂದಲೂ, ಗ್ರಾಹಕರ ಮತ್ತು ಪ್ರೇಕ್ಷಕರ ಸಂಘಟನೆಯಿಂದಲೂ ಈ ಫ್ಯಾನ್ಸಿಬಝಾರವು ಒಳ್ಳೆ ಪ್ರೇಕ್ಷಣೀಯವಾಗಿತ್ತು. ದೊಡ್ಡ ದೊಡ್ಡ ಅಧಿಕಾರಿಗಳ ಪತ್ನಿಯರಿಂದ ಅಲಂಕೃತವಾಗಿರುವ ಅಂಗಡಿಗಳಿಂದ ಶೋಭಿಸುವ ಯುರೋಪಿಯನ್ ಪದ್ಧತಿಯ ಈ ಫ್ಯಾನ್ಸಿಪೇರವು, ಯಾರಿಗೂ ತ್ರಾಸವಾಗದಂತೆ ಯಾವದೊಂದು ಪುಣ್ಯಕಾರ್ಯಕ್ಕಾಗಿ ಫಂಡು ಕೂಡಿಸಲಿಕ್ಕೆ ಸುಲಭವಾದ ಸಾಧನವಾಗಿರುತ್ತದೆ. ದೊಡ್ಡವರಿಂದ ಹಿಡಿದ ಕಾರ್ಯಗಳು ಸುಲಭವಾಗಿ ನೆರವೇರುವ ಸಂಭವವಿರುವದರಿಂದ, ಈ ತರದ ಪದ್ಧತಿಯನ್ನು ಜಾಣರಾದ ಯುರೋಪಿಯನ್ನರು ಬಳಕೆಯಲ್ಲಿ ತಂದಿರಬಹುದೆಂಬಂತೆ ತೋರುತ್ತದೆ.

ಹೈದ್ರಾಬಾದದ ಹಾಹಾಕಾರ

ಮುಂದಿನ ವರ್ಷದ ಶ್ರೀ ಮದ್ವೀರಶೈವ ೪ನೇ ಮಹಾಸಭೆಯು ನಿಜಾಮ ಇಲಾಖಾ ಹೈದರಾಬಾದ ಪಟ್ಟಣದಲ್ಲಿ ಜರುಗಬಹುದೆಂದು ಸೊಲ್ಲಾಪುರ ಮಹಾಸಭೆಯಲ್ಲಿ ಹೇಳಲ್ಪಟ್ಟಿತ್ತು. ಅದರಂತೆ ಮಹಾಸಭೆಯು ಹೈದರಾಬಾದದಲ್ಲಿಯೇ ನೆರವೇರಬಹುದಾಗಿತ್ತು. ಆದರೆ ಸನ್ ೧೯೦೮ನೇ ಇಸವಿಯ ಅಗಷ್ಟ ಮತ್ತು ಸಪ್ಟೆಂಬರ ತಿಂಗಳಲ್ಲಿ ಹೈದರಾಬಾದ ಶಹರದ ಮೇಲೆ ಈಶ್ವರೀ ಕ್ಷೋಭವಾಗಿ ಹೃದಯದ್ರಾವಕ ಸಂಗತಿಯು ಘಟಿಸಿದ್ದರಿಂದ, ಅಲ್ಲಿ ಮಹಾಸಭೆಯು ನೆರವೇರಲವಕಾಶವುಳಿಯಲಿಲ್ಲ. ಹೈದರಾಬಾದ ಶಹರದ ನಡುವೆ ಮುಸಿ ಎಂಬದೊಂದು ನದಿಯು ಹರಿದಿರುವದು. ಆಕಸ್ಮಾತ್ ಅತಿವೃಷ್ಟಿಯಾಗಿ ರಾತ್ರಿಯಲ್ಲಿ ಆ ನದಿಯು ಮೇರೆದಪ್ಪಿ ಬಂದದರಿಂದ ನದಿಯ ದಂಡೆಯ ಮೇಲಿದ್ದ ಯಾವತ್ತು ಓಣಿಗಳಲ್ಲಿ ನೀರೇರಿ ಎಷ್ಟೋ ಮನೆಗಳೂ, ಮಂದಿರಗಳೂ ಬಿದ್ದು ಹೋದವು. ಮನೆಯೊಳಗೆ ಮಲಗಿದ್ದ ಮನುಷ್ಯರೂ, ಕಟ್ಟಿದ ದನಕರುಗಳೂ ಒಮ್ಮೇಲೆ ಮೃತವಾಗಿ ನದಿಯ ಪ್ರವಾಹದಗುಂಟ ತೇಲಿಹೋದವು. ಪೇಟೆಯಲ್ಲಿ, ಅಂಗಡಿಗಳಲ್ಲಿ ವಖಾರಗಳಲ್ಲಿ ಅಳತಿಲ್ಲದೆ ಒಟ್ಟಿದ ಸಾಮಾನುಗಳನ್ನೂ, ಮನೆಮನಂದಿರಗಳೊಳಗಿನ ಒಡವೆ ವಸ್ತುಗಳನ್ನೂ ಪ್ರವಾಹವು ಕೊಚ್ಚಿಕೊಂಡು ಹೋಯಿತು. ಭಾಗ್ಯವಂತರ ಧನರಾಶಿಯನ್ನೂ, ಮೌಲ್ಯವಾದ ಅಲಂಕಾರಗಳನ್ನೂ, ವಸ್ತ್ರಾಭರಣಗಳನ್ನೂ, ಮುತ್ತು ಮಾಣಿಕ ರತ್ನಾದಿಗಳನ್ನೂ ಪ್ರವಾಹವು ಸೆಳೆದುಕೊಂಡು ಹೋಯಿತು. ಓಣಿಗೆ ಓಣಿಯೇ ತೇಲಿಹೋಗುತ್ತಿರುವಾಗ ಅಲ್ಲಿ ಉಳಿಯಬೇಕೇನು! ಹೆಂಡರೂ, ಮಕ್ಕಳೂ, ಮೊಮ್ಮಕ್ಕಳೂ, ಯಜಮಾನರೂ ಮೊದಲಾಗಿ ಪ್ರತಿಯೊಂದು ಮನೆಯ ಜನರು ಒಂದೇ ಕಾಲಕ್ಕೆ ನದಿಗೆ ಅಹುತಿಯಾದದರಿಂದ ಹೈದರಾಬಾದ ನಿವಾಸಿಗಳ ಹಾಹಾಕಾರಕ್ಕೆ ಮೇರೆಯಿಲ್ಲದಂತಾಯಿತು. ಪ್ರವಾಹದೊಡನೆ ಅಲ್ಲಲ್ಲಿಗೆ ಪ್ರಾಣಿಮಾತ್ರಗಳ ಪ್ರೇತಗಳು ತೇಲಾಡಹತ್ತಿದವು. ಹಲವು ತರದ ಸಾಮಾನುಗಳು ತೆರವಿಲ್ಲದೆ ಹರಿದು ಹೋಗುತ್ತ ಸಿಕ್ಕವರ ಪಾಲಾಗಹತ್ತಿದವು. ಈ ಜಲಪ್ರಳಯದಲ್ಲಿ ಲಕ್ಷೋಪಲಕ್ಷ ಪ್ರಾಣಹಾನಿಯೂ, ಕೋಟ್ಯಂತರ ಧನಹಾನಿಯಾಗಿ ಆಗಿ, ಹೈದರಬಾದ ಶಹರ ನಿವಾಸಿಗಳ ಗೋಳನ್ನು ಕೇಳಿಕೊಳ್ಳಲು ಮಾರ್ಗವಿಲ್ಲದಾಯಿತು. ಏರಿನ ಮೇಲಿನ ಓಣಿಗಳೂ, ನದಿಯಿಂದ ದೂರ ಇರುವ ಶಹರಭಾಗವೂ ಮಾತ್ರ ಉಳಿದುಕೊಂಡವು. ಈ ಅಸದೃಶವಾದ ಹಾಹಾಕಾರವನ್ನು ನೋಡಿ ನಿಜಾಮ ಸಾಹೇಬರು ಕಣ್ಣಲ್ಲಿ ನೀರು ತರುವದಾಯಿತು. ಈ ಹೃದಯವಿದ್ರಾವಕ ಸಂಗತಿಯನ್ನು ಕೇಳಿ ಅಂತಃಕರಣದಿಂದ ಜಗತ್ತೆ ನಡುಗುವದಾಯಿತು. ಪೃಥ್ವಿಯ ಮೇಲಿನ ಯಾವತ್ತು ವರ್ತಮಾನ ಪತ್ರಿಕೆಗಳೂ ಭೋರೆಂದು ಅತ್ತವು. ರಾಜಾಧಿರಾಜರ ಮೈಮೇಲೆಯೂ ಕೂಡ ಮುಳ್ಳು ಎದ್ದವು. ಎಂಥ ಕಠಿಣಹೃದಯರ ಮನಸೂ ಸಹ ಕರಗಿತು. ದೇಶೀಯ ಅರಸರೂ, ಪರರಾಷ್ಟ್ರದ ರಾಜರೂ, ಘನವಂತರೂ, ಸಂಸ್ಥಾನಕರೂ, ಈ ಜಲಪ್ರಳಯದಿಂದುಂಟಾದ ಅಸಮಾಧಾನವನ್ನು ನಿಜಾಮ ಸಾಹೇಬರಿಗೆ ತಾರಿನಿಂದ ತಿಳಿಸಿ, ತಮ್ಮ ತಮ್ಮೊಳಗೆ ಅನಾಥ ಸಂರಕ್ಷಕ ಫಂಡು ಕೂಡಿಸಿ ಕಳಿಸುವವರಾದರು. ಪ್ರವಾಸದಲ್ಲಿಯೂ, ಪರಸ್ಥಳಗಳಲ್ಲಿಯೂ ಇರುವ ಘನವಂತರೂ, ಬಡವರೂ, ತಮ್ಮ ಹೆಂಡರು-ಮಕ್ಕಳು ಮನೆಮಾರು ಬದುಕೆಲ್ಲ ಜಲಸಮಾಧಿಯನ್ನು ಹೊಂದಿದ ವಾರ್ತೆಯನ್ನು ಕೇಳಿ, ಅನಾಥರಾಗಿ ಗೋಳಿಟ್ಟು ಅತ್ತರು. ಸ್ವತಃ ನಿಜಾಮಸಾಹೇಬರು ಲಕ್ಷಾಂತರ ರೂಪಾಯಿ ವೆಚ್ಚಮಾಡಿ ಅನಾಥರನ್ನು ಉದ್ಧಾರ ಮಾಡತೊಡಗಿದರು. ಆ ಸಮಯದಲ್ಲಿ ಹೈದರಾಬಾದ ಶಹರದ ಮೇಲೆ ಇಡಿ ಜಗತ್ತೇ ಅಂತಃಕರಣವನ್ನು ತೋರಿಸಿತು. ಇಂತಹ ಕಷ್ಟತಮವಾದ ಅನಾಹುತಿಯು ಹೈದರಾಬಾದಕ್ಕೆ ಉಂಟಾದುದರಿಂದ, ಅಲ್ಲಿ ಶ್ರೀಮದ್ವೀರಶೈವ ಮಹಾಸಭೆಯು ಕೂಡಲಿಕ್ಕೆ ಅವಕಾಶವಿರಲಿಲ್ಲ.

ಬಾಗಲಕೋಟೆಯಲ್ಲಿ ೪ನೇ ಶ್ರೀಮದ್ವೀರಶೈವ ಮಹಾಸಭೆ

ಹೈದರಾಬಾದಿನಲ್ಲಿ ಮಹಾಸಭೆಯು ನೆರವೇರುವ ಮಾರ್ಗ ತಪ್ಪಲು, ಅಲ್ಲಲ್ಲಿಯ ಜನರು ತಮ್ಮ ತಮ್ಮ ಊರುಗಳಲ್ಲಿ ಮಹಾಸಭೆಯನ್ನು ಕರೆದುಕೊಳ್ಳಬೇಕೆಂದು ಆಲೋಚಿಸುವಷ್ಟರಲ್ಲಿ ಜಿಲ್ಲಾ ವಿಜಾಪುರ, ತಾಲೂಕ ಬಾಗಲಕೋಟಿಯ ವೀರಶೈವರು ಶ್ರೀ ಹಾನಗಲ್ ಕುಮಾರಸ್ವಾಮಿಗಳವರ ಪ್ರೇರಣೆಯಿಂದಲೂ, ಶ್ರೀ ಬೀಳೂರಸ್ವಾಮಿಗಳ ಪ್ರಯತ್ನದಿಂದಲೂ ತಮ್ಮಲ್ಲಿಯೇ ಮಹಾಸಭೆ ಕೂಡಿಸುವದನ್ನು ನಿಶ್ಚಯಿಸಿದರು. ಅದರಂತೆ ಸನ್ ೧೯೦೮ನೇ ಇಸವಿಯ ಡಿಸೆಂಬರ್ ತಿಂಗಳ ತಾರೀಖು ೨೮-೨೯-೩೦ ಸೋಮವಾರ, ಮಂಗಳವಾರ, ಬುಧವಾರ ಈ ಮೂರು ದಿವಸಗಳಲ್ಲಿ ಬಾಗಲಕೋಟೆಯಲ್ಲಿ ಶ್ರೀ ಮದ್ವೀರಶೈವ ೪ನೇ ಮಹಾಸಭೆಯು ಜರುಗುವದೆಂದು ಪ್ರಕಟನಾ ಪತ್ರಿಕೆಗಳು ಸುತ್ತಲೂ ಹರಡಿಕೊಂಡವು. ಮುದ್ದತಿಗೆ ಸರಿಯಾಗಿ ಪ್ರಾಂತಪ್ರಾಂತಗಳಿಂದ ಜನರು ಬಾಗಲಕೋಟಿಗೆ ಬರುವವರಾದರು. ಸಭಾಮಂಟಪವು ತೆಂಗಿನಮಠದ ವಿಸ್ತಾರವಾದ ಕಂಪೌಂಡಿನಲ್ಲಿ ಹತ್ತು ಸಾವಿರ ಜನರು ಪ್ರಶಸ್ತವಾಗಿ ಕೂತುಕೊಳ್ಳುವಂತೆ ಬಹು ಭವ್ಯವಾಗಿ ಶೃಂಗರಿಸಲ್ಪಟ್ಟಿತು. ಮಠದ ಮುಂಭಾಗದಲ್ಲಿ ಮಹಾದ್ವಾರವು ಬಹು ಎತ್ತರವಾಗಿ ಕಟ್ಟಲ್ಪಟ್ಟಿತ್ತು. ಮಹಾದ್ವಾರದ ಇಬ್ಬದಿಯಲ್ಲಿಯೂ ಎರಡು ಮಹತ್ತಾದ ಧ್ವಜಗಳು ಆಕಾಶದಲ್ಲಿ ಎದ್ದು ನಿಂತು, ವೀರಶೈವರನ್ನು ಆಹ್ವಾನಮಾಡುತ್ತಲಿದ್ದವು. ಮುಖಮಂಟಪವೂ ಸೌಂದರ್ಯವನ್ನು ಸುರಿಸುತ್ತಿತ್ತು. ನಗಾರಖಾನೆಯಲ್ಲಿ ತ್ರಿಕಾಲದಲ್ಲಿಯೂ ಮಂಗಳವಾದ್ಯಗಳು ಮೊಳಗುತ್ತಿದ್ದವು. ಮಠದಲ್ಲಿ ವಿರಕ್ತವೃಂದವು ಸಾಂದ್ರವಾಗಿತ್ತು. ಸಭಾಮಂಟಪದಲ್ಲಿ ಉಚಿತಾಸನಗಳು ಓರಣವಾಗಿ ಇಡಲ್ಪಟ್ಟಿದ್ದವು. ಸಭಾಮಂಟಪದ ರಚನೆಯು ಸೊಲ್ಲಾಪುರ ಸಭಾಮಂಟಪದಂತೆ ವ್ಯವಸ್ಥೆಯುಳ್ಳದ್ದಾಗಿತ್ತು. ತಳಿರ್ದೋರಣ ಧ್ವಜ ಪತಾಕೆಗಳಿಂದಲೂ, ರಮಣೀಯವಾದ ಕಮಾನುಗಳಿಂದಲೂ, ಬಾಳೆಗಂಬಂಗಳಿಂದಲೂ, ಬಣ್ಣದ ವಸ್ತ್ರಗಳ ಹಾಗೂ ಕಾಗದಗಳ ಫರಫರಿಗಳಿಂದಲೂ ರಾಜಮಾರ್ಗಗಳು ಮನೋಹರವಾಗಿದ್ದವು. ಪೇಟೆಯೂ, ಬಾಗಲಕೋಟಿಯೂ ತಳಿರ್ದೋರಣಗಳ ಅಲಂಕಾರದಲ್ಲಿ ಮುಚ್ಚಿಹೋಗಿದ್ದವು. ಬಾಗಿಲಕೋಟೆಯ ವೀರಶೈವರು ಅಲಂಕಾರಪ್ರಿಯರಾದುದರಿಂದ ಸಭಾಮಂಟಪವೂ, ಊರೂ ಅಲಂಕಾರಮಯವಾಗಿದ್ದವು. ಇಲ್ಲಿ ವೀರಶೈವರ ವಸತಿಯು ವಿಶೇಷವಾಗಿದ್ದುದರಿಂದಲೂ, ಇಲ್ಲಿಯ ವ್ಯಾಪಾರವೆಲ್ಲ ಮುಖ್ಯವಾಗಿ ವೀರಶೈವರ ಕಯ್ಯಲ್ಲಿಯೇ ಇದ್ದುದರಿಂದಲೂ, ಇಲ್ಲಿ ಧನಾಢ್ಯರಾದ ಸೆಟ್ಟರೂ ಸಾವಕಾರರೂ ತುಂಬಿಕೊಂಡಿರುವದರಿಂದಲೂ ಬಾಗಲಕೋಟೆಯಲ್ಲಿ ವೀರಶೈವರ ವೈಭವವು ಚೆನ್ನಾಗಿ ಇದೆಯೆಂದು ಹೇಳಬಹುದು. ಸೆಟ್ಟಿಸಾವಕಾರ ಸಮಸ್ತ ವೀರಶೈವರೆಲ್ಲ ಹುರಿದುಂಬಿ ಮಹಾಸಭೆಯ ಸೇವೆಯನ್ನು ಮಾಡತೊಡಗಿದ್ದದರಿಂದ, ಸರ್ವವ್ಯವಸ್ಥೆಯು ಸರಿಯಾಗಿ ಸಾಗಿಹೋಗಿತ್ತು.

ರಾ.ಬ॥ರುದ್ರಗೌಡ ಸಾಹೇಬರು ಈ ಸಂಧಿಯಲ್ಲಿ ಫಿರತಿಯ ಮೇಲಿದ್ದ ಕಾರಣ ಅಥಣೀ ತಾಲೂಕ, ತೆಲಸಂಗ ಮುಕ್ಕಾಮಿನಿಂದ ತಾರೀಖು ೨೪ನೇ ಡಿಸೆಂಬರ ಗುರುವಾರ ದಿವಸ ಹೊರಟು,ಟಾಂಗೆಯ ಮೇಲಿಂದ ಹೊನವಾಡ ರಸ್ತೆಯ ಮಾರ್ಗವಾಗಿ ಸಂಜೆಯ ೫ಘಂಟೆಗೆ ವಿಜಾಪುರಕ್ಕೆ ಬಂದು ಅಲ್ಲಿಯ ನಿವಾಸಿಗಳ ಆಗ್ರಹದಿಂದ ಅದೊಂದು ದಿವಸ ಅಲ್ಲಿ ನಿಂತು, ಹೋದವರ್ಷದಿಂದಲೂ ಇವರ ಆಗಮನವನ್ನು ಅಪೇಕ್ಷಿಸುತ್ತಿದ್ದ ವಿಜಾಪುರಸ್ಥರ ಸಂತೋಷವನ್ನು ಪೂರ್ಣಮಾಡಿ, ತಾರೀಖು ೨೫ನೇ ಶುಕ್ರವಾರ ದಿವಸ ಮಧ್ಯಾಹ್ನದ ೨ಘಂಟೆಯ ಮೇಲಗಾಡಿಗೆ ಕೂತು ಬಾಗಲಕೋಟಿಗೆ ೫ ಘಂಟಿಗೆ ಇಳಿದರು. ಬಾಗಲಕೋಟಿಯ ವೀರಶೈವರು ಇವರನ್ನು ಮಹಾವೈಭವದಿಂದ ಕರೆದುಕೊಂಡು ಹೋದರು. ಮರುದಿವಸ ೨೬ನೇ ತಾರೀಖಿನ ರಾತ್ರಿಯ ಗಾಡಿಗೆ ವಂಟಮುರಿಯ ಶ್ರೀಮಂತ ಸರದೇಸಾಯಿಯವರೂ ಅವರ ಚಿರಂಜೀವರಾದ ಬಾಬಾಸಾಹೇಬರೂ, ಶ್ರೀಮಂತ ಚಚಡಿಯ ನಾಯಕ ಬಹದ್ದೂರ

ದೇಸಾಯರೂ ಬಂದರು. ಇನ್ನೂ ರಾತ್ರಿಯಿದ್ದದರಿಂದ ಬೆಳಗಾಗುವ ವರೆಗೆ ಶ್ರೀಮಂತರನ್ನು ಸ್ಟೇಶನದ ಹತ್ತರಿರುವ ಒಂದು ಬಂಗಲೆಯಲ್ಲಿ ಇಳಿಸಿದರು.

ಬೆಳಗಾಗುತ್ತಲೇ ಬಾಗಲಕೋಟಿಯ ವೀರಶೈವರೆಲ್ಲರು ಬಹು ಆನಂದಭರಿತರಾಗಿ, ರಾವಬಹದ್ದೂರ ರುದ್ರಗೌಡ ಸಾಹೇಬರನ್ನೊಡಗೊಂಡು ಸಕಲ ಸಂಭ್ರಮದಿಂದ ಶ್ರೀಮಂತರನ್ನು ಎದುರ್ಗೊಂಡು, ಕರೆದುಕೊಂಡು ಹೋಗಲಿಕ್ಕೆ ಬಂದರು. ಆ ಬಂಗಲೆಯಲ್ಲಿಯೇ ಬಹು ವಿಜೃಂಭಣೆಯಿಂದ ತಾಂಬೂಲ ಸಮಾರಂಭವಾಯಿತು. ಜನಸಮೂಹವು ಪರಿಮಿತಿಯಿಲ್ಲದಷ್ಟು ಕೂಡಿತ್ತು. ರಥಕ್ಕೆ ಹೂಡಿದ ದಿವ್ಯಾಶ್ವಗಳು ಶ್ರೀಮಂತರ ಸಮಾರಂಭಕ್ಕೆ ಸಂತೋಷಹೊಂದಿದವೇನೋ ಎಂಬಂತೆ ಗಂಭೀರಧ್ವನಿಯಿಂದ ಹೇಷಾರವವನ್ನು ಮಾಡುತ್ತಿದ್ದವು. ಕಹಳೆಗಳ ಎತ್ತರವಾದ ಧ್ವನಿಯು ಆಕಾಶವನ್ನು ವ್ಯಾಪಿಸಿತ್ತು, ಅಷ್ಟರಲ್ಲಿ ಶ್ರೀಮಂತರೂ, ಸಾಹೇಬರೂ ರಥಾರೂಢರಾದರು. ದಿವ್ಯಾಶ್ವಗಳು ತಮ್ಮ ರಮ್ಯವಾದ ಪುಚ್ಛವನ್ನು ನೆಗಹಿ ಥಾಳಿಸುತ್ತ, ಕಾಲ್ಗಳನ್ನು ನೆಲಕ್ಕೆ ಅಪ್ಪಳಿಸುತ್ತ ಕಿವಿಗಳನ್ನು ನಿಗರಿಸಿ ರಥವನ್ನು ಎಬ್ಬಿಸಲಿಕ್ಕೆ ಆತುರಿಸುತ್ತಿದ್ದವು. ಈ ಉಭಯ ಮಹನೀಯರೂ ದಿವ್ಯವಾದ ಪೋಷಾಕುಗಳಿಂದ ರಥಗಳಲ್ಲಿ ಬೆಳಗುತ್ತಿದ್ದರು. ಅವರ ಕೊರಳಲ್ಲಿ ಲೋಲಾಯಮಾನವಾಗಿರುವ ಮನೋಹರವಾದ ಪುಷ್ಪಮಾಲೆಗಳು, ವೈಭವಾತಿಶಯಕ್ಕೆ ತಲೆದೂಗುತ್ತಿರುವಂತೆ ತೋರುತ್ತಿದ್ದವು. ಬಹುಜನರ ಕರಕಮಲಗಳಲ್ಲಿ ಪರಿಮಳದಿಂದಿಡಿದ ಪುಷ್ಪಗುಚ್ಛಗಳು ಶೋಭಿಸುತ್ತಿದ್ದವು. ಸುಗಂಧದ್ರವ್ಯಗಳ ಸುವಾಸನೆಯು ಸುತ್ತಲೂ ವ್ಯಾಪಿಸುತ್ತಿತ್ತು. ಜನಸಮೂಹವು ಅಮರ್ಯಾದವಾಗಿ ವರ್ಧಿಸುತ್ತಿತ್ತು. ಎಲ್ಲರ ಮುಖಮಂಡಲಗಳು ಪ್ರಫುಲ್ಲವಾಗಿದ್ದವು. ಜಯ ಜಯಕಾರದ ಧ್ವನಿಯು ಮೇಲಿಂದ ಮೇಲೆ ಬಹು ಭವ್ಯವಾಗಿ ಏಳುತ್ತಿತ್ತು. ರಥಕ್ಕೆ ಹೂಡಿದ ಕುದುರೆಗಳನ್ನು ಬಿಚ್ಚಿ ವೀರಶೈವ ವಿದ್ವಾನರಾದ ಪದವೀಧರರು ರಥವನ್ನು ಸ್ವತಃ ಎಳೆಯಲಿಕ್ಕೆ ಪ್ರಯತ್ನಿಸಿದರು. ರಾವಬಹದ್ದೂರರವರು ಅದಕ್ಕೆ ಒಪ್ಪಿಗೆಯನ್ನು ಕೊಡಲಿಲ್ಲ. ಪದವೀಧರರು, ನಾವು ಪ್ರೇಮಪೂರ್ವಕವಾಗಿ ರಥವನ್ನೆಳೆಯುತ್ತೇವೆಂದರು. ಅದಕ್ಕೆ ಶ್ರೀಮಂತರೂ ಸಾಹೇಬರೂ "ನಿಮ್ಮ ಪೂಜ್ಯಭಾವಕ್ಕೆ ನಮಗೆ ಮಹದಾನಂದವಾಯಿತು, ಎಳೆಯುವದೇನು ಬೇಡ!ಅಶ್ವಗಳನ್ನೇ ಹೂಡಿರೆಂ"ದರು. ಪದವೀಧರರು ನಿರುಪಾಯರಾಗಿ ಹಿಂದಕ್ಕೆ ಸರಿದರು. ಅಶ್ವಗಳು ಕುಣಿಯತೊಡಗಿದವು; ನೆಲದ ಮೇಲೆ ನಿಲ್ಲಲೊಲ್ಲವು! ಕರತಳಗಳ ಸಪ್ಪಳದಿಂದ ಜಯಜಯಕಾರದ ಸೂಚನೆಯಾಗಹತ್ತಿತು; ಕೂಡಲೆ ಮಂಗಳವಾದ್ಯಗಳು ಕಿವಿಗಳನ್ನು ಗಡಚಿಕ್ಕಿಸಿದವು; ಒಡನೆಯೆ ಕುದುರೆಗಳೆದ್ದವು; ಆನಂದ ಲಹರಿಯಲ್ಲಿ ಜನಸಮೂಹವು ಮುಂದೆ ಸಾಗಹತ್ತಿತು. ಸ್ಟೇಶನದಿಂದ ಸಭಾಮಂಟಪದ ವರೆಗೂ ಇರುವ ಒಂದು ಮೈಲು ಪ್ರದೇಶವನ್ನು ದಟ್ಟವಾಗಿ ತುಂಬಿಕೊಂಡು, ಜನಪ್ರವಾಹವು ಮೇರೆದಪ್ಪಿ ಹರಿಯುತ್ತಿತ್ತು. ವೀರಶೈವಮತವೆಂಬ ಮಹಾಸಾಗರವನ್ನು ಉಕ್ಕೇರಿಸುವ ಚಂದ್ರಸೂರ್ಯರಂತೆ ತೋರುವ ಶ್ರೀಮಂತರೂ, ರಾವಬಹದ್ದೂರರವರೂ ರಥಗಳಲ್ಲಿ ಥಳಥಳಿಸುತ್ತಿದ್ದರು. ಮುಂದೆ ಮುಂದೆ ಅನೇಕತರದ ಮಂಗಳವಾದ್ಯಗಳು ಒಂದೇ ಸವನೆ ಬಾರಿಸಲ್ಪಟ್ಟಿದ್ದವು. ಅವುಗಳಲ್ಲೆಲ್ಲ ಬೆಂಡಬಾಜಾದ ಮಂಜುಳ ಧ್ವನಿಯು ಬಹು ಎತ್ತರವಾಗಿ ಹಾರಿ, ಎಲ್ಲರ ಆಹ್ಲಾದ ರಸಕ್ಕೆ ಭರಿತಿಯನ್ನುಂಟು ಮಾಡುತ್ತಲಿತ್ತು. ಕುದುರೆಯ ಸ್ವಾರರೂ, ಪೊಲೀಸ ಪಾಳ್ಪಿಯವರೂ ಎರಡೂ ಪಾರ್ಶ್ವಗಳಲ್ಲಿ ಬಹು ಭವ್ಯವಾಗಿ ನಡೆದಿದ್ದರು. ಮುಂದೆ ಈ ಉಭಯ ಮಹನೀಯರ ರಥವೂ, ಅದರ ಹಿಂದೆ ಎಷ್ಟೋ ದೇಸಾಯಿ, ದೇಶಪಾಂಡೆಯರ, ಜಹಗೀರದಾರರ, ಇನಾಮದಾರರ ರಥಗಳೂ, ಅದರ ಹಿಂದೆ ಸೆಟ್ಟರ, ಸಾವಕಾರರ, ಗ್ರ್ಯಾಜುಯೇಟರ ರಥಗಳೂ, ಟಾಂಗೆಗಳೂ, ಸಾರವಾಟಗಳೂ ಸಾಲ್ಗೊಂಡು ನಡೆದಿದ್ದವು. ಮುಂದಿನ ರಥದ ಮೇಲೆ ಛತ್ರಚಾಮರಾಪ್ತಾಗಿರಿಗಳು ಥಾಳಿಸುತ್ತಿದ್ದವು. ಇದೇ ವರ್ಷ ವಿಜಾಪುರ ಜಿಲ್ಲೆಗೆ ಪ್ರೊಬೆಶನರಿ ಡೆಪೂಟಿ ಕಲೆಕ್ಟರರಾಗಿದ್ದ ವೇದಮೂರ್ತಿ ಗುರುಸಿದ್ಧಯ್ಯ ಅಡವಯ್ಯ ಹಿರೇಮಠ ಸಾಕೀನ ಮಂಡಿಯಾಳ ತಾಲೂಕ ಧಾರವಾಡ ಇವರು ಕರಿಯ ಪೋಷಾಕಿನಿಂದ ಅಲಂಕೃತರಾಗಿ, ಶ್ವೇತವರ್ಣದ

ಮಹತ್ತರವಾದ ಅಶ್ವವನ್ನೇರಿ, ದೀರ್ಘವಾದ ಗಾತ್ರದಿಂದ ಶೋಭಿಸುತ್ತ, ರಥದ ಮುಂದೆ ಸಾಂದ್ರವಾಗಿದ್ದ ಜನಸಮೂಹವನ್ನು ಸರಿಸುತ್ತ ಕುದುರೆಯನ್ನು ಹಾರಿಸುತ್ತ ಬರುತ್ತಿದ್ದುದ್ದನ್ನು ನೋಡಿದರೆ, ಅವರು ವ್ಯವಸ್ಥೆಗಾಗಿ ಬಂದಿದ್ದ ಪೊಲೀಸ ಸಾಹೇಬರೋ ಏನೋ ಎಂಬಂತೆ ಭವ್ಯವಾಗಿ ತೋರುತ್ತಿದ್ದರು. ಒಂದೇ ಸವನೆ ಹರಿದು ಬರುತ್ತಿರುವ ಈ ಜನಸಮೂಹದ ಎದುರಿಗೆ ಗ್ರಾಮದ ಬಹಿರ್ಪ್ರದೇಶದಲ್ಲಿ ಭವ್ಯವಾದದ್ದೊಂದು ಮಹಾದ್ವಾರವು ಬಹು ಶೋಭಾಯಮಾನವಾಗಿ ರಚಿಸಲ್ಪಟ್ಟಿತ್ತು.

ಎದುರಿನಿಂದ ಬರುತ್ತಿರುವ ರಥಾಸೀನರಿಗೆ ಬಾಗಿಲಕೋಟೆಯ ಈ ಅಲಂಕೃತವಾದ ಬಾಗಿಲವು ಬಹು ಭವ್ಯವಾಗಿ ತೋರುತ್ತಿರುವಂತೆ, ಇಲ್ಲಿ ಬಾಗಿಲ ಹತ್ತಿರ ಸಾಂದ್ರವಾಗಿ ನಿಂತು ನೋಡುತ್ತಿರುವ ಜನಸಮೂಹಕ್ಕೆ ಈ ಮಹನೀಯರ ರಥಾಗಮನವು ಬಹು ರಮ್ಯವಾಗಿ ತೋರುತ್ತಿತ್ತು. ಗ್ರಾಮ ಪ್ರವೇಶ ಮಾತ್ರವೆ ಬಹು ಎತ್ತರವಾದ ಧ್ವನಿಯಿಂದ ಜಯಜಯಕಾರ ಮಾಡಲ್ಪಟ್ಟಿತು. ಬಾಗಲಕೋಟೆಯ ರಾಜಬೀದಿಯೆಲ್ಲವೂ ಜನರಿಂದ ತುಂಬಿ ತುಳುಕುತ್ತಿತ್ತು. ಈ ಮಹನೀಯರನ್ನು ನೋಡಲಿಕ್ಕೆ ಬಾಗಲಕೋಟೆಯ ಲಿಂಗಾಯತ, ಬ್ರಾಹ್ಮಣ ಮುಂತಾದ ಸರ್ವಜಾತಿಯ ಹೆಂಗಸರೂ, ಗಂಡಸರೂ, ಮೊದಲಾಗಿ ಆಬಾಲವೃದ್ಧರು ಓಣಿಗಳಲ್ಲಿಯೂ, ಮಳಿಗೆಗಳಲ್ಲಿಯೂ, ಮಹಡಿಗಳ ಮೇಲೆಯೂ, ಮಾಳಿಗೆಗಳ ಮೇಲೆಯೂ, ಮಂದಿರಗಳ ಮೇಲ್ಭಾಗದಲ್ಲಿಯೂ ಸಜ್ಜಾಗಿ ನಿಂತಿದ್ದರು. ಬಾಗಲಕೋಟೆಯ ಜನರಿಗೆ ಶ್ರೀಮದ್ವೀರಶೈವ ಮಹಾಸಭೆಯ ಸಮಾರಂಭವು ಒಂದು ದೊಡ್ಡ ಹಬ್ಬದಂತಾಗಿತ್ತು. ವಸ್ತ್ರಾಭರಣಗಳಿಂದ ಸ್ತ್ರೀ ಪುರುಷರು ಬಹು ಅಲಂಕೃತರಾಗಿದ್ದರು. ಮಾಳಿಗೆಗಳ ಮೇಲೆಲ್ಲ ಸ್ತ್ರೀಸಮೂಹವು ಬಹು ಸಾಂದ್ರವಾಗಿ ನಿಂತಿತ್ತು. ವಾತಾಯನಗಳಲ್ಲಿಯೂ, ಗವಾಕ್ಷಗಳಲ್ಲಿಯೂ, ಪ್ರಾಸಾದಗಳ ಮೇಲೆಯೂ ಭಾಗ್ಯವಂತ ಸ್ತ್ರೀಯರ ಮುಖಕಮಲಗಳೇ ಗೋಚರಿಸುತ್ತಿದ್ದವು. ಮಾರ್ಗದ ಎರಡೂ ಬದಿಗಳಲ್ಲಿಯೂ ತಳದಿಂದ ಮಾಳಿಗೆಗಳ ವರೆಗೂ ಜನವೇಷ್ಟಿತವಾದ ಮಂದಿರಗಳೇ ನಿಂತುಕೊಂಡಿದ್ದವು. ಮಾಳಿಗೆಗಳ ಮೇಲೆ ಎಲ್ಲಿ ನೋಡಿದಲ್ಲಿ ಸ್ತ್ರೀಯರ ನೂತನ ವಸ್ತ್ರಗಳೂ, ಅಲಂಕಾರಗಳೂ ಝಳುಪಿಸುತ್ತಿದ್ದವು. ಸಾರಾಂಶ, ಜನಸಮೂಹದಿಂದಲೇ ಮಂದಿರಗಳನ್ನು ರಚಿಸಿರುವರೋ ಎಂಬಂತೆ ಎಲ್ಲ ಮನೆಗಳೂ, ಮಂದಿರಗಳೂ ಬುಡದಿಂದ ಕಡೆಯ ವರೆಗೆ ಜನಮಯವಾಗಿ ಹೋಗಿತ್ತು. ಇಂತಹ ಕಿಷ್ಕಿಂಧವಾದ ಜನಸಮೂಹದ ಮಧ್ಯದಲ್ಲಿ ರಥಗಳು ಗಡಗಡನೆ ನಡೆದಿದ್ದವು. ಸ್ತ್ರೀಯರು ಕಂಕಣಾಭರಣಗಳಿಂದ ಝಣಗುಡುತ್ತಿರುವ ತಮ್ಮ ಕರಕಮಲಗಳನ್ನು ಮುಂದೆಮಾಡಿ, ತೋರಬೆರಳನ್ನು ಚಾಚಿ "ಅಗೋ ಮುಂದಿನ ದೊಡ್ಡ ರಥದಲ್ಲಿ ಎಡಕ್ಕೆ ಕೂತವರೇ ರುದ್ರಗೌಡರು! ಬಲಕಿನವರು ವಂಟಮುರಿಯ ದೇಸಾಯರು" ಎಂದು ತಮ್ಮ ತಮ್ಮೊಳಗೆ ತೋರಿಸುತ್ತಿದ್ದರು. ಗೊತ್ತಿಲ್ಲದವರು"ರಥದೊಳಗೆ ಕೂತವರಲ್ಲಿ ರುದ್ರಗೌಡರು ಯಾರು?" ಎಂದು ಆತುರದಿಂದ ಕೇಳುತ್ತಿದ್ದರು. ದಟ್ಟಣೆಯಲ್ಲಿ ನೆಟ್ಟಗೆ ಕಾಣದಂತಾಗಲು, ರಥವು ಮುಂದೆ ಹೋಗುತ್ತದೆಂದು ಕೆಲವರು ಗಡಬಡಿಸಿ ಮಂದಿಯ ಸಂದಣಿಯೊಳಗಿಂದ ಆತುರದಿಂದ ಮುಂದೆ ಬಂದು, ಇವರನ್ನು ನೋಡಿ ಸಂತೋಷವನ್ನು ಹೊಂದುತ್ತಿದ್ದರು. ಈ ಅತಿಶಯವಾದ ಜನಪ್ರವಾಹದಲ್ಲಿ ಈ ಮಹನೀಯರ ರಥತರಂಗಗಳು ತೇಲಿಹೋಗುತ್ತಿದ್ದವು. ದಾರಿಯುದ್ಧಕ್ಕೂ ಇವರ ರಥಗಳ ಮೇಲೆ ಪುರಜನರು ಪುಷ್ಪಗಳನ್ನು ಅವಿಚ್ಛಿನ್ನವಾಗಿ ತೂರುತ್ತಿದ್ದದರಿಂದ ಹೂವಿನ ಮಳೆಯು ಸುರಿಯುತ್ತಿರುವಂತೆ ತೋರುತ್ತಿತ್ತು. ಈ ವೈಭವಾತಿಶಯವನ್ನು ನೋಡಿ ರಾವಬಹದ್ದೂರವರಿಗೆ ಚಿತ್ರದುರ್ಗದ ಬೃಹನ್ಮಠದ ಶ್ರೀಮಹಾಲಿಂಗಸ್ವಾಮಿಗಳವರ ವೈಭವವು ನೆನಪಾಗಿ ಇವರ ನೇತ್ರಕಮಲಗಳು ಆರ್ದ್ರವಾದವು. ರಥದ ಹಿಂದೆ ಮುಂದೆ ಎಡಕ್ಕೆ ಬಲಕ್ಕೆ ಸುತ್ತಲೂ ಸೆಟ್ಟರೂ ಸಾವಕಾರರೂ ಸಂಗಡಲೇ ನಡೆದಿದ್ದರು.

ಈ ಮಹತ್ತಾದ ಮೆರವಣಿಗೆಯು ಪೇಟೆಯ ನಡುವೆ ಬರುವಷ್ಟರಲ್ಲಿ ಬಾಗಲಕೋಟೆಯ ಗರ್ಲಸ್ಕೂಲ್ ಲಿಂಗಾಯತ ಮಾಸ್ತರಿಣಿಯು ತಮ್ಮ ಶಾಲೆಯ ವಿದ್ಯಾರ್ಥಿನಿಯರಾದ ನೂರಾರು ಹೆಣ್ಣು ಮಕ್ಕಳನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ, ಅವರೆಲ್ಲರನ್ನು ರಥಕ್ಕೆ ಎದುರಾಗಿ ದ್ವಿಪಾರ್ಶ್ವಗಳಲ್ಲಿ ಸಾಲ್ಗೊಳಿಸಿ ನಿಲ್ಲಿಸಿದ್ದಳು.

ರಥವು ಹತ್ತರ ಬಂದೊಡನೆ ಎಲ್ಲ ಹೆಣ್ಣುಮಕ್ಕಳು ಜಯಜಯಕಾರ ಮಾಡಿ ವಂದಿಸಿ, ಈ ಮಹನೀಯರ ಸ್ವಾಗತಪರವಾದ ಗೀತವನ್ನೂ, ಸ್ತ್ರೀ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುವ ಬಗ್ಗೆ ರಚಿಸಿದ ಪದವನ್ನೂ ಮಂಜುಳ ಸ್ವರದಿಂದ ಹಾಡಿದರು. ಈ ಬಾಲಿಕೆಯರ ಆದರೋಪಚಾರಕ್ಕಾಗಿ ತುಸು ಹೊತ್ತು ರಥವು ಮಾರ್ಗಮಧ್ಯದಲ್ಲಿಯೇ ನಿಲ್ಲುವದಾಯಿತು. ಹಾಡು ತೀರಿದೊಡನೆ ಒಬ್ಬ ಹೆಣ್ಣುಮಗಳು ರಥವನ್ನೇರಿ ಶ್ರೀಮಂತರ ಕೊರಳಿಗೆ ಬಹು ವಿನಯದಿಂದ ಪುಷ್ಪಮಾಲಿಕೆಯನ್ನು ಹಾಕಿ ವಂದಿಸಿ ರಥವನ್ನಿಳಿದಳು. ಈ ವಿದ್ಯಾರ್ಥಿನಿಯರ ಗಾನಮಾಧುರ್ಯದ ಲಹರಿಯೊಳಗೆ ರಥವು ಮುಂದೆ ಸಾಗಿತು. ಜನಸಮೂಹವೆಲ್ಲವೂ ಒತ್ತಟ್ಟಿಗೆ ಹರಿದು ಇಲ್ಲಿಗೇ ಬಂದದರಿಂದ ಬಾಗಲಕೋಟೆಯು ಒಮ್ಮೊಗ್ಗಲಾದಂತೆ ತೋರುತ್ತಿತ್ತು. ಅಲ್ಲಿಂದ ಕುದುರೆಗಳು ನೆಟ್ಟಗೆ ಹಾರುತ್ತ ರಥವನ್ನು ಮಹಾಸಭಾಮಂಟಪದ ಮುಂದೆ ಒಯ್ದು ನಿಲ್ಲಿಸಿದವು. ಕೂಡಲೆ ಮಂಟಪದ ಮಹಾದ್ವಾರದ ಶಿರೋಭಾಗದಲ್ಲಿರುವ "ವೆಲ್‌ಕಮ್" ಎಂಬ ಆಂಗ್ಲವರ್ಣಗಳು ಈ ಮಹನೀಯರನ್ನು ಬಹುವಿನಯದಿಂದ ಒಳಗೆ ಕರೆದುಕೊಳ್ಳಹತ್ತಿದವು. ಮೇಲೆ ನಗಾರಿಖಾನೆಯಲ್ಲಿ ದುಂದುಭಿಗಳು ಗಂಭೀರವಾಗಿ ನುಡಿಯಹತ್ತಿದವು. ಬೇಂಡಬಾಜೆಯು ಸ್ವಾಗತಪರ ಗೀತವನ್ನು ಸ್ವೈರವಾಗಿ ಹಾಡುತ್ತಲಿತ್ತು. ಸಭಾಪ್ರವೇಶ ಮಾತ್ರವೆ ಜಯಘೋಷದಿಂದಲೂ, ಜನಸಮೂಹದಿಂದಲೂ ಸಭಾಮಂಟಪವೆಲ್ಲವೂ ತುಂಬಿಹೋಯಿತು. ತುಸುಹೊತ್ತು ಗಾಯನ ಸಮಾರಂಭವಾಯಿತು. ಬಳಿಕ ಶ್ರೀಮಂತರೂ ಸಾಹೇಬರೂ ಶ್ರೀಹಾನಗಲ್‌ಸ್ವಾಮಿಗಳೇ ಮೊದಲಾದ ವಿರಕ್ತವೃಂದಕ್ಕೆ ನಮಸ್ಕರಿಸಿ, ಮಹೋತ್ಸವದೊಡನೆ ತಮ್ಮ ಬಿಡಾರಕ್ಕೆ ದಯಮಾಡಿಸಿದರು. ಈ ಮಹನೀಯದ್ವಯರ ಬಿಡಾರವು ಬಾಗಲಕೋಟೆಗೆ ಎರಡು ಎರಡೂವರೆ ಮೈಲು ದೂರಾಗಿ ಘಟಪ್ರಭಾ ನದಿಯ ತೀರದಲ್ಲಿರುವ ಹವೇಲಿ ಬಂಗಲೆಯಲ್ಲಿ ಮಾಡಲ್ಪಟ್ಟಿತ್ತು. ಭವ್ಯವಾದ ಬಂಗಲೆಯ ಮುಂದೆ ರಾವಬಹದ್ದೂರವರದೊಂದೂ, ಶ್ರೀಮಂತರದೊಂದೂ ಹೀಗೆ ದಿವ್ಯವಾದ ಎರಡು ಡೇರೆಗಳು ಹೊಡೆಯಲ್ಪಟ್ಟಿದ್ದವು. ಸಾಹೇಬರು ಡೇರೆಯಲ್ಲಿಯೂ, ಶ್ರೀಮಂತರು ಬಂಗಲೆಯಲ್ಲಿಯೂ ವಿಶ್ರಮಿಸುತ್ತಿದ್ದರು.

ತಾರೀಖು ೨೮ನೇ ಡಿಸೆಂಬರ ದಿವಸ ಮಧ್ಯಾಹ್ನದ ೧೨ ಘಂಟೆಗೆ ಸಭೆಯ ಕಾರ್ಯವು ಪ್ರಾರಂಭವಾಯಿತು. ಮೊದಲೇ ಪ್ರಸಿದ್ಧಿಸಿದಂತೆ ಸಭಾಧ್ಯಕ್ಷಸ್ಥಾನವು ವಂಟಮುರಿ ಸಂಸ್ಥಾನದ ಶ್ರೀಮಂತ ಲಖಮಗೌಡ ಊರ್ಫ ಬಸವಪ್ರಭು ಸರದೇಸಾಯಿಯವರಿಗೆ ಸರ್ವಾನುಮತಿಯಿಂದ ಕೊಡಲ್ಪಟ್ಟಿತು. ಬಾಗಲಕೋಟೆಯ ಮೋಟಗಿ ಘಟಿಬಸಪ್ಪಣ್ಣನವರು ಈ ಮಹಾಸಭೆಯ ಉಪಾಧ್ಯಕ್ಷರಾಗಿದ್ದರು. ಶ್ರೀಹಾನಗಲ್ ಕುಮಾರಸ್ವಾಮಿಗಳೂ, ಶ್ರೀ ಬೀಳೂರಸ್ವಾಮಿಗಳೂ ಮಹಾಸಭೆಯನ್ನು ಇಲ್ಲಿಯೇ ಜರುಗಿಸುವದಕ್ಕಾಗಿ ಇಲ್ಲಿಗೆ ೨ ತಿಂಗಳು ಮುಂಚಿತವಾಗಿಯೇ ದಯಮಾಡಿಸಿದ್ದರು. ಶ್ರೀಹಾನಗಲ್‌ಸ್ವಾಮಿಗಳೇ ಮೊದಲಾಗಿ ಯಾವತ್ತು ವಿರಕ್ತವರ್ಯರು ಉಚಿತಾಸನಗಳಲ್ಲಿ ವಿರಾಜಮಾನರಾಗಿದ್ದರು. ವರ್ಷಂಪ್ರತಿಯಂತೆ ಮಹಾಸಭೆಗೆ ಆಫೀಸರರೂ, ವಿರಕ್ತರೂ, ಸಿಂಹಾಸನಾಧಿಪತಿಗಳೂ, ಶೂನ್ಯಸಿಂಹಾಸನಾಧಿಪತಿಗಳೂ, ಪದವೀಧರರೂ, ಪಂಡಿತರೂ, ಶಾಸ್ತ್ರಿಗಳೂ, ಪುರಾಣಿಕರೂ, ಅಧಿಕಾರಿಗಳೂ, ಘನವಂತರೂ, ಶ್ರೀಮಂತರೂ, ದೇಸಾಯಿ ದೇಶಪಾಂಡೆಯರೂ, ಜಹಾಗೀರದಾರ ಇನಾಮದಾರರೂ, ಸೆಟ್ಟರೂ, ಸಾವಕಾರರೂ ಮೊದಲಾಗಿ ಅನೇಕ ಭಕ್ತ ಮಹೇಶ್ವರರು ದಯಮಾಡಿಸಿ ಉಚಿತಾಸನಗಳನ್ನಲಂಕರಿಸಿದ್ದರು. ಮಹಾಸಭೆಯೆಲ್ಲವೂ ಮಹನೀಯರಿಂದ ತುಂಬಿ ಕಿಷ್ಕಿಂಧವಾಗಿತ್ತು. ಈ ಬಾಗಲಕೋಟೆಯ ಮಹಾಸಭೆಗೆ ಸೊಲ್ಲಾಪುರ ಸಭೆಗಿಂತಲೂ ಹೆಚ್ಚು ಅಥವಾ ಅದರಷ್ಟು ಜನಸಮೂಹವು ಕೂಡಿತ್ತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಬಾಗಲಕೋಟೆಯ ವೀರಶೈವರ (ಬಣಜಿತನದವರ) ಶರೀರ ಸಂಬಂಧಗಳು ಕರ್ನಾಟಕದ ಎಲ್ಲ ಪ್ರಮುಖಪಟ್ಟಣಗಳ ಗ್ರಾಮಗಳ ಕೂಡ ಜರುಗಿದದರಿಂದ, ಪ್ರತಿಯೊಂದು ಮನೆಯವರು ತಮ್ಮ ಬೀಗಬಿಜ್ಜರನ್ನೆಲ್ಲ ಮುಂದಾಗಿಯೇ ಕರಿಸಿಕೊಂಡಿದ್ದರು. ಆದರೂ ತಾಲೂಕಿನ ಸ್ಥಳವಾದ ಈ ಬಾಗಲಕೋಟೆಯಲ್ಲಿ ಇಷ್ಟು ಜನಸಮೂಹವು ಕೂಡಿದುದರ ಮೇಲಿಂದ ಮಹಾಸಭೆಯ ವಿಷಯವಾಗಿ ಎಲ್ಲ ವೀರಶೈವರ ಭಕ್ತಿಯು ದಾರ್ಢ್ಯವಾಗಿರುವದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಎಲ್ಲ ಪ್ರತಿನಿಧಿಗಳೂ, ಪ್ರೇಕ್ಷಕರೂ, ಮಹನೀಯರೂ ಮಹಾಸಭೆಯನ್ನು ಅಲಂಕರಿಸಿದ ಕೂಡಲೆ ಸಭೆಯ ಕೆಲಸಕ್ಕೆ ಪ್ರಾರಂಭವಾಯಿತು. ಅಧ್ಯಕ್ಷರು ಆರಂಭಕ್ಕೆ ಎದ್ದು ನಿಂತು, ನಮ್ಮ ಪರಮಮಿತ್ರರಾದ ರಾ.ಬ॥ರುದ್ರಗೌಡ ಸಾಹೇಬರು ಅಸ್ವಸ್ಥತೆಯ ಮೂಲಕ ಈ ಹೊತ್ತು ಸಭೆಗೆ ಬಾರದೆ ಇದ್ದುದಕ್ಕಾಗಿಯೂ, ನಾಮದಾರ ಮುಂಬಯಿ ಗವ್ಹರ್ನರಸಾಹೇಬ ಬಹದ್ದೂರವರ ಪತ್ನಿಯವರು ಮೃತವಾದ ಬಗ್ಗೆ ತಾರು ಬಂದದ್ದಕ್ಕಾಗಿಯೂ ನಮಗೆ ಬಹಳೇ ವ್ಯಸನವಾಗುತ್ತದ್ದೆಂದು ಹೇಳಿ, ನಿರುಪಾಯರಾಗಿ ಯಥಾಪ್ರಕಾರ ಸಭಾಕಾರ್ಯವನ್ನು ನಡೆಯಿಸಿದರು. ನೇಮಕ ವಿಷಯಗಳಿಗಿಂತ ಮೊದಲು ಸ್ವಾಗತ ಕಮೀಟಿಯ ಅಧ್ಯಕ್ಷರ ಭಾಷಣವೂ, ಅಧ್ಯಕ್ಷರ ಭಾಷಣವೂ ಚೆನ್ನಾಗಿ ಆದವು. ಆದರೆ ರಾ.ಬ॥ರುದ್ರಗೌಡ ಸಾಹೇಬರಿಗೆ ನಿನ್ನನ ದಿವಸ ಅಂದರೆ ೨೭ನೇ ತಾರೀಖಿನ ರಾತ್ರಿಯಲ್ಲಿ ಹೊಟ್ಟೆಶೂಲಿಯು ಬಂದು, ಅವರ ಪ್ರಕೃತಿಯು ಸ್ವಸ್ಥವಿಲ್ಲದ ಮೂಲಕ ಆ ದಿವಸದ ಸಭೆಗೆ ಬಾರದ್ದರಿಂದ ಸಭೆಯೆಲ್ಲವೂ ಸೂರ್ಯನಿಲ್ಲದ ಹಗಲಿನಂತೆ ನಿಸ್ತೇಜವಾಗಿ ಭಣಗುಡುತ್ತಿತ್ತು. ತಾರೀಖು ೨೭ನೇ ದಿವಸ ಮುಂಜಾನೆಯ ಗಾಡಿಯಿಂದ ಶ್ರೀಮಂತ ರಾ.ಸಾ॥ವಾರದ ಮಲ್ಲಪ್ಪಣ್ಣನವರು ಬಂದರು. ಸ್ಟೇಶನದಿಂದ ಇವರನ್ನೂ ಬಹು ವೈಭವದಿಂದ ಕರೆದುಕೊಂಡು ಬಂದರು. ರಾ.ಸಾ॥ಮಲ್ಲಪ್ಪಣ್ಣನವರ ಬಿಡಾರವು ಬಾಗಲಕೋಟೆಯ ಪ್ರಸಿದ್ಧ ಸಾವಕಾರರೂ, ವ್ಯವಹಾರಸ್ಥರೂ ಆದ ಸಾಬಾದಿಯವರ ಮನೋಹರವಾದ ಮಂದಿರದಲ್ಲಾಗಿತ್ತು. ಈ ದಿವಸ ರಾ.ಬ॥ರವರ ಪ್ರಕೃತಿಯು ಇನ್ನೂ ಅಸ್ವಸ್ಥವಾಗಿದ್ದರೂ ಬಹುಜನರ ಆಗ್ರಹದ ಮೂಲಕವಾಗಿಯೂ, ಮಹಾಸಭೆಯನ್ನು ಬಿಟ್ಟು ಇರದಂತೆ ಮನಸು ಆಗದಿದ್ದರಿಂದಲೂ ಸಭೆಗೆ ದಯಮಾಡಿಸಿದರು. ಅದೇ ಕಾಲಕ್ಕೆ ವಾರದ ರಾ.ಸಾ॥ಮಲ್ಲಪ್ಪಣ್ಣನವರೂ, ಸಭಾಪ್ರವೇಶ ಮಾಡಿದರು. ಈ ಉಭಯ ಮಹನೀಯರ ಸಭಾಪ್ರವೇಶ ಮಾತ್ರವೆ ಸಭಿಕರಿಗೆಲ್ಲ ಆನಂದವಾನಂದವಾಗಿ ಹೋಯಿತು. ನಿಯಮಿತ ವಿಷಯಗಳ ಮೇಲೆ ಅನೇಕ ಜನ ಪಂಡಿತರ ಉಪನ್ಯಾಸಗಳಾದವು.

ಈ ಸಭೆಯಲ್ಲಿ ಧಾರವಾಡ ಜಿಲ್ಲಾ, ತಾಲೂಕ ಗದಗಿನ ಬಸಪ್ಪ ವೀರಪ್ಪ ಕೋಟಿ ಎಂಬ ಹುಟ್ಟು ಗುರುಡರು, ಮಹಾಸಭೆಯ ವಿಷಯವಾಗಿಯೂ, ಲಿಂಗಾಯತ ಫಂಡಿನ ವಿಷಯವಾಗಿಯೂ ಸಂಸ್ಕೃತ ಭಾಷೆಯಲ್ಲಿ ಅಸ್ಖಲಿತವಾಣಿಯಿಂದ ಅತಿ ಗಂಭೀರವಾಗಿ ಉಪನ್ಯಾಸ ಮಾಡಿದ್ದಲ್ಲದೆ, ಎಲ್ಲ ಜನರಿಗೂ ತಿಳಿಯಬೇಕಾಗಿ ಅದರ ಸಾರಾಂಶವನ್ನು ಕನ್ನಡದಲ್ಲಿಯೂ ಹೇಳಿದರು. ಈ ಬಸಪ್ಪನವರು ಜನ್ಮಶಃ ಅಂಧರಿದ್ದು ಸ್ವತಂತ್ರವಾಗಿ ಸಂಸ್ಕೃತ ವಿದ್ಯಾವ್ಯಾಸಂಗವನ್ನು ಮಾಡಿ, ಅದರಲ್ಲಿ ಉಪನ್ಯಾಸ ಮಾಡುವಂತಹ ಪ್ರವೀಣತೆಯನ್ನು ಪಡೆದದ್ದು ಪ್ರತಿಯೊಬ್ಬನೂ ನೆನಪಿಡತಕ್ಕ ಮಾತಾಗಿದೆ. ಜಗನ್ನಿಯಾಮಕನು ಜ್ಞಾನೇಂದ್ರಿಗಳನ್ನೆಲ್ಲ ದಯಪಾಲಿಸಿ ವಿದ್ಯಾವ್ಯಾಸಂಗಕ್ಕೆ ಸರ್ವಾನುಕೂಲಗಳನ್ನೊದಗಿಸಿ ಕೊಟ್ಟಿದ್ದರೂ ಅತ್ತ ಕಡೆಗೆ ಗಮನಿಸದೆ, ಆಲಸ್ಯದಲ್ಲಿ ಕಾಲಹರಣ ಮಾಡುವ ವಿದ್ಯಾವಿಹೀನರು, ಕೇವಲ ಸ್ವಂತಪ್ರಯತ್ನದಿಂದ ಸಂಸ್ಕೃತ ಪಂಡಿತರಾದ ಈ ನಮ್ಮ ಕೋಟಿ ಬಸಪ್ಪನವರ ಚರಿತ್ರೆಯನ್ನು ಕೇಳಿ ವಿದ್ಯಾನಿರತರಾಗತಕ್ಕದ್ದು. ಬಸಪ್ಪನವರ ಭಾಷಾಸರಣಿಗೂ, ರಸಾಳವಾಣಿಗೂ ಪಂಡಿತರು ತಲೆದೂಗಿದರು. ಜನ್ಮಾಂಧರಾದ ಇವರ ಸಂಸ್ಕೃತ ವಿದ್ಯಾವ್ಯಾಸಂಗ ಪ್ರಯತ್ನವನ್ನು ಎಷ್ಟು ಶ್ಲಾಘಿಸಿದರೂ ತೀರದು.

ಈ ಸಭೆಯಲ್ಲಿ ಪ್ರಾಮುಖ್ಯವಾಗಿ ವೀರಶೈವರೇ ಸೇರಿರುವದರಿಂದಲೂ, ಕರ್ನಾಟಕದಲ್ಲಿ ಮುಖ್ಯವಾಗಿ ವೀರಶೈವರೇ ಒಕ್ಕಲತನದ ಹೋರೆಯಲ್ಲಿರುವದರಿಂದಲೂ, ಅವರಿಗೆ ಒಕ್ಕಲತನದ ಮಾಹಿತಿಯನ್ನು ಕೊಡುವದಕ್ಕಾಗಿಯೂ, ಕೃಷಿಕರ್ಮದ ಮರ್ಮವನ್ನು ಸುಬೋಧಪರವಾಗಿ ತಿಳಿಸುವದಕ್ಕಾಗಿಯೂ ಸರಕಾರದವರು, ಅಗ್ರಿಕಲ್ಚರ್ ಸ್ಪೆಶಲ್ ಟ್ರಾವ್ಹಲಿಂಗ್ ಇನ್‌ಸ್ಪೆಕ್ಟರರಾದ ಮಿಸ್ಟರ ರುದ್ರಯ್ಯ ಶಿವಲಿಂಗಯ್ಯ ಹಿರೇಮಠ ಸಾಕೀನ

ಅದರಗುಂಚಿ ತಾಲೂಕ ಹುಬ್ಬಳ್ಳಿ ಜಿಲ್ಲಾ ಧಾರವಾಡ ಎಲ್.ಎಜಿ. ಎಂಬವರನ್ನು ಮುದ್ದಾಂ ಈ ಬಾಗಲಕೋಟಿಯ ಮಹಾಸಭೆಗೆ ಕಳಿಸಿದ ಪ್ರಕಾರಕ್ಕೆ, ರುದ್ರಯ್ಯನವರು "ಒಕ್ಕಲತನ" ಈ ವಿಷಯದ ಮೇಲೆ ಸಣ್ಣ ಹುಡುಗರಿಗೂ ಸಹ ತಿಳಿಯುವಂತೆ ಅಸ್ಖಲಿತ ವಾಣಿಯಿಂದ ಒಳ್ಳೇ ಸೊಗಸಾಗಿ ಭಾಷಣಮಾಡಿದರು. ಈ ರುದ್ರಯ್ಯನವರನ್ನು ಮಹಾಸಭೆಗೆ ಕಳಿಸಿ ವೀರಶೈವ ರೈತರಿಗೆ ಈ ಪ್ರಕಾರದ ಲಾಭಮಾಡಿಕೊಟ್ಟಿದ್ದಕ್ಕೆ ಮಹಾಸಭೆಯವರು ಸರಕಾರದವರ ಅಭಿನಂದನವನ್ನು ಮಾಡಿದರು. ಮತ್ತು ಇದೇ ಕೃಷಿಕರ್ಮದ ವಿಷಯವಾಗಿ ಶಾಂತವೀರಯ್ಯ ಹಿರೇಮಠ ಊರ್ಫ ಒಡೆಯರ ಎಲ್.ಎಜಿ ಸಾಕೀನ ಚೌಡದಾನಪುರ ತಾಲೂಕ ರಾಣೇಬೆನ್ನೂರ ಇವರು ಬಹು ಸರಸವಾಗಿ ಭಾಷಣಮಾಡಿದರು.

ಮತ್ತು "ವೃದ್ಧವಿವಾಹ" ಈ ವಿಷಯದ ಮೇಲೆ ಕಿತ್ತೂರ ಶಾಲೆಯ ಮಾಸ್ತರರೂ, ಈ ಗ್ರಂಥಕರ್ತರೂ ಆದ ಬಸವಯ್ಯ ಚೆನ್ನಬಸವಯ್ಯ ಹಿರೇಮಠ ಊರ್ಫ ಕಂಬಿ ಸಾಕೀನ ಪಾರ್ಶವಾಡ, ತಾಲೂಕ ಖಾನಾಪುರ, ಜಿಲ್ಲಾ ಬೆಳಗಾವ ಇವರು ಈ ಬಾಗಲಕೋಟಿಯ ಮಹಾಸಭೆಗೆ ಒಂದು ಸರ್ವೋತ್ಕೃಷ್ಟವಾದ ನಿಬಂಧವನ್ನು ಬರೆದು ಕಳಿಸಿದ್ದರು. ನೇಮಕವಾಗಿದ್ದ ಎಲ್ಲ ವಿಷಯಗಳ ಉಪನ್ಯಾಸಕ್ಕೆ ಅವಕಾಶದೊರೆಯದ್ದರಿಂದ ಸಭೆಯಲ್ಲಿ ಇವರ ಭಾಷಣವಾಗಲಿಲ್ಲ. ಆದರೂ ವಂಟಮುರಿಯ ಶ್ರೀಮಂತ ಸರದೇಸಾಯಿಯವರೂ, ರಾ.ಬ॥ರುದ್ರಗೌಡಸಾಹೇಬರೂ ದಿವ್ಯವಾದ ಡೇರೆಯಲ್ಲಿ ಬಹುಜನ ಪ್ರಮುಖರೊಂದಿಗೆ ವಿಶ್ರಮಿಸಿರುವಾಗ (೨೯ನೇ ತಾರೀಖಿನ ದಿವಸ ಮುಂಜಾನೆ ೯ ಘಂಟೆಯ ಸುಮಾರಕ್ಕೆ) ಈ ಪ್ರಬಂಧವು ಓದಲ್ಪಟ್ಟಿತು. ಬಸವಯ್ಯನವರ ಭಾಷಾಮಾಧುರ್ಯಕ್ಕೂ, ವಿಷಯ ವಿವೇಚನಕ್ಕೂ ರಾವಬಹದ್ದೂರವರೂ, ಶ್ರೀಮಂತರೂ ಮೊದಲಾಗಿ ಯಾವತ್ತು ಪ್ರಮುಖರು ತಲೆದೂಗಿದರು. ಈ ಉಪನ್ಯಾಸವು ಒಳ್ಳೇ ಹೃದಯಂಗಮವಿರುವದರಿಂದ ರಾವಬಹದ್ದೂರವರೂ ಶ್ರೀಮಂತರೂ ಆನಂದಭರಿತವಾಗಿ, ಅದರ ಒಂದೊಂದು ಪ್ರತಿಗಳನ್ನು ಬಸವಯ್ಯನವರ ಕಡೆಯಿಂದ ಬರೆಯಿಸಿಕೊಂಡರು. ಈ ಲೇಖವನ್ನೇ ಅನುಸರಿಸಿ, ಮಹಾಸಭೆಯವರು ಆಗ (೫೦)ವರ್ಷಕ್ಕೆ ಮೇಲ್ಪಟ್ಟು ಪುರುಷರು ಲಗ್ನವನ್ನೇ ಮಾಡಿಕೊಳ್ಳಕೂಡದೆಂಬದಾಗಿ ನಿರ್ಣಯಿಸಿದರು.[೨]

ಶಿವಯೋಗಮಂದಿರ ಸ್ಥಾಪನೆಯ ಆವಶ್ಯಕತೆಯೂ ಅದರ ಬಗ್ಗೆ ಆದ ಠರಾವವೂ

ಈ ಮಹಾಸಭೆಯಲ್ಲಿ "ಶಿವಯೋಗಮಂದಿರ"ವೆಂಬ ಹೆಸರಿನ ಸಂಸ್ಥೆಯೊಂದನ್ನು ಸ್ಥಾಪಿಸುವ ಬಗ್ಗೆ ಮಹತ್ವವಾದದ್ದೊಂದು ಠರಾವು ಪಾಸಾಯಿತು. ವೀರಶೈವ ಗುರುಕುಲದವರನ್ನು ಸುಶಿಕ್ಷಿತರನ್ನಾಗಿ ಮಾಡುವದೇ ಈ ಶಿವಯೋಗಮಂದಿರದ ಸ್ಥಾಪನೆಯ ಮುಖ್ಯೋದ್ದೇಶವು. "ಯಥಾ ಗುರುಸ್ತಥಾ ಶಿಷ್ಯಃ" ಎಂಬ ಉಕ್ತಿಯಂತೆ ಶಿಷ್ಯರು ಗುರುಗಳ ಅನುಕರಣವನ್ನೇ ಮಾಡುತ್ತಿರುತ್ತಾರೆ. ಗುರುಗಳು ಮೇಧಾವಿಗಳೂ, ಸುವಿವೇಕಿಗಳೂ,

---

೨. ಇದೇ ಬಸವಯ್ಯನವರು ಹೋದವರ್ಷ ಸೊಲ್ಲಾಪುರ ಮಹಾಸಭೆಯಲ್ಲಿ "ಪೌಢವಿವಾಹ" ಈ ವಿಷಯದ ಮೇಲೆ ಭಾಷಣ ಮಾಡಿದ್ದರು. ಆ ಪೌಢವಿವಾಹದ ಲೇಖನವಾದರೂ ಬಹು ಮನೋಹರವಾಗಿದೆ. ಇವರ ಪೌಢವಿವಾಹದ ಲೇಖನವೂ, ಭಾಷಣವೂ ಮಹಾಸಭೆಯವರಿಂದ ಪಸಂದಿಸಲ್ಪಟ್ಟು, ಚಿಕ್ಕಮಕ್ಕಳ ಲಗ್ನಮಾಡದೆ ಪೌಢವಯಸ್ಸಿನಲ್ಲಿಯೇ ಮಾಡತಕ್ಕದ್ದು ಎಂಬ ಠರಾವು ಪಾಸಾಗಿರುವದು.

ಸದಾಚರಣೆಯುಳ್ಳವರೂ ಇದ್ದರೆ ಶಿಷ್ಯರಾದರೂ ಪಂಡಿತರೂ, ಸುವಿಚಾರಿಗಳೂ, ಸದ್ವರ್ತನವುಳ್ಳವರೂ ಆಗುತ್ತಾರೆ. ಭಕ್ತವರ್ಗವನ್ನು ಸುಧಾರಿಸುವ ಮೊದಲು ಗುರುವರ್ಗವನ್ನು ಸುಧಾರಿಸುವದು ಅವಶ್ಯವಾಗಿರುತ್ತದೆ. ಮೂಗು ಹಿಡಿದರೆ ಬಾಯಿಯು ತಾನಾಗಿಯೇ ತೆರೆಯುವಂತೆ, ಗುರುಕುಲವು ಸುಶಿಕ್ಷಿತವಾದರೆ ಭಕ್ತವರ್ಗವು ಸ್ವಯಮೇವ ಸುಶಿಕ್ಷಿತವಾಗಲನುಕೂಲವಾಗುವದು. ಪ್ರಸ್ತುತಕ್ಕೆ ನೋಡಿದರೆ ನಮ್ಮ ಗುರುಕುಲದಲ್ಲಿ ವೈದಿಕವಿದ್ಯೆಯು ಲುಪ್ತಪ್ರಾಯವಾಗಿರುವದು. ಅದನ್ನು ನಾವು ಜಾಗ್ರತಪಡಿಸಲಿಕ್ಕೆ ಬೇಕು. ದೊಡ್ಡ ದೊಡ್ಡ ಮಠಗಳಲ್ಲಿಯೂ ಕೂಡ ವಿದ್ಯಾಗಂಧವು ನಿರ್ನಾಮವಾಗಿ ಹೋಗಿರುತ್ತದೆ. ಮಠಾಧಿಪರೂ, ಮರಿದೇವರೂ, ವಿದ್ಯಾವಿರಹಿತರಾಗಿ ಬಹುಶಃ ಅಜ್ಞಾನತೆಯಿಂದ ಒಂದೇ ವರ್ಗದೊಳಗೆ ಎಣಿಸಲ್ಪಡಲು ತಕ್ಕವರಾಗಿರುವರು. ವಿದ್ಯಾವಿರಹಿತ ಮಠಾಧಿಪರ ತರುವಾಯ ಆ ದಿವ್ಯಸ್ಥಾನಕ್ಕೆ ವಿದ್ಯಾವಿಹೀನವಾದ ಮರಿದೇವನೇ ಅಧಿಪತಿಯಾಗುತ್ತಾನೆ. ಮುಖ್ಯಪೀಠಗಳಲ್ಲಿ ವಿರಾಜಮಾನವಾಗಿರುವ ಸಿಂಹಾಸನಾಧಿಪತಿಗಳೂ ಕೂಡ ವೈದಿಕ ವಿದ್ಯೆಯ ಕಡೆಗೆ ಕೊಡತಕ್ಕಷ್ಟು. ಲಕ್ಷವನ್ನು ಕೊಡುವದಿಲ್ಲೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಶೂನ್ಯಸಿಂಹಾಸನಾಧಿಪತಿಗಳಲ್ಲಿಯೂ ಎಷ್ಟೋ ವಿರಕ್ತರು ಜ್ಞಾನಶೂನ್ಯರೇ ಇರುತ್ತಾರೆ. ಗುರುವರ್ಗಕ್ಕೆ ವಿದ್ಯೆಯೇ ಮುಖ್ಯ ಭಾಂಡಾರವೂ, ಭೂಷಣವೂ, ಪರಮಾರ್ಥಸಾಧನವೂ ಆಗಿರುವದು. ವಿದ್ಯಾವಿರಹಿತನಾದ ಗುರುವು ಭಂಡವಲವಿಲ್ಲದ ವ್ಯಾಪಾರಿಯಂತೆ ನಿಸ್ತೇಜನಾಗಿರುತ್ತಾನೆ. ಸಭೆಯಲ್ಲಿಯ ಉಪದೇಶ ಮಾತ್ರದಿಂದ ಗುರುವರ್ಗವು ವೈದಿಕ ವಿದ್ಯೆಯಲ್ಲಿ ಪ್ರವರ್ತಕರಾಗುವದಿಲ್ಲ. ವಿಶ್ವವಿದ್ಯಾಲಯ(ಯುನಿವ್ಹರ್ಸಿಟಿ)ಗಳಲ್ಲಿ ಲೌಕಿಕ ವಿದ್ಯೆಯು ಕಲಿಸಲ್ಪಡುತ್ತಿರುವಂತೆ, ನಮ್ಮ ಗುರುಕುಲಕ್ಕೆ ವೈದಿಕ ವಿದ್ಯೆಯ ಶಿಕ್ಷಣಕ್ಕಾಗಿ ಒಂದು ಚಿರಸಂಸ್ಥೆಯು ಏರ್ಪಡಬೇಕು. ಇವೇ ಮುಂತಾದ ಸಂಗತಿಗಳನ್ನು ಮನಸಿನಲ್ಲಿ ತಂದು, ಪ್ರಕೃತದಲ್ಲಿ ಉಂಟಾಗಿರುವ ಧರ್ಮಗ್ಲಾನಿಯನ್ನು ನಿವಾರಣಗೊಳಿಸುವದಕ್ಕೆ ಧರ್ಮಗುರುಗಳ ಮತ್ತು ಆಚಾರ್ಯರ ಸುಧಾರಣೆಯು ಅತ್ಯಅವಶ್ಯಕವಾಗಿರುವದರಿಂದ, ಶಾಲೆಗಳಲ್ಲಿ ಬೋಧಕರಾಗತಕ್ಕ ಜನರನ್ನು ಟ್ರೇನಿಂಗ್ ಕಾಲೇಜಗಳಲ್ಲಿ ಅಣಿಮಾಡುವಂತೆ, ಬಾಲ್ಯದಿಂದಲೂ ಮಾಹೇಶ್ವರ ವಟುಗಳನ್ನು ಒಂದು ಮಂದಿರದಲ್ಲಿಟ್ಟು ಅಲ್ಲಿ ಅವರಿಗೆ ಧರ್ಮಶಿಕ್ಷಣವನ್ನೂ, ವೈದಿಕ ವಿದ್ಯಾಭ್ಯಾಸವನ್ನೂ ಉಂಟುಮಾಡಿಸಿ, ಸದಾಚಾರ ಸನ್ನೀತಿಗಳಲ್ಲಿಯೂ, ಶಿವಯೋಗಾನುಷ್ಠಾನದಲ್ಲಿಯೂ, ತತ್ಪರರಾಗಿರುವಂತೆ ಮಾಡಿ, ಹೀಗೆ ಮಂದಿರದಲ್ಲಿ ಶಿಕ್ಷಿತರಾದವರನ್ನೇ ಉತ್ತರತ್ರ ಎಲ್ಲ ಕಡೆಯ ಆಚಾರ್ಯ ಗುರುಪೀಠಗಳಿಗೂ ಅಧಿಕಾರಕ್ಕೆ ಸೇರಿಸುತ್ತ ಬಂದರೆ ಧಾರ್ಮಿಕ ಸುಧಾರಣೆಗೆ ಅತ್ಯಂತಾನುಕೂಲವಾಗುತ್ತದೆಂಬ ಭಾವದಿಂದ, ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳೂ, ಶ್ರೀ ಬೀಳೂರಸ್ವಾಮಿಗಳೂ, ವೀರಶೈವ ಮಹನೀಯರೂ 'ಶಿವಯೋಗಮಂದಿರ'ವೆಂಬ ಹೆಸರಿನ ಸಂಸ್ಥೆಯೊಂದನ್ನು ಪ್ರಶಸ್ತವಾದ ಒಂದು ನದೀತೀರದಲ್ಲಿ ಸ್ಥಾಪಿಸಬೇಕೆಂದು ಉದ್ದೇಶಪಟ್ಟಿರುವ ಪ್ರಕಾರ, ಅದರ ಸ್ಥಾಪನೆಯ ಅವಶ್ಯಕತೆಯನ್ನೂ, ಏರ್ಪಡಿಸಬೇಕಾದ ರೀತಿಗಳನ್ನೂ ಕುರಿತು ದಾವಣಗೆರೆಯ ಚಂದ್ರಶೇಖರಶಾಸ್ತ್ರಿಗಳು ಭಾಷಣಮಾಡಿ ಸೂಚನೆ ಕೊಟ್ಟರು. ಅದನ್ನು ಪುಷ್ಟೀಕರಿಸಲು ಶ್ರೀಮಂತ ರಾ.ಸಾ॥ವಾರದ ಮಲ್ಲಪ್ಪಣ್ಣನವರೂ, ದಾವಣಗೆರೆಯ ಮಾಗಾನಹಳ್ಳಿ ದೊಡ್ಡಬಸಪ್ಪನವರೂ, ಹುಬ್ಬಳ್ಳಿಯ ವಕೀಲರಾದ ಸಿದ್ಧರಾಮಪ್ಪ ಪಾವಟೆ ಬಿ.ಎ., ಎಲ್‌ಎಲ್.ಬಿ ಯವರೂ, ಬೆಂಗಳೂರ ಶಿವಪ್ಪಶಾಸ್ತ್ರಿಗಳೂ, ಕೊಲ್ಲಾಪುರ ರಾಜಾರಾಮ ಕಾಲೇಜದ ಮಾಸ್ತರರಾದ ವೀರಬಸವ ಶ್ರೇಷ್ಠ ಬಿ.ಎ. ಯವರೂ ಸಹ ಭಾಷಣಗಳನ್ನು ಮಾಡಿದರು. ಈ ವಿಷಯವು ಸರ್ವಾನುಮತದಿಂದ ಪಸಂದಿಸಲ್ಪಟ್ಟು, ಕಡೆಗೆ "ವೀರಶೈವ ಸಮಾಜದಲ್ಲಿ ಸದ್ಯಃ ದುರ್ದೈವದಿಂದ ಧರ್ಮಗ್ಲಾನಿಯುಂಟಾಗಿರುತ್ತಿದ್ದು, ಅದನ್ನು ಹೋಗಲಾಡಿಸುವದಕ್ಕೂ, ಶೂನ್ಯಸಿಂಹಾಸನಾಧ್ಯಕ್ಷರು, ಪಟ್ಟದದೇವರು, ಚರಮೂರ್ತಿಗಳು ಮೊದಲಾದ ಪೂಜ್ಯರಾದ ಸ್ವಾಮಿಗಳಿಗೆ ಯೋಗ್ಯವಾದ ಶಿಕ್ಷಣವನ್ನು ಕೊಟ್ಟು, ಅವರಿಂದ ಸಮಾಜದಲ್ಲಿ ಭಕ್ತಮಾಹೇಶ್ವರರಿಬ್ಬರಿಗೂ ಶಿವಾನುಭವ ಶಾಸ್ತ್ರಜ್ಞಾನವನ್ನು ಪ್ರಸಾರಗೊಳಿಸಲಿಕ್ಕೂ

ಶ್ರೀಶಿವಯೋಗಮಂದಿರವನ್ನು ಸ್ಥಾಪಿಸತಕ್ಕದ್ದೆ"ಂದು ಮಹಾಸಭೆಯಿಂದ ನಿರ್ಣಯವಾಯಿತು. ಮತ್ತು ಅದರ ಕಾರ್ಯನಿರ್ವಾಹಕ್ಕಾಗಿ ಒಂದು ಸಂಘವೂ ಸ್ಥಾಪಿಸಲ್ಪಟ್ಟಿತು.

ಈ ದಿವಸ ಮತ್ತೆ ಕೆಲವು ವಿಷಯಗಳ ಮೇಲೂ, ತಾರೀಖು ೩೦ನೇ ದಿವಸ ಕೆಲವು ವಿಷಯಗಳ ಮೇಲೂ, ಪ್ರಸಿದ್ಧವಾಗ್ಮಿಗಳ ಉಪನ್ಯಾಸವಾಗಿ ಮಹಾಸಭೆಯಿಂದ ಕೆಲವು ಠರಾವುಗಳು ಪಾಸಾದವು. ಕಡೆಯ ಒಂದು ದಿವಸ ಮಾತ್ರ ರಾ.ಬ॥ರುದ್ರಗೌಡರು ಮಹಾಸಭೆಯ ಪ್ರವೇಶ ಫೀಯನ್ನು ಮಾಫೀ ಮಾಡಿಸಿದ್ದರಿಂದ ಬಡಜನರೂ ಕೂಡ ಸಭೆಯನ್ನು ನೋಡಿ ಸಂತೋಷಿಸಿ ಇವರನ್ನು ಕೊಂಡಾಡಿದರು. ಪ್ರತಿಯೊಂದು ಕಾರ್ಯದಲ್ಲಿಯೂ ರಾ.ಬ॥ರವರ ಲಕ್ಷವು ಬಡಜನರ ಕಡೆಗೇ ವಿಶೇಷವಾಗಿರುತ್ತದೆ. ಮತ್ತೆ ಈ ಸಭೆಯಲ್ಲಿ ಹೈದರಾಬಾದಿನಲ್ಲಿ ಈಚೆಗೆ ಆದ ಜಲಪ್ರಳಯದಿಂದ ಆ ಸಂಸ್ಥಾನದಲ್ಲಿರುವ ವೀರಶೈವರ ಮನೆಮಾರುಗಳು ಹಾಳಾಗಿ ಹೋಗಿ ಅನೇಕ ಅಮೌಲ್ಯವಾದ ಜೀವರಾಸಿಯೂ, ವಿಫುಲವಾದ ಸಂಪತ್ತೂ, ನಾಶಹೊಂದಿದ್ದರಿಂದ ಅಲ್ಲಿಯ ವೀರಶೈವಬಾಂಧವರಿಗೆ ಸಂಪೂರ್ಣವಾದ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಅನಾಥರಕ್ಷಕ ಫಂಡಿಗೆ ಐದುನೂರು (೫೦೦)ರೂಪಾಯಿಗಳನ್ನು ಕಳಿಸಿಕೊಡಬೇಕೆಂದು ನಿರ್ಣಯವಾದ ಪ್ರಕಾರಕ್ಕೆ ನಿಜಾಮಸಾಹೇಬರ ಕಡೆಗೆ ದುಃಖಪ್ರದರ್ಶನದ ತಾರು ಮಾಡಿದ್ದಲ್ಲದೆ, ೫೦೦ ರೂಪಾಯಿಗಳನ್ನು ಕಳುಹಿಸಿಕೊಡುವದಾಯಿತು.

ತಾರೀಖು ೩೧ನೆಯ ದಿವಸ ಶಿವಯೋಗಮಂದಿರದ ಸ್ಥಾಪನೆಯ ವಿಚಾರಕ್ಕಾಗಿಯೂ, ಅದರ ಸಹಾಯಧನ ಸಂಗ್ರಹದ ವಿಚಾರಕ್ಕಾಗಿಯೂ ಶ್ರೀಮಂತ ರಾ.ಸಾ॥ವಾರದ ಮಲ್ಲಪ್ಪಣ್ಣನವರ ಅಧ್ಯಕ್ಷತೆಯ ಕೆಳಗೆ ಸಭೆಯು ಕೂಡಿತು. ಈ ಸಭೆಗೆ ಶ್ರೀಮಂತ ವಂಟಮುರಿಯ ಸರದೇಸಾಯಿಯವರೂ, ರಾವಬಹದ್ದೂರವರೂ ಮುಂಚಿತವಾಗಿಯೇ ಬಂದಿದ್ದು, ಈ ಸಭಾಧ್ಯಕ್ಷಸ್ಥಾನವನ್ನು ವ್ಯವಹಾರ ಚತುರರೂ, ಘನವಂತರೂ, ಅನುಭವಿಕರೂ, ಭಕ್ತಿವಾನರೂ ಆದ ರಾ.ಸಾ॥ಮಲ್ಲಪ್ಪಣ್ಣನವರೇ ವಹಿಸಲಿಕ್ಕೆ ಯೋಗ್ಯರೆಂದು ಅವರಿಗೇ ಕೊಟ್ಟರು. ತಾವು ಸಭೆಯಲ್ಲಿ ಸ್ವಲ್ಪಮಾತ್ರ ವಿಶ್ರಮಿಸಿ, ಗರ್ಲಸ್ಕೂಲ ಮಾಸ್ತರಿಣಿಯ ಆಮಂತ್ರಣವನ್ನು ಮನ್ನಿಸಿ, ಈ ಉಭಯ ಮಹನೀಯರು ಹೆಣ್ಣುಮಕ್ಕಳ ಶಾಲೆಗೆ ಹೋದರು. ಇತ್ತ ಸಭೆಯಲ್ಲಿ ಶಿವಯೋಗ ಮಂದಿರದ ಸ್ಥಾಪನೆಯ ಕಾರ್ಯನಿರ್ವಾಹಕ ಸಂಘದ ಸಭಾಸದರನ್ನು ಆರಿಸುವದು, ಹತ್ತು (೧೦)ಲಕ್ಷ ಮೂಲಧನದಿಂದ ಒಂದು ಬಟ್ಟೆಯ ಕಾರ್ಯಾಲಯ (ವೀರಶೈವ ಮಿಲ್)ವನ್ನು ಸ್ಥಾಪಿಸುವದಕ್ಕಾಗಿ ಒಂದು ಕಾರ್ಯನಿರ್ವಾಹಕ ಸಂಘವನ್ನು ಕಲ್ಪಿಸುವದು, ಇತ್ಯಾದಿ ಸಂಗತಿಗಳು ಜರುಗಿದವು. ಈ ವಿಷಯವಾಗಿ ಕೆಲವರ ಭಾಷಣಗಳು ನಡೆದವು. ಶಿವಯೋಗ ಮಂದಿರವನ್ನು ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿಗೆ ಸೇರಿದ ಶ್ರೀ ಮಹಾಕೂಟಕ್ಷೇತ್ರದ ಪಂಚಕ್ರೋಶದ ಆವರಣದಲ್ಲಿ, ಮಲಪ್ರಭಾನದೀ ತಟಾಕದಲ್ಲಿ, ಬಹು ರಮಣೀಯವೂ ಪ್ರಶಸ್ತವೂ ಇರುವ ಪುಣ್ಯಪ್ರದೇಶದಲ್ಲಿ ಸ್ಥಾಪಿಸಬೇಕೆಂದು ಯೋಚಿಸಲ್ಪಟ್ಟಿತು. ಇದರ ಕಾರ್ಯನಿರ್ವಾಹಕ್ಕೆ ರಾ.ಸಾ॥ ಶ್ರೀಮಂತ ವಾರದ ಮಲ್ಲಪ್ಪನವರ ಅಧ್ಯಕ್ಷತೆಯಿಂದ ಒಂದು ಸಂಘವು ಸ್ಥಾಪಿಸಲ್ಪಟ್ಟಿರುವದು. ಕಾರ್ಯನಿರ್ವಾಹ ಸಮರ್ಥರೂ ಧರ್ಮಾಭಿಮಾನಿಗಳೂ ಎಲ್ಲ ಪ್ರಾಂತದ ಸಮಾಜ ಬಾಂಧವರನ್ನು ಆರಿಸಿ, ಈ ಕಾರ್ಯವನ್ನು ಕೊನೆಗಾಣಿಸಲಿಕ್ಕೆ ಗೊತ್ತುಪಡಿಸಿದರು.

ಈ ಮಹತ್ಕೃತ್ಯಕ್ಕೆ ಬಹು ದೊಡ್ಡ ಧನರಾಸಿಯೂ ಬೇಕಾದುದರಿಂದ ಜನರಿಗೆ ಫಂಡಿನ ತ್ರಾಸವಾಗದಂತೆ ಭಾಗಗಳಿಂದ (ಶೇರುಗಳಿಂದ) ವೀರಶೈವರ ಗಿರಣಿಯೊಂದನ್ನು ಸ್ಥಾಪಿಸಿ, ಅದರಿಂದ ಬರುವ ಪ್ರಾಪ್ತಿಯನ್ನು ಈ ಶಿವಯೋಗ ಮಂದಿರದ ಕಾರ್ಯಕ್ಕೆ ವಿನಿಯೋಗಿಸಿದರೆ, ಆ ಸಂಸ್ಥೆಯು ಅಬಾಧಿತವಾಗಿ ನಡೆದುಕೊಂಡು ಹೋಗುವದೆಂದು ಗೊತ್ತಾಯಿತು. ಈ ಕಾರ್ಯಾಲಯ ಸ್ಥಾಪನೆಯ ಸಂಬಂಧವಾಗಿ ಚರ್ಚೆನಡೆದು ಅದಕ್ಕಾಗಿ

ಹತ್ತು ಲಕ್ಷರೂಪಾಯಿಗಳ ಮೂಲಧನವನ್ನು ೧೦ ಸಾವಿರ ಭಾಗಗಳಿಂದ (ಭಾಗ ೧ಕ್ಕೆ ೧೦೦ ರೂಪಾಯಿಯಂತೆ) ಸಂಗ್ರಹಿಸಬೇಕೆಂತಲೂ, ನೂರು (೧೦೦) ರೂಪಾಯಿಗಳನ್ನು ಕೊಟ್ಟು ಭಾಗದಾರರಾಗಲು ಶಕ್ತನಲ್ಲದವರು ಒಂದು ಎರಡು (೧-೨) ರೂಪಾಯಗಳನ್ನಾದರೂ ಆ ಮೂಲಧನಕ್ಕಾಗಿ ಶಕ್ತ್ಯನುಸಾರ ಕೊಡಬಹುದೆಂತಲೂ, ಶಕ್ತರಾದವರು ಒಂದು ಭಾಗ ಮೊದಲುಗೊಂಡು ಅವರ ಶಕ್ತಿಯಿದ್ದಷ್ಟು ಭಾಗಗಳನ್ನು ಪಡೆದುಕೊಳ್ಳಬಹುದೆಂತಲೂ, ಈ ಮೂಲಧನದಿಂದ ಸ್ಥಾಪಿಸಿದ ಒಂದು ಅರಳೆಯ ಕಾರ್ಯಾಲಯದಲ್ಲಿ ಉತ್ಪನ್ನವಾಗುವ ಲಾಭದಲ್ಲಿ ಅರ್ಧಭಾಗವು ಭಾಗಸ್ಥರಿಗೆ ಹಂಚಲ್ಪಟ್ಟು, ಉಳದರ್ಧಭಾಗವು ಮತದ ಧಾರ್ಮಿಕ ವ್ಯಾವಹಾರಿಕ, ನೈತಿಕ, ಸುಧಾರಣೆಗಳಿಗಾಗಿ ಉಪಯೋಗಿಸಲ್ಪಡಬೇಕೆಂತಲೂ ಗೊತ್ತಾಯಿತು. ಹೀಗೆ ಮಾಡುವದರಿಂದ ಮತದ ಕಾರ್ಯಕ್ಕಾಗಿ ಯಾರೊಬ್ಬರಿಂದಾಗಲಿ, ಚಂದಾರೂಪವಾಗಿಯಾಗಲಿ ಹಣವನ್ನು ಕೇಳಿ ಸಂಗ್ರಹಿಸಿ ಸಹಾಯವಾದ ಮಟ್ಟಿಗೆ ಕಾರ್ಯವನ್ನು ಮಾಡುವ, ಸಹಾಯವಾಗದಿದ್ದರೆ ಅಷ್ಟಕ್ಕೆ ಬಿಟ್ಟುಬಿಡುವ ಕಷ್ಟಗಳು ತಪ್ಪುವವಲ್ಲದೆ, ಈ ನೂತನೋದ್ಯಮದಿಂದ ನಿರ್ವಿಘ್ನವಾಗಿ ಮತಸುಧಾರಣೆಯ ಕಾರ್ಯವನ್ನು ನೆರವೇರಿಸುವದಕ್ಕೆ ಎಷ್ಟೋ ಸಹಾಯವಾಗುವದೆಂದು ನಿರೀಕ್ಷಿಸಲ್ಪಟ್ಟಿತು. ಈ ಕಾರ್ಯಸ್ಥಾಪನೆಯ ಆಲೋಚನಾ ಸಭೆಗೆ ರಾ.ಸಾ||ಶ್ರೀಮಂತ ವಾರದ ಮಲ್ಲಪ್ಪಣ್ಣನವರೂ, ರಾ.ಸಾ||ಗದಗಿನ ಮಾನ್ವಿ ಮಲ್ಲೇಶಪ್ಪನವರೂ, ಹುಬ್ಬಳ್ಳಿಯ ಶ್ರೀಮಾನ್ ನೀಲಿ ರಾಚಪ್ಪಣ್ಣನವರೂ, ಗೋಕಾಕ ಗಿರಣಿಯ ಕ್ಲಾರ್ಕರಾದ ಕಣಬರಗಿ ಶಿವಮೂರ್ತಯ್ಯನವರೂ, ಗದಗಿನ ಶ್ರೀಮಂತ ವೀರಪ್ಪಣ್ಣ ಮಾನ್ವಿಯವರೂ ಸಭಾಸದರಾಗಿರಬೇಕೆಂದು ಗೊತ್ತುಮಾಡಲ್ಪಟ್ಟಿತು. ಮತ್ತು ಈ ಕಾರ್ಯಾಲಯದ ಆರಂಭದ ಬಗ್ಗೆ ಮುಟ್ಟುವ ವೆಚ್ಚವನ್ನು ಕೊಡಲಿಕ್ಕೆ ಎಷ್ಟೋ ಘನವಂತರು ಸಂತೋಷದಿಂದ ಒಪ್ಪಿಕೊಂಡಿರುವರು. ಈ ಮಹತ್ಕಾರ್ಯದ ಔಚಿತ್ಯವನ್ನು ಪರಿಭಾವಿಸಿ ಕೆಲ ದೇಸಾಯರೂ, ಘನವಂತರೂ ಹಲವು ಭಾಗಗಳನ್ನು ಪಡೆದುಕೊಳ್ಳಲಿಕ್ಕೆ ಸಭೆಯಲ್ಲಿಯೇ ಒಪ್ಪಿಗೆಯನ್ನು ಕೊಟ್ಟು, ತಮ್ಮ ಮತಾಭಿಮಾನವನ್ನು ವ್ಯಕ್ತಗೊಳಿಸಿದರು. ಈ ಕಾರ್ಯಾಲಯವನ್ನು ಕಟ್ಟುವ ಸ್ಥಳ ರೀತಿ ಮೊದಲಾದುದನ್ನು ನಿರ್ಧರಿಸಿ ಕಾರ್ಯಾರಂಭವನ್ನು ಮಾಡುವ ಭಾರವನ್ನೂ, ಅವರ ಯಜಮಾನ್ಯತೆಯನ್ನೂ ರಾ.ಸಾ|| ವಾರದ ಮಲ್ಲಪ್ಪಣ್ಣನವರಿಗೇ ವಹಿಸಲ್ಪಟ್ಟಿತು.

ಈ ಸಭೆಯ ಕಾರ್ಯವನ್ನು ಪ್ರಾರಂಭಿಸಿ, ವಂಟಮುರಿಯ ಶ್ರೀಮಂತ ಸರದೇಸಾಯಿಯವರೂ, ರಾ.ಬ||ರುದ್ರಗೌಡ ಸಾಹೇಬರೂ ಹೆಣ್ಣು ಹುಡುಗೆಯರ ಸಾಲಿಗೆ ಹೋದರೆಂದು ಹಿಂದೆ ಬರೆದಿರುವದಷ್ಟೇ! ಆ ಶಾಲೆಯ ಮುಂದಿನ ವಿಸ್ತಾರವಾದ ಅಂಗಳಕ್ಕೆಲ್ಲ ನೀರಿನ ಥಳಿಕೊಟ್ಟು, ರಂಗವಲ್ಲಿಗಳನ್ನು ಬರೆದು, ಶಾಲೆಯ ಮಹಾದ್ವಾರಕ್ಕೆ ಹೊಂದಿ ಒಂದು ಬಹು ಭವ್ಯವಾದ ಕಮಾನವನ್ನು ಕಟ್ಟಿ, ಅದನ್ನು ಚಿತ್ರ ವಿಚಿತ್ರವಾಗಿ ಶೃಂಗರಿಸಿ, ಅದರ ಶಿರೋಭಾಗದಲ್ಲಿ ಇವರ ಸ್ವಾಗತಪರ ವಾಕ್ಯವನ್ನು ಬರೆದಿದ್ದರು. ಶಾಲೆಯು ಒಳಗೂ ಹೊರಗೂ ತಳಿರ್ದೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ, ಚಿತ್ರಪಟಗಳಿಂದಲೂ, ಸ್ವಚ್ಛತೆಯಿಂದಲೂ, ಉಚಿತಾಸನಗಳಿಂದಲೂ ಝುಗಝುಗಿಸುತ್ತಿತ್ತು. ಶಾಲೆಗೆ ಊರೊಳಗಿನ ಸೆಟ್ಟರೂ, ಸಾವಕಾರರೂ, ಬೇರೆ ಮಾಸ್ತರಜನರೂ, ಮ್ಯುನಸಿಪಾಲ್ಟಿಯ ಅಧಿಕಾರಿಗಳೂ, ಪುರಪ್ರಮುಖರೂ ಬಂದಿದ್ದರು. ಪ್ರೇಕ್ಷಕರಿಗೆ ಶಾಲೆಯೂ, ಅದರ ಹೊರಭಾಗವೂ ನಿಲ್ಲಲಿಕ್ಕೆ ಸಾಲದೆ, ಅವರು ರಸ್ತೆಯ ವರೆಗೂ ದಬ್ಬಿಕೊಂಡಿದ್ದರು. ಆರಂಭಕ್ಕೆ ಬಾಲಿಕೆಯರು ಮಂಜುಳ ಸ್ವರದಿಂದ ಪದಗಳನ್ನು ಸರಸಾಗಿ ಅಂದರು. ಮಾರ್ಮಿಕ ಪ್ರಶ್ನೆಗಳಿಂದ ಬಾಲಿಕೆಯರ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಕೇಳಿದ ಪ್ರಶ್ನೆಗಳಿಗೆ ವಿದ್ಯಾರ್ಥಿನಿಯರು ಉತ್ತರಗಳನ್ನು ಸರಿಯಾಗಿ ಕೊಟ್ಟರು. ಮಾಸ್ತರಿಣಿಯು ವೀರಶೈವ ಮತದವಳು. ಆ ಹೆಡ್‌ಮಾಸ್ತರಿಣಿಯ ಶಿಕ್ಷಣ ಕ್ರಮವನ್ನೂ, ವ್ಯವಸ್ಥೆಯನ್ನೂ ನೋಡಿ ಆನಂದಿತರಾಗಿ ಶಾಲೆಯ ವ್ಹಿಜಿಟರ್ಸ ಬುಕ್ಕಿನಲ್ಲಿ "ಹೆಡ್ ಮಿಸ್ಟ್ರೆಸ್ಸರ ಶಿಕ್ಷಣ ಕ್ರಮವು ಸಮಾಧಾನಕರವದೆ.

ಬಾಲಿಕೆಯರ ಕಯ್ಯಿಂದ ತೆಗೆಯಿಸಿದ ಕಸೂತಿ ಮುಂತಾದ ಕೈಗಾರಿಕೆಯೂ ನೋಡುವಂತಿದೆ. ಶಾಲಾ ಖಾತೆಯ ಅಧಿಕಾರಿಗಳಿಂದ ಇವರ ಶ್ರಮಕ್ಕೆ ತಕ್ಕಪ್ರತಿಫಲವು ದೊರೆಯಬೇಕೆಂದು ಆಶಿಸುವೆನು" ಎಂಬದಾಗಿ ಷರೆಯನ್ನು ಬರೆದು, ಮಿಠಾಯಿಗಳನ್ನು ತರಿಸಿ, ಎಲ್ಲ ಬಾಲಿಕೆಯರಿಗೂ ಉದಾರವಾಗಿ ಹಂಚಿದರು. ಮತ್ತು ಅವರೆಲ್ಲರಿಗೂ ಉಪದೇಶಪರ ಭಾಷಣ ಮಾಡಿ, ಸ್ತ್ರೀವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಟ್ಟರು. ಮತ್ತು ತಮಗೆ ಶಾಲೆಗೆ ಬರಲಿಕ್ಕೆ ಆಮಂತ್ರಣಕೊಟ್ಟು ಆದರಿಸಿದ್ದಕ್ಕೆ ಅವರೆಲ್ಲರ ಅಭಿನಂದನ ಮಾಡಿದರು. ಬಳಿಕ ತುಸು ಗಾಯನವಾದನಂತರ ಬಾಲಿಕೆಯರು ಪರಿಮಳದಿಂದಿಡಿದ ಪುಷ್ಪಮಾಲೆಗಳನ್ನು ತೆಗೆದುಕೊಂಡು ಬಂದು, ಬಹು ವಿನಯದಿಂದ ಈ ಉಭಯ ಮಹನೀಯರ ಕೊರಳೊಳಗೆ ಹಾಕಿದರು. ಎಲ್ಲ ಜನರಿಗೂ ಗಂಧದ್ರವ್ಯಗಳನ್ನು ಚಿಮುಕಿಸಿದರು. ಶ್ರೀಮಂತರೂ, ರಾವಬಹದ್ದೂರರವರೂ ವಿದ್ಯಾರ್ಥಿನಿಯರ ಜಯಘೋಷದೊಡನೆ ಎದ್ದು, ಆ ಮಾಸ್ತರಿಣಿಯರ ನಿರೂಪ ತಕ್ಕೊಂಡು, ರಥಾರೂಢವಾಗಿ ಬಂಗಲೆಗೆ ತೆರಳಿದರು. ಅದೇ ದಿವಸ ಊರೊಳಗೆ ಘನವಂತರ ಮನೆಗಳಲ್ಲಿ ಶ್ರೀಮಂತರಿಗೂ, ರಾವಬಹದ್ದೂರರವರಿಗೂ, ಶ್ರೀಮಂತ ರಾ.ಸಾ||ವಾರದ ಮಲ್ಲಪ್ಪಣ್ಣನವರಿಗೂ ಬಹು ವಿಜೃಂಭಣೆಯಿಂದ ತಾಂಬೂಲ ಸಮಾರಂಭಗಳಾದವು. ರಾತ್ರಿಯೊಳಗೆ ಸಭಾಮಂಟಪದಲ್ಲಿ ತಾಲೂಕ ಚಿಕ್ಕೋಡಿಯ ವೀರಶೈವ ನಾಟಕ ಕಂಪನಿಯವರು "ಮೇದಾರ ಕೇತಯ್ಯ" ಎಂಬ ಶಿವಶರಣರ ಆಖ್ಯಾನವನ್ನು ನಾಟಕಮಾಡಿ, ತೋರಿಸಿದ್ದರಿಂದ ಸಭಿಕರಿಗೆ ಬಹಳ ಆನಂದವಾಯಿತು. ಆ ದಿವಸ ಕೂಡಿದ ನಾಟಕದ ಹಣವನ್ನೆಲ್ಲ ಕಂಪನಿಯವರು ಮಹಾಸಭೆಯ ಫಂಡಿಗಾಗಿ ಸಮರ್ಪಿಸಿದರು.

ಈ ಎಲ್ಲ ಸಮಾರಂಭವು ತೀರಿದ ಮರುದಿವಸ ಅಂದರೆ ತಾರೀಖು ೧ನೇ ಜಾನೇವಾರಿ ಸನ್ ೧೯೦೯ನೇ ಇಸವಿಯ ಶುಕ್ರವಾರ ದಿವಸ, ರಾವಬಹದ್ದೂರ ರುದ್ರಗೌಡರು ಮಹೋತ್ಸವದಿಂದ ಹೊರಟು, ಬಾಗಲಕೋಟೆಯ ವೀರಶೈವರ ಅಭಿನಂದನಮಾಡಿ, ಅವರ ನಿರೂಪ ತಕ್ಕೊಂಡು ಮುಂಜಾನೆಯ ಗಾಡಿಯಿಂದ ವಿಜಾಪುರಕ್ಕೆ ಬಂದು, ಮಧ್ಯಾಹ್ನದ ಭೋಜನವನ್ನು ಅಲ್ಲಿಯೇ ತೀರಿಸಿ, ವಿಜಾಪುರಸ್ಥರ ಅಪ್ಪಣೆ ಪಡಕೊಂಡು ಅಲ್ಲಿಂದ ಹೊರಟು, ಟಾಂಗೆಯ ಮೇಲಿಂದ ಸಾಯಂಕಾಲ ಸಮಯಕ್ಕೆ ಅಥಣೀ ತಾಲೂಕ ತೆಲಸಂಗ ಮುಕ್ಕಾಮಿಗೆ ದಯಮಾಡಿಸಿದರು. ವಂಟಮುರಿಯ ಶ್ರೀಮಂತ ಸರದೇಸಾಯಿಯವರು ಅದೇ ದಿವಸ ಬಾಗಲಕೋಟೆಯಿಂದ ವೈಭವದೊಡನೆ ಬೆಳಗಾವಿಯ ಕಡೆಗೆ ದಯಮಾಡಿಸಿದರು. ರಾ.ಸಾ||ವಾರದ ಮಲ್ಲಪ್ಪಣ್ಣನವರನ್ನು ಬಾಗಲಕೋಟೆಯವರು ಮತ್ತೆ ಒಂದೆರಡು ದಿವಸ ಇಟ್ಟುಕೊಂಡು, ಮೇಜವಾನೆಯನ್ನು ಮಾಡಿ, ಬಲು ಸಂಭ್ರಮದಿಂದ ಅವರನ್ನು ಸೊಲ್ಲಾಪುರಕ್ಕೆ ಕಳಿಸಿದರು. ಈ ಮೇರೆಗೆ ಬಾಗಲಕೋಟೆಯಲ್ಲಿ ಶ್ರೀಮದ್ವೀರಶೈವ ನಾಲ್ಕನೇ ಮಹಾಸಭೆಯು ಬಹು ವಿಜೃಂಭಣೆಯಿಂದ ನೆರವೇರಿ, ಕೆಲವು ಮಹತ್ವವಾದ ಠರಾವುಗಳು ಪಾಸಾದವು.

ರುದ್ರಗೌಡ ದೊರೆಗಳಿಗೆ ಹಿಂದುಸ್ಥಾನ ಸರಕಾರದಿಂದ "ರಾವಬಹಾದ್ದೂರ" ಎಂಬ ಪದವಿಯು ದೊರೆದದ್ದು

ಬಾಗಲಕೋಟೆಯಿಂದ ರಾ.ಬ||ರುದ್ರಗೌಡ ಸಾಹೇಬರು ಸನ್ಮಾನಿತರಾಗಿ ತಿರುಗಿ ಬರುವಷ್ಟರಲ್ಲಿ, ಇವರ ಸುದೈವವು ಇವರನ್ನು ಸರಕಾರದಿಂದಲೂ ಸನ್ಮಾನಿತರನ್ನಾಗಿ ಮಾಡಿತ್ತು. ತಾರೀಖು ೩ನೇ ಜಾನೇವಾರಿ ಸನ್ ೧೯೦೯ನೇ ಇಸವಿಯ ರವಿವಾರ ದಿವಸ ರಾತ್ರಿಯ ೮ ಘಂಟೆಯ ಸುಮಾರಕ್ಕೆ ಅಥಣೀ ತಾಲೂಕ ತೆಲಸಂಗ

ಮುಕ್ಕಾಮಿನಲ್ಲಿ ರಾವಬಹದ್ದೂರವರ ಟಪಾಲು ಬಂದಿತ್ತು. "ಟಪಾಲನ್ನು ನಾಳೆ ಮುಂಜಾನೆ ನೋಡುತ್ತೇನೆ; ಅನಕಾ ಇಟ್ಟು ಬಿಡು" ಎಂದರು. ಅದಕ್ಕೆ ಸಿಪಾಯಿಯು "ಟಪಾಲಿನಲ್ಲಿ ತಾರುಗಳು ಇರುತ್ತವೆ"ಂದನು. ಕೂಡಲೆ ಟಪಾಲನ್ನು ನೋಡತೊಡಗಿದರು. ಕೆಲವು ತಾರಗಳಿದ್ದವು. ಎಲ್ಲಕ್ಕೂ ಮೊದಲು ತಾರಗಳನ್ನು ನೋಡಲು, ಎಲ್ಲ ತಾರಗಳಲ್ಲಿಯೂ "ನಿಮಗೆ ಸರಕಾರದಿಂದ ಬಹುಮಾನದ ಪದವಿಯು ದೊರೆತದ್ದಕ್ಕೆ ನಮಗೆ ಪರಮಾನಂದವಾಗಿ, ತಾವು ಈ ಗೌರವದ ಬಿರುದಿಗೆ ಪಾತ್ರರಾದ ಬಗ್ಗೆ ನಾವು ನಿಮ್ಮ ಅಭಿನಂದನ ಮಾಡುತ್ತೇವೆ." ಎಂದು ಬರೆಯಲ್ಪಟ್ಟಿತ್ತು. ರಾವಬಹದ್ದೂರವರು ತಾರಗಳನ್ನು ಕಂಡು ವಿಸ್ಮಯರಾಗಿ, "ತಾರಗಳಂತೂ ಹೀಗೆ ಹೇಳುತ್ತವೆ. ಈ ಸಂಬಂಧವಾಗಿ ನನಗಂತೂ ಏನೂ ಗೊತ್ತಿರುವದಿಲ್ಲ, ಇದೇನಾಗಿರಬಹುದು? ಸರಕಾರದಿಂದ ಯಾವದೊಂದು ದೊರೆತಿರಬಹುದೇನು? ವರ್ಷಾರಂಭಕ್ಕೆ ಅಂದರೆ ಜಾನೇವಾರಿ ತಿಂಗಳ ೧ನೇ ತಾರೀಖಿಗೆ ಸರಕಾರದಿಂದ ಪ್ರತಿಷ್ಠಿತ ಜನರಿಗೆ ಪದವಿಗಳು ದೊರೆಯುತ್ತಿರುತ್ತವೆ. ಆ ಪ್ರಕಾರ ಸರಕಾರದವರು ನನಗೂ ಯಾವದೊಂದು ಪದವಿಯನ್ನು ಕೊಟ್ಟಿದ್ದರೂ ಕೊಟ್ಟಿರಬಹುದು. ಈ ವಾರ್ತೆಯನ್ನು ಗ್ಯಾಝೀಟಿನಿಂದ ತಿಳಿದು, ಕೂಡಲೆ ಇವರೆಲ್ಲರು ತಾರು ಮಾಡಿರಬಹುದು" ಎಂದು ತಮ್ಮೊಳಗೆ ಆಲೋಚಿಸುತ್ತ, ಅದೇ ಟಪಾಲಿಗೆ ಬಂದಿದ್ದ ಮುಂಬಯಿಯ ಟಾಯಿಮ್ಸ ಪತ್ರವನ್ನೊಡೆದು ನೋಡಲು, ಅದರಲ್ಲಿ ಇವರಿಗೆ ಸನ್ಮಾನಾರ್ಥವಾಗಿ ಹಿಂದೂಸ್ಥಾನ ಸರಕಾರದಿಂದ "ರಾವಬಹದ್ದೂರ" ಎಂಬ ಪದವಿಯು ಕೊಡಲ್ಪಟ್ಟ ಸಂಗತಿಯು ಪ್ರಸಿದ್ಧವಾಗಿತ್ತು.

ಎಷ್ಟೋ ಜನರು ತಮಗೆ ಸರಕಾರದಿಂದ "ರಾವಸಾಹೇಬ, ರಾವಬಹಾದ್ದೂರ" ಮುಂತಾದ ಪದವಿಗಳು ಸಿಗಬೇಕೆಂದು ಹಲವು ಬಗೆಯಿಂದ ಹಗಲಿರುಳು ಪ್ರಯತ್ನಿಸುತ್ತಿರುತ್ತಾರೆ. ಕೆಲವರು ಜೀ.ಜೀ ಎಂದೆನ್ನುತ್ತ ಮೇಲಧಿಕಾರಿಗಳ ಮರ್ಜಿಯನ್ನು ಸಂಪಾದನೆ ಮಾಡುವದರಲ್ಲಿರುತ್ತಾರೆ. ಕೆಲವರು ಮೇಲಧಿಕಾರಿಗಳಿಗೆ ನಾನಾ ತರದಿಂದ ಹೇಳಿಕೊಳ್ಳುತ್ತಿರುತ್ತಾರೆ. ಕೆಲವರು ಮಧ್ಯಸ್ಥಗಾರರಿಗೆ ಲಂಚಕೊಟ್ಟು ಬಿರುದು ಸಂಪಾದಿಸಲಿಕ್ಕೆ ಹವಣಿಸುತ್ತಿರುತ್ತಾರೆ. ಕೆಲವರು ದೊಡ್ಡಮನುಷ್ಯರಿಂದ ಮೇಲಾಧಿಕಾರಿಗಳಿಗೆ ಹೇಳಿಸಿ, ತಾವು ಆ ಪದವಿಗೆ ಯೋಗ್ಯರಿರುವಂತೆ ಬರೆಯಿಸಿ, ಪದವಿಯನ್ನು ಪಡೆಯಲು ತವಕಿಸುತ್ತಿರುತ್ತಾರೆ. ಈ ಬಗೆಯಾಗಿ ಹಲವರು ಹಲವು ಬಗೆಯಿಂದ ಸರಕಾರದಿಂದ ಯಾವದೊಂದು ಪದವಿಯನ್ನು ಸಂಪಾದಿಸುವದರಲ್ಲಿ ವಿಶ್ವಪ್ರಯತ್ನ ಮಾಡುತ್ತಿರಲು, ರಾವಬಹದ್ದೂರವರು ಸ್ವಲ್ಪವೂ ಪ್ರಯತ್ನಿಸದೆ, ಇವರಿಗೆ ಯಾವ ಸುದ್ದಿಯು ಎಷ್ಟು ಮಾತ್ರವೂ ಗೊತ್ತಿರದೆ, ಒಮ್ಮಿಂದೊಮ್ಮೆ ಬಂದ ಅಭಿನಂದನದ ತಾರಗಳಿಂದ ಚಮತ್ಕಾರವೆನಿಸಿ, ಹಿಂದಿನಿಂದ ಸರಕಾರೀ ಗ್ಯಾಝೀಟ ನೋಡಲು ತಮಗೆ ಸರಕಾರದಿಂದ "ರಾವಬಹದ್ದೂರ" ಎಂಬ ಪದವಿಯು ದೊರೆತ ಸಂಗತಿಯು ತಿಳಿಯಿತು. ಸರಕಾರದಿಂದ ಪದವಿಯನ್ನು ಪಡೆದ ಎಷ್ಟೋ ಜನರು ಅಲ್ಲಲ್ಲಿ ಇರುತ್ತಾರೆ. ಆದರೆ ಸರಕಾರದಿಂದ ಯಾವ ಉದ್ದೇಶವಾಗಿ ಪದವಿಗಳು ಕೊಡಲ್ಪಡುತ್ತಿರುವವೋ, ಈ ಪದವೀಧರರು ಎಂಥ ಯೋಗ್ಯತೆಯುಳ್ಳವರಿರಬೇಕೆಂದು ಸರಕಾರದ ಉದ್ದೇಶವಿರುವದೋ, ಅಂತಹ ಉದ್ದೇಶಕ್ಕೆ ಪೂರ್ಣವಾಗಿ ಪಾತ್ರರಾದ ಜನರು ತೀರ ವಿರಳತಮರಾಗಿರುವರು. ರಾ.ಬ॥ರುದ್ರಗೌಡರವರಾದರೋ ಇಂತಹ ನಾಮಧಾರಿಗಳಾದ ಪದವೀಧರರ ಮಾಲಿಕೆಯಲ್ಲಿ ಗಣನೆ ಮಾಡತಕ್ಕವರಲ್ಲ. ಇವರು ತಮ್ಮ ಸ್ವಂತ ಕರ್ತವ್ಯಜಾಗ್ರತೆಯಿಂದಲೂ, ಕಾರ್ಯದಕ್ಷತೆಯಿಂದಲೂ ಕೇವಲ ಪ್ರಜೆಗಳ ಹಿತವನ್ನೇ ಬಯಸಿ, ನ್ಯಾಯನಿಷ್ಠರೂ, ನಿಸ್ಪೃಹಿಗಳೂ ಎಂದೆನ್ನಿಸಿಕೊಂಡು ರಾಜ್ಯಕಾರ್ಯವನ್ನೆಸಗಿ ಲೋಕಪ್ರಿಯರಾದ ಸಂಗತಿಯನ್ನು ಸರಕಾರವು ಕಿವಿಯಾರೆ ಕೇಳಿ, ಕಣ್ಣಾರೆ ನೋಡಿ, ಇವರಿಗೆ ತಾವಾಗಿಯೇ "ರಾವಬಹದ್ದೂರ" ಎಂಬ ಕಿತಾಬವನ್ನು ಕೊಟ್ಟಿತು. ರಾವಬಹದ್ದೂರವರು ಸ್ವಲ್ಪ ಮಾತ್ರವೂ ಪ್ರಯತ್ನಿಸದೆ "ಪದವಿ" ಎಂಬ ಸುದ್ದಿಯನ್ನೇ ಮನಸಿನಲ್ಲಿ ತರದೆ ಇದ್ದಾಗ್ಯೂ, ಸರಕಾರದವರು

ಇವರ ಸದ್ಗುಣಗಳನ್ನೂ ರಾಜ್ಯಕಾರ್ಯದ ಪ್ರೌಢಿಮೆಯನ್ನೂ ಕಂಡು, ತಾವಾಗಿಯೇ ಇವರಿಗೆ ಬಹಮಾನದ ಪದವಿಯನ್ನು ಕೊಟ್ಟಿದ್ದರಿಂದ ಇವರು ಎಂತಹ ಘನವಂತರೂ, ಎಷ್ಟು ರಾಜನಿಷ್ಠೆಯುಳ್ಳವರೂ ಇರುವರೆಂಬುದು ತಾನಾಗಿ ವ್ಯಕ್ತವಾಗುವಂತಿದೆ.

ಗುಣಗ್ರಾಹಕತೆಯೆಂಬ ಗುಣವು ಅಪೂರ್ವವಾಗಿದೆ. ಎರಡನೆಯವರ ಹೃದಯದೊಳಗಿನ ಸದ್ಗುಣಗಳನ್ನು ಕಂಡುಹಿಡಿದು, ಆ ಗ್ಘುಣಗಳ ಪ್ರಶಂಸೆಯನ್ನು ಮಾಡುವ ಮಹನೀಯರು ಜಗತ್ಯದೊಳಗೆ ವಿರಳತಮರಾಗಿರುವರು. ಇದರ ಕಾರಣವೇನೆಂದರೆ ಪರರಲ್ಲಿರುವ ನಿಜವಾದ ಸದ್ಗುಣಗಳನ್ನು ಕಂಡು ಹಿಡಿಯುವ ಪರಿಜ್ಞಾನವು ಎಷ್ಟೋ ಜನರಲ್ಲಿರುವದಿಲ್ಲ. ಆದರೆ ಯಾರಲ್ಲಿ ಅಂತಹ ನಿಜವಾದ ಸದ್ಗುಣಗಳ ವಾಸ್ತವ್ಯವಿರುವದೋ ಅವರನ್ನು, ಪ್ರಸಂಗಾನುಸಾರವಾಗಿ ಆ ಸದ್ಗುಣಗಳು ಕೀರ್ತಿಗೆ ಪಾತ್ರರನ್ನಾಗಿ ಮಾಡದೆ ಬಿಡುವದಿಲ್ಲ. ನಮ್ಮ ದಯಾಳು ಸರಕಾರದ ಹೃದಯದಲ್ಲಿ ಗುಣಗ್ರಾಹಕತೆಯೆಂಬ ಅಪೂರ್ವವಾದ ಗುಣವಿರುವದರಿಂದಲೇ ನಿಜವಾದ ಗುಣೀಜನರ ಪ್ರಶಂಸೆಯಾಗುತ್ತಿರುವದು, ಮೇಲಿಂದ ಮೇಲೆ ಕಂಡುಬರುತ್ತಿರುವದು. ಕರ್ತವ್ಯದಕ್ಷತೆ, ಸರಳವರ್ತನೆ, ನಿಸ್ಪೃಹತೆ ಇತ್ಯಾದಿ ಸದ್ಗುಣಗಳ ಜೊತೆಯಾಗಿದ್ದ ಸದ್ಗೃಹಸ್ಥರಿಗೆ ಸರಕಾರವು ಪ್ರಸಂಗವಿಶೇಷದಲ್ಲಿ ಉತ್ತೇಜನ ಕೊಟ್ಟು, ಆ ಸದ್ಗುಣಗಳ ಪ್ರಶಂಸೆಯನ್ನು ಮಾಡಲಿಕ್ಕೆ ಬಹುಶಃ ತಪ್ಪುವದಿಲ್ಲ. ಆದರಿಂದ ಆ ಮನುಷ್ಯನು ಧನ್ಯತೆಯನ್ನು ಪಡೆಯುವನು; ಅಲ್ಲದೆ ಇತರರೂ ಕೂಡ ಆ ಸದ್ಗೃಹಸ್ಥರ ಆಚರಣೆಯನ್ನು ಅನುಕರಣೆ ಮಾಡಲವಕಾಶವುಂಟಾಗುತ್ತದೆ. ಪ್ರಸ್ತುತಕ್ಕೆ ರಾ.ಬ॥ರುದ್ರಗೌಡ ಸಾಹೇಬರಿಗೆ ಸರಕಾರದವರು "ರಾವಬಹದ್ದೂರ" ಎಂಬ ಸನ್ಮಾನದ ಪದವಿಯನ್ನು ಕೊಟ್ಟು, ಇವರನ್ನು ಗೌರವಿಸಿದುದೇ ಇದಕ್ಕೆ ಸಾಕ್ಷಿಭೂತವಾಗಿರುತ್ತದೆ.[೬]

ರಾವಬಹದ್ದೂರವರು ಸರಕಾರದ ಪರಮವಿಶ್ವಾಸಿಕರೂ, ಕರ್ತವ್ಯದಕ್ಷರೂ, ಸತ್ಪಕ್ಷಾಭಿಮಾನಿಗಳೂ, ಮತ್ತು ಕೇವಲ ರೈತರ ಹಿತವನ್ನು ಚಿಂತಿಸುವವರೂ ಆಗಿರುತ್ತಾರೆ. ಸರಕಾರಿಯ ಕೆಲಸದಲ್ಲಿ ಇವರು ನಿಸ್ಪೃಹತೆಯಿಂದಲೂ, ಸರಳವರ್ತನದಿಂದಲೂ, ರಾಜನಿಷ್ಠೆಯಿಂದಲೂ ನಡೆಯುತ್ತಿರುವದರಿಂದ, ಒಳಸಂಚುಗಾರರ ಮತ್ತು ಕಾರ್ಯಸಾಧಕರ ಲಾಂಗೂಲಚಾಲನವೃತ್ತಿಯು ಇವರ ಮುಂದೆ ಏನೇನೂ ನಡೆಯುವದಿಲ್ಲ. ಇಂತಹ ದುರ್ಜನರ ಮದಾಂಧಚಕ್ಷುಗಳಿಗೆ ರಾವಬಹದ್ದೂರವರ ಸದ್ಗುಣಗಳು ಪ್ರಕಾಶಿಸುವದಿಲ್ಲೆಂಬದು ಸ್ಪಷ್ಟವೇ ಅದೆ. ಆದರೂ ಸತ್ಪಕ್ಷದ ಕಡೆಗೆ ಲಕ್ಷಕೊಟ್ಟು ಬಡರೈತರ ಹಿತವಾಗುವಂತೆ ಕೆಲಸಮಾಡುತ್ತಿರುವದರಿಂದ ಇವರ ಯೋಗ್ಯತೆಯು

೬.ಬೆನ್ನುಪುಟದ ಮೇಲೆ ಈ ಪದವನ್ನು ಬರೆಯಲಾಗಿದೆ-ಸಂ.

ರಾವಬಹದ್ದೂರ ಅರಟಾಳ ರುದ್ರಗೌಡ ಸಾಹೇಬರವರ ಬಗ್ಗೆ ಪದ

ರಾಗ ಭೈರವಿ-ರೂಪತಾಳ

ಧನ್ಯ ಧನ್ಯ ರುದ್ರಗೌಡ ಲೋಕಪ್ರೌಢರೇ ॥
ಚನ್ನವೀರಗೌಡರಾತ್ಮಜಾತ ದೊರೆಗಳೇ॥ಪಲ್ಲ ॥
ಧೀರಗುಣ ಗಂಭೀರ ವೀರ ಸುಗುಣ ಸುಂದರಾ ॥
ವೀರಶೈವವಾರವಾರ್ಧಿ ಲಸಿತ ಚಂದಿರಾ ॥೧॥

ವೇದಶಾಸ್ತ್ರ ವರಪುರಾಣ ವಿದಿತ ಬಂಧುರಾ ॥
ಸಾಧುಸಂತ ಸುಜನ ವಿನುತ ಪುಣ್ಯಮಂದಿರಾ ॥೨॥ →

ಬಹಳೇ ಪ್ರೌಢ ತರದ್ದಾಯಿತೆಂದು ಧಾರಾಳವಾಗಿ ಹೇಳಬಹುದು. ರಾ.ಬ||ರವರ ಈ ಉತ್ತಮೋತ್ತಮ ಗುಣಗಳು ಸರಕಾರದ ಅನುಭವಕ್ಕೆ ಮೇಲಿಂದಮೇಲೆ ಬರುತ್ತಿರುವದರಿಂದಲೂ ಮತ್ತು ಈವರೆಗೆ ಸರಕಾರಿಯ ಕೆಲಸವನ್ನು ಇವರು ಒಳ್ಳೇ ಸರಳತನದಿಂದ ಮಾಡುತ್ತ ಬಂದಿರುವದರಿಂದಲೂ, ಸರಕಾರದವರು ಇವರಿಗೆ "ರಾವಬಹದ್ದೂರ" ಎಂಬ ಬಹಮಾನದ ಪದವಿಯನ್ನು ಕೊಟ್ಟು, ಯೋಗ್ಯಸನ್ಮಾನ ಮಾಡಿದ ಬಗ್ಗೆ ಯಾರಿಗೆ ಆನಂದವಾಗಲಿಕ್ಕಿಲ್ಲ.[೩] ಇವರಿಗೆ ಈ ಪದವಿಯು ದೊರೆತ ವಾರ್ತೆಯು ಎರಡು ಮೂರು ದಿವಸದೊಳಗೆ ಇಡೀ ಹಿಂದುಸ್ತಾನದಲ್ಲಿ ಹಬ್ಬಿ, ಬಾಲಬಾಲಿಕೆಯರಿಗೂ ಕೂಡ ಗೊತ್ತಾಗಿ ಹೋಯಿತು. ಎಲ್ಲ ಕಡೆಯಿಂದಲೂ, ಅಭಿನಂದನಪರವಾದ ತಾರಗಳೂ ಪತ್ರಗಳೂ ಅಳತಿಲ್ಲದೆ ಬರಹತ್ತಿದವು. ಜ್ಞಾನಿಗಳೂ, ಸಮಸ್ತ ವೀರಶೈವರೂ "ರಾ.ಬ||ರುದ್ರಗೌಡರೇ ಧನ್ಯ, ಧನ್ಯ ನಿಮ್ಮ ಪುಣ್ಯಕ್ಕೆ ಮೇರೆಯಿಲ್ಲ"ವೆಂದು ಊರೂರುಗಳಲ್ಲಿ ಮಾತಾಡುವವರಾದರು. ವೀರಶೈವಸಮಾಜಕ್ಕೆ ಇವರು ಜ್ಞಾನದಿಂದಲೂ, ವಯಸ್ಸಿನಿಂದಲೂ, ಅಭಿಮಾನದಿಂದಲೂ, ಅಧಿಷ್ಠಿತರಾಗಿರುವದರಿಂದ ಆಬಾಲವೃದ್ಧರು ಇವರಿಗೆ ವೀರಶೈವ ಸಮಾಜಮಂದಿರದ ಯಾಜಮಾನ್ಯತೆಯನ್ನು ಕೊಟ್ಟು, ಎಲ್ಲರೂ ಇವರನ್ನು ಹಿರಿಯರಂತೆ ಭಾವಿಸಿ ಇವರ ಅಪ್ಪಣೆಯನ್ನು ತಪ್ಪದೆ ಪಾಲಿಸುತ್ತ ಬಾಲಕರೋಪಾದಿಯಿರುವದರಿಂದ ತಮ್ಮ ಯಜಮಾನರಿಗೆ ದೊರೆತ ಈ "ರಾವಬಹದ್ದೂರ" ಎಂಬ ಪದವಿಯಿಂದ ಸಮಸ್ತವೀರಶೈವರೂ ಪರಮಾನಂದವುಳ್ಳವರಾಗಿ, ಈ ಸದ್ವಾರ್ತೆಯನ್ನು ಕೇಳಿದ ದಿವಸವನ್ನು ಹಬ್ಬದಂತೆ ಗ್ರಹಿಸಿ ಸಭೆಗಳನ್ನೂ, ಉತ್ಸವಗಳನ್ನೂ ಮಾಡುವವರಾದರು. ಸ್ವಮತರಷ್ಟೇ ಅಲ್ಲ, ಎಷ್ಟೋ ಅನ್ಯಮತೀಯರೂ ಕೂಡ ಇವರ ಅಭಿನಂದನವನ್ನು ಅನೇಕತರವಾಗಿ ಮಾಡತೊಡಗಿದರು. ಹಳ್ಳಿಯ ಜನರೂ, ಶಹರವಾಸಿಗಳೂ ಕೂಡಿಯೇ ಈ ಮಹಾನುಭಾವರ ಧನ್ಯವಾದವನ್ನು ಮಾಡುವವರಾದರು. ಇವರ ಉತ್ಕರ್ಷವನ್ನು ಕಂಡು ಸಹನವಾಗದ ಕೆಲ ಹೊಟ್ಟೆಯುರಕ ಬ್ರಾಹ್ಮಣರು ಮಾತ್ರ ಒಳಗೊಳಗೆ ಮತ್ಸರಪಡುವವರಾದರು.[೪]

ತಾರೀಖು ೬ನೇ ಜಾನೇವಾರಿ ೧೯೦೯ನೇ ಇಸವಿಯ ದಿವಸ ಮುಂಬಯಿ ಇಲಾಖೆಯ ಗವ್ಹರ್ನರರಾದ ನಾಮದಾರ ಸರ್‌ಜಾನ ಕ್ಲಾರ್ಕಸಾಹೇಬ ಬಹದ್ದೂರವರ ಕಡೆಯಿಂದ ಅಥಣೀ ತಾಲೂಕಿಗೆ ಸೇರಿದ ಕಕಮರೀಗ್ರಾಮದ ಮುಕ್ಕಾಮಿಗೆ ರಾ.ಬ||ರವರ ಅಭಿನಂದನ ಪರವಾದ ಪತ್ರವೊಂದು ಬಂತು. ಅದರಲ್ಲಿ "ಮಿಸ್ತರ ರುದ್ರಗೌಡರೇ,ತಮಗೆ ಹಿಂದುಸ್ತಾನದ ವೈಸರಾಯರವರಿಂದ "ರಾವಬಹದ್ದೂರ" ಎಂಬ ಬಹಮಾನದ ಪದವಿಯು ದೊರೆತದ್ದನ್ನು ಕೇಳಿ ನನಗೆ ಪರಮಾನಂದವುಂಟಾಗಿರುತ್ತದೆ. ತಾವು ರಾಜನಿಷ್ಠರಾಗಿ, ಸರಕಾರದ ವಿಶ್ವಾಸಕ್ಕೆ ಪಾತ್ರರಾಗಿ, ನ್ಯಾಯನಿಷ್ಠರಾಗಿ, ಪ್ರಜೆಗಳ ಪ್ರೇಮಕ್ಕೆ ಪಾತ್ರರಾಗಿಯೂ ಇದ್ದುದರಿಂದ ತಮಗೆ ಸರಕಾರದಿಂದ

→ ರಾಜನಿಷ್ಠ ನ್ಯಾಯನಿಷ್ಠ ಸತ್ಯಸಂಧರೇ ||
ರಾಜರಾಜ ಚಕಿತ ರಾಜಕಾರ್ಯತತ್ಪರಾ ||೩||

ಹರನ ಮತವನುದ್ಧರಿಸಲು ರುದ್ರದೇವರು ||
ಅರಟಾಳದಿ ಅವತರಿಸಿ ಧರೆಗೆ ಬಂದರೈ ||೪||

ಅಸಮ ಮಹಿಮ ಕುಶಲಚತುರ ಧರ್ಮಪ್ರಭುಗಳೇ ||
ವಸುಧೆಗಧಿಕವಾದ ಚರಿತ ಬಸವಸ್ಮರಣರೇ ||೫||

ಬಸವಯ್ಯ ಮಾಸ್ತರ
ಕಿತ್ತೂರ ಶಾಲಾ ನಂಬರ-೧

೪. ಬೆನ್ನುಪುಟದ ಮೇಲೆ ಈ ಪದವನ್ನು ಬರೆಯಲಾಗಿದೆ-ಸಂ

ಬಹುಮಾನಾರ್ಥವಾಗಿ ಈ ಪದವಿಯು ದೊರೆತದ್ದಕ್ಕೆ ನಾನು ತಮ್ಮ ಅಭಿನಂದನ ಮಾಡುತ್ತೇನೆ. ಕೇವಲ ರೈತರ ಹಿತಚಿಂತನೆಯಿಂದ ಸರಕಾರಿಯ ಕೆಲಸವನ್ನು ಏಕನಿಷ್ಠೆಯಿಂದ ಮಾಡಿ, ಲೋಕಪ್ರಿಯರಾಗಿರುವ ತಮ್ಮ ಘನತೆಯನ್ನು ನೋಡುತ್ತಿರಲಿಕ್ಕೆ ಈ "ರಾವಬಹದ್ದೂರ" ಪದವಿಗಿಂತಲೂ ಹೆಚ್ಚಿನ ಸನ್ಮಾನಕ್ಕೆ ತಾವು ಪಾತ್ರರಿರುವಿರೆಂದು ನಾನು ಅನುಭವದಿಂದ ಹೇಳುತ್ತೇನೆ. ಸನ್ಮಾನನೀಯರಾದ ತಮಗೆ ಮುಂದೆ ಸರಕಾರದಿಂದ ಇದಕ್ಕೂ ಹೆಚ್ಚಿನ ಬಹುಮಾನವು ದೊರೆಯಬಹುದು; ಆದರೆ ಸದ್ಯಕ್ಕೆ ಸಿಕ್ಕ ಈ ಬಹುಮಾನದ ಪದವಿಯನ್ನು ತಾವು ಬಹುಕಾಲ ಅನುಭೋಗಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ" ಎಂದು ಬರೆಯಲ್ಪಟ್ಟಿತ್ತು. ಪ್ರತ್ಯಕ್ಷ ಇಲಾಖಾಧೀಶರಾದ ಗವ್ಹರ್ನರ ಸಾಹೇಬ ಬಹದ್ದೂರರವರಿಂದ ಈ ಪ್ರಕಾರದ ಅಭಿನಂದನ ಪತ್ರವು ಬರಬೇಕಾದರೆ ಇವರ ಕಾರ್ಯದಕ್ಷತೆಯು ಎಷ್ಟಿದ್ದೀತೆಂಬುದು ತಾನಾಗಿ ತಿಳಿಯುವಂತಿದೆ. ಇದರಂತೆ ಶ್ರೀಮಂತ ಛತ್ರಪತಿ ಕೊಲ್ಲಾಪುರ ಶಾಹೂ ಮಹಾರಾಜರವರಿಂದಲೂ, ಮೆ॥ಮ್ಯೂರ ಮ್ಯಾಕೆಂಝಿ ಸಾಹೇಬ ಬಹದ್ದೂರ ಸೀನಿಯರ ಮೆಂಬರ ಆಫ್ ಕೌನ್ಸಿಲರವರ ಕಡೆಯಿಂದಲೂ ಅಭಿವಂದನ ಪರವಾದ ಪತ್ರಗಳು ಬಂದವು. ಇದರಂತೆ ಯುರೋಪಿಯನ್, ಫಾರ್ಸಿ ಮತ್ತು ದೇಶಿಯ ದೊಡ್ಡ ದೊಡ್ಡ ಅಧಿಕಾರಿಗಳಿಂದಲೂ, ಮಹಾಸ್ವಾಮಿಗಳಿಂದಲೂ, ಮಹನೀಯರಿಂದಲೂ, ಶ್ರೀಮಂತರಿಂದಲೂ, ದೇಸಾಯಿ ದೇಶಪಾಂಡೆಯರಿಂದಲೂ, ಜಹಾಗೀರದಾರ-ಇನಾಮದಾರ-ವತನದಾರರಿಂದಲೂ, ಸೆಟ್ಟರಿಂದಲೂ, ಸಾವಕಾರರಿಂದಲೂ ಅಭಿನಂದನದ ತಾರಗಳೂ, ಪತ್ರಗಳೂ ಪರಿಮಿತಿಯಿಲ್ಲದೆ ಬಂದು, ತಮ್ಮ ಆನಂದವನ್ನು ಪ್ರಕಟಮಾಡಿದವು.

→ ರಾವಬಹದ್ದೂರ ಅರಟಾಳ ರುದ್ರಗೌಡ ಸಾಹೇಬರವರ ಬಗ್ಗೆ ಪದ

ರಾಗ ಭೈರವಿ-ರೂಪ ತಾಳ
ದಾಟಿ॥"ಮಧುಮಾಸವು ಒದಗಿರ್ಪುದು" ಈ ಪದದಂತೆ

ಕರುಣಾಕರ ರಾವ್‌ಬಹಾದ್ದೂರ। ಅರಟಾಳದ ರುದ್ರಗೌಡರೇ ॥
ಖರಜನ ಭೀಕರ-ಶ್ರೀಕರ।ನಿರುಪಮರೇ ಸರಕಾರಕೆ ಪ್ರಿಯರಾಗಿಹ ॥ಪಲ್ಲ॥

ಹರಮೂರ್ತಿಯು।ನರರೂಪದಿ।ಧರೆಯೊಳಗವತರಿಸಿ ಬಂದಿಹ ॥
ಸುರಗಣಮಾನಿತ ಭೂಸುತ।ಹರಮತವನ್ನುದ್ಧರಿಸಿದ ಶ್ರೀ ರುದ್ರನೆ ॥೧॥

ಧರಣೀಶರು ।ಬೆರಗಾಗುವ ।ತೆರದಿ ನ್ಯಾಯನಿಷ್ಠರಾಗಿಹ ।
ಸುರುಚಿರ ಸುಂದರ ಬಂಧುರ । ಸಿರಿಯುತರೇ ಪರತತ್ವದ ಪರಿಶೋಧಕ ॥೨॥

ಸಡಗರದೊಳು ಕಡು ಮುದದೊಳು । ಬಡಜನಕಾಧಾರಮಾಗಿಹ ॥
ಕಡುತರ ಕಾರ್ಯದ ಧೈರ್ಯದ । ಪೊಡವಿಯೊಳು ಕಡು ಜಾಣ್ಮೆಯ ದೃಢಮತಿಗಳ ॥೩॥

ಸವಿಗಾರರು।ಶಿವಶರಣರು। ಕುವಲಯಾನಂದಕಾರರು ॥
ಶಿವಮತ ಶೋಧಕ ಬೋಧಕ । ಭುವನದೊಳ್ ಇವರಂಥವರಿನ್ನುದಿಪರೆ ॥೪॥

ರಸಿಕೋತ್ತಮ । ಕುಶಲಾಗ್ರಣಿ। ಮಿಸುಪ ರಾಜ್ಯಕಾರ್ಯದಕ್ಷರು ॥
ಎಸೆಯುವ ಯುಕ್ತಿಯ ಶಕ್ತಿಯ । ಸಸುಧಿಯೊಳು ಮತವರ್ಧಕ ಪ್ರತಿಬಸವನೆ ॥೫॥

ಬಸವಯ್ಯ ಮಾಸ್ತರ
ಕಿತ್ತೂರ ಶಾಲಾ ನಂಬರ -೧

"ರಾವಬಹದ್ದೂರ" ಎಂಬ ಪದವಿಯನ್ನು ಸರಕಾರದವರು, ವಿಶೇಷ ಸನ್ಮಾನನೀಯರಿಗೇನೇ ಕೊಡುತ್ತಿರುತ್ತಾರೆ. ಇಂತಹ ಪದವೀಧರರು ತೀರ ವಿರಳವಾಗಿರುವರು. ಇಂಗ್ಲಿಷ ಸಾಮ್ರಾಜ್ಯವು ಈ ದೇಶಕ್ಕೆ ಬಂದಂದಿನಿಂದ ನಮ್ಮ ವೀರಶೈವ ಸಮಾಜದಲ್ಲಿ ಈ ಪದವಿಯನ್ನು ಈವರೆಗೂ ಯಾರೂ ಪಡೆದಿರುವದಿಲ್ಲ. ಈ ಬಹುಮಾನದ ಪದವಿಯನ್ನು ಪಡೆದ ವೀರಶೈವ ಮಹನೀಯರು ಇವರೇ ಮೊದಲಿನವರೆಂದು ಹೇಳಬಹುದು. ಯಾರ ಆರ್ಜವವನ್ನು ಎಷ್ಟು ಮಾತ್ರವೂ ಮಾಡದೆ, ಸ್ವಲ್ಪ ಮಾತ್ರವೂ ಪ್ರಯತ್ನಿಸದೆ, ಈ ಪದವಿಯ ವಿಚಾರವೇ ಇವರ ಕನಸು ಮನಸಿನಲ್ಲಿಲ್ಲದೆ, ಹಿಂದುಸ್ಥಾನ ಸರಕಾರದಿಂದ ಇವರಿಗೆ ಈ ಬಹುಮಾನದ ಪದವಿಯು ದೊರೆತದ್ದು, ಕೇವಲ ಇವರ ನ್ಯಾಯನಿಷ್ಠತೆಯ ಅಥವಾ ಸತ್ಯ ಸಂಧತೆಯ ಫಲವೇ ಎಂದು ನಿಕ್ಷುಣ್ಣವಾಗಿ ಹೇಳಬಹುದು, ಯಾಕಂದರೆ-

ಮಾಲಿನೀವೃತ್ತ

ಅರಸೊಳಿತನೆ ಗೆಯ್ವಂ ದ್ವೇಷಿಯಪ್ಪಂ ಪ್ರಜರ್ಗೆ।
ದೊರೆ ಪ್ರಜೆಯೊಳಿತನ್ನೇ ಗೆಯ್ವನಂ ಮುಂದೆ ಮಾಡಂ।
ಪಿರಿದೆನಿಪ ವಿರೋಧಂ ತಾನಿದಕ್ಕುಂ ಸಮಾನಂ।
ದೊರೆ ಪ್ರಜೆಯುಭಯರ್ಗಂ ದುರ್ಲಭಂ ಕ್ಷೇಮಕರ್ತಂ ॥೧॥

ಎಂಬಂತೆ ರಾಜಪ್ರಜೆಗಳೀರ್ವರಿಂದಲೂ ಹೌದೆನ್ನಿಸಿಕೊಳ್ಳುವ ಅಧಿಕಾರ ಪುರುಷರು ವಿರಳ. ಸದ್ಯಪ್ರಸಂಗದಲ್ಲಿ ಸರಕಾರಿಯ ಕೆಲಸವು ಬಹಳ ಸೂಕ್ಷ್ಮಸ್ಥಿತಿಗೆ ಬಂದು ಕೂತಿರುವರು. ಆದರೂ ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿ ಸಹ ಸರಕಾರಿಯ ಕೆಲಸವನ್ನು ನಿಸ್ಪ್ರಹದಿಂದಲೂ, ಸದಯಾಂತಃಕರುಣದಿಂದಲೂ ಮಾಡಿ ಪ್ರಜೆಗಳ ತೊಂದರೆಗಳನ್ನು ದೂರಮಾಡುವ ದೊಡ್ಡ ಮನಸ್ಸುಳ್ಳವರೂ, ಸುವಿಚಾರಿಗಳೂ ಆದ ಅಧಿಕಾರಿಗಳು ಅಲ್ಲಲ್ಲಿ ಇರಬಹುದು. ಈ ಮಹನೀಯರಲ್ಲಿ ರಾ.ಬ॥ರುದ್ರಗೌಡ ಸಾಹೇಬರವರು ಒಬ್ಬರಾಗಿರುತ್ತಾರೆಂದು ತಿಳಿದೇ ಸರಕಾರದವರಿಂದ ಇವರಿಗೆ "ರಾವಬಹದ್ದೂರ" ಎಂಬ ಬಹುಮಾನದ ಪದವಿಯು ಕೊಡಲ್ಪಟ್ಟಿತು.

ಅಧಿಕಾರ ವಿಶಿಷ್ಟತೆಯಿಂದ ಇವರು, ಎಂದಿನಿಂದ ಈ ವರೆಗೂ ಸರ್ವರಿಂದ ರಾವಬಹದ್ದೂರ ಎಂಬ ಪದವಿಯಿಂದ ಕರೆಯಿಸಿಕೊಳ್ಳಲ್ಪಡುತ್ತಿರುವರಷ್ಟೇ ! ಆದರೆ ಆ ಅಧಿಕಾರದಿಂದ ಬಂದ ಪದವಿಯು ಈ ಅಧಿಕಾರವಿರುವ ವರೆಗೆ ಮಾತ್ರ ಉಪಯೋಗಿಸಲ್ಪಡುತ್ತಿರುವದು. ನಿಸರ್ಗಭೂತ ಘನವಂತರಿಗೂ, ಮಹನೀಯರಿಗೂ ಯಾರೂ ಯಾವ ಪದವಿಯನ್ನು ಕೊಡಬೇಕಾಗಿರುವದಿಲ್ಲ. ಈಶದತ್ತ ಘನತೆಯ ಪದವಿಯೋ ಅವರಿಗೆ ಯಾವಾಗಲೂ ಇದ್ದೇ ಇರುವದು. ಆದರೆ ಲೌಕಿಕದಲ್ಲಿ ಗೌರವಾರ್ಥವಾಗಿ "ರಾವಬಹದ್ದೂರ" ಎಂಬ ಬಹುಮಾನದ ಪದವಿಯನ್ನು ಇವರಿಗೆ ಸರಕಾರದವರು ಕೊಟ್ಟದ್ದರಿಂದ, ಸರಕಾರದಲ್ಲಿ ಸನ್ಮಾನನೀಯರ ಸನ್ಮಾನವು ಆಗೇ ಆಗುವದೆಂಬ ಮಾತು ಎಲ್ಲರ ನಿದರ್ಶನಕ್ಕೆ ಬರುವಂತಾಯಿತು. ಈ ಪದವಿಯು ಸಾಹೇಬ ಬಹದ್ದೂರವರು ಬದುಕಿರುವ ಮಟ್ಟಿಗೂ ವ್ಯವಹರಿಸಲ್ಪಡುವದರಿಂದ, ಸರಕಾರದವರು ರಾವಬಹದ್ದೂರವರ ಮೇಲೆ ಅಷ್ಟೇ ಅಲ್ಲ, ಇಡೀ ವೀರಶೈವ ಸಮಾಜದ ಮೇಲೆ ಕೃಪಾದೃಷ್ಟಿಯನ್ನಿಟ್ಟು ಸಮಾಜಕ್ಕೇ ಸನ್ಮಾನವನ್ನುಂಟು ಮಾಡಿದರೆಂದು ಹೇಳಲು ಪ್ರತ್ಯವಾಯವಿಲ್ಲ. ಆದರೆ ನಾಮದಾರ ಗವ್ಹರ್ನರಸಾಹೇಬ ಬಹದ್ದೂರವರ ಅಭಿಪ್ರಾಯದಂತೆ ರಾ.ಬ॥ರುದ್ರಗೌಡ ಸಾಹೇಬರ ಕರ್ತೃತ್ವ ಶಕ್ತಿಗೆ ಈ ರಾವಬಹದ್ದೂರ ಪದವಿಯಕಿಂತಲೂ ಘನವಾದ ಪದವಿಯು ಸರಕಾರದಿಂದ ದೊರೆಯಬೇಕಾಗಿತ್ತು. ಆದರೂ ಇನ್ನು ಮುಂದೆ ಗುಣಗ್ರಾಹಿಗಳಾದ ಸರಕಾರದವರಿಂದ ಇವರಿಗೆ ಇನ್ನೂ ಹೆಚ್ಚಿನ ಮರ್ಯಾದೆಯು ದೊರೆಯಬಹುದೆಂದು ಬಹುಜನರ ಭಾವನೆ ಇರುವದು.

ಗೋಕಾವಿಯಲ್ಲಾದ ತಾಂಬೂಲ ಸಮಾರಂಭ

"ರಾವಬಹದ್ದೂರ" ಈ ಪದವಿಯು ಹಿಂದುಸ್ಥಾನ ಸರಕಾರದವರಿಂದ ನಮ್ಮೆಲ್ಲರಿಗೆ ಪರಮಮಾನ್ಯರಾದ ರಾ.ಬ॥ರುದ್ರಗೌಡ ದೊರೆಗಳವರಿಗೆ ದೊರೆತ ಮೂಲಕ ಉಂಟಾದ ಸಂತೋಷವನ್ನು, ಸಾರ್ವಜನಿಕ ರೀತಿಯಿಂದ ವ್ಯಕ್ತಪಡಿಸುವದಕ್ಕೆ ಇದು ತಕ್ಕ ಸಮಯವೆಂದರಿತು ಬೆಳಗಾವ ಜಿಲ್ಲಾ, ಗೋಕಾಕ ತಾಲೂಕಿನ ಕೆಲ ಪ್ರಮುಖರು ರಾ.ಬ॥ರವರ ಸ್ವಾರಿಯು ಗೋಕಾಕಕ್ಕೆ ಸಮೀಪವಾಗಿರುವ ಲೋಳಸರದ ಬಂಗಲೆಯಲ್ಲಿದ್ದಾಗ, ತಾಂಬೂಲ ಸಮಾರಂಭಕ್ಕಾಗಿ ಆಮಂತ್ರಣ ಕೊಟ್ಟರು. ಅದನ್ನು ಇವರು ಮಾನ್ಯ ಮಾಡಿದ್ದರಿಂದ ಗೋಕಾಕದ ವ್ಯವಹಾರೋತ್ತೇಜಕ ವಾಚನಮಂದಿರದ ದಿವಾಣಖಾನೆಯನ್ನು ಬಹು ವಿಧವಾಗಿ ಶೃಂಗರಿಸಿ, ಅದರಲ್ಲಿ ತಾರೀಖು ೭ನೇ ಫೆಬ್ರುವರಿ ಸನ್ ೧೯೨೧ನೇ ಇಸವಿಯ ರವಿವಾರ ದಿವಸ ಸಾಯಂಕಾಲದ ೪ ಘಂಟೆಗೆ ರಾ.ಬ॥ಅರಟಾಳ ಸಾಹೇಬರನ್ನು ಬಲು ಸಡಗರದಿಂದ ನಾನಾ ಪ್ರಕಾರದ ವಾದ್ಯಗಳಿಂದಲೂ, ಗಾಯಕರಿಂದಲೂ, ತಳಿರ್ದೋರಣಗಳಿಂದಲೂ, ಧ್ವಜ ಪತಾಕೆಗಳಿಂದಲೂ ಸುಶೋಭಿತವಾದ ರಾಜರೀವಿಯಿಂದ ಬರಮಾಡಿಕೊಂಡರು. ಅಲ್ಲಿ ರಾ.ಬ॥ಬೆಳಗಾವ ಜಿಲ್ಲೆಯ ಹುಜೂರ ಡೆಪೂಟಿ ಕಲೆಕ್ಟರರಾದ ಶಿವಾಜಿ ನಯಾಜಿ ಪೊರೇಡಿ ಸಾಹೇಬರೂ ರಾ.ಸಾ॥ಬಾಳಕೃಷ್ಣ ವಾಮನ ಧುಮೆಯವರೂ (ಕಲೆಕ್ಟರ ಸಾಹೇಬರ ಪರ್ಸನಲ್ ಅಸಿಸ್ಟಂಟರವರೂ), ರಾ॥ಸಾ॥ಕೃಷ್ಣರಾದ ರಾಮಚಂದ್ರ ಪಣಜೀಕರ ಮಾಮಲೇದಾರರೂ, ಡಾಕ್ಟರ್ ಮಾಣಿಕ್ಯಂ ಸುಬ್ರಾಯನ್ ಮೊದಲಿಯಾರರೂ, ಸಬ್‌ರಜಿಸ್ಟ್ರಾರರೂ, ರಾ.ಸಾ॥ರಾಮಚಂದ್ರಪ್ಪಾ ಅಣ್ಣಾ ಕಸ್ತೂರಿಯವರೂ, ಶಿವಮೂರ್ತಿಸ್ವಾಮಿ ಕಣಬರಿಗಿಯವರೂ, ಪರಮಸೆಟ್ಟಿಯವರೂ, ಘನವ್ಯಾಪಾರಿಯಾದ ದೋಲಾಜಿಯವರೂ, ಮೇಘಾಜಿ ಮಾರವಾಡಿಯವರೂ, ವೀರಭದ್ರಪ್ಪ ನಿರ್ವಾಣಪ್ಪ ಘೋಡಗೇರಿಯವರೂ, ಸಿದ್ಧಮಲ್ಲಪ್ಪ ಕಪಲಿಯವರೂ ಮೊದಲಾಗಿ ಅಧಿಕಾರಿಗಳೂ, ಕೋರ್ಟಿನ ವಕೀಲರೂ, ವ್ಯಾಪಾರಸ್ಥರೂ, ಸೆಟ್ಟರೂ, ಸಾವಕಾರರೂ, ಸಾವಿರಾರು ಜನರು ದಿವಾಣಖಾನೆಯ ಮೇಲೂ ಕೆಳಗೂ ಕೂಡಿದ್ದರು. ಮೆ॥ಬೆಂಜಾಮಿನ್ ವ್ಹಾಲಿ ಸಾಹೇಬ ಬಹದ್ದೂರವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ರಾ.ಸಾ॥ಪಣಜೀಕರ ಮಾಮಲೇದಾರರು ಸೂಚನೆಮಾಡಿದರು. ಕಣಬರಗಿಯ ಶಿವಮೂರ್ತಯ್ಯನವರು ಅದಕ್ಕೆ ಅನುಮೋದಿಸಲು, ಸರ್ವಾನುಮತದಿಂದ ಸದರೀ ಸಾಹೇಬ ಬಹದ್ದೂರರವರು, ಜನಸಮೂಹದ ಕರತಾಡನದ ಜಯಘೋಷದಲ್ಲಿ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಅನಂತರ ಡಾಕ್ಟರ ಮೊದಲಿಯಾರ, ಮಿಸ್ತರ ಕಾಡಾಪುರಕರ, ಶಿವಮೂರ್ತಯ್ಯ ಕಣಬರಗಿಕರ ಇವರ ಭಾಷಣಗಳು ಇಂಗ್ಲೀಷ, ಮರಾಠಿ, ಕನ್ನಡ ಭಾಷೆಗಳಲ್ಲಿಯೂ, ಒಬ್ಬರ ಭಾಷಣವು ಹಿಂದುಸ್ಥಾನೀ ಭಾಷೆಯಲ್ಲಿಯೂ ಆದವು. ರಾವಬಹದ್ದೂರವರ ಗುಣಾನುವಾದವನ್ನೂ, ಬ್ರಿಟಿಶ ಸರಕಾರದವರ ಆಭಾರವನ್ನೂ, ಬಡಜನರಿಗೆ ರಾ.ಬ॥ರವರಿಂದ ಆಗುತ್ತಿರುವ ಸಹಾಯವನ್ನೂ, ಅವರ ಮೇಲೆ ಸರಕಾರದವರ ಪ್ರೇಮವು ಇರುವ ಗುರುತಿನ ರೂಪವಾದ ಪದವಿಯು ಸಿಕ್ಕಿದ ಬಗ್ಗೆ ತಮ್ಮೆಲ್ಲರಿಗೆ ಆಗಿರುವ ಆನಂದವನ್ನೂ, ತಮಗಾದ ಆನಂದವನ್ನು ಪ್ರದರ್ಶಿಸುವದಕ್ಕೆ ಆಮಂತ್ರಣವನ್ನು ಸ್ವೀಕರಿಸಿ, ತಮ್ಮ ಅಮೌಲ್ಯವಾದ ವೇಳೆಯನ್ನು ನೋಡದೆ ಇಲ್ಲಿಯ ವರೆಗೆ ದಯಮಾಡಿಸಿದ್ದಕ್ಕೆ ಅವರ ಉಪಕಾರವನ್ನೂ ಕುರಿತು, ರಸಭರಿತವಾದ ಉಪನ್ಯಾಸಗಳನ್ನು ಮಾಡಿದರು. ಬಳಿಕ ರಾ.ಬ॥ಅರಟಾಳ ಸಾಹೇಬರವರು ಪ್ರೇಕ್ಷಕರ ಕಿವಿಗಳು ಗಡಚಿಕ್ಕುವಂತೆ ಉಂಟಾದ ಸಭಿಕರ ಕರತಾಡನದ ಜಯಘೋಷದಲ್ಲಿ ಎದ್ದುನಿಂತು, ಸಮಯಕ್ಕನುಸಾರವಾಗಿ ಸಭಿಕರಿಗಾನಂದವಾಗುವಂತೆ ಸ್ವಲ್ಪದರಲ್ಲಿಯೇ ಭಾಷಣಮಾಡಿ, ಅವರೆಲ್ಲರ ಆಭಾರವನ್ನು ಮನ್ನಿಸಿದರು. ಅನಂತರ ಅಧ್ಯಕ್ಷ ಸಾಹೇಬ ಬಹಾದ್ದೂರವರು "ಗೋಕಾಕದಿಂದ ಗಿರಣಿಯ ವರೆಗೆ ಬೇಕಾಗಿರುವ ಮಾರ್ಗದ ಸಲುವಾಗಿ ರಾವಬಹದ್ದೂರವರು ಡಿಸ್ಟ್ರಿಕ್ಟ ಲೋಕಲ್ ಬೋರ್ಡ ನಾತೆಯಿಂದ ಬಹಳ

ಪರಿಶ್ರಮ ತೆಗೆದುಕೊಂಡು ಹಿಡಿದ ಕೆಲಸವನ್ನು ಪಾರಮಾಡಿದ್ದರಿಂದ, ನಮ್ಮ ಗಿರಣಿಯ ಜನರಿಗೂ ಗೋಕಾಕದ ನಿವಾಸಿಗಳಿಗೂ ಆಗಿರುವ ಆನಂದವನ್ನು ಹೇಳತೀರದು; ಸರಕಾರದವರು ಇವರ ನಿಸ್ಪೃಹತನಕ್ಕೂ, ಕಾರ್ಯದಕ್ಷತೆಗೂ ಮೆಚ್ಚಿ ಇವರಿಗೆ ಈ ಮೊದಲನೇ ಬಹುಮಾನವನ್ನು ಕೊಟ್ಟುದಕ್ಕೆ ನಮ್ಮೆಲ್ಲರಿಗೆ ಪರಮಾನಂದವಾಗಿರುವದಲ್ಲದೆ, ಇವರು ಮುಂದೆ ಇದಕ್ಕೂ ಹೆಚ್ಚಿನ ಪದವಿಗಳನ್ನು ಪಡೆಯಲೆಂದೂ, ಈಶ್ವರನು ಇವರಿಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂ"ದೂ ಅತಿ ಮನೋಹರವಾದ ಭಾಷಣ ಮಾಡಿದರು. ಬಳಿಕ ಮೆ॥ಅರ್ಥರ ಬೆನೆಟ್ ಸಾಹೇಬ ಬಹದ್ದೂರ ಅಕೌಂಟಂಟ ಗೋಕಾಕ ಮಿಲ್ ಇವರು "ನನಗೆ ರಾ.ಬ॥ಅರಟಾಳ ಸಾಹೇಬರವರ ಪರಿಚಯವು ಬಹಳ ವರ್ಷಗಳಿಂದ ಇದ್ದದರಿಂದ ಇವರ ನ್ಯಾಯನಿಷ್ಠುರತನವೂ, ಪ್ರಜಾಹಿತಚಿಂತನವೂ ನನಗೆ ಪೂರ್ಣವಾಗಿ ಗೊತ್ತಿರುತ್ತದೆ. ಇವರ ಕಾರ್ಯ ದಕ್ಷತೆಗೂ, ರಾಜನಿಷ್ಠೆಗೂ ಮೆಚ್ಚಿ ಸರಕಾರದವರು ಇವರಿಗೆ ಕೊಟ್ಟ "ರಾವಬಹಾದ್ದೂರ" ಪದವಿಯ ಆನಂದದ ಗುರುತಿಗಾಗಿ, ಒಂದು ವರ್ಷದ ವರೆಗೆ ಗೋಕಾಕ ಧಬಧಬೆಯ ದಂಡೆಗಿರುವ ಶ್ರೀಮಹಾಲಿಂಗೇಶ್ವರ ದೇವಾಲಯದಲ್ಲಿ ನಾನು ಹಗಲಿರುಳು ನಂದಾದೀವಿಗೆಯನ್ನಿಡುವೆನೆಂದೂ, ಅದಕ್ಕಾಗಿ ತಗಲುವ ವೆಚ್ಚವನ್ನು ನಾನು ಸ್ವತಃ ಕೊಡುವೆನೆಂ"ದೂ ಭಾಷಣ ಮಾಡಿ, ಈ ನಂದಾದೀವಿಗೆಯನ್ನು, ಯೋಗ್ಯರೀತಿಯಿಂದ ಇಡಿಸುವ ಬಗ್ಗೆ ಕಣಬರಗಿಯ ಶಿವಮೂರ್ತಯ್ಯನವರು ವ್ಯವಸ್ಥೆಗಾರರಾಗಿರಬೇಕೆಂದು ಕೇಳಿಕೊಂಡದ್ದಕ್ಕೆ, ಸಭಿಕರೆಲ್ಲರಿಗೂ ಆನಂದವಾಗಿ ಚಪ್ಪಾಳೆಯನ್ನಿಕ್ಕಿದರು. ಯುರೋಪಿಯನ್ನರಾದ ಮೆ॥ಬೆನೆಟ್ ಸಾಹೇಬ ಬಹದ್ದೂರವರು ಈ ಬಗೆಯಾಗಿ ರಾ.ಬ॥ರವರ ಮೇಲಿರುವ ತಮ್ಮ ಪ್ರೇಮವನ್ನು ಪ್ರಕಟಮಾಡಿದ್ದಕ್ಕೆ ಎಲ್ಲರೂ ಚಕಿತರಾದರು. ರಾವಬಹದ್ದೂರವರ ಘನತೆಗೂ, ಪುಣ್ಯವಂತಿಕೆಗೂ ಸಭೆಯ ಜನರು ತಲೆದೂಗಿದರು. ಆ ಬಳಿಕ ಪರಿಮಳದ್ರವ್ಯ ತಾಂಬೂಲ ಪುಷ್ಪಹಾರಗಳು ಅರ್ಪಿಸಲ್ಪಟ್ಟವು. ಕಡೆಗೆ ಅಲ್ಲಿ ದಿವಾಣಖಾನೆಯ ಕೆಳಭಾಗದಲ್ಲಿ ನೆರೆದಿರುವ ಬಡಬಗ್ಗರಿಗೂ, ಅನಾಥರಿಗೂ ಅಕ್ಕಿ-ಜೋಳ ಮುಂತಾದ ಧಾನ್ಯಗಳನ್ನೂ, ದೋತರ-ರುಮಾಲ-ಸೀರೆ-ಕುಪ್ಪಸ ಮುಂತಾದ ವಸ್ತ್ರಗಳನ್ನೂ ಉದಾರತನದಿಂದ ದಾನಮಾಡಿ, ಗೋಕಾಕದ ನಿವಾಸಿಗಳು ರಾ.ಬ॥ರವರ ಮೇಲಿರುವ ಪ್ರೇಮವನ್ನೂ, ಬ್ರಿಟಿಶ ಸರಕಾರದವರ ಮೇಲಿರುವ ರಾಜನಿಷ್ಠೆಯನ್ನೂ ವ್ಯಕ್ತಪಡಿಸಿದರು. ಈ ಇಡೀ ದಿವಸ ಪ್ರತಿಯೊಬ್ಬರ ಮುಖದಲ್ಲಿ ಈ ತಾಂಬೂಲ ಸಮಾರಂಭ ಮಹೋತ್ಸವದ ಮಾತುಗಳೇ ಹೊರಡುತ್ತಿದ್ದವು. ಅಧ್ಯಕ್ಷರ ಆಭಾರಮನ್ನಿಸಿ ಸಭೆಯ ಕೆಲಸವು ನೆರವೇರಿದ ನಂತರ ರಾ.ಬ॥ರವರು ಸಂಭ್ರಮದೊಡನೆ ತಮ್ಮ ಬಿಡಾರಕ್ಕೆ ಗಮನಿಸಿದರು.[೫]

ಗೋಕಾಕದ ನಿವಾಸಿಗಳು ಮಹಾವೈಭವದಿಂದ ತಾಂಬೂಲ ಸಮಾರಂಭವನ್ನು ಜರುಗಿಸಿ ತಮ್ಮ ಆನಂದ ಪ್ರದರ್ಶನವನ್ನು ಮಾಡಿದಂತೆ ಅವರ ಅನುಕರಣವನ್ನೇ ಮಾಡಿ, ಗೋಕಾಕ ತಾಲೂಕಿಗೆ ಸೇರಿದ ಅಂಕಲಗಿಯ ಜನರೂ ಒಳ್ಳೇ ವೈಭವದಿಂದ ತಮ್ಮ ಊರಲ್ಲಿ ತಾಂಬೂಲ ಸಮಾರಂಭವನ್ನು ಮಾಡಿದರು. ಊರನ್ನು ಶೃಂಗರಿಸಿದ್ದರು. ದೊಡ್ಡ ದೊಡ್ಡ ಕಮಾನುಗಳನ್ನು ಕಟ್ಟಿದ್ದರು. ಧ್ವಜ ಪತಾಕೆಗಳನ್ನು ನಿಲ್ಲಿಸಿದ್ದರು. ತೋರಣಗಳನ್ನು ತೂಗಲಿಟ್ಟಿದ್ದರು. ಬಹಳ ಸಡಗರದಿಂದ ಕರೆದುಕೊಂಡುಬಂದರು. ಗಾಯನ ಸಮಾರಂಭವಾಯಿತು. ಆನಂದ

→೫. ಈ ಕೆಳಗಿನ ಬರಹ ಬೆನ್ನುಪುಟದ ಮೇಲೆ ಬರೆಯಲಾಗಿದೆ-ಸಂ.

ಸನ್ ೧೯೦೪ನೇ ಇಸವಿಯಲ್ಲಿ (ರಾ.ಬ॥ರವರು) ಉತ್ತರಭಾಗದ ಡಿಸ್ಟ್ರಿಕ್ಟ ಡಿ. ಕಲೇಕ್ಟರರಾದಾಗ ಗೋಕಾಕ ಮ್ಯುನಸಿಪಾಲ್ಟಿಯ ಸ್ಥಿತಿಯು ಬಹು ಅವ್ಯವಸ್ಥೆಯುಳ್ಳದ್ದಾಗಿತ್ತು. ಈ ಅವ್ಯವಸ್ಥೆಯ ಮೂಲಕ ಮ್ಯುನಸಿಪಾಲ್ಟಿಯ ಹಣವು ನಿರರ್ಥಕವಾಗಿ ಹಾಳಾಗುತ್ತಿತ್ತು. ಕಾರಣ, ವ್ಯವಸ್ಥಾಮೂರ್ತಿಗಳಾದ ರಾ.ಬ॥ರುದ್ರಗೌಡ ಸಾಹೇಬರು ಈ ಅವ್ಯವಸ್ಥೆಯನ್ನು ನೋಡಿ, ನನ್ನ ಆಳಿಕೆಗೊಳಪಟ್ಟ ಈ ಮ್ಯುನಸಿಪಾಲ್ಟಿಯಲ್ಲಿ ಇಂಥ ಅವ್ಯವಸ್ಥೆಯಿರುವದು ಅಪ್ರಶಸ್ತವೆಂದು ಭಾವಿಸಿ, ಅದರ ಅನೇಕ ಸುಧಾರಣೆಮಾಡಿ, ಆ ಹಣವು ಹಾಳಾಗದಂತೆ ಅಚ್ಚುಕಟ್ಟಾದ ವ್ಯವಸ್ಥೆಯನ್ನಿಡಿಸಿದರು. ರಾವಬಹದ್ದೂರವರ ಈ ಉಪಕಾರವನ್ನು

ಪ್ರದರ್ಶನದ ಭಾಷಣಗಳಾದವು. ಇಲ್ಲಿಯೂ ಒಬ್ಬ ಭಕ್ತಿವಾನರು ರಾ.ಬ॥ಅರಟಾಳ ಸಾಹೇಬರಿಗೆ "ರಾವಬಹದ್ದೂರ" ಎಂಬ ಬಹುಮಾನದ ಪದವಿಯು ದೊರೆತ ಬಗ್ಗೆ ತಮಗಾದ ಆನಂದ ಪ್ರದರ್ಶನಾರ್ಥವಾಗಿಯೂ, ಅದರ ಗುರುತಿಗಾಗಿಯೂ ತಮ್ಮೂರಲ್ಲಿರುವ ಶ್ರೀಬಸವೇಶ್ವರ ದೇವಾಲಯದಲ್ಲಿ ಒಂದು ವರ್ಷದ ವರೆಗೆ ನಂದಾದೀವಿಗೆಯನ್ನಿಡುವೆವೆಂದು ಸಭೆಯಲ್ಲಿ ಹೇಳಿದರು. ಮತ್ತು ಅಂಕಲಿಗಿಯ ನಿವಾಸಿಗಳು ಬಡಬಗ್ಗರಿಗೂ, ಭಿಕ್ಷುಕರಿಗೂ, ಅನಾಥರಿಗೂ ಗೋದಿಯ ಪಾಯಸ ಮುಂತಾದ ಅನ್ನದಾನಮಾಡಿ ತೃಪ್ತಿಪಡಿಸಿದರು. ಅಂಕಲಗಿಯ ಸಮಾರಂಭವೂ ಬಹಳ ಚೆನ್ನಾಗಿ ಆಯಿತು. ಇವರಂತೆ ಬೆಳಗಾವ, ಹುಕ್ಕೇರಿ, ನಿಪ್ಪಾಣಿ, ಚಿಕ್ಕೋಡಿ, ಅಥಣಿ ಮುಂತಾದ ಶಹರ ನಿವಾಸಿಗಳೂ ರಾವಬಹದ್ದೂರವರಿಗೆ ಬಹು ಆದರಪೂರ್ವಕ ಆಮಂತ್ರಣಕೊಟ್ಟು, ತಮ್ಮ ತಮ್ಮ ಊರಗಳನ್ನು ಶೃಂಗರಿಸಿ, ಬಹು ಸಡಗರದಿಂದ ಇವರನ್ನು ಕರೆದುಕೊಂಡು ಹೋಗಿ, ತಮ್ಮ ತಮ್ಮ ಗ್ರಾಮಗಳಲ್ಲಿ ಬಹು ವಿಜೃಂಭಣೆಯಿಂದ ತಾಂಬೂಲ ಸಮಾರಂಭವನ್ನು ಮಾಡಿ, ತಮ್ಮಲ್ಲಿ ರಾ.ಬ॥ರವರ ವಿಷಯವಾಗಿಯೂ, ಸರಕಾರದ ಸಂಬಂಧವಾಗಿಯೂ ಇದ್ದ ಪ್ರೇಮವನ್ನೂ, ನಿಷ್ಠೆಯನ್ನೂ ಪ್ರಕಟಮಾಡಿದರು. ಇಂತಹ ಸಮಾರಂಭಗಳು ಅಲ್ಲಲ್ಲಿ ಬಹಳಾದವು. ಸಂಕೇಶ್ವರ (ಹುಕ್ಕೇರಿ ತಾಲೂಕ) ಮುಂತಾದ ಎಷ್ಟೋ ಗ್ರಾಮದ ನಿವಾಸಿಗಳು ಆಮಂತ್ರಣ ಕೊಡುವದಕ್ಕೆ ಬಂದಿದ್ದರು. ಕಾರ್ಯಬಹುಳತೆಯ ಮೂಲಕ ಎಷ್ಟೋ ಆಮಂತ್ರಣಗಳನ್ನು ಇವರು ಸ್ವೀಕರಿಸಲಿಲ್ಲ. ಈ ಮೇಲಿನ ಸಮಾರಂಭಗಳನ್ನು ಲಿಂಗಾಯತ, ಬ್ರಾಹ್ಮಣ, ಮರಾಠಿ, ಜೈನ, ಮುಸಲ್ಮಾನ ಮುಂತಾದ ಹಲವು ಜಾತಿಯ ಜನರು ಕೂಡಿಯೇ ಮಾಡಿದರು. ಕೆಲಕೆಲವು ಸ್ಥಳಗಳಲ್ಲಿ ಬ್ರಾಹ್ಮಣರು ಇವರಿಗೆ ಪ್ರತ್ಯೇಕವಾಗಿ ತಮ್ಮ ಮನೆಗಳಲ್ಲಿ ತಾಂಬೂಲ ಸಮಾರಂಭವನ್ನು ಮಾಡಿದರು. ನ್ಯಾಯನಿಷ್ಠರೂ, ವಿದ್ವಾನರೂ, ಸತ್ಯವಾದಿಗಳೂ, ಸಜ್ಜನರೂ ಆದ ಬ್ರಾಹ್ಮಣರು ರಾ.ಬ॥ರುದ್ರಗೌಡ ಸಾಹೇಬರನ್ನು

→ಸ್ಮರಿಸಿ, ಗೋಕಾಕದ ಜನರು ಈ ಉಪಕಾರದ ಸ್ಮರಣಾರ್ಥವಾಗಿ ತಮ್ಮ ಊರಲ್ಲಿ ಒಂದು ಮಾರ್ಕೀಟು ಕಟ್ಟಬೇಕೆಂದೂ, ಅದಕ್ಕೆ "ಅರಟಾಳ ಮಾರ್ಕೀಟ" ಎಂಬ ಹೆಸರನ್ನಿಡಬೇಕೆಂದೂ ಆಲೋಚನೆ ಮಾಡಿದರು. ಕೂಡಲೆ ಅರಟಾಳ ಮ್ಯುನಸಿಪಾಲ್ಟಿ ವ್ಹಾಯಿಸ್ ಪ್ರೆಸಿಡೆಂಟರು ಈ ಬಗ್ಗೆ ಮೆ॥ಕಲೆಕ್ಟರ ಸಾ.ಬ॥ಬೆಳಗಾವ ಇವರ ಕಡೆಗೆ ನಂಬರ ೧೫೪/ತಾ.೧೯ನೇ ಫೆಬ್ರುವರಿ ಸನ್ ೧೯೧೦ನೇ ಇ. ನೇ ರಿಪೋರ್ಟಮಾಡಲು, ಅದರ ಕೆಳಗೆ ಮೆ॥ಬ್ರ್ಯಾಂಡನ್ ಸಾಹೇಬ ಬ॥ಕಲೇಕ್ಟರ ಬೆಳಗಾವ ಇವರ ಇಂಗ್ರಜೀ ನಂಬರ ೧೨೨೭/೧೩-೨-೧೯೧೦ನೇದ್ದು ಬರೆದು ಹೋಗಿ, ದಕ್ಷಿಣಭಾಗದ ಕಮೀಶನರರಾದ ಮೆ॥ಎಂ.ಸಿ. ಗಿಲ್‌ಸಾಹೇಬ ಬ॥ರವರಿಂದ ಅದಕ್ಕೆ ಮಂಜೂರಿ ಹುಕುಮು ದೊರೆಯಿತು. ಶರಾ ನಂಬರ ಮ್ಯುನಿಸಿಪಲ್ ೪೫/ತಾ.೨೦ನೇ ಫೆಬ್ರುವರಿ ಸನ್ ೧೯೧೦ನೇ ಇಸವಿ. ಈ ಪ್ರಕಾರ ಗೋಕಾಕ ಮ್ಯುನಿಸಿಪಾಲ್ಟಿಯವರು ಸುಮಾರು ಹದಿನೈದುಸಾವಿರ (೧೫೦೦೦) ರೂಪಾಯಿ ವೆಚ್ಚಮಾಡಿ ತಮ್ಮಲ್ಲಿ ಒಂದು ಭವ್ಯವಾದ ಮಾರ್ಕೀಟು ಕಟ್ಟಿಸಿ, ಅದಕ್ಕೆ "ಅರಟಾಳ ಮಾರ್ಕೀಟು" ಎಂಬ ಹೆಸರನ್ನಿಟ್ಟಿರುವರು. ಗೋಕಾಕ ಜನರ ಈ ತರದ ಉಪಕಾರ ಸ್ಮರಣೆಯು ಸ್ತುತ್ಯವಾಗಿದೆ.

೬. ಸನ್ ೧೯೧೧ನೇ ಇಸವಿಯಲ್ಲಿ ಧಾರವಾಡ ಜಿಲ್ಲಾ ಅಕ್ಟಿಂಗ್ ಕಲೇಕ್ಟರರಾದ ಮೆ॥ಸಿ.ಎಲ್. ಮ್ಯಾಗ್ರೇಗರ ಸಾಹೇಬ ಬಹದ್ದೂರ ಆಯ್.ಸಿ. ಯಸ್ ಪ್ರೆಸಿಡೆಂಟ ಲಿಂಗಾಯತ ಎಜ್ಯುಕೇಶನಲ್ ಫಂಡ ಕಮೀಟಿ ಧಾರವಾಡ ಇವರು, ಲಿಂಗಾಯತ ಫಂಡಿನ ಕರ್ತರಾದ ರಾ.ಬ॥ಅರಟಾಳ ರುದ್ರಗೌಡ ಸಾಹೇಬರು ಈ ಲಿಂಗಾಯತ ಫಂಡು ಕೂಡಿಸುವದಕ್ಕೆ ತನುಮನಧನಗಳಿಂದ ಬಹಳೇ ಸಹಾಯ ಮಾಡಿರುವರೆಂದೂ ಅದರಿಂದ ಇವರ ಹೆಸರು ಚಿರಸ್ಮರಣೀಯವಾಗಿರುವದು ಯೋಗ್ಯವೆಂದೂ ಪರಿಭಾವಿಸಿ, ಫಂಡಿನಿಂದ ಇಂಗ್ಲೀಷ ವಿದ್ಯಾರ್ಥಿಗಳಿಗೆ ಕೊಡಲ್ಪಡುವ ಅನೇಕ ಸ್ಕಾಲರಸಿಪ್ಪುಗಳಲ್ಲಿ ಒಂದು ಸ್ಕಾಲರಸಿಪ್ಪನ್ನು ಲಿಂಗಾಯತ ಫಂಡಿನ ಕಮಿಟಿಜನರ ಸರ್ವಾನುಮತಿಯಿಂದ ನಿಮ್ಮ ಹೆಸರಿಲೆ ಇಡುವ ಏರ್ಪಾಡು ಮಾಡಲ್ಪಟ್ಟಿದೆ. ಎಂಬದಾಗಿ ನಂಬರ ೯೮/ತಾ.೨೨ನೇ ಸೆಪ್ಟೆಂಬರ ಸನ್ ೧೯೧೧ನೇ ಇಂಗ್ರೇಜಿ ಪತ್ರದಿಂದ ತಿಳಿಸಲು, ರಾ.ಬ॥ಅರಟಾಳ ಸಾಹೇಬರವರು ಆನಂದಿತರಾಗಿ, ತಮ್ಮ ಇಂಗ್ರೇಜಿ ಪತ್ರ ನಂಬರ ೧೪೧೮/ತಾ. ೨೯ನೇ ಸಪ್ಟಂಬರ ೧೯೧೧ಇಸ್ವಿ ನೇದರ ಮೂಲಕ ಮೆ॥ಪ್ರೆಸಿಡೆಂಟ ಸಾಹೇಬ ಬ॥ರವರ ಹಾಗೂ ಮೇಂಬರ ಜನರ ಆಭಾರವನ್ನು ವ್ಯಕ್ತಪಡಿಸಿದರು. ಪ್ರಚಂಡವಾದ ಲಿಂಗಾಯತ ಫಂಡೇ ರಾವಬಹದ್ದೂರವರ ಸ್ಮಾರಕವಾಗಿದ್ದರೂ ಮೆ॥ಕಲೆಕ್ಟರ ಸಾಹೇಬ ಬ॥ರವರು ಇವರ ಸ್ವಮತಾಭಿಮಾನವನ್ನೂ, ಅದಕ್ಕಾಗಿ ಪಡುತ್ತಿರುವ ಅವಿಶ್ರಾಂತ ಶ್ರಮವನ್ನೂ ಕಂಡು, ಇವರ ಹೆಸರಿನಿಂದ ಸ್ಪೇಶಲ್ ಒಂದು ಸ್ಕಾಲರ್‌ಸಿಪ್ ಇಟ್ಟದ್ದು ಬಹಳೇ ಸ್ತುತ್ಯವದೆ.

ತ್ರಿಕರಣಪೂರ್ವಕವಾಗಿ ಅಭಿನಂದನಮಾಡುವರು; ಇವರ ನ್ಯಾಯನಿರ್ಣಯಗಳಿಗೆ ಮೆಚ್ಚುವರು. ಇವರ ತಾತ್ವಿಕವಿಚಾರಕ್ಕೂ, ಶೋಧದೃಷ್ಟಿಗೂ ತಲೆದೂಗುವರು; ಇವರ ನಡೆನುಡಿಗಳಿಗೆ ಆನಂದಿಸುವರು.

ಇವರ ಪ್ರಾಮಾಣಿಕತನಕ್ಕೂ ರಾಜನಿಷ್ಠೆಗೂ, ಸಂತೋಷಿಸುವರು. ರಾವಬಹದ್ದೂರರವರಾದರೋ ಸಜ್ಜನರೂ, ವಿದ್ವಾನರೂ ಎಂಬುವವರು ಬ್ರಾಹ್ಮಣರೇ ಇರಲಿ, ಲಿಂಗಾಯರೇ ಇರಲಿ, ಇತರ ಯಾವ ಜಾತಿಯವರೇ ಇರಲಿ, ಅವರನ್ನು ಪ್ರೀತಿಸುವರು. ದುರ್ಜನರು ಯಾವ ಜಾತಿಯವರೇ ಇರಲಿ, ದೂಷಿಸುವರು. "ಜ್ಞಾನವುಳ್ಳವರೊಡಲು ಭಾನುಮಂಡಲದಂತೆ" ಎಂದೆನ್ನುತ್ತ ಇವರು ಜ್ಞಾನಿಗಳನ್ನು ಶಿರಸಾ ಮನ್ನಿಸುವರು. ದುಷ್ಟದಲನ-ಶಿಷ್ಟಪಾಲನಮಾಡುವ ಶ್ರೇಷ್ಠವಾದ ಗುಣವು ಇವರಲ್ಲಿ ಹುಟ್ಟಸ್ವಭಾವವಾಗಿದೆ. ಪುಣ್ಯದಿಂದ ಇವರು ಜನನಹೊಂದಿದರು; ನ್ಯಾಯದಿಂದ ಬೆಳೆದರು; ಪ್ರಾಮಾಣಿಕತನದಿಂದ ಪ್ರಸಿದ್ಧಿಗೆ ಬಂದರು; ದುರ್ಜನರ ಶಾಸನದಿಂದ ಪ್ರೌಢಿಮೆಯನ್ನು ಹೊಂದಿದರು; ಸತ್ಯದಿಂದ ಸಜ್ಜನತ್ವವನ್ನು ಪಡೆದರು. ಅಂತೆಯೇ ಸರಕಾರದಲ್ಲಿಯೂ, ಪ್ರಜೆಗಳಲ್ಲಿಯೂ ಇವರ ಬಗ್ಗೆ ಪೂಜ್ಯಭಾವವು ನೆಲೆಗೊಂಡು "ರಾವಬಹದ್ದೂರ" ಎಂಬ ಪದವಿಯು ತಾನಾಗಿ ಇವರಿಗೆ ದೊರೆಯಿತು; ಇವರ ಕೀರ್ತಿಯು ಮತ್ತಿಷ್ಟು ಪಸರಿಸಹತ್ತಿತು; ವಿಜಯಧ್ವಜವು ಮೆರೆಯಹತ್ತಿತು; ಊರೂರುಗಳಲ್ಲಿ ಲಗ್ನಸಮಾರಂಭಗಳಂತೆ ಇವರ ತಾಂಬೂಲ ಸಮಾರಂಭಗಳೂ ಮೆರವಣಿಗೆಗಳೂ ಬಹು ಸಡಗರದಿಂದ ಆಗುವವಾದವು. ಇವರ ಪ್ರಸಾದದಿಂದ ಬಡಜನರೂ, ಭಿಕ್ಷುಕರೂ ಅನ್ನದಾನ, ವಸ್ತ್ರದಾನಗಳನ್ನು ಹೊಂದಿ ತೃಪ್ತಿಪಡುವವರಾದರು;ವೀರಶೈವ ಸಮಾಜವು ಪ್ರಕಾಶಿಸಹತ್ತಿತು.

ಯಾವ ಗೋಕಾಕದ ಮಹಾಜನರು ಇವರನ್ನು ಹಿಂದೆ ಹಂಗಾಗಿ ಕಾಡಿದ್ದರೋ ಅವರೇ ಈಗ ಈ ಉತ್ಸವಗಳನ್ನು ನೋಡಿ ಮಂಗಾಗಿ ಕೂಡುವವರಾದರು. ಮಹಾಜನರ ಪ್ರಕರಣವು ನಡೆದಾಗ್ಗೆ ಯಾವ ಗೋಕಾಕದ ಪೇಟೆಯಲ್ಲಿ ರಾ.ಬ॥ರವರು ಹಾಯ್ದು ಹೋಗುವದು ಕಠಿಣವೆಂದು ಜನರು ಅನುಮಾನಿಸುತ್ತಿದ್ದರೋ ಅದೇ ಪೇಟೆಯಲ್ಲಿ ಕಿಷ್ಕಿಂಧವಾದ ಜನಸಮೂಹದಲ್ಲಿ ಬಹು ವೈಭವದಿಂದ ಇವರ "ರಾವಬಹದ್ದೂರ"ಪದವಿಯ ಮೆರವಣಿಗೆಯಾಯಿತು. ಯಾರು ಇವರನ್ನು ದ್ವೇಷಿಸುತ್ತಿದ್ದರೋ ಅವರೇ ಈ ಉತ್ಸವಗಳಲ್ಲಿ ಸಹಾಯಕರಾದರು. ಯಾವ ಗೋಕಾಕದಲ್ಲಿ ಹಿಂದೆ ಮಹಾಜನರ ಪ್ರಕರಣದಲ್ಲಿ ಸುಳ್ಳು ಸುದ್ದಿಗಳ ಉತ್ಸವವು ಅಟ್ಟಹಾಸದಿಂದ ನಡೆಯುತ್ತಿತ್ತೋ ಅದೇ ಗೋಕಾಕದಲ್ಲಿ ರಾವಬಹದ್ದೂರವರ ತಾಂಬೂಲ ಸಮಾರಂಭವು ಬಹು ಸಡಗರದಿಂದ ಜರುಗಿಹೋಯಿತು. ಹಾಲು ಇದ್ದದ್ದು ಯಾವಾಗಲೂ ಹಾಲೇ ಆಗುತ್ತದೆ. ನೀರು ಇದ್ದದ್ದು ನೀರೇ ಆಗುತ್ತದೆ. ದುರ್ಜನರು ಇವರ ಮೇಲೆ ನಡಿಸುವ ಕಪಟೋಪಾಯಗಳೆಲ್ಲ ಇವರ ನ್ಯಾಯನಿಷ್ಠರೆಯೆಂಬ ಅಗ್ನಿಯಿಂದ ಧ್ವಂಸವಾಗಿ, ಪುಟಕೊಟ್ಟ ಬಂಗಾರದಂತೆ ಇವರು ಇನ್ನಿಷ್ಟು ಕೀರ್ತಿವಂತರೇ ಆಗಿಹೋದರೆಂದು ಅನುಭವಸಿದ್ಧವಾಗಿ ಹೇಳಬಹುದು.[೬]

ವಂಟಮುರಿಯಲ್ಲಾದ ತಾಂಬೂಲ ಸಮಾರಂಭ

ಗೋಕಾಕ ಅಂಕಲಗಿಗಳಲ್ಲಿ ತಾಂಬೂಲ ಸಮಾರಂಭವಾದನಂತರ ರಾವಬಹ್ದೂರವರ ಸ್ವಾರೀ ಮುಕ್ಕಾಮು ಹುಕ್ಕೇರಿ, ತಾಲೂಕ ಯಮಕನಮರಡಿಯಲ್ಲಿ ಆಗಿರಲು, ಅಲ್ಲಿಂದ ಇವರನ್ನು ತಮ್ಮ ಊರಿಗೆ ಕರೆದುಕೊಂಡು ಬರುವದಕ್ಕಾಗಿ ವಂಟಮುರಿ ಸಂಸ್ಥಾನದ ಶ್ರೀಮಂತ ಲಖಮಗೌಡ ಬಸವಪ್ರಭು ಸರದೇಸಾಯಿಯವರು ತಮ್ಮ ಚಿರಂಜೀವರಾದ ಶ್ರೀಮಂತ ಬಾಬಾಸಾಹೇಬರೊಡನೆ ಸ್ವಾರರನ್ನೂ ಚೋಪದಾರರನ್ನೂ, ಎರಡು ಮೇಣೆಗಳನ್ನೂ

೬. ಸನ್ ೧೯೧೧ನೇ ಇಸವಿಯಲ್ಲಿ ಧಾರವಾಡ ಜಿಲ್ಲಾ ಅಕ್ಟಿಂಗ್ ಕಲೇಕ್ಟರರಾದ ಮೆ॥ಸಿ.ಎಲ್. ಮ್ಯಾಗ್ರೇಗರ ಸಾಹೇಬ ಬಹದ್ದೂರ ಆಯ್.ಸಿ. ಯಸ್ ಪ್ರೆಸಿಡೆಂಟ ಲಿಂಗಾಯತ ಎಜ್ಯುಕೇಶನಲ್ ಫಂಡ ಕಮೀಟಿ ಧಾರವಾಡ ಇವರು, ಲಿಂಗಾಯತ ಫಂಡಿನ ಕರ್ತರಾದ ರಾ.ಬ॥ಅರಟಾಳ ರುದ್ರಗೌಡ ಸಾಹೇಬರು ಈ ಲಿಂಗಾಯತ ಫಂಡು ಕೂಡಿಸುವದಕ್ಕೆ ತನುಮನಧನಗಳಿಂದ→

ಕೊಟ್ಟು ಕಳುಹಿಸಿದರು. ತಾ. ೨೯ನೇ ಮಾರ್ಚ ಸನ್ ೧೯೦೯ನೇ ಇಸವಿಯ ಸೋಮವಾರ ದಿವಸ ಶ್ರೀಮಂತರ ಆಮಂತ್ರಣವನ್ನು ಮಾನ್ಯಮಾಡಿ, ಮೇಣೆಯಲ್ಲಿ ಕೂತು, ಕುಟುಂಬ ಸಹಿತ ತಾರೀಖು ೩೦ನೇ ಮಾರ್ಚ ಸನ್ ೧೯೦೯ನೇ ಮಂಗಳವಾರ ದಿವಸ ವಂಟಮುರಿಗೆ ಹೋದರು. ಶ್ರೀಮಂತರು ತಮ್ಮ ಪರಮಸ್ನೇಹಿತರಾದ ರಾ.ಬ॥ಅರಟಾಳ ಸಾಹೇಬರವನ್ನು ಬಹು ಆದರದಿಂದ ಬರಮಾಡಿಕೊಂಡು, ನಾಲ್ಕೈದು ದಿವಸಗಳ ವರೆಗೆ ಬಹು ಪ್ರೀತಿಯಿಂಥ ತಮ್ಮ ವಾಡೆಯಲ್ಲಿಯೇ ಇಟ್ಟುಕೊಂಡು, ತಾರೀಖು ૩ನೇ ಎಪ್ರೀಲ್ ಸನ್ ೧೯೦೯ನೇ ಶನಿವಾರ ದಿವಸ ವಾಡೆಯಲ್ಲಿ ಬಹು ವೈಭವದಿಂದ ತಾಂಬೂಲ ಸಮಾರಂಭವನ್ನು ಮಾಡಿದರು. ಸಮಾರಂಭಕ್ಕೆ ಬಹು ಜನರು ಕೂಡಿದ್ದರು. ಗಾಯನವೂ, ನಾಚೂ, ಬೈಠಕವೂ ಚೆನ್ನಾಗಿ ಆದವು. "ರಾವಬಹದ್ದೂರ"ಪದವಿಯು ದೊರೆತ ಬಗ್ಗೆ ಜಯಜಯಕಾರವಾಯಿತು. ಅಭಿನಂದನ ಪರವಾದ ಭಾಷಣಗಳಾದವು. ಪರಿಮಳದ್ರವ್ಯ ಪುಷ್ಪಮಾಲೆಗಳು ಸಮರ್ಪಿಸಲ್ಪಟ್ಟವು. ಸಭಾವಿಸರ್ಜನವಾದನಂತರ ವಾದ್ಯಗಳೂ, ನಾಚೂ ಮುಂತಾದ ರಾಜವೈಭವದೊಡನೆ ಶ್ರೀಮಂತರು ರಾ॥ಬ॥ರವರನ್ನು ಶ್ರೀ ಪ್ರಭುದೇವರ ಗುಡಿಗೆ ಕರೆದುಕೊಂಡು ಹೋಗಿ, ದೇವರ ದರ್ಶನ ಮಾಡಿಸಿದರು. ಈ ತಾಂಬೂಲ ಸಮಾರಂಭವು ಬಹಳೇ ಉದಾರತನದ್ದಾಗಿ ಮಾಡಲ್ಪಟ್ಟಿತು.

ತಾಂಬೂಲ ಸಮಾರಂಭವಾದನಂತರ ತುಸು ಮಳೆಯಾಗಿ, ಎಲ್ಲರ ಮನಸ್ಸನ್ನು ಶಾಂತಗೊಳಿಸಿತು. ಪುಣ್ಯವಂತರ ಆಗಮನದಿಂದಲೂ, ದರ್ಶನದಿಂದಲೂ ಶುಭಚಿಹ್ನವು ಪ್ರಕಟವಾಯಿತೆಂದು ಭಾವಿಕ ಜನರು ಭಾವಿಸುವವರಾದರು. ಶ್ರೀಮಂತರ ರಾಜೋಪಚಾರಗಳಿಂದ ರಾ.ಬ॥ರವರು ಬಹಳ ಸಂತೋಷ ಹೊಂದಿ ಶ್ರೀಮಂತರ ಆಭಾರವನ್ನು ಮನ್ನಿಸಿದರು. ತಾ. ೪ನೇ ಮಾರ್ಚ ದಿವಸ ಭೋಜನವಾದನಂತರ ಹೊರಟು ಮೇಣೆಯ ಮೇಲಿಂದ ತಾಲೂಕ ಹುಕ್ಕೇರಿಗೆ ದಯಮಾಡಿಸಿದರು.

ವಂಟಮುರಿಯ ಶ್ರೀಮಂತರು ರಾ.ಬ॥ರವರಿಗೆ ಬಹು ದಿವಸದಿಂದಲು ಪರಮಸ್ನೇಹಿತರಾಗಿರುವರೆಂದು ವಾಚಕರಿಗೆ ಗೊತ್ತಿರುವದು. ಶ್ರೀಮಂತ ಲಖಮಗೌಡ ಸರದೇಸಾಯಿಯವರು, ಮೊದಲು ಚಿಕ್ಕೋಡಿ ತಾಲೂಕ ಅಮ್ಮಣಗಿ ಗ್ರಾಮದ ವತನದಾರಗೌಡರಿದ್ದು, ಈ ವಂಟಮುರಿಯ ದೇಸಗತಿಗೆ ದತ್ತಕವಾಗಿ ಬಂದಿರುತ್ತಾರೆ. ಇವರ ಜನನವು ಅಮ್ಮಣಗಿಯಲ್ಲಿ ಆಷಾಢ-ವದ್ಯ ೧೧ ಶಕೆ ೧೭೮೬ನೇ ರಕ್ತಾಕ್ಷಿನಾಮ (ತಾರೀಖು ೨೯ನೇ ಜುಲೈ ಸನ್ ೧೮೬೪ರಲ್ಲಿ) ಆಯಿತು. ಇವರು ತಮ್ಮ ೧೩ನೇ ವರ್ಷದ ವಯಸ್ಸಿನಲ್ಲಿ ಈ ದೇಸಗತಿಗೆ ದತ್ತಕವಾಗಿ ಬಂದರು. ದತ್ತಕ ಸಮಾರಂಭವು ಜ್ಯೇಷ್ಠ ಬಹುಳ ನವಮಿ ಶಕೆ ೧೭೯೯ ಧಾತುನಾಮ ಸಂವತ್ಸರದಲ್ಲಿ (ತಾ. ೫-೭-೧೮೭೭) ಆಯಿತು. ೨೧ನೇ ವರ್ಷದ ವಯಸ್ಸಿಗೆ (ತಾ. ೨೯-೭-೧೮೮೫ ಇಸ್ವಿ ದಿವಸ) ಇವರಿಗೆ ದೇಸಗತಿಯ ಅಧಿಕಾರ ಕೊಡಲ್ಪಟ್ಟಿತು. ಇವರು ಚಿಕ್ಕಂದಿನಿಂದಲೂ ಇಂಗ್ಲೀಷು ವಿದ್ಯಾಭ್ಯಾಸ ಮಾಡಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾಗಿದ್ದರು. ಅಧಿಕಾರ ದೊರೆತ ಮರುವರ್ಷವೇ ತಾ. ೧೫-೪-೧೮೮೬ನೇ ಇಸವಿಯಲ್ಲಿ ಬ್ಯಾರಿಷ್ಟರ

→ಬಹಳೇ ಸಹಾಯ ಮಾಡಿರುವರೆಂದೂ ಅದರಿಂದ ಇವರ ಹೆಸರು ಚಿರಸ್ಮರಣೀಯವಾಗಿರುವದು ಯೋಗ್ಯವೆಂದೂ ಪರಿಭಾವಿಸಿ, ಫಂಡಿನಿಂದ ಇಂಗ್ಲೀಷ ವಿದ್ಯಾರ್ಥಿಗಳಿಗೆ ಕೊಡಲ್ಪಡುವ ಅನೇಕ ಸ್ಕಾಲರಸಿಪ್ಪುಗಳಲ್ಲಿ ಒಂದು ಸ್ಕಾಲರಸಿಪ್ಪನ್ನು ಲಿಂಗಾಯತ ಫಂಡಿನ ಕಮಿಟಿಜನರ ಸರ್ವಾನುಮತಿಯಿಂದ ನಿಮ್ಮ ಹೆಸರಿಲೆ ಇಡುವ ಏರ್ಪಾಡು ಮಾಡಲ್ಪಟ್ಟಿದೆ. ಎಂಬದಾಗಿ ನಂಬರ ೯೮/ತಾ.೨೨ ನೇ ಸೆಪ್ಟೆಂಬರ ಸನ್ ೧೯೧೧ನೇ ಇಂಗ್ರೇಜಿ ಪತ್ರದಿಂದ ತಿಳಿಸಲು, ರಾ.ಬ॥ಅರಟಾಳ ಸಾಹೇಬರವರು ಆನಂದಿತರಾಗಿ, ತಮ್ಮ ಇಂಗ್ರೇಜಿ ಪತ್ರ ನಂಬರ ೧೪೧೮/ತಾ. ೨೯ನೇ ಸಪ್ಟಂಬರ ೧೯೧೧ಇಸ್ವಿ ನೇದರ ಮೂಲಕ ಮೆ॥ಪ್ರೆಸಿಡೆಂಟ ಸಾಹೇಬ ಬ॥ರವರ ಹಾಗೂ ಮೇಂಬರ ಜನರ ಆಭಾರವನ್ನು ವ್ಯಕ್ತಪಡಿಸಿದರು. ಪ್ರಚಂಡವಾದ ಲಿಂಗಾಯತ ಫಂಡೇ ರಾವಬಹದ್ದೂರವರ ಸ್ಮಾರಕವಾಗಿದ್ದರೂ ಮೆ॥ಕಲೆಕ್ಟರ ಸಾಹೇಬ ಬ॥ರವರು ಇವರ ಸ್ವಮತಾಭಿಮಾನವನ್ನೂ, ಅದಕ್ಕಾಗಿ ಪಡುತ್ತಿರುವ ಅವಿಶ್ರಾಂತ ಶ್ರಮವನ್ನೂ ಕಂಡು, ಇವರ ಹೆಸರಿನಿಂದ ಸ್ಪೇಶಲ್ ಒಂದು ಸ್ಕಾಲರ್‌ಸಿಪ್ ಇಟ್ಟದ್ದು ಬಹಳೇ ಸ್ತುತ್ಯವದೆ.

ಪರೀಕ್ಷೆಯನ್ನು ಕೊಡುವದಕ್ಕಾಗಿ ವಿಲಾಯತಿಗೆ ಹೋದರು. ವಿಲಾಯತಿಯಲ್ಲಿ ಎರಡು ವರ್ಷ ನಿಂತು ಬ್ಯಾರಿಷ್ಟರ ಪರೀಕ್ಷೆ ಪಾಸಾಗಿ, ಅಲ್ಲಿಂದ ತಾ. ೧೨ನೇ ಮೇ ಸನ್ ೧೮೮೮ನೇ ಇಸ್ವಿಯಲ್ಲಿ ಸ್ವದೇಶಕ್ಕೆ ತಿರುಗಿ ಬಂದರು. ಈ ವಂಟಮುರಿಯ ಶ್ರೀಮಂತರು, ವಿದ್ವಾಂಸರೂ, ಚತುರರೂ, ಘನವಂತರೂ ಇರುತ್ತಾರೆ. ಇವರ ದೊಡ್ಡಸ್ತಿಕೆಯನ್ನು ನೋಡಿ ಸರಕಾರದವರು ೧ನೇ ವರ್ಗ ಮ್ಯಾಜಿಸ್ಟ್ರೇಟ ಕೆಲಸವನ್ನು ಇವರಿಗೆ ಕೊಟ್ಟದ್ದಲ್ಲದೆ, ಮುಂಬಯಿಯ ಕಾಯದೆ ಕೌನ್ಸಿಲದಲ್ಲಿ ಮೇಂಬರರನ್ನಾಗಿ ಮಾಡಿದ್ದಾರೆ. ರಾ.ಬ॥ರವರ ಪ್ರೇರಣೆಯಿಂದ ಇವರಲ್ಲಿ ಮತಾಭಿಮಾನವು ಜಾಗ್ರತವಾಗಿ, ಇವರು ಲಿಂಗಾಯತ ಫಂಡಿಗೆ ಐವತ್ತು (೫೦೦೦೦) ಸಾವಿರ ರೂಪಾಯಿಯ ಬಹು ದೊಡ್ಡ ರಕಮನ್ನು ಕೊಟ್ಟ ಸಂಗತಿಯು ಹಿಂದೆ ಬರೆಯಲ್ಪಟ್ಟಿದೆ. ಸನ್ ೧೯೦೭ ಇಸ್ವಿ ಡಿಸೆಂಬರದಲ್ಲಿ ಸೊಲ್ಲಾಪುರದಲ್ಲಾದ ಶ್ರೀಮದ್ವೀರಶೈವ ೩ನೇ ಮಹಾಸಭೆಯಲ್ಲಿ "ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆ" ಈ ವಿಷಯದ ಮೇಲೆ ಶ್ರೀಮಂತರ ಭಾಷಣವಾಗಿ, ವೀರಶೈವರು ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸತಕ್ಕದ್ದೆಂಬದಾಗಿ ನಿರ್ಣಯವಾಯಿತು. ಸನ್ ೧೯೦೮ನೇ ಇಸ್ವಿ ಡಿಸೆಂಬರದಲ್ಲಿ ಬಾಗಲಕೋಟೆಯಲ್ಲಾದ ೪ನೇ ಶ್ರೀಮದ್ವೀರಶೈವ ಮಹಾಸಭೆಗೆ ಇವರು ಅಧ್ಯಕ್ಷರಾಗಿದ್ದರು. ಇವರು ಮಹಾಸಭೆಯ ಅಧ್ಯಕ್ಷತೆಯನ್ನು ಸರಸಾಗಿ ಮಾಡಿದರು. ಶ್ರೀಮಂತರು ಸಮಾಜದಲ್ಲಿಯೂ ಸರಕಾರದಲ್ಲಿಯೂ, ಸರಿಯಾಗಿ ವರ್ಚಸ್ವಿಗಳಾಗಿರುತ್ತಾರೆ. ಸಿರಸಂಗಿಯ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರಂತೆ ಈ ವಂಟಮುರಿಯ ಶ್ರೀಮಂತರಾದರೂ ರಾ.ಬ॥ರವರಿಗೆ ಬಹು ನಯಭಯದಿಂದ ನಡೆದುಕೊಳ್ಳುವವರಾಗಿದ್ದಾರೆ. ಶ್ರೀಮಂತರ ಹೊಟ್ಟೆಯಿಂದ ಬಾಬಾಸಾಹೇಬ ಊರ್ಫ ಬಸವಪ್ರಭು ದೇಸಾಯರೆಂಬವರೊಬ್ಬರೇ ಪುತ್ರರಿದ್ದು, ಇವರ ಜನನವು ಮಾಘಶುದ್ಧ ೭ ಶಕೆ ೧೮೦೪ರಲ್ಲಿ (ತಾ. ೨೬-೨-೧೮೮೩ನೇ ಇಸ್ವಿ ದಿವಸ) ವಂಟಮುರಿಯಲ್ಲಿ ಆಗಿದೆ. ಇವರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿ ಕಾಲೇಜದಲ್ಲಿ ಒಂದು ವರ್ಷ ಅಭ್ಯಾಸ ಮಾಡಿದರು. ಶ್ರೀಮಂತ ಬಾಬಾಸಾಹೇಬರು ತಮ್ಮ ತಂದೆಯವರಂತೆ ರಾ.ಬ॥ರವರಿಗೆ ವಿಧೇಯರಾಗಿ ವರ್ತಿಸುತ್ತಾರೆ. ರಾ.ಬ॥ರವರು ಈ ಮೇರೆಗೆ ಎಲ್ಲ ಕಡೆಯಲ್ಲಿಯ ಶ್ರೀಮಂತರಿಂದಲೂ, ಘನವಂತರಿಂದಲೂ ವಂದ್ಯರಾಗಿರುವುದನ್ನು ನೋಡಿದರೆ, ಇವರ ಪುಣ್ಯವಂತಿಕೆಯು ಬಹು ಘನತರವಾಗಿರುವದೆಂದು ಹೇಳಬಹುದು.

ಶ್ರೀಮಂತ ಚಚಡಿಯ ಚಂದ್ರಭೂಷಣ ದೊರೆಗಳ ಜನನ

ಸುಖಗಳು ಬರಹತ್ತಿದವೆಂದರೆ ಒಂದರಮೇಲೊಂದು ಬರುತ್ತವೆಂದು ಹಿರಿಯರು ಹೇಳುವ ಮಾತೇನು ಸುಳ್ಳಲ್ಲ. ರುದ್ರಗೌಡ ಸಾಹೇಬರಿಗೆ "ರಾವಬಹದ್ದೂರ" ಎಂಬ ಪದವಿಯು ದೊರೆತದ್ದಕ್ಕೆ ಅವರನ್ನು ಮೊದಲು ಮಾಡಿ ಇಡೀ ವೀರಶೈವ ಸಮಾಜಕ್ಕೆ ಸಂತೋಷವಾಗಿರುವಲ್ಲಿ, ಇದಕ್ಕಿಂತಲು ಹೆಚ್ಚಿನ ಸಂತೋಷವನ್ನುಂಟುಮಾಡುವ ಇನ್ನೊಂದು ಸಂಗತಿಯು ವರ್ತಿಸಿತು. ಅದೇನೆಂದರೆ, ರಾವಬಹದ್ದೂರರವರ ಹೊಟ್ಟೆಯಿಂದ ಪುತ್ರಸಂತಾನವಿಲ್ಲದಿದ್ದರೂ ಅವರ ಏಕಪುತ್ರಿಯವರಾದ ಶ್ರೀಮತಿ ರುದ್ರವ್ವ ದೇಸಾಯಿಯವರ ಗರ್ಭಾಂಬುಧಿಯಿಂದ ಬೆಳಗಾವಿಯ ಹೊಸಬಂಗಲೆಯಲ್ಲಿ ಶ್ರೀಮನ್ನೃಪಶಾಲಿವಾಹನ ಶಕೆಯ ೧೮೩೦ನೇ ಕೀಲಕನಾಮಸಂವತ್ಸರ ಮಾಘ ಬಹುಳ-ಅಷ್ಟಮೀ ಶನಿವಾರ ಅನುರಾಧಾ ನಕ್ಷತ್ರದ ೨ನೇ ಚರಣದ ಶುಭಲಗ್ನದಲ್ಲಿ (ಅಂದರೆ ಸನ್ ೧೯೦೯ನೇ ಇಸವಿಯ ಫೆಬ್ರುವರಿ ತಿಂಗಳ ೧೩ನೇ ತಾರೀಖು ಶನಿವಾರ ರಾತ್ರಿ ೮ಘಂಟೆಯ ಮೇಲೆ ೨೩ಮಿನಿಟಿಗೆ) ಪೂರ್ಣಚಂದ್ರೋಪಮವಾದ ಪುತ್ರರತ್ನವು ಜನಿಸಿ ತಾಯಿ, ತಂದೆ, ಅಮ್ಮ, ಅಜ್ಜ ಮುಂತಾದ

ಬಂಧು ಬಳಗಕ್ಕೂ, ಆಪ್ತೇಷ್ಟರಿಗೂ, ಊರುಕೇರಿಗೂ, ಮುಖ್ಯವಾಗಿ ಇಡೀ ವೀರಶೈವಸಮಾಜಕ್ಕೂ ಅನಿರ್ವಾಚ್ಯವಾದ ಆನಂದವನ್ನುಂಟುಮಾಡಿತು. ಶ್ರೀಮತಿ ರುದ್ರವ್ವನವರು ಚಚಡಿ ದೇಸಗತಿಯ ದೊರೆಗಳಾದ ಶ್ರೀಮಂತನಾಯಕ ಬಹದ್ದೂರ ದೇಸಾಯರು ಊರ್ಫ ಅಣ್ಣಾಸಾಹೇಬರಿಗೆ ಪತ್ನಿಯವರಾದ ಸಂಗತಿಯೂ ಅವರ ಲಗ್ನದ ಸಮಾರಂಭವೂ, ಅವರ ಪ್ರಥಮ ಗರ್ಭದಿಂದ ಕಾಶೀಬಾಯಿಯವರು ಜನಿಸಿದ ವಾರ್ತೆಯೂ ಹಿಂದೆ ೧೨ನೆಯ ಭಾಗದಲ್ಲಿ ವಿಸ್ತಾರವಾಗಿ ವಿವರಿಸಿದ್ದು, ವಾಚಕರ ಸ್ಮರಣದಲ್ಲಿರಬಹುದು. ರಾವಬಹದ್ದೂರವರಿಗೆ ಒಬ್ಬರೇ ಒಬ್ಬರು ಹೆಣ್ಣುಮಕ್ಕಳಿದ್ದು, ಶ್ರೀಮಂತ ಅಣ್ಣಾಸಾಹೇಬರಿಗೂ ಹೆಣ್ಣುಮಗಳೇ ಹುಟ್ಟಿದುದರಿಂದ ಇವರ ಹೊಟ್ಟೆಯಿಂದ ಆದಷ್ಟು ತೀವ್ರವಾಗಿ ಪುತ್ರರತ್ನವನ್ನು ದಯಪಾಲಿಸೆಂದು, ಎಲ್ಲರೂ ಅಂತರಂಗದಲ್ಲಿ ಅಂತರ್ಯಾಮಿಯನ್ನು ಸಂತತವೂ ಚಿಂತಿಸುವವರಾಗಿದ್ದರು.

ಚಂಪಕಮಾಲಾವೃತ್ತಂ

ನಲಿನಲಿದಾಡಿ ನುಣ್ಣೊದಳ್ಗಳಿಂ ಕಿವಿಗಿಂಪನೊಡರ್ಚಿ ಗೆಜ್ಜೆಗಳ್ ।
ಗಿಲಿಗಿಲಿಗೊಂಡಿರೆಯ್ದು ಬಿಗಿದಪ್ಪಿ ಪಯಂಗಳನುಂಡು ಪ್ರೀತಿಯಿಂ ॥
ನಲಿದು ನಗುತ್ತೆ ಮುದ್ದಿಡುವ ದಿವ್ಯಕುಮಾರಕನಂ ಮದೀಯ ಸ ।
ತ್ಕುಲಗೃಹದೀಪನಂ ಪಡೆವ ಸೈಪಿನ ಸುಗ್ಗಿಯದೆಂದು ಬರ್ಕುಮೋ ॥೧॥

ಎಂದು ಮನೆಯವರೆಲ್ಲರು ಪುತ್ರರತ್ನವನ್ನಪೇಕ್ಷಿಸುತ್ತಿದ್ದರು. ರಾವಬಹದ್ದೂರವರು ಸಕಲೈಶ್ವರ್ಯದಿಂದ ಬೆಳಗುತ್ತಿದ್ದರೂ, ಪುತ್ರಸಂತಾನವೊಂದಿಲ್ಲೆಂದು ಅವರು ಒಳಗೊಳಗೆ ಚಿಂತಿಸುತ್ತಿದ್ದರು. ಪುತ್ರನನ್ನು ಪಡೆಯುವ ಭಾಗ್ಯವು ಇವರಿಗಿಲ್ಲದಿದ್ದರೂ ಪೌತ್ರನನ್ನಾದರೂ ಕಂಡು ಸಂತೋಷಿಸುವ ಸುಯೋಗವನ್ನು ಆದಷ್ಟು ತೀವ್ರ ತಂದುಕೊಡೆಂದು, ಎಲ್ಲರೂ ಪರಮಾತ್ಮನನ್ನು ಪ್ರಾರ್ಥಿಸುವವರಾಗಿದ್ದರು. ಇವರ ಭಕ್ತಿಗೂ, ಪುಣ್ಯಕಾರ್ಯಗಳಿಗೂ ಪರಮೇಶ್ವರನು ಮೆಚ್ಚಿ, ಶ್ರೀಮತಿ ರುದ್ರವ್ವನವರ ಗರ್ಭಾಂಬೋಧಿಯಿಂದ ಪುತ್ರರತ್ನವನ್ನು ದಯಪಾಲಿಸಿದನು. ವೃದ್ಧಾಪ್ಯದಲ್ಲಿ ಮೊಮ್ಮಗನನ್ನು ಕಂಡು ಸಂತೋಷಿಸುವ ಈ ಸುಕಾಲವು ಪ್ರಾಪ್ತವಾದದ್ದು ರಾವಬಹದ್ದೂರವರ ಪುಣ್ಯಬಲದ ಪರಿಣಾಮವೇ ಎಂದು ಭಾವಿಸಬಹುದಾಗಿದೆ.

ಪುತ್ರನು ಜನಿಸುವ ಸಮಯವು ಒಳ್ಳೇ ಸೊಬಗುಳ್ಳದ್ದಾಗಿತ್ತು. ರಾವ್‌ಬಹದ್ದೂರವರ ಸಕಲ ಪರಿವಾರವೂ ಸಂತೋಷದಲ್ಲಿತ್ತು. ಅರಟಾಳಸಾಹೇಬರವರಾದರೋ "ರಾವಬಹದ್ದೂರ"ಎಂಬ ಬಹುಮಾನದ ಪದವಿಯನ್ನು ಪಡೆದು, ಸಮಾರಂಭ ಸಂಭ್ರಮಗಳಲ್ಲಿ ಮಗ್ನರಾಗಿದ್ದರು. ಚಚಡಿಯ ದೇಸಗತಿಯೂ ಸುಖಶಾಂತಿಗಳಿಂದ ಕೂಡಿದ್ದಾಗಿತ್ತು. ಪ್ರಕೃತಕ್ಕೆ ಯಾವ ತೊಂದರೆಯೂ ಇದ್ದಿಲ್ಲ; ಎಲ್ಲರೂ ಪರಮಾನಂದದೊಳಗಿದ್ದರು. ಮೇಲಿಂದ ಮೇಲೆ ಶುಭಶಕುನಗಳು ತೋರುತ್ತಿದ್ದವು. ಪ್ರಸವ ಸಮಯದಲ್ಲಿ ಇವರ ಬಂಗಲೆಯ ಬಲಪಾರ್ಶ್ವದಲ್ಲಿರುವ ಫಾರ್ಸೀಜನರ ದೇವಾಲಯದಲ್ಲಿ ಒಂದು ಲಗ್ನಸಮಾರಂಭವು ನಡೆದಿತ್ತು. ಲಗ್ನಮಂಟಪದ ಸುತ್ತಲೂ ವಿದ್ಯುದ್ದೀಪಗಳು ಪ್ರಕಾಶಿಸುತ್ತಿದ್ದವು. ಈ ವಿದ್ಯುದ್ದೀಪಗಳ ಪ್ರಕಾಶವು ಪೂರ್ಣಚಂದ್ರಪ್ರಭೆಗಿಂತಲೂ ಸಾಂದ್ರವಾಗಿತ್ತು. ಈ ಮಧುರವಾದ ಪ್ರಕಾಶದಲ್ಲಿ ರಾವಬಹದ್ದೂರರವರ ಮನೋಹರವಾದ ಮಂದಿರವು ಬಹು ಸುಂದರವಾಗಿ ಕಾಣುತ್ತಿತ್ತು. ಮಂದಿರದ ಮುಂದಿರುವ ವಿಧವಿಧದ ಪುಷ್ಪಗಳ ತರುಲತೆಗಳು ಈ ಸುಂದರವಾದ ಪ್ರಕಾಶವನ್ನು ಕಂಡು, ಚಂದ್ರೋದಯವಾಯಿತೆಂಬ ಭ್ರಮೆಯಿಂದ ಪುಷ್ಪವೃಂದವಿಕಸಿಸಿದ್ದವು. ಬೇಂಡಬಾಜಾ ಮುಂತಾದ ಮಂಗಳವಾದ್ಯಗಳು ಕಿವಿಗಳಿಗೆ ಬಲು ಇಂಪಾಗಿದ್ದವು. ವಿಕಸಿತವಾದ ತರುಲತೆಗಳು ದಿವ್ಯಪ್ರಕಾಶದಲ್ಲಿ

ನೋಡಲಿಕ್ಕೆ ಬಹು ಸೊಂಪಾಗಿದ್ದವು. ಭಾವೀ ಆನಂದಕ್ಕಾಗಿ ತರುಲತೆಗಳೆಲ್ಲ ಈಗಲೇ ನಲಿದು ನಗುತ್ತಿರುವವೇನೋ ಎಂಬಂತೆ ಹೂಗಳನ್ನು ಅರಳಿಸಿದ್ದವು. ಭಾರ್ಸಿಜನರ ಲಗ್ನ ಸಮಾರಂಭದಿಂದ ನೆರೆಹೊರೆಯೆಲ್ಲ ಆನಂದಮಯವಾಗಿ ಹೋಗಿತ್ತು. ಈ ದಿವ್ಯವಾದ ಆನಂದ ಸಮಯದಲ್ಲಿ ಶ್ರೀಮತಿ ರುದ್ರವ್ವರಾಣಿಯರು ಪುತ್ರರತ್ನವನ್ನು ಪ್ರಸೂತಿಸಿದರು. ಗಂಡುಕೂಸನ್ನು ನೋಡುತ್ತಲೆ ಪರಿವಾರದವರೆಲ್ಲರು ಪರಮಾನಂದಭರಿತರಾಗಿ ಪರವಶರಾದರು. ಮಂಗಳವಾದ್ಯಗಳು ಮೊಳಗುತ್ತಿದ್ದವು. ಬಂಗಲೆಯ ಮುಂಭಾಗದಲ್ಲೆಲ್ಲ ಮನೋಹರವಾದ ಪ್ರಕಾಶವು ಹರಡಿಕೊಂಡಿತ್ತು. ಇವೆಲ್ಲ ಶುಭಶಕುನಗಳು ಹೇಳಿಮಾಡಿಸಿಟ್ಟ ಹಾಗೆ ತಮಗೆ ತಾವೇ ಅನುಕೂಲಿಸಿದವು. ಇದರಿಂದ ಈ ಚಿಕ್ಕದೇಸಾಯರು ಮುಂದೆ ತಮ್ಮ ಅಜ್ಜಂದಿರಂತೆ ಪ್ರಖ್ಯಾತಪುರುಷರಾಗಬಹುದೆಂದು ಊಹಿಸಲಿಕ್ಕೆ ಆಸ್ಪದವಿದೆ.

ಜಾತಕರಣವು ವಿಧಾನೋಕ್ತವಾಗಿ ಜರುಗಿತು. ಕೂಡಲೆ ಆಪ್ತೇಷ್ಟರಿಗೂ ಬಂಧುಬಳಗಕ್ಕೂ, ಘನವಂತರಿಗೂ, ಮಹನೀಯರಿಗೂ ಈ ಶುಭವಾರ್ತೆಯ ತಾರುಗಳೂ, ಪತ್ರಗಳೂ ಹೋದವು. ಈ ಆನಂದದ ವಾರ್ತೆಯನ್ನು ಹೇಳುವವರ ಮತ್ತು ಕೇಳುವವರ ಬಾಯಿಯಲ್ಲಿ ಆದರದಿಂದ ಬಿದ್ದು, ಅವರನ್ನು ಸಂತೋಷಗೊಳಿಸಬೇಕೆಂದು, ಸಕ್ಕರೆಯ ಪೊಟ್ಟಣಗಳು ಟಪಾಲ ಮಾರ್ಗವಾಗಿ ಓಡುತ್ತೋಡುತ್ತ ಪಟ್ಟಣ-ಪುರ-ಹಳ್ಳಿಗಳಲ್ಲಿಯ ಮಹನೀಯರ ಕರಕಮಲಗಳಲ್ಲಿ ಅಲಂಕೃತವಾದವು. ಕೆಲವು ಪುಡಿಕೆಗಳು ಸೇವಕರ ಹೆಗಲ ಮೇಲೆ ಕೂತುಕೊಂಡು, ಸಕ್ಕರೆ ಬೀರಲಿಕ್ಕೆ ಬೆಳಗಾವಿ ಶಹರದ ರಾಜಮಾರ್ಗಗಳಲ್ಲಿ ವಿರಾಜಮಾನವಾದವು. ಕೆಲಕೆಲವರಿಗೆ ಈ ಸಂತೋಷದ ಸುದ್ದಿಯನ್ನು ತಿಳಿಸಲಿಕ್ಕೆ ಮುದ್ದಾಂ ಮನುಷ್ಯರು ಓಡುವವರಾದರು. ಬೆಳಗಾಗುವಷ್ಟರಲ್ಲಿ ಈ ಸುದ್ದಿಯು ಚಚಡಿಗೆ ಹೋಯಿತು. ತಮ್ಮ ಭಾವೀ ದೇಸಾಯರ ಜನನವಾರ್ತೆಯನ್ನು ಕೇಳಿ ಚಚಡೀ ದೇಸಗತಿ ಸೀಮೆಯ ಜನರು ಅತಿಶಯವಾದ ಆನಂದವನ್ನು ಹೊಂದಿ, ತಮ್ಮ ಉದ್ಯೋಗಗಳನ್ನೆಲ್ಲ ತೊರೆದು, ಆ ದಿವಸವನ್ನು ಹಬ್ಬದಂತೆ ತಿಳಿದು ಉತ್ಸವಗಳನ್ನು ಮಾಡಿದರು. ಈ ಸುದ್ದಿಯು ಊರಿಗೆ ಬಂದಾಗ, ದೇಸಗತಿಯ ಆಶ್ರಯದಲ್ಲಿದ್ದ ಬಸವಂತರಾಯನೆಂಬೋರ್ವ ಪ್ರಾಯಸ್ಥನು ಚಚಡಿವಾಡೆಯ ಎತ್ತರವಾದ ಬುರುಜಿನ ಮೇಲೆ ನಿಂತಿದ್ದನು. ಈ ಚಿಕ್ಕದೇಸಾಯರು ಹುಟ್ಟಿದ ವಾರ್ತೆಯನ್ನು ಕೇಳಿದೊಡನೆಯೇ ಆನಂದಪರವಶನಾಗಿ ಆ ಬುರುಜಿನ ಮೇಲಿಂದ ಕೆಳಗೆ ಧುಮುಕಿ ಓಡಾಡಹತ್ತಿದನು. ಅವನಿಗೆ ಏನೂ ಅಪಾಯವಾಗಲಿಲ್ಲ. ಆನಂದದ ಲಹರಿಯು ವಿಚಿತ್ರವಾಗಿದೆ. ಈ ಸುಖದಾಯಕ ವಾರ್ತೆಯು ಕಿವಿಗೆ ಮುಟ್ಟಿದ ಕೂಡಲೆ ಚಚಡಿಯ ಸಣ್ಣ ದೊಡ್ಡ ಜನರೆಲ್ಲ ಊರನ್ನೂ, ವಾಡೆಯನ್ನೂ ತಳಿರ್ದೋರಣಧ್ವಜಪತಾಕೆಗಳಿಂದ ಶೃಂಗರಿಸಿ, ವಾಡೆಯೊಳಗೆ ಒಂದು ಸಭೆಯನ್ನು ನೆರೆಯಿಸಿ, ಚಿಕ್ಕದೇಸಾಯರು ಹುಟ್ಟಿದ ಬಗ್ಗೆ ಆನಂದಪ್ರದರ್ಶನ ಮಾಡಿದರು. ಅಲ್ಲಿಯ ಶಾಳಾ ಮಾಸ್ತರರಾದ ಚೆನ್ನಪ್ಪ ಫಕೀರಪ್ಪ ಪಾಟೀಲ ಸಾಕೀನ ಮುರಗೋಡ ಇವರು ಸಭೆಯಲ್ಲಿ ಶ್ರೀಮಂತರ ಗುಣಗಳನ್ನೂ, ರಾ.ಬ॥ರುದ್ರಗೌಡಸಾಹೇಬರ ಘನತೆಯನ್ನೂ ವರ್ಣಿಸಿ, ಅವರ ಗುಣಕ್ಕೆ ಸರಿಯಾಗಿ ಪರಮೇಶ್ವರನು ತಕ್ಕ ಫಲವನ್ನು ಕೊಟ್ಟನೆಂದು, ಸರಸವಾದ ಭಾಷಣ ಮಾಡಿದರು. ಸಭಿಕರೆಲ್ಲರು ಸಂತೋಷದಿಂದ ಕರತಾಡನಗಳನ್ನು ಮಾಡಿ, ಜಯಜಯಕಾರ ಮಾಡಿದರು. ಚಚಡಿಯಲ್ಲಿ ಒಂದು ಮನೆಯೂ ಉಳಿಯದಂತೆ ಬಹುವೈಭವದಿಂದ ಊರತುಂಬ ಸಣ್ಣ ದೊಡ್ಡವರೆಲ್ಲರಿಗೂ ಸಕ್ಕರೆಯು ಹಂಚಲ್ಪಟ್ಟಿತು. ಮುರಗೋಡ ಮಹಾಲಿನಲ್ಲಿಯೂ ಸಕ್ಕರೆಯನ್ನು ಹಂಚಿದರು. ಚಚಡಿಯ ನಗಾರಖಾನೆಯಲ್ಲಿ ಚೌಘಡೆಗಳು ಗಂಭೀರವಾಗಿ ನುಡಿಯಹತ್ತಿದವು. ಊರತುಂಬೆಲ್ಲ ವಾದ್ಯಧ್ವನಿಯೂ, ಸಂತೋಷದ ನಗೆಯೂ ತುಂಬಿಹೋಗಿತ್ತು. ಸಭೆಯ ಕೆಲಸವನ್ನು ತೀರಿಸಿ, ಸರ್ವರೂ ದೇವಾಲಯಗಳಿಗೆ ಹೋಗಿ, ನಂದಾದೀವಿಗೆಗಳನ್ನಿಡಿಸಿ, ಕಾರ್ತಿಕ ಹಚ್ಚಿ ಬಾಲದೇಸಾಯರ ಕಲ್ಯಾಣದ ಬಗ್ಗೆ ಪಾರ್ವತೀಶನನ್ನು ಪ್ರಾರ್ಥಿಸಿ, ತಮ್ಮ ತಮ್ಮ ಮನೆಗಳಿಗೆ ಆನಂದದಿಂದ ತೆರಳಿದರು. ಈ ಸಂಗಮೇಶ್ವರ

ದೇವಾಲಯ ಮೊದಲಾದ ಯಾವತ್ತು ದೇವಾಲಯಗಳಲ್ಲಿ ಅಭಿಷೇಕಗಳೂ, ಪೂಜೆಗಳೂ ವೈಭವದಿಂದ ನಡೆದವು. ಜಂಗಮರಿಗೂ, ಬಡಬಗ್ಗರಿಗೂ, ಅನಾಥರಿಗೂ, ಶಿಪಾಯರಿಗೂ, ಸೇವಕರಿಗೂ, ಓಲೆಕಾರರಿಗೂ, ಹಳಬರಿಗೂ, ಕುಂಟಕುರುಡ ಮೊದಲಾದವರಿಗೂ ವಸ್ತ್ರಗಳು, ರೋಖ ರೂಪಾಯಿಗಳೂ ಉಡುಗರೆಯಾಗಿಯೂ, ದಾನಾರ್ಥವಾಗಿಯೂ ಕೊಡಲ್ಪಟ್ಟವು.

ಈ ಸಮಯದಲ್ಲಿ ರಾ.ಬ॥ರುದ್ರಗೌಡ ದೊರೆಗಳ ಸ್ವಾರಿಯು ಗೋಕಾಕ ತಾಲೂಕಕ್ಕೆ ಸೇರಿದ ಕೌಜಲಗಿಯ ಮುಕ್ಕಾಮಿನಲ್ಲಿತ್ತು. ಈ ಸದ್ವಾರ್ತೆಯನ್ನರುಹಲಿಕ್ಕೆ ಬೆಳಗಾವಿಯಿಂದ ಕೌಜಲಗಿ ಮುಕ್ಕಾಮಿಗೆ ಮುದ್ದಾಂ ಮನುಷ್ಯನನ್ನು ಕಳಿಸಿದ್ದಲ್ಲದೆ, ಟಪಾಲ ಮಾರ್ಗವಾಗಿ ಸಕ್ಕರೆಯ ಪೊಟ್ಟಣವೂ ಕಳಿಸಲ್ಪಟ್ಟಿತು. ಮೊಮ್ಮಗನು ಹುಟ್ಟಿದ ವಾರ್ತೆಯನ್ನು ಕೇಳಿ ರಾವಬಹದ್ದೂರರವರು ಬಹು ಆನಂದ ಹೊಂದಿದರು. ಇವರಿಗೆ "ರಾವಬಹದ್ದೂರ" ಪದವಿಯು ಸಿಕ್ಕು ಬಹಳ ದಿವಸಗಳಾಗಿದ್ದಿಲ್ಲ. ಆ ಬಗ್ಗೆ ಆನಂದ ಪ್ರದರ್ಶನದ ತಾಂಬೂಲ ಸಮಾರಂಭಗಳು ಮೇಲಿಂದ ಮೇಲೆ ಆಗುತ್ತಲೇ ಇದ್ದವು. ಈ ಆನಂದ ಸಂಭ್ರಮದಲ್ಲಿಯೇ ಇದೊಂದು ಅತ್ಯಾನಂದವಾರ್ತೆಯನ್ನು ಕೇಳಿದ್ದರಿಂದ ಇವರ ಅಂತರಂಗವು ಕಬ್ಬಿನ ಮೇಲೆ ಜೇನಿಟ್ಟಂತೆ ಸರ್ವವೂ ಸವಿಸವಿಯಾಗಿ ಹೋಯಿತು. "ರಾವಬಹದ್ದೂರ" ಪದವಿಯ ಅಭಿನಂದನಪರ ಪತ್ರಗಳೂ, ತಾರುಗಳೂ ತೆರಪಿಲ್ಲದೆ ಬರುತ್ತಿರುವ ಸಮಯದಲ್ಲಿಯೇ ಈ ಪೌತ್ರನು ಜನಿಸಿದ ಆನಂದ ದರ್ಶಕ ತಾರುಗಳೂ, ಪತ್ರಗಳೂ ಎಡೆಬಿಡದೆ ಸುರುವಾದವು. ರಾವಬಹದ್ದೂರರವರ ಟೇಬಲಿನ ಮೇಲೆ ಒಂದೆರಡು ತಿಂಗಳು ಈ ಆನಂದ ಪ್ರದರ್ಶಕ ಪತ್ರಗಳ ಮಳೆಯಾಗಹತ್ತಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಈ ಸಂತೋಷದ ವಾರ್ತೆಯು ರಾವಬಹದ್ದೂರರವರ ಜನ್ಮಸ್ಥಾನವಾದ ಅರಟಾಳಗ್ರಾಮಕ್ಕೆ ತಲುಪಿದಾಕ್ಷಣವೇ, ಅಲ್ಲಿ ಇವರ ಮನೆತನದ ವ್ಯವಸ್ಥೆಗಾಗಿ ಇಡಲ್ಪಟ್ಟ ಗಂಗಾಧರಯ್ಯ ಬಸವಣ್ಣಯ್ಯ ನಾಗನೂರಮಠ ಸಾಕೀನ ಎತ್ತಿನಳ್ಳಿ ಎಂಬವರು ಸಾಹೇಬರ ಕುಲದೇವರಾದ ಶ್ರೀ ವೀರಭದ್ರದೇವರ ದೇವಾಲಯವನ್ನೂ, ಇನ್ನು ಉಳಿದ ದೇವಾಲಯಗಳನ್ನೂ ಶೃಂಗರಿಸಿ, ಅರಟಾಳ ಮಸಳೀಕೊಪ್ಪ ಹಿರೇಕೊಪ್ಪ ಮುಂತಾದ ಅವರ ಗೌಡಿಕಿ ಗ್ರಾಮಗಳ ಜನರನ್ನು ಕೂಡಿಸಿ, ಸಾಹೇಬರಿಗೆ ಮೊಮ್ಮಗನು ಹುಟ್ಟಿದ ಆನಂದ ಪ್ರದರ್ಶನೋತ್ಸವವನ್ನು ಬಹು ವಿಜೃಂಭಣೆಯಿಂದ ಮಾಡಿದುದಲ್ಲದೆ, ಎಲ್ಲ ದೇವತೆಗಳ ಅಭಿಷೇಕವನ್ನೂ, ಪೂಜೆಗಳನ್ನೂ ನಡೆಯಿಸಿ, ಎಲ್ಲ ದೇವರಿಗೂ ಕಾಯಿ ಕರ್ಪೂರ ನೈವೇದ್ಯಗಳನ್ನು ಸಮರ್ಪಿಸಿದರು. ಎಲ್ಲ ದೇವಾಲಯಗಳಲ್ಲಿಯೂ ದೀವಿಗೆಗಳನ್ನಿಡಿಸಿ, ಎಲ್ಲರಿಗೂ ಸಕ್ಕರೆಯನ್ನು ಹಂಚಿದರು. ಈ ಉತ್ಸವಗಳಿಂದ ಸರ್ವರೂ ಸಂತೋಷಭರಿತರಾದರು.

ಶ್ರೀಮತಿ ರುದ್ರವ್ವನವರು ಹುಟ್ಟಿದ ಗೌಡಿಕಿ ಗ್ರಾಮವಾದ ಕಸಬಾ ಅರಟಾಳದಲ್ಲಿಯೂ, ಇವರನ್ನು ಲಗ್ನಮಾಡಿಕೊಟ್ಟ ದೇಸಗತಿಯ ಗ್ರಾಮವಾದ ಚಚಡಿಯಲ್ಲಿಯೂ, ಈ ಶಿಶುಜನನಾನಂದ ಪ್ರದರ್ಶನೋತ್ಸವಗಳು ಜರುಗಿದ್ದು ಸ್ವಾಭಾವಿಕವಾಗಿದ್ದರೂ, ಇತರ ಕೆಲಗ್ರಾಮಗಳಲ್ಲಿಯೂ ಕೆಲಘನವಂತರೂ ಇಂತಹ ಮಹೋತ್ಸವಗಳನ್ನು ನಡೆಯಿಸಿ, ಚಿಕ್ಕದೇಸಾಯರು ಜನಿಸಿದ ಬಗ್ಗೆ ತಮಗಾದ ಆನಂದವನ್ನು ತೋರ್ಪಡಿಸಿದ್ದು ಆಶ್ಚರ್ಯಕರವಾಗಿದೆ. ಜಿಲ್ಲಾ ಬೆಳಗಾವ, ತಾಲೂಕ ಬೈಲಹೊಂಗಲ ಗ್ರಾಮದ ಮುಲಕೀ ಮತ್ತು ಪೊಲೀಸ ಗೌಡರಾದ ಮಲ್ಲನಾಯಕ ಲಿಂಗನಾಯಕ ಪಾಟೀಲ ಎಂಬವರು ತಮ್ಮ ಮನೆಯನ್ನು ಶೃಂಗರಿಸಿ,ಊರಲ್ಲಿಯ ಪ್ರಮುಖರನ್ನು ಕೂಡಿಸಿ,ಶ್ರೀ ಗದ್ದಿಗೆಯ್ಯಸ್ವಾಮಿ ಪುರಾಣಿಕಮಠ ಇವರ ಅಧ್ಯಕ್ಷತೆಯ ಕೆಳಗೆ ಸಭೆಯನ್ನು ಕೂಡಿಸಿ, ರಾವಬಹದ್ದೂರವರಿಗೆ ಮೊಮ್ಮಗನು ಹುಟ್ಟಿದ ಬಗ್ಗೆ ಆನಂದಪ್ರದರ್ಶನವನ್ನು ಮಾಡಿ, ಸಭಿಕರಿಗೂ, ಗ್ರಾಮದ

ಇತರ ಜನರಿಗೂ ಸಕ್ಕರೆ ಹಂಚಿದರು. ಸಭೆಯಲ್ಲಿ ಗಾಯನ ಸಮಾರಂಭವಾಯಿತು; ಕೆಲಹೊತ್ತು ಪುರಾಣ ನಡೆಯಿತು. ರಾವಬಹದ್ದೂರವರ ಘನತೆಯೂ, ಶ್ರೀಮಂತ ಅಣ್ಣಾಸಾಹೇಬರ ಸುದೈವವೂ ಕೊಂಡಾಡಲ್ಪಟ್ಟವು. ಪರಿಮಳದ್ರವ್ಯ ಪುಷ್ಪಮಾಲೆಗಳು ಸಮರ್ಪಿಸಲ್ಪಟ್ಟವು. ಇವರಂತೆ ಗೋಕಾಕ ತಾಲೂಕಿಗೆ ಸೇರಿದ ಅಂಕಲಗಿ ಸಮ್ಮತ ದೇಸಾಯರಾದ ಮಹಮ್ಮದ ಗೌಸಖಾನ ಎಂಬವರು ತಮ್ಮ ಊರಲ್ಲಿಯ ಜನರನ್ನು ಕೂಡಿಸಿ, ವೈಭವದಿಂದ ಸಕ್ಕರೆ ಹಂಚಿ, ತಮಗಾದ ಆನಂದವನ್ನು ಪ್ರಕಟಮಾಡಿದರು. ಇದೇ ಪ್ರಕಾರ ಧಾರವಾಡ ಜಿಲ್ಲಾ ಕಲಘಟಗಿ ತಾಲೂಕಿಗೆ ಸೇರಿದ ತಬಕದ ಹೊನ್ನೀಹಳ್ಳಿಯ ಶಿವನಗೌಡರೂ, ಸಿಗ್ಗಾವಿ ತಾಲೂಕಿಗೆ ಸೇರಿದ ಕುನ್ನೂರ ಹನುಮಂತಗೌಡ ಮರಿಗೌಡ ಪಾಟೀಲರವರೂ, ಇನ್ನು ಕೆಲ ಕೆಲ ಗ್ರಾಮದ ಮುಖಂಡರೂ ತಮ್ಮ ತಮ್ಮ ಊರುಗಳಲ್ಲಿ ಮಹೋತ್ಸವಗಳನ್ನು ಮಾಡಿ, ಚಿಕ್ಕದೇಸಾಯರ ಜನನದಿಂದುಂಟಾದ ತಮ್ಮ ಆನಂದವನ್ನು ತೋರ್ಪಡಿಸಿದರು. ಮುರಗೋಡ ಮಹಾಲಿಗೆ ಸೇರಿದ ಹೊಸೂರ ಗ್ರಾಮದಲ್ಲಿರುವ ಚಚಡೀ ದೇಸಗತಿಯ ಬೈಲಪ್ಪ ಕುಂಬಿ ಎಂಬೊಬ್ಬ ರೈತನು ತಮ್ಮ ದೇಸಗತಿಗೆ ಚಿಕ್ಕದೊರೆಗಳು ಹುಟ್ಟಿದರೆಂಬ ಅತ್ಯಾನಂದದಿಂದ ಹದಿಮೂರು ದಿವಸಗಳ ವರೆಗೂ ತಮ್ಮ ಊರದೇವಸ್ಥಾನದಲ್ಲಿ ನಂದಾದೀವಿಗೆಯನ್ನಿಟ್ಟಿದ್ದನು. ಇವೆಲ್ಲ ಉತ್ಸವಗಳನ್ನು ನೋಡಿದರೆ ರಾವಬಹದ್ದೂರವರ ಮೇಲೆಯೂ, ಶ್ರೀಮಂತ ಅಣ್ಣಾ ಸಾಹೇಬರ ಮೇಲೆಯೂ, ಎಲ್ಲ ಸ್ಥಳದ ಜನರು ಎಷ್ಟು ಪೂಜ್ಯಭಾವವುಳ್ಳವರಾಗಿರು ವರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಕಂದ ನವರತ್ನ

ಚಿಕ್ಕದೇಸಾಯರು ಹುಟ್ಟಿದ ಬಗ್ಗೆ ಶ್ರೀಮಂತ ಅಣ್ಣಾಸಾಹೇಬರವರ ಕಡೆಯಿಂದ ಈ ಗ್ರಂಥಕರ್ತರಾದ ಪಾರಿಶವಾಡದ ಬಸವಾರ್ಯ ಕವಿಗಳಿಗೆ ಪತ್ರವೂ, ಸಕ್ಕರೆಯ ಪೊಟ್ಟಣವೂ ಬಂದಿರಲು, ಅವರು ಆನಂದಾತಿಶಯದಿಂದ ಕೆಲವು ಪದ್ಯಗಳನ್ನು ರಚಿಸಿ "ಕಂದನವರತ್ನ" ಎಂಬ ಪತ್ರಿಕೆಯನ್ನು ಶ್ರೀಮಂತರಿಗೂ, ರಾವಬಹದ್ದೂರರವರಿಗೂ ಬೇರೆ ಬೇರೆ ಪ್ರತಿಗಳಿಂದ ಬರೆದು ಕಳುಹಿಸಿದ್ದರು. ವಾಚಕರ ಆನಂದಕ್ಕೋಸುಗ ಆ ಕಂದ ನವರತ್ನಗಳನ್ನು ಇಲ್ಲಿ ಸುರಿಸುವೆನು.

ಕಂದ ನವರತ್ನ

ಶ್ರೀ ಮದ್ಗುಹಗಣಪಾದ್ಯರ್।ವಾಮಾಂಕದೊಳೊಂದುಗೂಡಿ ಕ್ರೀಡಿಸುತಿರೆ ಸಂ ॥
ಪ್ರೇಮಗೊಳಿಪ ಶಿವಶಿವೆಯರ್।ಪ್ರೇಮದೊಳೆಮಗಮಲಸೌಖ್ಯವೀವುಗೆ ಸತತಂ ॥೧॥

ಕಂದಂ ಜನಿಸಿದನೆಂಬಾ।ನಂದದವಾರ್ತೆಯನು ತಿಳಿದು ಸಂತೋಷಿಸುತಂ ॥
ಕಂದನವರತ್ನಮೆಂದಾ।ನಂದದಿ ಪೆಸರಿಟ್ಟು ಬರೆದೆನೀ ಪತ್ರಿಕೆಯಂ ॥೨॥

ಭವದೀಯ ಪೌತ್ರಲಾಭ।ಶ್ರವಣದೊಳಾನಂದವಾರ್ಧಿಯುರ್ಕಿತು ನಿಜದಿಂ ॥
ಶಿವಕರುಣಮಿರ್ದ ಪುರುಷಗೆ।ಕುವರಂ ಕುಣಿಯುತ್ತೆ ಬರ್ಪನೊಲದಿಂ ಪೊಡೆಯಿಂ ॥೩॥

ನಿರುತಂ ನೀವತಿಭಕ್ತಿಯ।ಪರಿವಿಡಿಯಿಂ ಗೈವ ಪುಣ್ಯಕಾರ್ಯಗಳಿಂದಂ ॥
ಹರ ಗುರು ಹಿರಿಯರನುಗ್ರಹ।ದಿರುವುಂ ಪಿರಿದಾಗೆ ಮೂಡಿ ಬಂದಂ ಕುವರಂ ॥೪॥

ಪುತ್ರಾನಂದವನರಿಯದ। ಛತ್ರಾಧಿಪನಿರ್ದೊಡೇನು ವ್ಯರ್ಥಂ ಜಗದೊಳ್ ॥
ಧಾತ್ರಿಗೆ ನಿಜಲಾಭಂ ಸ। ತ್ಪುತ್ರರೆ ತಾವಲ್ತೆ ಪುತ್ರಲಾಭವೆ ಲಾಭಂ ॥೫॥

ಪುತ್ರನೆ ಸದ್ಗತಿಪಾತ್ರಂ।ಪುತ್ರನೆ ನಿಜವಂಶದೀಪ ಪುಣ್ಯಕಲಾಪಂ ॥
ಪುತ್ರನೆ ನಿಜಸುಖಮೂಲಂ।ಪುತ್ರಂ ಭವತಾಪಶಮನ ಛತ್ರಂ ಸತ್ಯಂ ॥೬॥

ಸುತನಂ ಪಡೆವುದು ಪೂರ್ವಾ।ರ್ಜಿತ ಪುಣ್ಯದ ಫಲಮಿದೆಂದು ಪೇಳುವರದರಿಂ ॥
ದತಿಧನ ಸಂಪಚ್ಛೇಯೋ।ಯುತನಾ ಸಂತತಿಯನಾಂತರವನೆ ಕೃತಾರ್ಥಂ ॥೭॥

ವರವೀರಶೈವ ವಾರಿಧಿ। ಪರಿವರ್ಧನ ಪೂರ್ಣಚಂದ್ರ ಸದ್ಗುಣಸಾಂದ್ರರ್ ॥
ದೊರೆ ರುದ್ರಗೌಡರತಿ ಧಾನ್ಯರು ಸೈ ಸೈ ಪೌತ್ರರತ್ನ ಪಡೆದುದರಿಂದಂ ॥೮॥

ಮಗು ತಾಂ ಸತ್ಯಸುಶೀಲಂ।ಸುಗುಣಂ ವಿದ್ಯಾವಿರಾಜ ಮಾನಂ ಧನಿಕಂ ॥
ಮಿಗಿಲಾದ ಕೀರ್ತಿವಂತಂ।ಜಗದೊಳ್ ದೀರ್ಘಾಯುವಾಗಿ ಬಾಳಲಿ ಸುಖದಿಂ ॥೯॥

ಹಿಂದೆ ಬರೆದಂತೆ ಅಲ್ಲಲ್ಲಿ ಅನೇಕ ಆನಂದ ಪ್ರದರ್ಶನೋತ್ಸವಗಳು ತಾವಾಗಿ ಜರುಗಿದ್ದನ್ನೂ, ಆನಂದದಿಂದೋಡಿ ಬಂದ ಆಶೀರ್ವಾದ ಪದ್ಯವನ್ನೂ ನೋಡಿದರೆ ಈ ಚಿಕ್ಕ ದೇಸಾಯರು ತಮ್ಮ ಮಾತಾಮಹರಂತೆ ಮುಂದೆ ಪುಣ್ಯಪುರುಷರಾಗಬಹುದೆಂಬಂತೆ ತೋರುತ್ತದೆ.

ಹೊರಗಿನ ಜನರಿಗೆ ಈ ಪ್ರಕಾರದ ಆನಂದವಾಗಿರಲು ಮನೆಯವರಿಗೆ ಆದ ಆನಂದವನ್ನು ದೇವರೇ ಬಲ್ಲನು. ರಾ.ಬ॥ರವರ ತಂಗಿಯವರಾದ ವೀರವ್ವನವರೂ, ಧರ್ಮಪತ್ನಿಯವರಾದ ಗುರುಪಾದವ್ವನವರೂ, ಸಿದ್ಧಲಿಂಗವ್ವನವರೂ ಇನ್ನೂ ಉಳಿದ ಪರಿವಾರದ ಜನರೂ ಈ ಶಿಶುಜನನದಿಂದುಂಟಾದ ಸಂತೋಷದಿಂದ ಮೈಮರೆತರು. ಆನಂದಸಾಮ್ರಾಜ್ಯದಲ್ಲಿ ಲೋಲುಪ್ತರಾದರು. ಹರ್ಷಾಬ್ಧಿಯಲ್ಲಿ ಮುಳುಗಿ ಹೋದರು. ಕೂಸು ಹುಟ್ಟಿದ ಕೂಡಲೆ ಸೂಲಗಿತ್ತಿಯು "ದೇಸಾಯರು ಹುಟ್ಟಿದರು" ಎಂದು ಹೇಳಿದೊಡನೆ ಆನಂದಾತಿಶಯದಿಂದ ಎಲ್ಲರ ಸ್ಮೃತಿಯಿಲ್ಲದಂತಾಯಿತು. ಗಂಡುಕೂಸನ್ನು ಪ್ರತ್ಯಕ್ಷ ನೋಡುತ್ತಿದ್ದರೂ ಗಂಡು ಹೌದೋ ಅಲ್ಲವೋ ಎಂಬ ಭ್ರಾಂತಿಯುಂಟಾಗುವಂತೆ ಆನಂದವು ಮೇರೆದಪ್ಪಿತ್ತು. ಅಣ್ಣಂದಿರು ಕೈಹಿಡಿದ ಕಾರ್ಯವು ಈ ಹೊತ್ತಿಗೆ ಕೊನೆಗಂಡಿತೆಂದೂ, ಕಾಲ್ಗತಿಯಿಂದ ನಿರಾಧಾರವಾಗಿದ್ದ ಚಚಡಿಯ ದೇಸಗತಿಗೆ ಅಣ್ಣಂದಿರು ಹೆಣ್ಣುಕೊಟ್ಟು ಆಶ್ರಯಭೂತರಾಗಿ, ಈ ಹೊತ್ತಿಗೆ ಅದನ್ನು ಉದ್ಧರಿಸಿದಂತಾಯಿತೆಂದೂ, ಪುಣ್ಯವಂತರಾದ ಅಣ್ಣಂದಿರು ಹಿಡಿದ ಮಣ್ಣು ಹೊನ್ನಾಗಿ ಹೊಯಿತೆಂದೂ, ದುರ್ಬಲವಾದ ದೇಸಗತಿಗೆ ರಾ.ಬ॥ರವರು ತಮ್ಮ ಏಕಪುತ್ರಿಯನ್ನೇಕೆ ಕೊಟ್ಟರೆಂದು ಮೊದ ಮೊದಲು ಮಾತಾಡುತ್ತಿದ್ದ ಜನರಿಗೆ ಈಗಿನ ಚಚಡಿಯ ಸಂತೋಷದ ಸಂಗತಿಯು ಕೇಳಲಿಕ್ಕೆ ಪುಣ್ಯಕಥೆಯಂತಾಯಿತೆಂದೂ, ನಾವೆಲ್ಲರು ಕೂಡಿ ಹಾಳು ಮಣ್ಣಿನಲ್ಲಿ ಹಚ್ಚಿದ ವಂಶವೃಕ್ಷವು ಈಶ್ವರಾನುಗ್ರಹವೆಂಬ ಜಲಧಾರೆಯಿಂದ ರಸವತ್ತಾಗಿ ಬೆಳೆದು, ಪ್ರೇಕ್ಷಕರಿಗೆ ಆನಂದದಾಯಕವಾಗಿ ಶೋಭಿಸುತ್ತ, ಪಾಂಥಸ್ಥರಿಗೆ ನೆರಳನ್ನುಂಟುಮಾಡುತ್ತ, ಮಧುರವಾದ ಫಲಗಳನ್ನು ಫಲಿಸುತ್ತಿರುವದೆಂದೂ, ಅಣ್ಣಂದಿರ ಅಂತಃಕರುಣಶುದ್ಧಿಗೆ ಆ ಮಹಾಮಹಿಮನಾದ ಪರಮಾತ್ಮನು ಮೆಚ್ಚಿ ಇಚ್ಛಿತವನ್ನು ಈಡೇರಿಸುತ್ತಿರುವನೆಂದೂ, ವೀರವ್ವನವರು ಹಲವು ತರವಾಗಿ ಸಂತೋಷವನ್ನು ಹೊಂದಿದರು.

ಶಿಶುವಿನ ಸೌಂದರ್ಯವೂ ನಾಮಕರಣವೂ

ಶಿಶುವಾದರೋ ಸುಂದರವಾದ ಮುಖಮಂಡಲದಿಂದಲೂ, ದುಂಡನ್ನ ಮೈಕಟ್ಟಿನಿಂದಲೂ, ದೀರ್ಘವಾದ ದೇಹದಿಂದಲೂ, ನಿಡಿದಾದ ಬಾಹುಗಳಿಂದಲೂ, ವಿಶಾಲವಾದ ಎದೆಕಟ್ಟಿನಿಂದಲೂ, ಸರಳವಾದ ಬೆರಳುಗಳಿಂದಲೂ ಬಹು ಶೋಭಿಸುತ್ತಿರುವದು. ನೆಟ್ಟನ್ನ ಮೂಗೂ, ವಿಶಾಲವಾದ ಕಣ್ಣೂ, ಮಧುರವಾದ ತೇಜಸ್ಸೂ, ಪ್ರಸನ್ನಮುಖಮಂಡಲದಲ್ಲಿ ರಮಣೀಯವಾಗಿ ತೋರುತ್ತಿರುವುವು. ಸಾರಾಂಶ, ಈ ಶಿಶುವು ತಮ್ಮ ಅಜ್ಜಂದಿರ ರೂಪರೇಖಾ ಲಕ್ಷಣಗಳನ್ನೇ ಹರಣಮಾಡಿರುವದೆಂಬಂತೆ ಕಂಡು ಬರುವದು. ಮುಖದ ಮೇಲೆ ರಾಜಲಕ್ಷಣಗಳು ಈಗಿನಿಂದಲೇ ಕಂಡುಬರುತ್ತಲಿರುವವು. ಜನನವಾದ ೧೩ನೆಯ ದಿವಸಕ್ಕೆ ಶುಭಮುಹೂರ್ತದಲ್ಲಿ ಸರ್ವಸಮಾರಂಭದಿಂದ ಶಿಶುವನ್ನು ತೊಟ್ಟಿಲದಲ್ಲಿ ಹಾಕಿದರು. ಯಥೇಷ್ಟವಾದ ಮೃಷ್ಟಾನ್ನಗಳಿಂದಲೂ, ದಕ್ಷಿಣೆಗಳಿಂದಲೂ ಜಂಗಮರನ್ನು ಸಂತೋಷಪಡಿಸಿದರು. ನಾಮಕರಣವಿಧಿಯು ವಿಧಾನೋಕ್ತವಾಗಿಯೂ, ಸಮಾರಂಭ ಸಮೇತವಾಗಿಯೂ ಸಾಂಗವಾಯಿತು. ಕೂಸಿನ ರೂಪರೇಖಾ ವಿಲಾಸಗಳನ್ನು ನೋಡಿ, ಈತನು ಮುಂದೆ ಮಹಾಪ್ರಬಲಶಾಲಿಯಾಗಬಹುದೆಂದೂಹಿಸಿ, ಚಚಡಿಯ ದೇಸಗತಿಯಲ್ಲಿ ಹಿಂದಕ್ಕೆ ಬಹುಶೂರ ವೀರ ರಣಧೀರನಾಗಿದ್ದ ಚಂದ್ರಭೂಷಣ ದೇಸಾಯಿಯವರ ಹೆಸರನ್ನೇ ಇಡುವದು ಯೋಗ್ಯ ತೋರುವದೆಂದು ನಿಶ್ಚಯಿಸಿ, ಶುಭಲಗ್ನದಲ್ಲಿ ಆ ಶಿಶುವಿಗೆ "ಚಂದ್ರಭೂಷಣ" ದೇಸಾಯರು ಊರ್ಫ ಅಪ್ಪಾಸಾಹೇಬ ಎಂದು ಹೆಸರಿಟ್ಟರು. ಮೊದಲಿನ ಚಂದ್ರಭೂಷಣ ದೇಸಾಯರು ಕಿತ್ತೂರ ದೇಸಗತಿಯವರೊಡನೆ ಕಾಳಗಮಾಡಿ, ಅದರಲ್ಲಿ ಜಯ ಪಡೆದದ್ದರಿಂದ ಅವರು ಮಹಾಪ್ರತಾಪಶಾಲಿಗಳೆಂದು ಹೆಸರುವಾಸಿಯಾಗಿದ್ದರು. ಈ ಪ್ರತಾಪಶಾಲಿಗಳ ಹೆಸರೇ ಈ ಕೂಸಿಗೆ ಇಡಲ್ಪಟ್ಟಿತ್ತು. ಮೇಲಾಗಿ "ಚಂದ್ರಭೂಷಣ" ಎಂಬ ಹೆಸರು ಪ್ರತ್ಯಕ್ಷ ಮಹಾದೇವರಿಗೆ ಇರುವದರಿಂದ ದೇವರ ಹೆಸರನ್ನೂ ಇಟ್ಟಂತಾಯಿತು. ಸಾಕ್ಷಾತ್ ಚಂದ್ರಭೂಷಣನ ಅನುಗ್ರಹದಿಂದ ಚಂದ್ರಪ್ಪ ದೇಸಾಯಿಯಂತೆ ಈ ಚಂದ್ರಭೂಷಣ ದೇಸಾಯರೂ ಪ್ರತಾಪಶಾಲಿಯಾಗಲೆಂದು ಆಶಿಸುವೆವು.

ಸುಮಂಗಲೆಯರು ನಾಮಕರಣ ಸಮಾರಂಭದಲ್ಲಿ ಈ ಮುದ್ದುಶಿಶುವನ್ನು ತೊಟ್ಟಿಲೊಳಗಿಟ್ಟು, ಮೃದುಮಧುರ ಮಂಜುಳಸ್ವರದಿಂದ

ಮತ್ತಕೋಕಿಲವೃತ್ತ

ಮಂಗಳಾಕರ ಜೋ ಮನೋಹರ ರುದ್ರಗೌಡರ ಪೌತ್ರ ಜೋ ।
ಸಂಗಮೇಶ್ವರ ಲಿಂಗಸಂಗತ ಚಂದ್ರಭೂಷಣ ಜೋ ಜನೋ- ।
ತ್ತುಂಗವಂದಿತ ರಾಜ ಜೋ ಚಚಡೀ ಮಹೀಶ್ವರ ಜೋಯೆನು ।
ತ್ತಂಗನಾಜನಮೈದೆ ಪಾಡುತ ತೊಟ್ಟಿಲಂ ತವೆ ತೂಗಿದರ್ ॥೧॥

ಇದಲ್ಲದೆ ಆ ವೇಳೆಗೆ ಈ ಗ್ರಂಥಕರ್ತರಾದ ಪಾರಿಶವಾಡದ ಬಸವಾರ್ಯಕವಿಗಳು ರಚಿಸಿ ಕಳುಹಿಸಿದ ಜೋಗುಳ ಪದವನ್ನು ಪಾಡುತ್ತ ತೊಟ್ಟಿಲಲ್ಲ ತೂಗುತ್ತ ಸಂತೋಷಪಡುವವರಾದರು.

ಬಸವಾರ್ಯಕೃತ ಜೋಗುಳಪದ

ಜೋಜೋಯೆನ್ನ-ರಾಜಕುಮಾರ ಜೋಜೋ ॥ಪಲ್ಲ॥

ಜೋಜೋಯೆನ್ನ ಹುಣ್ಣಿವಿ ಚಂದ್ರಾ। ಜೋಜೋ ಎನ್ನ ಸದ್ಗುಣ ಸಾಂದ್ರಾ ॥
ಜೋಜೋ ಎನ್ನ ಪ್ರೀತಿಯ ಕೇಂದ್ರಾ। ಮುದ್ದು ಜೋಜೋ ಎನ್ನ ಚಚಡಿ ರಾಜೇಂದ್ರಾ
ಜೋಜೋ ॥ಅನುಪಲ್ಲ॥

ರುದ್ರವ್ವರಾಣಿಯ ಗರ್ಭದಿ ಜನಿಸಿ।ರುದ್ರಗೌಡರ ಮುದ್ದು ಮೊಮ್ಮಗನೆನಿಸಿ॥
ಭದ್ರದಾಋಕ ಚಿಕ್ಕದೇಸಾಯಿಯೆನಿಸಿ।ವೀರ।ಭದ್ರದೇವರ ದಿವ್ಯದಯದೊಳವತರಿಸಿ
ಜೋಜೋ ॥೧॥

ಶ್ರೀ ರುದ್ರಗೌಡರು ಧನ್ಯಧನ್ಯಾಗಿ। ವೀರಮ್ಮ ಗುರುಪಾದಮ್ಮ ಮೊದಲಾಗಿ।
ವೀರಭದ್ರಪ್ಪ ರುದ್ರವ್ವ ಮುಂದಾಗಿ।ಎಲ್ಲ।ವೀರಶೈವರಿಗೆ ಆನಂದವಾಗಿ
ಜೋಜೋ ॥೨॥

ಚಿಕ್ಕದೇಸಾಯರು ಹುಟ್ಟಿ ಲೇಸಾಗಿ।ಅಕ್ಕ ಕಾಶೀಬಾಯಿ ತಮ್ಮರೊಂದಾಗಿ।
ಚಿಕ್ಕ ಸಿದ್ಧಲಿಂಗಮ್ಮ ಮೊದಲಾಗಿ।ಬಹಳ।ಅಕ್ಕರದಿಂದಲಿ ಸಲಹುವರಾಗಿ
ಜೋಜೋ ॥೩॥

ಹಸಿದವರಿಗೆ ಹೋಳಿಗೆ ನೀಡಿದಂತೆ। ಬಿಸಲೇರಿದವರಿಗೆ ಕೊಡೆ ಹಿಡಿದಂತೆ॥
ಹಸನಾಗಿ ಶಶಿಬಿಂಬ ಮೂಡಿಬಂದಂತೆ। ಮುದ್ದು।ಶಿಶು ತಾನು ಜನಿಸಿದಾ ಗುರುದಯದಂತೆ
ಜೋಜೋ ॥೪॥

ಹಸುಳನು ಬೆಳೆಯಲಿ ಚಂದಚಂದಾಗೆ। ವಸುಧೀಶನಾಗಲಿ ಚಚಡೀ ಸೀಮಿಗೆ॥
ಕುಶಲದಿಂದಾಳಲಿ ದೇಶ ಲೇಸಾಗೆ। ಹೀಗೆ। ಬಸವಯ್ಯ ಹರಸುತ ತೊಟ್ಟಿಲ ತೂಗೆ
ಜೋಜೋ ॥೫॥

ಈ ಪ್ರಕಾರ ನಾಮಕರಣವಿಧಿಯೂ, ತೊಟ್ಟಿಲಸಮಾರಂಭವೂ ವೈಭವದಿಂದ ಜರುಗಿದವು. ಸುಮಂಗಲೆಯರು ಊಟ ಉಡುಗರೆಗಳಿಂದ ತೃಪ್ತರಾದರು.

ಯುರೋಪಿಯನ್ ಪದ್ಧತಿಯಂತೆ ಚಿಕ್ಕದೇಸಾಯರ ಸಂರಕ್ಷಣಾರ್ಥವಾಗಿ (ದೇಸಾಯರನ್ನು ಆಡಿಸಲಿಕ್ಕೆ) ಒಬ್ಬಿಬ್ಬರು ದಾಯಿಗಳು ಇಡಲ್ಪಟ್ಟರು. ಮುಂದೆ ಎಲ್ಲ ಪರಿವಾರದವರ ಪ್ರೀತಿಯಿಂದಲೂ, ಅಕ್ಕರತೆಯಿಂದಲೂ, ಆರೈಕೆಯಿಂದಲೂ ಚಂದ್ರಭೂಷಣ ದೇಸಾಯರು ದಿನದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತ, ಸಕಲ ಪರಿವಾರಕ್ಕೂ ಸಂತೋಷವನ್ನುಂಟು ಮಾಡಹತ್ತಿದರು. ಈ ಚಿಕ್ಕದೇಸಾಯರು ಜನಿಸಿ ಚಚಡಿಯ ದೇಸಗತಿಯನ್ನೂ, ತಮ್ಮ ಅಜ್ಜಂದಿರ ಅರಟಾಳಗೌಡಿಕಿಯ ಮನೆತನವನ್ನೂ ಉದ್ಧರಿಸಿದರೆಂದು ಧಾರಾಳವಾಗಿ ಹೇಳಬಹುದು. ಈ ಚಂದ್ರಭೂಷಣದೊರೆಗಳು ತಮ್ಮ ಅಜ್ಜಂದಿರಾದ ರಾ.ಬ।ರುದ್ರಗೌಡ ದೊರೆಗಳಂತೆ ದೀರ್ಘಾಯುಷಿಗಳೂ, ಸಂಪೂರ್ಣಸುಖಿಗಳೂ, ಕೀರ್ತಿವಂತರೂ, ಸದ್ಗುಣಿಗಳೂ ಆಗಿ ದೇಸಗತಿಯ ಹೆಸರನ್ನೂ, ಅಜ್ಜಂದಿರ ಹೆಸರನ್ನೂ ತರಲೆಂದು ಶ್ರೀ ಜಗನ್ನಿಯಾಮಕನನ್ನು ಪ್ರಾರ್ಥಿಸುವೆವು. ದುರ್ದೆಶೆಯಲ್ಲಿದ್ದ ಚಚಡಿಯ ದೇಸಗತಿಯು

ರಾ.ಬ||ರುದ್ರಗೌಡ ದೊರೆಗಳ ಕರುಣಾವಿಶಿಷ್ಟತೆಯಿಂದ ಉದ್ಧಾರವಾಗಿ, ಶ್ರೀಮಂತ ಅಣ್ಣಾಸಾಹೇಬರು ಮುಂದಕ್ಕೆ ಬಂದು, ಸೌಂದರ್ಯವತಿಯರೂ, ಸುಶೀಲೆಯರೂ ಆದ ಧರ್ಮಪತ್ನಿ ಶ್ರೀಮತಿ ರುದ್ರವ್ವನವರನ್ನು ಹೊಂದಿ, ತೀವ್ರವೇ ಸಂತತಿಯನ್ನೂ ಸಂಪತ್ತಿಯನ್ನೂ ಪಡೆದು ಹೆಸರುವಾಸಿಯಾದುದರಿಂದ ಇವರು ಮಹಾ ಪುಣ್ಯಶಾಲಿಗಳೆಂದು ತಿಳಿಯಬೇಕು.

❖❖

೧೭ನೇ ಭಾಗ

ಹಾರುವರ ಹೃದಯದೊಳಗಿನ ಹಾಲಾಹಲ

ರಾ.ಬ॥ರುದ್ರಗೌಡ ಸಾಹೇಬರ ಉತ್ಕರ್ಷವು ಉತ್ತರೋತ್ತರವಾಗಿ ಆಗಹತ್ತಲು, ಅದು ಕೆಲ ಬ್ರಾಹ್ಮಣರಿಗೆ ಸಹನವಾಗಲಿಲ್ಲ. ಇವರ ಸಮಾರಂಭಗಳನ್ನು ಕಣ್ಣುಗಳಿಂದ ನೋಡುವದೂ, ಇವರ ಅಭಿವೃದ್ಧಿಯನ್ನು ಕಿವಿಯಿಂದ ಕೇಳುವದೂ, ಇವರ ಹೆಚ್ಚಳವನ್ನು ಬಾಯಿಂದ ನುಡಿಯುವದೂ ಬ್ರಾಹ್ಮಣರಿಂದ ಆಗಲಿಲ್ಲ. ಇವರ ವೈಭವಾತಿಶಯವನ್ನು ಕಂಡು, ಅವರು ಒಳಗೇ ಕುದಿಯಹತ್ತಿದರು. ರಾವಬಹದ್ದೂರರವರನ್ನು ಯಾವದೊಂದು ಪೇಚಿನಲ್ಲಿ ಹಾಕಿ, ಇವರ ಉತ್ಕರ್ಷವನ್ನು ತಗ್ಗಿಸಿ ಮೋಜು ನೋಡಬೇಕೆಂದು ಇಚ್ಛಿಸುತ್ತಿದ್ದರು. ಗೋಕಾಕದ ಮಹಾಜನರು ಮತ್ತು ದೇಶಪಾಂಡೆಯರು ಇವರ ಮೇಲೆ ಯಾವದೊಂದು ಆರೋಪವನ್ನು ಹೊರಿಸಬೇಕೆಂದು ಭಗೀರಥ ಪ್ರಯತ್ನಮಾಡಿ ಮುಂಬಯಿಯ ಬಾಗಿಲದ ವರೆಗೂ ಬಡಿದಾಡಿ ಬಗಳಿಯಾಗಿ ಹೋದ ಸಂಗತಿಯು ಹಿಂದೆ ಬರೆದಿರುವದಷ್ಟೇ. ಅಷ್ಟಾದರೂ ಅವರು ಸುಮ್ಮನೆ ಕೂಡ್ರಲಿಲ್ಲ. ಇನ್ನಾದರು ಯಾವದೊಂದು ಹಂಚಿಕೆಯನ್ನು ತೆಗೆದು, ಇವರ ಮೇಲಿರುವ ಸರಕಾರದ ವಿಶ್ವಾಸವನ್ನು ಹಾರಿಸಬೇಕೆಂದು ಕೆಟ್ಟ ಒಳಸಂಚು ಮಾಡತೊಡಗಿದರು. ಮಹಾಜನ ದೇಶಪಾಂಡೆಯರು ಪ್ರತ್ಯಕ್ಷವಾಗಿ ಮುಂದೆ ಬಂದು ನಿಂತು, ಸ್ವತಃ ಫಿರ್ಯಾದಿಯನ್ನು ಮಾಡಲಿಕ್ಕೆ ಅವರ ಮೋರೆ ಇದ್ದಿಲ್ಲ. ಯಾಕಂದರೆ ಅವರು ಹಿಂದಿನ ಪ್ರಕರಣದಲ್ಲಿ ಹಿಮ್ಮೋಡವಾಗಿದ್ದರು. ಅದರಿಂದ ಈ ಮಹಾಜನ ದೇಶಪಾಂಡೆಯರೇ ಮೊದಲಾಗಿ ಬಹುಜನ ಬ್ರಾಹ್ಮಣರು ಮಸಲತ್ತು ಮಾಡಿ ಒಂದು ಬನಾವಟ ವ್ಯಾಜ್ಯದ ರಚನೆಯನ್ನು ಮಾಡಿ, ವಾದಿ-ಹಣಮಾ ಬಿನ್ ಭೀಮಾ ಮೆಳವಂಕಿ ಸಾಕೀನ ತುಕಾನಹಟ್ಟಿ ಮಜರೆ ಕಲ್ಲೊಳ್ಳಿ ತಾಲೂಕ ಗೋಕಾಕ ಎಂಬ ಒಬ್ಬ ಹರಕ ಮನುಷ್ಯನ ಕಡೆಯಿಂದ ಪ್ರತಿವಾದಿ ರಾ.ಬ॥ರುದ್ರಗೌಡ ಸಾಹೇಬರವರ ಮೇಲೆ ಗೋಕಾಕ ಸಬ್‌ಜಜ್ಜ ಕೋರ್ಟಿನಲ್ಲಿ ೧೬೦ ರೂಪಾಯಿಯ ದಿವಾಣಿ ಅಸಲನಂಬರ ೧೧೪/೧೯೦೪ನೇ ದಾವೆಯನ್ನು ದಾಖಲ ಮಾಡಿಸಿದರು. "ರಾ॥ಬ॥ರವರು ನನ್ನನ್ನು ಧಮಿಕಿಯಿಂದ ಮನೆಬಿಡಿಸಿ ಹೊರಗೆ ಹಾಕಿಸಿದ ಕಾರಣ ನನಗೆ ಬಹಳ ಹಾನಿಯಾಗಿರುತ್ತದೆ" ಎಂಬದಾಗಿ ವಾದಿ ಹಣಮಾ ಈತನ ದಾವೆಯ ಅಭಿಪ್ರಾಯವಾಗಿತ್ತು. ಸಬ್‌ಜಜ್ಜರು ವಾದಿ ಹಣಮಾ ಈತನ ದಾವೆಯನ್ನು ರದ್ದು ಪಡಿಸಿದರು. ಅದರಿಂದ ಬ್ರಾಹ್ಮಣರಿಗೆ ಸಮಾಧಾನವೆನಿಸದೆ ಡಿಸ್ಟ್ರಿಕ್ಟ ಜಜ್ಜಕೋರ್ಟಿಗೆ ಅಪೀಲು ಮಾಡಿಸಿದರು. ಅಪೀಲ ನಂಬರ ೪೫/೧೯೦೭ ಸಬ್‌ಜಜ್ಜರು ಈ ದಾವೆ ರದ್ದು ಪಡಿಸಿದ್ದನ್ನು ಡಿಸ್ಟ್ರಿಕ್ಟ ಜಜ್ಜರಾದ ಮೆ॥ಈ ಕ್ಲೆಮೆಂಟ್ಸ ಸಾಹೇಬ ಬಹದ್ದೂರರವರು ಕಾಹೀಮು ಮಾಡಿ ಖರ್ಚುಸಹಿತವಾಗಿ ಸದರೀ ಅಪೀಲು ಕಿತ್ತುಹಾಕಿದರು. ತಾರೀಖು ೪ನೇ ಎಪ್ರೀಲ ಸನ್ ೧೯೦೮ನೇ ಇಸವಿ. ಸಬ್‌ಜಜ್ಜರಿಗೂ ಮೆ॥ಡಿಸ್ಟ್ರಿಕ್ಟ ಜಜ್ಜರಿಗೂ ಈ ದಾವೆಯು

ಬನಾವಟ ಇರುವದೆಂಬದು ಕೂಡಲೆ ತಿಳಿದದರಿಂದ ಆ ದಾವೆಯೂ, ಅಪೀಲು ಕೂಡಿಯೇ ಕಿತ್ತು ಹೋದವು. ಅದರೊಡನೆ ಮಹಾಜನ ದೇಶಪಾಂಡೆಯರ ಮುಖತೇಜವೂ ಕಿತ್ತುಹೋಯಿತು. ಅವರ ಕಪಟ ಪ್ರಯತ್ನವೆಲ್ಲ ಹೊಳೆಯೊಳಗೆ ಹುಣಸೀ ಹಣ್ಣು ತೊಳೆದಂತಾಯಿತು. ರಾವಬಹದ್ದೂರವರಿಗೆ ದೂಷಣೆಯುಂಟಾಗಲೆಂದು ಬ್ರಹ್ಮವೃಂದವೆಲ್ಲ ಎಷ್ಟು ದುರಾಶಾಬದ್ಧರಾಗಿದ್ದರೋ ಅಷ್ಟು ನಿರಾಶೆಯುಳ್ಳವರಾದರು. ಅದರಿಂದಲೂ ಬ್ರಾಹ್ಮಣರ ಹೃದಯದೊಳಗಿನ ಹಾಲಾಹಲವು ಕ್ಷೋಭಿಸಹತ್ತಿ, ಇನ್ನು ಯಾವ ತಂತ್ರದಿಂದ ರಾವಬಹದ್ದೂರವರನ್ನು ಗೊಂದಲದಲ್ಲಿ ಹಾಕಬೇಕೆಂಬದನ್ನೇ ಚಿಂತಿಸಹತ್ತಿದರು.

ಈ ಮಹಾಜನ ಮತ್ತು ದೇಶಪಾಂಡೆಯರೇ ಮೊದಲಾದ ಬ್ರಾಹ್ಮಣಜನರು ಇದೊಂದೇ ವ್ಯಾಜ್ಯವನ್ನು ಹೂಡಲಿಲ್ಲ. ಹತ್ತು ಕಲ್ಲೊಗೆದರೆ ಒಂದಾದರೂ ತಾಕಬಹುದೆಂದೂಹಿಸಿ ಕುರುಬರ ಜಮೀನ ಸಂಬಂಧವಾದ ಮತ್ತೂ ಒಂದು ಬನಾವಟ ಖಟ್ಲೆಯ ರಚನೆಯನ್ನು ಮಾಡಿ, ಮಹಾಜನ ದೇಶಪಾಂಡೆಯರ ಆಪ್ತನಾದ ವಾದಿ-ವೆಂಕಾಜಿ ಶ್ರೀನಿವಾಸ ನಾಗನೂರ ತಾಲೂಕ ಗೋಕಾಕ ಈತನ ಕಡೆಯಿಂದ ಪ್ರತಿವಾದಿ- ರಾ.ಬ॥ರುದ್ರಗೌಡ ಸಾಹೇಬರು ಮತ್ತು ಸಿದ್ಧಪ್ಪ ಬಿನ್ ಸಿದ್ಧಪ್ಪ ಕಂಬಳಿ ಸಾಕೀನ ತುಕಾನಹಟ್ಟಿ ಮಜರೆ ಕಲ್ಲೊಳ್ಳಿ ತಾಲೂಕ ಗೋಕಾಕ ಮುಂತಾದ ಎಂಟು ಮಂದಿಯ ಮೇಲೆ, ಅದೇ ಗೋಕಾಕ ತಾಲೂಕ ಸಬ್‌ಜಜ್ಜ ಕೋರ್ಟಿನಲ್ಲಿ ೧೦೫ ರೂಪಾಯಿಯ ದಾವೆಯನ್ನು ದಾಖಲಮಾಡಿಸಿದರು. ಅಸಲ ದಾವಾ ನಂಬರ ೧೨೭/೯೦೪. ಗೋಕಾವಿಯ ಮುನಸೂಫರಾದ ರಾ.ಸಾ॥ವಾಮನ ವಿಶ್ವನಾಥ ಬಾಪಟ ಬಿ.ಎ.ಎಲ್‌ಎಲ್.ಬಿ ಇವರನ್ನು ಮಹಾಜನ ದೇಶಪಾಂಡೆ ಮೊದಲಾದವರು ದುರ್ಬೋಧನೆಯಿಂದ ತಮ್ಮೊಳಗೆ ಎಳಕೊಂಡಿದ್ದರಿಂದ ಮುನಸೂಫರು ಈ ಖಟ್ಲೆಯಲ್ಲಿ ರಾ.ಬ॥ರುದ್ರಗೌಡರ ಅಂಗವಿರುವದೆಂತಲೂ, ಇವರು ಈ ಭಾಗದ ಇಲಾಖಾ ಸಾಹೇಬರಿರುವದರಿಂದ ಜನರು ಅಂಜಿ ಇವರಂತೆ ಸಾಕ್ಷಿಯನ್ನು ಹೇಳುವರೆಂತಲೂ ಶರಾ ಬರೆದು, ಸದರ ದಾವೆಯನ್ನು ವಾದಿ-ವೆಂಕಾಜಿಯಂತೆಯೇ ಕಾಹೀಮು ಮಾಡಿದರು. ಸಬ್ ಜಜ್ಜರ ಈ ನಿರ್ಣಯವು ಅನ್ಯಾಯದ್ದಾಯಿತೆಂದು ಕೂಡಲೆ ಸದರ ವ್ಯಾಜ್ಯದ ಸಂಬಂಧವಾಗಿ ಪ್ರತಿವಾದಿಯರ ಕಡೆಯಿಂದ ಡಿಸ್ಟ್ರಿಕ್ಟ ಜಜ್ಜಕೋರ್ಟಿಗೆ ನಂಬರ ೧೮೭/೯೦೭ನೆಯ ಅಪೀಲು ದಾಖಲಾಯಿತು. ಈ ಅಪೀಲ ಸುನಾವಣೆಯಲ್ಲಿ ರಾವಬಹದ್ದೂರವರ ಸಾಕ್ಷಿಯು ತೆಗೆದುಕೊಳ್ಳಲ್ಪಟ್ಟಿತು. ಡಿಸ್ಟ್ರಿಕ್ಟ ಜಜ್ಜರಾದ ಮೆ॥ ಈ. ಕ್ಲೆಮೆಂಟ ಸಾಹೇಬ ಬಹದ್ದೂರರವರು ಈ ದಾವೆಯು ಆರಂಭದಿಂದ ಕಡೆತನಕ ಕೃತ್ರಿಮತನದ್ದಿರುತ್ತದೆಂತಲೂ, ರಾ.ಬ॥ಅರಟಾಳ ಸಾಹೇಬರ ವಿಷಯವಾಗಿ ದ್ವೇಷಮೂಲಕ ಈ ದಾವೆಯ ರಚನೆಯಾಗಿರುವದೆಂತಲೂ, ರಾವಬಹದ್ದೂರರವರಿಗೆ ಯಾವದೊಂದು ದೂಷಣೆ ಕೊಡುವ ಉದ್ದಿಶ್ಯವಾಗಿಯೇ ಬ್ರಾಹ್ಮಣರು ಒಳಸಂಚು ಮಾಡಿ, ಅಭುಕ್ತವಾಗಿ ಈ ಕಲಹವನ್ನೆಬ್ಬಿಸಿರುವರೆಂತಲೂ ಪೂರ್ಣ ಮನಗಂಡು, ಸಬ್ ಜಜ್ಜಕೋರ್ಟನಲ್ಲಿ ಆದ ನಿರ್ಣಯವನ್ನು ರದ್ದುಪಡಿಸಿ, ಖರ್ಚು ಸಹಿತ ಆ ಭೂಮಿಯನ್ನು ಕುರುಬರಿಗೆ ಕೊಡಿಸಿದರು. ತಾರೀಖು ೨೫ನೇ ಜಾನೇವಾರಿ ಸನ್ ೧೯೦೯ನೇ ಇಸವಿ. ಮೆ॥ಡಿಸ್ಟ್ರಿಕ್ಟ್ ಜಜ್ಜರು ತಮ್ಮ ಠರಾವಿನಲ್ಲಿ ರಾ.ಬ॥ರುದ್ರಗೌಡರು ನಿರ್ದೋಷಿಗಳಿರುತ್ತಾರೆಂದೂ, ಇವರ ಮೇಲೆ ದೋಷದ ಛಾಯಾ ಸಹ ಬೀಳುವಂತಿಲ್ಲೆಂದೂ, ಇವರು ಒಳ್ಳೇ ನ್ಯಾಯನಿಷ್ಠರೂ, ಪ್ರಾಮಾಣಿಕರೂ, ಇದ್ದು ಇವರು ಬಹು ಘನವಂತಿಕೆಗೆ ಪಾತ್ರರಿರುವರೆಂತಲೂ, ಇವರ ಮೇಲೆ ಯಾರೂ ಎಳ್ಳಷ್ಟು ಕುಂದಿಡಲಿಕ್ಕೆ ಆಸ್ಪದವಿಲ್ಲೆಂತಲೂ, ವಾದಿಯು ಕೀಳಜನರ ದುರ್ಬೋಧನೆಯಿಂದ ಇವರ ಮೇಲೆ ಯಾವದೊಂದು ದೋಷಾರೋಪ ಹೊರಿಸುವ ಉದ್ದಿಶ್ಯವಾಗಿ ಈ ಬನಾವಟ ದಾವೆಯನ್ನು ತಂದಿರುವನೆಂತಲೂ, ಇದೆಲ್ಲ ಬನಾವಟಕೃತ್ಯಕ್ಕೆ ಮುನಸೂಫರೇ ಪಾತ್ರರಿರುವರೆಂತಲೂ ಬರೆದಿರುವರು. ಈ ಮೆ॥ಕ್ಲೆಮೆಂಟ ಸಾಹೇಬರವರ ಜಜ್ಜಮೆಂಟನ್ನು ನೋಡಿದರೆ ಯಾವತ್ತು ಸತ್ಯಸಂಗತಿಯು ವಿಶದವಾಗಿ ತಿಳಿಯುವದು. ಮತ್ತು ರಾ.ಸಾ॥ಸಬ್‌ಜಜ್ಜರಾದ ಬಾಪಟ ಇವರ ಠರಾವು ನೋಡಿದರೆ ಅವರ ಕೃತ್ರಿಮತನವೂ, ಬ್ರಾಹ್ಮಣರ

ಕಪಟತನವೂ ಸ್ಪಷ್ಟವಾಗಿ ಕಂಡುಬರುತ್ತದೆ. ಬೇಕಾದವರು ನೋಡಿಕೊಳ್ಳತಕ್ಕದ್ದು. ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಈ ದಾವೆಯು ರದ್ದಾದ ಕೂಡಲೆ ರಾ.ಸಾ॥ಬಾಪಟ ಮುನಸೂಫರಿಗೆ ಕೆಟ್ಟ ಹವೆಯುಳ್ಳ ಕಾರವಾರ ಜಿಲ್ಲೆಗೆ ವರ್ಗವಾಯಿತು.

ಬ್ರಾಹ್ಮಣರು ಬನಾವಟವಾಗಿ ರಚಿಸಿದ ಇವೆರಡೂ ದಾವೆಗಳು ರದ್ದಾಗಿ ರಾ.ಬ॥ರವರ ನ್ಯಾಯವಂತಿಕೆಯು ಜನರಲ್ಲಿಯೂ, ಸರಕಾರದಲ್ಲಿಯೂ ಮತ್ತಿಷ್ಟು ಬೆಳೆದದರಿಂದ ಬ್ರಹ್ಮವೃಂದವೆಲ್ಲ ಅಧೋಮುಖವಾಯಿತು. ಮಹಾಜನ ದೇಶಪಾಂಡೆಯರೇ ಮೊದಲಾದವರ ಮುಖಗಳು ತಗ್ಗಿದವು. ಅವರೆಲ್ಲರ ಕಪಟ ಪ್ರಯತ್ನವು ಅವರಿಗೇ ಮುಳುವಾಯಿತು. ರಾವಬಹದ್ದೂರವರ ಪ್ರಖ್ಯಾತಿಯು ಬೆಳೆದು ಹೋಯಿತು. ಸೂರ್ಯನ ಮೇಲೆ ಮಣ್ಣು ತೂರ ಹೋದರೆ ಅದು ತನ್ನ ಕಣ್ಣ ಮೇಲೆಯೇ ಬೀಳುವದಲ್ಲದೆ ಆ ಸೂರ್ಯದೇವನು ತೇಜಃಪುಂಜನಾಗಿಯೇ ಇರುತ್ತಾನೆ.

ವಾಲೀಕಾರರ ತ್ರಾಸವನ್ನು ಕಡಿಮೆ ಮಾಡಿದ್ದು

"ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸಹ ಪಂಡಿತಃ" ಎಂಬ ಸಂಸ್ಕೃತ ವಾಕ್ಯವು ತನ್ನಂತೆ ಅನ್ಯರನ್ನು ತಿಳಿಯುವವನೇ ಮನುಷ್ಯನೆಂಬದಾಗಿ ಹೇಳುತ್ತಿರುವದು. ಆದರೆ ಇಂತಹ ಮನುಷ್ಯರು ಜಗತ್ತಿನಲ್ಲಿ ತೀರ ವಿರಳರಾಗಿರುವರು. ಇಹಪರವೆರಡೂ ಸುಖಸಾಧನಾರ್ಥವಾಗಿ ಎಲ್ಲರೂ ಇಂತಹ ಸದ್ವರ್ತನ, ಭೂತದಯವುಳ್ಳವರೇ ಆಗಬೇಕಾಗಿರುವಲ್ಲಿ ಸಕೃದ್ದರ್ಶನಕ್ಕೆ ಅಂತಹ ಮಹನೀಯರ ಅಭಾವವೇ ಕಂಡು ಬರುವಂತಿದೆ. ಇದ್ದರೂ ಅಂತಹ ಪುಣ್ಯಾತ್ಮರು ಎಲ್ಲೆಲ್ಲಿಯೋ ವಿರಳವಾಗಿರುವರು. ಪ್ರತಿಯೊಬ್ಬನೂ ಈ ಬಗೆಯ ವರ್ತನವುಳ್ಳವನಾಗಿರುವದು ಅಸಂಭವನೀಯವಾಗಿದ್ದರೂ ಅನೇಕ ಪ್ರಜೆಗಳನ್ನಾಳುವ ದೊರೆಗಳಾದರೂ ಈ ಅಮೌಲ್ಯವಾದ ಗುಣವಂತರಾಗಿರುವದವಶ್ಯವಾಗಿರುತ್ತದೆ. ಯಾಕಂದರೆ "ಯಥಾ ರಾಜಾ ತಥಾ ಪ್ರಜಾ" ಎಂಬ ಉಕ್ತಿಗನುಸಾರವಾಗಿ ರಾಜನು ಪ್ರಜಾವಾತ್ಸಲ್ಯವನ್ನು ತೋರಿಸುವವನಾದರೆ ಪ್ರಜೆಗಳು ಸಹಜವಾಗಿ ರಾಜನಿಷ್ಠೆಯುಳ್ಳವರಾಗುತ್ತಾರೆ. ಪ್ರಜೆಗಳಿಗೆ ಸುಖವಾಗುವಂತೆ ಅವರನ್ನು ಪರಿಪಾಲಿಸುವದೇ ರಾಜಧರ್ಮವಾಗಿರುತ್ತದೆ. ಪ್ರಜೆಗಳು ಸುಖಶಾಂತಿಯಿಂದಲೂ, ನಿರ್ವಿಘ್ನದಿಂದಲೂ ವಾಸಿಸಬೇಕಾದರೆ ರಾಜರೂ, ಆ ರಾಜ್ಯದೊಳಗಿನ ಸಣ್ಣ ದೊಡ್ಡ ಅಧಿಕಾರಿಗಳೂ ತಮ್ಮಂತೆ ಪ್ರಜೆಗಳನ್ನೂ ತಿಳಿದು ವರ್ತಿಸಬೇಕಾಗುತ್ತದೆ. ಪ್ರಜೆಗಳನ್ನು ಮಕ್ಕಳಂತೆ ತಿಳಿದು ಸಂರಕ್ಷಿಸುವ ರಾಜನೇ ಆಚಂದ್ರಾರ್ಕ ಕೀರ್ತಿಗೆ ಪಾತ್ರನಾಗುತ್ತಾನೆ. ಅಂತಹ ಶುದ್ಧಾಂತಃಕರಣವುಳ್ಳ ಅಧಿಕಾರಿಗಳೇ ಹೆಸರುವಾಸಿಯಾಗುತ್ತಾರೆ. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು" ಎಂಬ ಸರ್ವಜ್ಞೋಕ್ತಿಯಂತೆ, ಅಂತಹ ಅಧಿಕಾರಿಗಳು ಲೋಕಪ್ರಿಯರಾಗಿದ್ದಂತೆ ದೇವರ ಪ್ರೀತಿಗೂ ಕಾರಣರಾಗುತ್ತಾರೆ. ಈ ಪ್ರಕಾರ ಐಹಿಕಾಮುಷ್ಮಿಕ ಸುಖಸಾಧನೀಭೂತರಾಗಿ ಕೆಲಸಮಾಡುತ್ತಿರುವ ಮಹನೀಯರಲ್ಲಿ ರಾ.ಬ॥ರುದ್ರಗೌಡದೊರೆಗಳು ಒಬ್ಬರಾಗಿರುತ್ತಾರೆಂದು ಬೇರೆ ಹೇಳುವ ಕಾರಣವಿಲ್ಲ. ಇವರ ಕಾರ್ಯಗಳೇ ಇವರ ಕೋಮಲ ಹೃದಯವನ್ನು ಜಗಜ್ಜನಕ್ಕೆ ತೋರಿಸುತ್ತವೆ. ಇವರು ಕೇವಲ ಪ್ರಜೆಗಳ ಅರ್ಥಾತ್ ರೈತರ ಹಿತವನ್ನು ಚಿಂತಿಸಿ ಕೆಲಸಮಾಡುತ್ತಿರುವ ಸತ್ಯಸಂಗತಿಯು ಈವರೆಗೂ ಈ ಚರಿತ್ರವನ್ನು ಓದಿದ ವಾಚಕ ಮಹಾಶಯರಿಗೆ ತಿಳಿಯದೆ ಹೋಗಿರಲಿಕ್ಕಿಲ್ಲ. ರೈತಜನರ ಹಾಗೂ ಬಡಬಗ್ಗರ ಹಿತದ ಕಾರ್ಯಗಳು ಇವರಿಂದ ಈವರೆಗೆ ಎಷ್ಟೋ ಆಗಿರುವವು; ಆಗುತ್ತಿರುವವು; ಇನ್ನೂ ಆಗುವದರಲ್ಲಿರುವವು. ಈ ಭೂತಭವಿಷದ್ವರ್ತಮಾನಗಳಲ್ಲಿಯ ಬಡಬಗ್ಗರ ಎಲ್ಲ ಹಿತದ ಕಾರ್ಯಗಳಲ್ಲಿ ಇವರು ಬಡ

ವಾಲೀಕಾರರಿಗುಂಟಾಗುತ್ತಿದ್ದ ಟಪಾಲಿನ ತ್ರಾಸವನ್ನು ಕಡಿಮೆಮಾಡಿದ ಸಂಗತಿಯೊಂದೂ ಹೇಳತಕ್ಕ ಸಂಗತಿಯಾಗಿರುವದು.

ಪ್ರತಿಯೊಂದು ಹಳ್ಳಿಯ ಗ್ರಾಮಸ್ಥರ ಟಪಾಲನ್ನು ಆಯಾ ಗ್ರಾಮಗಳ ಓಲೆಕಾರರು ವಾರದಲ್ಲಿ ಎರಡಾವರ್ತಿ ಅಥವಾ ಪ್ರಸಂಗವಿಶೇಷದಲ್ಲಿ ಪ್ರತಿದಿವಸವೂ ತೆಗೆದುಕೊಂಡು ಹೋಗಿ, ತಾಲೂಕಿಗೆ ತಲುಪಿಸಬೇಕಾಗಿರುತ್ತದಷ್ಟೆ? ಈ ಪ್ರಕಾರವಾಗಿ ತಾಲೂಕಿನೊಳಗಿನ ಎಲ್ಲ ಹಳ್ಳಿಗಳಿಂದಲೂ ಓಲೆಕಾರರು ಗ್ರಾಮಸ್ಥರ ಟಪಾಲುಗಳನ್ನು ತಾಲೂಕಿನಲ್ಲಿರುವ ಅಧಿಕಾರಿಗಳಿಗೆ ಮುಟ್ಟಿಸಲಿಕ್ಕೆ ಎಡಬಿಡದೆ ಎಡತಾಕುತ್ತಿರುವದು ಎಲ್ಲರಿಗೂ ಗೊತ್ತಿರುವದು. ಆದರೆ ಈ ಬಡ ಓಲೆಕಾರರಿಗೆ ಒದಗುವ ಕಷ್ಟವು ಮಾತ್ರ ಯಾರಿಗೂ ಗೊತ್ತಿರಲಿಕ್ಕಿಲ್ಲ. ಗ್ರಾಮಸ್ಥರ ಟಪಾಲಿನಲ್ಲಿ ಮುಲಿಕೀ ಮತ್ತು ಫೌಜದಾರಿ ಇವೆರಡೂ ಖಾತೆಯ ಕಾಗದಪತ್ರಗಳಿರುವದರಿಂದ ಅವುಗಳನ್ನು ಮುಲಿಕೀ ಅಧಿಕಾರಿಗಳಿಗೂ, ಮತ್ತು ಪೊಲೀಸ ಅಧಿಕಾರಿಗಳಿಗೂ ಮುಟ್ಟಿಸತಕ್ಕದ್ದಿರುವದು. ಪೊಲೀಸನಾತೆಯ ಟಪಾಲನ್ನು ಫೌಜದಾರಿ ಆರ್ಡರಲಿಯು ತೆಗೆದುಕೊಳ್ಳುತ್ತಿರುತ್ತಾನೆ. ಮುಲಿಕೀ ಟಪಾಲನ್ನು ಮುಲಕೀನಾಯಕನು ಅಥವಾ ಕಾರಕೂನರು ತೆಗೆದುಕೊಳ್ಳುತ್ತಿರುತ್ತಾರೆ. ಓಲೆಕಾರರು ಟಪಾಲ ತಂದ ವೇಳೆಯಲ್ಲಿ ಅವರು ಇಲ್ಲದ್ದರಿಂದಲೂ ಅಥವಾ ಬೇರೆ ಕೆಲಸದಲ್ಲಿ ತೊಡಗಿರುವದರಿಂದಲೂ ಟಪಾಲು ತೆಗೆದುಕೊಳ್ಳುವವ ರೆಗೂ ಈ ಓಲೆಕಾರರು ಕೂತು ಕೂತು ಬೇಸರಿಯಬೇಕಾಗುತ್ತದೆ. ಟಪಾಲನ್ನು ತೀವ್ರ ತೆಗೆದುಕೊಳ್ಳದ್ದಕ್ಕೆ ಎಷ್ಟೋ ಸಾರೆ ಅಲ್ಲಿಯೇ ವಸತಿಯನ್ನು ಮಾಡಬೇಕಾಗುತ್ತದೆ. ಫೌಜದಾರರ ಮುಕ್ಕಾಮ ಬೇರೆ ಕಡೆಗೆ ಇದ್ದರೆ, ಸ್ಥಳೀಯ ಕಾರಕೂನ ಮುಂತಾದವರು ಜರೂರವಾಗಿ ಕಳಿಸಬೇಕಾಗಿರುವ ಲಖೋಟೆಗಳನ್ನು ಆಗಿಂದಾಗ್ಗೆ ಮುಟ್ಟಿಸಲಿಕ್ಕೆ ಈ ಬಡ ವಾಲೀಕಾರರನ್ನೇ ಅತ್ತ ಕಡೆಗೆ ಅಟ್ಟುವರು. ನಿರ್ವಾಹಿಲ್ಲದೆ ಅಲ್ಲಿಗೆ ಹೋಗುತ್ತಲೆ ಫೌಜದಾರರಾಗಲಿ, ಅವರ ಸಿಪಾಯರಾಗಲಿ, ಯಾವದೊಂದು ಬಿಟ್ಟಿಯ ಕೆಲಸವನ್ನು ಇವರ ಕೊರಳಿಗೇ ತೊಡಕಿಸುವರು. ತಕರಾರ ಮಾಡಿದರೆ ಬೆನ್ನಮೇಲೆ ಲತ್ತಾ ಪ್ರಹಾರಗಳು ಬರುವವು. ಕಾರಕೂನ, ನಾಯಕ, ಸಿಪಾಯಿ ಮುಂತಾದವರು ಈ ಟಪಾಲ ತಂದ ಓಲೆಕಾರರಿಗೆ ಸರಕಾರಿಯ ಕೆಲಸದ್ದಾಗಲಿ, ತಮ್ಮ ಮನೆತನದ ಖಾಸಗೀ ಕೆಲಸದ್ದಾಗಲಿ ಇಲ್ಲದ್ದೊಂದು ಬಿಟ್ಟಿಯನ್ನು ಹಚ್ಚೇ ಹಚ್ಚುವರು. ಟಪಾಲು ಕೊಟ್ಟು ಹೋಗುವ ಮಟ್ಟಿಗಾಗಿ ಅವರು ಬರಬೇಕಾಗಿರಲು, ಇಲ್ಲಿಗೆ ಬಂದು ಈ ಭೂತಗಳ ಕಯ್ಯಲ್ಲಿ ಸಿಕ್ಕು ಪೇಚಾಡಬೇಕಾಗುವದು. ಓಲೆಕಾರರನ್ನಲ್ಲದೆ ಟಪಾಲಕೊಡುವ ಕೆಲಸಕ್ಕಾಗಿ ಗ್ರಾಮಸ್ಥರು ಹೊಲೆಯರನ್ನು ಸರತಿಯ ಮೇರೆಗೆ ಕಳಿಸುತ್ತಿರುತ್ತಾರೆ. ಈ ಓಲೆಕಾರರೂ, ಹೊಲೆಯರೂ ಮುಂತಾದವರು ಮಳೆಗಾಲದಲ್ಲಿಯೂ, ಚಳಿಗಾಲದಲ್ಲಿಯೂ, ಬಿಸಿಲುಕಾಲದಲ್ಲಿಯೂ ತಪ್ಪದೆ ಟಪಾಲಿಗಾಗಿ ತಾಲೂಕಿಗೆ ಎಡತಾಕಲೇಬೇಕಾಗುವದು. ದೇವರ ಮೇಲಿನ ಹೂವು ತಪ್ಪಿದರೂ ಇವರಿಗೆ ಈ ಟಪಾಲಿನ ಎಡತಾಕು ತಪ್ಪುವಂತಿಲ್ಲ. ಈ ಬಡ ಸನದಿಯರಿಗೂ ಗ್ರಾಮಸ್ಥರ ಕಯ್ಯೊಳಗಿನ ಕಲ್ಲುಗಳಂತೆ ಈ ಟಪಾಲಿನ ಕೆಲಸಕ್ಕಾಗಿ ಒಗೆದಲ್ಲಿ ಹೋಗಿ ಬೀಳಬೇಕಾಗುತ್ತದೆ. ತಾಲೂಕ ದೂರಿದ್ದರೆ ಈ ಬಡಪ್ರಾಣಿಗಳು ಒಂದೆರಡು ರೊಟ್ಟಿಗಳನ್ನು ಕಟ್ಟಿಕೊಂಡು ಬಂದಿರುತ್ತಾರೆ. ಸಮೀಪವಿದ್ದರೆ ಟಪಾಲು ಕೊಟ್ಟ ಕೂಡಲೆ ತಿರುಗಬೇಕೆಂದು ಹಾಗೆಯೇ ಬಂದಿರುತ್ತಾರೆ. ಆದರೆ ತಾಲೂಕಿಗೆ ಬಂದೊಡನೆ ಇವರೆಲ್ಲರಿಗೆ ಯಾವದೊಂದು ಬಿಟ್ಟಿಯ ಗ್ರಹಣವು ಹಿಡಿಯುತ್ತದೆ. ಎಷ್ಟು ಪರಿಯಿಂದ ಬಿಡಿಸಿಕೊಳ್ಳಲಿಕ್ಕೆ ಇವರು ಪ್ರಯತ್ನಿಸಿದರೂ ಆ ಬಿಟ್ಟಿಯ ಗ್ರಹಣವು ಇವರನ್ನು ಬಿಡುವದಿಲ್ಲ. ಹೊಟ್ಟೆಯನ್ನು ಕಟ್ಟಿಕೊಂಡಾದರೂ ಈ ಬಿಟ್ಟಿಯನ್ನು ಮಾಡಲಿಕ್ಕೇ ಬೇಕಾಗುತ್ತದೆ. ಆಗ್ಗೆಯೇ ಇವರ ಮೋಕ್ಷಕಾಲವು. ಇಂತಹ ಅರಿಷ್ಟ ಗ್ರಹಣಕಾಲವು ಈ ಬಡಪ್ರಾಣಿಗಳಿಗೆ ಒಂದೆರಡು ಸಾರೆಯಲ್ಲ, ಮೇಲಿಂದ ಮೇಲೆ ತಪ್ಪದೆ ಆಗುತ್ತಿರುತ್ತವೆ. ಟಪಾಲು ತೆಗೆದುಕೊಳ್ಳಲಿಕ್ಕೆ ತಡವಾಗಿ ಅಥವಾ ಯಾವದೊಂದು ಬಿಟ್ಟಿಹತ್ತಿ, ಅಥವಾ ಮಳೆಹತ್ತಿ ತಾಲೂಕಿನಲ್ಲಿ ಅಥವಾ ಬೇರೆ ಗ್ರಾಮಗಳಲ್ಲಿ ಈ ಬಡಪ್ರಾಣಿಗಳು ಉಪವಾಸ ಬೀಳುವ ಪ್ರಸಂಗವು ಎಷ್ಟೋ ಸಾರೆ ಬರುತ್ತಿರುತ್ತದೆ. ಧೋಯೆಂದು ಮಳೆ ಸುರಿಯುತ್ತಿದ್ದರೂ ಇವರ ಯಾತಾಯಾತವು

ತಪ್ಪುವಂತಿಲ್ಲ. ಮಳೆಯಿಂದ ಕೊಳೆಯುತ್ತಾದರೂ ಹೋಗಿ ಟಪಾಲು ಮುಟ್ಟಿಸಲಿಕ್ಕೆ ಬೇಕು. ಪ್ಲೇಗಿನ ಅಥವಾ ಪಟಿಕೆಯ ಇಲ್ಲವೆ ಮೈಲಿಯ ಹಾವಳಿಯಿದ್ದಾಗ ದಿನವೊಂದಕ್ಕೂ ಟಪಾಲನ್ನೊಯ್ಯಬೇಕಾಗುತ್ತದೆ. ಆಗಿನ ವಾಲೀಕಾರರ ಮತ್ತು ಹೊಲೆಯರ ಕಷ್ಟವನ್ನೂ, ಕೊಳೆಯನ್ನೂ ಹೇಳುವಂತಿಲ್ಲ. ಪಿಡುಗಿನಿಂದ ಹಾದಿಯಲ್ಲಿ ಅಥವಾ ಹೋದಲ್ಲಿ ಬಿದ್ದು ಸತ್ತುಹೋದರಂತೂ ಇವರನ್ನು ಕೇಳುವವರಿಲ್ಲ. ಇದಲ್ಲದೆ ಪ್ರತಿಸಾರೆ ತಾಲೂಕಿಗೆ ಹೋಗುವಾಗಲೂ, ಅತ್ತಕಡೆಯಿಂದ ಬರುವಾಗಲೂ ಈ ಗ್ರಾಮಕೀಟಕರ ಖಾಸಗೀ ಬಿಟ್ಟಿಯು ಇದ್ದೇ ಇರುವದು. ಮೇಲಾಗಿ ತಾಲೂಕಿನವರ ತ್ರಾಸವೂ ಇವರನ್ನು ಅಂಟಿಕೊಳ್ಳುವದು. ಗ್ರಾಮಸ್ಥರ ಮನೆತನದ ಸಾಮಾನುಗಳನ್ನು ಇವರು ಹೊತ್ತುಕೊಂಡು ಹೋಗಬೇಕಾಗುತ್ತದೆ. ಅಥವಾ ಅತ್ತಕಡೆಯಿಂದ ತರಬೇಕಾಗುತ್ತದೆ. ಮತ್ತು ತಾಲೂಕಿನ ಕಾರಕೂನ, ಹವಾಲದಾರ, ನಾಯಕ, ಜಮಾದಾರ, ಕಾನ್‌ಸ್ಟೇಬಲ ಮುಂತಾದವರು ಹಳ್ಳಿಗಳಿಂದ ಯಾವದೊಂದು ಗ್ರಾಸವನ್ನು ಓಲೆಕಾರರ ಕಡೆಯಿಂದಲೇ ತರಿಸುತ್ತಿರುತ್ತಾರೆ. ಈ ಟಪಾಲಿನ ಕೆಲಸಕ್ಕಿಂತ ಇವರೆಲ್ಲರ ಖಾಸಗಿಯ ಕೆಲಸವೇ ಬಹಳವಿರುತ್ತದೆ. ಹೀಗಾಗಿ ತಾಲೂಕೆಂದರೆ ಆ ಬಡಪ್ರಾಣಿಗಳಿಗೆ ನೀರು ಹೊಳೆಯು ದಾರಿಯಂತಾಗಿರುತ್ತದೆ.

ದುರಧಿಕಾರಿಗಳು ವೇಳೆಗೆ ಸರಿಯಾಗಿ ಟಪಾಲ ತೆಗೆದುಕೊಳ್ಳದೆ ಇರುವದರಿಂದಲೂ, ಎಲೇ ಹೊಲಿಯಾ!ಎಲೋ ವಾಲೀಕಾರಾ! ಅಲ್ಲಿ ಹೋಗು! ಇಲ್ಲಿ ಹೋಗು! ಎಂದು ತಮ್ಮ ಕೆಲಸವನ್ನು ಅವರಿಗೇ ಹಚ್ಚಿ ಬೇರೆ ಕಡೆಗೆ ಅವರನ್ನು ಅಟ್ಟುವದರಿಂದಲೂ, ಆ ಬಡಪ್ರಾಣಿಗಳು ನಿರುಪಾಯರಾಗಿ ಹೋಗಲೇಬೇಕಾಗುವದರಿಂದ ಹೊಟ್ಟೆಗೆ ಕೂಳಿಲ್ಲದೆ ಒಣಗನಾರಬೇಕಾಗುವದು. ತಂದ ರೊಟ್ಟಿಯು ಒಂದು ಒಪ್ಪೊತ್ತಿಗೆ ತೀರಿಹೋಗುವದರಿಂದ ತಾಲೂಕಿನಲ್ಲಿಯಾಗಲಿ, ನೆರೆಹೊರೆಯ ಹಳ್ಳಿಯಲ್ಲಾಗಲಿ, ಇರುವ ತಮ್ಮ ಊರಗೌಡರ ಆಪ್ತೇಷ್ಟರ ಮನೆಯನ್ನು ಶೋಧಿಸಿ ಅಥವಾ ಬೇರೆ ಗುರುತಿನವರ ಮನೆಗೆ ಹೋಗಿ ಬಾಯಿ ತೆಗೆದು ರೊಟ್ಟಿಯನ್ನಿಸುಕೊಂಡು ತಿನ್ನಬೇಕಾಗುತ್ತದೆ. ಯಾರೂ ಕೊಡದಿದ್ದರೆ ಉಪವಾಸ ಬೀಳಬೇಕಾಗುತ್ತದೆ. ಬರಿಯ ಟಪಾಲು ಮುಟ್ಟಿಸಿ ಬರಲಿಕ್ಕೆ ಬಂದ ಈ ಬಡ ಓಲೆಕಾರರು ಚಳಿ-ಗಾಳಿ-ಬಿಸಿಲು-ಮಳೆಯೆನ್ನದೆ, ಹೊಳೆ ಹಳ್ಳಗಳೆನ್ನದೆ, ಹಗಲು ರಾತ್ರಿಯೆನ್ನದೆ, ಕಟಕ ರೊಟ್ಟಿಯನ್ನು ಕಡಿಯುತ್ತ ಬಿಟ್ಟಿಯನ್ನು ಮಾಡುವ ಪ್ರಸಂಗವು ಬರುತ್ತಿರುತ್ತದೆ. ಟಪಾಲು ಯೋಗ್ಯವೇಳೆಗೆ ಮುಟ್ಟದ್ದರಿಂದ ತಿರುಗಿ ತರಬೇಕಾಗುತ್ತದೆ. ಪುನಃ ಅದನ್ನೇ ತಾಲೂಕಿಗೆ ಒಯ್ಯಬೇಕಾಗುತ್ತದೆ. ಈ ಪ್ರಕಾರ ಓಲೆಕಾರ ಮತ್ತು ಹೊಲೆಯರೆಂದರೆ ದನಗಳಿಗಿಂತಲೂ ಕಡೆಯಾಗಿ ಎಡತಾಕಬೇಕಾಗುತ್ತದೆ. ಗ್ರಾಮಸ್ಥರ ಲಖೋಟಿಗಳೂ, ಕಾಗದಪತ್ರಗಳೂ ಯಾರಿಗೆ ಮುಟ್ಟತಕ್ಕವಿರುವವೋ ಅವರಿಗೆ ಮುಟ್ಟಿ ಇವರ ಬಿಡುಗಡೆಯಾಗುವ ಪರ್ಯಂತರಕ್ಕೂ ಇವರಿಗೆ ಎಷ್ಟು ತ್ರಾಸವಾಗುತ್ತಿರುವದೆಂಬದು ಆ ಓಲೆಕಾರ ಜನರಿಗೆ ಗೊತ್ತಿರುವದಲ್ಲದೆ, ಎಲೇ ಹೋಗಲೆ!ಬಾರಲೆ! ಎಂದೆನ್ನುತ್ತ ನೆರಳಲ್ಲಿ ಕೂಡ್ರುವ ಗ್ರಾಮಸ್ಥರಿಗೂ, ಮೇಲಧಿಕಾರಿಗಳಿಗೂ ಅದರ ಕಲ್ಪನೆಯೂ ಕೂಡ ಆಗುತ್ತಿರುವದು ಅಸಾಧ್ಯವು! ಈ ಇಲ್ಲದ ಬಿಟ್ಟಿಯ ಕೆಲಸಕ್ಕಾಗಿ ತಾಲೂಕಿನಲ್ಲಿಯಾಗಲಿ, ಬೇರೆ ಹಳ್ಳಿಗಳಲ್ಲಾಗಲಿ ಉಳಿದು ಉಪವಾಸ ಬೀಳಬೇಕಾಗುವದಲ್ಲದೆ ಮಲಗಲಿಕ್ಕೆ ಕಟ್ಟೆಯ ಮೇಲೆ ಒಂದಿಷ್ಟು ಸ್ಥಳವನ್ನು ಕೂಡ ಯಾರೂ ಕೊಡುವದಿಲ್ಲ. ಮನೆಯ ಮುಂದೆ ನಿಲ್ಲಗೊಡುವದಿಲ್ಲ. ಹೀಗೆ ಅನೇಕ ತರದ ಕಷ್ಟಕ್ಕೆ ಗುರಿಯಾಗಿ, ಈ ಓಲೆಕಾರರು ಎಲ್ಲೆಲ್ಲಿಯೋ ಬಿದ್ದುಕೊಂಡು ರಾತ್ರಿಯನ್ನು ಕಳೆದು, ಮಿಡುಕುತ್ತ ಊರದಾರಿಯನ್ನು ಹಿಡಿಯುವರು. ಟಪಾಲಿನ ಕೆಲಸವು ಇವರಿಗೆ ಅಷ್ಟೊಂದು ತ್ರಾಸವೆನಿಸದೆ, ಈ ಗ್ರಾಮಸ್ಥರ ಹಾಗೂ ತಾಲೂಕಿನವರ ಬಿಟ್ಟಿಯೇ ವಿಶೇಷ ತ್ರಾಸವಾಗಿರುತ್ತದೆ. ಇವರ ಈ ಕಷ್ಟವು, ತಲೆಯ ಮೇಲೆ ಹೊರೆಹೊತ್ತುಕೊಂಡು ಹೋಗುವವನ ಎರಡೂ ಬಗಲುಗಳಲ್ಲಿ ಒಂದೊಂದು ಒಜ್ಜೆಯುಳ್ಳ ಗಂಟನ್ನು ಕೊಟ್ಟಂತಾಗುವದು.

ಈ ಬಡ ಓಲೆಕಾರರ ಬವಣೆಯನ್ನು ದೀನತಾರಕರೆಂಬ ಬಿರುದಿಗೆ ಅಕ್ಷರಶಃ ಪಾತ್ರರಾದ ರಾ.ಬ॥ರುದ್ರಗೌಡ ದೊರೆಗಳು ಕಂಡು ಕನಿಕರಪಟ್ಟು, ಇವರನ್ನು ಹೇಗಾದರೂ ಮಾಡಿ ಈ ಕಷ್ಟದಿಂದ ದೂರಮಾಡಬೇಕೆಂದೂ, ತ್ರಾಸವಾಗದೆ ಸುಲಭರೀತಿಯಿಂದ ಹಳ್ಳಿಯ ಟಪಾಲು ತಾಲೂಕಿಗೂ, ತಾಲೂಕಿನ ಟಪಾಲು ಗ್ರಾಮಕ್ಕೂ ಮುಟ್ಟುವ ಯಾವದೊಂದು ವ್ಯವಸ್ಥೆಯನ್ನು ಕಂಡುಹಿಡಿಯಬೇಕೆಂದು ಆಲೋಚಿಸಿದರು. ಒಂದು ಅರ್ಧ ಆಣೆಯ ಟಿಕೇಟಿನಲ್ಲಿ ಹೋಗಬಹುದಾದ ಲಖೋಟಿಯೊಂದನ್ನು ತಾಲೂಕಿಗೆ ಕಳಿಸಬೇಕಾದರೆ ಒಬ್ಬ ಓಲೆಕಾರನು ಆರೇಳು ಹರದಾರಿ ನಡೆದುಹೋಗಿ, ತಿರುಗಿ ಅಷ್ಟು ದಾರಿಯನ್ನು ನಡೆದು ಬರಬೇಕಾಗುವದಲ್ಲದೆ, ಗ್ರಾಮಸ್ಥರ ಹಾಗೂ ತಾಲೂಕಿನವರ ಬಿಟ್ಟಿಯ ಕೆಲಸಗಳ ಕಷ್ಟಕ್ಕೆ ಆ ಓಲೆಕಾರನು ಗುರಿಯಾಗಬೇಕಾಗುತ್ತದೆ. ಸ್ವಲ್ಪದರಲ್ಲಿ ಕೆಲಸವಾಗುವಂತಿರಲು ಬಡ ಓಲೆಕಾರರು ನಿರರ್ಥಕವಾಗಿ ಇಷ್ಟೊಂದು ಕಷ್ಟವನ್ನು ವಹೀಸಬೇಕಾಗುತ್ತದೆ. ಅಲ್ಲದೆ ಮೇಲೆ ಬರೆದ ಓಲೆಕಾರ ಜನರ ತ್ರಾಸದಾಯಕ ಸಂಗತಿಯನ್ನು ರಾವಬಹದ್ದೂರರವರು ಲಕ್ಷದಲ್ಲಿ ತಂದು, ಈ ಯಮಯಾತನೆಯಿಂದಲೂ ಬಡ ಪ್ರಾಣಿಗಳನ್ನು ಉದ್ಧರಿಸಬೇಕೆಂದು ಯೋಚಿಸಿ, ಗ್ರಾಮಸ್ಥರ ಕಡೆಗೆ ಸರಕಾರೀ ಸರ್ವೀಸ ಟಿಕೀಟುಗಳನ್ನು ಕೊಟ್ಟು, ಅವರ ಟಪಾಲದ ಲಖೋಟಿಗಳಿಗೆ ಅಂಟಿಸಿ ಪೋಷ್ಟ ಆಫೀಸುಗಳ ಪೆಟ್ಟಿಗೆಗಳಲ್ಲಿ ಚಲ್ಲಿಸುವಂತೆ ವ್ಯವಸ್ಥೆಯಾದಲ್ಲಿ, ಆ ಬಡ ಓಲೆಕಾರರ ದೈನಿಕ ಯಾತಾಯಾತಾವೂ ಬಿಟ್ಟಿಯೂ ತಪ್ಪಿ ಅವರ ಹಿತವಾಗುವದಲ್ಲದೆ, ಸರಕಾರೀ ಟಪಾಲದ ಕೆಲಸವು ಸರಿಯಾಗಿ ನೆರವೇರುವದೆಂದು ನಿರ್ಧರಿಸಿ, ಈ ಓಲೆಕಾರ ಜನರ ತ್ರಾಸವನ್ನೂ, ಅದಕ್ಕೆ ಮಾಡಬೇಕಾದ ಯುಕ್ತಿಯನ್ನೂ ರಾ.ಬ॥ರವರು ಪರಸಗಡ ಸಬ್‌ಡಿವ್ಹಿಜನಕ್ಕೆ ಇದ್ದ ಕಾಲದಲ್ಲಿ ಅಂದರೆ ಸನ್ ೧೯೦೩ನೇ ಇಸವಿಯ ಡಿಸೆಂಬರ ತಿಂಗಳಲ್ಲಿ ೨೨೯೮/೨೫-೧೨-೧೯೦೩ನೇ ನಂಬರ ಪತ್ರ ಮೂಲಕ ಸರಕಾರಕ್ಕೆ ತಿಳಿಸಿ, ಆ ಬಗ್ಗೆ ಕೆಲಸ ನಡಿಸಿದರು. ಸರಕಾರದಲ್ಲಿ ಈ ಬಗ್ಗೆ ವಿಚಾರ ನಡೆದು ಮೂರು ನಾಲ್ಕು ವರ್ಷಗಳಾದರೂ ಪರಿಣಾಮವು ತಿಳಿಯಲಿಲ್ಲ. ಬೆಳಗಾವ ಜಿಲ್ಲೆಯ ಉತ್ತರಭಾಗದಲ್ಲಿದ್ದಾಗ್ಗೆ ಈ ಓಲೆಕಾರ ಜನರ ಬಗ್ಗೆ ರಾ.ಬ॥ಅರಟಾಳ ಸಾಹೇಬರವರ ಕಡೆಯಿಂದ ೧೧೭೭/೧೮-೬-೧೯೦೮ನೇ ನಂಬರಿನ ರಿಪೋರ್ಟು ಹೋಯಿತು. ಈ ರಿಪೋರ್ಟಿನಿಂದ ಈ ವಿಷಯವಾಗಿ ನಡೆಯಿಸಿದ ಸರಕಾರದವರ ವಿಚಾರವು ಜಾಗ್ರತವಾಗಿ, ರಾವಬಹದ್ದೂರವರು ಬರೆದಂತೆ ಗ್ರಾಮಸ್ಥರ ಕಡೆಗೆ ಸರಕಾರದಿಂದ ಸಾಕಷ್ಟು ಸರ್ವೀಸಟಿಕೇಟುಗಳು ಕಳಿಸಲ್ಪಡುವವೆಂತಲೂ, ಅವುಗಳನ್ನು ಅಂಟಿಸಿ ತಮ್ಮ ತಮ್ಮ ಗ್ರಾಮದ ಮುಲಿಕೀ ಫೌಜದಾರಿ ಮುಂತಾದ ಸರಕಾರೀ ಟಪಾಲನ್ನು ಅಂಚೆಗಟ್ಟೆಗಳ ಪೆಟ್ಟಿಗೆಯಲ್ಲಿ ಒಗಿಸಿಬಿಟ್ಟರಾಯಿತೆಂತಲೂ, ಅಂಚೆಗಟ್ಟೆಯಿಲ್ಲದ ಹಳ್ಳಿಗಳ ಗ್ರಾಮಸ್ಥರು ತಮ್ಮ ಗ್ರಾಮಕ್ಕೆ ಸಮೀಪವಾಗಿರುವ ಪೋಷ್ಟುಗಳಲ್ಲಿ ಓಲೆಕಾರರ ಕಡೆಯಿಂದ ಚಲ್ಲಿಸಬೇಕೆಂತಲೂ, ಪ್ರಸಂಗ ವಿಶೇಷದಲ್ಲಿ ಅಂದರೆ ಖೂನಿ, ದರೋಡೆ, ಮಾರಾಮಾರಿ ಮುಂತಾದ ಅತಿಜರೂರಿಯ ಪ್ರಸಂಗದಲ್ಲಿ ಮಾತ್ರ ಆಗಿಂದಾಗ ಓಲೆಕಾರರ ಕಡೆಯಿಂದ ಮುದ್ದಾಂ ತಾಲೂಕಿಗೆ ಟಪಾಲ ಕಳಿಸಬೇಕೆಂತಲೂ, ವಾರದ ಟಪಾಲನ್ನು ಟಪಾಲಮಾರ್ಗದಿಂದಲೇ ಕಳಿಸಬೇಕೆಂತಲೂ, ಗ್ರಾಮಸ್ಥರು ಈ ಸರ್ವೀಸಟಿಕೇಟಗಳ ಲೆಕ್ಕವನ್ನಿಡಬೇಕೆಂತಲೂ ಸರಕಾರ ಠರಾವವಾಯಿತು. ಠರಾವ ನಂಬರ ೬೭೯/೨೨-೧-೧೯೦೯ರೆವ್ಹಿನ್ಯೂ ಡಿಪಾರ್ಟಮೆಂಟ.

ಈ ಓಲೆಕಾರ ಜನರ ತ್ರಾಸವನ್ನು ತಪ್ಪಿಸುವ ಬಗ್ಗೆಯೂ, ಸರಕಾರಿಯ ಟಪಾಲು ಎಷ್ಟು ಮಾತ್ರವೂ ತಡೆಯದೆ ಈಗಿನಕಿಂತಲೂ ಸುಲಭವಾಗಿ ಅಲ್ಲಲ್ಲಿ ತಲುಪುವ ಬಗ್ಗೆಯೂ ರಾ.ಬ॥ಅರಟಾಳ ಸಾಹೇಬರು ಮಾಡಿದ ಸೂಚನೆಗೆ ಸರಕಾರದವರು ಸಂತೋಷಪಟ್ಟು, ಆ ಬಗ್ಗೆ ಒಳ್ಳೇ ಹಿತಕರವಾದ ಠರಾವು ಮಾಡಿದುದಲ್ಲದೆ,ಈ ವ್ಯವಸ್ಥೆಯು ಬಹಳೇ ಯೋಗ್ಯವಾದದ್ದೆಂದು ಮನಗಂಡು, ಈ ಠರಾವಿನ ಅಮಲನ್ನು ಇಡೀ ಮುಂಬಯಿ ಇಲಾಖೆಯಲ್ಲಿ ತರುವವರಾದರು. ರಾ.ಬ॥ಅರಟಾಳ ಸಾಹೇಬರವರ ಸೂಚನೆಯಿಂದ ಉಪಲಬ್ಧವಾದ ಈ

ಠರಾವಿನನ್ವಯ ಹುಕುಮುಗಳು ಮುಂಬಯಿ ಇಲಾಖೆಯೊಳಗಿನ ಎಲ್ಲ ಜಿಲ್ಲೆಗಳ ಕಲೆಕ್ಟರ ಸಾಹೇಬ ಬಹದ್ದೂರವರಿಗೆ ಹೋಗುವವಾದವು. ಎಲ್ಲ ಜಿಲ್ಲೆಗಳಲ್ಲಿಯೂ ಈ ಹುಕುಮುಗಳು ಅಮಲಿನಲ್ಲಿ ಬಂದು ಬಡ ಓಲೆಕಾರರ ಅಸಹ್ಯವಾದ ತ್ರಾಸವು ಕಡಿಮೆಯಾದುದರಿಂದ, ಮುಂಬಯಿ ಇಲಾಖೆಯೊಳಗಿನ ಎಲ್ಲ ಗ್ರಾಮಗಳ ಓಲೆಕಾರರೂ, ಹೊಲೆಯರೂ ರಾ.ಬ||ಅರಟಾಳ ಸಾಹೇಬರವರನ್ನು ಕೊಂಡಾಡುವವರಾದರು. ಬಡಜನರ ಕಷ್ಟಗಳನ್ನು ದೂರ ಮಾಡುವ ಕೃತ್ಯಗಳನ್ನು ಕಂಡು ಮುಂಬಯಿ ಇಲಾಖೆಯೊಳಗಿನ ಎಲ್ಲ ಸಜ್ಜನರು ಇವರನ್ನು ಹೊಗಳುವವರಾದರು.ಎಲ್ಲ ಜಿಲ್ಲೆಗಳ ಕಲೆಕ್ಟರರು ಇವರನ್ನು ಅಭಿನಂದಿಸುವವರಾದರು. ಈ ಯೋಗ್ಯಸೂಚನೆಯನ್ನು ಮಾಡಿದ ಬಗ್ಗೆ ಸರಕಾರದಲ್ಲಿಯೂ ಕೂಡ ಈ ಮಹನೀಯರ ಪ್ರಶಂಸೆಯಾಯಿತು. ಈ ಬಗೆಯಾಗಿ ಇವರು ತಮ್ಮ ಅಸಾಧಾರಣವಾದ ಬುದ್ಧಿಬಲದಿಂದ ಸರ್ವಜನರ ವಂದನೆಗೆ ಪಾತ್ರರಾದರೆಂದು ಹೇಳಬಹುದು.

ಓಲೆಕಾರ ಜನರ ತ್ರಾಸವನ್ನು ತಪ್ಪಿಸಿದ ಈ ಉಪಾಯವು ಸಾಧಾರಣವಾದದ್ದೆಂದು ತಿಳಿಯುವಂತಿಲ್ಲ. ಗ್ರಾಮಸ್ಥರ ಟಪಾಲಿನಿಂದ ಬಡ ಓಲೆಕಾರರಿಗೆ ಎಷ್ಟು ತ್ರಾಸವಾಗುತ್ತಿತ್ತೆಂಬುದನ್ನು ಸ್ಮರಣಕ್ಕೆ ತಂದರೆ ಈ ಉಪಾಯದ ಕಲ್ಪನೆಯೂ, ಯೋಜನೆಯೂ ಬಹು ಮಹತ್ವವಾದದ್ದೆಂದು ಸ್ಪಷ್ಟವಾಗುತ್ತದೆ. ಅಂಚೆಕಟ್ಟಿಗಳಿದ್ದ ಊರುಗಳ ಓಲೆಕಾರರಿಗೆ ಸ್ವಲ್ಪವೂ ಶ್ರಮವಿಲ್ಲದಾಯಿತು. ಪೋಷ್ಟ ಆಫೀಸು ಇಲ್ಲದ ಹಳ್ಳಿಯ ಓಲೆಕಾರರಿಗೂ ಅಷ್ಟೊಂದು ಶ್ರಮವಾಗುವಂತಿಲ್ಲ. ಯಾಕೆಂದರೆ ಗ್ರಾಮಸ್ಥರು ಕೊಟ್ಟ ಲಖೋಟಗಳನ್ನು ನೆರೆಯೂರುಗಳಲ್ಲಿರುವ ಅಂಚೆಗಟ್ಟಿಗಳ ಪೆಟ್ಟಿಗೆಯಲ್ಲಿ ಚಲ್ಲಿದೊಡನೆ ಹೊರಳಿಬಂದರಾಯಿತು. ಯಾರೂ ಇವರನ್ನು ತಡೆಯಲಿಕ್ಕೆ ಮಾರ್ಗವಿಲ್ಲದಾಯಿತು. ಓಲೆಕಾರರಿಗೆಲ್ಲ ಟಪಾಲಿನ ತ್ರಾಸವು ತಪ್ಪಿ ಹಿತವಾದದ್ದಂತೂ ಸರಿಯೇ! ತಾಲೂಕ ಮಾಮಲೇದಾರ ಕಚೇರಿಯಿಂದ ಗ್ರಾಮಸ್ಥರಿಗೆ ಸರ್ವಿಸ ಟಿಕೀಟುಗಳು ಆಗಾಗ್ಗೆ ದೊರೆಯಹತ್ತಿ, ಅವರ ಕಾಗದ ಪತ್ರಗಳು ಟಪಾಲಮಾರ್ಗದಿಂದ ನಿರ್ವಿಘ್ನವಾಗಿ ತಾಲೂಕ ಅಧಿಕಾರಿಗಳಿಗೆ ತಳುವದೆ ತಲುಪುವಂತಾದವು. ತಾಲೂಕಿನ ಟಪಾಲು ಈಗಿನಂತೆ ಕಟ್ಟೆಯ ಗ್ರಾಮುಗಳಿಗೆ ಹೋಗದೆ ಟಪಾಲ ಮಾರ್ಗವಾಗಿ ವ್ಹಿಲೇಜ ಪೋಷ್ಟಮನ್ನರಿಂದ ವಾರದಲ್ಲಿ ಎರಡುಸಾರೆ ತಪ್ಪದೆ ಆಯಾ ಹಳ್ಳಿಗಳ ಗ್ರಾಮಸ್ಥರ ಕಯ್ಯಲ್ಲಿ ತಲುಪುವ ವ್ಯವಸ್ಥೆಯಾದದರಿಂದ, ಯಾರ ಆಲಸ್ಯಕ್ಕೂ ಅಲಕ್ಷಕ್ಕೂ ಅವಕಾಶವಿಲ್ಲದೆ ಟಪಾಲಿನ ಕೆಲಸವು ಸರಿಯಾಗಿ ಸಾಗುವಂತಾಯಿತು. ಓಲೆಕಾರಜನರ ಈ ಕಷ್ಟತಮವಾದ ಕೆಲಸವು ಎಂದಿನಿಂದ ಈವರೆಗೂ ನಡೆದುಕೊಂಡು ಬಂದಿರಲು ಇವರ ಕಷ್ಟವನ್ನು ತಪ್ಪಿಸಲಿಕ್ಕೆ ಯಾವ ಕರುಣಾಳುವೂ ಉದಿಸಿದ್ದಿಲ್ಲ. ಓಲೆಕಾರರ ಶ್ರಮದ ಕಲ್ಪನೆಯೇ ಯಾರ ಕನಸುಮನಸಿನಲ್ಲಿ ಬಂದಿರಲಿಲ್ಲ. ಈವರೆಗೆ ಎಷ್ಟೋ ಅಧಿಕಾರಿಗಳು ಆಗಿ ಹೋದರು. ಈ ಬಡಪ್ರಾಣಿಗಳ ಮೊರೆಯನ್ನು ಯಾರೂ ಕೇಳಿಕೊಳ್ಳಲಿಲ್ಲ. ಇವರ ಶ್ರಮನಿವಾರಣಾರ್ಥವಾಗಿ ಯಾವ ಮಹಿಮನೂ ಮುಂದುವರಿಯಲಿಲ್ಲ. ಕೇವಲ ಸ್ವಾರ್ಥಹಿತದ ಕಡೆಗೆ ಲಕ್ಷವಿಟ್ಟು ಕೆಲಸಮಾಡುವ ಅಧಿಕಾರಿಗಳ ಮನಸಿನೊಳಗೆ ಈ ತರದ ಲೋಕಹಿತಾರ್ಥಕರವಾದ ಆಲೋಚನೆಗಳು ಬಹುಶಃ ಬರುತ್ತಿರುವದಿಲ್ಲ. ಬಂದರೂ ಅವರು ಪ್ರಯತ್ನ ಪಡುವದಿಲ್ಲ. ಲೌಕಿಕವನ್ನು ಪ್ರೀತಿಸುವಂತೆ ಪಾರಮಾರ್ಥವನ್ನೂ ಪ್ರೀತಿಸುವ ಪ್ರಾಜ್ಞ ಅಧಿಕಾರಿಗಳ ಹೃತ್ಸಾಗರದಲ್ಲಿ ಮಾತ್ರ ಇಂತಹ ಲೋಕಹಿತಕಾರಕವಾದ ಉಪಾಯ ತರಂಗಗಳುದ್ಭವಿಸಿ, ದಡವನ್ನು ಕಂಡುಕೊಂಡು ಜಗಜ್ಜನಕ್ಕೆ ಸುಖವನ್ನುಂಟು ಮಾಡುತ್ತವೆ. ಇಂತಹ ಪಾರಮಾರ್ಥ ಪ್ರೀತರಾದ ರಾ.ಬ|| ಅರಟಾಳ ಸಾಹೇಬರು ದಯಾರ್ದ್ರಹೃದಯರಾಗಿ ಸಹಾನುಭೂತಿಯನ್ನು ತೋರಿಸಿದುದರಿಂದಲೇ ಈ ಬಡ ಓಲೆಕಾರ ಜನರ ಕಷ್ಟತಮವಾದ ಯಾತಾಯಾತವು ತಪ್ಪಿ, ಅವರು ಸುಖದಿಂದ ಕಾಲಕಳೆಯುವವರಾದರು. ಈ ಸುಖದಾಯ ಕೋಪಾಯವನ್ನೊದಗಿಸಿಕೊಟ್ಟದ್ದಕ್ಕಾಗಿ ಓಲೆಕಾರ ಜನರು ಈ ಮಹನೀಯರ ಉಪಕಾರವನ್ನು ವಂಶಪರಂಪರವಾಗಿ

ಸ್ಮರಿಸಿದರೂ ತೀರದೆಂದು ಹೇಳಬಹುದು. ಮತ್ತು ಈ ಪ್ರಕಾರ ಬಡಜನರ ಕಷ್ಟವನ್ನು ದೂರಮಾಡಲು ಕಂಕಣಬದ್ಧರಾದ ರಾ.ಬ॥ಅರಟಾಳ ಸಾಹೇಬರ ಸ್ತುತಿಯನ್ನು ಎಷ್ಟು ಮಾಡಿದರೂ ಸ್ವಲ್ಪವಾಗಿರುವದು.

ಗ್ರಾಮಸ್ಥರ ಪೋಟಗೀ ಹಣವು ಮನಿಯಾರ್ಡರ ರೂಪದಿಂದ ದೊರೆಯುವ ಏರ್ಪಾಡಾದದ್ದು

ರಾ.ಬ॥ಅರಟಾಳ ಸಾಹೇಬರು ಕೇವಲ ಪ್ರಜಾಹಿತವನ್ನೇ ಚಿಂತಿಸಿ ಸರಕಾರಿಯ ಕೆಲಸಮಾಡುತ್ತ ರಾಜ್ಯದ ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದ್ದು, ಈವರೆಗೆ ಬರೆದ ಇವರ ಚರಿತ್ರೆಯಿಂದ ವಾಚಕ ಮಹಾಶಯರಿಗೆ ತಿಳಿದಿರಬಹುದು. ಲಂಚವು ನಿರ್ನಾಮವಾಗಿ ಬಡವರೂ, ರೈತಜನರೂ ಸೌಖ್ಯಶಾಲಿಗಳಾಗಬೇಕೆಂಬುದೇ ಇವರ ಮನೋದಯವು. ಗೌಡ ಕುಲಕರಣಿಯರು ತಾಲೂಕಿಗೆ ಪೋಟಗೀ ಹಣಕ್ಕೆ ಹೋದಾಗ, ಅವರ ಕಡೆಯಿಂದ ನಗದಿಯ ಕಾರಕೂನರೂ, ಕಚೇರಿಯ ಸಿಪಾಯರೂ, ಕಾರಕೂನರ ಆಶ್ರಯದಿಂದ ಪೋಟಗೀ ವೇಳೆಗೆ ಬಂದು ಕೂತ ಆಚಾರ್ಯರೂ, ಲಂಚವೆಂದೋ ಖುಶಾಲಿಯೆಂದೋ, ದಕ್ಷಿಣೆಯೆಂದೋ ಹಣವನ್ನು ಎಳೆಯ ಹತ್ತಿದುದನ್ನು ಕಂಡು ಕಂಡು ಕನಿಕರಪಟ್ಟು, ರಾ.ಬ॥ರವರು ಈ ಸುಲಿಗೆಯನ್ನು ತಪ್ಪಿಸುವದಕ್ಕಾಗಿ, ಗೌಡ ಕುಲಕರಣಿಯರ ಪೋಟಗಿಯ ಹಣವು ಈಗಿನಂತೆ ತಾಲೂಕಿನಲ್ಲಿ ಕೊಡಲ್ಪಡದೆ ಅವರಿದ್ದಲ್ಲಿಯೇ ಅವರವರ ಸ್ಥಳಗಳಿಗೆ ಟಪಾಲಿದ್ವಾಗ ಮನಿಯಾರ್ಡರ ಮಾಡುವದಾದರೆ ನೆಟ್ಟಗಾಗುವದೆಂದು ಯೋಚಿಸಿ, ಈ ವಿಷಯವಾಗಿ ಸರಕಾರಕ್ಕೆ ಸೂಚನೆ ಮಾಡಿದ ಸಂಗತಿಯನ್ನು ಹಿಂದೆ ತಿಳಿಸಿರುವದಷ್ಟೆ! ಈ ಸಮಂಜಸವಾದ ಸೂಚನೆಯನ್ನು ಸರಕಾರದವರು ಪರ್ಯಾಲೋಚಿಸಿ, ಇದು ಒಳ್ಳೆ ಬೆಲೆಯುಳ್ಳ ಸೂಚನೆಯೆಂದು ಒಪ್ಪಿ ಗೌಡ, ಶಾನಭೋಗ, ಶೇತಸನದಿ, ವತನದಾರ ಮೊದಲಾದವರಿಗೆ ಸರಕಾರದಿಂದ ಸಿಗುತ್ತಿದ್ದ ಪೋಟಗೀ ಮುಂತಾದ ಉಂಬಳಿಯ ಹಣವು ಮನಿಯಾರ್ಡರ ದ್ವಾರ ಮುಟ್ಟಿಸಲ್ಪಡುವದೆಂಬದಾಗಿ ಠರಾವವಾಯಿತು, ಸರಕಾರ ಠರಾವ ನಂಬರ ೭೭೭೯/೯-೮-೧೯೦೯ ರೆವಿನ್ಯೂ ಡಿಪಾರ್ಟಮೆಂಟ ಈ ಠರಾವಿನ ಅನುಭವ ನೋಡಬೇಕೆಂದು ಸರಕಾರದವರು ಆರಂಭಕ್ಕೆ ರಾ.ಬ॥ಅರಟಾಳ ಸಾಹೇಬರವರ ಭಾಗದ ನಾಲ್ಕು ತಾಲೂಕುಗಳಲ್ಲಿಯೇ ಇದನ್ನು ಅಮಲಿನಲ್ಲಿ ತಂದರು. ಈ ಸುಧಾರಣೆಯಿಂದ ಗೌಡ ಕುಲಕರಣಿ ಮೊದಲಾದವರಿಗೆ ಅವರವರ ಹಣವು ಅವರವರಿಗೆ ಏನೂ ತ್ರಾಸವಿಲ್ಲದೆ ದೊರೆಯ ಹತ್ತಿತಲ್ಲದೆ ಮನಿಯಾರ್ಡರ ಚಾರ್ಜನಿಂದ ಸರಕಾರಕ್ಕೂ ಲಾಭವಾಗಹತ್ತಿತು. ಉಭಯತೋಪಿ ಲಾಭದಾಯಕವಾದ ಈ ಸುಧಾರಣೆಯ ಅಮಲನ್ನು ಕೂಡಲೆ ಸರಕಾರದವರು ಇಡಿ ಮುಂಬಯಿ ಇಲಾಖೆಯಲ್ಲಿ ಸುರುಮಾಡಿದರು; ಸದ್ಯಕ್ಕೆ ಮುಂಬಯಿ ಇಲಾಖೆಯಲ್ಲೆಲ್ಲ ಇದರಂತೆ ಪೋಟಗೀ ವ್ಯವಸ್ಥೆಯು ನಡೆಯುತ್ತಿರುವದು.

ಈ ಸುಧಾರಣೆಯ ಸೂಚನೆಯನ್ನು ಕೊಟ್ಟ ಬಗ್ಗೆ ಸರಕಾರದವರು ರಾ.ಬ॥ಅರಟಾಳ ಸಾಹೇಬರವರನ್ನು ಬಹಳೇ ಶ್ಲಾಘಿಸಿದರು. ಇವರು ರೈತರ ಹಾಗೂ ಕಡಿಮೆ ಪಗಾರದ ಅಧಿಕಾರಿಗಳ ಸುಖಕ್ಕೆ ಲಕ್ಷಕೊಟ್ಟಂತೆ, ಸರಕಾರದ ಹಿತವನ್ನೂ ಇಚ್ಛಿಸಿ ಕೆಲಸ ಮಾಡುತ್ತಾರೆಂಬದನ್ನು ಮಗಂಡಿರುವರು. ಸರಕಾರದ ಶ್ಲಾಘನೆಗೂ, ಪ್ರಜೆಗಳ ಹೊಗಳಿಕೆಗೂ ಕಾರಣರಾದ ರಾ.ಬ॥ಅರಟಾಳ ಸಾಹೇಬರವರ ಖ್ಯಾತಿಯು ಮತ್ತಿಷ್ಟು ಹೆಚ್ಚಾಯಿತು. ೫೦ ರೂಪಾಯಿ ಪೋಟಿಗೆಯುಳ್ಳ ಗೌಡನಾಗಲಿ ಕುಲಕರಣಿಯಾಗಲಿ ಪೋಟಿಗೆಗಾಗಿ ತಾಲೂಕಿಗೆ ಹೋದರೆ ಲಂಚಕ್ಕೂ, ಖುಶಾಲಿಗೂ, ದಕ್ಷಿಣೆಗೂ ಕೂಡಿ ನಿಧಾನ ಹತ್ತೆಂಟು ರೂಪಾಯಿ ವೆಚ್ಚವಾಗದೆ ಎಂದೂ ಇರುತ್ತಿದ್ದಿಲ್ಲ. ಈ ಠರಾವು ಆದಂದಿನಿಂದ ಎಂಟು ಆಣೆಯ ಮನಿಯಾರ್ಡರ ವೆಚ್ಚದಿಂದ ೫೦ ರೂಪಾಯಿಯ ಪೋಟಗೀ ಹಣವು ಮನೆಗೆ ನಡೆದುಬಂದು ಅವರ ಕಯ್ಯಲ್ಲಿ ಬೀಳುವದು. ಇದು ಎಷ್ಟರ ಮಟ್ಟಿಗೆ ಲಾಭಕರವಾಯಿತೆಂಬ

ಬಗ್ಗೆ ಹೆಚ್ಚಿಗೆ ಬರೆಯುವ ಕಾರಣವಿಲ್ಲ. ಆದರೆ ಈ ಜೀವಂತ (ಹಯಾತ) ಇದ್ದ ಬಗ್ಗೆ, ತಮ್ಮ ತಮ್ಮ ಸಮೀಪವಿರುವ ದೇಸಾಯಿ ದೇಶಪಾಂಡೆ ಮುಂತಾದ ಸರಕಾರಕ್ಕೆ ಮಾನ್ಯರಾದ ಸದ್ಗೃಹಸ್ಥರ ಸರಟೀಪಿಕೇಟುಗಳನ್ನು ಮಾತ್ರ ಪ್ರತಿವರ್ಷ ಸರಕಾರಕ್ಕೆ ಕಳಿಸಬೇಕೆಂದು ಆ ಠರಾವಿನಲ್ಲಿ ನಮೂದವಿರುತ್ತದೆ. ಈ ಸರಟಿಫಿಕೇಟುಗಳನ್ನು ಕಳಿಸಿಕೊಟ್ಟಕೂಡಲೆ ಪೋಟಗಿ ಹಣವು ತಾನಾಗಿ ತಪ್ಪದೆ ಮನಿಯಾರ್ಡರಾಗಿ ಬರುವದು. ಈ ಠರಾವವು ಅಮಲಿನಲ್ಲಿ ಬಂದದರಿಂದ ಎಲ್ಲ ಜನರಿಗೆ ಬಹಳೇ ಸಂತೋಷವಾಯಿತು.

ಸರಕಾರಿ ವನಗಾವಲದ ಫೀ ಕಡಿಮೆ ಮಾಡಲ್ಪಟ್ಟಿದ್ದು

ರಾ.ಬ॥ಅರಟಾಳ ಸಾಹೇಬರು ತಮ್ಮ ಬುದ್ಧಿಯನ್ನೂ ಆಯುಷ್ಯವನ್ನೂ ಅಹರ್ನಿಶೆಯಲ್ಲಿಯೂ ಕೂಡ ರೈತಜನರ ಹಿತದ ಕಾರ್ಯಗಳಲ್ಲಿಯೇ ವ್ಯಯಮಾಡುತ್ತಿರುವ ಸಂಗತಿಯು ಸರ್ವಶ್ರುತವಾಗಿರುವದು ಮೇಲಿನ ತಿದ್ದುಪಡಿಯು ಅಮಲಿನಲ್ಲಿ ಬಂದ ಸ್ವಲ್ಪ ದಿವಸಗಳಲ್ಲಿಯೇ ಇವರು ಇನ್ನೊಂದು ಲೋಕೋಪಕಾರದ ಸೂಚನೆಯನ್ನು ಸರಕಾರದ ಮುಂದೆ ತಂದಿಟ್ಟರು. ಅದೇನೆಂದರೆ, ಪ್ರತಿ ಗ್ರಾಮಗಳಲ್ಲಿರುತ್ತಿದ್ದ ಸರಕಾರಿಯ ವನಗಾವಲದಲ್ಲಿ ಮೆಯ್ಯುವ ದನಗಳಿಗಾಗಿ ಪ್ರತಿಯೊಂದು ದನಕ್ಕೆ ನಾಲ್ಕಾಣೆಯಂತೆ ಸರಕಾರಕ್ಕೆ ಹಾಸಲು ಕೊಡಬೇಕಾಗುತ್ತಿತ್ತು. ಮುಖ್ಯವಾಗಿ ದನಗಳೇ ರೈತರ ಜೀವನ ಸಾಧನಗಳೆಂದೂ, ಈ ಹುಲಬನ್ನಿಯ ಹಣವನ್ನು ಕೊಡಲು ಬಡಜನರಿಗೆ ತ್ರಾಸಕರವೆಂದೂ ಮನಗಂಡು ರಾ.ಬ॥ಅರಟಾಳ ಸಾಹೇಬರವರು, ಬಡರೈತಜನರ ಸುಖದ ಸಲುವಾಗಿ ಈ ಹುಲಬನ್ನಿಯ ಹಣವನ್ನು ಮಾಫ ಮಾಡೋಣಾಗಬೇಕೆಂದು ನಿಪ್ಪಾಣಿಯ ಮುಕ್ಕಾಮಿನಿಂದ ಸರಕಾರಕ್ಕೆ ಬರೆದರು. ಇಂಗ್ರಜೀ ಪತ್ರ ನಂಬರ ೧೭೪೫/೯-೯-೧೯೦೮. ಇದಕ್ಕೆ ಜಿಲ್ಲಾ ಕಲೆಕ್ಟರರಾದ ಮೆ॥ಬ್ರ್ಯಾಂಡನ್ ಸಾಹೇಬ ಬಹದ್ದೂರವರು ಇವರ ಸೂಚನೆಯನ್ನು ಮಾನ್ಯ ಮಾಡಿ, ತಮ್ಮ ಸದಭಿಪ್ರಾಯವನ್ನು ಬರೆದರು. ಆದರೆ ದಕ್ಷಿಣಭಾಗದ ಕಮೀಶನರಾದ ಮೆ॥ಎಂ.ಸಿ. ಗಿಬ್ಬ ಸಾಹೇಬ ಬಹದ್ದೂರವರು ಈ ದೊಡ್ಡದಾದ ಆದಾಯವನ್ನು ಮಾಫ ಮಾಡಿದಕ್ಕೆ ಸರಕಾರದವರು ಒಪ್ಪಲಿಕ್ಕಿಲ್ಲೆಂಬ ಅಳೈದೆಯಿಂದ ಈ ಹುಲಬನ್ನಿಯ ಹಣವನ್ನು ಕಡಿಮೆ ಮಾಡಬಾರದೆಂಬದಾಗಿ ಬರೆದರು. ಆದರೂ ದಯಾಳು ಸರಕಾರದವರು ರಾ.ಬ॥ಅರಟಾಳ ಸಾಹೇಬರವರ ಸೂಚನೆಯು ಗ್ರಾಹ್ಯವಾದದ್ದೆಂದೂ, ಅವರ ಅಭಿಪ್ರಾಯದಲ್ಲಿ ನಿಜಾಂಶವು ಬಹಳವಿರುವದೆಂದೂ ಭಾವಿಸಿ, ಇವರ ಅಭಿಪ್ರಾಯವನ್ನು ಮಾನ್ಯಮಾಡಿ, ಹುಲಬನ್ನಿಯ ಹಾಸಲನ್ನು ಅರ್ಧಕಡಿಮೆ ಮಾಡಿದರು. ಅಂದರೆ ಈ ವರೆಗೆ ಸರಕಾರಿಯ ವನಗಾವಲದ ಹುಲಬನ್ನಿಗಾಗಿ ಪ್ರತಿಯೊಂದು ದನಕ್ಕೆ ಕೊಡಲ್ಪಡುವ ನಾಲ್ಕಾಣೆಯ ಬದಲು ಎರಡಾಣೆ ಕೊಡಬೇಕೆಂದು ನಿರ್ಧಾರವಾಯಿತು. ಮತ್ತು ಸರಕಾರೀ ಪಡನಂಬರದೊಳಗಿರುವ ಹುಲಬನ್ನಿಯ ಒಂದು ಎಕರೆ ಭೂಮಿಯ ತರಮು ಒಂದಾಣೆಯಂತೆ ಕಾಹೀಮಾಯಿತು. ಸರಕಾರ ಠರಾವ ನಂಬರ ೮೯೫೨/ ೧೫-೯-೧೯೦೯ ಮುಲಕೀಖಾತೆ. ರಾವಬಹದ್ದೂರ ಎಂಬ ಪದವಿಯು ದೊರೆತ ಬಗ್ಗೆ ಸನದು ತೆಗೆದುಕೊಳ್ಳುವದಕ್ಕಾಗಿ ಜೂನ ತಿಂಗಳ ಅಖೈರಕ್ಕೆ ರಾ.ಬ॥ಅರಟಾಳ ಸಾಹೇಬರು ಪುಣೆಗೆ ಹೋದಾಗ್ಗೆ ಈ ಹುಲಬನ್ನಿಯ ಫೀ ಸಂಬಂಧವಾಗಿ ಮೆ॥ನಾಮದಾರ ಸರ್ ಮ್ಯೂರ ಮ್ಯಾಕೆಂಝಿ ಸಾಹೇಬ ಬಹದ್ದೂರರವರ ಕೂಡ ಚರ್ಚೆಯನ್ನು ನಡಿಸಿ, ಸರಕಾರಿಯ ಪಡನಂಬರಗಳನ್ನು ಸಾಂಗಮಾಡಗೊಡದೆ ಹುಲಬನ್ನಿಗಾಗಿ ಕೊಡೋಣವಾದಲ್ಲಿ ಬಡಜನರಿಗೆ ಬಹಳೇ ಹಿತವಾಗುವದೆಂದು ಹೇಳಿದ್ದರು. ಈಗ ಅದೂ ಕಾಹೀಮಾಯಿತು. ಈ ಹುಲಬನ್ನಿಯ (ವನಗಾವಲದ) ಠರಾವವು ಮುಂಬಯಿ ಸರ್ಕಾರ ಗ್ಯಾಝಿಟ ಭಾಗ ೧ ತಾರೀಖ ೨೩-೯-೧೯೦೯ನೇ ಇಸವಿಯ ಪಾನು ೧೭೯-೧೪೦ರ ವರೆಗೆ ೧೨ ಪಾನುಗಳಲ್ಲಿ ಪ್ರಸಿದ್ಧಿಸಲ್ಪಟ್ಟಿದೆ. ಹುಲಬನ್ನಿಯ ಫೀ

ನಾಲ್ಕಾಣೆಯಿದ್ದದ್ದು ಎರಡಾಣೆಯಾದದರಿಂದ ಸರಕಾರಕ್ಕೆ ಒಂದೂವರೆ ಲಕ್ಷ ರೂಪಾಯಿಯ ಆದಾಯವು ಕಡಿಮೆಯಾದಂತಾಯಿತು.

ಈ ಮಹತ್ವದ ಠರಾವವು ಪ್ರಸಿದ್ಧವಾದ ಕೂಡಲೆ ಮೆ॥ಕಲೆಕ್ಟರ ಬ್ರ್ಯಾಂಡನ್ ಸಾಹೇಬ ಬಹದ್ದೂರರವರು, ಬಡಜನರಿಗೆ ಲಾಭಕರವಾದ ಈ ವನಗಾವಲದ ಠರಾವವು ಪಾಸಾದ ಶ್ರೇಯಸ್ಕರವೆಲ್ಲ ನಿಜವಾಗಿ ನಿಮ್ಮ ಪಾಲಿಗೇ ಸಲ್ಲತಕ್ಕದೆಂಬದಾಗಿ ರಾ.ಬ॥ಅರಟಾಳ ಸಾಹೇಬರವರನ್ನು ಬಹಳೇ ಗೌರವಿಸಿದರು. ಈ ಠರಾವವನ್ನು ಕೇಳಿ ದನಕಾಯುವ ಹುಡುಗರು ಮೊದಲಾಗಿ ಯಾವತ್ತು ಜನರು ಬಹಳೇ ಆನಂದಮನಸ್ಕರಾಗಿ ಇವರನ್ನು ಕೊಂಡಾಡಹತ್ತಿದರು. ಮೆ॥ಬ್ರ್ಯಾಂಡನ್ ಸಾ॥ಬಹದ್ದೂರವರಂತೆ ಮೆ॥ಕಮೀಶನರ ಸಾ॥ಬಹದ್ದೂರವರಾದರೂ ಅಷ್ಟು ಮನಸಿನ ಮೇಲೆ ತಕ್ಕೊಂಡು ರಾ.ಬ॥ಅರಟಾಳ ಸಾಹೇಬರವರ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದರೆ ಹುಲಬನ್ನಿಯ ಹಣವು ಪೂರಾ ಮಾಫವಾಗಿ ಬಡಜನರಿಗೆ ಇಮ್ಮಡಿ ಲಾಭದೊರೆಯುತ್ತಿತ್ತು. ಆದರೆ ಎಲ್ಲ ಅಧಿಕಾರಿಗಳೂ ರೈತಜನರ ವಿಷಯವಾಗಿ ಕಳಕಳಿಯನ್ನು ತೋರಿಸುತ್ತಾರೆಂಬ ನಿಯಮವಿಲ್ಲ."ದಾತಾ ಭವತಿ ವಾ ನವಾ" ಎಂಬಂತೆ ಲೋಕೋಪಕಾರಾರ್ಥವಾಗಿ ಉದಾತ್ತ ವಿಚಾರವನ್ನೂ, ಉದಾರ ಮನಸ್ಸನ್ನೂ ವ್ಯಕ್ತಪಡಿಸುವ ಮಹನೀಯರು ವಿರಳತಮವಾಗಿರುವರು. ಕಾರ್ಯವು ಆಗಲಿ, ಆಗದಿರಲಿ ಆಗುವದೋ ಇಲ್ಲೋ ಎಂಬ ಸಂಶಯ ಮಂತ್ರವನ್ನು ಜಪಿಸದೆ, ತಮ್ಮ ಕಯ್ಯಿಂದಾಗುವ ಹಿತವನ್ನಷ್ಟು ಮಾಡಿ ವಂದ್ಯರಾಗುವದೇ ಲೋಕೋಪಕಾರಿಗಳ ಲಕ್ಷಣವು.

ಗೋಪಾಳ ಸಿದ್ಧೇಶ್ವರನ ಗುಪ್ತತಂತ್ರವು ಬೈಲಿಗೆ ಬಂದದ್ದು

ಯಾವ ಕಾಲದಲ್ಲಾದರು ದುಷ್ಟದಲನ ಶಿಷ್ಟಪಾಲನವಾಗುತ್ತಿರುವದು ಸರಿಯಷ್ಟೆ. ದುರ್ಜನರ ದೌರ್ಜನ್ಯವು ಬೆಳೆಯಹತ್ತಲು ಅದರ ನಿವಾರಣಾರ್ಥವಾಗಿ ದೇವರು ಪುಣ್ಯಶಾಲಿಗಳನ್ನು ಸೃಜಿಸಿಯೇ ಇರುವನು. ರಾ.ಬ॥ಅರಟಾಳ ಸಾಹೇಬರವರ ಕಾರ್ಯಕರ್ತೃತ್ವವು ಇದೇ ತತ್ವವನ್ನವಲಂಬಿಸಿ ಇರುತ್ತದೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯು. ಈ ವರೆಗೆ ಇವರ ನ್ಯಾಯನಿಷ್ಠತೆಯೆಂಬ ಝುಂಝಾವಾತಕ್ಕೆ ದುಷ್ಟರ ಕಪಟಕೃತಿಗಳೆಂಬ ತರಗೆಲೆಗಳು ಅಂತರಿಕ್ಷಕ್ಕೆ ಹಾರಿ ಅದೃಶ್ಯವಾದ ಸಂಗತಿಯು ವಾಚಕ ಮಹಾಶಯರಿಗೆ ವಿದಿತವೇ ಇರುವದು. ಕಪಟಿಗಳ ಕಾಟವು ಎಷ್ಟು ಮಾತ್ರವೂ ನಡೆಯದೆ ಬಡಜನರಿಗೆ ಸೌಖ್ಯವಾಗಲೆಂಬುದೇ ರಾವಬಹದ್ದೂರವರ ಆಳಿಕೆಯ ಮುಖ್ಯತತ್ವವು.

ಅಧರ್ಮವೂ ಎಂದು ಅಡಗುವದಿಲ್ಲ. ಅದು ಒಮ್ಮಿಲೊಮ್ಮೆ ಹೊರಬೀಳುವುದೇ ಸರಿ. ಕಡಿಯುತ್ತಿದ್ದ ತಗಣಿಯು ಒಮ್ಮೆ ಸಿಗತಕ್ಕದ್ದು. ಗೋಕಾಕ ತಾಲೂಕ ಅಂಕಲಗಿ ಗ್ರಾಮದ ಕುಲಕರಣಿಯೂ, ದೇಶಪಾಂಡೆಯನೂ ಆದ ಗೋಪಾಳ ಸಿದ್ಧೇಶ್ವರನೆಂಬವನು ಒಬ್ಬಾನೊಬ್ಬ ಬಡಕೂಲಿಕಾರನ ಜಮೀನನ್ನು ತಾನು ಅಪಹರಿಸಬೇಕೆಂಬ ದುಷ್ಟವಾಸನೆಯಿಂದ ಸನ್ ೧೮೯೫ನೇ ಇಸವಿಯಲ್ಲಿ ತಾಲೂಕ ಕಚೇರಿಯ ರಿಕಾರ್ಡಿನಲ್ಲಿ ಬನಾವಟ ಕಾಗದಪತ್ರಗಳನ್ನು ಮಾಡಿದ್ದನು. ಲಂಚಗುಳಿಗಳಾದ ಕಾಮದಾರರ ಮುರವತ್ತಿನಿಂದಲೂ, ಹೇಳಿದಂತೆ ಕೇಳುವ ಕಾರಕೂನರ ಕಪಟಜಾಲದಿಂದಲೂ ಗೋಪಾಳ ಸಿದ್ಧೇಶ್ವರನಿಗೆ ರಿಕಾರ್ಡಿನ ಕಾಗದಪತ್ರಗಳನ್ನು ಗೌಪ್ಯವಾಗಿ ತಿದ್ದುವದು ಬಲು ಸುಲಭವಾಗಿತ್ತು. ಅಂತೆಯೇ ತನಗೆ ಹೇಗೆ ಬೇಕೋ ಹಾಗೆ ಸ್ವಾರ್ಥಸಾಧನ ಸನ್ನಾಹ ಸಿದ್ಧನಾಗಿ, ರಿಕಾರ್ಡನ್ನು ತಿದ್ದಿಕೊಂಡು ಬಿಟ್ಟಿದ್ದನು. ಮುಂದೆ ಈ ಜಮೀನಿನ ಸಂಬಂಧವಾಗಿ ವ್ಯಾಜ್ಯ ನಡೆದು ಸನ್ ೧೯೦೬ನೇ ಇಸವಿಯ ಡಿಶಂಬರ ತಿಂಗಳಲ್ಲಿ ಈ ಗೋಪಾಳ ಸಿದ್ಧೇಶ್ವರನ ಗುಪ್ತತಂತ್ರವು ಹೊರಬಿತ್ತು. ಈತನ

೧೨-೧೩ ವರ್ಷದ ಹಿಂದಿನ ಗುಪ್ತಕೃತ್ಯವನ್ನೂ, ಕಪಟಕೃತಿಯನ್ನೂ ಗೊತ್ತುಹಚ್ಚಿದ ಮಹನೀಯರಾರೆಂದರೆ, ದೀರ್ಘದೃಷ್ಟಿಗಳೂ ದೀನೋದ್ಧರಣರೂ ಆದ ರಾ.ಬ॥ಅರಟಾಳ ಸಾಹೇಬರವರೇ ಸರಿ. ಈ ಖಟ್ಲೆಯು ಮೆ॥ಟಿ.ಎಚ್. ಕವ್ಹಾನ್‌ಸಾಹೇಬ ಬಹದ್ದೂರ ೧ನೇ ವರ್ಗ ಮ್ಯಾಜಿಸ್ಟ್ರೇಟ ಫರ್ಸ್ಟ ರಿ॥ಕಲೇಕ್ಟರ ಜಿಲ್ಲಾ ಬೆಳಗಾವ ಇವರ ಕಡೆಗೆ ನಡೆದು ಡಿಸ್ಟ್ರಿಕ್ಟ ಸೆಸನ್‌ಕೋರ್ಟಿಗೆ ಕಮೀಟವಾಯಿತು. ಕಮೀಟಲ್ ಕೇಸನಂಬರ ೧೭/೧೯೦೯ ನ್ಯಾಯಕಲಾ ಧುರೀಣರಾದ ಮೆ॥ಡಿಸ್ಟ್ರಿಕ್ಟ ಜಜ್ಜ ಕ್ಲೆಮೆಂಟ ಸಾ॥ಬಹದ್ದೂರರವರಲ್ಲಿ ಇದರ ವಿಚಾರ ನಡೆದು ಗೋಪಾಳ ಸಿದ್ಧೇಶ್ವರನು ದೋಷಿಯೆಂದು ನಿರ್ಧರಿಸಲ್ಪಟ್ಟು, ತಾರೀಖು ೧೭ನೇ ಸಪ್ಟಂಬರ ೧೯೦೯ನೇ ದಿವಸ ಇವನಿಗೆ ೭ ವರ್ಷಗಳ ಸಕ್ತಮಜೂರಿಯ ಕೈದೂ, ಒಂದು ಸಾವಿರ (೧೦೦೦) ರೂಪಾಯಿಗಳ ದಂಡವೂ ಆಯಿತು. ಸೆಸನ್‌ಕೋರ್ಟ ಕ್ಯಾಲೆಂಡರ ನಂಬರ ೫೯/೧೯೦೯. ರಾವಬಹದ್ದೂರವರ ಮೆ॥ಜಿಲ್ಲಾ ಕಲೇಕ್ಟರ ಸಾ॥ಬಹದ್ದೂರರವರ ಕಡೆಗೆ ರವಾನಿಸಿದ ಇಂಗ್ಲಜೀ ಪತ್ರನಂಬರ ೬೬೬೨/೧೨-೧೦-೧೯೦೯ ಮತ್ತು ಇವರ ಸನ್ ೧೯೦೮-೧೯೦೯ ಇಸವಿಯ ಅಡಿಮಿನಿಸ್ಟ್ರೇಶನ್ ರಿಪೋರ್ಟವೂ ರವಾನೆಯಾಯಿತು. ಮೆ॥ಕಲೆಕ್ಟರ ಬ್ರ್ಯಾಂಡನ್ ಸಾಹೇಬ ಬಹದ್ದೂರರವರು ತಮ್ಮ ಅಡಿಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ರಾ.ಬ॥ಅರಟಾಳ ಸಾಹೇಬರು ಬಹು ಧೈರ್ಯಶಾಲಿಗಳೆಂದೂ ಸತ್ಯವನ್ನು ಶೀಘ್ರವಾಗಿ ಹುಡುಕಿ ತೆಗೆಯುವದರಲ್ಲಿ ಅಸಾಧಾರಣ ಬುದ್ಧಿಚಾತುರ್ಯವುಳ್ಳವರೆಂದೂ ಸ್ಪಷ್ಟವಾಗಿ ಬರೆದಿರುವರು.

ಈ ವ್ಯಾಜ್ಯವು ನಡೆದಾಗ ಅಂದರೆ ಸನ್ ೧೯೦೭ನೇ ಇಸವಿಯ ಜುಲೈ ತಿಂಗಳಲ್ಲಿ ಬ್ರಾಹ್ಮಣರು, ಹನ್ನೆರಡು ಹದಿಮೂರು ವರ್ಷದ ಹಿಂದಿನ ಪ್ರಕರಣವನ್ನು ರಾ.ಬ॥ಅರಟಾಳ ಸಾಹೇಬರು ಬ್ರಾಹ್ಮಣದ್ವೇಷಬುದ್ಧಿಯಿಂದ ಮುದ್ದಾಂ ಎಬ್ಬಿಸಿರುತ್ತಾರೆಂದೂ, ಇವರು ಎಬ್ಬಿಸಿದ ಈ ವ್ಯಾಜ್ಯವೆಲ್ಲ ತೀರ ಬನಾವಟವಿರುತ್ತದೆಂದೂ ಗೋಪಾಳ ಸಿದ್ಧೇಶ್ವರನು ನಿರ್ದೋಷಿಯಿರುತ್ತಾನೆಂದೂ ನಾಮದಾರ ಇಲಾಖಾಧೀಶರಾದ ಗವ್ಹರ್ನರಸಾಹೇಬ ಬಹದ್ದೂರರವರ ಕಡೆಗೆ ಇಂಗ್ರಜೀ ಛಾಪೇ ಅರ್ಜಿಯನ್ನು ಮಾಡಿದ್ದಲ್ಲದೆ, ಅರಟಾಳ ಸಾಹೇಬರ ಮೇಲಿರುವ ಸರಕಾರದವರ ವಿಶ್ವಾಸವನ್ನು ಹಾರಿಸಬೇಕೆಂದು ಬೇರೆ ಎಷ್ಟೋ ಸಾಹಸವನ್ನು ಮಾಡಿದರು. ಆದರೆ ಅದೆಲ್ಲ ನಿರರ್ಥಕವಾಗಿ ಗೋಮುಖವ್ಯಾಘ್ರನಂತೆ ಕಾರ್ಯತತ್ಪರನಾಗಿದ್ದ ದೋಷಾಕ್ರಾಂತನಾದ ಗೋಪಾಳ ಸಿದ್ಧೇಶ್ವರನಿಗೆ ಶಿಕ್ಷೆಯಾಗಿ ಹೋಯಿತು. ಗೋಪಾಳ ಸಿದ್ಧೇಶ್ವನಿಗೆ ಶಿಕ್ಷೆಯಾದ ಸುದ್ದಿಯನ್ನು ಕೇಳಿ ಸಂತೋಷಪಡದ ಜನರು ವಿರಳರೆಂದು ಹೇಳಬಹುದು. ದುಷ್ಟರಿಗೆ ಶಾಸನವಾದರೆ ಯಾರಿಗೆ ಆನಂದವಾಗಲಿಕ್ಕಿಲ್ಲ! ಹನ್ನೆರಡು ಹದಿಮೂರು ವರ್ಷದ ತರುವಾಯ ಸಾಧಿಸಬಹುದಾದ ದುಷ್ಕೃತ್ಯಕ್ಕೆ ಪ್ರಾರಂಭದಲ್ಲಿಯೇ ರಿಕಾರ್ಡು ತಿದ್ದಿದ ಗೋಪಾಳ ಸಿದ್ಧೇಶ್ವರನ ಕಾಪಟ್ಯವೂ, ಬಹುದಿವಸದ ಹಿಂದೆ ಸಾಧಿಸಿದ ಅವನ ಕಾಪಟ್ಯವನ್ನು ಹೊರಗೆಡವಿದ ರಾ.ಬ॥ಅರಟಾಳ ಸಾಹೇಬರವರ ಚಾಣಾಕ್ಷತನವೂ ಇವೆರಡೂ ಅಗಾಧವಾಗಿಯೇ ಇರುವವೆಂದು ಹೇಳಬೇಕಾಗಿದೆ. ಅಂದರೆ ದುರ್ಜನರಲ್ಲಿ ದುಷ್ಟತನವೂ ಮೋಸವೂ ಎಷ್ಟು ದಟ್ಟವಾಗಿರುವವೋ, ಅದನ್ನು ಗೊತ್ತು ಹಚ್ಚುವ ಚಾತುರ್ಯವೂ ಬಲಿಷ್ಠತನವೂ ರಾ.ಬ॥ಅರಟಾಳ ಸಾಹೇಬರವರಲ್ಲಿ ಅವುಗಳ ಇಮ್ಮಡಿಯಾಗಿರುವವೆಂಬದಕ್ಕೆ ಸಂದೇಹವಿಲ್ಲ. ಈ ವ್ಯಾಜ್ಯದ ಸಾರಾಸಾರ ವಿಚಾರಮಾಡಿದರೆ ಗೋಪಾಳಸಿದ್ಧೇಶ್ವರನ ಗುಪ್ತವಾದ ಕಪಟತಂತ್ರವನ್ನು ಬೈಲಿಗೆಳೆದದ್ದು ಮೃತವಾದ ಮನುಷ್ಯನಿಗೆ ಸಜೀವತೆಯನ್ನುಂಟು ಮಾಡಿದ ಜಾಣ್ಮೆಗೆ ಸರಿಯಾದದ್ದೆಂದು ಹೇಳಲು ಅಡ್ಡಿತೋರುವದಿಲ್ಲ. ರಾಮಬಾಣವು ಎಂದಿಗಾದರೂ ಹುಸಿಯಾದೀತೆ!

ಮುಂದೆ ಈ ವ್ಯಾಜ್ಯವು ಹಾಯಕೋರ್ಟಿಗೆ ಅಪೀಲಾಯಿತು. ಫೌಜದಾರಿ ಅಪೀಲ ನಂಬರ ೩೮೩/೧೯೦೯ ಅಲ್ಲಿ ಇದರ ವಿಚಾರ ನಡೆದು ಪ್ರಮುಖ ಬ್ರಾಹ್ಮಣರ ಪ್ರಚಂಡ ಸಾಹಸದಿಂದಲೋ ಗೋಪಾಳ

ಸಿದ್ದೇಶ್ವರನ ಪಿತೃವರ್ಗದ ಪುಣ್ಯಶೇಷದ ಬಲದಿಂದಲೋ ಒಂದು ಕಲಮಿನ ಶಿಕ್ಷೆಯು ಕಡಿಮೆ ಮಾಡಲ್ಪಟ್ಟು, ಅವನಿಗೆ ಫಕ್ತ ೩ ವರ್ಷಗಳ ಸಕ್ತಮಜೂರಿಯ ಕೈದೂ, ೪೦೦ ರೂಪಾಯಿ ದಂಡವೂ ಕಾಹೀಮಾಯಿತು. ಗೋಪಾಳ ಸಿದ್ದೇಶ್ವರನಿಂದ ಆ ಬಡ ಜಮೀನದ ಮಾಲಕನಿಗೆ ಬಹಳೇ ಹಾನಿಯಾಗಿರುವದೆಂಬ ನಿಜಾಂಶವನ್ನು ಗೊತ್ತು ಹಚ್ಚಿ, ಮೆ॥ಸೆಸೆನ್ ಜಜ್ಜ ಸಾಹೇಬ ಬಹದ್ದೂರರವರು ಮೊದಲಿಗೆ ಮಾಡಿದ ಒಂದು ಸಾವಿರ ರೂಪಾಯಿ ದಂಡದ ರಕಮಿನಲ್ಲಿ ೪೦೦ ರೂಪಾಯಿಗಳನ್ನು ಆ ಜಮೀನಿನ ಮಾಲಕನಿಗೇ ಕೊಡುವದಾಗಿ ಠರಾವಿನಲ್ಲಿ ಬರೆದಿದ್ದರು. ಹಾಯಕೋರ್ಟಿನವರಾದರೂ ಈ ೪೦೦ ರೂಪಾಯಿಗಳನ್ನು ಆ ಜಮೀನಿನ ಮಾಲಕರಿಗೇ ಮುಟ್ಟಿಸತಕ್ಕದೆಂಬದಾಗಿ ಠರಾವು ಮಾಡಿದರು. ಬಡಜನರ ಸೌಖ್ಯದ ಕಡೆಗೂ, ನ್ಯಾಯದ ಕಡೆಗೂ ಪೂರ್ಣ ಲಕ್ಷವಿಟ್ಟು ಮಾಡಿದ ಮೆ॥ಡಿ. ಜಜ್ಜ ಕ್ಲೆಮೆಂಟಸಾಹೇಬ ಬಹದ್ದೂರರವರ ತೀರ್ಪೂ, ಇದಕ್ಕನುಸರಿಸಿಯೇ ಆದ ಹಾಯಕೋರ್ಟಿನವರ ತೀರ್ಪೂ ಜ್ಞಾನಿಗಳಿಂದ ಹೊಗಳತಕ್ಕಂಥವಿರುತ್ತವೆ. ಹಾಯಕೋರ್ಟ ತೀರ್ಪಿನ ತಾರೀಖು ೧೦-೨-೧೯೧೦ ಇಸವಿ.

ಮೆ॥ಬೆಳಗಾವ ಜಿಲ್ಲಾ ಕಲೆಕ್ಟರ ಸಾಹೇಬ ಬಹದ್ದೂರರವರಿಗೆ ಶಿರಸಂಗೀ ದೇಸಗತಿಯ ಪ್ರೊಬೇಟ ದೊರೆದದ್ದು

ಶ್ರೀಮಂತ ಶಿರಸಂಗಿಯ ಕೈ.ವಾ. ಲಿಂಗಪ್ಪ ಜಾಯಪ್ಪ ಸರದೇಸಾಯಿಯವರು ತಮ್ಮ ಯಾವದಾಸ್ತಿಯನ್ನು ಸ್ವಮತಸ್ಥರ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸತಕ್ಕುದೆಂದು ಮೃತ್ಯುಪತ್ರವನ್ನು ಬರೆದು ಶಿವಾಧೀನರಾದ ಸಂಗತಿಯು ವೀರಶೈವ ರಾಷ್ಟ್ರಕ್ಕೆಲ್ಲ ತಿಳಿದಿರುವದಷ್ಟೇ! ಆ ಮೃತ್ಯುಪತ್ರದಲ್ಲಿ ತೋರ್ಪಡಿಸಿದಂತೆ ತಮ್ಮ ಉದ್ದೇಶವನ್ನು ಅವ್ಯಾಹತವಾಗಿ ನೆರವೇರಿಸಿಕೊಂಡು ಹೋಗುವ ವಿಷಯದಲ್ಲಿ ಒಂದು ಸಂಘವು ಇರತಕ್ಕುದು ಅವಶ್ಯವಾದುದರಿಂದ, ಅದರ ನಿರ್ವಾಹಕ್ಕೆ ಯೋಗ್ಯರೆಂದು ತಮಗೆ ಯಾರು ತೋರಿದರೋ ಅಂಥ ಜನರ ಹೆಸರನ್ನಾದರೂ ಅವರು ಆ ಪತ್ರಿಕೆಯಲ್ಲಿಯೇ ಬರೆದು ಬಿಟ್ಟಿದ್ದರು. ಶ್ರೀಮಂತರು ಗತಿಸಿ ಈಗ ಎರಡು ವರ್ಷಗಳಾಗಿಹೋದರೂ ಅವರ ಉದ್ದೇಶದಂತೆ ಕಾರ್ಯವು ಮಾತ್ರ ನಡೆಯುವದಕ್ಕೆ ಇದುವರೆಗೂ ಅನುವಾಗಿದ್ದಿಲ್ಲ. "ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಅನುಭವ ವಚನವು ಇಲ್ಲಿಯಾದರೂ ದೃಷ್ಟಾಂತವಾಯಿತು. ಸ್ವಾರ್ಥಪರರೂ, ಪರೋತ್ಕರ್ಷಾಸಹಿಷ್ಣುಗಳೂ ಧರ್ಮಕಂಟಕರೂ ಆದ ಕೆಲವರು ದೇಸಾಯರ ಉದ್ದೇಶವನ್ನು ಸಾಂಗಗೊಳಿಸಿದಂತೆ ಮಾಡಲು ಸಾಹಸಪಟ್ಟರು. ಶ್ರೀಮಂತ ಸರದೇಸಾಯಿಯವರ ಪತ್ನಿಯವರಾದ ಸುಂದರಾಬಾಯಿಯವರಿಗೆ ದುರ್ಬೋಧೆಯನ್ನು ಮಾಡಿದರು. ಮೇಣದಂತೆ ಮೃದುಲವಾದ ಸುಂದರಾಬಾಯಿಯವರ ಸ್ತ್ರೀಹೃದಯವು ಅವರ ನಾನಾ ವಿಧವಾದ ಕಪಟ ಬೋಧೆಗೆ ಮರುಳಾಗಿ ಹೋಯಿತು. ಪತಿಯ ಧರ್ಮಕ್ಕೆ ಸತಿಯೇ ವಿಘ್ನಕಾರಿಯಾದಳೆಂದು ದೂರಿಸಿಕೊಳ್ಳುವ ಹೊತ್ತನ್ನು ಅವರಿಗೂ ತಂದಿಕ್ಕಿದರು. ಈ ಆಸ್ತಿಯನ್ನು ತಮ್ಮ ಪತಿಯಾದ ಶ್ರೀಮಂತ ಸರದೇಸಾಯರು ಮೃತ್ಯುಪತ್ರಮುಖೇನ ಅನ್ಯಾಕ್ರಾಂತಮಾಡಲು ಅಧಿಕಾರವುಳ್ಳವರಾಗಿರಲಿಲ್ಲವೆಂದೂ, ಆದುದರಿಂದ ಅದನ್ನು ಅಂಗೀಕರಿಸಲಾಗದೆಂದೂ ಸುಂದರಾಬಾಯಿಯವರು ಸರಕಾರದವರಿಗೆ ಪ್ರಾರ್ಥಿಸಿಕೊಂಡರು. ಇದರ ಮೇಲೆ ಸರಕಾರದವರು ನ್ಯಾಯಸಮ್ಮತವಾದ ವಿಚಾರಣೆಯನ್ನು ನಡಿಸಿ, ಗತಿಸಿದ ದೇಸಾಯರಿಗೆ ಮೃತ್ಯುಪತ್ರವನ್ನು ಬರೆಯಲಿಕ್ಕೆ ಅಧಿಕಾರವಿದ್ದಿತೆಂತಲೂ, ಅದನ್ನು ನಾವು ಅಂಗೀಕರಿಸಿರುತ್ತೇವೆಂತಲೂ ಅದರ ಕಾರ್ಯನಿರ್ವಾಹಕ ಸಂಘಕ್ಕೆ ಅಧ್ಯಕ್ಷರಾಗಿ ಕೋರಲ್ಪಟ್ಟರು. ಜಿಲ್ಲಾ ಕಲೇಕ್ಟರ ಸಾಹೇಬ ಬಹದ್ದೂರರವರು ನ್ಯಾಯಮಂದಿರದಲ್ಲಿ ಆ ಅಧಿಕಾರಪತ್ರವನ್ನು ಪಡೆದುಕೊಳ್ಳತಕ್ಕುದೆಂತಲೂ ಅಪ್ಪಣೆ ಮಾಡಿದರು. ಮತ್ತು ಪ್ರತಿಪಕ್ಷದ ಸುಂದರಾಬಾಯಿಯವರಾದರೂ ಅದೇ

ನ್ಯಾಯಮಂದಿರದಲ್ಲಿ ತಮ್ಮ ವಿವಾದವನ್ನು ಹೇಳಿಕೊಳ್ಳಬಹುದೆಂತಲೂ ತೀರ್ಮಾನಿಸಿದರು. ಆ ಪ್ರಕಾರ ಅಧಿಕಾರ ಪತ್ರಿಕಾಪ್ರಾಪ್ತಿಗಾಗಿ ವಾದಿ-ಬೆಳಗಾವ ಜಿಲ್ಲೆಯ ಕಲೆಕ್ಟರರಾದ ಮೆ||ಬಿ.ಎ. ಬ್ಯಾಂಡನ್‌ಸಾಹೇಬ ಬಹದ್ದೂರವರು ಬೆಳಗಾವ ಡಿಸ್ಟ್ರಿಕ್ಟ ಜಜ್ಜಕೋರ್ಟಿನಲ್ಲಿ ವ್ಯಾಜ್ಯ ನಡೆಸಿದರು;ಪ್ರೊಬೇಟ ಅಪ್ಲಿಕೇಶನ ನಂಬರ ೩/೧೯೦೭ ಪ್ರತಿವಾದಿ (೧) ರಾ.ಬ||ರುದ್ರಗೌಡ ಚೆನ್ನವೀರಗೌಡ ಅರಟಾಳ ಡಿ.ಡಿ. ಕಲೆಕ್ಟರ ಜಿಲ್ಲಾ ಬೆಳಗಾವ (೨) ನರಸಿಂಹ ರಾಮಚಂದ್ರ ಫಡಣೀಸ ಮೊದಲಾಧ ೧೩ ಜನರಿದ್ದರು. ಈ ವಿಚಾರಣೆಯಲ್ಲಿ ರಾ.ಬ||ಅರಟಾಳ ಸಾಹೇಬರವರ ಹಾಗೂ ನವಲಗುಂದ ತಾಲೂಕಿನ ಮಾಮಲೇದಾರರಾದ ರಾ.ಸಾ||ರೇವಣಸಿದ್ದಪ್ಪ ಬಸವಣ್ಣಪ್ಪ ಕಿತ್ತೂರ ಇವರ ಸಾಕ್ಷಿಗಳಾದವು. ಈ ಘನ ವಿಚಾರಣೆಯು ಡಿಸ್ಟ್ರಿಕ್ಟ ಜಜ್ಜರಾದ ಮೆ||ಇ.ಕ್ಲಿಮೆಂಟ ಸಾಹೇಬ ಬಹದ್ದೂರವರ ಮುಂದೆ ನಡೆದು, ತಾರೀಖು ೨೭ನೇ ಸಪ್ಟಂಬರ ಸನ್ ೧೯೦೮ನೇ ಇಸವಿಯ ದಿವಸ ಸುಂದರಾಬಾಯಿಯವರ ವಾದವು ಅನ್ಯಾಯವಾದುದರಿಂದ ಅವರ ವಾದವು ತಿರಸ್ಕರಿಸಲ್ಪಟ್ಟಿತೆಂತಲೂ, ಮೆ||ಜಿಲ್ಲಾ ಕಲೇಕ್ಟರ ಸಾಹೇಬ ಬಹದ್ದೂರವರಿಗೆ ಪ್ರೊಬೇಟ (ಅಧಿಕಾರ ಪತ್ರಿಕೆ) ಮಾಡಲ್ಪಟ್ಟಿತೆಂತಲೂ ಅವರವರ ವೆಚ್ಚಗಳನ್ನು ಅವರವರೇ ನೋಡಿಕೊಳ್ಳಬೇಕೆಂತಲೂ ಠರಾವವು ಹೇಳಲ್ಪಟ್ಟಿತು.

ನ್ಯಾಯನಿಷ್ಠರಾದ ಮೆ||ಕ್ಲಿಮೆಂಟಸಾಹೇಬ ಬಹದ್ದೂರವರ ನಿರ್ಣಯವನ್ನು ಕೇಳಿ, ಇಡೀ ವೀರಶೈವ ಜಗತ್ತೆಲ್ಲ ಅಪಾರವಾದ ಆನಂದವನ್ನು ಹೊಂದಿತು. ಶ್ರೀಮಂತರ ಸತ್ಯಸಂಕಲ್ಪಕ್ಕೆ ಸರಿಯಾಗಿ ತೀರ್ಮಾನವಾಗಿ, ಅದರಂತೆ ಕಾರ್ಯವು ಜರುಗಲನುಕೂಲವುಂಟಾದುದನ್ನು ಕಂಡು ಯಾರಿಗೆ ಆನಂದವಾಗಲಿಕ್ಕಿಲ್ಲ! ಲಿಂಗಾಯತರ ಕಟ್ಟಭಿಮಾನಿಗಳೂ, ದೂರದರ್ಶಿಗಳೂ ಆದ ರಾ.ಬ||ಅರಟಾಳ ಸಾಹೇಬರವರು ಶ್ರೀಮಂತರ ಮೃತ್ಯುಪತ್ರದಂತೆಯೇ ನಿರ್ಣಯವಾಗಬೇಕೆಂಬ ವಿಷಯದಲ್ಲಿ ಬಹುಪ್ರಯತ್ನ ಮಾಡಿದುದರಿಂದ, ಇದರ ಪರ್ಯವಸಾನವು ಸಮಾಧಾನಕರವಾಗಿ ಜರುಗಿತೆಂದು ಬೇರೆ ಹೇಳಲವಶ್ಯವಿಲ್ಲ. ಇದರ ತೀರ್ಪು ಹೀಗೇ ಆಗುವದೆಂಬದಾಗಿ ರಾ.ಬ||ರವರಲ್ಲಿ ದೃಢವಾದ ಭಾವನೆಯಿತ್ತು. ಸಂದೇಹ ಮನಸ್ಕರಾದ ತಮ್ಮ ಋಣಾನುಬಂಧಿಗಳ ಮುಂದೆ ಈ ತೀರ್ಪು ಅಕ್ಷರಶಃ ಮೃತ್ಯುಪತ್ರದಂತೆಯೇ ಆಗುವದೆಂದು ಪದೇ ಪದೇ ಹೇಳುತ್ತಿದ್ದರು. ಮಹನೀಯರ ಜ್ಞಾನಚಕ್ಷುಗಳ ಮುಂದೆ ತೂಗಾಡುತ್ತಿದ್ದ ಅನುಮಾನಗಳು, ಮುಂದೆ ಅಕ್ಷರಶಃ ಹಾಗೆಯೇ ಆಗುವದರಲ್ಲಿ ಬಹುಶಃ ತಪ್ಪುವದಿಲ್ಲ.

ಶ್ರೀಮಂತರ ಮೃತ್ಯುಪತ್ರವನ್ನು ರದ್ದುಪಡಿಸಬೇಕೆಂದು ಪ್ರತಿಪಕ್ಷದವರು ವಿಶ್ವಪ್ರಯತ್ನಮಾಡಿದರು. ದೇಸಗತಿಯ ದತ್ತಕ ಕಾಹೀಮ ಮಾಡಬೇಕೆಂದು ದುರಭಿಮಾನಿಗಳಾದ ಎಷ್ಟೋ ಧನಿಕ ಸೆಟ್ಟರೂ ಸಾಹುಕಾರರೂ ಪ್ರತಿಪಕ್ಷಕ್ಕೆ ಸೇರಿಕೊಂಡು, ಸ್ವಾರ್ಥಸಾಧನ ಕಾರ್ಯತತ್ಪರರಾದರು. ಈ ಪ್ರಕರಣದಲ್ಲಿ ದೊಡ್ಡ ದೊಡ್ಡ ಜನರ ಸಾಕ್ಷಿಗಳಾದವು. ಸುಳ್ಳು ಹೇಳದವರೂ ಕೂಡ ಈ ಸಂದರ್ಭದಲ್ಲಿ ಸುಳ್ಳು ಸಾಕ್ಷಿಗಳನ್ನು ಹೇಳಿದರು. ಇದೆಲ್ಲ ಘಟಾಟೋಪವನ್ನು ಕಂಡು ವ್ಯಾಜ್ಯವು ಸುಂದರಾಬಾಯಿಯವರಂತೆ ಎಲ್ಲಿ ಆಗುವದೋ ಎಂದು ಸಂದೇಹ ಮನಸ್ಕರಾಗಿ ಕೆಲ ಅದೂರದರ್ಶಿಗಳೂ ಅಳ್ಳೆದೆಯವರೂ ಆದ ಅಧಿಕಾರಿಗಳು, ರಾವಬಹದ್ದೂರವರೊಡನೆ "ದೇಸಗತಿಯ ಅರ್ಧ ಆದಾಯವನ್ನು ಅವರು ಕೊಡಲೊಡಂಬಟ್ಟರೆ, ರಾಜಿಯಾಗುವದು ನೆಟ್ಟಗೆ ತೋರುತ್ತದೆ; ಅವರ ಪ್ರಯತ್ನವು ದೂರ ದೂರ ಕಾಣುತ್ತದೆ; ವಿರುದ್ಧವಾದರೆ ಜಗತ್ತಿನ ಅಪಹಾಸ್ಯಕ್ಕೆ ಕಾರಣವಾದೀತು" ಎಂಬದಾಗಿ ಆಪ್ತಾಲೋಚನೆ ಮಾಡಿದುದನ್ನು ಕಂಡು, ಅವರ ಅಧೀರತೆಗೆ ನಕ್ಕು "ನೀವೇನೂ ಚಿಂತೆ ಮಾಡಕೂಡದು, ಆದದ್ದಾಗಲಿ; ಅಧೈರ್ಯಪಡುವ ಕಾರಣವಿಲ್ಲ. ಮೃತ್ಯುಪತ್ರಾನುಸಾರವಾಗಿ ನಿರ್ಣಯವಾಗಲು ತಪ್ಪುವದಿಲ್ಲ" ಎಂದು ಖಂಡಿತವಾಗಿ ಹೇಳಿದುದರಿಂದ ಎಲ್ಲ ಅನುಯಾಯಿಗಳೂ ಸ್ತಬ್ಧರಾಗಿರಬೇಕಾಗಿತ್ತು. ನಿರ್ಣಯಕ್ಕೆ ದಿವಸಗಳು ಬಹಳ ಸಂದದರಿಂದ ಬಹುಜನರು, ವ್ಯಾಜ್ಯವು ದೃಢೀಕೃತವಾಯಿತೆಂದೂ ಲಿಂಗಾಯತ ಫಂಡಿನಂತೆ

ಆಗುವದು ಅಸಂಭವನೀಯವೆಂದೂ ಊಹಿಸುವವರಾಗಿದ್ದರು. ಆದರೆ ಕಡೆಗೆ ಒಮ್ಮಿಂದೊಮ್ಮೆ ಶ್ರೀಮಂತರ ಉಯಿಲಿಗೆ ಸರಿಯಾಗಿ ಮೆ||ಕಲೆಕ್ಟರ ಸಾಹೇಬ ಬಹದ್ದೂರರವರಿಗೆ ಪ್ರೊಬೇಟ ದೊರೆಯಿತೆಂಬ ವಾರ್ತೆಯಿಂದ ಪ್ರತಿಪಕ್ಷದವರ ಹೊರತು ಲಿಂಗಾಂಗಿಗಳೆಲ್ಲ ಆನಂದಭರಿತರಾದರು.

ಶ್ರೀಮಂತರ ಅಭೂತಪೂರ್ವವಾದ ಧರ್ಮಮಾರ್ಗ

ಸತ್ಯಕ್ಕೆ ಸಾವಿಲ್ಲ;ಸತ್ಯ ಸಂಕಲ್ಪಕ್ಕೆ ಚ್ಯುತಿಯಿಲ್ಲ. ಶ್ರೀಮಂತ ಸರದೇಸಾಯರು ಸ್ವಮತ ಹಿತಕ್ಕಾಗಿ, ಸಂಪೂರ್ಣವಾದ ಸ್ವಾರ್ಥತ್ಯಾಗದಿಂದ ಜಗತ್ತೇ ಮೆಚ್ಚುವಂತಹ ಧರ್ಮಕಾರ್ಯವನ್ನು ಮಾಡಿ ಶಿವಕೃಪೆಗೆ ಪಾತ್ರರಾದರು. ಅಂತಹ ಧರ್ಮಕ್ಕೆ ವಿಘಾತವುಂಟಾಗುವದಾದರೆ ಸತ್ಯಧರ್ಮಶ್ರೇಷ್ಠವೇ ಜಗತ್ತಿನಲ್ಲಿ ಉಳಿಯಲಿಲ್ಲವೆಂದು ಹೇಳಬೇಕಾದೀತು. ಕರ್ಣ-ಶಿಬಿಚಕ್ರವರ್ತಿ-ಬಲಿಚಕ್ರವರ್ತಿ ಮೊದಲಾದ ಮಹಾಪುರುಷರನೇಕರು ಪುರಾಣಪ್ರಸಿದ್ಧರಾಗಿ ದಾನಶೂರರೆಂದೆನ್ನಿಸಿಕೊಂಡಿರುವರು. ಆದರೆ ಅವರೆಲ್ಲರೂ ಪ್ರಾರ್ಥಿತರಾಗಿ ಒಂದೊಂದು ಬಗೆಯ ಸ್ವಾರ್ಥತ್ಯಾಗವನ್ನು ಮಾಡಿರುವರು. ಆಧುನಿಕ ದಾನಶೂರರಲ್ಲಿ ಅಮೇರಿಕೆಯ ಕಾರ್ನೆಗಿ ಮೊದಲಾದ ವಿಖ್ಯಾತ ಪುರುಷರು ಅನೇಕರಿರುವರು. ಆದರೆ ಅವರು ಕೋಟ್ಯಂತರ ರೂಪಾಯಿಗಳನ್ನು ದಾನಮಾಡಿಯೂ ಮಾಡುತ್ತಲು ಇದ್ದರೂ ಶ್ರೀಮಂತರಂತೆ ಸಂಪೂರ್ಣವಾಗಿ ಯಾವದಾಸ್ತಿಯನ್ನೂ ಪರೋಪಕೃತಿಗಾಗಿ ವಿನಿಯೋಗಿಸಿದವರಲ್ಲ. ಆದ ಕಾರಣವೇ ಇವರು ಮಾಡಿದ ಧರ್ಮವು ಅಭೂತಪೂರ್ವವಾದುದೆಂದು ಹೇಳಬೇಕಾಗಿರುವದು. ಹಿಂದೆ ವಾಮನಮೂರ್ತಿಯ ಪ್ರಾರ್ಥನೆಯಂತೆ ಬಲಿಚಕ್ರವರ್ತಿಯು ದಾನಮಾಡುವ ಬಗ್ಗೆ ಶುಕ್ರಾಚಾರ್ಯರು ಉದಕಕುಂಭದ ರಂಧ್ರದಲ್ಲಿ ಅಡಕವಾಗಿ ನಿಂತು ಧಾರಾಜಲವು ಸ್ರವಿಸಿದಂತೆ ಮಾಡಿ, ಆ ಧರ್ಮಕಾರ್ಯಕ್ಕೆ ಅಡ್ಡಿಯನ್ನು ಮಾಡಬೇಕೆಂದು ಯತ್ನಿಸಿ, ಕಡೆಗೆ ಕಣ್ಣನ್ನು ಕಳೆದುಕೊಂಡವೆಂದು ಪುರಾಣ ಪ್ರಸಿದ್ಧವಾಗಿರುವದು. ಈಗ ಈ ಧರ್ಮಕಾರ್ಯಕ್ಕೆ ವಿಘ್ನವನ್ನಾಚರಿಸಲು ಜ್ಞಾನಾಂಧತ್ವ ಧರ್ಮಾಂಧತ್ವ ನ್ಯಾಯಾಂಧತ್ವ ರೂಪದೋಷಗಳು ಲೋಕಕ್ಕೆಲ್ಲ ಗೋಚರವಾದಂತಾಯಿತು. ಅದಂತಿರಲಿ. ಶ್ರೀಮಂತರ ಘನತರವಾದ ಸಾದ್ಗುಣ್ಯದ ಪರಿಮಿತಿಯು ಎಷ್ಟಾಗಿದ್ದಿತೋ ಅದಕ್ಕೆ ಅನುಗುಣವಾದ ಧರ್ಮಕಾರ್ಯವನ್ನೇ ಅವರು ಮಾಡಿದರು. ರಂಗಿಯ ಭೂಮಿಯು ತನ್ನಷ್ಟಕ್ಕೆ ತಾನೇ ನೀರನ್ನು ಬಿಡುತ್ತಿರುವದು. ಕಲ್ಲುಭೂಮಿಯಲ್ಲಿ ಎಷ್ಟು ಅಗಿದರೂ ನೀರು ಬೀಳುವದಿಲ್ಲ. ಶ್ರೀಮಂತರು ಮಾಡಿದ ಅಸಮ ದಾನವೇ ಅವರ ಮತಾಭಿಮಾನದ ಪ್ರಮಾಣವನ್ನು ಜಗತ್ತಿಗೆಲ್ಲ ಪ್ರಕಾಶಪಡಿಸುತ್ತಿರುವದು. ಈ ಮಹಾಪುರುಷರು ಅಹರ್ನಿಶೆಯಲ್ಲಿಯೂ ಸ್ವಮತದ ಏಳ್ಗೆಯನ್ನೇ ತಮ್ಮ ಚತುರ್ವಿಧ ಪುರುಷಾರ್ಥಸಾಧನವನ್ನಾಗಿ ತ್ರಿಕರಣಪೂರ್ವಕವಾಗಿಯೂ ತಿಳಿದಿದ್ದರೆಂಬದಕ್ಕೆ ಹೆಚ್ಚಿನ ದೃಷ್ಟಾಂತವನ್ನೇ ಕೊಡಬೇಕಾಗಿರುವದಿಲ್ಲ. ಇವರೇ ಧನ್ಯರು! ಇವರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ ಸ್ವಾರ್ಥತ್ಯಾಗವನ್ನು ಮಾಡಿ ಸ್ವಮತೀಯರ ಏಳ್ಗೆಯ ಕೃತ್ಯವನ್ನು ಮಾಡುವ ಮಹನೀಯರೆಲ್ಲರೂ ಧನ್ಯರು. ರಾ.ಬ||ಕೈ.ವಾ.||ಗಿಲಗಿಂಚಿ ಗುರುಸಿದ್ಧಪ್ಪಣ್ಣನವರೂ ರಾ.ಬ||ಅರಟಾಳ ರುದ್ರಗೌಡ ಸಾಹೇಬರೂ ಲಿಂಗಾಯತ ಫಂಡನ್ನು ಕೂಡಿಸಿಟ್ಟಿದ್ದರಿಂದಲೇ, ತಮ್ಮ ಯಾವತ್ತೂ ಇಷ್ಟೇಟನ್ನು ಅದಕ್ಕೆ ಕೂಡಿಸಿ ವೃದ್ಧಿಪಡಿಸಬೇಕೆಂಬ ಮತಾಭಿಮಾನದ ಸ್ಫೂರ್ತಿಯು ಶ್ರೀಮಂತರಲ್ಲಿ ಜಾಗ್ರತವಾಯಿತೆಂದು ನಿರ್ಧಾರವಾಗಿ ಹೇಳಬಹುದು. ಶ್ರೀಮಂತರಲ್ಲಿ ಇಂತಹ ಅತ್ಯಗಾಧವಾದ ಸ್ವಮತಾಭಿಮಾನದ ಸ್ಫೂರ್ತಿಯು ಯಾವ ಮಹನೀಯನ ಅನುಕರಣದಿಂದುದ್ಭವಿಸಿತೋ, ಇಂತಹ ಸನ್ಮಾರ್ಗದ ಅನುಕರಣವನ್ನು ತೆಗೆದುಕೊಳ್ಳುವದಕ್ಕೆ ಶ್ರೀಮಂತರ ಮೇಲೆ ಯಾವ ಜಗದೀಶ್ವರನ ಅನುಗ್ರಹವಾಯಿತೋ ಆ ಮಹನೀಯನ

ಹಾಗೂ ಆ ಮಹೇಶನ ನಾಮೋಚ್ಚಾರವನ್ನು ವೀರಶೈವರಾದ ನಾವೆಲ್ಲರು ಎಷ್ಟು ಜಪಿಸಿದರೂ ತೀರದು. ಅಂತೂ ಕೈ.ವಾ. ಶ್ರೀಮಂತರು ಇಹಲೋಕದಲ್ಲಿ ಸಜ್ಜನಶ್ಲಾಘನೀಯವಾದ ಸತ್ಕೀರ್ತಿಗೂ ಪರದಲ್ಲಿ ಉತ್ತಮ ಭಕ್ತೈಕ ಸುಲಭವಾದ ಶಿವಾನುಗ್ರಹ ಸ್ಫೂರ್ತಿಗೂ ಪಾತ್ರರಾಗಲು ಸಾಧಕವಾದ ಕಾರ್ಯವನ್ನು ಮಾಡಿ ಜಗದ್ವಂದ್ಯರಾದರು. ಮತ್ತು ಶ್ರೀಮಂತರ ಸಂಕಲ್ಪವನ್ನು ಸರಿಯಾಗಿ ನೆರವೇರಿಸಲು ಕಂಕಣಬದ್ಧರಾದ ರಾ.ಬ॥ ರುದ್ರಗೌಡ ಸಾಹೇಬರವರೇ ಮೊದಲಾದ ಮಹನೀಯರೆಲ್ಲರೂ ವಂದ್ಯರಾದರು. ಮುಖ್ಯವಾಗಿ ಶ್ರೀಮಂತರು ತಮ್ಮ ಜೀವಮಾನದ ಮುಖ್ಯಕರ್ತವ್ಯಭಾರವನ್ನು ಈ ರೀತಿಯಲ್ಲಿ ಇಳುಹಿಕೊಂಡರು. ಆದರೆ ಅವರ ಉದ್ದೇಶ ನಿರ್ವರ್ತನರೂಪವಾದ ಭಾರವು ಯಾವ ಕಾರ್ಯನಿರ್ವಾಹಕ ಸಂಘದ ಮೇಲೆ ಇಡಲ್ಪಟ್ಟಿರುವದೋ ಆ ಸಂಘವು ಧರ್ಮಕರ್ತರ ಉದ್ದೇಶವು ನಿರಾಕ್ಷೇಪವಾಗಿ ನೆರವೇರುವಂತೆ ಮಾಡಲು ಸರ್ವಪ್ರಕಾರದಿಂದಲೂ ಅರ್ಹವಾಗಿರುತ್ತದೆಂದು ವೀರಶೈವ ಸಮಾಜದ ನಂಬಿಕೆಯಿದೆ. ಈ ನಂಬಿಗೆಯನ್ನೂ, ವೀರಶೈವ ಜಗತ್ತಿನ ನಿರೀಕ್ಷಣೆಯನ್ನೂ ವ್ಯರ್ಥಗೊಳಿಸದ ಹಾಗೆ ಮುಂದಿನ ಕರ್ತವ್ಯವನ್ನು ನೆರವೇರಿಸಿ ಕೃತಕೃತ್ಯರಾಗಲೆಂದು ಹಾರೈಸುತ್ತೇವೆ.

ಸಿರಸಂಗಿಯ ಪ್ರಕರ್ಣವು ಮುಂದೆ ಮುಂಬೈ ಹೈಕೋರ್ಟಿಗೆ ಅಪೀಲ ಆಯಿತು. ಅಪೀಲ ನಂಬರ ೧೯೩/೧೯೧೦ರಲ್ಲಿ ನ್ಯಾಯಮೂರ್ತಿಗಳಾದ ನಾಮದಾರ ಎಸ್. ಬ್ಯಾಚಲರ ಸಾಹೇಬರವರ ಮತ್ತು ನ್ಯಾಯಮೂರ್ತಿ ನಾಮದಾರ ಸರ್ ನಾರಾಯಣ ಗಣೇಶ ಚಂದಾವರಕರ ಇವರ ಹತ್ತರ ವಿಚಾರಣೆ ನಡೆದು, ತಾ. ೧೧ನೇ ಮಾರ್ಚ ಸನ್ ೧೯೧೨ನೇ ಇಸ್ವಿ ದಿವಸ ಠರಾವು ಹೇಳಲ್ಪಟ್ಟಿತು. ಅದರಲ್ಲಿ ಜಿಲ್ಲಾ ಜಜ್ಜಕೋರ್ಟಿನಲ್ಲಿ ಆದ ಠರಾವನ್ನೇ ಕಾಹಿಮ ಮಾಡಿರುವರು. ಅಂದರೆ ಮೃತ್ಯುಪತ್ರವು ಕಾಹೀಮವಾಗಿ ಜಿಲ್ಲಾ ಕಲೇಕ್ಟರ ಸಾ.ಬ॥ರವರಿಗೆ ಪ್ರೊಬೇಟ ಕೊಟ್ಟ ಠರಾವನ್ನೇ ಕಾಹೀಮ ಮಾಡಲ್ಪಟ್ಟಿತು. ಈ ಠರಾವು ಬರೆಯುವದಕ್ಕೆ ನಾಮದಾರ ಬ್ಯಾಚಲರ ಸಾಹೇಬರವರು ಮತ್ತು ಚಂದಾವರಕರವರು ರಾ.ಬ॥ಅರಟಾಳ ಸಾಹೇಬರವರ ಮೇಲೆ ಸಂಪೂರ್ಣ ವಿಶ್ವಾಸಕೊಟ್ಟು, ಠರಾವು ಬರೆಯಲ್ಪಟ್ಟಿದೆಯೆಂದು ಸ್ಪಷ್ಟವಾಗಿ ಬರೆದಿರುವರು. ಅಂದಮೇಲೆ ರಾ.ಬ॥ಅರಟಾಳ ಸಾಹೇಬರವರ ಸತ್ಯಸಂಧತೆಯು ಎಷ್ಟು ಪ್ರಸಾರವಾಗಿರುವದು ಎಂಬುದು ಇಲಾಖಾ ಹೈಕೋರ್ಟ ಜಜ್ಜಸಾಹೇಬ ಬಹದ್ದೂರವರ ಲೇಖನದ ಮೇಲಿಂದ ಸ್ಪಷ್ಟವಾಗಿ ತಿಳಿಯುವಂತಿದೆ. ಇಂಥ ಮಹತ್ವವಾದ ಪ್ರಕರಣದ ಠರಾವವು ಇವರ ಒಂದೇ ಒಂದು ಸಾಕ್ಷಿಯನ್ನು ಅವಲಂಬಿಸಿ ಬರೆಯಲ್ಪಟ್ಟಿರುವದರಿಂದ, ಇವರ ಅಮೋಘವಾದ ಸತ್ವವನ್ನು ಎಷ್ಟು ವರ್ಣಿಸಿದರೂ ತೀರದು. ಈ ಪ್ರೊಬೇಟ ನಂಬರದಲ್ಲಿ ಹೈಕೋರ್ಟಿ ಹುಕುಂನ ವಿರುದ್ಧ ಅಪೀಲ ಪ್ರೀವ್ಹೀಕೌನ್ಸಿಲಕ್ಕೆ ವಗೈರೆ ಮುಂದೆ ಏನೂ ಇಲಾಜ ಮಾಡಲೇ ಇಲ್ಲಾ. ಬೇರೆ ಅಸಲ ದಾವೆ ದತ್ತಕಮಾಡಿಕೊಂಡದ್ದರ ದಶಿಂದ ದತ್ತಕ ಕಾಯಿಂ ಮಾಡಿಕೊಳ್ಳಲಿಕ್ಕೆ ಬೆಳಗಾವಿಯ ಫಸ್ಟಕ್ಲಾಸ ಕೋರ್ಟಿನಲ್ಲಿ ತಂದದ್ದರ ಹಕೀಕತು ಮುಂದಿನ ಪಾನ ೧೯೭-೧೬೦೨ನೇದ್ದರಲ್ಲಿ ಬಂದಿದೆ.[೧]

❖❖

೧. ಈ ಪುಸ್ತಕದ ೫೩೫ನೆಯ ಪುಟದಲ್ಲಿ ಈ ವಿಷಯವಿದೆ-ಸಂ.

೧೮ನೇ ಭಾಗ

ಅರಟಾಳ ಗ್ರಾಮದ ಶ್ರೀ ವೀರಭದ್ರದೇವರ ಜಾತ್ರೆ

ಯಾವ ಶ್ರೀಮನ್ಮಹಿಮನ ಪ್ರೇರಣೆಯಿಂದ ನಾವು ಜನ್ಮವನ್ನೆತ್ತಿರುವೆವೋ, ಯಾವ ಜಗದೀಶನ ಕೃಪೆಯಿಂದ ಸಂರಕ್ಷಿತರಾಗಿ ಕಾಲಹರಣ ಮಾಡುತ್ತಿರುವೆವೋ ಆ ವಿಶ್ವೇಶ್ವರನ ಧ್ಯಾನ-ಪೂಜಾರ್ಚನ ಭಜನಗಳಲ್ಲಿ ನಾವು ಅಹರ್ನಿಶೆಯಲ್ಲಿಯೂ ಮಗ್ನರಾಗಿರುವದು ಕೃತಜ್ಞತೆಯ ಲಕ್ಷಣವಾಗಿರುತ್ತಿದ್ದರೂ, ಬಹುಜನರು ಆತನ ಸ್ಮರಣೆಯನ್ನು ಒಂದು ಕ್ಷಣವಾದರೂ ಮಾಡುತ್ತಿರುವದಿಲ್ಲ. ಇಂತಹ ಅಧರ್ಮಿಗಳನ್ನು ನಾಸ್ತಿಕಕೋಟಿಯಲ್ಲಿ ಸಮಾವೇಶಮಾಡಲು ಅಡ್ಡಿಯಿಲ್ಲ. ಅಶಿಕ್ಷಿತರಾದ ಅಜ್ಞಾನಿಗಳು, ಜಗನ್ನಿಯಾಮಕನ ಮಹಿಮೆಯನ್ನು ಅರಿಯದಿದ್ದರೂ ಸುಶಿಕ್ಷಿತರೆಂದೆನ್ನಿಸಿಕೊಂಡು ಮೆರೆದಾಡುತ್ತಿರುವ ಅಹಂಭಾವಿಗಳಾದರೂ ಅದನ್ನರಿತು ಅದರಂತೆ ಅನುವರ್ತಿಸಬೇಕಲ್ಲವೋ? ಆದರೆ ಅವರು ಅದಕ್ಕೆ ವಿಪರೀತವಾಗಿ ವರ್ತಿಸುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ.

ಈಗಿನ ಜನರಲ್ಲಿ ಶಿಕ್ಷಣ ಪ್ರಸಾರವು ಎಷ್ಟೆಷ್ಟು ಪ್ರಬಲವಾಗುತ್ತಿರುವದೋ ಅವರು ಅಷ್ಟಷ್ಟು ಧರ್ಮಲಂಡರಾಗುತ್ತಿರುವಂತೆ ಕಂಡು ಬರುವದು. ಇಂಗ್ಲೀಷ ಕಲಿತವರ ಸ್ಥಿತಿಗತಿಯನ್ನಂತೂ ಹೇಳುವಂತಿಲ್ಲ. ಹೆಚ್ಚೆಚ್ಚಿನ ಪರೀಕ್ಷೆಯನ್ನು ಕೊಟ್ಟು ಕೊಟ್ಟ ಹಾಗೆ ಅಧರ್ಮವಾದರೂ ಅವರಲ್ಲಿ ಹೆಚ್ಚಿಗೆ ಬೆಳೆಯುತ್ತ ಹೋಗುತ್ತದೆ. ಇಂಥವರು ಸುಧಾರಕರೆಂಬ ಹೆಸರನ್ನು ಧರಿಸಿ, ಧರ್ಮದ ಮೂಲತತ್ವಗಳನ್ನು ಶಿಥಿಲೀಕರಿಸಿ, ದೇವರ ಮೇಲಿನ ನಂಬಿಗೆಯನ್ನು ದೂರೀಕರಿಸಿ ಹೊಸ ಹೊಸ ಮಾರ್ಗಾವಲಂಬಿಗಳಾಗುತ್ತಿರುವದನ್ನು ಈಗ ನಾವೆಲ್ಲರು ನೋಡಿಯೂ, ನೋಡುತ್ತಲೂ ಇರುವೆವು. ಕೆಲಕೆಲವರು ಅಪೇಯಪಾನ, ಅಭಕ್ಷ್ಯ ಭಕ್ಷ್ಯರಾಗಿ ಅಧೋಗತಿಗೆ ಭಾಜನರಾಗುತ್ತಿರುವರು. ಉಚ್ಚತರವಾದ ಹಳೆಯ ನಡೆನುಡಿಗಳೂ, ಉಡಿಗೆತೊಡಿಗೆಗಳೂ ಇಂಥವರಿಗೆ ಸರಿದೋರುವದಿಲ್ಲ. ತೀರ್ಥಕ್ಷೇತ್ರಗಳೂ, ದೇವಸ್ಥಾನಗಳೂ ಇವರಿಗೆ ಸೇರುವದಿಲ್ಲ. ಅವರು ಕೇವಲ ಪ್ರಪಂಚಾಸಕ್ತರೂ ದೇವಭಕ್ತಿವಿಹೀನರೂ ಆಗಿ ಐಷ ಆರಾಮಿಯಿಂದ (ಸ್ವಚ್ಛಂದದಿಂದ) ಕಾಲಕ್ಷೇಪ ಮಾಡುತ್ತಿರುವರು. ಆದರೆ ಆಂಗ್ಲಭಾಷಾವಿಶಾರದರಾಗಿ, ಸುಶಿಕ್ಷಿತರೆಂದೆನ್ನಿಸಿಕೊಂಡು ಹೆಚ್ಚಿನ ಪದವಿಯನ್ನೂ ಅಧಿಕಾರವನ್ನೂ ಸಂಪಾದಿಸಿ, ಉನ್ನತಾಸನದಲ್ಲಿ ಅಲಂಕೃತರಾಗಿ, ದೇವಜಂಗಮಪ್ರೀತರೆನ್ನಿಸಿ, ನಿಷ್ಕಲಂಕ ಕೀರ್ತಿಯನ್ನು ಹೊಂದಿ, ತನುಮನಧನಗಳಿಂದ ಧಾರ್ಮಿಕ ಮಾರ್ಗದಲ್ಲಿ ಅವಿಶ್ರಾಂತವಾಗಿ ಕಾಲಯಾಪನೆ ಮಾಡುತ್ತಿರುವ ರಾ.ಬ॥ಅರಟಾಳ ರುದ್ರಗೌಡ ಸಾಹೇಬರವರಂಥ ಮಹಾನುಭಾವರು ಪ್ರಪಂಚದಲ್ಲಿ ವಿರಳತರವಾಗಿರುವರೆಂದು ನಿರ್ವಿವಾದವಾಗಿ ಹೇಳಬಹುದು.

ಈ ಮಹನೀಯರು ಇಂಗ್ಲೀಷ ಕಲಿತು ದೊಡ್ಡ ಆಫೀಸರರಾಗಿದ್ದರೂ ಅಧರ್ಮಕ್ಕೆ ಯತ್ಕಿಂಚಿತವಾದರೂ ಆಶ್ರಯಕೊಡದೆ, ಯಾವಾಗಲೂ ಧಾರ್ಮಿಕಪಥದಲ್ಲಿಯೇ ಚರಿಸಿ, ತಮ್ಮ ಅನುಯಾಯಿಗಳಿಗೆ ಆ ಸನ್ಮಾರ್ಗವನ್ನೇ ತೋರಿಸುತ್ತಿರುವರು. ಸರಕಾರಿಯ ಅಧಿಕಾರಿಗಳಲ್ಲಿ ದೇವರ ಮೇಲೆ ಭಕ್ತಿಯಿರುವದು ಕಡಿಮೆಯೆಂದು ಜನರ ಅಭಿಪ್ರಾಯವಿದ್ದರೂ ರಾವಬಹದ್ದೂರರವರ ಆಚರಣೆಯು ಆ ಮಾತಿಗೆ ವಿಪರೀತವಾಗಿರುವದು. ಇವರ ಆಹಾರವಿಹಾರ, ಉಡಿಗೆ ತೊಡಿಗೆ, ಸ್ಥಿತಿಗತಿ, ನಡೆನುಡಿಗಳ ಬಗ್ಗೆ ಯೋಚಿಸಿದರೆ ಆಶ್ಚರ್ಯವಾಗುವದು. ಯಾಕಂದರೆ ಈಗಿನ ಮನ್ವಂತರದಲ್ಲಿ ಜನರ ಕಯ್ಯಲ್ಲಿ ತುಸು ದುಡ್ಡು ಆಗುವದಷ್ಟೇ ತಡ; ಅಥವಾ ಸ್ವಲ್ಪ ಇಂಗ್ಲೀಷು ಕಲಿಯುವದಷ್ಟೇ ತಡ, ಕೂಡಲೆ ಅವರ ಎಲ್ಲ ವ್ಯವಹಾರಗಳು ಬದಲಾವಣೆಯನ್ನು ಹೊಂದುವವು. ಮನೆಯಲ್ಲಿ ಚಹಾ ಕಾಫಿಯ ಕಪ್‌ಗಳೂ, ಬಿಸ್ಕೀಟುಗಳೂ, ಕಪಾಟುಗಳಲ್ಲಿ ಬ್ರಾಂಡಿಯ ಬಾಟ್ಲಗಳೂ, ಹಾಸಿಗೆಯಲ್ಲಿ ಬಗೆಬಗೆಯ ಬ್ಲಾಂಕಿಟುಗಳೂ ಝುಗಝುಗಿಸುತ್ತಿರುವವು. ದುರ್ವ್ಯಸನವು ಆ ವ್ಯಸನಿಗಳನ್ನು ಆವರಿಸಿ ಅವರಿಗೆ ಹೊಸ ವೇಷವನ್ನುಂಟು ಮಾಡುವದು. ಆದರೆ ರಾವಬಹದ್ದೂರರವರ ನಿಷ್ಕಲಂಕವಾದ ಆಚರಣೆಯು ಆಫೀಸರರು ಕೂಡ ಅನುಕರಣಮಾಡಲು ಅರ್ಹವಾಗಿರುವದು. ಇವರು ಟವಾಲುಗಳನ್ನುಪಯೋಗಿಸದೆ ತಮ್ಮ ಹಿರಿ-ಕಿರಿಯರು ಉಪಯೋಗಿಸುತ್ತ ಬಂದ ಜವಾರಿಯ ಕೈಮಗ್ಗದ ಕರವಸ್ತ್ರಗಳನ್ನೇ ಉಪಯೋಗಿಸುವರು. ಚಹಾ ಕಾಫಿಗಳ ವ್ಯಸನವೇ ಇವರಿಗಿಲ್ಲ. ಇವರು ಬ್ಲಾಂಕಿಟುಗಳನ್ನು ಹೊರದೆ ಹಚ್ಚಡ ಕಂಬಳಿಗಳನ್ನೇ ಉಪಯೋಗಿಸುವರು. ಇತರ ದುರ್ವ್ಯಸನಗಳು ಇವರಲ್ಲಿ ಎಷ್ಟು ಮಾತ್ರವೂ ಇಲ್ಲ. ಇವರ ಆಹಾರ ವಿಹಾರವು ಸಾತ್ವಿಕತನದ್ದೂ, ಉಡಿಗೆ ತೊಡಿಗೆಗಳು ಸಭ್ಯತರದವೂ, ನಡೆನುಡಿಗಳು ಸಮಾಧಾನಕರವಾದವುಗಳೂ ಆಗಿರುವವು. ದೇಶಿಯ ಪದ್ಧತಿಯನ್ನನುಸರಿಸಿದ ಇವರ ಶುದ್ಧವಾದ ಆಚರಣೆಯು ಎಲ್ಲ ಬಗೆಯಿಂದಲೂ ವರ್ಣನೀಯವಾಗಿರುವದು. ಇವರಲ್ಲಿ ದೈವಿಕ ವಿಶ್ವಾಸವು ಪ್ರಬಲವಾಗಿರುವದು. ಆದರಿಂದಲೇ ಇವರಿಂದ ಯಾವಾಗಲೂ ಧಾರ್ಮಿಕಕಾರ್ಯಗಳು ಜರುಗುತ್ತಲಿರುವವು. ಇವರು ತಮ್ಮ ಜನ್ಮಸ್ಥಳವಾದ ಅರಟಾಳದ ಶ್ರೀ ವೀರಭದ್ರದೇವರ ಜಾತ್ರೆಯನ್ನು ಸ್ವತಃ ಮಾಡಿದ್ದೇ ಇದಕ್ಕೆ ತಕ್ಕ ಉದಾಹರಣೆಯಾಗಿರುವದು.

ಅರಟಾಳದ ಶ್ರೀ ವೀರಭದ್ರದೇವರು, ಇವರ ಜನ್ಮಭೂಮಿಯ ದೇವರಲ್ಲದೆ, ಮನೆದೇವರೂ ಆಗಿದ್ದಾನೆ. ವಂಶಪರಂಪರಾಗತರಾದ ಇವರ ಹಿರಿಯರೂ, ಮನೆತನದ ಯಾವತ್ತು ಸಣ್ಣದೊಡ್ಡ ಜನರೂ ಈ ದೇವರ ಬಗ್ಗೆ ಪರಮವಿಶ್ವಾಸಿಕರಾಗಿ, ನಿರಂತರವೂ ಅವನನ್ನೇ ನಂಬಿ ನಡೆಯುತ್ತ ಆತನ ಧ್ಯಾನಭಜನ ಪೂಜಾರ್ಚನಗಳಲ್ಲಿ ಆಸಕ್ತರಾಗಿ, ಅವನ ಅಂತಃಕರಣದಿಂದಲೇ ಸೌಖ್ಯಶಾಲಿಗಳಾಗುತ್ತ ಬಂದಿರುವರು. ರಾ.ಬ॥ರುದ್ರಗೌಡಸಾಹೇಬರ ಪಿತೃಗಳಾದ ಚೆನ್ನವೀರಗೌಡರಾದರೂ ತಮ್ಮ ಹಿರಿಯರ ಅನುಕರಣವನ್ನೇ ಮಾಡಿ ಈ ದೇವರಡಿಯಲ್ಲಿಯೇ ತಮ್ಮ ತನುಮನಧನಗಳನ್ನು ಸಮರ್ಪಿಸಿದರು. ಇವರ ಪುಣ್ಯಪ್ರಭಾವದಿಂದಲೇ ನಮ್ಮ ಚರಿತ್ರನಾಯಕರಾದ ರಾ.ಬ॥ಅರಟಾಳ ಸಾಹೇಬರವರ ಅವತಾರವು ನಮ್ಮ ವೀರಶೈವರಾಷ್ಟ್ರದಲ್ಲಿ ಪ್ರಾದುರ್ಭವಿಸಿತು. ಆ ಪುಣ್ಯರಾಶಿಯೇ ಈ ಅವತಾರ ಪುರುಷರಿಂದ ಅನೇಕ ಧಾರ್ಮಿಕ, ಸಾಮಾಜಿಕ ಮಹತ್ಕಾರ್ಯಗಳನ್ನುಂಟುಮಾಡಿಸಿತು. ಆ ಮಹತ್ಕಾರ್ಯಗಳಲ್ಲಿ ಇವರು ಮಾಡಿದ ಅರಟಾಳದ ಶ್ರೀ ವೀರಭದ್ರದೇವರ ಜಾತ್ರೆಯು ಒಂದಾಗಿರುವದು.

ಈ ದೇವರ ಜಾತ್ರೆಯನ್ನು ಚೆನ್ನವೀರಗೌಡರು ಹಿಂದೆ ಸನ್ ೧೮೬೦-೬೧ನೇ ಇಸವಿಯ ಸುಮಾರಕ್ಕೆ ಸಮಾರಂಭದಿಂದ ಮಾಡಿದ್ದರು. ಹಿರಿಯರ ಪಂಕ್ತಿಯನ್ನೇ ಅನುಸರಿಸಿ ಅವರ ಪುತ್ರರಾದ ರಾ.ಬ॥ರುದ್ರಗೌಡಸಾಹೇಬರು ಶಕೆ ೧೮೩೨ನೇ ಚೈತ್ರಶುದ್ಧ ಪೂರ್ಣಿಮೆಯ ಶುಭಮುಹೂರ್ತದಲ್ಲಿ

ಬಹುವೈಭವದಿಂದಲೂ, ಮಹೋತ್ಸವಗಳಿಂದಲೂ ಸ್ವಂತ ವೆಚ್ಚದಿಂದ ಪುನಃ ಈ ಜಾತ್ರೆಯನ್ನು ಮಾಡಿದರು. ಆನುವಂಶಿಕ ಸಂಬಂಧವಾಗಿ ತಂದೆತಾಯಿಗಳ ಗುಣಸ್ವಭಾವಾದಿಗಳು ಮಕ್ಕಳಲ್ಲಿ ನೆಲೆಗೊಳ್ಳುವವೆಂಬ ಮಾತು ಸುಳ್ಳಲ್ಲ. ಇವರ ಹಿರಿಯರು ಗುರುಲಿಂಗ ಜಂಗಮರಲ್ಲಿ ಭಕ್ತಿಯುಳ್ಳವರಾಗಿಯೂ, ದೇವರಲ್ಲಿ ನಂಬಿಗೆಯುಳ್ಳವರಾಗಿಯೂ ಇದ್ದು ಆಗಾಗ್ಗೆ ಅರಟಾಳದಲ್ಲಿ ಜಂಗಮಾರ್ಚನೆಯನ್ನು ನಡಿಸುತ್ತ ಬಂದದ್ದು ಈ ಚರಿತ್ರದಲ್ಲಿ ಅಲ್ಲಲ್ಲಿಗೆ ತೋರುವದು. ಅವರಂತೆ ಇವರಾದರೂ ಮೇಲಿಂದ ಮೇಲೆ ಈ ಜಂಗಮಾರ್ಚನೆಯನ್ನು ಅಭಿವರ್ಧಿಸುತ್ತಲೇ ಬಂದಿರುವರು. ಪುಣ್ಯವಂತರಿಂದ ಪುಣ್ಯಕಾರ್ಯಗಳೇ ಜರುಗುತ್ತವಲ್ಲವೇ? ಅರಟಾಳದ ಶ್ರೀವೀರಭದ್ರದೇವರಿಗೆ ಇವರು ಬಹುಭಕ್ತಿಯಿಂದ ಬೆಳ್ಳಿಬಂಗಾರಗಳ ಒಡವೆಗಳನ್ನೂ, ಛತ್ರಚಾಮರಾಪ್ತಾಗಿರಿ ಮೊದಲಾದ ಅಲಂಕಾರಗಳನ್ನೂ, ಕಹಳೆ-ಕರ್ಣಿಕೆ ಮೊದಲಾದ ಮಂಗಳವಾದ್ಯಗಳನ್ನೂ ಮಾಡಿಸಿಕೊಟ್ಟ ಸಂಗತಿಯೂ, ಗುಗ್ಗುಳ ಸಮಾರಂಭವನ್ನೆಸಗಿದ ವಾರ್ತೆಯೂ ವಾಚಕರ ನೆನಪಿನಲ್ಲಿರಬಹುದು. ಈ ದೇವರ ಜಾತ್ರೆಯನ್ನು ಸಡಗರದಿಂದ ಮಾಡಬೇಕೆಂದಾಸಿಸಿ ರಾವಬಹದ್ದೂರರವರು ಕಲ್ಲಿನ ಮಹತ್ತಾದ ಗಾಲಿಗಳನ್ನು ಮಾಡಿಸಿ ಅರಟಾಳಕ್ಕೆ ಮೊದಲೇ ಕಳಿಸಿದ್ದರು. (ಆ ಗಾಲಿಗಳ ಮೇಲೆ ತಮ್ಮ ಹೆಸರನ್ನೂ, ಅವುಗಳನ್ನು ತಯಾರಪಡಿಸಿದ ಇಸವಿಯನ್ನೂ ಕೆತ್ತಿಸಿರುವರು). ಗಾಲಿಗಳು ತಯಾರಾದ ಕೂಡಲೆ ಜಾತ್ರೆಯನ್ನು ಮಾಡಿಸುವ ಅನುಕೂಲವಾಗಲಿಲ್ಲ. ಅದು ಈ ವರ್ಷ ಅಂದರೆ ಸನ್ ೧೯೧೦ನೇ ಇಸವಿಯ ಎಪ್ರೀಲ ತಿಂಗಳಲ್ಲಿ ಅನುಕೂಲಿಸಿತು.

ಚೈತ್ರಶುದ್ಧ ಪೂರ್ಣಿಮೆಗೆ (ದವನದ ಹುಣ್ಣಿವೆಗೆ) ರಥೋತ್ಸವವಾಗಬೇಕೆಂದು ಮುಂದಾಗಿಯೇ ನಿರ್ಧರಿಸಲ್ಪಟ್ಟು, ಕೂಡಲೆ ಅದರ ಪೂರ್ವಸಿದ್ಧತೆಗಾಗಿ ಸಾಹೇಬರ ಅಳಿಯಿಂದಿರಾದ ಚಚಡಿಯ ಶ್ರೀಮಂತ ಅಣ್ಣಾಸಾಹೇಬ ನಾಯಕ ಬಹದ್ದೂರ ದೇಸಾಯರವರನ್ನು,ಸಾಹೇಬರ ತಂಗಿಯವರಾದ ವೀರವ್ವನವರೇ ಮೊದಲಾಗಿ ಯಾವತ್ತು ಕುಟುಂಬ ಪರಿವಾರ ಸಮೇತವಾಗಿ ಅರಟಾಳಕ್ಕೆ ಕಳಿಸಲ್ಪಟ್ಟಿತು. ಸಹಾಯಕ್ಕಾಗಿ, ಚಚಡಿ ಬೆಳಗಾವ, ಶಹಾಪುರಗಳ ಕೆಲ ನಂಬಗೆಯ ಜನರೂ ಹೋಗಿದ್ದರು. ಇವರೆಲ್ಲರು ಹೋಗುವಾಗ ಚಚಡಿ ಬೆಳಗಾವಗಳಿಂದ ಹಿಟ್ಟು ಅಕ್ಕಿ ಮುಂತಾದ ಯಾವತ್ತು ಸಾಮಗ್ರಿಗಳನ್ನು ಸಜ್ಜುಮಾಡಿಕೊಂಡೇ ಹೋಗಿದ್ದರು. ಅರಟಾಳವು ಹಳ್ಳಿಯ ಊರಾದದರಿಂದ ಬೇಕಾದ ಸಾಮಗ್ರಿಯೆಲ್ಲ ಬೆಳಗಾವಿಯಿಂದಲೇ ಕಳಿಸಲ್ಪಟ್ಟಿತು. ಅರಟಾಳಕ್ಕೆ ಹೋದೊಡನೆ ದೇಸಾಯರು, ಸಾಹೇಬರ ಆಪ್ತರಾದ ಅರಟಾಳದ ಸುತ್ತುಮುತ್ತಲಿರುವ ಗ್ರಾಮಗಳ ಗೌಡರನ್ನೂ, ರೈತಜನರನ್ನೂ, ಶಿಲ್ಪಿಗಳನ್ನೂ ಕೂಡಿಕೊಂಡು ರಥವನ್ನೂ, ಮಂಟಪಗಳನ್ನೂ ನಿರ್ಮಿಸಿದರು. ಈ ಕೆಲಸದಲ್ಲಿ ತಬಕದ ಹೊನ್ನೀಹಳ್ಳಿಯ ಪಾಟೀಲರಾದ (ವೀರವ್ವನವರ ಮೈದುನರಾದ) ಶಿವನಗೌಡರೂ, ರಾ.ಬ॥ರವರು ತಮ್ಮ ಹೊಲಮನೆಯ ವ್ಯವಸ್ಥೆಗಾಗಿ ಅರಟಾಳದಲ್ಲಿಟ್ಟ ಕಾರಭಾರಿ ಗಂಗಯ್ಯನವರೂ ಬಹಳ ಪರಿಶ್ರಮ ಮಾಡಿದರು. ಶ್ರೀಮಂತರು ತಮ್ಮ ದೇಸಗತಿಯ ಆಶ್ರಯದಲ್ಲಿದ್ದ ಜೀನಗಾರರಿಂದ ಹೊಸಮನೆಯನ್ನು ಬಣ್ಣದಿಂದಲೂ, ಬಗೆಬಗೆಯ ಚಿತ್ರಗಳಿಂದಲೂ ಅಲಂಕರಿಸಿದರು. ವೀರವ್ವನವರು ತಮ್ಮ ಆಪ್ತೇಷ್ಟರ ಹೆಣ್ಣುಮಕ್ಕಳನ್ನೂ, ಆಳುಗಳನ್ನೂ ಕೂಡಿಕೊಂಡು ಹಿಟ್ಟಕ್ಕಿಯ ಜೋಡಣೆಯನ್ನೆಲ್ಲ ಮಾಡಿದರು. ಇವರಿಬ್ಬರ ಪರಿಶ್ರಮದಿಂದ ಸ್ವಲ್ಪದಿವಸಗಳಲ್ಲಿಯೇ ಯಾವತ್ತು ಸನ್ನಾಹವು ಸಿದ್ಧವಾಯಿತು. ಕೂಡಲೆ ಶ್ರೀವೀರಭದ್ರದೇವರ ರಥೋತ್ಸವಕ್ಕೆ ಬರಬೇಕೆಂಬದಾಗಿ ಸಾಹೇಬ ಬಹದ್ದೂರವರಿಂದಲೂ, ಶ್ರೀಮಂತರಿಂದಲೂ ಆಮಂತ್ರಣ ಪತ್ರಗಳು ಸುತ್ತಲೂ ಕಳಿಸಲ್ಪಟ್ಟವು.

ಯಾತ್ರೆಯ ಪ್ರಯಾಣ

ಸಾಹೇಬರು ಬೆಳಗಾವ ಮುಕ್ಕಾಮಿನಿಂದ ತಾರೀಖು ೨೧ನೇ ಎಪ್ರೀಲ್ ಸನ್ ೧೯೧೦ನೇ ಇಸವಿಯ ಗುರುವಾರ ಬರುತ್ತೇವೆಂದು ಶ್ರೀಮಂತರಿಗೆ ಮೊದಲಿಗೆ ತಿಳಿಸಿದ ಪ್ರಕಾರ, ಆ ದಿವಸ ೯ ಘಂಟೆಗೆ ಸ್ಟೇಶನಕ್ಕೆ ಬಂದು, ಮೇಲಗಾಡಿಯಿಂದ ಪ್ರಯಾಣ ಮಾಡಿದರು. ಸಾಹೇಬರ ಸಕಲ ಪರಿವಾರವೂ, ಸಾಮಾನು ಸರಂಜಾಮವೂ ಮೊದಲೇ ಅರಟಾಳಕ್ಕೆ ಕಳಿಸಲ್ಪಟ್ಟಿದ್ದವು. ಸಾಹೇಬರೊಡನೆ ಕೆಲ ಜನ ಸೆಟ್ಟರೂ, ಸಾವಕಾರರೂ, ಸಿಪಾಯರೂ ಇದ್ದರು. ಉಗಿಬಂಡಿಯು ಮಧ್ಯಾಹ್ನದ ೧-೨ ಘಂಟೆಯ ಸುಮಾರಕ್ಕೆ ಧಾರವಾಡ ಸ್ಟೇಶನಕ್ಕೆ ಬರುತ್ತಲೆ, ಇವರ ಆಗಮನವನ್ನು ಮೊದಲೇ ತಿಳಿದು ಮಾರ್ಗಪ್ರತೀಕ್ಷೆ ಮಾಡುತ್ತ ಕೂತುಕೊಂಡಿರುವ ಧಾರವಾಡದ ಸೆಟ್ಟಿ ಸಾವಕಾರ ಮುಂತಾದ ವೀರಶೈವ ಪ್ರಮುಖ ಜನರು ಆತುರದಿಂದಲೂ, ಅಭಿಮಾನದಿಂದಲೂ, ಆನಂದದಿಂದಲೂ ಸಾಹೇಬರ ದರ್ಶನವನ್ನು ತೆಗೆದುಕೊಂಡು, ಸಂತುಷ್ಟರಾಗಿ ಕುಶಲವಾರ್ತೆಯನ್ನು ವಿಚಾರಿಸುವಷ್ಟರಲ್ಲಿ ಉಗಿಬಂಡಿಯು ಹೊರಡಲುಪಕ್ರಮಿಸಿದುದರಿಂದ ಅವರೆಲ್ಲರು ಸಾಹೇಬರಿಂದ ಅಪ್ಪಣೆ ತೆಗೆದುಕೊಂಡರು. ಮುಂದೆ ೨ ಘಂಟೆಯ ಸುಮಾರಕ್ಕೆ ಗಾಡಿಯು ಹುಬ್ಬಳ್ಳಿಯ ಸ್ಟೇಶನಕ್ಕೆ ಬಂತು. ಅಲ್ಲಿಯೂ ಇವರ ಆಗಮನದ ನಿರೀಕ್ಷಣೆಯನ್ನು ಮಾಡುತ್ತ ನಿಂತುಕೊಂಡಿರುವ ಹುಬ್ಬಳ್ಳಿಯ ಮುಖಂಡ ಜನರು, ಸಾಹೇಬರು ಗಾಡಿಯಿಂದ ಇಳಿದು ಬರುತ್ತಲೆ ಇವರ ಸ್ವಾಗತವನ್ನು ಮಾಡಿ, ಬಹು ಪ್ರೀತಿಯಿಂದ ಕೊರಳಲ್ಲಿ ಕುಸುಮಹಾರಗಳನ್ನು ಹಾಕಿ, ಕರಕಮಲದಲ್ಲಿ ಬಹು ಅಂದವಾಗಿ ರಚಿಸಿರುವ ಗಜರೆಯನ್ನು ಕೊಟ್ಟು, ದರ್ಶನಾನಂದವನ್ನು ವ್ಯಕ್ತಪಡಿಸಿದರು. ಇವರನ್ನು ಪಟ್ಟಣದೊಳಗೆ ಕರೆದುಕೊಂಡು ಹೋಗುವದಕ್ಕಾಗಿ ಹುಬ್ಬಳ್ಳಿಯ ಪ್ರಸಿದ್ಧ ಸಾವಕಾರರಾದ ನೀಲಿ ರಾಚಪ್ಪಣ್ಣನವರು, ಜೋಡುಗುದುರೆಯ ರಥವನ್ನು ತಂದು ಸ್ಟೇಶನದಲ್ಲಿ ನಿಲ್ಲಿಸಿದ್ದರು. ವೀರಶೈವ ಜನಸಮೂಹದ ಜಯ ಜಯಕಾರದೊಡನೆ ರಾವಬಹದ್ದೂರರವರು ರಥಾರೂಢರಾಗಿ ವಿಸ್ತೀರ್ಣವಾದ ಪೇಟೆಯ ಮಾರ್ಗದಿಂದ ರಾಚಪ್ಪಣ್ಣನವರ ಮಂದಿರಕ್ಕೆ ಗಮಿಸಿದರು. ದಾರಿಯೊಳಗೆ ಪೇಟೆಯ ಇಬ್ಬದಿಗಳಲ್ಲಿಯೂ ಸಾಂದ್ರವಾಗಿ ನಿಂತಜನರು ಸಾಹೇಬರನ್ನು ಸಂತೋಷದಿಂದ ನೋಡುತ್ತಿದ್ದರು. ಸಾಹೇಬರ ವಿಶ್ರಾಂತಿಗಾಗಿ ರಾಚಪ್ಪಣ್ಣನವರ ಮಂದಿರದಲ್ಲಿ ಉನ್ನತಾಸನಗಳು ಮೊದಲೇ ಸಿದ್ಧಪಡಿಸಿದ್ದವಲ್ಲದೆ, ಉಪಾಹಾರವೂ ತಯಾರಿಸಲ್ಪಟ್ಟಿತ್ತು. ರಥವು ಮಂದಿರಕ್ಕೆ ಬರುತ್ತಲೆ ರಾಚಪ್ಪಣ್ಣನವರು ಬಹು ಮರ್ಯಾದಾ ಪೂರ್ವಕ ರಾ.ಬ॥ರವರನ್ನು ಬರಮಾಡಿಕೊಂಡು ಉನ್ನತಾಸನದಲ್ಲಿ ಕೂಡ್ರಿಸಿದರು. ದರ್ಶನಕ್ಕಾಗಿ ಹುಬ್ಬಳ್ಳಿಯ ಎಷ್ಟೋ ಪ್ರಮುಖ ಜನರು ಬಂದರು. ಬೆಳಗಾಂವ ತಾಲೂಕ ಅರಳೀಕಟ್ಟಿಯ ಪ್ರಸಿದ್ಧ ಸಾವಕಾರರಾದ ರಾ॥ಸಂಗೊಳ್ಳಿಯ ಹೊಳೆಬಸಪ್ಪಣ್ಣನವರು ಸಾಹೇಬ ಆಮಂತ್ರಣ ಪ್ರಕಾರ ಹುಬ್ಬಳ್ಳಿಗೆ ಬಂದು ಕೂಡಿದರು. ಕುಶಲವಾರ್ತೆಯಾದ ಬಳಿಕ ಸಾಹೇಬರನ್ನು ಉಪಹಾರಕ್ಕೇಳೋಣವಾಗಬೇಕೆಂದು ರಾಚಪ್ಪಣ್ಣನವರು ವಿಜ್ಞಾಪಿಸಿಕೊಂಡರು. ಸಾಹೇಬರಿಗೆ ಅನಿಯಮಿತ ವೇಳೆಯಲ್ಲಿ ಉಪಹಾರಮಾಡುವ ರೂಢಿಯಿಲ್ಲದುದರಿಂದ ಸಂಗಡಿಗರಿಗೆ ಉಪಾಹಾರಕ್ಕೆ ಅಪ್ಪಣೆ ಕೊಟ್ಟರು. ಬಳಿಕ ಸ್ವಲ್ಪ ಹೊತ್ತು ವಿಶ್ರಮಿಸಿ ಅದೇ ರಥಾರೂಢರಾಗಿ ಅರಟಾಳಕ್ಕೆ ಅಭಿಮುಖರಾದರು.

ಸಾಯಂಕಾಲ ಸಮಯ. ಮೂರು ಬಡಿದು ಹೋಗಿತ್ತು. ಸರಕಾರೀ ರಸ್ತೆಯು ಪ್ರಶಸ್ತವಾಗಿತ್ತು. ಮಾರ್ಗದ ಇಬ್ಬದಿಗಳಲ್ಲಿಯೂ ನಿಬಿಡವಾದ ಮಾಮರಗಳ ಸಾಲು ಸೊಗಯಿಸುತ್ತಲಿದ್ದವು. ದಿವ್ಯಾಶ್ವಗಳು ತಮ್ಮ ರಮ್ಯವಾದ ಪುಚ್ಛಗಳನ್ನು ನೆಗಹಿ ಹಾರುತ್ತ ನಡೆದಿದ್ದವು. ಮಾರ್ಗಮಧ್ಯದಲ್ಲಿ ರಥವು ರಭಸದಿಂದ ಓಡುತ್ತಲಿತ್ತು. ಮಾರ್ಗದಲ್ಲಿ ಮದುವೆ ನಿಬ್ಬಣಗಳ ಚಕ್ಕಡಿಗಳು ಅಳತಿಲ್ಲದೆ ಬರುತ್ತಲಿದ್ದವು. ನಿಬ್ಬಣದ ಜನರು, ರಥದಲ್ಲಿ ಮಿಂಚುಹೊಡೆಯುತ್ತಲಿರುವ ಮನೋಹರವಾದ ಮೂರ್ತಿಯನ್ನು ಆತುರದಿಂದ ನೋಡುತ್ತಲಿದ್ದರು.

ಚಕ್ಕಡಿಗಳ ಸವಾರೀ ಮುಸುಕಿನಲ್ಲಿರುವ ಹೆಣ್ಣುಮಕ್ಕಳು ಸಹ ಗುಡಾರಗಳನ್ನೆತ್ತೆತ್ತಿ ಶ್ರೀ ರುದ್ರಮೂರ್ತಿಯನ್ನು ನೋಡಲು ತವಕಿಸುತ್ತಿದ್ದರು. ರಥಾರ್ಭಾಟಕ್ಕೂ ಕುದುರೆಗಳ ಖುರಪುಟಾಘಾತಕ್ಕೂ ಎದುರುಬರುವ ಚಕ್ಕಡಿಗಳು ದೂರಿಂದಲೇ ಓರೆಯಾಗಿ ನಿಲ್ಲುತ್ತಿದ್ದವು. ಕಂಡ ಕಂಡವರೆಲ್ಲರು ಕೈಮುಗಿದು ಹಾದಿಯನ್ನು ಹಿಡಿಯುತ್ತಿದ್ದರು. ಸಾಹೇಬರವರ ಪ್ರೇಮಾಸ್ಪದರಾವ ಕಿತ್ತೂರ ಬಸವಾರ್ಯರು ಅವರ ಸಂಗಡಲೇ ಇದ್ದರು. ಇವರೊಡನೆ ಸಾಹೇಬರು ತಮ್ಮ ಚಿಕ್ಕಂದದ ಚರಿತ್ರವನ್ನು ಹೇಳುತ್ತಲೂ, ಎಡಬಲದ ಹಳ್ಳಿಗಳನ್ನೂ, ವನಶ್ರೀಯನ್ನೂ ತೋರಿಸುತ್ತಲೂ ಗಮಿಸುತ್ತಿದ್ದರು. ಅಷ್ಟರಲ್ಲಿ ತಡಸ ಎಂಬ ಗ್ರಾಮವು ಬಂತು. ಅಲ್ಲಿ ನೀಲಿ ರಾಚಪ್ಪಣ್ಣನವರು ಕುದುರೆಗಳ ಟಪ್ಪೆಯನ್ನಿಡಿಸಿದ್ದರು. ಅಲ್ಲಿಂದ ಹೊಸ ಕುದುರೆಗಳನ್ನು ಹೂಡಿದ ರಥವು ಮತ್ತಿಷ್ಟು ರಭಸದಿಂದ ಓದಹತ್ತಿತು. ತಡಸದಿಂದ ತುಸುಮುಂದಕ್ಕೆ ಹೋಗುವಷ್ಟರಲ್ಲಿ ಅಸ್ತಮಯವಾಯಿತು.

ಮೊದಲೇ ವೈಶಾಖ ಮಾಸ, ಮನೋಹರವಾದ ಸಂಧಿ ಪ್ರಕಾಶ. ಮನ್ಮಥನ ಮದ್ದಾನೆಯಂತೆ ಎದ್ದು ನಿಂತಿರುವ ಮಾಮರಗಳ ಸಾಲು. ಸೊಂಪಾದ ಸೂಸುಗಾಳಿಯ ಸುಳಿದಾಟ. ಮೇಲಾಗಿ ಸಾಂದ್ರವಾದ ಚಂದ್ರಿಕೆ. ಅಂದಮೇಲೆ ಕೇಳುವದೇನು? ವಸಂತರಾಜನ ವೈಭವವು ಸ್ವೈರವಾಗಿ ವಿಹರಿಸುತ್ತಲಿತ್ತು. ಯುವಕನಾದ ಚಂದ್ರಮನು ನಗನಗುತ್ತ ಗಮಿಸುತ್ತಿದ್ದನು. ಸ್ವಲ್ಪ ಹೊತ್ತಿನಲ್ಲಿ ರಥವು ಕುನ್ನೂರಿಗೆ ಬಂತು. ಕುನ್ನೂರ ಹನುಮಂತಗೌಡರು ತಮ್ಮ ಊರ ಹತ್ತಿರ ರಾಜಮಾರ್ಗಕ್ಕೆ ಹೊಂದಿರುವ ಒಂದು ಮಾವಿನ ಮರದ ಕೆಳಗೆ ಖುರ್ಚಿ ಮೇಜುಗಳನ್ನು ತಂದಿರಿಸಿ, ಹಣ್ಣುಹಂಪಲ ಮೊದಲಾದ ಉಪಾಹಾರದ ಸಿದ್ಧತೆಯನ್ನು ಮಾಡಿಸಿ, ತಮ್ಮೂರ ರೈತಜನರನ್ನೊಡಗೊಂಡು ಬಂದು ಸಾಹೇಬರ ಮಾರ್ಗಪ್ರತೀಕ್ಷೆ ಮಾಡುತ್ತ ಕುಳಿತಿದ್ದರು. ರಥವನ್ನು ನೋಡುತ್ತಲೆ ಆನಂದಭರಿತರಾಗಿ ದರ್ಶನವನ್ನು ಹೊಂದಿ, ಅರಟಾಳದ ಜಾತ್ರೆಯ ಸಿದ್ಧತೆಯನ್ನೆಲ್ಲ ಶ್ರುತಪಡಿಸಿದರು. ಸರ್ವಸಿದ್ಧತೆಯಾದದ್ದು ಕೇಳಿ ಸಾಹೇಬರಿಗೆ ಸಂತೋಷವಾಯಿತು. ಕುನ್ನೂರ ಸಂಕನಗೌಡರ ಸೊಸೆಯು ಮೃತವಾದ ವಾರ್ತೆಯು ಅಲ್ಲಿ ಗೊತ್ತಾದುದರಿಂದ, ಊರೊಳಗೆ ಹೋಗಿ ಅವರನ್ನು ಮಾತಾಡಿಸದೆ ಹಾಗೆಯೇ ಹೋಗುವದು ಲೌಕಿಕಕ್ಕೆ ವಿರೋಧವಾಗುತ್ತದೆಂದು ಭಾವಿಸಿ, ರಥವನ್ನು ಊರೊಳಗೆ ಒಯ್ಯ ಆಜ್ಞಾಪಿಸಿದರು. ಸಂಕನಗೌಡರ ಮನೆಯು ಇನ್ನೂ ತುಸು ದೂರಿರುತ್ತಲೇ ರಥದಿಂದಿಳಿದು ಪಾದಚಾರಿಯಾಗಿ ಅವರ ಮನೆಗೆ ಹೋದರು. ಸಾಹೇಬರನ್ನು ನೋಡಲಿಕ್ಕೆ ಉರೊಳಗಿನ ಆ ಬಾಲವೃದ್ಧ ಮಂಡಳಿಯೆಲ್ಲ ನೆರೆಯಿತು. ಸಂಕನಗೌಡರು ಲಗುಬಗೆಯಿಂದ ಎದ್ದು ಬಂದು ಸಾಹೇಬರನ್ನು ಆದರಿಸಿದರು. ಅವರ ಸೊಸೆಯ ಮರಣದಿಂದುಂಟಾದ ಅನುತಾಪವನ್ನು ಸಾಹೇಬರು ವ್ಯಕ್ತಪಡಿಸಿ, ಸಮಯೋಚಿತವಾಗಿ ಸಂಕನಗೌಡರ ಕೂಡ ಸಂಭಾಷಣೆ ಮಾಡಿ, ವೇಳೆ ಬಹಳಾದದರಿಂದ ಅವರಿಂದ ಅಪ್ಪಣೆಯನ್ನು ತೆಗೆದುಕೊಂಡು, ಹಾಗೆಯೇ ರಥಾರೂಢರಾಗಿ ತಮ್ಮ ಗೊತ್ತಿನ ಜನರ ಕ್ಷೇಮ ಸಮಾಚಾರವನ್ನೂ, ಅವರ ಮನೆತನಗಳ ಸ್ಥಿತಿಯನ್ನೂ ವಿಚಾರಿಸುತ್ತ ಜನಸಮೂಹದೊಡನೆ ರಾಜಮಾರ್ಗದ ವರೆಗೆ ಬಂದು, ಹನುಮಂತಗೌಡರು ಮೊದಲಾಗಿ ಎಲ್ಲರಿಗೂ ಅಪ್ಪಣೆಕೊಟ್ಟು, ಅರಟಾಳದ ಮಾರ್ಗವನ್ನು ಹಿಡಿದರು. ದಟ್ಟಾಗಿ ಹಬ್ಬಿದ ಬೆಳದಿಂಗಳಲ್ಲಿ ರಥವು ಬಹುವೇಗದಿಂದ ಸಾಗಹತ್ತಿತು.

ಅತ್ತ ಅರಟಾಳದಲ್ಲಿ ಚಚಡಿಯ ಶ್ರೀಮಂತರೂ, ವೀರಪ್ಪನವರೂ "ಏಳು ಬಡೆದು ಹೋಯಿತು.! ಸಾಹೇಬರು ಇನ್ನೂ ಯಾಕೆ ಬರಲಿಲ್ಲ"ವೆಂದು ಯೋಚಿಸಿ, ಎದುರಿಗೆ ಒಬ್ಬ ಭಟನನ್ನು ಸಾಯಕಲ್ಲಿನಿಂದ ಕಳಿಸಿದ್ದರು. ಅವನು ಧುಂಡಸೀ ಗ್ರಾಮವನ್ನು ದಾಟಿ ಬಂದು ಸಾಹೇಬರನ್ನು ಕಂಡುಕೊಂಡು ಅರಟಾಳದ ಕ್ಷೇಮವಾರ್ತೆಯನ್ನು ತಿಳಿಸಿ, ಹಾಗೆಯೇ ತಿರುಗಿ ತೀವ್ರವಾಗಿ ಮುಂಚಿತವಾಗಿಯೇ ಅರಟಾಳಕ್ಕೆ ಗಮಿಸಿ, ಸಾಹೇಬರ ಬರುವಿಕೆಯನ್ನು ತಿಳಿಸಿದ್ದರಿಂದ ಸರ್ವರೂ ಸಂತೋಷಗೊಂಡು, ಇವರ ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದರು. ಇತ್ತ ರಥವು ಕೂಡಲೆ ಧುಂಡಸಿಯನ್ನು ದಾಟಿ ಅರಟಾಳವನ್ನು ಸಮೀಪಿಸಿತು. ಕುದುರೆಗಳ

ಖುರಪುಟಧ್ವನಿಯನ್ನು ಕೇಳಿ ಮಾರ್ಗದ ಬಲಭಾಗಕ್ಕಿರುವ ಲಮಾಣೀ ಜನರ ತಾಂಡೆಯಲ್ಲಿ "ಪಟೇಲ ಆಯಾ, ಪಟೇಲ ಅಯಾ" ಎಂಬ ಆನಂದೋದ್ಗಾರವು ರಥಾಸೀನರಿಗೆ ಕೇಳಬರಹತ್ತಿತು. ಅಲ್ಲಿಂದ ತಡವಿಲ್ಲದೆ ರಥವು ಅರಟಾಳವನ್ನು ಅಭಿಗಮಿಸಿತು.

ಅರಟಾಳದ ಶೃಂಗಾರ

ಸಾಹೇಬರನ್ನು ಕಂಡು ಸರ್ವರೂ ಸಂತೋಷಭರಿತರಾದರು. ಸಾಹೇಬರು ಎಲ್ಲಕ್ಕೂ ಮೊದಲು ಶೃಂಗರಿಸಿದ ಹೊಸ ಮನೆಯನ್ನು ಪ್ರವೇಶಿಸಿ, ಮುದ್ದು ಮೊಮ್ಮಗನಾದ ಶ್ರೀಮಂತ ಚಂದ್ರಭೂಷಣ ದೇಸಾಯರನ್ನು ಕಂಡು ಆನಂದಿಸಿ, ತಮ್ಮ ಕೊರಳ ಹಾರವನ್ನು ಅವರ ಕೊರಳಿಗೆ ಹಾಕಿ ಕಯ್ಯಲ್ಲಿ ಗಜರೆಯನ್ನು ಕೊಟ್ಟು ಮುಂಡಾಡಿದರು. ಎಲ್ಲ ಆಪ್ತೇಷ್ಟ ಮಂಡಳಿಗೂ ಭೆಟ್ಟಿಯಾಗಿ, ಜಾತ್ರೆಯ ಎಲ್ಲ ಸಿದ್ಧತೆಯನ್ನು ಕೇಳಿಕೊಂಡು ಕುಶಲವಾರ್ತೆಯನ್ನು ವಿಚಾರಿಸುವಷ್ಟರಲ್ಲಿ ಎಂಟು ಘಂಟೆಯಾಗಲು ಭೋಜನಕ್ಕೆದ್ದರು. ರಥೋತ್ಸವಕ್ಕಾಗಿ ಮೊದಲೇ ಬರಮಾಡಿಕೊಂಡಿದ್ದ ಇವರ ಗುರುಗಳಾದ ಶ್ರೀನರೇಗಲ್ಲದ ಪಟ್ಟದೇವರೂ, ಸಿಗ್ಗಾವಿಯ ಚರಮೂರ್ತಿಗಳೂ ಮೊದಲಾದವರು ಹಳೇ ಮನೆಯಲ್ಲಿದ್ದರು. ಅಲ್ಲಿಗೆ ಹೋಗಿ ಅವರ ಪಾದಪದ್ಮಂಗಳಿಗೆ ಶಿರಸಾಷ್ಟಾಂಗ ನಮಸ್ಕಾರಮಾಡಿ, ಅವರಿಂದ ಆಶೀರ್ವಾದ ಹೊಂದಿ, ಅವರ ಪಂಕ್ತಿಭೋಜನಗೈದು, ಎಲ್ಲ ಕಡೆಗೂ ಅಡ್ಡಾಡಿ, ಯಾವತ್ತು ವ್ಯವಸ್ಥೆಯನ್ನು ಕಣ್ಮುಟ್ಟ ನೋಡಿ, ಎಲ್ಲ ಜನರ ಊಟಾದದ್ದನ್ನು ವಿಚಾರಿಸಿ, ನಾಳಿಗೆ ಮಾಡತಕ್ಕ ವ್ಯವಸ್ಥೆಯನ್ನು ಸೂಚಿಸಿ, ಹೊಸಮನೆಯ ಎಡಭಾಗದಲ್ಲಿ ಹೊಡೆದಿದ್ದ ತಂಬೂದಲ್ಲಿ ಶಯನ ಮಾಡಲಿಕ್ಕೆ ತೆರಳಿದರು.

ಸಾಹೇಬರು ಬಂದ ಸುದ್ದಿಯನ್ನು ಕೇಳಿ ಮರುದಿವಸದಿಂದ ಸುತ್ತ ಹಳ್ಳಿಗಳ ಜನರು ಬಂದು ಬಂದು, ಅವರ ದರ್ಶನವನ್ನು ತೆಗೆದುಕೊಳ್ಳಹತ್ತಿದರು. ಶ್ರೀ ವೀರಭದ್ರದೇವರ ರಥವು ಮೊದಲೇ ಸಿದ್ಧವಾಗಿ ಬಹು ಉನ್ನತವಾಗಿ ನಿಂತುಕೊಂಡಿತ್ತು. ಮನೆಯ ಮುಂದಿನ ಮಂಟಪವು ಅತಿ ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು. ಜನರೆಲ್ಲರು ತಮ್ಮ ತಮ್ಮ ನಿಯಮಿತವಾದ ಕಾರ್ಯಗಳಲ್ಲಿ ತತ್ಪರರಾಗಿದ್ದರು. ಜಾತ್ರೆಯ ಯಾವತ್ತು ಕೆಲಸಗಳಲ್ಲಿ ಶಿವನಗೌಡರೂ, ಗಂಗಯ್ಯನವರೂ ಬಹಳ ಶ್ರಮಪಡುತ್ತಿದ್ದರು. ತಾರೀಖು ೨೨ನೇ ಎಪ್ರೀಲ ಸನ್ ೧೯೧೦ನೇ ಇಸವಿಯ ಶುಕ್ರವಾರ ದಿವಸ ರುದ್ರಭೋಜನವಾಯಿತು. ಆ ದಿವಸ ಸಾವಿರಾರು ಜನ ಜಂಗಮರು ಭೋಜನ-ತಾಂಬೂಲ-ದಕ್ಷಿಣೆಗಳಿಂದ ಸಂತುಷ್ಟರಾದರು. ಅಂದಿನಿಂದ ಏಳೆಂಟು ದಿವಸಗಳ ವರೆಗೂ ಅನ್ನದಾನವು ಮುಕ್ತದ್ವಾರವಾಗಿ ಇಡಲ್ಪಟ್ಟಿತ್ತು.

ರಥೋತ್ಸವಕ್ಕೆ ಎಷ್ಟೋ ಜನ ಸೆಟ್ಟರೂ ಸಾವಕಾರರೂ ಸಾಹೇಬರ ಆಪ್ತರಾದ ಸುತ್ತ ಹಳ್ಳಿಗಳ ಗೌಡರೂ ಮೊದಲಾದ ಮುಖಂಡ ಮಂಡಳಿಯು ಮುಂಚಿತವಾಗಿಯೇ ಬಂದಿತ್ತು. ತಾ. ೨೩-೪-೧೯೧೦ ಶನಿವಾರ ದಿವಸ ಶ್ರೀಮಂತ ಹಂದಿಗನೂರ ದೇಸಾಯರೂ ಕುಂದಗೋಳದ ದೇಶಪಾಂಡೆಯರೂ ಬಂದರು. ಅವರನ್ನು ಶ್ರೀಮಂತರೂ, ಸಾಹೇಬರೂ ವೈಭವದಿಂದ ಎದುರ್ಗೊಂಡು ಕರೆದುಕೊಂಡು ಬಂದರು. ಆ ಕಾಲಕ್ಕೆ ಶ್ರೀಮಂತರಿಗೆ ಎರಡು ಬಂದೂಕ ಬಾರಗಳ ಸಲಾಮಿಯಾಯಿತು. ಎಲ್ಲ ಶ್ರೀಮಂತರಿಗೂ ಸೆಟ್ಟಿ ಸಾವಕಾರ ಮೊದಲಾದ ಸಮಸ್ತದೈವದವರಿಗೂ ಪ್ರಶಸ್ತವಾದ ಬಿಡಾರಗಳನ್ನು ಸಿದ್ಧಪಡಿದ್ದರು. ಯಾತ್ರಿಕರ ವಿಶ್ರಾಂತಿಗಾಗಿ ಶುಭ್ರವಾದ ಪ್ರಕಾಶದಿಂದ ಶೋಭಿಸುತ್ತಲಿರುವ ಎರಡು ಮೂರು ತಂಬುಗಳು ಉನ್ನತವಾಗಿ ನಿಂತುಕೊಂಡಿದ್ದವು. ಪ್ರಪುಲ್ಲವಾದ ಮಾವಿನ ತೋಪುಗಳ ಆವರಣದಿಂದ ಅವು ಇನ್ನಿಷ್ಟು ರಮ್ಯವಾಗಿ ತೋರುತ್ತಲಿದ್ದವು. ರವಿವಾರ ಮಧ್ಯಾಹ್ನಕ್ಕೆ

ಬರತಕ್ಕ ಎಲ್ಲ ಜನರೂ ಬಂದು ಕೂಡಿದರು. ರೇವಡಿಗಾರರ ಅಂಗಡಿಗಳೂ ಹಣ್ಣುಕಾಯಿ ಕರ್ಪೂರಗಳ ಅಂಗಡಿಗಳೂ ಬಳೆಗಾರ ಮುಂತಾದ ತರ ತರದೊಡವೆಗಳ ಅಂಗಡಿಗಳೂ ಬಂದು ತುಂಬಿಕೊಂಡಿದ್ದವು. ಆಟ ನೋಟ ಮುಂತಾದ ತಮಾಷೆಗಳೂ ತೊಟ್ಟಿಲ ಜೀಕುಗಳೂ ಒಂದು ತಾಸಗಾವಿಯ ಸರ್ಕಸೂ ಬಂದಿದ್ದವು. ಅಂಗಡಿಕಾರರು, ಗುಡಿಯ ಮುಂದಿನ ವಿಸ್ತಾರವಾದ ಪ್ರದೇಶದಲ್ಲಿ ಗುಡಾರಗಳನ್ನು ಹೊಡೆದು ಸಾಲ ಅಂಗಡಿಗಳನ್ನು ಹಚ್ಚಿದ್ದರು. ಅಗಸಿಯ ಹತ್ತರ ಮಹಾದ್ವಾರವು ರಚಿಸಲ್ಪಟ್ಟು ಇಬ್ಬದಿಗಳಲ್ಲಿಯೂ ಮಹೋನ್ನತವಾದ ನಿಶಾನೆಗಳು ಶೋಭಿಸುತ್ತಲಿದ್ದವು. ಜಾತ್ರೆಯ ಜನಜಂಗುಳಿಯಿಂದ ಊರು ಕಿಷ್ಕಿಂಧವಾಗಿತ್ತು.

ರಥೋತ್ಸವ

ಹುಣ್ಣಿವೆಯ ದಿವಸ ಮಧ್ಯಾಹ್ನದ ಪೂಜಾ ಸಮಾರಂಭವು ಸಾಂಗವಾದನಂತರ, ನಿಯಮಿತ ವೇಳೆಗೆ ಸರಿಯಾಗಿ ಶ್ರೀ ವೀರಭದ್ರದೇವರ ಪಲ್ಲಕ್ಕಿಯು ಸರ್ವ ಸಮಾರಂಭದಿಂದ ಹೊರಟಿತು. ಪಲ್ಲಕ್ಕಿಯ ಮುಂದೆ ವಿಜಯತೋರಣ, ಮಾಯಾ ಮುರತಾಪ (ಮಾಯಾಮರ್ದನ), ವ್ಯಾಸನ ತೋಳು ಸಹಿತವಾದ ನಂದೀಧ್ವಜ ಮೊದಲಾದ ಅನೇಕ ಬಿರುದಾವಳಿಗಳೂ, ಧ್ವಜ ಪತಾಕೆಗಳೂ, ಬಹುಶೋಭೆಗೊಂಡಿದ್ದವು. ಮಂಗಳವಾದ್ಯಗಳ ಮೇಳದೊಡನೆ ದೇವರು ಆಂದೋಳಿಕಾರೂಢನಾಗಿ ಬಂದು ರಥವನ್ನೇರಿದನು. ಕೂಡಲೆ ಮಂಗಳವಾದ್ಯಗಳು ಮೊಳಗಿದವು. ದೇವಾಲಯದ ಭೇರಿಯು ಬಹು ಗಂಭೀರವಾಗಿ ನುಡಿಯಹತ್ತಿತು. ರಥವು, ದೇವಾಲಯಾಭಿಮುಖವಾಗಿ ಮೆಲ್ಲಮೆಲ್ಲನೆ ಸಾಗಹತ್ತಿತು. ಶ್ರೀಗಳವರೂ, ಶ್ರೀಮಂತರೂ, ಸಾಹೇಬರೂ, ಸೆಟ್ಟಿ ಸಾವಕಾರ ಮೊದಲಾದ ಸಮಸ್ತದೈವದವರೂ ಪಾದಚಾರಿಯಾಗಿ ರಥದ ಮುಂದೆ ನಡೆದಿದ್ದರು. ಜನಸಮೂಹವು ಯಥೇಷ್ಟವಾಗಿತ್ತು. ಮೇಲಿಂದಮೇಲೆ "ಜಯ ನಮಃ ಪಾರ್ವತಿಪತೇ ಹರಹರ ಮಹಾದೇವ" ಎಂಬ ವಿಜಯಧ್ವಾನವು ಉಚ್ಚಸ್ವರದಿಂದ ಉಚ್ಚರಿಸಲ್ಪಡುತ್ತಿತ್ತು. ರಥವು ಬಹು ಸಮಾರಂಭದಿಂದ ಸಾಗಿ ಪಾದಗಟ್ಟಿಗೆ ಬಂದು ನಿಂತುಕೊಂಡಿತು. ರಥವು ಇಲ್ಲಿಂದ ಸುಮಾರು ಅರ್ಧ ಮೈಲಿನ ಮೇಲೆ, ಧುಂಡಸೀ ಹಾದಿಗೆ ಹೊಂದಿರುವ ಶ್ರೀ ಹಾದೀಬಸವಣ್ಣನ ಗುಡಿಯ ವರೆಗೂ ಹೋಗುವ ಸಂಕೇತವಿತ್ತು. ಆದರೆ ದಾರಿಯು ಸರಳವಾಗಿ ಇರದ್ದರಿಂದ ರಥವನ್ನು ಅಲ್ಲಿಗೇ ನಿಲ್ಲಿಸಿ, ಉಳಿದ ಸಮಾರಂಭ ಸಮೇತರಾಗಿ ಸಾಹೇಬರು, ಶ್ರೀಮಂತರು ಮೊದಲಾಗಿ ಸರ್ವರನ್ನೊಡಗೊಂಡು ಪಾದಗಟ್ಟಿಯ ತನಕ ಹೋದರು. ಅಲ್ಲಿ ಕಾಯಿಗಳನ್ನೊಡಿಸಿ ಅಲ್ಲಿಂದ ಹೊರಟು ತಿರುಗಿ ಬರುತ್ತ, ನಡುವೆ ದಾರಿಗೆ ಹೊಂದಿ ಒಂದು ಪ್ರಶಸ್ತವಾದ ಸ್ಥಳದಲ್ಲಿ ಕರಡೀ ಮಜಲು ಮಾಡಿಸಿದರು. ಉಚಿತಾಸನಗಳು ಆ ಸ್ಥಳಕ್ಕೆ ಮುಂದಾಗಿಯೇ ಕಳಿಸಲ್ಪಟ್ಟಿದ್ದವು. ಆ ಇಳಿಹೊತ್ತಿನ ಸಮಯದಲ್ಲಿ ಬೀಸುತ್ತಿದ್ದ ಸುಳಿಗಾಳಿಯ ಸಡಗರದಲ್ಲಿ ಮಜಲು ಬಹು ಮನೋಹರವಾಗಿ ಹೋಯಿತು. ಜಾತ್ರೆಯನ್ನು ಮಾಡಿಕೊಂಡು ತಿರುಗಿ ಹೋಗುತ್ತಿರುವ ಸುತ್ತ ಹಳ್ಳಿಗಳ ಜನರು ಮಜಲು ನೋಡಲಿಕ್ಕೆ ನೆರೆದದರಿಂದ ಇಲ್ಲಿಯೂ ಒಂದು ಜಾತ್ರೆ ಕೂಡಿದಂತಾಗಿತ್ತು. ಅಲ್ಲಿಂದ ಹಾಗೆಯೇ ತಿರುಗಿ ಬಂದು ಸಾಹೇಬರು ಶ್ರೀವೀರಭದ್ರದೇವರ ದರ್ಶನವನ್ನು ತೆಗೆದುಕೊಂಡರು. ಸಾಂಪ್ರದಾಯದಂತೆ ಪಲ್ಲಕ್ಕಿಯ ಸೇವೆಯಾಯಿತು. ಗುಡಿಯ ಮುಂದೆಯೂ ಬಹಳ ಹೊತ್ತಿನ ವರೆಗೆ ಮಜಲು ನಡೆಯಿತು. ಮಜಲು ನೋಡುವ ಮಂದಿಗಿಂತಲೂ ಸಾಹೇಬರನ್ನು ನೋಡುವ ಮಂದಿಯೇ ವಿಶೇಷವಾಗಿತ್ತು.

ದೇವರಿಗೆ ನಮಸ್ಕರಿಸಿ ಸಾಹೇಬರು ಗುಡಿಯ ಕಟ್ಟಿಯ ಮೇಲೆ ನಿಂತುಕೊಂಡಿದ್ದರು. ಆ ದಿವಸದ ಅವರ ಪೋಷಾಕವೇ ಬೇರೆ ತರದ್ದಾಗಿತ್ತು. ಅವರ ದರ್ಬಾರಿಯ ಕೋಟು ಪಾಟ್ಲೀನಗಳು ಮೈಮೇಲೆ ಇದ್ದಿಲ್ಲ.

ಶ್ರೀಮಂತಿಕೆಯ ಜರತಾರಿಯ ವಸ್ತ್ರಗಳೂ ಇದ್ದಿಲ್ಲ. ಅವರು ತಮ್ಮ ವತನೀ ಗೌಡಿಕೆಯ ಶಿಸ್ತಿಗನುಸರಿಸಿ ತಿಳಿಯಾದ ಗುಲಾಬಿ ಬಣ್ಣವನ್ನೆದ್ದಿದ ಸ್ವಚ್ಛವಾದ ದೋತರವನ್ನು ಉಟ್ಟಿದ್ದರು. ಮೈಯ್ಯಲ್ಲಿ ಒಂದೇ ಒಂದು ಶುಭ್ರವಾದ ಸೈನದ ಪೈರಣವನ್ನು ಹಾಕಿದ್ದರು. ಗಂಜೀ ರುಮಾಲನ್ನು ಸುತ್ತಿದ್ದರು. ಮೇಲೆ ಒಂದು ತಿಳಿ ಬಣ್ಣದ (ಕುಲಿಮೆಯ) ದೋತರವನ್ನು ಹೊತ್ತಿದ್ದರು. ಅದರಿಂದವರು, ಸಂಜೆಗಂಪಿನ ಮುಸುಕಿನಲ್ಲಿ ರಂಜಿಸುತ್ತಿರುವ ಸೂರ್ಯಮಂಡಲದಂತೆ ಶೋಭಿಸುತ್ತಿದ್ದರು. ಜಾತ್ರೆಗೆ ಬಂದ ಜನರು, ಗುಡಿಯೊಳಗೆ ವಸ್ತ್ರಾಭರಣಗಳಿಂದಲೂ ಸಕಲಾಯುಧಗಳಿಂದಲೂ ಝುಗಝುಗಿಸುವಂಥ ಕಾಶಿಯನ್ನುಟ್ಟು, ಶ್ರೀವೀರಭದ್ರದೇವರ ಮೂರ್ತಿಯನ್ನೂ, ಹೊರಗೆ ಸೊಬಗಿನಿಂದ ನಿಂತಿರುವಂತೆ ಶ್ರೀಮಾನ್ ರುದ್ರಮೂರ್ತಿಯನ್ನೂ ನೋಡಿ ಧನ್ಯರಾಗುತ್ತಿದ್ದರು. ಇವರ ಸಾತ್ವಿಕವಾದ ಪೋಷಾಕು, ಜನರ ಮೆಚ್ಚಿಕೆಗೆ ಕಾರಣವಾಗಿತ್ತೆಂದು ಹೇಳಬಹುದು. ಇವರು ತಮ್ಮ ಅಧಿಕಾರದ ಅಥವಾ ಶ್ರೀಮಂತಿಕೆಯ ಪೋಷಾಕು ತ್ಯಜಿಸಿ, ಸರ್ವಸಾಧಾರಣವಾದ ವಸ್ತ್ರಗಳನ್ನು ಧರಿಸಿ, ತಮ್ಮ ರೈತರನ್ನೊಡಗೊಂಡು ರಥೋತ್ಸವವನ್ನು ನಡಿಸಿದ್ದೂ, ಬೌದ್ಧಧರ್ಮ ಪ್ರಸಾರಕನಾದ ಶಿಲಾದಿತ್ಯರಾಜನು, ಪ್ರತಿವರ್ಷಾಂತ್ಯದಲ್ಲಿ ತನ್ನ ರಾಜಪೋಷಾಕನ್ನು ತ್ಯಜಿಸಿ, ಸಾಧಾರಣತರದ ವಸ್ತ್ರಗಳನ್ನು ಧರಿಸಿ ತನ್ನ ಭಾಂಡಾರವನ್ನು ಭಿಕ್ಷುಕರಿಗೆ ಮುಕ್ತದ್ವಾರವಾಗಿ ದಾನಮಾಡಿ, ತನ್ನ ಔದಾರ್ಯವನ್ನು ವ್ಯಕ್ತಪಡಿಸುತ್ತಿದ್ದದ್ದೂ ಒಂದೇ ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಕರಡಿಯ ಮಜಲೂ, ಪಾರಿಜಾತದ ಆಟವೂ

ದೇವಾಲಯದ ಮುಂದೆ ಅನೇಕೋತ್ಸವಗಳು ಜರುಗಿದನಂತರ ಸಾಹೇಬರು ಸರ್ವರೊಡನೆ ಸಮಾರಂಭದಿಂದ ಮಂದಿರಕ್ಕೆ ಗಮಿಸಿದರು. ಅಲ್ಲಿಯೂ ಕೆಲಹೊತ್ತು ಕರಡೀಮಜಲು ನಡೆಯಿತು. ಈ ಮಹೋತ್ಸವವನ್ನು ನೋಡಲಿಚ್ಛಿಸಿ ಬಂದನೇನೋ ಎಂಬಂತೆ ಸಕಲ ಕಲಾಪರಿಪೂರ್ಣನಾದ ಚಂದ್ರಮನು ಆಗಲೇ ನಗುನಗುತ್ತ ಉದಿಸಿದನು. ಈ ಚಂದ್ರನ ತೇಜಸ್ಸಿನಕಿಂತಲೂ ನನ್ನ ತೇಜವು ಮಿಗಿಲೆಂದು ಜನರಿಗೆ ತೋರಿಸುತ್ತದೋ ಏನೋ ಎಂಬಂತೆ ಕಿಟಸನ್ ದೀವಿಗೆಯು (ಗ್ಯಾಸಲಾಯಿಟವು) ಮಜಲಿನ ಮಧ್ಯದಲ್ಲಿ ಪ್ರಜ್ವಲಿಸುತ್ತಲಿತ್ತು. ತಮ್ಮ ತಮ್ಮ ಜಾಣ್ಮೆಯನ್ನು ತೋರಿಸಲುತ್ಕಂಠಿತವಾದ ಮಜಲಿನವರು ಅನೇಕ ವಿಧವಾಗಿ ಬಾರಿಸಿದರು. ಊದಿದರು ಹಾಡಿದರು, ಮುಗತಾಯಗಳನ್ನು ಮಾಡಿದರು. ಅವರಲ್ಲಿ ಗೋಕಾಕ ತಾಲೂಕ ಅಂಕಲಗಿಯ ಶ್ರೀ ಅಡಿವೆಪ್ಪನವರ ಮಠದ ಸಂಬಾಳದ ಮಜಲಿನಲ್ಲಿ ತಾಳ ಬಾರಿಸುವವನೊಬ್ಬನನ್ನು ಎಲ್ಲರೂ ವಿಶೇಷವಾಗಿ ನೋಡುವದಾಗಿತ್ತು. ಅವನ ತಾಳ ಬಾರಿಸುವ ಚಾತುರ್ಯವೂ ಮುಗಿತದ ಮಟ್ಟೂ, ಅವನ ಲಯವೂ ಹುರುಪೂ, ಆತನ ಕುಣಿತವೂ ಹಾರಾಟವೂ ಬಹು ವಿಚಿತ್ರವಾಗಿದ್ದವು. ಒಟ್ಟಿಗೆ ಮಜಲು ಬಲು ಮೋಜು ಉಳ್ಳದ್ದಾಗಿತ್ತು.

ಮಜಲು ಮುಗಿದ ಕೂಡಲೆ ಊಟದ ಸಮಾರಂಭವು ನಡೆಯಿತು. ಊಟದ ಪಂಙ್ತಿಗಳು ಮನೆಯ ಒಳಗೂ, ಹೊರಗೂ ತುಂಬಿ ಕೂತದ್ದಲ್ಲದೆ ಇತರ ಜನರ ಪಂಕ್ತಿಗಳು ಹೊಸ ಮನೆಯಿಂದ ಹಳೆಮನೆಯ ವರೆಗೂ ಅಂಗಳದ ಇಬ್ಬದಿಗಳಲ್ಲಿಯೂ ದಟ್ಟಾಗಿ ಕೂತಿದ್ದವು. ಎಲ್ಲ ಜನರಿಗೂ ಭೋಜನ ಪದಾರ್ಥಗಳು ಸರಿಯಾಗಿ ಮುಟ್ಟುವಂತೆ ಬಡಿಸುವವರ ಮೇಲ್ವಿಚಾರಣೆಗಾಗಿ ಚಚಡಿಯ ಶ್ರೀಮಂತ ಅಣ್ಣಾಸಾಹೇಬರು ಸ್ವತಃ ದಕ್ಷರಾಗಿದ್ದರು. ರಾವಬಹದ್ದೂರರವರಂತೂ ಎಲ್ಲ ಕಡೆಗೂ ಅಡ್ಡಾಡಿ ಸರ್ವವ್ಯವಸ್ಥೆಯು ಸರಿಯಾಗಿ ನಡೆದಿರುವದೋ ಇಲ್ಲೋ ಎಂಬದನ್ನು ಕಣ್ಮುಟ್ಟ ನೋಡುತ್ತಿದ್ದರು.

ಮರುದಿವಸ ಅಂದರೆ ತಾ. ೨೫-೪-೧೯೧೧ನೇ ಇ.ಯ ಸೋಮವಾರ ದಿವಸ ಮುಂಜಾನೆ ಪುನಃ ಮಜಲು ಪ್ರಾರಂಭವಾಯಿತು. ಜನಸಮೂಹವು ಯಾವಾಗಲೂ ತುಂಬಿಕೊಂಡೇ ಇರುತ್ತಿತ್ತು. ಯಾಕೆಂದರೆ

ಈವರೆಗೆ ಡಿಸ್ಟ್ರಿಕ್ಟ ಡಿಪ್ಯೂಟಿ ಕಲೇಕ್ಟರರಾದ ಆಫೀಸರರು ಸಣ್ಣ ಹುಡುಗರಂತೆ ತೊಟ್ಟಿಲ ಜೀಕು ಆಡಿದ್ದನ್ನುಯಾರೂ ಕೇಳಿರಲಿಕ್ಕಿಲ್ಲ. ಆದರೆ ರಾ.ಬ॥ರವರ ಚರಿತ್ರವೇ ವಿಚಿತ್ರವಾಗಿದೆ. ಇವರ ಅಭಿಮಾನವೆಷ್ಟು ನೋಡಿರಿ? ಕುನ್ನೂರವರು ತಮ್ಮ ಊರ ಜಾತ್ರೆಗೆ ತೊಟ್ಟಿಲ ಜೀಕು ತಂದದರಿಂದ ಅವರ ಮನಸ್ಸಿನ ಪ್ರೀತಿಯನ್ನು ಪೂರ್ಣಮಾಡಬೇಕೆಂದು, ಕ್ಷಣಮಾತ್ರ ವಿನೋದಾರ್ಥವಾಗಿ ಜೀಕನ್ನಾಡಿದರು. ಇದು ಎಲ್ಲರಿಗೂ ಕೌತುಕವನ್ನುಂಟು ಮಾಡಿತು. ಇಂಥ ಅತ್ಯಗಾಧವಾದ ಸಂಗತಿಯೇ ಮಹನೀಯರ ಚರಿತ್ರವೆನ್ನಿಸಿಕೊಳ್ಳುತ್ತದಲ್ಲವೇ!

ಅನ್ನಸಂತರ್ಪಣೆ

ಈ ಅರಟಾಳದ ಜಾತ್ರೆಯಲ್ಲಿ ಅನ್ನಕ್ಕೆ ಮುಕ್ತದ್ವಾರವಿತ್ತು. ಒಂದರ ಮೇಲೊಂದು ಪಂಙ್ತಿಗಳು ಉಂಡುಂಡು ಏಳುತ್ತಿದ್ದವು. ಅಡಿಗೆಯವರೂ, ಬಡಿಸುವವರೂ, ಯಾವಾಗಲೂ ತಮ್ಮ ತಮ್ಮ ಕಾರ್ಯಗಳಲ್ಲಿ ಜಾಗರೂಕರಾಗಿಯೇ ಇರುತ್ತಿದ್ದರು. ಮೇಲಾಗಿ ವೀರವ್ವನವರೂ, ಬಾಯಿಸಾಹೇಬರಿಬ್ಬರೂ, ಚಚಡಿಯ ಶ್ರೀಮಂತರೂ ನ್ಯೂನತೆಯಾಗದಂತೆ ದಕ್ಷತೆಯನ್ನು ತೆಗೆದುಕೊಳ್ಳುತ್ತಿದ್ದರು. ಸಾಹೇಬರಂತೂ, ಸರ್ವವ್ಯವಸ್ಥೆಯನ್ನು ನೋಡುತ್ತಿರುವಲ್ಲಿ ಸಿದ್ಧರಾಗಿಯೇ ಇದ್ದರು. ಈ ಸುವ್ಯವಸ್ಥೆಯಿಂದ ಸರ್ವಜನರಿಗೂ ಸಂತೋಷವಾಗುವಂತೆ ಕಾರ್ಯವು ಸಾಂಗವಾಯಿತು. ಒಟ್ಟಿಗೆ ಈ ಜಾತ್ರೆಯಲ್ಲಿ ಅಜಮಾಸು ೨೦-೨೫ ಸಾವಿರ ಜನರ ಊಟವಾಗಿರಬಹುದು. ಅನ್ಯಜಾತಿಯ ಜನರಿಗೆ ಕೋಠಿಮನೆಯಿಂದ ಸೀದಾ ಕೊಡಲ್ಪಡುತ್ತಿತ್ತು. ಸರ್ವಸಾಮಾನುಗಳನ್ನು ಸಾಕಷ್ಟು ತರಿಸಿ ಕೋಠಿಮನೆಯನ್ನು ಮೊದಲೇ ತುಂಬಿ ಬಿಟ್ಟಿದ್ದರು. ಯಾವದಕ್ಕೂ ಏನೂ ಕೊರತೆಯಾಗುವಂತೆ ಇದ್ದಿದ್ದಿಲ್ಲ. ಜಾತ್ರೆಯೆಲ್ಲ ತೀರಿ ಹೋದರೂ ಇನ್ನೂ ಒಂದು ಅಕ್ಕಿಯ ಕಣಜವು ಬಿಗಿದೇ ನಿಂತಿತ್ತು. ಅಂದಮೇಲೆ ಪ್ರತಿಯೊಂದು ಸಾಮಾನಿನ ಪೂರೈಕೆಯು ಹ್ಯಾಗೆ ಇತ್ತೆಂಬದರ ಕಲ್ಪನೆಯನ್ನು ವಾಚಕರೇ ಮಾಡತಕ್ಕದ್ದು. ಕೋಠಿಮನೆಯ ವ್ಯವಸ್ಥೆಯು ಶಹಾಪುರದ ಅಪ್ಪಯ್ಯಣ್ಣಾ ಭೋಜದ ಇವರಿಗೆ ಕೊಡಲ್ಪಟ್ಟಿತ್ತು. ಇವರು ಆ ಕೆಲಸವನ್ನು ಬಹು ವ್ಯವಸ್ಥೆಯಿಂದಲೂ, ಪ್ರಾಮಾಣಿಕತನದಿಂದಲೂ ಮಾಡಿದರು. ಜನಸಮೂಹದ ಊಟವು ನಿಯಮಿತ ವೇಳೆಗೆ ಆಗಲಿಕ್ಕೆ ತಪ್ಪುತ್ತಿದ್ದಿಲ್ಲ. ಮುಂಜಾನೆ ೧ ಘಂಟೆಗೆ ಮತ್ತು ಸಂಜೆಗೆ ೮ ಘಂಟೆಗೆ ಪಂಙ್ತಿಗಳು ಕೂಡ್ರಲಿಕ್ಕೆ ಸುರುವಾಗುತ್ತಿತ್ತು. ಇಷ್ಟು ದೊಡ್ಡ ಸಮಾಜಕ್ಕೆ ವೇಳೆಗೆ ಸರಿಯಾಗಿ ಅಡಿಗೆಯಾಗುವದು ಶ್ರಮಸಾಧ್ಯವಾದರೂ, ಸಾಹೇಬರ ಮನೆತನದಲ್ಲಿ ನಿರಂತರ ನಡೆದ ವ್ಯವಸ್ಥಾಕ್ರಮದಿಂದ ನಿರಾಯಾಸವಾಗಿ ನಿಯಮಿತ ವೇಳೆಗೆ ಸರಿಯಾಗಿ ಊಟವಾಗುತ್ತಿತ್ತು. ಈ ಅಖಂಡವಾದ ಅನ್ನದಾನದಿಂದ ಅರಟಾಳ ಸಾಹೇಬ ಬ॥ರವರಿಗೆ ಅಕ್ಷಯವಾದ ಪುಣ್ಯರಾಶಿಯು ಲಭಿಸದೆ ಎಂದೂ ಹೋಗದು.

ಈ ಪುಣ್ಯಕಾರ್ಯವನ್ನು ನೆರವೇರಿಸಿ ರಾ.ಬ॥ರವರು ಶುಕ್ರವಾರ ತಾ. ೨೯-೪-೧೯೧೦ ದಿವಸ ಮುಂಜಾನೆ ೬ ಗಂಟೆಗೆ ಅರಟಾಳ ಬಿಟ್ಟು, ರಥಾರೂಢರಾಗಿ ಮಧ್ಯಾಹ್ನಕ್ಕೆ ಹುಬ್ಬಳ್ಳಿಗೆ ಬಂದು, ೧ ಗಂಟೆಯ ಸುಮಾರಕ್ಕೆ ಮೇಲಗಾಡಿಯಲ್ಲಿ ಕೂತು, ಸಂಜೆಯ ೬ ಗಂಟೆಗೆ ಬೆಳಗಾವಿಗೆ ಇಳಿದು, ಮರುದಿವಸ ತಮ್ಮ ಕೆಲಸದ ಮೇಲೆ ಹಾಜರಾದರು. ಇತ್ತ ಅರಟಾಳದಲ್ಲಿ ಎಷ್ಟೋ ಕೋಠಿಯ ಸಾಮಾನು ಶಿಲಕು ಉಳಿದಿತ್ತೆಂದು ಹಿಂದೆ ಹೇಳಿರುತ್ತದಷ್ಟೆ! ಅದರ ವಿನಿಯೋಗವನ್ನು ಸತ್ಕಾರ್ಯಕ್ಕೇ ಮಾಡಬೇಕೆಂದೂಹಿಸಿ ವೀರಮ್ಮನವರೂ, ಚಚಡಿಯ ಶ್ರೀಮಂತರೂ ಕೂಡಿ ಕುನ್ನೂರ ಹನುಮಂತಗೌಡರ ಲಗ್ನವನ್ನು ಹೂಡಿ, ಅವರೊಡನೆ ಬೇರೆ ಅಯ್ದಾರು ಧರ್ಮಾರ್ಥ ಲಗ್ನಗಳನ್ನು ಸಮಾರಂಭದಿಂದ ಮಾಡಿ, ಕೀರ್ತಿಯನ್ನು ಸಂಪಾದಿಸಿದರು. ಮತ್ತು ಧುಂಡಿಸಿ, ಕೊಪ್ಪ,

ಎತ್ತಿನಹಳ್ಳಿ, ಹೊಸೂರ, ಮುಂತಾದ ಸುತ್ತು ಹಳ್ಳಿಗಳ ಯಾವತ್ತು ಜೈನಮತದ ಜನರಿಗೆ ಔತಣದ ಆಮಂತ್ರಣಕೊಟ್ಟು, ಅರಟಾಳ ಬಸ್ತಿಯಲ್ಲಿ ಪ್ರಶಸ್ತವಾದ ಪ್ರಸ್ಥವನ್ನು ಬಹು ಶಿಸ್ತವಾಗಿ ಮಾಡಿ, ಯಾವತ್ತು ಶಿಲಕಿನ ಸಾಮಾನುಗಳನ್ನು ಅಲ್ಲಿಯೇ ವ್ಯಯಮಾಡಿ ಪುಣ್ಯವಂತರೆಂದೆನ್ನಿಸಿಕೊಂಡರು. ಇಂಥ ಪುಣ್ಯಪುರುಷರು ಲೋಕದಲ್ಲಿ ವಿರಳ.

❖❖

೧೯ನೇ ಭಾಗ

[1]ಚಿತ್ರಗಲ್‌ದುರ್ಗದ ಮಹಾಸ್ವಾಮಿಗಳೂ ಅವರಿಗಿರುವ ರಾಜಮರ್ಯಾದೆಯೂ

ಮೈಸೂರ ಸೀಮೆಯ ಚಿತ್ರಗಲ್‌ದುರ್ಗದ ಡಿಸ್ಟ್ರಿಕ್ಟಿನಲ್ಲಿ ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠಾಧೀಶ ಶ್ರೀಮನ್ಮಹಾರಾಜ ನಿರಂಜನಮೂರ್ತಿ ಶ್ರೀ ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಪ್ರಖ್ಯಾತಿಯು ಸರ್ವಶ್ರುತವಾಗಿರುತ್ತದಷ್ಟೇ. ಇವರ ಹಿಂದಿನ ಸ್ವಾಮಿಗಳಾದ ಶ್ರೀಮನ್ಮಹಾಲಿಂಗಸ್ವಾಮಿಗಳು ಹಿಂದಕ್ಕೆ (ಸನ್ ೧೮೬೨-೬೩ನೇ ಇಸವಿಯ ಸುಮಾರಕ್ಕೆ) ಮುಂಬಯಿ ಕರ್ನಾಟಕದ ಸಂಚಾರಕ್ಕಾಗಿ ದಯಮಾಡಿಸಿದಾಗಿನ ಅವರ ವೈಭವಾತಿಶಯವನ್ನೂ, ಅವರಿಗೂ ರಾವಬಹದ್ದೂರರವರಿಗೂ ಆದ ಸಂದರ್ಶನವನ್ನೂ ಹಿಂದೆ ವರ್ಣಿಸಿರುವದು. ಈ ಮಹಾಸ್ವಾಮಿಗಳು ಶಿವಮೂರ್ತಿಸ್ವರೂಪವೇ ಆಗಿದ್ದರೆಂದು ಜನಜನಿತ ವಾರ್ತೆಯಿದೆ. ಈ ಮಠಕ್ಕೆ ಮೈಸೂರ ಮಹಾರಾಜರು ಎಷ್ಟು ಪೂಜ್ಯಭಾವದಿಂದ ನಡೆಯುತ್ತಿದ್ದರೆಂಬದು ಕೆಳಗಿನ ಅವತರಣದಿಂದ ತಿಳಿಯುವಂತಿದೆ:

ಶ್ರೀ ವೀರಶೈವ ಮತಸ್ಥಾಪನಾಚಾರ್ಯವರ್ಯ ಶ್ರೀಮತ್ಪರಮಪಾವನ ಚಾರುತರಸನ್ಮೋಹನಾಂಗ ಮದನಮರ್ದನ ಮಾಯಾಕೋಲಾಹಲ ಶ್ರೀಮದಲ್ಲಮಪ್ರಭು ಸ್ವಾಮ್ಯನ್ವಯ ಸಂಜನಿತ ಶ್ರೀಮಚ್ಚಿನ್ಮೂಲಾದ್ರಿ ಪ್ರಭು ಶೂನ್ಯಸಿಂಹಾಸನಾರೂಢ ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಮುರುಗಾರಾಜೇಂದ್ರ ಸ್ವಾಮಿಗಳವರ ಸನ್ನಿಧಾನಕ್ಕೆ-

ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೀತಿಪ್ರೌಢ ಅಪ್ರತಿಮ ವೀರನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಲಾನಿಧಿ ಶಂಖಚಕ್ರ, ಮತ್ಸ್ಯಶರಭಸಾಳ್ವ ಗಂಡಭೇರುಂಡ ಧರಣೀವಾರಾಹ ಹನುಮದ್ಗರುಡಾಂಕುಶ ಕುಠಾರ ಸಿಂಹಾದ್ಯನೇಕ ಬಿರುದಾಂಕಿತ ಮೈಸೂರ ರತ್ನಸಿಂಹಾಸನಾರೂಢ ಕೃಷ್ಣರಾಜ ಒಡೆಯರ ಕೃತ ಸಾಷ್ಟಾಂಗ ನಮಸ್ಕಾರಗಳು.

ಸಾಂಪ್ರತ, ನಾವು ತಮ್ಮ ಅನುಗ್ರಹದಿಂದ ಶ್ರಾವಣಶುದ್ಧ ಬಿದಿಗಿ ಧಾತುನಾಮ ಸಂವತ್ಸರದ ವರೆಗೆ ಕ್ಷೇಮ. ತಮ್ಮ ತಪಃಸಾಮ್ರಾಜ್ಯವೈಭವವನ್ನು ಲೇಖನದ್ವಾರ ತಿಳಿಸುತ್ತಿರುವದಾಗಬೇಕು. ತರುವಾಯ ದಾಸೋಹ ಒಪತ್ತಿಯ ಚರಮೂರ್ತಿ ನೀಲಕಂಠಯ್ಯನವರು ಕೊಡಲಿ ಹಾಗೂ ಚರಮೂರ್ತಿ ಸೋಮಶೇಖರ ಶಾಸ್ತ್ರಿ ಈ ಉಭಯತರ ವಿದ್ಯಮಾನ, ತಾವು ಕಳಿಸಿದ ಆಶೀರ್ವಾದಯುಕ್ತ ಪತ್ರಿಕೆ ಹಾಗೂ ಫಲಮಂತ್ರಾಕ್ಷತೆ ಹಾಗೂ

---

೧. ಜಗದ್ಗುರುಗಳ ದರ್ಶನ ಲಾಭವು

ಛತ್ರಚಾಮರ ಪಲ್ಲಕ್ಕಿ ವಸ್ತ್ರ ಮೊದಲಾದವುಗಳೆಲ್ಲ ತಮ್ಮ ಆಜ್ಞಾನುಸಾರವಾಗಿ ಬಂದು ಮುಟ್ಟಿದವು. ಅವುಗಳನ್ನು ನಾವು ಶಿರಸಾವಂದನಪೂರ್ವಕ ಸ್ವೀಕರಿಸಿದೆವು. ಇತ್ತಕಡೆಯಿಂದ ಕೊಟ್ಟು ಕಳಿಸಿದ ಸಾಮಾನುಗಳ ವಿವರ.

ವಜ್ರ ಮುತ್ತು ಪಚ್ಚೆ ರತ್ನಖಚಿತ ೧೧೭ ನಗಗಳುಳ್ಳ ದುಲಡೀ ಪದಕ ಒಂದು, ಪೈಠಣೀ ಮರ್ದಾನೀ ಪೀತಾಂಬರ ಒಂದು, ಹಸರು ಮಡಿ ಒಂದು, ನಾಗಮರೀ ದೋತರ ಜೋಡಿಗಳು ಎರಡು, ಕಿನಕಾಪಿನ ರಾಣ ಒಂದು, ಮಹತಾಪೀ.ಪಟಕ ಒಂದು, ಜಾಮೇವಾರೂ ಎರಡು, ಚೀರಾ ಒಂದು, ಸರಿಗೇತುರಾಯಿ ಕಂಬಿಶಾಲಜೋಡಿ ಒಂದು, ಕಂಠೀಸರ ಒಂದು, ಸಾವಿರ ಮೋಹರುಗಳುಳ್ಳ ಥೈಲಿ ಒಂದು, ಹಣಸುಮೋತಿ ಮೊದಲಾಗಿ ಸರ್ವಾಂಗ ಸರಂಜಾಮ ಸಹ ಪಲ್ಲಕ್ಕಿ ಒಂದು, ಬೆಳ್ಳಿ ಹಿಡಿಕೆಯ ಚಾಮರಜೋಡು ಒಂದು, ಸುವರ್ಣಕಲಶಾಂಕಿತ ಕಿನ್ಮಾಬೀ ಚಿತ್ತರಿಗೆ ಒಂದು, ಸುವರ್ಣಕಲಶಯುಕ್ತ ಶ್ವೇತಛತ್ರಗಳು ಎರಡು, ಸುವರ್ಣಕಲಶ ಯುಕ್ತ ಸೂರ್ಯಪಾನಗಳು ಎರಡು, ಆನೆಗಳು ಎರಡು, ಕುದುರೆಗಳು ಎರಡು, ಒಂಟೆಗಳು ಎರಡು, ವರ್ಷಾಶನದ ಸನದು ಮತ್ತು ಕಿರುಕಳ ರಹದಾರೀ ಹುಕುಮು ಮೊದಲಾಗಿ ಕಳಿಸಿದ್ದು, ಅವು ತಮ್ಮ ಸನ್ನಿಧಾನ ಪತ್ರ ಬಂದು ಮುಟ್ಟಿದ್ದನ್ನು ತಿಳಿಸುವದಾಗಬೇಕು.

ಈ ಸಾಮಾನುಗಳೊಡನೆ ರಾಜವಾಡೆಯೊಳಗಿನ ಈಟಿಯೂಳಿಗದ ಮಾದಯ್ಯಾ, ಗವೀಮಠದ ಸಿದ್ಧಲಿಂಗಯ್ಯನವರು, ಅರುಣಾಚಲ ರಾಮಲಿಂಗಯ್ಯ ಮೊದಲಾದವರನ್ನು ಕಳಿಸಿಕೊಟ್ಟಿರುತ್ತದೆ. ಅವರ ಹೇಳಿಕೆಯಿಂದ ತಮಗೆ ಸರ್ವಸಂಗತಿ ತಿಳಿಯಬಹುದು. ಗವಿಮಠದ ಚಿ॥ಸಹಸ್ರಾಯುಷಿ ಶಿವಯ್ಯನವರ ಮುಖಾಂತರ ಸ್ವಾಮಿ ಮಹಾರಾಜರ ಮಹಾತ್ಮ್ಯವೂ, ತಪೋಬಲವೂ ನಮಗೆ ವಿದಿತವಾಗಿರುತ್ತದೆ. ಸ್ವಾಮಿ ಮಹಾರಾಜರ ದರ್ಶನವಿಷಯವಾಗಿ ನಮಗೆ ಅತಿ ಉತ್ಕಂಠೆಯಾಗಿದ್ದು, ಅದು ತಮಗೆ ಒಪತ್ತಿ ನೀಲಕಂಠ ಚರಮೂರ್ತಿಗಳ ಮತ್ತು ಕೊಡಲಿ ಚರಮೂರ್ತಿಗಳ ಸೋಮಶೇಖರಶಾಸ್ತ್ರಿಗಳ ಹೇಳಿಕೆಯ ಮೇಲಿಂದ ಖಾತ್ರಿಯಾಗಬಹುದು. ದಯಮಾಡಿ ತೀವ್ರವೇ ಮೈಸೂರಿಗೆ ಹೊರಡುವ ಸುನಿಶ್ಚಯಮಾಡಿ, ನಮಗೆ ಮುಂದಾಗಿಯೇ ಪತ್ರದ್ವಾರ ಸೂಚನೆಯನ್ನು ಕೊಡುವದಾಗಬೇಕು. ನಮ್ಮ ಮನಃಸಂತುಷ್ಟಗೊಳಿಸಬೇಕೆಂಬ ಇಚ್ಛೆ ಇದ್ದರೆ ಈ ಪತ್ರವು ಸಹಸ್ರಾಮಂತ್ರಣವೆಂದು ತಿಳಿದು, ಮುಂದಾಗಿ ತೀವ್ರವೇ ತಿಳಿಸುವ ದಯವಾದಲ್ಲಿ ತಮ್ಮ ಇಚ್ಛಾನುರೂಪ ವರ್ತಿಸಲನುಕೂಲವಾಗುವದು.

ತಾರೀಖು ೧೬ನೇ ಮಾಹೆ
ಜುಲೈ ಸನ್ ೧೮೧೬ನೇ ಇಸವಿ.

ದಸ್ತೂರ-ಪ್ರಸನ್ನಯ್ಯಾ ಮುನಸೀಹುಜೂರ
ಶ್ರೀ ಕೃಷ್ಣ
ರುಜು

ಶ್ರೀ
ಶ್ರೀ ಚಾಮರಾಜೇಂದ್ರ ಒಡೆಯರ
ತನುಜ ಶ್ರೀಕೃಷ್ಣರಾಜ ಒಡೆಯರ

ಕೃಷ್ಣರಾಜ ಒಡೆಯರ

ಶ್ರೀಮತ್-ರವಿವಾರ ಅಶ್ವೀನ ಶುದ್ಧ ೬ ಧಾತುನಾಮ ಸಂವತ್ಸರ. ಮೈಸೂರ ಸರಕಾರದ ಹದ್ದಿಯೊಳಗಿನ ಎಲ್ಲ ಅಮಲದಾರ ಮತ್ತು ಕಿಲ್ಲೇದಾರ ಇವರಿಗೆ ಲೇಖೀ ಹುಕುಮು-

ಶ್ರೀಮನ್ಮಹಾರಾಜ ಜಗದ್ಗುರು ಮುರುಗಾರಾಜೇಂದ್ರಸ್ವಾಮಿ, ಮಠ ಚಿತ್ರದುರ್ಗ ಇವರ ಸ್ವಾರಿಯು ಚಿತ್ರದುರ್ಗದಿಂದ ಮೈಸೂರಿಗೆ ಬರುವದಿದ್ದು, ಶ್ರೀಗಳ ಅಡ್ಡಪಲ್ಲಕ್ಕಿಯ ಮುಂದೆ ಮಕರತೋರಣ ಒಂದು, ನಂದೀಧ್ವಜದ ಮೇಲಿರುವ ವ್ಯಾಸನತೋಳು ಒಂದು, ಪಂಚದೀವಟಿಕೆಗಳು ಎರಡು, ಮೋರಚಲ ಎರಡು, ಮೇಟಪಾವಡ ಎರಡು, ಕುದುರೆಯ ಮೇಲಿರುವ ಢಂಕೆಗಳೆರಡು, ಕಾವಿಯ ನಿಶಾನೆಗಳು ಎರಡು, ಮಾಯಾ ಮರತಬು ಒಂದು, ಚಂದ್ರವಾದ್ಯಗಳು ಎರಡು, ಹಸರು ಕೆಂಪು ಹಳದೀ ಬಣ್ಣದ ಅಪ್ತಾಗಿರಿಗಳೆರಡು, ಪರಶು ಎರಡು, ಚಂದ್ರಗಾವೀ ಉಡಾಸ ಎರಡು, ಬಿಚಫರಂಗ ಎರಡು, ಕಾಡ ಎರಡು, ತಲೆಗೆ ಕಟ್ಟಿ ಬಾರಿಸುವ ಚಂದ್ರವಾದ್ಯಗಳೆರಡು, ಹಗಲು ದೀವಟಿಗಳು ಎರಡು, ಜಾಂಗಟಿಗಳು ಎರಡು, ಶಂಖಗಳು ಎರಡು, ಕಾವೀಝೆಂಡೇಗಳು ಎರಡು, ಪಟ್ಟಾಪಟ್ಟಿ ಝೆಂಡೆಗಳೆರಡು, ಉಡಕವಾದ್ಯಗಳು ಎರಡು, ಚಾಮರಗಳೆರಡು, ತಲೆಗೆ ಕಟ್ಟಿ ಬಾರಿಸುವ ಸೂರ್ಯವಾದ್ಯಗಳೆರಡು, ಬೆಳ್ಳಿಯ ಬಡಿಗೆಗಳು ಎರಡು, ಹಸರು ಬಡಿಗೆಗಳು ಎರಡು, ಈ ಪ್ರಕಾರ ಬಿರುದಾವಳಿ ಸಹಿತವಾಗಿ ಮಾಮೂಲ ಪ್ರಕಾರ ಮೆರವಣಿಗೆ ಹೊರಟಾಗ್ಗೆ ಯಾರೂ ಹರಕತ ಮಾಡಲಾಗದು.

ತಾರೀಖು ೨ನೇ ಸಪ್ತಂಬರ
ಸನ್ ೧೮೮೬ನೇ ಇಸವಿ.

ಸಹಿ ಪ್ರಸನ್ನಯ್ಯಾ ಮುನಸೀ ಹುಜೂರ
ಶ್ರೀ ಕೃಷ್ಣ
ಸಹಿ

ಇಂತಹ ಪತ್ರಗಳೂ, ಅಧಿಕಾರಿಗಳಿಗೆ ಕೊಟ್ಟ ಹುಕುಮುಗಳೂ ಅನೇಕ ಇವೆ. ಇದರ ಮೇಲಿಂದ ಈ ಚಿತ್ರದುರ್ಗಮಠದ ವೈಭವವು ಎಷ್ಟಿರುವದೆಂಬದು ಸ್ಪಷ್ಟವಾಗುವಂತಿದೆ.

ಸಾಂಪ್ರತ ಈ ಬೃಹನ್ಮಠಕ್ಕೆ ಅಧಿಪತಿಗಳಾಗಿದ್ದ ಶ್ರೀ ಜಯದೇವ ಮಹಾಸ್ವಾಮಿಗಳು ಸನ್ ೧೯೦೮ನೇ ಇಸವಿಯಲ್ಲಿ ಸರ್ವಸಮಾರಂಭ ಸಮೇತರಾಗಿ ಸಂಚಾರಕ್ಕೆ ಹೊರಟು, ಮೈಸೂರ ಸೀಮೆಯ ಸಂಚಾರವನ್ನೆಲ್ಲ ತೀರಿಸಿ, ಮುಂಬಯಿ ಕರ್ನಾಟಕಕ್ಕೆ ಸೇರಿದ ಧಾರವಾಡ ಜಿಲ್ಲೆಯನ್ನು ಪ್ರವೇಶಿಸಿ, ಆಯಾ ಸ್ಥಳಗಳ ಭಕ್ತರ ಬಿನ್ನಹಗಳನ್ನು ಮನ್ನಿಸುತ್ತ ಧಾರಾಡಕ್ಕೆ ದಯಮಾಡಿಸಿ, ಅಲ್ಲಿ ೮-೧೦ ದಿವಸ ಮುಕ್ಕಾಮ ಮಾಡಿದರು. ಶ್ರೀಗಳು ತಮ್ಮ ಸಕಲ ಬಿರುದಾವಳಿ ಸಹಿತವಾಗಿ ದಕ್ಷಿಣ ಭಾಗದಲ್ಲಿ ನಿರಾತಂಕವಾಗಿ ಸಂಚಾರ ಮಾಡಲಿಕ್ಕೆ ಈ ಭಾಗದ ಕಮೀಶನರರಾದ ಮೆ॥ಎಮ್.ಸಿ. ಗಿಬ್ಬಸಾಹೇಬ ಬಹದ್ದೂರರವರು ಪರವಾನಗಿಯನ್ನು ಕೊಟ್ಟಿದ್ದಲ್ಲದೆ, ಆಯಾ ಜಿಲ್ಲೆಗಳ ಕಲೇಕ್ಟರರೂ ಕೊಟ್ಟಿದ್ದರು. ಮತ್ತು ಇವರು ಹೋದಹೋದಲ್ಲಿ ಇವರನ್ನು ಮರ್ಯಾದಿಸುವ ಬಗ್ಗೆ ಪ್ರತಿಯೊಂದು ಗ್ರಾಮದ ಗ್ರಾಮಸ್ಥರಿಗೂ, ಸರಕಾರಿಯ ಅಧಿಕಾರಿಗಳಿಗೂ ವರಿಷ್ಠರ ಹುಕುಮಾಗಿತ್ತು. ಉದಾಹರಣಾರ್ಥವಾಗಿ ಮೆ॥ಧಾರವಾಡ ಜಿಲ್ಲೆಯ ಕಲೆಕ್ಟರ ಸಾ॥ಬ॥ರವರು ಕೊಟ್ಟ ಹುಕುಮು ಇದರ ಕೆಳಗೆ ಅವತರಿಸಲ್ಪಟ್ಟಿದೆ.

ಡಿಸ್ಟ್ರಿಕ್ಟ ಪೊಲೀಸ ಅಕ್ಟ ಕಲಮು ೪೪ನೇ ಅನ್ವಯ ಹುಕುಮು.

"ವೀರಶೈವಧರ್ಮಗುರು ಶ್ರೀ ಜಗದ್ಗುರು ಮುರಗಾರಾಜೇಂದ್ರಸ್ವಾಮಿ ಶ್ರೀ ಜಯದೇವಶಾಸ್ತ್ರೀಮಠ ಚಿತ್ರದುರ್ಗ ಇವರು ರಾಣೇಬೆನ್ನೂರ, ಬ್ಯಾಡಗಿ, ಹಾವೇರಿ, ಬಂಕಾಪುರ, ಹಾನಗಲ್, ಧಾರವಾಡ, ನವಲಗುಂದ, ರೋಣ, ನರಗುಂದ ಮತ್ತು ಈ ಜಿಲ್ಲೆಯೊಳಗಿನ ಇತರ ಸ್ಥಳಗಳಲ್ಲಿ ಸಂಚಾರಮಾಡುವ ವಿಚಾರವದೆ. ಲಿಂಗಾಯತ

ಜನರು ಯಾವ ಸಮಾರಂಭದಿಂದ ಶ್ರೀಗಳ ಸ್ವಾಗತವನ್ನು ಮಾಡುವರೋ ಆ ಸಮಾರಂಭಕ್ಕೂ ಶ್ರೀಗಳ ಮೆರವಣಿಗೆಗೂ, ಅನ್ಯಜಾತಿಯ ಯಾವ ಮನುಷ್ಯನಿಗೂ ಹರಕತ ಮಾಡುವ ಅಧಿಕಾರವಿಲ್ಲ. ಗದಗ, ಹುಬ್ಬಳ್ಳಿ ಸ್ವಾಮಿಗಳ ಅಡ್ಡಪಲ್ಲಕ್ಕಿಯ ಹಕ್ಕಿನ ತಕರಾರಿನ ಸಂಬಂಧವಾಗಿ ಕೆಲವು ವರ್ಷಗಳ ಹಿಂದೆ ನಾನು ನಿರ್ಣಯ ಮಾಡಿರುತ್ತೇನೆ. ಚಿತ್ರಗಲ್‌ಮಠದ ಸ್ವಾಮಿಗಳಿಗೂ ಈ ತರದ ಹಕ್ಕು ಇದ್ದಂತೆ ಕಂಡುಬರುತ್ತದೆ.

ಆದುದರಿಂದ ಡಿಸ್ಟ್ರಿಕ್ಟ ಪೊಲೀಸ ಆಕ್ಟಿನ ಳಳನೇ ಕಲಮಿನನ್ವಯ ನಾನು ಹುಕುಮು ಕೊಡುವದೇನೆಂದರೆ-ಸರ್ವಬಿರುದಾವಳಿ ಸಹಿತವಾಗಿ ಶ್ರೀಗಳ ಅಡ್ಡಪಲ್ಲಕ್ಕಿಯ ಮೆರವಣಿಗೆಗೆ ಪರವಾನಗಿ ಕೊಟ್ಟಿರುತ್ತದೆ. ಮೆರವಣಿಗೆಯ ವೇಳೆಯಲ್ಲಿ ಶಾಂತತೆಯ ಭಂಗವಾಗಬಾರದೆಂದು ತಿಳಿದು, ಯೋಗ್ಯ ವ್ಯವಸ್ಥೆಯನ್ನಿಡುವ ಬಗ್ಗೆ ಡಿಸ್ಟ್ರಿಕ್ಟ ಸುಪರಿಂಟೆಂಡೆಂಟ ಆಫ್ ಪೊಲೀಸ ಇವರಿಗೆ ವಿನಂತಿ ಮಾಡಿರುತ್ತದೆ."

ಎಮ್.ಸಿ. ಗಿಬ್ಬ

ಸಹಿ

ಜಿಲ್ಲಾ ಮ್ಯಾಜಿಸ್ಟ್ರೇಟ ಧಾರವಾಡ.

ಹಿಂದೆ ಮೈಸೂರ ಸರಕಾರದವರು ಕೊಟ್ಟ ಹುಕುಮು ಒಂದನ್ನು ಇದರ ಕೆಳಗೆ ಅವತರಣ ಮಾಡಿರುತ್ತದೆ.

ಶ್ರೀ

ರಾಜಮುದ್ರೆ[೧]

ಮಿತಿ ಚೈತ್ರಶುದ್ಧ ೫ ಈಶ್ವರನಾಮ ಸಂವತ್ಸರ

"ಚಿತ್ರಗಲ್‌ದುರ್ಗದ ಸುಭೇದಾರರಾದ ಶಾಮರಾವ ಇವರು ಚಿತ್ರಗಲ್ ದುರ್ಗದ ತಾಲೂಕಿನ ಬೇರೆ ಬೇರೆ ಭಾಗಗಳ ಸೇಕದಾರ ಗೌಡ ಶಾನುಭೋಗರಿಗೆ ಕಳಿಸಿದ ಹುಕುಮು:

ಶ್ರೀಮನ್ಮಹಾರಾಜ ಸರಕಾರ ಮೈಸೂರ ಇವರ ಕಡೆಯಿಂದ ಬಂದ ರಹದಾರಿಯ ಖುಲಾಸಾ:

ತಾಲೂಕಿನ ಅಮಲದಾರ ಕಿಲ್ಲೇದಾರ ಸರ್ವಶಿರಸ್ತೇದಾರ ಸೆಟ್ಟಿಸಾವಕಾರ ವರ್ತಕ ವಾಜಂತ್ರಿ ಮೊದಲಾದ ಯಾವತ್ತು ಜನರಿಗೆ ಹುಕುಮು ಕೊಡುವದೇನೆಂದರೆ-ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಮುರಗಾರಾಜೇಂದ್ರಸ್ವಾಮಿಗಳು ಚಿತ್ರದುರ್ಗದಿಂದ ಮೈಸೂರಿಗೆ ಬರುವಾಗ್ಗೆ ಮತ್ತು ಮೈಸೂರಿಂದ ತಿರುಗಿ ಚಿತ್ರಗಲ್‌ದುರ್ಗಕ್ಕೆ ಹೋಗುವಾಗ್ಗೆ ನೀವು ನಿಮ್ಮ ನಿಮ್ಮ ಸೀಮೆಗಳ ಹತ್ತಿರ ಸ್ವಾಮಿ ಮಹಾರಾಜರ ಸ್ವಾಗತವನ್ನು ಆದರ ಪೂರ್ವಕವಾಗಿ ಮಾಡತಕ್ಕದ್ದು. ಮತ್ತು ಅವರಿಗೆ ಬಹುಮಾನ ಪುರಃಸರವಾಗಿ ಫಲಪುಷ್ಪಗಳನ್ನು ಸಮರ್ಪಿಸತಕ್ಕದ್ದು.

ಶ್ರೀ ಮನ್ಮಹಾರಾಜ ಸರಕಾರ ಮೈಸೂರ ಇವರ ಕಡೆಯಿಂದ ಬಂದ ರಹದಾರೀ ಹುಕುಮು ಏನೆಂದರೆ : ಶ್ರೀಗಳ ಅಡ್ಡಪಲ್ಲಕ್ಕಿಯ ಮುಂದೆ ಮಕರತೋರಣ, ನಂದೀಧ್ವಜಕ್ಕಿರುವ ವ್ಯಾಸನತೋಳು... ಇತ್ಯಾದಿ ಸರ್ವಬಿರುದಾವಳಿ ಸಹಿತವಾಗಿ ಅಡ್ಡಪಲ್ಲಕ್ಕಿಯ ಸರ್ವಾಂಗ ಸರಂಜಾಮ ಸಹ ಸಂಚಾರಮಾಡಲಿಕ್ಕೆ ಶ್ರೀಗಳವರಿಗೆ ಅತಿ ಪುರಾತನ ಕಾಲದಿಂದ ಮಾಮೂಲ ವಹಿವಾಟವಿರುತ್ತದೆ. ಮತ್ತು ಶ್ರೀಗಳ ಸಂಚಾರಕ್ಕೆ ಯಾವ ತರದಿಂದಲೂ

---

೧. ಈ ಮುದ್ರೆಯಲ್ಲಿ ದೇವನಗರೀ ಅಕ್ಷರಗಳಿರುತ್ತವೆ.

ಅಡ್ಡಿಯಾಗಬಾರದು. ಮೇಲೆ ಬರೆದ ಬಿರುದಾವಳಿ ಸಹ ಈ ಹೊತ್ತು ಸ್ವಾಮಿಗಳು ಮೈಸೂರಿಂದ ತಿರುಗಿ ಚಿತ್ರಗಲ್‌ದುರ್ಗಕ್ಕೆ ಬರುವಾಗ್ಗೆ ನಾವು (ಸೆಟ್ಟಿ-ಸಾವಕಾರ-ವ್ಯಾಪಾರಿ-ವಾಜಂತ್ರಿ-ಮತ್ತು ಸರ್ವ ಖಾತೆಯ ನೌಕರರು) ಶ್ರೀಮನ್ಮಹಾರಾಜ ಸರಕಾರ ಮೈಸೂರ ಇವರ ಹುಕುಮಿನನ್ವಯ ನಮ್ಮ ಹದ್ದಿಗಳ ಹತ್ತರ ಶ್ರೀಗಳ ಎದುರ್ಗೊಂಡು ಆದರ ಪೂರ್ವಕವಾಗಿ ಫಲಪುಷ್ಪಾದಿಗಳ ಅರ್ಪಣೆ ಮಾಡಿದೆವು. ಕಾರಣ ನಿಮಗಾದರೂ ಹುಕುಮು ಕೊಡುವದೆನೆಂದರೆ- ನೀವು ಇದರಂತೆ ಸರ್ವ ಸೆಟ್ಟಿ ಸಾವಕಾರ ವಾಜಂತ್ರಿ ಮತ್ತು ಇತರ ಜನರು ಕೂಡಿ ನಿಮ್ಮ ನಿಮ್ಮ ಸೀಮೆಗಳ ಹತ್ತರ ಶ್ರೀಗಳಿಗೆ ಬಹುಮಾನಪುರಃಸರವಾಗಿ ಫಲಪುಷ್ಪಾದಿಗಳನ್ನು ಅರ್ಪಣಮಾಡತಕ್ಕದ್ದು. ಮತ್ತು ಶ್ರೀಗಳು ಅಲ್ಲಿಂದ ಮುಂದೆ ಸಾಗದ ಹೊರತು ನೀವು ನಿಮ್ಮ ನಿಮ್ಮ ಸ್ಥಳಗಳಿಗೆ ತಿರುಗಿ ಹೋಗಬಾರದು. ಹುಕುಮಿನಂತೆ ನಡೆದ ಬಗ್ಗೆ ರಿಪೋರ್ಟ ಮಾಡತಕ್ಕದ್ದು.

ಶಾಮರಾವ್

ಸಹಿ

ಮೈಸೂರ ಮತ್ತು ಬ್ರಿಟಿಶ ಸರಕಾರದವರ ಈ ವ್ಯವಸ್ಥೆಯಿಂದ ಯಾವ ಉಪಾಧಿಯೂ ಇಲ್ಲದೆ ಮಹಾಸ್ವಾಮಿಗಳ ಸಂಚಾರವು ಮಹಾಸಂಭ್ರಮದಿಂದ ಸಾಗುವದಕ್ಕೆ ಅವಕಾಶವಾಯಿತು.

ಜಗದ್ಗುರುಗಳು ಅಥಣಿಗೆ ದಯಮಾಡಿಸಿದ್ದು

ಸಾಂಪ್ರತಕ್ಕೆ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ಬೆಳಗಾವ ಜಿಲ್ಲೆಗೆ ಸೇರಿದ ತಾಲೂಕ ಅಥಣೀ ಗ್ರಾಮಕ್ಕೆ ಹೋಗುವ ಅವಶ್ಯಕತೆಯಿತ್ತು. ಯಾಕಂದರೆ ಅಥಣಿಯಲ್ಲಿ ಗಚ್ಚಿನಮಠದ ಶ್ರೀಮನ್ಮಹಾ ಮುರಿಗೇಂದ್ರಸ್ವಾಮಿಗಳವರು ತಪಃಪ್ರಭಾವದಿಂದಲೂ, ಕ್ರಿಯಾನಿಷ್ಠತೆಯಿಂದಲೂ ಲೋಕಪ್ರಸಿದ್ಧಿಯನ್ನು ಹೊಂದಿ ವಯೋವೃದ್ಧರಾದುದರಿಂದ ಇವರ ದರ್ಶನವನ್ನು ತೆಗೆದುಕೊಳ್ಳಬೇಕಾಗಿತ್ತು. ಅಥಣಿಯ ಧನಾಢ್ಯರಾದ ಭಕ್ತಜನರು ಮಹಾಸ್ವಾಮಿ ಜಗದ್ಗುರುಗಳಿಗೆ ಮೊದಲೇ ಮರ್ಯಾದಾಪೂರ್ವಕ ಬಿನ್ನಹಮಾಡಿದ್ದರು. ಆದುದರಿಂದ ಶ್ರೀಗಳು ಧಾರವಾಡದಿಂದ ನೆಟ್ಟಗೆ ಸವದತ್ತಿ, ಮುನವಳ್ಳಿ, ರಬಕವಿಗಳ ಮೇಲಿಂದ ಅಥಣಿಗೆ ದಯಮಾಡಿಸಿದರು. ಅಥಣಿಗೆ ಜಗದ್ಗುರುಗಳ ಆಗಮನವಾಗುವ ಸುದ್ದಿಯು ಬಹುದಿವಸಗಳಿಂದ ಹಬ್ಬಿದ್ದದರಿಂದ ೨೦-೩೦ ಹರದಾರಿಯ ಮೇಲಿನ ಭಕ್ತಜನರು ಮುಂದಾಗಿಯೇ ಬಂದು ಬಂದು ಅಥಣಿಯನ್ನು ಅಲಂಕರಿಸಿದ್ದರು. ತಪೋನಿಷ್ಠರಾದ ಶ್ರೀ ಮುರಿಗೇಂದ್ರಸ್ವಾಮಿಗಳವರ ವಾಸ್ತವ್ಯದಿಂದ ಅಥಣಿಯು ಒಂದು ಕ್ಷೇತ್ರವೇ ಅನಿಸಿಕೊಂಡಿರುವದರಿಂದಲೂ, ಉಭಯ ಮಹಾಸ್ವಾಮಿಗಳವರ ಪಾದದರ್ಶನವು ಒಂದೇ ಸ್ಥಳದಲ್ಲಿ ಲಭಿಸುವದರಿಂದಲೂ ದೂರ ದೂರಿನ ಜನರು ಕುಟುಂಬ ಪರಿವಾರ ಸಹಿತವಾಗಿ ಅಥಣಿಗೆ ಬಂದಿದ್ದರು. ಮತ್ತು ಅಥಣಿಯಲ್ಲಿ ಲಿಂಗಾಯತ ಜನರ ವಸತಿಯು ವಿಶೇಷವಾಗಿರುವದರಿಂದ ಪ್ರತಿಯೊಂದು ಮನೆಯವರು ಪರವೂರಲ್ಲಿರುವ ತಮ್ಮ ತಮ್ಮ ಬಂಧು ಬಳಗದವರನ್ನೂ, ಬೀಗರು ಬಿಜ್ಜರನ್ನೂ ಕರಿಸಿಕೊಂಡಿದ್ದರು. ಅದರಿಂದ ಅಥಣಿಯು ಜನಸಮೂಹದಿಂದ ತುಂಬಿ ತುಳುಕುತ್ತಿತ್ತು. ಸೇಡಬಾಳ ಸ್ಟೇಶನಕ್ಕೂ, ಅಥಣಿಗೂ ಟಾಂಗಾಗಳ ಹಾಗೂ ಸವಾರಿ ಚಕ್ಕಡಿಗಳ ಯಾತಾಯಾತವು ಅವಿಚ್ಛಿನ್ನವಾಗಿ ನಡೆಯುತ್ತಲಿತ್ತು.

ಅಥಣಿಯಲ್ಲಿ ಅಳತಿಯಿಲ್ಲದೆ ಜನಸಮೂಹವು ಸೇರಲಿಕ್ಕೆ ಇನ್ನೂ ಒಂದು ಬಲವತ್ತಾದ ಕಾರಣವಿತ್ತು. ಅದೇನೆಂದರೆ, ವ್ಯಾಸನತೋಳಿನ ಮೆರವಣಿಗೆ. ಈ ಪ್ರಾಂತದಲ್ಲಿ ವ್ಯಾಸನತೋಳಿನ ಮೆರವಣಿಗೆಯಾದದ್ದನ್ನು ಎಷ್ಟೋ ಜನರು ಕಣ್ಣಾರೆ ಕಂಡಿದ್ದಿಲ್ಲ. ಜಗದ್ಗುರು ಶ್ರೀಮುರಘರಾಜೇಂದ್ರ ಮಹಾಸ್ವಾಮಿಗಳವರಿಗಿರುವ ೭೨

ಬಿರುದಾವಳಿಗಳಲ್ಲಿ ವ್ಯಾಸನತೋಳು ಸಹಿತವಾದ ನಂದೀಧ್ವಜವೂ ಒಂದಾಗಿರುವದರಿಂದ ಈ ಮೆರವಣಿಗೆಯನ್ನು ನೋಡಬೇಕೆಂಬ ಉತ್ಕಂಠೆಯಿಂದ ಅಪರಿಮಿತ ಜನ ಕೂಡಿತ್ತು. ಮೇಲಾಗಿ ಗಚ್ಚಿನಮಠದ ಹೊರಗೋಡೆಯೊಳಗೆ ಪುರಾತನದಿಂದಲೂ ಕೂಡ್ರಿಸಿದ್ದ ವ್ಯಾಸನ ತೋಳಿನ ವಿಗ್ರಹವನ್ನು ಒಳಗಡೆಯಲ್ಲಿ ಅಥಣಿಯ ಹಾರುವರೆಲ್ಲ ವ್ಯಾಜ್ಯ ಹೂಡಿ ಕಿತ್ತಿಸಿ, ಅದನ್ನು ಮಠದ ಒಳಭಾಗದಲ್ಲಿ ಇಡಿಸಿದ ಸಂಗತಿಯು ಸರ್ವಜನರಿಗೂ ಗೊತ್ತಿದ್ದದರಿಂದ, ಈಗ ಅದೇ ಅಥಣಿಯಲ್ಲಿ ಶ್ರೀ ಜಗದ್ಗುರುಗಳ ಬಿರುದಾವಳಿಯ ವ್ಯಾಸನತೋಳು ಸಹಿತವಾದ ನಂದೀಧ್ವಜವು ಓಣಿಯಲ್ಲೆಲ್ಲ ಮೆರವಣಿಗೆಯನ್ನು ಹೊಂದುವದೆಂದು ಹರ್ಷಭರಿತವಾಗಿ ಬಹುಜನರು ಬರುವವರಾದರು.

ಶ್ರೀಗಳವರ ಸ್ವಾರಿಯು ದಯಮಾಡಿಸುತ್ತದೆಂದು ಅಥಣೀವಾಸಿಗಳಾದ ಲಿಂಗಾಯತರು ತಮ್ಮ ಪುರಪ್ರದೇಶವನ್ನು ನಾನಾವಿಧವಾಗಿ ಶೃಂಗರಿಸಿದರು. ಪೇಟೆಯ ಕೂಟಗಳಲ್ಲಿಯೂ, ಮುಖ್ಯ ಮುಖ್ಯ ಓಣಿಗಳಲ್ಲಿಯೂ, ಅಲ್ಲಲ್ಲಿಗೆ ಭವ್ಯವಾದ ಅಗಸಿಗಳನ್ನೂ, ಕಮಾನುಗಳನ್ನೂ, ಮಂಟಪಗಳನ್ನೂ ಕಟ್ಟಿದ್ದರು. ಊರ ಹೆಬ್ಬಾಗಿಲ ಹತ್ತರ ಮಹೋನ್ನತವಾದ ಅಗಸಿಯನ್ನು ರಚಿಸಿದ್ದರು. ಎಲ್ಲ ಓಣಿಗಳಲ್ಲಿಯೂ ವಿಧವಿಧ ಬಣ್ಣದ ಧ್ವಜಪತಾಕೆಗಳು ಬಲು ಚಂದ ಕಾಣುತ್ತಿದ್ದವು. ಊರಲ್ಲೆಲ್ಲ ಓಣಿಯೋಣಿಗೆ ತಳಿರುಗಳೂ, ತೋರಣಗಳೂ, ಬಾಳೆಯ ಕಂಬಗಳೂ, ಪರಿಪರಿಗಳೂ ಸಾಂದ್ರವಾಗಿ ಶೋಭಿಸುತ್ತಿದ್ದವು. ಅಗಸಿಗಳೂ ಕಮಾನುಗಳೂ ಬಹು ಸುಂದರವಾಗಿ ರಚಿಸಲ್ಪಟ್ಟಿದ್ದವು. ಸಾರಾಂಶ, ಊರೆಲ್ಲ ಹೊಸ ಅಥಣಿಯೋ ಏನೋ ಎಂಬಂತೆ ಬಲು ಶೃಂಗರಿಸಲ್ಪಟ್ಟಿತ್ತು.

ಮಹಾಸ್ವಾಮಿಗಳು ಬಂದು, ಅಥಣಿಯ ಉರಹೊರಗಿರುವ ಶ್ರೀ ಸಿದ್ಧೇಶ್ವರ ದೇವಾಲಯದಾಚೆಗಿರುವ ಶ್ರೀ ಮುರಿಗೇಶತೀರ್ಥದ[೩] ಬಗೀಚಿನಲ್ಲಿ ಸರ್ವಪರಿವಾರ ಸಹಿತ ಇಳುಕೊಂಡಿದ್ದರು. ಮೊದಲಿಗೇ ಪ್ರಕಟಪಡಿಸಿದಂತೆ ತಾ. ೨೦-೬-೧೯೧೦ ಇಸವಿಯ ದಿವಸ ಅಥಣೀವಾಸಿಗಳು ಶ್ರೀಗಳವರನ್ನು ಮಹಾಸಮಾರಂಭದಿಂದ ಊರೊಳಗೆ ಕರತರುವವರಾದರು.

ಅಥಣಿಯಲ್ಲಿ ಶ್ರೀ ಜಗದ್ಗುರುಗಳ ಮೆರವಣಿಗೆಯ ಉತ್ಸವವೂ ಅವರ ಬಿರುದಾವಳಿಗಳೂ

ಸೂರ್ಯೋದಯಕ್ಕೆ ಸರಿಯಾಗಿ ಭೇರಿಗಳು ಭೋಭೋ ಎಂದು ಭೋರ್ಗರೆಯ ಹತ್ತಿದವು. ಕಹಳೆಗಳು ಉನ್ನತಸ್ವರದಿಂದ ಎಲ್ಲರನ್ನು ಎಚ್ಚರಿಸಹತ್ತಿದವು. ಬೇಂಡಬಾಜಾ ಎಂಬ ಆಂಗ್ಲವಾದ್ಯವು ಬಹು ಮಂಜುಳವಾಗಿ ಸರ್ವರ ಉಲ್ಲಾಸವನ್ನು ಇಮ್ಮಡಿಸಿತು. ಚಂದ್ರವಾದ್ಯ ಸೂರ್ಯವಾದ್ಯಗಳು ಸಕಲರ ಕರ್ಣೇಂದ್ರಿಯವನ್ನು ತಮ್ಮ ಕಡೆಗೆ ಆಕರ್ಷಿಸಹತ್ತಿದವು. ಒಟ್ಟಿಗೆ ಮಂಗಳವಾದ್ಯಗಳೆಲ್ಲ ಮೊಳಗಹತ್ತಿದವು. ಬೃಹನ್ಮಠದ ಆನೆಯು ಶೃಂಗಾರಾಗಿ ಸೊಂಡೆಯಲ್ಲಿ ಚಾಮರವನ್ನು ಹಿಡಿದುಕೊಂಡು ಬಂದು ನಿಲ್ಲುವದಾಯಿತು. ಅಶ್ವಗಳು ಸರ್ವಾಭರಣಭೂಷಿತವಾಗಿ ಹೇಷಾರವವನ್ನು ಮಾಡುವವಾದವು. ಒಂಟಿಗಳು ಢಂಕೆಗಳನ್ನು ಹೇರಿಕೊಂಡು ನಿಲ್ಲುವವಾದವು. ಸ್ವಾರರೂ ಸಿಪಾಯರೂ ಗಂಭೀರವಾದ ಪೋಷಾಕುಗಳಿಂದ ಪ್ರಕಾಶಿಸುತ್ತ ಸಜ್ಜರಾಗಿ ನಿಂತರು. ಸರ್ವಾಲಂಕಾರದಿಂದ ಉನ್ನತವಾದ ಪಲ್ಲಕ್ಕಿಯು ಮೊದಲೇ ಸಿದ್ಧವಾಗಿತ್ತು. ಜನಸಮೂಹವು ಮಹಾಸ್ವಾಮಿಗಳ

---

೩. ಈ ತೀರ್ಥಕ್ಕೆ ತಪೋನಿಧಿಗಳಾದ ಶ್ರೀ ಮುರಿಗೇಂದ್ರಶಿವಯೋಗಿಗಳು ಪ್ರತಿದಿವಸ ಪ್ರಾತಃಸಂಧ್ಯಾಕಾಲಗಳಲ್ಲಿ ದಯ ಮಾಡಿಸುತ್ತಿರುತ್ತಾರೆ.

ಬರುವಿಕೆಯನ್ನೇ ನೋಡುತ್ತಲಿತ್ತು. ಅಷ್ಟರಲ್ಲಿ ಶ್ರೀಗಳವರು ಪ್ರಾತಃಪೂಜೆಯನ್ನು ತೀರಿಸಿಕೊಂಡು ಹೊರಬಿದ್ದರು." ಜಯ ನಮಃ ಪಾರ್ವತೀಪತೇ ಹರಹರ ಮಹಾದೇವ" ಎಂಬ ಜಯಜಯಕಾರದ ರಭಸಿನಲ್ಲಿ ಸ್ವಾಮಿಗಳವರು ಪಲ್ಲಕ್ಕಿಯನ್ನಲಂಕರಿಸಿದರು. ಕೂಡಲೆ ಪಲ್ಲಕ್ಕಿಯು ಎತ್ತಲ್ಪಟ್ಟಿತು. ಸಂಸ್ಥಾನ ನಾಯಕನು ಸೀಟಿಮಾಡಿದಾಕ್ಷಣವೆ ಸ್ವಾರರೆಲ್ಲ ಚಟ್ಟನೆ ಹಾರಿ ತಮ್ಮ ತಮ್ಮ ಕುದುರೆಗಳನ್ನೇರಿದರು. ಶಿಪಾಯರೆಲ್ಲ ತಮ್ಮ ತಮ್ಮ ಕಾರ್ಯಗಳಲ್ಲಿ ಜಾಗರೂಕರಾದರು. ಬಿರುದಾವಳಿಗಳೆಲ್ಲ ಮೆರೆದಾಡಹತ್ತಿದವು. ಅಥಣಿಯ ಬ್ರಾಹ್ಮಣರೆಲ್ಲ ಸ್ವಾಮಿಗಳ ಸನ್ನಿಧಿಯಲ್ಲಿ ವ್ಯಾಸನತೋಳನ್ನು ದಯಮಾಡಿ ಹೊರತೆಗೆಯಬಾರದೆಂದು ಪ್ರಾರ್ಥಿಸಿಕೊಂಡಿದುದರಿಂದಲೂ, ವ್ಯಾಸನತೋಳು ಕಟ್ಟಿದರೆ ದೊಡ್ಡ ದಂಗೆಯಾಗುವ ಸಂಭವವಿರುವದೆಂದು ಬ್ರಾಹ್ಮಣರ ಬಾಲಬಡಿಯುವ ಒಬ್ಬಿಬ್ಬ ಮುಖಂಡ ವೀರಶೈವರು ಸ್ವಾಮಿಗಳಿಗೆ ಅಂಜಿಕೆ ಹಾಕಿದುದರಿಂದಲೂ ಅವರು ವ್ಯಾಸನ ತೋಳು ಹೊರತೆಗೆಯಲು ಅಪ್ಪಣೆ ಕೊಡಲಿಲ್ಲ. ಮೆ||ಕಮೀಶನರ ಸಾಹೇಬ ಬಹದ್ದೂರವರ ಪರವಾನಗಿ ಇದ್ದರೂ ಶ್ರೀಗಳು ಆ ಬ್ರಾಹ್ಮಣರ ಪ್ರಾರ್ಥನೆಯನ್ನು ಪರಾಮರಿಸಿದ್ದು, ಅವರ ಮಹೌದಾರ್ಯವನ್ನು (ಅವರ ಒಳ್ಳೇ ದೊಡ್ಡಸ್ತಿಕೆಯನ್ನು) ವ್ಯಕ್ತಪಡಿಸುತ್ತದೆ. ಆದರೆ ವ್ಯಾಸನ ತೋಳು ಕಟ್ಟದೆ ಇದ್ದದ್ದು ಅಪರಿಮಿತವಾಗಿ ನೆರದಿದ್ದ ಭಕ್ತವರ್ಗದ ನೀರಸತನಕ್ಕೆ ಕಾರಣವಾಯಿತು. ಅಂತೂ ಮೆರವಣಿಗೆಯು ಅಭಿಮಾನದಿಂದಲೂ, ಅಟ್ಟಹಾಸದಿಂದಲೂ, ಮಹಾವೈಭವದಿಂದಲೂ ನಡೆಯಿತು.

ಸುವರ್ಣಕವಚದಿಂದ ಥಳಥಳಿಸುವ ಪಲ್ಲಕ್ಕಿಯು ಬಹು ರಮ್ಯವಾಗಿತ್ತು. ಉನ್ನತವಾದ ದಂಡಿಗೆಯ ಎರಡೂ ತುದಿಗಳು ಬಂಗಾರದ ಸಿಂಹಮುಖಗಳಿಂದ ಗಂಭೀರವಾಗಿ ಒಪ್ಪುತ್ತಿದ್ದವು. ಬಂಗಾರ ಜರದ ಸಾಲುಗೊಂಡೆಗಳಿಂದ ದಂಡಿಗೆಯ ಮಧ್ಯಭಾಗವು ಮುಚ್ಚಿಹೋಗಿತ್ತು. ಮಧ್ಯದಲ್ಲಿ ತೂಗಾಡುವ ರಾಜಗೊಂಡೆಯು ಮಹತ್ತಾದ ಚಿನ್ನದ ಗಂಟೆಯಂತೆ ಒಪ್ಪುತ್ತಿತ್ತು. ಪಲ್ಲಕ್ಕಿಯಲ್ಲಿ ರೇಸಿಮೆಯ ಆಸನಗಳು ಶೋಭಿಸುತ್ತಿದ್ದವು. ಪಲ್ಲಕ್ಕಿಯ ಮೇಲೆ ಸುವರ್ಣದ ಪಂಚಕಲಶಗಳು ಪಂಚಾಚಾರ್ಯರ ಪ್ರತಾಪವನ್ನು ಪ್ರಕಾಶಗೊಳಿಸುತ್ತಿದ್ದವು. ಸಾರಾಂಶ, ಪಲ್ಲಕ್ಕಿಯು ಸುವರ್ಣಮಯವಾಗಿ ಹೋಗಿತ್ತು. ಈ ಅಲಂಕೃತವಾದ ಆಂದೋಳನದಲ್ಲಿ ಭಸ್ಮಭಸಿತ ದಿವ್ಯಾಂಗದಿಂದಲೂ, ಕಾವೀವಸ್ತ್ರಗಳಿಂದಲೂ, ರುದ್ರಾಕ್ಷಮಾಲೆಗಳಿಂದಲೂ, ಮಾಲೆಗಳಿಂದಲೂ, ಶಿವಕಳೆಯ ತೇಜಸ್ಸಿನಿಂದಲೂ ಪ್ರಕಾಶಿಸುವ ಶ್ರೀಮುರುಘರಾಜೇಂದ್ರ ಮಹಾಸ್ವಾಮಿಗಳು ಪ್ರತ್ಯಕ್ಷ ಶಿವಮೂರ್ತಿಯಂತೆ ಕಂಗೊಳಿಸುತ್ತಿದ್ದರು.

ಪಲ್ಲಕ್ಕಿಯ ಹಿಂದೆಯೂ, ಮುಂದೆಯೂ ಭದ್ರತೆಗಾಗಿ ನಾಲ್ಕು ನಾಲ್ಕು ಮಂದಿ ಸ್ವಾರರು, ಬೆಳ್ಳಿಯ ಭಾಲೇಗಣೆಗಳೊಂದಿಗೆ ದಿವ್ಯಾಶ್ವಗಳನ್ನೇರಿ ದಕ್ಷರಾಗಿ ನಡೆದಿದ್ದರು. ಸುತ್ತು ಮುತ್ತು ಬೆಳ್ಳಿಯ ಒರೆಗಳುಳ್ಳ (ಕವಚಗಳುಳ್ಳ) ಖಡ್ಗಗಳನ್ನು ಝುಳುಪಿಸುತ್ತ ಸಂಸ್ಥಾನದ ಸುಮಾರು ೫೦ ಮಂದಿ ಸಿಪಾಯರು ಎಚ್ಚರದಿಂದ ನಡೆದಿದ್ದರು. ಸ್ಥಾನಿಕ ಪೊಲೀಸ ಅಮಲದಾರರು, ತಮ್ಮ ಪೊಲೀಸ ಸಿಪಾಯಿಗಳೊಂದಿಗೆ ಸ್ವಲ್ಪವೂ ಗೊಂದಲವಾಗದಂತೆ ವ್ಯವಸ್ಥಿತವನ್ನಿಡುತ್ತಿದ್ದರು. ದ್ವಿಪಾರ್ಶ್ವಗಳಲ್ಲಿಯೂ, ಬಂಗಾರದ ಪಂಚಕಲಶಗಳಿಂದ ಶೋಭಿಸುವ ಶ್ವೇತಛತ್ರಗಳೂ ಬಂಗಾರದ ಹಿಡಿಕೆಯ ಚಾಮರಗಳೂ ವಿಧವಿಧದ ಬಣ್ಣದ ರೇಶಿಮೆ ವಸ್ತ್ರಗಳಿಂದ ಶೋಭಿಸುವ ಅಪ್ತಾಗಿರಿಗಳೂ ಪಲ್ಲಕ್ಕಿಯನ್ನು ಮುತ್ತಿದವು. ಅಡ್ಡಪಲ್ಲಕ್ಕಿಯ ಮುಂದೆ ಮಕರತೋರಣ, ನಂದೀಧ್ವಜ, ಪಂಚಕಲಶದ ಶ್ವೇತಛತ್ರ, ಪಂಚದೀವಟಿಗೆಗಳೆರಡು, ಮೋರಚಲಗಳೆರಡು, ಪೇಟಪಾವಟಗಳೆರಡು, ಕುದುರೆಯ ಮೇಲಿನ ಡಂಕೆಗಳೆರಡು, ಒಂಟಿಯ ಮೇಲಿನ ನಗಾರಿಗಳೆರಡು, ಕಾವಿಯ ನಿಶಾನೆಗಳೆರಡು, ಮಾಯಾಮರತಾಪು (ಮಾಯಾಮರ್ದನ)ಗಳು ಎರಡು, ಚಂದ್ರವಾದ್ಯಗಳೆರಡು, ಉಡಕವಾದ್ಯಗಳೆರಡು, ಚಾಮರಗಳೆರಡು, ಬಿಚ್‌ಫಿರಂಗಗಳೆರಡು, ಹಸಿರು ಕೆಂಪು ಮತ್ತು ಹಳದೀ ಬಣ್ಣದ ಅಪ್ತಾಗಿರಿಗಳು ಎರಡು,

ಚಂದ್ರಗಾವೀ ಉಡಾಸಗಳು ಎರಡು, ಹಗಲು ದೀವಟಿಗೆಗಳು, ಎರಡು, ಜಾಗಟೆಗಳೆರಡು, ಶಂಖಗಳೆರಡು, ಕಾವೀಝೋಂಡೇಗಳೆರಡು, ಪಟ್ಟಾಪಟ್ಟಿ ಝೋಂಡೆಗಳೆರಡು, ಅಯ್ವತ್ತು ಬೆಳ್ಳಿಯ ಬಡಿಗೆಗಳು, ಅಯ್ವತ್ತು ಹಸಿರು ಬಣ್ಣದ ಬಡಿಗೆಗಳು. ಸೂರ್ಯಪಾನುಗಳೆರಡು ಇವೇ ಮುಂತಾದ ಸಕಲ ಬಿರುದಾವಳಿಗಳು ಮೆರೆಯುತ್ತಲಿದ್ದವು. ಅವುಗಳ ಮುಂದೆ ಭಕ್ತಜನರ ಭಜನೆಯ ತಂಡಗಳು ತಾಳಮೇಳಗಳೊಂದಿಗೆ ಶಿವಸ್ತೋತ್ರವನ್ನು ಹಾಡುತ್ತ ನಡೆದಿದ್ದವು. ಪಲ್ಲಕ್ಕಿಗೆ ಹೊಂದಿ ಶಾಸ್ತ್ರಿಗಳೂ, ಪುರಾಣಿಕರೂ, ಪಂಡಿತರೂ, ಗಣಾಧೀಶ್ವರರೂ, ವೇದಘೋಷವನ್ನು ಉಚ್ಚೈಃಸ್ವರದಿಂದ ಮಾಡುತ್ತ ಸಾಗಿದ್ದರು. ಮಧ್ಯಭಾಗದಲ್ಲಿ ಸಕಲಾಭರಣಗಳಿಂದ ಅಲಂಕೃತವಾದ ಕುದುರೆಗಳು ಕುಣಿಯುತ್ತ ನಡೆದಿದ್ದವು. ಅವುಗಳ ಮುಂದೆ ಉನ್ನತವಾದ ಗಜವು, ಸ್ವಾಮಿಗಳಿಗೆದುರಾಗಿ ಚಾಮರವನ್ನು ಬೀಸುತ್ತ ನಡೆದಿರುವದು. ಸಂಸ್ಥಾನದ ನಾಯಕನು ಆಗಾಗ್ಗೆ ಹುಷಾರ್ ಹುಷಾರ್ ಎಂದು ಗಂಭೀರಸ್ವರದಿಂದ ಸರ್ವರನ್ನು ಎಚ್ಚರಿಸುತ್ತಿದ್ದರು. ಭಟ್ಟಂಗಿಗಳು ಶ್ರೀಗಳವರ ಸ್ತೋತ್ರಗಳನ್ನು ಬಿಡದೇ ಸಾರುತ್ತಿದ್ದರು. ಕಾಳಿ, ಕರ್ಣಿ, ತುತೂರಿ, ನಪೂರಿ, ಸಾಜು, ಕಿರಿಸಾಜು, ಭೇರಿ, ನಗಾರಿ, ಢಕ್ಕೆ, ತಮ್ಮಟಿ, ತಾಸೆ, ಕರಡಿ, ಹಲಿಗೆ, ರಣಹಲಿಗೆ, ಬೇಂಡಬಾಜಾ ಮೊದಲಾದ ಮಂಗಳವಾದ್ಯಗಳಿಂದುಂಟಾದ ರಭಸವೂ, ಪುರಜನರ ಕಲಕಾಲಟವೂ ಒಟ್ಟಾಗಿ ಸೇರಿ, ದಿಗ್ಮಂಡಲವನ್ನು ವ್ಯಾಪಿಸಿತ್ತು. ನಡನಡುವೆ"ಜಯ ನಮಃ ಪಾರ್ವತೀಪತೇ ಹರಹರ ಮಹಾದೇವ" ಎಂಬ ಜಯಜಯಕಾರವು ಒಮ್ಮೇಲೆ ಏಳುತ್ತಿತ್ತು.

ಅಥಣಿಯ ಪೇಟೆಯು ಮೊದಲೇ ಪ್ರಶಸ್ತವಾದದ್ದಿದ್ದು, ರಸ್ತೆಗಳು ವಿಸ್ತೀರ್ಣವಾಗಿರುವವು. ಓಣಿಯುದ್ಧಕ್ಕೂ ಜನಪ್ರವಾಹವು ಸಾಂದ್ರವಾಗಿ ಗಮಿಸುತ್ತಿತ್ತು. ಈ ಜನಪ್ರವಾಹದಲ್ಲಿ ಪಲ್ಲಕ್ಕಿಯು ಸರ್ವಸಮಾರಂಭ ಸಮೇತವಾಗಿ ಸೇರಿಹೋಗುವಂತೆ ಕಾಣುತ್ತಿತ್ತು. ಸ್ವಾಮಿಗಳನ್ನು ನೋಡುವ ಉತ್ಕಂಠೆಯಿಂದ ಜನರು ಕಟ್ಟೆಗಳ ಮೇಲೂ, ಮಹಡಿಗಳ ಮೇಲೂ, ಎತ್ತರವಾದ ಸ್ಥಳಗಳ ಮೇಲೂ ಜಿಗಿದು ನಿಂತುಕೊಂಡಿದ್ದರು. ಮಾಳಿಗೆಗಳ ಮೇಲೆ ಸ್ತ್ರೀಯರು ವಸ್ತ್ರಾಭರಣ ಭೂಷಿತೆಯರಾಗಿ ನಿಂತುಕೊಂಡು ಸ್ವಾಮಿಗಳನ್ನು ಆತುರತೆಯಿಂದ ನೋಡಿ ನೋಡಿ ಅಲ್ಲಿಂದಲೇ ಕೈಮುಗಿಯುತ್ತಿದ್ದರು. ಮಹಾಲುಗಳೂ, ಮೇಲುಪ್ಪರಿಗೆಗಳೂ, ಕಿಡಿಕೆಗಳೂ, ಕುಂಬಿಗಳೂ, ವಾತಾಯನಗಳೂ ಅಂಗನಾಮಣಿಗಳ ಮುಖಕಮಲಗಳಿಂದ ತುಂಬಿಕೊಂಡಿದ್ದವು. ಮಾಳಿಗೆಗಳನ್ನು ನೋಡಿದರೆ ಅಥಣೀಪುರದ ಮನೆಗಳನ್ನೆಲ್ಲ ಹೆಣ್ಣುಮಕ್ಕಳಿಂದಲೇ ಕಟ್ಟಿರುವರೋ ಏನೋ ಎಂಬಂತೆ ಭಾಸವಾಗುವಂತಲಿತ್ತು. ದೂರಿನಿಂದ ಬರುವ ಪಲ್ಲಕ್ಕಿಯನ್ನು ನೋಡಿ ಕೋಮಲೆಯರು ಕಂಕಣಾಭರಣಗಳಿಂದಲಂಕೃತವಾದ ಆನೆ ಸೊಂಡಿಲಿನಂಥ ತಮ್ಮ ಕರಕಮಲಗಳನ್ನು ಮುಂದೆ ಚಾಚಿ "ಅಕ್ಕಾ, ನೋಡು ನೋಡು ಪಲ್ಲಕ್ಕಿ ಬಂತು" ಎಂದು ಮುಂದೊರೆದು ಬಹು, ತವಕದಿಂದ ತೋರಿಸುತ್ತಿದ್ದರು. ಪಲ್ಲಕ್ಕಿಯು ಸಾಗಿಹೋಗುತ್ತದೆಂಬ ಗಡಿಬಿಡಿಯಿಂದ ಕೆಲ ಸುಂದರಾಂಗಿಯರು ತಮ್ಮ ಪೈಝಣಗಳ ಝಣತ್ಕಾರದಿಂದ ಮಾಳಿಗೆಯ ಮೆಟ್ಟಿಲುಗಳನ್ನು ಅವಸರದಿಂದೇರಿ ಓಡಿ ಓಡಿ ಬರುತ್ತಿದ್ದರು. ಗಂಡುಹುಡುಗರಲ್ಲಿ ಒಬ್ಬನು "ಗೆಳೆಯಾ, ಜನಸಮೂಹವನ್ನು ನೋಡಿದಿಯಾ! ಈಚೆಯ ಕಡೆಯಿಂದ ಆಚೆಗೆ ದಾಟಿ ಹೋಗುವದು ಅಸಾಧ್ಯವಾಗಿದೆ. ಇಷ್ಟು ಜನರ ಗದ್ದಲವನ್ನು ನಾನು ಎಂದೂ ನೋಡಿದ್ದಿಲ್ಲ. ಅಗೋ ನೋಡು! ಪಲ್ಲಕ್ಕಿಯ ಮೇಲೂ, ಶ್ವೇತಛತ್ರಗಳ ಮೇಲೂ ಬಂಗಾರದ ಕಲಶಗಳು ಹ್ಯಾಗೆ ಹೊಳೆಯುತ್ತವೆ, ವಾದ್ಯಗಳ ಸಪ್ಪಳವೆಷ್ಟು" ಎಂದು ಅಂದಕೂಡಲೆ ಅದಕ್ಕೆ ಪ್ರತ್ಯುತ್ತರವಾಗಿ "ಗೆಳೆಯಾ ಉತ್ಸವವೆಲ್ಲ ಗರ್ದಿಯಾದರೂ ವ್ಯಾಸನ ತೋಳು ಒಂದು ಇಲ್ಲದ್ದಕ್ಕೆ ಸ್ವಲ್ಪ ಸಪ್ಪಗಾಯಿತು" ಎಂದನು. ನಡುವೆ ಇನ್ನೊಬ್ಬ ಹುಡುಗನು ಮುಂದೊರೆದು "ಮಿತ್ರಾ, ನೀನಂದಂತೆ ಹೋಳಿಗೆಗೆ ಹೂರಣವು ರಗಡಾಗಿದೆ, ಆದರೆ ಬೆಲ್ಲ ಮಾತ್ರ ಕಡಿಮೆಯಾಗಿದೆ, ನೋಡು" ಎಂದನು. ಹೀಗೆ ಹುಡುಗರು ತಮ್ಮತಮ್ಮೊಳಗೆ ಮಾತಾಡುವವರಾಗಿದ್ದರು. ಮತ್ತೊಂದು ಕಡೆಯಲ್ಲಿ "ಸೆಟ್ಟರೇ, ಅಲ್ಲಿ ನೋಡಿರಿ. ಪಲ್ಲಕ್ಕಿಯು

ಬರುತ್ತಲೆ ತಡಕೋಡ ತಮಣಾಚಾರ್ಯರೂ, ಮರೀಗುದ್ದಿ ಮಧ್ವಾಚಾರ್ಯರೂ ಹ್ಯಾಗೆ ಒಳಗೆ ಓಡಿ ಹೋಗುತ್ತಾರೆ ಎಂದೂ, ಅದಕ್ಕೆ ಪ್ರತ್ಯುತ್ತರವಾಗಿ "ಒಳಗೆ ಹೋದ ಬಡಿವಾರದ ಅವರು ಆ ಕಿಡಿಕೆಯೊಳಗಿಂದ ಯಾಕೆ ಹಣಕಿ ನೋಡುತ್ತಾರೆ" ಎಂದೂ, ಇನ್ನೊಬ್ಬರು "ಸೆಟ್ಟರೇ, ಹಾಗಲ್ಲ, ವ್ಯಾಸನ ತೋಳು ಕಟ್ಟಿರುವರೋ ಇಲ್ಲೋ ಎಂಬದನ್ನು ಅವರು ನೋಡುತ್ತಾರೆ" ಎಂದೂ ಸಂಭಾಷಣೆ ನಡೆದಿತ್ತು. ಈ ಪ್ರಕಾರದ ಆನಂದೋದ್ಗಾರದ ಸಂಭಾಷಣೆಗಳು ಅಲ್ಲಲ್ಲಿ ಅನೇಕಾನೇಕ ಪ್ರಕಾರವಾಗಿ ನಡೆದಿದ್ದವು.

ಜಗದ್ಗುರುಗಳ ಅಡ್ಡಪಲ್ಲಕ್ಕಿಯು ಮಹೋತ್ಸವದಿಂದ ಬರುವಾಗ, ಪ್ರತಿಯೊಂದು ಮನೆಯವರು ತುಂಬಿದ ಕೊಡಗಳನ್ನು ತಂದು ತಂದು ಪಲ್ಲಕ್ಕಿಯ ಮುಂದೆ ನೀರು ಹೊಯ್ಯುತ್ತಿದ್ದರು. ಮನೆಮನೆಗೆ ತರುಣಿಯರು ಸ್ನಾನಮಾಡಿ, ನೂತನ ವಸ್ತ್ರಗಳನ್ನುಟ್ಟು, ಆಭರಣಗಳನ್ನಿಟ್ಟು, ಅಷ್ಟಮಿ ಚಂದ್ರನಂತೆ ಸುಂದರವಾದ ಹಣೆಯ ಮೇಲೆ ವಿಭೂತಿ ಕುಂಕುಮಗಳನ್ನು ಧರಿಸಿ, ಕೋಮಲವಾದ ಕರಕಮಲಗಳಲ್ಲಿ ಆರತಿಗಳನ್ನು ಹಿಡಿದುಕೊಂಡು, ಝುಗಝುಗಿಸುತ್ತ ತಮ್ಮ ತಮ್ಮ ಬಾಗಿಲುಗಳಲ್ಲಿ ನಿಂತುಕೊಂಡಿದ್ದು, ಪಲ್ಲಕ್ಕಿಯು ಬರುತ್ತಲೆ ಮಂದಗಮನದಿಂದ ಅಲ್ಲಿಯ ವರೆಗೆ ಗಮಿಸಿ, ಶ್ರೀಗಳವರ ಪಾದಪದ್ಮಂಗಳಿಗೆ ಆರತಿಯನ್ನು ಮಾಡಿ, ಆಶೀರ್ವಾದ ತಕ್ಕೊಂಡು ನಮಸ್ಕರಿಸುತ್ತಿದ್ದರು. ಈ ಪ್ರಕಾರ ಸರ್ವವೈಭವದಿಂದ ಶ್ರೀಗಳವರನ್ನು ಶ್ರೀ ಮುರಿಗೇಂದ್ರಸ್ವಾಮಿಗಳವರ ಮಹತ್ತಾದ ಮಠಕ್ಕೆ ಕರೆದುಕೊಂಡು ಬಂದರು. ಉತ್ಸವವೆಲ್ಲ ಮನೋಹರವಾಗಿದ್ದರೂ, ವ್ಯಾಸನ ತೋಳು ಒಂದು ಇಲ್ಲದ್ದಕ್ಕೆ ಎಷ್ಟೋ ಜನರ ಮನಸ್ಸಿಗೆ, ಮದುಮಗಳನ್ನು ಬಿಟ್ಟು ಮದುವೆಯನ್ನು ಮಾಡಿದಂತಾಯಿತೆಂದು ಹೇಳಬಹುದು.

ರಾ.ಬ॥ ಅಥಣಿಗೆ ಬಂದದ್ದು

ಈ ಅಡ್ಡಪಲ್ಲಕ್ಕಿಯ ಮಹೋತ್ಸವದಿಂದ ಅಥಣಿಯ ಊರಿಗೆ ಊರೇ ಸಂತುಷ್ಟರಾಗಿದ್ದರೂ, ಹಾರುವರ ಹಿಂಡಿಗೆ ಮಾತ್ರ ಸಮಾಧಾನವೆನಿಸಲಿಲ್ಲ. ಅವರ ಪ್ರಾರ್ಥನೆಯನ್ನು ಮನ್ನಿಸಿ ತೋಳು ಕಟ್ಟುವದನ್ನು ಬಿಟ್ಟಿದ್ದರೂ ಕೂಡ, ಅವರ ಹೃದಯ ಕಟಾಹದಲ್ಲಿ ಹಾಲಾಹಲವು ಕುದಿಯುತ್ತಲೇ ಇತ್ತು. ಈ ಅಡ್ಡಪಲ್ಲಕ್ಕಿಯೂ, ಪಂಚಕಲಶಗಳೂ, ಶ್ವೇತಛತ್ರ ಮೊದಲಾದ ಬಿರುದಾವಳಿಗಳೂ, ಮಂಗಳವಾದ್ಯಗಳ ರಭಸವೂ, ವೀರಶೈವರ ಅಟ್ಟಹಾಸವೂ, ಆಡಂಬರವೂ ಅವರಿಗೆ ಸಹನವಾಗಲಿಲ್ಲ. ಆದರೂ ವ್ಯಾಸನ ತೋಳಿನ ಪ್ರಸ್ತಾಪವಿಲ್ಲದ್ದಕ್ಕೆ ಅವರಿಗೆ ದುಃಖದೊಳಗೇ ಸುಖವೆನಿಸಿತೆಂದು ಹೇಳಬಹುದು. ಆದರೆ ಇವರ ಹೃದಯದೊಳಗಿನ ವಿಷವು ಒಳಗೆ ಕೂಡ್ರಲಿಲ್ಲ. ಕುದಿಯುತ್ತಿದ್ದ ವಿಷವು ಹೊಟ್ಟೆಕಿಚ್ಚೆಂಬ ಪ್ರಜ್ವಲವಾದ ಜ್ವಾಲೆಯಿಂದ ಉಕ್ಕೇರಿ ಹೊರಬೀಳಹತ್ತಿತು. ಅವರು ಬೀದಿಬೀದಿಗಳಲ್ಲಿ ವೀರಶೈವ ಮುಖಂಡರನ್ನು ಕಂಡು, "ಏನು ಸೆಟ್ಟರೆ! ನಿಮ್ಮ ವ್ಯಾಸನತೋಳು ಎಲ್ಲಿ ಕೂತಿತು?" ಎಂದು ಹಂಗಿಸಹತ್ತಿದರು. ಊರಲ್ಲೆಲ್ಲ ಇದೇ ಮಾತು. ಇದೇ ಪ್ರಸ್ತಾಪ. ಇದೇ ಗೊಂದಲ. ಎಲ್ಲ ಅಂಗಡಿಗಳಲ್ಲಿ, ಕಟ್ಟೆಗಳ ಮೇಲೆ, ಬೀದಿಬೀದಿಗಳಲ್ಲಿ ಕೂಡ ಇದರ ವ್ಯತಿರಿಕ್ತ ಇನ್ನೊಂದು ಮಾತಿಲ್ಲ. ಈ ಹಾರುವರ ಹಂಗಿನ ನುಡಿಗಳಿಗೆ ನೊಂದು ವೀರಶೈವರು ತಮ್ಮೊಳಗೆ ಆಲೋಚಿಸಿ, ಧೀರೋದಾತ್ತ ರಾ.ಬ॥ರುದ್ರಗೌಡ ಸಾಹೇಬರನ್ನು ಹೇಗಾದರೂ ಮಾಡಿ ಕರೆದುಕೊಂಡು ಬಂದರೆ ಈ ಕೆಲಸವಾಗುತ್ತದೆಂತಲೂ, ಹಾರುವರ ಸದ್ದನ್ನಡಗಿಸಲಿಕ್ಕೆ ಇವರೇ ಮದ್ದು ಎಂತಲೂ, ಇವರ ಹೊರತು ಇನ್ನಾರಿಂದಲೂ ಈ ಕೆಲಸವಾಗದೆಂದೂ ಮಾತಾಡಿಕೊಂಡು ಕೆಲಮುಖಂಡರು ರಾವಬಹದ್ದೂರರವರನ್ನು ಕರೆಯಲಿಕ್ಕೆ ಬೆಳಗಾವಿಗೆ ಬಂದದ್ದಲ್ಲದೆ, ಶ್ರೀಗಳವರ ಸನ್ನಿಧಿಯ ಅಪ್ಪಣೆಯ ಮೇರೆಗೆ ಒಬ್ಬ ಕಾರಭಾರಿಯೂ ಬರುವವನಾದನು. ಇದೇ ಸಮಯಕ್ಕೆ ಅಥಣೀ ತಾಲೂಕ ಇನಾಮಗ್ರಾಮ ಅನಂತಪುರದ ಒಂದು ಬನಾವಟ ಖಟ್ಲೆ ನಡೆದದ್ದು, ಅದರ ಫಿರ್ಯಾದಿಯ ಅಶಕ್ತತೆಯ ಮೂಲಕ ಆತನ ಜಬಾನಿಯನ್ನು ಅಲ್ಲಿಗೆ ಹೋಗಿಯೇ ತೆಗೆದುಕೊಳ್ಳುವ ಜರೂರಿಯಿತ್ತು. ರಾ.ಬ॥ರವರು ಶ್ರೀಗಳವರ

ಆಜ್ಞೆಯನ್ನು ಶಿರಸಾ ಮನ್ನಿಸಿ, ಮೆ||ಕಲೇಕ್ಟರ ಸಾಹೇಬರವರ ಅಪ್ಪಣೆ ಪಡೆದು, ತಾರೀಖು ೨೨ನೇ ಜೂನ ಸನ್ ೧೯೧೦ನೇ ಇಸವಿಯ ದಿವಸ ಮೇಲಗಾಡಿಯಿಂದ ತಮ್ಮ ಆಫೀಸ ಸಹಿತ ಅಥಣಿಗೆ ಹೊರಟು, ಆ ದಿವಸ ಸೇಡಬಾಳ ಬಂಗಲೆಯಲ್ಲಿಳಿದು, ತಾರೀಖು ೨೩ನೇ ಜೂನ ಸನ್ ೧೯೧೦ನೇ ಇಸವಿಯ ಮುಂಜಾನೆ ಆರು ಘಂಟೆಗೆ ಅಲ್ಲಿಂದ ಹೊರಟು, ಹತ್ತು ಘಂಟೆಯೊಳಗಾಗಿ ಅಥಣಿಯನ್ನು ಅಲಂಕರಿಸಿದರು.

ನಮ್ಮ ರಾ:ಬ||ರುದ್ರಗೌಡ ಸಾಹೇಬರನ್ನು ಕರೆಯಲಿಕ್ಕೆ ಹೋಗಿರುವರೆಂತಲೂ, ಅವರು ಬಂದಕೂಡಲೆ ವ್ಯಾಸನ ತೋಳು ಕಟ್ಟಿಸುವರೆಂತಲೂ, ಅಲ್ಲಿಂದ ಈ ಹಾರುವರ ಹಾರಾಟವು ತಗ್ಗುತ್ತದೆಂತಲೂ ಅಥಣಿಯಲ್ಲಿಯ ಜನರು, ಹರುಷದಿಂದಲೂ, ಹುರುಪಿನಿಂದಲೂ ಮಾತಾಡುತ್ತ ಸಾಹೇಬರ ಹಾದಿಯನ್ನೇ ನೋಡುತ್ತಿದ್ದರು. ರಾ.ಬ||ಅರಟಾಳ ಸಾಹೇಬರು ಬಂದು ವ್ಯಾಸನತೋಳು ಕಟ್ಟಿಸುವರೆಂಬ ಸುದ್ದಿಯು ಸುತ್ತಲೂ ಹಬ್ಬಿ, ಸುತ್ತ ಹಳ್ಳಿಗಳ ಜನರಾದರೂ ಅವರ ಆಗಮವನ್ನೇ ನಿರೀಕ್ಷಿಸುತ್ತಿದ್ದರು. ಬ್ರಾಹ್ಮಣರು ಮಾತ್ರ ಬೆದರಿ ಇದಕ್ಕೇನಾದರೊಂದು ಹಂಚಿಕೆಯನ್ನು ತೆಗೆಯಬೇಕೆಂದೂ, ಈ ರುದ್ರಮೂರ್ತಿಯ ರೌದ್ರಾಕಾರದ ಮುಂದೆ ನಮ್ಮ ಹಂಚಿಕೆಗಳು ಎಲ್ಲಿ ಹಾರಿ ಹೋಗುತ್ತವೋ ಎಂದು, ತಮ್ಮ ತಮ್ಮೊಳಗೆ ಆಲೋಚಿಸುತ್ತಿದ್ದರು.

ಹತ್ತುಗಂಟೆಯ ಸಮಯ. ರಾವ ಬ||ರವರ ಟಾಂಗೆಯು ಅಥಣಿಗೆ ಅಭಿಮುಖವಾಗಿ ಓಡಿ ಬರುತ್ತಲಿತ್ತು. ಟಾಂಗೆಯಲ್ಲಿ ಶ್ರೀ ರುದ್ರಮೂರ್ತಿಯ ಪ್ರಸನ್ನಮುಖಮಂಡಲವು ಪ್ರಕಾಶಿಸುತ್ತಲಿತ್ತು. ಹಾ ಅನ್ನವಷ್ಟರಲ್ಲಿ ಟಾಂಗೆಯು ಊರ ಸಮೀಪಕ್ಕೆ ಬಂತು. ಮಾರ್ಗಪ್ರತೀಕ್ಷೆ ಮಾಡುತ್ತ ನಿಂತ ಕೆಲ ವೀರಶೈವ ಮುಖಂಡರೂ, ಸರಕಾರಿಯ ಅಧಿಕಾರಿಗಳೂ, ಮ್ಯುನಸೀಪಾಲ್ಟಿಯ ಅಧಿಕಾರಿಗಳೂ ಒಮ್ಮೇಲೆ ಶರಣು ಮಾಡಿದರು. ಅವರೊಡನೆ ಸರ್ವಸಮಾಚಾರವನ್ನು ಕೇಳುತ್ತ ಅರಟಾಳ ಸಾಹೇಬರವರ ಟಾಂಗೆಯು ಮೆಲ್ಲಗೆ ಬಂಗಲೆಯ ಕಡೆಗೆ ಸಾಗಹತ್ತಿತು. ಅಲ್ಲಿಂದ ಹಾಗೆಯೇ ಅವರಿಗೆ ಅಪ್ಪಣೆಕೊಟ್ಟ ಮಾತ್ರವೆ ಕುದುರೆಗಳು ಓಡುತ್ತ ಟಾಂಗೆಯನ್ನು ಅಥಣಿಯ ಬಹುಭವ್ಯವಾದ ಬಂಗಲೆಯ ಮುಂದೆ ತಂದು ನಿಲ್ಲಿಸಿದವು. ಅಲ್ಲಿಯೂ ಎಷ್ಟೋ ವೀರಶೈವ ಜನರು ದರ್ಶನಾತುರರಾಗಿ ನಿಂತಿದ್ದರು. ಸಾಹೇಬರ ಮುಖಾವಲೋಕನ ಮಾತ್ರವೆ ಅವರೆಲ್ಲರ ಮುಖಕಮಲಗಳು ಅರಳಿದವು. ಪ್ರೀತಿಯಿಂದ ಅವರೆಲ್ಲರ ಕೂಡ ಮಾತಾಡಿ ಅಪ್ಪಣೆಕೊಟ್ಟು ಸ್ನಾನಕ್ಕೆ ಹೋದರು. ಭೋಜನವಾದ ತರುವಾಯ ರಾ.ಸಾ||ಮಾಮಲೇದಾರ ಮೊದಲಾದವರು ಬಂದು ಸಾಹೇಬರ ಭೆಟ್ಟಿಯಾಗಿ ಹೋದರು. ಅಲ್ಲಿಂದ ಲಿಂಗಾಯತ ಸೆಟ್ಟಿ ಸಾವಕಾರ ಮೊದಲಾದವರು ತಂಡತಂಡಾಗಿ ಬಂದು ಇವರ ದರ್ಶನ ತೆಗೆದುಕೊಳ್ಳಹತ್ತಿದರು. ಸಾಹೇಬರು ಬಂದ ಸುದ್ದಿಯು ಕ್ಷಣಮಾತ್ರದಲ್ಲಿ ಊರೊಳಗೆ ಹಬ್ಬಿ ಬ್ರಾಹ್ಮಣರ ಹೊರತು ಎಲ್ಲರೂ ಸಂತುಷ್ಟರಾದರು. ಉತ್ಸವ ನೋಡಿ ಊರಿಗೆ ಹೋಗಿದ್ದ ಸುತ್ತಹಳ್ಳಿಗಳ ಜನರು, ಸಾಹೇಬರು ಬಂದ ಸುದ್ದಿಯನ್ನು ಕೇಳಿ ಪುನಃ ಬಂದು ಅಥಣಿಯನ್ನು ತುಂಬಿದರು. ಸಾಹೇಬರು ಬಂದ ವಾರ್ತೆಯನ್ನು ತಮ್ಮ ಕಾರಭಾರಿಗಳ ಮುಖಾಂತರ ಕೇಳಿ ಶ್ರೀ ಜಗದ್ಗುರುಗಳೂ ಸಂತೋಷಪಟ್ಟರು.

ಶ್ರೀಗಳ ದರ್ಶನವೂ ಸಮಾರಂಭದ ಸಭೆಯೂ

ಮಧ್ಯಾಹ್ನದ ಮೂರು ಘಂಟೆಯ ಸಮಯಕ್ಕೆ ಸಾಹೇಬರು, ಶ್ರೀಗಳವರ ಪಾದದರ್ಶನಕ್ಕೆ ಬರುತ್ತಾರೆಂಬ ಸುದ್ದಿಯು ಊರಲ್ಲೆಲ್ಲ ಹಬ್ಬಿತು. ಆ ಸಮಯಕ್ಕೆ ಮಠದಲ್ಲಿ ಸಭೆಯನ್ನು ಸೇರಿಸಬೇಕಾಗಿ ಗೊತ್ತಾಗಿ ಆ ಪ್ರಕಾರ ಸಮಯಕ್ಕೆ ಸರಿಯಾಗಿ ಸರ್ವಸಿದ್ಧತೆಯಾಯಿತು. ಸಾಹೇಬರನ್ನು ಕರೆಯಲಿಕ್ಕೆ ಬಂಗಲೆಗೆ ಟಾಂಗೆ ಹೋಯಿತು.

ಕೂಡಲೆ ದಿವ್ಯಪೋಷಾಕಿನಿಂದ ಝುಗಝುಗಿಸುತ್ತ ಸಾಹೇಬರ ಸ್ವಾರಿಯು ಮಠದ ಸಮೀಪಕ್ಕೆ ಬರುತ್ತಲೆ, ಸಭೆಯಲ್ಲಿ 'ಸಾಹೇಬರು ಬಂದರು; ಸಾಹೇಬರು ಬಂದರು' ಎಂಬ ಗಡಿಬಿಡಿಯು ನಡೆಯಿತು. ಅಷ್ಟರಲ್ಲಿ ಸ್ವಾರಿಯು ಒಳಗೆ ಪ್ರವೇಶಿಸಿತು. ಸಭೆಯ ಸ್ಥಳವನ್ನು ಮಠದ ವಿಸ್ತಾರವಾದ ಚೌಸಪ್ಪೆಯಲ್ಲಿ ರಚಿಸಿದ್ದರು. ಮೊದಲೇ ಭವ್ಯವೂ ರಮ್ಯವೂ ಆದ ಮಠವು, ಅದನ್ನು ಶೃಂಗರಿಸಿದ ಬಳಿಕ ಕೇಳುವದೇನು!ಸುಂದರ ಸ್ತ್ರೀಗೆ ನವರತ್ನಖಚಿತವಾದ ಸುವರ್ಣದ ಆಭರಣಗಳನ್ನಿಡಿಸಿದಂತೆ ಬಲು ರಮಣೀಯವಾಗಿತ್ತು. ಎತ್ತರವಾದ ಗರುಡಗಂಬಗಳೂ, ಮೇಲಂತಸ್ತೂ ನೋಟಕ್ಕೆ ಬಲು ಶೋಭಿಸುತ್ತಿದ್ದವು. ಕೆಳಗೆಲ್ಲ ಕಲ್ಲ ಪರಸು. ಚೌಸಪ್ಪೆಯು ಚಂದ್ರಶಾಲೆಯಂತೆ ಮನೋಹರವಾಗಿತ್ತು. ಮಧ್ಯಭಾಗದಲ್ಲಿ ಎತ್ತರವಾದ ಮಂಟಪವನ್ನು ಕಟ್ಟಿ ಚಿತ್ರವಿಚಿತ್ರವಾದ ಛತ್ತು ಹೊಡೆದು ಹಂಡೆ, ಗ್ಲಾಸ, ಗುಂಡು, ಗುಳಾಪು, ಝುಮರಗಳನ್ನು ತೂಗಬಿಟ್ಟಿದ್ದರು. ಛತ್ತಿನ ಸುತ್ತಲು ಕೆಂಪು ಮಲಮಲಿಯ ಗೋಟುಗಳನ್ನು ಕಟ್ಟಿದ್ದರು. ಎತ್ತರವಾದ ಸ್ತಂಭಗಳು ವಿಧವಿಧ ಬಣ್ಣಧ ಕಾಗದಗಳಿಂದಲೂ, ವಸ್ತ್ರಗಳಿಂದಲೂ ಆಚ್ಛಾದಿತವಾಗಿದ್ದವು. ಗೋಡೆಗಳು ಬಣ್ಣಗಳಿಂದಲೂ, ಸುಳುವುಗಳಿಂದಲೂ, ಗೊಂಬೆಗಳಿಂದಲೂ ರಂಜಿಸುತ್ತಿದ್ದವು. ಶ್ರೀಗಳವರು ಕೂಡ್ರುವ ಮುಖ್ಯ ಮಂಟಪವು ಪಶ್ಚಿಮಾಭಿಮುಖವಾಗಿ ರಚಿಸಲ್ಪಟ್ಟಿತ್ತು ಜಾಣರಾದ ಶಿಲ್ಪಿಗರು ಆ ಮಂಟಪವನ್ನು ಬಣ್ಣದ ಹಾಗು ಜರತಾರಿಯ ಕಾಗದಗಳಿಂದಲೂ, ಡಾಕುಗಳಿಂದಲೂ ಅವರ್ಣನೀಯವಾಗಿ ಶೃಂಗರಿಸಿದ್ದರು. ಆ ಮಂಟಪದ ಮಧ್ಯಭಾಗದಲ್ಲಿ ಸ್ವಾಮಿಗಳ ಸಿಂಹಾಸನವು, ರೇಸಿಮೆ, ಕಿನಕಾಪು, ಕುತ್ತನಿ, ಜರತಾರೀ ವಸ್ತ್ರಗಳಿಂದಲೂ, ಜರದ ಗೋಟು ಸುಳುವುಗಳಿಂದಲೂ, ಹೇಳಿಕೂಡದಷ್ಟು ಚಂದವಾಗಿತ್ತು. ಸಿಂಹಾಸನಕ್ಕೇರುವ ಪಾವಟಿಗೆಗಳಿಗೆ ಕುತನಿಯ ಮೆತ್ತನ್ನ ಗಾದಿಗಳನ್ನು ಹಾಕಿ, ಮೇಲೆ ಜರದ ಬುಟಿಗಳುಳ್ಳ ಪೀತಾಂಬರಗಳನ್ನು ಹೊದಿಸಿದ್ದರು. ಹಿಂಬದಿಗೆ ಎದ್ದು ತೋರುವ ಬಂಗಾರ ಬಣ್ಣದ ಪ್ರಭಾವಳಿಯು ಪ್ರೇಕ್ಷಕರ ನೇತ್ರಗಳಿಗೆ ಮಿಂಚು ಹೊಡೆಯುತ್ತಲಿತ್ತು. ಸಿಂಹಾಸನದ ಎಡಬಲಕ್ಕೆ ಸಾಕಷ್ಟು ಜರತಾರಿಯ ಗಿರ್ದೆಗಳು ಇಡಲ್ಪಟ್ಟಿದ್ದವು. ಸಾರಾಂಶ, ಮಂಟಪವೂ, ಸಿಂಹಾಸನವೂ ಶೃಂಗಾರದಲ್ಲಿ ಒಂದನ್ನೊಂದು ಪ್ರತಿಸ್ಪರ್ಧಿಸುವಂತೆ ಇದ್ದವು. ಸಾಹೇಬರು ಸಭಾಪ್ರವೇಶ ಮಾಡಿದ ಮಾತ್ರವೆ ಶ್ರೀಗಳವರು ಸಹಿತವಾಗಿ ಸಭಿಕರೆಲ್ಲರು ಚಪ್ಪಾಳೆಗಳನ್ನು ಹೊಡೆದು, ತಮಗಾದ ಆನಂದವನ್ನು ಪ್ರಕಟಮಾಡಿದರು. ದಿವ್ಯವಾದ ಸಿಂಹಾಸನದ ಮೇಲೆ ಶೋಭಿಸುತ್ತಿರುವ ಶ್ರೀಗಳವರ ಪಾದಪದ್ಮಂಗಳಿಗೆ ಸಾಹೇಬರು ೩ ಸಾರೆ ಶಿರಸಾಷ್ಟಾಂಗ ದೀರ್ಘದಂಡ ಪ್ರಣಾಮಗಳನ್ನು ಮಾಡಿ, ಕಾಣಿಕೆಯ ಹಣದಿಂದಲೂ, ಹಣ್ಣು ಹಂಪಲಗಳಿಂದಲೂ ತುಂಬಿದ ಬೆಳ್ಳಿಯ ತಾಟುಗಳನ್ನು ಪಾದಸನ್ನಿಧಿಯಲ್ಲಿರಿಸಿ, ಅವರ ಅಜ್ಞಾನುಸಾರವಾಗಿ ಕೂತುಕೊಂಡರು. ಸ್ವಾಮಿಗಳ ಎಡಭಾಗದಲ್ಲಿ ವಿರಕ್ತವರ್ಯರೂ, ಪಟ್ಟದಾರ್ಯರೂ, ಚರಮೂರ್ತಿಗಳೂ, ಗಣಾಧೀಶ್ವರರೂ ವಿರಾಜಮಾನರಾಗಿದ್ದರು. ಬಲಭಾಗದಲ್ಲಿ ಪಂಡಿತರೂ, ಪುರಾಣಿಕರೂ, ಶಾಸ್ತ್ರಿಗಳೂ ಒಪ್ಪುತ್ತಿದ್ದರು. ಮುಂಭಾಗದಲ್ಲಿ ಸೆಟ್ಟರು, ಸಾವಕಾರರು ಮೊದಲಾದ ಮುಖಂಡ ಮಂಡಳಿಯು ಮಂಡಿಸಿತ್ತು. ಅದರ ಹಿಂದೆ ಸುತ್ತಲೂ ಪ್ರೇಕ್ಷಕರಿಂದ ಸಭೆಯು ತುಂಬಿ ತುಳುಕುತ್ತಿತ್ತು. ಚೌಸಪ್ಪೆಯ ಎಡಭಾಗದಲ್ಲಿ ಸಂಸ್ಥಾನದ ಕಚೇರಿಯು ಉಚಿತವಾದ ಆಸನಗಳಿಂದಲೂ, ಗಾದಿ, ಟಕ್ಕೆ, ಲೋಡುಗಳಿಂದಲೂ, ಪುಸ್ತಕ ಪೆಟ್ಟಿಗೆ ಡೆಸ್ಕುಗಳಿಂದಲೂ, ತಮ್ಮ ತಮ್ಮ ಕಾರ್ಯಾಸಕ್ತರಾದ ಕಾರಕೂನರಿಂದಲೂ ಒಪ್ಪುತ್ತಲಿತ್ತು. ಸಂಸ್ಥಾನದ ವ್ಯವಸ್ಥಾಪಕರೂ, ಕಾರಭಾರಿಗಳೂ, ಕಾರ್ಯಾರ್ಥವಾಗಿ ಸದ್ದುಮಾಡದೆ ಸಭೆಯಲ್ಲಿ ಅತ್ತಿತ್ತ ಚರಿಸುತ್ತಿದ್ದರು. ಸಾಹೇಬರು ಕೂತಾಕ್ಷಣವೆ ಸಭೆಯು ಶಾಂತವಾಯಿತು.

ಈ ಹೊತ್ತಿನ ಸಾಹೇಬರ ಪೋಷಾಕನ್ನು ಇಲ್ಲಿ ಯಥಾಸ್ಥಿತವಾಗಿ ಬಣ್ಣಿಸುವದು ಯೋಗ್ಯ ತೋರುತ್ತದೆ. ಇವರು ಸಭೆಗೆ ಬರುವಾಗ ದಿನದಂತೆ ತಮ್ಮ ದರ್ಬಾರೀ ಪೋಷಾಕು ಧರಿಸದೆ, ಶುಭ್ರವಾದ ನಾಗಪುರೀ ಕರ್ವತಕಾರೀ

ದೋತರವನ್ನುಟ್ಟು, ಕರೇ ಬನಾತಿನ ನಿಲುಪಂಗಿಯನ್ನು ತೊಟ್ಟು, ಮೇಲೆ ಜರತಾರೀ ಉಪ್ಪರಣಿಯನ್ನು(ಶಲ್ಯ)ಯನ್ನು ಹೊತ್ತು, ತಲೆಗೆ ಬಿಳೇ ಜರದ ರುಮಾಲನ್ನು ಸುತ್ತಿದ್ದರು. ಮೊದಲೇ ಇವರ ಮೈಕಟ್ಟು ಬಲುಮಾಟವುಳ್ಳದ್ದು. ಅದರ ಮೇಲೆ ದಿವ್ಯವಾದ ರಾಜಪೋಷಾಕು. ಅಲ್ಲಿಂದ ಕೇಳುವದೇನು! ಇವರು ಈ ಮನೋಹರವಾದ ಪೋಷಾಕಿನಿಂದ ಸಭಾಪ್ರವೇಶ ಮಾಡಿದಾಕ್ಷಣವೆ ಪ್ರತಿಯೊಬ್ಬರಿಗೂ ಇವರನ್ನು ನೋಡಿ ನಮ್ಮ ದೇಶೀರಾಜರ ಪರಿಸ್ಥಿತಿಯು ಸ್ಮರಣಪಥಕ್ಕೆ ಬಂದು, ರಮಣೀಯವಾದ ರಾಜಸಭೆಯಲ್ಲಿ ಕ್ಷಣಮಾತ್ರ ಭೋಜರಾಜನನ್ನೋ ವಿಕ್ರಮರಾಜನನ್ನೋ ನೋಡಿದಂತೆ ಭಾಸವಾಯಿತು.

ಆರಂಭಕ್ಕೆ ಶ್ರೀಗಳವರು ಅಪ್ಪಣೆಕೊಡಿಸಿದ ಮೇರೆಗೆ, ಕೋಹಳ್ಳಿಯ ಪಟ್ಟದಾರ್ಯರು, ಈ ನಮ್ಮ ವೀರಶೈವರಾಷ್ಟ್ರಕ್ಕೆ ಕಿರೀಟದೋಪಾದಿ ಶೋಭಿಸುವವರೂ, ಲಿಂಗಾಯತ ಫಂಡಿನ ಉತ್ಪಾದಕರೂ, ಲಿಂಗಾಯತರ ಕಟ್ಟಭಿಮಾನಿಗಳೂ, ಅಘಟಿತ ಘಟನಾ ಚಾತುರ್ಯವುಳ್ಳವರೂ, ಅಸಾಧಾರಣ ಬುದ್ಧಿಸಾಮರ್ಥ್ಯವುಳ್ಳವರೂ, ಬೆಳಗಾವ ಜಿಲ್ಲೆಯ ಡಿ.ಡಿ. ಕಲೆಕ್ಟರರೂ, ಅನೇಕತರದ ಅನುಭವ ಶಾಲಿಗಳೂ ಆದ ರಾ.ಬ॥ಅರಟಾಳ ರುದ್ರಗೌಡ ಸಾಹೇಬರವರು ಈ ಹೊತ್ತು ದರ್ಶನಕೊಟ್ಟದ್ದರಿಂದ ನಮಗೆ ಅಪಾರವಾದ ಆನಂದವಾಗಿರುವದೆಂದೂ, ಇವರ ದರ್ಶನವಾದ ಈ ದಿನವೇ ಸುದಿನವೆಂದೂ, ಇವರಿಗೆ ಆಯುರಾರೋಗ್ಯ ಭಾಗ್ಯಸಂತತಿಗಳು ಅಭಿವರ್ಧಿಸಲೆಂದೂ, ಇವರ ಆಯುರ್ವೃದ್ಧಿಯೇ ನಮ್ಮ ವೀರಶೈವರ ಅಭಿವೃದ್ಧಿಯೆಂದೂ ಮಾತಾಡಿದರು. ಇದಕ್ಕೆ ರಾ.ಬ॥ರವರು "ನ ಗುರೋರಧಿಕಂ" ಎಂಬ ಶಾಸ್ತ್ರವಚನದಂತೆ ನಮಗೆ ಗುರುಪಾದ ದರ್ಶನಲಾಭವೇ ಅಧಿಕವಾದುದರಿಂದ ಭಕ್ತರಾದ ನಾವು ಗುರುಸನ್ನಿಧಿಯ ಪಾದದರ್ಶನಕ್ಕೆ ಬರುವದು ಸದ್ಧರ್ಮವೆಂದೂ, ಗುರು ದಯವಾದ ಹೊರತು ನಮಗೆ ಗತಿಯಿಲ್ಲೆಂದೂ, ನಮ್ಮಿಂದ ಆಗಿಹೋದ ಮತ್ತು ಆಗತಕ್ಕ ಕಾರ್ಯಗಳಿಗೆ ಗುರುಗಳ ಅನುಗ್ರಹವೇ ಕಾರಣವೆಂದೂ ಸ್ವಲ್ಪಮಟ್ಟಿಗೆ ಭಾಷಣ ಮಾಡಿದರು. ಬಳಿಕ ಶ್ರೀಗಳು ಸ್ವತಃ ಸಭೆಯ ಜನರನ್ನು ಕುರಿತು "ನೋಡಿರಿ ರಾ.ಬ॥ಅರಟಾಳ ಸಾಹೇಬರವರು ತಮ್ಮ ಆಫೀಸಿನ ಕೆಲಸದ ಹೊರತು ಇತರ ವೇಳೆಯಲ್ಲಿ ಧಾರ್ಮಿಕ ಗ್ರಂಥಗಳನ್ನು ಓದುವದರಲ್ಲಿಯೂ, ಆ ಸಂಬಂಧಿಯ ಗ್ರಂಥಗಳನ್ನು ಬರೆಯುವದರಲ್ಲಿಯೂ ಕಳೆದು, ನಮ್ಮ ಸಮಾಜಕ್ಕೂ, ಲೋಕಕ್ಕೂ ಮಹೋಪಕಾರಿಗಳಾಗಿದ್ದಾರೆ. ಪ್ರಚಂಡವಾದ ಲಿಂಗಾಯತ ಫಂಡು ಮಾಡಿ ನಮ್ಮ ಜನರಲ್ಲಿ ಇಂಗ್ಲೀಷ ವಿದ್ಯಾಪ್ರಚಾರ ಮಾಡಿದ ಸಂಗತಿಯು ನಿಮ್ಮೆಲ್ಲರಿಗೆ ಗೊತ್ತೇ ಅದೆ. ಸರಕಾರೀ ಅಧಿಕಾರಿಗಳು ಈ ಪ್ರಕಾರ ಸಮಾಜಹಿತದ ಕೆಲಸಗಳನ್ನು ಮಾಡುವದು ತೀರ ದುರ್ಲಭ. ಈ ಪುಣ್ಯಪುರುಷರು ನಮ್ಮ ಸಮಾಜವನ್ನು ಉದ್ಧರಿಸಲಿಕ್ಕೇ ಉದಸಿರುವರೆಂದು ಹೇಳಲು ಅಡ್ಡಿಯಿಲ್ಲ" ಎಂಬದಾಗಿ ಭಾಷಣಮಾಡಿದರು. ಶ್ರೀಗಳವರ ಭಾಷಣಕ್ಕೂ, ಸಾಹೇಬರ ಭಾಷಣಕ್ಕೂ ಸಭಾಸದರು ಸಂತೋಷಭರಿತರಾಗಿ ಚಪ್ಪಾಳೆಗಳನ್ನು ಹೊಡೆದರು. ಅನಂತರ ಸಾಹೇಬರು ಶ್ರೀಗಳವರನ್ನು ಕುರಿತು "ಸ್ವಾಮಿಗಳೇ, ನಮ್ಮ ಕಿತ್ತೂರ ಶಾಲಾಮಾಸ್ತರರಾದ ಪಾರಿಶವಾಡದ ಬಸವಾರ್ಯರು, ಸನ್ನಿಧಿಯ ಪಾದಸ್ತವನವನ್ನು ಕುರಿತು 'ಶ್ರೀ ಮುರುಘೇಂದ್ರಾಷ್ಟಕ'ವೆಂಬ ಕೆಲವು ಕವಿತೆಗಳನ್ನು ರಚಿಸಿ ತಂದಿದ್ದಾರೆ. ಸಭಿಕರೆಲ್ಲರು ಕೇಳಿ ಆನಂದವನ್ನು ಹೊಂದುವ ಉದ್ದಿಶ್ಯವಾಗಿ ಈ ಸಭೆಯಲ್ಲಿ ಅನ್ನಲು ಅಪ್ಪಣೆಯನ್ನು ಕೊಡಿಸುವದಾಗಬೇಕೆಂ"ದು ಬಿನ್ನವಿಸಲು, ಆ ಪ್ರಕಾರ ಆಜ್ಞೆಯಾಯಿತು. ಕೂಡಲೆ ಬಸವಾರ್ಯರು ಆ ಪದ್ಯಗಳನ್ನು ಸುಸ್ವರದಿಂದಲೂ, ಸುವಾಚ್ಯದಿಂದಲೂ ಅಂದರು. ಮನೋಹರವಾದ ಕವಿತೆಗಳನ್ನು ಕೇಳಿ ಸರ್ವರು ಸಂತೋಷ ಹೊಂದಿದರು. ಭಕ್ತಾಗ್ರಗಣ್ಯರು ಆ ಅಷ್ಟಕವನ್ನು ಕೂಡಲೆ ಛಾಪಿಸಿ ತರಿಸಿ ಎಲ್ಲರಿಗೂ ಹಂಚಿದರು. ಆ ಪದ್ಯಗಳನ್ನು ವಾಚಕರ ಅವಗಾಹನೆಗಾಗಿ ಇದರಡಿಯಲ್ಲಿ ಬರೆದಿರುವೆವು.

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಚಿತ್ರದುರ್ಗ ಬೃಹನ್ಮಠಾಧಿವಾಸ
ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಪಾದಪಂಕೇರುಹಂಗಳಿಗೆ

ಸದ್ಗುರುಪಾದಸರಸಿಜಭೃಂಗೋಪಮಾನ ಕೆ. ಬಸವಾರ್ಯಂ
ಭಕ್ತಿಪುರಸ್ಸರಮಾಗಿ ಕವಿತಾರೂಪ ಪುಷ್ಪಂಗಳಂ ಯಥಾಮತಿ ವಿರಚಿಸಿ ಸಮರ್ಪಿಸಿರ್ಪಂ

॥ಶ್ರೀ ಮುರುಘೇಂದ್ರಾಷ್ಟಕಂ॥

ವಿಭಾವರೀವೃತ್ತಂ

ಶರಣ ಸತ್ಪುರುಷಸಾಧು ಜನಾವೃತಂ। ಪರಮ ಪಾವನತರೋಚ್ಚರಿತಾಮೃತಂ ॥
ಸರಸಿಜಾಶುಗಹರಂ ವಿಬಧಂ ಜಗತ್ । ಗುರುವರಂ ಪೊರೆಗೆ ಶ್ರೀ ಮುರುಘೇಶ್ವರಂ ॥೧॥

ನರವರಾರ್ಚಿತ ಪದಂ ಮುನಿವಂದಿತಂ । ಚರವರಂ ಪರಿನುತಂ ವರತಾಪಸಂ ॥
ಸುರಗಣ ಪ್ರಮುದಿತಾಚರಣಂ ಜಗತ್। ಗುರುವರಂ ಪೊರೆಗೆ ಶ್ರೀ ಮುರುಘೇಶ್ವರಂ ॥೨॥

ಘನಮಯಂ ಕನಕಭೂಷಿತ ಪೀಠರಂ।ಜನಮಯಂ ಧನಮಯಂ ಮಠರಾಜಿತಂ ।
ಮನುಮುನಿಪ್ರಕರವರ್ಣಿತ ವೇದವಿತ್। ಚಿನುಮಯಂ ಪೊರೆಗೆ ಶ್ರೀ ಮುರುಘೇಶ್ವರಂ ॥೩॥

ವಿರತಿವರ್ಧನ ಯಶೋರ್ಣವವೇಷ್ಟಿತಂ । ಪರಿಗತಂ ಭಜಕ ತಾಮಸ ನಾಶಕಂ ॥
ಪರಿಜನೋಚ್ಚರಿತ ವೇದರವಂ ಜಗ।ದ್ಗುರುವರಂ ಪೊರೆಗೆ ಶ್ರೀ ಮುರುಘೇಶ್ವರಂ ॥೪॥

ಶಿವಮತೋದ್ಧರಣ ಸಾಗರಚಂದಿರಂ ।ಭವಕರಿಪ್ರಹರಕೇಸರಿ ಬಂಧುರಂ ॥
ಅವನತಾವನಿಪವಾರ ವಿರಂಜನಂ।ಶಿವಪದಂ ಪೊರೆಗೆ ಶ್ರೀಮುರುಘೇಶ್ವರಂ ॥೫॥

ಸ್ಫುರದಪಾರ ಬಿರುದಾವಳಿ ಶೋಭಿತಂ।ಗುರುಕುಲೋತ್ತಮ ಶಿರೋಮಣಿಮಂಡಿತಂ ॥
ಸುರನರೋರಗ ಕುಲೋನ್ನಹಿತಂ ಜಗ।ದ್ಗುರುವರಂ ಪೊರೆಗೆ ಶ್ರೀ ಮುರುಘೇಶ್ವರಂ ॥೬॥

ನಿರಘ ನಿರ್ಮಲ ವಿಭೂತಿ ನಿರಂಜನಂ। ನಿರುಪಮಂ ನಿಜಗುಣಂ ನಿಗಮೋದಿತಂ ॥
ಪರಮ ಭೂಸುರವರಂ ಸುಕರಂ ಜಗ।ದ್ಗುರುವರಂ ಪೊರೆಗೆ ಶ್ರೀ ಮುರುಘೇಶ್ವರಂ ॥೭॥

ದುರಿತ ದಾರಣ ತಪೋಬಲ ಭೂಷಿತಂ ।ಗುರುಪದಾನಮಿತ ಭಕ್ತ ಸುರದ್ರುಮಂ ।
ನಿರುತದೊಳ್ ಬಸವ ಬಾಲಕನಂ ಜಗ।ದ್ಗುರುವರಂ ಪೊರೆಗೆ ಶ್ರೀ ಮುರುಘೇಶ್ವರಂ ॥೮॥

ವಸಂತತಿಲಕ ವೃತ್ತಂ

ರಾಜಾಧಿರಾಜ ಪರಿಪೂಜಿತ ಪಾದಪದ್ಮಂ।ತೇಜೋಗಜಾಶ್ವರಥರಾಜಿತ ದುರ್ಗಸದ್ಮಂ ॥
ರಾಜತ್ಪ್ರಭಾವಿಜಿತ ವೈಭವ ಕೀರ್ತಿಭಾಜಂ।ಪೂಜ್ಯಂ ಸದಾ ಪೊರೆಗೆ ಶ್ರೀ ಮುರುಘೇಂದ್ರರಾಜಂ ॥೯॥

ಈ ಅಷ್ಟಕವನ್ನು ಕೇಳಿ ಶ್ರೀಗಳು"ಬಸವಾರ್ಯರೇ, ನಿಮ್ಮ ಕವಿತೆಯ ಶೈಲಿಯು ಚೆನ್ನಾಗಿದೆ. ಶಬ್ದಮಾಧುರ್ಯವು ಮನೋಹರವಾಗಿದೆ" ಎಂದು ಮರ್ಯಾದಿಸಿದರು. ಅಷ್ಟಕ ಅನ್ನುವದು ತೀರಿದೊಡನೆ ಶ್ರೀಗಳು ಸಭೆಯ ಜನರನ್ನು ಕುರಿತು"ಸಭಿಕರೇ, ಸಾಹೇಬರೊಡನೆ ಸ್ವಲ್ಪ ಏಕಾಂತವಿದ್ದದರಿಂದ ಅರ್ಧಘಂಟೆಯ ವರೆಗೆ ನೀವೆಲ್ಲರೂ ಕೂತುಕೊಳ್ಳಬೇಕು" ಎಂದು ಅಪ್ಪಣೆ ಕೊಡಿಸಿ, ಸಿಂಹಾಸನದಿಂದೆದ್ದು ಮಹಡಿಯನ್ನೇರಿದರು. ಕೂಡಲೆ ಸಾಹೇಬರೂ ಅಲ್ಲಿಗೆ ಹೋದರು. ಅಲ್ಲಿ ಅರ್ಧಘಂಟೆಯ ವರೆಗೂ ಅವರವರ ಸಂಭಾಷಣೆಗಳಾದವು. ಏಕಾಂತ ತೀರಿದೊಡನೆ ಪುನಃ ಶ್ರೀಗಳೂ, ಸಾಹೇಬರೂ ಸಭೆಯನ್ನಲಂಕರಿಸಿದರು. ಕೂಡಲೆ ಸಾಹೇಬರು ಗುರುಕಾಣಿಕೆಯನ್ನು ಸನ್ನಿಧಿಯ ಪಾದಕ್ಕೆ ಸಲ್ಲಿಸಿದರು. ಒಡನೆಯೇ ಶ್ರೀ ಕೋಹಳ್ಳಿಯ ಪಟ್ಟದಪ್ಪನವರು, ಸಾಹೇಬರ ಭಕ್ತಿ, ತಾರತಮ್ಯಜ್ಞಾನ, ಸೌಜನ್ಯ ಇವುಗಳ ವಿಷಯವಾಗಿ ಸ್ವಲ್ಪ ಭಾಷಣಮಾಡಿದರು. ಅದೇನೆಂದರೆ "ಸಭಿಕರೇ, ನಾವೆಲ್ಲರು ರಾ.ಬ॥ಅರಟಾಳ ಸಾಹೇಬರ ಅಮೌಲ್ಯವಾದ ಗುಣಗಳ ಅನುಕರಣ ಮಾಡುವದವಶ್ಯವಾಗಿದೆ. ಯಾಕಂದರೆ ಇತ್ತಿತ್ತಲಾಗಿ ಜನರಲ್ಲಿ ಭಕ್ತಿಯೆಂಬುವದು ಕಡಿಮೆಯಾಗುತ್ತ ನಡೆದಿರುವದು. ಭಕ್ತಿಯು ಕಡಿಮೆಯಾದಂತೆ ಜನರ ಸೌಖ್ಯವೂ ಕಡಿಮೆಯಾಗಿ ಕಾಲಕ್ರಮವು ಕಠಿಣವಾಗಹತ್ತಿದೆ. ಭಕ್ತಿಯಿಲ್ಲದೆ ಭಕ್ತರಿಗೆ ಮುಕ್ತಿಯಾಗದು. ಈಗಿನ ಇಂಗ್ಲೀಷ ಕಲಿತ ಜನರೆಲ್ಲಂತೂ ಭಕ್ತಿಯು ಬಹಳೇ ಕಡಿಮೆಯಾಗಿದೆ. ಸರಕಾರಿಯ ಅಧಿಕಾರಿಗಳಲ್ಲಿ ಭಕ್ತಿಯ ಗಂಧವೇ ಉಳಿದಿರುವದಿಲ್ಲ. ದೊಡ್ಡ ದೊಡ್ಡ ಆಫೀಸರರ ವಿಷಯಕ್ಕೆ ಮಾತಾಡುವಂತೆಯೇ ಇಲ್ಲ. ಅಯ್ಯನವರೆಂದರೆ ಅವರು ಸಿಟ್ಟು ಬೆಂಕಿ! ಆಫೀಸರರಿಗೂ ಅಯ್ಯನವರಿಗೂ ನಡುವೆ ಅಡ್ಡ ಬೆಂಕಿಯು ಹಾಯದು. ಇವರ ಮಸ್ತಕಗಳಿಗೆ ಗುರುಗಳ ಪಾದಸ್ಪರ್ಶವೇ ಆಗುವಂತಿಲ್ಲ. ಆದರೂ ಅದು ಅಂತಿಮ ಕಾಲಕ್ಕೆ ಸರಿ. ಕರುಣಪ್ರಸಾದವು ಕನಸಿನಲ್ಲಿಯೇ ಸರಿ. ವಸ್ತುಸ್ಥಿತಿಯು ಹೀಗಿರುವಾಗ ಆಫೀಸರರಾದ ಅರಟಾಳ ಸಾಹೇಬ ಬಹದ್ದೂರರವರು, ಅಥಣಿಯ ವರೆಗೆ ಬಂದು, ಜಗದ್ಗುರುಗಳ ಪಾದದರ್ಶನ ಲಾಭವನ್ನು ಹೊಂದಿ, ಧನ್ಯರಾದರು. ಅಲ್ಲದೆ ಇವರು ಬಂದೊಡನೆ ಮೂರಾವರ್ತಿ ಶಿರಸಾಷ್ಟಾಂಗ ನಮಸ್ಕಾರ ಮಾಡಿದ್ದನ್ನು ನೀವೆಲ್ಲರು ನೋಡಿರುವಿರಿ. ನೋಡಿರಿ! ಸಾಹೇಬರ ಧೂರ್ತತನವೆಷ್ಟು! ಎಲ್ಲಿ ಯಾವ ಪ್ರಕಾರ ಆಚರಿಸಬೇಕೋ ಅದೆಲ್ಲ ಇವರಿಗೆ ಅರಿಕೆಯೇ ಇರುವದು. ಇನ್ನೊಂದು ಮುಖ್ಯ ಸಂಗತಿಯೇನೆಂದರೆ ಗುರುಸನ್ನಿಧಿಗೆ ರಿಕ್ತಹಸ್ತದಿಂದ ಹೋಗುವದು ಅಯೋಗ್ಯವಾದುದೆಂದು ಯೋಗ್ಯವಾದ ಗುರುಕಾಣಿಕೆಯನ್ನು ತೆಗೆದುಕೊಂಡು ಬಂದು, ಬಹು ಭಕ್ತಿಪುರಸ್ಸರವಾಗಿ ಸಮರ್ಪಿಸಿದ್ದು ಶ್ಲಾಘನೀಯವಾಗಿದೆ. ಈ ವರೆಗೂ ಇಲ್ಲಿಯವರು ಹಾಗೆಯೇ ನಮಸ್ಕಾರ ಮಾಡಿ ಹೋಗುತ್ತಾರಲ್ಲದೆ, ಈವರೆಗೆ ಒಬ್ಬ ಭಕ್ತನೂ ಕಾಣಿಕೆ ಕೊಟ್ಟಿದ್ದನ್ನು ಕಾಣಲಿಲ್ಲ. ಇದು ಬಹು ಶೋಚನೀಯ ಸಂಗತಿಯಾಗಿದೆ. ಆದುದರಿಂದ ಸಭಿಕರೇ, ನಾಳಿನಿಂದ ಸಭೆಗೆ ಬರುವವರು ಪದ್ಧತಿಯ ಪ್ರಕಾರ ಮೂರು ಸಾರೆ ಸಾಷ್ಟಾಂಗ ನಮಸ್ಕಾರ ಮಾಡಿ ಕೂತುಕೊಳ್ಳಬೇಕು. ಬರಿಗೈಯಿಂದ ಬರಬಾರದು. ತಮ್ಮ ಯೋಗ್ಯತೆಗೆ ಅನುಸರಿಸಿ ಹಣ್ಣುಕಾಯಿಗಳನ್ನೂ, ಕಾಣಿಕೆಯನ್ನೂ ತೆಗೆದುಕೊಂಡು ಬಂದು ಆಶೀರ್ವಾದ ಪಡೆದುಕೊಳ್ಳಬೇಕು. ಗುರುಭಕ್ತಿಯು ಸ್ಥಿರವಾಗಿರಬೇಕು. ನಮ್ಮ ವೀರಶೈವ ಸಮಾಜಕ್ಕೆ ಬುದ್ಧಿಯಿಂದಲೂ, ಅಧಿಕಾರದಿಂದಲೂ, ಘನಕಾರ್ಯಂಗಳಂಗೈದು ಮಹೋಪಕಾರ ಮಾಡಿದುದರಿಂದಲೂ, ಕೀರ್ತಿಯಿಂದಲೂ ರಾ.ಬ॥ರವರು ಯಜಮಾನರಂತಿದ್ದು, ಈ ವರೆಗೆ ನಮಗೆ ಅನೇಕ ಉದಾಹರಣೆಗಳ ಕಿತ್ತೆ ಹಾಕಿ ಕೊಟ್ಟಿದ್ದು, ಈಗ ಕಾಣಿಕೆಯನ್ನು

ಕೊಡುವ ಕಿತ್ತೆಯನ್ನೂ ಹಾಕಿಕೊಟ್ಟರು. ಅದರಿಂದ ನಾವೆಲ್ಲರು, ಈ ಮಹಾನುಭಾವರ ಅನುಕರಣಮಾಡಿ ಅದರಂತೆ ಅನುವರ್ತಿಸತಕ್ಕದ್ದು" ಎಂದು ಭಾಷಣಮಾಡಿದ ನಂತರ, ಹಾರ ತುರಾಯಿ ಅತ್ತರ ಮೊದಲಾದ ಸುಗಂಧ ದ್ರವ್ಯಗಳ ಘಮಘಮಾಟದಲ್ಲಿ ಸಭಾವಿಸರ್ಜನೆಯಾಯಿತು. ಸಾಹೇಬರು ಶ್ರೀಗಳವರ ಸನ್ನಿಧಿಯಲ್ಲಿ ಅಪ್ಪಣೆಯನ್ನು ಬೇಡಿಕೊಂಡರು. ಶಾಸ್ತ್ರಿಗಳು ಆಶೀರ್ವಾದಮಂತ್ರವನ್ನು ಉಚ್ಚರಿಸುತ್ತಿರಲು, ಶ್ರೀಗಳವರು ಆಶೀರ್ವದಿಸಿ ಅಪ್ಪಣೆಕೊಟ್ಟರು.

ಅಥಣಿಯಲ್ಲಿ ವ್ಯಾಸನ ತೋಳಿನ ಪ್ರಸ್ತಾಪ

ಹೊರಗೆ ಟಾಂಗೆಯು ಸಾಹೇಬರ ಹಾದಿಯನ್ನು ನೋಡುತ್ತಲಿತ್ತು. ಹಾರ ತುರಾಯಿಗಳಿಂದ ಪ್ರಕಾಶಿಸುತ್ತ ಸಾಹೇಬರು ಹೊರಬಿದ್ದು ಟಾಂಗೆಯನ್ನೇರಿ, ಬಂಗಲೆಯ ಕಡೆಗೆ ತೆರಳಿದರು. ಆದರೆ, ಕೂಡಿದ ಜನರೆಲ್ಲರು "ಎಲ್ಲಾ ಆಯಿತು; ವ್ಯಾಸನ ತೋಳಿನದೇನಾಯಿತು?" ಎಂದು ಒಬ್ಬರಿಗೊಬ್ಬರು ಕೇಳುವವರೇ ಆದರು. ಅವರಿಗೆ ಸರಿಯಾದ ಉತ್ತರಗಳನ್ನು ಹೇಳಿ ಅವರ ಮನಃಶಾಂತಿಯನ್ನು ಮಾಡುವವರು ಒಬ್ಬರೂ ದೊರೆಯಲಿಲ್ಲ. ಶ್ರೀಗಳವರದೂ, ಸಾಹೇಬರದೂ ಅದರ ವಿಷಯವಾಗಿಯೇ ಏಕಾಂತವಾಗಿರಬಹುದು ಎಂದು ಕೆಲವರು ತರ್ಕಿಸುವವರಾದರು. ತಮ್ಮ ಮನಸಿಗೆ ಹ್ಯಾಗೆ ತಿಳಿಯುತ್ತದೋ ಹಾಗೆ ಎಲ್ಲರೂ ತರ್ಕಮಾಡಿ ಮಾತಾಡುವವರಾದರೇ ಹೊರತು, ನಿಜವಾದ ಸಂಗತಿಯು ಯಾರಿಗೂ ಗೊತ್ತಾಗಲಿಲ್ಲ. "ವ್ಯಾಸನ ತೋಳಿನ ಸಲುವಾಗಿಯೇ ನಾವು ಬಂದಿದ್ದೆವು. ಸಭೆಯಲ್ಲಿ ಅದರ ಪ್ರಸ್ತಾಪವೇ ಹೊರಡಲಿಲ್ಲ. ಸಾಹೇಬರು ಹಾಗೆಯೇ ಹೋದರು. ಇದೇನಾಯಿತು?" ಎಂದು ಕೆಲವರು ಚಿಂತಿಸುವವರಾದರು. ಅದಕ್ಕೆ ಕೆಲವರು "ಸಾಹೇಬರು ವ್ಯಾಸನತೋಳು ಕಟ್ಟಿಸಲಿಕ್ಕೇ ಬಂದಿರುವರು. ಅದನ್ನು ಮೆರಿಸೇ ಹೋಗುವರು. ಅಲ್ಲಿಯ ವರೆಗೆ ಸುಮ್ಮನೆ ಇಲ್ಲಿಯೇ ಇದ್ದುಬಿಡಿರಿ" ಎಂದು ಅವರಿಗೆ ಸಮಾಧಾನ ಹೇಳುವವರಾದರು. ಈ ಮೇರೆಗೆ ಊರಲ್ಲೆಲ್ಲ ವ್ಯಾಸನ ತೋಳಿನ ಗಡಿಬಿಡಿಯೇ ಗಡಿಬಿಡಿಯು. ನಾಳಿಗೆ ವ್ಯಾಸನತೋಳು ಕಟ್ಟಿಯೇ ಪಲ್ಲಕ್ಕಿ ಹೊರಡುವದೆಂದು ಕೆಲವರು ಸುಳ್ಳು ಸುದ್ದಿಯನ್ನು ಬೀರಿಬಿಟ್ಟರು. ಹೀಗೆ ನಿರಾಧಾರವಾದ ಸುಳ್ಳುಸುದ್ದಿಗಳು ಕ್ಷಣಕ್ಷಣಕ್ಕೆ ಹೊರಟು ಪ್ರೇಕ್ಷಕರನ್ನು ಗೊಂದಲದಲ್ಲಿ ಕೆಡವಿದವು.

ಸಭೆಯಲ್ಲಿ ನಡೆದ ಸಂಗತಿಯನ್ನೂ, ಅಳತಿಲ್ಲದೆ ಹೊರಬೀಳುವ ಸುಳ್ಳು ಸುದ್ದಿಗಳನ್ನೂ ಬ್ರಾಹ್ಮಣರು ತಡವಿಲ್ಲದೆ ಕೇಳಿ, ಕೆಲ ಪ್ರಮುಖ ಬ್ರಾಹ್ಮಣರು ಸಾಹೇಬರ ಬಳಿ ಹೋಗಿ "ನಾಳಿಗೆ ತಾವು ವ್ಯಾಸನತೋಳು ಕಟ್ಟಿಸುವಿರೆಂಬದಾಗಿ ಊರಲ್ಲೆಲ್ಲ ಸುದ್ದಿಯು ಹರಡಿಕೊಂಡಿರುವದು. ದಯಮಾಡಿ ವ್ಯಾಸನ ತೋಳು ಕಟ್ಟಿಸಬಾರದು" ಎಂದು ಬೇಡಿಕೊಂಡರು. ಅಧಕ್ಕೆ ಸಾಹೇಬರು "ನನಗೇನು ಅದರ ಸಂಬಂಧವಿಲ್ಲ; ನಾನು ಅದರ ಸಲುವಾಗಿ ಬಂದಿಲ್ಲ. ಅನಂತಪುರದ ಬನಾವಟಿ ಖಟ್ಲೇ ಬಾಬ ಫಿರ್ಯಾದಿಯ ಜವಾಬ ತೆಗೆದುಕೊಳ್ಳುವದು ಅವಶ್ಯವಿತ್ತು. ಅದೂ ಆಯಿತು; ಸ್ವಾಮಿಗಳ ದರ್ಶನವೂ ಆಯಿತು ಎಂದು ಬಂದಿದ್ದೆ. ಮತ್ತು ವ್ಯಾಸನ ತೋಳಿನ ಬಗ್ಗೆ ಪರವಾನಗಿಯನ್ನು ಕೊಡಲಿಕ್ಕೂ ನನಗೆ ಅಧಿಕಾರವಿಲ್ಲ" ಎಂದೂ ಉತ್ತರ ಕೊಡಲು, ಅವರು ಸಮಾಧಾನ ಮನಸ್ಕರಾಗಿ ಶರಣು ಹೊಡೆದು, ತಮ್ಮ ತಮ್ಮ ಮನೆಗೆ ಹೋದರು. ಬಳಿಕ ಲಿಂಗಾಯತ ಪ್ರಮುಖರು ಬಂಗಲೆಗೆ ಬಂದು ಸಾಹೇಬರನ್ನು ಕುರಿತು"ಹೇಗಾದರೂ ಮಾಡಿ ವ್ಯಾಸನ ತೋಳು ಕಟ್ಟಲೇಬೇಕೆಂದೂ, ಇದರಿಂದ ನಾವು ಊರಲ್ಲಿ ಬ್ರಾಹ್ಮಣರಿಗೆ ಮೋರೆಯನ್ನು ತೋರಿಸದಂತೆ ಆಗಿದೆಯೆಂದೂ, ನಮ್ಮನ್ನು ನೋಡಿ ಅವರು ಬಹಳೇ ಹೀಯಾಳಿಸುತ್ತಾರೆಂದೂ, ದಯಮಾಡಿ ಹುಕುಮು ಕೊಡಿಸಬೇಕೆಂದೂ ತಮ್ಮ ಮುಕ್ಕಾಮು ಇಲ್ಲಿ

ಇರುವದರೊಳಗಾಗಿ ಹುಕುಮಾದರೆ ನೆಟ್ಟಗಾಗುವದೆಂದೂ, ತಾವು ಪಲ್ಲಕ್ಕಿಯ ಮುಂದೆ ನಿಂತದ್ದಾದರೆ ಯಾವ ಹಾರುವನೂ ಮುಂದೆ ಬಾರನೆಂದೂ, ತಾವು ಇದನ್ನಷ್ಟು ಮನಸಿನ ಮೇಲೆ ತೆಗೆದುಕೊಳ್ಳಬೇಕೆಂ"ದೂ ಪ್ರಾರ್ಥಿಸಿಕೊಂಡರು. ಸಾಹೇಬರು ಅದಕ್ಕೆ ಪ್ರತ್ಯುತ್ತರವಾಗಿ "ಹಿಂದೆ ಸರಕಾರದಿಂದ ವ್ಯಾಸನ ತೋಳು ಮೆರಿಸಲಿಕ್ಕೆ ಮನಾಯಿ ಹುಕುಮು ಆದದರಿಂದ ಆ ಬಗ್ಗೆ ಪರವಾನಗಿ ಕೊಡಲಿಕ್ಕೆ ನನಗೆ ಅಧಿಕಾರವಿಲ್ಲ. ನಿಮ್ಮ ಮನಸಿನಲ್ಲಿ ಈ ಉತ್ಸವವನ್ನು ಮಾಡಬೇಕೆಂಬುದೇ ಇದ್ದರೆ, ಕಾಯದೇಶೀರ ಮೆ||ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಪರವಾನಗಿ ಬಂದೋಬಸ್ತು ತೆಗೆದುಕೊಂಡು ಮಾಡಬೇಕು. ಪ್ರಕರಣವು ಮುಂದೆ ಬೆಳೆದರೆ, ಕಡೆಯ ಪರಿಣಾಮದ ವರೆಗೂ ಪ್ರಯತ್ನಿಸಲಿಕ್ಕೆ ನೀವೆಲ್ಲರು ನಡಕಟ್ಟಿ ನಿಂತಿರಬೇಕು. ಅಂಥ ಗಟ್ಟಿಗತನವು ನಿಮ್ಮಲ್ಲಿದ್ದರೆ ಈ ಕೆಲಸಕ್ಕೆ ಕೈಹಾಕಿರಿ; ಇಲ್ಲದಿದ್ದರೆ ಸುಮ್ಮನೆ ಬಿಟ್ಟುಬಿಡಿರಿ" ಎಂದು ಹೇಳಿದರು.

ಬ್ರಾಹ್ಮಣರು ಮಾತ್ರ ಸಂಶಯಗೊಂಡು, ಸಾಹೇಬರು ಎಲ್ಲಿ ಆಕಸ್ಮಿಕವಾಗಿ ವ್ಯಾಸನತೋಳು ಕಟ್ಟಿಸುವರೋ ಎಂಬ ಅಳ್ಳೆದೆಯಿಂದ "ನಮ್ಮಲ್ಲಿ ಲಿಂಗಾಯತರು ವ್ಯಾಸನತೋಳಿನ ಮೆರವಣಿಗೆಯನ್ನು ಮಾಡುವವರಿದ್ದಾರೆ. ಈ ಮೆರವಣಿಗೆಯಾದರೆ ಬಹುದೊಡ್ಡ ದಂಗೆಯು ಎದ್ದು ನಿಶ್ಚಯವಾಗಿ ಬಹಳೇ ಹಾನಿತಟ್ಟುವದು. ಖೂನುಗಳೂ ಸಹ ಆಗಿ ರಕ್ತದ ಕಾವಲಿ ಹರಿಯುವ ಸಂಭವವದೆ."ಎಂದು ಮೆ||ಕಲೆಕ್ಟರ ಬ್ರ್ಯಾಂಡನ್ ಸಾಹೇಬರ ಬಹದ್ದೂರ ಇವರ ಕಡೆಗೆ ತಾರು ಮಾಡಿದರು. ಸದ್ಯಕ್ಕೆ ವ್ಯಾಸನ ತೋಳು ಕಟ್ಟುವ ಪ್ರಯತ್ನವನ್ನು ಯಾರೂ ಮಾಡದಿದ್ದರೂ ಬ್ರಾಹ್ಮಣರು ತಮ್ಮ ಪೂರ್ವ ತಯಾರಿಯನ್ನು ಹ್ಯಾಗೆ ಮಾಡಿಟ್ಟುಕೊಂಡರೆಂಬದು ಬಹು ಸೋಜಿಗದ ಸಂಗತಿಯಾಗಿದೆ. ಇದನ್ನು ಕಂಡು ಲಿಂಗವಂತರೂ ಸಿಟ್ಟಾಗಿ ಹುಕುಮು ಪಡೆದುಕೊಳ್ಳುವ ಪ್ರಯತ್ನವನ್ನು ನಡೆಯಿಸುವ ಭಾಗಬಿತ್ತು.

ಸಾಹೇಬರು ಶ್ರೀಗಳವರಿಗೆ ಮತ್ತೊಂದು ಸಾರೆ ಭೆಟ್ಟಿಯಾಗಿ, ಅವರೊಡನೆ ಕೆಲವು ಸಂಗತಿಗಳ ಬಗ್ಗೆ ಸಂಭಾಷಿಸಿ ಆಶೀರ್ವಾದ ತೆಗೆದುಕೊಂಡು, ತಾರೀಖು ೨೯ನೇ ಜೂನ ಸನ್ ೧೯೧೦ನೇ ಇಸವಿಯ ದಿವಸ ಮುಂಜಾನೆ ಅಥಣಿಯನ್ನು ಬಿಟ್ಟು, ಆ ದಿವಸ ಸೇಡಬಾಳ ಮುಕ್ಕಾಮು ಮಾಡಿ, ಮರುದಿವಸ ಬೆಳಗಾವಿಗೆ ಬಂದರು. ಇದೇ ಸಂಧಿಯಲ್ಲಿ ಪುಣ್ಯಪುರುಷರಾದ ಸೊಲ್ಲಾಪುರದ ಶ್ರೀಮಂತ ರಾ.ಸಾ||ವಾರದ ಮಲ್ಲಪ್ಪನವರಿಗೆ ಸರಕಾರದವರು 'ರಾವಬಹದ್ದೂರ' ಎಂಬ ಕಿತಾಬು ಕೊಟ್ಟ ವಾರ್ತೆಯು ಅಥಣಿಗೆ ತಿಳಿದದರಿಂದ ತಾರೀಖು ೨೭ನೇ ಜೂನ್ ಸನ್ ೧೯೧೦ನೇ ಇಸವಿಯ ದಿವಸ ಶ್ರೀಗಳವರ ಸನ್ನಿಧಾನದಲ್ಲಿ ಪುನಃ ಸಭೆಸೇರಿ ಆನಂದಪ್ರದರ್ಶನ ಮಾಡಿದ್ದಲ್ಲದೆ, ಮರುದಿವಸ ಶ್ರೀಮಂತ ವಾರದ ಇವರಿಗೆ ೬೦ ವರ್ಷ ಪೂರ್ಣವಾದದ್ದರಿಂದ ಇವರ ಜ್ಯುಬಿಲಿಯ ಉತ್ಸವವನ್ನು ಸಂಭ್ರಮದಿಂದ ಮಾಡಿದರು. ಮತ್ತು ಎಲ್ಲ ಮಠಗಳಲ್ಲಿಯೂ ದೇವಾಲಯಗಳಲ್ಲಿಯೂ ಕಾರ್ತಿಕ ಹಚ್ಚಲ್ಪಟ್ಟು, ಶ್ರೀಗಳ ಸನ್ನಿಧಿಯಲ್ಲಿ ಪುನಃ ಸಭೆಸೇರಿ ಮಹಾಸಮಾರಂಭವಾಯಿತು. ಈ ಪ್ರಕಾರ ಶ್ರೀಗಳವರ ಸನ್ನಿಧಿಯು ಸಡಗರದೊಡನೆ ಪ್ರಕಾಶಿಸುವದಾಯಿತು.

ಅಥಣಿಯ ಲಿಂಗಾಯತರು ಮುಂದೆ ಸುಮ್ಮನೆ ಕೂಡ್ರಲಿಲ್ಲ. ಕೂಡಲೆ ಅವರು ಮೆ||ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾಹೇಬ ಬಹದ್ದೂರ ಜಿಲ್ಲಾ ಬೆಳಗಾವ ಇವರ ಕಡೆಗೆ ವ್ಯಾಸನತೋಳಿನ ಪರವಾನಗಿ ಸಿಗುವ ಬಗ್ಗೆ ಪ್ರಯತ್ನ ನಡಿಸಿದರು. ಮೆ||ಬಿ.ಎ. ಬ್ರ್ಯಾಂಡನ್ ಕಲೆಕ್ಟರ ಸಾಹೇಬ ಬಹದ್ದೂರ ಜಿಲ್ಲಾ ಬೆಳಗಾವ ಇವರು, ಬ್ರಾಹ್ಮಣರ ಹಾಗೂ ಲಿಂಗಾಯತರ ಎಲ್ಲ ತಕರಾರುಗಳ ವಿಚಾರಮಾಡಿ, ತಾರೀಖು ೨೦ನೇ ಸೆಪ್ಟಂಬರ್ ಸನ್ ೧೯೧೦ನೇ ಇಸವಿಯ ದಿವಸ, "ಅಥಣಿಯ ಸಾರ್ವಜನಿಕ ರಸ್ತೆಗಳಲ್ಲಿ ವ್ಯಾಸನತೋಳು ಹಾಯಿಸಲಿಕ್ಕೆ ಏನೂ ಹರಕತ ಇಲ್ಲ ವೆಂದು ತಪಶೀಲ ವ ಕಾರಣ ಸಹಿತ ಬರೆದು ತಾ.೩೧ನೇ ಅಗಷ್ಟ ಸನ್ ೧೯೧೦ನೇ ಇಸವಿ ದಿವಸ ಹುಕುಮು

ಕೊಟ್ಟರು.[೪] ಕೂಡಲೆ ಬ್ರಾಹ್ಮಣರು ಈ ಹುಕುಮಿನ ವಿರುದ್ಧವಾಗಿ ದಕ್ಷಿಣಭಾಗದ ಕಮೀಶನರರಾದ ಮೆ||ಎಮ್.ಸಿ. ಗಿಬ್ಬ ಸಾಹೇಬ ಬ||ರವರ ಕಡೆಗೆ ಅಪೀಲು ಮಾಡಿದರು. ಅದಕ್ಕೆ ಮೆ||ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾಹೇಬರವರು ಕೊಟ್ಟ ಹುಕುಮು ತೆಗೆದು ಹಾಕಲಿಕ್ಕೆ ನಮಗೆ ಅಧಿಕಾರವಿಲ್ಲ; ಮತ್ತು ಇದಕ್ಕೆ ಅಪೀಲು ಇಲ್ಲ" ಎಂದು ಮೆ||ಕಮೀಶನರ ಸಾಹೇಬರವರು ತಾರೀಖು ೧೫ನೇ ಸಪ್ಟಂಬರ ತಿಂಗಳ ಸನ್ ೧೯೧೧ನೇ ಇಸವಿಯ ದಿವಸ ಅಥಣಿಯಲ್ಲಿ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಯ ಮಹೋತ್ಸವವು ವ್ಯಾಸನ ತೋಳು ಸಹಿತವಾಗಿ ಆಗುವದೆಂದು ಜಾಹೀರು ಮಾಡಿದ್ದರಿಂದ, ೬೦-೭೦ ಹರದಾರಿಗಳ ಮೇಲಿನ ಜನರು ಮೊದಲಿಗಿಂತಲೂ ಇಮ್ಮಡಿಯಾಗಿ ಕೂಡಿದರು. ಅಥಣಿಯ ಗ್ರಾಮವು ಮೊದಲಿನಂತೆ ಅಗಸಿಗಳಿಂದಲೂ, ಕಮಾನಗಳಿಂದಲೂ, ಧ್ವಜಪತಾಕೆ ತಳಿರು ತೋರಣಗಳಿಂದಲೂ ಅಲಂಕೃತವಾಯಿತು. ವೀರಶೈವ ಸಮಾಜದ ಸಂತೋಷವನ್ನು ಹಿಡಿಯಲು ಅಸಾಧ್ಯವಾದಂತೆ ಬ್ರಾಹ್ಮಣರಿಗೆ ಆದ ಅಸಂತೋಷವನ್ನು ಹಿಡಿಯುವದೂ ಅಶಕ್ಯವಾಯಿತು.

ಈ ಹುಕುಮು ಆದಾಕ್ಷಣವೆ, ಹಾರುವರ ಹೃದಯದ ಹಾಲಾಹಲ ವಿಷವು ಕ್ಷೋಭಿಸಿ ಅವರನ್ನು ಸುಮ್ಮನೆ ಕೂಡ್ರಗೊಡಲಿಲ್ಲ. ಕೂಡಲೆ ಅವರು, ಅಥಣಿಯಲ್ಲಿ ಲಿಂಗಾಯತರು ವ್ಯಾಸನ ತೋಳು ಕಟ್ಟುವರೆಂದೂ, ಆ ಸಮಯದಲ್ಲಿ ಭಯಂಕರ ದಂಗೆಯೆದ್ದು ನಿಶ್ಚಯವಾಗಿ ಖೂನುಗಳಾಗುವವೆಂದೂ, ಇದರ ಮೇಲೆ ನಾವು ಹಾಯಕೋರ್ಟಿಗೆ ಅಪೀಲು ಮಾಡತಕ್ಕವರಿರುವೆವೆಂದೂ, ಆ ವರೆಗೆ ಈ ಮಹೋತ್ಸವವನ್ನು ನಿಲ್ಲಿಸಲಿಕ್ಕೆ ಹುಕುಮಾಗಬೇಕೆಂದೂ, ಈ ಉತ್ಸವವು ತಾರೀಖು ೨೦ ಸಪ್ಟಂಬರ ೧೯೧೧ನೇ ಇಸವಿಯ ದಿವಸ ಆಗುವದರಿಂದ ಅದರೊಳಗಾಗಿ ಅವರಿಗೆ ತಲುಪುವಂತೆ ತಾರಿನಿಂದ ತಹಕೂಬಿ ಹುಕುಮಾಗಬೇಕೆಂದೂ, ಮುಂಬಯಿಯ

---

೪. ಒಳಗಡೆಯಲ್ಲಿ ಸಂಪಗಾವ ತಾಲೂಕ ದೇಶನೂರ ಗ್ರಾಮದ ಲಿಂಗಾಯತರಿಗೂ, ಹಟಗಾರ ಜೇಡರಿಗೂ ಧರ್ಮಸಂಬಂಧವಾದ ಇದೇ ತರದ ವಾದವಿವಾದ ನಡೆದು, ಅಲ್ಲಿಯ ಲಿಂಗಾಯತರು ಆ ಊರ ಕಿಲ್ಲೆಯ ಹೊರಗೆ ತಮ್ಮ ಪೇಟಿಯನ್ನು ಕಟ್ಟಿಕೊಂಡು ವಾಸಮಾಡಹತ್ತಿದ್ದು ಎಲ್ಲರಿಗೆ ಗೊತ್ತಿದ್ದ ಮಾತು. ಸಿಂಗನು ಸಹಿತವಾದ ಹಟಗಾರರ ರಥೋತ್ಸವವನ್ನು ವೀರಶೈವರು ತಮ್ಮ ಓಣಿಗಳಲ್ಲಿ ಬರಗೊಡುವದಿಲ್ಲ. ಯಾಕಂದರೆ ಆ ಸಿಂಗನು ಈಶ್ವರನ ಮುಖದ ಪ್ರತಿಮೆಯನ್ನು ತನ್ನ ಮೊಣಕಾಲ ಕೆಳಗೆ ಕಟ್ಟಿ ವೀರಶೈವ ಮತಕ್ಕೆ ವಿರೋಧವಾದ ನಿಂದ್ಯಾಸ್ಪದ ನುಡಿಗಳಿಂದ ಮನಬಂದಂತೆ ಬೊಗಳುತ್ತ ಹೋಗುವನು. ಅದರಿಂದ ಲಿಂಗಾಯತರ ವ್ಯಾಸನತೋಳಿನ ಮೆರವಣಿಗೆಯನ್ನು ಬ್ರಾಹ್ಮಣರು ಹ್ಯಾಗೆ ಪ್ರತಿಬಂಧಿಸುವರೋ ಹಾಗೆ ಲಿಂಗಾಯತರು ಈ ಹಟಗಾರರ ಸಿಂಗನು ಸಹಿತವಾದ ಹಟಗಾರರ ಉತ್ಸವವನ್ನು ತಮ್ಮ ಓಣಿಗಳಲ್ಲಿ ಹಾಯಿಸಲಿಕ್ಕೆ ಪ್ರತಿಬಂಧಿಸುತ್ತಾರೆ. ಆದುದರಿಂದ ಲಿಂಗವಂತರು ಈ ಉತ್ಸವವನ್ನು ನೋಡುವದಿಷ್ಟೇ ಅಲ್ಲ. ತಮ್ಮ ಓಣಿಗಳಲ್ಲಿ ಉತ್ಸವ ಬರಲಿಕ್ಕೂ ಅಡ್ಡಿ ಮಾಡುತ್ತಾರೆ. ದೇಶನೂರ ಹಟಗಾರರು ಈ ತಮ್ಮ ಉತ್ಸವವನ್ನು ಲಿಂಗಾಯತರ ಓಣಿಯಲ್ಲಿ (ಪೇಟಿಯಲ್ಲಿ) ಹಾಯಿಸಲೇಬೇಕೆಂದು ಹಟ ಹಿಡಿದರು. ಅದಕ್ಕೆ ವಿರೋಧವಾಗಿ ಲಿಂಗಾಯತರು ಈ ಹಟಗಾರರ ಉತ್ಸವವನ್ನು ತಮ್ಮ ಓಣಿಯಲ್ಲಿ ತರಲು ಪ್ರತಿಬಂಧಿಸಲೇಬೇಕೆಂದು ಪಂಥವನ್ನು ತೊಟ್ಟರು. ಈ ಉತ್ಸವಕ್ಕೆ ಮೆ||ಜಾಕ್ಸನ್ ಸಾಹೇಬ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಬೆಳಗಾವ ಇವರ ಕಡೆಗೆ ಪರವಾನಗಿಯನ್ನು ಬೇಡಿದ್ದಕ್ಕೆ ಅವರು ಕೋರ್ಟಿನ ಹುಕೂಮನಾಮೆಯನ್ನು ಪಡಕೊಂಡು ಬಂದಲ್ಲಿ "ಪರವಾನಗಿ ಕೊಡಬಹುದು". ಎಂದು ಹೇಳಿದ ಪ್ರಕಾರಕ್ಕೆ ಆ ಹಟಗಾರರು ಕೋರ್ಟಿನಿಂದ ಹುಕುಮನಾಮೆ ತಂದು ಹಾಜರಮಾಡಲು" ಸಾರ್ವಜನಿಕ ರಸ್ತೆಗಳಲ್ಲಿ ನಿಮ್ಮ ಉತ್ಸವವನ್ನು ಹಾಯಿಸಿಕೊಂಡು ಹೋಗಲಿಕ್ಕೆ ಯಾವ ತರದ ಅಡ್ಡಿಯೂ ಇಲ್ಲ". ಎಂಬದಾಗಿ ಪರವಾನಗಿ ಹುಕುಮುಕೊಟ್ಟರು. ಆ ಪ್ರಕಾರ ಒಳಗಡೆಯಲ್ಲಿ ದೇಶನೂರ ಗ್ರಾಮದಲ್ಲಿ ಹಟಗಾರ ಜಾತಿಯವರ ಉತ್ಸವವು ಲಿಂಗಾಯತರ ಓಣಿಯಲ್ಲಿ ಹಾಯ್ದು ಹೋಯಿತು.

ಈ ಹುಕುಮನ್ನು ಅನುಸರಿಸಿ ಮೆ||ಬಿ.ಎ. ಬ್ರ್ಯಾಂಡನ್ ಸಾಹೇಬ ಬಹದ್ದೂರರವರು ಅಥಣಿಯಲ್ಲಿ ವೀರಶೈವರ ವ್ಯಾಸನ ತೋಳು ಮೆರೆಯಿಸುವದಕ್ಕೆ ಹುಕುಮು ಕೊಟ್ಟರು.

ಗವ್ಹರ್ನಮೆಂಟ ಆಫೀಸಿಗೆ ಅರ್ಜಿಯನ್ನು ಮಾಡಿ, ಹಾಯಕೋರ್ಟಿಗೆ ಅಪೀಲನ್ನು ಮಾಡಿದರು. ನೋಡಿರಿ! ಬ್ರಾಹ್ಮಣರ ಜಾಗರೂಕತನವೆಷ್ಟು? ಸಾಹಸವೆಷ್ಟು! ಒಕ್ಕಟ್ಟು ಎಷ್ಟು! ಇಂತಹ ಸಾಹಸಪ್ರಯತ್ನಗಳು ನಮ್ಮ ಲಿಂಗಾಯತರಲ್ಲಿ ಕಂಡುಬರುವವೋ!ನಿಜವಾಗಿ ಲಿಂಗಾಯತರು ಹುಂಬಗುತ್ತಿಗೆಯವರು. ಟೊಣ್ಣೆಕಾಯಕದವರು. ಮೈಮೇಲೆ ಬಂದು ಬಿದ್ದಾಗ್ಗೇ ಎಚ್ಚರಗೊಳ್ಳುವವರು. ಆದರೆ ರಾ.ಬ॥ರುದ್ರಗೌಡ ಸಾಹೇಬರಂಥ ಅಸಾಧಾರಣ ಬುದ್ಧಿ ಚಾತುರ್ಯವುಳ್ಳವರು ಲಿಂಗಾಯತರಲ್ಲಿ ಯಾಕೆ, ಬ್ರಾಹ್ಮಣರಲ್ಲಿಯೂ ಇಲ್ಲವೆಂದೆನ್ನಬಹುದು. ಇವರೊಬ್ಬರು ನಮ್ಮ ಸಮಾಜದಲ್ಲಿ ಏನೋ ತಪ್ಪಿ ಹುಟ್ಟಿರುವರೆಂದೆನ್ನಲಿಕ್ಕೆ ಅಡ್ಡಿಯಿಲ್ಲ.

ಬ್ರಾಹ್ಮಣರ ಗುಪ್ತತಂತ್ರವು ಗವ್ಹರ್ನಮೆಂಟಿನಲ್ಲಿ ಸಂಚರಿಸುತ್ತಿರಲು, ಇತ್ತ ಅಥಣಿಯ ವೀರಶೈವರು ಆ ಹುಕುಮು ಬರುವದರೊಳಗಾಗಿ ಮಹೋತ್ಸವವನ್ನು ನೆರವೇರಿಸಿ ಬಿಡಬೇಕೆಂದು ರಾತ್ರಿ ಹಗಲು ಕೂಡಿಯೇ ಪುರವನ್ನು ಶೃಂಗರಿಸಲಿಕ್ಕೆ ಸುರು ಮಾಡಿದರು. ಬೆಳಿಗ್ಗೆ ಮಹೋತ್ಸವವಾಗುವದೆಂದು ಎಲ್ಲರಿಗೂ ಮಹದಾನಂದ!ಎಲ್ಲ ಕಡೆಗೂ ಇದೇ ಗಡಿಬಿಡಿ! ಇದೇ ಮಾತು. ಬೆಳ್ಳಬೆಳತನಕ ಓಡಾಟ. ಎಲ್ಲ ಕಡೆಗೂ ಸಂತೋಷವು ಹಬ್ಬಿ ಹೋಗಿರುವದು. ಆದರೆ ಅಷ್ಟರೊಳಗಾಗಿ "ನೀವು ನಡಿಸಿರುವ ವ್ಯಾಸನತೋಳಿನ ಉತ್ಸವವನ್ನು ತುರ್ತಕ್ಕೆ ಬಂದು ಮಾಡಬೇಕು" ಎಂಬದಾಗಿ ಹಾಯಕೋರ್ಟಿನಿಂದ ನಂಬರ೨೩೧೫/ದಿ. ೧೯ ಸೆಪ್ಟಂಬರ ೧೯೧೦ನೇ ತಹಕೂಬೀ ಹುಕುಮಿನ ತಾರು ಬಂದದರಿಂದ ಲಿಂಗಾಯತರ ಸಂತೋಷವೆಂಬ ಹಾಲಿನಲ್ಲಿ ಹುಳಿಯನ್ನು ಹಿಂಡಿದಂತಾಯಿತು.

ವಾಚಕರೇ, ಈ ನಮ್ಮ ಲಿಂಗಾಯತರ ಅವಸ್ಥೆಯು ಹ್ಯಾಗಾದ್ದೀತೆಂಬದರ ಕಲ್ಪನೆಯನ್ನು ನೀವೇ ಮಾಡಿರಿ. ಇದಕ್ಕೆ ವಿಪರೀತವಾಗಿ ಹಾರುವರಿಗೆ ಚಲ್ಲಾಟವಾಯಿತು. ಅವರ ಚಂಡಿಕೆಗಳು ಹಾರಾಡಹತ್ತಿದವು. ವಿಘ್ನಸಂತೋಷಿಗಳಾದ ಅವರು ಉಬ್ಬಿನಿಂದ ಕೊಬ್ಬಿನಿಂತು, ಕಾರ್ಯಕಾರಣವಿಲ್ಲದೆ ಪೇಟೆಗಳಲ್ಲಿ ಸೆಟೆಸೆಟೆದು ಅಡ್ಡಾಡ ಹತ್ತಿದರು. ಆದರೆ ಸರಕಾರೀ ಹುಕುಮಿಗೆ ಯಾರೇನು ಮಾಡುವದದೆ!ಬ್ರಾಹ್ಮಣರಾಗಲಿ, ಲಿಂಗಾಯತರಾಗಲಿ, ಯಾರೇ ಆಗಲಿ ಸರಕಾರೀ ಹುಕುಮನ್ನು ಮಾನ್ಯಮಾಡಲೇಬೇಕಲ್ಲವೆ!

ವ್ಯಾಸನ ತೋಳಿನ ಮನಾಯಿ ಬಗ್ಗೆ ಹಾಯಕೋರ್ಟಿನಲ್ಲಿ ಬ್ರಾಹ್ಮಣರ ಅಪೀಲ ವಿಚಾರಣೆ ನಡೆದು "ತಾರೀಖು ೧೪ ಅಕ್ಟೋಬರ ೧೯೧೦ನೇ ಇಸವಿಯ ದಿವಸ ಬೆಳಗಾವಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಡಿ॥ ಪೊಲೀಸ ಆಕ್ಟಿನ ೪೪ನೇ ಕಲಮಿನನ್ವಯ ಹುಕುಮು ಕೊಟ್ಟಿದ್ದರಿಂದ ಅದರಲ್ಲಿ ತಮಗೆ ಕೈ ಹಾಕುವದಕ್ಕೆ ಅಧಿಕಾರವಿಲ್ಲ. ಬೇಕಾದರೆ ಬ್ರಾಹ್ಮಣ ಮುಂತಾದವರು ಸರಕಾರದ ಕಡೆಗೆ ಹೋಗಬೇಕು. ಅಥವಾ ಯೋಗ್ಯಕಂಡರೆ ದಿವಾಣಿಯಲ್ಲಿ ದಾವೇ ತರಬೇಕು" ಎಂದು ಠರಾವು ಹೇಳಲ್ಪಟ್ಟಿತು. ಅಂದರೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾಹೇಬ ಬ॥ರ ಜಿಲ್ಲಾ ಬೆಳಗಾವ ಇವರು ಕೊಟ್ಟ ಹುಕುಮನ್ನೇ ಹಾಯಕೋರ್ಟಿನವರು ಮಾನ್ಯಮಾಡಿದಂತಾಯಿತು. ಈ ಖಟ್ಲೆಯ ಬಾಬತ ತಪಶೀಲವಾರ ಹಕ್ಕೀಕತ ದಿ. ಬಾಂಬೆ ಲಾ ರಿಪೋರ್ಟಿನ ವ್ಹಾಲೀಮ್ ೧೨ನೇ ೧೧೦೭ನೇ ಪಾನಿನಲ್ಲಿ ಛಾಪಿಸಿರುತ್ತದೆ. ಈ ಹಾಯ್‌ಕೋರ್ಟಿನ ಠರಾವು ಲಿಂಗಾಯತರಂತೆ ಆದದ್ದನ್ನು ಕಂಡು ಬ್ರಾಹ್ಮಣರಿಗೆ ಸಹನವಾಗದೆ, ಕೂಡಲೆ ಅವರು ಗವ್ಹರ್ನಮೆಂಟಿನಲ್ಲಿ ಅಪೀಲು ನಡಿಸಿದರು. ಈ ಕೆಲಸಕ್ಕೆ ಇಡೀ ಮುಂಬಯಿ ಇಲಾಖೆಯ ಬ್ರಾಹ್ಮಣರೆಲ್ಲ ತೊಡಗಿದ್ದರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮುಂದೆ ಗವ್ಹರ್ನಮೆಂಟಿನಲ್ಲಿ ಆರೇಳು ತಿಂಗಳ ವರೆಗೆ ಈ ಬಗ್ಗೆ ವಿಚಾರ ನಡೆದು 'ಲಿಂಗಾಯತರು ವ್ಯಾಸನ ತೋಳು ಮೆರಿಸುವ ಬಗ್ಗೆ ಪರವಾನಗಿ ಬೇಡಿದರೆ ಅವರಿಗೆ ಪರವಾನಗಿ ಕೊಡಬಾರದು' ಎಂದು ನಿರ್ಣಯವಾಯಿತು. ಸರಕಾರ ಠರಾವು ನಂಬರ ೨೬೫೮/೬ನೇ ಮೇ ೧೯೧೩ನೇ ಇಸವಿ.ಜ್ಯೂಡಿಸಿಯಲ್ ಡಿಪಾರ್ಟಮೆಂಟ.

ಈ ಠರಾವಿನಲ್ಲಿ ಏನೂ ಅರ್ಥವಿಲ್ಲೆಂದು ಮೇಲೆಯೇ ಕಂಡುಬರುತ್ತದೆ. ಹ್ಯಾಗಾದರೂ ಮಾಡಿ ವ್ಯಾಸನ ತೋಳು ಹಾಯಿಸುವದಕ್ಕೆ ಪ್ರತಿಬಂಧಿಸಬೇಕೆಂಬ ಬ್ರಾಹ್ಮಣರ ಘಟಾಟೋಪದ ಪ್ರಯತ್ನದಿಂದ ಈ ಪ್ರಕಾರ ಅನ್ಯಾಯದ ಹುಕುಮು ಹೊರಬಿತ್ತೆಂಬುದು ಎಲ್ಲರಿಗೂ ತಿಳಿಯುವಂತಿದೆ. ಆದರೆ ಮಾಡಬೇಕೇನು! ಸರಕಾರೀ ಹುಕುಮನ್ನು ಪ್ರತಿಯೊಬ್ಬನೂ ಮಾನ್ಯಮಾಡುವದು ರಾಜಧರ್ಮವಾಗಿದೆ.

ಹೀಗೆ ಹುಕುಮಾದದ್ದು ಅನ್ಯಾಯವಾಯಿತಾದದರಿಂದ ಅಥಣಿಯವರು, "ಜನ್ಮತಃ ವ್ಯಾಸನತೋಳು ಮೆರಿಸುವ ಪ್ರಚಾರವು ನಮ್ಮ ಧರ್ಮದಲ್ಲಿದ್ದುದರಿಂದ ನಮ್ಮ ಧರ್ಮಕ್ಕೆ ವಿರುದ್ಧವಾದ ಈ ತಮ್ಮ ಹುಕುಮನ್ನು ತಿರುಗಿ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ನಮ್ಮ ಸಮಾಜದ ಲುಕಸಾನಿಯ ಬಗ್ಗೆ ನಿಮ್ಮ ಮೇಲೆ ದಾವೇ ತರಲ್ಪಡುವದು" ಎಂಬ ಅರ್ಥದ ನೋಟೀಸನ್ನು ಸರಕಾರದ ಮೇಲೆ ತಾರೀಖು ೨೬ನೇ ಜುಲೈ ಸನ್ ೧೯೧೧ನೇ ಇಸವಿಯ ದಿವಸ ಕೊಟ್ಟಿರುವರು. ಮುಂದಿನ ಪರಿಣಾಮವು ಹೇಗೆ ಆಗುವದೆಂಬದನ್ನು ಎಲ್ಲರೂ ನೋಡುವಂತಾಗಿದೆ.

ಕೊಲ್ಹಾಪುರದಲ್ಲಿ ಆದ ವ್ಯಾಸನ ತೋಳಿನ ಮೆರವಣಿಗೆಯು

ಅಥಣಿಯ ವ್ಯಾಸನ ತೋಳಿನ ಪ್ರಕರಣವು ಈ ಮೇರೆಗೆ ಒಳ್ಳೇ ವಾದವಿವಾದಕ್ಕೆ ಬಿದ್ದು ಕಡೆಯ ಪರಿಣಾಮವು ಇನ್ನೂ ಹೊರಬೀಳದೆ ಇರುತ್ತಿರಲು, ಸಂಸ್ಥಾನ ಕೊಲ್ಹಾಪುರ ಶಹರದ ವೀರಶೈವರು ಶ್ರೀಚಿತ್ರದುರ್ಗದ ಜಗದ್ಗುರುಗಳನ್ನು ತಮ್ಮಲ್ಲಿ ಬರಮಾಡಿಕೊಂಡು, ಈ ಮಹೋತ್ಸವವನ್ನೆ ಸಗಬೇಕೆಂದಾಲೋಚಿಸಿ ವ್ಯಾಸನ ತೋಳು ಸಹಿತ ಸಕಲ ಬಿರುದಾವಳಿಗಳ ಶೋಭೆಯಿಂದ ಜಗದ್ಗುರುಗಳ ಮಹೋತ್ಸವಕ್ಕೆ ಪರವಾನಗಿಯನ್ನು ಬೇಡಲು, ಅಲ್ಲಿಯ ದಿವಾನಸಾಹೇಬ ಬಹದ್ದೂರರವರು "ವೀರಶೈವರು ತಮ್ಮ ಧಾರ್ಮಿಕ ಸಂಪ್ರದಾಯದಂತೆ ಯಾವತ್ತು ಬಿರುದಾವಳಿಗಳಿಂದ ಜಗದ್ಗುರುಗಳ ಉತ್ಸವವನ್ನು ನಡಿಸಲಿಕ್ಕೆ ಪರವಾನಗಿಯನ್ನು ಬೇಡುತ್ತಾರೆ"ಂದು ಮಾಡಿದ ಇಂಗ್ರೇಜ ರಿಪೋರ್ಟ ನಂಬರ ೯೪೪/೧೬ನೇ ಮಾರ್ಚ ೧೯೧೧ ನೇ ಇಸವಿಯ ದಿವಾನ ಸಾಹೇಬರವರ ಹುಕುಮಿನ ಕೆಳಗೆ, ಶ್ರೀ ಛತ್ರಪತಿ ಶಾಹೂಮಹಾರಾಜ ಸರಕಾರ ಕೊಲ್ಹಾಪುರ ಇವರ ಇಂಗ್ಲೇಜಿ ಹುಕುಮ ನಂಬರ ೧೨೪/೨೪ನೇ ಮಾರ್ಚ ೧೯೧೧ನೇ ದರ ಪ್ರಕಾರ, "ಜಗದ್ಗುರು ಚಿತ್ರಗಲ್‌ಮಠದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರ ಮೆರವಣಿಗೆಯ ಮಹೋತ್ಸವವನ್ನು, ಅವರಿಗಿದ್ದ ವ್ಯಾಸನತೋಳು ಸಹಿತ ಸಕಲ ಬಿರುದಾವಳಿ ಸಮೇತವಾಗಿ ಮಾಡಲಿಕ್ಕೆ ಏನೂ ಹರಕತ ಇಲ್ಲ. 'ಮೋರಚಲ' ಎಂಬ ಬಿರುದು ನಮ್ಮಲ್ಲಿ ರಾಜಬಿರುದು, ಆಗಿರುವದರಿಂದ ಛತ್ರಪತಿ ಮಹಾರಾಜರ ಹೊರತು ಅದನ್ನು ಯಾರಿಗೂ ಹಿಡಿಯುವ ಹಕ್ಕು ಇಲ್ಲ. ಆದರೂ ನಾನು ಈ ಜಗದ್ಗುರುಗಳವರ ಉತ್ಸವಕ್ಕೆ ಮೊರಚಲದ ಪರವಾನಗಿಯನ್ನೂ ಕೊಟ್ಟಿರುವೆನು. ನನ್ನ ಮುಂದಿನ ಮಹಾರಾಜರು ಮುಂದೆ ತಮ್ಮ ಮನಸಿಗೆ ಬಂದಂತೆ ಪರವಾನಗಿಯನ್ನು ಕೊಡಬಹುದು. ನಾನು ಮಾತ್ರ ಅವರಿಗಿದ್ದ ಯಾವತ್ತು ಬಿರುದಾವಳಿ ಸಹಿತ (ವ್ಯಾಸನತೋಳು ಸಹಿತ) ಈ ಉತ್ಸವಕ್ಕೆ ಪರವಾನಗಿ ಕೊಟ್ಟಿರುತ್ತೇನೆ" ಎಂಬದಾಗಿ ಹುಕುಮು ಕೊಟ್ಟಿದ್ದರಿಂದ, ಕೊಲ್ಹಾಪುರ ಇಲಾಖೆಯ ವೀರಶೈವರೆಲ್ಲ ತಮ್ಮ ರಾಜಧಾನಿಯಾದ ಕೊಲ್ಹಾಪುರ ಶಹರದಲ್ಲಿ ತಾರೀಖು ೧೨ನೇ ಮೇ ೧೯೧೧ನೇ ಇಸವಿಯ ದಿವಸ ಮಹಾಸಮಾರಂಭದಿಂದ ವ್ಯಾಸನ ತೋಳು ಸಹಿತವಾಗಿ ಸರ್ವಬಿರುದಾವಳಿಗಳೊಂದಿಗೆ ಶ್ರೀಗಳವರ ಮೆರವಣಿಗೆಯನ್ನು ಜರುಗಿಸಿ, ಕೀರ್ತಿಯನ್ನು ಹೊಂದಿದರು. ಈ ಉತ್ಸವವನ್ನು ನೋಡಲಿಕ್ಕೆ ದೂರದೂರಿನಿಂದ ಬಹುಜನರು ಹೋಗಿದ್ದರು. ಅಲ್ಲಿ ಶ್ರೀಗಳವರ ವ್ಯಾಸನತೋಳು ಸಹಿತ ಮಹೋತ್ಸವದ ಪೋಟೋ ತೆಗೆದು ಸಮಾರಂಭದಲ್ಲಿ ಹಂಚಿದರು.

ಕೊಲ್ಲಾಪುರದಲ್ಲಿ ಈ ಸಮಾರಂಭವಾದನಂತರ, ಆ ಇಲಾಖೆಗೆ ಸೇರಿದ ಪೇಠಾ ಗಡಇಂಗ್ಲಜದಲ್ಲಿ ವ್ಯಾಸನತೋಳು ಸಹಿತವಾಗಿ ಎಲ್ಲ ಬಿರುದಾವಳಿಗಳೊಂದಿಗೆ ತಾರೀಖು ೩೦ನೇ ಜೂನ ೧೯೧೧ನೇ ಇಸವಿಯ ದಿವಸ ಶ್ರೀ ಜಗದ್ಗುರುಗಳವರ ಮೆರವಣಿಗೆಯ ಸಮಾರಂಭವಾಯಿತು. ಇದರಂತೆ ಅಥಣಿಯ ಹೊರತಾಗಿ ಬೇರೆ ಹಲವು[೫] ಕಡೆಗಳಲ್ಲಿ ಈ ವ್ಯಾಸನ ತೋಳಿನ ಸಮಾರಂಭಗಳನ್ನು ಆಗಿಯೂ, ಆಗುತ್ತಲೂ ಇರುವವು.

ವ್ಯಾಸನ ತೋಳಿನ ಬಗ್ಗೆ ವೀರಶೈವರಿಗೆ ಇರುವ ಹಕ್ಕೂ, ಆ ಬಗ್ಗೆ ಹಿಂದೆ ಆಗಿಹೋದ ಸರಕಾರ ಠರಾವುಗಳೂ

ವ್ಯಾಸನ ತೋಳಿನ ಸಂಬಂಧವಾಗಿ ವಾದವಿವಾದವು, ಲಿಂಗಾಯತರಿಗೂ ಬ್ರಾಹ್ಮಣರಿಗೂ ಬಹುದಿವಸಗಳಿಂದಲೂ ಅದೆ. ಸರಕಾರೀ ಠರಾವುಗಳಾದರೂ ಒಮ್ಮೆ ಇವರಂತೆಯೂ, ಮತ್ತೊಮ್ಮೆ ಅವರಂತೆಯೂ ಆಗುತ್ತ ಬಂದಿರುತ್ತವೆ. ವ್ಯಾಸನ ತೋಳು ಮೆರೆಸುವ ಪ್ರಘಾತವು ಲಿಂಗಾಯತರಿಗೆ ಜನ್ಮತಃ ಇದ್ದು, ಅದು ಪೇಶವೆಯರ ಕಾಲದಲ್ಲಿಯೂ ಕೂಡ ನಡೆಯುತ್ತಲಿತ್ತು. ಇದರ ಯಾವತ್ತು ಇತಿಹಾಸವು ಈ ಕೆಳಗಿನ ಸಂಗತಿಯಿಂದ ಗೊತ್ತಾಗುತ್ತದೆ.

ಸನ್ ೧೮೧೮ನೇ ಇಸವಿಯ ನವಂಬರ ತಿಂಗಳಲ್ಲಿ ಇಂಗ್ಲೀಷರಿಗೂ, ಪೇಶವಯರಿಗೂ ಖಡಕಿಯ ಹತ್ತರ ಕಾಳಗವಾಗಿ, ಸನ್ ೧೮೧೯ನೇ ಇಸವಿಯ ಫೆಬ್ರುವರಿ ತಿಂಗಳಲ್ಲಿ ಡೆಕ್ಕನ್ ಮತ್ತು ಕರ್ನಾಟಕ ಪ್ರಾಂತನ್ನು ಇಂಗ್ಲೀಷರು ತಮ್ಮ ಕಬ್ಜಾಕ್ಕೆ (ಸ್ವಾಧೀನಕ್ಕೆ)ತೆಗೆದುಕೊಂಡರು. ಆಗ ಮೇಜರ ಜನರಲ್ ಮನ್ರೋ ಎಂಬವರು ಕಮ್ಯಾಂಡರ (ದಳವಾಯಿ)ಗಳಿದ್ದರು. ಈ ಜಯದಿಂದ ಮುಂದೆ ಅವರಿಗೆ ಸರ್ ಎಂಬ ಕಿತಾಬು ದೊರೆತು, ಇವರನ್ನು ಸರ್ ಥಾಮಸ್ ಮನ್ರೋ ಎಂದು ಕರೆಯಹತ್ತಿದರು. ಈ ಹೊಸದಾಗಿ ಗೆದ್ದುಕೊಂಡ ಸೀಮೆಗೆ ಮದ್ರಾಸದ ಸಿವ್ಹಿಲಿಯನ್ ಕಲೇಕ್ಟರರನ್ನು ನೇಮಿಸಿದ್ದರಿಂದ, ಅವರು ಧಾರವಾಡಕ್ಕೆ ಪ್ರಿನ್ಸಿಪಾಲ ಕಲೆಕ್ಟರರಾಗಿ ಬಂದರು. ಇವರಿಗೆ ಆಗ ಪ್ರಿನ್ಸಿಪಾಲ ಕಲೇಕ್ಟರ ಪೊಲಿಟಿಕಲ್ ಎಜಂಟ ಸದರ್ನ ಮರಾಠಾ ಕಂಟ್ರಿ ಎಂದೆನ್ನುತ್ತಿದ್ದರು. ಇವರಿಗಿಂತ ಮೊದಲು ಮೆ॥ಚಾಪಲಿನ್ ಸಾಹೇಬ ಬಹದ್ದೂರವರು ಮದ್ರಾಸದಿಂದ ಪ್ರಿನ್ಸಿಪಾಲ ಕಲೆಕ್ಟರರಾಗಿ ಬಂದಿದ್ದರು. ಇವರು ಬರುವಾಗ ತಮ್ಮೊಡನೆ ತಮ್ಮ ವಿಶ್ವಾಸಿಕ ಮತ್ತು ಅನುಭವಿಕರಾದ ಕೆಲ ವೈಷ್ಣವ ಬ್ರಾಹ್ಮಣರನ್ನು ಕೆಲಸದ ಮೇಲೆ ತೆಗೆದುಕೊಂಡು ಬಂದಿದ್ದರು. ಇವರೇ ಮುಂದೆ ಕಮೀಶನರ ಆಫ್ ಡೆಕ್ಕನ್ ಆದರು. ಆಮೇಲೆ ಸೇಂಟ ಜಾನ್ ಥ್ಯಾಕರೆ[೬] ಎಂಬ ಸಾಹೇಬರು ಮದ್ರಾಸ ಇಲಾಖೆಯಿಂದ ಪ್ರಿನ್ಸಿಪಾಲ ಕಲೇಕ್ಟರ ಪೋಲಿಟಿಕಲ್ ಎಜಂಟ ಸದರ್ನ ಮರಾಠಾ ಕಂಟ್ರಿ ಆಗಿ ಬಂದರು. ಆಗ ಈ ಪ್ರಾಂತಕ್ಕೆ ಸೌಥ ಮರಾಠಾ ದುವಾಬ ಅನ್ನುತ್ತಿದ್ದರು. ಅಂದರೆ ದಕ್ಷಿಣದಲ್ಲಿರುವ ಭೀಮಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶವೆನ್ನುತ್ತಿದ್ದರು. ಇಂಗ್ಲೀಷರ ಆಳಿಕೆಯ ಮೊದಲು ಪೇಶವೆಯರ ಕಾಲದಲ್ಲಿ ಸರಕಾರದಿಂದ ನಂದೀಧ್ವಜ

---

೫. ಇದೇ ವರ್ಷ (೧೯೧೧) ಎಪ್ರೀಲ ತಿಂಗಳಲ್ಲಿ ಅಥಣೀ ತಾಲೂಕ ತೆಲಸಂಗ, ಅನಂತಪುರ, ಕಿನ್ನಾಳ, (ಡಿಶಂಬರ ತಿಂಗಳಲ್ಲಿ) ಹಿಪ್ಪರಗಿ ಮತ್ತು ಅಥಣಿಯ ಹತ್ತರಿರುವ (ಕುರಂದವಾಡ ಇಲಾಖೆ ಪೈಕಿ) ಇಂಗಳಗಾವಿಯ ಮುಂತಾದ ಸ್ಥಳಗಳಲ್ಲಿ ಜಗದ್ಗುರುಗಳ ವ್ಯಾಸನ ತೋಳಿನ ಮೆರವಣಿಗೆಯಾಯಿತು.

೬. ಈ ಥ್ಯಾಕರೆ ಸಾಹೇಬರು ಕಿತ್ತೂರ ದೇಸಾಯಿಯ ತಾಯಿಯಾದ ಚೆನ್ನವ್ವನವರಿಂದ ಹತನಾದುದರಿಂದ, ಈತನ ದೇಹವನ್ನು ಧಾರವಾಡಕ್ಕೆ ತಂದು ದಫನಮಾಡಿ ಅದರ ಮೇಲೆ ಸುಂದರವಾದ ಗೋರಿಯನ್ನು ಕಟ್ಟಿರುತ್ತಾರೆ. ಈಗ್ಯೂ ಈ ಗೋರಿಯು ರಸ್ತೆಗೆ ಹೊಂದಿ ಎತ್ತರವಾಗಿ ನಿಂತಿರುತ್ತದೆ.

ಸಹಿತವಾಗಿ ವ್ಯಾಸನತೋಳಿನ ಮೆರವಣಿಗೆಯ ವಹಿವಾಟವಿತ್ತು. ಈ ಥ್ಯಾಕರೆ ಸಾಹೇಬರು ಬಂದಕೂಡಲೆ ಈ ವ್ಯಾಸನತೋಳು ಹಾಯಿಸಗೊಡಬಾರದೆಂದು ಸನ್ ೧೮೪೯ನೇ ಇಸವಿಯಲ್ಲಿ ಎಲ್ಲ ಮಾಮಲೇದಾರರಿಗೆ ಒಟ್ಟು ಹುಕುಮು (ಸರಕ್ಯೂಲರ್) ತೆಗೆದರು. ಜನರು ಈ ಹುಕುಮು ಮಾನ್ಯಮಾಡದೆ ಸನ್ ೧೮೪೯ನೇ ಇಸವಿಯ ನವಂಬರ ತಿಂಗಳಲ್ಲಿ ವ್ಯಾಸನತೋಳು ಮೆರಿಸಿದರು. ಅದು ಬ್ರಾಹ್ಮಣರಿಗೆ ಸಹನವಾಗದೆ ಅವರು ಕೋರ್ಟ ಆಫ್ ರಿಜಿಸ್ಟ್ರಾರ್ (ಅಂದರೆ ಪ್ರಿನ್ಸಿಪಾಲರ ಕಲೇಕ್ಟರ ಇವರ ಅಸಿಸ್ಟಂಟನಿಗೆ ಜ್ಯೂಡಿಸಿಯಲ್ ಅಸಿಸ್ಟಂಟ ಅಥವಾ ಕೋರ್ಟ ಆಫ್ ರಿಜಿಸ್ಟ್ರಾರ ಎಂದೆನ್ನುತ್ತಿದ್ದರು) ಇವರ ಕೋರ್ಟಿನಲ್ಲಿ ಸನ್ ೧೮೨೮ನೇ ಇಸವಿಯಲ್ಲಿ ವ್ಯಾಸನ ತೋಳಿನ ಮನಾಯಿ ಬಗ್ಗೆ ವಿವಾದ ಹೂಡಿದರು. ಈ ಕೋರ್ಟಿನಲ್ಲಿ ರಾಮಚಂದ್ರಾಚಾರ್ಯ ಗುರಾಚಾರ್ಯ (ಗುಡಿ) ಮತ್ತು ಸಮಸ್ತ ಬ್ರಾಹ್ಮಣವಾದಿ ಇವರು, ಪ್ರತಿವಾದಿ ಸಿದ್ಧಲಿಂಗಪ್ಪ ಸೆಟ್ಟಿ ಹಾಗೂ ಬಸನಗೌಡ ಪಾಟೀಲ ಧಾರವಾಡ ಇವರ ಮೇಲೆ, ವ್ಯಾಸನ ತೋಳು ಮೆರಿಸಿ ತಮ್ಮ ಅಪಮಾನ ಮಾಡಿದರೆಂಬ ಆರೋಪವಿಟ್ಟು ನಮ್ಮ ಹಾನಿಯನ್ನು ತುಂಬಿಕೊಡಬೇಕೆಂದೂ, ಮುಂದೆ ವ್ಯಾಸನತೋಳು ಮೆರಿಸುವದು ಬಂದು ಮಾಡಬೇಕೆಂದೂ, ೫೦೦ ರೂಪಾಯಿಗಳ ದಾವೆ ತಂದರು. ಆದರೆ ಕೋರ್ಟ ಆಫ್ ರಿಜಿಸ್ಟ್ರಾರ್ ಇವರು ಸದರೀ ಲುಕಸಾನಿಯನ್ನು ವಾದಿಯರಿಗೆ ಕೊಡಿಸದೆ, ಮುಂದೆ ವ್ಯಾಸನತೋಳು ಮೆರಿಸುವದನ್ನು ಬಂದುಮಾಡಿದರು.

ಮುಂದೆ ಲಿಂಗಾಯತರು ಮೆ॥ಡಬ್ಲೂ. ಇ. ಫ್ರಿಯರ ಜಿಲ್ಲಾ ಜರ್ಜ್ಜ ಇವರ ಕೋರ್ಟಿಗೆ ಅಪೀಲ ಮಾಡಿದರು. ಡಬ್ಲ್ಯೂ.ಇ.ಪ್ರಿಯರ ಇವರು, ಮುಂದೆ ಗವ್ವರ್ನರರಾದ ಸರ್ ಬಾರ್ಟಲ್ ಫ್ರಿಯರ ಇವರ ಅಣ್ಣಂದಿರಿದ್ದರು. ಡಬ್ಲ್ಯೂ. ಇ.ಪ್ರಿಯರ ಸಾಹೇಬ ಬ॥ರವರು ಸದರೀ ಅಪೀಲು ವಿಚಾರಿಸಿ, ಕೆಳಗಿನ ಕೋರ್ಟಿನವರು ಮಾಡಿದ ಹುಕುಮನ್ನು ರದ್ದುಪಡಿಸಿ, ಲಿಂಗಾಯತರಿಗೆ ವ್ಯಾಸನ ತೋಳಿನ ಮೆರವಣಿಗೆಯ ಹಕ್ಕು ಜನ್ಮತಃ ಇರುತ್ತದೆಂದೂ, ಇವರು ಈ ಉತ್ಸವವನ್ನು ಮೆ॥ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾಹೇಬ ಬ॥ರವರ ಬಂದೋಬಸ್ತ ತೆಗೆದುಕೊಂಡು ನಿರ್ವಿವಾದವಾಗಿ ಮಾಡಬಹುದೆಂದೂ, ಧಾರವಾಡದಲ್ಲಿ ಬ್ರಾಹ್ಮಣರ ಪ್ರಚಾರವಾಗುವದಕ್ಕಿಂತ ಮೊದಲು ಲಿಂಗಾಯತ ವ್ಯಾಸನ ತೋಳು ಮೆರಿಸುತ್ತಲೇ ಬಂದಿರುವರೆಂದೂ ಠರಾವು ಮಾಡಿದರು.

ಬಳಿಕ ಬ್ರಾಹ್ಮಣರು ಮುಂಬಯಿಯ ಸದರ ದಿವಾಣಿ ಅದಾಲತ ಕೋರ್ಟಿಗೆ ಅಂದರೆ ಹಾಯಕೋರ್ಟಿಗೆ ಅಪೀಲ ಮಾಡಿದರು. ಸ್ಪೇಶಲ್ ಅಪೀಲ ನಂಬರ ೬೪೯/೫ ನವಂಬರ ೧೮೩೩ ಈ ವಿವಾದವನ್ನು ಹಾಯಕೋರ್ಟಿನವರು ಪರಾಮರಿಸಿ, ಜಿಲ್ಲಾ ಕೋರ್ಟಿನವರು ಮಾಡಿದ ಹುಕುಮನ್ನೇ ಕಾಹಿಮ ಮಾಡಿದ್ದಲ್ಲದೆ ಲಿಂಗಾಯತರಿಗೆ ಆದ ಅವರ ಕೋರ್ಟ ಖರ್ಚು ೮೧ ರೂಪಾಯಿ ಕೊಡಿಸಿದರು. ಅಂದರೆ ಹಾಯಕೋರ್ಟಿನವರು, ಲಿಂಗಾಯತರಿಗೆ ವ್ಯಾಸನ ತೋಳು ಮೆರಿಸುವ ಹಕ್ಕು ಸ್ವಾಭಾವಿಕವಾಗಿ ಅಂದರೆ ಜನ್ಮತಃ (ಹುಟ್ಟಾ) ಇರುತ್ತದೆಂಬದನ್ನು ಸಿದ್ಧಪಡಿಸಿದರು.

ಈ ಹಾಯಕೋರ್ಟಿನ ಠರಾವಿಗೆ ಅನುಸಾರವಾಗಿ ಸನ್ ೧೮೩೬ನೇ ಇಸವಿಯಲ್ಲಿ ಧಾರವಾಡದಲ್ಲಿ ಪುನಃ ವ್ಯಾಸನ ತೋಳು ಮೆರಿಸಲ್ಪಟ್ಟಿತು. ಆ ಕಾಲಕ್ಕೆ ಸ್ವಲ್ಪ ದಂಗೆಯಾಗಲು ಆ ಬಗ್ಗೆ ಸರಕಾರಕ್ಕೆ ರಿಪೋರ್ಟಾಗಿ ಸರಕಾರದಲ್ಲಿ ವಿಚಾರಣೆ ನಡೆದು, ಹೊಸ ಠರಾವು ಮಾಡಿ ಆ ಠರಾವವನ್ನು ಮುಂಬಯಿ ಸರಕಾರದವರು ವಿಲಾಯತಿಗೆ ಕೋರ್ಟ ಆಫ್ ಡಾಯರೇಕ್ಟರ್ಸ ಇವರ ಕಡೆಗೆ ಕಳಿಸಿದರು. ಅದಕ್ಕೆ ಅನುಸಾರವಾಗಿ ಅವರು "ನಾವು ಪ್ರತಿಯೊಂದು ಧರ್ಮದಲ್ಲಿ ಕೈಹಾಕಲಾರೆವು. ಅವರವರ ಜಾತಿಯ ಧರ್ಮದ ಪ್ರಕಾರ ಪ್ರತಿಯೊಂದು ಧರ್ಮವು ಸರಿಯಾಗಿ ನಡೆಯತಕ್ಕದ್ದು. ಆದರೆ ವ್ಯಾಸನ ತೋಳಿನ ಮೆರವಣಿಗೆಯಿಂದ ದಂಗೆಯಾಗುತ್ತದೆಂದು ಕಂಡುಬಂದದರಿಂದ ಅದರ ಉತ್ಸವಕ್ಕೆ ಪರವಾನಗಿ ಕೊಡಲಾರೆವು" ಎಂದು ಠರಾವ ಮಾಡಿದರು. ಕೋರ್ಟ ಆಫ್ ಡಾಯರೇಕ್ಟರ್ಸ ಇವರ ಇಂಗ್ರೇಜೀ ಪತ್ರ ನಂಬರ ೨/೧೬ಮೇ, ೧೮೩೮ ಇಸವಿ ಜ್ಯೂಡಿಸಿಯಲ್ ಡಿಪಾರ್ಟಮೆಂಟ.

ಆ ಕಾಲಕ್ಕೆ ಧಾರವಾಡ ಜಿಲ್ಲೆಯ ಕಲೇಕ್ಟರರಾಗಿದ್ದ ಮೆ|ಥಾಮಸ್ ಹಾರ್ವೆ ಬೇಬರ್ ಸಾಹೇಬ ಬ||ರವರು "ಧಾರವಾಡದ ಆಫೀಸುಗಳಲ್ಲಿ ಎಲ್ಲರೂ ಬ್ರಾಹ್ಮಣರೇ ಇದ್ದದರಿಂದ ಈ ದಂಗೆಯ ಮಸಲತ್ತು ಯಾರಿಗೂ ತಿಳಿಯಲಿಲ್ಲ. ಆದದರಿಂದ ದಂಗೆಯಾಯಿತು. ಆಫೀಸಿನಲ್ಲಿ ಎಲ್ಲರೂ ಇವರೇ ಇಲ್ಲದಿದ್ದರೆ ನಿಶ್ಚಯವಾಗಿ ದಂಗೆಯಾಗುತ್ತಿದ್ದಿಲ್ಲ" ಎಂದು ಸರಕಾರಕ್ಕೆ ಬರೆದದರಿಂದ, ಇನ್ನು ಮೇಲೆ ಎಲ್ಲ ಆಫೀಸುಗಳಲ್ಲಿ ಲಿಂಗಾಯತರನ್ನು ಸೇರಿಸಿಕೊಳ್ಳಬೇಕೆಂಬದಾಗಿ ವಿಲಾಯತಿ ಕೋರ್ಟ ಆಫ್ ಡಿರಕ್ಟರ್ಸ ಸಭೆಯವರಿಂದ ಠರಾವವಾಯಿತು.

ವ್ಯಾಸನ ತೋಳು ಕಟ್ಟಿ ಮೆರಿಸುವ ಬಗ್ಗೆ
ವೀರಶೈವರಿಗೆ ಜನ್ಮತಃ ಇರುವ ಹಕ್ಕೂ ಪೌರಾಣಿಕ ಆಧಾರಗಳೂ

ವೀರಶೈವರಿಗೆ ವ್ಯಾಸನ ತೋಳು ಮೆರಿಸುವ ಹಕ್ಕು ಜನ್ಮತಃ ಇರುತ್ತದೆಂಬದಕ್ಕೆ ಪುರಾಣ ಮುಂತಾದ ಗ್ರಂಥಗಳಲ್ಲಿ ಅನೇಕ ಆಧಾರಗಳಿವೆ. ಅವುಗಳಲ್ಲಿ ಕೆಲವು ಆಧಾರಗಳನ್ನು ಇಲ್ಲಿ ಕೊಟ್ಟಿರುತ್ತದೆ.

ವ್ಯಾಸಹಸ್ತವನ್ನು ನಂದೀಧ್ವಜಕ್ಕೆ ಕಟ್ಟಿ ಮೆರವಣಿಗೆ ಮಾಡುವ ಪ್ರಚಾರವು ಪುರಾಣೋಕ್ತವಾಗಿದ್ದು, ಅದರ ಮೆರವಣಿಗೆಯಾದರೂ ಪೌರಾಣಿಕ ಕಾಲದಿಂದಲೂ ನಡೆಯುತ್ತ ಬಂದಿರುವದು. ನಂದೀಧ್ವಜಕ್ಕೆ ವ್ಯಾಸನ ತೋಳು ಕಟ್ಟಿ ಯಾಕೆ ಮೆರಿಸುತ್ತಾರೆಂಬ ಸಂಗತಿಯು ಎಷ್ಟೋ ಜನರಿಗೆ ಗೊತ್ತಿರುವದಿಲ್ಲ. ಹದಿನೆಂಟು ಮಹಾಪುರಾಣಗಳೆಂದು ವ್ಯವಹಾರ ರೂಢವಾಗಿರುತ್ತದಷ್ಟೇ;ಇವೆಲ್ಲ ಮಹಾಪುರಾಣಗಳನ್ನು ರಚಿಸಿದ ಮಹರ್ಷಿಯೇ ವ್ಯಾಸನು. ಈ ವ್ಯಾಸಹಸ್ತದ ವಿಷಯವಾಗಿ ಶಿವಾಧಿಕ್ಯವೆಂಬ ಗ್ರಂಥದಲ್ಲಿ

ಯಸ್ಮಾದ್ರಮೇಶಾಧಿಕತಾಂ ಪ್ರವಕ್ತು|ರ್ವ್ಯಾಸಸ್ಯ ಸದ್ಬಾಹುಯುಗೇ ಪ್ರರುದ್ಧೇ ||
ಪುನಸ್ಸ ಏವಾಹ ಶಿವಾಧಿಕತ್ವಂ|ತಸ್ಮಾಚ್ಛಿವಸ್ಸರ್ವಸುರಪ್ರಕೃಷ್ಟಃ ||೧||

ಎಂದು ಹೇಳಲ್ಪಟ್ಟಿದೆ. ಅಂದರೆ ಪೂರ್ವದಲ್ಲಿ ವ್ಯಾಸಮುನಿಯು ಶಿವ ವರಪ್ರಸಾದದಿಂದ ಅಷ್ಟಾದಶ ಪುರಾಣಗಳನ್ನು ರಚಿಸುವದಕ್ಕೆ ಪ್ರಯತ್ನಿಸಿ ಶಿವಾಧಿಕ್ಯವನ್ನು ಹೇಳುತ್ತ, ಹತ್ತು ಶೈವ ಪುರಾಣಗಳನ್ನು ರಚಿಸುವದಕ್ಕೆ ಪ್ರಯತ್ನಿಸಿ ಶಿವಾಧಿಕ್ಯವನ್ನು ಹೇಳುತ್ತ, ಹತ್ತು ಶೈವ ಪುರಾಣಗಳನ್ನು ರಚಿಸಿದನಂತರ ವಿಷ್ಣು ಪುರಾಣಗಳನ್ನು ರಚಿಸುವದಕ್ಕೆ ಆರಂಭಿಸಿ, ಮಾಯಾಮೋಹಮನಸ್ಕವಾಗಿ ವಿಷ್ಣ್ವಾಧಿಕ್ಯವನ್ನು ಹೇಳುತ್ತಿರಲು, ಸಮೀಪದಲ್ಲಿದ್ದ ಶಿಷ್ಯರು ಯತಿಗಳು ಎಲ್ಲರೂ ಸೇರಿ ವ್ಯಾಸರನ್ನು ಕುರಿತು "ಮಹಾಸ್ವಾಮಿ, ಏತತ್ಪರ್ಯಂತರ ಸಕಲ ಜಗತ್ಕರ್ತನು ಪರಶಿವನು. ಆ ಶಿವನ ಆಜ್ಞೆಯಿಂದ ಪಿಪೀಲಿಕಾದಿ ಬ್ರಹ್ಮಪರ್ಯಂತವೂ ಬಂಧಿಸಲ್ಪಟ್ಟಿದೆ. ಶಿವನಿಗಿಂತ ಅಧಿಕವಾದ ದೇವರೇ ಇಲ್ಲ, ಶಿವನೇ ಸರ್ವೋತ್ತಮನು" ಎಂದು ಹೇಳಿ, ಈಗ ವಿಷ್ಣುವಿನಿಂದಲೇ ಸರ್ವಜಗತ್ತು ವ್ಯಾಪ್ತವಾಗಿರುವದು ಎಂದು ಹೇಳಿದ್ದನ್ನು ಶಿಷ್ಯರು ಕೇಳಿ, "ಆರಂಭಕ್ಕೆ ಶ್ರುತ್ಯುಕ್ತನುಭವಗಳಿಂದ ಶಿವಸರ್ವೋತ್ತಮನೆಂದು ಹೇಳಿ, ಈಗ ಹೀಗೆ ಹೇಳುವದು ಸಮಂಜವೇ" ಎಂದು ವ್ಯಾಸರನ್ನು ಬೆಸಗೊಳ್ಳಲು, "ಆಗ ನಾನು ಅಜ್ಞಾನದಿಂದ ಹಾಗೆ ಹೇಳಿದೆನು; ಆದರೆ ವಿಷ್ಣುವೇ ಸರ್ವೋತ್ತಮನು" ಎಂದು ಪುನಃ ಹೇಳಲು, ಶಿಷ್ಯರು ಆ ನುಡಿಗಳನ್ನು ಕೇಳಿ "ತಮ್ಮ ವಚನವು ನಮಗೆ ಅನುಮಾನಾಸ್ಪದವಾಗಿದೆ. ಶ್ರೀ ಕಾಶೀ ವಿಶ್ವೇಶ್ವರನ ಸನ್ನಿಧಿಯಲ್ಲಿ ವಿಷ್ಣುವೇ ಅಧಿಕನೆಂದು ಕಯ್ಯೆತ್ತಿ ಹೇಳಿದರೆ ನಾವು ಒಪ್ಪುತ್ತೇವೆಂ"ದು ಹೇಳಲು, ಅದರಂತೆ ಒಪ್ಪಿಕೊಂಡು ವ್ಯಾಸನು ಶಿಷ್ಯಗಣ ಸಮೇತನಾಗಿ ವಾರಣಾಸಿಗೆ (ಶ್ರೀ ಕಾಶೀಕ್ಷೇತ್ರಕ್ಕೆ) ಗಮಿಸಿ, ಅನೇಕ ಕೋಟಿ ಮನುಮುನಿಗಳ ಮುಂದೆ ಹಸ್ತಗಳನ್ನೆತ್ತಿ ಶ್ರೀ

ವಿಶ್ವನಾಥನ ಮುಂದೆ ನಿಂತು "ನ ದೈವಂ ಕೇಶವಾತ್ಪರಂ" ಅಂದರೆ ವಿಷ್ಣುವಿಗಿಂತಲೂ ಅಧಿಕವಾದ ದೇವರು ಇಲ್ಲವೆ"ಂದು ಸಾರಿ ಹೇಳಲು, ಆ ಸಮಯದಲ್ಲಿ ಎರಡೂ ಭುಜಗಳು ಅಲ್ಲಾಡಿಸುವದಕ್ಕಾಗದಂತೆ ಸ್ತಂಭಿತವಾದವು. ಬಳಿಕ ಎಷ್ಟು ಪ್ರಯತ್ನಪಟ್ಟರೂ ಬಗ್ಗಿಸುವದಕ್ಕೆ ಅವಕಾಶವಿಲ್ಲದೆ ಪಾಶಗಳಿಂದ ಬಿಗಿದಂತಾಗಲು, ಆ ಕಾಲದಲ್ಲಿ ಬ್ರಹ್ಮನು ಬಂದು "ಎಲೈ ಮರುಳೇ, ಮಾಯಾವಶವಾದೆಯಾ? ಶಿವನಾಮೋಚ್ಚಾರಣೆಯನ್ನು ಮಾಡು" ಎಂದು ಹೇಳಲು, ಶಿವತತ್ವದ ಜ್ಞಾನೋದಯವಾಗಿ, ಆಗ ವ್ಯಾಸನು ಶಿವಸ್ತುತಿಯನ್ನು ಮಾಡಲು ನಂದೀಶ್ವರನು ಬಂದು, ವ್ಯಾಸನಿಗೆ ಪ್ರತ್ಯಕ್ಷನಾಗಿ, ಭುಜಗಳ ಬಂಧನವನ್ನು ಬಿಡಿಸಿದನು. ಆಗ ವ್ಯಾಸನು ಪರಮಾನಂದ ಭರಿತನಾಗಿ "ಇದೇನು?ನಾನು ಮಾಯಾಭ್ರಾಂತನಾಗಿ ಅವಿವೇಕದಿಂದ ಸಕಲ ಜಗನ್ನಾಯಕನಾದ ಪರಮೇಶ್ವರನನ್ನು ವಿಷ್ಣುವಿಗಿಂತಲೂ ನಿಕೃಷ್ಟನನ್ನಾಗಿ ಹೇಳಿದೆನಲ್ಲ!ಪ್ರಮಾದವಾಯಿತು. ವಿಷ್ಣು ಸರ್ವೋತ್ತಮನೆಂದು ಹೇಳುವದಕ್ಕೋಸ್ಕರ ಎತ್ತಿದ ನನ್ನ ತೋಳುಗಳು ಇರಬಾರದೆ"ಂದು ಕತ್ತರಿಸಲ್ಪಟ್ಟ ಬಾಹುಗಳುಳ್ಳವನಾದನು. ಮತ್ತೆ ಶಿವಪ್ರಸಾದದಿಂದ ಮರಳಿ ಭುಜಗಳನ್ನು ಪಡೆದು, ಪುನಃ ಶಿವಸರ್ವೋತ್ತಮನೆಂದು ಕಯ್ಯೆತ್ತಿ ಹೇಳಹತ್ತಿದನು. ಶಿವಾಧಿಕ್ಯದಲ್ಲಿ ಈ ಸಂಗತಿಯು ಈ ಪ್ರಕಾರ ಇದ್ದದ್ದಲ್ಲದೆ ಶಿವಮಹಿಮಾಶತಕದಲ್ಲಿ

ವನಜಾತೇಕ್ಷಣನತ್ತಲಿಂದೆ ಪರವಿಲ್ಲೀ ಭಾಷಿತಂ ಸತ್ಯಮೆಂ ।
ದೆನುತಂ ತನ್ನಯ ತೋಳನೂರ್ಧ್ವಕಿರದೆತ್ತಲ್ ವ್ಯಾಸನಾ ಕಾಲದೊಳ್ ॥
ಘನದೇವೋತ್ತಮ ನಂದಿಯಿಂದವನ ತೋಳೇನಾದುದೆಂದೆಂಬುದಂ ।
ಬಿನುಗರ್ ಕಾಶಿಯ ಕಾಂಡದಲ್ಲಿ ತಿಳಿಯರ್! ಶ್ರೀ ಚನ್ನಮಲ್ಲೇಶ್ವರಾ ॥೧॥

ಈ ಪ್ರಕಾರವಾಗಿ ಹೇಳಲ್ಪಟ್ಟಿದೆ. ಅಂದರೆ ವ್ಯಾಸಮುನಿಯು, ವಿಷ್ಣುವಿಗಿಂತಲು ಅಧಿಕವಾದ ದೈವವಿಲ್ಲವೆಂಬ ವಚನವು ಸತ್ಯವೆನ್ನುತ್ತ ತನ್ನ ತೋಳನ್ನು ತಪ್ಪದೆ ಮೇಲಕ್ಕೆತ್ತಲಾಗಿ, ಆ ಸಮಯದಲ್ಲಿ ಪರಶಿವನೆಂದೆನಿಸಿದ ನಂದೀಶ್ವರನಿಂದ ಆ ವ್ಯಾಸಋುಷಿಯ ತೋಳು ಏನಾಯಿತೆಂಬದನ್ನು ದ್ವೈತವಾದಿಗಳಾದ ಬ್ರಾಹ್ಮಣರು ಕಾಶೀಕಾಂಡದಲ್ಲಿ ಓದಿ ತಿಳಿದುಕೊಳ್ಳರೇ!

"ನ ದೈವಂ ಕೇಶವಾತ್ಪರಂ" ಎಂದು ವ್ಯಾಸಮುನಿಯು ತೋಳನ್ನು ಮೇಲಕ್ಕೆತ್ತಿದ ಕಾರಣ, ದ್ವಿತೀಯ ಶಂಭು ಎಂದೆನ್ನಿಸಿದ ನಂದಿಕೇಶ್ವರನು ಆತನ ತೋಳನ್ನು ಕತ್ತರಿಸಿದನು. ಪುನಃ ಶಿವಪ್ರಸಾದದಿಂದ ಬಾಹುಗಳನ್ನು ಪಡೆದು ವ್ಯಾಸನು ಶಿವಸರ್ವೋತ್ತಮನೆಂದು ಕಯ್ಯೆತ್ತಿ ಸಾರಹತ್ತಿದನು. ಈ ಸಂಗತಿಯೆಲ್ಲವು, ವ್ಯಾಸೋಕ್ತ ಸ್ಕಾಂದಪುರಾಣದ ಕಾಶೀಕಾಂಡದಲ್ಲಿ ವಿಶದವಾಗಿ ಹೇಳಲ್ಪಟ್ಟಿದೆ.

ಮತ್ತು ಭವಿಷ್ಯೋತ್ತರ ಪುರಾಣದಲ್ಲಿ ನೈಮಿಷೀಯ ಶಾಂಡಿಲ್ಯರ ಸಂವಾದದ ೬೧ನೇ ಅಧ್ಯಾಯದಲ್ಲಿ ವ್ಯಾಸಭುಜದ ಸಂಬಂಧವಾಗಿ ಬರೆಯಲ್ಪಟ್ಟ ಶ್ಲೋಕಗಳು :

ದೇಹಿ ಮೇ ನೂತನಬಾಹೂ।ಕಲ್ಪಶಾಖಾಸಮೌ ಶಿವ ॥
ನಂದೀಶೋತ್ಪಾಟಿತೌ ಬಾಹೂ।ಧ್ವಜೇ ತೇ ವಸತಾಂ ಸದಾ ॥೧॥

ಪೌತ್ರೀಂ ದಷ್ಟ್ರಾಂ ಪುರಾ ವಿಷ್ಣೋ।ಕಂಕಾಲಂ ಮೃಗಚರ್ಮಚ ॥
ನಾರಸಿಂಹಾಜಿನಂ ಮಾತ್ಸ್ಯಮ್।ವಾಲಂ ಕೌರ್ಮಾಸ್ಥಿಕಂ ವಿಷಮ್ ॥೨॥

ಧೃತೋಸಿ ಸರ್ವದಾ ತದ್ವತ್।ಬಧ್ವಾ ಬಾಹೂ ಧ್ವಜೇ ತಥಾ ॥
ದಿವಿ ಭೂಮ್ಯಾದಿತೋ ದೇವಾಃ। ಗಣಪಾಃ ಖೇಲಯಂತು ತೌ ॥೩॥

ತದಾ ಪುರಃ ಸ್ಥಿತಾನ್ ದೇವಾನ್।ಬಭಾಷೇ ಗಣಪುಂಗವಃ ॥
ಯೂಯಮೇಕಂ ಭುಜಂ ಸ್ವರ್ಗೇ।ಭೂಮ್ಯಾಮೇಕಂ ನರಶ್ಚವೈ ॥೪॥

ಇದಂ ಮಮ ವರಂ ಶಂಭೋ ।ದೇಹೀತಿ ಬ್ರುವತೋ ಮುನೇಃ ॥
ಸ್ವರ್ಣದಂಡಸಮೌ ಬಾಹೂ।ನೂತನೌ ಶಂಕರೋ ಹ್ಯದಾತ್ ॥೫॥

ಈ ಪ್ರಕಾರ ಹೇಳುತ್ತವೆ. ಅಂದರೆ ವೇದವ್ಯಾಸನು ಶಿವನಿಗಿಂತ ವಿಷ್ಣುವೇ ಪರಬ್ರಹ್ಮವೆಂದು ಹೇಳಿ, ತನ್ನ ಎರಡೂ ತೋಳುಗಳನ್ನು ಕಳಕೊಂಡನು. ಆ ಮೇಲೆ ವಿಷ್ಣುವಿಗಿಂತಲೂ ಶಿವನೇ ಅಧಿಕನೆಂದು ತನ್ನೆರಡು ತೋಳುಗಳನ್ನು ಪಡಕೊಂಡನು. ಇನ್ನು ಮುಂದೆ ಈ ಲೋಕದಲ್ಲಿ ಯಾರಾದರೂ ಶಿವನಿಂದೆಯನ್ನು ಮಾಡಿದರೆ ಅವರ ಗತಿಯು ಹೀಗೆ ಆಗುವದೆಂದು ಈ ಲೋಕದವರಿಗೆ ತಿಳಿಯುವದಕ್ಕಾಗಿ ಅದೇ ವ್ಯಾಸಮುನಿಯು ಕಳಕೊಂಡ ತನ್ನ ಎರಡು ತೋಳುಗಳಲ್ಲಿ ಒಂದು ತೋಳನ್ನು ಶಿವಸರ್ವೋತ್ತಮನೆಂದು ಸಾರಲಿಕ್ಕೆ ಸ್ವರ್ಗಲೋಕಕ್ಕೆ ಕಳಿಸಿದನು. ಮತ್ತೊಂದು ತೋಳನ್ನು ಈ ಭೂಲೋಕದಲ್ಲಿರುವ ವೀರಶೈವರು ತಮ್ಮ ನಂದೀಧ್ವಜಕ್ಕೆ ಕಟ್ಟಿಕೊಂಡು ಮೆರಿಸಬೇಕೆಂದು ವೇದವ್ಯಾಸನು ಪ್ರತಿಜ್ಞಾಪೂರ್ವಕವಾಗಿ ಪರಮೇಶ್ವರನಲ್ಲಿ ಬೇಡಿಕೊಂಡಿದ್ದಕ್ಕೆ ಶಿವನು ಸಂತುಷ್ಟನಾಗಿ, ಆ ಪ್ರಕಾರ ವರವನ್ನು ಕೊಟ್ಟನು. ಈ ಪ್ರಕಾರ ಭವಿಷ್ಯತ್ಪುರಾಣದ ೭೧ನೇ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಿರುವದು.

ಈ ಆಧಾರಗಳಿಗೆ ಅನುಸರಿಸಿ ಲಿಂಗಾಯತರು ಆಚರಿಸುವ ವೃಷಭಧ್ವಜೋತ್ಸವದಲ್ಲಿ ವ್ಯಾಸಭುಜವನ್ನು ಅದಕ್ಕೆ ಕಟ್ಟಿ ಮೆರೆಯಿಸುವದು ಆಧುನಿಕ ಪದ್ಧತಿಯಲ್ಲ. ಮತ್ತು ಕುಚೇಷ್ಟಾ ಮೂಲಕವೂ ಅಲ್ಲ. ಪೂರ್ವಕಾಲದಲ್ಲಿ ಇದು ಅನ್ಯಮತಕ್ಕೆ ಆಗೌರವಕರವಾದುದು ಎಂದು ಎಣಿಸಲ್ಪಟ್ಟೂ ಇರಲಿಲ್ಲ, ಎಂಬುವದಕ್ಕೆ ಇನ್ನೂ ಒಂದು ಸಾಕ್ಷ್ಯವು ಇರುತ್ತದೆ. ಅದೇನೆಂದರೆ-

ಈಗ್ಗೆ ೭೫೦ ವರ್ಷಗಳ ಹಿಂದೆ ದ್ವಾರ(ದೋರ)ಸಮುದ್ರದಲ್ಲಿ ಆಳುತ್ತಿದ್ದ ನರಸಿಂಹ ಬಲ್ಲಾಳನ ಬಳಿಯಲ್ಲಿ ಕೆರೆಯಪದ್ಮರಸರೆಂಬ ವೀರಶೈವ ಪಂಡಿತೋತ್ತಮರು ಮಂತ್ರಿಯಾಗಿದ್ದರು. ಅವರು ಬೇಲೂರಿನಲ್ಲಿರುವಾಗ ದ್ವಾರಸಮುದ್ರಕ್ಕೆ ಒಬ್ಬ ವೈಷ್ಣವನು ಬಂದು ಪದ್ಮರಸರೊಡನೆ ವಾದಮಾಡಬೇಕೆಂದು ಅಪೇಕ್ಷಿಸಿದನು. ಆಗ ದೊರೆಯು ಪದ್ಮರಸರನ್ನು ಕರೆಯ ಕಳುಹಿಸಲು, ಅವರು ಬೇಲೂರಿಂದ ಬರುವಾಗ ಅವರೊಡನೆ ದೊಡ್ಡ ಪರಿವಾರವಿತ್ತು. ಮುಂಗಡೆಯಲ್ಲಿ ವ್ಯಾಸಭುಜಸಮೇತವಾದ ನಂದೀಧ್ವಜಗಳಿದ್ದವು- ಎಂಬುದಾಗಿ ಅವರ ಚರಿತ್ರೆಯನ್ನು ವರ್ಣಿಸುವ "ಪದ್ಮರಾಜ ಪುರಾಣ"ದಲ್ಲಿಯ ೯ನೇ ಸಂಧಿಯ ೩೭ನೇ ಪದ್ಯದಲ್ಲಿ ಹೇಳಲ್ಪಟ್ಟಿದೆ. ಅದು ಹೇಗಂದರೆ,

ವಾರ್ಧಕ ಷಟ್ಪದಿ

ತಾಳಲಯ ಸಂಗೀತ ವಾದ್ಯಯತಿಗಳ ಗತಿಗೆ।
ಪಾಳಿದಪ್ಪದೆ ನರ್ತನಂಗೆಯ್ದು ಕೇಳಿಸುವ।

ಕೇಳಿಕೆಗಳಿಂದ ವ್ಯಾಸಹಸ್ತ ವೃಷಭಧ್ವಜಂಗಳನಾಂತು ಬರ್ಪವರ್ಗಳಿಂ ॥
ಓಳಿಯಂ ನಡೆವ ವೀರಗಣಂಗಳಿಂ ಛತ್ರ ।
ತಾಳವೃಂತೋದ್ಧ ಚಾಮರ ಮುಖಾನೇಕ ವಿಭ ।
ವಾಳಿಯಿಂ ಶಂಖಘಂಟಾಕಾಹಳೀ ಡಿಂಡಿಮಾದಿ ವಾದ್ಯಪ್ರಕರದಿಂ ॥೧॥

ಮತ್ತು ಆ ವಿದ್ವಾಂಸರು ಹೋಗುವಾಗ ಅವರ ಜತೆಯಲ್ಲಿ ಅನೇಕ ಪಂಡಿತರು ಹೋಗಿದ್ದರು. ಅವರಾರೆಂಬುದು ಅದೇ ಗ್ರಂಥದ ಈ ಎರಡು ಪದ್ಯಗಳಿಂದ ಗೊತ್ತಾಗುತ್ತದೆ.

ವಾರ್ಧಕ ಷಟ್ಪದಿ

ಸಕಲಜನ ಸೇವ್ಯ ದೋರಾಂಬುಧಿಯ ರಾಮಣ್ಣ ।
ನಕಲಂಕನುಭಯಕವಿಶರಭಭೇರುಂಡ ನೆನಿ ।
ಪ ಕವೀಂದ್ರ ರಾಘುವಂ ಹುಲಿಗೆರೆಯ ಮಾಯಿದೇವ ಪುರಾಣಭಟ್ಟರೆಸೆವಾ ॥
ಸುಕರ ಗುರುಭಕ್ತ ಕಾಮಣ್ಣನಭಿಯಾತಿ ತಿಮಿ ।
ರಕುಲ ಸಪ್ತಾಶ್ವ ವಿಶ್ವಣ್ಣನುದ್ಧತ ಶಾಸ್ತ್ರಿ ।
ನಿಕರ ಭಂಜನ ನಾಗಥಾರ್ಯಾನತಿ ರಸಿಕ ಕರ್ಣಾಭರಣ ಬುಧವರಂ ॥೧॥

ಪರಮಪದವಾಕ್ಯಪ್ರಮಾಣಜ್ಞನಾದ ದೇ- ।
ವರಸ ಪಂಡಿತನನೇಕ ಕಲಾವಿದಂ ಹಂಪೆ ।
ಯುರು ರಾಮಿತಂದೆ ಸನ್ಮೇಧ್ಯ ಜಗದಾರಾಧ್ಯನಾ ನಾಗಿದೇವೋತ್ತಮಂ ॥
ಸ್ಫುರದಷ್ಟಭಾಷಾ ಕವೀಶ್ವರಂ ಶಿವದಾಸ ।
ರರರೆ ಶೈವವಿರುದ್ಧಮತ ದಾವದಾವ ದಾ ।
ವರಸರಿವರಾದಿಯಾದನುಪಮಿತ ಶೈವ ವಿದ್ವಜ್ಜನಂ ನಡೆದುದೊಲವಿಂ ॥೨॥

ಈ ಎರಡು ಪದ್ಯಗಳಲ್ಲಿ ಹೇಳಲ್ಪಟ್ಟಿರುವ ವಿದ್ವಾಂಸರ ಹೆಸರುಗಳನ್ನು ನೋಡಿದರೆ, ಲಿಂಗಧಾರಕರಲ್ಲದೆ ಶೈವಪಂಡಿತರುಗಳೂ ಜತೆಯಲ್ಲಿ ಇದ್ದಿರಬಹುದೆಂದು ಕಾಣುತ್ತದೆ. ಆಗಿನ ಕಾಲದಲ್ಲಿ ಯಾರೂ ಆ ವೃಷಭಧ್ವಜದ ಸಂಬಂಧವಾಗಿ ಆಕ್ಷೇಪವಿಟ್ಟಿದ್ದಂತೆ ಕಾಣುವದಿಲ್ಲ. (ಈ ಪದ್ಮರಾಜ ಪುರಾಣವು ಈಗ್ಗೆ ೫೨೫ ವರ್ಷಗಳ ಹಿಂದೆ ಬರೆಯಲ್ಪಟ್ಟಿರುವದೆಂದು ಕವಿಚರಿತೆಯಲ್ಲಿ ಹೇಳಲ್ಪಟ್ಟಿದೆ.)

ಮತ್ತು ಗದುಗಿನ ಶ್ರೀ ಮರಿತೋಂಟದಾರ್ಯರು ರಚಿಸಿದ ಸಿದ್ಧೇಶ್ವರ[೭] ಪುರಾಣದ ೯ನೇ ಸಂಧಿಯ ೬೧ನೇ ಪದ್ಯದಲ್ಲಿ ವ್ಯಾಸನ ತೋಳಿನ ಬಗ್ಗೆ ಪ್ರಸ್ತಾಪವುಂಟು.

ವಾರ್ಧಕ ಷಟ್ಪದಿ

ಯತಿಪನಂ ಪುಷ್ಪಕದ ಮೇಲೆ ಕುಳ್ಳಿರಿಸಿ ಸ ।
ನ್ನುತಿಗಳಿಂ ಕೊಂಡಾಡುತಾಡುತ್ತುಘೇಯೆಂದೆ ।

೭. ಈ ಸಿದ್ಧೇಶ್ವರ ಪುರಾಣವು ೧೪ನೇ ಶತಮಾನದಲ್ಲಿ ರಚಿಸಲ್ಪಟ್ಟಿದೆ.

ನುತ ಮಂಗಳಾರತಿಯನೆತ್ತುತ್ತೆ ನೃತ್ಯವಾಡುತ್ತೆ ಸಂತೋಷಿಸುತ್ತೆ ॥
ಕ್ಷಿತಿಯರಿಯೆ ನಂದೀಧ್ವಜ ವ್ಯಾಸಭುಜಗಳನು ।
ಮತಿಯಿಂದ ಪಿಡಿದು ಬರೆ ಕೇರಿಕೇರಿಗಳೊಳಗೆ ।
ಚತುರತೆಯನಾಗಳೊಲವಿಂ ಮೆರಿಸಿ ತನ್ನ ಮಂದಿರಕೆ ಬಿಜಯಂಗೈಸಿದಂ ॥೧॥

ಅಂದರೆ ಕೆಗ್ಗೆರೆಯಲ್ಲಿ ನಂಬೆಂಣ ಎಂಬ ಭಕ್ತನು, ತೋಂಟದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳನ್ನು ನಂದೀಧ್ವಜ ವ್ಯಾಸನತೋಳು ಮೊದಲಾದ ಬಿರುದಾವಳಿಗಿಂದ ಕರಕೊಂಡು ಬಂದು ಸತ್ಕರಿಸಿದನು ಎಂದು ಹೇಳಲ್ಪಟ್ಟಿದೆ. ಮತ್ತು ಇದೇ ಪುರಾಣದ ೧೭ನೇ ಸಂಧಿಯ ೩೧ನೇ ಶ್ಲೋಕದಲ್ಲಿ-

ಎಂದಖಿಳರುಗಳು ನುಡಿಯುತಾ ಯತಿ ನಿಶ್ಚಳಾ ।
ನಂದಮಯನಡಿದಾವರೆಗೆ ತುಳಿಲ್ಗೆಯ್ದು ಕೃಪೆ ।
ಯಿಂದ ಬಿಜಯಂಗೈವುದೆಂದು ಬಿನ್ನವಿಸೆ ವಾದ್ಯಗಳ್ಬೆದರಾ ರವಗಳಿಂ ॥
ಸಂದಿಣಿಪ ನಂದೀಧ್ವಜಂ ವ್ಯಾಸಭುಜಗಳಿಂ ।
ದಂದು ಮೆರೆಯಲ್ ಚನ್ನವೀರಗೌಡನ ನಿಳಿಯ ।
ಕಂ ದಯಾಸಿಂಧುವಂ ತೋಂಟದ ಯತಿಪನ ಬಿಜಯಂಗೈಸಿದರು ನಲುವಿನಿಂ ॥೧॥

ಈ ಪ್ರಕಾರ ವ್ಯಾಸನ ತೋಳಿನ ಪ್ರಸಕ್ತಿಯನ್ನು ತಂದಿರುವನು.

ಪುರಂದರದಾಸನ ಪದ

ದಿಕ್ಕು ದಿಕ್ಕಿಗೆ ವೇದ ಸಾರುತಿದೆ।ನಮ್ಮ ।
ಮುಕ್ಕಣ್ಣನೇ ಘನಘನವೆಂದು ॥ಪಲ್ಲ॥

ಕಾಶಿಯ ನದಿಯಲ್ಲಿ ।ಕೇಶವ ಘನವೆಂದು ।
ವ್ಯಾಸನೆತ್ತಲು ಮೇಲಕೆ ತೋಳು ॥
ಈಶನ ಶರಣರು ಬಿಡದೆ ಎಳದೊಯ್ವಾಗ ।
ದೇಶದೇಶದೊಳೆಲ್ಲಾ ಮೆರೆವುತದೇಕೋ ॥೧॥

ರಂಗನ ಕಾಲೊಳು ಗಂಗೆ ಹುಟ್ಟಿದಳೆಂದು ।
ಭಂಗಹೀನರು ನೀವು ಅನಬೇಡಿರೋ ॥
ರಂಗನು ಮತ್ಸ್ಯಾವತಾರದೊಳಿರುವಾಗ ।
ರಂಗ ಮೊದಲೋ ತಾ ಗಂಗೆ ಮೊದಲೋ ॥೨॥

ಅಂಜಿ ಹೇಳುವನಲ್ಲ ಪುರಂದರ ವಿಠಲನು ।
ಕಂಜನಾಭಗೆ ಗಂಡನು ಶಿವನು ।

ನಂಜುಂಡ ಗುಡ್ಡೊಳು ರಂಜಿಸಿ ಮೆರೆವ ನಮ್ಮ ।
ನಂಜುಂಡನೇ ಘನಘನವೆಂದು ॥೩॥

ಈ ಮೇರೆಗೆ ವ್ಯಾಸನ ತೋಳಿನ ಬಗ್ಗೆ ಬಸವಪುರಾಣ, ಕ್ರಿಯಾಸಾರ, ವೀರಶೈವಮತಸಾರಸಂಗ್ರಹ ಮುಂತಾದ ವೀರಶೈವ ಧಾರ್ಮಿಕ ಗ್ರಂಥಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವದು. ಅಂದರೆ ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟ ವ್ಯಾಸಹಸ್ತದ ಸಂಗತಿಯನ್ನು ವೀರಶೈವ ಧರ್ಮಗ್ರಂಥಕಾರರು ತಮ್ಮ ತಮ್ಮ ಗ್ರಂಥಗಳಲ್ಲಿ ತಕ್ಕೊಂಡಿರುವರು.

ವ್ಯಾಸನ ತೋಳಿನ ಬಗ್ಗೆ ವ್ಯಾಪಾರ ರೂಢವಾದ ಆಧಾರಗಳು

ಈ ಪೌರಾಣಿಕ ಸಂಗತಿಯನ್ನು ಅವಲಂಬಿಸಿ ವೀರಶೈವ ಮತದ ಎಷ್ಟೋ ರಥೋತ್ಸವಗಳಲ್ಲಿ, ಪಲ್ಲಕ್ಕಿ ಮುಂತಾದ ಇತರ ಮಹೋತ್ಸವಗಳಲ್ಲಿ ಪುರಾಣಕಾಲದಿಂದಲೂ ಈ ವ್ಯಾಸನ ತೋಳು ಮೆರವಣಿಗೆಯೆಂದರೆ, ವ್ಯಾಸಋಷಿಗೆ ಶಿವಸರ್ವೋತ್ತಮನೆಂಬ ಜ್ಞಾನವಾದ ಸ್ಮಾರಕವೆಂದು ಅಥವಾ ನಂದೀಶ್ವರನ ಜಯದ ಸ್ಮಾರಕವೆಂದು ಹೇಳಲು ಅಡ್ಡಿಯಿಲ್ಲ. ಅದರಿಂದಲೇ ಎಲ್ಲ ಕಡೆಗೂ ದೇವಾಲಯಗಳಲ್ಲಿ, ಶಿವಾಲಯಗಳಲ್ಲಿ, ಮಠಮಂದಿರಗಳಲ್ಲಿ, ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ತೀರ್ಥಕ್ಷೇತ್ರ ಮುಂತಾದ ಪುಣ್ಯಸ್ಥಳಗಳಲ್ಲಿ, ಹಾದಿಗಳಲ್ಲಿಯೂ ಕೂಡ ವ್ಯಾಸಹಸ್ತದ ವಿಗ್ರಹಗಳೂ, ಚಿತ್ರಗಳೂ, ಪಟಗಳೂ ಅಲ್ಲಲ್ಲಿಗೆ ಕಂಡುಬರುತ್ತವೆ. ವ್ಯಾಸನತೋಳಿನ ಚಿತ್ರವನ್ನು ಕಲ್ಲಿನಲ್ಲಿ ಕೆತ್ತಿದ ವಿಗ್ರಹಗಳಿಗೆ ಹಸ್ತಶಿಲೆಗಳೆಂದೆನ್ನುವರು. ಈ ಹಸ್ತಶಿಲೆಗಳಲ್ಲಿ ಈ ವ್ಯಾಸನ ತೋಳಿನ ಚಿತ್ರದ ಹೊರತು, ಲಿಂಗಮುದ್ರೆಯೂ, ಬಸವಣ್ಣ (ನಂದಿ), ಸೂರ್ಯ ಚಂದ್ರ ಇತ್ಯಾದಿ ಪ್ರತಿಮೆಗಳೂ ಇದ್ದು, ವ್ಯಾಸನ ಹಸ್ತವು ಶಿವನನ್ನೇ (ಲಿಂಗಮುದ್ರೆಯನ್ನೇ) ತೋರಿಸುತ್ತಿರುವಂತೆ ಲಿಂಗಕ್ಕೆ ಎದುರಾಗಿ ಇರುತ್ತದೆ. ಅಂದರೆ ಶಿವನೇ ಸರ್ವೋತ್ತಮನೆಂದು ಕೈಯೆತ್ತಿ ಸಾರುತ್ತಿರುವಂತೆ ವ್ಯಾಸನ ತೋಳಿನ ರಚನೆಯಿರುತ್ತದೆ. ಕಲ್ಲಿನಲ್ಲಿ ಹೊಡೆದ ಈ ವ್ಯಾಸನ ತೋಳಿನ ಪ್ರತಿಮೆಯಲ್ಲದೆ ನಿಶಾನೆಗಳ ಮೇಲೆ ಸಹ ಅರಿವೆಗಳಿಂದ ವ್ಯಾಸನ ತೋಳನ್ನು ಕತ್ತರಿಸಿ ಹಚ್ಚಿರುತ್ತಾರೆ. ಅದಕ್ಕೆ ಹೊಂದಿ ಈಶ್ವರ, ಬಸವೇಶ, ಸೂರ್ಯ, ಚಂದ್ರಾದಿ ಚಿತ್ರಗಳು ಇರತಕ್ಕದ್ದೇ ಸರಿ. ಇದಲ್ಲದೆ ಕೆಲವು ಕಡೆಗೆ ಪಲ್ಲಕ್ಕಿಗಳ ದಂಡಿಗೆಗೂ, ಕೆಲವು ಕಡೆಗೆ ಕಂಬಿಗಳಿಗೂ ವ್ಯಾಸನ ತೋಳನ್ನು ಕಟ್ಟುವ ಪರಿಪಾಠವುಂಟು. ಮತ್ತು ವೀರಶೈವ ಧರ್ಮಸಂಬಂಧವಾದ ಯಾವತ್ತು ಶುಭಾಶುಭಕಾರ್ಯಗಳಲ್ಲಿ ಅಂದರೆ ಧರ್ಮಸಂಬಂಧದ ಮೆರವಣಿಗೆ ಮುಂತಾದದ್ದು ಹೊರಡುವ ವೇಳೆಯಲ್ಲಿ ವ್ಯಾಸನ ತೋಳು ಸಹಿತವಾದ ನಂದೀಧ್ವಜವನ್ನು ಮೆರೆಸುವ ಸಾಂಪ್ರದಾಯವು ಪುರಾಣಕಾಲದಿಂದಲೂ ವೀರಶೈವರಲ್ಲಿ ಅದೆ. ಶವಗಳ ದಫನ ಮಾಡುವಾಗ ಸಮಾಧಿಯ ನಾಲ್ಕೂ ಗೋಡೆಗಳಲ್ಲಿ ಪ್ರತಿಯೊಂದು ಗೋಡೆಯ ಮಧ್ಯಭಾಗದಲ್ಲಿ ಲಿಂಗಮುದ್ರೆಯನ್ನೂ, ನಂದಿಯಮೂರ್ತಿಯನ್ನೂ ಬರೆದು, ಆ ನಂದಿಯ ಹತ್ತರಿರುವ ನಂದೀಸಂಭಕ್ಕೆ ಹೊಂದಿ ವ್ಯಾಸನತೋಳು ಬರೆಯುತ್ತಾರೆ. ಅಥವಾ ಕಾಗದ ಕತ್ತರಿಸಿ ಹಚ್ಚುತ್ತಾರೆ. ಇಲ್ಲವೆ ವಿಭೂತಿಯಿಂದ ಬರೆಯುತ್ತಾರೆ. ಯಾಕಂದರೆ ವ್ಯಾಸನ ತೋಳು ನಂದೀಶ್ವರನ ಜಯಸೂಚಕದ ಉದಾಹರಣೆಯಾಗಿದ್ದುದರಿಂದ, ಅದು ನಂದಿಯ ಹತ್ತರ ಯಾವಾಗಲೂ ಇರಲಿಕ್ಕೆಬೇಕು. ವ್ಯಾಸನತೋಳು ಇಲ್ಲದೆ ನಂದೀಧ್ವಜದ ಪೂಜೆಯಾಗುವದಿಲ್ಲ. ಹಾಗೆ ಮಾಡಿದರೆ ಆ ಪೂಜೆಯು ಯೋಗ್ಯವಲ್ಲ ಅಂದರೆ ಶಾಸ್ತ್ರಸಮ್ಮತವಲ್ಲ. ಕಾರಣ ವ್ಯಾಸನತೋಳು ಸಹಿತವಾಗಿಯೇ ನಂದೀಧ್ವಜದ ಪೂಜೆಯಾಗತಕ್ಕದ್ದು.

ಲಿಂಗದ ಬಲಭಾಗಕ್ಕೆ ಸೂರ್ಯನ ಚಿತ್ರವನ್ನೂ, ಎಡಭಾಗಕ್ಕೆ ಚಂದ್ರನ ಚಿತ್ರವನ್ನೂ ಬರೆಯುವ ನಡವಳಿಕೆಯುಂಟು. ಇದರಂತೆ ಅಲ್ಲಲ್ಲಿ ಕಂಡುಬರುವ ಹಸ್ತಶಿಲೆಗಳಲ್ಲಿ ಲಿಂಗಮುದ್ರೆ, ನಂದಿ, ಆ ನಂದೀಸ್ತಂಭಕ್ಕೆ ಹೊಂದಿ ವ್ಯಾಸನತೋಳು, ಬಲಕ್ಕೆ ಸೂರ್ಯನ ಚಿತ್ರ, ಎಡಕ್ಕೆ ಚಂದ್ರನ ಚಿತ್ರ ಇರುತ್ತವೆ. ಕೆಲಕೆಲವು ಕಡೆಯ ಹಸ್ತಶಿಲೆಗಳಲ್ಲಿ ಈ ಮೇಲಿನ ಚಿತ್ರಗಳಲ್ಲದೆ ಕಯ್ಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಕುದುರೆಯ ಮೇಲೆ ಸವಾರಿಯಾದ ರುದ್ರನ ಮೂರ್ತಿಯೂ, ಕೆಲವೆಡೆಯಲ್ಲಿ ಒಂದು ಕಯ್ಯಲ್ಲಿ ಖಡ್ಗವನ್ನೂ, ಇನ್ನೊಂದು ಕಯ್ಯಲ್ಲಿ ಡಾಲನ್ನೂ ಹಿಡಿದು ಕುದುರೆಯನ್ನೇರಿದ ರುದ್ರದೇವರ ಮೂರ್ತಿಯೂ, ಆ ರುದ್ರದೇವರ ಮುಂದೆ ಕಯ್ಯಲ್ಲಿ ಬಿಲ್ಲುಬಾಣಗಳನ್ನೂ, ಇಲ್ಲವೆ ಕತ್ತಿ ಥಾಲುಗಳನ್ನೂ ಹಿಡಿದ ಕಾಲ್ದಳದ ಗಣಮೂರ್ತಿಗಳೂ ಕೆತ್ತಲ್ಪಟ್ಟಿರುತ್ತವೆ. ಯಾಕಂದರೆ ಸೂರ್ಯನು ಜ್ಞಾನದ ಚಿಹ್ನವು. ವೀರಶೈವರು ನಿರರ್ಥಕವಾದ ಕರ್ಮಕಾಂಡವನ್ನು ತ್ಯಜಿಸಿ ಜ್ಞಾನಕಾಂಡವನ್ನು ಸ್ವೀಕರಿಸಿದುದರಿಂದ ಇವರಿಗೆ ಒಂದೇ ಒಂದು ಜನ್ಮದಲ್ಲಿ ಮೋಕ್ಷವಾಗುತ್ತದೆಂದು ವೀರಶೈವ ಧರ್ಮಗ್ರಂಥಗಳು ಹೇಳುತ್ತವೆ. ಆದುದರಿಂದ ವೀರಶೈವರಿಗೆ ಪುನರ್ಜನ್ಮವಿಲ್ಲದ್ದರಿಂದ ಅವರು ಶ್ರಾದ್ಧ ಪಕ್ಷ ಮೊದಲಾದ ಪಿತೃಕರ್ಮಗಳನ್ನು ಮಾಡಬೇಕಾಗುವದಿಲ್ಲ. ಇದಲ್ಲದೆ ಸೂರ್ಯನು ಉತ್ತರಾಯಣದ ಚಿಹ್ನವಿದ್ದುದರಿಂದ ಉತ್ತರಾಯಣದಲ್ಲಿ ಮೃತವಾದವರಿಗೆ ಮೋಕ್ಷವಾಗುತ್ತದೆಂಬದಾಗಿ ಶಾಸ್ತ್ರವುಂಟು. ಅದರಿಂದ ಜ್ಞಾನಸೂಚಕವಾದ ಸೂರ್ಯನ ಚಿತ್ರವನ್ನು ಬಲಭಾಗಕ್ಕೆ ಬರೆಯುವ ಸಾಂಪ್ರದಾಯವುಂಟು.

ಚಂದ್ರನು ದಕ್ಷಿಣಾಯನದ ಮತ್ತು ಕರ್ಮಕಾಂಡದ ಚಿಹ್ನವು. ಕರ್ಮಕಾಂಡವನ್ನನುಸರಿಸಿದವರಿಗೆ ಮರಣದ ನಂತರ ಚಂದ್ರಲೋಕವಾಗುತ್ತದೆ; ಬಳಿಕ ಅವರಿಗೆ ಪುನರ್ಜನ್ಮವಾಗುತ್ತದೆಂದು ವೇದ ಮತ್ತು ಉಪನಿಷತ್ತುಗಳಲ್ಲಿ ಹೇಳಿರುತ್ತದೆ. ವೀರಶೈವರು ಕರ್ಮಕಾಂಡವನ್ನು ಬಿಟ್ಟಿದ್ದರಿಂದ ಇವರಿಗೆ ಪುನರ್ಜನ್ಮನವು ಎಂದೂ ಆಗುವದಿಲ್ಲ. ಈ ತತ್ವವನ್ನು ವೀರಶೈವರು ದುಃಖದ ಕಾರ್ಯಗಳಲ್ಲಿಯೂ ಕೂಡ ಅಂದರೆ ಸಮಾಧಿಯಲ್ಲಿಯೂ ಅನುಸರಿಸುತ್ತಾರೆ. ಮತ್ತು ಶವವನ್ನು ಒಯ್ಯುವ ವಿಮಾನದಲ್ಲಿಯೂ ಸಹ ಮೇಲೆ ಬರೆದಂತೆ ಕಾಗದದ ಚಿತ್ರಗಳನ್ನು ಬರೆದು ಹಚ್ಚುತ್ತಾರೆ.

ಕರ್ನಾಟಕದಲ್ಲಿ ಒಕ್ಕಲತನ ಮಾಡುವ ಜನರಲ್ಲಿ ವೀರಶೈವರೇ ಬಹಳ. ಈ ವೀರಶೈವ ಒಕ್ಕಲತನದವರು ತಮ್ಮ ತಮ್ಮ ಹೊಲಗಳಲ್ಲಿ ಬತ್ತ, ಜೋಳ ಮುಂತಾದ ಧಾನ್ಯಗಳ ರಾಶಿಗಳನ್ನು ತಯಾರಮಾಡಿ ಕರಿಬಂಟವನ್ನು ಕಟ್ಟುವ ಕಾಲಕ್ಕೆ ಆ ರಾಶಿಗಳ ಮೇಲೆ ಸಹ ಮೇಲೆ ಬರೆದ ಎಲ್ಲ ಚಿತ್ರಗಳನ್ನು ಅಂದರೆ ಲಿಂಗ, ನಂದಿ, ಸೂರ್ಯ, ಚಂದ್ರ, ವ್ಯಾಸನತೋಳು ಮೊದಲಾದವುಗಳನ್ನು ಆ ಕರಿಬಂಟದಿಂದ ಬರೆದು ಪೂಜೆಮಾಡಿ, ನೈವೇದ್ಯ ಹಿಡಿದು, ಕಣದ ಹಬ್ಬವನ್ನು ಮಾಡಿದನಂತರ ರಾಶಿಗಳನ್ನು ಮುಗುಚಿ ಮನೆಗೆ ತರುವರು. ವೀರಶೈವರ ಸಂಸರ್ಗದಿಂದ, ಇತರ ಜಾತಿಯ ಒಕ್ಕಲತನದವರೂ ಸಹ ತಮ್ಮ ತಮ್ಮ ರಾಶಿಗಳ ಮೇಲೆ ಕರಿಬಂಟದಿಂದ ಈ ಚಿಹ್ನಗಳನ್ನು ಬರೆಯುತ್ತಾರೆ. ಮತ್ತು ವೀರಶೈವರ ಲಗ್ನಕಾಲಕ್ಕೆ ಲಗ್ನವೇದಿಕೆಗಳ ಮೇಲೂ, ಗೋಡೆಗಳ ಮೇಲೂ ಕೆಲಕೆಲವು ಕಡೆಗೆ ನಂದಿ, ಈಶ್ವರ, ವ್ಯಾಸನಹಸ್ತ ಮೊದಲಾದ ಚಿತ್ರಗಳನ್ನು ಬರೆಯುತ್ತಾರೆ.

ಮತ್ತು ವೀರಶೈವ ಜನಾಂಗದ ಎಷ್ಟೋ ಜನರು, ನವರಾತ್ರಿ ಹಬ್ಬದಲ್ಲಿ ಘಟಸ್ಥಾಪನೆಯನ್ನು ಮಾಡುವ ಸಮಾರಂಭದಲ್ಲಿಯೂ, ಭಾದ್ರಪದ ಶುದ್ಧ ಅಷ್ಟಮಿಯಲ್ಲಿ ಅಂದರೆ ದಾರವನ್ನು ತೆಗೆದುಕೊಳ್ಳುವ ಹಬ್ಬದಲ್ಲಿಯೂ, ಗುಗ್ಗುಳ ಲಗ್ನ ಮುಂತಾದ ಸಮಾರಂಭಗಳಲ್ಲಿಯೂ ದೇವರ ಮೇಲೆ ಕಟ್ಟಿರುವ ಪಡುವಣಿಗೆಗೆ ತರಗಗಳನ್ನು ಅಂದರೆ ಕಣಕದಿಂದ ಕರಚೀಕಾಯಿ, ಸೂರೆಹಪ್ಪಳ, ಹುರಕ್ಕೀಹೋಳಿಗೆ, ಚಕ್ಕಲಿ, ಬೆಂಡಿನ ಸಂಡಿಗೆ, ಉಂಡಿ, ಲಿಂಗ, ಬಸವಣ್ಣ, ಸೂರ್ಯ, ಚಂದ್ರ, ವ್ಯಾಸಹಸ್ತ, ಗಂಟಿ, ಜಂಗು, ಸರಪಳಿ ಮೊದಲಾದ ಅನೇಕ ತರದ ಪದಾರ್ಥಗಳನ್ನು ಮಾಡಿ ಅವುಗಳನ್ನು ತುಪ್ಪದಲ್ಲಾಗಲಿ, ಎಣ್ಣೆಯಲ್ಲಾಗಲಿ ಕರಿದು ಶೋಭೆಗಾಗಿ ತೂಗಗಟ್ಟುತ್ತಾರೆ.

ಇವುಗಳಲ್ಲಿ ಕೆಲಪದಾರ್ಥಗಳು ಇಲ್ಲದಿದ್ದರೂ ಅಡ್ಡಿಯಿಲ್ಲ; ಆದರೆ ಲಿಂಗ, ಬಸವಣ್ಣ, ಸೂರ್ಯ, ಚಂದ್ರ ವ್ಯಾಸಹಸ್ತಗಳು ಇರಲಿಕ್ಕೇಬೇಕು. ಇವುಗಳನ್ನು ಕಿತ್ತೂರಲ್ಲಿ ಅಡಿವೆಪ್ಪಾ ಅಣ್ಣಾ ವಳಸಂಗದ ಇವರ ಮನೆಯಲ್ಲಿಯೂ, ಮಹಾರುದ್ರಪ್ಪಾ ಹೊಸಪೇಟಿ ಇವರ ಮನೆಯಲ್ಲಿಯೂ, ಮುತ್ತೂರವರ ಮನೆಯಲ್ಲಿಯೂ ಪ್ರತಿವರ್ಷ ನವರಾತ್ರಿಯ ಹಬ್ಬದಲ್ಲಿ ಮತ್ತು ಲಗ್ನಸಮಯದಲ್ಲಿ ಕಟ್ಟುತ್ತ ಬಂದದ್ದನ್ನು ಗ್ರಂಥಕರ್ತನಾದ ನಾನು ಈಗ ೧೫-೧೬ ವರ್ಷಗಳಿಂದಲೂ ನೋಡುತ್ತ ಬಂದಿರುವೆನು. ಮತ್ತು ಚಚಡೀ ದೇಸಗತಿಯ ಅರಮನೆಯಲ್ಲಿ ಕಟ್ಟಿದ್ದನ್ನೂ ನೋಡಿರುವೆನು. ಮತ್ತು ನಮ್ಮ ಮನೆಯಲ್ಲಿಯೂ ಕಟ್ಟುವರು. ಇದೇ ಪ್ರಕಾರ ಎಷ್ಟೋ ವೀರಶೈವರ ಮನೆಗಳಲ್ಲಿ ಈ ಪ್ರಕಾರ ದೇವರ ಮೇಲೆ ತರಗಗಳನ್ನು ಕಟ್ಟುವ ಪರಿಪಾಠವು ಬಹಳವುಂಟು.

ವೇದದೊಳಗೆ ಶಿವನಿಗೆ ರುದ್ರನೆಂಬ ಸಂಜ್ಞೆಯುಂಟು. ಅದರಿಂದ ವೀರಶೈವರಿಗೆ ಆದಿದೈವತವು ರುದ್ರನೇ ಎಂದು ಹೇಳಬಹುದು. ವೇದದೊಳಗಿನ ರುದ್ರನಿಗೇ ಇತ್ತಿತ್ತಲಾಗಿ ಶಿವ ಎಂದೆನ್ನಹತ್ತಿದರು. ಋಗ್ವೇದದಲ್ಲಿ ಶಿವಶಬ್ದ ಸಂಬಂಧವಾಗಿ ಎರಡೇ ಋಚೆಗಳುಂಟು. ಉಳಿದ ಎಲ್ಲೆಡೆಯಲ್ಲಿ ರುದ್ರ ಶಬ್ದವನ್ನೇ ಉಪಯೋಗಿಸಲ್ಪಟ್ಟಿರುವದು. ರುದ್ರನು ಅಗ್ನಿತತ್ವದ ಆದಿ ದೈವತವು. ರುದ್ರದೇವರ ಪೂಜೆಯು ಅಗ್ನಿಯ ಪೂಜೆಯಂತೆಯೇ ಆಗುತ್ತದೆ. ಮತ್ತು ಪಿಂಡಕಾರೂಪವಾಗಿ ಅಂದರೆ ಲಿಂಗರೂಪವಾಗಿಯೂ ರುದ್ರದೇವರ ಪೂಜೆಯಾಗುತ್ತದೆ. ಯಜುರ್ವೇದದಲ್ಲಿ ರುದ್ರದೇವರಿಗೆ ಭವ, ಶರ್ವ, ಈಶ್ವರ, ಈಶಾನ್ಯ, ಮಹಾದೇವ, ತ್ರಿಪುರಾಂತಕ, ತ್ರಿಯಂಬಕ ಎಂಬ ಹೆಸರುಂಟು. ಮತ್ತು ಇದೇ ವೇದದಲ್ಲಿ ರುದ್ರನಿಗೆ ಗಣನಾಯಕನೆಂದೂ ಅಂದರೆ ಯಾವತ್ತು ತನ್ನ ಗಣಗಳೊಡನ್ನೊಡಗೊಂಡು ಯುದ್ಧಮಾಡಿ ಸಕಲಜಗತ್ತನ್ನು ಸಂರಕ್ಷಿಸುವ ಕಾರ್ಯವನ್ನು ಕೈಕೊಂಡ ದೇವರೆಂದೂ ಹೇಳಿರುತ್ತದೆ. ಶತರುದ್ರೀಯ ಗ್ರಂಥದಲ್ಲಿ ರುದ್ರದೇವರನ್ನು ಯುದ್ಧಮೂರ್ತಿಯೆಂದು ಆಹ್ವಾಹನ ಮಾಡಿ, ಸುಬ್ರಹ್ಮಣ್ಯನೆಂದೂ, ಕಾರ್ತಿಕಸ್ವಾಮಿಯೆಂದೂ ಕುಮಾರನೆಂದೂ ಆತನನ್ನು ವರ್ಣಿಸಿರುವರು. ಅದರಿಂದ ಈತನ ಸ್ವರೂಪವನ್ನು, ಕಯ್ಗಳಲ್ಲಿ ಬಿಲ್ಲುಬಾಣಗಳನ್ನು ಇಲ್ಲವೆ ಖಡ್ಗ ಢಾಲುಗಳನ್ನು ಹಿಡಿದ ಕಾಲ್ದಳದ ಸಿಪಾಯಿಯಂತೆಯೂ, ಕುದುರೆಯ ಸವಾರನಂತೆಯೂ, ಮತ್ತು ಆಯುಧಧಾರಿಯಾಗಿ ರಥದಲ್ಲಿ ಕೂತ ರಥಿಕನಂತೆಯೂ ಕಲ್ಪಿಸಿ, ಅದರಂತೆ ಹಸ್ತಶಿಲೆಗಳಲ್ಲಿ ಕೆತ್ತಿ, ಅವುಗಳ ಪೂಜೆ ಮಾಡುತ್ತಾರೆ. ಹೀಗೆ ವೇದೋಕ್ತವಾಗಿಯೂ ಪುರಾಣೋಕ್ತವಾಗಿಯೂ ಇದ್ದ ಸಂಗತಿಗಳ ಆಧಾರದಿಂದಲೇ ಪೂರ್ವಜರು ಧರ್ಮಬದ್ಧ ಚಿತ್ರಗಳನ್ನು ಕೆತ್ತಿಸಿ, ಎಲ್ಲ ಕಡೆಗೆ ಹಸ್ತಶಿಲೆಗಳನ್ನು ಸ್ಥಾಪಿಸಿ, ಶಿಲಾಲೇಖಗಳನ್ನು ಬರೆಯಿಸಿ ಇಟ್ಟಿರುವರು.

ಮತ್ತು ವೀರಶೈವ ಜನಾಂಗದಲ್ಲಿ ಎಲ್ಲ ಕಡೆಗೆ ಪ್ರತಿವರ್ಷ ಭಾರತ ಹುಣ್ಣಿವೆಗೆ ಅಂದರೆ ಮಾಘ ಶುದ್ಧ ಏಕಾದಶಿಯಿಂದ ಮಾಘ ಪೌರ್ಣಿಮೆ ಸಹ ಐದು ದಿವಸ ಪ್ರತಿಯೊಂದು ಮನೆಯ ಹೆಣ್ಣುಮಕ್ಕಳು ತಮ್ಮ ತಮ್ಮ ಮನೆಯ ಮುಂದಿನ ಅಥವಾ ಹಿತ್ತಲ ಅಂಗಳವನ್ನು ಸಾರಿಸಿ ಸ್ವಚ್ಛಮಾಡಿ, ಬೆಳದಿಂಗಳ ಹೊಯ್ದು ಅದನ್ನು ಪೂಜೆಮಾಡುವ ಪರಿಪಾಠವು ಬುನಾದಿಯಿಂದಲೂ ನಡೆದು ಬಂದಿರುತ್ತದೆ.[೮] ಪ್ರತಿ ದಿವಸ ಒಂದೊಂದು ವಿಧವಾಗಿ ಅಂದರೆ ಕ್ರಮವಾಗಿ ಕಮಲಬಟ್ಟಲ, ತಳಕುಬಟ್ಟಲ, ಎಲೆಬಳ್ಳಿ, ಕೊಳಲಬಾವಿ ಹೀಗೆ ಬೆಳದಿಂಗಳ ಹೊಯ್ದು, ಹುಣ್ಣಿವೆಯ ದಿವಸ ರಥದ ಚಿತ್ರವನ್ನು ಹೊಯ್ಯುವದಲ್ಲದೆ ಅದರ ಎಡಬಲಕ್ಕೆ ಲಿಂಗಮುದ್ರೆ, ಬಸವಣ್ಣ, ಸೂರ್ಯ, ಚಂದ್ರ, ವ್ಯಾಸಹಸ್ತ, ಹಾವು, ಚೇಳು ಮೊದಲಾದ ಚಿತ್ರಗಳನ್ನು ಹೊಯ್ದು ಪೂಜೆ ಮಾಡುತ್ತಾರೆ. ಧರ್ಮಸಂಬಂಧವಾದ ದೇವತಾಕಾರ್ಯದಲ್ಲಿ ವ್ಯಾಸಹಸ್ತವನ್ನು ಹುಡುಗರೂ ಕೂಡ ಉಪಯೋಗಿಸುವದನ್ನು ನೋಡಿದರೆ, ವ್ಯಾಸಹಸ್ತದ ಹಕ್ಕು ವೀರಶೈವರಿಗೆ ಜನ್ಮತಃ ಇರುತ್ತದೆಂದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

---

೮. ಕೆಲವು ಕಡೆಗೆ ಗೋಡೆಗಳ ಮೇಲೂ ಬೆಳದಿಂಗಳ ಹೊಯ್ಯುವದುಂಟು.

ಈ ಪ್ರಕಾರ ವೀರಶೈವರು ಎಲ್ಲ ಶುಭಾಶುಭಕಾರ್ಯಗಳಲ್ಲಿ ಲಿಂಗ, ನಂದಿ, ನಂದೀಧ್ವಜ, ವ್ಯಾಸನ ತೋಳು, ಸೂರ್ಯ, ಚಂದ್ರ ಮೊದಲಾದ ಚಿತ್ರಗಳನ್ನು ಉಪಯೋಗಿಸುವ ರೂಢಿಯು ಪುರಾಣೋಕ್ತವಾಗಿಯೇ ಉಂಟು. ಅದರಿಂದ ಬುನಾದಿಯಿಂದಲೂ, ಅಂದರೆ ಪುರಾಣಕಾಲದಿಂದಲೂ ಈ ವ್ಯಾಸನತೋಳನ್ನು ಮೆರೆಯಿಸುವ ಸಾಂಪ್ರದಾಯವು ವೀರಶೈವರಲ್ಲಿ ರೂಢವಾಗುತ್ತ ಬಂದಿದೆ. ಇದಕ್ಕೆ ಅನುಗುಣವಾಗಿಯೇ ಕೆತ್ತಲ್ಪಟ್ಟ ಹಸ್ತಶಿಲೆಗಳೂ, ಶಿಲಾಲೇಖಗಳೂ ಎಷ್ಟೋ ಕಡೆಗೆ ದೊರೆಯುತ್ತವೆ. ಉದಾಹರಣಾರ್ಥವಾಗಿ ಈ ಕೆಳಗೆ ಬರೆದ ಸ್ಥಳಗಳಲ್ಲಿ ಹಸ್ತಶಿಲೆಗಳು (ಕಲ್ಲಿನಲ್ಲಿ ಹೊಡಿದ ವ್ಯಾಸನ ಹಸ್ತಗಳು) ಇದ್ದದ್ದನ್ನು ರಾ.ಬ||ಅರಟಾಳ ಸಾಹೇಬರವರು ತಮ್ಮ ಫಿರತಿಯಲ್ಲಿ ಅಲ್ಲಿಯ ವರೆಗೆ ಹೋಗಿ, ಮುದ್ದಾಂ ಅವುಗಳನ್ನು ಕಣ್ಮುಟ್ಟ ನೋಡಿ, ಅವುಗಳ ಚಿತ್ರಗಳನ್ನು ಬರೆಯಿಸಿ ತಂದು ತಮ್ಮ ಸಂಗ್ರಹದಲ್ಲಿಟ್ಟಿರುವರು. ಅವು ಯಾವವೆಂದರೆ-

೧. ಅಥಣೀಗ್ರಾಮದ ಶ್ರೀಮುರಿಗೀಸ್ವಾಮಿಗಳ ಮಠದಲ್ಲಿ (ಗಚ್ಚಿನಮಠದಲ್ಲಿ) ಒಂದು ಹಸ್ತಶಿಲೆಯದೆ.

೨. ಅಥಣಿ ತಾಲೂಕ ಐನಾಪುರ ಗ್ರಾಮದ ಹಿರೇಮಠದಲ್ಲಿ ಒಂದು ಹಸ್ತಶಿಲೆಯದೆ.[೯]

೩. ಗೋಕಾಕ ತಾಲೂಕ ಹಂದಿಗುಂದ ಗ್ರಾಮದ ಹಿರೇಮಠದಲ್ಲಿ ಒಂದು ಹಸ್ತಶಿಲೆಯದೆ.

೪. ಗೋಕಾಕ ತಾಲೂಕ ಕಲ್ಲೊಳ್ಳಿ ಗ್ರಾಮದ ಶಿವಾಲಯದಲ್ಲಿ ಒಂದು ಹಸ್ತಶಿಲೆಯದೆ.

೫. ಗೋಕಾಕ ಗಿರಣಿಯಿಂದ ಘಾಟರಸ್ತೆಗೆ ಹೋಗುವಾಗ ಎಡಬದಿಯಲ್ಲಿ ಒಂದು ಹಸ್ತಶಿಲೆಯದೆ.

೬. ಹುಕ್ಕೇರಿ ತಾಲೂಕ ಠಾಣಾ ಹತ್ತರಿಗಿಯ ಶ್ರೀ ಕಲ್ಮೇಶ್ವರನ ಗುಡಿಯಲ್ಲಿ ಜೋಡುಹಸ್ತಶಿಲೆಗಳಿವೆ.

೭. ಚಿಕ್ಕೋಡಿ ತಾಲೂಕ ಬೇನಾಡಿ ಗ್ರಾಮದಲ್ಲಿ ಈಶ್ವರನ ಮೂರ್ತಿಯೂ ಹನುಮಂತದೇವರ ಮೂರ್ತಿಯೂ ಒಂದೇ ಗುಡಿಯಲ್ಲಿದ್ದು, ಹನುಮಂತ ದೇವರ ಎದುರಿನಲ್ಲಿ ಹಸ್ತಶಿಲೆಯೊಂದು ಅದೆ.

೮. ಚಿಕ್ಕೋಡಿ ತಾಲೂಕ ಗಳತಗಿ ಗ್ರಾಮದಲ್ಲಿ ಈಶ್ವರ ಮತ್ತು ಹನುಮಂತ ದೇವರು ಒಂದೇ ಗುಡಿಯಲ್ಲಿದ್ದು, ಆ ಗುಡಿಯಲ್ಲಿ ಜೋಡು ಹಸ್ತಶಿಲೆಗಳು ಅವೆ.

೯. ಚಿಕ್ಕೋಡಿ ತಾಲೂಕ ಖಡಕಲಾಟ ಗ್ರಾಮದ ಈಶ್ವರನ ಗುಡಿಯಲ್ಲಿ ಒಂದು ಹಸ್ತಶಿಲೆಯದೆ.

---

೯. ಅಥಣೀತಾಲೂಕ ಐನಾಪುರ ಗ್ರಾಮದಲ್ಲಿರುವ ರುದ್ರಯ್ಯ ಬಿನ್ನ ವಿರೂಪಾಕ್ಷಯ್ಯ ಬಿನ್ನ ಸಂಗಯ್ಯ ಹಿರೇಮಠ ಇವರ ಮಠದ ತಲೆಬಾಗಿಲ ಹತ್ತರ ಆವಾರ ಗೋಡೆಗೆ ನಡಿಸಿದ ಹಸ್ತಶಿಲೆಯಲ್ಲಿ ಈ ಕೆಳಗೆ ಬರೆದ ಶಿಲಾಲಿಪಿಯು ಇರುತ್ತದೆ.

"ಶ್ರೀ ಸ್ವಸ್ತಿ ಶಕೆ ೧೪೧೪ ಪರಿಧಾವಿ ಸಂವತ್ಸರದ ಅಶ್ವಿಜ ಶುದ್ಧ ವಿಜಯ ದಶಮಿ ಬುಧವಾರದಲ್ಲಿ ನಾಗೋಜಿಯ ಸುತ ಯಲ್ಲೋಜಿ ಸ್ವರ್ಗಸ್ಥನಾದಲ್ಲಿ ರಾಣಿ ಗುಣಾನ್ವಿತೆಯರುಂ ಆನೇರಾಯನ ಕುಮಾರಿಯರುಂ ಚಿನ್ನಾಂಬಿಕೆಯುಂ ನಾಗಾಜಿಯಂ ಇವರೆಲ್ಲರು ಅಗ್ನಿಕುಂಡವಂ ಕೊಂಡರು. ಇಂತಿವರು ಮಹಸತಿಯರದಲ್ಲಿ ಆನೇರಾಯನ ಕುಮಾರಿ ಚಿನ್ನಾಂಬಿಕೆಯ ಸಹೋದರಿ ಹಯಮಾಂಬಿಕೆ ಈ ಹಸ್ತಶಿಲೆಯಂ ಪ್ರತಿಷ್ಠೆಯ ಮಾಡಿದಳು."

ಈ ಮೇಲಿನ ಶಿಲಾಲಿಪಿಯು ತಿದ್ದಿ ಬರೆಯಲ್ಪಟ್ಟಿದೆ. ಸದರ ಶಿಲಾಲಿಪಿಯು ಇದ್ದಕ್ಕಿದ್ದಂತೆ ಇದರ ಕೆಳಗೆ ಬರೆಯಲ್ಪಟ್ಟಿದೆ.

"ಶ್ರೀಸ್ವಸ್ತಿ ಸಕು ೧೪೧೪ ಪರಿಧಾವಿ ಸಂವತ್ಸರದ ಅಸ್ವಿಜ ಸುಧ ವಿಜೆಯ ೧೦ ಬುದವಾರದಲು ನಾಗೋಜಿಯ ಸುತ ಯಲೋಜಿ ಸ್ವರ್ಗಸ್ತನಾದ ರಾಣಿಗುಣಾನ್ವಿತೆಯರುಂ ಅನೆರಯನ ಕುಮಾರಿಯರುಂ ಚಿನ್ನಾಂಬಿಕೆಯುಂ ನಾಗಾಜಿಯುಂ ಬರು ಇವರೆ ಅಗ್ನಿಕೊಂಗವಂ ಕೊಂಗರು. ಇಂತಿವರು ಮಹಸತಿಯರದಲಿ ಆನೆಯರಾಯನ ಕುಮಾರಿ ಚಿನ್ನಾಂಬಿಕೆಯ ಸಹೋದರರೆ ಹಯಮಾಂಬಿಕೆ ಈ ಹಸ್ತಶಿಲೆಯಂ ಪ್ರತಿಷ್ಠೆಯ ಮಾಗೆದ.

ಈ ಶಿಲಾಲಿಪಿಯ ನಕಲು ತೆಗೆದುಕೊಂಡ ತಾರೀಖು ೧೩ನೇ ಡಿಜಂಬರ ಸನ್ ೧೯೧೦ನೇ ಇಸವಿ. ಈ ಹಸ್ತಶಿಲೆಯ ಚಿತ್ರವು ಬಲಬದಿಯ ಕಾಗದದಲ್ಲಿ ತೋರಿಸಲ್ಪಟ್ಟಿದೆ. (ಇದು ಮಾಸ್ತಿಶಿಲ್ಪ. ಪುಟ ಸಂಪೂರ್ಣ ತುಂಡುತುಂಡಾಗಿದೆ. ಕಾರಣ ಅದನ್ನು ಇಲ್ಲಿ ಕೊಟ್ಟಿಲ್ಲ.-ಸಂ)

೧೦.ಚಿಕ್ಕೋಡಿಯ ವಿರಕ್ತಮಠದ ಮುಂದೆ ಮತ್ತು ಬಿಲ್ವದಂಡಿಗೆಯ(ಬೀಳದಂಡಿಗೆಯ) ಮಠದ ಮುಂದೆ ಒಂದೊಂದು ಹಸ್ತಶಿಲೆಗಳಿವೆ.

೧೧.ಚಿಕ್ಕೋಡಿ ತಾಲೂಕ ಸದಲಿಗಿ ಗ್ರಾಮದ ಮಹಾದೇವರ ಗುಡಿಯಲ್ಲಿ ಒಂದು ಹಸ್ತ ಶಿಲೆಯದೆ.

ಇವುಗಳಂತೆ ಬೆಳಗಾವ ಜಿಲ್ಲೆಯ ಹುಕ್ಕೇರಿ, ಬೆಳಗಾವ, ಸಂಪಗಾವಿ, ಸವದತ್ತಿ, ಖಾನಾಪುರ ಮುಂತಾದ ಎಲ್ಲ ತಾಲೂಕಗಳಲ್ಲಿಯೂ, ಧಾರವಾಡ ವಿಜಾಪುರ ಕಾರವಾರ ಮುಂತಾದ ಜಿಲ್ಲೆಗಳಲ್ಲಿಯೂ, ಘಟ್ಟದ ಕೆಳಗೆ ಸಾವಂತವಾಡಿ ರತ್ನಾಗಿರಿ ಜಿಲ್ಲೆಗಳಲ್ಲಿಯೂ, ಕುಲಾಬಾ ಜಿಲ್ಲೆಯಲ್ಲಿಯೂ, ಇದರಂತೆ ವೀರಶೈವರ ವಸತಿಯುಳ್ಳ ಹಿಂದುಸ್ತಾನದ ಎಲ್ಲ ಕಡೆಯಲ್ಲಿಯೂ ಹಸ್ತಶಿಲೆಗಳು ಅಲ್ಲಲ್ಲಿ ಅನೇಕ ಕಡೆಗೆ ಅವೆ. ಅವೆಲ್ಲವುಗಳನ್ನು ಇಲ್ಲಿ ಬರೆಯುತ್ತ ಹೋದರೆ ಸ್ಥಳಸಾಲದು. ಕೆಲವು ಕಡೆಯ ವ್ಯಾಸನತೋಳಿನ ವಿಗ್ರಹಗಳನ್ನು ಬ್ರಾಹ್ಮಣರು ಮತದ್ವೇಷದಿಂದ ನಾಶಪಡಿಸಿರುತ್ತಾರೆ. ಉದಾಹರಣಾರ್ಥವಾಗಿ ಅಥಣಿಯ ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿದ್ದ ಹಸ್ತಶಿಲೆಯನ್ನು, ಬ್ರಾಹ್ಮಣರು ಅಲ್ಲಿಯ ಪೂಜಾರಿಯನ್ನು ಪಿತೂರ ಮಾಡಿಕೊಂಡು, ಕೃಷ್ಣಾನದಿಯನ್ನು ಕಾಣಿಸಿದ ಸಂಗತಿಯನ್ನು ಅಥಣಿಯಲ್ಲಿ ಎಷ್ಟೋ ಜನರು ಹೇಳುವರು. ಈ ಮೇರೆಗೆ ಎಷ್ಟೋ ಪ್ರತಿಮೆಗಳು ನಾಶಪಟ್ಟಿದ್ದರೂ ಅಲ್ಲಲ್ಲಿ ಇನ್ನೂ ಅಳತೆಯಿಲ್ಲದಷ್ಟು ಸಿಗುತ್ತವೆ.

ಪುರಾಣಕಾಲದಿಂದಲೂ ನಡೆಯುತ್ತ ಬಂದ ಮಾಮೂಲ ವಹಿವಾಟದಂತೆ ಶ್ರೀ ಉಳವಿ, ಗೊಡಚಿ, ಕಿತ್ತೂರ, ಚಚಡಿ, ಅರಟಾಳ, [೧೦] ಶಿರಸಂಗಿ, ಹುಣಸೀಕಟ್ಟಿ, ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಕಲ್ಲೂರ ಮುಂತಾದ ಗ್ರಾಮದ ಜಾತ್ರೆಗಳ ರಥೋತ್ಸವಕಾಲದಲ್ಲಿ, ದಸರೆಯ ಉತ್ಸವದಲ್ಲಿ ನಂದೀಧ್ವಜಕ್ಕೆ ಪ್ರತಿವರ್ಷ ವ್ಯಾಸನ ತೋಳನ್ನು ನಿರ್ವಿವಾದವಾಗಿ ಕಟ್ಟುತ್ತಾರೆ. ಕಿತ್ತೂರ ಕಲ್ಮಠದ ಶ್ರೀ ಗುರುಸಿದ್ಧೇಶ್ವರ ದೇವರ ಜಾತ್ರೆಯಲ್ಲಿ ಹಾಗೂ ಮಹಾಸ್ವಾಮಿಗಳ ಪಲ್ಲಕ್ಕಿಯ ಉತ್ಸವಕಾಲದಲ್ಲಿ ನಂದೀಧ್ವಜಕ್ಕೆ ಮತ್ತು ಪಲ್ಲಕ್ಕಿಯ ದಂಡಿಗೆಗೆ ಕೆಂಪು ಮಖಮಲಿನಿಂದ ಆಚ್ಛಾದಿತವಾದ ವ್ಯಾಸನ ತೋಳು ಕಟ್ಟಿದ್ದನ್ನು ಗ್ರಂಥಕರ್ತನಾದ ನಾನು ಕಣ್ಣುಟ್ಟ ಕಂಡಿರುವೆನು.

(ಇಲ್ಲಿ ವ್ಯಾಸನ ತೋಳು ಕಟ್ಟಿದ ನಂದಿಧ್ವಜವುಳ್ಳ ಒಂದು ಪುಟ ಹಾಳಾಗಿ ಹೋಗಿದೆ)

ನಂದೀಧ್ವಜಕ್ಕೆ ನಂದೀಸ್ತಂಭವೆಂದೂ, ನಂದೀಕಂಬು ಎಂದೂ, ನಂದೀಕೋಲವೆಂದೂ, ಅನ್ನುವದುಂಟು. ನಂದಿಕೇಶ್ವರನಿಂದಲೇ ವ್ಯಾಸನಿಗೆ ಶಿವತತ್ವಜ್ಞಾನವಾದುದರಿಂದ ವ್ಯಾಸನ ತೋಳನ್ನು ಕಟ್ಟುವ ಪ್ರಘಾತವಾಗಿರುವದುಂಟು. ಈ ನಂದಿಕೋಲಿಗೆ ೧೦ ಜಂಗುಗಳೂ, ಆ ಜಂಗುಗಳ ನಡುವೆ ೮ (ಎಂಟು) ಕೊಳಿವೆಗಳೂ ಇರುವದನ್ನು ಎಲ್ಲರೂ ನೋಡಿರುವರು. ಆದರೆ ಇವುಗಳನ್ನು ಎಲ್ಲ ಕಡೆಗೆ ನಿಯಮಿತವಗಿ (೧೦ ಜಂಗು, ೮ ಕೊಳವೆ ಕೂಡಿ ಒಟ್ಟು) ಹದಿನೆಂಟು ಯಾಕೆ ಕಟ್ಟುತ್ತಾರೆಂಬದು ಮಾತ್ರ ಯಾರಿಗೂ ಗೊತ್ತಿಲ್ಲ. ರಾ.ಬ॥ಅರಟಾಳ ಸಾಹೇಬರವರು ಬಹು ಶೋಧಕರು. ಇಂಥ ಶೋಧವನ್ನು ಗೊತ್ತುಹಚ್ಚುವದರಲ್ಲಿ ಬಹು ಚಾಣಾಕ್ಷರು. ಇಂಥ ತತ್ವಗಳನ್ನು ಗೊತ್ತುಹಚ್ಚದಿದ್ದರೆ ಇವರಿಗೆ ಸಮಾಧಾನವೇ ಇರುವದಿಲ್ಲ. ಹತ್ತು ಜಂಗುಗಳೂ ಎಂಟು ಕೊಳಿವೆಗಳೂ ಕೂಡಿ ಒಟ್ಟು ಹದಿನೆಂಟು ಆಗುವದರಿಂದ ಅವು ಹದಿನೆಂಟು ಪುರಾಣಗಳ ಸಂಜ್ಞೆಯನ್ನೂ, ಜಂಗು ಶ್ರೇಷ್ಠ ವಾಚಕವಿರುವದರಿಂದ ಆ ೧೦ ಜಂಗುಗಳು ಶಿವಸರ್ವೋತ್ತಮನೆಂದು ಸಾರುವ ಹತ್ತು ಶೈವ ಪುರಾಣಗಳ ಕಲ್ಪನೆಯನ್ನೂ, ಎಂಟು ಕೊಳಿವೆಗಳು ಪೊಳ್ಳು ಇರುವದರಿಂದ (ಈ ಎಂಟೂ ಪುರಾಣಗಳು ಶೈವ ಪುರಾಣಗಳಲ್ಲಿ ಅಡಕವಾಗಿರುವದರಿಂದ) ಅವುಗಳಲ್ಲಿ ಏನೂ ಅರ್ಥವಿಲ್ಲೆಂಬ ಸಂಜ್ಞೆಯನ್ನೂ ತೋರಿಸುತ್ತಿರುವರೆಂಬದಾಗಿ ಗೊತ್ತು ಹಚ್ಚಿರುವರು. ಇವರ ತತ್ವವಿಚಾರವು ಅಗಾಧವಾಗಿದೆ. ವಾಚಕರ ಅವಲೋಕನಕ್ಕಾಗಿ ಆ ಹದಿನೆಂಟು ಮಹಾ ಪುರಾಣಗಳ ಹೆಸರುಗಳು ಇದರ ಕೆಳಗೆ ಕೊಡಲ್ಪಟ್ಟಿವೆ.

---

೧೦. ಜಿಲ್ಲಾ ಧಾರವಾಡ ತಾಲೂಕ ಬಂಕಾಪುರ ಪೈಕಿ ಕಸಬಾ ಅರಟಾಳ.

ಅಷ್ಟಾದಶ ಮಹಾಪುರಾಣಗಳ ಹೆಸರು

೧. ಸ್ಕಾಂದಪುರಾಣ ೨. ಶೈವ ಪುರಾಣ ೩. ಲೈಂಗ್ಯಪುರಾಣ ೪. ಕೂರ್ಮಪುರಾಣ ೫. ವಾಮನಪುರಾಣ ೬.ವರಾಹಪುರಾಣ ೭. ಭವಿಷ್ಯತ್ಪುರಾಣ ೮. ಮಾತ್ಸ್ಯಪುರಾಣ ೯. ಮಾರ್ಕಂಡೇಯಪುರಾಣ ೧೦.ಬ್ರಹ್ಮಾಂಡಪುರಾಣ- ಇವು ಹತ್ತು ಶಿವಪುರಾಣಗಳು

೧೧. ನಾರದೀಯ ಪುರಾಣ ೧೨. ಭಾಗವತಪುರಾಣ ೧೩. ಗಾರುಡಪುರಾಣ ೧೪. ವಿಷ್ಣುಪುರಾಣ - ಇವು ನಾಲ್ಕು ವಿಷ್ಣುಪುರಾಣಗಳು

೧೫.ಬ್ರಹ್ಮಪುರಾಣ ೧೬. ಪದ್ಮ ಪುರಾಣ- ಇವೆರಡು ಬ್ರಹ್ಮ ಪುರಾಣಗಳು

೧೭. ವೈವರ್ತಪುರಾಣ ೧೮. ಆಗ್ನೇಯಪುರಾಣ- ಇವೆರಡು ಅಗ್ನಿ ಪುರಾಣಗಳು

ಮಹಾರಾಣಿ ವಿಕ್ಟೋರಿಯಾ ಚಕ್ರವರ್ತಿನಿಯರವರ ಜಾಹೀರನಾಮೆಯೂ, ಅದಕ್ಕೆ ವಿರೋಧವಾದ ಮುಂಬಯಿ ಸರಕಾರದವರ ವ್ಯಾಸನ ತೋಳಿನ ಠರಾವವೂ

ಸನ್ ೧೮೨೭ನೇ ಇಸವಿಯ ೨ನೇ ರೆಗ್ಯೂಲೇಶನ್ ೨೧ನೇ ಕಲಮಿನ ೧ನೇ ಕ್ಲಾಜ ಪ್ರಕಾರ ಹಿಂದುಸ್ತಾನದ ಪ್ರತಿಯೊಂದು ಜಾತಿಯ ಸಂಬಂಧವಾಗಿ ಅವರವರ ಧರ್ಮದಲ್ಲಿ ಕೈಹಾಕಲಿಕ್ಕಿಲ್ಲವೆಂಬದಾಗಿ ಸರಕಾರದವರು ಕಾಯದೆ ಮಾಡಿರುವರು. ಮತ್ತು ಶಿಪಾಯರ ಬಂಡಾಯದ ತರುವಾಯ ಸನ್ ೧೮೫೮ನೇ ಇಸವಿಯ ಅಗಷ್ಟ ತಿಂಗಳಲ್ಲಿ ಮಹಾರಾಣಿ ವಿಕ್ಟೋರಿಯಾ ಚಕ್ರವರ್ತಿನಿಯವರು ಹಿಂದುಸ್ತಾನದ ಜನರಿಗೆ ಕೊಟ್ಟ ಜಾಹೀರನಾಮೆಯ ೯ನೇ ಕಲಮಿನಲ್ಲಿ "ನಾವು ಹಿಂದುಸ್ತಾನದ ಪ್ರತಿಯೊಂದು ಜಾತಿಯ ಜನರ ಧರ್ಮದಲ್ಲಿ ಕೈಹಾಕಲಿಕ್ಕಿಲ್ಲ. ಅದು ಧರ್ಮಭೋಳೇತನದ್ದಾಗಿದ್ದರೂ ಅದರಲ್ಲಿ ಕೈಹಾಕಲಿಕ್ಕಿಲ್ಲ. ಒಂದುವೇಳೆ ನಮ್ಮ ಪ್ರತಿನಿಧಿಗಳಾದ ವ್ಹಾಯಿಸ್‌ರಾಯ ಮೊದಲಾದ ನೌಕರ ಜನರು ನಿಮ್ಮ ಧರ್ಮದಲ್ಲಿ ಕೈಹಾಕಿದರೆ ಅವರ ಅನ್ಯಾಯದ ವರ್ತನದ ಬಗ್ಗೆ ನಾವು ಬಹಳ ಅಸಮಾಧಾನ ಪಟ್ಟೇವು;ಮತ್ತು ನಿಮ್ಮ ನಿಮ್ಮ ಧರ್ಮಗಳನ್ನು ಸರಿಯಾಗಿ ನಡಿಸಿಕೊಟ್ಟೇವು"ಎಂಬದಾಗಿ ಸನದು ಕೊಟ್ಟಿರುವರು. ಇವರ ತರುವಾಯ ಇವರ ಪುತ್ರರಾದ ಏಳನೇ ಎಡ್ವರ್ಡ ಬಾದಶಹರವರು ರಾಜ್ಯಾರೋಹಣಕಾಲಕ್ಕೆ ತಮ್ಮ ಮಾತೋಶ್ರೀಯವರು ಕೊಟ್ಟ ಸನದನ್ನು ಅಕ್ಷರಶಃ ಪಾಲಿಸುವೆವೆಂದೂ, ಇವರನಂತರ ರಾಜ್ಯಾಭಿಷಿಕ್ತರಾದ ೫ನೇ ಜಾರ್ಜಬಾದಶಹರವರಾದರೂ ತಮ್ಮ ತಂದೆಯವರಂತೆ ಹಾಗೂ ವಿಕ್ಟೋರಿಯಾ ಚಕ್ರವರ್ತಿಯವರಂತೆ ಅವರ ಸನದನ್ನು ಸರಿಯಾಗಿ ನಡಿಸುವೆವೆಂದು ಅಭಿವಚನ ಕೊಟ್ಟಿರುವರು. ಹೀಗಿದ್ದೂ ಈ ವ್ಯಾಸನ ತೋಳಿನ ಪ್ರಕರಣದ ಬಗ್ಗೆ ಮುಂಬಯಿ ಸರಕಾರದವರು ಇದಕ್ಕೆ ವಿರೋಧವಾಗಿ ಠರಾವು ಕೊಟ್ಟರು. ಈ ಠರಾವವು ಎಷ್ಟು ಅನ್ಯಾಯವಾದದ್ದಾಯಿತೆಂಬುದು ಎಲ್ಲರಿಗೂ ಸ್ಪಷ್ಟವಾಗಿ ತಿಳಿಯುವಂತಿದೆ. ಮಹಾರಾಣಿಯವರ ಜಾಹೀರನಾಮೆಗೂ, ಈ ಠರಾವಿಗೂ ಹೊಂದಿಸಿ ನೋಡಿದರೆ ಅಜಗಜಾಂತರವು ಕಂಡುಬರುತ್ತದೆ. ಈ ಜಾಹೀರನಾಮೆಯನ್ನು ಸರಕಾರದವರು ಅನುಸರಿಸುವದೇ ನಿಜವಾಗಿದ್ದಲ್ಲಿ ಈ ಠರಾವವನ್ನು ರದ್ದುಪಡಿಸಬೇಕಾದೀತು. ಈ ಠರಾವವನ್ನೇ ಕಾಹೀಮು ಮಾಡುವದಾದಲ್ಲಿ ಆ ಜಾಹೀರನಾಮೆಗೆ ವಿರೋಧವಾಗಿ ಒಂದು ಸ್ಪೇಶಲ್ ಕಾಯದೆ ಮಾಡಬೇಕಾದೀತು. ಯಾವದೂ ಮಾಡದಿದ್ದರೆ ಬಹಳೇ ಅನ್ಯಾಯವಾಗುತ್ತದೆ. ಯಾಕಂದರೆ "ನಿಮ್ಮ ಧರ್ಮದಲ್ಲಿ ಕೈಹಾಕುವದಿಲ್ಲ" ಎಂಬ ಆಶ್ವಾಸನಕೊಟ್ಟು ಹೀಗೆ ಠರಾವು ಮಾಡಿದರೆ ಧರ್ಮದಲ್ಲಿ ಕೈ ಹಾಕಿದಂತಾಗಲಿಲ್ಲವೋ ?"ವ್ಹಾಯಿಸ್‌ರಾಯ ಮೊದಲಾದ ನಮ್ಮ ಬ್ರಿಟನ್ ಸರಕಾರದ ನೌಕರರು ಧರ್ಮದಲ್ಲಿ ಕೈ ಹಾಕಿದರೆ ಅವರ ಅನ್ಯಾಯದ ವರ್ತನದ ಬಗ್ಗೆ ನಾವು ಬಹಳ ಅಸಮಾಧಾನ

ಪಟ್ಟೇವು; ಮತ್ತು ನಿಮ್ಮ ನಿಮ್ಮ ಧರ್ಮವನ್ನು ಸರಿಯಾಗಿ ನಡಿಸಿಕೊಟ್ಟೇವು" ಎಂಬ ಅಭಿವಚನ ಪ್ರಕಾರ ಈ ಮುಂಬಯಿ ಸರಕಾರದವರ ಅನ್ಯಾಯದ ಠರಾವವನ್ನು ಬ್ರಿಟಿಶ ಸರಕಾರದವರು ರದ್ದ ಪಡಿಸಲೇಬೇಕು. ಅಲ್ಲದೆ ಹೋದರೆ ಬ್ರಿಟಿಶ್ ಸರಕಾರದ ನ್ಯಾಯನಿಷ್ಠತೆಗೆ ಕಲಂಕ ಬರುವದರಲ್ಲಿ ಅಭ್ಯಂತರವಿಲ್ಲ.

ವ್ಯಾಸನ ತೋಳನ್ನು ಮೆರೆಯಿಸುವ ಧಾರ್ಮಿಕ ಸಾಂಪ್ರದಾಯದ ಹಕ್ಕು ವೀರಶೈವರಿಗೆ ಜನ್ಮತಃ ಇರುತ್ತದೆಂಬ ವಾರ್ತೆಯು ಸರಕಾರಕ್ಕೆ ಗೊತ್ತು ಇಲ್ಲೆಂಬಂತಲ್ಲ; ಯಾಕಂದರೆ ರಾವಬಹದ್ದೂರವರು ವ್ಯಾಸನ ತೋಳಿನ ಬಗ್ಗೆ ಪುರಾಣಗ್ರಂಥಗಳ ಅನೇಕ ಆಧಾರಗಳನ್ನೂ, ವ್ಯವಹಾರ ರೂಢವಾಗಿರುವ ಉದಾಹರಣೆಗಳನ್ನೂ ತಮ್ಮ ಇಂಗ್ರೇಜೀ ಪತ್ರಗಳಿಂದ ಸರಕಾರಕ್ಕೆ ಮೊದಲೇ ತಿಳಿಸಿರುವರು. ತಿಳಿದೂ ತಿಳಿದು ವೀರಶೈವಧರ್ಮಕ್ಕೆ ವಿರೋಧವಾಗಿ ವ್ಯಾಸನ ತೋಳಿನ ಪ್ರಕರಣದ ವಿಷಯವಾಗಿ ಮುಂಬಯಿ ಸರಕಾರದವರು ಮಾಡಿದ ಠರಾವು, ಬಹಳ ಅನ್ಯಾಯವಾದದ್ದೂ, ಅಪ್ರಶಸ್ತವಾದದ್ದೂ ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಸರಕಾರದ ಮನಸಿನಲ್ಲಿ ವೀರಶೈವಧರ್ಮದಲ್ಲಿ ಕೈಹಾಕಿ ವ್ಯಾಸನ ತೋಳಿನ ಪ್ರತಿಬಂಧಮಾಡಿ ವೀರಶೈವರ ಅಪಮಾನ ಮಾಡುವದು ಎಷ್ಟು ಮಾತ್ರ ಇಲ್ಲೆಂದೂ, ಕೇವಲ ಬ್ರಾಹ್ಮಣರ ಕೃಷ್ಣಕಾರಸ್ಥಾನದಿಂದಲೇ ಗವ್ಹರ್ನಮೆಂಟಿನಿಂದ ಇಂಥ ಅನ್ಯಾಯದ ಠರಾವು ಹೊರಬಿತ್ತೆಂದೂ ಜನಜನಿತ ವಾರ್ತೆಯದೆ. ಹೇಗೇ ಆಗಲಿ, ಈ ಬಗೆಯ ಅಪ್ರಶಸ್ತವಾದ ಠರಾವು ಆಗತಕ್ಕದ್ದಿದ್ದಿಲ್ಲ. ಯಾಕಂದರೆ ಪುರಾಣಗ್ರಂಥಗಳು ಕಯ್ಯೆತ್ತಿ ಸಾರುತ್ತಿದ್ದು ರಥೋತ್ಸವದಲ್ಲಿ, ಪಲ್ಲಕ್ಕಿಯ ಉತ್ಸವದಲ್ಲಿ, ಧಾನ್ಯಗಳ ರಾಶಿಯನ್ನು ಕಟ್ಟುವ ಕಾಲದಲ್ಲಿ, ಗುಡಿ ಗುಂಡಾರಗಳ ಸ್ಥಾಪನಾ ಕಾಲದಲ್ಲಿ, ದೇವರಮೇಲೆ ತರಗಗಳನ್ನು ಕಟ್ಟುವ ಕಾಲದಲ್ಲಿ, ಬೆಳದಿಂಗಳನ್ನು ಹೊಯ್ಯುವ ಸಮಯದಲ್ಲಿ, ಲಗ್ನಕಾಲದಲ್ಲಿ, ಶವಗಳ ದಫನಪ್ರಸಂಗದಲ್ಲಿ, ಇನ್ನೂ ಅನೇಕ ಶುಭಾಶುಭ ಕಾರ್ಯಗಳಲ್ಲಿ ಹಸ್ತಶಿಲೆಗಳಲ್ಲಿ ವ್ಯಾಸನ ತೋಳಿನ ಪೂಜೆಯೂ, ಮೆರವಣಿಗೆಯೂ ಪ್ರಚಲಿತವಾಗಿದ್ದು, ಇವೆಲ್ಲ ಸಂಗತಿಗಳನ್ನು ಸರಕಾರಕ್ಕೆ ತಿಳಿಸಿಕೊಟ್ಟರೂ ಸರಕಾರದವರು ಇಂಥ ಅನರ್ಥಕರವಾದ ಠರಾವು ಮಾಡಿದ್ದು ಸಜ್ಜನ ಸಮಂಜಸವೆಂದು ಹೇಳಲಿಕ್ಕೆ ಬರುವದಿಲ್ಲ. ಈ ವ್ಯಾಸನ ತೋಳು ಮೆರೆಸುವದರಿಂದ ದಂಗೆಯಾಗುವದೆಂಬದಾಗಿ ಸರಕಾರಕ್ಕೆ ಸಂಶಯವಿದ್ದರೆ, ಹಿಂದೆ ಹೇಳಿದಂತೆ ಕೊಲ್ಲಾಪುರ, ಗಡಇಂಗ್ಲಜ, ತೆಲಸಂಗ, ಅನಂತಪುರ, ಕನ್ನಾಳ, ಹಿಪ್ಪರಿಗಿ, ಇಂಗಳಗಾವಿ ಮುಂತಾದ ಸ್ಥಳಗಳಲ್ಲಿ ಇದೇ ವರ್ಷ ಇದೇ ಜಗದ್ಗುರುಗಳ ಆಗಮನ ಮಹೋತ್ಸವದಲ್ಲಿ ಆದ ವ್ಯಾಸನ ತೋಳಿನ ಮೆರವಣಿಗೆಯು ಬಹು ಶಾಂತವಾಗಿ ಜರುಗಿದ್ದನ್ನು ನಮ್ಮ ಮುಂಬಯಿ ಸರಕಾರದವರು ನೆಟ್ಟಗೆ ನೋಡಬೇಕು. ಕೊಲ್ಲಾಪುರ ಶಹರದಲ್ಲಿ ಬ್ರಾಹ್ಮಣರ ವಸತಿಯು ಬಹಳಿದ್ದು, ಅಲ್ಲಿ ಈ ಉತ್ಸವಕಾಲಕ್ಕೆ ಸುಮಾರು ಇಪ್ಪತ್ತು ಇಪ್ಪತ್ತೈದು ಸಾವಿರ ಜನಕೂಡಿದ್ದರೂ ಕೂಡ ಈ ಸ್ಥಳಗಳಲ್ಲಿ ಏನೂ ದಂಗೆಯಾಗಲಿಲ್ಲ. ಪೊಲೀಸ ಬಂದೋಬಸ್ತಿಯಿಟ್ಟು ಉತ್ಸವ ಜರುಗಿಸಿದರೆ ದಂಗೆಯಾಗುವ ಭೀತಿಯೇ ಇಲ್ಲ. ವ್ಯಾಸನ ತೋಳಿನ ಬಗ್ಗೆ ದಂಗೆಯಾಗುವದೇ ಇದ್ದರೆ ಈ ಸ್ಥಳಗಳಲ್ಲಿ ದಂಗೆಯಾಗಬೇಕಾಗಿತ್ತು. ಈ ಎಲ್ಲ ಸ್ಥಳಗಳಲ್ಲಿ ದಂಗೆಯ ಚಕಾರ ಶಬ್ದವಿಲ್ಲದೆ ಉತ್ಸವವು ಬಹು ಸಮಾರಂಭದಿಂದಲೂ, ಶಾಂತತೆಯಿಂದಲೂ ಸಾಂಗವಾಯಿತೆಂದ ಮೇಲೆ, ವ್ಯಾಸನ ತೋಳು ಮೆರಿಸಿದರೆ ದಂಗೆಯಾಗುವದೆಂಬ ಮಾತು ಎಷ್ಟು ಮಾತ್ರವೂ ನಿಜವಲ್ಲ. ಮತ್ತು ಕರ್ನಾಟಕದಲ್ಲಿ ವೀರಶೈವರ ವಸತಿಯೇ ಹೆಚ್ಚಿರುವದರಿಂದ ಸಾಧಾರಣವಾಗಿ ಪ್ರತಿಯೊಂದು ಸ್ಥಳದಲ್ಲಿ ಒಬ್ಬ ಬ್ರಾಹ್ಮಣನಿಗೆ ಲಿಂಗಾಯತರು ೨೫ ರಂತೆ, ಕೆಲಕೆಲವು ಸ್ಥಳಗಳಲ್ಲಿ ೩೦ರಂತೆ ಜನಸಂಖ್ಯೆಯಿರುತ್ತದೆ. ಅಂದಮೇಲೆ ಬ್ರಾಹ್ಮಣರು ಮುಂದುವರೆದು ಎಂದೂ ದಂಗೆಮಾಡಲಾರರು.

ವ್ಯಾಸನ ತೋಳು ಮೆರೆಸುವ ಬಗ್ಗೆ ಸರಕಾರದ ಪ್ರಬಲವಾದ ಠರಾವು ಆಗಿ, ಅದರಂತೆ ಪೊಲೀಸರ ಬಂದೋಬಸ್ತಿಯನ್ನಿಟ್ಟು ಉತ್ಸವವನ್ನು ಹೊರಡಿಸಿದರೆ ಏನೇನೂ ಗೊಂದಲವಾಗುವದಿಲ್ಲ. ಇದು ತೀರ ನಿಜವಾದ

ಮಾತು. ಮೇಲಾಗಿ ಬ್ರಾಹ್ಮಣರು ಎಂದೂ ದಂಗೆಮಾಡುವವರಲ್ಲ. ಎಲ್ಲಿಯಾದರೂ ದಂಗೆಯಾಗುವ ಲಕ್ಷಣಕಂಡರೆ; ಕೂಡಲೆ ಓಡಿಹೋಗಿ ಕೋಣೆಗಳನ್ನು ಸೇರುವದೇ ಅವರಿಗೆ ಸಾಕುಸಾಕಾಗುತ್ತದೆ. ಅವರ ದಂಗೆಯೆಂದರೆ ಕಾಗದಪತ್ರದೊಳಗಿನ ದಂಗೆಯೇ ದಂಗೆಯು. ಕಾಗದದಲ್ಲಿ ಅವರಷ್ಟು ದಂಗೆಯು ಯಾರಿಂದಲೂ ಆಗುವದಿಲ್ಲ. ಆದರೆ ಅವರು ಎದುರು ನಿಂತು ಬಡಿದಾಡಲಿಕ್ಕೆ ಎಂದೂ ಬರುವದಿಲ್ಲ. ಕಾಗದದಲ್ಲಿ ಮಾತ್ರ ಕಡ್ಡಿಯಿದ್ದದ್ದನ್ನು ಗುಡ್ಡಮಾಡಿ ಬೆಳಿಸಿ, ಅಪ್ರಮಾಣವಾದ ದಂಗೆಯನ್ನು ಎಬ್ಬಿಸಲಿಕ್ಕೆ ಮಾತ್ರ ಅವರು ಬಹು ಜಾಣರು. ಅನೇಕ ಅರ್ಜಿಗಳಿಂದಲೂ, ಪುಷ್ಕಳ ತಾರುಗಳಿಂದಲೂ ಸರಕಾರದಲ್ಲಿ ಸುಳ್ಳು ಸುಳ್ಳೇ ಕೂಗಾಟವನ್ನೆಬ್ಬಿಸುವರು. ಇದರ ನಿಜತ್ವವು ಮೇಲೆ ಹೇಳಿದ ಸ್ಥಳಗಳಲ್ಲಿ ನಡೆದ ಉತ್ಸವಗಳಿಂದಲೂ, ಅಥಣಿಯಲ್ಲಿ ನಡೆದ ವ್ಯಾಸನ ತೋಳಿನ ಪ್ರತಿಬಂಧದ ಪ್ರಕರಣದಿಂದಲೂ ಸ್ಪಷ್ಟವಾಗಿ ಕಂಡುಬರುವದು. ಬ್ರಾಹ್ಮಣರ ಮಾತ್ಸರ್ಯದ ವಾದವನ್ನೇ ಲಾಲಿಸಿ ಸರಕಾರದ ಠರಾವುಗಳು ಹೊರಬೀಳುವದಾದಲ್ಲಿ ಆ ಬ್ರಾಹ್ಮಣರು, ಲಿಂಗಾಯತರು ಲಿಂಗಕಟ್ಟುವದಕ್ಕೂ ಇನ್ನೂ ಅನೇಕ ಧರ್ಮಕಾರ್ಯಗಳಿಗೂ ವಿವಾದವನ್ನು ತರಬಹುದು. ಲಿಂಗಾಯತರಿಗೆ ಅವಮಾನವಾಗುವಂಥ ಅನೇಕ ಉತ್ಸವಗಳನ್ನು ಬ್ರಾಹ್ಮಣರು ಮಾಡುತಿದ್ದು, ಅವಕ್ಕೆ ಲಿಂಗಾಯತರು ಯಾವತರದ ವಿಘ್ನವನ್ನೂ ತರುವದಿಲ್ಲ. ಕಾಶಿ, ಪ್ರಯಾಗ, ಕಲಕತ್ತಾ ಮುಂತಾದ ಕಡೆಯಲ್ಲಿ ಬ್ರಾಹ್ಮಣರು, ಕಾಳಿಯು ಪರಮೇಶ್ವರನನ್ನು ಕಾಲುಗಳಿಂದ ತುಳಿಯುತ್ತಿರುವಂತೆ ಉತ್ಸವ ಮಾಡುತ್ತಾರೆ. ಶಂಕರನ ಭಕ್ತರಿಗೆ ಅವಮಾನಕರವಾದ ಈ ಉತ್ಸವಕ್ಕೆ ಯಾರೂ ಪ್ರತಿಬಂಧ ಮಾಡುವದಿಲ್ಲ. ಅದರಂತೆಯೇ ಪುರಾಣಗಳಲ್ಲಿ ಪ್ರಸಿದ್ಧವಾಗಿ ನ್ಯಾಯವಾಗಿ ನಡೆದುಕೊಂಡು ಬಂದಿರುವ ವ್ಯಾಸನ ತೋಳನ್ನು ಯಾಕೆ ಮೆರೆಸಬಾರದು ? ಮೆರೆಸಿದಲ್ಲಿ ಬ್ರಾಹ್ಮಣರಿಗೆ ಯಾಕೆ ವಿರೋಧವಾಗುತ್ತದೆ? ಅದರಂತೆಯೇ ಕಾಳಿಯ ಉತ್ಸವವನ್ನು ಮೆರೆಸುವದರಿಂದ ಶಂಕರನ ಭಕ್ತರಿಗೆ ವಿರೋಧವಾಗುವದಿಲ್ಲವೇ! ಇವೆಲ್ಲ ಸಂಗತಿಗಳನ್ನು ಪರಾಮರ್ಶಿಸಿ ಸರಕಾರದವರು ನ್ಯಾಯಸಮ್ಮತವಾದ ಠರಾವು ಮಾಡುವದು ಕರ್ತವ್ಯವಾಗಿದೆ.

ತಾರೀಖು ೨ನೇ ಅಕ್ಟೋಬರ ಸನ್ ೧೯೧೧ ಇಸವಿಯ ಸೋಮವಾರ ದಿವಸ ಅಂದರೆ ವಿಜಯ ದಶಮಿಯ ದಿವಸ ದಸರೆಯ ಉತ್ಸವದಲ್ಲಿ ಬೆಳಗಾವ ಶಹರದಲ್ಲಿ ಲಷ್ಕರ ಹದ್ದಿನಲ್ಲಿರುವ ಮದ್ರಾಸೀಜನರು (ಕೊಂಗರು) ಶಿವಮತಕ್ಕೆ ವಿರೋಧವಾಗಿ ಕಲಕತ್ತಾ ಮುಂತಾದ ಕಡೆಗೆ ಮೆರೆಸುವಂತೆ ಕಾಳೀ ಪಟವನ್ನು ಮೆರಿಸಿದರು. ಅಂದರೆ ಒಬ್ಬ ಮನುಷ್ಯನು ದುರ್ಗೆಯಂತೆ ಸ್ತ್ರೀವೇಷಧಾರಣ ಮಾಡಿ, ಮೋರೆಗೆ ಕರಾಳ ಸ್ವರೂಪದ ಕೃತ್ರಿಮ ಮುಖವನ್ನು ಹಾಕಿಕೊಂಡಿದ್ದನು. ಬೆನ್ನಿಗೆ ಪ್ರಭಾವಳಿಯಂತೆ ಕಟ್ಟಿದ ಪಟಕ್ಕೆ, ಶಿವನನ್ನು ಕಾಲಿನಿಂದ ಎದೆಯ ಮೇಲೆ ತುಳಿಯುತ್ತಿರುವ ಕಾಳಿಯ ಚಿತ್ರಪಟವನ್ನು ಹಚ್ಚಿದ್ದರು. ಒಂದು ಕಯ್ಯಲ್ಲಿ ಖಡ್ಗವೂ ಇನ್ನೊಂದು ಕಯ್ಯಲ್ಲಿ ರಕ್ತವರ್ಣದ ಸಣ್ಣಬುಟ್ಟಿಯೂ ಇದ್ದವು. ಈ ಭಯಂಕರ ಸ್ವರೂಪದ ವೇಷಧಾರಿಯಾದ ದುರ್ಗೆಯು ವಾದ್ಯಗಳ ರಭಸದೊಡನೆ ಉತ್ಸವದಲ್ಲಿ ನರ್ತಿಸುತ್ತ ನಡೆದಿದ್ದಳು.

ಈ ಉತ್ಸವದಲ್ಲಿ ಶಹರನಿವಾಸಿಗಳಾದ ಎಲ್ಲ ಜಾತಿಯ ಸಾವಿರಾರು ಜನರು ಸೇರಿದ್ದರು. ವರ್ಷಂಪ್ರತಿ ಇರುವಂತೆ ಪೊಲೀಸರ ಬಂದೋಬಸ್ತಿಯಿತ್ತು. ಇದು ಶಿವಮತಕ್ಕೆ ವಿರೋಧವಾಗಿದ್ದರೂ ಆ ಜನರ ಧರ್ಮಕಾರ್ಯಕ್ಕೆ ಯಾರೂ ಪ್ರತಿಬಂಧಮಾಡಲಿಲ್ಲ. ಉತ್ಸವವು ಊರೊಳಗಿಂದ ವೈಭವದಿಂದ ಬಂದು ರಾ.ಬ॥ಅರಟಾಳ ಸಾಹೇಬರವರ ಬಂಗಲೆಯ ಮುಂದೆ ಹಾಯ್ದು ಸೀಮೋಲ್ಲಂಘನಕ್ಕೆ ಹೋಯಿತು. ಇದನ್ನು ಸಾಹೇಬ ಬ॥ರವರು ಸ್ವತಃ ನೋಡಿದರು. ಈ ದಸರೆಯ ಉತ್ಸವ ಕಾಲಕ್ಕೆ ನಾನು ಬೆಳಗಾವಿಯಲ್ಲಿದ್ದದರಿಂದ ನಾನೂ ಈ ದುರ್ಗಾಪಟ ಮೆರಿಸಿದ್ದನ್ನು ಪ್ರತ್ಯಕ್ಷ ನೋಡಿರುವೆನು. ಅನ್ಯಮತಕ್ಕೆ ವಿರೋಧವಾಗಿ ಕಂಡುಬರುವ ಈ ಕಾಳಿಯ ಮೆರವಣಿಗೆಯಾದ ಮೇಲೆ ಇದಕ್ಕೂ ಸೌಮ್ಯಸ್ವರೂಪವಾದ ವ್ಯಾಸನ ತೋಳನ್ನು ಮೆರೆಸುವದರಲ್ಲಿ ದೋಷವೇನು? ಇದನ್ನು ಯಾಕೆ ಮೆರೆಸಬಾರದು!

ಸನ್ ೧೯೧೦ಲನೇ ಇಸವಿಯಲ್ಲಿ ಕಾನಡಾ ಜಿಲ್ಲೆಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಪರವಾನಗಿಯಿಂದ ಆ ಜಿಲ್ಲೆಗೆ ಒಳಪಟ್ಟ ತಾಲೂಕ ಸಿದ್ಧಾಪುರ ಗ್ರಾಮದ ವೀರಶೈವರು ಶ್ರೀ ಬಸವೇಶ್ವರನ ರಥೋತ್ಸವಕಾಲದಲ್ಲಿ ನಂದೀಧ್ವಜಕ್ಕೆ ವ್ಯಾಸನತೋಳು ಕಟ್ಟಿ ಮೆರಿಸಲು, ಅದಕ್ಕೆ ಬ್ರಾಹ್ಮಣರು ಪ್ರತಿಬಂಧ ಮಾಡಿದರು. ಈ ವ್ಯಾಜ್ಯವು ಮುಂಬಯಿ ಹಾಯಕೋರ್ಟಿನ ವರೆಗೂ ಹೋಗಿ, ಅಲ್ಲಿ ಲಿಂಗಾಯತರಿಗೆ ವ್ಯಾಸನತೋಳು ಮೆರಿಸುವ ಹಕ್ಕು ಜನ್ಮತಃ ಇರುತ್ತದೆಂತಲೂ ಅವರು ತಮ್ಮ ಉತ್ಸವಕಾಲದಲ್ಲಿ ನಿರ್ವಿವಾದವಾಗಿ ಕಟ್ಟಬಹುದೆಂತಲೂ ಠರಾವವಾಯಿತು. ಈ ಠರಾವವನ್ನು ಅಥಣಿಯ ವ್ಯಾಸನ ತೋಳಿನ ಪ್ರಕರಣದಲ್ಲಿ ಹಾಯಕೋರ್ಟಿನವರು ಆಧಾರವಾಗಿ ತೆಗೆದುಕೊಂಡಿರುತ್ತಾರೆ. ಅಲ್ಲಿಂದಿತ್ತ ಸಿದ್ಧಾಪುರದ ವೀರಶೈವರು ಪ್ರತಿವರ್ಷ ಶ್ರೀ ಬಸವೇಶ್ವರನ ರಥೋತ್ಸವದಲ್ಲಿ ವ್ಯಾಸನ ತೋಳನ್ನು ಕಟ್ಟೇಕಟ್ಟುತ್ತಾರೆ. ಸಿದ್ಧಾಪುರದಲ್ಲಿ ಲಿಂಗಾಯತರಿಗಿಂತ ಬ್ರಾಹ್ಮಣರ ಸಂಖ್ಯೆಯೇ ವಿಶೇಷವಾಗಿದ್ದು ಏನೂ ದಂಗೆಯಿಲ್ಲದೆ ಉತ್ಸವವು ನಿರ್ವಿಘ್ನದಿಂದ ಸಾಂಗವಾಗುತ್ತದೆ. ಸರಕಾರದ ಬಲವತ್ತಾದ ಠರಾವವಾದರೆ ಎಷ್ಟು ಮಾತ್ರವೂ ದಂಗೆಯಾಗುವದಿಲ್ಲ. ಈಗ ಆದಂತೆ ನಿರರ್ಥಕವಾದ (ಪೊಳ್ಳು) ಠರಾವವಾದರೆ ಮಾತ್ರ ಬಡಿದಾಟ ತಪ್ಪುವದಿಲ್ಲ. ಸ್ವಲ್ಪ ಸಡಿಲು ಸಿಕ್ಕರೆ ಬ್ರಾಹ್ಮಣರು ಇಲ್ಲದ ಗೊಂದಲವನ್ನು ಎಬ್ಬಿಸುತ್ತಾರೆ.

ಮುಂಬಯಿ ಸರಕಾರದವರ ಠರಾವಿನ ಪ್ರಕಾರ ಅಥಣಿಯಲ್ಲಿ ವ್ಯಾಸನತೋಳು ಕಟ್ಟುವದಕ್ಕೆ ಪ್ರತಿಬಂಧವಾಗಲು, ಅದನ್ನು ಕಂಡು ಬಾಗಲಕೋಟೆಯ ಬ್ರಾಹ್ಮಣರು ತಾರೀಖು ೧೨ನೇ ಸಪ್ಟಂಬರ ಸನ್ ೧೯೧೧ನೇ ಇಸವಿಯ ದಿವಸ ತಮ್ಮಲ್ಲಿ ಆದ ಶ್ರೀಮನ್ಮಹಾ ಜಗದ್ಗುರು ಚಿತ್ರದುರ್ಗದ ಶ್ರೀಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಯ ಮಹೋತ್ಸವಕ್ಕೂ ಪ್ರತಿಬಂಧವನ್ನು ಮಾಡಿ ಒಣಜಗಳ ತೆಗೆದು, ಈ ಅಡ್ಡಪಲ್ಲಕ್ಕಿಯ ಉತ್ಸವದಿಂದ ಬಹಳ ದೊಡ್ಡ ದಂಗೆಯಾಯಿತೆಂತಲೂ, ಏಳೆಂಟು ಖೂನುಗಳಾಗಿವೆಯಂತಲೂ ಸರಕಾರಕ್ಕೆ ಸುಳ್ಳುಸುಳ್ಳೇ ತಾರು ಮಾಡಿದ್ದರು. ವರಿಷ್ಠ ಅಧಿಕಾರಿಗಳು ಬಂದು ಪ್ರತ್ಯಕ್ಷ ವಿಚಾರಿಸಲು ಯಾವದೂ ದಂಗೆಯಿಲ್ಲದೆ ಉತ್ಸವವು ಸುಸೂತ್ರವಾಗಿ ಸಾಂಗವಾಗಿತ್ತು. ಇವರು ಸುಳ್ಳುಸುಳ್ಳೇ ತಾರ ಮುಂತಾದ್ದು ಮಾಡಿ ಗೊಂದಲವೆಬ್ಬಿಸಿದ್ದು ಸರಕಾರಕ್ಕೆ ಖಾತ್ರಿಯಾಯಿತು. ವಿಜಾಪುರದ ಕಲೇಕ್ಟರರಾದ ಮೆ॥ಆರ್.ಸಿ. ಬ್ರಾವುನ್‌ಸಾಹೇಬ ಬ॥ರವರು "ಈ ಬಾಗಲಕೋಟೆಯಲ್ಲಾದ ಜಗದ್ಗುರುಗಳ ಅಡ್ಡಪಲ್ಲಕ್ಕಿಯ ಉತ್ಸವವು ಶಾಂತತೆಯಿಂದ ಜರುಗಿತು. ದಂಗೆ ಮುಂತಾದದ್ದು ಏನೂ ಆಗಿಲ್ಲ. ದಂಗೆ ವಗೈರೆ ಆಗಿ ಖೂನುಗಳಾಗಿವೆ ಎಂದು ಬ್ರಾಹ್ಮಣರು ತಾರು ಮಾಡಿದ ಸಂಗತಿಯು ಅತೀ ಸುಳ್ಳು ಇರುತ್ತದೆ" ಎಂಬದಾಗಿ ಸರಕಾರಕ್ಕೆ ರಿಪೋರ್ಟಮಾಡಿರುವರು. ಯಾವದೊಂದು ಗೊಂದಲವನ್ನೆಬ್ಬಿಸಿ ಈ ಅಡ್ಡಪಲ್ಲಕ್ಕಿಗೆ ಪ್ರತಿಬಂಧ ಮಾಡಿದರೆ, ಮುಂದೆ ಇವರಿಗೆ ವ್ಯಾಸನ ತೋಳಿನ ಪರವಾನಗಿಯು ಸಿಗಲಿಕ್ಕಿಲ್ಲ ಎಂಬ ಭಾವನೆಯಿಂದ ಬ್ರಾಹ್ಮಣರು ಇಂಥ ನಿರರ್ಥಕವಾದ ಗೊಂದಲವನ್ನೆಬ್ಬಿಸಿ, ಮುಂದೆ ಉಪಯೋಗ ಬೀಳಬೇಕೆಂದು ಬನಾವಟ ಪುರಾವೆಮಾಡಿ ಇಡುತ್ತಾರೆ. ಬ್ರಾಹ್ಮಣರ ಈ ಕಪಟ ತಂತ್ರವು ಯುರೋಪಿಯನ್ ಜನರಿಗೆ ತಿಳಿಯುವದಿಲ್ಲಾದ್ದರಿಂದ ಗೈರ ಸಮಜೂತಿಯಿಂದ ಇಂಥ ಅನ್ಯಾಯದ ಠರಾವುಗಳಾಗುತ್ತವೆ.

ಕಡೆಗೆ ಬಾಗಲಕೋಟೆಯಲ್ಲಿ ಸ್ವಲ್ಪಾದರೂ ದಂಗೆಯಾಗದೆ ಇದ್ದು ನಿರರ್ಥಕವಾಗಿ ಬ್ರಾಹ್ಮಣರು ಗೊಂದಲವೆಬ್ಬಿಸಿದ್ದು ಸರಕಾರಕ್ಕೆ ಸಂಪೂರ್ಣ ಖಾತ್ರಿಯಾಗಿ, ತಾ. ೨೭-೧೧-೧೯೧೧ನೇ ಗ್ಯಾಝೀಟಿನ ಪುರವಣಿಯಲ್ಲಿ ಪ್ರೆಸ್‌ನೋಟ ರೂಪವಾಗಿ, ಬ್ರಾಹ್ಮಣರ ಈ ತರದ ಅಸಭ್ಯವರ್ತನಕ್ಕೆ ಖೇದವನ್ನೂ, ವೀರಶೈವರ ಸಭ್ಯವರ್ತನಕ್ಕೆ ಸಹಾನುಭೂತಿಯನ್ನೂ ಪ್ರಕಟಪಡಿಸಿರುತ್ತಾರೆ.ಈ ಸಂಗತಿಯು ಸಪ್ಲಿಮೆಂಟ ಬಾಂಬೆ ಗವ್ಹರ್ನಮೆಂಟ ಆಫೀಸರ ಪೇಪರ್ಸ ಪಾನ ೭೪೨ನೇದರಲ್ಲಿ ಛಾಪಿಸಿರುತ್ತದೆ. ಬೇಕಾದವರು ನೋಡಿಕೊಳ್ಳಬಹುದು.

ಹಿಂದಕ್ಕೆ ಸನ್ ೧೮೩೩ನೇ ಇಸವಿಯಲ್ಲಿ ಜಿಲ್ಲಾ ಧಾರವಾಡ ತಾಲೂಕ ಹುಬ್ಬಳ್ಳಿಯ ಶ್ರೀ ಮೂರು ಸಾವಿರಮಠದ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿಯ[೧೧] ಹಕ್ಕಿನ ಸಂಬಂಧವಾಗಿ ವಾದಿ ಶಂಕರ ಭಾರತೀಸ್ವಾಮಿ ವಿರುದ್ಧ ಸಿದ್ಧಲಿಂಗ ಚರಂತೀಸ್ವಾಮಿ ಹುಬ್ಬಳ್ಳಿ ಮೂರುಸಾವಿರಮಠ ಇವರ ನಡುವೆ ಹತ್ತು ಹನ್ನೆರಡು ವರ್ಷ ವ್ಯಾಜ್ಯ ನಡೆದು, ಕಡೆಗೆ ಪ್ರಿವ್ಹೀ ಕೌನ್ಸಿಲನ ವರೆಗೂ ಹೋಗಿ, ಅಲ್ಲಿ ಸನ್ ೧೮೪೩ನೇ ಇಸವಿಯ ಜೂನ ಜುಲೈ ತಿಂಗಳಲ್ಲಿ ಸದರ ಮಹಾಸ್ವಾಮಿಗಳಿಗೆ ಅಡ್ಡಪಲ್ಲಕ್ಕಿಯ ಹಕ್ಕು ಇರುವದೆಂದು ಠರಾವವಾಯಿತು. ಈ ವ್ಯಾಜ್ಯದಲ್ಲಿ ಶಂಕರಭಾರತೀ ಸ್ವಾಮಿಗಳು ಎರಡು ಬನಾವಟ ತಾಮ್ರಪಟಗಳನ್ನು ಹಾಜರ ಮಾಡಿದರು. ಅವು ಬನಾವಟ ಇರುತ್ತದೆಂಬದಾಗಿ ಎಲ್ಲ ಕೋರ್ಟಗಳಲ್ಲಿ ನಿರ್ಣಯವಾಗಿ ವೀರಶೈವ ಮಹಾಸ್ವಾಮಿಗಳಿಗೆ ಇರುವ ಅಡ್ಡಪಲ್ಲಕ್ಕಿಯ ಹಕ್ಕು ಕಾಹೀಮವಾಯಿತು. ಇದೇ ಸಂಧಿಯಲ್ಲಿ ಶಂಕರಪ್ಪಾ ಬಿನ್ ಮರಿಬಸಪ್ಪಾ ಚಲವಾದಿ ಬಾಗಲಕೋಟ, ವಿರುದ್ಧ ಹನುಮಾ ಬಿನ್ ಭೀಮಾ ಚಲವಾದಿ ಬಾಗಲಕೋಟ ಇವರ ಮಾನಪಾನ ಸಂಬಂಧವಾಗಿ ವಿಚಾರ ನಡೆದು, ಮಾನಪಾನಗಳ ಸಂಬಂಧ ದಾವೆಗಳು ಕೋರ್ಟಿನಲ್ಲಿ ನಡೆಯಬಾರದೆಂದು ಗೊತ್ತಾಯಿತು. ಈ ಮಾನಪಾನದ ವಿಚಾರಣೆಯಲ್ಲಿ ಅಡ್ಡಪಲ್ಲಕ್ಕಿಯ ಸಂಬಂಧವಾಗಿ ಕೆಳಕೋರ್ಟಿನವರು ಮಹಾಸ್ವಾಮಿಗಳಿಗಿದ್ದ ಹಕ್ಕು ಕಾಹೀಮು ಮಾಡಿರಲು, ಹಾಯಕೋರ್ಟಿನವರು ಆ ಸಂಬಂಧವಾಗಿ ದಾವೇ ಸಹ ತೆಗೆದುಕೊಳ್ಳತಕ್ಕದ್ದಿದ್ದಿಲ್ಲೆಂದೂ, ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿಯ ಹಕ್ಕು ಕಾಹೀಮು ಮಾಡಿದ್ದು ನ್ಯಾಯ ಸಮ್ಮತವಿರುವದೆಂದೂ, ಪ್ರಿವ್ಹೀಕೌನ್ಸಿಲಿನವರು ವ್ಯಕ್ತಪಡಿಸಿದರು. ಈ ಚಲವಾದಿಗಳ ಮಾನಪಾನ ಸಂಬಂಧವಾದ ಯಾವತ್ತು ತೀರ್ಪು ಇಂಡಿಯನ್ ಲಾ ರಿಪೋರ್ಟ ಮುಂಬಯಿ ವ್ಹಾಲೀಮ ೨ನೇ ಪಾನು ೪೭೦ರಲ್ಲಿ ಛಾಪಿಸಿರುತ್ತದೆ. ಮತ್ತು ಅಡ್ಡಪಲ್ಲಕ್ಕಿಯ ಹಕ್ಕಿನ ಸಂಬಂಧವಾದ ಮೂಲ ಪ್ರಕರಣವು ಮೂರ್ಸ ಇಂಡಿಯನ್ ಅಪೀಲ್ಸ ೩ನೇ ವ್ಹಾಲೀಂ ಪಾನು ೧೯೮ರಲ್ಲಿ ಛಾಪಿಸಿರುತ್ತದೆ. ಬೇಕಾದವರು ನೋಡಿಕೊಳ್ಳತಕ್ಕದ್ದು.

ಈ ಮೇರೆಗೆ ಲಿಂಗಾಯತರಿಗೆ ಅಡ್ಡಪಲ್ಲಕ್ಕಿಯ ಹಕ್ಕು ಇದ್ದು, ಇದಕ್ಕೂ ಸಹ ಬ್ರಾಹ್ಮಣರು ಪ್ರತಿಬಂಧ ಮಾಡುತ್ತಾರೆಂದರೆ ಇವರ ದುಷ್ಕೃತ್ಯಕ್ಕೆ ಏನೆನ್ನಬೇಕು? ಇವರು ನಿರರ್ಥಕವಾಗಿ ಲಿಂಗಾಯತರ ಧಾರ್ಮಿಕ ಕಾರ್ಯಗಳಿಗೆ ವಿಘ್ನವನ್ನುಂಟು ಮಾಡುತ್ತಾರೆ. ತಾಲೂಕ ಕಚೇರಿಯಿಂದ ಗವ್ಹರ್ನಮೆಂಟಿನ ವರೆಗೂ ಎಲ್ಲ ಆಫೀಸುಗಳಲ್ಲಿ ಬ್ರಾಹ್ಮಣರೇ ವಿಶೇಷವಾಗಿರುವದರಿಂದ, ಯುರೋಪಿಯನ್ ಜನರಿಗೆ ಇವರ ಕಪಟತಂತ್ರವೂ

---

೧೧. ಈ ಅಡ್ಡಪಲ್ಲಕ್ಕಿಯ ಹಕ್ಕಿನ ಸಂಬಂಧವಾಗಿ ಶಂಕರಭಾರತೀ ಸ್ವಾಮಿಗಳಿಗೂ, ಧಾರವಾಡ ಜಿಲ್ಲಾ ಹುಬ್ಬಳ್ಳಿಯ ಮೂರುಸಾವಿರ ಮಠದ ಸ್ವಾಮಿಗಳಿಗೂ ತ್ಂಟೇ ನಡೆದು, ವಾದಿ ಶಂಕರಭಾರತೀ ಸ್ವಾಮಿಗಳು, ವಿರುದ್ಧ ಸಿದ್ಧಲಿಂಗ ಚರಂತೀಸ್ವಾಮಿ ಮೂರು ಸಾವಿರಮಠ ಹುಬ್ಬಳ್ಳಿ ಇವರ ಮೇಲೆ ಧಾರವಾಡ ಜಿಲ್ಲಾ ಕೋರ್ಟಿನಲ್ಲಿ ತಾರೀಖು ೧೭ನೇ ಸನ್ ೧೮೩೬ನೇ ಇಸವಿಯ ದಿವಸ ಹದಿನೈದು ಸಾವಿರ (೧೫೦೦೦) ರೂಪಾಯಿಯ ದಾವೆ ತಂದರು. ಅಲ್ಲಿ ಈ ವ್ಯಾಜದ ವಿಚಾರವಾಗಿ, ಹುಬ್ಬಳ್ಳಿಯ ಮೂರುಸಾವಿರಮಠದ ಸ್ವಾಮಿಗಳಿಗೆ ಅಡ್ಡಪಲ್ಲಕ್ಕಿಯ ಹಕ್ಕು ಇರುವದೆಂದು ತಾರೀಖು ೨೪ನೇ ಅಕ್ಟೋಬರ ಸನ್ ೧೮೩೬ನೇ ಇಸವಿಯಲ್ಲಿ ಠರಾಯಿಸಲ್ಪಟ್ಟವು. ಈ ಕೋರ್ಟಿನಲ್ಲಿ ಶಂಕರಭಾರತೀಸ್ವಾಮಿಗಳು ಹಾಜರ ಮಾಡಿದ ಎರಡು ತಾಮ್ರಪಟಗಳು ಬನಾವಟ ನಿರ್ಧರಿಸಲ್ಪಟ್ಟವು; ಮುಂದೆ ಶಂಕರಭಾರತೀಸ್ವಾಮಿಗಳು ಮುಂಬಯಿ ಸದರ ದಿವಾಣಿ ಅದಾಲತ ಕೋರ್ಟಿಗೆ ಅಪೀಲ ಮಾಡಿದರು. ಅಲ್ಲಿ ತಾರೀಖು ೨೩ನೇ ಫೆಬ್ರುವರಿ ಸನ್ ೧೮೩೮ನೇ ಇಸವಿಯ ದಿವಸ ಜಿಲ್ಲಾ ಕೋರ್ಟಿನವರು ಮಾಡಿದ ಠರಾವವೇ ಕಾಹೀಮಾಯಿತು. ಕಡೆಗೆ ಶಂಕರಭಾರತೀ ಸ್ವಾಮಿಗಳು ಪ್ರಿವ್ಹೀಕೌನ್ಸಿಲಿಗೆ ಅಪೀಲು ಮಾಡಿದರು. ಅಲ್ಲಿ ಸನ್ ೧೮೪೩ನೇ ಇಸವಿಯ ಜೂನ ತಿಂಗಳಲ್ಲಿ ಸದರೀ ಹುಬ್ಬಳ್ಳಿಯ ಸ್ವಾಮಿಗಳಿಗೆ ಅಡ್ಡಪಲ್ಲಕ್ಕಿಯ ಹಕ್ಕು ಇರುವದೆಂದು ಠರಾವವಾಯಿತು.

ಮಾತ್ಸರ್ಯವೂ ತಿಳಿಯದೆ ಗೈರಸಮಜೂತಿಯಿಂದ ವ್ಯಾಜ್ಯಗಳು ಬಹುಶಃ ಅವರಂತೆಯೇ ಆಗುತ್ತವೆ. ಒಳ್ಳೇ ಚಾಣಾಕ್ಷ ದೊರೆಗಳಿದ್ದಲ್ಲಿ ಮಾತ್ರ ಇವರ ಕಾಪಟ್ಯವು ಹೊರಬಿದ್ದು, ಸತ್ಯಾಸತ್ಯವಿಚಾರವಾಗಿ ನ್ಯಾಯ ಸಮ್ಮತವಾದ ಠರಾವುಗಳಾಗುತ್ತವೆ. ಆದದರಿಂದ ಈಗ ವ್ಯಾಸನ ತೋಳಿನ ಬಗ್ಗೆ ಆದ ಅನ್ಯಾಯದ ಠರಾವು ರದ್ದಾಗಿ, ಆ ಬಗ್ಗೆ ನ್ಯಾಯಸಮ್ಮತವಾದ ಠರಾವವು ಮುಂದೆ ಆಗಬಹುದೆಂದು ಹೇಳಬಹುದು.

ವ್ಯಾಸನ ತೋಳಿನ ಬಗ್ಗೆ ಮನಾಯಿ ಠರಾವು ಆಗಲಿಕ್ಕೆ ಅನೇಕ ಕಾರಣಗಳಿರುವವು. ಸನ್ ೧೮೩೩ನೇ ಇಸವಿಯಲ್ಲಿ ವೀರಶೈವರಿಗೆ ವ್ಯಾಸನ ತೋಳು ಮೆರೆಸುವ ಹಕ್ಕು ಜನ್ಮತಃ ಇರುತ್ತದೆಂದು ಸದರ ಅದಾಲತ ಕೋರ್ಟ ಮುಂಬಯಿ ಸ್ಪೇಶಲ್ ಅಪೀಲ ನಂಬರ ೬೦೯/೫ನವಂಬರ ೧೮೩೩ನೇ ೩ನೇ ಡಿಕ್ರಿಯಾದ ಕಾಲಕ್ಕೆ ಬೆಳಗಾವ, ವಿಜಾಪುರ, ಸೊಲ್ಲಾಪುರ, ಸಾತಾರೆ ಜಿಲ್ಲೆಯ ಕೆಲವು ತಾಲೂಕು ಇವೆಲ್ಲ ಧಾರವಾಡ ಜಿಲ್ಲಾ ಕೋರ್ಟಿನ ಕೆಳಗೆ ಇದ್ದವು. ಅಂದಮೇಲೆ ಆ ಕೋರ್ಟಿನ ಡಿಕ್ರಿಯು ಇವೆಲ್ಲ ಜಿಲ್ಲೆಗಳಿಗೂ ಸಂಬಂಧಿಸಿರುವದಲ್ಲದೆ, ಫಕ್ತ ಒಂದೇ ಧಾರವಾಡ ಜಿಲ್ಲೆಗೆ ಸಂಬಂಧವಾಗಿರುವದೆಂದು ತಿಳಿಯಲಾಗದು. ಮುಂದೆ ಸನ್ ೧೮೬೯ನೇ ಇಸವಿಯಲ್ಲಿ ಬೆಳಗಾವ ಜಿಲ್ಲಾ ಬೇರೆ ಮಾಡಲ್ಪಟ್ಟು ಅಲ್ಲಿ ಜಿಲ್ಲಾ ಜಜ್ಜಕೋರ್ಟ ಸ್ಥಾಪನೆಯಾಯಿತು. ಮುಂಬಯಿ ಸರಕಾರದವರು ಈ ಠರಾವು ಬರೆಯುವ ಕಾಲಕ್ಕೆ, ಈಗಿದ್ದಂತೆ ಆಗಲೂ ಬೆಳಗಾವ ಜಿಲ್ಲೆಯು ಬೇರೆ ಇತ್ತೆಂದೂ, ಮೊದಲಿನ ಕೋರ್ಟಿನ ಡಿಕ್ರಿಯು ಧಾರವಾಡ ಜಿಲ್ಲೆಯ ಪೂರ್ತೆ ಇರುವದೆಂದೂ ಭಾವಿಸಿ ಈ ಬಗೆಯ ಠರಾವು ಬರೆದಿರಬಹುದು. ಆ ಕಾಲಕ್ಕೆ ಬೆಳಗಾವ ಜಿಲ್ಲೆಯು ಧಾರವಾಡ ಜಿಲ್ಲಾ ಕೋರ್ಟಿನ ಕೆಳಗೆ ಇತ್ತೆಂಬದರ ಸ್ಮರಣೆಯು ಗವ್ಹರ್ನಮೆಂಟಿನವರ ನೆನಪಿನಲ್ಲಿ ಬಂದಂತೆ ಕಾಣುವುದಿಲ್ಲ. ಮತ್ತು ದಕ್ಷಿಣಭಾಗದ ಕಮೀಶನರರಾದ ಮೆ॥ಎಂ.ಸಿ. ಗಿಬ್ಬ ಸಾಹೇಬ ಬ॥ರವರು ಸನ್ ೧೯೧೧ನೇ ಇಸವಿಯ ಜಾನೇವಾರಿ ತಿಂಗಳ ೧೯ನೇ ತಾರೀಖು ಮಂಗಳವಾರ ದಿವಸ ಧಾರವಾಡ ಜಿಲ್ಲಾ ಹಾವೇರಿ ಮುಕ್ಕಾಮಿನಲ್ಲಿ ವ್ಯಾಸನ ತೋಳಿನ ವಿಚಾರಣೆಯ ಬಗ್ಗೆ ಅಥಣಿಯ ಬ್ರಾಹ್ಮಣರನ್ನೂ ಲಿಂಗಾಯತರನ್ನೂ ಕರೆಸಿ ವಿಚಾರಿಸಿ, ಸರಕಾರಕ್ಕೆ ಬರೆದ ರಿಪೋರ್ಟಿನಲ್ಲಿ ಈ ವ್ಯಾಸನ ತೋಳು ಮೆರಿಸುವದು ಫಕ್ತ ಲಿಂಗಾಯತರ ಹೊರತು ಇತರ ಯಾವತ್ತು ಜಾತಿಯ ಜನರಿಗೆ ಅಪಮಾನಕರವಾಗುವದೆಂದು ಬರೆದದರಿಂದ, ಲಿಂಗಾಯತರ ಹೊರತು ಎಲ್ಲ ಜಾತಿಯ ಜನರು ಇದಕ್ಕೆ ವಿರೋಧವಾಗಿರುವರೆಂಬ ತಪ್ಪು ತಿಳುವಳಿಕೆಯಿಂದಲೂ ಸನ್ ೧೮೩೩ನೇ ಇಸವಿಯ ಮುಂಬಯಿಯ ಸದರ ದಿವಾಣಿ ಅದಾಲತ ಕೋರ್ಟಿನ ಡಿಕ್ರಿಯು ಫಕ್ತ ಧಾರವಾಡ ಜಿಲ್ಲೆಯ ಪೂರ್ತೆ ಇರುವದೆಂಬ ಭ್ರಮೆಯಿಂದಲೂ ಸರಕಾರದವರು ಈ ಬಗೆಯ ಅನ್ಯಾಯದ ಠರಾವು ಮಾಡಿದರೆಂದು ಹೇಳಬಹುದು. ಆದರೆ ವ್ಯಾಸನತೋಳು ಕಟ್ಟುವದಕ್ಕೆ ಬ್ರಾಹ್ಮಣ ಜಾತಿಯವರಷ್ಟೇ ಅಡ್ಡಿಮಾಡುತ್ತಾರಲ್ಲದೆ, ಉಳಿದ ಯಾವತ್ತು ಜಾತಿ ಜನರ ತಕರಾರವೇನೂ ಇರುವದಿಲ್ಲೆಂಬದು ಸರಕಾರಕ್ಕೆ ಗೊತ್ತಾಗಲಿಲ್ಲ.

ಮುಂಬಯಿ ಡಿಸ್ಟ್ರಿಕ್ಟ ಪೊಲೀಸ ಆಕ್ಟ ನಂಬರ ೪/೧೮೯೦ನೇ ಇಸವಿ ನೇ ೪೪ ನೇ ಕಲಮಿನ ೨ನೇ ರಕಮಿನನ್ವಯ ಮೆ॥ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಬೆಳಗಾವ ಇವರು ವ್ಯಾಸನ ತೋಳಿನಬಗ್ಗೆ ಕೊಟ್ಟ ಹುಕುಮು ಬಹಳೇ ನ್ಯಾಯವಾದದ್ದಿರುತ್ತದೆ. ಯಾಕಂದರೆ ಕೋರ್ಟಿನ ಡಿಕ್ರಿಯ ಪ್ರಕಾರ ಅದರಲ್ಲಿ ಧರ್ಮ ಸಂಬಂಧವಾದ ವ್ಯಾಸನತೋಳು ಮೆರೆಸುವದು ಬಂದ ಮಾಡಬಾರದು, ಬಂದೋಬಸ್ತ ಇಟ್ಟು ಉತ್ಸವ ಜರುಗಿಸಬೇಕು ಅಂತಾ ನಮೂದವದೆ. ಇದು ನ್ಯಾಯವಾದದ್ದು. ಮುಂಬಯಿ ಸರಕಾರದವರು ಈ ನ್ಯಾಯಮಾರ್ಗವನ್ನೇ ಅವಲಂಬಿಸಿ ಠರಾವು ಮಾಡುವದು ಯೋಗ್ಯವಾಗಿತ್ತು. ವ್ಯಾಸನ ತೋಳಿನ ಬಗ್ಗೆ ವೀರಶೈವರ ಕಾಲಮಾನವು ಸದ್ಯಸ್ಥಿತಿಗೆ ಸಾಮಾನ್ಯವಾಗಿರಬಹುದೆಂದು ಹೇಳಬಹುದಾಗಿದೆ. ಯಾಕಂದರೆ ವೀರಶೈವರಿಗೆ ವ್ಯಾಸನ ತೋಳು ಮೆರೆಸುವ ಹಕ್ಕು ಹುಟ್ಟಾ ಇರುತ್ತದೆಂದು ಕೋರ್ಟಿನ ಡಿಕ್ರಿಯಾಗಿದ್ದು, ಅದರಂತೆ ಅಲ್ಲಲ್ಲಿ ವ್ಯಾಸನ ತೋಳಿನ ಮೆರವಣಿಗೆಗಳು ಆಗುತ್ತಿದ್ದು, ಅಥಣಿಯಲ್ಲಿ ಅದರ ಪ್ರತಿಬಂಧ ಮಾಡಲ್ಪಟ್ಟಿತು. ಮೆ॥ಕಮಿಶನರ ಸಾಹೇಬ ಬ॥ರವರು ಮೊದಲು

ವ್ಯಾಸನ ತೋಳಿನ ಪ್ರಕರಣ ಸಂಬಂಧವಾಗಿ ಅನುಗುಣವಾದ ಅಭಿಪ್ರಾಯ ಬರೆದು, ಈಗ ವಿರೋಧವಾಗಿ ಬರೆದದ್ದನ್ನು ನೋಡಿದರೆ ಬಹಳೇ ಆಶ್ಚರ್ಯವಾಗುವದು. ಹೀಗೇಕೆ ಮಾಡಿದರೆಂಬ ವಿಷಯವು ಬಹುಗೂಢವಾಗಿದೆ.

ಈಗಾದ ಮುಂಬಯಿ ಸರಕಾರದ ಠರಾವಿನಿಂದ ವೀರಶೈವರಿಗೆ ಸ್ವಭಾವತಃ ಇದ್ದ ವ್ಯಾಸನತೋಳಿನ ಹಕ್ಕು ಹೋದಂತಾಗಲಿಲ್ಲ. ದಂಗೆಯಾಗುತ್ತದೆಂಬ ಭ್ರಾಂತಿಯಿಂದ ಅದನ್ನು ತಹಕೂಪ ಇಟ್ಟಂತಾಯಿತಷ್ಟೇ ಹೊರತು, ಅವರಿಗಿದ್ದ ಹಕ್ಕನ್ನು ಕಸುಕೊಂಡಂತಾಗಲಿಲ್ಲ. ಈ ಧರ್ಮಸಂಬಂಧವಾದ ಹಕ್ಕನ್ನು ತೆಗೆದು ಹಾಕಲಿಕ್ಕೆ ಸರಕಾರಕ್ಕೆ ಬರುವಂತಿಲ್ಲ. ಫಕ್ತ ಅವಾಂತರ ಕಾರಣಗಳಿಂದ ಮನಾಯಿ ಮಾಡಲಿಕ್ಕೆ ಮಾತ್ರ ಬರುತ್ತದೆ. ಆ ಪ್ರಕಾರ ಮನಾಯಿ ಬಗ್ಗೆ ಮಾತ್ರ ಠರಾವವಾಗಿರುತ್ತದೆ. ಈ ಠರಾವವಾದರೂ ಬ್ರಾಹ್ಮಣರ ವಿಶ್ವಪ್ರಯತ್ನದಿಂದ ಆಗಿರುತ್ತದೆಂಬದು ಎಲ್ಲರಿಗೂ ಗೊತ್ತದೆ. ದಂಗೆಯಾಗುತ್ತವೆಂಬದು ಸರಕಾರಕ್ಕೆ ಭ್ರಾಂತಿಯಲ್ಲದೆ ಭೀತಿಯಲ್ಲ. ಯಾಕಂದರೆ ಬೇಕುಬೇಕಾದಂಥ ದಂಗೆಗಳನ್ನು ಮುರಿಯಲಿಕ್ಕೆ ಸರಕಾರದವರು ಯಾವಾಗಲೂ ಸಮರ್ಥರಿದ್ದಾರೆ. ದಂಗೆಯ ಮರ್ಮವೆಲ್ಲ ಸರಕಾರದ ಠರಾವಿನಲ್ಲಿಯೇ ಇರುತ್ತದೆ. ಬಲವತ್ತಾದ ಠರಾವವಾದರೆ ದಂಗೆಯ ಸುದ್ಧಿ ಸಹ ಇಲ್ಲದೆ ಉತ್ಸವವು ಸರಳವಾಗಿ ಸಾಗುವದು. ಈಗಿನಂಥ ದುರ್ಬಲವಾದ ಠರಾವು ಇದ್ದದ್ದಾದರೆ ಇಲ್ಲದ ಗೊಂದಲವೇಳಲಿಕ್ಕೆ ಸರಕಾರದವರೇ ಮಾರ್ಗಮಾಡಿ ಕೊಟ್ಟಂತಾಗುವದು. ಕಾರಣ ಅಥಣಿಯವರು ಕೊಟ್ಟ ನೋಟೀಸಿನಂತೆ ಸರಕಾರದವರು ತಮ್ಮ ಠರಾವನ್ನು ರದ್ದುಪಡಿಸಿ, ವ್ಯಾಸನ ತೋಳಿನ ಉತ್ಸವಕ್ಕೆ ಪರವಾನಗಿ ಕೊಟ್ಟಲ್ಲಿ ವೀರಶೈವರಿಗೆ ವ್ಯಾಸನ ತೋಳಿನ ಹಕ್ಕು ನಿಸರ್ಗಭೂತವಾಗಿದ್ದ ಧರ್ಮವನ್ನು ಸರಿಯಾಗಿ ನಡೆಸಿಕೊಟ್ಟಂತೆ ಆಗುತ್ತದೆ.

ವ್ಯಾಸನ ತೋಳಿನ ಬಗ್ಗೆ ವಿಶೇಷ ವಿಚಾರ

ಧಾರ್ಮಿಕ ದೃಷ್ಟಿಯಿಂದಲೂ ನ್ಯಾಯತತ್ವವಿಚಾರದಿಂದಲೂ ಪ್ರಾಂಜಲಬುದ್ಧಿಯಿಂದ ಪ್ರತಿಪಾದನೆ ಮಾಡಿದರೆ, ವ್ಯಾಸನ ತೋಳಿನ ಮೆರವಣಿಗೆಯನ್ನು ಪ್ರತಿಬಂಧ ಪಡಿಸಿದ ಮುಂಬಯಿ ಸರಕಾರದ ಠರಾವವು ಅಪ್ರಶಸ್ತವಾದದ್ದಿರುತ್ತದೆಂದು ಹೇಳಲು ಯಾವ ಭಯವೂ ತೋರುವದಿಲ್ಲ. ಯಾಕಂದರೆ ಸಾರ್ವಜನಿಕ ರಸ್ತೆಗಳಲ್ಲಿ ನ್ಯಾಯಸಮ್ಮತವಾದ ಹಾಗೂ ಧರ್ಮಶಾಸ್ತ್ರ ಸಮ್ಮತವಾದ ಕಾಯದೇಶೀರ ಕಾರ್ಯಗಳನ್ನು ಜರುಗಿಸಲಿಕ್ಕೆ ಧಾರ್ಮಿಕ ರಾಜ್ಯಪ್ರಭುತ್ವದಲ್ಲಿ ಯಾವ ಕಾಲದಲ್ಲಿ ಯಾವ ಪ್ರತಿಬಂಧವೂ ಇರಲಾರದು. ಮತ್ತು ಇಂಥ ಕಾರ್ಯಗಳನ್ನು ಜರುಗಿಸಿದವರ ಮೇಲೆ ಎಂದೂ ಖಟ್ಲೆಯಾಗಲಾರದು. ಈ ಜನರು ಈ ವಿಷಯವಾಗಿ ಯಾವ ಶಿಕ್ಷೆಗೂ ಪಾತ್ರರಾಗಲಾರರು. ಇದಕ್ಕೆ ಪ್ರತಿಯಾಗಿ ಪ್ರತಿಬಂಧಪಡಿಸುವವರಿಗೆ ಶಿಕ್ಷೆಯಾಗದೆ ಎಂದೂ ಹೋಗಲಾರದು. ನ್ಯಾಯಮಾರ್ಗವು ವಾಸ್ತವಿಕವಾಗಿ ಹೀಗಿದ್ದೂ ಕಾಯದೇಶೀರ ಕಾರ್ಯಗಳನ್ನು ಜರುಗಿಸುವವರ ಮೇಲೆ ಖಟ್ಲೆ ಮಾಡುವದೂ, ತತ್ಕಾರ್ಯಪ್ರತಿಬಂಧ ತತ್ಪರರಿಗೆ ಅನುಕೂಲ ಠರಾವಗಳನ್ನು ಹೊರಪಡಿಸುವದೂ ಯಾವ ನ್ಯಾಯವೆಂದು ಹೇಳಬೇಕು? ಈ ಪ್ರಕರಣದ ಕೊನೆಯ ನಿರ್ಣಯವು ನಿಜವಾಗಿ ಹೀಗೆಯೇ ಆದಲ್ಲಿ, ಅಧರ್ಮರಾಜ್ಯದಾಡಳಿತದಲ್ಲಿ ಪಡಿಯನ್ನು ಅಡ್ಡವಿಟ್ಟು ಕಡಲಿಯನ್ನಳೆದಂತೆ ಲೋಕವಿಚಿತ್ರವಾದ ಠರಾವವು ಹೊರಪಟ್ಟಿತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಆದರೆ ಶಾಂತತಾಪ್ರಿಯರೂ, ನ್ಯಾಯನಿಷ್ಠರೂ, ಸತ್ಯಸಂಧರೂ, ನಿಷ್ಪಕ್ಷಪಾತಗಳೂ ಆದ ಇಂಗ್ಲೀಷ ಸರಕಾರದವರ ಸಾರ್ವಭೌಮಛತ್ರದಲ್ಲಿ ಪಂಡಿತ ಜನದೂಷ್ಯವಾದ ಇಂತಹ ಹೊಲಸು ಠರಾವವು ಎಂದೂ ಹೊರಬೀಳಲಿಕ್ಕಿಲ್ಲವೆಂದೇ ಹೇಳಬೇಕಾಗಿದೆ. ಯಾಕಂದರೆ "ದೈವವೇ ದೇವರು" ಎಂಬ ನಾಣ್ಣುಡಿಯಂತೆ ತತ್ವಜ್ಞಾನಿಗಳೂ, ನ್ಯಾಯಪ್ರಿಯರೂ ಆದ ಮಹಾಮಹಾ ಪಂಡಿತಶ್ರೇಷ್ಠರು ತಮ್ಮ ಬುದ್ಧಿಭಾಂಡಾರವನ್ನೂ, ಆಯುಷ್ಯವನ್ನೂ ವೆಚ್ಚಮಾಡಿ ಜಗತ್ತು ತಲೆದೂಗುವಂತೆ ಬರೆದಿಟ್ಟ ಯಾವ ಕಾಯದೆ

ಬುಕ್ಕುಗಳಲ್ಲಿಯೂ ನ್ಯಾಯಸಮ್ಮತವಾದ ಕಾರ್ಯಕ್ಕೆ ಪ್ರತಿಬಂಧವನ್ನು ಹೇಳಿರಲಿಕ್ಕಿಲ್ಲ?ಕಾಯದೆಯ ಮರ್ಮವನ್ನೆಲ್ಲ ಚೆನ್ನಾಗಿ ಬಲ್ಲ ಇಂಗ್ಲಂಡದ ಏ.ವ್ಹಿ.ಡಾಯಸಿ ಎಂಬ ಲೋಕವಿಖ್ಯಾತನಾದ ಕಾಯದೇ ಪಂಡಿತನು ಇಂಗ್ಲೀಷ ರಾಜ್ಯದ ನ್ಯಾಯ ಸಂಬಂಧವಾಗಿ ಸರ್ವೋತ್ಕೃಷ್ಟವಾದ ಒಂದು ಗ್ರಂಥವನ್ನು ರಚಿಸಿರುವನು. ಅದರಲ್ಲಿ ಬ್ರಿಟಿಷ ನ್ಯಾಯತತ್ವಗಳೆಲ್ಲವೂ ಅಡಕವಾಗಿರುವವು. ಈ ಪುಸ್ತಕದ ೭ನೇ ಆವೃತ್ತಿಯ ೭ನೇ ಅಧ್ಯಾಯದ ೨೧೭ನೇ ಪಾನಿನಲ್ಲಿ ಸಾರ್ವಜನಿಕ ರಸ್ತೆಗಳಲ್ಲಿ ಹಾಯ್ದು ಹೋಗಲು ಯೋಗ್ಯವಾದ ಕಾರ್ಯಗಳ ಸಂಬಂಧವಾಗಿ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ಈತನ ಗ್ರಂಥದಲ್ಲಿ ನ್ಯಾಯದೇವತೆಯು ಮೂರ್ತಿಮಂತವಾಗಿರುತ್ತಾಳೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ನ್ಯಾಯವನ್ನೇ ಎದುರಿಟ್ಟುಕೊಂಡು ಬರೆದ ಈ ಗ್ರಂಥದೊಳಗಿನ ಪ್ರತಿಯೊಂದು ಮಾತು ನ್ಯಾಯವನ್ನೇ ಬಲಪಡಿಸುತ್ತದೆ. ಧರ್ಮಸಮ್ಮತವಾದ ಮತ್ತು ನ್ಯಾಯಸಮ್ಮತವಾದ ಕಾಯದೆಶೀರಕಾರ್ಯಗಳು ಸಾರ್ವಜನಿಕ ರಸ್ತೆಗಳಲ್ಲಿ ಅಪ್ರತಿಬಂಧವಾಗಿ ಜರುಗಲು ಯೋಗ್ಯವೆಂದೂ, ಇಂಥ ಕಾರ್ಯಗಳಿಗೆ ನಿರರ್ಥಕವಾಗಿ ಪ್ರತಿಭಟಿಸಿ ಪ್ರತಿಬಂಧವನ್ನುಂಟು ಮಾಡುವ ಪ್ರತಿಪಕ್ಷಿಗಳಿಗೆ ತಪ್ಪದೆ ಶಿಕ್ಷೆಯಾಗುವದು ಪ್ರಶಸ್ತವೆಂದೂ, ಹೀಗಾಗದೆ ಪ್ರತಿಪಕ್ಷಿಗಳಿಗೆ ಪ್ರೋತ್ಸಾಹವನ್ನುಂಟು ಮಾಡಿ ಅನ್ಯಾಯ ಸಮ್ಮತವಾದ ಕಾರ್ಯಗಳನ್ನು ಪ್ರತಿಬಂಧಿಸುವದು ಅಪ್ರಶಸ್ತವೆಂದೂ ಆ ಘನಪಂಡಿತನು ಪ್ರತಿಪಾದಿಸುವನು. ವಿಚಾರಮಾಡಿ ನೋಡಿದರೆ ಕಾಯದೆಶೀರ ಕೆಲಸಗಳ ಬಗ್ಗೆ ಒಪ್ಪಿಗೆಯೂ, ಬೇಕಾಯದೇಶೀರ ಕೆಲಸಗಳ ಬಗ್ಗೆ ಶಿಕ್ಷೆಯೂ ತಪ್ಪದೆ ಜರುಗುವದು ನ್ಯಾಯಸಮ್ಮತವಾಗಿದೆ. ಅಲ್ಲದೆ ಹೋದರೆ ಪ್ರತಿಕಕ್ಷಿಗಳಾದ ಆ ಲೆಂಡಜನರಿಗೇ ಕಾಯದೆಯನ್ನು ಮಾಡುವ ಅಧಿಕಾರ ಕೊಟ್ಟಂತಾಗುತ್ತದೆ. ಅಂದರೆ ಕಾಯದೆಯನ್ನು ಉಲ್ಲಂಘಿಸಿದ ಅವರ ದುರ್ವರ್ತನವನ್ನು ಮಾನ್ಯಮಾಡಿದಂತಾಗಿ, ನ್ಯಾಯದೇವತೆಯು ಅವರ ಕಯ್ಯಲ್ಲಿ ಸಿಕ್ಕು ಬೊಬ್ಬೆಗುಟ್ಟಬೇಕಾಗುವದು. ಧಾರ್ಮಿಕ ಪ್ರಭುಗಳ ಆಡಳಿತದಲ್ಲಿ ಇಂಥ ಅನ್ಯಾಯದ ನಿರ್ಣಯಗಳು ಎಂದೂ ನೆಲಸಿ ನಿಲ್ಲಲಾರವು.

ಒಮ್ಮೊಮ್ಮೆ ಯಾವದೊಂದು ಪ್ರಕರಣದ ಮರ್ಮವು ಗೊತ್ತಾಗದೆ ಇದ್ದ ಮೂಲಕವಾಗಿ ಅಥವಾ ಪರಪಂಥಿಗಳ ಸವಿ ನುಡಿಗಳ ಕಡೆಗೆ ಕಿವಿಕೊಟ್ಟ ನ್ಯಾಯಾಧಿಕಾರಿಗಳ ದುರ್ವರ್ತನ ಮೂಲಕವಾಗಿ, ಇಂಥ ಅಸಂಗತ ಪರಿಣಾಮಗಳು ಸಂಭವಿಸುವ ಸಂಭವವೂ ಉಂಟು. ಆದರೆ ನ್ಯಾಯಪ್ರಿಯರೆಂದು ಜಗದ್ವಿಖ್ಯಾತರಾಗಿರುವ ವರಿಷ್ಠ ಸರಕಾರದವರ ವಿಚಾರಣೆಯಲ್ಲಿ ನ್ಯಾಯಾನ್ಯಾಯವು ನಿರ್ಣಯವಾಗದೆ ಎಂದೂ ನಿಲ್ಲಲಾರದು. ಯಾಕೆಂದರೆ ನ್ಯಾಯದಿಂದಲೇ ಈ ಜಗತ್ತು ಸ್ಥಿರವಾಗಿ ನೆಲಸಿರುತ್ತದೆ. 'ಗೆಲವುದು ಸದ್ಧರ್ಮವಲ್ತೆ ಕೊನೆಗೆ ನಿಸರ್ಗಂ' ಎಂಬ ನ್ಯಾಯತತ್ವವಾದರೂ ಇದೇ ಅರ್ಥವನ್ನು ದೃಢಪಡಿಸುತ್ತದೆ. ಯಾವ ಸರಕಾರವೇ ಇರಲಿ, ಯಾವ ಕಾಲವೇ ಇರಲಿ, ಧಾರ್ಮಿಕಪ್ರಭುಗಳೆಂಬವರ ಆಡಳಿತದಲ್ಲಿ ಎಲ್ಲಕ್ಕೂ ಮೊದಲು ಜಾತಿಭೇದವನ್ನೆಣಿಸದೆ ಪ್ರತಿಯೊಂದು ಜನಾಂಗದವರ ಧಾರ್ಮಿಕ ಹಕ್ಕುಗಳನ್ನು ಕಾಯ್ದಿಡಲೇಬೇಕಾಗಿರುವದು. ಧಾರ್ಮಿಕ ಹಕ್ಕುಗಳಿಗೆ ಭಂಗತರಲಿಕ್ಕೆ ಯಾರಿಗೂ ಬರುವಂತಿಲ್ಲ. ಅಂತೆಯೇ ರಾಜ್ಯಕಾರ್ಯಧುರಂಧರರೆಂದು ಇಡಿ ಪೃಥ್ವಿಯಲ್ಲಿ ಹೆಸರುವಾಸಿಯಾಗಿರುವ ಆಂಗ್ಲಪ್ರಭುಗಳು ತಮ್ಮ ಪ್ರಜೆಗಳಿಗೆ 'ನಿಮ್ಮ ಧರ್ಮದಲ್ಲಿ ನಾವು ಎಂದೂ ಕೈಹಾಕಲಿಕ್ಕಿಲ್ಲ' ಎಂಬುದಾಗಿ ಅಶ್ವಾಸನ ಕೊಟ್ಟಿರುವರು. ಅಂದಿನಿಂದ ಇದುವರೆಗೆ ಅದಕ್ಕನುಸಾರವಾಗಿಯೇ ಠರಾವುಗಳು ಪ್ರಕಟವಾಗುತ್ತ ಬಂದು, ಈಗ ಈ ವ್ಯಾಸನತೋಳಿನ ಸಂಬಂಧವಾಗಿ ಅಪ್ರಾಶಸ್ತ್ಯವಾದ ಠರಾವವು ಏಕೆ ಹೊರಬಿತ್ತೆಂಬುದು ತಿಳಿಯುವದಿಲ್ಲ....

ಈ ಕೆಳಗೆ ತೋರಿಸಿದ ಆಧಾರಭೂತ ತೀರ್ಪುಗಳಿಂದ ಕಾಯದೇಶೀರ ಹಕ್ಕಗಳನ್ನು ನಿರ್ಬಾಧವಾಗಿ ನಡೆಯಿಸಬಹುದೆಂಬುದು ಸ್ಪಷ್ಟವಾಗಿ ತಿಳಿಯುವಂತಿದೆ. ಬೇಕಾದವರು ಅವುಗಳನ್ನು ನೋಡಿಕೊಂಡು ಮನನ ಮಾಡಿಕೊಳ್ಳಬಹುದು.

೧.	ಇಂಡಿಯನ್ ಲಾ ರಿಪೋರ್ಟ ಮದ್ರಾಸ, ವ್ಹಾಲೀಮ ನಂಬರ ೨. ಪಾನು ೧೪೦

೨.	ಇಂಡಿಯನ್ ಲಾ ರಿಪೋರ್ಟ ಮದ್ರಾಸ, ವ್ಹಾಲೀಮ ನಂಬರ ೬ ಪಾನು ೨೨೦-೨೨೧ ಮತ್ತು ೩೬೮.

೩.	ಇಂಡಿಯನ್ ಲಾ ರಿಪೋರ್ಟ ಮದ್ರಾಸ, ವ್ಹಾಲೀಮ ನಂಬರ ೨೬ ಪಾನು ೩೨೭ ಮಾಹೆ ಅಗಷ್ಟ ಸನ್ ೧೯೦೨ ಇಸ್ವಿ. ಇದರ ಮೇಲೆ ಪ್ರಿವ್ಹಿಕೌನ್ಸಿಲ್ ಠರಾವ ಇಂಡಿಯನ್ ಲಾ ರಿಪೋರ್ಟ ಮದ್ರಾಸ, ವ್ಹಾಲೀಮ ನಂಬರ ೩೦ ಪಾನು ೧೮೫.

೪.	ಇಂಡಿಯನ್ ಲಾ ರಿಪೋರ್ಟ ಕಲಕತ್ತಾ ಹಾಯಕೋರ್ಟ ವ್ಹಾಲೀಮ ನಂಬರ ೨೪ ಪಾನು ೫೨೪

೫.	ಇಂಡಿಯನ್ ಲಾ ರಿಪೋರ್ಟ ವ್ಹಾಲೀಮ ನಂಬರ ೩೨. ಅಲಹಾಬಾದ ಹಾಯಕೋರ್ಟ ಪಾನು ೧೭೧.

೬.	ಇಂಡಿಯನ್ ಲಾ ರಿಪೋರ್ಟ ಮುಂಬಯಿ ವ್ಹಾಲೀಮ ನಂಬರ ೩೪ ಪಾನು ೫೭೧ ತಾ. ೧೬-೮-೧೯೧೦ ಇಸವಿ (ಬೆಳಗಾವ ಜಿಲ್ಲಾ ಸಂಪಗಾವ ತಾಲೂಕ ಪೈಕಿ ದೇಶನೂರ ಖಟ್ಲೆ ಸಂಬಂಧವಾಗಿ ನಡೆದಿದ್ದು).

೭.	ಮುಂಬಯಿ ಲಾ ರಿಪೋರ್ಟ ವ್ಹಾಲೀಮ ನಂಬರ ೧೧ ಪಾನು ೩೭೬ (ಧಾರವಾಡ ಜಿಲ್ಲಾ ಉಪ್ಪಿನ ಬೆಟಗೇರಿಯ ಸಂಬಂಧವಾಗಿ ನಡೆದದ್ದು). ಈ ಠರಾವವು ಮೇಲಿನ ದೇಶನೂರ ಪ್ರಕರಣದ ಠರಾವಿನಿಂದ ರದ್ದು ಪಡಿಸಲ್ಪಟ್ಟಿತು.

೮.	ಮದ್ರಾಸ ಲಾ ಜರ್ನಲ್ ವ್ಹಾಲೀಮ ನಂಬರ ೧೯, ಪಾನು ೭೧೭

೯.	ಮದ್ರಾಸ ಲಾ ಜನರಲ್ ವ್ಹಾಲೀಮ ನಂಬರ ೨೦, ಪಾನು ೧೧೯

ಇಂಥ ಆಧಾರಭೂತ ನ್ಯಾಯ ನಿರ್ಣಯಗಳು ಇನ್ನೂ ಅನೇಕ ಇರುವವು. ಈ ತೀರ್ಪುಗಳಿಂದ ಕಾಯದೇಶೀರ ಹಕ್ಕುಗಳು ಸಾರ್ವಜನಿಕ ರಸ್ತೆಗಳಲ್ಲಿ ಸರಿಯಾಗಿ ಜರುಗಿ ಹೋಗುವವು. ಇವುಗಳಂತೆ ಈ ವ್ಯಾಸನತೋಳಿನ ಮೆರವಣಿಗೆಯು ಯಾಕೆ ಜರುಗಬಾರದು? ಈ ಧರ್ಮಸಂಬಂಧವಾದ ಹಕ್ಕು ವೀರಶೈವರಲ್ಲಿ ನಿನ್ನೆ ಮೊನ್ನೆಯಿಂದ ನಡೆದು ಬಂದದ್ದಲ್ಲ; ನೂರಾರು ವರ್ಷಗಳ ಮಾತಲಿಲ್ಲ; ಸಾವಿರಾರು ವರ್ಷಗಳಾಚೆ ಬಹು ಬುನಾದಿಯಿಂದಲೂ, ನಡೆದು ಬಂದದ್ದು. ಅಂದರೆ ವೀರಶೈವರಿಗೆ ಈ ಹಕ್ಕು ಜನ್ಮತಃ ಇದ್ದದ್ದು. ವಸ್ತುಸ್ಥಿತಿಯು ಹೀಗಿದ್ದು ಪುರಾಣಪ್ರಸಿದ್ಧವಾದ, ಬುನಾದಿಯಿಂದ ನಡೆದು ಬಂದ, ನ್ಯಾಯಸಮ್ಮತವಾದ ವೀರಶೈವರ ಈ ಜನ್ಮತಃ ಧಾರ್ಮಿಕ ಹಕ್ಕನ್ನು ಪ್ರತಿಬಂಧಿಸುವ ಠರಾವವಾದದ್ದು ಪರಮ ಅನ್ಯಾಯವಾದದ್ದೆಂದೇ ಹೇಳಬೇಕಾಗಿದೆ. ಯಾಕಂದರೆ ಇಂಥ ಕಾಯದೇಶೀರ ಹಕ್ಕುಗಳನ್ನು ಸರಿಯಾಗಿ ನಡೆಯಿಸಿಕೊಡುವದರಲ್ಲಿ ಸಾರ್ವಭೌಮ ಸರಕಾರದವರು ಸರ್ವತಃ ಸಮರ್ಥರಿದ್ದು, ಈ ಪ್ರಕಾರದ ಮನಾಯಿ ಹುಕುಮು ಕೊಡುವದರಲ್ಲಿ ಗೌರವದ್ದಲ್ಲ. ದಂಗೆ ಮುಂತಾದ ಗೊಂದಲವಾಗದಂತೆ ಯೋಗ್ಯ ಬಂದೋಬಸ್ತನ್ನಿಟ್ಟು, ಈ ಹಕ್ಕನ್ನು ನಿರಾತಂಕವಾಗಿ ನಡೆಯಿಸಿಕೊಡುವಂತೆ ಠರಾವವನ್ನು ಹೊರಪಡಿಸುವದರಲ್ಲಿಯೇ ಗೌರವವಿತ್ತು. ಕಾಯದೆಗಳಾದರೂ ಈ ಮಾತಿಗೆ ಸಾಧಕಗಳಾಗಿಯೇ ಇವೆ.

ಕಾಯದೆಗಳು ಕಾಯದೇಶೀರ ಹಕ್ಕುಗಳನ್ನು ನಡೆಯಿಸಿಕೊಡಬೇಕೆಂತಲೂ, ಅವಕ್ಕೆ ತೊಂದರೆ ಕಂಡು ಬಂದಲ್ಲಿ ಯೋಗ್ಯ ಬಂದೋಬಸ್ತಿಯನ್ನಿಟ್ಟು ಅವರವರ ಹಕ್ಕುಗಳನ್ನು ನಿರಾತಂಕವಾಗಿ ನಡೆಯಿಸಿಕೊಡುವದು

ನ್ಯಾಯಸಮ್ಮತವೆಂತಲೂ ಹೇಳುತ್ತವೆ. ಬೇಕಾದಂತಹ ಪರಚಕ್ರಗಳನ್ನು ಕ್ಷಣಾರ್ಧದಲ್ಲಿ ತೂರಿಬಿಡಲು ಸಮರ್ಥವಾದ ಸರಕಾರಕ್ಕೆ ಇಂಥ ಕ್ಷುಲ್ಲಕ ದಂಗೆಗಳ ಭೀತಿಯಿರಬಹುದೇ! ದಂಗೆಯ ಭೀತಿಯಿಂದ, ಬುನಾದಿಯಿಂದಲೂ ನಡೆದು ಬಂದಿರುವ ಧಾರ್ಮಿಕ ಹಕ್ಕುಗಳನ್ನು ಪ್ರತಿಬಂಧಿಸುವದು ನ್ಯಾಯವಾದದ್ದಲ್ಲವೆಂದು ನಿರ್ಧಾರವಾಗಿ ಹೇಳಬಹುದು. ಸರಕಾರದ ಸಮರ್ಥವಾದ ಠರಾವವಾದರೆ ಮೂಲತಃ ದಂಗೆಯೇ ಆಗುವದಿಲ್ಲ. ಇನ್ನು ಈ ವ್ಯಾಸನತೋಳು ಹಿಂದೆ ಎಂದೂ ಮೆರವಣಿಗೆಯನ್ನು ಹೊಂದಲಿಲ್ಲವೆಂದು ಹೇಳಬಹುದೊ? ಈಗ ಸದ್ಯಕ್ಕೆ ಎಲ್ಲಿಯೂ ಈ ಉತ್ಸವವು ನಡೆಯುವದಿಲ್ಲವೆಂದು ಹೇಳಬೇಕೋ? ಹಾಗೆ, ಎಂದೂ ಹೇಳಲು ಬರುವಂತಿಲ್ಲ. ಯಾಕಂದರೆ ಈ ಉತ್ಸವವು ಹಿಂದೆ ಎಷ್ಟೋ ಪ್ರಸಂಗಗಳಲ್ಲಿ ಜರುಗಿಹೋದ ಆಧಾರಗಳು ಅನೇಕವಾಗಿರುವವು. ಈಗ ಪ್ರತಿವರ್ಷ ಕಾನಡಾ ಜಿಲ್ಲಾ ಸಿದ್ದಾಪುರ, ಉಳವಿ ಮುಂತಾದ ಕ್ಷೇತ್ರಗಳಲ್ಲಿ ಈ ಉತ್ಸವಗಳು ನಡೆಯುತ್ತಲೂ ಇರುವವು. ಅಲ್ಲಿ ನಡೆದಲ್ಲಿ ದಂಗೆಗಳು ಯಾಕೆ ಆಗಬಾರದು? ಸರಕಾರದ ಪ್ರಬಲವಾದ ಠರಾವವಾದರೆ ನಿಶ್ಚಯವಾಗಿ ದಂಗೆಯು ಎಲ್ಲಿಯೂ ಆಗುವದಿಲ್ಲ. ಸಾರ್ವತ್ರಿಕವಾದ ಬ್ರಿಟಿಶ ಸರಕಾರದ ಒಂದೆಡೆಯಲ್ಲಿ ನ್ಯಾಯವೂ, ಇನ್ನೊಂದೆಡೆಯಲ್ಲಿ ಅದೇ ಹಕ್ಕಿನ ಸಂಬಂಧವಾಗಿ ಅನ್ಯಾಯವೂ ಆಗುವದು ಅಪ್ರಶಸ್ತವಾದ ಮಾತು. ಧಾರ್ಮಿಕ ಹಕ್ಕು ಸ್ಥಳಭೇದದಿಂದ ಬದಲಾವಣೆಯನ್ನು ಹೊಂದುವದಿಲ್ಲ. ಕಾನಡಾ ಜಿಲ್ಲೆಯ ವೀರಶೈವನ ಧಾರ್ಮಿಕ ಹಕ್ಕೂ ಬೆಳಗಾವ ಜಿಲ್ಲೆಯ ವೀರಶೈವನ ಹಕ್ಕೂ ಸಮಾನವಾದದ್ದಿರುತ್ತವೆ. ಕಾಶೀನಿವಾಸಿಯಾದ ವೀರಶೈವನು ಲಿಂಗಬಂಧನಕ್ಕೆ ಹೇಗೆ ಬಾಧ್ಯನೋ ಅದರಂತೆ ರಾಮೇಶ್ವರವಾಸಿಯಾದ ಲಿಂಗಾಂಗಿಯು ಲಿಂಗಬಂಧನಕ್ಕೆ ಬಾಧ್ಯನೇ ಸರಿ. ಇನ್ನು ಒಂದು ಜನಾಂಗದವರ ಧಾರ್ಮಿಕ ಹಕ್ಕು ಇನ್ನೊಂದು ಜನಾಂಗದವರ ಮನಸ್ಸಿಗೆ ವಿಷಾದಕರವಾಗುತ್ತದೆಂದು ಸರಕಾರವು ಭಾವಿಸಿ, ಅವರ ಹಕ್ಕನ್ನು ಪ್ರತಿಬಂಧಿಸಿದ್ದಾದರೆ, ಆ ಹಕ್ಕು ಕಳಕೊಂಡವರನ್ನು ಸರಕಾರವು ವಿಷಾದಪಡಿಸಿದಂತಾಗುವದಿಲ್ಲವೋ? ಇವೆಲ್ಲ ತತ್ವಗಳನ್ನು ಪರಾಮರ್ಶಿಸಿಯೇ ಮೇಲೆ ಬರೆದ ನ್ಯಾಯಸಮ್ಮತವಾದ ತೀರ್ಪುಗಳು ಹೊರಬಿದ್ದಿರುತ್ತವೆ. (ಅಡ್ಡಪಲ್ಲಕ್ಕಿ ಮತ್ತು ವ್ಯಾಸನತೋಳು ಇವುಗಳ ಸಂಬಂಧವಾಗಿ ರಾ.ಬ॥ಅರಟಾಳ ಸಾಹೇಬರವರು ಇಂಗ್ಲೀಷ್‌ನಲ್ಲಿ ಒಂದು ಸ್ವತಂತ್ರವಾದ ಪುಸ್ತಕವನ್ನೇ ಬರೆದಿರುತ್ತಾರೆ. ಅದನ್ನು ನೋಡಿದಲ್ಲಿ ಯಾವದ್ವೃತ್ತಾಂತವೂ ಗೊತ್ತಾಗುವದು.)

ಸರಕಾರದವರು ಇಂಥ ಧಾರ್ಮಿಕ ಹಕ್ಕುಗಳನ್ನು ನಿಶ್ಚಯವಾಗಿ ಪ್ರತಿಬಂಧಿಸುತ್ತಾರೆಂದು ಗೊತ್ತಾದರೆ, ಈ ಹೊತ್ತು ಈ ಧಾರ್ಮಿಕ ಹಕ್ಕಿಗೆ ಅಡ್ಡಿಯನ್ನು ತಂದ ಜನಾಂಗದವರು ನಾಳಿಗೆ ಧರ್ಮಸಂಬಂಧವಾದ ಇತರ ಸಂಗತಿಗಳ ಹಕ್ಕುಗಳಿಗೂ ಬಾಧೆಯನ್ನು ತರಬಹುದು. ಇವಕ್ಕೆಲ್ಲ ಸರಕಾರದವರು ಗಮನಕೊಡುತ್ತ ಹೋದರೆ ರಾಜ್ಯದಾಡಳಿತದಲ್ಲಿ ಸುಖಶಾಂತಿಗಳೇ ನೆಲೆಗೊಳ್ಳಲಿಕ್ಕಿಲ್ಲ. ಹೀಗಾಗದಂತೆ, ಸರಕಾರದವರು ತಾವು ಆಶ್ವಾಸನ ಕೊಟ್ಟಂತೆ ಧಾರ್ಮಿಕ ಹಕ್ಕುಗಳನ್ನು ನಿರಾತಂಕವಾಗಿ ನಡೆಯಿಸಿಕೊಡುವದರಲ್ಲಿಯೇ ಬದ್ಧರಾಗಿರಬೇಕೆಂದು ಬೇರೆ ಹೇಳುವ ಕಾರಣವಿಲ್ಲ. ಸರಕಾರದವರು ವೀರಶೈವರಿಗೆ ಈಗ ಹೊಸದಾಗಿ ಯಾವದೊಂದು ಧಾರ್ಮಿಕ ಹಕ್ಕನ್ನು ನಡೆಯಿಸಿಕೊಡಬೇಕಾಗಿಲ್ಲ. ಇದ್ದದ್ದನ್ನೇ ನಿರಾತಂಕವಾಗಿ ನಡೆಯಿಸಿಕೊಡಬೇಕಾಗಿದೆ. ಒಟ್ಟಿಗೆ ಯಾವ ಬ್ರಿಟಿಶ ಸರಕಾರದವರು ಮೇಲಿನ ತೀರ್ಪುಗಳನ್ನು ಯಾವ ಆಧಾರದಿಂದ ಹೊರಪಡಿಸಿ ನ್ಯಾಯಪ್ರಿಯರೆಂದು ಹೆಸರು ಪಡೆದಿರುವರೋ ಅದೇ ಸರಕಾರದವರು ಈಗಾದರೂ ಅದೇ ಆಧಾರವನ್ನನುಸರಿಸಿ ಈ ವ್ಯಾಸನತೋಳಿನ ಪ್ರಕರಣದ ಹೊಸ ಠರಾವವನ್ನು ಹೊರಪಡಿಸಿ ಹೆಸರುವಾಸಿಯಾಗಬೇಕೆಂದು ಬಯಸುತ್ತೇವೆ.

ವ್ಯಾಸನತೋಳನ್ನು ಸಾರ್ವಜನಿಕ ರಸ್ತೆಗಳಲ್ಲಿ ಹಾಯಿಸುವದು ಬ್ರಾಹ್ಮಣರಿಗೆ ಅಸಹ್ಯವಾಗುವದೆಂದು ಅವರ ಅರ್ಜಿಗಳಿಂದಲೇ ಅರಿದು, ಸರಕಾರದವರು ಅವರ ವಿನಂತಿಯನ್ನು ಮಾನ್ಯ ಮಾಡಿ, ಅದನ್ನು ಪ್ರತಿಬಂಧಪಡಿಸಿದ್ದಾದರೆ ತಮ್ಮ ರಾಷ್ಟ್ರದಲ್ಲಿ ನಡೆಯುವಂಥ ಇಂಥ ಅನಂತ ಸಂಗತಿಗಳನ್ನು

ಪ್ರತಿಬಂಧಪಡಿಸಬೇಕಾದೀತು. ವ್ಯಾಸನತೋಳು ಇದೇನು ಅಸಹ್ಯಕರವಾದದ್ದಲ್ಲ. ಇದರ ಮೆರವಣಿಗೆಯೆಂದರೆ ಶಿವಸರ್ವೋತ್ತಮನೆಂದು ಸಾರುವ ಪುರಾಣೋಕ್ತ ವಿಧಾನವು. ಇದರಲ್ಲಿ ಅಸಹ್ಯಕಾರಕ ಸಂಗತಿಯು ತಿಲಮಾತ್ರವಿಲ್ಲ. ಶಾಸ್ತ್ರೋಕ್ತ ವಿಧಾನವನ್ನು ಯಥಾವತ್ತಾಗಿ ಸೌಮ್ಯರೀತಿಯಿಂದ ಆಚರಿಸಲ್ಪಡುತ್ತಲಿದೆ. ಇದು ವ್ಯಾಸನ ಗರ್ಹಣವೂ ಅಲ್ಲ; ಆತನ ಪ್ರತಿಷ್ಠೆ. ವ್ಯಾಸೋಕ್ತ ವಚನಗಳಿಗನುಸಾರವಾಗಿಯೇ ಶಿವಸರ್ವೋತ್ತಮನೆಂಬ ತತ್ವವನ್ನು ಲೋಕಕ್ಕೆ ಸಾರಿಹೇಳುತ್ತಿರುವಂತೆ ಆತನ ಹಸ್ತವು ಮೆರೆಸಲ್ಪಡುತ್ತಲಿದೆ. ನಿಜಸ್ಥಿತಿಯು ಹೀಗಿದ್ದು, ಇದರಿಂದವರಿಗೆ ಯಾವ ಪ್ರಕಾರದ ಅಸಹ್ಯವಾಗುತ್ತಿರಬಹುದೆಂಬುದು ಅವರಿಗೇ ಗೊತ್ತು!

ಸದ್ಯಕ್ಕೆ ಈ ಸಂಗತಿಯು ಒತ್ತಟ್ಟಿಗಿರಲಿ. ವೀರಶೈವ, ಮುಸಲ್ಮಾನ ಮುಂತಾದ ಕೆಲಜಾತಿಗಳ ಜನಾಂಗಕ್ಕೆ ಹಂದಿಯು ನಿಷಿದ್ಧವೆಂದು ಸುಪ್ರಸಿದ್ಧವಾಗಿರುವದಷ್ಟೆ. ಆದರೆ ಬ್ರಾಹ್ಮಣರು ಈ ಹಂದಿಯನ್ನು (ವರಾಹವತಾರವನ್ನು)ಪೂಜೆಮಾಡುವದೂ, ನವರಾತ್ರಿ ಮುಂತಾದ ಹಬ್ಬಗಳಲ್ಲಿ ವಾಹನಗಳ ಉತ್ಸವ ಜರುಗಿಸುವ ಕಾಲಕ್ಕೆ ವರಾಹಾವತಾರವನ್ನು ಹೊರಪಡಿಸುವದೂ ವೀರಶೈವರಿಗೂ ಮುಸಲ್ಮಾನರಿಗೂ ಕೂಡಿಯೇ ಅಸಹ್ಯಕಾರಕವಾಗಿರುತ್ತದೆ. ಇಂಥ ಅಸಹ್ಯವರ್ತನಗಳನ್ನು ಇವರು ಹ್ಯಾಗೆ ಸಹನಮಾಡಬೇಕು? ಬ್ರಾಹ್ಮಣರು ದೇವಪೂಜಾ ಕಾಲದಲ್ಲಿ ವಿಷ್ಣುಬ್ರಹ್ಮಾದಿಗಳ ಉಚ್ಛಿಷ್ಟೋದಕವು ಶಿವನ ಮೇಲೆ ಬೀಳುವಂತೆ ರಚನೆಯನ್ನು ಮಾಡಿರುತ್ತಾರೆ. ಕಲಕತ್ತೆಯ ಕಡೆಗೆ ಕರಾಳರೂಪಿಯಾದ ಕಾಳಿಯು ಶಿವನ ವಕ್ಷಸ್ಥಲದಲ್ಲಿ ತಾಂಡವನೃತ್ಯವನ್ನಾಡುತ್ತಿರುವಂತೆ ಕೃತಿಗಳನ್ನು ಮೆರೆಸುತ್ತಾರೆ. ಶ್ರೀ ಕಾಶಿ ಪ್ರಯಾಗ ಮುಂತಾದ ಮಹಾಕ್ಷೇತ್ರಗಳಲ್ಲಿ ಸಾಧುಗಳು ದಿಗಂಬರ ರೂಪದಿಂದ ಸಂಚರಿಸುತ್ತಿರುತ್ತಾರೆ. ಕರ್ನಾಟಕದಲ್ಲಿ ಪ್ರತಿವರ್ಷ ಭಾದ್ರಪದ ಶುಕ್ಲಪಕ್ಷದಲ್ಲಿ ಜೋಕುಮಾರನನ್ನು ಮೆರಿಸುವ ಪರಿಪಾಠವು ಎಲ್ಲ ಕಡೆಗೂ ಉಂಟು. ಜೋಕುಮಾರನಿಗೆ ಒಂದು ಮಹತ್ತರವಾದ ಶಿಶ್ನಾಕಾರವನ್ನು ಮಾಡಿ ಅದು ಎಲ್ಲರಿಗೂ ಎದ್ದು ತೋರುವಂತೆ ಹೊರಗೆ ತೆರೆಯಲ್ಪಟ್ಟು ಆತನ ಬಾಯಿಗೆ ಬೆಣ್ಣೆಯನ್ನು ಹಚ್ಚಿರುತ್ತಾರೆ. ಮಕ್ಕಳಾಗದ ಹೆಣ್ಣುಮಕ್ಕಳು ಆ ಜೋಕುಮಾರನ ಶಿಶ್ನಕ್ಕೆ ನಮಸ್ಕಾರಮಾಡಿ, ಬಾಯಿಗೆ ಹಚ್ಚಿದ ಬೆಣ್ಣೆಯನ್ನು ಪ್ರಸಾದವೆಂದು ಸೇವಿಸುತ್ತಾರೆ. ಇದರಂತೆ ಫಾಲ್ಗುಣಮಾಸದಲ್ಲಿ ಕಾಮನ ಶಿಶ್ನಕ್ಕೆ ಬದನೇಕಾಯಿ, ಬೆಲ್ಲದ ಕರಣಿ, ಉಳ್ಳೇಗಡ್ಡಿ ಮುಂತಾದ ತಿನ್ನತಕ್ಕ ಕೆಲಪದಾರ್ಥಗಳನ್ನು ಕಟ್ಟಿ ಮೆರೆಯಿಸುವದೂ ಉಂಟು. ಈ ಜೋಕುಮಾರನ ಹಾಗೂ ಕಾಮನ ಹಾಡುಗಳನ್ನಂತೂ ಕೇಳಲಾಸಲ್ಲ. ಈ ಕರ್ಣಕಠೋರವಾದ ಭೀಭತ್ಸಪದಗಳನ್ನು ಜನರು ಉಚ್ಚ ಸ್ವರದಿಂದುಚ್ಚರಿಸುತ್ತ ಸಾರ್ವಜನಿಕ ರಸ್ತೆಗಳಲ್ಲಿ ಸ್ವಚ್ಛಂದವಾಗಿ ಸಂಚರಿಸುತ್ತಿರುವದುಂಟು. ಆ ಕಾಮನ ಹಬ್ಬದ ವಿಕಾರಸ್ವರೂಪವನ್ನು ಇಂತಿಷ್ಟೆಂದು ಬರೆದು ತೋರಿಸುವದು ಅಸಾಧ್ಯವಾಗಿದೆ. ಮತ್ತು ಬೌದ್ಧರ ಹಾಗೂ ಜೈನರ ದೇವತೆಗಳು ಬಸ್ತಿಗಳಲ್ಲಿ ಬತ್ತಲೆ ನಿಂತುಕೊಂಡಿದ್ದು, ಅವುಗಳ ಉತ್ಸವಗಳಾದರೂ ನಗ್ನರೂಪವಾಗಿಯೇ ನಡೆಯುತ್ತವೆ. ಶಾಕ್ತರು ಶಕ್ತಿಯ ಪೂಜೆಯನ್ನು ಬತ್ತಲೆಯಾಗಿ ಮಾಡುತ್ತಾರೆ. ಶ್ರವಣಬೆಳಗುಳದ ಜಿನ್ನದೇವರ ಪ್ರತಿಮೆಯು ಸುಮಾರು ೬೦ ಫೂಟು ಎತ್ತರವಾಗಿ ಬೈಲಲ್ಲಿ ಬಹು ದೂರ ಕಾಣುವಂತೆ ಬಿಟ್ಟ ಬರಿಮೈಯಿಂದ ನಿಂತುಕೊಂಡಿರುತ್ತದೆ. ಅಯ್ಯೋ!ಅತಿಪವಿತ್ರವೆಂದು ಪ್ರಸಿದ್ಧಿಪಡೆದಿರುವ ಇಂತಹ ಕ್ಷೇತ್ರಗಳ ಮಹಿಮೆಯನ್ನು ಏನಂತ ಹೇಳಬೇಕು. ಈ ಅನನ್ವಿತ ಸಂಗತಿಗಳೆಲ್ಲ ಪರಮತೀಯರಿಗೆ ಅಸಹ್ಯವಾಗಿ ತೋರುವದಿಲ್ಲವೋ? ಪರಮತೀಯರು ಇವೆಲ್ಲ ಅಸಹ್ಯಕೃತ್ಯಗಳನ್ನು ಅಡಗಿಸಬೇಕೆಂದು ಸರಕಾರಕ್ಕೆ ಪ್ರಾರ್ಥಿಸಿಕೊಂಡಲ್ಲಿ ಸರಕಾರದವರು ಇವರ ಪ್ರಾರ್ಥನೆಗೆ ಸ್ವಲ್ಪಾದರೂ ಕಿವಿಗೊಡುವರೋ? ಸರಕಾರದವರು ಸಮದೃಷ್ಟಿಯಿಂದ ನ್ಯಾಯಕೊಡುವದಾದರೆ ಒಂದು ಜಾತಿಯ ಜನಾಂಗಕ್ಕೆ ಅಸಹ್ಯತೋರುವ ಅನಾಚಾರಗಳನ್ನು ಅವರ ಪ್ರಾರ್ಥನೆಯ ಮೇರೆಗೆ ನಿಲ್ಲಿಸಬಿಡತಕ್ಕದ್ದು. ಇಂಥ

ಅನಾಚಾರಗಳನ್ನು ಸರಕಾರದವರು ಈ ವರೆಗೆ ಪ್ರತಿಬಂಧಿಸಲಿಚ್ಛಿಸದೆ, ನೋಡಲು ಮತ್ತು ಕೇಳಲು ಅಸಹ್ಯಕರವಾದ ಅನಾಚಾರಗಳ ಕಡೆಗೆ ಅಲಕ್ಷಮಾಡಿ, ಸ್ವಲ್ಪವೂ ಅನಾಚಾರವಲ್ಲದ ಈ ವ್ಯಾಸನತೋಳಿನ ಧಾರ್ಮಿಕ ಹಕ್ಕನ್ನು ಯಾವ ನ್ಯಾಯನಿಬಂಧನೆಯನ್ನವಲಂಬಿಸಿ ಪ್ರತಿಬಂಧಿಸಿದರೋ ತಿಳಿಯದು.

ಮುಸಲ್ಮಾನರು ಹಂದಿಯ ಹೆಸರನ್ನು ಸಹ ಉಚ್ಚರಿಸುವದಿಲ್ಲ. ಅದರ ಹೆಸರನ್ನು ಕಿವಿಯಿಂದ ಕೇಳುವದೂ ಕೂಡ ಅವರಿಗೆ ವಾಗತ್ಯವೆನಿಸುತ್ತದೆ. ವಸ್ತ್ರವೊಡವೆಗಳನ್ನು ಬೆಳಗುವದಕ್ಕಾಗಿ ವರಾಹಕೇಸರಗಳನ್ನುಪಯೋಗಿಸುವದರಿಂದ ಪಂಚಾಳರ ಮನೆಯಲ್ಲಿ ಸಹ ಅವರು ಊಟ ಮಾಡುವದಿಲ್ಲ. ಊಟಕ್ಕೆ ಕೂತಾಗ ಹಂದಿ ಎಂಬ ಶಬ್ದವು ಕಿವಿಗೆ ಬಿದ್ದರೆ ಕೂಡಲೆ ಅವರು ಊಟವನ್ನೇ ಬಿಟ್ಟು ಏಳುವರು. ಅವರಿಗೆ ಹಂದಿಯು ಇಷ್ಟು ನಿಷಿದ್ಧವಾಗಿದ್ದು, ಅದು ಬ್ರಾಹ್ಮಣರಿಗೆ ಪರಮ ಪೂಜ್ಯವಾಗಿರುತ್ತದೆ. ಹಂದಿ ಕೆದರಿದ ಮೃತ್ತಿಕೆಯಿಲ್ಲದೆ ಬ್ರಾಹ್ಮಣರ ಯಜ್ಞವೇದಿಕೆಯು ಪವಿತ್ರವೆನಿಸುವದಿಲ್ಲ. ಅಂದಮೇಲೆ ಅನ್ಯೋನ್ಯ ಅಸಂಗತವಾಗಿರುವ ಬ್ರಾಹ್ಮಣರ ವರಾಹ ಮಹೋತ್ಸವವು ಮುಸಲ್ಮಾನರಿಗೆ ಇನ್ನೆಷ್ಟು ಅಸಹ್ಯವಾಗುತ್ತಿರಬಹುದು? 'ಹಂದಿ, ಬೆಕ್ಕು, ನಾಯಿ, ಕೋಳಿ ಮೊದಲಾದ ತಿರ್ಯಕ್ಪ್ರಾಣಿಗಳನ್ನು ವೀರಶೈವರು ಮುಟ್ಟಲಾಗದು' ಎಂಬದು ಅವರ ೬೪ ಶೀಲಗಳಲ್ಲಿ ಒಂದು ಮಹತ್ತರವಾದ ಶೀಲವಾಗಿದೆ. ಆದರೂ ಬ್ರಾಹ್ಮಣರು ಸಾರ್ವಜನಿಕ ರಸ್ತೆಗಳಲ್ಲಿ ಸ್ವೈರವಾಗಿ ಸಾಗಿಸಿಕೊಂಡು ಹೋಗುತ್ತಿರುವ ವರಾಹೋತ್ಸವಕ್ಕೆ ಈ ವರೆಗೆ ಯಾವ ವೀರಶೈವನೂ, ಮುಸಲ್ಮಾನನೂ ವಿಘ್ನವನ್ನು ತಂದಿಲ್ಲ. ಹಿಂದುಸ್ತಾನದ ನಿವಾಸಿಗಳಲ್ಲಿದ್ದಷ್ಟು ಜಾತಿಭೇದದ ತೊಡಕು ಇನ್ನಾವ ರಾಷ್ಟ್ರದಲ್ಲಿ ಕಂಡು ಬರುವದಿಲ್ಲ. ಒಂದು ಜಾತಿಗೆ ಅನುರೋಧವಾದ ಆಚಾರವು ಇನ್ನೊಂದು ಜಾತಿಗೆ ವಿರೋಧವಾಗಿರುತ್ತದೆ. ದುಷ್ಟವೇ ಇರಲಿ, ಒಂದು ಜನಾಂಗದ ಧರ್ಮಪದ್ಧತಿಯು ಇನ್ನೊಂದು ಜನಾಂಗದ ಮನಸ್ಸಿಗೆ ಬರುವದಿಲ್ಲ. ಈ ಎಲ್ಲ ತೊಡಕನ್ನು ಬಿಡಿಸುವದು ಸರಕಾರಕ್ಕೆ ಅಸಾಧ್ಯವಾದ ಮಾತಾಗಿದೆ. ಹಿಂದೆ ಯಾವ ಸರಕಾರದಿಂದಲೂ ಈ ಜಾತಿಭೇದದ ತೊಡಕು ಮುರಿಯುವದಾಗದೆ ಮತ್ತೆ ಹೊಸ ಹೊಸ ಮತಗಳು ಹೊರಬಿದ್ದು, ಅದು ಇನ್ನಿಷ್ಟು ತೊಡಕು ಬಿದ್ದುಹೋಯಿತು. ಒಂದು ಮತದ ಧಾರ್ಮಿಕ ಹಕ್ಕನ್ನು ವಿಚಾರಿಸ ಹೋದರೆ ಇನ್ನೊಂದು ಮತದವರು ರೊಚ್ಚಿಗೇಳುತ್ತಾರೆ. ಒಂದು ಜನಾಂಗವನ್ನು ಸಂತುಷ್ಟಪಡಿಸ ಹೋದರೆ ಇನ್ನೊಂದು ಜನಾಂಗವು ಅಸಂತುಷ್ಟವಾಗುತ್ತದೆ. ಹೀಗೆ ಆಗಾಗುತ್ತ ಕಟ್ಟಕಡೆಗೆ ಎಲ್ಲ ಜನಾಂಗಗಳು ಅಸಮಾಧಾನ ಮನಸ್ಕರಾಗುವದೇ ನಿಜ. ಈ ಮರ್ಮವನ್ನರಿತುದರಿಂದಲೇ 'ಯಾವದೊಂದು ಧರ್ಮದಲ್ಲಿ ನಾವು ಕೈ ಹಾಕಲಾರೆವು' ಎಂಬ ಅಭಿವಚನವನ್ನು ಸರಕಾರವು ಕೊಟ್ಟಿದ್ದು, ಅದನ್ನು ಅಕ್ಷರಶಃ ಪಾಲಿಸುತ್ತ ಬಂದಿದೆ. ಮೊನ್ನೆ ಮೊನ್ನೆ ಶ್ರೀ ಪಂಚಮ ಜಾರ್ಜ ಬಾದಶಹರವರ ಸಿಂಹಾಸನಾರೋಹಣ ಸಮಾರಂಭ ಸಮಯಕ್ಕೆ ಹೊರಪಡಿಸಿದ ಹೊಸ ರೂಪಾಯಿಗಳ ಮುದ್ರೆಯಲ್ಲಿ ಹಿಂದೂ ಜನರ ರಾಜಚಿಹ್ನವಾದ ಆನೆಯ ಚಿತ್ರವು ಕೆತ್ತಲ್ಪಟ್ಟಿದ್ದು, ಅದರ ಸೊಂಡೆಯು ಚನ್ನಾಗಿ ಎದ್ದು ಕಾಣದೆ ಹೃಸ್ವವಾಗಿ ಹಂದಿಯ ಮೋರೆಯಂತೆ ಕಾಣುತ್ತದೆಂದೂ, ಈ ಹಂದಿಯ ಲಕ್ಷಣವು ನಮಗೆ ಸರ್ವಥಾ ನಿಷಿದ್ಧವೆಂದೂ ಮುಂಬಯಿಯ ಮುಸಲ್ಮಾನರೇ ಮೊದಲಾದ ಜನರು ತಕರಾರ ತೆಗೆಯಲು, ಅದು ಸರಕಾರಕ್ಕೆ ಕೂಡಲೆ ದಾದು ಹತ್ತಿ, ಸರಕಾರದವರು ಆಗಿಂದಾಗ ತಮ್ಮ ಎಲ್ಲ ಖಜಾನೆಗಳಲ್ಲಿ ಪಸರಿಸಿದ ನಾಣ್ಯಗಳನ್ನೆಲ್ಲ ಪರತ ತರಿಸಿ, ಅವುಗಳನ್ನೆಲ್ಲ ಕತ್ತರಿಸಿ ಟಂಕಶಾಲೆಗೆ ಭರಣಾಮಾಡಿ, ಆ ಧರ್ಮನಿಷಿದ್ಧಚಿಹ್ನವನ್ನು ತೆಗೆದು ಹಾಕಿ, ಗಜಶುಂಡವು ಚೆನ್ನಾಗಿ ಕಾಣುವಂತೆ ಹೊಸ ರೂಪಾಯಿಗಳನ್ನು ಹೊರಪಡಿಸಿದರು. ಸರಕಾರವು ಧಾರ್ಮಿಕ ಹಕ್ಕುಗಳನ್ನು ಕಾಯ್ದಿಡಲು ಇಷ್ಟು ಸೂಕ್ಷ್ಮ ರೀತಿಯಿಂದ ಜಾಗೃತರಾಗಿರುವಾಗ, ನಮ್ಮ ವ್ಯಾಸನ ತೋಳಿನ ಬಗ್ಗೆ ಯಾಕೆ ಇಷ್ಟು ಅನಾದರ ಮಾಡಿರುವರೆಂಬವರ ಮರ್ಮವು

ಬ್ರಾಹ್ಮಣರ ಕಪಟತಂತ್ರದ ವಿಶ್ವಪ್ರಯತ್ನದಲ್ಲಿ ಗೌಪ್ಯವಾಗಿ ಹುದುಗಿಕೊಂಡಿರುವದು. ಈ ಗೌಪ್ಯ ಸ್ಫೋಟನವು ಒಮ್ಮಿಲ್ಲೊಮ್ಮೆ ಆಗಿ, ಸತ್ಯಾಮೃತಸಾರವು ಹೊರಸೂಸದೆ ಎಂದಿಗೂ ಇರಲಾರದು.

ವೀರಶೈವ ಮತಕ್ಕೆ ವಿರೋಧವಾಗಿ ಅನ್ಯಮತಗಳಲ್ಲಿ ನಡೆಯುತ್ತಿರುವ ಅಸಹ್ಯಅನಾಚಾರಗಳ ಕಡೆಗೆ ವೀರಶೈವರು ನದರೆತ್ತಿನೋಡದೆ, ಮನದಲ್ಲಿಯೇ ನೊಂದುಕೊಂಡು ಸ್ತಬ್ಧರಾಗಿ ಕೂತಿರುವರು. ಈ ಮೇಲೆ ವಿವರಿಸಿದ ಶಿವಾಪಮಾನಕಾರಕವಾದ ಬ್ರಾಹ್ಮಣರ ಕೆಲ ಅನಾಚಾರಗಳನ್ನು ಕಣ್ಣಾರೆ ಕಂಡು ವೀರಶೈವರು ಹೇಗೆ ಸಹನ ಮಾಡಬೇಕು? ವ್ಯಾಸಭುಜದ ಮೆರವಣಿಗೆಯಲ್ಲಿ ವ್ಯಾಸನಿಂದೆಯ ಚಕಾರ ಶಬ್ದವಿಲ್ಲ. ಅನ್ಯ ಅನಾಚಾರ ದೋಷಾದಿಗಳೇನೂ ಇಲ್ಲ. ಹೀಗಿದ್ದೂ ಅವರು ಈ ಉತ್ಸವವನ್ನು ನಿಷ್ಕಾರಣವಾಗಿ ಉದ್ವಾಮತನದಿಂದ ಪ್ರತಿಬಂಧಿಸುತ್ತಾರೆ. ಪರಹಿತ ಪ್ರತಿಬಂಧವೇ ಅವರಿಗೊಂದು ಮೋಜು. ಪರೋತ್ಕರ್ಷಾ ಅಸಹಿಷ್ಣುತೆಯೇ ಅವರ ಅಂತರಂಗದ ಮಟ್ಟು. ಈ ತಥ್ಯಾಂಶವನ್ನು ಸರಕಾರವು ತಿಳಿಯಲಸಮರ್ಥವಾಗಿದೆ. ಕಡೆಗೂ ಸರಕಾರವು ಅದೇ ಪಕ್ಷಾನುಸಾರವಾಗಿ ಅಭಿಪ್ರಾಯ ಪಡುವದಾದರೆ, ಒಬ್ಬರಿಗೆ ಉಂಡಿ ಒಬ್ಬರಿಗೆ ಕಡಬು ಎಂಬಂತೆ ಪಂಕ್ತಿಭೇದವನ್ನು ಮಾಡಿದಂತಾಗುತ್ತದೆ. ತಮಗೆ ವಿರೋಧವಾಗಿ ಆಚರಿಸಲ್ಪಡುವ ಪರಮತೀಯರ ಹುಳುಕುಗಳನ್ನು ವೀರಶೈವರಲ್ಲಿ ಈವರೆಗೆ ಒಬ್ಬರಾದರೂ ಆರಿಸಿದರೋ? ಯಾರೂ ಇಲ್ಲ. ಹಾರುವರಂಥ ಉಪದ್ವ್ಯಾಪಗುಣವು ವೀರಶೈವರಲ್ಲಿ ಹುಟ್ಟಾ ಇಲ್ಲೆಂಬದನ್ನು ಸರಕಾರದವರು ಮನಗಂಡಿದ್ದರೂ ಈ ನ್ಯಾಯೋಲ್ಲಂಘನ ಠರಾವವನ್ನು ಯಾಕೆ ಹೊರಪಡಿಸಿದರೆಂಬುದು ಬಹು ಚೋದ್ಯವಾಗಿದೆ. ಈ ಅನ್ಯಾಯನ್ನು ಕ್ಷಿಪ್ರವಾಗಿ ಸರಿಪಡಿಸಿಕೊಂಡು ಸಜ್ಜನ ಸಮಂಜಸವಾದ ಠರಾವವನ್ನು ಪ್ರಕಟಪಡಿಸದ ಹೊರತು, ಸರಕಾರದ ತಲೆಯ ಮೇಲೆ ಹೊತ್ತು ನಿಂತಿದ್ದ ಆರೋಪಭಾರವು ಕೆಳಗೆ ಇಳಿಯಲಿಕ್ಕಿಲ್ಲ.

ವ್ಯಾಸನ ತೋಳಿನ ಬಗ್ಗೆ
ಜಜ್ಜ ಕೋರ್ಟಿನಲ್ಲಿ ಅಸಲ ದಾವೆಯನ್ನು ತಂದದ್ದು

ವ್ಯಾಸನ ತೋಳಿನ ಬಗ್ಗೆ ಮುಂಬಯಿ ಸರಕಾರದವರು ಹೊರಪಡಿಸಿದ ಅಸಮಾಧಾನಕಾರಕವಾದ ಠರಾವವನ್ನು ಕಂಡು, ಅಥಣಿಯವರು ಸರಕಾರದ ಮೇಲೆ ಮತ್ತು ಅಥಣಿಯ ಕೆಲ ಬ್ರಾಹ್ಮಣರ ಮೇಲೆ ಈಗ ಜಿಲ್ಲಾ ಬೆಳಗಾವ ಸೆಸೆನ್‌ಕೋರ್ಟಿನಲ್ಲಿ ಅಸಲದಾವೆಯನ್ನು ತಂದಿರುವದು. ದಾವಾ ನಂಬರ ೯/೧೯೧೨. ದಾವೆಯ ರಕಮು ೧೪೦ ರೂಪಾಯಿ, ವಾದಿ ಪ್ರತಿವಾದಿಯರ ಹೆಸರುಗಳನ್ನು ಇದರ ಕೆಳಗೆ ಬರೆದಿರುತ್ತದೆ.

ವಾದಿಯರು (೫)

೧. ರೇವಪ್ಪ ರುದ್ರಪ್ಪ ಮಹಾಜನ ಸಾಕೀನ ಅಥಣಿ. ೨. ಶಿವಲಿಂಗಪ್ಪ ಅಂದಾನಪ್ಪ ಸೆಟ್ಟಿ ಸಾ. ಅಥಣಿ ೩. ಶಂಕರಪ್ಪ ನೀಲಕಂಠಪ್ಪ ಬಲ್ಲಿ ಸಾ. ಅಥಣಿ ೪. ದುಂಡಪ್ಪ ಬಸಲಿಂಗಪ್ಪ ನೂಲಿ ಸಾ. ಅಥಣಿ ೫. ವಿರೂಪಾಕ್ಷಪ್ಪ ಚನ್ನಪ್ಪ ಹಳಿಯಾಳ ಸಾ. ಅಥಣಿ

ಪ್ರತಿವಾದಿಯರು (೪)

೧. ಸೆಕ್ರೆಟರಿ ಆಫ್ ಸ್ಟೇಟ ಫಾರ ಇಂಡಿಯಾ ಕೌನ್ಸಿಲ್ ೨. ಪಾಂಡುರಂಗ ಸಿದ್ಧರಾವ ಪಾಟೀಲ ಸಾ. ಅಥಣಿ ೩. ಶೇಷಗಿರಿ ತಿರುಮಲರಾವ ದಾತಾರ ಸಾ. ಅಥಣಿ ೪. ಬಳವಂತ ನಾರಾಯಣ ಗುಮಾಸ್ತಿ ಪಾಟೀಲ ಸಾ. ಅಥಣಿ.

ಈ ವ್ಯಾಜ್ಯದ ಮುದ್ದತು ತಾರೀಖು ೯ನೇ ಮಾಹೆ ಜುಲೈ ೧೯೧೨ನೇ ಇಸವಿಯ ದಿವಸವಿರುವದು. ಮುಂದೆ ಠರಾವವು ಹೇಗಾಗುವದೆಂಬದನ್ನು ಎಲ್ಲರೂ ಎದುರು ನೋಡುತ್ತಿರುವರು. ಈ ಮುದ್ದತು ಹಾಗೇ

ಮುಂದೆ ಸಾಗುತ್ತ ಹೋಗಿ, ಡಿಸ್ಟ್ರಿಕ್ಟ ಜಜ್ಜರಾದ ಮೆ॥ಎಲ್.ಸಿ.ಕ್ರಂಪಸಾಹೇಬ ಬಹಾದ್ದೂರರವರು ವ್ಯಾಸನ ತೋಳಿನ ಪ್ರಕರಣದ ಬಗ್ಗೆ ಅಥಣಿಯ ಲಿಂಗಾಯತರು ಕೊಟ್ಟ ನೋಟೀಸು ಯೋಗ್ಯವಿಲ್ಲೆಂದು ಠರಾವು ಹೇಳಿ, ತಾರೀಖು ೩೧ನೇ ಅಕ್ಟೋಬರ ಸನ್ ೧೯೧೨ ಇಸವಿಯ ದಿವಸ ಖರ್ಚು ಸಹಿತವಾಗಿ ಆ ದಾವೆಯನ್ನು ಕಿತ್ತು ಹಾಕಿದರು. ಅದರಿಂದ ತಾರೀಖು ೧೪ನೇ ಡಿಶಂಬರ ಸನ್ ೧೯೧೨ ಇಸವಿಯ ದಿವಸ ಪುನಃ ಹೊಸ ನೋಟೀಸು ದಾಖಲಮಾಡಲ್ಪಟ್ಟಿತು. ವಾದಿ-ಬಸಲಿಂಗಯ್ಯಾ ಮುತ್ತಿನಕಂಠಯ್ಯ ಹಿರೇಮಠ ಕಸಬಾ ಅಥಣಿ ಮತ್ತು ಅಥಣಿಯ ಇತರ ಹತ್ತು ಜನರು ಕೂಡಿ, ಪ್ರತಿವಾದಿ-ಸೆಕ್ರೆಟರಿ ಆಫ್ ಸ್ಟೇಟ ಫಾರ ಇಂಡಿಯಾ ಇನ್‌ಕೌನ್ಸಿಲ್ ಮತ್ತು ೫ ಮಂದಿ ಅಥಣಿಯ ಬ್ರಾಹ್ಮಣರು ಇವರ ಮೇಲೆ ತಾ.೧೭ನೇ ಎಪ್ರೀಲ ಸನ್ ೧೯೧೩ನೇ ಇಸವಿಯ ದಿವಸ ೧೩೦ ರೂಪಾಯಿಯ ದಾವೆಯನ್ನು ತಂದಿರುವರು. ದಾವಾ ನಂಬರ ೧೪/೧೯೧೩. ಇದರ ಮುದ್ದತು ತಾ. ೫-೭-೧೯೧೩ ಇಸವಿಯ ದಿವಸ ಇಡಲ್ಪಟ್ಟಿದ್ದು, ಆ ದಿವಸ ಏನೂ ವಿಚಾರವಾಗದೆ ಮುಂದೆ ಜಾನೇವಾರಿ ತಿಂಗಳಲ್ಲಿ ಈ ದಾವೆಯ ವಿಚಾರಣೆ ನಡೆದು ತಾರೀಖು ೩೦ನೇ ಮೇ ಸನ್ ೧೯೧೪ ಇಸವಿಯ ದಿವಸ ಡಿಸ್ಟ್ರಿಕ್ಟ ಜಜ್ಜರಾದ ಮೆ॥ಎಲ್.ಸಿ. ಕಂಪ್ರ ದೊರೆಗಳು "ಯಾವ ಜಾತಿಯವರಾದರೂ ತಮ್ಮ ತಮ್ಮ ಧರ್ಮಾನುಸಾರವಾಗಿ ಯಾವದೇ ತರದ ಉತ್ಸವವನ್ನು ಸಾರ್ವಜನಿಕ ರಸ್ತೆಗಳಲ್ಲಿ ಹಾಯಿಸಿಕೊಂಡು ಹೋಗಲಿಕ್ಕೆ ಡಿಸ್ಟ್ರಿಕ್ಟ್ ಕೋರ್ಟ ಆಕ್ಟಿನ ಪ್ರಕಾರ ಅಡ್ಡಿಯಿಲ್ಲ. ಆದರೆ ದಂಗೆ ಮೊದಲಾದ ತೊಂದರೆ ಬರುವಂತೆ ಕಂಡು ಬಂದರೆ ಅಂಥ ಉತ್ಸವಗಳನ್ನು ಪ್ರತಿಬಂಧಿಸಲಿಕ್ಕೆ ಸರಕಾರದವರಿಗೆ ಅಧಿಕಾರವಿರುವದರಿಂದ, ಈ ಸಂಬಂಧವಾಗಿ ಸ್ಟೇಟ ಸೆಕ್ರೆಟರಿ ಫಾರ ಇಂಡಿಯಾ ಇವರ ಮೇಲೆ ಅಂದರೆ ಸರಕಾರದ ಮೇಲೆ ತಂದ ದಾವೆಯು ಅಯೋಗ್ಯವಿದೆ ಎಂಬರ್ಥದ ಠರಾವವನ್ನು ಕೇಳಿ ಈ ದಾವೆಯನ್ನು ರದ್ದುಪಡಿಸಿದರು. ಇದರ ಅಥಣಿಯ ಲಿಂಗಾಯತರು, ಡಿಸ್ಟ್ರಿಕ್ಟ ಜಜ್ಜರು ಮಾಡಿದ ಠರಾವವು ಅಯೋಗ್ಯವಾಗಿರುವದೆಂದು ಸನ್ ೧೯೧೪ನೇ ಜೂನ ತಿಂಗಳಲ್ಲಿ ಅಪೀಲು ಮಾಡಿರುತ್ತಾರೆ. ಫರ್ಸ್ಟ ಅಥವಾ ರೆಗ್ಯುಲರ ಅಪೀಲ ನಂಬರ ೧೮೬/೧೯೧೩ ಅಪೀಲು ಮಂಜೂರಾಗಿ ಪ್ರತಿವಾದಿಯರಿಗೆ ನೋಟೀಸು ಹೊರಟಿರುತ್ತವೆ. ಈ ಪ್ರಕರಣದ ನಿರ್ಣಯವನ್ನು ಮುಂದೆ ನೋಡಬೇಕಾಗಿದೆ. ಮುಂದೆ ಹಾಯಕೋರ್ಟಿನಲ್ಲಿ ಈ ಬಗ್ಗೆ ವಿಚಾರ ನಡೆದು, ಹಿಂದೆ ಆದ ಸರಕಾರ ಠರಾವ ನಂಬರ ೨೬೫೪/೬-೫-೧೯೧೧ ನ್ಯಾಯಖಾತೆ ಮತ್ತು ಡಿಸ್ಟ್ರಿಕ್ಟ ಜಜ್ಜರಾದ ಮೆ॥ಕ್ರಂಪಸಾಹೇಬ ಬಹದ್ದೂರರವರ ಠರಾವುಗಳನ್ನು ರದ್ದಪಡಿಸಲ್ಪಟ್ಟು ಲಿಂಗಾಯತರಿಗೆ ವ್ಯಾಸನ ತೋಳಿನ ಹಕ್ಕು ನೈಸರ್ಗಿಕವಾಗಿ ಇದ್ದದ್ದು ನಿಜವೆಂತಲೂ, ಅದನ್ನವರು ಸಾರ್ವಜನಿಕ ರಸ್ತೆಗಳಲ್ಲಿ ಹಾಯಿಸಲಿಕ್ಕೆ ನೈಸರ್ಗಿಕವಾಗಿ ಇದದ್ದು ನಿಜವೆಂತಲೂ, ಅದನ್ನವರು ಸಾರ್ವಜನಿಕ ರಸ್ತೆಗಳಲ್ಲಿ ಹಾಯಿಸಲಿಕ್ಕೆ ಅಡ್ಡಿಯಿಲ್ಲವೆಂತಲೂ ವಗೈರೆ ತಾರೀಖು ೨೩ನೇ ಫೆಬ್ರುವರಿ ಸನ್ ೧೯೧೬ ಇಸವಿಯ ದಿವಸ ನಿರ್ಣಯವಾಯಿತು.

---

೧೨. ಇಲ್ಲಿಂದ ಈ ಭಾಗದ ಕೊನೆಯ ವರೆಗಿನ ಕನ್ನಡ ಮತ್ತು ಇಂಗ್ಲೀಷ್ ಪತ್ರ ಶ್ರೀ ರುದ್ರಗೌಡರ ಹಸ್ತಾಕ್ಷರದಲ್ಲಿ ಹೀಗಿದೆ-ಸಂ.→

(ಬಾಂಬೆ ಲಾ ರಿಪೋರ್ಟರ ೧೮ನೇ ವ್ಹಾಲೀಮ ಪಾನ ೪೬೦ಯಿಂದ ೪೭೯ನೇ ವರೆಗೆ. ಬೇಕಾದವರು ನೋಡಿಕೊಳ್ಳತಕ್ಕದ್ದು). ಇದರ ಕೆಲ ಮುದ್ದೆಗಳ ವಿಷಯವಾಗಿ ಬೆಳಗಾವ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ವಿಚಾರ ನಡೆದಿದ್ದು, ಅವುಗಳ ನಿರ್ಣಯವಾದರೂ ಕ್ಷಿಪ್ರದಲ್ಲಿಯೇ (ಸಧ್ಯದಲ್ಲಿಯೇ)ಹೊರಬೀಳಬಹುದು.[೧೨]

❖❖

→ಸದರಿ ಮೇಲ್ಕಂಡ ದಾವೇದ ವಿಚಾರವು ಮೆ॥ಮೊಂಟಗೋಮರೀ ಸಾಹೇಬ ಅಸಿಸ್ಟಂಟ ಜಜ್ಜ ಸಾಹೇಬರ ಮುಂದೆ ನಡಿದು, ಲಿಂಗಾಯತ ಮತದವರಂತೆ ಅಂದರೆ ವ್ಯಾಸನ ತೋಳ ಕಟ್ಟಲಿಕ್ಕೆ ಹಕ್ಕು ಅದೆ. ಕಟ್ಟುವ ಕಾಲಕ್ಕೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾಹೇಬರವರ ಪರವಾನಗಿ ಮಾತ್ರ ತಗೊಳ್ಳತಕ್ಕದ್ದೆಂದು ಠರಾವು ಆಯಿತು. ತಾ. ೧೨ನೇ ಸಪ್ಟಂಬರ ೧೯೧೮. ಇದರ ಮೇಲೆ ಹೈಕೋರ್ಟಿಗೆ ಪುನಃ ಲಿಂಗಾಯತ ಸಮಾಜದವರು ಅಪೀಲ ಮಾಡಿದ್ದರಲ್ಲಿ ಲೇಬರ್ಸ ಪೇಟಂಟ ಅಪೀಲ ನಂಬರ ೫೫/೧೯೧೮ನೇದಲ್ಲಿ ಬಿದ್ದು ಹೈಕೋರ್ಟ ಚೀಫ್ ಜಸ್ಟೀಸ ಸರ್ ನಾರ್ಮನ್ ಮೆಕ್ಲಾಪುಡ ಸಾಹೇಬರವರು ಅದೇ ಪ್ರಕಾರದ ಮುಲ್ಕಿ ಅಂದರೆ ಲಿಂಗಾಯತ (ಅಥಣಿ) ಸಮಾಜದವರಿಗೆ ವ್ಯಾಸನ ತೋಳ ಕಟ್ಟಲಿಕ್ಕೆ ಹಕ್ಕು ಸಂಪೂರ್ಣ ಅದೆ. ಆದರೆ ರೇಗ್ಯುಲೇಟ ಮಾಡತಕ್ಕವು ಅಂದರೆ ಮೇಹರ್ಬಾನ ಡಿಸ್ಟ್ರಿಕ್ಟ ಪೋಲಿಸ ಆಕ್ಟ ಪ್ರಕಾರ ದಿ. ಮ್ಯಾಜಿಸ್ಟ್ರೇಟರ ಕಡೆಗೆ, ಯಾವ ಜಾಗಾದಲ್ಲಿ ಯಾವ ವೇಳೆಯಲ್ಲಿ ಕಟ್ಟತಕ್ಕದ್ದೆಂಬ ಮಾತನ್ನು ತಿಳಿಸಿ, ಹುಕ್ಕುಂ ಪಡಕೊಂಡ ಕಟ್ಟಬೇಕೆಂದು ಕೊನೆಯ ಹುಕ್ಕುಂ ಸಿಕ್ಕು, ಲಿಂಗಾಯತಮತದಂತೆ ಆದಂತಾಯಿತು. ೧೨೧೩ನೇ ಪಾನಿನಲ್ಲಿ ಇಂಗ್ರಜೀ ಠರಾವ ಉತಾರಿಸಿದೆ. ತಾರೀಖ ೧೧ ಜುಲೆ ೧೯೨೧ ಇಸ್ವಿ. (-ಈ ಠರಾವು ಒಳಗೊಂಡ ೧೨೧೩ನೆಯ ಪಾನು ಓದಲು ಸಾಧ್ಯವಾಗದಂತೆ ತುಂಡುತುಂಡಾಗಿದೆ. ಹೀಗಾಗಿ ಅದನ್ನು ಉದ್ಧರಿಸಲಾಗಲಿಲ್ಲ - ಸಂ.)

As to detailed account of the Vyasanatola procession, consult the file no. 26 Parts II and III and also the note dated 25th May 1913. The note dated 25th May 1913 A.D. was sent to Mr. R.C. Brown, I.C.S. Collector of Belgaum with my special letter no. 1055 dated 25th May 1913. This letter is filed in file no. 26 Part III. ಇದನ್ನು ಚನ್ನಾಗಿ ಓದಿ ನೋಡಿದರೆ ಒಳ್ಳೆ ಬೋಧವಾಗುವಂತಿದೆ.

೨೦ನೇ ಭಾಗ

ದಿಲ್ಲಿ ದರ್ಬಾರವೂ, ಆಯ್.ಎಸ್.ಓ. ಎಂಬ ಪದವಿಯೂ

ಇಂಡಿಯಾ ದೇಶಕ್ಕೆ ಸಂಬಂಧಿಸಿದ ಆಧುನಿಕ ಇತಿಹಾಸದಲ್ಲಿ ಬಂಗಾರದ ಅಕ್ಷರಗಳಿಂದ ಕೆತ್ತಿಡುವ ಸಂಗತಿಯೆಂದರೆ ಸನ್ ೧೯೧೨ನೇ ಇಸವಿ ಡಿಶಂಬರ ತಿಂಗಳ ೧೨ನೇ ತಾರೀಖಿನ ದಿವಸ ಬಹು ವೈಭವದಿಂದ ಜರುಗಿದ ದಿಲ್ಲಿಯ ದರ್ಬಾರವೇ ಸರಿ. ಶ್ರೀಮದ್ವಿಕ್ಟೋರಿಯಾ ಮಹಾರಾಣಿಯವರ ಪುತ್ರರಾದ ೭ನೇ ಎಡ್ವರ್ಡ ಬಾದಶಹರವರ ತರುವಾಯ ಶ್ರೀ ಪಂಚಮ ಜಾರ್ಜ ಬಾದಶಹರವರು ಬ್ರಿಟಿಶ ಸಿಂಹಾಸನಾರೋಹಣಂಗೈದರಷ್ಟೇ! ಇವರು ಪಟ್ಟಾಭಿಷಿಕ್ತರಾದ ಸಂಗತಿಯನ್ನು ಹಿಂದುಸ್ತಾನದಲ್ಲಿ ಪ್ರಕಟಪಡಿಸುವ ಬಗ್ಗೆ ಹಿಂದಿನಿಂದ ನಡೆದು ಬಂದ ಪದ್ಧತಿಯ ಮೇರೆಗೆ ತಾ. ೧೨-೧೨-೧೯೧೧ನೇ ದಿವಸ ದಿಲ್ಲಿಯಲ್ಲಿ ಬಹು ಭವ್ಯವಾದ ದರ್ಬಾರನ್ನು ನೆರೆಯಿಸಬೇಕೆಂದು ಗೊತ್ತಾದ ಮೇರೆಗೆ, ಸರಕಾರದಿಂದ ಸರ್ವಸಿದ್ಧತೆಯು ಇಡಲ್ಪಟ್ಟಿತು. ಈ ಕಾಲಕ್ಕೆ ಲಾರ್ಡ ಹಾರ್ಡಿಂಜ ಪ್ರಭುಗಳು ಇಂಡಿಯಾದ ವೈಸರಾಯರಾಗಿಯೂ, ಲಾರ್ಡ ಕ್ರ್ಯೂ ದೊರೆಗಳು ಸ್ಟೇಟ ಸೆಕ್ರೆಟರಿಗಳಾಗಿಯೂ ಇದ್ದರು. ಈ ದರ್ಬಾರಕ್ಕೆ ಶ್ರೀ ಜಾರ್ಜ ದೊರೆಗಳು ಮಹಾರಾಣಿ ಮೇರೀ ಸಹಿತವಾಗಿ ಲಾರ್ಡ ಕ್ರ್ಯೂ ಸಾಹೇಬರವರನ್ನೊಡಗೊಂಡು ಸ್ವತಃ ದಯಮಾಡಿಸಿದುದರಿಂದ, ಹಿಂದಿನ ೨ ದರ್ಬಾರುಗಳಿಗಿಂತ ಈ ದರ್ಬಾರವು ಚಿರಸ್ಮರಣೀಯವಾಯಿತೆಂದು ಹೇಳಬಹುದು. ಆಮಂತ್ರಿತರಾದ ಅನೇಕ ಸಾಮಂತ ನೃಪಾಲರಿಂದಲೂ, ಅಧಿಕಾರಿಗಳಿಂದಲೂ ಅಲಂಕೃತವಾದ ದರ್ಬಾರವು ದಿಲ್ಲಿಯಲ್ಲಿ ಅಭೂತ-ಅಶ್ರುತಪೂರ್ವವಾಗಿ ಜರುಗಿತು. ಆ ಸಮಯದಲ್ಲಿ ಮುಂಬಯಿ ಮುಂತಾದ ಪಟ್ಟಣಗಳು ಶೃಂಗರಿಸಲ್ಪಟ್ಟು, ಬಹು ಉದಾರಬುದ್ಧಿಯಿಂದ ಚಕ್ರವರ್ತಿಗಳ ಸ್ವಾಗತವನ್ನು ಮಾಡಿದವು. ಒಟ್ಟಿಗೆ ಸರ್ವಾಂಗಸುಂದರಿಯೂ ಸದ್ಗುಣಿಯೂ, ಸರ್ವಾಲಂಕಾರಭೂಷಿತೆಯೂ ಆದ ಭಾರತಾಂಗನೆಯು ತನ್ನ ಅಧಿಪತಿಯಾದ ಶ್ರೀಜಾರ್ಜಬಾದಶಹರವರನ್ನು ಅನೇಕ ವಿಧವಾಗಿ ಆದರಿಸಿದಳೆಂದು ಹೇಳಬಹುದು.

ದಿಲ್ಲೀದರ್ಬಾರಕ್ಕೆ ಸರಕಾರದಿಂದ ಆಮಂತ್ರಿತರಾದ ಮಹಾಶಯರ ಮಾಲಿಕೆಯಲ್ಲಿ ನಮ್ಮ ರಾವಬಹದ್ದೂರರವರೂ ಒಬ್ಬರಾಗಿದ್ದರು. ಮುಂಬಯಿ ಕರ್ನಾಟಕದಲ್ಲಿ ಆಮಂತ್ರಿತರಾದ ನೇಟಿಹ್ವ ಆಫೀಸರರೆಂದರೆ ರಾ.ಬ॥ಅರಟಾಳ ರುದ್ರಗೌಡರು ಒಬ್ಬರೇ ಸರಿ. ಇವರ ಅಸಾಧಾರಣವಾದ ರಾಜ್ಯಕಾರ್ಯ ಧುರಂಧರತೆಯೂ, ಅನುಪಮೇಯವಾದ ರಾಜನಿಷ್ಠೆಯೂ ಸರಕಾರದ ಸಾಕ್ಷಾತ್ಕಾರವಾದ ದೃಷ್ಟಿಯ ವರೆಗೂ ಪಸರಿಸಿ, ಇವರನ್ನು

ಆಮಂತ್ರಿತರನ್ನಾಗಿ ಮಾಡಿದವೆಂದು ಹೇಳಿದರೆ ಅತಿಶಯೋಕ್ತಿಯಾಗದು. ರಾ.ಬ॥ಅರಟಾಳ ಸಾಹೇಬರು ದರ್ಬಾರಕ್ಕೆ ಆಮಂತ್ರಿತರಾದಾಗ್ಯೂ ಇವರ ವೃದ್ಧಾಪ್ಯದ ಪ್ರಕೃತಿಯು ದಿಲ್ಲಿಯ ಚಳಿಯನ್ನು ಸಹಿಸುವಷ್ಟು ಶಕ್ತವಾಗಿರದ್ದರಿಂದ ತಮಗೆ ದರ್ಬಾರಕ್ಕೆ ಬರುವದಾಗುವದಿಲ್ಲೆಂದೂ, ಈ ಬಗ್ಗೆ ಕ್ಷಮೆಯಿರಬೇಕೆಂದೂ ವಿಜ್ಞಾಪಿಸಿಕೊಂಡದ್ದಕ್ಕೆ ಸರಕಾರದವರು ಒಪ್ಪಿಕೊಂಡರು. ಯಥಾವಿಧಿಯಾಗಿ ದಿಲ್ಲೀದರ್ಬಾರವು ಮಹಾವೈಭವದಿಂದ ಜರುಗಿ ಹೋಯಿತು.

ದಿಲ್ಲೀದರ್ಬಾರವು ಹಿಂದುಸ್ತಾನದಲ್ಲಿ ಚಿರಸ್ಮರಣೀಯವಾಗಬೇಕೆಂಬ ಉದ್ದೇಶದಿಂದ ಆ ದಿವಸ ಅಂದರೆ ತಾರೀಖು ೧೨-೧೨-೧೯೧೧ ಇ. ದಿವಸ (ಮಂಗಳವಾರ), ದಿಲ್ಲಿಯಂತೆ ಎಲ್ಲ ಕಡೆಯಲ್ಲಿಯೂ ದರ್ಬಾರ ಮಹೋತ್ಸವವು ಜರುಗಬೇಕೆಂದು ಸರಕಾರದ ಕಟ್ಟಪ್ಪಣೆಯಾದುದರಿಂದ, ಹಳ್ಳಿಪಳ್ಳಿಗಳಲ್ಲಿಯೂ ಕೂಡ ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತಿರಲು, ಜಿಲ್ಲಾ ಸ್ಥಾನವಾದ ಬೆಳಗಾವಿಯಲ್ಲಿ ನಡೆದ ದರ್ಬಾರದ ಸೊಬಗನ್ನೇನು ವರ್ಣಿಸುವದದೆ?

ಆಯ್.ಎಸ್.ಓ. ಎಂಬ ಪದವಿಯು ಸಿಕ್ಕಿದ್ದು

ಜಿಲ್ಲಾಧಿಪತಿ ಮೆಹರ್ಬಾನ ಬಿ.ಎ. ಬ್ರ್ಯಾಂಡನ್ ಸಾಹೇಬ ಬಹಾದ್ದೂರರವರು ಆ ದಿವಸ ಬೆಳಗಾವಿಯ ಪಶ್ಚಿಮಕ್ಕಿರುವ ರೇಸಕೋರ್ಷಿನ ವಿಶಾಲವಾದ ಸ್ಥಳದಲ್ಲಿ ಬಲು ಸುಂದರವಾದ ದರ್ಬಾರ ಮಂಟಪವನ್ನು ರಚಿಸಿ ಜಿಲ್ಲಾ ಸ್ಥಳದಲ್ಲಿರುವ ಎಲ್ಲ ಅಧಿಕಾರಿಗಳನ್ನೂ, ಸಂಸ್ಥಾನಿಕರನ್ನೂ ಕರೆಯಿಸಿದ್ದರು. ದರ್ಬಾರಕ್ಕೆ ಮೆ. ಜಜ್ಜಸಾಹೇಬ ಬಹಾದ್ದೂರರವರೂ, ಲಷ್ಕರದ ಎಲ್ಲ ಅಮಲ್ದಾರರೂ, ರಾವಬಹಾದ್ದೂರ ಅರಟಾಳ ಸಾಹೇಬರೂ, ಶ್ರೀಮಂತ ವಂಟಮುರಿಯ ಸರದೇಸಾಯಿಯವರೂ, ಶ್ರೀಮಂತ ಚಚಡಿಯ ನಾಯಕ ಬಹಾದ್ದೂರ ದೇಸಾಯಿಯವರೂ ಮೊದಲಾದ ಮಹಾಮಹಾ ಜನಸಮುದಾಯವು ದಯಮಾಡಿಸಿತ್ತು. ದರ್ಬಾರವು ನಡೆದ ಕಾಲಕ್ಕೆ ಮೆ. ಬ್ರ್ಯಾಂಡನ್ ಸಾಹೇಬ ಬಹದ್ದೂರರವರು ಎದ್ದು ರಾವಬಹಾದ್ದೂರರವರನ್ನು ಉದ್ದೇಶಿಸಿ "ರಾವಬಹಾದ್ದೂರರವರೇ, ನಿಮ್ಮ ವಿಶ್ವಸನೀಯವಾದ ಸರಕಾರೀ ಕೆಲಸವನ್ನು ಕಂಡು ಬ್ರಿಟಿಶ ಸಾರ್ವಭೌಮ ಜಾರ್ಜಬಾದಶಹರವರು ನಿಮಗೆ ಆಯ್-ಎಸ್-ಓ ಎಂಬ ಬಹುಮಾನಾರ್ಹವಾದ ಪದವಿಯನ್ನು ದಯಪಾಲಿಸಿದ್ದಾರೆ. ಇದು ನಿಮಗೆ ಒಳ್ಳೇ ಭೂಷಣಾಸ್ಪದವಾಗಿದೆ. ಈ ಸಂಗತಿಯನ್ನು ತಿಳಿಸಲಿಕ್ಕೆ ನನಗೆ ಬಹಳೇ ಆನಂದವಾಗುತ್ತದೆ" ಎಂದು ಇವರನ್ನು ಅನೇಕ ವಿಧವಾಗಿ ಅಭಿನಂದಿಸಿದರು. ಇದೇ ಕಾಲಕ್ಕೆ ರಾವಬಹಾದ್ದೂರವರ ಪರಮಸ್ನೇಹಿತರಾದ ಡಾಕ್ಟರ ವಿಷ್ಣು ಜಗನ್ನಾಥ ಶಿರಗಾವಕರ ಇವರಿಗೆ ರಾವಬಹಾದ್ದೂರ ಎಂಬ ಕಿತಾಬೂ, ಮೆ. ಶ್ರೀಮಂತ ನಾಯಕ ಬಹಾದ್ದೂರ ದೇಸಾಯರವರಿಗೆ ಗವ್ಹರ್ನಮೆಂಟನಿಂದ ಲಾಯಖೀ ಸರಟೀಫಿಕೇಟೂ, ಸಿಕ್ಕವು. ಮತ್ತು ಕೆಲ ಅಧಿಕಾರಿಗಳಿಗೂ, ಶ್ರೀಮಂತರಿಗೂ ಬೇರೆ ಬೇರೆ ಬಿರುದುಗಳೂ ಸರಟೀಫಿಕೇಟುಗಳೂ ಕೊಡಲ್ಪಟ್ಟವು. ನೇಟಿಹ್ವ ಜನರೊಳಗೆ ಸಿಕ್ಕ ಬಹುಮಾನಗಳಲ್ಲಿ ರಾವ ಬ॥ಅರಟಾಳ ಸಾಹೇಬರಿಗೆ ದೊರೆತ ಬಹುಮಾನವೇ ಮೇಲಾಗಿರುವದು. ಆಯ್.ಎಸ್.ಓ. ಎಂಬ ವರ್ಣಸಂಕೇತವು ಕಂಪ್ಯಾನಿಯನ್ ಆಫ್ ದಿ ಇಂಪೀರಿಯಲ್ ಸರ್ವೀಸ ಆರ್ಡರ ಎಂಬ ಅರ್ಥದ್ದಿದ್ದು, ಶ್ರೀ ಜಾರ್ಜಬಾದಶಹರವರು ಎಲ್ಲಕ್ಕೂ ಮೊದಲು ದಿಲ್ಲಿಯ ದರ್ಬಾರದಲ್ಲಿಯೇ ಪ್ರಕಟ ಮಾಡಿದರು. ಈ ಮೊದಲು ಈ ಬಿರುದು ಹಿಂದುಸ್ಥಾನದಲ್ಲಿ ಇದ್ದಿದ್ದಿಲ್ಲ. ಹಿಂದುಸ್ತಾನಕ್ಕೆ ಜಾರ್ಜ ಬಾದಶಹರವರೇ ಹೊಸದಾಗಿ ಇದನ್ನು ತಂದರು. ಈ ಹೊಸ ಬಿರುದನ್ನು ನಮ್ಮ ಮುಂಬಯಿ ಕರ್ನಾಟಕದಲ್ಲಿ ಎಲ್ಲಕ್ಕೂ ಮೊದಲು ರಾ.ಬ॥ಅರಟಾಳ ಸಾಹೇಬರೇ ಪಡೆದರು. ಇದು ನಮ್ಮ ವೀರಶೈವರಿಗೇ ಯಾಕೆ? ಇಡೀ ಕರ್ನಾಟಕಸ್ಥರಿಗೇ ಭೂಷಣಾಸ್ಪದವಾಗಿದೆ. ಶ್ರೀ ಜಾರ್ಜ ಬಾದಶಹರವರು

ಜರುಗಿಸಿದ ದಿಲ್ಲೀ ದರ್ಬಾರದಿಂದ ದಿಲ್ಲೀ ನಗರವು ಇಂಡಿಯಾದ ರಾಜಧಾನಿಯಾಗಿ ಮತ್ತು ವಿದ್ಯಾಖಾತೆಗೆ ಸಾಕಷ್ಟು ಧನಸಹಾಯವೊದಗಿ ಇಡಿ ಇಂಡಿಯಾ ದೇಶವೇ ಆನಂದಾಬ್ಧಿಯಲ್ಲಿ ಮಗ್ನವಾಗಿರುತ್ತಿರಲು, ಅದರಲ್ಲಿಯೇ ವೀರಶೈವರು ರಾವಬಹಾದ್ದೂರರವರ ಬಹುಮಾನದ ವಾರ್ತೆಯನ್ನು ಕೇಳಿ ಆ ಆನಂದಾಬ್ಧಿಯ ತೆರೆಯಲ್ಲಿ ಲೋಲಾಡುವವರಾದರು.

ರಾವಬಹಾದ್ದೂರರವರಿಗೆ ಆಯ್.ಎಸ್.ಓ. ಎಂಬ ಪದವಿಯು ದೊರೆತ ಸಂಗತಿಯು ತಾ. ೨೧ನೇ ಡಿಶಂಬರ ಸನ್ ೧೯೧೧ ಇಸವಿಯ ಬಾಂಬೆ ಗ್ಯಾಝೀಟ ಭಾಗ ೧ನೇದರ ೨೨೧೭ನೇ ಪಾನಿನಲ್ಲಿ ಮುದ್ರಿಸಲ್ಪಟ್ಟಿದೆ. ರಾವಬಹಾದ್ದೂರರವರಿಗೆ ಈ ಬಹುಮಾನದ ಪದವಿಯು ದೊರೆದ ಬಗ್ಗೆ ವಿಲಾಯತಿ ಹಾಗೂ ಇಂಡಿಯಾದಲ್ಲಿರುವ ದೊಡ್ಡದೊಡ್ಡ ಅಂಗ್ಲಾಧಿಕಾರಿಗಳಿಂದಲೂ ಏತದ್ದೇಶೀಯ ಅಧಿಕಾರಿಗಳಿಂದಲೂ, ಶ್ರೀಮಂತ ಛತ್ರಪತಿ ಶಾಹೂ ಮಹಾರಾಜ ಕರವೀರ ಇಲಾಖಾ ಮೊದಲಾದ ಸಂಸ್ಥಾನಿಕರಿಂದಲೂ, ಸೆಟ್ಟರು ಸಾವಕಾರರಿಂದಲೂ, ಅಭಿನಂದನಪರವಾದ ತಾರುಗಳೂ ಪತ್ರಗಳೂ ಬಂದು ಇವರನ್ನು ಗೌರವಿಸಿದವು. ಮುಂಬಯಿ ಇಲಾಖೆಯ ಸೇಕನಾಮದಾರ ಗವ್ಹರ್ನರ ಸಾಹೇಬ ಬಹಾದ್ದೂರರವರು ಪದವಿಗಳನ್ನು ಪಡೆದ ಪ್ರಮುಖ ಜನರಿಗೆ ಪದಕಗಳನ್ನು ಕೊಡುವ ಸಮಾರಂಭವನ್ನು ಪುಣೆಯಲ್ಲಿ ಜರುಗಿಸುವದನ್ನು ಗೊತ್ತುಮಾಡಿದ್ದರು. ಅದಕ್ಕೆ "ನಿಮ್ಮ ಬಹುಮಾನದ ಪದಕವನ್ನು ನೀವು ಪುಣೆಗೆ ಬಂದು ಸ್ವೀಕರಿಸುತ್ತೀರೋ ಅಥವಾ ಮೆ. ಕಮೀಶನರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರ ವಿದ್ಯಮಾನ ಬೆಳಗಾವಿಯಲ್ಲಿ ತೆಗೆದುಕೊಳ್ಳುತ್ತೀರೋ"ಎಂದು ನಾಮದಾರರು ರಾವಬಹಾದ್ದೂರರವರನ್ನು ಕೇಳಿದರು (ತಾ. ४-೩-೧೯೧೨), ಅದಕ್ಕಿವರು ಸದರೀ ಬಹುಮಾನವನ್ನು ಬೆಳಗಾವಿಯಲ್ಲಿಯೇ ಪರಿಗ್ರಹಿಸುವದಾಗಿ ನನ್ನ ಇಚ್ಛೆಯುಂಟೆಂದು ತಿಳಿಸಲು ಗವ್ಹರ್ನಮೆಂಟಿನಿಂದ ಅದಕ್ಕೆ ಒಪ್ಪಿಗೆ ಸಿಕ್ಕಿತು.

ರತ್ನಖಚಿತವಾದ ಸುವರ್ಣ ಪದಕವು
ಶ್ರೀ ಜಾರ್ಜಬಾದ ಶಹರವರಿಂದ ದೊರೆತದ್ದು

ಬಳಿಕ ಸೇಕನಾಮದಾರ ಗವ್ಹರ್ನರ ಸಾಹೇಬ ಬಹಾದ್ದೂರವರ ಅಪ್ಪಣೆಯ ಮೇರೆಗೆ ಅವರ ಪಕ್ಷದಿಂದ ದಕ್ಷಿಣಭಾಗದ ಕಮೀಶನರರಾದ ನಾಮದಾರ ಮಿಸ್ತರ ಡಬ್ಲ್ಯೂ. ಡಿ. ಶೇಫರ್ಡ ಸಿ.ಆಯ್.ಇ.ಆಯ್.ಸಿ. ಎಸ್. ರವರು ರಾವ್‌ಬಹದ್ದೂರ ರುದ್ರಗೌಡ ಚೆನ್ನವೀರಗೌಡ ಅರಟಾಳ ಇವರಿಗೆ "ಕಂಪ್ಯಾನಿಯನ್ ಆಫ್ ದಿ ಇಂಪೀರಿಯಲ್ ಸರ್ವೀಸ್ ಆರ್ಡರ" ಎಂಬ ಬಹುಮಾನದ ಬಿರುದನ್ನೂ, ಮಿಸ್ತರ ಇ.ಎಂ. ಹಾಡ್ಜಸನ್ ಆಯ್.ಎಫ್.ಎಸ್. ಇವರಿಗೆ ಮೊದಲನೇ ತರಗತಿಯ 'ಕೇಸರ. ಇ. ಹಿಂದ' ಎಂಬ ಗೌರವದ ಪದಕವನ್ನೂ ಕೊಡುವದಕ್ಕಾಗಿ ಸನ್ ೧೯೧೨ ಇಸವಿಯ ಜುಲಾಯಿ ತಿಂಗಳ ೩ನೇ ತಾರೀಖು ಬುಧವಾರ ದಿವಸ ಸಾಯಂಕಾಲದ ४ ೧/೨ ಘಂಟೆಗೆ ಬೆಳಗಾವಿಯಲ್ಲಿರುವ ತಮ್ಮ ಕಚೇರಿಯ ಭವ್ಯವಾದ ಕಟ್ಟಡದಲ್ಲಿ ಕೇವಲ ಇದೇ ಕೆಲಸಕ್ಕಾಗಿ ದರ್ಬಾರವನ್ನು ನೆರೆಯಿಸಿದ್ದರು. ಈ ದರ್ಭಾರಕ್ಕೆ ಬೆಳಗಾವ-ಧಾರವಾಡ-ವಿಜಾಪುರ ಜಿಲ್ಲೆಗಳ ದೊಡ್ಡ ದೊಡ್ಡ ಅಧಿಕಾರಿಗಳೂ, ಶ್ರೀಮಂತರೂ, ಸೆಟ್ಟರೂ, ಸಾವಕಾರರೂ ಆಮಂತ್ರಿತರಾಗಿ ಬಂದದ್ದರಿಂದ, ಈ ದರ್ಬಾರದ ನೆವದಿಂದ ಬೆಳಗಾವಿಯ ಶಹರವೇ ಸೊಬಗುಳ್ಳದ್ದಾಗಿತ್ತು.

ಈ ದರ್ಬಾರಕ್ಕೆ ಬಹು ಜನರು ಬಂದಿದ್ದರು. ಅವರಲ್ಲಿ ಬ್ರಿಗೇಡಿಯರ್ ಜನರಲ್ ಫ್ರಾಯರವರು ಮತ್ತು ಅವರ ಪತ್ನಿಯವರು, ಕರ್ನಲ್ ಹೆಡ್ಲೆಯವರು, ಕರ್ನಲ್ ನಾಚಬುಲ್‌ರವರು, ಮೇಜರ್ ಬೆಲ್

ದಂಪತಿಗಳು, ಆರ್.ಸಿ. ಬ್ರಾವುನ್ ಆಯ್.ಸಿ. ಎಸ್. ದಂಪತಿಗಳು, ಎಲ್.ಸಿ. ಕ್ರಂಪ ಆಯ್.ಸಿ.ಎಸ್. ದಂಪತಿಗಳು ಆನ್‌ರೇಬಲ್ ಒಂಟಮುರಿಯ ಸರದೇಸಾಯರವರು, ಆನರೇಬಲ್ ಮಿ॥ ರೊದ್ದರವರು, ಆನರೇಬಲ್ ಮಿ॥ ಬೆಳವಿಯವರು, ಕರ್ನಲ್ ಕ್ಯಾಂಬೆಲ್ ದಂಪತಿಗಳು, ರೆವರೆಂಡ ಮಿ॥ಕಾರ್ಟಲೋಗನ್ನರವರು, ಮಿ॥ ಬೀಟ ದೊರೆಗಳವರ ಪತ್ನಿಯವರು, ಆಯ್‌ಚಿಸನ್ ದಂಪತಿಗಳು ಮೆಕ್‌ಲಾರೆನ್ ದಂಪತಿಗಳು, ಮಿಸ್ ವಾಲ್ಬರ್ಸ ದೊರೆಸಾನಿಯವರು, ಮಿ॥ ಹಾಡ್ಜಸನ್ನರ ಪತ್ನಿಗಳು ಮತ್ತು ಕುಮಾರಿಯರು, ಮಿ॥ ಮಿಲ್ಲರರವರು, ಮಿ॥ ವಾಯಿಲ್ಸರವರು, ಮಿ॥ ಮ್ಯಾಕೇಯವರು. ಮಿ॥ಕಾಯಿಟ್‌ರವರು, ಮಿ॥ ಬಟರವರ್ಥರವರು ಮಿ॥ ಹಿತೀಯವರು, ಮಿ॥ ಕೊಪ್ಲೆಸ್ಟನ್ನರವರು, ಕ್ಯಾಪ್ಟನ್ ಲೂನ್ ಹ್ಯಾಮ್ ಆಯ್.ಎಂ. ಎಸ್‌ರವರು, ಗೋಕಾಕ ಫಾಲ್ಸ ಮಿಲ್ಲದ ಮ್ಯಾನೇಜರರಾದ ಮಿ॥ಡ್ರಾಯಿವ್ಹರವರು, ಡಾಕ್ಟರ ದಲಾಲ ದಂಪತಿಗಳು, ಡಾಕ್ಟರ ಫಿಶರ ದಂಪತಿಗಳು, ಮಿ॥ ರಾವಜಿ ಬಾಳಾಜಿ ಕರಂದೀಕರರು ಮತ್ತು ಇನ್ನೂ ಅನೇಕ ಅಧಿಕಾರಸ್ಥರೂ ಸದ್ಗೃಹಸ್ಥರೂ ದರ್ಬಾರವನ್ನು ಅಲಂಕರಿಸಿದ್ದರು. ಮಿ॥ ಪ್ರಿಸ್ಟಲೇ ದೊರೆಗಳು ಇಲ್ಲದ್ದರಿಂದ ಮಿ॥ ಹಾಸ್ಲೇ ಹರ್ಟರವರೇ ಪೊಲೀಸ ಬಂದೋಬಸ್ತಿಯ ವ್ಯವಸ್ಥೆಯನ್ನೆಲ್ಲ ಇಟ್ಟಿದ್ದರು. ಅಸಿಸ್ಟಂಟ ಕಮೀಶನರರಾದ ಮಿ॥ ಬೋರಕರರವರೂ ಮಿ॥ ಮೋಬಡ್ಜಯವರೂ ಕೂಡ ದರಬಾರಕ್ಕೆ ಆಗಮಿಸಿದ್ದರು.

ಸಭಾಸದರೆಲ್ಲರೂ ಬಂದು ತಮ್ಮ ತಮ್ಮ ಸ್ಥಳಗಳಲ್ಲಿ ಮೊದಲೇ ಕುಳಿತುಕೊಂಡಿದ್ದರು. ಮೆ॥ಕಮೀಶನರ ದೊರೆಗಳು ಸರಿಯಾಗಿ ನಾಲ್ಕೂವರೆ ಗಂಟೆಗೆ ಆಗಮಿಸಿ, ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ, ಕೂಡಲೆ ಎದ್ದುನಿಂತು, ದರ್ಬಾರು ಪ್ರಾರಂಭವಾಯಿತೆಂದು ಪ್ರಕಟವಾಗಿ ಹೇಳಿ ಮಾತನಾಡಿದ್ದೇನಂದರೆ:

ಮೆ॥ ಕಮೀಶನರ ಸಾಹೇಬರವರ ಭಾಷಣ

ತಾವೆಲ್ಲರು ರಾವಬಹಾದ್ದೂರ ಅರಟಾಳರವರನ್ನು ಬಲ್ಲಿರಿ. ಇವರ ಹೆಸರು ಕರ್ನಾಟಕದೊಳಗಿನ ಪ್ರತಿಯೊಂದು ಮನೆಯಲ್ಲಿಯ ಆಬಾಲವೃದ್ಧರಿಗೆ ಪ್ರಿಯವಾಗಿದೆ, ಇಷ್ಟೇ ಅಲ್ಲ, ಅದು ಇವರ ದೀರ್ಘಕಾಲಕವಾದ ಹಾಗೂ ಶ್ರೇಯಸ್ಕರವಾದ ಉದ್ಯೋಗದ ಮೂಲಕ ಬಹು ದೂರುದೂರಿನ ಪ್ರಾಂತಗಳಲ್ಲಿ ಸಹ ಪ್ರಸಿದ್ಧಿಯನ್ನು ಹೊಂದಿದೆ. ಇವರು ತಮ್ಮ ೬೦ ವರ್ಷದ ವಯಸ್ಸಿನಲ್ಲಿ ತುಸು ಕಡಿಮೆ ४೦ ವರ್ಷ ಸರಕಾರೀ ಉದ್ಯೋಗವನ್ನು ಮಾಡಿದ್ದಾರೆ. ಅಂದಮೇಲೆ ಇಷ್ಟು ಪ್ರಖ್ಯಾತರಾದ ಪುರುಷರ ಪರಿಚಯವನ್ನು ತಮಗೀಗ ಮಾಡಿಕೊಡುವ ಅವಶ್ಯವೇ ಇಲ್ಲ. ಇವರು ಧಾರವಾಡ ಜಿಲ್ಹಾ ಬಂಕಾಪುರ ತಾಲೂಕ ಕಸಬಾ ಅರಟಾಳವೆಂಬ ತಮ್ಮ ಗ್ರಾಮದ ಗೌಡಿಕಿಯ ಕೆಲಸವನ್ನು ಒಂದೆರಡು ವರ್ಷ ಮಾಡಿದ ತರುವಾಯ, ಸನ್ ೧೮೭೫ನೇ ಇಸವಿಯಲ್ಲಿ ಧಾರವಾಡ ಜಿಲ್ಲೆಯ ಮೆ. ಕಲೆಕ್ಟರ ಸಾಹೇಬರವರ ಕಚೇರಿಯನ್ನು ಪ್ರವೇಶಿಸಿ, ಕ್ರಮೇಣ ಮೇಲಿನ ತರಗತಿಯ ಕಾರಕೂನೀ ಉದ್ಯೋಗಗಳನ್ನು ಪಡೆಯುತ್ತ ಪಡೆಯುತ್ತ ಹೋಗಿ, ಕಟ್ಟಕಡೆಗೆ ಆ ದೊರೆಗಳ ಚಿಟ್ನಿಸರ ಉದ್ಯೋಗವನ್ನೇ ಪಡೆದುಕೊಂಡರು. ಆಮೇಲೆ ಕ್ಯಾನರಾ ಕಲೆಕ್ಟರರ 'ದಪ್ತರದಾರರು. ತರುವಾಯ ದಕ್ಷಿಣಭಾಗದ ಕಮೀಶನರವರ ನೇಟಿವ್ಹ ಅಸಿಸ್ಟಂಟರು, ಬಳಿಕ ಜಿಲ್ಲೆಯ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರರು ಆದರು. ವಿಜಾಪುರ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ ಡೆಪುಟಿ ಕಲೆಕ್ಟರರಾಗಿ ೬ ವರ್ಷ ಕೆಲಸ ಮಾಡುತ್ತಿರುವಾಗ್ಗೆ ಸನ್ ೧೮೯೬-೯೭ರಲ್ಲಿ ಒದಗಿದ ಭಯಂಕರವಾದ ಕ್ಷಾಮ ನಿವಾರಣೆಯ ಉದ್ಯೋಗದಲ್ಲಿ ಇವರು ವಿಶೇಷ ಶ್ರಮವಹಿಸಿ ಕೆಲಸಮಾಡಿದರು. ಆಮೇಲೆ ಬೆಳಗಾವ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ ಡೆಪ್ಯೂಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟು, ಈ ಹೊತ್ತಿನ ವರೆಗೆ ಅಂದರೆ ಅಖಂಡ ೧೪ ವರ್ಷಗಳ ವರೆಗೆ ಅದೇ ಉದ್ಯೋಗದಲ್ಲಿರುವರು. ಈ ಕಾಲಾವಧಿಯಲ್ಲಿ ಇವರು ತಮ್ಮ ಉದ್ಯೋಗಗಳನ್ನು

ಅತ್ಯಂತ ಕಾರ್ಯಕ್ಷಮತೆಯಿಂದಲೂ, ಬುದ್ಧಿಸಾಮರ್ಥ್ಯಗಳಿಂದಲೂ ಮಾಡುತ್ತ ಬಂದಿರುವರು. ಇವೇನು ಸುಲಭವಾದ ಉದ್ಯೋಗಗಳಲ್ಲ. ಇವರು ಸರಕಾರೀ ಉದ್ಯೋಗದಲ್ಲಿ ಸೇರಿದಂದಿನಿಂದ ಈ ಹೊತ್ತಿನ ವರೆಗೆ ತಮ್ಮ ಆಯುಷ್ಯವನ್ನು ಅವ್ಯಾಹತವಾದ ಹೋರಾಟದಲ್ಲಿಯೇ ಕಳೆದಿದ್ದಾರೆ. ಧಾರವಾಡದ ಕಲೆಕ್ಟರ ದೊರೆಗಳವರು ಇವರಿಗೆ ಎಲ್ಲಕ್ಕೂ ಮೊದಲು ಕೆಲಸವನ್ನು ಕೊಟ್ಟಾಗ್ಗೆ ಸರಕಾರೀ ಉದ್ಯೋಗಗಳೊಳಗಿನ ದೊಡ್ಡ ಭಾಗಕ್ಕೆ ಸಂಪೂರ್ಣವಾಗಿ ತಾವೇ ಬಾಧ್ಯಸ್ಥರೆಂದು ಅಷ್ಟೊತ್ತಿನ ವರೆಗೆ ಗ್ರಹಿಸುತ್ತ ಬಂದಂಥ ಮತ್ತು ಸರಕಾರೀ ಉದ್ಯೋಗಗಳಲ್ಲಿ ತಮ್ಮ ಹೊರತು ಅನ್ಯಜಾತಿಯವರ ಪ್ರವೇಶವಾಗಲಿಕ್ಕೇ ಬಾರದೆಂಬ ಪ್ರಬಲವಾದ ಕಟ್ಟುಮಾಡಿದ ಜನಾಂಗದವರ ಅಂದರೆ ಮುಖ್ಯವಾಗಿ ಬ್ರಾಹ್ಮಣ ಜನರ ಪ್ರಾಬಲ್ಯವುಳ್ಳಂಥ ಒಂದು ಬಲಾಢ್ಯವಾದ ಸಂಘದವರೊಡನೆ ಸರಿಗಟ್ಟಿ ಕಾದಾಡುವ ಪ್ರಸಂಗವು ಇವರಿಗೆ ಪ್ರಾಪ್ತವಾಯಿತು. ಆದುದರಿಂದ ಜಾಣರಾದ ಸ್ಪರ್ಧಿಗಳ ಮಧ್ಯದಲ್ಲಿ ಬಹುಶಃ ಒಬ್ಬರೇ ಒಬ್ಬರಾಗಿದ್ದ ಲಿಂಗಾಯತರು ಇಷ್ಟು ಘನತೆಗೇರುವದು ಸುಲಭಸಾಧ್ಯವಾದ ಸಂಗತಿಯಲ್ಲ. ಈ ಕಾರಣದಿಂದ ಇವರು ಇಷ್ಟು ಜಯಶೀಲರಾದದ್ದು ಇವರಿಗೆ ಭೂಷಣಪ್ರದವಾಗಿಯೂ, ಇವರಲ್ಲಿದ್ದ ಸ್ವಭಾವಸಿದ್ಧ ಸದ್ಗುಣಗಳ ದ್ಯೋತಕವಾಗಿಯೂ ಇದೆ.

ಮೆ. ಕಮೀಶನರ ದೊರೆಗಳವರು ಮತ್ತೂ ಹೇಳಿದ್ದೇನಂದರೆ "ರಾವ ಬಹಾದ್ದೂರ ಅರಟಾಳರವರು ತಮ್ಮ ಔದ್ಯೋಗಿಕ ಪ್ರಸಕ್ತಿಯಲ್ಲಿ ಗ್ರಾಮಾಧಿಕಾರಿಗಳಲ್ಲಿಯೂ ತಮ್ಮ ಕೈಕೆಳಗಿನ ಉದ್ಯೋಗಸ್ಥರಲ್ಲಿಯೂ ಇದ್ದ ಲಂಚಬಡಕತನವನ್ನು ನಿಲ್ಲಿಸಿ ಬಿಡುವದಕ್ಕೆ ಪರಮಾವಧಿ ಶ್ರಮಪಟ್ಟರು. ಬಹುಕಾಲದಿಂದ ನಡೆಯುತ್ತ ಬಂದಿರುವ ಈ ಕೆಟ್ಟ ಪದ್ಧತಿಯನ್ನು ಸಂಪೂರ್ಣವಾಗಿ ಮುರಿದು ಬಿಡುವದು ಬಹು ದುಸ್ತರವಾದ ಕಾರ್ಯವೇ ಸರಿ. ಆದರೂ ರಾವ ಬಹಾದ್ದೂರವರು ಸಾಧ್ಯವಾದ ಮಟ್ಟಿಗೆ ಈ ದುಷ್ಟಪದ್ಧತಿಯನ್ನು ನಿಲ್ಲಿಸಿದರು; ಮತ್ತು ಈ ದೇಶದೊಳಗಿನ ಈ ನೀಚ ಸಾಂಪ್ರದಾಯವನ್ನು ಮುರಿಯುವ ವಿಷಯದಲ್ಲಿ ಇವರು ತೋರಿಸಿದ ಧೈರ್ಯವು ಇವರಿಗೆ ಕೀರ್ತಿಪ್ರದವಾಗಿದೆ. ನಿಶ್ಚಲವಾದ ಪ್ರಮಾಣಿಕತನಕ್ಕೆ ಇವರು ಪ್ರಕಾಶಮಾನವಾದದ್ದೊಂದು ಉದಾಹರಣೆಯೇ ಆಗಿದ್ದಾರೆ. ಇಷ್ಟೇ ಅಲ್ಲ;ರಾಜನಿಷ್ಠಾತತ್ಪರತೆಯಲ್ಲಿಯೂ ಹೆಸರಾಗಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಎದ್ದ ದೇಶೀ ಚಳವಳಿಗಳಲ್ಲಿ ಇವರ ಅಂಗವು ಕಿಂಚಿತ್ತಾದರೂ ಇದ್ದಿಲ್ಲ; ಮತ್ತು ತಮ್ಮ ಸಾರ್ವಭೌಮರನ್ನು ಅಲ್ಲಗಳೆದಂಥ ಜನರ ವಿಷಯವಾಗಿ ಇವರು ಸ್ವಲ್ಪವಾದರೂ ಸಹಾನುಭೂತಿಯನ್ನು ತೋರಿಸಲಿಲ್ಲ. ಇವರಲ್ಲಿದ್ದ ರಾಜಭಕ್ತಿಯಂತೂ ಅಪೂರ್ವವಾದದ್ದು. ಇವರ ಸಮಗ್ರ ಉದ್ಯೋಗ ನಿರ್ವಾಹಕ ಕ್ರಮವು, ಚಿಕ್ಕವಯಸ್ಸಿನ ಲಿಂಗಾಯತರಿಗೆ ಆದರ್ಶ ಸ್ವರೂಪವಾಗಿದೆ. ಇವರ ಮೇಲು ಪಂಙ್ತಿಯನ್ನೇ ಅನುಸರಿಸಿ ನಡೆಯುವುದು ಕೆಲ ತರುಣ ಲಿಂಗಾಯತರಲ್ಲುಂಟಾದರೆ, ಅವರು ತಮ್ಮ ಸಮಾಜಕ್ಕೆ ಅಲಂಕಾರ ಸ್ವರೂಪರಾಗುವರು.

ರಾವಬಹಾದ್ದೂರ ಅರಟಾಳರವರಿಗೆ 'ಇಂಪೀರಿಯಲ್ ಸರ್ವಿಸ ಆರ್ಡರ' ಎಂಬ ಗೌರವದ ಬಿರುದನ್ನು ನಮ್ಮ ಕಯ್ಯಿಂದಲೇ ಕೊಡುವ ಪ್ರಸಂಗವು ಒದಗಿರುವದನ್ನು ನೋಡಿ ನಮಗೆ ಬಹು ಆನಂದವಾಗುತ್ತದೆ.

ಆಮೇಲೆ ಅವರು ಮಿ॥ ಹಾಡ್ಜಸನ್ನರವರನ್ನು ಉದ್ದೇಶಿಸಿ ನುಡಿದದ್ದೇನಂದರೆ "ಈ ದೊರೆಗಳವರು ಮೊದಲನೇ ತರಗತಿಯ 'ಕೇಸರ-ಇ ಹಿಂದ' ಎಂಬ ಬಹುಮಾನದ ಪದಕವನ್ನು ಹೊಂದುವದನ್ನು ಕಂಡು ನಮಗೆ ಪರಮ ಸಂತೋಷವಾಗುತ್ತದೆ. ಇವರು ಡಾಂಗ್ಸದಲ್ಲಿ ಫಾರೇಷ್ಟ ಆಫೀಸರರಾಗಿಯೂ ಪೊಲಿಟಿಕಲ್ ಎಜಂಟರಾಗಿಯೂ ಇದ್ದು ಅಲ್ಲಿಯ 'ಭಿಲ್ಲರು'ಎಂಬ ಕಾಡು ಜನರ ಸ್ಥಿತಿಯನ್ನು ಬಹಳೇ ಸುಧಾರಿಸಿದರು. ಮತ್ತು ಬೆಂಕಿಯ ಕಾಟಗಳಿಂದ ವನಗಾವಲಗಳನ್ನು ಸಂರಕ್ಷಿಸುವ ಕೆಲಸದಲ್ಲಿ ಅವರನ್ನು ತೊಡಗಿಸಿದರು. ಈ ಕೃತ್ಯದ ಪರಿಣಾಮಗಳು ಅತ್ಯಂತ ಸಮಾಧಾನಕರವಾಗಿವೆ. ಈ ಒಳ್ಳೆಯ ಪರಿಣಾಮಗಳಿಗೆ ಈ ದೊರೆಗಳಲ್ಲಿರುವ ಬುದ್ಧಿಸಾಮರ್ಥ್ಯವೂ ಉದ್ಯೋಗತತ್ಪರತೆಯೂ ಪ್ರಜಾವಾತ್ಸಲ್ಯವೂ ವಿಶೇಷಕಾರಣವಾಗಿವೆ.

ತರುವಾಯ ಮೆ||ಕಮಿಶನರ ದೊರೆಗಳವರು, ರಾವಬಹದ್ದೂರ ರುದ್ರಗೌಡ ಚೆನ್ನವೀರಗೌಡ ಅರಟಾಳ ಇವರಿಗೆ 'ಇಂಪೀರಿಯಲ್ ಸರ್ವಿಸ ಆರ್ಡರ' ಎಂಬ ಬಹುಮಾನದ ಬಿರುದನ್ನೂ ಮಿ.ಇ.ಎಮ್.ಹಾಡ್ಜಸನ್ನರವರಿಗೆ ಮೊದಲನೇ ತರಗತಿಯ 'ಕೇಸರ ಇ ಹಿಂದ' ಎಂಬ ಗೌರವದ ಪದಕವನ್ನೂ ಕೊಟ್ಟರು. ಬಳಿಕ ಈ ಇಬ್ಬರೂ ಸದ್ಗೃಹಸ್ಥರು ತಮಗೆ ಈ ಸನ್ಮಾನಗಳನ್ನು ಅನುಗ್ರಹಸಿದ್ದಕ್ಕಾಗಿ ಸ್ವಲ್ಪದರಲ್ಲಿಯೇ ಸರಕಾರದವರ ಉಪಕಾರವನ್ನು ಸ್ಮರಿಸಿದರು. ಇದರಲ್ಲಿ ರಾವಬಹಾದ್ದೂರವರು ಮೆ. ಕಮಿಶನರ ಸಾಹೇಬರವರ ಭಾಷಣಕ್ಕೆ ಸಮಂಜಸವಾಗಿ ಕೊಟ್ಟ ಉತ್ತರವನ್ನು ಇದರ ಕೆಳಗೆ ಬರೆಯುತ್ತೇವೆ.

ರಾವಬಹಾದ್ದೂರರವರು ಕೊಟ್ಟ ಉತ್ತರ

ನಾಮದಾರ ಮಿ. ಶೇಪರ್ಡ ದೊರೆಗಳವರೇ, ದೊರೆಸಾನಿಯವರೇ, ಸಭ್ಯಗೃಹಸ್ಥರೇ, ಈ ಹೊತ್ತಿನ ದಿವಸ ನನ್ನ ಹಳೆಯ ಗೆಳೆಯರು ಮತ್ತು ಹಿತಚಿಂತಕರು ತಮ್ಮ ಸ್ವಂತ ಕಯ್ಯಿಂದಲೇ ಈ ಬಹುಮಾನದ ಬಿರುದನ್ನು ಕೊಟ್ಟಿದ್ದನ್ನು ಕಂಡು ನನಗೆ ಅತ್ಯಾನಂದವಾಗುತ್ತದೆ. ಆನರೇಬಲ್ ಮಿ. ಸೇಪರ್ಡ ದೊರೆಗಳವರು ನನ್ನ ವಿಷಯವಾಗಿ ಈಗಲೇ ಹೊರಗೆಡವಿದ ಪರಮಪ್ರೀತಿಯ ಮತ್ತು ಕನಿಕರದ ನುಡಿಗಳು, ನನ್ನಲ್ಲಿ ಹುಟ್ಟಿಸಿರುವ ಮನೋಭಾವನೆಗಳನ್ನು ವ್ಯಕ್ತಪಡಿಸಲು ತಕ್ಕ ಶಬ್ದಗಳು ದೊರೆಯುವದು ಕಠಿಣ. ತುಸು ಕಡಿಮೆ ೩೮ ವರ್ಷಗಳ ನನ್ನ ನೌಕರಿಯ ಮುದ್ದತಿನಲ್ಲಿ ಇಷ್ಟು ದೊಡ್ಡ ಮಾನವನ್ನು ಹೊಂದಬಹುದೆಂದು ನಾನು ಎಂದೂ ನೆನಸಿದ್ದಿಲ್ಲ. ಹಿಂದುಸ್ತಾನದ ಸಾರ್ವಭೌಮ ಬಾದಶಹರವರು ನನ್ನ ಅಲ್ಪಸೇವೆಯನ್ನು ಮನ್ನಿಸಿ, ಕೃಪಾದೃಷ್ಟಿಯಿಂದ ಅನುಗ್ರಹಿಸಿದ ಈ ಘನವಾದ ಮಾನವನ್ನು ಕೃತಜ್ಞತಾ ಪೂರ್ವಕವಾಗಿ ಅಂಗೀಕರಿಸುತ್ತೇನೆ; ಮತ್ತು ಈ ಪ್ರಸಂಗವು ಒಳ್ಳೇ ಅಭಿಮಾನಪಡತಕ್ಕದ್ದೂ ಬಹುಮಾನದ್ದೂ ಆಗಿರುವದರಿಂದ ಇದನ್ನು ನಾನು ಆಮರಣ ಮರೆಯಲಿಕ್ಕಿಲ್ಲ. ನಮ್ಮ ಸಾರ್ವಭೌಮರ ಇಚ್ಛೆಗೂ ಆಜ್ಞೆಗೂ ಸರಿಯಾಗಿ ಭರತಖಂಡದಲ್ಲಾದ ಅವರ ಕಿರೀಟಧಾರಣ ಮಹೋತ್ಸವದ ಶುಭವಾರ್ತೆಯನ್ನು ಹಿಂದುಸ್ತಾನದ ಬ್ರಿಟಿಶ ರಾಜ್ಯಗಳೊಳಗಿನ ಅವರ ಪ್ರೀತಿಯ ಪ್ರಜೆಗಳಿಗೆಲ್ಲ ಪ್ರಸಿದ್ಧರೀತಿಯಿಂದ ಶ್ರುತಪಡಿಸಿದ ದಿವಸವು ಮಹತ್ವವುಳ್ಳದ್ದಾಗಿದೆ; ಮತ್ತು ಆ ಅಪೂರ್ವವಾದ ಪಟ್ಟಾಭಿಷೇಕ ಮಹೋತ್ಸವದ ಪ್ರಸಂಗದಲ್ಲಿ ನಮ್ಮ ಸಾರ್ವಭೌಮರು, ರಾಜನಿಷ್ಠೆಯ ಮತ್ತು ಪ್ರಾಮಾಣಿಕತನದ ನನ್ನ ಅತ್ಯಲ್ಪ ಸೇವೆಯನ್ನು ಮನ್ನಿಸಿ, 'ಇಂಪೀರಿಯಲ್ ಸರ್ವೀಸ್ ಆರ್ಡರ್' ಎಂಬ ಘನವಾದ ಬಿರುದನ್ನು ದಯಪಾಲಿಸಿದ್ದು ಅಸಾಧಾರಣವಾದ ಮಾನದ ಸಂಗತಿಯೆಂದು ನಾನು ತಿಳಿದುಕೊಳ್ಳುವದರಿಂದ ಆ ಕಿರೀಟ ಧಾರಣೆ ಮಹೋತ್ಸವದ ದಿವಸವು ನನಗೆ ಇನ್ನೂ ಹೆಚ್ಚು ಮಹತ್ವವುಳ್ಳದ್ದಾಗಿದೆ.

ನನ್ನ ಅಲ್ಪವಾದ ಸೇವೆಯು ದೊಡ್ಡ ದೊಡ್ಡ ಯುರೋಪಿಯನ್ ಅಧಿಕಾರಸ್ಥರಿಂದ ಮನ್ನಿಸಲ್ಪಟ್ಟಿದ್ದೂ ಮತ್ತು ಹಿಂದಿನದೊಂದು ಪ್ರಸಂಗದಲ್ಲಿ ಅಂದರೆ ಸನ್ ೧೯೦೯ನೇ ವರ್ಷದಲ್ಲಿ 'ರಾವ ಬಹದ್ದೂರ' ಎಂಬ ವ್ಯಕ್ತಿವಾಚಕ ಬಿರುದನ್ನು ಮುಂಬಯಿ ಗವ್ಹರ್ನರರಾದ ನೇಕನಾಮದಾರ ಸರ್-ಜಾರ್ಜ-ಕ್ಲಾರ್ಕರಂಥ ದೊಡ್ಡ ಅಧಿಕಾರಸ್ಥರು ನನಗೆ ದಯಪಾಲಿಸಿದ್ದೂ ಅತ್ಯಾನಂದಜನಕ ಸಂಗತಿಗಳಾಗಿವೆ.ಆದರೂ ನಾಮದಾರ ಮಿ. ಶೇಪರ್ಡ ದೊರೆಗಳವರ ಅನುಮತಿಯಿಂದ ಈ ಪ್ರಸಂಗದಲ್ಲಿ ಅರಿಕೆ ಮಾಡಿಕೊಳ್ಳುವದೇನೆಂದರೆ : ನನ್ನಿಂದಾದ ಅಲ್ಪಸ್ವಲ್ಪ ಸೇವೆಯು, ನನ್ನ ಮೇಲಿನ ಅಧಿಕಾರಸ್ಥರು ಪ್ರೀತಿಯಿಂದ ನನಗೆ ಮೇಲಿಂದಮೇಲೆ ನೆರವಾಗದಿದ್ದರೆ ಮತ್ತು ಕಾಲೋಚಿತವಾಗಿ ನನ್ನನ್ನು ಪ್ರೋತ್ಸಾಹಗೊಳಿಸದಿದ್ದರೆ ಎಂದೂ ಆಗುತ್ತಿದ್ದಿಲ್ಲ. ಈ ಅಧಿಕಾರಸ್ಥರು ಬಹುಶಃ ಏಕಪ್ರಕಾರವಾಗಿ ಯುರೋಪಿಯನ್ ಸದ್ಗೃಹಸ್ಥರೇ ಇದ್ದಾರೆ. ನಾನು ನನ್ನ ಸರಕಾರೀ ಕೆಲಸವನ್ನು ಸಾಗಿಸುವಲ್ಲಿ

ಅಜ್ಞಾನಿಗಳಾದ ರೈತರ ಹಿತವನ್ನು ಕಾಪಾಡುವದೂ, ಅವರ ಕಲ್ಯಾಣವನ್ನು ಚಿಂತಿಸುವದೂ ನನ್ನ ಪ್ರಧಾನೋದ್ದೇಶವಾಗಿದೆ. ಇದೇ ಉದ್ದೇಶವು ನನ್ನ ಮಾರ್ಗದರ್ಶಕ ತತ್ವವು.

ವನಗಾವಲ ಖಾತೆಯ ಒಬ್ಬ ಅಧಿಕಾರಸ್ಥರೊಂದಿಗೆ ನಾನು ಬಹುಮಾನದ ಬಿರುದನ್ನು ಹೊಂದಿದೆ. ಈ ವಿಚಿತ್ರವಾದ ಯೋಗದ ವಿಷಯವಾಗಿ ಒಂದೆರಡು ಮಾತುಗಳನ್ನಾಡದೆ ಇರಲಾರೆನು. ಆ ಖಾತೆಯ ಉಪಕಾರವು ನನ್ನ ಮೇಲೆ ಅಧಿಕವಾಗಿದೆ. ಯಾಕಂದರೆ, ಧಾರವಾಡ ಡಿವ್ಹಿಜನಲ್ ಫಾರೆಷ್ಟ ಆಫೀಸರರಾದ ಮಿ॥ ಆರ್.ಬಿ. ಆಲಿಫಂಟ ಎಂಬ ದೊರೆಗಳವರ ಶಿಫಾರಸಿನಿಂದಲೇ ನಾನು ಮುಲ್ಕಿಖಾತೆಯನ್ನು ಸೇರಿದೆನು. ರಾಜಾರ್ಪಿತವಾದ ಈ ಬಿರುದನ್ನು ಅಂಗೀಕರಿಸಲು ನನಗೆ ಅತಿಶಯ ಸಂತೋಷವೂ ಅಭಿಮಾನವೂ ಉಂಟಾಗುತ್ತವೆಂದು ಅರಿಕೆಮಾಡಿಕೊಳ್ಳುತ್ತೇನೆ. ಮತ್ತು ಸನ್ ೧೯೧೧ನೇ ಇಸವಿಯ ಡಿಶಂಬರ ತಿಂಗಳಲ್ಲಿ ಕೂಡಿದ ಆ ಅಪೂರ್ವವಾದ ದಿಲ್ಲೀ ದರ್ಬಾರದ ಜ್ಞಾಪಕ ವಸ್ತುವೇ ಈ ಬಿರುದಾಗಿದೆಯೆಂದು ತಿಳಿದುಕೊಳ್ಳುವೆನೆಂದು ಖಂಡಿತವಾಗಿ ಹೇಳುತ್ತೇನೆ. ಮತ್ತು ಈ ಹೊತ್ತಿನ ಸಮಾರಂಭಕ್ಕೆ ಬಂದು ನನಗೆ ಮನ್ನಣೆಯನ್ನಿತ್ತ ಸಮಸ್ತ ದೊರೆಸಾನಿಗಳ ಮತ್ತು ಎಲ್ಲ ಸದ್ಗೃಹಸ್ಥರ ಉಪಕಾರವನ್ನು ಸ್ಮರಿಸುತ್ತೇನೆ.

ಈ ಮೇರೆಗೆ ರಾವಬಹಾದ್ದೂರರವರು ಭಾಷಣ ಮಾಡಿದನಂತರ ಎಲ್ಲ ಸಭಾಸದರನ್ನು ತಾಂಬೂಲ-ಹಾರ-ತುರಾಯಿ-ಪರಿಮಳ ಮುಂತಾದವುಗಳಿಂದ ಸತ್ಕರಿಸಿದರು. ಬಳಿಕ ಮೆ. ಕಮೀಶನರ ದೊರೆಗಳವರು ಎದ್ದು ನಿಂತು, ತಮ್ಮ ಆಮಂತ್ರಣವನ್ನು ಮನ್ನಿಸಿ ಈ ದರ್ಬಾರಕ್ಕೆ ಬಂದಂಥ ಎಲ್ಲ ಜನರ ಆಭಾರವನ್ನು ಮನ್ನಿಸಿ, ಅದರೊಳಗಿನ ಕೆಲವು ಜನರು ವಿಜಾಪುರ, ಬಾಗಲಕೋಟ, ಗದಗ ಮುಂತಾದ ದೂರದೂರಿನ ಸ್ಥಳಗಳಿಂದ ಬಂದದ್ದಕ್ಕೂ, ಸರಕಾರದವರು ಬಹುಮಾನಗಳನ್ನಿತ್ತ ಮುಖ್ಯ ಮಹನೀಯರ ವಿಷಯವಾಗಿ ಅವರು ವ್ಯಕ್ತಪಡಿಸಿದ ಉತ್ಸುಕತೆಗೂ ಪರಮಾನಂದ ಪಟ್ಟು, ಬೆಳಗಾವ ಬ್ರಿಗೇಡದ ಕಮ್ಯಾಂಡಿಂಗ್ ಆಫೀಸರರಾದ ಜನರಲ್ ಫ್ರಾಯರವರು, ಅವರ ಕೈಕೆಳಗಿನ ಅಧಿಕಾರಸ್ಥರು, ಕರ್ನಲ್ ಹೆಡ್ಲೆಯವರು, ಕರ್ನಲ್ ನಾಚಬುಲ್‌ರವರು, ಸುಭೇದಾರ ಮೇಜರರವರು ಮತ್ತು ಬೆಳಗಾವಿಯಲ್ಲಿದ್ದ ರಿಜಮೆಂಟುಗಳ ಸುಭೇದಾರರು ಈ ದರ್ಬಾರಕ್ಕೆ ದಯಮಾಡಿಸಿದ್ದಕ್ಕಾಗಿ ಅವರ ಉಪಕಾರವನ್ನು ಸ್ಮರಿಸಿ, ದರ್ಬಾರ ಸಮಾಪ್ತಿಯನ್ನು ಮಾಡಿದರು.

ಅದೇ ದಿವಸ ಸಾಯಂಕಾಲಕ್ಕೆ ಮೆ. ಕಮೀಶನರ ದೊರೆಗಳವರು, ಸಭಾಸದರೆಲ್ಲರಿಗೂ ಆಮಂತ್ರಣಕೊಟ್ಟು, ತಮ್ಮ ಬಂಗಲೆಗೆ ಬರಮಾಡಿಕೊಂಡು, ೧೧೦ ಮರಾಠಾ ಲಾಯಿಟ್ ಇನ್‌ಫಂಟ್ರೀಯ ಬ್ಯಾಂಡು ಮತ್ತು ಸ್ವದೇಶಿಯ ಸಂಗೀತ ವಾದ್ಯಗಳು, ಫಲಾಹಾರ ಇವೇ ಮೊದಲಾದವುಗಳಿಂದ ಸತ್ಕರಿಸಿ, ಮಧ್ಯರಾತ್ರಿಯ ತರುವಾಯ ಅವರನ್ನು ಕಳುಹಿಸಿ ಕೊಟ್ಟರು.

ಈ ಎಲ್ಲ ಸಂಗತಿಯನ್ನು ತಾ. ೬-೭-೧೯೧೨ನೇ ಬಾಂಬೆ ಟಾಯಿಮ್ಸ ಆಫ್ ಇಂಡಿಯಾ ಪತ್ರಿಕೆಯಲ್ಲಿಯೂ, ಸದರೀ ತಾರೀಖಿನ ಪುಣೆಯ ಜ್ಞಾನಪ್ರಕಾಶವೆಂಬ ಮರಾಠಿ ಪತ್ರಿಕೆಯಲ್ಲಿಯೂ, ತಾ.೧೦-೭-೧೯೧೨ನೇ ಬೆಳಗಾವಿಯ ಚಿಕಿತ್ಸಕ ಪತ್ರದಲ್ಲಿಯೂ ವಿಸ್ತಾರವಾಗಿ ಮುದ್ರಿಸಿರುತ್ತಾರೆ.

ಆಯ್.ಎಸ್.ಓ. ಎಂಬ ಪದವಿಯ ಸನದು ಸಿಕ್ಕದ್ದು

ಮುಂದೆ ತಾ. ೨೭ನೇ ಜುಲೈ ಸನ್ ೧೯೧೨ ಇಸವಿಯ ದಿವಸ ಸರಕಾರದ ಅಂಡರ ಸೆಕ್ರೆಟರಿಗಳಾದ ಮಿ॥ಕೇ. ಡಬ್ಲ್ಯೂ. ಬಾರ್ಲಿ ಪೊಲಿಟಿಕಲ್ ಡಿಪಾರ್ಟಮೆಂಟ ಇವರ ಇಂಗ್ರೇಜಿ ಪತ್ರ ನಂಬರ ೫೬೭೯/೨೩-೭-೧೯೧೨ನೇದರ ಕೂಡ ಆಯ್.ಎಸ್.ಓ. ಪದವಿಯ ಸನದೂ, ಅದನ್ನು ಅನುಭೋಗಿಸುವ ಬಗ್ಗೆ ನಿಯಮಗಳೂ

ಬಂದವು. ಸನದಿನ ಶಿರೋಭಾಗದಲ್ಲಿ ಶ್ರೀ ಜಾರ್ಜಬಾದಶಹರವರ ಸ್ವದಸ್ತೂರ ಸಹಿ ಇರುವದು. ಸನದಿಗೆ ಸಹಿಯಾದ ತಾರೀಖು ೨೦ನೇ ಫೆಬ್ರುವರಿ ಸನ್ ೧೯೧೨ ಇಸವಿ. ವಾಚಕರ ಅವಲೋಕನಾರ್ಥವಾಗಿ ಆ ಸನದು ಇದ್ದಕ್ಕಿದ್ದಂತೆ ಇದರ ಕೆಳಗೆ ಅವತರಿಸಲ್ಪಟ್ಟಿದೆ.

ಹೋಮ ಆಫೀಸ್

ಹ್ವಾಯಿಟ ಹಾಲ್

೧೩ನೇ ಎಪ್ರೀಲ ಸನ್ ೧೯೧೨೩.

ಪ್ರಿಯ ಮಹಾಶಯರೇ,

ತಮ್ಮನ್ನು ಇಂಪೀರಿಯಲ್ ಸರ್ವೀಸ್ ಆರ್ಡರಿನ ಕಂಪ್ಯಾನಿಯನ್ನರನ್ನಾಗಿ ನಿಯಮಿಸಿದ ಬಗ್ಗೆ ರಾಜಾಜ್ಞಾಪತ್ರಿಕೆಯನ್ನು ಮೊದಲೇ ಕಳಿಸಿದೆ. ಆ ಆರ್ಡರಿನ ಬಿರುದು ಸಹಿತ ಇದರೊಡನೆ ತಮ್ಮ ಕಡೆಗೆ ಕಳಿಸುವದಕ್ಕೆ ನನಗೆ ಪರಮಾನಂದವಾಗುತ್ತದೆ. ಇದು ತಮಗೆ ತಲುಪಿದ ಬಗ್ಗೆ ತಿಳಿಸುವ ಅನುಗ್ರಹವಾದರೆ ನಾನು ತಮ್ಮ, ಅಭಾರಿಯಾಗುವೆನು.

ತಮ್ಮ ವಿಶ್ವಾಸಿಕ,

ಸಹಿ. ಆರ್.ಎಸ್. ರೆನಾರ್ಡ

ಇಂಪೀರಿಯಲ್ ಸರ್ವೀಸ್ ಆರ್ಡರಿನ ಸೆಕ್ರೆಟರಿ

ಮತ್ತು ರಿಜಿಸ್ಟ್ರಾರ್.

ರಾವಬಹಾದ್ದೂರ ರುದ್ರಗೌಡಾ ಚೆನ್ನವೀರಗೌಡಾ ಅರಟಾಳ ಆಯ್.ಎಸ್. ಓ. ಇವರಿಗೆ-

ಜಾರ್ಜ ಆರ್.ಆಯ್.

ಸಹಿ

ಈಶ್ವರ ಕೃಪೆಯಿಂದ ಗ್ರೇಟಬ್ರಿಟನ್ ಮತ್ತು ಆಯರ್ಲಂಡ ಈ ಸಂಯುಕ್ತ ರಾಜ್ಯದ ಹಾಗೂ ಸಮುದ್ರಗಳಾಚೆಗಿರುವ ಬ್ರಿಟಿಶ್ ರಾಜ್ಯಗಳ ರಾಜರೂ, ಧರ್ಮಸಂರಕ್ಷಕರೂ, ಹಿಂದುಸ್ತಾನದ ಚಕ್ರವರ್ತಿಗಳೂ, ಇಂಪೀರಿಯಲ್ ಸರ್ವೀಸ್ ಆರ್ಡರಿನ ಸಾಮ್ರಾಜ್ಯಾಧಿಪತಿಗಳೂ ಆದ ಪಂಚಮ ಜಾರ್ಜ ಮಹಾರಾಜರವರು, ನಮ್ಮ ವಿಶ್ವಾಸಿಕರೂ ಅತಿಪ್ರಿಯರೂ ಆದ ರಾವಬಹಾದ್ದೂರ ರುದ್ರಗೌಡಾ ಚೆನ್ನವೀರಗೌಡಾ ಅರಟಾಳ ಡೆಪ್ಯುಟಿ ಕಲೆಕ್ಟರ ಇಲಾಖಾ ಮುಂಬಯಿ ಗವ್ಹರ್ನಮೆಂಟ ಆಫ್ ಇಂಡಿಯಾ ಇವರಿಗೆ ಮಾಡುವ ಪ್ರೇಮಪೂರ್ವಕ ಸಲ್ಲಾಮುಗಳು.

ಆದರೆ ನಾವು ತಮ್ಮನ್ನು ನಮ್ಮ ಇಂಪೀರಿಯಲ್ ಸರ್ವೀಸ್ ಆರ್ಡರದ ಕಂಪ್ಯಾನಿಯನ್ನರನ್ನಾಗಿ ನಾಮನಿರ್ದೇಶ ಮಾಡಲಿಕ್ಕೂ ಮತ್ತು ನೇಮಿಸಲಿಕ್ಕೂ ಯೋಗ್ಯರೆಂದು ತಿಳಿದಿರುವೆವು. ಆದುದರಿಂದ ಈ ದೇಣಿಗೆಗಳಿಂದ ತಮಗೆ ಸದರೀ ಆರ್ಡರಿನ ಕಂಪ್ಯಾನಿಯನ್ ಪದವಿಯನ್ನು ಅರ್ಪಣಮಾಡುತ್ತೇವೆ. ಇದರಿಂದ ತಾವು ಸದರೀ ಆರ್ಡರಿನ ಕಂಪ್ಯಾನಿಯನ್‌ರೆಂದು ಪದವಿಯನ್ನು ಹೊಂದಲಿಕ್ಕೂ ಮತ್ತು ಅದನ್ನು ಉಪಭೋಗಿಸಲಿಕ್ಕೂ ಹಾಗೂ ಅದಕ್ಕೆ ಸೇರಿರುವ ಅಥವಾ ಸಂಬಂಧಿಸಿರುವ ವಿಶೇಷ ಅಧಿಕಾರವನ್ನು ಅನುಭೋಗಿಸಲಿಕ್ಕೂ ಈ ಸನದಿನಿಂದ ನಾವು ನಿಮಗೆ ಅಧಿಕಾರಕೊಡುತ್ತೇವೆ.

ನಮ್ಮ ಆಳಿಕೆಯ ೨ನೇ ವರ್ಷದ ೧೯೧೨ನೇ ಇಸವಿ ತಾರೀಖು ೨೦ನೇ ಫೆಬ್ರುವರಿಯ ದಿವಸ ಸೇಂಟ ಜೇಮ್ಸದಲ್ಲಿರುವ ನಮ್ಮ ಕೋರ್ಟಿನಲ್ಲಿ ಕೊಡಲ್ಪಟ್ಟಿತು.

ಹೀಜ ಮಾಜಿಸ್ಟಿಯ ಆಜ್ಞೆಯಿಂದ

ಆರ್. ಮೆಕೆನ್ನಾ

ಸಹಿ

ಈ ಬಗ್ಗೆ ಸರಕಾರ ಠರಾವ ನಂಬರ ೮೧೬೧/೧೧-೧೧-೧೯೧೨ ಪೊಲಿಟಿಕಲ್ ಡಿಪಾರ್ಟಮೆಂಟ ಇದರಲ್ಲಿ ಆಯ್.ಎಸ್.ಓ. ಎಂಬ ಪದವಿಯನ್ನು ಪಡೆದ ರಾವಬಹಾದ್ದೂರರವರು ಆಮಂತ್ರಿತವಾದ ಯಾವದೇ ದರ್ಬಾರದಲ್ಲಿ ಫರ್ಷ್ಟಕ್ಲಾಸ ಸರದಾರರ ಜೊತೆಯಲ್ಲಿ ಕೂಡ್ರಬೇಕೆಂಬದಾಗಿ ಪ್ರಕಟವಾಗಿರುತ್ತದೆ. ಇದು ಸಾಮಾನ್ಯವಾದ ಮರ್ಯಾದೆಯೋ!

ಮುಂದೆ ತಾ. ೧೩-೮-೧೯೧೨ ಇಸವಿಯ ದಿವಸ ಮೆ।। ಕಮೀಶನರ ದೊರೆಗಳು ರಾವಬಹಾದ್ದೂರರವರ ಪೀತ್ಯರ್ಥವಾಗಿ ತಮ್ಮ ಬಂಗಲೆಯಲ್ಲಿ ಬಹುಮಾನಾರ್ಹವಾದ ಯುರೋಪಿಯನ್ ಸ್ತ್ರೀ ಪುರುಷರ ನಾಚನ್ನು ಮಾಡಿಸಿದರು. ಯುರೋಪಿಯನ್ ಜನಾಂಗದಲ್ಲಿ ಒಳ್ಳೇ ಸಂತೋಷಪ್ರದರ್ಶನ ಸಂದರ್ಭಗಳಲ್ಲಿ ಸ್ತ್ರೀ ಪುರುಷರು ಸೇರಿ ಬ್ಯಾಂಡವಾದ್ಯದೊಡನೆ ನಾಚುಮಾಡುವ ಸಾಂಪ್ರದಾಯವುಂಟು. ಈ ನಾಚನ್ನು ನೋಡಲು ಬಹುಶಃ ನೇಟಿಹ್ವ ಜನರಿಗೆ ಪ್ರವೇಶವಿಲ್ಲ. ಆದರೆ ರಾವಬಹಾದ್ದೂರವರ ಮೇಲೆ ದಾರ್ಢ್ಯವಾದ ಪ್ರೇಮವಿರುವದರಿಂದ ಲೇ ಮೆ।।ರವರು ಇವರೊಬ್ಬರನ್ನು ಮಾತ್ರ ಈ ವಿನೋದವನ್ನು ನೋಡಲು ಮರ್ಯಾದಿಸಿದ್ದರು. ಈ ಸಮಾರಂಭದಲ್ಲಿ ಮೆ।।ರವರು ರಾವಬಹಾದ್ದೂರವರನ್ನು ತಮ್ಮ ಮಿತ್ರರೋಪಾದಿಯಲ್ಲಿ ಉಪಚರಿಸಿದರು.

ಮತ್ತು ತಾರೀಖು ೧೫ನೇ ಅಗಷ್ಟ ಸನ್ ೧೯೧೨ ಇಸವಿಯ ಗುರುವಾರ ೧೨ ಗಂಟೆಗೆ ಮೆ।।ಕಮಿಶನರ ಸಾಹೇಬ ಬ।।ರವರು ತಮ್ಮ ಕಚೇರಿಯಲ್ಲಿ ಸಣ್ಣ ದರ್ಬಾರಮಾಡಿ, ಬೆಳಗಾವ ಜಿಲ್ಲಾ ಕಲೆಕ್ಟರರಾದ ಮೆ।।ಬ್ರಾವುನ್ ಸಾಹೇಬ ಬಹಾದ್ದೂರರವರಿಗೂ ಮೆ. ಮೆಕಾನಕಿ ಸಾಹೇಬ ಬಹದ್ದೂರ ಕಲೆಕ್ಟರ ಧಾರವಾಡ ಇವರಿಗೂ, ರಾವಬಹಾದ್ದೂರ ಅರಟಾಳ ಸಾಹೇಬರವರಿಗೂ ಮೆ. ಚಚಡಿಯ ಶ್ರೀಮಂತ ನಾಯಕ ಬಹಾದ್ದೂರ ದೇಸಾಯಿಯವರಿಗೂ, ಮಿ. ಬೋರಕರ ಮೊದಲಾದ ಸನ್ಮಾನನೀಯ ಅಧಿಕಾರಿಗಳಿಗೂ ದಿಲ್ಲಿಯ ಕೊರೋನೇಶನ್ (ಸಿಂಹಾಸನಾರೋಹಣ) ಸಂಬಂಧವಾದ ರಾಜಮುದ್ರೆಯುಳ್ಳ ಬೆಳ್ಳಿಯ ಪದಕಗಳನ್ನು ಕೊಟ್ಟು ಸತ್ಕರಿಸಿದರು.

❖ ❖

೨೧ನೇ ಭಾಗ

ದತ್ತಪುತ್ರನನ್ನು ತೆಗೆದುಕೊಳ್ಳುವ ಬಗ್ಗೆ ವಿಚಾರ

ವಾಚಕರೇ, ನೀವು ಇಲ್ಲಿಯ ವರೆಗೆ ರಾವಬಹಾದ್ದೂರ ಅರಟಾಳ ಸಾಹೇಬರವರ ಅಗಮ್ಯವಾದ ಚರಿತ್ರೆಯನ್ನು ಓದಿ ಆನಂದವನ್ನು ಹೊಂದಿರಬಹುದು. ಚಿತ್ತಾಕರ್ಷಕವಾದ ಇವರ ಚಾತುರ್ಯವನ್ನು ಕಂಡು ಚಕಿತರಾಗಿರಬಹುದು. ದಿಗಂತವಾದ ಇವರ ಕೀರ್ತಿಯನ್ನು ಕಂಡು ಕೌತುಕ ಪಟ್ಟಿರಬಹುದು. ನೀವು ಹೀಗೆ ಅತುಲವಾದ ಆನಂದಾಶ್ಚರ್ಯಗಳಲ್ಲಿ ಮಗ್ನರಾಗಿರುತ್ತಿರಲು ರೈತರಿಂದ ರಾಜಾಧಿರಾಜರ ವರೆಗೂ ಲೋಕಾದರಕ್ಕೆ ಪಾತ್ರರಾಗಿ, ಸೌಖ್ಯಶಾಲಿಗಳಾದ ರಾವಬಹಾದ್ದೂರರವರು ಒಳಗೊಳಗೆ ದುರಂತವಾದ ಚಿಂತಾಂಬುಧಿಯೊಳಗೆ ಮಗ್ನರಾಗಿದ್ದ ಕಾರಣವನ್ನು ನೀವು ಕಂಡು ಹಿಡಿದಿರಲಿಕ್ಕಿಲ್ಲ. ವಂಶೋದ್ಧಾರಕವೂ ಸಂಸಾರಸಾಗರೋತ್ತಾರಕವೂ ಪ್ರಪಂಚಸುಖಸಾರವೂ ಆದ ಪುತ್ರಸಂತಾನದ ಅಭಾವವೇ ಅವರ ಚಿಂತೆಯ ಕಾರಣವಾಗಿತ್ತು. ಈ ಚಿಂತೆಯು ಇವರೊಬ್ಬರನ್ನೇ ಅಂಟಿಕೊಂಡಿದ್ದಿಲ್ಲ. ಇವರ ಕುಟುಂಬದವರನ್ನೂ ಯಾವತ್ತು ಪರಿವಾರದವರನ್ನೂ ವ್ಯಾಪಿಸಿಕೊಂಡಿತ್ತು. ಪ್ರಾಪಂಚಿಕ ವಿಷಯವೇ ಅಂತಹ ಗಹನವಾಗಿದೆ. ಅಷ್ಟೈಶ್ವರ್ಯಗಳೊಳಗೆ ಪುತ್ರ ಸಂತಾನವೂ ಒಂದು ಮಹದೈಶ್ವರ್ಯ ವೆಂದೆನ್ನಿಸಿಕೊಂಡದ್ದರಿಂದ ಪ್ರಾಪಂಚಿಕರೆಂಬ ಮಹನೀಯರಿಗೆ ಇದೊಂದು ಐಸಿರಿಯು ಇದ್ದೇ ತೀರಬೇಕು. ಇದು ಇಲ್ಲದ ಜನ್ಮವು ಹರಳಿಲ್ಲದ ಗೆಜ್ಜೆಯಂತೆಯೂ, ನಾಲಿಗಿಲ್ಲದ ಗಂಟೆಯಂತೆಯೂ ನೀರವವಾಗಿರುವದು. ಬಹುಕಾಲದಿಂದ ಅವಿಚ್ಛಿನ್ನವಾದ ಸಂತಾನಾಭಿವೃದ್ಧಿಯಿಂದ ನಮ್ಮ ವಂಶವು ನನ್ನ ವರೆಗೆ ನಡೆದುಕೊಂಡು ಬಂದು ನಿಂತಿರುವದು. ಇದು ಇಲ್ಲಿಗೇ ಸಮಾಪ್ತವಾದರೆ ವಂಶಚ್ಛೇದದ ಅಪವಾದವು ನನ್ನ ಪಾಲಿಗೇ ಬರುವದಲ್ಲ! ಎಂಬ ದುಗುಡು ರಾವಬಹಾದ್ದೂರರವರನ್ನೂ, ಅವರ ಕುಟುಂಬ ಶ್ರೀಮತಿ ಗುರುಪಾದವ್ವನವರನ್ನೂ ಬಾಧಿಸುತ್ತಿತ್ತು. ಮೇಲಾಗಿ "ಅಪುತ್ರಸ್ಯ ಗತಿರ್ನಾಸ್ತಿ" ಎಂಬ ವೃದ್ಧವಾಕ್ಯವೂ ಇವರ ಮನೋಭಿತ್ತಿಯನ್ನು ಆಗಾಗ್ಗೆ ಭೇದಿಸುತ್ತಿತ್ತು. ಅಣ್ಣನವರ ಐಸಿರಿಗೆ ಯಾವ ನ್ಯೂನತೆಯೂ ಇಲ್ಲದೆ ಕೇವಲ ಪುತ್ರಸಂತಾನವೊಂದೇ ಇಲ್ಲದ್ದರಿಂದ, ನನ್ನ ಮಾತಾಪಿತರ ವಂಶಾಭಿವೃದ್ಧಿಗೆ ಇನ್ನೇನು ಮಾಡಬೇಕೆಂದು ವೀರಮತಿಯುಳ್ಳ ವೀರವ್ವನವರು ವಿಚಾರಕ್ಕೊಳಗಾಗಿದ್ದರು. ಲೋಕವಿಖ್ಯಾತರಾದ ರಾವಬಹದ್ದೂರ ರುದ್ರಗೌಡರ ಬೆಳಕು ದಿಗ್ದೇಶದಲ್ಲೆಲ್ಲ ಹರಡಿಕೊಂಡಿದ್ದು ಇವರಿಗೆ ಗಂಡುಮಕ್ಕಳಿಲ್ಲ. ಹೆಣ್ಣು ಮಗಳೊಬ್ಬಳಿದ್ದರೆ ಚಚಡೀ ದೇಸಗತಿಯನ್ನು ಉದ್ಧರಿಸುವವಳಾದಳು. ಇವರ ತರುವಾಯ ಇವರ ಮನೆತನವನ್ನು ಮುಂದೆ ತರುವಂಥ ಒಬ್ಬನಾದರೂ ಮಗನಿದ್ದರೆ ಲೇಸಾಗುತ್ತಿತ್ತು. ಇವರು ಇದೊಂದು ಮಾತ್ರ ದೇವರಲ್ಲಿ ಬೇಡಿ ಬರಲಿಲ್ಲ- ಎಂದು

ಜನಸಮೂಹವೂ ಮಾತಾಡುತ್ತಲಿತ್ತು. ಎಲ್ಲರ ಆಲೋಚನೆಗಳು ಹೀಗೆ ನಡೆದಿರುವವೇನೋ ನಿಜ. ಆದರೆ ಪುತ್ರಲಾಭವಾಗುವದು ದೇವಾಧೀನವಾದ ಮಾತು, ಅದು ಯಾರ ಕಯ್ಯಲ್ಲಿರುವದು!

ಆದರೆ ಸುದೈವಿಗಳ ಸಂಸಾರವು ಸುಖಸಾಧನೆಯ ಮಾರ್ಗದಲ್ಲಿಯೇ ಇರುವದು. ಸಾಧ್ವಿಶಿರೋಮಣಿಗಳಾದ ಗುರುಪಾದವ್ವನವರು ತಮ್ಮ ವಂಶೋದ್ಧಾರಕ ಸಂಗತಿಯನ್ನು ಕುರಿತು ತಮ್ಮೊಳಗೆ "ದೇವರು ನನಗೆ ಕೊಟ್ಟ ಸೌಭಾಗ್ಯಸುಖವು ಸಾಕಷ್ಟು ಇರುವದು. ಇದರಲ್ಲಿ ಪುತ್ರಸಂತಾನವೊಂದು ಮಾತ್ರ ಇಲ್ಲದೆ ಹೋಯಿತು. ಇಲ್ಲದ್ದಕ್ಕೆ ಆಶಿಸಿ ಫಲವಿಲ್ಲ. ವಯೋತೀತರಾದೆವಾದುದರಿಂದ ಇನ್ನು ನಮಗೆ ಸಂತತಿಯಾಗುವ ಆಶೆಯೂ ಇಲ್ಲ. ಕಾರಣ ವಂಶೋನ್ನತಿಗಾಗಿ ಆಪ್ತೇಷ್ಟರಲ್ಲಿ ಯಾವನೊಬ್ಬ ಸತ್ಕುಲಪ್ರಸೂತನೂ ಸದ್ಗುಣಿಯೂ ಆದ ಒಳ್ಳೇ ಬಾಲಕನನ್ನು ಆರಿಸಿ ಅವನನ್ನು ಧರ್ಮಪದ್ಧತಿಗನುಸಾರವಾಗಿ ದತ್ತಪುತ್ರನನ್ನು ಮಾಡಿಕೊಂಡರೆ ತೀರಿತೆಂದು, ನಮ್ಮ ಹೊಟ್ಟೆಯಿಂದ ಪುತ್ರಸಂತತಿ ಇಲ್ಲದೆ ಇದ್ದರೂ ದೈವಯೋಗದಿಂದ ನಮ್ಮ ರುದ್ರವ್ವನ ಹೊಟ್ಟೆಯಿಂದ ಅಪ್ಪಾಸಾಹೇಬ (ಚಂದ್ರಭೂಷಣ)ನಂಥ ಇನ್ನೊಬ್ಬ ಕುಮಾರನು ಹುಟ್ಟಿಬಂದರೆ ಅವನನ್ನೇ ತೆಗೆದುಕೊಳ್ಳಲಿಕ್ಕೆ ಬರುವದೆಂದೂ ವಿಧವಿಧವಾಗಿ ವಿಚಾರಿಸುವವರಾದರು. ಅತ್ತಿಗೆಯವರ ಅಂತರಂಗವನ್ನರಿತ ವೀರವ್ವನವರು ಅಣ್ಣನವರನ್ನು ಕುರಿತು "ವಂಶೋನ್ನತಿಗಾಗಿ ಇನ್ನು ಮೇಲೆ ಆದಷ್ಟು ತೀವ್ರವಾಗಿ ಯಾವನೊಬ್ಬ ಬಾಲಕನನ್ನು ಆರಿಸಿ ಗೊತ್ತುಮಾಡಿ, ದತ್ತಕ ಪುತ್ರನನ್ನಾಗಿ ಮಾಡಿಕೊಳ್ಳಬೇಕೆಂ"ದು ಸೂಚನೆಯನ್ನು ಕೊಡಲು, ಅದಕ್ಕವರು ತಂಗಿಯರನ್ನು ಕುರಿತು "ತಂಗೀ ನೀನು ಹೇಳುವದೆಲ್ಲ ನಿಜ. ಆದರೆ ಶಿರಸಂಗಿಯಂಥ ಎಂಥೆಂಥ ಸಂಸ್ಥಾನಗಳೇ ದತ್ತಪುತ್ರರಿಲ್ಲದೆ ಬಿದ್ದಿರುವಾಗ ನಮ್ಮಂಥವರ ಗತಿಯೇನು? ದೈವವಿದ್ದಂತೆ ಆದೀತು. ದೈವದ ಮುಂದೆ ಓಡುವವರಾರು? ಮಾಡಿಕೊಂಡ ದತ್ತಪುತ್ರನು ಕುಲದೀಪಕನಾಗಿ ಹಿಂದಿನವರ ವಂಶವನ್ನು ಇನ್ನಿಷ್ಟು ಬೆಳಗುವಂತೆ ಮಾಡುವವನಾಗಿದ್ದರೆ ಮಾತ್ರ ಆ ದತ್ತಪುತ್ರನಿಂದ ಸಾರ್ಥಕವಾದೀತು. ಅಲ್ಲದೆ ಯಾವನೊಬ್ಬ ಅಗಡದತ್ತನು ಬಂದು ಬೆಳಗುತ್ತಿರುವ ವಂಶವನ್ನು ಕಗ್ಗತ್ತಲೆಯಲ್ಲಿ ಕೆಡವಿ ಬಿಟ್ಟರೆ ಅಮ್ಮನು ನೂತದ್ದೆಲ್ಲ ಮೊಮ್ಮಗನ ಉಡುದಾರಕ್ಕಾಯಿತೆಂಬ ನಾಣ್ಣುಡಿಯಂತೆ ಪರಿಣಮಿಸೀತು. ಈಗೇನು ಅವಸರ ನೋಡಲಿಕ್ಕೆ ಬಂದೀತು. ಜಗದೀಶನ ಅನುಗ್ರಹವಿದ್ದರೆ ಎಲ್ಲವೂ ಅನುಕೂಲಿಸುವದು" ಎಂದು ಹೇಳಿ, ಅಷ್ಟಕ್ಕೆ ಸುಮ್ಮನಾದರು. ಆದರೂ ಎಲ್ಲರ ಲಕ್ಷವು ವಂಶೋನ್ನತಿಯ ವಿಚಾರದಲ್ಲಿ ಹುದುಗಿಕೊಂಡಿತ್ತೆಂದು ಹೇಳಬಹುದು.

ಶ್ರೀಮಂತ ಬಾಬಾಸಾಹೇಬರ ಜನನ

ವಾಚಕರೇ, ಎಲ್ಲ ಬಲಕ್ಕಿಂತಲು ದೈವಬಲವು ಹೆಚ್ಚಿನದು. ರಾವಬಹಾದ್ದೂರವರ ಪುತ್ರಿಯವರಾದ ಶ್ರೀಮತಿ ರುದ್ರವ್ವನವರಿಗೆ ಕಾಶೀಬಾಯಿ ಮತ್ತು ಚಂದ್ರಭೂಷಣ ಎಂಬ ಇಬ್ಬರು ಮಕ್ಕಳಾಗಿರುವದು ನಿಮಗೆ ಗೊತ್ತುಂಟಷ್ಟೇ! ಚಂದ್ರಭೂಷಣ ದೇಸಾಯರ ಬೆನ್ನಮೇಲೆ ರುದ್ರಾಬಾಯಿಯವರು ಗರ್ಭಿಣಿಯಾದದ್ದನ್ನು ಕಂಡು ಎಲ್ಲರೂ ಆನಂದಿಸುವವರಾದರು. ಜೇಷ್ಠಪುತ್ರನಾದ ಚಂದ್ರಭೂಷಣನು ದೇಸಗತಿಯ ಗಾದಿಗೆ ಹಕ್ಕುದಾರ (ಬಾಧ್ಯಸ್ಥ)ನಾದುದರಿಂದ ರುದ್ರವ್ವನವರ ಹೊಟ್ಟೆಯಿಂದ ಇನ್ನೊಬ್ಬ ಗಂಡು ಮಗನು ಹುಟ್ಟಿದರೆ, ಅವನನ್ನೇ ದತ್ತಕ ತೆಗೆದುಕೊಳ್ಳುವದು ನಿಶ್ಚಯವೆಂದು ಮನೆಯವರೆಲ್ಲರೂ ಮನಸಿನಲ್ಲಿ ನಿಶ್ಚಯಿಸುವವರಾದರು. ಇವರ ನಿಶ್ಚಯದಂತೆಯೇ ಶ್ರೀಮತಿ ರುದ್ರವ್ವನವರು ಶ್ರೀಮನ್ನೃಪಶಾಲಿವಾಹನ ಶಕೆ ೧೮೩೩ನೇ ವಿರೋಧಿಕೃತನ್ನಾಮ ಸಂವತ್ಸರ ಶ್ರಾವಣ ವದ್ಯ ೧೦ ಶನಿವಾರ (ತಾರೀಖ ೧೯ನೇ ಅಗಷ್ಟ ಸನ್ ೧೯೧೧ನೇ ಇಸವಿ) ಮುಂಜಾನೆ ಮದ್ರಾಸ ಟಾಯಿಮ್ ೮ ಹೊಡೆದು ೫ ಮಿನಿಟಿಗೆ ಸರಿಯಾಗಿ ಮೃಗನಕ್ಷತ್ರದ ಮೊದಲನೇ ಚರಣದಲ್ಲಿ ಬೆಳಗಾವಿಯ

ಹೊಸಬಂಗಲೆಯಲ್ಲಿ ಪುತ್ರರತ್ನವನ್ನು ಪ್ರಸೂತಿಸಿದರು. ರೋಗಿಯು ಬಯಸಿದ್ದೂ, ವೈದ್ಯನು ಹೇಳಿದ್ದೂ ಒಂದೆ ಆಯಿತೆಂಬ ಗಾದೆಯ ಮಾತಿಗನುಸಾರವಾಗಿ ಮನೆಯವರು ಆಶಿಸಿದಂತೆ ದೇವರು ಗಂಡು ಮಗನನ್ನೇ ದಯಪಾಲಿಸಿದ್ದಕ್ಕಾಗಿ, ಎಲ್ಲರ ಆನಂದಕ್ಕೆ ಪಾರಾವಾರವೇ ಇಲ್ಲದಾಯಿತು.

ಹುಟ್ಟಿದ ಕೂಸು ಚಂದ್ರಭೂಷಣ ದೇಸಾಯರಂತೆ ಸುಂದರಾಂಗವಾಗಿಯೂ, ತಂದೆಯವರಾದ ಶ್ರೀಮಂತ ವೀರಭದ್ರಪ್ಪ ದೇಸಾಯರಂತೆ ಸದೃಢಕಾಯವಾಗಿಯೂ, ಅಜ್ಜಂದಿರಂತೆ ವಿಶಾಲವಕ್ಷವುಳ್ಳದ್ದಾಗಿಯೂ ಇತ್ತು. ಈ ಮಗುವಿಗೆ ಶುಭಮುಹೂರ್ತದಲ್ಲಿ ಕಂಠೀ ವೀರಪ್ಪದೇಸಾಯರೆಂಬ ನಾಮಕರಣಮಾಡಿ ಬಾಬಾಸಾಹೇಬರೆಂದು ಕರೆಯಹತ್ತಿದರು. ಹುಟ್ಟಿದಂದಿನಿಂದ ಎಲ್ಲರೂ ಬಾಬಾಸಾಹೇಬರೇ ಅರಟಾಳದ ಗೌಡರೆಂದು ಅಕ್ಕರತೆಯಿಂದಲೂ ಅಭಿಮಾನದಿಂದಲೂ ಅನ್ನುವವರಾದರು. ಅರಟಾಳ ದಂಪತಿಗಳಿಗೆ ತಮ್ಮ ಅರಟಾಳ ಗೌಡಿಕಿಯ ಮನೆತನದ ಅಭಿಮಾನವೆಷ್ಟಿದ್ದಿತೋ ಅದಕ್ಕೂ ಹೆಚ್ಚು ಅಭಿಮಾನವು ತವರ್ಮನೆಯ ಸಂಬಂಧವಾಗಿ ವೀರವ್ವನವರ ಹೃದಯದಲ್ಲಿ ಉಕ್ಕಲಾಡುತ್ತಲಿದ್ದಿತು. ಅಣ್ಣಂದಿರಿಗೆ ದತ್ತಪುತ್ರನೇ ಆಗುವ ಯೋಗವಿದ್ದರೆ ರುದ್ರವ್ವನ ಗರ್ಭಾಂಬುಧಿಯಿಂದ ಉದಯಿಸುವ ಚಚಡಿಯ ಚಂದ್ರಮನೇ ಯೋಗ್ಯಪುತ್ರನಾಗುವನೆಂದೂ ಆ ರಾಕಾಶಶಾಂಕನಿಂದಲೇ ನಮ್ಮ ಅಣ್ಣಂದಿರ ವಂಶಾಬುಧಿಯು ವರ್ಧಮಾನವಾಗುವದೆಂದೂ ಭಾವಿಸಿದ್ದರು. ಇದಕ್ಕನುಗುಣವಾಗಿ ರುದ್ರವ್ವನವರು ಗಂಡುಮಗನನ್ನೇ ಹೆತ್ತದ್ದರಿಂದ, ಅವರಿಗೆ ಕಂಡ ಕನಸೂ ಉಂಡ ಊಟವೂ ಒಂದೇ ಆಯಿತೆಂದು ಹೇಳಬಹುದು. ಈ ಆನಂದದಲ್ಲಿ ಆಡಾಡುತ್ತ ಬಾಲಕನಾದ ಬಾಬಾಸಾಹೇಬನಿಗೆ ಒಂದು ವರ್ಷವಾಯಿತು.

ಶ್ರೀಮಂತ ಬಾಬಾಸಾಹೇಬರನ್ನು ದತ್ತಪುತ್ರರನ್ನಾಗಿ ತೆಗೆದುಕೊಂಡದ್ದು ತಾ. ೨೦-೧೦-೧೯೧೨

ಪುತ್ರನು ಮನೆಯಲ್ಲಿ ಇರುವವನಾದನು. ದತ್ತವಿಧಾನವನ್ನು ಬೇಕಾದಾಗ ಮಾಡಿಕೊಂಡರೂ ಬರಬಹುದೆಂದು ಎಲ್ಲರೂ ಭಾವಿಸುವವರಾಗಿದ್ದರು. ಆದರೆ ಗುರುಪಾದಮ್ಮನವರಿಗೆ ಮಾತ್ರ ಯಾಕೋ ಏನೋ ದತ್ತಕವಿಧಾನವನ್ನು ತೀವ್ರವೇ ತೀರಿಸಿಬಿಡಬೇಕೆಂಬ ಭಾವನೆಯುತ್ಪನ್ನವಾಯಿತು. ಮುಂದೆ ತುಸು ದಿವಸಗಳಲ್ಲಿಯೇ ಅವರ ಪ್ರಕೃತಿಯು ತುಸು ವ್ಯತ್ಯಸ್ತವಾಯಿತು. ಯೋಗ್ಯ ಔಷಧೋಪಚಾರವನ್ನು ನಡೆಸುತ್ತಲಿದ್ದರೂ, ಅದು ಗುಣಾನುಮಾರ್ಗದಲ್ಲಿರಲಿಲ್ಲ. ದಿನೇ ದಿನೇ ಅವರ ಶಕ್ತಿಯು ಕುಂದುತ್ತ ದೇಹವು ಕ್ಷೀಣಾವಸ್ಥೆಗೆ ಬರುತ್ತಿದ್ದಂತೆ ಕಂಡುಬರಹತ್ತಿತು. ಆದುದರಿಂದ ಅವರು ದತ್ತಕವಿಧಾನವನ್ನು ಆದಷ್ಟು ಬೇಗನೆ ಆಗುಮಾಡಿದರೆಂದು ನಾದಿನಿಯವರಿಗೆ ನಯದಿಂದ ಹೇಳಿದರು. ಈ ವಿಷಯವನ್ನು ಕುರಿತು ರಾವಬಹಾದ್ದೂರರವರೂ, ಚಚಡಿಯ ಶ್ರೀಮಂತ ನಾಯಕ ಬಹಾದ್ದೂರ ದೇಸಾಯರೂ, ವೀರವ್ವನವರೂ ಆಲೋಚಿಸಿ ದತ್ತಕ ಕಾರ್ಯವನ್ನು ತೀವ್ರ ತೀರಿಸಿ ಬಿಡುವದೇ ನೆಟ್ಟಗೆಂದು ಗೊತ್ತುಮಾಡಿದರು. ಮುಂದೆ ಹೇಗೂ ವಿಜಯದಶಮಿ ಹಬ್ಬವಿತ್ತು. ಈ ದಸರೆಯ ಶುಭಮುಹೂರ್ತದಲ್ಲಿಯೇ ದತ್ತವಿಧಾನವನ್ನು ಜರುಗಿಸುವದಾಗಿ ನಿರ್ಣಯಿಸಿದರು. ಈ ಸಂಗತಿಯನ್ನು ತಿಳಿದು ಗುರುಪಾದವ್ವನವರು ಬಹು ಆನಂದಪಟ್ಟರು. ಕೂಡಲೆ ಶ್ರೀ ಗುರುಮೂರ್ತಿಗಳಿಗೂ, ಸ್ವಾಮಿಗಳ ಗಡಣಕ್ಕೂ, ಸುತ್ತಲೂ ಆಪ್ತೇಷ್ಟ ಮಂಡಳಿಗೂ, ಮತ್ತು ಬರಲವಶ್ಯವಾಗಿದ್ದ ಮುಖ್ಯ ಮುಖ್ಯ ಮಂಡಳಿಗೂ ಆಮಂತ್ರಣ ಪತ್ರಗಳು ಹೋದವು. ದತ್ತಕ ವಿಧಾನದ ದಸರೇ ಮುಹೂರ್ತವು ಸಮೀಪಕ್ಕೆ ಬಂದಂತೆ

ಗುರುಪಾದವ್ವನವರ ಶರೀರದ ಸ್ಥಿತಿಯಾದರೂ ಶುಷ್ಕವಾಗುತ್ತ ನಡೆಯಿತು. ಅವರ ಮೈಯ್ಯಲ್ಲಿ ಏನೂ ಬಲವಿರಲಿಲ್ಲ. ಕೇವಲ ಈ ದತ್ತಕ ವಿಧಾನವನ್ನೀಕ್ಷಿಸುವದಕ್ಕಾಗಿಯೇ ಪ್ರಾಣವನ್ನು ಧರಿಸಿರುವರೋ ಏನೋ ಎಂಬಂತೆ ಇವರ ಪ್ರಕೃತಿಯು ಬಹಳೇ ವಿಕೃತಿಯನ್ನು ಹೊಂದಿತ್ತು. ಆದರೂ ಈ ಸಾಧ್ವಿಯು ತನ್ನ ಅಸ್ವಸ್ಥತೆಯ ಸಂಕಟವನ್ನು ಬಹಿರಂಗ ಪಡಿಸಿದ್ದಿಲ್ಲ. ಖಂಡೇ ನವಮಿಗೆ ಜಡ್ಡು ಹೆಚ್ಚಾಯಿತು. ಅವರ ಶರೀರ ಸ್ವಾತಂತ್ರ್ಯವು ತಪ್ಪಿದಂತಾಯಿತು. ಬಹುಶಃ ಇವರು ಬದುಕುವದಿಲ್ಲೆಂದು ಎಲ್ಲರು ತಿಳಿದರು. ರಾವಬಹಾದ್ದೂರ ಡಾಕ್ಟರ ಶಿರಗಾವಕರ ಇವರಾದರೂ ರೋಗಿಯ ವಿಷಯವಾಗ ಸದಭಿಪ್ರಾಯವನ್ನು ಪ್ರಕಟಮಾಡಲಿಲ್ಲ.

ಖಂಡೇ ನವಮಿಯ ದಿವಸವೇ ಕೆಲ ಆಮಂತ್ರಿತ ಮಹಾಶಯರು ಬರುವವರಾದರು. ಆಪ್ತೇಷ್ಟ ಮಂಡಳಿಯೆಲ್ಲ ಮುಂದಾಗಿಯೇ ಬಂದೊದಗಿತ್ತು. ಆದರೂ ಇನ್ನೂ ಕೆಲಜನರು ಬರುವವರಿದ್ದರು. ಶ್ರೀ ಗುರುಸ್ವಾಮಿಗಳಾದ ನರೇಗಲ್ಲ ಚರಮೂರ್ತಿಗಳೂ, ಪ್ರತಿವರ್ಷ ದಸರೇ ಹಬ್ಬಕ್ಕೆ ಬರುವ ಬಂಕಾಪುರ ತಾಲೂಕ ಶಿಗ್ಗಾವಿ ಹಿರೇಮಠದ ಚರಮೂರ್ತಿಗಳಾದ ಶ್ರೀ ಗುರುಸಿದ್ಧಸ್ವಾಮಿಗಳೂ, ಕಿತ್ತೂರ ಶಾಲಾಧ್ಯಾಪಕರಾದ ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಊರ್ಫ ಕಂಬಿ ಇವರೂ, ಶಿ|ರಾ|ರಾ|ದುಂಡಯ್ಯ ಶಿವಲಿಂಗಯ್ಯ ನಂದಿ, ಗೋಕಾಕ ಇವರೂ ದಯಮಾಡಿಸಿದ್ದರು. ಬಂದ ಜನರೆಲ್ಲರನ್ನು ಕಂಡು ಗುರುಪಾದಮ್ಮನವರು ಸಂಕಟ ಸಮಯದಲ್ಲಿಯೂ ಕೂಡ ಬಹಳ ಸಂತೋಷವನ್ನು ಹೊಂದಿದರು. ಇವರ ಜಡ್ಡು ವಿಶೇಷವಾಗಿ ಕಂಡು ಬಂದದ್ದರಿಂದ ಎಲ್ಲ ಜನರ ಮನಸ್ಸಿಗೆ ದತ್ತಕವಿಧಾನವನ್ನು ಈ ಹೊತ್ತೇ ತೀರಿಸಬೇಕೆಂದು ಅನ್ನಿಸಹತ್ತಿತು. ಡಾಕ್ಟರರಾದರೂ ಆದಷ್ಟು ತೀವ್ರ ತೀರಿಸಿಬಿಡುವದೇ ಉತ್ತಮವೆಂದು ಹೇಳಿದರು. ಇದನ್ನು ಕೇಳಿ ರಾವಬಹಾದ್ದೂರರವರು, ಬೇನೆಯಿಂದ ಬಳಲುತ್ತಿರುವ ಗುರುಪಾದಮ್ಮನವರ ಬಳಿಗೆ ಹೋಗಿ "ರೋಗವು ಸ್ವಲ್ಪ ಹೆಚ್ಚಾಗಿ ಕಂಡು ಬಂದದ್ದರಿಂದ ಈ ಹೊತ್ತೇ ದತ್ತಕ ವಿಧಾನವನ್ನು ತೀರಿಸಿಬಿಡಬೇಕೆನ್ನುತ್ತೇವೆ. ಇದಕ್ಕೆ ನಿನ್ನ ಸಮ್ಮತಿಯದೆಯೋ ಹ್ಯಾಗೆ?" ಎಂದು ಕೇಳಲು ಅದಕ್ಕವರು "ಛೇ ಛೇ ಹಾಗೆ ಎಂದೂ ಮಾಡಲಿಕ್ಕಾಗದು. ದತ್ತಕವಿಧಾನಕ್ಕೆ ದಸರೆ ಮುಹೂರ್ತವನ್ನು ಗೊತ್ತುಪಡಿಸಿರುವಿರಿ. ಈ ಕಾರ್ಯಕ್ಕೆ ಇನ್ನೂ ಜನರು ಬರುವವರಿದ್ದಾರೆ. ನೀವು ನಿಯಮಿಸಿದ ಮುಹೂರ್ತಕ್ಕೆ ಸರಿಯಾಗಿಯೇ ದತ್ತಕ ವಿಧಾನವನ್ನು ತೀರಿಸುವಂತೆ ಮಾಡಿರಿ. ಈ ದತ್ತಕವಿಧಾನವು ತೀರುವದರೊಳಗಾಗಿ ನಾನು ಮರಣ ಹೊಂದುವದಿಲ್ಲ. ನೀವು ಅಧೈರ್ಯಪಡಬೇಡಿರಿ. ಕಾರ್ಯ ಸಾಂಗವಾದನಂತರ ಮಾತ್ರ ನನ್ನ ಭರವಸವನ್ನು ಹಿಡಿಯಬೇಡಿರಿ. ಅಷ್ಟೊತ್ತಿನ ವರೆಗೆ ಮಾತ್ರ ನಾನು ಎಂದೂ ಸಾಯುವದಿಲ್ಲ. ನೀವು ಸ್ವಸ್ಥಚಿತ್ತರಾಗಿ ಕಾರ್ಯ ಸಾಂಗಮಾಡಿರೆಂ"ದು ಸ್ಪಷ್ಟವಾಗಿ ಹೇಳಿದರು. ರೋಗದ ಪ್ರಾಬಲ್ಯವು ಅಧಿಕವಾಗಿದ್ದರೂ ಅವರ ಮಾತಿನ ಮೇಲೆ ವಿಶ್ವಾಸವಿಟ್ಟು, ಮುಖ್ಯವಾಗಿ ಅವರ ಅಪೇಕ್ಷೆಯ ಕಡೆಗೆ ಲಕ್ಷಕೊಟ್ಟು, ರಾವಬಹಾದ್ದೂರರವರು ಹಾಗೆಯೇ ಆಗಲೆಂದು ದತ್ತಕ ಕಾರ್ಯವನ್ನು ನಿಯಮಿತ ಮುಹೂರ್ತಿಗೆ ಮಾಡುವದಾಗಿ ನಿರ್ಧಾರಮಾಡಿದರು.

ಸದ್ಯಸ್ಥಿತಿಯನ್ನು ನೋಡುತ್ತಿರಲು ಗುರುಪಾದಮ್ಮನವರು ಅಂದಿನ ಬೆಳಗುಗಳೆಯುವದೇ ಕಠಿಣವಾಗಿತ್ತು. ದೇವರು ಮಾಡಿದಂತೆ ಆಗಲಿ ಎಂದು ಎಲ್ಲರು ಸ್ತಬ್ಧರಾಗಿ ಇರುವವರಾದರು. ಬೆಳಗಾಯಿತು. ರಾತ್ರಿಯಲ್ಲಿ ಅಸ್ತವ್ಯಸ್ತವಾಗಿ ಕಾಣುತ್ತಿದ್ದ ಅವರ ಪ್ರಕೃತಿಯು ಉಷಃಕಾಲಕ್ಕೆ ಸ್ವಲ್ಪ ಶಾಂತಿಯುಳ್ಳದ್ದಾಗಿ ತೋರಹತ್ತಿತು. ಆಗ ಗುರುಪಾದಮ್ಮನವರು ನಾದಿನಿಯವರನ್ನು ಕರೆದು "ಅಕ್ಕಾ ಇನ್ನು ಮಾತ್ರ ವಿಲಂಬಮಾಡಬೇಡಿರಿ. ಎಲ್ಲರೂ ಬೇಗ ಸ್ನಾನಮಾಡಿ ದತ್ತಕವಿಧಾನವನ್ನು ತೀವ್ರ ತೀರಿಸಿರಿ. ನಾನು ಪಕ್ಕಾ ಜಾಗೃತಗಳಾಗಿರುವೆನು" ಎಂದು ಹೇಳಿದ ಅತ್ತಿಗೆಯವರ ನುಡಿಗಳನ್ನು ಕೇಳಿ ವೀರವ್ವನವರು ಮನೆಯೊಳಗಿನ ಸರ್ವಸಿದ್ಧತೆಯನ್ನು ಸಜ್ಜುಗೊಳಿಸಿದರು. ರಾವಬಹಾದ್ದೂರರವರ ಅಪ್ಪಣೆಯ ಮೇರೆಗೆ ಸ್ವಾಮಿಗಳಾದರೂ ತಮ್ಮ ತಯಾರಿನಲ್ಲಿಯೇ ಇದ್ದರು. ಅಷ್ಟೊತ್ತಿಗೇ

ರಾತ್ರಿಯ ಉಗೆಬಂಡಿಯಿಂದಲೂ, ಧಾರವಾಡ ಕಡೆಯಿಂದ ಬರುವ ಬೆಳಗಿನ ಗಾಡಿಯಿಂದಲೂ ಬರುವ ಯಾವತ್ತು ಮಂಡಳಿಯೂ ಬಂದು ಸೇರಿಕೊಂಡಿತು. ದತ್ತಕವಿಧಾನಕ್ಕಾಗಿ ಬಂಗಲೆಯನ್ನು ತಳಿರ್ದೋರಣ-ಧ್ವಜಪತಾಕೆ-ಕದಳೀಸ್ತಂಭಗಳಿಂದಲೂ ಹಂಡೇ ಝುಮುರು ಗುಂಡುಗುಳಾಪುಗಳಿಂದಲೂ ಅಲಂಕರಿಸಿದರು. ರಾತ್ರಿಯ ದಿಪೋತ್ಸವಕ್ಕಾಗಿ ಗ್ಯಾಸಲಾಯಿಟಗಳನ್ನೂ ಸಾಲುದೀವಿಗೆಗಳ ವ್ಯವಸ್ಥೆಯನ್ನೂ ಈಗಿನಿಂದಲೇ ಇಟ್ಟಿದ್ದರು. ಮತ್ತು ಉತ್ಸವದ ಬಗ್ಗೆ ನಾನಾವಿಧವಾದ ಸಿದ್ಧತೆಯು ಇಡಲ್ಪಟ್ಟಿತ್ತು.

ಸೂರ್ಯೋದಯದೊಳಗಾಗಿ ಶ್ರೀ ನರೇಗಲ್ ಹಿರೇಮಠದ ಚರಮೂರ್ತಿಗಳೂ, ಶ್ರೀ ಸಿಗ್ಗಾವಿ ಹಿರೇಮಠದ ಚರಮೂರ್ತಿಗಳಿಗೂ, ಹೊಸಬಂಗಲೆಯ ಭೋಜನಶಾಲೆಯ ಪ್ರಶಸ್ತವಾದ ಪಟಾಂಗಣದಲ್ಲಿ ರಂಗವಲ್ಲಿ ಮೊದಲಾದ ಮಾಡತಕ್ಕ ವಿಧಿಯನ್ನೆಲ್ಲ ಮಾಡಿ ತಯಾರಗೊಳಿಸಿ, ದತ್ತಕ ತೆಗೆದುಕೊಳ್ಳುವ ಅರಟಾಳ ದಂಪತಿಗಳೂ, ದತ್ತಕ ಕೊಡುವ ಚಚಡಿಯ ಶ್ರೀಮಂತ ದಂಪತಿಗಳೂ ದತ್ತಪುತ್ರ ಸಮೇತವಾಗಿ ಬರಲನುಜ್ಞೆಯನ್ನು ಮಾಡಿದೊಡನೆ, ಝುಗರಝುಗಿಸುವ ವಸ್ತ್ರಾಭರಣಗಳಿಂದಲಂಕೃತವಾದ ಬಾಲಕನನ್ನೆತ್ತಿಕೊಂಡು ಎಲ್ಲರೂ ಬರುವವರಾದರು. ಬಂಗಲೆಯ ಕಚೇರಿಯ ಕೋಣೆಯಲ್ಲಿ ರುಗ್ಣಶಯ್ಯೆಯಲ್ಲಿ ಪವಡಿಸಿದ ಶ್ರೀಮತಿ ಗುರುಪಾದವ್ವನವರು, ನಾನು ಅಲ್ಲಿಯ ವರೆಗೆ ಬರುತ್ತೇನೆಂದು ಹಂಬಲಿಸಿದರು; ಆದರೆ ಡಾಕ್ಟರರ ಅಭಿಪ್ರಾಯದ ಮೇರೆಗೆ ಅವರನ್ನು ಬರಗೊಡದೆ ಭೋಜನಶಾಲೆಯ ದತ್ತಕ ವಿಧಾನಮಂಡಲದಿಂದ ಅವರ ವರೆಗೆ ಗುರುಸೂತ್ರವನ್ನೊಯ್ದು ವಿಧಾನವನ್ನಾರಂಭಿಸಿದರು. ಈ ಕಾರ್ಯಕ್ಕಾಗಿ ಪದ್ಧತಿಯ ಮೇರೆಗೆ ಬೆಳಗಾವ ಶಹಾಪುರ ಶಹರಗಳ ಸ್ವಾಮಿಗಳನ್ನೂ ದೈವದ ಮುಖಂಡರನ್ನೂ ಬರಮಾಡಿಕೊಂಡಿದ್ದರು. ಅರಟಾಳದ ಹಿರೇಮಠದ ಸ್ವಾಮಿಗಳೂ, ರೈತರೂ ಗೌಡಕುಲಕರಣಿಯರೂ ಮುಂದಾಗಿಯೇ ಬಂದಿದ್ದರು. ಎಲ್ಲ ಆಪ್ತೇಷ್ಟ ಮಂಡಳಿಯೂ ಪ್ರೇಕ್ಷಕ ಜನಸಮೂಹವೂ ನೋಡುತ್ತಿರಲು, ಸ್ವಾಮಿಗಳ ಗಂಭೀರವಾದ ಮಂತ್ರೋಚ್ಚರಣವು ನಡೆಯುತ್ತಿರಲು, ಸರ್ವವಿಧಿವತ್ತಾಗಿ ನಡೆದಿರಲು, ಮಂಗಳವಾದ್ಯಗಳು ಮೊಳಗುತ್ತಿರಲು ಚಚಡಿಯ ಶ್ರೀಮಂತ ದಂಪತಿಗಳು ತಮ್ಮ ದ್ವಿತೀಯ ಪುತ್ರರಾದ ಕಂಠೀ ವೀರಪ್ಪದೇಸಾಯರು ಊರ್ಫ ಬಾಬಾಸಾಹೇಬರನ್ನು ಎತ್ತಿ ಗುರುಹಿರಿಯರ ಸಮಕ್ಷ ಗುರುಹಸ್ತದಿಂದ ಅರಟಾಳ ದಂಪತಿಗಳಿಗೆ ದತ್ತಪುತ್ರರನ್ನಾಗಿ ಸಮರ್ಪಿಸಿದರು. ಅದೇ ಕಾಲಕ್ಕೆ (ತಾ. ೨೦-೧೦-೧೯೧೨ ರವಿವಾರ ಮುಂಜಾನೆ ೬ ಘಂಟೆ) ಕಾಯದೇ ಪ್ರಕಾರ ದತ್ತಕ ಪತ್ರವು ಬರೆಯಲ್ಪಟ್ಟು, ಎಲ್ಲ ಮುಖ್ಯಸ್ಥರ ಸಹಿ ತೆಗೆದುಕೊಳ್ಳಲ್ಪಟ್ಟಿತು. ಪುತ್ರನನ್ನು ಸ್ವೀಕರಿಸಿ ಆ ಕುಮಾರನಿಗೆ ಗುರುಮುಖಾಂತರ ರಾವಬಹಾದ್ದೂರರು ತಮ್ಮ ತಂದೆಯ ಹೆಸರಾದ 'ಚೆನ್ನವೀರಗೌಡರು' ಎಂಬ ನಾಮಕರಣವನ್ನು ಮಾಡಿಸಿದರು. ಅಲ್ಲಿಂದ ಹಾಗೆಯೇ ಎದ್ದು ರಾವಬಹಾದ್ದೂರರವರು ಗುರುಸೂತ್ರಾನುಸಾರವಾಗಿ ಕಚೇರಿಯ ಕೋಣೆಗೆ ಹೋದರು. ಗುರುಪಾದಮ್ಮನವರು ಪುತ್ರನನ್ನೆತ್ತಿಕೊಂಡು ಕೂತ ಪತಿದೇವರನ್ನು ಕಣ್ತುಂಬ ನೋಡಿ ಆನಂದಾಶ್ರುಗಳನ್ನುದುರಿಸಿ ಆರತಿಮಾಡಿ, ಪುತ್ರನನ್ನೆತ್ತಿಕೊಂಡು ಮುದ್ದಾಡಿ ಮಗನ ಮಸ್ತಕದ ಮೇಲೆ ಹಸ್ತವನ್ನಿಟ್ಟು ಆಶೀರ್ವದಿಸಿ ಎಲ್ಲರನ್ನು ಕುರಿತು "ಇನ್ನು ನಾನು ನಿಶ್ಚಿಂತಳಾದೆನು. ಇನ್ನು ಮೇಲೆ ನನಗೆ ಮರಣವು ಬೇಕಾದಾಗ ಬರಲಿ. ನಾನು ಅದಕ್ಕೆ ಹೆದರುವದಿಲ್ಲ. ಸಂತೋಷದಿಂದ ಪ್ರಾಣವನ್ನು ಬಿಡುವೆನು. ನನ್ನ ಮನದಿಚ್ಛೆಯು ಪೂರ್ಣವಾದಂತಾಯಿತು. ನನಗೆ ಇನ್ನು ಯಾವ ಆಶೆಯೂ ಇಲ್ಲ. ರಾವಬಹಾದ್ದೂರರವರ ಅನುಗ್ರಹದಿಂದ ಯಾವತ್ತು ಸೌಭಾಗ್ಯವನ್ನು ಕಂಡಿರುವೆನು. ನಾನು ಇನ್ನು ನಿಶ್ಚಿಂತವಾದ ಮರಣವನ್ನೇ ಎದುರುವ ನೋಡುವೆನು" ಎಂದು ಎಲ್ಲರಿಗೂ ಅಪ್ಪಣೆಕೊಟ್ಟು, ನಾದಿನಿಯವರನ್ನು ಕರೆದು "ಅಕ್ಕಾ, ಸ್ವಾಮಿಗಳ ಹಾಗೂ ಉತ್ಸವಕ್ಕೆ ಬಂದ ಯಾವತ್ತು ಆಪ್ತೇಷ್ಟರ ಮತ್ತು ಬಡಬಗ್ಗರ ಊಟ ಉಪಹಾರವನ್ನೆಲ್ಲ ಶೀಘ್ರವಾಗಿ ತೀರಿಸಿರಿ, ತಡಮಾಡಬೇಡಿರಿ" ಎಂದು ಕೈ ಹಿಡಿದು ಹೇಳಿದರು. ಇಷ್ಟೊತ್ತಿಗೆ ೧೦ ಘಂಟೆಯಾಯಿತು.

ಶ್ರೀಮತಿ ಗುರುಪಾದಮ್ಮನವರ ಅಂತ್ಯಕಾಲದ ನುಡಿಗಳು

ಕೂಡಲೆ ಭೋಜನಶಾಲೆಯಲ್ಲಿ ಯಥಾಪ್ರಕಾರವಾಗಿ ಗಣಾರಾಧನೆಯು ನಡೆಯಿತು. ಊಟ ಉಪಚಾರದಿಂದಲೂ ದಕ್ಷಿಣೆ ತಾಂಬೂಲಾದಿಗಳಿಂದಲೂ ಗಣವೃಂದವು ಸಂತುಷ್ಟಿಯನ್ನು ಹೊಂದಿತು. ಎಲ್ಲ ಜನರ ಊಟವು ಮುಗಿಯಲಿಕ್ಕೆ ಹನ್ನೆರಡು ಘಂಟೆಯಾಗಿ ತೋಫು ಹಾರಿತು. ತೋಫು ಹಾರಿದಾಕ್ಷಣವೆ ಗುರುಪಾದವ್ವನವರ ದೇಹಭಾಗವು ಹಾರಿದಂತಾಗಿ ಪುನಃ ಜಾಗೃತರಾದರು. ಊಟ ಮಾಡಿ ಬಂದ ಸ್ವಾಮಿಗಳು ಮೊದಲಾಗಿ ಸರ್ವಸ್ವರಿಗೂ ನಮಸ್ಕಾರಮಾಡಿ "ಇನ್ನು ಮಾತ್ರ ಎಲ್ಲರೂ ನನ್ನ ಆಶೆಯನ್ನು ತೊರೆಯಬೇಕು. ನಾನು ಇನ್ನು ಮೇಲೆ ಬಹಳ ಹೊತ್ತು ಬದುಕಲಾರೆನು. ಇದೇ ನಿಮ್ಮ ಕಡೆಯ ದರ್ಶನವು. ದತ್ತಕದ ಯೋಗದಿಂದ ನಿಮ್ಮೆಲ್ಲರ ದರ್ಶನವಾಯಿತು. ಮುಖ್ಯವಾಗಿ ಸತ್ಸಮಯಕ್ಕೆ ಗುರುಪಾದದರ್ಶನ ಲಾಭವಾಯಿತು. ಎಲ್ಲವೂ ಲಭಿಸಬಹುದು. ಗುರುಸಾನ್ನಿಧ್ಯವು ಲಭಿಸುವದು ಕಠಿಣ. ನನ್ನ ಸುಕೃತವಶಾತ್ ತಮ್ಮ ಪಾದಪ್ರಣಿಪಾತವೊದಗಿ ನನ್ನ ದೇಹವು ಪವಿತ್ರವಾಯಿತು" ಎಂದು ಹೇಳಿದ್ದಲ್ಲದೆ "ಈ ಹೊತ್ತು ದರಸೆಹಬ್ಬವು ಬನ್ನಿ ಮುಡಿಯುವ ಕಾರ್ಯವನ್ನಾದರೂ ತೀವ್ರ ತೀರಿಸಿರೆಂದು" ತಿಳಿಸಿದರು. ಆ ಪ್ರಕಾರ ಶಮೀಪೂಜೆಯನ್ನು ಮಾಡಿ ದೇವರಿಗೆ ಸಮರ್ಪಿಸಿ ಬಳಿಕ, ಬಂಗಲೆಯಲ್ಲಿದ್ದ ಸರ್ವಜನರಿಗೂ ಬನ್ನಿಬಂಗಾರವನ್ನು ಹಂಚಿದರು. ಈ ಶಿಷ್ಟಾಚಾರವನ್ನು ಮುಗಿಸಿ ೧ ಘಂಟೆಯ ಸುಮಾರಕ್ಕೆ ಬಳಿಯಲ್ಲಿ ಬಂದ ರಾವಬಹಾದ್ದೂರರವರಿಗೆ ಗುರುಪಾದಮ್ಮನವರು ಬನ್ನಿಯನ್ನು ಸಮರ್ಪಿಸಿ" ನಾನು ಇನ್ನು ಕೃತಾರ್ಥಳಾದೆನು. ತಾವು ಈವರೆಗೆ ನನ್ನ ಅಭೀಷ್ಟಗಳನ್ನೆಲ್ಲ ಈಡೇರಿಸಿಕೊಟ್ಟದ್ದಕ್ಕಾಗಿ ನಾನು ತಮ್ಮ ಋಣಿಯಾಗಿರುವೆನು; ಈ ಹೊತ್ತು ಮಾಡಿದ ಆರತಿಯೇ ನನ್ನ ಕಡೆಯ ಆರತಿಯು" ಎಂದು ನಮಸ್ಕರಿಸಿ ಕಣ್ಣೀರುಗಳನ್ನು ಅವಿರಳಧಾರೆಯಾಗಿ ಸುರಿಸಹತ್ತಿದರು. ಇದನ್ನು ಕಂಡು ರಾವಬಹಾದ್ದೂರರವರ ಅಶ್ರುಬಿಂದುಗಳೂ ಉದುರಹತ್ತಿದವು. ಇವರೀರ್ವರ ಅವಸ್ಥೆಯನ್ನು ಕಂಡು ವೀರವ್ವನವರೂ ರುದ್ರವ್ವನವರೂ ಸಿದ್ಧಲಿಂಗವ್ವನವರೂ ಒತ್ತಿ ಅಳುವವರಾದರು. ಈ ಪರಿವಾರದ ದುಃಖವನ್ನು ಕಂಡು ನೆರೆದ ಜನಸಮೂಹದ ದುಃಖಾಶ್ರುಗಳು ಅನೈಚ್ಛಿಕವಾಗಿ ಧಾರೆಗೊಂಡವು. ಒಟ್ಟಿಗೆ ಆ ಸಮಯದಲ್ಲಿ ಕಣ್ಣಿಗೆ ನೀರು ತಾರದವನೇ ಪಾಪಿಯು. ಅಳುತ್ತಿರುವ ಆಪ್ತೇಷ್ಟ ಮೊದಲಾದ ಬಂಧು ಬಳಗವನ್ನು ಕಂಡು ಗುರುಪಾದವ್ವನವರ ದುಃಖವು ಇಮ್ಮಡಿಸಿತು. ಅದನ್ನು ತಡಕೊಂಡು "ನೀವೆಲ್ಲರೂ ಯಾಕೆ ಅಳುತ್ತೀರಿ?ಇನ್ನು ಮೇಲೆ ಸರ್ವಥಃ ಅಳಬೇಡಿರಿ. ನಾನು ಈ ಪ್ರಪಂಚವನ್ನು ಗೆದ್ದೆನು" ಎಂದು ನಾದಿನಿಯವರಾದ ವೀರವ್ವನವರನ್ನು ಕುರಿತು "ಅಕ್ಕಾ ನೀವೇ ಹೀಗೆ ದುಃಖಿಸುತ್ತ ಕೂತರೆ ಸಣ್ಣವರು ಹ್ಯಾಗೆ ಸುಮ್ಮನಿದ್ದಾರು? ಇಲ್ಲಿಯ ವರೆಗೆ ನಮ್ಮ ನಿಮ್ಮ ಋಣವಿತ್ತು. ಇನ್ನು ಮೇಲೆ ಅದರ ಅಂತ್ಯಕಾಲವೊದಗಿ ಬಂದಿರುತ್ತದೆ. ಪ್ರಾರಬ್ಧಕ್ಕೆ ಮಾಡಬೇಕೇನು? ಇಲ್ಲಿಯ ವರೆಗೆ ನನ್ನನ್ನು ನಾನಾವಿಧವಾಗಿ ಉಪಚರಿಸಿದರಿ. ಎಂಥ ಕಠಿಣ ಪ್ರಸಂಗಗಳಲ್ಲಿಯೂ ಕೂಡ ನನಗೆ ಅಕ್ಕನಂತೆ ಅಥವಾ ಹಡೆದ ತಾಯಿಯಂತೆ ಅಂತಃಕರುಣವನ್ನು ತೋರಿಸಿದಿರಿ. ನೀವು ನಿಮ್ಮ ದುರ್ದೈವದಿಂದ ನಿಮ್ಮ ದಾಂಪತ್ಯಸುಖವನ್ನು (ಪತಿಯನ್ನೂ ಸುತರನ್ನೂ) ಕಳೆದುಕೊಂಡಿದ್ದರೂ ತವರ್ಮನೆಯೇ ತಮ್ಮ ಮನೆಯೆಂದು ಭಾವಿಸಿ, ಮನೆತನದ ಅಂತರ್ವ್ಯವಸ್ಥೆಯನ್ನೆಲ್ಲ ನೀವೇ ನಿರ್ವಹಿಸಿಕೊಂಡು, ಸಾಹೇಬರ ಹಾಗೂ ನನ್ನ ಯಾವತ್ತು ಕೆಲಸಗಳನ್ನು ಕಡಿಮೆ ಮಾಡಿದುದಕ್ಕಾಗಿ ನಾವು ನಿಮಗೆ ಋಣಿಯಾಗಿರುವೆವು. ಅಕ್ಕಾ, ನಮ್ಮ ಮನೆತನವೆಂಬ ರಾಜ್ಯಕ್ಕೆ ನೀವು ಮಂತ್ರಿಯಂತೆ ಇರುವಿರೆಂದರೂ ಸಲ್ಲುವದು. ಹೊರಗಿನ ವ್ಯವಸ್ಥೆಯನ್ನೆಲ್ಲ ಸಾಹೇಬ ಬಹಾದ್ದೂರರೂ ಒಳಗಿನ ಕೆಲಸಗಳನ್ನೆಲ್ಲ ನೀವೂ ದಕ್ಷತೆಯಿಂದಲೂ ಅಚ್ಚುಕಟ್ಟುತನದಿಂದಲೂ ನೋಡುತ್ತಿರುವದರಿಂದ ನೋಡುವವರಿಗೆ ಸಾಹೇಬರ ಮನೆತನದ ಶಿಸ್ತು ಶೋಭೆಯುಳ್ಳದ್ದಾಗಿ ತೋರುತ್ತಿರುವದು. ಯಜಮಾನರಂತೆ ನೀವಾದರೂ ನಮ್ಮ ಅರಟಾಳ

ಗೌಡಿಕೀ ಮನೆತನದ ಪೂರ್ಣ ಅಭಿಮಾನಿಗಳಾಗಿ, ಮನೆತನದ ಸಣ್ಣದೊಡ್ಡ ಯಾವತ್ತು ಕೆಲಸಗಳನ್ನು ನೀವೇ ನೋಡಿ ಕೊಳ್ಳುತ್ತಿರುವದರಿಂದ, ನಿಶ್ಚಯವಾಗಿ ನಮಗೆ ಯಾವ ಚಿಂತೆಯೂ ಇಲ್ಲದಾಗಿದೆ. ಲೋಕದಲ್ಲಿ ಎಷ್ಟೋ ಜನ ಅತ್ತಿಗಿ ನಾದಿನಿಯರಿರಬಹುದು. ಆದರೆ ನಿಮ್ಮಂಥ ನಾದಿನಿಯರನ್ನು ಕಾಣುವದು ಅಪರೂಪ. ಇದು ನನ್ನ ಸುದೈವವೆಂದು ತಿಳಿಯುತ್ತೇನೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ ಅದೆ. ಸಾರಾಂಶ, ಈ ಸಂಸಾರದಲ್ಲಿ ನಾನು ಪಟ್ಟಸೌಖ್ಯವೆಲ್ಲ ನಿಮ್ಮ ಅನುಗ್ರಹದ ಫಲವೇ ಎಂದು ನಾನು ತಿಳಿದಿರುತ್ತೇನೆ. ನಿಮಗೆ ಹೆಚ್ಚಿಗೆ ಹೇಳಬೇಕಂತಿಲ್ಲ. ತಿಳಿದವರೇ ಇರುತ್ತೀರಿ. ನೀವು ಇನ್ನು ದುಃಖಿಸಬೇಡಿರಿ. ದೇವರ ದಯದಿಂದ ನನ್ನ ಮನದಭೀಷ್ಟೆಯೆಲ್ಲವೂ ಕೊನೆಗಂಡಿತು. ನಾನು ಇನ್ನು ನಿಶ್ಚಿಂತಳಾಗಿ ಮರಣೋನ್ಮುಖಳಾಗುವೆನು. ನೀವು ಎಂದಿನಂತೆ ಸಾಹೇಬರ ಸಂರಕ್ಷಣಾ ಕಾರ್ಯಭಾಗದಲ್ಲಿ ದಕ್ಷರಾಗಿರುತ್ತೀರೆಂಬದು ನನಗೆ ಖಾತ್ರಿಯದೆ. ಚಿರಂಜೀವಿ ರುದ್ರವ್ವನು ಇನ್ನು ಮೇಲೆ ನನ್ನ ಮಗಳಲ್ಲ ನಿಮ್ಮ ಮಗಳು. ಆಕೆಯು ಸಮರ್ಥವಾದ ಚಚಡೀ ಶ್ರೀಮಂತರ ಅರ್ಧಾಂಗಿಯಾಗಿ ಮುತ್ತಿನಂಥ ಮೂವರು ಮಕ್ಕಳನ್ನು ಹೆತ್ತು ವೀರಮಾತೆಯಾಗಿದ್ದರೂ ನಿಮ್ಮೆಲ್ಲ ಹಿರಿಯರ ಅಸ್ತಿತ್ವದಲ್ಲಿ ಈಕೆಯು ಇನ್ನೂ ಚಿಕ್ಕವಳೇ ಆದುದರಿಂದ, ನೀವೆಲ್ಲರೂ ಈ ಮಗಳನ್ನು ಮೊಮ್ಮಕ್ಕಳೊಂದಿಗೆ ಸಂರಕ್ಷಣೆ ಮಾಡುವದೇ ಕರ್ತವ್ಯವಾಗಿದೆ.

ಈ ವಿಷಯವಾಗಿ ಶ್ರೀಮಂತ ಅಣ್ಣಾಸಾಹೇಬರಿಗೆ ಒಂದೆರಡು ಮಾತುಗಳನ್ನು ಹೇಳಬೇಕೆನ್ನುತ್ತೇನೆ. ಅವರನ್ನು ತುಸು ಮುಂದು ಕರೆಯಿರೆಂ"ದು ಸಂಜ್ಞೆಯಿಂದ ತಿಳಿಸಲಾಗಿ, ಅದನ್ನರಿತು ಶ್ರೀಮಂತ ಅಣ್ಣಾಸಾಹೇಬರು ಅಶ್ರುಬಿಂದುಗಳನ್ನುದುರಿಸುತ್ತ ಅತ್ತೆಯವರ ಬಳಿಗೆ ಬರಲು ಅಳಿಯಂದಿರನ್ನು ಕುರಿತು "ಜಾಮಾತೃಗಳಾದ ದೇಸಾಯಿಯವರೇ, ಸುಜ್ಞರಾದ ನಿಮಗೆ ಹೆಚ್ಚಿಗೆ ಹೇಳುವ ಕಾರಣವಿಲ್ಲದಿದ್ದರೂ ನನ್ನ ಅಂತ್ಯಕಾಲದ ನುಡಿಗಳು ನಿಮ್ಮ ಸ್ಮರಣದಲ್ಲಿ ನಿಲ್ಲಲೆಂದು ಎರಡು ಮಾತು ಹೇಳಬೇಕೆನ್ನುತ್ತೇನೆ. ಈವರೆಗೆ ನಾನು ನಿಮ್ಮನ್ನೂ ನಿಮ್ಮ ಸತಿಯಾದ ಈ ರುದ್ರವ್ವನನ್ನೂ ಬಾಲ್ಯದಿಂದಲೂ ಜೋಪಾನ ಮಾಡಿರುವೆನು. ನಾನು ಈಗ ಮೃತ್ಯುಮುಖದಲ್ಲಿರುವದಿಂದ ನೀವು ಇನ್ನು ಮೇಲೆ ಮುಪ್ಪಿನವರಾದ ಸಾಹೇಬರನ್ನೂ, ಅನನುಭವಿಯಾದ ನಿಮ್ಮ ಅರ್ಧಾಂಗಿಯನ್ನೂ ನಿಮ್ಮ ಜೀವಕ್ಕೆ ಸರಿಯಾಗಿ ಕಾಪಾಡಿಕೊಂಡು ಹೋಗುವ ಕೆಲಸವು ನಿಮ್ಮನ್ನು ಕೂಡಿರುವದು. ಅಕ್ಕನವರೂ ಸಿದ್ಧಲಿಂಗವ್ವನೂ ಎಷ್ಟಾದರೂ ಅಬಲೆಯರು. ಅವರಾದರೂ ಬಹುಶಃ ತಮ್ಮ ಕರ್ತವ್ಯಕ್ಕೆ ತಪ್ಪಲಿಕ್ಕಿಲ್ಲ. ನೀವೂ ಅವರ ಸಂರಕ್ಷಣದಲ್ಲಿ ಪೂರ್ಣ ಸಹಾಯಕರಾಗಿರತಕ್ಕದ್ದು. ಸಾಹೇಬರ ಸೌಖ್ಯವನ್ನು ಲಕ್ಷಿಸಿದಂತೆ ಅಕ್ಕನವರ ಕ್ಷೇಮವನ್ನಾದರೂ ನೀವು ಚಿಂತಿಸತಕ್ಕದ್ದು. ಯಾಕಂದರೆ ಅವರು ಅರಟಾಳದ ತಮ್ಮ ತವರ್ಮನೆಯ ಅಭ್ಯುದಯವನ್ನು ಎಷ್ಟು ಆಸ್ಥೆಯಿಂದ ಚಿಂತಿಸುತ್ತಿರುವರೋ ಅದಕ್ಕೂ ಹೆಚ್ಚು ಆಸ್ಥೆಯಿಂದ ನಿಮ್ಮ ಚಚಡೀ ಸಂಸ್ಥಾನದ ಏಳ್ಗೆಗಾಗಿಯೂ ದೇಹವನ್ನು ಸವಿಸುತ್ತಿರುವರು.ಇನ್ನು ಮೇಲೆ ನೀವು ಈ ಎರಡೂ ಮನೆತನಗಳು ಒಂದೇ ಎಂದು ತಿಳಿಯತಕ್ಕದ್ದು. ನಾನು ನಮ್ಮ ಸಂರಕ್ಷಣಕ್ಕಾಗಿ ನಿಮ್ಮ ಮಗನನ್ನು ದತ್ತಕ ತೆಗೆದುಕೊಂಡಿದ್ದದೆ, ನಿಮ್ಮನ್ನೇ ತೆಗೆದುಕೊಂಡಿರುವೆನೆಂದು ತಿಳಿದಿರುವೆನು. ನೀವಾದರೂ ಇದರಂತೆ ವರ್ತಿಸಬೇಕು" ಎಂದು ಹೇಳಿ ಶ್ರೀಮತಿ ರುದ್ರಾಬಾಯಿಯವರ ಕಡೆಗೆ ದೃಷ್ಟಿಯನ್ನು ತಿರುಗಿಸಿ" ಮಗಳೇ, ನೀನು ನನ್ನ ಸಲುವಾಗಿ ಸ್ವಲ್ಪವೂ ದುಃಖಿಸಬೇಡ. ನಿನ್ನನ್ನು ರಾಜಪುತ್ರಿಯಂತೆ ಸಾಕಿ ಸಲುಹಿ ಚಚಡೀ ರಾಜಮನೆತನದ ಯೋಗ್ಯ ವರನಿಗೆ ಕೊಟ್ಟು, ನಮ್ಮ ಕರ್ತವ್ಯಭಾರವನ್ನು ಇಳುಹಿಕೊಂಡಿರುತ್ತೇವೆ. ಈಗ ನೀನು ನಿನ್ನ ಸುದೈವದಿಂದ ವೀರಪತ್ನಿಯೂ, ವೀರಮಾತೆಯೂ ಆಗಿರುತ್ತಿ. ನಿನ್ನ ಹಾಗೂ ನಿನ್ನ ಮಕ್ಕಳ ಸಂರಕ್ಷಣಕ್ಕೆ ಶ್ರೀಮಂತರೂ ಸಾಹೇಬರೂ ಕಂಕಣಬದ್ಧರಾಗಿರುತ್ತಾರೆ. ನನ್ನ ತರುವಾಯ ನಿನಗೆ ನನ್ನಂತೆಯೇ ಅಂತಃಕರುಣೆಗಳಾದ ನಿಮ್ಮ ಅತ್ತೆವ್ವನವರು ಇರುತ್ತಾರೆ. ನೀನು ಯಾವದಕ್ಕೂ ಎಷ್ಟು ಮಾತ್ರವೂ ಚಿಂತಿಸದೆ. ಮುಪ್ಪಿನವರಾದ ಸಾಹೇಬರನ್ನು ಕೈಲಾದಮಟ್ಟಿಗೆ

ನೋಡುತ್ತ, ನಿನ್ನ ಪತಿಯ ಶುಶ್ರೂಷಯಲ್ಲಿಯೂ ಮಕ್ಕಳ ಆರೈಕೆಯಲ್ಲಿಯೂ ಸುಖವಾಗಿ ಕಾಲಕಳೆದು, ಶ್ರೀಮಂತರ ವಂಶವನ್ನೂ ನಿಮ್ಮ ಸಾಹೇಬರ ಮನೆತನವನ್ನೂ ಉದ್ಧರಿಸಿ ಕೀರ್ತಿಗೆ ಪಾತ್ರಳಾಗಬೇಕೆಂದು ಹಾರೈಸುವೆನು" ಎಂದು ಹೇಳಿ, ಸಿದ್ಧಲಿಂಗವ್ವನವರನ್ನು ಕುರಿತು "ತಂಗಿ, ನಿನಗೆ ಒಂದೇ ಒಂದು ಮಾತು ಹೇಳುತ್ತೇನೆ, ಚಿತ್ತವಿಟ್ಟು ಲಾಲಿಸಬೇಕು. ನಮ್ಮೆಲ್ಲರ ಸುಖಶಾಂತಿಗಳಿಗೂ ಸೌಭಾಗ್ಯಕ್ಕೂ ಸಾಹೇಬರ ಆಯುರಾರೋಗ್ಯಭಾಗ್ಯಗಳೇ ಮೂಲಕಾರಣವಾಗಿರುವದರಿಂದ ನಮ್ಮೆಲ್ಲರಿಗೆ ಅವರ ಸಂರಕ್ಷಣೆ ಆದ್ಯಕರ್ತವ್ಯವಾಗಿದೆ. ಈಗ ಅವರು ಮುಪ್ಪಿನವರಾದುದರಿಂದ ಹಿಂದಿನಕಿಂತ ಇನ್ನು ಮುಂದೆ ಅವರನ್ನು ಹೆಚ್ಚು ಲಕ್ಷಕೊಟ್ಟು ಕಾಪಾಡತಕ್ಕದ್ದಾಗಿದೆ. ಕಾರಣ ನನ್ನ ನಂತರ ನೀನು ಅವರ ಶೀಲಸ್ವಭಾವಕ್ಕನುಸಾರವಾಗಿ ಆಹಾರವಿಹಾರಗಳಲ್ಲಿಯೂ ಆಚಾರವಿಚಾರಗಳಲ್ಲಿಯೂ ಮುಖ್ಯವಾಗಿ ಅವರ ಪ್ರತಿಯೊಂದು ಕಾರ್ಯದಲ್ಲಿಯೂ ಅವರಿಗೆ ಸೌಖ್ಯವೇ ಉಂಟಾಗುವಂತೆ ದಕ್ಷಳಾಗಿದ್ದರೆ ತೀರಿತು. ನಾನು ಕೃತಕೃತ್ಯಳಾದೆನು. ಇನ್ನು ಹೆಚ್ಚಿಗೆ ಹೇಳಲಾರೆ" ಎಂದು ಹೇಳಿ ಸ್ವಲ್ಪ ಚೇತರಿಸಿಕೊಂಡು, ಎಲ್ಲರನ್ನೂ ಕುರಿತು "ಬಂಧುಬಳಗಕ್ಕೆಲ್ಲ ನನ್ನ ಕಡೆಯ ವಿನಂತಿಯೇನಂದರೆ, ನಾನು ನಿಮ್ಮಲ್ಲಿ ಯಾರಿಗಾದರೂ ಯಾವದೊಂದು ಪ್ರಸಂಗದಲ್ಲಿ ಏನಾದರೂ ಬಿರುಸು ಮಾತಾಡಿದ್ದರೆ, ಅಥವಾ ನಿಮ್ಮ ಮನಸು ನೋಯುವಂತೆ ವರ್ತಿಸಿದ ಹಾಗೆ ಕಂಡು ಬಂದಿದ್ದರೆ ಆ ಬಗ್ಗೆ ಕ್ಷಮೆ ಇರಬೇಕು. ನಾನೇನು ಅಹಿತದೃಷ್ಟಿಯಿಂದ ಒಬ್ಬರ ಕೇಡನ್ನು ಬಯಸಿರುವದಿಲ್ಲ. ಅಂತಹ ಕೆಡಕು ವಾಸನೆಯೂ ನನ್ನಲ್ಲಿಲ್ಲ. ಆದರೂ ನನ್ನಿಂದ ಏನಾದರೂ ಪ್ರಮಾದವಾಗಿದ್ದರೆ ಮಾತ್ರ ಕ್ಷಮಿಸಬೇಕು. ಇಷ್ಟೇ ನನ್ನ ಹೇಳುವಿಕೆಯು! ಇದೇ ನನ್ನ ಕಡೆಯ ಮಾತು" ಎಂದು ಹೇಳುತ್ತ, ಗುರುಪಾದವ್ವನವರ ದುಃಖದ ವೇಗವು ಅತಿಶಯಿಸಲು ಎಲ್ಲರೂ ದಳದಳನೆ ದುಃಖಿಸುವವರಾದರು. ಮಧ್ಯಾಹ್ನದ ೧ ಘಂಟೆ.

ಗುರುಪಾದವ್ವನವರ ಲಿಂಗೈಕ್ಯವೂ ಅಂತ್ಯಯಾತ್ರೆಯೂ

ಈ ಪರಿಸ್ಥಿತಿಯನ್ನು ಕಂಡು ಶಿ.ರಾ।ರಾ।ದುಂಡಯ್ಯ ಶಿವಲಿಂಗಯ್ಯ ನಂದಿ, ಗೋಕಾಕ ಇವರು ದುಃಖಾರ್ತರಾದ ಪರಿವಾರದ ಜನರನ್ನು ಕುರಿತು"ಹೀಗೆ ರೋಗಿಗಳ ಮುಂದೆ ದುಃಖಿಸುವದು ಅಸಂಗತವಾದದ್ದು, ನಿಮ್ಮೆಲ್ಲರ ದುಃಖದಿಂದ ಅವರ ದುಃಖವು ಇಮ್ಮಡಿಸಿ ರೋಗವು ಹೆಚ್ಚುತ್ತದೆ. ನೀವು ಯಾರೂ ಇಲ್ಲಿ ಇರಬೇಡಿರಿ. ಹೊರಗೆ ಹೋಗಿರೆಂ"ದು ಎಲ್ಲರನ್ನು ಸಮಾಧಾನಪಡಿಸಿ, ಅಲ್ಲಿಯ ಗದ್ದಲವನ್ನು ಕಡಿಮೆ ಮಾಡಿದರು. ಹೊತ್ತು ಹೊರಳಿದ ನಂತರ ಅಂದರೆ ೧ ಘಂಟೆಯು ಮೀರಿದನಂತರ ಗುರುಪಾದವ್ವನವರ ಶಕ್ತಿಯು ಮತ್ತಿಷ್ಟು ಕುಂದಿತು. ಇಷ್ಟೊತ್ತಿನ ವರೆಗೆ ಎದ್ದು ಕೂತವರು. ಈಗ ಮಲಗಿಕೊಂಡರು. ಬರಬರುತ್ತ, ಸ್ಮೃತಿಯೂ ಹಾರಹತ್ತಿತು. ಸ್ವಲ್ಪ ಆಯಸವೂ ಆಗುತ್ತಿರುವಂತೆ ಕಂಡು ಬಂದಿತು. ಮಾತುಗಳೂ ಕುಂಠಿತವಾಗುತ್ತ ನಡೆದವು. ಪಂಚಪ್ರಾಣವೆನಿಸುವ ಪಂಚವಾಯುಗಳೂ ಶಿಥಿಲವಾಗಹತ್ತಿದವು. ಅವುಗಳೊಡನೆ ನರಗಳ ಸ್ಫುರಣವೂ ಸ್ತಬ್ಧವಾಗಹತ್ತಿದವು. ಇಂಥ ಅವಸ್ಥೆಯೊಳಗಾದರೂ ಕರೆದರೆ ಓ ಅನ್ನುತ್ತಿದ್ದರು. ಆಗಾಗ್ಗೆ 'ಅಕ್ಕಾ' ಎಂಬದೊಂದು ಶಬ್ದ ಮಾತ್ರ ಹೊರಡುತ್ತಿತ್ತು. ಈ ಸಮಯವನ್ನರಿತು ಗೋಕಾವಿಯ ಶಿ।ರಾ।ರಾ।ದುಂಡಯ್ಯ ಶಿವಲಿಂಗಯ್ಯ ನಂದಿ ಇವರು ಯಾರೂ ಅಳದಂತೆ ವ್ಯವಸ್ಥೆಯನ್ನಿಡಿಸಿ, ವಿಭೂತಿವೀಳೆಯನ್ನು ಮಾಡಿಸಿ, ಧರ್ಮಪದ್ಧತಿಗನುಸಾರವಾಗಿ ಗುರುಪಾದವ್ವನವರಿಗೆ ಶರಣಸಂಸ್ಕಾರವನ್ನು ಕೊಟ್ಟರು. ಈ ಸಂಸ್ಕಾರ ಸಮಯಕ್ಕೆ ಗುರುಪಾದವ್ವನವರಿಗೆ ಗುರುಪಾದದರ್ಶನಲಾಭವಾದದ್ದು ಕೇವಲ ಅವರ ಸುಕೃತವೇ ಸರಿ. (ಮಧ್ಯಾಹ್ನದ ೩ ಘಂಟೆ). ಬಳಿಕ ಈ ಶರಣೆಯರಿಗೆ ಯಾರ ಅಳುವ ಧ್ವನಿಯೂ ಕೇಳಬಾರದ ಹಾಗೆಯೂ ಕೇಳಿದರೆ ಶಿವನಾಮಾವಳಿಯೇ ಕೇಳಿಬರುವಂತೆಯೂ ಅವರ ಅವಸಾನದ ಅವಸ್ಥೆಯನ್ನು

ಅವಲೋಕಿಸುತ್ತಿದ್ದರು. ಕ್ರಮೇಣ ಪಂಚೇಂದ್ರಿಯಗಳ ವ್ಯಾಪಾರವೂ ಕಟ್ಟಾಗಿ ಇದ್ದಷ್ಟು ಪ್ರಾಣಾವಾಯುವು ಊರ್ಧ್ವಮುಖವಾಗಿ ಕುತ್ತಿಗೆಯ ವರೆಗೆ ಬಂದು ನಿಂತುಕೊಂಡಿತ್ತು. ಕೂಡಲೆ ಅದು ಕಂಠಪಟಲವನ್ನೆತ್ತಿ ಬಿಕ್ಕನ್ನುಂಟುಮಾಡಿ ಹೊರಟು ಹೋಗಹತ್ತಿತು. ಆ ಕ್ಷಣವೆ ಇನ್ನು ಸೃಷ್ಟ್ಯವಲೋಕನವು ಸಾಕೆಂದು ನೇತ್ರಪಟಲಗಳು ಮುಚ್ಚಿಕೊಂಡವು. ಕೈಕಾಲುಗಳು ಸೆಳೆದುಕೊಂಡವು. ಶಿವನಾಮೋಚ್ಚರಣೆಯು ಏಕಪ್ರಕಾರವಾಗಿ ನಡೆದೇ ಇತ್ತು. ನೋಡು ನೋಡುವಷ್ಟರಲ್ಲಿ ಗುರುಪಾದಮ್ಮನವರ ಹೃತ್ಪಂಜರದೊಳಗಿನ ಪ್ರಾಣಪಕ್ಷಿಯು ಹಾರಿಹೋಯಿತು. ಮಧ್ಯಾಹ್ನದ ನಾಲ್ಕೂವರಿ ಘಂಟೆ (ತಾರೀಖು ೨೦ನೇ ಅಕ್ಟೋಬರ ಸನ್ ೧೯೧೨ಇಸವಿ ರವಿವಾರ, ಶಕೆ ೧೮೩೪ನೇ ಅಶ್ವೀಜ ಶುದ್ಧ ದಶಮೀ, ವಿಜಯಾದಶಮಿ).

ಪಾಠಕ ಮಹಾಶಯರೇ, ಜಗನ್ನಾಟಕವು ವಿಚಿತ್ರವಾಗಿರುವದು. ಸೃಷ್ಟಿಯ ಒಂದು ಭಾಗದಲ್ಲಿ ಪ್ರಕಾಶವೂ, ಇನ್ನೊಂದು ಭಾಗದಲ್ಲಿ ಕತ್ತಲೆಯೂ ವ್ಯಾಪಿಸಿಕೊಂಡಿರುವಂತೆ ಒಂದು ಕಡೆಯ ಜನಾಂಗವು ಪರಮಾನಂದದೊಳಗಿರುತ್ತಿರಲು ಇನ್ನೊಂದೆಡೆಯ ಜನಸಮೂಹವು ಮಹದ್ದುಃಖದಲ್ಲಿ ಮುಳಿಗೇಳುತ್ತಿರುವದು. ಈ ಹೊತ್ತಿನ ದಿವಸ ಬೆಳಗಾವಿ ಶಹರವು ದಸರೇ ಹಬ್ಬದ ಐಸಿರಿಯಲ್ಲಿ ದಿಮಿದಿಮಿಸುತ್ತಿರಲು, ರಾವಬಹಾದ್ದೂರರವರ ಬಂಗಲೆಯು ಆಕ್ರೋಶದಿಂದ ಆವರಿಸಿಕೊಂಡಿತ್ತು. ಅಷ್ಟೇಕೆ! ಅದೇ ದಿವಸ ಮುಂಜಾವಿನ ೯ ಘಂಟೆಯ ಸಮಯಕ್ಕೆ ಆನಂದಾಶ್ರುಗಳನ್ನು ಸುರಿಸುವ ಬಂಗಲೆಯು ಸಂಜೆಯ ೪ ಘಂಟೆಯ ಸುಮಾರಕ್ಕೆ ದುಃಖಾಶ್ರುಗಳ ಧಾರೆಯಿಂದ ದ್ರವಿಸುವದಾಯಿತು. ಜಗತ್ತಿನ ಆಗುಹೋಗುಗಳು ಯಾರಿಗೂ ತಿಳಿಯವು.

ಪ್ರಾಣ ಹೋದಕೂಡಲೆ ಎಲ್ಲರು ಬಡಬಡಕೊಂಡು ಅಳಹತ್ತಿದರು. ಗುರುದೇವರೂ ಚರಮೂರ್ತಿಗಳೂ ಅಳುವ ಹೆಣ್ಣುಮಕ್ಕಳನ್ನು ಕುರಿತು "ಸುಶಿಕ್ಷಿತರಾದ ನೀವು ಅಶಿಕ್ಷಿತರಂತೆ ಅಳುವದು ಅಯೋಗ್ಯವಾಗಿದೆ. ಗುರುಪಾದಮ್ಮನವರು ಇಹಲೋಕದ ಸರ್ವಸೌಖ್ಯಗಳನ್ನು ಅನುಭೋಗಿಸಿ, ತಮ್ಮ ಎಲ್ಲ ಅಪೇಕ್ಷೆಗಳನ್ನು ಪೂರ್ಣಮಾಡಿಕೊಂಡು, ಶಿವಸಾಯುಜ್ಯವನ್ನು ಪಡೆದರು. ಇನ್ನು ನೀವು ಅವರ ಚಿಂತೆಯನ್ನೇ ಬಿಟ್ಟು ಅವರ ಆತ್ಮಕ್ಕೆ ಶಾಂತಿಯನ್ನೀಯುವ ಬಗ್ಗೆ ಆ ಶಾಂತಮೂರ್ತಿಯಾದ ಪರಮಾತ್ಮನನ್ನು ಪ್ರಾರ್ಥಿಸಬೇಕಲ್ಲದೆ, ಅತ್ತು ಫಲವಿಲ್ಲ"ವೆಂಬದಾಗಿ ಮಾಡಿದ ಉಪದೇಶವನ್ನು ಕೇಳಿ ಸರ್ವರೂ ಸ್ತಬ್ಧರಾದರು. ಧರ್ಮಪದ್ಧತಿಗನುಸಾರವಾಗಿ ಕಚೇರಿಯ ಕೋಣೆಯಲ್ಲಿಯೇ ಉತ್ತರಾಭಿಮುಖವಾಗಿ ಕೂಡ್ರಿಸಿ ಸಾಧ್ವಿಯ ಶವವನ್ನು ವಸ್ತ್ರಾಲಂಕಾರಗಳಿಂದ ಶೃಂಗರಿಸಿದರು. ಉತ್ಸವಕ್ಕಾಗಿ ತಂದಿದ್ದ ಗ್ಯಾಸಲಾಯಿಟಗಳು ಈ ಶವವನ್ನು ಬೆಳಗುವದಕ್ಕೆ ಉಪಯೋಗ ಬಿದ್ದು, ಅವು ತಮ್ಮ ಪ್ರಕಾಶವನ್ನು ತೋರ್ಪಡಿಸದೆ, ಈ ಸುಮಂಗಲೆಯ ಗುಣಾತಿಶಯವನ್ನೇ ಬೆಳಗುತ್ತಿರುವವೆಂದು ತೋರುತ್ತಿದ್ದವು. ಶವದ ಮುಂದೆ ಶ್ರೋತೃಗಳ ಸಮೂಹವು ಸಂದಣಿಸಿ ಕೂತು, ಶ್ರೀ ಸಿಗ್ಗಾವಿಯ ಚರಮೂರ್ತಿಗಳಾದ ಗುರುಸಿದ್ಧಸ್ವಾಮಿಗಳು ಹೇಳುತ್ತಿರುವ ಶಿವಪುರಾಣ ಶ್ರವಣಮಾಡುತ್ತಿದ್ದರು. ಪ್ರಸಿದ್ಧ ಗವಯಿಗಳಾದ ಚನ್ನಬಸಯ್ಯ ಮಲ್ಲಯ್ಯ ಬೊಮ್ಮಿಗಟ್ಟಿ ತಾಲೂಕ ಕಲಘಟಗಿ ಇವರು ಆ ಪುರಾಣವನ್ನು ಓದುವವರೂ, ಚರಮೂರ್ತಿಗಳು ಅದನ್ನು ಒಡೆದು ಹೇಳುವವರೂ ಆಗಿದ್ದರು. ಶಿವಪುರಾಣದೊಂದಿಗೆ ನಡುನಡುವೆ ಶಿವಪಾದಾನುವರ್ತಿಯಾದ ಈ ಮಹಾದೇವಿಯ ಗುಣಕಥನವನ್ನೂ ಮಾಡುತ್ತಿದ್ದರು. ದತ್ತಕ ಸಮಾರಂಭಕ್ಕೆ ಬಂದಿದ್ದ ಶಿ.ರಾ|| ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಊರ್ಫ ಕಂಬಿ ಸಾಕೀನ ಪಾರಿಶ್ವಾಡ ತಾಲೂಕ ಖಾನಾಪುರ, ಸ್ಕೂಲ ಮಾಸ್ತರ ಕಿತ್ತೂರ ಇವರಾದರೂ ಗುರುಪಾದಮ್ಮನವರ ಅಂತ್ಯವಿಧಿಗೆ ಒದಗಿದರು. ಇವರು ಈ ಸಾಧ್ವಿಯ ಸದ್ಗುಣಗಳನ್ನು ಪೂರಾ ಅರಿತವರಾದುದರಿಂದ, ಆಗಿಂದಾಗ ಅವರ ಪರವಾಗಿ ಕೆಲ ಕವಿತೆಗಳನ್ನು ರಚಿಸಿ ಶವದ ಮುಂದೆ ಸಟೀಕವಾಗಿ ಓದಿ ತೋರಿಸಿದರು.

ದಾಟಿ-"ನೀತಿಯಿದಲ್ಲೊ ಪೌರವರಾಯಾ ನೀ ಕರುಣೆಪುರೊ" ಎಂಬ ಶಾಕುಂತಲ ನಾಟಕದೊಳಗಿನ ಪದದಂತೆ

ಮರೆಯಲೆಂತು ನಾ।ಗುರುಪಾದಮ್ಮಾ।ಮರೆಯಲೆಂತು ನಿನ್ನಾ ॥ಪಲ್ಲ॥

ಅರಟಾಳ ಗ್ರಾಮದ।ವರ ರುದ್ರಗೌಡನ।ದೊರೆಸಾನಿ ನಿನ್ನಯ ।ಸರುವ ಗುಣಂಗಳ ॥ಅನುಪಲ್ಲ॥

ಮೇದಿನಿ ಜನರೆಲ್ಲ।ಅದರೊಳು ನಿನ್ನ।ಕೊಂಡಾಡುತಿಹರೇ ॥
ಸಾಧ್ವಿ ಶಿರೋಮಣಿ ।ಭೇದವಿಲ್ಲದೆ ನಿನ್ನ ।ನಾದಿನೀರವ್ವನೊಳ್ ಮೋದದೊಳಿದ್ದೆಮ್ಮಾ ॥೧॥

ಅಕ್ಕರದಿಂದಲಿ।ಅಕ್ಕ ವೀರವ್ವಗೆ।ಮಕ್ಕಳನೊಪ್ಪಿಸಿದ್ಯಾ ॥
ಚಿಕ್ಕ ಬಾಬಾಸಾಬ।ನ್ನಕ್ಕರದುಡಿಯೊಳು।ಇಕ್ಕಿಸಿಕೊಂಡು ನೀ।ಗಕ್ಕನೆ ಪೋದೆಮ್ಮಾ ॥೨॥

ಸಿದ್ದಲಿಂಗವ್ವಗೆ।ಬುದ್ಧಿಮಾತನು ಪೇಳಿ।ಎದ್ದು ನಡೆದಿಯಾ ॥
ಮುದ್ದು ಮಗಳು ನಿನ್ನ।ರುದ್ರಾಬಾಯಿಯ ನೋಡಿ।ಬಿದ್ದು ದುಃಖಿಸಿ ನೋಡಿ। ರುದ್ರಗೌಡಾಂಗನೆ ॥೩॥

ಸೀಮಂತಿನಿ ನಿನ್ನ ನಾಮಾಂಕಿತವನು।ನೇಮದಿಂ ಪೊಗಳುವರೇ॥
ಶ್ರೀಮಂತಣ್ಣಾಸಾಬಾ।ಕೋಮಲಾಂಗಿಯನತಿ।ಕ್ಷೇಮದೊಳಿರಿಸೆಂದು।ಪ್ರೇಮದಿ ಪೇಳಿದಿಯ ॥೪॥

ಶಶಿಮುಖಿ ನಿನ್ನಯ। ವಂಶವನ್ನುದ್ಧರಿಸಿ।ಹೆಸರು ವಾಸಿಯಾದೆಯಾ॥
ದಸರೇ ದಿವಸ ನೀನೀ।ವಸುಧೀ ವಾಸವ ತೊರೆದು।ಬಸವಾ, ಬಸವಾ ಎಂದು ಅಸುವ ನೀಗಿದೆಯಾ ॥೫॥

ಈ ಕವಿತೆಗಳನ್ನೂ ಅವುಗಳಲ್ಲಿ ಅಡಕವಾಗಿದ್ದ ಅವರ ಗುಣಗಳನ್ನೂ ಕೇಳಿ, ಸರ್ವರ ಕಣ್ಣೀರ ಧಾರೆಗಳು ಏಕಪ್ರಕಾರವಾಗಿ ಹರಿದವು. ರಾವಬಹಾದ್ದೂರರವರಂತೂ ಸಣ್ಣ ಕೂಸಿನಂತೆ ಅಳುವವರಾದರು. ಪ್ರಿಯ ಜನರ ವಿಯೋಗ ವ್ಯಥೆಯು ಹೀಗೇ ಇರುವದು. ಧೀರೋದಾತ್ತರಾದ ರಾವಬಹಾದ್ದೂರರವರ ಚಕ್ಷುರಿಂದ್ರಿಯಗಳಿಗೆ ಅಶ್ರುಧಾರೆಯನ್ನಿತ್ತ ಆ ಕವಿತೆಗಳನ್ನು ಕೇಳಬೇಕೆಂದು ವಾಚಕವೃಂದವು ಆತುರಿಸುತ್ತಿರಬಹುದು. ಅವರ ಇಚ್ಛಾಪೂರ್ಣತೆಗಾಗಿ ಈ ಕವಿತೆಗಳು ಇದರ ಕೆಳಗೆ ಅವತರಿಸಲ್ಪಟ್ಟಿವೆ.

ರಾ॥ಬ॥ಅರಟಾಳ ರುದ್ರಗೌಡರವರ ಧರ್ಮಪತ್ನಿಯವರಾದ
ಶ್ರೀಮತಿ ಗುರುಪಾದಮ್ಮನವರು ಶಿವೈಕ್ಯರಾದ ಬಗ್ಗೆ ಪದ್ಯ ನವರತ್ನ

ಕಂದ ಪದ

ಸೃಷ್ಟಿ ಸ್ಥಿತಿ ಲಯ ಕಾರಣ।ನಷ್ಟಾದಶ ಸತ್ಪುರಾಣ ಪೂಜ್ಯಂ ಭವದಾ ।
ಕಷ್ಟನಿವಾರಣನನಿಶದೊ।ಳಿಷ್ಟಾರ್ಥವನಿತ್ತು ಪೊರೆಯಲಾ ಶಿವಲಿಂಗಂ ॥೧॥

ಪರಿಧಾವೀ ಸಂವತ್ಸರ।ವರದಾಶ್ವಿನ ಶುಕ್ಲ ವಿಜಯ ದಶಮಿ ದಿನದೊಳ್ ।
ಗುರುಪಾದಮ್ಮನವರು ತಾಂ।ಹರಹರ ಎಂದೆನುತ ಸಾರ್ದರಾ ಶಿಪದಮಂ ॥೨॥

ಮಕ್ಕಳ ಮೊಮ್ಮಕ್ಕಳ ಮೇ।ಣೆಕ್ಕೆಲದಾ ಬಂಧುವರ್ಗದಕ್ಕರ ತೊರೆದಾ ॥
ದುಕ್ಕದೊಳವರನ್ನಿರಿಸುತೆ। ಮುಕ್ಕಣ್ಣನ ಮನೆಗೆ ಪೋಪುದುಚಿತವೆ ?ಅಕಟಾ ॥೩॥

ಮ.ವಿ.ವೃತ್ತ

ಗುರುಮಂತ್ರಂ ಘನಸೌಖ್ಯಮಾಗೆ ತಮಗಾ ಪುಣ್ಯಾಂಶದಿಂ ಮಂಗಳಾ ।
ಕರ ಸೌಭಾಗ್ಯ ಸುಖಂಗಳೆಲ್ಲ ಪರಿಯಿಂ ಸಂತೋಷದಿಂದಾಗೆ ತಾ ॥
ವಿರುವನ್ನಂ ಗೃಹಲಕ್ಷ್ಮಿಯಂತೆನೆಯುತಂ ಸತ್ಕೀರ್ತಿಯಂ ಪೊಂದುತಂ ।
ಗುರುಪಾದಮ್ಮ ಶಿವೈಕ್ಯರಾದಿರಹರಾ!ಸಚ್ಚಿತ್ತದಿಂ ಶಾಂತಿಯಿಂ ॥೪॥

ಕಂದಪದ್ಯ

ಪರಲೋಕ ಸಾರಲಣುಗನ।ಕೊರತೆಯಿದೊಂದಿರ್ಪುದೆಂದು ದತ್ತಕ ವಿಧಿಯಂ ॥
ಜರುಗಿಸಿ ಜವದೊಳ್ ಹರುಷದಿ।ಹರಪದಮಂ ಸಾರ್ದರಿವರು ನರರೋ ಸುರರೋ ॥೫॥

ಮ.ವಿ.ವೃತ್ತ

ಪತಿಯೇ ದೈವಮಿದೆಂದು ನಂಬಿ ಪತಿಯಂ ಸದ್ಭಾವದಿಂ ಸೇವಿಪಾ ।
ಪತಿವಾಕ್ಯಂ ಪರಮಾತ್ಮವಾಕ್ಯಮೆನುತಂ ತದ್ವಾಕ್ಯಮಂ ಧ್ಯಾನಿಪಾ ॥
ಪತಿಯಾಚಾರ ವಿಚಾರವೆಲ್ಲರೊಳು ತಾಂ ಸದ್ಧರ್ಮದಿಂ ಸೇರುವಾ ।
ಪತಿಯೇ ಸದ್ಗತಿ ಮೂಲಮೆಂಬ ನಿಮಗಾರ್ ಜೋಡಿರ್ಪರೀ ಭೂಮಿಯೊಳ್ ॥೬॥

ಧರಣೀ ಸನ್ನುತ ರುದ್ರಗೌಡ ಮಹನೀಯಾರ್ಧಾಂಗಿನೀ ಮಾನಿನೀ ।
ತರುಣೀ ಸಾಧ್ವಿ ಶಿರೋಮಣಿ ಪ್ರಮಥರಾಶಾನಂದಿನೀ ಕುಂಕುಮಾ ॥
ಭರಣೀ ಸದ್ಗುಣೀ ಸತ್ಯವಾಣಿ ಅರಟಾಳ್ ಸದ್ವಂಶ ಸಂವರ್ಧಿನೀ ।
ಶರಣೇ ನಿಮ್ಮ ಸಮಾನ ಮಾನಿನಿಯರಂ ನಾಂ ಕಾಣೆನೀ ಧಾತ್ರಿಯೊಳ್ ॥೭॥

ಕಂದಪದ್ಯ

ಶರಣರ ಸಾವಿದು ಮರಣದೊ।ಳರಿವುದು ನಿಜಮೆಂಬ ಪಿರಿಯರಾ ನುಡಿಯಂತೆ ॥
ಶರಣೆ ಸು ಗುರುಪಾದಮ್ಮನ।ಮರಣಂ ಕಡು ಚೋದ್ಯಮಾಯ್ತು ಬುಧಜನರಿರವೊಲ್ ॥೮॥

ಕಂದಪದ್ಯ

ವರ ಪುಣ್ಯಪಾಕಬಲದಿಂ। ಭರದಿಂದಿಹ ಸೌಖ್ಯವಾಂತು ಪರಮಂ ಸಾರ್ದಾ ।
ಗುರುಪಾದಾಂಬೆಯರಾತ್ಮ ಕೆ।ಪರಮೋತ್ಕರ ಶಾಂತಿಯಾಗೆ ಶ್ರೀ ಬಸವೇಶಂ ॥೯॥

ಬೆಳಗಾವ — ಬಸವಾರ್ಯ ಶಾಳಾ ಮಾಸ್ತರ

ತಾರೀಖು:೨೦-೧೦-೧೯೧೨ — ಕಿತ್ತೂರ

ಬೆಳಗಾಗುವ ವರೆಗೆ ಶಿವಪುರಾಣವೂ ಈ ದೇವೀಪುರಾಣವೂ ಕೂಡಿಯೇ ನಡೆದವು. ಶ್ರೋತೃಜನರಿಗೆ ನಾವು ಶವದೆದುರಿಗೆ ಕೂತಿರುತ್ತೇವೆಂಬ ಭಾಸವಾಗದೆ, ದೇವಿಯ ಮುಂದೆ ವಿಶ್ರಮಿಸಿರುತ್ತೇವೆಂಬಂತೆ ಭಾಸವಾಗುತ್ತಿತ್ತು. ಬೆಳಗಾದ ಕೂಡಲೆ ಬೆಳಗಾವ ಶಹಾಪುರ ಶಹರಗಳ ಮಠಾಧ್ಯಕ್ಷರೂ ಗುರುಸ್ಥಲದ ಜಂಗಮರೂ ಸೆಟ್ಟರು ಸಾವಕಾರರು ಮೊದಲಾಗಿ ಸಮಸ್ತದೈವದವರೂ ಬಂಗಲೆಗೆ ಬರುವವರಾದರು. ಶವವನ್ನು ಒಯ್ಯುವದಕ್ಕೆ ಬಹು ಸುಂದರವಾದ ವಿಮಾನವನ್ನು ರಚಿಸಿದ್ದರು. ಅದು ವೀರಶೈವ ಮತಾನುಸಾರವಾಗಿ ಲಿಂಗಮುದ್ರೆ, ಬಸವೇಶ್ವರ, ವ್ಯಾಸನತೋಳು ಮುಂತಾದ ಶಿವಲಾಂಛನವುಳ್ಳದ್ದಾಗಿತ್ತು. ರಾವಬಹಾದ್ದೂರವರು ಈ ಲಕ್ಷಣಗಳನ್ನೆಲ್ಲ ಹೇಳಿ ಕಟ್ಟಿಸಿರಲಿಲ್ಲ; ವಿಮಾನ ರಚಿಸುವ ಮತಾನುಯಾಯಿಗಳು ವಿಮಾನಕ್ಕೆ ಇರಲವಶ್ಯವಾದ ಲಕ್ಷಣಗಳನ್ನೆಲ್ಲ ಅವರೇ ತಮ್ಮಿಂದ ತಾವೇ ರಚಿಸಿದ್ದರು. ಯಾಕಂದರೆ ವೀರಶೈವರಿಗೆ ಪುನರ್ಜನ್ಮವೇ ಇಲ್ಲೆಂತಲೂ ಮರಣವೇ ಅವರಿಗೆ ಮುಕ್ತಿಯೆಂತಲೂ, ಮರಣಹೊಂದಿದ ಕೂಡಲೇ ಅಂದರೆ ಶಿವಸಾಯುಜ್ಯವನ್ನು ಹೊಂದಿದೊಡನೆ ಆ ಆತ್ಮವನ್ನು ತೆಗದುಕೊಂಡು ಹೋಗುವದಕ್ಕಾಗಿ ಸಾಕ್ಷಾತ್ ಶಿವನು ತನ್ನ ಪ್ರಮಥ ಗಣಸಮೇತನಾಗಿ ಕೈಲಾಸದಿಂದ ವಿಮಾನ ತೆಗೆದುಕೊಂಡು ಬರುತ್ತಾನೆಂತಲೂ, ಆತನ ಗಣಾಧೀಶ್ವರರೊಳಗೆ ನಂದೀಶ್ವರನೇ ಅಗ್ರಗಣ್ಯನೆಂತಲೂ, ನಂದೀಶ್ವರನು ಬರಬೇಕಾದಲ್ಲಿ ಆತನೊಡನೆ ವ್ಯಾಸಹಸ್ತಸಮೇತವಾದ ನಂದೀಧ್ವಜವು ಇರಲೇಬೇಕೆಂತಲೂ, ಅದರಿಂದ ವಿಮಾನಕ್ಕೆ ಲಿಂಗಮುದ್ರೆ-'ನಂದಿ'-ವ್ಯಾಸಹಸ್ತ ಮೊದಲಾದ ಶಿವಲಾಂಛನಗಳು ಇರಬೇಕೆಂತಲೂ ಅವು, ಇಲ್ಲದೆ ಹೋದರೆ ಶಿವಸಾಯುಜ್ಯವು (ಮೋಕ್ಷವು)ದೊರೆಯುವದಿಲ್ಲೆಂತಲೂ ಲಿಂಗಾಯತ ಜನರ ಭಾವನೆಯದೆ. ಆದುದರಿಂದ ವೀರಶೈವರ ಶವವಾಹಕ ವಿಮಾನಗಳಿಗೆಲ್ಲ ಈ ಲಕ್ಷಣಗಳು ಇದ್ದೇ ತೀರಬೇಕು. ಇವೆಲ್ಲ ಲಕ್ಷಣಗಳು ಗುರುಪಾದವ್ವನವರ ವಿಮಾನಕ್ಕೂ ರಚಿಸಲ್ಪಟ್ಟಿದ್ದವು.

ಬೆಳಗಿನ ೯ ಗಂಟೆಯ ಸುಮಾರಕ್ಕೆ ಗುರುಪಾದವ್ವನವರ ಶವಾರೂಢವಾದ ವಿಮಾನವು ಎತ್ತಲ್ಪಟ್ಟಿತು. ಕೂಡಲೆ ಶರಣೆಯ ವಿಮಾನವು ಬರುತ್ತದೆ;ಕೈಲಾಸದ ಬಾಗಿಲ ತೆರೆಯಿರಿ? ಎಂಬುದನ್ನು ಸೂಚಿಸುತ್ತವೋ ಏನೋ ಎಂಬಂತೆ ಹಲಿಗೆ-ರಣಹಲಿಗೆ-ಸಂಬಾಳ-ಸನಾದಿ-ಬ್ಯಾಂಡ ಮೊದಲಾದ ವಾದ್ಯಗಳೂ ಕಹಳೆ ಕರ್ನಿಗಳೂ ಭೋರ್ಗರೆಯ ಹತ್ತಿದವು. ಮೂವತ್ತೆರಡು (೩೨) ಹಲಿಗೆಯ ಜೋಡುಗಳು ಕೂಡಿದ್ದವು. ಜನಸಮೂಹವು ಅಪರಿಮಿತವಾಗಿದ್ದಿತು. ಶವದ ಕೂಡ ಸರ್ವಪರಿವಾರವೂ ದಾರಿಯುದ್ದಕ್ಕೂ ದುಃಖಾಶ್ರುಗಳನ್ನುದುರಿಸುತ್ತ ಸಾಗುವದಾಗಿತ್ತು. ಶವವು ಸಾಗಿಹೋಗುತ್ತಿರುವಾಗ ರಾ.ಬ॥ಶಿರಗಾವಕರ ಡಾಕ್ಟರರ ಬಂಗಲೆಯ ಈಚೆಗಿರುವ ಫಾರ್ಶೀಜನರ ಬಂಗಲೆಯ ಮುಂದೆ ಫೋಟೋ ತೆಗೆದುಕೊಳ್ಳಲ್ಪಟ್ಟಿತು. ಮತ್ತು ಈ ಮೊದಲು ಶವವನ್ನು ಕೂಡಿಸಿದಾಗ್ಗೆ ಕಚೇರಿ ಕೋಣೆಯಲ್ಲಿಯೂ, ಶವವನ್ನೆತ್ತುವ ಸಮಯಕ್ಕೆ ಬಂಗಲೆಯ ಮುಂದೆಯೂ- ಹೀಗೆ ಎರಡುಸಾರೆ ಫೋಟೋ ತೆಗೆದುಕೊಳ್ಳಲ್ಪಟ್ಟಿತ್ತು. ವಿಮಾನವು ಹಾಗೆಯೇ ಪೂರ್ವಾಭಿಮುಖವಾಗಿ ಊರಕಡೆಗೆ

ಸಾಗುತ್ತ, ರಾ.ಬ||ಶಿರಗಾವಕರ ಡಾಕ್ಟರರ ದವಾಖಾನೆಯ ಹತ್ತರ ಬಲಕ್ಕೆ ಹೊರಳಿ, ಅಲ್ಲಿಂದ ಬೋಗಾರ ಅಗಸಿಯಿಂದ ಶಹರದೊಳಗೆ ಪ್ರವೇಶಿಸಿ, ಹನ್ನೆರಡು ಗಡಗಡೀ ಬಾವಿಯ ಹತ್ತರ ಪುನಃ ಬಲಕ್ಕೆ ಹೊರಳಿ ಮಾರುತಿ ಗಲ್ಲಿಯ ಮಾರ್ಗವಾಗಿ ಶಾಂತವಾಗಿ ಸಾಗಿಹೋಗುತ್ತಿತ್ತು. ವಿಮಾನವು ಎತ್ತರವಾಗಿ ಕಟ್ಟಿದುದರಿಂದಲೂ ಸೋನೇರಿಬಣ್ಣದ ಕಳಸದಿಂದಲೂ ಚಿತ್ರವಿಚಿತ್ರವಾದ ಕಾಗದಗಳಿಂದಲೂ ವಸ್ತ್ರಗಳಿಂದಲೂ ಶೃಂಗರಿಸಿದುದರಿಂದ, ಅದು ರಥವೇ ಸಾಗಿಬರುತ್ತಿರುವಂತೆ ಕಂಡುಬರುತ್ತಿತ್ತು. ವಿಮಾನದ ಮೇಲ್ಭಾಗಕ್ಕೆ ತೂಗುಗಟ್ಟಿದ ಕಾಗದದ ವ್ಯಾಸನ ತೋಳು ದೂರದಿಂದಲೇ ಕಾಣುತ್ತಿತ್ತು. ಭೋರ್ಗರೆಯುತ್ತಿದ್ದ ವಾದ್ಯಗಳ ಧ್ವನಿಯನ್ನು ಕೇಳಿ, ಮನೆಮನೆಯ ಜನರು ಒಳಗಿಂದ ಹೊರಗೆ ಓಡಿಬಂದು, ವಿಮಾನವು ಸಾಗಿಹೋಗುವವರೆಗೂ ನೋಡುತ್ತ ನಿಲ್ಲುವವರಾಗಿದ್ದರು.

ಮಾರುತೀ ಗಲ್ಲಿಯಲ್ಲಿ ಬಹುಶಃ ಬ್ರಾಹ್ಮಣರ ವಸತಿಯೇ ವಿಶೇಷ. ಅವರು, ವಿಮಾನಕ್ಕೆ ಕಟ್ಟಿದ ವ್ಯಾಸನ ತೋಳನ್ನು ಕಂಡು, ಇದನ್ನು ರುದ್ರಗೌಡರು ವಿಮಾನಕ್ಕೆ ಬೇಕಂತೇ ಕಟ್ಟಿಸಿ, ನಮ್ಮ ಓಣಿಯಲ್ಲಿ ಮುದ್ದಾಮ ಹಾಯಿಸಿ ಒಯ್ಯುತ್ತಾರೆಂದು ತಮ್ಮತಮ್ಮೊಳಗೆ ಗುಜುಗುಜು ಮಾತಾಡುವವರಾಗಿದ್ದರು. ವಿಮಾನವು ಮಾರುತೀ ಗಲ್ಲಿಯನ್ನು ಕ್ರಮಿಸಿ, ಮರಾಠಿ ಗರ್ಲಸ್ಕೂಲಿನ ವರೆಗೆ ಸಾಗಿ, ಅಲ್ಲಿಂದ ಎಡಕ್ಕೆ ಹೊರಳಿ, ಗಣಪತಿಗಲ್ಲಿಯ ಮಾರ್ಗವಾಗಿ ಉತ್ತರಕ್ಕೆ ಸಾಗುತ್ತಲಿತ್ತು. ಇಲ್ಲಿ ಜನಸಮೂಹವು ಗಣನಾತೀತವಾಗಿ ಕೂಡಿದ್ದು, ಓಣಿಯುದ್ದಕ್ಕೂ ಜನಪ್ರವಾಹವೇ ಹರಿಯುತ್ತಿರುವಂತೆ ಕಾಣುತ್ತಲಿತ್ತು. ವಿಮಾನಾರೂಢವಾಗಿದ್ದ ಸಾಧ್ವಿಯ ಶವವನ್ನು ಕಂಡು ಕೆಲ ಸ್ತ್ರೀಯರು "ಶರಣೇ, ನಿನ್ನ ಪುಣ್ಯಕ್ಕೆ ಎಣೆಯುಂಟೇ? ಲೋಕಪ್ರಖ್ಯಾತರಾದ ರಾವಬಹಾದ್ದೂರ ರುದ್ರಗೌಡರ ಪತ್ನಿಯಾಗಿ, ಅನೇಕ ಸೌಖ್ಯಗಳನ್ನನುಭೋಗಿಸಿ, ಅಹುದೆನಿಸಿಕೊಂಡು ಆ ಮಹಾರಾಯರ ಕಯ್ಯಿಂದ ಸಮಾಧಿಸ್ಥಳಾಗುವ ನಿನ್ನ ಸೌಭಾಗ್ಯವು ಎಲ್ಲರಿಗೂ ಲಭಿಸುವದುಂಟೆ?" ಎಂದು ಗುರುಪಾದಮ್ಮನವರ ಗುಣಾನುವಾದ ಮಾಡುವವರಾಗಿದ್ದರು. ಮುತ್ತೈದೆಯರಾದ ಬ್ರಾಹ್ಮಣ ಮೊದಲಾದ ಸ್ತ್ರೀಯರು "ಸುಮಂಗಲೆಯೇ, ನಿನ್ನಂತೆ ನಮಗೆ ಮುತ್ತೈದೆತನದ ಮರಣವೇ ಒದಗಲಿ" ಎಂದು ಪದ್ಧತಿಯ ಮೇರೆಗೆ ವಿಮಾನದ ಕಡೆಗೆ ಮೋರೆಯನ್ನೆತ್ತಿ ನಮಸ್ಕರಿಸುತ್ತಿದ್ದರು. ಮತ್ತೆ ಕೆಲವರು "ದತ್ತಕ ವಿಧಾನವು ದಸರೆಯ ದಿವಸವೇ ತೀರಬೇಕೆಂದರೇನು? ಅದನ್ನು ಕಣ್ಣಾರೆ ಕಂಡು ಆ ಹೊತ್ತೇ ಈ ಶರಣೆಯ ಮರಣವು ಒದಗಬೇಕೆಂದರೇನು? ಇದು ಬಲು ವಿಚಿತ್ರವು!! ನಿಜವಾಗಿ ಇವರು ತಮ್ಮ ಪತಿಯಂತೆ ದೇವಾಂಶ ಸಂಭೂತರೇ" ಎಂದು ಇವರನ್ನು ಪ್ರಶಂಸಿಸುವವರಾಗಿದ್ದರು. ಬಹು ದೀರ್ಘವಾದ ಸ್ಮಶಾನಯಾತ್ರೆಯ ದಟ್ಟಣೆಯನ್ನೂ ರಥಾಕಾರವಾಗಿ ರಚಿಸಿದ ವಿಮಾನವನ್ನೂ ಕಂಡು, ಜನರು ಗ್ರಾಮದೇವತೆಯ ಯಾತ್ರೆಯನ್ನು ನೆನಪಿಗೆ ತರುವವರಾಗಿದ್ದರು. ವಿಮಾನವು ಹಾಗೆಯೇ ಸಾಗುತ್ತ ಕಾಗತೀ ಅಗಸಿಯಿಂದ ಊರ ಹೊರಬಿದ್ದು ಮೆ||ಕಮಿಶನರ ಸಾಹೇಬ ಬಹದ್ದೂರರವರ ಬಂಗಲೆಯ ಹತ್ತರ ಹಾಯ್ದು ನೆಟ್ಟಗೆ ಉತ್ತರಕ್ಕೆ ತೆರಳಿ ಶಿ|ರಾ|ರಾ|ಸಿದ್ಧಯ್ಯ ಗದ್ದಿಗಯ್ಯ ಹೊಸಮಠ ಬೆಳಗಾವ ಇವರ ಮಠದ ಸ್ಥಳವಾದ (ರುದ್ರಭೂಮಿಗೆ) ಸ್ಮಶಾನಕ್ಕೆ ಬರುವದಾಯಿತು. ಅಲ್ಲಿ ವಿರಚಿಸಿದ ವೀರಶೈವ ಲಕ್ಷಣ ಪರಿಪೂರ್ಣತವಾದ ಕ್ರಿಯಾಸಮಾಧಿಯಲ್ಲಿ ಗುರುಪಾದಮ್ಮನವರ ಶವವನ್ನು ಗುರುಹಸ್ತದಿಂದ ಧರ್ಮಪದ್ಧತಿಗನುಸಾರವಾಗಿ ದಫನಗೊಳಿಸಿ, ಕೂಡಿದ ಅನೇಕ ಜನ ಜಂಗಮರಿಗೂ ಬಡಬಗ್ಗರಿಗೂ ಭಿಕ್ಷುಕರಿಗೂ ತಂಬಿಗೆ-ತಾಬಾಣ-ವಸ್ತ್ರ-ದಕ್ಷಿಣೆಗಳನ್ನು ಬಹು ಉದಾರವಾಗಿ ದಾನಧರ್ಮ ಮಾಡಿ, ಸ್ಮಶಾನಯಾತ್ರೆಯಿಂದ ಸರ್ವರು ಮನೆಗೆ ತೆರಳುವವರಾದರು. ತಾರೀಖು ೨೧ನೇ ಅಕ್ಟೋಬರ್ ಸನ್ ೧೯೧೩ ಇಸವಿ ಸೋಮವಾರ ಮಧ್ಯಾಹ್ನದ ೧ ಘಂಟೆ.

ಈ ಸ್ಮಶಾನಯಾತ್ರೆಗೆ ಸುಮಾರು ಹತ್ತು ಹನ್ನೆರಡು ಸಾವಿರ ಜನರು ಕೂಡಿದ್ದರು. ಹಿಂದಿನ ರಾತ್ರಿಯಲ್ಲಿ ರಚಿಸಿದ ಆ ಪದ್ಯನವರತ್ನವೆಂಬ ಕವಿತೆಗಳನ್ನು ಶಿ|ರಾ|ರಾ|ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಊರ್ಫ

ಕಂಬಿ ಸಾಕೀನ ಪಾರಿಶವಾಡ, ತಾಲೂಕ ಖಾನಾಪುರ, ಜಿಲ್ಲಾ ಬೆಳಗಾವ, ಸ್ಕೂಲ ಮಾಸ್ತರ ಕಿತ್ತೂರ ಶಾಳಾ ನಂಬರ ೧-ಇವರು ಬಹು ಜನರ ಅಪೇಕ್ಷೆಯ ಮೇರೆಗೆ ಮುದ್ರಿಸಿ ಆ ಸ್ಮಶಾನಯಾತ್ರೆಯಲ್ಲಿ ಹಂಚಿದರು. ಇವರು ಆ ಪದ್ಯರತ್ನಗಳನ್ನಷ್ಟೇ ಹಂಚಿದರಂತಲ್ಲ. ಆ ಪದ್ಯರತ್ನಗಳೊಂದಿಗೆ ಗುರುಪಾದವ್ವನವರ ಗುಣರತ್ನಗಳನ್ನೂ ಹಂಚಿದರೆಂದು ಹೇಳಬಹುದು.

ಗುರುಪಾದವ್ವನವರ ಸ್ವರೂಪ-ಗುಣವರ್ಣನ

ಇಲ್ಲಿ ಈ ಸಾಧ್ವಿಯವರ ಸ್ವರೂಪ-ಗುಣಕಥನವನ್ನು ಸ್ವಲ್ಪಾದರೂ ಮಾಡದೆ ನನ್ನಿಂದ ಇರೋಣವಾಗದು. ಹಿಂದೆ ಬರೆದ ಪದ್ಯಗಳು ಇವರ ಸದ್ಗುಣಗಳನ್ನು ಸಾರುತ್ತಿದ್ದರೂ ಇನ್ನೂ ಅಷ್ಟು ಪ್ರಸ್ತಾಪಿಸಿ ಕೃತಾರ್ಥನಾಗುವೆನು. ಇವರು ದೇಹದಿಂದ ಸದೃಢರಿದ್ದು ಗೌರವರ್ಣದ ಸುಂದರಾಂಗಿಯರಾಗಿದ್ದರು. ನೇತ್ರಗಳು ವಿಶಾಲವಾಗಿದ್ದು, ಸರ್ವೇಂದ್ರಿಯಗಳಿಂದ ಸಲ್ಲಕ್ಷಣಭರಿತರಾಗಿದ್ದರು. ಇವರ ಸರಳ ಸ್ವಭಾವವು ಸುಪ್ರಸನ್ನವಾದ ಮುಖಮುದ್ರೆಯಲ್ಲಿ ಸ್ಪಷ್ಟವಾಗಿ ಮೂಡಿ ತೋರುತ್ತಿತ್ತು. ಇವರು ಪತಿಭಕ್ತಿ ಪರಾಯಣರೂ ಪರೋಪಕಾರಮತಿಯುಳ್ಳವರೂ ಇದ್ದದರಿಂದ ಸರ್ವರು ಇವರಲ್ಲಿ ಆದರ ಬುದ್ಧಿಯುಳ್ಳವರಾಗಿದ್ದರು. ಕುಲೀನ ಸ್ತ್ರೀರತ್ನಗಳಲ್ಲಿ ಇರಲವಶ್ಯವಾಗಿದ್ದ ಎಲ್ಲ ಸದ್ಗುಣಗಳೂ ಸಲ್ಲಕ್ಷಣಗಳೂ ಇವರಲ್ಲಿ ಪರಿಪೂರ್ಣವಾಗಿದ್ದವು. ಇವರು ದೇವ ಗುರು ಜಂಗಮರಲ್ಲಿ ಬಹು ಭಕ್ತಿಯುಳ್ಳವರೂ ಪಾಪಭೀರುಗಳೂ ಆಗಿದ್ದರು. ಇವರ ಮನಸು ಬಹುದೊಡ್ಡದಾಗಿತ್ತು. ಕಂಡ ಮಾತ್ರವೆ ಆನಂದವಾಗುವಂತಹ ಇವರ ಮುಖಮುದ್ರೆಯಿತ್ತು. ಇವರು ಧಾರವಾಡ ಜಿಲ್ಲೆಯ ತಾಲೂಕ ಬಂಕಾಪುರ ಗ್ರಾಮದ ಶರಣಮನೆತನದವರಾದ ಸಂಗನಬಸಪ್ಪ ಸೆಟ್ಟರ್ ಮಕ್ಕಳೆಂಬ ಸಂಗತಿಯು ವಾಚಕರಿಗೆ ಗೊತ್ತಿರಬಹುದು. ಇವರು ಬಡಬಗ್ಗರ ಮೇಲೂ ಒಳ್ಳೇ ನಿಷ್ಠೆಯುಳ್ಳವರಾಗಿದ್ದರು. ಸಾರಾಂಶ, ಇವರು ಮಾದರಿ ತೆಗೆದುಕೊಳ್ಳತಕ್ಕಂಥ ಶೀಲಸ್ವಭಾವವುಳ್ಳ ಸಭ್ಯಸ್ತ್ರೀಯರಾಗಿದ್ದರು. ಕೈಯೊಳಗೆ ಕೆಲಸವಿಲ್ಲದೆ ಕೂಡ್ರುವದು ಇವರಿಗೆ ಬೇಸರವೆನಿಸುತ್ತಿತ್ತು. ಯಾವಾಗಲು ಒಂದಿಲ್ಲೊಂದು ಕೆಲಸದಲ್ಲಿ ತೊಡಗೇ ಇರುತ್ತಿದ್ದರು. ಮರಣಕಾಲಕ್ಕೆ ಇವರ ವಯಸ್ಸು ಸುಮಾರು ೪೫ ವರ್ಷದ್ದಾಗಿತ್ತು. ಇಷ್ಟು ವಯಸ್ಸಿನವರಾಗಿದ್ದರೂ ಇವರ ಮೈಕಟ್ಟು ಇನ್ನೂ ಭದ್ರವಾದದ್ದೂ ಇಂದ್ರಿಯಗಳು ಸಬಲವಾದವುಗಳೂ ಇದ್ದವು. ಸಜ್ಜನರ ಗುಣಗಳನ್ನು ಎಷ್ಟು ಶ್ಲಾಘಿಸಿದರೂ ಸ್ವಲ್ಪವೇ ಇರುವದು.

ಇವರು ಮಹಾಪುಣ್ಯಶಾಲಿಗಳೆಂದು ಹೇಳಲಿಕ್ಕೆ ಅಡ್ಡಿಯಿಲ್ಲ ಯಾಕಂದರೆ "ಶರಣರ ಸತ್ವವು ಮರಣದಲ್ಲಿ ತಿಳಿಯುವದು" ಎಂಬ ಗಾದೆಯ ಮಾತಿನಂತೆ ಇವರ ಮರಣದ ಕಾಲ ಕ್ರಮವನ್ನು ಪರ್ಯಾಲೋಚಿಸಿದರೆ ಸಾಕು, ಈ ಸಾಧ್ವಿಯು ನಿಜವಾಗಿ ಶರಣೆಯೆಂತಲೇ ಕಂಡುಬರುವದು. ಪೌತ್ರನನ್ನು ದತ್ತಕವಿಧಾನದಿಂದ ಸ್ವೀಕರಿಸಬೇಕೆಂಬ ಅವರ ಪ್ರಬಲವಾದ ಅಪೇಕ್ಷೆಯು ಸ್ಮೃತಿಯಿರುವಾಗಲೇ ಪೂರ್ಣವಾಯಿತು. ಮರಣ ಸಮಯಕ್ಕೆ ದತ್ತಕ ಕಾರ್ಯದುದ್ದಿಶ್ಯವಾಗಿ ಬಂದ ಆಪ್ತೇಷ್ಟ ಬಂಧುಬಳಗದ ಭೆಟ್ಟಿಯಾಯಿತು. ಮನಸಿನೊಳಗಿನ ಮಾತುಗಳನ್ನೆಲ್ಲ ಅಂತಃಕರುಣವುಳ್ಳವರಿಗೆ ತಿಳಿಸುವಂತೆ ಕಡೆತನಕ ಇವರಿಗೆ ಸ್ಮೃತಿಯಿತ್ತು. ಹಿಂದೂ ಜನರ ಪ್ರಶಸ್ತ ಮುಹೂರ್ತವೂ ಪ್ರಸಿದ್ಧ ಹಬ್ಬವೂ ಎನಿಸಿದ ವಿಜಯದಶಮಿ ಮುಹೂರ್ತವು ಇವರ ಮರಣ ಸಮಯಕ್ಕೆ ಸಾಧಿಸಿತು. ಮೇಲಾಗಿ ಶಿವಪಾರ್ವತಿಯರಿಗೆ ಸಂತೋಷಪ್ರದವಾದ ಸೋಮವಾರ ದಿವಸ ಇವರ ಸ್ಮಶಾನಯಾತ್ರೆಯಾಯಿತು. ಅಂತ್ಯಕಾಲಕ್ಕೆ ಶರಣ ಸಂಸ್ಕರಣವನ್ನೂ ಹೊಂದಿದರು. ಇವೆಲ್ಲ ಪುಣ್ಯವಂತರಿಗೇ ಲಭ್ಯವಲ್ಲದೆ ಇತರರಿಗೆ ದೊರೆಯಲಾರವು. ಇನ್ನು ಈ ಶರಣೆಯರ ಆತ್ಮಕ್ಕೆ ಆ ಅಂತರ್ಯಾಮಿಯಾದ

ಪರಮೇಶ್ವರನು ಶಾಂತಿಯನ್ನೀಯಲೆಂದು ಪ್ರಾರ್ಥಿಸಿ, ಅವರು ಸಮಾಧಿಸ್ಥರಾದ ಸಮಾಚಾರವನ್ನು ಇಲ್ಲಿಗೆ ಸಮಾಪ್ತಿಗೊಳಿಸುವೆನು.

ಛಿದ್ರಾನ್ವೇಷ

ಗುರುಪಾದೆವ್ವನವರ ಶವವನ್ನು ಕೂಡ್ರಿಸಿದ ವಿಮಾನಕ್ಕೆ ವ್ಯಾಸನ ತೋಳನ್ನು ಕಟ್ಟಿದ ಬಗ್ಗೆ, ದಫನಕಾರ್ಯ ತೀರಿದ ೨-೩ ದಿವಸಗಳ ಮೇಲೆ ಬೆಳಗಾವಿಯ ಬ್ರಾಹ್ಮಣರು ಕೋಲಾಹಲವನ್ನೆಬ್ಬಿಸಿದರು. ಅವರಲ್ಲಿ ಪಾಂಡುರಂಗ ಸದಾಶಿವ ಛತ್ರೆ ಮೊದಲಾದ ಬ್ರಾಹ್ಮಣರು, ನಮ್ಮ ಜನಾಂಗದ ಅಪಮಾನವಾಗಬೇಕೆಂಬ ಉದ್ದೇಶದಿಂದ ರಾ.ಬ॥ಅರಟಾಳ ಸಾಹೇಬರು, ಶವವನ್ನು ಕೂಡ್ರಿಸಿದ ವಿಮಾನಕ್ಕೆ ವ್ಯಾಸನ ತೋಳನ್ನು ಕಟ್ಟಿಸಿ ಮುದ್ದಾಮ ನಮ್ಮ ಬ್ರಾಹ್ಮಣರ ಓಣಿಗಳಲ್ಲಿ ಹಾಯಿಸಿ ತೆಗೆದುಕೊಂಡು ಹೋದರೆಂತಲೂ, ಇದು ನಮ್ಮೆಲ್ಲರಿಗೆ ಬಹಳೇ ಅಪಮಾನಕಾರಕ ಸಂಗತಿಯಾಗಿರುವದೆಂತಲೂ, ವ್ಯಾಸನ ತೋಳನ್ನು ಕಟ್ಟಿ ಸಾರ್ವಜನಿಕ ರಸ್ತೆಯ ಮೇಲೆ ಹಾಯಿಸಬಾರದೆಂದು ಸರಕಾರ ಠರಾವವಾಗಿದ್ದರೂ ಕೂಡ ಇವರು ಸರಕಾರೀ ಆಫೀಸರರು ಕೂತುಕೊಂಡು ಸರಕಾರೀ ಹುಕುಮಿಗೆ ಅವಮಾನ್ಯವಾಡಿದರೆಂತಲೂ, ಈ ಬಗ್ಗೆ ವಿಚಾರಾಗಿ ಅವರ ಮೇಲೆ ಫೌಜದಾರಿ ಖಟ್ಲೇ ನಡಿಸಲಿಕ್ಕೆ ನಮಗೆ ಪರವಾನಗಿ ಕೊಡಬೇಕೆಂತಲೂ, ಹಾಗೆ ಮಾಡಲಿಕ್ಕೆ ಬಾರದಂತಿದ್ದರೆ ಸರಕಾರೀ ಹುಕುಮಿಗೆ ಅಮಾನ್ಯ ಮಾಡಿದ ಬಗ್ಗೆ ತಾವಾದರೂ ಅವರ ಮೇಲೆ ಖಟ್ಲೇ ಮಾಡಬೇಕೆಂತಲೂ ಸರಕಾರಕ್ಕೆ ಅರ್ಜಿ ಮಾಡಿದರು. ಮತ್ತು "ರುದ್ರಗೌಡರು ಚಲೋ ಪೇಚಿನೊಳಗೆ ಸಿಕ್ಕರು. ಇನ್ನು ಹ್ಯಾಗೆ ಪಾರು ಆಗುತ್ತಾರೆ. ಆಗಲಿ ನೋಡೋಣ" ಎಂದು ಜನರೊಳಗೆ ಬೆದರಿಕೆಯ ಮಾತುಗಳನ್ನು ಹಬ್ಬಿಸಿದರು. ತಾವು ಮಾಡಿದ ಅರ್ಜಿಯ ನಮೂನೆಗಳನ್ನು ಛಾಪಿಸಿ ಹಂಚಿದರು. ಮತ್ತು ಅನೇಕ ವರ್ತಮಾನ ಪತ್ರಗಳಲ್ಲಿ ಈ ಸಂಗತಿಯನ್ನು ಪ್ರಕಟಿಸಿ, ವೀರಶೈವ ಜನಾಂಗಕ್ಕೆ ಬೆದರಿಕೆಯನ್ನುಂಟು ಮಾಡಿದರು. ಆದರೆ ನ್ಯಾಯಮಾರ್ಗದಿಂದ ರಾಷ್ಟ್ರಕ್ಕೆ ರಾಷ್ಟ್ರವನ್ನೇ ದಂಗುಪಡಿಸುವಂಥ ದರ್ಪವುಳ್ಳ ರಾವಬಹಾದ್ದೂರ ರುದ್ರಗೌಡರು ಈ ಹಾರುವರ ಛಿದ್ರಾನ್ವೇಷಕ್ಕೆ ಹೆದರುವರೆ!

ಅರ್ಜಿಯಾಗುವ ಪುರುಸೊತ್ತಿಲ್ಲದೆ "ರುದ್ರಗೌಡರ ಮೇಲೆ ವಿಮಾನಕ್ಕೆ ವ್ಯಾಸನ ತೋಳನ್ನು ಕಟ್ಟಿದ ಬಗ್ಗೆ ಖಟ್ಲೆಯಾಗುವದು" ಎಂದು ಒಂದಿದ್ದರೆ, ನೂರೆಂಟು ಸುಳ್ಳು ಸುದ್ದಿಗಳು ಸುತ್ತಲೂ ಕರ್ನಾಟಕದಲ್ಲೆಲ್ಲ ಹರಡಿಕೊಂಡವು. ರಾವಬಹಾದ್ದೂರವರು ಶಾಂತವಾದ ಗಂಭೀರತನದಿಂದ ಸ್ತಬ್ಧರಾಗಿರಲು, ಹಾರುವರೆಲ್ಲ ದೂರಿಂದ ದೂರೇ ಹೊರಗೆ ಹಾರಾಡತೊಡಗಿದರು. ವೀರಶೈವರು ಚಿಂತೆಗೊಳಗಾದರು. "ಇದರೊಳಗೆ ರಾವಬಹಾದ್ದೂರರವರಿಗೆ ಸ್ವಲ್ಪಾದರೂ ತಗಲದೆ ಹೋಗದು. ಪ್ರಸಂಗ ಮಾತ್ರ ಕಠಿಣವದೆ. ದೊಡ್ಡವರಾದರೂ ಕಾಯದೆ ಯಾರ ಮನೆಯದು? ಆಡಾಡುತ್ತ ಗುದುಮುರಿಗೆಯೊಳಗೆ ಬಿದ್ದರು" ಎಂದು ಪ್ರತಿಷ್ಠಿತರಾದ ನಮ್ಮ ಜನರೇ ನಮಗೆ ಹೇಳುತ್ತಿರುವಾಗ ನಾವು ಇನ್ನಾರ ಮಾತನ್ನು ನಂಬಿ ಸಮಾಧಾನ ಪಡಬೇಕು? ಒಟ್ಟಿಗೆ ಏನೇ ಆಗಲಿ ಪ್ರಸಂಗವು ಹೇಗೆ ಪಾರಾಗುತ್ತದೋ ಎಂದು ವೀರಶೈವ ಜನಾಂಗವು ಎತ್ತೆತ್ತಲೂ ಹೆದರಿಕೊಂಡಿತ್ತು. ಅದಕ್ಕೆ "ನೀವೇಕೆ ಹೆದರುತ್ತೀರಿ? ಇದರೊಳಗೇನಾಗುತ್ತದೆ? ಎಂದಿಗಾದರೂ ಬ್ರಾಹ್ಮಣರು ಹೀಗೆಯೇ ಮಾಡುತ್ತ ಬಂದಿರುತ್ತಾರೆ. ಜನ್ಮಾರಭ್ಯ ಆಮರಣ ನಮಗೂ ಅವರಿಗೂ ಗಂಟು ಬಿದ್ದದ್ದೇ ಅದೆ. ನಾನು ನ್ಯಾಯಕ್ಕೆ ಬಡದಾಡುವವನು, ಅವರು ಅನ್ಯಾಯಕ್ಕೆ ಬಡದಾಡುವವರು! ಯಾರೂ ಎಳ್ಳಷ್ಟು ಚಿಂತೆ ಪಡಲಾಗದು" ಎಂದು ತಮ್ಮ ಅನುಯಾಯಿಗಳಿಗೆ ರಾವಬಹಾದ್ದೂರರವರು ಸಮಾಧಾನ ಹೇಳುತ್ತ ಬಂದರು.

ಬ್ರಾಹ್ಮಣರಿಗೆ ಇಂಥ ತಿಲಮಾತ್ರ ಕೊಂಕು ಸಿಕ್ಕರೆ ಸಾಕು. ಕಡ್ಡಿ ಇದ್ದದ್ದನ್ನು ಗುಡ್ಡಾಮಾಡಿ ಪ್ರಕರಣ ಬೆಳೆಸುವ ಪರಿಪಾಠವು ಅವರಲ್ಲಿ ಕಡೆಗೂ ಉಂಟು. ವೀರಶೈವರ ವಿಮಾನಗಳಿಗೆ ವ್ಯಾಸನತೋಳು ಕಾಗದದಿಂದ

ಕತ್ತರಿಸಿ ಹಚ್ಚುವ ಪರಿಪಾಠವು ಎಲ್ಲ ಕಡೆಗೂ ಉಂಟೇ ಉಂಟು. ಅದರಂತೆ ರಾವಬಹಾದ್ದೂರರವರ ಪತ್ನಿಯವರ ವಿಮಾನಕ್ಕೂ ಹಚ್ಚಲ್ಪಟ್ಟಿತ್ತು. ಇದೇ ಒಂದು ದೊಡ್ಡ ತಪ್ಪು ಬ್ರಾಹ್ಮಣರಿಗೆ ಸಿಕ್ಕಂತಾಯಿತು. ಲಿಂಗಾಯತರಲ್ಲಿ ಈ ಪರಿಪಾಠವಿದ್ದದ್ದು ಬ್ರಾಹ್ಮಣರಿಗೆ ಗೊತ್ತಿದ್ದರೂ ರಾ.ಬ॥ಅರಟಾಳ ಸಾಹೇಬರ ಮೇಲೆ ಒಂದಿಲ್ಲೊಂದು ಪೇಚು ತರಬೇಕೆಂಬ ಕ್ಷುದ್ರ ಬುದ್ಧಿಯಿಂದಲೇ ಅವರು ಈ ಅರ್ಜಿ ಮಾಡಿದ್ದು. ಅದೇ ವ್ಯಾಸಹಸ್ತವನ್ನು ಮತ್ತೆ ಯಾರಲ್ಲಾದರು ವಿಮಾನಕ್ಕೆ ಹಚ್ಚಿದ್ದರೆ ಅರ್ಜಿಯ ಚಕಾರ ಶಬ್ದವು ಹೊರಡುತ್ತಿದ್ದಿಲ್ಲ. ಇಷ್ಟೇ ಅಲ್ಲ, ಆ ವ್ಯಾಸನ ತೋಳಿನ ಕಲ್ಪನೆಯೇ ಯಾರ ಕನಸು ಮನಸಿನಲ್ಲಿ ಬರುತ್ತಿದ್ದಿಲ್ಲ. ತಮ್ಮ ಎಲ್ಲ ಕಪಟಜಾಲಗಳೊಳಗಿಂದ ಉಡ್ಡಾಣಗೆಯ್ಯುತ್ತ ಪಾರಾಗಿ ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದುತ್ತ ಜಯಶಾಲಿಯಾದ ರಾ.ಬ॥ಅರಟಾಳ ಸಿಂಹಶ್ರೇಷ್ಠವನ್ನು ಇನ್ನಾವ ಜಾಲದಲ್ಲಾದರೂ ಕೆಡುವಬೇಕೆಂಬದೇ ಬ್ರಾಹ್ಮಣರ ಮುಖ್ಯೋದ್ದೇಶವಾಗಿತ್ತು.

ಬ್ರಾಹ್ಮಣರ ಅರ್ಜಿಯು ಅತ್ತ ಸರಕಾರಕ್ಕೆ ಹೋಗಿರಲು, ಇತ್ತ ರಾವಬಹದ್ದೂರರವರು ಮೆ॥ನಾಮದಾರ ಶೇಪರ್ಡ ದೊರೆಗಳೂ ಮೆ॥ಬ್ರಾವುನ್ ಸಾಹೇಬ ಬಹಾದ್ದೂರರವರೂ ಭೆಟ್ಟಿಯಾದಾಗ ಸಹಜವಾಗಿ ಆ ಬಗ್ಗೆ ಹೇಳಿದ್ದೇನಂದರೆ "ನನ್ನ ಹೆಂಡತಿ ಮೃತವಾದಾಗ್ಗೆ ವಿಮಾನಕ್ಕೆ ನಮ್ಮ ಜಾತಿಯ ರಿವಾಜ ಪ್ರಕಾರ ಕಾಗದದಿಂದ ವ್ಯಾಸನ ತೋಳನ್ನು ಹಚ್ಚಿದ್ದು ನಿಜವು. ಇದನ್ನು ಮುದ್ದಾಮ ಹಚ್ಚಲಿಕ್ಕೆ ನಾನೇನು ಹೇಳಿದ್ದಿಲ್ಲ. ಆ ವಿಮಾನವನ್ನು ಕಟ್ಟುವವರೇ ಧರ್ಮ ಪ್ರಕಾರ ಹಚ್ಚಿದ್ದರು. ಅವರೇನು ಬ್ರಾಹ್ಮಣರ ಮನಸು ನೋಯಿಸಬೇಕೆಂಬ ಹೇತುವಿನಿಂದ ಕಟ್ಟಿದ್ದಲ್ಲ. ವಿಮಾನವು ತುಸು ಮುಂದಕ್ಕೆ ಹೋದ ಮೇಲೆ ನಾನು ಅದನ್ನು ನೋಡಿದೆನು. ನಮ್ಮ ಜನಾಂಗದಲ್ಲಿ ಶುಭಪ್ರಸಂಗಗಳಲ್ಲಿ ವ್ಯಾಸನ ತೋಳು ಕಟ್ಟುವಂತೆ ಶವಸಂಸ್ಕಾರದ ವಿಮಾನಕ್ಕೂ ಕಟ್ಟುವ ಪ್ರಘಾತವು ಸಾರ್ವತ್ರಿಕವಾಗಿ ಉಂಟು. ಇದನ್ನು ಬೇಕಾದಲ್ಲಿ ವಿಚಾರಿಸಬಹುದು. ಈ ಬ್ರಾಹ್ಮಣರು ಕೇವಲ ದ್ವೇಷಬುದ್ಧಿಯಿಂದ ಅರ್ಜಿ ಮಾಡಿರುತ್ತಾರೆ" ಎಂದು ಇದ್ದ ಸಂಗತಿಯನ್ನು ತಿಳಿಸಿಬಿಟ್ಟರು. ಬ್ರಾಹ್ಮಣರ ಆ ಅರ್ಜಿಯ ಬಗ್ಗೆ ಸರಕಾರದವರು ರಾವಬಹಾದ್ದೂರರವರ ಜವಾಬ ಸಹ ಕೇಳದೆ ಪರಭಾರೆ ನಿಕಾಲೆ ಮಾಡಿ, ಅರ್ಜಿದಾರರಾದ ಬ್ರಾಹ್ಮಣರಿಗೆ "ನಿಮ್ಮ ಇಚ್ಛೆಯ ಪ್ರಕಾರ ಹಾಗೆ ಮಾಡಲಿಕ್ಕೆ ಬರುವದಿಲ್ಲ" ಎಂದು ಇಂಗ್ಲೀಷ ಪತ್ರ ೩೦೬೪/೨೩-೪-೧೯೧೩ನೇ ನಂಬರದ ಉತ್ತರ ಕೊಟ್ಟರು. ಮತ್ತು ಇದರ ನಕಲುಗಳನ್ನು ಅವಲೋಕನಕ್ಕಾಗಿ ಮೆ॥ಕಮೀಶನರ ಸಾಹೇಬ ಬಹಾದ್ದೂರರವರ ಕಡೆಗೂ ಮೆ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕಡೆಗೂ ನಂಬರ ೩೫೦೦/ ೨೩-೪-೧೯೧೩ನೇ ಇಂಗ್ಲೀಷ ಶರಾದ ಕೂಡ ಕಳಿಸಿದರು.

ರಾ.ಬ॥ಅರಟಾಳ ಸಾಹೇಬರವರು ಈ ವ್ಯಾಸನ ತೋಳಿನ ಬಗ್ಗೆ ತಾವಾಗಿ ಸರಕಾರಕ್ಕೆ ನಂಬರ ೫೭೫/೧೪ನೇ ಗುಪ್ತ ರಿಪೋರ್ಟವೊಂದನ್ನು ಮಾಡಿದರು. ಮುಂದೆ ಡಿಸ್ಟ್ರಿಕ್ಟ ಡಿಪೂಟಿ ಕಲೆಕ್ಟರ ನಾತೆಯಿಂದ ಇಂಗ್ರೇಜಿ ಪತ್ರ ನಂಬರ ೧೦೫೨೩/೨೫-೫-೧೩ನೇದರ ಕೂಡ ವ್ಯಾಸನ ತೋಳಿನ ಸಂಬಂಧವಾಗಿ ಬರೆದ ೯೧ ಕಲಮುಗಳುಳ್ಳ ಇಂಗ್ಲೀಷ ನೋಟನ್ನು ಮೆಹರ್ಬಾನ ಆರ್.ಸಿ. ಬ್ರಾವುನ್ ಕಲೆಕ್ಟರ ಸಾಹೇಬ ಬಹಾದ್ದೂರ ಜಿಲ್ಲಾ ಬೆಳಗಾವ, ಇವರ ಕಡೆಗೆ ಕಳಿಸಿದರು. ಇದನ್ನು ನೋಡಿದರೆ ವ್ಯಾಸಹಸ್ತ ಸಂಬಂಧವಾದ ಯಾವತ್ತು ಮಾಹಿತಿಯು ಗೊತ್ತಾಗುವದು.

ಬ್ರಾಹ್ಮಣರು ತಮ್ಮ ಅರ್ಜಿಯ ಕೆಳಗೆ ಕೊಟ್ಟ ಸರಕಾರದ ಉತ್ತರವನ್ನು ಕಂಡು ಸುಮ್ಮನೆ ಮನೆಹಿಡಿದು ಕೂಡ್ರುವವರಾದರು. ಕೇವಲ ಮಾತ್ಸರ್ಯದಿಂದ ಮಾಡಿದ ಬ್ರಾಹ್ಮಣರ ಪ್ರಯತ್ನವೆಲ್ಲ ರಾವಬಹಾದ್ದೂರರವರ ನ್ಯಾಯನಿಷ್ಠೆಯ ಪ್ರಭಾವಕ್ಕೆ ಹಾರಿಹೋಯಿತು. ವ್ಯಾಸನ ತೋಳನ್ನು ಕಟ್ಟಿ ಸಾರ್ವಜನಿಕ ರಸ್ತೆಗಳಲ್ಲಿ ಹಾಯಿಸಿದರೆ ಸರಕಾರದವರಿಗೆ ಖಟ್ಲೇ ಮಾಡಲಿಕ್ಕೆ ಬರುವದಿಲ್ಲೆಂದೂ, ಇದು ಧಾರ್ಮಿಕವಿಷಯವಾಗಿರುವುದರಿಂದ ಧರ್ಮಕ್ಕೆ

ವಿರೋಧವಾಗಿ ಅವರು ಖಟ್ಲೇ ಮಾಡಲಾರರೆಂದೂ, ವ್ಯಾಸನತೋಳು ಕಟ್ಟಬಾರದೆಂದು ಸರಕಾರ ಠರಾವವಾಗಿರದೆ ಅದನ್ನು ಕಟ್ಟಿ ಸಾರ್ವಜನಿಕ ರಸ್ತೆಗಳಲ್ಲಿ ಹಾಯಿಸಿದರೆ ದಂಗೆಯಾಗುವದೆಂಬದಾಗಿ ಸರಕಾರದ ದೃಷ್ಟಿಗೆ ಕಂಡುಬಂದದರಿಂದ, ಸದ್ಯಕ್ಕೆ ಅದರ ಮೆರವಣಿಗೆ ತಹಕೂಪಿ ಮಾಡಲ್ಪಟ್ಟಿದೆ ಎಂಬದಾಗಿ ಠರಾವವಾಗಿದೆಯೆಂದೂ, ಇಷ್ಟೂ ಮೀರಿ ಒಂದು ವೇಳೆ ಯಾವನಾದರು ಕಟ್ಟಿ ಹಾಯಿಸಿದರೆ ಖಟ್ಲೆಯಾಗಿ ಅವನಿಗೆ ಎಂದೂ ಶಿಕ್ಷೆಯಾಗಲಾರದೆಂದೂ, ಕಾರಣ, ಈ ಬ್ರಾಹ್ಮಣರು ಮಾಡಿದ ಅರ್ಜಿಗೆ ಏನೇನೂ ಆಗುವದಿಲ್ಲೆಂದೂ ರಾವಬಹಾದ್ದೂರರವರು ಜನಸಮೂಹಕ್ಕೆ ಎಷ್ಟು ಹೇಳಿದ್ದರೂ ಅವರಿಗೆ ಕಿಂಚಿತ್ ಭರವಸೆವಾಗಿದ್ದಿಲ್ಲ. ಕಡೆಗೆ ಸರಕಾರದವರು ಬ್ರಾಹ್ಮಣರಿಗೆ ಕೊಟ್ಟ ಉತ್ತರವನ್ನು ಕಂಡು, ಬಂದ ಅರಿಷ್ಟವು ದೂರಾಯಿತೆಂದು ವೀರಶೈವ ಜನಾಂಗವು ಸಂತೋಷವನ್ನು ಹೊಂದುವದಾಯಿತು. ಬ್ರಾಹ್ಮಣರು ಈ ವ್ಯಾಸನ ತೋಳಿನ ಪ್ರಕರಣವನ್ನು ಎಬ್ಬಿಸಿದುದರಿಂದ ರಾವಬಹಾದ್ದೂರರವರ ಗೌರವವು ಮತ್ತಿಷ್ಟು ಹೆಚ್ಚಾಗಿ, ಇವರು ಕಾಯದೆಯಲ್ಲಿ ಒಳ್ಳೇ ನಿಷ್ಣಾತರೆಂದೂ ಬಹುಧೈರ್ಯಶಾಲಿಗಳೆಂದೂ ಜಗತ್ತಿಗೆ ಗೊತ್ತಾಗಿ, ಇವರು ಇನ್ನಿಷ್ಟು ಪ್ರಶಂಸೆಗೆ ಕಾರಣೀಭೂತರಾದರು.

ತಾರೀಖು ೨೭-೨೮-೨೯-೩೦ನೇ ಡಿಶಂಬರ ಸನ್ ೧೯೧೧ ಇ. ದಿವಸ ಬೆಳಗಾವಿಯಲ್ಲಿ ಕೂಡಿದ ೬ನೇ ಶ್ರೀಮದ್ವೀರಶೈವ ಮಹಾಸಭೆ

ಈವರೆಗೆ ಧಾರವಾಡ, ಬೆಂಗಳೂರ, ಸೊಲ್ಲಾಪುರ, ಬಾಗಲಕೋಟೆ, ಬಳ್ಳಾರಿ ಈ ಅಯ್ದು ಸ್ಥಳಗಳಲ್ಲಿ ೫ ವೀರಶೈವ ಮಹಾಸಭೆಗಳು ನೆರವೇರಿದ ಸಂಗತಿಯು ವಾಚಕ ಮಹಾಶಯರಿಗೆ ಗೊತ್ತೇ ಇರುವದು. ೬ನೇ ಮಹಾಸಭೆಯನ್ನು ಬೆಳಗಾವಿಯಲ್ಲಿ ಸೇರಿಸಬೇಕೆಂದೂ ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವದಕ್ಕೆ ರಾ.ಬ॥ಅರಟಾಳ ಸಾಹೇಬರವರನ್ನು ಪ್ರಾರ್ಥಿಸಬೇಕೆಂದೂ ಆಲೋಚಿಸಿ ಶಿ|ರಾ|ಶಿವಮೂರ್ತಿಸ್ವಾಮಿ ಕಣಬರಗಿಮಠ ಗೋಕಾಕಫಾಲ್ಸ ಇವರೇ ಮೊದಲಾದ ವೀರಶೈವ ಮುಖಂಡರು ರಾವಬಹಾದ್ದೂರರವರ ಸಮ್ಮತಿಯನ್ನು ಕೇಳಿದರು. ಅದಕ್ಕೆ ರಾವಬಹಾದ್ದೂರರವರು "೬ನೇ ಶ್ರೀಮದ್ವೀರ ಮಹಾಸಭೆಯನ್ನು ಬೆಳಗಾವಿಯಲ್ಲಿ ನೆರವೇರಿಸಲು ಅಡ್ಡಿಯಿಲ್ಲ. ಇಲ್ಲಿಯ ಅಧ್ಯಕ್ಷಸ್ಥಾನಕ್ಕೆ ನನ್ನನ್ನು ಯೋಚಿಸದೆ ಹೊರಗಿನವರನ್ನು ಆರಿಸುವದು ವಿಹಿತವಾಗಿ ತೋರುತ್ತದೆ. ಯಾಕಂದರೆ ಈ ಮಹಾಸಭೆಯು ಬೆಳಗಾವಿಯಲ್ಲಿಯಾಗುವದಾದ್ದರಿಂದ ಇಲ್ಲಿಯೇ ಇರುವ ನಾನು ಇದಕ್ಕೆ ಒಪ್ಪಿಕೊಳ್ಳಲಾರೆನು;ನಮ್ಮನ್ನು ನಾವೇ ಮರ್ಯಾದಿಸಿಕೊಳ್ಳುವದಕ್ಕಿಂತ ಎರಡನೇ ಪ್ರಾಂತದ ಬೇರೆ ಯೋಗ್ಯ ಪುರುಷರನ್ನು ಆರಿಸಿ ಆಮಂತ್ರಣಕೊಟ್ಟು, ಮರ್ಯಾದಿಸಿದರೆ ನೆಟ್ಟಗಾಗುತ್ತದೆ. ಇಲ್ಲಿಯ ಅಧ್ಯಕ್ಷಸ್ಥಾನಕ್ಕೆ ಹಂದಿಗಿನೂರ ಶ್ರೀಮಂತ ಬುಳ್ಳಪ್ಪ ಬಸವಂತರಾದ ಮಾಮಲೇದೇಸಾಯಿ ಇವರನ್ನು ಆರಿಸಬಹುದು. ನಾನೇ ಅಧ್ಯಕ್ಷನಾಗಬೇಕೆಂಬದಾಗಿ ನಿಮ್ಮೆಲ್ಲರ ಅಪೇಕ್ಷೆಯಿದ್ದರೆ ನಿಮ್ಮ ಅಪೇಕ್ಷೆಯನ್ನು ಪೂರ್ಣಮಾಡುವದಕ್ಕಾಗಿ ನಾನು ಮುಂದಿನ ವರ್ಷದ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವೆನು" ಎಂಬದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು, ಎಲ್ಲರೂ ಇದು ಯೋಗ್ಯವೆಂದು ಒಪ್ಪಿಕೊಂಡು, ಈ ಸಂಗತಿಯನ್ನು ಮಹಾಸಭೆಯ ಸ್ಟ್ಯಾಂಡಿಂಗ್ ಕಮೀಟಿಯ ಚೆಯರಮನ್ನರಾದ ಮಿ. ಶಾಂತವೀರಪ್ಪಣ್ಣಾ ಮೆಣಸಿನಕಾಯಿ ಧಾರವಾಡ ಇವರು ಸನ್ ೧೯೧೧ ಇಸವಿಯ ಅಕ್ಟೋಬರ ತಿಂಗಳಲ್ಲಿ 'ಸ್ಟಾರ'ಪತ್ರದ್ವಾರ ಪ್ರಸಿದ್ಧಿಸಿದರು. ಬಳಿಕ ಈ ಮಹಾಸಭೆಯ ಸರ್ವ ಕೆಲಸಕ್ಕೆ ಶಿ|ಶಿವಮೂರ್ತಿಸ್ವಾಮಿ ಕಣಬರಗೀಮಠ ಗೋಕಾಕಫಾಲ್ಸ ಇವರೂ ಮೆ॥ ಶ್ರೀಮಂತ ನಾಯಕ ಬಹಾದ್ದೂರ ದೇಸಾಯಿ ಚಚಡೀಕರ ಇವರೂ ನಡಕಟ್ಟಿ ನಿಂತು, ಬೆಳಗಾವ ಜಿಲ್ಲೆಯ ಎಲ್ಲ ತಾಲೂಕಿನೊಳಗಿನ ಪ್ರಮುಖ

ವೀರಶೈವರಿಗೆಲ್ಲ ಪತ್ರಗಳನ್ನು ಬರೆದು ಬೆಳಗಾವಿಯ ಹಿರೇಮಠದಲ್ಲಿ ಎರಡುಸಾರೆ ಆಲೋಚನಾ ಸಭೆಗಳನ್ನು ಕೂಡಿಸಿ, ಶ್ರೀ ಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳವರ ಮತ್ತು ಶ್ರೀ ಬಿಳ್ಕೂರ ಸ್ವಾಮಿಗಳವರ ಸದಯಾಂತಃಕರಣವಾದ ಆಶೀರ್ವಾದವನ್ನು ಹೊಂದಿ, ಸಭೆಯ ಕೆಲಸಕ್ಕೆ ತೀರ ತುಸು ದಿವಸಗಳು ಉಳಿದಾಗ್ಯೂ ಅಥಣಿ ಗೋಕಾಕ-ಚಿಕ್ಕೋಡಿ-ಬೆಳಗಾವ-ಹುಕ್ಕೇರಿ-ಸವದತ್ತಿ-ಸಂಪಗಾವ-ಖಾನಾಪುರ ಈ ಎಂಟೂ ತಾಲೂಕಗಳ ಮುಖಂಡ ವೀರಶೈವರನ್ನು ಸಹಾಯಕ್ಕೆ ಬರಮಾಡಿಕೊಂಡು ಎಲ್ಲ ಮಂಟಪದ ಭೋಜನಾಲಯದ -ಗುಡಿಗಳ-ವಾದ್ಯಗಳ-ದವಾಖಾನೆ -ಪೋಷ್ಟ ಆಫೀಸುಗಳ -ಚಹಾ ಕಾಫೀ ಮುಂತಾದ ಉಪಹಾರಗಳ ಅಂಗಡಿಗಳ ಧರ್ಮಗ್ರಂಥಾಲಯ ವರ್ತಮಾನ ಪತ್ರಗಳ ಲಾಯಬ್ರರಿಯ ವಿಭೂತಿ ರುದ್ರಾಕ್ಷಿ ಧೂಪದೀಪಗಳ ಸಣ್ಣ ಸಣ್ಣ ಅಂಗಡಿಗಳ ವ್ಯವಸ್ಥೆಯನ್ನು ಇಡಿಸಿದರು. ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ಸಭಾಮಂಟಪಕ್ಕೆ ಸಮೀಪವಾಗಿ ಸಾಂದ್ರವಾಗಿ ಶೋಭಿಸುವ ಆಮ್ರವೃಕ್ಷಗಳ ತಣ್ಣೆಳಲಿನಲ್ಲಿ ಡೇರೆಗಳನ್ನು ಹೊಡಿಸಿದರು. ಅವಕ್ಕೆ ಸಮೀಪದಲ್ಲಿಯೇ ರಾ||ಚನ್ನಮಲ್ಲಪ್ಪಣ್ಣಾ ಕಿತ್ತೂರ ಇವರ ತೋಟದ ಬಾವಿಯ ಹತ್ತಿರ ಭೋಜನಾಲಯವನ್ನು ಕಟ್ಟಿಸಿ, ಸ್ನಾನಕ್ಕೂ ಶಿವಾರ್ಚನಕ್ಕೂ ಭೋಜನಕ್ಕೂ ಯಾರಿಗೂ ಯಾವ ಪ್ರಕಾರದ ತೊಂದರೆಗಳು ಬಾರದಂತೆ, ಬಲು ಅಂದವಾದ ವ್ಯವಸ್ಥೆಯನ್ನು ಇಡಿಸಿದರು. ಒಳಗೂ ಹೊರಗೂ ಬೈಲಲ್ಲಿಯೂ ತಕ್ಕಷ್ಟು ಕಿಟಸನ್ ದೀವಿಗೆಗಳನ್ನು ಹಚ್ಚಿರುತ್ತಿದ್ದ ಮೂಲಕ, ಸುತ್ತುಮುತ್ತಲೂ ಚಂದ್ರಜ್ಯೋತಿಯಂತೆ ಪ್ರಕಾಶ ಬೀಳುತ್ತಿತ್ತು. ನೀರಿನ ತೊಂದರೆಯೂ ಪ್ಲೇಗಿನ ಉಪಟಳವೂ ಸೋಂಕಬಾರದೆಂದು, ಬೆಳಗಾವಿಯಿಂದ ಆಗ್ನೇಯ ದಿಕ್ಕಿಗೆ ಒಂದೂವರೆ ಮೈಲು ಅಂತರದ ಮೇಲೆ ಪುಣೆ ಹರಿಹರ ರಸ್ತೆ (ಬೆಳಗಾವ-ಧಾರವಾಡ)ರಸ್ತೆಗೆ ಹೊಂದಿ ಇರುವ, ಉತ್ತಮವಾದ ಬೈಲಿನಲ್ಲಿ ಮಹಾಸಭಾಮಂಟಪವನ್ನು ಸರ್ವಾಂಗ ಸುಂದರವಾಗಿ ರಚಿಸಿ, ಎಲ್ಲ ವ್ಯವಸ್ಥೆಯನ್ನು ಅದರ ಸುತ್ತ ಮುತ್ತು ಸಮೀಪದಲ್ಲಿಯೇ ಮಾಡಿದ್ದು, ಸರ್ವರಿಗೂ ಆನಂದವನ್ನುಂಟು ಮಾಡಿತು. ಸ್ಟ್ಯಾಂಡಿಂಗ್ ಕಮೀಟಿಯ ಮೆಂಬರರೂ, ಸಭೆಯ ಸಂಚಾಲಕರೂ, ಮತಾಭಿಮಾನಿಗಳೂ ಮುಂಚಿತವಾಗಿ ಬಂದು, ನೇಮಿಸಿಕೊಟ್ಟ ಕಾರ್ಯಗಳ ಎಲ್ಲ ವ್ಯವಸ್ಥೆಗೊಳಿಸಿದರು. ಅದರಂತೆ ಶ್ರೀಮನ್ನಿರಂಜನ ಹಾನಗಲ್‌ಕುಮಾರ ಸ್ವಾಮಿಗಳೂ ಶ್ರೀ ಬಿಳ್ಕೂರಸ್ವಾಮಿಗಳೂ ಮುಂದಾಗಿಯೇ ದಯಮಾಡಿಸಿ, ಮಹಾಸಭೆಯ ವ್ಯವಸ್ಥೆಯನ್ನು ಸ್ಥಿರಗೊಳಿಸಿದರು.

ನಿಶ್ಚಿತವಾದಂತೆ ಅಧ್ಯಕ್ಷರಾದ ಶ್ರೀಮಂತ ಸರದಾರ ಬುಳ್ಳಪ್ಪಾ ಉರ್ಫ ಬಾಬಾಸಾಹೇಬ ಬಸವಂತರಾವ ಮಾಮಲೇದೇಸಾಯಿ ಹಂದಿಗಿನೂರ ಇವರೂ ಮಿ. ಶಾಂತವೀರಪ್ಪಣ್ಣಾ ಮೆಣಸಿನಕಾಯಿ ಪೆನಶನರ್ ಡಿ.ಡಿ. ಕಲೆಕ್ಟರ ಮೊದಲಾದ ಧಾರವಾಡದ ಮುಖಂಡರೂ ತಾರೀಖು ೨೬ನೇ ಡಿಶಂಬರ ೧೯೧೧ನೇ ಇಸವಿ ಮಂಗಳವಾರ ದಿವಸ ಮೇಲಗಾಡಿಯಿಂದ ಬೆಳಗಾವ ಸ್ಟೇಶನಕ್ಕೆ ಬರಲು, ಸರ್ವನಾಗರಿಕರೂ ಸ್ವಯಂ ಸೇವಕರೂ ಸ್ವಾಗತ ಕಮೀಟಿಯವರೂ ಅನೇಕ ರಥ ಸಾರವಾಟ ಟಾಂಗಾ ಮೋಟಾರಗಾಡಿ ಸಮೇತರಾಗಿ ವಾದ್ಯಗಳ ಮೇಳದೊಡನೆ ಹೋಗಿ, ಸ್ಟೇಶನದಲ್ಲಿ ಅವರನ್ನು ಪ್ರೇಮಪೂರ್ವಕವಾಗಿ ಇದಿರ್ಗೊಂಡು, ಪರಿಮಳದ್ರವ್ಯ ಪುಷ್ಪಹಾರಗಳನ್ನು ಸರ್ವರಿಗೂ ಸಮರ್ಪಿಸಿ, ಜಯಘೋಷದೊಡನೆ ಅವರನ್ನು ರಥದಲ್ಲಿ ಕೂಡ್ರಿಸಿ, ಪುರಪ್ರವೇಶಮಾಡಿಸಿ, ಅಲ್ಲಲ್ಲಿಗೆ ಅಂದವಾಗಿ ಕಟ್ಟಿಸಿದ ಸ್ವಾಗತಪರವಾದ ಕಮಾನ-ಮಕರತೋರಣ-ಧ್ವಜಪತಾಕೆಗಳಿಂದ ಶೃಂಗರಿಸಲ್ಪಟ್ಟ ರಾಜಬೀದಿಗಳೊಳಗಿಂದ ಮೆರವಣಿಗೆ ಮಾಡುತ್ತ, ಆ ದಿವಸ ರಾತ್ರಿ ೮ ಘಂಟೆ ಸುಮಾರಕ್ಕೆ ಅವರಿಗಾಗಿ ತಯಾರಿಸಿರುವ ಡೇರೆಗಳಲ್ಲಿ ಅವರನ್ನು ಇಳಿಸಿ, ಸರ್ವರಿಗೂ ಭೋಜನದ ಸಿದ್ಧತೆಯು ಅತಿ ವಿಜೃಂಭಣೆಯಿಂದ ಮಾಡಲ್ಪಟ್ಟಿತು. ತಾರೀಖು ೨೭ನೇ ಡಿಶಂಬರ ಸನ್ ೧೯೧೧ ಇ. ಬುಧವಾರ ದಿವಸ ಮಹಾಸಭೆಯು ಪ್ರಾರಂಭವಾಯಿತು. ಅಧ್ಯಕ್ಷರಾದ ಶ್ರೀಮಂತ ಬುಳ್ಳಪ್ಪಾ ಬಸವಂತರಾವ ಮಾಮಲೇದೇಸಾಯಿ ಹಂದಿಗಿನೂರ ಇವರು ಜೋಡುಗುದುರೆಗಳನ್ನು ಹೂಡಿದ ರಥದಲ್ಲಿ ಕುಳಿತು, ತಮ್ಮ ಪರಿವಾರದೊಡನೆ ಸಭಾಮಂಟಪದ

ಬಹಿರ್ದ್ವಾರದ ಬಳಿಗೆ ಬರುತ್ತಿರುವದನ್ನು ಬ್ಯಾಂಡ ಮತ್ತು ಚೌಘಡೆಗಳ ವಾದ್ಯಗಳು ಸೂಚಿಸಿದೊಡನೆ ಆಯ್.ಎಸ್.ಓ. ಪದವೀಧರರಾದ ರಾವಬಹಾದ್ದೂರರವರೂ, ನಾಮದಾರ ವಂಟಮುರಿಯ ಸರದೇಸಾಯಿಯವರೂ, ಸತ್ಕಾರ ಸಂಘಾಧ್ಯಕ್ಷರಾದ ಮೆ. ಶ್ರೀಮಂತ ರಾ.ಸಾ. ಶಿವಮೂರ್ತಿಸ್ವಾಮಿ ಕಣಬರಿಗಿಮಠ ಮುಂತಾದ ಅನೇಕ ದೊಡ್ಡ ದೊಡ್ಡ ಮನುಷ್ಯರು ದ್ವಾರದ ಬಳಿಗೆ ಬಂದು, ಅಧ್ಯಕ್ಷರನ್ನು ಎದುರ್ಗೊಂಡು, ತಳಿರ್ದೋರಣಗಳಿಂದಲೂ ಕದಳೀ ಸ್ತಂಭಗಳಿಂದಲೂ ಧ್ವಜಪತಾಕೆಗಳಿಂದಲೂ ಬಹುಸುಂದರವಾಗಿ ಅಲಂಕರಿಸಲ್ಪಟ್ಟಿದ್ದ ಮಂಟಪದೊಳಗೆ ಕರೆದುಕೊಂಡು ಬಂದು, ಉಚಿತಾಸನದಲ್ಲಿ ಕೂಡ್ರಿಸಿದರು. ಸಭಾಸದರ ಆನಂದ ಪ್ರದರ್ಶಿತ ಕರತಾಡನದ ಸಪ್ಪಳದಿಂದ ಸಭಾಮಂಟಪವು ತುಂಬಿ ಹೋಯಿತು.

ಅಧ್ಯಕ್ಷರ ಆಸನದ ಬಲಗಡೆಗೆ ಶ್ರೀಮಂತ ನಾಮದಾರ ವಂಟಮುರಿಯ ಸರದೇಸಾಯಿಯವರು ಎಡಗಡೆಗೆ ರಾ.ಬ॥ಅರಟಾಳಸಾಹೇಬ ಆಯ್.ಎಸ್.ಓ. ಇವರೂ ಹಿಂಭಾಗದಲ್ಲಿ ಎತ್ತರವಾದ ಸ್ಥಳದಮೇಲೆ ಏರ್ಪಡಿಸಲ್ಪಟ್ಟ ಆಸನಗಳಲ್ಲಿ ಶ್ರೀ ಬಿಳ್ಳೂರ ಸ್ವಾಮಿಗಳೇ ಮೊದಲಾದ ಯತಿವೃಂದವೂ ಎಡಬಲದ ಪಾರ್ಶ್ವಗಳಲ್ಲಿ ದೇಸಾಯಿ ದೇಶಪಾಂಡೆ ಜಹಾಗೀರದಾರರೂ ಸರಕಾರಿ ಅಧಿಕಾರಿಗಳೂ ಮಹಾಸಭೆಯ ಅಭಿಮಾನಿಗಳೂ ಗುರುಸ್ಥಲದವರೂ ನಿಯಮಿತವಾದ ಆಸನಗಳಲ್ಲಿ ಸರಿಯಾಗಿ ಮಂಡಿಸಿದ್ದರು. ರಾ.ಸಾ॥ ಶಿವಮೂರ್ತಿಸ್ವಾಮಿ ಕಣಬರಗಿಮಠ ಗೋಕಾಕ ಫಾಲ್ಸ ಮತ್ತು ಮೆ॥ ಶ್ರೀಮಂತ ಅಣ್ಣಾಸಾಹೇಬ ಚಚಡೀಕರ ಈ ಇಬ್ಬರು ಮಹಾಶಯರು ಮಹಾಸಭೆಯ ಮುಂದಿನ ಕಾರ್ಯಕ್ರಮವನ್ನು ಯೋಚಿಸುವದರಲ್ಲಿ ದಕ್ಷರಾಗಿದ್ದರು. ಸ್ಟೇಜದ ಕೆಳಗಡೆಯ ವಿಶಾಲವಾದ ಪ್ರದೇಶದಲ್ಲಿ ನಾನಾಭಾಗದಿಂದ ಬಂದಿದ್ದ ಪ್ರತಿನಿಧಿಗಳೂ ಪ್ರೇಕ್ಷಕರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದರು. ವೃತ್ತ ಪತ್ರಿಕೆಗಳ ಪ್ರತಿನಿಧಿಗಳಿಗೆ ತಕ್ಕ ಸ್ಥಳಗಳು ಏರ್ಪಡಿಸಲ್ಪಟ್ಟಿದ್ದವು. ಸ್ಟೇಜಿನ ಬಲಗಡೆಯ ೭-೮ ಗಜಗಳ ಅಂತರದಲ್ಲಿ ಮಹಿಳಾ ಮಂಡಳಿಗೆ ಪ್ರತ್ಯೇಕವಾದ ಸ್ಥಳವೇರ್ಪಡಿಸಲ್ಪಟ್ಟಿದ್ದು, ಮುಂದೆ ತಿಳುವಾದ ಪರದೆ ಬಿಡಲ್ಪಟ್ಟಿತ್ತು.

ಆರಂಭಕ್ಕೆ ಶಿವಸ್ತುತಿಯಾದನಂತರ ಸ್ವಾಗತ ಕಮೀಟಿಯಧ್ಯಕ್ಷರಾದ ಶ್ರೀಮಂತ ವೀರಭದ್ರಪ್ಪ ಊರ್ಫ ಅಣ್ಣಾಸಾಹೇಬ ನಾಯಕ ಬಹಾದ್ದೂರ ದೇಸಾಯಿ ಚಚಡಿ ಇವರು ತಮ್ಮ ಸ್ವಾಗತಪರ ಭಾಷಣದಿಂದ ಬೆಳಗಾವಿ ಮಹಾಸಭೆಯ ರಚನೆಯನ್ನೂ, ಇದಕ್ಕಾಗಿ ಅವಿಶ್ರಾಂತ ಶ್ರಮಪಟ್ಟ ಶಿ. ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರ ತನು-ಮನ-ಧನ ಪೂರ್ವಕ ಸಾಹಸವನ್ನೂ ಬೆಳಗಾವ ಶಹರದ ಐತಿಹ್ಯವನ್ನೂ ವೀರಶೈವ ಸಮಾಜದ ಉತ್ತರೋತ್ತರವಾದ ವಿದ್ಯಾಭಿವೃದ್ಧಿಯ ಇತಿಹಾಸವನ್ನೂ ಸಭಾಸದರಿಗೆ ವಿವರವಾಗಿ ತಿಳಿಸಿ, ಬ್ರಿಟಿಶ ಸಾಮ್ರಾಜ್ಯದ ರಾಜನಿಷ್ಠೆಯನ್ನು ವ್ಯಕ್ತಗೊಳಿಸಿ, ತಮ್ಮ ಭಾಷಣವನ್ನು ಮುಗಿಸಿದರು.

ಅನಂತರ ಸ್ಟ್ಯಾಂಡಿಂಗ್ ಕಮೀಟಿಯ ಚೆಯರಮನ್ನರಾದ ಮೆಣಸಿನಕಾಯಿ ಶಾಂತವೀರಪ್ಪಣ್ಣನವರು ಎದ್ದು, ಶ್ರೀಮಂತ ಸರದಾರ ಹಂದಿಗಿನೂರ ದೇಸಾಯರ ಗುಣಕಥನವನ್ನು ಮಾಡಿ, ಸಭಾಸದರಿಗೆ ಅವರ ಪರಿಚಯ ಮಾಡಿಕೊಟ್ಟ ಮೇಲೆ, ಈ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಬೇಕೆಂದು ಸೂಚಿಸಿದರು. ಅದನ್ನು ರಾವಬಹದ್ದೂರ ಅರಟಾಳ ಸಾಹೇಬರವರು ಪುಷ್ಟೀಕರಿಸಿದ ಮೇಲೆ, ಸಭಾಸದರ ಕರತಳರವದಿಂದ ಅನುಮೋದಿತವಾಯಿತು. ಅನಂತರ ಶ್ರೀಮಂತರು ಎದ್ದು ಸಭೆಯನ್ನು ಕುರಿತು ವಂದಿಸಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿ, ತಮಗೆ ಕೊಂಡ ದೇಸಾಲಸ್ಯವಾಗಿರುವ ಪ್ರಯುಕ್ತ ದಾವಣಗೇರಿಯ ಮಿ॥ ಮಾಗಾನಹಳ್ಳಿ ದೊಡ್ಡ ಬಸಪ್ಪನವರು ತಮ್ಮ ಪರವಾಗಿ ಭಾಷಣವನ್ನು ಓದುತ್ತಾರೆಂದು ತಿಳುಹಿ ಕುಳಿತುಕೊಂಡರು. ತರುವಾಯ ಅಧ್ಯಕ್ಷರ ವತಿಯಿಂದ ಭಾಷಣವಾಗಿ, ಸಂಜೆಯ ೬ ಘಂಟೆಗೆ ಆ ದಿವಸದ ಸಭೆಯನ್ನು ವಿಸರ್ಜಿಸಿ, ೯ ಘಂಟೆಯ ವರೆಗೆ ಸಬ್‌ಜಕ್ಟ ಕಮೀಟಿಯ ಮೆಂಬರರೂ ಮಹಾಸ್ವಾಮಿಗಳೂ ಕೂಡಿ ಆಲೋಚಿಸಿ, ಮುಂದಿನ ವಿಷಯಗಳನ್ನು

ಗೊತ್ತುಪಡಿಸಿದರು. ಅದೇ ರಾತ್ರಿ ಪ್ರಸಿದ್ಧ ಗೋಕಾಕ ತಾಲೂಕ ಕೊಣ್ಣೂರ ಕನ್ನಡ ಸಂಗೀತ ನಾಟಕ ಕಂಪನಿಯವರು ಅದೇ ಸಭಾಮಂಟಪದಲ್ಲಿ 'ಸಂಗೀತ ಸೌಭದ್ರ' ನಾಟಕ ಪ್ರಯೋಗವನ್ನು ಮಾಡಿದರು.

ತಾರೀಖು ೨೮ನೇ ಡಿಶೆಂಬರ ಸನ್ ೧೯೧೧ ಗುರುವಾರ ದಿವಸ ನೇಮಣೂಕವಾದಂತೆ ೧೨ ಘಂಟೆಗೆ ಸಭೆ ಕೂಡಿ, ಕೆಲಪಂಡಿತ ವ್ಯಾಖ್ಯಾನಗಳು ಅತಿ ಉತ್ತಮ ರೀತಿಯಿಂದಾದವು. ಹಿಂದಿನ ದಿವಸದಂತೆ ಸಾಯಂಕಾಲಕ್ಕೆ ಸಬ್‌ಜಕ್ಟ್ ಕಮೀಟಿಯವರು ಕೂಡಿ, ಮರುದಿವಸದ ಕಾರ್ಯಕ್ರಮವನ್ನು ಗೊತ್ತುಪಡಿಸಿದರು. ಅದೇ ರಾತ್ರಿ ಕೊಣ್ಣೂರ ನಾಟಕ ಕಂಪನಿಯವರು ವೃದ್ಧವಿವಾಹ ನಿಷೇಧಪರವಾದ ನಾಟಕವನ್ನು ಬಲು ಸರಸಾಗಿ ಮಾಡಿದರು.

ಮರುದಿವಸ ಅಂದರೆ ತಾರೀಖು ೨೯ನೇ ಡಿಸಂಬರ ಸನ್ ೧೯೧೧ ಶುಕ್ರವಾರ ಯಥಾಪ್ರಕಾರ ಸಭೆ ಕೂಡಿತು. ಈ ದಿವಸ ಎಲ್ಲ ಜಾತಿಯ ಮಹನೀಯರಿಗೆ ಆಮಂತ್ರಣವಾಗಿದ್ದು, ಸಭಾಮಂಟಪದಲ್ಲಿ ಸುಮಾರು ಏಳು ಸಾವಿರ ಜನರು ಕೂಡಿದ್ದರು. ಮಹಾಸಭೆಯವರ ಪ್ರೇಮ ಪುರಸ್ಸರವಾದ ಆಮಂತ್ರಣವನ್ನು ಸ್ವೀಕರಿಸಿ, ನಾಮದಾರ ಮೆಹರ್ಬಾನ ಶೇಪರ್ಡಸಾಹೇಬಬಹಾದ್ದೂರ ಕಮೀಶನರ ದಕ್ಷಿಣಭಾಗ ಇವರು ಪತ್ನೀ ಸಮೇತರಾಗಿ ಮೋಟಾರಗಾಡಿಯಿಂದ ಸಭೆಗೆ ದಯಮಾಡಿಸಿದರು. ಅದರಂತೆ ಪುಣೆಯ ಅಗ್ರಿಕಲ್ಚರ ಡಿಪಾರ್ಟಮೆಂಟಿನ ಪ್ರಿನ್ಸಿಪಾಲರಾದ ಡಾಕ್ಟರ ಮೆ॥ಮ್ಯಾನ್ ಸಾಹೇಬ ಬಹಾದ್ದೂರರವರೂ, ಗೋಕಾಕ ಗಿರಣಿಯ ಮ್ಯಾನೇಜರರಾದ ಮೆ॥ ಡ್ರಾಯವ್ಹರ ಸಾಹೇಬ ಬ॥ರವರೂ ಮತ್ತು ಅನೇಕ ಆಂಗ್ಲಪ್ರಭುಗಳೂ ಮೋಟಾರಬಂಡಿಯಿಂದ ಸಭೆಗೆ ಬಂದರು. ಮತ್ತು ಕೋಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಗಳ ವಿದ್ಯಮಾನ ಮೆ॥ಕ್ಯಾಂಬೆಲ್ ಸಾಹೇಬರ ಬ॥ರವರ ಪರವಾಗಿ ಮಿ. ಉದ್ಯಾವರಕರರವರೂ ಸಭೆಗೆ ಆಗಮಿಸಿದರು. ಆಂಗ್ಲಾಧಿಕಾರಿಗಳ ಆಗಮನ ಮಾತ್ರವೆ ಸಭೆಯ ಕೆಲಸವು ಬಲು ಹುರುಪಿನಿಂದ ಪ್ರಾರಂಭವಾಗಿ, ಮಿ॥ಉದ್ಯಾವರಕರ ಇವರ ಹಾಗೂ ಮೆ॥ಡಾಕ್ಟರ ಮ್ಯಾನ್‌ಸಾಹೇಬ ಬಹಾದ್ದೂರರವರ ಅತಿ ಮಹತ್ವದ ವಿಷಯಗಳ ಬಗ್ಗೆ ವ್ಯಾಖ್ಯಾನಗಳಾಗಿ ಸಭಾಸದರು ಆನಂದಭರಿತರಾದರು. ಬಂದ ಅತಿಥಿಗಳಿಗೆಲ್ಲ ಹಾರತುರಾಯಿ ಪರಿಮಳ ದ್ರವ್ಯಗಳನ್ನೂ ತಾಂಬೂಲವನ್ನೂ ಹಂಚಿ ನಮ್ಮ ಬ್ರಿಟಿಶ ಸಾರ್ವಭೌಮ ಪಂಚಮ ಜಾರ್ಜಬಾದಶಹರವರಿಗೂ ಮೇರಿ ಮಹಾರಾಣಿಯವರಿಗೂ ಅವರ ಅಡಳತೆಗೊಳಪಟ್ಟ ಸರ್ವ ನಾಮದಾರರಿಗೂ ಮೆ॥ನಾಮದಾರ ಕಮೀಶನರ ಸಾಹೇಬ ಬಹದ್ದೂರರವರಿಗೂ ಅವರ ಪ್ರಿಯ ದೊರೆಸಾನಿಗಳಿಗೂ ಮೆ॥ಡಾಕ್ಟರ ಮ್ಯಾನರವರಿಗೂ ಮೆ॥ಡ್ರಾಯವ್ಹರ ಸಾಹೇಬರವರಿಗೂ ತ್ರಿವಾರ ಜಯಘೋಷವನ್ನು ಮಾಡಿ, ಅವರೆಲ್ಲರ ಆಯುರಾರೋಗ್ಯವನ್ನು ಬಯಸಿದರು. ಅಷ್ಟರಲ್ಲಿ ಸಾರ್ವಭೌಮ ಬಾದಶಹರವರು ನಮ್ಮ ದೇಶಕ್ಕೆ ರಾಜ್ಯಾಭಿಷೇಕಕ್ಕಾಗಿ ದಯಮಾಡಿಸಿದ ಸ್ಮರಣಾರ್ಥವಾಗಿ ಬೆಳಗಾವ ಜಿಲ್ಲೆಯಲ್ಲಿ ಒಂದು ಅನಾಥ ಫಂಡು ಕೂಡಿಸುವದು ಗೊತ್ತು ಮಾಡಲ್ಪಟ್ಟು, ಆಗಿಂದಾಗ ರಾ.ಬ॥ಅರಟಾಳ ಸಾಹೇಬರವರ ಪ್ರಯತ್ನದಿಂದ ೭೦೦ ರೂಪಾಯಿ ಫಂಡು ಕೂಡಿತು. ಬಳಿಕ ಈ ಎಲ್ಲ ಮಹನೀಯರ ಭಾವಚಿತ್ರಗಳು ತೆಗೆಯಲ್ಪಟ್ಟು ಸಭಾವಿಸರ್ಜನವಾಯಿತು.

೨ನೇ ವೀರಶೈವ ಮಹಿಳಾ ಪರಿಷತ್ತು. ಬೆಳಗಾವ

ತಾರೀಖು ೩೦ನೇ ಡಿಸೆಂಬರ ಸನ್ ೧೯೧೧ ಇ॥ಶನಿವಾರ ದಿವಸ ನೇಮಕವಾದಂತೆ ಮಹಿಳಾ ಪರಿಷತ್ತು ಕೂಡಿತು. ಶ್ರೀಮಂತ ಸೌಭಾಗ್ಯವತಿ ರುದ್ರಾಬಾಯಿ ದೇಸಾಯಿಣಿ ಚಚಡೀಕರ ಇವರು ಈ ಸ್ತ್ರೀಸಭೆಯ ಸ್ವಾಗತ ಕಮೀಟಿಯ ಅಧ್ಯಕ್ಷಿಣಿಯರಾಗಿಯೂ ಶ್ರೀಮತಿ ಸೌ॥ಭಾಗೀರಥಿಬಾಯಿ ಭೃತಾರ ಮಲ್ಲಿಕಾರ್ಜುನಪ್ಪಾ ಪಾಟೀಲ ಸೊಲ್ಲಾಪುರ ಇವರು ಅಧ್ಯಕ್ಷಿಣಿಯರಾಗಿಯೂ ನಿಯಮಿಸಲ್ಪಟ್ಟಿದ್ದು, ಸಭಾಕಾರ್ಯವನ್ನು ಬಹಳೇ ಚೆನ್ನಾಗಿ ಸಾಂಗಮಾಡಿದರು. ಇವರ ಭಾಷಣಗಳೂ ಮುಂಬಯಿಯ ಡಾಕ್ಟರ ಗುರುಬಾಯಿ ಕರಮರಕರ ಎಮ್.ಡಿ.

ಇವರ ಭಾಷಣವೂ ಶ್ರವಣೀಯವಾಗಿದ್ದವು. ಇನ್ನೂ ಎಷ್ಟೋ ನಾರೀಮಣಿಯರ ಭಾಷಣಗಳಾಗಿ ಅನೇಕ ವಿಷಯಗಳನ್ನು ಪಾಸು ಮಾಡಿದರು. ಈ ಸಭೆಗೆ ಸುಮಾರು ಐದು ಸಾವಿರ (೫೦೦೦) ಜನ ಸ್ತ್ರೀಯರು ಕೂಡಿದ್ದರು. ಈ ಮಹಿಳಾ ಮಣಿಗಳಿಂದಲಂಕೃತವಾದ ಮಹಾಸಭೆಯು ಪ್ರೇಕ್ಷಣೀಯವಾಗಿತ್ತು. ಇಂಥ ಅಪೂರ್ವಯೋಗವು ಹಿಂದೆ ಎಂದೂ ಕೂಡಿದ್ದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ, ಗೋಕಾಕ ಫಾಲ್ಸ

ಈ ಮಹಾಸಭೆಯನ್ನು ಬೆಳಗಾವಿಯಲ್ಲಿ ನೆರವೇರಿಸಿದ ಮಠಾಭಿಮಾನಿಗಳಲ್ಲಿ ಶ್ರೀಶಿವಮೂರ್ತಿಸ್ವಾಮಿ ಕಣಬರಿಗೀಮಠ ಗೋಕಾಕ ಫಾಲ್ಸ ಇವರೇ ಅಗ್ರಗಣ್ಯರಾಗಿರುವರೆಂಬದಕ್ಕೇನೂ ಸಂದೇಹವಿಲ್ಲ. ಧಾರವಾಡ ಮಹಾಸಭೆಯನಂತರ ಶಿರಸಂಗಿಯ ಶ್ರೀಮಂತ ಸರದೇಸಾಯಿಯವರು ೨ನೇ ಶ್ರೀಮದ್ವೀರಶೈವ ಮಹಾಸಭೆಯನ್ನು ಇಲ್ಲಿ ಕೂಡಿಸಬೇಕೆಂದು ಭಾವಿಸಿದ್ದರು. ಆದರೆ ಮೈಸೂರ ಪ್ರಾಂತದವರ ಅಗ್ರಹದ ಮೂಲಕ ಅದು ಆ ವರ್ಷ ಬೆಂಗಳೂರಿಗೆ ಹೋಯಿತು. ಅದರಿಂದ ೩ನೇ ಮಹಾಸಭೆಯನ್ನಾದರೂ ಇಲ್ಲಿ ಕೂಡಿಸಬೇಕೆಂದು ನಿಶ್ಚಿತಮನಸ್ಸುಳ್ಳವರಾಗಿದ್ದರು. ಆದರೆ ವಿಧಿಯು ವೀರಶೈವ ಸಮಾಜವನ್ನು ದುಃಖಾಂಬುಧಿಯಲ್ಲಿ ತಳ್ಳಿ, ಆ ದಿವ್ಯಮೂರ್ತಿಯನ್ನೇ ಶ್ರೀಮಂತ ಸಿರಸಂಗಿ ಲಿಂಗರಾಜರನ್ನೇ ಎತ್ತಿಕೊಂಡು ಹೋದದ್ದರಿಂದ ಆ ಕಾಲಕ್ಕೆ ಬೆಳಗಾವಿಯಲ್ಲಿ ಮಹಾಸಭೆ ಎಂಬ ಹೆಸರನ್ನೇ ತೆಗೆಯಲಿಕ್ಕೆ ಅವಕಾಶವಿಲ್ಲದಂತಾಯಿತು. ಆದರೆ ಆ ಶ್ರೀಮಂತರ ಸಂಕಲ್ಪವು ನೆರವೇರುವ ಸಂಕೇತವಿದ್ದುದರಿಂದಲೋ ಬೆಳಗಾವ ಜಿಲ್ಲೆಯ ವೀರಶೈವರು ಧರ್ಮಜಾಗ್ರತರಾಗುವ ಸುಯೋಗವಿದ್ದುದರಿಂದಲೋ ಸಭೆಯನ್ನು ಜರುಗಿಸುವ ಸ್ಫೂರ್ತಿಯು ಶ್ರೀ ಶಿವಮೂರ್ತಿಸ್ವಾಮಿಗಳಲ್ಲಿ ಉಂಟಾಗಿ, ಅವರ ದೀರ್ಘಪ್ರಯತ್ನದಿಂದ ಈ ವರ್ಷದ ಮಹಾಸಭೆಯು ಇಲ್ಲಿ ನೆರವೇರುವದಾಯಿತು. ಕಾರಣ ಈ ಮಹನೀಯರು ಈ ಮಹಾಸಭೆಯ ವಿಷಯವಾಗಿ ತೋರ್ಪಡಿಸಿದ ಕರ್ತವ್ಯ ಜಾಗ್ರತೆಯನ್ನು ಇಲ್ಲಿ ತುಸುಮಟ್ಟಿಗೆ ವಿವರಿಸಿದರೆ ಅದು ಅಪ್ರಾಸಂಗಿಕವಾಗಲಾರದು.

ಅಕ್ಟೋಬರ ತಿಂಗಳು ಅರ್ಧ ಕಳೆದು ಹೋದರೂ ೬ನೇ ಮಹಾಸಭೆಯ ವಿಷಯವಾಗಿ ಎಲ್ಲಿಯೂ ಪ್ರಸ್ತಾಪ ಹೊರಡಲಿಲ್ಲ. ಅದನ್ನು ಕಂಡು ಶ್ರೀ ಶಿವಮೂರ್ತಿಸ್ವಾಮಿಗಳು ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಶಿರಸಂಗಿ ಇವರ ನಿಶ್ಚಿತವನ್ನೇ ಅಂತರಂಗದಲ್ಲಿಟ್ಟುಕೊಂಡು, ಇಲ್ಲಿ ಮಹಾಸಭೆಯನ್ನು ನೆರವೇರಿಸುವ ಯೋಚನೆಯನ್ನು ಮಾಡಿ, ರಾ.ಬ॥ಅರಟಾಳಸಾಹೇಬರವರನ್ನೂ ಸ್ಟ್ಯಾಂಡಿಂಗ್ ಕಮೀಟಿಯವರನ್ನೂ ವಿಚಾರಿಸಿ, ಹಿಂದೆ ಹೇಳಿದಂತೆ ಇಲ್ಲಿಯ ಹಿರೇಮಠದಲ್ಲಿ ಆಲೋಚನಾ ಸಭೆಗಳನ್ನು ಕೂಡಿಸಿ, ಇಲ್ಲಿಯೇ ಜನರಲ್ಲಿ ಧರ್ಮಾಭಿಮಾನದ ಸ್ಫೂರ್ತಿಯನ್ನುಂಟು ಮಾಡಿ ಅವರನ್ನು ಹುರಿದುಂಬಿಸಿ, ಮಹಾಸಭೆಯನ್ನು ಬೆಳಗಾವಿಯಲ್ಲಿಯೇ ಕೂಡಿಸುವದಾಗಿ ನಿರ್ಧರಿಸಿ, ಆ ಕ್ಷಣವೆ ಈ ವಾರ್ತೆಯನ್ನು ಸ್ವಾರ ಪದ್ರದ್ವಾರ ಸಮಸ್ತರಿಗೂ ಪ್ರಕಟಪಡಿಸಿದರು. ಕೂಡಲೆ ಕೆಲಸ್ಥಾನಿಕ ಜನರೂ ಚಚಡಿಯ ಶ್ರೀಮಂತ ಅಣ್ಣಾಸಾಹೇಬ ನಾಯಕ ಬಹದ್ದೂರ ದೇಸಾಯಿಯವರೂ, ಶ್ರೀಯುತ ವೀರಭದ್ರಪ್ಪ ನಿರ್ವಾಣಪ್ಪ ಘೋಡಗೇರಿ ಗೋಕಾಕ, ಮತ್ತು ಪರಮಸೆಟ್ಟಿ ಕಾಡಪ್ಪ ಪಾಟೀಲ ಗೋಕಾಕ, ಚೆನ್ನಬಸಪ್ಪ ಬಸಪ್ಪ ಲಕ್ಷೆಟ್ಟಿ ಯಾದವಾಡ, ಬಸೆಟ್ಟೆಪ್ಪ ಬಸಪ್ಪಾ ಮುತ್ತೂರ ರಬಕವಿ, ನೂರಂದಪ್ಪಾ ಸೆಟ್ಟಿ, ಅಥಣಿ, ನಾಗಪ್ಪಾ ಮಹಾಳಂಕ ಸಂಕೇಶ್ವರ, ರಾಜಶೇಖರಪ್ಪ ಶಿವಲಿಂಗಪ್ಪ ನಂದಿ ಪಾಟೀಲ ಸಂಪಗಾವ, ಚಂದ್ರಶೇಖರ ಶಿವಪ್ಪ ತೆಲಸಂಗ, ಶಿ।ರಾ।ರಾ।ಮಹಾಲಿಂಗಸ್ವಾಮಿ ಕಣಬರಗೀಮಠ, ನೀಲಕಂಠಗೌಡಾ ಪಾಟೀಲ ಮಾದನಬಾವಿ ಮುಂತಾದ ಪರಸ್ಥಳದ ಅಭಿಮಾನಿಗಳೂ ಬಹಳ ಶ್ರಮ ಬಿಟ್ಟು

ಮಹಾಸಭೆ ಮಂಟಪ ಮೊದಲಾದ ಎಲ್ಲ ಕಾರ್ಯಗಳನ್ನು ಬಹು ಉತ್ಸುಕತೆಯಿಂದ ಮಾಡತೊಡಗಿದ್ದುದರಿಂದಲೂ, ಸಭಾ ಕಾರ್ಯಕ್ಕೆ ತಗಲುವ ಯಚ್ಚ್ಯಾವತ್ ಧನವನ್ನು ಅಂದರೆ ಸುಮಾರು ಎಂಟು ಹತ್ತು ಸಾವಿರ ರೂಪಾಯಿಗಳ ಬಹು ದೊಡ್ಡ ರಕಮನ್ನು ಶ್ರೀ ಶಿವಮೂರ್ತಿ ಸ್ವಾಮಿಗಳೊಬ್ಬರೇ ಕೊಟ್ಟು, ಸ್ವಾಭಾವಿಕ ಉದಾರಭಾವವನ್ನು ವ್ಯಕ್ತಪಡಿಸಿದುದರಿಂದಲೂ ಇಲ್ಲಿ ಮಹಾಸಭೆಯು ಜರುಗುವದಾಯಿತು.

ಈ ಮಹಾಸಭೆಯ ವಿಷಯಕ್ಕೆ ವ್ಯಕ್ತಿಮಾತ್ರವಾಗಿ ಶಿವಮೂರ್ತಿಸ್ವಾಮಿಗಳಷ್ಟು ಕಾರ್ಯಭಾರವನ್ನು ವಹಿಸಿಕೊಂಡು, ಈವರೆಗೆ ಅವರಷ್ಟು ಪ್ರಯತ್ನವನ್ನು ತನು-ಮನ-ಧನ ಪೂರ್ವಕವಾಗಿ ಯಾರೂ ಮಾಡಿರಲಿಕ್ಕಿಲ್ಲೆಂದರೆ ಅತಿಶಯೋಕ್ತಿಯಾಗದು. ಸಮಾಜದ ಸೇವೆಗಾಗಿ ಇವರು ವ್ಯಕ್ತಪಡಿಸಿದ ಅಭಿಮಾನಕ್ಕೂ ವಹಿಸಿಕೊಂಡ ಪ್ರಯತ್ನಕ್ಕೂ ಕರ್ತವ್ಯಜಾಗ್ರತೆಗೂ ಪಾರಾವಾರವೇ ಇಲ್ಲೆಂದೆನ್ನಬಹುದು. "ಆಡಬಾರದು, ಆಡಿದ ಮೇಲೆ ಬಿಡಬಾರದು" ಎಂಬ ಸಾಮತಿಗನುಸಾರವಾಗಿ ಇವರು, ತಮ್ಮ ಮನೋದಾರ್ಢ್ಯವನ್ನು ಪ್ರತ್ಯಕ್ಷ ನಿದರ್ಶನಮಾಡಿಯೇ ಕೊಟ್ಟರು. ಮನೆಯ ಯಜಮಾನರು ತಮ್ಮ ಮನೆತನದ ಲಗ್ನ ಮುಂತಾದ ಯಾವದೊಂದು ಮಹತ್ಕಾರ್ಯಕ್ಕೆ ಯಾವ ಪ್ರಕಾರ ದಕ್ಷವಾಗಿ ನಿಂತಿರುವನೋ ಅದರಂತೆ ಶಿವಮೂರ್ತಿಸ್ವಾಮಿಗಳು, ಈ ಮಹಾಸಭಾಕಾರ್ಯವು ತಮ್ಮ ಮನೆತನದ್ದೇ ಎಂದು ಭಾವಿಸಿ ಅದಕ್ಕೆ ಕಂಕಣಬದ್ಧರಾಗಿ ನಿಂತಿರುವರೆಂಬದಕ್ಕೆ ಏನೂ ಅಡ್ಡಿಯಿಲ್ಲ. ಎಲ್ಲರೂ ಇಂಥ ಕಟ್ಟಭಿಮಾನಿಗಳೇ ಆದದ್ದಾದರೆ"ಆರಂಭ ಶೂರಾಃ ಖಲು ದಾಕ್ಷಿಣಾತ್ಯಃ" ಎಂದು ರೂಢವಾಗಿದ್ದ ದಾಕ್ಷಿಣಾತ್ಯರ ಅಪವಾದವು ಅಳಿದು ಹೋಗುವದರಲ್ಲಿ ಆಶ್ಚರ್ಯವೇನು? ಸತತೋದ್ಯೋಗದಿಂದಲೂ, ಸ್ಥಿರಪ್ರಯತ್ನದಿಂದಲೂ ಎಂತಹ ಘನಕಾರ್ಯಗಳೂ ಕೂಡ ಕೈಗೂಡತ್ತವೆಂಬ ಮಾತೂ ಉಪದೇಶಕ್ಕಿಂತ ಉದಾಹರಣೆಯೇ ಮೇಲುಂಟೆಂಬ ಮಾತೂ ಶಿವಮೂರ್ತಯ್ಯನವರ ಕಟ್ಟಭಿಮಾನವನ್ನೂ ವಿಶ್ವಪ್ರಯತ್ನವನ್ನೂ ತಮ್ಮ ತಮ್ಮ ಹೃದ್ದರ್ಪಣಗಳಲ್ಲಿ ಚಿತ್ರಿಸುವಂತಿದೆ. ಇದಲ್ಲದೆ ಇದೇ ಡಿಸೆಂಬರ ತಿಂಗಳ ೧೨ನೇ ತಾರೀಖಿಗೆ ನಿಶ್ಚಿತವಾಗಿದ್ದ ಇವರು ತಮ್ಮ ಸ್ವಂತ ಲಗ್ನವನ್ನು ಮಹಾಸಭೆಯ ಸಲುವಾಗಿ ತುರ್ತಕ್ಕೆ ಬಂದಿಟ್ಟು, ಆ ಲಗ್ನಮುಹೂರ್ತವನ್ನು ಮುಂದೆ ಹಾಕಿದರು. ಮಹಾಸಭೆಗಾಗಿ ವ್ಯಕ್ತಪಡಿಸಿದ ಇವರ ಪ್ರಯತ್ನವನ್ನೂ, ಧೈರ್ಯವನ್ನೂ ಎಷ್ಟು ಶ್ಲಾಘಿಸಿದರೂ ಅದು ಸ್ವಲ್ಪವೇ ಸರಿ. ಆರಂಭದಿಂದ ಕಡೆತನಕ ಎಲ್ಲ ಕಾರ್ಯಗಳಲ್ಲಿ ತಾವೇ ಸ್ವತಃ ಪ್ರವರ್ತಕರಾಗಿ ಎಲ್ಲ ಹಣವನ್ನೂ ತಾವೇ ವಹಿಸಿ, ಹಿಡಿದ ಕೆಲಸವನ್ನು ಹಠಾತ್ತಾಗಿ ನೆರವೇರಿಸಿಯೇ ಬಿಟ್ಟೇವೆಂದು ನಿರ್ಧರಿಸಿ, ತಮ್ಮ ಕೃತನಿಶ್ಚಯವನ್ನು ಪೂರೈಸಿಯೇ ಬಿಟ್ಟ, ಶಿವಮೂರ್ತಿಸ್ವಾಮಿಯವರ ಧನ್ಯವಾದವನ್ನು ಎಷ್ಟು ಮಾಡಿದರೂ ತೀರದು. ಇವರ ಪ್ರಯತ್ನವೇ ನಿಜವಾದ ಪ್ರಯತ್ನವು. ಆ ಪ್ರಯತ್ನದ ಫಲವೇ ಈ ಮಹಾಸಭೆಯು.

ಈ ಮಹಾಸಭೆಯ ಎಲ್ಲ ವಿವರವೂ ಬೆಳಗಾವಿ ಮಹಾಸಭೆಯ ರಿಪೋರ್ಟಿನಲ್ಲಿ ಸವಿಸ್ತರವಾಗಿ ಮುದ್ರಿಸಿರುತ್ತದೆ. ಬೇಕಾದವರು ನೋಡಿಕೊಳ್ಳಬಹುದು. ಈ ಮಹಾಸಭೆಯು ನಡೆದ ಸಮಯದಲ್ಲಿ ಬೆಳಗಾವಿ ಶಹರದಲ್ಲಿ ಸ್ವಲ್ಪ ಪ್ಲೇಗು ಇರುವದರಿಂದ ರಾ.ಬ॥ಅರಟಾಳ ಸಾಹೇಬರವರ ಪರಿವಾರದವರೂ, ಶ್ರೀಮಂತ ಚಚಡೀ ದೊರೆಗಳ ಪರಿವಾರದವರೂ ದಕ್ಷಿಣದಿಕ್ಕಿಗಿರುವ ಬೆಳಗಾವ ಖಾನಾಪುರ ರಸ್ತೆಗೆ ಹೊಂದಿ ಅನಿಗೋಳ ಗ್ರಾಮದ ಸೀಮೆಯಲ್ಲಿರುವ ಮಿ. ಆಬಾಜಿ ರಾಮಚಂದ್ರ ಸಾವಂತ ಶ್ರೀರಾಮತತ್ವಪ್ರಕಾಶ ಮುದ್ರಾಲಯ ಬೆಳಗಾವ ಇವರ ಬಂಗಲೆಯಲ್ಲಿ ಇದ್ದರು. ಮಹಿಳಾ ಪರಿಷತ್ತು ಆದ ಮರುದಿವಸ ಅಂದರೆ ರವಿವಾರ ಮಧ್ಯಾಹ್ನದಲ್ಲಿ ಮಹಾಸಭೆಗೆ ದಯಮಾಡಿಸಿದ ಯಾವತ್ತು ದೇಸಾಯಿ ದೇಶಪಾಂಡೆಯರಿಗಾಗಿಯೂ, ಸೆಟ್ಟರೂ ಸಾವಕಾರರೂ ಮೊದಲಾದ ಪ್ರಮುಖ ಮಂಡಳಿಗಾಗಿಯೂ ಇದೇ ಬಂಗಲೆಯಲ್ಲಿ ರಾವಬಹಾದ್ದೂರವರು ಬಹು ಸಮಾರಂಭದ

ಮೇಜವಾನಿಯನ್ನು ಮಾಡಿಸಿದ್ದರು. ಬಂದ ಮಹನೀಯರೆಲ್ಲ ಸಂತೋಷಗೊಂಡು ತಮ್ಮ ತಮ್ಮ ಸ್ಥಳಗಳಿಗೆ ತೆರಳುವವರಾದರು.

ತಾ॥೨೬-೨೭-೨೮-೨೯ನೇ ಡಿಸಂಬರ ಸನ್ ೧೯೧೨ರ ಇಸವಿಯಲ್ಲಿ ನಿಪ್ಪಾಣಿಯಲ್ಲಾದ ೭ನೇ ಶ್ರೀಮದ್ವೀರಶೈವ ಮಹಾಸಭೆ

ಶ್ರೀ ಶಿವಮೂರ್ತಿಸ್ವಾಮಿ ಕಣಬರಗೀಮಠ ಗೋಕಾಕ ಫಾಲ್ಸ ಇವರು ಬೆಳಗಾವಿಯಲ್ಲಾದ ೬ನೇ ಮಹಾಸಭೆಯನ್ನು ತ್ರಿಕರಣಪೂರ್ವಕವಾಗಿ ತಾವೊಬ್ಬರೇ ವೆಚ್ಚಮಾಡಿ, ನೆರವೇರಿಸಿದುದನ್ನು ಕಣ್ಣಾರೆ ಕಂಡು ಆ ಮಹಾಸಭೆಗೆ ದಯಮಾಡಿಸಿದ ಬೆಳಗಾವ ಜಿಲ್ಲಾ ಚಿಕ್ಕೋಡಿ ತಾಲೂಕ ಕುರಲೀಗ್ರಾಮದ ಪ್ರಚಂಡ ಸಾವಕಾರರಾದ ಶ್ರೀಮಂತ ಮಲ್ಲಪ್ಪಣ್ಣ ಸಿಂತ್ರೆಯವರ ಮನಸಿನಲ್ಲಿ ತಾವಾದರೂ ಒಂದು ಮಹಾಸಭೆಯನ್ನು ಇದಕ್ಕಿಂತಲೂ ಸಮಾರಂಭದಿಂದ ತಮ್ಮೊಬ್ಬರ ವೆಚ್ಚದಿಂದಲೇ ಜರುಗಿಸಬೇಕೆಂಬ ಸ್ಫೂರ್ತಿಯುಂಟಾಗಿ, ಅದು ಮನದಲ್ಲಿ ತಡೆಯದೆ ಆಗಿಂದಾಗ ಕಡೆಯ ದಿವಸ ಅಂದರೆ ತಾ. ೨೯-೧೨-೧೯೧೧ ಇಸವಿ ಶುಕ್ರವಾರ ದಿವಸ ಸಭೆಯಲ್ಲಿ ರಾ.ಬ॥ಅರಟಾಳ ಸಾಹೇಬರವರು ಅಧ್ಯಕ್ಷರಾಗ ಒಡಂಬಿಟ್ಟರೆ, ಮುಂದಿನ ವರ್ಷದ ಮಹಾಸಭೆಯನ್ನು ನಾನು ಕೊಲ್ಲಾಪುರದಲ್ಲಿ ಜರುಗಿಸುವ ಏರ್ಪಾಡು ಮಾಡುವೆನು " ಎಂದು ವಾಗ್ದಾನ ಮಾಡಿದ್ದರು. ಅದರಂತೆ ೭ನೇ ಮಹಾಸಭೆಯು ಕೊಲ್ಲಾಪುರದಲ್ಲಿ ಜರುಗಬೇಕಾಗಿತ್ತು. ಈ ಸಭೆಯು ಸಕಲ ಸಂಭ್ರದೊಡನೆ ಕೊಲ್ಲಾಪುರದಲ್ಲಿ ಜರುಗುವದೆಂದು ನಾವು ತಿಳಿದುಕೊಂಡಾಗ್ಯೂ ಕೆಲಕಾರಣಗಳ ಮೂಲಕ ಅಲ್ಲಿ ಮಾಡುವದನ್ನು ರಹಿತ ಪಡಿಸಿ, ಸಿಂತ್ರೆಯವರು ಧಾರವಾಡ ಜಿಲ್ಲಾ ತಾಲೂಕ ಹುಬ್ಬಳ್ಳಿಯಲ್ಲಿ ಮಾಡಬೇಕೆಂಬ ಮನಸ್ಸಿನಿಂದ ಅಲ್ಲಿಯ ವೀರಶೈವ ಮುಖಂಡರೊಡನೆ ಆಪ್ತಾಲೋಚನೆ ಮಾಡಲಾಗಿ, ಅದಕ್ಕೆ ಹುಬ್ಬಳ್ಳಿಯ ವೀರಶೈವರು "ಶ್ರೀಮಂತ ಸಿಂತ್ರೆಯವರ ವೆಚ್ಚದಿಂದ ನಮ್ಮ ಶಹರದಲ್ಲಿ ಮಹಾಸಭೆಯನ್ನು ಜರುಗಿಸುವರು ನಮಗೆ ಸಾಮಾನ್ಯವಾಗುತ್ತದೆಂ"ದು ಭಾವಿಸಿ, ಅದಕ್ಕೆ ಒಪ್ಪಿಗೆಯನ್ನು ಕೊಡಲಿಲ್ಲವಾದುದರಿಂದಲೂ, ಬೆಳಗಾವ ಜಿಲ್ಲೆಯಲ್ಲಿಯೇ ೨ ಮಹಾಸಭೆಗಳು ಜರುಗುವ ಸುಯೋಗವಿದ್ದುದರಿಂದಲೂ ಅದು ಕೊಲ್ಲಾಪುರ-ಹುಬ್ಬಳ್ಳಿಗಳಲ್ಲಿ ಆಡುವದು ತಪ್ಪಿ, ಚಿಕ್ಕೋಡಿ ಸ್ಟೇಶನದಿಂದ ೩೦ ಮೈಲು, ಕೊಲ್ಲಾಪುರದಿಂದ ೨೪ ಮೈಲು ಅಂತರದಲ್ಲಿರುವ ಚಿಕ್ಕೋಡಿ ತಾಲೂಕಿಗೊಳಪಟ್ಟು, ಸುಪ್ರಸಿದ್ಧ ವ್ಯಾಪಾರಸ್ಥಳವಾಗಿ, ಕುರಲೀ ಗ್ರಾಮದ ಸಮೀಪದಲ್ಲಿರುವ ನಿಪ್ಪಾಣಿಗ್ರಾಮದಲ್ಲಿ ಶ್ರೀಮಂತ ಸಿಂತ್ರೆಯವರ ವೆಚ್ಚದಿಂದಲೇ ನೆರವೇರುವಂತೆ ಸನ್ ೧೯೧೨ ಇಸವಿಯ ಅಕ್ಟೋಬರ ತಿಂಗಳ ಕೊನೆಗೆ ಗೊತ್ತಾಯಿತು. ಶ್ರೀಮಂತ ಸಿಂತ್ರೆಯವರಿಗೆ ವಾಗ್ದಾನ ಕೊಟ್ಟಂತೆ ಮೆಹರ್ಬಾನ ಕಮೀಶನರ ಸಾಹೇಬ ದಕ್ಷಿಣಭಾಗ ಇವರ ಕಡೆಯಿಂದ ಸರಕಾರೀ ರೀತಿಯಿಂದ ಮಂಜೂರಿ ಪಡಕೊಂಡು, ರಾವಬಹಾದ್ದೂರರವರು ಅಧ್ಯಕ್ಷ ಸ್ಥಾನವನ್ನು ವಹಿಸಲೊಪ್ಪಿಕೊಂಡರು. ಈ ಸಂಗತಿಯನ್ನು ಮಿ. ಶಾಂತವೀರಪ್ಪಣ್ಣಾ ಮೆಣಸಿನಕಾಯಿ ಚೆಯರಮನ್ ಸ್ಟ್ಯಾಂಡಿಂಗ್ ಕಮೀಟಿ ಧಾರವಾಡ ಇವರ ಮುಖಾಂತರ ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳಿಗೂ, ಶ್ರೀ ಬಿಳ್ಳೂರಸ್ವಾಮಿಗಳಿಗೂ, ಉಳಿದ ಪ್ರಮುಖ ವೀರಶೈವ ಮಹನೀಯರಿಗೂ ತಿಳಿಸಿ ಅವರ ಒಪ್ಪಿಗೆಯನ್ನು ಪಡೆದು, ಮಹಾಸಭೆಯ ಕೆಲಸಕ್ಕೆ ಪ್ರಾರಂಭಿಸಲ್ಪಟ್ಟಿತು. ಕೂಡಲೆ 'ಸ್ಟಾರ'ಪತ್ರದ್ವಾರವಾಗಿಯೂ, ಬೇರೆ ಆಮಂತ್ರಣ ಪತ್ರಿಕೆಗಳಿಂದಲೂ ವೀರಶೈವ ರಾಷ್ಟ್ರದಲ್ಲೆಲ್ಲ ಮಹಾಸಭೆಯ ವಾರ್ತೆಯನ್ನು ಪ್ರಕಟಮಾಡಿದರು.

ಇಷ್ಟು ತುಸುದಿವಸಗಳಲ್ಲಿ ಸಭಾಮಂಟಪ-ಅನ್ನಸಾಮಗ್ರಿ-ಮೋಟಾರಗಾಡಿ-ಬಗಿಡಮಣಿ-ಟಾಂಗಾಗಳ ವ್ಯವಸ್ಥೆಯಾಗುವದೂ, ಸಭೆಯು ಕೂಡುವದು ಅನೇಕರಿಗೆ ಅಸಾಧ್ಯವಾಗಿ ಕಂಡು ಬಂತು. ಆದರೂ ಶ್ರೀಮಂತ

ಸಿಂತ್ರೆಯವರು, ಸಾರ್ವಜನಿಕ ಕಾರ್ಯಗಳಲ್ಲಿ ಸದಾ ನಿರತರಾದ ಶ್ರೀಯುತ ಶಿವಮೂರ್ತಿಸ್ವಾಮಿ ಕಣಬರಿಗಿಮಠ ಗೋಕಾಕ ಫಾಲ್ಸ, ಇವರನ್ನು ನಿಪ್ಪಾಣಿಗೆ ತಾ. ೧೦ನೇ ನವಂಬರ ಸನ್ ೧೯೧೨ ಇಸವಿ ರವಿವಾರ ದಿವಸ ಬರಮಾಡಿಕೊಂಡು ರಾ,ರಾ। ಗುರುಮಲ್ಲಪ್ಪಣ್ಣಾ ಕೋಟವಾಲೆ ನಿಪ್ಪಾಣಿ ಇವರ ಗೃಹದಲ್ಲಿ ಒಂದು ಆಪ್ತಾಲೋಚನೆಯ ಸಭೆಯನ್ನು ಕೂಡಿಸಿ, ಈ ಶಿವಮೂರ್ತಿಸ್ವಾಮಿಗಳನ್ನು ಸ್ವಾಗತ ಕಮೀಟಿಯ ಅಧ್ಯಕ್ಷರನ್ನಾಗಿ ನಿಯಮಿಸಿದ್ದಲ್ಲದೆ, ಇವರ ಕುಟುಂಬ ಶ್ರೀಮತಿ ಸೌ। ಶಾಂತಮ್ಮ ಕಣಬರಿಗಿಮಠ ಇವರನ್ನು ಮೂರನೇ ಮಹಿಳಾ ಪರಿಷತ್ತಿನ ಸ್ವಾಗತ ಕಮೀಟಿಯ ಅಧ್ಯಕ್ಷರನ್ನಾಗಿಯೂ, ವಂಟಮುರಿಯ ಶ್ರೀಮಂತ ಸರದೇಸಾಯಿಯವರ ಪತ್ನಿಯವರಾದ ಸೌ।ಕಮಲಾಬಾಯಿ ಸಾಹೇಬರನ್ನು ಅಧ್ಯಕ್ಷಿಣಿಯರನ್ನಾಗಿಯೂ ಗೊತ್ತುಪಡಿಸಿದರು. ಕೂಡಲೆ ಸ್ವಾಮಿಗಳು ಬೆಳಗಾವಿ ಮಹಾಸಭೆಯಲ್ಲಿ ಕೆಲಸಮಾಡಿ ಸರಟೀಫಿಕೀಟು ಪಡೆದ ಮ.ರಾ। ವೀರಭದ್ರ ನಿರ್ವಾಣಪ್ಪ ಘೋಡಗೇರಿ ಗೋಕಾಕ, ಪರಮಸೆಟ್ಟಿ ಕಾಡಪ್ಪ ಪಾಟೀಲ ಗೋಕಾಕ, ಚೆನ್ನಬಸಪ್ಪ ಲಕ್ಷೆಟ್ಟಿ ಯಾದವಾಡ, ಮಹಾಲಿಂಗಸ್ವಾಮಿ ಕಣಬರಿಗಿಮಠ ಗೋಕಾಕ, ಬಸೆಟ್ಟೆಪ್ಪಾ ಮುತ್ತೂರ ರಬಕವಿ, ನೂರಂದಪ್ಪಾ ಸೆಟ್ಟಿ ಅಥಣಿ ಮೊದಲಾದ ಅಭಿಮಾನಶಾಲಿಗಳನ್ನು ಕರೆಯಿಸಿಕೊಂಡು ಬೆಳಗಾವಿಯ ಮಹಾಸಭೆಯಲ್ಲಿ ಇಡಿಸಿದಂತೆ, ಇಲ್ಲಿಯೂ ಯಾವತ್ತೂ ವ್ಯವಸ್ಥೆಯನ್ನಿಡಿಸಿದರು. ಶ್ರೀಮಂತ ಸಿಂತ್ರೆಯವರು ಹಿಡಿದ ಕೆಲಸವು ಕೊನೆಗಾಣುವ ಕುರಿತು ಧಾರಾಳವಾಗಿ ಹಣವನ್ನು ಖರ್ಚು ಮಾಡಿದುದರಿಂದಲೂ ಹಾಗೂ ನೇಮಿಸಿಕೊಂಡ ಕೆಲಸಗಳನ್ನು ಸರ್ವಮಹನೀಯರು ಮನಃಪೂರ್ವಕವಾಗಿ ಮಾಡಿ ತಿಂಗಳೊಪ್ಪತ್ತಿನಲ್ಲಿ ಸರ್ವವ್ಯವಸ್ಥೆಯನ್ನು ಮಾಡಿದರು. ಅಷ್ಟರಲ್ಲಿ ಮಹಾಸಭೆಯ ನೇಮಕವಾದ ದಿವಸವು ಸಮೀಪಿಸಿತು.

ಈ ಸಮಯಕ್ಕೆ ರಾವಬಹಾದ್ದೂರರವರು ಅಥಣೀ ತಾಲೂಕಿನಲ್ಲಿ ಫಿರತೀ ಮೇಲೆ ಇದ್ದರು. ಆಗ ಇವರ ಪ್ರಿಯಪುತ್ರಿಯವರಾದ ಶ್ರೀಮಂತ ಸೌ. ರುದ್ರಾಬಾಯಿಯವರಿಗೆ ಅಥಣೀ ಮುಕ್ಕಾಮಿನಲ್ಲಿ ೧೫-೨೦ ದಿವಸಗಳ ವರೆಗೆ ಜ್ವರದ ಬಾಧೆಯಿಂದ ಬಹಳೇ ಜಡ್ಡಾಗಿತ್ತು. ಯೋಗ್ಯ ಔಷಧೋಪಚಾರದಿಂದ ಮಹಾಸಭೆಯ ದಿವಸದೊಳಗಾಗಿ ಗುಣವಾಯಿತು. ಸಭೆಯ ದಿವಸಗಳು ಸಮೀಪಿಸುತ್ತಲೆ ರಾವಬಹದ್ದೂರರವರು ಎಲ್ಲಪಾರಹಟ್ಟಿ-ಕಬ್ಬೂರ ಮುಂತಾದ ಗ್ರಾಮಗಳ ಮುಕ್ಕಾಮು ತೀರಿಸಿ, ಚಿಕ್ಕೋಡಿ ತಾಲೂಕ ಚಿಕ್ಕೋಡಿಯ ಹತ್ತರಿರುವ ಚಿಂಚಲೀ ಗ್ರಾಮದ ಮುಕ್ಕಾಮ ಮಾಡಿ, ಸರ್ವಪರಿವಾರದೊಂದಿಗೆ ಡೇರೆಗಳಲ್ಲಿ ವಸತಿಯನ್ನು ಮಾಡಿದ್ದರು. ಇವರೊಡನೆಯೇ ಶ್ರೀಮಂತ ಚಚಡಿಯ ದೊರೆಗಳೂ ಅವರ ಪರಿವಾರವೂ ಇತ್ತು. ಇಲ್ಲಿಂದಲೇ ಮಹಾಸಭೆಗೆ ಹೋಗುವದಾಗಿ ನಿರ್ಧರಿಸಿ ರಾ.ಬ॥ರವರು ಯಾವತ್ತೂ ಪರಿವಾರವನ್ನು ಮುಂದಾಗಿಯೇ ಚಚಡಿಯ ಶ್ರೀಮಂತರೊಡನೆ ನಿಪ್ಪಾಣಿಗೆ ಕಳಿಸಿ, ತಾವೊಬ್ಬರೇ ಚಿಂಚಲೀ ಮುಕ್ಕಾಮಿನಲ್ಲಿದ್ದರು. ಪರಿವಾರವೆಲ್ಲ ನಿಪ್ಪಾಣಿಯಲ್ಲಿ ಪ್ರಶಸ್ತವಾಗಿರುವ ಸರಕಾರೀ ಡಿಸ್ಟ್ರಿಕ್ಟ ಬಂಗಲೆಯ ಸಮೀಪದಲ್ಲಿಯೇ ಭವ್ಯವಾದ ಅನೇಕ ಡೇರೆಗಳನ್ನು ಹೊಡಿಸಿದ್ದರು. ಪುರ ಶೃಂಗಾರವಾದರೂ ಅತಿ ಮನೋಹರವಾಗಿತ್ತು.

ಸಭಾಮಂಟಪ

ಸಭಾಮಂಟಪದ ಸೌಂದರ್ಯವು ಈವರೆಗೆ ಆದ ಆರೂ ಮಹಾಸಭೆಯ ಮಂಟಪಗಳಿಗಿಂತಲೂ ಮಿಗಿಲಾಗಿತ್ತು. ಈ ಅಂದವಾದ ಮಂಟಪವು ನಿಪ್ಪಾಣಿ ಗ್ರಾಮದ ಉತ್ತರಭಾಗಕ್ಕಿರುವ ಅತಿ ರಮಣೀಯವಾದ ಬೈಲಿನಲ್ಲಿ ಸುಮಾರು ೧೫೦ ಫೂಟು ಅಗಲು ೧೮೦ ಫೂಟು ಉದ್ದವಾಗಿ ಕಟ್ಟಲ್ಪಟ್ಟು, ಹೊರಮಗ್ಗಲಿಗೆ ಬಹು ಭವ್ಯವಾದ ಕಮಾನುಳ್ಳ ಮಹಾದ್ವಾರವನ್ನೂ ಅದರ ಮೇಲೆ ನಗಾರಿಖಾನೆಯನ್ನೂ ರಚಿಸಿದ್ದರು. ಮಹಾದ್ವಾರವು,

ದಿಲ್ಲೀದರ್ಬಾರ ಕಾಲಕ್ಕೆ ಕೊಲ್ಲಾಪುರದ ಶ್ರೀಮಂತ ಛತ್ರಪತಿ ಶಾಹೂಮಹಾರಾಜರವರು ದಿಲ್ಲಿಯಲ್ಲಿ ಬಿಡಾರಮಾಡಿದ ಸ್ಥಳದ ಮಹಾದ್ವಾರವು ಯಾವ ಮಾದರಿಯದಾಗಿತ್ತೋ ಅದೇ ಮಾದರಿಯಾಗಿ ಇದು ಕಟ್ಟಲ್ಪಟ್ಟಿತ್ತು. ದಿಲ್ಲಿಯಲ್ಲಿ ಕಟ್ಟಿದ ಆ ಕೊಲ್ಲಾಪುರದ ಕಲಾಕುಶಲಗಾರರನ್ನೇ ಕರತರಿಸಿ ಇದನ್ನು ಕಟ್ಟಿಸಿದ್ದರು. ದೂರಿಂದ ನೋಡುವವರಿಗೆ ಈ ಮಹಾದ್ವಾರವು ಬಹು ಸೊಬಗುಳ್ಳ ರಾಜವಾಡೆಯ ಮಹಾದ್ವಾರದಂತೆ ತೋರುತ್ತಲಿತ್ತು. ಮಹಾದ್ವಾರದ ಇಬ್ಬದಿಗಳ ಕೌಲೆಗಳ ಮೇಲೆ ಚಿತ್ರಕಲಾ ಸಾರ್ವಭೌಮನಾದ ಜಗಪ್ರಸಿದ್ಧ ರಾಜಾ ರವಿವರ್ಮಾ ಇವರ ಚಿತ್ರಗಳ ಮಾದರಿಯ ಸ್ತ್ರೀಪ್ರತಿಮೆಗಳು ರೇಖಿಸಲ್ಪಟ್ಟಿರುವದರಿಂದ ಅದು ಇನ್ನಿಷ್ಟು ಶೋಭೆಯುಳ್ಳದ್ದಾಗಿತ್ತು. ಮುಖಮಂಟಪದ ಶಿರೋಭಾಗದಲ್ಲಿ ಬ್ರಿಟಿಶಸಾಮ್ರಾಜ್ಯ ಲಕ್ಷಣ ಸೂಚಕವಾದ ರಾಜಚಿಹ್ನಗಳನ್ನು ವಿಧವಿಧದ ಬಣ್ಣಗಳಿಂದ ರಚಿಸಿದ್ದರು. ಮಂಟಪದೊಳಗೆ ಅಲ್ಲಲ್ಲಿಗೆ ಚಿತ್ರವಿಚಿತ್ರವಾದ ಬಣ್ಣದ ಕಂಬಗಳನ್ನು ಸ್ಥಾಪಿಸಿ ಭಾವಚಿತ್ರಗಳನ್ನೂ ಛತ್ತನ್ನೂ ಹೊಡೆದು, ವಿರಕ್ತರಿಗೂ ಮಹಾಸ್ವಾಮಿಗಳಿಗೂ ಸಿಂಹಾಸನಾಧಿಪತಿಗಳಿಗೂ ಉಚಿತಾಸನಗಳನ್ನೇರ್ಪಡಿಸಿ, ಅದರ ಕೆಳಭಾಗಕ್ಕೆ ಅಧ್ಯಕ್ಷರಿಗಾಗಿ ಅಂದವಾದ ಖುರ್ಚಿಯನ್ನಿರಿಸಿ ಅದರ ಎಡಬಲ ಭಾಗಗಳಿಗೆ ಸಂಸ್ಥಾನಿಕರಿಗೂ, ಸರದಾರರಿಗೂ, ದೇಸಾಯಿ-ದೇಶಮುಖ-ದೇಶಪಾಂಡೆ ಇನಾಮದಾರರಿಗೂ, ಸರಕಾರಿ ಕಾಮದಾರರಿಗೂ, ಆಜೀವ ಸಭಾಸದರಿಗೂ ಖುರ್ಚಿಗಳ ಸಾಲುಗಳನ್ನು ಇಡಿಸಿ, ಕೆಳಗಿನ ಭಾಗಕ್ಕೆ ಸರ್ವಭಾಗದ ಪ್ರತಿನಿಧಿಗಳಿಗೆ ಅಚ್ಚುಕಟ್ಟಾಗಿ ಖುರ್ಚಿಗಳನ್ನು ಇಟ್ಟು, ಅದರ ಎಡಬಲಕ್ಕೆ ತುಸು ಎತ್ತರಿಸಿದ ಸ್ಥಳದ ಮೇಲೆ ಉತ್ತಮ ಜಮಖಾನೆಯನ್ನು ಹಾಕಿ, ಪ್ರೇಕ್ಷಕ ಸಮೂಹದ ವ್ಯವಸ್ಥೆಮಾಡಿತ್ತು. ಅದರ ಆಚೆಯ ಮಗ್ಗಲಿಗೆ ತಿಳುವಾದ ಪರದೆಯನ್ನು ಕಟ್ಟಿ, ಸ್ತ್ರೀಯರಿಗಾಗಿ ಸ್ಥಳವನ್ನು ಕಾದಿಟ್ಟಿತ್ತು. ಸಭೆಯ ಮಧ್ಯದಲ್ಲಿ ಎಲ್ಲರಿಗೂ ಕಾಣುವಂತೆ ಶ್ರೀ ಪಂಚಮ ಜಾರ್ಜಬಾದಶಹರವರ ಮತ್ತು ಕೊಲ್ಲಾಪುರ ಛತ್ರಪತಿ ಶಾಹೂ ಮಹಾರಾಜರವರ ಭಾವಚಿತ್ರಗಳನ್ನು ಅಂದವಾದ ಕನ್ನಡಿಯ ಚೌಕಟ್ಟಿನಲ್ಲಿಟ್ಟು, ಪರಿಮಳ ಪೂರಿತ ಪೂಮಾಲೆಗಳನ್ನು ಹಾಕಿ ಸುಶೋಭಿಸಲ್ಪಟ್ಟಿತ್ತು. ಪತ್ರಕಾರರಿಗೆ ಉಚಿತಾಸನಗಳನ್ನು ನಿರ್ಮಿಸಿ, ಟೇಬಲ್ ಖುರ್ಚಿ ಕಾಗದ ಮಸಿ ಟಾಕುಗಳನ್ನಿಟ್ಟಿತ್ತು. ಪರಮತಸ್ಥರಿಗಾಗಿ ಒತ್ತಟ್ಟಿಗಾಗಿ ಉಚಿತವಾದ ವ್ಯವಸ್ಥೆಯನ್ನು ಮಾಡಿತ್ತು. ಮಂಟಪದ ಹೊರಮಗ್ಗಲಿಗೆ ಅನೇಕ ತಂಬೂಗಳನ್ನು ಹೊಡಿಸಿ ಫಲಾಹಾರದ ವ್ಯವಸ್ಥೆಯನ್ನೂ, ಟಿಕೀಟ ವಿಕ್ರೀ ಆಫೀಸನ್ನೂ, ವಿಭೂತಿ-ರುದ್ರಾಕ್ಷಿ ಧರ್ಮಗ್ರಂಥಗಳ ಅಂಗಡಿ, ಚಹಾ ಕಾಫಿ ಪೋಷ್ಟಿನ ವ್ಯವಸ್ಥೆ ಮಾಡಿ, ಅಲ್ಲಲ್ಲಿಗೆ ಸಿಬ್ಬಂದಿಗಳ ಪಹಾರೆ ಇಟ್ಟಿತ್ತು. ಹೊರಗೆ ಬೈಲಲ್ಲಿ ಬೇಕಾದಷ್ಟು ಜನರು ನಿಲ್ಲುವಂತೆಯೂ ವೃಕ್ಷಗಳ ಇಂಪಾದ ನೆರಳಲ್ಲಿ ಇಳಿದುಕೊಳ್ಳುವಂತೆಯೂ ತಜವೀಜು ಮಾಡಿತ್ತು. ಸಾರಾಂಶ, ವೀರಶೈವ ಸಮಾಜದ ಮುಕುಟಮಣಿಸದೃಶರಾದ ರಾ.ಬ॥ಅರಟಾಳ ಸಾಹೇಬರವರು ಅಧ್ಯಕ್ಷಸ್ಥಾನವನ್ನು ವಹಿಸುವದರಿಂದಲೇ ಈ ಸಭಾಮಂಟಪವು ಇಂತಹ ಅದ್ವಿತೀಯ ಶೋಭಾರಚನೆಯುಳ್ಳದ್ದಾಗಿ ನಿರ್ಮಿಸಲ್ಪಟ್ಟಿತ್ತೆಂದು ಹೇಳಬಹುದು. ಸೌಂದರ್ಯರಸವು ಸೂಸುವ ಸಭಾಮಂಟಪದಿಂದ ಶೋಭಿಸುವ ನಿಪ್ಪಾಣಿಪುರವು, ಈ ಮೇರೆಗೆ ಸರ್ವಾಂಗಸುಂದರವಾಗಿ ರಾ.ಬ॥ಅರಟಾಳ ದೊರೆಗಳ ಆಗಮನವನ್ನು ನಿರೀಕ್ಷಿಸುತ್ತಲಿತ್ತು.

ಅಧ್ಯಕ್ಷರ ಅದ್ವಿತೀಯ ಮೆರವಣಿಗೆ

ಮೊದಲಿಗೆ ಗೊತ್ತುಪಡಿಸಿದ ಪ್ರಕಾರ ರಾವಬಹಾದ್ದೂರ ಅರಟಾಳ ಸಾಹೇಬರು ನಿಪ್ಪಾಣಿಯ ೭ನೇ ಶ್ರೀಮದ್ವೀರಶೈವ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವದಕ್ಕಾಗಿ, ತಾರೀಖು ೨೫ನೇ ಡಿಸಂಬರ ೧೯೧೨ ಇಸವಿಯ ಬುಧವಾರ ಮಧ್ಯಾಹ್ನದ ಮೂರು ಘಂಟೆಯ ಸುಮಾರಕ್ಕೆ ಟಾಂಗೆಯ ಮೇಲಿಂದ ಬಿಜಯಂಗೈದರು.

ಈ ಮಹನೀಯರ ಆಗಮನವನ್ನು ಶ್ರೀಮಂತರು ಸೆಟ್ಟರು ಸಾವಕಾರರು ಅಧಿಕಾರಿಗಳು ಮೊದಲಾದವರಿಂದ ತುಂಬಿತುಳುಕುತ್ತಿರುವ ನಿಪ್ಪಾಣಿಯ ಊರಿಗೇ ಊರೇ ಉತ್ಕಂಠವಾಗಿ ಎದುರು ನೋಡುತ್ತಲಿತ್ತು. ಬಂದೊಡನೆ ಊರಿಂದ ಅರ್ಧಮೈಲು ಅಂತರದಲ್ಲಿ ವಿರಚಿಸಿದ ಶಿಬಿರದಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುವಷ್ಟರೊಳಗಾಗಿ ವಂಟಮುರಿಯ ಶ್ರೀಮಂತ ಸರದೇಸಾಯಿಯವರೂ, ಶ್ರೀಮಂತ ಚಚಡಿಯ ನಾಯಕ ಬಹಾದ್ದೂರ ದೇಸಾಯಿಯವರೂ, ಬ್ಯಾರಿಷ್ಟರ ಗರಡೀ ರುದ್ರಪ್ಪನವರೂ, ಮಿ॥ ರೇವಣಸಿದ್ಧಪ್ಪ ಕಿತ್ತೂರ, ರುದ್ರಯ್ಯನವರು ಅದರಗುಂಚಿ, ಗುರುಸಿದ್ಧಯ್ಯ ಹಿರೇಮಠ ಮಂಡಿಯಾಳ ಮೊದಲಾಗಿ ಯಾವತ್ತು ಮಹನೀಯರನ್ನೊಡಗೊಂಡು ಶ್ರೀಮಂತ ಸಿಂತ್ರೆ ಮಲ್ಲಪ್ಪಣ್ಣನವರು ರಾಜವೈಭವದಿಂದ ಎದುರ್ಗೊಂಡು, ರಾವಬಹಾದ್ದೂರರವರನ್ನು ಕಂಡು ಆನಂದಿಸಿ, ಹಸ್ತಲಾಘವವನ್ನು ಕೊಟ್ಟು ಆದರಿಸಿ, ಪರಸ್ಪರ ಕುಶಲಪ್ರಶ್ನೆಗಳಾದೊಡನೆ ಗಜಾರೋಹಣ ಮಾಡುವದಾಗಿ ರಾವಬಹಾದ್ದೂರರವರನ್ನು ವಿಜ್ಞಾಪಿಸಿದರು. ರಾಜೋಪಚಾರಕ್ಕೆ ಸದೃಶವಾದ ಈ ಬಹುಮಾನಕ್ಕಾಗಿ ರಾವಬಹಾದ್ದೂರರವರು ನೆರೆದ ಜನಸಮೂಹದ ಸಮ್ಮತಿಯನ್ನು ಪಡೆದು, ಸರ್ವತೋಮುಖವಾಗಿ ಶೃಂಗರಿಸಿದ ಮಹೋನ್ನತವಾದ ಆನೆಯ ಅಂಬಾರಿಯಲ್ಲಿ ಅಲಂಕೃತವಾದರು. ರಾ.ಬ॥ರವರು ತಾವು ಒಬ್ಬರೇ ಅಲಂಕೃತರಾಗಲಿಲ್ಲ. ತಾವು ಆನೆಯಂಬಾರಿಯ ಐಸಿರಿಯಲ್ಲಿ ಮೆರವಣಿಗೆಯನ್ನು ಹೊಂದುತ್ತಿರುವಾಗ ವಂಟಮುರಿಯ ರಾಜರಾದ ಶ್ರೀಮಂತ ಸರದೇಸಾಯಿಯವರು ಇತರ ವಾಹನದಲ್ಲಿ ಗಮಿಸುವದು ಅಪ್ರಶಸ್ತವಾದದ್ದೆಂದು ಅವಲೋಕಿಸಿ, ಸೂಕ್ಷ್ಮವಿಚಾರಿಗಳಾದ ರಾವಬಹಾದ್ದೂರರವರು ತಮ್ಮ ಒಂದು ಪಾರ್ಶ್ವದಲ್ಲಿ ಅವರನ್ನೂ ಇನ್ನೊಂದು ಪಾರ್ಶ್ವದಲ್ಲಿ ತಮ್ಮ ಮುದ್ದು ಮೊಮ್ಮಗನಾದ ಚಚಡಿಯ ಶ್ರೀಮಂತ ಚಂದ್ರಭೂಷಣ ದೇಸಾಯರನ್ನೂ ಪ್ರೇಮದಿಂದ ಕರೆದುಕೊಂಡು ಅಂಬಾರಿಯನ್ನು ಅಲಂಕರಿಸಿದರು.

ಆನೆಯೆಂದರೆ ಸಾಮಾನ್ಯವಾದ ಆನೆಯಲ್ಲ; ಮಹತ್ತಾದ ಆನೆ. ಕೊಲ್ಲಾಪುರ ಛತ್ರಪತಿ ಶ್ರೀಮಂತ ಶಾಹೂ ಮಹಾರಾಜರು ಪ್ರೇಮಪೂರ್ವಕ ಕಳಿಸಿದ ಅವರ ಪಟ್ಟದಾನೆ. 'ರಾಮಪ್ರಸಾದ'ವೆಂಬ ಅಭಿದಾನವುಳ್ಳ ಆನೆ. ರಾಜಠೀವಿಗೆ ಇರಲವಶ್ಯವಾದ ಯಾವತ್ತು ಅಲಂಕಾರಗಳಿಂದ ಅಲಂಕೃತವಾದ ಆನೆ. ಆನೆಯು ನೋಡಲಿಕ್ಕೆ ಭವ್ಯವೂ ರಮ್ಯವೂ ಉಳ್ಳದ್ದಾಗಿತ್ತು. ಬೆಳ್ಳಿ ಬಂಗಾರಗಳ ಆಭರಣಗಳಿಂದಲೂ, ಮಂಜುಳವಾದ ಧ್ವನಿಯಿಂದ ಬೆಳಗುತ್ತ ಇಬ್ಬದಿಗಳಲ್ಲಿ ಇಳಿಬಿದ್ದ ಗಂಟೆಗಳಿಂದಲೂ, ಚೀನಾಂಬರಗಳ ಆಚ್ಛಾದನದಿಂದ ಚಿತ್ರವಿಚಿತ್ರವಾಗಿ ಪ್ರಕಾಶಿಸುತ್ತಿರುವ ಕುಂಭಸ್ಥಳದಿಂದಲೂ ಅವರ್ಣನೀಯವಾದ ಆ ಆನೆಯು ನೋಟಕ್ಕೆ ಬಲು ನೀಟವಾಗಿತ್ತು. ಮುತ್ತಿನ ಝೂಲರಿಗಳಿಂದಲೂ, ರೇಸಿಮೆಯ ಗುಚ್ಛಗಳಿಂದಲೂ, ಹೊಳೆಯುತ್ತಿರುವ ಕಲಶಗಳಿಂದಲೂ ಅಲಂಕೃತವಾದ ಅಂಬಾರಿಯು ಆನೆಗಿಂತಲೂ ಅಲಂಕೃತವಾಗಿತ್ತೆಂದು ಹೇಳಲು ಪ್ರತ್ಯವಾಯ ತೋರುವದಿಲ್ಲ. ಆನೆಯೂ ಅಂಬಾರಿಯೂ ಸಿಂಗರತೆಯಲ್ಲಿ ಪರಸ್ಪರ ಪ್ರತಿಸ್ಪರ್ಧಿಸುತ್ತಲಿದ್ದವೆಂದು ಹೇಳಬಹುದು. ಅಂಬಾರಿಯಲ್ಲಿ ಉನ್ನತವಾದ ಆಸನದಲ್ಲಿ ಪರಮಪೂಜ್ಯ ಬ್ರಿಟಿಶ ಸಾರ್ವಭೌಮ ಶ್ರೀ ಪಂಚಮ ಜಾರ್ಜ ಬಾದಶಹರವರ ಭಾವಚಿತ್ರವು ಬೆಳಗುತ್ತಲಿತ್ತು. ಈ ಎಲ್ಲ ರಾಜೋಪಚಾರವು ನನಗೆ ಲಭ್ಯವಾಗಿದ್ದು ಬ್ರಿಟಿಶ ಸರಕಾರದ ಮಹಾಪ್ರಸಾದವೆಂದು ಬಗೆದು ರಾವಬಹಾದ್ದೂರರವರು ಆ ಬಾದಶಹರ ತಸ್ಬೀರನ್ನು ತಮ್ಮ ಶಿರೋಭಾಗದಲ್ಲಿರಿಸಿಕೊಂಡರು. ರಾಜನಿಷ್ಠರೂ, ಕೃತಜ್ಞರೂ ಆದ ಮಹನೀಯರಿಗೆ ರಾಜಮರ್ಯಾದೆಯು ಲಭಿಸುತ್ತದೆಂಬುದು ಸುಳ್ಳಲ್ಲ.

ಸಾಹೇಬರೂ ಶ್ರೀಮಂತರೂ ಆನೆಯಂಬಾರಿಯನ್ನು ಆರೋಹಣ ಮಾಡುತ್ತಲೇ ಮಂಗಳವಾದ್ಯಗಳು ಮೊಳಗಿದವು. ಛತ್ರಚಾಮರಾಪ್ತಾಗಿರಿಗಳು ಅಂಬಾರಿಯನ್ನು ಮುತ್ತಿದವು. ಧ್ವಜಪತಾಕೆಗಳು ಎತ್ತಿದವು. ಕುದುರೆಗಳು ಕುಣಿಯಹತ್ತಿದವು. ಎತ್ತನೋಡಲು ಜನಪ್ರವಾಹವು ಮೇರೆದಪ್ಪಿ ಹರಿಯುತ್ತಲಿತ್ತು. ಅಂಬಾರಿಯ ಉಭಯ

ಪಾರ್ಶ್ವದಲ್ಲಿ ಸಮವಯಸ್ಕರೂ ಸುಂದರರೂ ಆದ ಇಬ್ಬರು ಬಾಲಕರು ಚಾಮರಗಳನ್ನು ಢಾಳಿಸುತ್ತಿದ್ದರು. ಮುಂದೆ ಮುಂದೆ ಸಾಲಂಕೃತರಾದ ವೇತ್ರಧಾರಿಗಳೂ, ಚೋಪದಾರರೂ, ವಂದಿಮಾಗಧರೂ, ಭಟ್ಟಂಗಿಗಳೂ ತಂತಮ್ಮ ಕಾರ್ಯಗಳಲ್ಲಿ ತತ್ಪರರಾಗಿ ನಡೆದಿದ್ದರು. ಕೊರಳಲ್ಲಿ ಪುತ್ಥಳಿಯ ಸರಗಳುಳ್ಳಂಥ, ಜರದ ಧಡಿಯುಳ್ಳಂಥ, ಕಾಲಲ್ಲಿ ಬೆಳ್ಳಿಯ ಸರಪಳಿಗಳುಳ್ಳಂಥ, ಹಣೆಯಲ್ಲಿ ಅರಳೆಲೆಯುಳ್ಳಂಥ ಕುದುರೆಗಳ ಸಾಲುಗಳು ಶೋಭೆಗೊಂಡಿದ್ದವು. ಇವುಗಳ ಮೇಲೆ ಉತ್ತಮವಾದ ಜರತಾರಿಯ ವಸ್ತ್ರಗಳಿಂದಲೂ ಆಭರಣಗಳಿಂದಲೂ ಅಲಂಕೃತರಾದ ರಾಹುತರು ಸಾಯುಧರಾಗಿ ಸಾಗಿದ್ದರು. ಇವುಗಳಲ್ಲಿ ಕೊಲ್ಲಾಪುರ ಮಹಾರಾಜರು ಕಳಿಸಿದ ೨೧ ಕುದುರೆಗಳಿದ್ದವು. ಈ ಕುದುರೆಗಳ ಮಧ್ಯದಲ್ಲಿ ಸುವರ್ಣದ ಶಿರಸ್ತ್ರಾಣ (ಉಷ್ಣೀಷ) ದಿಂದಲೂ, ನವರತ್ನಖಚಿತವಾದ ಆಭರಣಗಳಿಂದಲೂ ಮೌಲ್ಯವುಳ್ಳ ವಸ್ತ್ರಗಳಿಂದಲೂ ಶೋಭಿಸುತ್ತಿದ್ದ ಶ್ರೀಮಂತ ಸಿಂತ್ರೆಯವರ ಬಾಲಕನೋರ್ವನು, ಕೇವಲ ಸುವರ್ಣ ರಸ್ಮಿಯಿಂದ ಝಗಝಗಿಸುವ ಕಿರಿಗುದುರೆಯನ್ನೇರಿ ಬಾಲಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಈತನ ಮುಂದೆ ನಗಾರಿ ನೌಬತ್ತುಗಳನ್ನು ಹೇರಿದ ಉಷ್ಟ್ರಾರೂಢರೂ, ಮನೋಹರವಾದ ಸಂಸ್ಥಾನದ ಪೋಷಾಕುಳ್ಳ ವಂಟಮುರಿ ದೇಸಗತಿಯ ಕಾಲ್ದಳದ ರಾಜಭಟರೂ, ಭದ್ರತೆಗಾಗಿ ಬ್ರಿಟಿಶ ಸರಕಾರದಿಂದ ಬಂದ ಪೊಲೀಸ ಇನ್‌ಸ್ಪೆಕ್ಟರರಿಗೂ, ಕಾನಿಸ್ಟೇಬಲರೂ ದಕ್ಷರಾಗಿ ನಡೆದಿದ್ದರು. ಇವರಾಚೆಯಲ್ಲಿ ಶ್ರೀಮಂತ ಕೊಲ್ಲಾಪುರ ಛತ್ರಪತಿ ಮಹಾರಾಜರವರು ಕಳಿಸಿದ 'ಯಶವಂತ' ಎಂಬ ಹೆಸರಿನ ಇನ್ನೊಂದು ಮಹತ್ತಾದ ಆನೆಯು ತನ್ನ ದೀರ್ಘವಾದ ಶುಂಡಿಲದಲ್ಲಿ ಮನೋಹರವಾದ ಬೆಳ್ಳಿಯ ಹಿಡಿಕೆಯುಳ್ಳ ಶುಭ್ರವಾದ ಚಾಮರವನ್ನು ಢಾಳಿಸುತ್ತ ಪಟ್ಟದಾನೆಗೆ ಸಮ್ಮುಖವಾಗಿ ನಡೆದಿರುವದು. ಇದರ ಮುಂದೆ ಕರ್ನಾಟಕದ ದೂರ ದೂರಿನ ಸ್ಥಳಗಳಿಂದ ಮಹಾಸಭೆಗಾಗಿ ದಯಮಾಡಿಸಿದ ಪ್ರತಿನಿಧಿಗಳೂ ಪ್ರೇಕ್ಷಕರೂ ಇತರ ಸುತ್ತು ಹಳ್ಳಿಗಳ ಜನಸಮೂಹವೂ ಸಾಂದ್ರವಾಗಿ ಗಮಿಸುತ್ತಿರುವದು. ಮುಂದೆ ಮುಂದೆ ನಗಾರೆ-ನೌಬತ್ತು-ಡಂಕೆ-ಬ್ಯಾಂಡ-ಕರಡಿ-ಡೊಳ್ಳು-ಚೌಘಡೆ-ತಾಸೆ-ಬಜಂತ್ರಿ-ಕಹಳೆ-ಕರ್ನಿ ಮೊದಲಾದ ಅನೇಕ ಮಂಗಳವಾದ್ಯಗಳ ತೂರ್ಯಸ್ವನವು ದಿಗ್ತಟವನ್ನು ತುಂಬಿ ಆಕಾಶವನ್ನು ವ್ಯಾಪಿಸುತ್ತಲಿರುವದು. ರಾ.ಬ||ರುದ್ರಗೌಡರ ಪ್ರತಾಪಾತಿಶಯವನ್ನು ಸುತ್ತಲೂ ಸಾರುವಂತೆ ಕಹಳೆ ಕರ್ನಿಗಳೂ, ನಗಾರಿ ನೌಬತ್ತುಗಳೂ ಗಂಭೀರವಾಗಿ ಮೊಳಗುತ್ತಿದ್ದವು. ನಡುನಡುವೆ "ರುದ್ರಗೌಡ ಮಹಾರಾಜಕೀ ಜಯ" ಎಂಬ ಜಯಘೋಷವು ಉಚ್ಚಸ್ವರದಿಂದ ಉಚ್ಚರಿಸಲ್ಪಟ್ಟು, ವಾಯುಪಥದಲ್ಲಿ ವಿಲೀನವಾಗಿ ಹೋಗುತ್ತಿತ್ತು.

ಪಟ್ಟದಾನೆಯ ಹಿಂದೆ ಅನೇಕ ಸ್ವಾಮಿಗಳೂ ಶ್ರೀಮಂತರೂ ದೇಸಾಯಿ ದೇಶಮುಖ ದೇಶಪಾಂಡೆಯರೂ ಜಹಾಗೀರದಾರರೂ ಇನಾಮದಾರರೂ ಗೌಡಶಾನಭೋಗರೂ ಸೆಟ್ಟಿಸಾವಕಾರರೂ ಸರಕಾರೀ ಅಧಿಕಾರಿಗಳೂ ಕಾರಕೂನರೂ ವಕೀಲರೂ ಸಾರವಾಟಗಾಡಿಗಳನ್ನೇರಿ ಸಾಲ್ಗೊಂಡು ಬರುತ್ತಿದ್ದರು. ಕೆಲವರು ಟಾಂಗೆಗಳನ್ನೇರಿದ್ದರು. ಎಷ್ಟೋ ಮಹನೀಯರು ಪಾದಚಾರಿಗಳಾಗಿ ಗಮಿಸುತ್ತಿದ್ದರು. ಎದೆಯ ಮೇಲೆ ಕೆಂಪು ಸಕಲಾತಿಯ ಬಿಲ್ಲೀ ಪಟ್ಟಿಗಳನ್ನು ಹಾಕಿ ಹಳದೀಪಟಿಕೆಗಳನ್ನು ಸುತ್ತಿದ ಮಹಾಸಭೆಯ ಸ್ವಯಂಸೇವಕರಾದ ತರುಣ ವೀರಶೈವರ ತಂಡಗಳು ನಿಯಮಿತ ಕಾರ್ಯಗಳಲ್ಲಿ ತತ್ಪರರಾಗಿ ನಡೆದಿದ್ದರು. ಸರದಾರರೂ, ಸ್ವಾರರೂ ಸಜ್ಜಾಗಿ ಸಾಗಿದ್ದರು. ಈ ಮೇರೆಗೆ ಅರ್ಧಮೈಲಿನ ಅಂತರದಿಂದ ಊರ ಉದ್ದಕ್ಕೂ ಜನಪ್ರವಾಹವು ಸಾಂದ್ರವಾಗಿ ಹರಿದುಹೋಗುತ್ತಲಿತ್ತು. ಇಷ್ಟು ವೈಭವದೊಂದಿಗೆ ಐತರುವ ಪ್ರಭುವನ್ನು ಬಹು ಆದರದಿಂದ ಸ್ವಾಗತ ಮಾಡುವದಕ್ಕೆ ಸರ್ವತೋಮುಖದಿಂದ ಶೃಂಗಾರಳಾದ ಪುರಲಕ್ಷ್ಮಿಯು ಮೂರ್ತಿಮಂತಳಾಗಿ ಪ್ರಸನ್ನಳಾಗಿರುವಳೋ ಏನೋ ಎಂಬಂತೆ, ನಿಪ್ಪಾಣಿ ಗ್ರಾಮವು ಸರ್ವಾಂಗ ಸುಂದರವಾಗಿತ್ತು. ಸುಂದರವಾದ ಅಗಸಿಗಳಿಂದಲೂ ಭವ್ಯವಾದ ಕಮಾನುಗಳಿಂದಲೂ, ಸಾಂದ್ರವಾದ ತಳಿರ್ದೋರಣಗಳಿಂದಲೂ, ಗಣನೆಯಿಲ್ಲದ ಫರಫರಿಗಳಿಂದಲೂ,

ಉನ್ನತವಾದ ಧ್ವಜಪತಾಕೆಗಳಿಂದಲೂ, ವಸ್ತ್ರಾಭರಣಭೂಷಿತರಾದ ನರನಾರಿಯರಿಂದಲೂ ನಿಪ್ಪಾಣಿ ಪುರಿಯು, ರಾಜವೈಭವದಿಂದ ಎದುರಿಗೆ ಬರುತ್ತಿರುವ ರಾ.ಬ||ರುದ್ರಗೌಡ ಸಾಹೇಬರವರನ್ನು ಸ್ವಾಗತಮಾಡಲಿಕ್ಕೆ ಒಯ್ಯಾರದಿಂದ ಎದ್ದು ನಿಂತಂತೆ ಒಪ್ಪುತ್ತಲಿತ್ತು.

ಪುರಪ್ರವೇಶ ಮಾತ್ರವೆ ಮಂಗಳವಾದ್ಯಗಳ ರಭಸವು ಇಮ್ಮಡಿಸಿತು. ಈ ತೂರ್ಯಸ್ವನವೂ ಪುರೀಜನದ ಕಲಕಲಾಟವೂ ಜನಸಮೂಹದ ಜಯ ಜಯಕಾರವೂ ಕೂಡಿ ಉಂಟಾದ ಧ್ವನಿಯನ್ನು ಜಲಧಿಘೋಷಕ್ಕೆ ಹೋಲಿಸಬಹುದಲ್ಲದೆ, ಅದಕ್ಕೆ ಎರಡನೆಯ ಉಪಮೆಯು ದೊರೆಯದು. ಅಹಾ! ಈ ಸೌಭಾಗ್ಯವೂ ಅಧಿಕಾರವೂ ಇವುಗಳನ್ನನುಭೋಗಿಸುವ ಸುದೈವವೂ ಸಾಮಾನ್ಯ ಜನರಿಗೆ ದೊರೆಯುವದು ದುರ್ಲಭವು!ದೇವಾಂಶ ಸಂಭೂತರಿಗೇ ಮಾತ್ರ ಇವು ಲಭ್ಯವು. ಸಾಹೇಬರು ಇಷ್ಟು ವೈಭವದೊಂದಿಗೆ ರಾಜಬೀದಿಯಲ್ಲಿ ಅಂಬಾರಿಯ ಮೇಲೆ ಮೆರವಣಿಗೆಯನ್ನು ಹೊಂದುತ್ತ ನಡೆದಿರುವಾಗ, ಅನೇಕ ಸ್ತ್ರೀ ಪುರುಷರು ಸೌಧಗಳನ್ನೇರಿಕೊಂಡು ಸಾಹೇಬರನ್ನು ಕಣ್ತುಂಬಾ ನೋಡಿ, ದೇವರು ತಮಗೆ ಕೊಟ್ಟ ನೇತ್ರಗಳ ಸಾಫಲ್ಯವನ್ನು ಮಾಡಿಕೊಂಡರು. ಜನರು ನಿಂತು ನೋಡಲಿಕ್ಕೆ ಕಟ್ಟೆಗಳೂ, ಕುಂಬಿಗಳೂ, ಮಹಡಿಗಳೂ, ಮಹಾಲುಗಳೂ, ಮೇಲುಪ್ಪರಿಗೆಗಳೂ ಸಾಲಲಿಲ್ಲ. ಮಾಳಿಗೆಗಳೆಲ್ಲ ಸ್ತ್ರೀಸಮೂಹದಿಂದ ತುಂಬಿತುಳುಕುತ್ತಲಿದ್ದವು. ಇಂಥ ಅಪೂರ್ವವಾದ ಸಮಾರಂಭವು ಬೀದಿಯುದ್ದಕ್ಕೂ ಹಬ್ಬಿಕೊಂಡು ಸ್ವಚ್ಛಂದವಾಗಿ ಸಾಗುತ್ತಲಿತ್ತು. ಇದನ್ನು ನೋಡಿದರೆ ಅಪಾರವಾದ ಸಮುದ್ರದಲ್ಲಿ ಮಹೋನ್ನತವಾದ ನೌಕೆಯು ಸಾಗಿಬರುತ್ತಿರುವಂತೆ, ಈ ವಿಶಾಲವಾದ ಜನಪ್ರವಾಹದಲ್ಲಿ ಅಂಬಾರಿಯಿಂದ ಅಲಂಕೃತವಾದ ಗಜೇಂದ್ರವು ತೇಲಿ ಹೋಗುತ್ತಲಿತ್ತು.

ಇಷ್ಟು ಸಂಭ್ರಮದಿಂದ ಮೆರವಣಿಗೆ ಸಾಗುವಾಗ ಅಂಬಾರಿಯಲ್ಲಿದ್ದ ರುದ್ರಮೂರ್ತಿಯ ಸುಪ್ರಸನ್ನ ಮುಖಮಂಡಲವು ಆನಂದದಿಂದ ತುಂಬಿತುಳುಕುತ್ತಲಿತ್ತು. ಈ ಮೇರೆಗೆ ನಿಪ್ಪಾಣಿಯ ರಾಜಮಾರ್ಗಗಳಲ್ಲಿ ಮೆರವಣಿಗೆ ಹೊಂದುತ್ತ ಸರ್ವಜನರೊಂದಿಗೆ ಗ್ರಾಮದ ಕಡೆಯ ಅಗಸಿಯನ್ನು ದಾಟಿ ಗಜೇಂದ್ರವು ವಿಶಾಲವಾದ ತಂಬೂಗಳಿಂದ ರಮಣೀಯವಾದ ಡಿಸ್ಟ್ರಿಕ್ಟ ಆಫೀಸರ್ಸ ಬಂಗಲೆಯ ಬಾಗಿಲಿಗೆ ಬರಲು ಕದಲಾರತಿಯಾಗಿ ಸಾಹೇಬರ ಮೇಲೆ ಮೊಸರು ಅನ್ನವನ್ನು ನಿವಾಳಿಸಿ ಒಗೆದರು. ನಿವಾಳಿಯ ಟೆಂಗಿನಕಾಯಿಯೂ ಒಗಿಯಲ್ಪಟ್ಟಿತು. ಸರ್ವಾಂಗಸುಂದರಿಯರೂ, ಸರ್ವಾಲಂಕಾರ ಭೂಷಿತೆಯರೂ ಆದ ರಾ.ಬ||ಪುತ್ರಿಯವರಾದ ಶ್ರೀಮಂತ ಸೌಭಾಗ್ಯವತಿ ರುದ್ರವ್ವ ದೇಸಾಯಿಣಿಯವರು ವಿಜಯಶಾಲಿಗಳಾದ ತಂದೆಯವರಿಗೆ ಮಂಗಳಕರವಾದ ಆರತೀಮಾಡಿದರು. ಸಾಹೇಬರು ಮಾವುತನಿಗೆ ಮೆಚ್ಚುಗೊಟ್ಟು ಆನೆಯಿಂದಿಳಿದು, ಬಂಗಲೆಯ ಮುಂಭಾಗದ ಪ್ರಶಸ್ತವಾದ ಅಂಗಣದಲ್ಲಿ ನಿರ್ಮಿಸಿದ ಕೂರ್ಚಾಸನದಲ್ಲಿ ಕುಳಿತುಕೊಂಡರು. ಬಂದ ಜನರೆಲ್ಲರು ಉಚಿತಾಸನಗಳಲ್ಲಿ ಕುಳಿತುಕೊಂಡರು. ಯೋಗ್ಯ ಸಂಭಾಷಣಗಳಿಂದ ಸಾಹೇಬರನ್ನು ಸತ್ಕರಿಸಿ, ಅಪ್ಪಣೆಯನ್ನು ತೆಗೆದುಕೊಂಡರು. ತಂತಮ್ಮ ಬಿಡಾರಗಳಿಗೆ ತೆರಳಿದರು. ಭಗವಾನ್ ಸೂರ್ಯನಾರಾಯಣನಾದರೋ ಈ ರುದ್ರಮೂರ್ತಿಯ ಪ್ರಭಾವದ ಮುಂದೆ ನನ್ನ ಪ್ರಭಾವವು ರಮ್ಯದೋರದೆಂದು ಬೇಗನೆ ಮೊಗದೆಗೆದನೋ ಎಂಬಂತೆ ಅಸ್ತಂಗತನಾದನು. ಈ ಮೇರೆಗೆ ಆ ದಿವಸ ಮಧ್ಯಾಹ್ನದ ೪ ಗಂಟೆಗೆ ಹೊರಟ ಅಪ್ರತಿಮವಾದ ಮೆರವಣಿಗೆಯ ಸಮಾರಂಭವು ಸಂಜೆಯ ೭ ಘಂಟೆಯ ವರೆಗೆ ನಡೆಯುವದಾಯಿತು. ಈ ಮೇರೆಗೆ ಸರ್ವಜನರಲ್ಲಿಯೂ, ಸಕಲ ಪರಿವಾರದಲ್ಲಿಯೂ ಹೊಂದಿದ ರಾಜಮನ್ನಣೆಯನ್ನು ಕಂಡು, ರಾವಬಹಾದ್ದೂರರವರು ಆನಂದಾಶ್ರುಗಳನ್ನುದುರಿಸುತ್ತಿದ್ದರೂ ಈ ಆನಂದದ ಪಾಲುಗಾರರಾಗಲಿಕ್ಕೆ ತಮ್ಮ ಪತ್ನಿಯವರು ಇರಲಿಲ್ಲವೆಂದು ಅವರ ಸ್ಮರಣವಾಗಿ, ಆ ಆನಂದಾಶ್ರುಗಳೊಡನೆ ಕೆಲ ದುಃಖಾಶ್ರು ಬಿಂದುಗಳೂ ಮಿಶ್ರವಾಗಿದ್ದವು. ರಾವಬಹಾದ್ದೂರರವರಂತೆ ಅವರ ಸರ್ವಪರಿವಾರವೂ ಆ ಸಮಯದಲ್ಲಿ ಶ್ರೀಮತಿ ಗುರುಪಾದವ್ವನವರನ್ನು ಸ್ಮರಿಸುವವರಾದರು.

ಈ ಮೆರವಣಿಗೆಯ ಸಮಾರಂಭವನ್ನು ಕಣ್ಣಾರೆ ಕಂಡು ಶ್ರೀ ರಾ।ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಊರ್ಫ ಕಂಬಿ ಪಾರಿಶ್ವಾಡ, ತಾಲೂಕ ಖಾನಾಪುರ, ಶಾಳಾ ಮಾಸ್ತರ ಕಿತ್ತೂರ, ತಾಲೂಕ ಸಂಪಗಾವ ಇವರು ಈ ಸಮಾರಂಭ ದ್ಯೋತಕವಾದ ಒಂದೇ ಒಂದು ಪದವನ್ನು ರಚಿಸಿ ಮುದ್ರಿಸಿ ಸಮಾರಂಭದಲ್ಲಿ ಹಂಚಿದರು. ಆ ಪದ್ಯವನ್ನು ಅವಗಾಹನೆಗಾಗಿ ಇಲ್ಲಿ ಕೊಡುತ್ತೇವೆ.

ರಾಗ-ಕೇದಾಗೌಳ:ತಾಳ-ಛಾಪ

ಏನು ಹೇಳಲಿ ರುದ್ರಗೌಡರೈಶ್ವರ್ಯವ। ಆನೆಯಂಬಾರಿಯನೇರಿ ಬರುವವನು ॥ಏನು ... ॥ಪಲ್ಲ॥

ಛತ್ರಚಾಮರ ಆಪ್ತಾಗಿರಿ ಬಿರುದಾವಳಿ। ಮುತ್ತಿನ ಝೂಲರಿ ಎತ್ತಿ ಥಾಳಿಸುತಿರೆ ॥ಏನು.... ॥೧॥

ಧನ್ಯಧನ್ಯ!ಚನ್ನವೀರಗೌಡಾತ್ಮಜ। ಅಣ್ಣ ರುದ್ರಾಖ್ಯರ ಪುಣ್ಯಪ್ರತಾಪವ ॥ ಏನು.... ॥೨॥

ಗಜಾಶ್ವರಥಗಳು ಸುಜನ ಪದಾತಿಗಳು। ವಿಜಯ ವಾದ್ಯಂಗಳು ಮೊಳಗುತಿರುವದನು ॥ಏನು... ॥೩॥

ರಾಜವೈಭವದಿಂದ ರಾರಾಜಿಸುತ್ತಿಹ। ರಾಜರ ಗಡಣದಿ ತೇಜದೊಳಿರುವದನು ॥ಏನು... ॥೪॥

ಸಿಂತ್ರೆ ಮಲ್ಲಪ್ಪನವರ ಸಂತೋಷಾಶ್ರಯವನು। ಅಂತ ಸಪ್ತಮಸಭೆಯ ಅಧ್ಯಕ್ಷರಾದುದನು ॥ ಏನು ... ॥೫॥

ಭಪ್ಪರೆ ಬಹಾದ್ದೂರ ಅಪ್ಪ ರುದ್ರಗೌಡ। ನಿಪ್ಪಾಣಿ ಊರೊಳು ಒಪ್ಪುತಿರುವದನು ॥ಏನು... ॥೬॥

ಅಸಮ ಮಹಿಮನೆಂದು ವಸುಧೆಗೆ ಹೆಸರಾ। ಬಸವರಾಜನಂತೆ ಎಸೆಯುತಿರುವದನು ॥ಏನು... ॥೭॥

ಈ ಒಂದೇ ಒಂದು ಪದದಿಂದ ಚಾಣಾಕ್ಷರಾದ ವಾಚಕರು ಮೆರವಣಿಗೆಯ ಸಮಾರಂಭವು ಎಷ್ಟು ಉತ್ಸವದಿಂದ ಜರುಗಿತೆಂಬದನ್ನು ಸಹಜವಾಗಿ ಊಹಿಸಬಹುದು. ಈ ಸಮಾರಂಭಕ್ಕೆ ಸುಮಾರು ೨೫೦೦೦ ಇಪ್ಪತ್ತೈದು ಸಾವಿರ ಜನಸ್ತೋಮವು ಕೂಡಿತ್ತೆಂದು ನಿರ್ವಿವಾದವಾಗಿ ಹೇಳಬಹುದು.

ಮರುದಿವಸ ಅಂದರೆ ತಾರೀಖು ೨೬ನೇ ಡಿಶಂಬರ ಸನ್ ೧೯೧೨ ಇ. ಗುರುವಾರ ದಿವಸ ರಾವಬಹಾದ್ದೂರರವರು ಪುನಃ ಶೃಂಗರಿಸಿದ ಆನೆಯಂಬಾರಿಯಲ್ಲಿ ಶ್ರೀಮಂತ ವಂಟಮುರಿಯ ಸರದೇಸಾಯಿಯವರನ್ನೂ, ಚಚಡಿಯ ಚಿಕ್ಕದೇಸಾಯರಾದ ಶ್ರೀಮಂತ ಚಂದ್ರಭೂಷಣ ಕುಮಾರನನ್ನೂ ಕೂಡ್ರಿಸಿಕೊಂಡು ನಿನ್ನಿನ ದಿವಸದಂತೆಯೇ ಮಂಗಳವಾದ್ಯಗಳ ರಭಸರೊಂದಿಗೆ ಮಹಾವೈಭವದಿಂದ ನಿಪ್ಪಾಣಿಯ ರಾಜಬೀದಿಯಲ್ಲಿ ಹಾಯ್ದು ೨ ಗಂಟೆಯ ಸುಮಾರಕ್ಕೆ ಕಡು ಸಡಗರದಿಂದೊಡಗೂಡಿದ ಸಭಾಮಂಟಪಕ್ಕೆ ದಯಮಾಡಿಸಲು ವೀರಶೈವ ಪ್ರಮುಖರು ಅವರನ್ನು ಎದುರ್ಗೊಂಡು, ಜಯಘೋಷದೊಡನೆ ಒಳಗೆ ಕರೆದೊಯ್ದು ಉಚಿತಾಸನದ ಮೇಲೆ ಕೂಡ್ರಿಸಿದ ನಂತರ ಸಭೆಯ ಕೆಲಸಕ್ಕೆ ಪ್ರಾರಂಬಿಸಲ್ಪಟ್ಟಿತು. ಆರಂಭಕ್ಕೆ ಸತ್ಕಾರಕ ಸಂಘದ ಅಧ್ಯಕ್ಷರಾದ ಶ್ರೀ ಶಿವಮೂರ್ತಿ ಸ್ವಾಮಿ ಕಣಬರಗಿಮಠ ಇವರು ಸಭೆಯ ಮುಂದೆ ಬಂದು, ಗಂಭೀರವಾಣಿಯಿಂದ

ಸರ್ವರಿಗೂ ತಿಳಿಯುವಂತೆ ತಮ್ಮ ಭಾಷಣವನ್ನು ಮಾಡಿದರು. ಅನಂತರ ಮಿ. ಶಾಂತವೀರಪ್ಪಣ್ಣ ಮೆಣಸಿನಕಾಯಿ ಇವರು ರಾ.ಬ. ರುದ್ರಗೌಡಾ ಅಣ್ಣಾ ಅರಟಾಳ ಆಯ್.ಎಸ್.ಓ. ಇವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಸೂಚಿಸಿದರು. ಅದಕ್ಕೆ ವಂಟಮುರಿಯ ಶ್ರೀಮಂತ ಲಖಮಗೌಡಾ ಬಸವಪ್ರಭು ಸರದೇಸಾಯಿಯವರು ಅನುಮೋದನ ಕೊಡಲು ಸರ್ವಾನುಮತದಿಂದ ಅರಟಾಳ ಸಾಹೇಬರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಆಗ್ಗೆ ಕೈ ಚಪ್ಪಾಳೆಯಿಂದ ಸಭಾಸದರೆಲ್ಲರೂ ತಮ್ಮ ಆನಂದವನ್ನು ವ್ಯಕ್ತಗೊಳಿಸಿದರು. ಕೂಡಲೆ ರಾವಬಹಾದ್ದೂರರವರು ಎದ್ದು ನಿಂತು ತಾವು ಬರೆದು ತಂದಿದ್ದ ಇಂಗ್ಲೀಷ ಭಾಷಣವನ್ನು ಓದದಲೆ ಸರ್ವಜನರಿಗೂ ತಿಳಿಯಬೇಕೆಂಬ ಸದುದ್ದೇಶದಿಂದ ಜನರ ವಿನಂತಿಯನ್ನು ಮಾನ್ಯಮಾಡಿ ತಮ್ಮ ಭಾಷಣವನ್ನು ಮಾಡುವ ಪೂರ್ವದಲ್ಲಿಯೇ ತಾರೀಖು ೨೩ನೇ ಡಿಶಂಬರ ಸನ್ ೧೯೧೨ ಇ. ದಿವಸ ಹಿಂದುಸ್ತಾನದಲ್ಲಿ ಹೊಸರಾಜಧಾನಿಯಾದ ದಿಲ್ಲೀ ನಗರಪ್ರವೇಶದ ಮಹೋತ್ಸವದ ಕಾಲಕ್ಕೆ ನಮ್ಮ ವೈಸರಾಯರಾದನೇಕ ನಾಮದಾರ ಲಾರ್ಡ ಹಾರ್ಡಂಜರವರು ತಮ್ಮ ದೊರೆಸಾನಿ ಸಹಿತ ಗಜಾರೋಹಣರಾದ ಸಮಯದಲ್ಲಿ ಯಾವನೋ ದುಷ್ಟ-ಭ್ರಷ್ಟ-ನೀಚ-ಅಧಮಾಧಮನು ಅವರ ಪ್ರಾಣಘಾತವನನು ಮಾಡಬೇಕೆಂಬ ದುರಾಲೋಚನೆಯಿಂದ ಸಿಡಿಮದ್ದನ್ನು (ಬಾಂಬನ್ನು) ಎಸೆದನು. ಅದು ನಮ್ಮೆಲ್ಲರ ಸುದೈವದಿಂದಲೂ ಈಶ್ವರನ ಆಶೀರ್ವಾದದಿಂದಲೂ ತಪ್ಪಿ ಅವರ ಪ್ರಾಣವು ಉಳಿದ ಬಗ್ಗೆ ಆ ನೀಚನರಾಧಮನ ಅಸುರೀಕೃತ್ಯವನ್ನು ನಿಷೇಧಿಸುವದಕ್ಕೆ ಅವರು ಈ ಗಂಡಾಂತರದಿಂದ ಮುಕ್ತರಾದ ಬಗ್ಗೆ ಆನಂದವನ್ನು ಪ್ರದರ್ಶನಮಾಡುವ ಕುರಿತು ಸೂಚನೆಯನ್ನು ಸಭೆಯ ಮುಂದೆ ತಂದರು. ಕೂಡಲೆ ಅದು ಸರ್ವಾನುಮತದಿಂದ ಪಾಸಾಗಿ ಕೆಳಗೆ ಬರೆದಂತೆ ಠರಾವು ಮಾಡಿ ಮೆ. ರುದ್ರಪ್ಪಾ ಅಣ್ಣಾ ಗರಡಿ ಬ್ಯಾರಿಷ್ಟರ ಅಟಲಾ ಮುಂಬಯಿ ಇವರಿಂದ ಓದಿಸಿ ಸರ್ವಾಧಿಪತಿಗೆ ಕೂಡಲೆ ತಾರು ಕಳಿಸಿದರು.

"ಲಾರ್ಡ ಹಾರ್ಡಿಂಜ ಮತ್ತು ಲೇಡಿ ಹಾರ್ಡಿಂಜ ಪ್ರಭೃತಿಗಳ ಪ್ರಾಣಹರಣಕ್ಕಾಗಿ ಮಾಡಲ್ಪಟ್ಟ ನೀಚ ಮತ್ತು ಭ್ರಷ್ಟ ಪ್ರಯತ್ನವು ನಿಷ್ಫಲವಾಗಿ ಉಭಯತರೂ ಈ ಮಹದಾಪತ್ತಿನಿಂದ ಪಾರಾದ ಬಗ್ಗೆ ಈ ಮಹಾಸಭೆಗೆ ಅತ್ಯಂತ ಆನಂದವಾಗುವದಲ್ಲದೆ, ಈ ಅತಿ ನೀಚ ನಿಂದಾಸ್ಪದವಾದ ಹೇಡಿತನದ ಕೆಲಸವನ್ನು ಈ ಮಹಾಸಭೆಯು ಅತ್ಯಂತ ಬಲವಂತಿಕೆಯಿಂದ ತಿರಸ್ಕರಿಸುತ್ತದೆ. ಹಾಗೂ ಲಾರ್ಡ ಹಾರ್ಡಿಂಜ ಪ್ರಭುಗಳವರು ಹಿಂದುಸ್ತಾನದೊಳಗಿನ ತಮ್ಮ ಉದಾತ್ತಕಾರ್ಯಭಾಗವನ್ನು ಪುನಃ ವಹಿಸುವದಕ್ಕೆ ಸಮರ್ಥರಾಗುವಂತೆ ಬೇಗನೆ ಪೂರ್ಣ ದೇಹಾರೋಗ್ಯವುಳ್ಳವರಾಗಲೆಂದು ಒಮ್ಮನಸ್ಸಿನಿಂದ ಆಶಿಸುತ್ತದೆ."

ಇದಾದ ಬಳಿಕ ಅಧ್ಯಕ್ಷರು ತಮ್ಮ ಅನುಭವಜನ್ಯವಾದ ಭಾಷಣವನ್ನು ಮಂಜುಳವಾಣಿಯಿಂದ ಸರ್ವರಿಗೂ ತಿಳಿಯುವಂತೆ ಸಭೆಯ ಎಲ್ಲ ವಿಷಯಗಳ ಮೇಲೆ ಉತ್ತಮರೀತಿಯಿಂದ ಮಾಡಿದರು. ತಮ್ಮ ಸಮಾಜೋನ್ನತಿಯ ಬಗ್ಗೆ ಇನ್ನೂ ಮಾಡಬೇಕಾಗುವ ಸುಧಾರಣೆಯ ವಿಷಯಗಳ ಭಾಷಣ ಮಾಡುವಾಗ್ಗೆ ಅವರ ಕಂಠದ ಶಿರಗಳು ಬಿಗಿದು ಕಣ್ಣಿನಿಂದ ಅಶ್ರುಬಿಂದುಗಳು ಪಟಪಟನೆ ನೆಲಕ್ಕೆ ಉದುರಿದವು. ಇದರ ಮೇಲಿಂದ ಸಮಾಜ ಸುಧಾರಣೆಯ ಬಗ್ಗೆ ಇವರ ಕಳಕಳಿಯು ಎಷ್ಟಿರುವದೆಂಬುದು ಪ್ರತಿಯೊಬ್ಬರಿಗೂ ತಿಳಿದು ಧನ್ಯ, ಧನ್ಯ, ಶಹಾಬಾಶ್ ನಿಜವಾದ ಸುಧಾರಣಾ ಪುರುಷರು ನೀವೇ!ಸೈ!ಸೈ! ಎಂದು ಎಲ್ಲರ ಕರತಾಡಣ ಮಾಡಿ, ಅಧ್ಯಕ್ಷರನ್ನು ಸಂತೋಷಗೊಳಿಸಿದರು. ಅವಕ್ಕೆ ಅನುರೂಪವಾದ ಮನಗಂಡ ಉದಾಹರಣೆಗಳಿಂದಲೂ ರಸವತ್ತಾಗಿ ನಡೆದುದರಿಂದ ಚಕಿತರಾದ ಸಭಾಸದರಿಗೆ ವೇಳೆ ಹೋದದ್ದೇ ಗೊತ್ತಾಗಲಿಲ್ಲ. ವೇಳೆ ಬಹಳವಾದದರಿಂದ, ಆ ದಿವಸದ ಸಭೆಯ ಕೆಲಸವನ್ನು ನಿಲ್ಲಿಸಿದರು. ಮುಂದೆ ಅರ್ಧತಾಸಿನ ಮೇಲೆ ಸ್ಟ್ಯಾಂಡಿಂಗ್ ಕಮೀಟಿಯ ಸಭಾಸದರೇ ಸಬ್‌ಜೆಕ್ಟ ಕಮೀಟಿಯ ಮೆಂಬರರಾಗಿ ಮರುದಿವಸದ ವಿಷಯಗಳನ್ನು ಗೊತ್ತುಪಡಿಸಿ ರಾತ್ರಿ ೮ ಗಂಟೆಗೆ ಭೋಜನಕ್ಕೆ ಹೋದರು. ಆ ದಿವಸ ರಾತ್ರಿ ಅಲ್ಲಲ್ಲಿಗೆ ನಡೆದಿರುವ ಭಜನೆಯ ಮೇಳವನ್ನೂ, ಕರಡೀ ಡೊಳ್ಳಿನ ಮಜಲನ್ನೂ,

ಸಂಗೀತ ನಾಟಕವನ್ನೂ, ಕುದುರೆಯ ಸರಕಸ್‌ನ್ನೂ ಪ್ರಸಿದ್ಧ ಬಡಕುಂದ್ರೀ ಬಸಪ್ಪನ ಕನ್ನಡ ಪಾರಿಜಾತ ಆಟವನ್ನೂ ನೋಡಿ, ರಸಿಕ ಜನರು ಸಂತೋಷಪಡುವವರಾದರು.

ಮರುದಿವಸ ತಾ. ೨೭ನೇ ಡಿಶಂಬರ ೧೯೧೨ ಇ. ಶುಕ್ರವಾರ ದಿವಸ ನಿಯಮಿತ ವೇಳೆಗೆ ಸರಿಯಾಗಿ ಸಭೆಯು ಕೂಡಿ ಅನೇಕ ವಿದ್ವಾನ ಗೃಹಸ್ಥರ ಅನುಭವಜನ್ಯವಾದ ಭಾಷಣೆಗಳಾದವು. ಎಂದಿನಂತೆ ಸಾಯಂಕಾಲಕ್ಕೆ ಮತ್ತೆ ಸಬ್‌ಜೆಕ್ಟ ಕಮೀಟಿಯು ರಾ.ಬ. ಶಾಂತವೀರಪ್ಪಣ್ಣಾ ಮೆಣಸಿನಕಾಯಿ ಇವರ ಅಧ್ಯಕ್ಷತೆಯಲ್ಲಿ ಕೂಡಿ, ಮರುದಿವಸದ ವಿಷಯಗಳನ್ನು ಗೊತ್ತುಮಾಡಿದರು.

ಮಹಾಸಭೆಗೆ ಮೆ. ನಾಮದಾರ ಶೆಫರ್ಡ ಸಾಹೇಬ ಬಹಾದ್ದೂರ ಕಮೀಶನರ ದಕ್ಷಿಣಭಾಗ ಇವರ ಆಗಮನ

ಮೊದಲಿಗೆ ಆಶ್ವಾಸನಕೊಟ್ಟಂತೆ ಮರುದಿವಸ ಅಂದರೆ ತಾ. ೨೮ನೇ ಡಿಶಂಬರ ೧೯೧೨ ಇಸವಿ ಶನಿವಾರ ದಿವಸ ದಕ್ಷಿಣಭಾಗದ ಕಮೀಶನರರಾದ ನಾಮದಾರ ಮೆಹರ್ಬಾನ ಶೆಫರ್ಡಸಾಹೇಬ ಬಹಾದ್ದೂರರವರು ಬರುವವರಿದ್ದರು. ಆ ದಿವಸ ದಶದಿಕ್ಕುಗಳು ತುಂಬಿತುಳುಕುವಂತೆ ಎಲ್ಲ ನಾಗರಿಕರು ತಮ್ಮ ತಮ್ಮ ವ್ಯವಸ್ಥೆಗಳನ್ನು ಮಾಡಿಕೊಂಡು, ವಸ್ತ್ರಾಭರಣಗಳನ್ನು ಧರಿಸಿ, ಪ್ರಜೆಗಳನ್ನು ಮಕ್ಕಳಂತೆ ಕಾಪಾಡುವ ಪ್ರಭುಗಳ ದರ್ಶನಲಾಭವನ್ನು ಪಡೆಯುವ ಲವಲವಿಕೆಯುಳ್ಳವರಾಗಿ ೨-೩ ತಾಸು ಮುಂಚಿತವಾಗಿಯೇ ಪಟ್ಟಣದ ತುಂಬೆಲ್ಲ ಎತ್ತ ನೋಡಿದತ್ತೆಲ್ಲ ಜನಸ್ತೋಮವೇ ಆಗಿತ್ತು. ಅವರ ಸ್ವಾಗತಕ್ಕೆ ಸರಿಯಾದ ಯಾವತ್ತು ರಾಜೋಪಚಾರವು ಮುಂದಾಗಿಯೇ ಊರಹೊರಗೆ ಬೆಳಗಾವ ರಸ್ತೆಗೆ ಹೊಂದಿ ಇರುವ ಬಂಗಲೆಯಲ್ಲಿ ಇಡಿಸಲ್ಪಟ್ಟಿತ್ತು. ಗೊತ್ತಾದ ವೇಳೆಗೆ ಸರಿಯಾಗಿ ಅಂದರೆ ಮಧ್ಯಾಹ್ನದ ೨ ಗಂಟೆಗೆ ಸರಿಯಾಗಿ ಮೆಹರ್ಬಾನರವರ ಸ್ವಾರಿಯು ಮೋಟಾರ ಗಾಡಿಯ ಮೇಲೆ ವಾಯುವೇಗದಿಂದ ಬರುವದನ್ನು ದೂರಿನಿಂದಲೇ ಕಂಡು, ಅವರ ಮಾರ್ಗ ಪ್ರತೀಕ್ಷೆಯನ್ನೇ ಮಾಡುತ್ತ ಕೂತ ರಾ.ಬ॥ರುದ್ರಗೌಡ ಸಾಹೇಬರೂ, ಶ್ರೀಮಂತ ಸಿಂತ್ರೆಯವರೂ ಮೊದಲಾಗಿ ಯಾವತ್ತು ಮಹನೀಯರು ಆನಂದಭರಿತರಾದರು. ಹಾ.ಹಾ. ಅನ್ನುವದರೊಳಗಾಗಿ ಮೋಟಾರಗಾಡಿಯು ಹತ್ತರವೇ ಬಂದುಬಿಟ್ಟಿತು.

ಮೆಹರ್ಬಾನರವರ ಆಗಮನ ಮಾತ್ರವೆ ಮಂಗಳವಾದ್ಯಗಳು ಭೋರ್ಗರೆದವು. ಜಯಘೋಷವು ಮೇರೆದಪ್ಪಿತು. ಜನಸಮೂಹದ ಕಲಕಾಲಾಟವು ವೆಗ್ಗಳಿಸಿತು. ಈ ಜಯಧ್ವಾನದ ಸಂಭ್ರಮದಲ್ಲಿ ಪಟ್ಟದಾನೆಯು ಮನೋಹರವಾದ ಸೊಂಡಿಲದಿಂದ ಮೆ॥ರವರ ಕೊರಳಿಗೆ ಪುಷ್ಪಮಾಲೆಯನ್ನು ಹಾಕಿತು. ರಾವಬಹಾದ್ದೂರರವರು, ಮೆಹರ್ಬಾನರವರ ದರ್ಶನಮಾತ್ರ ಹಸ್ತಲಾಘವವನ್ನಿತ್ತು, ಗಜಾರೋಹಣಕ್ಕೆ ವಿಜ್ಞಾಪನೆಮಾಡಿದರು. ನಾಮದಾರ ಶೆಫರ್ಡಸಾಹೇಬ ಬಹಾದ್ದೂರರವರು ಈ ಸಮಾರಂಭಕ್ಕೆ ತಾವು ಒಬ್ಬರೇ ಬಂದಿರಲಿಲ್ಲ. ತಮ್ಮ ಅತ್ಯಂತ ಮಿತ್ರರಾದ ಮಿಸ್ಟರ ಎ.ಸಿ. ಮಿಲರ ಸಾಹೇಬ ಬಹಾದ್ದೂರ ಹೆಡ್‌ಮಾಸ್ತರ ಸರದಾರ್ಸ ಹೈಸ್ಕೂಲ ಬೆಳಗಾವ ಮತ್ತು ಮಿಸ್ಟರ ಸಿ.ಆರ್. ಡಬ್ಲ್ಯೂ ಗಿಪ್ರಿಥ ಬಿ.ಎ. ಆಕ್ಸಫರ್ಡ ಯುನಿವ್ಹರ್ಸಿಟಿ ಪ್ರಿನ್ಸಿಪಾಲ ಎಲ್ಫಿನಿಷ್ಟನ್ ಹೈಸ್ಕೂಲ ಮುಂಬಯಿ ಈ ಮಹನೀಯರೀರ್ವರನ್ನು ತಮ್ಮ ಆನಂದದ ಪಾಲುಗಾರರನ್ನಾಗಲು ಮಾಡಲಿಕ್ಕೆ ಸಂಗಡ ಕರೆಕೊಂಡ ಬಂದಿದ್ದರು. ಮಹನೀಯ ಪುರುಷರು "ವಸುಧೈವ ಕುಟಂಬಕಮ್"ಎಂಬಂತೆ ತಮಗಾದ ಸಂತೋಷವನ್ನು ಸಜ್ಜನರಿಗೆ ಹಂಚಿಕೊಡುತ್ತಾರೆಂಬುದು ಸುಳ್ಳಲ್ಲ. ಮೆ॥ರವರು ರಾವಬಹಾದ್ದೂರವರ ಹಾಗೂ ಜನಸಮೂಹದ ಆಗ್ರಹದಿಂದ ಆ ಉಭಯ ಮಹನೀಯರನ್ನೊಡಗೊಂಡು ಅಂಬಾರಿಯನ್ನಲಂಕರಿಸಿದರು. ಈ ಮೂವರೂ ಮಹಾಪುರುಷರಿಂದ ಅಲಂಕೃತವಾದ ಅಂಬಾರಿಯುಳ್ಳ ಗಜೇಂದ್ರವು ಯಥಾವತ್ತಾಗಿ ರಾಜವೈಭವದಿಂದ

ನಿಪ್ಪಾಣಿಯ ಪೇಟಿಯಲ್ಲಿ ಮೆರವಣಿಗೆಯನ್ನು ಹೊಂದುತ್ತ ಬರುವಾಗ, ಅದು ಜನರಿಗೆ ದಿಲ್ಲೀದರ್ಬಾರದಲ್ಲಾದ ಮೆರವಣಿಗೆಯ ಕಲ್ಪನೆಯನ್ನುಂಟುಮಾಡಿಕೊಡುತ್ತಲಿತ್ತು. ಗಜಾರೋಹಿಗಳಾದ ಆ ಮಹನೀಯ ತ್ರಿವರ್ಗರು ಈ ಅಪಾರವಾದ ಜನಸಮೂಹವನ್ನೂ, ಅಗಾಧವಾದ ರಾಜವೈಭವವನ್ನೂ, ಅಪ್ರತಿಮವಾದ ಪುರಶೃಂಗಾರವನ್ನೂ, ಅದ್ವಿತೀಯವಾದ ವೀರಶೈವ ಜನಾಂಗದ ರಾಜಭಕ್ತಿಯನ್ನೂ ಕಂಡು, ಅಸಾಧಾರಣವಾದ ಆನಂದವನ್ನು ತಾಳಿ, ನಮಗೆ ಈ ಸೌಭಾಗ್ಯವು ಲಭಿಸಿದ್ದು ಕೇವಲ ಈ ರಾವಬಹಾದ್ದೂರ ಅರಟಾಳ ಸಾಹೇಬರವರಿಂದಲೇ ಸರಿ. ಇವರ ಘನತೆಗೆ ಎಣೆಯಿಲ್ಲವೆಂದು ಪರಸ್ಪರ ಮಾತಾಡಿಕೊಳ್ಳುವವರಾದರು. ಈ ಅನುಪಮೇಯವಾದ ಸಮಾರಂಭದಲ್ಲಿ ಶ್ರೀಮಂತರು, ಸರದೇಸಾಯಿಯವರು, ದೇಸಾಯಿ, ದೇಶಮುಖ, ದೇಶಪಾಂಡೆಯರು ಜಹಾಗೀರದಾರರು, ಇನಾಮದಾರರು, ಬ್ಯಾರಿಷ್ಟರರು, ವಕೀಲರು, ಡಿ.ಡಿ. ಕಲೆಕ್ಟರರು, ಮಾಮಲೇದಾರರು, ಶಿರಸ್ತೇದಾರರು ಮುಂತಾದ ಮಹನೀಯರ ಗಡಣದೊಡನೆ ರಾವಬಹಾದ್ದೂರರವರು ಪಾದಚಾರಿಗಳಾಗಿ ನಡೆದಿದ್ದರು. ಹೋದವರ್ಷ ಇದೇ ತಿಂಗಳಲ್ಲಿ ದಿಲ್ಲಿಯಲ್ಲಿ ಬ್ರಿಟಿಶ ಸಾರ್ವಭೌಮರಾದ ಪರಮಪೂಜ್ಯರಾದ ಪಂಚಮಚಾರ್ಜ ಬಾದಶಹರವರು, ಗಜಾರೋಹಿಗಳಾಗಿ ರಾಜವೈಭವದಿಂದ ದರ್ಬಾರ ಮಂಟಪವನ್ನು ಕುರಿತು ಹೇಗೆ ಗಮಿಸುತ್ತಿದ್ದರೋ, ಅದೇ ಪ್ರಕಾರ ಈ ಹೊತ್ತು ನಿಪ್ಪಾಣಿಯಲ್ಲಿ ಬ್ರಿಟಿಶ ಸರಕಾರದ ಅಧಿಕಾರಿಗಳಾದ ನಾಮದಾರ ಮೆ. ಶೆಪರ್ಡಸಾಹೇಬ ಬಹಾದ್ದೂರರವರು ಗಜಾರೋಹಿತವಾಗಿ ಮಹಾವೈಭವದಿಂದ ಮಹಾಸಭಾಮಂಟಪವನ್ನು ಕುರಿತು ಗಮಿಸುತ್ತಿದ್ದರೆಂದು ಹೇಳಬಹುದು.

ಸಮಾರಂಭವು ಹಾಗೆಯೇ ಸಾಗಿಬರುವಾಗ ಮೆ||ರವರು, ತಮ್ಮ ಪ್ರಜೆಗಳು ತೋರಿಸುವ ಆನಂದದ ಮುಜುರೆಗಳನ್ನು ಮಂದಸ್ಮಿತ ಮುಖದಿಂದ ಸ್ವೀಕರಿಸುತ್ತ ಸಬಾಮಂಟಪದ ಮಹಾದ್ವಾರಕ್ಕೆ ಬರಲು, ಅಲ್ಲಿ ಅವರ ಭಾವಚಿತ್ರವನ್ನು ಪ್ರಸಿದ್ಧ ಫೋಟೋಗ್ರಾಫರ್ಸ ಎಸ್. ಮಹಾದೇವ ಆಂಡ ಸನ್ಸ್ ಬೆಳಗಾವ ಇವರಿಂದ ಚೆನ್ನಾಗಿ ತೆಗಿಸಿ, ಸಭೆಯ ಪ್ರಮುಖರೆಲ್ಲರು ಪುನಃ ದೊರೆಗಳ ಇದಿರುಗೊಂಡು ಸಭೆ ಪ್ರವೇಶ ಮಾಡಿಸಿದರು. ಸಭಾಮಂಟಪ ಪ್ರವೇಶ ಮಾತ್ರವೆ ಸಾಗರವು ಸೂರ್ಯಚಂದ್ರರು ಉದಿಸಿದ ಮಾತ್ರವೆ ಹೇಗೆ ಮಹಾಭರತಿಯನ್ನು ಹೊಂದುವದೋ ಈ ಸಭಾಸಾಗರವೂ ಉಕ್ಕೇರುವದಾಯಿತು. ಸಭಾಸದರ ಕರತಳದ ಗರ್ಜನೆಯಲ್ಲಿ ಈ ವಿಭೂತಿಗಳು ಆಸನದ ಬಳಿಗೆ ಬರಲು, ರಾವಬಹಾದ್ದೂರರವರು ಮೆಹರ್ಬಾನರವರಿಗೆ ಸಭೆಯ ಉನ್ನತಸ್ಥಳದಲ್ಲಿ ಝಗಝುಗಿಸುತ್ತಿರುವ ಕೂರ್ಚಾಸನದಲ್ಲಿ ಕೂಡ್ರಲು ಬಿನ್ನೈಸಲು ಅದಕ್ಕೆ ಅವರು ಒಪ್ಪದೆ "ಈ ಅಧ್ಯಕ್ಷರ ಆಸನವು ನಿಮ್ಮದು. ಸಭಾಸದರೆಲ್ಲರು ಬಹುಮರ್ಯಾದೆಯಿಂದ ನಿಮಗೆ ಸಮರ್ಪಿಸಿದ ಆಸನದ ಮೇಲೆ ಕೂಡುವ ಅಧಿಕಾರವು ನನ್ನದಲ್ಲ. ನೀವೇ ಕೂಡ್ರತಕ್ಕದ್ದು" ಎಂದು ರಾ.ಬ||ರವರ ಕೈಹಿಡಿದು ಖುರ್ಚಿಯ ಮೇಲೆ ಕೂಡ್ರಿಸಹೋದರು. ಅದಕ್ಕೆ ಪ್ರತಿಯಾಗಿ "ದೊರೆಗಳೇ ತಾವು ಹೇಳಿದ್ದು ನಿಜವದೆ. ಆದರೆ ಅದೇ ಆಸನವನ್ನು ನಾನು ನನ್ನ ಸಂತೋಷದಿಂದ ತಮಗೆ ಸಮರ್ಪಿಸುವೆನು. ನನ್ನ ಈ ಸಮರ್ಪಣೆಗೆ ಸಭಾಸದರೂ ನಮ್ಮತಿಸದೆ ಇರಲಾರರು. ತಾವು ಕೂಡ್ರಬೇಕೆಂದು ನನ್ನ ಪೂರ್ಣ ಅಪೇಕ್ಷೆಯಿರುತ್ತದೆ. ಕೂಡುವದಾಗಬೇಕು" ಎಂದು ಎಷ್ಟು ಹೇಳಿದರೂ ಮೆ||ರವರು ಒಡಂಬಡದೆ ರಾವಬಹಾದ್ದೂರರವರನ್ನು ಅಧ್ಯಕ್ಷಸ್ಥಾನಕ್ಕೆ ಕೂಡ್ರಿಸಿ, ತಾವು ಅವರ ಎಡಗಡೆಗೆ ರಚಿಸಿದ ಆಸನದ ಮೇಲೆ ಇಷ್ಟಮಿತ್ರರನ್ನೊಡಗೊಂಡು ವಿಶ್ರಮಿಸಿದರು.

ಆಹಾ!ರಾವಬಹಾದ್ದೂರ ಅರಟಾಳ ಸಾಹೇಬರ ಪುಣ್ಯಪ್ರಭಾವವು ಎಷ್ಟು ಗಹನವಾಗಿರುವದಯ್ಯಾ! ಏತಸ್ಸಭಾ ಪ್ರಸಂಗವು ಇವರನ್ನು ಈ ಹೊತ್ತು ತಮ್ಮ ವರಿಷ್ಠಾಧಿಕಾರಿಗಳ ಆಸನಕ್ಕಿಂತಲೂ ಮಿಗಿಲಾದ ಆಸನದಲ್ಲಿ ವಿರಾಜಮಾನಗೊಳಿಸತಲ್ಲವೆ!ಇಂಥ ಪುಣ್ಯಪುರುಷರ ಜನ್ಮವೇ ಸಾರ್ಥಕವು! ಈ ಮಹಾಶಯರಿಂದ ಅಲಂಕೃತವಾದ ಸಭೆಯೇ ಧನ್ಯವು.

ಈ ಮಹಾಸಭೆಯು ಈ ಕಾಲಕ್ಕೆ ಒಳ್ಳೇ ದರ್ಶನೀಯ ಸ್ವರೂಪವನ್ನು ಹೊಂದಿತ್ತು. ಮಧ್ಯಭಾಗದಲ್ಲಿ ರಾ.ಬ॥ರುದ್ರಗೌಡರು ಅಧ್ಯಕ್ಷರು. ಅಧ್ಯಕ್ಷರ ಎಡಭಾಗಕ್ಕೆ ನಾಮದಾರ ಕಮಿಶನರ ಸಾಹೇಬ ಬಹಾದ್ದೂರರವರು. ಅವರಿಗೆ ಹೊಂದಿ ಅವರ ಮಿತ್ರರಾದ ಮಿಸ್ಟರ ಮಿಲರ ಮತ್ತು ಗಿಫ್ರಿಥ ಸಾಹೇಬ ಬ॥ರವರು, ಬಲಭಾಗಕ್ಕೆ ಆನರೇಬಲ್ ವಂಟಮುರಿಯ ಸರದೇಸಾಯಿಯವರು, ಅವರ ಹತ್ತಿರವೇ ಬ್ಯಾರಿಷ್ಟರ ಗರಡೀ ರುದ್ರಪ್ಪನವರು, ಅಲ್ಲಿಯೇ ರಾವಸಾಹೇಬ ಆರ್.ಬಿ. ಕಿತ್ತೂರ, ಮಿಸ್ತರ ಅದರಗುಂಚಿ, ಮಿ॥ ಗುರುಸಿದ್ಧಯ್ಯಾ ಹಿರೇಮಠ, ಮಿ॥ ಶಾಂತವೀರಪ್ಪಾ ಮೆಣಸಿನಕಾಯಿ ಮೊದಲಾದ ಡೆಪುಟಿ ಕಲೆಕ್ಟರರು, ಅವರ ಬದಿಯಲ್ಲಿ ಎಷ್ಟೋಜನ ಮಾಮಲೇದಾರರು, ಶಿರಸ್ತೇದಾರರು, ವಕೀಲರು, ಕಾರಕೂನರು, ಸರ್ಕಲ್ ಇನಸ್ಪೆಕ್ಟರರು, ಇತರ ಅನೇಕ ಖಾತೆಯ ಸರಕಾರೀ ಅಧಿಕಾರಿಗಳು, ಅಲ್ಲಿಯೇ ಒತ್ತಟ್ಟಿಗೆ ಶ್ರೀವಂತ ಸರದೇಸಾಯಿ, ದೇಸಾಯಿ, ದೇಶಮುಖ,ದೇಶಪಾಂಡೆಯರ ಸಾಲು, ಇನ್ನೊತ್ತಟ್ಟಿಗೆ ಜಹಾಗೀರದಾರರು, ಇನಾಮದಾರರು, ದೊಡ್ಡ ದೊಡ್ಡ ವತನದಾರರು, ಬೇರೊಂದು ಬದಿಗೆ ಸೆಟ್ಟರು, ಸಾವಕಾರರು ಮತ್ತು ಸರಕಾರದಿಂದ ಘನತೆಯನ್ನು ಹೊಂದಿದ ಇತರ ಸದ್ಗೃಹಸ್ಥರು, ಇನ್ನೊಂದು ಕಡೆಗೆ ಮಹಾ ಮಹೋಪಾಧ್ಯಾಯರು, ವಿದ್ವಾಂಸರು, ಪಂಡಿತರು, ಬೇರೊಂದು ಕಡೆಗೆ ಗ್ರಂಥಕಾರರು, ಕವಿಗಳು, ಹಿಂದೆ ಉನ್ನತಾಸನದಲ್ಲಿ ಪಂಚಾಚಾರ್ಯಸ್ಥಾನಾಪನ್ನರಾದ ಹಿಮಾಲಯಸ್ಥ ಬದರಿಕೇದಾರದ ಮಹಾಸ್ವಾಮಿಗಳೇ ಮೊದಲು ಮಾಡಿ ಯಾವತ್ತು ಗುರುವೃಂದವು, ಒಂದೆಡೆಗೆ ವಿರಕ್ತರು, ಒಂದೆಡೆಗೆ ಗುರುಸ್ಥಲದವರು, ಅವರ ಬದಿಯಲ್ಲಿ ಪಟ್ಟದಾರ್ಯರು, ಚರಮೂರ್ತಿಗಳು, ಮತ್ತೊಂದು ಬದಿಯಲ್ಲಿ ಶಾಸ್ತ್ರಿಗಳು, ಪುರಾಣಿಕರು, ಅವರ ಹತ್ತರವೇ ಶಿಷ್ಯವೃಂದವು. ಬಲಗಡೆಗೆ ದೂರದಲ್ಲಿ ಪರದೆಯೊಳಗೆ ಮಹಿಳಾಮಣಿಯರು, ಎಡಗಡೆಗೆ ಸ್ವಲ್ಪ ದೂರದಲ್ಲಿ ಮುಂಬಯಿಯ ಟಾಯಿಮ್ಸ ಪತ್ರದ ಎಡಿಟರರು. ಮೈಸೂರ ಸ್ವಾರಕರ್ತರು, ಧಾರವಾಡದ ಧನಂಜಯಕಾರರು, ಬೆಳಗಾವಿಯ ಚಕಿಚ್ಛಕಪತ್ರದ ಸಂಪಾದಕರು, ವರ್ಷಾಡದ ವೀರಶೈವ ಪತ್ರಕರ್ತರು. ಮುಂಭಾಗದ ವಿಶಾಲವಾದ ಪ್ರದೇಶದಲ್ಲಿ ಪ್ರತಿನಿಧಿಗಳೂ ಪ್ರೇಕ್ಷಕರೂ ಆದ ಮಹಾಜನ ಸಮುದಾಯ. ಇವರೆಲ್ಲರಿಂದ ಕಿಕ್ಕಿಂಧವಾಗಿ ತುಂಬಿದ ಪ್ರಚಂಡವಾದ ಮಹಾಸಭೆಯ ಮಧ್ಯದಲ್ಲಿರುವ ಅಧ್ಯಕ್ಷಸ್ಥಾನದಲ್ಲಿ ರುದ್ರಮೂರ್ತಿಯ ಪ್ರತಿಭೆಯು ಅದ್ವಿತೀಯವಾಗಿ ಬೆಳಗುತ್ತಲಿತ್ತು. ಅಹಹಾ! ಈ ಸೌಭಾಗ್ಯವನ್ನೂ ವೈಭವವನ್ನೂ ಅಲ್ಪಮತೀಯನಾದ ನಾನು ಎಷ್ಟೆಂದು ವರ್ಣಿಸಲಿ!

ಕೂಡಲೆ ಸಭೆಯ ಕೆಲಸವು ಪ್ರಾರಂಭವಾಗಿ, ಮೈಸೂರ ಮಹಾರಾಣೀ ಕಾಲೇಜದಲ್ಲಿಯ ಶಿಕ್ಷಕಿಯರಾದ ಚೆನ್ನಮ್ಮನವರು ಇಂಗ್ಲಿಷದಲ್ಲಿ ತಮ್ಮ ಮನೋಹರವಾದ ಭಾಷಣವನ್ನು ಓದಿದರು. ಬಳಿಕ ಕೆಲವು ಭಾಷಣಗಳಾಗಿ ಮೆ॥ ರುದ್ರಪ್ಪಾ ಗರಡಿ ಬ್ಯಾರಿಷ್ಟರ ಅಟ್ ಲಾ ಮುಂಬಯಿ ಇವರ ಭಾಷಣವು ಇಂಗ್ಲಿಷದಲ್ಲಿ ಬಹಳ ಉತ್ತಮವಾಯಿತು. ಅನಂತರ ನಾಮದಾರ ಶೆಪರ್ಡ ದೊರೆಗಳು ನಮ್ಮ ವಿನಂತಿಯನ್ನು ಮಾನ್ಯಮಾಡಿ, ತಮ್ಮ ಅಡಚಣಿ ಮತ್ತು ಮಹತ್ವದ ಕೆಲಸಗಳನ್ನು ಬಿಟ್ಟು, ಮಾರ್ಗಾಯಾಸಪಟ್ಟು ಮಹಾಸಭೆಗೆ ದಯಮಾಡಿಸಿದುದಕ್ಕೆ ಸಭೆಯ ವತಿಯಿಂದ ಅಧ್ಯಕ್ಷರು ಅವರ ಆಭಾರಮನ್ನಿಸಲು, ನಾಮದಾರ ಪ್ರಭುಗಳು ಸಮಯಕ್ಕೆ ಶೋಭಿಸುವಂತೆ ತಮ್ಮ ಮಂಜುಳವಾಣಿಯಿಂದ ಇಲ್ಲಿ ಬಂದದ್ದಕ್ಕೆ ತಮಗಾದ ಆನಂದವನ್ನೂ, ವೀರಶೈವರಲ್ಲಿ ತಮ್ಮ ಪರಿಚಯದ ಅನೇಕ ಮಹನೀಯರ ದರ್ಶನಲಾಭಾವಾದದ್ದರಿಂದಲೂ ವೀರಶೈವರು ಹೊಂದುತ್ತಿರುವ ಪ್ರಗತಿಯನ್ನು ನೋಡಲು ತಮಗೆ ಇದು ಎರಡನೇ ಸಾರೆ ಸಿಕ್ಕಿದ್ದರಿಂದಲೂ ತಮ್ಮನ್ನು ಅಪೂರ್ವ ರೀತಿ ಮೆರವಣಿಗೆಯಿಂದ ಸನ್ಮಾನಿಸಿದ್ದಕ್ಕೆ ಸಂತೋಷಪಟ್ಟಿದ್ದನ್ನೂ ವ್ಯಕ್ತಪಡಿಸಿದರು. ಕೂಡಲೆ ಶ್ರೀಮಂತ ಮಲ್ಲಪ್ಪಾ ಅಣ್ಣಾ ಶಿಂತ್ರೆ ಇವರು ಪೂಮಾಲೆಗಳನ್ನು ಪ್ರಭುಗಳ ಹಾಗೂ ಅವರ ಮಿತ್ರರ ಕೊರಳಿಗೆ ಹಾಕಿ ಪರಿಮಳದ್ರವ್ಯಗಳಿಂದ ಅಲಂಕರಿಸಿ ಹೊರಗೆ ತಯಾರಿಸಿದ ಡೇರೆಯಲ್ಲಿ ಅವರೆಲ್ಲರನ್ನು ಕರೆದೊಯ್ದು ಅಲ್ಪಾಹಾರ ಮಾಡಿಸಿ, ಅವರ ಭಾವಚಿತ್ರಗಳನ್ನು ತೆಗೆದುಕೊಂಡ

ನಂತರ ಮೂವರೂ ಸಾಹೇಬ ಬಹಾದ್ದೂರರವರು ಪುನಃ ಮೋಟಾರಗಾಡಿಯಿಂದ ಬೆಳಗಾವಿಗೆ ಪ್ರಯಾಣ ಮಾಡಿದರು. ಬಳಿಕ ಅರ್ಧತಾಸಿನನಂತರ ಪುನಃ ಸಭೆಯು ಕೂಡಿ, ಕೊಲ್ಲಾಪುರ ಸಂಸ್ಥಾನದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಪ್ರೊಫೆಸರ ಲಠ್ಠೆ ಮತ್ತು ರಂಗೋ ಗೋವಿಂದ ನಾಯಿಕ ಮೊದಲಾದ ಅನೇಕ ಮಹನೀಯರ ಮಹತ್ವದ ಭಾಷಣಗಳಾದವು. ಮತ್ತು ಚೆನ್ನಬಸವ ಬಸವಾರ್ಯ ಹಿರೇಮಠ ಊರ್ಫ ಕಂಬಿ ಪಾರಿಶವಾಡ, ವಿದ್ಯಾರ್ಥಿ ಕಿತ್ತೂರ ಶಾಳಾ ನಂಬರ ೧ ಮತ್ತು ಸಿದ್ಧವೀರಸ್ವಾಮಿ ಕಣಬರಿಗಿಮಠ ಗೋಕಾಕ ಫಾಲ್ಸ ಈ ಆರೇಳು ವರ್ಷದ ವಯಸ್ಸಿನ ಇಬ್ಬರು ಬಾಲಕರ ಭಾಷಣಗಳು ಮನೋರಂಜನವಾಗಿ, ಇಬ್ಬರೂ ಬೆಳ್ಳಿಯ ಪದಕಗಳನ್ನು ಪಡೆದರು. ಈ ಮೇರೆಗೆ ಸಭೆಯ ಕೆಲಸವು ಸಂತೋಷದಿಂದಲೂ, ವಿಜೃಂಭಣೆಯಿಂದಲೂ ಸಾಗಿ, ರಾಷ್ಟ್ರಗೀತದೊಡನೆ ಸರ್ವರೂ ಪೂಮಾಲೆಗಳಿಂದಲೂ, ಪರಿಮಳ ದ್ರವ್ಯಗಳಿಂದಲೂ ಪರಾಮರಿಸಲ್ಪಟ್ಟರು. ಶ್ರೀಮಂತ ಸಿಂತ್ರೆ ಮಲ್ಲಪ್ಪಣ್ಣನವರ ಅಭಿಮಾನಕ್ಕೂ ಶ್ರಮಕ್ಕೂ, ಔದಾರ್ಯಕ್ಕೂ, ಶಿವಮೂರ್ತಿಸ್ವಾಮಿಗಳವರ ಸಾಹಸಕ್ಕೂ ಸುವ್ಯವಸ್ಥೆಗೂ, ಶ್ರೀಮಂತ ನಾಯಕ ಬಹಾದ್ದೂರ ದೇಸಾಯಿ ಚಚಡಿ ಮತ್ತು ಮಹಾಲಿಂಗಸ್ವಾಮಿ ಕಣಬರಿಗಿಮಠ ಇವರು ಮಹಾಸಭೆಯ ಸೆಕ್ರೆಟರಿಯ ಕೆಲಸವನ್ನು ಚೆನ್ನಾಗಿ ಮಾಡಿದ್ದಕ್ಕೂ, ಅವರಿಗೆ ಸಹಾಯ ಮಾಡಿದ ಸದ್ಗೃಹಸ್ಥರಿಗೂ, ಇನ್ನುಳಿದವರಿಗೂ ಆಭಾರಮನ್ನಿಸಲ್ಪಟ್ಟಿತು. ಅನಂತರ ಅಧ್ಯಕ್ಷರು ಉಪಸಂಹಾರಭಾಷಣವನ್ನು ಮಾಡಿ ಸಭಾವಿಸರ್ಜನವನ್ನು ಮಾಡಿದರು. ಈ ದಿವಸ ಸಭೆಗೆ ಸುಮಾರು ೧೨೦೦೦ ಜನರು ಕೂಡಿದ್ದರು. ಈ ಮಹಾಸಭೆಯ ಅಪರಿಮಿತ ಜನಸ್ತೋಮವೂ, ಸುವ್ಯವಸ್ಥೆಯೂ, ವೀರಶೈವ ಮಂದಾಳುಗಳ ಆನಂದಾಭಿಮಾನವೂ, ಪರಮತಸ್ಥರ ಸಹಾನುಭೂತಿಯೂ ಆವರ್ಣನೀಯವಾಗಿದ್ದವು.

೩ನೇ ಮಹಿಳಾ ಪರಿಷತ್ತು ನಿಪ್ಪಾಣಿ ತಾ. ೨೯-೧೨-೧೯೧೨ ರವಿವಾರ

ತಾರೀಖು ೨೯ನೇ ಡಿಶಂಬರ ೧೯೧೨ ಇಸವಿ ರವಿವಾರ ದಿವಸ ಸ್ತ್ರೀಯರ ೩ನೇ ಮಹಾಸಭೆಯು ಅತಿ ಮನೋಹರವಾಗಿ ಕೂಡಿತು. ಮೊದಲಿಗೆ ಗೊತ್ತು ಪಡಿಸಿದಂತೆ ಸರ್ವಮಹಿಳೆಯರು ಮಧ್ಯಾಹ್ನದ ೨ ಗಂಟೆಯ ಮೊದಲೇ ಸಭಾಗೃಹಕ್ಕೆ ಬಂದದರಿಂದ ಮಂಟಪವು ಪೂರ್ಣ ತುಂಬಿತ್ತು. ಹಾಗೂ ಆ ಮಂಟಪಕ್ಕೆ ಒಂದು ಪ್ರಕಾರದ ವಿಲಕ್ಷಣ ಶೋಭೆಯು ಪ್ರಾಪ್ತವಾಗಿತ್ತು. ಎರಡು ಗಂಟೆಗೆ ಸರಿಯಾಗಿ ಶ್ರೀಮಂತ ಸೌಭಾಗ್ಯವತಿ ಕಮಲಾಬಾಯಿ ದೇಸಾಯಿಣಿ ಸಂಸ್ಥಾನ ವಂಟಮುರಿ ಇವರು ಮೇಣೆಯಲ್ಲಿ ಕೂತು ಸಭೆಗೆ ಬಂದಕೂಡಲೆ, ಶ್ರೀಮಂತ ಸೌಭಾಗ್ಯವತಿ ರುದ್ರಾಬಾಯಿ ದೇಸಾಯಿಣಿ, ಶ್ರೀಮತಿ ಸೌ.ಶಾಂತವ್ವ ಕಣಬರಿಗಿಮಠ, ಶ್ರೀಮತಿ ಸೌ. ಚನ್ನಮ್ಮ ಮೈಸೂರ ಮೊದಲಾದ ಮಹಿಳಾಮಣಿಯರು ಅವರನ್ನು ಇದಿರುಗೊಂಡು, ಕರತಾಡನದಿಂದ ತಮ್ಮ ಆನಂದವನ್ನು ವ್ಯಕ್ತಗೊಳಿಸಿ, ಸರ್ವರೂ ಎದ್ದುನಿಂತು ಅವರನ್ನು ಉಚಿತಾಸನದಲ್ಲಿ ಕುಳ್ಳಿರಸಲು, ಸಭೆಯ ಕೆಲಸಕ್ಕೆ ಪ್ರಾರಂಭವಾಯಿತು. ಮೊದಲು ಸತ್ಕಾರಕ ಸಂಘದ ಅಧ್ಯಕ್ಷರಾದ ಶ್ರೀಮತಿ ಸೌ॥ಶಾಂತಾಬಾಯಿ ಕಣಬರಿಗಿಮಠ ಗೋಕಾಕ ಫಾಲ್ಸ ಇವರು ಯಾವತ್ತು ಮಹಿಳಾಮಣಿಯರ ಸುಖಾಗಮನವನ್ನು ಬಯಸಿ, ಬಹುಸರಸವಾದ ಭಾಷಣವನ್ನು ಮಾಡಿದರು. ಬಳಿಕ ಶ್ರೀಮಂತ ಸೌ॥ರುದ್ರಾಬಾಯಿ ಚಚಡೀಕರ ದೇಸಾಯಿಣಿಯರು ಶ್ರೀಮಂತ ಸೌ॥ವಂಟಮುರಿಕರ ಕಮಲಾಬಾಯಿ ಸಾಹೇಬರವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಮಹಾಸಭಾ ಪತಿಯಿಂದ ಸೂಚನೆ ತಂದರು. ಇದಕ್ಕೆ ಚನ್ನಮ್ಮ ಮೈಸೂರ ಇವರು ಅನುಮೋದನೆ ಕೊಡಲು, ಅದು ಸರ್ವಾನುಮತದಿಂದ ಪಾಸಾಗಿ, ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ತಮ್ಮ ಭಾಷಣ ಪ್ರಾರಂಭದಲ್ಲಿ ಶ್ರೀಮತಿ ಸೌ॥ಗುರುಪಾದವ್ವನವರು ಅರಟಾಳ ಇವರ ನಿಧನವನ್ನು ಕುರಿತು ಮಾತಾಡಿದ್ದೇನಂದರೆ "ಕಳೆದ ವರ್ಷದೊಳಗೆ

ನಮ್ಮ ವೀರಶೈವ ಸಮಾಜದೊಳಗಿನ ಕೆಲ ಲಲನಾಮಣಿಯರು ನಮ್ಮನ್ನು ಬಿಟ್ಟು ಪರಂಧಾಮಕ್ಕೆ ಹೋದರು. ಗತಿಸಿದ ಮಹಿಳೆಯರಲ್ಲಿ ಶ್ರೀಮತಿ ಸೌ|| ಅರಟಾಳ ಗುರುಪಾದವ್ವನವರೊಬ್ಬರಾಗಿರುವರು. ಇವರ ನಿಷ್ಕಲಂಕವಾದ ವರ್ತನವೂ, ಪತಿನಿಷ್ಠಾದಿ ಸದ್ಗುಣಗಳೂ ಸ್ತ್ರೀಸಮಾಜಕ್ಕೇ ಭೂಷಣೀಭೂತವಾಗಿದ್ದುದರಿಂದ ನಮಗೆ ಅತ್ಯಂತ ದುಃಖವನ್ನುಂಟು ಮಾಡುತ್ತಿರುವವು. ಆದರೆ ಪರಮೇಶ್ವರನ ಸಂಕೇತಕ್ಕೆ ನಿರುಪಾಯವದೆ. ಇವರೆಲ್ಲರ ಆತ್ಮಗಳಿಗೆ ಪರಮಾತ್ಮನು ಶೌಶ್ವತ ಶಾಂತಿಯನ್ನು ಕೊಡಲೆಂದು ನಾನು ಹಾರೈಸುವೆನು" ಎಂದು ಹೇಳಿ, ತಮ್ಮ ಇಂಪಾದ ಧ್ವನಿಯಿಂದ ಬಲು ಅಂದವಾಗಿ ಸರ್ವರಿಗೂ ಸಂತೋಷವಾಗುವಂತೆ ತಮ್ಮ ಭಾಷಣವನ್ನು ಪೂರ್ಣಗೊಳಿಸಿದರು. ಅನಂತರ ಕೆಲವರು ಇಂಗ್ಲೀಷಿನಲ್ಲಿ, ಕೆಲ ನಾರಿಮಣಿಗಳು ಮರಾಠಿಯಲ್ಲಿ, ಕೆಲ ಬಾಲೆಯರು ಕನ್ನಡದಲ್ಲಿ ಸ್ತ್ರೀಯರಿಗೆ ಅವಶ್ಯವಿರುವ ಅನೇಕ ವಿಷಯಗಳನ್ನು ಚರ್ಚಿಸಿ, ಬಹುಮತದಿಂದ ಠರಾವುಗಳನ್ನು ಪಾಸಮಾಡಿದರು. ನಂತರ ನಮ್ಮನ್ನಾಳುವ ಪ್ರಜಾವಾತ್ಸಲ್ಯವುಳ್ಳ ಪಂಚಮ ಜಾರ್ಜ ಸಾರ್ವಭೌಮರವರಿಗೂ, ಅವರ ದೊರೆಸಾನಿಗಳಾದ ಮೇರಿಯವರಿಗೂ ಅವರ ರಾಜಮನೆತನಕ್ಕೂ ವಂದನೆಗಳನ್ನು ಸಮರ್ಪಿಸಿ, ಶ್ರೀಗೌರೀವರನನ್ನು ಕೊಂಡಾಡಿ, ಪೂಮಾಲೆ ಪರಿಮಳದ್ರವ್ಯಗಳಿಂದ ಸರ್ವರನ್ನು ಅಲಂಕರಿಸಿ "ಹರಹರ ಪಾರ್ವತೀಪತೇ ಹರಹರ" ಎಂಬ ಜಯಘೋಷದಿಂದ ಸ್ತ್ರೀಸಭೆಯು ಸಮಾಪ್ತವಾಯಿತು.

ರಾವಸಾಹೇಬ ಶ್ರೀಮಂತ ಮಲ್ಲಪ್ಪಣ್ಣಾ ಸಿಂತ್ರೆ, ಕುರಲಿ

ಈ ಮಹಾಸಭೆಗೆ ಶ್ರೀಮಂತ ಸಿಂತ್ರೆಯವರು ಸುಮಾರು ಹದಿನೈದು ಸಾವಿರ (೧೫೦೦೦) ರೂಪಾಯಿ ವೆಚ್ಚಮಾಡಿರಬಹುದು. ಯಾವ ಬಾಬದಿಯಲ್ಲಿಯೂ ಕೊರತೆ ಕಂಡುಬರಲಿಲ್ಲ. ಬಂದ ಯಾವತ್ತು ಜನರಿಗೆ ಭೋಜನದ ಸಿದ್ಧತೆಯು ಚೆನ್ನಾಗಿ ಇಡಲ್ಪಟ್ಟಿತ್ತು. ಸ್ತ್ರೀಸಭೆಯ ದಿವಸ ಎಲ್ಲ ಗಣಾಧೀಶ್ವರ -ಸರದೇಸಾಯಿ-ದೇಸಾಯಿ-ದೇಶಮುಖ-ದೇಶಪಾಂಡೆ-ವತನದಾರ-ಸೆಟ್ಟರು-ಸಾವಕಾರರು ಮೊದಲಾಗಿ ಯಾವತ್ತು ಮಹನೀಯ ಮಂಡಳಿಗೂ ಪಂಚಪಕ್ವಾನ್ನಗಳ ಪ್ರಸ್ಥವನ್ನೇರ್ಪಡಿಸಿದ್ದರು. ಪಙ್ತೆಯು ಪ್ರೇಕ್ಷಣೀಯವಾಗಿತ್ತೆಂದು ಹೇಳಬಹುದು. ನಿಪ್ಪಾಣೀ ಗ್ರಾಮವು ರೇಲ್ವೆ ಸ್ಟೇಶನದಿಂದ ಬಹುದೂರ ಇರುವದರಿಂದ ಕಬ್ಬೂರ ಹಾಗೂ ಕೊಲ್ಲಾಪುರ ಸ್ಟೇಶನಗಳ ಮೇಲೆ ಸಭೆಗೆ ಬರುವ ಯಾವತ್ತು ಜನರ ಸಲುವಾಗಿ ಮೊಟಾರಗಾಡಿಗಳನ್ನೂ, ಎಷ್ಟೋ ಬಗಿ-ಸಾರವಾಟ-ಟಾಂಗಾಗಳನ್ನೂ, ಎಷ್ಟೋ ಚಕ್ಕಡಿಗಳನ್ನೂ ಇಟ್ಟಿದ್ದರು. ಈ ಸಂದರ್ಭಗಳಲ್ಲಿ ಸಿಂತ್ರೆಯವರು ನೀರಿನಂತೆ ಹಣವನ್ನು ಸೂರೆಮಾಡಿದುದರಿಂದ ಅವರ ಘನತರವಾದ ಶ್ರೀಮಂತಿಕೆಯೂ ಔದಾರ್ಯವೂ ಗೊತ್ತಾಗಿ, ಅವರು ಸರ್ವಜನರ ಪ್ರಶಂಸೆಗೆ ಕಾರಣೀಭೂತರಾದರು.

ಈ ಮಲ್ಲಪ್ಪಣ್ಣನವರ ಅಣ್ಣಂದಿರಾದ ಶ್ರೀಮಂತ ಅಪ್ಪಯ್ಯಪ್ಪಣ್ಣನವರಾದರೂ ಉದಾರಮತಿಗಳಾಗಿದ್ದುದು ಅವರು ಲಿಂಗಾಯತ ಫಂಡಿಗೆ ಒಮ್ಮೆಲೆ ಹತ್ತುಸಾವಿರ ರೂಪಾಯಿ ಕೊಟ್ಟ ಸಂಗತಿಯಿಂದ ವಾಚಕರಿಗೆ ಗೊತ್ತಾಗಿರಬಹುದು. ಇದಲ್ಲದೆ ಅವರು ಇನ್ನೂ ಅನೇಕ ಪ್ರಸಂಗಗಳಲ್ಲಿ ಬಹು ದೊಡ್ಡ ದೊಡ್ಡ ರಕಮುಗಳ ದೇಣಗೀ ಕೊಟ್ಟು, ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿರುವರು. ಶ್ರೀಮಂತ ಮಲ್ಲಪ್ಪಣ್ಣನವರಾದರೂ ತಮ್ಮ ಅಣ್ಣಂದಿರಂತೆಯೇ ಮಹಾಸಭೆಗಾಗಿ ಮತ್ತು ಇತರ ಅನೇಕ ಸಾರ್ವಜನಿಕ ಕಾರ್ಯಗಳಿಗಾಗಿ ಸಹಾಯ ಧನರಾಶಿಯನ್ನಿತ್ತು ಕೀರ್ತಿವಂತರಾದರೆಂಬದಕ್ಕೇನೂ ಸಂದೇಹವಿಲ್ಲ. ಇವರು ಚಿಕ್ಕೋಡಿ ತಾಲೂಕ ಕುರಲಿ ಎಂಬ ಗ್ರಾಮದ ಶ್ರೀಮಂತ ಮನೆತನದವರಿದ್ದು, ನಿಪ್ಪಾಣಿ-ಕೊಲ್ಲಾಪುರ ಮುಂತಾದ ವ್ಯಾಪಾರದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇವರ ಅಂಗಡಿಗಳೂ ವಖಾರಗಳೂ ಇರುತ್ತವೆ. ಇವರು ಲಕ್ಷಾವಧಿ ರೂಪಾಯಿಗಳ

ಘನವರ್ತಕರಾಗಿದ್ದು, ಜಮೀನ ಸಂಬಂಧವಾದ ಪ್ರಾಪ್ತಿಯಲ್ಲಿಯೂ ಸಾವಕಾರಿಕೆಯ ಉತ್ಪತ್ನದಲ್ಲಿಯೂ ಹೆಸರುವಾಸಿಯಾಗಿದ್ದಾರೆ. ದೇವರು ತಮಗೆ ಇತ್ತ ಅಪರಿಮಿತ ಧನವನ್ನು ಇವರು ಹಳೆಯ ಜನರಂತೆ ಭೂಮಿಯಲ್ಲಿ ಬಚ್ಚಿಡದೆ ವ್ಯವಹಾರದಲ್ಲಿ ತೊಡಗಿಸಿ, ಬಹುಜನರ ಚರಿತಾರ್ಥಕ್ಕೆ ಮಾರ್ಗಮಾಡಿಕೊಟ್ಟಿರುವರು. ಇವರು ರಾವಬಹಾದ್ದೂರರವರ ಮೇಲೆ ತಮ್ಮ ಅಣ್ಣಂದಿರಂತೆ ಅತ್ಯಂತ ಪ್ರೇಮಿಗಳಾಗಿದ್ದು, ರಾವಬಹಾದ್ದೂರರವರ ವಾಕ್ಯವು ದೇವರ ವಾಕ್ಯವೆಂದು ತಿಳಿದು ಇವರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿರುವರು. ಇಂತಹ ಪ್ರಚಂಡ ಸಾವಕಾರ ಜನರು ರಾವಬಹಾದ್ದೂರರವರಿಗೆ ಇಷ್ಟು ವಿಧೇಯರಾಗಿ ನಡೆಯುತ್ತಿರುವದು, ಕೇವಲ ಇವರ ನಿಷ್ಪೃಹತನದ ಪ್ರಭಾವಕ್ಕೇ ಸರಿ.

ಈ ಮಹಾಸಭೆಯ ಕೆಲಸಕ್ಕೆ ಪ್ರಾರಂಭವಾದಾಗಿನಿಂದ ಮುಗಿಯುವ ವರೆಗೆ ಅನೇಕ ಬಗೆಯಿಂದ ನಮ್ಮ ಪರಮಪ್ರಿಯ ಶ್ರೀಮನ್ ಮಹಾರಾಜ ಶ್ರೀ ಶಾಹುಛತ್ರಪತಿ ಮಹಾರಾಜರವರು ಶ್ರೀಮಂತ ಸಿಂತ್ರೆಯವರಿಗೆ ಮಾಡಿದ ಸಹಾಯವೂ ತೋರಿಸಿದ ಸಾನುಭೂತಿಯೂ ಅವರ್ಣನೀಯವಾಗಿದ್ದು, ನಮ್ಮ ಸಮಾಜವು ಅವರಿಗೆ ಬಹಳ ಋಣಿಯಾಗಿರುವದು. ಈ ಮಹಾಸಭೆಯ ಅಧ್ಯಕ್ಷರ ಮೆರವಣಿಗೆಯ ಮಹೋತ್ಸವಕ್ಕೆ ಶ್ರೀ ಛತ್ರಪತಿ ಮಹಾರಾಜರವರು ಕೇವಲ ತಮ್ಮ ಪಟ್ಟದಾನೆಯನ್ನು ಕಳಿಸಿಕೊಟ್ಟಿದ್ದರೆಂದ ಮೇಲೆ ಇವರ ಪ್ರೇಮವು ಶ್ರೀಮಂತ ಸಿಂತ್ರೆಯವರ ಮೇಲೆ ಹಾಗೂ ರಾವಬಹಾದ್ದೂರವರ ಮೇಲೆ ಎಷ್ಟಿರುವದೆಂಬದು ಸಹಜವಾಗಿ ತಿಳಿಯುವಂತಿದೆ. ಶ್ರೀಮಂತ ಮಲ್ಲಪ್ಪಣ್ಣನವರ ಘನವಂತಿಕೆಯನ್ನು ಕಂಡು ಸರಕಾರದವರು ಇವರಿಗೆ 'ರಾವಸಾಹೇಬ' ಎಂಬ ಬಿರುದು ಕೊಟ್ಟಿರುವರು. ಇದು ಇವರಿಗೆ ಭೂಷಣವೇ ಸರಿ.

❖❖

೨೨ನೇ ಭಾಗ

ರಾ.ಬ॥ಅರಟಾಳ ಸಾಹೇಬರು ಪೆನಶನ್ ತೆಗೆದುಕೊಂಡದ್ದೂ ಮತ್ತು ಅವರಿಗಾದ ತಾಂಬೂಲ ಸಮಾರಂಭಗಳೂ

ತಾ. ೧೬ನೇ ಜೂನ ೧೯೧೩ ಸೋಮವಾರ

ಹಿಂದೆ ವಿವರಿಸಿದಂತೆ ರಾವಬಹಾದ್ದೂರವರು ರಾಜಾ-ಪ್ರಜಾ ಎರಡೂ ಪಕ್ಷಕ್ಕೂ ಹಿತಕರವಾಗುವಂತೆ ಅಖಂಡ ೩೮ ಮೂವತ್ತೆಂಟು ವರ್ಷ ಸರಕಾರೀ ಕೆಲಸಮಾಡಿ, ಸನ್ ೧೯೧೩ನೇ ಇಸವಿಯ ಜೂನ ತಿಂಗಳ ೧೬ನೇ ತಾರೀಖಿನ ಸೋಮವಾರ ಸಾಯಂಕಾಲಕ್ಕೆ ರಾಜ್ಯಕಾರ್ಯದಿಂದ ನಿವೃತ್ತರಾದರು. ಈ ಹೊತ್ತಿಗೆ ಇವರಿಗೆ ಸರಕಾರೀ ಲೆಕ್ಕದಿಂದ ೬೦ ಅರವತ್ತು ವರ್ಷಪೂರ್ಣವಾಯಿತು. ನಮ್ಮ ಹಿಂದೂ ಜನರಲ್ಲಿ "ಅರವತ್ತು ವರ್ಷಕ್ಕೆ ಅರವು ಮರವು" ಎಂದು ಗಾದೆಯ ಮಾತುಂಟಷ್ಟೆ. ಇಷ್ಟು ವಯಸ್ಸಿನವರಾದರೂ ಇವರು ಸದೃಢರಿದ್ದು ಕಣ್ಣು ಕಿವಿ ಮೊದಲಾದ ಸರ್ವ ಇಂದ್ರಿಯಗಳಿಂದ ಸಬಲರೂ, ಕೆಲಸ ಮಾಡಲಿಕ್ಕೆ ತರುಣರಂತೆ ಸರ್ವಸಮರ್ಥರೂ ಇರುವರು. ಇವರ ಸ್ಮರಣಶಕ್ತಿಯು ಪ್ರೌಢಾವಸ್ಥೆಯಲ್ಲಿರುವಂತೆ ಇಳಿತ ವಯಸ್ಸಿನಲ್ಲಾದರೂ ಜಾಗೃತವಿರುವದು. ಇವರು ಆಮರಣ ಸರಕಾರೀ ಕೆಲಸ ಮಾಡಿದರೂ ಜನರಿಗೆ ಬೇಸರು ಬರುವಂತಿದ್ದಿಲ್ಲ. ಇವರು ಪೆನಶನ್ ತೆಗೆದುಕೊಂಡದ್ದಕ್ಕಾಗಿ ಇಡಿ ಕರ್ನಾಟಕ ಪ್ರಾಂತದ ಎಲ್ಲ ಜನರು ಬಹಳೇ ಅಸಮಾಧಾನ ಮನಸ್ಕರಾದರು. ಇನ್ನು ಇವರಂಥ ನಿಷ್ಪೃಹಿಗಳೂ ಚತುರರೂ ಚಾಣಾಕ್ಷರೂ ಆದ ಅಧಿಕಾರಿಗಳು ದೊರೆಯುವದು, ಅಪರೂಪವೆಂದು ಜನರು ಮನದಲ್ಲಿ ಮರಗುವವರಾದರು. ಮತ್ತು ಇವರ ವರಿಷ್ಠರಾದ ಆಂಗ್ಲಾಧಿಕಾರಿಗಳು ಸಹ ನಮ್ಮ ಸರಕಾರೀ ಕೆಲಸಕ್ಕೆ ಇಂಥ ರಾಜನಿಷ್ಠೆಯುಳ್ಳ ಸತ್ಯಸಂಧ ಆಫೀಸರರು ದೊರೆಯುವದು ದುರ್ಲಭವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವವರಾದರು. ಸಾರಾಂಶ, ಇವರು ರಾಜ್ಯಕಾರ್ಯದಿಂದ ಮುಕ್ತರಾದುದರಿಂದ ದೇಶೀ ವಿದೇಶೀಯ ಎಲ್ಲ ಜನರು ಅತ್ಯಂತ ಅಸಾಮಾಧಾನ ಪಡುವವರಾಗಿದ್ದರೆಂದು ಹೇಳಬಹುದು.

ರಾವಬಹಾದ್ದೂರರವರು ಬಹಳೇ ಉತ್ತಮ ರೀತಿಯಿಂದ ಸರಕಾರೀ ಕೆಲಸಮಾಡಿ ಪೆನಶನ್ ತೆಗೆದುಕೊಂಡರಷ್ಟೆ! ಅವರ ಕೆಲಸದಿಂದ ಇಡಿ ಕರ್ನಾಟಕಕ್ಕೆ ಎಷ್ಟೋ ಒಳಿತಾದುದರಿಂದ ಕೃತಜ್ಞತೆಯನ್ನು ಸ್ಮರಿಸಿ ಅವರ ಪ್ರೀತ್ಯರ್ಥ-ಕರ್ನಾಟಕದ ಎಷ್ಟೋ ಸ್ಥಳಗಳಲ್ಲಿಯ ಎಲ್ಲ ಜಾತಿಯ ಜನರು ಬಹು ವೈಭವದ ತಾಂಬೂಲ ಸಮಾರಂಭಗಳನ್ನು ಜರುಗಿಸಿ, ಇವರನ್ನು ಅನೇಕಾನೇಕವಾಗಿ ಸತ್ಕರಿಸಿದರು. ಈ ಕಾಲಕ್ಕೆ ಕರ್ನಾಟಕದಲ್ಲಿ ತಾಂಬೂಲ ಸಮಾರಂಭದ (ಪಾನಸುಪಾರಿಯ) ಸುಗ್ಗಿಯೇ ನಡೆದಿತ್ತೆಂದರೂ ಸಲ್ಲುವದು. ಅವುಗಳ ಸಾರಾಂಶವನ್ನು ಕ್ರಮವಾಗಿ ವಿವರಿಸುವೆವು.

ಬೆಳಗಾವಿಯ ಪಾನಸುಪಾರಿ

ಲೋಕಮಾನ್ಯರಾದ ರಾ.ಬ॥ ಅರಟಾಳಸಾಹೇಬ ಬಹಾದ್ದೂರರವರ ಆಡಳಿತದಿಂದ ನಮ್ಮ ಕರ್ನಾಟಕಕ್ಕೆ ಅರ್ಥಾತ್ ಮುಂಬಯಿ ಇಲಾಖೆಗೆ ಆದ ಮಹೋಪಕಾರಕ್ಕೆ ಪ್ರತಿಯಾಗಿ ಯಥೋಚಿತ ಕೃತಜ್ಞತೆಯನ್ನು ಪ್ರಕಟಪಡಿಸುವದು ಪ್ರಜಾವರ್ಗಕ್ಕೆ ಅಸಾಧ್ಯವಾಗಿದ್ದರೂ ಅಳಲೀ ಭಕ್ತಿಯಂತೆ ಕಿಂಚಿದಂಶದಿಂದಾದರೂ ಕೃತಜ್ಞತೆಯನ್ನು ತೋರಿಸುವದು ಲೌಕಿಕಧರ್ಮವೆಂದೂಹಿಸಿ, ಬೆಳಗಾವ ಶಹರ ನಿವಾಸಿಗಳಾದ ಬ್ರಾಹ್ಮಣ-ಲಿಂಗಾಯತ-ಜೈನ-ಮರಾಠಿ-ಮುಸಲ್ಮಾನ ಮೊದಲಾಗಿ ಯಾವತ್ತು ಜಾತಿಗಳ ಮುಖಂಡ ಜನರು ಮಿಳಿತರಾಗಿ ತಾರೀಖು ೨೯ ಜೂನ ೧೯೧೩ ಇಸವಿಯ ರವಿವಾರ ದಿವಸ ರಾವಬಹಾದ್ದೂರರವರಿಗೆ ಅಪೂರ್ವವಾದ ತಾಂಬೂಲ ಸಮಾರಂಭವನ್ನು ಮಾಡಿದರು.

ಆರಂಭಕ್ಕೆ ದಕ್ಷಿಣಭಾಗದ ಕಮಿಶನರರಾದ ಮೆ॥ನಾಮದಾರ ಶೆಫರ್ಡಸಾಹೇಬ ಬಹಾದ್ದೂರ ಇವರಿಗೆ ಆಮಂತ್ರಣ ಕೊಡಲು ಅವರದಕ್ಕೆ ಆನಂದದಿಂದ ಒಪ್ಪಿಕೊಂಡರು. ಕೂಡಲೆ ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳ ಸೆಟ್ಟರು ಸಾಹುಕಾರರು ಅಧಿಕಾರಿಗಳು ಶ್ರೀಮಂತ ಸರದೇಸಾಯಿ ಇನಾಮದಾರ ಮೊದಲಾದ ಯಾವತ್ತು ಮುಖಂಡಮಂಡಳಿಗೆ ಆಮಂತ್ರಣಪತ್ರಗಳು ಹೋದವು. ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಗೋಕಾಕ ಫಾಲ್ಸ ಇವರು ವ್ಯವಸ್ಥಾ ಕಮೀಟಿಯ ಅಗ್ರೇಸರರಾಗಿ ಕರ್ತವ್ಯ ದಕ್ಷರಾಗಿದ್ದರು.

ರವಿವಾರ ದಿವಸ ಬೆಳಗಾವಿಯ ಖಡೇಬಜಾರದ ಇಬ್ಬದಿಗಳು ತಳಿರ್ದೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಚಿತ್ರವಿಚಿತ್ರವಾದ ಬಣ್ಣದ ಕಾಗದಗಳ ಫರಫರಿಗಳಿಂದಲೂ, ಸಾಂದ್ರವಾದ ಧ್ವಜಪತಾಕೆಗಳಿಂದಲೂ ಶೋಭೆಗೊಂಡಿದ್ದವು. ಸಮಾರಂಭ ಸ್ಥಾನವಾದ ಶಿವಾನಂದ ಥಿಯೇಟರವು, ಸರ್ವತೋಮುಖವಾಗಿ ಶೃಂಗರಿಸಲ್ಪಟ್ಟಿತ್ತು. ಮೊದಲಿಗೆ ಗೊತ್ತುಪಡಿಸಿದಂತೆ ಸಂಜೆಯ ೫ ಗಂಟೆಯ ಸುಮಾರಕ್ಕೆ ಸಭಾಸದರಿಂದ ಆಸನಗಳೆಲ್ಲ ಅಲಂಕರಿಸಲ್ಪಟ್ಟವು. ಮಹಾದ್ವಾರದಲ್ಲಿ ಬೇಂಡಬಾಜಾ ಎಂಬ ಮಂಗಳವಾದ್ಯವು ಮಂಜುಳಧ್ವಾನದಿಂದ ಅತಿಥಿಗಳ ಸ್ವಾಗತವನ್ನು ಸರಿಯಾಗಿ ಮಾಡುತ್ತಲಿತ್ತು. ಅಷ್ಟೊತ್ತಿಗೆ ಯುರೋಪಿಯನ್ ಅಧಿಕಾರಿಗಳ ಸ್ವಾರಿಗಳು ಒಂದರ ಮೇಲೊಂದು ಬರತೊಡಗಿದವು. ಮಹನೀಯರ ಆಗಮನ ಮಾತ್ರವೆ ಶ್ರೀಮಂತ ನಾಯಕ ಬಹಾದ್ದೂರ ದೇಸಾಯಿ ಚಚಡಿ ಇವರ ಚೋಪದಾರರ ಪರಾಕು ಉಚ್ಚಸ್ವರದಿಂದ ಉಚ್ಚರಿಸಲ್ಪಡುತ್ತಿತ್ತು. ಕೂಡಲೆ ರಾ.ಬ॥ಅರಟಾಳ ಸಾಹೇಬರವರ ಸ್ವಾರಿಯು ಆಗಮಿಸಿತು. ಸಭಾಗೃಹಪ್ರವೇಶ ಮಾತ್ರವೆ ಮಹೋನ್ನತವಾದ ಮಂದಿರವು ಜಯಜಯಕಾರದಿಂದಲೂ ಚಪ್ಪಾಳೆಗಳ ಸಪ್ಪಳದಿಂದಲೂ ತುಂಬಿ ಹೋಯಿತು. ರಾವಬಹದ್ದೂರರವರು ದರ್ಬಾರೀ ಪೋಷಾಕಿನಿಂದಲೂ ಉರಪ್ರದೇಶದಲ್ಲಿ ರಾಜಚಿಹ್ನದಿಂದ ಪ್ರಕಾಶಿಸುತ್ತಿರುವ ಪದಕುಗಳಿಂದಲೂ ಝಗಝಗಿಸುತ್ತ ರಂಗಸ್ಥಳಕ್ಕೆ ದಯಮಾಡಿಸುತ್ತಲೆ ಆಂಗ್ಲಾಧಿಕಾರಿಗಳೇ ಮೊದಲಾಗಿ ಯಾವತ್ತು ಜನರು ಎದ್ದುನಿಂತು, ಆದರದಿಂದ ಹಸ್ತಲಾಘವವನ್ನು ಕೊಟ್ಟು, ಮುಖ್ಯಾಸನದಲ್ಲಿ ಕುಳ್ಳಿರಿಸಿದರು. ತತ್ಕಾಲಕ್ಕೆ ನಾಮದಾರ ಮೆ॥ಕಮಿಶನರ ಸಾಹೇಬ ಬಹಾದ್ದೂರರವರು ದಯಮಾಡಿಸಿ ರಾವಬಹಾದ್ದೂರರವರ ಬಲಭಾಗದಲ್ಲಿರುವ ಯೋಗಾಸನದಲ್ಲಿ ವಿರಾಜಮಾನರಾದರು. ಅಷ್ಟೊತ್ತಿಗೆ ಸಂಜೆಯ ೫ ಬಾರಿಸಿತು.

ಕಾರ್ಯಕ್ರಮಾನುಸಾರವಾಗಿ ಆರಂಭಕ್ಕೆ ಒಂದೆರಡು ಚಿಕ್ಕಬಾಲಕರ ಭಾಷಣಗಳಾದ ತರುವಾಯ, ರಾವಸಾ ॥ಶಿವಮೂರ್ತಿಸ್ವಾಮಿ ಕಣಬರಿಗಿಮಠ ಇವರು ಪ್ರಾಸ್ತಾವಿಕ ಭಾಷಣ ಮಾಡಿದನಂತರ ಮಿ॥ಗಣಪತರಾವ ಅಣ್ಣಾಜಿ ಹೆಬ್ಬಾಳಕರ ವಕೀಲ ಚಿಕ್ಕೋಡಿ ಇವರು ಆಂಗ್ಲಭಾಷೆಯಲ್ಲಿ ರಾವಬಹಾದ್ದೂರರವರ ಲೋಕಪ್ರಿಯಕರವಾದ ಆಳಿಕೆಯನ್ನು ವಿಸ್ತರಿಸಿ, ಅವರ ಗುಣಾನುವಾದ ಮಾಡಿದರು. ಬಳಿಕ ಗೋಕಾವಿಯ

ಮಾಮಲೇದಾರರಾದ ರಾವಸಾ||ಭೀಮರಡ್ಡಿ ಕೃಷ್ಣರಡ್ಡಿ ಕುರ್ತಕೋಟಿ ಇವರು ರಾವಬಹಾದ್ದೂರರವರ ಸಂಕ್ಷಿಪ್ತ ಚರಿತ್ರವನ್ನು ಬಹು ಗಂಭೀರವಾಣಿಯಿಂದ ರಸವತ್ತಾಗಿ ದಿಗ್ದರ್ಶನ ಮಾಡಿದರು. ತರುವಾಯ ಮಿ|| ಗದ್ದಿಗಯ್ಯ ಹುಚ್ಚಯ್ಯ ಹೊನ್ನಾಪುರಮಠ ವಕೀಲ ಧಾರವಾಡ ಇವರು ಸ್ವಲ್ಪ ಭಾಷಣ ಮಾಡಿ ರಾವಬಹಾದ್ದೂರರವರ ಗುಣಕಥನ ಮಾಡಿದನಂತರ, ಜಿಲ್ಲಾ ಬೆಳಗಾವ ತಾಲೂಕ ಸಂಪಗಾವ ಮೊಜೆ ಬೂದೀಹಾಳದ ವೇ|| ಕಾಶಪ್ಪಶಾಸ್ತ್ರಿಗಳು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ "ರಾವಬಹಾದ್ದೂರವರು ಕೇವಲ ನಾಮಮಾತ್ರದಿಂದ ರುದ್ರಗೌಡರಲ್ಲ ದುಷ್ಟಥಲನ-ಶಿಷ್ಟಪಾಲನ ಮಾಡುವ ಕಾರ್ಯಭಾಗಕ್ಕೆ ಭೂಲೋಕಕ್ಕೆ ಅವತರಿಸಿದ ಸಾಕ್ಷಾತ್ ರುದ್ರದೇವರೇ ಸರಿ ಎಂಬುದು ಇವರು ಮಾಡಿದ ಅದ್ಭುತಕಾರ್ಯಗಳಿಂದ ಎಲ್ಲರಿಗೂ ಸಹಜವಾಗಿ ತಿಳಿಯುವಂತಿದೆ. ಈ ಸಭಾಸ್ಥಾನದಲ್ಲಿ ಮಂಡಿಸಿರುವ ಮೂರ್ತಿಯು ಕೇವಲ ರುದ್ರಮೂರ್ತಿಯೇ. ಇದು ಕೇವಲ ರುದ್ರಸಭೆಯೇ ಎಂದು ತಿಳಿದು ನನಗೆ ಅತೀವ ಆನಂದವಾಗಿರುತ್ತದೆ. ಇವರಿಗೆ ಸದಾಶಿವನು ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲಿ" ಎಂದು ಬಹುಗಂಭೀರವಾಗಿ ಭಾಷಣಮಾಡಿದರು. ಬಳಿಕ ಇನ್ನೂ ಕೆಲವರ ಭಾಷಣಗಳಾಗಿ ಎಲ್ಲರೂ ರಾವಬಹಾದ್ದೂರರವರನ್ನು ಬಹುಪರಿಯಿಂದ ಗೌರವಿಸಿದರು. ಭಾಷಣ ನಡೆದಾಗ್ಯೆ ಮೆ||ನಾಮದಾರ ಕಮೀಶನರ ಸಾಹೇಬ ಬ||ರವರು ಮೇಲಿಂದ ಮೇಲೆ ಚಪ್ಪಾಳೆ ಹೊಡೆದು ತಮಗಾದ ಆನಂದವನ್ನು ಪ್ರಕಟಮಾಡುತ್ತಿದ್ದರು. ಮೆ||ರವರು ಯಾರ ಭಾಷಣದಲ್ಲಿ ರಾ.ಬ. ರವರ ಯಾವ ರಹಸ್ಯವು ಹೊರಡುತ್ತದೆಂಬದನ್ನು ಬಹು ಆತುರದಿಂದ ಅವಲೋಕಿಸುತ್ತಿದ್ದರು.

ಭಾಷಣಗಳು ತೀರಿದ ನಂತರ ಕೊಂಕಣ ಸೀಮೆಯ ಪಾತ್ರದ ಬೈಠಕಿಯಾಯಿತು. ಬಳಿಕ ಚಿಕ್ಕಬಾಲಕರೀರ್ವರು ಪರಮ ಪೂಜ್ಯರಾದ ಬ್ರಿಟಿಶ ಸಾರ್ವಭೌಮ ಶ್ರೀ ಪಂಚಮ ಜಾರ್ಜ ಬಾದಶಹರವರ ಮತ್ತು ರಾವಬಹಾದ್ದೂರರವರ ಹಾಗೂ ನಾಮದಾರ ಮೆ|| ಕಮಿಶನರ, ಸಾ.ಬ|| ರವರ ವರ್ಣನಾಪರ ಪದ್ಯಗಳನ್ನು ಚಿತ್ತಾಕರ್ಷಕವಾಗಿ ಹಾಡಿದರು. ಇನ್ನೂ ಕೆಲ ಗವಯಿಗಳ ಗಾಯನವಾದಬಳಿಕ ಗಾನರಸಪ್ರವಾಹದಲ್ಲಿ ಸಭಾಸದರೆಲ್ಲರೂ ಲೋಲಾಡುತ್ತಿದ್ದರು.

ಈ ಪ್ರಸಂಗದಲ್ಲಿ ಮನೋಹರವಾಗಿ ಕಂಗೊಳಿಸುತ್ತಿರುವ ಈ ಸಭಾ ಸೌಂದರ್ಯವನ್ನೂ, ರಾವಬಹಾದ್ದೂರರವರ ಪುಣ್ಯಪ್ರತಾಪವನ್ನೂ ಎಷ್ಟು ವರ್ಣಿಸಿದರೂ ತೀರದು. ಸಭೆಯ ಸ್ಥಳವು ಮೊದಲೇ ಭವ್ಯವೂ ರಮ್ಯವೂ ಆದ ನಾಟಕಶಾಲೆಯು, ಮೇಲಾಗಿ ಹೊಸಕಟ್ಟಡ. ಬಗೆ ಬಗೆಯ ಸೀನರಿಗಳಿಂದ ರಮಣೀಯವಾದ ಪಡದೆಗಳಿಂದ ಅಲಂಕೃತವಾದ ರಂಗಸ್ಥಳ;ಮಧ್ಯದಲ್ಲಿ ಮನೋಹರವಾದ ಎರಡು ರಾಜಾಸನಗಳು, ಶಿರೋಭಾಗದಲ್ಲಿ ಝುಗಝುಗಿಸುವ ಬ್ರಿಟಿಶ ಸಾರ್ವಭೌಮರ ಚಿತ್ರಪಟವು, ದ್ವಿಪಾರ್ಶ್ವದಲ್ಲಿಯೂ, ಸಮ್ಮುಖದಲ್ಲಿಯೂ ಮಹನೀಯರ ಸಮೂಹವು, ಇಂತಪ್ಪ ಸೌಕರ್ಯವಾದ ಸಭಾಮಧ್ಯದಲ್ಲಿ ದಿವ್ಯರುದ್ರಮೂರ್ತಿ. ಆ ರುದ್ರಮೂರ್ತಿಯ ಬಲಭಾಗಕ್ಕೆ ನಾಮದಾರ ಮೆ||ಶೇಫರ್ಡಸಾಹೇಬ ಬಹದ್ದೂರರವರು; ಅವರಾಚೆಗೆ ನ್ಯಾಯಮೂರ್ತಿಗಳಾದ ಡಿಸ್ಟ್ರಿಕ್ಟಜಜ್ಜ ಮೆ||ಕ್ರಂಪ ಸಾ ಬ||ರವರು, ಎಡಭಾಗಕ್ಕೆ ಮೆ. ಕಲೆಕ್ಟರ ಬ್ರಾವುನ್ ಸಾಹೇಬರವರು, ಅವರೀಚೆಗೆ ಮೆ|| ಕವ್ಹಾನ ಸಾ.ಬ||ರವರು, ಅವರಿಗೆ ಹೊಂದಿ ಮೆ. ಮ್ಯಾಕೆ ಸಾ. ಬ|| ರವರು, ಬಲಪಾರ್ಶ್ವದಲ್ಲಿ ನಾಮದಾರ ಬೆಳವಿ ಮೊದಲಾದ ವಕೀಲ ಮಂಡಳಿಯು, ಅವರ ಹತ್ತಿರ ಡಿ.ಡಿ. ಕಲೆಕ್ಟರರೂ, ಮಾಮಲೇದಾರರೂ, ಮುನುಸೂಫರೂ ಮೊದಲಾದ ಎಷ್ಟೋ ಅಧಿಕಾರಿವರ್ಗದವರು, ಒಂದುಕಡೆಗೆ ಗುರುವರ್ಗದವರು, ಇನ್ನೊಂದು ಕಡೆಗೆ ವಿದ್ವನ್ಮಂಡಳಿಯು. ಸಮ್ಮುಖದ ಮೇಲ್ಗಡೆಯಲ್ಲಿ ಜಾಜ್ವಲ್ಯಮಾನವಾಗಿ ಪ್ರಕಾಶಿಸುವ ಕಿಟಸನ್ ಜ್ಯೋತಿಗಳು; ಇಷ್ಟೆಲ್ಲ ವೈಭವವು ಮೂರ್ತಿಮಂತವಾದ ಸಭಾಮಧ್ಯದಲ್ಲಿ ತೇಜಃಪುಂಜವಾದ ಪ್ರಸನ್ನಮುಖಮಂಡಲದಿಂದ ಮಂಡಿತರಾಗಿರುವ ರಾವಬಹಾದ್ದೂರರವರ ತಾಂಬೂಲ ಸಮಾರಂಭವನ್ನು ಅದಾವನು ಬಣ್ಣಿಸುವನು!ಇಂಥ ಅಪೂರ್ವವಾದ ಸಮಾರಂಭದ ಸೊಬಗನ್ನು ನೋಡದವನೇ ಪಾಪಿಯು.

ಆ ಸಮಯದಲ್ಲಿ ವೈಭವ ಶಾಲಿಯಾದ ರಾವಬಹಾದ್ದೂರರವರ ದರ್ಶನೀಯ ಸ್ವರೂಪವನ್ನು ನೋಡಿದರೆ ನಿಜವಾಗಿ:

ಮತ್ತೇಭ.ವಿ.ವೃತ್ತ

ಇವನೇ ಇಂದ್ರನೊ ಚಂದ್ರನೋಗುಣಗಣಕ್ಕಾಧಾರನೋ ಮಾರನೋ ।
ಇವನೇ ಸತ್ಯಸುಶೀಲನೋ ಮಹಿಮನೋ ಸದ್ಧರ್ಮ ಸಂಪನ್ನನೋ ॥
ಇವನೇ ಪುಣ್ಯವಿಶಾಲನೋ ಚತುರನೋ ನ್ಯಾಯಪ್ರಸಿದ್ಧಾತನೋ ।
ಇವನೇ ಮಾನವರೂಪಧಾರಿ ಸುರನೋ ಶ್ರೀ ರುದ್ರ ಭೂಪಾಲನೋ ॥

ಎಂಬಂತೆ ತೋರುತ್ತಿದ್ದರು. ಈ ಅದ್ವಿತೀಯವಾದ ಸಮಾರಂಭವನ್ನು ಕಂಡು ರಾವಬಹಾದ್ದೂರ ರುದ್ರಗೌಡ ಸಾಹೇಬರು ನರರಲ್ಲ, ದೇವಾಂಶಸಂಭೂತರು, ಇವರಿಂದಾದ ಕಾರ್ಯಗಳು ಮಾನವೀ ಕಾರ್ಯಗಳಲ್ಲ, ಮಹಿಮಾ ಪುರುಷರ ಕಾರ್ಯಗಳು. ಇವರ ಚರಿತ್ರವು ಸಾಧಾರಣಚರಿತ್ರವಲ್ಲ, ಪುಣ್ಯಕರವಾದ ಪುರಾಣವು. ಈಗ ಕೂಡಿರುವ ಸಭೆಯು ನರರ ಸಭೆಯಲ್ಲ; ಸುರರ ಸಭೆಯು ಎಂದು ಭಾವಿಕ ಜನರು ಭಾವಿಸುವವರಾದರು.

ಗಾಯನಕಾರ್ಯವು ತೀರಿದನಂತರ ಮಹನೀಯರ ಕಂಠಪ್ರದೇಶಗಳು ಪುಷ್ಪಮಾಲೆಗಳಿಂದ ಸಾಲಂಕೃತವಾದವು. ಪರಿಮಳ ದ್ರವ್ಯಗಳು ಸುತ್ತಲೂ ಸುವಾಸನೆಯನ್ನು ಬೀರಹತ್ತಿದವು. ಜಯ ಜಯಕಾರದಿಂದ ರಾವಬಹಾದ್ದೂರ ರುದ್ರಗೌಡ ಸಾಹೇಬರವರ ಹಾಗೂ ಸಾರ್ವಭೌಮ ಸರಕಾರದವರ ಯಶೋದುಂದುಭಿಯು ದುಮುದುಮಿಸಹತ್ತಿತು. ಕಡೆಗೆ ನಾಟಕದ ಕೋರಸದಂತೆ ಎಲ್ಲ ಪಾತ್ರಗಳು ಎದ್ದು ನಿಲ್ಲಲು ಜಯಧ್ವಾನವು ಸೂರೆಗೊಳ್ಳುತ್ತಿರಲು, ಮಂಗಳವಾದ್ಯಗಳು ಭೋರಿಡುತ್ತಿರಲು, ಅಂತರಿಕ್ಷದಿಂದ ಅವಿಚ್ಛಿನ್ನವಾಗಿ ಪುಷ್ಪವೃಷ್ಟಿಯು ಸುರಿಯುತ್ತಿರಲು ಸಮಾರಂಭವು ಸಮಾಪ್ತವಾಯಿತು.

ಆಹಾ!ರಾವ್‌ಬಹಾದ್ದೂರರವರ ಪುಣ್ಯಪ್ರಭಾವವು ಎಷ್ಟು ಘನತರವಾಗಿರುವದಯ್ಯಾ, ತಮ್ಮ ದೃಢತರವಾದ ವರ್ಚಸ್ಸಿನಿಂದ, ದಿಗಂತರವಾದ ಕೀರ್ತಿಯಿಂದ, ದಾರ್ಢ್ಯವಾದ ದರ್ಪಿನಿಂದ, ಗಂಭೀರವಾದ ಘನತೆಯಿಂದ, ಅಸಾಧಾರಣವಾದ ಬುದ್ಧಿಬಲದಿಂದ, ಅಪೂರ್ವವಾದ ಮಹಿಮೆಯಿಂದ, ಈಶದತ್ತವಾದ ಪ್ರಾರಬ್ಧದಿಂದ, ಅರ್ಥಾತ್ ಪುಣ್ಯಬಲದಿಂದ ನಿಪ್ಪಾಣಿಯ ವೀರಶೈವ ಮಹಾಸಭೆಯಲ್ಲಿ ನಾಮದಾರ ಮೆ॥ ಶೆಪರ್ಡಸಾಹೇಬ ಬ. ಕಮೀಶನರ ದಕ್ಷಿಣಭಾಗ ಇವರ ಆಸನಕ್ಕಿಂತಲೂ ಉನ್ನತವಾದ ಆಸನದಲ್ಲಿ ವಿರಾಜನಮಾನರಾದರು. ಈ ತಾಂಬೂಲ ಸಮಾರಂಭದ ಪ್ರಸಂಗದಲ್ಲಿ ಅವರಿಗೆ ಹೊಂದಿ ಸಮಾನಾಸನದಲ್ಲಿ ಮಂಡಿತರಾದರು. ವರಿಷ್ಠರಾದ ಆಂಗ್ಲಾಧಿಕಾರಿಗಳು ತಮ್ಮ ಆಸನಗಳನ್ನು ಮನಃಪೂರ್ವಕವಾಗಿ ಇವರಿಗೆ ಸಮರ್ಪಿಸಿದರು. ಸಾರ್ವಭೌಮ ಸರಕಾರದಿಂದ ಮರ್ಯಾದಿಸಲ್ಪಟ್ಟರು. ಮತ್ತು ಪರೋತ್ಕರ್ಷಾಸಹಿಷ್ಣುಗಳೂ, ಅಸೂಯಾತೃಷ್ಣರೂ ಆದ ಮುಖಂಡ ಮಂಡಳಿಯ ಸಮಕ್ಷ ಮುಕ್ತದ್ವಾರವಾಗಿ ಇವರ ಗುಣಾನುವಾದವು ನಡೆಯಿತು. ಸಾರಾಂಶ, ಮಾನವರಿಗೆ ದೊರೆಯಬೇಕಾಗಿದ್ದ ಯಾವತ್ತು ಮಾನವು ಇವರಿಗೆ ಸಹಜವಾಗಿ ದೊರೆಯಿತು. ಅಂದಮೇಲೆ ಇವರ ಪುಣ್ಯರಾಶಿಯನ್ನು ಅಲ್ಪಮತೀಯನಾದ ನಾನು ಏನೆಂದು ಬಣ್ಣಿಸಲಿ?

ಈ ಸಮಾರಂಭವು ನಿಜವಾಗಿ ಪಾನಸುಪಾರಿಯಾದರೂ ಇದು ಕೇವಲ ಮನೋಹರವಾದ ನಾಟಕದಂತೆ ಪರಿಣಮಿಸಿತೆಂದು ಹೇಳಬಹುದು. ರಮ್ಯವಾದ ಕಥಾ ಸಂವಿಧಾನದಿಂದಲೂ, ಸಮೀಚೀನವಾದ ಗಾನರಸದಿಂದಲೂ, ಸುಂದರವಾದ ಪಾತ್ರಗಳಿಂದಲೂ, ಪಾತ್ರಕ್ಕೆ ಅನುಗುಣವಾದ ಭಾಷಣಗಳಿಂದಲೂ ನಾಟಕವು ಪ್ರೇಕ್ಷಕರನ್ನು ತಲ್ಲೀನರನ್ನಾಗಿ ಮಾಡಿಬಿಡುವಂತೆ, ವಿಚಿತ್ರವಾದ ಚರಿತ್ರದಿಂದಲೂ ವರ್ಣನಾಪರವಾದ ಪದಪದ್ಯಗಳಿಂದಲೂ

ಗಂಭೀರವಾದ ಭಾಷಣಗಳಿಂದಲೂ ಸರ್ವಾಂಗ ಸುಂದರರಾದ ರಾವಬಹಾದ್ದೂರರವರ ಅಪೂರ್ವವಾದ ತಾಂಬೂಲ ಸಮಾರಂಭವು ಸಭಾಸದರನ್ನು ಚಕಿತರನ್ನಾಗಿ ಮಾಡಿ ಬಿಡುವದರಲ್ಲಿ ಆಶ್ಚರ್ಯವೇನು?

ಅಪಾರವಾದ ಆಕಾಶಮಂಡಲದಲ್ಲಿ ಜಾಜ್ವಲ್ಯಮಾನವಾಗಿ ಪ್ರಕಾಶಿಸುವ ಸೂರ್ಯಚಂದ್ರರಂತೆ ರಮ್ಯವಾದ ಸಭಾಮಂಡಲದಲ್ಲಿ ತೇಜೋವಂತರಾಗಿ ಬೆಳಗುತ್ತಿರುವ ಮೆ॥ಕಮಿಶನರ ಸಾಹೇಬ ಬಹಾದ್ದೂರರವರನ್ನೂ, ರಾವಬಹಾದ್ದೂರ ರುದ್ರಗೌಡ ಸಾಹೇಬರವರನ್ನೂ ನೋಡಿ ಸಭಾಸದರು ಧನ್ಯರಾದರು. ಸೀಮಾತೀತವಾದ ವೈಭವವು ಈ ಅಪ್ರತಿಮವಾದ ತಾಂಬೂಲ ಸಮಾರಂಭದಲ್ಲಿ ಸ್ವೈರವಾಗಿ ವಿಹರಿಸುತ್ತಿರಲು, ಸಭಾಸೀನರಾದ ರಾವಬಹಾದ್ದೂರ ರುದ್ರಮೂರ್ತಿಯನ್ನು ನೋಡಿ ನಲಿದು ಆನಂದಾಶ್ರುಗಳನ್ನುದುರಿಸದೆ ಹೋದ ನರನು ನರನಲ್ಲವೆಂದು ನಿಃಸಂದೇಹವಾಗಿ ಹೇಳಬಹುದು. ವೀರಶೈವ ವಂಶಾಂಬುಧಿಯಲ್ಲಿ ಜನಿಸಿ, ವೀರಶೈವಮತವನ್ನು ಉದ್ಧರಿಸಿ, ತಮ್ಮ ಅಸಾಧಾರಣ ಬುದ್ಧಿಬಲದಿಂದ ಪ್ರಬಲವಾದ ಅಧಿಕಾರವನ್ನು ಪಡೆದು, ಲೋಕಪ್ರಿಯಕರವಾಗಿ ತಮ್ಮ ಆಡಳಿತವನ್ನು ಸಾಗಿಸಿ ಪ್ರಜಾಕಂಟಕಗಳನ್ನು ದೂರೀಕರಿಸಿ, ಸಾರ್ವಭೌಮ ಸರಕಾರದಿಂದ ರಾಜಮರ್ಯಾದೆಯನ್ನು ಹೊಂದಿ, ದುಷ್ಟದಲನ ಶಿಷ್ಟಪಾಲನರೆಂಬ ಬಿರುದಿನ ಹೆಗ್ಗಾಳಿಯನ್ನು ಹಿಡಿಸಿ ಆಯ್.ಎಸ್.ಓ. ಎಂಬ ಪದವಿಯನ್ನು ಪಡೆದು, ವೀರಶೈವಜನಾಂಬುಧಿಯನ್ನುಕ್ಕಿಸಿ, ವೀರಶೈವ ಮುಕುಟಮಣಿಯಾದ ರಾವಬಹಾದ್ದೂರರವರ ಅನುಪಮೇಯವಾದ ತಾಂಬೂಲ ಸಮಾರಂಭವನ್ನು ಕಣ್ಣಾರೆ ನೋಡಿ ಯಾರಿಗೆ ರೋಮಾಂಚನಗಳು ಏಳಲಿಕ್ಕಿಲ್ಲ ಯಾರ ಆನಂದಾಶ್ರುಗಳು ಉದುರಲಿಕ್ಕಿಲ್ಲ ಇಂಥ ಸಮಾರಂಭದ ಪಾನಸುಪಾರಿಯು ಇದು ವರೆಗೆ ಬೆಳಗಾವಿಯಲ್ಲಿ ಎಂದೂ ಆಗಲಿಲ್ಲವೆಂದೂ, ಇದು ರಾವಬಹಾದ್ದೂರವರ ಪುಣ್ಯಪ್ರತಾಪದ ಮಹಿಮೆಯೆಂದೂ, ಯಾವತ್ತು ಜನರು ಚಕಿತಮುದ್ರೆಯಿಂದ ಮಾತಾಡುತ್ತ ಸಂಜೆಯ ೭ ಘಂಟೆಗೆ ಮನೆಗೆ ತೆರಳುವವರಾದರು.

ವಾಚಕ ಮಹಾಶಯರು ಈ ಸಮಾರಂಭದ ಸಂಗತಿಯನ್ನೋದಿ ಇದು ಅತಿಶಯೋಕ್ತಿಯಾಗಿದೆಯೆಂದು ಹೇಳಬಹುದು. ಆದರೆ ಈ ಸಮಾರಂಭವನ್ನು ಪ್ರತ್ಯಕ್ಷವಾಗಿ ನೋಡಿದ ನಾನು ವಿಸ್ತಾರದ ಭಯದಿಂದ ನಡೆದ ಸಂಗತಿಯನ್ನು ಸಂಕ್ಷೇಪವಾಗಿ ವಿವರಿಸಿರುವೆನು. ಬರೆದದ್ದರಕಿಂತ ನಡೆದ ಸಂಗತಿಯೇ ವಿಶೇಷವಾಗಿರುವದು. ಒಟ್ಟಿಗೆ ದೇವರ ಮಹಿಮೆಯಿಂದ ರಾವಬಹಾದ್ದೂರವರ ಯೋಗ್ಯತಾತೀತವಾಗಿ ಇವರ ತಾಂಬೂಲ ಸಮಾರಂಭವು ಜರುಗಿತೆಂದು ಧಾರಾಳವಾಗಿ ಹೇಳಬಹುದು.

ಈ ಸಮಾರಂಭವನ್ನು ಶಹರನಿವಾಸಿಗಳ ತರ್ಫೆನಿಂದ ಈ ಕೆಳಗಿನ ಮಹನೀಯರು ತನು-ಮನ-ಧನ ಪೂರ್ವಕವಾಗಿ ನೆರವೇರಿಸಿದ್ದು, ಅವರಿಗೆ ಬಹು ಭೂಷಣಾಸ್ಪದವಾಗಿರುವದು. ಈ ಉತ್ಸವಕ್ಕೆ ಮುಂಬಯಿ ಕರ್ನಾಟಕದ ಯಾವತ್ತು ಜಿಲ್ಲೆಗಳಿಂದ (ಅಥಣಿಯಿಂದ ಬೆಂಗಳೂರ ವರೆಗೆ) ಯಾವತ್ತು ಜಾತಿಯ ಮುಖಂಡ ಮಂಡಳಿಯು ದಯಮಾಡಿಸಿತ್ತು. ಅಂದ ಮೇಲೆ ರಾವಬಹಾದ್ದೂರರವರು ಎಲ್ಲ ಪ್ರಾಂತಗಳ ಯಾವತ್ತು ಜಾತಿಯ ಜನರಿಗೆ ಎಷ್ಟು ಪ್ರಿಯಕರರಾಗಿದ್ದರೆಂಬದು ಸಹಜವಾಗಿ ವ್ಯಕ್ತವಾಗುವಂತೆ ಇದೆ. ಈ ತಾಂಬೂಲ ಸಮಾರಂಭವನ್ನು ನೆರವೇರಿಸಿದ ಮಹನೀಯರ ಹೆಸರು ಕೆಳಗೆ ಬರೆದವೆ.

ರಾ.ಸಾ॥ಡಾಕ್ಟರ ವ್ಹಿ.ಜಿ. ಶಿರಗಾವಕರ	ಮಿಸ್ಟರ॥ ಡಿ.ಜಿ. ಪೋತನೀಸ
ರಾ.ಸಾ॥ಶಿವಮೂರ್ತಿಸ್ವಾಮಿ ಕಣಬರಗಿಮಠ	ಮಿ.ಬಿ.ಎ. ಪಾಟಣಕರ
ಮಿ॥ ವೈಜಪ್ಪಾ ಅನಿಗೋಳ	ರಾ.ಸಾ॥ ಆರ್.ಜಿ. ನಾಯಕ ವಕೀಲ
ಮಿ॥ ಮಹಮ್ಮದ ಸಾಹೇಬ ಖತೀಬ	ಮಿ॥ಎ.ಆರ್. ಸಾವಂತ
ಮಿ॥ ಎ.ಪಿ. ಚೌಗುಲೆ ವಕೀಲ	

ಗೋಕಾಕದ ಪಾನಸುಪಾರಿ ಸಮಾರಂಭ
ತಾ. ೨೭ನೇ ಜುಲೈ ಸನ್ ೧೯೧೩ ಇ. ಶನಿವಾರ

ಬೆಳಗಾವಿಯ ಪಾನಸುಪಾರಿಯದ ನಂತರ ಒಂದು ತಿಂಗಳೊಳಗಾಗಿಯೇ ಗೋಕಾಕ ತಾಲೂಕಿನ ಎಲ್ಲ ಜಾತಿಯ ಜನರು ತಮ್ಮ ತಾಲೂಕಿನ ವತಿಯಿಂದ ಗೋಕಾಕದಲ್ಲಿ ರಾವಬಹಾದ್ದೂರರವರ ತಾಂಬೂಲ ಸಮಾರಂಭ ಮಾಡುವದನ್ನು ನಿರ್ಧರಿಸಿ, ತಾರೀಖು ೨೭ನೇ ಜುಲೈ ಸನ್ ೧೯೧೩ ಇಸವಿಯ ರವಿವಾರ ದಿವಸ ಗೋಕಾಕದ ಆಲದಕಟ್ಟೀಮಠದಲ್ಲಿ (ಇಂಗ್ಲೀಷ ಶಾಲೆಯಿರುವ ಮಠದಲ್ಲಿ) ಬಹುವೈಭವದಿಂದ ಪಾನಸುಪಾರಿ ಸಮಾರಂಭಮಾಡಿದರು. ರಾವಬಹಾದ್ದೂರರವರು ಕೆಲಸದ ಮೇಲಿರುವಾಗಲೇ ಒಳ್ಳೇ ಸಡಗರದಿಂದ ಇವರ ತಾಂಬೂಲ ಸಮಾರಂಭವನ್ನು ನೆರವೇರಿಸಿ ಇವರಿಗೆ ಮಾನಪತ್ರವನ್ನೂ, ಕಾಸ್ಕೀಟವನ್ನೂ ಕೊಡಬೇಕೆಂದು ಗೋಕಾಕದವರು ನಿಶ್ಚಯಿಸಿದ್ದರು. ಅದಕ್ಕೆ ರಾವಬ।।ರವರು, ಕೆಲಸದ ಮೇಲಿರುವಾಗ್ಗೆ ಸರಕಾರದವರ ಹುಕುಮಿಲ್ಲದೆ ಈ ಪ್ರಕಾರ ತೆಗೆದುಕೊಳ್ಳಲಿಕ್ಕೆ ಬರುವದಿಲ್ಲೆಂದೂ, ನಿಮ್ಮ ಇಚ್ಛೆಯಿದ್ದರೆ ಅರ್ಜಿ ಮೂಲಕ ಸರಕಾರವನ್ನು ಕೇಳಿಕೊಳ್ಳಬೇಕೆಂದೂ ಹೇಳಲು, ಅವರು ಈ ಬಗ್ಗೆ ಸರಕಾರದ ಅಪ್ಪಣೆಯನ್ನು ಕೇಳಿದರು. ಅದಕ್ಕೆ ಸರಕಾರದವರು, ಕೆಲಸದ ಮೇಲಿರುವಾಗ ಸರಕಾರೀ ಅಧಿಕಾರಿಗಳಿಗೆ ಕಾಸ್ಕೀಟು ಕೊಡಲಾಗದೆಂದು ಹುಕುಮು ಮಾಡಿದರು. ಅದರಿಂದ ನಿರುಪಾಯರಾದ ಗೋಕಾಕದವರಿಗೆ ರಾ.ಬ।।ರವರು ಪೆನಶನ್ ತೆಗೆದುಕೊಂಡನಂತರ ಈಗ ಈ ಪಾನಸುಪಾರಿ ಸಮಾರಂಭ ಮಾಡುವ ಯೋಗವು ಸಾಧಿಸಿತು. ಈ ಸಮಾರಂಭಕ್ಕೆ ಅಜಮಾಸು ನಾಲ್ಕೈದು ಸಾವಿರ ಜನರು ಕೂಡಿದ್ದು, ಸುಮಾರು ಏಳೆಂಟು ನೂರು ರೂಪಾಯಿ ವೆಚ್ಚವಾಯಿತು. ಬಹು ಮೌಲ್ಯವಾದ ಬೆಳ್ಳಿಯ ಕಾಸ್ಕೀಟ (ಕಾಪ್ಯಕರಂಡದಲ್ಲಿ)ನಲ್ಲಿ ಮಾನಪತ್ರವನ್ನು ಹಾಕಿಕೊಟ್ಟರು. ಬರಿಯ ಮಾನಪತ್ರವನ್ನು ಮುದ್ರಿಸಲಿಕ್ಕೆ ೫೫ ರೂಪಾಯಿ ಹತ್ತಿದವು. ಈ ಸಮಾರಂಭವು ಆ ದಿವಸ ಸಾಯಂಕಾಲದ ೫ ಘಂಟೆಯಿಂದ ೮ ಘಂಟೆಯ ವರೆಗೆ ನಡೆಯಿತು. ಸಮಾರಂಭದಲ್ಲಿ ರಾವ ಬ।।ರವರ ಗುಣಕಥನಪರವಾದ ಭಾಷಣಗಳೂ ಗಾಯನವೂ ನಡೆಯಲ್ಪಟ್ಟವು.

ಮರುದಿವಸ ಅಂದರೆ ತಾರೀಖು ೨೮ನೇ ಜುಲೈ ಸನ್ ೧೯೧೩ ಇಸವಿಯ ಸೋಮವಾರ ದಿವಸ ಮುಂಜಾನೆ ೮ ಘಂಟೆಯಿಂದ ೩ ಘಂಟೆಯ ವರೆಗೆ ಗೋಕಾವಿಯ ಮಿ।। ಗೋವಿಂದ ಶಂಕರ ಮಹಾಜನ ಇವರ ವಾಡೆಯಲ್ಲಿ ರಾವಬಹಾದ್ದೂರರವರ ತಾಂಬೂಲ ಸಮಾರಂಭವಾಯಿತು. ಈ ಸಮಾರಂಭದಲ್ಲಿ ಪಾತ್ರದವರ ನಾಚು ಆಯಿತು. ಇಲ್ಲಿ ಸುಮಾರು ಮುನ್ನೂರು ಜನರು ಕೂಡಿದ್ದರು. ಅದೇ ದಿವಸ ಸಾಯಂಕಾಲದ ೬ ಘಂಟೆಯಿಂದ ೯ ಘಂಟೆಯವರೆಗೆ ಮಿ।। ವೆಂಕಾಜಿ ದಾಸೋ ದೇಶಪಾಂಡೆ ಇವರ ವಾಡೆಯಲ್ಲಿ ಸುಮಾರು ಮೂರು ಸಾವಿರ ಜನಸಮೂಹದಲ್ಲಿ ರಾವಬಹಾದ್ದೂರರವರ ತಾಂಬೂಲ ಸಮಾರಂಭವು ಅಪ್ರತಿಮವಾಗಿ ನೆರವೇರಿತು. ಈ ಸಮಾರಂಭದಲ್ಲಿ ಅನೇಕ ಪದ ಪದ್ಯಗಳೂ ಭಾಷಣಗಳೂ ಆದವು. ಅವುಗಳಲ್ಲಿ ದುಷ್ಟಜನರ ದೌರ್ಜನ್ಯವನ್ನು ದೂರ ಮಾಡುವ ಬಗ್ಗೆ ರಾ.ಬ।।ರವರು ಎಷ್ಟು ದಕ್ಷರಾಗಿದ್ದರೆಂಬ ಸಂಗತಿಯು ಈ ಕೆಳಗಿನ ಪದದಿಂದ ವ್ಯಕ್ತವಾಗುತ್ತದೆ. ಈ ಪದವನ್ನು ಭೀಮಾಜಿ ಹಣಮಂತ ದೇಶಪಾಂಡೆ ಶಾಳಾಮಾಸ್ತರ ಹುನೂರ ತಾಲೂಕ ಗೋಕಾಕ ಇವರು ರಚಿಸಿರುವರು.

ರಾಗ : ಕಾಂಬೋಧಿ-ತಾಳ ಝಂಪಾ

ಶ್ರೇಷ್ಠ ಅರಟಾಳ ಸಾಹೇಬರಂ ಕಂಡು।ಇಷ್ಟಶುಭಕಾಲ ಬಂದೊದಗಿತೆಂದು ।।ಪಲ್ಲ।।

ದುಷ್ಟಜನ ವೃಂದಮಂ ನಷ್ಟಗೆಯ್ಯುತ್ತಲೆ। ರಾಷ್ಟ್ರದೊಳ್ ಶಿಷ್ಟರಂ ತುಷ್ಟಗೊಳಿಪಾ ॥೧॥

ಎಗ್ಗಳಾ ಹಣವನು ಜಗ್ಗುವಾ ಜನರನು। ನುಗ್ಗುನುರಿಯಪ್ಪಂತೆ ಬಗ್ಗುಬಡಿಪಾ ॥೨॥

ನಿಚ್ಚಳಾ ಮನದಲಿ ಚಚ್ಚರದಿ ಕಾರ್ಯದಲಿ। ಅಚ್ಯುತನ ದಯದಿಂದ ಉಚ್ಚಪದವಿಯ ಪಡೆದ ॥೩॥

ಈ ಪ್ರಕಾರ ಗೋಕಾಕದ ಸಮಾರಂಭವನ್ನು ತೀರಿಸಿಕೊಂಡು, ರಾವಬಹಾದ್ದೂರರವರು ಪರಮಾನಂದ ಭರಿತರಾಗಿ ತಾರೀಖ ೩೦ನೇ ಜುಲೈ ಸನ್ ೧೯೧೩ ಇಸವಿಯ ಬುಧವಾರದ ಮೇಲ ಟ್ರೇನಿನಿಂದ ಬೆಳಗಾವಿಗೆ ಬಂದರು. ಗೋಕಾವಿಯ ಯಾವ ಈ ಮಹಾಜನ ಮತ್ತು ದೇಶಪಾಂಡೆಯರು ಒಳಗಡೆಯಲ್ಲಿ ಎದುರಾಳಿಗಳಾಗಿ ಹೋರಾಡಿದ್ದರೋ, ಅವರೇ ಈಗ ಮುಂದಾಳುಗಳಾಗಿ ಗೋಕಾವಿಯಲ್ಲಿ ಸಾರ್ವಜನಿಕವಾಗಿ ಮತ್ತು ತಮ್ಮ ತಮ್ಮ ವಾಡೆಗಳಲ್ಲಿ ಸ್ಪೇಶಲ್ ರೀತಿಯಿಂದ ತಾಂಬೂಲ ಸಮಾರಂಭಗಳನ್ನು ಬಹು ವಿಜೃಂಭಣೆಯಿಂದ ನೆರವೇರಿಸಿ, ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈ ಸಂಗತಿಯಿಂದ ಕಟ್ಟಕಡೆಗೆ 'ಧರ್ಮವೇ ಜಯ'ವೆಂಬ ಮಾತು ನಿದರ್ಶನಕ್ಕೆ ಬರುವಂತಿದೆ.

ಚಚಡೀ ದೇಸಗತಿಯ ಮತ್ತು ನೇಸರಗಿ ಗ್ರಾಮದ ತಾಂಬೂಲ ಸಮಾರಂಭ ತಾ. ೨೪ನೇ ಅಗಸ್ಟ ಸನ್ ೧೯೧೩ ರವಿವಾರ

ಬೆಳಗಾವ ಗೋಕಾಕ ಈ ಸ್ಥಳಗಳಲ್ಲಿ ರಾವಬಹಾದ್ದೂರ ಅರಟಾಳ ಸಾಹೇಬರವರ ತಾಂಬೂಲ ಸಮಾರಂಭಗಳು ಬಹು ವೈಭವದಿಂದ ಜರುಗಿದ ಬಳಿಕ, ಚಚಡೀ ಸಂಸ್ಥಾನದ ಮೆ॥ ವೀರಭದ್ರಪ್ಪ ಗುಣಪ್ಪ ನಾಯಕಬಹಾದ್ದೂರ ದೇಸಾಯರು ತಮ್ಮ ರೈತಜನರನ್ನೊಡಗೊಂಡು, ನಮ್ಮಲ್ಲಿಯ ತಾಂಬೂಲ ಸಮಾರಂಭವನ್ನು ಅಂಗೀಕರಿಸಬೇಕೆಂದು ರಾವಬಹಾದ್ದೂರರವರನ್ನು ಪ್ರಾರ್ಥಿಸಿಕೊಂಡು, ಆಮಂತ್ರಣಕೊಟ್ಟರು. ರಾವ ಬ॥ರವರು ಆಮಂತ್ರಣವನ್ನು ಸ್ವೀಕರಿಸಿದ ನಂತರ ತಾರೀಖು ೨೪ನೇ ಅಗಸ್ಟ ಸನ್ ೧೯೧೩ ರವಿವಾರ ದಿವಸ ತಾಂಬೂಲ ಸಮಾರಂಭ ನೆರವೇರಿಸುವದನ್ನು ನಿಶ್ಚಯಿಸಿ, ದೇಸಾಯಿ ಸಾಹೇಬರು ಅನೇಕ ಜನ ಆಂಗ್ಲಾಧಿಕಾರಿಗಳಿಗೂ, ನೇಟಿವ ಕಾಮದಾರರಿಗೂ ಮತ್ತು ಜಿಲ್ಲೆಯ ಮುಖ್ಯ ಮುಖ್ಯ ಸ್ಥಳದ ದೇಸಾಯಿ ದೇಶಪಾಂಡೆಯರಿಗೂ, ಸೆಟ್ಟರು ಸಾವಕಾರರಿಗೂ ಆಮಂತ್ರಣಕೊಟ್ಟು, ಸಮಾರಂಭದ ಸರ್ವಸಿದ್ಧತೆಯನ್ನಿಡಿಸಿದರು.

ಸರ್ವಾಂಗಸುಂದರವಾದ ವಾಡೆಯ ಸದರುಗಟ್ಟಿಯ ಮೇಲೆ ಸಿಂಹಾಸನವನ್ನು ರಚಿಸಿ, ವಾಡೆಯ ಮುಂದೆ ಬಹು ಭವ್ಯವೂ ರಮ್ಯವೂ ಆದ ದರ್ಬಾರಮಂಟಪವನ್ನು ಏರ್ಪಡಿಸಿದ್ದರು. ಮಂಟಪವು ಎರಡಂತಸ್ತಿನದಾಗಿ ರಚಿಸಿದ್ದು, ಮೇಲಂತಸ್ತಿನ ಚಿತ್ರವಿಚಿತ್ರವಾದ ಕಮಾನುಗಳಲ್ಲಿ ವಾಡೆಗೆ ಎದುರಾಗಿ ಎರಡು ಸುಂದರವಾದ ಸ್ತ್ರೀ ಪ್ರತಿಮೆಗಳಿಂದ ಅಲಂಕೃತವಾಗಿತ್ತು. ಮಂಟಪವು ೬-೭ ಸಾವಿರ ಜನರಿಗೆ ಸಾಲುವಷ್ಟು ವಿಶಾಲವಾಗಿತ್ತು. ಉಚಿತವಾದ ಆಸನಗಳಿಂದಲೂ, ಸಾಂದ್ರವಾದ ಧ್ವಜಪತಾಕೆಗಳಿಂದಲೂ, ಮಂಟಪವು ಒಳ್ಳೇ ಮನೋಹರವಾಗಿ ತೋರುತ್ತಲಿತ್ತು. ಪಂಚರಂಗೀ ವಸ್ತ್ರಗಳ ಹಾಗೂ ಕಾಗದಗಳ ಫರಫರಿಗಳಿಂದಲೂ ತಳಿರ್ದೋರಣ ಕದಳೀಸ್ತಂಭಗಳಿಂದಲೂ ಧ್ವಜಪಾತಕೆಗಳಿಂದಲೂ ಊರೆಲ್ಲ ಶೃಂಗರಿಸಲ್ಪಟ್ಟಿತ್ತು. ಊರ ಮನೆಗಳೆಲ್ಲ ಬಹುಶಃ ದಸರೆ ಹಬ್ಬಕ್ಕೆ ತಯಾರಾಗುವಂತೆ ಸುಣ್ಣ ಕೆಮ್ಮಣ್ಣು ಬಣ್ಣಗಳಿಂದ ಅಲಂಕೃತವಾಗಿದ್ದವು. ಊರಿಂದ ಬೆಳಗಾವ

ಕಲಾದಗಿ ರಸ್ತೆಯ ವರೆಗೆ ಖಾಸಿಗೀ ಲೈನವನ್ನು ತಯಾರಿಸಿ, ಇಬ್ಬದಿಗಳಲ್ಲಿಯೂ ಸಾಲ್ಗೊಂಡು ಪತಾಕೆಗಳನ್ನು ನಿಲ್ಲಿಸಿದ್ದರು. ವಾಡೆಯ ಮೇಲೆ ದೂರಿನಿಂದ ಬಹು ಎತ್ತರವಾಗಿ ಕಾಣುವಂತೆ, ಇಂಗ್ಲೀಷ ಪದ್ಧತಿಯ ಮಹತ್ತರವಾದ ನಿಶಾನೆಯನ್ನು ನಿಲ್ಲಿಸಿದ್ದರು. ಅಂತೂ ಪುರಶೃಂಗಾರವೂ ವಾಡೆಯ ಅಲಂಕಾರವೂ ಸಾಕಷ್ಟು ಆಗಿತ್ತೆಂದು ಹೇಳಬಹುದು.

ತಾರೀಖು ೨೩ನೇ ಅಗಸ್ಟ ಸನ್ ೧೯೧೪ ಇಸವಿಯ ಶನಿವಾರ ದಿವಸ ರಾವಬಹಾದ್ದೂರರವರು ಮೋಟಾರ ಗಾಡಿಯ ಮೇಲೆ ಬೆಳಗಾವಿಯಿಂದ ಹೊರಟು, ಕಲಾದಗಿ ಮಾರ್ಗವಾಗಿ ಮಧ್ಯಾಹ್ನದ ೩ ಘಂಟೆಯ ಸುಮಾರಕ್ಕೆ ತಮ್ಮ ಮೊಮ್ಮಕ್ಕಳಾದ ಕಾಶೀಬಾಯಿ-ಚಂದ್ರಭೂಷಣರನ್ನೊಡಗೊಂಡು, ರಸ್ತೆಯ ಮೇಲಿರುವ ಪೊಲೀಸ ಪೋಷ್ಟಿನಲ್ಲಿ ಬಂದು ಇಳಿದರು. ಅಷ್ಟೊತ್ತಿಗೆ ಪುರಜನರೂ ಉತ್ಸವವನ್ನು ನೋಡಲೈತಂದ ಹಳ್ಳಿಪಳ್ಳಿ ಎಂಟು ಹತ್ತು ಸಾವಿರ ಜನರೂ ಆಮಂತ್ರಿತ ಮಹಾಶಯರೂ ಮಂಗಳವಾದ್ಯಗಳ ಮೇಳದೊಡನೆ ಸರ್ವಸರಂಜಾಮ ಸಹಿತವಾದ ಪಲ್ಲಕ್ಕಿಯನ್ನು ತೆಗೆದುಕೊಂಡು ಬಂದು, ಮಾರ್ಗಪ್ರತೀಕ್ಷೆ ಮಾಡುತ್ತ ಕೂತುಕೊಂಡಿದ್ದರು. ಮೋಟಾರಗಾಡಿಯು ಬಂದಾಕ್ಷಣವೆ ಜಯಘೋಷವನ್ನು ಮಾಡಿ, ಅಂದವಾದ ಅಂದಣದಲ್ಲಿ ಇವರನ್ನು ಕೂಡ್ರಿಸಿ, ಅನೇಕೋತ್ಸವದೊಡನೆ ಪುರಾಭಿಮುಖರಾದರು. ರಾವಬಹಾದ್ದೂರರವರು ತಮ್ಮ ಹತ್ತಿರ ಪಲ್ಲಕ್ಕಿಯಲ್ಲಿ ಶ್ರೀಮಂತ ಚಂದ್ರಭೂಷಣನನ್ನೂ, ಕಾಶೀಬಾಯಿಯನ್ನೂ ಕೂಡ್ರಿಸಿಕೊಂಡಿದ್ದರು. ಮುಂದೆ ಮುಂದೆ ಬೇಂಡಬಾಜಾ ಎಂಬ ಆಂಗ್ಲವಾದ್ಯ ಸಹಿತವಾದ ನಗಾರಿ-ನೌಬತ್ತು-ಡಂಕೆ ಮೊದಲಾದ ಸರ್ವಮಂಗಳವಾದ್ಯಗಳು ಭೋರ್ಗರೆಯುತ್ತಿರಲು, ಕಹಳೆ-ಕರ್ನಿಗಳ ಉಚ್ಚೈಃಸ್ವರವು ವಾಯುಮಂಡಲವನ್ನು ಭೇದಿಸಿ ಹೋಗುತ್ತಿರಲು, ಭಟ್ಟಂಗಿಗಳು ಹೊಗಳುತ್ತಿರಲು, ಇಬ್ಬದಿಯಲ್ಲಿಯೂ ಅಶ್ವಾರೋಹಿಗಳು ಗಂಭೀರವಾಗಿ ನಡೆಯುತ್ತಿರಲು, ವಸ್ತ್ರಾಲಂಕಾರ ಭೂಷಿತವಾದ ಕುದುರೆಗಳು ಮನೋಹರವಾಗಿ ಕುಣಿಯುತ್ತಿರಲು, ರಾಜಭಟರು ರಾರಾಜಿಸುತ್ತಿರಲು, ಬಾರಿಬಾರಿಗೆ ಬಂದೂಕಗಳ ಬಾರು ಆಗುತ್ತಿರಲು, ಚೋಪದಾರರು ಪರಾಕುಗಳನ್ನುಚ್ಚರಿಸುತ್ತಿರಲು, ಜನಸಮೂಹದ ಜಯಜಯಕಾರವು ಬಿಡದೇ ನಡೆದಿರಲು, ಛತ್ರಚಾಮರಾಪ್ತಾಗಿರಿಗಳು ಪಲ್ಲಕ್ಕಿಯನ್ನು ಆವರಿಸಿರಲು, ಮನೆಮನೆಗೆ ಅಂಗಳಕ್ಕೆ ನೀರೆರೆದು ಹೆಣ್ಣು ಮಕ್ಕಳು ಆರತಿಗಳನ್ನು ಮಾಡುತ್ತಿರಲು, ಜನಸಮೂಹವು ಪಲ್ಲಕ್ಕಿಯ ಹಿಂದೆ ಮುಂದೆ ಸಾಂದ್ರವಾಗಿ ಸಾಗುತ್ತಿರಲು, ಕೆಲವರು ಬಗಿ-ಟಾಂಗಾ-ಸಾರವಾಟ ಗಾಡಿಗಳಲ್ಲಿ ಬರುತ್ತಿರಲು, ಎಲ್ಲಕ್ಕೂ ಹಿಂದೆ ಮೋಟಾರಗಡಿಯು ಬರುತ್ತಿರಲು, ಇಂತಹ ರಾಜವೈಭವದಿಂದ ರಾವಬಹಾದ್ದೂರರವರ ಪಲ್ಲಕ್ಕಿಯು ಸಾಗಿಬರುತ್ತಿರಲು, ಅದು ಜನಪ್ರವಾಹದಲ್ಲಿ ತೇಲಿಹೋಗುತ್ತಿರುವ ನೌಕೆಯಂತೆ ಕಂಡುಬರುತ್ತಿತ್ತು.

ಮಹೋತ್ಸವದೊಡನೆ ಪಲ್ಲಕ್ಕಿಯು ಬರುತ್ತಲಿರುವಾಗ ಬೆಳಗಾವಿಯ ಪ್ರಸಿದ್ಧ ಫೋಟೋಗ್ರಾಫರರಾದ ಎಸ್. ಮಹಾದೇವ ಆಂಡ ಸನ್ಸ್ ಇವರ ಜ್ಯೇಷ್ಠಪುತ್ರ ಗಜಾನನ ಎಂಬವರು ವಾಡೆಯ ಹತ್ತಿರ ಬುರುಜಿನ ಮೇಲೆ ನಿಂತು, ಪಲ್ಲಕ್ಕಿ ಸಹಿತವಾದ ಈ ಮಹೋತ್ಸವದ ಫೋಟೋ ತೆಗೆದುಕೊಂಡರು. ಉತ್ಸವವನ್ನು ನೋಡಲಿಕ್ಕೆ ಅಂಗಳಗಳು ಸಾಲದೆ ಕಟ್ಟಿಗಳ ಮೇಲೂ ಮನೆಗಳ ಮೇಲೂ ಕುಂಬಿಗಳ ಮೇಲೂ ಮಹಡಿಗಳ ಮೇಲೂ ಕಿಲ್ಲೆಯ ಗೋಡೆಗಳ ಮೇಲೂ ಬುರುಜುಗಳ ಮೇಲೂ ಏರಿ ನಿಂತುಕೊಂಡಿದ್ದರು. ಎಲ್ಲ ನರನಾರಿಯರಿಂದ ಸಂಕಲಿತವಾದ ಆ ದಿವಸದ ಉತ್ಸವವು ಪ್ರೇಕ್ಷಣೀಯವಾಗಿತ್ತು. ವಾಡೆಗೆ ಪಲ್ಲಕ್ಕಿಯು ಬಂದೊಡನೆ ಪದ್ಧತಿಯ ಮೇರೆಗೆ ಬಹು ಮರ್ಯಾದೆಯಿಂದ ಪುರಪ್ರಮುಖರು ರಾವಬಹಾದ್ದೂರರವನ್ನು ಎದುರ್ಗೊಂಡು, ವಾಡೆಯ ಸದರುಗಟ್ಟಿಯ ಮೇಲೆ ಪೂರ್ವಾಭಿಮುಖವಾಗಿ ರಚಿಸಿದ ಸಿಂಹಾಸನದ ಮೇಲೆ ಇವರನ್ನು ಕೂಡಿಸಿ, ಯಥಾವಿಧಿಯಾಗಿ ಇವರ ಸ್ವಾಗತ ಸಮಾರಂಭವನ್ನು ಮಾಡಿದರು. ಆಗ ಚಚಡೀ ದೇಸಗತಿಯ ಕಾರಭಾರಿಗಳಾದ ಶಿ.ರಾ।ಮುರಿಗಯ್ಯ ಗುರುಸಿದ್ಧಯ್ಯ ಕಬ್ಬಿಣಕಾಂತೀಮಠ ಹಾನಗಲ್ಲ (ಹಾಲಯ್ಯನವರ ಮಠ ಸಾಕೀನ ಹಾವೇರಿ) ಇವರು ಮಾಡಿದ ಸ್ವಾಗತಪರ ಭಾಷಣ:

ಚಚಡೀ ಕಾರಭಾರಿಗಳ ಸ್ವಾಗತಪರ ಭಾಷಣ

"ಮಹನೀಯರೆ, ಈಈಚಿಕ್ಕ ಚಚಡೀ ಸಂಸ್ಥಾನಾಧಿಪತಿಗಳಾದ ನಮ್ಮ ಶ್ರೀಮಂತರು ನಾಳಿನ ದಿವಸ ತಮಗೋಸ್ಕರ ಮಾಡುವ ಪಾನಸುಪಾರಿ ಸಮಾರಂಭದ ಆಮಂತ್ರಣವನ್ನು ಕೈಕೊಂಡು ಇಲ್ಲಿಯ ವರೆಗೆ ತಾವು ದಯಮಾಡಿಸಲು, ಗ್ವಜಾಶ್ವರಥಗಳ ಹಾಗೂ ಸರ್ವಪ್ರಜಾಸಮೂಹದೊಡನೆ ಸರ್ವಾಲಂಕಾರಗಳಿಂದ ಶೃಂಗರಿಸಲ್ಪಟ್ಟ ಅಂದವಾದ ಅಂದಳದಿಂದಲೂ-ಸ್ವಾರ ಶಿಲೇದಾರ-ಜಮಾದಾರ-ಹವಾಲದಾರ-ಅಂಗರಕ್ಷಕ ಮೊದಲಾದ ರಾಜಭಟರಿಂದಲೂ, ಭಾಲದಾರ-ಚೋಪದಾರ-ಭಟ್ಟಂಗಿ ಮೊದಲಾದ ಸ್ತುತಿಪಾಠಕದಿಂದಲೂ ತಾಸೆ-ಭಜಂತ್ರಿ-ನಗಾರೆ-ನೌಬತ್ತು-ಚೌಘಡೆ-ಢಂಕೆ-ಹಿರಿಡೊಳ್ಳು-ಕಿರಿಡೊಳ್ಳು-ಜಗ್ಗಡೊಳ್ಳು-ಕರಡೀಮಜಲು ಮೊದಲಾದ ವಾದ್ಯಗಳಿಂದಲೂ, ಛತ್ರಚಾಮರಾಪ್ತಾಗಿರಿ ಮೊದಲಾದ ಬಿರುದಾವಳಿಗಳಿಂದಲೂ ಇದಿರ್ಗೊಳ್ಳಬಂದು, ಅಂದಣವನ್ನೇರಲು ಅಪೇಕ್ಷಿಸಿದ ಶ್ರೀಮಂತರ ಹಾಗೂ ಪುರಪ್ರಜೆಗಳ ಬಿನ್ನಹವನ್ನು ಮಾನ್ಯಮಾಡಿ, ಸಕಲವಾದ್ಯಗಳು ಮೊಳಗುತ್ತಿರಲು ಜಯಘೋಷದೊಡನೆ ಅಂದಳದಲ್ಲಿ ಮಂಡಿಸಿ, ಸಕಲವೈಭವದೊಡನೆ ಪುರಪ್ರವೇಶವನ್ನು ಮಾಡಿ, ಸುಮಂಗಲೆಯರಾದ ಪುರನಾರೀಮಣಿಗಳು ಆರತಿಯನ್ನೆತ್ತಲು ಅವರನ್ನು ಉಚಿತಮರ್ಯಾದೆಗಳಿಂದ ಮನ್ನಿಸಿ, ಸಂಭಾವನೆಯನ್ನಿತ್ತು ರಾಜಬೀದಿಗಳಲ್ಲಿ ರಾಜವೈಭವದೊಡನೆ ಪುರಪ್ರಜೆಗಳೆಲ್ಲರಿಗೂ ದರ್ಶನಲಾಭವನ್ನು ಕೊಡುತ್ತ, ಸರ್ವರ ವಂದನೆಗಳನ್ನು ಚಿತ್ತವಿಟ್ಟು ಸ್ವೀಕರಿಸುತ್ತ, ಶಾಂತಚಿತ್ತರಾಗಿ ರಾಜವಾಡೆಯನ್ನು ಪ್ರವೇಶಿಸಲು, ನಮ್ಮ ಒಡತಿಯರಾದ ಸರ್ವಮಂಗಳೆಯಂತೊಪ್ಪುವ ಮಹಾಸನ್ನಿಧಿಯ ತನುಜೆಯರೂ ನಮ್ಮ ಶ್ರೀಮಂತರ ಪತ್ನಿಯರೂ ಆದ ಕುಂಕುಮ ಸೌಭಾಗ್ಯವತಿ ರುದ್ರಾಬಾಯಿ ಸಾಹೇಬರವರ ವತಿಯಿಂದ ಮಂಗಲಾಂಗಿಯರು ಕದಲಾರತಿಯಿಂದ ನಿವಾಳಿ ತೆಗೆದು ಕಂಚಿನಾರತಿಯನ್ನು ಬೆಳಗಲು, ಅವರನ್ನು ಮನ್ನಿಸಿ ಸಂಭಾವನೆಯನ್ನಿತ್ತು, ನಮ್ಮ ಅಧಿಪತಿಗಳಿಗೆ ಹಸ್ತಲಾಘವವನ್ನಿತ್ತು, ಸಿಂಹಾಸನದೊಳ್ ಮಂಡಿಸಿ ಶ್ರೀಪ್ರತಿಬಸವೇಶ್ವರನಂತೊಪ್ಪುವ ಅರಟಾಳ ಚನ್ನವೀರೇಂದ್ರ ನಂದನರಾದ ರಾವ್‌ಬಹಾದ್ದೂರ ಆಯ್.ಎಸ್.ಓ. ಎಂಬ ಬಿರುದುಳ್ಳ ರುದ್ರಭೂಪಾಲರವರೇ, ತಾವು ದಯವಿಟ್ಟು ಈ ಸಂಸ್ಥಾನಕ್ಕೆ ದಯಮಾಡಿಸಿದ್ದಕ್ಕೆ ನಾವೆಲ್ಲರೂ ತಮಗೆ ಆಭಾರಿಗಳಾಗಿರುತ್ತೇವೆ. ಮಹನೀಯರೆ, ನಮ್ಮ ತಾಂಬೂಲ ಸಮಾರಂಭವನ್ನು ಸ್ವೀಕರಿಸಿ, ನಮ್ಮೆಲ್ಲರಿಗೆ ಧರ್ಮನೀತಿ ಸದಾಚಾರಗಳನ್ನು ಬೋಧಿಸಿ, ಮತದ ಮರ್ಮಗಳನ್ನು ತಿಳಿಸಿ, ಸರ್ವರನ್ನು ಆನಂದಗೊಳಿಸಬೇಕೆಂದು ಅನನ್ಯ ಭಾವದಿಂದ ಬಿನ್ನಹ ಮಾಡಿಕೊಳ್ಳುತ್ತೇನೆ." ಈ ಪ್ರಕಾರ ಭಾಷಣವಾದನಂತರ ರಾ.ಬ।। ರವರು ಸರ್ವರ ಅಭಾರಮನ್ನಿಸಿದರು. ಇಷ್ಟೊತ್ತಿಗೆ ಸಂಜೆಯ ಏಳು ಬಡೆದದ್ದರಿಂದ ಆಹೊತ್ತಿನ ಸಭಾವಿಸರ್ಜನೆಯಾಯಿತು. ಮರುದಿವಸ ಅಂದರೆ ತಾರೀಖು ೨೪ನೇ ಅಗಸ್ಟ ಸನ್ ೧೯೧೩ ರವಿವಾರ ದಿವಸ ಜರಗುವ ತಾಂಬೂಲ ಸಮಾರಂಭಕ್ಕೆ ಮೆ।। ಕಮಿಶನರ ಸಾಹೇಬ ಬಹದ್ದೂರರವರೇ ಮೊದಲಾದ ಆಂಗ್ಲಾಧಿಕಾರಿಗಳು ದಯಮಾಡಿಸುವವರಿದ್ದದರಿಂದ ಸರ್ವಸಿದ್ಧತೆ ಇಡಲ್ಪಟ್ಟಿತು. ಆದರೆ ಬೆಳಗಾವ ಚಚಡಿಗಳ ನಡುವೆ ರಸ್ತೆಯ ಮೇಲಿದ್ದ ಸಂಪಗಾವ ತಾಲೂಕ ಪೈಕಿ ನೇಸರಗಿ ಗ್ರಾಮದ ರಾವಸಾಹೇಬ ಮಹಾಂತಸೆಟ್ಟರೂ ಮತ್ತು ಪುರನಿವಾಸಿಗಳೂ ಕೂಡಿ, ಅನಾಯಾಸವಾಗಿ ಒದಗುವ ಈ ಸಮಯವನ್ನು ಸಾಧಿಸಿ, ಅದೇ ದಿವಸ ಮಧ್ಯಾಹ್ನದ ೧ ಘಂಟೆಗೆ ರಾವಬಹಾದ್ದೂರರವರಿಗೆ ತಾಂಬೂಲ ಸಮಾರಂಭದ ಆಮಂತ್ರಣವನ್ನು ಕೊಟ್ಟಿದ್ದಲ್ಲದೆ, ಚಚಡಿಗೆ ಬರುವ ಯಾವತ್ತು ಆಂಗ್ಲಾಧಿಕಾರಿಗಳಿಗೂ ಆಮಂತ್ರಣವನ್ನಿತ್ತು, ಅವರ ಮಾರ್ಗನಿರೀಕ್ಷಣೆ ಮಾಡುತ್ತ ರಸ್ತೆಯ ಮೇಲೆ ನಿಂತುಕೊಂಡಿದ್ದರು. ನೇಸರಿಗಿಯವರು ಪುರಶೃಂಗಾರವನ್ನೂ ಮಂಟಪಸೌಂದರ್ಯವನ್ನೂ ಚೆನ್ನಾಗಿ ಮಾಡಿದ್ದರು. ವೇಳೆಗೆ ಸರಿಯಾಗಿ ಬೆಳಗಾವಿಯಿಂದ ಸರ್ವ ಆಂಗ್ಲಾಧಿಕಾರಿಗಳು ಮೊಟಾರ ಗಾಡಿಗಳ ಮೇಲಿಂದಲೂ ಚಚಡಿಯಿಂದ ರಾವಬಹಾದ್ದೂರರವರು ರಥದ ಮೇಲಿಂದಲೂ ನೇಸರಿಗಿಗೆ ಆಗಮಿಸಿದರು. ಮಳೆಯಾಗಿದ್ದರೂ ಜನಸಮೂಹವು

ವಿಶೇಷ ಕೂಡಿತ್ತು. ಅಜಮಾಸು ೮-೧೦ ಸಾವಿರ ಜನರು ಕೂಡಿದ್ದರು. ರಾವಬಹಾದ್ದೂರರವರ ಮೆರವಣಿಗೆಯು ಇಲ್ಲಿ ಸರ್ವತೋಮುಖವಾಗಿ ಶೃಂಗರಿಸಿದ ಕುದುರೆಯ ಮೇಲೆ ಬಹು ಸಡಗರದಿಂದ ಆಯಿತು. ಮೆರವಣಿಗೆಯೊಡನೆ ರಾವಬಹಾದ್ದೂರರವರೂ ಆಗಮಿಸಿ, ಆಂಗ್ಲಾಧಿಕಾರಿಗಳೂ ಮಂಟಪವನ್ನು ಪ್ರವೇಶಿಸಿ, ಅಲ್ಲಿಯ ತಾಂಬೂಲ ಸಮಾರಂಭವನ್ನು ಮನೋಹರವಾಗಿ ಸಾಂಗಮಾಡಿದರು. ಈ ಸಮಾರಂಭಕ್ಕೆ ನೇಸರಿಗಿಯವರು ಸುಮಾರು ೪೦೦ ನಾಲ್ಕುನೂರು ರೂಪಾಯಿ ವೆಚ್ಚಮಾಡಿರಬಹುದು. ಈ ಸಮಾರಂಭದಲ್ಲಿಯೂ ಯಥಾವಿಧಿಯಾಗಿ ವಾದ್ಯಗಳೂ, ಭಾಷಣಗಳೂ ಚೆನ್ನಾಗಿ ಆದವು.

ಅದೇ ದಿವಸ ೨ ಗಂಟೆಗೆ ಚಚಡೀ ತಾಂಬೂಲ ಸಮಾರಂಭವಿದ್ದದರಿಂದ ಈ ನೇಸರಿಗಿಯ ಸಭೆಯನ್ನು ಸ್ವಲ್ಪದರಲ್ಲಿಯೇ ಮುಗಿಸಿ, ಎಲ್ಲರೂ ಕೂಡಿ ಚಚಡಿಗೆ ದಯಮಾಡಿಸುವವರಾಗಿದ್ದರು. ಬೆಳಗಾವ-ಬೈಲಹೊಂಗಲ ಮುರಗೋಡ-ಯಕ್ಕುಂಡಿ-ಸವದತ್ತಿ-ಸಂಪಗಾವ -ಅರಳಿಕಟ್ಟಿ-ನೇಸರಿಗಿ-ಕಿತ್ತೂರ-ಗೋಕಾಕ ಮೊದಲಾದ ದೂರದೂರಿನ ಸ್ಥಳಗಳಿಂದ ಆಮಂತ್ರಿತ ಜನರೂ ಸುತ್ತಹಳ್ಳಿಗಳ ಜನರೂ ಬಂದು ೭-೮ ಸಾವಿರ ಜನರು ಸೇರಿಕೊಂಡಿದ್ದರು. ಎಲ್ಲ ಜನಸಮೂಹದಿಂದ ಚಚಡಿಯು ತುಂಬಿ ತುಳುಕುತ್ತಲಿತ್ತು. ಮೇಲಾಗಿ ಮರುದಿವಸ ಸೋಮವಾರವೇ ಅಲ್ಲಿಯ ಶ್ರೀ ಸಂಗಮೇಶ್ವರದೇವರ ಜಾತ್ರೆಯಿದ್ದದರಿಂದ ಎರಡೊಂದು ಕಾರಣದಿಂದ ವಿಶೇಷಜನರು ಕೂಡಲಿಕ್ಕೆ ಕಾರಣವಾಗಿತ್ತು.

ಎಲ್ಲ ಜನರೂ ಸಕಲವಾದ್ಯ ವಿಶಿಷ್ಟವೈಭವಗಳಿಂದ ಬೆಳಗಾವ ರಸ್ತೆಯ ದ್ವಿಪಾರ್ಶ್ವಗಳಲ್ಲಿಯೂ, ಸಾಲ್ಗೊಂಡು ಸಜ್ಜಾಗಿ ನಿಂತಿದ್ದರು. ಎಲ್ಲರ ಲಕ್ಷವು ಬೆಳಗಾವ ಮಾರ್ಗದ ಕಡೆಗೇ ಇದ್ದು, ಮುಂದೆ ನೋಡಲಿಕ್ಕೆ ಒಬ್ಬ ಸ್ವಾರನು ಓಡಿಸಲ್ಪಟ್ಟಿದ್ದನು. ಎಲ್ಲರೂ ಈ ಪ್ರಕಾರವಾಗಿ ಆಮಂತ್ರಿತರಾದ ಆಂಗ್ಲಾಧಿಕಾರಿಗಳ ಆಗಮನವನ್ನೇ ನೋಡುತ್ತಿರಲು ಬಂದರೆಂಬದನ್ನು ಸೂಚಿಸಲಿಕ್ಕೆ ಆ ಸ್ವಾರನು ಮುಂದಾಗಿಯೇ ವಾಯುವೇಗದಿಂದ ಬಂದನು. ಕೂಡಲೆ ಒಂದರ ಹಿಂದೊಂದು ೩-೪ ಮೊಟಾರಗಾಡಿಗಳು ಬಂದವು. ಜಯಘೋಷದೊಡನೆಯೆ ಎಲ್ಲ ಮಹನೀಯರನ್ನು ಮರ್ಯಾದಿಸಿ, ಹಿಂದಿನ ದಿವಸದಂತೆ ಮಹಾವೈಭವದಿಂದ ರಥಗಳ ಮೇಲೆ ಮೆಹರ್ಬಾನ ನಾಮದಾರ ಶೆಫರ್ಡ ಮತ್ತು ಮೆ|| ಬ್ರಾವುನ್, ಕ್ರುಂಪ್‌ಕೂವೆನ್, ಮ್ಯಾಕೆ ಸಾಹೇಬ ಬಹಾದ್ದೂರರನ್ನು ಮೆರೆಸುತ್ತ ವಾಡೆಯ ಕಡೆಗೆ ತೆರಳುವವರಾದರು. ಉತ್ಸವವು ಮಹಾದ್ವಾರಕ್ಕೆ ಬಂದೊಡನೆ ಯಾವತ್ತು ಆಂಗ್ಲಾಧಿಕಾರಿಗಳ ಹಾಗೂ ನೇಟಿಪ್ಹ ಅಧಿಕಾರಿಗಳ ಮತ್ತು ಪ್ರತಿಷ್ಠಿತ ಜನರ ಫೋಟೋ ತೆಗೆದುಕೊಳ್ಳಲ್ಪಟ್ಟಿತು.

ಈ ಹೊತ್ತಿನ ದಿವಸ ದರ್ಬಾರ ಮಂಟಪಕ್ಕೆ ಎದುರಾಗಿ ಪಾತಾಳ ಅಂಕಣದ ಮಧ್ಯದಲ್ಲಿ ಬಹು ರಮ್ಯವಾದ ಸಿಂಹಾಸನವನ್ನು ಉತ್ತರಾಭಿಮುಖವಾಗಿ ರಚಿಸಿದ್ದರು. ಸಪ್ತವರ್ಣದ ಚೀನಾರಗಳಿಂದಲೂ, ಕುತ್ತನಿ-ಕಿನಕಾಪ-ಮಖಮಲಗಳಿಂದಲೂ, ಜರತಾರೀ ವಸ್ತ್ರಗಳಿಂದಲೂ ಛತ್ರಚಾಮರಾಪ್ತಾಗಿರಿಗಳಿಂದಲೂ ಎತ್ತರವಾಗಿ ರಚಿಸಿರುವ ಸಿಂಹಾಸನವು ಸಭಾಸದರ ಚಿತ್ತವನ್ನು ಆಕರ್ಷಿಸುತ್ತಲಿತ್ತು. ಸಭಾಮಂದಿರಕ್ಕೆ ಎಲ್ಲ ಆಂಗ್ಲಾಧಿಕಾರಿಗಳು ಆಗಮಿಸಿದೊಡನೆ ಜಯಘೋಷದಲ್ಲಿಯೂ, ಕರತಳದ ಸಪ್ಪಳದಲ್ಲಿಯೂ ಎಲ್ಲರು ತಮ್ಮ ತಮ್ಮ ಆಸನಗಳಲ್ಲಿ ಅಲಂಕೃತರಾದರು. ರಾವಬಹಾದ್ದೂರರವರು ನಾಮದಾರ ಮೆ||ಕಮೀಶನರ ಸಾಹೇಬ ಬಹದ್ದೂರರವರನ್ನು ಕುರಿತು-ಅಧ್ಯಕ್ಷಸ್ಥಾನವಾದ ಸಿಂಹಾಸನದಲ್ಲಿ ವಿಶ್ರಮಿಸಲಿಕ್ಕೆ ವಿಜ್ಞಾಪಿಸಿಕೊಳ್ಳಲು, ಮೆ|| ರವರು ನೀವೇ ಕೂಡ್ರತಕ್ಕದ್ದೆಂದು ರಾವಬಹಾದ್ದೂರರವರನ್ನು ಆಗ್ರಹದಿಂದ ಕೈಹಿಡಿದು ಕೂಡ್ರಿಸಹೋದರು. ಅದಕ್ಕೆ ರಾ.ಬ||ರವರು ಹಾಗೆ ಎಂದಿಗೂ ಆಗದು. ತಾವೇ ವಿಶ್ರಮಿಸತಕ್ಕದ್ದೆಂದು ಹೇಳಿ, ಅವರನ್ನು ಅಧ್ಯಕ್ಷಸ್ಥಾನಕ್ಕೆ ಕೂಡ್ರಿಸಿದರು. ಅಹಹಾ! ಈ ಹೊತ್ತಿನ ಸದರನ್ನು ಕಣ್ತುಂಬ ನೋಡಿದ ನೇತ್ರಗಳೇ ಸಾರ್ಥಕವೆಂದು ಹೇಳಬಹುದು. ಮಧ್ಯದಲ್ಲಿ ಮೆ||ನಾಮದಾರ ಶೇಫರ್ಡ ದೊರೆಗಳು ವಿರಾಜಿಸುತ್ತಿರುವರು. ಅವರ ಬಲಕ್ಕೆ ರಾವಬಹಾದ್ದೂರ ಅರಟಾಳಸಾಹೇಬರವರು; ಎಡಕ್ಕೆ ಜಿಲ್ಲಾ ಕಲೆಕ್ಟರರಾದ ಮೆ||ಬ್ರಾವುನ್ ಸಾಹೇಬ ಬಹದ್ದೂರರವರು;ಕಲೆಕ್ಟರರಿಗೆ ಹೊಂದಿ ಡಿಸ್ಟ್ರಿಕ್ಟ ಜಜ್ಜರಾದ

ಕ್ರಂಪಸಾಹೇಬ ಬಹಾದ್ದೂರರವರು; ಅವರ ಹತ್ತರ ಮೆ॥ಕೊವ್ವೆನ್ ಸಾಹೇಬ ಬ॥ರವರು; ಅವರ ಹಿಂದಿನ ಸಾಲಿನಲ್ಲಿ ಚಚಡಿಯ ಮೆ॥ನಾಯಕ ಬಹಾದ್ದೂರ ದೇಸಾಯ ಸಾಹೇಬರವರು; ಅವರ ಬಳಿಯಲ್ಲಿ ಸವದತ್ತಿ ತಾಲೂಕ ಮಾಮಲೇದಾರರಾದ ಮಿ॥ ಹೆಗಡೆಯವರು; ಅವರಿಗೆ ಹತ್ತಿ ಮುರಗೋಡ ಮಹಾಲಕರಿಗಳಾದ ಮಿ॥ ನಾಗರಗಟ್ಟಿಯವರು ವಿಶ್ರಮಿಸಿದ್ದರು. ಇತ್ತ ರಾ.ಬ॥ಅರಟಾಳ ಸಾಹೇಬರಿಗೆ ಹೊಂದಿ ಅ॥ ಕಲೆಕ್ಟರರಾದ ಮೆ॥ ಮ್ಯಾಕೆ ಸಾಹೇಬರವರೂ ಅವರಿಗೆ ಹೊಂದಿ ಶ್ರೀಮಂತ ತಲ್ಲೂರಕರ ಚಂದ್ರಪ್ಪ ದೇಸಾಯರೂ ಇವರ ಹತ್ತರವೇ ಸಂಪಗಾವ ತಾಲೂಕ ಮಾಮಲೇದಾರರಾದ ಗಿಲಗಿಂಚಿ ಬಸವಂತಪ್ಪನವರೂ ಅವರೆಡೆಯಲ್ಲಿ ನೇಸರಿಗಿ ರಾವ ಸಾ॥ಮಹಾಂತಸೆಟ್ಟರೂ, ಇವರ ಹಿಂದಿನ ಸಾಲಿನಲ್ಲಿ ಬೆಳಗಾವ ಜಿಲ್ಲಾ ಡಿ.ಡಿ. ಕಲೆಕ್ಟರರಾದ ಮಿ॥ ಕಲೋಳಗಿ ವಿರೂಪಾಕ್ಷಪ್ಪನವರೂ, ಅಥಣಿಯ ದೇವಪ್ಪಾ ರುದ್ರಪ್ಪಾ ಅಣ್ಣಾ ಮಹಾಜನ ಇವರೂ ಮಹಾಜನರಿಗೆ ಹೊಂದಿ ರಾ.ಸಾ॥ ಶಿವಮೂರ್ತಿಸ್ವಾಮಿ ಕಣಬರಿಗಿಮಠ ಗೋಕಾಕ ಫಾಲ್ಸ ಇವರೂ ಇವರ ನೆರೆಯಲ್ಲಿಯೇ ಛಾಯಪ್ಪಾ ಸಣ್ಣತಮ್ಮಪ್ಪಾ ಹುಯಿಲಗೋಳ ಬೆಳಗಾವ ಇವರೂ ಶೋಭಿಸುತ್ತಿದ್ದರು. ಇವರಲ್ಲದೆ ಇನ್ನೂ ಅನೇಕ ಜನ ಅಧಿಕಾರಿಗಳೂ ಸೆಟ್ಟರು ಸಾವಕಾರರೂ ಗೌಡ ಕುಲಕರಣಿಯರೂ ವತನದಾರರೂ ಯೋಗ್ಯಾಸನಗಳಲ್ಲಿ ಒಪ್ಪುತ್ತಿದ್ದರು. ಇಬ್ಬದಿಗಳಲ್ಲಿ ಪೊಲೀಸರು ಭದ್ರವಾಗಿ ನಿಂತಿದ್ದರು. ಅವರ ಜೊತೆಯಲ್ಲಿ ಚೋಪದಾರರೂ ಚವರಿಯವರೂ ಮನೋಹರವಾಗಿ ನಿಂತಿದ್ದರು. ಮೆ॥ ನಾಮದಾರ ಶೆಫರ್ಡ ದೊರೆಗಳ ಶಿರೋಭಾಗದಲ್ಲಿ ರೇಶಿಮೆಯ ವಸ್ತ್ರಗಳಿಂದಲಂಕೃತವಾದ ಅಪ್ತಾಗಿರಿಯು ಶೋಭಾಮಯಮಾನವಾಗಿತ್ತು. ಶ್ರೀಮಂತರ ಪುತ್ರರಾದ ಅಪ್ಪಾಸಾಹೇಬರು ಅಜ್ಜಂದಿರ ಬಳಿಯಲ್ಲಿ ಆನಂದದಿಂದ ಕುಳಿತಿದ್ದರು. ಮೊದಲೇ ಮನೋಹರವಾದ ರಾಜವಾಡೆಯು. ಮೇಲಾಗಿ ಅದು ಶೃಂಗರಿಸಲ್ಪಟ್ಟಿತ್ತು. ಅದರಲ್ಲಿ ಸರ್ವತೋಮುಖವಾಗಿ ರಂಜಿಸುತ್ತಿರುವ ಸಿಂಹಾಸನ. ಅದರ ಮೇಲೆ ನಾಮದಾರ ಶೇಫರ್ಡ ದೊರೆಗಳು. ಅಂದಮೇಲೆ ಕೇಳುವದೇನು? ನೋಡುವವರಿಗೆ ಈ ನೋಟವು ಬಹು ರಮ್ಯವಾಗಿ ತೋರುತ್ತಲಿತ್ತು.

ಸಮಾರಂಭವು ಮಧ್ಯಾಹ್ನದ ೨ಗಂಟೆಗೆ ಆರಂಭವಾಯಿತು. ಆರಂಭಕ್ಕೆ ಕಿತ್ತೂರ ಶಾಳಾ ಮಾಸ್ತರರಾದ ಬಸವಾರ್ಯರು ರಚಿಸಿದ ಸ್ವಾಗತಪದವನ್ನು ಗವಯಿಗಳು ಸುಶ್ರಾವ್ಯವಾಗಿ ಹಾಡಿದರು.

ಸ್ವಾಗತ ಪದ

ಸ್ವಾಗತವೈ ಶುಭ ಸ್ವಾಗತವೈ ಘನ ಶೇಪರ್ಡ ದೊರೆಗಳಿಗೆ॥
ರಾಗದೊಳೆಮ್ಮಯ ದಕ್ಷಿಣ ಭಾಗ ಕಮಿಶನರ ದೊರೆಗಳಿಗೆ ॥ಪಲ್ಲ॥

ಆಯತ ಮತಿಯ ಕಲೆಕ್ಟರ ಬಹಾದ್ದೂರ ಬ್ರಾವುನ್ ಸಾಹೇಬರಿಗೆ ।
ನ್ಯಾಯಮೂರ್ತಿ ಶ್ರೀ ಜಜ್ಜ ಮಹಾಪ್ರಭು ಕ್ರಂಪ ಸಾಹೇಬರಿಗೆ ॥೧॥

ಬ್ರಿಟಿಶ್ ರಾಜ್ಯಸತ್ಕಾರ್ಯ ಧುರಂಧರ ಕೊವ್ವೆನ್ ಸಾಹೇಬರಿಗೆ ।
ಅತಿಮುದದಿಂದಾ ಜನಹಿತಗೆಯ್ಯುವ ಮೆಕೇ ಸಾಹೇಬರಿಗೆ ॥೨॥

ರಸಿಕ ಕುಶಲಮತಿ ಅಸಮಬುದ್ಧಿಬಲ ರುದ್ರಗೌಡರಿಗೆ ।
ರಸೆಯೊಳ್ ಬೆಳೆದರಟಾಳುಪನಾಮದ ರಾಜನಿಷ್ಠ ದೊರೆಗೆ ॥೩॥

ರೈತಜನರ ಸಂಪ್ರೀತಿಯಿಂದ ಸಲೆ ದೊರೆಯುವ ದೊರೆಗಳಿಗೆ ।
ನೀತಿವಿಶಾಲ ಗಂಭೀರ ವಿಚಾರದ ನ್ಯಾಯಮೂರ್ತಿಗಳಿಗೆ ॥೪॥

ಸಭೆಯೊಳ್ ನೆರೆದ ಮಹಾಜನ ವೃಂದಕೆ ಪಂಡಿತ ಪ್ರಭುಗಳಿಗೆ ।
ವಿಭವದ ಸ್ವಾಗತ ಮಾಳ್ಪೆವು ನಯದಿಂ ಸಕಲ ಜನಾವಳಿಗೆ ॥೫॥

ಸ್ವಾಗತ ಪದವಾದನಂತರ ಮೆ॥ಶ್ರೀಮಂತ ನಾಯಕ ಬಹಾದ್ದೂರ ದೇಸಾಯರವರ ಭಾಷಣವಾಯಿತು. ಶ್ರೀಮಂತರ ಭಾಷಣವಾದನಂತರ ರಾ.ಸಾ॥ಶಿವಮೂರ್ತಿಸ್ವಾಮಿ ಕಣಬರಿಗಿಮಠ ಗೋಕಾಕ ಫಾಲ್ಸ ಮಿ॥ರಾಜಶೇಖರಗೌಡಾ, ಸಂಪಗಾವ ಶಿ.ರಾ॥ಮುರಿಗಯ್ಯನವರು ಕಾರಭಾರಿ ಇವರ ಭಾಷಣಗಳು ಕನ್ನಡದಲ್ಲಿಯೂ, ಮಿಸ್ಟರ ಬಾಳಪ್ಪ ನರಸಪ್ಪ ಕಾಮತಿ ಸಾ. ಅಂಕಲಿ ತಾಲೂಕ ಚಿಕ್ಕೋಡಿ ಇವರ ಭಾಷಣವು ಇಂಗ್ಲೀಷಿನಲ್ಲಿಯೂ ಆದವು. ಬಳಿಕ ಚಚಡೀ ರೈತಜನರ ಮಾನಪತ್ರದಾನವೂ ಸುವರ್ಣಪದಕ ಸಮರ್ಪಣವೂ ಆಗುವವಿದ್ದವು. ವೇಳೆಯಾಗುವದೆಂದು ಮೆ.ನಾಮದಾರ ಶೆಫರ್ಡ ದೊರೆಗಳು ಮಾನಪತ್ರದ ವಾಚನವನ್ನು ಹಿಂದಿನಿಂದ ಮಾಡಿರೆಂದು ಹೇಳಿ, ತಮ್ಮ ಹಸ್ತದಿಂದ ಸುವರ್ಣಪದಕವನ್ನು ರಾವಬಹಾದ್ದೂರರವರ ಎದೆಯ ಮೇಲೆ ಹಚ್ಚಿದರು. ಅಲ್ಲಿಂದ ತಾಂಬೂಲ ಹಂಚುವಿಕೆಯೂ ಹಾರತುರಾಯಿ ಪರಿಮಳ ದ್ರವ್ಯಗಳಿಂದ ಸಭಾಸದರ ಸತ್ಕಾರವೂ ಆಗಿ, ಕೂಡಲೆ ಕಾರ್ಯಕ್ರಮದಲ್ಲಿ ನಿಶ್ಚಿತವಾದ ಪ್ರಕಾರ ಪಶುಪಕ್ಷಿಗಳ ಧ್ವನಿಯನ್ನು ಅನುಕರಿಸುವ ಪರಸಗಡ ತಾಲೂಕ ಅಸುಂಡೀಗ್ರಾಮದ ನಿಂಗಪ್ಪಾ ಚಲವಾದಿ ಈತನ ತಮಾಷೆಯು ಸರ್ವರು ತಲೆದೂಗುವಂತೆ ಆಯಿತು. ಈ ಸಮಯಕ್ಕೆ (ಮಧ್ಯಾಹ್ನದ ೫ ಗಂಟೆ ಸುಮಾರಕ್ಕೆ) ಸಭಾಸೀನರಾದ ಯಾವತ್ತು ಮಹನೀಯರ ಫೋಟೋ ತೆಗೆದುಕೊಳ್ಳಲ್ಪಟ್ಟಿತು. (ಈ ಫೋಟೋ ನೋಡಿದರೆ ಬರೆದದ್ದೆಲ್ಲ ಯಥಾರ್ಥವಾಗಿದೆಯೆಂದು ಸಹಜವಾಗಿ ತಿಳಿಯುವದು). ಬಳಿಕ ಶ್ರೀಮಂತರು ನಾಮದಾರ ಶೆಫರ್ಡ ದೊರೆಗಳೇ ಮೊದಲಾಗಿ ಯಾವತ್ತು ಆಂಗ್ಲಾಧಿಕಾರಿಗಳಿಗೆ ಉಪಹಾರವನ್ನು ತೀರಿಸಿಕೊಂಡು ತೆರಳಬೇಕೆಂದು ವಿನಂತಿಯನ್ನು ಮಾಡಿಕೊಳ್ಳಲು, ಅದಕ್ಕೊಪ್ಪಿ ಶ್ರೀಮಂತರೊಡನೆ ವಾಡೆಯ ಮೇಲ್ಮಂದಿರದಲ್ಲಿ ಪ್ರವೇಶಿಸಿದರು. ಅಲ್ಲಿ ಯುರೋಪಿಯನ್ ಪದ್ಧತಿಯ ಪ್ರಕಾರ ಶ್ರೀಮಂತರು ಸ್ಪೇಶಲ್ ರೀತಿಯಿಂದ ಇಬ್ಬರು ಬಟ್ಲೋರರನ್ನು ಕರೆಯಿಸಿ, ಯಾವತ್ತು ಸಿದ್ಧತೆಯನ್ನು ಇಡಿಸಿದ್ದರು. ಮೇಜುಗಳ ಮೇಲೆ ಶುಭ್ರವಾದ ವಸ್ತ್ರಗಳನ್ನು ಹಾಕಿ ಅದರ ಮೇಲೆ ಯುರೋಪಿಯನ್ನರ ಬಗೆಬಗೆಯ ಉಪಹಾರದ ಪದಾರ್ಥಗಳೂ ತರತರದ ಹಣ್ಣುಹಂಪಲಗಳೂ ಇರಿಸಲ್ಪಟ್ಟಿದ್ದವು. ನೇಟಿಹ್ವ ಜನರಿಗಾದರೂ ಚಹಾಕಾಫಿಯ ವ್ಯವಸ್ಥೆ ಇಡಲ್ಪಟ್ಟಿತ್ತು. ಅಯ್ವರೂ ಆಂಗ್ಲಾಧಿಕಾರಿಗಳು ಯೋಗ್ಯಾಸನಗಳಲ್ಲಿ ವಿಶ್ರಮಿಸಿ ಉಪಹಾರಗೈದು, ಶ್ರೀಮಂತ ನಾಯಕ ಬಹಾದ್ದೂರರವರು ಬಹು ಉದಾರಬುದ್ಧಿಯಿಂದ ಇಡಿಸಿದ ಸರ್ವವ್ಯವಸ್ಥೆಗೆ ಅತಿ ಸಂತೋಷಪಟ್ಟು ಕೆಳಗಿಳಿದು, ಈ ಅಗಮ್ಯವಾದ ತಾಂಬೂಲ ಸಮಾರಂಭವನ್ನು ನೋಡಿ ಆಶ್ಚರ್ಯಭರಿತರಾಗಿ, ಶ್ರೀಮಂತರ ಆಭಾರವನ್ನು ಸ್ಮರಿಸಿ, ಅಪ್ಪಣೆ ತಕ್ಕೊಂಡು ರಸ್ತೆಯವರೆಗೆ ರಥಗಳ ಮೇಲಿಂದ ಹೋಗಿ, ಅಲ್ಲಿಂದ ಮೋಟಾರಗಾಡಿಗಳನ್ನೇರಿ ಬೆಳಗಾವಿಯ ಮಾರ್ಗಾನುಗಾಮಿಗಳಾದರು.

ಇವರು ಹೋದನಂತರ ಸಭಾಸದರು ಅಧ್ಯಕ್ಷಸ್ಥಾನಕ್ಕೆ ರಾವಬಹಾದ್ದೂರ ಅರಟಾಳ ದೊರೆಗಳನ್ನು ಕೂಡ್ರಿಸಿದರು. ಅನಂತರ ಚಚಡಿಯ ಶ್ರೀಮಂತರಿಂದೊಡಗೂಡಿ ರೈತಜನರು ರಾ.ಬ॥ರವರಿಗೆ ಕೊಡಲ್ಪಡುವ ಮಾನಪತ್ರವನ್ನು ರಾ॥ಚನ್ನಪ್ಪ ಫಕೀರಪ್ಪ ಪಾಟೀಲ ಮಹಾಲ ಮುರಗೋಡ ಇವರು ಸಾದ್ಯಂತವಾಗಿ ಓದಿ ಅದನ್ನು ಅರ್ಪಣಮಾಡಿದರು. ಬಳಿಕ ಚೆನ್ನಬಸಯ್ಯ ಮಲ್ಲಯ್ಯಾ ಬೊಮ್ಮಿಗಟ್ಟಿ ತಾಲೂಕ ಕಲಘಟಗಿ ಜಿಲ್ಲಾ ಧಾರವಾಡ ಮತ್ತು ಶಿವಜಾತಯ್ಯ ಸುತ್ತಗಟ್ಟಿ ತಾಲೂಕ ಪರಸಗಡ ಹಾಗೂ ಪಾರಿಜಾತ ಆಟದಲ್ಲಿ ಸುಪ್ರಸಿದ್ಧನಾದ ಸಿದ್ಧರಾಮಪ್ಪ ಬೋಗಾರ ಹುಕ್ಕೇರಿ ಮತ್ತು ಮೃದಂಗಬಾರಿಸುವದರಲ್ಲಿ ಅದ್ವಿತೀಯನೆನಿಸಿಕೊಂಡ ಮಲ್ಲೇಶಪ್ಪಾ ಶಹಾಪುರ ಇವರೆಲ್ಲರ ಮೇಳದ ಭೈಠಕೂ ಮತ್ತು ಒಬ್ಬಿಬ್ಬರ ಭಾಷಣಗಳೂ ಆದನಂತರ, ಸಂಜೆಯ ೭ ಘಂಟೆಗೆ

ಸಭಾವಿಸರ್ಜನವಾಯಿತು. ಬಂದ ಜನರೆಲ್ಲರಿಗೂ ಶ್ರೀಮಂತ ಅಪ್ಪಾಸಾಹೇಬರು ಭೋಜನದ ಸಿದ್ಧತೆಯನ್ನಿಡಿಸಿದ್ದರು. ಊರಿಗೆ ಹೋಗಲವಶ್ಯವಿದ್ದ ಜನರು ಚಹಾ ಕಾಫಿ ತೆಗೆದುಕೊಂಡು ತೆರಳುವವರಾದರು. ಒಟ್ಟು ಈ ಉತ್ಸವಕ್ಕೆ ಸುಮಾರು ೮-೧೦ ಸಾವಿರ ಜನರು ಕೂಡಿದ್ದು ಮೂರುಸಾವಿರ ರೂಪಾಯಿಗಳ ವರೆಗೆ ವೆಚ್ಚವಾದಂತೆ ಅಂದಾಜವಿದೆ. ರಾವಬಹದ್ದೂರರವರು ಮರುದಿವಸ ಅಲ್ಲಿಯೇ ಇದ್ದು, ತಾರೀಖು ೨೬ನೇ ಅಗಷ್ಟ ಸನ್ ೧೯೧೪ ಇ. ಮಂಗಳವಾರ ದಿವಸ ಹೊರಟು ಮೋಟಾರಗಾಡಿಯಿಂದ ಬೆಳಗಾವಿಗೆ ಬಂದರು. ಉತ್ಸವಕ್ಕೆ ಬಂದ ಮಹನೀಯರು ಮನ್ನಣೆಗಳನ್ನು ಹೊಂದಿ, ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಶ್ರೀಮಂತರು ಎಷ್ಟೋ ಬಡಬಗ್ಗರಿಗೂ, ಆಶ್ರಿತರಿಗೂ, ಆಳುಮಕ್ಕಳಿಗೂ ವಸ್ತ್ರದಾನಮಾಡಿದರು. ಈ ವಿಧವಾಗಿ ಮಹೋತ್ಸವದಿಂದ ಸನ್ಮಾನನೀಯರಾದ ರಾವಬಹಾದ್ದೂರ ಅರಟಾಳ ಸಾಹೇಬರವರನ್ನು ಮರ್ಯಾದಿಸಿದ್ದು, ಶ್ರೀಮಂತ ನಾಯಕ ಬಹಾದ್ದೂರ ಚಚಡೀ ದೇಸಾಯರವರಿಗೂ ಅವರ ಪುರನಿವಾಸಿಗಳಿಗೂ ಬಹು ಭೂಷಣಾಸ್ಪದವಾದ ಮಾತು.

ಶ್ರೀಮಂತ ಗುಣಪ್ಪದೇಸಾಯರು ಊರ್ಫ ಆಬಾಸಾಹೇಬ ಜನನ
೨೭-೮-೧೯೧೩

ರಾ.ಬ॥ರವರು ಚಚಡೀ ತಾಂಬೂಲ ಸಮಾರಂಭವನ್ನು ತೀರಿಸಿಕೊಂಡು ಬೆಳಗಾವಿಗೆ ಬಂದ ಮರುದಿವಸವೇ ಅಂದರೆ ತಾರೀಖು ೨೭ ಅಗಷ್ಟ ೧೯೧೩ ಇ. ಬುಧವಾರ ಸಂಜೆಯ ೬ ಗಂಟೆಯ ಸುಮಾರಕ್ಕೆ (ಶಕೆ ೧೮೩೫ ಶ್ರಾವಣಬಹುಳ ೧೦ ಬುಧವಾರ ಆರಿದ್ರಾ ನಕ್ಷತ್ರದಲ್ಲಿ)ಚಚಡೀ ಶ್ರೀಮಂತರ ಪತ್ನಿಯವರೂ, ರಾ.ಬ॥ರವರ ಪ್ರಿಯಪುತ್ರಿಯವರೂ ಆದ ಶ್ರೀಮತಿ ಸೌ॥ರುದ್ರವ್ವನವರು ಬೆಳಗಾವಿಯ ಹೊಸಬಂಗಲೆಯಲ್ಲಿ ಮತ್ತೊಬ್ಬ ಪುತ್ರರತ್ನನನ್ನು ಪ್ರಸೂತಿಸಿದರು. ಇವರ ಈ ತೃತೀಯ ಪುತ್ರನಿಗೆ ಶುಭಮುಹೂರ್ತದಲ್ಲಿ 'ಗುಣಪ್ಪ ದೇಸಾಯರು' ಎಂಬ ನಾಮಕರಣ ಮಾಡಿ ಆಬಾಸಾಹೇಬರೆಂದು ಕರೆಯಹತ್ತಿದರು. ಈ ಪುತ್ರನಾದರೂ ಸುಂದರಾಂಗನೂ ಸದೃಢಕಾಯನೂ ಆಗಿರುವನು. ಶ್ರೀಮಂತ ಅಣ್ಣಾಸಾಹೇಬರೊಡನೆ ಶ್ರೀಮತಿ ರುದ್ರಕುಮಾರಿಯವರ ಲಗ್ನವಾಗಿ ಒಂಬತ್ತು ವರ್ಷಗಳಲ್ಲಿ ನಾಲ್ವರು ಮಕ್ಕಳನ್ನು ಪಡೆದುದರಿಂದ ಆ ಗೃಹರತ್ನಗಳೆನಿಸುವ ಬಾಲಕರ ಬಾಲಲೀಲೆಗಳನ್ನು ಕಂಡು ಬಂಧು ಬಳಗದವರೆಲ್ಲರು ಪರಮಾನಂದ ಭರಿತರಾದರು. ಕಬ್ಬಿನ ಮೇಲೆ ಜೇನಿಟ್ಟಂತೆ ಪಾನಸುಪಾರಿ ಸಮಾರಂಭಗಳ ಸಂತೋಷದಲ್ಲಿ ರಾವಬಹಾದ್ದೂರರವರಿಗೆ ಮೂರನೇ ಮೊಮ್ಮಗನು ಹುಟ್ಟಿ ಬಂದದರಿಂದ ಮತ್ತಿಷ್ಟು ಆನಂದವಾಗಲಿಕ್ಕೆ ಕಾರಣವಾಯಿತು. ಇದು ಇವರ ಪೂರ್ಣಸುಕೃತವೇ ಸರಿ.

ಧಾರವಾಡದಲ್ಲಿ ಆದ ಕೈ.ವಾ. ಶ್ರೀಮಂತ ಶಿರಸಂಗಿ ಸರದೇಸಾಯಿಯವರ ಭಾವಪಟದ ಮೆರವಣಿಗೆಯೂ
ರಾ.ಬ॥ಅರಟಾಳ ರುದ್ರಗೌಡ ಸಾಹೇಬರವರ ತಾಂಬೂಲ ಸಮಾರಂಭವೂ

ರಾವಬಹದ್ದೂರ ರುದ್ರಗೌಡಸಾಹೇಬರು ಪೆನಶನ್ ತೆಗೆದುಕೊಂಡ ನಂತರ ಬೆಳಗಾವ ಗೋಕಾಕ ನೇಸರಗಿ ಚಚಡಿ ಮುಂತಾದ ಸ್ಥಳಗಳಲ್ಲಿ ಅಪ್ರತಿಮವಾದ ತಾಂಬೂಲ ಸಮಾರಂಭಗಳು ಜರುಗಿಹೋದವು. ಆದರೆ ರಾವಬಹದ್ದೂರರವರ ಜನನವು ಧಾರವಾಡ ಜಿಲ್ಲೆಯಲ್ಲಿ ಆದುದರಿಂದಲೂ ಆರಂಭಕ್ಕೆ ಅವರು ಆ

ಜಿಲ್ಲೆಯಲ್ಲಿಯೇ ಕೆಲಸಮಾಡಿ ಲೋಕಪ್ರಿಯರಾದುದರಿಂದಲೂ ಇವರು ಇಡೀ ಲಿಂಗಾಯತ ಸಮಾಜದ ಕಲ್ಯಾಣಕ್ಕೋಸ್ಕರ ಪಟ್ಟಶ್ರಮ ಹಾಗೂ ಮಾಡಿದ ಸಾಹಸಗಳ ವಿಷಯವಾಗಿ ತಮ್ಮಲ್ಲಿರತಕ್ಕ ಭಕ್ತಿವಿಶ್ವಾಸಪ್ರೇಮಭಾವಗಳನ್ನು ವ್ಯಕ್ತಪಡಿಸಿ, ಕೃತಜ್ಞತೆಯನ್ನು ತೋರಿಸಬೇಕಾದುದರಿಂದಲೂ ಅಂತಃ ಕರಣದಿಂದಲೂ ಅಭಿಮಾನದಿಂದಲೂ ಧಾರವಾಡದಲ್ಲಿ ಇವರ ತಾಂಬೂಲ ಸಮಾರಂಭವನ್ನು ಜರುಗಿಸಿ, ಅವರಿಗೆ ಮಾನಪತ್ರವನ್ನು ಸಮರ್ಪಿಸಬೇಕೆಂಬ ಉತ್ಕಟೇಚ್ಛೆಯಿಂದ ಧಾರವಾಡದ ಪ್ರಮುಖರು ಅದರ ಸಿದ್ಧತೆಯನ್ನು ಒಳ್ಳೆ ದಕ್ಷತೆಯಿಂದ ಮಾಡತೊಡಗಿದರು.

ಬೆಳಗಾವಿಯಲ್ಲಿ ಸನ್ ೧೯೧೩ ಇಸವಿಯ ಜೂನ ೨೯ನೇ ತಾರೀಖಿನ ದಿವಸ ರಾ.ಬ|| ರವರ ತಾಂಬೂಲ ಸಮಾರಂಭವು ಜರುಗಿದನಂತರ ಮುಂದೆ ಜುಲೈ ತಿಂಗಳಲ್ಲಿಯೇ ಧಾರವಾಡದಲ್ಲಿ ಅದಕ್ಕೂ ಮಿಗಿಲಾಗಿ ಸಮಾರಂಭವನ್ನು ಜರುಗಿಸಬೇಕೆಂದು ಧಾರವಾಡದವರು ವಿಚಾರಿಸಿದರು. ಆದರೆ ಸಮೀಪದಲ್ಲಿ ಶ್ರೀಮಂತ ಶಿರಸಂಗಿ ಸರದೇಸಾಯಿಯವರ ಮೃತ್ಯುಪತ್ರದ ಠರಾವವು ಮುಂಬಯಿ ಹಾಯಕೋರ್ಟಿನಿಂದ ಪ್ರಸಿದ್ಧವಾಗುವದಿದ್ದದರಿಂದ ಅದನ್ನೂ ನೋಡಿಕೊಂಡು ಉತ್ಸವವನ್ನು ಜರುಗಿಸಿದರೆ ನೆಟ್ಟಗಾಗಬಹುದೆಂದು ರಾ.ಬ||ರವರು ಸೂಚನೆಯನ್ನು ಮಾಡಲು, ಅವರು ಆ ಸೂಚನೆಯನ್ನು ಮನ್ನಿಸಿ ಅಲ್ಲಿಯ ವರೆಗೆ ಸಮಾರಂಭವನ್ನು ತಹಕೂಪ ಇಟ್ಟರು. ಮುಂದೆ ತಾರೀಖು ೩ ಸಪ್ಟಂಬರ ೧೯೧೩ ಇ. ದಿವಸ ಆ ಠರಾವವು ಮೃತ್ಯುಪತ್ರದಂತೆಯೇ ಆಗಲು, ಇಡೀ ವೀರಶೈವ ರಾಷ್ಟ್ರವು ನಲಿಯುತ್ತಿರಲು, ಧಾರವಾಡದವರು ಉತ್ಸವಕ್ಕೆ ಮತ್ತಿಷ್ಟು ಹುರಿದುಂಬಿದರು. ಕೆಲ ಕೆಲ ಕಾರಣಗಳ ಮೂಲಕ ನಿಯಮಕವಾದ ದಿವಸವು ಮುಂದೆ ಹೋಗುತ್ತ, ಹೋಗುತ್ತ ಅದು ತಾರೀಖು ೨೧ನೇ ಸಪ್ಟಂಬರ ೧೯೧೩ ಇ. ಯ ರವಿವಾರ ದಿವಸ ಆಗುವದಾಗಿ ನಿರ್ಧರಿಸಲ್ಪಟ್ಟಿತು.

ಸಿರಸಂಗಿಯ ಸರದೇಸಾಯಿಯವರ ಭಾವಚಿತ್ರದ ಮೆರವಣಿಗೆ

ಸಿರಸಂಗೀ ದೇಸಗತಿಯ ಮೃತ್ಯುಪತ್ರದ ಠರಾವವು ಹೈಕೋರ್ಟಿನಿಂದ ಲಿಂಗಾಯತ ಫಂಡಿನಂತೆ ಆದಕೂಡಲೆ, ಆ ಶಿವಶರಣರಾದ ಶ್ರೀಮಂತ ಲಿಂಗರಾಜರವರು ಮಾಡಿದ ಅಶ್ರುತ-ಅಪೂರ್ವ ಮಹದುಪಕಾರದ ಬಗ್ಗೆ ಅವರ ವಿಷಯವಾಗಿ ತಮ್ಮಲ್ಲಿ ಉಂಟಾಗಿರುವ ಕೃತಜ್ಞತಾಭಾವವನ್ನು ಸ್ಫುಟವಾಗಿ ವ್ಯಕ್ತಪಡಿಸುವದಕ್ಕೋಸ್ಕರ ಒಂದು ಮಹೋತ್ಸವವನ್ನು ಜರುಗಿಸಬೇಕೆಂದು ಧಾರವಾಡದ ವೀರಶೈವರು ಮೊದಲೇ ಆಲೋಚಿಸಿದ್ದರು. ಈಗ ರಾವಬಹಾದ್ದೂರರವರ ತಾಂಬೂಲ ಸಮಾರಂಭವಾಗುವದಿದ್ದದರಿಂದ ಈ ಉತ್ಸವವನ್ನಾದರೂ ಇದಕ್ಕೆ ಜೋಡಿಸಿ ಮಾಡಿದರೆ ಮತ್ತಿಷ್ಟು ಶೋಭಾಯಮಾನವಾಗುವದೆಂದು ಕೆಲ ದೀರ್ಘವಿಚಾರಿಗಳಾದ ಮುಖಂಡರು ಎಣಿಸಿ, ತಾರೀಖು ೨೦ ಸಪ್ಟಂಬರ ೧೯೧೩ ಇಸವಿಯ ಶನಿವಾರ ದಿವಸ ಮಹಾವೈಭವದಿಂದ ಸಿರಸಂಗಿಯ ಶ್ರೀಮಂತರ ಭಾವಚಿತ್ರದ ಮೆರವಣಿಗೆಯನ್ನು ಹೊರಡಿಸುವದಾಗಿಯೂ, ಮರುದಿವಸ ರಾವಬಹಾದ್ದೂರರವರಿಗೆ ಮಾನಪತ್ರ ಕೊಡುವ ಸಮಾರಂಭವನ್ನು ಜರುಗಿಸುವದಾಗಿಯೂ ಗೊತ್ತುಮಾಡಿ, ಆ ಬಗ್ಗೆ ಬೇರೆ ಬೇರೆ ಆಮಂತ್ರಣಪತ್ರಗಳನ್ನು ಮುದ್ರಿಸಿ ಸುತ್ತಲೂ ಕಳಿಸಿದರು.

ಆರಂಭಕ್ಕೆ ಅನೇಕತರವಾಗಿ ಪುರಶೃಂಗಾರವನ್ನು ಮಾಡಿದರು. ನಿಬಿಡವಾದ ತಳಿರ್ದೋರಣಗಳಿಂದಲೂ, ಸಾಂದ್ರವಾದ ಧ್ವಜಪತಾಕೆಗಳಿಂದಲೂ ಅಲ್ಲಲ್ಲಿ ಪೇಟೆಯ ಕೂಟಗಳಲ್ಲಿ ರಚಿಸಿದ ಭವ್ಯವಾದ ಅಗಸಿಗಳಿಂದಲೂ ಕಮಾನುಗಳಿಂದಲೂ ಸಾಲ್ಗೊಂಡು ಶೋಭಿಸುವ ರಂಭಾಸ್ತಂಭಗಳಿಂದಲೂ ಚಿತ್ರವಿಚಿತ್ರವಾದ ಪಂಚರಂಗೀ ಕಾಗದಗಳ ಫರಫರಿಗಳಿಂದಲೂ ಧಾರವಾಡಪಟ್ಟಣವು ನೋಟಕ್ಕೆ ಬಲು ರಮಣೀಯವಾಗಿತ್ತು.

ಧಾರವಾಡದಲ್ಲಿ ಸಿರಸಂಗೀ ಸರದೇಸಾಯಿಯವರ ಭಾವಚಿತ್ರದ ಮೆರವಣಿಗೆಯೂ ರಾ.ಬ॥ರುದ್ರಗೌಡರ ತಾಂಬೂಲಸಮಾರಂಭವೂ ಬಹು ವೈಭವದಿಂದ ಜರುಗುವದೆಂಬ ವಾರ್ತೆಯು ಕರ್ನಾಟಕದಲ್ಲೆಲ್ಲ ಹರಿಬಿದ್ದದರಿಂದ, ಆ ಮಹೋತ್ಸವವನ್ನು ನೋಡುವ ಬಗ್ಗೆ ದೂರದೂರಿಂದ ಬಂದು ಧಾರವಾಡ ಶಹರವನ್ನು ಅಲಂಕರಿಸುವವರಾದರು. ಆದರೆ ಈವರೆಗೆ ಸಮಗ್ರ ೨ ತಿಂಗಳುಗಳ ವರೆಗೆ ಮಳೆ ಹೋಗಿ, ಬೇಸಿಗೆಯಂತೆ ಬಿಸಿಲುಕಾಯುತ್ತ ನಿರಭ್ರವಾಗಿ ನಿಂತುಕೊಂಡ ಆಕಾಶವು ತಾರೀಖು ೧೯ನೇ ಶುಕ್ರವಾರ ರಾತ್ರಿ ಕಾಡಿಗೆಯಂತೆ ಕಪ್ಪಾದ ಮೋಡಗಳಿಂದ ಮುಸುಕಿ, ಸುತ್ತಲೂ ಮುಸುಲಧಾರೆಯಾಗಿ ಮಳೆಯನ್ನು ಕಾರುತ್ತಲಿತ್ತು. ತಾರೀಖು ೨೦ನೇ ಶನಿವಾರ ದಿವಸವಾದರೂ ಮುಂಜಾನೆ ಮೋಡಗವಿದು ಮಳೆಯು ಸುರಿಯುತ್ತಲೇ ಇತ್ತು. ಮಳೆಗೆ ಅಂಜಿ ಆಕಾಶವೂ ಕೂಡ ಮನುಷ್ಯರಂತೆ ಕರೇ ಕಂಬಳಿಯನ್ನು ಮುಸುಕು ಹಾಕಿತೋ ಏನೋ ಎಂಬಂತೆ ಮೋಡವು ಮುಸುಕಿ ಹೋಗಿತ್ತು. ಮುಸುಕಿದ ಮೋಡವು ಮಿಸುಕಾಡದೆ ಮತ್ತಿಷ್ಟು ಮುಗಿಲನ್ನು ಮುತ್ತಿಕೊಂಡೇ ನಿಲ್ಲುವದಾಗಿತ್ತು. ಇಂತಹ ಕಾರ್ಗಾಲದ ದುರ್ದಿನದಲ್ಲಿಯೂ ಕೂಡ ಅಭಿಮಾನಿಗಳಾದ ವೀರಶೈವರು ಪ್ರಯಾಣದ ಕಷ್ಟವನ್ನು ಸಹಿಸಿ ಉತ್ಸವಕ್ಕೆ ಬರುವವರೇ ಆಗಿದ್ದರು. ಆದರೆ ಇಂತಹ ಧುರಂಧರವಾದ ಮಳೆಯಲ್ಲಿ ಮೋಡದ ಮುಸುಕುಳ್ಳ ನಿಸ್ತೇಜವಾದ ಪ್ರಕಾಶದಲ್ಲಿ ಬಹುವೈಭವದ ಮೆರವಣಿಗೆಯನ್ನು ಹೇಗೆ ಹೊರಡಿಸಬೇಕೆಂಬ ಪ್ರಬಲವಾದ ಚಿಂತಾತರಂಗವು ಕಾರ್ಯಕಾರಿ ಮಂಡಳಿಯ ಹೃತ್ಸಾಗರದಲ್ಲಿ ಉದ್ಭವಿಸಿ ಕಾಣದೆ ಹೋಯಿತು. ಉತ್ಸವವನ್ನು ಈ ಹೊತ್ತು ನಿಲ್ಲಿಸಿ ನಾಳಿಗೆ ಮಾಡಿದರಾಯಿತೆಂದು ಕೆಲವರೂ, ಈ ಹೊತ್ತು ಮಧ್ಯಾಹ್ನದ ವರೆಗೆ ನೋಡಿಕೊಂಡು ಮುಂದಿನ ವಿಚಾರವನ್ನು ಮಾಡಬಹುದೆಂದು ಕೆಲವರೂ, ಹೇಗೇ ಆಗಲಿ ಉತ್ಸವವನ್ನು ಈ ಹೊತ್ತು ಮಾಡಲೇಬೇಕೆಂದು ಕೆಲವರೂ ಅನ್ನುವವರಾದರು. ವೀರಶೈವರು ಈ ಬಗೆಯ ಚಿಂತಾಂಬುಧಿಯಲ್ಲಿ ಮಗ್ನರಾಗಿರಲು ಪರೋತ್ಕರ್ಷಾಸಹಿಷ್ಣುಗಳಾದ ಕೆಲವರು ಸಂತೋಷಿತರಾಗಿ, ಈ ಉತ್ಸವವು ನಿಂತುಹೋಯಿತೆಂದು ಸುತ್ತಲೂ ಸುದ್ದಿಯನ್ನು ಬೀರುವವರಾದರು. ಅಂತೂ ಮಧ್ಯಾಹ್ನದ ವರೆಗೆ ವೀರಶೈವ ಸಮಾಜದ ಮೋರೆಯ ಮೇಲೆ ಕಳೆಯಿರಲಿಲ್ಲ. ಎಲ್ಲಿ ನೋಡಿದರೂ ಮಳೆಯ ಹಾಗೂ ಮೆರವಣಿಗೆಯ ಮಾತೇ ಮಾತು ಆಗಿತ್ತು. ಸುತ್ತಲಿಂದ ಜನ ಸಮೂಹವು ಬಂದು ಬಂದು, ಧಾರವಾಡವನ್ನು ಮುತ್ತಿಕೊಳ್ಳುವದು ತಪ್ಪಿಲೇ ಇಲ್ಲ.

ಅಷ್ಟರೊಳಗಾಗಿ ಸುದೈವದಿಂದ ಮಧ್ಯಾಹ್ನದ ೧೨ ಘಂಟೆಯ ಸುಮಾರಕ್ಕೆ ಆಕಸ್ಮಾತ್ತಾಗಿ ಮೋಡಗಳೆಲ್ಲ ಹರಿದು ಹೋಗಿ ಮಾಯವಾಗಿ, ಝಗ್ಗೆಂದು ಬಿಸಿಲುಬಿದ್ದು ಪ್ರಕಾಶಿಸುವದಾಯಿತು. ಆಕಾಶವು ನಿರಭ್ರವಾಗಿ ಸಹಸ್ರ ರಶ್ಮಿಗಳಿಂದ ಪ್ರಕಾಶಿಸುವ ಸೂರ್ಯ ಮಂಡಲವನ್ನು ನೋಡಿ ವೀರಶೈವರ ಸಂತೋಷ ಸಮುದ್ರವು ಮೇರೆದಪ್ಪಿ ಉಕ್ಕೇರುವದಾಯಿತು. ಕೂಡಲೆ ಉತ್ಸವದ ಸಿದ್ಧತೆಯು ಗಡಿಬಿಡಿಯಿಂದ ನಡೆಯುವದಾಯಿತು. ಎಲ್ಲಿ ನೋಡಿದರೂ ಗಡಿಬಿಡಿಯೇ ಗಡಿಬಿಡಿಯು. ಓಣಿಗಳಲ್ಲೆಲ್ಲ ನೂತನ ವಸ್ತ್ರಾಭರಣಗಳಿಂದಲಂಕೃತರಾದ ಸರ್ವರ ಓಡಾಟವೇ ಓಡಾಟ. ಈ ಪ್ರಕಾರವಾಗಿ ವೀರಶೈವ ಜನಾಂಗವು ಸಂತೋಷಸಾಗರದಲ್ಲಿ ಮಗ್ನವಾಗಿರಲು, ಅತ್ತ ಬೆಳಗಾವಿಯ ಮೇಲಗಾಡಿಯಿಂದ ರಾ.ಬ॥ರುದ್ರಗೌಡ ಸಾಹೇಬರವರೂ, ಶ್ರೀಮಂತ ಚಚಡಿಯ ನಾಯಕ ಬಹಾದ್ದೂರ ದೇಸಾಯರೂ ಅವರೊಡನೆ ಅವರ ಸ್ನೇಹಿತ ಮೊದಲಾದವರೂ ಬರುವವರಿದ್ದ ಮೂಲಕ, ಮಧ್ಯಾಹ್ನದ ೨ ಗಂಟೆಯ ಸುಮಾರಕ್ಕೆ ಪುರಪ್ರಮುಖರೆಲ್ಲ ಮಂಗಳವಾದ್ಯಗಳೊಂದಿಗೆ ಮಹಾವೈಭವದಿಂದ ಮದುವಣಿಗನನ್ನು ಎದುರ್ಗೊಳ್ಳಲು ಹೋಗುವಂತೆ ಸ್ಟೇಶನಕ್ಕೆ ದಯಮಾಡಿಸಿ, ಈ ಮಹನೀಯರ ಮಾರ್ಗಪ್ರತೀಕ್ಷೆ ಮಾಡುತ್ತ ಕುಳಿತಿದ್ದರು.

೨ ಗಂಟೆಯ ಸುಮಾರಕ್ಕೆ ಉಗಿಬಂಡಿಯ ಸ್ಟೇಶನಕ್ಕೆ ಬರುತ್ತಲೆ ತೋಪುಹಾರಿಸಿದಂತೆ ಸಪ್ಪಳವಾಗಿ, ರಾವಬಹಾದ್ದೂರರವರಿಗೆ ಧಾರವಾಡಸ್ಥರ ಶರಣು ಸಮರ್ಪಿಸಲ್ಪಟ್ಟಿತು. ಕೂಡಲೆ ಮಂಗಳವಾದ್ಯಗಳು ಮೊಳಗಿದವು.

ರಾವಬಹದ್ದೂರರವರೂ ಚಚಡಿಯ ಶ್ರೀಮಂತರೂ, ಅವರೊಡನೆ ಬಂದಿದ್ದ ಇನ್ನೂ ಕೆಲ ದೊಡ್ಡ ಮನುಷ್ಯರೂ ಗಾಡಿಯಿಂದಿಳಿದು ಪ್ಲಾಟಫರ್ಮಿನ ಮೇಲೆ ಅಡಿಯನ್ನಿಡುತ್ತಲೆ, ಜನಸಮೂಹದ ಜಯಜಯಕಾರದ ಧ್ವನಿಯಲ್ಲಿಯೂ ಚಪ್ಪಾಳೆಯ ಸಪ್ಪಳದಲ್ಲಿಯೂ, ಮಹನೀಯರ ಕಂಠಪ್ರದೇಶಗಳು ರಮಣೀಯವಾದ ಹಾರಗಳಿಂದಲೂ, ಕರಕಮಲಗಳು ಚಿತ್ರವಿಚಿತ್ರವಾದ ಗಜರೆಗಳಿಂದಲೂ ಅಲಂಕೃತವಾದವು. ಈ ಬಗೆಯಾಗಿ ಸ್ವಾಗತ ಸಮಾರಂಭವು ಸರಿಯಾಗಿ ಜರುಗಿತು.

ರಥಾರೂಢರಾದ ರಾವ ಬ॥ರವರನ್ನೂ ಶ್ರೀಮಂತರನ್ನೂ ಉಳಿದ ಸನ್ಮಾನ್ಯ ಸದ್ಗೃಹಸ್ಥರನ್ನೂ ರಾಜವೈಭವದಿಂದ ಸ್ಟೇಶನಕ್ಕೆ ಸಮೀಪವಾಗಿರುವ ಶ್ರೀ ಉಳವೀ ಬಸವೇಶ್ವರ ದೇವಾಲಯಕ್ಕೆ ಕರೆದುಕೊಂಡು ಬಂದು, ಅಲ್ಲಿ ಚಹಾಪಾನ ಮೊದಲಾದ ಉಪಾಹಾರ-ಫಲಾಹಾರ-ಉಚಿತ ಸಂಭಾಷಣಾದಿಗಳಿಂದ ಅವರನ್ನು ಸಂತೋಷಪಡಿಸಿ, ಸ್ವಲ್ಪ ವಿಶ್ರಾಂತಿಗೆ ಅವಕಾಶಕೊಟ್ಟು, ೩ ಗಂಟೆಯ ಸುಮಾರಕ್ಕೆ ಯಥಾವೈಭವದಿಂದ ಶಹರ ಪ್ರವೇಶ ಮಾಡಿಸಿದರು.

ಅಷ್ಟೊತ್ತಿಗೆ ತಿರುವಲರಾವ ಜಡಿ ಇವರ ಮನೆಯ ಮುಂದೆ, ಸರ್ವತೋಮುಖವಾಗಿ ಶೃಂಗಾರವಾದ ಗಜೇಂದ್ರವು ಭವ್ಯವೂ ರಮ್ಯವೂ ಆದ ಅಯ್ವತ್ನಾಲ್ಕು (೫೪) ಮಣ ಒಜ್ಜೆಯುಳ್ಳ ಅಂಬಾರಿಯನ್ನು ಅಲಂಕರಿಸಿಕೊಂಡು, ಬೆಳಗುತ್ತ ಗಂಭೀರವಾಗಿ ನಿಂತುಕೊಂಡಿತ್ತು. ಆನೆಯು ಗದುಗಿನ ಶ್ರೀತೋಂಟದಸ್ವಾಮಿಗಳವರದು. ಅಂಬಾರಿಯಲ್ಲಿ ಶ್ರೀಮಂತ ಲಿಂಗರಾಜರ ಭಾವಪಟವು ಪ್ರತ್ಯಕ್ಷ ಶ್ರೀಮಂತರೇ ಕೂತಿರುವರೋ ಏನೋ ಎಂಬಂತೆ ಜನಸಮೂಹಕ್ಕೆ ಭ್ರಾಂತಿಯನ್ನುಂಟು ಮಾಡುತ್ತಲಿತ್ತು. ಶ್ರೀಮಂತಿಕೆಯ ಶಿಸ್ತಿಗನುಸಾರವಾಗಿ ತಲೆಯ ಮೇಲೆ ಜರತಾರಿಯ ಕೆಂಪು ಪಾಗೋಟಿಯನ್ನು ಧರಿಸಿದ, ಕಿವಿಯಲ್ಲಿ ಜೋಲುಮುತ್ತಿನ ಬಾವಲಿಯುಳ್ಳ, ಕೊರಳಲ್ಲಿ ಮುತ್ತಿನ ಸರಗಳುಳ್ಳ, ಮಯ್ಯಲ್ಲಿ ಬಿಳೇ ನಿಲುವಂಗಿಯುಳ್ಳ, ದೇಸಗತಿಗೆ ತಕ್ಕುದಾದ ಎಲ್ಲ ರಾಜಠೀವಿಯುಳ್ಳ, ಸುಂದರವಾದ ಮುಖವುಳ್ಳ ಮನುಷ್ಯಪ್ರಮಾಣದ ಸರದೇಸಾಯಿಯವರ ಭಾವಚಿತ್ರವು ಭವ್ಯವಾಗಿ ಬೆಳಗುತ್ತಲಿತ್ತು. ಆ ಭಾವಚಿತ್ರವು ಸರದೇಸಾಯಿಯವರ ಭಾವನೆಯನ್ನು ಜಗತ್ತಿಗೆ ತಿಳಿಯಪಡಿಸುತ್ತಿತ್ತಲ್ಲದೆ, ಅದನ್ನು ಬರೆದ ಚಿತ್ರಕಾರನ ಬುದ್ಧಿವಂತಿಕೆಯನ್ನೂ ವ್ಯಕ್ತಮಾಡುತ್ತಲಿತ್ತು.

ತಮ್ಮ ಪ್ರಿಯಸ್ನೇಹಿತರಾದ ರಾ.ಬ॥ರವರು ಬರುವ ವರೆಗೆ ಶ್ರೀಮಂತರು ತಡೆದು ನಿಂತಿರುವರೋ ಏನೋ ಎಂಬಂತೆ ಭಾವಚಿತ್ರವು ಅಂಬಾರಿಯಲ್ಲಿ ಸ್ತಬ್ಧವಾಗಿರಲು, ಅವರು ಬಂದ ಕೂಡಲೆ ಮೆರವಣಿಗೆಯು ಹೊರಡಲುದ್ಯುಕ್ತವಾಯಿತು. ಜಯಭೇರಿಗಳು ಜಯಧ್ವಾನವನ್ನು ಮಾಡುವವಾದವು. ಕಹಳೆ ಕರ್ನಿಗಳು ತೂರ್ಯಸ್ವನದಿಂದ ವಾಯುಪಡೆವನ್ನು ಭೇದಿಸುವವಾದವು. ಬೇಂಡ ಬಾಜಾ ಎಂಬ ಆಂಗ್ಲವಾದ್ಯದ ಮಂಜುಳ ಧ್ವಾನವಂತೂ ಎಲ್ಲರ ಚಿತ್ತಾಕರ್ಷವನ್ನು ಮಾಡುತ್ತಲೇ ಇತ್ತು. ಭೋರಿಡುತ್ತಿದ್ದ ಉಳಿದ ವಾದ್ಯಗಳ ರಭಸವನ್ನು ವರ್ಣಿಸುವದಕ್ಕೆ ಅವಕಾಶವೇ ಇಲ್ಲ.

ಎಲ್ಲಕ್ಕೂ ಮುಂದೆ ಭಾವಿಕ ಜನರ ತಂಡವು ಉಚ್ಚಸ್ವರದಿಂದ ಸಿರಸಂಗಿಯ ಶ್ರೀಮಂತರ ಭಜನೆಯನ್ನು ಮಾಡುತ್ತ ಸಾಗಿತ್ತು. ಅವಕ್ಕೆ ಹೊಂದಿ ಕರಡೀ ಮಜಲುಗಳ ಮೇಳುಗಳು ಅಲ್ಲಲ್ಲಿಗೆ ಮಜಲು ಮಾಡುತ್ತ ನಡೆದಿದ್ದವು. ಅವರ ಹಿಂದೆ ಇಬ್ಬದಿಗಳಲ್ಲಿಯೂ ನಗಾರೆ ನೌಬತ್ತುಗಳನ್ನು ಹೇರಿದ ಒಂಟೆಗಳೂ, ಢಂಕೆಗಳನ್ನು ಹೇರಿದ ಕುದುರೆಗಳೂ ಸಾಲ್ಗೊಂಡು ನಡೆದಿದ್ದವು. ನಡುವೆ ವಸ್ತ್ರಾಭರಣಗಳಿಂದಲಂಕೃತವಾದ ಕುದುರೆಗಳು, ಧೀರರಾದ ಸವಾರರ ಪ್ರೇರಣೆಯಿಂದ ಗತ್ತಿಗನುಸಾರವಾಗಿ ಕುಣಿಯುತ್ತ ನಡೆದಿದ್ದವು. ಭೀಕರವಾದ ಕೃಷ್ಣವರ್ಣದ ಪೋಷಾಕಿನಿಂದ ಶೋಭಿಸುವ ಪೊಲೀಸ ಸಿಪಾಯರು ಗೊಂದಲವಾಗದಂತೆ ಭದ್ರವಾಗಿ ನಡೆದಿದ್ದರು. ಅವರ ಮೇಲಧಿಕಾರಿಗಳಾದ ಪೊಲೀಸ ಇನ್‌ಸ್ಪೆಕ್ಟರರು ಶಾಂತತೆಯ ಸಲುವಾಗಿ ಸಜ್ಜಾಗಿ ನಡೆದಿದ್ದರು. ಉತ್ಸವದೊಡನೆ

ಸಹಸ್ರಾವಧಿ ಜನರು ಓಣಿಯುದ್ದಕ್ಕೂ ಸಾಂದ್ರವಾಗಿ ಗಮಿಸುತ್ತಿದ್ದರು. ಇವರೆಲ್ಲರ ಹಿಂದೆ ಮಹೋನ್ನತವಾದ ಆನೆಯು ಅಂಬಾರಿಯಿಂದ ಅಲಂಕೃತವಾಗಿ ಅಂದಾಗಿ ಗಮಿಸುತ್ತಿತ್ತು. ಶ್ರೀಮಂತರ ಭಾವಚಿತ್ರದಿಂದ ಅಲಂಕೃತವಾದ ಅಂಬಾರಿಯು ಛತ್ರ ಚಾಮರಾಪ್ತಾಗಿರಿ ಮೊದಲಾದ ರಾಜಬಿರುದಾವಳಿಯಿಂದ ಬಹುಶೋಭೆಯನ್ನು ಹೊಂದಿತ್ತು. ಆನೆಯ ಹಿಂದೆ ಬೆಂಕಿಯಂತೆ ಹೊಳೆಯುವ ಬಂಗಾರದ ಪಂಚಕಲಶಗಳಿಂದಲೂ, ಎರಡೂ ಬದಿಗೆ ರಜತ ಕವಚಗಳುಳ್ಳ ದಂಡಿಗೆಯಿಂದಲೂ ಚಿತ್ರವಿಚಿತ್ರವಾದ ರೇಶಿಮೇ ವಸ್ತ್ರಗಳಿಂದಲೂ ಜರತಾರಿಯ ರಾಜಗೊಂಡೆಗಳಿಂದಲೂ, ಶೋಭಾಯಮಾನವಾಗಿರುವ ಮಹತ್ತಾದ ಪಲ್ಲಕ್ಕಿಯು ಸಿರಸಂಗಿಯ ಶ್ರೀಮಂತರ ಸಣ್ಣದೊಂದು ಭಾವಚಿತ್ರದಿಂದ ಅಲಂಕೃತವಾಗಿ ಗಮಿಸುವದಾಗಿತ್ತು. ಪಲ್ಲಕ್ಕಿಯ ಹಿಂದೆ ಆಸ್ಟ್ರಿಯಾ ವ್ಹೆಲಸನ್ ಕುದುರೆಗಳನ್ನು ಹೂಡಿದ ಮನೋಹರವಾದ ರಥದಲ್ಲಿ ರಾ.ಬ॥ರುದ್ರಗೌಡರೂ, ಬ್ಯಾರಿಷ್ಟರ ಗರಡೀ ರುದ್ರಪ್ಪನವರೂ ಹಾರತುರಾಯಿಗಳಿಂದಲಂಕೃತರಾಗಿ ಸಾವಿರಾರು ಜನರ ಶರಣುಗಳನ್ನು ತೆಗೆದುಕೊಳ್ಳುತ್ತ ಆನಂದ ಮುದ್ರೆಯುಳ್ಳವರಾಗಿ ಸಾಗಿದ್ದರು. ಅವರ ಹಿಂದಿನ ರಥದಲ್ಲಿ ಚಚಡಿಯ ಶ್ರೀಮಂತರೂ ರಾ॥ಬ॥ಅದರಗುಂಚಿಯವರೂ ಅವರಿಗೆ ಹೊಂದಿದ ರಥದಲ್ಲಿ ರಾ.ಬ॥ಮೆಣಸಿನಕಾಯಿ ಶಾಂತವೀರಪ್ಪನವರೂ, ರಾ.ಬ॥ಕಿತ್ತೂರ ರೇವಣಸಿದ್ದಪ್ಪನವರೂ ಇನ್ನೂ ಕೆಲ ದೇಸಗತಿಯ ರಾಜಕುಮಾರರೂ ವಸ್ತ್ರಾಭರಣಗಳಿಂದಲಂಕೃತರಾಗಿ ಸಾನಂದದಿಂದ ಗಮಿಸುತ್ತಿದ್ದರು. ಇವರ ಹಿಂದೆ ಎಷ್ಟೋ ಟಾಂಗಾಗಳಲ್ಲಿ ಹಾಗೂ ಸಾರವಾಟಗಳಲ್ಲಿ ಸ್ವಾಮಿಗಳೂ ಸಾವುಕಾರಜನರೂ ವಿಶ್ರಮಿಸಿದ್ದರು. ಮುಂದೆ ಇದ್ದಂತೆ, ಇವರೆಲ್ಲರ ಹಿಂದೆ ಸಹ ಸಾವಿರಾರು ಜನರು ಸಾಂದ್ರವಾಗಿ ಬರುವವರಾಗಿದ್ದರು.

ಈ ಪ್ರಕಾರ ಮಹಾವೈಭವದಿಂದ ೪ ಗಂಟೆಗೆ ಮೆರವಣಿಗೆಯು ಹೊರಟು, ಮೊದಲು ಶುಕ್ರವಾರ ಪೇಟೆಯಲ್ಲಿ ಜಡ್ಜಿ ಇವರ ಮನೆಯ ಮುಂದೆ ಹಾಯ್ದು, ಶ್ರೀ ವೆಂಕಟೇಶದೇವರ ಗುಡಿಯನ್ನು ದಾಟಿ, ಕಾಮನಕಟ್ಟಿಯಲ್ಲಿ ಹಾಯ್ದು, ಕರ್ನಾಟಕವೃತ್ತ ಆಫೀಸಿನ (ವೆಂಕಟರಂಗೋ ಕಟ್ಟಿ ಇವರ ಮನೆಯ) ಮುಂದಿನಿಂದ ಮಂಗಳವಾರ ಪೇಟೆಯಿಂದ ಜವಳೀಪೇಟೆಯನ್ನು ಪ್ರವೇಶಿಸಿತು. ಜವಳೀಪೇಟೆಯ ಕೂಟದೊಳಗಿನ ಕಮಾನು ಪ್ರೇಕ್ಷಣೀಯವಾಗಿತ್ತು. ಅದು ಮಂಟಪದ ಆಕಾರವುಳ್ಳದ್ದಾಗಿ ಅದಕ್ಕೆ ಚತುರ್ದಿಕ್ಕುಗಳಲ್ಲಿಯೂ ನಾಲ್ಕು ಕಮಾನುಗಳು ರಚಿಸಲ್ಪಟ್ಟಿದ್ದವು. ಅದರ ಮಧ್ಯದಲ್ಲಿ ಅಂಬಾರಿಯೂ ರಥಗಳೂ ಬಂದಾಕ್ಷಣವೆ ಅಂತರಿಕ್ಷದಿಂದ ಅವಿರಳಧಾರೆಯಾಗಿ ಪುಷ್ಪವೃಷ್ಟಿಯಾಯಿತು. ಇಷ್ಟೊತ್ತಿಗೆ ಸೂರ್ಯಾಸ್ತ ಸಮಯವಾಗಲು ಇಬ್ಬದಿಗಳಲ್ಲಿಯೂ ಸಾಲ್ಗೊಂಡು ಸಾಕಷ್ಟು ವಿದ್ಯುದ್ದೀಪಗಳು ಜಾಜ್ವಲ್ಯಮಾನವಾಗಿದ್ದವು. ಅಂಬಾರಿಯಲ್ಲಿ ಶ್ರೀಮಂತರ ಭಾವಚಿತ್ರದ ಮುಂದೆ ಮೇಣಬತ್ತಿಗಳು ಮನೋಹರವಾಗಿ ಉರಿಯುತ್ತಿದ್ದವು. ಈ ಪ್ರಕಾಶಮಯವಾದ ಸಮಾರಂಭದಲ್ಲಿ ಮದ್ದಿನ ಚಮತ್ಕಾರವು ಬೀದಿಯುದ್ದಕ್ಕೂ ನಡೆಯುತ್ತಲಿತ್ತು. ಅಳತೆಯಿಲ್ಲದ ಕುಡಿಕೆ ಕೊಂಬುಗಳು ಸ್ವೈರವಾಗಿ ಗರ್ಜಿಸುತ್ತ ಪ್ರೇಕ್ಷಕರನ್ನು ಚದುರಿಸುತ್ತಿದ್ದವು. ಅವಿಚ್ಛಿನ್ನವಾಗಿ ನಡೆದ ಈ ಅಗ್ನಿಕ್ರೀಡೆಯಿಂದ ಇಡೀ ಜವಳಿಯ ಓಣಿಗೆ ಓಣಿಯೇ ಒಯ್ಯಾರದಿಂದ ನರ್ತಿಸುತ್ತಿದ್ದಂತೆ ತೋರುತ್ತಿತ್ತು. ಉತ್ಸವದ ಮಧ್ಯಗತವಾದ ಆನೆಯು ಜವಳೀ ಪೇಟೆಯ ಕೂಟಿನಲ್ಲಿರಲು, ಆ ಉತ್ಸವದ ಕೊನೆಯು ಹಾಲ್ಗೆರೆಯ ದಂಡೆಯ ವರೆಗೆ ಪ್ರಸಾರಗೊಂಡಿತ್ತು. ಇದರ ಮೇಲಿಂದ ಎಷ್ಟು ಜನಸಮೂಹವು ಕೂಡಿತ್ತೆಂಬುದು ಸಹಜವಾಗಿ ತಿಳಿಯುವಂತಿದೆ. ನಿದಾನ ೩೦-೪೦ ಸಾವಿರ ಜನರು ಕೂಡಿರಬಹುದೆಂದು ಜನರ ತರ್ಕವದೆ.

ಮೆರವಣಿಗೆಯು ಸಕಲೈಶ್ವರ್ಯದಿಂದ ಸಾಗುವಾಗ್ಗೆ ನಡುನಡುವೆ ವಿದ್ಯಾರ್ಥಿಗಳು, ಶ್ರೀಮಂತರ ಸ್ತುತಿಪರವಾದ ಪದಗಳನ್ನು ಮಂಜುಳಸ್ವರದಿಂದ ಹಾಡುತ್ತಿದ್ದರು. ಒಂದೆರಡು ಕಡೆಗೆ ನರ್ತಕಿಯರು ನೃತ್ಯಗಾಯನಗಳನ್ನು ಮಾಡಿದರು. ಅಲ್ಲಲ್ಲಿ ಜನರು 'ಜಯ ನಮಃ ಪಾರ್ವತೀ ಪತೇ ಹರಹರ ಮಹಾದೇವ'

ಎಂಬುದಾಗಿಯೂ, 'ಸಿರಸಂಗೀ ಮಹಾರಾಜಕಿ ಜಯ್' ಎಂಬುದಾಗಿಯೂ ಜಯಘೋಷವನ್ನು ಮಾಡುತ್ತಿದ್ದರು. ಈ ಅಪೂರ್ವವಾದ ಮೆರವಣಿಗೆಯನ್ನು ನಗರದ ಅನೇಕ ನರನಾರಿಯರು ಮಹಡಿಗಳನ್ನೇರಿಕೊಂಡು ಸಂತೋಷದಿಂದ ನೋಡುತ್ತಿದ್ದದರಿಂದ, ಮಹಡಿಗಳು ಮಹಿಳಾಮಣಿಯರ ಸಂಘಟ್ಟಣೆಯಿಂದ ಶೋಭೆಗೊಂಡಿದ್ದವು. ಮೆರವಣಿಗೆಯು ಸಾಗುವಾಗ್ಗೆ ಲಿಂಗಾಯತರಾದ ಎಷ್ಟೋ ಜನರು, ಮನೆಗೆ ಮನೆಗೆ ಅಂಗಳದಲ್ಲಿ ನೀರು ಸುರಿವಿ, ಭಕ್ತಿಪೂರ್ವಕ ಕಾಯಿಕರ್ಪೂರಗಳನ್ನು ಸಮರ್ಪಿಸುತ್ತಿದ್ದರು. ಸೌಭಾಗ್ಯವತಿಯರಾದ ನಾರೀಮಣಿಯರು ಆರತಿಗಳನ್ನು ಬೆಳಗುತ್ತಿದ್ದರು. ನಡುನಡುವೆ ಶ್ರೀಮಂತರ ಭಾವಚಿತ್ರಕ್ಕೆ ನಾಗರಿಕರಿಂದ ಸನ್ಮಾನಾರ್ಥವಾಗಿ ಪುಷ್ಪಮಾಲಿಕೆಗಳು ಸಮರ್ಪಿಸಲ್ಪಡುತ್ತಿದ್ದವು. ಅಲ್ಲಲ್ಲಿಗೆ ಜನರು ಹರುಷದಿಂದ ಮಲ್ಲಿಗೆಯ ಹೂವುಗಳನ್ನು ಬೆಂಡು ಬತ್ತಾಸುಗಳನ್ನೂ ಹಾರಿಸುತ್ತಿದ್ದರು. ಎರಡು ಮೂರು ಸ್ಥಳಗಳಲ್ಲಿ ಈ ಸೊಬಗುಳ್ಳ ಮೆರವಣಿಗೆಯ ಫೋಟೋ ತೆಗೆಯಲ್ಪಟ್ಟಿತು. ಜವಳಿ ಓಣಿಯ ಜನರೆಲ್ಲರು ತಮ್ಮ ತಮ್ಮ ಅಂಗಡಿಗಳಲ್ಲಿ ಕಾರ್ತಿಕದಂತೆ ದೀಪೋತ್ಸವವನ್ನು ಮಾಡಿದ್ದರು.

ಸೂರ್ಯಚಂದ್ರರ ಪ್ರಕಾಶದಂತೆ ಬೆಳಗುತ್ತಿರುವ ವಿದ್ಯುದ್ದೀಪಗಳ ಮನೋಹರವಾದ ಪ್ರಕಾಶದಲ್ಲಿ ಮೆರವಣಿಗೆಯು ಜವಳೀಪೇಟೆಯಿಂದ ನೆಟ್ಟಗೆ ಹಾಲಗೆರೆಯ ಎದುರಿಗಿರುವ ಚನ್ನವೀರ ಫಕ್ಕೀರಪ್ಪಾ ಅನಾಡ ಇವರ ಅಂಗಡಿಯ ಹತ್ತರದ ಕೂಟಿಗೆ ಬರಲು, ಅಲ್ಲಿ ಊರ ಯಾವತ್ತು ಹೆಣ್ಣುಮಕ್ಕಳು ಹಾಲಗೆರೆಯ ಸೋಪಾನಗಳ ಮೇಲೆ ಹಾಗೂ ಕ್ರಮವಾಗಿ ಏರುತ್ತ ಗ್ಯಾಲರಿಯ ಹಾಗೆ ಹೋಗಿರುವ ಅದರ ಪಾಳಿಯ ಮೇಲೆ ಸಾಲ್ಗೊಂಡು ನಿಂತು, ಈ ರಮಣೀಯವಾದ ಮೆರವಣಿಗೆಯನ್ನು ಮನದಣಿ ನೋಡುತ್ತಿದ್ದರು. ಅಲ್ಲಿ ನಿಂತ ಸ್ತ್ರೀಸಮುದಾಯದ ಶೋಭೆಯು ವರ್ಣಿಸಲು ಬಲು ಯೋಗ್ಯವಾಗಿತ್ತು. ಕೆರೆಯ ಪಾಳಿಯು ಸೋಪಾನ ಸಹಿತವಾಗಿ ಕ್ರಮೇಣ ಎತ್ತರವಾಗಿ ಏರುತ್ತ ಹೋಗಿದ್ದದರಿಂದ ದಟ್ಟಾಗಿ ಒಬ್ಬರ ಹಿಂದೊಬ್ಬರು ಸಾಲ್ಗೊಂಡು ನಿಂತ ಸಾವಿರಾರು ಜನ ಹೆಣ್ಣುಮಕ್ಕಳ ಮುಖಗಳಷ್ಟೇ ಕಾಣುತ್ತಿದ್ದದರಿಂದ ಅವು ವಿಸ್ತಾರವಾದ ಸರೋವರದಲ್ಲಿ ತಲೆಯೆತ್ತಿ ಅರಳಿದ ಕಮಲಗಳಂತೆ ಕಂಗೊಳಿಸುತ್ತಿದ್ದವು. ನಿಜವಾಗಿ ಇದೊಂದು ಪ್ರದರ್ಶನವಾಗಿತ್ತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಎಷ್ಟೋ ಜನರಸಿಕರು ಮೆರವಣಿಗೆಯನ್ನು ನೋಡಿ ನೋಡಿ ಬೇಸತ್ತು, ವಿಶ್ರಾಂತಿಗಾಗಿ ಈ ಅಂಗನಾಮಣಿಗಳು ನಿಂತ ಅಂದವನ್ನು ನೋಡುವವರಾಗಿದ್ದರು. ಈ ಸ್ತ್ರೀಯರು ರಾ.ಬ|| ಅರಟಾಳಸಾಹೇಬ ಬ. ರವರನ್ನು ನೋಡುವ ಅಪೇಕ್ಷೆಯಿಂದ ಅವರ ರಥವನ್ನು ತಮ್ಮ ಹತ್ತರ ತರಿಸಿಕೊಂಡು, ಅವರನ್ನು ಕಣ್ತುಂಬ ನೋಡಿ, ತಮ್ಮ ಅಪೇಕ್ಷೆಯನ್ನು ಪೂರ್ಣ ಮಾಡಿಕೊಂಡರು.

ಅಲ್ಲಿಂದ ಹಾಗೆಯೇ ಮೆರವಣಿಗೆಯು ಹಾಲಗೆರೆಯ ದಂಡೆಯ ಮೇಲಿಂದ ಹಾಯ್ದು, ಮಾರ್ಕೀಟನ್ನು ದಾಟಿ, ನೂತನವಾಗಿ ಕಟ್ಟಿದ ಲಿಂಗಾಯತರ ವಿದ್ಯಾಮಂದಿರಕ್ಕೆ (ವೀರಶೈವ ಟೌನ ಹಾಲಿಗೆ) ಹೊಂದಿ ಇರುವ ಹಡಸನ್ ಲಾಯಬ್ರರಿಯ ವರೆಗೆ ಬರುವದಾಯಿತು. ಮೆರವಣಿಗೆ ಕೂಡ ಮದ್ದಾದರೂ ಮೆರೆಯುತ್ತಲಿತ್ತು. ಬಳಿಕ ಅಂಬಾರಿಯೊಳಗಿಂದ ಶ್ರೀಮಂತರ ಭಾವಪಟವನ್ನು ಕೆಳಗಿಳಿಸಿ, ಅದನ್ನು ಲಾಯಬ್ರರಿಯಲ್ಲಿ ರಚಿಸಿದ ಸಿಂಹಾಸನದ ಮೇಲೆ ಸ್ಥಾಪಿಸಿ, ರಾ.ಬ||ರುದ್ರಗೌಡರವರೇ ಮೊದಲಾಗಿ ಯಾವತ್ತು ಮಹನೀಯ ಮಂಡಳಿಯು ತುಸು ವಿಶ್ರಾಂತಿಯನ್ನು ಹೊಂದುವದಾಯಿತು. ಅಲ್ಲಿ ಶ್ರೀಮಂತರ ಹಾಡುಗಳನ್ನು ಗವಾಯಿಗಳೂ ವಿದ್ಯಾರ್ಥಿಗಳೂ ಪಾಡಿ, ಭಾವಪಟಕ್ಕೆ ಮಂಗಳಾರತಿಯನ್ನು ಮಾಡಿದರು. ಈ ಮೆರವಣಿಗೆಯು ಮುಗಿಯಬೇಕಾದರೆ ರಾತ್ರಿ ೯ ಗಂಟೆಯಾಯಿತು.

ಮೆರವಣಿಗೆಯು ಮುಗಿದರೂ ಜನಸಮೂಹದ ಸಂತೋಷವು ಮುಗಿಯಲಿಲ್ಲ. ಯಾಕಂದರೆ ಮರುದಿನ ರಾವಬಹಾದ್ದೂರರವರ ತಾಂಬೂಲ ಸಮಾರಂಭವೊಂದಿತ್ತು. ಅಲ್ಲದೆ ಹಿಂದಿನ ದಿವಸದ ರಾತ್ರಿಯಿಂದ ಮಧ್ಯಾಹ್ನದ ವರೆಗೂ ಸಂತತ ಧಾರೆಯಾಗಿ ಸುರಿಯುತ್ತಿದ್ದ ಮಳೆಯು ದೈವಯೋಗದಿಂದ ೧೨ ಘಂಟೆಯ ಸುಮಾರಕ್ಕೆ ಗಕ್ಕನೆ

ನಿಂತು, ಮೆರವಣಿಗೆಯು ಮುಗಿಯುವ ವರೆಗೂ ಒಂದು ಹನಿ ಸಹ ಉದುರಲಿಲ್ಲ. ಸುತ್ತಲೂ ಸ್ವಚ್ಛವಾಗಿ ಸೂರ್ಯಪ್ರಕಾಶವು ಬಿದ್ದುಬಿಟ್ಟಿತು. ಈ ದೈವಬಲವನ್ನು ಕಂಡು ಭಾವಿಕ ಜನರು ಸಂತೋಷಿತರಾಗಿ ಈ ಪ್ರಕಾರ ಭಾವಿಸುವವರಾದರು.

ವಾರ್ಧಕ ಷಟ್ಪದಿ

ಮಳೆ ಬೆಳೆಯೊಣಗುತಿಳೆಯೆಲ್ಲ ಕಳವಳಿಸಿ ।
ಕಳೆಗುಂದಿ ನೊಂದು ಮಳೆ ಮಳೆಯೆಂದು ಬಾಯ್ಬಿಡುತಿ ।
ರಲು ನಮ್ಮ ಮೆರವಣಿಗೆ ಲೇಸಲ್ತಿದೆಂದು ಮೊರೆಯಿಡೆ ಹರಗೆ ಲಿಂಗರಾಜಂ ॥
ಸಲೆ ಮೆಚ್ಚಿ ಶಂಕರಂ ಮಳೆಯೀಯಲಾಗಿಳೆಯು ।
ನಳನಳಿಸಿ ನಲಿದತ್ತು ಆ ದಿನವೆ ಮೆರವಣಿಗೆ ।
ಬಲುಶೋಭೆಯಿಂದೆಸೆಯೆ ಶಿವಶರಣನೀತನಹುದಹುದೆಂಬ ಭಾವನೆಯೊಳು ॥೧॥

ಅಂದರೆ ಅನಾವೃಷ್ಟಿಯ ಕಾಲದಲ್ಲಿ ಆಕಸ್ಮಿಕವಾಗಿ ಮಳೆಯಾದದ್ದನ್ನೂ, ಸುರಿಯುತ್ತಿದ್ದ ಮಳೆಯು ಸಮಾರಂಭದ ವೇಳೆಗೆ ಸರ್ರನೆ ಸರಿದದ್ದನ್ನೂ ಪರಿಭಾವಿಸಿದರೆ ಇದು ಶಿವಶರಣರ ಮಹಾತ್ಮೆಯೇ ಎಂಬುದು ಸಹಜವಾಗಿ ಎಲ್ಲ ಜನರ ಲಕ್ಷದಲ್ಲಿ ಬಾರದೆ ಹೋಗದು. ಹಿಂದಕ್ಕೆ ಇದೇ ಧಾರವಾಡದಲ್ಲಿ ಶ್ರೀಶಂಕರಭಾರತೀ ಸ್ವಾಮಿಗಳ ಮೆರವಣಿಗೆಯ ಸಮಾರಂಭದ ಕಾಲಕ್ಕೆ ಇದೇ ಪ್ರಕಾರವೇ ದೇವಾನುಗ್ರಹ ಒದಗಿದ ಸಂಗತಿಯನ್ನು ಧಾರವಾಡ ಶಹರ ನಿವಾಸಿಗಳು ಏತತ್ಪ್ರಸಂಗದಲ್ಲಿ ಸ್ಮರಣಕ್ಕೆ ತರುವರಾದರು. "ದೇವಬಲವಿದ್ದ ಮಹಾನುಭಾವರಿಗೆ ಯಾವ ಭಯವೂ ಇಲ್ಲ" ವೆಂಬ ಮಾತು, ಈ ಶ್ರೀಮಂತ ಭಾವಪಟದ ಮೆರವಣಿಗೆಯಿಂದ ಎಲ್ಲ ಜನರ ನಿದರ್ಶನಕ್ಕೆ ಬಂದು ಹೋಯಿತು. ಅಂತೂ ಮೆರವಣಿಗೆಯು ಬಹು ಅಟ್ಟಹಾಸದಿಂದ ಸಾಂಗವಾಯಿತು. ಇಂಥ ಸೌಂದರ್ಯವೂ ವೈಭವವೂ ಉಳ್ಳ ಮೆರವಣಿಗೆಯಾದದ್ದು ಕರ್ನಾಟಕದಲ್ಲಿ ಇದೇ ಮೊದಲನೇದೆಂದು ಹೇಳಬಹುದು.

ಧಾರವಾಡದ ತಾಂಬೂಲ ಸಮಾರಂಭ ತಾ. ೨೧-೯-೧೯೧೩ ರವಿವಾರ

ಮರುದಿವಸ ಅಂದರೆ ತಾರೀಖು ೨೧ನೇ ಸಪ್ಟಂಬರ ಸನ್ ೧೯೧೩ ಇಸವಿಯ ರವಿವಾರ ದಿವಸ ರಾ.ಬ॥ರುದ್ರಗೌಡ ಚೆನ್ನವೀರಗೌಡ ಅರಟಾಳ ಆಯ್.ಎಸ್.ಓ. ಇವರಿಗೆ ಮಾನಪತ್ರವನ್ನು ಸಮರ್ಪಿಸುವ ಸಮಾರಂಭವು ಜರುಗಿತು. ಅದಕ್ಕಾಗಿ ಕೈ.ವಾ. ಚನ್ನಮಲ್ಲಪ್ಪಣ್ಣಾ ಟೆಂಗಿನಕಾಯಿ ಇವರ ಜಿನ್ನಿಂಗ ಫ್ಯಾಕ್ಟರಿಯು ಮನೋಹರವಾಗಿ ಅಲಂಕೃತವಾಗಿತ್ತು. ಮಧ್ಯದಲ್ಲಿ ಉಚ್ಚಾಸನವನ್ನು ರಚಿಸಿ, ಮೇಲೆ ಶ್ರೀಮಂತ ಪಂಚಮ ಜಾರ್ಜಬಾದಶಹರವರ ಹಾಗೂ ಮೇರೀ ಮಹಾರಾಣಿಯವರ ಭಾವಪಟಗಳೂ ಕೈ.ವಾ. ಸಿರಸಂಗಿಯ ಶ್ರೀಮಂತರ ಭಾವಪಟವೂ ಸ್ಥಾಪಿಸಲ್ಪಟ್ಟಿದ್ದವು. ೫ ಘಂಟೆಯೊಳಗಾಗಿ ಆಮಂತ್ರಿತರಾದ ಸ್ಥಳ ಪರಸ್ಥಳದ ಯಾವತ್ತು ಮಹನೀಯರು ಬಂದು ತಮ್ಮ ತಮ್ಮ ಸ್ಥಳವನ್ನು ಅಲಂಕರಿಸುವವರಾದರು. ೫ ಗಂಟೆಯ ಸರಿಯಾಗಿ ಜಿಲ್ಲಾ ಕಲೆಕ್ಟರರಾದ ಮೆಹರ್ಬಾನ ಮೆಕಾನಕಿ ಸಾಹೇಬ ಬಹಾದ್ದೂರರವರೂ ಮೆ॥ಸವನೂರ ನವಾಬ ಸಾಹೇಬರವರೂ ಸ್ಥಳೀಯ ದೊಡ್ಡ ದೊಡ್ಡ ಅಧಿಕಾರಿಗಳೂ ದಯಮಾಡಿಸಿದರು. ಸ್ಥಳ ಪರಸ್ಥಳದ ಅನೇಕ ಪ್ರತಿಷ್ಠಿತ ಗ್ರಹಸ್ಥರು ಸುಮಾರು ಹತ್ತು ಹದಿನೈದು ಸಾವಿರದ ವರೆಗೆ ನೆರೆದು ಸಭಾಂಗಣವು ಕಿಕ್ಕಿಂಧವಾಗಿ ತುಂಬಿ ಹೋಯಿತು. ಆಮಂತ್ರಿತ ಜನರ ಹೊರತು ಉತ್ಸವಕ್ಕೆ ಬಂದಿದ್ದ ಸುತ್ತು ಹಳ್ಳಿಗಳ ಸಾವಿರಾರು ಜನರಿಗೆ ಸ್ಥಳವು ಸಾಲದೆ

ಹೋಯಿತು. ಕಟ್ಟಡದ ಹೊರಗೆ ಸಾವಿರಾರು ಜನರು ನಿರುತ್ಸಾಹಿಗಳಾಗಿ ನಿಂತುಬಿಡುವದಾಗಿತ್ತು. ಮಾಡಬೇಕೇನು? ಹೀಗೆ ಅಪರಿಮಿತ ಜನ ಸಮೂಹವು ಕೂಡೀತೆಂಬ ಅಜಮಾಸು ಮೊದಲಿಗೆ ಹತ್ತಲಿಲ್ಲ. ಮುನ್ನಾ ದಿನ ಮೆರವಣಿಗೆಯನ್ನು ನೋಡಬಂದಿದ್ದ ಜನಸ್ತೋಮವು, ಇದೊಂದು ಸಮಾರಂಭವನ್ನೂ ನೋಡಿಕೊಂಡು ಹೋಗಬೇಕೆಂಬ ಕಾಂಕ್ಷೆಯಿಂದ ನಿಂತೇ ಬಿಟ್ಟಿತ್ತು. ಈ ಮಹಾಜನ ಸ್ತೋಮಕ್ಕೆ ಆ ಕಟ್ಟಡವು ಹೇಗೆ ಪೂರೈಸೀತು? ಮೊದಲು ಆಮಂತ್ರಿತ ಜನರಿಗೇ ಸ್ಥಳವು ಸಂಕೋಚವಾಗುತ್ತಿರಲು, ಈ ಅನಾಮಂತ್ರಿತ ಜನರನ್ನಾರು ಕೇಳಬೇಕು?

ಉಚಿತಾಸನದಲ್ಲಿ ಲೋಕಪ್ರಿಯರಾದ ಮೆ॥ಮೆಕಾನಕಿ ಸಾಹೇಬ ಬಹಾದ್ದೂರ ಕಲೆಕ್ಟರ ಜಿಲ್ಲಾ ಧಾರವಾಡ ಇವರು ವಿರಾಜಮಾನರಾದರು. ಅವರಿಗೆ ಹೊಂದಿ ಎಡಭಾಗದಲ್ಲಿ ರಾ.ಬ॥ರುದ್ರಗೌಡರವರು ವಿಶ್ರಮಿಸಿದರು. ಬಲಕ್ಕೆ ಮೆ॥ನವಾಬಸಾಹೇಬ ಸವಣೂರರವರೂ, ನಾಮದಾರ ಶ್ರೀನಿವಾಸರಾವ ರೊದ್ದರವರೂ, ಪರಸನಲ್ ಅಸಿಸ್ಟಂಟ ಕಲೆಕ್ಟರರಾದ ಕಿತ್ತೂರ ರೇವಣಸಿದ್ಧಪ್ಪನವರೂ, ಡಿ.ಡಿ. ಕಲೆಕ್ಟರರಾದ ಅದರಗುಂಚಿಯವರೂ ಮಿ॥ ಬಾಳೇಕುಂದ್ರಿಯವರೂ ಬೆಳಗಾವ ಜಿಲ್ಲೆಯ ಡಿ.ಡಿ. ಕಲೆಕ್ಟರರಾದ ಕಲ್ಲೋಳಗಿ ವಿರೂಪಾಕ್ಷಪ್ಪನವರೂ, ಹೈಸ್ಕೂಲ ಹೆಡ್‌ಮಾಸ್ತರರಾದ ಮಿ॥ ಜಠಾರರೂ, ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ರಾವಸಾ॥ವಿನಾಯಕ ಬಾಬಾಜಿ ಜೋಸಿಯವರೂ ಎಡಭಾಗದಲ್ಲಿ ಶ್ರೀಮಂತ ಚಚಡಿಯ ನಾಯಕ ಬಹಾದ್ದೂರ ದೇಸಾಯರೂ ಮತ್ತು ಹಂದಿಗಿನೂರ -ರಕ್ಕಸಿಗಿ-ಮುಮ್ಮಿಗಟ್ಟಿ ಮೊದಲಾದ ದೇಸಾಯರೂ ಬ್ಯಾರಿಷ್ಟರ ಗರಡೀ ರುದ್ರಪ್ಪನವರೂ ಮತ್ತು ಇನ್ನೂ ಅನೇಕ ದೊಡ್ಡ ದೊಡ್ಡ ಅಧಿಕಾರಿಗಳೂ ಮುಂಭಾಗದ ಉಚಿತಾಸನಗಳಲ್ಲಿ ಆಮಂತ್ರಿತರಾದ ಸದ್ಗೃಹಸ್ಥರೂ ಅಲಂಕೃತರಾಗಿದ್ದರು. ಒಟ್ಟಿಗೆ ಸಭೆಯ ಬೈಠಕಿಯು ಮನೋಹರವಾಗಿತ್ತು.

ಕಾರ್ಯಕ್ರಮ ಪತ್ರಿಕೆಯಲ್ಲಿ ಪ್ರಕಟಿಸಿದ ಮೇರೆಗೆ ಆರಂಭಕ್ಕೆ ಬ್ಯಾರಿಷ್ಟರ ಗರಡೀ ರುದ್ರಪ್ಪನವರು ಸಭಾಸದರ ಸ್ವಾಗತಭಾಷಣಮಾಡಿ, ಅನಂತರ ಪ್ರಸಕ್ತ ಸಭೆಯ ಉದ್ದೇಶವನ್ನು ಪ್ರಸ್ತಾಪಿಸಿ, ಬಳಿಕ ರಾ.ಬ॥ಅರಟಾಳ ಸಾಹೇಬರವರು ಸರಕಾರೀ ಅಧಿಕಾರದಲ್ಲಿದ್ದು ಅವರು ಮಾಡಿದ ಕೆಲಸದ ಘನತೆಯನ್ನೂ ಸಮಾಜ ಕಲ್ಯಾಣಕ್ಕಾಗಿ ಆಚರಿಸಿದ ಕೃತ್ಯಗಳ ಮಹತ್ವವನ್ನೂ ಕುರಿತು ರಸವತ್ತಾಗಿ ಆಂಗ್ಲಭಾಷೆಯಲ್ಲಿ ಅಸ್ಖಲಿತವಾಣಿಯಿಂದ ಭಾಷಣಮಾಡಿದರು. ಅನಂತರ ಚೌಡದಾನಪುರದ ಪಂಡಿತ ವಿರೂಪಾಕ್ಷಶಾಸ್ತ್ರಿ ಒಡೆಯರ ಇವರು ಇದೇ ಅಭಿಪ್ರಾಯವುಳ್ಳ ಭಾಷಣವನ್ನು ಸಂಸ್ಕೃತದಲ್ಲಿ ಮಾಡಿದರು. ಆ ಮೇಲೆ ಬೆಳಗಾವಿಯ ಮಿ॥ ವಿಷ್ಣು ಮಹೇಶ್ವರ ಗಾಡಗೀಳ ಎಂಬವರು ಇಂಗ್ಲೀಷಿನಲ್ಲಿ ರಾ.ಬ॥ರವರ ಕಾರ್ಯಕ್ಷಮತೆಯನ್ನು ವರ್ಣಿಸಿದರು. ಬಳಿಕ ರಾ.ಬ॥ಶಾಂತವೀರಪ್ಪ ಮೆಣಸಿನಕಾಯಿಯವರು ಮಾನಪತ್ರವನ್ನು ಓದಿ, ಅದನ್ನು ಸುಂದರವಾದ ಕೌಪ್ಯಕರಂಡಕದಲ್ಲಿಟ್ಟು ಮೆ. ಮೆಕಾನಕಿಸಾಹೇಬ ಬಹದ್ದೂರರವರ ಹಸ್ತದಿಂದ ರಾವಬಹಾದ್ದೂರರವರಿಗೆ ಸಮರ್ಪಿಸಿ, ಅವರನ್ನು ಪರಿಮಳದ್ರವ್ಯ ಪುಷ್ಪಮಾಲೆಗಳಿಂದ ಅಲಂಕರಿಸಿದರು. ಅನಂತರ ರಾ.ಬ॥ಅರಟಾಳ ಸಾಹೇಬರು ಎದ್ದುನಿಂತು ಸಮಯೋಚಿತ ಭಾಷಣ ಮಾಡಿದರು. ಅದರ ಸಾರಾಂಶವೇನಂದರೆ "ತಾವೆಲ್ಲರು ಅಂತಃಕರಣಪೂರ್ವಕ ಮಾಡಿದ ಸನ್ಮಾನಕ್ಕೆ ನಾನು ಅರ್ಹನಲ್ಲ. ಸರಕಾರದ ಸೇವೆಯನ್ನು ಏಕನಿಷ್ಠೆಯಿಂದ ಮಾಡುವದು ನನ್ನ ಕರ್ತವ್ಯವಿದ್ದದರಿಂದ ಅದನ್ನು ಮಾಡಿದ್ದು ಹಾಗೂ ಆ ಕಾಲಕ್ಕೆ ನನ್ನ ಕಡೆಯಿಂದೇನಾದರೂ ಜನಹಿತವಾದದ್ದು ಇವು ನನ್ನ ಯೋಗ್ಯತೆಯನ್ನು ಎಂದೂ ಹೆಚ್ಚಿಸಲಾರವು. ಕರ್ತವ್ಯಮಾಡುವದನ್ನು ಬಿಟ್ಟರೆ ಮಾತ್ರ ಅಪರಾಧವಾಗುತ್ತದೆ. ಮಾಡಿದರೆ ಅದರಲ್ಲೇನು ವಿಶೇಷವಿಲ್ಲ. ಲಿಂಗಾಯತ ಸಮಾಜದ ಕಾರ್ಯದಲ್ಲಿ ನಾನು ಮಾಡಿದ ಕೆಲಸವಾದರೂ ಇದೇ ದೃಷ್ಟಿಯಿಂದ ಅವಲೋಕಿಸಲಿಕ್ಕೆ ತಕ್ಕದ್ದಾಗಿದೆ. ಕರ್ನಾಟಕ ಕಾಲೇಜದ ಫಂಡಿಗೆ ಅರವತ್ತು (೬೦) ಸಾವಿರ ರೂಪಾಯಿಗಳ ವರೆಗೆ ಹಣವು ಕೂಡಿರುವದರ ಶ್ರೇಯಸ್ಸಿನ ಬಹುಮಾನವನ್ನು ನಿಷ್ಕಾರಣವಾಗಿ ನೀವು ನನ್ನ ಕೊರಳಿಗೆ ಕಟ್ಟುತ್ತೀರಿ. ನನ್ನ ಅಲ್ಪ ಶಬ್ದಕ್ಕೆ ನೀವು ಮಾನಕೊಟ್ಟು, ಹಣವನ್ನಿತ್ತು

ಔದಾರ್ಯವನ್ನು ತೋರ್ಪಡಿಸಿದ್ದುದರಿಂದ, ಆ ರಕಮು ಕೂಡಿದ ಶ್ರೇಯಸ್ಸು ನನ್ನದೋ ನಿಮ್ಮದೋ? ಎಂಬ ವಿಚಾರವನ್ನು ನೀವೇ ಮಾಡಿರಿ. ನಮ್ಮ ಲಿಂಗಾಯತ ಸಮಾಜವು ಧನಕನಕ ಸಂಪನ್ನವಾಗಿದೆ. ಸಮಾಜಹಿತದ ಯಾವ ಕೆಲಸಕ್ಕಾದರೂ ಉದಾರಸಹಾಯಮಾಡುವ ಸಾಮರ್ಥ್ಯವು ನಮ್ಮ ಸಮಾಜದಲ್ಲಿರುವದು. ಮತ್ತು ಅನೇಕ ಪ್ರಕಾರದ ವಿಲಾಸಗಳಲ್ಲಿಯೂ ದುಂದುಗಾರಿಕೆಯಲ್ಲಿಯೂ ಎಷ್ಟೋ ಸಾರೆ ದುಡ್ಡಿನ ಅಪವ್ಯಯ ಮಾಡುವದನ್ನು ನೋಡಿದರೆ ಜೀನತನಕ್ಕೂ ನಮ್ಮ ಸಮಾಜಕ್ಕೂ ಮಹದಂತರವಿರುವದೆಂಬುದು ಸಹಜವು. ಅಂದಮೇಲೆ ಕರ್ನಾಟಕ ಕಾಲೇಜದಂಥ ಲೋಕೋಪಯೋಗಿ ಸಂಸ್ಥೆಗಳಿಗೆ ದ್ರವ್ಯಸಹಾಯ ಮಾಡಲಿಕ್ಕೆ ನಾವು ಎಂದೂ ಹಿಂದೆಗೆಯತಕ್ಕದ್ದಲ್ಲ. ಇದಕ್ಕೇ ಆಗಲಿ, ಬೇರೆ ಲೋಕೋಪಯೋಗಿ ಸಂಸ್ಥೆಗಳಿಗೇ ಆಗಲಿ, ಇದೇ ಪ್ರಕಾರ ಉದಾರ ಸಹಾಯ ಮಾಡುವ ಬುದ್ಧಿಯು ನಮ್ಮವರಲ್ಲಿ ಹುಟ್ಟಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ. ನೀವೆಲ್ಲರು ನನಗೆ ತೋರಿಸಿದ ಗೌರವಕ್ಕಾಗಿ ಮತ್ತೊಮ್ಮೆ ನಿಮ್ಮೆಲ್ಲರನ್ನು ಅಭಿವಂದಿಸುತ್ತೇನೆ" ಎಂದು ಭಾಷಣಮಾಡಿ ಕುಳಿತುಕೊಂಡರು. ಆ ಮೇಲೆ ಶ್ರೀ ಪಂಚಮ ಚಾರ್ಜಸಾರ್ವಭೌಮ ದಂಪತಿಗಳ ಹಾಗೂ ಜಿಲ್ಲಾ ಕಲೆಕ್ಟರ ದೊರೆಗಳ ಮತ್ತು ರಾ.ಬ॥ಅರಟಾಳ ಸಾಹೇಬರ ಹೆಸರುಗಳಿಂದ ತ್ರಿವಾರ ಜಯಘೋಷ ಮಾಡಲ್ಪಟ್ಟು, ಪರಿಮಳದ್ರವ್ಯ ಹಾರ-ತುರಾಯಿ-ತಾಂಬೂಲ ಸಮಾರಂಭವಾಗಿ ಸಭಾಕಾರ್ಯವು ಪರಿಸಮಾಪ್ತಿಯಾಯಿತು.

ಈ ಪ್ರಕಾರವಾಗಿ ಶ್ರೀಮಂತ ಸಿರಸಂಗಿಯ ಸರದೇಸಾಯಿಯವರ ಭಾವಪಟದ ಮೆರವಣಿಗೆ ಹಾಗೂ ರಾ.ಬ॥ಅರಟಾಳ ಸಾಹೇಬರ ತಾಂಬೂಲ ಸಮಾರಂಭ ಮತ್ತು ಮಾನಪತ್ರದ ಸಮರ್ಪಣೆ ಈ ಎರಡೂ ಸಮಾರಂಭಗಳ ಏಕೀಕರಣವಾಗಿ ಉತ್ಸವಕ್ಕೆ ವಿಶೇಷವಾದ ಶೋಭೆಯು ಬಂದಿತ್ತು. ಈ ಮೆರವಣಿಗೆಯನ್ನು ನೋಡಿ ಕೆಲ ವಯೋವೃದ್ಧರು, "ಈ ಉತ್ಸವವು ಹುಬ್ಬಳ್ಳಿಯ ಶ್ರೀ ಮೂರುಸಾವಿರಮಠದ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಯ ಮಹೋತ್ಸವಕ್ಕಿಂತ ಮಿಗಿಲು ಆಯಿತೆಂದು" ಮಾತಾಡುವವರಾಗಿದ್ದರು. ಒಟ್ಟು ಈ ಸಮಾರಂಭಕ್ಕೆ ಸುಮಾರು ೪೫೦೦ ರೂಪಾಯಿ ವೆಚ್ಚವಾಯಿತಂತೆ. ಇಂಥ ಅಮೋಘವಾದ ವೈಭವವನ್ನು ಪಡೆಯುವ ಪುಣ್ಯಪುರುಷರ ಜನ್ಮವೇ ಸಾರ್ಥಕವು.

ಕಣಬರಿಗಿಯಲ್ಲಾದ ತಾಂಬೂಲ ಸಮಾರಂಭ

ಧಾರವಾಡದ ಪಾನಸುಪಾರಿ ಸಮಾರಂಭವಾದನಂತರ ಒಂದು ತಿಂಗಳೊಳಗಾಗಿ ಅಂದರೆ ತಾರೀಖು ೧೨ನೇ ಅಕ್ಟೋಬರ ಸನ್ ೧೯೧೩ ರವಿವಾರ ದಿವಸ, ರಾವಸಾ॥ಶಿವಮೂರ್ತಿಸ್ವಾಮಿ ಕಣಬರಿಗಿಮಠ ಇವರು ತಮ್ಮ ಜನ್ಮಸ್ಥಾನವಾದ ಬೆಳಗಾವ ತಾಲೂಕ ಪೈಕಿ ಬೆಳಗಾವಿಯಿಂದ ಈಶಾನ್ಯ ದಿಕ್ಕಿಗೆ ೩ ಮೈಲು ಅಂತರದ ಮೇಲಿರುವ ಕಣಬರಿಗಿ ಗ್ರಾಮದಲ್ಲಿ, ತಮ್ಮ ಮನೆಯ ಮುಂದೆ ಹಾಕಿದ ರಮ್ಯವಾದ ಮಂಟಪದಲ್ಲಿ, ರಾವಬಹಾದ್ದೂರರವರ ಪಾನಸುಪಾರಿ ಸಮಾರಂಭವನ್ನು ಒಳ್ಳೇ ವೈಭವದಿಂದ ಜರುಗಿಸಿದರು. ಈ ಉತ್ಸವಕ್ಕೆ ನಾಮದಾರ ಮೆ॥ಕಮಿಶನರ ಶೆಫರ್ಡಸಾಹೇಬ ಬಹಾದ್ದೂರರರೂ ಮೆ॥ಕಲೆಕ್ಟರ ಸಾ.ಬ॥ರವರೂ, ಮೆ॥ಡಿಸ್ಟ್ರಿಕ್ಟ ಜಜ್ಜಸಾಹೇಬ ಬ॥ರವರೂ, ಮೆ॥ಆ॥ಕಲೆಕ್ಟರಸಾಹೇಬ ಬ॥ರವರೂ ಮತ್ತು ಲಷ್ಕರೀ ಆಂಗ್ಲಾಧಿಕಾರಿಗಳೂ ಮೊದಲಾದ ಮುಖ್ಯ ಮುಖ್ಯ ಯುರೋಪಿಯನ್ ಎಲ್ಲ ಅಧಿಕಾರಿಗಳೂ ಆಗಮಿಸಿದ್ದರು. ಈ ಸಮಾರಂಭಕ್ಕೆ ಸುಮಾರು ೪-೫ ಸಾವಿರ ಜನರು ಕೂಡಿದ್ದು, ಶ್ರೀ ಶಿವಮೂರ್ತಿಸ್ವಾಮಿಗಳು ಸುಮಾರು ೧೫೦೦ ರೂಪಾಯಿ ವೆಚ್ಚ ಮಾಡಿದರು. ರಾವಬಹಾದ್ದೂರರವರಿಗೆ ಮಾನಪತ್ರವನ್ನು ಸಮರ್ಪಿಸಿದ್ದಲ್ಲದೆ ಅದರೊಡನೆ ಒಂದು

ಸುವರ್ಣಪದಕವನ್ನೂ ಸಮರ್ಪಿಸಿದರು. ಶ್ರೀ ಶಿವಮೂರ್ತಿಸ್ವಾಮಿಗಳು ಸನ್ ೧೯೧೧ನೇ ಇಸ್ವಿ ಡಿಸೆಂಬರ ತಿಂಗಳಲ್ಲಿ ಬೆಳಗಾವಿಯ ಮಹಾಸಭೆಯನ್ನು ತಮ್ಮ ಒಬ್ಬರ ಹಣದಿಂದಲೇ ಜರುಗಿಸಿದಂತೆ, ಈ ತಾಂಬೂಲ ಸಮಾರಂಭವನ್ನಾದರೂ ತಾವು ಒಬ್ಬರೇ ನೆರವೇರಿಸಿದರು. ಇಷ್ಟೆಲ್ಲ ವೆಚ್ಚದ ಭಾರವನ್ನು ತಾವು ಒಬ್ಬರೇ ವಹಿಸಿ, ಸಮಾರಂಭವನ್ನು ಸರಿಯಾಗಿ ನೆರವೇರಿಸಿದುದರಿಂದ ರಾ||ಸಾ||ಶಿವಮೂರ್ತಿಸ್ವಾಮಿಗಳ ಅನುಪಮೇಯವಾದ ಉದಾರತನವೂ ಮತ್ತು ರಾವಬಹಾದ್ದೂರ ಅರಟಾಳ ಸಾಹೇಬರ ಸಂಬಂಧವಾಗಿಯೂ ವೀರಶೈವಜನಾಂಗದ ವಿಷಯವಾಗಿಯೂ ಇದ್ದ ಅವರ ಅಭಿಮಾನವೂ ಎಷ್ಟೆಂಬದು ಸ್ಪಷ್ಟವಾಗಿ ತೋರುತ್ತದೆ. ಇಂಥ ಉದಾರ ಪುರುಷರು ತೀರ ವಿರಳ.

ಬೈಲಹೊಂಗಲದ ತಾಂಬೂಲದ ಸಮಾರಂಭ
ತಾ||೨೬ನೇ ಅಕ್ಟೋಬರ ೧೯೧೩

ಕಣಬರಿಗಿಯ ತಾಂಬೂಲ ಸಮಾರಂಭವಾದ ೧೫ ದಿವಸಗಳೊಳಗಾಗಿ ಅಂದರೆ ತಾರೀಖು ೨೬ನೇ ಅಕ್ಟೋಬರ ಸನ್ ೧೯೧೩ ಇಸ್ವಿ ರವಿವಾರ .ದಿವಸ ಬೈಲಹೊಂಗಲದವರು ತಮ್ಮ ಗ್ರಾಮದಲ್ಲಿ ಬಹು ಸಮಾರಂಭದಿಂದ ರಾವಬಹಾದ್ದೂರರವರಿಗೆ ಪಾನಸುಪಾರಿಯನ್ನು ಮಾಡುವದಾಗಿ ನಿರ್ಧರಿಸಿ, ಅದರಂತೆ ಜಿಲ್ಲೆಯ ದೇಶೀವಿದೇಶೀಯ ಎಲ್ಲ ಮುಖಂಡ ಮಂಡಳಿಗೆ ಆಮಂತ್ರಣಕೊಟ್ಟು, ಊರನ್ನು ತಳಿರ್ದೋರಣ ಧ್ವಜ-ಪತಾಕೆ ಕದಳೀಸ್ತಂಭಗಳಿಂದ ಬಲು ಶೃಂಗರಿಸಿದ್ದರು. ಪೇಟೆಯ ಶೃಂಗಾರವು ಪ್ರೇಕ್ಷಣೀಯವಾಗಿತ್ತು. ಬಾಳೆಯ ಕಂಬಗಳನ್ನು ಕಟ್ಟದೆ ಇದ್ದ ಮನೆಗಳೇ ಕಂಡು ಬರಲಿಲ್ಲ. ಮೊದಲೇ ನಿಶ್ಚಿತವಾದಂತೆ ತಾ. ೨೫ನೇ ಅಕ್ಟೋಬರ ಸನ್ ೧೯೧೩ ಇಸ್ವಿ ಶನಿವಾರ ದಿವಸ ರಾ.ಬ||ರವರು ಬೆಳಗಾವಿಯಿಂದ ಮೋಟಾರು ಬಂಡಿಯಲ್ಲಿ ಹೊರಟು ಬೈಲಹೊಂಗಲಕ್ಕೆ ಬರುತ್ತಿರಲು, ಹಾದಿಯಲ್ಲಿ ಹಾಲಿಗೀ ಗ್ರಾಮದ ಹತ್ತರ ಮೋಟಾರ ಬಂಡಿಯು ಕೆಟ್ಟು, ಕಟ್ಟು ಮಾಡಿತು.ಈಗ ರಾವಬಹಾದ್ದೂರರವರು ಬರುವರೆಂದು ಬೈಲಹೊಂಗಲದಲ್ಲಿ ಕೂಡಿದ ಅಪರಿಮಿತ ಜನಸಮೂಹವು ಇವರ ಮಾರ್ಗನಿರೀಕ್ಷಣೆಯನ್ನು ಮಾಡುತ್ತಲಿತ್ತು. ರಾ.ಬ||ರವರಲ್ಲದೆ ಮೋಟಾರಬಂಡಿಯಲ್ಲಿ ಅವರ ಮೊಮ್ಮಗನಾದ ಚಚಡಿಯ ಚಂದ್ರಭೂಷಣನೂ ಶ್ರೀ ಶಿಗ್ಗಾವಿಯ ಚರಮೂರ್ತಿಗಳೂ ಇದ್ದರು. ಆಗ ಇನ್ನೇನು ಮಾಡಬೇಕೆಂದು ರಾ.ಬ||ರವರು ಯೋಚಿಸುತ್ತಿರುವಷ್ಟರಲ್ಲಿ ಬೆಳಗಾವಿಯಿಂದ ಬೈಲಹೊಂಗಲಕ್ಕೆ ಹೋಗುತ್ತಲಿರುವ ಟಪಾಲ ಟಾಂಗೆಯು ಆಕಸ್ಮಿಕವಾಗಿ ಅಲ್ಲಿಗೆ ಬಂತು. ಅದರಲ್ಲಿ ರಾವಬ||ರವರೊಬ್ಬರೇ ಕೂತು "ಚಂದ್ರಭೂಷಣನೊಂದಿಗೆ ನೀವು ಹಿಂದಿನಿಂದ ಬರಬೇಕೆಂದು" ಶ್ರೀ ಚರಮೂರ್ತಿಗಳಿಗೆ ಹೇಳಿ, ಅಲ್ಲಿ ಜನರು ಹಾದೀನೋಡುತ್ತಿರಬಹುದೆಂದು ತಾವು ಹೊರಟರು.

ಇವರು ಹೊರಟು ಹೋದ ಕೆಲಹೊತ್ತಿನ ಮೇಲೆ ಸಂಪಗಾವಿಯ ಮುಸಲ್ಮಾನ ವ್ಯಾಪಾರಿಯಾದ ಫಕರುಸಾಹೇಬ ಎಂಬವರು ಬೈಲಹೊಂಗಲದ ಉತ್ಸವಕ್ಕೆ ಒಯ್ಯಲವಶ್ಯವಾಗಿದ್ದ ಒಂದು ರಥವನ್ನು ತೆಗೆದುಕೊಂಡು ಬರುತ್ತಿರಲು ಹಾದಿಯಲ್ಲಿ ಮೋಟಾರ ಬಂಡಿ ಕೆಟ್ಟ ಈ ಸಂಗತಿಯನ್ನು ತಿಳಿದು, ಆ ರಥದಲ್ಲಿ ಶ್ರೀ ಚರಮೂರ್ತಿಗಳನ್ನೂ ಶ್ರೀಮಂತ ಚಂದ್ರಭೂಷಣ ದೇಸಾಯರನ್ನು ಕುಳ್ಳಿರಿಸಿಕೊಂಡು ಬರುವವರಾದರು. ರಾವಬಹಾದ್ದೂರರವರು ಟಪಾಲ ಟಾಂಗೆಯಲ್ಲಿ ಕೂತು ಬಾಗೇವಾಡಿಗೆ ಬಂದು, ತಡವಾದ ವಾರ್ತೆಯನ್ನು ತಾರಿನಿಂದ ಬೈಲಹೊಂಗಲಕ್ಕೆ ತಿಳಿಸಿ, ತಾವು ಹಾಗೆಯೇ ಸಾಗಿಬರುತ್ತಿದ್ದರು. ತಾರು ನೋಡಿ ರಾ.ಸಾ|| ಮಲ್ಲನಾಯಕ ಪಾಟೀಲ ಬೈಲಹೊಂಗಲ ಇವರು ತಮ್ಮ ಊರಲ್ಲಿರುವ ಒಂದು ಮೋಟಾರ ಸಾಯಕಲ್ ತೆಗೆದುಕೊಂಡು ತಾವು

ಒಂದು ಕುದುರೆಯನ್ನೇರಿ ಆ ಸಾಯಕಲ್ಲಿನೊಡನೆ ತಾವೂ ಗಮಿಸಿ, ಹಾದಿಯಲ್ಲಿ ಬರುತ್ತಿರುವ ರಾ.ಬ॥ಅರಟಾಳ ದೊರೆಗಳನ್ನು ಕಂಡು ಆನಂದಿಸಿ, ಅವರನ್ನು ಮೋಟಾರ ಸಾಯಕಲ್ಲಿನಲ್ಲಿ ಕೂಡ್ರಿಸಿಕೊಂಡು ಮಧ್ಯಾಹ್ನದ ಮೂರುಘಂಟೆಗೆ ಸರಿಯಾಗಿ ಬೈಲಹೊಂಗಲದ ಜಕಾತಿ ಕಟ್ಟೆಯ ಹತ್ತಿರ ಹೊಡೆದಿದ್ದ ಡೇರೆಗೆ ಬಂದು ತಲುಪಿದರು. ಈ ಪೂರ್ವದಲ್ಲಿಯೇ ತಾಲೂಕಿನಲ್ಲಿಯ ಯಾವತ್ತು ಗ್ರಾಮಗಳ ಮುಖಂಡರು, ಶ್ರೀಮಂತರು-ದೇಸಾಯಿ ದೇಶಪಾಂಡೆಯರು, ಇನಾಮದಾರ ಸೆಟ್ಟರು ಸಾವಕಾರರು ಮೊದಲಾದ ಸದ್ಗೃಹಸ್ಥರೂ, ರೆವಿನ್ಯೂ ಮತ್ತು ಜ್ಯುಡಿಷಿಯಲ್ ಹಾಗೂ ಪೊಲೀಸ್ ಅಧಿಕಾರಿಗಳೂ ಸಹ ಹೇಳಸಲದಳವಾದ ವಾದ್ಯಗಳಿಂದ ಯುಕ್ತವಾದ ಮೇಳಗಳಿಂದಲೂ, ಕುದುರೆಯ ಸ್ವಾರರು ಹಾಗೂ ನೈತ್ಯಾಶ್ವಗಳು ಮೊದಲಾದ ಮೆರವಣಿಗೆಗೆ ಅಂದವನ್ನು ತರತಕ್ಕ ಯಾವತ್ತು ಸಾಹಿತ್ಯಗಳಿಂದಲೂ ಕೂಡಿ, ರಾ.ಬ॥ರವರು ವಿಶ್ರಾಂತಿಯನ್ನು ಪಡೆಯುತ್ತಿದ್ದ ಡೇರಾದ ಹತ್ತರ ಸನ್ನದ್ಧರಾಗಿ ನಿಂತಿದ್ದರು. ೧೦ ನಿಮಿಷಗಳನಂತರ ವಿಶ್ರಾಂತಿಯನ್ನು ಪಡೆದಿದ್ದ ರಾವಬಹಾದ್ದೂರರವರಿಗೆ ಶ್ರೀಮಂತರು ದೇಸಾಯರು ಮೊದಲಾದ ಪುರಪ್ರಮುಖರು ಅತ್ಯಾದರದಿಂದ ಸ್ವಾಗತವನ್ನು ಮಾಡಿ, ತಮ್ಮೆಲ್ಲರಿಗುಂಟಾದ ಆನಂದವನ್ನು ವ್ಯಕ್ತಗೊಳಿಸಿ, ರಾ.ಬ॥ರವರ ಕೊರಳಿಗೆ ಪುಷ್ಪಮಾಲಿಕೆಯನ್ನು ಹಾಕಿ, ಪರಿಮಳದ್ರವ್ಯವಗಳನ್ನು ಸಮರ್ಪಿಸಿದರು. ಅಲ್ಲಿ ಅಂದವಾಗಿ ಶೃಂಗರಿಸಲ್ಪಟ್ಟ ಅಶ್ವಗಳನ್ನು ಹೂಡಿದ ರಥದ ಮೇಲೆ ರಾ.ಬ॥ರವರನ್ನು ಕುಳ್ಳಿರಿಸಿ ಅದರ ಇದಿರು ಮುಖವಾಗಿ ಶ್ರೀಮಂತ ಚಚಡಿಯ ಅಣ್ಣಾಸಾಹೇಬ ನಾಯಕ ಬಹಾದ್ದೂರ ದೇಸಾಯಿಯವರನ್ನೂ, ತಲ್ಲೂರ ಶ್ರೀಮಂತ ಚಂದ್ರಪ್ಪ ದೇಸಾಯರನ್ನೂ ಕುಳ್ಳಿರಿಸಿ, ರಥಾಶ್ವಗಳನ್ನು ಬಿಚ್ಚಿ, ಜನರು ತಮ್ಮ ಪೂಜ್ಯಬುದ್ಧಿಯನ್ನು ವ್ಯಕ್ತಪಡಿಸುವದಕ್ಕಾಗಿ ತಾವೇ ಜಗ್ಗಲುಪಕ್ರಮಿಸಿದರು. ಆಗ್ಗೆ ಪೊಲೀಸರು ಪದ್ಧತಿಯ ಮೇರೆಗೆ ತಮ್ಮ ಸಲಾಮುಗಳನ್ನು ಸಮರ್ಪಿಸಿದರು. ರಾ.ಬ॥ರವರ ರಥದ ಮುಂದೆ ಕಲಿಕಾಲದ ಅವತಾರ ಪುರುಷರಲ್ಲಿ ಶ್ರೇಷ್ಠರೆನಿಸಿದ ಕೈ.ವಾ॥ ಲಿಂಗಪ್ಪ ಜಾಯಪ್ಪ ಸರದೇಸಾಯಿ ಸಂಸ್ಥಾನ ಸಿರಸಂಗಿ ಇವರ ಭಾವಚಿತ್ರವನ್ನು ಅಂದವಾಗಿ ಶೃಂಗರಿಸಿದ ಪಲ್ಲಕ್ಕಿಯಲ್ಲಿರಿಸಿದ್ದರು. ಆ ಪಲ್ಲಕ್ಕಿಯ ಮುಂದೆ ಶಾಲೆಯ ವಿದ್ಯಾರ್ಥಿಗಳು ಇಂಪಾಗಿ ರಾಷ್ಟ್ರಗೀತೆಯನ್ನು ಹಾಡುತ್ತಲೂ, ಅವರ ಮುಂಗಡೆ ಶಿವಭಜಕರ ಭಜನೆಯ ಜಯಘೋಷವು ರಾಷ್ಟ್ರಗೀತೆಯನ್ನು ಹಾಡುತ್ತಲೂ, ಅವರ ಮುಂಗಡೆ ಶಿವಭಜಕರ ಭಜನೆಯ ಜಯಘೋಷವು ನಡೆಯುತ್ತಲೂ, ಅವರ ಮುಂದೆ ಬ್ಯಾಂಡಿನವರ ಸುಸ್ವರವಾದ್ಯವು ನಡೆಯುತ್ತಲೂ, ಅವರ ಮುಂದೆ ಈ ಉತ್ಸಕ್ಕೆ ಆಗಮಿಸಿದ್ದ ಯಾವತ್ತು ಜನರ ಸಮುದಾಯವು ದಟ್ಟಣೆಯಿಂದಲೂ, ಮತ್ತು ಕುದುರೆಯ ಸ್ವಾರರು-ಕರಡಿಯರ ಮೇಳ-ಕಹಳೆ-ಕರ್ನಿಹಲಿಗೆ-ರಣಹಲಿಗೆ-ತಾಸೆ-ಭಜಂತ್ರಿ ಡೊಳ್ಳು ಮೊದಲಾದ ವಾದ್ಯಗಳನ್ನು ಬಾರಿಸತಕ್ಕ ಮಜಲಿನವರಿಂದಲೂ ಉತ್ಸವವು ಸಾಗಿಬರುತ್ತ, ಪುರದ ಹೊರಗೆ ಇರುವ ಹನುಮಂತದೇವರ ಗುಡಿಯ ಬಳಿಗೆ ಬರಲು, ಅಲ್ಲಿ ಊರಲ್ಲಿಯ ಯಾವತ್ತು ಸ್ತ್ರೀಮಂಡಳಿಯು ರಾ.ಬ॥ರವರಿಗೆ ಶ್ರೀ ಶಂಕರನು ಯಾವಾಗಲೂ ಅಯುರಾರೋಗ್ಯ ಘನಪದವಿಯನ್ನಿತ್ತು ಕಾಪಾಡಲೆಂದು ತಮ್ಮ ಅಂತಃಕರಣಪೂರ್ವಕವಾಗಿ ಬೇಡಿಕೊಂಡು, ಅವರಿಗೆ ಮಂಗಲವನ್ನು ಬಯಸುವ ಮನದಿಂದ ಕಲಶಾರತಿಯನ್ನು ಬೆಳಗಿದರು.

ಅನಂತರ ಸಂಭ್ರಮದಿಂದ ನಡೆದಿದ್ದ ಮೆರವಣಿಗೆಯು ಜುಮ್ಮಾಮಸೀದೆಯ ಮಾರ್ಗವಾಗಿ ಶ್ರೀ ಶಂಕರಲಿಂಗನ ದೇವಸ್ಥಾನದ ಹತ್ತರದಿಂದ ಪ್ಯಾಟಿಗೆ ದಯಮಾಡಿಸಿತು. ಆ ಕಾಲಕ್ಕೆ ಪುರದ ಯಾವತ್ತು ಭಾಗವು ತಳಿರು ತೋರಣ ಧ್ವಜಪತಾಕೆಗಳಿಂದ ಅಲಂಕರಿಸಲ್ಪಟ್ಟಿತ್ತು. ಈ ಶೋಭೆಯು ನೋಡುವವರಿಗೆ ಅಚ್ಚರಿಯನ್ನುಂಟುಮಾಡತಕ್ಕುದಾಗಿತ್ತು. ಅಲ್ಲಲ್ಲಿಗೆ ರಚಿಸಲ್ಪಟ್ಟಿದ್ದ ಕಮಾನುಗಳ ಮೇಲೆ ನಮ್ಮ ಬ್ರಿಟಿಷ ಸಾರ್ವಭೌಮರವರ ಹಾಗೂ ರಾ.ಬ॥ರವರ ಸ್ವಾಗತಪರ ಸ್ತುತಿಪರ-ಆಯುರಾರೋಗ್ಯಪರ-ಸ್ಫುಟವಾದ ವಾಕ್ಯಗಳು ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟಿದ್ದವು. ಮಂದಗತಿಯಿಂದ ಮೆರವಣಿಗೆಯು ನಡುಪೇಟೆಯಲ್ಲಿ

ಬಹುಪುರಾತನಕಾಲದ ಅನ್ವರ್ಥಕನಾಮವನ್ನು ಧರಿಸಿಕೊಂಡಿದ್ದ ಗೊಂಬೆಯ ಗುಡಿಯೆಂಬ ಈಶ್ವರದೇವಾಲಯದ ಹತ್ತರ ಬರಲು, ಅಲ್ಲಿಗೆ ಆಕಸ್ಮಾತ್ತಾಗಿ ಬಿಜಯಂಗೈದ ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಿಗಿಮಠ ಗೋಕಾಕ ಫಾಲ್ಸ ಇವರು ಬರಲು ರಾ.ಬ॥ರವರು ಆನಂದಿಸಿ ಇವರನ್ನು ತಮ್ಮ ಎಡಪಾರ್ಶ್ವದಲ್ಲಿ ಕುಳ್ಳಿರಿಸಿಕೊಂಡರು. ಹಾಗೆಯೇ ಮೆರವಣಿಗೆಯು ಮುಂದೆ ಸಾಗಲು, ಶ್ರೀಯುತ ಶಿವಲಿಂಗಪ್ಪಾ ಚನ್ನಪ್ಪಾ ಅಣ್ಣಾ ಮೇಟಗುಡ್ಡ ಇವರು ತಮ್ಮ ಬಾಗಿಲಮುಂದೆ ರಾ.ಬ॥ರವರ ಸುಖಾಗಮನದ ಆನಂದವನ್ನು ವ್ಯಕ್ತಪಡಿಸುವದಕ್ಕಾಗಿ ಹಾರ-ತುರಾಯಿ-ಅತ್ತರ-ಗುಲಾಬಿಗಳನ್ನು ಸಮರ್ಪಿಸಿದರು. ಕೂಡಲೆ ಯಾವತ್ತು ಜನರು ರಾ.ಬ॥ರವರ ಹೆಸರಿನ ಮೇಲೆ ತ್ರಿವಾರ ಜಯಘೋಷವನ್ನು ಮಾಡಿದರು. ಅನಂತರ ಸಮಾರಂಭವು ಹಾಗೆಯೇ ರಾವಸಾಹೇಬ ಮಲ್ಲನಾಯಕ ಪಾಟೀಲ ಇವರ ಮನೆಯ ಮುಂದೆ ಹಾಯ್ದು, ಮೊದಲಿಗೆ ನೇಮಕಮಾಡಿದ್ದ ಶ್ರೀಮಂತ ಶೇಖರಪ್ಪ ವಿರೂಪಾಕ್ಷಪ್ಪಾ ಅಣ್ಣಾ ಮೇಟಗುಡ್ಡ ಇವರ ಹೊಸ ಜಿನ್ನಿಂಗ್ ಫ್ಯಾಕ್ಟರಿಯಲ್ಲಿಯ ಭವ್ಯವಾದ ಬಂಗಲೆಗೆ ಸಂಜೆಯ ಏಳು ಗಂಟೆಗೆ ತಲುಪಿತು. ಈ ಸಮಾರಂಭಕ್ಕೆ ಬಂದ ಸ್ಥಳಿಕ ಮತ್ತು ಪರಸ್ಥಳಿಕ ಯಾವತ್ತು ಜನಪರಿಗಣನೆಯು ಅಜಮಾಸು ೩೦-೩೫ ಸಾವಿರವಿತ್ತು. ಊರನ್ನು ಶೃಂಗರಿಸಲಿಕ್ಕೆ ಬೈಲಹೊಂಗಲದ ಒಬ್ಬ ತೋಟಿಗನು ತನ್ನ ಇಡೀ ಬಾಳೆಯತೋಟನ್ನೇ ಕೊಟ್ಟಿದ್ದನು. ಇವನು ಜಾತಿಯಲ್ಲಿ ಮಹಮ್ಮದೀಯನಿದ್ದನು. ಈತನ ಮನಸ್ಸು ಎಷ್ಟು ಉದಾರವಾಗಿರುವದೆಂಬದನ್ನು ಬೇರೆ ಹೇಳುವ ಅಗತ್ಯವಿಲ್ಲ. ರಾ.ಬ॥ರವರು ಬಿಡಾರಕ್ಕೆ ಬಂದ ಕೂಡಲೆ ಯಾವತ್ತರು ಕರತಾಡನದಿಂದ ತಮ್ಮ ವಂದನೆಗಳನ್ನರ್ಪಿಸಿ, ಸಮೀಪದ ಗ್ರಾಮಗಳ ಜನರು ತಮ್ಮ ತಮ್ಮ ಗ್ರಾಮಗಳಿಗೆ ದಯಮಾಡಿಸಿದರು. ಉಳಿದ ಯಾವತ್ತು ಜನರು ರಾ.ಬ॥ರವರ ಸಮ್ಮುಖದಲ್ಲಿ ನಡೆದ ಗಾಯನ ಸಮಾರಂಭವನ್ನು ನೋಡುವದಾಯಿತು. ಅದು ರಾತ್ರಿ ೯ ಘಂಟೆಗೆ ಸರಿಯಾಗಿ ಮುಗಿಸಲ್ಪಟ್ಟು, ಅಲ್ಲಿ ಕೂಡಿದ ಯಾವತ್ತು ಸನ್ಮಾನಿತ ಜನರಿಗೆ ಪಾನಸುಪಾರಿಯು ಹಂಚಲ್ಪಟ್ಟು, ಪುರಪ್ರಮುಖರು ಮತ್ತು ಅಧಿಕಾರಿಗಳು ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಆ ಕಾಲಕ್ಕೆ ಕಾಲಾವಧಿಯಾಗಿ ಉಳಿದ ಪರಸ್ಥಳದ ಜನರ ಸಲುವಾಗಿ ತಯಾರಿಸಲ್ಪಟ್ಟ ಭೋಜನ ಗೃಹಕ್ಕೆ ಉಳಿದ ಯಾವತ್ತು ಜನರು ತೆರಳಿದರು. ಆ ಭೋಜನ ಸಮಾರಂಭಕ್ಕೆ ಕೂಡಿದ್ದ ಜನರ ಸಮೂಹವು ಎರಡು ಸಾವಿರದ ವರೆಗೆ ಇತ್ತು. ರಾತ್ರಿ ಊರಲ್ಲಿ ಪ್ರತಿಯೊಬ್ಬರ ಬಾಗಿಲಲ್ಲಿಯೂ ಮೇಲುಪ್ಪರಿಗೆಗಳ ಮೇಲೂ, ದೇವಾಲಯಗಳಲ್ಲಿಯೂ ದೀಪೋತ್ಸವವು ಮಾಡಲ್ಪಟ್ಟಿತ್ತು. ರಾ.ಬ॥ರವರು ಬಿಡಾರಮಾಡಿದ ಸ್ಥಳದಿಂದ ನೋಡಿದರೆ ಪುರವು ದೀಪೋತ್ಸವದಿಂದ ಅಲಂಕೃತವಾಗಿದ್ದ ಶೋಭೆಯು ಅಪ್ರತಿಮವಾಗಿ ತೋರುತ್ತಿತ್ತು.

ಮರುದಿವಸ ಅಂದರೆ ತಾರೀಖು ೨೬ನೇ ಅಕ್ಟೋಬರ್ ಸನ್ ೧೯೧೩ ರವಿವಾರ ದಿವಸ ಮಧ್ಯಾಹ್ನದ ೧ ಘಂಟೆಯ ಸುಮಾರಕ್ಕೆ ಈ ತಾಂಬೂಲ ಸಮಾರಂಭಕ್ಕಾಗಿ ಆಮಂತ್ರಿತರಾದ ನಾಮದರಾ ಮೆ॥ಶೆಫರ್ಡದೊರೆಗಳೂ ಮೆ॥ಕಲೆಕ್ಟರ ಬ್ರಾವುನ್ ದೊರೆಗಳೂ, ಡಿಸ್ಟ್ರಿಕ್ಟ ಜಜ್ಜರಾದ ಕ್ರಂಪ್ ದೊರೆಗಳೂ ಮುಂಬಯಿ ಹಾಯಕೋರ್ಟ ಜಜ್ಜರಾದ ನಾಮದಾರ ಜಸ್ಟೀಸ್ ಎನ್.ಎಲ್. ಬ್ಯಾಚಲರ ಸಾಹೇಬ ಬಹಾದ್ದೂರರವರೂ, ಮೆ॥ಕೊವ್ಹೆನ್ ಸಾಹೇಬ ಬಹಾದ್ದೂರರವರೂ, ಆ ॥ಕಲೆಕ್ಟರರಾದ ಮೆ॥ಮ್ಯಾಕೆಸಾಹೇಬ ಬ॥ರವರೂ ದಯಮಾಡಿಸಿದರು. ಬೈಲಹೊಂಗಲದ ಮಹಮ್ಮದೀಯ ಜನರು ನಾಮದಾರ ಶೆಫರ್ಡದೊರೆಗಳಿಗೆ ತಮ್ಮ ಮಸೀದೆಯಲ್ಲಿ ಪಾನಸುಪಾರಿಯನ್ನು ಮಾಡುವ ಸಿದ್ಧತೆಯನ್ನಿಟ್ಟು ಕರಕೊಂಡು ಹೋಗಲಾಗಿ, ಎಲ್ಲ ಅಧಿಕಾರಿಗಳೂ ಅಲ್ಲಿಗೆ ಗಮಿಸಿ ಅಲ್ಲಿಯ ಪಾನಸುಪಾರಿಯನ್ನು ನೆರವೇರಿಸಿಕೊಂಡು, ಎಲ್ಲರೂ ಕೂಡಿ ರಾ.ಬ॥ಅರಟಾಳಸಾಹೇಬರೊಂದಿಗೆ ಶ್ರೀಯುತ ಚತುರ್ಭುಜ ಮುರಾರ್ಜಿಯವರ ಜಿನ್ನಿಂಗ ಮತ್ತು ಪ್ರೆಸ್ಸಿಂಗ ಫ್ಯಾಕ್ಟರಿಯ ಕಂಪೌಂಡಿನಲ್ಲಿ ಹೊಸದಾಗಿ ರಚಿಸಿದ್ದ ಭವ್ಯವಾದ ಮಂದಿರಕ್ಕೆ ಬಂದರು. ಮಹಾದ್ವಾರದ ಬಳಿಗೆ ಇವರು ಬರುತ್ತಲೆ ಬ್ಯಾಂಡು ಮೊದಲಾದ

ಯಾವತ್ತು ವಾದ್ಯಗಳು ರಭಸದಿಂದ ಭೋರ್ಗರೆದವು. ಆ ಕಾಲಕ್ಕೆ ಪುರಪ್ರಮುಖರು ಮತ್ತು ರಾವಸಾಹೇಬ ಮಲ್ಲನಾಯಕ ಪಾಟೀಲ ಮೊದಲಾದ ಸ್ಥಳ ಪರಸ್ಥಳದ ಮುಖಂಡರು, ಅತಿಥಿಗಳಾಗಿ ಬಂದ ಐರೋಪ್ಯಮಹಾನುಭಾವರಿಗೂ ಮತ್ತು ರಾವಬಹಾದ್ದೂರರವರಿಗೂ ಸನ್ಮಾನಯುಕ್ತ ಪ್ರೇಮಪೂರ್ವಕ ಸ್ವಾಗತಮಾಡಿ, ಸಭಾಮಂಟಪಕ್ಕೆ ಕರೆತಂದು ಉಚಿತಾಸನಗಳಲ್ಲಿ ಕಳ್ಳಿರಿಸಿದರು. ಸಭಾಮಂದಿರವು ರಾಜಸಭೆಯಂತೆ ಬಹು ಅಂದವಾಗಿ ಅಲಂಕರಿಸಲ್ಪಟ್ಟಿದ್ದು, ಶ್ರೋತೃಸಮಾಜದಿಂದ ತುಂಬಿ ತುಳುಕುತ್ತಲಿತ್ತು.

ನಾಮದಾರ ಮೆ||ಶೆಫರ್ಡದೊರೆಗಳು ಅಗ್ರಾಸನದಲ್ಲಿ ರಾವಬಹಾದ್ದೂರ ಅರಟಾಳ ಸಾಹೇಬರವರನ್ನು ಕುಳ್ಳಿರಿಸಿ, ತಾವು ಅವರ ಬಲಭಾಗಕ್ಕೆ ವಿಶ್ರಮಿಸಿದ್ದರು. ಎಡಭಾಗಕ್ಕೆ ನ್ಯಾಯಮೂರ್ತಿಗಳಾದ ನಾಮದಾರ ಬ್ಯಾಚಲರ್ ಸಾಹೇಬ ಬಹಾದ್ದೂರರವರೂ ಮೆ. ಆಯ್.ಸಿ.ಎಸ್. ಕ್ರಂಪ ದೊರೆಗಳೂ, ಮೆ. ಕಲೆಕ್ಟರ ಬ್ರಾವುನ್ ದೊರೆಗಳೂ, ಮೆ. ಕೊವ್ಹೆನ್ ಸಾಹೇಬ ಬಹಾದ್ದೂರರವರೂ, ಮೆ. ಮ್ಯಾಕೆಸಾಹೇಬ ಬಹಾದ್ದೂರರವರೂ ಕೂತುಕೊಂಡಿದ್ದರು. ಬಲಭಾಗಕ್ಕೆ ಶ್ರೀಮಂತ ಚಂದ್ರಪ್ಪ ದೇಸಾಯರೂ, ಬೆಳಗಾವ ಜಿಲ್ಲೆಯ ಡಿಪುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಖಾನಸಾಹೇಬ ಅತಾರಸಾಹೇಬ ಬ||ರವರೂ, ಅವರಾಚೆಗೆ ಎಡಬಲಗಳಲ್ಲಿ ಡಿ.ಡಿ. ಕಲೆಕ್ಟರರೂ ಮಾಮಲೇದಾರರೂ ಶಿರಸ್ತೇದಾರರೂ ಸಬ್‌ಜಜ್ಜ ಮೊದಲಾದವರೂ ಸಮ್ಮುಖದಲ್ಲಿ ಸೆಟ್ಟರೂ, ಸಾವಕಾರರೂ, ಅಪರಿಮಿತ ಪ್ರೇಕ್ಷಕಜನ ಸಮೂಹವೂ ವಿಶ್ರಮಿಸಿಕೊಂಡಿತ್ತು. ಸಭೆಯ ಬೈಠಕು ದರ್ಶನೀಯವಾಗಿತ್ತು. ಸಭೆಯ ಕಾರ್ಯವು ೨ ಘಂಟೆಯ ಸುಮಾರಕ್ಕೆ ಆರಂಭವಾಯಿತು. ಮೊದಲು ಗಾಯಕರಿಂದ ಸ್ವಾಗತಪದ್ಯಗಳು ಸಂಗೀತದಲ್ಲಿ ರಮಣೀಯವಾಗಿ ಹಾಡಲ್ಪಟ್ಟವು. ಅನಂತರ ಮಿ. ಧೋಂಡೋಪಂತ ವಕೀಲ ಬೈಲಹೊಂಗಲ ಇವರು ಇಂಗ್ಲೀಷಿನಲ್ಲಿ ಸ್ವಾಗತಪರ ಭಾಷಣಮಾಡಿದರು. ಬಳಿಕ ಬೈಲಹೊಂಗಲ ಜಾಕ್ಸನ್ ಮೆಮೋರಿಯಲ್ ಸ್ಕೂಲಿನ ವಿದ್ಯಾರ್ಥಿಗಳಿಂದ ಇಂಗ್ಲೀಷಿನಲ್ಲಿ ಒಂದು ಫಾರ್ಸು ಅಭಿನಯಿಸಲ್ಪಟ್ಟಿತ್ತು. ಅನಂತರ ಬೆಳಗಾವಿಯ ಮಿ. ಮೊಹದೀನಸಾಹೇಬ ಕಲಾಯಿಗಾರ ಇವರು ಉರ್ದುಭಾಷೆಯಲ್ಲಿ ಅರಟಾಳಸಾಹೇಬರವರ ಕರ್ತವ್ಯದ ವಿಷಯವಾಗಿ ಸರಸವಾಗಿ ಭಾಷಣಮಾಡಿದರು. ಆಮೇಲೆ ಅಪ್ರಾಪ್ತವಯಸ್ಕನಾದ ೭ ವರ್ಷದ ಬಾಲಕ ಚನ್ನಬಸವ ಬಸವಾರ್ಯ ಹಿರೇಮಠ ವಿದ್ಯಾರ್ಥಿ ಕಿತ್ತೂರ ಕನ್ನಡ ಶಾಳಾ ನಂಬರ ೧ ಈತನು ಕನ್ನಡದಲ್ಲಿ ದಿಟ್ಟತನದಿಂದ ವಿದ್ಯೆಯ ಮಹತ್ವವನ್ನು ಅರುಹಿ, ಆ ವಿದ್ಯೆಯ ಫಲಿತಾಂಶದಿಂದ ರಾ.ಬ||ರವರು ಹೊಂದಿದ ಘನತೆಯ ನಿದರ್ಶನವನ್ನು ಸಭಾಸದರ ಮನದಟ್ಟಾಗುವಂತೆ ಭಾಷಣಮಾಡಿದುದು, ನೆರೆದಿದ್ದ ಯಾವತ್ತೂ ಜನರಿಗೆ ಬಹು ಆಶ್ಚರ್ಯವನ್ನುಂಟು ಮಾಡಿತು. ಅನಂತರ ಮಿ. ಪಂಡಿತಪ್ಪ ರಾಯಪ್ಪ ಚಿಕ್ಕೋಡಿ ಬಿ.ಎ. ಗೋಕಾಕ ಇಂಗ್ಲೀಷಸ್ಕೂಲ ಹೆಡ್‌ಮಾಸ್ತರ ಇವರು ಇಂಗ್ಲೀಷಿನಲ್ಲಿ ಬಹು ಸರಸವಾದ ಭಾಷಣ ಮಾಡಿದರು. ಆ ಮೇಲೆ ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಸ್ಕೂಲಮಾಸ್ತರ ಕಿತ್ತೂರ ಶಾಳಾ ನಂಬರ ೧ ಇವರು ರಾ.ಬ||ರವರ ನ್ಯಾಯಪ್ರಾಧಾನ್ಯವಾದ ಆಡಳಿತವನ್ನೂ ಅವರ ದರ್ಪವನ್ನೂ ಬಗೆಬಗೆಯ ಉದಾಹರಣೆಗಳನ್ನು ಕೊಟ್ಟು, ಸಭಾಸದರ ಚಿತ್ತವು ತಲ್ಲೀನವಾಗುವಂತೆ ವರ್ಣಿಸಿದರು. ಇವರ ಭಾಷಣವು ವಾಚಕಮಹಾಶಯರ ಮನಸ್ಸನ್ನಾದರೂ ಸಂತೋಷಪಡಿಸಬಹುದೆಂದು ಅದನ್ನು ಇಲ್ಲಿ ಕೊಡುತ್ತೇವೆ.

ಬಸವಾರ್ಯರ ಭಾಷಣವು

"ಪ್ರೆಸಿಡೆಂಟರೆ, ಸಭ್ಯರೆ, ಈ ವರೆಗೆ ಎಷ್ಟೋ ಜನ ವ್ಯಾಖ್ಯಾತರು ರಾ.ಬ||ಅರಟಾಳ ಸಾಹೇಬರ ಚರಿತ್ರವನ್ನು ಅವರ ಜನ್ಮಾರಭ್ಯ ಸಾದ್ಯಂತವಾಗಿ ಹೇಳಿದರು. ಆದರೆ ನಾನು ಈಗ ಇವರ ಜೀವನಚರಿತ್ರದಲ್ಲಿ

ಕಂಡು ಬಂದ ಒಂದೆರಡು ವಿಚಿತ್ರ ಸಂಗತಿಗಳನ್ನೂ, ಅವುಗಳೊಡನೆ ಅವರ ಕರ್ತೃತ್ವ ಶಕ್ತಿಯನ್ನೂ ಕುರಿತು ಯಥಾಮತಿ ಸ್ವಲ್ಪ ಭಾಷಣ ಮಾಡಬೇಕೆಂದು ಇಚ್ಛಿಸುವೆನು. ಇವರಲ್ಲಿ ಸ್ವಾಭಾವಿಕ ಕರ್ತೃತ್ವಶಕ್ತಿಯು "ರುದ್ರಗೌಡ" ಎಂಬ ಇವರ ಹೆಸರಿನಲ್ಲಿಯೇ ಗರ್ಭೀಭೂತವಾಗಿರುವದೆಂದು ಒಬ್ಬ ಕವಿಯು ಅನ್ನುತ್ತಾನೆ. ಹ್ಯಾಗಂದರೆ-

ಉತ್ಕೋಚಗ್ರಾಹಿಣಾಂ ರೌದ್ರಾ।ನಿಷ್ಪೃಹಾಣಾಂ ಗುಡೋಪಮಾಃ
ಏತೇ ಚಾನ್ವರ್ಥನಾಮಾನೋ।ರುದ್ರಗೌಡಾ ಮಹಾಶಯಾಃ ॥೧॥

ಅಂದರೆ ಇವರು ಲಂಚಗುಳಿಗಳಾದ ದುಷ್ಟಜನರಿಗೆ ರೌದ್ರರೂಪಿಗಳಾಗಿಯೂ ನಿಷ್ಪೃಹಿಗಳಾದ ಸಜ್ಜನರಿಗೆ ಬೆಲ್ಲಸಕ್ಕರೆಗಳಂತೆ ಸೌಮ್ಯಸ್ವರೂಪಿಗಳಾಗಿಯೂ ಇದ್ದುದರಿಂದ, ರೌದ್ರಶಬ್ದದ ಮೂಲರೂಪವಾದ 'ರುದ್ರ' ಎಂಬ ಶಬ್ದಕ್ಕೆ 'ಗುಡ' ಶಬ್ದದ ವೃದ್ಧಿರೂಪವಾದ ಗೌಡಶಬ್ದ ಪರವಾಗಿ 'ರುದ್ರಗೌಡ' ಎಂಬ ನಾಮವು ಇವರಿಗೆ ದೈವಯೋಗದಿಂದಲೇ ಏರ್ಪಟ್ಟಿರುವರೆಂಬದಕ್ಕೆ ಏನೇನೂ ಸಂದೇಹವಿಲ್ಲ. ಇವರಿಗೆ ಈ ಹೆಸರು ಅನ್ವರ್ಥವಾಗಿರುವದು. ಅಂದರೆ ಹೆಸರಿಗೆ ತಕ್ಕಂತೆ ಇವರಲ್ಲಿ ಕರ್ತೃತ್ವಶಕ್ತಿಯು ನೈಸರ್ಗಿಕವಾಗಿ ನೆಲೆಗೊಂಡಿರುವದು. ಈ ಮಹನೀಯರು ದುರ್ಜನರ ಧೈರ್ಯವು ದ್ರವಿಸಿ ಹೋಗುವಂಥ ದರ್ಪದಿಂದಲೂ ಗರ್ವಿಷ್ಠರು ಗರ್ಭಗಳಿತರಾಗುವಂಥ ಗಾಂಭೀರ್ಯದಿಂದಲೂ ಲಂಚಗುಳಿಗಳು ಪಂಚತ್ವವನ್ನು ಹೊಂದುವ ಹಂಚಿಕೆಯಿಂದಲೂ, ನ್ಯಾಯಮೂರ್ತಿಗಳು ನಿಬ್ಬೆರಗಾಗುವಂತಹ ನಿರ್ಣಯಗಳಿಂದಲೂ ಚತುರಪುರುಷರ ಚಿತ್ತಾಕರ್ಷವಾಗುವಂಥ ಚಾತುರ್ಯದಿಂದಲೂ ರಾಜಾಧಿರಾಜರು ರಮನೀಷರಾಗುವಂಥ ರಾಜನಿಷ್ಠೆಯಿಂದಲೂ, ಸತ್ಪುರುಷರು ಸಂತೋಷಪಡುವಂಥ ಸತ್ಯಸಂಧತೆಯಿಂದಲೂ, ಆಬಾಲವೃದ್ಧರು ಆಶ್ಚರ್ಯಪಡುತ್ತಿರುವಂಥ ಅಸಾಧಾರಣ ಬುದ್ಧಿಯಿಂದಲೂ, ತಾರ್ಕಿಕರು ತಲೆದೂಗುವಂಥ ತಂತ್ರದಿಂದಲೂ, ಸರಕಾರೀ ಕೆಲಸವನ್ನು ಮಾಡುತ್ತ ಬಂದಿರುತ್ತಾರೆಂತಲೇ ಇವರಿಗೆ ಇಷ್ಟು ಘನತೆಯು ಪ್ರಾಪ್ತವಾಗಿರುವದು. ಇವರು ಎಷ್ಟು ಲೋಕಪ್ರಿಯರಾಗಿರುತ್ತಾರೆಂಬ ವಿಷಯವನ್ನು ಅತಿವೈಭವದಿಂದಾದ ಇವರ ಅನೇಕ ಪಾನಸುಪಾರಿ ಸಮಾರಂಭಗಳೇ ಸಿದ್ಧಮಾಡಿಕೊಡುತ್ತವೆ.

ಸನ್ ೧೯೧೨ನೇ ಇಸವಿಯ ಜುಲೈ ತಿಂಗಳ ೩ನೇ ತಾರೀಖಿನ ದಿವಸ ಬೆಳಗಾವಿಯಲ್ಲಾದ ದರ್ಬಾರದಲ್ಲಿ ನಾಮದಾರ ಮೆ॥ಕಮಿಶನರ ಸಾಹೇಬ ಬ॥ರವರ ಮುಖದಿಂದ ಹೊರಬಿದ್ದ "ರಾ.ಬ॥ರುದ್ರಗೌಡರ ಹೆಸರು ಬಹುತರ ಕರ್ನಾಟಕದ ಪ್ರತಿಯೊಂದು ಮನೆಯಲ್ಲಿ ಗೊತ್ತಿರುತ್ತದೆ" ಎಂಬ ಮಾತು ಅಕ್ಷರಶಃ ನಿಜವಾಗಿರುತ್ತದೆ. ಯಾಕಂದರೆ ಒಬ್ಬ ಬೀಸುವ ಹೆಣ್ಣುಮಗಳು "ಹರಿವ ಹಾವಿನ ಗಂಡ।ಉರಿವ ಕಿಚ್ಚಿನ ಗಂಡ ದರುಳರಾ ಗಂಡ ರುದ್ರಗೌಡ॥" ಇತ್ಯಾದಿ ಹಾಡುತ್ತಿರುವದನ್ನು ನಾನು ಪ್ರತ್ಯಕ್ಷ ಕೇಳಿದ್ದೇನೆ. ಇದು ಹೆಣ್ಣುಮಕ್ಕಳ ಬೀಸುವ ಹಾಡಾಗಿದ್ದರೂ ಇದರಲ್ಲಿ ರಾ.ಬ॥ರವರ ಗುಣಗಳನ್ನು ಸ್ಪಷ್ಟೀಕರಿಸುವ ಅರ್ಥಗಾಂಭಿರ್ಯವಿರುತ್ತದೆ. ಅಂದರೆ ಕೇವಲ ವಿಷಪುಂಜವಾದ ಹಾವಿನಂತಿರುವ ದುಷ್ಟರಿಗೂ, ಉರಿಯುತ್ತಲಿರುವ ಗರ್ವಿಷ್ಠರಿಗೂ ರುದ್ರಗೌಡರು ಗಂಡರೆಂಬ ಮಾತು ಆ ಹೆಣ್ಣುಮಗಳ ಮಂಜುಳವಾಣಿಯಿಂದ ಸಹಜವಾಗಿ ಹೊರಡುವದಾಯಿತು. ಇದೇ ಅರ್ಥವುಳ್ಳ ಇವರ ಪರಾಕನ್ನು ನಿಪ್ಪಾಣಿಯಲ್ಲಾದ ಇವರ ಸುಖಾಮನಗದ ಮೆರವಣಿಗೆಯಲ್ಲಿ ನಾನು ಕೇಳಿರುವೆನು. ಅದೇನೆಂದರೆ:

ಹಿಂಡು ದುರುಳರ ಗಂಡ, ಪುಂಡ ಪ್ರಚಂಡ, ಖಳಕಪಟ ಕೋದಂಡ,
ಖೂಳಜನ ಮದಖಂಡ, ಸಜ್ಜನ ಶ್ರೀಖಂಡ, ಕೃತಕತರು ಕರಿಶುಂಡ,
ದುಷ್ಟಹರ ದೋರ್ದಂಡ, ವೀರಶೈವಮುಖಂಡ, ಸದ್ಗುಣಸಮುದ್ರ
ಶ್ರೀಮತ್ ರುದ್ರಗೌಡಭೂಪತೇ ಬಹು ಪರಾಕೆಂದೂ

ಮತ್ತೆ

ಶಿಷ್ಟ ಸಜ್ಜನಪಾಲ, ದುಷ್ಟ ದುರ್ಜನಶೂಲ, ಸತ್ಯ ಸತ್ಕವಿಲೋಲ,
ಶ್ರೇಷ್ಠ ಸದ್ಗುಣಜಾಲ, ಕಪಟ ಕಾರ್ಮುಕಕಾಲ, ನಿತ್ಯನಿರ್ಮಲಶೀಲ,
ವೀರಶೈವ ವಿದ್ಯಾವಾರ್ಧಿವರ್ಧನ ಚಂದ್ರ, ಸದ್ಗುಣಸಾಂದ್ರ ಶ್ರೀಮತ್
ರುದ್ರಗೌಡ ಭೂಪಾಲ ಬಹುಪರಾಕ್

ಎಂದೂ ಸಾರುತ್ತಿದ್ದರು. ಒಂದು ಕಡೆಯಲ್ಲಿ ಇವರು ಕಪಟ ಜನರೆಂಬ ವೃಕ್ಷಗಳ ಮೂಲಕ್ಕೆ ಕುಠಾರ ಸ್ವರೂಪರೂ ಕ್ರೂರರ ಕೆಟ್ಟ ಕೃತ್ಯಗಳನ್ನು ಕಿತ್ತು ಹಾಕುವದರಲ್ಲಿ ಕೇವಲ ಸಮರ್ಥರೂ ಎಂದು ಇವರನ್ನು ಬಣ್ಣಿಸಿರುವರು. ಸಾರಾಂಶ, ಇವರು ದುಷ್ಟರ ದಲನಮಾಡಿ ಶಿಷ್ಟರನ್ನು ಪಾಲನೆ ಮಾಡುವದರಲ್ಲಿ ಒಳ್ಳೇ ದಕ್ಷರೆಂಬ ಮಾತು ಶತಶಃ ಸಿದ್ಧವಾಗುತ್ತದೆ. ಇವರು ಜನ್ಮತಃ ಸತ್ಯಪ್ರಿಯರಾಗಿರುವದರಿಂದ, ರಾಜಹಂಸವು ಬೆರಿಸಿಟ್ಟ ಹಾಲುನೀರನ್ನು ತನ್ನ ಹುಟ್ಟುಗುಣದಿಂದ ವಿಂಗಡಿಸಿ, ನೀರನ್ನು ಬಿಟ್ಟು ಹಾಲನ್ನೇ ಹೇಗೆ ಸ್ವೀಕರಿಸುವದೋ ಅದರಂತೆ ರಾ.ಬ||ರವರು ತಮ್ಮ ನ್ಯಾಯನಿರ್ಣಯದಲ್ಲಿ ನೈಸರ್ಗಿಕವಾದ ಜಾಣ್ಮೆಯಿಂದ ಸತ್ಯಾಂಶವನ್ನೇ ಹೊರಗೆಡವಿ ಅಸತ್ಯವನ್ನು ಆ ಕ್ಷಣವೇ ಬೈಲಿಗೆ ತರುವರು. ಇದು ಎಲ್ಲರ ಅನುಭವಕ್ಕೆ ಬಂದ ಮಾತೇ ಸರಿ. ಇವರು ಸತ್ಯಾಂಶವನ್ನು ಹೊರಗೆಡುವದಕ್ಕೆ ಎಷ್ಟು ಮಾತ್ರವೂ ಬೇಸರಿಯುತ್ತಿದ್ದಿಲ್ಲ. ಇವರ ಅನಿವಾರ ಕೆಲಸವನ್ನು ಕಣ್ಣಾರೆ ಕಂಡ ಒಬ್ಬ ಕವಿಯು ಅನ್ನುವದೇನಂದರೆ-

ಕಂದ|| ಬೇಸರವಿಲ್ಲದೆ ಬಡವರ|ಸಾಸಿರ ಬಯಕೆಗಳ ಕೇಳಿಕೊಳ್ವರ್ ನಲುವಿಂ ||
ದಾಸರಕೊಡುವರ್ ಹಿತವೆನ್ನೈಸಲೆಯೆಸಗುವರು ಪೂರ್ಣ ತನುಮನಧನದಿಂ ||೧||

ಅಂದರೆ ಬೇಸರವಿಲ್ಲದೆ ಬಡವರ ಸಾವಿರಾರು ಸಂಗತಿಗಳನ್ನು ಕೇಳಿ, ಅವರಿಗೆ ಆಶ್ರಯಕೊಟ್ಟು ಆ ಬಡವರನ್ನು ರಕ್ಷಿಸುವರೆಂಬ ಮಾತು ವಿಜಾಪುರ ಜಿಲ್ಲೆಯಲ್ಲಿ ದುಷ್ಕಾಳ ಸಮಯದಲ್ಲಿ ಬಡಜನರ ಸಂರಕ್ಷಣಾರ್ಥ ಇವರು ಎಷ್ಟು ಕಷ್ಟಪಟ್ಟರೆಂಬ ಸಂಗತಿಯಿಂದ ಸ್ಪಷ್ಟವಾಗುವದು. ಹೀಗಿದ್ದು "ರುದ್ರಗೌಡರು ಬಹಳ ಕೆಟ್ಟವರು" ಎಂಬ ಮಾತು ಕೆಲವರ ಮುಖದಿಂದ ಹೊರಬೀಳುತ್ತಿರುವದು. ಆದರೆ ಇವರು ಕೆಟ್ಟವರೆಂದರೆ ಯಾರಿಗೆ ಕೆಟ್ಟವರು? ದುಷ್ಟರಿಗೆ ಮಾತ್ರ ಕೆಟ್ಟವರು, ಸಜ್ಜನರಿಗೆ ನೆಟ್ಟಗುಳ್ಳವರು. ದುಷ್ಟರ ದಲನಕ್ಕಾಗಿಯೇ ಇವರು ಹುಟ್ಟಿ ಬಂದಿರುವರೋ ಏನೋ ಎಂದು ಕೆಲ ಭಾವಿಕ ಜನರು ಅನ್ನುವವರಾಗಿದ್ದರು. ಯಾಕಂದರೆ-

ಕ್ಷುದ್ರಜನಛಿದ್ರನಿದ್ರೋ|ನ್ನಿದ್ರಾ ಬ್ರಹ್ಮಾಂಡಭೇದ ಮೇಘೋದ್ರಾವರ್ ||
ರುದ್ರಾವತಾರ ರೂಪರ್|ಭದ್ರಪ್ರದ ರುದ್ರಗೌಡ ನಾಮವಿಶೇಷರ್||೧||

ಅಂದರೆ ಕ್ಷುದ್ರಜನರ ಛಿದ್ರತನವೆಂಬ ನಿದ್ರೆಯನ್ನು ಹೋಗಲಾಡಿಸಲಿಕ್ಕೆ, ಮುಂಗಾರೀ ಗುಡುಗಿನ ಗರ್ಜನೆಯಂತೆ ದರ್ಪವುಳ್ಳ ರುದ್ರಾವತಾರವೇ ರುದ್ರಗೌಡರೆಂಬ ಹೆಸರಿನಿಂದ ಧಾರುಣಿಗೆ ದಯಮಾಡಿಸಿತೋ ಏನೋ ಎಂಬಂತೆ ಕವಿಯು ಇವರ ದರ್ಪವನ್ನು ಉತ್ಪ್ರೇಕ್ಷಿಸಿದ್ದಾನೆ. ಇವರು ಮಾಡಿದ ಒಂದೊಂದು ನ್ಯಾಯ ನಿರ್ಣಯವನ್ನು ಉದಾಹರಣಾರ್ಥವಾಗಿ ಇಲ್ಲಿ ಹೇಳಿದರೆ ಅಪ್ರಾಸಂಗಿಕವಾಗಲಾರದೆಂದು ತಿಳಿದು, ಅದರ ಸಾರವನ್ನು ಸ್ವಲ್ಪದರಲ್ಲಿ ಹೇಳುವೆನು.

ಇವರ ಭಾಗದಲ್ಲಿಯ ಪರಸ್ವತ್ತಾಪದಾರಿಯಾದ ಒಬ್ಬ ಪ್ರಬಲ ಮನುಷ್ಯನು, ಒಬ್ಬ ಬಡರೈತನ ಉತ್ತಮವಾದ ಜಮೀನಿನ ಮೇಲೆ ಕಣ್ಣಿಟ್ಟು ಅದನ್ನು ಎತ್ತಿಹಾಕಬೇಕೆಂಬ ದುಷ್ಟಹೇತುವಿನಿಂದ ಸದರೀ ಜಮೀನು

ನನ್ನದು, ನಾನೇ ಮಾಡಿದ್ದೇನೆ ಎಂದು ಸಾಧಿಸಿ, ಅದಕ್ಕನುಸಾರವಾಗಿ ಮಾಡತಕ್ಕ ಕಪಟಕಾರಸ್ಥಾನವನ್ನು ರಚಿಸಿ, ಅವನಿಗೆ ಅನುಕೂಲನಾಗಿರುವ ಆ ಭಾಗದ ಮಹಾಲಕರಿಗೆ ಯಥೇಷ್ಟ ಲಂಚವನ್ನು ಕೊಟ್ಟು, ಅದರಂತೆ ಸಾಕ್ಷೀ ಪುರಾವೆ ಮಾಡಿಸಿ, ಆ ಬಡವನ ಹೊಲವನ್ನು ಪೀಕ ಸಹಿತ ತನ್ನ ಕಬಜಾಕ್ಕೆ ತಕ್ಕೊಂಡ. ಪಾಪ! ಆ ಬಡರೈತನ ಬವಣೆಯನ್ನು ಯಾರು ಕೇಳಬೇಕು? ಕಡೆಗೆ ನಿರಾಧಾರಿಯಾದ ಆ ರೈತನು ಆಶ್ರಿತರ ಅಮರವೃಕ್ಷ ಎಂದು ಅನ್ನಿಸಿಕೊಳ್ಳುವ ಅರಟಾಳ ಸಾಹೇಬರಿಗೆ ಆದ ಸಂಗತಿಯನ್ನು ಅರ್ಜಿಯ ಮೂಲಕ ಅರಿಕೆ ಮಾಡಿಕೊಂಡನು. ರಾ.ಬ॥ರವರು ಈ ಸಂಗತಿಯನ್ನು ಬೇರೆ ರೀತಿಯಿಂದ ತಾವು ಖಾತ್ರೀ ಮಾಡಿಕೊಂಡು, ಅವರ ಊರಿಗೆ ಸ್ವಾರಿ ಮುಕ್ಕಾಮು ಮಾಡಿ, ಆ ಬಾಳಪ್ಪಾ ಬಾನಿ ಎಂಬ ರೈತನ ಎತ್ತುಗಳನ್ನು ಕಣ್ಣೀ ಉಚ್ಚಿಸಿ ಬಿಡಲು, ಅವು ನೆಟ್ಟಗೆ ತಮ್ಮ ಹೊಲಕ್ಕೆ ಅಂದರೆ ಆ ತಂಟೇದ ಹೊಲಕ್ಕೆ ಹೋಗಿ, ಬೇಲೀಹಾರಿ ನಿತ್ಯದಲ್ಲಿ ಕಟ್ಟುವ ಕಣ್ಣಿಗಳ ಬಳಿಗೆ ನಿಂತುಬಿಟ್ಟವು. ಇದರಂತೆ ಆ ಪ್ರತಿವಾದಿಯ ಎತ್ತುಗಳನ್ನು ಬಿಚ್ಚಿಬಿಡಲು ಅವು ಬೇರೆ ಹಾದಿಯನ್ನು ಹಿಡಿದವು. ಈ ಮಾದರಿಯ ಅನೇಕ ಪುರಾವೆಗಳು ದೊರೆದವು. ಮುಖ್ಯವಾಗಿ ಈ ಪಶುಗಳ ಪುರಾವೆಯಿಂದ ರಾ.ಬ॥ರವರು ಆ ರೈತನ ಜಮೀನನ್ನು ಅವನಿಗೆ ಮಾಲ ಸಹಿತ ಕೊಡಿಸಿ, ಆ ಪ್ರತಿವಾದಿಯನ್ನು ಶಿಕ್ಷಿಸಿದರು. ನ್ಯಾಯವೆಂದು ಇದಕ್ಕೆ ಅನ್ನಬಹುದು. ಇವರ ಇಂಥ ಉದಾಹರಣೆಗಳು ಪುಷ್ಕಳ ಇರುವವು. ಅವೆಲ್ಲ ನಿರ್ಣಯಗಳು ದೇಶದ ಜನರನ್ನೆಲ್ಲ ಸೋಜಿಗಗೊಳಿಸುವದಲ್ಲದೆ ಆಂಗ್ಲಪ್ರಭುಗಳನ್ನೂ ಕೂಡ ಚಕಿತರನ್ನಾಗಿ ಮಾಡುವವು.

ಇನ್ನು 'ದುಷ್ಟರ ಸದ್ದು ಅಡಗಿಸಲಿಕ್ಕೆ ರುದ್ರಗೌಡರೇ ಮದ್ದು' ಎಂಬ ವಿಷಯದಲ್ಲಿ ವರ್ತಿಸಿದ ಒಂದೆರಡು ಸಂಗತಿಗಳು ಚಮತ್ಕಾರವಾಗಿ ಕಂಡು ಬಂದದ್ದರಿಂದ, ಅವನ್ನು ಸಭಾಸದರ ಗೋಚರಕ್ಕಾಗಿ ಇಲ್ಲಿ ಹೇಳುವೆನು.

ಇವರು ತಮ್ಮ ಫಿರತಿಯಲ್ಲಿ ಗೋಕಾಕ ತಾಲೂಕ ಲೋಳಸರ ಎಂಬ ಗ್ರಾಮದ ನದೀತೀರದಲ್ಲಿರುವ ಲೋಕಲ್‌ಬೋರ್ಡ ಧರ್ಮಶಾಲೆಯಲ್ಲಿ ನೇಹಮೀ ಇಳಿಯುವಂತೆ ಅಲ್ಲಿ ಮುಕ್ಕಾಮ ಮಾಡಿದಾಗ್ಗೆ, ಒಬ್ಬ ಒಕ್ಕಲಿಗರ ಹುಡುಗನು ದನಗಳನ್ನು ನೀರು ಕುಡಿಸಲಿಕ್ಕೆ ನದಿಗೆ ಬಂದಿದ್ದನು. ಆಗ ಒಂದು ಮಕರಿಗೆ ಬಂದ ಹೋರಿಯು, ತನ್ನ ಹಿಂಡಿನೊಡನೆ ಸರಿಯಾಗಿ ಹೋಗದೆ ಅಡ್ಡತಿಡ್ಡಾಗಿ ಜಿಗಿದು ಡುರಿಕೀ ಹಾಕುತ್ತ ಕೆಕ್ಕರಗಣ್ಣಿನಿಂದ ದುರುದುರು ನೋಡುತ್ತ, ಕೋಡುಗಳಿಂದ ದಿನ್ನೆಗಳನ್ನಿರಿದು ಉಸುಕು ತೂರುತ್ತ, ಕಾಲುಗಳಿಂದ ನೆಲವನ್ನು ಕೆದರುತ್ತ, ತನ್ನ ಮದದಲ್ಲಿಯೇ ಇದ್ದದ್ದನ್ನು ಕಂಡು ಆ ಒಕ್ಕಲಿಗನು "ಎಲೇ ನಿನ್ನ ಹಾರ್‍ಯಾಟೆಲ್ಲಾ ಬಿಟ್ಟಬಿಡ. ಇಲ್ಲೇ ದಂಡೀಮ್ಯಾಲೆ ರುದ್ರಗೌಡ ಅದಾನ ಗೊತ್ತಿಲ್ಲ ಹೌದ? ಅಲ್ಲಿ ಹೋದಿ ಅಂತಂದರ ನಿಂದೆಲ್ಲಾ ತಿಳಿದೀತ" ಹೀಗೆ ಅಂದನು. ಇದನ್ನು ಕೇಳಿ ಅಡಿಗೆಯವರೂ ಶಿಪಾಯರೂ ನಕ್ಕರು. ಇದರಿಂದ ಹೊರಡುವ ಸಾರವೇನಂದರೆ, ನ್ಯಾಯನಿಷ್ಠರಾದ ರುದ್ರಗೌಡರ ಮುಂದೆ ದುಷ್ಟರ ಆಟವು ಎಷ್ಟು ಮಾತ್ರವೂ ನಡೆಯುವದಿಲ್ಲೆಂಬದೇ ಸರಿ.

ಇದರಂಥಾದ್ದೇ ಇನ್ನೊಂದು ಸಂಗತಿಯು ಇದೇ ತಾಲೂಕಿನ ಕಿತ್ತೂರಲ್ಲಿ ವರ್ತಿಸಿರುವದು. ಅಲ್ಲಿ ಒಬ್ಬ ಜಂಗಲೀ ದನಗಳನ್ನು ಕಾಯುವ ಹೊಲೆಯರ ಹುಚ್ಚ್ಯಾ ಎಂಬವನು ದಿನಾಲು ಮುಂಜಾನೆ ಊರ ದನಗಳನ್ನು ಹೊಡಕೊಂಡು ಗುಡ್ಡದ ಕಡೆಗೆ ಮೇಯಿಸಲಿಕ್ಕೆ ಹೋಗುತ್ತಿರುತ್ತಾನೆ. ದನಗಳು ಹಾಯ್ದು ಹೋಗುವಾಗ ಯಾವದೊಂದು ದನವು ಎಡಬಲದಲ್ಲಿ ಹಾಕಿರುವ ಕಾಳುಕಡಿಗಳನ್ನಾಗಲಿ ಬೆಳಸನ್ನಾಗಲಿ ತಿನ್ನಲಿಕ್ಕೆ ತನ್ನ ಹಿಂಡನ್ನು ಬಿಟ್ಟು ಅಡ್ಡಹಾಯಲು, ಅದನ್ನು ಕಂಡು ಅವನು 'ಎಲಾ ನಿನ, ಮಂದೀ ಕಾಳ ತಿನಬೇಕಂತ್ಯಾ. ನಿನ್ನ ರುದ್ರಗೌಡರ ಕಡೆ ಒದೇನನ್ನೋದ ಗೊತ್ತಿಲ್ಲ ಹೌದ? ಸುಮ್ಮನ ಹಾದೀ ಹಿಡಿ, ಅದನೇನ ಮಾಡಿ, ಮದಲ ಹೊಳ್ಳ ಅಂದಾಕ್ಷಣವೇ ಅವು ಅಡ್ಡಹಾದಿಯನ್ನು ಬಿಟ್ಟು ಹಿಂಡಿನಲ್ಲಿ ಸೇರುವವು. ಒಟ್ಟಿಗೆ ಅಡ್ಡಹಾದೀ ಹಿಡಿಯುವವರನ್ನು ರುದ್ರಗೌಡರ ಮುಂದೆ ನಿಲ್ಲಿಸಿದರೆ, ಅವರು ಬಡ್ಡ ಆಗಿ ಹೋಗುವರೆಂಬ ಮಾತು ಆ ಹೊಲೆಯನಿಗೂ ಕೂಡ ಗೊತ್ತಾಗಿರುವದು. ಈ ಸಂಗತಿಯು ನನಗೆ ಸ್ವತಃ ಗೊತ್ತಿರುವದಲ್ಲದೆ ಕಿತ್ತೂರವರನ್ನು ಕೇಳಿದರೆ ಖಾತ್ರಿಯಾಗಬಹುದು.

ಇನ್ನೊಂದು ಚಮತ್ಕಾರದ ಸಂಗತಿಯೇನೆಂದರೆ, ಒಂದು ಲೈನಮಾರ್ಗದಿಂದ ನಾಲ್ವರು ತರುಣರು ಸಂಭಾಷಣ ಮಾಡುತ್ತ ಹೋಗುತ್ತಿರಲು, ಆಗ ಲಂಚದ ಪ್ರಸ್ತಾಪವು ಹೊರಟಿತು. ಅವರಲ್ಲಿ ಮೂವರು ಲಂಚಗುಳಿಗಳ ಪಕ್ಷದವರೂ, ಇನ್ನೊಬ್ಬನು ಲಂಚದ ವ್ಯಾಪಾರವು ನೆಟ್ಟಗಲ್ಲವೆಂದು ವಾದಿಸುವವನೂ ಆಗಿದ್ದನು. ಆ ಮೂವರೂ ಎಷ್ಟು ವಾದವಿವಾದ ಮಾಡಿದರು ನಾಲ್ಕನೆಯವನು ತನ್ನ ಹಟವನ್ನು ಬಿಡಲೇ ಇಲ್ಲ. ಅದಕ್ಕವರು ವಿನೋದದಿಂದ "ಇವನು ಅರಟಾಳ ರುದ್ರಗೌಡ ಆದನಲ್ಲ" ಎಂದು ಅಂದರು. ಸಾರವಿಷ್ಟೆ, ವೈಭವದ ಶೀವಿಯಲ್ಲಿ ಜನರು ಪೇಶ್ವೆ ಬಾಜೀರಾಯನ ಹೆಸರು ತೆಗೆದುಕೊಳ್ಳುವ ರೂಢಿಯಿದ್ದಂತೆ 'ಲಂಚ ತಿನ್ನಬಾರದು' ಎಂಬ ವಿಷಯದಲ್ಲಿ ರಾ.ಬ॥ರುದ್ರಗೌಡರ ಹೆಸರು ತೆಗೆದುಕೊಳ್ಳುತ್ತಾರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಈ ಸಂಭಾಷಣೆಯನ್ನು ಆ ತರುಣರ ಹಿಂದಿಂದೆ ಹೋಗುತ್ತಿರುವ ಅರಳೀಕಟ್ಟಿಯ ಸಾವಕಾರರಾದ ಮಿ॥ಹೊಳೆಬಸಪ್ಪಾ ಸಂಗಪ್ಪಾ ಸಂಗೊಳ್ಳಿ ಇವರು ಕೇಳಿರುವರು. ಬೇಕಾದವರು ಈ ಸಂಗತಿಯನ್ನು ಅವರನ್ನು ಕೇಳಿ ಖಾತ್ರೀಮಾಡಿಕೊಳ್ಳಬಹುದು.

ಇವರ ದರ್ಪಿನ ಬಗ್ಗೆ ಇನ್ನೊಂದು ಸಾಧಾರಣವಾದ ಉದಾಹರಣೆ ಇರುವದು. ಅದೇನಂದರೆ, ಸನ್ ೧೮೮೨ನೇ ಇಸವಿಯ ಫೆಬ್ರುವರಿ ತಿಂಗಳಲ್ಲಿ ಸವನೂರ ನವಾಬರಾದ ಮೆ॥ದಿಲೇರಜಂಗ ಬಹಾದ್ದೂರ ಇವರ ಲಗ್ನ ಸಮಾರಂಭವಿತ್ತು. ಆಮಂತ್ರಿತರಾದ ಮೆ॥ಕಲೆಕ್ಟರ ಸಾಹೇಬ ಧಾರವಾಡ ಇವರು ಆ ಲಗ್ನಕ್ಕೆ ಹೋಗಿದ್ದರು. ಆಗ ರುದ್ರಗೌಡರು ಅಲ್ಲಿಯ ಡಿ॥ ಚೀಟಣೀಸರಿದ್ದರು. ಕಾರಣ ಕಲೆಕ್ಟರ ಸಾಹೇಬರವರ ಸಂಗಡ ಇವರೂ ಇದ್ದರು. ಡಿ॥ ಚೀಟಣೀಸರು ಸವನೂರಲ್ಲಿಯ ವೀರಪ್ಪಾ ಪೀತಾಂಬರಸೆಟ್ಟಿ ಇವರ ಖಾಲೀಮನೆಯಲ್ಲಿ ಇಳುಕೊಂಡಿದ್ದರು. ನವಾಬಸಾಹೇಬರ ಲಗ್ನದ ಆಮಂತ್ರಣಕ್ಕನುಸರಿಸಿ ಬಂಕಾಪುರ ತಾಲೂಕಿನ ಮಾಮಲೇದಾರರೂ ಫೌಜದಾರರೂ ಸವಣೂರಿಗೆ ಬಂದಿರಲು, ಇವರಿಬ್ಬರೂ ಕೂಡಿ ಚೀಟಣೀಸರ ಭೆಟ್ಟೀ ತೆಗೆದುಕೊಳ್ಳಬೇಕೆಂದು ಅವರ ಮನೆಗೆ ಹೋದರು. ಆಗ ಚೀಟಿಸಿಸರು ಊಟಕ್ಕೆ ಕೂತಿರಲು, ಇವರಿಬ್ಬರು ಊಟವಾಗುವ ತನಕ ಮುಂದಿನ ಪಡಸಾಲೆಯಲ್ಲಿ ಕೂತಿದ್ದರು. ಕೂಡಲೆ ಊಟವು ತೀರಿ ನಡುಮನೆಯಲ್ಲಿ ಡಿ. ಚೀಟಣೀಸರೂ ಅವರ ಸ್ನೇಹಿತರೂ ತಾಂಬೂಲವನ್ನು ಸೇವಿಸುತ್ತಿದ್ದರು. ಬಾಗಿಲದ ಪಟಕುಗಳು ಮುಂದೆ ಮಾಡಲ್ಪಟ್ಟಿದ್ದವು. ಈಗ ಹೊರಗೆ ಬಂದಾರೆಂದು ಮಾಮಲೇದಾರರೂ ಫೌಜದಾರರೂ ಬಾಗಿಲದ ಕಡೆಗೇ ದೃಷ್ಟಿಯನ್ನಿಟ್ಟು ಕೂತಿದ್ದರು. ಆದರೆ ಒಳಗೆ ಒಂದು ಬೆಕ್ಕು ಗೊಂದಲ ಮಾಡಿದ್ದರಿಂದ ಅದನ್ನೊಬ್ಬನು ಹೊರಗೆ ಬಾಕಬೇಕೆಂದು ಬೆದರಿಸಲು, ಮುಂದೆ ಮಾಡಲ್ಪಟ್ಟ ಬಾಗಿಲ ಪಟಕುಗಳ ಸಂದಿನೊಳಗಿಂದ ಆ ಬೆಕ್ಕು ಬುದಂಗನೆ ಹೊರಬಿತ್ತು. ಅದರಿಂದ ಎರಡೂ ಪಟಕುಗಳು ಪಟಕ್ಕನೆ ತೆರೆಯಲ್ಪಟ್ಟವು. ಆ ಬೆಕ್ಕಿನ ರಭಸಕ್ಕೆ ರುದ್ರಗೌಡರೇ ಬಂದರೆಂದು ಸದರೀ ಮಾಮಲೇದಾರರೂ, ಫೌಜದಾರರೂ ಕೈಮುಗಿದುಕೊಂಡು ಎದ್ದು ನಿಲ್ಲುವವರಾದರು. ಅಷ್ಟೊತ್ತಿಗೆ ಚೀಟಣೀಸರು ಹೊರಗೆ ಬಂದು ನಡೆದ ಸಂಗತಿಯನ್ನು ನೋಡಿ ನಕ್ಕು, ಏನು ಫೌಜದಾರರೇ 'ಬೆಕ್ಕಿಗೆ ಹೆದರಿದರೆ ಕೆಲಸವು ಹ್ಯಾಗೆ ಆದೀತು?' ಎಂದು ಉತ್ತರ ಕೊಡುವವರಾದರು. ಸಾರಾಂಶ ಇವರ ದರ್ಪವು ಇಷ್ಟು ದಾರ್ಢ್ಯವಾಗಿರುವದೆಂಬದಿಷ್ಟೇ ಸರಿ.

ಇವರ ಧೈರ್ಯದ ವಿಷಯವಾಗಿಯೂ ಪ್ರಸಂಗಾವಧಾನದ ವಿಷಯವಾಗಿಯೂ ಜಿಲ್ಲಾ ನಾಸಿಕ ಪೈಕಿ ಸಿನ್ನರದಲ್ಲಿ ಸನ್ ೧೮೯೮ ಇ॥ಜನೇವರಿ ತಿಂಗಳಲ್ಲಿ ಪ್ಲೇಗಸಂಬಂಧವಾಗಿ ಎದ್ದ ಭಯಂಕರ ಸ್ವರೂಪವನ್ನು ಪರ್ಯಾಲೋಚಿಸಿದರೆ ಸಾಕು. ಅಲ್ಲಿಯ ದಂಗೆಯ ಉಗ್ರಸ್ವರೂಪವನ್ನು ಅಡಗಿಸಿ, ಅದನ್ನು ಶಾಂತಮಾಡಿದ ಶ್ರೇಯಸ್ಸು ಪೂರ್ಣ ಇವರಿಗೇ ಸರಿ. ಆ ದುರ್ಧರ ಪ್ರಸಂಗದಲ್ಲಿ ಇವರಿಗೆ ನೂರು ವರ್ಷ ತುಂಬಿ ಹೋಗುವ ಸಮಯವು ಒದಗಿತ್ತು. ಆದರೆ ಇವರಲ್ಲಿ ಸ್ಥಿರವಾಗಿ ನೆಲಸಿದ ರಾಜನಿಷ್ಠೆಯ ಪ್ರಭಾವದಿಂದಲೆ, ಚೆನ್ನವೀರಗೌಡರ ಪುಣ್ಯಶೇಷದಿಂದಲೋ, ಅಥವಾ ನಮ್ಮ ವೀರಶೈವ ರಾಷ್ಟ್ರದ ಸೌಭಾಗ್ಯದಿಂದಲೋ ಈ ಮಹನೀಯರು ಆ ಮಹತ್ತರವಾದ ಗಂಡಾಂತರದೊಳಗಿಂದ ಪಾರಾದರೆಂದು ಹೇಳಬಹುದು. ಈ ಪ್ರಸಂಗದಲ್ಲಿ ಸಿನ್ನರಕ್ಕೆ ಇವರ

ಹೊರತು ಇನ್ನೊಬ್ಬ ಮ್ಯಾಜಿಸ್ಟ್ರೇಟರು ಹೋಗಿದ್ದರೆ, ಆ ಭಯಂಕರ ಕೊಲೆಗೊಳಪಟ್ಟ ಮಾಮಲೇದಾರ, ಪ್ಲೇಗ ಅಥಾರಿಟಿ ವಕೀಲ ಮೊದಲಾದವರಂತೆ ಅವರೂ ನಿಶ್ಚಯವಾಗಿ ಠಾರ ಆಗುತ್ತಿದ್ದರೆಂದು ಅಲ್ಲಿ ನಡೆದ ಸಂಗತಿಯ ಮೇಲಿಂದ ಹೇಳಲಿಕ್ಕೆ ಅಡ್ಡಿಯಿಲ್ಲ. ನೈಸರ್ಗಿಕವಾದ ನ್ಯಾಯದೇವತೆಯೇ ಇವರಿಗೆ ಆಗ ಪ್ರಾಣದಾನ ಮಾಡಿದಳೆಂದು ಹೇಳಬಹುದು.

ರಾ.ಬ॥ರವರು ಸರಕಾರೀ ಕೆಲಸವನ್ನು ಒಳ್ಳೇ ನಿಷ್ಠೆಯಿಂದ ಮಾಡಿದ್ದಲ್ಲದೆ ಸಾರ್ವಜನಿಕ ಹಿತದ ಕೆಲಸಗಳನ್ನಾದರೂ ಬಹಳ ಆಸ್ಥೆಯಿಂದ ಮಾಡಿದರು. ಅದರಂತೆ ಸಮಾಜಹಿತದ ಅನೇಕ ಕೆಲಸಗಳನ್ನೂ ಮಾಡಿ ಸಮಾಜೋದ್ಧಾರಕರೆಂಬ ಬಿರುದನ್ನು ಪಡೆದಿರುವರು. ಅವುಗಳಲ್ಲಿ ಎಲ್ಲಕ್ಕೂ ಮಹತ್ವವಾದ ಸಂಗತಿಯೆಂದರೆ ಪ್ರಚಂಡವಾದ ಲಿಂಗಾಯತ ಎಜ್ಯುಕೇಶನಲ್ ಫಂಡು.

ಭಾಮಿನಿ ಷಟ್ಪದಿ

ಲಿಂಗವಂತರ ಫಂಡು ಕೂಡಿಸಿ।ಲಿಂಗವಂತ ಜನಾಂಗದವರಿಗೆ ।
ಆಂಗ್ಲವಿದ್ಯಾಸಂಗ್ರಹಕೆ ಸನ್ಮಾರ್ಗವಂಗೈದು ॥
ಕಂಗೆಡುವ ಕರ್ನಾಟಕಸ್ಥಿತ।ಲಿಂಗವಂತರ ಸಂಘಮಂ ಮಿಗೆ ।
ಕಂಗೊಳಿಪ ತೆರದಲ್ಲಿ ತಂದರತೀವ ತೀವ್ರದಲಿ ॥೧॥

ಈ ಫಂಡು ಕೂಡಿಸಿ, ವೀರಶೈವರಿಗೆ ಇಂಗ್ಲೀಷ ವಿದ್ಯಾಭ್ಯಾಸದ ರುಚಿಯನ್ನುಂಟು ಮಾಡಿದ ಶ್ರೇಯಸ್ಸಿಗೆ ಕೈ.ವಾ.ರಾ.॥ಬ॥ಗಿಲಗಂಚಿ ಗುರುಸಿದ್ಧಪ್ಪನವರೂ ರಾ.ಬ॥ರುದ್ರಗೌಡರೂ ಸರಿಯಾಗಿ ಬಾಧ್ಯರಿರುತ್ತಾರೆ. ಈ ಉಭಯ ರಾ.ಬ॥ರವರ ಆಚೆಗೆ ವೀರಶೈವರಲ್ಲಿ ವಿದ್ಯಾಭಿರುಚಿಯೇ ಇದ್ದಿದ್ದಿಲ್ಲ. ರಾಬರ್ಟ ಕ್ಲೈವ ದೊರೆಯು, ಇಂಡಿಯಾದಲ್ಲಿ ಬ್ರಿಟಿಶ ಸಾಮ್ರಾಜ್ಯದ ಬೀಜಾರೋಪಣ ಮಾಡಿದಂತೆ, ಆರಂಭಕ್ಕೆ ರಾ.ಸಾ॥ಡಿಪೂಟಿ ಚನ್ನಬಸಪ್ಪನವರು ವೀರಶೈವರಲ್ಲಿ ವಿದ್ಯಾವೃಕ್ಷದ ಅಂಕುರೋತ್ಪತ್ತಿಯನ್ನು ಮಾಡಿದರೆಂದೂ, ಲಾರ್ಡ ವೆಲ್ಲಸ್ಲಿ, ಲಾರ್ಡ ಬೆಂಟಿಂಕ, ಲಾರ್ಡ ಡಾಲಹೌಸಿ, ಲಾರ್ಡ ಮೇಯೋ ಮೊದಲಾದ ದೊರೆಗಳು ಬ್ರಿಟಿಶ ಸಾಮ್ರಾಜ್ಯವನ್ನು ಅಭಿವೃದ್ಧಿ ಪಡಿಸಿ ಅದನ್ನು ಸ್ಥಿರಗೊಳಿಸಿದಂತೆ ರಾ.ಬ॥ಗಿಲಗಂಚಿ ಗುರುಸಿದ್ಧಪ್ಪನವರೂ ರಾ.ಬ॥ಅರಟಾಳ ಸಾಹೇಬರೂ ವೀರಶೈವ ವಿದ್ಯಾವೃಕ್ಷವನ್ನು ಪ್ರಫುಲ್ಲವಾಗಿ ಬೆಳಿಸಿ, ಅದಕ್ಕೆ ಮಧುರತರ ಫಲಗಳುಂಟಾಗುವಂತೆ ಪ್ರಯತ್ನವನ್ನು ಮಾಡಿದರೆಂದೂ ನಿರ್ವಿವಾದವಾಗಿ ಹೇಳಬಹುದು. ಆ ಫಂಡಿನ ಸಹಾಯದಿಂದಲೇ ಪುಷ್ಕಳ ಜನ ಪದವೀಧರರು ಪ್ರಕಟವಾಗಿ, ವೀರಶೈವ ರಾಷ್ಟ್ರವನ್ನು ಪ್ರಕಾಶಿಸುತ್ತಿರುವರು. ಆ ಫಂಡಿನ ಯೋಗದಿಂದಲೇ ಸರಕಾರಕ್ಕೆ ವೀರಶೈವರ ಪೂರ್ಣ ಪರಿಚಿತಿಯಾಗಿ ಇವರ ಔದಾರ್ಯವೂ, ಸ್ವಾಮಿನಿಷ್ಠತೆಯೂ, ವಿದ್ಯಾಭಿರುಚಿಯೂ ಗೊತ್ತಾಗಿರುವದು. ಶ್ರೀಮಂತ ಸಿರಸಂಗಿಯ ಸರದೇಸಾಯಿಯವರಿಗೆ ತಮ್ಮ ಸಂಸ್ಥಾನದ ಸರ್ವಸ್ವವನ್ನು ಸಮಾಜದ ವಿದ್ಯಾಭಿವೃದ್ಧಿಗೆ ಸಂತೋಷದಿಂದ ಸಮರ್ಪಣೆ ಮಾಡುವ ಸ್ಫೂರ್ತಿಯುಂಟಾಗಲಿಕ್ಕೆ ಆ ಫಂಡೇ ಮೂಲ ಕಾರಣವಾಗಿರುವದು. ಆ ಪ್ರಚಂಡವಾದ ಫಂಡು, ವೀರಶೈವರ ವಿದ್ಯಾವೃಕ್ಷಕ್ಕೆ ತಾಯಿ ಬೇರಿನಂತೆಯೂ, ಇವರ ವಿದ್ಯಾಮಂದಿರಕ್ಕೆ ಮಧ್ಯಸ್ತಂಭದಂತೆಯೂ, ಇವರ ವಿದ್ಯಾರಥಕ್ಕೆ ಸುವರ್ಣಕಲಶದಂತೆಯೂ ಒಪ್ಪುತ್ತಿರುವದೆಂದು ಹೇಳಬಹುದು. ಈ ಫಂಡನ್ನು ಕೂಡಿಸಿದಂತೆ ರಾ.ಬ॥ರವರು ಈಗ ಕರ್ನಾಟಕ ಕಾಲೇಜಕ್ಕಾಗಿ ಒಂದು ಫಂಡು ಕೂಡಿಸುತ್ತಿರುವದಂತೂ ತಮ್ಮೆಲ್ಲರಿಗೆ ಗೊತ್ತೇ ಇರುವದು. ಈ ಪ್ರಕಾರ ಇವರು ಸ್ವಮತದ ಏಳ್ಗೆಗಾಗಿಯೂ, ಸಾರ್ವಜನಿಕ ಹಿತದ ಸಲುವಾಗಿಯೂ, ಸರಕಾರಿ ಕೆಲಸದ ಬಗ್ಗೆಯೂ ಅವಿಶ್ರಾಂತವಾಗಿ ಪ್ರಯತ್ನ ಪಡುತ್ತಿರುವ ಬಗ್ಗೆ ನಾವೆಲ್ಲರೂ ಈ ಮಹನೀಯರ ಋಣಿಗಳಾಗಿಯೇ ಇರುವೆವೆನ್ನಲಿಕ್ಕೆ ಅಡ್ಡಿಯಿಲ್ಲ.

ಮುಖ್ಯವಾಗಿ ಈ ಮಹನೀಯರ ಕಾರ್ಯಕ್ಷಮತೆಯಿಂದ ಲಂಚದ ವ್ಯಾಪಾರವು ಎಷ್ಟೋ ಮಟ್ಟಿಗೆ ಕಟ್ಟಾಗಿ ಹೋಯಿತು. ಅಜ್ಞಾನಿಗಳೂ ಅಶಿಕ್ಷಿತರೂ ಆದ ರೈತಜನರ ಕಡೆಯಿಂದ ಗೌಡ ಕುಲಕರಣಿಯರು ಬಾಂದಿನಪಟ್ಟಿಯೆಂದೂ, ನಂದಾದೀವಿಗೆಯ ಪಟ್ಟಿಯೆಂದೂ, ತೆರಿಗೆಯ ಕೂಡ ತಮಗಾಗಿ ಎತ್ತುತ್ತಿದ್ದ ಹೆಚ್ಚಿನ ಹಣವು ತೀರ ಕಟ್ಟಾಗಿ, ಈಗ ತೆರಿಗೆಯ ಹೊರತು ಒಂದು ಪೈ ಸಹ ಹೆಚ್ಚಿಗೆ ತೆಗೆದುಕೊಳ್ಳದಂತೆ ವ್ಯವಸ್ಥೆಯಾಯಿತು. ಹಪ್ತೇ ವಸೂಲಿ ಬಂತೆಂದರೆ ಆಗ ಗ್ರಾಮಸ್ಥರಿಗೆ ಹಬ್ಬವಾದಂತಾಗುತ್ತಿತ್ತು. ಯಾಕಂದರೆ ತೆರಿಗೆಯೊಡನೆ ಅವರಿಗೆ ಪೋಟಗಿಗಿಂತ ಹೆಚ್ಚು ಹಣ ವಸೂಲಾಗುತ್ತಿತ್ತು. ಈ ಕೆಟ್ಟ ಪದ್ಧತಿಯನ್ನು ಮುರಿಯುವದಕ್ಕಾಗಿ ರಾ.ಬ||ರವರು ಒಂದು ಒಳ್ಳೇ ಹಂಚಿಕೆಯನ್ನು ತೆಗೆದಿದ್ದರು. ಅದೇನೆಂದರೆ, ಇವರು ಫಿರತಿಯ ಮೇಲೆ ಹೋದಾಗ್ಗೆ ಒಂದು ದೊಡ್ಡ ಪಟದ ಮೇಲೆ "ರೈತರು ಗ್ರಾಮಸ್ಥರ ಕಡೆಗೆ ತೆರಿಗೇ ಹಣವನ್ನು ಕೊಡುವಾಗ್ಗೆ ತಮ್ಮ ಪಾವತಿಯಲ್ಲಿ ನಮೂದ ಇದ್ದ ಹಣಕ್ಕಿಂತಲೂ ಹೆಚ್ಚಿನವನ್ನು ಎಷ್ಟುಮಾತ್ರವೂ ಕೊಡಬಾರದು, ಪಾವತಿಯೊಳಗಿದ್ದಷ್ಟೇ ಹಣವನ್ನು ಕೊಡತಕ್ಕದ್ದು" ಎಂದು ದೊಡ್ಡ ಅಕ್ಷರಗಳಿಂದ ಬರೆಯಿಸಿ, ಆ ಪಟವನ್ನು ಒಂದು ಬಡಿಗೆಯ ತುದಿಗೆ ಕಟ್ಟಿ, ಅದನ್ನು ಒಬ್ಬ ಓಲೇಕಾರನ ಕಯ್ಯಲ್ಲಿ ಕೊಟ್ಟು ಎತ್ತಿ ಹಿಡಿಸಿ, ಅದರ ಎಡಬಲಕ್ಕೆ ಗೌಡ ಕುಲಕರಣಿಯರನ್ನು ನಿಲ್ಲಿಸಿ ಅದರ ಮುಂದೆ ರಣಹಲಗೆ-ಹಲಗೆ-ಕರಡೀಮಜಲುಗಳ ರಭಸದೊಡನೆ ಮೆರವಣಿಗೆಯನ್ನು ಹೊರಡಿಸುತ್ತಿದ್ದರು. ಆ ಮೆರವಣಿಗೆಯಲ್ಲಿ ಕಹಳೆ-ಕರ್ನೀಗಳು ಭೋರ್ಗರೆಯುತ್ತಿದ್ದವು. ಈ ಮೆರವಣಿಗೆಯು ಆಯಾಗ್ರಾಮಗಳ ಸಂತೆಯ ದಿವಸ ಹೊರಡುತ್ತಿತ್ತು. ಈ ಮೆರವಣಿಗೆಯ ಕೂಡ ತಳವಾರ-ಓಲೇಕಾರ-ಹಳಬ್ರ-ಗೌಡ ಕುಲಕರಣಿ ಈ ಯಾವತ್ತರೂ ಇರಬೇಕಾಗುತ್ತಿತ್ತು. ಈ ಉತ್ಸವದಲ್ಲಿ ಜನಸಮೂಹವು ಕಿಷ್ಕಿಂಧವಾಗಿರುತ್ತಿತ್ತು. ಈ ವಾದ್ಯದ ರಭಸವನ್ನು ಕೇಳಿ ಇದೇನೆಂದು ಊರ ರೈತರೂ, ಸಂತೆಗೆ ಬಂದ ಸುತ್ತುಹಳ್ಳಿಗಳ ರೈತರೂ ಹೆಂಗಸರೂ ಸಹ ಇದನ್ನು ನೋಡಲಿಕ್ಕೆ ಬರುತ್ತಿದ್ದರು. ಆಗ ಅಲ್ಲಲ್ಲಿಗೆ ವಾದ್ಯವನ್ನು ನಿಲ್ಲಿಸಿ, ಆ ಪಟದಲ್ಲಿ ಬರೆದದ್ದನ್ನು ಎಲ್ಲರೂ ಕೇಳುವಂತೆ ಆ ಗೌಡ ಕುಲಕರಣಿಯರೇ ಸ್ವತಃ ಓದಿ ಹೇಳಬೇಕೆಂದು ಕಟ್ಟಪ್ಪಣೆ ಮಾಡಿದ್ದರಿಂದ ಅದನ್ನು ಅವರೇ ಓದಿ ಹೇಳುತ್ತಿದ್ದರು. ಈ ಬಗಳಿಯನ್ನು ಕಂಡು ರೈತರು ಹಿರಿಹಿರಿ ಹಿಗ್ಗಿ "ಭಲೆ, ನಮ್ಮಪ್ಪ ರುದ್ರಗೌಡ ಭೂಮಿ ಮ್ಯಾಲ ಹುಟ್ಟಬಹುದು, ಕೆಲಸಮಾಡಬಹುದು" ಎಂದು ಇವರನ್ನು ಕೊಂಡಾಡುತ್ತ ಸಂತೀಮಾಡಿ, ಸಂತೆಯಲ್ಲಿ ನಡೆದ ಈ ಸಂಗತಿಯನ್ನೇ ಮಾತಾಡುತ್ತ ಊರ ದಾರಿಹಿಡಿದು, ಊರಲ್ಲಿ ಉಳಿದ ರೈತರಿಗೆ ಗೌಡ ಕುಲಕರಣಿಯರ ಬಗಳಿಯನ್ನು ಕಥೆಮಾಡಿ ಹೇಳುತ್ತಿದ್ದರು. ಇದರಿಂದ ಯಾವತ್ತು ಹಳ್ಳಿಗಳ ಜನರಿಗೆ ಗೌಡ ಕುಲಕರಣಿಯರ ಲಂಚಬಡಕತನವು ಗೊತ್ತಾಗಿ ಕ್ರಮೇಣ ಅದು ತೀರ ಕಟ್ಟಾಗಿ ಹೋಯಿತು.

ಇದರಂತೆ ಸ್ಟ್ಯಾಂಪವೆಂಡರರೂ, ಸಬ್‌ರಜಿಷ್ಟ್ರರರೂ, ಕಾರಕೂನರೂ ಮೊದಲಾದವರು ತೆಗೆದುಕೊಳ್ಳುತ್ತಿದ್ದ ಲಂಚವು ಕಟ್ಟಾಗುತ್ತ ಬಂತು. ಒಟ್ಟಿಗೆ ಆರಂಭಕ್ಕೆ ಕರ್ನಾಟಕಪ್ರಾಂತದಲ್ಲಿ ಇವರಿಂದ ಲಂಚದ ಹಾವಳಿಯ ಮೂಲೋತ್ಪಾಟನಕ್ರಮವು ಆವಿರ್ಭವಿಸಿದ್ದು, ಕ್ರಮೇಣ ಅದು ಇಡೀ ದೇಶದಲ್ಲಿ ಪ್ರಸಾರಗೊಂಡು ಎಲ್ಲ ಕಡೆಯಲ್ಲಿಯೂ ಅದು ಎಷ್ಟೋ ಪಾಲಿಗೆ ತಗ್ಗಿಹೋಯಿತು. ಈಗ ಯಾವದೇ ಭಾಗದ ಯಾವ ಅಧಿಕಾರಿಯಾದರೂ ಯಾರಿಗೂ ತಿಳಿಯದಂತೆ ಎಷ್ಟು ಗೌಪ್ಯವಾಗಿ ಲಂಚತೆಗೆದುಕೊಳ್ಳುವ ಪ್ರಸ್ತಾಪ ನಡಿಸಿದರೂ ಕೂಡ, ಲಂಚತೆಗೆದುಕೊಳ್ಳುವ ಮುಂದೆ ಆ ಅಧಿಕಾರಿಯ ಹೃದ್ದರ್ಪಣದ ಮೇಲೆ ರುದ್ರಗೌಡರ ಮೂರ್ತಿಯು ಚಿತ್ರಿತವಾಗದೆ ಎಂದಿಗೂ ಇರಲಿಕ್ಕಿಲ್ಲ. ಅಂದರೆ ರುದ್ರಗೌಡರಿಗೆ ಈ ಸುದ್ದಿ ಎಲ್ಲಾದರೂ ಹತ್ತೀತೋ ಏನೋ ಶಂಕೆಯು ಅವನ ಮನದಲ್ಲಿ ಆ ಕಾಲಕ್ಕೆ ಉದ್ಭವಿಸದೆ ಮತ್ತು ಆ ಸಂಬಂಧವಾಗಿ ಸ್ವಲ್ಪಾದರೂ ಭಯಹುಟ್ಟದೆ ಎಂದಿಗೂ ಹೋಗಲಿಕ್ಕಿಲ್ಲ. ರಾ.ಬ||ರುದ್ರಗೌಡರು ಆ ಭಾಗದಲ್ಲಿ ಇರದಿದ್ದರೂ ಕೂಡ ಆ ಲಂಚಗುಳಿಗಳಿಗೆ ಇವರ ನೆನಪು ಆಗದೆ ಎಂದೂ ಇರುವದಿಲ್ಲ. ಈ ವಿಷಯವಾಗಿ ಎಲ್ಲ ಲಂಚಬಡಕ ಅಧಿಕಾರಿಗಳಲ್ಲಿ ಇವರ ಭಯವು ಇಷ್ಟು ದಟ್ಟಾಗಿ ನೆಲೆಗೊಂಡಿರುವದು. ಮತ್ತು ಯಾವ ಅಧಿಕಾರಿಯೇ ಲಂಚ ತೆಗೆದುಕೊಂಡಿರಲಿ, ಆ

ಸುದ್ದಿಯು ಇವರಿಗೆ ಹತ್ತಲಿಕ್ಕೆ ತಡವೇ ಆಗುತ್ತಿದ್ದಿಲ್ಲ. ಅದರಿಂದ ಇವರು ಕರ್ಣಪಿಶಾಚಿಯನ್ನು ಸಾಕಿರುವರೋ ಏನೋ ಎಂದು ಕೆಲಮರುಳ ಜನರು ಅನ್ನುವರು. ಆದರೆ ಸ್ವಭಾವತಃ ನಿಷ್ಪ್ರಹಿಗಳೂ ಜನರ ಇಂಗಿತಜ್ಞರೂ ಸೂಕ್ಷ್ಮವಿಚಾರಿಗಳೂ ಆದ ಮಹಾಶಯರಿಗೆ ಕರ್ಣಪಿಶಾಚಿಯಾತಕ್ಕೆ ಬೇಕು? ಸಜ್ಜನರ ಸಹವಾಸವೇ ಇವರ ವಶವರ್ತಿಯಾದ ಕರ್ಣಪಿಶಾಚಿಯು. ಅಂತೆಯೇ ಇವರು ಜಾಣ್ಮೆಯಿಂದ ಹಿಡಿದುಕೊಟ್ಟ ಒಂದು ಲಂಚದ ಪ್ರಕರಣವು ಹೈಕೋರ್ಟಿನಲ್ಲಿ ವಿಚಾರಣೆ ನಡೆದಾಗ, ಅಲ್ಲಿಯ ನ್ಯಾಯಮೂರ್ತಿಗಳು ರಾ.ಬ॥ರವರ ಚಾಣಾಕ್ಷತನವನ್ನು ಕಂಡು ಪ್ರೇಮದೃಷ್ಟಿಯಿಂದ ಇವರನ್ನು ನೋಡಿ ಕೈಮಾಡಿ"ಸಾವಿನ ಕಣ್ಣಿನ ಮ್ಯಾಜಿಸ್ಟ್ರೇಟ" ಎಂದು ಇವರನ್ನು ಕೋರ್ಟಿನಲ್ಲಿಯೇ ಕೊಂಡಾಡಿದರಲ್ಲವೆ? ರಾ.ಬ॥ರವರು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಸದುಪದೇಶ ಮಾಡುವಾಗ-

ಉತ್ಪಲಮಾಲೆ

ಲಂಚಕೆ ಪೇಸು, ದುಮ್ಮರವನೋಡಿಸು, ದುಷ್ಕೃತನಾಗದಿರ್ ಸದಾ ॥
ಮುಂಚು, ಮತೋನ್ನಯಾಧ್ವದೆ ಹಿತಂಗುಡು, ದುರ್ಬಲರಿಂಗೆ ದುಃಖದೊಳ್ ॥
ಕುಂಚಿತ ಬುದ್ಧಿಯಿಂ ಮೆರೆಯ ಬೇಡಧಿಕಾರ ಮದಾಂಧನಾಗಿ, ನೀಂ ।
ಪಂಚಮುಖಂಗೆ ಪ್ರೇಮಕರನಾಗಿರು ಬಾಗಿರು, ರಾಜ್ಯಕಾರ್ಯದೊಳ್ ॥೧॥

ಈ ಪ್ರಕಾರ ಹೇಳುವರು. ಅಂದರೆ ಪರಮೇಶ್ವರನ ಅನುಗ್ರಹದಿಂದ ನಿನಗೆ ಅಧಿಕಾರ ದೊರೆದಿರುವದು. ಅದರಿಂದ ನೀನು ವಿನಿಯಾನ್ವಿತನಾಗಿ 'ದುಷ್ಟದಲನ ಶಿಷ್ಟಪಾಲನ' ಎಂಬ ರಾಜಧರ್ಮವನ್ನು ಮೂಲಮಂತ್ರವಾಗಿಟ್ಟುಕೊಂಡು ಕೈಲಾದಮಟ್ಟಿಗೆ ಪರೋಪಕಾರಮಾಡಿ, ಜನ್ಮಸಾರ್ಥಕ ಮಾಡಿಕೊಳ್ಳ ಬೇಕಲ್ಲದೆ, ಅಧಿಕಾರ ಬಂತೆಂದು ಅಹಂಭಾವಿಯಾಗಿ, ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡು, ಮದಾಂಧನಾಗಿ ಮೆರದಾಡಿ, ಲಂಚದಾಶೆಗೊಳಪಟ್ಟು ಪಾಪಪಂಕದಲ್ಲಿ ಬೀಳಬೇಡ. ಲಂಚವು ಪ್ರತ್ಯಕ್ಷ ಹೇಸಿಕೆಯೆಂದು ತಿಳಿ;ಎಂದು ಸದ್ಬೋಧಮಾಡುವರು. ಈ ಪ್ರಕಾರ ಇವರು ಸರಕಾರದಲ್ಲಿಯೂ, ಸಾರ್ವಜನಿಕರಲ್ಲಿಯೂ ಸ್ವಮತೀಯರಲ್ಲಿಯೂ ಪ್ರಖ್ಯಾತಪುರುಷರಾದುದರಿಂದಲೇ ನಾವೆಲ್ಲರು ಇಂಥ ಮಹಾವೈಭವದ ತಾಂಬೂಲ ಸಮಾರಂಭವನ್ನು ನೋಡುವವರಾದೆವು.

ನರಪತಿ ಹಿತಕರ್ತಾದ್ವೇಷ್ಯತಾಂ ಯಾತಿ ಲೋಕೇ।ಜನಪದ ಹಿತಕರ್ತ ತ್ಯಜ್ಯತೇ ಪಾರ್ಥಿವೇನ॥ ಇತಿಮಹತಿವಿರೋಧೇ ವಿದ್ಯಮಾನೇ ಸಮಾನೇ ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ॥

ಎಂಬಂತೆ ರಾಜಪ್ರಜಾ ಉಭಯಪಕ್ಷಕ್ಕೂ ಪ್ರೀತರಾದ ರಾ.ಬ॥ಅರಟಾಳ ಸಾಹೇಬರಂಥ ಅಧಿಕಾರಿಗಳು ತೀರ ವಿರಳರೆಂದೇ ಹೇಳಬಹುದು.

ಸಭ್ಯರೆ, ಅಧಿಕಾರವು ಆಟದಲ್ಲಿ ನಟಿಸುವ ವೇಷದಂತಿರುವದು. ಬಣ್ಣದಿಂದ ಅಲಂಕೃತವಾಗಿ ರಂಗಭೂಮಿಯಲ್ಲಿ ಅಭಿನಯಿಸುತ್ತಿರುವ ಮನೋಹರವಾದ ವೇಷವನ್ನು ಜನರು ಮನಗೊಟ್ಟು ನೋಡುವರು. ಅದೇ ಬಣ್ಣವನ್ನು ತೊಳೆಯಲು ಅವನನ್ನು ಯಾರೂ ನೋಡುವದಿಲ್ಲ. ಅದರಂತೆ ಅಧಿಕಾರವಿರುವ ವರೆಗೆ ಆತನನ್ನು ಎಲ್ಲರೂ ಆದರಿಸುವರು. ಅದೇ ಅಧಿಕಾರ ಹೋದ ಮರುದಿವಸ ಅತ್ತ ಕಡೆಗೆ ಯಾರೂ ಹಣಕಿ ಹಾಕುವದಿಲ್ಲ. ಆದರೆ ರಾವಬಹಾದ್ದೂರರವರು ಈ ನೇಮಕ್ಕೆ ಅಪವಾದವಾಗಿದ್ದಾರೆ. ಇವರು ಪೆನಶನ್ ತೆಗೆದುಕೊಂಡಿದ್ದರೂ ಇವರಲ್ಲಿ ಜನರ ಪ್ರೇಮವು ಸ್ವಲ್ಪವೂ ಕಡಿಮೆಯಾಗಿಲ್ಲ. ದಿನದಿನಕ್ಕೆ ಹೆಚ್ಚೇ ಆಗುತ್ತಿರುವದು. ಪ್ರತಿಯೊಂದು ಪಾನಸುಪಾರಿಗೆ ದೂರ ದೂರಿಂದ ಜನರು ಬಂದೇ ಬರುವರು. ಧನವ್ಯಯ ಕಾಲವ್ಯಯ ಮಾಡಿಕೊಂಡು, ಮನೆತನದ ಉದ್ಯೋಗಗಳನ್ನು ಬಿಟ್ಟು ಇವರೆಲ್ಲರು ಯಾಕೆ ಬರುವರು? ಸುಮ್ಮ ಸುಮ್ಮನೆ

ಯಾರೂ ಬರುವದಿಲ್ಲ. ಈ ಮಹಿಮಾಪುರುಷರಲ್ಲಿ ಅಂಥ ಅಮೋಘವಾದ ಗುಣಗಳೂ, ಅಸಾಧಾರಣ ಕರ್ತೃತ್ವಶಕ್ತಿಯೂ, ಅನುಪಮೇಯವಾದ ನ್ಯಾಯವೂ ಇರುವದರಿಂದ ಜನರು ತಮ್ಮಿಂದ ತಾವೆ ಬರುತ್ತಾರೆ.

ಸಭಾಸದರೆ, ಈ ಅಧ್ಯಕ್ಷಸ್ಥಾನದಲ್ಲಿ ಅಲಂಕರಿಸಿರುವ ನಾಮದಾರ ಮೆ॥ಕಮಿಶನರ ಸಾಹೇಬರವರೂ ಅವರ ಎಡಬಲದಲ್ಲಿ ವಿಶ್ರಮಿಸಿರುವ ನಾಮದಾರ ಹೈಕೋರ್ಟ ಜಜ್ಜ, ಡಿಸ್ಟ್ರಿಕ್ಟ ಜಜ್ಜ, ಮೆ॥ ಕಲೆಕ್ಟರ, ಆ॥ಕಲೆಕ್ಟರ ಮೊದಲಾದ ಯಾವತ್ತು ಆಂಗ್ಲಾಧಿಕಾರಿಗಳೂ ಇತರ ನೇಟಿಪ್ಪ ಅಧಿಕಾರಿಗಳೂ ಇವರೆಲ್ಲರು ಇಲ್ಲಿಗೆ ಯಾತಕ್ಕೆ ಬಂದಾರು? ಏನು ಕೊಟ್ಟರೆ ಬಂದಾರು? ಈ ಮಹನೀಯರ ಆಗಮನವಾದದ್ದು ಕೇವಲ ಈ ನಮ್ಮ ಅರಟಾಳ ಸಾಹೇಬರವರ ಪುಣ್ಯ ಪ್ರಭಾವದಿಂದಲೇ ಸರಿ.

ಇವರು ಪುಣ್ಯೋದರದಲ್ಲಿ ಜನಿಸಿದರು. ನ್ಯಾಯದಿಂದ ಬೆಳೆದರು. ನ್ಯಾಯಕ್ಕಾಗಿಯೇ ಬಲಾಢ್ಯಜನರೊಡನೆ ಹೋರಾಡಿದರು. ನ್ಯಾಯದಿಂದಲೇ ಅಧಿಷ್ಠಾನವನ್ನು ಹೊಂದಿದರು. ಕಡೆಗೆ ನ್ಯಾಯದಿಂದಲೇ ಲೋಕೋತ್ತರವಾದ ಕೀರ್ತಿಯನ್ನು ಹೊಂದಿದರು. ನ್ಯಾಯಕ್ಕಾಗಿಯೇ ಆತ್ಮವನ್ನು ಅರ್ಪಿಸುತ್ತಿರುವರು. ಅಂತೆಯೇ ಇವರು ನಮ್ಮ ಪರಮಪೂಜ್ಯ ಬ್ರಿಟಿಷ ಸಾರ್ವಭೌಮ ಸರಕಾರದವರಿಂದ ರಾವಬಹಾದ್ದೂರ ಮತ್ತು ಆಯ್.ಎಸ್.ಓ. ಎಂಬ ಬಹುಮಾನದ ಬಿರುದುಗಳನ್ನು ಹೊಂದಿದರು. ರಾಜನಿಷ್ಠನೂ ಉದ್ಯೋಗ ತತ್ಪರನೂ ಆದ ಮನುಷ್ಯನಿಗೆ ಪ್ರತಿಫಲವು ನಿಶ್ಚಯವಾಗಿ ಲಭಿಸುವದು ಎಂಬ ವಾಕ್ಯವು ಇವರ ಚರಿತ್ರದಿಂದ ಸಹಜವಾಗಿ ತಿಳಿಯುವದು.

ಇವರು ವೀರಶೈವರಿಗೆ ಪ್ರತಿಬಸವೇಶ್ವರರೇ ಆದರೆಂದು ಹೇಳಬಹುದು. ಬಸವಣ್ಣನವರ ಪವಾಡಗಳಂತೆ ಇವರ ಕಾಲದಲ್ಲಿಯೂ ಅನೇಕ ವಿಚಿತ್ರ ಸಂಗತಿಗಳು ಗತಿಸಿ ಹೋದವು. ಬಸವೇಶನ ಪ್ರಭಾವವನ್ನೂ ಪ್ರಖ್ಯಾತಿಯನ್ನೂ ಕಂಡು ಕೊಂಡೀ ಮಂಚಣ್ಣ ಮೊದಲಾದ ಅಸಹಿಷ್ಣುಗಳು ಇಲ್ಲದ ಆರೋಪಗಳನ್ನು ಹೊರಿಸಿ, ಆತನ ಮೇಲೆ ಇರುವ ರಾಜನ ನಿಃಸೀಮವಾದ ಪ್ರೇಮವನ್ನು ಕಡಿಮೆ ಮಾಡಲು ಪ್ರಯತ್ನಿಸಿದಂತೆ, ಇವರ ಮೇಲೂ ಅನೇಕ ಜನ ಹೊಟ್ಟೆಯುರುಕರು ಇಲ್ಲದ ತೊಂದರೆಗಳನ್ನು ತಂದು ತ್ರಾಸಕೊಟ್ಟು ಇವರ ವಿಷಯವಾಗಿ ವರಿಷ್ಠಾಧಿಕಾರಿಗಳ ಮನಸ್ಸನ್ನು ಕಲುಷಿತ ಮಾಡುವ ಪ್ರಯತ್ನವನ್ನು ನಡಿಸಿದರು. ಆದರೆ ಅಗ್ನಿಸಂಸ್ಕಾರದಿಂದ ಬಂಗಾರಕ್ಕೆ ಪುಟಕೊಟ್ಟಂತೆ ಇವರು ಮತ್ತಿಷ್ಟು ರಾಜನಿಷ್ಠರೇ ಎಂದೆನ್ನಿಸಿಕೊಂಡರು. 'ಕುಚೇಷ್ಟಾ ವಚನ ಪ್ರತಿಷ್ಠಾಹೋತ ನಹೀ" ಎಂಬ ಮರಾಠೀ ನುಡಿಯಂತೆ ಕೌರವರ ಪೀಡೆಯಿಲ್ಲದೆ ಪಾಂಡವರೂ, ರಾವಣಾದಿಗಳ ಕಾಟವಿಲ್ಲದೆ ಶ್ರೀರಾಮನೂ ಹೇಗೆ ಪುರಾಣಪ್ರಸಿದ್ಧರಾಗುತ್ತಿದ್ದಿಲ್ಲವೋ ಅದರಂತೆ ಇವರ ವಿರೋಧಿಗಳಾದ ಬಲಾಢ್ಯ ಜನರ ತೊಂದರೆಗಳಿಲ್ಲದೆ ಇವರು ಇಷ್ಟು ಪ್ರಸಿದ್ಧಿಯನ್ನು ಹೊಂದುತ್ತಿದ್ದಿಲ್ಲವೆಂದೇ ಹೇಳಬಹುದು.

ವಾರ್ಧಕ ಷಟ್ಪದಿ

ಭಕ್ತಿಯಿಂ ಬಸವೇಶ, ಲಕ್ಷೋಪಲಕ್ಷಜನ ।ಯುಕ್ತಗಣಜಂಗಮರ್ಗಿಷ್ಟಾನ್ನದೂಟದಿಂ ।
ತೃಪ್ತಿಯಂಗೊಳಿಸಿ ಭಕ್ತಾಗ್ರಮಣಿ ಬಸವಣ್ಣನೆಂದೆನಿಸಿಕೊಂಡ ತೆರದಿ ॥
ಯುಕ್ತಿಯಿಂ ಜನವನಕೆ ರುದ್ರಗೌಡಾಖ್ಯನಾ।ಸಕ್ತಿಯಿಂದಾಂಗ್ಲ ವಿದ್ಯಾಮೃತವನಿತ್ತು ಸ ।
ದ್ಭಕ್ತ ಪ್ರತಿಬಸವೇಶನೆಂಬ ತೆರದೊಳು ಲೋಕವಿಖ್ಯಾತನಾಗಿರ್ಪನೈ ॥೧॥

ಸಾರಾಂಶ, ಬಸವೇಶನು ಲಕ್ಷಾವಧಿ ಜನಗಳಿಗೆ ಪ್ರತಿದಿವಸ ಇಚ್ಛಾನ್ನ ಭೋಜನ ಮಾಡಿಸಿ, ಅವರನ್ನು ತೃಪ್ತಿಪಡಿಸಿ ಮತೋದ್ಧಾರಕನಾಗಿ ಲೋಕಪೂಜ್ಯನಾದಂತೆ ರಾ.ಬ॥ರುದ್ರಗೌಡರು ವೀರಶೈವಜನಗಳಿಗೆ ಇಂಗ್ಲೀಷ ವಿದ್ಯೆಯೆಂಬ

ಅಮೃತಪಾನಮಾಡಿಸಿ ಕೃತಾರ್ಥರಾದ್ದರಿಂದ ನಾವೆಲ್ಲರು ಇವರನ್ನು ಪ್ರತಿಬಸವೇಶ್ವರನೆಂದೇ ಭಾವಿಸಲಿಕ್ಕೆ ಏನೂ ಅಡ್ಡಿಯಿಲ್ಲವೆಂದು ಹೇಳಿ ತಮ್ಮೆಲ್ಲರ ಅಪ್ಪಣೆಯನ್ನು ತೆಗೆದುಕೊಳ್ಳುವೆನು"

ತಾರೀಖು	ಬಸವಾರ್ಯ
೨೬ನೇ ಅಕ್ಟೋಬರ ಸನ್ ೧೯೧೩	ಕಿತ್ತೂರ ಶಾಳಾ ನಂಬರ ೧
ರವಿವಾರ.	

ಈ ಪ್ರಕಾರ ಬಸವಾರ್ಯರ ಭಾಷಣವಾಯಿತು. ಇವರ ಭಾಷಣ ನಡೆದಾಗ ನಾಮದಾರ ಕಮಿಶನರ ಮೆ. ಶೇಫರ್ಡ ದೊರೆಗಳೂ ನಾಮದಾರ ಹೈಕೋರ್ಟ ಜಜ್ಜರಾದ ಮೆ॥ಬ್ಯಾಚಲರ ದೊರೆಗಳೂ ನಗೆಮುಖದಿಂದ ಆಗಾಗ್ಗೆ ಚಪ್ಪಾಳೆ ಹೊಡೆದು ತಮಗಾದ ಆನಂದವನ್ನು ವ್ಯಕ್ತಪಡಿಸುತ್ತಿದ್ದರು. ಬಳಿಕ ಸಂಪಗಾವ ತಾಲೂಕ ಬೂದೀಹಾಳದ ವೇ. ಕಾಶೀನಾಥಶಾಸ್ತ್ರಿಗಳೂ, ರಾ.ಸಾ॥ಶಿವಮೂರ್ತಿ ಸ್ವಾಮಿಗಳೂ ತಮ್ಮ ಅಸ್ಖಲಿತವಾಣಿಯಿಂದ ಭಾಷಣಮಾಡಿ ಬಸವಾರ್ಯರ ಭಾಷಣವನ್ನು ಪುಷ್ಟೀಕರಿಸಿದರು. ಬಳಿಕ ರಾವಬಹಾದ್ದೂರವರಿಗೆ ಸಂಪಗಾವ ತಾಲೂಕಿನ ವತಿಯಿಂದ ಪ್ರಮುಖರ ಸಹಿಯಿಂದ ತಯಾರಿಸಲ್ಪಟ್ಟ ವಿಜ್ಞಪ್ತಿಯ ಮಾನಪತ್ರವು ಮಿ. ಪ್ರಭಪ್ಪ ಚೆನ್ನಮಲ್ಲಪ್ಪ ಮೂಗಿ ಇವರಿಂದ ಓದಲ್ಪಟ್ಟು, ನಾಮದಾರ ಶೆಫರ್ಡ ದೊರೆಗಳವರಿಂದ ಅರ್ಪಿಸಲ್ಪಟ್ಟಿತು. ಅದೇ ಕಾಲಕ್ಕೆ ಒಂದು ಸುವರ್ಣಪದಕವೂ ಸಮರ್ಪಿಸಲ್ಪಟ್ಟಿತು. ಇದು ಅಲ್ಲಿಯ ಪ್ರಸಿದ್ಧ ಕಾರಾಗೀರರಾದ ಹೂವಪ್ಪ ಕಂಚುಗಾರ ಮತ್ತು ದೇಮಪ್ಪ ಬಡಿಗೇರ ಗುರ್ಲಹೊಸೂರ ಈ ಉಭಯತರ ಕುಶಾಗ್ರಬುದ್ಧಿಯಿಂದ ತಯಾರು ಮಾಡಿಸಲ್ಪಟ್ಟಿದ್ದು, ಇದರ ಒಂದು ಪಕ್ಕದಲ್ಲಿ ಕೈ.ವಾ. ಸಿರಸಂಗಿ ಲಿಂಗರಾಜರ ಮತ್ತು ರಾ.ಬ॥ಗಿಲಗಿಂಚಿ ಗುರುಸಿದ್ಧಪ್ಪಣ್ಣನವರ ಹಾಗೂ ರಾ.ಬ॥ಅರಟಾಳ ಸಾಹೇಬ ಬಹಾದ್ದೂರರವರ ಭಾವಚಿತ್ರಗಳೂ ಇನ್ನೊಂದು ಪಕ್ಕದಲ್ಲಿ ನಾಮದಾರ ಶೆಪರ್ಡ ಸಾಹೇಬ ಬಹಾದ್ದೂರರವರ ಭಾವಚಿತ್ರವೂ ಕೊರೆಯಲ್ಪಟ್ಟಿದ್ದಿತು. ಅನಂತರ ರಾ.ಬ॥ರವರು ಸಮಯಕ್ಕನುಸರಿಸಿ ಕೂಡಿದ್ದ ಸಭಾಸದರಿಗೆ ಕೇಳುವಂತೆ ತಮ್ಮ ಸ್ಪಷ್ಟವಾಣಿಯಿಂದ ವಿದ್ಯೆಯೆಂಬ ಮೂಲಮಂತ್ರವನ್ನುಪದೇಶಿಸಿ, ತುಸು ಸಂಭಾಷಿಸಿ ತಮಗೆ ಮಾಡಿದ ಸನ್ಮಾನಕ್ಕಾಗಿ ಯಾವತ್ತರ ಅಭಾರಮನ್ನಿಸಿದರು. ಬಳಿಕ ಪ್ರಸಿದ್ಧ ಗವಯಿಗಳಾದ ಶ್ರೀ ಶಿವಜಾತಸ್ವಾಮಿಗಳ ಹಾಗೂ ಬಮ್ಮಿಗಟ್ಟಿ ಚೆನ್ನಬಸಯ್ಯನವರ ಪೀಟಿಲವಾದನವೂ, ಗಾಯನವೂ ಅದಕ್ಕೆ ಸಹಕಾರಿಯಾದ ಶಹಾಪುರ ಮಲ್ಲೇಶಪ್ಪನ ಮೃದಂಗವಾದನವೂ ಸಭಿಕರಿಗಾನಂದವನ್ನುಂಟು ಮಾಡಿತು. ಬಳಿಕ ರಾ.ಸಾ॥ ಶಿವಮೂರ್ತಿಸ್ವಾಮಿಯವರು ನಾಮದಾರರಾದ ಐರೋಪ್ಯಾತಿಥಿಗಳ ಮತ್ತು ಉಳಿದ ತಾಲೂಕಿನ ಮುಖ್ಯಾಧಿಕಾರಿಗಳ ಆಭಾರವನ್ನು ಸಮಯಕ್ಕನುಸರಿಸಿ ಆದರದ ವಾಕ್ಪಟುತ್ವದಿಂದ ಮನ್ನಿಸಿದರು. ಆ ಮೇಲೆ ಸರ್ವರಿಗೂ ಪುಷ್ಪಹಾರಗುಚ್ಛಗಳು ಸಮರ್ಪಿಸಲ್ಪಟ್ಟು, ಸಾರ್ವಭೌಮ ದಂಪತಿಗಳ ಮತ್ತು ಸಭೆಗೆ ದಯಮಾಡಿಸಿದ ಐರೋಪ್ಯಾತಿಥಿಗಳ ಹಾಗೂ ರಾ.ಬ॥ರವರ ಆಯುರಾರೋಗ್ಯಸುಖಸಂಪತ್ತನ್ನು ಕೋರಿ, ಸಭೆಯು ವಿಸರ್ಜಿಸಲ್ಪಟ್ಟಿತು ತರುವಾಯ ಸಂಜೆಯ ೫ ಘಂಟೆಗೆ ಐರೋಪ್ಯಾತಿಥಿಗಳು ಅಲ್ಲಿ ತಯಾರಿಸಿದ ಉಪಾಹಾರವನ್ನು ತೀರಿಸಿಕೊಂಡು ತುಷ್ಟರಾಗಿ ಮೋಟಾರ ಬಂಡಿಗಳಲ್ಲಿ ಬೆಳಗಾವಿಗೆ ಪ್ರಯಾಣ ಮಾಡಿದರು.

ಮರುದಿವಸ ತಾರೀಖು ೨೭ನೇ ಅಕ್ಟೋಬರ ಸನ್ ೧೯೧೩ ಇ. ಸೋಮವಾರ ಮುಂಜಾನೆ ೮ ಘಂಟೆಗೆ ಮಿ. ತೋಟಪ್ಪಣ್ಣಾ ಪರಪ್ಪಣ್ಣಾ ಮೇಟಗುಡ್ಡ ಇವರ ಮನೆಯಲ್ಲಿ ಮತ್ತು ೯ ಘಂಟೆಗೆ ಶೇಖರಪ್ಪಾ ಪರಪ್ಪ ಅಣ್ಣಾ ಮೇಟಗುಡ್ಡ ಇವರ ಮನೆಯ ಮೇಲುಪ್ಪರಿಗೆಯಲ್ಲಿ ರಾ.ಬ॥ರವರ ಪಾನಸುಪಾರಿ ಸಮಾರಂಭಗಳನ್ನು ನೆರವೇರಿಸಿದರು. ಕೂಡ್ರಲಿಕ್ಕೆ ಸ್ಥಳಸಾಲದಷ್ಟು ಜನ ಸಮೂಹವು ಕೂಡಿತ್ತು. ಇಲ್ಲಿ ಸವದತ್ತಿಯ ಪಾತ್ರದವರ

ನಾಚು ಬಹಳ ಚೆನ್ನಾಗಿ ಆಯಿತು. ಇಲ್ಲಿ ಭಾಷಣಮಾಡಿದ ಕಿತ್ತೂರ ಶಾಳಾ ವಿದ್ಯಾರ್ಥಿಯಾದ ಚೆನ್ನಬಸವ ಬಸವಾರ್ಯ ಹಿರೇಮಠ ಎಂಬ ಬಾಲಕನಿಗೆ ಮಿ. ಶೇಖರಪ್ಪಣ್ಣಾ ಮೇಟಗುಡ್ಡ ಇವರು ೫ ರೂಪಾಯಿ ಉಚಿತಕೊಟ್ಟರು. ಅದೇ ದಿವಸ ರಾತ್ರಿ ೭ ಘಂಟೆಯ ಸುಮಾರಕ್ಕೆ ಮುಸಲ್ಮಾನರು ತಮ್ಮ ಜುಮ್ಮಾ ಮಸೀದೆಯಲಿ ರಾವಬಹಾದ್ದೂರರವರಿಗೆ ಪಾನಸುಪಾರಿಯನ್ನು ಮಾಡಿ, ತಮ್ಮ ಪ್ರೇಮವನ್ನು ವ್ಯಕ್ತಪಡಿಸಿದರು. ಜುಮ್ಮಾಮಸೀದೆಯಲ್ಲಿ ಮಾಡಿದ ದೀಪೋತ್ಸವವು (ರೋಷನಾಯಿಯು) ರಮ್ಯವಾಗಿತ್ತು.

ಈ ಪ್ರಕಾರ ಬೈಲಹೊಂಗಲದವರು ತಾಂಬೂಲ ಸಮಾರಂಭವನ್ನು ಬಹಳೇ ಸಡಗರದಿಂದ ನೆರವೇರಿಸಿದರು. ಈ ಸಮಾರಂಭಕ್ಕೆ ಸುಮಾರು (೨೫೦೦) ಇಪ್ಪತ್ತೈದುನೂರು ರೂಪಾಯಿ ವೆಚ್ಚವಾಗಿರಬಹುದು. ಇದರಂತೆ ಕರ್ನಾಟಕದಲ್ಲಿ ರಾವಬಹಾದ್ದೂರರವರ ತಾಂಬೂಲ ಸಮಾರಂಭಗಳು ಒಂದರಕಿಂತಲೂ ಒಂದು ಮಿಗಿಲಾದ ವೈಭವದಿಂದಲೂ ವೆಚ್ಚದಿಂದಲೂ ಆಗುತ್ತ ನಡೆದವು. ಈ ಕಾಲಕ್ಕೆ ಕರ್ನಾಟಕದಲ್ಲಿ ಇವರ ಪಾನಸುಪಾರಿಯ ಸುಗ್ಗಿಯೇ ನಡೆಯಿತ್ತೆಂದು ಹೇಳಬಹುದು. ಇದು ರಾ.ಬ॥ರವರ ಪೂರ್ವಸುಕೃತೇ ಸರಿ.

ಬಾಗಲಕೋಟೆಯಲ್ಲಾದ ತಾಂಬೂಲ ಸಮಾರಂಭ

ಬೈಲಹೊಂಗಲ ತಾಂಬೂಲ ಸಮಾರಂಭವಾದ ೩ ತಿಂಗಳಾದ ಮೇಲೆ ಅಂದರೆ ತಾರೀಖು ೨೮ನೇ ಜಾನೇವಾರಿ ಸನ್ ೧೯೧೪ ಇಸವಿ ಬುಧವಾರ ದಿವಸ, ವಿಜಾಪುರ ಜಿಲ್ಲೆಗೊಳಪಟ್ಟ ಬಾಗಲಕೋಟಿಯ ಗ್ರಾಮದವರು ರಾ.ಬ॥ರವರಿಗೆ ತಮ್ಮಲ್ಲಿ ಪಾನಸುಪಾರಿ ಸಮಾರಂಭ ಮಾಡುವದಾಗಿ ನಿರ್ಧರಿಸಿದರು. ಈ ಸಂಧಿಯಲ್ಲಿ ದಕ್ಷಿಣಭಾಗದ ಕಮೀಶನರರಾದ ನಾಮದಾರ ಮೆ॥ಶೆಫರ್ಡ ದೊರೆಗಳ ಸ್ವಾರೀ ಮುಕ್ಕಾಮು ಅಲ್ಲಿಗೆಯೇ ಇತ್ತು. ಇದೇ ಸಮಯದಲ್ಲಿ ಬಾಗಲಕೋಟಿಯಲ್ಲಿ ಕೊಣ್ಣೂರ ನಾಟಕ ಕಂಪನಿಯವರು ಇದ್ದರು. ಈ ಕಂಪನಿಯವರು ತಾರೀಖು ೨೬ನೇ ಜಾನೇವಾರಿ ಸನ್ ೧೯೧೪ ಇ. ಸೋಮವಾರ ದಿವಸ ಮೆ॥ಶೆಫರ್ಡ ದೊರೆಗಳಿಗೆ ಪಾನಸುಪಾರಿ ಸಮಾರಂಭವನ್ನು ಮಾಡಿದರು. ಆಮಂತ್ರಿತರಾದ ರಾ.ಬ॥ರವರು ಅದೇ ದಿವಸ ಸಾಯಂಕಾಲದ ಐದೂವರೆ ಘಂಟೆಯ ಸುಮಾರಕ್ಕೆ ಬಾಗಲಕೋಟಿಗೆ ಬಿಜಯಂಗೈದರು. ಪಾನಸುಪಾರಿಯ ಸಮಾರಂಭವನ್ನು ತೀರಿಸಿಕೊಂಡು, ಎಲ್ಲ ಜನರು ಅನೇಕ ಮಂಗಳ ವಾದ್ಯಗಳ ಮೇಳದೊಡನೆ ಸ್ಟೇಶನಕ್ಕೆ ಹೋಗಿ ರಾ.ಬ॥ರವರನ್ನು ಕಂಡು ಸಂತೋಷಿಸಿ ಜಯಘೋಷದೊಡನೆ ಅವರ ಸ್ವಾಗತಮಾಡಿ, ಅವರನ್ನು ಹಾರತುರಾಯಿ ಪರಿಮಳದ್ರವ್ಯಗಳಿಂದಲಂಕರಿಸಿ, ಅನೇಕ ವೈಭವದಿಂದ ರಥದ ಮೇಲೆ ಮೆರವಣಿಗೆಯನ್ನು ಹೊರಡಿಸಿ, ಆ ರಥವನ್ನು ಜನರೇ ಕಯ್ಯಿಂದ ಜಗ್ಗುವವರಾದರು. ಪುರಶೃಂಗಾರವು ತಳಿರ್ದೋರಣ ಧ್ವಜಪತಾಕೆಗಳಿಂದ ಬಲುರಮಣೀಯವಾಗಿತ್ತು. ಬೇಂಡಬಾಜಾ, ತಾಸೆ, ಭಜಂತ್ರಿ, ಕಹಳೆ, ಕರ್ನಿ ರಣಹಲಿಗೆ ಕರಡೀಮಜಲು ಮೊದಲಾದ ಮಂಗಳವಾದ್ಯಗಳ ರಭಸದಿಂದಲೂ, ಶೃಂಗಾರವಾದ ಕುದುರೆಗಳಿಂದಲೂ, ಮಹತ್ತಾದ ರಥದಿಂದಲೂ, ಶ್ರೀಮಂತರು ದೇಸಾಯಿ ದೇಶಪಾಂಡೆ, ದೇಶಮುಖ ಸೆಟ್ಟರು ಸಾವಕಾರರು ಮೊದಲಾದ ಮಹನೀಯರ ಗಡಣದಿಂದಲೂ, ಸರಕಾರೀ ಅಧಿಕಾರಿಗಳ ಸಮೂಹದಿಂದಲೂ, ಭಜನೆಯವರ ಮೇಳದಿಂದಲೂ, ಶೃಂಗಾರವಾದ ಅಶ್ವಗಳಿಂದಲೂ, ಕುಣಿಯುವ ಕುದುರೆಗಳಿಂದಲೂ, ರಾಜಭಟರ ತಂಡದಿಂದಲೂ, ರಥಾಸೀನರಾದ ರಾ.ಬ॥ರವರ ಮೆರವಣಿಗೆಯು ಪ್ರೇಕ್ಷಣೀಯವಾಗಿತ್ತು.

ತಾರೀಖು ೨೮ನೇ ಜಾನೇವಾರಿ ಸನ್ ೧೯೧೪ ಇಸವಿ ಬುಧವಾರ ದಿವಸ ಐದೂವರೆ ಘಂಟೆಯ ಸುಮಾರಕ್ಕೆ ರಾಜಮಂದಿರದಂತೆ ಶೃಂಗರಿಸಿದ ನಾಟಕಗೃಹದಲ್ಲಿ ನಾಮದಾರ ಮೆ॥ಶೆಫರ್ಡ ದೊರೆಗಳವರ ಹಾಗೂ

ರಾ.ಬ॥ರವರ ತಾಂಬೂಲ ಸಮಾರಂಭಗಲಾದವು. (ಆರಂಭಕ್ಕೆ ನಾಮದಾರರವರಿಗಾಗಿಯೂ, ಅನಂತರ ರಾ.ಬ॥ರವರಿಗಾಗಿಯೂ ತಾಂಬೂಲ ಸಮಾರಂಭಗಳಾದವು). ಸಮಾರಂಭಕ್ಕೆ ತಾಲೂಕಿನ ಎಲ್ಲ ಅಧಿಕಾರ ವರ್ಗದವರೂ, ಇತರ ಅಧಿಕಾರಿಗಳೂ, ದೇಸಾಯಿ ದೇಶಪಾಂಡೆ ದೇಶಮುಖರೂ, ಶ್ರೀಮಂತರು ಸೆಟ್ಟರು ಸಾವುಕಾರರೂ ಮೊದಲಾಗಿ ಯಾವತ್ತು ಜನರು ದಯಮಾಡಿಸಿದ್ದರು. ಸುಮಾರು ನಾಲ್ಕೈದು ಸಾವಿರ ಜನರು ಕೂಡಿದ್ದರು. ಆರಂಭಕ್ಕೆ ಸ್ವಾಗತಪರ ಭಾಷಣವಾದನಂತರ, ಕೆಲ ವ್ಯಾಖ್ಯಾತರು ರಾ.ಬ॥ರವರ ಕರ್ತೃತ್ವಶಕ್ತಿಯ ವಿಷಯವಾಗಿಯೂ ಸರಕಾರಿ ಹಾಗೂ ಸಾರ್ವಜನಿಕ ಮತ್ತು ಸ್ವಮತೀಯ ವಿಷಯವಾಗಿ ಮಾಡಿದ ಇವರ ಮಹತ್ಕಾರ್ಯಗಳ ಸಂಬಂಧವಾಗಿಯೂ ಇವರಲ್ಲಿ ಸ್ವಾಭಾವಿಕವಾಗಿದ್ದ ಅನುಪಮ ಗುಣಗಳ ವಿಷಯವಾಗಿಯೂ ಭಾಷಣಮಾಡಿದರು. ಅನಂತರ ಮಾನಪತ್ರವು ಓದಲ್ಪಟ್ಟು ಅದನ್ನು ಬಹುಸುಂದರವಾದ ರಜತಕರಂಡಕದಲ್ಲಿಟ್ಟು ನಾಮದಾರ ಶೆಫರ್ಡದೊರೆಗಳ ಹಸ್ತದಿಂದ ರಾ.ಬ॥ರವರಿಗೆ ಸಮರ್ಪಿಸಲ್ಪಟ್ಟಿತು. ಬಳಿಕ ರಾವಬಹಾದ್ದೂರರವರು ತಮ್ಮನ್ನು ಅತಿವೈಭವದಿಂದ ಸನ್ಮಾನಿಸಿದ್ದಕ್ಕಾಗಿ ಎಲ್ಲ ಆಭಾರ ಮನ್ನಿಸಿದನಂತರ, ಗವಯಿಗಳ ಗಾಯನವೂ ಬೇರೆ ಪದಪದ್ಯಗಳೂ ಅನ್ನಲ್ಪಟ್ಟವು. ಮತ್ತು ಪಾತ್ರದವರ ನಾಚು ಮಾಡಲ್ಪಟ್ಟಿತು. ಅಲ್ಲಿಂದ ಸರ್ವಮಹನೀಯರಿಗೂ ಹಾರತುರಾಯಿ ಪರಿಮಳಗಳನ್ನೂ ತಾಂಬೂಲವನ್ನೂ ಸಮರ್ಪಿಸಿ, ಬ್ರಿಟಿಶ ಸಾರ್ವಭೌಮ ಬಾದಶಹರವರ ಹಾಗೂ ನಾಮದಾರ ಶೆಫರ್ಡದೊರೆಗಳವರ ಮತ್ತು ರಾ.ಬ॥ರವರ ಆಯುರಾರೋಗ್ಯಭಾಗ್ಯಗಳ ಅಭಿವೃದ್ಧಿಗೋಸುಗ ಅವರವರ ಹೆಸರುಗಳಿಂದ ತ್ರಿವಾರ ಜಯಘೋಷವಾಗಿ ಸಭಾವಿಸರ್ಜನವಾಯಿತು.

ಮುಂದೆ ತಾರೀಖು ೧ನೇ ಫೆಬ್ರುವರಿ ಸನ್ ೧೯೧೪ ಇಸವಿ ರವಿವಾರ ದಿವಸ ಹಾರ್ಡಿಂಜ ಲಾಯಬ್ರರಿಯಲ್ಲಿ ಮುಖ್ಯವಾಗಿ ವಕೀಲ ಸಬ್‌ಜಜ್ಜ ಮೊದಲಾದ ಬ್ರಾಹ್ಮಣಜನರು ರಾ.ಬ॥ರವರಿಗೆ ಸ್ಪೇಶಲ್ ಪಾನಸುಪಾರಿ ಸಮಾರಂಭವನ್ನು ಮಾಡಿದರು. ಇಲ್ಲಿಯೂ ಜನಸಮೂಹವು ವಿಶೇಷವಾಗಿ ಕೂಡಿದ್ದು, ರಾ.ಬ॥ರವರ ಗುಣ ಕಾರ್ಯ ಪ್ರಶಂಸನಾಪರವಾದ ಕೆಲ ಭಾಷಣಗಳಾದವು. ಮಿ॥ದುರ್ಗೋಪಂತ ಎಂಬ ಹೆಸರಿನ ಪ್ರಸಿದ್ಧ ವಕೀಲರು ತಮ್ಮ ಭಾಷಣದಲ್ಲಿ ರಾ.ಬ॥ರವರನ್ನು ಭೀಷ್ಮಾಚಾರ್ಯರಿಗೆ ಹೋಲಿಸಿ, ಪರಿಪರಿಯಾಗಿ ಗೌರವಿಸಿದರು. ಭೀಷ್ಮಪ್ರತಿಜ್ಞೆಯು ಬಹುಶಃ ಎಲ್ಲರಿಗೂ ಗೊತ್ತುಂಟು. ಭಾಗವತಕಾಲದಲ್ಲಿ ಭೀಷ್ಮಾಚಾರ್ಯರು ತಮ್ಮ ಪ್ರತಿಜ್ಞೆಯನ್ನು ಆಮರಣ ಹೇಗೆ ನಡಿಸಿದರೋ ಅವರಂತೆ ರಾ.ಬ॥ರವರು ನ್ಯಾಯಮಾರ್ಗದಿಂದ ಹಿಡಿದ ಕಾರ್ಯವನ್ನು ಕಡೆಗಾಣಸದೆ, ಎಂದಿಗೂ ಬಿಡುವದಿಲ್ಲೆಂಬ ಮಾತನ್ನು ಭೀಷ್ಮಾಚಾರ್ಯರ ಉಪಮೆಯಿಂದ ಸಭಾಸದರಿಗೆ ಸ್ಪಷ್ಟಮಾಡಿತೋರಿಸಿದರು.

ತಾರೀಖು ೩ನೇ ಫೆಬ್ರುವರಿ ಸನ್ ೧೯೧೪ ಇಸವಿ ಮಂಗಳವಾರ ದಿವಸ ಅಲ್ಲಿಯ ಮಿ॥ ಗೋವಿಂದ ರಾಘವೇಂದ್ರ ಅಥವಾ ಜಾನರಾವ ಊರ್ಫ ಅಣ್ಣಾರಾವ ಸರದೇಸಾಯಿ ಮಣ್ಣೆಕೇರಿ ಎಂಬ ವೈಷ್ಣವ ಬ್ರಾಹ್ಮಣರು, ರಾವಬಹದ್ದೂರರವರನ್ನು ಬಹುಮರ್ಯಾದೆಯಿಂದ ತಮ್ಮ ವಾಡೆಗೆ ಕರೆದುಕೊಂಡು ಹೋಗಿ, ಒಳ್ಳೇ ವಿಜೃಂಭಣೆಯಿಂದ ತಾಂಬೂಲ ಸಮಾರಂಭವನ್ನು ಮಾಡಿದರು. ಸಭಾಸದರು ಸುಮಾರು ೨೦೦-೩೦೦ ಜನರು ಕೂಡಿದ್ದರು. ಒಳ್ಳೇ ಸೊಗಸಾದ ನಾಚು ಆಯಿತು. ಆ ದಿವಸ ರಾ.ಬ॥ರವರಿಗೆ ಅದೇ ಸರದೇಸಾಯಿಯವರ ಮೇಜವಾನಿ ಮಾಡಲ್ಪಟ್ಟಿತು.

ರಾ.ಬ॥ರವರು ಬಾಗಲಕೋಟೆಗೆ ಬಂದ ಮರುದಿವಸ ಅಂದರೆ ತಾ. ೨೭ನೇ ಜಾನೇವಾರಿ ಸನ್ ೧೯೧೪ ಇಸವಿ ಮಂಗಳವಾರ ದಿವಸ ಅಲ್ಲಿಯ ಇಂಗ್ಲೀಷ ಸ್ಕೂಲಿನಲ್ಲಿ ನಾಮದಾರ ಶೆಫರ್ಡ ದೊರೆಗಳಿಗೆ ಪಾನಸುಪಾರಿ ಸಮಾರಂಭವನ್ನು ಮಾಡಿದ್ದರು. ಮೆ॥ರವರ ಹಸ್ತದಿಂದ ಆಗ್ಗೆ ವಿದ್ಯಾರ್ಥಿಗಳಿಗೆ ಇನಾಮು

ಕೊಡಲ್ಪಟ್ಟಿತು. ಆ ಸಮಾರಂಭದಲ್ಲಿ ನಾಮದಾರವರು ಸರ್ವೋತ್ಕೃಷ್ಟವಾಗಿ ಭಾಷಣಮಾಡಿದರು. ಆಮಂತ್ರಿತರಾದ ರಾ.ಬ॥ರವರಾದರೂ ಈ ಸಮಾರಂಭಕ್ಕೆ ದಯಮಾಡಿಸಿದ್ದರು. ಈ ಮಹನೀಯರನ್ನು ಮೆ॥ರವರು ತಮ್ಮ ಬಲಕ್ಕೆ ತಮಗೆ ಹೊಂದಿಯೇ ಉಚಿತಾಸನದಲ್ಲಿ ಕೂಡ್ರಿಸಿಕೊಂಡಿದ್ದರು.

ಈ ಪ್ರಕಾರವಾಗಿ ಬಾಗಲಕೋಟಿಯವರು ಸಾರ್ವಜನಿಕವಾಗಿಯೂ, ಸ್ಪೇಶಲವಾಗಿಯೂ ತಾಂಬೂಲ ಸಮಾರಂಭಗಳನ್ನು ಜರುಗಿಸಿ ಕೀರ್ತಿಗೆ ಪಾತ್ರರಾದರು.

ವಿಜಾಪೂರದಲ್ಲಾದ ತಾಂಬೂಲ ಸಮಾರಂಭ

ಬಾಗಲಕೋಟಿಯ ತಾಂಬೂಲ ಸಮಾರಂಭವನ್ನು ಕಂಡು ವಿಜಾಪುರದವರು ತಮ್ಮಲ್ಲಿಯೂ ರಾ.ಬ॥ರವರ ಪಾನಸುಪಾರಿಯ ಸಮಾರಂಭ ಮಾಡಬೇಕೆಂದೆಣಿಸಿ, ಅದಕ್ಕಾಗಿ ಮುಂದೆ ೧೦-೧೧ ದಿವಸದೊಳಗಾಗಿಯೇ ಅಂದರೆ ತಾರೀಖು ೩ನೇ ಫೆಬ್ರುವರಿ ಸನ್ ೧೯೧೪ ಇಸವಿ ರವಿವಾರ ದಿವಸವನ್ನು ಗೊತ್ತುಪಡಿಸಿ, ಜಿಲ್ಲೆಯ ಮುಖ್ಯ ಮಂಡಳಿಗೆ ಆಮಂತ್ರಣಕೊಟ್ಟರು. ಶಹರವನ್ನೂ, ಸಮಾರಂಭದ ಮಂಟಪವನ್ನೂ ಅನೇಕ ವಿಧವಾಗಿ ಶೃಂಗರಿಸಿದ್ದರು. ನಾಮದಾರ ಮೆ॥ಶೆಫರ್ಡದೊರೆಗಳೂ ರಾವಬಹಾದ್ದೂರ ಅರಟಾಳ ಸಾಹೇಬರೂ ಕೂಡಿಯೇ ವಿಜಾಪುರಕ್ಕೆ ತಾರೀಖು ೬ನೇ ಶುಕ್ರವಾರ ಮುಂಜಾನೆ ಗಾಡಿಯಿಂದ ದಯಮಾಡಿಸುತ್ತಲೆ, ಸ್ಟೇಶನದ ಮೇಲೆ ಈ ಮಹನೀಯರ ಆಗಮನವನ್ನು ಕಾಯ್ದುಕೊಂಡು ಕೂತ ಪ್ರಮುಖರೆಲ್ಲರು ಇವರ ಸುಖಾಗಮನಕ್ಕೆ ಸಂತೋಷಿಸಿ, ಬೇಂಡ ವಾದ್ಯದಿಂದ ಸ್ವಾಗತಸತ್ಕಾರ ಮಾಡಿ, ಈ ಉಭಯ ಮಹನೀಯರನ್ನು ಹಾರ ತುರಾಯಿಗಳಿಂದ ಅಲಂಕರಿಸಿ, ರಥಗಳಲ್ಲಿ ಕೂಡ್ರಿಸಿ ರಾಜಮಾರ್ಗವಾಗಿ ಪುರಪ್ರವೇಶ ಮಾಡಿಸಿದರು.

ತಾರೀಖು ೭ನೇ ಶನಿವಾರ ದಿವಸ ಸಾಯಂಕಾಲಕ್ಕೆ ನಾಮದಾರ ಶೇಫರ್ಡ ದೊರೆಗಳ ಹಸ್ತದಿಂದ ಅಲ್ಲಿ ಹೊಸದಾಗಿ ತಯಾರಿಸಿದ ನೀರಿನ ನಳಗಳನ್ನು ಸುರುಮಾಡುವ (ಓಪನ್) ಕಾರ್ಯವು ಸಮಾರಂಭದಿಂದ ಜರುಗಿಸಲ್ಪಟ್ಟಿತು. ಈ ಸಮಾರಂಭ ಸಮಯದಲ್ಲಿ ಮಾಡಿದ ಮೆ॥ರವರ ಭಾಷಣವು ಬಲು ಸರಸಾಗಿ ಆಯಿತು.

ಪಾನಸುಪಾರಿಯ ಸಭಾಮಂಟಪವು, ವಿಜಾಪುರದಲ್ಲಿರುವ ರಾವಬಹಾದ್ದೂರ ಮಲ್ಲಪ್ಪಾ ಬಸಪ್ಪಾ ವಾರದ ಸೊಲ್ಲಾಪುರ ಇವರ ಅಂಗಡಿಯ ಎದುರಿಗಿರುವ ಮಿ. ರೇವಣಸಿದ್ಧಪ್ಪಾ ಜುಮ್ಮಾ ಇವರ ಭವ್ಯವಾದ ವಖಾರಿನಲ್ಲಿ ರಚಿಸಲ್ಪಟ್ಟಿತು. ತಾರೀಖು ೮ನೇ ಫೆಬ್ರುವರಿ ಸನ್ ೧೯೧೪ ಇಸವಿ ರವಿವಾರ ದಿವಸ ಸಾಯಂಕಾಲದ ೫ ಘಂಟೆಗೆ ಆ ಮಂಟಪದಲ್ಲಿ ಸಭೆಯು ಕೂಡಿಸಲ್ಪಟ್ಟಿತು. ಸಭೆಗೆ ಸುಮಾರು ನಾಲ್ಕಾರು ಸಾವಿರ ಜನರು ಕೂಡಿದ್ದರು. ಸ್ಥಳ ಸಾಲದೆ ಸಾವಿರಾರು ಜನರು ಹೊರಗೆ ಕೂತಿದ್ದರು. ರಾ.ಬ॥ಅರಟಾಳ ಸಾಹೇಬರವರೊಂದಿಗೆ ನಾಮದಾರ ಮೆ॥ಶೆಫರ್ಡ ದೊರೆಗಳೂ ಮೆ॥ಕಲೆಕ್ಟರ ಸಾಹೇಬರವರೂ, ಮೆ॥ಡಿಸ್ಟ್ರಿಕ್ಟ ಜಜ್ಜ ಸಾಹೇಬ ಬ॥ರವರೂ ಉಚಿತಾಸನಗಳನ್ನು ಅಲಂಕರಿಸಿದ್ದರು. ಉಳಿದ ಎಲ್ಲ ಸರಕಾರೀ ಅಧಿಕಾರಿಗಳೂ, ವಕೀಲರೂ, ಶ್ರೀಮಂತರೂ, ಸೆಟ್ಟರೂ ಸಾವಕಾರ ಜನರೂ, ದೇಸಾಯಿ ದೇಶಪಾಂಡೆ ದೇಶಮುಖ ಮೊದಲಾದ ಮಹನೀಯರೂ ಯೋಗ್ಯಾಸನಗಳಲ್ಲಿ ವಿಶ್ರಮಿಸಿದ್ದರು. ಸ್ವಾಗತಪರ ಭಾಷಣವಾದನಂತರ, ಪ್ರಸಿದ್ಧವಾಗ್ಮಿಗಳಾದ ಮಹಮ್ಮದೀಯ ಮತದ ಮಿ.ಮೌಲ್ವಿಸಾಹೇಬರೂ, ಬ್ರಾಹ್ಮಣಮತದ ಮಿ. ಅಜರೇಕರ ಮೊದಲಾದವರ ಭಾಷಣಗಳಾಗಿ ರಾ.ಬ॥ರವರ ಘನತರ ಕಾರ್ಯಗಳನ್ನು ಚೆನ್ನಾಗಿ ವರ್ಣಿಸಿದರು. ಬಳಿಕ ಶ್ರೀಮಂತ ಶಿವಲಿಂಗರಾವ ಜಯದೇವರಾವ ದೇಶಮುಖ ಆಲಮೇಲ ಇವರು ಮಾನಪತ್ರವನ್ನೋದಿ, ಅದನ್ನು ಒಂದು ಬಹು ಮೋಹಕವೂ ಸುಂದರವೂ

ಆದ ಕೌಪ್ಯಕರಂಡಕದಲ್ಲಿಟ್ಟು ನಾಮದಾರ ಶೆಫರ್ಡದೊರೆಗಳ ಹಸ್ತದಿಂದ ರಾ.ಬ॥ರವರಿಗೆ ಅರ್ಪಿಸಬೇಕೆಂದು ಸೂಚಿಸಿದರು. ಆ ಮೇಲೆ ನಾಮದಾರ ಶೆಫರ್ಡದೊರೆಗಳು ಸಭಾಸದರನ್ನು ಉದ್ದೇಶಿಸಿ "ರಾವಬಹಾದ್ದೂರ ಅರಟಾಳರವರು ತಮ್ಮ ಸರಕಾರೀ ಕೆಲಸದಲ್ಲಿ ತೋರಿಸಿದ ಚಾತುರ್ಯವನ್ನೂ, ದೃಢತರವಾದ ಇವರ ರಾಜನಿಷ್ಠೆಯನ್ನೂ ಕಂಡು ಸರಕಾರದವರು ಇವರಿಗೆ ಕೊಟ್ಟ ಕಿತಾಬಗಳನ್ನು ವಿವರಿಸಿ, ಇವರು ಇದಕ್ಕೂ ಹೆಚ್ಚಿನ ಪದವಿಗಳನ್ನು ಹೊಂದತಕ್ಕ ಯೋಗ್ಯತೆಯುಳ್ಳವರಿರುತ್ತಾರೆಂಬ ತಮ್ಮ ಉದ್ಗಾರವನ್ನು ಹೊರಪಡಿಸಿ, ಕರಂಡಕ ಸಮೇತವಾದ ಈ ಮಾನಪತ್ರವನ್ನು ಕೊಡಲಿಕ್ಕೆ ತಮಗೆ ಬಹಳೇ ಸಂತೋಷವಾಗುತ್ತದೆಂದು ಹೇಳಿ, ಅದನ್ನು ರಾ.ಬ॥ರವರಿಗೆ ಅರ್ಪಣ ಮಾಡಿದರು. ಬೃಹಸ್ಪತಿಯಂತೆ ಬಹು ಗಂಭೀರವಾಗಿ ಮಾಡಿದ ನಾಮದಾರ ಶೆಫರ್ಡದೊರೆಗಳ ಭಾಷಣವನ್ನು ಕೇಳಿ ಸಭಾಸದರು ಚಕಿತರಾದರು. ಅವರ ಭಾಷಣವನ್ನು ಅಕ್ಷರಶಃ ಮುದ್ರಿಸಿ ಇದರ ಕೆಳಗೆ ಅಂಟಿಸಿರುತ್ತದೆ. ವಾಚಕರು ಓದಿ ಮನನ ಮಾಡಿಕೊಳ್ಳತಕ್ಕದ್ದು.

The speech made by the Honourable Mr. W.D. Sheppard, C.I.E., I.C.S., Commissioner S.D. on the occasion of the pan supari party held in honour of R.B.R.C. Artal, I.S.O. at Bijapur on Sunday, the 8th of February 1914.

It gives me much pleasure to be present at this large representative assembly of all classes of the people of Bijapur town and District who have come here to day to honour to our late Deputy Collector Rao Bahadur Artal.

Government have had many good Indian Officers, but I can conscientiously say that to none of them would I assign a higher place than that to which the Rao Bahaddur has attained in the estimation of those who know him. Government have recognised the worth of the Rao Bahaddur, first by giving him the title of Rao Bahadur and secondly by making him a member of the Imperial Service Order- an order which was newly introduced into India on the occasion when Rao Bahaddur received it.

I have therefore much pleasure both as the Senior Officer of Government present on this occasion, as a former resident of Bijapur, and finally as a personal friend of Rao Bahaddur Artal, in associating myself with all of you, gentlemen, who have assmebled here today to present this beautiful casket and this interesting address to Rao Bahaddur Rudragowda Artal, I.S.O.

ಮಾನಪತ್ರವನ್ನು ಸ್ವೀಕರಿಸಿ ರಾವಬಹಾದ್ದೂರರವರು ಎದ್ದು ನಿಂತು "ಸರಕಾರೀ ಕೆಲಸದಲ್ಲಿ ಆದಷ್ಟು ರೈತರ ಹಿತಚಿಂತನೆಯನ್ನೇ ಮಾಡುತ್ತಿದ್ದೆನೆಂತಲೂ, ಯಾವ ಪ್ರಕರಣಬಂದರೂ ಸ್ಥಾನಿಕ ವಿಚಾರಣೆ ಮಾಡದೆ ಅದರ ನಿಕಾಲೆ ಮಾಡುತ್ತಿರಲಿಲ್ಲವೆಂತಲೂ, ಇದು ನನ್ನ ಕರ್ತವ್ಯವಾಗಿತ್ತೆಂತಲೂ, ಲಿಂಗಾಯತ ಫಂಡಿಗೂ, ಕರ್ನಾಟಕ ಕಾಲೇಜ ಫಂಡಿಗೂ ಲಿಂಗಾಯತರು ಯಥೇಷ್ಟ ಹಣಕೊಟ್ಟು, ನನಗೆ ಸಹಾಯ ಮಾಡಿದುದರಿಂದ ನನ್ನ ಸರ್ವಶ್ರೇಯಸ್ಸಿಗೂ ಸಮಾಜ ಬಾಂಧವರೇ ಕಾರಣರೆಂತಲೂ" ಹೇಳಿ ತಮ್ಮ ಇಷ್ಟು ಸಮಾರಂಭದಿಂದ ಮಾನಪತ್ರವಿತ್ತ ಬಗ್ಗೆ ವಿಜಾಪುರದವರ ಆಭಾರವನ್ನು ಮನ್ನಿಸಿದರು. ಆಮೇಲೆ ಪಾರಿಜಾತ ಆಟದಲ್ಲಿ ಪ್ರಸಿದ್ಧನಾದ ರಾ॥ಸಿದ್ಧರಾಮಪ್ಪ ಮುಗಳಿ ತಾಲೂಕ ಹುಕ್ಕೇರಿ ಮೊದಲಾದವರ ಗಾಯನ ಸಮಾರಂಭವಾಗಿ ಶ್ರೀ ಜಾರ್ಜ ಬಾದಶಹರವರ ಹಾಗೂ ನಾಮದಾರ ಶೆಫರ್ಡ ದೊರೆಗಳವರ ಮತ್ತು ರಾವಬಹದ್ದೂರರವರ ಜಯಜಯಕಾರದಲ್ಲಿ ಹಾರ ತುರಾಯಿ ಪರಿಮಳ ದ್ರವ್ಯ ತಾಂಬೂಲಾದಿಗಳು ಹಂಚಲ್ಪಟ್ಟು, ಸಭಾವಿಸರ್ಜನೆಯಾಯಿತು.

ಮುಂದೆ ಮೂರು ದಿವಸಕ್ಕೆ ಅಂದರೆ ತಾರೀಖು ೧೧ನೇ ಫೆಬ್ರುವರಿ ಸನ್ ೧೯೧೪ ಇಸವಿ ಬುಧವಾರ ದಿವಸ ವಿಜಾಪುರದ ಬ್ರಾಹ್ಮಣ ವಕೀಲ ಮೊದಲಾದವರು ನಾಮದಾರ ಮೆ॥ಶೆಫರ್ಡ ದೊರೆಗಳವರಿಗೂ

ರಾ.ಬ॥ಅರಟಾಳ ಸಾಹೇಬರವರಿಗೂ ಬಹು ವೈಭವದೊಡನೆ ಸ್ಪೆಶಲ್ ತಾಂಬೂಲ ಸಮಾರಂಭವನ್ನು ಜರುಗಿಸಿದರು. ಅಲ್ಲಿಯ ತಮ್ಮ ಭಾಷಣದಲ್ಲಿ ಮೆಹರ್ಬಾನರವರು ಕರ್ನಾಟಕ ಕಾಲೇಜದ ಫಂಡು ಕೂಡಿಸಿದ ಬಗ್ಗೆ ರಾ.ಬ॥ಅರಟಾಳ ಸಾಹೇಬರರವರನ್ನು ಬಹಳೇ ಶಿಫಾರಸ ಮಾಡಿದರು. ಈ ಬಗೆಯಾಗಿ ವಿಜಾಪುರದಲ್ಲಿ ತಾಂಬೂಲ ಸಮಾರಂಭವು ವಿಜೃಂಭಣೆಯಿಂದ ಸಾಂಗವಾಯಿತು.

ಅರಟಾಳದ ತಾಂಬೂಲ ಸಮಾರಂಭ

ತಾ. ೨೬ನೇ ಎಪ್ರೀಲ್ ಸನ್ ೧೯೧೪ ಇ.

ರಾವಬಹಾದ್ದೂರ ಅರಟಾಳ ಸಾಹೇಬರವರು ಸರಕಾರೀ ಕೆಲಸಮಾಡಿ, ಅದ್ವಿತೀಯ ಕೀರ್ತಿಯನ್ನು ಪಡೆದುದರಿಂದ ಬೆಳಗಾವ ಧಾರವಾಡ ವಿಜಾಪುರ ಜತ್ತಗಳಲ್ಲಿಯೂ ಮತ್ತು ಆ ಜಿಲ್ಲೆಗಳಿಗೊಳಪಟ್ಟ ಕೆಲ ದೊಡ್ಡ ಸ್ಥಳಗಳಲ್ಲಿಯೂ ಇವರ ಅಭಿನಂದನೀಯವಾದ ತಾಂಬೂಲ ಸಮಾರಂಭಗಳಾಗಿ, ಮೌಲ್ಯವಾದ ರೌಪ್ಯಕರಂಡಕ ಸಮೇತವಾದ ಮಾನಪತ್ರಗಳು ದೊರೆತು, ಇವರ ಮೇಲೆ ಸುವರ್ಣಪದಕಗಳ ವೃಷ್ಟಿಯಾದದ್ದನ್ನು ಕಂಡು, ಇವರ ಜನ್ಮಭೂಮಿಯಾದ ಅರಟಾಳ ಗ್ರಾಮದವರು ಅರ್ಥಾತ್ ಆ ಗ್ರಾಮಕ್ಕೆ ಸಂಬಂಧಿಸಿದ ಬಂಕಾಪುರ ತಾಲೂಕಿನವರು ಕೂಡಿ, ಅರಟಾಳ ಗ್ರಾಮದಲ್ಲಿಯೇ ಪಾನಸುಪಾರಿ ಸಮಾರಂಭವನ್ನು ಬಹು ಸಡಗರದಿಂದ ಮಾಡಿ ರಾ.ಬ॥ರವರನ್ನು ಅಭಿನಂದಿಸುವುದು ಯೋಗ್ಯವೆಂದು ಬಗೆದು, ಸದರೀ ಸಮಾರಂಭವನ್ನು ತಾರೀಖು ೨೬ನೇ ಎಪ್ರೀಲ್ ಸನ್ ೧೯೧೪ ಇಸವಿ ರವಿವಾರ ದಿವಸ ಮಾಡುವದಾಗಿ ನಿರ್ಧರಿಸಿ, ಎಲ್ಲ ಕಡೆಯ ಮುಖಂಡ ಮಂಡಳಿಗೆ ಆಮಂತ್ರಣಕೊಟ್ಟರು.

ಈ ಸಮಯಕ್ಕೆ ರಾ.ಬ॥ರವರ ದತ್ತಪುತ್ರರಾದ ಚನ್ನವೀರಗೌಡ ಊರ್ಫ ಬಾಬಾಸಾಹೇಬರು ಸುಮಾರು ಎರಡೂವರೆ ವರ್ಷದವರಾದದರಿಂದ, ಇದೇ ಸಂಧಿಯಲ್ಲಿ ಅವರ ಜಾವಳಕಾರ್ಯವನ್ನು ಅರಟಾಳದ ಶ್ರೀ ವೀರಭದ್ರದೇವರ ಸನ್ನಿಧಿಯಲ್ಲಿ ನೆರವೇರಿಸಬೇಕೆಂದು ಚಚಡಿಯ ಶ್ರೀಮಂತ ಅಣ್ಣಾಸಾಹೇಬರವರು, ರಾ.ಬ॥ರವರೊಬ್ಬರನ್ನು ಬಿಟ್ಟು ಉಳಿದ ಯಾವತ್ತು ಪರಿವಾರವನ್ನು ಕರಕೊಂಡು ಮುಂದಾಗಿಯೆ ಅರಟಾಳಕ್ಕೆ ದಯಮಾಡಿಸಿದರು. ಬಂದಕೂಡಲೆ ಶ್ರೀಮಂತರು ಶ್ರೀ ಶಿಗ್ಗಾವಿಯ ಚರಮೂರ್ತಿಗಳನ್ನೂ ಮಿ॥ ಹುತ್ತಪ್ಪಾ ಗೂಳಪ್ಪಾ ಹುರಳೀಕುಪ್ಪಿ ಮಜರೆ ಕೊಪ್ಪ ಕಸಬಾ ಅರಟಾಳ ಮೊದಲಾದ ಪ್ರಮುಖರನ್ನೂ, ರೈತಜನರನ್ನೂ ಕೂಡಿಕೊಂಡು ಪುರಶೃಂಗಾರ-ಮಂಟಪ ಮೊದಲಾದ ಸರ್ವವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿಸಿ, ಶಕೆ ೧೮೩೬ನೇ ಚೈತ್ರ ಶುದ್ಧ ೫ ಬುಧವಾರ (ತಾ. ೧ನೇ ಎಪ್ರೀಲ ೧೯೧೪ ಇ) ಮುಂಜಾನೆ ೯ ಘಂಟೆಯ ಸುಮಾರಕ್ಕೆ ಬಾಬಾಸಾಹೇಬರ ಜಾವಳಕಾರ್ಯವನ್ನು ಅರಟಾಳದ ಶ್ರೀ ವೀರಭದ್ರದೇವರ ಸನ್ನಿಧಿಯಲ್ಲಿ ಬಹು ಸಮಾರಂಭದಿಂದ ಸಾಂಗಮಾಡಿ, ಪ್ರಸ್ಥಪ್ರಯೋಜನಾದಿಗಳಿಂದ ಜಂಗಮರನ್ನೂ, ಯಾಚಕರನ್ನೂ ಆಪ್ತೇಷ್ಟ ಬಂಧುಬಳಗವನ್ನೂ ತೃಪ್ತಿಗೊಳಿಸಿದರು. ಈ ಜಾವಳಕಾರ್ಯದಲ್ಲಿ ಸುಮಾರು ಎರಡು ಮೂರು ಸಾವಿರ ಜನರ ಭೋಜನವಾಯಿತು. ಶ್ರೀಮಂತರ ಉದಾರವಾದ ಹಸ್ತದಲ್ಲಿ ಎಲ್ಲ ಜನರೂ ಸಂತುಷ್ಟಿಯನ್ನು ಹೊಂದಿದರು.

ಈ ಸಮಯಕ್ಕೆ ಊರ ಶೃಂಗಾರವು ಚೆನ್ನಾಗಿ ಆಗಿತ್ತು. ತಳಿರ್ದೋರಣ ಧ್ವಜಪತಾಕೆಗಳಿಂದ ಓಣಿಗಳನ್ನು ಶೃಂಗರಿಸಿ, ಊರ ಅಗಸಿಯಿಂದ ಧುಂಡಸಿಯ ರಸ್ತೆಯ ವರೆಗೆ ಇಬ್ಬದಿಗಳಲ್ಲಿ ತರತರದ ಬಣ್ಣದ ವಸ್ತ್ರಗಳ ಪತಾಕೆಗಳನ್ನು ಸಾಲ್ಗೊಂಡು ನಿಲ್ಲಿಸಿದ್ದರು. ಲಮಾಣಿಯರು ತಮ್ಮ ತಾಂಡೇದ ಹತ್ತರ ರಾ.ಬ॥ರವರ ಆಗಮನ ಪ್ರೀತ್ಯರ್ಥವಾಗಿ ರಸ್ತೆಯ ಮೇಲೆ ಸುಂದರವಾದ ಪತಾಕೆಗಳನ್ನು ಮಂಟಪಾಕಾರವಾಗಿ ಸಾಂದ್ರವಾಗಿ ನಿಲ್ಲಿಸಿ,

ಅಲ್ಲಿ ವಿಶೇಷ ಶೋಭೆಯನ್ನುಂಟು ಮಾಡಿದ್ದರು. ದೇವಾಲಯಗಳ ಮುಂದೆ ಉನ್ನತವಾದ ಧ್ವಜಗಳು ನಿಂತಿದ್ದು, ಬಣ್ಣದಿಂದ ಅಲಂಕೃತವಾದ ರಾ.ಬ॥ರವರ ಹೊಸಮನೆಯ ಮುಂದೆ ಬಹು ಸುಂದರವಾದ ಮಂಟಪವನ್ನು ರಚಿಸಿದ್ದರು. ಅಡಿಕೆಯ ಕಂಬಗಳನ್ನು ನಿಲ್ಲಿಸಿ, ವಿಸ್ತಾರವಾದ ಮಂಟಪವು ರಚಿಸಲ್ಪಟ್ಟಿತ್ತು. ಶುಭ್ರವಾದ ಛತ್ತುಹೊಡೆದು, ಸುತ್ತಲೂ ಮಲಮಲಿಯ ನಿರಿಗಿಯ ಗೋಟುಗಳನ್ನು ಇಳಿಬಿಟ್ಟಿದ್ದರು. ಗರ್ಭಮಂಟಪವು ಸುತ್ತಲೂ ಕಮಾನುಗಳುಳ್ಳದ್ದಾಗಿ, ಆ ಕಮಾನುಗಳಿಗೆ ಜಪಾನೀ ಕಾಗದದ ಹೂಬಳ್ಳಿಗಳು ಹಬ್ಬಿಕೊಂಡಿದ್ದವು. ಮತ್ತು ಎತ್ತ ನೋಡಿದತ್ತ ಸುತ್ತುವರಿದು ಮಂಟಪದ ಮೇಲ್ಭಾಗದಲ್ಲಿ ಕಾಗದದ ಪುಷ್ಪಲತೆಗಳೂ ತರತರದ ಚಿತ್ರಗಳುಳ್ಳ ಜಪಾನೀ ಪತಾಕೆಗಳೂ ಕಟ್ಟಲ್ಪಟ್ಟಿದ್ದವು. ಇನ್ನೂ ಅನೇಕ ವಿಧವಾದ ಜಪಾನೀ ಹಂಡೆ ಮೊದಲಾದ ಚಿತ್ರವಿಚಿತ್ರವಾದ ಸಾಮಾನುಗಳು ಮನೋಹರವಾಗಿ ಜೋಲಾಡುತ್ತಿದ್ದವು. ಕಂಬಗಳಿಗೆಲ್ಲ ಬಣ್ಣದ ವಸ್ತ್ರಗಳೂ ಕಾಗದಗಳೂ ಸುತ್ತಲ್ಪಟ್ಟಿದ್ದವು. ಪಶ್ಚಿಮಾಭಿಮುಖವಾಗಿ ಮಂಟಪವು ರಚಿಸಿದ್ದು, ಮಂಟಪಕ್ಕೆ ತಕ್ಕಂತೆ ಅದರ ಸದರಾದರೂ ಬಲು ಸೊಬಗುಳ್ಳದ್ದಾಗಿತ್ತು. ಮನೆಯ ಬಾಗಿಲಕ್ಕೆ ನೀಟಾಗಿ ಗರ್ಭಮಂಟಪದ ನಡುವಿನ ಅಂಕಣದಲ್ಲಿ ಸದರಿನ ಆಸನವು ರಚಿಸಲ್ಪಟ್ಟಿತ್ತು. ರೇಶಿಮೆಯ ವಸ್ತ್ರಗಳಿಂದಲೂ, ತರತರದ ಬಣ್ಣಗಳಿಂದ ಹೊಳೆಯುವ ಕಾಗದಗಳಿಂದಲೂ, ಸದರು ವಿಶೇಷ ಶೋಭೆಯುಳ್ಳದ್ದಾಗಿತ್ತು. ಈ ಮಂಟಪವನ್ನು ಶಿ.ರಾ॥ಗದ್ದಿಗೆಯ್ಯಾ ಗೌರೀಮಠ ಸಾಕೀನ ಬಂಕಾಪುರ ಮತ್ತು ರಾಚಯ್ಯ ಪ್ರಭುವಯ್ಯಾ ಬಸಾಪುರಮಠ ಮುಕ್ಕಾಂ ಧುಂಡಸಿ ಇವರಿಬ್ಬರು ಬಹು ಶ್ರಮಪಟ್ಟು ರಚಿಸಿದ್ದರು. ಈ ಪ್ರತಿಯೊಂದು ಕೆಲಸದಲ್ಲಿ ಚಚಡಿಯ ಶ್ರೀಮಂತ ಅಣ್ಣಾಸಾಹೇಬರು ಮೇಲ್ವಿಚಾರಕರಾಗಿ ಅಹೋರಾತ್ರಿ ದಕ್ಷರಾಗಿದ್ದರು. ಹೊಸಮನೆಯ ಎಡಭಾಗದಲ್ಲಿ ರಾವಬಹಾದ್ದೂರರವರು ವಿಶ್ರಮಿಸುವದಕ್ಕಾಗಿ ಎರಡು ತಂಬೂ ಹೊಡೆಯಲ್ಪಟ್ಟಿದ್ದವು. ಉತ್ಸವಕ್ಕೆ ಬರುವ ಯಾವತ್ತು ಸಭಾಸದರ ಬಗ್ಗೆ ಭೋಜನ ಸಿದ್ಧತೆಯು ಹಳೇ ಮನೆಯಲ್ಲಿ ಮಾಡಲ್ಪಟ್ಟಿತ್ತು. ಹಳೆಮನೆಯ ಹಿತ್ತಲಲ್ಲಿ ಪ್ರಶಸ್ತವಾದ ಪಾಕಶಾಲೆಯೂ, ಅದಕ್ಕೆ ಹೊಂದಿ ವಿಸ್ತಾರವಾದ ಭೋಜನಶಾಲೆಯೂ ಮಂಟಪಗಳನ್ನು ಹಾಕಿ ನಿರ್ಮಿಸಲ್ಪಟ್ಟಿದ್ದವು. ಮತ್ತು ಸಾಕಷ್ಟು ಸಾಮಗ್ರಿಗಳಿಂದ ತುಂಬಿದ ಉಗ್ರಾಣವು ಆ ಹಳೆಮನೆಗೆ ಹೊಂದಿ ಇರುವ ಇವರ ಬತ್ತದ ಕಣಜಗಳ ಮನೆಯಲ್ಲಿ ಮಾಡಲ್ಪಟ್ಟಿತ್ತು. ಸಾರಾಂಶ, ಸಾಹೇಬ ಬಹಾದ್ದೂರರವರ ಠೀವಿಗಿರಲವಶ್ಯವಾಗಿರುವ ಸರ್ವ ಏರ್ಪಾಡು ಸಜ್ಜವಾಗಿತ್ತು.

ಇತ್ತ ರಾವಬಹಾದ್ದೂರರವರು ತಾರೀಖು ೨೧ನೇ ಎಪ್ರೀಲ ಸನ್ ೧೯೧೪ ಇಸವಿ ಮಂಗಳವಾರ ದಿವಸ ಮುಂಜಾನೆ ಹೊರಟು, ಮೊಟಾರು ಬಂಡಿಯ ಮೇಲಿಂದ ಮುಂಜಾನೆ ಒಂಭತ್ತೂವರೆ ಗಂಟೆಗೆ ಬೆಳಗಾವಿಯನ್ನು ಬಿಟ್ಟು, ಪೂನಾ ಹರಿಹರ ರಸ್ತೆಯ ಮಾರ್ಗವಾಗಿ ಹೊರಟು ೧೧ ಗಂಟೆಯ ಸುಮಾರಕ್ಕೆ ಕಿತ್ತೂರಿಗೆ ಬರುವಷ್ಟರಲ್ಲಿ, ಅಲ್ಲಿ ರಸ್ತೆಯ ಮೇಲಿರುವ ಧರ್ಮಶಾಲೆಯಲ್ಲಿ ಕಿತ್ತೂರ ಶಾಳಾಮಾಸ್ತರರಾದ ಶ್ರೀ ರಾ॥ ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಇವರು ತಮ್ಮ ವಿದ್ಯಾರ್ಥಿಗಳನ್ನೂ ಮಿ. ಚನ್ನಮಲ್ಲಪ್ಪಾ ಅಡಿವೆಪ್ಪಣ್ಣಾ ವಳಸಂಗದ, ಚನ್ನಮಲ್ಲಪ್ಪಾ ಶಿವಯೋಗಪ್ಪಾ ನಾಗಲಾಪುರ, ರಾಮಚಂದ್ರ ನರಸೋ ಕುಲಕರಣಿ ಮೊದಲಾದ ಮುಖಂಡ ಮಂಡಳಿಯನ್ನೂ ಕೂಡಿಕೊಂಡು ಬಂದು ರಾ.ಬ॥ರವರಗೆ ಪಾನಸುಪಾರಿ ಮಾಡಿದರು. ಚೆನ್ನಬಸವ ಬಸವಾರ್ಯ ಹಿರೇಮಠ ಮತ್ತು ಬಂಡೋ ಕೃಷ್ಣಾಚಾರ್ಯ ಹಾವನೂರ ಈ ವಿದ್ಯಾರ್ಥಿಗಳಿಬ್ಬರೂ ರಾ.ಬ॥ರವರ ಸ್ವಾಗತಪದವನ್ನೂ, ರಾಷ್ಟ್ರಗೀತವನ್ನೂ ಪಿಯಾನೋಸ್ವರದ ಮೇಳದೊಂದಿಗೆ ಮನೋಹರವಾಗಿ ಹಾಡಿದರು. ಅಲ್ಲಿ ತಾಸು ದೀಡತಾಸು ವಿಶ್ರಾಂತಿಯನ್ನು ಹೊಂದಿ ಶ್ರೀ ರಾ॥ಬಸವಾರ್ಯರನ್ನು ಸಂಗಡ ಕರಕೊಂಡು ರಾ.ಬ॥ರವರು ಮೊಟಾರು ಬಂಡಿಯನ್ನೇರಿದರು. ಬಹಳ ದಿವಸಕ್ಕಾದ ರಾ.ಬ॥ರವರ ದರ್ಶನ ಲಾಭದಿಂದ ಕಿತ್ತೂರ ಜನರು ಸಂತುಷ್ಟರಾದರು. ೧೨ ಗಂಟೆಯ ಸುಮಾರಕ್ಕೆ ಕಿತ್ತೂರನ್ನು ಬಿಟ್ಟು, ಮೋಟಾರು ಬಂಡಿಯು

ವಾಯುವೇಗದಿಂದ ಸಾಗಿ, ಒಂದೇ ಒಂದು ತಾಸಿನಲ್ಲಿ ರಾ.ಬ॥ರವರನ್ನು ಧಾರವಾಡಕ್ಕೆ ತಂದು ಇಳಿಸಿತು. ಅಲ್ಲಿ ರಾ॥ಬ॥ರವರು ಹುಚ್ಚರ ಆಸ್ಪತ್ರೆಯ ಹತ್ತಿರಿರುವ ಡಾಕ್ಟರ ಸುಬ್ರಾಯಂ ಮಾಣಿಕ್ಯಂ ಮುದಲಿಯಾರ ಇವರ ಭೆಟ್ಟಿಯಾಗಿ, ಕುಶಲವಾರ್ತೆಯನ್ನು ವಿಚಾರಿಸುತ್ತ ಅವರ ಮನೆಯಲ್ಲಿ ಅರ್ಧತಾಸಿನ ವಿಶ್ರಾಂತಿಯನ್ನು ಹೊಂದಿ ಅಲ್ಲಿಂದ ಹೊರಟು, ದಾರಿಯ ಮೇಲೆ ಮಿ॥ ಶಾಂತವೀರಪ್ಪಾ ವೀರಸಂಗಪ್ಪಾ ಮೆಣಸಿನಕಾಯಿ ಪೆನಶನರ ಡಿ.ಡಿ. ಕಲೆಕ್ಟರ ಧಾರವಾಡ ಇವರ ಭೆಟ್ಟಿ ತಕ್ಕೊಂಡು, ೨ ಗಂಟೆಯ ಸುಮಾರಕ್ಕೆ ಹುಬ್ಬಳ್ಳಿಗೆ ಬರುವವರಾದರು. ರಾ.ಬ॥ರವರು ಮೋಟಾರು ಬಂಡಿಯಿಂದ ಬಂದಾರೆಂದು ಧಾರವಾಡ-ಹುಬ್ಬಳ್ಳಿಯವರು ತಿಳಿದಿದ್ದಿಲ್ಲ. ಯಾಕಂದರೆ ಆ ದಿವಸ ರೇಲಮಾರ್ಗವಾಗಿ ಮೇಲ್‌ಟ್ರೇನಿನಿಂದ ಬರುವೆವೆಂದು ಅವರಿಗೆ ರಾ.ಬ॥ರವರಿಂದ ಪತ್ರ ಬಂದ ಪ್ರಕಾರ ಅವರು ಉಗಿಬಂಡಿಯ ವೇಳೆಗೆ ಸರಿಯಾಗಿ ರಾ.ಬ॥ರವರನ್ನು ಕಂಡುಕೊಳ್ಳಲೋಸುಗ ೩ ಗಂಟೆಯ ಸುಮಾರಕ್ಕೆ ಸ್ಟೇಶನಕ್ಕೆ ಹೋಗುವ ಸಿದ್ಧತೆಯಲ್ಲಿದ್ದರು. ಆದರೆ ರಾ.ಬ॥ರವರು ಒಂದು ತಾಸು ಮುಂದಾಗಿಯೇ ಮೋಟಾರುಗಾಡಿಯಿಂದ ದಯಮಾಡಿಸಿದುದನ್ನು ಕಂಡು ಶಹರದ ಹೊರಗೆ ತಿರುಕಾರಾಮನ ಕೆರೆಯ ಹತ್ತರಿರುವ ಶ್ರೀ ಮೂರು ಸಾವಿರಮಠ ಮಹಾಸ್ವಾಮಿಗಳ ಜಿನ್ನಿಂಗ ಇಂಜನಿಯರರೂ, ಮ್ಯಾನೇಜರರೂ ರಾ॥ಬ॥ರವರನ್ನು ಕಂಡು ಮರ್ಯಾದೆಯಿಂದ ಪ್ರೆಸ್ಸಿನೊಳಗೆ ಕರಕೊಂಡು ಹೋಗಿ, ಅಲ್ಲಿ ಒಂದು ಪಟಾಂಗಣದಲ್ಲಿ ಮೊದಲೇ ತಯಾರಿಸಿದ ಉಚಿತಾಸನಗಳಲ್ಲಿ ಕುಳ್ಳಿರಿಸಿ, ಒಬ್ಬರು ಆಗಿಂದಾಗ ಕಾಲ್ಗಾಡಿಯ ಮೇಲಿಂದ ಊರೊಳಗೆ ಹೋಗಿ ಸೆಟ್ಟರು ಸಾವಕಾರರು ಮೊದಲಾದವರನ್ನು ಕರಕೊಂಡು ಬಂದರು. ಅವರೆಲ್ಲರು ಬಂದು ರಾವಬಹಾದ್ದೂರರವರನ್ನು ಕಂಡು ಪರಮಹರ್ಷಿತರಾಗಿ, ಹಾರತುರಾಯಿ ಪರಿಮಳಗಳಿಂದ ಅವರನ್ನು ಸತ್ಕರಿಸಿ, ಕೂಡಲೆ ಮೋಟಾರಗಾಡಿಯಲ್ಲಿ ಕುಳ್ಳಿರಿಸಿಕೊಂಡು ರಾಜಬೀದಿಯಿಂದ ಸಾಗಿ ಪ್ರಸಿದ್ಧ ಸಾವಕಾರರಾದ ಚನ್ನಬಸಪ್ಪಾ ಬಿನ್ ಅಡಿವೆಪ್ಪಾ ನೀಲಿ ಮತ್ತು ಮಿ॥ ಗುರುಸಿದ್ಧಪ್ಪಾ ಬಿನ್ ಚೆನ್ನವೀರಪ್ಪಾ ನೀಲಿ ಇವರ ಮನೆಗೆ ಕರಕೊಂಡು ಬಂದರು. ಪೇಟೆಯಲ್ಲಿ ಬರುವಾಗ ಜನರು ಬಹಳ ಕೂಡಿದ್ದರು. ಜನರ ದಟ್ಟಣೆಯ ಸಲುವಾಗಿ ಮೋಟಾರ ಬಂಡಿಯು ಬಹಳ ಸಾವಕಾಶವಾಗಿ ಬರುವದಾಯಿತು. ನೀಲಿಯವರ ಮನೆಯಲ್ಲಿಯೂ ಎಷ್ಟೋ ಸೆಟ್ಟರೂ ಸಾವಕಾರರೂ ವರ್ತಕರೂ ಕೂಡಿದ್ದರು. ಜನರಿಂದ ತುಂಬಿ ತುಳುಕುತ್ತಿರುವ ನೀಲಿಯವರ ಮನೆಯಲ್ಲಿ ರಾ.ಬ॥ರವರ ಪಾನಸುಪಾರಿಯ ಸಮಾರಂಭವು ಬಹು ಚೆನ್ನಾಗಿ ಆಯಿತು. ಇಷ್ಟಾಗುವದರೊಳಗಾಗಿ ಮೂರವರೆ ಗಂಟೆಯಾಯಿತು. ಉಪಾಹಾರ ತೀರಿಸಿಕೊಂಡು ತೆರಳಬೇಕೆಂದು ಮಿ॥ ಚನ್ನಬಸಪ್ಪಣ್ಣಾ ನೀಲಿ ಇವರು ವಿನಂತಿಯನ್ನು ಮಾಡಿಕೊಳ್ಳಲು ವೇಳೆಯಾಗುತ್ತವೆಂದು ಹೇಳಿ ಅವರೆಲ್ಲರ ಆಭಾರವನ್ನು ಮನ್ನಿಸಿ, ಅವರ ನಿರೂಪದೊಂದಿಗೆ ರಾ.ಬ॥ಅರಟಾಳ ಸಾಹೇಬರು ಅರಟಾಳಾಭಿಮುಖರಾದರು. ಅಲ್ಲಿ ಉಪಾಹಾರವಾಗದ್ದರಿಂದ ನೀಲಿಯವರು ಎಷ್ಟೋ ಹಣ್ಣುಹಂಪಲಗಳನ್ನು ಮೋಟಾರ ಗಾಡಿಯಲ್ಲಿಟ್ಟುಬಿಟ್ಟರು.

ಹುಬ್ಬಳ್ಳಿಯಿಂದ ಮೋಟಾರ ಗಾಡಿಯು ಬಲುವೇಗದಿಂದ ಸಾಗಿಹೋಗುತ್ತಿತ್ತು. ಬೇಸಿಗೆಯ ಪ್ರಖರವಾದ ಬಿಸಿಲಿನ ತಾಪವಿದ್ದರೂ ವೇಗದಿಂದ ಹೋಗುವ ಮೋಟಾರು ಬಂಡಿಯಲ್ಲಿ ಯಥೇಷ್ಟವಾಗಿ ಗಾಳಿಯು ದೊರೆತು, ಪ್ರವಾಸಿಕರಿಗೆ ಸುಖವೇ ಉಂಟಾಗುತ್ತಿತ್ತು. ಆಗ ವಸಂತ ಋತುವಿದ್ದದರಿಂದ ತರುಲತೆಗಳೆಲ್ಲ ಚಿಗಿತು ವನಶೋಭೆಯು ಮನೋಹರವಾಗಿತ್ತು. ರಥಾಸೀನರಾದ ರಾ.ಬ॥ರವರು ಸಂಗಡ ಇದ್ದ ಬಸವಾರ್ಯರೊಡನೆ ತಮ್ಮ ಬಾಲಲೀಲೆಗಳನ್ನೂ, ಮಹತ್ಕಾರ್ಯಗಳನ್ನೂ ಕುರಿತು ಸಂಭಾಷಿಸುತ್ತಿರಲು ೫ ಗಂಟೆಯ ಸುಮಾರಕ್ಕೆ ಮೋಟಾರು ಬಂಡಿಯು ರಸ್ತೆಗೆ ಹೊಂದಿ ಇರುವ ಅಡವಿ ಸೋಮಾಪುರವೆಂಬ ಗ್ರಾಮದ ಸಮೀಪಕ್ಕೆ ಬಂತು. ಆ ಗ್ರಾಮದ ಪಾಟೀಲರಾದ ವೀರನಗೌಡರು ತಮ್ಮ ಗ್ರಾಮದ ರೈತರು ಮೊದಲಾದ ಜನಸಮೂಹದಿಂದ ತಾಸೆ ಸನಾದಿ ಕರಡೀಮಜಲುಗಳ ಮೇಳದೊಡನೆ ಬಂದು ರಾ.ಬ॥ರವರನ್ನು ಕಂಡು ಸಂತೋಷಿತರಾಗಿ "ತಮ್ಮ

ಪಾದಧೂಳಿಯು ನಮ್ಮ ಈ ಬಡಗ್ರಾಮದಲ್ಲಿ ಬೀಳಬೇಕಾಗಿ ನಮ್ಮೆಲ್ಲರ ಅಪೇಕ್ಷೆಯಿರುವದೆಂದು" ಬಿನ್ನವಿಸಲು, ಅವರ ಬಿನ್ನಹವನ್ನು ಮಾನ್ಯಮಾಡಿ ರಾ.ಬ||ರವರು ಮೋಟಾರುಬಂಡಿಯಿಂದಿಳಿದು ಪಾದಚಾರಿಯಾಗಿ ಬಸವಾರ್ಯರೊಡನೆ ಆ ಅಡವೀ ಸೋಮಾಪುರವೆಂಬ ಗ್ರಾಮದೊಳಗೆ ಹೋದರು. ಆ ಗೌಡರು ತಮ್ಮ ಊರನ್ನು ತಳಿರ್ದೋರಣ ಧ್ವಜ ಪತಾಕೆಗಳಿಂದಲೂ ತೆಂಗಿನ ಗರಿಗಳಿಂದಲೂ ಚೆನ್ನಾಗಿ ಶೃಂಗರಿಸಿದ್ದರು. ಊರ ನಡುವೆ ಉತ್ತರಾಭಿಮುಖವಾಗಿರುವ ಒಂದು ದೇವಾಲಯದಲ್ಲಿ ಪಾನಸುಪಾರಿ ಸಮಾರಂಭದ ಸಿದ್ಧತೆಯಿಡಲ್ಪಟ್ಟಿತ್ತು. ದೇವಾಲಯದ ಮುಂದೆ ಮಂಟಪ ಹಾಕಲ್ಪಟ್ಟಿದ್ದು, ಆ ದೇವಾಲಯವೂ ಮಂಟಪವೂ ತಳಿರ್ದೋರಣಗಳಿಂದ ಅಲಂಕೃತವಾಗಿದ್ದವು. ರಾವಬಹದ್ದೂರರವರು ಉಚಿತಾಸನದಲ್ಲಿ ವಿಶ್ರಮಿಸಲು ಆ ಗ್ರಾಮದ ವತಿಯಿಂದ ಕುಲಕರಣಿಯು ರಾ.ಬ||ರವರ ಘುನತೆಯ ವಿಷಯವಾಗಿಯೂ, ಅವರು ಮಾಡಿದ ಮಹತ್ಕಾರ್ಯಗಳ ವಿಷಯವಾಗಿಯೂ, ಭಾಷಣಮಾಡಿ ಅವರನ್ನು ಗೌರವಿಸಿದನು. ಕೂಡಲೆ ಹಾರ-ಪರಿಮಳ-ತಾಂಬೂಲ ಹಂಚಲ್ಪಟ್ಟು ಸಭಾವಿಸರ್ಜನೆಯಾಯಿತು. ಈ ಸಮಯದಲ್ಲಿ ಆ ಊರ ಸ್ತ್ರೀ ಪುರುಷರೆಲ್ಲರೂ ಅಲ್ಲಿ ನೆರೆದಿದ್ದು ಎಲ್ಲರೂ ರಾ.ಬ||ರವರನ್ನು ಕಂಡು ಪರಮಾನಂದ ಭರಿತರಾಗಿ ಅವರ ಪುಣ್ಯವಂತಿಕೆಯನ್ನು ಕೊಂಡಾಡುವವರಾಗಿದ್ದರು. ಊರ ಹೆಣ್ಣುಮಕ್ಕಳು ರಸ್ತೆಯ ಮೇಲೆ ನಿಂತಿದ್ದ ಮೋಟಾರ ಗಾಡಿಯನ್ನು ನೋಡುತ್ತಿದ್ದರು. ಕೂಡಲೆ ನಿರೂಪ ಹೊಂದಿ ರಾ.ಬ||ರವರು ಅಲ್ಲಿಂದ ಹೊರಟು ಕುನ್ನೂರ ಮೇಲಿಂದ ಅರಟಾಳ ಕಡೆಗೆ ಪ್ರಯಾಣೋನ್ಮುಖರಾದರು.

ಇತ್ತ ೫ ಗಂಟೆಯ ಸಮಯಕ್ಕೆ ರಾ.ಬ||ರವರು ಬರುತ್ತಾರೆಂದು ತಿಳಿದು, ಅರಟಾಳ ಧುಂಡಸಿ ಮೊದಲಾದ ಅನೇಕ ಸುತ್ತುಹಳ್ಳಿಗಳ ಜನರೆಲ್ಲರು ಒತ್ತಟ್ಟಿಗೆ ಸೇರಿ, ಅನೇಕ ಮಂಗಳವಾದ್ಯಗಳೇ ಮೊದಲಾಗಿ ಎಲ್ಲ ಮೆರವಣಿಗೆಯ ಸಾಹಿತ್ಯದೊಡನೆ ರಾ.ಬ||ರವರನ್ನು ಎದುರ್ಗೊಳ್ಳಲು ಧುಂಡಸೀ ದಾಟಿ ಛತ್ರಪ್ಪ ಪುತ್ರಸೆಟ್ಟಿ ಇವರ ಮಾವಿನ ತೋಪಿನ ಬಳಿಯಲ್ಲಿರುವ ಸಂತಮಾನವರ ತೋಟದ ಬಾವಿಯ ಹತ್ತರ ಬಂದು, ಮಾರ್ಗಪ್ರತೀಕ್ಷೆ ಮಾಡುತ್ತ ಕೂತಿದ್ದರು. ಶ್ರೀಮಂತ ಚಚಡಿಯ ನಾಯಕ ಬಹಾದ್ದೂರ ದೇಸಾಯರಾದ ಅಣ್ಣಾಸಾಹೇಬರು ಒಳ್ಳೇ ಸೊಬಗುಳ್ಳ ಪೋಷಾಕು ಧರಿಸಿ, ಸರ್ವಾಂಗಸುಂದರವಾಗಿದ್ದ ಸೀತಾ ಎಂಬ ಹೆಸರಿನ ತಮ್ಮ ಬಿಳೇ ಬಣ್ಣದ ಹೆಣ್ಣು ಕುದುರೆಯನ್ನೇರಿ ರಾ.ಬ||ರವರು ಬಂದರೇನೆಂಬದನ್ನು ತಿಳಿದುಕೊಳ್ಳಲೋಸುಗ ಭರದಾಂಡ ಎದುರಿಗೆ ಬರುತ್ತಿರುವಾಗ, ಅವರು ಕುದುರೆಯ ಮೇಲೆ ಸವಾರಿಯಾದ ಮಹಾರಾಜರಂತೆ ಕಾಣುತ್ತಿದ್ದರು. ಮೋಟಾರು ಬಂಡಿಯನ್ನು ಕಂಡಾಕ್ಷಣವೆ ಶ್ರೀಮಂತರು ಮಹದಾನಂದದಿಂದ ಆ ಮನೋವೇಗದ ಕುದುರೆಯನ್ನು ತಿರುಗಿಸಿ ರಾ.ಬ||ರವರು ಬಂದ ಸುದ್ದಿಯನ್ನು ತಿಳುಹಲೋಸುಗ ಧುಂಡಸಿಯ ಕಡೆಗೆ ತೆರಳಿದರು.

ರಾ.ಬ||ರವರು ಬಂದರೆಂದು ತಿಳಿದಾಕ್ಷಣವೆ ಎಲ್ಲ ಜನರು ಜಾಗೃತರಾಗಿ ಸಾಲ್ಗೊಂಡು ನಿಂತಿದ್ದರು. ವಾದ್ಯಗಳ ಮೇಳದವರು ತಮ್ಮ ತಮ್ಮ ವಾದ್ಯಗಳನ್ನು ಸಜ್ಜುಗೊಳಿಸುತ್ತಿದ್ದರು. ಅಷ್ಟರೊಳಗಾಗಿ ಮೋಟಾರಗಾಡಿಯು ಓಡುತ್ತಲೇ ಬಂದಿತು. ಕೂಡಲೆ ರಾ.ಬ||ರವರಿಗೆ ಎರಡು ಬಂದೂಕ ಬಾಯಿಗಳಿಂದ ನೆರೆದ ಜನಸಮೂಹದ ಸಲಾಮಿಯು ಸಮರ್ಪಿಸಲ್ಪಟ್ಟಿತು. ಕೂಡಲೆ ಮಂಗಳವಾದ್ಯಗಳು ಮೊಳಗಹತ್ತಿದವು. ಕಹಳೆ ಕರ್ನಿಗಳು ಕೂಗಹತ್ತಿದವು. ಜಯಘೋಷವು ಮೇರೆದಪ್ಪಿತು. ಆಗ ರಾ.ಬ||ರವರು ಮೋಟಾರು ಬಂಡಿಯಿಂದಿಳಿದು, ಸಾರವಾಟಗಾಡಿಯಲ್ಲಿ ಶ್ರೀ ಶಿಗ್ಗಾವಿಯ ಚರಮೂರ್ತಿಗಳೊಡನೆ ವಿಶ್ರಮಿಸಿದರು. ಮೊಮ್ಮಕ್ಕಳಾದ ಶ್ರೀಮಂತ ಚಂದ್ರಭೂಷಣ, ಕಾಶೀಬಾಯಿಯರು ಮೋಟಾರು ಬಂಡಿಯಲ್ಲಿಯೂ, ಬಾಬಾಸಾಹೇಬರು ಶೃಂಗರಿಸಿದ ಕುದುರೆಯ ಮೇಲೆಯೂ ಕುಳಿತಕೊಂಡರು. ಶ್ರೀಮಂತ ಅಣ್ಣಾಸಾಹೇಬರಂತು ಮೊದಲೇ ಅಶ್ವಾರೋಹಿಗಳಾಗಿದ್ದರು. ಮೆರವಣಿಗೆಯು ಮುಂದೆ ಸಾಗಿತು. ಬಂದೊಡನೆಯೆ ರಾ.ಬ||ರವರು ಹಾರಗಳಿಂದಲೂ, ಪುಷ್ಪಗುಚ್ಛ ಪರಿಮಳಗಳಿಂದಲೂ, ಅಲಂಕೃತರಾಗಿದ್ದರು. ಕುದುರೆಗಳು ಕುಣಿಯಹತ್ತಿದವು.

ತಾಸೆ-ಸನಾದಿ-ಕರಡೀಮಜಲು ಹಲಿಗೆ ರಣಹಲಿಗೆ ಕಹಳೆ ಕರ್ನಿ ಮೊದಲಾದ ಮಂಗಳವಾದ್ಯಗಳ ಪ್ರಚಂಡ ರಭಸದೊಡನೆ ಮೆರವಣಿಗೆಯು ಬಲು ರಮಣೀಯವಾಗಿ ಧುಂಡಸಿಯ ಗ್ರಾಮವನ್ನು ಪ್ರವೇಶಿಸಿ, ಪೇಟೆಯ ಮಾರ್ಗವಾಗಿ ಸಾಗಿರಲು ಅಲ್ಲಿ ರಾ||ರಾ||ಅರ್ಜುನಪ್ಪಾ ರಾಮಪ್ಪಾ ಬಳೆಗಾರ ಇವರು ಸಾ||ಬ||ರವರನ್ನು ಮರ್ಯಾದೆಯಿಂದ ಬರಮಾಡಿಕೊಂಡು, ಶೃಂಗರಿಸಿದ ತಮ್ಮ ಮನೆಯಲ್ಲಿ ಅತ್ಯುತ್ತಮವಾಗಿ ಪಾನಸುಪಾರಿ ಸಮಾರಂಭವನ್ನು ಮಾಡಿದ ನಂತರ ರಾ||ಬ||ರವರು ಅವರ ನಿರೂಪ ಪಡೆದುಕೊಂಡು ಗಾಡಿಯನ್ನೇರಲು ಪುನಃ ಮೆರವಣಿಗೆಯು ಮುಂದೆ ಸಾಗುವದಾಯಿತು. ಹಗಲು ದೀವಟಿಗೆಯು ಹಿಡಿಸಲ್ಪಟ್ಟಿತ್ತು. (ಅರಟಾಳ ಗೌಡಿಕಿಯ ವತನಕ್ಕೆ ಹಗಲು ದೀವಟಿಗೆ, ಛತ್ರ, ಆಪ್ತಾಗಿರಿ, ಉಡಾಸ ರುಮಾಲ- ಈ ನಾಲ್ಕು ಬಿರುದುಗಳು ಹಿಂದಿನ ಅರಸರಿಂದ ಕೊಡಲ್ಪಟ್ಟಿರುವವು. ಈ ನಾಲ್ಕೂ ಬಿರುದುಗಳು ಎಪ್ಪತ್ತೆರಡು ಬಿರುದಾವಳಿಗಳಲ್ಲಿಯೇ ಸಮಾವೇಶಗಳಾಗುವವು). ಅಲ್ಲಿಂದ ಧುಂಡಸೀ ಗ್ರಾಮಕ್ಕೆ ಹೊಂದಿ ಇರುವ ಅರಟಾಳದ ಮಜರೆ ಗ್ರಾಮವಾದ ಕೊಪ್ಪದ ರೈತರೆಲ್ಲರೂ ಕೂಡಿ ಚಿನ್ನಪ್ಪಾ ಮಣಕಟ್ಟಿ ಇವರ ಮನೆಯ ಮುಂದಿನ ಪಟಾಂಗಣದಲ್ಲಿ ರಾ.ಬ||ರವರಿಗೆ ತಾಂಬೂಲ ಸಮಾರಂಭಮಾಡಿದರು. ಅಲ್ಲಲ್ಲಿ ಆಗುವ ಈ ತಾಂಬೂಲ ಸಮಾರಂಭಗಳು, ಮದುವಣಿಗನು ಮನೆಮನೆಗೆ ಕೋರೂಟಕ್ಕೆ ಹೋಗುವ ಸಮಾರಂಭದಂತೆ ತೋರುತ್ತಿದ್ದವು. ಕೊಪ್ಪದ ಪಾನಸುಪಾರಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಸುಸ್ವರದಿಂದ ರಾಷ್ಟ್ರಗೀತವನ್ನೂ, ರಾ.ಬ||ರವರ ಮೇಲಿನ ಒಂದು ಪದವನ್ನೂ ಅಂದರು. ಬಳಿಕ ಮಿ|| ಹುತ್ತಪ್ಪನವರು ರಾ.ಬ||ರವರ ಅಭಿನಂದಪರ ಭಾಷಣಮಾಡಿದರು. ಆಗ ರಾ.ಬ||ರವರು ಎದ್ದು ನಿಂತು, ನಾನು ತಮ್ಮೆಲ್ಲರ ಈ ಸನ್ಮಾನಕ್ಕೆ ಪಾತ್ರನಾಗಬೇಕಾದರೆ ನನ್ನಲ್ಲಿರುವ ಕಿಂಚಿತ್ ವಿದ್ಯೆಯೇ ಮೂಲ ಕಾರಣವೆಂತಲೂ, ಬಾಲ್ಯದಲ್ಲಿ ನಾನು ಆ ವಿದ್ಯೆಯನ್ನು ಬಲು ಆಸ್ಥೆಯಿಂದ ಸಂಪಾದಿಸಿದೆನೆಂತಲೂ, ನೀವಾದರೂ ನಿಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಚೆನ್ನಾಗಿ ಲಕ್ಷಕೊಡಿರೆಂತಲೂ, ಒಂದೇ ದಿವಸ ನಾನು ಮನೆಯಲ್ಲಿ ಹೇಳದೆ ಸಾಲೆಯನ್ನು ತಪ್ಪಿಸಿರಲು ನಮ್ಮ ತಂದೆಯು ನನ್ನನ್ನು ಆ ದಿವಸ ಉಪವಾಸವಿಟ್ಟಿದ್ದನೆಂತಲೂ" ಹೇಳಹೇಳುತ್ತ ಚಿಕ್ಕಂದಿನ ತಮ್ಮ ಚರಿತ್ರವು ಸ್ಮೃತಿಪಥಕ್ಕೆ ಬಂದಂತಾಗಿ ಸಾಹೇಬರ ಕಂಠದ ಶಿರಗಳು ಬಿಗಿದು ಮಾತುಗಳು ಕಟ್ಟಾಗಿ, ನೇತ್ರಗಳಲ್ಲಿ ಅಶ್ರುಬಿಂದುಗಳು ತುಂಬಿ ಬಂದವು. ಇವರ ಈ ಗದ್ಗದಿತ ಮುದ್ರೆಯನ್ನು ಕಂಡು ಸಭಾಸದರ ಅಂತಃಕರಣವೂ ದ್ರವಿಸಿ, ಇವರ ಕಂಬನಿಗಳಾದರೂ ಅನೈಚ್ಛಿಕವಾಗಿ ಹೊರಸೂಸಹತ್ತಿದವು. ಕೆಲವು ನಿಮಿಷಗಳ ವರೆಗೆ ಚಿತ್ರಸ್ಥ ಪ್ರತಿಮೆಯಂತೆ ಸಭೆಯೆಲ್ಲವೂ ನಿಃಶಬ್ದವಾಯಿತು. ಉಕ್ಕಿಬಂದ ದುಃಖವನ್ನು ಸೈರಿಸಿಕೊಂಡು ಸಾಹೇಬರು ಸ್ವಲ್ಪದರಲ್ಲಿ ತಮ್ಮ ಭಾಷಣವನ್ನು ಮುಗಿಸಿ, ಅವರ ಆಭಾರ ಮನ್ನಿಸಿ, ಅಪ್ಪಣೆ ಪಡಕೊಂಡು ಸಂಜೆಯ ೬ ಗಂಟೆಯ ಸುಮಾರಕ್ಕೆ ಅರಟಾಳಾಭಿಮುಖರಾದರು. ಮೊದಲಿನಂತೆ ಮೆರವಣಿಗೆಯು ಮನೋಹರವಾಗಿ ಸಾಗುತ್ತ ಅರಟಾಳ ಗ್ರಾಮವನ್ನು ಪ್ರವೇಶಿಸಿ, ಉತ್ಸವದೊಡನೆ ೭ ಗಂಟೆಯ ಸುಮಾರಕ್ಕೆ ಹೊಸ ಬಂಗಲೆಯ ಮುಂದೆ ಬರಲು ಮುತ್ತೈದೆಯರು ಕೆಲವರು ಶಿಷ್ಟಾಚಾರ ಪ್ರಕಾರ ರಾ.ಬ||ರವರಿಗೆ ಆರತಿಯನ್ನು ಮಾಡಿದರು. ಅವರನ್ನೆಲ್ಲ ಮರ್ಯಾದಿಸಿ ಗಾಡಿಯಿಂದಿಳಿದು ರಾ.ಬ||ರವರು ಎಲ್ಲ ಕಡೆಗೂ ಸಂಚರಿಸಿ ಸಭಾಮಂಟಪ-ತಂಬೂ-ಪಾಕಶಾಲೆ-ಭೋಜನಶಾಲೆ ಮೊದಲಾದವುಗಳನ್ನು ನೋಡಿ, ಎಲ್ಲವೂ ತಮ್ಮ ಇಚ್ಛೆಯ ಪ್ರಕಾರ ಏರ್ಪಟ್ಟಿರುವದೆಂದು ಆನಂದಭರಿತರಾಗಿ, ತೀವ್ರವೇ ಭೋಜನ ತೀರಿಸಿಕೊಂಡು ತಂಬೂದಲ್ಲಿ ಪವಡಿಸಿದರು. ಮುಂದೆ ನಾಲ್ಕು ದಿವಸ ಸುತ್ತುಹಳ್ಳಿಗಳಿಂದ ರಾ.ಬ||ರವರ ಬಂಧು ಬಳಗದವರೂ, ಆಪ್ತೇಷ್ಟರೂ, ಋಣಾನುಬಂಧಿಗಳೂ, ಪರಿಚಯಸ್ಥ ಅಧಿಕಾರಿಗಳೂ, ರೈತಜನರೂ ಅಭಿಮಾನಶಾಲಿಗಳಾದ ಇತರ ಜನರೂ ಬಂದು ಬಂದು, ರಾವಬಹಾದ್ದೂರರವರ ದರ್ಶನ ತೆಗೆದುಕೊಳ್ಳುವವರಾಗಿದ್ದರು.

ತಾರೀಖು ೨೬ನೇ ಎಪ್ರೀಲ ಸನ್ ೧೯೧೪ ಇಸವಿ ರವಿವಾರ ದಿವಸ ಮಧ್ಯಾಹ್ನದ ಮೇಲೆ ೩ ಗಂಟೆಯ ಸುಮಾರಕ್ಕೆ ಸಭಾಮಂಟಪದಲ್ಲಿ ಸಭಾಸದರು ಕೂಡಲಿಕ್ಕೆ ಸುರುವಾಯಿತು. ಸಭೆಗೆ ಸುಮಾರು ನಾಲ್ಕೈದು ಸಾವಿರ ಜನರು ಕೂಡಿದ್ದರು. ಸಭೆಗೆ ಇವರ ಗುರುಗಳೂ ಬೇರೆ ಸ್ವಾಮಿಗಳೂ ಶ್ರೀಮಂತರೂ ಸೆಟ್ಟರು ಸಾವಕಾರರು ದೇಸಾಯಿ ದೇಶಪಾಂಡೆ ದೇಶಮುಖ ಜಾಹಗೀರದಾರರು ಸರಕಾರೀ ಅಧಿಕಾರಿಗಳೂ ಮೊದಲಾದ ಅನೇಕ ಮಹನೀಯರು ದಯಮಾಡಿಸಿದ್ದರು. ರಾ.ಬ॥ರವರನ್ನು ಹಳೆಮನೆಯಿಂದ ಸಾರವಾಟ ಗಾಡಿಯ ಮೇಲೆ ಕುಳ್ಳಿರಿಸಿ, ಮೊದಲನೇ ದಿವಸದಂತೆ ಮಂಗಳವಾದ್ಯಗಳ ರಭಸದೊಡನೆ ಮೆರವಣಿಗೆ ಮಾಡುತ್ತ ಸಭಾಮಂಟಪಕ್ಕೆ ಕರೆತರುವವರಾದರು. ಆಗ ಭವ್ಯವಾದ ರಾಜಪೋಷಾಕಿನಿಂದಲೂ, ರಂಜಿಸುತ್ತಿರುವ ರಾಜಮುದ್ರೆಗಳಿಂದಲೂ ಬೆಳಗುತ್ತ ಬರುತ್ತಿರುವ ರಾ.ಬ॥ರುದ್ರಗೌಡರು ವಿವಾಹ ಮಂಟಪವನ್ನು ಕುರಿತು ಬರುವ ಸರ್ವಾಂಗ ಸುಂದರನಾದ ಮದುಮಗನಂತೆ ತೋರುತ್ತಿದ್ದರೆಂದು ಹೇಳಬಹುದು. ರಾ.ಬ॥ರವರು ಕೂತಿದ್ದ ಗಾಡಿಯನ್ನು ಜನರೇ ಜಗ್ಗುತ್ತಿದ್ದರು. ಸಭಾಪ್ರವೇಶಮಾತ್ರವೆ ಸಭಾಸದರೆಲ್ಲರು ಕರತಾಡನದೊಂದಿಗೆ ಎದ್ದು, ವಿನಯದಿಂದ ಶರಣುಗಳನ್ನು ಸಮರ್ಪಿಸಿ, ಸದರಿನ ಮೇಲೆ ವಿಶ್ರಮಿಸಿಕೊಳ್ಳಲು ವಿನಂತಿಮಾಡಿಕೊಂಡ ಪ್ರಕಾರ ರಾ.ಬ॥ರವರು ಸದರನ್ನೇರಿ ಕೂತುಕೊಂಡರು.

ಈ ಸಭೆಯ ಬೈಠಕಿಯು ರಮಣೀಯವಾಗಿತ್ತು. ಮಧ್ಯದಲ್ಲಿ ರಾ.ಬ॥ರುದ್ರಗೌಡರು ಎದ್ದು ತೋರುತ್ತಿದ್ದರು. ಅವರ ಎಡಬಲಗಳಲ್ಲಿ ಇಬ್ಬರು ಚೋಪದಾರರು ನಿಂತಿದ್ದರು. ಒಬ್ಬ ಚೋಪದಾರನು ಚಚಡೀ ದೇಸಗತಿಯವನೂ, ಇನ್ನೊಬ್ಬನು ಹಂದಿಗಿನೂರ ದೇಸಗತಿಯವನೂ ಇದ್ದರು. ಬಲಪಾರ್ಶ್ವದಲ್ಲಿ ಉಚಿತಾಸನದ ಮೇಲೆ ಶ್ರೀಮಂತ ಬುಳ್ಳಪ್ಪ ಬಸವಂತರಾವ ಮಾಮಲೇದೇಸಾಯಿ ಹಂದಿಗಿನೂರ ಇವರೂ, ಇವರಿಗೆ ಹೊಂದಿ ಕುಂದಗೋಳದ ಶ್ರೀಮಂತ ವೀರಭದ್ರಪ್ಪ ಮಲ್ಲಪ್ಪ ದೇಶಪಾಂಡೆಯವರೂ, ಇವರ ಹತ್ತರ ಬಂಕಾಪುರ ತಾಲೂಕ ಮಾಮಲೇದಾರರಾದ ಮಿ॥ ರಾಮಚಂದ್ರ ನಾರಾಯಣ ಕಿಣಿಯವರೂ, ಇವರ ಹತ್ತಿರವೇ ಶಿರಸ್ತೇದಾರರೂ ಕಾರಕೂನರೂ, ಎಡಪಾರ್ಶ್ವದಲ್ಲಿ ಕಲಘಟಗೀ ತಾಲೂಕ ಸೋಮನಕೊಪ್ಪದ ಶ್ರೀಮಂತ ಭೀಮರಾವ ಶಿವಾಜಿ ದೇಸಾಯಿಯವರೂ ಇವರ ಹತ್ತರ ಶಿಗ್ಗಾವಿಯ ದೇಶಪಾಂಡೆಯರಾದ ಲಕ್ಷ್ಮೀಪತಿರಾಯರೂ ಹಿಂದೆ ಉನ್ನತಾಸನಗಳಲ್ಲಿ ಅರಟಾಳ ಗೌಡಕೀ ಮನೆತನದ ಗುರುಗಳಾದ ಶ್ರೀ ನರೇಗಲ್ ಹಿರೇಮಠದ ಚರಮೂರ್ತಿಗಳೂ, ಶ್ರೀ ಶಿಗ್ಗಾವಿಯ ಚರಮೂರ್ತಿಗಳೂ, ಸಮ್ಮುಖದಲ್ಲಿ ಅನೇಕ ಜನ ಸೆಟ್ಟರೂ ಸಾವಕಾರರೂ, ಸಾಹೇಬರಿಗೆ ಸಮೀಪವಾಗಿ ಚಚಡಿಯ ಶ್ರೀಮಂತ ನಾಯಕ ಬಹಾದ್ದೂರ ದೇಸಾಯರಾದ ಅಣ್ಣಾಸಾಹೇಬರವರೂ ವಿಶ್ರಮಿಸಿದ್ದರು. ಸದರಿನ ಮುಂದೆ ಟೇಬಲುಗಳ ಮೇಲೆ ರೇಶಿಮೆಯ ವಸ್ತ್ರಗಳನ್ನು ಹಾಕಿ, ಅವುಗಳ ಮೇಲೆ ರಾ.ಬ॥ರವರಿಗೆ ಆಯಾ ಸ್ಥಳಗಳಲ್ಲಿ ಬಹುಮಾನ ಪೂರ್ವಕ ದೊರೆತ ಸುಂದರವಾದ ಕಾಸ್ಕೀಟುಗಳನ್ನು ಓರಣದಿಂದ ಇಟ್ಟಿದ್ದರು. ಸದರಿನ ಶಿರೋಭಾಗದಲ್ಲಿ ರಾ.ಬ॥ರವರ ದೊಡ್ಡದಾದ ಭಾವಚಿತ್ರವು ಅದನ್ನು ಬರೆದ ಚಿತ್ರಕಾರನ ಕೌಶಲ್ಯವನ್ನು ವ್ಯಕ್ತಪಡಿಸುತ್ತಿತ್ತು. ಅದರ ಎಡಬಲಗಳಲ್ಲಿ ಅವರ ಮಾನಪತ್ರಗಳು ಕನ್ನಡಿಯ ಕಟ್ಟುಗಳಲ್ಲಿ ಶೋಭಿಸುತ್ತಿದ್ದವು. ಸ್ವಾಮಿಗಳು ವಿಶ್ರಮಿಸಿದ ಅಂಕಣಗಳು ಯುರೋಪಿಯನ್ ಪದ್ಧತಿಯಂತೆ ನೇತುಗಟ್ಟಿದ ಪೀತಾಂಬರಗಳಿಂದ ಶೋಭೆಗೊಂಡಿದ್ದವು. ಮಂಟಪವು ಸಭಾಸದರಿಂದ ತುಂಬಿ ತುಳುಕುತ್ತಲಿತ್ತು. ಸಾವಿರಾರು ಜನ ಸ್ತ್ರೀಯರು ಕೂಡಿದ್ದರು.

೪ ಗಂಟೆಯ ಸುಮಾರಕ್ಕೆ ಸಮಾರಂಭವು ಸುರುವಾಯಿತು. ಸಭಾರಂಭ ಕಾಲಕ್ಕೆ ಕಿತ್ತೂರ ಶಾಳಾಮಾಸ್ತರರಾದ ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಇವರು ರಚಿಸಿದ ಸ್ವಾಗತಪದವನ್ನು ಫಕೀರಯ್ಯಾ ವೀರಯ್ಯಾ ಪೂಜಾರಿ ಸಾ. ಅರಟಾಳ ಮತ್ತು ರಾಚಯ್ಯ ಪ್ರಭುವಯ್ಯಾ ಬಸಾಪುರಮಠ ಮು. ಧುಂಡಸಿ ಇವರಿಬ್ಬರು ಅಂದರು.

ಸ್ವಾಗತ ಪದ

ದಾಟಿ॥"ಘೇವುನಿಯೇ ಪಂಖಾ।ವಾಳ್ಯಾಚಾ ಜಾಜಾಜಾ ಝುಣೇ" ॥ ಎಂಬ ಶಾರದಾ ನಾಟಕದೊಳಗಿನ ಮರಾಠೀ ಪದದಂತೆ

ಸ್ವಾಗತವೈ ನಿಮಗೆ।ರಾಗದೊಳು ಭೋ ಭೋ ಭೋ ಪ್ರಭೋ ॥ಪಲ್ಲ॥

ನಮ್ಮಯ ಪ್ರಾರ್ಥನೆಯಾ ಮಾನ್ಯವ ಮಾಡುತಲಿ ॥
ಸಮ್ಮುದ ಬಂದುದಕೆ ॥೧॥

ಬಿಸಿಲು ದಿವಸದಲ್ಲಿ ತುಸು ಕಷ್ಟವನ್ನು ವಹಿಸಿ ॥
ಕುಶಲದೊಳು-ಬಂದುದಕೆ ॥೨॥
ಅರಟಾಳಪುರದಿ ಜನಿಸಿ।ಅರಟಾಳ ದೊರೆಯು ಎನಿಸಿ ॥
ಹರುಷದೊಳು ಬಂದುದಕೆ ॥೩॥

ಬಡವರೆಡರುಗಳನು।ಜಡಿದೋಡಿಸುತ್ತೆ ಬಿಡದೆ ॥
ಸಡಗರದಿ ಬಂದುದಕೆ ॥೪॥

ಬಸವನನುಗ್ರಹದಿ ।ಎಸೆಯಲಿಂದು ಸಭೆಯು ॥
ವಸುಧೆಯೊಳು ವಿನಯದಲಿ ॥೫॥

ಸ್ವಾಗತಪದವಾದನಂತರ ಶಿ.ರಾ॥ರಾಚಯ್ಯ ಚೆನ್ನಬಸಯ್ಯ ಹಿರೇಮಠ ಅರಟಾಳ ಶ್ರೀ ರಾ॥ಬಸವಾರ್ಯ ಚೆನ್ನಬಸವಾರ್ಯ ಶಾಳಾಮಾಸ್ತರ ಕಿತ್ತೂರ, ಶಿ.ರಾ॥ಫಕೀರಯ್ಯಾ ಬಸಯ್ಯ ಮಣಿಕಟ್ಟಿ ಧುಂಡಸಿ, ಶ್ರೀ.ರಾ॥ಕಾಶಪ್ಪಶಾಸ್ತ್ರಿ ಬೂದೀಹಾಳ ತಾ॥ಸಂಪಗಾವ, ರಾ.ರಾ॥ಜೀವಾಜಿ ಹಣುಮಂತರಾವ್ ಕುಲಕರಣಿ ಶಾಳಾ ಮಾಸ್ತರ ಹೊಸೂರ, ಶ್ರೀಮಂತ ಭೀಮರಾವ ಶಿವಾಜಿ ದೇಸಾಯಿ ಸೋಮನಕೊಪ್ಪ (ಇವರ ತರ್ಫೆಯಿಂದ ಇವರ ಕಾರಭಾರಿಗಳಾದ ಶಿ.ರಾ॥ಚೆನ್ನಬಸಯ್ಯ ಮಲ್ಲಯ್ಯ ಮೊಮ್ಮಿಗಟ್ಟಿ ಇವರು) ಮಿ. ರಾಚಪ್ಪ ನೇಸರಿಗಿ ಸೆಕೆಂಡ ಕ್ಲಾರ್ಕ ಕಲೆಕ್ಟರ ಆಫೀಸ ಧಾರವಾಡ ಮೊದಲಾದ ಮಹನೀಯರು ರಾ.ಬ॥ರವರ ಅಭಿನಂದ ಪರವಾದ ಭಾಷಣಗಳನ್ನು ಸಭಾಸದರು ತಲೆದೂಗುವಂತೆ ಮಾಡಿದರು. ಬಳಿಕ ಶ್ರೀಮಂತ ಬುಳ್ಳಪ್ಪ ಬಸವಂತರಾವ ಮಾಮಲೇದೇಸಾಯಿ ಹಂದಿಗಿನೂರ ಇವರ ತರ್ಫೆಯಿಂದ ಶ್ರೀ ರಾ॥ಬಸವಾರ್ಯ ಚೆನ್ನಬಸವಾರ್ಯ ಹಿರೇಮಠ ಸ್ಕೂಲ ಕಿತ್ತೂರ ಇವರು ಮಾನಪತ್ರವನ್ನು ಸ್ಪಷ್ಟವಾಗಿಯೂ ಸುವಾಚ್ಯವಾಗಿಯೂ ಓದಿದನಂತರ, ಅದನ್ನು ಸುಂದರವಾದ ಕಾಷ್ಯಕರಂಡಕದಲ್ಲಿಟ್ಟು ಹಂದಿಗಿನೂರ ಶ್ರೀಮಂತರ ಹಸ್ತದಿಂದ ರಾ.ಬ॥ ರವರಿಗೆ ಸಮರ್ಪಿಸಲ್ಪಟ್ಟಿತು. ಅನಂತರ ರಾ.ಬ॥ರವರು ಎದ್ದುನಿಂತು"ಸಭಾಸದರೆ, ತಾವೆಲ್ಲರು ನನ್ನನ್ನು ಇಷ್ಟುಜನ ಸಮೂಹದ ಮಧ್ಯದಲ್ಲಿ ಬಹು ವೈಭವದಿಂದ ಸನ್ಮಾನಿಸಿ, ಈ ಸುಂದರವಾದ ಕರಂಡಕ ಸಮೇತವಾದ ಮಾನಪತ್ರವನ್ನು ಇತ್ತುದಕ್ಕಾಗಿ ನಾನು ತಮ್ಮೆಲ್ಲರ ಆಭಾರಿಯಾಗಿರುವೆನು. ತಮ್ಮೆಲ್ಲರಿಂದ ಹಾಗೂ ಸರಕಾರದಿಂದ ಇಷ್ಟು ಮರ್ಯಾದಿಸಲ್ಪಟ್ಟಿದ್ದು, ಕಿಂಚಿದಂಶ ಮಾತ್ರ ನಾನು ಸಂಪಾದಿಸಿದ ಕೇವಲ ವಿದ್ಯೆಯ ಫಲವಲ್ಲವೆ!ವಿದ್ಯೆಯ ಜೊತೆಗೆ ಮನುಷ್ಯನಿಗೆ ಶೀಲವು ಅಂದರೆ ಸದಾಚಾರವು ಅವಶ್ಯವಾಗಿ ಬೇಕಾಗುತ್ತದೆ. ಎಷ್ಟೋ ವಿದ್ಯಾವಂತರು ಶೀಲಭ್ರಷ್ಟರಾದುದರಿಂದ ಮರ್ಯಾದಾ ವಿಹೀನರಾಗಿರುತ್ತಾರೆ. ಕಾರಣ ನೀವು ನಿಮ್ಮ ಮಕ್ಕಳ ವಿದ್ಯೆಯ ವಿಷಯವಾಗಿ ಎಷ್ಟು ಜಾಗ್ರತೆಯುಳ್ಳವರಾಗಿರುತ್ತೀರೋ ಅದಕ್ಕೂ ಹೆಚ್ಚು ಅವರು ಸದಾಚಾರಿಗಳಾಗುವ ವಿಷಯದಲ್ಲಿ ಜಾಗ್ರತರಾಗಿರಿ.

ಪಾಲಕರಿಂದ ಸಾಕಷ್ಟು ದುಡ್ಡು ದೊರೆಯುತ್ತಿದ್ದ ಸ್ವೈರವೃತ್ತಿಗಳಾದ ವಿದ್ಯಾರ್ಥಿಗಳು ಬಹುತರ ಕೆಟ್ಟು ಹೋಗುತ್ತಾರೆ. ಇದಕ್ಕೆ ಬಡವರ ಮಕ್ಕಳೇ ವಿದ್ಯಾವಂತರಾಗಿ ಮುಂದೆ ಬರುತ್ತಿರುವದೇ ದೃಷ್ಟಾಂತವಾಗಿದೆ. ನಮ್ಮ ತಂದೆಯವರು ನಾನು ಚಿಕ್ಕವನಿರುವಾಗ ಸುತ್ತ ಹಳ್ಳಿಗಳ ಜಾತ್ರೆ ಮುಂತಾದ ಉತ್ಸವ ನೋಡಲಿಕ್ಕೆ ಹೋಗುವದಾದಲ್ಲಿ ನನ್ನ ಕಯ್ಯಲ್ಲಿ ಎರಡೇ ದುಡ್ಡುಗಳನ್ನು ಕೊಡುತ್ತಿದ್ದರು. ನಾನಾದರೂ ಅವನ್ನಷ್ಟೇ ತಕ್ಕೊಂಡು ಜಾತ್ರೆಗೆ ಹೋಗುತ್ತಿದ್ದೆನು. ಆಗ ಬೀಗರ ಊರಿನ ಕಾಳಿಯವರು ಬಂದು ಖುಶಾಲಿಗೆ ಗಂಟು ಬೀಳುತ್ತಿದ್ದರು. ಆದರೂ ನಾನು ಒಬ್ಬೊಬ್ಬರಿಗೆ ಒಂದೊಂದು ದುಡ್ಡಿನಂತೆ ಆ ಎರಡೂ ದುಡ್ಡು ಕೊಡುತ್ತಲೇ ಅವರು ಅಷ್ಟಕ್ಕೆ ಸಂತುಷ್ಟರಾಗಿ, ಸಲಾಮು ಮಾಡಿ ಹೋಗುತ್ತಿದ್ದರು. ನಾನು ತಿಂಬುಂಬುವ ಸುಖದಕಿಂತ ಮರ್ಯಾದೆಯ ಕಡೆಗೆ ವಿಶೇಷ ಲಕ್ಷ ಕೊಡುತ್ತಿದ್ದೆನು. ಹೆಚ್ಚು ರೊಕ್ಕ ಕಯ್ಯಲ್ಲಿದ್ದರೆ ಬಾಲಕರು ಅವನ್ನು ದುರುಪಯೋಗಿ ಕೆಲಸಗಳಲ್ಲಿ ನಿರರ್ಥಕವಾಗಿ ಕಳೆಯುತ್ತಾರೆ. ಕಾರಣ ಈ ಬಗ್ಗೆ ಪಾಲಕರು ತಮ್ಮ ಮಕ್ಕಳ ವರ್ತನ ಬಗ್ಗೆ ಎಚ್ಚರಪಟ್ಟಷ್ಟು ಒಳ್ಳೇದು. ನನಗೆ ನನ್ನ ತಂದೆಯವರಂತೆ, ನಮ್ಮ ಧುಂಡಸೀ ಶಾಳಾ ಮಾಸ್ತರರಾದ ಮಿ॥ ಯಜ್ಞೇಶ್ವರ ವೆಂಕಾಜಿ ಜೋಸಿ ಎಂಬ ಸುಶಿಕ್ಷಿತ ಗುರುಗಳೇ ದೊರೆತದರಿಂದ ನನ್ನ ಬಾಲ್ಯದ ಶಿಕ್ಷಣವು ಸರಿಯಾಗಿ ಸಾಗಿತು. ನಾನು ಶಾಳಾ ವಿದ್ಯಾರ್ಥಿಯಾಗಿರುವಾಗಲೇ ಅಂದರೆ ಸನ್ ೧೮೬೬ನೇ ಇಸವಿ ಫೆಬ್ರುವರಿ ೧ನೇ ತಾರೀಖಿನಿಂದ ಧುಂಡಸಿ ಶಾಲೆಯಲ್ಲಿಯೇ (೩) ಮೂರು ರೂಪಾಯಿ ಪಗಾರದ ಹಿರೇಮಣಿಯಾಗಿದ್ದು, ಹಿಂದಿನಿಂದ ಮುಲಕೀ ಖಾತೆಯಲ್ಲಿ ಸೇರಿ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುತ್ತ, ಅಖಂಡ ೩೮ ವರ್ಷ ಸರಕಾರೀ ಕೆಲಸವನ್ನು ಮಾಡಿ, ಕಡೆಗೆ (೮೦೦) ಎಂಟುನೂರು ರೂಪಾಯಿ ಪಗಾರದ ಡಿಸ್ಟ್ರಿಕ್ಟ ಡಿಪೂಟಿ ಕಲೆಕ್ಟರ ಜಾಗೆಯ ಮೇಲೆ ಪೆನಶನ್ ತೆಗೆದುಕೊಂಡೆನು. ನನ್ನಲ್ಲಿ ಸ್ವಾಭಾವಿಕವಾಗಿದ್ದ ನಿರ್ಮಲವಾದ ಸತ್ಯತನವೂ ನಿಶ್ಚಲವಾದ ನ್ಯಾಯವಂತಿಕೆಯೂ ನನ್ನನನ್ನು ಇಷ್ಟು ಅಭಿವೃದ್ಧಿಯ ಸ್ಥಿತಿಗೆ ತಂದವೆಂದು ನಾನು ನಿರ್ಧಾರವಾಗಿ ಹೇಳುವೆನು" ಇತ್ಯಾದಿ ತಮ್ಮ ಚರಿತ್ರದ ಸಾರವನ್ನು ಚೆನ್ನಾಗಿ ಹೇಳುತ್ತಿರುವದನ್ನು ಸಭಾಸದರು ಚಿತ್ರದ ಬೊಂಬೆಗಳಂತೆ ಚಕಿತರಾಗಿ ಕೇಳುತ್ತಿದ್ದರು. ಸಭಾಸದರ ಆಭಾರವನ್ನು ಪುನಃ ಮನ್ನಿಸಿ ಸಾಹೇಬರು ತಮ್ಮ ಭಾಷಣವನ್ನು ಮುಗಿಸಿದನಂತರ ಮಿ॥ ಸಿದ್ಧರಾಮಪ್ಪಾ ಮುಗುಳಿ ಸಾ. ಹುಕ್ಕೇರಿ ಇವರ ಪದಗಳೂ ಅನಂತರ ಬೇರೆ ಗವಯಿಗಳ ಗಾನವೂ ಜರುಗಿದವು. ಬಳಿಕ ಕುಂದಗೋಳ ತಾಲೂಕ ಸಾಂವಸಿ ಗ್ರಾಮದ ಫಕೀರಯ್ಯಾ ವೀಣಾಕಾರ ಇವರು ಅತಿಮನೋಹರವಾಗಿ ರುದ್ರವೀಣಾ ಬಾರಿಸಿದರು. ಓರ್ವ ಹತ್ತು ಹನ್ನೆರಡು ವರ್ಷದ ಬಾಲಕನು ತನ್ನ ಮಂಜುಳಧ್ವನಿಯಿಂದ ಒಂದೆರಡು ಪದಗಳನ್ನು ಹಾಡಿ ಸಭಾಸದರಿಗೆ ಆನಂದವನ್ನು ಇಮ್ಮಡಿಸಿದನು. ಕಡೆಗೆ ಹಾರತುರಾಯಿ ಪರಿಮಳ ತಾಂಬೂಲಾದಿಗಳ ಸಮರ್ಪಣವಾಗಿ, ಸಂಜೆಯ ೭ ಗಂಟೆಯ ಸುಮಾರಕ್ಕೆ ಸಭಾವಿಸರ್ಜನವಾಯಿತು.

ಉತ್ಸವಕ್ಕೆ ಬಂದ ಯಾವತ್ತು ಜನರಿಗೂ ಭೋಜನವು ಮಾಡಿಸಲ್ಪಟ್ಟಿತು. ಸಾವಿರಾರು ಜನರ ಪಙ್ತಿಗಳು ಒಂದರ ಮೇಲೊಂದು ನಡೆಯುತ್ತಲೇ ಇದ್ದವು. ಒಟ್ಟು ಈ ಸಮಾರಂಭದಲ್ಲಿ ಆರೇಳು ಸಾವಿರ ಜನರ ಊಟವಾಗಿರಬಹುದು. ಈ ವಿಷಯವಾಗಿ ಸಾಹೇಬರ ತಂಗಿಯವರಾದ ವೀರವ್ವ ಭೃತಾರ ಬಸನಗೌಡಾ ಪಾಟೀಲ ತಬಕದ ಹೊನ್ನೀಹಳ್ಳಿ ಇವರು ಒಳ್ಳೆ ವ್ಯವಸ್ಥೆಯನ್ನಿಟ್ಟದ್ದರು. ಸಾಹೇಬರ ಮನೆತನದ ಅಂತರ್ವ್ಯವಸ್ಥೆಯಲ್ಲಿ ಇವರು ಯಾವಾಗಲೂ ಒಳ್ಳೇ ಜಾಗ್ರತರಾಗಿರುತ್ತಿದ್ದರು. ಮನೆತನದ ಹೊರಗಿನ ವ್ಯವಸ್ಥೆಯನ್ನು ಸಾಹೇಬರು ಎಷ್ಟು ದಕ್ಷತೆಯಿಂದ ಇಡಿಸುತ್ತಿದ್ದರೋ, ಅಷ್ಟೆ ದಕ್ಷತೆಯಿಂದ ವೀರವ್ವನವರು ಬರುಹೋಗುವ ಜನರ ಊಟ ಉಪಚಾರದ ವ್ಯವಸ್ಥೆಯನ್ನಿಡುತ್ತಿದ್ದರು. ಅದರಲ್ಲಿ ತಿಲಮಾತ್ರ ಕೊರತೆಯಾಗುತ್ತಿದ್ದಿಲ್ಲ. ಬೇಕಾದಾಗ ಬೇಕಾದಷ್ಟು ಜನರು ಮನೆಗೆ ಬಂದರೂ ಅವರವರ ಯೋಗ್ಯತೆಗೆ ಸರಿಯಾಗಿ ಅವರನ್ನು ಉಪಚರಿಸುವ ತಯಾರಿಯನ್ನಿಡುತ್ತಿದ್ದರು. ಸಾಹೇಬರ ಮನೆತನದ ಶಿಸ್ತಿನ ಸರ್ವಶ್ರೇಯಸ್ಸನ್ನು ವೀರವ್ವನವರಿಗೆ ಕೊಡಲಿಕ್ಕೆ ಅಡ್ಡಿಯಿಲ್ಲ. ತಮ್ಮ ಪ್ರತಿಯೊಂದು

ಕಾರ್ಯದಲ್ಲಿ ಪೂರ್ಣಸಹಾಯಕಾರಿಯಾಗಿರುತ್ತಿದ್ದ ಶ್ರೀಮತಿ ಗುರುಪಾದವ್ವನವರು ಈ ತಾಂಬೂಲ ಸಮಾರಂಭದಲ್ಲಿ ಇಲ್ಲದೆ ಹೋದದ್ದಕ್ಕಾಗಿ ಸ್ವರ್ಗವಾಸಿಯಾದ ಅವರನ್ನು ಸ್ಮರಿಸಿ, ವೀರವ್ವನವರು ಬಹಳೇ ವ್ಯಸನಪಟ್ಟರು. ಆದರೂ ಸಭೆಗೆ ಬಂದ ಯಾವತ್ತು ಜನರು ಸಂತೋಷಪಡುವಂತೆ ಸರ್ವವ್ಯವಸ್ಥೆಯನ್ನಿಡಿಸಿ ಕೀರ್ತಿಯನ್ನು ಹೊಂದಿದರು.

ತಾರೀಖು ೨೮ ಮಂಗಳವಾರ ದಿವಸ ಸುಪ್ರಸಿದ್ಧ ಗೋಕಾಕ ತಾಲೂಕ-ಕೌಜಲಗಿ ನಿಂಗಾಸಾನಿಯ ಪಾರಿಜಾತ ಆಟವು ಒಳ್ಳೇ ಸರಸಾಗಿ ಆಯಿತು. ನೋಡಲಿಕ್ಕೆ ಸಾವಿರಾರು ಜನರು ಕೂಡಿದ್ದರು. ಅವರಿಗೆ ರಾ.ಬ॥ರವರು ಯೋಗ್ಯಸಂಭಾವನೆಯನ್ನು ಕೊಟ್ಟು ಕಳಿಸಿದರು. ರಾ.ಬ॥ರವರು ಮುಂದೆ ಅರಟಾಳದಲ್ಲಿ ಮೂರು ದಿವಸ ನಿಂತು, ತಾರೀಖು ೨ನೇ ಮೇ ರವಿವಾರ ದಿವಸ ಅರಟಾಳದಿಂದ ಮೋಟಾರು ಬಂಡಿಯಲ್ಲಿ ಹೊರಟು ಧಾರವಾಡದ ವರೆಗೆ ಬಂದು, ಮೇಲ್ ಟ್ರೇನಿನಿಂದ ಸಂಜೆಯ ೬ ಗಂಟೆಯ ಸುಮಾರಕ್ಕೆ ಬೆಳಗಾವಿಗೆ ಬಂದರು. ಮುಂದೆ ಚಚಡಿಯ ಶ್ರೀಮಂತರು ಯಾವತ್ತು ಪರಿವಾರದೊಂದಿಗೆ ಅರಟಾಳದಲ್ಲಿ ೧೨ ದಿವಸ ನಿಂತು, ಅಲ್ಲಿಯ ಸರ್ವಸಾಮಾನುಗಳನ್ನು ವ್ಯವಸ್ಥೆಗೊಳಿಸಿ, ಎಲ್ಲ ಮನೆಯ ಮಂಡಳಿಯನ್ನು ಕರಕೊಂಡು, ತಾರೀಖು ೧೪ನೇ ಮೇ ಗುರುವಾರ ದಿವಸ ಹೊರಟು ರೇಲ್ ಮಾರ್ಗದಿಂದ ಬೆಳಗಾವಿಗೆ ಬಂದರು.

ವಾಚಕರೇ, ಕರ್ನಾಟಕದ ಒಂದು ಮೂಲೆಯಲ್ಲಿ ಅಪ್ರಸಿದ್ಧವಾಗಿ ಇರುವ ಈ ಅರಟಾಳ ಗ್ರಾಮವೆತ್ತ ಇಡಿ ಹಿಂದುಸ್ತಾನದಲ್ಲಿ ಬೆಳಗುತ್ತಿರುವ ರಾ.ಬ॥ಅರಟಾಳ ಸಾಹೇಬರವರ ಖ್ಯಾತಿಯೆತ್ತ? ಇವರು ಹೇಳಿಕೊಳ್ಳದಂಥ ಹಳ್ಳಿಯಲ್ಲಿ ಹುಟ್ಟಿದ್ದರೂ ಕೂಡ ಹಿಂದುಸ್ತಾನದಲ್ಲೆಲ್ಲ ಹೆಸರುವಾಸಿಯಾದರು. ಕೆಸರಿನಲ್ಲಿ ಹುಟ್ಟಿದ ಕಮಲದಂತೆಯೂ, ಸಿಂಪಿನಲ್ಲಿ ಉದ್ಭವಿಸಿದ ಮುತ್ತಿನಂತೆಯೂ ಅರಟಾಳ ಗ್ರಾಮದಲ್ಲಿ ಜನ್ಮಸ್ಥರಾದ ರಾ.ಬ॥ರವರು ಲೋಕಪ್ರಿಯರಾಗಿ ಘನತರವಾದ ಕೀರ್ತಿಯನ್ನು ಹೊಂದಿದರು. ಯಾವ ಅರಟಾಳದಲ್ಲಿ ಹುಟ್ಟಿ ಬಾಲಲೀಲೆಗಳಿಂದ ಬೆಳೆದು ಹೊರಬಿದ್ದಿದ್ದರೋ ಅದೇ ಅರಟಾಳದಲ್ಲಿ ಈಗ ಮಹದೈಶ್ವರ್ಯದಿಂದ ಮೆರವಣಿಗೆಯನ್ನು ಹೊಂದಿ, ಆ ಬಂಕಾಪುರ ತಾಲೂಕಿನ ಮಹನೀಯರುಗಳಿಂದ ಮಾನಪತ್ರ ಸಮಾರಂಭವನ್ನು ಪಡೆದ ಸಂಗತಿಯು ಕೇಳಲಿಕ್ಕೂ ಹೇಳಲಿಕ್ಕೂ ರಮ್ಯವಾಗಿರುವದು. ದೈವಗತಿಯು ವಿಚಿತ್ರವಾಗಿರುವದಲ್ಲವೆ!

ಅರಟಾಳ ಗ್ರಾಮವು ಈಗ ಕಾಲಚಕ್ರದ ಹೊಡೆತಕ್ಕೆ ಸಿಕ್ಕು ಮುರಕಳಿಯ ಸ್ಥಿತಿಗೆ ಬಂದಿದ್ದರೂ ಇದು ಹಿಂದೆ ಒಂದಾನೊಂದು ಕಾಲದಲ್ಲಿ ದೊಡ್ಡ ಶಹರವಾಗಿತ್ತೆಂದೂ, ಈ ಶಹರಕ್ಕೆ ಕೋಟೆಯಿದ್ದು, ಅದರ ಪೇಟೆಯು ಬಹು ವಿಸ್ತಾರವಾಗಿತ್ತೆಂದೂ ಇಲ್ಲಿ ಜೈನ ಅರಸರು ಅಧಿಪತಿಗಳಾಗಿದ್ದರೆಂದೂ, ಹಿಂದೆ ಈ ಗ್ರಾಮದಲ್ಲಿ ಸಂತೆಯಾಗುತ್ತಿತ್ತೆಂದೂ, ಈಗಿರುವ ಇಲ್ಲಿಯ ಅನೇಕ ಕುರುಹುಗಳಿಂದಲೂ ಶಿಲಾಲಿಪಿಗಳಿಂದಲೂ ಕೆಲ ಸರಕಾರೀ ಲೇಖ ಮೊದಲಾದ ಆಧಾರಗಳಿಂದಲೂ ತಿಳಿದುಬರುತ್ತದೆ. ಈ ಕಾಲಕ್ಕೆ ಈ ಅರಟಾಳದ ಕೆಳಗೆ ೮೬ ತುಣುಕುಗಳು ಅಂದರೆ ತುಕಡಿಗಳು ಇದ್ದವೆಂಬ ಬಗ್ಗೆಯೂ ಆಧಾರಗಳಿವೆ.

ಅರಟಾಳ ಪಾನಸುಪಾರಿ ಸಮಾರಂಭವಾಗುವ ಮೊದಲು ಮೆ॥ನಾಮದಾರ ಶೆಫರ್ಡಸಾಹೇಬ ದಕ್ಷಿಣಭಾಗ ಇವರಿಗೆ ಮುಂಬಯಿ ಗವ್ಹರ್ನಮೆಂಟ ಕೌನ್ಸಿಲ್ ಜಾಗಾಕ್ಕೆ ವರ್ಗವಾದದರಿಂದ ಅವರ ಪ್ರೀತ್ಯರ್ಥವಾಗಿ ರಾ.ಬ॥ಅರಟಾಳ ಸಾಹೇಬರವರೇ ಮೊದಲಾಗಿ ಅನೇಕ ಮಹನೀಯರು ತಾರೀಖು ೧೨ನೇ ಎಪ್ರೀಲ್ ಸನ್ ೧೯೧೪ ಇಸವಿ ರವಿವಾರ ದಿವಸ ಅವರಿಗೆ ಬೆಳಗಾವಿಯಲ್ಲಿ ಸಾರ್ವಜನಿಕವಾಗಿ ಬಹು ವೈಭವದ ತಾಂಬೂಲ ಸಮಾರಂಭವನ್ನು ಮಾಡಿ ಗಾರ್ಡನ್ ಪಾರ್ಟಿ ಕೊಟ್ಟರು. ಈ ಸಮಾರಂಭಕ್ಕೆ ಬೆಳಗಾವ-ಧಾರವಾಡ-ವಿಜಾಪುರ ಜಿಲ್ಲೆಗಳಿಂದ, ದೂರದೂರಿನ ಸ್ಥಳಗಳಿಂದ ಅನೇಜ ಜನ ಮಹನೀಯರು ದಯಮಾಡಿಸಿದ್ದರು. ಈ ಸಮಾರಂಭಕ್ಕೆ ಸುಮಾರು (೧೧೦೦) ಹನ್ನೊಂದು ನೂರು ರೂಪಾಯಿ ವೆಚ್ಚವಾಯಿತು. ಮುಂದೆ ೮ ದಿವಸಕ್ಕೆ ಅಂದರೆ ತಾರೀಖು

೨ನೇ ಎಪ್ರೀಲ ದಿವಸ ಮೆ॥ರವರು ಮುಂಬಯಿಗೆ ಹೊರಟರು. ಅವರನ್ನು ಕಳಿಸಲಿಕ್ಕೆ ಸ್ಟೇಶನ್‌ದ ವರೆಗೆ ರಾ.ಬ॥ರವರು ಮೊದಲಾಗಿ ಎಷ್ಟೋ ಜನ ಸರಕಾರೀ ಅಧಿಕಾರಿಗಳೂ ಸದ್ಗೃಹಸ್ಥರೂ ಹೋಗಿದ್ದರು. ಆಗ ಸ್ಟೇಶನದ ಮೇಲೆ ಎಲ್ಲ ಜನರ ಸಮಕ್ಷ ನಾಮದಾರ ಶೆಫರ್ಡ ದೊರೆಗಳು ಹೇಳಿದ್ದೇನೆಂದರೆ "ರಾ.ಬ॥ಅರಟಾಳ ಸಾಹೇಬರವರ ಯೋಗ್ಯತೆಯು ಘನತರವಾಗಿರುವದು. ಇಷ್ಟರೊಳಗಾಗಿ ಇವರು ಜಿಲ್ಲಾ ಕಲೆಕ್ಟರರೇ ಆಗತಕ್ಕವರೇ ಇದ್ದರು. ಇವರಿಗೆ ಕೊಡುವ ಬಗ್ಗೆ ಸರಕಾರದಲ್ಲಿ ಗುಪ್ತರೀತಿಯಿಂದ ಕೆಲಸವು ನಡೆದಿತ್ತು. ಆದರೆ ಇವರ ವಯಸ್ಸು ೫೫ ವರ್ಷವಾಗಿದ್ದು ಪೆನಶನಕ್ಕೆ ಸಮೀಪಿಸಿರುವದರಿಂದ ಕಾಯದೆಯನ್ನು ಮೀರಿ ಇವರಿಗೆ ಕಲೆಕ್ಟರ ಜಾಗೆಯನ್ನು ಕೊಡಲಿಕ್ಕೆ ಬಾರದಾಯಿತು. ಆದರು ಇವರು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಅಧಿಕಾರವನ್ನು ವಹಿಸುವ ಯೋಗ್ಯತೆಯವರೇ ಇರುವರೆಂದು ಹೇಳಲಿಕ್ಕೆ ಏನೇನೂ ಅಡ್ಡಿಯಿಲ್ಲ" ಎಂದು ರಾ.ಬ॥ರವರ ಮಹತ್ತರವಾದ ಯೋಗ್ಯತೆಯನ್ನು ಸ್ಪಷ್ಟಮಾಡಿದರು. ಇದರಿಂದ ಮೆ॥ರವರು ಪ್ರೇಮವು ರಾ.ಬ॥ರವರ ಮೇಲೆ ಎಷ್ಟಿರುವದೆಂಬುದು ಬ್ರಾಹ್ಮಣ ಮೊದಲಾದ ಯಾವತ್ತು ಜನಸಮೂಹಕ್ಕೆ ಖಾತ್ರಿಯಾಗಿ ಹೋಯಿತು. ನಾಮದಾರ ಶೆಫರ್ಡ ದೊರೆಗಳು ಮುಂಬಯಿಗೆ ಹೋದ ಮರುದಿವಸ ಹಿಂದೆ ಹೇಳಿದಂತೆ ಮೋಟಾರು ಬಂಡಿಯಿಂದ ಅರಟಾಳದ ಪಾನಸುಪಾರಿ ಸಮಾರಂಭಕ್ಕೆ ಬಂದಿದ್ದರು. (ಈ ಸಂಗತಿಯನ್ನು ಅರಟಾಳದ ತಾಂಬೂಲ ಸಮಾರಂಭದ ಪೂರ್ವದಲ್ಲಿ ಬರೆಯಕ್ಕದ್ದು, ಮರೆತದ್ದರಿಂದ ಇಲ್ಲಿ ಬರೆದಿರುವೆವು).

ರಾವ ಬ॥ರವರ ಅರಟಾಳದ ಸರಕಾರೀ ಜಮೀನುಗಳೆಲ್ಲ ವತನೀ ಸದರಿನಲ್ಲಿ ಸೇರಿಸಲ್ಪಟ್ಟು ಇವರ ವಂಶಪರಂಪರ ಫಕ್ತ ೧/೪ ಜೂಡಿ ಕೊಡುವ ಬಗ್ಗೆ ಸರಕಾರ ಠರಾವವಾದದು

ಅರಟಾಳದ ತಾಂಬೂಲ ಸಮಾರಂಭವನ್ನು ತೀರಿಸಿಕೊಂಡು ಸಂತುಷ್ಟರಾಗಿ ರಾವಬಹಾದ್ದೂರರವರು ಬೆಳಗಾವಿಗೆ ಬಂದ ೧೦-೧೫ ದಿವಸಗಳೊಳಗಾಗಿ ಅವರ ಜೀವಿತ ಕಾಲದಲ್ಲಿ ಅತಿ ಮಹತ್ವದ್ದೂ, ಸಂತೋಷದ್ದೂ ಆದ ಇನ್ನೊಂದು ಸಂಗತಿಯು ವರ್ತಿಸಿತು. ಅದೇನಂದರೆ-ಕೃತಜ್ಞಮತಿಗಳು ನಮ್ಮ ಸಾರ್ವಭೌಮ ಸರಕಾರದವರು ರಾ.ಬ॥ರವರ ನಿಷ್ಕಲಂಕವಾದ ರಾಜನಿಷ್ಠೆಯನ್ನೂ, ಸರಕಾರದ ಕೆಲಸದಲ್ಲಿ ತೋರಿಸಿದ ಕಾರ್ಯಕ್ಷಮತೆಯನ್ನೂ, ಧೈರ್ಯವನ್ನೂ, ಪ್ರಾಮಾಣಿಕತನವನ್ನೂ ಮುಖ್ಯವಾಗಿ ಇವರ ಅಸಾಧಾರಣವಾದ ರಾಜ್ಯಕಾರ್ಯಪಟುತವನ್ನು ಕಂಡು, (ರಾವಬಹಾದ್ದೂರ ಮತ್ತು ಆಯ್.ಎಸ್.ಓ. ಎಂಬ ಬಹುಮಾನದ ಬಿರುದುಗಳನ್ನು ಕೊಟ್ಟು ಇವರನ್ನು ಗೌರವಿಸಿರುವರು. ಅವರಿಗೆ ಸಾಲದೆ ಇವರನ್ನು ಇನ್ನಿಷ್ಟು ಮರ್ಯಾದಿಸುವದು ವಿಹಿತವೆಂದು ಪರ್ಯಾಲೋಚಿಸಿ, ಅರಟಾಳದಲ್ಲಿರುವ ರಾ.ಬ॥ರವರ ಸರಕಾರೀ ಜಮೀನುಗಳೆಲ್ಲ ಇವರ ವಂಶಪರಂಪರ ಗೌಡಿಕಿ ವತನಿಯಾಗಿ ನಡಿಸಲ್ಪಡುವದೆಂದೂ, ಸದರೀ ಜಮೀನುಗಳ ಸಂಬಂಧವಾಗಿ ನಿರಂತರ ೩/೪ ತೆರಿಗೆ ಮಾಫ ಮಾಡಲ್ಪಟ್ಟು, ಫಕ್ತ ೧/೪ ಜೂಡೀ ಕೊಡಬೇಕೆಂದೂ ಸರಕಾರ ಠರಾವವಾಯಿತು. ಸರಕಾರ ಠರಾವ ನಂಬರ 4316 ರೇವಿನ್ಯೂ ಡಿಪಾರ್ಟಮೆಂಟ/ಆಮೇ ೧೯೧೪.ಇದರ ನಿಕಾಲೆ ಕೊಟ್ಟ ಸಂಗತಿಯನ್ನು ರಾವಬಹಾದ್ದೂರರವರಿಗೆ ೪೩೧೭ಅ/ ೮-೫-೧೯೧೪ನೇ ನಂಬರಿನ ಇಂಗ್ರಜೀ ಪತ್ರದಿಂದ ತಿಳಿಸಿದರು. ಸದರೀ ಪತ್ರದ ಮುದ್ರಿತವಾದ ಒಂದು ಪ್ರತಿಯನ್ನು ಇದರ ಮುಂದಿನ ಪಾನಿನಲ್ಲಿ ಅಂಟಿಸಿರುತ್ತೇನೆ. ಅದನ್ನು ವಾಚಕರು ನೋಡಿದಲ್ಲಿ ಸರ್ವಸಂಗತಿಯು ಚೆನ್ನಾಗಿ ಗೊತ್ತಾಗುವದು.

(ಇಲ್ಲಿ ಒಂದು ಪುಟ ಹರಿದುಹೋಗಿದೆ- ಸಂ.)

ಚಿಕ್ಕೋಡಿಯ ತಾಂಬೂಲ ಸಮಾರಂಭ

ಅರಟಾಳದ ಪಾನಸುಪಾರಿ ಸಮಾರಂಭವಾದ ಒಂದು ತಿಂಗಳ ಮೇಲೆ ಚಿಕ್ಕೋಡಿ ತಾಲೂಕಿನವರು ತಮ್ಮ ತಾಲೂಕಿನ ತರ್ಫೆಯಿಂದ ತಮ್ಮಲ್ಲಿಯೂ ರಾ.ಬ॥ರವರಿಗಾಗಿ ತಾಂಬೂಲ ಸಮಾರಂಭವನ್ನು ನೆರವೇರಿಸಬೇಕೆಂದ್ಞಾಲೋಚಿಸಿ, ಅದರಂತೆ ತಾರೀಖು ೩೧ನೇ ಮೇ ಸನ್ ೧೯೧೪ ಇಸವಿ ರವಿವಾರ ದಿವಸವನ್ನು ಗೊತ್ತುಮಾಡಿ, ಯಾವತ್ತು ಮುಖಂಡರಿಗೆ ಆಮಂತ್ರಣ ಪತ್ರಗಳನ್ನು ಕಳಿಸಿ, ಪುರವನ್ನು ಯಥಾಪ್ರಕಾರ ಶೃಂಗರಿಸಿ, ಅದಕ್ಕಾಗಿ ವಿರಕ್ತಮಠದಲ್ಲಿ ಒಂದು ಸುಂದರವಾದ ಸಭಾಮಂಟಪವನ್ನು ರಚಿಸಿ, ಸಮಾರಂಭದ ಸರ್ವಸಿದ್ಧತೆಯನ್ನು ಮಾಡಿದರು. ಅಮಂತ್ರಿತರಾದ ರಾ.ಬ॥ರವರು ತಾರೀಖು ೩೦ನೇ ಮೆ ೧೯೧೪ ಇ. ಶನಿವಾರ ದಿವಸ ಬೆಳಗಾವಿಯಿಂದ ಮುಂಜಾನೆ ಗಾಡಿಗೆ ಹೊರಟು, ಚಿಕ್ಕೋಡಿಗೆ ೧೨ ಗಂಟೆಯ ಸುಮಾರಕ್ಕೆ ತಲುಪಿದರು. ಮುಖಂಡರೆಲ್ಲರು ಇವರನ್ನು ಮರ್ಯಾದೆಯಿಂದ ಊರೊಳಗೆ ಕರೆದುಕೊಂಡು ಹೋದರು. ಮರುದಿವಸ ಅಂದರೆ ತಾರೀಖು ೩೧ನೇ ರವಿವಾರ ದಿವಸ ರಾ.ಬ॥ರವರನ್ನೂ, ಇವರೊಂದಿಗೆ ಮಿ॥ ಯಶವಂತ ಬಾಳಪ್ಪ ಬೋರಕರ ಡಿ.ಡಿ. ಕಲೆಕ್ಟರ ಬೆಳಗಾವ ಇವರನ್ನೂ ಡಮಣೀ ಗಾಡಿಯಲ್ಲಿ ಕುಳ್ಳಿರಿಸಿ, ಮಂಗಳವಾದ್ಯಗಳ ರಭಸದೊಡನೆ ಮೆರವಣಿಗೆಯನ್ನು ಹೊರಡಿಸಿ, ಪೇಟೆಯ ಮಾರ್ಗವಾಗಿ ಸಭಾಮಂಟಪಕ್ಕೆ ಕರಕೊಂಡು ಬರುವಾಗ ಇವರಮೇಲೆ ಭತಾಸುಗಳನ್ನೂ, ತಾಮ್ರಬೆಳ್ಳಿಗಳ ನಾಣ್ಯಗಳನ್ನೂ ಬಹಳೇ ಹಾರಿಸಿದರು. ಅನೇಕೋತ್ಸವದಿಂದ ಮೆರವಣಿಗೆಯು ಸಭಾಮಂಟಪಕ್ಕೆ ಬಂದೊಡನೆ ಸಭಾಸದರ ಜಯಘೋಷದಲ್ಲಿ ಎಲ್ಲ ಮಹನೀಯರು ಉಚಿತಾಸನಗಳಲ್ಲಿ ವಿಶ್ರಮಿಸಿದರು. ಸಂಜೆಯ ೫ ಗಂಟೆಯ ಸುಮಾರಕ್ಕೆ ಸಭೆಯು ಸುರುವಾಗಿ ಆರಂಭಕ್ಕೆ ಸ್ವಾಗತಪದವನ್ನು ಸಿದ್ಧರಾಮಪ್ಪಾ ಮುಗಳಿ ಮು॥ಹುಕ್ಕೇರಿ ಇವರು ಹಾಡಿದರು.[೧] ಅನಂತರ ಮಿ. ಹುಬ್ಬಳ್ಳೀಕರ ವಕೀಲ, ಗಣೇಶ ಅಣ್ಣಾಜಿ ಹೆಬ್ಬಾಳ ವಕೀಲ, ಬಿ.ಎ.ಎಲ್ಎಲ್.ಬಿ, ಚಂದಾವರಕರ ವಕೀಲ, ವೇ.ರಾ॥ ಜ್ಞಾನದೇವ ಪಾಂಡುರಂಗಶಾಸ್ತ್ರಿ ಏಕಸಂಬಿಕರ ಮುಕ್ಕಾಮ ಸಂಕೇಶ್ವರ ತಾ. ಚಿಕ್ಕೋಡಿ, ಚನ್ನಬಸವಸ್ವಾಮಿ ಹಿರೇಮಠ ಸಾ॥ ಸದಲಿಗಿ ತಾಲೂಕ ಚಿಕ್ಕೋಡಿ, ಪಾಂಡುರಂಗ

---

೧. ಈ ಪದವನ್ನು ಬೆನ್ನುಪುಟದ ಮೇಲೆ ಬರೆಯಲಾಗಿದೆ -ಸಂ

ಪದ-ರಾಗ-ತೋಡಿ ತಾಳ-ಆದಿ
ಪುಣ್ಯವಂತನೊ ಆಹಾ! ಚೆನ್ನಿಗರಟಾಳ ದೊರೆಯೆ॥
ನಿನ್ನಸಮಾನರು ಇನ್ನು। ಧನ್ಯಮಾನ್ಯರಿಹರೇ ॥ಪಲ್ಲ॥

ವೀರಶೈವಾನ್ವಯ ವಾರಿವರ್ಧನ
ಒಗಿರುಚಂದಿರವೀರ। ಶೂರ ಧೀರ ರುದ್ರಗೌಡನೇ ॥೧॥

ಹುಟ್ಟಿದ ಮಕ್ಕಳಿಗೆ ಇಟ್ಟು ನಿನ್ನಯ ಹೆಸರು।
ಶ್ರೇಷ್ಠ ದೊರೆಯು ಎಂದು। ಊರು ಕೇರಿ ಸಾರುತಿಹದ್ಯೆ ॥೨॥

ಜನಸತಿ ಹಿತವನು। ಜನರ ಹಿತವಗೆಯ್ಯ
ಲನುದಿನ ನಿನ್ನ ಕಾರ್ಯವ। ಜನರು ಮನವಿ ನೆನೆಯುತಿಹರ್‍ಯೆ ॥೩॥

ಎಲ್ಲ ವಿಷಯಗಳ ಬಲ್ಲಮಹಿಮನೆಂದು
ಎಲ್ಲ ಕಡೆಯ ಜನರು। ಬಲಿದು ಒಲಿದು ನಲಿಯುತಿಹರ್‍ಯೆ ॥೪॥

ರಸಿಕ ಶಿರೋಮಣಿ। ಅಸಮಗುಣಾಗ್ರಣಿ
ಬಸವ ಚಿಂತಾಮಣಿ। ವಸುಧೆಗೆಸೆದು ಹೆಸರು ಪಡೆದ್ಯೆ ॥೫॥

ಕೃಷ್ಣ ದೇಸಾಯಿ ಹೊದಲೂರ ಕಾರಕೂನ ಡಿ.ಡಿ. ಕಲೆಕ್ಟರ ಆಫೀಸ ಬೆಳಗಾವ ಮೊದಲಾದ ವ್ಯಾಖ್ಯಾತರು ತಮ್ಮ ತಮ್ಮ ಭಾಷಣಗಳಿಂದ ರಾ.ಬ॥ರವರು ಮಾಡಿದ ಮಹತ್ಕಾರ್ಯಗಳನ್ನು ಸಭಾಸದರಿಗೆ ವಿಶದಪಡಿಸಿದರು. ಬಳಿಕ ಮಾನಪತ್ರವು ಓದಲ್ಪಟ್ಟು ಅದನ್ನು ಅತಿ ಸುಂದರವಾದ ಬೆಳ್ಳಿಯ ಕಾಸ್ಕೀಟದಲ್ಲಿಟ್ಟು ರಾ॥ಬಹದ್ದೂರರವರಿಗೆ ಸಮರ್ಪಿಸಿದ್ದಲ್ಲದೆ, ಅದರೊಡನೆ ಸುವರ್ಣಪದಕವನ್ನೂ ಸಮರ್ಪಿಸಿದರು. ರಾ.ಬ॥ರವರು ಸಭಾಸದರ ಆಭಾರವನ್ನು ಮನ್ನಿಸಿದರು. ಕಡೆಗೆ ಪದ ಪದ್ಯಗಳೂ, ಗಾಯನ ಸಮಾರಂಭವೂ ಆಗಿ, ಹಾರ ತುರಾಯಿ ಪರಿಮಳದ್ರವ್ಯಗಳು ಹಂಚಲ್ಪಟ್ಟು, ೮ ಗಂಟೆಯ ಸುಮಾರಕ್ಕೆ ಸಭಾವಿಸರ್ಜನೆಯಾಯಿತು. ಸಭಾವಿಸರ್ಜನವಾದ ನಂತರ ರಾ.ಬ॥ರವರನ್ನು ಪುನಃ ಮೊದಲಿನಂತೆ ಮೆರವಣಿಗೆಯೊಡನೆ ಬಂಗಲೆಗೆ ಕಳಿಸಿದರು. ಈ ರಾತ್ರಿ ಸಮಯದ ಮೆರವಣಿಗೆಯಲ್ಲಿ ಮದ್ದಿನ ಉತ್ಸವವು ಚೆನ್ನಾಗಿ ಆಯಿತು. ಒಟ್ಟಿಗೆ ಸಮಾರಂಭವು ಪ್ರೇಕ್ಷಣೀಯವಾಯಿತು. ಈ ಸಮಾರಂಭಕ್ಕೆ ಚಿಕ್ಕೋಡಿಯವರು ಸುಮಾರು ಏಳೆಂಟು ನೂರು ರೂಪಾಯಿ ವೆಚ್ಚಮಾಡಿದರು. ಅಜಮಾಸು (೪೦೦೦) ನಾಲ್ಕು ಸಾವಿರದ ವರೆಗೆ ಜನರು ಕೂಡಿದ್ದರು. ರಾ.ಬ॥ರವರು ಮರುದಿನ ಒಂದು ದಿವಸ ಚಿಕ್ಕೋಡಿಯಲ್ಲಿಯೇ ಇದ್ದು, ತಾರೀಖು ೨ನೇ ಜೂನ್ ೧೯೧೪ ಮಂಗಳವಾರ ದಿವಸ ಅಲ್ಲಿಂದ ಹೊರಟು ನಿಪ್ಪಾಣಿಗೆ ಬಂದು, ಕರ್ನಾಟಕ ಕಾಲೇಜದ ಫಂಡಿನ ಕೆಲಸದ ಸಲುವಾಗಿ ಅಲ್ಲಿ ತಾ. ೨-೩-೪ ಈ ಮೂರು ದಿವಸದಲ್ಲಿಯೇ ಮುಕ್ಕಾಮು ಮಾಡಿ, ತಾ. ೫ನೇ ಶುಕ್ರವಾರ ದಿವಸ ಗೋಟೂರಿಗೆ ಬಂದರು. ಅಲ್ಲಿಯೂ ಫಂಡು ಕೂಡಿಸುವ ಉದ್ದಿಶ್ಯ ತಾ. ೫-೬-೭ ಈ ದಿವಸ ನಿಂತು, ತಾರೀಖು ೮ನೇ ಸೋಮವಾರ ದಿವಸ ಯಮಕನಮರಡಿಯ ರಸ್ತೆಯಿಂದ ಸುಖರೂಪವಾಗಿ ಬೆಳಗಾವಿಗೆ ಬಂದು ತಲುಪಿದರು.

❖❖

೨೩ನೇ ಭಾಗ

ಜಗದ್ಗುರುಗಳಾದ ಶ್ರೀ ಜಯದೇವ ಮುರುಘೇಂದ್ರ ಮಹಾಸ್ವಾಮಿಗಳು ಬಂಗಲೆಗೆ ದಯಮಾಡಿಸಿದ್ದು

ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಚಿತ್ರದುರ್ಗ ಬೃಹನ್ಮಠ ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರು ಅಥಣಿಗೆ ದಯಮಾಡಿಸಿದ ಸಂಗತಿಯು ಹಿಂದೆ ಬರೆಯಲ್ಪಟ್ಟಿದೆ. ಶ್ರೀಗಳವರು ಅಲ್ಲಿಂದ ಸಕಲ ಸರಂಜಾಮದೊಂದಿಗೆ ಸಾಂಗಲಿ-ಮಿರ್ಜಿ-ಪುಣೆ-ಸತಾರೆ-ಸೊಲ್ಲಾಪುರ ಮೊದಲಾದ ಮಹಾರಾಷ್ಟ್ರ ಪ್ರಾಂತದಲ್ಲೆಲ್ಲ ಸಂಚರಿಸಿ ಅಲ್ಲಲ್ಲಿಯ ಭಕ್ತರನ್ನು ಉದ್ಧರಿಸುತ್ತ, ಅವರು ಈಯುವ ಕಾಣಿಕೆಗಳನ್ನು ಸ್ವೀಕರಿಸುತ್ತ, ಕೊಲ್ಲಾಪುರಕ್ಕೆ ದಯಮಾಡಿಸಿ ಅಲ್ಲಿ ಲಕ್ಷಾವಧಿ ರೂಪಾಯಿಗಳನ್ನು ವೆಚ್ಚಮಾಡಿ ಒಂದು ಭವ್ಯವಾದ ಮಠವನ್ನು ಸ್ಥಾಪಿಸಿ, ಅದಕ್ಕೊಬ್ಬ ತಮ್ಮ ಮಠದ ಶಿಷೋತ್ತಮರನ್ನು ಪಟ್ಟಿಗಟ್ಟಿ, ಈ ಪಟ್ಟಾಭಿಷೇಕ ಸಮಾರಂಭವನ್ನು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿದರು. ಶ್ರೀಮಚ್ಛತ್ರಪತಿ ಶಾಹೂಮಹಾರಾಜರವರು ತಮ್ಮ ಮಠದ ವಿಷಯವಾಗಿ ತೋರ್ಪಡಿಸಿದ ಸಾನುಭೂತಿಗೆ ಶ್ರೀಗಳು ಸಂತೋಷಿಸಿ, ಪುನಃ ಕರ್ನಾಟಕದ ಕಡೆಗೆ ತಮ್ಮ ಪ್ರಯಾಣವನ್ನು ಬೆಳಿಸಿ, ಗಡ ಇಂಗ್ಲಜ ನಿಪ್ಪಾಣಿಗಳ ಮಾರ್ಗವಾಗಿ ಬೆಳಗಾವ ತಾಲೂಕ ಕಾಗತಿಗೆ ಬಂದರು. ಕಾಗತಿಯ ಮುಕ್ಕಾಮಿನಿಂದ ತಾ. ೧೭ನೇ ಸಪ್ಟಂಬರ ೧೯೧೫ನೇ ಇ. ದಿವಸ ಶಹಾಪುರಕ್ಕೆ ದಯಮಾಡಿಸಿದರು. ಬೆಳಗಾವ-ಶಹಾಪುರಗಳ ಭಕ್ತಜನರು ಶ್ರೀಗಳವರನ್ನು ಬಹು ಸಮಾರಂಭದಿಂದ ಎದುರ್ಗೊಂಡು ಊರೊಳಗೆ ಕರೆತಂದರು. ಅನೇಕ ಜನ ಭಕ್ತರು ಶ್ರೀಗಳವರನ್ನು ಅಡ್ಡಪಲ್ಲಕ್ಕಿಯ ಸಮಾರಂಭ ಸಮೇತವಾಗಿ ತಂತಮ್ಮ ಮನೆಗಳಿಗೆ ಬರಮಾಡಿಸಿಕೊಂಡು ಇಷ್ಟ ಕಾಣಿಕೆಗಳನ್ನು ಸಮರ್ಪಿಸಿ ಸಂತಸವನ್ನಾಂತರು. ಶ್ರೀಗಳವರು ಬೆಳಗಾವಿಗೆ ದಯಮಾಡಿಸಿದ ದಿವಸ ರಾವಬಹಾದ್ದೂರರವರು ಊರೊಳಗಿದ್ದಿಲ್ಲ. ಕರ್ನಾಟಕ ಕಾಲೇಜ ಫಂಡಿಗಾಗಿ ಬೈಲಹೊಂಗಲ-ಮುರಗೋಡಗಳ ಕಡೆಗೆ ಹೋಗಿದ್ದರು. ಅಲ್ಲಿಂದ ಬಂದು ೨೩ನೇ ಸಪಟಂಬರ ಸನ್ ೧೯೧೫ ಇ. ದಿವಸ ಶಹಾಪುರದಲ್ಲಿ ಶ್ರೀಗಳವರ ದರ್ಶನಲಾಭವನ್ನು ಹೊಂದಿದರು. ತಾ. ೧೮ನೇ ಅಕ್ಟೋಬರ ಸನ್ ೧೯೧೫ ಇ. ಯ ರವಿವಾರ ದಿವಸ ರಾ.ಬ॥ರವರು ಶ್ರೀಗಳವರನ್ನು ತಮ್ಮ ಬಂಗಲೆಗೆ ಕರೆದುಕೊಂಡು ಬಂದು ಯೋಗ್ಯವಾಗಿ ಉಪಚರಿಸಿದರು. ಶ್ರೀಗಳವರ ಆ ದಿವಸ ಶಿವಾರ್ಚನೆಯು ಬಂಗಲೆಯಲ್ಲಿಯೇ ಆಯಿತು. ಪ್ರಶಸ್ತವಾದ ಮಂದಿರದಲ್ಲಿ ಶಿವಪೂಜಾ ನಿರತರಾಗಿರುತ್ತಿದ್ದ ಶ್ರೀಗಳನ್ನು ಕಂಡರೆ, ಕೈಲಾಸದಲ್ಲಿ ಶಂಕರನು ಯೋಗಾಸಕ್ತನಾಗಿರುವಂತೆ ಕಂಡುಬರುತ್ತಿದ್ದರು. ರಾವಬಹಾದ್ದೂರರವರು ಹಿಂದೆ ಅಥಣಿಯಲ್ಲಿ ೧೦೧

ರೂಪಾಯಿಗಳನ್ನು ಕಾಣಿಕೆಯಾಗಿ ಸಮರ್ಪಿಸಿದ್ದರೂ ಕೂಡ, ಇಲ್ಲಿ ತಾವೂ ಚಚಡಿಯ ಶ್ರೀಮಂತರೂ ಇಷ್ಟು ಕಾಣಿಕೆಯನ್ನಿಟ್ಟು ಶ್ರೀಗಳವರನ್ನು ಸಂತೈಸಿದರು. ಈ ಸಮಯದಲ್ಲಿ ರಾವಬಹಾದ್ದೂರರವರು ಕರ್ನಾಟಕ ಕಾಲೇಜದ ಬಗ್ಗೆ ವರ್ಗಣಿ ಕೂಡಿಸುತ್ತಿರುವದನ್ನು ಕಂಡು ವಿದ್ಯಾಭಿಮಾನಿಗಳಾದ ಶ್ರೀಗಳವರು ತಮ್ಮ ಬೃಹನ್ಮಠದಿಂದ ಐದುಸಾವಿರ (೫೦೦೦) ರೂಪಾಯಿಗಳ ವರ್ಗಣಿಯನ್ನು ಕೊಟ್ಟು, ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದರು. ಬೆಳಗಾವ, ಶಹಾಪುರಗಳ ಭಕ್ತರ ಸೇವೆಯನ್ನು ಕೈಕೊಂಡು ಶ್ರೀಗಳವರು, ಇಲ್ಲಿಂದ ಕಣಬರಗಿ ಮೊದಲಾದ ಸ್ಥಳಗಳಿಗೆ ಬಿಜಯಂಗೈಸಿ, ಅಲ್ಲಿಂದ ತಾಲೂಕ ಖಾನಾಪುರಕ್ಕೆ ಗಮಿಸಿ ಅಲ್ಲಿಂದ ಪುನಃ ಬೆಳಗಾವಿಗೆ ಬಂದು, ಇಲ್ಲಿಂದು ಬಾಗೆವಾಡಿಯ ಮಾರ್ಗವಾಗಿ ಬೈಲಹೊಂಗಲ-ಸಂಪಗಾವ-ತುರಮರಿ-ಮುಗುಟಖಾನ ಹುಬ್ಬಳ್ಳಿ-ಬೈಲೂರ ಮೊದಲಾದ ಸಂಪಗಾವ ತಾಲೂಕಿನ ಮುಖ್ಯ ಮುಖ್ಯ ಸ್ಥಳಗಳಲ್ಲಿ ಸಂಚರಿಸಿ, ಅಲ್ಲಿಂದ ಧಾರವಾಡ ತಾಲೂಕ ಆಳಣಾವರಕ್ಕೆ ಮುಕ್ಕಾಮ ಮಾಡಿ, ಅಲ್ಲಿಯೊಂದು ಸಭೆಯನ್ನು ಕೂಡಿಸಿ, ಶ್ರೀ ಉಳವೀಕ್ಷೇತ್ರಕ್ಕೆ ದಯಮಾಡಿಸುವ ವಿಚಾರಮಾಡಿ ಆ ಪ್ರಕಾರ ಅನೇಕ ಜನ ಭಕ್ತರ ಗಡಣದಿಂದ ಹಲ್ಲಿಯಾಳ ಮಾರ್ಗವಾಗಿ ಸುಪಾ ಮುಕ್ಕಾಮ ಮಾಡಿ, ಕುಂಬಾರವಾಡೆಯ ಮೇಲಿಂದ ತಾರೀಖು ೨೯ನೇ ಜಾನೇವಾರಿ ಸನ್ ೧೯೧೫ ಇ. ಶುಕ್ರವಾರ ದಿವಸ ಶ್ರೀಗಳವರು ಸರ್ವಸಮಾರಂಭದಿಂದ ಕ್ಷೇತ್ರ ಪ್ರವೇಶಮಾಡಿದರು. ಮಹಾಸ್ವಾಮಿಗಳ ಸೂಚನೆಯ ಮೇರೆಗೆ ಒಂದು ಧರ್ಮಸಭೆಯು ಕೂಡಿಸಲ್ಪಟ್ಟಿತು. ಸಭೆಯ ಅಧ್ಯಕ್ಷಸ್ಥಾನವನ್ನು ಸರ್ವಾನುಮತದಿಂದ ಚಚಡಿಯ ಶ್ರೀಮಂತ ವೀರಭದ್ರಪ್ಪ ನಾಯಕ ಬಹಾದ್ದೂರ ದೇಸಾಯಿಯವರು ಸ್ವೀಕರಿಸಿದ್ದರು. ತಾ. ೩೧-೧-೧೫ ಇಸವಿ ರವಿವಾರದಿಂದ ತಾ. ೩-೨-೧೯೧೫ ಬುಧವಾರದ ವರೆಗೆ ನಾಲ್ಕು ದಿವಸ ಸಭೆಯ ಕೆಲಸವು ನಡೆದು, ಅಲ್ಲಿಯೊಂದು ಧಾರ್ಮಿಕ ಸಂಸ್ಥೆಯು ಸ್ಥಾಪಿಸಲ್ಪಟ್ಟು, ಒಂದು ಸಭಾಗೃಹವನ್ನು ಕಟ್ಟುವದು ಗೊತ್ತಾಗಿ, ಆ ಬಗ್ಗೆ ಕೆಲ ವರ್ಗಣಿಯನ್ನೂ ಕೂಡಿಸುವದಾಯಿತು. ಈ ಸಾಗ್ರಸಂಗತಿಯನ್ನು ತಾರೀಖು..................ನೇ 'ಮೈಸೂರಸ್ಟಾರ' ಪತ್ರದಲ್ಲಿ[೧] ಮುದ್ರಿಸಿರುತ್ತದೆ. ಬೇಕಾದವರು ನೋಡಿಕೊಳ್ಳತಕ್ಕದ್ದು.

ಧಾರವಾಡ ವೀರಶೈವ ಮಂದಿರ

ಧಾರವಾಡ ಶಹರವು ಕರ್ನಾಟಕದಲ್ಲಿ ಹೆಸರಾದ ಶಹರವೆಂದು ಹೇಳಬಹುದು. ಇಲ್ಲಿ ಕನ್ನಡಿಗರ ವಸತಿಯು ಹೆಚ್ಚಿರುವದರಿಂದಲೂ, ಕನ್ನಡ ಭಾಷೆಯ ವಿದ್ಯಾನಿಲಯಗಳೂ, ಸಂಸ್ಥೆಗಳೂ, ವಿದ್ಯಾಭಿಮಾನಿಗಳೂ ನೆಲಸಿರುವದರಿಂದಲೂ, ಪೂರ್ವದಿಂದ ಈ ಶಹರವು ಕನ್ನಡದ ತವರೂರಾಗಿರುವದು. ಇಲ್ಲಿ ಮುಖ್ಯವಾಗಿ ವೀರಶೈವರ ಮುಖಂಡರೂ, ಮತಾಭಿಮಾನಿಗಳೂ ಇರುವದರಿಂದಲೂ, ಇಲ್ಲಿ ಮತ ವಿಷಯಕವಾದ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿರುವದರಿಂದಲೂ, ವೀರಶೈವರ ಧರ್ಮಜಾಗ್ರತೆಯು ಆಗಾಗ್ಗೆ ಇಲ್ಲಿಯೇ ಆಗುತ್ತಿರುವದರಿಂದಲೂ ಈ ಶಹರವು ವೀರಶೈವರ ಕೇಂದ್ರಸ್ಥಾನವಾಗಿರುವದೆಂದರೂ ಸಲ್ಲುವದು. ಮೈಸೂರ ಕರ್ನಾಟಕದ ಕನ್ನಡ ವಿದ್ಯಾಭ್ಯಾಸದ ವಿಷಯವಾಗಿ ಮೈಸೂರು ಹೇಗೆ ಮುಖ್ಯ ಪಟ್ಟಣವಾಗಿರುವದೋ ಹಾಗೆ, ಮುಂಬಯಿ ಕರ್ನಾಟಕದಲ್ಲಿ ಧಾರವಾಡವು ಮುಖ್ಯ ಶಹರವೆಂದೆನ್ನಿಸಿಕೊಳ್ಳುವದು. ಮತ-ಭಾಷೆ-ವಿದ್ಯೆ-ಧರ್ಮಜಾಗ್ರತಿ ಮೊದಲಾದವುಗಳಿಂದ ಇಂತು ಪ್ರತಿಷ್ಠಿತವಾದ ವೀರಶೈವರ ಪ್ರಮುಖ ಶಹರದಲ್ಲಿ ವೀರಶೈವ ಮತವಿಷಯಕವಾದ ಯಾವದೊಂದು ವಿಮರ್ಶೆಯನ್ನು ಮಾಡಲಿಕ್ಕೆ ಬಹು ಜನರು ಸೇರಲು ಸಾಕಷ್ಟು ಅವಕಾಶವುಳ್ಳ ಭವ್ಯವಾದ ಸಾರ್ವಜನಿಕ ಭವನವೊಂದು ಬೇಕಾದುದೆಂದು, ಬಹುಜನರ ಕುತೂಹಲವು ಬಹುಕಾಲದಿಂದಲೇ ಇತ್ತು. ಈ

---

೧. ಹಸ್ತ ಪ್ರತಿಯಲ್ಲಿಯೇ ಸ್ಥಳ ಬಿಡಲಾಗಿದೆ- ಸಂ

ವಿಚಾರವು ರಾ.ಬ॥ಅರಟಾಳ ಸಾಹೇಬರು ಚೀಟನೀಸರಿದ್ದಾಗ್ಗೆ ಅಂದರೆ ಲಿಂಗಾಯತ ಫಂಡಿನ ಉತ್ಪತ್ತಿಯ ಕಾಲಕ್ಕೆ ಅವರ ಮನಸ್ಸಿನಲ್ಲಿ ಬಂದಿತ್ತು. ಆದರೆ ಆಗ ಲಿಂಗಾಯತ ಫಂಡು ಕೂಡಿಸುವ ಮಹತ್ವದ ಕಾರ್ಯವನ್ನು ಕಯ್ಕೊಂಡದ್ದರಿಂದ ಇದನ್ನು ಹಿಂದಿನಿಂದ ನೋಡಲಿಕ್ಕೆ ಬಂದೀತೆಂದು ಭಾವಿಸಿದ್ದರು. ಮುಂದೆ ಸನ್ ೧೯೦೪ನೇ ಇಸವಿಯಲ್ಲಿ ಧಾರವಾಡದಲ್ಲಿ ಶ್ರೀಮದ್ವೀರಶೈವ ಮಹಾಸಭೆಯಾದ ಕಾಲಕ್ಕೆ ಈ ವಿಚಾರವು ಪುನಃ ಜಾಗ್ರತವಾಯಿತು. ಕಡೆಗೆ ಇಲ್ಲಿ ವೀರಶೈವರ ಸಾಮಾಜಿಕವಾದ ಒಂದು ಇಮಾರತ ಕಟ್ಟಲ್ಪಡುವದು ಅವಶ್ಯವಾದುದೆಂದೂ, ಧರ್ಮಸಭೆ ಮೊದಲಾದವುಗಳನ್ನು ಬೇಕಾದಾಗ ಕೂಡಿಸಲಿಕ್ಕೂ ಗವ್ಹರ್ನರ ಮೊದಲಾದ ಮಹನೀಯರು ಧಾರವಾಡಕ್ಕೆ ಆಗಮಿಸಿದಾಗ ವೀರಶೈವರ ವಿದ್ಯಮಾನ ಪ್ರತ್ಯೇಕವಾಗಿ ಅವರ ಸ್ವಾಗತಸಮಾರಂಭವನ್ನೇರ್ಪಡಿಸಲಿಕ್ಕೂ ಅನುಕೂಲವಾಗಬೇಕೆಂದೂ ಯೋಚಿಸಿ, ಮಿ॥ ಮೂಗಪ್ಪ ಚೆನ್ನಬಸಪ್ಪ ಸವದತ್ತಿ, ಚೆನ್ನಮಲ್ಲಪ್ಪಾ ಟೆಂಗಿನಕಾಯಿ, ಮಿ॥ ವೀರಭದ್ರಪ್ಪಾ ಹಾಲಭಾವಿ, ಗದ್ದಿಗಯ್ಯ ಹುಚ್ಚಯ್ಯ ಹೊನ್ನಾಪುರಮಠ, ಮಿ॥ ಕೊಟ್ರಬಸಪ್ಪ ಮೊದಲಾದ ಮುಖಂಡರು ದಾವಣಗೆರೆ ಮುಕ್ಕಾಮಿನಲ್ಲಿದ್ದ ಶ್ರೀ ಜಗದ್ಗುರು ಜಯದೇವ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಈ ಸಂಗತಿಯನ್ನು ಅರಿಕೆ ಮಾಡಿಕೊಂಡರು. ಶ್ರೀಗಳವರು ಸಂತೋಷಿಸಿ ಈ ಕಟ್ಟಲ್ಪಡುವ ವೀರಶೈವ ಮಂದಿರಕ್ಕೆ ತಮ್ಮ ಹೆಸರು (ಜಯದೇವ ಮಂದಿರ) ಇಡುವ ಕರಾರಿನಿಂದ ಹತ್ತುಸಾವಿರ ರೂಪಾಯಿಗಳನ್ನು ತಾವು ಕೊಡುವ ವಾಗ್ದಾನ ಮಾಡಿ, ಒಂಬತ್ತು ಸಾವಿರ ರೂಪಾಯಿಗಳನ್ನು ನಗದು ಕೊಟ್ಟಿರುವರು. ಶ್ರೀಗಳ ಅನುಗ್ರಹದಿಂದ ಮಂದಿರವನ್ನು ಕಟ್ಟುವದು ನಿಶ್ಚಿತವಾಯಿತು. ಈ ಇಮಾರತಿಗೋಸುಗ ಧಾರವಾಡದ ಕಲೆಕ್ಟರರಾದ ಮೆ॥ಎಮ್.ಸಿ. ಗಿಬ್ಬಸಾಹೇಬ ಬ॥ರವರು ಶಹರದ ವಾಯವ್ಯ ದಿಕ್ಕಿಗೆ ಧಾರವಾಡ-ಬೆಳಗಾವ ರಸ್ತೆಗೆ ಹೊಂದಿ ಬಲಭಾಗಕ್ಕೆ ಧಾರವಾಡ ಕಿಲ್ಲೆಯ ಬಾಗಿಲದ ಹತ್ತರ ಪ್ರಶಸ್ತವಾದ ಸ್ಥಳವನ್ನು ಉಚಿತವಾಗಿ ಕೊಟ್ಟರು. ಈ ಮಹನೀಯರಿಂದಲೇ ಈ ಇಮಾರತಿ ಆಸ್ತಿವಾರದ ಮೊದಲನೇ ಕಲ್ಲು ಸನ್ ೧೯೦೫ನೇ ಇಸವಿಯಲ್ಲಿ ಕೂಡಿಸಲ್ಪಟ್ಟಿತು. ಆರಂಭಕ್ಕೆ ಈ ಇಮಾರತಿಯನ್ನು ಅಚ್ಚುಕಟ್ಟಾಗಿ ಕಟ್ಟಿಸುವ ಕೆಲಸವನ್ನು ಚೆನ್ನಮಲ್ಲಪ್ಪಾ ಟೆಂಗಿನಕಾಯಿ ಇವರಿಗೆ ಒಪ್ಪಿಸಲ್ಪಟ್ಟಿತು. ಸನ್ ೧೯೦೬ನೇ ಇಸವಿಯ ಅಗಷ್ಟ ತಿಂಗಳಲ್ಲಿ ಧಾರವಾಡದಲ್ಲಿ ಆದ ಮೀಟಿಂಗಿಗೆ ರಾವಬಹಾದ್ದೂರರವರು ಹೋಗಿದ್ದರು. ಮೆ॥ಕಲೆಕ್ಟರ ಹಡಸನ್ ಸಾಹೇಬರವರೂ ಬಂದಿದ್ದರು. ಆಗ ಚೆನ್ನಮಲ್ಲಪ್ಪ ಟೆಂಗಿನಕಾಯಿ ಇವರಿಂದ ಈ ಇಮಾರತಿಯನ್ನು ಕಟ್ಟುವ ಕೆಲಸವು ಸರಿಯಾಗಿ ಜರುಗುವದಿಲ್ಲೆಂದೂ ಅದರ ಜಮಾಖರ್ಚಿನ ಲೆಕ್ಕವು ಸಹ ಸರಿಯಾಗಿಲ್ಲೆಂದು ಕಂಡು ಬಂದದರಿಂದ ಮಿ॥ ಟೆಂಗಿನಕಾಯಿಯವರನ್ನು ಬಿಡಿಸಿ, ಈ ಕೆಲಸವನ್ನು ಮಿ॥ ಶಾಂತವೀರಪ್ಪ ವೀರಸಂಗಪ್ಪನವರು ಮೆಣಸಿನಕಾಯಿ, ರಿಟಾಯರ್ಡ ಡಿ.ಡಿ. ಕಲೆಕ್ಟರ ಧಾರವಾಡ ಇವರಿಗೆ ಕೊಡಲ್ಪಟ್ಟಿತು. ಇವರು ಅನೇಕ ಕಡೆಗೆ ಸಂಚರಿಸಿ ಅವಿಶ್ರಾಂತ ಶ್ರಮಮಾಡಿ ವರ್ಗಣಿಯನ್ನೆತ್ತಿ, ಈ ಇಮಾರತಿಯನ್ನು ವ್ಯವಸ್ಥೆಯಿಂದ ಕಟ್ಟಿಸುವದರಲ್ಲಿ ತೊಡಗಿದರು. ಈ ಕಟ್ಟಡದ ಕಟ್ಟುವಿಕೆಯು ಅನೇಕ ಅಡಚಣೆಗಳ ಮೂಲಕ ಆರೇಳು ವರ್ಷಗಳ ವರೆಗೆ ಸಾಗಿ ಸನ್ ೧೯೧೩ನೇ ಇಸವಿಯಲ್ಲಿ ಪೂರ್ಣವಾಯಿತು. ಈ ಭವ್ಯವಾದ ಮಂದಿರವನ್ನು ಮನಃಪೂರ್ವಕವಾಗಿ ಕಟ್ಟಿಸಿದ ಶ್ರಮವನ್ನು ತಕ್ಕೊಂಡ ಪೂರ್ಣಶ್ರೇಯಸ್ಸು ಮಿ॥ ಶಾಂತವೀರಪ್ಪ ವೀರಸಂಗಪ್ಪಾ ಮೆಣಸಿನಕಾಯಿ ಇವರಿಗೇ ಸಲ್ಲುವದು.

ಈ ಭವ್ಯವೂ ರಮ್ಯವೂ ಆದ ವೀರಶೈವರ ಸಾರ್ವಜನಿಕ ಮಹಾಮಂದಿರವು ಬಹು ಸೊಬಗುಳ್ಳದ್ದಾಗಿ ಧಾರವಾಡ ಶಹರಕ್ಕೆ ಅಲಂಕಾರಪ್ರಾಯವಾಗಿದೆ. ಇದು ಎರಡು ಅಂತಸ್ತುಗಳುಳ್ಳದ್ದಾಗಿದ್ದು ಕೆಳಗಿನ ಅಂತಸ್ತಿನಲ್ಲಿ ಬಹು ಭವ್ಯವಾದ ಸಭಾಂಗಣವಿದೆ. ಒಳಭಾಗವೆಲ್ಲ ಬಣ್ಣದಿಂದ ಅಲಂಕೃತವಾಗಿದ್ದು ಈ ಮಂದಿರದ ಸೌಂದರ್ಯವು ಬಲು ಪ್ರೇಕ್ಷಣೀಯವಾಗಿದೆ. ಇದರ ದರ್ಶನೀಯ ಸ್ವರೂಪವು ಸರ್ವಾಂಗ ಸುಂದರನೂ ವಿದ್ಯಾಭೂಷಿತನೂ,

ಘನವಂತನೂ ಆದ ಮಹಾಪುರುಷನನ್ನು ಹೋಲುತ್ತದೆಂದು ಹೇಳಬಹುದು. ಈ ಇಮಾರತಿಗೆ ಹೊಂದಿ ನೂತನವಾಗಿ ರಚಿಸಿದ ಒಂದು ಚಿಕ್ಕಗೃಹದಲ್ಲಿ ವೀರಶೈವರ ವಾಚನಾಲಯವು ಸ್ಥಾಪಿಸಲ್ಪಟ್ಟಿರುವದು. ಸುತ್ತಲಿನ ಹೂದೋಟವು ಕಟ್ಟಡದ ಸೌಂದರ್ಯವನ್ನು ಇನ್ನಿಷ್ಟು ಹೆಚ್ಚಿಸಿರುವದು. ಒಟ್ಟು ಈ ಕಟ್ಟಡವನ್ನು ಕಟ್ಟುವದಕ್ಕೆ ಸುಮಾರು ಅರವತ್ತು ಸಾವಿರ ರೂಪಾಯಿಗಳು ವೆಚ್ಚವಾಗಿರುವವು. ಇಷ್ಟು ವಿಶಾಲವಾದ ಸಭಾಂಗಣವುಳ್ಳ ಭವ್ಯವಾದ ಮಂದಿರವು ಮುಂಬಯಿ ಕರ್ನಾಟಕದಲ್ಲಿ ಎಲ್ಲಿಯೂ ಇಲ್ಲವೆಂದು ಹೇಳಬಹುದು.


ಈ ಸುಂದರವಾದ ಮಂದಿರದ ದ್ವಾರವನ್ನು ತೆರೆಯುವ ಸಮಾರಂಭವು ತಾರೀಖು ೧೯ನೇ ನವಂಬರ ಸನ್ ೧೯೧೩ನೇ ಇಸವಿಯ ದಿವಸ ಮುಂಬಯಿ ಇಲಾಖೆಯ ಗವ್ಹರ್ನರರಾದ ನೇಕನಾಮದಾರ ಲಾರ್ಡ ಉಯಿಲಂಗ್‌ಡನ್ ದೊರೆಗಳವರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಸ್ಥಳ ಪರಸ್ಥಳದ ಯಾವತ್ತು ಲಿಂಗಾಯತ ಮುಖಂಡರೂ ಇತರ ಯಾವತ್ತು ಜಾತಿಯ ಪ್ರತಿಷ್ಠಿತಜನರೂ ಸರಕಾರೀ ಸಣ್ಣ ದೊಡ್ಡ ಅಧಿಕಾರಿಗಳೂ ದಯಮಾಡಿಸಿದ್ದರು. ಈ ಸಮಾರಂಭದಲ್ಲಿ ನಾಮದಾರರಿಗೆ ಲಿಂಗಾಯತರ ಪಕ್ಷದಿಂದ ಮಾನಪತ್ರ ಕೊಡಲ್ಪಟ್ಟಿತು. ಮಾನಪತ್ರ ಕೊಟ್ಟಿದ್ದಕ್ಕಾಗಿ ಲಿಂಗಾಯತ ಸಮಾಜದ ಆಭಾರವನ್ನು ಮನ್ನಿಸಿ, ವೀರಶೈವರು ವಿದ್ಯಾಭಿವೃದ್ಧಿಗಾಗಿ ಪಡುತ್ತಿರುವ ಸಾಹಸವನ್ನೂ ಇವರ ಸಂಬಂಧವಾಗಿ ತಮಗಿರುವ ಸಾನುಭೂತಿಯನ್ನೂ ಕುರಿತು ಮಹತ್ವವಾದ ಭಾಷಣಮಾಡಿದರು. ಮುಂದೆ ಮುಂಬಯಿಗೆ ಹೋದವರೇ ನಾಮದಾರರು ಲಿಂಗಾಯತ ಸಮಾಜದ ವಿನಂತಿಯನ್ನು ಸ್ಮರಿಸಿ, ಲಿಂಗಾಯತ ಕಾಮದಾರರಿಗೆ ಹಿತಕರವಾದ ಒಂದು ಠರಾವವನ್ನು ಪ್ರಸಿದ್ಧ ಮಾಡಿದರು. ಅಂದರೆ ಲಿಂಗಾಯತ ಅಸೋಸಿಯೇಶನದವರು ಹಕ್ಕುದಾರರಾದ ತಮ್ಮ ಲಿಂಗಾಯತ ಅಧಿಕಾರಿಗಳ ಬಗ್ಗೆ ಆಯಾ ಖಾತೆಗಳ ವರಿಷ್ಠಾಧಿಕಾರಿಗಳಿಗೆ ರಿಪೋರ್ಟಿನ ಮೂಲಕ ತಿಳಿಸತಕ್ಕದ್ದು ಎಂಬ ಠರಾವವಾಯಿತು. ಸರಕಾರ ಠರಾವ ನಂಬರ ೬೨೫/೨೩-೧-೧೯೧೪ಎಜ್ಯುಕೇಶನಲ್ ಡಿಪಾರ್ಟಮೆಂಟ. ಈ ಠರಾವಿನ ನಕಲುಗಳನ್ನು ಎಲ್ಲ ಖಾತೆಯ ವರಿಷ್ಠಾಧಿಕಾರಿಗಳ ಕಡೆಗೆ ಅವರ ಮಾಹಿತಿಗಾಗಿ ಕಳಿಸಿದರು. ಈ ಠರಾವಿನ ಮೂಲಕ ಲಿಂಗಾಯತ ಅಸೋಸಿಯೇಶನ್ನದವರಿಗೆ ನಾಮದಾರರು ಒಳ್ಳೇ ಹಕ್ಕುಕೊಟ್ಟಂತಾಯಿತು.

(ಇಲ್ಲಿಂದ 'ಕರ್ನಾಟಕ ಕಾಲೇಜ'ವರೆಗಿನ ಪಠ್ಯ ಬೇರೊಬ್ಬರ ಅಕ್ಷರದಲ್ಲಿ, ಆತ್ಮಚರಿತ್ರೆ ಶೈಲಿಯಲ್ಲಿದೆ. ಹೀಗಾಗಿ ಇದನ್ನು ಅಡಿಯಲ್ಲಿ ಕೊಡಲಾಗಿದೆ-ಸಂ) [೨]

---

೨ [ಹಂದಿಗನೂರ ದೇಸಗತಿಯ ದತ್ತಕ ತಂಟೆ]

ಹಂದಿಗನೂರ ದೇಸಗತಿಯ ದತ್ತಕ ಸಂಬಂಧವಾಗಿ ತಂಟೇ ನಡೆದ ವಿಷಯವಾಗಿ ಹಕೀಕತು ಹಿಂದಿನ ಪಾನ ೩೩೧ರಿಂದ ೩೩೩ನೇದರಲ್ಲಿ (ಈ ಮುದ್ರಿತ ಪುಸ್ತಕದ ಪುಟ ೮೩- ಸಂ) ಅಗದಿ ಸಂಕ್ಷಿಪ್ತವಾಗಿ ಬರದದೆ. ಅದರಿಂದ ಯಾವ ಪ್ರಕಾರ ತಂಟೆ, ಎಷ್ಟು ವರ್ಷಗಳ ವರೆಗೆ ನಡೆದು, ಅದರ ಕೊನೆಗೆ ಖಾಲಿ ಹ್ಯಾಗೆ ಆಯಿತೆಂಬುವದು ಚೆನ್ನಾಗಿ ಬೋಧವಾಗುವಂತೆ ಇಲ್ಲಾ. ಕಾರಣ ಈ ತಂಟೇದ ಹಕಿಕತು ತಪಶೀಲವಾರ ಕೆಳಗೆ ಬರದಂತೆ ಇರುತ್ತದೆ.



→

ಕರ್ನಾಟಕ ಕಾಲೇಜ

ಜನರಲ್ಲಿ ಉಚ್ಚಪ್ರತಿಯ ಶಿಕ್ಷಣವು ಪ್ರಸಾರವಾಗಬೇಕಾದರೆ ಆಯಾ ಭಾಗಗಳಲ್ಲಿ ಕಾಲೇಜುಗಳು ಇರಬೇಕಾಗುತ್ತದಷ್ಟೇ. ಕರ್ನಾಟಕಕ್ಕಿಂತ ಮಹಾರಾಷ್ಟ್ರವು ಶಿಕ್ಷಣದಲ್ಲಿ ಮುಂದರಿಯುವದಕ್ಕೆ ಆ ಪ್ರಾಂತದಲ್ಲಿರುವ ವಿಶ್ವವಿದ್ಯಾಲಯಗಳ, ದುಯ್ಯಂಪ್ರತಿಯ ಕಾಲೇಜಗಳ ಅಸ್ತಿತ್ವವೇ ಕಾರಣವು. ಕರ್ನಾಟಕ ಪ್ರಾಂತವು ವಿದ್ಯೆಯಲ್ಲಿ ಮೊದಲೇ ಹಿಂದುಳಿದಿದ್ದು, ಅದರಲ್ಲಿ ಅಲ್ಪ ಸ್ವಲ್ಪ ಪ್ರಗತಿಯನ್ನು ಹೊಂದಿದ ಉಮೇದವಾರರು ಹೆಚ್ಚಿನ ಶಿಕ್ಷಣ ಪಡೆಯಲಿಕ್ಕೆ ಕಾಲೇಜಕ್ಕೆ ಹೋಗಬೇಕೆಂದರೆ, ಕರ್ನಾಟಕಕ್ಕೆ ದೂರವಾಗಿರುವ ಪುಣೆ ಮುಂಬಯಿ ಮುಂತಾದ ಪಟ್ಟಣಗಳಿಗೇ ಹೋಗಬೇಕು. ಅಲ್ಲಿಗೆ ಹೋಗಲಿಕ್ಕೆ ಹಣದ ಕೊರತೆ ಮೊದಲಾದ ಅನೇಕ ಕಾರಣಗಳಿಂದ, ಉಮೇದವಾರರು ನಿರಾಶರಾಗಿ ಮನೆ ಹಿಡಿದು ಕೂಡ್ರಬೇಕಾಗುವದು. ಇಲ್ಲವೇ ಅಷ್ಟಕ್ಕೆ ದೊರೆತ ನೌಕರಿಯಿಂದ ಸಂತುಷ್ಟರಾಗಬೇಕಾಗುವದು. ಅಥವಾ ಶ್ರೀಮಂತ ಪುತ್ರರಾಗಲೀ ಸಾಕಷ್ಟು ಸ್ಕಾಲರಶಿಪ್ಪು ದೊರೆದ

→ ಬುಳ್ಳಪ್ಪ ದೇಸಾಯರು ಹಿರೇಕುಟುಂಬ ನಾಗವ್ವನವರ ಮಕ್ಕಳು. ಇವರು ಚಿಕ್ಕಹೆಂಡತೀ ಮಕ್ಕಳಾದ ಸಿದ್ಧಲಿಂಗಪ್ಪ ದೇಸಾಯರಕಿಂತಲೂ ವಯಸ್ಸಿನಿಂದ ಚಿಕ್ಕವರಾಗಿದ್ದರು. ಆಗಿನ ಪದ್ಧತೀ ಪ್ರಕಾರ ಹಿರೇಹೆಂಡತಿ ನಾಗವ್ವನವರ ಮಕ್ಕಳಾದ ಬುಳ್ಳಪ್ಪ ದೇಸಾಯರ ಹೆಸರೆ ಸಂಸ್ಥಾನದ ಖಾತೆ ದಾಖಲಾಗಿ ಅವರೇ ಗಾದೀ ಮಾಲಕರು ಆದರು. ಬುಳ್ಳಪ್ಪ ದೇಸಾಯರು ಸನ್ನ ೧೮೬೬ನೇ ಇಸವಿಯಲ್ಲಿ ಮಾರಿಕಾ ಅಜಾರಿಯಿಂದ ಮರಣಹೊಂದಿದರು. ಅವರ ಹೊಟ್ಟೆಲೇ ವಂದು ಗಂಡು ಶಿಶುವು ಹುಟ್ಟಿದ್ದು, ಆ ಕೂಸು ಹುಟ್ಟಿದ ಸ್ವಲ್ಪ ವೇಳ್ಯೆದಲ್ಲಿ ಸತ್ತು ಹೋಯಿತು. ಮುಂದೆ ವಾರಸಾ ವಿಚಾರ ನಡೆದು, ಸಿದ್ಧಲಿಂಗಪ್ಪನವರ ಎರಡನೇ ಮಗ ಬಸವಂತರಾಯನಿಗೆ ವಿರುಪಾಕ್ಷವ್ವನವರು ದತ್ತಕ ತೆಗೆದುಕೊಂಡರು. ಸಿದ್ಧಲಿಂಗಪ್ಪನವರ ಕಬೂಲೀ ಮೇಲಿಂದ ವಿರುಪಾಕ್ಷವ್ವನವರ ಹೆಸರ್ಲೆ ಸಂಸ್ಥಾನ ದಾಖಲಾಗಿ, ವಿರುಪಾಕ್ಷವ್ವನವರು ಸಂಸ್ಥಾನದ ವಹಿವಾಟ ಮಾಡಿಕೋತಾ ಬಂದರು. ದತ್ತಕಪತ್ರ ಬರೆದು ಕೊಟ್ಟಿದ್ದಿಲ್ಲಾ, ಪರಂತು ರಾಣೇಬೆನ್ನೂರ ನಾಯಕರ ಕಡಿಂದ ಸಾಲಾ ತೆಗೆದುಕೊಂಡು, ನೋಂದ ದಸ್ತವೈಜುಗಳನ್ನು ವಿರುಪಾಕ್ಷವ್ವನವರು ಹಾಗೂ ದತ್ತಕಮಗ ಬಸವಂತರಾಯರು ಕೂಡೇ ಬರಕೊಟ್ಟಿದ್ದರು. ಅಜಮಾಸ ೧೮೮೨ ನೇ ಇಸವಿಯಲ್ಲಿ ಶಿದ್ಧಲಿಂಗಪ್ಪ ದೇಸಾಯರ ಹಾಗೂ ವಿರುಪಾಕ್ಷವ್ವನವರ ನಡುವೆ ವತನೀ ವಹಿವಾಟೀ ಸಮ್ಮಂಧ ತಂಟೇ ವುತ್ಪನ್ನವಾಗಿ ಮೆ॥ಮಿಡಲ್ಟನ್ನ ಕಲೆಕ್ಟರ ಸಾಹೇಬರವರ ಕಡೇ ದತ್ತ ಮಗನಾದ ಬಸವಂತರಾಯನು "ನಾನು ದತ್ಕಮಗನಿದ್ದೇನೆ. ನನ್ನ ಹೆಸರ್ಲೆ ಸಂಸ್ಥಾನದ ಆಸ್ತಿ ದಾಖಲಾಗಿ ನನ್ನ ತಾಬೇಕ್ಕೆ ಬರಬೇಕೆಂ"ದು ಅರ್ಜಿ ಮಾಡಿದರು. ಆ ಪ್ರಕರಣದಲ್ಲಿ ೩-೪ ಸಾರೇ ಸಮನ್ಸ ಮಾಡಿದರೂ ತಪ್ಪಿಸಿಕೊಳ್ಳುತ್ತಾ ಅಡ್ಡಾಡಿದರು. ವಿರುಪಾಕ್ಷವ್ವನವರ ಅಕ್ಕಂದಿರಿಗೆ ಬಿಜಾಪುರ ಜಿಲ್ಲೆ ಶಿಂದಗಿ ತಾಲೂಕ ಪೈಕಿ ಆಲಮೇಲ ದೇಸಾಯರಿಗೆ ಕೊಟ್ಟಿತ್ತು ಕರ್ಜಗಿ ತಾಲೂಕ ಮಾಮಲೇದಾರರಿಗೆ ದತ್ತಕ ತೆಗೆದುಕೊಂಡಿದ್ದ ಖರೇದೆ ಹ್ಯಾಗೆ ಈ ಬಗ್ಗೆ ಅವರು ಜವಾಬು ತೆಗೆದುಕೊಂಡು ಹುಕುಮು ಕೊಟ್ಟ, ಕೂಡಲೇ ತಪ್ಪಿಸಿಕೊಂಡು ಯಳಮಲ್ಲಿಗೆ ಹೋಗುತ್ತಿದ್ದರು. ವಿಜಾಪುರ ಜಿಲ್ಲೆದ ಕಲೆಕ್ಟರನಿಗೆ ಬರದ ಕೂಡ್ಲೆ ತಪ್ಪಿಸಿಕೊಂಡು ಧಾರವಾಡ ಜಿಲ್ಲೆಕ್ಕೆ ಅಗರ ಮದ್ರಾಸ ಇಲಾಖೆಯಲ್ಲಿ ಹಾಗಲವಾಡಿ ಸಂಸ್ಥಾನಕ್ಕೆ ಹೋಗುತ್ತಿದ್ದರು. ನಾಗವ್ವನವರು ಹಾಗಲವಾಡಿ ಸಂಸ್ಥಾನದಲ್ಲಿ ಹುಟ್ಟಿದವರು. ಸನ್ನ ೧೮೮೨ನೇ ಇಸವಿಯಲ್ಲಿ ಮೆಹರ್ಬಾನ ದಿಲೇರಜಂಗ ಬಹಾದ್ದೂರ ಸವಣೂರ ನವಾಬ ಇವರ ಲಗ್ನವಾಯಿತು. ಲಗ್ನದ ಕೆಲಸವು ತೀರಿದ ಕೂಡ್ಲೇ ಶ್ರೀಮಂತ ಸಿದ್ಲಿಂಗಪ್ಪ ದೇಸಾಯರು ಹಾಗೂ ಅವರ ಇಬ್ಬರು ಮಕ್ಕಳು ಅಂದರೆ ಬಸಲಿಂಗಪ್ಪನವರು ಹಾಗೂ ಬಸವಂತಪ್ಪನವರು ಮೆಹರ್ಬಾನ ಮಿಡಲ್ಟನ್ನ ಸಾಹೇಬರವರ ಭೆಟ್ಟಿಯಾದರು. ಇವರು ಭೆಟ್ಟಿಯಾದ ಕಾಲಕ್ಕೆ ನಾನು ಹಾಜರ ಇದ್ದೆ. ಸವಣೂರ ನವಾಬಸಾಹೇಬರ ಬಂಗಲೇ ಕಿತ್ತು ಬೀಳುವಂತೆ ತಂದಿ ಮಕ್ಕಳು ಬಹಳ ಅತ್ತರು. ಹಾಗೂ ವಿರಾಪಾಕ್ಷವ್ವನವರು ಈಗ ಬಂಕಾಪುರದ ಕಮತದ ವಾಡೇದಲ್ಲಿ ಇದ್ದಾರೆ. ತಾವು ಏಕದಂ ಅವರ ಜಬಾನೀಯನ್ನು ತೆಗೆದುಕೊಂಡರೆ, ಅವರು ಶಿವಪೂಜಿ ಮಾಡುವವರು ಸುಳ್ಳು ಹೇಳುವದಿಲ್ಲ. ದತ್ತಕ ತೆಗೆದುಕೊಂಡದ್ದು ಕಬೂಲ ಮಾಡುತ್ತಾರೆಂದು ಅತ್ತೂ ಕರೆದೂ ಹೇಳಿಕೊಂಡರು. ಆಮೇಲೆ ಅವರಿಗೆ ಅಪ್ಪಣೆ ಕೊಟ್ಟು ಕಳುಹಿಸಿದರು. ಮುಂದೆ ಹ್ಯಾಗೆ ಮಾಡಬೇಕೆಂದು ನನಗೆ ಕರಿಸಿ ಕೇಳಿದರು. "ಯಾರಿಗೂ ತಿಳುಹಿಸದಂತೆ ಇಲ್ಲಿಂದ ಅಂದರೆ ಸವಣೂರಿಂದ ಹೊರಟು ಬಂಕಾಪೂರಕ್ಕೆ ಹೋಗಬೇಕು. ಅಂದರೆ ವಿರುಪಾಕ್ಷವ್ವನವರು ನಮಗೆ ದೊರಿಯುವರೆಂ"ದು ಹೇಳಿದೆ. ಅದಕ್ಕೆ ಕಬೂಲ ಮಾಡಿ,ನನಗೆ ರಾತ್ರಿ ಹೊರಟು ಬಂಕಾಪೂರಕ್ಕೆ ಹೋಗಿ ವಿರುಪಾಕ್ಷವ್ವನವರಿಗೆ ಏಕದಂ ಭೆಟ್ಟಿ ಆಗಿ, →

ಬಡವಿದ್ಯಾರ್ಥಿಗಳಾಗಲೀ ಇವರಷ್ಟೇ ಕಾಲೇಜದ ಕಟ್ಟಡವನ್ನು ಏರಬೇಕಾಗುವದು. ಮಹಾರಾಷ್ಟ್ರದ ಹಾಗೂ ಕರ್ನಾಟಕದ ಗ್ರಾಜ್ಯುಯೇಟರ ಸಂಖ್ಯೆಯನ್ನು ನೋಡಿದರೆ ಭ್ಯೂಮ್ಯಾಕಾಶದಷ್ಟು ಅಂತರವು ಒಡೆದು ಕಾಣುವದು. ಊರಲ್ಲಿ ಶಾಲೆ ಇದ್ದದ್ದಾದರೆ ಆವೂರ ಎಷ್ಟೋ ಹುಡುಗರು-ಬಡವಿದ್ಯಾರ್ಥಿಗಳೂ ಕೂಡ ಹೇಗೆ ಸುಲಭವಾದ ಶಿಕ್ಷಣವನ್ನು ಹೊಂದುವರೋ ಅದರಂತೆ ಆರ್ಟ್ಸ ಕಾಲೇಜವು ಸಮೀಪದಲ್ಲಿದ್ದರೆ, ಆ ಪ್ರಾಂತದ ಅನೇಕಾನೇಕ ವಿದ್ಯಾರ್ಥಿಗಳು ಗ್ರಾಜ್ಯುಯೇಟರಾಗುವರೆಂಬುದಕ್ಕೆ ಸಂದೇಹವಿಲ್ಲ. ಅಂತೂ ಕರ್ನಾಟಕದಲ್ಲಿ ಒಂದು ಆರ್ಟ್ಸ ಕಾಲೇಜವು ಇರಲವಶ್ಯವಾದದ್ದೇ ಸರಿ. ಸನ್ ೧೮೭೧-೧೮೭೨ ಇಸವಿಯ ಸುಮಾರಿನಲ್ಲಿ ಧಾರವಾಡದಲ್ಲಿ ಟ್ರೇನಿಂಗ ಕಾಲೇಜವು ಸ್ಥಾಪಿತವಾದಾಗ್ಯೆ ಅಲ್ಲಿಯ ಕಲೆಕ್ಟರರಾದ ಮೆ॥ಇ.ಪಿ. ಕಲೆಕ್ಟರ ಸಾಹೇಬರವರು ಇವುಗಳ ಜೊತೆಗೆ ಇಲ್ಲಿಯೊಂದು ಆರ್ಟ್ಸ ಕಾಲೇಜವು ಇರತಕ್ಕದ್ದೆಂಬುದಾಗಿ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಇವರಂತೆ

→ ಅವರಿಗೆ ಎರಡನೇ ಕಡೆ ಹೋಗದಂತೆ ಬಂದೋಬಸ್ತಮಾಡಬೇಕೆಂದು ಹೇಳಿದರು. ಅಷ್ಟೇ ಆದ ಪ್ರಕಾರ ನಾನು ರಾತ್ರಿನೇ ಹೊರಟು ಬೆಳಗಾಗುವದರೊಳಗಾಗಿ ಕಮತದ ಮನೆ ಮುಂದಿನ ಪಟಾಂಗಣದಲ್ಲಿ ಹೋಗಿ ಕೂತೆನು. ನನ್ನ ನೋಡಿ ಆಜುಬಾಜು ಮನೇ ಜನರು ಕೂಡಿದರು. ಗುರುಬಸಪ್ಪಶೆಟ್ಟಿ ಕೆಲಸಮಾಡುವವರು ಏಕದಂ ಬಂದರು. ಹಿಂದಿನ ಬಾಗಲಕ್ಕೆ ಕೆಲವು ವಾಲೀಕಾರರನ್ನು ಕೂಡ್ರಿಸಿದೆ. ನನಗೆ ಒಂದು ಖುರ್ಚಿ ತಂದು ಕೊಟ್ಟರು. ಹೊರಗೆ ಕೂತೆ. ಅಷ್ಟರಲ್ಲಿ ಮೇಹರ್ಬಾನ ಮಿಡಲಟನ್ ಸಾಹೇಬ ಬಹಾದೂರರವರು ಬಿಳೇಕುದುರೇ ಮೇಲೆ ಕೂತುಕೊಂಡು ಬಂದರು. ಹಾಗೂ ಪಡದೇದೊಳಗೆ ವಿರುಪಾಕ್ಷವ್ವನವರು ಕೂತುಕೊಂಡು ಪ್ರತಿಜ್ಞೇದ ಮೇಲೆ ಜವಾಬ ಕೊಟ್ಟರು. ಅವರು "ಬಸವಂತರಾಯರಿಗೆ ನಾನು ದತ್ಕ ತೆಗೆದುಕೊಂಡಿಲ್ಲೆ"ಂದು ಹೇಳಿದ ಕೂಡ್ಲೆ ಸಿದ್ದಲಿಂಗಪ್ಪ ದೇಸಾಯರು ಅತ್ತರು. ಹಾಂಗೂ ಬೋಳಿ ಬಂದು ನೆಲಕ್ಕೆ ಬಿದ್ದರು. ಈ ವಿಚಾರಣೇಯಲ್ಲಿ ವಿರೂಪಾಕ್ಷವ್ವನವರು "ತಮ್ಮಘರಾಣೀ ಏಕತ್ರವಾಗಿದೆ. ಹಿಸೆ ಆಗಿಲ್ಲೆ"ಂದು ಕಬೂಲಿಕೊಟ್ಟರು. ಗುರುಬಸಪ್ಪಸೆಟ್ಟರು, "ಪಡದೇಯಲ್ಲಿ ಕೂತು ಜಬಾನಿಕೊಟ್ಟವರು ವಿರುಪಾಕ್ಷವ್ವನವರೇ. ಅವರ ಗುರ್ತಾ ನನಗೆ ಅದೆ" ಅಂತಾ ಬಂದು ಸಹಿಮಾಡಿದರು. "ವಿರುಪಾಕ್ಷವ್ವನವರು ದತ್ತಕ ತೆಗೆದುಕೊಂಡದ್ದಕ್ಕೆ ಇನಕಾರ ಮಾಡುತ್ತಾರೆ. ಕಾರಣ ನಾವು ದತ್ತಕ ಮಗನ ಹೆಸರ್ಲೆ ಸಂಸ್ಥಾನ ದಾಖಲಮಾಡಲಾರೆವು"ಯೆಂದು ಶೇವಟಿಗೆ ಮೆ॥ಮಿಡಲ್ಟನ್ನ ಸಾಹೇಬರವರು ಹುಕುಂ ಕೊಟ್ಟರು. ಮುಂದೆ ಗಾರ್ಡಿಯನ ಸೆಟಲಮೆಂಟ ಲಾಗೂ ಆದ ವತನಗಳಿಗೆ ನಡಿಯುವ ನಗದ ನೇಮಣೂಕಗಳ್ಗೆಲ್ಲ ಹೆಂಗಸರ ಹೆಸರು ತೆಗೆದು ಸಮೀಪದ ಗಂಡು ವಾರ್ಸದಾರರ ಹೆಸರು ದಾಖಲಮಾಡಬೇಕೆಂದು ಸರಕಾರದವರು ಠರಾವ ಮಾಡಿದರು. ಆಗ್ಯೆ "ಘರಾಣೀ ಏಕತ್ರವಾಗಿದೆ. ನಾನು ವಾರಸದಾರನು, ನನ್ನ ಹೆಸರ್ಲೆ ದಾಖಲಾಗಬೇಕೆಂ"ದು ದತ್ತಕ ಮಗ ಬಸವಂತರಾಯರು ತಕರಾರ ಮಾಡಿದರು. ಅದರಂತೆ ಅವರ ಹೆಸರ್ಲೆ ನಗದ ನೇಮಣೂಕೀ ರಜಿಸ್ತರದಲ್ಲಿ ದಾಖಲಾಯಿತು. ಪರಂತು ನಗದ ನೇಮಣೂಕಿ ಹಣವನ್ನು ವಿರುಪಾಕ್ಷವ್ವನವರಿಗೆ ಕೊಡಬೇಕೆಂದು ದಕ್ಷಿಣಭಾಗದ ಕಮೀಶನರರಾದ ಮೆ॥ಪ್ರಾಪರ್ಟಸಾಹೇಬ ಬಹಾದೂರವರು ಠರಾವಮಾಡಿದರು. ಈ ಠರಾವಿನ ಮೇಲೆ ದತ್ತಕ ಮಗ ಬಸವಂತರಾಯರು ಸರಕಾರಕ್ಕೆ ಅಪೀಲಮಾಡಿದರು. ಅದರ ಚವಕಶಿಯಲ್ಲಿ ಮೆ॥ಫುಲಟನ ಸಾಹೇಬ ಬಹಾದೂರ-ಲೀಗಲ್ ರಿಮೆಂಬ್ರನ್ಸರ್ ಅವರ ಅಭಿಪ್ರಾಯವನ್ನು ಸರಕಾರದವರು ಕೇಳಿದರು. ಅವರು ಇಂಡಿಯಸ್ ಪೇನಶನ್ ಆಕ್ಟಿನ ಪ್ರಕಾರ ಪೂರ್ಣ ವಿಚಾರಮಾಡಿ, "ಮೆ॥ಕಲೆಕ್ಟರ ಸಾಹೇಬರವರು ಠರಾವಮಾಡಬೇಕು. ಅವರು ಮಾಡಿದ ಠರಾವಿನ ಮೇಲೆ ಸರಕಾರಕ್ಕೆ ಅಪೀಲ ಇಲ್ಲ. ಮರ್ಜಿ ಇದ್ದವರು ದಿವಾಣೀ ಕೋರ್ಟಿಗೆ ಹೋಗಬೇಕು" ಅಂತಾ ಕೊನೆ ನಿರ್ಣಯವಾಯಿತು. ಅದರಂತೆ ಮೆ॥ಜೆ.ಕೇ. ಸ್ಪೇನ್ಸ ಆಗಿನ ಧಾರವಾಡದ ಕಲೆಕ್ಟರವರು ಪೂರ್ಣ ವಿಚಾರಮಾಡಿ "ಘರಾಣೀ ಏಕತ್ರವದೆ. ಕಾರಣ ದತ್ತಕ ಮಗನ ಹೆಸರ್ಲೆ ನಗದ ನೇಮಣೂಕ ಹಾಗೂ ವತನ ದಾಖಲಮಾಡಬೇಕೆ"ಂದು ಸನ್ನ ೧೮೮೮ ನೇ ಇಸವಿ ಜೂನ ತಿಂಗಳಲ್ಲಿ ಹ್ಕುಂ ಕೊಟ್ಟರು. ವತನ ದತ್ಕ ಮಗನ ಹೆಸರ್ಲೆ ದಾಖಲಾಯಿತು. ಈ ಚವಕಶಿಯಲ್ಲಿ ವಿರುಪಾಕ್ಷವ್ವನವರ ವಕೀಲ ಮಿಸ್ತರ ಅವಟೇ ಹುಬ್ಬಳ್ಳಿಯವರು ಚವಕಶಿ ನಡಿದಾಗ್ಯೆ" ಚಿಟಣೀಸರು ದತ್ಕ ಮಗನ ಪಕ್ಷ ಹಿಡಿದಿರುತ್ತಾರೆ. ಕಾರಣ ಅವರ ಕಡಿಂದ ಅಂದ್ರೇ ನನ್ನ ಕಡಿಂದ ಕಾಗದ ಪತ್ರಗಳನ್ನು ಓದಿಸಿಕೊಳ್ಳಬಾರದು. ಎರಡನೇ ಕಾರಕೂನರ ಕಡಿಂದ ಓದಿಸಿಕೊಳ್ಳಬೇಕು" ಅಂತಾ ತಕರಾರು ಮಾಡಿದರು. ಅದಕ್ಕೆ ಮೆ॥ಸ್ಪೇನ್ಸ ಸಾಹೇಬ ಬಹಾದೂರವರು ಕಬೂಲ ಮಾಡಲಿಲ್ಲ. ಈ ಸಮ್ಮಂಧಿ ಚವಕಸೀ ಮುದ್ದತು ನೇಮಿಸಿದಾಗ್ಯೆ, ಬಸವಂತರಾವ ದೇಸಾಯರು ಹಾಗೂ ಬಸಲಿಂಗಪ್ಪ ದೇಸಾಯರು ಮತ್ತು ಇವರ ವಟಮುಖ್ತಿಯಾರ ಕರಬಸಪ್ಪ ರಿತ್ತಿ-ತಾಲ್ಲೂ ಕರಜಿಗಿಯವರು→

ಆ ಕಾಲದ ಅನೇಕ ವಿದ್ಯಾಭಿಮಾನಿಗಳ ಮತವಾದರೂ ಇತ್ತು. ಆದರೆ ಇದಕ್ಕೆ ಹಣವು ಬಹಳ ಬೇಕಾಗುವದರಿಂದ ಅವರೆಲ್ಲರ ಅಭಿಪ್ರಾಯಗಳು ಅಷ್ಟಕ್ಕೇ ಅಸ್ತವಾಗಿದ್ದವು. ಮುಂದೆ ಸನ್ ೧೯೦೨ನೇ ಇಸವಿಯಲ್ಲಿ ಮುಂಬಯಿ ಇಲಾಖೆಯ ಆಕ್ಸಿಂಗ ಡಾಯರೆಕ್ಟರರಾಗಿ ಬಂದಿದ್ದ ಮೆ॥ಈ ಜಾಯಿಸ್ಸ ಸಾಹೇಬರವರು ಈ ಪ್ರಾಂತದಲ್ಲೊಂದು ಆರ್ಟ್ಸ ಕಾಲೇಜವು ಇರಲವಶ್ಯವಾದದ್ದೆಂದು ಒಡಂಬಟ್ಟಿದ್ದರು. ಹಣದ ಅಭಾವದ ಮೂಲಕ ಇವರ ವಿಚ್ಯಾರವಾದರೂ ಅಷ್ಟಕ್ಕೆ ಕೂತಿತು.

ಮುಂದೆ ಧಾರವಾಡದ ಟ್ರೇನಿಂಗ ಕಾಲೇಜ ಮಾಜೀ ಪ್ರಿನ್ಸಿಪಾಲರಾದ ಪೇನ್ಸನರ ಶ್ರೀನಿವಾಸ ಕೊನ್ನೇರರಾವ ರೊದ್ದ ಹಾಗೂ ಮಿ॥ ಶ್ರೀನಿವಾಸ ಸ್ವಾಮಿರಾವ ಕಮಲಾಪೂರ (ಪೇನಶನರ ಅ. ಕಮಿಶನರ), ಮಿ॥ ನಾರಾಯಣ ಗಣೇಶ ನಾಡಗೇರ ಪೇನಶನರ ಮಾಮಲೇದಾರ ಮೊದಲಾದವರು ಕೂಡಿ ರಾ.ಬ॥ರವರ

→ ಖರ್ಚಿನ ದಶೆಯಿಂದ ೫-೬೦೦ ರೂಪಾಯಿಗಳನ್ನು ತಂದು ಬಸವಂತರಾಯರ ಕಡೇಯಿಟ್ಟಿದ್ದರು. ಅವರು ಆ ರೂಪಾಯಿಗಳನ್ನು ಖರ್ಚುಮಾಡಿ ಒಂದು ಬಂಗಾರದ ಪುತ್ಥಳೀ ಸರವನ್ನು ತೆಗೆದುಕೊಂಡು ಕುಂದಗೋಳಕ್ಕೆ ತಮ್ಮ ಕುಟುಂಬಕ್ಕೆ ಒಯ್ದುಕೊಟ್ಟರು. ಬಸಲಿಂಗಪ್ಪನವರು ಹಾಗೂ ವಟ್ಟಮುಖ್ತಿಯಾದ ಕರಬಸಪ್ಪ ರಿತ್ತಿ ಈ ವುಭಯತರು ನಾನು ಹಾಸಿಕೆಯಿಂದ ಏಳೂದಕ್ಕಿಂತ ಮೊದಲು ನಾನು ಹೊರಗೆ ಕಛೇರಿ ಮಾಡತಕ್ಕ ಜಾಗೇದಲ್ಲಿ ಬಂದು ಕೂಡಿದ್ದರು. ನಾನು ಬಾಗಿಲ ತೆರೆದು ಹೊರಗೆ ಮೂತ್ರವಿಸರ್ಜನೇ ಮಾಡಲಿಕ್ಕೆ ಬಂದಕೂಡಲೆ ಕರಬಸಪ್ಪ ವಟಮುಖ್ತಿಯಾರ ಈತನು ನನ್ನ ಎರಡೂ ಕಾಲುಗಳನ್ನು ಹಿಡಿದುಕೊಂಡು, "ನಮಗೆ ಯಾರದಾರಕಡಿಂದ ೨೦೦ ರೂಪಾಯಿಗಳನ್ನು ಕೊಡಿಸಬೇಕೆ"ಂದು ಹೇಳಿಕೊಂಡರು. ಬಸಲಿಂಗಪ್ಪ ದೇಸಾಯರು ಖುರ್ಚಿ ಮೇಲೆ ಕೂತುಕೊಂಡು ದೊಡ್ಡ ಧ್ವನಿಯಿಂದ ಅಳಲಿಕ್ಕೆ ಹತ್ತಿದರು. ಈ ಧ್ವನಿಯನ್ನು ಕೇಳಿ ನನ್ನ ತಂಗಿಯಾದ ವೀರವ್ವನವರು ವಳಗಿಂದ ಎದ್ದು ಬಂದು, ಏನು ಗದ್ದಲ" ಎಂದು ಕೇಳಿದರು. ನನಗೆ ಸಾಲಾ ಕೊಡಿಸಬೇಕೆಂದು ಗೈರಶಿಸ್ತ ಮಾತು ಹೇಳುತ್ತಾರೆ"ಂದು ಹೇಳಿದೆ. ಆಗ್ಯೆ ನಮ್ಮ ತಂಗಿ ಅಂದದ್ದು "ಸಮಾಧಾನ ಮಾಡು, ಎಲ್ಲರಿಗೂ ಕೆಟ್ಟ ವೇಳ್ಯೆ ತಗಲುತ್ತವೆ. ದೊಡ್ಡ ದೇಸಾಯರು ಅವರೇನು ಹಣಾ ಮುಣಗಿಸುವವರಲ್ಲಾ. ಹೀಗೆ ಸಿಟ್ಟಿಗೇಳಬೇಡೆಂ"ದು ಸಮಾಧಾನ ಹೇಳಿದರು. ಆಮೇಲೆ ರಾ॥ರಾ॥ಲಿಂಗನಗವಡಾ ಮಂಡಿಗಿನಹಾಳ ಕಾರಕೂನ ಇವರಿಗೆ ಕರಿಸಿ, "೨೦೦ ರೂಪಾಯಿಗಳು ಕೈಗಡವಾಗಿ ಕೊಡಿರಿ" ಅಂತಾ ಹೇಳಿದೆ. ಆ ಪ್ರಕಾರ ಅವರು ೨೦೦ ರೂಪಾಯಿ ಕೈಗಡವಾಗಿ ಆಗ್ಯೆ ಕೊಟ್ಟರು. ಲಿಂಗನಗೌಡನ ತಂದಿಯಾದ ರಾಮನಗೌವಡ ಮಂಡಿಗಿಹಾಳ ಇವರು ಅರಳಿ ಮಾರಿ ೩೦೦೦ ರೂಪಾಯಿಗಳು ಅದೇ ವೇಳೆಗೆ ತಂದು ತನ್ನ ಮಗನಾದ ಲಿಂಗನಗೌಡನ ಹತ್ತರ ಇಟ್ಟಿದ್ದು, ಇದು ನಮ್ಮ ತಂಗಿ ವೀರವ್ವನವರು ಹೇಳಿದರು. ಶ್ರೀಮಂತ ಬಸವಂತರಾವ ದೇಸಾಯಿರು ಒಮ್ಮೆ ೪೦೦, ಒಮ್ಮೆ ೨೦೦, ಹಾಗೂ ಕಡೆಗೆ ೧೦೦ರೂಪಾಯಿಗಳನ್ನು ತಿರುಗಿ ತಂದುಕೊಟ್ಟರು. ಲಿಂಗನಗೌಡರು ಬಡ್ಡೀ ತೆಗೆದುಕೊಳ್ಳಲಿಲ್ಲಾ. ಈ ಪ್ರಕಾರ ಹಕೀಕತ ಇರುತ್ತದೆ. ಈ ದೇಸಗತೀ ಸಂಬಂಧಿ ತಂಟೆ ಸನ್ನ ೧೮೮೧ ಇಸವೀಯಿಂದ ೧೮೮೮ನೇ ಇಸವಿ ವರೆಗೆ ನಡೆಯಿತು. ವಿರುಪಾಕ್ಷವ್ವನವರ ಕಡೇ ಸಂಸ್ಥಾನ ವಹಿವಾಟ ಇದ್ದಾಗ್ಯೆ, ಎಲ್ಲಾ ರೈತರ ಕಡಿಂದ ಆಗಾವು ಪುಷ್ಕಳ ಹಣಾ ತೆಗೆದುಕೊಂಡಿದ್ದರು. ಬಸವಂತರಾಯರ ಕಡೆ ಸಂಸ್ಥಾನ ಬಂದ ಕೂಡ್ಲೆ ಎಲ್ಲಾ ಜಮೀನುಗಳು ಅವರ ತಾಬಾಕ್ಕೆ ಬಂದವು. ಅಗಾವು ಕೊಟ್ಟ ಹಣ ಕೆಲವು ರೈತರು ಮುಣಗಿ ಹೋದರು.

ಈ ಹಂದಿಗನೂರ ವಾರಸಾ ಚವಕಶಿಯಲ್ಲಿ ಮೆ॥ಮಿಡಲ್ಟನ್ನ ಸಾಹೇಬರವರು ಬಂಕಾಪುರದ ಕಮತದ ಮನೆಯಲ್ಲಿ ವಿರುಪಾಕ್ಷವ್ವನವರ ಜಬಾನಿ ತೆಗೆದುಕೊಂಡರೆಂದು, ಮೇಲೆ ನಮೂದ ಆಗಿದೆ. ಆ ಜಬಾನಿ ನಾನು ವಿರುಪಾಕ್ಷವ್ವನವರಿಗೆ ಓದಿ ಹೇಳಿದ ಮೇಲೆ "ಇನ್ನೊಂದು ಪ್ರಶ್ನ ವಿರುಪಾಕ್ಷವ್ವನವರಿಗೆ ಹಾಕುವದು ಉಳಿದದೆ"ಯಂದು ಮೆ॥ಮಿಡಲ್ಟನ್ನ ಸಾಹೇಬರವರಿಗೆ ಇಂಗ್ರಜಿ ಭಾಷೆಯಲ್ಲಿ ಹೇಳಿದೆ. ಅದಕ್ಕೆ ಅವರು ಇಂಗ್ರೇಜಿಯಿಂದ "ಏನು ಪ್ರಶ್ನ" ಅಂತಾ ನನಗೆ ಕೇಳಿದರು. ದೇಸಗತಿ ಕುಟುಂಬವು ವಿಭಕ್ತ ಅಥವಾ ಅವಿಭಕ್ತ ಅದೆ ಎಂಬುವದು ಮಹತ್ವದ ಪ್ರಶ್ನೆಯೆಂದು ಹೇಳಿದೆ. ಅದಕ್ಕೆ ಅವರು ಏಕದಂ ಒಡಂಬಟ್ಟರು. ವಿರುಪಾಕ್ಷವ್ವನವರಿಗೆ ಪ್ರಶ್ನಹಾಕಿದರು. ಅದಕ್ಕೆ ಅವರು "ಅವಿಭಕ್ತ ಅದೆ"ಯೆಂದು ಉತ್ತರವನ್ನು ಆಗಿಂದಾಗ ಕೊಟ್ಟರು. ಆ ಉತ್ತರವನ್ನು ಬರೆದುಕೊಂಡು ಜಬಾನೀ ಓದಿ ಹೇಳಿದೆ. ಆ ಮೇಲೆ ವಿರುಪಾಕ್ಷವ್ವನವರು ಜಬಾನೀ ಮೇಲೆ ಸಹಿ ಮಾಡಿದರು. ಮುಂದೆ ಹಪ್ತೆ ವಸೂಲೀ ಕಾಲಕ್ಕೆ, ಸಿದ್ಲಿಂಗಪ್ಪ ದೇಸಾಯರು ಹಾಗೂ ವಿರುಪಾಕ್ಷವ್ವನವರು ಉಭಯತರು ಹಂದಿಗನೂರ ಗ್ರಾಮಸ್ತರ ಕಡೇ ತಕರಾರ ತಂದರು. ಭರಣಾ ಖರ್ಚು ಸಿದ್ಲಿಂಗಪ್ಪನವರು ತಮ್ಮ ಕಡೇ ಹಣಾ →

ಹತ್ತರ ಬಂದು, ಕರ್ನಾಟಕ ಕಾಲೇಜದ ಪ್ರಸ್ತಾಪ ತೆಗೆದು, ಇದಕ್ಕೆ ನಿಮ್ಮ ಸಿರಸಂಗೀ ದೇಸಗತಿಯ ಹಣದ ಸಹಾಯಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಅದಕ್ಕೆ ರಾ||ರವರು ಆ ಹಣವು ಶ್ರೀಮಂತ ಸರದೇಸಾಯಿಯವರ ಮೃತ್ಯುಪತ್ರದ ಪ್ರಕಾರ ಲಿಂಗಾಯಿತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿಯೇ ವೆಚ್ಚವಾಗತಕ್ಕದ್ದಾದ ಕಾರಣ, ಅದನ್ನು ಕರ್ನಾಟಕ ಕಾಲೇಜಕ್ಕಾಗಿ ಕೊಡಲಿಕ್ಕೆ ಬರುವಂತಿಲ್ಲವೆಂದು ಹೇಳಲಾಗಿ, ಅವರು ನಿರುಪಾಯರಾಗಿ ಹೊರಟುಹೋದರು. ಆದರೆ ಇಷ್ಟಕ್ಕೆ ಈ ಪ್ರಯತ್ನವನ್ನು ಅವರು ಬಿಡಲಿಲ್ಲ. ತಾ. ೨೦-೧೧-೦೯ ಇಸವಿಯಲ್ಲಿ ರಾ.ಬ||ರೊದ್ದರವರೂ ಮಿ|| ಕಮಲಾಪೂರ ವ ನಾಡಗೇರ ಇವರೂ ಬೆಳಗಾಂವ ಮುಕ್ಕಾಮಿನಲ್ಲಿ ದಕ್ಷಿಣ ಭಾಗದ ಕಮೀಶನರಾದ ಮೆ||ಎಂ.ಸಿ. ಗಿಬ್ಬ ಸಾಹೇಬ ಆಯ್.ಸಿ. ಯಸ್. ಬಹಾದೂರವರು ಮತ್ತು ಮುಂಬಯಿ ಇಲಾಖೆಯ ವಿದ್ಯಾಖಾತೆಯ ಡಾಯರೆಕ್ಟರಾದ ನಾಮದಾರ ಶಾರ್ಪಸಾಹೇಬ ಬಹಾದೂರವರು, ಮೇಹರ್ಬಾನ

→ ಬೇಕೆಂದು ಹಾಗೂ ವಿರುಪಾಕ್ಷವ್ವನವರು ತಕರಾರ ಮಾಡಹತ್ತಿದರು. ಆಗೀನ ಕಾಲಕ್ಕೆ ಕರ್ಜಗೀ ತಾಲ್ಕು ಮಾಮಲೇದಾರರಾದ ಮಿಸ್ತರ ಕೃಷ್ಣಾಜೀ ಬಲ್ಲಾಳ ದೇವಳ ಇವರು "ಹ್ಯಾಗೆ ಮಾಡಬೇಕೆ"ಂದು ಮೆ. ಕಲೇಕ್ಟರ ಸಾಹೇಬರವರ ಕಡೇ ರಿಪೋರ್ಟಮಾಡಿದರು. ಮೆ||ಎಚ್.ಟಿ. ವೋಮಾನಿ ಆಯ್.ಸಿ. ಎಸ್. ಇವರು ಧಾರವಾಡ ಜಿಲ್ಲೆಯ ಆಕ್ಟಿಂಗ ಕಲೇಕ್ಟರು ಆಗಿದ್ದರು. ಅವರು ದೇಸಗತಿ ತಂಟೆ ಒಂದು ದೊಡ್ಡ ರಿಪೋರ್ಟ ಇಂಗ್ರಜೀಯಿಂದ ತಪಶೀಲವಾರ ಬರೆದು "ಘರಾಣೇ ಅವಿಭಕ್ತ ಅದೆ. ಹಣಾ ವಸೂಲ ಯಾರಿಗೆ ಕೊಡಬೇಕೆ"ಂದು ಆಗಿನ ಕಾಲದ ಮೆ||ಕಮೀಶನರರಾದ ಮಿ|| ಡಬ್ಲ್ಯೂ.ಎಚ್. ಪ್ರೊಪರ್ಟ ಆಯ್.ಸಿ.ಎಸ್. ಇವರ ಹೆಸರಿಲೇ ಕಳಿಸಿದರು. ಈ ರಿಪೋರ್ಟ ಅವರ ಕಡೇ ಬಾಗಲಕೋಟಿ ಮುಕ್ಕಾಂಗೆ ಹೋಗಿ ದಾಖಲ ಆಯಿತು. ಅದೇ ವೇಳೆಗೆ ಮೆ||ವೋಮಾನಿ ಸಾಹೇಬರ ಮುಕ್ಕಾಂ ಗದುಗಿನಲ್ಲಿ ಇತ್ತು. ಮೆ||ಪ್ರೊಪರ್ಟ ಸಾಹೇಬರವರ ಕಡಿಂದ ಒಂದು ತಾರು ಬಂತು. ವೋಮಾನಿ ಸಾಹೇಬರು ಬಾಗಲಕೋಟಿಗೆ ಬಂದು ಭೇಟಿಯಾಗಿ, ಒಂದೆರಡು ದಿವಸ ತಮ್ಮ ಹತ್ತರ ಯಿದ್ದು, ಹೋಗಬೇಕೆಂದು ನಮೂದ ಇತ್ತು. ನನಗೇ ಕೂಡ್ಲೆ ರಾತ್ರಿ ೯ ಗಂಟೆಗೆ ಮುದ್ದಾಂ ಕರಿಸಿಕೊಂಡು, "ನಾನು ನಾಳಿನ ದಿವಸ ಪ್ರಾಂತಃಕಾಲದ ಗಾಡಿಯಿಂದ ಬಾಗಲಕೋಟಗೆ ಹೋಗುತ್ತೇನೆ. ಟಪಾಲಿನ ವ್ಯವಸ್ಥೆ ಮಾಡಬೇಕೆ"ಂದು ಹೇಳಿದರು. ಮತ್ತು ಮರುದಿವಸ ಹೋದರು.

ಬಾಗಲಕೋಟಿ ಬ್ರೆಕ್‌ಫಾಸ್ಟಮಾಡಿದ ನಂತರ ಉಭಯ ಸಾಹೇಬರು ಮಾತಾಡುತ್ತ ಕುಳಿತಾಗ್ಯೆ "ಮೆ||ವ್ಯೋಮಾನೀ ಸಾಹೇಬರವರು ಮಾಡಿದ ರಿಪೋರ್ಟಿಗೆ ಹೆಚ್ಚಿನ ತಜವೀಜ ಆಗದು. ಕುಟುಂಬ ಅವಿಭಕ್ತ ಇದ್ದ ಬಗ್ಗೆ ಪುರಾವೇ ಇಲ್ಲದೇ ನೀವು ರಿಪೋರ್ಟದಲ್ಲಿ ಅವಿಭಕ್ತಯೆಂದು ಬರೀತೀರಿ. ಕಾರಣ ನೀವು ಮಾಡಿದ ರಿಪೋರ್ಟಿನ ಬಗ್ಗೆ ಹೆಚ್ಚಿನ ತಜವೀಜ ಆಗಲಿಕ್ಕೆ ಸವಡ ಇಲ್ಲೆ"ಂದು ಬರೆದ ಉತ್ತರವನ್ನು ಕಮೀಶನರ ಸಾಹೇಬರವರು ವೋಮಾನಿ ಸಾಹೇಬರ ಕೈಯಲ್ಲೇ ಕೊಟ್ಟರು. ಆಗ್ಯೆ ಅವರು "ನನ್ನ ಚಿಟಣೀಸ ಹುಷಾರಿ ಮನುಷ್ಯ. ತಪ್ಪು ಮಾಹಿತಿ ಕೊಡುವವನಲ್ಲೆಂದು, ನಾನು ಪರ್ತ ಗದುಗಿಗೆ ಹೋದ ನಂತರ ಚಿಟಣೀಸನಿಗೆ ಕೇಳಿ ನನ್ನ ಕಡಿಂದ ಉತಾರ ಬರುವ ವರೆಗೆ ಪ್ರಕರಣ ನಿಕಾಲೇ ಮಾಡಬಾರದೆಂದು ಹೇಳಿ ಬಂದಿದ್ದೇನೆಂ"ದು ಗದುಗಿಗೆ ತಿರುಗಿ ಬಂದ ನಂತರ ನನಗೆ ಹೇಳಿದರು. ಆಗ್ಯೆ ನಾನು "ವಿರುಪಾಕ್ಷವ್ವನವರು ಬಂಕಾಪೂರದ ಕಮತದ ಮನೆಯಲ್ಲ ಕೊಟ್ಟ ಜಬಾನಿಯು ವಾರಸಾ ಪ್ರಕರ್ಣದಲ್ಲಿ ಸೇರಿದೆ. ಆ ಪ್ರಕರಣವು ಹುಜೂರ ರಿಕಾರ್ಡಿನಲ್ಲಿ ವಿಲ್ಹೆ ಬಿದ್ದದೆ. ಧಾರವಾಡಕ್ಕೆ ಒಂದೆರಡು ದಿವಸದಲ್ಲಿ ಕಚೇರಿ ಹೋಗುವದು. ಹೋದಕೂಡ್ಲೆ ಸದರಹೂ ಪ್ರಕರಣವು ಹುಜೂರ ರಿಕಾರ್ಡಿನಲ್ಲಿ ಇದ್ದಕ್ಕು ತೆಗೆದು ತೋರಿಸಿದೆ. ಅದನ್ನು ಮೆ||ವೋಮಾನೀ ಸಾಹೇಬ ಬಹಾದೂರನವರು ಸರಕಾರಿ ಪತ್ರದ ಕೂಡ ಮೆ||ಕಮಿಶನರ ಸಾಹೇಬರವರ ಕಡೇ ಕಳುಹಿಸಿದರು. ಪುನಃ ಪ್ರಕರಣವು ಸರಕಾರಕ್ಕೆ ಹೋಯಿತು. ಅವರು ಲೀಗಲ್ಲ ರಿಮೆಂಬ್ರನ್ಸರ ಅಭಿಪ್ರಾಯವನ್ನು ತೆಗೆದುಕೊಂಡು, ಪುನಹಾ ಸಹರಹೂ ಪ್ರಕರಣವನ್ನು ಪ್ರಕಾರ ಪೂರ್ಣ ಚವಕಶೀ ಮಾಡಿ, ನಗದ ನೇಮಣೂಕ ಕಡಿಗೆ ಯೋಗ್ಯ ವಾರಸದಾರ ಹೌದು, ದಾಖಲಮಾಡಬೇಕು ಹಾಗೂ ಕಲೇಕ್ಟರ ಸಾಹೇಬರವರು ಮಾಡಿದ ಹುಕುಮಿನ ಮೇಲೆ ಸರಕಾರಕ್ಕೆ ಅಪೀಲ ಇಲ್ಲಾ. ಮರ್ಜಿ ಇದ್ದವರು ದಿವಾಣೀ ಕೋರ್ಟಿಗೆ ಹೋಗಬೇಕೆಂದು ಸರಕಾರ ಠರಾವಮಾಡಿ ಕಲೇಕ್ಟರ ಸಾ. ರವರ ಕಡೇ ಕಳುಹಿಸಿದರು. ಅವರು ದತ್ತಕ ಮಗ ಬಸವಂತರಾವ ಬುಳ್ಳಪ್ಪ ದೇಸಾಯಿಯವರು ವಾರಸದಾರರೆಂದು ಠರಾವ, ಅವರ ಹೆಸರು ನಗದ ನೇಮಣೂಕಿ ರಜಿಸ್ಟ್ರದಲ್ಲಿ ದಾಖಲಮಾಡಿ, ನೇಮಣೂಕ ಅವರಿಗೆ ಆದಾ ಮಾಡಬೇಕೆಂದು ಹುಕುಂ ಕೊಟ್ಟರು. ಇಲ್ಲಿಗೆ ಹಂದಿಗನೂರ ದೇಸಗತಿಯ ತಂಟೇದ ಕೊನೆ ಮುಕ್ತಾಯವಾಯಿತು. ಮೆ||ಜೆ.ಆರ್.→

ರೆವ್ಹರೆಂಡ ಬೀಲ ಸಾಹೇಬರವರು, ರಾ.ಬ||ಅರಟಾಳ ಸಾಹೇಬರವರು, ಕಮಲಾಪೂರ ವಕೀಲರು ಮೊದಲಾದ ಪ್ರಮುಖ ಮಂಡಳಿಯ ಮೀಟಿಂಗಿನಲ್ಲಿ. ಕರ್ನಾಟಕ ಕಾಲೇಜದ ಬಗ್ಗೆ ಪುನಃ ಪ್ರಸ್ತಾಪ ತೆಗೆಯಲು, ಅದಕ್ಕೆ ೨೬೪೦೦೦ ರೂಪಾಯಿಗಳನ್ನು ವರ್ಗಣೀ ಕೂಡಿಸಿ ಕೊಟ್ಟರೆ ಕರ್ನಾಟಕದಲ್ಲಿ ಕಾಲೇಜವನ್ನು ಸೇಕಂಡಗ್ರೇಡ ಸ್ಥಾಪಿಸಲಿಕ್ಕೆ ಅಡ್ಡಿಯಿಲ್ಲವೆಂದು ಮೆ||ಕಮೀಶನರ ಸಾ.ಬ.ರವರು ರಾ.ಬ. ರೊದ್ದರವರಿಗೆ ಹೇಳಲು, ಅವರು ಹಿಂದು ಮುಂದಿನ ಯಾವ ವಿಚ್ಯಾರವನ್ನೂ ತಮ್ಮ ಆಳವನ್ನೂ ಸ್ವಲ್ಪವೂ ಪರ್ಯಾಲೋಚಿಸದೆ, ಅವರ ಪ್ರಶ್ನಕ್ಕೆ "ಓಹೋ ಇಷ್ಟು ರೂಪಾಯಿಗಳನ್ನು ನಾನು ಕೂಡಿಸಿ ಕೊಡುವೆ"ನೆಂದರು. ಇವರ ಈ ಅವಿಚಾರದ ಉತ್ತರವನ್ನು ಕೇಳಿ ರಾ.ಬ||ಅರಟಾಳ ಸಾಹೇಬರಿಗೆ ಆಕಸ್ಮಿಕ ನಗೆಬಂತು. ರಾ.ಬ||ಅರಟಾಳರವರ ನಗೆಯನ್ನು ಕಂಡು ಮೆ||ಗಿಬ್ಬ ದೊರೆಗಳು ಇದರಲ್ಲೇನೋ ರಹಸ್ಯವಿರಬೇಕೆಂದು ನಗೆಯ ಕಾರಣವನ್ನು ವಿಚಾರಿಸಿದರು. "ಮೆ||ರವರೇ, ನುಡಿದಂತೆ

→ ಮಿಡಲಟನ್ ಸಾಹೇಬರನ್ನು ಹಾಗೂ ಮೆ||ವೋಮಾನೀ ಸಾಹೇಬರನ್ನು ಈ ದೇಸಗತಿ ವಂಶದವರು ಅನನ್ಯ ಭಾವದಿಂದ ಸ್ಮರಿಸತಕ್ಕದ್ದು.

ಸದರಿ ವಿರುಪಾಕ್ಷಪ್ಪನವರು "ತಮ್ಮ ಘರಾಣೇ ಏಕತ್ರ ಅದೆ" ಅಂತಾ ಜವಾಬ ಕೊಟ್ಟ ಸಂಗತಿ ತಿಳಿದ ಕೂಡಲೇ ಜನರು ಸಾಲಾ ಕೊಡಲೇ ಇಲ್ಲಾ. ಹೀಗಾಗಿ ಬಹಳೇ ತ್ರಾಸಿನಲ್ಲಿ ಬಂದು, ಕಡೆಗೆ ತೀರಿಹೋದರು. ವಿಜಾಪೂರ ಜಿಲ್ಲಾ ಸಿಂದಿಗಿ ಎಳಮಲಿಯಲ್ಲಿ ಅವರ ಅಕ್ಕನನ್ನು ಕೊಟ್ಟಿತ್ತು. ಅಲ್ಲಿಗೆ ಹೋಗಿ, ಅಲ್ಲಿಯೇ ಇದ್ದು ತೀರಿಕೊಂಡರು. ಇವರು ಇರ್ವರು ಅಕ್ಕ ತಂಗಿಯರು ಅಲ್ಲೇ ತೀರಿಕೊಂಡರು. ಉಭಯತರ ಸಮಾಧಿಗಳು ಯಳೆಮಲ್ಲಿಯಲ್ಲೇ ಇರುತ್ತವೆ.

[ಪೆನ್‌ಶನ್ ಹೊಂದಿದ ರುದ್ರಗೌಡರ ಪಾನಸುಪಾರಿ ತಪಶೀಲ]

ರಾವಬಹಾದ್ದೂರ ರುದ್ರಗೌಡಾ ಚನವೀರಗೌಡಾ ಅರಟಾಳ ಆಯ್.ಎಸ್.ಓ. ಇವರು ತಾರೀಖ ೧೭ ಜೂನ ೧೯೧೩ ಇಸ್ವಿಯಲ್ಲಿ ಬೆಳಗಾಂವದಲ್ಲಿ ತಮ್ಮ ಡಿಸ್ಟ್ರಿಕ್ಟ ಡೆಪ್ಯೂಟೀ ಕಲೆಕ್ಟರ ಕೆಲಸದಿಂದ ನಿವೃತ್ತರಾಗಿ ಪೆನ್ಸನ್ ತೆಗೆದುಕೊಂಡ ನಂತರ ಪಾನಸುಪಾರಿಗಳಾದ್ದರ ತಪಶೀಲು ಕ್ರಮವಾಗಿ ಕೆಳಗೆ ವಿವರಿಸಿದಂತೆ ಇರುತ್ತದೆ.

೧. ಬೆಳಗಾವಿ, ಶಿವಾನಂದ ಥಿಯೇಟರ
   ೨೯-೬-೧೯೧೩ ರವಿವಾರ ೫ ಗಂಟೆ.
   ಅಜಮಾಸ ೭೦೦-೮೦೦ ರೂಪಾಯಿ ಖರ್ಚು ಆಗಿರಬಹುದು. ಮೆ. ಶೆಫರ್ಡ-ಕ್ರಂಪನ-ಬ್ರಾವುನ್-ಮ್ಯಾಕೆ ಮುಂತಾದ ಜನರು ಮತ್ತು ಪ್ರೇಕ್ಷಕರು ಅಜಮಾಸ ೩-೪ ಸಾವಿರ ಇರಬಹುದು.

೨. ಗೋಕಾಕ ಆಲದಕಟ್ಟಿಮಠ
   ೨೭-೭-೧೯೧೩ ರವಿವಾರ ೫ ಗಂಟೆ
   ಅಜಮಾಸ ೭೦೦ ರೂಪಾಯಿ ಖರ್ಚು ಮಾಡಿ ಬೆಳ್ಳಿ ಕಾಸ್ಕೇಟದಲ್ಲಿ ಮಾನಪತ್ರವು ಕೊಡಲ್ಪಟ್ಟಿತು. ೫೦೦೦ ಜನರು ನೋಡಲಿಕ್ಕೆ ಕೂಡಿತ್ತು.

೩. ಮಿ. ಗೋವಿಂದ ಶಂಕರ
   ಮಾಹಜನ ಗೋಕಾಕ ಇವರಲ್ಲಿ
   ೨೯-೭-೧೯೧೩ ಸೋಮವಾರ ಸಾಯಂಕಾಲ ೮ ಗಂಟೆ.
   ಅಜಮಾಸು ೫೦ ರೂ. ಖರ್ಚುಮಾಡಿದರು. ಸಭೆಗೆ ೨೫೦ ಜನ ಪ್ರಮುಖರು ಕೂಡಿದ್ದರು. →

ನಡೆದರೆ ನಗೆ ಬರುವ ಅವಶ್ಯವೇ ಇಲ್ಲ. ಕಾರ್ಯದ ಸಾಧ್ಯಾಸಾಧ್ಯತೆಯನ್ನು ವಿಚ್ಯಾರಿಸದೇ ೨-೩ ಲಕ್ಷ ರೂಪಾಯಿಗಳ ವರ್ಗಣೀಯನ್ನು ಒಬ್ಬರೇ ಕೂಡಿಸಿಕೊಡುತ್ತೇವೆಂದು ಒಡನುಡಿದ ನಾಮದಾರ ರೊದ್ದರವರ ಶುಷ್ಕನುಡಿಗಳನ್ನು ಕೇಳಿ ನಗೆ ಬಾರದೇನು ಮಾಡೀತು! ಒಪ್ಪಿಕೊಂಡ ಕೆಲಸವನ್ನು ಕಾರ್ಯತಃ ನೇರವೇರಿಸದೇ ಬರಿಯ ಸುಳ್ಳು ನುಡಿಗಳಿಂದ ಪ್ರಸಂಗವನ್ನು ಗೆದೆಯುವದು ನನಗೆ ಸಹಸಾ ಸೇರುವದಿಲ್ಲ. 'ಮುತ್ತು ಒಡೆದರೆ ಹೋಯಿತು ಮಾತು ಆಡಿದರೆ ಹೋಯಿತು' ಎಂಬ ನಾಣ್ಣುಡಿಗೆ ಸರಿಯಾಗಿ ಮಾತುಗಳಿತಕ್ಕದ್ದು" ಎಂದು ರಾ.ಬ॥ರವರು ಹೇಳಿ ತಮ್ಮ ಸದ್ಭಾವನೆಯನ್ನು ವ್ಯಕ್ತಪಡಿಸಿದರು. ಈ ಪೂರ್ವಾಲೋಚನೆಯ ಮಿಟಿಂಗಿನಲ್ಲಿ ಏನೇನು ನಡೆಯತೆಂಬ ಸಂಗತಿಯು ಮೇಹರ್ಬಾನ ಗಿಬ್ಬ ದೊರೆಗಳು ರಾ.ಬ॥ಅರಟಾಳ ಸಾಹೇಬರವರ ಕಡಿಗೆ ಕಳಿಸಿದ ಇಂಗ್ರಜೀ ಶರಾ ೪೬೨೨/೨೨-೧೦-೧೯೧೯ ನೋಡಿದರೆ ಪೂರ್ಣ ತಿಳಿಯುವದು.

→ ೪. ಮಿ. ವೆಂಕಾಜೀ ದಾಸೋ ದೇಶಪಾಂಡೆ ಗೋಕಾಕ ಇವರಲ್ಲಿ
೨೮-೭-೧೯೧೩ ಸೋಮವಾರ ರಾತ್ರಿ ೯ ಗಂಟೆ
ಅಜಮಾಸು ೩೦೦ ರೂಪಾಯಿಗಳು ಖರ್ಚಾಗಿ ಮಾಡಿಸಿದ್ದರಲ್ಲಿ ಬಹಳೇ ಸುಂದರ ಮಂಟಪವಿತ್ತು. ಅಜಮಾಸ ೩ ಸಾವಿರ ಜನರು ಕುತಿದ್ದರು.

೫. ಶ್ರೀಮಂತ ಸರದಾರ ನಾಯ್ಕಿಬಹಾದ್ದೂರ ದೇಸಾಯಿ ಚಚಡೀ ಇವರ ವಾಡೇದಲ್ಲಿ
೨೪-೮-೧೯೧೩ ರವಿವಾರ ೩ ಘಂಟೆ ಮಧ್ಯಾಹ್ನ
ಅಜಮಾಸ ೨೦೦೦ ರೂಪಾಯಿಗಳು ಖರ್ಚು ಆದವು. ಬಂಗಾರದ ಪದಕವು ಕೊಡಲ್ಪಟ್ಟಿತ್ತು. ಅಜಮಾಸ ೬-೭ಸಾವಿರ ಜನರು ನೋಡಲಿಕ್ಕೆ ನೆರೆದಿದ್ದರು.ಮೆ॥ಶೆಫರ್ಡ, ಕ್ರಂಪ, ಬ್ರಾವೂನ, ಮೇಕೀ, ಕೋವನ್ ಮುಂತಾದ ಸಿವ್ಹಿಲಿಯನ್ನರು ಬಂದಿದ್ದರು.

೬. ರಾ.ಸಾ॥ಶಿವಲಿಂಗಪ್ಪ ಮಾಹಂತಶೆಟ್ಟಿ ಮತ್ತು ನೇಸರ್ಗಿ ನಿವಾಸಿಗಳು ಪೇಟಿಯಲ್ಲಿ ತಯಾರಿಸಿದ ಮಂಟಪದಲ್ಲಿ
ತಾ.೨೪-೮-೧೯೧೩ ರವಿವಾರ ೧ ಗಂಟೆ ಮಧ್ಯಾಹ್ನಕ್ಕೆ
ಅಜಮಾಸ ೩೫೦ ರೂ.ಗಳು ಖರ್ಚು ಆಗಿರಬಹುದು. ಬಿಳೀಕುದುರೆಯ ಮೇಲೆ ಕುದ್ರಿಸಿ ರಾ.ಸಾ॥ರವರ ಮೆರವಣಿಗೆ ಆಯಿತು. ಮೆ॥ಶೆಫರ್ಡ ಸಾಹೇಬರು ಬಂದಿದ್ದರು. ೪-೫ ಸಾವಿರ ಜನರು ನೋಡಲಿಕ್ಕೆ ಒಳ್ಳೇ ಆತುರಪಡುವವರಾಗಿದ್ದರು.

೭. ಧಾರವಾಡ ಹಡ್ಸನಲಾಯಬ್ರರಿ ವ ಟೆಂಗಿನಕಾಯಿಯವರ ಗಿರಣೆಯಲ್ಲಿ
೨೦-೯-೧೯೧೩ ಶನಿವಾರ ಮೆರವಣಿಗೆ, ತಾ. ೨೧-೯-೧೯೧೩ ರವಿವಾರ
ಅಜಮಾಸ ರೂ. ೪೦೦೦ ಖರ್ಚು ಆಗಿರಬೇಕು. ಮೆರವಣಿಗೆಗೆ ೪೦-೫೦ ಸಾವಿರ ಜನರು ಕೂಡಿರಬಹುದು. ಪಾನಸುಪಾರಿ ವೇಳೆಯಲ್ಲಿ ೧೨ ಸಾವಿರ ಜನರು ಕೂಡಿದ್ದರು. ಮೆ॥ಮೇಕಾನಕೀ ಕಲೆಕ್ಟರ ಸಾ॥ರು ಬಂದಿದ್ದರು.

೮. ಕಣಬರಗಿ ತಾಲ್ಲುಕ ಬೆಳಗಾಂವಿ
೧೨-೧೦-೧೯೧೩ ರವಿವಾರ ೩-೪ ಘಂಟೆ
ಅಜಮಾಸ ೨೦೦೦ ರೂಪಾಯಿಗಳು ಖರ್ಚು ಆಗಿರಬಹುದು. ಬಂಗಾರದ ಪದಕವು ಕೊಡಲ್ಪಟ್ಟಿತು. ಮೆ॥ಶೆಫರ್ಡ, ಕ್ರಂಪ,ಬ್ರಾವೂನ ಮುಂತಾದ ಸಿವ್ಹಿಲಿಯನ್ನರು ಬಂದಿದ್ದರು. ೩-೪ ಸಾವಿರ ಜನರು ಕೂಡಿದ್ದರು.

೯. ಬೈಲಹೊಂಗ್ಲ ಕಡೀ ಗಿರಣೆಯಲ್ಲಿ
೨೫-೧೦-೧೯೧೩ ಶನಿವಾರ ಮೆರವಣಿಗೆ,೨೬-೧೦-೧೯೧೩ ೨ ಘಂಟೆಗೆ ಪಾನಸುಪಾರಿ
ಮಾನಪತ್ರವೂ ಬಂಗಾರದ ಪದಕವೂ ಕೊಡಲ್ಪಟ್ಟಿತು. ಅಜಮಾಸ ೩೦ ಸಾವಿರ ಜನರು ನೋಡಲಿಕ್ಕೆ ಕೂಡಿದ್ದರು. ೧೫೦೦ ರೂ. ಖರ್ಚಾಗಿದ್ದವು. ಮೇಹರ್ಬಾನ ಶೆಫರ್ಡ, ಬ್ರಾವುನ,ಬ್ಯಾಚಲರ ಮುಂತಾದ ಸಿವ್ಹಿಲಿಯನ್ ಬಂದಿದ್ದರು.→

ಮುಂದೆ ಮತ್ತೊಮ್ಮೆ ಬೆಳಗಾಂವಿಯ ಜಮ್ಮಾಮಸೀದೆಯ ಮಾಳಿಗೆ ಮೇಲೆ ಮೀಟಿಂಗು ಕೂಡಿದಾಗ್ಗೆ ಮೇಹರ್ಬಾನ ಕಮೀಶನರರಾದ ಗಿಬ್ಬ ಸಾಹೇಬರವರು ಹಾಗೂ ಮೇಹರ್ಬಾನ ಕಲೆಕ್ಟರ ಬ್ರ್ಯಾಂಡನ್ ಸಾಹೇಬರವರ ಮುಂದೆ ರಾ.ಬ॥ರೊದ್ದರವರು ರಾ.ಸಾ॥ಕಮಲಾಪೂರ ವಕೀಲರು ಪುನಃ ಕರ್ನಾಟಕ ಕಾಲೇಜದ ಪ್ರಸ್ತಾಪ ತೆಗೆದರು. ಅದಕ್ಕೆ ಯಾರೂ ಏನೂ ಉತ್ತರ ಕೊಡದೇ ಇದ್ದದರಿಂದ ಈ ಮಾತು ಅಷ್ಟಕ್ಕೆ ನಿಂತುಹೋಯಿತು. ಮುಂದೆ ಸನ್ ೧೯೧೧ನೇ ಇಸವಿಯಲ್ಲಿ ದಕ್ಷಿಣ ಭಾಗದ ಕಮೀಶನರರಾದ ನಾಮದಾರ ಶೆಫರ್ಡ ದೊರೆಗಳವರಿಗೆ ನಾಮದಾರ ರೊದ್ದ ಹಾಗೂ ಕಮಲಾಪೂರ ಈ ಉಭಯತರು ನಾವು ಕರ್ನಾಟಕ ಕಾಲೇಜದ ಬಗ್ಗೆ ಕೂಡಿಸುವ ಸಭೆಗೆ ತಾವು ಪ್ರೆಸಿಡೆಂಟರಾಗಬೇಕೆಂದು ಪ್ರಾರ್ಥಿಸಿಕೊಂಡರು. ಇವರೀರ್ವರ ಅಂತರಂಗವನ್ನು ಅರ್ಥಮರ್ಥವರಿತ

→ ೧೦. ಬಾಗಲಕೋಟಿ

೨೮-೧-೧೯೧೪ ಬುಧವಾರ ೫ ಘಂಟೇ

ಬಿಳೇಕಾಸ್ಕೇಟದಲ್ಲಿ ಮಾನಪತ್ರವು ಕೊಡಲ್ಪಟ್ಟಿತು. ಮೇಹರ್ಬಾನ ಡಬ್ಲ್ಯು.ಡಿ.ಶೆಫರ್ಡ ಕಮೀಶನರ ದಕ್ಷಿಣ ಭಾಗ ಮತ್ತು ಊರಲ್ಲಿ ಪ್ರಮುಖ ಜನರು ಮುಂತಾದ ಅಜಮಾಸ ೫೦೦೦ ಜನರು ಕೂಡಿದ್ದರು.

೧೧. ಬಿಜಾಪೂರ

೮-೨-೧೯೧೪ ರವಿವಾರ ೫ ಘಂಟೆ

ಮಾನಪತ್ರ ಕೊಡುವಾಗ್ಗೆ ಅಜಮಾಸ ೮-೧೦ ಸಾವಿರ ಜನರು ಕೂಡಿದ್ದರು. ಮೆ॥ಶೆಫರ್ಡ ವ ಕಲೆಕ್ಟರ ಸಾಹೇಬ ಮಿ॥ಕಬ್ರಾತೀ ಮಿ॥ಸಿ.ಎಮ್. ಬೇಕರಡಿ ಜಜ್ಯ ಮೊದಲಾದ ಜನರು ಬಂದಿದ್ದರು.

೧೨. ಅರಟಾಳ ಬಂಕಾಪುರ

೨೪-೪-೧೯೧೪ ರವಿವಾರ ೩ ಘಂಟೆಕ್ಕೆ

ರೂ. ೧೨೦೦ ಖರ್ಚಾಗಿ, ಬೆಳ್ಳಿಕಾಸ್ಕೇಟದಲ್ಲಿ ಮಾನಪತ್ರವು ಕೊಡಲ್ಪಟ್ಟಿತು. ಅಜಮಾಸ ೫೦೦೦ ಜನರು ಕೂಡಿದ್ದರು.

೧೩. ಚಿಕ್ಕೋಡಿಯಲ್ಲಿ ಗುಲಗಂಜೀಮಠದೊಳಗೆ

೩೧-೪-೧೯೧೪ ರವಿವಾರ ೪ ಘಂಟೆ

ಅಜಮಾಸ ೫ ಸಾವಿರ ಜನರು ಕೂಡಿದ್ದರು. ಬೆಳ್ಳೀಕಾಸ್ಕೇಟದಲ್ಲಿ ಮಾನಪತ್ರ ಕೊಟ್ಟರು. ಒಂದು ಸಾವಿರ ರೂಪಾಯಿ ಖರ್ಚು ಆಗಿರಬಹುದು. ಮೆರವಣಿಗೆಯಲ್ಲಿ ಬೆಳ್ಳಿನಾಣ್ಯಗಳು ಮತ್ತು ಬತ್ತಾಸಗಳನ್ನು ಹಾರಿಸಿದರು.

೧೪. ಮುಂಬೈ

೩-೧೦-೧೯೧೫ ರವಿವಾರ

ಒಂದು ಬಂಗಾರದ ಪದಕವೂ ಮತ್ತು ಬೆಳ್ಳಿಯ ಕಾಸ್ಕೇಟದಲ್ಲಿ ಮಾನಪತ್ರವೂ ಕೊಡಲ್ಪಟ್ಟಿತು. ಒಂದು ಹಜಾರ ರೂಪಾಯಿಗಳ ಮೇಲೆ ಖರ್ಚು ಆಗಿರಬೇಕು.

೧೫. ತೇಲಸಂಗ-ತಾಲ್ಲೂಕ ಅಥಣಿ ಬೆಳಗಾವಿ ಜಿಲ್ಲಾ

೧೩-೮-೧೯೧೬ ರವಿವಾರ ೪ ಘಂಟೆ

ಕೊಲ್ಹಾಪುರದ ಜಾಧವರಾವ ಎಮ್.ಎ.ಎಲ್ಎಲ್.ಬಿ. ಇವರ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಅಜಮಾಸ ೫೦೦ ಜನರು ಬಂದಿದ್ದರು. ೬೦೦ ರೂಪಾಯಿ ಖರ್ಚು ಆಗಿರಬೇಕು. →

ಮೆ||ಶೆಫರ್ಡ ಸಾಹೇಬ ಬಹಾದೂರವರು ಮೊದಲು ಹಣವನ್ನು ವಸೂಲಮಾಡಿ ತಂದುಕೊಟ್ಟರೆ ನಾನು ಆ ಬಗ್ಗೆ ವಿಚ್ಯಾರಿಸಿ, ಸರಕಾರಿ ಪರವಾನಿಗಿ ಪಡೆದು ಪ್ರೆಸಿಡೆಂಟನಾಗಲಿಕ್ಕೆ ಒಡಂಬಡುವೆನೆಂದೂ ಸುಮ್ಮನೇ ಬರಿಗಯ್ಯಿಂದ ಮೊಳಹಾಕುವದರಲ್ಲಿ ಅರ್ಥವಿಲ್ಲೆಂದೂ ಹೇಳಿದರು.

ಮುಂದೆ ತಾ. ೧೭-೯-೧೨ ಇಸ್ವಿ ದಿವಸ ಮುಂಬಯಿ ಕಾಯಿದೇ ಕೌನ್ಸಿಲ ಇಲೆಕ್ಸನವಿತ್ತು. ಇದರಲ್ಲಿ ತಮ್ಮ ಮೆಂಬರ ಜಾಗೆಗಳು ಸ್ಥಿರಗೊಳ್ಳಲು ಬಹುಮತಗಳು ತಮ್ಮ ಪಕ್ಷಕ್ಕೆ ಬೀಳಬೇಕೆಂದು ರಾ.ಬ||ರೊದ್ದರವರೂ, ನಾಮದಾರ ಬೆಳವಿಯವರೂ ಈ ಕರ್ನಾಟಕ ಕಾಲೇಜವನ್ನು ಸ್ಥಾಪಿಸುವದರಲ್ಲಿ ತಾವೇ ಮುಖಂಡರೆಂಬ ಸೋಂಗನ್ನು ಜನಸಮೂಹದ ಮುಂದೆ ತಂದರು. ಇವರ ಈ ಕುಟಿಲತನದ, ಕೇವಲ ಸ್ವಾರ್ಥೈಕ ದೃಷ್ಟಿಯ ಅಂತರಂಗವು ರಾ.ಬ||ಅರಟಾಳ ಸಾಹೇಬರವರಿಗೆ ಮೊದಲೇ ಗೊತ್ತಾಗಿ, ಈ ಸೋಗುಗಳ ಕೌಶಲ್ಯವನ್ನು ನೋಡುವವರಾಗಿದ್ದರು.

→ ೧೬. ದಾವಣಗೇರೆ ಮೈಸೂರ ಸ್ಟೇಟ
೩-೨-೧೯೧೭ ಶನಿವಾರ ೫ ಘಂಟೆ
ಬೆಳ್ಳಿಪೆಟ್ಟಿಗೆಯಲ್ಲಿ ಮಾನಪತ್ರ ಕೊಟ್ಟಿತು. ಶ್ರೀ ಮನ್ನಿರಂಜನ ಮೃತ್ಯಂಜಯಸ್ವಾಮಿಗಳು ದಯಮಾಡಿಸಿದ್ದರು. ೨೫೦ ಜನರು ಬಂದಿದ್ದರು.

೧೭. ಬೀರೂರ ಮೈಸೂರ ಪ್ರಾವ್ಹಿನ್ಸ
೫-೨-೧೯೧೭ ಸೋಮವಾರ
ಅಜಮಾಸ ೫೦೦೦ ಜನರು ನೆರೆದಿದ್ದರು. ದುರ್ಗದ ಜಗದ್ಗುರುಗಳು ದಯಮಾಡಿಸಿದ್ದರು. ಬಂಗಾರದ ಪದಕದೊಡನೆ ಮಾನಪತ್ರವು ಕೊಡಲ್ಪಟ್ಟಿತು. ೧೫೦೦ ರೂಪಾಯಿಗಳು ಖರ್ಚು ಆಗಿರಬಹುದು.

೧೮. ತಿಪಟೂರ ಮೈಸೂರ ಪ್ರಾಂತ
೭-೨-೧೯೧೭ ಬುಧವಾರ ವೀರಶೈವ ಆನಂದಾಶ್ರಮ ವ ಬಿಲ್ಡಿಂಗದಲ್ಲಿ
ಮಾನಪತ್ರವು ಕೊಡಲ್ಪಟ್ಟಿತು. ೩-೪ ಸಾವಿರ ಜನರು ಕೂಡಿದ್ದರು. ಮೆ||ಮಾಮ್ಲೆದಾರ ಮುನಸೀಪ, ಸಬ್ಬ ಇನ್ಸಪೇಕ್ಟರ ಮುಂತಾದ ಜನರು ಕೂಡಿದ್ದರು. ರುದ್ರವೀಣಾವಾದ್ಯ ಬಾರಿಸಿತು. ೧೨೫ ರೂಪಾಯಿ ಖರ್ಚು ಆಗಿರಬಹುದು.

೧೯. ಸೊಲ್ಲಾಪೂರ ಮೀಟಿಂಗ ಹಾಲದಲ್ಲಿ
೨೦-೧-೧೯೧೯ ಸೋಮವಾರ ೭ ಘಂಟೆ ಸಾಯಂಕಾಲ
ಬೆಳ್ಳಿ ಕಾಸ್ಕೇಟಿನಲ್ಲಿ ಮಾನಪತ್ರವು ಕೊಡಲ್ಪಟ್ಟಿತು. ಅಜಮಾಸ ೪೦೦೦ ಜನರು ಕೂಡಿದ್ದರು. ಮೇರಿ||ಚಟ್ಯಾ, ಮಿ||ದಿಕ್ಷಿತ ಮುಂತಾದವರು ಬಂದಿದ್ದರು. ಮಿ||ಗುರುಶಾಂತಪ್ಪ ಪಂಚಪ್ಪ ವುಂಬರ್ಜೆ ಬಿ.ಎ.ಇವರು ಅಜಮಾಸ ೧೮೦೦ ರೂಪಾಯಿ ಖರ್ಚು ಮಾಡಿದರು.

೨೦. ಹಿರೇಕೆರೂರ
೧೯ ರಿಂದ ೨೨-೧೦-೧೯೧೯ ರವಿವಾರ ೨ ಘಂಟೆ
೪-೫ ಸಾವಿರ ಜನರು ಕೂಡಿದ್ದರು. ಅಜಮಾಸ ೧೫೦೦ ರೂಪಾಯಿಗಳು ಖರ್ಚು ಆಗಿರಬೇಕು. ಬಂಗಾರದ ಪದಕದೊಡನೆ ಮಾನಪತ್ರವು ಕೊಡಲ್ಪಟ್ಟಿತು.

[ಹುಬ್ಬಳ್ಳಿ-ಮೂರುಸಾವಿರಮಠದ ಅಡ್ಡಪಲ್ಲಕ್ಕಿ ವ್ಯಾಜ್ಯ]

ಶ್ರೀ ಶಂಕರಭಾರತೀ ಸ್ವಾಮಿ ಶೃಂಗೇರಿ ಇವರ ಹಾಗೂ ಶ್ರೀ ಮೂರಸಾವಿರಮಠದ ಕುಮಾರಸ್ವಾಮಿ ಹುಬ್ಬಳ್ಳಿ, ಜಿಲ್ಲಾ ಧಾರವಾಡ ಇವರ ದರಮ್ಯಾನ ಅಡ್ಡಪಲ್ಲಕ್ಕಿಯಲ್ಲಿ ಕೂತು ಮೆರವಣಿಗೆಯಿಂದ ಸರಕಾರೀ ರಸ್ತೆಗಳಲ್ಲಿ ಹೋಗುವ ಹಕ್ಕಿನ ಸಮ್ಮಂಧವಾಗಿ ವ್ಯಾಜ್ಯದ ಹಕೀಕತು ಕೆಳಗೆ ಬರೆದಂತೆ ಇರುತ್ತದೆ. →

ಸನ್ ೧೯೧೨ನೇಯ ತಿಂಗಳಲ್ಲಿ ಧಾರವಾಡ ಮ್ಯುನ್ಸಿಪಲ್ ಕಚೇರಿಯೊಳಗೆ ಕರ್ನಾಟಕ ಕಾಲೇಜದ ಬಗ್ಗೆ ಲಿಂಗಾಯತ ಹಾಗೂ ಬ್ರಾಹ್ಮಣ ಮುಖಂಡರ ಸಭೆ ಕೂಡಿತ್ತು. ಈ ಸಭೆಗೆ ಮೆ॥ನಾಮದಾರ ಶೆಫರ್ಡದೊರೆಗಳೂ, ಕಲೆಕ್ಟರರಾದ ಮೆಕಾನಕಿ ಸಾಹೇಬರವರೂ ನಾಮದಾರ ರೊದ್ದರವರೂ, ಮೆಣಸಿನಕಾಯಿ ಶಾಂತವೀರಪ್ಪನವರೂ ಮೊದಲಾದ ಮುಖಂಡರೆಲ್ಲರೂ ದಯಮಾಡಿಸಿದ್ದರು. ಸಭೆಯಲ್ಲಿ ನಾಮದಾರ ರೊದ್ದರವರು ಈ ಕರ್ನಾಟಕ ಕಾಲೇಜದ ಮಹತ್ವವಾದ ಕಾರ್ಯಸ್ಥಾಪನೆಗೆ ಲಿಂಗಾಯತ ಸಹಾಯವು ನಮಗೆ ಅವಶ್ಯವಾಗಿಬೇಕಾಗುವದೆಂದು ಸೂಚನೆಯನ್ನು ಮಾಡಿದರು. ಅದಕ್ಕೆ ಮೆಣಸಿನಕಾಯಿ ಶಾಂತವೀರಪ್ಪನವರು ನಮಗೆ ಸಧ್ಯಕ್ಕೆ ಕಾಲೇಜದ ತಯಾರಿಯಿಲ್ಲೆಂತಲೂ, ನಮ್ಮ ವಿದ್ಯಾರ್ಥಿಗಳು ಉಚ್ಚತರದ ಶಿಕ್ಷಣದಲ್ಲಿ ಇನ್ನೂ ಅಷ್ಟು ಮುಂದೆ ಬಿದ್ದಿಲ್ಲೆಂತಲೂ ಮೇಲಾಗಿ ವೀರಶೈವ ಬಿಲ್ಡಿಂಗ ಕಟ್ಟುವದಕ್ಕೆ ನಮ್ಮ ಜನರು ವಿಶೇಷ ಹಣವನ್ನು

→ ಶ್ರೀ ಶಂಕರಭಾರತೀಸ್ವಾಮಿ ಶೃಂಗೇರಿಯವರು ತಾರೀಖು ೧೭ನೇ ಮಾಹೇ ಮೇ ಸನ್ ೧೮೩೬ನೇ ಇಸವಿಯಲ್ಲಿ ಅಡ್ಡಪಲ್ಲಕ್ಕಿ ವಳಗೆ ಕೂತು ಮೆರವಣಿಗೆಗೀಯಿಂದ ಸರಕಾರೀ ರಸ್ತೆಗಳ ಮೇಲೆ ಹಾಯ್ದು ಹೋಗುವ ಹಕ್ಕು ತಮ್ಮ ಒಬ್ಬರಿಗೆಯಿರುತ್ತದೆ. ಶ್ರೀ ಕುಮಾರಸ್ವಾಮಿಗಳು ಹುಬ್ಬಳ್ಳಿ ಇವರಿಗೆ ಅಥವಾ ಇತರ ಲಿಂಗಾಯತ ಸ್ವಾಮಿಗಳಿಗೆ ಇರುವದಿಲ್ಲೆಂದು ಧಾರವಾಡ ಜಿಲ್ಲಾ ಕೋರ್ಟಿನಲ್ಲಿ ದಾವೇತಂದರು. ಈ ದಾವೇದ ಪಕ್ಕಾ ವಿಚ್ಯಾರಣೀ ಆಗಿ, ಜಿಲ್ಲಾ ಕೋರ್ಟ ಜಜ್ಜರು ಹುಬ್ಬಳ್ಳಿ ಮೂರುಸಾವಿರಮಠದ ಗುರುಸಿದ್ಧಸ್ವಾಮಿಗಳು ಅದೆಯೆಂದು ತಾರೀಖು ೨೪ನೇ ಮಾಹೇ ಅಕ್ಟೋಬರ ೧೮೩೬ ದಿವಸ ಠರಾವ ಮಾಡಿದರು.

ಅನಂತರ ಶ್ರೀ ಶಂಕರಭಾರತೀ ಸ್ವಾಮಿಗಳವರು ತಾರೀಖು ೨೧ನೇ ಮಾಹೇ ನವಂಬರ ೧೮೩೬ನೇ ದಿವಸ ತಮ್ಮ ಒಬ್ಬರಿಗೆ ಹಕ್ಕು ಅದೆಯೆಂದು ವಿಜಯನಗರದ ಅರಸರು ಎರಡು ತಾಂಬ್ರದ ಪತ್ರದ ಶಾಸನಗಳನ್ನು ಕೊಟ್ಟಿದ್ದಾರೆ. ದಾವೇದ ನಿಕಾಲೇ ಆದಮೇಲೆ, ಹಳೆ ರಿಕಾರ್ಡಗಳು ತಪಾಸ ಮಾಡಿ ನೋಡಲಾಗಿ ಸಿಕ್ಕಿರುತ್ತವೆ. ಈಗ ಅವುಗಳನ್ನು ತಂದು ಹಾಜರಮಾಡಿರುತ್ತೇವೆ. ದಾಖಲಮಾಡಿಕೊಂಡು ಪುನಃ ಚವಕಶಿ ಆಗಿ ಠರಾವ ಮಾಡಬೇಕೆಂದು ವಿನಂತಿ ಮಾಡಿಕೊಂಡರು. ಈ ತಾಂಬ್ರಶಾಸನಗಳು ಇಸವಿ ಸನ್ ೧೨೪೪ ಹಾಗೂ ೧೫೬ನೇ ಇಸ್ವಿಯಲ್ಲಿವು ಇದ್ದು, ಮಧ್ಯದೇಶದ ಕ್ಷತಿ ಬಂಗವರು ಕೊಟ್ಟಿರುತ್ತಾರೆಯೆಂದು ಹಾಜರಮಾಡಿದರು. ಮೊದಲನೆ ಚವಕಶಿಯಲ್ಲಿ ಈ ಎರಡು ತಾಮ್ರ ಶಾಸನಗಳು ಹಾಜರಮಾಡಲಿಲ್ಲಾ. ಈ ಶಾಸನಗಳ ಖರೇತನ ತಮಗೆ ಸಂಶಯಬರುತ್ತದೆಂದು ಶ್ರೀ ಶಂಕರಭಾರತೀಸ್ವಾಮಿಗಳವರ ಅರ್ಜಿ ನಾಮಂಜೂರ ಮಾಡಿದರು. ಆ ಮೇಲೆ ಮುಂಬೈ ಸದರ ದಿವಾಣೀ ಅದಾಲತ ಕೋರ್ಟಿಗೆ ಶ್ರೀ ಶಂಕರಭಾರತೀ ಸ್ವಾಮಿಗಳವರು ಮಾಡಿದ ಅಪೀಲ ನಾಮಂಜೋರಾಯಿತು. ಹಾಗೂ ಕೋರ್ಟ ಖರ್ಚು ಕೊಡಿಸಿದರು.

ಶ್ರೀ ಶಂಕರಭಾರತೀ ಸ್ವಾಮಿಗಳವರು ಅನಂತರ ಪ್ರೀವ್ಹಿ ಕೌನಶಿಲಕ್ಕೆ ಅಪೀಲ ಮಾಡಿದರು. ಈ ಅಪೀಲ ಪರತ ಚವಕಶಿ ದೆಶೆಯಿಂದ ಮುಂಬಯಿ ಸದರ ದಿವಾಣೀ ಕೋರ್ಟಿಗೆ ಪರತ ಕಳುಹಿಸಿದರು. ಮುಂಬೈ ಸದರ ದಿವಾಣೀ ಕೋರ್ಟಿನವರು ಈ ಪ್ರಕಾರದ ದಾವೇ ನಡಿಯಲಾರದೆಂದು ಠರಾವ ಮಾಡಿ ಪಕ್ಷಕಾರರು ತಮ್ಮ ಖರ್ಚು ತಾವೇ ಸಹಿಸಿಕೊಳ್ಳಬೇಕೆಂದು ಠರಾವ ಮಾಡಿದರು. ಇಲ್ಲಿಗೆ ಈ ತಂಟೇದ ಸಮಾಪ್ತಿಯಾಯಿತು. (Vide Moore's Indian Appeals 1841, 1846, page 206, Indian Law Reports, volume II pp. 473-476)

ಈ ಪ್ರಕಾರ ನಿಕಾಲೇ ಆದನಂತರ ಹುಬ್ಬಳ್ಳಿ ಮೂರುಸಾವಿರಮಠದ ಮಹಾಸ್ವಾಮಿಗಳವರಿಗೆ ಅಡ್ಡಪಲ್ಲಕ್ಕಿಯಲ್ಲಿ ಕೂತು ಮೆರೆಯುವ ಹಕ್ಕು ಇಲ್ಲೆಂದು ಮೇಲಿಂದ ಮೇಲೆ ತಕರಾರು ತರುತ್ತಿದ್ದರು. ಅವರ ತಕರಾರು ಮನ್ನಿಸದೇ ಧಾರವಾಡ ಜಿಲ್ಲೇದ ಮೆಹರ್ಬಾನ ಕಲೇಕ್ಟರಸಾಹೇಬ ಬಹಾದೂರವರು ಮೂರುಸಾವಿರಮಠಸ್ವಾಮಿಗಳವರಿಗೆ ಅಡ್ಡಪಲ್ಲಕ್ಕಿಯಲ್ಲಿ ಕೂತು ಮೆರೆಯುವ ಹುಕುಂ ಕೊಡುತ್ತಿದ್ದರು. ಶ್ರೀಮುರಘಾರಾಜೇಂದ್ರಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮೆರವಣಿಗೆ ಬಿಜಾಪೂರ ಜಿಲ್ಲಾ ಬಾಗಲಕೋಟಿಯಲ್ಲಿ ಹರಕತ್ತ ಮಾಡಿದರು. ವಿಜಾಪೂರ ಜಿಲ್ಲೇದ ಕಲೇಕ್ಟರ ಸಾಹೇಬರವರು ಅಡ್ಡಪಲ್ಲಕ್ಕೀ ಮೆರವಣಿಗೆ ಪರವಾನಿಗೆ ಕೊಟ್ಟಿದ್ದು, ಇನ್ನು ಮುಂದೆ ಈ ಅಡ್ಡಪಲ್ಲಕ್ಕಿ ಮೆರವಣಿಗೆ ಸಂಬಂಧವಾಗಿ ತಂಟೇ ಬರಬಾರದೆಂದು ಲಿಂಗಾಯತಸ್ವಾಮಿಗಳವರ ಅಡ್ಡಪಲ್ಲಕ್ಕಿ ಉತ್ಸವಗಳಿಗೆ ಯಾರೂ ಹರಕತ ಮಾಡಬಾರದೆಂದುವಂದು ಪ್ರೆಸ್ ನೋಟ ತೆಗೆದು, ಜೂಡಿಶಿಯಲ್ ಡಿಪಾರ್ಟಮೆಂಟ ತಾರೀಖ ೨ನೇ ನವಂಬರ ೧೯೧೧ ಇಸ್ವಿ ಮುಂಬೈ ಸರಕಾರೀ ಗ್ಯಾಝಿಟಿನಲ್ಲಿ ಛಾಪಿಸಿದರು. (Vide supplement to the Bombay Gazette official papers dated 9-11-1911 page 742). ಈ ಪ್ರೆಸ್ →

ಕೊಟ್ಟಿರುವದರಿಂದ ಈಗ ಪುನಃ ವರ್ಗಣಿ ಕೂಡಿಸುವದು ಸಾಧ್ಯವಿಲ್ಲೆಂತಲೂ ನಿವೇದಿಸಿದರು. ಈ ಸಭೆಯ ಉದ್ದೇಶ್ಯವಾಗಿ ನಾಮದಾರ ರೊದ್ದ ಮೊದಲಾದ ಮುಖಂಡರು ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧಿಸಿ, ಅದರಲ್ಲಿ ಶಾಂತವೀರಪ್ಪ ಮೆಣಸಿನಕಾಯಿ ಮೊದಲಾದ ಲಿಂಗಾಯತರ ಹೆಸರನ್ನು ಅವರ ಅನುಮತಿ ತೆಗೆದುಕೊಳ್ಳದೇ ಸ್ವೇಚ್ಛೆಯಿಂದ ಪ್ರಕಟಿಸಿದ್ದರು. ಇದು ಸಜ್ಜನ ಸಮಂಜಸವಾದ ಕಾರ್ಯವಲ್ಲೆಂದು ವಿವಾದಿಸಲ್ಪಟ್ಟು, ಬ್ರಾಹ್ಮಣ ಜನರು ಧಾರವಾಡ 'ಕರ್ನಾಟಕವೃತ್ತ'ವೆಂಬ ಪತ್ರದ್ವಾರ ಕ್ಷಮೆಯನ್ನು ಬೇಡಿಕೊಂಡರು.

ತಮ್ಮ ಜಾಹೀರ ಪತ್ರಿಕೆಯಲ್ಲಿ ಲಿಂಗಾಯತ ಮುಖಂಡರ ಹೆಸರನ್ನು ಬ್ರಾಹ್ಮಣರು ಮರೆತು ಹಾಕಿರಲಿಲ್ಲ. ಬೇಕಂತಲೇ ಹಾಕಿದ್ದರು. ಅಂದರೆ ಕರ್ನಾಟಕ ಕಾಲೇಜದ ಬಗ್ಗೆ ಹಣದ ಸಹಾಯ ಮಾಡಲಿಕ್ಕೆ ನಾವೂ ಲಿಂಗಾಯತರೂ ಸರಿಯಾಗಿ ಬಾಧ್ಯರಿರುವೆವೆಂದೂ, ಈ ನಮ್ಮ ಕಾರ್ಯಕ್ಕೆ ಲಿಂಗಾಯತರು

→ ನೋಟ ಛಾಪಿಸಿದ ಮೇಲೆ ಶ್ರೀಮನ್ಮಹಾರಾಜ ಜಯದೇವ ಮುರುಘಾರಾಜೇಂದ್ರಸ್ವಾಮಿಗಳವರ ಅಡ್ಡಪಲ್ಲಕ್ಕಿ ಮೆರವಣಿಗೆ ಸಾತಾರಾ, ಪುಣೇ, ಸೊಲ್ಲಾಪುರ ಜಿಲ್ಲೆಗಳಲ್ಲಿಯ ಪುಷ್ಕಳ ಊರಲ್ಲಿ ಆದವು. ಯಾರೂ ಹರಕತ್ತ ಮಾಡಲಿಲ್ಲ. (See the English papers file no. 26 Part I of the cross palanquin procession file)

ರಾವಬಹಾದ್ದೂರವರು ಹತ್ತು ವಿಷಯಗಳನ್ನು ಕುರಿತು
Anthropological Journal, Bombay ಇದರಲ್ಲಿ ಬರೆದದ್ದು ವ ಮೆಂಬರಾದದ್ದು

ರಾವಬಹಾದ್ದೂರವರು ವಟ್ಟು ೩೦ ವರುಷಗಳ ವರೆಗೆ ಸರಕಾರೀ ಕೆಲಸವನ್ನು ಮಾಡಿ ಪೆನಶನ್ ತೆಗೆದುಕೊಂಡರು. ಸರಕಾರೀ ಕೆಲಸವನ್ನು ಮಾಡುವಾಗ್ಯೆ ಒಳ್ಳೇ ನಿಯಮಿತತನದಿಂದ ನಡೆದು, ಆ ದಿವಸದ ಸರಕಾರೀ ಕೆಲಸವನ್ನು ಶಕ್ಯವಿದ್ದಷ್ಟು ಅದೇ ದಿವಸ ತೀರಿಸಿ, ರಾತ್ರಿ ೯ ಘಂಟೆಯಿಂದ ೧೧ ಅಥವಾ ೧೨ ಘಂಟೆವರೆಗೆ ಕೆಲವು ವಿಷಯಗಳ ಮೇಲೆ ಲೇಖನಗಳನ್ನು ಬರೆಯುತ್ತಿದ್ದರು. ಮೊಟ್ಟಮೊದಲು ಯಲ್ಲವ್ವನ ಮೇಲೆ ಒಂದು ಲೇಖವನ್ನು ಬರೆದು ಮೇಹರ್ಬಾನ A.M.J. Jackson M.A. (Oxon) ಬೆಳಗಾವಿ ಜಿಲ್ಲೇದ ಕಲೆಕ್ಟರ ಸಾ.ಬ॥ರವರಿಗೆ ತೋರಿಸಿದರು. ಅದನ್ನು ಸಾಹೇಬ ಬಹಾದ್ದೂರವರು ಮನನ ಮಾಡಿ "ಒಳ್ಳೇ ಚೆನ್ನಾಗಿ ಬರಿದ್ದೀರಿ. ಈ ಲೇಖವು The Bombay Anthropological Society ಯವರ ಕಡಿಗೆ ಕಳುಹಿಸಲಿಕ್ಕೆ ಲಾಯಖವದೆ. ಹಾಗೂ ನೀವು ಆ ಸೊಸಾಯಿಟಿಯ ಮೆಂಬರರಾಗಲು ಲಾಯಖರಾಗುವಿರೆ"ಂದು ಹೇಳಿ, ರಾ॥ಬಹಾದ್ದೂರವರಿಗೆ ಆ ಸೊಸಾಯಿಟಿ ಮೆಂಬರನ್ನ ಮಾಡಿದರು. ಕೆಲವು ದಿವಸಗಳ ಮೇಲೆ ಅವರಿಗೆ ಮುಂಬಯಿಗೆ ವರ್ಗ ಆಯಿತು. ಆಗ್ಯೆ ರಾವಬಹಾದ್ದೂರವರಿಗೆ The Bombay Branch of the Royal Asiatic Society ಮೆಂಬರರಾಗಲಿಕ್ಕೆ ಯತ್ನಪಟ್ಟು, ರಾವಬಹಾದ್ದೂರವರಿಗೆ ಆ ಸೊಸಾಯಿಟಿ ಮೆಂಬರ ಮಾಡಿದರು. ರಾವಬಹಾದ್ದೂರವರು ಕೆಳಗೆ ಬರೆದ ವಿಷಯಗಳ ಮೇಲೆ ಲೇಖಗಳನ್ನು ಬರೆದರು. ಅವುಗಳೆಲ್ಲಾ ಮುಂಬೈ ಯಂಥ್ರಾಪೋಲೋಜಿಕಲ್ ಸೊಸಾಯಿಟಿ ಜರನಲ್‌ಗಳಲ್ಲಿ ಛಾಪಿಸಿರುತ್ತದೆ. ಅವುಗಳ ತಪಶೀಲು ಕೆಳಗೆ ಬರೆದಿದೆ:

List of papers contributed to the Anthropological Society, Bombay

1.	A theoretical Account of the Goddess Yellamma	Volume VII No. 8 page 591
2.	The Village Goddess Dyamava	Volume VII No. 8 page 632
3.	Indigeneous School Ceremony performed	Volume VIII No. 1 page 2
4.	A short account of the Veerashaiva faith (Lingayat)	Volume VIII No. 3 page 171
5.	An account of Dakkalgers	Volume VIII No 4 page 298
6.	A note on Krishna with	Volume VIII No 5 page 356

೭೨ ಬಿರುದಾವಳಿಗಳು →

ಸಾನುಭೂತಿಯುಳ್ಳವರಿರುತ್ತಾರೆಂದೂ ವ್ಯಕ್ತಪಡಿಸಲೋಸುಗ, ಇವರ ಹೆಸರನ್ನು ಅನುಮತಿ ಪಡೆಯದೆ ಮುದ್ದಾಂ ಸೇರಿಸಿದ್ದರು. ಇದಕ್ಕೆ ಯಾರೂ ತಕರಾರ ಮಾಡದೆ ಹೋದರೆ ಲಿಂಗಾಯತರ ಕೈಕಟ್ಟಿದಂತೆ ಆಗುತ್ತದೆಂದು ಬ್ರಾಹ್ಮಣ ಜನರ ಭಾವನೆಯಾಗಿತ್ತು. ಆದ್ರೆ ಇವರ ಕುಟಿಲತಂತ್ರಗಳನ್ನು ಪೂರ್ಣ ಬಲ್ಲ ರಾ.ಬ||ಅರಟಾಳ ಸಾಹೇಬರವರ ಚಾಣಾಕ್ಷರ ಮುಂದೆ ಕ್ಷಮಾಪತ್ರವೂ ಬಾರದೇ ಇರಲಿಲ್ಲ. ಇದರಿಂದ ನಾಮದಾರ ರೊದ್ದ ಮೊದಲಾದ ಮುಖಂಡರು ನಿರಾಶರಾಗದೆ ಕರ್ನಾಟಕ ಕಾಲೇಜದ ಬಗ್ಗೆ ಫಂಡ ಕೂಡಿಸಹತ್ತಿದರು. ಕಾಯಿದೇ ಕೌನ್ಸಿಲ್ ಮೆಂಬರ ಜಾಗೆಗೆ ಹೊಸದಾಗಿ ಚುನಾಯಿಸಲ್ಪಟ್ಟ ರಾ.ಸಾ||ವೆಂಕಟೇಶ ಶ್ರೀನಿವಾಸ ನಾಯಿಕ ಎಂಬವರು ಇವರ ಫಂಡಿಗೆ ೧೦೦೦ ರೂ. ಆರಂಭಕ್ಕೆ ಕೊಡಲೊಡಂಬಟ್ಟು ಕಡೆಗೆ ೫೦೦ ರೂಪಾಯಿಗಳ ಮೇಲೆ ಬಗೆಹರಿಸಿದರು. ಬ್ರಾಹ್ಮಣರ

→ 7. An account of Hanabars (ಹಣಬರು) — Volume VIII No. 6 page 455
8. Ten Incarnations of Vishnu — Volume IX No. 1 page 3
9. Basavis... in Peninsular India — Volume IX No. 2 page 93
10. A Note on cross palanquin procession — Volume XI pages 396-410.

[ಯಡೂರ ವೀರಭದ್ರದೇವರ ಪೂಜೆಯ ಬಗ್ಗೆ ಕೋರ್ಟ ಆದೇಶ]

ಬೆಳಗಾವ ಜಿಲ್ಲಾ ಚಿಕ್ಕೋಡಿ ತಾಲೂಕ ಪೈಕಿ ಇನಾಮ ಗ್ರಾಮ ಯಡೂರಲ್ಲಿರುವ ಶ್ರೀ ವೀರಭದ್ರದೇವರ ಲಿಂಗದ ಪೂಜಾಮಾಡುವ ಸಂಬಂಧವಾಗಿ ಶ್ರೀಕಾಡದೇವರಮಠದವರ ಹಾಗೂ ಆ ಗ್ರಾಮದ ಬ್ರಾಹ್ಮಣ ಭಟ್ಟರ ನಡುವೆ ನಡೆದ ದಿವಾಣೀ ತಂಟೇದ ಸಂಬಂಧವಾಗಿ ದಿವಾಣೀ ಕೋರ್ಟುಗಳಿಂದ ಆದ ಠರಾವಗಳ ಸಾರಾಂಶವು ಕೆಳಗೆ ಬರಿದಂತೆ ಇರುತ್ತದೆ.

ಸನ್ ೧೮೬೮ನೇ ಇಸವಿಯಲ್ಲಿ ಬೆಳಗಾವಿ ಮುನಶೀಫರಾದ ಮಿಸ್ತರ ದಯಾರಾಮ ವಯಾರಾಮ ಇವರ ಕೋರ್ಟಿನಲ್ಲಿ, ಸಿದ್ಧಲಿಂಗೇಶ್ವರ ಗುರುಸಿದ್ಧೇಶ್ವರ ಇವರು ಅಸಲ ನಂಬರ ೧೦೫ ಸನ್ ೧೮೬೮ ಇಸವೀ ದಾವೇ ಭವಾನರಾವ ನಾಗನಾಥ ಇವರ ವಿರುದ್ಧ ದಾಖಲಮಾಡಿದರು. ಯಡೂರ ವೀರಭದ್ರದೇವರ ಪೂಜಾ ವಗೈರೆ ಮಾಡುವದು ತಮ್ಮದು, ಪೂಜಾ ಸಂಬಂಧಿ ಹಕ್ಕು ಬಾಬುಗಳು ತಮಗೆ ಬರತಕ್ಕವು. ಗೈರ ಹಕ್ಕಿನಿಂದ ಭವಾನರಾವ ಇವರು ತೆಗೆದುಕೊಂಡಿರುತ್ತಾರೆ. ತಮಗೆ ಲುಕ್ಸಾನಿ ಸಂಬಂಧವಾಗಿ ೩೫೦ ರೂಪಾಯಿಗಳು ಕೊಡಿಸಬೇಕೆಂದು ಮಾಗಣೀ ಮಾಡಿದರು. ಈ ದಾವೇದ ದುತರ್ಫಿ ಚವಕಶಿ ಆಗಿ, ತಾರೀಖ ೧೧ನೇ ನವಂಬರ ೧೮೬೮ನೇ ಇಸವೀ ದಿವಸ ದಾವೇದ ಸಾಬೀತಿ ಮಾಡಿ, ಖರ್ಚುಸಹಿತವಾಗಿ ವಾದಿಗೆ ಕೊಡಿಸಿದರು. ಆಮೇಲೆ ಭವಾನರಾವ ಇವರು ಜಜ್ಜಕೋರ್ಟಿನಲ್ಲಿ ಅಪೀಲ ಮಾಡಿದರು. ಅಪೀಲ ನಂಬರ ೩೮ ಸನ್ ೧೮೬೮ (ಆಗಿನ ಜಜ್ಜರಾದ ಮೇಹರ್ಬಾನ ಸಿ.ಎಫ್.ಎಚ್. ಶಹಾ)ರಲ್ಲಿ ಸಾಹೇಬರವರು ಚವಕಶೀಮಾಡಿ ಕೆಳಕೋರ್ಟಿನ ಹುಕ್ಕುಂ ನಾಮೆ ಕಾಯಂಮಾಡಿ, ವಾದಿಗೆ ಖರ್ಚು ಕೊಡಿಸಿದರು. ಅನಂತರ ಭವಾನರಾವ ಇವರು ಹಾಯಕೋರ್ಟಿಗೆ ಸ್ಪೇಶಿಯಲ್ ಅಪೀಲ ನಂಬರ ೪೬೪ ಸನ್ ೧೮೬೮ನೆದ್ದು ದಾಖಲಮಾಡಿದರು. ಅದರ ವಿಚ್ಯಾರ ದುತರ್ಫಿ ಆಗಿ ಆಪೀಲು ಫೆಬ್ರುವರಿ ತಿಂಗಳ ೧೮೭೦ನೇ ಇಸ್ವಿಯಲ್ಲಿ ತೆಗೆದುಹಾಕಿ, ಕೆಳಕೋರ್ಟಿನವ ಅಪೀಲ ಕೋರ್ಟಿನ ಹುಕುಂ ಕಾಯಿಂ ಮಾಡಿ, ಖರ್ಚು ಸಹಿತವಾಗಿ ಕೊಡಿಸಿದರು.

ಮುಂದೆ ಸನ್ನ ೧೯೧೯ನೇ ಇಸವಿಯಲ್ಲಿ ಮಿಸ್ತರ ಅನಂತಕೃಷ್ಣ ಅಸುಂಡೀ ಬಿ.ಎ.,ಎಲ್‌ಎಲ್.ಬಿ. ಸಬಜಜ್ಯ ಚಿಕ್ಕೋಡಿ ಇವರು ಕಟ್ಟು ವೈಷ್ಣವರು ಇದ್ದು, ಯಡೂರಸ್ವಾಮಿಗಳಿಗೆ ನೋಟೀಸ ವಗೈರೆ ಕೊಡದೇ, ಏಕತರ್ಫಿ ತುರ್ತಾ ತುರ್ತ ಮನಾಯಿ "ಹುಕ್ಕುಂ ಯಡೂರಸ್ವಾಮಿ ಹಾಗೂ ಲಿಂಗಾಯತ ಮತದ ಜನರು ಪೂಜಾ ಮಾಡಲಿಕ್ಕೆ ಶ್ರೀ ವೀರಭದ್ರ ಅಥವಾ ವಿರುಪಾಕ್ಷಲಿಂಗನ ಗುಡಿಗೆ ಹೋಗಬಾರದೆ"ಂದು ಕೊಟ್ಟರು. ಅನಂತರ ಮೆಹರ್ಬಾನ ಎಫ್.ಕೆ. ಬೊಯಡ್ ಆಯ್.ಸಿ. ಎಸ್. ಡಿಸ್ಟ್ರಿಕ್ಟ ಜಜ್ಜರ ಕಡೇ ಮನಾಯಿ ಹುಕ್ಕುಂ ರದ್ದ ಆಗಬೇಕೆಂದು ಅರ್ಜಿಮಾಡಿದರು. ನೋಟೀಸ ವಗೈರೆ ಏನೂ ಕೊಡದೇ ಲಿಂಗಾಯತರ ಅರ್ಜಿ ನಾಮಂಜೂರ ಮಾಡಿದರು. ಆಮೇಲೆ ಹೈಕೋರ್ಟಿಗೆ ಲಿಂಗಾಯತರು ಅಪೀಲ ಮಾಡಿದರು. ಈ ಮನಾಯಿ ಹುಕುಂ ಕಾಯಿಂ ಮಾಡಿ ಅಪೀಲ ನಾಮಂಜೂರ ಮಾಡಿ, "ಈ ದಿವಾಣೀ ದಾವೇ ಮುನಶೀಫರಲ್ಲಿ ನಡಿಯಬಾರದು ಯರಡನೇ ಕೋರ್ಟಿಗೆ ವರ್ಗಮಾಡಬೇಕೆ"ಂದು ಅಪ್ಪಣೆ ಮಾಡಿದರು. ನಂತರ ಮೇಹರ್ಬಾನ ಡಿ. ಜಜ್ಯ→

ಕಯ್ಯು ಕೊಟ್ಟ ಕಯ್ಯೇ ಅಲ್ಲ, ತೆಗೆದುಕೊಳ್ಳಲಿಕ್ಕೆ ಮಾತ್ರ ಎಲ್ಲರಕಿಂತಲೂ ಮುಂದೆ ಬರುತ್ತಾರೆ. ನಾಮದಾರ ಎಂದೆನ್ನಿಸಿಕೊಂಡವರೂ, ರಾವಸಾಹೇಬ ಎಂಬ ಪದವೀ ಪಡೆದವರೂ ಧನಿಕರೂ ಕರ್ನಾಟಕ ಕಾಲೇಜದ ಕಟ್ಟಭಿಮಾನಿಗಳೂ ಆದ ರಾ.ಸಾ||ನಾಯಿಕ ಇವರ ವಚನವೇ ಈ ಪ್ರಕಾರ ಅಸ್ಥಿರವಾಗಿರುವದರಿಂದ ಇವರ ಕಾರ್ಯ ಸಿದ್ಧಿಯಾದರೂ ಹೇಗೆ ಆಗಬೇಕು? ಇಂತಹ ಅಪ್ರಬುದ್ಧ ಕಾರ್ಯವನ್ನು ಇನ್ನಾರಾದರೂ ಮಾಡಿದರೆ, ಅವರಿಗೆ ನೂರಾರು ವಾಗ್ಬಾಣಗಳ ಪ್ರಹಾರವನ್ನು ಮಾಡುವದರಲ್ಲಿ ಹಿಂದುಮುಂದು ನೋಡುವದಿಲ್ಲ.

ಆರಂಭಕ್ಕೆ ಅಪ್ರಸಕ್ತವಾದ ಕಾರ್ಯವನ್ನು ಮಾಡಲಿಕ್ಕೆ ಬ್ರಾಹ್ಮಣರು ಹೇಗೆ ಹಿಂಜರಿಯುವದಿಲ್ಲವೋ ತದ್ದೋಷಪನಿವಾರಣೆಗಾಗಿ ಹಿಂದಿನಿಂದ ಅವರು ಕ್ಷಮಾಪಣೆಯನ್ನು ಬೇಡಿಕೊಳ್ಳಲಿಕ್ಕೂ ಹಿಂಜರಿಯುವದಿಲ್ಲಾ. ಈ ತರದ ಇವರ ಆಲೋಚನೆಗಳು ಆಗಾಗ್ಗೆ ಸಾರ್ವತ್ರಿಕವಾಗಿ ಕಂಡು ಬರುತ್ತಿರುತ್ತವೆ.

→ ಸಾಹೇಬ ಬಹಾದ್ದೂರ ಇವರು ಈ ವ್ಯಾಜ್ಯವನ್ನು ಚವಕಶೀಮಾಡಿ, ನಿಕಾಲೇ ಮಾಡುವ ಕುರಿತು ಮೇಹರ್ಬಾನ ನಾರ್ಮನ್ ಸಾಹೇಬರು ಅಸಿಸ್ಟಂಟ ಜಜ್ಯ ಇವರ ಕೋರ್ಟಿಗೆ ಬೆಳಗಾವಿಗೆ ವರ್ಗಮಾಡಿದರು. ಅವರು ವಿಚ್ಯಾರ ಮಾಡಿ ಲಿಂಗಾಯತರ ವಿರುದ್ಧ ಠರಾವ ಮಾಡಿ "ಲಿಂಗಾಯತರು ದೇವರ ಪೂಜಾಮಾಡುವದಕ್ಕೆ ಗುಡಿಯೊಳಗೆ ಹೋಗಬಾರದೆ"ಂದು ಠರಾವಮಾಡಿದರು. ಅನಂತರ ಯಡೂರಸ್ವಾಮಿಗಳು ಹಾಗೂ ಲಿಂಗಾಯತರು ಜಜ್ಯಕೋರ್ಟಿಗೆ ಅಪೀಲಮಾಡಿ ಅಲ್ಲೇ ವಿಚ್ಯಾರಾಗಿ ಮೇಹರ್ಬಾನ ಸಿ.ಇ. ತಲ್‌ಮೆರ, ಆಯ.ಸಿ.ಎಸ್. ಡಿಸ್ಟ್ರಿಕ್ಟ ಜಜ್ಯ ಸಾಹೇಬರವರು (ಅಪೀಲ ನಂಬರ ೬೬ ವ ೬೭) ಚವಕಶೀ ಮಾಡಿ ಕೆಳಕೋರ್ಟಿನ ಹುಕ್ಕುಂ ನಾಮೆಯನ್ನು ರದ್ದುಪಡಿಸಿದರು. ಬ್ರಾಹ್ಮಣರು ಹೈಕೋರ್ಟಿಗೆ ಅಪೀಲ ಮಾಡಿದರು. ಅಪೀಲ ಮಂಜೂರಾಗಿ, ಹೈಕೋರ್ಟಿನಿಂದ ಬ್ರಾಹ್ಮಣರು ಪುನಃ ಮನಾಯಿ ಹುಕ್ಕುಂ ಲಿಂಗಾಯತರು ಗುಡಿಯೊಳಗೆ ಹೋಗಿ ಶ್ರೀ ವೀರಭದ್ರದೇವರ ಪೂಜಿಮಾಡಬಾರದೆಂದು ಹುಕ್ಕುಂ ಕೊಟ್ಟಿರುತ್ತಾರೆ. ಡಿಸ್ಟ್ರಿಕ್ಟ ಜಜ್ಜಸ್ ಜಜ್ಜಮೆಂಟ ದಿನಾಂಕ ೧೧ ಜುಲೈ ೧೯೨೧.[೬]

[ಮೂಕಿ ಅರ್ಜಿಯನ್ನು ಕಚೇರಿಯಲ್ಲಿ ಓದಿ ಹರಿದು ಹಾಕಿದುದು]

ರಾವಬಹಾದ್ದೂರ ಧಮನೀ ಗಾಡಿಗೆ ಹೂಡುವ ಮೈಸೂರ ಶೀಮೆಯ ಡಾಗಿನ ಯತ್ತು ಜೋಡಿ ಮಿಸ್ತರ ಗುರುಶಿದ್ದಪ್ಪ ಬಿನ್ನ ಶಿದ್ದಪ್ಪ ಮೀಸಿ ಸಾಕೀನ ಹೊಸಹುಬ್ಬಳ್ಳಿ ಈತನು ಡಿಸ್ಟ್ರಿಕ್ಟ ರಜಿಸ್ಟ್ರಾರ ಕಚೇರಿಯಲ್ಲಿ ೨೫ ರೂಪಾಯಿ ಪಗಾರವುಳ್ಳ ಕಾರಕೂನನು. ಈತನು ಹುಬ್ಬಳ್ಳಿಯಲ್ಲಿ ಕಮತಾ ಇಟ್ಟಿದ್ದನು. ಈತನ ತಮ್ಮನು ಕಮತದ ಕೆಲಸವನ್ನು ವಳ್ಳೇ ಮೇಹನತಿಯಿಂದ ಮಾಡುತ್ತಿದ್ದನು. ಕಮತದ ಕೆಲಸಕ್ಕೆ ವಂದು ಜೋಡಿ ಛಲೋ ಯತ್ತುಗಳನ್ನು ತರುವದಕ್ಕೆ ತುಂಗಭದ್ರಾ ನದಿಯ ಬಲಗಡೀ ತಟಾಕದ ಮೇಲೆ ಇರುವ ಮೈಲಾರದ ಹತ್ತರ ಕುರವತ್ತೀ ಬಸವಣ್ಣನ ಜಾತ್ರಿಯಲ್ಲಿ ಯತ್ತುಗಳ ಖರೀದಿ ಮಾಡುವದಕ್ಕೆ ಆ ಜಾತ್ರಿಗೆ ಹೋಗುವಾಗ್ಗೆ, ನನ್ನ ಧಮನಿ ಗಾಡಿ ದೆಸೆಯಿಂದ ವಂದು ಜೋಡಿ ವುತ್ತಮ ಡಾಗಿನ ಜೋಡಿಗಳನ್ನು ಖರೀದಿ ಮಾಡಿಕೊಂಡು ಬರಬೇಕೆಂದು ಹೇಳಿ ಕಳುಹಿಸಿದೆನು. ಗುರುಶಿದ್ದಪ್ಪನು ಖರೀದಿ ಮಾಡಿತಂದ ಜೋಡಿವಳಗೆ ವಂದು ಯತ್ತು ಅತಿ ವುತ್ತಮ ಹೊರಟಿತು. ಮತ್ತೊಂದು ಸುಮಾರ ಹೊರಟಿತು. ಸುಮಾರ ಎತ್ತು ಮಾರಿ ಮತ್ತೊಂದು ಹೋರಿ ತೆಗೆದುಕೊಂಡೆನು. ಅದು ಉತ್ತಮ ಹೊರಟಿತು. ಒಂದು ಎತ್ತಿಗೆ ರಾಜ್ಯ ಯರಡನೇ ಯತ್ತಿಗೆ ಪ್ರಧಾನಿಯೆಂದು ಕರೆಯುತ್ತಿದ್ದರು. ಮಳಿಗಾಲದಲ್ಲಿ ಧಾರವಾಡದಲ್ಲಿದ್ದಾಗ್ಯೆ ಮೆ||ಮಿಡಲ್ಟನ್ ಸಾಹೇಬ ಬಹಾದ್ದೂರವರ ಪರವಾನಿಗಿ ತೆಗೆದುಕೊಂಡು, ಅವರ ಕಂಪಾವುಂಡದಲ್ಲಿ ೧೧ ಘಂಟೆಯಿಂದ ಕಚೇರಿ ಬಂದಮಾಡಿ ಮನೆಗೆ ಹೋಗುವ ವರಿಗೆ ಕಂಪಾವುಂಡದಲ್ಲಿಯೇ ಮೇಯುತ್ತಿದ್ದವು. ಸಾಯಂಕಾಲಕ್ಕೆ ಗಾಡಿ ಹೂಡಿಕೊಂಡು ಕಚೇರಿ ಬಂದ ಆದ ಮೇಲೆ ಮನೆಗೆ ತಿರುಗಿ ಗಾಡಿಗೆ ಹೂಡಿಕೊಂಡು ಹೋಗುವ ಪರಿಪಾಠವಿತ್ತು.

ಹೀಗಿರುವಲ್ಲಿ ಮೇಹರ್ಬಾನ ಆಮನೀ ಸಾಹೇಬರವರು ಮೇಹರ್ಬಾನ ಮಿಡಲ್ಟನ್ನ ಸಾಹೇಬರವರ ಬದಲೀ ಯರಡು ವರುಷ ಫರ್ಲೋ ತಗೊಂಡು ಹೋದಮೇಲೆ ಕಂಪೌಂಡಿನಲ್ಲಿ ಅವರ ಅಪ್ಪಣೆ ತೆಗೆದುಕೊಂಡು ಮೇಯಿಸುತ್ತಿದ್ದರು. ಆಮೇಲೆ ಮೆ||ಜೆ.ಕೆ. ಸ್ಪೇನ್ಸ್ ಸಾಹೇಬ ಬಹಾದ್ದೂರವರು ಧಾರವಾಡಕ್ಕೆ ಕಲೇಕ್ಟರ ಜಾಗೇದ ಚಾರ್ಜ ತೆಗೆದುಕೊಂಡರು.

---

೬. ಕರವೀರಪ್ಪ ಶಿವಪ್ಪ ಛೆಪ್ರೆ ಇವರು ಬರೆದ "ಶ್ರೀ ಕ್ಷೇತ್ರ ಎಡೂರ " ಈ ಪುಸ್ತಕದಲ್ಲಿ ಎಡೂರ ವೀರಭದ್ರ ಗುಡಿಯ ಮಾಹಿತಿ ಯೋಗ್ಯ ಇರುತ್ತದೆ. ಇವರು ಮಾಡಿದ ಖಟ್ಲೆ ಪೇಜ ೪೪೫ of that book Shri Kshetra yedur. ಈ ಪುಸ್ತಕ ನನ್ನ ಲಾಯಬ್ರರಿಯಲ್ಲಿ ಇರುತ್ತದೆ. ಪುಸ್ತಕದ ಲಿಸ್ಟ ನೋಡಿ. →

ಈ ಕರ್ನಾಟಕ ಕಾಲೇಜ ಸ್ಥಾಪನೆಯ ಕಲ್ಪನೆಯು ಈಗಿನದಲ್ಲ. ಇದು ನಾಮದಾರ ರೊದ್ದರವರಿಂದಾಗಲೀ, ಬೆಳವಿಯವರಿಂದಾಗಲೀ ಉಪಸ್ಥಿತವಾದುದಲ್ಲ. ಈ ವಿಚಾರವು ೪೦-೫೦ ವರ್ಷಗಳಿಂದಲೂ ಆಗಾಗ್ಯೆ ಎದ್ದು, ಹಣದ ಅನನುಕೂಲತೆ ಮೊದಲಾದ ಉಪಾಧಿಗಳಿಂದ ಅಷ್ಟಕ್ಕೆ ಅಡಗುತ್ತ ಬಂದಿತ್ತು. ಎಲ್ಲ ಕೆಲಸಗಳು ಒಮ್ಮೆಲೆ ಆಗುವದಾದರೂ ಸಂಭವವಿಲ್ಲ. ಮೊದಲು ಟ್ರೇನಿಂಗ ಕಾಲೇಜು ಹಾಯಸ್ಕೂಲಗಳು ಆಗುವ ಅವಶ್ಯಕತೆಯಿತ್ತು. ಶಿಕ್ಷಣ ಪ್ರಸಾರವು ಹೆಚ್ಚುತ್ತ ಹೋದ ಹಾಗೆ ಕಾಲೇಜದ ಬೇಡಿಕೆಯು ಜನರಲ್ಲಿ ಆತುರಗೊಂಡದ್ದು ಆಶ್ಚರ್ಯವಲ್ಲ. ಪರಿಸ್ಥಿತಿಗನುಸಾರವಾಗಿ ಹೆಚ್ಚೆಚ್ಚು ಸೌಕರ್ಯಗಳು ಬೇಕಾಗುತ್ತಿರುತ್ತವೆ. ಈಗ ಕರ್ನಾಟಕಕ್ಕೆ ಆರ್ಟ್ಸ ಕಾಲೇಜದ ಅವಶ್ಯಕತೆಯಾಗಿದ್ದು, ಅದರ ಬಗ್ಯೆ ಸಾರ್ವತ್ರಿಕವಾಗಿ

→ ಅವರ ಕಡೇ ಬಹಳ ಮೂಕ ಅರ್ಜಿಗಳನ್ನು ಬ್ರಾಹ್ಮಣರು ನನ್ನ ವಿರುದ್ಧ ಮಾಡಿದ್ದರು. ವಂದು ದಿವಸ ಮೇಹರ್ಬಾನ ಸ್ಪೇನ್ಸ ಸಾಹೇಬರಿಗೆ "ನನ್ನ ಯತ್ತುಗಳನ್ನು ಕಚೇರಿಗೆ ಬಂದಮೇಲೆ ಕಪೌಂಡಿನಲ್ಲಿ ಮೆಯಿಸುತ್ತಿದ್ದೆ, ಅದರಂತೆ ಮಾಡಲಿಕ್ಕೆ ತಮ್ಮ ಅಪ್ಪಣೆ ಇರುತ್ತದೆ, ಹ್ಯಾಗೆ" ಎಂದು ಕೇಳಿದೆನು. ಅವರು ಯೇಕದಂ ಮೊದಲಿನಂತೆ ಕಂಪೌಂಡಿನಲ್ಲಿ ನಿಮ್ಮ ಏತ್ತುಗಳನ್ನು ಮೇಯಿಸುವದಕ್ಕೆ ಹರಕತ್ತ ವಿಲ್ಲೆ"ಂದು ಹೇಳಿದರು. "ನಾನು ಎತ್ತುಗಳನ್ನು ಮೇಯಿಸಲಿಕ್ಕೆ ಬಿಟ್ಟಕೂಡ್ಲೆ ನಾನು ಕಳಿವಿನಿಂದ ಯತ್ತುಗಳನ್ನು ಮೇಯಿಸುತ್ತೆನೆಂದು ವಂದೆರಡು ದಿವಸಗಳಲ್ಲಿ ನನ್ನ ವಿರುದ್ಧ ಮೂಕ ಅರ್ಜಿಗಳು ಬರುತ್ತವೆ"ಂದು ಹೇಳಿದೆನು. ನಾನು ಭವಿಷ್ಯ ನುಡಿದಂತೆ ವಂದೆರಡು ದಿವಸಗಳಲ್ಲಿ ನಾನು ಕಳುವಿಲೆ ಯತ್ತುಗಳನ್ನು ಮೇಯಿಸುತ್ತೇನೆಂದು ಇಂಗ್ರೇಜಿಯಲ್ಲಿ ಬರದ ವಂದು ದೊಡ್ಡ ಮೂಕ ಅರ್ಜಿ ಬಂತು. "ನೀನು ಮೊದಲೇ ಹೇಳಿದಂತೆ ನಿನ್ನ ವಿರುದ್ಧ ಮೂಕ ಅರ್ಜಿ ಬಂದದೆ ನೋಡು" ಎಂದು ಹೇಳಿ ನನ್ನ ಕೈಯಲ್ಲಿ ಕೊಟ್ಟರು. "ಅದು ನೋಡಿ ಪರತ ಕೊಡು, ನಾನೂ ಹರದು ಹಾಕುತ್ತೇನೆಂ"ದು ನನಗೆ ಹೇಳಿದರು. "ಹಾಗೇ ಮಾಡಬಾರದು, ಮೂಕಿ ಅರ್ಜಿ ನನ್ನ ಕಡೇ ಕೊಡಿರಿ. ನಾನು ಕಚೇರಿಯಲ್ಲಿ ಯಲ್ಲ ಕಾರಕೂನರ ಮುಂದೆ ಓದಿ ಹರದು ಹಾಕುತ್ತೇನೆಂ"ದು ಹೇಳಿದೆ. ಆ ಪ್ರಕಾರ ಮಾಡುವದರಿಂದ ಮುಂದೆ ಮೂಕ ಅರ್ಜಿಗಳು ಬರುವವು ಬಂದ ಆಗುತ್ತವೆಂದು ಹೇಳಿದೆ. "ಹೌದು ಅದರಂತೆ ಮಾಡು" ಅಂತಾ ಹೇಳಿದರು. ಅದನ್ನು ಕಚೇರಿಯಲ್ಲಿ ಜನರೆಲ್ಲರೂ ಕೇಳುವಂತೆ ಘೋರ ಸ್ವರದಿಂದ ಓದಿ ಹರದು ಹಾಕಿದೆ. ಮುಂದೆ ಈ ಥರದ ಅರ್ಜಿಗಳನ್ನು ದಾದ ಆಗುವದಿಲ್ಲೆಂದು ತಿಳಿದು ಅರ್ಜಿ ಮಾಡುವದನ್ನು ಬಿಟ್ಟುಬಿಟ್ಟರು.

ಸ್ವಾಮಿರಾಯಾಚಾರ್ಯ ಭೀಮಾಚಾರ್ಯ ಮಾಸೂರ ತಾ॥ಹಿರೇಕೆರೂರ ಇವನು, ವರಿಷ್ಠ ಅಮಲದಾರರ ವಿರುದ್ಧವಾಗಿ ವಿಶ್ವಪ್ರಯತ್ನದಿಂದ ನವಕರೀ ಪಡಿಯಬೇಕೆಂಬ ಅಭಿಲಾಷೆಯೂ ರಾವಬಹಾದ್ದೂರ ರುದ್ರಗೌಡರು ಮಾಡಿದ ಮುಂಜಾಗ್ರತೆಯ ಪ್ರತೀಕಾರವೂ [೪]

ಸ್ವಾಮೀರಾಯಾಚಾರ್ಯ ಭೀಮಾಚಾರ್ಯ ಮಾಸೂರ, ಹಿರೇಕೆರೂರ ಎಂಬ ಒಬ್ಬ ಉಮೇದುವಾರನು ಧಾರವಾಡದ ತಾಲೂಕ ಕಛೇರಿಯಲ್ಲಿದ್ದನು. ಇವನು ಕನ್ನಡ ಮೂಲ್ಕಿ ಪರೀಕ್ಷೆಯಲ್ಲಿ ಹೊಂದಿದವನಾಗಿದ್ದನು. ಇವನಿಗೆ ಯರಡು ವರ್ಷ ಉಮೇದವಾರ ಮಾಡಿದನಂತರ ಅದೇ ತಾಲೂಕ ಕಚೇರಿಯಲ್ಲಿ ಬದಲೀ ಕಾರಕೂನ ಜಾಗಾ ನೇಮಣೂಕವಾಗಿತ್ತು. ಈ ಸ್ವಾಮಿರಾಯಾಚಾರ್ಯನು ತಾನು ಕೆಲಸಮಾಡುತ್ತಿದ್ದ ಕಚೇರಿಯ ಮಾಮ್ಲೆದಾರರಾದ ಮಿ. ಶಿವರಾವ ಪರಮೇಶ್ವರ ಕರ್ನಾಡ ಇವರ ವಿರುದ್ಧವಾಗಿ "ತನಗೆ ಕಾಯಂ ಕೆಲಸಕ್ಕೆ ಶಿಫಾರಸ ಮಾಡಿಲ್ಲಾ" ವಗೈರೆ ಮುಂತಾದ ಹಕೀಕತಿನ ಅರ್ಜಿ ಮೆಹರ್ಬಾನ ಐ.ಆರ್. ಮಿಡಲಟನ್ ಕಲೆಕ್ಟರ ಸಾಹೇಬರ ಕಡೆಗೆ ಮಾಡಿದನು. ಈ ಬಗ್ಗೆ ಮಾಮ್ಲೇದಾರರು 'ಸದರೀ ಉಮೇದವಾರನು ಮಗರೂರಿ ಮನುಷ್ಯನಿರುತ್ತಾನೆ. ವೇಳೆಕ್ಕೆ ಬಂದು ಕೆಲಸ ಮಾಡುವದಿಲ್ಲಾ. ಖೊಟ್ಟಿ ಮನುಷ್ಯನಿದ್ದಾನೆಂ'ದು ಪರತ್ತ ರಿಪೋರ್ಟ ಮಾಡಿದರು. ಈ ರಿಪೋರ್ಟ ನೋಡಿ ಮೆಹರಬಾನ ಕಲೇಕ್ಟರ ಸಾಹೇಬರವರು ಅವನಿಗೆ (೨) ರೂ ದಂಡಮಾಡಿ, ಅವನ ಹೆಸರು ತಮ್ಮ ನೋಟಬುಕ್ಕಿನಲ್ಲಿ ಟಿಪಾಯಿಸಿಕೊಂಡರು. ಮುಂದೆ ಸನ್ ೧೮೮೬ನೇ ಇಸ್ವಿ ನವ್ಹಂಬರ ತಿಂಗಳಲ್ಲಿ ಮೇಹರ್ಬಾನ ಮಿಡಲ್ಟನ್ ಸಾಹೇಬರವರು ಎರಡು ವರ್ಷ ಫರ್ಲೋ ರಜೆಯ ಮೇಲೆ ಹೋದರು. ಆ ರಜೆಯ ಮಂಜೂರಾಗಿ ಆ ಜಾಗಾದಲ್ಲಿ

---

೪. Indian Law Reports, Bombay, volume XV, 1891, page 441. Swamirayacharya Bhimacharya v/s The Collector of Dharwar. →

ವಿಶೇಷ ಸನ್ನಾಹ ಪಡೆಯುತ್ತಿರುವದು ಸಹಜವಾಗಿರುವದು. ಇಂಥ ಸುಸಂಧಿಯಲ್ಲಿ ನಾಮದಾರ ರೊದ್ದ, ಬೆಳವೀ ಮೊದಲಾದವರು ತಮ್ಮದೊಂದು ಅಕ್ಕೀಕಾಳು ಬೆರೆಸ ಹೋಗಿರುತ್ತಾರೆ. ಆದರೆ ಇವರು ಕರ್ನಾಟಕ ಕಾಲೇಜಕ್ಕಾಗಿ ಕೇವಲ ಪ್ರಾಂಜಲ ಬುದ್ಧಿಯಿಂದ ಕಂಕಣಬದ್ಧರಾಗಿರುತ್ತಾರೆಂದು ತಿಲಮಾತ್ರ ನಂಬಕೂಡದು. ಮುಂಬಯಿ ಕಾಯಿದೇ ಕೌನ್ಸಿಲಿನ ಇಲೆಕ್ಷನದಲ್ಲಿ ತಮಗಾಗಿ ಬಹುಮತಗಳು ಬೀಳಬೇಕೆಂಬ ಭಾವನೆಯಿಂದಲೇ ಈ ಕಾಲೇಜಸ್ಥಾಪನೆಯ ಮಹತ್ಕಾರ್ಯದಲ್ಲಿ ಸೇರಿಕೊಂಡದ್ದೇ ನಿಜವು. ಯಾಕೆಂದರೆ ಈ ಇಲೆಕ್ಷನದ ಸಂಧಿಯಲ್ಲಿಯೇ ಈ ಕಾರ್ಯದಲ್ಲಿ ಇವರು ತೊಡಗಿದರು. ಈ ಸ್ವಾರ್ಥ ಸಂಬಂಧವು ತಮಗೆ ಎಷ್ಟು ಮಾತ್ರವೂ ಇಲ್ಲದಿದ್ದರೆ, ಈ ಮೊದಲೇ ಇವರು ಈ ಲೋಕೋನ್ನತಿಯ ಕಾರ್ಯದಲ್ಲಿ ತತ್ಪರರಾಗಿರುತ್ತಿದ್ದರು. ಇರಲಿ. ಈ ಪ್ರಕಾರವಾಗಿ ಕಾರಣಾಂತರದಿಂದ ಕೈಕೊಂಡ ಕಾಲೇಜಸ್ಥಾಪನೆಯ ಕಾರ್ಯಕ್ಕೆ ಈ ಲಿಂಗಾಯತ ಸಮಾಜದಿಂದ

→ ಮೇ. ಜೇಮ್ಸ ನೊಕ್ಸ, ಸ್ಪೆನ್ಸ ಸಾಹೇಬರ ನೇಮಣೂಕವಾಯಿತು. ಈ ಸಾಹೇಬರು ಬ್ರೋಚದಿಂದ ಬರಲಿಕ್ಕೆ ತಡವಾದ್ದರಿಂದ ಆರು ತಿಂಗಳ ತನಕಾ ಮೆಹರ್ಬಾನ್ ಎಚ್.ಟಿ. ಅಮ್ಮನೀ ಸಾಹೇಬರು ಕೆಲಸ ಮಾಡಿದರು. ಈ ಮೆಹರ್ಬಾನ ಸ್ಪೆನ್ಸ ಸಾಹೇಬರು ಬರುವ ಮೊದಲಾಗಿ ರಾ.ಬ॥ರುದ್ರಗೌಡರ ವಿರುದ್ಧ ಅನೇಕ ಅರ್ಜಿಗಳು (ಮೂಕ) ಬ್ರೋಚಕ್ಕೆ ಹೋಗಿ ತಲುಪಿದವು. ಧಾರವಾಡಕ್ಕೆ ಬರೋದರೊಳಗಾಗಿ ಕಲುಷಿತ ಮನಸ್ಸಿನವರಾಗಿ ಬಂದಿದ್ದರು. ಧಾರವಾಡಕ್ಕೆ ಬಂದು ಕಛೇರಿ ಚ್ಯಾರ್ಜ ತೆಗೆದುಕೊಳ್ಳುವ ದಿವಸ ಟ್ರೇಝರೀ ತಪಾಸ ನಡಿದಾಗ್ಯೆ ರಾ.ಬ॥ ರವರು ಮೇಹರ್ಬಾನ ಅಮ್ಮನೀ ಸಾಹೇಬರು ಕೊಟ್ಟ ಕಾನ್ಫಿಡೆನ್ಶಿಯಲ್ ಲಕೋಟೆಯನ್ನು ಕೊಟ್ಟಿದ್ದಕ್ಕೆ, ತಿರುಗಿ ಮಾತು ಸಹ ಆಡದೇ, ಸಲಾಂ ಸಹ್ಹಿ ದೊರೀಲಿಲ್ಲಾ. ಈ ಸಂಗತೀ ಯಾವತ್ತೂ ಬ್ರಾಹ್ಮಣ ಜನರಿಗೂ ಮತ್ತು ಸ್ವಾಮಿ ರಾಯಾಚಾರ್ಯನಿಗೂ ಗೊತ್ತಾಯಿತು. ಇದರ ಫಾಯಿದೇ ತೆಗೆದುಕೊಳ್ಳುವ ಕುರಿತು ಪುನಃ ಕೆಲಸದಶಿಂದ ಅರ್ಜಿ ತಯಾರ ಮಾಡಿ ಅದರ ಲಗ್ತ ಮಿ॥ರಾಜ್ಯಾಚ್ಯಾರಿ ಬಿಂದಾಚ್ಯಾರಿ ಬಂಕಾಪೂರ ಮಾಮ್ಲೆದಾರ, ಹುಬ್ಬಳ್ಳಿ ಮಾಮ್ಲೆದಾರ ಕರ್ಜಗೀ ಮಾಮ್ಲೆದಾರ ಮಿ॥ ಬಿಂದೂರಾವ ಅನಂತ, ಮಿ॥ ಶ್ರೀನಿವಾಸ ಕೃಷ್ಣ ಬುದ್ದಿಕೋಟಕರ ಕೋಡ ತಾಲ್ಕು ಮಾಮ್ಲೆದಾರ, ಮಿ॥ ನರಶಿಂಗ ಭಗವಂತ, ಕಲಘಟಗೀ ಮಾಮ್ಲೆದಾರ ಮೊದಲಾದ ಜನರ ಕಡಿಂದ ಪರಭಾರೇ ವುತ್ತಮ ಸರ್ಟಿಫಿಕೇಟ ಪಡಕೊಂಡಿದ್ದವು ಇಟ್ಟು, ಇಂಗ್ರೇಜಿ ಅರ್ಜಿ ಮೇಹರ್ಬಾನ ಸ್ಪೇನ್ಸ ಸಾಹೇಬರ ಕಡಿಗೆ ಕೊಟ್ಟನು. ಈ ಅರ್ಜಿ ನೋಡಿದ ಕೂಡಲೇ ಕಲೇಕ್ಟರ ಸಾಹೇಬರು ಮೊದಲಿಗೆ ಖಾಲಿಬಿದ್ದ ಜಾಗಾ ಇವನಿಗೆ ಕೊಡಬೇಕು ಮತ್ತು ಚಿಟ್ನಿಸರು ಇದರ ಸೀಟಿ ತೆಗೆದುಕೊಳ್ಳಬೇಕೆಂದು ಬರೆದು ರಾ. ಬ॥ ರುದ್ರಗೌಡರನ್ನು ಕರಿಸಿ ಕೇಳದೆ ಕಚೇರಿಗೆ ಕಳುಹಿಸಿಕೊಟ್ಟರು. ನಂತರ ಚಿಟಣಿಸರು ಈ ಅರ್ಜಿದಾರನ ಅರ್ಜಿಯನ್ನು ತಗೊಂಡು ಮೆ॥ಸ್ಪೇನ್ಸ ಸಾಹೇಬರ ಕಡಿಗೆ ತಗೊಂಡುಹೋಗಿ ಮೊದಲಿಗೆ ನಡಿದ ಹಕಿಕತಂದರೆ, ಧಾರವಾಡ ತಾಲ್ಲೂ ಮಾಮ್ಲೆದಾರರು ಮಾಡಿದ ರಿಪೋರ್ಟ ಅದಕ್ಕೆ ಮೆ॥ಮಿಡಲ್ಟನ್ ಸಾಹೇಬರು (೨) ರೂ. ದಂಡಮಾಡಿದ ಹಕಿಕತ ಹೇಳಿದರು. ಮತ್ತು ಮಾಮ್ಲೆದಾರರು ಈ ಪ್ರಕಾರ ಮೇಹರ್ಬಾನ ಕಲೇಕ್ಟರ ಸಾಹೇಬರ ಪರವಾನಗೀ ಇಲ್ಲದೇ ಸರ್ಟಿಫಿಕೇಟು ಕೊಡಲಿಕ್ಕೆ ಬರುವದಿಲ್ಲೆಂದು ಹೇಳಿದರು. ಇದಕ್ಕೆ ಮೇಹರ್ಬಾನ ಕಲೇಕ್ಟರ ಸಾಹೇಬರವರು ಯಾವತ್ತೂ ಮಾಮ್ಲೆದಾರರು ಜವಾಬು ಕೇಳಬೇಕೆಂದು ಬರೆದರು. ಅವರು ನಮ್ಮ ಚೂಕ ಆಗಿದೆಯೆಂದು ಕ್ಷಮೆಬೇಡಿಕೊಂಡರೆ ನಂತರ ಪುನಃ ಈ ಅರ್ಜಿ ತಗೊಂಡು ಹೋದಾಗ್ಯೆ ಈ ಸರ್ಟಿಫಿಕೇಟುಗಳು ರದ್ದ ಅವೇ ಅಂತಾ ಚಿಟ್ನಿಸರು ಹೇಳಿದ್ದಕ್ಕೆ ಮೆ॥ಸ್ಪೇನ್ಸ ಸಾಹೇಬರು ಕೂಡಲೇ ಹರಿದು ಹಾಕಿದರು. ಇದನ್ನು ನೋಡಿ ರಾ.ಬ॥ರುದ್ರಗೌಡರು ನಾಳೇ ನನ್ನ ಮೇಲೆ ಹರಿದು ಹಾಕಿದ ಆರೋಪ ಬಂದೀತು. ಕಾರಣ ನಾನೇ ಸ್ವತಃ ಹರಿದೆನೆಂದು ಆಫೀಸ ಆರ್ಡರ ಒಂದು ಬರೆದು ಕೊಡಿರೀ ಅಂತಾ ಕೇಳಿದ ಕೂಡಲೆ ಆ ಪ್ರಕಾರ ಬರೆದುಕೊಟ್ಟರು. ಮತ್ತು ಸದ್ರಿ ಸ್ವಾಮಿರಾಚಾರ್ಯರಿಗೆ ಅವನ ಸರ್ಟಿಫಿಕೇಟಗಳು ಬೇಕಾಯಿದೇಶೀರ ಅವೆ. ಕಾರಣ ರದ್ದಪಡ್ಸಿ ನಾಶಮಾಡಿರುತ್ತವೆಂದು ಲೇಖಿಯಿಂದ ಬರೆದು ಹುಕ್ಕುಂ ಕಳುಹಿಸಿತು. ಇಷ್ಟಾದ ಮೇಲೆ ರಾ.ಬ॥ ರುದ್ರಗೌಡರಿಗೆ ಕಾರವಾರದ ದಪ್ತರರಾಗಿ ನೇಮ್ಸಿದ್ದರಿಂದ ಅಲ್ಲಿಗೆ ಪ್ರಯಾಣಮಾಡುವ ಭಾಗಬಿತ್ತು. ಹೋಗುವಾಗ್ಯೆ ತಮ್ಮ ಜಾಗೇಕ್ಕೆ ಕೆಲ್ಸಮಾಡುವ ಮಿ॥ ಶಾಂತವೀರಪ್ಪ ಮೆಣಶಿನಕಾಯಿ ಚಿಟ್ನೀಸರಿಗೆ ಈ ಸ್ಪೇನ್ಸ ಸಾಹೇಬರು ಬರಕೊಟ್ಟ ಆರ್ಡರು ಫಾಯಿಲ್‌ಮಾಡ್ಸಿ ಇಟ್ಟಸಂಗತಿ ಹೇಳಿ, ಈ ಬಗ್ಗೆ ಬಹಳಮಾಡಿ ದಾವೇ ಆಗೋ ಸಂಭವ ಅದೇ ಅಂತ ಸಹಾ ತಿಳ್ಸಿ ಹೋದರು. ಮುಂದೆ ಸ್ಪೇನ್ಸ ಸಾಹೇಬರವರು ಮಧ್ಯಭಾಗದ ಕಮೀಶನರರಾದರು. ಸದ್ರಿ ಕಮೀಶನರ ಸಾಹೇಬರ ವಿರುದ್ಧವಾಗಿಯೂ ಮತ್ತು ರಾ.ಬ॥ ರುದ್ರಗೌಡರ ವಿರುದ್ಧವಾಗಿಯೂ ನೋಟ್ಸುಗಳನ್ನು ಈ →

ಬಾಧಕವಾಗಹತ್ತಿದ್ದನ್ನು ಕಂಡು, ಇದಕ್ಕೆ ಮೂಲಕಾರಣರು ರಾ.ಬ॥ಅರಟಾಳ ಸಾಹೇಬರವರೇ ಎಂಬುದನ್ನರಿತು ಇವರು ನಾವು ಹೇಳಿದರೆ ಕೇಳುವವರಲ್ಲ, ಕೀಲಿಕೈಯಿಂದ ಕೀಲಿ ತೆಗಿಸಬೇಕು ಅಂದರೆ ನಮ್ಮ ಕಾರ್ಯವಾಗುವದು, ಎಂದು ತರತರದ ಹಂಚಿಕೆಗಳನ್ನು ಹಾಕಹತ್ತಿದರು.

ಕರ್ನಾಟಕದ ಅರ್ಥಾತ್ ಇಡೀ ಹಿಂದುಸ್ಥಾನದ ವೀರಶೈವ ಮುಖಂಡರನ್ನೆಲ್ಲ ಯುಕ್ತಿ ಪ್ರಯುಕ್ತಿಗಳಿಂದ ವಶಪಡಿಸಿಕೊಳ್ಳಬಹುದು. ಆದರೆ ರಾ.ಬ॥ರುದ್ರಗೌಡರೊಬ್ಬರನ್ನು ಮಾತ್ರ ವಶಪಡಿಸಿಕೊಳ್ಳಲಾಗದೆಂಬದು ಇವರಿಗೆ ನಿಶ್ಚಿತವಾಗಿತ್ತು. ಯಾಕಂದರೆ ಇವರು ಆಜನ್ಮ ಈ ಬ್ರಾಹ್ಮಣರ ಕುಟಿಲ ಕಾರಸ್ಥಾನಗಳನ್ನೆಲ್ಲ ಬಲ್ಲವರು. ಲೋಕಹಿತವಾದ ನಿಷ್ಕಪಟವಾದ ಕಾರ್ಯಗಳಿಗೆ ಮಾತ್ರ ಇವರು ತ್ರಿಕರಣಪೂರ್ವಕ ಸಹಾಯ ಮಾಡುವವರೆಂಬ ಇಂಗಿತವು ಬ್ರಾಹ್ಮಣರಿಗೆ ಪೂರ್ಣವಾಗಿ ಗೊತ್ತಿತ್ತು. ಆದ್ದರಿಂದ ವರಿಷ್ಠಾಧಿಕಾರಿಗಳ ವಿದ್ಯಮಾನ ರಾವಬಹಾದ್ದೂರವರನ್ನು ಪ್ರೋತ್ಸಾಹಗೊಳಿಸಬೇಕೆಂದು ನಿಶ್ಚಯಿಸಿದರು.

→ ಸ್ವಾಮಿರಾಯಾಚಾರ್ಯನು ಲುಕ್ಸಾನಿ ಬಗ್ಗೆ ಕೊಟ್ಟನು. ನೋಟ್ಸಿನಲ್ಲಿ ರುದ್ರಗೌಡಾ ಬಿನ್ ಚನವೀರಗೌಡಾ ಅಂತ ಬರೆದಿದ್ದನು. ಈ ನೋಟ್ಸುಗಳಲ್ಲಿ ಮೆ॥ ಕಮೀಶನರ ಸಾಹೇಬರಾದ ಸ್ಪೇನ್ಸ ಸಾಹೇಬರ ಕಡಿಗೆ ಬಂದು ಹೋಗಿತ್ತು. ಅದನ್ನು ಓದಿ ನೋಡಿ ಅದಕ್ಕೆ (A sort of Bravado) ಸುಮ್ಮನೇ ಅಂಜಿಕೆ ಹಾಕತಾರೆ ಅಂತಾ ಹರಿದು ಬುಟ್ಟಿಯಲ್ಲಿ ಛಲ್ಲಿ ಕೊಟ್ಟಿದ್ದರು. ತರುವಾಯ ಈ ಬಗ್ಗೆ ಸದರೀ ಸ್ವಾಮಿರಾಯಾಚಾರ್ಯನು ಮೇಹರ್ಬಾನ ಫರ್ಸ್ಟಕ್ಲಾಸ ಕೋರ್ಟ ಧಾರವಾಡದಲ್ಲಿ ಮಿ॥ಕಾಶೀನಾಥ ಬಳವಂತ ಮರಾಠೆ ಇವರ ಕಡಿಗೆ ದಾವೇ ದಾಖಲ ಮಾಡಿದನು. ಇದಕ್ಕೆ ಸಬಜಜ್ಯ ಸಾಹೇಬರು ನಮ್ಮ ಅಧಿಕಾರದ ದಾವೇ ಅಲ್ಲಾ ರಿ॥ಕೋರ್ಟಿನಲ್ಲಿ ನಡೀತಕ್ಕ ದಾವೇ ಅಂತಾ ತೆಗೆದು ಹಾಕಿದರು. ಆಮೇಲೆ ಡಿ. ಕೋರ್ಟಿನಲ್ಲಿ ದಾವೇ ತಂದ ನಂತರ ಕೋರ್ಟಿನಿಂದ ನೋಟಿಸ ಚಿಟ್ನೀಸರಿಗೆ ಹೋದಾಗ್ಗೆ ನನ್ನದೇನೂ ತಪ್ಪು ಇಲ್ಲಾ. ದಪ್ತರದಲ್ಲಿ ಮೆ॥ಕಲೇಕ್ಟರ ಸಾಹೇಬರು ಸ್ವತಃ ನಾಶಮಾಡಿದ ಬಗ್ಗೆ ಆರ್ಡರ ಅದೆ ಅಂತಾ ಬರಿದರು. ಆಮೇಲೆ ಮೆಹರ್ಬಾನ ಸ್ಪೇನ್ಸ ಸಾಹೇಬರವರೊಬ್ಬರ ಮೇಲೆ ದಾವೆ ನಡೆದು ಸರ್ಟಿಫಿಕೇಟದೊಳಗಿನ ಮಜಕೂರಿನ ಕಿಮ್ಮತ್ತು ಏನೂ ಇಲ್ಲಾ ಫಕ್ತ ಕಾಗದದ ಕಿಮ್ಮತ್ತ ಮಾತ್ರ ೧ ರೂ. ೨ ಪೈ. ಮೆ॥ಸ್ಪೇನ್ಸ ಸಾಹೇಬರು ಕೊಡಬೇಕೆಂದು ನಿಕಾಲೇದಲ್ಲಿ ತರಲ್ಪಟ್ಟಿತು. ಈ ದಾವೇ ಹಾಯಕೋರ್ಟಿನ ತನಕಾ ಹೋದದ್ದರಿಂದ ರಿಪೋರ್ಟೇಡ್ ಕೇಸ ಆಗಿ ಬಂದಿರುತ್ತದೆ.

(Vide Indian Law Reports, Bombay, Volume 15, page 441 in 1891 Swamirayacharya bin Bimacharya versus the Collector of Dharwar).

Before Sir Charles Sargent, Kt., Chief Justice and Mr. Justice Cambay Jurisdiction suit against Collector Mr. J.K. Spains- Act done in official capacity-

The plaintiff sued the Collector and his Chitnis (Rao Bahadur Rudragouda Chanivrgouda Artal) for having destroyed certain certificates of efficiency which had been given to him by Mamlatdars in whose service he had been employed. The defendants pleaded that the certificates had been destroyed, because they were not issued by the Mamlatdars in proper form.

Held that the act of the defendans was an act done by them in their official capacity and that the Subordinate Judge could not entertain the suit.

ಧಾರವಾಡದಲ್ಲಿ ಕರ್ನಾಟಕ ಕಾಲೇಜ ಸ್ಥಾಪಿಸುವ ಬಗ್ಗೆ ನಡಿದ ಗೊಂದಲವೂ ರಾ.ಬ॥ರುದ್ರಗೌಡರು ವರ್ಗಣೀ ವಸೂಲ ಮಾಡಿ ಸರಕಾರಕ್ಕೆ ಒಂದು ಲಕ್ಷ ರೂಪಾಯಿ ಕಳುಹಿಸಿದ ಸಂಗತಿಯೂ-

ಧಾರವಾಡದ ನಿವಾಶಿಗಳಾಗಿದ್ದು, ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿ ಪೆನ್ಸನ್ ಪಡೆದ ರಾವಬಹಾದ್ದೂರ ಶ್ರೀನಿವಾಸ ಕೊನ್ಹೇರರಾವ್ ರೊದ್ದ ಎಂಬ ಬ್ರಾಹ್ಮಣ ಪ್ರಮುಖ ಮನುಷ್ಯರ ಗುರ್ತು ರಾ.ಬ॥ರುದ್ರಗೌಡರಿಗೆ ಅಸಿಸ್ಟಂಟ ಡೆಪ್ಯೂಟಿ ಕೆಲಸವಿದ್ದಾಗಿನಿಂದ ಇರುತ್ತದೆ. ಈ ರಾವಬಹಾದ್ದೂರ ರೊದ್ದವರು ಸದಾ ಆತ್ಮಪೌರೂಷ ಮಾಡಿಕೊಳ್ಳುವವರೂ, ಸ್ವಾರ್ಥ ಬುದ್ಧಿಯವರೂ ಆಗಿದ್ದು, ಯುರೋಪಿಯನ್ನ ಅಮಲದಾರರಿಗೆ ಭೆಟ್ಟಿಯಾಗುತ್ತಾ, ತಮ್ಮ ಕಾರ್ಯಸಾಧಿಸಿಕೊಳ್ಳುವದರ ದಶೆಯಿಂದ ಇಲ್ಲಿದ್ದೊಂದು ಚಾಹಡೀ ಮಾತನ್ನು ಬಳಿಸುತ್ತಾ, ಇರುವದೆ ಇವರ →

ಮುಂದೆ ಸನ್ ೧೯೧೩ನೇ ಇಸವಿಯ ಮೇ ತಿಂಗಳಲ್ಲಿ ಮಹಾಬಲೇಶ್ವರ ಮುಕ್ಕಾಮಿನಲ್ಲಿ ಮುಂಬಯಿ ಕಾಯಿದೇ ಕೌನ್ಸಿಲ್ ಮೀಟಿಂಗು ಇತ್ತು. ಆ ಸಂಧಿಗೆ ಆಕಸ್ಮಿಕವಾಗಿ ಧಾರವಾಡ ಕಲೇಕ್ಟರರಾದ ಮೆ॥ಮೆಕಾನಕಿ ಸಾಹೇಬರವರೂ ಅಲ್ಲಿಗೆ ಹೋಗಿದ್ದರು. ಆಗ್ಯೆ ನಾಮದಾರತ್ರಯರಾದ ರೊದ್ದ, ಬೆಳವೀ, ನಾಯಕ ಇವರೂ ಹೋಗಿದ್ದರೆಂದು ಬೇರೆ ಹೇಳುವ ಕಾರಣವಿಲ್ಲಾ. ಈ ತ್ರಿಕೂಟವು ಕೂಡಿ ಕರ್ನಾಟಕ ಕಾಲೇಜದ ಬಗ್ಗೆ ರಾ.ಬ॥ಅರಟಾಳ ಸಾಹೇಬರು ಸಹಾನುಭೂತಿಯನ್ನು ತೋರಿಸುವದಿಲ್ಲೆಂದೂ, ವೀರಶೈವ ಜನಾಂಗವೆಲ್ಲ ರಾ.ಬ॥ರವರು ಹೇಳಿದಂತೆ ಕೇಳುವರೆಂದೂ, ಅವರು ತಮ್ಮ ಉಪದೇಶದಿಂದಲೇ ಕಾಲೇಜ ಸ್ಥಾಪನೆಯ ಕಾರ್ಯಕ್ಕೆ ಸಹಾಯವಾಗತೊಡಗಬಹುದೆಂದೂ ಚಾಡೀ ಹೇಳುವ ಸಂಕಲ್ಪವನ್ನು ಗೊತ್ತುಮಾಡಿ, ಸಮಯಸಾಧಿಸಿ ಈ ಮೂವರು ಕೂಡಿ ಅಥವಾ ಇಬ್ಬರೇ ಇಲ್ಲವೇ ಒಬ್ಬರೇ ಯಾರಾದರೂ ಮೇಹರ್ಬಾನ ನಾಮದಾರ ಸಿ.ಎಚ್.ಹಿಲ್. ಎಜ್ಯುಕೇಶನಲ್ ಮೆಂಬರ ಎಗ್ಝಿಕ್ಯೂಟಿಹ್ವ ಕೌನ್ಸಿಲ ಇವರ ಕಿವಿಯಲ್ಲಿ ಊದಿದರು.

→ ಕರ್ತವ್ಯವಾಗಿರುತ್ತದೆ. ಕೋಕಣಸ್ಥ ಬ್ರಾಹ್ಮಣ (ಚಿತ್ಪಾವನ) ಜನರ ಮೇಲೆ ಇವರು ದ್ವೇಷಭಾವದಲ್ಲಿರುತ್ತಾರೆ. ಈ ರೊದ್ದರು ವೈಷ್ಣವ ಮತದವರು. ಇವರಿಗೆ ಮುಂಬೈ ಕಾಯಿದೇ ಕಾವುನ್ಸಿಲ್ಲ ಮೆಂಬರರಾಗಬೇಕೆಂಬ ಇಚ್ಛೆಯುಂಟಾಗಿ ರಾವಬಹಾದ್ದೂರ ರುದ್ರಗೌಡರ ಕಡಿಗೆ ಬಂದು ಹೇಳಿಕೊಂಡರು. ಮತ್ತು ನಾನು ಮೆಂಬರನಾದರೆ ಕರ್ನಾಟಕ ಕಾಲೇಜವನ್ನು ಧಾರವಾಡಕ್ಕೆ ಸ್ಥಾಪಿಸುವದರ ದಶೆಯಿಂದ ಪ್ರಯತ್ನಮಾಡಿ ಹ್ಯಾಗಾದರೂ ಮಾಡಿ ಕೆಲಸ ಕೊನೆಗಾಣಿಸುತ್ತೇನೆಂದು ಬಹುವಿನಯದಿಂದ ಎಷ್ಟೋ ಪತ್ರಗಳನ್ನು ಸಹ ಬರೆದಿರುತ್ತಾನೆ. ಈ ಪತ್ರಗಳೆಲ್ಲವೂ ರಾ.ಬ॥ರವರ ಖಾಸಗೀ ಫೈಲಿನಲ್ಲಿ ಇರುತ್ತವೆ. ಅದರಂತೆ ಅವರ ವಿನಂತಿಗೆ ಕಬೂಲಾಗಿ ರಾವಬಹಾದ್ದೂರ ರುದ್ರಗೌಡರು ಧಾರವಾಡ ಜಿಲ್ಲೆಯಲ್ಲಿ ಮತಗಳನ್ನು ರಾ॥ರೊದ್ದರಿಗೆ ಕೊಡುವದರ ದಶಿಂದ ಮದತ್ತಮಾಡಿ ಮೆಂಬರನನ್ನಾಗಿ ಮಾಡಿದರು. ಇದೇ ಕರಾರಿನ ಮೇಲೆ ಬೆಳಗಾಂವ ಜಿಲ್ಲೆಯಲ್ಲಿ ನಾಮದಾರ ಬೆಳವಿಯವರಾದರೂ ಮೆಂಬರ ಜಾಗೆಕ್ಕೆ ಆರಿಸಲ್ಪಟ್ಟರು. ಈ ನಾಮದಾರದ್ವಯರು ೧೯೦೯-೧೯೧೧ ಇಸ್ವಿಯಲ್ಲಿ ವುಮೇದವಾರರಾಗಿ ನಿಂತಿದ್ದರು. ರಾ.ಬ॥ರೊದ್ದರವರು ರಾ.ಬ॥ರುದ್ರಗೌಡರವರಿಗೆ ವರ್ಗಣೀ ಕೆಲಸದಲ್ಲಿ ಮದತಮಾಡಿರಿ, ಎಂದು ಪುನಃ ಹೇಳಿಕೊಳ್ಳಲು ಶುರುಮಾಡಿದರು. ಅದಕ್ಕೆ ರಾ.ಬ॥ರುದ್ರಗೌಡರು ನೌಕರಿಯಲ್ಲಿರೊದ್ದರಿಂದ ನಾನು ಮಾಡುವದಿಲ್ಲೆಂದು ಹೇಳಿದರು. ಈ ನಾಮದಾರರು ಸುಮ್ಮನೇ ನಮ್ಮ ಕಡಿಂದ ಮತ ತಗೊಂಡು ಮೆಂಬರರಾದರು. ಇವರ ಕೈಯಿಂದ ಏನೂ ಆಗುವದಿಲ್ಲಾ ಮುಂತಾದ ವಿರುದ್ಧ ಮಾತುಗಳ ಲೇಖಗಳೂ ವರ್ತಮಾನಪತ್ರದಲ್ಲಿ ಬರಹತ್ತಿದವು. ಈ ರಾ.ಬ॥ರೊದ್ದರವರು ಮೇಹರ್ಬಾನ ದಕ್ಷಿಣ ಭಾಗ ಕಮೀಶನರಾದ ಗಿಬ್ಬ ಸಾಹೇಬರಿಗೆ ಸ್ವಲ್ಪ ಪ್ರೀತಿಯವರಾಗಿದ್ದರು. ಈ ಬಗ್ಗೆ ತಾ. ೨೦ನೇ ಅಕ್ಟೋಬರ ೧೯೦೯ನೇ ದಿವಸ ಮೆ. ಕಮೀಶನರ ಸಾಹೇಬರ ಬಂಗ್ಲೇದಲ್ಲಿ ಒಂದು ಸಭೆಯು ಭರಾಯಿಸಲ್ಪಟ್ಟಿತು. ಆ ಸಭೆಗೆ ಸಾ. ರೊದ್ದ ರಾ.ಬ॥ಅರಟಾಳ, ಮಿ॥ ಶ್ರೀನಿವಾಸರಾವ ಕಮಲಾಪೂರ ಮಿ॥ ನಾರಾಯಣ ಗಣೇಶ ನಾಡಗೇರ, ರೆವ್ಹರೆಂಡ ಮಿ॥ ಬೀಲ ಇಷ್ಟ ಜನರೂ ಹಾಜರ ಇದ್ದರು. ಆ ಮೀಟಿಂಗದಲ್ಲಿ Formation of Associationದ draft rules produce ಮಾಡಿದರು. ಇದರ ಹೊರ್ತಾಗಿ ಎರಡು ಲಕ್ಷ ಅರವತ್ತು ನಾಲ್ಕು ಸಾವಿರ ರೂಪಾಯಿಗಳ ಧನರಾಶಿಯನ್ನು ಕೂಡಿಸಬೇಕೆಂದು ಸರ್ವಾನುಮತದಿಂದ ಪಾಸ (ಠರಾವ) ಮಾಡಿದರು. ಇದರ ಪ್ರೊಸಿಡಿಂಗ್ಸದ ನಕಲು ಇಂಗ್ಲೀಷ ಮೆಮೊ ನಂ. ೪೬೨೨/೨೭-೧೦-೧೯೦೯ನೇದ್ದು ರಾ.ಬ॥ಅರಟಾಳ ಸಾಹೇಬರ ಕಡಿಗೆ ಕಳುಹಿಸಿಕೊಟ್ಟರು. ಇದರಂತೆ ಠರಾವ ಆದ ಪ್ರಕಾರ ಇವರು ವರ್ಗಣೀ ವಸೂಲ ಮಾಡಲಿಕ್ಕೆ ಹೋದರೆ ಯಾರೂ ಕೊಡಲಿಲ್ಲಾ. ಅಲ್ಲಿಂದ ರಾ.ಬ॥ ರೊದ್ದರು ಮಹಾಬಲೇಶ್ವರಕ್ಕೆ ಹೋಗಿ ಅಲ್ಲಿದ್ದ ಮೆ॥ಹೆಲೋಡಿ ಹಿಲ್.ಸಿ. ಆಯ್.ಇ. ಆಯ್.ಸಿ.ಎಸ್. ಇವರ ಮುಂದೆ ಮೆ॥ E. Mechonochin ಧಾರವಾಡದ ಕಲೇಕ್ಟರ ಸಾಹೇಬರವರ "ಮಾರ್ಫತ ರಾವಬಹಾದೂರ ರುದ್ರಗೌಡರು ವರ್ಗಣೀ ಮಾಡಲಿಕ್ಕೆ ಮನಸು ಹಾಕವಲ್ಲರು, ವರ್ಗಣೀ ಕೂಡಿದರೆ ಬ್ರಾಹ್ಮಣ ಹುಡುಗರೇ ಬಹಳ ಕಲೀತಾರೆ ಎಂಬ ದುಷ್ಟ ಹೇತುವಿನಿಂದ ಹಣಕೂಡಿಸುವದಿಲ್ಲೆ"ಂದು ಚಾಹಡಿ ಮಾತುಗಳನ್ನು ಹೇಳಿದರು. ಈ ಧಾರವಾಡ ಕಲೇಕ್ಟರ ಸಾಹೇಬರ ಮಾತು ಖರೇ ಕಾಣಿಸಿ, ಧಾರವಾಡಕ್ಕೆ ಬಂದು ತಪಾಸ ಮಾಡುತ್ತೇನೆ"ಂದು ಮೆ॥ಹಿಲ್ ಸಾಹೇಬರು ಹೇಳಿದರು. ಮತ್ತು ಬರುವ ಪೂರ್ವದಲ್ಲಿ "ಅಂಥ ದಿವಸ ಧಾರವಾಡಕ್ಕೆ ಹೋಗುತ್ತೇನೆ. ಹಾದಿಯಲ್ಲಿ ಬೆಳಗಾಂವಿಯ ಸ್ಟೇಶನ್ನದಲ್ಲಿ ರಾ.ಬ॥ರುದ್ರಗೌಡರನ್ನು ಕರಕೊಂಡು ಬರಲಿಕ್ಕೆ" ಮೆ॥ಕಮಿಶನರ ಸಾಹೇಬ ಬೆಳಗಾಂವ ಇವರಿಗೆ ಗವ್ಹರ್ನಮೆಂಟ →

ನಾಮದಾರ ಹಿಲ್ಲ ಸಾ॥ರವರು ಈ ಏಕಪಕ್ಷದ ಮಾತನ್ನೇ ನಂಬಿ ತಾ. ೭ನೇ ಜೂನ ಸನ್ ೧೯೧೩ ಇಸ್ವಿ ದಿವಸ ಸಾಯಂಕಾಲ ಪುಣೆಯ ಮೇಲಗಾಡಿಯಿಂದ ತಮ್ಮ ಮಗಳು ಸಹಿತವಾಗಿ ಧಾರವಾಡಕ್ಕೆ ಹೊರಟು "ಕೂಡಲೇ ಬೆಳಗಾಂವಿಯ ಸ್ಟೇಶನದ ಮೇಲೆ ನನಗೆ ರಾ.ಬ॥ಅರಟಾಳ ಸಾಹೇಬರ ಭೆಟ್ಟಿಯನ್ನು ಮಾಡಿಸಬೇಕೆ"ಂದು ನಾ॥ಶೆಫರ್ಡ ಸಾಹೇಬರವರಿಗೆ ತಾ. ೭ ಜೂನ ೧೯೧೩ ಶನಿವಾರ ಸಾಯಂಕಾಲಕ್ಕೆ ತಾರು ಮಾಡಿದರು. ಅವರು ಕೂಡಲೇ ಮೇಹರ್ಬಾನ ಕಲೆಕ್ಟರ ಸಾಹೇಬರವರಿಗೆ ಈ ಬಗ್ಗೆ ಚೀಟಿಯನ್ನು ಕೊಟ್ಟರು. ಆ ಪ್ರಕಾರ ಆಗಿಂದಾಗ್ಯೆ ಮೆ॥ರವರು ರಾವಬಹಾದ್ದೂರವರಿಗೆ ತಿಳಿಸಿದರು. ಮರುದಿವಸ ೯ ಘಂಟೆಗೆ ಸರಿಯಾಗಿ ಸ್ಟೇಶನಕ್ಕೆ ದಯಮಾಡಿಸಿದರು. ಉಗಿಬಂಡಿಯು ಬಂದೊಡನೆ ಮೆ॥ಕಮೀಶನರ ಸಾಹೇಬರವರೂ ಮೆ॥ಕಲೆಕ್ಟರ ಸಾಹೇಬರವರು ರಾ.ಬ॥ಅರಟಾಳ ಸಾಹೇಬರ ಪರಿಚಯವನ್ನು ಮಾಡಿಕೊಟ್ಟರು. ಅದಕ್ಕೆ 'ನಾಮದಾರ ರಾ.ಬ॥ಅರಟಾಳರವರು ತಾವೆಯೇ?' ಎಂಬದಾಗಿ ರಾವಬಹಾದ್ದೂರವರನ್ನು ಕೇಳಿದರು. ಆಗ್ಗೆ ಇದಕ್ಕಿಂತ ಹೆಚ್ಚಿಗೇನೂ ಮಾತಾಡಲಿಲ್ಲ. ತಮ್ಮ ಗುರುತಾದ್ದರಿಂದ

→ ಸೆಕ್ರೇಟರಿಯವರ ಕಡಿಂದ ಮೆ॥ಹಿಲ್ಲ ಸಾಹೇಬರು ಪತ್ರ ಬರೆಯಿಸಿದರು. ಆ ಪ್ರಕಾರ ಮೆ. ಬ್ರಾವುನ ಸಾಹೇಬ ಕಲೇಕ್ಟರ ಸಾ॥ಕಡಿಗೆ ಬಂದ ಕೂಡಲೇ ಡೆಮಿ ಆಫಿಸಿಯಲ್ ಪತ್ರ ಬರೆದು ಮಧ್ಯ ರಾತ್ರಿಯಲ್ಲಿ ರಾ.ಬ॥ರುದ್ರಗೌಡರಿಗೆ ಮುಟ್ಟಿಸುವಂತೆ ಆಜ್ಞೆ ಮಾಡಿ ಶಿಪಾಯಿಗೆ ಕಳುಹಿಸಿದರು. ತರುವಾಯ ತಾ. ೮ನೇ ಅಗಸ್ಟ ೧೯೧೩ ಇಸ್ವಿ ರವಿವಾರ ಮುಂಜಾನೆ ಮೇಲಗಾಡಿಯಿಂದ ಸ್ಪೇಶಲ್ ಸಲೂನದಲ್ಲಿ ಬರುವವರಾಗಿದ್ದ ಮೆ॥ಹಿಲ್ ಸಾಹೇಬರವರ ದರ್ಶನಾರ್ಥವಾಗಿ ನಾಮದಾರ ಶೇಪರ್ಡ ಸಾಹೇಬರೂ ಮೆ॥ಬ್ರಾವುನ್ನ ಸಾಹೇಬರೂ ಮತ್ತು ರಾ.ಬ॥ರುದ್ರಗೌಡರೂ ರೇಲ್ವೆ ಸ್ಟೇಶನಕ್ಕೆ ಹೋಗಿ ನಿಂತರು. ಗಾಡಿಯು ಬಂದು ನಿಂತ ಕೂಡಲೇ ನಾ॥ಶೇಪರ್ಡ ಸಾಹೇಬರು ಮೆ॥ಬ್ರಾವುನ್ನ ಸಾಹೇಬರು ಮತ್ತು ರಾ.ಬ॥ಅರಟಾಳ ಸಾಹೇಬರನ್ನು ಮೆ॥ಹಿಲ್ಲ ಸಾಹೇಬರಿಗೆ ಭೆಟ್ಟಿಮಾಡಿಸಿ ಗುರ್ತು ಮಾಡಿಕೊಟ್ಟರು. ಒಬ್ಬರಿಗೊಬ್ಬರು ಶೇಕಹ್ಯಾಂಡವಾಗಿ ಕುಶಲಪ್ರಶ್ನಗಳಾದ ಮೇಲೆ ಮೆ॥ಹಿಲ್ಲ ಸಾಹೇಬರು ರಾ.ಬ॥ರುದ್ರಗೌಡರಿಗೆ ಧಾರವಾಡಕ್ಕೆ ಬಂದು ನಮಗೆ ಭೆಟ್ಟಿಯಾಗುವಿರೇನೆಂದು ಹರಕತ್ತು ಕೇಳಿದರು. ಅದಕ್ಕೆ ರಾ.ಬ॥ಅರಟಾಳರು "ಇದೆಂಥ ಆಶ್ಚರ್ಯದ ಮಾತು, ನಾನು ತಮ್ಮ ಅಧೀನದಲ್ಲಿ ನೌಕರದಾರನಿದ್ದು ಹೀಗೆ ಕೇಳುವದೇನು. ನಾನು ತಪ್ಪದೇ ನಾಳಿಗೆ ಧಾರವಾಡಕ್ಕೆ ಬಂದು ಭೆಟ್ಟಿಯಾಗುತ್ತೇನೆಂದು ಹೇಳಿದರು. ರಾ॥ಬ॥ಅರಟಾಳ ಸಾಹೇಬರವರು ಹೋಗುವ ಪೂರ್ವದಲ್ಲಿಯೇ ಅಂದರೆ ಮೆ॥ ಹಿಲ್ ಸಾಹೇಬರು ಹೋದ ದಿವಸವೇ ತಾ. ೮-೬-೧೯೧೩ ಇಸ್ವಿ ದಿವಸ ಲಿಂಗಾಯತ ಹಾಲದಲ್ಲಿ ಮೆ॥ಕಲೇಕ್ಟರ ಸಾಹೇಬ ಮೆಕಾನಕೀಯವರು ಸಹ ಕೂಡಿಕೊಂಡು ಮಾಡಿದ ಮೀಟಿಂಗದಲ್ಲಿ ಲಿಂಗಾಯತ್ತರೆಲ್ಲರೂ ಕೂಡಿ ಕೊಟ್ಟ ಮಾನಪತ್ರದುತ್ತರವಾಗಿ ಮೇಹರ್ಬಾನ ಹಿಲ್ಲ ಸಾಹೇಬರವರು "ನೀವು ಲಿಂಗಾಯತರು ಬ್ರಾಹ್ಮಣರು ಕಲಿತರೆ ನಿಮ್ಮ ವಿರುದ್ಧವಾಗುತ್ತಾರೆ. ಕಾರಣ ಹಣಾ ಕೂಡಿಸುವದು ನಿಮ್ಮ ಇಚ್ಛಾ ಇಲ್ಲಾ. ಇದು ನಿಮ್ಮ ದುಷ್ಟ ಹೇತು ಅದೆ" ಅಂತಾ ಪುಷ್ಕಳ ಲಿಂಗಾಯಿತರ ವಿರುದ್ಧ ಮಾತಾಡಿದ್ದರು. ಇದರಿಂದ ಲಿಂಗಾಯತ ಪ್ರಮುಖ ಜನರೆಲ್ಲರೂ ದುಃಖಿತರಾಗಿ ರಾ.ಬ॥ರವರು ಮರುದಿವಸ ಮೇಲಗಾಡಿಯಿಂದ ಹೋಗುವಷ್ಟರೊಳಗೆ ಬಂದು ಸ್ಟೇಶನ್‌ದ ಮೇಲೆ ನಿಂತಿದ್ದರು. ರಾ.ಬ॥ರುದ್ರಗೌಡರು "ನೀವು ಸುಮ್ಮನೇ ಇದ್ದಿರೇನು" ಎಂದು ಕೇಳಿದರು. ಮತ್ತು ವೂರೊಳಗೆ ಹೋಗುವದರಲ್ಲಿಯೇ ಪೋಷಾಕು ಹಾಕಿಕೊಂಡು ಮೆಹರ್ಬಾನ್ ಹಿಲ್ಲ ಸಾಹೇಬರು ಇಳಿದಿದ್ದ ಕಲೇಕ್ಟರ ಸಾಹೇಬರ ಬಂಗ್ಲೆಕ್ಕೆ ಅವರ ಭೇಟ್ಟಿಗೋಸ್ಕರ ಹೋದರು. ರಾ.ಬ॥ರುದ್ರಗೌಡರು ಮೆ॥ಹಿಲ್ಲರವರ ಭೆಟ್ಟಿಯಲ್ಲಿ ಯಾವತ್ತೂ ರಾ.ಬ॥ರೊದ್ದರ ಹಕೀಕತ ಹೇಳಿದ್ದಲ್ಲದೆ "ಬ್ರಾಹ್ಮಣರ ಜನರು ಲಿಂಗಾಯಿತರ ಕಡಿಂದ ವ ಇತರ ಜನರ ಕಡಿಂದ ಹಣವರ್ಗಣಿಮಾಡಿ ತಮ್ಮ ಹೆಸರು ಮಾಡುತ್ತಾರೆ. ಆದ್ದರಿಂದ ಫಕ್ತ ಬ್ರಾಹ್ಮಣರ ಕಡಿಂದ ೧ ಲಕ್ಷ ರೂಪಾಯಿ ವಸೂಲ ಮಾಡಲಿಕ್ಕೆ ತಾವು ತಿಳಿಸರಿ ಮತ್ತು ನಾನು ಸ್ವಥಃ ಲಿಂಗಾಯತ ಜನರಿಂದಲೇ ಮಾತ್ರ ೧ ಲಕ್ಷ ರೂಪಾಯಿ ತಂದು ಕೊಡುತ್ತೇನೆ"ಂದು ಹೇಳಿದರು. ಇಯೆಲ್ಲಾ ರಾ.ಬ॥ರುದ್ರಗೌಡರ ಭಾಷಣವನ್ನು ಮೆ॥ಹಿಲ್ಲ ಸಾ. ರವರು ಕೇಳಿ, ಅವರ ಮನಸ್ಸು ತಿರುಗಿ, "ಅದೇ ದಿವಸ ಜನರಲ್ ಮೀಟಿಂಗದಲ್ಲಿ ನಿರ್ಣಯ ಮಾಡೋಣ"ವೆಂದು ಹೇಳಿ ಅವರನ್ನು ಪರತ ಕಳುಹಿಸಿದರು. ಅದೇ ದಿವಸ ಧಾರವಾಡದ ಗ್ರಾಮದಲ್ಲಿಯ ಹಳೇ ತಾಲ್ಕು ಕಚೇರಿಯಲ್ಲಿ ದೊಡ್ಡ ಸಭೆ ಕೂಡಲ್ಪಟ್ಟಿತ್ತು. ರಾ.ಬ॥ರುದ್ರಗೌಡರು ಮೆ. ಹಿಲ್ಲ ಸಾಹೇಬರು ಬರುವ ಮೊದಲು ಅಲ್ಲಿಗೆ ಹೋದರು. ಅಲ್ಲಿ ಲಿಂಗಾಯತ ಮತದ ಮುಮ್ಮಿಗಟ್ಟಿ ದೇಸಾಯರವರು ಅಗ್ರಸ್ಥಾನದಲ್ಲಿ ಕೂತಿದ್ದರು. ಅವರು ಯಾಕ ಬಂದಿರೆಂದು ರಾ.ಬ॥ರವರು ಕೇಳಿದ್ದಕ್ಕೆ "ಕಾಲೇಜದ ಪಟ್ಟಿ ದಶಿಂದ ಕರಿಸಿರುತ್ತಾರೆ"ಂದು ಹೇಳಿದರು. ಅದಕ್ಕೆ ರಾ.ಬ॥ರುದ್ರಗೌಡರು "ನೀವು ಪಟ್ಟಿ ಕೊಡತಕ್ಕದ್ದೆನದೆ ಅದನ್ನು ನನ್ನ ಕಡಿಗೆ ಕೊಡ್ರಿ ಮತ್ತು ಬ್ರಾಹ್ಮಣರು →

ನಮಗೆ ಬಹಳ ಸಂತೋಷವಾಯಿತು. ಇದೇ ಗಾಡಿಯಿಂದ ನೀವು ಧಾರವಾಡಕ್ಕೆ ಬರುತ್ತಿರೋ" ಎಂದು ಕೇಳಿದರು. ಅದಕ್ಕೆ ರಾ.ಬ॥ರವರು "ಈ ಹೊತ್ತು ನನ್ನ ಅಡಿಗೆಯವರನ್ನು ಕಳಿಸಿ ನಾನು ನಾಳಿನ ದಿವಸ ಬರುತ್ತೇನೆ"ಂದು ತಿಳಿಸಿದರು. ಅದಕ್ಕೆ 'ಹಾಗೆಯೇ ಮಾಡಿರಿ' ಎಂದು ಕಡೆಗೆ ಹೋಗುವ ಮುಂದೆ, ಗಾಡಿಯಲ್ಲಿ ಕೂತವರು ಎದ್ದು ಬಂದು, ರಾವಬಹಾದ್ದೂರವರನ್ನು ಕುರಿತು 'ಧಾರವಾಡಕ್ಕೆ ಬರಲು ನಿಮಗೇನಾದರೂ ಅಡ್ಡಿಯಿರುವದೇನು?' ಎಂದು ಪ್ರಶ್ನೆ ಮಾಡಿದರು. ಅದಕ್ಕೆ ರಾವಬಹಾದ್ದೂರವರು 'ಮೆ॥ರವರೇ ಅಖಂಡ ೩೮ ವರ್ಷ ಸರಕಾರಿ ಕೆಲಸವನ್ನು ಮಾಡಿದ ನಾನು ತಮ್ಮಂಥ ಪ್ರಭುಗಳ ಆಜ್ಞೆಯನ್ನು ಮೀರುವದುಂಟೇ? ತಮ್ಮ ಆಜ್ಞೆಯು ನನಗೆ ಶಿರಸಾಮಾನ್ಯವದೆ. ನಿಶ್ಚಯವಾಗಿ ಬರುವೆನು. ಯಾವ ಅಡ್ಡಿಯೂ ಇಲ್ಲ. ಇನ್ನು ೭-೮ ದಿವಸಗಳಲ್ಲಿ ಪೆನಶನ್ ತೆಗೆದುಕೊಳ್ಳುವವನಾಗಿದ್ದರೂ ಕೂಡಾ, ನಾನು ವತನದಾರ ಗೌಡನಿದ್ದರಿಂದ ಆ ಜನ್ಮ ಸರಕಾರದ ಸೇವೆಯನ್ನು

→ ಈಗ ಲಿಂಗಾಯತ ಜನರ ಕಡಿಂದ ವಸೂಲ ಮಾಡಿದ ಹಣ ಸಹ್ತಿ ಮೆ॥ಹಿಲ್ಲ ಸಾಹೇಬರು ನನ್ನ ಕಡಿಗೆ ಕೊಡಿಸುತ್ತಾರೆ. ಫಕ್ತ ಬ್ರಾಹ್ಮಣರೇ ವಂದು ಲಕ್ಷ ಬೇರೆ ವಸೂಲ ಮಾಡಿಕೊಡತಕ್ಕದ್ದು. ಹೀಗೆ ಈ ಸಭೆಯಲ್ಲಿ ನಿರ್ಣಯಿಸತಕ್ಕದ್ದದೆ" ಎಂದು ಹೇಳಿದ ಮಾತುಗಳನ್ನು ಬ್ರಾಹ್ಮಣ ವ್ಯಕ್ತಿಗಳು ಕೇಳಿದ ಕೂಡಲೇ ಸಜೀವ ಪ್ರೇತಗಳಂತೆ ಕುಳಿತುಕೊಂಡರು. ಅವರಲ್ಲಿ ಕಮಲಾಪೂರ ಶ್ರೀನಿವಾಸರಾಯರು ಮಾತ್ರ "ನಮ್ಮನ್ನು ಕೊಲ್ಲುವದಕ್ಕೆ ಬಂದಿದ್ದಿರೇನೆ"ಂದು ಕೇಳಿದರು. ಅದಕ್ಕೆ ರಾ.ಬ॥ರುದ್ರಗೌಡರು "ನಿಮ್ಮ ಚಾಹಡಿಯನ್ನು ಹೊರಗೆ ಹಾಕಿ, ನಿಮ್ಮ ಶೌರ್ಯತನವನ್ನು ನೋಡಲಿಕ್ಕೆ ಬಂದಿದ್ದೆನೆ"ಂದು ವುತ್ತರಕೊಟ್ಟರು. ರಾ.ಬ॥ರೊದ್ದನೊಬ್ಬ ಕೆಟ್ಟ ಮನುಷ್ಯನಾದ್ದರಿಂದ ನಮ್ಮೆಲ್ಲರ ವಿರುದ್ಧ ತಾವು ಮಾಡಬೇಕೆ"ಂದು ಶ್ರೀನಿವಾಸರಾಯರು ಅಂದರು. ಆಗ್ಯೆ ಸಭೆಗೆ ಮೆ॥ಹಿಲ್ಲ ಸಾಹೇಬರು ಬಂದಕೂಡಲೇ ಮೊದಲೇ ನಿರ್ಣಯವಾದ ಪ್ರಕಾರ ಒಂದು ಲಕ್ಷರೂಪಾಯಿ ರಾ.ಬ॥ರುದ್ರಗೌಡರು ಕೊಡಬೇಕು. ೧ ಲಕ್ಷ ರೂಪಾಯಿ ರಾ.ಬ॥ರೊದ್ದರಾಯರು ಕೊಡಬೇಕು. ಈರ್ವರೂ ತಮ್ಮ ತಮ್ಮ ಮತದವರಿಂದಲೇ ಮಾತ್ರ ಹಣ ಕೂಡಿಸಿ ಕೊಡಬೇಕೆಂದು ಕೂಡಿದ ಸಭೆಯಲ್ಲಿ ಹೇಳಿದ್ದಲ್ಲದೆ, ರಾ.ಬ॥ರುದ್ರಗೌಡರ ವಿಷಯದಲ್ಲಿ ವಳ್ಳೇ ಚೆನ್ನಾಗಿ ಭಾಷಣ ಮಾಡಿದರು. ಆಗ್ಯೆ ಧಾರವಾಡದ ಲಿಂಗಾಯತರೆಲ್ಲರೂ ಸಂತುಷ್ಟರಾಗಿ ಸಭೆಯ ಕೆಲಸವು ತೀರುವದಾಯಿತು ಇದೆನ್ನೆಲ್ಲಾ ತೀರಿಸಿಕೊಂಡು ರಾ.ಬ॥ ರುದ್ರಗೌಡರು ಮರುಳಿ ಬೆಳಗಾಂವಿಗೆ ಹೊರಟು ಬಂದರು.

ಬೆಳಗಾಂವಿಗೆ ಬಂದ ಮೇಲೆ ರಾ.ಬ॥ರುದ್ರಗೌಡರು ಪೇನಶನ್ ಅತಿ ಸ್ವಲ್ಪ ದಿವಸಗಳಲ್ಲಿ ತೆಗೆದುಕೊಂಡರು. ೧೬-೬-೧೯೧೩. ಅಲ್ಲಿಂದ ಬೆಳಗಾಂವಿಯಲ್ಲಿಯೂ ಮತ್ತು ಒಂದೆರಡು ಕಡಿಗೆ ಪಾನಸುಪಾರಿಗಳಾಗಿದ್ದವು. ನಂತರ ಗೋಕಾಕದ ಪಾನಸುಪಾರಿಗೆ ಹೋದ ಕಾಲಕ್ಕೆ ಮೆ॥ಶೆಫರ್ಡಸಾಹೇಬ ದ.ಭಾ. ಕಮೀಶನರ ಹೆಸರ್ಲೆ" ೧ ಲಕ್ಷ ರೂಪಾಯಿ ಕಾಲೇಜದ ದಶಿಂದ ಕೊಡಲಿಕ್ಕೆ ಗ್ಯಾರಂಟೀ ಅದೆ "ಅಂತಾ ತಾರು ಮಾಡಿದರು. ಅಗ್ಯೆ ನಾಮದಾರ ಶೆಫರ್ಡಸಾಹೇಬರು ಕೌನ್ಸಿಲ್ ಮೆಂಬರುದಲ್ಲಿ ರಾ.ಬ॥ರುದ್ರಗೌಡರ ವಿಷಯದಲ್ಲಿ ಬಹಳೇ ಉತ್ತಮ ಭಾಷಣ ಮಾಡಿದರು. ಈ ಪ್ರಕಾರ ರಾ.ಬ॥ರುದ್ರಗೌಡರು ಒಳ್ಳೇ ಚತುರತನದಿಂದ ಜನರಿಗೆ ತ್ರಾಸ ಆಗದಂತೆ ದೊಡ್ಡ ದೊಡ್ಡ ಲಿಂಗಾಯತ ಶ್ರೀಮಂತರಿಂದ ಹಣವನ್ನು ಕೂಡಿಸಿದರು. ತಾ. ೨೧-೧೧-೧೯೧೩ ಇಸ್ವಿ ದಿವಸ ಮೊದಲನೆಯ ಪಾವತಿ, ತಾ. ೧೩-೯-೧೯೧೬ ಇಸ್ವಿ ದಿವಸ ಕಡೀ ಪಾವತಿಕೊಟ್ಟು ಹಣ ವಸೂಲ ಮಾಡಿ, ಗವ್ಹರ್ನಮೆಂಟ ಪ್ರಾಮೀಸರಿ ನೋಟ್ಸ ರೂಪದಲ್ಲಿ ಹಣ ಇಟ್ಟರು. ಅದರಿಂದ ಉತ್ಪನ್ನವಾದ ಬಡ್ಡಿಯಲ್ಲಿ ಗಿಲ್ಗಂಚಿ ಅರಟಾಳ ಹೈಸ್ಕೂಲವನ್ನು ಬೆಳಗಾಂವಿಯಲ್ಲಿ ಸ್ಥಾಪನೇ ಮಾಡಿದರು. ಆ ಮೇಲೆ "ನನ್ನ ಹಣ ತಯಾರ ಅದೆ. ಬ್ರಾಹ್ಮಣರ ಹಣ ತಯಾರಯಿಲ್ಲಾ. ವಸೂಲ ಬಹಳ ಆಗಿಲ್ಲಾ. ಈಗ ವಸೂಲ ಆದದ್ದ ಸಹ ಬ್ರಾಹ್ಮಣೇತರರ ಕಡಿಯಿಂದಲೂ ಲಿಂಗಾಯತರಿಂದಲೂ ವಸೂಲಮಾಡಿರುತ್ತಾರೆ. ಅದರ ಸಂಬಂಧೀ ಏನೂ ವ್ಯವಸ್ಥೆ ಇಲ್ಲಾ" ವಗ್ಯೆರೆ ಮುಂತಾದ ಮಜ್ಕೂರಿನ ಇಂಗ್ರೆಜೀ ರಿಪೋರ್ಟ ರಾ.ಬ॥ರುದ್ರಗೌಡರು ಮೆ॥ಸೆಕ್ರೆಟರಿ ಎಜ್ಯುಕೇಶನಲ್ ಡಿಪಾರ್ಟಮೆಂಟ ಇವರ ಕಡಿಗೆ ತಾರೀಖ ೧೮ನೇ ಫೆಬ್ರುವರಿ ಸನ್ ೧೯೧೬ ಇಸ್ವಿ ದಿವಸ ಛಾಪಿಸಿ ಕಳುಹಿಸಿದರು. ಈ ಇಂಗ್ರಜೀ ರಿಪೋರ್ಟ ಸಾದ್ಯಂತ ಕರ್ನಾಟಕ ವೃತ್ತದಲ್ಲಿ ಛಾಪಿಸಿದೆ. ಯಾವತರಿಗೂ ತಿಳಿಯೋ ವುದ್ದೇಶದಿಂದ ಕನ್ನಡದಲ್ಲಿ ಸಹ ಭಾಷಾಂತರಿಸಿ ಮುದವೇಡಕರ ಕೃಷ್ಣರಾಯ ಛಾಪಿಸಿರುತ್ತಾನೆ ೨೨-೨-೧೯೧೬ ಇಷ್ಟೇಲ್ಲಾ ರಾ.ಬ॥ರುದ್ರಗೌಡರು ಶ್ರಮಪಟ್ಟು ತಾ. ೨೦ನೇ ಮಾರ್ಚ ೧೯೧೭ ಇಸ್ವಿ ದಿವಸ ಎಲ್ಲಾ ಹಣಾ ಕಳುಹಿಸಿ ಸರಕಾರದಿಂದ ಕೃತ್‌ಕೃತ್ಯರಾದರು. ಬ್ರಾಹ್ಮಣರು ಈ ಹಣ ಕೂಡಿಸಿ ಹಿಂದಿನಿಂದ ಬಹಳೇ →

ನಿಷ್ಠೆಯಿಂದ ಮಾಡತಕ್ಕವನೇ ಸರಿ. ತಾವು ಅನ್ಯಥಾ ಭಾವಿಸಕೂಡದು' ಎಂದು ಹೇಳಿದ ಉತ್ತರಕ್ಕೆ ಸಂತೋಷಗೊಂಡು ಸಾಹೇಬರವರು ಹೊರಟು ಹೋದರು.

'ತಾವು ಧಾರವಾಡಕ್ಕೆ ಬರಲು ಏನಾದರೂ ಆತಂಕವಿರುವದೆ?' ಎಂಬದಾಗಿ ನಾಮದಾರ ಹಿಲ್ ಸಾಹೇಬ ಬ॥ರವರು ಮಾಡಿದ ಪ್ರಶ್ನೆಯು ಬಹುಗೂಢವಾಗಿರುತ್ತದೆಂಬದು ವಾಚಕರ ಲಕ್ಷದಲ್ಲಿ ತೀವ್ರವೇ ಬರಬಹುದು. ಯಾಕಂದರೆ ನಾಮದಾರ ಹಿಲ್ ದೊರೆಗಳ ಕೋಮಲವಾದ ಮನಸ್ಸನ್ನು ಯಾರೂ ಕಲುಷಿತ ಮಾಡಿರದಿದ್ದರೆ ಅವರು ರಾ.ಬ॥ಅರಟಾಳ ಸಾಹೇಬರಿಗೆ ಈ ಮೇಲಿನ ಪ್ರಶ್ನೆಯನ್ನೇ ಮಾಡುತ್ತಿದ್ದಿಲ್ಲ. ಮಾಡುವ ಕಾರಣವೂ ಇದ್ದಿಲ್ಲ. ಅಂದ ಮೇಲೆ ನಾಮದಾರ ರೊದ್ದ ಮೊದಲಾದವರು ಈ ದೊರೆಗಳಿಗೆ ರಾವಬಹಾದ್ದೂರ ಅರಟಾಳ

→ ಪ್ರಾಯಾಸಮಾಡಿಕೊಂಡು ಕೊಟ್ಟರು. ಅದರ ಸಂಬಂಧೀ ರಾ.ಬ॥ಜೋಶಿಯವರು ಲೆಕ್ಕಾ ಛಾಪಿಸಿರಿ ಅಂತಾ ನೋಟ್ಸ ಕೊಟ್ಟರೂ ರಾ॥ರೊದ್ದರಾಯರು ಕಡೆತನಕಾ ಲೆಕ್ಕಾ ಛಾಪಿಸಲೇಯಿಲ್ಲಾ. ರಾ.ಬ॥ವಿನಾಯಕ ಬಾಬಾಜಿ ಜೋಶಿ ಬಿ.ಎ. ಇವರು, "ಬ್ರಾಹ್ಮಣರ ಕಡಿಯಿಂದ ವಸೂಲ ಆದ ಹಣದ ದೆಶೆಯಿಂದ ಲೆಖ್ಖವನ್ನು ಛಾಪಿಸದಿದ್ರೆ ನಿಮ್ಮ ಮೇಲೆ ದಾವೇ ಮಾಡುತ್ತೇನೆ"ಂದು ನೋಟ್ಸ ರಾ.ಬ॥ರೊದ್ದರಾಯರಿಗೆ ಕೊಟ್ಟರು. ಬಹಳೇ ಸಾರೆ ೪-೫ ತಿಂಗಳ ತನಕಾ ಗೊಂದಲ ಹಾಕಿದರೂ ಲೆಕ್ಕ ಛಾಪಿಸಲೇಯಿಲ್ಲಾ. ಅದರ ಮೇಲಿಂದ ಲೆಕ್ಕದಲ್ಲಿ ಅಪರಾಥಪರಾ ಆಗಿರುತ್ತದೆಂದು ಊಹಿಸಲಿಕ್ಕೆ ಮಾರ್ಗವದೆ. ಈ ನೋಟ್ಸಿಗಳ ಮಜಕೂರು ವರ್ತಮಾನಪತ್ರಗಳಲ್ಲಿ ನೋಡಬಹುದು. ಈ ರಾ.ಬ॥ರೊದ್ದರಾಯರು ತಮಗೆ ೧ ಲಕ್ಷ ರೂಪಾಯಿ ವಸೂಲ ಮಾಡಲಿಕ್ಕೆ ಆಗದ್ದರಿಂದ ರಾ.ಬ॥ಕೆಂಭಾವಿ ಬಿಜ್ಯಾಪೂರ ವಕೀಲ ಇವರ ಸಹಾಯ ತಗೊಂಡು, ವಿಜ್ಯಾಪೂರ ಜಿಲ್ಲೆಯಲ್ಲಿಯ ಬ್ರಾಹ್ಮಣೇತರರ ಕಡಿಂದ ವರ್ಗಣೀ ವಸೂಲಮಾಡಿದರು. ಮತ್ತು ಲಿಂಗಾಯತ್ತಾ ವ ಬ್ರಾಹ್ಮಣೇತರ ಮಾಸ್ತರ ಜನರ ಮಾರ್ಫತ ಹಣ ವಸೂಲಮಾಡಿದರು. ಊರಲ್ಲಿಯ ಹಕೀಕತ್ "ಶಾಲಾಪತ್ರ"ದಲ್ಲಿ ಅದೆ. ಮೆ॥ಹಿಲ್ಲ ಸಾಹೇಬರವರು ಧಾರವಾಡದ ಲಿಂಗಾಯತ ಹಾಲಿನಲ್ಲಿ ಲಿಂಗಾಯತರ ವಿರುದ್ಧ ಮಾತಾಡಿದ ಭಾಷಣದ ನಕಲು ತಮ್ಮ ಡೇಮಿ ಅಫಿಶಿಯಲ್ ಪತ್ರ ತಾ. ೧೭-೬-೧೯೧೩ ಇಸ್ವಿದ್ದರ ಸಂಗಡ ರಾ.ಬ॥ರುದ್ರಗೌಡರ ಕಡಿಗೆ ಕಳಿಸಿರುತ್ತಾರೆ. ಅದರ ನಕ್ಕುಗಳೆಲ್ಲಾ ಫೈಲಿನಲ್ಲಿ ಅವೆ. ಅವುಗಳನ್ನು ಅಂದ್ರೆ ಮೆ॥ಹಿಲ್ಲ ಸಾಹೇಬರವರು ಮಾಡಿದ ಭಾಷಣದ ಮಜ್ಕೂರು ಓದಿನೋಡಿದರೆ ರಾ.ಬ॥ರೊದ್ದರವರು ವ ಬ್ರಾಹ್ಮಣರು ಮೆ॥ಹಿಲ್ಲಸಾಹೇಬರ ಮುಂದೆ "ಲಿಂಗಾಯತರು ಕಾಲೇಜಕ್ಕೆ ವರ್ಗಣೀ ಕೊಟ್ಟರೆ ಬ್ರಾಹ್ಮಣರು ಕಲಿತಾರೆ"ಂಬ ಮಾತು ಸುಳ್ಳೇ ಹೇಳಿದ್ದು ಸಿದ್ಧವಾಗುವಂತಿದೆ. ರಾ.ಬ॥ರೊದ್ದರಾಯರ ಹೊರತಾಗಿ ಯಾರೂ ಹೇಳಿದ್ದು" ತರ್ಕದಿಂದ ಹೊರಡುವದಿಲ್ಲಾ. ಯಾಕಂದ್ರೆ ಮೆ॥ಮೆಕಾನಕೀ ಸಾಹೇಬರ ಕಡಿಗೆ ಇವರು ಹೋಗಿದ್ದರು.

"ಕರ್ನಾಟಕ ವೃತ್ತ" ಮತ್ತು "ಧನಂಜಯ ಪತ್ರ"ದಲ್ಲಿ ತಾರೀಖ ೨೨ನೇ ಫೆಬ್ರುವರಿ ೧೯೧೬ ಇಸ್ವಿ ದಿವಸ ಛಾಪಿಸಿದ ಮಜ್ಕೂರು ಕೆಳಗೆ ಬರೆದಂತೆ.

ರಾವಬಹಾದ್ದೂರ ಅರಟಾಳರವರ ಪತ್ರವು

ಬೆಳಗಾವಿ ಜಿಲ್ಲೆಯ ಡಿಸ್ಟ್ರಿಕ್ಟ ಡೆಪೂಟಿ ಕಲೆಕ್ಟರರಾಗಿದ್ದು ಪೆನಶನ್ ಪಡೆದ ರಾ.ಬ॥ರುದ್ರಗೌಡ ಚನವೀರಗೌಡಾ ಅರಟಾಳ ಆಯ್.ಎಸ್.ಓ. ರವರು ಮುಂಬೈ ಸರಕಾರದ ವಿದ್ಯಾಖಾತೆಯ ಶೆಕ್ರೆಟರಿಗಳಿಗೆ ಬರಿದ ಮೂಲ ಇಂಗ್ಲೀಷ ಪತ್ರವನ್ನು ಕಳೆದ ಸಂಚಿಕೆಯಲ್ಲಿ ಸಾಗ್ರವಾಗಿ ಮುದ್ರಿಸಿರುತ್ತೇವಷ್ಟೆ. ಆದರೆ ಆ ಸಂಬಂಧವಾಗಿ ನಾವು ಬರೆದ ಸ್ಫುಟಲೇಖಗಳ ಮೇಲಿಂದ ಇಂಗ್ಲೀಷವನ್ನರಿಯದ ಕನ್ನಡ ವಾಚಕರಿಗೆ ಆ ಪತ್ರದ ಪೂರ್ಣ ಸ್ವರೂಪವು ತಿಳಿಯುವದು ಅಶಕ್ಯವೆಂಬದನ್ನು ಕಳೆದ ಸಂಚಿಕೆಯಲ್ಲಿಯೇ ತಿಳಿಸಿರುತ್ತೇವೆ. ಅದಕ್ಕನುಸಾರವಾಗಿಯೇ ನಮ್ಮ ಬಹು ಮಂದಿ ವಾಚಕರಿಂದ ಪತ್ರವು, ಕನ್ನಡದಲ್ಲಿ ಪ್ರಸಿದ್ಧವಾಗಬೇಕೆಂದು ಆಗ್ರಹದ ಸೂಚನೆಗಳು ಬಂದ ಮೇರೆಗೆ ಆ ಪತ್ರದ ಸಾಗ್ರ ಭಾಷಾಂತರವನ್ನು ಇಲ್ಲಿ ಕೊಡುತ್ತೇವೆ.

"ನಾನು ಸನ್ ೧೯೧೫ನೇ ಇಸವಿಯ ಜೂನ ೨೨ನೇ ತಾರೀಖಿನ ದಿವಸ ಬರೆದ ಪತ್ರದಲ್ಲಿ ಕರ್ನಾಟಕ ಕಾಲೇಜದ ಫಂಡಿನ ಲಿಂಗಾಯತ ಸಮಾಜದ ವಸೂಲಿಯು ರೋಖ ರಕಮು ಈಗ ೯೨೦೦೦ ರೂಪಾಯಿ ಆಗಿರುವದೆಂದು ತಿಳಿಸಲು ನನಗೆ ಅಭಿಮಾನವೆನಿಸುತ್ತದೆ. ಈ ರಕಮಿನಲ್ಲಿ ನಾನು ಕೂಡಿಸಿದ ೯೧೧೫೦ ರೂಪಾಯಿಗಳು ಮತ್ತು ರಾವಬಹಾದ್ದೂರ ಶ್ರೀನಿವಾಸರಾವ ರೊದ್ದ ಇವರು ಲಿಂಗಾಯತ ಜನರಿಂದ ನಾಮದಾರ ಸಿ.ಎಚ್.ಎ. ಹಿಲ್ಲ ಸಾಹೇಬರವರಿಗೂ ನನಗೂ →

ಸಾಹೇಬರ ವಿಷಯವಾಗಿ ಚಾಡೀ ಹೇಳಿ ಅವರ ನಿರ್ಮಲವಾದ ಮನಸ್ಸನ್ನು ಕಲುಷಿತ ಮಾಡಿರಲಿಕ್ಕೇಬೇಕೆಂಬದು ಸಹಜವಾಗಿ ತಿಳಿಯುವಂತಿದೆ. ಯುರೋಪಿಯನ್ ಅಧಿಕಾರಿಗಳಿಗೆ ರಾ.ಬ॥ರವರ ವಿಷಯವಾಗಿ ಚಾಡೀ ಹೇಳುವ ಈ ಬ್ರಾಹ್ಮಣರ ಕ್ರಮವು ಹೊಸದಲ್ಲ. ರಾ.ಬ॥ರವರ ನೌಕರಿ ಆರಂಭದಿಂದಲೂ ಅದು ಒಂದೇ ಸವನೆ ನಡೆದುಕೊಂಡು ಬಂದಿರುತ್ತದೆಂಬದು ಇವರ ಚರಿತ್ರವಾಚನದಿಂದ ವಾಚಕರಿಗೆ ಮನವರಿಕೆಯಾಗಿರಬಹುದು, ಇರಲಿ.

ನಾಮದಾರ ಹಿಲ್ ದೊರೆಗಳ ಕಡೆಯಿಂದ ಇವರ ಭೆಟ್ಟಿಯ ಅಪೇಕ್ಷೆಯನ್ನು ಕುರಿತು ಆಕಸ್ಮಿಕವಾಗಿ ತಾರು ಬಂದದ್ದು ತಿಳಿದಕೂಡಲೇ ರಾವಬಹಾದ್ದೂರವರು, ಕಾಲೇಜಕ್ಕಾಗಿಯೇ ಇವರು ನನ್ನ ಭೆಟ್ಟಿಯನ್ನು ಅಪೇಕ್ಷಿಸುವರೆಂದೂ ಇದು ರೊದ್ದ ಮೊದಲಾದ ಬ್ರಾಹ್ಮಣ ಕೃಷ್ಣಕಾರಸ್ಥಾನವೆಂದೂ ರಾ.ಬ॥ರವರು ಆಗಲೇ

→ ಧಾರವಾಡದಲ್ಲಿ ತಾ. ೯ ನೇ ಜೂನ ೧೯೧೩ನೇ ಇಸ್ವಿಯ ದಿವಸ ಆದ ಭೆಟ್ಟಿಯ ಮೊದಲು ಕೂಡಿಸಿದ ೮೫೦ ರೂಪಾಯಿಗಳು ಕೂಡಿರುತ್ತವೆ. ವಂಟಮುರಿ ಸರದೇಸಾಯರಾದ ಮೆ॥ಲಖಮಗೌಡಾ ಬಸವಪ್ರಭು ಇವರು ನನ್ನ ವಿನಂತಿಯನ್ನು ಮನ್ನಿಸಿ, ಕರ್ನಾಟಕ ಕಾಲೇಜ ಫಂಡಿಗಾಗಿ ೧೦೦೦೦ ರೂಪಾಯಿಗಳನ್ನು ಕೊಡುವ ವಾಗ್ದಾನಮಾಡಿ ಪತ್ರ ಬರೆದಿದ್ದಾರೆ. ಈ ಹಣವು ಬೇಡಿದಾಗ ದೊರೆಯುವಂತಿರುವದು. ಆದ್ದರಿಂದ ನಾಮದಾರ ಹಿಲ್ ಸಾಹೇಬರಿಗೆ ನಾನು ಧಾರವಾಡದಲ್ಲಿ ಭೆಟಿಯಾದಾಗ್ಯೆ ಗೊತ್ತಾದ ಕರಾರಗಳ ಪ್ರಕಾರ ಸರಕಾರದವರಿಗೆ ಬೇಕಾದಾಗ ಒಂದು ಲಕ್ಷ ರೂಪಾಯಿಗಳನ್ನು ಒಪ್ಪಿಸುವ ಸ್ಥಿತಿಯಲ್ಲಿ ನಾನು ಇರುತ್ತೇನೆ.

೨. ಕರ್ನಾಟಕದಲ್ಲಿ ಒಂದು ಆರ್ಟ್ಸ ಕಾಲೇಜನ್ನು ಸ್ಥಾಪಿಸುವ ವಿಷಯವಾಗಿ ನಡೆದ ಪ್ರಸಕ್ತಿಯ ಇತಿಹಾಸವನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವದು ಅಪ್ರಾಸಂಗಿಕವಾಗಲಾರದೆಂದು ನಾನು ತಿಳಿಯುತ್ತೇನೆ. ಕರ್ನಾಟಕದಲ್ಲಿ ಒಂದು ಕಾಲೇಜವನ್ನು ಸ್ಥಾಪಿಸುವ ವಿಚಾರವು ೧೮೭೭ನೇ ಇಸವಿಯಲ್ಲಿಯೇ ಹೊರಟಿತು. ಆಗ ಗವ್ಹರ್ನರರಾಗಿದ್ದ ಸರ್ರ ರಿಚಾರ್ಡ ಟೆಂಪಲ ದೊರೆಗಳು ಆಗಿನ ಭಯಂಕರ ಬರಗಾಲದಲ್ಲಿ ಧಾರವಾಡಕ್ಕೆ ಬಂದಾಗ್ಯೆ ಈ ವಿಚ್ಯಾರವು ಅವರಿಗೆ ತಿಳಿಸಲ್ಪಟ್ಟಿತು. ಆ ಕಾಲಕ್ಕೆ ಧಾರವಾಡದ ಕಲೇಕ್ಟರರಾಗಿದ್ದ ಮಿ॥ಚೇ.ಬಿ.ರಿಚೀ (ಹಿಂದಿನಿಂದ) ಇವರು ಸರ್ ಆದರು. ಇವರ ಕೈ ಕೆಳಗೆ ನಾನು ದುಷ್ಕಾಳದ ಕೆಲಸದ ಮೇಲಿದ್ದೆನು. ಈ ಪ್ರಸಕ್ತಿಯ ಉಲ್ಲೇಖವನ್ನು ಮಿ. ರ್‍ಯಾ. ಸಾಹೇಬರು ಮುಂಬಯಿ ಯುನಿವ್ಹರ್ಸಿಟಿಗೆ ಬರೆದ ತಮ್ಮ ಪತ್ರದಲ್ಲಿ ಮಾಡಿರುತ್ತಾರೆ. ಅದು ಸರಕಾರ ಠರಾವ ನಂಬರ ೨೫೭೨ ತಾ. ೧ನೇ ಸೆಪ್ಟಂಬರ ೧೯೧೫ನೇ ಇಸ್ವಿಯದರ ಕೂಡ ಪ್ರಸಿದ್ಧವಾಗಿದೆ. ಈಗ ಆ ಪ್ರಸಕ್ತಿಯ ವಿಷಯವಾಗಿ ನಡೆದ ಚರ್ಚೆಯು ನನಗೆ ಸ್ಪಷ್ಟವಾಗಿ ನೆನಪಿನಲ್ಲಿರುವದು. ಆಗಿನಿಂದ ಸಾರ್ವಜನಿಕರೆದುರಿಗೆ ಮೇಲೆ ಮೇಲೆ ಬರುತ್ತಿರುವಾಗೆಲ್ಲ ಈ ವಿಷಯವಾಗಿ ಅಂತಃಕರುಣ ಪೂರ್ವಕವಾಗಿಯೂ ವಳ್ಳೇ ಪದ್ಧತಿಯನ್ನನುಸರಿಸಿಯೂ ಎಂದೂ ಪ್ರಯತ್ನವಾಗದೇ ಇದ್ದುದರಿಂದ, ಮೊನ್ನೆ ಮೊನ್ನಿನ ವರಿಗೆ ಸರಕಾರದವರ ಸಹಾನುಭೂತಿಯನ್ನು ದೊರಕಿಸುವದು ಅಸಾಧ್ಯವಾಯಿತು. ಈಗಿನ ಕಾಲಕ್ಕೆ ನಡೆದಿರುವ ಈ ಚಳವಳಿಯ ಸ್ವರೂಪದಲ್ಲಿಯೂ ಇಂಥ ದೊಡ್ಡ ಉದ್ಯೋಗಗಳನ್ನು ಮೂರ್ತಸ್ವರೂಪಕ್ಕೆ ತರುವದಕ್ಕೆ ಅವಶ್ಯಕವಾದ ದೃಢತೆಯೂ ಏಕಾಗ್ರತೆಯೂ ಎಳ್ಳುಕಾಳಷ್ಟು ಇರುವದಿಲ್ಲ. ಅನೇಕ ವರ್ಷಗಳ ವರಿಗೆ ನೆನೆಗುದಿಗೆ ಬಿದ್ದಿದ್ದ ಪ್ರಶ್ನೆಯು ೧೯೦೯ರಲ್ಲಿ ಕರ್ನಾಟಕ ಕಾಲೇಜದ ಈಗಿನ ಪುರಸ್ಕರ್ತರೆಂಬವರು ಕಾಯಿದೇ ಕೌನ್ಸಿಲ್ಲದ ಮೆಂಬರರಾಗುವದಕ್ಕಾಗಿ ಮಾಡಿದ ಪ್ರಯತ್ನದೊಂದಿಗೆ ಪುನಃ ಜನರ ಮುಂದೆ ಬಂದಿತೆಂಬುದೊಂದೇ ಸಂಗತಿಯನ್ನು ಧ್ಯಾನಕ್ಕೆ ತಂದರೇ ಈ ಮಾತು ಸ್ಪಷ್ಟವಾಗಿ ಕಾಣುವಂತಿರುವದು.

೩. ೧೯೦೯ರಲ್ಲಿಯೂ ೧೧ರಲ್ಲಿಯೂ ನಾ.ರಾ.ಬ॥ ರೊದ್ದರವರೂ ಹಾಗೂ ನಾಮದಾರ ಮಿ॥ಬೆಳವಿಯವರೂ ಕೌನ್ಸಿಲ ಮೆಂಬರರಾಗುವದಕ್ಕೆ ಉಮೇದವಾರರಿದ್ದಾಗ ಆರ್ಟ್ಸ ಕಾಲೇಜವನ್ನು ಸ್ಥಾಪಿಸಬೇಕೆಂಬ ವಿಚಾರವು ಇವರ ವಿಷಯವಾಗಿ ದಕ್ಷಿಣಭಾಗದೊಳಗಿನ ಮತದಾರರಲ್ಲಿ ಅನುಕೂಲ ಅಭಿಪ್ರಾಯವನ್ನು ಹುಟ್ಟಿಸುವದಕ್ಕೆ ಉತ್ಕೃಷ್ಟವಾದ ಸಾಧನವಾಯಿತು. ಈ ನಾಮದಾರದ್ವಯರು ಇಲೆಕ್ಷನ್‌ನದಲ್ಲಿ ಆರಿಸಿಬಂದಕೂಡಲೇ ಕರ್ನಾಟಕದಲ್ಲಿ ಆರ್ಟ್ಸಕಾಲೇಜದ ಸ್ಥಾಪನೆಯಾದಂತೆಯೇ ಸರಿಯೆಂದು ಜನರಲ್ಲಿ ತಿಳುವಳಿಕೆಯು ಹಬ್ಬಿಸಲ್ಪಟ್ಟಿತು. ಆದರೆ ಇವರು ಮೆಂಬರಾದ ಕೂಡಲೆ ಈ ಪ್ರಶ್ನೆದ ಕಾವು ಬಹಳ ಮಟ್ಟಿಗೆ ಕಡಿಮೆಯಾಯಿತು. ಆದರೂ ತಾ. ೨೦ನೇ ಅಕ್ಟೋಬರ ೧೯೦೯ನೆ ದಿವಸ ಕೆಲವು ಜನರು ಸಭೆಯಂತೆ ಕೂಡಿ ಈ →

ತರ್ಕಮಾಡಿ ಬಿಟ್ಟರು. ಸ್ಟೇಶನ ಮೇಲೆ ಈ ಸಂಬಂಧವಾಗಿ ಸಾ||ಹಿಲ್ಲ ದೊರೆಗಳ ಮುಖದಿಂದ ಒಂದು ಚಕಾರ ಶಬ್ದವಾದರೂ ಹೊರಡಲಿಲ್ಲ. ಆದರೆ 'ಬರಲಿಕ್ಕೆ ಏನಾದರೂ ಅಡ್ಡಿಯುಂಟೆ?' ಈ ಪ್ರಶ್ನೆಯಲ್ಲಿಯೇ ಅದರ ಇಂಗಿತವೆಲ್ಲ ಗುಪ್ತವಾಗಿರಬೇಕೆಂದು ಸ್ಪಷ್ಟವಾಗಿ ತೋರುತ್ತದೆ. ಈ ಮೊದಲು ಮೇ ತಿಂಗಳ ಅಖೈರದಲ್ಲಿ ಬೆಳಗಾಂವಿಯ ಬ್ರಾಹ್ಮಣರು ರಾ.ಬ||ರ ಅರಟಾಳ ಸಾಹೇಬರನ್ನು ಮೂಗಿಗೆ ಮುಗದಾಣ ಹಾಕಿ ಕರಕೊಂಡು ಹೋಗಿ, ಕರ್ನಾಟಕ ಕಾಲೇಜಕ್ಕೆ ಲಿಂಗಾಯತರ ಪಕ್ಷದಿಂದ ವರ್ಗಣೀ ಕೊಡಿಸಲಿಕ್ಕೆ ಹಚ್ಚುವರೆಂಬದಾಗಿ ಸುದ್ದಿಯನ್ನು ಹಬ್ಬಿಸಿದ್ದರು. ಈ ಸುದ್ದಿಯನ್ನು ಕೇಳಿ ರಾವಬಹಾದ್ದೂರರವರು ಈ ಸುದ್ದಿಯ ಅರ್ಥವೇನೆಂದು ವಿಚಾರಿಸತೊಡಗಿದ್ದರು. ನಾಮದಾರ ಹಿಲ್ ದೊರೆಗಳ ಆಕಸ್ಮಿಕವಾದ ಆಗಮನದಿಂದ ಇದರ ಅರ್ಥವು ಬೇಗ ಅನುಭವಕ್ಕೆ ಬಂದಂತಾಯಿತು. ಅಂದಮೇಲೆ ಈ ಚಾಡೀ ಹೇಳುವ ವ್ಯೂಹವನ್ನು ಮುಂದಾಗಿಯೇ ಕಲ್ಪಿಸಿ, ನಾಮದಾರ ಹಿಲ್ ದೊರೆಗಳನ್ನು ಇಲ್ಲಿಗೆ ಬರಮಾಡಿಸಿ ಅವರ ಮುಖಾಂತರ ರಾವಬಹಾದ್ದೂರ ಅರಟಾಳ

→ ಪ್ರಸ್ತಾಪದ ವಿಚ್ಯಾರ ಮಾಡಿದರು. ಆ ಸಭೆಗೆ ಮೆ||ಗಿಬ್ಬ ಸಾಹೇಬರು ಅಧ್ಯಕ್ಷರಾಗಿದ್ದರಲ್ಲದೇ ನಾ.ಮಿ||ಶಾರ್ಪ ರಾ.ಬ||ರೊದ್ದ, ಮಿ|| ಕಾಮಾಲಾಪೂರ, ಮಿ|| ನಾಡಗೀರ, ಮಿ|| ರೇಬೀಲ ಮತ್ತು ನಾನು ಇಷ್ಟು ಜನರು ಸಭೆಯಲ್ಲಿ ಹಾಜರ ಇದ್ದೆವು. ಈ ಸಭೆಯಲ್ಲಿ ಕರ್ನಾಟಕದ ಜನರು ಕನಿಷ್ಟ ಪಕ್ಷಕ್ಕೆ ೨೬೪೦೦೦ ರೂಪಾಯಿಗಳನ್ನು ಭಾವೀ ಕಾಲೇಜಕ್ಕೆ ವರ್ಗಣೀ ಕೂಡಿಸಬೇಕೆಂದೂ ಗೊತ್ತಾಯಿತು. ಈಗ ಕಾಯಿದೇ ಕೌನ್ಸಿಲ್ ಮೆಂಬರರಾಗುವದಕ್ಕೆ ಉಮೇದವಾರನಾಗಿ ನಿಂತಿದ್ದ ರಾ.ಬ||ರೊದ್ದ ಇವರು ತಾವೊಬ್ಬರೇ ಎರಡು ಲಕ್ಷ ಅರವತ್ತು ನಾಲ್ಕು ಸಾವಿರ ರೂಪಾಯಿಗಳನ್ನು ಕೂಡಿಸುವವೆಂದು ಸಾರಿದರು. ಈ ಸಂಗತಿಯೂ ರಾ.ಬ||ರವರಿಗೆ ಇಷ್ಟು ಮೋಜಕವೂ ಆಶಾಜನಕವೂ ತೋರಿದ್ದು ಕಂಡು ನನಗೆ ಅಲ್ಪಸ್ವಲ್ಪ ಚೋದ್ಯವೆನಿಸಲಿಲ್ಲ. ಮುಂದೇ ವರ್ಗಣೀ ಹಣಕ್ಕಾಗಿ ಸಾರ್ವಜನಿಕ ವಿನಂತಿ ಪತ್ರಗಳು ಕರ್ನಾಟಕದ ಜನರಿಗೆ ಕಳುಹಿಸಲ್ಪಟ್ಟವು. ಇವುಗಳ ಕೆಳಗೆ ಪ್ರಮುಖ ಜನರ ಹೆಸರುಗಳಿದ್ದವಾದರೂ ಅವರೊಳಗಿನ ಕೆಲವರನ್ನು ಮೊದಲು ಎಂದೂ ಕೇಳದೇ ಇದ್ದ ಮೂಲಕ ಮುಂದೆ ಯೋಗ್ಯ ರೀತಿಯಿಂದ ಅವರ ಕ್ಷಮಾ ಬೇಡುವ ಪ್ರಸಂಗ ಬಂತು. ಈ ವಿನಂತಿ ಪತ್ರಗಳಿಗೆ ಸಾರ್ವಜನಿಕದವರಿಂದ ದೊರೆತ ಸನ್ಮಾನವು ತೀರ ಅಲ್ಪವಾಗಿದ್ದ ಮೂಲಕ ರಾ.ಬ||ರೊದ್ದರವರು ನನ್ನ ಕಡಿಗೆ ಬಂದರು. ಮತ್ತು ಶಿರಸಂಗಿಯ ದೇಸಾಯರ ಟ್ರಸ್ಟಿನೊಳಗಿಂದ ಒಂದು ಲಕ್ಷ ರೂಪಾಯಿಗಳು ದೊರೆಯುವಂತೆ ವ್ಯವಸ್ಥೆ ಮಾಡಿರೆಂದು ಬೇಡಿಕೊಂಡರು. ಆದರೆ ಸರದೇಸಾಯರ ದಾನವು ಲಿಂಗಾಯತರ ವಿದ್ಯಾಭ್ಯಾಸಕ್ಕೆ ಮಾತ್ರವೇ ಆಗಿದ್ದರಿಂದ ಅವರ ಬೇಡಿಕೆಯನ್ನು ಕೊಡುವ ದಾರಿಯು ನನಗೆ ತೋರದಾಯಿತು.

೪. ಕಾಲೇಜಫಂಡಿಗೆ ವಚನ ಕೊಟ್ಟವರ ಸಂಖ್ಯೆಯು ಅಷ್ಟಕ್ಕಷ್ಟೇ ಇದ್ದದ್ದಲ್ಲದೇ, ರೋಖ ಹಣ ಕೊಟ್ಟವರಂತೂ ತೀರ ತುಸುವಾದದರಿಂದ ನಾ.ರಾ.ಬ|| ರೊದ್ದರವರಂಥ ಆಶಾಪೂರ್ಣ ಹುರುಪಿನ ಗಡಿಗೂ ಆಗಿನ ಪರಿಸ್ಥಿತಿಯು ಅತ್ಯಂತ ನಿರಾಶಾಜನಕವಾಗಿ ತೋರಿತು. ಎರಡು ಲಕ್ಷ ಅರವತ್ತು ನಾಲ್ಕುಸಾವಿರ ರೂಪಾಯಿಗಳಂಥ ದೊಡ್ಡ ರಕಮನ್ನು ಕೂಡಿಸುವಂಥ ಬಿಕ್ಕಟ್ಟಾದ ಕೆಲಸದಲ್ಲಿ ರಾ.ಬ||ರೊದ್ದವರಿಗೆ ಉಂಟಾದ ತೊಂದ್ರೆಗಳಲ್ಲಿ ಕೆಲವುಗಳ ನಿರ್ದೇಶವನ್ನು ಮಾಡುವ ನನ್ನ ಪ್ರಯತ್ನವನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ. ಸಾರ್ವಜನಿಕದವರೊಡನೇ ಕಲೆತು ಅವರೊಂದಿಗೆ ಕೂಡಿ ಹೋಗುವ ಪ್ರಸಂಗವೂ ಅತ್ಯಲ್ಪವಾಗಿ ಬಂದಿರುವ ಮೂಲಕ ಸಾರ್ವಜನಿಕದವರ ನಂಬಿಗೆಯನ್ನು ಸಂಪಾದಿಸುವದಕ್ಕೆ ಅಥವಾ ಅವರಲ್ಲಿ ತುಸುಮಟ್ಟಿಗಾದರೂ ವರ್ಚಸ್ಸವನ್ನು ಸ್ಥಾಪಿಸುವದಕ್ಕೆ ಅವಕಾಶವೇ ದೊರೆಯದಂಥ ಆಯುಷ್ಕ್ರಮಣವನ್ನು ಮಾಡಿದವರು, ಅತ್ಯಲ್ಪವಾಗಿ ಭಾವಿಸಿ ಅಂಗೀಕಾರ ಮಾಡುವದಕ್ಕೆ ಈ ಕಾರ್ಯವು ಅತ್ಯಂತ ಮಹತ್ವದ್ದಾಗಿತ್ತು. ರಾ.ಬ||ರೊದ್ದರವರು ಸಾರ್ವಜನಿಕ ಆಯುಷ್ಕ್ರಮಣದ ಕಣದಲ್ಲಿ ಅದೇ ಮೊದಲು ಬಂದು ನಿಂತಲ್ಲದೆ ಕರ್ನಾಟಕದಲ್ಲಂತೂ ಸಾರ್ವಜನಿಕದವರ ವಿಶ್ವಾಸಕ್ಕೆ ಪಾತ್ರವಾಗುವಂಥ ಯಾವ ಕಾರ್ಯವನ್ನೂ ಮಾಡದ ಮತ್ತು ವಿಶೇಷತಃ ಇತರ ಜಾತಿಗಳ ಯೋಗ್ಯವಾದ ಸಂತಾಪ ಭಾವನೆಯನ್ನೂ ಅವಿಶ್ವಾಸವನ್ನೂ ಅಭಿವೃದ್ಧಿಪಡಿಸುವದಕ್ಕೆ ಕಾರಣವಾಗುವಂತೆ ಆಚರಣೆ ಮಾಡಿದ ಜಾತಿಯವರಾದದ್ದೂ ಅವರಿಗೆ ಒಂದು ಅನಾನುಕೂಲವಾಯಿತು. ಧಾರವಾಡದ ಪ್ರಮುಖ ಬೀದಿಗಳೊಳಗಿನ ಒಂದನ್ನು ಅಲಂಕರಿಸುತ್ತಿರುವ ಸಂಸ್ಕೃತ ಪಾಠಶಾಲೆಯ ಕಟ್ಟಡವು ಮುಖ್ಯವಾಗಿ ಲಿಂಗಾಯತರು ಮತ್ತು ಬೇರೆ ಬ್ರಾಹ್ಮಣೇತರರು ಕೊಟ್ಟ ಹಣದಿಂದ ಕಟ್ಟಲ್ಪಟ್ಟಿರುವದಾದರೂ, ವಿಚಿತ್ರತರವಾದ ದೈವಿಕ ದುರ್ನೀತಿಯಿಂದ ಅದರ ಕವಾಟುಗಳು ಅದೇ ಜಾತಿಯವರಿಗೆ ಮುಚ್ಚಲ್ಪಟ್ಟಿರುತ್ತವೆ. ಬ್ರಾಹ್ಮಣ ಸಮಾಜದವರು ಬ್ರಾಹ್ಮಣೇತರರ ಕಡಿಯಿಂದ, ಯಾತಕ್ಕೆ ಏನೆಂಬದರ ಸುತರಾಂ ಕಲ್ಪನೇ→

ಸಾಹೇಬರನ್ನು ಕರ್ನಾಟಕ ಕಾಲೇಜದ ವರ್ಗಣಿಗೆ ಪ್ರೋತ್ಸಾಹಗೊಳಿಸಬೇಕೆಂಬ ಒಳಸಂಚನ್ನು ಮೊದಲೇ ಮಾಡಿದ್ದರೆಂದು ಸ್ಪಷ್ಟವಾಗುತ್ತದೆ. ಅಂತೆಯೇ ಈ ಭವಿಷ್ಯವನ್ನು ಬೆಳಗಾಂವಿಯ ಬ್ರಾಹ್ಮಣರು ಮುಗದಾಣದ ಪರ್ಯಾಯದಿಂದ ಮೊದಲೇ ಕಥನ ಮಾಡಿದ್ದರು. ಈ ಪ್ರಸಂಗದಲ್ಲಿ ನಾಮದಾರ ಹಿಲ್ಲ ಸಾಹೇಬರೇ ಮುಗದಾಣವಾದಂತಾದರು. ಆಗಲಿ.

ರಾವಬಹಾದ್ದೂರರವರು ಇವರ ಈ ಕೃಷ್ಣಕಾರಸ್ಥಾನವೆಲ್ಲ ಪೂರ್ಣವಾಗಿ ತಿಳಿದುಕೊಂಡು ಧಾರವಾಡಕ್ಕೆ ಹೊರಡುವದನ್ನು ನಿಶ್ಚಯಿಸಿ, ತಾ. ೮ನೇ ಜೂನ ಸನ್ ೧೯೧೩ ಇಸವಿಯ ರವಿವಾರ ದಿವಸ ಸಾಯಂಕಾಲದ ಗಾಡಿಯಿಂದ ಧಾರವಾಡಕ್ಕೆ ಅಡಿಗೆಯವರನ್ನು ಕಳಿಸಿಕೊಟ್ಟರು. ಆದರೆ "ನಾನು ಬರುವ ವರೆಗೆ ಧಾರವಾಡದ ಲಿಂಗಾಯತ ಯಾವ ಮುಖಂಡರೂ ನಾಮದಾರ ಹಿಲ್ ಸಾಹೇಬರವರಿಗೆ ಭೆಟ್ಟಿಯಾಗಿ, ಕರ್ನಾಟಕ ಕಾಲೇಜದ ವಿಷಯವಾಗಿ ಲಿಂಗಾಯತ ಸಮಾಜದ ವತಿಯಿಂದ ಏನೂ ಹೇಳಬಾರದು, ನಾನು ಬಂದು ಯಾವತ್ತೂ

→ ಕೂಡ ಇಲ್ಲದೆ ಅಥವಾ ಅದರ ಯೋಗ್ಯಲಾಭವನ್ನು ಹೂಡಲು ಏನೂ ಅನುಕೂಲವಿಲ್ಲದೆ ಮೇಲಿಂದ ಮೇಲೆ ಎತ್ತುತ್ತಿರುವ ಅಸಂಖ್ಯ ವರ್ಗಣಿಗಳಿಗಾಗಿ ಬಹು ಪರಿಯಾಗಿ ತಕರಾರು ಮಾಡುತ್ತಾರೆ. ೨೦-೩೦ ಮೈಲುಗಳ ದೂರದಲ್ಲಿರುವ ಜನರಿಂದಲೂ ಪ್ರತಿಯೊಂದು ಬಗೆಯ ಒತ್ತಾಯದ ಇರುಕಿನಲ್ಲಿ ಅವರನ್ನು ಹಿಡಿದು, ವರ್ಗಣಿಯನ್ನು ಎತ್ತಿ, ಸೋಶಿಯಲ್ ಕ್ಲಬ್ಬುಗಳನ್ನು ಟೇನಿಸ ಕೋರ್ಟುಗಳನ್ನು ಅನೇಕ ಕಡಿಗೆ ಸ್ಥಾಪಿಸಿದ್ದಾರೆ. ಗೋಕಾವಿ ಮತ್ತು ಅಥಣಿಗಳಲ್ಲಿ ದಿವಾಣೀ ಮತ್ತು ಮುಲಕೀ ಕೋರ್ಟುಗಳಿಗೆ ತಮ್ಮ ಕೆಲಸದ ಮೂಲಕ ಆ ತಾಲೂಕಗಳ ದೂರಿನ ಹಳ್ಳಿಗಳಿಂದ ಬರುವ, ಅಷ್ಟೇ ಅಲ್ಲಾ ನೆರೆಹೊರೆಯ ತಾಲೂಕುಗಳಿಂದಲೂ ಬರುವ ಲಿಂಗಾಯತ ಮತ್ತು ಇತರ ಜನರ ಹಣದಿಂದ ತೀರ ಇತ್ತಿತ್ತಲಾಗಿ ಸ್ಥಾಪಿಸಲ್ಪಟ್ಟ ಇಂಥ ಕ್ಲಬ್ಬುಗಳೂ ಟೇನಿಸ ಕೋರ್ಟುಗಳೂ ಮೇಲಿನ ವಿಧಾನಕ್ಕೆ ದೃಷ್ಟಾಂತವಾಗಿವೆ. ಈ ಮಾದರಿಯ ಅನೇಕ ಉದಾಹರಣೆಗಳನ್ನು ಹೇಳಬಹುದು, ಆದರೆ ನಾ.ರಾ. ಬ॥ ರೊದ್ದರವರು ಯಾವ ಜಾತಿಯವರಾಗಿರುತ್ತಾರೋ ಆ ಕರ್ನಾಟಕ ಬ್ರಾಹ್ಮಣರ ವಿಷಯವಾಗಿ ಬ್ರಾಹ್ಮಣೇತರರಲ್ಲಿ ಹೆಚ್ಚಿನ ಅವಿಶ್ವಾಸವು ಹುಟ್ಟುವದಕ್ಕೆ ಸಾಕಷ್ಟು ಯೋಗ್ಯಕಾರಣಗಳು ಇರುವವೆಂಬದನ್ನು ಸಿದ್ಧಮಾಡುವದಕ್ಕೆ ಮೇಲೆ ಹೇಳಿದವುಗಳು ಸಾಕಾಗಿವೆ. ಆದುದರಿಂದ ರಾ.ಬ॥ರೊದ್ದರವರಿಗೂ ಅವರ ಬ್ರಾಹ್ಮಣ ಸ್ನೇಹಿತರಿಗೂ ತಮ್ಮ ಪರಿಶ್ರಮದಿಂದಲೇ ಹಣವನ್ನು ಕೂಡಿಸುವದು ದೂತೋಪಾಸ್ತವಾಗಿ ತೋರಿರುವದು ಸ್ವಾಭಾವಿಕವಾದ ಮಾತಾಗಿದೆ. ಆದರೂ ಈಗ ಪೆನಶನ್ ಪಡೆದಿರುವ ಡಿಪೂಟಿ ಕಲೆಕ್ಟರರಾಗಿರುವ ಮಿ॥ಎಸ್.ಎಸ್. ಕಾಮುಲಾಪೂರ ಇವರು ಮಾಮಲೇದಾರರಾಗಿದ್ದ ತಾಲೂಕಗಳ ಜನರ ನಂಬಿಗೆಗೆ ಪಾತ್ರರಾಗಿರುವ ಮೂಲಕ ಬ್ರಾಹ್ಮಣಸಮಾಜದ ಪರವಾಗಿ ಕೂಡ ಹಾಕಲ್ಪಟ್ಟ ಹಣದ ಬಹುಭಾಗವು ಮುಖ್ಯವಾಗಿ ಇವರ ಪರಿಶ್ರಮದಿಂದಲೇ ವಸೂಲಾಗಿರುವದೆಂದು ಇಲ್ಲಿ ಹೇಳಬಹುದು.

೫. ಕರ್ನಾಟಕ ಕಾಲೇಜಫಂಡಿಗೆ ವರ್ಗಣಿಯನ್ನು ಕೊಡಬೇಕೆಂದು ಕರ್ನಾಟಕದ ಸಾರ್ವಜನಿಕದವರ ಮನಸ್ಸು ಒಲಿಸುವ ಪ್ರಯತ್ನಗಳೆಲ್ಲ ನಿಷ್ಫಲವಾಗಲು, ನಿರಾಶರಾದ ರಾ.ಬ॥ ರೊದ್ದರವರು ಅವರ ಸ್ನೇಹಿತರೂ "ಕಾಲೇಜದ ಪ್ರಸಕ್ತಿಯಲ್ಲಿ ಲಿಂಗಾಯತರು ಬೇಕಾಗಿ ವಿಘ್ನವನ್ನು ತರುತ್ತಾರೆ; ಮತ್ತು ಕರ್ನಾಟಕದಲ್ಲಿ ಆರ್ಟ್ಸಕಾಲೇಜನ್ನು ಸ್ಥಾಪಿಸಬೇಕೆಂಬುವಂಥ ಅತ್ಯಂತ ಉದಾತ್ತವಾದ ವಿಚ್ಯಾರಕ್ಕೆ ಅವರು ಪ್ರತಿಕೂಲವಾಗಿರುತ್ತಾರೆ" ಎಂಬುದಾಗಿ ಇಲಾಖೆಯೊಳಗಿನ ಇತರ ಪ್ರಾಂತಗಳಲ್ಲಿಯೂ ಲೋಕಮತವನ್ನು ಅಡ್ಡದಾರಿಗೆ ಒಯ್ಯುವದಕ್ಕಾಗಿ ಬೊಬ್ಬೆಯನ್ನು ಕುಟ್ಟಿದರು. ಈ ಕಾಲಕ್ಕೆ ಮಿ॥ಸಿ.ಎಚ್. ಹಿಲ್ಲ ಸಾಹೇಬರು ಇದೇ ವಿಷಯವನ್ನು ಇಲ್ಲಿಯೇ ಚರ್ಚಿಸಬೇಕೆಂದು ಧಾರವಾಡಕ್ಕೆ ಬಂದರು. ಅವರಿಗೆ ಭೆಟ್ಟಿಯಾಗುವದಕ್ಕೋಸ್ಕರ ನನ್ನನ್ನು ಅಲ್ಲಿಗೆ ಕರಿಸಿದರು ಮತ್ತು ತಾ. ೯ನೇ ಜೂನ ೧೯೧೩ನೇ ಇಸ್ವಿಯ ದಿವಸ ಎರಡು ತಾಸುಗಳ ವರೆಗೆ ಅವರಾ ನನ್ನಾ ಸಂಭಾಷಣೆಯಾಯಿತು. ಆ ಕಾಲಕ್ಕೆ ನಾನು ಮತ್ತು ಮೆ. ಹಿಲ್ ಸಾಹೇಬರು ಇಬ್ಬರ ಹೊರ್ತು ಬೇರೆಯಾರೂ ಇದ್ದಿಲ್ಲ. ನಾನು ಮೇಹರ್ಬಾನರವರಿಗೆ ಎಲ್ಲ ಸಂಗತಿಗಳನ್ನು ಸ್ಪಷ್ಟಮಾಡಿ ತಿಳಿಸಿದೆನು. ಭಾವೀ ಕಾಲೇಜದ ವಿಷಯಕವಾಗಿ ಲಿಂಗಾಯತ ಜನರ ಭಾವನೆಯು ಸಂಪೂರ್ಣ ವಿಪರೀತ ಮಾಡಿ ತಿಳಿಸಲ್ಪಟ್ಟಿದೆ. ಬ್ರಾಹ್ಮಣರೊಂದಿಗೆ ಕೂಡಿಕೊಂಡು ಒಂದೇ ಫಂಡನ್ನು ಕೂಡಿಸುವ ಪ್ರಯತ್ನಮಾಡಬೇಡಿರೆಂದು ಲಿಂಗಾಯತರ ಹಿಂದಿನ ಅನುಭವವು ಅವರಿಗೆ ಬುದ್ಧಿಯನ್ನು ಕಲಿಸಿದೆ. ಬ್ರಾಹ್ಮಣರ ಶಾಬ್ದಿಕ ಸಹಾನುಭೂತಿಯು ತಾತ್ವಿಕವಾಗುವಂತೆ ಅವರು ತಮ್ಮ ಸಮಾಜದಿಂದಲೇ ಲಿಂಗಾಯತರು ಕೂಡಿಸುವಷ್ಟು ಹಣವನ್ನಾದರೂ ಕೂಡಿಸಿ ತೋರಿಸಿದರೆ ಲಿಂಗಾಯತರು ಸ್ವತಂತ್ರವಾಗಿ ತಮ್ಮ ಯೋಗ್ಯತಾನುಸಾರ ವರ್ಗಣಿಯನ್ನು ಕೊಡುವದಕ್ಕೆ ಸಿದ್ಧರೇ ಇದ್ದಾರೆ, ಕರ್ನಾಟಕದಲ್ಲಿ ಆರ್ಟ್ಸ ಕಾಲೇಜನ್ನು ಸ್ಥಾಪಿಸುವ

ಸಂಗತಿಯನ್ನು ನಾಮದಾರರವರಿಗೆ ಶ್ರುತಪಡಿಸುವೆನು, ಎಂದು ಅಡಿಗೆಯವರ ಕೂಡ ಧಾರವಾಡ ಲಿಂಗಾಯಿತರ ಮುಖಂಡ ಮಂಡಳಿಗೆ ಹೇಳಿ ಕಳುಹಿಸಿದ್ದರು. ಅಂದರೆ ತಲೆಗೊಬ್ಬರು ಏನಾದರೊಂದು ಹೇಳಿ ಕೆಡಿಸಿ ಬಿಟ್ಟಾರೆಂದು ಭಾವಿಸಿ ರಾ.ಬ॥ರವರು ಮುಂದಾಗಿ ಹೇಳಿ ಕಳಿಸಿದ್ದು, ಮೇಲಾದ ಮುತ್ಸದ್ದಿತನದ ಯುಕ್ತಿಯೆಂದೇ ತಿಳಿಯತಕ್ಕದ್ದು.

ಇತ್ತ ನಾಮದಾರ ಹಿಲ್ ಸಾಹೇಬರ ಬಹಾದ್ದೂರವರು ತಾ. ೮ನೇ ಜೂನ ೧೯೧೩ ಇಸವಿಯ ದಿವಸ ಧಾರವಾಡಕ್ಕೆ ದಯಮಾಡಿಸಿದರು. ಅಲ್ಲಿ ವೀರಶೈವ ಟೌನಹಾಲಕ್ಕೆ ಹೊಂದಿರುವ ಲಿಂಗಾಯತ ಲಾಯಬ್ರರಿಯಲ್ಲಿ ತಾಂಬೂಲ ಸಮಾರಂಭವಾಯಿತು. ಆ ಸಮಾರಂಭದಲ್ಲಿ ನಾಮದಾರರು ಕರ್ನಾಟಕ ಕಾಲೇಜದ ವಿಷಯವಾಗಿ ಭಾಷಣ ಮಾಡಿದರು. ಲಿಂಗಾಯತ ಸಮಾಜದ ಸಂಬಂಧವಾಗಿದ್ದ ಅವರ ಭಾಷಣವೆಲ್ಲ ಬ್ರಾಹ್ಮಣರ ಚಾಡೀ ಮಾತುಗಳನ್ನೇ ಆವರಿಸಿದ್ದಾಗಿತ್ತು. ಲಿಂಗಾಯತರು ಕರ್ನಾಟಕ ಕಾಲೇಜಕ್ಕೆ ಸಹಾಯ ಮಾಡಲೊಲ್ಲರು,

---

→ ಕೆಲಸವನ್ನು ಲಿಂಗಾಯತರು ಎಂದೂ ವಿರೋಧಿಸುವದಿಲ್ಲ. ಆದ್ರೆ ತಮ್ಮ ನಿರಂತರ ಪದ್ಧತಿಯ ಪ್ರಕಾರ ಲಿಂಗಾಯತರ ಗಲ್ಲೇಕ್ಕೆ ಕೈಹಾಕಿ ಕಾಲೇಜದ ಪ್ರಸ್ತಾಪದ ಕೀರ್ತಿಯನ್ನೆಲ್ಲ ಮಾತ್ರ ತಾವೇ ಕಟ್ಟಿಕೊಳ್ಳಬೇಕೆಂಬುವ ಬ್ರಾಹ್ಮಣರ ನೀಚಪ್ರಯತ್ನಗಳನ್ನು ಮಾತ್ರ ಅವರು ವಿರೋಧಿಸುತ್ತಾರೆ, ಮತ್ತು ಭಾವೀ ಕಾಲೇಜದ ನಿಧಿಗೆ ದ್ರವ್ಯಸಹಾಯವನ್ನು ಮಾಡುವದಕ್ಕೆ ಯೋಗ್ಯವಾದ ಸಮಾಜಗಳೆಂದರೆ ಲಿಂಗಾಯತರೂ ಬ್ರಾಹ್ಮಣರೂ ಆಗಿರುತ್ತಾರೆ" ಎಂಬಿವೇ ಸಂಗತಿಗಳನ್ನು ನಾನು ಮೆ॥ಹಿಲ್ಲ ಸಾಹೇಬರವರಿಗೆ ಸ್ಪಷ್ಟಮಾಡಿ ತಿಳಿಸಿದೆನು. ಈ ಪ್ರಶ್ನದ ವಿಷಯವಾಗಿ ಸಾಧಕ ಬಾಧಕವಾದ ಎಲ್ಲ ಸಂಗತಿಗಳು ಚೆನ್ನಾಗಿ ಚರ್ಚಿಸಲ್ಪಟ್ಟ ನಂತರ, ನಾವಿಬ್ಬರೂ ಏಕಮತದಿಂದ ಕೆಳಗೆ ಬರೆದ ಸಂಗತಿಗಳನ್ನು ಗೊತ್ತುಪಡಿಸಿಕೊಂಡೆವು.

೧. ನಾಮದಾರ ರಾವಬಹಾದೂರ ರೊದ್ದರವರು ಹಾಗೂ ಬ್ರಾಹ್ಮಣ ಸ್ನೇಹಿತರು ತಮ್ಮ ಜಾತಿಯ ಜನರಿಂದಲೇ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಬೇಕು.

೨. ಈ ವಳಗಾಗಿ ಲಿಂಗಾಯತರಿಂದ ವಸೂಲ ಮಾಡಿದ ಎಲ್ಲ ಹಣವನ್ನು ಅವರು ನನ್ನ ಕೈಯಲ್ಲಿ ಕೊಡಬೇಕು.

೩. ಲಿಂಗಾಯತರನ್ನಾಗಲೀ ಬೇರೆ ಬ್ರಾಹ್ಮಣೇತನ್ನಾಗಲೀ ಕಾಲೇಜ ಫಂಡಿನ ವರ್ಗಣಿಯನ್ನು ಕೇಳಲಾಗದು.

೪. ನಾನು ಲಿಂಗಾಯತ ಜನರಿಂದಲೇ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಬೇಕು.

ನಾಮದಾರ ಮಿ॥ ಹಿಲ್ಲ ಸಾಹೇಬರು ಇವೆಲ್ಲ ಕರಾರುಗಳನ್ನು ರಾ.ಬ॥ರೊದ್ದರವರಿಗೆ ಹೇಳಿದರು. ಅಂದಿನಿಂದ ನಾನು ಲಿಂಗಾಯತ ಜನರಿಂದಲೇ ಮಾತ್ರ ವರ್ಗಣಿಯನ್ನು ಕೂಡಿಸಹತ್ತಿರುತ್ತೇನೆ. ಮತ್ತು ವಚನಕೊಟ್ಟ ಹಣವನ್ನು ಇಂದಿಗೆ ಸರಕಾರಕ್ಕೆ ಒಪ್ಪಿಸುವದಕ್ಕೆ ಸಿದ್ಧನಾಗಿದ್ದೇನೆ.

೬. ನಾಮದಾರ ರಾ.ಬ॥ ರೊದ್ದರವರು ಗೊತ್ತಾದ ಕರಾರುಗಳ ಮೇರಿಗೆ ಪ್ರಾಮಾಣಿಕತನದಿಂದ ನಡೆಯುವದರ ಬದಲು,ಅದಕ್ಕೆ ಸಂಪೂರ್ಣ ವಿರುದ್ಧವಾಗಿಯೇ ನಡೆಯುತ್ತಿರುತ್ತಾರೆ. ನಾಮದಾರ ಮಿ॥ಹಿಲ್ ಸಾಹೇಬರವರು ಸ್ವತಃ ಪ್ರತ್ಯಕ್ಷ ಹೇಳಿದ್ದರೂ ಮತ್ತು ನಾನು ಅನೇಕ ಸಾರೆ ಪತ್ರಗಳನ್ನು ಬರೆದು ಕೇಳಿದರೂ ರಾ.ಬ॥ರೊದ್ದರವರು ಮೆ॥ಹಿಲ್ ಸಾಹೇಬರೊಂದಿಗಾದ ನನ್ನ ಭೆಟ್ಟಿಯ ವೊದಲು ಲಿಂಗಾಯತರಿಂದ ಕೂಡಿಸಿದ ೮೫೦ ರೂಪಾಯಿಗಳನ್ನು ಕೊಟ್ಟಿಲ್ಲ ಮತ್ತು ಪಾರ್ಸಿ, ಯುರೋಪಿಯನ್, ಜೈನ, ಮರಾಠಾ, ಮುಸಲ್ಮಾನ, ಮಹಾರ ಇವರ ಕಡಿಂದಾ ಮತ್ತು ಲಿಂಗಾಯತರಿಂದ ಕೂಡ ವರ್ಗಣಿಯನ್ನು ವಸೂಲ ಮಾಡಹತ್ತಿರುತ್ತಾರೆ. ಇಷ್ಟೇ ಅಲ್ಲ ಕರ್ನಾಟಕ ಪ್ರಾಂತವೇ ಎರಡು ಲಕ್ಷ ರೂಪಾಯಿಗಳನ್ನು ಕೂಡಿಸಲು ಗತಿಗೆಟ್ಟಿರುವದೇನೋ ಎಂಬಂತೆ ಕರ್ನಾಟಕ ಹೊರಗಿನ ಪ್ರಾಂತಗಳಿಂದಲೂ ವರ್ಗಣೀ ಕೂಡಿಸಹತ್ತಿರುತ್ತಾರೆ. ಈ ನನ್ನ ವಿಧಾನದ ಸತ್ಯತೆಯನ್ನು ಸಿದ್ಧಮಾಡುವದಕ್ಕಾಗಿ ನಾ.ರಾ.ಬ॥ರೊದ್ದರವರಿಂದಲೇ ವರ್ಗಣಿ ವಸೂಲಿಯ ಯಾದಿಯೊಂದು ಮುದ್ರಿಸಿ ಪ್ರಸಿದ್ಧಮಾಡಲ್ಪಟ್ಟಿದ್ದರ ಒಂದು ಪ್ರತಿಯನ್ನು ಇದರೊಂದಿಗೆ ಕಳಿಸಿರುತ್ತೇನೆ. ಆ ಯಾದಿಯಲ್ಲಿ ನಿರ್ದಿಷ್ಟವಾಗಿರುವ ೫೫೦೦೦ ರೂಪಾಯಿಗಳಲ್ಲಿ ಸುಮಾರು ಅರ್ಧದಷ್ಟು ರಕಮು ಲಿಂಗಾಯತರಿಂದಲೂ ಬೇರೆ ಬ್ರಾಹ್ಮಣೇತರರಿಂದಲೂ ವಸೂಲಾದದ್ದಿರುವರೆಂದು ಕಂಡುಬರುತ್ತದೆ.

೭. ಈಗಿನ ಯುದ್ಧವು ಬ್ರಾಹ್ಮಣ ಸಮಾಜವನ್ನು ಮಾತ್ರ ಬಾಧಿಸಿರುವದೇಕೋ ಎಂಬಂತೆ ನಾಮದಾರ ರಾವಬಹಾದೂರ ರೊದ್ದರವರೂ ಅವರ ಸ್ನೇಹಿತರೂ ಈ ಯುದ್ಧವೊಂದಿಲ್ಲದಿದ್ದರೆ ಇಷ್ಟು ಹೊತ್ತಿಗೆ ಕೂಡಿಸಿ ಬಿಡುತ್ತಿದ್ದೆವೆಂಬದಾಗಿ ಮೇಲಿಂದ ಮೇಲೆ ಸಾರಹತ್ತಿರುತ್ತಾರೆ. ಕರ್ನಾಟಕದೊಳಗಿನ ಯಾವದಾದರೂ ಸಮಾಜಕ್ಕೆ ಈಗಿನ ಯುದ್ಧದ ಮೂಲಕ ವಿಶೇಷವಾದ→

ಈ ಮಾತನ್ನು ಸಮರ್ಥನೆ ಮಾಡಲೋಸುಗ ನಾಮದಾರರು ತಮ್ಮ ಭಾಷಣದಲ್ಲಿ ಇಸೋಪನ ನೀತಿಯಲ್ಲಿಯ 'ಕೊಟ್ಟಿಗೆಯಲ್ಲಿ ಕಟ್ಟಿದ ಎತ್ತೂ-ನಾಯಿಯೂ' ಎಂಬದೊಂದು ದೃಷ್ಟಾಂತವನ್ನು ಕೊಟ್ಟರು. ಅಂದರೆ ನಾಯಿಯು ಎತ್ತಿನ ಮುಂದಿನ ಹೊಟ್ಟೂ ಹತ್ತೀಕಾಳೂ ತಾನು ತಿನ್ನುವಂತಿಲ್ಲ ಹಾಗೂ ಎತ್ತಿಗೂ ತಿನ್ನಗೊಡುವದಿಲ್ಲ. ಈ ಪ್ರಕಾರ ಲಿಂಗಾಯತರು ತಾವು ವಿದ್ಯೆ ಕಲಿಯುವದಿಲ್ಲ ಕಲಿಯುವರಿಗೂ ಕಲಿಯಗೊಡುವದಿಲ್ಲಾ ಎಂಬದಾಗಿ ಭಾಷಣ ಮಾಡಿದರು. ಈ ಭಾಷಣವನ್ನು ಕೇಳಿ ಬ್ರಾಹ್ಮಣರು ಎಷ್ಟು ಆನಂದವನ್ನು ಹೊಂದಿದರೋ ಅಷ್ಟೇ ವ್ಯಸನವನ್ನು ಲಿಂಗಾಯತರುಹೊಂದುವದಾಯಿತು. ದೊಡ್ಡವರ ಮಾತಿಗೆ ಉಪಾಯವಿಲ್ಲ ಅವರ ಕಡೆಗಾದರೂ ಏನೂ ದೋಷ? ಅವರಿಗೆ ಈ ಪ್ರಕಾರವಾಗಿ ಬ್ರಾಹ್ಮಣ ನಾಮದಾರರು ಚಾಡೀ ತುಂಬಿಸಿ ಬಿಟ್ಟಿದ್ದರು. ಲಿಂಗಾಯಿತ ಪಕ್ಷದಿಂದ ಯಾರೂ ಅವರಿಗೆ ಸತ್ಯ ಸಂಗತಿಯನ್ನು ವಿಶದಪಡಿಸಿದ್ದಿಲ್ಲ. ರಾವಬಹಾದ್ದೂರವರಿಗೆ ಇನ್ನೊಂದು

→ ಹಾನಿಯುಂಟಾಗಿದ್ದರೆ, ಅದು ಲಿಂಗಾಯತ ಸಮಾಜಕ್ಕೆ ಆಗಿರುವದು. ಯಾಕಂದರೆ ಲಿಂಗಾಯತರೊಳಗೆ ಬಹುತೇಕ ಜನರು ವ್ಯಾಪಾರಸ್ಥರಾಗಲೀ ಅಥವಾ ಒಕ್ಕಲತನ ಮಾಡುವವರಾಗಲೀ ಇರುವದರಿಂದ ಅವರ ಮುಖ್ಯ ಉದ್ಯೋಗವಾದ ಹತ್ತಿಯ ಧಾರಣೆಯು ಮಂದವಾಗಿ ಅವರಿಗೇ ಬಹಳ ಹಾನಿಯಾಗಿದೆ. ಆದರೂ ಕರ್ನಾಟಕದ ವಾರಘಂಡದೊಳಗಿನ ನೂರು ರೂಪಾಯಿಗಳಲ್ಲಿ ೮೦ ರೂಗಳನ್ನು ಲಿಂಗಾಯತರೇ ಕೊಟ್ಟಿರುವರೆಂಬದೂ ಕಾಲೇಜಕ್ಕಾಗಿ ವಚನ ಕೊಟ್ಟ ರಕಮು ಕೊಡಲು ಲಿಂಗಾಯತರೇ ಇಂದಿಗೆ ಸಿದ್ಧರಾಗಿರುವರೆಂಬದೂ, ಈ ಎರಡು ಸಂಗತಿಗಳನ್ನು ಧ್ಯಾನಕ್ಕೆ ತಂದು ನೋಡಿದರಂತೂ ನಾ.ರಾ.ಬ॥ರೊದ್ದರವರೂ ಅವರ ಸ್ನೇಹಿತರೂ ತಮಗೆ ಅನುಕೂಲವಾಗುವಂತೆ ಇಷ್ಟು ದೊಡ್ಡದಾಗಿ ಮುಂದೆಮಾಡಿದ ಯುದ್ಧದ ಕಾರಣವು ಎಷ್ಟು ಪೊಳ್ಳಾಗಿರುತ್ತದೆಂಬದು ಹೆಚ್ಚಿಗೆ ಸ್ಪಷ್ಟವಾಗಿ ಕಂಡುಬರುತ್ತದೆ. ವರ್ಗಣೀ ವಸೂಲಿಯ ಕೆಲಸವು ತಮ್ಮ ಕೈಯಿಂದ ನೀಗದಾಗಲು ನಾ.ರಾ.ಬ॥ರೊದ್ದರವರು ಯುದ್ಧದ ಇಲ್ಲದ ನೆವನವನ್ನು ಸುಮ್ಮನೇ ಮುಂದೆ ಮಾಡುತ್ತಿರುವರಲ್ಲದೇ ಈಗಿನ ಯುದ್ಧಕ್ಕೂ ನಾಮದಾರರವರ ವರ್ಗಣೀ ವಸೂಲಿಗೂ ಏನೂ ಸಂಬಂಧವಿಲ್ಲವೆಂಬದು ಇದರಿಂದ ಸ್ಪಷ್ಟವಾಗುತ್ತದೆ. ಯುದ್ಧವಿರಲಿ ಇಲ್ಲದಿರಲಿ, ಲಿಂಗಾಯತರು ತಾವು ಕೊಟ್ಟ ವಚನವನ್ನು ಪೂರ್ಣಮಾಡಲು ಸಿದ್ಧರಾಗಿರುವರು; ಮತ್ತು ಇಂದಿಗೆ ಸುಮಾರು ೨೨೦೦೦ ರೂಪಾಯಿಗಳ ಚಿಕ್ಕ ರಕಮನ್ನು ಮಾತ್ರ ಕೂಡಿಸಿದ್ದರ ಮೇಲಿಂದಲೇ ಬರಿಯ ವಾಚಾಳರೆಂದು ಸಿದ್ಧವಾಗುವಂತಿರುವ ಬ್ರಾಹ್ಮಣಸಮಾಜಕ್ಕಿಂತ ಹೆಚ್ಚಿನ ತಾತ್ವಿಕ ಸ್ಫೂರ್ತಿಯನ್ನು ಲಿಂಗಾಯತರು ಕರ್ನಾಟಕ ಕಾಲೇಜದ ವಿಷಯವಾಗಿ ತೋರಿಸಿರುವರು. ಬ್ರಾಹ್ಮಣರು ಬರುವವರಿದ್ದಾರೆಂಬತಿಲ್ಲ; ಅಥವಾ ಕರ್ನಾಟಕ ಕಾಲೇಜದಂಥ ಸಂಸ್ಥೆಯ ಮಹತ್ವವನ್ನರಿಯದಷ್ಟು ಅಕ್ಷರಶತ್ರುಗಳಿದ್ದಾರೆಂಬಂತಿಲ್ಲ; ಅವರಲ್ಲಿ ಸಂಸ್ಥಾನಕರೂ, ಇನಾಮದಾರರೂ ಜಹಾಗೀರದಾರರೂ, ಸರದಾರರೂ, ಶ್ರೀಮಂತರಾದ ವಕೀಲರೂ ಇರುತ್ತಾರೆ. ಹೀಗೆ ಸಾಂಪತ್ತಿಕ ಸ್ಥಿತಿಯಿಂದಲೂ ಬ್ರಾಹ್ಮಣ ಸಮಾಜವು ಉತ್ತಮ ಸ್ಥಿತಿಯಲ್ಲಿದ್ದರೂ, ಕಳೆದ ೫-೬ ವರ್ಷಗಳಲ್ಲಿ ೨೨೦೦೦ ರೂಪಾಯಿಗಳನ್ನು ಮಾತ್ರ ಕೂಡಿಸುವದಕ್ಕೆ ಅವರು ಸಮರ್ಥರಾಗಿರುವರೆಂಬ ಸಂಗತಿಯು" ಅವರು ಕರ್ನಾಟಕದ ಜನತೆಯ ಬಯಕೆಗಳನ್ನು ಸ್ಪಷ್ಟಮಾಡಿ ಹೇಳುವ ವಿಶ್ವಸ್ತ ಮುಖಂಡರಲ್ಲ ಮತ್ತು ಹಿಂದೆ ಎಂದೂ ಇದ್ದಿಲ್ಲ. ಈ ಕಾಲೇಜದ ಪ್ರಸಕ್ತಿಯ ವಿಷಯದಲ್ಲಿ ಮೊದಲು ಲಿಂಗಾಯತರಲ್ಲಿ ಹುಟ್ಟಿದ ಅವಿಶ್ವಾಸವು ಸಾಧಾರಣವಾಗಿತ್ತು. ಅನೇಕ ಮುಖ್ಯ ಸಮಾಜಗಳನ್ನು ಈ ವಿಷಯವಾಗಿ ವಿಚ್ಯಾರಿಸಲಿಲ್ಲ; ಮತ್ತು ಈ ಪ್ರಸಕ್ತಿಯು ತಮಗೆ ಮತಗಳನ್ನು ಸಂಪಾದಿಸುವದಕ್ಕೆ ಅಮೋಲ್ಯವಾದ ಸಾಧನವಾಗುವದೆಂಬ ಭಾವನೆಯಿಂದ ಕರ್ನಾಟಕದೊಳಗಿನ ಮುನಸಿಪಾಲಿಟಿಗಳ ಡಿ॥ಲೋ॥ಬೋರ್ಡುಗಳವತಿಯಿಂದ ಕೌನ್ಸಿಲದ ಮೆಂಬರರಾಗಿದ್ದ ನಾಮದಾರದ್ವಯರು ಇದನ್ನು ಇಷ್ಟು ಆತುರತೆಯಿಂದ ಎತ್ತಿಹಿಡಿದರು" ಎಂಬ ನನ್ನ ಸಿದ್ಧಾಂತಗಳನ್ನು ದೃಢಪಡಿಸುತ್ತದೆ.

೮. ನಾಮದಾರ ಮಿ॥ಬೆಳವಿಯವರು ತಾ. ೨೯ನೇ ಜುಲೈ ೧೯೧೩ನೇ ಇಸ್ವಿಯ ದಿವಸ ಕಾಯಿದೇ ಕೌನ್ಸಿಲದಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಒಳ್ಳೇ ಹಂಚಿಕೆಯಿಂದ ಮಾಡಲೆಣಿಸಿದ ಕರ್ನಾಟಕದ ಜನರ ವರ್ಗೀಕರಣವು ಅತ್ಯಂತ ದೂಷಣೀಯವಾಗಿರುವದು. ಈ ವರ್ಗೀಕರಣ ಅವರ ಕಲ್ಪನಾ ಸೃಷ್ಟಿಯಲ್ಲಿ ಮಾತ್ರ ಕಂಡು ಬರುವಂತಿರುವದು. ನಾಮದಾರ ಮಿ॥ಹಿಲ್ ಸಾಹೇಬರು ೧೯೧೩ನೇ ಇಸ್ವಿಯ ಜೂನ ತಿಂಗಳಲ್ಲಿ ಧಾರವಾಡಕ್ಕೆ ಬಂದದ್ದರಿಂದ ದಕ್ಷಿಣಭಾಗದೊಳಗಿನ ಮುಖ್ಯ ಎರಡು ಸಮಾಜಗಳಲ್ಲಿ ಅಂದರೆ ಲಿಂಗಾಯತ ಮತ್ತು ಲಿಂಗಾಯತೇತರ ಜ್ಞಾತಿಗಳಲ್ಲಿ ಸ್ನೇಹಾನುರಾಗ ನೆಲೆಗೊಳ್ಳುವದಕ್ಕೆ ಕಾರಣವಾಯಿತೆಂದು ಅವರು ಅನ್ನುತ್ತಾರೆ. ದಕ್ಷಿಣ ಭಾಗದೊಳಗಿನ ಜನರಲ್ಲಿ ಲಿಂಗಾಯತರು, ಲಿಂಗಾಯಿತೇತರು, ಎಂದು→

ದಿವಸ ಮುಂಚಿತವಾಗಿ ಧಾರವಾಡಕ್ಕೆ ಹೋಗುವದು ತಿಳಿದಿದ್ದರೆ ನಾಮದಾರ ಹಿಲ್ಲ ದೊರೆಗಳಿಗೆ ಯಾವತ್ತೂ ಸಂಗತಿಯನ್ನು ತಿಳಿಸಲಿಕ್ಕೆ ಅವಕಾಶವಾಗುತ್ತಿತ್ತು. ಈ ಅವಕಾಶ ದೊರೆಯದ್ದರಿಂದ ಕೇವಲ ಬ್ರಾಹ್ಮಣ ನಾಮದಾರರ ಹಾಳು ನುಡಿಗಳನ್ನು ನಂಬಿ, ದೊರೆಗಳು ಈ ಪ್ರಕಾರದ ಭಾಷಣ ಮಾಡಿದರು. ಈ ಭಾಷಣ ಕಾಲಕ್ಕೆ ರಾ.ಬ॥ಅರಟಾಳ ಸಾಹೇಬರು ಇರಬೇಕಾಗಿತ್ತೆಂದು ಬ್ರಾಹ್ಮಣರೆಲ್ಲರು ಭಾವಿಸಿದರು. ಯಾಕೆಂದರೆ ಈ ಭಾಷಣವನ್ನು ಧಾರವಾಡದ ಲಿಂಗಾಯಿತ ಮುಖಂಡರೆಲ್ಲರೂ ಕೇಳಿದ್ದರಿಂದಾಗುವ ಸಂತೋಷಕ್ಕಿಂತ ರಾ.ಬ॥ಅರಟಾಳ ಸಾಹೇಬರೊಬ್ಬರೇ ಕೇಳಿದ್ದರಿಂದಾಗುವ ಸಂತೋಷವು ಎಷ್ಟೋ ಮಡಿ ಹೆಚ್ಚಾಗುತ್ತಿತ್ತು. ಆದರೂ ಅವರು ನಾಳಿಗೆ ಇಲ್ಲಿಗೆ ಬರುತ್ತಾರೆ. ಈ ಭಾಷಣದ ಸಾರವನ್ನು ಅವರು ಹೇಗೂ ಕೇಳಿಯೇ ಕೇಳುವರೆಂದು ತಮ್ಮತಮ್ಮೊಳಗೆ ಸಂತೋಷಪಡುವವರಾದರು.

→ ಮಾಡಿದ ಈ ವರ್ಗೀಕರಣವು ಸಂಪೂರ್ಣ ಅನ್ಯಾಯದ್ದೂ ವಸ್ತುಸ್ಥಿತಿಗೆ ವಿಪರೀತವಾದದ್ದೂ ಆದುದರಿಂದ ತಿರಸ್ಕರಣೀಯವಾದದ್ದೂ ಇರುವ ಮೂಲಕ ಅದರ ಬೆಲೆಯು ಅದರಿಂದಲೇ ಕಟ್ಟಲ್ಪಡುತ್ತದೆ. ಈ ಬಗೆಯ ವರ್ಗೀಕರಣವು ಎರಡು ಬಗೆಯ ಉದ್ದೇಶಗಳಿಂದ ಬುದ್ಧಿಪೂರ್ವಕವಾಗಿ ಮಾಡಲ್ಪಟ್ಟಿರುವದೆಂದು ನನಗೆ ತೋರುತ್ತದೆ. ಅವು ಯಾವವೆಂದರೆ -ಬ್ರಾಹ್ಮಣ ಮತ್ತು ಇತರ ಜಾತಿಗಳೊಂದಿಗೆ ಲಿಂಗಾಯತರು ದ್ವೇಷಮಾಡುತ್ತಾರೆಂಬದನ್ನು ಸರಕಾರಕ್ಕೆ ತಿಳಿಸುವದೊಂದು ಮತ್ತು ಅವರು ಮುಂದೆ ಮಾಡುತ್ತಾ ಬಂದಂತೆ ಎಲ್ಲ ಬ್ರಾಹ್ಮಣೇತರರಿಂದ ವರ್ಗಣಿಯನ್ನು ವಸೂಲು ಮಾಡುವದಕ್ಕೆ ತಮಗೆ ಅವಸರ ದೊರಿಯಬೇಕೆಂಬದು ಮತ್ತೊಂದು. ಯಾವದಾದರೂ ಎರಡು ಜಾತಿಗಳಲ್ಲಿ ಏನಾದರೂ ತಪ್ಪು ತಿಳುವಳಿಕೆಗಳೂ ಪೂರ್ವದುರ್ಗ್ರಹಗಳು ಇದ್ದರೆ ಅವು ಲಿಂಗಾಯತ ಮತ್ತು ಬ್ರಾಹ್ಮಣರಲ್ಲಿಯೇ ಇದ್ದವು. ಈ ಜಾತಿಗಳಲ್ಲಿ ಈ ತಪ್ಪುತಿಳುವಳಿಕೆಗಳೂ ದರ್ಗ್ರಹಗಳೂ ಇದ್ದದರಿಂದಲೇ ನಾಮದಾರ ಮಿ॥ಹಿಲ್ಲ ಸಾಹೇಬರವರು ಕಾಲೇಜಕ್ಕೆ ಬೇಕಾದ ನಿಧಿಯನ್ನು ಕೂಡಿಸುವ ವಿಷಯದಲ್ಲಿ ಕಾರ್ಯಕಾರಿಯಾದ ಮಾರ್ಗವನ್ನು ಗೊತ್ತುಪಡಿಸುವದಕ್ಕಾಗಿ ಧಾರವಾಡ ತನಕಾ ಬರಬೇಕಾಯಿತು. ಮೇಲೆ ವಿವರಿಸಿರುವಂತೆ ಕರ್ನಾಟಕದೊಳಗಿನ ವಿದ್ಯಮಾನ ಪರಿಸ್ಥಿತಿಯನ್ನು ನಾಮದಾರ ಹಿಲ್ಲ ಸಾಹೇಬರವರಿಗೆ ತಿಳಿಸಿದ ನಂತರ ಅವರು ಲಿಂಗಾಯಿತರು ಒಂದು ಲಕ್ಷ ರೂಪಾಯಿಗಳನ್ನು ಬ್ರಾಹ್ಮಣರು ಮತ್ತೊಂದು ಲಕ್ಷವನ್ನೂ ಕೊಡಬೇಕೆಂದು ಹೇಳಿದರು.

ಈ ನಾಮದಾರದ್ವಯರು ತಮ್ಮ ಸ್ವಂತ ಸಮಾಜದ ಮೇಲಿನ ತಮ್ಮ ನಾಯಿಕತ್ವವೇ ಆಂದೋಲನ ಸ್ಥಿತಿಯಲ್ಲಿರುವ ಈ ಸಂದರ್ಭದಲ್ಲಿ ಲಿಂಗಾಯಿತೇತರರ ಮುಖಂಡರೆಂಬ ಅಧಿಕತನವನ್ನು ಮಾಡಲೆತ್ನಿಸುತ್ತಿರುವದನ್ನು ನೋಡುವದು ನಿಜವಾಗಿಯೂ ವಿನೋದಾಸ್ಪದವಾಗಿದೆ. ಕರ್ನಾಟಕದ ಇಡೀ ಇತಿಹಾಸದಲ್ಲಿ ಬ್ರಾಹ್ಮಣರು ಲಿಂಗಾಯತರ ಅಥವಾ ಜೈನರ ಅಥವಾ ಮರಾಠರ ಅಥವಾ ರಡ್ಡೇರ ಅಥವಾ ಮುಸಲ್ಮಾನರ ಪಕ್ಷವನ್ನು ಎಂದೂ ಸ್ವೀಕರಿಸಲಿಲ್ಲ. ೧೮೮೩ರಲ್ಲಿ ಧಾರವಾಡದಲ್ಲಿ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನವು ಸ್ಥಾಪನವಾದಂದಿನಿಂದ ಬ್ರಾಹ್ಮಣವರ್ಗದ ಅಂತಸ್ಥ ಕಾರಸ್ಥಾನಗಳ ವಿರುದ್ಧವಾಗಿ ತಮ್ಮೊಬ್ಬರ ಪ್ರಗತಿಗೆ ಮಾತ್ರವಲ್ಲದೆ, ಸಾಮಾನ್ಯವಾಗಿ ಬ್ರಾಹ್ಮಣೇತರರೆಂದು ಕರೆಯಲ್ಪಡುವ ಎಲ್ಲ ಜಾತಿಗಳ ಪ್ರಗತಿಗಾಗಿಯೂ ಲಿಂಗಾಯತರೇ ಬಡದಾಡುತ್ತಿರುವರು (ಸರಕಾರ ಠರಾವ ನಂಬರ ೩೯೬೮, ತಾ:೧ನೇ ಅಗಷ್ಟ ೧೯೦೪ ಜೆ.ಡಿ. ಇದನ್ನು ದೃಷ್ಟಾಂತವಾಗಿ ನೋಡಬಹುದು). ಬ್ರಾಹ್ಮಣರ ಸರ್ವವ್ಯಾಪ್ತಿ ಹಿತಸಂಬಂಧಗಳ ವಿರುದ್ಧವಾಗಿ, ಕರ್ನಾಟಕದಲ್ಲಿ ವಾಸವಾಗಿರುವ ಎಲ್ಲ ವರ್ಗಗಳ ಮಾನ್ಯ ಧುರೀಣತ್ವವು ಲಿಂಗಾಯಿತರ ಕಡೆಗೇ ಇರುವದೆಂಬದನ್ನು ತೋರಿಸುವದಕ್ಕೆ ಅನೇಕಾನೇಕ ದಾಖಲೆಗಳಿರುವವು. ಮರಾಠರು, ಜೈನರು, ಮುಸಲ್ಮಾನರು, ರಡ್ಡೇರು ಮುಂತಾದವರಿಂದ ವರ್ಗಣಿಯನ್ನು ಕೂಡಿಸುವದನ್ನು ಲಿಂಗಾಯತರು ಅಂಗೀಕರಿಸಿದ್ದಾರೆ. ಬ್ರಾಹ್ಮಣರು ಈಗ ಕೂಡಿಸಿದ್ದರೊಳಗಿನ ಅಂಶಮಾತ್ರವನ್ನಾದರೂ ಕೂಡಿಸುವದಕ್ಕೆ ಸಮರ್ಥರಾಗುತ್ತಿದ್ದಿಲ್ಲ. ವಸ್ತುಸ್ಥಿತಿಯು ಹೀಗಿರುವದರಿಂದ ನಾಮದಾರ ರಾ.ಬ॥ ರೊದ್ದ ಹಾಗೂ ನಾಮದಾರ ಮಿ॥ಬೆಳವಿಯವರು ತಾವು ವಚನಕೊಟ್ಟ ಒಂದು ಲಕ್ಷ ರೂಪಾಯಿಗಳನ್ನು ಬ್ರಾಹ್ಮಣರಿಂದಲೇ ವಸೂಲ ಮಾಡುವದನ್ನು ಬಿಟ್ಟು ಎಲ್ಲ ವರ್ಗದವರಿಂದ ಹಣವನ್ನು ಕೂಡಿಹಾಕಿರುವರು. ಈ ತಮ್ಮ ಅನ್ಯಾಯ ವರ್ತನವನ್ನು ನ್ಯಾಯವಾದದ್ದೆಂದು ತೋರಿಸುವದಕ್ಕಾಗಿ ಲಿಂಗಾಯತೇತರರಿಂದ ಹಣವನ್ನು ಕೂಡಿಸುವದಕ್ಕೆ ತಮಗೆ ಹೇಳಿರುವರೆಂಬಂತೆ ಮಾತಾಡುತ್ತಿರುವರು. ಮತ್ತು ಲಿಂಗಾಯಿತರು ಇತರ ಎಲ್ಲ ಜಾತಿಗಳ ಸಂಗಡ ಯಾವಾಗಲೂ ತಲೆವಡಕತನವನ್ನು ಮಾಡುತ್ತಾರೆಂಬ ಭಾವನೆಯು→

ಮರುದಿವಸ (ತಾ: ೯-೬-೧೯೧೩) ಸೋಮವಾರ ಮೇಲಗಾಡಿಯಿಂದ ರಾ.ಬ||ರವರು ಬೆಳಗಾವಿಯಿಂದ ಹೊರಟು ೨ ಘಂಟೇ ಸುಮಾರಕ್ಕೆ ಧಾರವಾಡಕ್ಕೆ ತಲುಪಿದರು. ಸ್ಟೇಶನದ ಮೇಲೆ ಶಾಂತವೀರಪ್ಪಣ್ಣಾ ಮೆಣಸಿನಕಾಯಿ, ರೇವಣಸಿದ್ಧಪ್ಪ ಕಿತ್ತೂರ, ಚೆನ್ನಬಸಪ್ಪ ಶಿರಹಟ್ಟಿ ಮೊದಲಾದ ಎಷ್ಟೋ ಮುಖಂಡರು ಭೆಟ್ಟಿಯಾಗಿ ಹಿಂದಿನ ದಿವಸ ಆದ ನಾಮದಾರ ಭಾಷಣವನ್ನು ಸಾದ್ಯಂತ ತಿಳಿಸಿ, ನಮ್ಮ ಲಿಂಗಾಯಿತ ಸಮಾಜವು ನಿರ್ಜೀವವಾಯಿತೆಂದು ಉಸುರ್ಗರೆದರು. ಅದಕ್ಕೆ 'ನೀವೇಕೆ ಚಿಂತಿಸುತ್ತೀರಿ, ಸ್ವಲ್ಪ ತಡೆಯಿರೆಂ'ದು ಅವರನ್ನು ಉಚಿತೋಕ್ತಿಗಳಿಂದ ಸಮಾಧಾನಪಡಿಸಿ, ಅಲ್ಲಿಂದು ಹೊರಟು ಮೊದಲು ಮೆ||ಮೆಕಾನಕಿ ಕಲೇಕ್ಟರ ಸಾಹೇಬರವರ ಭೆಟ್ಟಿಯಾಗಿ, ಮುಂದೆ ನೆಟ್ಟಗೆ ನಾಮದಾರ ಹಿಲ್ ದೊರೆಗಳ ದರ್ಶನಕ್ಕೆ ದಯಮಾಡಿಸಿದರು. ಇದೇ ಸಂಧಿಗೆ ನಾಮದಾರರ ದರ್ಶನಾರ್ಥವಾಗಿ ಧಾರವಾಡ ಸರಕಾರೀ ಹಾಯಸ್ಕೂಲ ಹೆಡ್ಡಮಾಸ್ತರ ಮಿ||ಭಾಸ್ಕರ ಯಶವಂತ ಜಠಾರ

→ ಸಾರ್ವಜನಿಕರವರಲ್ಲಿ ಹುಟ್ಟಿಸುವ ಹೊರ್ತು ಬೆರೆಯಾವ ಉದ್ದೇಶವೂ ಇಲ್ಲದೆ, ಲಿಂಗಾಯತರರು ಲಿಂಗಾಯತೇತರರು ಎಂಬ ಅಪೂರ್ವವಾದ ವರ್ಗೀಕರಣವನ್ನು ಒಳ್ಳೇ ಜಾಣತನದಿಂದ ಕಲ್ಪಿಸಿರುತ್ತಾರೆ. ನಾಮದಾರ ಮಿ|| ಬೆಳವಿಯವರು ನನಗೂ ನಾ|| ಹಿಲ್ ಸಾಹೇಬರಿಗೂ ಆದ ಭೆಟ್ಟಿಯ ಪ್ರಸಂಗದಲ್ಲಿ ಇದ್ದಿದ್ದಿಲ್ಲ; ಅಥವಾ ಮೆ||ಹಿಲ್ ಸಾಹೇಬರು ನಮ್ಮೊಳಗೆ ಗೊತ್ತಾದ ಸಂಗತಿಯನ್ನು ನಾಮದಾರ ರಾ.ಬ|| ರೊದ್ದರವರಿಗೆ ತಿಳಿಸಿದಾಗ್ಯೂ ಅವರು ಇದ್ದಿಲ್ಲ. ನಿಜವಾದ ಸಂಗತಿಯೇನಿರುವದೆಂಬದನ್ನು ಅರಿತುಕೊಳ್ಳದೇ ಈ ವಿಷಯವಾಗಿ ಕಾಯಿದೆ ಕೌನ್ಸಿಲದಲ್ಲಿ ಮಾತಾಡುವದಕ್ಕೆ ಮುಂದೆ ಬಂದದ್ದು ಆಶ್ಚರ್ಯಕರವಾಗಿದೆ.

೯. ನಾನು ಇದನ್ನೆಲ್ಲ ಬರೆದಿರುವದು ದೋಷ ಕೆದರಬೇಕೆಂಬ ಬುದ್ಧಿಯಿಂದಲ್ಲ ಅಥವಾ ಯಃಕಶ್ಚಿತ ಮಾತುಗಳ ಸಲುವಾಗಿ ನಿಷ್ಪ್ರಯೋಜಕವಾದ ವಾದವನ್ನು ಹೂಡುವ ಬುದ್ಧಿಯಿಂದಲೂ ಅಲ್ಲ ಎಂಬದಾಗಿ ವಿನಯಪೂರ್ವಕ ಅರಿಕೆ ಮಾಡಿಕೊಳ್ಳುತ್ತೇನೆ. ಕರ್ನಾಟಕ ಕಾಲೇಜದ ಪ್ರಸಕ್ತಿಯಲ್ಲಿ ನಾಮದಾರರಿಬ್ಬರು ಮಾಡಿದ ಉದ್ಯೋಗದ ಯೋಗ್ಯಯಶಸ್ಸನ್ನು ಅವರಿಗೆ ಕೊಡುವ ವಿಷಯದಲ್ಲಿ ನಾನು ಯಾರಿಗೂ ಹಿಂಜರಿಯಲಾರೆನು. ಆದರೂ ಮೊದಲಿನಿಂದ ಯೋಗ್ಯರೀತಿಯಿಂದಲೂ ವ್ಯವಸ್ಥಿತನಾಗಿಯೂ ಪ್ರಯತ್ನವಾಗಲಿಲ್ಲವೆಂದೂ ಮತ್ತು ಬೇರೆ ಒಂದು ಅಂತಸ್ಥಹೇತುವಿನಿಂದ ಇದು ಪ್ರಾರಂಭಿಸಲ್ಪಟ್ಟಿತೆಂದೂ ನಿರ್ದೇಶನಮಾಡುವದು ನನ್ನ ಕರ್ತವ್ಯವಾಗಿರುವದೆಂದು ನಾನು ತಿಳಿಯುತ್ತೇನೆ. ಕರ್ನಾಟಕವು ಅವಶ್ಯಕವಾದಷ್ಟು ಹಣವನ್ನು ಕೊಡಲು ಸಮರ್ಥವಿರುವದೋ ಏನೋ ಎಂಬಂತೆ ನಾಮದಾರ ರೊದ್ದರವರು ಮುಂಬಯಿಯಲ್ಲಿಯೂ, ಡೆಕ್ಕನದಲ್ಲಿಯೂ ವರ್ಗಣಿಯನ್ನು ವಸೂಲ ಮಾಡುವದನ್ನು ಕಂಡರೆ, ನಿಜವಾಗಿಯೂ ಕರ್ನಾಟಕಸ್ಥನೆನಿಸಿಕೊಳ್ಳುವ ಅಭಿಮಾನಶಾಲಿಯಾದ ಪ್ರತಿ ಒಬ್ಬನಿಗೂ ನಿಜವಾಗಿಯೂ ಒಂದು ಬಗೆಯ ಅವಮಾನವಾದಂತೆ ತೋರದಿರದು. ಕರ್ನಾಟಕಸ್ಥರು ವಿತರಣಶಾಲಿಗಳೆಂಬ ಬಹುದಿನಗಳ ಯಶಸ್ಸಿಗೆ ಕುಂದು ತರುವಂಥ ಹೆಚ್ಚಿನ ಸಂಗತಿಯು ಯಾರದು ಇರಲಿಕ್ಕಿಲ್ಲ. ನಾನು ವಚನಕೊಟ್ಟ ಹಣದೊಳಗಿನ ೧೦೦ ರಲ್ಲಿ ೯೦ ರೂಪಾಯಿಗಳನ್ನು ಒಂದೇ ಜಿಲ್ಲೆಯಿಂದ ವಸೂಲು ಮಾಡಿರುವೆನು. ಮತ್ತು ಲಿಂಗಾಯತರಿಂದ ಮಾಡಿರುವೆನು. ಪುಣೆಯೊಳಗಿನ ಅನೇಕ ಸಾರ್ವಜನಿಕ ಸಂಸ್ಥೆಗಳಿಗೆ ಕರ್ನಾಟಕದಿಂದ ಯಾವಾಗಲೂ ಧನಸಹಾಯವಾಗುತ್ತ ಬಂದಿರುತ್ತದೆ. ಹೀಗಿರಲು ನಾಮದಾರ ರಾವಬಹಾದ್ದೂರ ರೊದ್ದರವರು ಕರ್ನಾಟಕ ಕಾಲೇಜ ಫಂಡಿಗಾಗಿ ಪುಣೇಯಲ್ಲಿಯೂ ಮುಂಬಯಿಯಲ್ಲಿಯೂ ನಾಟಕಪ್ರಯೋಗಗಳನ್ನು ಮಾಡಿಸುತ್ತ ತಿರುಗಾಡಬೇಕೆಂಬದು ಬಹಳ ಜನರಿಗೆ ನಿಜವಾಗಿಯೂ ತಿಳಿಯದಂಥ ಸಂಗತಿಯಾಗಿದೆ. ತಮ್ಮಲ್ಲದ ಪ್ರಾಂತದೊಳಗಿನ ಜನರ ಉಚ್ಚಶಿಕ್ಷಣಕ್ಕಾಗಿ ತಮ್ಮ ಕೊಡಗೈಯನ್ನು ಮುಂದೆ ಮಾಡಿದ ಉದಾರ ಸದ್ಗೃಹಸ್ಥರಿಂದ ದೊರೆತ ಉತ್ಕೃಷ್ಟ ದೇಣಿಗೆಗಳನ್ನು ಯೋಗ್ಯಶಬ್ದಗಳಿಂದ ಅಭಿನಂದಿಸದಿದ್ದರೆ ನಮ್ಮ ಕರ್ತವ್ಯಕ್ಕೆ ನಾನು ಬಹಳವಾಗಿ ಪರಾಙ್ಮುಖನಾದಂತೆ ಆಗುವದು.

೧೦. ತುಸುಮಟ್ಟಿಗೆ ಉದ್ದವಾದ ರಿಪೋರ್ಟನ್ನು ತಮ್ಮ ಕಡೆ ಕಳುಹಿಸಿ ತಮಗೆ ತೊಂದರೆ ಕೊಡವರಲ್ಲಿ, ಬ್ರಾಹ್ಮಣ ಲಿಂಗಾಯತರಲ್ಲಿ ಕರ್ನಾಟಕ ಕಾಲೇಜದ ಪ್ರಸಕ್ತಿಯ ವಿಷಯದಲ್ಲಿ ತಪ್ಪು ತಿಳಿವಳಿಕೆಯು ಹ್ಯಾಗೆ ಉಂಟಾಯಿತೆಂದನ್ನು ಮತ್ತು ಆ ಎರಡು ಜಾತಿಗಳಲ್ಲಿ ಪರಸ್ಪರ ವಿಷ್ಮತೆ ಬಂತೆಂಬದನ್ನು ಸ್ಪಷ್ಟಮಾಡಿ ಹೇಳುವದೆ ನನ್ನ ಮುಖ್ಯ ಉದ್ದೇಶವಾಗಿದೆ.

೧೧. ಕೊನೆಗೆ ನಾನು ವಿನಯಪೂರ್ವಕವಾಗಿ ಸೂಚಿಸುವದೇನೆಂದರೆ, ನಾಮದರಾದ್ಯಯರು ಬ್ರಾಹ್ಮಣೇತರರಿಂದ ವಸೂಲ ಮಾಡಿದ ಹಣವನ್ನು ನಾಟಕಗಳ ವುತ್ಪನ್ನದಿಂದ ತಂದ ಹಣವನ್ನು, ಮತ್ತು ಧಾರವಾಡದ ಔದ್ಯೋಗಿಕ ಪ್ರದರ್ಶನದ ಶಿಲಕು →

ಬಿ.ಎ. ಇವರು ಬಂದಿದ್ದರು. ನಾಮದಾರರು ರಾ.ಬ||ಅರಟಾಳ ಸಾಹೇಬರವರ ಆಗಮನವನ್ನು ಕಂಡು ಜಠಾರ ಮಾಸ್ತರರಿಗೆ ಹಿಂದಿನಿಂದ ಬನ್ನಿರೆಂದು ಅಜ್ಞಾಪಿಸಿ, ರಾವಬಹಾದ್ದೂರವರನ್ನು ಒಳಗೆ ಕರೆಯಿಸಿಕೊಂಡು ಕರ್ನಾಟಕ ಕಾಲೇಜದ ಪ್ರಸ್ತಾಪವನ್ನು ತೆಗೆದರು. ಅವರ ಪ್ರಶ್ನೆಗಳಿಗೆಲ್ಲ ರಾ.ಬ||ರವರು ಸಮರ್ಪಕವಾದ ಉತ್ತರಗಳನ್ನು ಕೊಡುತ್ತ ಹೋದಂತೆ, ಇವರ ಸತ್ಯವಂತಿಕೆ, ನ್ಯಾಯ ನಿಷ್ಠತೆ, ವಿದ್ಯಾಭಿಮಾನತೆಗಳ ಹೊಳಪು ಪ್ರತಿಯೊಂದು ಮಾತಿನಲ್ಲಿ ಝಳಕು ಹೊಡೆಯುತ್ತಲಿತ್ತು. ವೀರಶೈವರಲ್ಲಿ ಕರ್ನಾಟಕ ಕಾಲೇಜದ ಬಗ್ಗೆ ಅನಾದರವಿರುತ್ತದೆಂದು ನಂಬಿದ ಅವರ ತಿಳುವಳಿಕೆಯಲ್ಲಿ ತಪ್ಪಾಗಿರುತ್ತದೆಂಬ ಭಾವನಾಂಕುರವು ಅವರ ಹೃದ್ಭೂಮಿಯಲ್ಲಿ ಆಗಲೇ ಮೊಳೆಯಹತ್ತಿತು. ನಾಮದಾರರು ರಾವಬಹಾದೂರವರ ಕೂಡ ಸಮಗ್ರ ೨ ತಾಸುಗಳ ವರೆಗೆ ಸಂಭಾಷಿಸಿದರು.

→ ಹಣವನ್ನು ಬ್ರಾಹ್ಮಣ ಲಿಂಗಾಯತರಿಂದ ತಮ್ಮ ತಮ್ಮ ಸಮಾಜಗಳಲ್ಲಿ ವಸೂಲ ಮಾಡಲ್ಪಟ್ಟ ರಕಮಿನ ಹೊರತಾಗಿ ಒಂದು ಬೇರೆಯಾದ ಸಾಮಾನ್ಯ ನಿಧಿಯೆಂದು ತಿಳಿಯತಕ್ಕದ್ದು. ಮತ್ತು ಕರ್ನಾಟಕ ಕಾಲೇಜದ ಫಂಡು ಸುಮಾರು ಯರಡುವರಿ ಲಕ್ಷವಾಗುವಂತೆ ಬ್ರಾಹ್ಮಣರು ತಮ್ಮ ಸ್ವಂತಜಾತಿಯ ಜನರಿಂದಲೇ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂದು ಅವರಿಗೆ ಸ್ಪಷ್ಟವಾಗಿ ತಿಳಿಸಿ ಹೇಳಬೇಕು.

ಮುಕ್ಕಾಂ ಧಾರವಾಡ — ಆರ್.ಸಿ. ಅರಟಾಳ ಆಯ್.ಎಸ್.ಓ.
ತಾರೀಖು ೧೮ನೇ ಮಾಹೆ ಜನವರಿ ಇಸವಿ ಸನ್ ೧೯೧೬. — ರಿಟಾಯರ್ಡ ಡಿಸ್ಟ್ರಿಕ್ಟ ಡೆಪ್ಯೂಟಿ ಕಲೇಕ್ಟರ ಬೆಳಗಾವ

[ರುದ್ರಗೌಡರಿಗೆ ಮೇಲಧಿಕಾರಿಗಳಿಂದ ಶಿಫಾರಸ್ಸು ಪತ್ರಗಳು]

Extract from the certificates recorded in Jan. 1878 by J.B. Richey Esquire, in the certificate book belonging to the office of the Collector of Dharwar.

"8. Rudragowda was special Famine Karkun during the past year. He has earned an excellent character for steady hard work and a marked interest in his duty. I believe him to be a thoroughly trustworthy and conscienious subordinate, willing and careful"

True extract furnished to Mr. Rudragouda Chenvirgouda Artal, Deputy Chitnis.

Dharwar. — Sd/- J.R. Middleton
20th June 1881. — Acting Collector.

Mr. Rudragouda Chenvirgowda served under me as a Karkun and also as clerk in the Accounts Office for about one year and gave entire satisfaction. He was in every way the most promising clerk I ever had in the Accounts Office and I believe him to be quite trustworthy.

Dharwar Collector's Office — Sd/- J. Dracup.
23rd April 1879 — Huzur Dy. Collector

Forwarded to the Collector for approval. Being about to retire, the undersigned deems it right to record his appreciation of the cheerful and intelligent manner in which Mr. Rudragouda Chenvirgouda performed his work.

Sd/- J. Dracup
Huzur Dy. CollectorDharwar
2nd May 1879

Approved
Sd/- J.Elphinston.
Acting Collector. →

ಈ ಅಪೂರ್ವ ಸಮಾಗಮ-ಸಂಭಾಷಣಾದಿಗಳಲ್ಲಿ ರಾವಬಹಾದೂರವರ ವಿಷಯವಾಗಿಯೂ, ವೀರಶೈವ ಸಮಾಜದ ವಿಷಯವಾಗಿಯೂ, ಅವರ ವಿದ್ಯಾಭಿಮಾನದ ವಿಷಯವಾಗಿಯೂ, ನಾಮದಾರರಿಗೆ ಆದರ ಬುದ್ಧಿಯುತ್ಪನ್ನವಾಗಿ ಹೋಯಿತು.

ವಾಚಕರೆ, ಈ ಸತ್ಯಾನ್ವೇಷ ಬುದ್ಧಿಯ ಪ್ರಭಾವವೆಷ್ಟು ನೋಡಿರಿ: ರಾವಬಹಾದ್ದೂರವರ ಸರಳವಾದ ಸತ್ಯಾಶ್ರಯಭೂತವಾದ ಗಂಭೀರ ವಿಚಾರಗಳೆಂಬ ಝುಂಝಾವಾತಕ್ಕೆ ಆ ಬ್ರಾಹ್ಮಣರ ಜಾಳುನುಡಿಗಳೆಂಬ ಮೇಘಪಜ್ತಿಗಳು ತಕ್ಷಣದಲ್ಲಿ ಅದೃಶ್ಯವಾಗಿ ಹೋದವು. ಈ ಬಿರುಗಾಳಿಯು ಬೀಸುವ ಮೊದಲು ಮೋಡಗಳಿಂದ ಮುಸುಕಿದ ಆಕಾಶವು ಘುಡುಘುಡುಸಿತು. ಆ ಗಡಗಡಾಟದಲ್ಲಿ ಒಂದು ಚಪಲತರವಾದ ಕೊಲ್ಮಿಂಚು ಹೊಳೆಯಿತು. ಇನ್ನು ಮುಸಲಧಾರೆ ಮಳೆಯಾಗಿ ಜಲಪ್ರಳಯವೆಲ್ಲಿಯಾಗುವದೋ ಎಂದೆನ್ನುವಷ್ಟರಲ್ಲಿ, ಸಕಾಲಕ್ಕೆ

→ Extract from paras 5 and 8 from letter No. 2246, dated 3rd May 1880 written by Mr. Elphinston, the late Collector of Dharwar, to the Commissioner S.D. regarding the appointment of Chitnis to the Collector of Dharwar.

"5 Mr. Rudragowda has for the last two years atleast as Dy. Chitnis, visited all the Taluka Offices in the Zilla, and has assisted in examining the Revenue and Magisterial work done in each, and thus he has had many more opportunities of knowing the whole of the Revenue officials of the District than any other subordinate in the Revenue Department, except the Chitnis who is now leaving me. I am sure from my two years every day experience of him that he is an honest, impartial officer and is also a good reader of Kanarese and he can translate with equal facility into English or Marathi.

"8. On the point whether or no there are fitter or as fit men as Mr. Rudragowda among the seniors for the post of Chitnis, I have already touched in my 5th para. I do not believe that there is one of the officials mentioned in the list called for by you, in your No. 831 of the 22nd ultimo, whose knowledge of the whole District and of the officials in it and whose general efficiency in the post would enable him to give the Collector such reliable aid and information and who would keep the subordinates in the office in order and discipline, and I express this opinion in the interests of the District quite as much for the individual interests of the Dy. Chitnis. On two or three occasions during the Chitnis absence he has acted for him with efficiency"

True extract furnished to Mr. Rudragowda Chenvirgowda, Dy Chitnis.

Dharwar — Sd/- R. Middleton
24th June 1981 — ag. Collector.

Extract from certificates recorded in July 1880 by J. Elphinston, Esquire, late Collector of Dharwar.

The undersigned entirely concurs with his predecessor Mr. Richey in his estimate of the under mentioned Government Officer VII Mr. Rudragowda who has been Acting as Chitnis for 3 1/2 months, and whom the undersigned has repeatedly asked the Commissioner to confirm in the appointment. The undersigned would suggest to his successor to make a trial of him for a few months longer, and then (if his experience of him is the same as that of the undersigned who has always found him clever, hardworking and perfectly honest, and one who is thoroughly opposed to the corruption which is so prevalent among officials in this zillah) to appoint him as his Chitnis when the Commissioner cannot but confirm him, for he unites every qualification a man should have for the post i.e. talents, a knowledge of English and of the law Revenue and Magesterial- honesty and that of not belonging to the large body of Government servants who are of the same caste in every rank and gradation of the sub-Revenue Department in this Zilla.

"No VII. Rudragowda has already been described. Mr. Richey has in a few words described his chief characteristics viz., his steady hard work, marked interest →

ಝುಂಝಾವಾತವು ಬೀಸಿ, ಆ ಮೇಘಪಙ್ತಿಗಳನ್ನೆಲ್ಲ ಭೇದಿಸಿ ಓಡಿಸಿದುದರಿಂದ ನಭೋಮಂಡಲವು ನಿರಭ್ರವಾಗಿ ಪ್ರಕಾಶಿಸಹತ್ತಿತು.

ವೀರಶೈವರ ವಿದ್ಯಾಭಿವೃದ್ಧಿಗಾಗಿ ಅಹೋರಾತ್ರಿ ಎಲ್ಲವೂ ಅವಿಶ್ರಾಂತವಾಗಿ ಶ್ರಮಪಡುತ್ತಿರುವ ಮತ್ತು ವಿದ್ಯಾಭಿವೃದ್ಧಿಯೇ ಸಮಾಜೋನ್ನತಿ ಎಂಬ ತತ್ವವನ್ನು ಜಪಿಸುತ್ತಿರುವ, ವೀರಶೈವ ವಿದ್ಯಾಭಿವೃದ್ಧಿಯ ಫಂಡಿನ ಉತ್ಪಾದಕರಾಗಿರುವ, ಕೇವಲ ವೀರಶೈವರ ಉನ್ನತಿಯೇ ತಮ್ಮ ಉನ್ನತಿಯೆಂದು ಪರಿಭಾವಿಸಿ ಸ್ವಮತಾಭ್ಯುದಯ ಕಾರ್ಯದಲ್ಲಿ ತ್ರಿಕರಣಪೂರ್ವಕ ತತ್ಪರರಾಗಿರುವ ರಾ.ಬ॥ಅರಟಾಳ ಸಾಹೇಬರಿಗೆ ಕರ್ನಾಟಕ ಕಾಲೇಜ ಸ್ಥಾಪನೆಯ ಕಾರ್ಯದಲ್ಲಿ ತಿಲಾಂಶವಾದರೂ ಅನಾದರ ಬುದ್ಧಿಯಿರಬಹುದೇ? ಇಂಥ ಕ್ಷುದ್ರ ಭಾವನೆಗೆ ಇವರ ನಿರ್ಮಲಾಂತಃ

→ in his duty and his thorougly conscientious and careful discharge of his duties. He knows the District and the officers in it well, having travelled in every Taluka for some years with the Collector and he is as determined a foe to dishonesty and corruption in others as he is scrupulously honest himself. This will and has caused him enemis which a more time serving policy would have saved him from".

True Extract.
Sd/- J.Elphinston ag. Collector
Sd/- J.R. Middleon ag. Collector
Dharwar, 23rd Oct. 1880.

True extract furnished to Azam Rudragowda C. Chitnis.

[ಶ್ರೀಮಂತ ಶಿರಸಂಗೀ ಸುಂದರಾಬಾಯಿ ಸಾಹೇಬರವರ ದತ್ತಕ ಪ್ರಕರಣ]

ಶ್ರೀಮಂತ ಶಿರಸಂಗೀ ಬಾಯೀಸಾಹೇಬರವರು ಸರದೇಸಾಯಿಯವರು ಮಾಡಿಟ್ಟ ಮೃತ್ಯುಪತ್ರವನ್ನು ರದ್ದಪಡಿಸಿ, ದತ್ತಕ ಮಗನಿಗಾಗಲೀ ಅಥವಾ ತಮ್ಮ ಸ್ವಂತಃ ಕಬ್ಜಾಕ್ಕೆ ಆಗಲೀ ದೇಸಗತ್ತ ವತನ ತಗೊಳಬೇಕೆಂದು ೧೫ ವರ್ಷ ವಿಶ್ವಪ್ರಯತ್ನ ಮಾಡಿದ್ದು ಸಾಧ್ಯವಾಗಲಿಲ್ಲ-

ಶ್ರೀಮಂತ ಸುಂದರಾಬಾಯಿ ಸಾಹೇಬರವರು ಬೆಳಗಾಂವಿಯ ಫಸ್ಟಕ್ಲಾಸ ಸಬ್ ಜಜ್ಯಕೋರ್ಟಿನಲ್ಲಿ ನಂ 50/1909 ನೇದ್ದು ತಂದರು. ಅದರಲ್ಲಿ ಮಿ॥ ವಿ.ವಿ. ಫಡಕೆ, ಎಫ್.ಸಿ. ಸಬ್‌ಜಜ್ಯರವರು ಚವಕಸೀ ಮಾಡಿ ಮೇಹರ್ಬಾನ ಜಜ್ಯ ಕೋರ್ಟಿನಿಂದ ಪ್ರೊಬೇಟ ಸಿಕ್ಕಿದ್ದೂ ಕೂಡಾ ಲಂಚ ತಿಂದು ದತ್ತಕ ಕಾಯಿಂ ಮಾಡಿ, ಇಸ್ಟೇಟದ ಕಬಜಾ ದತ್ತಕ ಮಗನಿಗೆ ಸಿಗಬೇಕೆಂದು ತಾ. ೩ನೇ ಮಾರ್ಚ ೧೯೧೦ನೇ ಇಸ್ವಿಯ ದಿವಸ ಠರಾವ ಬರೆದರು. ಈ ಬಗ್ಗೆ ರಾ.ಬ॥ಅರಟಾಳ ಸಾಹೇಬರವರಿಗೆ ಸಂಶಯ ಬಂದು, ಮೇಹರ್ಬಾನ ಕಲೇಕ್ಟರ ಸಾಹೇಬ (B.A. Brenden)ರವರ ಹುಕ್ಕುಂ ಪ್ರಕಾರ ಪೂರ್ವ ತಪಾಸಣೇಮಾಡಿ ಸರಕಾರಕ್ಕೆ ಬರೆದ್ದರ ಮೇಲಿಂದ ಸದರೀ ಸಬಜಜ್ಯರವರ ಮೇಲೆ ಕಮೀಶನ ಕೂತು, ಮೇಹರ್ಬಾನ Kenneth William Barlee B.A. I.C.S. Dublinರವರು ಖಟ್ಲೇದ ಚವಕಶೀಮಾಡಿ ರಾ.ಬ॥ಅರಟಾಳ ಸಾಹೇಬ ಮತ್ತು ಮಿ॥ ಕೇ. ಬೀ. ಅಚರೇಕರ ಮುಂತಾದವರ ಸಾಕ್ಷಿಗಳನ್ನು ತೆಗೆದುಕೊಂಡು ಸರಕಾರಕ್ಕೆ ಬರೆದರು. ಅಲ್ಲಿ ಸದ್ರಿ ಗುನ್ಹೇದ ದಶಿಂದ ಸಂಶಯವಾಗಿ ಸಂಶಯದ ಫಾಯಿದೇ ಆರೋಪಿಗೆ ಕೊಟ್ಟು, Scotch verdict ಎಂದು ಠರಾವಮಾಡಿ ದೋಷಮುಕ್ತಮಾಡಿ ಬಿಟ್ಟುಬಿಟ್ಟರು. ಮೇಲ್ಕಂಡ ನಂಬರ ೫೦/೧೯೦೯ನೇ ದಾವೇದ ವಿರುದ್ಧ ಹೈಕೋರ್ಟಿಗೆ ಅಪೀಲ ನಂಬರ ೮೦/೧೯೧೨ನೇದ್ದು ದಾಖಲ ಆಗಿ ಸದರೀ ಅಪೀಲ ನಾಮದಾರ ಹೈಕೋರ್ಟ ನ್ಯಾಯಾಧೀಶರಾದ Messers Justice B.Scott and J.J. Heaton ಸಾಹೇಬರವರ ಫಂಡಿನಂತೆ ಅಂದರೆ ಮೆಹರ್ಬಾನ ಬೆಳಗಾಂವಿಯ ಕಲೇಕ್ಟರ ಮತ್ತು ಟ್ರಸ್ಟೀ ಜನರ ಅನುಗುಣವಾಗಿ ನಿರ್ಣಯಿಸಲ್ಪಟ್ಟಿತು. ಇದರ ಮೇಲೆ ಸಿವ್ಹಿಲ ಅಪ್ಲಿಕೇಶನ ೭೩೮/೧೯೧೩ನೇದ್ದು ವಿಲಾಯತಿಗೆ ಅಪೀಲು ಮಾಡಲಿಕ್ಕೆ ಪರವಾನಗೀ ಬೇಡಿದ್ದರಲ್ಲಿ, ೧೪ನೇ ಎಪ್ರಿಲ್ ೧೯೧೬ನೇ ಇಸ್ವಿಯಲ್ಲಿ ಚೀಫ ಜಸ್ಟೀಸ ಬಿ. ಸ್ಕಾಟ್ ರವರಿಂದ ಸರ್ಟಿಫಿಕೇಟ ದೊರಕಿಸಿಕೊಂಡು, ಪ್ರೀವ್ಹಿಕೌನ್ಸಿಲಿಗೆ ಅಪೀಲ ನಂಬರ ೫೭/೧೯೧೬ನೇದ್ದು →

ಕರಣದಲ್ಲಿ ಕಿಂಚಿತ್ತಾದರೂ ಅನುವು ದೊರೆದೀತೇ? ಇಂಥ ಕ್ಷುಲ್ಲಕ ವಿಚಾರವು ಇವರ ಸ್ವಪ್ನದಲ್ಲಿಯಾದರೂ ಉದ್ಭವಿಸೀತೇ? ಎಂದಿಗೂ ಆಗಲಾರದು. ಕರ್ನಾಟಕ ಕಾಲೇಜದ ವಿಷಯವಾಗಿ ರಾವಬಹಾದ್ದೂರವರ ಸಾನುಭೂತಿಯು ಸಂಪೂರ್ಣವಾಗಿದ್ದರೂ ಇವರ ವಿಚಾರಗಳು ಮಾತ್ರ ಬ್ರಾಹ್ಮಣರಿಂದ ತೀರ ಭಿನ್ನವಾಗಿದ್ದವು. ಯಾಕಂದರೆ ಇವರು ಬ್ರಾಹ್ಮಣರು ಕುತಂತ್ರಗಳನ್ನೆಲ್ಲ ಬೊಡ್ಡೆಯಿಂದ ಬಲ್ಲವರು. ತಾವು ಸ್ವತಃ ಏನೂ ಕೊಡದೆ ಯಾವದೊಂದು ಸಾರ್ವಜನಿಕ ಕೆಲಸದಲ್ಲಿ ತೊಡಗಿಕೊಂಡು, ಮುಂದಾಳವಾಗಿ ಆ ಕೆಲಸವನ್ನು ನಾವೇ ಮಾಡಿದೆವೆಂಬ ತಮ್ಮ ಪ್ರತಿಭೆಯನ್ನೇ ತೋರಿಸಲಿಚ್ಛಿಸುವ ಈ ಬ್ರಾಹ್ಮಣರ ಜಾಣ್ಮೆಯು ರಾ.ಬ॥ರವರಿಗೆ ಪೂರಾ ಗೊತ್ತುಂಟು. ಯಾರಿಂದಾಗಲಿ ಯಾವದೊಂದು ಸಂಸ್ಥೆಯು ಪೂರ್ಣಾವಸ್ಥೆಗೆ ಬರುವದನ್ನು ಕಂಡೊಡನೆ ಅದರ ಕಳಸವನ್ನಿಡಲಿಕ್ಕೆ ಓಡಿ ಬರುವವರು ಬ್ರಾಹ್ಮಣರೇ ಯಾವದೊಂದು ಫಂಡು ಯಾವ ಜನಾಂಗದಿಂದಾಗಲಿ

→ ದಾಖಲಮಾಡಿದರು. ಇದರಲ್ಲಿ ಪ್ರೀವ್ಹಿಕೌನ್ಸಿಲ್ಲದವರು ಚವಕಶೀಮಾಡಿ ತಾ. ೧೫ನೇ ಅಕ್ಟೋಬರ ೧೯೧೮ನೇ ಇಸ್ವಿಯ ದಿವ್ಸ ಹೈಕೋರ್ಟಿನ ಹುಕ್ಕುಂ ನಾಮೇ ಕಾಯಿಂ ಮಾಡಿದ್ದಲ್ಲದೆ, ಟ್ರಸ್ಟೀ ಜನರಿಗೆ ಆದ ಖರ್ಚು ಸಹ ಕೊಡಸಿದರು. ಆ ಪ್ರಕಾರ ತಾ. ೨೩ನೇ ಅಕ್ಟೋಬರ ಸನ್ ೧೯೧೮ ಇಸ್ವಿ ದಿವಸ ಡಿಕ್ರಿ ಸಹಿತ ಬಾದಾಶಾಹೀ ಮೋಹರಿನಿಂದ ತಯಾರಿಸಲ್ಪಟ್ಟಿತು.

ಈ ಠರಾವಿನ ಪ್ರಕಾರ ಮೇಹರ್ಬಾನ ಕಲೇಕ್ಟರ ಸಾಹೇಬ ಬಹಾದೂರ ಬೆಳಗಾಂವ ಇವರು, ಇಸ್ಟೇಟದ ಕಬ್ಜಾ ಮೃತ್ಯುಪತ್ರದ ಪ್ರಕಾರ ಶ್ರೀಮಂತರು ತೀರಿದ ಕೂಡಲೆ ಕೋರ್ಟ ಆಫ್ ವಾರ್ಡ್ಸ (ಮೇಹರ್ಬಾನ ಕಮೀಶನರ ದಕ್ಷಿಣಭಾಗ) ಇವರ ಕಡಿಗೆ ಇದ್ದದ್ದನ್ನು ತಗೊಳ್ಳಬೇಕೆಂದನ್ನುವಷ್ಟರಲ್ಲಿ ಬಾಯಿ ಸಾಹೇಬರು ಕೋರ್ಟ ಆಫ್ ವಾರ್ಡ್ಸದವರನ್ನೇ ಪ್ರತಿವಾದಿ ಮಾಡಿ, ನಾನು ಅಜ್ಞಾನ ಇದ್ದವೇಳೆಯಲ್ಲಿ ನನ್ನ ಯಜಮಾನರಾದ ಶಿರಸಂಗೀ ಶ್ರೀಮಂತರು ತೀರಿ ಹೋದರು. ಆದ್ದರಿಂದ ನನ್ನವತಿಯಿಂದ ನಿಮ್ಮ ಕಬ್ಜಾದಲ್ಲಿ ೧೨ ವರ್ಷದಕಿಂತಲೂ ಹೆಚ್ಚು ಕಬ್ಜಾ ಅದೆ. ಕಾರಣ ನನ್ನ ಕಬ್ಜಾಕ್ಕೆ ಸಿಗಬೇಕೆಂದು ಪುನಃ ಬೆಳಗಾವಿಯ ಫರ್ಸ್ಟಕ್ಲಾಸ ಕೋರ್ಟಿನಲ್ಲಿ ಅಸಲ ದಾವೆ ೧೩/೧೯೧೯ನೇದ್ದು ಮಾಡಿದರು. ಈ ದಾವೇದಲ್ಲಿ ರಾ॥ಬ॥ಎನ್.ಆರ್. ಕೊಪ್ಪಿಕರ ಸಬಜಜ್ಯರು ಮೆ॥ಕಮೀಶನರ ಸಾಹೇಬರಿಗೆ ದಾವೇ ನಿಕಾಲೇ ಆಗೂವರಿಗೆ ಯಾರ ಕಡಿಗೆ ಕಬ್ಜಾ ಕೊಡಬಾರದೆಂದು ಮನಾಯಿ ಹುಕ್ಕುಂ ಮಾಡಿದರು, ಅಮ್ಮಣಗಿ ಗ್ರಾಮದಲ್ಲಿಯ ಇನಾಂ ಜಮೀನುಗಳನ್ನು ಶ್ರೀಮಂತರು ಹಯಾತಿಯಲ್ಲಿ ಲಿಂಗಾಯಿತ ಫಂಡಿಗೆ ಸಮರ್ಪಿಸಿದ ಆಸ್ತಿಗೆ ಸಹಾ ಮನಾಯಿ ಮಾಡಿದರು. ಮತ್ತು ಇದರಲ್ಲಿ ಎದುರುಗಾರ ಪಕ್ಷಗಾರರಿಗೆ ನೋಟ್ಸ ತೆಗೆದು, ತಕರಾರು ಸಹ ಕೇಳದೇ ಮಾಡಿದರು. ಇಷ್ಟರಲ್ಲಿ ಸದ್ರಿ ಮುನಸೂಫರವರಿಗೆ ಧಾರವಾಡಕ್ಕೆ ವರ್ಗವಾದ್ದರಿಂದ ಇವರ ಜಾಗೆಕ್ಕೆ ಮಿ॥ ಈ. ಟಿ. ರೇಗೋ ಸಬ್ಬಜಜ್ಜರವರು ಬಂದು, ಕಡೇ ನಿಕಾಲೇ ಮಾಡಿ, ಬಾಯಿಸಾಹೇಬರವರ ದಾವೇ ರದ್ದು ಪಡಿಸಿದರು. ತಾ. ೨೧-೧೦-೧೯೧೯ ಇಸ್ವಿ. ಆ ಪ್ರಕಾರ ಯಾವತ್ತು ಟ್ರಸ್ಟಿ ಜನರ ತಾಬಾಕ್ಕೆ ಬಂತು. ಅನಂತರ ಈ ಅಸಲ ನಂಬರದ ಮೇಲೆ ಹೈಕೋರ್ಟಿಗೆ ಅಪೀಲ ಮಾಡಿದ್ದರಲ್ಲಿ ಹೈಕೋರ್ಟ ಅಪೀಲ ನಂಬರ ೧೭೮/೧೯೧೯ನೇದ್ದು ಬಿದ್ದು ಮಿ॥ ಜಸ್ಟೀಸ್ ಹೀಟನ್ ಮತ್ತು ಮಿ॥ ಜಸ್ಟಿನ್ ಎನ್.ಸಿ. Medeod ಇವರು ತಾ. ೧೯ ನವಂಬರ ೧೯೧೯ ಇಸವೀ ದಿವಸ ಅಪೀಲ ಸಮರೀಲೀ ಡಿಸ್ಸಮಿಸ್ಸ ಮಾಡಿದರು. ಆಮೇಲೆ ವಿಲಾಯತಿಗೆ ಅಪೀಲ ಮಾಡಲಿಕ್ಕೆ ಪರವಾನಗೀ ಬೇಡಿ ಅರ್ಜಿ ನಂಬರ ೮೨/೧೯೨೦ನೇದ್ದು ಮಾಡಿದ್ದರಲ್ಲಿ ವಿಚ್ಯಾರ ಆಗಿ, ತಾ. ೧ನೇ ಸಪ್ಟಂಬರ ೧೯೨೦ನೇ ದಿವಸ ಮಿ. ಜಸ್ಟಿಸ್ ಎನ್.ಸಿ. Medeod ಮತ್ತು C. facott ಇವರು ಮಂಜೂರೀ ಸರ್ಟಿಫಿಕಿಟ ಸಿಗಲಾರದೆಂದು ಠರಾವಮಾಡಿದರು. ಇದರ ವಿರುದ್ಧ ಸೀದಾ ವಿಲಾಯತಿಗೆ ಸ್ಪೇಶಲ್ ಪರವಾನಗೀ ದಶಿಂದ ಅಪೀಲ ಮಾಡಿದ್ದರಲ್ಲಿ, ತಾ. ೨೭ನೇ ಜುಲೈ ೧೯೨೧ ಇಸ್ವಿ ದಿವಸ ಖರ್ಚು ಸಹ್ಹಿ ರದ್ದುಪಡಿಸಿದ ಆರ್ಡರ ಪಾಸಾದ ಬಗ್ಗೆ The Secretary of State for India-London ರವರಿಂದ His Excellency, the Governer of Bombay ರವರ ಮಾರ್ಫತ ಮೇಹರ್ಬಾನ ದಕ್ಷಿಣಭಾಗದ ಕಮೀಶನರ ಸಾಹೇಬರವರ ಕಡಿಗೆ ತಾರು ಬಂತು. ಸದರೀ ತಾರು ಶಿರಸಂಗೀ ಟ್ರಸ್ಟ ಆಫೀಸಿಗೆ ತಾ. ೨೫ನೇ ಅಗಷ್ಟ ೧೯೨೧ ಇಸ್ವಿ ದಿವಸ →

ಕೂಡವಲ್ಲದೇಕೆ? ಅದರ ಶ್ರೇಯಸ್ಸು ಈ ಬ್ರಾಹ್ಮಣರಿಗೇ ಸಲ್ಲತಕ್ಕದ್ದು. ಸಾರಾಂಶ, ಪ್ರತಿಯೊಂದು ಸಾಂಘಿಕ ಕಾರ್ಯದಲ್ಲಿ ಈ ಬ್ರಾಹ್ಮಣ ಪ್ರಸ್ಥವೇ ಬೆಳೆಯಲಿಕ್ಕೆ ಬೇಕು. ಈ ತರದ ಇವರ ಕುಟಿಲ ವರ್ತನವನ್ನು ಕಂಡು ಕೇಳಿ ಬೇಜಾರಾಗಿ ಹೋಗಿದ್ದರು. ನಾಮದಾರರೆಂದೆನ್ನಿಸಿಕೊಳ್ಳುವ ಈ ಬ್ರಾಹ್ಮಣ ಮುಖಂಡರ ಉತ್ಕಟವಾದ ಸ್ವಾರ್ಥಾಭಿಲಾಷೆಯನ್ನು ಸಂಪೂರ್ಣ ಬಲ್ಲವರಾದುದರಿಂದಲೇ ರಾ.ಬ||ರವರು ಇವರ ಆಟಕ್ಕೆ ಆಶ್ರಯ ಕೊಡುತ್ತಿದ್ದಿಲ್ಲ.[೬] ಕೇವಲ ಪ್ರಾಂಜಲ ಬುದ್ಧಿಯಿಂದ ಲೋಕಹಿತಾರ್ಥವಾಗಿ ಬ್ರಾಹ್ಮಣ ನಾಮದಾರರು ಈ ಮಹಾತ್ಕಾರ್ಯದಲ್ಲಿ ತನುಮನಧನಗಳನ್ನು ಸಮರ್ಪಿಸತೊಡಗಿರುತ್ತಾರೆಂದು ರಾ.ಬ||ರವರಿಗೆ ಕಂಡು ಬಂದಿದ್ದರೆ, ಅವರಿಗೆ ಅಪ್ರಾರ್ಥಿತವಾಗಿ ಆಶ್ರಯ ಕೊಡುತ್ತಿದ್ದರು. ಆದರೆ ಅವರ ಇಂಗಿತವು ಲೋಕೋಪಕಾರದ ಕಡೆಗಿರದೆ ಕೇವಲ ಸ್ವಾರ್ಥಪರವಾಗಿತ್ತು.

ಕರ್ನಾಟಕದಲ್ಲಿ ಯಾವದೊಂದು ಸಾರ್ವಜನಿಕ ಕೆಲಸವು ನೆರವೇರಬೇಕಾದರೆ ಅವರಲ್ಲಿ ಲಿಂಗಾಯತರ ಹಣವು ಬಹುವಂಶದಿಂದ ಇರಲಿಕ್ಕೆ ಬೇಕು. ಲಿಂಗಾಯಿತರ ದುಡ್ಡಿಲ್ಲದೆ ಯಾವದೊಂದು ಕೆಲಸವು ಕೊನೆಗಾಣದೆ,

---

→ ತಲುಪಿ ಸಮಾಪ್ತಿ ಆಯಿತು. ಈಗ ಶಿರಸಂಗೀ ಸುಂದರಾಬಾಯಿ ಸಾಹೇಬರಿಗೆ ಯಾವ ಥರದ ಮಾರ್ಗವೂ ತಿಳಿಯದಂತೆ ಆಗಿ, ವ್ಯರ್ಥವಾಗಿ ತಮ್ಮ ಹಣವನ್ನೂ ಖರ್ಚುಮಾಡಿ ಕೊಳ್ಳುವದಲ್ಲದೆ, ಇಸ್ಟೇಟದ ಹಣವನ್ನು ಹಾಳುಮಾಡಿದರು. ಇಂಥಾ ಪ್ರಸಂಗದಲ್ಲಿ ಬ್ರಾಹ್ಮಣ ಜನರು ಮತ್ತು ಮಿ|| ದತ್ತಾತ್ರಯ ವೆಂಕಟೇಶ ಬೆಳವೀ, ಮಿಸ್ತರ ನಾರಾಯಣ ತಿರುಮಲದಾತಾರ ವಕೀಲ-ಮಿಸ್ತರ ಕೃಷ್ಣಾಜಿ ಗೋವಿಂದ ಸೆಟ್ಟಿ ವಕೀಲ ಮುಂತಾದ ಜನರು ಈ ಸಂಸ್ಥಾನವು ಲಿಂಗಾಯತ ಸಮಾಜದವರಿಗೆ ಸಿಕ್ಕರೆ ಜ್ಞಾನಿಗಳಾಗಿ ಮುಂದಾಗುವರೆಂಬ ಹೊಟ್ಟೆಕಿಚ್ಚಿನಿಂದ ಬಾಯೀಸಾಹೇಬರಿಗೆ ಸಹಾನುಭೂತಿಯನ್ನು ತೋರಿಸುತ್ತಾರೋ ಏನೋ ಎಂಬಂತೆ ವಂದೇ ಸವನೇ ಬೆನ್ನುಹತ್ತಿ, ಇಲ್ಲದ್ದೊಂದು ಮಾಹಿತಿಕೊಟ್ಟು, ದುಡ್ಡು ಹಾಳುಮಾಡಿಸಿದರು. ಈ ಬ್ರಾಹ್ಮಣರ ಸಂಗಡ ರಾ.ಬ|| ರುದ್ರಗೌಡರು ೧೫ ವರ್ಷ ವಂದೇ ಸವನೇ ಹೋರಾಡಿ ಹಿಡಿದ ಕೆಲಸವನ್ನು ಬಿಡದೆ ಎಷ್ಟೇ ಕಷ್ಟ ವದಗಿದರೂ ಕಾರ್ಯ ಕೊನೆಗಾಣಿಸಿದರು. ಈ ಮಹನೀಯರು ಈ ಸಂಧಿಯಲ್ಲಿ ಮಾಡಿದ ಪ್ರಯತ್ನಕ್ಕೆ ಬೆಲೆಯೇ ಇಲ್ಲಾ. ಸಾರಾಂಶ, ಇವರು ವಳ್ಳೇ ಮೇಹನತೀಯಿಂದಲೂ ಕಾಳಜೀಪೂರ್ವಕವಾಗಿಯೂ ಕೆಲಸವನ್ನು ಮಾಡಿ ಜಯತ್ಕಾರ ಪಡೆದರು. ಈ ಖಟ್ಲೇದ ಸಾದ್ಯಂತ ಮಾಹಿತಿ ಬಗ್ಗೆ ಇಂಗ್ರೇಜಿ ಫಾಯಿಲ್ ನಂಬರ ೧೬ ಭಾಗ ೧-೨ ಇವುಗಳನ್ನು ನೋಡಿದರೆ ಎಲ್ಲಾ ಹಕೀಕತ ವಿದಿತವಾಗುವದು. (ಮೇಹರ್ಬಾನ ಕಲೇಕ್ಟರ ಸಾಹೇಬರವರಿಗೆ ಸಿರಸಂಗಿ ದೇಸಗತ್ತಿ ಸಂಬಂಧ ಪ್ರೊಬೇಟು ಸಿಕ್ಕ ಮಜಕೂರಿನ ಬಾಬ್ತು ಸಂಗತೀ ಪಾನ ೧೧೩೮ ರಿಂದ ೧೧೪೨ ರ ವರೆಗೆ ಬಂದಿದೆ).[೫]

ಶಿರಸಂಗಿ ಸಂಸ್ಥಾನದ ಮೆ|| ಸುಂದ್ರಾಬಾಯಿ ಸಾಹೇಬರು
೨ನೇ ಸಾರೆ ದತ್ತಕ ರದ್ದುಮಾಡಿಸಿಕೊಂಡ ಸಂಗತಿಯು

ಶಿರಸಂಗಿ ಸಂಸ್ಥಾನಕ್ಕೆ ಹತ್ತು ಇನಾಮೆ ಗ್ರಾಮಗಳಿಗೆ ಅವುಗಳ ಪೈಕಿ ಬೆಳ್ಳೇರಿಯೆಂಬುವ ಒಂದು ಗ್ರಾಮವು ಧಾರವಾಡ ಜಿಲ್ಲಾ ನವಲಗುಂದ ತಾಲೂಕಿಗೆ ಸೇರಿದ ನರಗುಂದ ಪೇಠಾದಲ್ಲಿರುತ್ತದೆ. ಈ ಗ್ರಾಮದಲ್ಲಿ ಪಾಟೀಲ ಕುಲಕರಣಿ ವತನವು ಸಿರಸಂಗಿ ಸರದೇಸಾಯರದು ಇರುತ್ತದೆ. ಈ ವತನಗಳಿಗೆ ವತನೀ ಆಕ್ಟ ಪ್ರಕಾರ ಶಿರಸಂಗಿ ದೇಸಾಯರ ಬಾಯೀಸಾಹೇಬರ ಹೆಸರ್ಲೆ ವತನವು ಹಾಗೂ ಕೆಲಸ ನೋಡುವ ಹಕ್ಕು ಅವರ ಹೆಸರ್ಲೆ ಆದವು. ಅನಂತರ ಅಂದ್ರೆ ಈಗ ೨ ವರ್ಷಗಳ ಹಿಂದೆ ಬೆಳಗಾಂವಿ ವಕೀಲರು ಮತ್ತು ಇತರ ಬ್ರಾಹ್ಮಣರೂ ಸರ್ತಿ ತೆಗೆದುಕೊಂಡು, ಶ್ರೀಮತಿ ಸುಂದರಾಬಾಯಿ ಸಾಹೇಬರವರು ಪುನಃ ತಮ್ಮ ಅಣ್ಣನಾದ ಕಲ್ಲನಗವಡಾ ಬಿನ್ನ ಜಾಯಗವಡಾ ವತನದಾರ ಪಾಟೀಲ ಸಾಕೀನ ಕಲಾಬಿಳಗೀ ಸಂಸ್ಥಾನ ಜಮಖಂಡೀ ಇವರಿಗೆ ಪುನಃ ದತ್ತಕ ತೆಗದುಕೊಂಡು, ಮೆ||ಕಲೇಕ್ಟರ ಸಾ.ಬ. ಜಿಲ್ಲಾ ಧಾರವಾಡ ಇವರ ಹೆಸರ್ಲೆ ದಾಖಲ ಆಗಬೇಕೆಂದು ಅರ್ಜಿಕೊಟ್ಟರು. ಧಾರವಾಡ ಜಿಲ್ಹೇದ ಕಲೇಕ್ಟರ ಸಾ.ರವರು ದತ್ತಕ ಮಗ ಕಲ್ಲನಗೌಡನ ಹೆಸರು ಪೋತಿ ಸರದೇಸಾಯರ

ಯುಕ್ತಿಯಿಂದ ಇಲ್ಲದೆ ಹುರುಪಿನಿಂದ ಲಿಂಗಾಯತರಿಂದ ದುಡ್ಡನ್ನೆತ್ತಿ, ಅದನ್ನು ಕೂಡಿಸಿದ ಶ್ರೇಯಸ್ಸನ್ನು ಪಡೆಯುವದರಲ್ಲಿ ಬ್ರಾಹ್ಮಣರು ಬಹು ಕುಶಲರು. ಮಾಡುವವರೊಬ್ಬರು ಅದನ್ನು ಉಣ್ಣುವವರು ಬೇರೊಬ್ಬರು. ಈ ಗುರುಮಂತ್ರದಿಂದಲೇ ಕಾಲೇಜ ಫಂಡನ್ನು ಸಾಕಷ್ಟು ಕೂಡಿಸಿ, ಸಾರ್ವಜನಿಕದಲ್ಲಿಯೂ ಸರಕಾರದಲ್ಲಿಯೂ ಪ್ರತಿಷ್ಠೆಯನ್ನು ಪಡೆಯಬೇಕೆಂದು ಇವರು ಭಾವಿಸಿದ್ದರು. ಕರ್ನಾಟಕದಲ್ಲಿ ಬ್ರಾಹ್ಮಣೇತರ ಜನರು ಲಿಂಗಾಯತ ಜನಾಂಗಕ್ಕೆ ಅನುಸರಿಸಿ ನಡೆಯುತ್ತಿರುವದರಿಂದ ಕೇವಲ ಬ್ರಾಹ್ಮಣರ ಕಡೆಯಿಂದ ೨-೩ ಲಕ್ಷ ರೂಪಾಯಿಗಳ ವರ್ಗಣಿಯು ಎಂದೂ ಕೂಡುವದಿಲ್ಲೆಂದು ಬ್ರಾಹ್ಮಣ ನಾಮದಾರರು ಪೂರ್ಣವಾಗಿ ತಿಳಿದದರಿಂದ, ಇವರು ಈ ಪ್ರಕಾರವಾಗಿ ಲಿಂಗಾಯತ ಮೊದಲಾದ ಬ್ರಾಹ್ಮಣೇತರ ಜನರಿಗೆ ಬಾಯ್ದೆರೆಯ ಬೇಕಾಯಿತು. ಬ್ರಾಹ್ಮಣ

→ ಜಾಗೇದ ಮೇಲೆ ದಾಖಲಮಾಡಿದರು. ಈ ಸಂಗತೀ ಮೆ. ಕಲೇಕ್ಟರ ಸಾ.ಬ. ಜಿಲ್ಲಾ ಬೆಳಗಾಂವ ಯಿವರಿಗೆ ತಿಳಿದಕೂಡ್ಲೆ ಪುನಃ ಕಲ್ಲನಗೌಡನ ದತ್ಕ ತೆಗೆದುಕೊಂಡದ್ದು ಪ್ರಿವ್ಹಿಕೌನ್ಸಿಲ ಯಿವರು ಮಾಡಿದ ಠರಾವಿಗೆ ವಿರುದ್ಧ ಅದೆಯೆಂದು ರಿಪೋರ್ಟ ಮಾಡಿದರು. ಮುಂದೆ ಕೆಲ್ಸ ನಡಿದು ಸರಕಾರದವರು ಲೀಗಲ ರಿಮೆಂಬ್ರನ್ಸರ ಅಭಿಪ್ರಾಯ ತೆಗೆದುಕೊಂಡು ಕಲ್ಲಪ್ಪಗೌಡನನ್ನು ಎರಡನೇ ಸಾರೇ ದತ್ಕ ತೆಗೆದುಕೊಂಡದ್ದು ಬೇಕಾಯಿದೇಶೀರ ಇರುತ್ತದೆಂದು ರದ್ದು ಪಡಿಸಿರುತ್ತಾರೆ. ಗವರ್ನಮೆಂಟ ರೆಸಲೂಶನ್ ನಂ. ೯೭೩೬. ದಿನಾಂಕ ೧೭ ಡಿಸಂಬರ ೧೯೨೩ ರೆವಿನ್ಯೂ ಡಿಪಾರ್ಟಮೆಂಟ, ಬೆಳಗಾವ.

[ರುದ್ರಗೌಡರಿಗೆ ಮನೆದೇವರು ವೀರಭದ್ರನ ಬಗ್ಗೆ ಭಕ್ತಿ]

ರಾವಬಹಾದೂರ ರುದ್ರಗೌಡರ ಜನ್ಮಭೂಮಿಯಾದ ಅರಟಾಳ ಮಜರೇ ಮಸಳೀಕೊಪ್ಪದಲ್ಲಿ ಶ್ರೀ ಬಸವೇಶ್ವರ ದೇವಾಲಯದ ಸಮೀಪಕ್ಕೆ ಪುರಾಣಿಕಮಠವೆಂಬದೊಂದು ಮಠದ ಮೂಲಪುರುಷ ಅಂದರೆ ಶಿವಮೂರ್ತಿಸ್ವಾಮಿ ಅಯ್ಯಪ್ಪನವರು. ಇವರಿಗೆ ಮೂವರು ಮಕ್ಕಳು, ಗಂಗಾಧರಯ್ಯಾ, ವೀರಯ್ಯಾ ಮತ್ತು ಗದಿಗೆಯ್ಯಾ. ಈ ಪ್ರಕಾರ ಜನರು ಈ ಕುಟುಂಬದವರು ನಿಜ್ಯಾಮ ಇಲಾಖೇ ಪೈಕಿ ಕಂದಗಲ್ಲ ಗ್ರಾಮದ ನಿವಾಸಿಗಳು. ಈ ಗ್ರಾಮವು ಕೃಷ್ಣಾತೀರದಲ್ಲಿದ್ದು ಮುದ್ದೇಬಿಹಾಳ ತಾಲೂಕಿಗೆ ಸಮೀಪದಲ್ಲಿರುತ್ತದೆ. ಈ ಮೂವರು ದುಷ್ಕಾಳದಲ್ಲಿ ಯಾಚಕವೃತ್ತಿಯಲ್ಲಿ ಸಂಚಾರಮಾಡುತ್ತಾ ಮಾಡುತ್ತಾ ಬಂಕಾಪೂರ ತಾಲ್ಲುಕ ಪೈಕಿ ಕಳಸವೆಂಬ ಗ್ರಾಮಕ್ಕೆ ಬಂದು ಇರಹತ್ತಿದರು. ಅಲ್ಲಿಂದ ಪುನಃ ಬಿಟ್ಟು ತಮ್ಮ ಆಪ್ತರ ಊರು ಆದ ಅರಟಾಳ ಹೊಸೂರಿಗೆ ಬಂದರು. ಅವರಲ್ಲಿ ಶಿ॥ಗದಿಗಯ್ಯವರು ಮಾತ್ರ ಹೊಸೂರಲ್ಲಿಯೇ ಸ್ಥಿರವಾಗಿ ನಿಂತರು. ಅವರ ವಂಶದವರು ಅಲ್ಲೇ ಇಹೊತ್ತಿಗೆ ಇರುತ್ತಾರೆ. ಬಾಕಿ ಈರ್ವರು ಮಸಳೀಕೊಪ್ಪದಲ್ಲಿ ಬಂದು ಇರಹತ್ತಿದರು. ಇವರಲ್ಲಿ ವೀರಯ್ಯರವರು ಕನ್ನಡದಲ್ಲಿ ದಿವ್ಯ ಪಂಡಿತರು. ಪುರಾಣ ಹೇಳುವದರಲ್ಲಿ ಹೆಸರು ಪಡೆದವರು. ಕವಿತ್ವರಚನಾ ಮಾಡುವದರಲ್ಲಂತೂ ಅತೀ ನಿಪುಣರು. ಮಾತ್ರ ಶೀಘ್ರ ಕೋಪಿಗಳಾಗಿದ್ದರು. ಇವರ ಅಪಾರವಾದ ವಿದ್ಯಕ್ಕೆ ಬೆಲಿಯೇ ಇಲ್ಲಾ. ಆದ್ದರಿಂದ ಸುತ್ತುಮುತ್ತಲಿನ ಗ್ರಾಮದ ಪಾಟೀಲರಿಗೆ ಬಹಳೇ ಪ್ರೇಮಾಸ್ಪದಕ್ಕೆ ಪಾತ್ರರಾದರು. ಈ ವೀರಯ್ಯನವರು ಪುತ್ರಸಂತಾನವಿಲ್ಲದೆ ತೀರಿಹೋದರು. ಶಿ॥ಗಂಗಾಧರಯ್ಯನವರು ಮಾತ್ರ ಈ ಮಠಕ್ಕೆ ವುತ್ಪತ್ತಿ ಕೊಟ್ಟರು. ಇವರಿಗೆ ಈರ್ವರು ಗಂಡು ಮಕ್ಕಳು. ೧ನೇಯವರು ಅಯ್ಯಪ್ಪನವರು. ೨ನೇದವರು ಶಂಕರಯ್ಯನವರು. ಈ ಶಂಕರಯ್ಯನವರು ಬಹಳೇ ಹುಷಾರ ಇದ್ದರು. ಮಕ್ಕಳಿಲ್ಲದೇ ಮಸಳೀಕೊಪ್ಪದಲ್ಲಿ ಮಾರಿಕಾ ಅಜಾರಿಯಿಂದ ತೀರಿದರು. ಇನ್ನುಳಿದ ಅಯ್ಯಪ್ಪನವರು ಸಹ ತಮ್ಮ ಮನೆತನದ ನೇಮದಂತೆ ಪುರಾಣ ಹೇಳುವದರಲ್ಲಿಯೂ ಭಾಗವತ ಆಟನೋಟಗಳನ್ನು ಕಲಿಸಿ ತಯಾರ ಮಾಡುವದರಲ್ಲಿಯೂ ವುತ್ತಮ ಜ್ಞಾನವಂತರಾಗಿದ್ದರು. ಇವರ ಕುಟುಂಬ ಸವನೂರ ಪೈಕಿ ಜೇಕಿನಕಟ್ಟಿಯವರು, ಇವರ ಹೊಟ್ಟೆಗೆ ಐದು (೫) ಮಂದಿ ಗಂಡು ಮಕ್ಕಳು ಗಂಗಾಧರಯ್ಯ, ಗದಿಗೆಯ್ಯಾ, ಕೆಂಪಯ್ಯಾ, ಶಿವಮೂರ್ತೆಯ್ಯಾ ಮತ್ತು ವಿರುಪಾಕ್ಷಯ್ಯಾ. ಈ ಪ್ರಕಾರ ಜನರೂ, ಇವರ ತಂದೆ ಅಯ್ಯಪ್ಪನವರೂ ತೀರಿದ ಬಳಿಕ ಇವರ ಮನೆತನದಲ್ಲಿ ಕೆಂಪಯ್ಯನವರು ಸಾಧಾರಣ →

ಜನರು ಬರಿಯ ವಾಗಾಡಂಬರದ ಸಹಾಯಕರು. ಬ್ರಾಹ್ಮಣೇತರ ಜನರ ಹಣದ ಸಹಾಯಕರು. ಆದರೂ ಶಿಫಾರಸಿಗೆ ಪಾತ್ರರು ಬ್ರಾಹ್ಮಣರೇ. ಹಾಗೂ ಆ ಫಂಡಿನ ಅಥವಾ ಅದರಿಂದಾದ ಕಾರ್ಯದ ಲಾಭವನ್ನು ಉಪಭೋಗಿಸುವವರು ಬ್ರಾಹ್ಮಣರೇ. ತನುಮನಧನ ಸಹಾಯಮಾಡಿದ ಈ ಬ್ರಾಹ್ಮಣೇತರರು ನಿರಾಶ್ರಿತರಾಗಿ ಆ ಉಪಭೋಗಿಸುವವರ ಬಾಯಿ ನೋಡುತ್ತ ಕೂಡ್ರಬೇಕು. ಹೆಚ್ಚು ಸಹಾಯ ಮಾಡಿದವರಿಗೆ ಹೆಚ್ಚಿನ ಸಲಕರಣೆ ದೊರೆಯುವದು ನ್ಯಾಯವು. ಇದಕ್ಕೆ ವಿಪರೀತವಾಗಿ ಸಹಾಯ ಮಾಡದವರಿಗೇನೇ ಸದಾಶ್ರಯವು ದೊರೆಯುವಂತಾಗುವದು, ಅನ್ಯಾಯವು. ಈ ತರದ ಉಂಡಿ ಕಡಬುಗಳ ಪಂಕ್ತಿ ಭೇದದ ಪ್ರಸಂಗಗಳು ಲಿಂಗಾಯತರಿಗೆ ಅನೇಕ ವೇಳೆ ಸಂಘಟಿಸಿರುವವು. ಇವೇ ಮೊದಲಾದ ಬೀಜ ಮಾತುಗಳನ್ನು ನಾಮದಾರ ಹಿಲ್‌ದೊರೆಗಳು ತಮ್ಮ ಹಾಗೂ ರಾವಬಹಾದ್ದೂರವರ ಸಂಭಾಷಣದಿಂದ ಪೋಷಿಸಿಕೊಂಡು, "ರಾವಬಹದೂರವರೇ, ತಮ್ಮ ಅನುಭವಿಕ ಅಭಿಪ್ರಾಯವು ನಿಜವದೆ. ಇದಕ್ಕನುಸಾರವಾಗಿ ನಿಮ್ಮ ವೀರಶೈವ ಜನಾಂಗ ಉಚ್ಚ ಪ್ರತಿಯ ಶಿಕ್ಷಣಾಭಿವೃದ್ಧಿಗೆ ಆದಷ್ಟು ಸೌಕರ್ಯವನ್ನು ಒದಗಿಸಿ ಕೊಡುವದಕ್ಕೆ ನಾನು ಪೂರ್ಣ ಪ್ರಯತ್ನಪಡುತ್ತೇನೆ. ನಿಮ್ಮ ಲಿಂಗಾಯತರ ಪಕ್ಷದಿಂದ ನೀವು ಒಂದು ಲಕ್ಷ ರೂ.ಗಳನ್ನು ಬ್ರಾಹ್ಮಣರ ಪಕ್ಷದಿಂದ ನಾ||ರೊದ್ದರವರು ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಿಕೊಟ್ಟರೆ ತೀವ್ರವಾಗಿ ನಿಮ್ಮ ಕರ್ನಾಟಕ ಕಾಲೇಜವು ಸ್ಥಾಪನೆಗೊಳ್ಳುವದು" ಎಂದು ಹೇಳಿದ್ದಕ್ಕೆ ರಾ.ಬ||ರವರು ಆನಂದದಿಂದೊಪ್ಪಿಕೊಂಡು ಅವರ ಅಪ್ಪಣೆ ತಕ್ಕೊಂಡರು.

ಈ ಹೊತ್ತು ಸಂಜೆಯ ೫ ಗಂಟೆಯ ಸುಮಾರಕ್ಕೆ ಬ್ರಾಹ್ಮಣ ಜನರು ಹಾಲಗೇರಿಯ ಮೇಲಿರುವ ಸಂಸ್ಕೃತಪಾಠಶಾಲೆಯ ಮೇಲುಪ್ಪರಿಗೆಯಲ್ಲಿ ನಾಮದಾರರವರಿಗೆ ತಾಂಬೂಲ ಸಮಾರಂಭವನ್ನು ಮಾಡುವದಾಗಿ ಗೊತ್ತುಮಾಡಿ, ಆ ಪ್ರಕಾರ ಎಲ್ಲ ಪ್ರತಿಷ್ಠಿತ ಜನರಿಗೆ ಆಮಂತ್ರಣ ಚೀಟಿಗಳನ್ನು ಕಳಿಸಿದ್ದರು. ರಾವಬಹಾದ್ದೂರವರು ಸ್ಟೇಶನದಿಂದ ಬರುತ್ತಿರುವಾಗಲೇ ದಾರಿಯಲ್ಲಿ ಇವರಿಗೊಂದು ಆಮಂತ್ರಣ ಚೀಟಿಯು ಬಂತು. ಬ್ರಾಹ್ಮಣ ಜನರ ಧೂರ್ತತನವು ನಿಜವಾಗಿ ವರ್ಣನೀಯವಾಗಿರುತ್ತದೆ. ಹಿಂದಿನ ದಿವಸ ನಾಮದಾರರು ತಮ್ಮ ಭಾಷಣದಿಂದ ಲಿಂಗಾಯತ ಸಮಾಜವನ್ನು ಅಲ್ಲಗಳೆದದ್ದರಿಂದ ಆನಂದಿತರಾದ ಬ್ರಾಹ್ಮಣರು ಈ ಹೊತ್ತು ಭವ್ಯವಾದ ತಾಂಬೂಲ

→ಮಟ್ಟಿಗೆ ವಿದ್ಯಾವಂತರಿದ್ದು, ಪುರಾಣ ಸಧ್ಯಕ್ಕೆ ಹೇಳುತ್ತಿರುತ್ತಾರೆ. ಮಸಳೀಕೊಪ್ಪದಲ್ಲಿಯೇ ವಾಸಮಾಡಿಕೊಂಡಿರುತ್ತಾರೆ. ಇವರ ತಂದಿ ಅಯ್ಯಪ್ಪನವರಿಗೆ ರಾ.ಬ||ರುದ್ರಗೌಡರು ಭೂಮಿ ಕೆಲವನ್ನು ಇನಾಮು ಮಾಡಿಕೊಟ್ಟಿರುತ್ತಾರೆ. ಅಂದ್ರೆ ಇವರು ತಮ್ಮಲ್ಲಿಗೆ ಬಂದು ಪುರಾಣ ಹೇಳುವದರ ನಿಮಿತ್ಯವಾಗಿಯೂ ತಮ್ಮ ಗೃಹದ ದೇವರಾದ ಅರಟಾಳದ ಶ್ರೀ ವೀರಭದ್ರದೇವರ ರುದ್ರ ಅಭಿಷೇಕ ಮಾಡುವದರ ದೆಶೆಯಿಂದಲೂ ವುಂಬಳಿಯಾಗಿ ಕೊಟ್ಟಿರುತ್ತಾರೆ. ಸದರೀ ಜಮೀನು ಅರಟಾಳದ ಮಜರೇ ಹಂದರಕೊಪ್ಪ (ಕೊಪ್ಪ)ದಲ್ಲಿ ಪಾರ್ಶ್ಯಾ ಯಂಡಿಗೇರಿ ಇವನದ್ದು ವತ್ತಿ ಹಕ್ಕು ಸಹ್ಪಿ ೩೦೦ ರೂಪಾಯಿಗಳಿಗೆ ಖರೀದಿ ತಗೊಂಡು, ಪೌರಾಣಿಕರಾದ ಕೆಂಪಯ್ಯನವರೇ ಉಪಭೋಗಮಾಡುತ್ತಿರುತ್ತಾರೆ. ಇವರಾದರೂ ಶಾಂತವೃತ್ತಿಯವರೂ ಆಜ್ಞಾಧಾರಕರೂ ಆಗಿರುತ್ತಾರೆ. ಇವರಿಗೆ ಕೊಟ್ಟಿರುವ ಜಮೀನು ೬೪ ರೂಪಾಯಿಗಳಿಗೆ ಲಾವಣೀ ಆಗಿರುತ್ತದೆ. ಅದರ ಕಿಮ್ಮತ್ತು ಈಗಿನ ವೇಳೆಕ್ಕೆ ಅಜಮಾಸ ೧೦೦೦-೧೨೦೦ ರೂಪಾಯಿಯ ಬೆಲೆ ಬಾಳುವದು. ಈ ಪುರಾಣೇದವರು ವಿದ್ಯಾವಂತರಾಗಿದ್ದರಿಂದ ರಾ.ಬ||ರವರ ಅಣ್ಣ ತಮ್ಮಂದಿರಾದ ಸೊಲಬಗೌಡರ ನಿಂಗನಗೌಡರ ಮನೆತನದ ಮುದಿಗವಡಾ ವೀರನಗೌಡಾ ಇವರು ಸಹ ಪಡ ಹೊಲಾ ಒಂದು ಕ್ಯಾದಿಗಿ ಮುಂಡಿಗಿ ಹೊಲಾ ಹಿಡಿದು ಕೊಟ್ಟಿರುತ್ತಾರೆ. ಅದು ಈ ಪುರಾಣಿಕ ಮನೆತನಕ್ಕೆ ನಡೀತದೆ. ಸಾರಾಂಶ ರಾ.ಬ||ರುದ್ರಗೌಡರು ಜಂಗಮರ ಮೇಲೂ ಮತ್ತು ಮನೆಯ ಶ್ರೀ ವೀರಭದ್ರದೇವರ ಮೇಲೂ ಎಷ್ಟು ಪ್ರೇಮಭಕ್ತಿಯದೆ ಎಂಬದು ಸಿದ್ಧವಾಗುತ್ತದೆ.[೬]

---

೬. ಆತ್ಮಚರಿತ್ರೆ ಶೈಲಿಯ ಪಠ್ಯ ಇಲ್ಲಿಗೆ ಮುಗಿದಿದೆ - ಸಂ.

ಸಮಾರಂಭವನ್ನೇರ್ಪಡಿಸಿ ರಾ.ಬ॥ರವರಿಗೆ ಬಂದ ಕೂಡಲೇ ಆಮಂತ್ರಣ ಚೀಟಿಯು ದೊರೆಯುವಂತೆ ವ್ಯವಸ್ಥೆಯನ್ನಿಟ್ಟಿದ್ದರು.

ಆಮಂತ್ರಿತರಾದ ರಾ.ಬ॥ರವರು ಸಮಾರಂಭದ ಗ್ರಹವನ್ನು ಪ್ರವೇಶ ಮಾಡಿದಾಕ್ಷಣವೇ ಎಲ್ಲ ಜನರು ಎದ್ದುನಿಂತು, ಇವರನ್ನು ಮರ್ಯಾದೆಯಿಂದ ಬರಮಾಡಿಕೊಂಡರು. ಮುಖ್ಯವಾಗಿ ಎಲ್ಲ ಪ್ರತಿಷ್ಠಿತ ಬ್ರಾಹ್ಮಣರು ಭವ್ಯವಾದ ಪೋಷಾಕುಗಳಿಂದ ಸಮಾರಂಭಕ್ಕೆ ಬಂದಿದ್ದರು. ಇನ್ನೂ ನಾಮದಾರರೇ ಮೊದಲಾದ ಅನೇಕ ಆಂಗ್ಲಾಧಿಕಾರಿಗಳು ಬರುವದಕ್ಕೆ ಅವಕಾಶವಿತ್ತು. ಸಾ॥ಹಿಲ್ ದೊರೆಗಳು ಯಾವಾಗ್ಯೆ ಬಂದಾರೋ, ನಿನ್ನಿನಂತೆ ಈ ಹೊತ್ತು ರಾ.ಬ॥ರುದ್ರಗೌಡರನ್ನಷ್ಟು ಯಾವಾಗ ಭದ್ರಮಾಡಿಯಾರೋ ಎಂದು ಎಲ್ಲ ಬ್ರಾಹ್ಮಣರು ಆತುರಪಡುತ್ತಿದ್ದರು. ಆದರೆ ಈ ಬ್ರಾಹ್ಮಣರ ಮುಖಭದ್ರತೆಯನ್ನೆ ಮಾಡಬೇಕೆಂದು ಮುಂದಾಗಿಯೇ ರಾ.ಬ॥ರವರು ಸಮಾರಂಭಕ್ಕೆ ಬಂದರು. ಇವರು ಬಂದೊಡನೇ ಸಮೀಪದಲ್ಲಿ ಕೂತಿದ್ದ ಮುಮ್ಮಿಗಟ್ಟಿ ಬಾಬಾಸಾಹೇಬ ದೇಸಾಯರ ಇಬ್ಬರು ಕುಮಾರರನ್ನು ಕಂಡು ಕುಶಲವಾರ್ತೆಯನ್ನು ವಿಚಾರಿಸುತ್ತ, ಅವರ ತೀರ್ಥರೂಪರು ಗತಿಸಿದ್ದನ್ನು ಕೇಳಿ ಕಳವಳ ಪಟ್ಟು, ಕಡೆಗೆ "ನೀವು ಕಾಲೇಜದ ಫಂಡನ್ನು ಕೊಟ್ಟಿರುವಿರೋ?" ಎಂದು ಕೇಳಿದರು. ಅವರದಕ್ಕೆ "ಇನ್ನೂ ಕೊಟ್ಟಿಲ್ಲ"ವೆಂದು ಹೇಳಿದರು. "ಆದರೆ ನೀವು ಕೊಡತಕ್ಕ ರಕಮನ್ನು ನಮ್ಮ ಕಡಿಗೆ ಕೊಡತಕ್ಕದ್ದು, ಬ್ರಾಹ್ಮಣರ ಕಡಿಗೆ ಕೊಡಬಾರದು. ಯಾಕಂದರೆ ಕಾಲೇಜ ಫಂಡಿಗೆ ಲಿಂಗಾಯತರ ಪಕ್ಷದಿಂದ ೧ ಲಕ್ಷ ರೂಪಾಯಿ ಕೊಡತಕ್ಕದ್ದೆಂತಲೂ, ಬ್ರಾಹ್ಮಣರು ೧ ಲಕ್ಷ ರೂ. ಕೂಡಿಸಿ ಕೊಡತಕ್ಕದ್ದೆಂತಲೂ ನಾಮದಾರ ಹಿಲ್ ದೊರೆಗಳು ಗೊತ್ತುಪಡಿಸಿ, ಲಿಂಗಾಯತರ ಪಕ್ಷದಿಂದ ವರ್ಗಣಿ ಹಣವನ್ನು ನನಗೆ ವಸೂಲ ಮಾಡಲಿಕ್ಕೆ ತಿಳಿಸಿದ್ದಾರೆ. ಮತ್ತು ನಾಮದಾರ ರೊದ್ದ ಮೊದಲಾದವರು ಈವರೆಗೆ ಬ್ರಾಹ್ಮಣೇತರ ಜನರಿಂದ ವಸೂಲ ಮಾಡಿದ ರಕಮನ್ನು ನನ್ನ ಕಡೆಗೆ ಕೊಡಿಸುವದಾಗಿ ತಿಳಿಸಿದ್ದಾರೆ. ಕಾರಣ ಎಲ್ಲರೂ ನನ್ನ ಕಡೆಗೆ ಜಮೆ ಮಾಡಬೇಕು" ಎಂದು ನಗುನಗುತ್ತ ಹೇಳುತ್ತಿರುವ ನುಡಿಗಳನ್ನು ಯಾವತ್ತೂ ಬ್ರಾಹ್ಮಣರು ಕೇಳಿ ಬೆರಗಾಗಿ, ಚಿತ್ರಸ್ಥ ಬೊಂಬೆಗಳಂತೆ ಸ್ತಬ್ಧರಾದರು. ಅವರಿಗೆ ಯಾವ ಮಾತನ್ನು ಆಡಲಿಕ್ಕೆ ಅವಕಾಶವಾಗಲಿಲ್ಲ. ಕೂತಲ್ಲಿಯೇ ಉಸುರ್ಗರೆದರು. ಅವರ ಮುಖಗಳು ಬಾಡಿದವು. ತಾನೊಂದು ಬಗೆದರೆ ದೇವರು ಒಂದು ಬಗೆದನೆಂಬಂತೆ ಅವರ ಅವಸ್ಥೆಯಾಯಿತು.

ರಾ.ಬ॥ರವರು ನಾಮದಾರರಿಗೆ ಭೆಟ್ಟಿಯಾಗಿ ತಮ್ಮ ಕೀಲಿಯನ್ನು ತಿರುವಿ ಬಂದಿರುತ್ತಾರೆಂದು ಬ್ರಾಹ್ಮಣರು ಆಗಲೇ ತಿಳಿದು ಬಿಟ್ಟರು. ನಾಮದಾರ ನಾಯಿಕ ಇವರು ರಾ.ಬ॥ರವರ ಸಮೀಪಕ್ಕೆ ಬಂದು 'ಆದದ್ದಾದರೂ ಏನು?' ಎಂದು ಕೇಳಿದ್ದಕ್ಕೆ, 'ಆಗುವದೇನು? ಲಿಂಗಾಯತರು ೧ ಲಕ್ಷ ರೂಪಾಯಿ ಹಾಗೂ ಬ್ರಾಹ್ಮಣರು ೧ ಲಕ್ಷ ರೂ. ಹೀಗೆ ಬೇರೆ ಬೇರೆ ಫಂಡು ಕೂಡಿಸಿಕೊಡಬೇಕೆಂದು ಗೊತ್ತಾಯಿತು' ಎಂದು ಹೇಳಿದರು. ಇದನ್ನು ಕೇಳಿ ಮಿ॥ವಿ.ವಿ. ಜೋಶಿ ಪ್ರಿನ್ಸಿಪಾಲರು ಮೊದಲಾದ ಪ್ರತಿಷ್ಠಿತರು "ರಾವಬಹಾದ್ದೂರವರೇ ಒಳ್ಳೇ ಕಡತವನ್ನು ಹಾಯಿಸಿ ಬಂದಿರುವಿರಿ" ಎಂದು ಇವರ ಕರ್ತೃತ್ವ ಶಕ್ತಿಯನ್ನು ಕುರಿತು ಒಳ್ಳೆ ಶಿಫಾರಸು ಮಾಡಿದರು. ಕೂಡಲೆ ನಾಮದಾರ ಹಿಲ್ ದೊರೆಗಳೂ ಮೆ॥ಮೆಕಾನಕೀ ಸಾಹೇಬರವರು ದಯಮಾಡಿಸಿದರು. ನಾಮದಾರರು ತಮ್ಮ ಭಾಷಣದಲ್ಲಿ ಅದೇ ಮಾತನ್ನು ಅಂದರೆ ಲಿಂಗಾಯತ ಹಾಗೂ ಬ್ರಾಹ್ಮಣರು ಪ್ರತ್ಯೇಕವಾಗಿ ಒಂದೊಂದು ಲಕ್ಷ ರೂಪಾಯಿಗಳನ್ನು ಕೂಡಿಸಿ ಕೊಡತಕ್ಕದ್ದೆಂತಲೂ, ಈವರೆಗೆ ಲಿಂಗಾಯಿತರಿಂದ ವಸೂಲಾದ ಹಣವನ್ನು ನಾಮದಾರ ರೊದ್ದರು ರಾ.ಬ॥ಅರಟಾಳ ಸಾಹೇಬರ ಕಡೆಗೆ ಒಪ್ಪಿಸಬೇಕೆಂತಲೂ ಹೇಳಿಬಿಟ್ಟರು. ನಾಮದಾರರ ನಿನ್ನನ ರಂಗು ಇಹೊತ್ತು ಇಲ್ಲದ್ದನ್ನು ಕಂಡು ಬ್ರಾಹ್ಮಣರ ರಸಭಂಗವಾಯಿತು. ನಾಮದಾರರಿಗೆ ರಾ.ಬ॥ರವರು ಏನೋ ಮಂಕುಬೂದಿಯನ್ನೇ ತಳೆದಿರುವರೆಂಬದಾಗಿ ಕಲ್ಪಿಸಿಕೊಂಡರು. ಸಮಾರಂಭವು ಸಮಾಪ್ತಿಯಾದ ನಂತರ ಹೋಗುವ ಮುಂದೆ ನಾಮದಾರರು, ಲಿಂಗಾಯತರಿಂದ ವಸೂಲಾದ ಹಣವನ್ನು

ರಾ.ಬ॥ರವರ ಕಡಿಗೆ ಕೊಡುವುದಾಗಿ ನಾಮದಾರ ರೊದ್ದ ಇವರಿಗೆ ಪುನಃ ಹೇಳಿದರು. ಅವರು ಹೋದ ತರುವಾಯ ರಾ.ಬ॥ರವರಿಗೆ ನಾಮದಾರ ರೊದ್ದರವರು 'ನಿಮ್ಮ ಜನರ ಕಡೆಯಿಂದ ವಸೂಲಾದ ವರ್ಗಣೀ ರಕಮನ್ನು ತೆಗೆದುಕೊಂಡು ಹೋಗಿರೆಂ'ದು ಹೇಳಿದರು. 'ಈ ರಕಮನ್ನು ಇಲ್ಲಿಯೇ ಮಿ॥ ಶಾಂತವೀರಪ್ಪಣ್ಣ ಮೆಣಸಿನಕಾಯಿ ಇವರ ಕಡೆಗೆ ಕೊಟ್ಟು ಬಿಡಿರಿ. ಅಂದರೆ ಅದು ನನಗೆ ಮುಟ್ಟುವದು' ಎಂದು ಹೇಳಿ ಟಾಂಗೆಯನ್ನು ಏರಿದರು. ಇವರ ಟಾಂಗೆಯಲ್ಲಿ ಮಿ॥ ಮೆಣಸಿನಕಾಯಿಯವರೂ ಮಿ॥ ಕಂಬಳೀ ವಕೀಲರೂ ಕೂತಿದ್ದರು. ಆಗ ನಾ॥ ರೊದ್ದ ಮಿ॥ ಕರ್ಮಲಾಪೂರ ಮೊದಲಾದ ಬ್ರಾಹ್ಮಣ ಮುಖಂಡರು ಹತ್ತರ ಬಂದು 'ರಾವಬಹಾದ್ದೂರವರೇ, ನಾವು ಪ್ರತ್ಯೇಕವಾಗಿ ವರ್ಗಣೀ ವಸೂಲ ಮಾಡದೆ, ಈರ್ವರೂ ಕೂಡಿ ವಸೂಲಮಾಡಿ ೨ ಲಕ್ಷ ರೂ. ಕೂಡಿಸಿಕೊಟ್ಟರಾಯಿತು' ಎಂದು ಔಪಚಾರಿಕ ನುಡಿಗಳಿಂದ ಆದರಿಸಹತ್ತಿದರು. ಈ ಶುಷ್ಕೋಪಚಾರಕ್ಕೆ ರಾ.ಬ॥ರವರು ಎಂದಿಗಾದರೂ ಒಡಂಬಡುವರೇ. ಇವರು ಕೂಡಲೇ ಕ್ರುದ್ಧರಾಗಿ ನಾಮದಾರ ರೊದ್ದರೇ ಮೊದಲಾಗಿ ಯಾವತ್ತು ಪ್ರಮುಖ ಬ್ರಾಹ್ಮಣರ ಮುಂದೆ "ಏನು ಇದು ನಿಮ್ಮ ನಡತಿಯು. ನಾಮದಾರ ಹಿಲ್ ದೊರೆಗಳ ಮುಂದೆ ನನ್ನ ವಿಷಯವಾಗಿ ಇಲ್ಲದ್ದೊಂದು ಚಾಡೀ ಹೇಳಿ, ಈಗ ಇಲ್ಲಿ ಇಬ್ಬರೂ ಕೂಡಿ ವರ್ಗಣೀ ಮಾಡೋಣವೆಂದು ಹೇಳಲಿಕ್ಕೆ ನಿಮಗೆ ನಾಚಿಕೆ ಬರುವದಿಲ್ಲವೆ? ಒಳಗೆ ಕಪಟೋಪಾಯಗಳನ್ನಿಟ್ಟುಕೊಂಡು, ಹೊರಗೆ ಸಭ್ಯರಂತೆ ನಟಿಸುವದು ನನಗೆ ಸಹಸಾ ಸೇರುವದಿಲ್ಲ. ನಾಮದಾರ ಹಿಲ್ ದೊರೆಗಳ ಹೇಳಿಕೆಯಂತೆ ನಾನು ಪ್ರತ್ಯೇಕವಾಗಿ ವರ್ಗಣೀ ಕೂಡಿಸುತ್ತೇನೆ. ನೀವಾದರೂ ಪ್ರತ್ಯೇಕವಾಗಿ ಕೂಡಿಸಿರಿ" ಎಂದು ಹೇಳಿ ಹೊರಟುಹೋದರು. ಇನ್ನು ನಮ್ಮ ಆಟವೇನು ನಡೆಯುವದಿಲ್ಲೆಂದೂ, ನಮ್ಮ ಗುಪ್ತತಂತ್ರವು ಗೊತ್ತಾಯಿತೆಂದೂ, ನಾಮದಾರ ರೊದ್ದ ಮೊದಲಾದವರು ಮೋರೆ ತಗ್ಗಿಸಿಕೊಂಡು ಮನೆಗೆ ಹೋದರು. ಮರುದಿವಸ ಎಲ್ಲ ಪ್ರತಿಷ್ಠಿತ ಬ್ರಾಹ್ಮಣರು ರಾ.ಬ॥ರವರ ಹತ್ತರ ಬಂದು ಪುನಃ ಅದೇ ಪ್ರಸ್ತಾಪವನ್ನೇ 'ನಾವೂ ನೀವೂ ಕೂಡಿಯೇ ೨ ಲಕ್ಷ ರೂ. ಕೂಡಿಸಿಕೊಡೋಣ'ವೆಂಬದನ್ನೇ ತೆಗೆದರು. ಅದಕ್ಕೆ ಹಾಗೆ ಎಂದೂ ಆಗುವದಿಲ್ಲೆಂದು ರಾ.ಬ॥ರವರು ಖಂಡಿತವಾದ ಒಂದೇ ಉತ್ತರದಿಂದ ಅವರಿಗೆ ಅಪ್ಪಣೆಕೊಟ್ಟರು. ಅದೇ ದಿವಸ ಅಂದರೆ ತಾ. ೧೦ನೇ ಜೂನ ಸನ್ ೧೯೧೩ ಇ. ಮಂಗಳವಾರ ದಿವಸ ನಾಮದಾರ ಹಿಲ್ ದೊರೆಗಳೂ ರಾವಬಹಾದ್ದೂರವರೂ ಒಂದೇ ಗಾಡಿಯಿಂದ ಬೆಳಗಾಂವಿಗೆ ಬಂದರು. ನಾಮದಾರ ಹಿಲ್ ದೊರೆಗಳು ಹಾಗೆಯೇ ಮುಂದೆ ಮುಂಬಯಿಗೆ ಹೋದರು.

ಈ ಪ್ರಕಾರವಾಗಿ ಕರ್ನಾಟಕ ಕಾಲೇಜದ ಬಗ್ಗೆ ಲಿಂಗಾಯತರಿಗೂ ಬ್ರಾಹ್ಮಣರಿಗೂ ಬಿದ್ದ ತೊಡಕು ಪರಿಹಾರವಾಗಿ, ವರ್ಗಣಿಯನ್ನು ಕೂಡಿಸುವ ಕೆಲಸವು ನಡೆಯಿತು. ಇಷ್ಟರೊಳಗಾಗಿ ಬ್ರಾಹ್ಮಣರು ಸಾವಿರಾರು ರೂಪಾಯಿ ವರ್ಗಣೀ ಮಾಡಿದ್ದರು. ರಾವಬಹಾದ್ದೂರವರು ಸನ್ನ ೧೯೧೩ ಇ.ಯ ಜುಲೈ ಕೊನೆಯಲ್ಲಿ ವರ್ಗಣಿಯನ್ನು ಕೂಡಿಸಲಿಕ್ಕೆ ಪ್ರಾರಂಭಿಸಿದರು. ಆರಂಭಕ್ಕೆ ಧಾರವಾಡ ಜಿಲ್ಲಾ ದೇವಿಹೊಸೂರ ಶೆಟ್ಟರಾದ ಚೆನ್ನಬಸವಪ್ಪಾ ಪಂಚಪ್ಪಾ ಕುರಬಗೊಂಡ ಎಂಬವರು ೨೦೦೦ ಎರಡುಸಾವಿರ ರೂಪಾಯಿ ವರ್ಗಣೀ ಮಾಡಿದರು. ಕೂಡಲೇ ಒಬ್ಬರ ಹಿಂದೊಬ್ಬರು ತಾವಾಗಿ ಸಂತೋಷದಿಂದ ವರ್ಗಣಿಯನ್ನು ಹಾಕಹತ್ತಿದರು. ಬೆಳಗಾವ ಜಿಲ್ಲಾ ಚಿಕ್ಕೋಡಿ ತಾಲ್ಲುಕು ಕುರ್ಲಿ ಗ್ರಾಮದ ಮಲ್ಲಪ್ಪಣ್ಣಾ ಸಿಂತ್ರೆ ಎಂಬ ಘನವಂತರು ತಾವೊಬ್ಬರೇ ೨೫೦೦೦ ರೂ. ವರ್ಗಣೀ ಕೊಡಲೊಪ್ಪಿದರು. ಈ ಘನವಂತರನ್ನು ರಾ.ಬ॥ರವರು ನಾಮದಾರ ಶೆಫರ್ಡ ಸಾಹೇಬರವರ ಭೆಟ್ಟಿಯನ್ನು ಮಾಡಿಸಿ, ಈ ಸಂಗತಿಯನ್ನು ಅವರಿಗೆ ಅರುಹಿದರು. ಅವರು ಈ ಘನವಂತರ ಔದಾರ್ಯವನ್ನು ಹೊಗಳಿದರು. ಮುಂದೆ ಆರೇಳು ತಿಂಗಳುಗಳಲ್ಲಿ ಒಂದು ಲಕ್ಷ ರೂ. ವರ್ಗಣಿಯು ಕೂಡಿ ತೊಂಭತ್ತು ಸಾವಿರ ರೂಪಾಯಿಗಳು ರೋಖ ವಸೂಲ ಬಂದವು. ಇನ್ನುಳಿದ ಹತ್ತು ಸಾವಿರ ರೂಪಾಯಿಗಳನ್ನು ಶ್ರೀಮಂತ

ವಂಟಮುರಿಯ ಸರದೇಸಾಯವರು ಕೊಡಲಿಕ್ಕೆ ಒಪ್ಪಿಕೊಂಡಿದ್ದು, ಆ ಹಣವನ್ನು ಅವರು ಬೇಡಿದಾಗ ಕೊಡುವರು. ಅಂತೂ ಲಿಂಗಾಯತರ ೧ ಲಕ್ಷ ರೂಪಾಯಿಗಳು ಕೂಡಿದಂತಾದವು.

ರಾವಬಹಾದ್ದೂರರವರು ಈ ವರ್ಗಣೀಗಾಗಿ ವಿಶೇಷವೆಲ್ಲಿಯೂ ಸಂಚರಿಸಲಿಲ್ಲ. ವಿಜಾಪೂರ ಬಾಗಲಕೋಟಗಳ ತಾಂಬೂಲ ಸಮಾರಂಭಕ್ಕೆ ಹೋದಾಗ ಅಲ್ಲಿಯೇ ಆರೇಳು ಸಾವಿರ ರೂಪಾಯಿಗಳು ಕೂಡಿದವು. ಧಾರವಾಡ-ಹುಬ್ಬಳ್ಳಿ-ಗದಗ ಮೊದಲಾದವುಗಳ ಕಡಿಗೆ ವರ್ಗಣಿಗಾಗಿ ಹೋಗಲೇ ಇಲ್ಲ. ಮುರಗೋಡ ಬೈಲಹೊಂಗಲಗಳಿಗೆ ಒಮ್ಮೆ ಮಾತ್ರ ಸಂಚರಿಸಿ ಬಂದರು. ಇವೆರಡು ಪ್ರಯಾಣಗಳ ಹೊರತು ಇವರು ಬೇರೆ ಯಾವ ಕಡೆಗೂ ವರ್ಗಣಿಗಾಗಿ ಹೋಗಲಿಲ್ಲ. ಬೆಳಗಾಂವಿಯಲ್ಲಿಯೇ ಕೂತು ಆದಷ್ಟು ವರ್ಗಣಿಯ ಕೆಲಸವನ್ನು ನಡೆಸಿದರು. ಸುಮಾರು ಒಂದುವರೆ ನೂರು ಜನರಿಂದಲೇ ಒಂದು ಲಕ್ಷ ರೂಪಾಯಿಗಳ ವರ್ಗಣಿಯು ಕೂಡಿ ಹೋಯಿತು. ಇಷ್ಟು ಅಲ್ಪಾವಧಿಯಲ್ಲಿ ಇಷ್ಟು ಸ್ವಲ್ಪ ಜನರಿಂದಲೇ ಒಂದು ಲಕ್ಷ ರೂಪಾಯಿ ವರ್ಗಣಿಯು ಕೂಡಿತೆಂಬದು ಬಲು ಆಶ್ಚರ್ಯದ ಸಂಗತಿಯೇ ಸರಿ. ಮೇಲಾಗಿ ಇದೇ ಸಂಧಿಯಲ್ಲಿ (ಸನ್ ೧೯೧೪ನೇ ಇ. ಅಗಷ್ಟ ತಿಂಗಳಲ್ಲಿ)ನಮ್ಮ ಬ್ರಿಟಿಶ ಸರಕಾರದವರಿಗೂ ಜರ್ಮನಿ ಸಾಮ್ರಾಜ್ಯದವರಿಗೂ ಯುದ್ಧ ನಡೆದದರಿಂದ, ಯುದ್ಧದ ಫಂಡು ಕೂಡಿಸುವ ಕೆಲಸವು ಎಲ್ಲ ಕಡೆಯಲ್ಲಿ ನಡೆದು, ಪ್ರತಿಯೊಂದು ಜಿಲ್ಲೆಯಿಂದ ಅಜಮಾಸು ಒಂದೊಂದು ಲಕ್ಷ ಫಂಡು ಕೂಡಿಸಲ್ಪಟ್ಟಿತು: ಮತ್ತು ಯುದ್ಧದ ಮೂಲಕ ಪರದೇಶಕ್ಕೆ ಅರಳೀ ಹೋಗುವದು ಕಟ್ಟಾಗಿ ಅರಳೆಯ ವ್ಯಾಪಾರಸ್ಥರಿಗೆ ಬಹಳೇ ಹಾನಿಯಾಯಿತು. ಇಂಥಹ ಕಠಿಣ ಪ್ರಸಂಗದಲ್ಲಿಯೂ ಕೂಡ ಕಾಲೇಜ ಫಂಡನ್ನು ರಾ.ಬ॥ರವರು ಕೂಡಿಸಿಬಿಟ್ಟರು. ನಾಮದಾರ ರೊದ್ದ ಮೊದಲಾದ ಬ್ರಾಹ್ಮಣ ಮುಂದಾಳುಗಳು ಹಕ್ಕಿಯ ಪಣಗಟ್ಟಿದಂತೆ ೨-೩ ವರ್ಷ ಒಂದೇ ಸವನೇ ಕರ್ನಾಟಕವನ್ನೆಲ್ಲಾ ಸುತ್ತಿ ವರ್ಗಣಿಯನ್ನು ಕೂಡಿಸಿದರೂ ಅವರ ವರ್ಗಣಿಯು ಇನ್ನೂ ಅರ್ಧಲಕ್ಷ ಸಹ ಆಗಿಲ್ಲ. ಅಂದಮೇಲೆ ರಾ.ಬ॥ಅರಟಾಳ ಸಾಹೇಬರ ಕರ್ತೃತ್ವಶಕ್ತಿಯೂ, ವರ್ಚಸ್ಸೂ, ಎಷ್ಟು ಘನತರವಾಗಿರುತ್ತದೆಂಬದು ತಾನಾಗಿ ಸ್ಪಷ್ಟವಾಗುತ್ತದೆ. ಈ ಕಾರ್ಯವನ್ನು ಇವರ ಹೊರತು ಇನ್ನೊಬ್ಬ ಯಾರಾದರೂ ವೀರಶೈವರಿಗೆ ವಹಿಸಿದ್ದರೆ, ಅವರಿಂದ ಇಷ್ಟು ಹಣವನ್ನು ವರ್ಗಣಿ ಕೂಡಿಸುವದು ಎಷ್ಟು ಮಾತ್ರವೂ ಆಗುತ್ತಿದ್ದಿಲ್ಲವೆಂದು ಖಂಡಿತವಾಗಿ ಹೇಳಬಹುದು.

ಇವರು ಹಿಂದೆ ಚಿಟನೀಸರಿದ್ದಾಗ್ಗೆ ಲಿಂಗಾಯತ ಫಂಡು ಕೂಡಿಸುವ ಕಾಲಕ್ಕೆ, ಅಧಿಕಾರದ ಒಲುಮೆಯಿಂದ ಇವರ 'ಲಿಂಗಾಯತ ಫಂಡು' ವಸೂಲ ಮಾಡುವರೆಂದು ಬ್ರಾಹ್ಮಣ ಜನರು ರಾ.ಬ॥ರವರ ಮೇಲೆ ಟೀಕಾ ಮಾಡುತ್ತಿದ್ದದ್ದು ವಾಚಕರಿಗೆ ಗೊತ್ತಿರಬಹುದು. ಈಗಂತೂ ರಾ.ಬ॥ರವರು ಸರಕಾರಿ ಕೆಲಸದಿಂದ ನಿವೃತ್ತರಾಗಿರುವರಷ್ಟೇ ಪೆನಶನದಾರರಾದ ಮೇಲೆ ಅಧಿಕಾರವಂತೂ ಇಲ್ಲೆಯಿಲ್ಲಾ. ಅಂದಮೇಲೆ ಅನಧಿಕಾರಿಗಳಾದ ಇವರಿಗೆ ಇಷ್ಟು ಅಲ್ಪಾವಧಿಯಲ್ಲಿ ೧ ಲಕ್ಷ ರೂಪಾಯಿ ವರ್ಗಣೀ ಕೂಡಿ ಅದು ತತ್ಕಾಲವೇ ವಸೂಲಾಗಿ ಹೋಯಿತು. ಇದು ಹೇಗಾಗಿರಬಹುದು? ಅಧಿಕಾರಕ್ಕೂ ಈ ವರ್ಗಣಿಯ ವಸೂಲಿಗೂ ಸ್ವಲ್ಪವಾದರೂ ಸಂಬಂಧವು ಸೋಂಕಿತೋ? ಅಧಿಕಾರ ಸಂಪರ್ಕವೇ ಇಲ್ಲದ ಮೇಲೆ ಇಷ್ಟು ಅಲ್ಪಾವಕಾಶದಲ್ಲಿ ಇಷ್ಟು ರೂಪಾಯಿಗಳ ವರ್ಗಣಿಯು ಹೇಗೆ ಕೂಡಿತು? ಬ್ರಾಹ್ಮಣರ ಹಿಂದಿನ ಟೀಕೆಗೆ ಆಸ್ಪದವೆಲ್ಲ ಉಳಿಯಿತು? ಇದು ನಿಃಸಂದೇಹವಾಗಿ ನಿದರ್ಶನಕ್ಕೆ ಬರುವಂತಿದೆ. ಪರೋತ್ಕರ್ಷವು ಸಹನವಾಗದೆ ಅದಕ್ಕೆ ವಿಘ್ನವನ್ನು ತರುವದೇ ಬ್ರಾಹ್ಮಣರ ಸ್ವಾಭಾವಿಕ ಧರ್ಮವು. ಕುಡಿಯಲಿಕ್ಕೆ ಬಾರದಿದ್ದರೂ ಉರುಳಿಸಿಬಿಡುವ ಮಾರ್ಜಾಲವೃತ್ತಿಯನ್ನು ಎಲ್ಲ ಬ್ರಾಹ್ಮಣರೂ ಬಲ್ಲರು. ಅಂತೆಯೇ ಆರಂಭದಿಂದ ಕಡೆತನಕ ರಾ.ಬ॥ರವರ ಸತ್ಕೃತ್ಯಗಳಿಗೆ ಇವರು ವಿರೋಧವನ್ನುಂಟು ಮಾಡುತ್ತಲೇ ಬಂದಿರುವದು. ಅನಂತ ಮಹಿಮನಾದ ದೇವರ ಅಂತಃಕರುಣದಿಂದ ಅವರ ವಿರೋಧವೆಲ್ಲ ಇವರಿಗೆ ಅವಿರೋಧವಾಗಿ ಪರಿಣಮಿಸಿ, ಇವರ ಪ್ರತಿಭೆಯು ಇನ್ನಿಷ್ಟು ಪ್ರಕಾಶಿಸುವಂತೆ ಆಯಿತು. ಒಟ್ಟಿಗೆ

ನಾಮದಾರ ರೊದ್ದ ಬೆಳವಿ ಮೊದಲಾದವರೆಲ್ಲ ವಿಶ್ವಪ್ರಯತ್ನ ಮಾಡಿದ್ದರೂ ಕರ್ನಾಟಕ ಕಾಲೇಜದ ವರ್ಗಣಿಯು ಕೊನೆಗಾಣುತ್ತಿದ್ದಿಲ್ಲ. ಅದರ ಅರ್ಧಭಾರವನ್ನು ರಾವಬಹಾದೂರ ಅರಟಾಳ ಸಾಹೇಬರು ವಹಿಸಿದುದರಿಂದ ಅದು ತೀವ್ರವಾಗಿ ಕೈಗೂಡಲಿಕ್ಕೆ ಕಾರಣವಾಯಿತು.

ಈ ಕರ್ನಾಟಕ ಕಾಲೇಜ ಸ್ಥಾಪನೆಯ ವಿಷಯವಾದ ಲೇಖಗಳು ಟಾಯಿಮ್ಸ ಆಫ್ ಇಂಡಿಯಾ ಪತ್ರದಲ್ಲಿ ಕೆಳಗೆ ಬರೆದ ತಾರೀಖುಗಳಲ್ಲಿ ಪ್ರಕಟವಾಗಿರುತ್ತವೆ. ಅವು ಲೇಖಗಳನ್ನು ನೋಡಿದರೆ ಕಾಲೇಜದ ಸಂಬಂಧವಾಗಿ ನಡೆದ ಯಾವತ್ತೂ ಸಂಗತಿಯು ವಿದಿತವಾಗುವದು. ತಾ. ೧೬ ಸಪ್ಟಂಬರ ೧೯೧೨, ತಾ. ೧ನೇ ಅಕ್ಟೋಬರ ೧೯೧೨, ತಾ. ೩೧ನೇ ಅಕ್ಟೋಬರ ೧೯೧೩, ತಾ. ೮ನೇ ನವಂಬರ ಸನ್ ೧೯೧೩, ತಾ. ೧೯ನೇ ನವಂಬರ ೧೯೧೩, ತಾ. ೨೭ನೇ ಜಾನೇವಾರಿ ೧೯೧೪, ತಾ. ೧೦ನೇ ಡಿಶಂಬರ ೧೯೧೪, ತಾ. ೧೨ನೇ ಜಾನೇವರಿ ೧೯೧೫ ಬಾಂಬೇ ಕ್ರಾನಿಕಲ್ ಪತ್ರದಲ್ಲಿ, ತಾ. ೩೧ನೇ ಜುಲೈ ೧೯೧೫ ಇ. ಟಾಯಿಮ್ಸ ಪತ್ರದಲ್ಲಿ, ತಾ. ೯ನೇ ಅಗಸ್ಟ ೧೯೧೫ ಟಾಯಿಮ್ಸ ಪತ್ರದಲ್ಲಿ.

ಇವುಗಳ ಪೈಕಿ ೩೧ನೇ ಜುಲೈ ಸನ್ ೧೯೧೫ರ ದಿವಸ ಟಾಯಿಮ್ಸ ಪತ್ರದಲ್ಲಿ ನಾಮದಾರ ಬೆಳವಿಯವರು ಕಾಯಿದೇ ಕಾವುನ್ಸಿಲಿನಲ್ಲಿ ಕರ್ನಾಟಕ ಕಾಲೇಜ ಸಂಬಂಧವಾಗಿ ಮಾಡಿದ ಭಾಷಣವು ಪ್ರಕಟವಾಗಿರುತ್ತದೆ. ಅದರಲ್ಲಿ ಸಾ. ಬೆಳವಿಯವರು, ಲಿಂಗಾಯತರು ೧ ಲಕ್ಷ ರೂಪಾಯಿಗಳನ್ನು ಹಾಗೂ ಬ್ರಾಹ್ಮಣರು ಹಾಗೂ ಲಿಂಗಾಯತರಲ್ಲದೆ ಬ್ರಾಹ್ಮಣೇತರ ಜನರು ಕೂಡಿ ೧ ಲಕ್ಷ ರೂಪಾಯಿಗಳನ್ನು ವರ್ಗಣಿ ಕೊಡತಕ್ಕದ್ದೆಂದು ಭಾಷಣ ಮಾಡಿರುವರು. ವಾಚಕರೇ, ಬೆಳವಿಯವರ ಕಪಟ ಭಾಷಣ ನೋಡಿದಿರಾ. ಕೂಡಲೇ ಲಿಂಗಾಯತರಲ್ಲದ ಬ್ರಾಹ್ಮಣೇತರ ಜನರನ್ನು ಸಹಜವಾಗಿ ತಮ್ಮೊಳಗೆ ಎಳಕೊಂಡು ಬಿಟ್ಟರು. ವಾಸ್ತವಿಕವಾಗಿ ಲಿಂಗಾಯತರೂ ಲಿಂಗಾಯತರಲ್ಲದ ಬ್ರಾಹ್ಮಣೇತರರೂ ಕೂಡಿ ೧ ಲಕ್ಷ ರೂ. ವರ್ಗಣಿಯನ್ನು ಲಿಂಗಾಯತರ ವತಿಯಿಂದ ರಾ.ಬ॥ರವರು ಕೂಡಿಸತಕ್ಕದ್ದೆಂದು ಗೊತ್ತಾಗಿದ್ದು, ತಮ್ಮ ಬ್ರಾಹ್ಮಣ ಪಕ್ಷಕ್ಕೆ ಸುಲಭವಾಗಬೇಕೆಂದು ಬೆಳವಿಯವರು ಇದರ ವ್ಯತಿಕ್ರಮ ಸ್ಥಿತಿಯನ್ನು ಕಲ್ಪಿಸಿಕೊಂಡು, ತಮ್ಮ ಚಾತುರ್ಯವನ್ನು ಪ್ರಕಟಮಾಡಿದರೂ ಕೂಡ, ಇವರ ಕೃತ್ರಿಮ ಭಾಷಣವು ಯಾರಿಗೂ ಗೊತ್ತಾಗದೇ ಹೋಗದು.

The Honourable Mr. Sheppard's Speech

The Bombay Government Gazette, Part VII, dated 2nd Sept., 1913 page 519-531.

Looking over the budget from another point of view, I am somewhat sorry to see that Government have not found it possible yet to make any provision for the requirements of the Karnatak College. This is a scheme that has been in the air for several years and came more or less to a head about two years ago when both my Hon'ble colleagues Mr. Rodda and Mr. Belvi joined together to form an association to collect funds for this college. The need for the college is too well known to need recapitulation by me. It arises from the fact that though there are colleges in the Central Division in Poona and in Bombay to which alone people from the Southern Division can

go, these are overcrowded and numbers of boys especially Brahmin boys who wish to continue their education through the colleges are gradually finding it impossible to obtain access to these colleges. Therefore, for the people of that Division and more particularly for the three Karnatak districts of Bijapur, Belgaum and Dharwar including a portion of Kanara, there is indeed a great need for the college of their own. Therefore as I said, two years ago, the two gentlemen, I have named, with other gentlemen endeavoured to raise subscriptions to enable them to come before Government and ask for a grant sufficient to ensure the complete establishment of the college. I regret to hear from my Hon'ble friend Mr. Rodda that the total sum they have been able to raise up to now is only Rs. 13000. But, sir, during the last few months the large community which lives down there which is known as the Lingayat community has been interesting itself in this college. You may all have heard the name of Rao Bahadur Artal, retired Dy. Collector, who last year, was honoured by His Majesty with the Companionship of the Imperial Service Order. After a service of forty years distinguished by all the best features of an administrator of the very best type Rao Bahadur Artal retired in June last, and from that time he has devoted himself towards interesting his community in this question of the Karnatak College; and since I have come here to this council meeting. I have been gratified by the receipt of a telegram in which he tells me that the Lingayat community can now guarantee one lakh of rupees towards the establishment of this college (Hear, hear). I hope, Sir, that announcement will be gratifying to this council and I hope it will induce my two colleagues Mr. Rodda and Mr. Belvi to encourage their friends to come forward with at least the same amount which the Lingayat community have been able to promise.

ತಾ. ೨೮ನೇ ಜುಲೈ ೧೯೧೩ನೆ ಇಸ್ವಿ ದಿವಸ ಮುಂಬಯೀ ಕಾಯಿದೇ ಕೌನ್ಸಿಲ ಬೈಠಕಿ ಇತ್ತು. ಇದೇ ಸಂಧಿಗೆ ರಾ.ಬ॥ಅರಟಾಳ ಸಾಹೇಬರು ಗೋಕಾವಿಯ ತಾಂಬೂಲ ಸಮಾರಂಭಕ್ಕೆ ಹೋಗಿದ್ದರು. ಆ ಕೌನ್ಸಿಲ್ ಕೂಡುವ ದಿವಸವೇ ಗೋಕಾವಿಯಿಂದ ರಾ.ಬ॥ರವರು ಲಿಂಗಾಯತು ೧ ಲಕ್ಷ ರೂಪಾಯಿಗಳನ್ನು ಕರ್ನಾಟಕ ಕಾಲೇಜದ ಬಗ್ಗೆ ವರ್ಗಣೀಕೊಡಲಿಕ್ಕೆ ನಂಬಿಗೆಯಿಂದ ಒಪ್ಪಿಕೊಳ್ಳುತ್ತಾರೆಂದು ನಾಮದಾರ ಶೆಫರ್ಡ ಸಾ.ಬ॥ರವರಿಗೆ ತಾರು ಮಾಡಿದರು. ನಾಮದಾರರು ಕೌನ್ಸಿಲ್ಲಕ್ಕೆ ಹೋಗುವ ದಾರಿಯಲ್ಲಿಯೇ ಅವರ ಕೈಯಲ್ಲಿ ಬಂತು. ಅದನ್ನು ನೋಡಿ ಹರ್ಷಭರಿತರಾಗಿ ಕೌನ್ಸಿಲದಲ್ಲಿ ಕರ್ನಾಟಕ ಕಾಲೇಜ ಸಂಬಂಧವಾಗಿ ವಿಚಾರ ನಡೆದ ಕಾಲಕ್ಕೆ ಹೇಳಿದ್ದೇನಂದರೆ "ರಾ.ಬ॥ಅರಟಾಳ ಸಾಹೇಬರ ಹೆಸರನ್ನು ಎಲ್ಲ ಕೌನ್ಸಿಲ್‌ದಾರರು ಕೇಳಿರಬಹುದು. ಇವರು ಒಟ್ಟು ೪೦ ವರ್ಷ ಸರಕಾರೀ ಕೆಲಸವನ್ನು ಒಳ್ಳೇ ನಿಚ್ಚಳವಾಗಿ ಮಾಡಿ ಯಶಸ್ವಿಗಳಾಗಿದ್ದಾರೆ. ಇವರಷ್ಟು ನಿಷ್ಕಲಂಕವಾದ ವರ್ತನದಿಂದ ಸರಕಾರೀ ಕೆಲಸ ಮಾಡುವವರನ್ನು ಕಾಣುವದು ದುಲರ್ಭವು. ಸರಕಾರದ ವಿಶ್ವಾಸನೀಯವಾದ ಉತ್ತಮ ಇಂಡಿಯಾ ಆಫೀಸರರೆಂಬವರು ಯಾರಿರುವರೋ ಅವರಲ್ಲಿ ರಾ.ಬ॥ಅರಟಾಳ

ಸಾ||ರು ಅತ್ಯುತ್ತಮ ಆಫೀಸರರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಈ ರಾ.ಬ||ರವರು ಈ ಹೊತ್ತು ಲಿಂಗಾಯತ ಸಮಾಜದವರು ೧ ಲಕ್ಷ ರೂಪಾಯಿ ವರ್ಗಣೀ ಕೊಡುತ್ತೇವೆಂದು ವಿಶ್ವಸನೀಯವಾಗಿ ತಾರ ಮೂಲಕ ತಿಳಿಸಿದ್ದಾರೆ" ಎಂಬದಾಗಿ ಭಾಷಣ ಮಾಡಿ ರಾ.ಬ|| ರವರ ವರ್ಚಸ್ಸನ್ನು ಕಾರ್ಯದಕ್ಷತೆಯನ್ನು, ಘನವಂತಿಕೆಯನ್ನು ಕೊಂಡಾಡಿದರು. ಆ ತಾರಿನ ಸಂಗತಿಯನ್ನು ಕೇಳಿ ಕೌನ್ಸಿಲದಾರರು ಹೀಯರ, ಹೀಯರ ಎಂಬ ಆನಂದೋದ್ಗಾರಗಳನ್ನು ವ್ಯಕ್ತಮಾಡಿದರು. ಕೌನ್ಸಿಲದಲ್ಲಿ ನಡೆದ ನಾಮದಾರ ಶೆಫರ್ಡ ಸಾ.ಬ||ರವರ ಭಾಷಣವೆಲ್ಲ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟ ಭಾಗ ೭ನೇದ್ದು ಪಾನು ೫೧೯ ತಾ. ೨ ಸಪ್ಟಂಬರ ೧೯೧೩ನೇದರಲ್ಲಿ ಪ್ರಕಟವಾಗಿದೆ. ಬೇಕಾದವರು ನೋಡಿಕೊಳ್ಳತಕ್ಕದ್ದು.

ನಾಮದಾರ ರೊದ್ದ, ನಾಯಿಕ ಮೊದಲಾದವರು, ಪೂರ್ಣ ವಸೂಲಾಗುವದನ್ನು ನೋಡದೆ 'ಇಷ್ಟು ವರ್ಗಣೀ ಹಣದ ಮೇಲಿಂದ ಕಾಲೇಜ ಸ್ಥಾಪನೆಯ ಕಾರ್ಯವನ್ನು ನಡಿಸತಕ್ಕದ್ದೆಂ'ಬ ಸೂಚನೆಯನ್ನು ತಂದರು. ಅದನ್ನು ಕೇಳಿ ನಾಮದಾರ ಸರ್ ರಿಚರ್ಡ ಲ್ಯಾಂಪ ಸಾ.ಬ||ರವರು ಅವರ ಇಂಗಿತವನ್ನು ತಿಳಿದುಕೊಂಡು, ಹಾಗೆ ಎಂದಿಗೂ ಮಾಡಲಿಕ್ಕಾಗದು. ಈಗ ೧ ಲಕ್ಷ ರೂಪಾಯಿಗಳನ್ನು ಲಿಂಗಾಯತರು ಕೊಡುತ್ತೇವೆಂದು ಹೇಗೆ ವಚನಕೊಟ್ಟಿರುವರೋ ಅದರಂತೆ ಬ್ರಾಹ್ಮಣರು ೧ ಲಕ್ಷ ರೂ. ಕೊಡುತ್ತೇವೆಂದು ವಚನಕೊಟ್ಟ ನಂತರ, ಅರ್ಥಾತ್ ಆ ೨ ಲಕ್ಷ ರೂ.ಗಳು ವಸೂಲ ಬರುವತನಕ ಕಾಲೇಜದ ಕಟ್ಟಡವು ಕಟ್ಟಲ್ಪಡಲಾಗದೆಂದು ನಿಷ್ಠುರವಾಗಿ ಉತ್ತರಕೊಟ್ಟದ್ದರಿಂದ, ಬ್ರಾಹ್ಮಣ ನಾಮದಾರರ ಕಪಟ ವಿಚಾರಗಳು ಕುಂಠಿತವಾದವು. ಮುಂದೆ ೩-೪ ದಿವಸ ಕೌನ್ಸಿಲದ ಕಾರ್ಯವು ನಡೆದು ಆ ವಿಷಯವು ಅಷ್ಟಕ್ಕೆ ನಿಂತಿತು.

ರಾವಬಹಾದ್ದೂರ ಅರಟಾಳ ಸಾಹೇಬರ ತಾರಿನ ಸಂಗತಿಯನ್ನು ಕೇಳಿ ಆನಂದಮಯರಾದ ನಾಮದಾರ ಹಿಲ್ ದೊರೆಗಳಿಗೆ, "ಈ ಕೌನ್ಸಿಲಿನ ಕಾರ್ಯ ತೀರಿ ಯಾವಾಗ ಅವಕಾಶ ದೊರಿತೀತೋ, ಯಾವಾಗ್ಗೆ ರಾ.ಬ||ರವರಿಗೆ ಅಭಿನಂದನಪರ ಪತ್ರ ಬರೆಯುವೆನೋ ಎಂಬ ಆತುರವುಂಟಾಗಿತ್ತು. ತಾ. ೫ನೇ ಅಗಷ್ಟ ೧೯೧೩ಇಸ್ವಿ ದಿವಸ ಅವರು ರಾ.ಬ||ರವರಿಗೆ ಬರೆದ ಇಂಗ್ರಜೀ ಡೆಮಿ ಆಫೀಸಿಯಲ್ ಪತ್ರವು ಕೆಳಗೆ ಅವತರಿಸಲ್ಪಟ್ಟಿದೆ.

August 5th 1913.

My dear Rao Bahadur,

I seize the first moment and leisure since the meeting of the Legistative Council to write to thank you very warmly, as well as to congratulate you, for your efforts which have resulted in punctual subscription of 1 lakh of Rupees by the Lingayat community. I know this is due entirely to you, and I assure you that I (and Government) appreciate your efforts cordially,

Believe me
Yours sincerely,
Sd/- Claud H. Hill

ಇದೇ ಪತ್ರದ ಕನ್ನಡ ಭಾಷಾಂತರವು ಕೆಳಗೆ ಬರೆದಂತೆ.

ತಾ. ೫-೮-೧೯೧೩ ಇಸ್ವಿ

ನನ್ನ ಪ್ರಿಯ ರಾವಬಹಾದೂರವರೇ,

ಈ ಕಾಯಿದೇ ಕೌನ್ಸಿಲದ ಕಾರ್ಯವು ಮುಗಿದ ಮೊದಲನೇ ಮಿನಿಟನ್ನೇ ತಮಗೆ ಅಭಿನಂದನ ಪತ್ರ ಬರೆಯುವದರಲ್ಲಿ ಕಳೆಯುತ್ತಿದ್ದೇನೆ. ಕರ್ನಾಟಕ ಕಾಲೇಜ ಸಂಬಂಧವಾಗಿ ಮಾಡಿದ ತಮ್ಮ ಪ್ರಯತ್ನದ ಪ್ರತಿಫಲವು ಲಿಂಗಾಯಿತರ ತರ್ಫಿಯಿಂದ ೧ ಲಕ್ಷ ರೂಪಾಯಿಯಾದದ್ದಕ್ಕೆ ನಾನು ಅತಿ ಮನಃಪೂರ್ವಕವಾಗಿ ತಮ್ಮ ಆಭಾರಮನ್ನಿಸಿ ಅಭಿನಂದನ ಮಾಡುತ್ತೇನೆ. ಇದರ ಸಂಪೂರ್ಣ ಶ್ರೇಯಸ್ಸು ತಮ್ಮದೇ ಅದೆ. ತಮ್ಮ ಪ್ರಯತ್ನದ ಬಗ್ಗೆ ನಾನು ಹಾಗೂ ಸರಕಾರದವರು ಕೂಡಿ ತ್ರಿಕರ್ಣಪೂರ್ವಕವಾಗಿ ತಮ್ಮನ್ನು ಸ್ಮರಿಸುತ್ತೇವೆಂದು ನಂಬಿಗೆಯಿಂದ ಹೇಳುತ್ತೇನೆ.

ತಮ್ಮ ಒಳ್ಳೇ ವಿಶ್ವಸನೀಯ
ಸಹಿ-ಕ್ಲಾಡೇ ಎಚ್.ಹಿಲ್
ಮೆಂಬರ ಆಫ್ ಕೌನ್ಸಿಲ್

ಈ ಪತ್ರವನ್ನು ರಾ.ಬ॥ರವರು ನಾಮದಾರ ಶೆಫರ್ಡ ಸಾ.ಬ॥ರವರಿಗೆ ತೋರಿಸಲಾಗಿ, ಅವರು ಇದನ್ನು ನೋಡಿ ಬಹು ಸಂತೋಷಪಟ್ಟರು.

ಬ್ರಾಹ್ಮಣ ಜನರು ಕೇವಲ ತಮ್ಮ ಜನಾಂಗದ ಹಿತಚಿಂತನೆಗಾಗಿ ಯಾವ ಪ್ರಕಾರದ ಕೃಷ್ಣಕಾರಸ್ಥಾನವನ್ನು ನಡೆಯಿಸುತ್ತಾರೆಂಬ ಸಾಗ್ರಸಂಗತಿಯನ್ನು ರಾವಬಹಾದ್ದೂರವರು ಸನ್ ೧೯೧೬ನೇ ಇಸ್ವಿಯ ಜನೇವಾರಿ ೧೮ನೇ ತಾರೀಖಿನ ಇಂಗ್ಲೇಜಿ ಪತ್ರದಿಂದ ಮುಂಬಯಿ ಸರಕಾರಕ್ಕೆ ತಿಳಿಸಿದರು. ಅದರ ಕನ್ನಡ ಭಾಷಾಂತರವು ಇದರ ಹಿಂದಿನ ಪಾನ ೧೫೬೮ (ನೋಡಿ: ಈ ಕೃತಿಯ ೫೫೫ನೆಯ ಪುಟದ ಅ.ಟಿ.) ರಿಂದ ಬರೆಯಲ್ಪಟ್ಟಿದೆ.

ಈ ಪತ್ರವನ್ನು ಸರಕಾರದವರು ನೋಡಿ, ಇದನ್ನು ನೀವು ಹೀಗೆ ಬಹಿರಂಗವಾಗಿ ಪ್ರಸಿದ್ಧಮಾಡತಕ್ಕದ್ದಲ್ಲವೆಂದೂ, ಪ್ರಸಿದ್ಧಮಾಡಿದ ಬಗ್ಗೆ ನೀವು ಸರಕಾರಕ್ಕೆ ಕ್ಷಮೆಯನ್ನು ಬೇಡತಕ್ಕದ್ದೆಂದೂ ಇಂಗ್ರೇಜಿ ಪ್ರೆಸ್‌ನೋಟ ನಂಬರ ೬೪೭/೮-೭-೧೯೧೬ನೇ ದ್ವಾರಾ ರಾ.ಬ॥ರವರಿಗೆ ತಿಳಿಸಿದರು. ಅದಕ್ಕೆ ರಾ.ಬ॥ರವರು, ನಾನು ಪ್ರಸಿದ್ಧಮಾಡಿದ ಸಮಗ್ರ ಸಂಗತಿಯು ವಾಸ್ತವಿಕವಾಗಿರುತ್ತದೆಂತಲೂ, ಈ ವಿಷಯಗಳೆಲ್ಲ ಈ ಮೊದಲೇ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧವಾಗಿರುವವೆಂತಲೂ ಇದರಲ್ಲಿ ನನ್ನದೇನೂ ತಪ್ಪು ಇಲ್ಲೆಂತಲೂ, ಆಯಾ ವರ್ತಮಾನ ಪತ್ರಿಕೆಗಳನ್ನೆಲ್ಲ ಪತ್ರದ ಅಡಿಯಲ್ಲಿಟ್ಟು, ಮುಂಬಯಿ (ವಾಳುಕೇಶ್ವರ) ಮುಕ್ಕಾಂನಿಂದ ತಾ. ೧೧ನೇ ಎಪ್ರಿಲ್ ಸನ್ ೧೯೧೬ ಇಸ್ವಿಯ ದಿವಸ ಸರಕಾರಕ್ಕೆ ಕಳಿಸಿಕೊಟ್ಟರು. ಅದು ಸರಕಾರಕ್ಕೆ ಸೇರಿ "ಆದರೂ ನೀವು ಈ ಬಗ್ಗೆ ಕ್ಷಮೆಯನ್ನು ಬೇಡತಕ್ಕದ್ದು" ಎಂದು ಬರೆದು ಬಂತು. ಆ ಪ್ರಕಾರ ಉಪಾಯವಿಲ್ಲದೇ ರಾ.ಬ॥ರವರು ಕ್ಷಮೆಯನ್ನು ಬೇಡಿಕೊಂಡರು.

ಸನ್ನ ೧೯೧೬ ಇಸ್ವಿ ಮಾರ್ಚ ತಿಂಗಳ ಒಳಗಾಗಿ ರಾ.ಬ॥ರವರು ಕರ್ನಾಟಕ ಕಾಲೇಜಕ್ಕಾಗಿ ಬರಿಯ ಲಿಂಗಾಯತ ಜನಾಂಗದಿಂದ ಕೂಡಿಸಿದ ಒಂದು ಲಕ್ಷ ರೂಪಾಯಿಗಳನ್ನು ಸರಕಾರಕ್ಕೆ ತಲುಪಿಸಿದರು. ಅದು ಮುಟ್ಟಿದ ಬಗ್ಗೆ ಮೇಹರ್ಬಾನ ಜಿ.ಎ. ಥಾಮಸ ಆಯ್.ಸಿ.ಎಸ್. ಇವರಿಂದ ಇಂಗ್ರೇಜಿ ಪಾವತೀ ನಂಬರ ೯೫೩/೫-೪-೧೯೧೭ನೇದು ಬಂತು. ಮುಂದೆ ತಾ. ೨೦ನೇ ಜೂನ ಸನ್ ೧೯೧೭ ಇಸವಿ ಬುಧವಾರ ಸಾಯಂಕಾಲದ ೫ ಘಂಟೆಗೆ ನಾಮದಾರ ಸರ್ ಮಹಾದೇವ ಭಾಸ್ಕರ ಚೌಬಾಳ ಇವರ ಅಧ್ಯಕ್ಷತೆಯ ಕೆಳಗೆ ಧಾರವಾಡದಲ್ಲಿ ಬಹು ಸಮಾರಂಭಪೂರ್ವಕ ಕರ್ನಾಟಕ ಕಾಲೇಜದ ಸ್ಥಾಪನೆಯಾಯಿತು. ಪ್ರಕೃತಿಯ ಅಸ್ವಸ್ಥತೆಯ ಮೂಲಕ ನಾಮದಾರ ಗವ್ಹರ್ನರ ಸಾ॥ರವರು ಈ ಸಮಾರಂಭಕ್ಕೆ ಬರಲಿಲ್ಲ. ಅವರ ಪಕ್ಷದಿಂದ ನಾಮದಾರ ಚೌಬಾಳರವರೇ

ಈ ಸಮಾರಂಭವನ್ನು ಸಾಂಗಮಾಡಿದರು. ನಾಮದಾರ ರೊದ್ದ ಮೊದಲಾದ ಬ್ರಾಹ್ಮಣರು ಲಿಂಗಾಯತ ಮುಖಂಡರಿಗೆ ಏನೂ ತಿಳಿಸದೆ ನಾಮದಾರ ಗವ್ಹರ್ನರ ಸಾ.ಬ||ರವರಿಗೆ ಆಮಂತ್ರಣಕೊಟ್ಟದ್ದರಿಂದ, ಹಾಗೂ ಮಾನಪತ್ರ ಕೊಡುವ ಸಂಗತಿಯನ್ನು ಸಹ ತಿಳಿಸದೆ ಇದ್ದದರಿಂದ, ನಾಮದಾರ ಗವ್ಹರ್ನರ ಸಾ.ಬ||ರವರಿಗೆ ಲಿಂಗಾಯತರು ಮಾನಪತ್ರವನ್ನು ಸಮರ್ಪಿಸಲಿಲ್ಲ. ಬ್ರಾಹ್ಮಣರು ಮಾತ್ರ ಕೊಟ್ಟರು. ಸಭೆಯಲ್ಲಿ ನಾಮದಾರ ಚೌಬಾಳ ಇವರು.ಸಾ||ಗವ್ಹರ್ನರ ಸಾ.ಬ||ರವರ ಸಂದೇಶವನ್ನು ಓದಿಹೇಳಿ, ಕಾಲೇಜ ಸ್ಥಾಪನಾ ಸಮಾರಂಭವನ್ನು ಸಾಂಗಮಾಡಿದರು.

ನಾಮದಾರ ಚೌಬಾಳ ಇವರು ತಮ್ಮ ಇಂಗ್ರೇಜಿ ಭಾಷಣದಲ್ಲಿ ರಾ.ಬ||ರವರು ಲಿಂಗಾಯಿತ ಸಮಾಜದ ವಿದ್ಯಾಭಿವೃದ್ಧಿಯ ಸ್ಥಿತಿಯನ್ನು, ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ಬಗ್ಗೆ ಅವಿಶ್ರಾಂತ ಶ್ರಮವನ್ನು ವಹಿಸಿದರೆಂದು ಇವರನ್ನು ಬಹು ವಿಧವಾಗಿ ಗೌರವಿಸಿದರು. ಇವರ ಭಾಷಣವನ್ನು ನೋಡಿದರೆ ಈ ಸಂಗತಿಯೆಲ್ಲ ವಿಶದವಾಗಿ ತಿಳಿಯುವದು. ಈ ವಿಧವಾಗಿ ಬಹು ದಿವಸದಿಂದ ಇದ್ದ ಕರ್ನಾಟಕ ಕಾಲೇಜದ ಅಪೇಕ್ಷೆಯು ತಾ. ೨೦ನೇ ಜೂನ ೧೯೧[೭] ಇಸ್ವಿ ದಿವಸ ಪೂರ್ಣವಾಗಿ ಕರ್ನಾಟಕಸ್ಥರಿಗೆಲ್ಲ ಅತೀವ ಆನಂದವಾಯಿತು.[೧]

ಬೆಳಗಾಂವಿಯಲ್ಲಿ ಗಿಲಗಂಚೀ ಅರಟಾಳ ಹೈಸ್ಕೂಲ ಸ್ಥಾಪನೆಯಾದದ್ದು

ಇತ್ತಿತ್ತಲಾಗಿ, ಸರಕಾರಿಯ ಎಲ್ಲ ಹೈಸ್ಕೂಲಗಳಲ್ಲಿ ಇಂತಿಷ್ಟೇ ವಿದ್ಯಾರ್ಥಿಗಳನ್ನು ಪ್ರತಿವರ್ಷ ಸೇರಿಸಿಕೊಳ್ಳತಕ್ಕದ್ದೆಂಬದಾಗಿ ನಿರ್ಧರಿಸಲ್ಪಟ್ಟದ್ದರಿಂದ ಮತ್ತು ಸಾಂಪ್ರತಕ್ಕೆ ಇಂಗ್ಲೀಷ್ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ವರ್ಷ ವರ್ಷಕ್ಕೆ ಹೆಚ್ಚುತ್ತಿರುವದರಿಂದ, ಹೈಸ್ಕೂಲು ತುಂಬಿ ಹೆಚ್ಚಾದ ಎಷ್ಟೋ ವಿದ್ಯಾರ್ಥಿಗಳು ಮನೆಹಿಡಿದು ಕೂತು, ಅಮೋಲ್ಯವಾದ ವಯಸ್ಸನ್ನು ಕಳೆದುಕೊಂಡು ಹಾನಿಗೊಳಪಡುತ್ತಿರುವದು ಸರ್ವಶ್ರುತುವಾಗಿದೆ. ಅದರಿಂದ ಎಷ್ಟೋ ಕಡಿಗೆ ಪ್ರಾವ್ಹೇಟ ಸ್ಕೂಲಗಳು ತೆರೆಯಲ್ಪಟ್ಟಿರುತ್ತವೆ. ಆದರೂ ವಿದ್ಯಾರ್ಥಿಗಳ ಸಂಖ್ಯೆಯ ಮಾನದಿಂದ ಹೈಸ್ಕೂಲುಗಳು ಇಲ್ಲ. ಇಂತಹದರೊಳಗೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಮೊದಲಾದ ಪಂಕ್ತಿಭೇದವು ಕೆಲ ಬ್ರಾಹ್ಮಣ ಮಾಸ್ತರಜನರಿಂದ ಆಗುತ್ತಿದದ್ದು ಕೇಳಿಕೆಯಲ್ಲಿ ಬರಹತ್ತಿತು. ಬಹುಶಃ ಬ್ರಾಹ್ಮಣರ ಹೊರತು ಇತರ ಜನದಲ್ಲಿ ಇಂಗ್ಲೀಷ ಶಿಕ್ಷಕರು ಎಲ್ಲ ಕಡೆಗೂ ಕಡಿಮೆ ಇರುತ್ತಾರೆ. ಬ್ರಾಹ್ಮಣ ಶಿಕ್ಷಕರೇ ಹೆಚ್ಚು. ಅವರು ಆದಷ್ಟು ತ್ವರೆಯಿಂದ ತಮ್ಮ ಬ್ರಾಹ್ಮಣ ವಿದ್ಯಾರ್ಥಿಗಳನ್ನೇ ಹೈಸ್ಕೂಲಗಳಲ್ಲಿ ಭರತೀಮಾಡಹತ್ತಿದ್ದು ಕಂಡುಬರಹತ್ತಿತು. ಹೀಗಾಗಿ ಲಿಂಗಾಯತ ಜೈನ ಮೊದಲಾದ ಇತರ ಜಾತಿಯ ವಿದ್ಯಾರ್ಥಿಗಳಿಗೆ ಜಾಗೆಯು ದೊರೆಯದಾಯಿತು. ಈ ತೊಂದರೆಯನ್ನು ಕಂಡು ರಾ.ಬ||ಅರಟಾಳ ಸಾಹೇಬ ಬಹಾದ್ದೂರವರು ಕೆಲ ವರ್ಗಣಿಯನ್ನು ಕೂಡಿಸಿ, ಬೆಳಗಾಂವಿಯಲ್ಲಿ ತಾ. ೧೩ನೇ ನವಂಬರ್ ಸನ್ ೧೯೧೬ ಇಸ್ವಿ ಸೋಮವಾರ ಮುಂಜಾನೇ ೧೧ ಘಂಟೆಗೆ ಒಂದು ಹೈಸ್ಕೂಲನ್ನು ಸ್ಥಾಪಿಸಿ, ಬಹುಜನ ಅಪೇಕ್ಷೆಯ ಮೇರೆಗೆ ಅದಕ್ಕೆ ಗಿಲಗಂಚೀ ಅರಟಾಳ ಹೈಸ್ಕೂಲ ಎಂಬ ಹೆಸರನ್ನು ಕೊಟ್ಟಿರುವರು. ಆರಂಭಕ್ಕೆ ಇದಕ್ಕೆ ಎಮ್.ಎ., ಬಿ.ಎ. ಮೊದಲಾದ ಸ್ವಾರ್ಥತ್ಯಾಗಗಳಿಂದ ಪದವೀಧರರು ದೊರೆತಿರುವದರಿಂದ, ಮುಖ್ಯವಾಗಿ ಅವರೆಲ್ಲರು ತ್ರಿಕರಣ ಪೂರ್ವಕವಾಗಿ ಶಿಕ್ಷಣವನ್ನು ಕೊಡುತ್ತಿರುವದರಿಂದ, ಒಂದೇ ವರ್ಷದಲ್ಲಿ ಸುಮಾರು ೩೦೦ ವಿದ್ಯಾರ್ಥಿಗಳು

೧. ಕರ್ನಾಟಕ ಕಾಲೇಜ ವಿಷಯವಾಗಿ ಸಂಗ್ರಹಿಸಿದ ಒಂದು ಲಕ್ಷ ರೂಪಾಯಿ ಕೈಸೇರಿದ ಬಗ್ಗೆ ಸರಕಾರದಿಂದ ತಮಗೆ ಪತ್ರ ಬಂದಿದೆಯೆಂದು ರುದ್ರಗೌಡರು ಬೆನ್ನುಪುಟದ ಮೇಲೆ ಬರೆದಿದ್ದಾರೆ. ಅಸ್ಪಷ್ಟ ಅಕ್ಷರ ಕಾರಣವಾಗಿ ಅದನ್ನು ಇಲ್ಲಿ ಉದ್ಧರಿಸಲು ಸಾಧ್ಯವಾಗಲಿಲ್ಲ-ಸಂ.

ಕೂಡಿ, ಸ್ಕೂಲು ಒಳ್ಳೆ ಸ್ಥಿತಿಯಲ್ಲಿ ಮುಂದು ಬೀಳುತ್ತಿರುವದು. ಸರ್ವಸಮರ್ಥನಾದ ದೇವರು ಈ ಹೈಸ್ಕೂಲಿಗೆ ಚಿರಾಯುಷ್ಯವನ್ನು ಕೊಡುವದಾಗಿ ಪ್ರಾರ್ಥಿಸುತ್ತೇವೆ.

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಚಿತ್ರಕಲ್‌ದುರ್ಗ ಬೃಹನ್ಮಠ ಇವರ ಸನ್ನಿಧಾನದಲ್ಲಿ ಜರುಗಿದ ಬಿರೂರ ತಾಂಬೂಲ ಸಮಾರಂಭ

ಬೆಳಗಾಂವ-ಧಾರವಾಡ-ವಿಜಾಪೂರ ಮುಂತಾದ ಮುಂಬಯಿ ಕರ್ನಾಟಕದ ಮುಖ್ಯ ಸ್ಥಳಗಳಲ್ಲಿ ರಾವಬ॥ಅರಟಾಳ ಸಾಹೇಬರ ತಾಂಬೂಲ ಸಮಾರಂಭಗಳು ಜರುಗಿದ ನಂತರ, ಮೈಸೂರ ಸೀಮೆಯ ನಿವಾಸಿಗಳು ತಮ್ಮ ಸೀಮೆಯಲ್ಲಿಯೂ ಕೂಡಾ ಈ ಮಹಾಶಯರಿಗೆ ಮಾನಪತ್ರವನ್ನು ಮಹಾವೈಭವದಿಂದ ಸಮರ್ಪಿಸಿ, ತಮ್ಮ ಮನೋದಯವನ್ನು ಪೂರ್ಣಮಾಡಿಕೊಳ್ಳಬೇಕೆಂದು ಅಪೇಕ್ಷಿಸಿ, ಯೋಗ್ಯಸಮಯವನ್ನು ನಿರೀಕ್ಷಿಸುತ್ತಿದ್ದರು. ಚಿತ್ರಕಲ್‌ದುರ್ಗ ಬೃಹನ್ಮಠದ ಶ್ರೀಮನ್ಮಹರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಕಡೂರ ಜಿಲ್ಲಾ ಕಡೂರ ತಾಲೂಕಿಗೊಳಪಟ್ಟ ಬಿರೂರ ಗ್ರಾಮಕ್ಕೆ ಆಕಸ್ಮಿಕವಾಗಿ ದಯಮಾಡಿಸಲು, ಮಹಾಸನ್ನಿಧಿಯಲ್ಲಿಯೇ ರಾ.ಬ॥ರವರ ತಾಂಬೂಲ ಸಮಾರಂಭವನ್ನು ನೆರವೇರಿಸುವದಾಗಿ ನಿಶ್ಚಯಿಸಿ, ಅವರು ಮಹಾಸನ್ನಿಧಿಯ ವಿದ್ಯಮಾನ ಆಮಂತ್ರಣವನ್ನು ಕೊಟ್ಟರು.

ರಾವಬಹಾದ್ದೂರವರು ಅವರ ಆಮಂತ್ರಣವನ್ನು ಮನ್ನಿಸಿ ತಾ. ೧ನೇ ಫೆಬ್ರುವರಿ ಸನ್ ೧೯೧೭ ಇಸ್ವಿ ಗುರುವಾರ ದಿವಸ ಬೆಳಗಾಂವಿಯಿಂದ ಹೊರಟು ಧಾರವಾಡಕ್ಕೆ ಹೋದರು. ಅಲ್ಲಿ ಆ ದಿವಸ ಕರ್ನಾಟಕ ಸೆಂಟ್ರಲ್ ಬ್ಯಾಂಕಿನ ೧ನೇ ಮೀಟಿಂಗು ಇತ್ತು. ಆ ಮೀಟಿಂಗಿನ ಕೆಲಸ ತೀರಿಸಿಕೊಂಡು, ಮರುದಿವಸ (೨-೨-೧೯೧೭)ಮೇಲಗಾಡಿಗೆ ಕೂತು, ಸಾಯಂಕಾಲದ ೭ ಘಂಟೆಯ ಸುಮಾರಕ್ಕೆ ದಾವಣಗೇರಿಗೆ ತಲುಪಿದರು. ದಾವಣಗೇರಿಯ ಶ್ರೀ ಮೃತ್ಯುಂಜಯಸ್ವಾಮಿಗಳು ಧಾರವಾಡದಿಂದ ರಾ.ಬ॥ರವರ ಸಂಗಡ ಇದ್ದರು.

ದಾವಣಗೇರಿಯ ಸೆಟ್ಟರು, ಸಾವಕಾರರು ಮೊದಲಾದವರು ಹಾರ ತುರಾಯಿ ಮೊದಲಾದ ಸ್ವಾಗತ ಸಾಹಿತ್ಯದೊಂದಿಗೆ ಸ್ಟೇಶನದ ಮೇಲೆ ಮೊದಲೇ ಬಂದು ರಾ.ಬ॥ರವರ ಮಾರ್ಗಪ್ರತೀಕ್ಷೆ ಮಾಡುತ್ತ ನಿಂತುಕೊಂಡಿದ್ದರು. ಬಂದ ಕೂಡಲೆ ಮಹದಾನಂದದಿಂದ ಶಿಷ್ಟಾಚಾರಕ್ಕನುಸರಿಸಿ ಸ್ವಾಗತವನ್ನು ನೆರವೇರಿಸಿ, ರಾ.ಬ॥ರವರನ್ನು ಸ್ಟೇಶನದ ಹತ್ತರಿರುವ ಷಡಕ್ಷರಪ್ಪ ಸಿದ್ದಪ್ಪ ತಿರಕಪ್ಪನವರ ಮಠದ ಇವರ ಬಂಗಲೆಯಲ್ಲಿ ಇಳಿಸಿದರು. ಮರುದಿವಸ (ತಾ. ೩ನೇ ಫೆಬ್ರುವರಿ ಸನ್ ೧೯೧೭ನೇ ಇಸವಿಯ ಶನಿವಾರ) ದಾವಣಗೇರಿಯ ನಿವಾಸಿಗಳು ತಮ್ಮಲ್ಲಿಯ ಮುರಗೀಮಠದಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳ ಅಧ್ಯಕ್ಷತೆಯೊಳಗೆ ಭವ್ಯವಾದ ಸಭೆಯನ್ನು ಕೂಡಿಸಿ, ರಾ.ಬ॥ರವರ ತಾಂಬೂಲ ಸಮಾರಂಭವನ್ನು ಜರುಗಿಸಿ, ಕಾಪ್ಯ ಕರಂಡದ ಸಮೇತವಾದ ಮಾನಪತ್ರವನ್ನಿತ್ತರು.

ತಾ. ೪-೨-೧೯೧೭ ಇಸ್ವಿ ರವಿವಾರ ದಿವಸ ಅಲ್ಲಿಂದ ಬೆಳಗಿನ ಗಾಡಿಯಿಂದ ಹೊರಟು, ರಾ.ಬ॥ರವರು ಬಿರೂರಕ್ಕೆ ದಯಮಾಡಿಸಿದರು. ಸ್ಟೇಶನದ ಮೇಲೆ 'ಬೇಂಡಬಾಜಾ ಮೊದಲಾದ ಮಂಗಳವಾದ್ಯಗಳ ಮೇಳದಿಂದಲೂ, ಶೃಂಗರಿಸಿದ ಶ್ರೀಗಳವರ ಗಜತುರಗ ರಥಾಶ್ವಗಳಿಂದಲೂ, ಮೈಸೂರ ಸೀಮೆಯ ನಿವಾಸಿಗಳು ಮುಂದಾಗಿಯೇ ಆಗಮಿಸಿ, ಬಹುಮರ್ಯಾದೆಯಿಂದ ರಾವ ಬ॥ರವರ ಸ್ವಾಗತ ಸಮಾರಂಭವನ್ನು ಮಾಡಿ, ಅವರನ್ನು ಭವ್ಯವಾದ ರಥದಲ್ಲಿ ಕುಳ್ಳಿರಿಸಿ, ರಾಜವೀಧಿಯಿಂದ ಮೆರವಣಿಗೆಯನ್ನು ಹೊರಡಿಸಿದರು. ಶ್ರೀ ಜಗದ್ಗುರುಗಳ ಸ್ವಾಗತಾರ್ಥವಾಗಿ ಬಿರೂರ ಗ್ರಾಮದ ಬೀದಿಗಳು ಮಕರ ತೋರಣ ಧ್ವಜಪತಾಕೆಗಳ

ಸಮೂಹದಿಂದಲೂ, ಕದಳೀ ಸ್ತಂಭಗಳಿಂದಲೂ, ಚೆನ್ನಾಗಿ ಅಲಂಕೃತವಾಗಿದ್ದವು. ಅವೇ ಬೀದಿಗಳಿಂದ ಮೆರವಣಿಗೆಯು ಬಹು ವೈಭವದಿಂದ ಸಾಗಿತು. ಸ್ವಾಗತ ಸಮಯಕ್ಕೆ ಜನಸಮೂಹವು ಸುಮಾರು ೨೦೦೦ ಸಾವಿರ ಇತ್ತು. ಮುಂದೆ ಊರೊಳಗೆ ಹೋದ ಹೋದಂತೆ ಅದು ಮೂರು ನಾಲ್ಕು ಸಾವಿರಕ್ಕೆ ಹತ್ತಿತು. ಸ್ಟೇಶನದ ಮೇಲೆ ಮೆ|| ಪೊಲೀಸ್ ಸುಪರಿಂಟೆಂಡೆಂಟ ಸಾ.ಬ||ರವರು ಡೆಪ್ಯೂಟಿ ಕಮೀಶನರ ಸಾ||ರವರೂ ಕಡೂರ ತಾಲೂಕ ಮಾಮಲೇದಾರ ಮೊದಲಾದ ಸರಕಾರೀ ಅಧಿಕಾರಿಗಳೂ ದಯಮಾಡಿಸಿದ್ದರು.

ಶ್ರೀ ಜಗದ್ಗುರುಗಳು ಅಲ್ಲಿ ವೇದಮೂರ್ತಿ ಸಾವುಕಾರ ವೀರಯ್ಯನವರು ಪತ್ರಿ ಇವರ ಮುಂದಿರದ ಮಾಹಡಿಯ ಮೇಲೆ ಮೂಹುರ್ತ ಮಾಡಿದ್ದರು. ಅಲ್ಲಿಗೆ ಮೆರವಣಿಗೆಯು ಮಧ್ಯಾಹ್ನದ ೨-೩ ಗಂಟೆಯ ಸುಮಾರಕ್ಕೆ ಹೋಗುವದಾಯಿತು. ರಾ.ಬ||ರವರು ಜಗದ್ಗುರುಗಳವರ ದರ್ಶನಲಾಭವನ್ನು ಪಡೆದು ಧನ್ಯರಾಗಿ, ಮೊದಲೇ ಸಜ್ಜುಗೊಳಿಸಿದ ಮಿ||ಶಾಂತಪ್ಪ ನಿರ್ವಾಣಪ್ಪ ಇಂಗಳಗುಂದಿ ಎಡೆಹಳ್ಳಿ ಶಿವಮೊಗ್ಗಾ ಡಿಸ್ಟ್ರಿಕ್ಟ ಇವರ ಬಿರೂರ ಪೇಟೆಯಲ್ಲಿದ್ದ ಮಂದಿರಕ್ಕೆ ದಯಮಾಡಿಸಿದರು. ಅದೇ ದಿವಸ ಸಾಯಂಕಾಲಕ್ಕೆ ಶ್ರೀಗಳ ರಥದಲ್ಲಿ ಕೂತು ರಾ.ಬ||ರವರು ಅಲ್ಲಿಯ ಡಿಸ್ಟ್ರಿಕ್ಟ ಕಾನಫರನ್ಸಕ್ಕೆ ಹೋಗಿ ಬಂದರು. ಬಳಿಕ ಶ್ರೀಗಳವರಿಂದ ವೇ|| ಪತ್ರಿ ವೀರಯ್ಯನವರ ಮಹಡಿಯ ಮೇಲೆ ಕೂಡಿಸಲ್ಪಟ್ಟ ಮಹತ್ತಾದ ಸಭೆಗೆ ದಯಮಾಡಿಸಿದರು. ಸಭೆಯ ಕಾರ್ಯವು ಬಹು ವಿಜೃಂಭಣೆಯಿಂದ ಜರುಗಿ ಕೊನೆಗೆ ಸಭೆಯಲ್ಲಿ ಸುಪ್ರಸಿದ್ಧ ಶಿವಕೀರ್ತನಕಾರ ಬೆಂಗಳೂರ ಶಿವಪ್ಪಶಾಸ್ತ್ರಿಗಳವರ ಕೀರ್ತನೆಯಾಯಿತು. (ಶ್ವೇತನ ಕಥೆಯನ್ನು ಹೇಳಿದರು).

ತಾ. ೫ನೇ ಫೆಬ್ರುವರಿ ಸನ್ ೧೯೧೭ ಇಸವೀ ಸೋಮವಾರ ದಿವಸ ಶ್ರೀ ವೀರಭದ್ರದೇವರ ಗುಡಿಯಲ್ಲಿ ಏಕಾದಶ ರುದ್ರಪೂಜಾ ಮಹೋತ್ಸವವು ವಿಧಾನೋಕ್ತವಾಗಿ ಜರಗಿಸಲ್ಪಟ್ಟಿತು. ಬಳಿಕ ಸಾಯಂಕಾಲದ ೯ ಗಂಟೆಗೆ ಶ್ರೀ ಜಗದ್ಗುರುಗಳ ಅಧ್ಯಕ್ಷತೆಯ ಕೆಳಗೆ ರಾ.ಬ||ರವರ ತಾಂಬೂಲ ಸಮಾರಂಭವು ಸುರುವಾಗಿ ಸುಮಾರು ೧೨ ಗಂಟೆಯ ವರಿಗೆ ಸಮಗ್ರ ೩ ತಾಸು ಬಹು ವೈಭವದಿಂದ ಜರುಗಿತು. ಸಭೆಯಲ್ಲಿ ರಾ.ಬ||ರವರು ಆರಂಭದಿಂದ ಈ ವರೆಗೆ ಮಾಡಿದ ಸಮಾಜ ಹಿತದ ಬಗ್ಗೆ ಅನೇಕ ವಾಗ್ಮಿಗಳ ವ್ಯಾಖ್ಯಾನಗಳಾದವು. ಅನಂತರ ಮೈಸೂರ ಸೀಮೆಯ ನಿವಾಸಿಗಳ ಪರವಾಗಿ ಮಾನಪತ್ರವು ಸಮರ್ಪಿಸಲ್ಪಟ್ಟಿತು. ಶ್ರೀಗಳು ಸ್ವಹಸ್ತದಿಂದ ಬಹು ಮೋಲ್ಯವಾದ ರತ್ನಜಡಿತ ಸುವರ್ಣಪದಕವನ್ನು ರಾ.ಬ||ರವರ ಉರಪ್ರದೇಶಕ್ಕೆ ಹಚ್ಚಿದರು. ಕೂಡಲೆ ಭೂರುದ್ರರು ಮೇದಮಂತ್ರದಿಂದ ರಾ.ಬ||ರವರನ್ನು ಆಶೀರ್ವದಿಸಿ, ಮಂಗಳಮಾಡಿದರು. ಈ ಅಪೂರ್ವ ಸಮಾರಂಭವನ್ನು ನೆರವೇರಿಸಿ, ಮೈಸೂರ ಸೀಮೆಯ ನಿವಾಸಿಗಳು ಧನ್ಯವಾದವನ್ನು ಪ್ರಕಟಮಾಡಿದರು.

ಮರುದಿವಸ (ತಾ. ೬-೨-೧೯೧೭ ಮಂಗಳವಾರ) ಶ್ರೀ ವೀರಭದ್ರದೇವರ ಗುಡಿಯಲ್ಲಿ ಪುನಃ ದೊಡ್ಡದೊಂದು ಸಭೆಯು ನೆರವೇರಿ, ಅದರಲ್ಲಿಯೂ ಶ್ರೀ ಶಿವಪ್ಪಶಾಸ್ತ್ರಿಗಳ ಶಿವಕೀರ್ತನವಾಯಿತು. ರಾತ್ರಿಯಲ್ಲಿ ಶ್ರೀಗಳವರ ಪಲ್ಲಕ್ಕಿಯ ಮೆರವಣಿಗೆಯಾಯಿತು. ಸುಮಾರು ೧೫-೨೦ ಸಾವಿರ ಜನರು ಕೂಡಿದ್ದರು.

ತಾ. ೭ನೇ ಫೆಬ್ರುವರಿ ಸನ್ ೧೯೧೭ ಇಸ್ವಿ ಬುಧವಾರ ದಿವಸ ತಿಪಟೂರಿನ ಶಿವಮೂರ್ತಿ ರಾ||ಕೊಟ್ಟುರಪ್ಪಸ್ವಾಮಿ ಇವರು ತಮ್ಮಲ್ಲಿಗೂ ದಯಮಾಡಿಸೋಣವಾಗಬೇಕೆಂದು ವಿಜ್ಞಾಪಿಸಿ, ರಾವಬಹಾದ್ದೂರವರನ್ನು ಕರೆದುಕೊಂಡು ಹೋಗಿ, ತಿಪಟೂರ ವೀರಶೈವ ಆನಂದಾಶ್ರಮ ಸಂಸ್ಕೃತ ಪಾಠಶಾಲೆಯಲ್ಲಿ ಬಹುಭವ್ಯವಾದ ಸಭೆಯನ್ನೇರ್ಪಡಿಸಿ, ಮನೋಹರವಾದ ತಾಂಬೂಲ ಸಮಾರಂಭವನ್ನೆಸಗಿ ಮಾನಪತ್ರವನ್ನಿತ್ತರು. ಸಭೆಯಲ್ಲಿ ಗಾಯನವು ಚೆನ್ನಾಗಿ ಆಯಿತು.

ರಾ.ಬ||ರವರು ಮೆ||ಮೂರ್ತಿ ಕೊಟ್ಟೂರಪ್ಪ ಸ್ವಾಮಿಗಳೇ ಮೊದಲಾಗಿ ತಿಪಟೂರ ನಿವಾಸಿಗಳನ್ನು ಅಭಿನಂದಿಸಿ ತಾ. ೮-೨-೧೯೧೭ ಇಸ್ವಿ ಗುರುವಾರ ದಿವಸ ಪುನಃ ಬಿರೂರಿಗೆ ಬಂದು, ಆ ಹೊತ್ತು ಅಲ್ಲಿಯೇ ಇದ್ದು, ೯ನೇ ತಾರೀಖಿನ ದಿವಸ ಶ್ರೀ ಜಗದ್ಗುರುಗಳ ಆಶೀರ್ವಚನವನ್ನಾಂತು ಅಪ್ಪಣೇ ಪಡಕೊಂಡು ಅಲ್ಲಿಂದು

ಹೊರಟು ಸಾಯಂಕಾಲ ಸಮಯಕ್ಕೆ ದಾವಣಗೇರಿಗೆ ಬಂದು, ಮೊದಲು ಬಿಡಾರ ಮಾಡಿದ್ದ ವೇ. ಷಡಕ್ಷರಪ್ಪನವರ ಬಂಗಲೆಯಲ್ಲಿಯೇ ಇಳಿದರು.

ಮರುದಿವಸ ಅಂದರೆ ತಾ. ೧೦ನೇ ಫೆಬ್ರುವರಿ ಸನ್ ೧೯೧೭ ಇಸ್ವಿ ಶನಿವಾರ ದಿವಸ ದಾವಣಗೇರಿಯ ಪುರಪ್ರಮುಖರಿಂದ ನಿರೂಪತೆಗೆದುಕೊಂಡು, ಸಾಯಂಕಾಲದ ಗಾಡಿಯಿಂದ ಹೊರಟು ರವಿವಾರ ಬೆಳಗಿನ ೬ ಗಂಟೆಯ ಸುಮಾರಕ್ಕೆ ಸುರಕ್ಷಿತವಾಗಿ ಬೆಳಗಾಂವಿಗೆ ಬಂದರು.

ರಾ.ಬ॥ರವರು ಮೈಸೂರ ಸೀಮೆಯ ನಿವಾಸಿಗಳ ಆಗ್ರಹದ ಮೇರೆಗೆ ಬಿರೂರ ತಾಂಬೂಲ ಸಮಾರಂಭಕ್ಕೆಂದು ಪ್ರಯಾಣಮಾಡಿರಲು, ಅದರೊಡನೆ ದಾವಣಗೇರಿ ತಿಪಟೂರಗಳಲ್ಲಿಯೂ ಬಹು ವಿಜೃಂಭಣೆಯಲ್ಲಿಂದ ಸಮಾರಂಭಗಳು ನೆರವೇರಿಸಲಾದವು. ಇವರು ಸರಕಾರೀ ಕೆಲಸದಿಂದ ನಿವೃತ್ತರಾಗಿ ಬಹು ದಿವಸಗಳಾಗಿದ್ದರೂ ಕೂಡ ಇನ್ನೂ ಇವರ ತಾಂಬೂಲ ಸಮಾರಂಭಗಳು ಜರುಗುತ್ತಲೇ ಇರುವದನ್ನು ನೋಡಿದರೆ ಎಲ್ಲ ಪ್ರಾಂತಗಳ ಜನರಲ್ಲಿ ಇವರ ಬಗ್ಗೆ ಎಷ್ಟು ಪ್ರೇಮಭಾವವು ನೆಲಸಿರುವದೆಂಬದು ಸ್ಪಷ್ಟವಾಗಿ ತಿಳಿಯುತ್ತದೆ. ಜಗತೀತಳದಲ್ಲಿ ಇಂತಹ ಮಹಾಪುರುಷರೇ ಧನ್ಯರೆಂದು ನಿರ್ವಿವಾದಾಗಿ ಹೇಳಬಹುದು.

ಮೈಸೂರ ಸೀಮೆಯ ನಿವಾಸಿಗಳಾದ ಬಿರೂರ ಗ್ರಾಮದಲ್ಲಾದ ರಾ.ಬ॥ಅರಟಾಳ ಸಾಹೇಬರವರ ತಾಂಬೂಲ ಸಮಾರಂಭದಲ್ಲಿ ಅನೇಕ ಜನವ್ಯಾಖ್ಯಾತರ ಉಪನ್ಯಾಸಗಳಾದವೆಂದು ಮೇಲೆ ಹೇಳಿರುತ್ತದೆ. ಆ ವ್ಯಾಖ್ಯಾತರಲ್ಲೊಬ್ಬರಾದ ಮೈಸೂರ ಲಿಂಗಾಯಿತ ಎಜ್ಯುಕೇಶನಲ್ ಫಂಡ ಅಸೋಸಿಯೇಶನದ ಸೆಕ್ರೆಟರಿಕೀ ರುದ್ರಾರ್ಯರೆಂಬವರು ತಮ್ಮ ಭಾಷಣದಲ್ಲಿ "ರಾ.ಬ॥ರವರು ಧಾರವಾಡ ಲಿಂಗಾಯತ ಫಂಡಿನ ಉತ್ಪಾಕರಾದಂತೆ, ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಉತ್ಪಾದಕರೂ ಆಗಿರುವರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಯಾಕಂದರೆ ಬೆಂಗಳೂರ ಮಹಾಸಭೆಯಾಗುವ ವರೆಗೆ ಮೈಸೂರ ಸೀಮೆಯಲ್ಲಿ ವೀರಶೈವವಿದ್ಯಾಭಿವೃದ್ಧಿ ಫಂಡಿನ ಸ್ಥಾಪನೆಯಾಗಿದ್ದಿಲ್ಲ. ಬೆಂಗಳೂರ ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಮಂತ ಸಿರಸಂಗಿಯ ಸರದೇಸಾಯವರಾದ ಲಿಂಗಾರಾಜರು ಅಲಂಕರಿಸಿದ್ದರೆಂಬುದು ತಮ್ಮೆಲ್ಲರಿಗೆ ಗೊತ್ತೇ ಅದೆ. ಆಗ ರಾ.ಬ॥ಅರಟಾಳ ಸಾಹೇಬರು, ನಮ್ಮ ಪ್ರಾಂತದ ಫಂಡಿನಂತೆ ಈ ಸೀಮೆಯಲ್ಲಿಯೂ ಒಂದು ವೀರಶೈವ ವಿದ್ಯಾಭಿವೃದ್ಧಿ ಫಂಡು ಅವಶ್ಯವದೆ. ಕಾರಣ ಇದೇ ಸಭೆಯಲ್ಲಿ ಮೈಸೂರ ವಿದ್ಯಾಭಿವೃದ್ಧಿ ಫಂಡು ಸ್ಥಾಪಿಸಲ್ಪಟ್ಟು, ಅಧ್ಯಕ್ಷರು ಆ ಫಂಡಿಗೆ ಆರಂಭಕ್ಕೆ ರಾ.ಬ॥ರವರಿಂದ ಪ್ರೇರಿತರಾಗಿ ತಾವು ಒಂದು ಸಾವಿರ ರೂಪಾಯಿ ಕೊಡುತ್ತೇವೆಂಬದಾಗಿ ಹೇಳಿದರು. ಈ ರಕಮಿನ ಪೈಕೀ ೫೦೦ ರೂ. ಅಲ್ಲಿಯೇ ಕೊಟ್ಟರು. ಕೂಡಲೇ ಅನೇಕ ಜನಮತಾಭಿಮಾನಿಗಳ ವರ್ಗಣಿಯು ಕೂಡಿಸಲ್ಪಟ್ಟಿತು. ಕಾರಣ ಈ ಫಂಡು ಕೂಡಿಸಿದ ಸಮಗ್ರ ಶ್ರೇಯಸ್ಸು ಸಿರಸಂಗಿಯ ಶ್ರೀಮಂತ ಸರದೇಸಾಯಿಯವರಿಗೂ ರಾ.ಬ॥ರವರಿಗೂ ಸಲ್ಲತಕ್ಕದ್ದಾಗಿರುತ್ತದೆ" ಈ ಪ್ರಕಾರ ವಿವರಿಸಿದರು.

ಅಥಣೀ ತಾಲೂಕ ತೆಲಸಂಗದ ತಾಂಬೂಲ ಸಮಾರಂಭ

ಎಲ್ಲ ಕಡೆಗೂ ರಾವಬಹಾದ್ದೂರವರ ತಾಂಬೂಲ ಸಮಾರಂಭಗಳು ಜರುಗಿದ್ದನ್ನು ಕಂಡು, ಅಥಣೀ ತಾಲೂಕ ತೆಲಸಂಗ ಗ್ರಾಮದ ನಿವಾಸಿಗಳು ತಮ್ಮಲ್ಲಿಯೂ ಇವರಿಗೆ ಮಹೋತ್ಸವಪೂರ್ವಕ ಮಾನಪತ್ರವನ್ನು ಸಮರ್ಪಿಸಬೇಕೆಂದು ಸಂಕಲ್ಪ ಮಾಡಿದ್ದರು. ಅಥಣಿಯಲ್ಲಿಯೂ ಒಂದು ತಾಂಬೂಲ ಸಮಾರಂಭವಾಗತಕ್ಕದ್ದಿತ್ತು. ಅದೇ ಸಂಧಿಯಲ್ಲಿ ಅತ್ತಿಂದತ್ತಲೇ ರಾ.ಬ॥ರವರು ತಮ್ಮಲ್ಲಿಗೆ ಕರದುಕೊಂಡು ಹೋಗಿ ಸಮಾರಂಭವನ್ನು ಸಾಂಗಮಾಡಬೇಕೆಂದು ಅವರು ನಿಶ್ಚಯಿಸಿದ್ದರು. ಆದರೆ ಕೆಲಕಾರಣಗಳ ಮೂಲಕ ಅಥಣಿಯ ಸಮಾರಂಭವು

ಮುಂದಕ್ಕೆ ಬೀಳುವದನ್ನು ಕಂಡು ಅವರು, ತಮ್ಮಲ್ಲಿಗೆ ತಾಂಬೂಲ ಸಮಾರಂಭಕ್ಕಾಗಿ ದಯಮಾಡಿಸಬೇಕೆಂದು ರಾ.ಬ॥ರವರನ್ನು ಬಿನ್ನವಿಸಿದರು. ಅದಕ್ಕೆ ರಾವಬಹಾದೂರವರು ಸ್ಟೇಶನದಿಂದ ಬಹು ದೂರವಿರುವ ನಿಮ್ಮ ಗ್ರಾಮಕ್ಕೆ ಬರುವದು ನಮಗೂ ನಿಮಗೂ ಕೂಡಿಯೇ ತ್ರಾಸದಾಯಕವಾಗುತ್ತದೆಂದೂ, ನಿಮ್ಮ ಅಪೇಕ್ಷೆಯಿದ್ದರೆ ಇಲ್ಲಿಯೇ ಬೆಳಗಾವಿಯಲ್ಲಿ ಸ್ವಲ್ಪದರಲ್ಲಿ ನಿಮ್ಮ ಸಮಾರಂಭವನ್ನು ನೆರವೇರಿಸಿರೆಂದೂ ಹೇಳಿದರು.

ಆ ಪ್ರಕಾರ ತೆಲಸಂಗದ ಮುಖಂಡರಾದ ಸಿದ್ಧನಗೌಡಾ ಪಾಟೀಲ, ಶ್ರೀ ರಾಚೋಟಿಸ್ವಾಮಿಗಳು ಪಟ್ಟದೇವರು ಹಿರೇಮಠ ಮುಂತಾದವರು ಬಂದು, ಬೆಳಗಾಂವ ರವಿವಾರ ಪೇಟಿಯೊಳಗಿರುವ ಹಿರೇಮಠದಲ್ಲಿ ಸನ್ನ ೧೯೧೬ನೇ ಇಸವಿಯ ಅಗಸ್ಟ ತಿಂಗಳ ೧೩ನೇ ತಾರೀಖು ರವಿವಾರ ಸಾಯಂಕಾಲದ ೫ ಗಂಟೆಯ ಸುಮಾರಕ್ಕೆ ಬಹು ವಿಜೃಂಭಣೆಯಿಂದ ತಾಂಬೂಲ ಸಮಾರಂಭವನ್ನು ನೆರವೇರಿಸಿದರು. ಸುಮಾರು ೫೦೦ ಜನ ಸಭಾಸದರು ಕೂಡಿದ್ದರು. ಕೆಲವರ ವ್ಯಾಖ್ಯಾನಗಳು ಆದವು. ಮಾನಪತ್ರವು ಓದಲ್ಪಟ್ಟು ಮಣಿಖಚಿತ ಸುವರ್ಣ ಪದಕದೊಂದಿಗೆ ರಾ.ಬ॥ರವರಿಗೆ ಬಹು ಮರ್ಯಾದಾಪೂರ್ವಕ ಸಮರ್ಪಿಸಲ್ಪಟ್ಟಿತು. ಮಿಸ್ತರ ಜಾಧವರಾವಜೀ ಎಮ್. ನರಸುಭಾ ಕೊಲ್ಲಾಪೂರ ಇವರು ಈ ಸಭೆಯಲ್ಲಿ ಪ್ರೆಸಿಡೆಂಟರಾಗಿದ್ದರು. ಇವರು ಅತಿ ಉತ್ತಮವಾದ ಭಾಷಣ ಮಾಡಿ ರಾ.ಬ॥ಅರಟಾಳ ಸಾಹೇಬರನ್ನು ಬಹಳೇ ಗೌರವಿಸಿದರು.

ಶ್ರೀಮತಿ ವೀರವ್ವಗೌಡಶಾನಿ, ತಬಕದ ಹೊನ್ನೀಹಳ್ಳಿ

ಧಾರವಾಡ ಜಿಲ್ಲಾ ಕಲಘಟಗೀ ತಾಲೂಕ ಪೈಕಿ ತಬಕದ ಹೊನ್ನೀಹಳ್ಳಿಯೆಂಬ ಗ್ರಾಮವದೆ. ಈ ಗ್ರಾಮವು ಪೂರ್ವದಲ್ಲಿ ಸವಣೂರ ಸಂಸ್ಥಾನಕ್ಕೆ ಒಳಪಟ್ಟಿದ್ದು. ಆದರೆ ನವಾಬರಿಂದ ಗೌಡಕಿ ವತನ ತೆಗೆದುಕೊಳ್ಳುವದರಲ್ಲಿ ಬಂದಿತ್ತು. ಕೆಲಕಾಲದ ಮೇಲೆ ಆ ಗ್ರಾಮದ ಸಮೀಪದಲ್ಲಿರುವ ಹುಣಶ್ಯಾಳದ ಹತ್ತರ ಸವಣೂರ ನವಾಬಸಾಹೇಬರು ಬಂದು ಇಳಿದಿರಲು, ಆ ಊರ ಪಾಟೀಲರ ಮನೆತನದವರಾದ ರ್‍ಯಾವವ್ವ ಗೌಡಶಾನಿಯವರು ತಮ್ಮಲ್ಲಿ ಗುಪ್ತವಾಗಿ ಕಾಯ್ದುಕೊಂಡಿದ್ದ ಬಂಗಾರದ ಇಕ್ಕೇರಿ ನಾಣ್ಯ(ಹೊನ್ನು)ಗಳನ್ನು ತಬಕದಲ್ಲಿ ಹಾಕಿಕೊಂಡು ಹೋಗಿ ನವಾಬಸಾಹೇಬರ ಮುಂದೆ ಇರಿಸಿ, ತಮ್ಮ ವತನವನ್ನು ಬಿಡುಗಡೆಮಾಡಿಕೊಡುವದಕ್ಕೆ ಧೈರ್ಯದಿಂದಲೂ ದೀನೋಕ್ತಿಗಳಿಂದಲೂ ಕೇಳಿಕೊಳ್ಳಲು, ನವಾಬರು ಅದಕ್ಕೆ ಒಪ್ಪಿಕೊಂಡು, ಮರಳಿ ಆ ಮನೆತನಕ್ಕೆ ವತನೀ ಆಸ್ತಿಯನ್ನೆಲ್ಲ ಸಮರ್ಪಿಸಿದರೆಂದು ಪೂರ್ವಕ ಜನರು ಹೇಳುತ್ತ ಬಂದಿರುವ ಇತಿಹಾಸವುಂಟು. ಆದ್ದರಿಂದ ಈ ಗ್ರಾಮಕ್ಕೆ ತಬಕದ ಹೊನ್ನಿಹಳ್ಳಿಯೆಂಬ ಹೆಸರು ಬಂತೆಂತಲೂ ಅನ್ನುವದುಂಟು. ಈ ಗ್ರಾಮದ ಪಾಟೀಲ ಮನೆತನದ ಚಾಲಕರಾದ ರಾಚನಗೌಡರು, ಇವರ ಮಕ್ಕಳು ಹಾಲಪ್ಪಗೌಡರು. ಈ ಹಾಲಪ್ಪ ಗೌಡರಿಗೆ ಬಸನಗೌಡರು, ರಾಚನಗೌಡರು, ಶಿವನಗೌಡರು ಈ ಪ್ರಕಾರ ಕ್ರಮವಾಗಿ ಮೂವರು ಮಕ್ಕಳು ಇದ್ದರು. ಇವರಲ್ಲಿ ಹಿರಿಯವರಾದ ಬಸನಗೌಡರಿಗೆ ರಾ.ಬ॥ರುದ್ರಗೌಡರ ತಂಗಿಯಂದಿರಾದ ಶ್ರೀಮತಿ ವೀರವ್ವನವರನ್ನು ವಿವಾಹದಿಂದ ಕೊಡಲ್ಪಟ್ಟಿತ್ತು. ನಂತರ ಈಶಾಜ್ಞೆಯಿಂದ ಬಸನಗೌಡರು ಕಾಲಾಧೀನರಾದರು. ಆಮೇಲೆ ವೀರವ್ವ ಗೌಡಶಾನಿಯವರು ತಮ್ಮ ಅಣ್ಣಂದಿರಾದ ರಾ.ಬ॥ರುದ್ರಗೌಡರ ಜೊತೆಗೆ ಸುಖದಿಂದ ಕಾಲ ಕಳೆಯುವವರಾಗಿದ್ದಾರೆ. ಈ ಗೌಡಶಾನಿಯವರು ಲಿಂಗಾಯತಸಮಾಜದಲ್ಲಿ ಸ್ತ್ರೀಶಿಕ್ಷಣ ಪ್ರಸಾರಕ್ಕಾಗಿ ೧೫೦೦ ರೂಪಾಯಿ ಬೆಲೆಯ ಪ್ರಾಮಿಸರಿ ನೋಟುಗಳನ್ನು ಧಾರವಾಡ ಲಿಂಗಾಯತ ಫಂಡ ಅಸೋಸಿಯೇಶನಕ್ಕೆ ಇವರ ಕಡಿಗೆ ಕೊಟ್ಟಿರುತ್ತಾರೆ. ಈ ನೋಟುಗಳು ೩

ರೂಪಾಯಿ ಬಡ್ಡಿಯವಿದ್ದು ಈ ಬಡ್ಡಿಹಣದಿಂದ ಶ್ರೀಮತಿ ವೀರವ್ವಗೌಡಶಾನಿಯವರ ಹೆಸರಿನದೊಂದು ಶಿಷ್ಯವೃತ್ತಿಯು ಸ್ಥಾಪಿಸಲ್ಪಟ್ಟಿದೆ. ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಕ್ಕೆ ಜೋಡಿಸಿರುವ ಬಾಲಕೆಯರ ಶಾಲೆಯಲ್ಲಿ ೫ನೇ ಇಯತ್ತೆಯನ್ನು ಪಾಸಾಗಿ ೧ನೇ ನಂಬರು ಪಡೆದು ಕಾಲೇಜಕ್ಕೆ ಹೋಗಿ ಅಭ್ಯಾಸಮಾಡುವ ಲಿಂಗಾಯತ ವಿದ್ಯಾರ್ಥಿನಿಗೆ ಈ ಶಿಷ್ಯವೃತ್ತಿಯು ಕೊಡಲ್ಪಡುವದು. ಸ್ತ್ರೀಶಿಕ್ಷಣ ಮಹತ್ವವನ್ನು ಕಂಡುಹಿಡಿದು, ಅದರ ಉತ್ತೇಜನಾರ್ಥವಾಗಿ ಒಂದು ಶಿಷ್ಯವೃತ್ತಿಯನ್ನು ಸ್ಥಾಪಿಸಿದ ಈ ಶ್ರೀಮತಿ ವೀರವ್ವ ಗೌಡಶಾನಿಯವರ ಉದಾಹರಣೆಯು ಮೊದಲೇ ಆದ್ದರಿಂದ ಬಹು ಅಭಿನಂದನ ಪರವಾಗಿರುತ್ತದೆ. ಎಷ್ಟೋ ಶ್ರೀಮಂತ ಮನೆತನದ ಸಭ್ಯಸ್ತ್ರೀಯರು ಮನಃಪೂರ್ವಕವಾಗಿ ಈ ಔದಾರ್ಯಗುಣವನ್ನು ಗೃಹಣಮಾಡಿಕೊಳ್ಳಲು ಸರ್ವಾತ್ಮನಾ ಯೋಗ್ಯವಾಗಿರುತ್ತದೆ. ಸ್ತ್ರೀಶಿಕ್ಷಣ ಹೆಚ್ಚಲಿಕ್ಕೆ ಮಾರ್ಗವೂ ಆದಂತಾಯಿತು. ಈ ವೀರವ್ವಗೌಡಶಾನಿಯವರ ವಿದ್ಯಾದಾನದ ಸದಿಚ್ಛೆಯು ಕೇವಲ ತಮ್ಮ ಅಣ್ಣಂದಿರಾದ ರಾ.ಬ॥ರುದ್ರಗೌಡರ ಗುಣಾನುವಾದದ ಅನುಕರಣವೆಂದು ಬೇರೆ ಹೇಳಬೇಕಾಗಿಲ್ಲಾ. ಈ ವೀರವ್ವಗೌಡಶಾನಿಯವರು ಶಾಂತ ಸ್ವಭಾವದವರೂ, ಸುಶೀಲರೂ ಆಗಿರುತ್ತಾರೆ.

ಸದರೀ ಶ್ರೀಮತಿ ವೀರವ್ವಗೌಡಶಾನಿಯವರು ಉದಾರ ಅಂತಃಕರಣದಿಂದ ವೀರಶೈವರ ವಿದ್ಯಾಭಿವೃದ್ಧಿಗಾಗಿ, ಗಿಲಗಿಂಚಿ ಅರಟಾಳ ಹೈಸ್ಕೂಲ ಇಂಗ್ಲಿಷ ಶಾಲೆಗೆ ಹೋಗಿ ಇಂಗ್ಲಿಷ ೭ನೇ ಇಯತ್ತೆ (ಮ್ಯಾಟ್ರಿಕ್)ಯ ಪರೀಕ್ಷೆ ಪಾಸಾಗಿ ೧ನೇ ನಂಬರ ಬಂದ ವಿದ್ಯಾರ್ಥಿಗಳಿಗೆ ಸ್ಕಾಲರಸಿಪ್ ಕೊಡಬೇಕೆಂಬ ಉದ್ದೇಶದಿಂದ ಅರಟಾಳ ಹೈಸ್ಕೂಲಕ್ಕೆ ಒಂದು ಸಾವಿರ ರೂಪಾಯಿಗಳನ್ನು (೧೦೦೦) ಕೊಟ್ಟಿರುವರು. ಕೊಟ್ಟ ತಾರೀಖು ೧೪-೬-೧೯೨೬ ಇಸ್ವಿ.

ಈ ವೀರವ್ವಗೌಡಶಾನಿಯವರ ವಿದ್ಯಾದಾನದ ಸದಿಚ್ಛೆಯು ತಮ್ಮ ಅಣ್ಣಂದಿರಾದ ರಾ.ಬ॥ರುದ್ರಗೌಡರ ಗುಣದ ಅನುಕರಣವೆಂದು ಪುನಃ ಹೇಳಬೇಕಾಗಿಲ್ಲ. ತಾ. ೧೭-೬-೨೬ನೇ ಇಸ್ವಿ.

[ಮಿ. ಎಂಥೋವ್ಹನ್ ದೊರೆಗಳಿಂದ ಕೃತಜ್ಞತೆ ಸ್ಮರಣೆ ಮತ್ತು ಪತ್ರ]

Extract of the last para in page XIX of the Introduction of the Tribes and Castes of Bombay by R. Enthoven, Companion of the Order of the Indian Empire, Commander of the Order of Leopold II, Indian Civil Service, Superintendent of Ethnography, Bombay Presidency-

In conclusion, I would express my grateful acknowledgements to Rao Bahadur B.A. Gupte, Mr. D.R. Bhandarkar, Rao Bahadur R.C. Artal, Shams- Ubulma Dr. J.J. Modi, C.I.E. Mr. K.G. Pandit, Rao Bahadur P.B. Joshi, Mr. M.K.Metha & Mr. J.A. Saldanha for the valuable assistance they have rendered in compiling many of the draft monographs which form the basis of this work. Mr. P.J. Mead, CIE I.C.S. has at intervals held temporary charge of the survey, and associated by Mr. L.J. Sedgwick, I.C.S., has directed the work of compilation recently during my absence in England on duty. I have also received useful materials from Mr. O. Rothfeld, I.C.S. and the Reverend A. Wilkie Brown.

A special tribute is due to Mr. G.M., Kalelkar, who has been my

assistant in the work of the survey since its commencement, and has carried out the heavy task of drafting caste articles with commendable skill & energy.

June 30, 1920 R.E.E.

Custom House, Bombay
20th January 1921

Dear Rao Bahadur,

I send you herewith (per Book Post) the first volume of Tribes and Castes. I fear the remaining two volumes which are ready for press, will be greatly delayed owing to a breakdown in the Government Central Press. They will, however, reach you in time, I trust.

I am greatly indebted to you for the most valuable assistance you rendered in the preparation of this work.

Yours sincerely,
Sd/- R.E. Enthoven

To,
R.B.R.C. Artal, Belgaum.

ರುದ್ರಗೌಡರು ನೀಡಿದ ಧರ್ಮಾರ್ಥ ವರ್ಗಣಿ

ರಾವಬಹಾದೂರವರು ಕೆಳಗೆ ನಮೂದ ಮಾಡಿದ ಪ್ರಕಾರ ಧರ್ಮಾರ್ಥ ಕೆಲಸಕ್ಕೆ ವರ್ಗಣಿ ಕೊಟ್ಟಿರುತ್ತಾರೆ.

1.	ಧಾರವಾಡ ಲಿಂಗಾಯತ ಫಂಡಿಗೆ	- 200
2.	ಧಾರವಾಡ ಲಿಂಗಾಯತ ಹಾಲಿಗೆ	- 500
3.	ಶಿಗ್ಗಾವಿ ದವಾಖಾನೆಕ್ಕೆ ವರ್ಗಣಿ	- 500
4.	ಕರ್ನಾಟಕ ಕಾಲೇಜದ ವರ್ಗಣಿ	- 200
5.	ಬೆಳಗಾವ ಹೊಸ ಹಾಸ್ಪಿಟಲಕ್ಕೆ ವರ್ಗಣಿ	- 100
6.	ಪುರಫಂಡ ವರ್ಗಣಿ ಮೆ॥ ಎಚ್.ಎಸ್. ಲಾರೆನ್ಸ ಡಿ.ಸಿ.ಎಸ್. ಕಮಿಶನರ ಸಾಹೇಬರವರು ಗಣಪತಿ ನೋಡಲಿಕ್ಕೆ ಮುಡುಲಿ ಸಾಹೇಬರು ಸಹಿತವಾಗಿ ಹಾಗೂ ಕೆಲವು ಮಂದಿ ಸಾಹೇಬರು ಬಂದಾಗ ಕೊಟ್ಟಿದ್ದು	- 500
7.	ಹೆಂಗಸರ ದೆಶೆಯಿಂದ ಪುರ ಫಂಡಿಗೆ ದರ ತಿಂಗಳಿಗೆ ಐದು ರೂಪಾಯಿಗಳಂತೆ ಎರಡು ವರ್ಷಗಳವರೆಗೆ	-120 ಅಥವಾ ಅದಕ್ಕೂ ಹೆಚ್ಚಿಗೆ
8.	ನೇಟಿಹ್ವ ಸೋಲಜರಿಗೆ ಮೆ॥ ಲಾರೆನ್ಸ ಸಾಹೇಬ	

ಬಹದೂರವರು ಕಮೀಶನರ ದಕ್ಷಿಣ ಭಾಗ ಯಿದ್ದ
ಸಜ್ಜಕದ ಹೋಳಿಗೆ, ಪುಗ್ಗೆ ವಗೈರೆ ಮಾಡಿಸಿ ಊಟಕ್ಕೆ
ಹಾಕಿಸಿದ್ದು -ಅಜಮಾಸು ಒಂದು(100)ರೂಪಾಯಿಗಳು

9. ಸೌಭಾಗ್ಯವತಿ ಸುಂದರವ್ವ ಬಂಕಾಪುರ ಈಕಿಯ
ಲಗ್ನದ ಬಗ್ಗೆ ಖರ್ಚು - 300

10. ನನ್ನ ಖಾಸ ಚಿಗವ್ವನು ಅಂದರೆ ನನ್ನ ತಾಯಿ ಖಾಸ
ತಂಗಿ ಈರವ್ವ ಭೃತಾರ ವುಳವನಗೌಡ ಸಾ. ಅಗಡಿ
ತಾ. ಹುಬ್ಬಳ್ಳಿ ಯಿವರ ಮಗ ಲಿಂಗನಗೌಡನ ಲಗ್ನಕ್ಕೆ
ಕೊಟ್ಟಿದ್ದು - 300

11. ಲಿಂಗಣಗೌಡ ಚಿನ್ನ ವುಳವಣಗೌಡ ಪಾಟೀಲ ಅಗಡಿ
ಸಾ. ಹುಬ್ಬಳ್ಳಿಗೆ ಈತನಿಗೆ ಯತ್ತಿನಬಂಡಿ - 200

12. ಸದರಿಯವನು ಅಗಡಿ ಪೂಜಾರಿ ಕಡಿಂದ ತಂದ
ಸಾಲಾ ತೀರಿಸಿದ ರಕಮು - 250

13. ....ಅಗಡಿಗೌಡ ಶಿವಲಿಂಗಗೌಡನಿಗೆ... ವತನಿ
ಮಾಡಿಕೊಡುವ ಬಗ್ಗೆ ಕೊಟ್ಟಿದ್ದು - 80

14. ಅಗಡಿ ಈರವ್ವನವರು
ಮರಣ ಹೊಂದಿದಾಗ್ಗೆ ಖರ್ಚುಮಾಡಿದ್ದು - 50

[ರುದ್ರಗೌಡರ ವರ್ಣ, ಸ್ವಭಾವ, ಆಚರಣೆ]

ಈ ವರೆಗೆ ಬರೆದ ಚರಿತ್ರೆಯಿಂದ ರಾ.ಬ॥ರುದ್ರಗೌಡರವರು ಯಾವ ತರದ ಮನುಷ್ಯರಾಗಿರುವರೆಂಬದು ವಾಚಕರಿಗೆ ಗೊತ್ತಾಗಿರಬಹುದು. ಒಂದೇ ಒಂದು ಅಗಳು ಹಿಚಿಕಿನೋಡಿ ಅನ್ನದ ಪರಿಪಕ್ವ ಸ್ಥಿತಿಯನ್ನು ತಿಳಿದುಕೊಳ್ಳುವಂತೆ ಇವರಿಂದುಂಟಾದ ಸಮಾಜಹಿತದ ಅನೇಕ ಕಾರ್ಯಗಳಲ್ಲಿ ಒಂದೇ ಒಂದು ಕಾರ್ಯವನ್ನು ಪರಿಶೀಲಿಸಿ ನೋಡಿ ಇವರ ಗುಣಾತಿಶಯವನ್ನು ಸಹಜವಾಗಿ ಕಂಡುಕೊಳ್ಳಬಹುದು. ಪುನಃ ಪುನಃ ಇವರ ಗುಣಾನುವಾದ ಮಾಡಿ ವಾಚಕವೃಂದವನ್ನು ಬೇಸರಪಡಿಸುವ ಗೊಂದಲಕ್ಕೆ ಹೋಗದೆ ಇವರು ವೀರಶೈವರಲ್ಲಿ ಯಾವ ವರ್ಣಕ್ಕೆ ಸೇರಿದವರು, ಇವರ ಶೀಲಸ್ವಭಾವ, ಆಚಾರವಿಚಾರಗಳು ಹೇಗಿರುವವು, ಇವರ ದೈನಿಕ ವೃತ್ತಿಯ ಕ್ರಮವೆಂತು? ಕಡೆಗೆ ಇವರಿಗೆ ಸತ್ಯಜ್ಞಾನೋದಯವು ಹೇಗಾಯಿತು ಇವೇ ಮುಂತಾದ ಸಂಗತಿಗಳನ್ನು ಈ ಭಾಗದಲ್ಲಿ ವಿವರಿಸುತ್ತೇವೆ.

ಶ್ರೀ ಮತ್ತು ಪರಮಪೂಜ್ಯನಾದ ಯಾವ ಪರಮಾತ್ಮನ ಪ್ರೇರಣೆಯಿಂದ ಅತ್ಯಗಾಧವಾದ ಜಗಚ್ಚಕ್ರವು ಅಬಾಧಿತವಾಗಿ ಭ್ರಮಿಸುತ್ತಿರುವದೋ ಆ ಮಹಾಮಹಿಮನಾದ ಪರಮೇಶ್ವರನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯಗಳೆಂಬ ಪಂಚಮುಖಗಳಿಂದ ಉದ್ಭವಿಸಿದ ಶ್ರೀ ರೇಣುಕಾರಾಧ್ಯ, ಮರುಳಾರಾಧ್ಯ, ಪಂಡಿತಾರಾಧ್ಯ, ಏಕೋರಾಮಾರಾಧ್ಯ, ವಿಶ್ವಾರಾಧ್ಯ ಎಂಬ ಪಂಚಾಚಾರ್ಯರಿಂದ

ಶ್ರೀಮದ್ವೇದಾಗಮೋಪನಿಷತ್ಪ್ರತಿಪಾದಿತನಾದ ಹಾಗೂ ಒಂದೇ ಒಂದು ಜನ್ಮದಲ್ಲಿ ಮೋಕ್ಷೈಕ ಸಾಧನೀಭೂತವಾದ ಶ್ರೀಮದ್ವೀರಶೈವ ಮತೋತ್ಪತ್ತಿಯಾದ ಸಂಗತಿಯು ಸರ್ವಶ್ರುತವಾಗಿರುತ್ತದಷ್ಟೇ. ಶುದ್ಧವೀರಶೈವರಲ್ಲಿ ನಿರಾಭಾರಿ ವೀರಶೈವರೆಂತಲೂ, ವಿಶೇಷ ವೀರಶೈವರೆಂತಲೂ, ಸಾಮಾನ್ಯವೀರಶೈವರೆಂತಲೂ ಮುಖ್ಯ ಮೂರು ವರ್ಗಗಳಿವೆ. ಶ್ರೀ ಬಸವೇಶ್ವರರು ಪ್ರಸಾರಾರ್ಥವಾಗಿ ಜಾತಿಭೇದವನ್ನೆಣಿಸದೆ ಎಷ್ಟೋ ಜಾತಿಯ ಜನರನ್ನು ಲಿಂಗವಂತರಲ್ಲಿ ಸೇರಿಸಿಕೊಂಡರು. ಅಂದಿನಿಂದ ವೀರಶೈವರಲ್ಲಿ ಅನೇಕ ಅವಾಂತರ ಭೇದಗಳುಂಟಾದವು. ಈ ಹೊಸದಾಗಿ ಸ್ವೀಕರಿಸಿದ ಲಿಂಗವಂತರು ಅರ್ಧಲಿಂಗವಂತರೆಂದು ಹೇಳಬಹುದು. ಮೇಲೆ ಹೇಳಿದ ಶುದ್ಧ (ನಿಜ)ಲಿಂಗವಂತರಲ್ಲಿ ಮೂರು ಮುಖ್ಯ ವರ್ಗಗಳಲ್ಲದೆ, ಲೀತ ಸ್ವಭಾವ ಆಚಾರ ವಿಚಾರ ಪ್ರಭೇದದಿಂದ ಇವರಲ್ಲಿ ಜಂಗಮರು, ಶೀಲವಂತರು, ಬಣಜಿಗರು, ಪಂಚಮಸಾಲಿಯವರು ಎಂದು ನಾಲ್ಕು ಒಳಭೇದಗಳಾಗಿರುವವು. ಇವೇ ನಾಲ್ಕು ಜಾತಿಗಳು ಲಿಂಗವಂತರಲ್ಲಿ ಶ್ರೇಷ್ಠವಾದವುಗಳು. ಕಡಿಮೇ ಜಾತಿಗಳ ಜನರು ಈ ಜಾತಿಗಳಲ್ಲಿ ಸೇರಲಾರರು.

ಮೊದಲಿನ ಮೂರು ವರ್ಗಗಳಿಗಿಂತ ವೀರಶೈವರಲ್ಲಿ ಪಂಚಮಸಾಲಿಯವರ ಸಂಖ್ಯೆಯು ಬಹಳ ಹೆಚ್ಚಿರುತ್ತದೆ. ಬಣಜಿಗರು, ಶೀಲವಂತರು ಪಂಚಮಸಾಲಿಯವರಿಂದಲೇ ಉಂಟಾದವರೆಂದು ಹೇಳುತ್ತಾರೆ. ಈ ಹೊತ್ತಿಗೆ ಪಂಚಮಸಾಲಿಯ ಮನುಷ್ಯನು ದೀಕ್ಷೆಯನ್ನು ತಕ್ಕೊಂಡು ಬಣಜಿಗನಾಗಲಿಕ್ಕೆ ಅಡ್ಡಿಯಿಲ್ಲಾ. ಪಂಚಮಸಾಲಿಯ ಹುಡುಗರು ಅಯ್ಯತನದ ಸಂಸ್ಕಾರ ಹೊಂದಿ ಜಂಗಮರಾಗಬಹುದು. ವಿರಕ್ತರಾಗಲಿಕ್ಕೆ ಸಹ ಅವರಿಗೆ ಅಡ್ಡಿಯಿಲ್ಲ. ಈ ಅಧಿಕಾರವು ಸ್ವೀಕರಿಸದ ಲಿಂಗವಂತರಿಲ್ಲ. ಸಾರಾಂಶ: ಪಂಚಮಸಾಲಿಯವರ್ಗವು ಗೋದಿಯಂತಿದ್ದು ಬೇಕಾದದ್ದನ್ನು ಮಾಡಿಕೊಳ್ಳಲಿಕ್ಕೆ ಬರುವಂತಿದೆ. ಪಂಚಮಸಾಲಿಯವರಂತೆ ಬಣಜಿಗರೂ, ಶೀಲವಂತರೂ ಜಂಗಮರಾಗಬಹುದು.

ಪಂಚಮಸಾಲಿಯವರ ಮುಖ್ಯ ಹೋರೆಯು ಒಕ್ಕಲತನವಾಗಿದ್ದು ಸಧ್ಯಕ್ಕೆ ಇವರಲ್ಲಿ ಕೆಲವರು ವ್ಯಾಪಾರ, ನೌಕರಿ ಮುಂತಾದ ಅನೇಕ ಬಗೆಯ ಉದ್ಯೋಗ ಪ್ರವರ್ತಕರಾಗಿರುವರು. ಇವರು ಸ್ವಾಭಾವಿಕವಾಗಿ ರಾಜನಿಷ್ಠೆಯುಳ್ಳವರೂ, ಸಭ್ಯಸ್ವಭಾವದವರೂ ಆಗಿದ್ದು, ಪರರನ್ನು ವಂಚಿಸುವ ಮೋಸಗಾರಿಕೆಯನ್ನು ಎಷ್ಟು ಮಾತ್ರವೂ ಅರಿಯರು. ನಮ್ಮ ರಾವಬಹಾದೂರ ರುದ್ರಗೌಡದೊರೆಗಳು ಈ ಪಂಚಮಸಾಲಿಯೆಂಬ ವರ್ಣಕ್ಕೆ ಸೇರಿದವರು. ಮಖಾರಿ, ಕಾಲಾರಿ, ಪುರಾರಿ, ಸ್ಮರಾರಿ, ವೈಧಾರಿ ಎಂಬ ಪಂಚಮರಲ್ಲಿ ಇವರು ಕಾಲಾರಿ ಪಂಚಮರು. ಮರುಳಾರಾಧ್ಯರೇ ಮೂಲಪೀಠಾಚಾರ್ಯರು(ಮೂಲಗುರುವು) ಉಜಯಿನಿ ಸಿಂಹಾಸನವೇ ಪೀಠಸ್ಥಾನವು. ವಾಮದೇವ ಮುಖ, ನಂದಿಗೋತ್ರ, ವೃಷ್ಟಿ ಮಹಾಸೂತ್ರ, ವೀರಶೈವ ಪ್ರವರ, ಯಜುರ್ವೇದ ಶಾಖಾ, ಅತಿವರ್ಣ, ನಕಾರಮಂತ್ರ ಬೀಜ, ವೀರಲಕ್ಷಣ, ಹರಿದ್ವರ್ಣಕಂಥಾ, ರಜತಧಾತು, ಪ್ರಸಾದ ಪಂಚಾಕ್ಷರೀಮಂತ್ರ, ಪೂರ್ವದಿಕ್ಕು, ಋಗ್ವೇದ, ಆಚಾರಲಿಂಗ, ಪೃಥ್ವಿತತ್ವ, ಭಕ್ತಿಸ್ಥಲದವರು. ಮೂಲಗುರುಪೀಠ ಶಾಖೆಯವರಾದ ಧಾರವಾಡ ಜಿಲ್ಲಾ ರೋಣ ತಾಲೂಕ ನರೇಗಲ್ಲ ಹಿರೇಮಠದ ಶ್ರೀ ಪಟ್ಟದ್ದೇವರೇ ಇವರ ಮನೆತನದ ಈಗಿನ ಗುರುಗಳು, ಈ ಪ್ರಕಾರ ಇವರ ವರ್ಣ ವಿವರವಿರುತ್ತದೆ.

ಇವರು ತಮ್ಮ ಸಚ್ಛೀಲ, ಸತ್ಯಸ್ವಭಾವ, ಸದಾಚಾರ, ಸದ್ವಿಚಾರ ಸತ್ಕ್ರಿಯೆಗಳಿಂದ ಸ್ವತಃ ಶಿವಶರಣರಾಗಿದ್ದು, ಹರಗುರುಭಕ್ತಿ ಪರಾಯಣರೂ, ಶಿವಪೂಜಾಸಕ್ತರೂ ಧರ್ಮಪರಿಪಾಲಕರೂ ಎಂದೆನ್ನಿಸಿಕೊಂಡು, ಅಖಂಡವಾದ ಪ್ರಜಾಪ್ರೇಮಕ್ಕೆ ಪಾತ್ರರಾಗಿರುವರು. ಇವರ ದೈನಿಕ ಕಾರ್ಯಕ್ರಮವು ಮಾದರಿ

ತೆಗೆದುಕೊಳ್ಳುವಂಥಾದ್ದಿರುವರು. ಪ್ರತಿದಿವಸ ಅರುಣೋದಯಕ್ಕೆ ಮುಂಚಿತವಾಗಿ ಎದ್ದು ಮುಖಮಾರ್ಜನಾದಿಗಳನ್ನು ತೀರಿಸಿಕೊಂಡು, ಶುಚಿರ್ಭೂತರಾಗಿ ಶಿವಧ್ಯಾನವನ್ನು ಮಾಡುತ್ತ ತುಸುಹೊತ್ತು ಧರ್ಮಗ್ರಂಥವನ್ನು ಓದಿ, ಬಳಿಕ ೧೦ ಗಂಟೆಗಳ ವರೆಗೆ ಧಾರ್ಮಿಕಗ್ರಂಥಗಳನ್ನೋದಿ ಹತ್ತು ಹೊಡಿಯುವ ಮುಂದಾಗಳೇ ಸ್ನಾನಕ್ಕೇಳುವರು. ಇವರ ಪಙ್ತಿಗೆ ಊಟಕ್ಕೆ ಕೂಡುವ ಜನರು ಸ್ನಾನ ಶಿವಪೂಜಾದಿಗಳೆಲ್ಲ ಈ ಮೊದಲೇ ತೀರಿಸಬೇಕು. ತಮ್ಮ ಸ್ನಾನ ತೀರಿಸಿಕೊಂಡು ಮೌಲ್ಯವಾದ ಮಡಿವಸ್ತ್ರಗಳನ್ನು ಧರಿಸಿ, ಶಿವಪೂಜೆಯನ್ನು ಸಾಂಗಮಾಡುವರು. ಇವರ ಸ್ವಂತ ಶಿವಪೂಜಾ ಸಾಮಗ್ರಿಗಳೂ ಭೋಜನಪಾತ್ರೆಗಳೂ ಶುದ್ಧ ಬೆಳ್ಳಿಯವಿದ್ದು, ಯಾವಾಗಲೂ ಝಗಝಗಿಸುತ್ತವೆ. ಕರ್ಮಮಾರ್ಗಕ್ಕಿಂತ ಜ್ಞಾನಮಾರ್ಗವೇ ಶ್ರೇಷ್ಠವಾದದರಿಂದ ರಾ.ಬ॥ರವರು ಜ್ಞಾನಮಾರ್ಗವನ್ನೇ ವಿಶೇಷವಾಗಿ ಅವಲಂಬಿಸಿರುವರು. ಕಾರಣ ಇವರು ಯಾವಾಗಲೂ ಸಣ್ಣನ್ನ ಮಂಜುಳವಾದ ಸುಸ್ವರದಿಂದ ಶಿವಧ್ಯಾನಪರವಾದ ಪದಗಳನ್ನು ಅನ್ನುತ್ತಿರುತ್ತಾರೆ. ಇವರ ಶಿವಪೂಜೆಯು ಪೂರ್ಣವಾದ ಸಮಯವನ್ನು ನೋಡಿಕೊಂಡು ಪಂಙ್ತಿಯ ಜನರು ಬಂದು ತಮ್ಮ ತಮ್ಮ ಮಣಿಗಳ ಮೇಲೆ ಓರಣದಿಂದ ಕೂಡುವರು. ಅವರೆಲ್ಲರ ಕೂಡ ಆನಂದದಿಂದಲೂ, ಉತ್ಸುಕತೆಯಿಂದಲೂ ವಿನೋದ ಪ್ರಶ್ನೆಗಳನ್ನು, ಇಲ್ಲವೇ ಯಾವದೊಂದು ವಿಷಯವಾದ ಚರ್ಚೆಯನ್ನು ಮಾಡುತ್ತ ಸಂತೋಷದಿಂದ ಊಟವನ್ನು ಸಾಗಿಸುವರು. ಊಟಕ್ಕೆ ಕೂತಾಗ ಗವಯಿಯು ಶಿವಸ್ತೋತ್ರಗಳನ್ನು ಹಾಡುವನು. ಊಟವಾದ ಕೂಡಲೇ ತಾಂಬೂಲವನ್ನು ಸವಿದು, ಬಂದ ಟಪಾಲುವಡೆದು ಸರಕಾರೀ, ಹಾಗೂ ಖಾಸಗೀ ಕಾಗದಪತ್ರಗಳನ್ನು ವಿಂಗಡಿಸಿ, ಸರಕಾರಿಯ ಕಾಗದ ಪತ್ರಗಳನ್ನು ನೋಡಿ ಸಿಪಾಯಿಯ ಕಡೆಗೆ ಕೊಟ್ಟು, ಸ್ವಂತ ಕಾಗದಪತ್ರಗಳನ್ನು ಪರಿಶೀಲಿಸಿ ಜರೂರವಾಗಿರುವ ಕಾಗದ ಪತ್ರಗಳಿಗೆ ಎಷ್ಟು ಮಾತ್ರವೂ ವಿಲಂಬಮಾಡದೇ ಆಗಿಂದಾಗ ಉತ್ತರಗಳನ್ನು ಬರೆದು, ಉಳಿದವುಗಳನ್ನು ಮೇಜಿನ ಒಂದು ಬದಿಗಿಟ್ಟು ಜವಾಬುಕೊಟ್ಟು, ಪತ್ರಗಳಿಗೆ ತಾರೀಖು ಸಹಿಹಾಕಿ, ಅವುಗಳನ್ನು ಬಂದು ಚೀಲಕ್ಕೆ ಹಾಕುವರು. ಜರೂರವಾಗಿರದ ಕಾಗದ ಪತ್ರಗಳಿಗೆ ಅನುಕೂಲತೆಯ ಪ್ರಕಾರ ಹಿಂದಿನಿಂದ ಉತ್ತರಕೊಟ್ಟು ಆ ಪತ್ರಗಳನ್ನಾದರೂ ಆ ಚೀಲಕ್ಕೆ ಸೇರಿಸುವರು. ವರ್ಷಪೂರ್ಣವಾದ ಮೇಲೆ ಈ ಪತ್ರದ ಚೀಲವನ್ನು ಬಾಯಿಕಟ್ಟಿ ಅದರ ಹೊರಮಗ್ಗಲಿಗೆ ಇಸವಿಯ ಚೀಟಿಯನ್ನು ಹಚ್ಚಿ ಒತ್ತಟ್ಟಿಗಿಟ್ಟು, ಬೇರೊಂದು ಹೊಸ ಚೀಲವನ್ನು ಮುಂದಿನ ವರ್ಷಕ್ಕಾಗಿ ತಂದಿರಿಸುವರು. ಟಪಾಲ ಕೆಲಸವು ತೀರಿದ ಮೇಲೆ ವರ್ತಮಾನ ಪತ್ರಗಳ ಮುಖ್ಯ ಮುಖ್ಯ ಸಾರವನ್ನೇ ಓದುತ್ತ ಕೂಡ್ರುವರು. ಅಷ್ಟರಲ್ಲಿ ಕಚೇರಿಯ ವೇಳೆಯಾಗಲು ತಮ್ಮ ದರ್ಬಾರೀ ಪೋಷಾಕು ಧರಿಸುವರು. ಗಾಡಿಯನ್ನು ಅಥವಾ ಜೋಡು ಕುದುರೆಯ ಟಾಂಗೆಯನ್ನು ಸಿದ್ಧಗೊಳಿಸಿ, ಸಿಪಾಯಿಯು ಸೂಚಿಸಲು ವೇಳೆಗೆ ಸರಿಯಾಗಿ (೧೧ ಗಂಟೆಗೆ) ತಮ್ಮ ಆಫೀಸಕ್ಕೆ ಹೋಗುವದು. ಸಂಜೆಯ ೫ ಗಂಟೆಗೆ ಸರಿಯಾಗಿ ಆಫೀಸಿನಿಂದ ಬಂದು, ಸ್ವಲ್ಪು ಹೊತ್ತು ಪಟ್ಟಣದ ಹೊರಗಿನ ಸ್ವಚ್ಛ ಹವೆಯಲ್ಲಿ ರಥಾರೂಢರಾಗಿ ವಿಶ್ರಾಂತಿಯನ್ನು ಹೊಂದುವರು. ಅಲ್ಲಿಂದ ತಿರುಗಿ ಮಂದಿರಕ್ಕೆ ಬಂದು, ದರ್ಶನಾತುರರಾಗಿ ಕಾಯ್ದುಕೊಂಡು ನಿಂತಿದ್ದ ಎಷ್ಟೋ ಸದ್ಗೃಹಸ್ಥರನ್ನು ಪರಾಮರ್ಶಿಸಿ ದಯಾರ್ದ್ರಪೂರಿತ ತಮ್ಮ ಸರಳ ಹೃದಯದಿಂದ ಅವರನ್ನು ಸಂತೋಷಗೊಳಿಸುವರು. ಬಳಿಕ ಸ್ವಲ್ಪ ಗಾಯನವನ್ನು ಕೇಳುವರು. ಒಬ್ಬ ಗವಯಿಯು ಯಾವಾಗಲೂ ಇವರ ಆಶ್ರಯದಲ್ಲಿರಲಿಕ್ಕೆ ಬೇಕು. ಆತನು ತ್ರಿಸಂಧ್ಯೆಗಳಲ್ಲಿಯೂ ಅಂದರೆ ಪ್ರಾತಃಸಮಯದಲ್ಲಿಯೂ, ಶಿವಪೂಜಾಸಮಯದಲ್ಲಿಯೂ, ಸಾಯಂಕಾಲದಲ್ಲಿಯೂ ತನ್ನ ಸುಶ್ರಾವ್ಯಗಾನದಿಂದ ಇವರನ್ನು ಸಂತೋಷಗೊಳಿಸುವನು. ಅಷ್ಟೊತ್ತಿಗೆ ಊಟದ ಹೊತ್ತಾಗಲು ಒಳಗೆ ಬಂದು, ಬಂಧು ಬಳಗದವರನ್ನು ಪ್ರೀತಿಯಿಂದ ಮಾತಾಡಿಸುತ್ತ ೮ ಗಂಟೆಯೊಳಗಾಗಿ ಭೋಜನವನ್ನು ತೀರಿಸಿ, ತಮ್ಮ ಸ್ಥಾನಕ್ಕೆ ಹೋಗಿ ಧಾರ್ಮಿಕ ಹಾಗೂ ಸಾಮಾಜಿಕ ಗ್ರಂಥಗಳನ್ನು ವಿಮರ್ಶಿಸುತ್ತಲೂ

ಬರೆಯುತ್ತಲೂ ಎರಡು ತಾಸುಗಳನ್ನು ಕಳೆಯುವರು. ಹತ್ತು ಗಂಟೆಗೆ ಸರಿಯಾಗಿ ಪವಡಿಸಿ ಗಾಢ ನಿದ್ರೆಗೊಳಗಾಗುವರು. ಈ ಪ್ರಕಾರ ಇವರ ಉತ್ತಮವಾದ ದೈನಿಕ ಶ್ರಮವಿರುವದರಿಂದ ದೇವರು ಇವರಿಗೆ ಆರೋಗ್ಯ, ವಿದ್ಯೆ, ಲಕ್ಷ್ಮಿಗಳನ್ನು ದಯಪಾಲಿಸಿರುವನೆಂದು ಹೇಳಬಹುದು.

ಮನೆಯ ಹಾಗೂ ಪರಿವಾರದ ವ್ಯವಸ್ಥೆಯಾದರೂ ಬಲು ಅಚ್ಚುಕಟ್ಟಾಗಿರುವದು. ಯಾವ ಜೀನಸು ಎಲ್ಲಿರತಕ್ಕದ್ದೋ ಅದು ಅಲ್ಲಿಯೇ ಇರಲಿಕ್ಕೆಬೇಕು. ಸೋಮಾರಿತನದಿಂದ ಅದನ್ನು ಆ ಜಾಗೆಯಿಂದ ಯಾರೂ ಎಷ್ಟು ಮಾತ್ರವೂ ಬೇರೆಡೆಯಲ್ಲಿಡಲಿಕ್ಕೆ ಆಗದು. ಮಂದಿರದ ಎಲ್ಲೆಡೆಗಳೂ ಈಗೀಗ ಉಡುಗಿದಂತೆ ಜಳ ಜಳವಾಗಿರಲಿಕ್ಕೆಬೇಕು. ತಮಗೆ ತಿಳಿಸದೇ ಮನೆತನದ ಯಾವದೊಂದು ಹೆಚ್ಚು ಕಡಿಮೆಯನ್ನು ಯಾರೂ ಮಾಡಲಾಗದು. ಮನೆತನದ ಗೊಂದಲವನ್ನು ಇವರು ಎಷ್ಟುಮಾತ್ರವೂ ತಮ್ಮ ಮೈಗೆ ಹಚ್ಚಿಕೊಂಡಿರದಿದ್ದು, ಎಲ್ಲದರ ಮೇಲೆ ಪೂರ್ಣಲಕ್ಷವಿರುತ್ತದೆ. ಪಗಾರದ ಥೈಲಿಯನ್ನು ಸಹ ಇವರು ಕೈಯಿಂದ ಹಿಡಿಯದೆ, ಕಣ್ಮೆತ್ತಿ ನೋಡದೆ, ಸಹಿಮಾಡಿ ಮಂದಿರಕ್ಕೆ ಕಳಿಸುವರು. ಸೂಕ್ಷ್ಮವಿಚಾರಿಗಳೂ ಸತ್ಯಾಚರಣೆಯುಳ್ಳವರೂ ಆದ ವೀರವ್ವನವರು ಮಿತವ್ಯಯದಿಂದ ಹಣದ ಹಾಗೂ ಮನೆತನದ ಸರ್ವವ್ಯವಸ್ಥೆಗಳನ್ನು ಮಾಡಿಸುವರು. ಮಂದಿರಕ್ಕೆ ಬರಹೋಗುವವರು ಈ ಸರ್ವೋತ್ಕೃಷ್ಟವಾದ ಗೃಹದ ವ್ಯವಸ್ಥೆಯನ್ನು ಮನದಣಿ ನೋಡಿ, ವಿಶ್ವಸನೀಯವಾದ ವೀರವ್ವನವರ ಹಾಗೂ ಮೇಲ್ವಿಚಾರಕರಾದ ಸಾಹೇಬರವರ ಗುಣಾನುವಾದ ಮಾಡುವರು. ಇಂತಹ ಮೇಲಾದ ವ್ಯವಸ್ಥೆಯೇ ಪ್ರತಿಯೊಂದು ಮನೆತನದ ಇಲ್ಲವೆ ರಾಷ್ಟ್ರದ ಶೋಭೆಗೂ ಚಿರಸ್ಥೆಗೂ ಕಾರಣೀಭೂತವಾಗಿರುತ್ತದೆ.

ದುಷ್ಕರ್ಮಿಗಳು ಗರ್ಭಗಳಿತರಾಗುವಂಥ ದರ್ಪದಿಂದಲೂ, ಚತುರರು ಚಕಿತರಾಗುವಂಥ ಚಾತುರ್ಯದಿಂದಲೂ, ಸಜ್ಜನರು ಸತ್ಯಸಂಧರು ಸಂತೋಷಗೊಳ್ಳುವಂಥ ಸತ್ಯವಂತಿಕೆಯಿಂದಲೂ, ನೀತಿ ನಿಪುಣರು ನಿಬ್ಬೆರಗಾಗುವಂಥ ನಿಷ್ಪ್ರಹರತೆಯಿಂದಲೂ, ಧೀರರು ದೃಷ್ಟಿಯಿಡುವಂಥ ದಿಟ್ಟತನದಿಂದಲೂ ಈವರೆಗೆ ಸರಕಾರದಲ್ಲಿ ಕೆಲಸಮಾಡಿದ ದೊಡ್ಡ ದೊಡ್ಡ ಅಧಿಕಾರದವರಲ್ಲಿ ರಾ.ಬ॥ರುದ್ರಗೌಡರೊಬ್ಬರೇ ಒಬ್ಬರೆಂದು ಅವರ ಕೃತಿಯನ್ನು ನೋಡಿದ, ಕೇಳಿದ ಪ್ರತಿಯೊಬ್ಬ ಮಾನವನು ನಿರ್ದಾಕ್ಷಿಣ್ಯದಿಂದ ಹೇಳುತ್ತಾನೆಂಬ ಮಾತು ಅಕ್ಷರಶಃ ನಿಜವಾಗಿರುತ್ತದೆ. ಇವೆಲ್ಲ ಮಾತುಗಳ ನಿದರ್ಶನಾರ್ಥವಾದ ಉದಾಹರಣೆಗಳು ಹಿಂದೆ ಬರೆದ ಇವರ ಚರಿತ್ರೆಯಲ್ಲಿ ಅಲ್ಲಲ್ಲಿಗೆ ದೊರೆಯುತ್ತವೆ. ಆದರೂ ಒಂದೆರಡು ಚಮತ್ಕಾರಿಕವಾದ ಚಿಕ್ಕ ದೃಷ್ಟಾಂತಗಳನ್ನು ಇಲ್ಲಿ ಕೊಡುತ್ತೇವೆ.

ಸನ್ ೧೮೮೨ ಫೆಬ್ರುವರಿ ತಿಂಗಳಲ್ಲಿ ರಾ.ಬ॥ರವರು ಹಿಂದೆ ಒಂದಾನೊಂದು ದಿವಸ ಸವನೂರ ನವಾಬ ಸಾಹೇಬರವರಿಂದ ದಿಲೇರ ಜಂಗಬಹಾದೂರ ನವಾಬರ ಮತ್ತು ಅವರ ತಂಗಿ ಅಹಮ್ಮದಬೀ ಇವರನ್ನು ಜಂಜೀರಾ ನವಾಬರಿಗೆ ಕೊಟ್ಟು ಲಗ್ನಮಾಡುವ ಆಮಂತ್ರಿತರಾಗಿ, ಅಲ್ಲಿ ನಡೆದ ಉತ್ಸವಕ್ಕೆ ಹೋಗಿ, ಓರ್ವ ಸ್ನೇಹಿತರ ಮನೆಯಲ್ಲಿ ಇಳುಕೊಂಡಿದ್ದರು. ಈ ಸುದ್ದಿಯನ್ನು ತಿಳಿದು ತಾಲೂಕ ಬಂಕಾಪುರದ ಮಾಮಲೇದಾರರಾದ ರಾ.ಸಾ॥ರಾಜಾಚಾರ್ಯ ಬಂಡಾಚಾರ್ಯ ದೀಪದ ಮತ್ತು ಅಬ್ದುಲ್ಲ ಸಾಹೇಬ ಫೌಜದಾರ ಇವರಿಬ್ಬರೂ ಇವರ ದರ್ಶನಾರ್ಥವಾಗಿ ಬಂದರು. ಆ ಸಮಯದಲ್ಲಿ ರಾ.ಬ॥ರವರ ಭೋಜನ ನಡೆದಿತ್ತು. ಅದರಿಂದ ರಾವಬಹಾದೂರವರು ಊಟಮಾಡಿ ಹೊರಗೆ ಬರುವ ಸಮಯವನ್ನು ಕಾಯುತ್ತ ಹೊರಗಿನ ಪಟಾಂಗಣದಲ್ಲಿ ಕೂತರು. ಆ ಹೊರಗಿನ ಪಟಾಂಗಣದಲ್ಲಿಯೇ ಆಸನಗಳು ಇರಿಸಲ್ಪಟ್ಟಿದ್ದವು. ಊಟಾದೊಡನೇ ರಾ.ಬ॥ರವರು ಮೊದಲಾಗಿ ಎಲ್ಲರೂ ಅಲ್ಲಿಗೇ ಬರತಕ್ಕವರು. ಇವರು ಕೂತು ಸ್ವಲ್ಪ ಹೊತ್ತಿನಲ್ಲಿಯೇ ಊಟವು ಮುಗಿದು ಪಟಾಂಗಣದ ಹಿಂದಿನ ಪಡಸಾಲೆಯೊಳಗೆ ತಾಂಬೂಲ ಸೇವನೆ ನಡೆದಿತ್ತು. ಪಡಸಾಲೆಯ ಬಾಗಿಲದ ಎರಡೂ ಪಟಕಗಳು ಒಂದಕ್ಕೊಂದು ಕೂಡುವಂತೆ ಮುಂದೆ ಮಾಡಲ್ಪಟ್ಟಿದ್ದವು. ಈಗ ಹೊರಗೆ ಬರುತ್ತಾರೆಂದು

ದರ್ಶನಾತುರರಾಗಿ ಬಾಗಿಲದ ಕಡೆಗೇ ದೃಷ್ಟಿಯನ್ನಿಟ್ಟು ಸಮಯವನ್ನು ಸಾಧಿಸುತ್ತಿರಲು, ಒಳಗೆ ಪಡಸಾಲೆಯಲ್ಲಿ ಬಂದಿರುವ ಒಂದು ಬೆಕ್ಕನ್ನು ಒಳಗಿದ್ದ ಪರಿಚಾರಕರು ಬೆದರಿಸಲು, ಅದು ಆ ಬಾಗಿಲದ ಎರಡೂ ಪಟಕುಗಳ ನಡುವಿನ ಸಂಧಿನೊಳಗಿಂದ ಬುದುಂಗನೇ ಹೊರಬಿದ್ದ ಮಾತ್ರವೇ ಎರಡೂ ಪಟಕಗಳು ತೆರೆಯಲು, ರಾವಬಹಾದ್ದೂರವರೇ ಬಂದರೆಂಬ ಭಾವನೆಯಿಂದ ಹೊರಗಿದ್ದ ಮಾಮಲೇದಾರರೂ, ಫೌಜದಾರರು ಚಟಕ್ಕನೇ ಎದ್ದು ಕೈ ಮುಗಿದುಕೊಂಡು ನಿಂತರು. ಇದನ್ನು ಕಂಡು ಅಲ್ಲಿ ನಿಂತಿದ್ದ ಶಿಪಾಯರೇ ಮೊದಲಾಗಿ ಎಲ್ಲರೂ ಬಿದ್ದು ಬಿದ್ದು ನಕ್ಕರು. ರಾವಬಹಾದ್ದೂರವರು ನಗುತ್ತ, ಏನು? ಮಾಮಲೇದಾರ ಫೌಜದಾರರೇ? ನಿಮ್ಮಂಥ ಅಧಿಕಾರಿಗಳು ಬೆಕ್ಕಿಗೆ ಬೆದರಬೇಕೆ? ಎಂದು ವಿನೋದದಿಂದ ಕೇಳುತ್ತ ಹೊರಗೆ ಬರಲು, ಶರಣಶರಣಾರ್ಥಿಗಳಾಗಲು "ರಾವಬಹಾದ್ದೂರವರೇ? ತಾವು ಬಾರದಿದ್ದರೂ ಕೂಡಾ ಈ ಯಃಕಶ್ಚಿತವಾದ ಬೆಕ್ಕು ತಮ್ಮ ಬರುವಿಕೆಯ ಭಾಸವನ್ನು ಭಯವನ್ನುಂಟುಮಾಡಿತು. ಸತ್ಯಮಯವಾದ ತಮ್ಮ ದರ್ಪವು ಸೂರ್ಯಪ್ರಕಾಶದಂತೆ ಎಲ್ಲೆಡೆಯಲ್ಲಿಯೂ ದಟ್ಟವಾಗಿ ತುಂಬಿಕೊಂಡಿರುವದೇ ಇದಕ್ಕೆ ಮೂಲಕಾರಣವು" ಎಂದು ಹೇಳಿ ಬಂದ ಕೆಲಸವನ್ನು ತೀರಿಸಿಕೊಂಡು ತಂತಮ್ಮ ಮನೆಗೆ ಹೋದರು.

ಮತ್ತೊಂದು ಸಮಯದಲ್ಲಿ ರಾ.ಬ॥ರವರು ತಮ್ಮ ರಾಜೋದ್ಯೋಗದ ಸಂಚಾರದಲ್ಲಿ ಗೋಕಾಕ ತಾಲೂಕಿನೊಳಗಿನ ಒಂದು ಹಳ್ಳಿ ಲೋಳಸರ ಸಮೀಪವಾಗಿರುವ ಘಟಪ್ರಭಾ ತೀರದಲ್ಲಿರುವ ಧರ್ಮಶಾಲೆಯಲ್ಲಿ ಬಿಡಾರ ಮಾಡಿರಲು, ಇವರ ಅಡಿಗೆಯನೋರ್ವನು ನದಿಗೆ ನೀರಿಗೆ ಹೋದಾಗ ದನಕಾಯುವ ಹುಡುಗರು ದನಗಳನ್ನು ನೀರು ಕುಡಿಸಲಿಕ್ಕೆ ಹೊಡೆತಂದಿದ್ದರು. ಆ ದನಗಳಲ್ಲಿ ಒಂದು ಒಳ್ಳೇ ಮಕರಿಗೆ ಬಂದ ಹೋರಿಯು ತನ್ನ ಮದದಿಂದ ಸುತ್ತಲಿನ ದನಕರಗಳನ್ನು ಲೆಖ್ಖಿಸದೆ ಢುರಕೀಹಾಕುತ್ತ ಕಂಡವರನ್ನೆಲ್ಲ ಕೆಕ್ಕರಿಸಿ ನೋಡುತ್ತ, ಕಾಲುಗಳನ್ನು ನೆಲಕ್ಕೆ ಬಡೆಯುತ್ತ ಸಮೀಪಕ್ಕೆ ಯಾರನ್ನು ಬರಗೊಡಿಸದೆ ತನ್ನ ಹದನಾದ ಕೋಡುಗಳಿಂದ ನೆಲವನ್ನು ನಿವಚಿ ಮಣ್ಣು ಹಾರಿಸುತ್ತಿತ್ತು. ಎಷ್ಟು ಬೆದರಿಸಿದರೂ ಹೆದರದೆ, ತನ್ನ ಉದ್ದಾಮತನವನ್ನು ಬಿಡದೇ ನಡಿಸಿರುವ ಹೋರಿಯನ್ನು ಕುರಿತು ಆ ದನಕಾಯುವ ಹುಡುಗನು ಸಹಜವಾಗಿ "ಎಲೇ ನಿನ್ನ ಹುಡುಗಾಟಿಕೀ ಎಲ್ಲಾ ಬಿಟ್ಟ ಬಿಡ ನೋಡ. ನಿನ್ನ ಸೊಕ್ಕ ತೋರಸಬ್ಯಾಡ, ಎಲ್ಲಾ ಗೊತ್ತಲೆ ನೋಡ, ಇಲ್ಲೇ ಸನೇಕ ರುದ್ರಗೌಡರ ಆದಾರ, ಹಾಂಗ, ಹಿಂಗ, ಮಾಡಿದೆಂದರ ನಿನ್ನ ತೊಗೀನ ಹಿರಿದಾರ, ನೋಡಿಕೊಂಡು ಬಾಳೇ ಮಾಡ" ಎಂಬದಾಗಿ ಪುನಃ ಪುನಃ ಅನ್ನುವ ಮಾತುಗಳನ್ನು ಅಡಿಗೆಯವನು ಕೇಳಿ "ಆಹಾ! ನಮ್ಮ ರಾವಬಹಾದ್ದೂರವರ ಭಯವು ಪಶುಪಕ್ಷಿಗಳಿಗೂ ಕೂಡ ಇರುವದೇ ಧನ್ಯಧನ್ಯ ರುದ್ರಗೌಡರೇ!ಕೆಲಸಮಾಡಬುದು ಮಾಡಬಹುದು" ಎಂಬ ಧನ್ಯವಾದವನ್ನು ತನ್ನ ಮನದೊಳಗೇ ಮಾಡುತ್ತ ರಾಹುಟಿಗೆ ಬಂದು, ಅಲ್ಲಿ ನಡೆದ ಸೋಜಿಗದ ಸಂಗತಿಯನ್ನು ಪರಿವಾರದವರಿಗೆ ತಿಳಿಸಲಾಗಿ ಎಲ್ಲರೂ ಸಂತೋಷಹೊಂದಿದರು. ವಿಶೇಷವೇನಂದರೆ, ಅಡಮುಟ್ಟ ದನಗಳಿಗೆ ಸನ್ಮಾರ್ಗವನ್ನು ತೋರಿಸುವದಕ್ಕಾಗಿ ಜನರು ದನಗಳಿಗೆ ಬೈಯುತ್ತಿರುವದು ಎಲ್ಲರಿಗೂ ಗೊತ್ತಿದ್ದ ಮಾತೇ ಸರಿ. ಗರ್ವದ ಮದದಿಂದ ಹಾಗೂ ದುಷ್ಟವಾಸನೆಯಿಂದ ಯಾರನ್ನೂ ಲಕ್ಷೀಕರಿಸದೆ ತಮ್ಮ ಉದ್ದಾಮ ತನವನ್ನು ಹಠಾತ್ತಾಗಿ ನಡಿಸಿ ಪರಪೀಡಕರಾದ ದುಷ್ಟರ ಮರ್ದನಕ್ಕೆ ರಾ.ಬ॥ರುದ್ರಗೌಡ ಸಾಹೇಬರವರೇ ಮದ್ದು ಎಂಬ ಮಾತು ದನಕಾಯುವ ಹುಡುಗರಿಗೆ ಸಹ ಗೊತ್ತಿರುವುದೆಂದು ಇದೊಂದು ದೃಷ್ಟಾಂತದಿಂದ ಕಂಡುಬರುವುದು. ಅಂತೆಯೇ ಕವಿಗಳು 'ದುರ್ಜನದಂತಿ ಸಿಂಹ' ಎಂಬ ವಿಶೇಷಣಪದವನ್ನು ಇವರ ಹೆಸರಿಗೆ ಜೋಡಿಸುತ್ತಾರೆ.

ಇದೇ ಮಾದರಿಯ ಇನ್ನೊಂದು ಉದಾಹರಣೆ: ಹುಚ್ಚನೆಂಬ ಹೆಸರಿನ ಹೊಲೆಯನೊಬ್ಬನು ಸಂಪಗಾಂವ ತಾಲೂಕ ಕಿತ್ತೂರ ಗುರುವಾರ ಪೇಟೆಯ (ಜಂಗಳಿಯ ದನಗಳನ್ನು) ಎಮ್ಮೆ ಆಕಳುಗಳನ್ನು ಬಹು ದಿವಸದಿಂದ ಕಾಯುತ್ತಿರುವನು. ಜನರು ಈತನಿಗೆ ಹುಚ್ಯಾ ಹುಚ್ಯಾ ಎಂದು ಕರೆಯುವರು. ಜಂಗಳೀದನ ಕಾಯುವದೇ

ಇವನ ಉಪಜೀವನದ ಮುಖ್ಯ ಹೋರೆಯು. ಬಹುಶಃ ಎಲ್ಲ ಜನರು ತಮ್ಮ ಎಮ್ಮೆ ಆಕಳುಗಳನ್ನು ಕಾಯಲಿಕ್ಕೆ ಇವನಿಗೆ ಹಚ್ಚುವರು. ಕಾರಣ ಈತನ ದನದ ಹಿಂಡು ಬಹಳೇ ದೊಡ್ಡದದೆ. ಈತನ ಕೂಗಾದರೂ ಬಹು ದೊಡ್ಡದು, ದೂರ ಕೇಳುವದು. ಪೇಟೆಯ ಮಾರ್ಗದಿಂದ ದನ ಬಿಡಿರೆಂದು ಒದರುತ್ತ ಬರಲು ದೂರ ಸಂದಿಗೊಂದಿಗಳಲ್ಲಿರುವ ಮನೆಯವರು ಸಹ ಎಚ್ಚತ್ತು ತಮ್ಮ ದನಕರಗಳನ್ನು ಕೂಡಲೇ ಬಿಟ್ಟು ಬಿಡುವರು. ಆತನು ಮನೆಮನೆಗೆ ಹೋಗುವ ಕಾರಣವಿಲ್ಲ. ಬಳಿಕ ೩-೪ ಹುಡುಗರು ಕೂಡ ಕಾಯಲಾಗದಷ್ಟು ಕೂಡಿದ ದೊಡ್ಡದಾದ ದನದ ಹಿಂಡನ್ನು ಒಬ್ಬನೇ ಕಾಯ್ದುಕೊಂಡು ಬರುತ್ತಾನೆ. ಹಿಂಡಿನೊಳಗಿನ ಯಾವದೊಂದು ದನವು ಅಡ್ನಾಡ ಮಾರ್ಗವನ್ನು ಹಿಡಿದರೆ, ಕಾದಾಡಹೋದರೆ, ಯಾರನ್ನಾದರೂ ಇರಿಯಲಿಕ್ಕೆ ಹೋದರೆ, ಯಾವದೊಂದು ತುಂಟತನವನ್ನು ಮಾಡಹತ್ತಿದರೆ ಅದನ್ನು ಕುರಿತು "ಎಲಾ ನಿನ್ನ ರುದ್ರಗೌಡರ ಕಡೇ ಒದೇನ ನೋಡ" ಎಂದು ಅಂದಾಕ್ಷಣವೆ ಅಂಜಿ ಅದು ತನ್ನ ಅಡ್ಡ ನಡೆಯನ್ನು ಬಿಟ್ಟು, ಹೊರಳಿ ಹಿಂಡನ್ನನುಸರಿಸುವದು. ಈ ಸಂಗತಿಯನ್ನು ಗ್ರಂಥಕರ್ತನಾದ ನಾನು ಪ್ರತ್ಯಕ್ಷ ದಿನಾಲು ಕೇಳಿರುವೆನು. ಹಗಲೆಲ್ಲ ಹೀಗೆ ಅವನು ಅನ್ನುವದರಿಂದ ರಾ.ಬ॥ರವರ ಹೆಸರು ಅವುಗಳಿಗೆ ಬಹು ಭೀಕರವಾಗಿ ಹೋಗಿದೆ. ವಾಸ್ತವಿಕ ವಿಚಾರವಾದರೂ ಹಾಗೇ ಇರುತ್ತದೆ. ಸಾರಾಂಶವೇನಂದರೇ, ರಾ.ಬ॥ರುದ್ರಗೌಡರು ಕೆಟ್ಟವರಿಗೆ ಕೆಟ್ಟವರಾಗಿಯೂ, ಸಜ್ಜನರಿಗೆ ಸಜ್ಜನರಾಗಿಯೂ ಇರುವರೆಂಬ ಮಾತು ಸುಶಿಕ್ಷಿತ, ಅಶಿಕ್ಷಿತ, ಸಣ್ಣವರು ದೊಡ್ಡವರೆಲ್ಲರಿಗೂ ಗೊತ್ತಾಗಿ ಹೋಗಿರುವದು. ರುದ್ರಗೌಡ ಎಂಬ ಹೆಸರಿನಲ್ಲಿಯೇ ಈ ಅರ್ಥವು ಅಡಕವಾಗಿರುವದೆಂದು ಕವಿಗಳು ವರ್ಣಿಸಿರುತ್ತಾರೆ. ಹೇಗೆಂದರೆ:

> ಉತ್ಕೋಚಗ್ರಾಹಿಣಾಂ ರೌದ್ರಾ।ನಿಸ್ಪೃಹಾಣಾಂ ಗುಡೋಪಮಾಃ
> ಏತೇ ಚಾನ್ವರ್ಥನಾಮಾನೋ।ರುದ್ರಗೌಡಾ ಮಹಾಶಯಾಃ॥

ಅಂದರೆ ಲಂಚಗುಳಿಗಳಿಗೆ ರೌದ್ರಾಕಾರವಾಗಿಯೂ, ಸಜ್ಜನರಿಗೆ ಬೆಲ್ಲದಂತೆ ಸವಿಸವಿಯಾಗಿಯೂ ಇವರು ಇರುವದರಿಂದ, ರುದ್ರಗೌಡರೆಂಬ ಹೆಸರು ಇವರ ಸ್ವಭಾವಕ್ಕೆ ಅನ್ವರ್ಥವಾಗಿರುವದು.

ಇವರ ಕರ್ತವ್ಯ ಜಾಗ್ರತೆಯ ವಿಷಯಕ್ಕೆ ಬಂದು ಸಾಧಾರಣ ದೃಷ್ಟಾಂತವೇನಂದರೆ, ಗೋಕಾಕ ತಾಲೂಕಿನೊಳಗೆ, ಗೋಕಾಕಕ್ಕೆ ಸಮೀಪವಾಗಿ ಬಡತನದ ಸ್ಥಿತಿಯಲ್ಲಿರುವ ಒಂದೆರಡು ಹಳ್ಳಿ (ಮಾಲದಿನ್ನಿ-ಉಪ್ಪಾರಟ್ಟಿ)ಗಳಲ್ಲಿಯ ಕೂಲಿಕಾರ ಜನರು ಮುಂಜಾನೆಯಿಂದ ಸಂಜೆಯ ವರೆಗೆ ದುಡಿದು ತಂದ ತಮ್ಮ ಕೂಲಿಯನ್ನೆಲ್ಲ ಸಿಂದಿ, ಸೆರೆ ಕುಡಿದು ಹಾಳು ಮಾಡುತ್ತಿರುವದರಿಂದ ಅವರ ಹೆಣ್ಣುಮಕ್ಕಳಿಗೆ ಅನ್ನ ಅರಿವೆಗಳ ತಾಪತ್ರಯವಾಗಿ, ಅವರು ಬಹಳ ಕಷ್ಟವನ್ನು ಅನುಭೋಗಿಸುತ್ತಿದ್ದರು. ಅನ್ನಾನ್ನಗತಿಯಾದ ಅಬಲೆಯರೆಲ್ಲ ತಮ್ಮ ಗಂಡಸರಿಗೆ ಕುಡುಕತನವನ್ನು ಬಿಡಿರೆಂದು ಎಷ್ಟು ಪರಿಯಿಂದ ಹೇಳಿದಾಗ್ಯೂ ಅವರು ಕೇಳದೆ, ತಮ್ಮ ಕೂಲಿಯ ಹಣವನ್ನೆಲ್ಲ ಗಡಂಗಕ್ಕೇ ಹಾಕಿ ಬಿಡುತ್ತಿದ್ದರು. ಅದರಿಂದಲಾಗಿ ಹಳ್ಳಿಗಳು ಬಹಳೇ ದರಿದ್ರಾವಸ್ಥೆಯಲ್ಲಿದ್ದು ದುಃಖದಲ್ಲಿ ಮುಳುಗಿ ಹೋಗಿದ್ದವು. ಇಂತಹ ಕಂಗಾಲಸ್ಥಿತಿಯಲ್ಲಿರುವ ಹಳ್ಳಿಗಳಿಗೆ ರಾ.ಬ॥ರುದ್ರಗೌಡ ಸಾಹೇಬರವರ ಸ್ವಾರಿಯು ಬರುತ್ತದೆಂದು ಕೇಳಿ, ಒಬ್ಬ ರೈತನ ಹೆಂಡತಿ ಲಕ್ಕವ್ವ ಎಂಬಾಕಿ ತಮ್ಮ ಹೆಂಗಸರನ್ನೆಲ್ಲ ಕೂಡಿಸಿಕೊಂಡು, ಇವರು ಬರುವ ಹಾದಿಗೆ ಹೋಗಿ ನಿಂತು, ಸಾಹೇಬರು ಬರುತ್ತಲೇ ಅವರ ಟಾಂಗೆಯ ಎದುರಿಗೆ ಎಲ್ಲರನ್ನು ಅಡ್ಡಬೀಳಿಸಿ, ತಾನೂ ಸಾಷ್ಟಾಂಗ ಹಾಕಿದಳು. ಸಾಹೇಬರು ಈ ವಿಚಿತ್ರವನ್ನು ಕಂಡು ಟಾಂಗೆಯನ್ನು ಅಲ್ಲಿಯೇ ನಿಲ್ಲಿಸಿ ಅವರನ್ನೆಲ್ಲ ಕುರಿತು "ನೀವೆಲ್ಲರು ಇಲ್ಲಿ ಏಕೆ ಕೂಡಿದ್ದೀರಿ, ನೀವು ಏನು ಹೇಳಿಕೊಳ್ಳುವದದೆ ಹೇಳಿರಿ, ಕೈಲಾದ ಮಟ್ಟಿಗೆ ಇಮ್ಮ ಇಚ್ಛಿತವನ್ನು ಪೂರ್ಣಮಾಡುತ್ತೇನೆಂ"ದು

ಹೇಳಲು ಆ ಮುದುಕಿಯು ಮುಂದೊರೆದು "ದೀನದಯಾರ್ದ್ರ ಹೃದಯವುಳ್ಳ ನನ್ನ ದೊರೆಯೇ! ನಮ್ಮ ಪಡಿಪಾಟವನ್ನು ಏನು ಹೇಳಲಿ? ನಮ್ಮ ಗಂಡಸಮಕ್ಕಳು ಪ್ರತಿದಿವಸ ಹಗಲಿರುಳು ದುಡಿದ ಹಣವೆಲ್ಲ ಇಲ್ಲಿಯ ಸಿಂದಿ ಗಡಂಗದ ಪಾಲಾಗುತ್ತಿರುವದರಿಂದ, ನಾವು ಉಪವಾಸ ಸಾಯಬೇಕಾಗಿದೆ. ಹೊಟ್ಟೆ ತುಂಬ ಅನ್ನ, ಮೈತುಂಬ ಅರಿವೆ ನಮಗೆ ಸಿಗದೆ ಹೇಳಲಾಗದ ಕಷ್ಟವನ್ನು ಸೋಸುತ್ತಿರುವೆವು. ಕಾರಣ ದಯಮಾಡಿ ಈ ಹಳ್ಳಿಗಳ ಗಡಂಗಗಳನ್ನು ಕಿತ್ತಿಸಿ ನಮ್ಮನ್ನೆಲ್ಲ ಸಂರಕ್ಷಿಸಬೇಕೆಂದು ಬೇಡಿಕೊಳ್ಳುತ್ತೇವೆ. ತಮ್ಮ ಹೊರತು ನಮ್ಮನ್ನು ರಕ್ಷಿಸುವ ಮಹಾನುಭಾವರು ಯಾರೂ ಇಲ್ಲ.ಈ ನಮ್ಮ ಬಡ ಅಬಲೆಯರ ಬಿನ್ನಪವನ್ನು ಮಾನ್ಯಮಾಡಿ ಕಲ್ಯಾಣಕಟ್ಟಿಕೊಂಡರೆ ನೂರಾರು ಮನೆತನದ ಮಕ್ಕಳು ಮರಿಗಳನ್ನು ಬದುಕಿಸಿದ ಪುಣ್ಯವು ತಮಗೆ ಲಭಿಸುವದು. ನಮ್ಮ ರಗಳೆಯನ್ನು ಕೇಳಿ, ಅದನ್ನು ದೂರಮಾಡಲಿಕ್ಕೆ ದೇವರೆ ತಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುವನೆಂಬದಾಗಿ ನಾವು ತಿಳಿದಿರುತ್ತೇವೆ. ರಕ್ಷಿಸಬೇಕು, ರಕ್ಷಿಸಬೇಕು" ಎಂದು ಪರಿಪರಿಯಿಂದ ಕೈ ಮುಗಿದು ದೈನ್ಯಭಾವದಿಂದ ಪ್ರಾರ್ಥಿಸುವ ಆ ಹೆಂಗಸರ ಕಂಗಾಲ ಸ್ಥಿತಿಯನ್ನು ಕಂಡು ಕಷ್ಟವೆನಿಸಿ, ಅವರನ್ನು ಕುರಿತು "ಆದಷ್ಟುಮಟ್ಟಿಗೆ ನಾನು ಪ್ರಯತ್ನಮಾಡುತ್ತೇನೆ. ನೀವು ಮನೆಗೆ ಹೋಗಿರಿ" ಎಂದು ಅವರನ್ನು ಪ್ರೀತಿಯ ಮಾತುಗಳಿಂದ ಸಂತೈಸಿ ಕಳುಹಿಸಿ, ಕೂಡಲೆ ಆ ವಿಷಯವಾಗಿ ಕೆಲಸ ನಡೆಸಿ, ಅಲ್ಲಿಯ ಸಿಂದಿ ಸರಾಯಿಗಳ ಅಂಗಡಿಗಳನ್ನು (ಗಡಂಗವನ್ನು) ಕಿತ್ತಿಸಿದ್ದರಿಂದ ಆ ಹಳ್ಳಿಯ ಜನರಿಗಾದ ಆನಂದಕ್ಕೆ ಅಳತೆಯಿಲ್ಲದಾಯಿತು. ಈ ದುಷ್ಟ ಅಂಗಡಿಗಳು ಬಂದಾದದ್ದು ಕೇಳಿ ಆ ಹಳ್ಳಿಗಳ ಸ್ತ್ರೀಯರು ಸಕ್ಕರೆ ಹಂಚಿದರು. ಆ ಲಕ್ಕವ್ವನು ರಾವಬಹಾದ್ದೂರರವರ ಉಪಕಾರ ಸ್ಮರಣಾರ್ಥವಾಗಿ ಆ ವರ್ಷವೇ ಹುಟ್ಟಿದ ತನ್ನ ಮೊಮ್ಮಗನಿಗೆ ರುದ್ರಗೌಡ (ಈ ಹೆಸರು ಜನನ ಮರಣದ ರಜಿಸ್ಟರದಲ್ಲಿ ದಾಖಲಾಗಿರುವದು) ಎಂಬ ಹೆಸರನ್ನಿಟ್ಟಿರುವಳು. ಪ್ರತಿವರ್ಷದ ಫಿರತಿಯಲ್ಲಿ ಆ ಮುದುಕಿಯು ತನ್ನ ಮೊಮ್ಮಗನನ್ನು ಕರೆದುಕೊಂಡು ಸಾಹೇಬರವರ ಮುಕ್ಕಾಂ ಇದ್ದಲ್ಲಿಗೆ ಹೋಗಿ ಆತನನ್ನು ಅವರ ಪಾದದ ಮೇಲೆ ಕೆಡಹುವಳು. ಈ ಉದಾಹರಣೆಯಿಂದ ರಾ.ಬ॥ರವರು ಬಡ ಪ್ರಜೆಗಳ ದೀನವಾಣಿಯನ್ನು ಯಾವ ಪ್ರಕಾರ ಕೇಳಿಕೊಳ್ಳುವರು, ಅವರ ಇಚ್ಛಿತವನ್ನು ಹೇಗೆ ನೆರವೇರಿಸಿಕೊಡುವರು? ಅದರಿಂದ ಇವರ ಮೇಲೆ ಪ್ರಜೆಗಳ ಪೂಜ್ಯಭಾವವು ಯಾವ ಕ್ರಮದಿಂದುಂಟಾಗುವದೆಂಬದು ಸರಸಾಗಿ ತಿಳಿಯುತ್ತದೆ.

ಈಗ ರೂಢಿಯಲ್ಲಿ ಯಾವನೊಬ್ಬನು ಒಳ್ಳೇ ಡೌಲಿನಲ್ಲಿಯೂ, ಐಷ ಆರಾಮಿಯಲ್ಲಿಯೂ ಇರುತ್ತಿದ್ದರೆ ಜನರು ಅವನ ಠೀವಿಯನ್ನು ನೋಡಿ "ಅವನು ಏನು ಬಾಜೀರಾಯನಾಗಿರುನಲ್ಲ" ಎಂಬದಾಗಿ ಸಹಜವಾಗಿ ಮಾತಾಡುತ್ತಿರುವದು ಸರ್ವಶ್ರುತವಾಗಿರುವದು. ಇದರಂತೆ ಸದಾ ಸತ್ಯಪಕ್ಷವನ್ನೇ ಸ್ವೀಕರಿಸಿ ನ್ಯಾಯಹೊಂದಿ ಅಘಟಿತ ಘಟನೆಗಳನ್ನು ನೆರವೇರಿಸುವ ಮಾತುಗಳಲ್ಲಿ ಜನರು ರಾ.ಬ॥ರುದ್ರಗೌಡರವರ ಹೆಸರನ್ನು ಉದಾಹರಣಾರ್ಥವಾಗಿ ತೆಗೆದುಕೊಳ್ಳುತ್ತಿರುವರು. ಬೆಳಗಾಂವ ತಾಲೂಕ ಅರಳೀಕಟ್ಟಿಯ ಸುಪ್ರಸಿದ್ಧ ಸಾವಕಾರರಾದ ಸಂಗೋಳ್ಳಿ ಹೊಳೆಬಸಪ್ಪನವರೆಂಬ ಘನವಂತರು ಅರಳೀಕಟ್ಟಿಯಿಂದ ಬೆಳಗಾಂವಿಗೆ ಬರುವ ದಾರಿಯಲ್ಲಿ ಚಿಕ್ಕಪ್ರಾಯದ ನಾಲ್ಕು ಮಂದಿ ಬ್ರಾಹ್ಮಣ ಜಾತಿಯ ಹೈಸ್ಕೂಲ ವಿದ್ಯಾರ್ಥಿಗಳು ಯಾವದೋ ಒಂದು ವಿಷಯವಾಗಿ ಚರ್ಚೆಯನ್ನು ನಡಿಸಿದ್ದರು. ಅವರೊಳಗೆ ಮೂವರು ಅಸತ್ಯ ಪಕ್ಷವನ್ನೂ, ಒಬ್ಬನು ಸತ್ಯವನ್ನೂ ಹಿಡಿದು ತಮ್ಮವಾದ ವಿವಾದಗಳನ್ನು ನಡೆಯಿಸಿದ್ದರು. ಸತ್ಯಪಕ್ಷದ ಹುಡುಗನು"ಗೆಲೆವುದು ಸದ್ಧರ್ಮವತ್ತೆ ಕೊನೆಗೆ ನಿಸರ್ಗಂ" ಎಂಬ ವಾಕ್ಯದಂತೆ ಸತ್ಯವೇ ಕಡೆಗೆ ಜಯಪ್ರದವಾಗುವದೆಂದೂ, ಅನ್ಯಾಯದ ಐಸಿರಿಯು ಅರಿಯದೇ ನಾಶವಾಗುವದೆಂದೂ ಹಠತ್ತಾಗಿ ಸಾಧಿಸುತ್ತಿದ್ದರು. ಅದನ್ನು ಸಹಿಸದೇ ಮೂವರು ಆತನಿಗೆ "ಏನು ಬಿಡು, ನೀನು ಅರಟಾಳ ರುದ್ರಗಡ ಅದಿ" ಎಂಬದಾಗಿ ವ್ಯಂಗೋಕ್ತಿಯಿಂದ ಹಂಗಿಸಿದರು. ಮುಂದೆ ಹೀಗೆಯೇ ಸಂಭಾಷಿಸುತ್ತ ಆ ವಿದ್ಯಾರ್ಥಿಗಳು ಸಾಗಲು ಹೊಳೆಬಸಪ್ಪನವರು ಈ ಸಂಭಾಷಣೆಯನ್ನು ಕೇಳಿ ಸಂತೋಷ

ಹೊಂದಿ, ರಾವಬಹಾದ್ದೂರವರ ದರ್ಶನಕ್ಕೆ ಬಂದು ಸ್ವಜನಾಭಿಮಾನದ ಖಣಿಯಾದ ಸದ್ಧರ್ಮ ದೊರೆಗಳೇ? ನ್ಯಾಯನಿಷ್ಠ ರಾಜ್ಯಕಾರಭಾರಕ್ಕೋಸುಗ ಕರ್ನಾಟಕದ ಜನರು ದೇಶೀ ಅಧಿಕಾರಿಗಳಲ್ಲೆಲ್ಲ ತಮ್ಮ ಹೆಸರನ್ನೇ ಮೊದಲು ಉದಾಹರಣೆ ತೆಗೆದುಕೊಳ್ಳುವದಾಯಿತು. ತಮ್ಮ ಪುಣ್ಯಕ್ಕೆ ಜೋಡಿಲ್ಲವೆಂದು ಆ ವಿದ್ಯಾರ್ಥಿಗಳ ಸಂಭಾಷಣೆಯನ್ನು ಸಾಗ್ರವಾಗಿ ತಿಳಿಸಿದರು. ಆ ವಿದ್ಯಾರ್ಥಿಗಳ ಸಂಭಾಷಣೆಯಿಂದ ತೆಗೆದುಕೊಳ್ಳತಕ್ಕ ಸಾರಾಂಶವಿಷ್ಟೇ ದುಷ್ಟರಾದ ಮಹಾಪ್ರಬಲಶಾಲಿಗಳನ್ನು ಕೂಡ ಲೆಕ್ಕಿಸದೆ, ದಾರ್ಢ್ಯವಾದ ಧೈರ್ಯವನ್ನು ಬಿಡದೆ, ಅವಿಚ್ಛಿನ್ನವಾಗಿದಿರುವ ವಿಘ್ನಗಳಿಗೆ ಭಗ್ನ ಮನಸ್ಕರಾಗದೆ, ಸ್ವರ್ಗದ್ವಾರ ಕವಾಟ ಪಾಟನಕ್ಕೆ ಮೂಲಕಾರಣವಾದ ಸದ್ಧರ್ಮವನ್ನು ನ್ಯಾಯವನ್ನೂ ಮುಂದಿಟ್ಟುಕೊಂಡು ತಾವು ಹಿಡಿದ ಅಸಾಧಾರಣ ಕಾರ್ಯಗಳನ್ನು ನಿಷ್ಠುರದಿಂದ ನಡಿಸಿ ಆರಂಭದಿಂದ ಕಡೆತನಕ ಜಯಪ್ರದವಾದದರಿಂದಲೇ ರಾ॥ಬ॥ರುದ್ರಗೌಡರು ಕೀರ್ತಿವಂತರಾದರೆಂಬ ಮಾತು ಅನ್ಯಮತೀಯರಾದ ಬಾಲಕರ ಬಾಯಿಯಲ್ಲಿಯೂ ಇರುವದಾಯಿತು. ಸತ್ಯವು ಜಾತಿಯನ್ನವಲಂಬಿಸದೆ ವ್ಯಕ್ತಿಯನ್ನನುಸರಿಸುತ್ತದೆ.

ಇಂತಹ ದೃಷ್ಟಾಂತಗಳನ್ನು ಹೀಗೆಯೇ ಬರೆಯುತ್ತ ಹೋದರೆ ಅವು ಸಾವಿರಾರು ಆಗಹುದು. ಸಾಧಾರಣವಾಗಿ ಇವರು ಸಕಲವಿಷಯವೆತ್ತರೂ (ಸಾತ್ವಿಕರೂ) , ಸಾಧುವಂದ್ಯರೂ, ಸಿರಿವಂತರೂ, ಶೀಲವಂತರೂ, ಸೀಮಾತೀತ ಕೀರ್ತಿವಂತರೂ, ಸುಜ್ಞರೂ, ಸುಕ್ಷ್ಮ ವಿಚಾರಿಗಳೂ, ಸೆಡವಿನವರಿಗೆ ಸೇರದವರೂ, ಸೈರಣೆಯುಳ್ಳವರೂ, ಸೊಗಸುಗಾರರೂ, ಸೋಮವದನರೂ, ಸೌಜನ್ಯವುಳ್ಳವರೂ, ಸಂತೋಷ ಹೃದಯರೂ, ಸಕ್ರೀಮನರೂ ಆಗಿರುವರೆಂದು ಹೇಳಬಹುದು. ನಿಜಸ್ಥಿತಿಯು ಹೀಗಿದ್ದೂ ಕೆಲ ಅವಿವೇಕರು ರಾ॥ಬ॥ರುದ್ರಗೌಡರು ಬ್ರಾಹ್ಮಣ ದ್ವೇಷಿಗಳೆಂದು ಸುಮ್ಮ ಸುಮ್ಮನೆ ಅವರಿಗೆ ಅಪವಾದ ಕೊಡುತ್ತಾರೆ. ಈ ಅಪವಾದದಲ್ಲಿ ಏನೂ ಅರ್ಥವಿಲ್ಲ. ಯಾಕೆಂದರೆ ನಿರ್ದುಷ್ಟವಾದ ಇವರ ಆಳಿಕೆಯೆಲ್ಲ ದುಷ್ಟರ ಆಟವೊಂದೂ ನಡಿಯದ್ದರಿಂದ ಗೂಗೆಯು ತೇಜೋಮಯನಾದ ಸೂರ್ಯನನ್ನು ನಿಂದಿಸುವಂತೆ, ಸಜ್ಜನರನ್ನು ಸುಮ್ಮನೇ ನಿಂದಿಸಿ ತಮ್ಮ ದೌರ್ಜನ್ಯವನ್ನು ತಾವೇ ಪ್ರಕಟಮಾಡಿಕೊಳ್ಳುತ್ತಾರೆ. ಇದಕ್ಕೊಂದು ದೃಷ್ಟಾಂತವೇನಂದರೆ:ಹಿಂದಕ್ಕೆ ಭಾರತಕಾಲದಲ್ಲಿ ಬಲಿಚಕ್ರವರ್ತಿಯು ಒಂದಾನೊಂದು ಸಮಯದಲ್ಲಿ ಧರ್ಮಲಾಜನ ಸೌಜನ್ಯವನ್ನೂ, ದುರ್ಯೋಧನನ ದೌರ್ಜನ್ಯವನ್ನೂ ಪರೀಕ್ಷಿಸಬೇಕೆಂದು ರಾಜಸಭೆಯಲ್ಲಿ ಧರ್ಮಜನನ್ನು ಕುರಿತು "ಯುಧ್ಧಿಷ್ಠರನೇ, ಈ ಪೃಥ್ವಿಯಲ್ಲಿ ದುರ್ಜನ ಮನುಷ್ಯನು ಯಾವನು? ಅವನನ್ನು ಅರಿಸಿ ತಂದು ನನಗೆ ತೋರಿಸಬೇಕೆಂತಲೂ, ದುರ್ಯೋಧನನ್ನು ಕುರಿತು " ಕೌರವನೇ, ಈ ಜಗತ್ತಿನಲ್ಲಿ ಸಜ್ಜನನು ಯಾವಾತನು? ಅವನನ್ನು ಶೋಧಿಸಿ ತಂದು ನನ್ನ ಮುಂದಿರಿಸಬೇಕೆಂ"ತಲೂ ಅವರಿಬ್ಬರಿಗೆ ಹೇಳಲು, ಈರ್ವರೂ ಶೋಧಮಾಡಹತ್ತಿದರು. ಧರ್ಮಜನು ಇಡೀ ಪೃಥ್ವಿಯನ್ನು ಶೋಧಿಸಿ ದುರ್ಜನನೊಬ್ಬನನ್ನು ಕಾಣದೆ ಬಂದು ಬಲಿಚಕ್ರವರ್ತಿಯನ್ನು ಕುರಿತು "ಸಾರ್ವಭೌಮನೇ, ನನಗೆ ಒಬ್ಬನೂ ದುಷ್ಟಮನುಷ್ಯನು ದೊರೆಯಲಿಲ್ಲ" ವೆಂದು ನಿವೇದಿಸಿದನು. ಅದಕ್ಕೆ ಬಲಿಚಕ್ರವರ್ತಿಯು ಚಕಿತನಾಗಿ "ಏನು? ಧರ್ಮರಾಜಾ! ಭೂಮಂಡಲದಲ್ಲೆಲ್ಲ ಒಬ್ಬ ದುರ್ಜನನನ್ನು ಕಾಣಲಿಲ್ಲವೆ?" ಎಂದು ಕೇಳಲು"ಸ್ವಾಮಿ, ನಾನೇನು ಮಾಡಲಿ? ನಾನು ಎಷ್ಟು ಬಗೆಯಿಂದ ಶೋಧಿಸಿದರೂ ನನಗೆ ಒಬ್ಬನೂ ದುರ್ಜನನಡತೆ ಕಾಣಲಿಲ್ಲ"ವೆಂದು ಉತ್ತರಕೊಟ್ಟನು. ಅದಕ್ಕೆ ಬಲಿಚಕ್ರವರ್ತಿಯು:ಧರ್ಮರಾಜನಂತಹ ಧರ್ಮಿಷ್ಠರು ಈ ಧರಣಿಯಲ್ಲಿ ಯಾರೂ ಇಲ್ಲವೆಂದು ಮನಗಂಡು ಸಂತೋಷಭರಿತನಾಗಿ ಅವನನ್ನು ಮನ್ನಿಸಿದನು. ಕೌರವನು ಬಂದು ಬಲಿಯನ್ನು ಕುರಿತ "ಏ ರಾಜಾಧಿರಾಜನೇ! ಈ ಭೂಮಂಡಲವನ್ನೆಲ್ಲ ಹುಡುಕಿದರೂ ಒಬ್ಬರಾದರೂ ಸಜ್ಜನರು ಸಿಗಲಿಲ್ಲ"ವೆಂದು ಹೇಳಿದ್ದನ್ನು ಕೇಳಿ "ದುರ್ಯೋಧನನೇ! ಪ್ರತಿಯೊಂದು ವಿಷಯದಲ್ಲಿ ದುಷ್ಟಕಲ್ಪನೆಯನ್ನೇ ಮಾಡುವ ನಿನಗೆ ಸಜ್ಜನರು ಸಿಗುವ ಬಗೆ ಹೇಗೆ? ಸಜ್ಜನರ ಶೋಧನಕ್ಕೆ ನೀವು ದೂರ

ಹೋಗುವ ಕಾರಣವೇ ಇದ್ದಿಲ್ಲ. ಇಗೋ! ಇಲ್ಲಿ ವಿಶ್ರಮಿಸಿದ ಈ ಮಹಾರಾಯ ಯುಧಿಷ್ಠರನೇ ಸಜ್ಜನ ಶಿರೋಮಣಿಯು. ಈತನೇ ತ್ರಿಲೋಕಪೂಜ್ಯನು. ಈತನೇ ಧರ್ಮದ ತಂದೆಯು. ಸಾಧುಜನರ ಕಲ್ಪವೃಕ್ಷದಂತಿರುವ ಈತನನ್ನು ಆಶ್ರಯಿಸಿದ ಮಹಶಯರೇ ಮುವವಿಕ್ಷುಗಳು" ಎಂದು ಏಕನಿಷ್ಠೆಯಿಂದ ಹೇಳುವ ನುಡಿಗಳನ್ನು ಕೇಳಿ ಕೌರವನಿಗೆ ಸಮಾಧಾನವಾಗಲಿಲ್ಲ. ಸಾರಾಂಶವೇನಂದರೆ, ಲಂಕಾದಹನದ ಪ್ರಚಂಡ ಜ್ವಾಲೆಯನ್ನು ಮನದಣಿ ನೋಡಿದ ಮಾತ್ರದಿಂದ ಹೃದಯವೆಲ್ಲ ಕೆಂಪು ಕಾಂತಿಯಿಂದ ಬಿಂಬಿಸಿದ ಹನುಮಂತನಿಗೆ ಚಂದ್ರದ್ರೋಣ ಪರ್ವತವೆಲ್ಲ ಅರುಣವರ್ಣಮಯವಾಗಿ ಹೇಗೆ ತೋರುತ್ತಿತ್ತೋ ಹಾಗೆ ಸಜ್ಜನರಿಗೆ ಸರ್ವಜನರಲ್ಲಿ ಸೌಜನ್ಯವೇ ಕಂಗೊಳಿಸುತ್ತದೆ. ದುಷ್ಟರಿಗೆ ದೌರ್ಜನ್ಯವೇ ಮುಂದೆ ಬಂದು ನಿಲ್ಲುತ್ತದೆ. ಅಂತೆಯೇ"ತಾನು ನೆಟ್ಟಗಿದ್ದರೆ ಜನವೆಲ್ಲ ನೆಟ್ಟಗೆ" ಎಂಬ ಗಾದೆಯ ಮಾತು ಎಂದಿನಿಂದಲೂ ಬಳಿಕೆಯಲ್ಲಿರುತ್ತದೆ. ಆದ ಕಾರಣ ಸಜ್ಜನರನ್ನು ನಿಂದಿಸುವ ಜನರೇ ದುರ್ಜನರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ರಾವಬಹಾದ್ದೂರವರಿಗೆ ಬ್ರಾಹ್ಮಣದ್ವೇಷಿಗಳೆಂದು ಗಳಹುವ ನೀಚರು ಒಂದು ದೊಡ್ಡತಪ್ಪು ಮಾಡುತ್ತಾರೆ. ಅದೇನಂದರೆ :ವಿದ್ಯಾವಿನಯಗುಣಗಣ ಸಂಪನ್ನರಾದ ಸಾವಿರಾರು ಮಂದಿ ಬ್ರಾಹ್ಮಣರಿಗೆ ಕೆಲಸ ಕೊಡಿಸಿದ್ದರಿಂದ ಇವರೆಲ್ಲರು ಎರಡೂ ಹೊತ್ತು ರಾ.ಬ॥ರವರನ್ನು ಸ್ಮರಿಸಿ ಊಟಮಾಡಿ ಈ ಹೊತ್ತಿಗೂ ಸುಖಶಾಲಿಗಳಾಗಿದ್ದಾರೆ. ಬಹಳ ದೂರೇಕೆ? ಚಚಡಿ ಸಂಸ್ಥಾನದ ಕಾರಭಾರೀ ಜಾಗೆಗೆ ಶುದ್ಧ ವೈಷ್ಣವ ಬ್ರಾಹ್ಮಣರಾದ ವೇದಮೂರ್ತಿ ನರಸಿಂಹಾಚಾರ್ಯ ಪುಣೇಕರ ಎಂಬವರನ್ನು ನಿಯಮಿಸಿರುತ್ತಾರೆ. ಸತ್ಯ ಸದ್ಗುಣಾದಿಗಳಿಗೂ, ವಿದ್ಯೆಕ್ಕೂ ರಾವಬಹಾದ್ದೂರವರು ಜಾತಿ ಭೇದವಿಲ್ಲದೆ ಎಲ್ಲರನ್ನು ಸಮದೃಷ್ಟಿಯಿಂದಲೇ ನೋಡುತ್ತಾರೆ. ಈ ನರಸಿಂಹ ಆಚಾರ್ಯರೇ ತಮ್ಮ ಸಂಸ್ಕೃತವಾಣಿಯಿಂದ ಇವರನ್ನು ಈ ಬಗೆಯಾಗಿ ಹೊಗಳುತ್ತಾರೆ.

ಶಾರ್ದೂಲ ವಿಕ್ರೀಡಿತ ವೃತ್ತ

ವಂದಾರುಶ್ರಮಹಾರಿನಂದನವನಂ ದ್ರವ್ಯಂ ಮಹದ್ಯೋಗಿನಾಮ್ ।
ವಂದೇ ಗೌರ್ಯಧಿದೈವತಂ ತ್ರಿಪುರದಂಡಶ್ವೇತಕೀರ್ತಿಂ ಮೃಡಂ ।
ಕಾಮಾರಿಙ್ಕರುಣಾನಿಧಿಂ ಶ್ರುತಿಗಣೈರ್ ಗೇಯಂ ಸುರಾರಾಧಿತಂ ।
ಶೀತಾಂಶುಪ್ರಭಯಾ ವಿರಾಜಿತಜಟಂ ಭಕ್ತ್ಯಾನೃಸಿಂಹಾಭಿದಂ ॥

(ಈ ಮೇಲಿನ ಶ್ಲೋಕದಲ್ಲಿ ಪ್ರತಿ ಚರಣದ ೩ನೇ ಮತ್ತು ೧೩ನೇ ಸ್ಥಾನದ ಅಕ್ಷರಗಳನ್ನು ಕೂಡಿಸಿದರೆ "ರುದ್ರಗೌಡರಿಗೆ ಶುಭ" ಎಂಬ ಶಬ್ದಗಳಾಗುತ್ತವೆ).

ಪೃಥ್ವಿವೃತ್ತ

ಪಜಾಸ್ವಸಮವರ್ತನನ್ನಿರಯ ಕಾರಣಂ ದುಃಖದಂ ।
ಶೃಣೋತಿಯ ಇದಂ ಸದಾ ಪರಮಭಾರತಾತ್ಸಂದಿತ್ಯೈಃ ॥೧॥

ಅನುಪಲ್ಲವನಿಜಾಯಕಾಧಿಕೃತಿಮಾನ್ನ ಬ್ರಿಟಿಶಭೂಪತೇ ।
ದ್ವಿಷಿತ ಸಕಧಂ ಮಹೀ।ಸುರಕುಲಂ ಕೃತೀ ನಿರ್ಮಲಮ್ ॥೨॥

ಕ್ಷುದ್ರಾ ದುರ್ಧನ ಬದ್ಧಾಶಾಃಹೃದ್ರೋಗೇಣೈವ ಪೀಡಿತಾಃ।
ಮುದ್ರಿತಾಸ್ಯಕರಾ ನೂನಂ। ರುದ್ರಗೌಡೇಽಧಿಕಾರಿಣಿ ॥೩॥

ಮಾಲಿನೀವೃತ್ತ

ಜಯತಿ ಜನಹಿತೈಷೀ ಜಾಗರೂಕಃ ಸ್ವಕರ್ಮೆ।
ಣ್ಯಾಭಿನವನಿಯಮಾನಾಂ ರಾಜ್ಯಕಾರ್ಯೇಷು ಕರ್ತಾ।
ಗುಣಗಣಮಣಿಮಾಲೀಗೂಢವಿಜ್ಞಾನವಿಜ್ಞೇ।
ಹ್ಯಭಿನಮದರಟಾಳಗ್ರಾಮಣೀ ರುದ್ರಗೌಡಃ ॥೪॥

ನಿಃಪಕ್ಷಪಾತದ ಬ್ರಾಹ್ಮಣರೂ, ಬ್ರಾಹ್ಮಣೇತರರೂ, ಪಂಡಿತರೂ, ಕವಿಗಳೂ, ರಾವಬಹಾದೂರವರ ಗುಣಗಳನ್ನು ಎಷ್ಟೋಸಾರೆ ಯಥಾರ್ಥವಾಗಿ ವರ್ಣಿಸುವದರಿಂದ, ಇವರು ಜಾತಿಭೇದವನ್ನು ಸ್ವಲ್ಪ ಮಾತ್ರವೂ ಮಾಡದೆ, ಎಲ್ಲ ಸಜ್ಜನರಿಗೂ ವಿದ್ವಾಂಸರಿಗೂ ಸರಿಯಾಗಿ ಮಾನಕೊಡುತ್ತಿದ್ದರೆಂದೇ ವ್ಯಕ್ತವಾಗುತ್ತದೆ. ಈ ನಿಜಸ್ಥಿತಿಯನ್ನರಿಯದ ನೀಚರು ವ್ಯರ್ಥವಾಗಿ "ಇವರು ಬ್ರಹ್ಮದ್ವೇಷಿಗಳು, ಬ್ರಹ್ಮದ್ವೇಷಿಗಳು" ಎಂದು ಬಾರಿ ಬಾರಿಗೆ ಕೋಲಾಹಲವನ್ನೆಬ್ಬಿಸಿದರೆ ಅದು ಕಾಕೋಲೂಕಗಳ ಕೂಗಾಟದಂತೆ ಜಗಜ್ಜನದ ಶ್ರವಣಕ್ಕೆ ಅಮಂಗಲವಾಗುತ್ತ ಎಂದಿಗೂ ಬಿಡದು. ಈ ನೀಚಾಧಮರ ಅಕ್ರಮವರ್ತನವು"ತನಗೆ ಕುಣಿಯಲಿಕ್ಕೆ ಬಾರದ್ದಕ್ಕೆ ಅಂಗಳು ಡೊಂಕು" ಎಂಬ ಡೊಂಬನಂತೆ ಜನರ ಅಪಹಾಸ್ಯಕ್ಕೂ ಕಾರಣವಾಗಿದೆ.

ರಾವಬಹಾದ್ದೂರವರು ಬಾಹ್ಯದಲ್ಲಿ ಬಹು ಭೀಕರವಾಗಿ ತೋರುತ್ತಿದ್ದರೂ ಇವರ ಅಂತರಂಗವು ಅತಿಕೋಮಲವಾಗಿರುವದು. "ರಾಜೋ ಜೋಗುಣಃ" ಎಂಬ ಮಹಾವಾಕ್ಯದಂತೆ ರಾಜಪದತ್ವಕ್ಕೆ ರಜೋಗುಣವೇ ಪ್ರಾಧಾನ್ಯವಾಗಿರುವದು. ಎಂಥ ಸಾತ್ವಿಕವೃತ್ತಿಯ ಅರಸನಾದರೂ ರಾಜ್ಯಕಾರಭಾರದ ಕೆಲಕೆಲವು ಪ್ರಸಂಗಗಳಲ್ಲಿ ತನ್ನ ಸಾತ್ವಿಕತನವನ್ನು ಸ್ವಲ್ಪಾದರೂ ಶಿಥಿಲಮಾಡಬೇಕಾಗುತ್ತದೆ. ಇಲ್ಲಿ ಸಾತ್ವಿಕ ವೃತ್ತಿಯನ್ನು ಶಿಥಿಲಮಾಡೋಣವೆಂದರೆ ನ್ಯಾಯಮಾರ್ಗವನ್ನು ಬಿಡೋಣವೆಂಬರ್ಥವಲ್ಲ. ಎಲ್ಲೆಡೆಯಲ್ಲಿ ನ್ಯಾಯವು ನಿಶ್ಚಲವಾಗಿ ನಡೆಯುವಂತೆ ನಿಷ್ಠುರತೆಯಿಂದ ನಡೆಯೋಣವೆಂದು ತಿಳಿದುಕೊಳ್ಳಬೇಕು. ಅಳ್ಳೆದೆಯ ಅಳಬುರಕ ಅಧಿಕಾರಿಯ ಅಳಿಕೆಯು ಅನ್ಯಾಯದಿಂದ ತುಂಬಿಕೊಳ್ಳುವದು. ಆದುದರಿಂದ ಚಾತುರ್ಯ ಸ್ಥೈರ್ಯ ಧೈರ್ಯ್ಯಾದಿಗಳ ಆವಶ್ಯಕತೆಯಿದ್ದಂತೆ ಗಾಂಭಿರ್ಯವೂ ದರ್ಪವೂ ಬೇಕೆಬೇಕು. ನಾಟಕದಲ್ಲಿ ಯಾವದೊಂದು ವೇಷವನ್ನು ವಹಿಸುವ ವ್ಯಕ್ತಿಯು, ಆ ಪಾತ್ರದಂತೆಯೇ ನಟಿಸಬೇಕಾಗುವದು ಸಹಜವಾಗಿರುವಂತೆ, ಅಧಿಕಾರಿಯು ಒಳ್ಳೇ ಆಡಳಿತಕ್ಕೆ ಅವಶ್ಯವಾದ ಗುಣಗಳನ್ನು ಅನುಸರಿಸಬೇಕಾಗುತ್ತದೆ. ಈ ರಾಜ್ಯಭಾರ ಮರ್ಮವನ್ನು ಬಲ್ಲ ರಾ.ಬ॥ರುದ್ರಗೌಡ ಸಾಹೇಬರವರ ಮುಖಮುದ್ರೆಯು ಬಾಹ್ಯದಲ್ಲಿ ಭವ್ಯವಾಗಿ ಕಾಣುತ್ತಿದ್ದರೂ, ಅಂತರ್ಯದಲ್ಲಿ ಬಿರುಸಾದ ಕವಚವುಳ್ಳ ಟೆಂಗಿನಕಾಯಿಯಂತೆ. ರುಚಿಯುಳ್ಳ ಕೊಬ್ಬರಿಯಂತೆಯೂ, ಮಧುರವಾದ ಜಲದಂತೆಯೂ ಕರುಣಾರಸದಿಂದ ಕೂಡಿಕೊಂಡಿರುವದು. ವಿಚಾರಮಾಡಿ ನೋಡಿದರೆ ಇವರ ಆಳಿಕೆಯು ಹೆಜ್ಜೇನಿನಂತೆ. ಮಧುರವಾಗಿಯೂ, ಇವರ ಉಪದೇಶವಚನಗಳು ಸವಿಯಲಿಕ್ಕೆ ಸುಲಭಸಾಧ್ಯವಾದ ದ್ರಾಕ್ಷಾಪಾಕದಂತೆ ಸವಿಸವಿಯಾಗಿಯೂ, ಇವರ ಠರಾವುಗಳು ನಿರ್ಜರಲೋಕದ ನಿರ್ಣಯಗಳಂತೆ ನಿರ್ಮಲವಾಗಿಯೂ ಇರುವವೆಂದು ಹೇಳಬಹುದು. ರಾ.ಬ॥ಗಿಲಗಂಚಿ ಗುರುಸಿದ್ದಪ್ಪನವರ ಹಾಗು ರಾ.ಬ॥ರುದ್ರಗೌಡ ಸಾಹೇಬರವರ ಆಚೆಯಲ್ಲಿ ನಮ್ಮ ವೀರಶೈವ

ಮತದ ಪವಿತ್ರತೆಯೂ, ಮಹತ್ವವೂ ಸರಕಾರದಲ್ಲಿ ತಿಳಿದಿದ್ದಿಲ್ಲ. ಇವರಿಬ್ಬರ ಅವಿಶ್ರಾಂತವಾದ ಪ್ರಯತ್ನಗಳಿಂದಲೂ, ದೀರ್ಘೋದ್ಯೋಗಗಳಿಂದಲೂ ಲಿಂಗವಂತರ ಗೌರವವು ಸರಕಾರಕ್ಕೆ ಗೊತ್ತಾಗಹತ್ತಿ, ಈ ಸಮಾಜವನ್ನು ಪ್ರೀತಿಸಹತ್ತಿದರು. ಬರಬರುತ್ತ ರಾಜಕೀಯ ಕಾರ್ಯಗಳಲ್ಲಿ ವೀರಶೈವರಿಗೆ ಮಾನದೊರೆಯಹತ್ತಿತು. ಲಿಂಗಾಯತ ಫಂಡಿನಿಂದಂತೂ ಸರ್ವತೋಪರಿಯಾಗಿ ಇವರ ಏಳ್ಗೆಯಾಗಹತ್ತಿತು. ಆದರೆ ಇತ್ತಿತ್ತಲಾಗಿ ಸರಕಾರದವರು ಹಿಂದುಸ್ತಾನದ ಪ್ರತಿಯೊಂದು ಮತದ ಐತಿಹ್ಯವನ್ನು ಗೊತ್ತುಮಾಡಬೇಕೆಂದು ಅದಕ್ಕಾಗಿಯೇ ಸ್ವತಂತ್ರವಾದದ್ದೊಂದು ಕಮಿಟಿಯನ್ನು ಸ್ಥಾಪಿಸಿ, ಅದಕ್ಕೆ ಘನಪಂಡಿತವಾದ ಮೆ||ಎಂಥೋವ್ಹನ್ ಎಂಬ ಸಾಹೇಬರನ್ನು ನೇಮಿಸಿರುತ್ತಾರೆ. ಈ ಸಾಹೇಬ ಬಹಾದ್ದೂರವರು ಲಿಂಗಾಯಿತ ಸಮಾಜವನ್ನು ಕುರಿತು ಐತಿಹ್ಯವನ್ನು ಬರೆಯುವಾಗ, ವೀರಶೈವ ಸಮಾಜಕ್ಕೆ ಮುಕುಟಮಣಿಯಾಗಿರುವ ರಾ.ಬ||ರುದ್ರಗೌಡ ಸಾಹೇಬರವರಿಂದಲೇ ಎಷ್ಟೋ ಸಂಗತಿಗಳನ್ನರಿತುಕೊಂಡು, ಅವುಗಳಿಂದಲೂ, ಶಿಲಾಲಿಪಿ, ತಾಮ್ರಪಟಗಳಿಂದಲೂ ಪ್ರಾಚೀನ ಗ್ರಂಥಗಳ ಪರಿಶೋಧದಿಂದಲೂ, ತಮಗೆ ಸರಿದೋರಿದ ಸಂಗತಿಗಳನ್ನೇ ಸಂಗ್ರಹಿಸಿ "ಲಿಂಗವಂತರು" ಎಂಬ ಗ್ರಂಥವನ್ನು ಪ್ರಸಿದ್ಧಮಾಡಿರುತ್ತಾರೆ. ಅದು ಸಮಸ್ತ ವೀರಶೈವರಿಗೆ ತಿಳಿಯಬೇಕೆಂದೂ ಅದರಲ್ಲಿ ಕಂಡು ಬಂದ ಆಕ್ಷೇಪಗಳನ್ನೆಲ್ಲ ತಿಳುಹಿಸಬೇಕೆಂದೂ ವೀರಶೈವ ಮಹಾಸಭೆಯವರು ರಾ.ಬ||ರವರ ಒಪ್ಪಿಗೆಯಿಂದ, ಅದನ್ನು ಕನ್ನಡದಲ್ಲಿ ಭಾಷಾಂತರಮಾಡಿ ಪ್ರಸಿದ್ಧಮಾಡಿರುತ್ತಾರೆ. ಇದರಿಂದ ನಮ್ಮ ನಿಜವಾದ ಇತಿಹಾಸವು ಹೊರಬಿದ್ದು ಸಮಾಜಕ್ಕೆ ಯಾವದೊಂದು ಹಿತವಾಗಬಹುದು.

ಈ ನಮ್ಮ ವೀರಶೈವ ಮತದ ಇತಿಹಾಸವು ಒಂದೆಡೆಯಲ್ಲಿ ಸಾಗ್ರವಾಗಿಯೂ, ಸಮಂಜಸವಾಗಿಯೂ ಸಿಗದೇ ಇದ್ದದ್ದನ್ನು ನೋಡಿ ಈ ತೊಂದರೆಯನ್ನು ತಪ್ಪಿಸಬೇಕೆಂದು ರಾ.ಬ||ರುದ್ರಗೌಡ ಸಾಹೇಬರು ಈ ವೀರಶೈವ ಮತದ ಉತ್ಪತ್ತಿಯನ್ನು, ಗೌರವವನ್ನು, ಪ್ರಸಾರವನ್ನು, ಉತ್ಕರ್ಷಾಪಕರ್ಷಗಳನ್ನೂ ಚೆನ್ನಾಗಿ ಊಹಾಪೋಹಮಾಡಿ ಸಂಗ್ರಹಿಸಿ ಇಂಗ್ಲೀಷ ಭಾಷೆಯಲ್ಲಿ ಗದ್ಯರೂಪವಾಗಿ ಸರಳವಾದ ಶೈಲಿಯಿಂದ ಬರೆದಿಟ್ಟು ಮುದ್ರಿಸಿ ಪ್ರಸಿದ್ಧಮಾಡಿದ್ದಾರೆ. ಇಂಗ್ಲೀಷ ಸಾರ್ವಭೌಮರೆ ನಮಗೆ ಸರಕಾರವಾದುದರಿಂದಲೂ, ಅವರ ಅನುಗ್ರಹದಿಂದಲೇ ನಮಗೆ ಸುಖಸಾಧನಗಳು ದೊರೆದು ನಮ್ಮ ಸಮಾಜದ ಉತ್ಕರ್ಷವಾಗಬೇಕಾದುದರಿಂದಲೂ, ಎಲ್ಲಕ್ಕೂ ಮೊದಲು ನಮ್ಮ ನಿಜವಾದ ಮತದ ತತ್ವಗಳು ಅವರಿಗೆ ತಿಳಿಯಲು ಅವಶ್ಯವಾದುದರಿಂದಲೂ, ಈ ಮತಗ್ರಂಥವನ್ನು ಇಂಗ್ಲೀಷಿನಲ್ಲಿ ಬರೆಯಬೇಕಾಯಿತು. ಈ ಗ್ರಂಥವನ್ನು ಮೆ|| ಎ.ಎಂ. ಟಿ. ಜಾಕಸನ್, ಎಂ.ಎಂ. (ಅಕ್ಸನ್) ಆಯ್.ಸಿ.ಎಸಂ. ಕಲೆಕ್ಟರ ಸಾ.ಬ||ರವರು ನೋಡಿ, ಸ್ತುತ್ಯವಾದ ಕಾರ್ಯವೆಂದು ಒಡಂಬಟ್ಟು, ಅದನ್ನು ತಾವು ಸ್ವತಃ ಪರಿಷ್ಕರಿಸಿದ್ದಾರೆ. ಅತಿವಿಚಾರ ದೃಷ್ಟಿಯಿಂದ ಬರೆಯಲ್ಪಟ್ಟ ಈ ಅಮೋಲ್ಯವಾದ ಗ್ರಂಥದಿಂದ ನಮ್ಮ ಸಮಾಜಕ್ಕೆ ಅನೇಕ ಲಾಭಗಳಾಗಬಹುದು. ಮೆ||ಜಾಕ್ಸನ್ ಸಾ.ಬ||ರವರು ರಾ.ಬ||ರುದ್ರಗೌಡರವರ ಅಗಾಧವಾದ ಶೋಧದೃಷ್ಟಿಯನ್ನು ಕಂಡು, ಇವರು ಒಳ್ಳೆಯ ವಿಚಾರಶೀಲರೂ, ಅನುಭವಿಕರೂ ಇರುವರೆಂದು ಮನಗಂಡು, ಇವರ ಕಯ್ಯಿಂದ ಕರ್ನಾಟಕ ನಿವಾಸಿಗಳ ಸ್ಥಿತಿಯ ವಿಷಯಕ್ಕೂ, ಒಕ್ಕಲತನದ ವಿಷಯಕ್ಕೂ ಉತ್ತಮವಾದ ಲೇಖಗಳನ್ನು ಬರೆಯಿಸಿರುತ್ತಾರೆ. ಇವುಗಳಲ್ಲಿ ಹಿಂದೂ ಜನರು, ಅವರ ನಡೆನುಡಿಗಳು, ಆಚಾರ ವಿಚಾರಗಳು, ಅವರ ದೇವತೆಗಳು, ಅವುಗಳ ಆರಾಧನಾ ಕ್ರಮಗಳು, ಅವರ ಹಬ್ಬಗಳು, ಹಬ್ಬಗಳ ಕಾರಣಗಳು, ದೇವತಾ ಸಂಬಂಧದ ಅವರ ಮೂಢ ತಿಳುವಳಿಕೆ; ಒಕ್ಕಲಿಗರ ಕರ್ತವ್ಯ, ಭೂಮಿಯ ಬಗ್ಗೆ ಇದ್ದ ಅವರ ತಿಳುವಳಿಕೆ, ಹೊಲ ಹಸನಮಾಡುವದು, ಅವರ ಬಿತ್ತಿಗೆ, ಮಳೆ, ಬೆಳೆ, ಒಕ್ಕುವದು, ರಾಶಿ, ಒಕ್ಕಲುತನದ ಸಂಬಂಧದ ದೇವತೆಗಳು, ಒಕ್ಕಲತನದ ಆಯುಧಗಳು, ಅವುಗಳ ಉಪಯೋಗ ಇವೇ ಮೊದಲಾದ ವಿಷಯಗಳು ಅಡಕವಾಗಿರುತ್ತವೆ. ರಾವಬಹಾದ್ದೂರವರ ಗ್ರಂಥಕರ್ತೃತ್ವದ ಶೋಧದೃಷ್ಟಿಯು ಅವರ್ಣನೀಯವಾಗಿರುತ್ತದೆ.

ಪ್ರತಿಯೊಂದು ವಿಷಯದಲ್ಲಿ ಇವರ ಚರ್ಚೆ ಬಹಳ ಜನರ ಮೂಢ ತಿಳುವಳಿಕೆಗಳನ್ನೂ, ಸಮಾಜ ಘಾತಕವಾದ ಹಳೆಯ ಸಾಂಪ್ರದಾಯಗಳನ್ನೂ ಆದಷ್ಟುಮಟ್ಟಿಗೆ ದೂರಮಾಡಬೇಕೆಂದು ಯಾವಾಗಲೂ ಹವಣಿಸುವರು. ವ್ಯವಹಾರದಲ್ಲಿ ವರ್ತಿಸುತ್ತಿರುವ ವಿಚಿತ್ರವಾದ ಪ್ರತಿಯೊಂದು ಸಂಗತಿಯ ಮೂಲವನ್ನು, ಅದರ ನಿಜಸ್ಥಿತಿಯನ್ನು, ಶೋಧಿಸದ ವಿನಹಾ ಇವರಿಗೆ ಸಮಾಧಾನವಾಗುವದಿಲ್ಲ. ಸಾಧಾರಣವಾಗಿ ಪ್ರತಿಯೊಂದು ವಿಷಯದಲ್ಲಿ ಇವರಿಗೆ ಪ್ರಗತಿಯಿರುವದರಿಂದ ಎಲ್ಲ ಬಗೆಯ ಜ್ಞಾನಿಗಳು ಇವರನ್ನು ಕಂಡುಕೊಂಡು ಧನ್ಯರಾಗುವರು.

ವೇದಾಂತಜ್ಞಾನ

ವಯೋವೃದ್ಧಿಯಾದಂತೆ ಜ್ಞಾನಾಭಿವರ್ಧನವಾಗುತ್ತಿರುವದು ಸರ್ವಸಾಧಾರಣವಾದ ಮಾತು. ಲೌಕಿಕದಲ್ಲಿಯ ಜ್ಞಾನವು ಎಲ್ಲರಲ್ಲಿ ಹೆಚ್ಚಾಗಲೀ, ಕಡಿಮೆಯಾಗಲೀ, ತಮ್ಮ ತಮ್ಮ ಮಾನದಿಂದ ಇದ್ದೇ ಇರುತ್ತದೆ. ಆದರೆ ಯಾವ ಮಹಾಮಹಿಮನ ಪ್ರೇರವಣಿಯಿಂದ ಈ ಜಗದುತ್ಪತ್ತಿಯಾಯಿತು? ಯಾವನ ಅನುಗ್ರಹದಿಂದ ನಾವೆಲ್ಲರೂ ಉದಯಿಸಿರುವೆವು? ಎಲ್ಲ ಸೃಷ್ಟಿಕಾರ್ಯಗಳು ಯಾವನ ಸೂತ್ರದಿಂದ ಜರಗುತ್ತಿರುವವು? ಸಚೇತನಚೇತನಾತ್ಮಕವಾದ ಸ್ಪಷ್ಟಪದಾರ್ಥಗಳೆಲ್ಲ ಯಾವಾತನ ಅಧೀನವಾಗಿರುವವು ಆ ಸರ್ವಶಕ್ತನಾದ ಪರಬ್ರಹ್ಮವಸ್ತುವಿನ ವಿಷಯಕವಾದ ಮಹಾಜ್ಞಾನವುಳ್ಳ ಮಹನೀಯವರು ತೀರವಿರಳತಮರಾಗಿ ಇರುವರು, ಈ ಸತ್ಯಜ್ಞಾನದ ಮಹಾಪ್ರಕಾಶವನ್ನು ಕಂಡು ಆನಂದಿಸುವದು ಪುಣ್ಯವಂತರಿಗೇನೇ ಸಾಧ್ಯವು.

ಕಣ್ಣಾರೆ ಕಾಣುವ ಸೃಷ್ಟಿಚಮತ್ಕಾರಗಳ ಬಗ್ಗೆ ಸ್ವಲ್ಪ ವಿಚಾರ ಮಾಡಿದರೆ, ಮನುಷ್ಯ ಪ್ರಾಣಿಯು ಎಷ್ಟು ದುರ್ಬಲನೂ, ಪರಾಧೀನನೂ ಇರುವನೆಂಬ ವಿಚಾರಗಳು ಹುಟ್ಟಿ, ಭೀತಿ ವಿಸ್ಮಯಗಳಿಂದ ಮನಸ್ಸು ತಲ್ಲಣಗೊಂಡು ನಮಗಿಂತ ಶ್ರೇಷ್ಠವಾದ ಜೀವನಗಳೂ, ದೈವಿಕ ಶಕ್ತಿಗಳೂ, ಈ ವಿಶ್ವದಲ್ಲಿರಬಹುದೆಂಬ ಕಲ್ಪನೆಯು ಸಹಜವಾಗಿ ಬರುತ್ತದೆ. ಇದರಿಂದ ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಈ ಸ್ಥೂಲ ಸೃಷ್ಟಿಯ ಹೊರತು ಬೇರೆ ಪ್ರಕಾರದ ಸೂಕ್ಷ್ಮಸೃಷ್ಟಿಯೊಂದು ಇರಬಹುದೆಂಬ ಭಾವನೆಯು ಹುಟ್ಟುತ್ತದೆ. ಆದುದರಿಂದ ಈ ಎಲ್ಲ ಸ್ಥಾವರ ಜಂಗಮಾತ್ಮಕವಾದ ಜಡಸೃಷ್ಟಿಯನ್ನಷ್ಟೇ ಅಲ್ಲ, ಇಂದ್ರಿಯಗಳಿಗೆ ಅಗೋಚರವಾದ ಸೂಕ್ಷ್ಮತರದ ಸೃಷ್ಟಿಯನ್ನು ಆಳುವ ಶಕ್ತಿಯೊಂದು ಇರುವದೆಂದು ನಾವು ಸಹಜವಾಗಿ ತರ್ಕಿಸಬಹುದು. ಈ ಶಕ್ತಿಯು ಸರ್ವಾಂತರ್ಯಾಮಿಯೂ, ಸರ್ವಜ್ಞವೂ ಆಗಿರುವದಲ್ಲದೆ ಜಗತ್ತಿಗೆ ಕಾರಣವೂ ಆಗಿರಬೇಕು. ಈ ಶಕ್ತಿಗೇ ವೇದಾಂತಜ್ಞರು ಪರಬ್ರಹ್ಮವಸ್ತುವೆಂದು ಹೆಸರಿರುವರು. ಆದುದರಿಂದ ಈ ಬ್ರಹ್ಮಾನಂದವೇ ನಿಜವಾದ ಆನಂದವೆಂದೂ, ಈ ಪರಮಾನಂದವನ್ನು ಹೊಂದುವದೇ ವಿವೇಕ ಲಕ್ಷಣವೆಂದೂ ಜ್ಞಾನಿಗಳು ಬೋಧಮಾಡುತ್ತಾರೆ.

ಈಶ ನಿರ್ಮಿತವಾದ ಈ ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನು ಯಾವಾಗಲೂ ಆನಂದವನ್ನೇ ಬಯಸುವನು, ದುಃಖವನ್ನು ಯಾರೂ ಬಯಸಲಾರರು. ಪ್ರತಿಯೊಬ್ಬನು ತನ್ನ ಸುಖದ ಸಲುವಾಗಿಯೇ ಸತಿಸುತರನ್ನು, ಬಂಧುಬಳಗದವರನ್ನು ಪ್ರೀತಿಸುವನು. ಸತಿಸುತ-ಮೊದಲಾದವರು ತಮ್ಮ ತಮ್ಮ ಸುಖಕ್ಕಾಗಿಯೇ ಪುರುಷನನ್ನು ಪ್ರೀತಿಸುವರು. ಶಿಶುವು ಎಷ್ಟು ರೋಧಿಸಿದಾಗ್ಯೂ ತಂದೆ ತಾಯಿಗಳು ಅದಕ್ಕೆ ಮುದ್ದುಕೊಡಲು ಪ್ರಯತ್ನಿಸುತ್ತಿರುವದು, ತಮ್ಮ ತಮ್ಮ ಸುಖಕ್ಕಾಗಿಯೇ ಸರಿ. ಇದರ ಮೇಲಿಂದ ತಿಳಿಯುವದೇನಂದರೆ, ಪ್ರತಿಯೊಂದು ವ್ಯಕ್ತಿಯಾಗಲೀ, ಕುಟುಂಬವಾಗಲೀ, ಸಮಾಜವಾಗಲೀ, ರಾಷ್ಟ್ರವಾಗಲೀ, ತಮ್ಮ ತಮ್ಮ ಸುಖಾನಂದಗಳ ಸಲುವಾಗಿಯೇ ಯತ್ನಮಾಡುವವಲ್ಲದೆ ಪರಹಿತವನ್ನು ಚಿಂತಿಸುವುದಿಲ್ಲ. ಆದರೆ ಪರಶಿವಜ್ಞಾನವೇ ನಿತ್ಯಾನಂದ ಸುಖಗಳ ಮಾರ್ಗವಾಗಿರಲು, ಅದು ತಿಳಿಯದೆ ಈ ಮೇಲೆ ಬರೆದ ಕ್ಷಣಿಕಾನಂದಕ್ಕೆ ನೆಚ್ಚುವರೇ ಬಹಳ ಮಂದಿ.

ವಸ್ತುಸ್ಥಿತಿಯು ಹೀಗಿರಲು, ಜನರು ಅಜ್ಞಾನದಿಂದಲೋ ವಿಷಯಕಾಠಿಣ್ಯದಿಂದಲೋ ವೇದಾಂತವನ್ನು ತಿರಸ್ಕರಿಸಿ, ಇದೆಲ್ಲ ಭ್ರಮೆಯೆಂದು ವಾದಿಸುವರು. ಆದರೆ ಇಂಥವರು ಅತ್ಯಗಾಧವಾದ ಈ ಪ್ರಪಂಚವೇ ಸ್ವಪ್ನದಂತೆ ಅಸ್ಥಿರವಾಗಿರುವದೆಂಬ ತತ್ವವನ್ನೇ ಮರೆತುಬಿಡುತ್ತಾರೆ. ವಾಯುವೇಗದಿಂದ ಗಮಿಸುತ್ತಿದ್ದ ಉಗಿಬಂಡಿಯೊಳಗೆ ಕೂತ ಮನುಷ್ಯನಿಗೆ ಎಡಬಲದ ಭೂಮಿಯೇ ಓಡುತ್ತಿರುವಂತೆ ಕಾಣುವ ಬಯಲ ಭಂಜನೆಯಂತೆಯೇ ವೇದಾಂತ ವಿಷಯವನ್ನು ಅಲ್ಲಗಳೆಯುವ ಮನುಷ್ಯನಿಗೆ ಐಹಿಕಾನಂದವೇ ಬರಿ ಭ್ರಮೆಯಾಗಿರುತ್ತದೆ. ಸರ್ವಶಾಸ್ತ್ರಾದಿಗಳ ವಿಷಯಗಳು ಸುಗಮ್ಯವಾಗಿರುವಂತೆ ವೇದಾಂತ ವಿಷಯವು ಸುಲಭ ಸಾಧ್ಯವಾದುದಲ್ಲ. ಆಸ್ತಿಕತ್ವವು ಬೇರೂರಿದ್ದ ಚಿತ್ತಧಾರ್ಢ್ಯವುಳ್ಳ ವಿವೇಕರಿಗೇ ಈ ಚಿಜ್ಜ್ಯೋತಿಪ್ರಕಾಶವು ಬೆಳಗುವದಲ್ಲದೆ, ಜ್ಞಾನಲವ ದುರ್ವಿದಗ್ಧರಿಗೂ, ಪಾಖಂಡಿಗಳಿಗೂ, ಪಾಮರರಿಗೂ, ಡಾಂಭಿಕರಿಗೂ ಅದು ಅಣುಮಾತ್ರ ಹೊಳೆಯದು. ಜ್ಞಾನದ ಪರಮಾವಧಿಯೇ ವೇದಾಂತವೆಂದು ಹೇಳಬಹುದು. ಅಥವಾ ವೇದದ ಅಂತ್ಯ ಭಾಗದ ಜ್ಞಾನವೇ ವೇದಾಂತವು. ಪರಮೇಶ್ವರನ ಮುಖೋದ್ಭೂತವಾದ ವೇದಗಳಲ್ಲಿ ಹೇಳಲ್ಪಟ್ಟ ಧರ್ಮತತ್ವಗಳಿಂದಲೇ ನಾವು ನಡೆಯತಕ್ಕದ್ದಾಗಿದೆ. ಆ ವೇದ ವೇದೋಪಾಂಗಗಳ ಪರಿಪಕ್ವಜ್ಞಾನವೇ ತಮ್ಮ ಉತ್ಪಾದಕನಾದ ಪರಶಿವನನ್ನು ವೇದಾಂತಿಯ ಜ್ಞಾನಚಕ್ಷುವಿನ ಮುಂದೆ ತಂದು ನಿಲ್ಲಿಸುತ್ತದೆ. ಅರ್ಥಾತ್ ಆ ಪರಬ್ರಹ್ಮವಸ್ತುವಿನ ಅಸ್ತಿತ್ವದ ದಿಗ್ದರ್ಶನಮಾಡಿಕೊಡುತ್ತದೆ. ಸುಮ್ಮ ಸುಮ್ಮನೇ ಅವರಿಗಿವರು, ಇವರಿಗವರು ತಲೆಮಾಡಿಸುತ್ತ, ಅವರು ಹೇಳಿದ್ದು ಇವರಿಗೆ, ಇವರು ಹೇಳಿದ್ದು ಅವರಿಗೆ ತಿಳಿಯದೆ, ತಾನು ಹೇಳಿದ್ದು ತನಗೆ ತಿಳಿಯದೆ ಇದ್ದ ಪಕ್ಷದಲ್ಲಿ ಅದಕ್ಕೆ ವೇದಾಂತವೆನ್ನುತ್ತಾರೆ ಎಂಬದಾಗಿ ವೇದಾಂತ ವ್ಯಾಖ್ಯೆಯನ್ನು ಕಲ್ಪಿಸಿಕೊಂಡು, ಬ್ರಹ್ಮೋಸಮಾಜವನ್ನು ಕಂಡೊಡನೆ ನಗಾಡುತ್ತಿರುವ ಪ್ರಪಂಚಾಸಕ್ತರಿಗೆ ವೇದಾಂತ ವಿಷಯದ ಉಪೋದ್ಘಾತವೇ ದೂರಾಗಹವಾಗಿರುವಲ್ಲಿ, ಆ ವಿಷಯದ ಉಪದ್ವ್ಯಾಪಮಾಡುವದರಲ್ಲಿ ಏನೂ ಅರ್ಥವಿಲ್ಲ.

ಬ್ರಹ್ಮಜ್ಞಾನವೆಂಬ ವೃಕ್ಷಾಗ್ರವನ್ನು ಸೇರಲಿಕ್ಕೆ ಆತ್ಮಜ್ಞಾನವೆಂಬ ಆ ವೃಕ್ಷದ ಬೊಡ್ಡೆಯ ಆಶ್ರಯ ಬೇಕು, ಕ್ಷಣಿಕಾನಂದವನ್ನು ತ್ಯಾಗಮಾಡಿ, ವಿಷಯ ಸಾಪೇಕ್ಷೆವರಿಲ್ಲದೆ ಆನಂದ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಅದೇ ಸ್ವರೂಪಾನಂದವು. ಆನಂದ ಸಾಕ್ಷಾತ್ಕಾರವಾದರೆ ಬ್ರಹ್ಮಸಾಕ್ಷಾತ್ಕಾರವಾದಂತಾಯಿತು. ಈ ಬ್ರಹ್ಮಜ್ಞಾನವಾಗಬೇಕಾದರೆ, ಕರ್ಮೋಪಾಸನಗಳಿಂದಾಗಲಾರದು. ಆತ್ಮಜ್ಞಾನವೇ ಮುಖ್ಯವಾದದ್ದು. ಯಾಕಂದರೆ :

ಕಂದ

ಯವಜಲಕಾಷ್ಠಗಳಿಂ ಪಾ|ಕವು ತಾಂ ಸಿದ್ಧಿಪುದೆ ವಹ್ನಿಯೊಂದಿಲ್ಲದೆ ||
ತವೆ ಕರ್ಮಾದಿಗಳಿಂದ|ಮವಗತಿಯೊಂದಿಲ್ಲದಿರಲು ಲಭಿಸದು ಮೋಕ್ಷಂ ||೧||

ಧಾನ್ಯ, ನೀರು, ಕಟ್ಟಿಗೆ ಮೊದಲಾದ ಪಾಕೋಪಕರಣಗಳಿದ್ದು, ಅಗ್ನಿಯೊಂದಿಲ್ಲದೆ ಹೋದರೆ ಹ್ಯಾಗೆ ಪಾಕಸಿದ್ಧಿಯಾಗಲಾರದೋ ಹಾಗೆ ಕರ್ಮೋಪಾಸನಾದಿ ಇತರ ಸಾಧನಗಳಿಂದ ಮೋಕ್ಷವಾಗದೆ, ಕೇವಲ ಜ್ಞಾನದಿಂದಲೇ ಆಗುವದು. ಕರ್ಮೋಪಾಸನಾದಿಗಳು ಬಹುಜನ್ಮಗಳನ್ನು ಕೊಟ್ಟು ಕೊಟ್ಟು ಕಡೆಗೆ ಚಿತ್ತಶುದ್ಧಿಯನ್ನು ಮಾತ್ರ ಮಾಡುವವು. ಆದರೆ ಜ್ಞಾನಮಾರ್ಗವು ಹಾಗಲ್ಲ, ಜನ್ಮಮಾತ್ರದಿಂದಲೇ ಅದು ಅಜ್ಞಾನವನ್ನು ನಾಶಮಾಡಿ ಮುಕ್ತಿಯನ್ನು ಕೊಡುವದು." ಜ್ಞಾನಾದೇವ ತಂ ಕೈವಲ್ಯಂ" ಎಂದು ಶ್ರುತಿಗಳು ಸಾರಿ ಹೇಳುತ್ತಿರುವವು. ಮತ್ತು

ಫಲಸ್ಯಾಕರಣಂ ಪುಷ್ಪಂ ಫಲೇ ಪುಷ್ಪನಿವಾರಣಂ ||
ಜ್ಞಾನಸ್ಯ ಕಾರಣಂ ಕರ್ಮ|ಜ್ಞಾನೇ ಕರ್ಮನಿವಾರಣಂ ||೧||

ಎಂಬಂತೆ ಫಲೋದಯವಾದೊಡನೆ ಪುಷ್ಪವು ಉದುರಿ ಬೀಳುವಂತೆ ಜ್ಞಾನದ ಪ್ರಾದುರ್ಭಾವವಾದ ಆಕ್ಷಣವೇ ಕರ್ಮೋಪಾಸನ ಆದಿಗಳ ನಿವಾರಣವು ತಾನಾಗಿ ಆಗುವದು. ಆದುದರಿಂದ ಮುಮುಕ್ಷುಗಳಿಗೆ ಅಂದರೆ ಪರಶಿವಜ್ಞಾನಾಪೇಕ್ಷಿತರಿಗೆ ಆತ್ಮಜ್ಞಾನವೇ ಪ್ರಥಮ ಸೋಪಾನವೆಂದು ಹೇಳಬಹುದು.

ಈ ಗಹನ ವಿಷಯವು ಮಹಾಸಾಗರದಂತೆ ಅಪಾರವಾಗಿರುವಲ್ಲಿ ಅಲ್ಪಜ್ಞರಾದ ನಾವು ಅದನ್ನು ವಿಶೇಷವಾಗಿ ವರ್ಣಿಸುವ ಭರಕ್ಕೆ ಬೀಳದೆ, ನಮ್ಮ ರಾ.ಬ||ರುದ್ರಗೌಡರೆಂಬ ಘನಸಾಧುಗಳು ಮೇಲೆ ಬರೆದಂತೆ ವಿಷಯ ವಿವೇಚನೆಮಾಡಿ, ಅದನ್ನು ಪೂರ್ಣವಾಗಿ ನಂಬಿ, ಇತ್ತಿತ್ತಲಾಗಿ ಆ ವೇದಾಂತ ವಿಷಯದಲ್ಲಿಯೂ ತಮ್ಮ ಅಚಲವಾದ ಮನಸ್ಸು ಹಾಕಿದ್ದಾರೆಂಬದನ್ನು ವಾಚಕಮಹಾಶಯರಿಗೆ ತಿಳುಹಿಸುವದಿಷ್ಟೇ ನಮ್ಮ ಕೆಲಸವಾಗಿದೆ.

ಯಾವದೊಂದು ವಿಷಯದ ಜ್ಞಾನವು ಗುರುಬೋಧವಿಲ್ಲದೆ ಸರಿಯಾಗಿ ಆಗಲಾರದು. ಅದರಿಂದ ರಾ.ಬ||ರವರು ಎಲ್ಲಕ್ಕೂ ಮೊದಲು ವೇದಾಂತದಲ್ಲಿ ಘನಪಂಡಿತರಾದ ಸಂಕೇಶ್ವರದ ಜ್ಞಾನದೇವಶಾಸ್ತ್ರಿ ಯಕಸಂಬೀಕರ ಎಂಬ ಮಹನಿಯರಿಂದ ಗುರೂಪದೇಶವನ್ನು ಹೊಂದಿದರು. ಮುಂದೆ ತಮ್ಮ ಅಲೌಕಿಕವಾದ ಸ್ಮರಣಶಕ್ತಿಯಿಂದಲೂ, ಅವಿಚ್ಛಿನ್ನವಾದ ಶ್ರವಣಬಲದಿಂದಲೂ ವೇದಾಂತಜ್ಞಾನವನ್ನು ಬೆಳೆಯಿಸಹತ್ತಿರುವರು. ಬೆಳಗಾಂವ ಜಿಲ್ಲೆಯ ಹುಜೂರ ಡಿಪ್ಯೂಟಿ ಕಲೇಕ್ಟರರಾದ ರಾ.ಬ||ಗೋವರ್ಧನದಾಸ ಲಲ್ಲುಭಾಯಿ (ಸುರತ) ಎಂಬ ಇವರ ವ್ಯವಸಾಯ ಬಂಧುಗಳು ವೇದಾಂತಜ್ಞರಾಗಿದ್ದರಿಂದ, ಅವರಿಂದಲೂ ಕೆಲವು ವೇದಾಂತ ರಹಸ್ಯಗಳನ್ನು ಹೇಳಿಸಿಕೊಂಡು, ತಮ್ಮ ಜ್ಞಾನವನ್ನು ಹೆಚ್ಚಿಸಹತ್ತಿದರು. ಇವರಿಬ್ಬರೂ ಇಂಗ್ಲೀಷಜ್ಞರೂ, ಸುಶಿಕ್ಷಿತರೂ, ಸಮವ್ಯವಸಾಯಿಗಳೂ, ಪರಮಮಿತ್ರರೂ ಆಗಿರುವದರಿಂದ ರಾ.ಬ||ಲಲ್ಲೂಭಾಯಿಯವರು ಅನೇಕಾನೇಕ ಉದಾಹರಣೆಗಳಿಂದ ಉತ್ಕೃಷ್ಟವಾಗಿ ವೇದಾಂತ ಮರ್ಮವನ್ನು ಹೇಳುತ್ತಿರುವದರಿಂದ ರಾ.ಬ||ರುದ್ರಗೌಡರಿಗೆ ಕೇಳಿದ ವಿಷಯಗಳೆಲ್ಲ ಹೃದ್ಗತವಾಗಹತ್ತಿದವು. ಮುಂದೆ ತಮ್ಮ ರಾಜೋದ್ಯೋಗದ ಸಂಚಾರದಲ್ಲಿ ಅಲ್ಲಲ್ಲಿಗೆ ಕಂಡುಬರುತ್ತಿರುವ ಪ್ರಸಿದ್ಧ ವೇದಾಂತಿಗಳ ದರ್ಶನವನ್ನು ತಕ್ಕೊಂಡು ವಿಮರ್ಶೆಯನ್ನು ಮಾಡಹತ್ತಿದರು.

ಮಾರ್ಗೇ ಮಾರ್ಗೇ ನಿರ್ಮಲಂ ಬ್ರಹ್ಮವೃಂದಂ|
ವೃಂದೇ ವೃಂದೇ ತತ್ವಚಿದಾನುವಾದಃ |
ವಾದೇ ವಾದೇ ಜಾಯತೇ ತತ್ವಬೋಧೋ |
ಬೋಧೇ ಬೋಧೇ ಶ್ರಾಯತೇ ಚಂದ್ರಚೂಡಃ ||

ಎಂಬಂತೆ ಇವರ ಜ್ಞಾನಭಾಂಡಾರವು ದಿನೇ ದಿನೇ ವರ್ಧಿಸಹತ್ತಿತು. ಇವರ ವೇದಾಂತ ವಿಷಯದ ಅಭಿರುಚಿಯನ್ನು ಕಂಡು ದೂರ ದೂರಿನ ವೇದಾಂತಿಗಳು ಬಂದು, ಇವರ ದರ್ಶನ ಲಾಭವನ್ನೂ, ವೇದಾಂತ ಸಾರಮಸ್ಯವನ್ನೂ ಕಂಡು ಸಂತೋಷಹೊಂದುವರು. ಇವರ ವಿಶ್ರಾಂತಿಯ ವೇಳೆಯಲ್ಲಿ ರಾಮತತ್ವಪ್ರಕಾಶ ಮುದ್ರಣಾಲಯದ ಮಾಲಕರಾದ ಸುಪ್ರಸಿದ್ಧ ರಾವಸಾಹೇಬ ಅಬಾಜೀ ರಾಮಚಂದ್ರ ಸಾವಂತರವರಂಥ ಸ್ಥಾನಿಕ ವೇದಾಂತಿಗಳು ಒಳ್ಳೇ ಉತ್ಸುಕತೆಯಿಂದ ಇವರ ಮಂದಿರಕ್ಕೆ ಬಂದು, ವೇದಾಂತ ವಿವೇಚನೆ ಮಾಡುವರು. ರಾ.ಬ||ರವರಿಗೆ ಅಲೌಲಿಕ ವೇದಾಂತಿಗಳಾದ ಜಿಲ್ಲಾ ಧಾರವಾಡ ತಾಲೂಕ ಹುಬ್ಬಳ್ಳಿಯ ಶ್ರೀ

ಸಿದ್ಧಾರೂಢಸ್ವಾಮಿಗಳವರ ಪರಿಚಯವಾದರೂ ಪೂರ್ಣವದೆ. ಈ ಪ್ರಕಾರ ರಾ.ಬ॥ರವರು ಎಲ್ಲ ವಿಷಯಗಳ ಜ್ಞಾನವನ್ನು ಬಲ್ಲವರಾದದರಿಂದ ಏನೂ ಅರಿಯದ ಸಣ್ಣ ಬಾಲಕನಿಂದ ವಿದ್ವನ್ಮುಕುಟಮಣಿಗಳಾದ ವಿರಕ್ತಶಕ್ತಿಮಣಿಗಳ ವರೆಗೆ ಇವರು ಎಲ್ಲರ ಪ್ರೇಮಕ್ಕೂ ಕಾರಣರಾದರು.

ಸನ್ನ ೧೯೦೬ನೆಯ ಇಸವಿಯಲ್ಲಿ ಇವರ ವೇದಾಂತಗುರುಗಳೆಂದರೆ ದೇವರಕೊಂಡದ ಓಂ ಚೆನ್ನವೃಷಭಾರೂಡ ಶಿವಯೋಗಿಗಳು, ಇವರು ವೀರಶೈವ ಸಿದ್ಧಾಂತಿಗಳೂ, ವೇದಾಂತಿಗಳೂ ಇದ್ದು ರಾವಬಹಾದ್ದೂರವರ ಮನೆತನದ ಶರೀರ ಸಂಬಂಧಿಕರಾಗಿರುವರು. ಇವರು ಜಿಲ್ಲಾ ಧಾರವಾಡ ತಾಲೂಕ ಕಲಘಟಗಿ ಸಾಕೀನ ದ್ಯಾವಣಕೊಂಡ ಅಥವಾ ದೇವಕೊಂಡದ ಗೌಡರ ಮನೆತನದವರು. ಇವರ ತಂದೆಯು ಸಾಂಬಗವಡ ಅಥವಾ ಸಾಹೇಬಗೌಡ. ಈ ಯೋಗಿಗಳ ಮೊದಲಿನ ಹೆಸರು ಚೆನ್ನಬಸವಗೌಡ. ಇವರು ಜಂಗಮಗೌಡರು, ಅಂದರೆ ವಿಶೇಷ ವೀರಶೈವರು. ಇವರು ಬಾಲ್ಯದ ೧೦ ವರ್ಷಗಳ ವರೆಗೆ ದೇಶಭಾಷೆಯ ಶಾಲಾಭ್ಯಾಸಮಾಡಿ, ಸಾಲೆ ಬಿಟ್ಟನಂತರ ೧೧ ರಿಂದ ೧೫ನೇ ವರ್ಷದ ವಯಸ್ಸಿನ ವರೆಗೂ ಸಾಹಿತ್ಯ, ಶಾಸ್ತ್ರ ಮುಂತಾದವುಗಳನ್ನು ನೋಡಿಕೊಂಡು, ೨೦ನೇ ವರ್ಷದ ವರೆಗೆ ಉಪಾಸನಾ ಕಾಂಡ ಅಥವಾ ಭಕ್ತಿಕಾಂಡದ ವಿವರಣೆಯನ್ನು ಓದಹತ್ತಿದರು. ೨೧ನೇ ವಯಸ್ಸಿನಲ್ಲಿಯೇ ಇವರು ಪರಮವೈರಾಗ್ಯವನ್ನು ಹಿಡಿದು ಶ್ರೀಮಜ್ಜಗದ್ಗುರು ಚಿತ್ರದುರ್ಗದ ಮಹಾಲಿಂಗಸ್ವಾಮಿಗಳವರ ಕಡೆಯಿಂದಲೂ, ಬೇರೆ ಸದ್ಗುರುಗಳಿಂದಲೂ, ಸಜ್ಜನರ ಸಂಗದಿಂದಲೂ ಪರಮಾತ್ಮನ ಪೂರ್ಣಾನುಗ್ರಹದಿಂದಲೂ, ಪೂರ್ವ ಸುಕೃತದಿಂದಲೂ, ಶಿವಪೂಜೆ, ಶಿವಧ್ಯಾನ, ಶಿವಮಂತ್ರ, ಶಿವಭಕ್ತಿ, ಶಿವಮಂತ್ರೋಪದೇಶ, ವೇದಾಂತ ವಿವರಣೆ ಮುಂತಾದ ಸರ್ವವಿಷಯಗಳನ್ನು ಅರಿತುಕೊಂಡು, ೨೫ನೇ ವಯಸ್ಸಿಗೆ ಪೂರ್ಣಜ್ಞಾನಿಗಳಾದರು. ಮುಂದೆ ೨೬ನೇ ವರ್ಷದಿಂದ ೩೬ನೇ ವಯಸ್ಸುಗಳ ವರಿಗೆ ಕೇವಲ ಸಮ್ಯಕ್‌ಜ್ಞಾನಿಗಳಾಗಿ, ಸದ್ಗುರುಸ್ಥಾನವನ್ನು ಹೊಂದಿ, ಮುಮುಕ್ಷುಗಳಿಗೂ, ಭಕ್ತರಿಗೂ, ಪಂಡಿತರಿಗೂ, ಪಾಮರರಿಗೂ, ರಾಜರಿಗೂ, ಯೋಗಿಗಳಿಗೂ, ಭೋಗಿಗಳಿಗೂ, ದುಷ್ಟರಿಗೂ, ಶಿಷ್ಟರಿಗೂ, ಗಂಡುಮಕ್ಕಳಿಗೂ, ಹೆಣ್ಣುಮಕ್ಕಳಿಗೂ ಸರ್ವರಿಗೂ ಸದಾನಂದ ರೂಪರಾಗಿ, ಸದ್ಬೋಧಾಮೃತವನ್ನು ಸುವೃಷ್ಟಿಯಂತೆ ಸುರಿಸುತ್ತಿದ್ದರು."ಸಾಧೂಜೆ ವಿಭೂತಿ ಜಗಾಚೆ ಕಲ್ಯಾಣಾರ್ಥ" ಎಂಬ ಉಕ್ತಿಯಂತೆ ಸದ್ಬೋಧದಿಂದ ಸರ್ವಜನರಿಗೂ ಕಲ್ಯಾಣವಾಗಲೆಂಬುದೇ ಇವರ ವೇದಾಂತವಿಭೂತಿಯ ಮುಖ್ಯಲಕ್ಷಣವಾಗಿತ್ತು.

ಈ ವೇದಾಂತವರೇಣ್ಯರು ರಾವಬಹಾದ್ದೂರವರ ವೇದಾಂತದಲ್ಲಿರುವ ಅಚಲವಾದ ಅಭಿರುಚಿಯನ್ನು ಕಂಡು, ಕೆಲದಿವಸ ಅವರ ಆಶ್ರಮದಲ್ಲಿಯೇ ವಾಸವಾಗಿದ್ದು, ಪ್ರತಿದಿವಸ ಸರಳ ಮತ್ತು ಸಮಂಜಸವಾದ ವ್ಯವಹಾರೋದಾಹರಣೆಗಳಿಂದಲೂ, ಸುಲಭವಾದ ಶೈಲಿಯಲ್ಲಿ ಸುಗಮ್ಯವಾಗುವಂತೆ ವೇದಾಂತೋಪದೇಶ ಮಾಡಹತ್ತಿದ್ದರಿಂದ ರಾ.ಬ॥ರವರು ತಮ ಸಂಶಯಗಳನ್ನೆಲ್ಲ ನಿವೃತ್ತಿಮಾಡಿಕೊಂಡು ನಿಜವಾದ ಜ್ಞಾನವನ್ನು ಹೊಂದಹತ್ತಿದರು. ರಾವಬಹಾದ್ದೂರವರಿಗೆ ಈ ಕಾಲಕ್ಕೆ ಸುಮಾರು ೫೫ ವರ್ಷಗಳಾಗಿದ್ದರೂ, ವಿದ್ಯಾರ್ಥಿಗಳಂತೆ ಉಪಯುಕ್ತ ವಿಷಯಗಳನ್ನೆಲ್ಲ ಆಗಿಂದಾಗ ಬೇಸರಿಯದೇ ಬರೆದಿಡುವರು. ಒಂದೊಂದು ವಿಷಯಕ್ಕೆ ಬೇರೆ ಬೇರೆ ಪುಸ್ತಕಗಳನ್ನು ಕಟ್ಟಿಸಿ, ಆಯಾ ವಿಷಯಗಳ ಉಪಯುಕ್ತ ಸಂಗತಿಗಳನ್ನೆಲ್ಲ ಬರೆದಿಡುವರು. ಇದರಂತೆ, ತಮ್ಮ ಆಳಿಕೆಯಲ್ಲಿ ಆರಂಭದಿಂದ ವರ್ತಿಸಿದ ಮಹತ್ವದ ಸಂಗತಿಗಳನ್ನು ವರ್ಷಾನುಕ್ರಮದಂತೆ ಫೈಲುಕಟ್ಟಿಸಿ, ಅವುಗಳಲ್ಲಿ ಬರೆದಿಟ್ಟಿರುವರು. ಮತ್ತು ಇಂಥಾ ವಿಷಯವು ಇಂಥಾ ಪುಸ್ತಕದ ಇಷ್ಟನೇ ಪುಟದ ಸ್ಥಳದಲ್ಲಿರುವದೆಂಬದನ್ನು ಸಹಜವಾಗಿ ಹೇಳುತ್ತಿರುವ ಇವರ ಸ್ಮರಣಶಕ್ತಿಯನ್ನು ಕಂಡು ಎಲ್ಲರೂ ಚಕಿತರಾಗುವರು.

ಇಂಥ ಅದ್ವಿತೀಯವಾದ ಇವರ ಸ್ಮರಣಶಕ್ತಿಯನ್ನು, ಸರಳಸ್ವಭಾವವನ್ನು, ಶೋಧಕ ದೃಷ್ಟಿಯನ್ನು ಕಂಡು, ಶ್ರೀ ಚೆನ್ನವೃಷಭಾರೂಢರು ರಾವಬಹಾದೂರವರ ಕೂಡ, ಸಕ್ಕರೆಗೂ ಸವಿಗೂ ಭೇದವಿಲ್ಲದಂತೆಯೂ,

ಅಗ್ನಿಗೂ ಪ್ರಕಾಶಕ್ಕೂ ಭೇದವಿಲ್ಲದಂತೆಯೂ, ಹಾಲಿಗೂ ರುಚಿಗೂ ಭೇದವಿಲ್ಲದಂತೆಯೂ, ಹೂವಿಗೂ ಗಂಧಕ್ಕೂ ಭೇದವಿಲ್ಲದಂತೆಯೂ, ಬಂಗಾರಕ್ಕೂ ಉಂಗುರಕ್ಕೂ ಭೇದವಿಲ್ಲದಂತೆಯೂ ಹೆಸರು ಮಾತ್ರ ಎರಡು ಆದಾಗ್ಯೂ ವಸ್ತುವು ಒಂದೇಯಾಗಿರುವಂತೆ ಅಭೇದವಾಗಿ, ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಒಂದೇ ವಾಸನೆಯಿಂದ ಸದ್ಬೋಧದ ಚರ್ಚೆಯನ್ನು ಮಾಡುತ್ತಿದ್ದರು. ಪೂರ್ವದಲ್ಲಿ ಶ್ರೀರಾಮಚಂದ್ರನಿಗೂ ವಶಿಷ್ಠರಿಗೂ ಹಾಗೂ ಶಂಕರಾಚಾರ್ಯರಿಗೂ ಹಸ್ತಾಮಲಕರಿಗೂ ಹೇಗೆ ಸದ್ಬೋಧ ವಿವೇಚನವಾಗುತ್ತಿತ್ತೋ ಅದರಂತೆ ಓಂ ಚನ್ನವೃಷಭಾರೂಢರಿಗೂ, ರಾ.ಬ।।ರುದ್ರಗೌಡರವರಿಗೂ ಬಹು ವಿನಯೋಕ್ತಿಯಿಂದಲೂ, ಸತ್ಯತನದಿಂದಲೂ, ಯೋಗ್ಯರೀತಿಯಿಂದಲೂ, ಶಿವಾನುಭವ ಸಂಬಂಧದ ವಿವರಣೆಯು ವೇದಾಗಮೋಕ್ತವಾಗಿಯೂ, ಪುರಾಣೋಪನಿಷತ್ ವಚನಶಾಸ್ತ್ರಸಮ್ಮತವಾಗಿಯೂ, ಸಿದ್ಧಾಂತ ವೇದಾಂತ ವಿಷಯಗಳು ಸರಿಯಾಗಿ ಚರ್ಚಿಸಲ್ಪಡುತ್ತಿದ್ದವು.

ಮೌನೇ ಮೌನೀ ಗುಣಿನಿ ಗುಣವಾನ್ ಪಂಡಿತೇ ಪಂಡಿತೋಽಸೌ ।
ದೀನೇ ದೀನಃ ಸುಖಿನಿ ಸುಖವಾನ್ ಭೋಗಿನಿ ಪ್ರಾಪ್ತಭೋಗಃ ।
ಮೂರ್ಖೇ ಮೂರ್ಖೋ ಯುವತಿಷು ಯುವಾ ವಾಗ್ಮಿಷು ಪ್ರೌಢವಾಗ್ಮೀ ।
ಧನ್ಯಃ ಕೋಪಿ ತ್ರಿಭುವನವಿಜಯೀ ಯೋಽವಧೂತೋಽವಪೂತಃ ॥

ಎಂಬಂತೆ ವೇದಾಂತಜ್ಞರಾದ ಈ ಮಹನೀಯರಿರ್ವರ ಸಮಾಗಮ ಸುಖವು ಅತಿಶಯವಾಗಿತ್ತು. ಈ ವೇದಾಂತಿಗಳು ರಾ.ಬ।।ರುದ್ರಗೌಡರವರ ಗುಣಾದಿಗಳನ್ನು ಈ ಪ್ರಕಾರ ಹೇಳುತ್ತಾರೆ.

"ಸಾಕ್ಷಾತ್ ರುದ್ರದೇವರು ಅಂತರಂಗದಲ್ಲಿ ಅತಿ ಕೋಮಲ ಹೃದಯವುಳ್ಳವನಾಗಿಯೂ, ಸತ್ವಸ್ವರೂಪನಾಗಿಯೂ, ಸಾತ್ವಿಕ ವೃತ್ತಿಯುಳ್ಳವನಾಗಿಯೂ,ಆನಂದಪುರುಷನಾಗಿಯೂ, ಜಗದ್ವ್ಯಾಪಕನಾಗಿಯೂ ಬ್ರಹ್ಮವಿಷ್ಣ್ವಾದಿಗಳಿಗೆ ದೇವರಾಗಿಯೂ, ಮಹೇಶ್ವರರೂಪನಾಗಿಯೂ, ಶಿವಭಕ್ತರುಗಳಿಗೆ ವಾಂಛಿತಾರ್ಥವನ್ನು ಕೊಡುವಲ್ಲಿ ಮಾತೃಸ್ವರೂಪನಾಗಿಯೂ, ಕೇವಲ ಸಮ್ಯಜ್ಞಾನ, ಸಹಜಜ್ಞಾನ, ಮಹಾಜ್ಞಾನ, ಸರ್ವಜ್ಞತ್ವ, ಸರ್ವೇಶ್ವರತ್ವವುಳ್ಳವನಾಗಿಯೂ, ಬಹಿರಂಗದಲ್ಲಿ ಭಯಂಕರಸ್ವರೂಪನಾಗಿಯೂ, ಕಾರಣಸ್ವರೂಪನಾಗಿಯೂ, ಮಹಾತೇಜಃಪುಂಜನಾಗಿಯೂ ದುಷ್ಟಮರ್ದನ, ಶಿಷ್ಟಪ್ರತಿಪಾಲನ ಸ್ವರೂಪನಾಗಿಯೂ, ದಕ್ಷ-ಬ್ರಹ್ಮ-ಮನ್ಮಥ-ಕಾಲರೆಂಬ ಮೇಘಗಳಿಗೆ ಝುಂಝೂಮಾರುತನಾಗಿಯೂ ಇರುವನೆಂಬದು ಸರ್ವಜಗತ್ತಿಗೂ ಗೊತ್ತಿದ್ದ ಸಂಗತಿಯು. ಇಂತಹ ಮಹಾರುದ್ರನ ಕಿಂಚಿದಂಶವೇ ರಾ.ಬ।।ರುದ್ರಗೌಡರವರ ಹೃದಯಾಬ್ಜ ಮಂದಿರದಲ್ಲಿದ್ದುಕೊಂಡು ಅವತರಿಸಿದ್ದರಿಂದಲೇ ಇವರು ಅಂತರಂಗದಲ್ಲಿ ಸಾತ್ವಿಕಸ್ವರೂಪದಿಂದಲೂ, ಸದಯಾಂತಃಕರಣದಿಂದಲೂ ಸಜ್ಜನವಂದ್ಯರಾಗಿರುತ್ತಾರೆ. ಬಹಿರಂಗದಲ್ಲಿ ತಮೋರೂಪ ಅಥವಾ ಭೈರವರೂಪ ಅಂದರೆ ಭಯಂಕರ ರೂಪವಾಗಿ ದುಷ್ಟದಲನ, ಶಿಷ್ಟಪಾಲನ, ಮಾಡುವ ಕೇವಲ ರುದ್ರರೂಪವೇ ಆಗಿ ಲೋಕ ಪೂಜ್ಯರಾಗಿರುತ್ತಾರೆ. ರಾಜ್ಯಕಾರ್ಯಧುರಂಧರರಾದ ಇವರು ಇಂಗ್ಲಿಷ ಸಾಮ್ರಾಜ್ಯದಲ್ಲಿ ಪ್ರಜೆಗಳ ವ್ಯಾಧಿಯನ್ನು ದೂರಮಾಡಿ ಸತ್ಯವಾಗಿಯೂ, ಜಾಗರೂಕವಾಗಿಯೂ ಸಲ್ಲಕ್ಷಣದಿಂದ ರಾಜ್ಯವನ್ನು ಆಳುತ್ತಾರೆ. ದುರ್ಜನತಾರಣ್ಯಕ್ಕೆ ದಾವಾನಲ ಸ್ವರೂಪರಾಗಿಯೂ, ಸಜ್ಜನರೆಂಬ ಕುಮುದಗಳಿಗೆ ಪೂರ್ಣಚಂದ್ರೋಪಮಾನರಾಗಿಯೂ ಇರುತ್ತಾರೆ. ಇವರು ತಮ್ಮ ನ್ಯಾಯನಿಷ್ಠವಾದ ಆಳಿಕೆಯಲ್ಲಿ ಅನೇಕ ದುಷ್ಟರನ್ನು ಮರ್ದಿಸಿ, ಭೂಭಾರವನ್ನು ಕಡಿಮೆಮಾಡಿ, ಶಿಷ್ಟರನ್ನು ಉದ್ಧಾರವಮಾಡಿ, ಭೂದೇವಿಗೆ ಮಾಂಗಲ್ಯವನ್ನುಂಟು ಮಾಡಿದ್ದರಿಂದ, ಸರ್ವಪ್ರಾಣಿಗಳಿಗೆ ಸಂತೋಷವುಂಟಾಗಿರುತ್ತದೆ. ಜನಕರಾಜನಂತೆ ಪ್ರಪಂಚವನ್ನು ಪಾರಮಾರ್ಥವನ್ನು ನಿಗ್ರಹದಿಂದ ಸಾಗಿಸುತ್ತಿರುವ

ಇವರ ಚಿತ್ತಸ್ಥೈರ್ಯವೂ, ಚಿತ್ಪ್ರಕಾಶವೂ ಬಹು ತೀಕ್ಷ್ಣವಾಗಿರುತ್ತದೆ. ಅಹೋರಾತ್ರಿಯಲ್ಲಿಯೂ ಆತ್ಮಾನಾತ್ಮ ವಿಚಾರದ ಕಡೆಗೂ, ಪ್ರಜಾಹಿತದ ಕಡೆಗೂ ಲಕ್ಷವಿರುವ ಇವರಿಗೆ ಪರಶಿವನು ಕಲ್ಯಾಣವನ್ನುಂಟು ಮಾಡಲಿ"

ಈ ಮೇಲೆ ಬರೆದ ವೇದಾಂತಿಗಳ ವಚನಗಳು ಅಕ್ಷರಶಃ ನಿಜವಾಗಿರುತ್ತದೆ. ಇಂತಹ ಅಲೌಕಿಕ ಬುದ್ಧಿ ಸಾಮರ್ಥ್ಯದಿಂದಲೇ ಇವರು ಇಷ್ಟು ಘನತೆಗೆ ಬಂದಿರುತ್ತಾರೆ. ಅಂತೆಯೇ ಇವರ ಮೇಲೆ ಸರಕಾರದ ಪೂರ್ಣ ನಂಬಿಗೆಯಿರುತ್ತದೆ. ಸರಕಾರದವರು ಇವರಿಗೆ ಈಗಿರುವ ೫೦೦ ರೂ. ಪಗಾರಕ್ಕೆ ಹೆಚ್ಚಿಗೆ ನೂರು ರೂಪಾಯಿ ಬಡತಿಯನ್ನು ಕೊಟ್ಟು ಸನ್ ೧೯೦೬ನೇ ಇಸವಿಯಲ್ಲಿ ೬೦೦ ರೂಪಾಯಿ ಮಾಡಿರುವರು. ಅಲ್ಲದೆ ಪುನಃ ಸನ್ ೧೯೧೦ಲನೇ ಇಸವಿಯಲ್ಲಿ ೧೦೦ ರೂ. ಬಡತೀ ಕೊಟ್ಟಿದ್ದರಿಂದ ಸಧ್ಯಕ್ಕೆ ಇವರ ಪಗಾರವು ೭೦೦ ರೂಪಾಯಿಯಾಗಿರುವದು. ಇವರ ನೌಕರಿಯ ಮುದ್ದತಾದರೂ ಸಮೀಪಿಸಿರುವದು. ಇನ್ನು ಮೇಲೆ ಆದಷ್ಟು ತೀವ್ರವಾಗಿ ಪೆನಶನ್ ತೆಗೆದುಕೊಂಡು ರಜೋಗುಣ ಪ್ರಧಾನ್ಯವಾದ ರಾಜವೇಷದ ಬಣ್ಣವನ್ನು ತೊಳೆದು, ವೇದಾಂತ ವಿಷಯವಿವೇಚನದ ವಿಶ್ರಾಂತಿಯಲ್ಲಿ ಕಳೆಯಬೇಕೆಂದು ಇವರ ಕೃತಸಂಕಲ್ಪವಾಗಿರುವದು. ಆದರೆ ವೀರಶೈವ ರಾಜ್ಯಾಧಿಕರ್ತೃಗಳೆಲ್ಲ ಇವರನ್ನು ಕುರಿತು "ನಿಮ್ಮ ಆಧಾರ ಬಲದಿಂದಲೇ ನಾವೆಲ್ಲರೂ ನಿರ್ಭಯದಿಂದ ಕೆಲಸ ಮಾಡುತ್ತಿರುವೆವೆಂದೂ, ಮನೆಯ ಮೂಲಸ್ತಂಭವು ಶಿಥಿಲವಾದರೆ, ಉಳಿದ ಅಂಗಾಂಗಳೆಲ್ಲ ಸಡಿಲಾಗುವವೆಂದೂ, ಪರಮಾವಧಿ ಮುದ್ದತ ಸಿಗುವ ವರೆಗೂ ತಾವು ಕೆಲಸ ಮಾಡುತ್ತಿರುವದೇ ನಮ್ಮ ಏಳ್ಗೆಯೆಂದೂ" ಬಿನ್ನೈಸುವದನ್ನೂ ಕೇಳಿ ರಾ.ಬ॥ರವರು ಎಂದಿನಂತೆ ರಾಜ್ಯಭಾರ ಮಾಡುತ್ತಿರುವರು. ಇದೇ ನಮ್ಮ ಸುದೈವವು.

ರಾವಬಹಾದ್ದೂರವರ ಆಳಿಕೆಯ ಕಾಲವು ಸಮೀಪವಾದದರಿಂದ ಜನಸಮೂಹವು ಈಗಿನಿಂದಲೇ ಹಳಹಳಿಸುತ್ತಿರುವದು. ಇನ್ನು ಮೇಲೆ ಇಂತಹ ಮಹಾರಾಯರು ಎಂದಿಗೂ ಬರಲಾರರೆಂದು ಕೆಲಕೆಲವರು ವಾದಿಸುವರು. ಮುಂದೆ ಎಷ್ಟೋ ಮಂದಿ ನಿಸ್ಪೃಹಿಗಳೂ ವಿವೇಕರು ಅಧಿಕಾರಿಗಳಾಗಿ ಬರಬಹುದು. ಆದರೆ ಇವರಷ್ಟು ನ್ಯಾಯನಿಷ್ಠುರತೆಯಿಂದಲೂ ದರ್ಪದಿಂದಲೂ ರಾಜ್ಯಭಾರಮಾಡಿ ಲೋಕಪೂಜ್ಯರಾಗುವ ಮಹಾತ್ಮರು ಯಾವ ಕಾಲಕ್ಕೆ ಬರುವರೋ ತಿಳಿಯದೆಂದು ಜನರು ಮಾತಾಡುವರು. ಸಾರಾಂಶ, ಇವರ ಆಳಿಕೆಯು ಸರ್ವರಿಗೂ ಸಂತೋಷಕರವಾಗಿತ್ತೆಂತಲೇ ಉದ್ಗಾರಗಳು ಈ ಮೇರೆಗೆ ಹೊರಬೀಳು ವವೆಂಬದರಲ್ಲೇನು ಸಂಶಯವಿಲ್ಲ.

ಜ್ಞಾನ ಸದ್ಗುಣಾದಿಗಳ ಮೇಲಿಂದ ಸಾಮಾನ್ಯವಾಗಿ ಇವರಿಗೆ ಸಮುದ್ರದ ಉಪಮೆಯನ್ನೂ ಕೊಡಬಹುದು. ಯಾಕಂದರೆ, ಸಮುದ್ರದಲ್ಲಿ ಮನೋಹರವಾದ ಎರಡು ದೊಡ್ಡ ಗುಣಗಳಿವೆ. ಅವುಗಳಲ್ಲಿ ಒಂದು ಗಾಂಭೀರ್ಯ, ಇನ್ನೊಂದು ಮರ್ಯಾದಾ ಪಾಲನೆ. ಅದರಲ್ಲಿ ಆ ಎರಡೂ ಗುಣಗಳಿರುವದರಿಂದ ಅದು ಜಗತ್ತಿನಲ್ಲಿ ಎಲ್ಲಕ್ಕಿಂತಲೂ ದೊಡ್ಡದೆನ್ನಿಸಿಕೊಂಡು, ಪ್ರಶಂಸೆಗೆ ಯೋಗ್ಯವಾಗಿದೆ. ಸಮುದ್ರಗರ್ಭದಲ್ಲಿ ಏನಿದೇ, ಎಷ್ಟಿದೆ? ಅದು ಯಾವ ಕಡಿಗೆ ಇದೆ? ಎಂಬುದನ್ನು ಹೇಳುವದಕ್ಕೆ ಯಾರಿಂದಲೂ ಆಗುವದಿಲ್ಲ. ಅದರ ಆಳವು ಬಹಳವಾಗಿದೆ. ಅದರ ಗರ್ಭದಲ್ಲಿ ಅಮೂಲ್ಯವಾದ ಮತ್ತು ಅಸಂಖ್ಯವಾದ ರತ್ನಗಳಿವೆ. ಹೀಗಿದ್ದಾಗ್ಯೂ ಅದು ನನ್ನಲ್ಲಿ ಇಂಥಿಂಥ ವಸ್ತುಗಳಿವೆಯೆಂದು ಹೇಳಿಕೊಳ್ಳುವದಿಲ್ಲ. ಇದೊಂದು ಸಮುದ್ರದ ದೊಡ್ಡ ಗುಣವಾಗಿದೆ. ಜಲಪ್ರಳಯವಾಗುವಂತೆ ಮಳೆ ಕರೆದಾಗ್ಯೂ ಸಮುದ್ರವು ಮೇರೆದಪ್ಪುವದಿಲ್ಲ. ಮತ್ತು ಹತ್ತು ಹನ್ನೆರಡು ವರ್ಷ ಅನಾವೃಷ್ಟಿಯಾದಾಗ್ಯೂ ಅದರಲ್ಲಿರುವ ನೀರು ಕಡಿಮೆಯಾಗುವದಿಲ್ಲ. ಆದರೆ ಸಣ್ಣ ಸಣ್ಣ ಹಳ್ಳಗಳ ಸ್ಥಿತಿಯು ಈ ಪ್ರಕಾರವಿರುವದಿಲ್ಲ. ಅದರ ಗರ್ಭದಲ್ಲಿ ಕಲ್ಲು ಮಣ್ಣು ಮುಂತಾದವು ಎಷ್ಟಿರುವವೆಂಬುದು ಎಲ್ಲರಿಗೂ ತಿಳಿದಿರುತ್ತದೆ. ಸ್ವಲ್ಪ ಮಳೆ ಬರುತ್ತಲೇ ಅದು ಮನಸ್ಸು ಬಂದಂತೆ ಉಬ್ಬಿ ಹೆಚ್ಚಾಗಿ ಗರ್ಜಿಸುತ್ತ ದಾರಿ ಸಿಕ್ಕಕಡೆಗೆಲ್ಲ ಸೊಟ್ಟು ಸೊಟ್ಟಾಗಿ ಒರಟುತನದಿಂದ ಒಳನುಗ್ಗಿ, ತನ್ನ

ಉದ್ಧತಟತನವನ್ನು ತೋರಿಸಿಕೊಳ್ಳುತ್ತದೆ. ಆ ಕಾಲದಲ್ಲಿ ಅದಕ್ಕೆ ಯಾರ ಲಕ್ಷ್ಯವೂ ಇರುವದಿಲ್ಲ. ಎರಡು ದಿವಸ ಮಳೆಬಾರದೆ ಇದ್ದರೆ ಕೂಡಲೆ ಅದು ಹೇಳಲಿಕ್ಕಾಗದಷ್ಟು ಹೀನಸ್ಥಿತಿಗೆ ಬಂದು ಕ್ಷೀಣಿಸಿ ಬತ್ತಿ ಹೋಗುತ್ತದೆ. ಈ ಹಳ್ಳದ ಉಪಮೆಯು ಅಲ್ಪಮತಿಯ, ಅಹಂಕಾರದ ದುಷ್ಟಮನುಷ್ಯನಿಗೆ ಹೊಂದುತ್ತದೆ.

ಈ ಮೇಲಿನ ಉಪಮೆಗಳ ವಿಮರ್ಶೆ ಹೇಗಂದರೆ, ರಾವಬಹಾದ್ದೂರವರಾದರೂ ತಮ್ಮ ಗಾಂಭೀರ್ಯದಿಂದಲೂ, ಭವ್ಯವಾದ ದರ್ಪದಿಂದಲೂ, ಮರ್ಯಾದಾಪಾಲನೆಯಿಂದಲೂ ಎಲ್ಲ ರಾಜ್ಯಾಧಿಕಾರಿಗಳಲ್ಲಿ ದೊಡ್ಡಸ್ತಿಕೆಯನ್ನು ಪಡೆದು ಪ್ರಶಂಸನಾರ್ಹರಾಗಿರುತ್ತಾರೆ. ಇವರ ಜ್ಞಾನವು ಬಹಳ ಆಳವಾಗಿದೆ. ಆದರೂ ಎಲ್ಲ ವಿಷಯಗಳನ್ನು ನಾನು ಬಲ್ಲೆನೆಂಬ ಅಹಮೇಕತನವು ಇವರಲ್ಲಿ ತಿಲಮಾತ್ರವಿಲ್ಲ. ಇವರ ಉತ್ಕರ್ಷವು ಎಷ್ಟು ಪರಿಯಿಂದಾದಾಗ್ಯೂ ಇವರು ಉಬ್ಬುವದಿಲ್ಲ, ಸಾಮಾನ್ಯಕಾಲದಲ್ಲಿ ನಿರರ್ಥಕವಾಗಿ ಚಿಂತಿಸುವದಿಲ್ಲ. ಅದೇ ದುರ್ಜನರಾದ ಅವಿವೇಕಿಗಳು ಅಲ್ಪ ಐಸಿರಿ ಬಂದೊಡನೆ ಆಡಂಬರದಿಂದ ಉಬ್ಬುಬ್ಬಿ, ಎಡಬಲದವರನ್ನು ನೆದರೆತ್ತಿ ನೋಡದೆ, ಮಾತಾಡಿಸದೆ ಗರ್ಜಿಸುತ್ತ ಶಠಂಭಾವದ ಗರ್ವದಿಂದ ತಮ್ಮ ಉದ್ದಾಮತನವನ್ನೇ ತೋರಿಸುತ್ತಾರೆ. ಜನರಿಗೆ ಈ ಉದ್ಧಟ ಕಿಮ್ಮತ್ತು ಮೊದಲೇ ಗೊತ್ತಿರುತ್ತದೆ. ಕಾಲವಶಾತ್ ಇಂಥವರ ಇದ್ದಷ್ಟು ಸಿರಿಯು ಹೋಗಿ ಅವನತಿಯಾಗಲು, ಕಡೆಗೆ ಕಂಡ ಕಂಡ ಜನರ ಕೈಕಾಲು ಕಟ್ಟಿಕೊಳ್ಳುತ್ತಾರೆ.

ಇಂತಹ ಉದ್ದಾಮರು ಸಮುದ್ರದಂತೆ ಗಂಭೀರವಾಗಿ ಶೋಭಿಸುತ್ತಿರುವ ರಾ.ಬ॥ರುದ್ರಗೌಡ ದೊರೆಗಳವರ ಗುಣಸ್ವಭಾವಾದಿಗಳನ್ನೂ, ಅವುಗಳಿಂದ ಅವರಿಗುಂಟಾದ ಉತ್ಕರ್ಷವನ್ನು ನೋಡಿ ತಮ್ಮ ನೀಚತನಕ್ಕೆ ತಾವೇ ಪಶ್ಚಾತ್ತಾಪಪಟ್ಟು, ಇವರ ಸದ್ಗುಣಗಳ ಅನುಕರಣಮಾಡಿ ಸಂತೋಷವನ್ನು ಹೊಂದಹತ್ತಿದರು. ಮುಖ್ಯವಾಗಿ ಇದೇ ಉದ್ದೇಶದಿಂದಲೇ ರಾ.ಬ॥ರುದ್ರಗೌಡರವರ ಈ ಚರಿತ್ರೆಯು ಬರೆಯಲ್ಪಟ್ಟಿರುವದೆಂದರೂ ಸಲ್ಲುವದು. ಸಮುದ್ರಮಥನದಿಂದ ಹೊರಟ ಅಮೃತದಂತೆ ಈ ಪುಣ್ಯಮಯ ಚರಿತ್ರೆಯಿಂದ ಹೊರಡುವ ಸಾರವೇನಂದರೆ "ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ". ಸತ್ಯವು ಸೌಖ್ಯದ ತಾಯಿ.

ಇನ್ನು ರಾವಬಹಾದ್ದೂರವರು ಪ್ರತಿಯೊಬ್ಬರಿಗೆ ಮಾಡುತ್ತಿರುವ ಸ್ವಾನುಭವದ ಉಪದೇಶ ವಚನಗಳನ್ನು ವಾಚಕರ ದಿವ್ಯದೃಷ್ಟಿಯ ಮುಂದಿಟ್ಟು, ದೀರ್ಘವಾದ ಈ ಚರಿತ್ರೆಯ ಸಮಾಪ್ತಿಗೆ ತಮ್ಮೆಲ್ಲರ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ. ಅವು ಯಾವವೆಂದರೆ:

೧. ದಿನಂಪ್ರತಿ ನಸುಕಿನಲೇಳು, ಜಗತ್ಕರ್ತನಾದ ಭಗವಂತನನ್ನು ಭಕ್ತಿಯಿಂದ ಭಜಿಸು.

೨. ನಿನ್ನ ಹಿತಸ್ಥರಾದ ಗುರುಹಿರಿಯರಿಗೆ ತಪ್ಪದೇ ಮಾನವನ್ನು ಕೊಡುತ್ತಿರು.

೩. "ವಿದ್ಯೆಯಿಲ್ಲದವನು ಹದ್ದಿಗಿಂತ ಕಡೆ". ಅಥವಾ "ದಡ್ಡನು ದನಕ್ಕಿಂತಲೂ ಕಡೆ" ಆದ್ದರಿಂದ ಎಲ್ಲಕ್ಕೂ ಮೊದಲು ವಿದ್ಯೆಯನ್ನೂ ಕಲಿತು ಜ್ಞಾನಿಯಾಗು.

೪. ಯಾವಾಗಲೂ ಒಳ್ಳೇ ಕೆಲಸದಲ್ಲಿ ತೊಡಗಿಕೊಂಡಿರು. ಆದರೆ ಆಗದ ಕೆಲಸವನ್ನು ಮಾತ್ರ ಆರಂಭಿಸಬೇಡ, ಬಳಸದಿದ್ದ ಬಣತು ಗುನಿಗಡಿಯುವಂತೆ ಕೆಲಸಗೇಡಿಯ ಮನದಲ್ಲಿ ಕೆಟ್ಟ ಆಲೋಚನೆಗಳು ಹುಟ್ಟಿ, ಅವನು ಕಟ್ಟಕಡೆಗೆ ಕೆಟ್ಟುಹೋಗುತ್ತಾನೆ.

೫. ಅನ್ಯಾಯವನ್ನು ಎಂದೆಂದೂ ಮಾಡಬೇಡ. ಯಾಕಂದರೆ ಅನ್ಯಾಯವು ಅನರ್ಥದ ತಾಯಿಯು.

೬. ಸದಾ ಸತ್ಯವನ್ನೇ ಆಶ್ರಯಿಸು. ಯಾಕಂದರೆ ಸತ್ಯದ ಸಮಾನ ಧರ್ಮವಿಲ್ಲ. ಸುಳ್ಳನ್ನು ಕಳ್ಳರು ಕೂಡ ನಂಬರು.

೭. ಯತ್ನದಿಂದ ಕೆಲಸಗಳು ಕೈಗೂಡುವವು. ನುಂಗದ ಹೊರತು ಅಂಗಳಿನಲ್ಲಿದ್ದ ಅನ್ನವು ಒಳಗೆ ಇಳಿಯದು.

೮. ಕಲಿತದ್ದನ್ನು ಆಗಾಗ್ಯೆ ತಿರುವಿ ಹಾಕುತ್ತಿರು. ಮೇಲಿಂದ ಮೇಲೆ ಒಗೆಯುತ್ತಿದ್ದ ವಸ್ತ್ರವು ಸ್ವಚ್ಛವಿರುವದು.

೯. ಹೊತ್ತನ್ನು ವ್ಯರ್ಥವಾಗಿ ಕಳೆಯಬೇಡ. ಹೋದ ಮುತ್ತು ಸಿಗುವದು, ಹೋದ ಹೊತ್ತು ಸಿಗಲಾರದು.

೧೦. ಕೆಲಸದಲ್ಲಿ ನಿಯಮಿತತನವಿರಲಿ. ಈ ಗುಣವುಳ್ಳವನು ಕೊಡಲಿಯ ಸಣ್ಣ ಪೆಟ್ಟುಗಳಿಂದ ದೊಡ್ಡ ದೊಡ್ಡ ಮರಗಳನ್ನು ಉರುಳಿಸುವನು. ಗುದ್ದಲಿಯ ಸಣ್ಣ ಮೊನೆಯಿಂದ ಗುಡ್ಡವನ್ನು ತೋಡುವ.

೧೧. ನಿನ್ನ ಕೆಲಸವನ್ನು ನೀನೆ ಮಾಡು, ಯಾಕಂದರೆ ಎರವಿನ ಅಕ್ಕಿ ಎಸರಿಗೆ ಬಾರದು.

೧೨. ಬೇನೆ ಬೀಳದಂತೆ ದೇಹವನ್ನು ಕಾಯ್ದುಕೊಳ್ಳು. ಯಾಕಂದರೆ ನಿನ್ನ ಎಲ್ಲ ಸುಖಕ್ಕೂ ಶರೀರವೇ ಮುಖ್ಯ ಸಾಧನವು. ಅದು ಬಾಳುವೆಯೆಂಬ ಬೀಸುಕಲ್ಲಿಗೆ ತಳಗೂಟದಂತಿರುವದು. ಈ ವಿಷಯದಲ್ಲಿ 'ಊಟಬಲ್ಲವನಿಗೆ ರೋಗವಿಲ್ಲ, ಮಾತುಬಲ್ಲವರಿಗೆ ಜಗಳವಿಲ್ಲ' ಎಂಬ ಗಾದೆಯ ಮಾತನ್ನು ಮರೆಯದಿರು.

೧೩. ದುಃಖಿಗಳಲ್ಲಿ ದಯವನ್ನುದೋರು. ನಿನ್ನ ನಡೆನುಡಿಗಳಿಂದ ಅನ್ಯರು ನೊಂದುಕೊಳ್ಳದಂತೆ ಎಚ್ಚರದಿಂದಿರು. ಒಬ್ಬರಿಗೆ ನೋವು ಮಾಡುವದು ತನ್ನ ನೋವಿಗೆ ಕಾರಣವು. ಹ್ಯಾಗಂದರೆ ಮಂದಿಯ ಮೋರೆಗೆ ಮಸಿ ಹಚ್ಚುವ ದುರಾಲೋಚನೆ ಮಾಡಿದರೆ, ಮೊದಲು ನಿನ್ನ ಕೈಗೆ ಮಸಿ ಹತ್ತುವದನ್ನು ನೆನಪಿಗೆ ತಾ.

೧೪. ತಾಳ್ಮೆಯಿರಲಿ, ಯಾಕಂದರೆ ತಾಳಿದವನು ಬಾಳುವನು.

೧೫. ಯಾವ ತರದಿಂದಲೂ ಸೊಕ್ಕು ಮಾಡಬೇಡ. ಸೊಕ್ಕುತನವು ತಿಳಿಗೇಡಿಗಳ ಲಕ್ಷಣವು. ಇದಲ್ಲದೆ ಲೋಕದಲ್ಲಿ ಒಬ್ಬರಿಗಿಂತ ಒಬ್ಬರು ಹೆಚ್ಚಿನವರುಂಟು. ಜಗದೀಶ್ವರನ ಮುಂದಂತೂ ಎಲ್ಲರೂ ಎಲ್ಲ ಬಗೆಯಿಂದಲೂ ಅಲ್ಪರೇ.

೧೬. ಮಿಕ್ಕಿ ಹೋದದ್ದಕ್ಕೆ ಮಿಡುಕಬೇಡ. ಒಡೆದದ್ದಕ್ಕೆ ಮಿಡುಕುತ್ತಾ ಕುಳಿತರೆ ಹಂಚುಗಳು ಕೂಡಿ ಹರಿವೆಯಾಗುವದೇನು?

೧೭. ಒಳ್ಳೆಯವರ ಒಡನಾಟದಲ್ಲಿರು.

೧೮. ಮಂದಿಯ ಬದುಕಿಗೆ ಎಂದೂ ಮನವೆಳಸಬೇಡ. ಇದಲ್ಲದೇ ಯಾವದನ್ನೂ ಮಿತಿ ಮೀರಿ ಮಾಡಬೇಡ. ದುರಾಶೆಯು ದುಃಖದ ಬೀಜವು. ಹಾಲುಸಕ್ಕರೆ ಸಹ ಸಿಹಿಯೆಂದು ಅಳತೆಗೆಟ್ಟು ಕುಡಿದರೆ ಅಜೀರ್ಣವಾಗದೆ ಇರದು.

೧೯. ಹಣದಿಂದಾಗದ ಕೆಲಸಗಳು ಗುಣದಿಂದಾಗುವವು. ಕಾರಣ ಎಲ್ಲರೊಡನೆ ಬೆಲ್ಲದಂತಿರು.

೨೦. ಮತಾಭಿಮಾನಿಯೂ, ಧರ್ಮಾಭಿಮಾನಿಯೂ ಆಗಿರು. ಯಾಕಂದರೆ "ಪ್ರಾಣಾನಪಿ ಪರಿತ್ಯಜ್ಯ ಸ್ವಧರ್ಮಂ ರಕ್ಷಯೇತ್" ಎಂಬುದಾಗಿ ಮಹಾತ್ಮರ ವಚನವುಂಟು.

೨೧. ಇಂದಿನ ಕೆಲಸಕ್ಕೆ ನಾಳೆನ್ನಬೇಡ, ಯಾಕಂದರೆ ನಾಳೆಯೆಂದವರ ಮನೆ ಹಾಳು.

೨೨. ಲಂಚಕ್ಕೆ ಹೊಂಚು ಹಾಕಬೇಡ. ಯಾಕಂದರೆ ನ್ಯಾಯವಂತರು ಲಂಚವು ಹೇಸಿಗೆಯೆಂದು ತಿಳಿಯುತ್ತಾರೆ.


೨೩. ಮಿತವ್ಯಯ ಮಾಡು. ಆದಾಯಕಿಂತಲೂ ವ್ಯಯವು ಕಡಿಮೆಯಾಗಿರಲಿ, ಯಾಕಂದರೆ ಸಾಲವು ಶೂಲಕ್ಕಿಂತ ಕಠಿಣವು.

೨೪. ಎಲ್ಲಕ್ಕೂ ಮೊದಲು ಜಾಣನಾಗು, ಯಾಕಂದರೆ "ಜಾಣಂ ಜಗತ್ಪ್ರಾಣಂ".

ಪ್ರತಿಯೊಬ್ಬ ಮನುಷ್ಯರು ಈ ಮೇಲಿನ ಮಾರ್ಮಿಕ ವಚನಗಳಂತೆ ನಡೆದುಕೊಂಡರೆ ದೇವರು ನಿಶ್ಚಯವಾಗಿ ಸುಖವನ್ನು ಕೊಡುವನು ಮತ್ತು ಜನರ ಪ್ರೇಮವನ್ನು ಬಯಸುವ ಪ್ರತಿಯೊಬ್ಬ ಅಧಿಕಾರಿಯು ರಾ.ಬ.ರುದ್ರಗೌಡ ಸಾಹೇಬರವರ ಆಳಿಕೆಯ ಅನುಕರಣಮಾಡಿ ಅದರಂತೆ ನಡೆದರೆ, ಇವರಂತೆ ಅವರಾದರೂ ದಿಗಂತ ಕೀರ್ತಿವಂತರಾಗಿ ಸುಖದಿಂದ ಬಾಳುವರು. ಸಜ್ಜನರಿಗೆ ಸರ್ವೇಶ್ವರನು ಸುಖಶಾಂತಿಗಳನ್ನೀಯಲಿ. ಸಮಾಪ್ತಿ. ತಾ. ೧೯-೧೦-೧೯೨೧, ಬೆಳಗಾವ.[೧]

❖❖

೧. ಇದರ ಕೆಳಗೆ R.C. Aratal,Belgaum, 19th october 1921 ಎಂದು ಸಹಿ ಇದೆ-ಸಂ.



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖಿ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ
ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ., ಮೊ:97390 67359